Registered No. M. 3618

6-7-1939

ನವಯುಗ

NAVAYUGA

ಮ್ಯಾನೇಜ್‌ಮೆಂಟ್ ಬದಲಾವಣೆ

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್

ಇಂಡಿಯನ್ ರಿಫ್ರೆಷ್‌ಮೆಂಟ್ ರೂಮ್

೧—೭—೧೯೩೯ ರಿಂದ ಫಲಾಹಾರದ ವ್ಯವಸ್ಥೆ

ಸುಪ್ರಸಿದ್ಧರಾದ

ಮದ್ರಾಸ್ ಮಾಡರ್ನ್ ಕೆಫೆ

ಯವರಿಂದ

ಬೆಂಗಳೂರು—ಗುಂಟಕಲ್ (ಹಿಂದೂಪುರದ ಮಾರ್ಗವಾಗಿ)

ಬೆಂಗಳೂರು—ಹುಬ್ಬಳ್ಳಿ (ಹರಿಹರದ ಮಾರ್ಗವಾಗಿ)

ಇವುಗಳ ಡೈನಿಂಗ್ ಕಾರುಗಳಲ್ಲೂ ತಿಂಡಿ ತೀರ್ಥಗಳನ್ನು ಒದಗಿಸುವರು.

ಅತ್ಯುತ್ತಮವಾದ, ಶುದ್ಧವಾದ ಮತ್ತು ಪುಷ್ಟಿಕರವಾದ ಊಟ ಮತ್ತು ತಿಂಡಿಗಳು ಒದಗಿಸಲ್ಪಡುವುವು.

ಇವರ ಮಾಲೀಕತ್ವದಲ್ಲಿರುವ ಇತರ ಹೋಟೇಲು ಮತ್ತು ಫಲಾಹಾರ ಮಂದಿರಗಳು

ಮಾಡರ್ನ್ ಹಿಂದೂ ಹೋಟೆಲ್, ಮೈಸೂರು.
ಮೈಸೂರು ಸಿಟಿ ರೈಲ್ವೆ ಸ್ಟೇಷನ್ ಫಲಾಹಾರ ಮಂದಿರ.
ಮಾಡರ್ನ್ ಕೆಫೆ, ಎಸ್ಪ್ಲನೇಡ್, ಮದರಾಸ್.
ಮಾಡರ್ನ್ ಕೆಫೆ ಬೋರ್ಡಿಂಗ್ ಅಂಡ್ ಲಾಡ್ಜಿಂಗ್,
ನಂ. ೪ ತಂಬುಚೆಟ್ಟಿ ಬೀದಿ, ಮದರಾಸ್.

ಮಾಡರ್ನ್ ಕೆಫೆ ಬೋರ್ಡಿಂಗ್ ಅಂಡ್ ಲಾಡ್ಜಿಂಗ್,
ನಂ. ೧೫/೨೨, ಫ್ರಾನ್ಸಿಸ್ ಜೋಸೆಫ್ ಸ್ಟ್ರೀಟ್, ಮದರಾಸ್.
ಅಕ್ವೇರಿಯಂ ರೆಸ್ಟೋರೆಂಟ್, ಮೆರೀನ, ಮದರಾಸ್
ಮಾಡರ್ನ್ ಹಿಂದೂ ಹೋಟೆಲ್, ಊಟಿ.

ಕೆ. ಸೀತಾರಾಮ ರಾವ್, ಪ್ರೊಪ್ರೈಟರ್.

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಐದು ವರ್ಷ ಕೈಗಡಿಯಾರಗಳು, ೬ ವಿಷ್ಕ ಕಿಸೆಗಡಿಯಾರಗಳು, ಮತ್ತು ಒಂದು ಗಿಲ್ಟಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ, ೩೦ ಗಂಟೆಗೊವೆಕ್ಕೆ ಕೀ, ೧೦ ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯಿತಿ ದರದಲ್ಲಿ ಕೇವಲ ೧೦,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವುದು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬಿನ ಫೌಂಟನ್ ಪೆನ್ನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—
ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co
P. B. No 27 (N.Y.U)
AMRITSAR, (India),

ಮೈಸೂರಿನಲ್ಲಿ ಶ್ರೇಷ್ಠದರ್ಜೆಯ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ:106) ಹಳೆ ಪೋಸ್ಟಾಫೀಸು ರೋಡ್ ಮೈಸೂರು
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇದೇ ಮ್ಯಾಲೀಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜ ಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೆಫೆ**

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್–ಕೆ. ಗುರುರಾಜಾಚಾರ್.

—— ಬಲು ಸುಲಭ ದರದಲ್ಲಿ ——

- ಉತ್ಕೃಷ್ಟ ಊಟ ಉಪಹಾರಾದಿಗಳಿಗಾಗಿ ಇತ್ತ ಗಮನಿಸಿರಿ!
- ನಾವು ನಮ್ಮನ್ನೇ ವಿಶೇಷವಾಗಿ ಪ್ರಶಂಸಿಸಿ ಕೊಳ್ಳಬಾರದಷ್ಟೆ!

ಲಕ್ಷ್ಮೀ ನಿವಾಸ ಹಿಂದೂ ಹೋಟೇಲು

(ಸ್ಥಾಪನೆ 1926)
ವಿಠಲ್ ಭಾಯಿ ಪಟೇಲ್ ರೋಡ್, ಗಿರ್ಗಾಂ, ಮುಂಬಯಿ.

Lakshmi Nivas Hindu Hotel
VITTALBHAI PATHEL ROAD,
GIRGAUM — — BOMBAY.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಜಿಸ್ಟರ್ಡ್ ಮುದ್ರೆಯು —
ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಜೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನಲ್ಲಿ ರಿಜಿಸ್ಟರ್ಡ್ ಮುದ್ರೆಯು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.
ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ಪೃಥ್ವಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.

ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ
ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಭಸ್ಮಗಳು ಇತ್ಯಾದಿ ಯಾವಾಗಲೂ ತಯಾರು
ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ
ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಏಜಂಟರಿಗೂ ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿನಾಶಿನಿ
ಕಜ್ಜಿ, ರಕ್ತದೋಷಗಳಿಗೆ	—ಕ್ಯಾಷ್ಟರ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂವಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಾಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ಮಾರಾಟಕ್ಕೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ಹೊಂಬಾತಿನ ಸಾಮಾನುಗಳು ಬೇಕಾಗಿದ್ದು ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೪೪	ಉಡುಪಿ, ಗುರುವಾರ ೬-೭-೧೯೩೯ Udipi, Thursday 6—7—1939	Vol. XVIII No. 44

ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾವಲೋಕನ

ದೂಡುವ ಕೈಯನ್ನು ಚುಂಬಿಸುವ ನೀತಿ!

ಆಂಗ್ಲೋ—ಜರ್ಮನಿ ನಾವಿಕ ಒಪ್ಪಂದವನ್ನು ಹಿಟ್ಲರ್ ಹಿಮ್ಮಡಿಯಿಂದೊದ್ದು ಝಾಡಿಸಿದ್ದ. 'ಯುರೋಪಿನ ಯಾವ ಭಾಗದಲ್ಲಿಯೇ ಇರಲಿ, ಜರ್ಮನಿ ಯುದ್ಧಕ್ಕೆ ತೊಡಗಿದರೆ ಬ್ರಿಟನು ವಿಘ್ನಕಾರಿಯಾಗಿ ನಿಲ್ಲುತ್ತಿದೆ; ಜರ್ಮನಿಯನ್ನು ಸುತ್ತುಗಟ್ಟುವ ಧೋರಣೆ ವಹಿಸಿದೆ. ಆದ್ದರಿಂದ ಬದರೂಡನಿದ್ದ ನಾವಿಕ ಒಪ್ಪಂದಕ್ಕೆ ಇಂದೇ ತಿಲಾಂಜಲಿ!' ಎಂದು ಫಾಲನೇತ್ರವನ್ನು ತೆರೆದಿದ್ದ ಹಿಟ್ಲರ್. ಈ ಆರೋಪಕ್ಕೀಗ ಬ್ರಿಟಿಷ್ ಸರಕಾರವು ಉತ್ತರವಾಗಿ ನೋಟ್ ಒಂದನ್ನು ಜರ್ಮನಿಸರಕಾರಕ್ಕೆ ಕಳುಹಿಸಿರುವುದು. ಎಲ್ಲ ಏನುಮಾಡಿದರೂ ವಿರೋಧಿಸುವ ಧೋರಣೆಯು ಬ್ರಿಟಿಷರದಲ್ಲ. ನಾವು ಆಶ್ವಾಸನೆಕೊಟ್ಟ ರಾಷ್ಟ್ರಗಳ ಮೇಲೆ ಆಕ್ರಮಣ ನಡಿಸಿದರೆ ಅದನ್ನಿದಿರಿಸಲು ನಾವು ಬದ್ಧರು. ಜರ್ಮನಿಯನ್ನು ಆವರಿಸುವ ಧೋರಣೆ ಬ್ರಿಟಿಷರಿಗಿದೆ ಎನ್ನುವದು ದೊಡ್ಡ ತಪ್ಪು. ಒಡಂಬಡಿಕೆಗೆ ಬಂದಲ್ಲಿ ಜರ್ಮನಿಯ ಆರ್ಥಿಕಸುಧಾರಣೆಗೆ ನೆರವಾಗುವುದಕ್ಕೆ ನಾವು ಸಿದ್ಧರಿದ್ದೇವೆ ಎಂದು ಬ್ರಿಟಿಷ್‌ಸರಕಾರವು ಉತ್ತರದಲ್ಲಿ ತಿಳಿಸಿದೆ. ಜರ್ಮನಿ ಪತ್ರಿಕೆಗಳು ಈ ಉತ್ತರಕ್ಕೆ ಕಟುವಾದ ಉತ್ತರವನ್ನು ಕೊಡುತ್ತಿವೆ.

ತಾತ್ಪರ್ಯವಿಷ್ಟು— ಬ್ರಿಟನು ಜರ್ಮನಿಯ ಮೊಣಕಾಲ ವರೆಗೆ ಬಗ್ಗಲು ತಯಾರಿದೆ, 'ನೆಲಮುಟ್ಟಿ ಸಲಾಂ ಹೊಡೆಯುವುದಕ್ಕೆ ಏನು ಧಾಡಿ?' ಎಂದು ಜರ್ಮನಿ ಪ್ರಶ್ನಿಸುತ್ತಿದೆ!

ಮೀಸೆ ಹೊಗಿಸಲು ಪ್ರಾರಂಭ!

ಈ ನಡುವೆ ಡಾನ್ಜಿಗಿನೊಳಗೆ ನಾಜೀ ಜರ್ಮನಿಯು ಮೆಲ್ಲನೆ ಮೀಸೆ ಹೊಗಿಸಹತ್ತಿದೆ. ಜೆಕೋಸ್ಲೊವೇಕಿಯದ ಆಕ್ರಮಣಕ್ಕಾಗಿ ಆದಿಯಲ್ಲಿ ತಯಾರಿಸಿದಂತಹ ಸ್ವಯಂ ಸೇವಕ ದಳವನ್ನು ಡಾನ್ಜಿಗಿನೊಳಗೆ ತಯಾರಿಸುವ ಕೆಲಸವು ಭರದಿಂದ ನಡೆಯುತ್ತಿದೆ. ತಾ 28ರಲ್ಲಿ ಒಂದೇ ದಿನವೇ 4000 ನಾಜೀ ಆಫೀಸರರೂ ಇತರರೂ ಡಾನ್ಜಿಗನ್ನು ಪ್ರವೇಶಿಸಿದ್ದಾರೆ. ಡಾನ್ಜಿಗ್ ವಾತಾವರಣವು ಕ್ಷಣಕ್ಷಣಕ್ಕೂ ಕಾವೇರುತ್ತಾ ಬರುತ್ತಿದೆ. 'ಸ್ವಯಂ ಸೇವಕರ ಮೂಲಕ ಡಾನ್ಜಿಗನ್ನು ವಶಪಡಿಸಿಕೊಂಡಲ್ಲಿ ಪೋಲೆಂಡಾಗಲೀ, ಇಂಗ್ಲಾಂಡಾಗಲೀ ಅಲಕ್ಷಿಸಿ ಬಿಡಬಹುದೆಂದು ನಾಜಿಗಳು ನೆನಸದಿರಲಿ!' ಎಂದು ಬ್ರಿಟಿಷ್ ಪತ್ರಿಕೆಗಳು ಕುಲುಕಿ ಕುಲುಕಿ ಎಚ್ಚರಿಸುತ್ತಿವೆ. ನಿರೀಕ್ಷಿಸುತ್ತಿದ್ದ ಗಂಡಾಂತರವು ಸಮೀಪಿಸುತ್ತಿರುವ ಸುಸ್ಪಷ್ಟ ಶಕುನಗಳು ಡಾನ್ಜಿಗಿನಲ್ಲಿ ತೋರಿ ಬರುತ್ತಿವೆ. ಗಾಳಿ ಯಾವ ಕಡೆಯಿಂದ ಬೀಸುತ್ತಿದೆ ಎಂಬುದನ್ನು ಪರಿಶೀಲಿಸುವದರಲ್ಲೇ ಇದ್ದಾರೆ ಚೇಂಬರ್ಲೇನರು—ಆ ಕಡೆಗೆ ಕೊಡೆ ಬಿಡಿಸಿಕೊಂಡು ಹೊರಡುವದೊಂದೇ ಬಾಕಿ!

ಲೋರ್ಡ್ ಹೆಲಿಫೇಕ್ಸರ ಬಿಸಿಬಿಸಿ ಮಾತು.

ಕೆಲವು ದಿನಗಳಿಂದ ಪೋಲೆಂಡ್ ಪ್ರಶ್ನೆಗೆ ಸಂಬಂಧ ಪಟ್ಟವರೆಲ್ಲರ ಮಾತುಗಳು ಬಿಸಿಬಿಸಿಯಾಗಿ ಹೊರಡುತ್ತಿವೆ. ಬ್ರಿಟನಿನ ವಿದೇಶಾಂಗ ಮಂತ್ರಿ ಲೋರ್ಡ್ ಹೆಲಿಫೇಕ್ಸರು ತಾ. 29ರಲ್ಲಿ ಕೊಟ್ಟ ಭಾಷಣವೊಂದರಲ್ಲಿ ಸಂದೇಹಾತೀತವಾದ, ಬ್ರಿಟಿಷ್ ಅಧಿಕಾರಿಗಳ ಸಾಮಾನ್ಯ ರೀತಿಗೆ ವಿರುದ್ಧವಾದ ಖಂಡತುಂಡ ಮಾತುಗಳನ್ನಾಡಿರುವರು. "ಮುಂದಿನ ಆಕ್ರಮಣವನ್ನು ತಡೆಗಟ್ಟಿ ನಮ್ಮ ಪ್ರತಿಜ್ಞಾ ಪಾಲನೆಯನ್ನು ಮಾಡಲು ಒಂದೇ ಸವನೆ ನಮ್ಮ ಸರ್ವಶಕ್ತಿಯನ್ನೂ ಪ್ರಯೋಗಿಸುವ ದೃಢ ನಿರ್ಧಾರ ಮಾಡಿದ್ದೇವೆ." ಡಾನ್ಜಿಗಿನಲ್ಲಿ ಜರ್ಮನರು ಪ್ರತ್ಯಕ್ಷವಾಗಿ ಪಿಕಲಾಟಕ್ಕೆ ಕೈಹಾಕಿರುವ ವಿಷಮ ಘಳಿಗೆಯಲ್ಲಿ ಬಂದ ಎಚ್ಚರಿಕೆಯಿದು! ಅತ್ತ ಪೋಲೆಂಡಿನ ಅಧ್ಯಕ್ಷರು ಡಾನ್ಜಿಗನ್ನು ಎಷ್ಟಕ್ಕೂ ಬಿಟ್ಟುಕೊಡುವಂತಿಲ್ಲವೆಂದು ತಾ. 29ರಲ್ಲಿ ಉದ್ಘೋಷಿಸಿದ್ದಾರೆ. ಪೋಲೆಂಡಿನ ದೃಢ ಪ್ರತಿಜ್ಞೆಯನ್ನು ಸಾರುವ ಪ್ರದರ್ಶನಗಳಾಗುತ್ತಿವೆ. ಪೋಲ್ ಜನರು ವೀರಾವೇಶದಿಂದ ನಿಗುರಿ ನಿಂತಿದ್ದಾರೆ. ಫ್ರೆಂಚ್ ಪತ್ರಿಕೆಗಳು ಜರ್ಮನಿಗೆ ಬಲವಾದ ಎಚ್ಚರಿಕೆಯನ್ನು ಕೊಡಹತ್ತಿವೆ.

ಡಾನ್ಜಿಗ್ ಪಟ್ಟಣವು ವಿಷದ ಪೊಟ್ಟಣವಾಗಿ ಲೋಕದ ಗಂಟಲನ್ನು ಕೊರೆಯಬಹುದು. ಹಿಟ್ಲರನದನ್ನೊಡೆಯಲು ಕೈ ಚಾಚಿದ್ದಾನೆ. ಮ್ಯುನಿಚಿನಂತಹ ಆಕಸ್ಮಿಕ ಘಟನೆಯೊಂದೊದಗದಿದ್ದಲ್ಲಿ ಭವಿಷ್ಯವು ಬಹು ಭಯಂಕರವಾಗಲಿದೆ!

"ರಾಜಾಮರ್ಜಿ"ಯ ಬದಲು 'ರಾಜೀಮರ್ಜಿ'

ಚೀನದ ಟಿಯೆಂಟ್ಸಿನಿನಲ್ಲಿ ಬ್ರಿಟಿಷರನ್ನು ಬೇಗಹಾಕಿ ಒಳಗಿಟ್ಟು ಬುದ್ಧಿ ಕಲಿತುಕೊಳ್ಳಿ! ಎಂದು ಜಪಾನರು ಕಾವಲು ನಿಂತಿದ್ದಾರಷ್ಟೆ. ಈ ರೀತಿ ಎರಡು ಮೂರು ವಾರದಿಂದ ನುಚ್ಚಿಟ್ಟುದರ ಪರಿಣಾಮವಾಗಿ ಬ್ರಿಟಿಷರು ತಕ್ಕಮಟ್ಟಿಗೆ ಹಣ್ಣಾಗಿರುವರು. ಚೇಂಬರ್ಲೇನರು ಟೋಕಿಯೋದಲ್ಲಿ ಜಪಾನ್ ಸರಕಾರದೊಡನೆ ರಾಜಿ ಪ್ರಸ್ತಾಪ ಹೂಡಿರುವರು. ಬ್ರಿಟಿಷ್ ಕ್ಷೇತ್ರದೊಳಗೆ ಜಪಾನೀ ವಿರುದ್ಧ ಕಾರ್ಯವಾವುದೂ ನಡೆಯದಂತೆ ನೋಡಬೇಕು. ಮತ್ತು ಅಲ್ಲಿ ಚೀನೀ ಕರೆನ್ಸಿನೋಟುಗಳ ಬದಲು ಜಪಾನರ ನೋಟುಗಳನ್ನು ವಹಿವಾಟಿನಲ್ಲಿ ತರಬೇಕು, ಎಂಬೆರಡು ಮುಖ್ಯ ಶರ್ತಗಳನ್ನು ಜಪಾನರು ಮುಂದಿಟ್ಟಿದ್ದಾರೆ. ಕೊನೆಯ ಶರ್ತವು ಜಪಾನರ ಬೆನ್ನು ಹಿಡಿದಿರುವಂತೆ ಬ್ರಿಟಿಷರನ್ನು ಕೇಳಿಕೊಳ್ಳುತ್ತದಾದುದರಿಂದ ಬ್ರಿಟಿಷರಿಗೊಪ್ಪಿಗೆಯಿಲ್ಲ. ಆದರೂ ಎಲ್ಲವೂ ರಾಜಿಯಿಂದಲೇ ತೀರ್ಮಾನವಾಗುವ ಆಶೆಯಿದೆಯೆಂದು ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಬ್ರಿಟಿಷರನ್ನು ಬತ್ತಲೆಮಾಡಿ ಜಡ್ತಿ ನಡಿಸಿದ್ದುಂಟು ನುಮಾನುಗಳನ್ನು ಕಸಗೊಂಡು ಅಪಮಾನಿಸಿದ್ದುಂಟು. ಗುಟ್ಟೇನು— ಬ್ರಿಟಿಷ್ ಸಿಂಹವನ್ನು ಟಿಯೆಂಟ್ಸಿನ್ ಪಂಜರದೊಳಗೆ ಸೇರಿಸಿ ಚಾಟಿಹಿಡಿದು ನಿಂತಿದ್ದಾರೆ ಜಪಾನರು! ಆದರೇನು—ಜಪಾನರು ಹಾಕಿರುವ ಆವರಣದ ವಿದ್ಯುಚ್ಛಕ್ತಿ ಸರಿಗೆಯಂತೇನೇ ಚೇಂಬರ್ಲೇನರ ಆಘಾತಂ ತುಸ್ತೂ ಕಡಿದುಹೋಗಿಲ್ಲ!

ಲೋಕದ ಅಜೇಯ ಸಂಗತಿಗಳಲ್ಲಿ ಚೇಂಬರ್ಲೇನರ ಆಶೆಗೆ ಅಗ್ರಸ್ಥಾನ ಸಲ್ಲಬೇಕು!

ಉಗ್ರವಾದಿಗಳ ಅತ್ಯುಗ್ರವಾದ!

ಅಖಿಲ ಭಾರತ ಕಾಂಗ್ರೆಸ್ ತೀವ್ರಗಾಮಿಗಳ ಪರಿಷತ್ತು ಕಳೆದ ತಾ. 28ರಲ್ಲಿ ಕಾಮ್ರೇಡ್ ಎಮ್. ಎನ್. ರೋಯಿಗಳ ಅಧ್ಯಕ್ಷತೆಯಲ್ಲಿ ಪೂನೆಯಲ್ಲಿ ಸೇರಿತು. ಪಾಸಾದ ಠರಾವುಗಳಲ್ಲಿ ಕಾಂಗ್ರೆಸ್ ಘಟನೆಯ ಮೊದಲನೇ ಭಾಗದಲ್ಲಿರುವ 'ಶಾಂತವಾದ ಮತ್ತು ನ್ಯಾಯವಾದ' ರೀತಿಯಿಂದ ಸ್ವಾತಂತ್ರ್ಯಗಳಿಸಬೇಕೆಂದಿರುವ ಧೋರಣೆಯ ಮೊದಲನೇ ಅಂಶವನ್ನು ತೆಗೆದುಹಾಕಬೇಕೆಂಬುದೂ ಒಂದು. ಶ್ರೀ. ರೋಯಿಗಳು ತನ್ನ ಭಾಷಣದಲ್ಲಿ ನಿಶ್ಚಯದ ಪಲ್ಲವಿಯನ್ನು ಹಾಡುತ್ತಾ ಹೀಗೆಂದರು. "ನಾವು ಹಾದಿಯು ಕವಲೊಡೆಯುವಲ್ಲಿಗೆ ಬಂದಿದ್ದೇವೆ. ಈ ಗಡಿಯಲ್ಲಿ ಇತರರನ್ನು ಸಮುಜಾಯಿಸಲು ತಡೆಯದೆ ನಾವು ನಮ್ಮ ಸ್ವತಂತ್ರ ಹಾದಿಯನ್ನು ಹಿಡಿದು ಮುಂದೊತ್ತೋಣ."

ಹಾಗೆ ಮಾಡಲಾಗದೆಂದು ರೋಯಿಗಳನ್ನು ಸಮಜಾಯಿಸುವವನು ಕಾಂಗ್ರೆಸಿನಲ್ಲಿದ್ದಂತೆ ತೋರುವದಿಲ್ಲ. ಅದ್ದರಿಂದ ರೋಯಿಗಳಾಗಲೀ ಅವರ ಸಂಗಡಿಗರಾಗಲೀ ಅನ್ಯರನ್ನು ಸಮಜಾಯಿಸಲು ಹೋದರೂ ಫಲ ದೊರೆಯದು. ಹಿಂದುಸ್ಥಾನದ ರಾಜಕೀಯ ಕ್ಷೇತ್ರವು ವಿಶಾಲವಿರುವುದರಿಂದ ಹಾದಿಯು ರಾವಣೇಶ್ವರನ ತಲೆಯಂತೆ ಕವಲೊಡೆದೇ ಇದೆ. ತೊಂದರೆಯೆಂದರೆ ಹಾದಿ ಹಿಡಿದು ಹೋಗುವವರು ಬೀದಿಬೊಗಳೆಯಿಂದ 'ಪಬ್ಲಿಕ್ ನ್ಯೂಯಿಸನ್ಸ್' ಮಾಡುವದೊಂದೆ!

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru — Sjt. S. Srinivasa Iyengar
Dr. M. A. Ansari — Hakim Ajmal Khan

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS. INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty, BRANCH MANAGER, Hampankatta, Mangalore. OR K. S. Ramamurthi, M.A. BRANCH SECRETARY, 160, Mount Road, Madras.

ಮೈಸೂರಿನ ಶ್ರೀಮನ್ಮಹಾರಾಜರವರ ಶ್ರೀಮನ್ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರು ಇವರು ತಾ. 29–6–39ರಲ್ಲು ಹಳೆಗರಿನ ಒಯ್ಯಳ್ಲಿ ಹೊಸ ನದಿಯ ಮೇಲಣ ಸೇತು ಸಂಚಾರ ಸಮಾರಂಭವನ್ನು ನೆರವೇರಿಸಿದರು

ಲಂಡನಿನಲ್ಲಿ
ಮೈಸೂರಿನ ಆಡಳಿತದ ಪ್ರಶಂಸೆ

ಲಾರ್ಡ್ ಸ್ಯಾಮ್ಯುಯಲ್‌ರವರು ಮೈಸೂರಿನ ಶ್ರೀಮನ್ಮಹಾರಾಜರವರನ್ನೂ, ದಿವಾನರನ್ನೂ ಪ್ರಶಂಸಿಸಿದರು.

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಮೈಸೂರು ಸರ್ಕಾರದವರ ಯಾವುದೋ ಇದರ ಆಗಿನ ಎವರು ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಈ ಉದಾತ್ತವಾದ ಧ್ಯೇಯವು ಎದ್ದು ಕಾಣುತ್ತಿರುವುದು ಮೈಸೂರು ಸಂಸ್ಥಾನವು ಸರ್ವರ ಶ್ಲಾಘನೆಗೆ ಪಾತ್ರವಾಗಿರುವುದಕ್ಕೆ ಸರಕಾರದವರ ಈ ಮನೋಭಾವವೇ ಕಾರಣವಾಗಿದೆ

ರಾಜಕೀಯ ಸಂಸ್ಥೆ—ಬರಬಂಡದ ಮುಂದಿರುವ ಸಮಸ್ಯೆಗಳಲ್ಲಿ ರಾಜಕೀಯ ಸಮಸ್ಯೆಯು ಸಲ್ಪ ಸಂದೇ ಮತ್ತು ಬಹು ಜಟಿಲವಾದುದು ನೂತನ ರಾಜ್ಯಾಂಗ ವ್ಯವಸ್ಥೆಯು ಮಾರ್ಗ ಪ್ರಾಂತಗಳಲ್ಲಿ ಪ್ರಜಾಪ್ರತಿನಿಧಿ ಸರಕಾರಗಳು ಒಟ್ಟಿನಲ್ಲಿ ಚೆನ್ನಾಗಿಯೇ ಕೆಲಸಮಾಡುತ್ತಿವೆ ಪ ವಿಷಯ ಅರಸು ಜನ್ಯವಾಗಿದ ದೇಶೀಯ ಸಂಸ್ಥಾನಗಳಲ್ಲಿಯಾದರೋ ಪ್ರಜೆಗಳು ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುತ್ತಿದ್ದಾರೆ ಈ ಸಂಬಂಧದಲ್ಲಿ ಎರಡು ಸಂಸ್ಥಾನಗಳು ಮಾತ್ರ ಉಳಿದವುಗಳಿಗಿಂತ ಮುಂದುವರಿದಿವೆ. ಅವು ಮೈಸೂರು ಮತ್ತು ಬರೋಡಾ ಸಂಸ್ಥಾನಗಳು. ಪ್ರಜೆಗಳೂ ಮತ್ತು ಪ್ರಭುತ್ವದವರೂ ಹೆಚ್ಚು ಹೆಚ್ಚಾಗಿ ಕಲೆತು ಆಡಳಿತವನ್ನು ನಡೆಯಿಸಲು ಅವಕಾಶವನ್ನೇರ್ಪಡಿಸಿರುವ ವಿಷಯದಲ್ಲಿ ಮೈಸೂರು ಮತ್ತು ಬರೋಡಾ ಸಂಸ್ಥಾನಗಳು ಇತರ ಸಂಸ್ಥಾನಗಳಿಗೆ ಮೇಲ್ಪಂಕ್ತಿಯಾಗಿವೆ

ಕೆಲವು ಕಾಲದಿಂದಲೂ ಸಭೆ ಸೇರಿ ಕೆಲಸ ಕಾರ್ಯಗಳನ್ನು ನಡೆಯಿಸುತ್ತಿದ್ದ ರಾಜಕೀಯ ಸುಧಾರಣ ಸಮಿತಿಯವರು ಸರ್ಕಾರದವರಿಗೊಪ್ಪಿಸಿರುವ ವರದಿಯು ಸದ್ಯದಲ್ಲಿಯೇ, ಪ್ರಕಟವಾಗುವುದೆಂದು ನಿನ್ನಿನ ವೃತ್ತಪತ್ರಿಕೆಗಳಲ್ಲಿ ನಾವು ಓದಿದೆವು. ಅವರ ಸಲಹೆಗಳನ್ನು ನಾವು ಬಹಳ ಕುತೂಹಲದಿಂದ ಇದಿರುನೋಡುತ್ತಿದ್ದೇವೆ.

ಆಡಳಿತವನ್ನು ನಡೆಸುವುದು ಕಷ್ಟಸಾಧ್ಯವಾದ ಕೆಲಸ ರಾಜ್ಯಭಾರವನ್ನು ನಡೆಯಿಸುವ ಅನುಭವವುಳ್ಳವರೆಲ್ಲರಿಗೂ ಆಡಳಿತವನ್ನು ನಡೆಯಿಸುವವರು ಕೆಲವು ವೇಳೆ ತಪ್ಪುಗಳನ್ನು ಮಾಡುವ ಸಂಭವವೂ ಉಂಟೆಂದು ತಿಳಿದಿರುತ್ತದೆ ಇದನ್ನು ರಾಜಕೀಯರಂಗಕ್ಕಿಳಿದವರ ಪೈಕಿ ತರುಣರಾದವರು ಕೆಲವು ವೇಳೆ ಚೆನ್ನಾಗಿ ಗಮನಿಸುವುದಿಲ್ಲ ರಾಜಕೀಯ ವಿಷಯಗಳಲ್ಲಿ ಹೆಜ್ಜೆ ಹೆಜ್ಜೆಯಾಗಿ ಮುಂದುವರಿಯುವುದು ಎಲ್ಲ ವಿಧದಲ್ಲಿಯೂ ಕ್ಷೇಮಕರ ಎದರಲ್ಲಿಯೂ ಭರತಖಂಡಕ್ಕೆ ಈ ತತ್ವವು ಖಂಡಿತವಾಗಿಯೂ ಅನ್ವಯಿಸುತ್ತದೆ ಮೈಸೂರಿನಲ್ಲಿ ಮುಂದೆ, ಕೊಡಬಹುದಾದ ರಾಜಕೀಯ ಸುಧಾರಣೆಗಳ ಸಂಬಂಧದಲ್ಲಿ, ಸರ್ಕಾರದವರು ಈ ತತ್ವವನ್ನು ಗಮನದಲ್ಲಿಟ್ಟೇ ಮುಂದುವರಿಯುತ್ತಾರೆಂಬುದರಲ್ಲಿ ನನಗೆ ಯಾವ ಸಂದೇಹವೂ ಇಲ್ಲ

'ಕಳೆದ ನಲವತ್ತು ವರ್ಷಗಳಿಂದಲೂ ಅತ್ಯುತ್ತಮವಾದ ರೀತಿಯಲ್ಲಿ ರಾಜ್ಯ ಪರಿಪಾಲನೆಮಾಡುತ್ತಿರುವ ಶ್ರೀಮನ್ ಮಹಾರಾಜರವರಿಗೂ, ಅವರ ಮಂತ್ರಿಗಳಿಗೂ ಅವರ ಪ್ರಜೆಗಳಿಗೂ, ಇಂಡಿಯಾದ ವೈಸರಾಯರವರು, ಮೈಸೂರಿನ ಆಡಳಿತವನ್ನು "ಅತ್ಯಂತ ವಿಚಕ್ಷಣೆಯ ಆಡಳಿತ"ವೆಂದು ಹೇಳಿದಾಗ ಬಹಳ ಸಂತೋಷವಾಗಿರಬೇಕು"

ಮೈಸೂರಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರು ತಾ 28 6 39ರಲ್ಲು ಪರಂಗಿಖಂಡದ 'ರೆಡ್‌ಕ್ರಾಸ್' ಸಂಘದ ಮೈಸೂರು ಶಾಖೆಯ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಬೋಧಪರ ಭಾಷಣ ವಿತ್ತರು.

ಅಧ್ಯಕ್ಷರ ಭಾಷಣ—ಔತಣದ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ, ಲಂಡನಿನಲ್ಲಿ ಮೈಸೂರಿನ ಟ್ರೇಡ್ ಕಮಿಷನರವರಾದ ರಾಜಸೇವಾಸಕ್ತ ಶ್ರೀಮಾನ್ ಟಿ ವಿ ಎ ಕಿಶ್ವರ್‌ರವರು ಈ ರೀತಿಯಾಗಿ ಭಾಷಣಮಾಡಿದರು 'ಮೈಸೂರು ಸರ್ವತೋಮುಖವಾಗಿ ಬೆಳೆಯುತ್ತಿರುವುದೂ ಅಲ್ಲದೆ, ರಾಜಕೀಯ, ಆರ್ಥಿಕ ಸಾಮಾಜಿಕ ಸಮಸ್ಯೆಗಳನ್ನು ಉತ್ತಮ ರೀತಿಯಲ್ಲಿ ಪರಿಹರಿಸುವ ಶಕ್ತಿಯನ್ನು ಪಡೆದು ಅಸಾಧಾರಣವಾದ ಪ್ರತಿಭೆಯಿಂದ ಮುಂದುವರಿಯುತ್ತಿವೆ ಮೈಸೂರಿನ ಶ್ರೀಮನ್ ಮಹಾರಾಜರವರು, ಪರಮಾತ್ಮನು ಮೈಸೂರಿನ ಪ್ರಜೆಗಳಿಗನುಗ್ರಹಿಸಿರುವ ವರಪ್ರಸಾದವೋ ಎನ್ನುವಂತಿದ್ದಾರೆ ಮೈಸೂರಿನವರ ವ್ಯವಸಾಯೋದ್ಯೋಗೋತ್ಸಾಹಗಳಿಗೆ ಪ್ರಭುಗಳು ಸ್ಫೂರ್ತಿದಾಯಕರಾಗಿರುತ್ತಾರೆ' ಎಂದು ಮುಂತಾಗಿ ಹೇಳುತ್ತಾ ಕೊನೆಗೆ "ಲಾರ್ಡ್ ಸಾಮ್ಯುಯಲ್‌ರವರು ಮೈಸೂರಿನಿಂದ ಬಂದು ಇನ್ನೂ ಬಹಳ ಕಾಲವಾಗಿಲ್ಲ ಇತಿಹಾಸ ಪ್ರಸಿದ್ಧವಾಗಿಯೂ ಮತ್ತು ಪ್ರಗತಿಪರವಾಗಿಯೂ ಇರುವ ನಮ್ಮ ಮೈಸೂರುನಾಡು ಇತೋಪ್ಯತಿಶಯವಾಗಿ ಬೆಳೆದು ಮುಂದೆ ಭರತಖಂಡದ ಜೀವನದಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಪಡೆದೇ ಪಡೆಯುವುದೆಂಬ, ನಮ್ಮ ಚರವಸೆಯನ್ನು ಲಾರ್ಡ್ ಸ್ಯಾಮ್ಯುಯಲ್‌ರವರೂ ಅನುಮೋದಿಸುತ್ತಾರೆಂದು ನಾನು ನಂಬಿರುತ್ತೇನೆ ಎಂದರು

THE

BOMBAY LIFE

ASSURANCE CO, LTD

ಸ್ಥಾಪನೆ 1908 **ದಿ ಬೊಂಬೇ ಲೈಫ್** ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು

ಹಿರಿಯುಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಬೆಲೆಗಳು ಏನೆಂದು	ವರ್ಷ	ಪೂರ್ತಿಯಾದವು
1,25,50,250	1934	1,04 33 750
1 50 48,915	1935	1,23,28,665
1 68 88 200	1936	1 36 01 500
1,72,579,75	1937	1 40 08,725
1,76,83 250	1938	1,44 91 000

1939 ವ್ಯಾಲ್ಯುವೇಶನ್ ವರ್ಷ

ಈಗಾಗಲೇ ಈ ಕಂಪನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು

ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಫಿರೋಜ್‌ಷಾ ಮೆಹ್ತಾ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತೂರು	ಪೋ ಬಾಕ್ಸ್ ನಂ 337 ಪ್ರಂಟೂರೋಡ್,	ವಿಕ್ಟೋರಿಯಾ ಮೆಮೋರಿಯಲ್	ಚರ್ನಿರೋಡ್, ಗಿರಗಾಂ	ಸೆಂಟ್ರಲ್ ಸ್ಟೇಷನ್ ರೋಡ್,
ಮಂಗಳೂರು	ತಲ್ಲಿಚೇರಿ	ಮದರಾಸ್	ಬೆಂಗಳೂರು ಸಿಟಿ	ಬೊಂಬಾಯಿ ನಂ 4	ತ್ರಿವೆಂಡ್ರಮ್

WANTED candidates Allowance Rs 26 Uniform, passage and quarter free Services for all Classes Telegraph, Station Master, Wireless Radio, Electrical Civil and Automobile Engineering, Commerce and Aircraft Rules and Entrance form on annas eight Director, Royal Telegraph and Rly Duties College, Bombay 11

ರಷ್ಯಾದ ಕ್ರಾಂತಿಕಾರ ಮಾಕ್ಸಿಂ ಗೋರ್ಕಿ

ಹುಟ್ಟು ದರಿದ್ರನಾಗಿ, ನಿರಕ್ಷರಕುಕ್ಷಿಯಾಗಿ, 'ರೋಲಿಂಗ್ ಸ್ಟೋನಿ'ನಂತೆ ಕೆಲಸಕ್ಕಾಗಿ ತಿರುತಿರುಗಿ, ಬೇಸತ್ತು, ನಿರಾಶೆಗೊಂಡು, ಆತ್ಮಹತ್ಯೆಗೆ ಪ್ರಯತ್ನಿಸಿದವನ ಜೀವನಕಥೆ

ಆತ್ಮಹತ್ಯೆಯ ಪ್ರಯತ್ನವು ವಿಫಲವಾಗಿ ವಕೀಲರೊಬ್ಬರ ಆಶ್ರಯಪಡೆದು ಓದುಕಲಿತು ಬರಹಗಾರನಾಗಿ, ನವಜೀವನವನ್ನು ಆರಂಭಿಸಿ ಕ್ರಾಂತಿಕಾರನಾದವನ ಜೀವನಕಥೆ

ನಿರಂಕುಶಾಧಿಕಾರವನ್ನು ಸದೆಬಡಿದವನೀತ! ಜನರಲ್ಲಿ ನವಜಾಗೃತಿಯನ್ನುಂಟುಮಾಡಿದವನೀತ

ಮಾಕ್ಸಿಂ ಗೋರ್ಕಿಎಂದೊಡನೆ ಅದು ರಷ್ಯಾದ ದೊಡ್ಡ ವಿಮಾನವೆಂದು ನೀವೆನ್ನಬಹುದು. ಹೌದು, ರಷ್ಯಾದವರು ದೊಡ್ಡ ವಿಮಾನವೊಂದನ್ನು ರಚಿಸಿ ಅಲ್ಲಿನ ಕ್ರಾಂತಿನಾಯಕ ಮಾಕ್ಸಿಂ ಗೋರ್ಕಿಯ ಹೆಸರು ಅಳಿಯದಿರಲೆಂದು ಅವನ ಹೆಸರನ್ನು ಆ ವಿಮಾನಕ್ಕೆ ಇಟ್ಟರು. ಇವನು ರಷ್ಯಾ ದೇಶಕ್ಕೆ ಮಾಡಿದ ಸೇವೆ ಕಲೆಕಲಾಂತರಗಳವರೆಗೂ ಮರೆಯುವಂತಿಲ್ಲ. ದೇಶದ ಸಾಹಿತ್ಯ ವಾತಾವರಣದಲ್ಲಿ ದೊಡ್ಡದೊಂದು ಕ್ರಾಂತಿಯನ್ನುಂಟುಮಾಡಿ ಜನತೆಯನ್ನು ಬಡಿದೆಬ್ಬಿಸಿದ ಮಹಾನುಭಾವನೆಂದರೆ ಮಾಕ್ಸಿಂಗೋರ್ಕಿ.

ಮಾಕ್ಸಿಂಗೋರ್ಕಿಯು ರಷ್ಯವನ್ನು ತನ್ನ ಹೆತ್ತೊಡಲಿಗಿಂತ ಅತಿಯಾಗಿ ಪ್ರೀತಿಸುತಿದ್ದ. ತನ್ನ ದೇಶವೆಂದರೆ ಅದಕ್ಕಿಂತ ಮಿಗಿಲಾದುದು ಪ್ರಪಂಚದಲ್ಲಿ ಮತ್ತಾವುದೂ ಇಲ್ಲವೆಂದು ಅವನ ಭಾವನೆ. ಇವನು ಹುಟ್ಟು ಸಾಹಿತಿಯಾದರೂ ಬೆಳವಣಿಗೆಯು ಅದಕ್ಕೆ ವ್ಯತಿರಿಕ್ತವಾದ ವಾತಾವರಣದಲ್ಲಿ ನಡೆಯಿತು. ಸಾಹಿತ್ಯ ಗಂಧವಿಲ್ಲದ ಜನಗಳೊಡನೆ ಬೆರೆತು ಬೆಳೆಯಬೇಕಾಗಿ ಬಂತು. ಮಾಕ್ಸಿಂಗೋರ್ಕಿಯು ಹುಟ್ಟಿದುದು ಹೊಟ್ಟೆಗೆ ಹಿಟ್ಟಿಲ್ಲದ ತಾಯಿತಂದೆಗಳ ಗರ್ಭದಲ್ಲಿ. ಬಾಲ್ಯದಿಂದಲೇ ಬಡತನ ಜೀವನವನ್ನು ಆರಂಭಿಸಬೇಕಾಗಿ ಬಂತು. ಜೊತೆಗೆ ತಂದೆತಾಯಿಗಳು ಕಣ್ಣುಮುಚ್ಚಿದರು. ಅಂದಿನಿಂದ ನಿರ್ಗತಿಕ ಗೋರ್ಕಿಯು ಜೀವನದ ಯಂತ್ರವನ್ನು ಬಹು ಕಷ್ಟದಿಂದ ನೂಕತೊಡಗಿದ. ಓದುಬರಹ ಬಾರದವನು ಏನು ತಾನೆ ಮಾಡಿಯಾನು?

ಅವನಿಗೆ ಸರಿಯಾದ ಕೆಲಸವನ್ನು ಕೊಡುವವರಿಲ್ಲದೆ ಚಮ್ಮಾರನಲ್ಲಿ ಕೆಲಸಮಾಡಬೇಕಾಗಿ ಬಂತು. ಹುಟ್ಟುದರಿದ್ರನಿಗೆ ಯಾವ ಕೆಲಸವಾದರೇನು? ಅದೇ ಕೆಲಸವನ್ನು ಮಾಡಲು ಒಪ್ಪಿಕೊಂಡನು. ಆದರೆ ಆ ಕೆಲಸವನ್ನು ಮಾಡಲು ಇವನಿಗೆ ಹೆಚ್ಚು ದಿವಸ ಇಷ್ಟ ಬರಲಿಲ್ಲ. ಅದನ್ನು ಬಿಟ್ಟು ತೋಟಗಾರನಲ್ಲಿ ಸಂಬಳಕ್ಕೆ ನಿಂತ. ಈ ಕೆಲಸವೂ ಅವನಿಗೆ ಸರಿಹೋಗಲಿಲ್ಲ. ಆ ಮೇಲೆ ದೊಡ್ಡ ಮನುಷ್ಯರೊಬ್ಬರ ಮನೆಯ ಬಾಗಿಲನ್ನು ಕಾಯಲು ಒಪ್ಪಿಕೊಂಡ. ಇವರಲ್ಲಿ ಕೆಲವು ದಿನಗಳಿದ್ದು ತರುವಾಯ ಅದನ್ನು ಬಿಟ್ಟು ಹಡಗಿನ ಅಡಿಗೆಯವನ ಸಹಾಯಕನಾದ. ಇದರಲ್ಲಿಯೂ ಗೋರ್ಕಿಗೆ ಅಸಮಾಧಾನವಾಯಿತು. ಅದನ್ನೂ ಬಿಟ್ಟು ರೊಟ್ಟಿ ಅಂಗಡಿಯಲ್ಲಿ ಸಂಬಳಕ್ಕೆ ನಿಂತ. ಇದರಲ್ಲಿಯೂ ಬೇಸರವಾಯಿತು.

ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ತಿರುಗಿ ಜಿಗುಪ್ಸೆ ಹುಟ್ಟಿ ಜೀವನವೇ ಸಾಕಾಯಿತು. ಗೋರ್ಕಿಯು ತನಗೆ ಶಾಂತಿ ಸಿಗಲಾರದೆಂದು ತಿಳಿದು ತನ್ನ ಬಾಳಿನ ಬೆಳಕನ್ನು ಕೊನೆಗಾಣಿಸಲೋಸುಗ ಒಂದು ಪಿಸ್ತೂಲಿನಿಂದ ಹೊಡೆದುಕೊಂಡನು, ಆದರೆ ಜಗತ್ತು ಇವನನ್ನು ಬಿಡಲಾರದೆ ಹೋಯ್ತು. ಆ ಗುಂಡು ಇವನನ್ನು ಕೊಲ್ಲಲಿಲ್ಲ; ಹೆಚ್ಚು ಬಾಧಿಸಲಿಲ್ಲ.

ಮಾಕ್ಸಿಂಗೋರ್ಕಿಯು ಆತ್ಮಹತ್ಯದ ಬಾಯಿಗೆ ತುತ್ತಾಗಿದ್ದರೆ ಇಂದು ರಷ್ಯವು ಆಧುನಿಕ ಸಾಹಿತ್ಯದ ಬಾಗಿಲಿಗೆ ಕೂಡ ಬರಲು ಸಾಧ್ಯವಾಗುತ್ತಿರಲಿಲ್ಲ. ಅವನು ಸಾಯದೆ ಇದ್ದುದರ ಫಲವಾಗಿ ರಷ್ಯಾದೇಶದ ಸಾಹಿತ್ಯಲೋಕದಲ್ಲಿ ಮಹಾಕ್ರಾಂತಿಯನ್ನುಂಟುಮಾಡಿರುತ್ತಾನೆ. ಇದೆಲ್ಲವೂ ಸ್ವಯಂ ಶಕ್ತಿಯೇ ಹೊರತು ಮತ್ತೊಬ್ಬರ ಕೈವಾಡವಲ್ಲ. ಆತ್ಮಹತ್ಯದ ಪ್ರಯತ್ನ ವಿಫಲವಾದ ನಂತರ ಗೋರ್ಕಿ ಹೊಸ ಜೀವನವನ್ನೇ ಆರಂಭಿಸಿದನೆನ್ನಬಹುದು. ವಕೀಲರೊಬ್ಬರ ಮನೆಯನ್ನು ಸೇರಿಕೊಂಡು ನಿತ್ಯಕೆಲಸಗಳನ್ನು ಮಾಡುವುದರ ಜೊತೆಗೆ ವಿದ್ಯಾಬಲ ವೃದ್ಧಿಗೊಳಿಸಿದನು. ಸಾಹಿತ್ಯ ಉನ್ನತಿಗೆ ಸರಿಯಾದ ವಾತಾವರಣವು ಸಿಕ್ಕಿದುದರಿಂದ ಕೊಂಚ ಕಾಲದಲ್ಲಿಯೇ ಅವನಿಗೆ ತನ್ನ ಬರವಣಿಗೆಗಳನ್ನು ಎಲ್ಲರ ಮುಂದಿಡುವಷ್ಟು ಧೈರ್ಯವುಂಟಾಯಿತು. ರಷ್ಯಾದ ಪ್ರಮುಖ ಲೇಖಕನೆನಿಸಿಕೊಂಡಿದ್ದ "ಕೋರೋಲಿಂಕೋ" ಎಂಬಾತನ ಸಹಾಯದಿಂದ ಪ್ರಸಿದ್ಧ ಲೇಖಕರ ಗುಂಪಿನಲ್ಲಿ ಗೋರ್ಕಿಗೂ ಒಂದು ಸ್ಥಾನ ಸಿಕ್ಕಿತು. ತನ್ನ 24ನೇ ವಯಸ್ಸಿನಲ್ಲಿ ಬರೆದ ಮೊದಲನೆಯ ಸಣ್ಣ ಕಥೆಯು ಸಾಹಿತ್ಯಪ್ರೇಮಿಗಳ ದೃಷ್ಟಿಯನ್ನು ಪೂರ್ಣವಾಗಿ ಆಕರ್ಷಿಸಿತು. ಅಗ ಜಾರ್ಜ್ ಚಕ್ರವರ್ತಿಯ ನಿರಂಕುಶ ಪ್ರಭುತ್ವವನ್ನು ನಾಶಪಡಿಸಿ, ಸೋವಿಯಟ್ ಸರ್ಕಾರವನ್ನು ಸ್ಥಾಪಿಸಬೇಕೆಂದಿದ್ದ ಕಾಲ.

ಕ್ರಾಂತಿಯನ್ನು ಅಭಿವೃದ್ಧಿಪಡಿಸಲು ಅನೇಕಾನೇಕ ವಿಧದ ಉತ್ತೇಜನಗಳಿದ್ದವು. ಅದರಲ್ಲಿ ಗೋರ್ಕಿಯ ಸಾಹಿತ್ಯವು ರಷ್ಯಾದ ಜನರನ್ನು ಪ್ರೇರೇಪಿಸಿದ ರೀತಿಯು ಬಹಳ ಬಲವಾದುದೆಂದೇ ಹೇಳಬೇಕು. ಜನಗಳ ಮನಮೆಚ್ಚುವಂತೆ ಬರೆಯಬಲ್ಲ ಚಾತುರ್ಯತೆ ಬುದ್ಧಿಶಕ್ತಿ ಇವನಲ್ಲಿತ್ತು. ಇವನ ಸಾಹಿತ್ಯವೆಂದರೆ ಟೊಳ್ಳು ಸಾಹಿತ್ಯವಲ್ಲ. ಬಹು ಅಗಾಧವಾದ ಮತ್ತು ಅನುಭವಸಿದ್ಧವಾದ ಸಾಹಿತ್ಯ.

ಗೋರ್ಕಿಯು ವಿವಿಧ ಜೀವನಗಳ ಸಾರವನ್ನು ಚೆನ್ನಾಗಿ ಬಲ್ಲನು. ಪ್ರತಿ ಬಾಳಿನ ತಿರುಳನ್ನು ಪೂರ್ಣವಾಗಿ ಪರಿಚಯಮಾಡಿಕೊಂಡಿದ್ದ. ಬಡತನದ ಬೇಗೆ, ಶ್ರೀಮಂತರ ಠೀವಿ, ಅರಸುತನದ ಅಹಂಕಾರ ಇವೆಲ್ಲವನ್ನು ಇವನ ಬರವಣಿಗೆಯಲ್ಲಿ ಪೂರ್ಣವಾಗಿ ನೋಡಬಹುದು. ಇವನ ಸಾಹಿತ್ಯವನ್ನು ಹೊಗಳುವವರು ಎಷ್ಟೋ ಮಂದಿ! ಆದರೆ ಅವರಿಗೆಲ್ಲಾ 'ಜೀವನಗಳೇ ಹೊಲಸಾಗಿರುವಾಗ ಅದನ್ನು ಪ್ರತಿಬಿಂಬಿಸುವ ಸಾಹಿತ್ಯವೂ ಹೊಲಸಾಗುವುದರಲ್ಲೇನು?' ಎನ್ನುತಿದ್ದನಂತೆ. ಕಷ್ಟ ಸನ್ನಿವೇಶಗಳಲ್ಲಿ ಮನಮರುಗುವಂತೆಯೂ, ಕ್ರಾಂತಿಯ ಕಾಲದಲ್ಲಿ ಮನಸ್ಸನ್ನು ಉದ್ರೇಕಗೊಳಿಸಿ ಜೀವಕ್ಕೆ ಹೆದರದೆ ಹೋರಾಡುವಂತೆಯೂ ಮಾಡುವ ಸಾಮರ್ಥ್ಯ ಇವನ ಬರಹಗಳಲ್ಲಿರುತ್ತಿದ್ದವು. ಇವನ ಗ್ರಂಥಗಳಲ್ಲೆಲ್ಲಾ ಮುಖ್ಯವಾಗಿ ಪ್ರಬಲರು ಅಬಲರನ್ನು ಯಾವ ರೀತಿ ದೋಚುತ್ತಿರುವರೆಂಬುದರ ಚಿತ್ರವನ್ನು ಚೆನ್ನಾಗಿ ನೋಡಬಹುದಾಗಿದೆ. ಇಂತಹ ಅನ್ಯಾಯಗಳನ್ನು ತೊಲಗಿಸಲು ಸರ್ವ ಸಮನ್ವಯ ತತ್ವವನ್ನು ಆಚರಿಸಬೇಕೆಂಬುದೇ ಗೋರ್ಕಿಯ ಅಭಿಮತ.

ರಷ್ಯಾದಲ್ಲಿ ಜಾರ್ಜ್ ಚಕ್ರವರ್ತಿಯ ನಿರಂಕುಶಾಧಿಕಾರವನ್ನು ನಾಶಗೊಳಿಸಿ ಅಲ್ಲಿ ಪ್ರಜೆಗಳ ರಾಜ್ಯಾಡಳಿತವನ್ನು ಸ್ಥಾಪಿಸಲು ನಡೆದ ಮಹಾ ಕ್ರಾಂತಿಯ ಮೂಲಪುರುಷನಾದ ಲೆನಿನ್‌ನ ಆಪ್ತಮಿತ್ರರಲ್ಲಿ ಮಾಕ್ಸಿಂಗೋರ್ಕಿಯು ಒಬ್ಬ. ಗೋರ್ಕಿಯು ಕ್ರಾಂತಿ ಪ್ರೇರೇಪಿತನಾದರೂ ಸ್ವತಃ ಕ್ರಾಂತಿಕಾರನಲ್ಲ; ಶಾಂತಿ ಪ್ರಿಯ. ಲೆನಿನ್‌ಗೆ ಸಮಯೋಚಿತ ಸಲಹೆಗಳನ್ನು ಕೊಟ್ಟು ಸೋವಿಯೆಟ್ ಪ್ರಭುತ್ವ ಸ್ಥಾಪನೆಗೆ ಬಹಳ ಸಹಾಯಮಾಡಿದ್ದಾನೆ. ಲೆನಿನ್‌ಗೆ ಗೋರ್ಕಿಯ ಮೇಲೆ ಪೂರ್ಣ ಅಭಿಮಾನವಿತ್ತು. ಆದರೆ ಒಂದು ಚಿಕ್ಕ ಕಾರಣಕ್ಕಾಗಿ ಇಬ್ಬರೂ ಮನಸ್ತಾಪ ಕಟ್ಟಿಕೊಳ್ಳಬೇಕಾಗಿ ಬಂತು.

ಜಾರ್ಜ್ ಚಕ್ರವರ್ತಿಯು ಪ್ರಭುತ್ವ ಮಾಡುತ್ತಿದ್ದಾಗ್ಯೆ ಕ್ರಾಂತಿಗಾರರು ಸಿಟ್ಟಿಗೆದ್ದು ಕೋಟೆಯ ಮೇಲೆ ಸುಗ್ಗಿ ದಾಂದಲೆ ನಡೆಯಿಸಿದರು. ಆ ಕಾಲದಲ್ಲಿ ಕಲಾವೈಭವವನ್ನು ತೋರ್ಪಡಿಸುತ್ತಿದ್ದ ಹಳೆಯ ಕೋಟೆಯು ಕ್ರಾಂತಿಕಾರರ ವಶವಾಯಿತು. ಈ ವಿಜಯ ವೈಭವದಲ್ಲಿ ದಂಗೆಕೋರರು ಕೆಲವರು ಹಳೆ ಕೋಟೆಯೊಳಗಿನ ಪ್ರಾಚೀನ ಕಲಾಕೌಶಲ್ಯವನ್ನೊಳಗೊಂಡ ವಿಗ್ರಹಗಳನ್ನೂ ಗೋಡೆಗಳನ್ನೂ, ಅನಾವಶ್ಯಕ

The Pangal Nayak Bank Ltd.,
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(INCORPORATED 1920)
Reserves: Rs. 2,02,800/-. Paid up Capital: Rs. 1,82,100/-.
PRINCIPAL OFFICE: COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% P. A. for the earlier half and at 1% P. A. for the latter half of every calender year.

Fixed Deposits are accepted at all the above offices for one and two years and interest allowed at 3½% P. A. and 4% P. A. respectively; interest being payable every half year of the calendar year. Savings Bank & cumulative Deposits are also received on the remunerative terms.

Negotiable Instruments payable on demand and also genuine short dated trade bill are discounted on fairly easy terms.

For business proper please address or call at any of our offices.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವ್ಯವಹಾರಗಳು ಇಲ್ಲಿ ನಡಿಸಲ್ಪಡುತ್ತವೆ, ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3	ತಿಂಗಳಿಗೆ	....	3½%
6	„	....	4%
1	ವರ್ಷಕ್ಕೆ	....	4½%
2	„	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. ೫/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

ವಾಗಿ ಸಜ್ಜುಗೊಳಿಸಿದರು. ಗೆಲುವಿನ ಮದವು ಅವರಿಗೆ ಅದರ ಶ್ರೇಷ್ಠತೆಯನ್ನು ತೋರಿಸಲಿಲ್ಲ. ಇದನ್ನು ತಿಳಿದೊಡನೆಯೇ ಗೋರ್ಕಿಗೆ ತುಂಬಾ ಕೋಪಬಂದಿತು. ಈ ಕೃತ್ಯವನ್ನು ಖಂಡಿಸಿ ದಂಗೆಕೋರರ ವಿವೇಚನಾಶೂನ್ಯತೆಯನ್ನು ಕುರಿತು ಕ್ರಾಂತಿನಾಯಕನಾದ ಲೆನಿನ್‌ಗೆ ಪತ್ರ ಬರೆದನು. ಆದರೆ ಲೆನಿನ್‌ನು ಕ್ರಾಂತಿಗೆ ವಿಜಯ ದೊರೆತಿದ್ದುದು ಮುಖ್ಯವೇ ಹೊರತು ಸೈನಿಕರ ನಷ್ಟಪಡಿಸಿದ ಕಲಾವೈಭವವೇನೂ ಅಷ್ಟು ಪ್ರಾಮುಖ್ಯವಲ್ಲವೆಂದನು. ಕಲಾಪ್ರೇಮಿ ಗೋರ್ಕಿಗೆ ಇದರಿಂದ ಮತ್ತಷ್ಟು ಕೋಪಬಂದು ಅವನೊಡನೆ ಮಾತನಾಡುವುದನ್ನು ಸಹ ಬಿಟ್ಟುಬಿಟ್ಟನು.

ಗೋರ್ಕಿಯು ಪ್ರಸಿದ್ಧ ಸಾಹಿತಿಯಾಗಿದ್ದವರ ಜೊತೆಗೆ ಪತ್ರಿಕೋದ್ಯೋಗದಲ್ಲಿಯೂ ತುಂಬಾ ಅಭಿಮಾನವಿಟ್ಟಿದ್ದ. ಸಾಹಿತ್ಯಾಭಿಮಾನಿಗಳನ್ನು ಎಷ್ಟು ಗೌರವದಿಂದ ಕಾಣುತ್ತಿದ್ದನೋ ಅಷ್ಟೇ ಗೌರವದಿಂದ ಪತ್ರಿಕೋದ್ಯೋಗಿಗಳನ್ನು ಕಾಣುತ್ತಿದ್ದನು. ರಷ್ಯಾದ ಕ್ರಾಂತಿಭಾವನೆ ಮತ್ತು ಚಳುವಳಿಗಳನ್ನು ಪ್ರಚಾರಮಾಡಿ ಅಭಿವೃದ್ಧಿಗೊಳಿಸುವುದರಲ್ಲಿ ಗೋರ್ಕಿಯು ಮೊದಲನೆ ಸಾಹಿತಿ. ರಷ್ಯಾದ ಕ್ರಾಂತಿ ಪ್ರಚಾರಕ್ಕಾಗಿ ಶ್ರೇಷ್ಠ ಪತ್ರಿಕೆಗಳನ್ನು ಹೊರಡಿಸಿ ಪ್ರಚುರಪಡಿಸಿದ್ದಾನೆ. ಜನಜಾಗ್ರತಿಗೆ ಬೇಕಾದ ಪ್ರೋತ್ಸಾಹವನ್ನು ಇವನು ಪತ್ರಿಕಾಪ್ರಪಂಚದಲ್ಲಿ ಬಹಳವಾಗಿ ಮಾಡಿರುವನೆಂಬುದು ಸರ್ವವಿದಿತ ವಿಷಯ.

ಗೋರ್ಕಿಯು ದಿವಂಗತನಾದರೂ ರಷ್ಯಾದ ಸಾರ್ವಜನಿಕ ಜೀವನದಲ್ಲಿ ಅವನಿಗೊಂದು ಪ್ರಮುಖ ಸ್ಥಾನವಿದೆ. ಇವನು ರಷ್ಯಾ ಸಾಹಿತ್ಯವನ್ನು ಪ್ರವೇಶಿಸಿದುದು ಕೂಲಿಕಾರರ ಕವಿಯಾಗಿ. ಇಂದೂ ಕೂಡ ಅವನ ಹೆಸರು ರಷ್ಯದ ಬಡ ಜನರ ಬಡ ಕೂಲಿಗಳ ಬಾಯಲ್ಲಿ ತಾಂಡವವಾಡುತ್ತಿದೆ. ಇದಕ್ಕೆ ಇವನು ಮುಂಚೆ ಬರೆದ ನಾಟಕಗಳೂ, ಕಾವ್ಯಗಳೂ, ಸುಪ್ರಸಿದ್ಧ 'ಮದರ್' ಎಂಬ ಗ್ರಂಥವೂ ಸಾಕ್ಷಿಯಾಗಿವೆ. ಬಾಲ್ಯದಲ್ಲಿ ಬಂದೊದಗಿದ ಕಷ್ಟನಷ್ಟಗಳನ್ನು ಲೆಕ್ಕಿಸದೆ ಬದುಕಿ ಬೆಳೆದು ಫಲಿಸಿದ ಗೋರ್ಕಿಯ ಸಾಹಿತ್ಯವು ಪ್ರಚಂಡವೇ ಸರಿ.

ಪೂರ್ವ ವಯಸ್ಸಿನಲ್ಲಿ ಕಾಠಿಣ್ಯಜೀವನವನ್ನು ಅನುಭವಿಸಿದ ಗೋರ್ಕಿ ಇಂದು ರಷ್ಯಾದ ಸಾಹಿತಿಗಳ ನಾಯಕನೆನಿಸಿದ್ದಾನೆ. ಅವನಿಲ್ಲದಿದ್ದರೂ ಅವನ ಕೃತಿಗಳು ರಷ್ಯಾ ಸಾಹಿತ್ಯಕ್ಕೆ ಶ್ರೇಷ್ಠತೆಯನ್ನು ಕೊಟ್ಟಿವೆ. ಅವನು ಸೂಚಿಸಿ ಹೋದ ಸಲಹೆಗಳಿಗೆ ಇಂದು ರಷ್ಯಾದಲ್ಲಿ ಪೂರ್ಣ ಮನ್ನಣೆ ಇದೆ. ಈತನ ಗ್ರಂಥಗಳು ಲೋಕ ವಿಖ್ಯಾತವಾಗಿವೆ. ಜಗತ್ತಿನ ನಾನಾ ಭಾಷೆಗಳು ಈ ಗ್ರಂಥಗಳನ್ನು ಭಾಷಾಂತರ ಮಾಡಿಕೊಂಡಿವೆ. ಆತನ ಬರವಣಿಗೆಯಲ್ಲಿ ಅಂತಹ ಮಹತ್ವ ಅಂತಹ ಧೋರಣೆಗಳಿವೆ.

ಗೋರ್ಕಿಯೆಂದರೆ ಆಧುನಿಕ ಸಾಹಿತ್ಯದ ಮೂಲಪುರುಷನೆಂದೂ, ಪ್ರಚಂಡ ಸಾಹಿತಿಯೆಂದೂ, ಎಲ್ಲರಿಗೂ ಗೊತ್ತುಂಟು. ಸೋವಿಯಟ್ ರಷ್ಯದಲ್ಲಿ ಗೋರ್ಕಿಗೆ ಮರ್ಯಾದೆ ಸಲ್ಲಿಸದವರಿಲ್ಲ. ಅವನ ಗ್ರಂಥಗಳಿಲ್ಲದ ಮನೆಯಿಲ್ಲ. ಅವನ ಬರವಣಿಗೆಯನ್ನು ಓದದ ಅಕ್ಷರಸ್ಥರಿಲ್ಲ. ಅವನ ಹೆಸರನ್ನು ಕೇಳದ ಪಾಪಿಯೂ ಇಲ್ಲ.

ರಷ್ಯಾದ ಜೀವಜ್ಯೋತಿಗಳಲ್ಲೊಬ್ಬನಾದ ಗೋರ್ಕಿಯು ಹುಟ್ಟಿದ ದಿನವೆಂದರೆ ರಾಷ್ಟ್ರದಲ್ಲೆಲ್ಲಾ ಒಂದು ಹಬ್ಬ. ಆ ದಿನವು ರಾಷ್ಟ್ರೀಯ ಉತ್ಸವದ ದಿನವೆಂದು ಪರಿಗಣಿತವಾಗಿದೆ. ಇಂದು ಆತನ ಹೆಸರಿನಲ್ಲಿ ರಷ್ಯದ ಮೂಲೆ ಮೂಲೆಗಳಲ್ಲೂ ಸ್ಮಾರಕಗಳು ಸ್ಥಾಪಿತವಾಗಿವೆ. 'ಗೋರ್ಕಿ ಪ್ಲಾಂಟ್' ಎಂಬ ದೊಡ್ಡದೊಂದು ಕಬ್ಬಿಣದ ಕಾರ್ಖಾನೆ ಇದೆ. 'ಗೋರ್ಕಿ ಫಾರಂ' ಎಂಬ ವ್ಯವಸಾಯ ಕ್ಷೇತ್ರವಿದೆ. ಇದಲ್ಲದೆ ಗೋರ್ಕಿಯು ಸಾಯುವುದಕ್ಕೆ 2 ತಿಂಗಳ ಮುಂಚೆ 'ಗೋರ್ಕಿ ಎಜುಕೇಶನಲ್ ಅಂಡ್ ಕಲ್ಚರಲ್ ಪ್ಲೇನ' ಎಂಬ ಶಿಕ್ಷಣ ವಿಮಾನವನ್ನು ಕಟ್ಟಿ ತರುಣರಿಗೆ ವಿಮಾನಶಿಕ್ಷಣವನ್ನು ಕೊಡುತ್ತಿದ್ದಾರೆ. ಈ ರೀತಿ ಅವನ ನೆನಪನ್ನು ತರುವ ಸಾರ್ವಜನಿಕ ಕ್ಷೇತ್ರಗಳು ರಷ್ಯದಲ್ಲಿ ಮಾತ್ರ ಇದ್ದರೂ ಗೋರ್ಕಿಯ ಹೆಸರು ವಿಶಾಲವಿಶ್ವವನ್ನೇ ಆವರಿಸಿದೆ.

"ಆರಾಧ್ಯ"

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರಗಳಲ್ಲಿ ಮೇಲುಗೈ, ದುರಾದೃಷ್ಟಗಳ ದುಷ್ಟಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

ಸಂಗೀತ

ಕಲಿವವರಿಗೆ ಸುಸಂಧಿ

ದತ್ತ ಮಂದಿರ

(ಹೆಂಗಸರ ಗವರ್ನ್‌ಮೆಂಟ ಟ್ರೈನಿಂಗ್ ಶಾಲೆಯ ಎದುರು)

ಉಡುಪಿ

ಇಲ್ಲಿ ಸಂಗೀತವನ್ನು ಶಾಸ್ತ್ರೀಯ ರೀತ್ಯಾ ಮಿತವರ್ಜಿಯಿಂದ ಕಲಿಸಲಾಗುತ್ತೆ. ಹೆಚ್ಚಿನ ಮಾಹಿತಿಗೆ ವಿಚಾರಿಸುವುದು.

ನರಸಿಂಹ ಸೇರಿಗಾರ್,
ಹಾರ್ಮೋನಿಯಂ ಮಾಸ್ಟರ್.

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ನಿಮ್ಮ ವ್ಯಾಪಾರವು ವೃದ್ಧಿಯಾಗಬೇಕೆ?

ಹಾಗಿದ್ದರೆ—

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ

ನವಯುಗದಲ್ಲಿ

ಜಾಹೀರಾತುಕೊಡಿರಿ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸು: ಉಡುಪಿ.

ಪ್ರಥಮ ಮೌಲ್ಯಮಾಪನ (Valuation) ದಲ್ಲಿಯೇ ಪಾಲಿಸಿದಾರರಿಗೆ

ಹೋಲ್ ಲೈಫ್ (Whole Life) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 15/-	ಲಾಭ (Bonus) ಹಂಚಿದೆ.	ಎಂಡವ್‌ಮೆಂಟ್ (Endowment) ಪಾಲಿಸಿಗಳಿಗೆ ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/-

ಅಖಿಲ ಕರ್ಣಾಟಕದಲ್ಲಿ ಪಾಲಿಸಿದಾರರದೇ ಆದ ವಿಮಾಸಂಸ್ಥೆ ಇದೊಂದೇ.

ಲಾಭಾದಾಯದ ಪ್ರತಿ ಅಂಶವೂ ಪಾಲಿಸಿದಾರರಿಗೇ ಹಂಚಲ್ಪಡುತ್ತದೆ.

ಈಗಿಂದೀಗಲೇ ಈ ಕಂಪೆನಿಯಲ್ಲಿ ವಿಮೆ ಇಳಿಸಿ ವಿಮೆಯ ಸಂಪೂರ್ಣ ಪ್ರಯೋಜನವನ್ನು ಹೊಂದಿರಿ.

ಏಜಂಟರಾಗಬಯಸುವವರು ಕಂಪೆನಿಯ ಹೆಡ್ ಆಫೀಸಿಗೆ ಬರೆಕೊಳ್ಳುವುದು.

THE CANARA MUTUAL
ASSURANCE COMPANY LTD.

—ಬಿರೇಶಚಂದ್ರ ಮಿಶ್ರಾರವರ ಸತ್ಯಶೋಧನೆ—

"ನಾಗರಾಣಿ ಗ್ವಿಡೆಲ್ಲೋ ಕೊಲೆಗಾತಿಯಲ್ಲ, ಛಲಗಾತಿ!"

ಮಿ. ಮೆಕ್ಡೊನಾಲ್ಡರ ಮಿಥ್ಯಾರೋಪ.

ನಿಜಸಂಗತಿ—ಅಸ್ಸಾಮಿನ ಸರಹದ್ದಿನಲ್ಲಿರುವ ಪರ್ವತ ಪ್ರದೇಶದಲ್ಲಿ ಕಳೆದ ಸತ್ಯಾಗ್ರಹ ಕಾಲದಲ್ಲಿ ಅಲ್ಲಿಯ ಕಾಡುಜನರ ಮುಂದಾಳುತ್ವ ವಹಿಸಿ ವೀರಾವೇಶದಿಂದ ಹೋರಾಡಿ ಜನ್ಮಾವಧಿ ಶಿಕ್ಷೆಗೆ ಗುರಿಯಾಗಿದ್ದ ನಾಗರಾಣಿ ಗ್ವಿಡೆಲ್ಲೋ ಎಂಬ ಧೀರ ತರುಣಿಯು ಈಗಲೂ ಕಾರಾಗೃಹದಲ್ಲಿ ಕೊಳೆಯುತ್ತಿದ್ದಾಳೆ. ಪಂಡಿತ ಜವಾಹರಲಾಲರು ಕಳೆದ ಬಾರಿ ಅಸ್ಸಾಮು ಪ್ರವಾಸ ಹೋಗಿದ್ದಾಗ ಅವಳ ಚರಿತ್ರೆಯನ್ನು ತನ್ನ ಉತ್ತೇಜಕ ವಾಣಿಯಲ್ಲಿ ವಿವರಿಸಿ ಲೋಕದ ಲಕ್ಷ್ಯವನ್ನು ಕಡೆಗೆಳೆದಿದ್ದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಾಗರಾಣಿಯನ್ನು ಅಭಿನಂದಿಸಿ ಅವಳ ಬಿಡುಗಡೆಗಾಗಿ ಠರಾವು ಮಾಡಿದ್ದರು. ಗ್ವಿಡೆಲ್ಲೋಳ ಬಿಡುಗಡೆಯ ಚಳವಳವು ಕೆಲಕಾಲದಿಂದ ಪ್ರಾಮುಖ್ಯತೆ ಪಡೆದಿದೆ. ಅಸ್ಸಾಮಿನ ಮಹಿಳಾ ಸಭೆ, ಕಾಂಗ್ರೆಸ್ ಕಮಿಟಿ, ಪ್ರಜಾಮಂಡಲ ಮೊದಲಾದುವು ನಾಗರಾಣಿಯನ್ನು ಬಿಡಬೇಕೆಂದು ಪ್ರಯತ್ನ ನಡೆಸುತ್ತಿವೆ. ಅವಳ ದಸ್ತಗಿರಿಗೆ ಹೊಣೆಯಾಗಿರುವ ಮಣಿಪುರ ದರ್ಬಾರಿನ ಅಧ್ಯಕ್ಷ ಮಿ. ಮೆಕ್ಡನಾಲ್ಡ್ ಸಾಹೇಬರು ಎಲ್ಲಕ್ಕೂ ತಿರಸ್ಕಾರ ಸೂಚಿಸಿ, ಗ್ವಿಡೆಲ್ಲೋ ಮಾಯಾಗಾತಿಯೆಂದೂ, ನಾಗ ಜನರಲ್ಲಿರುವ ಒಂದು ಪಂಗಡದ ನಾಯಕಿಯಾಗಿದ್ದು ಇನ್ನೊಂದು ಪಂಗಡದವರನ್ನು ಕೊಲೆ ಮಾಡುವ ವೃತ್ತಿಯಲ್ಲಿದ್ದಳೆಂದೂ ಸತ್ಯಸಂಗತಿಯನ್ನರಿಯದೆ ಅವಳನ್ನು ದೇಶಭಕ್ತೆಯಾಗಿ ಮಾಡಿ ಮಾತಾಡುವವರ ಬಿನ್ನಹಕ್ಕೆ ಎಂದೂ ಬೆಲೆ ಕೊಡಲಾಗುವುದಿಲ್ಲವೆಂದೂ ಸವಿವರ ಹೇಳಿಕೆಯೊಂದನ್ನು ಪ್ರಕಟಿಸಿದ್ದರು. 1930-32ನೇ ಇಸವಿಯ ಸತ್ಯಾಗ್ರಹ ಯುದ್ಧ ಮಂಡಲದ ಅಧ್ಯಕ್ಷರಾಗಿದ್ದ ಶ್ರೀ. ಬಿರೇಶಚಂದ್ರ ಮಿಶ್ರಾರವರು ಈಗ ಸತ್ಯಸಂಗತಿಯನ್ನು ಹೊರಗೆಡಹಿದ್ದಾರೆ. ಅದರ ಸಾರಾಂಶವು ಹೀಗಿದೆ.—

ಶೋಧನೆಯ ಪ್ರಯಾಸ

1932ನೇ ಇಸವಿಯ ಸತ್ಯಾಗ್ರಹ ಭರತದ ಕಾಲದಲ್ಲಿ ನಾಗ ಪರ್ವತ ಪ್ರದೇಶದಲ್ಲಿ ಪ್ರಬಲವಾಗಿರುವ ಕಂದಾಯ ನಿರಾಕರಣೆಯ ಚಳವಳವನ್ನು ದಮನಿಸಲು ಸೈನಿಕ ಧಾಳಿ ನಡೆಯುತ್ತಿದೆ ಎಂಬ ವಾರ್ತೆ ಬಂತು. ಸಿಲ್ಹೆಟ್ ಕಾಂಗ್ರೆಸ್ ಕಮಿಟಿಯವರು ಅಲ್ಲಿಯ ಸತ್ಯ ಸಂಗತಿಯೇನೆಂಬುವನ್ನು ತಿಳಿದು ಬರಲು ಸಾಹಸಿ ತರುಣನೊಬ್ಬನನ್ನು ಕಳುಹಿಕೊಟ್ಟರು. ಈ ತರುಣನು ಬಲವಾದ ಸೈನಿಕ ಪಹರೆಯಿಂದ ಅತಿ ಪ್ರಯಾಸದಿಂದ ತಪ್ಪಿಸಿಕೊಂಡು ಒಳಹೊಕ್ಕು ಸಾಧಾರವಾದ ದಾಖಲೆಗಳನ್ನು ಸಂಗ್ರಹಿಸಿದ. ಅವನು ಸಾಮಾನಿನ ಗಂಟಿನೊಳಗೆ ಅಡಗಿ ಕೂತು ಅಲ್ಲಿಂದ ಸುರಕ್ಷಿತವಾಗಿ ಪಾರಾಗಿ ಬಂದ.

ಪರ್ವತದ ಪಾರುಪತ್ಯ

ಆ ಪರ್ವತಗಳಲ್ಲಿ ವಾಸಿಸುವ ನಾಗ ಜನರಲ್ಲಿ ಬೇರೆ ಬೇರೆ ಪಂಗಡಗಳಿದ್ದು ಅವುಗಳೊಳಗೆ ಸಾಮಾಜಿಕ ಭಿನ್ನತೆಯೂ ಇದೆ. ಈ ಪರ್ವತ ಪ್ರದೇಶಗಳಲ್ಲಿ ಬ್ರಿಟಿಷ್ ಆಳ್ವಿಕೆಯ ಹತೋಟಿಗೆ ಸಿಗಲಾರದ ಭಾಗವೂ ಇತ್ತು. ಇಲ್ಲಿಯವರಿಂದ ಯಾವ ಕರವನ್ನೂ ವಸೂಲುಮಾಡಲು ಸರಕಾರದಿಂದ ಸಾಧ್ಯವಿರಲಿಲ್ಲ. ಆದರೆ ಸರಕಾರದ ಅಂಕೆಗಳೊಳಗಾಗಿರುವ ಪ್ರದೇಶದಲ್ಲಿ ತಾರತಮ್ಯ ನೋಡದೆ ಎಲ್ಲರಿಗೂ ರೂ. 3ರಂತೆ ಮನೆತೆರಿಗೆ ಹೊರಿಸಲಾಗಿತ್ತಲ್ಲದೆ ಅಲ್ಲಿರುವ ಸೈನಿಕ ಅಧಿಕಾರಿಗಳಿಗೆ ಇತರ ಸೇವೆ, ಕಾಣಿಕೆಗಳನ್ನೂ ಸ್ಥಳೀಕರು ಸಲ್ಲಿಸುತ್ತಿದ್ದರು. ನಿರಂಕುಶ ವರ್ತಿಗಳಾದ ನಾಗ ಜನರು ತಮ್ಮ ನೆರೆಯ ಭಾಗದವರೂ ತೆರಿಗೆ ಕೊಡಬಾರದೆಂದು ಮೊದಲಿನಿಂದಲೂ ಪ್ರೇರೇಪಿಸುತ್ತಲೇ ಇದ್ದರು.

ಕಾಯಿದೇ ಭಂಗ ಚಳವಳ

1930ರಲ್ಲಿ ಮಹಾತ್ಮಾಗಾಂಧಿಯವರ ಕಾಯಿದೇಭಂಗ ಚಳವಳವು ದೇಶದಲ್ಲೆಲ್ಲಾ ಹಬ್ಬಿದಾಗ ಈ ಜನರು ಆ ಸಂದರ್ಭವನ್ನು ಸದುಪಯೋಗಿಸಿಕೊಂಡರು. ಅಲ್ಲಿ ಕರನಿರಾಕರಣಾ ಚಳವಳವು ಕಾಡ್ಗಿಚ್ಚಿನಂತೆ ಹಬ್ಬಿಕೊಂಡಿತು. ಜಾದೊನಂಗ್ ಎಂಬ ತರುಣ ಮತ್ತು ಗ್ವಿಡೆಲ್ಲೋ ರಾಣಿ ಈ ಚಳವಳದ ಮುಂದಾಳಾಗಿ ನಿಂತರು. ಆ ಚಳವಳದ ಮೂಲೋದ್ದೇಶವು ಬ್ರಿಟಿಷ್ ಸರಕಾರದ ಹಿಡಿತವನ್ನು ಸಡಲಿಸಿ ತಮ್ಮ ಸಂಸ್ಕೃತಿ ಪೋಷಕವಾದ ನಾಗರಾಜ್ಯವನ್ನು ಸ್ಥಾಪಿಸಬೇಕೆಂಬುದೊಂದೇ ಆಗಿತ್ತು. ನಾಗ ಜನರ ಪಂಗಡಗಳೊಳಗೆ ಎಂತಹ ಭಿನ್ನತೆಯಿದ್ದರೂ ಈ ಗುರಿಯ ಕಡೆಗೆ ಅವರೆಲ್ಲಾ ಏಕದೃಷ್ಟಿಯುಳ್ಳವರಾಗಿದ್ದರು. ಮಿ. ಮೆಕ್ಡೊನಾಲ್ಡರು ಬೇಜವಾಬ್ದಾರಿಕೆಯಿಂದ ಒಂದು ಪಂಗಡದವರಿನ್ನೊಂದು ಪಂಗಡದವರ ತಲೆ ಕಡಿಯುತ್ತಿದ್ದರೆಂದು ಆರೋಪಿಸುತ್ತಿರುವರಾದರೂ ಅದಕ್ಕೊಂದೇ ಒಂದು ನಿದರ್ಶನವನ್ನೀಯಲು ಅವರಿಂದಾಗಲಿಲ್ಲ. ಮಾತ್ರವಲ್ಲ, ಅಲ್ಲಿಯ ವಸ್ತುಸ್ಥಿತಿಯ ಪೂರ್ಣ ಅಜ್ಞಾನವು ಹೊರಗಿನವರೆಲ್ಲರಿಗೂ ಅಂತೆಯೇ ಮಿ. ಮೆಕ್ಡೊನಾಲ್ಡರಿಗೂ ಇದೆ.

ಗ್ವಿಡೆಲ್ಲೋ ರಾಣಿಯ ಸೆರೆ

ಈ ನಾಗಜನರು ಒರಟು ಸ್ವಭಾವ, ಎದೆಗಾರಿಕೆ, ಸ್ವಸಂಸ್ಕೃತಿ ಪ್ರೇಮವಿರುವ ಕಾಡುಜನರಿದ್ದು ಪೂರ್ತಿ ಅಶಿಕ್ಷಿತರಿರುವರು. ಆದರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಹೂಡಿದ ಅವರ ಚಳವಳವು ಸರಕಾರದ ಮುಂದೆ ಅಭೇದ್ಯವಾಗಿ ನಿಂತಿತು. ಶತಪ್ರಯತ್ನಮಾಡಿ ಅಸ್ಸಾಮು ಸರಕಾರವು ಜಾದೊನಂಗನನ್ನು 1930ರಲ್ಲಿ ದಸ್ತಗಿರಿ ಮಾಡಿ ಅವನಿಗೆ ಮರಣದಂಡನೆ ವಿಧಿಸಿತು. ಅವನ ದಾಯಾದಿ ತಂಗಿಯೂ ಸಹವ್ಯವಸಾಯಿಯೂ ಆದ ಗ್ವಿಡೆಲ್ಲೋ ರಾಣಿಯು ಅತ್ಯಂತ ವಿಚಕ್ಷಣತೆಯಿಂದ ಈ ಚಳವಳವನ್ನು ಮುನ್ನಡೆಯಿಸಿದಳು. ನಾಗಜನರು ಅವಳನ್ನು ದೇವಿಯಂತೆ ಕಂಡು ಅವಳ ಸಂಘಟನೆಗೆ ಕಟ್ಟುಬಿದ್ದು ಒಮ್ಮತ್ಯದಿಂದ ಹೋರಾಡಿ ಸರಕಾರವನ್ನು ಪೇಚಾಟಕ್ಕೀಡುಮಾಡಿದರು. ಆ ಸಮಯದಲ್ಲಿ ಸೈನಿಕರು ಅಲ್ಲಿಯವರಿಗೆ ಕೊಟ್ಟಿದ್ದ ಉಪದ್ರವಕ್ಕಿವಲ್ಲಿ ಹಳ್ಳಿಹಳ್ಳಿಗಳಿಗೇನೇ ಬೆಂಕಿಕೊಟ್ಟುದಿದೆ; ಸಿಕ್ಕಸಿಕ್ಕಿದವರನ್ನೆಲ್ಲಾ ದಸ್ತಗಿರಿ ಮಾಡಿ 'ನಾಗಜನ'ರೆಂದೊಡನೆ ಕೋಳಸಿಕ್ಕಿಸಿದುದಿದೆ. ಆದರೂ ದೀರ್ಘಕಾಲದ ವರೆಗೆ ಗ್ವಿಡೆಲ್ಲೋಳನ್ನು ದಸ್ತಗಿರಿ ಮಾಡಲಾಗಲಿಲ್ಲ. ಅವಳು ಬಹು ಚಾತುರ್ಯದಿಂದ ತಪ್ಪಿಸಿಕೊಂಡು ಚಳವಳವನ್ನು ಮುನ್ನಡೆಯಿಸುತ್ತಲೇ ಇದ್ದಳು. ಕೊನೆಗೆ ತನ್ನಿಂದಾಗಿ ತನ್ನ ಜನರು ಪಡುತ್ತಿರುವ ಸಂಕಷ್ಟವನ್ನು ಸಹಿಸಲಾರದೆ 1932ನೇ ಅಕ್ಟೋಬರಿನಲ್ಲಿ ಕೊನಾಮಾ ಎಂಬಲ್ಲಿಯ ಬಳಿಯುಳ್ಳ ಮಿಲಿಟರಿ ಆಫೀಸರನೊಬ್ಬನ ಮುಂದೆ ತಾನಾಗಿ ಹಾಜರಾದಳು. ಕೊಲೆಗಾರಳೆಂಬ ಅಪಾದನೆ ಹೊರಿಸಿ ಪೊಲಿಟಿಕಲ್ ಏಜಂಟರು ಅವಳಿಗೆ ಜನ್ಮಾವಧಿ ಶಿಕ್ಷೆ ವಿಧಿಸಿದರು.

ಮಿ. ಮೆಕ್ಡೊನಾಲ್ಡರ ಮಿಥ್ಯಾರೋಪ

ಸತ್ಯ ಸಂಗತಿ ಹೀಗಿದ್ದರೂ ಮಿ. ಮೆಕ್ಡೊನಾಲ್ಡರೂ ಬೇರೆಯೇ ಕಂತೆ ಪುರಾಣ ಬಿಚ್ಚಿರುವರು. ರಾಣಿ ಗ್ವಿಡೆಲ್ಲೋ ಹೊಸ ತಂತ್ರವೊಂದನ್ನಭ್ಯಾಸಿಸಿ ಜಾದೊನಂಗನೊಡನೆ ಸೇರಿಕೊಂಡು ಮಾನವಾಹುತಿ ಕೊಡುತ್ತಿದ್ದಳೆಂದೂ, ಅವಳು ಮಹಾ ಜಾದುಗಾತಿಯೆಂದೂ ಅವರ ಪ್ರಕಟನೆ. ಆದರೆ ಆ ಹೊಸ ರೀತಿಯ ರೂಪರೇಷೆಯೆಂತಹದೆಂಬುದನ್ನು ತಿಳಿಸಲು ಅವರು ಸಮರ್ಥರಾಗಿಲ್ಲ. ಆ ಪರ್ವತ ಪ್ರಾಂತ್ಯಗಳ ನಾಗ ಜನರಲ್ಲಿ ಮಾನವ ಬಲಿಯೊಯುವ ಪದ್ಧತಿಯು ಬಹು ಪುರಾತನ ಕಾಲದಿಂದಲೂ ನಡೆದುಬಂದಿತ್ತು. ಈಗ ಕೂಡ ಸುಧಾರಿಸಿದ ನಾಗ ಜನರು ಕೂಡ ನರಬಲಿಯೊಯುತ್ತಿರುವರಂತೆ. ಅಸ್ಸಾಮಿನ ಮುಖ್ಯ ಪಟ್ಟಣದೊಳಗೂ ಹೊರಗೂ 'ಥ್ಲೆಂಗ್' ಎಂಬ ನಾಗಪೂಜೆಗಾಗಿ ಈ ಕಾಡು ಜನರು ನರಬಲಿಯೊಯುವ ಕ್ರಮವು ಈಗ ಕೂಡ ಉಂಟಂತೆ. ಆ ಪುರಾತನ ಪದ್ಧತಿಗೂ ಈ ಚಳವಳಕ್ಕೂ ಸಂಬಂಧವೇ ಇರಲಿಲ್ಲ. ನಾಗರಾಣಿಯ ಮೇಲಂತೂ ಅದು ಕೇವಲ ಮಿಥ್ಯಾರೋಪವೆಂದು ನಂಬಲಾಗಿದೆ. ಆದರೂ ಜನರ ಕಣ್ಣಿಗೆ ಮಣ್ಣೆರಚುವದಕ್ಕಾಗಿ ಅಜ್ಞಾತ ಸ್ಥಳವೊಂದರ ವಾರ್ತೆಯನ್ನು ಅಸಂಬದ್ಧವಾಗಿ ಹರಡಲಾಗಿದೆ

TRUE.COPY.

Certificate of Incorporation on Change of Name.

(Pursuant to Section 11 (4) and (5) of the Indian Companies Act, 1913.)

I hereby certify that the SUPPLY AGENCY LIMITED having, with the sanction of a special resolution of the said Company and with the approval of the Local Government, signified in G. O. No. 1570 MS. Development Department, dated 20th June 1939 changed its name, is now called the THULUNAD BANK OF SUPPLY AGENCY LIMITED and that such new name has this day been entered in the register.

Given under my hand at Mangalore this twenty-eighth day of June one thousand nine hundred and thirty-nine.

(*Sd.*) **F. Soans.**
Assistant Registrar of Joint Stock Companies,
South Canara.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುತ್ತದೆ.

CROWN RUBBER STAMP CO.,
Balmat Road, MANGALORE.

Included by the Mysore Govt. Stores, Purchase Committee in the list of approved firms

---

ನಮ್ಮ ಹೊಸ ಏಜಂಟರು

ಬ್ರಹ್ಮಾವರದಲ್ಲಿ—

ಶ್ರೀ. ಐ. ಡಿ. ಗುಂಡುರಾವ್,
ಬಸ್ ಸ್ಟೇಶನ್ ಬಳಿ.

ಲೈಬ್ರರಿ
ಮತ್ತು
ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ
ಪುಸ್ತಕಗಳು ನಮ್ಮಲ್ಲಿ
ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಆಂಡ್ ಪಬ್ಲಿಷರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಕಿವುಡರಿಗೆ
ಕಿವಿ ಕೇಳುತ್ತದೆ

ವಿಜ್ಞಾನ ಶಾಸ್ತ್ರದ ನವೀನ ಶೋಧೆ.

ಬಧಿರತಾ-ಹರಣ

ಕರ್ಣರೋಗಗಳಿಗೆ ಅಪ್ರತಿಮ ಔಷಧ. ಕಿವಿ ಸೋರುವದು, ಕೀವು ಬರುವದು, ಕಿವಿಯೊಳಗೆ ಘುಂಯ ಘುಂಯ ಶಬ್ದವಾಗುವದು, ಕ್ರಿಮಿ ಬೀಳುವದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ

ಬಧಿರತಾ-ಹರಣವು.

ಅಮೂಲ್ಯ ಔಷಧಿ. ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂತೆ.

ಬೆಲೆ ರೂ. 2—0—0

ಪತ್ತೆ:—ಆರೋಗ್ಯ ಸದನ,
ಮುಗಾರ್ದೇವಿ ಸ್ಟ್ರೀಟ್, ಮುಂಬಾಯಿ 4.

ನೋಟೀಸು

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. No ೩೩೩೯

M. ದೇವಪ್ಪ, ತಂದೆ ಪೂಜಾರ್ ಮಗ ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಮಟ್ಟು — ಅರ್ಜಿದಾರ

ಮತ್ತು ಎದುರು—

1 M. ಕೊರಗ ಪೂಜಾರ್ತಿ, 2 M. ರಾಮ ಪೂಜಾರಿ
3 M. ತನಿಯ ಪೂಜಾರಿ, 4 M. ಚೆಂಕ ಪೂಜಾರ್ತಿ ಇವರು ನಾಗು ಪೂಜಾರ್ತಿ ಮಕ್ಕಳು,
5 M. ಅಪ್ಪಯ ಪೂಜಾರಿ, 6 M. ಕೃಷ್ಣ ಪೂಜಾರ್ತಿ ಇವರು 4ನೇ ಎದುರಿನ ಮಕ್ಕಳು,
7 M. ತಿಮ್ಮಪ್ಪ ಪೂಜಾರಿ, 8 M. ಗೌರಿ ಪೂಜಾರ್ತಿ ಇವರು ಕೊರಗಿ ಪೂಜಾರ್ತಿ ಮಕ್ಕಳು

ಉಡುಪಿ ತಾಲ್ಲೂಕು ಕೊಡವೂರು ಗ್ರಾಮದ ಮಟ್ಟು ಬಳ್ಳಿಯವರು.

ಇವರೊಳಗೆ

ಸದ್ರಿ ಎದುರಿಗೆ ವ ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಉಡುಪಿ ತಾಲೂಕು ಕೊಡವೂರು ಗ್ರಾಮದ ಮಟ್ಟು ನಾಗು ಪೂಜಾರ್ತಿ ಮಗ ತಾರೀಕು 23-5-39 ರಲ್ಲಿ ಮೃತಪಟ್ಟ M. ಅಣ್ಣಯ್ಯನು ತಾರೀಕು 4-3-39ರಲ್ಲಿ ರಿಜಿಸ್ಟರು ಬರೆದಿಟ್ಟ ವಿಲ್ ನಾಮೆ ಪ್ರಕಾರ ಸದ್ರಿ M. ಅಣ್ಣಯ್ಯನ ಸೋದರಳಿಯ M. ದೇವಪ್ಪನಿಗೆ ಸಿಕ್ಕಬೇಕಾಗಿ ನಮೂದಿಸಿದ ಸ್ಥಿರಚರಸೊತ್ತುಗಳು ಐವೇಜುಗಳು ವಗೈರೆ ಪೈಕಿ ಅರ್ಜಿಯಿಂದ ಕೋರುವಂತೆ ದಿ ಒರಿಯಂಟ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ನಂಬ್ರ 219717ನೇ ದಿ ಎಂಪಾಯರ್ ಓಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿಯ ನಂಬ್ರ 87116ನೇ ವ ದಿ ಸನ್ ಲೈಫ್ ಎಶ್ಯೂರೆನ್ಸ್ ಕಂಪೆನಿಯ ನಂಬ್ರ 3035225 ನೇ ಪೋಲಿಸಿಗಳ ಪ್ರಕಾರ ಬರತಕ್ಕ ಪೂರಾ ಐವೇಜುಗಳು ಉಡುಪಿ ಡಿ. ಮು. ಕೋರ್ಟಿನಲ್ಲಿ ರೆಮೀಜಿಯ ಫರ್ನಾಂಡಿಸ್ ಬ್ಯಾ ವಗೈರೆ ರ ಮೇಲೆ O. S. 319/1933ನೇ ಡಿಕ್ರಿ ಪರಿಣಾಮ ಇವರ ಮೇಲೆ S. C. S. 9/1938ನೇಗೆ ವ ಕೆ. ಪಿ. ಮಹಮ್ಮದ ಮೂಸನ್ ಎಂಡ್ ಸನ್ಸ್ ಇವರ ಮೇಲೆ S. C. S. 22/1938ನೇಗೆ ಸಹಾ ಪಡೆದ ಡಿಕ್ರಿಗಳ ಪ್ರಕಾರ ಬಾಕಿ ಐವೇಜುಗಳು ಸಹಾ ವಸೂಲು ಮಾಡುವದೆಯೂ ಮತ್ತು ದಿ ಕಾಂಗ್ರಾಳ ನಾಯಕ ಬೇಂಕಿನ ನಂಬ್ರ 1796 ವ 1797ನೇ, ಉಡುಪಿ ಬೇಂಕಿನ ನಂಬ್ರ 468ರಿಂದ 482ರ ವರೆಗಿನ ವ 697, 698, 1044 ವ 1045ನೇ, ದಿ ಪೀಪ್ಯುಲ್ಸ್ ಇನ್ಶ್ಯೂರೆನ್ಸ್ ಕಂಪೆನಿಯ ನಂಬ್ರ 965ರಿಂದ 974ನೇ ವರೆಗಿನ, ದಿ ಸದರ್ನ್ ಬೇಂಕ್ ಲಿಮಿಟೆಡ್ಡಿನ ನಂಬ್ರ 8621ರಿಂದ 8650ನೇ ವರೆಗಿನ ಮತ್ತು ಬಡವರ ಬಂಧು ಪ್ರಿಂಟಿಂಗ್ ಪ್ರೆಸ್ ಇದರ ನಂಬ್ರ 720 ವ 721ನೇ ಶೇರುಗಳನ್ನು ತನ್ನ ಹೆಸರಿನಲ್ಲಿ ರಿಜಿಸ್ಟ್ರ ಮಾಡಿಕೊಳ್ಳುವದೆ ವಗೈರೆಯೂ ತನಗೆ ಸೆಕ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಸದ್ರಿ ಅರ್ಜಿದಾರನು ದಾಕ್ಲೆ ಮಾಡಿದ ಸದ್ರಿ ಅರ್ಜಿಯು ತಾರೀಕು 17-7-1939ಕ್ಕೆ ವಿಚಾರಣೆಗೆ ಇಡೋಣಾಗಿಯದೆ. ಆ ಕುರಿತು ಆಕ್ಷೇಪ ಇದ್ದವರು ಸದ್ರಿ ದಿವಸ ಬೆಳಗ್ಗೆ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಿಸುವದಾಗಿಕೊಳ್ಳತಕ್ಕದ್ದು.—

ತಪ್ಪಿದರೆ ಎಕ್ಸ್‌ಪಾರ್ಟಿಯಾಗಿ ಸದ್ರಿ ವ್ಯವಹಾರವನ್ನು ತೀರ್ಮಾನಿಸಲಾದೀತು.—

ಉಡುಪಿ 28-6-39 — P. Panduranga Nayak B.A.B.L., P. Dayananda Nayak B.A.L.L.B, *Advocates for Petitioner.*

ಬೈಂದೂರು—ಇದೇ ತಾ. 1ರಲ್ಲಿ ಸ್ಥಳೀಕ ಮಾಧ್ಯಮಿಕ ಶಾಲೆಯಲ್ಲಿ ಹಳ್ಳಿಯ ನಿವಾಸಿಗಳಿಗೆ ಬೇಕಾದ ಆಟಗಳನ್ನು (Village sports for villagers) ಒದಗಿಸುವ ಕುರಿತು ಆಲೋಚಿಸುವರೆ ಗ್ರಾಮಸ್ಥರ ಒಂದು ಸಭೆಯು ಜರಗಿತ್ತು. ಅಂದಿನ ಅಧ್ಯಕ್ಷಸ್ಥಾನವನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ. ಕೆ. ಅಂತಪ್ಪ B. A. B. L.ರವರು ವಹಿಸಿದ್ದರು. ಸಭೆಯ ಉದ್ದೇಶವನ್ನು ವಿವರಿಸಿದ ನಂತರ ಈ ಕೆಳಗಿನ ಮಹಾಶಯರಿಂದ ಕೂಡಿದ ಒಂದು ಮಂಡಳಿಯು ಏರ್ಪಡಿಸಲ್ಪಟ್ಟಿತು. ಶ್ರೀಗಳಾದ 1. ಕೆ. ಕೃಷ್ಣಭಟ್ಟ (ಅಧ್ಯಕ್ಷ) 2. ಡಾಕ್ಟರ್ ಕೃಷ್ಣಮೂರ್ತಿ (ಕಾರ್ಯದರ್ಶಿ) 3. ಯಸ್. ಗಣಪತಿ ರಾವ್ (ಖಜಾನ್ಜಿ) 4. ಬಿ. ಮೊಕ್ತುಂ ಸಾಹೇಬ್ 5. ಡಿ. ಆರ್. ಕುಂಪ್ಳೆ. ವಂದನೆ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಉಡುಪಿ

ಹರಿಕಥೆ—ಶ್ರೀ ಮಟ್ಟಿ ಶಂಕರನಾರಾಯಣ ಸಾಮಗರು ಶ್ರೀ. ಅನಂತೇಶ್ವರ ದೇವಸ್ಥಾನದಲ್ಲಿ ತಾ. 25-6-38ರಲ್ಲಿ ಸತ್ಯಶೋಧನ (ಜನಕರಾಯ ಸ್ವಪ್ನ) ಎಂಬ ಹರಿಕಥೆಮಾಡಿದರು. ತಾ. 27ರಂದು 'ರಾಮ ಜನನ' ಎಂಬ ಹರಿಕಥಾ ಸಪ್ತಾಹವನ್ನು ಮಾಡುತ್ತಿದ್ದಾರೆ. ಹರಿಕಥಾಕಾಲಕ್ಷೇಪವು ಜನಸೊಬ್ಬ ವಂತಿವೆಯೆಂಬ ವಕ್ಕೆ ಹೆಚ್ಚಾಗಿ ಬರುತ್ತಿರುವ ಜನಸಂಖ್ಯೆಯೇ ಸಾಕ್ಷಿಯಾಗಿದೆ.

ಗಂಡಲ್ಲ; ಹೆಣ್ಣು—ತಾ. 27-6-39ರಲ್ಲಿ ಪ್ರಯಾಣಿಕನೋರ್ವನು ಕುಂಭಕಾಶಿಯಿಂದ ಉಡುಪಿಗೆ ಬಂದ, ಶ್ರೀ ಕೃಷ್ಣಾ ರೆಸ್ಟೋರೆಂಟಿಗೆ ಹೋಗಿ ವಿಶ್ರಮಿಸಿದ. ಹೋಟೆಲಿನವರು ಸಂಶಯಗ್ರಸ್ತರಾದ ಹೋಟೆಲಿನವನು ವ್ಯಕ್ತಿಯು ಸ್ತ್ರೀಯೆಂತಿವೆಯೆಂದು ಪೋಲಿಸರಿಗೆ ತಿಳಿಸಿದರು. ವಿಚಾರಿಸಲಾಗಿ ತಾನು ನಾಟಕದಲ್ಲಿ ಸ್ತ್ರೀಪಾತ್ರ ಧರಿಸುವ ಪುರುಷನೆಂದು ಸಮಾಧಾನ ಹೇಳಿ ಶಿವಮೊಗ್ಗಕ್ಕೆ ಟಿಕೇಟುಮಾಡಿ ಮೋಟರು ಹತ್ತಿತು. ಪ್ರಯಾಣಿಕರಿಗೂ ಅನುಮಾನ ಹುಟ್ಟಿಯಿತು. ಡ್ರೈವರರು ಸಂಶಯಗೊಂಡು ವ್ಯಕ್ತಿಯನ್ನು ವಿಚಾರಿಸಿದರು, ಪರೀಕ್ಷಿಸಿದರು. ಸ್ತ್ರೀಯೆಂದು ಖಚಿತವಾಗಲು ಅವಳನ್ನು ಸ್ತ್ರೀ ಉಡುಗೆಯಿಂದ ಉಡುಪಿಗೆ ತರಲಾಯಿತು. ಇಲ್ಲಿ ಎಕ್ಸ್‌ಪ್ರೆಸ್ ನೌಕರರೊಬ್ಬರು ಅವಳ ಗುರುತು ಹಿಡಿದರು. ಅವಳು 17ವರ್ಷ ಪ್ರಾಯದ ಲಕ್ಷ್ಮಿ ಎಂಬ ಉಡುಪಿಗೆ 2-3ಮೈಲು ದೂರದ ಅಲೆವೂರಿನ ಹುಡುಗಿಯಾಗಿದ್ದಳು. ಅವಳ ತಂದೆ ಶಿವಮೊಗ್ಗದಲ್ಲಿ ವ್ಯಾಪಾರಿ. ಗಂಡನ ಮನೆ ಕುಂಭಕಾಶಿಯಲ್ಲಿ. ಗಂಡನ ಕಡೆಯವರು ಅವಳನ್ನು ಕರೆದೊಯ್ಯದೆ ಬಿಟ್ಟಿರಲು ದಾವಾ ಮೂಲಕ ಅರ್ಜಿ ಕೇಳಲಾಗಿತ್ತು. ಆಗ ಗಂಡನ ಕಡೆಯವರವಳನ್ನು ಕರಕೊಂಡು ಹೋಗಿ ಪೀಡಿಸುತ್ತಿದ್ದರು. ಈ ಬಾಧೆಯನ್ನು ತಡೆಯಲಾರದೆ ಹುಡುಗಿಯು ಗಂಡು ವೇಷ ಹಾಕಿ ಉಡುಪಿಗೆ ಬಂದು ಅಲ್ಲಿಂದ ತಂದೆಯಿರುವಲ್ಲಿಗೆ (ಶಿವಮೊಗ್ಗಕ್ಕೆ) ಹೊರಟು ಪೆಂದು ತಿಳಿದುಬಂತು. ಇವಳನ್ನೀಗ ಅಲೆವೂರಿನ ದಾಕ್ತರ್ ಶ್ರೀ. ರಾಮಚಂದ್ರರಾಯರ ಕೈಗೊಪ್ಪಿಸಲಾಗಿದೆ. ಡಾಕ್ಟರರು ತಂತಿ ಮೂಲಕ ಅವಳ ತಂದೆಗೆ ವಿಚಾರವನ್ನೆಲ್ಲಾ ತಿಳಿಸಿರುತ್ತಾರೆ. ಈಕೆಯ ಗಂಡನು ಕುಮುಟೆಯಲ್ಲಿರುವನಂತೆ.

ಅಜೆಕಾರು—ಸ್ಥಳೀಯ ಪಂಚಾಯ್ತ ಬೋರ್ಡಿನವರು ನವೀನವಾಗಿ ಒಂದು ಸಾರ್ವಜನಿಕ ವಾಚನಾಲಯವನ್ನು ತೆರೆದಿರುವುದು ಸ್ತುತ್ಯ.

ಮೂಲ್ಕಿ—ತಾ. 27-6-39ರಲ್ಲು ಕೂಡಿ ಬಂದ ಸ್ಥಳೀಕ ಯೂನಿಯನ್ ಕ್ಲಬ್ಬಿನ ಕಾರ್ಯ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

THE
Canara Industrial & Banking Syndicate, Ltd.

(INCORPORATED IN BRITISH INDIA
LIABILITY OF SHAREHOLDERS LIMITED.)

ESTD. 1925

Head Office:- UDIPI, (S. India.)

SEASON DEPOSITS ARE ACCEPTED at 3½ per cent per annum

Further particulars on application to any of our thirty-five Offices.

ದಕ್ಷಿಣ ಕನ್ನಡ

ಕಾರೀ ಸಭೆಯಲ್ಲಿ ಶ್ರೀ. ಡಾಕ್ಟರ್ ಯಂ. ಆರ್. ಕಾಮತ್, ಯಲ್. ಯಂ. ಪಿ. ರವರು ಅಧ್ಯಕ್ಷರಾಗಿಯೂ, ಶ್ರೀ. ಕೆ. ವಿಟ್ಠಪ್ಪ, ಬಿ. ಎ. ಯಲ್. ಟಿ. ರವರು ಉಪಾಧ್ಯಕ್ಷರಾಗಿಯೂ ಶ್ರೀ ಯಂ. ಸಿದ್ದು ಶೆಟ್ಟಿ ಖಜಾನ್ಜಿರಾಗಿಯೂ, ಶ್ರೀ. ಬಿ. ಭೋಜರಾಯರು ಗೌರವ ಕಾರ್ಯದರ್ಶಿಯರಾಗಿಯೂ, ಶ್ರೀ. ಬಿ. ಅಣ್ಣು ಪೂಜಾರಿಯವರು ಅಸಿಸ್ಟಾಂಟ್ ಕಾರ್ಯದರ್ಶಿಯರಾಗಿಯೂ, ಸರ್ವಾನುಮತದಿಂದ ಚುನಾಯಿಸಲ್ಪಟ್ಟಿರುವರಾಗಿ ತಿಳಿದುಬರುತ್ತದೆ.

ಮದ್ರಾಸು ಸರಕಾರದ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಮಂತ್ರಿಗಳಾದ ಮಾನ್ಯ ಬಿ. ಗೋಪಾಲರೆಡ್ಡಿಯವರು ಇದೇ ಬರುವ ತಾ. 10-7-39ನೇ ಸೋಮವಾರ ಪೂರ್ವಾಹ್ನ ಘಂಟೆ 11ಕ್ಕೆ ಇಲ್ಲಿಗೆ ಚಿತ್ತೈಸುವರಾಗಿಯೂ ಬೋರ್ಡು ಹೈಸ್ಕೂಲ್ ಕಟ್ಟಡದ ಶಂಕುಸ್ಥಾಪನೆ ಮಾಡುವರಾಗಿಯೂ ಕೇಳುತ್ತೇವೆ.

ಸ್ಥಳೀಕ ಸಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಸಭೆಯು ಇದೇ ಬರುವ ತಾ. 8-7-39 ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಸೆಂಟರ್ ಸ್ಕೂಲಲ್ಲಿ ಜರಗಲಿರುವುದು.

ಉಡುಪಿತಾಲೂಕು ಹರಿಜನ ಸೇವಕ ಸಂಘ, ಬ್ರಹ್ಮಾವರ

ಉಡುಪಿಯ ಕಾರ್ಯಕ್ರಮ—ತಾ. 29-6-39 ರಿಂದ ಸಂಘದ ಕಾರ್ಯದರ್ಶಿ ಶ್ರೀ ಬಿ. ಅಂತಯ್ಯ ಸೆಟ್ಟರು ಉಡುಪಿ ಮತ್ತು ಆ ಸುಪಾಸಿನ ಕೊರಗ (ಹರಿಜನ) ರ ಕೇರಿಗಳನ್ನು ಸಂದರ್ಶಿಸಿ ಅವರ ಬಾಲಕರನ್ನು ಶುಚಿಗೊಳಿಸುವುದು ಮತ್ತು ಸಾರ್ವಜನಿಕ ಶಾಲೆಗಳಿಗೆ ವಿದ್ಯಾಭ್ಯಾಸಮಾಡುವರೆ ಪ್ರವೇಶಿಸುವ ಕಾರ್ಯ ಕೈಗೊಂಡು ತಾ. 30-6-39ರಲ್ಲು ಮುನ್ಸಿಪಲ್ ಮ್ಯಾನ್ ಶಾಲೆಗೆ 2 ಮಕ್ಕಳನ್ನು ದಾಖಲುಮಾಡಿ ಬೇರೆ ಶಾಲೆಗಳಿಗೆ ಸೇರಿಸುವರೆ ಮಕ್ಕಳನ್ನು ಶುಚಿಗೊಳಿಸುತ್ತಾ ಮತ್ತೂ ವರೆಗೆ ಕೆಲಸಮಾಡುತ್ತಿದ್ದಾರೆ. ಹೆಚ್ಚಿನ ಮಕ್ಕಳು ವಿದ್ಯಾಭ್ಯಾಸಮಾಡಲು ಮುಂದೆ ಬಂದರೆ ಒಂದು ಹರಿಜನ ಬೋರ್ಡಿಂಗ್ ಹೌಸನ್ನು ತೆರೆಯುವ ಯೋಚನೆಯಲ್ಲಿದ್ದಾರೆಂದು ತಿಳಿದುಬರುತ್ತದೆ.

ಕಟಪಾಡಿ—ಶ್ರೀ. ಕೆದಿಂಜೆ ರಾಮಯ್ಯ ಹೆಗ್ಡೇರ ನಿಧನ—ಇವರು ಯೇಣಗುಡಿಯ ತನ್ನ ಮನೆಯಲ್ಲಿ 2-3ವರ್ಷಗಳಿಂದ ವಾತರೋಗ ಪೀಡಿತರಿದ್ದು ಹಾಸಿಗೆ ಹಿಡಿದಿದ್ದರು. ತಾ. 30-6-39ನೇ ರಾತ್ರಿ ಸುಮಾರು 11ಗಂಟೆಗೆ ತನ್ನ 69ನೇ ವರ್ಷದಲ್ಲಿ ದಿವಂಗತರಾದರೆನ್ನಲು ವಿಷಾದವಾಗುತ್ತದೆ. ಇವರು ದೊಡ್ಡ ಬಂಟಮನೆತನದವರೂ ಸದ್ಧರ್ಮಿಗಳೂ ಆಗಿದ್ದರು. ಇವರಿಗೆ 8ಜನ ಹೆಮ್ಮಕ್ಕಳು ಒಬ್ಬರು ಗಂಡು-ಶ್ರೀ. ಕೆ. ಭೋಜರಾಜ ಶೆಟ್ಟಿ—ಇವರು ಮಂಗಳೂರಲ್ಲಿ ವಕೀಲರಾಗಿದ್ದಾರೆ. ಮೃತರ ದುಃಖೀ ಕುಟುಂಬದೊಂದಿಗೆ ಸಹಾನುಭಾವ ಸೂಚಿಸುವೆವು.

ಸ್ಯಾಕಲ್ ಸವಾರಿಮಾಡುವವರು ಗಮನಿಸತಕ್ಕ ಪ್ರಾಮುಖ್ಯ ನಿಯಮಗಳು

1. ಸ್ಯಾಕಲುಗಳಿಗೆ ಬೇಕಾದ ಬ್ರೇಕುಗಳೂ ಬೆಲ್ಲುಗಳೂ ಇರುವಂತಹುಗಳನ್ನೇ ರಾಜರಸ್ತೆಗಳಲ್ಲಿ ಉಪಯೋಗಿಸತಕ್ಕದ್ದು. 2. ಮುನಿಸಿಪಲ್ ವ್ಯವಹಾರಕ್ಷೇತ್ರದಲ್ಲಿ ಸಂಚರಿಸುವಾಗ ಒಂದು ಸ್ಯಾಕಲಿನಲ್ಲಿ ಒಬ್ಬನೇ ಸವಾರಿಮಾಡತಕ್ಕದ್ದು. 3. ಜನಸಂಚಾರವಿರುವ ಸ್ಥಳಗಳಲ್ಲಿ ಸ್ಯಾಕಲ್ ಸವಾರರು ಒಬ್ಬರ ಹಿಂದೆ ಒಬ್ಬರು ಹೋಗತಕ್ಕದ್ದು. ಒಂದೇ ಲೈನಿನಲ್ಲಿ ಇಬ್ಬರಿಗಿಂತ ಹೆಚ್ಚು ಮಂದಿ ಹೋಗಕೂಡದು.

ಮೇಲಿನ ನಿಯಮಗಳು ಕಾರ್ಯರೂಪದಲ್ಲಿ ಫಲಿಸುವಂತೆ ಎಲ್ಲಾ ಸ್ಯಾಕಲುಮಾಲರು ಪೋಲೀಸರೊಂದಿಗೆ ಸಹಕರಿಸಬೇಕಾಗಿ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳು ಅಪೇಕ್ಷಿಸುತ್ತಾರೆ.

THE
Canara Banking Corporation, Ltd.
(Incorporated in British India.)

THE REGISTER OF MEMBERS
&
TRANSFER BOOKS OF THE CORPORATION
will remain closed from 15-7-1939 to 31-7-1939 both days inclusive.
(By order)
V. R. KAMATH,
MANAGER.

ಉಡುಪಿ, ಗುರುವಾರ, ತಾ. ೬-೭-೩೯

ಏಕೀಕರಣದ ಪ್ರಶ್ನೆ ನೀರು ಕುಡಿಯುತ್ತಿದೆ!

ಬೊಂಬಾಯಿಯಲ್ಲಿ ಜರಗಿದ ಅಖಿಲ ಭಾರತ ರಾಷ್ಟ್ರಸಭಾ ಸಮಿತಿಯ ಅಧಿವೇಶನದ ವೇಳೆ ಕರ್ನಾಟಕದ ನಿಸ್ಸಹಾಯಕತೆಗೊಂದು ಉತ್ತಮ ನಿದರ್ಶನ ದೊರೆಯಿತು. ಎ. ಐ. ಸಿ. ಸಿ. ಸಭೆಯಲ್ಲಿ ಆಂಧ್ರ ಪ್ರಾಂತ್ಯವನ್ನು ಪ್ರತ್ಯೇಕಿಸಬೇಕೆಂಬ ಅನಧಿಕಾರೀ ಠರಾವು ಬಂದು ಅದು ಪಾಸಾಗಿರುವುದು. ಅದೇ ಠರಾವಿನೊಳಗೆ ಕರ್ನಾಟಕವನ್ನೂ ಪ್ರತ್ಯೇಕ ಪ್ರಾಂತ್ಯವಾಗಿ ಮಾಡುವ ಅಂಶವನ್ನು ಸೇರಿಸಬೇಕೆಂದು ಶ್ರೀ ಕುರ್ತಕೋಟಿಯವರು ತಂದ ಉಪಸೂಚನೆಗೆ ನಿಯಮಶೀರ ಆಕ್ಷೇಪನೆದ್ದು ಅಧ್ಯಕ್ಷರೂ ಆ ಆಕ್ಷೇಪವನ್ನು ಎತ್ತಿಹಿಡಿದರು. ಅಂತೆಯೇ ಆಂಧ್ರ ಪ್ರಾಂತ್ಯ ನಿರ್ಮಾಣಕ್ಕೊಪ್ಪಿಗೆಯಿತ್ತ ಎ. ಐ. ಸಿ. ಸಿ. ಸಭೆಯು ಕರ್ನಾಟಕದ ಕುರಿತು ಮೌನತಾಳುವಂತಾಯಿತು. ಇದು ಕರ್ನಾಟಕದ ಕರ್ತವ್ಯಶೂನ್ಯತೆ ಮತ್ತು ನಿಸ್ಸಹಾಯಕತೆಯನ್ನು ಸಾರುತ್ತದೆ. ಆಂಧ್ರರಿಗೆ ತಮ್ಮ ಪ್ರಾಂತ್ಯರಚನೆಯ ಪ್ರಶ್ನೆಯು ಜೀವಾಳದಂತಿದೆ. ಅವರಾ ಕರ್ತವ್ಯ ಸಾಧನೆಯ ಭರದಲ್ಲಿ ಮೇರೆ ಮೀತಿಯನ್ನು ಲಕ್ಷಿಸುವದಿಲ್ಲ. ರಾಷ್ಟ್ರೀಯ ಭಾವನೆಯನ್ನು ಪ್ರಾಂತ್ಯಾಭಿಮಾನಕ್ಕೆ ಎರಡನೆಯದನ್ನಾಗಿ ಮಾಡಿಕೊಂಡಿದ್ದಾರೆ. ಎಸೆಂಬ್ಲಿ ಸ್ಪೀಕರರಾದ ಮಾನ್ಯ ಸಾಂಬ ಮೂರ್ತಿಗಳು ಆಂಧ್ರ ಪ್ರಾಂತ ನಿರ್ಮಾಣದ ಕಾರ್ಯ ಕೈಗೊಳ್ಳಲು ತನ್ನ ಪದವಿಗೆ ರಾಜಿಕೊಡುವವರೆಗೂ ಮುಂದು ವರಿದಿದ್ದರು. ಮಾನ್ಯ ರಾಜಗೋಪಾಲಾಚಾರ್ಯರು ಆಂಧ್ರದಲ್ಲಿ ಸಂಚರಿಸಿದಾಗ, ಅವರೀ ಪ್ರಶ್ನೆಯ ಕಡೆಗೆ ಸಾಕಷ್ಟು ಲಕ್ಷ್ಯ ಹರಿಸಲಿಲ್ಲವೆಂಬುದಕ್ಕಾಗಿಯೇ ಹೋದೆಡೆಗಳಲ್ಲೆಲ್ಲಾ ಧಿಕ್ಕಾರದ ಘೋಷಣೆಗಳನ್ನು ಕಿವಿತುಂಬಾ ಕೇಳುವಂತಾಗಿತ್ತು. ಆಂಧ್ರರ ಆತುರವಧಿಕವಾಯಿತು ಮೇರೆ ಮೀರಿತು ಎಂದು ರಾಜಾಜಿಯವರೇ ಆದಿಯಾಗಿ ಕೆಲವು ಜವಾಬ್ದಾರಿಯುಳ್ಳ ಧುರೀಣರ ಆಕ್ಷೇಪವಿದ್ದರೂ ಅವು ಆಂಧ್ರರ ಆತುರಕ್ಕೊಂದು ತಡೆಯಾಗಲಾರದೆ ಹೋದುವು. ಆಂಧ್ರರ ಬೇಡಿಕೆಯಲ್ಲಿ ಕರ್ನಾಟಕದಲ್ಲಿರುವಂಥ ಕೋರೆ ರಾಗಗಳಿರಲಿಲ್ಲ; ಏಕ ಕಂಠದಿಂದ ಅವರ ಬೇಡಿಕೆಯು ಮುಂದೆ ಬಂತು. ಮದ್ರಾಸು ಎಸೆಂಬ್ಲಿಯಲ್ಲಿ ರಾಜಾಜಿಯವರದನ್ನು ಅವಸರವಸರದಿಂದ ಒಪ್ಪಿಕೊಂಡರು. ಇಂದು ಎ. ಐ. ಸಿ. ಸಿ. ಯು ಅದಕ್ಕೆ ಪೂರ್ಣ ಸಮ್ಮತಿಕೊಟ್ಟಿದೆ. ಹಾಗಾಗದೆ ನಿರ್ವಾಹವಿಲ್ಲವಾಗಿತ್ತು. ಅಂತಹ ಪರಿಸ್ಥಿತಿಯನ್ನು ಆಂಧ್ರರು ನಿರ್ಮಿಸಿದ್ದರು.

ಆದರೆ ನಮ್ಮ ಕರ್ನಾಟಕದ ಪಾಡೇನು? ನಮಗೂ ಆಂಧ್ರರಂತೆಯೇ ಪ್ರತ್ಯೇಕಪ್ರಾಂತ್ಯವೇನೋ ಬೇಕು, ಹಾಗೆ ಪ್ರತ್ಯೇಕವಾಗುವ ಯೋಗ್ಯತೆ, ಅನುಕೂಲತೆ, ಇವೆರಡು ಕರ್ನಾಟಕಕ್ಕಿವೆ. ಮೇಲಾಗಿ ಭಾಷಾವಾರು ಪ್ರಾಂತ್ಯರಚನೆಯ ತತ್ವವನ್ನು ಕಾಂಗ್ರೆಸ್ ಎಂದೋ ಒಪ್ಪಿಕೊಂಡಿದ್ದು ಕಾಂಗ್ರೆಸ್ ಕಮಿಟಿಗಳ ಮಟ್ಟಿಗೆ ಕರ್ನಾಟಕವು ಪ್ರತ್ಯೇಕವಿದೆ. ಮುಂದಕ್ಕಾದರೂ ಆಂಧ್ರವನ್ನು ಪ್ರತ್ಯೇಕಿಸಿ ಕರ್ನಾಟಕವನ್ನು ಮರೆಯಲು ಕಾಂಗ್ರೆಸಿಗೆ ಸಾಧ್ಯವಿಲ್ಲ. ಆದರೆ ಅನುಕೂಲತೆ ಸುಸಂದರ್ಭ, ಇವು ಕರ್ತವ್ಯ ಹೀನರಿಗೆ ಕನಸಿನ ಸುಖವನ್ನು ಕೊಡಬಹುದೇ ಹೊರತು ಬಯಕೆಯನ್ನು ಈಡೇರಿಸಲಾರವು. ಅದಕ್ಕೆ ಆಂಧ್ರರು ತೋರಿಸಿದಂಥಾ ಛಲವೇ ಬೇಕು. ಕನ್ನಡಿಗರಂತೆ ಕೈಯೊಡ್ಡಿ ನಿಂತರೆ ಸಾಲದು!

ಕರ್ನಾಟಕ ಏಕೀಕರಣದ ಕೂಗು ಇಂದು ನಿನ್ನೆಯದಲ್ಲ. ಆದರೂ ಕೇಳಬೇಕಾದಲ್ಲಿ ವರೆಗೆ ಕೇಳಿ, ಸಂಬಂಧಪಟ್ಟವರಿಂದ ಹೊಂಗುಟ್ಟಿಸಿಕೊಳ್ಳುವ ಶಕ್ತಿ ಆಂಧ್ರರ ಕೂಗಿಗೆ ಮಾತ್ರವೇ ಎಂದರೇನು? ಕರ್ನಾಟಕದಲ್ಲಿ ಏಕೀಕರಣ ಸಂಘವಿದೆ. ಮದ್ರಾಸು ಬೊಂಬಾಯಿಯ ಶಾಸನ ಮಂಡಲಗಳಲ್ಲಿ ಕನ್ನಡನಾಡಿನ ಮೆಂಬರರಿದ್ದಾರೆ. ಶ್ರೀ. ಕುರ್ತಕೋಟಿಯವರ ಉಪಸೂಚನೆಯಂತೆ ಎಡೆ ದೊರೆತಲ್ಲಿ ಆ ಪ್ರಶ್ನೆ ಮುಂದೆ ನುಗ್ಗುತ್ತಲೂ ಇದೆ; ಆದರೂ ಆಂಧ್ರದೊಡನೆ ತುಲನೆಮಾಡುವಾಗ ಯಾವುದೂ ಸಾಕಷ್ಟಿಲ್ಲವೆಂದು ಖಚಿತವಾಗುತ್ತದೆ. ಕಾರಣವಿಷ್ಟು.—ಕನ್ನಡಿಗರಲ್ಲಿ ಒಬ್ಬೊಬ್ಬರಲ್ಲಿ ಒಂದೊಂದು ವಿಶಿಷ್ಟತೆ, ಅದನ್ನು ಮೀರಿದಲ್ಲಿ ರಾಷ್ಟ್ರೀಯತೆ ಮಾತ್ರವಿದ್ದು ಆವೆರಡರ ನಡುವಿನ ಪ್ರಾಂತ್ಯಾಭಿಮಾನವಿರುವ ಕನ್ನಡ ಧುರೀಣರು ಕೆಲವೇ ಮಂದಿ; ಇವರು ತಯಾರಿಸುವ ಏಕೀಕರಣದ ಚಿತ್ರದ ಪರಿಚಯಮಾಡಿಕೊಂಡವರಿರುವರಾದರೂ ಆಂಧ್ರದಂತೆ ಅದರ ಆವಶ್ಯಕತೆಯನ್ನು ಮನಗಂಡು, ಅದರಿಂದ ಹುರುಪುಗೊಂಡವರ ಸಂಖ್ಯೆ ಕಡಿಮೆ. ಹೀಗಾಗಿ ಕರ್ನಾಟಕದ ಏಕೀಕರಣ ಪ್ರಶ್ನೆಯಿಂದು ಹಿಂದೆಬಿದ್ದಿದೆ; ಕರ್ನಾಟಕದ ಸಂಸ್ಕೃತಿ, ಆರ್ಥಿಕ ಭದ್ರತೆ, ಸಾಮಾಜಿಕ ಐಕ್ಯತೆಗೆ ಅತಿ ಮುಖ್ಯವಾದ ನಾಡಿನ ಏಕೀಕರಣವು ಇನ್ನೂ 'ಎಂದೋ ಹೇಗೋ' ಎಂಬಲ್ಲಿಯೇ ಇದೆ.

ಕನ್ನಡ ನಾಡನ್ನು ಹಂಚಿಕೊಂಡಿರುವ ಬೊಂಬಾಯಿ, ಮದ್ರಾಸ್, ಈ ಎರಡು ಪ್ರಾಂತ್ಯಗಳಲ್ಲಿಯೂ ಭಾಷಾವಾರು ಪ್ರಾಂತ್ಯರಚನೆಯನ್ನೊಪ್ಪಿಕೊಂಡಿರುವ ಕಾಂಗ್ರೆಸೇ ಅಧಿಕಾರದಲ್ಲಿದೆ. ಆದರೇನು? ಒಂದು ತತ್ವವನ್ನೊಪ್ಪಿಕೊಳ್ಳುವದಕ್ಕೂ ಅಪ್ಪಿಕೊಳ್ಳುವದಕ್ಕೂ ಇರುವ ಅಭ್ಯಂತರದಿಂದ ಈ ಸರಕಾರಗಳೂ ಹೊರತಾಗಿಲ್ಲ. ಆದ್ದರಿಂದಲೇ ಕರ್ನಾಟಕ ಏಕೀಕರಣಕ್ಕೆ ಕನ್ನಡಿಗರು ದುಡಿಯಲೇ ಬೇಕಾಗಿ ಬಂದಿದೆ. ಅವರ ದುಡಿತದ ಏರಿಳಿತವನ್ನು ಹೊಂದಿಕೊಂಡೇ ಏಕೀಕರಣವು ಸಮೀಪಿಸಲೂ ಬಲ್ಲುದು, ದೂರವಾಗಲೂ ಬಲ್ಲುದು. ಆಂಧ್ರ-ಕರ್ನಾಟಕ ಪ್ರಾಂತ್ಯಗಳೊಳಗೆ ಇಂತಹ ತಾರತಮ್ಯವುಂಟಾದುದೂ ಆ ಆಧಾರದಿಂದಲೇ. ಆದ್ದರಿಂದ ಕನ್ನಡಿಗರೀಗ ಪರಿಸ್ಥಿತಿಯ ಕಡೆಗೆ ಕಣ್ಣು ಬಿಡಬೇಕು. ಏಕೀಕರಣಕ್ಕಾಗಿ ತಮ್ಮ ಪಾಲಿಗೆ ಬಿದ್ದ ಕರ್ತವ್ಯದ ಕ್ಷೇತ್ರವನ್ನು ಬಂಜರು ಬಿಡಬಾರದು. ಆಂಧ್ರರ ಮಾದರಿಯು ಅವರ ಮುಂದಿದೆ. ಈ ರೀತಿ ಅನುಕೂಲ ವಾತಾವರಣ, ಸುಸಂದರ್ಭ ಮತ್ತು ಉತ್ತಮ ನಿದರ್ಶನ ಇವುಗಳಿಂದ ಸ್ಫೂರ್ತಿಗೊಂಡ ಕರ್ನಾಟಕವು ಏಕೀಕರಣದ ಗುರಿಯನ್ನು ಸಾಧಿಸಲಾರದೆ? ಅಗತ್ಯಬೀಳುವ ಶಕ್ತಿ ಮತ್ತು ಒಗ್ಗಟ್ಟನ್ನು ತೋರಿಸಲಾರದೆ?

ಡಾನ್ಜಿಗ್ ಗೊಂದಲ

ಪೋಲೆಂಡಿನ ಅಧಿಕಾರಕ್ಕೊಳಪಟ್ಟ ಡಾನ್ಜಿಗ್ ಪಟ್ಟಣದ ಕಡೆಗೆ ಲೋಕದ ದೃಷ್ಟಿಯಿಂದು ಬಿದ್ದಿದೆ. ತಾನು ಪಟ್ಟಣವನ್ನು ಸ್ವಾಧೀನ ಪಡಿಸಿಯೇ ಸಿದ್ಧ; ಅದು ಜರ್ಮನಿಗೆ ನ್ಯಾಯಪ್ರಕಾರ ಸಲ್ಲತಕ್ಕದ್ದೆಂದು ಹಿಟ್ಲರನೂ, ಅದನ್ನೆಂದೂ ಬಿಟ್ಟುಕೊಡುವಂತಿಲ್ಲವೆಂದು ಪೋಲೆಂಡ್ ಸರಕಾರವೂ ವಾದಿಸಹತ್ತಿ ಕಾಲಕಳೆಯಿತು. ಬ್ರಿಟನ್ ಮತ್ತು ಫ್ರಾನ್ಸು ದೇಶಗಳು ಪೋಲೆಂಡಿನ ಬೆಂಬಲಕ್ಕೊದಗುವ ಭರವಸೆ ಕೊಟ್ಟು ಸಿದ್ಧತೆಗೆ ತೊಡಗಿದುದರಿಂದ ಇಷ್ಟು ಸಮಯವನ್ನು ವಾದದಲ್ಲಿಯೇ ವ್ಯಯಿಸುವ ತಾಕ್ಕು ಹಿಟ್ಲರನಿಗುಂಟಾಯಿತೆಂಬುದು ನಿರ್ವಿವಾದ. ಆದರೆ ಈಗ ಬರುತ್ತಿರುವ ವಾರ್ತೆಯಂತೆ ಹಿಟ್ಲರನು ಅಪಾಯವನ್ನಾಮಂತ್ರಿಸುವ ಆತುರದಲ್ಲಿದ್ದಾನೆಂದು ತಿಳಿಯಬರುತ್ತದೆ. ಡಾ। ಗೊಬೆಲ್ಸನು ಡಾನ್ಜಿಗಿನಲ್ಲಿ ನಾಜೀ ಕಹಳೆಯನ್ನೂದಿದ ಬೆನ್ನಲ್ಲಿಯೇ ಜರ್ಮನಿ ಸೈನ್ಯಗಳೂ ನಾಜೀ ಆಫೀಸರರೂ ಹಿಂಡುಹಿಂಡಾಗಿ ಡಾನ್ಜಿಗ್ ನಗರವನ್ನು ಪ್ರವೇಶಿಸಹತ್ತಿದ್ದಾರೆ. ಅಲ್ಲಿ ಜರ್ಮನಿ-ಪೋಲೆಂಡು ಘರ್ಷಣೆಗಳು ಅಧಿಕ ಸಂಖ್ಯೆಯಲ್ಲಿ ನಡೆಯಲಾರಂಭವಾಗಿವೆ. ಜೆಕೋಸ್ಲೊವೇಕಿಯದ ಇತ್ಯರ್ಥದ ಪೂರ್ವರಂಗದಲ್ಲಿ ಆಗಿದ್ದಂತಹ ಎಲ್ಲಾ ದುಶ್ಶಕುನಗಳೂ ಇಂದು ಡಾನ್ಜಿಗಿನಲ್ಲಿ ತೋರಬರುತ್ತಿವೆ. ಹಿಟ್ಲರನು ತನ್ನ ನಿಶ್ಚಿತ ಕಾರ್ಯಕ್ರಮವನ್ನು ರದ್ದುಪಡಿಸಿ ಮಹತ್ತಾದ ಗೂಢಾಲೋಚನೆಯಲ್ಲಿರುವನೆಂಬ ವಾರ್ತೆ ಬೇರೆ ಬರುತ್ತಿದೆ. ಇವೆಲ್ಲಾ ಶುಭಶಕುನಗಳಲ್ಲ. ಕೆಲಕಾಲದಿಂದ ಯಾವ ಶುಭಶಕುನವನ್ನೂ ಲೋಕವು ಕಾಣದಂತಾಗಿತ್ತು; ಆದರೆ ಇಂದಿನ ವಿಲಕ್ಷಣ ಚೇಷ್ಟೆಗಳಿಂದ ಅಪಾಯವು ಸನ್ನಿಹಿತವಾದಂತೆ ತೋರುತ್ತಿದೆ. ಭೂಕಂಪದ ಪೂರ್ವ ಚಿಹ್ನೆಗಳೆಲ್ಲಾ ಗೋಚರಕ್ಕೆ ಬರುತ್ತಿವೆ. ಲೋಕವು ಇನ್ನೊಂದು ಗಂಡಾಂತರವನ್ನು ಇದಿರಿಸುವ ದಿನವು ಸಮೀಪಿಸುತ್ತಿರುವದೋ ಎಂದು ಶಾಂತಿಪ್ರಿಯರು ತತ್ತರಿಸುವಂತಾಗಿದೆ. ಮುಂದಿನ ಕೆಲವೇ ದಿನಗಳಲ್ಲಿ ಲೋಕದ ಕಣ್ಣಲ್ಲಿ ಮಿಂಚುಸುಳಿದಂತಾಗುವ ಘಟನೆಯೊದಗುವದು ಅಸಂಭವನೀಯವಲ್ಲ.

ಶ್ರೀಮತಿ ಕಮಲಾದೇವಿಯರು

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸುತ್ತಿದ್ದಾರೆ. ಹೋದಲ್ಲೆಲ್ಲಾ ಅವರಿಗೆ ಗೌರವಪೂರ್ಣ ಸ್ವಾಗತ ದೊರೆಯುತ್ತಿದೆ. ಇಜಿಪ್ತಿನಲ್ಲಿ ವಾಫ್ಡ್ ಪಕ್ಷೀಯರು, ಲಂಡನಿನಲ್ಲಿ ಲೇಬರ್ ಪಕ್ಷೀಯರು ಅವರನ್ನು ಸ್ವಾಗತಿಸಿರುವರು. ಶ್ರೀಮತಿಯವರು ಕಾಂಗ್ರೆಸ್ಸಿನ ಶಕ್ತಿಸಾಹಸಗಳನ್ನು ಬಣ್ಣಿಸಿ ಸ್ವಾತಂತ್ರ್ಯ ದೊರೆಯದೆ ಭಾರತವು ತೃಪ್ತಿ ಹೊಂದಲಾರದೆಂಬುದನ್ನು ಖಚಿತಪಡಿಸಿರುವರು.

ಭಾರತದ ಕುರಿತು ಅನ್ಯ ರಾಷ್ಟ್ರಗಳಲ್ಲಿರುವ ತಪ್ಪು ತಿಳುವಳಿಕೆಯು ಇನ್ನೂ ಪೂರ್ಣ ಮಾಯವಾಗಿಲ್ಲ. ಕಾಂಗ್ರೆಸ್ಸಿನ ಲಕ್ಷ್ಯವು ಆ ಕಡೆಗೆ ಹರಿದುದು ಕೆಲವೇ ವರುಷಗಳಿಂದೀಚೆಗೆ. ಅಂತರರಾಷ್ಟ್ರೀಯ ಸಂಬಂಧವು ಬಿಗಿಯಾಗುತ್ತಿರುವ ಇಂದಿನ ವಿಜ್ಞಾನ ಯುಗದಲ್ಲಿ ಭಾರತದ ಸತ್ವದ ಕಡೆಗೆ ಕತ್ತಲು ಕವಿದಿರುವುದರಿಂದ ಅಭಿವೃದ್ಧಿಗೆ ಹಾನಿಯಿದೆ ಎಂತಲೇ ಕಾಂಗ್ರೆಸು ವಿದೇಶಗಳಲ್ಲಿ ಪ್ರಚಾರಮಾಡುವ ಅವಶ್ಯತೆಯನ್ನು ಮನಗಂಡಿತ್ತು. ಇಂತಹ ಪ್ರಚಾರಗಳಲ್ಲಿ ಹಿಂದೀ ಮುಖಂಡರು ಸ್ವತಃ ತೆರಳಿ ಪರದೇಶಗಳಲ್ಲಿರುವ ಭಾರತದ ಕುರಿತಾದ ಅಜ್ಞಾನವನ್ನು ದೂರಪಡಿಸುವದು ಹೆಚ್ಚಿನ ಪರಿಣಾಮಕಾರಿಯಾದುದು. ಈ ದೃಷ್ಟಿಯಿಂದ ಶ್ರೀಮತಿ ಕಮಲಾದೇವಿಯರ ಪರದೇಶ ಪ್ರವಾಸವು ಅಖಿಲ ಭಾರತದ ಹಿತಸಂಬಂಧವುಳ್ಳದ್ದೆನ್ನಲಡ್ಡಿಯಿರದು. ಕರ್ನಾಟಕವು ಅದರಲ್ಲೂ ದಕ್ಷಿಣ ಕನ್ನಡವು ತಮಗೆ ಯಶಸ್ಸನ್ನು ಸಂಪಾದಿಸಿಕೊಟ್ಟ ಶ್ರೀಮತಿಯವರಿಗೆ ಋಣಿಯಾಗಿರಬೇಕು. ಅವರು ತಮ್ಮ ಪ್ರವಾಸದಲ್ಲಿ ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ.

ಸಿಲೋನಿನ ಊಹಾಪೋಹ!

ಹಿಂದೀಯರನ್ನು ಹೊರಗಟ್ಟುವ ಕಾಯಿದೆಯನ್ನು ಜ್ಯಾರಿಗೆ ತರುವವನ್ನು ತುಸು ವಿಳಂಬಿಸಲಾರಿರಾ? ಎಂದು ಹಿಂದೀ ಸರಕಾರವು ಸಿಲೋನ್ ಸರಕಾರವನ್ನು ಕೇಳಿಕೊಂಡಿತು. ಸಾಧ್ಯವಿಲ್ಲವೆಂದು ಸಿಲೋನ್ ಸರಕಾರವು ಉತ್ತರಕೊಟ್ಟಿದೆ.

ಬರುವ ವಾರ

ಭಾರತದಲ್ಲಿ ಮಹಿಳೆಯರ ವ್ಯಾಪಾರ
(ಶ್ರೀಮತಿ ವಿಮಲಾದೇವಿ ಬಿ. ಎ.)
ಶ್ರೀಮತಿ ಚಾಂಗ್‌ಕಾಯಿ ಶೇಕರ
ಗೌರವ ಪೂರ್ಣ ವೀರ ಜೀವನ
(ಮನೋರಂಜಕ ಲೇಖನ)
ಹೀಗಾದರೇನು ಅಳಿಯ ಕಟ್ಟಿನ ಸುಧಾರಣೆ?
(ಸುಧಾರಕರಿಗೊಂದು ಸೂಚನೆ)
ಮೊದಲಾದ ಲೇಖನಗಳು ಬರುವವು.

ಜರ್ಮನಿಯು ಕಿಡಿಗಾರುತ್ತಿದೆ

ಟಿಯೆಂಟ್ಸಿನ ರಾಜೀಯತ್ನ

ಚೀನೀ ಮಂತ್ರಿಗಳ ಎಚ್ಚರಿಕೆಯ ಮಾತು

ಜಪಾನರೊಡನೆ ಸಂಧಿಮಾಡಿಕೊಳ್ಳಲು ಹೊಂಟಿರುವ ಯುರೋಪು ರಾಷ್ಟ್ರಗಳಿಗೆ ಎಚ್ಚರಿಕೆಯೀಯುತ್ತಾ ಚೀನದ ವಿದೇಶಾಂಗ ಮಂತ್ರಿ ಶ್ರೀ. ವಾಂಗ್ ಚೆಂಗ್ ಹೂ ಇವರು ಏಸ್ಯಾವನ್ನು ಪೂರ್ಣ ಸ್ವಾಧೀನ ಪಡಿಸುವುದೇ ಜಪಾನಿನ ಉದ್ದೇಶವೆಂದೂ, ಯುರೋಪು ರಾಷ್ಟ್ರಗಳನ್ನು ಏಸ್ಯಾದಿಂದ ಹೊರಗಟ್ಟುವ ಹಿರಿಯ ಬಯಕೆಯುಳ್ಳ ಜಪಾನಿನೊಡನೆ ಒಪ್ಪಂದಕ್ಕಿಳಿಯುವಾಗ ತಮ್ಮ ಹಿತ, ಧೋರಣೆ, ಮತ್ತು ಅಧಿಕಾರಕ್ಕೆ ಬೀಳುವ ಪೆಟ್ಟನ್ನು ಲಕ್ಷ್ಯಿಸಿಕೊಳ್ಳಬೇಕೆಂದೂ ಸೂಚಿಸಿದ್ದಾರೆ.

ಸರ್ವಾಧಿಕಾರಿಗಳು ಗುಟ್ಟು ಮಾತನಾಡಿಕೊಂಡರೇ?

ಕಳೆದ ವಾರ ಹಿಟ್ಲರ್ ಮತ್ತು ಮುಸಲಿನಿಗಳು ಗುಪ್ತ ಸಂಭಾಷಣೆ ನಡೆಸಿದರೆಂಬ ವಾರ್ತೆ ಹರಡಿದೆ. ಆದರೆ ಈ ಕುರಿತು ಅಧಿಕಾರಿಕವಾದ ಪ್ರಕಟಣೆಯೇನೂ ಆಗಿಲ್ಲ. ಸಂಭಾಷಣೆ ನಡೆಸಿರುವದು ನಿಜವಿದ್ದಲ್ಲಿ ಮುಸಲಿನಿಯು ಡಾನ್ಜಿಗ್ ಪ್ರಶ್ನೆಯ ಕುರಿತು ಅದನ್ನು ಮುಂದರಿಸಬೇಕೆಂದು ಹಿಟ್ಲರನಿಗೆ ಬೋಧಿಸಿರಬಹುದೆಂಬ ವಾರ್ತೆಯಿದೆ.

ಟಿಯೆಂಟ್ಸಿನ್ ರಾಜೀಯತ್ನ

ಟಿಯೆಂಟ್ಸಿನ್ ಸೂತ್ರಬಂಧನದ ಕುರಿತು ಬ್ರಿಟಿಷ್ ಸರಕಾರದ ರಾಜೀ ಸೂಚನೆಗೆ ಜಪಾನ್ ಸರಕಾರವು ಮಾತುಕತೆಯನ್ನಾರಂಭಿಸಲು ಒಪ್ಪಿರುವದು. ಅದಕ್ಕಾಗಿ ಟಿಯೆಂಟ್ಸಿನಿನ ಜಪಾನೀ ಆಫೀಸರರನ್ನು ಟೋಕಿಯೋವಿಗೆ ಕರೆಸಲಾಗಿದೆ. ಜಪಾನರ ಮುಖ್ಯ ಶರ್ತಗಳು ಟಿಯೆಂಟ್ಸಿನಿನಲ್ಲಿ ಜಪಾನೀವಿರುದ್ಧ ಚೀನೀಯರ ಆಟ ನಡೆಯಬಾರದು; ಚೀನೀ ಕರೆನ್ಸಿ ನೋಟುಗಳ ಬದಲು ಜಪಾನೀ ಕರೆನ್ಸಿ ನೋಟುಗಳನ್ನು ಉಪಯೋಗಿಸಬೇಕೆಂಬುದೇ. ಎರಡನೇ ಶರ್ತಕ್ಕೆ ಬ್ರಿಟಿಷರ ಒಪ್ಪಿಗೆಯಿಲ್ಲ. ಆದರೂ ಆಶೆಯಿದೆ ಎಂದು ಚೇಂಬರ್ಲೇನರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಬ್ರಿಟಿಷರನ್ನು ಶೋಧಿಸುವಾಗ ಅವಮಾನಿಸಬೇಡಿರೆಂದು ಟೋಕಿಯೋದಿಂದ ಟಿಯೆಂಟ್ಸಿನ್ ಅಧಿಕಾರಿಗಳಿಗೆ ಸೂಚನೆ ಬಂದಿದೆ. ಚೀನದ ಕೆಲವು ಬಂದರುಗಳಮೇಲೆ ಧಾಳಿ ನಡೆಸಿರುವ ಜಪಾನರು ವಿದೇಶೀ ಹಡಗುಗಳು ಅವನ್ನು ಬಿಟ್ಟು ಹೋಗಬೇಕೆಂದು ಎಚ್ಚರಿಕೆ ಕೊಟ್ಟಿರುವರು. ಇಂಗ್ಲೆಂಡ್ ಅಮೇರಿಕಾದವರದನ್ನು ಅಲಕ್ಷಿಸಿರುವರು.

ಯುದ್ಧ ಸಮೀಪಿಸುತ್ತಿದೆ.

ಡಾನ್ಜಿಗ್ ನಗರದೊಳಗೆ ಒಂದೇ ಸಮನೆ ನಾಜಿಗಳು ಬಂದು ತುಂಬುತ್ತಿದ್ದಾರೆ. ಪೂರ್ವ ಪ್ರಶ್ಯದ ಮೂಲಕ ನಾಜೀ ಸೈನಿಕರು ಒಳನುಗ್ಗುತ್ತಿದ್ದಾರೆ. ತಾವು ದಿನದಿಂದ ದಿನಕ್ಕೆ ಅಧಿಕವಾಗುತ್ತಿರುವ ಪೋಲೆಂಡಿನವರ ಅನ್ಯಾಯವನ್ನು ಖಂಡಿಸಲು ಬರುತ್ತಿರುವಲ್ಲದೆ ಅನ್ಯೋದ್ದೇಶವಿಲ್ಲವೆಂದು ನಾಜಿಗಳು ಪ್ರಕಟಿಸಿದ್ದಾರೆ. ಆದರೆ ಕೆಲವು ದಿನಗಳಿಂದ ಹಿಟ್ಲರನು ಗಾಢವಾದ ಆಲೋಚನೆಯಲ್ಲಿ ಬಿದ್ದಿರುವನೆಂದೂ, ಯಾವುದೇ ಒಂದು ಮಹತ್ಕಾರ್ಯಸಾಧನೆಗಾಗಿ ಈ ವರೆಗಿನ ಸಮಾರಂಭವೊಂದರಲ್ಲಿ ಭಾಗವಹಿಸಲಿದ್ದುದನ್ನು ಕೂಡ ನಿಲ್ಲಿಸಿರುವನೆಂ

ದೂ ನಟ್ಟನಾದ ವಾರ್ತೆ ಹರಡಿದೆ. ಡಾನ್ಜಿಗನ್ನು ಆಕ್ರಮಿಸುವ ಸಿದ್ಧತೆಯೇನು ಎಂದು ಸಂಬಂಧಪಟ್ಟವರು ಆತುರಗೊಂಡಿದ್ದಾರೆ.

ಪೋಲೆಂಡಿನ ದೃಢ ನಿರ್ಧಾರ.

ಪೋಲೆಂಡಿನ ಅಧ್ಯಕ್ಷ ಮೊಸ್ಸಿಕ್ಕಿ ಇವರು ತಾ. 29ರಲ್ಲಿ ಒಂದು ಬ್ರಾಡ್ ಕಾಸ್ಟ್ ಭಾಷಣವಿತ್ತರು. ಅದರಲ್ಲಿ ಗಡ್ನಿಯಾ ಮತ್ತು ಡಾನ್ಜಿಗ್ ಬಂದರುಗಳು ಪೋಲೆಂಡಿನ ಆರ್ಥಿಕ ವಿಭಾಗಕ್ಕೆ ನಿಕಟ ಸಂಬಂಧವುಳ್ಳವುಗಳೆಂದೂ ಹಲವು ಶತಮಾನಗಳಿಂದ ಪೋಲೆಂಡಿಗೆ ಸೇರಿದ್ದವುಗಳೆಂದೂ ತಿಳಿಸಿ, ವ್ಯಾಪಾರೀ ಧ್ವಜವುಳ್ಳ ಯಾವ ವಿದೇಶೀ ಹಡಗವಾದರೂ ಈ ಬಂದರವನ್ನು ಪ್ರವೇಶಿಸುವದಕ್ಕೆ ಅಡ್ಡಿಯಿಲ್ಲವೆಂದಿರುವರು. ಪೋಲೆಂಡಿನ ಸ್ವರಕ್ಷಣೆಯ ನಿರ್ಧಾರ ಸೂಚಕ ಪ್ರದರ್ಶನಗಳು ನಡೆಯುತ್ತಿವೆ.

ಸೋವಿಯೆಟ್ ಒಪ್ಪಂದದ ನಟನೆ

ಸೋವಿಯೆಟ್ ಡಿಪ್ಯೂಟಿಯಾದ ಶ್ಡೇನೋವ್ ಇವರು ಪ್ರಾವ್ಡಾ ಪತ್ರಿಕೆಯೊಂದರಲ್ಲಿ ಇಂಗ್ಲೆಂಡು ಫ್ರಾನ್ಸುಗಳ ಧೋರಣೆಯನ್ನು ಕಠಿಣವಾಗಿ ಟೀಕಿಸಿ ಬರೆದಿರುವರು. ಇಂಗ್ಲೆಂಡು ಮತ್ತು ಫ್ರಾನ್ಸಿನ, ಮುಖ್ಯವಾಗಿ ಇಂಗ್ಲೆಂಡಿನ ಧೋರಣೆಯು ರಷ್ಯಾದೊಡನೆ ಸಮಾನತೆಯ ಒಪ್ಪಂದಮಾಡಿಕೊಳ್ಳಲನುಕೂಲವಾಗಿಲ್ಲವೆಂದೂ, ಅದಷ್ಟು ಬೇಗನೆ ರಷ್ಯವು ಒಪ್ಪಂದವಾಗಬೇಕೆಂದು ಪ್ರಯತ್ನಿಸಿದರೂ ಇವೆರಡು ರಾಷ್ಟ್ರಗಳು ಕುತ್ಸಿತ ರೀತಿಯಲ್ಲಿ ಕಾಲಹರಣಮಾಡುತ್ತಿವೆಯೆಂದೂ, ಕೆಲವು ಕರಾರುಗಳ ಹೊರೆಹೊತ್ತು ರಷ್ಯವು ಅಡಿಯಾಳಾಗಿ ನಿಲ್ಲಲೆಂದೇ ಅವುಗಳ ಹಾರೈಕೆಯೆಂದೂ ತಿಳಿಸಿರುವರು. ತಮ್ಮ ದೇಶಗಳ ಜನಾಭಿಪ್ರಾಯವನ್ನರಿತು ಸಮಜಾಯಿಸುವ ಸಲುವಾಗಿ ಈ ರೀತಿ ಒಪ್ಪಂದದ ನಟನೆಯನ್ನು ಮಾಡಿ, ರಷ್ಯವು ಹಾದಿಗೆ ಬಾರದ ರಾಷ್ಟ್ರವೆಂದು ಜನರಿಗೆ ತೋರಿಸುವದೇ ಇಂಗ್ಲೆಂಡು ಫ್ರಾನ್ಸುಗಳ ಉದ್ದೇಶವೆಂದು ಅವರ ಕಂಠೋಕ್ತ ವಾದ.

ಲೋರ್ಡ್ ಹೆಲಿಫೇಕ್ಸರ ಖಂಡ ತುಂಡ ಮಾತು

ಚಾತಾಮ್ ಭವನದಲ್ಲಿ ತಾ. 29ರಲ್ಲಿ ಭಾಷಣಮಾಡುವಾಗ ಬ್ರಿಟಿಷ್ ವಿದೇಶಾಂಗ ಮಂತ್ರಿ ಲೋರ್ಡ್ ಹೆಲಿಫೇಕ್ಸರು ಬ್ರಿಟನಿನ ಧೋರಣೆಯನ್ನು ವಿವರಿಸುತ್ತಾ ಇಂಗ್ಲೆಂಡು ತನ್ನ ಮಾತಿಗನುಸಾರವಾಗಿ ಹಿಂದು ಮುಂದು ನೋಡದೆ ಯುದ್ಧಕ್ಕಿಳಿಯಲು ಸಿದ್ಧವಿರುವದೆಂದು ಘೋಷಿಸಿರುವರು. ಇಂಗ್ಲೆಂಡಿನ ಪತ್ರಿಕೆಗಳೂ, ಮುಂದಾಳುಗಳೂ ಲೋರ್ಡ್ ಹೆಲಿಫೇಕ್ಸರ ಭಾಷಣದಲ್ಲಿ ಹೊಳೆಯುತ್ತಿದ್ದ ಧೈರ್ಯ, ದೃಢತೆ ಮತ್ತು ನ್ಯಾಯ ನಿಷ್ಠುರತೆಯು ಅತ್ಯಪೂರ್ವವಾದುದೆಂದು ಶ್ಲಾಘಿಸಿ, ಅದು ಇಡೀ ರಾಷ್ಟ್ರದ ಅಭಿಪ್ರಾಯವೆಂದು ಸಮ್ಮತಿಕೊಟ್ಟಿವೆ.

ಜರ್ಮನಿಯು ಕಿಡಿಗಾರುತ್ತಿದೆ!

ಲೋರ್ಡ್ ಹೆಲಿಫೇಕ್ಸರ ಭಾಷಣದಿಂದ ಜರ್ಮನಿಯು ಕ್ರೋಧವೇರಿದೆ. ಬ್ರಿಟಿಷರು ಎಡೆಬಿಡದೆ ತಾವು ಶಾಂತಿಪ್ರಿಯರೆಂದು ಜಂಭಕೊಚ್ಚಿಕೊಳ್ಳುವುದನ್ನು ನಿಲ್ಲಿಸುವದು ವಿಹಿತವೆಂದೂ ಬ್ರಿಟಿಷರ ಧೋರಣೆ ಬದಲಾಗದೆ ಅವರ ಯಾವ ಆಶ್ವಾಸನೆಯಲ್ಲಿಯೂ ತಮಗೆ ನಂಬಿಗೆಯಿಲ್ಲವೆಂದೂ, ತಾವವರೊಡನೆ ಮಾತನಾಡುವಂತಿಲ್ಲವೆಂದೂ ನಾಜೀ ಪತ್ರಿಕೆಗಳು ಹೆಲಿಫೇಕ್ಸರ ಭಾಷಣವನ್ನು ಕಟುವಾಗಿ ಟೀಕಿಸಿ ಬ್ರಿಟಿಷರ ಕಪಟವರ್ತನೆಯ ಉತ್ತಮ ಪ್ರತೀಕವೆಂದು ಎಂದಿವೆ.

ನ್ಯೂಜೀಲೇಂಡಿನ ಸಿದ್ಧತೆ

ನ್ಯೂಜೀಲೇಂಡು ಒಂದೇಸಮನೆ ತನ್ನ ನೆಲ, ಜಲ ವಿಮಾನ ಸೈನ್ಯಗಳನ್ನು ಹೆಚ್ಚಿಸುತ್ತಿದೆ. 9500 ಮಾತ್ರವಿದ್ದ ನೆಲಸೈನ್ಯವೀಗ 16000 ಆಗಿದೆ. ಅಲ್ಲಿಯ ಯುದ್ಧಸಾಧನಾ ನಿರ್ಮಾಣಕ ಯಂತ್ರಗಳು ರಾತ್ರಿಹಗಲು ಕೆಲಸ ಮಾಡುತ್ತಿವೆ.

ಚಕ್ರವರ್ತಿಗಳು ಹಿಂದೂ ದೇಶಕ್ಕೆ ಬರುವರೆ?

ಅಮೇರಿಕಾ, ಕೆನಡಾ ಪ್ರವಾಸ ಮಾಡಿಬಂದ ಚಕ್ರವರ್ತಿಗಳು ಸಾಮ್ರಾಜ್ಯದ ಬೇರೆ ಭಾಗಗಳಿಗೂ ಸಂಚಾರಕ್ಕೆ ಹೋಗುವ ಯೋಜನೆ ನಡೆಯುತ್ತಿದೆ. ಹಿಂದುಸ್ಥಾನದ ಪ್ರಯಾಣವು ಫೆಡರೇಶನ್ ಜ್ಯಾರಿಗೆ ಬರುವ ಕಾಲವನ್ನು ಹೊಂದಿಕೊಂಡಿರುವಂತೆ. ಇನ್ನೊಂದು ಪ್ರಯಾಣದಲ್ಲಿ ದಕ್ಷಿಣಾಫ್ರಿಕಾ ಮತ್ತು ರೋಡೆಸಿಯಾ ದೇಶಗಳನ್ನು ಚಕ್ರವರ್ತಿಗಳು ಅಗತ್ಯವಾಗಿ ಸಂದರ್ಶಿಸಲಿರುವರಂತೆ.

ಸಿಂಗಾಪುರ ಸಂಭಾಷಣೆಯ ಮಂಗಳ!

ಆಂಗ್ಲೋ-ಫ್ರೆಂಚರು ಸಿಂಗಾಪುರ ಯುದ್ಧ ನಿಲ್ದಾಣದಲ್ಲಿ ನಡೆಸಿದ, ಯುದ್ಧ ಸಂದರ್ಭದಲ್ಲಿ ಏಕೀಭವಿಸಿ ಸಿಂಗಪುರವನ್ನು ರಕ್ಷಣಾ ಕೇಂದ್ರವನ್ನಾಗಿ ಮಾಡುವ ಕುರಿತು ನಡೆಸಿದ್ದ ಸಂಭಾಷಣೆಯು ಜಯಶೀಲವಾಗಿ ಮುಕ್ತಾಯವಾಗಿರುವದು. ಹತ್ತಿರದ ರಾಷ್ಟ್ರವಾದ ಆಸ್ಟ್ರೇಲಿಯವು ಇದರಿಂದ ತೃಪ್ತಿಗೊಂಡಿದೆ.

ಚರ್ಚಿಲ್ಲರ ಎಚ್ಚರಿಕೆ!

ಬ್ರಿಟಿಷ್ ಸೈನ್ಯವು ಮುಖ್ಯವಾಗಿ ವಿಮಾನಬಲವು ಸಶಕ್ತಿಯ ಕೊನೆಯಗಡಿಯನ್ನು ಮುಟ್ಟಿರುವವೆಂದೂ, ಹಿಟ್ಲರನು ಯಾವುದಾದರೊಂದು ಕಾರ್ಯಕ್ಕೆ ಧುಮುಕುವ ಮೊದಲು ಸ್ವಲ್ಪ ತಡೆದು ತುಸುಯೋಚಿಸಿಕೊಳ್ಳತಕ್ಕದ್ದೆಂದೂ ಬ್ರಿಟಿಷರ ತಾಳ್ಮೆಗೆ ಒಂದು ಮಿತಿಯಿರುವದೆಂಬುದನ್ನು ಅವನು ಅರಿಯಬೇಕೆಂದೂ ಇಂಗ್ಲೆಂಡಿನ ಅತ್ಯಗ್ರ ಸಾಮ್ರಾಜ್ಯವಾದಿಯಾದ ಚರ್ಚಿಲ್ಲರು ತನ್ನ ಭಾಷಣ ಒಂದರಲ್ಲಿ ಹೇಳಿರುವರು.

ಲಂಡನಿನಲ್ಲಿ ಶ್ರೀಮತಿ ಕಮಲಾ ದೇವಿಯರು.

ಇಜಿಪ್ಟಿನವಾಫ್ಡ್ ಪಕ್ಷೀಯರಿಂದ ಸಂಭ್ರಮದ ಸ್ವಾಗತ ಪಡೆದು ಶ್ರೀಮತಿ ಕಮಲಾ

MANCHILA HOUSE,
Attur, Nitte Village,
NITTE P. O. Karkal Taluk
16th June 1939.

I am thankful to The Tropical Insurance Company Limited, New Delhi, for the settlement of claim under Policy No. 12807, on the life of Manchila Dejappa Agly son deceased.

It is a great pleasure to note that the Company in order to expedite payment had specially deputed Mr. M. Sunder Ram Shetty the Manager, Mangalore Branch, who immediately called on me and handed over a cheque for Rs. 500.

I would therefore, recommend to all my countrymen who may be going in for Insurance to take up a life Policy with this

Tropical Insurance Company, Limited

THE NATIONAL OF NATIONAL concerns.

(Sd.) KAMALU

ಜಯಪುರ ಸಿಕಾರ್ ತಿಕ್ಕಾಟ

ದೇವಿಯರು ಲಂಡನಿಗೆ ತಲ್ಪಿರುವರು. ತಾ. 28ರಲ್ಲಿ ಅಲ್ಲಿಯ ಇಂಡಿಯಾ ಲೀಗಿನವರ ಆಶ್ರಯದಲ್ಲಿ ಇಂಡಿಯಾ ಆಕ್ಟನ್ನು ಖಂಡಿಸಲು ಸೇರಿದ ಸಭೆಯಲ್ಲಿ ಶ್ರೀಮತಿಯವರ ಭಾಷಣವಾಯಿತು. ಕಾಂಗ್ರೆಸು ಶಕ್ತಿಪೂರ್ಣ ಸಂಸ್ಥೆಯೆಂದೂ ಅದು ಸಂಸ್ಥಾನಿಕ ಪ್ರಜೆಗಳಲ್ಲಿ ಜಾಗ್ರತಿಯೆಬ್ಬಿಸಿ ಸಾಮೂಹಿಕ ಸಂಗ್ರಾಮ ಹೂಡಿರುವದೆಂದೂ ಹೇಳಿದರು. ಪಾರ್ಲಿಮೆಂಟರೀ ಲೇಬರ್ ಪಾರ್ಟಿಯ ಡೆಪ್ಯುಟಿ ಲೀಡರರಾದ ಮಿ, ಅರ್ಥರ್ ಗ್ರೀನ್‌ವುಡ್ ಇವರು ಸಮತಾವಾದೀ ಅನುಯಾಯಿಯೆಂದು ಶ್ರೀಮತಿಯವರನ್ನು ಸ್ವಾಗತಿಸಿ ಭಾಷಣವಿತ್ತರು. ಲೇಬರ್ ಪಕ್ಷವು ಇಂಡಿಯಾ ಬಿಲ್ಲನ್ನು ವಿರೋಧಿಸುವದೆಂದು ಸೂಚಿಸಿದರು.

ಮಧುರಾದಲ್ಲಿ ಪಹರೆ

ಮಧುರಾ ಕಾರ್ಖಾನೆಯೊಂದರ ಮುಂದೆ ಪಿಕೆಟಿಂಗ್ ಮಾಡಿದುದಕ್ಕಾಗಿ ಅಲ್ಲಿಯ ಟೌನ್ ಸಬ್ ಮೆಜಿಸ್ಟ್ರೇಟರು 15ಜನರಿಗೆ 6ತಿಂಗಳ ಕಠಿಣ ಸಜೆಯನ್ನೂ 38ಮಂದಿ ಸ್ತ್ರೀ ಪಹರೆಗಾರರಿಗೆ ಮೂರುತಿಂಗಳ ಸಾದಾ ಸಜೆಯನ್ನೂ ತಾ. 30ರಲ್ಲಿ ವಿಧಿಸಿರುವರು.

ಗೇಂಗ್‌ಪುರ ವಿಚಾರಣಾ ಯತ್ನ

ಗೇಂಗ್‌ಪುರ ಸಂಸ್ಥಾನದಲ್ಲಿ ಪ್ರಜೆಗಳ ಮೇಲೆ ದರ್ಬಾರಿನವರು ಗೋಳಿಬಾರುಮಾಡಿ ಹಲವರು ಮೃತಪಡುವಂತಾಗಿತ್ತು. ಈ ಕುರಿತು ವಿಚಾರಣೆ ನಡೆಸುವರೆ ನಿಷ್ಪಕ್ಷಪಾತಿ ಕಮಿಷನನ್ನು ನೇಮಿಸಬೇಕೆಂದು ಪಂಡಿತ ಜವಾಹಿರಲಾಲರು ಕೇಳಿಕೊಂಡರೂ ಸಂಸ್ಥಾನಿಕರು ಒಪ್ಪಿಕೊಳ್ಳದಿದ್ದುದು ಮಾತ್ರವಲ್ಲ, ಕಷ್ಟಕ್ಕೊಳಗಾದವರಿಗೆ ಸಹಾಯಮಾಡಲು ಒಬ್ಬ ಪ್ರತಿನಿಧಿಯನ್ನು ಕಳುಹುವದಕ್ಕೂ ಕೂಡ ರೆಸಿಡೆಂಟರು ಒಪ್ಪಿಗೆ ಕೊಡಲಿಲ್ಲ.

ಸೈನ್ಯಾಧಿಕಾರಿಯ ಕೊಲೆ

ಹಿಂದೀ ಸೈನಿಕ ಅಧಿಕಾರಿಯಾದ ಶ್ರೀ. ಧರ್ಮಾನಂದ ಪುರಿ ಎಂಬವರು ತಾ. 30ರಲ್ಲಿ ಬೊಂಬಾಯಿಯಲ್ಲಿ ತನ್ನ ಕೋಣೆಯೊಳಗೆ ಮರಣಹೊಂದಿರುವರು. ಅವರ ದೇಹದಲ್ಲಿ ಗುಂಡಿನ ಘಾಯವಿತ್ತು. ಪೋಲೀಸು ಪತ್ತೆ ನಡೆಯುತ್ತಿದೆ.

ಜಯಪುರ-ಸಿಕಾರ್ ತಿಕ್ಕಾಟದ ಪುನರಾವರ್ತನೆಯೆ?

ಸಿಕಾರಿನ ರಾವ್ ರಾಜರಿಗೂ ಜೈಪುರದ ರಾಜರಿಗೂ, ಸಿಕಾರ್ ರಾಜಪುತ್ರರ ವಿದ್ಯಾಭ್ಯಾಸ ಮತ್ತು ವಿವಾಹದ ಕುರಿತದ್ದ ವಾಗ್ವಾದ ಕಳೆದ ಬಾರಿ ಸಿಕಾರ್ ಸಂಸ್ಥಾನದ ಮೇಲೆ ಧಾಳಿ ನಡೆಯುವ ವರೆಗೂ ಮುಂದುವರಿದಿತ್ತಷ್ಟೆ. ಸೇಟ್ ಜಮ್ನಾಲಾಲ್ ಬಜಾಜರೇ ಮೊದಲಾದವರ ಪ್ರಯತ್ನದಿಂದ ಜಯಪುರ ಸಿಕಾರ್ ರಾಜೀಯಾಗಿತ್ತು. ಈಗ ಜಯಪುರ ... ಜಾಹೀರು ನಾಮೆಯಲ್ಲಿ ನಮೂದಿಸಿರುವ ಶಿಕಾರ್ ಸಂಸ್ಥಾನದ ಸ್ಥಾನಮಾನಗಳ ವಿಷಯದಲ್ಲಿ ರಾವ್ ರಾಜಾರವರಿಗೆ ತೀವ್ರ ಭಿನ್ನಾಭಿಪ್ರಾಯವಿರುವದಂತೆ. ಪ್ರಯಾಣಬದ್ಧರಾಗಿರುವ ಶಿಕಾರ್ ರಾವ್ ರಾಜರವರು ತಾನು ಮರಳಿದೊಡನೆ ಜಯಪುರ ರಾಜರಿಗೆ ಈ ಸಂಗತಿಯನ್ನು ವಿನಂತಿಸಿಕೊಳ್ಳಲಿರುವೆನೆಂದೂ ಅದು ನಿಷ್ಫಲವಾದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಬಿನ್ನವಿಸಿಕೊಳ್ಳುವೆನಾಗಿಯೂ ಹೇಳಿರುವರು.

ಬನ್ನುವಿನಲ್ಲಿ ಮತ್ತೊಂದು ಅಪಹರಣ!

ವಾಯುವ್ಯ ಗಡಿನಾಡಿನ ಬನ್ನು ಎಂಬಲ್ಲಿ ಮೇಲಿಂದ ಮೇಲೆ ಮಾನವಾಪಹರಣ ನಡೆಯುತ್ತಲೇ ಇದೆ. ಸಮೀಪದ ನಿವಾಸಿಯೂ ಬೇಂಕರರೂ ಜಮೀನ್ದಾರರೂ ಆದ ಶ್ರೀ. ಹರಿಸಿಂಗ ಸರುಲ್ಲಾರವರು ತನ್ನ ಮುಸಲ್ಮಾನ್ ಸೇವಕನೊಂದಿಗೆ ಬರುತ್ತಿದ್ದಾಗ ಆರು ಮಂದಿ ಸಶಸ್ತ್ರಧಾರಿಗಳು ಮುಸ್ಲಿಂ ಸೇವಕನನ್ನು ಹೋಗಬಿಟ್ಟು ಜಮೀನ್ದಾರರನ್ನು ಅಪಹರಿಸಿ ಕೊಂಡುಹೋಗಿರುವರು. ವಿಚಾರಣೆ ನಡೆಯುತ್ತಿದೆ.

ನಾಗಪುರದಲ್ಲಿ ಜಾತೀಯ ದಂಗೆ

ನಾಗಪುರದಲ್ಲಿ ಹಿಂದೂ ವಿವಾಹ ಮೆರವಣಿಗೆಯೊಂದು ಹೋಗುತ್ತಿದ್ದಾಗ ಜುಮ್ಮಾ ಮಸೀದಿಯಿಂದ ಕಲ್ಲುಗಳು ಬಿದ್ದುದರಿಂದ ಹಿಂದುಗಳು ಗುಂಪುಕೂಡಲಾರಂಭಿಸಿದರು. ಪೋಲೀಸು ಸುಪರಿಂಟೆಂಡರು ಬಂದೋಬಸ್ತನ್ನಿಟ್ಟರು. ಅಷ್ಟರಲ್ಲಿ ಪೋಲೀಸು ರಕ್ಷಣೆಯೊಂದಿಗೆ ಬಂದ ಇತರ ಹಿಂದೂ ಮಹಿಳಾ ಮೆರವಣಿಗೆಗಳ ಮೇಲೂ ಕಲ್ಲು ಬಿದ್ದುದರಿಂದ ಹಿಂದುಗಳು ಉದ್ರೇಕಗೊಂಡು ಪರಿಸ್ಥಿತಿಯು ಹತೋಟಿ ತಪ್ಪುವದರಲ್ಲಿರಲು ಗುಂಡು ಹಾರಿಸಲ್ಪಟ್ಟು ಇಬ್ಬರು ಹಿಂದುಗಳು ಮಡಿದು ಬಿದ್ದರು. ಹಲವರ ದಸ್ತಗಿರಿಯೂ ಆಗಿದೆ.

ಕುಟುಂಬವೇ ಕೊಲೆಯಾಯಿತು

ಫುಲ್ಲೆಟಕುರಾ ಎಂಬ ಹಳ್ಳಿಯಲ್ಲಿ ಬ್ರಾಹ್ಮಣ ಜಮೀನ್ದಾರರೊಬ್ಬರ ಇಡೀ ಕುಟುಂಬವೇ ತಾ. 28ನೇ ಮಧ್ಯರಾತ್ರಿ ಕೊಲೆಮಾಡಲ್ಪಟ್ಟಿದೆ. ಕೊಲೆಯಾದವರಲ್ಲಿ ಮಾಜಿ ಜಿಲ್ಲಾ ಬೋರ್ಡು ಸದಸ್ಯರೊಬ್ಬರು. ಪೋಲಿಸು ವಿಚಾರಣೆ ನಡೆಯುತ್ತಿದೆ.

ಬೊಂಬಾಯಿ ಮಂತ್ರಿಗಳಿಗೆ ಮದ್ರಾಸು ಮಂತ್ರಿಗಳ ಬೆಂಬಲ

ಬೊಂಬಾಯಿಯಲ್ಲಿ ಮಾನ್ಯ ಕೆ. ಎಮ್ ಮುನ್ಶಿಯವರಿಂದ ಕೊಡಲ್ಪಟ್ಟ ಸಾರ್ವಜನಿಕ ಸ್ವಾಗತ ಸಮಾರಂಭವೊಂದರಲ್ಲಿ ಭಾಷಣವೀಯುತ್ತಾ ಮಾನ್ಯ ರಾಜಗೋಪಾಲಾಚಾರ್ಯರು ಪಾನ ನಿಷೇಧ ಧೋರಣೆಯನ್ನು ಸಮರ್ಥಿಸಿ, ಸಂತೋಷದಿಂದ ಜನರು ಹೊಸ ತೆರಿಗೆಯನ್ನು ತೆರಬೇಕೆಂದು ಬೋಧಿಸಿದರು. ಮದ್ರಾಸಿನಲ್ಲಿ ಭಾಷಣವೀಯುವಾಗ ಮಾನ್ಯ ಆಚಾರ್ಯರು ಮದ್ಯಪಾನವೆಂಬ ಹುಲಿಯೊಂದೂ ಶ್ರೀ ಮುನ್ಶಿಯವರು ಕಿವಿಯನ್ನೂ ತಾನದರ ಬಾಲವನ್ನೂ ಹಿಡಿದು ಹಿಸುಕಿ ಅದನ್ನು ಹತಮಾಡಲಿರುವೆವೆಂದೂ ಬಣ್ಣಿಸಿದರು.

ಡಿಲ್ಲಿ ಎಕ್ಸ್‌ಪ್ರೆಸ್ಸ್ ಅಪಘಾತ

ತಾ. 30ನೇ ಮಧ್ಯಾಹ್ನ ಮೊರಾದಾಬಾದಿನ ಬಳಿ ಡಿಲ್ಲಿ-ಡೆಹರಾಡನ್ ಎಕ್ಸ್

ಹೈದರಾಬಾದ್ ಹೋರಾಟ

10 ಮಂದಿ ಮರಣಪಟ್ಟರಲ್ಲದೆ 31 ಮಂದಿ ಜಖಂ ಗೊಂಡಿರುವರು. ಭಾರೀ ಮಳೆಯಿಂದಾಗಿ ಸಂಕವೊಂದು ಹಾಳಾಗಿದ್ದುದೇ ಈ ಅವಘಡಕ್ಕೆ ಕಾರಣ.

ಮದ್ರಾಸಿನಲ್ಲಿ ೧೪೪ನೇ ಸೆಕ್ಶನು!

ಹೈದರಾಬಾದು ಸಭೆಗಳ ಮೇಲೆ ೧೪೪ನೇ ಸೆಕ್ಶನನ್ನು ಹೊರಿಸಿದ ಮುಖ್ಯ ಮಂತ್ರಿಗಳ ಮೇಲೆ ಹಲವು ದೂರುಗಳು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಹೋಗಿದ್ದುವು. ವರ್ಕಿಂಗ್ ಕಮಿಟಿಯವರು ಶ್ರೀ. ರಾಜಗೋಪಾಲಾಚಾರ್ಯರ ವಿವರಣೆಯನ್ನು ಕೇಳಿ ಸರಕಾರದ ವರ್ತನೆಯನ್ನು ಸಮರ್ಥಿಸಿರುವರೆಂದು ತಿಳಿದುಬರುತ್ತದೆ.

ಹೈದರಾಬಾದು ಹೂರಾಟ

ಎಂದಿನಂತೆಯೇ ನಡೆಯುತ್ತಿದೆ. ವಾಯುವ್ಯಗಡಿನಾಡಿನ ಹಲವು ಮುಸ್ಲಿಂ ಸಂಸ್ಥೆಗಳು ಒಂದಾಗಿ ಹೈದರಾಬಾದಿನ ನಿಜಸ್ಥಿತಿಯನ್ನರಿತು ಸಂಧಾನಹೂಡುವರೆ ಡೆಪ್ಯುಟೇಶನೊಂದನ್ನು ಕಳುಹಿಸಿರುವವು. ಡೆಪ್ಯುಟೇಶನೀಗ ಲಾಹೋರಿನಿಂದ ಡಿಲ್ಲಿಗೆ ಬಂದಿರುವದು. ಜುಲೈ 15ರೊಳಗೆ ಅದು ತನ್ನ ವರದಿಯನ್ನು ತಯಾರಿಸುವದಂತೆ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಶಿಫಾರಸು ಮಾಡಿದ ಎಲ್ಲಾ ಸೂಚನೆಗಳನ್ನೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಮಂಜೂರು ಮಾಡಿರುವದು. ಕಾಂಗ್ರೆಸ್ ಘಟನೆಯ ತಿದ್ದುಪಡಿ, ಪ್ರಾಂತಿಕ ಸಮಿತಿಗಳ ಅಪ್ಪಣೆ ವಿನಹಾ ಕಾಂಗ್ರೆಸ್ ಮೆಂಬರರು ಕಾಯಿದೆ ಭಂಗ ಹೂಡಬಾರದೆಂಬ ನಿರ್ಣಯ ಮೊದಲಾದವುಗಳಿಗೆ ಎಡಪಕ್ಷೀಯರ ಪ್ರಬಲ ವಿರೋಧವಿದ್ದರೂ ಹೆಚ್ಚಿನ ಬಹುಮತದೊಡನೆ ಅವೆಲ್ಲಾ ಪಾಸಾಗಿರುವವು. ಆಂಧ್ರ ಪ್ರಾಂತ್ಯ ನಿರ್ಮಾಣವನ್ನು ಒಪ್ಪಿಕೊಳ್ಳುವ ಠರಾವೂ ಆಗಿರುವದು.

ಮುಖ್ಯ ಮಂತ್ರಿಗಳ ಪರಿಷತ್ತು

ಕಾಂಗ್ರೆಸು ಪ್ರಾಂತ್ಯಗಳ ಮುಖ್ಯ ಮಂತ್ರಿಗಳ ಪರಿಷತ್ತು ಕಾಂಗ್ರೆಸು ಕಮಿಟಿ ಸಭೆಯ ಕಾಲದಲ್ಲಿಯೇ ಬೊಂಬಾಯಿಯಲ್ಲಿ ಸೇರಿತು. ಮದ್ಯಪಾನ ಪ್ರತಿಬಂಧ ಮತ್ತು ಅದರಿಂದಾಗಿ ಕಡಿಮೆ ಬೀಳುವ ಹಣವನ್ನು ತುಂಬಿಕೊಳ್ಳುವ ಹಂಚಿಕೆಗಳು ಚರ್ಚಿಸಲ್ಪಟ್ಟವು. ಮುಖ್ಯವಾಗಿ ಜಾತೀಯ ಜಗಳವನ್ನು ಉದ್ರೇಕಿಸುವ ಪತ್ರಿಕೆಗಳ ಮೇಲೆ ಕಠಿಣ ನಿರ್ಬಂಧವನ್ನು ಹಾಕುವ ನಿರ್ಧಾರವಾಗಿರುವದು. ಬರುವ ಆಗೋಸ್ತಿನಲ್ಲಿ ಮತ್ತೊಮ್ಮೆ ಪೂನೆಯಲ್ಲಿ ಈ ಪರಿಷತ್ತು ಸೇರಲಿದೆ.

ಮಿತಬಡ್ಡಿಗೆ ಮಸೂದೆ

ಸಾಲದ ಬಡ್ಡಿಯನ್ನು ಮಿತಗೊಳಿಸುವ ಮಸೂದೆಯು ಬಂಗಾಲಾ ಕೌನ್ಸಿಲಿನಲ್ಲಿ ಪಾಸಾಗಿರುವದು. ತನ್ನ ಪಕ್ಷದ ಧ್ಯೇಯಕ್ಕೊಪ್ಪುವ ಕೆಲವಂಶಗಳು ಈ ಮಸೂದೆಯಲ್ಲಿರುವುದರಿಂದ ತಾವದನ್ನು ವಿರೋಧಿಸುವುದಿಲ್ಲವೆಂದು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ. ಶರತ್‌ಚಂದ್ರ ಭೋಸರು ಹೇಳಿದರು.

ಮಂಗಳೂರು

ಜಿಲ್ಲಾ ಬೋರ್ಡಿನ ಸಭೆ—ತಾ.8-7-39 ನೇ ಬೆಳಿಗ್ಗೆ 10 ಘಂಟೆಗೆ ಜರಗಲಿರುವ ಬೋರ್ಡ್ ಮೀಟಿಂಗಿನಲ್ಲಿ ... ಬೋರ್ಡಿಗೆ ತೆಗೆದುಕೊಳ್ಳುವ ವಿಚಾರದಲ್ಲಿ ಮಧ್ಯಾಹ್ನ 2-30ಕ್ಕೆ ಸ್ಪೆಶಲ್ ಮೀಟಿಂಗು ನಡೆಯಲಿದೆ.

ಬೋರ್ಡಿನ ಪ್ರಶಂಸೆ— ಜಿಲ್ಲಾ ಬೋರ್ಡಿನ ಆಡಳಿತದಲ್ಲಿ ... ಸರಕಾರದವರು ... ಸಮಾಧಾನಕರವಾಗಿದೆಯೆಂದೂ, ಅಧ್ಯಕ್ಷರ ಹಾಗೂ ಮೆಂಬರರ ... ಚೆನ್ನಾಗಿ ... ರಸ್ತೆಗಳು ಅಷ್ಟೊಂದು ಸಮಾಧಾನಕರವಾಗಿಲ್ಲವೆಂದೂ ... ಕೆಲವು ರಸ್ತೆಗಳು ಉತ್ತಮವಾಗಿವೆಯೆಂದೂ ತಿಳಿಸಲಾಗಿದೆ.

ದೋಣಿಯ ಅಪಘಾತ— ಕಳೆದ ತಾ. 24ರಲ್ಲಿ ... ದೋಣಿಯೊಂದು ಮಗುಚಿದ್ದು ಅದರಲ್ಲಿದ್ದ 7 ಜನರಲ್ಲಿ ... ಶ್ರೀ ಎಂ. ಟಿ. ... ನೀರಿಗೆ ಧುಮುಕಿ ... ಬದುಕಿಸಿದರು.

ಜಿಲ್ಲೆಯ ಕರಾವಳಿ ರಸ್ತೆ:— ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾ. ವಿಟ್ಠಲಶೆಟ್ಟರು ಜಿಲ್ಲಾ ಬೋರ್ಡ್ ಇಂಜಿನಿಯರರಾದ ಶ್ರೀ. ಕೆ. ಕೆ. ... ರವರೊಂದಿಗೆ, ಮಲಬಾರ್ ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ ... ರವರನ್ನು ... ಕಳೆದ ವಾರ ಸಂದಿಸಿ, ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ರಸ್ತೆಗಳನ್ನು ... ವಿಚಾರವಾಗಿ ಚರ್ಚಿಸಿ, ... ಮಲಬಾರ್ ಗಡಿ ತನಕ ... ಮಲಬಾರ್ ಬೋರ್ಡಿನವರು ... ಜಿಲ್ಲೆಯ ಗಡಿಯ ವರೆಗೆ ... ಶ್ರೀ ... ರವರು ಹಾಗೆ ... ಕೊಟ್ಟರು. ಮಲಬಾರು ಜಿಲ್ಲಾ ಕಲೆಕ್ಟರರೂ ... ಬೋರ್ಡಿನ ಯೋಜನೆಯ ... ಬಿಟ್ಟಿರುತ್ತಾರೆ.

ಮಂತ್ರಿ ಗೋಪಾಲ ರೆಡ್ಡಿಗಳ ಜಿಲ್ಲಾ ಸಂಚಾರ— ಈ ತಾ 8ಕ್ಕೆ ನಮ್ಮ ಜಿಲ್ಲೆಗೆ ಬರುವ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಮಾ ಶ್ರೀ. ಬಿ. ಗೋಪಾಲರೆಡ್ಡಿಯವರ ಸಂಚಾರದ ನಿರ್ಣಯ:—

ತಾ. ೮ನೇ ಶನಿವಾರ— ... ಮಲಬಾರ್ ಎಕ್ಸ್‌ಪ್ರೆಸ್ ಮೂಲಕ ಆಗಮನ ... ಜಿಲ್ಲಾ ಬೋರ್ಡ್ ನೌಕರರ ಸಂಘದ ಸ್ವಾಗತ, ಜಿಲ್ಲಾ ಬೋರ್ಡಿನ ಹೊಸ ಸಭಾ ಭವನದ ಉದ್ಘಾಟನ, ಉಪಹಾರ, ... ಮುನ್ಸಿಪಲ್ ಆಫೀಸು ... ಭಾವಚಿತ್ರ ಅನಾವರಣ.

ತಾ. ೯ನೇ ಆದಿತ್ಯವಾರ— ಬೆಳಿಗ್ಗೆ ... ಕಾರ್ಕಳಕ್ಕೆ ಪ್ರಯಾಣ ... ಮೂಡಬಿದರೆ, ಸಾರ್ವಜನಿಕ ಸಭೆ, ... ಸಂದರ್ಶನ, ... ಶ್ರೀ. ಕೆ. ಎಸ್. ಪ್ರಭುಗಳು ಉಚಿತವಾಗಿ ಕೊಟ್ಟ ಜಾಗೆಗೆ ಆಸ್ಪತ್ರೆಯ ಉದ್ಘಾಟನೆ, ... ಉಪಹಾರ-ವಿರಾಮ, ... ಉಡುಪಿಗೆ ಪ್ರಯಾಣ, ... ಮುನಿಸಿಪಲ್ ಕೌನ್ಸಿಲರ ಉಪಹಾರ ಸತ್ಕಾರ. ... ಮುನಿಸಿಪಲ್ ಕೌನ್ಸಿಲಿನ ಸನ್ಮಾನ ... ಭುಜಂಗ ಪಾರ್ಕಿನ ಶಂಕುಸ್ಥಾಪನೆ, ವ್ಯಾಯಾಮ ಶಾಲೆ, ರೇಡಿಯೋ ಹೌಸ್, ದೇವಳ ಇತ್ಯಾದಿಗಳ ಸಂದರ್ಶನ ೬-೩೦ ಸಾರ್ವಜನಿಕ ಸಭೆ (ಮುನ್ಸಿಪಲ್ ಮೈದಾನಿನಲ್ಲಿ) ಉಡುಪಿಯಲ್ಲಿ ವಿಶ್ರಾಂತಿ.

ತಾ. ೧೦ನೇ ಸೋಮವಾರ—ಮುಂಜಾನೆ ೮-೩೦ರಿಂದ ೯ರ ತನಕ ಭೇಟಿ. ೯-೩೦ಕ್ಕೆ ಉಡುಪಿಯಿಂದ ಉದ್ಯಾವರ, ಕಾಪು, ಎರ್ಮಾಳು, ಪಡುಬಿದ್ರೆಗಳ ಮಾರ್ಗವಾಗಿ ಮೂಲ್ಕಿಗೆ ಪ್ರಯಾಣ. ೧೧ಕ್ಕೆ ಮೂಲ್ಕಿ ಪಂಚಾಯತ ಬೋರ್ಡಿನ ಮಾನಪತ್ರ, ೧೨ಕ್ಕೆ ಉಪಹಾರ, ವಿರಾಮ. ೨-೩೦ಕ್ಕೆ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆ, ೩ಕ್ಕೆ ಮೂಡಬಿದರೆ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣ. ೫ಕ್ಕೆ ಮಂಗಳೂರಿನ ಫೆಲಿಕ್ಸ್ ಪೈ ಬಜಾರಿನ ವಸ್ತುಸಂಗ್ರಹಾಲಯದ ಸಂದರ್ಶನ. ೫-೩೦ಕ್ಕೆ ಸ್ಟೂಡೆಂಟ್ಸ್ ಫೆಡರೇಶನಿನಲ್ಲಿ ಭಾಷಣ. ೬ರಿಂದ ೭. ಕೆನರಾ ಹೈಸ್ಕೂಲು—ಮಹಾತ್ಮಾ ಗಾಂಧಿಯವರ ಪ್ರತಿಮಾ ಅನಾವರಣ ವಸ್ತು ಸಂಗ್ರಹಾಲಯದ ನಾಮಕರಣ, ವೊಕೇಶನಲ್ ಹಾಲಿನ ಶಂಕುಸ್ಥಾಪನೆ.

ತಾ. ೧೧ನೇ ಮಂಗಳವಾರ— ಮುಂಜಾನೆ ೮ರಿಂದ ೯ರ ತನಕ ಭೇಟಿ ಮದ್ರಾಸ್ ಪ್ರಾಂತಿಕ ಲೋಕಲ್ ಬೋರ್ಡು ನೌಕರರ ... ೯-೩೦ಕ್ಕೆ ... ಪ್ರಯಾಣ. ೧೦ ೩೦ ಖಾನ್ ಬಹದ್ದೂರ್ ಮಹಮ್ಮದ್ ಅಹ್ಮದ್ ಸಾಹೇಬ ಬಹದ್ದೂರ್, ಯಂ. ಯಲ್. ಎ. ಯವರಲ್ಲಿ ಉಪಹಾರ, ೧೧ರಿಂದ ೧೨ ಪಂಚಾಯತ್ ಬೋರ್ಡಿನ ಮಾನಪತ್ರ. ಸಾರ್ವಜನಿಕ ಸಭೆ. ೧೨ರಿಂದ ೧-೪೫ ಉಪಹಾರ, ವಿರಾಮ ೨-೪ ... ಪ್ರಯಾಣ. ೩-೧೦ ಪಂಚಾಯತ್ ಬೋರ್ಡ್ ಅಧ್ಯಕ್ಷರುಗಳ ಉಪಹಾರ, ಸಾರ್ವಜನಿಕ ಸಭೆ, ೫-೩೦ ... ಕಾರಿನಲ್ಲಿ ... ೫-೪೫. ... ಸ್ವಾಗತ, ಸಾರ್ವಜನಿಕರ ಮಾನಪತ್ರ, ಸಾರ್ವಜನಿಕ ಸಭೆ ಭೇಟಿ, ೮-೩೦ ಡಿನ್ನರ್.

ತಾ. ೧೨ನೇ ಬುಧವಾರ— ಬೆಳಿಗ್ಗೆ ೮— ಉಪಹಾರ, ೯-೫. ಚರ್ವತ್ತೂರಿಗೆ ಪ್ರಯಾಣ. ೯-೨೦ ಚರ್ವತ್ತೂರಿನಲ್ಲಿ ಸ್ವಾಗತ ಹಾಗೂ ಸಾರ್ವಜನಿಕರ ಭಾಷಣಗಳು, ೧೦-೨೦ ಮದ್ರಾಸಿಗೆ ಪ್ರಯಾಣ.

ಬೊಂಬಾಯಿ

(ನಮ್ಮ ಬಾತ್ಮೀದಾರರಿಂದ)

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆ

ಸತ್ಯಾಗ್ರಹ ಠರಾವು

ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಪ್ಪಣೆ ವಿನಃ ಯಾವ ಕಾಂಗ್ರೆಸ್ ಸದಸ್ಯನಾಗಲಿ, ಸತ್ಯಾಗ್ರಹ ಹೂಡಬಾರದು. ಅಥವಾ ಅದಕ್ಕೆ ಸಹಾಯ ಮಾಡಬಾರದು. ಈ ಠರಾವನ್ನು ಸರ್ದಾರರವರು ಓದಿ ಹೇಳಿದನು.

ಶ್ರೀ. ಸುಭಾಷ್ಚಂದ್ರ ಬೋಸರವರು ಇದನ್ನು ವಿರೋಧಿಸಿ, ಇದು ಕಾರ್ಮಿಕರ ಮತ್ತು ರೈತರ ಪತನಕ್ಕಾಗಿ ತಂದ ಠರಾವೆಂದರು 20 ಸದಸ್ಯರು ಈ ಠರಾವನ್ನು ವಿರೋಧಿಸಿದರು.

130 ಓಟಿಗೆ ಈ ಠರಾವು ಪಾಸಾಯಿತು.

ಕಾಂಗ್ರೆಸ್ ಮಂತ್ರಿಗಳು ಮತ್ತು ಪಿ. ಸಿ. ಸಿ.

ಕಾಂಗ್ರೆಸ್ ಮಂತ್ರಿಗಳೊಳಗೆ, ಕಾಂಗ್ರೆಸ್ ಪಾರ್ಟಿಗಳೊಳಗೆ ಮತ್ತು ಪಿ. ಸಿ. ಸಿ ಗಳೊಳಗೆ ತಮ್ಮ ಕಾರ್ಯಕ್ರಮಗಳಲ್ಲಿ ಐಕ್ಯತೆ ಇರಬೇಕು, ಇಲ್ಲವಾದರೆ ಕಾಂಗ್ರೆಸಿನ ಕಾರ್ಯಕ್ರಮವು ಹಾಳಾಗುವುದು ಎಂಬ ಠರಾವನ್ನು ಸರ್ದಾರ್ ಪಟೇಲರು ಓದಿದರು.

ಠರಾವು ಪಾಸಾಯಿತು

ಕೊನೆಯ ದಿವಸ ಎರಡು ಠರಾವುಗಳು ಪಾಸಾದುವು. ಡಾ! ದೊಯಿಯವರು ಜಿಬ್ರಾ ಸಂಶಿನ ಕುರಿತು ಒಂದು ಠರಾವನ್ನು ಪಾಸುಮಾಡಿದರು.

ಶ್ರೀರಾಮುಲುಗರುರವರು ,ಪ್ರತ್ಯೇಕ ಆಂಧ್ರ ಪ್ರಾಂತವನ್ನು ಮಾಡಬೇಕೆಂಬುದ' ಕುರಿತ ಠರಾವೊಂದನ್ನು ತಂದರು, ಇದು ಬಹುಮತದಿಂದ ಪಾಸಾಯಿತು.

ಇಲ್ಲಿ ರಾಷ್ಟ್ರಪತಿಯವರು ಕಾರ್ಯಕ್ರಮವನ್ನು ನಿಲ್ಲಿಸಬೇಕೆಂದರು. ಅನಂತರ ಶ್ರೀ। ಭೂಲಾಭಾಯಿಯವರು ಬಿ ಪಿ. ಸಿ. ಸಿ. ಯ ಪರವಾಗಿ ಸಭಿಕರನ್ನೂ, ಎ. ಐ. ಸಿ ಸಿ. ಸದಸ್ಯರನ್ನು ಮತ್ತು ಕೊನೆಯದಾಗಿ ರಾಷ್ಟ್ರಪತಿಯವರನ್ನು ಮನಃಪೂರ್ವಕವಾಗಿ ವಂದಿಸಿದ ನಂತರ ಸಭಾಂತ್ಯವಾಯಿತು.

ಈ ಸಲ 4 ದಿವಸ ಎ.ಪಿ.ಸಿ.ಸಿ ಕೂಡಿತು. ಹೆಚ್ಚಿನ ಠರಾವುಗಳೆಲ್ಲ 'ಎಡಪಕ್ಷದವರನ್ನೂ, ಕಾಮಗಾರರೈತರನ್ನೂ ಕಾಂಗ್ರೆಸಿನಿಂದ ಓಡಿಸಿ ಬಲಪಕ್ಷದವರ ಸ್ವತಂತ್ರ ರಾಜ್ಯಭಾರವನ್ನು ಸ್ಥಾಪಿಸುವುದರ ಸಲವಾಗಿತ್ತು. ಶ್ರೀ ಜವಹರಲಾಲರವರು ತನ್ನಿಂದ ಕೂಡಿದಷ್ಟು ಪ್ರಯತ್ನ ಮಾಡಿ ಹಲವು ಠರಾವುಗಳನ್ನು ಸರಿಪಡಿಸಿದ್ದರು. ಅಂತೂ ಬಲಪಕ್ಷದವರ ಕಾಲವಿದು.

ಕುಂಜಾಲು -- ಇಲ್ಲಿಯ ಪಂಚ್ಯಾತ ಬೋರ್ಡಿನವರು ತಾ. 28-6 1939ರಲ್ಲಿ ಶ್ರೀ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕುಂಜಾಲ್ ಲೋವರ್ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಮಾಡಬೇಕಾಗಿಯೂ ಹಾಯರ್ ಕ್ಲಾಸ್‌ಗಳನ್ನು ಬೋರ್ಡಿನವರು ನಡೆಸಬೇಕಾಗಿಯೂ ಪಂಚ್ಯಾತ ಬೋರ್ಡಿನ ಆಫೀಸಿನ ಬಗ್ಗೆ ಒಂದು ಕಟ್ಟೋಣ ಕಟ್ಟಿಸಬೇಕೆಂದೂ ಆಸುಪಾಸು ಹಳ್ಳಿಯ ಬಡಜನರಿಗಾಗಿ ಒಂದು ರೂರಲ್ ಡಿಸ್ಪೆನ್ಸರಿಯನ್ನು ಸರ್ಕಾರದವರು ದಯಪಾಲಿಸುವಂತೆ ಮಾಡಬೇಕೆಂದೂ ನಿರ್ಣಯವಾಗಿದೆ.

ಅಳಿಯ ಸಂತಾನ ಮಸೂದೆ

ಅಳಿಯ ಸಂತಾನ ಸುಧಾರಣಾ ಪರಿಷತ್ತಿನವರು ಅಳಿಯ ಸಂತಾನ ಮಸೂದೆಯೊಂದನ್ನು ತಯಾರಿಸಲು ನೇಮಿಸಿರುವ ಕಮಿಟಿಯವರು ಎರಡು ಸಲ ಸಭೆಸೇರಿ ಚೆನ್ನಾಗಿ ಆಲೋಚಿಸಿ ತಯಾರಿಸುವ ಮಸೂದೆಯ ಇಂಗ್ಲಿಷ್ ಮತ್ತು ಕನ್ನಡ ಭಾಷಾಂತರವು ಬರುವ ವಾರದ ನವಯುಗದಲ್ಲಿ ಪುರವಣಿಯಾಗಿ ಕೊಡಲ್ಪಡುವುದೆಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

THE

PREMIER BANK OF INDIA, LIMITED.

Head Office: MADRAS.

Branches:

MADURA & NELLORE.

CHAIRMAN

Dr. U. L. Narayana Rao.

'Bhujanga Nivas' Madras.

FIXED DEPOSITS

are now received at the following

Rates:

For 6 Months at 3½% P. A.
12 Months at 4½% P. A.
24 Months at 5% P. A.

(Interest Paid Half-yearly.)

S. V. Rau, D. Com.,
Managing Director.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು ಪಿ. ಮೇಸ್ತ ಗೋಲ್ಡ್ ಮೆಡಲ್ಡ್ ಫಿಸಿಶಿಯನ್.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc.—

Sri. B. Narayan Shetty, Organizer, Brahmavar
„ **M. Shivarama Rao,** Organizer, Puttur.

OR

Sri. J. A. PUTRAN, Branch Manager, Mangalore.

ಬ್ರಿಟಿಷ್ ಸಾಮ್ರಾಜ್ಯದೊಳಗೆ ಹಿಟ್ಲರ್ ಕಾಲು ಚಾಚುತ್ತಿದ್ದಾನೆ!

ಅಚೆ ಅರಬರ ಬೆನ್ನು ತಟ್ಟುತ್ತಿದ್ದಾನೆ!

ಪೆಲೆಸ್ತೈನದ ಅರಬ ದಂಗೆಯಲ್ಲಿ ಹಿಟ್ಲರನ ಕೈಯಿದೆ ಎಂಬುದು ಲೋಕಕ್ಕೂ ಬ್ರಿಟಿಷರಿಗೂ ಗೊತ್ತಿದ್ದ ಸಂಗತಿ. ಅವನು ಅರಬರನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ದಂಗೆಯೇಳಲು ಪ್ರೋತ್ಸಾಹಿಸುತ್ತಾ ಬಂದಿದ್ದಾನೆ. ಇದಕ್ಕೆ ಮುಖ್ಯವಾದ ಎರಡು ಕಾರಣಗಳಿವೆ. ಯೆಹೂದೀ ದ್ವೇಷವು ಅವರು ಹೋದಲ್ಲೆಲ್ಲಾ ಬೆನ್ನಟ್ಟಬೇಕೆಂಬಷ್ಟು ಬಲವಾಗಿ ನಾಜಿಗಳಲ್ಲಿದೆ. ಪೆಲೆಸ್ತೈನಿನಲ್ಲಿ ಜರ್ಮನಿಯಿಂದಟ್ಟಲ್ಪಟ್ಟ ಯೆಹೂದಿಯರು ಹಿಂಡುಗಟ್ಟಿ ಒಳನುಗ್ಗಲಾರಂಭಿಸಿದಾಗಲೇ ಅರಬರು ಗೊಂದಲವೆಬ್ಬಿಸಹತ್ತಿದುದು; ಹಿಟ್ಲರನ ಎರಡನೇ ಉದ್ದೇಶವು ಬ್ರಿಟಿಷರನ್ನು ಪೇಚಾಟಕ್ಕೀಡುಮಾಡಬೇಕೆಂಬುದು. ಅರಬಸ್ಥಾನದ ಗೊಂದಲವನ್ನು ಬೆಟ್ಟೆತ್ತಿ ತೋರಿಸಿ ಅವನು ಬ್ರಿಟಿಷರನ್ನು ಒಂದೆರಡು ತಡವೆ ಹಂಗಿಸಿ ಮಾತಾಡಿದ್ದ. ಈಗ ಇತ್ತಂಡಕ್ಕೂ ಅಸಮಾಧಾನಕರವಾದ ಬ್ರಿಟನ್ ತೀರ್ಮಾನ ಹೊರಬಿದ್ದ ಮೇಲಂತೂ ಹಿಟ್ಲರ್-ಅರಬ ಸಂಬಂಧವು ಬಲವಾಗಿದೆ. ನಾಜೀ ಸೂತ್ರಚಾಲನೆಯಿಂದ ಅರಬರು ಬೇಕುಬೇಕಾದಂತೆ ಕುಣಿಯಹತ್ತಿದ್ದಾರೆ.

ಪಿಸುಮಾತಿನ ಮಾರ್ದನಿ

ಕಳೆದ ತಿಂಗಳಲ್ಲಿ ಅರಬರ ರಾಜಾ ಇಬಿನ್ ಸಾವೂದರ ಖಾಸಗಿ ಕಾರ್ಯದರ್ಶಿ ಖಲಿದ್-ಅಲ್-ಹುದ್, ಇವರು ಬರ್ಚೆಸ್‌ಗಾರ್ಡನಿಗೆ ಹೋಗಿ ಹಿಟ್ಲರನೊಡನೆ ಗುಪ್ತ ಸಂಭಾಷಣೆ ನಡೆಸಿದರು. ಈ ಸಂಭಾಷಣೆಯು ರಾಜಕೀಯ ಸಂಬಂಧವುಳ್ಳದ್ದಾಗಿರಲಿಲ್ಲವೆಂದು ಖಲಿದ್ ಅಲ್ ಹುದ್‌ರು ಹೇಳುತ್ತಾರೆ. ಆದರೆ ಆ ಕುರಿತು ಎಲ್ಲರಲ್ಲಿಯೂ ಅನುಮಾನವೆದ್ದಿದೆ. ಕಳೆದ ಕೆಲವು ವಾರಗಳಿಂದ ಪೆಲೆಸ್ತೈನಿನಲ್ಲಿ ಇಂಗ್ಲಿಷರ ವಿರುದ್ಧ ನಡೆಯುತ್ತಿರುವ ನಾಜೀ ಪ್ರಚಾರದ ಭರವು ಈ ಅನುಮಾನವನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ. ಅವರ ಗುಪ್ತ ಸಂಭಾಷಣೆಯು ಸಾವೂದೀ ಅರೇಬಿಯಾ ಸೈನ್ಯವನ್ನು ಸುಧಾರಿತ ರೀತಿಯಲ್ಲಿ ಸಜ್ಜುಗೊಳಿಸುವದು, ಮತ್ತು ಅದಕ್ಕಾಗಿ ಹೊಸ ಮಾದರಿಯ ವಾಯುವಿಮಾನ, ಗನ್ನುಗಳು ಮತ್ತು ಟೇಂಕುಗಳ ಸಹಾಯವನ್ನು ಜರ್ಮನಿಯಿಂದ ದೊರಕಿಸಿಕೊಳ್ಳುವದು. ಈ ವಿಷಯಗಳ ಮೇಲೆಯೇ ನಡೆದಿತ್ತೆಂದೂ ಹಿಟ್ಲರನು ಸಹಕರಿಸಲು ಒಪ್ಪಿರುವನೆಂದೂ ಬಲವಾದ ವದಂತಿಯಿದೆ. ಇದು ನಿಜವಾಗಿದ್ದಲ್ಲಿ ಈಗಲೇ ಬಗೆಹರಿಸಲಾಗದೆ ಬ್ರಿಟಿಷರು ಕೈಹೊಸೆದುಕೊಳ್ಳಬೇಕಾಗಿ ಬಂದಿರುವ ಪೆಲೆಸ್ತೈನ್ ಸಮಸ್ಯೆಯು ಬ್ರಿಟಿಷರ ಕೈ ಸಿಕ್ಕಿಕೊಳ್ಳುವಷ್ಟು ಸಿಕ್ಕುಗಟ್ಟಿ ಹೋಗಬಹುದು.

ಭಾರತಕ್ಕೂ ನಾಜೀ ಮಂತ್ರೋಪದೇಶ

ಅರಬರೊಡನೆ ಆ ರೀತಿಯ ಸಂಬಂಧವಾಯಿತು. ಬ್ರಿಟಿಷ್ ಸಾಮ್ರಾಜ್ಯದ ಪ್ರಮುಖ ಕ್ಷೇತ್ರವಾದ ಹಿಂದೂದೇಶವನ್ನು ಹಿಟ್ಲರನು ಮರೆತಿಲ್ಲ. ರೀಚ್ ಸ್ಟ್ಯಾಗ್ ಬೇಂಕಿನ ಮಾಜೀ ಅಧ್ಯಕ್ಷ ಡಾ|ಶ್ಯಾಟರು ತಾನು ನಿರಪರಾಧೀ ಎಂದು ಹಾಡುತ್ತಾ ಭಾರತವನ್ನು ಸಂಚರಿಸಿಕೊಂಡು ಹೋದರಷ್ಟೆ. ಅವರು ಒಳಗಿಂದೊಳಗೆ ಬಹಳ ಕೆಲಸಮಾಡಿಯೇ ಮರಳಿರುವರು. ಎಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ, ಹಲವರನ್ನು ಪರೀಕ್ಷಿಸಿ ಕೆಲವು ಹಿಂದೀ ಧುರೀಣರಾಗಿ ನಾಜೀ ತತ್ವಗಳನ್ನು ತಿಳಿದುಕೊಳ್ಳುವರೆ ನಮ್ಮಲ್ಲಿಗೆ ಬಂದುಹೋಗಿರೆಂದು ಆಮಂತ್ರಣಕೊಟ್ಟು ಹೋಗಿರುವರಂತೆ. ಅವರಂತೆಯೇ ಇನ್ನು ಕೆಲವು ಜರ್ಮನಿನ ವ್ಯಾಪಾರ ತಜ್ಞರು ಹಿಂದೂದೇಶಕ್ಕೆ ಬರಲಿರುವರಂತೆ. ಜರ್ಮನಿಯ ಲೇಬರ್ ಪಕ್ಷದ ನಾಯಕರಾದ ಡಾ. ಲೇ ಇವರ ಆಮಂತ್ರಣವು ಹಲವು ಭಾರತೀಯ ವಿದ್ಯಾರ್ಥಿಗಳಿಗೆ ಇಷ್ಟರಲ್ಲೇ ಬಂದಿದೆ. 'ಜರ್ಮನಿಯಲ್ಲಿ ಕೂಲಿಗಾರ ಸಮಸ್ಯೆಯು ಯಾವ ರೀತಿ ತೀರ್ಮಾನ ಹೊಂದಿರುವದೆಂಬುದನ್ನು ಕಣ್ಣಾರೆ ಕಂಡು ಕಲಿತುಕೊಳ್ಳಿ' ಎಂದು ಅವರನ್ನು ಕರೆಯಲಾಗಿದೆ. ಹೀಗೆ ಕರೆಯಲ್ಪಟ್ಟವರಲ್ಲಿ ಶ್ರೀ. ದೀಪಕ ಚೌಧರಿಯವರೊಬ್ಬರು. ಇವರು ಸುಪ್ರಸಿದ್ಧ ಬಂಗಾಳೀ ದೇಶಭಕ್ತೆಯೆನಿಸಿದ್ದ ಶ್ರೀಮತಿ ಸರಳಾದೇವಿ ಚೌಧುರಾಣಿಯರ ಮಗ. ಈ ಸಂಬಂಧದಲ್ಲಿ ಮಹಾತ್ಮಾ ಗಾಂಧಿಯವರೊಂದು ಪತ್ರವನ್ನು ಶ್ರೀ ಚೌಧರಿಯವರಿಗೆ ಬರೆದಿರುವರೆಂದು ವಾರ್ತೆ. ಆ ಪತ್ರವು ಪ್ರಕಟವಾಗಿಲ್ಲ. ಮಾತ್ರವಲ್ಲ, ಅದರಲ್ಲಿ ಸತ್ಯಾಂಶವಿರುವದೇ ಎಂದು ಕೂಡ ತಿಳಿದಿಲ್ಲ. ಈಗ ಸುದ್ದಿ ಹರಡಿದಂತೆ ಮಹಾತ್ಮರು ಡಾ| ಲೇಯವರ ಲೇಬರ್ ಪಕ್ಷದ ರೀತಿನೀತಿಗಳನ್ನು ಹಿಂದೀ ವಿದ್ಯಾರ್ಥಿಗಳು ಕಲಿತುಕೊಂಡು ಬರುವದಕ್ಕೆ ಅನುಕೂಲಾಭಿಪ್ರಾಯವುಳ್ಳವರಿರುವರಂತೆ

ಸತ್ಯವೇನೇ ಇರಲಿ, ಆಮಂತ್ರಣ ಬಂದವರೆಲ್ಲಾ ಜರ್ಮನಿಗೆ ಹೋಗಿ ಬರುವ ಉತ್ಸಾಹದಲ್ಲಿರುವಂತೆ ಕಾಣುತ್ತದೆ. ಜರ್ಮನಿಯ ಹೊಸ ಸಂಬಂಧ ಮತ್ತು ವಿದ್ಯಾರ್ಥಿಗಳಲ್ಲಿರುವ ಪರ್ಯಟನಾಪೇಕ್ಷೆ, ಹಾಗೂ ಅಪರಿಪಕ್ವತೆಯ ಪರಿಣಾಮವಾದ ನವೋತ್ಸಾಹ ಇವುಗಳಿಂದಾಗಿ ಒಂದು ವಿಧದ ನಾಜೀ ಸಂಬಂಧವು ಭಾರತಕ್ಕುಂಟಾಗುವ ಚಿಹ್ನೆಗಳು ಕಾಣುತ್ತಿವೆ.

ಈಚೆ ಭಾರತದ ಕಿವಿಯೂದುತ್ತಿದ್ದಾನೆ!

ಇನ್ಕಮ್ ಟೇಕ್ಸ್ ನೋಟೀಸು

1-4-'39ರಿಂದ ಇನ್ಕಮ್ ಟೇಕ್ಸ್ ಕಾಯಿದೆಯಲ್ಲಿ ಅನೇಕ ವ್ಯತ್ಯಾಸಗಳಾಗಿವೆ. ನೀವು ಕೊಡುವ ಟೇಕ್ಸ ನಿಮ್ಮ ಉತ್ಪತ್ತಿಗೆ ಮಿಕ್ಕಿದ್ದಿದ್ದು ನಿಮಗೆ ಆ ಬಗ್ಗೆ ಅಸಮಾಧಾನವಿದ್ದರೆ ಕೆಳಗಿನ ವಿಳಾಸಕ್ಕೆ ಬರೆದು ತಕ್ಕ ಅನುಭವವನ್ನು ಪಡಕೊಂಡು ನಿಮ್ಮ ಟೇಕ್ಸನ್ನು ಕಡಿಮೆಮಾಡಿಕೊಳ್ಳಬಹುದು. ಸಂದರ್ಭಾನುಸಾರ ನೀವು ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

S. S. Puranik
Govt-recognised Income-Tax Practitioner
AUDITOR
P. O. Byndoor

ಮುಂಬಾಯಿಯಲ್ಲಿ

ಶ್ರೀಗಳಾದ ಯು. ಕೆ. ರಂಗರವರು ನಮ್ಮ ಪ್ರತಿನಿಧಿಗಳಾಗಿ ಕೆಲಸಮಾಡುತ್ತಿದ್ದಾರೆ. ಇವರಿಗೆ ಶ್ರೀಗಳಾದ ಗಂಗಾಧರ, ಎಸ್. ಕೆ. ಉಪಾಧ್ಯಾಯ ಮೊದಲಾದವರು ನೆರವಾಗುತ್ತಿದ್ದಾರೆ. ಮುಂಬಯಿ ಕನ್ನಡಿಗರು ಚಂದಾದಾರರಾಗಿ ಸೇರಿಯೂ ಜಾಹೀರಾತುಗಳನ್ನು ಕೊಟ್ಟೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್.

ನಮ್ಮ ಹೊಸ ಏಜಂಟರು.

ಮುಂಡಗಡ್ಡೆಯಲ್ಲಿ—
ಶ್ರೀ. ಕೆ. ವಿ. ಸರಳಾಯ
ಹೋಟೆಲ್ ಕೀಪರ್.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ ಇತ್ಯಾದಿಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟನಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ'ದರ್ಪಣ. ಪುಸ್ತಕವು ಮುಫತ್ತಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

1939ನೇ ಇಸ್ವಿ ಜೂನ್ ತಾ. 27ನೇ ಸೋಮವಾರ ದಿವಸ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

	ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡ ಮುಡಿಗೆ	1—14—0	...
,, ದುಯಂ ,, ,,	1—12—0	..
,, ಅವ್ವಲ್ ತರದ ಸುಗ್ಗಿ ಮುಡಿಗೆ	1—12—0	...
,, ದುಯಂ ,, ,,	1—10—0	.
ಅಕ್ಕಿ ಅವ್ವಲ್ ತರದ ಗುಡ್ಡ ಮುಡಿಗೆ	4—10—0	4—12—0
,, ದುಯಂ ,, ,,	4—6—0	4—8—0
,, ಅವ್ವಲ್ ಸುಗ್ಗಿ ,,	4—6—0	4—8—0
,, ದುಯಂ ,, ,,	4—4—0	4—6—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದ್ದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	...
,, ದಿನಿ ,,	.	...
,, ದಿಲ್‌ಪಸಂದ್	..	...
ತೆಂಗಿನ ಎಣ್ಣೆ ಮಣಕ್ಕೆ	3—6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	3—8—0	4—4—0
ಗೇರುಬೀಜ ಮುಡಿಗೆ	3—12—0	..
ಕಬ್ಬಿನ ಬೆಲ್ಲ ಖಂಡಿಗೆ	52—8—0	57—8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	14—8—0	15—8—0



ಮೆದುಳಿಗೆ ತಂಪೂ ಮತ್ತು ಕೂದಲು ಬೆಳೆಯುವುದಕ್ಕೂ ಸಿದ್ಧಗೊಳಿಸಿದ

ಗಾಂಧಿ (ಝುಂಡಾಛಾಪ)

ರಿಜಿಸ್ಟರ್ಡ್

ಬ್ರಾಹ್ಮೀ ತೈಲ

ಒಮ್ಮೆ ಉಪಯೋಗಿಸಿ ಖಾತ್ರಿಮಾಡಿರಿ.
ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕು.

C. C. Mahajan & Co. Bombay 2
ಸಿ. ಸಿ. ಮಹಾಜನ & ಕಂ, ಮುಂಬಯಿ 2

WANTED District and Taluka Organisers in Districts and Taluks of Karnataka on a monthly salary of Rs 50/- and Rs 20/-. Special facilities for initial business. Only influential and educated Organisers who can guarantee Rs 50,000/- and Rs 25,000/- per year need apply. Padubidri Bros, Bombay 8

ಮದ್ರಾಸು ಹೊಗೆಸೊಪ್ಪಿನ ಕಾನೂನು

ಹೊಗೆಸೊಪ್ಪಿನ ಮಾರಾಟಗಳ ಮೇಲೆ ತೆರಿಗೆಹೊರಿಸುವ ಮತ್ತು ಅವರ ವ್ಯಾಪಾರದ ಬಗ್ಗೆ ಲೈಸನ್ಸು ಕೊಡುವ ಕಾನೂನು ಆಗೋಸ್ತು ೧ಕ್ಕೆ ಪ್ರಾರಂಭವಾಗುವುದು.

1. 1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವರ ವ್ಯಾಪಾರದ ಬಗ್ಗೆ ಲೈಸನ್ಸುಕೊಡುವ ಕುರಿತ) ಆಕ್ಟು 1939ನೇ ಇಸವಿ ಆಗೋಸ್ತು 1ನೇ ತಾರೀಖಿನಲ್ಲಿ ಮತ್ತು ಆ ತಾರೀಖಿನಿಂದ ಸಲುವಳಿಯಲ್ಲಿ ಬರತಕ್ಕದ್ದೆಂದು ಪ್ರಚುರಗೊಳಿಸೋಣಾಗಿದೆ. ಆ ಆಕ್ಟಿನ ಮೇರೆಗೆ ಯಾವನಾದರೂ ಮನುಷ್ಯನು ಲೈಸನ್ಸು ಆಫೀಸರಿಂದ ಸದರಿ ಉದ್ದೇಶದ ಬಗ್ಗೆ ಆತನು ಒಂದು ಲೈಸನ್ಸು ಪಡೆದಿದ್ದರೇನೇ ವಿನಾ ಯಾವ ನಮೂನೆಯಲ್ಲಿಯೂ ಹೊಗೆಸೊಪ್ಪನ್ನು ರಖಮ್ಮಾಗಿ ಮಾರಾಟ ಮಾಡಕೂಡದು. ಅಥವಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ ಯಾ ಕಮಿಶನ್ ಏಜಂಟನಾಗಿ ಹೊಗೆಸೊಪ್ಪಿನ ವ್ಯಾಪಾರವನ್ನು ನಡೆಸಕೂಡದು. ಅದೇ ರೀತಿಯಾಗಿ ಒಂದು ಅಂಗಡಿಯಲ್ಲಿ ಯಾಗಲೀ, ಹೊತ್ತು ಮಾರಾಟಮಾಡುವ ಮೂಲಕವಾಗಿಯಾಗಲೀ, ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಎಂದರೆ ಸಿಗಾರುಗಳು, ಚಿರೂಟುಗಳು, ಸಿಗರೇಟುಗಳು, ಸಿಗರೇಟು ಸೇದುವ ಬಗ್ಗಿನ ಹೊಗೆಸೊಪ್ಪು, ಪೈಪಿನಿಂದ ಸೇದುವ ಬಗ್ಗಿನ ಹೊಗೆಸೊಪ್ಪು, ಬೀಡಿಗಳು ಮತ್ತು ನಸ್ಯ ಇವನ್ನು ಚಿಲ್ಲರೆಯಾಗಿ ಮಾರಾಟಮಾಡುವ ಬಗ್ಗೆ ಒಂದು ಲೈಸನ್ಸು ಅಗತ್ಯವಿದೆ. ಮಲ್ಲುವ ಹೊಗೆಸೊಪ್ಪನ್ನು ಚಿಲ್ಲರೆಯಾಗಿ ಮಾರಾಟಮಾಡುವರೆ ಯಾವುದಾದರೂ ಲೈಸನ್ಸು ಅಗತ್ಯವಿಲ್ಲ. ಒಂದು ಲೈಸನ್ಸಿಲ್ಲದೆ 1939ನೇ ಇಸವಿ ಆಗೋಸ್ತು 1ನೇ ತಾರೀಖಿನಲ್ಲಿ ಮತ್ತು ಆ ತರುವಾಯ ಮೇಲಿನಂತೆ ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಯಾವನಾದರೂ ಮನುಷ್ಯನು ಫಿರ್ಯಾದು ವ್ಯವಹರಣೆ ನಡೆಸಲ್ಪಡಲು ಗುರಿಯಾಗುತ್ತಾನೆ.

2. ಅಗತ್ಯವಾದ ಲೈಸನ್ಸುಗಳಿಗಾಗಿ ಅರ್ಜಿಮಾಡಿ ಅವುಗಳನ್ನು ಪಡೆಯುವರೆ ವ್ಯಾಪಾರಿಗಳಿಗೆ ಸ್ವಲ್ಪಕಾಲ ಹಿಡಿಯುವುದರ ಕಾರಣ ವ್ಯಾಪಾರಿಗಳಿಗೆ ಅನಾನುಕೂಲ್ಯ ಉಂಟಾಗದಂತೆ ಮಾಡುವರೆ ಈ ಕೆಳಗಿನ ಅನುಜ್ಞೆಗಳು ಕೊಡಲ್ಪಟ್ಟಿವೆ. ಈ ಅನುಜ್ಞೆಗಳಿಗೆ ಅನುಸಾರವಾಗಿ ನಡೆದುಕೊಂಡ ಮನುಷ್ಯರು ಒಂದು ಲೈಸನ್ಸು ಇಲ್ಲದೆ ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಬಗ್ಗೆ ಅವರ ಮೇಲೆ ಕ್ರಮ ಜರಗಿಸಲ್ಪಡುವುದಿಲ್ಲ.

3. ಅನುಜ್ಞೆಗಳು—1939ನೇ ಇಸವಿ ಆಗೋಸ್ತು 1ನೇ ತಾರೀಖಿನಲ್ಲಿ ಮತ್ತು ಆ ತರುವಾಯ ರಖಮ್ಮಾಗಿ ಯಾವುದಾದರೂ ನಮೂನೆಯಲ್ಲಿ ಹೊಗೆಸೊಪ್ಪನ್ನು ಮಾರಾಟಮಾಡಲು ಅಥವಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ ಯಾ ಕಮಿಶನ್ ಏಜಂಟನಾಗಿ ಹೊಗೆಸೊಪ್ಪಿನ ವ್ಯಾಪಾರ ನಡೆಸಲು ಅಪೇಕ್ಷಿಸುವ ಸಮಸ್ತ ಮನುಷ್ಯರು ಹಾಗೆ ಮಾಡುವರೆ ಅವರಿಗಿರುವ ಉದ್ದೇಶವನ್ನು ಕೆಳಗೆ ಕೊಟ್ಟಿರುವ ಇಂಟಿಮೇಶನ್ (ಸಮಾಚಾರ ಕೊಡುವ) ಫಾರ್ಮಿನಲ್ಲಿ ಕೂಡಲೇ ತಿಳಿಸತಕ್ಕದ್ದು. ಈ ಫಾರ್ಮನ್ನು ಅರ್ಜಿದಾರರು ಕೈಬರಹದಿಂದ ತಯಾರಿಸಬಹುದು. ಮತ್ತು ಅದನ್ನು ಸದರಿ ಅರ್ಜಿದಾರನಿಗೆ ಆತನ ವ್ಯಾಪಾರ ಸ್ಥಳ ಯಾ ಸ್ಥಳಗಳು ಇರುವ ಅಥವಾ ಒಬ್ಬ ಹೊತ್ತು ಮಾರಾಟಮಾಡುವವನ ಸಂಗತಿಯಲ್ಲಿ ಆತನು ಸಾಧಾರಣವಾಗಿ ವಾಸಮಾಡುವ ತಾಲೂಕಿನ ತಹಸಿಲ್ದಾರರವರು ಮೇಲ್ವಿಳಾಸ ನೋಡಿಕೊಂಡು ಅಸಿಸ್ಟೆಂಟ್ ಕಮರ್ಸಿಯಲ್ ಟೇಕ್ಸ್ ಆಫೀಸರಿಗೆ ಕೊಡಬೇಕೆಂಬುದಾಗಿ ಮೇಲ್ವಿಳಾಸ ಬರೆದು ಕಳುಹಿಸಬೇಕು.

4. ಮೇಲಿನ ಸಮಾಚಾರ ಕೊಟ್ಟಿರುವ ಸಮಸ್ತ ಮನುಷ್ಯರಿಗೆ ಕಮರ್ಸಿಯಲ್ ಟೇಕ್ಸ್ (ವ್ಯಾಪಾರಿ ತೆರಿಗೆಯ) ಶಿಬಂದಿಯವರು ಛಾಪಿಸಿದ ಅರ್ಜಿಯ ಫಾರ್ಮುಗಳನ್ನು ಹಂಚುವವರು ಮತ್ತು ಅಂಥ ಮನುಷ್ಯರು ಸದರಿ ಅರ್ಜಿಯನ್ನು ಕ್ರಮವಾಗಿ ಪೂರಯಿಸಿ, ಅದನ್ನು ಲೈಸನ್ಸಿನ ಬಗ್ಗೆ ಹೊರಿಸಲ್ಪಡತಕ್ಕ ಫೀಸು, ಯಾವುದೂ ಇದ್ದರೆ ಅದರ ಸಮೇತ, ಸದರಿ ಅರ್ಜಿಯ ಫಾರ್ಮು ತಲುಪಿದ ತಾರೀಖಿನಿಂದ 15 ದಿನಗಳೊಳಗಾಗಿ ವಾಪಸುಮಾಡುವಂತೆ ಅಪೇಕ್ಷಿಸಲ್ಪಡುವರು. ಸದರಿ ಇಂಟಿಮೇಶನ್ ಫಾರ್ಮಿನ ಬಗ್ಗಾಗಲಿ ಅರ್ಜಿಯ ಫಾರ್ಮಿನ ಬಗ್ಗಾಗಲಿ ಯಾವ ಸ್ಟ್ಯಾಂಪೂ ಅಗತ್ಯವಿಲ್ಲ.

5. ಮೇಲಿನ ಅನುಜ್ಞೆಗಳನ್ನು ಅನುಸರಿಸಲು ತಪ್ಪಿ 1939ನೇ ಇಸವಿ ಆಗೋಸ್ತು 1ನೇ ತಾರೀಖಿನಲ್ಲಿ ಮತ್ತು ಆ ತರುವಾಯ ಸದರಿ ಆಕ್ಟಿನ ನಿಬಂಧನೆಗಳಿಗೆ ವಿರೋಧವಾಗಿ ಒಂದು ಲೈಸೆನ್ಸಿಲ್ಲದೆ ಹೊಗೆಸೊಪ್ಪಿನ ವ್ಯಾಪಾರ ನಡೆಸಿದ ಮನುಷ್ಯರ ಮೇಲೆ ಫಿರ್ಯಾದು ವ್ಯವಹರಣೆ ನಡೆಸಲ್ಪಡುವುದೆಂದು ಮಹಾಜನರಿಗೆ ಖಂಡಿತವಾಗಿ ಎಚ್ಚರಿಕೆ ಕೊಡೋಣಾಗುತ್ತಿದೆ.

ಇಂಟಿಮೇಶನ್ (ಸಮಾಚಾರಕೊಡುವ) ಫಾರ್ಮು

....ಎಂಬ ನಾನು............ . .

ತಯಾರಿಸಲ್ಪಟ್ಟ ಹೊಗೆಸೊಪ್ಪಿನ ರಖಂ ವ್ಯಾಪಾರಿಯಾಗಿ ಅಥವಾ

ತಯಾರಿಸಲ್ಪಟ್ಟ ಹೊಗೆಸೊಪ್ಪಿನ ವಿನಾ ಇತರ ಹೊಗೆಸೊಪ್ಪಿನ ರಖಂ ವ್ಯಾಪಾರಿಯಾಗಿ ಅಥವಾ

ತಯಾರಿಸುವವನಾಗಿ ಅಥವಾ

ದಲಾಲಿಯಾಗಿ-ಯಾ-ಕಮಿಶನ್ ಏಜಂಟಾಗಿ ಅಥವಾ

ಚಿಲ್ಲರೆ ವ್ಯಾಪಾರಿಯಾಗಿ ಅಥವಾ

ಹೊತ್ತು ಮಾರಾಟಮಾಡುವವನಾಗಿ

ಲೈಸೆನ್ಸ್ ಕೊಡಲ್ಪಡಬೇಕೆಂದು ಅಪೇಕ್ಷಿಸುತ್ತೇನೆ

(ಮೇಲಿನ ಬಾಬುಗಳಲ್ಲಿ ಯಾವುದು ಸಂಬಂಧಪಡತಕ್ಕದೋ ಅದನ್ನು ಸೇರಿಸುವುದು.)

ನಾನು ಒಂದು ಅರ್ಜಿಯ ಫಾರ್ಮು ತಲುಪಿದ ಹದಿನೈದು ದಿನಗಳೊಳಗಾಗಿ ಒಂದು ಲೈಸೆನ್ಸಿನ ಬಗ್ಗೆ ಅರ್ಜಿಮಾಡಿ ಆ ಕುರಿತು ಹೊರಿಸಲ್ಪಡಬಹುದಾದ ಫೀಸನ್ನು ಪಾವತಿಮಾಡುತ್ತೇನೆಂದು ಮತ್ತು ಹೊರಿಸಲ್ಪಡಬಹುದಾದ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಿನ ಏನಾದರೂ ತೆರಿಗೆಯನ್ನು ತೆರತಕ್ಕ ತಾರೀಖಿನಲ್ಲಿ ಪಾವತಿಮಾಡುತ್ತೇನೆಂದು ಖಾತ್ರಿ ಪಡಿಸುತ್ತೇನೆ

ನನ್ನ ವ್ಯಾಪಾರದ ಸ್ಥಳವು.. ....ಲ್ಲಿದೆ

ಮತ್ತು ನನ್ನ ಸಾಮಾನ್ಯ ವಾಸಸ್ಥಳವು. ...ಲ್ಲಿದೆ

ದಸ್ಕತು... . ...



HAVE YOU RECEIVED ???.

OUR NEW ILLUSTRATED COPY CONTAINING LATEST VARIETIES OF MODERN SWISS MADE GUARANTEED LEVER WATCHES?

ರೂ. 3ರಿಂದ ರೂ. 60ರ ತನಕ ಬೆಲೆಯುಳ್ಳವು

ನಂ. 517 ಕ್ರೋಮಿಯಂ ಕೇಸ್ ರೂ. 6-8-0.

„ 518 ಬಂಗಾರದ ಕೇಸ್ ರೂ. 8-0-0.

„ 518A, ರೋಲ್ಡ್ ಗೋಲ್ಡ್ 10ವರ್ಷಗಳದ್ದು ರೂ 12-8-0.

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚು 0-9-0 ಪ್ರತ್ಯೇಕ.
ಹೆಚ್ಚು ವಿವರಗಳಿಗಾಗಿ ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ.
ವಿ. ಸೂ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ.

BAPALAL & Co., (N. U.)
101, ABDUL RAHIMAN ST. BOMBAY, 3.

ಧಾತುಪುಷ್ಟಿ ಲೇಹ ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಜುಮ್ಮುವುದು, ಮಲಬದ್ಧತೆ, ಚಳಿಜ್ವರ, ಅಶಕ್ತತೆ ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು. ಬಾಟ್ಲಿ ೧ರ ರೂ 2-8-0.

ಮೇಹ ಕುಠಾರ— ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರನಾಳದ ಉರಿ, ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಲ್ಲಿ ಧಾತು ಹೋಗುವುದು ಸೊಂಟನೋವು ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಅಲ್ಲದೆ ಇಪ್ಪತ್ತು ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ. ಡಬ್ಬಿ 1ರ ರೂ. 2-8-0.

ಕಸ್ತೂರಿ ಮಿಶ್ರಣ ದಶಮೂಲ— ಪ್ರಸವಾನಂತರ ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಬಾಟ್ಲಿ 1ರ ರೂ. 1—8—0

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 11 ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—ನವಭಾರತ ಬುಕ್ ಡಿಪ್ಪೋ, ಉಡುಪಿ. ಶ್ರೀ ಕೃಷ್ಣ ಫಾರ್ಮಸಿ, ಕುಂದಾಪುರ. ವಿಟ್ಠಲ ನಾರಾಯಣ ಶೆಣೈ, ಟ್ರೇಮ್ ಟರ್ಮಿನಸ್ ಮಜಗಾಂ ಮುಂಬಯಿ.

ಪುಷ್ಪಗಂಧಾಮೋದಿತ
ಬಹುಗುಣಯುಕ್ತ

ಆಮಲಕೀ ತೈಲ

ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ ನಿತ್ಯ ಕೇಶಪ್ರಸಾಧನಾರ್ಥ ಉತ್ತಮವಾದ ಚಿತ್ತಾಕರ್ಷಕ ತೈಲ.

10 ತೊಲೆ ಸೀಸೆ 1ರ ಕ್ರಯ 0-11-0,
5 ತೊಲೆ „ „ „ 0-6-0.

ನಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿಕಾ

ಅಜೀರ್ಣ, ಅತಿಸಾರ, ಉದರಶೂಲೆ, ಉಬ್ಬಸ, ಪಾರ್ಶ್ವಶೂಲೆ, ಕಟಿಶೂಲೆ, ಚುಚ್ಚುವ ಮತ್ತು ಎಳೆಯುವ ವೇದನೆ, ಸರ್ವವಾತರೋಗ, ಜ್ವರ, ಕೆಮ್ಮು, ಇವುಗಳಲ್ಲಿ ಗುಣಕಾರಿಯಾಗಿದೆ. ಹಾಗೂ ಆಬಾಲವೃದ್ಧ ಸ್ತ್ರೀ ಪುರುಷರಿಗೂ, ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಮಾತ್ರೆ —	12	25,	50,	100,	500,	1000
ಕ್ರಯ:	0-4-0,	0-7-0,	0-13-0,	1-5-0,	5-0-0,	9-0-0

5 ಆಣೆ ಸ್ಟ್ಯಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲ್
ಪೋಸ್ಟ್ ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು:—

1. V. R. Prabhu, The Canara News & Books Agent, Batatawala Mansion, Lalbag, BOMBAY.
2. General Supplies Ltd., Udipi, S. K.
3. Nava Bharata Book Depot, Udipi, S. K.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Hello! what is the row in JAYANAGAR?

The Maharaja is Kidnapped on his way to England!

Commander Surendra's behaviour with the state 'fair-sex' grows questionable!

Surendra's installation to throne is interrupted, and the Maharaja's crown is snatched away by 'SILVER KING'

Princess Krishna having once failed to set free the Maharaja, openly befriends Surendra on a promise of marriage with him . . . . . . though, at the same time her heart is aglow with inspiration at the gallantry of Silver King!

What is the Ultimate result? — Where lies the solution?

See Sagar's Super Stunt Thriller and melodrama

SILVER KING

FEATURING:

The Beauty Queen **Sabita Devi** & Actor De-luxe Motilal

SUPPORTED BY

Yakub, Tara, Pande and others.

at

SRI RAMAKRISHNA THEATRE, UDIPI.

From 5—7—1939

ಅರರರೆ! ಜಯನಗರದಲ್ಲಿ ಅದೇನು ಗಲಭೆ?

ಇಂಗ್ಲೆಂಡಿಗೆ ಹೋಗುತ್ತಿದ್ದ ಮಹಾರಾಜನನ್ನು ಕದ್ದೊಯ್ದಿರುವರು!

ನಗರದ ಕೋಮಲಾಂಗಿಯರಲ್ಲಿ ಸೈನ್ಯಾಧಿಕಾರಿ ಸುರೇಂದ್ರನು ತೋರುತ್ತಿದ್ದ ನಡವಳಿಕೆಯು ಹೇಯವಾದ್ದು

ಸುರೇಂದ್ರನ ಪಟ್ಟಾಭಿಷೇಕಕ್ಕೆ ವಿಘ್ನವು ಬರುವುದು..........ಮಹಾರಾಜನ ಕಿರೀಟವನ್ನು ಸೆಳೆದುಕೊಂಡೊಯ್ಯುವನು 'ರಜತರಾಜ'!

ಮಹಾರಾಜನಿಗೆ ಬಂಧನವಿಮೋಚನೆ ಮಾಡಲೆಣಿಸಿದ ರಾಜಕುಮಾರಿ ಕೃಷ್ಣಳ ಪ್ರಯತ್ನವು ನಿಷ್ಫಲವಾಗಲು, ಅವಳೀಗ ಸುರೇಂದ್ರನನ್ನು ಮದುವೆಯಾಗುವೆನೆಂದು ಬಹಿರಂಗವಾಗಿ ಪ್ರೀತಿಯನ್ನು ತೋರ್ಪಡಿಸುತ್ತಿರುವಳು!..........ಆದರೆ 'ರಜತರಾಜ'ನ ಸಾಹಸ ಕೃತ್ಯವು ಅವಳ ಮನವನ್ನು ಅದೆಂದೋ ಅಪಹರಿಸಿಬಿಟ್ಟಿತ್ತು!

ಆಖೈರಿಯ ಪರಿಣಾಮವೇನು? ಸಮಸ್ಯೆಯನ್ನು ಬಿಚ್ಚಿದವರಾರು?

ನೋಡಿರಿ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ.

ತಾರೀಕು 5-7-1939ರಿಂದ

ಸಾಗರ ಮೂವಿಟೋನಿನವರ ಉಜ್ವಲ ಚಿತ್ರ

ಸಿಲ್ವರ್ ಕಿಂಗ್ ಅಥವಾ ರಜತ ರಾಜ

ರೂಪರಾಣಿ ಸಬಿತಾ ದೇವಿ, ಲೋಕಮಾನ್ಯ ನಟ ಮೋತಿಲಾಲ್ ಮತ್ತು ಯಾಕೂಬ್, ತಾರಾ, ಪಾಂಡೆ ಇನ್ನಿತರರು ನಟಿಸಿರುವ ಉತ್ಕೃಷ್ಟ ಕಥೆ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

SILVER KING

SYNOPSIS

The Maharaja of Jayanagar, on his way to England by air for change of climate, is kidnapped. Commander Surendra now assumes supreme power, and the state goes from bad to worst. His behaviour with the state women becomes questionable. One of his victims is Lila devi, a beautiful widow, who inspires her step-son Ajit to wreak vengeance on Surendra.

Surendra rallies his confederates and conspires to grab the throne, and simultaneously Ajit collects a band of patriots to foil Surendra's usurping the throne. Ajit styles himself 'SILVER KING!'

While Surendra is being installed, Ajit surprises them in the Darbar Hall and snatches away the crown from him. The same is secretly handed over to Princess Krishna who comming to know of her father's confinement enlists Silver king's help to set free her father. Silver king in his attempt to rescue the Maharaja, finds himself imprisoned. He is to be shot dead!

Princess Krishna is not dormant. She pretends friendship with Surendra, and on the shooting grounds, manages to effect Silver King's escape.

What becomes of Maharaja? Is Silver King the Crown Prince? Is Princess Krishna a commander's daughter? See it on the Silver Screen.

ಕಥಾಸಾರಾಂಶ

ಜಯನಗರದ ಮಹಾರಾಜನು ಹವಾ ಬದಲಾವಣೆಗಾಗಿ ಇಂಗ್ಲೆಂಡಿಗೆ ವಿಮಾನದಲ್ಲಿ ತೆರಳುತ್ತಿರುವಾಗ ಅವನ ಕಾಣೆಯಾಗುವುದು. ಸೈನ್ಯಾಧಿಪತಿ ಸುರೇಂದ್ರನೇ ನಗರದ ಸರ್ವಾಧಿಕಾರಿಯಾಗುವನು. ನಗರದ ಸ್ಥಿತಿಯು ಕಠಿಣವಾಗುವುದು. ಕೋಮಲಾಂಗಿಯರ ಬಾಳು ಹಾಳೆನಿಸುವುದು ಸುರೇಂದ್ರನ ಪಾಪದೃಷ್ಟಿಯಿಂದ. ಇವನಿಂದ ನೊಂದ ಲೀಲಾದೇವಿ ಎಂಬ ಸುಂದರಿ ವಿಧವೆಯು. ತನ್ನ ಸವತಿಯ ಮಗನಾದ ಅಜಿತನನ್ನು ಸುರೇಂದ್ರನ ಮೇಲೆ ಮುಯ್ಯಿಗೆ ಮುಯ್ಯಿ ತೀರಿಸಬೇಕೆಂದು ಹುರಿದುಂಬಿಸುವಳು.

ಸುರೇಂದ್ರನು ತನ್ನ ಅನುಯಾಯಿಗಳಲ್ಲಿ ಒಳಸಂಚು ನಡಿಸುತ್ತಾ ಸಿಂಹಾಸನವನ್ನು ಅಪಹರಿಸುವುದರಲ್ಲಿದ್ದನು. ಅಂತೂ ಅಜಿತನು ದೇಶಪ್ರೇಮಿಗಳ ದಳವೊಂದನ್ನು ಸಿದ್ಧ ಮಾಡುವನು ಸುರೇಂದ್ರನನ್ನು ಅಟಕಾಯಿಸಲು. ಅಜಿತನು 'ರಜತರಾಜ'ನೆಂದು ಹೆಸರಿಟ್ಟುಕೊಳ್ಳುವನು.

ಸುರೇಂದ್ರನು ಪೀಠವನ್ನೇರುವುದರಲ್ಲಿದ್ದನು. ರಜತರಾಜನು ಬಂದು ಕಿರೀಟವನ್ನು ಕಸಕೊಂಡು ಹೋಗುವನು. ಅದನ್ನು ರಾಜಕುವರಿ ಕೃಷ್ಣೆಗೆ ಒಪ್ಪಿಸುವನು. ತನ್ನ ಜನಕನು ಇನ್ನೂ ಸಜೀವನಾಗಿರುವನೆಂಬುದನ್ನು ತಿಳಿದು ಕೃಷ್ಣೆಯು ಅವನನ್ನು ಬಿಡಿಸಲು ರಜತರಾಜನ ಸಹಾಯವನ್ನು ಪಡೆಯುವಳು. ಆದರೆ ರಜತರಾಜನು ಆ ಪ್ರಯತ್ನ ಮಾಡುತ್ತಿರುವಾಗಲೇ ಅವನೂ ಬಂಧಿಯಾಗುವನು. ಅವನನ್ನು ಬಂದೂಕಿನಿಂದ ಹೊಡೆದು ಕೊಲ್ಲಬೇಕೆಂದು ಆಜ್ಞೆಯಾಗುವುದು.

ರಾಜಕುವರಿಯು ಸುಮ್ಮನಿರಲಿಲ್ಲ. ಸುರೇಂದ್ರನಲ್ಲಿ ಮಿತ್ರತ್ವವನ್ನು ತೋರ್ಪಡಿಸುತ್ತಾ ವಧಾಸ್ಥಳದಲ್ಲಿಯೇ ಅದೆಂತೋ ರಜತರಾಜನಿಗೆ ತಪ್ಪಿಸಿಕೊಂಡು ಹೋಗಲು ಅನುಕೂಲತೆಯನ್ನು ಕಲ್ಪಿಸಿಕೊಡುವಳು.

ಮಹಾರಾಜನ ಗತಿ ಏನಾಗುವುದು? ರಜತರಾಜನು ಯುವರಾಜನೆ? ರಾಜಕುವರಿ ಕೃಷ್ಣೆಯು ಸೈನ್ಯಾಧಿಪತಿಯ ಮಗಳೆ?

ರಜತಪರದೆಯಲ್ಲಿ ನೋಡಿರಿ.

Next. Ranjit's Giant Thriller '**Toofan Mail**' **featuring Madhuri & E. Billimoria.**

ಬರುವ ಚಿತ್ರ: ರಣಜಿತ್ ಮೂವಿಟೋನಿನವರ ಮಾಧುರಿ ಮತ್ತು ಬಿಲ್ಲಿಮೋರಿಯಾ ನಟಿಸಿರುವ ಅದ್ಭುತ ಸಾಹಸ ಚಿತ್ರ

ಟೂಫನ್ ಮೈಲ್

Coming **Baktha Kuchela, Tarzan's Revene.** Bombay Talkie's **Achuta Kanya, Zamana etc.**

ಮುಂದಿನ ಚಿತ್ರ ಭಕ್ತ ಕುಚೇಲ, ಟಾರ್ಜನ್ಸ್ ರಿವೆಂಜ್, ಬಾಂಬೇ ಟಾಕೀಸ್‌ನವರ ಅಚ್ಚುತ ಕನ್ಯಾ, ಜಮಾನಾ ಇತ್ಯಾದಿ

ದಕ್ಷಿಣ ಕನ್ನಡ ಜಿಲ್ಲಾ ಕೋಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರಿಗೆ—

ಹಾಲಾಡಿ ಕೋಂಗ್ರೆಸ್ ಮತದಾರರು ಈ ಮೂಲಕ ವಿನಂತಿಸುವುದೇನೆಂದರೆ,

ಸ್ವಾಮಿ,

ಬೈಕೂರು ಪರ್ಕಳಿನ ಚುನಾವಣೆಯು ಜೂನ್ ತಿಂಗಳ ತಾರೀಕು ೨೫ಕ್ಕೆ ನಡೆಯಲಿರುವುದಾಗಿಯೂ ಸದ್ರಿ ಚುನಾವಣೆಯಲ್ಲಿ ಶ್ರೀ. ಬಿ. ಗೋಪಾಲ ರಾವ್, ಮತ್ತು ಗೋಪಾಲಕೃಷ್ಣ ಕಾಮತ್ ಎಂಬ ಇಬ್ಬರು ಹುರಿಯಾಳುಗಳು ಸ್ಪರ್ಧಿಸುವುದಾಗಿಯೂ ಸದ್ರಿ ಚುನಾವಣೆಗೆ ಬಾರ್ಕೂರಿನಲ್ಲಿ ಮಾತ್ರ ಒಂದು ಪೋಲಿಂಗ್ ಸ್ಟೇಶನ್ ವ್ಯವಸ್ಥೆ ಇರುವುದಾಗಿಯೂ ತಿಳಿದು ಬರುತ್ತಿದೆ. ಆದರೆ ಈ ಚುನಾವಣೆಯಲ್ಲಿ ನಾವು ಭಾಗವಹಿಸಬಾರದೆಂಬುದೇ ನಿಮ್ಮ ಕೋಂಗ್ರೆಸಿನ ಧ್ಯೇಯವಾಗಿರಬೇಕೆಂದು ತಿಳಿಯುತ್ತೇವೆ. ಇಲ್ಲವಾದರೆ ಈ ಮಳೆಗಾಲದಲ್ಲಿ ೧೯ ಮೈಲು ದೂರವಿರುವ ಬಾರ್ಕೂರಿಗೆ ನಾವು ಹೋಗುವುದು ಎಷ್ಟೊಂದು ಅಸಾಧ್ಯ, ಮತ್ತು ಅನಾನುಕೂಲವೆಂಬುದನ್ನು ನೀವು ಚೆನ್ನಾಗಿ ವಿಚಾರಿಸುತ್ತಿದ್ದೀರಿ. ಅಲ್ಲದೆ ಈ ಸಲದ ಚುನಾವಣೆಯ ವಿಷಯದಲ್ಲಿ ಸರಿಯಾದ ಪ್ರಕಟಣೆಗಳು ಕೂಡಾ ಇಲ್ಲಿಗೆ ಬರುವ ಪತ್ರಿಕೆಗಳಲ್ಲಿ ಸಹ ಕಾಣುತ್ತದಿಲ್ಲ. ನೀವು ಹೀಗೆಲ್ಲಾ ಮಾಡುವ ಬದಲು ನಿಮಗೆ ಇಷ್ಟಬಂದವರನ್ನು ನೇಮಿಸುವುದು ಒಳ್ಳೆಯದಲ್ಲವೇ? ಆ ಬಗ್ಗೆ ಅನಾವಶ್ಯಕ ಇಲೆಕ್ಷನ್ ರಂಗಸ್ಥಳವನ್ನು ಕಲ್ಪಿಸಿ ಅನಾವಶ್ಯಕ ಖರ್ಚನ್ನು ಮಾಡಿಸುವುದು ಏಕೆ? ಅದರ ಬದಲು ನಿಮಗೆ ಇಷ್ಟ ಇದ್ದವರನ್ನು ಆರಿಸಿಕೊಳ್ಳುವುದು ಉಚಿತವಲ್ಲವೇ? ಜನಸಾಮಾನ್ಯರಿಂದ ಮನ್ನಿಸಲ್ಪಡದ ನಿಮ್ಮ ಅಧಿಕಾರಕ್ಕೆ ನಿಮಗೆ ನೀವೇ ಮರ್ಯಾದೆ ಕೊಟ್ಟುಕೊಳ್ಳಬೇಕಲ್ಲದೆ ಸಾರ್ವಜನಿಕರು ಎಂದಿಗೂ ನಿಮ್ಮ ನೀತಿಗೆ ಪುರಸ್ಕಾರಕೊಡಲಾರರು. ಕೋಂಗ್ರೆಸಿನ ಮೂಲಸೂತ್ರ ತತ್ವಗಳನ್ನೇ ನೀವು ನಿಜವಾಗಿಯೂ ನಿರ್ನಾಮಮಾಡುತ್ತಿದ್ದೀರಿ. ನೀವು ಇನ್ನು ಮುಂದೆ ಇದೇ ಧೋರಣೆಯನ್ನು ವಹಿಸುವುದು ಕೋಂಗ್ರೆಸಿಗೂ, ಹಾಗೂ ನಿಮಗೂ, ಒಳ್ಳೆತಲ್ಲವು. ಆದರೆ ಇಂತಹ ಕಮಿಟಿಗಳಿಗೆ ನಾವು ಎಂದಿಗೂ ಬೆಂಬಲ ಮರ್ಯಾದೆ ಕೊಡುವವರಲ್ಲ.

ಇತೀ ತಮ್ಮ ಇದರ ಉತ್ತರವನ್ನು ನೋಡುವ

ಹಾಲಾಡಿ ಮತದಾರರು.

(ಈ ವಾರ್ತೆಯನ್ನು ಶ್ರೀ. ಹಾಲಾಡಿ ಮಹಾಬಲ ಶೆಟ್ಟರು ಪ್ರಕಟನೆಗಾಗಿ ಕಳಿಸಿದ್ದಾರೆ. ಕಳೆದ ವಾರ ವಿಳಂಬವಾಗಿ ಕೈಸೇರಿದ್ದರಿಂದ ಈ ಬಾರಿ ಅದರ ಸಾರಾಂಶವನ್ನು ಪ್ರಕಟಿಸಲಾಗಿದೆ. ಸಂ. ನ.)

ಜನಮತ

ಸಾರ್ವಜನಿಕ ಹಿತದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಬರೆದು ಬರುವ ವಾರ್ತೆಗಳಿಗೆ ಈ ವಿಭಾಗದಲ್ಲಿ ಎಡೆಗೊಡಲಾಗುವುದು. ವಾರ್ತೆಗಳು ಅತಿ ಚುಟುಕಾಗಿ, ಸ್ಪಷ್ಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ವಾರ್ತೆದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕು. ಹೆಸರುಕೊಟ್ಟು ಬರುವ ವಾರ್ತೆಗಳಿಗೆ ವಿಶೇಷ ಗಮನಕೊಡಲಾಗುವುದು. ವಾರ್ತೆದಾರರ ಅಭಿಪ್ರಾಯಗಳಿಗೆ ನಾವು ಹೊಣೆಯಲ್ಲ. ಸಂ. ನ.

ಜಕಣಾಚಾರ್ಯ (ದ್ವಿತೀಯ ಮುದ್ರಣ)

ಇದೊಂದು ಐತಿಹಾಸಿಕ ಕಾದಂಬರಿ. ಇದರ ಗ್ರಂಥಕರ್ತರು ಮುಲಗಿ ಗ್ರಾಮವಾಸಿಗಳಾದ ಮಿ. ಶಂಕರ ಅಣ್ಣಾಜಿ ಕುಲಕರ್ಣಿಯವರು. ಪ್ರಕಾಶಕರ್ತರು ಆನಂದವನದಲ್ಲಿರುವ ಶ್ರೀ. ಶೇಷಾಚಲ ಗ್ರಂಥಮಾಲೆಯ ಮಾಲೀಕರಾದ ಮಿ. ಬಿ. ಪ. ಕಾಳೆಯವರು. ಬೆಲೆ 14 ಆಣೆ.

ಈ ಪುಸ್ತಕದ 92, 148, 172, 178ನೇ ಪುಟಗಳನ್ನು ಓದಿದರೆ ಜಕಣಾಚಾರ್ಯರು ಬ್ರಾಹ್ಮಣರೆಂತಲೂ, ವೃತ್ತಿಯಲ್ಲಿ ಜ್ಯೋತಿಷ್ಯರೆಂತಲೂ ತಿಳಿದುಬರುತ್ತದೆ. ಇವರು ಗೃಹಸ್ಥಾಶ್ರಮದಲ್ಲಿದ್ದಾಗ್ಗೆ ಶಿಲ್ಪಿಗಳಾಗಿಯಾಗಲೀ, ಮುಂದೆ ಶಿಲ್ಪಿಗಳಾಗಬೇಕೆನ್ನುವ ಅಭಿಪ್ರಾಯವಾಗಲೀ ಇವರಿಗಿರಲಿಲ್ಲವಂತೆ. ಇವರ ಮನೆತನದ ವೃತ್ತಿ ಸಹ ಶಿಲ್ಪವಲ್ಲವಂತೆ. ಹೀಗಿರಲು ಒಂದಾನೊಂದು ದಿವಸ ವಿಧಿವಿಲಾಸದಿಂದ ಆಚಾರ್ಯರು ಜ್ಯೋತಿಷಗಣನೆಯಲ್ಲಿ ತಪ್ಪುಮಾಡಿ, ತನ್ನ ಪ್ರಥಮ ಸಂತಾನ ಸಂದರ್ಶನ ಸಮಯದಲ್ಲಿ ತನ್ನ ಧರ್ಮಪತ್ನಿಯಲ್ಲಿಯೇ ಸಂಶಯಗ್ರಸ್ಥರಾಗಿ, ಗೃಹಸ್ಥಾಶ್ರಮ ಧರ್ಮತ್ಯಾಗಿಯಾಗಿ, ಅರಣ್ಯವಾಸಿಯಾಗಿ ತಪಸ್ಸಾಚರಿಸಿ, ಈಶಸಾಕ್ಷಾತ್ಕಾರಗೊಳಿಸಿ ಶಿಲ್ಪಿಯಾದರಂತೆ. ತನ್ನ ಜನನಕಾಲದಲ್ಲಿಯೇ ತನ್ನ ಜನಕ ಗೃಹತ್ಯಾಗಿಯಾಗಿ, ಹೋಗಿದ್ದಕ್ಕಾಗಿ, ಬಂಧುಮಿತ್ರರಲ್ಲಿ ಕೆಲವರು ಪರಿಹಾಸ್ಯಮಾಡಲು ಸಹಿಸಲಾರದೆ ನಿಜ ಜನಕನನ್ನು ಹುಡುಕಲು ಹೊರಟ ಡಂಕಣನೆಂಬ ಅಭಿಧಾನವುಳ್ಳ ಕೇವಲ ಹನ್ನೆರಡು ವರುಷ ವಯಸ್ಸಿನ ಜಕಣಾಚಾರ್ಯರ ಪುತ್ರ, ಸುಪ್ರಸಿದ್ಧ ಶಿಲ್ಪಿಯಾದ ತನ್ನ ಪಿತನ ಕಲಾಕೌಶಲ್ಯದಲ್ಲಿ ತಪ್ಪು ಹಿಡಿದು ಪರಾಜಯಗೊಳಿಸಿದನಂತೆ.

ಇದು ಅಸಂದರ್ಭೋಚಿತ ಅನುಚಿತ, ಅಸಾಧ್ಯ ಮತ್ತು ಅಸತ್ಯವಾಗಿರಬೇಕು. ಗ್ರಂಥಕರ್ತರ ಉಲ್ಲೇಖನ ಪ್ರಕಾರ ಜಕಣಾಚಾರ್ಯರು ಬ್ರಾಹ್ಮವಿಪ್ರರು, ಇವರ ಮನೆತನದ ವೃತ್ತಿ ಶಿಲ್ಪವಲ್ಲ. ಗೃಹಸ್ಥಾಶ್ರಮದಲ್ಲಿ ಆಚಾರ್ಯರು ಶಿಲ್ಪವೃತ್ತಿ ಅಭ್ಯಸಿಸಲಿಲ್ಲ. ಮತ್ತು ಮುಂದೆ ಶಿಲ್ಪಿಗಳಾಗಬೇಕೆನ್ನುವ ಅಭಿಪ್ರಾಯ ಸಹ ಇರಲಿಲ್ಲವಂತೆ. ಗೃಹಸ್ಥಾಶ್ರಮ ಧರ್ಮತ್ಯಾಗಿಯಾಗಿ ಈಶನನ್ನು ಕುರಿತು ತಪಸ್ಸಾಚರಿಸುವಾಗಲೂ ಸಹ ಶಿಲ್ಪಿಯಾಗಬೇಕೆನ್ನುವ ಅಭಿಪ್ರಾಯವಿರಲಿಲ್ಲವಂತೆ. ಈಶ್ವರನೇ ಈ ವೃತ್ತಿ ಅನುಸರಿಸೆಂದು ಆಜ್ಞೆಯಿತ್ತನಂತೆ. ಹೀಗಿರಲು ಆಚಾರ್ಯರ ಪುತ್ರನಾದ ಡಂಕಣನಾದರೋ ಪ್ರಥಮದಲ್ಲಿ ತನ್ನ ತಂದೆಯನ್ನು ಸಂದರ್ಶಿದಾಗ್ಗೆ ಹನ್ನೆರಡು ವರ್ಷದ ಬಾಲಕನಾಗಿದ್ದು ಯಾರ ಹತ್ತಿರವೂ ಶಿಲ್ಪವಿದ್ಯೆ ಕಲಿಯದೆಲೇ, ತಂದೆಯಂತೆ ಈಶಸಾಕ್ಷಾತ್ಕಾರಗೊಳಿಸದೆಲೇ, ಜಗದ್ವಿಖ್ಯಾತನಾದ ತನ್ನಯ್ಯನನ್ನು ಹೇಗೆ ಪರಾಜಯಗೊಳಿಸಿದ? ಜಕಣಾಚಾರ್ಯ ಶಿಲ್ಪಕಲಾಕೌಶಲ್ಯದ ವಿಚಾರವಾಗಿ ಭಾರತೀಯರಂತೂ ದೇಶಾಭಿಮಾನದಿಂದ ಹೇಳುತ್ತಾರೆಂದು ಅಂದುಕೊಳ್ಳೋಣ. ಆಚಾರ್ಯರಿಂದ ನಿರ್ಮಿತವಾದ ಹಳೇಬೀಡು, ಬೇಲೂರು ಗುಡಿಗಳ ವಿಚಾರವಾಗಿ ವಿದೇಶೀಯರಾದ ಡಾ. ಫರ್ಗ್ಯುಸನ್ನರು ಈ ರೀತಿ ಹೇಳಿದ್ದಾರೆ.

"There are many buildings in India, which are unsurpassed for delicacy of detail, by any in the world, but the temples at Belur and Halebid surpass even these, for freedom of handeng & richness of fancy. The amount of labour which each facet of this porch (Belur) displays in such as I believe never was bestowed on any such of equal extent in any building in the world." Fergusson.

(ಹಿಂದುಸ್ಥಾನದಲ್ಲಿ ಪ್ರಪಂಚದಲ್ಲಿಯೇ ಮಿಕ್ಕ ಗುಡಿಗಳನ್ನು ಅತ್ಯಂತ ಸೂಕ್ಷ್ಮವಾದ ಕೆಲಸದಲ್ಲಿ ಮೀರಿಸುವಂತಹ ಅನೇಕ ಗುಡಿಗಳುಂಟು. ಅವುಗಳಲ್ಲಿ ಬೇಲೂರು ಮತ್ತು ಹಳೇಬೀಡು ಗುಡಿಗಳೇ ಶ್ರೇಷ್ಠವಾದುವುಗಳು. ಇಷ್ಟು ಸುಂದರ ಕೆಲಸ ಪ್ರಪಂಚದಲ್ಲಿಯೇ ಮಿಕ್ಕ ಯಾವ ಗುಡಿಯಲ್ಲಿಯೂ ಕಾಣಬರುವುದಿಲ್ಲ.)

ಇಂಥಾ ಅದ್ವಿತೀಯ ಶಿಲ್ಪಕಲಾ ಪಾಂಡಿತ್ಯವುಳ್ಳ ಜಕಣಾಚಾರ್ಯರನ್ನು ಏನೊಂದೂ ತಿಳಿಯದ ಹನ್ನೆರಡು ವರ್ಷದ ಬಾಲಕನಾದ ಆಚಾರ್ಯರ ಪುತ್ರನಾದ ಡಂಕಣನು ತನ್ನ ಪಿತನನ್ನು ಪರಾಜಯಗೊಳಿಸಬೇಕಾದರೆ, ದೈವಾಂಶ ಸಂಭೂತರು, ರಾಜಪೂಜಿತರು, ರಾಜಪೋಷಿತರು, ಕಲಾಕೌಶಲ್ಯಕ್ಕೆ ಅಧಿದೇವತೆಗಳಾದ ವಿಶ್ವಬ್ರಾಹ್ಮಣ ವಂಶಸಂಜಾತರಾಗದೆ, ಗ್ರಂಥಕರ್ತರು ಉಲ್ಲೇಖಿಸಿರುವಂತೆ ಆಚಾರ್ಯರು ವಿಪ್ರರಾಗಿದ್ದರೆ ಇದು ಸಾಧ್ಯವಾಗುತ್ತಿದ್ದಿತೇ ಎನ್ನುವ ವಿಷಯವು ವಿಚಕರೇ ಬೋಧಿಸಬೇಕಲ್ಲದೆ ನಾನು ಬರೆಯುವದನಾವಶ್ಯಕ. ಜನ್ಮದಿಂದಲೇ ಶಿಲ್ಪಿಗಳಾದ ವಿಶ್ವಬ್ರಾಹ್ಮಣವಂಶಸಂಜಾತರಾಗದಿದ್ದರೆ ಜಕಣಾಚಾರ್ಯರು ತನ್ನನ್ನೇ ಮೀರಿಸುವಂಥ ಪುತ್ರರತ್ನಕ್ಕೆ ಜನ್ಮವಿತ್ತು ಜನಕರಾಗುತ್ತಿದ್ದರೇ? ಸಾಕ್ಷಾತ್ಕಾರನ್ನು ಸಹ ವಶಗೊಳಿಸುವಂಥ ಲೋಕೋತ್ತರ ಶಿಲ್ಪಿಯಾದ ತನ್ನ ಪಿತನನ್ನೇ ಪರಾಜಯಗೊಳಿಸಿದ ಡಂಕಣನು ಮಾತೃಗರ್ಭದಿಂದಲೇ ಹೇಗೆ ಶಿಲ್ಪಿಯಾಗಿ ಜನಿಸಿದನು? ಕಾದಂಬರಿಯನ್ನೋದುವ ಸಾಮಾನ್ಯ ವಾಚಕರಿಗೆ ಈ ವಿಚಾರವಾಗಿ ಸುಲಭವಾಗಿ ಗಮನಬೀಳದೆ ಹೋದರೂ ವಿಮರ್ಶಾತ್ಮಕ ದೃಷ್ಟಿಯಿಂದ ಓದುವವರಿಗೆ ತಪ್ಪದೆ ಈ ವಿಷಯಗಳು ಗೋಚರವಾಗುತ್ತವೆ.

ಜಕಣಾಚಾರ್ಯರು ಖಂಡಿತವಾಗಿಯೂ ಜಗತ್ಪೂಜನೀಯರು, ಕಲಾಕೌಶಲ್ಯಕ್ಕೆ ಅಧಿದೇವತೆಗಳಾದ ವಿಶ್ವಬ್ರಾಹ್ಮಣವಂಶಸಂಜಾತರಾಗಿರಬೇಕೇ ಹೊರತು ಎಂದಿಗೂ ವಿಪ್ರರಾಗಿರಲಾರರೆಂದು ನನ್ನ ದೃಢವಿಶ್ವಾಸ. ಈ ವಿಚಾರಗಳನ್ನು ಈ ಪುಸ್ತಕದ ಗ್ರಂಥಕರ್ತರು ಮತ್ತು ಪ್ರಕಾಶಕರ್ತರು ಸಹ ದೀರ್ಘಾಲೋಚನೆ ಮಾಡಿ ಸಾಧ್ಯವಾದಷ್ಟು ಶೀಘ್ರದಲ್ಲಿಯೇ ಈ ತಪ್ಪನ್ನು ಸರಿಪಡಿಸುವರೆಂದು ನನ್ನ ಆಶಯ.

ಪಿ. ಪದ್ಮನಾಭನ್.

ನಂ. 9 ಜಂಗಮ ಮೇಸ್ತ್ರಿ ಲೇನ್, ಬಳೇಪೇಟೆ, ಬೆಂಗಳೂರು ಸಿಟಿ.

TENDER NOTICE.

Tenders of rates to reach the Sub Assistant Director before 15-8-1939 are invited for transporting salt bags and stocking them in the fish-curing yards and salt gollahs on the West Coast from vessels or railway waggons and for sundry other works. Details and terms of contract can be obtained from the Sub Assistant Director of Fisheries (West Coast), Calicut.

Calicut, 14-6-'39.

M. Jayaram Naidu, *Sub Assistant Director of Fisheries, West Coast.*

ಮೂಲವ್ಯಾಧಿಗೆ

ವಿಶೇಷ ಗುಣಕಾರಿ.

ಮಹಾತ್ಮರವರ ಪ್ರಸಾದ

ಆಶ್ಚರ್ಯಕರವಾದ ಔಷಧಿ

ಸಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.

ಅರ್ಶಮಾರಾ

ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿತ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುವುದು, ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು. ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.

ಬೆಲೆ ರೂ. 2-0-0.

ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer DR. D. N. JASANI, Vitalbhai Patel Road, BOMBAY 4

ಪ್ರೇಮ ಪ್ರಕಟಣಾಲಯದ ಎಲ್ಲಾ ತರದ

ಪುಸ್ತಕಗಳು

ನವಭಾರತ ಪುಸ್ತಕ ಭಂಡಾರದಲ್ಲಿ ದೊರೆಯುತ್ತವೆ.

ಪ್ರತಿ ಒಂದರ ಬೆಲೆ: ೦—೬—೦

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 6-7-39ರಿಂದ ತಾ. 13-7-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಿನ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ಎಲ್ಲಾ ಬಣ್ಣವೂ ಮಸಿನುಂಗಿತೆಂಬ ಗಾದೆಯಂತೆ ಇತರ ಗ್ರಹರ ಅನುಕೂಲ್ಯವು ಉತ್ತಮವಾಗಿದ್ದರೂ ಜನ್ಮಸ್ಥ ಶನಿಯಿಂದ ಬಹಳ ಅನಿಷ್ಟಗಳು ಒದಗುವವು. ಅದಕಾರಣದಿಂದಲೇ ಕಾರ್ಯದಲ್ಲಿ ನಿರುತ್ಸಾಹ ಆಲಸ್ಯ ಇತ್ಯಾದಿಗಳು ನಿಮ್ಮಲ್ಲಿ ಹೆಚ್ಚುತ್ತಿವೆ. ಪ್ರವಾಸಸಂಬಂಧವಾಗಿ ಹೆಚ್ಚಿನ ಧನವ್ಯಯವೂ ಕಷ್ಟನಷ್ಟಗಳೂ ಒದಗುವವು. ಆದರೆ ಈ ಧನದ ವಿಷಯದಲ್ಲಿ ನಿಮಗೆ ಚಿಂತೆಯೊದಗದು. ನೌಕರಿ ಭಾಗದಲ್ಲಿಯೂ ವ್ಯಾಪಾರ ವೃತ್ತಿಯಲ್ಲೂ ಹೆಚ್ಚಾಗಿ ಲಾಭವಿದೆ, ಇಷ್ಟಸ್ಥಾನದ ಪ್ರಾಪ್ತಿಯಿಂದಲೂ ಸತ್ಪುರುಷರ ಲಕ್ಷ್ಯದಿಂದಲೂ ನಿಮ್ಮ ಮನಸ್ಸಿಗೆ ಸಂತೋಷವುಂಟಾಗುವದು. ಇಷ್ಟಮಿತ್ರರ ದರ್ಶನ ಪ್ರವಾಸದಲ್ಲಿ ಪ್ರೇಕ್ಷಣೀಯ ಸ್ಥಳಸಂದರ್ಶನ ಸತ್ಸಮಾಗಮಗಳು ದೊರೆಯುವವು. ತಾ. 8-9-10 ಮತ್ತು 13 ಈ ದಿನಗಳಲ್ಲಿ ದೇಹಾಲಸ್ಯ ಕಾರ್ಯವಿಘ್ನ ಇತ್ಯಾದ್ಯನಿಷ್ಟಗಳಧಿಕವಾಗುತ್ತವೆ.

ವೃಷಭರಾಶಿ—

ನಿಮ್ಮಲ್ಲೇ ನಿಮಗೆ ನಂಬಿಕೆಯಿಲ್ಲದ ಮೇಲೆ ಇತರರಲ್ಲಿ ಹೇಗೆ ವಿಶ್ವಾಸವಿಡುವಿರಿ. ಅದಕಾರಣದಿಂದ ನೀವು ವಿಶ್ವಾಸಿಯಾಗಿ ಮುಂದರಿಸತಕ್ಕ ಕಾರ್ಯವು ಅತೀವ ಮಂದಗತಿಯಿಂದ ಸಾಗುವುದು. ಈ ವಾರದಲ್ಲಿ ಬೇರೆಯವರ ವಸ್ತುಗೆ ಬೇಹಾರವನ್ನು ಮಾಡಿ ವೃಥಾ ನಷ್ಟ ಕಟ್ಟಿಕೊಳ್ಳುವಿರಿ. ದೇಹದ ಆರೋಗ್ಯವು ಸರಿಯಾಗಿ ಉಳಿಯಲಾರದು ತೀವ್ರವಾದದಕ್ಕೆ ತಕ್ಕ ಫಲವನ್ನು ಅತಿ ದಿವಸದಲ್ಲೇ ಹೊಂದುವಿರಿ. ಇಷ್ಟೆಲ್ಲಾ ದೋಷಕಾರ್ಯಗಳು ಸಂಭವಿಸುವಂತಿದ್ದರೂ ಗುರುಸಾನ್ನಿಧ್ಯವು ನಿಮಗೆ ಶುಭವು ಇರುವುದರಿಂದ ನೀವು ಅಪಮಾನವನ್ನು ಗಣನೆಗೆ ತಾರದಿರುವಿರಿ. ವಿಶೇಷವಾಗಿ ಸಾಲ ಮಾಡುವ ಪ್ರಸಂಗ ಬರಲಾರದು, ಉತ್ತಮ ಸ್ತ್ರೀಪ್ರಾಪ್ತಿಯು, ನಿಮಗೆ ಯೋಗ್ಯಸ್ಥಾನವೂ ದೊರೆಯಲಿದೆ, ತಾ. 11-12 ಈ ದಿನಗಳನ್ನು ಹೊರತಾಗಿ ಇತರ ದಿನಗಳಲ್ಲಿ ನಿಮಗೆ ಹೆಚ್ಚಿನ ಅನುಕೂಲ ಯೋಗವಿರುತ್ತದೆ.

ಮಿಥುನರಾಶಿ—

ಸದ್ಯದಲ್ಲಿ ನಿಮ್ಮ ಪರಿಸ್ಥಿತಿಯು ಹೆಚ್ಚಿನ ಉತ್ತಮವಾಗಿದ್ದರೂ ಕನಿಷ್ಠವಾಗಿಲ್ಲವು. ಹೆಚ್ಚಿನ ಕಾರ್ಯಗಳಲ್ಲಿ ನಿಮಗೆ ಜಯಲಾಭವಿರುವುದು. ಆದರೆ ರಾಜಕೀಯ ಭಾಗದಲ್ಲಿ ಮಾತ್ರ ಇಷ್ಟಸಿದ್ಧಿಯಾಗುವಂತಿಲ್ಲವು. ಆರೋಗ್ಯ ಸಂಪೂರ್ಣ ಉತ್ತಮವಾಗಿಲ್ಲದಿದ್ದರೂ ಶರೀರಪೀಡೆಯುಂಟಾಗಲಾರದು. ಸಮಾಜಹಿತಕಾರಕಗಳಾದ ಸಾರ್ವಜನಿಕ ಕಾರ್ಯಗಳಲ್ಲಿ ವಿಜಯಿಗಳಾಗಿ ಜನರ ಅಭಿನಂದನೆಗಳಿಗೆ ಪಾತ್ರರಾಗುವಿರಿ, ಇಷ್ಟಿತಾರ್ಥಗಳು ಅನಾಯಾಸದಿಂದ ಲಭಿಸುವವು. ರಿಪುಜನರಿಂದ ಧನಪದಾರ್ಥಕ್ಕೆ ಹಾನಿಯೊದಗುವ ಸ್ಥಿತಿಯಿರುವುದು. ಸಾಂಪತ್ತಿಕ ವಿಚಾರದಲ್ಲಿ ಉತ್ತಮ ಪರಿಸ್ಥಿತಿಯೇ ಕಂಡುಬರುವದು, ತಾ. 6-7 ಮತ್ತು 13 ಈ ದಿನಗಳಲ್ಲಿ ರಾಜಭೀತಿ, ಮಾನಸಿಕ ಉದ್ವೇಗ ಆಯಾಸ, ಧನವ್ಯಯಾದಿಗಳು ಅಧಿಕವಾಗಲಿವೆ.

ಕರ್ಕಾಟಕರಾಶಿ—

ಕೇವಲ ನಾಲಗೆಯಿಂದ ನೀನು ಅದೆಂತಹ ಮಾರ್ಗವನ್ನು ಹೊಂದುವನೆಂದು ಹೇಳಬಲ್ಲವಂತಿಲ್ಲ, ಕೇವಲ ಮಾತಿನಿಂದ ಶತ್ರುಗಳನ್ನು ಮಿತ್ರರನ್ನಾಗಿಯೂ ಮಿತ್ರರನ್ನು ಶತ್ರುಗಳನ್ನಾಗಿಯೂ, ವಿಶ್ವಬಾಂಧವ್ಯವನ್ನೂ ವಿಶ್ವಬಹಿಷ್ಕಾರವನ್ನೂ ಕೂಡ ಸಂಪಾದಿಸಿಕೊಡಬಲ್ಲುದೀ ನಾಲಗೆ. ಸೀವಾದದಲ್ಲಿ ಈ ನಾಲಗೆ ಮೋಹಕ ನಿಷ್ಠುರಗಳಾಗಿ ವರ್ತಿಸಿ ಇತರ ಜನರಿಗಂತಿರಲಿ, ನಿಮ್ಮ ಮನೆಯ ಜನರಿಗೇ, ಅದರಲ್ಲೂ ನಿಮ್ಮ ಅರ್ಧಾಂಗಿಗೇ ನಿಮ್ಮಲ್ಲಿ ವೈಮನಸ್ಸೂ ಅಸೂಯೆಯೂ ಉತ್ಪನ್ನವಾಗುವದು. ಎಲ್ಲಿ ಹೋದರೂ ನಿಮಗೆ ಪುರಸ್ಕಾರದ ಬದಲು ತಿರಸ್ಕಾರವೇ ಪ್ರಾಪ್ತಿಯೆನಬಹುದು. ನೀವು ತಿಳಿಯದೆ ಈ ರೀತಿ ವರ್ತಿಸುವಿರೆಂದಲ್ಲ, ಒಳ್ಳೇ ಸ್ವಪ್ರಜ್ಞೆಯು ನಿಮಗಿರುವದು ಆದರೆ ವಿಧಿಬರಹದಂತಿರುವದು. ಅನುದಿನದ ಕಾರ್ಯ ಅನಾಯಾಸದಿಂದ ಸಾಗುವದು. ತಾ. 11-12-13 ಈ ದಿನಗಳು ಇಷ್ಟಾರ್ಥಪ್ರದಗಳಾಗಿವೆ.

ಸಿಂಹರಾಶಿ—

ಇಷ್ಟಾನಿಷ್ಟದಾಯಕರಾದ ದ್ವಿವಿಧ ಗ್ರಹರೂ ಬಲದಲ್ಲಿ ಸಮತ್ವವನ್ನು ಹೊಂದಿರುವುದರಿಂದ ಸುಖದುಃಖ, ಲಾಭ-ನಷ್ಟ, ಜಯಾಪಜಯಗಳು ಏಕರೀತಿಯಲ್ಲಿ ದೊರೆಯುವವು. ಶರೀರದ ಆರೋಗ್ಯಮಾನವು ಉತ್ತಮವಾಗಿಲ್ಲದಿದ್ದರೂ ಮಿತ್ರಜನರ ಸಹಕಾರ ಬಂಧುಗಳ ಬೆಂಬಲ ಇವುಗಳಿಂದ ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ವಿರೋಧಕ್ಕೆ ಮೂಲವಾದ ವಾದವು ನಿವೃತ್ತಿಯಾಗಿ ಪರಸ್ಪರ ಐಕ್ಯರಾಗುವಿರಿ. ಕೋರ್ಟು ವಗೈರೆ ಕಾರ್ಯಗಳಲ್ಲಿ ಇಷ್ಟಾರ್ಥವು ನೆರವೇರುವುದು. ಧನಕ್ಷಯವೂ ದುರ್ವ್ಯಸನವೂ ಅಧಿಕವಾಗುವದು. ಆಪ್ತಜನರಲ್ಲಿ ಪರಸ್ಪರ ಮನಸ್ತಾಪ ಅಸೂಯೆಗಳು ಸ್ವಲ್ಪ ಮಟ್ಟಿಗೆ ಅಭಿವೃದ್ಧಿಯಾಗುವವು ಅಕಸ್ಮಾತ್ತಾಗಿ ಗಂಟುಬೀಳತಕ್ಕ ಪ್ರಯಾಣದಿಂದ ವಿಶೇಷ ಖರ್ಚೂ ಕಷ್ಟವೂ ಸಂಭವಿಸುವದು. ತಾ. 6-7-13 ಈ ದಿನಗಳು ಸಾಮಾನ್ಯ ಉತ್ತಮವಿವೆ.

ಕನ್ಯಾರಾಶಿ—

ಮಾತುಬಲ್ಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ, ಎಂಬೀ ಮಾತನ್ನು ಸದಾ ನೆನಪಿಟ್ಟುಕೊಳ್ಳಿರಿ. ಈ ವಾರದಲ್ಲಿ ನಿಮಗೀ ಎರಡು ತೆರನಾದ ಭಾಗಗಳೂ ಅನುಭವಕ್ಕೆ ಬರಲಿವೆ. ಆದಾವ ದೋಷದಿಂದಲೋ ನಿಮ್ಮ ಪ್ರಕೃತಿಯು ಕೆಡಲಿದೆ. ವಿಚಾರಮಾಡದೆ ಮಾತನ್ನು ಮುಂದರಿಸುವುದರಿಂದ ಕಲಹ ಗಂಟುಬೀಳುವುದು, ಇವುಗಳಿಂದಾಗಿ ನಿಮ್ಮ ಮಾನಸಿಕ ಸುಖಕ್ಕೂ ಹಾನಿಯಿದೆ. ಕಾರ್ಯಗಳಿಗೂ ವಿಘ್ನಗಳು ಪ್ರಾಪ್ತವಾಗುವವು. ಧನನಾಶಕ್ಕೆ ಎಡೆಯಾಗುವದು. ಆದರೂ ನೌಕರಿ ಭಾಗದಲ್ಲಿ ನಿಮಗೆ ಪರಿಸ್ಥಿತಿಯು ಉತ್ತಮವಾಗಿಯೇ ಇರುವದು, ಅಧಿಕಾರಿಗಳ ಮನವೊಲಿಸಿ ಕಾರ್ಯವನ್ನು ಸಾಧಿಸಿಕೊಳ್ಳುವ ಚೈತನ್ಯ ನಿಮಗಿರುವದು. ಇಷ್ಟವಸ್ತುಗಳು ಕಷ್ಟವಿಲ್ಲದೇನೇ ನಿಮಗೆ ದೊರೆಯುವವು, ಮನಸ್ಸಮಾಧಾನಗಳೂ ಗೃಹಸುಖವೂ ಸಾಕಷ್ಟು ಉತ್ತಮವಾಗಿಯೇ ಲಭಿಸುವವು, ಆಯವ್ಯಯಗಳು ಸಮತೂಕದಲ್ಲಿ ನಿಲ್ಲುವವು, ತಾ. 6ರಿಂದ 10ರ ವರೆಗೂ ನಿಮ್ಮ ಭಾಗಕ್ಕೆ ಅನುಕೂಲಗಳೇ ಆಗಿವೆ.

ತುಲಾರಾಶಿ—

ಕೈಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಕಷ್ಟಪಟ್ಟು ದುಡಿದರೇನೇ ಸುಖದಿಂದ ಉಣ್ಣಬಹುದು. ಈ ವಾರದಲ್ಲಿ ನಿಮ್ಮ ಗ್ರಹಬಲವು ಹೀನತರಗತಿಯಲ್ಲಿರುವುದರಿಂದ ಪ್ರಯತ್ನಕ್ಕೆ ತಕ್ಕುದಾದ ಫಲಸಿಗುವದೂ ದುರ್ಲಭವೆನಬೇಕಾಗಿದೆ. ವಾಣಿಜ್ಯಭಾಗದಲ್ಲೂ ವಿದ್ಯಾಮೂಲಕವೂ ಬಹಳ ಶ್ರಮದಿಂದ ಧನವನ್ನು ಪಡೆಯಬಹುದು. ಆದರೂ ಸಿಕ್ಕಿದ ಹಣಕ್ಕಿಂತ ದ್ವಿಗುಣವಾಗಿ ನಿಮಗೆ ಖರ್ಚೇ ಇರುವುದರಿಂದ ಆರ್ಥಿಕ ಅಡಚಣೆಯು ಬಹಳ ಹೆಚ್ಚುವದು, ಮಾತ್ರವಲ್ಲ ಧನಸಂಬಂಧವಾಗಿ ಕಲಹವೂ ಪ್ರಾಪ್ತವಾಗುವದು, ಜ್ವರ ಹೊಟ್ಟೆನೋವು ಇತ್ಯಾದಿಗಳಿಂದ ಬಹಳ ದಣ್ಣಾಗುವಿರಿ. ಕುಮಿತ್ರರ ಮೂಲಕ ಅನಿಷ್ಟಗಳೇ ಬಂದೊದಗುವವು. ಅಂತೂ ಸದಾ ವ್ಯಸನಿಗಳಾದ ನಿಮಗೆ ಚಿತ್ತಚಾಂಚಲ್ಯವು ಇತೋಪ್ಯಧಿಕವಾಗುವದು ತಾ. 8ರಿಂದ 12ರ ವರೆಗಿನ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಪ್ರಾಪ್ತವಾಗಲಿವೆ.

ವೃಶ್ಚಿಕರಾಶಿ—

ನಿಮಗೀವಾರವು ಸಾಕಷ್ಟು ಉತ್ತಮರೀತಿಯಲ್ಲಿರುವುದು. ಆರೋಗ್ಯಭಾಗ್ಯದಲ್ಲಿ ಏನೂ ಕೊರತೆಗಳಿರಲಾರವು. ಅಸಹಾಯಶೂರರಾದ ನೀವು ಸ್ವಸಾಮರ್ಥ್ಯದಿಂದಲೇ ಹಲಕೆಲವು ಕಾರ್ಯಗಳನ್ನು ಸಾಧಿಸುವಿರಿ, ಹಣದ ಅಡಚಣೆಯಿಂದ ಆದಷ್ಟು ಮುಕ್ತರಾದ ನೀವು ಸಾಕಷ್ಟು ಧನವನ್ನೂ ಕೂಡ ಸಂಗ್ರಹಿಸುವಿರಿ, ಶತ್ರುಕ್ಷಯದಿಂದಲೂ ನಾನಾವಿಧದ ಧನಪ್ರಾಪ್ತಿಯಿಂದಲೂ ವಾಂಛಿತಾರ್ಥವನ್ನು ಪಡೆಯುವುದರಿಂದಲೂ ನೀವು ನಿಶ್ಚಿಂತರಾಗುವಿರಿ, ಸಂಸಾರರಥವು ಉತ್ತಮವಾಗಿ ಸಾಗುವಂತಿದ್ದರೂ ತನ್ನಾಲಾಧಾರಭೂತವಾದ ಚಕ್ರದ್ವಯಗಳಂತಿರುವ ದಂಪತಿಗಳಲ್ಲಿನ ಮನಸ್ತಾಪ ಕಲಹಗಳು ಸುಸೂತ್ರವಾಗಿ ನಡೆಯಲು ವಿಘ್ನಕಾರಿಗಳಾಗಿವೆ. ನೌಕರಿ ಭಾಗದಲ್ಲೂ ಕೋರ್ಟು ಕೆಲಸಗಳಲ್ಲೂ ಅತ್ಯಂತ ಜಾಗರೂಕರಾಗಿರಿ. ವಾರಾದಿಯ (ಐದುದಿನಗಳು) ಹೆಚ್ಚಿನ ಉತ್ತಮಗಳಾಗಿಲ್ಲವು.

ಧನುರಾಶಿ—

ಗ್ರಹಮಾನವು ಚೆನ್ನಾಗಿಲ್ಲದ ಮೇಲೆ ಮನುಷ್ಯಯತ್ನವು ಎಷ್ಟೆಂದರೂ ಅಷ್ಟಕ್ಕೇ. ಇತ್ತೀಚೆಗೆ ಕೆಲವು ವಾರಗಳಿಂದ ನಿಮ್ಮ ಜೀವನಪಥದಲ್ಲಿ ಅನೇಕ ಕಂಟಕಗಳು ಪ್ರಾಪ್ತವಾಗುತ್ತಿವೆ. ಇನ್ನೂ ಕೆಲ ಸಮಯ ಈ ಕಷ್ಟದಿಂದ ನೀವು ಪಾರಾಗಲಾರಿರಿ. ಎಷ್ಟು ಪ್ರಯತ್ನವನ್ನು ಮಾಡಿದರೂ ಕಾರ್ಯವು ಕೊನೆಗೊಂಡುವುದು ಅಸಾಧ್ಯವೆಂದೆಣಿಸುವದು. ದುಡ್ಡಿನ ಅಡಚಣೆಯು ಬಹಳವಾಗಿ, ಸಾಲದಿಂದ ಪಾರಾಗುವುದು ಬಹಳ ಕಷ್ಟವಾದೀತು, ಮಿತ್ರರೂ ವಿಶ್ವಾಸಹೀನರಾದ ಜನರೂ ನಿಮಗೆ ಎಡರೊಡ್ಡುವರು. ಸ್ತ್ರೀಯರ ನಿಮಿತ್ತವಾಗಿ ಕಲಹಗಳೂ ಪ್ರಾಪ್ತವಾಗಲಿವೆ. ಪಿತ್ತಾಧಿಕ್ಯದ ಸಲುವಾಗಿ ಆರೋಗ್ಯವು ಚೆನ್ನಾಗಿರದು. ತಾ. 8ರಿಂದ 12ರ ವರೆಗಂತೂ ಕಾರ್ಯಹಾನಿ ಶೋಕಪ್ರವಾಸಾದಿ ಕಷ್ಟಗಳು ಪ್ರಾಪ್ತವಾಗಲಿವೆ.

ಮಕರರಾಶಿ—

ನಿಮಗೂ ಕೂಡ ಹಿಂದಿನ ರಾಶಿಯವರಂತೆ ಪ್ರತಿಕೂಲಕಾರಿ ಗ್ರಹರೇ ವಿಶೇಷವಾಗಿರುವರು, ಸದ್ಯಕ್ಕೆ ಷಷ್ಠಸ್ಥ ರವಿಯೋರ್ವನನ್ನು ಬಿಟ್ಟರೆ ಮತ್ತಾರೂ ನಿಮ್ಮ ಭಾಗಕ್ಕಿಲ್ಲವು. ಅದಕಾರಣದಿಂದಲೇ ಈಗೀಗ ನಿಮಗೆ ವಿರೋಧಿಗಳು ಹೆಚ್ಚುತ್ತಿರುವರು ಮಾತ್ರವಲ್ಲ, ಅವರಿಂದ ಉಪದ್ರವೂ ಕೂಡ ಬಹಳವಾಗುತ್ತಿರುವದು, ನಿಮ್ಮ ಆರೋಗ್ಯವು ಚೆನ್ನಾಗಿಲ್ಲದಿರುವುದರಿಂದಲೂ ಅಸ್ಥಿರಮತಿಯಿಂದಲೂ ಶತ್ರುಪೀಡೆಯಿಂದಲೂ ನೀವು ಕಾರ್ಯಪ್ರವೃತ್ತರಾಗದೆ ಉದಾಸೀನರಾಗುವಿರಿ. ಆಪ್ತೇಷ್ಟ ವಿಯೋಗವುಂಟಾಗುವದು, ಹಣದ ತಾಪತ್ರಯವೂ ಕೆಲವು ಮಟ್ಟಿಗೆ ತೋರಿಬಂದೀತು. ತಾ. 8-9-10 ಈ ದಿನಗಳ ಮಟ್ಟಿಗೆ ಕೇಂದ್ರಸ್ಥಾನ ಗ್ರಹವಿರುವುದರಿಂದ ರಾಜಕೀಯ ದ್ವಾರದಲ್ಲಿ ಇಷ್ಟಸಿದ್ಧಿ, ಜಯ, ಧನಗಳು ಲಭಿಸುವವು.

ಕುಂಭರಾಶಿ—

ಸಟ್ಟಸಿಂಗಾರವಾಗುವಾಗ ಪಟ್ಟಣ ಸೂರೆಯಾಯಿತೆಂಬ ಗಾದೆಯಂತೆ ನಿಮ್ಮ ಕಾರ್ಯಾರಂಭದ ಹೀಳಿಕೆಯಲ್ಲೇ ಅನುಕೂಲಕಾಲವು ಕ್ರಮಿಸಲಿಕ್ಕಿದೆ. ಆದಕಾರಣ 'ಶುಭಸ್ಯ ಶೀಘ್ರಂ' ಎಂದಂತೆ ಇಷ್ಟಪ್ರಾಪ್ತಿಗೆ ಆದಷ್ಟು ಬೇಗ ಪ್ರವರ್ತಿಸುವುದೊಳ್ಳಿತು. ವಿದ್ಯಾರ್ಥಿಗಳಿಗೆ ಕಾಲವು ಅತ್ಯನುಕೂಲವಾಗಿರುವದು, ವ್ಯಾಪಾರದಲ್ಲಿ ಉತ್ತಮರೀತಿಯಲ್ಲಿ ಲಾಭ ಸಿಗುವುದು. ವೃದ್ಧರು ಯುವಜನರು ಹೊರತಾಗಿ ಇತರರೆಲ್ಲರಿಗೂ ಸಾಮಾನ್ಯ ಉತ್ತಮ ಪರಿಸ್ಥಿತಿಯೇ ಇರುವುದು. ರಾಜಕೀಯ ಕಾರ್ಯಗಳಲ್ಲಿ, ಕೋರ್ಟು ವಗೈರೆಗಳಲ್ಲಿನ ಖಟ್ಲೆಗಳಲ್ಲಿ ಒಳ್ಳೆ ಫಲಿತಾಂಶವು ಚೆನ್ನಾಗಿಲ್ಲವು. ನೌಕರಿ ಭಾಗದಲ್ಲಿ ಉನ್ನತಿಯನ್ನು ಪಡೆಯುವಿರಿ. ಆರೋಗ್ಯಭಾಗ್ಯವೂ ಬಹಳ ಉತ್ತಮವಾಗಿರುವುದರಿಂದ ಆದಾವ ಭಾಗದಲ್ಲೂ ನಿಮಗೆ ಚಿಂತೆಯಿರದು. ತಾ. 6-7 ಮತ್ತು 11-12 ಈ ದಿನಗಳಲ್ಲಿ ಸರ್ವಾನುಕೂಲ ಯೋಗವಿರುತ್ತೆ.

ಮೀನರಾಶಿ—

ನಿಮಗೀವಾರದಲ್ಲಿ ಭೂಮಿಯ ಸಂಬಂಧವಾಗಿಯೂ, ಸಾಹಸದಿಂದ ಸಾಧ್ಯವಾಗತಕ್ಕ ಕಾರ್ಯಗಳಲ್ಲಿಯೂ ಧನಲಾಭವಾಗುವುದು. ಮಿತ್ರಜನರ ಸಮಾಗಮ. ಪುತ್ರಸಂಪತ್ತಿನಿಂದ ಕೂಡಿರುವಿರಿ. ಆದರೂ ನಿಮ್ಮ ಮನಸ್ಸಿಗೆ ಸಮಾಧಾನವಿಲ್ಲವು. ಕಾರಣ ಗೃಹಕಲಹದಿಂದ ಪರಸ್ಪರ ಮನಸ್ತಾಪವುಂಟಾಗಿ ಬೇರೆ ಬೇರೆಯಾಗುವರು, ಬೇಕಾದ ಪದಾರ್ಥಗಳು ಸಮಯಕ್ಕೆ ದೊರೆಯವು, ಉತ್ಪತ್ತಿಗಿಂತಲೂ ಅಧಿಕವಾಗಿ ಖರ್ಚಾಗುವದು, ಆದ್ದರಿಂದಲೇ ಸಾಲಮಾಡಬೇಕಾದ ಪ್ರಸಂಗ ಬರುವದು. ಆರೋಗ್ಯದ ಮಟ್ಟಿಗೂ ಕೂಡ ಚೆನ್ನಾಗಿಲ್ಲವೆಂದೇ ಹೇಳಬೇಕಾಗಿದೆ, ತಾ. 8-9-10 ಮತ್ತು 13 ಈ ದಿನಗಳಲ್ಲಿ ಕಾರ್ಯ ಜಯ, ವಸ್ತ್ರಲಾಭ ಸ್ತ್ರೀ ಸುಖಾದಿಗಳು ದೊರೆಯುವವು.

ಚೈತನ್ಯ ಮತ್ತು ಹೊಸ ಹುರುಪು

ಸನೆದುಹೋದ ನರಗಳಿಗೆ ಚೈತನ್ಯಕೊಡಲು ರಕ್ತವನ್ನು ವೃದ್ಧಿಮಾಡಲು ಮತ್ತು ನಿಮಗೆ ತೇಜಸ್ಸನ್ನುಂಟುಮಾಡಲು ಪಂಡಿತ ಡಿ. ಗೋಪಾಲಾಚಾರ್ಲುರವರ ಜೀವಾಮೃತಂ ಅದ್ವಿತೀಯವಾದದ್ದಾಗಿದೆ. "ಜೀವಾಮೃತ"ವು ಆಶ್ಚರ್ಯರೀತಿಯಲ್ಲಿ ನಿಮ್ಮ ಎಲ್ಲಾ ನರಗಳಿಗೂ ಹೊಸ ಚೈತನ್ಯವನ್ನು ಕೊಟ್ಟು, ನೀವು ಸಂತೋಷವನ್ನು ಅನುಭವಿಸಲು ಸಹಕಾರಿಯಾಗಿದೆ.

ಜೀವಾಮೃತ

ತಯಾರಿಸುವವರು:—

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೮೬, ಮದ್ರಾಸು

ಸ್ಟಾಕಿಸ್ಟರು—

ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ನವಯುಗಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದ್ದಾರೆ.

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ

ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೋಜ್ಞ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸು ಬಾರದು

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**

ನಂಬುಲಿಯರ್ ಬೀದಿ, ಜಿ ಟಿ ಮದರಾಸು.

T V Devkar & Co, *Nambulier Street*, G T MADRAS

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, — ಯಂ. ಆರ್. ಪುಂಜ,

President & Manager, — ಪ್ರಸಿಡೆಂಟ್ ಮತ್ತು ಮೆನೇಜರ್.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,

Kanara Printing Works,

Hampankatte **MANGALORE**

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಮುನೋವು, ಹೊಟ್ಟೆಯರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ ಬೆಲೆ 1—8—0

ಜೀವನಿ ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಮುಟ್ಟು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ ಬೆಲೆ 1—0—0

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I ಶೋಧನ ಗುಣ—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III ಸುಖಸೇವನ—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾಗುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು — ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ,

DAIMONDS! **DAIMONDS!**

K R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೨ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ ೯ ಆಣೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು.- **ನವಭಾರತ ಬುಕ್‌ಡಿಪೋ, ಉಡುಪಿ.**

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಕುಶಲವ

ಶ್ರೀ॥ ಕೆ. ಕೆ ಶೆಟ್ಟರು ಬರೆದಿರುವ

ನವ ಪೌರಾಣಿಕ ನಾಟಕ.

ಹಾಯರ್ ಎಲಿಮೆಂಟರಿ ಕ್ಲಾಸುಗಳ ವಿದ್ಯಾರ್ಥಿಗಳಿಗೆ

ಅತ್ಯುಪಯುಕ್ತವಾದುದು.

ಪ್ರಕಾಶಕರು. ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು:-

Navabharat Book Depot, Udipi.

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., **MANGALORE.**

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S Kanara 1939)

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **S. Chandappa Indra,**
(*Secretary, P. M. Committee*)
Members, Panchakalayana Mahosthawam Committee.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಒದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
,, ಭಾಗ ೨	0	4	0
,, ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:*—**GENERAL SUPPLIES Ltd., Udipi**).

Thulunad Bank

OF SUPPLY AGENCY LTD.

ESTD] **UDIPI** [1933

Authorised & Issued Capital Rs. 1,00,000
Subscribed & Paid up Rs. 31,300

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.
INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

PRINTED BY S. S. KARANTH AT THE THULUNAD PRESS, UDIPI
and Published by K. H SHETTY at "NAVAYUGA" OFFICE, UDIPI, South India.

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ವರ್ಷ ಕೈಗಡಿಯಾರಗಳು, ೨ ವರ್ಷ ಕಿಸೆಗಡಿಯಾರಗಳು, ಮತ್ತು ಒಂದು ಗಟ್ಟಿಯಂತ್ರದ ಸರಿ ಸಮಯ ತೋರಿಸುವ ಜರ್ಮನಿ ಟೈಂಪೀಸ್, ೩೦ ಗಂಟೆಗೊಮ್ಮೆ ಕೀ, ೧೦ ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ವಿಲಾಯಿತಿಯಿಂದ ಸ್ವಲ್ಪಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯತಿ ದರದಲ್ಲಿ ಕೇವಲ ೧,೦೦೦ ಗಡಿಯಾರಗಳನ್ನು ಮಾತ್ರನೇ ಮಾರುವುದು. ತ್ವರೆ ಮಾಡಿರಿ ಸುಸಂದರ್ಭ ತಪ್ಪಿಹೋದೀತು ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ನಿಬ್ಬಿನ ಫೌಂಟೆನ್ ಪೆನು ಒಂದು, ದೃಷ್ಟಿಚಕ್ರ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

ದೊರೆಯುವ ಸ್ಥಳ:—
ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B No. 27 (N.Y.U.)
AMRITSAR, (India),

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ:406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳ!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇದೇ ಮ್ಯಾನೇಜರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೇಫ್**

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

The Pangal Nayak Bank Ltd.,
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)
Reserves Rs. 2,02,800/-. Paid up Capital: Rs 1,82,100/-
PRINCIPAL OFFICE. COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% P. A. for the earlier half and at 1% P. A. for the latter half of every calender year.

Fixed Deposits are accepted at all the above offices for one and two years and interest allowed at 3½% P. A. and 4% P. A respectively; interest being payable every half year of the calendar year. Savings Bank & cumulative Deposits are also received on the remunerative terms

Negotiable Instruments payable on demand and also genuine short dated trade bill are discounted on fairly easy terms.

For business proper please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.
ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.
ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ ಸಮಾನ ಔಷಧಗಳು.
ಕ್ರಯ ಕಡಿಮೆ! ಫಲ ಅಧಿಕ!!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.
ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.
ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ
ಕೆಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಾಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೈಷ್ಟಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣೆಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂವಮಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ಹೊಸಬಂತೆ ಸಾಮಾನುಗಳು ಬೇಲುಗಟ್ಟಿ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD 1921 ಸ್ಥಾಪನೆ

FOUNDER
Sri A B SHETTY, M.L.A
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ ಎಲ್ ಎ

ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೪೫

ಉಡುಪಿ, ಗುರುವಾರ ೧೩-೭-೧೯೩೯
Udipi, Thursday 13—7—1939

Vol XVIII
No 45

ಚಂದಾ ವಿವರ:
೧ ವರ್ಷಕ್ಕೆ ರೂ ೩—೮—೦
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾವಲೋಕನ

ಸುಭಾಸರೂ ಗಡಿದಾಟುವರೆ?

ಬೊಂಬಾಯಿಯ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಠರಾವುಗಳನ್ನು ಖಂಡಿಸುವರೆ ಬಂಗಾಳದಲ್ಲಿ ಇದೇ ತಾ. 9ಕ್ಕೆ ನಿಷೇಧ ಸೂಚಕ ಸಭೆಗಳನ್ನೇರ್ಪಡಿಸುವ ವಿನಂತಿಯನ್ನು ಶ್ರೀ ಸುಭಾಸಚಂದ್ರ ಭೋಸರು ಮಾಡಿಕೊಂಡಿದ್ದರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಇದರಿಂದಾಗುವ ಶಿಸ್ತುಭಂಗದ ಎಚ್ಚರಿಕೆಯನ್ನು ಕೊಡುತ್ತಾ ಸುಭಾಸರಿಗೆ ಈ ಕೆಳಗಿನಂತೆ ತಂತಿ ಬಿಟ್ಟಿದ್ದಾರೆ "ಜುಲಾಯಿ ತಾ. 9ನ್ನು ಎ ಐ ಸಿ. ಸಿ. ನಿರ್ಣಯದ ನಿಷೇಧ ದಿನವಾಗಿ ಆಚರಿಸಬೇಕೆಂದು ನೀವಿತ್ತ ಹೇಳಿಕೆಯನ್ನು ಓದಿ ನಾನು ಆಶ್ಚರ್ಯಗೊಂಡೆ, ಹಲವು ಕಡೆಗಳಿಂದ ಬಂದಿರುವ ವಿನಂತಿಗನುಸಾರವಾಗಿ ನಾನು ಪತ್ರಿಕೆಗಳಿಗೆ ಈ ಕುರಿತು ಹೇಳಿಕೆಯನ್ನೀತ್ತಿದ್ದೇನೆ. ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ನೀವು ನಿರ್ಣಯಿಸಲ್ಪಟ್ಟ ಸಭೆಗಳನ್ನು ರದ್ದುಗೊಳಿಸಿ, ಕಾಂಗ್ರೆಸಿನ ಶಿಸ್ತನ್ನು ಕಾಯವಿಟ್ಟು ರಕ್ಷಿಸುವಿರೆಂದು ನಾನು ಅತಿ ಉತ್ಸಾಹದಿಂದ ಅಧ್ಯಕ್ಷರ ವಿನಂತಿಯಲ್ಲಿ ಪ್ರಾಂತಿಕ ಸಮಿತಿಯೊಂದರ ಅಧ್ಯಕ್ಷರಾದ ಸುಭಾಸರು ಕಾಂಗ್ರೆಸ್ ನಿರ್ಣಯವನ್ನಿದಿರಾಲು ಹಕ್ಕುಳ್ಳವರಲ್ಲ ಎಂಬ ಎಚ್ಚರಿಕೆಯಿದೆ. ಆ ಕುರಿತಿತ್ತ ಹೇಳಿಕೆಯಲ್ಲಿ ರಾಷ್ಟ್ರಪತಿಗಳು ಎ. ಐ ಸಿ ಸಿ. ಯ ನಿರ್ಣಯಗಳೆಲ್ಲ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲ್ಪಟ್ಟ ನಂತರವೇ ಪ್ರಬಲ ಬಹುಮತದ ಮಂಜೂರು ಮಾಡಲ್ಪಟ್ಟಿರುವುದರಿಂದ, ಕಾಂಗ್ರೆಸ್ ಕಮಿಟಿಗಳು ಮತ್ತು ಅಧಿಕಾರಿಗಳು ಅವುಗಳ ನಿಷೇಧ ಪ್ರದರ್ಶನಗಳಲ್ಲಿ ಭಾಗವಹಿಸಿದರೆ ನಿಯಮೋಲ್ಲಂಘನೆಯಾಗುವದೆಂದು ಸ್ಪಷ್ಟಪಡಿಸಿರುವರು. ಶ್ರೀ. ಸುಭಾಸರ ವರ್ತನೆಯು ನರಿಮನ್, ಖರೆ ಪ್ರಕರಣಗಳನ್ನು ಪುನರಾವರ್ತಿಸಬಹುದು-ಪುನರಾವರ್ತಿಸದಿರಬಹುದು ಕಾಂಗ್ರೆಸ್ ಅಧ್ಯಕ್ಷರ ವಿನಂತಿಯು ಕೊಂಕು ಕೋರೆಗಳಿಲ್ಲದ ನೇರಾಸ್ತ್ರ, ಅವರ ಗುರಿಗೀಡಾಗುವದು-ಆಗದಿರುವದು ಸುಭಾಸರ ನಿಲುವಿಕೆಯನ್ನು ಹೊಂದಿಕೊಂಡುಂಟು!

ರಾಜಕಾರಾದರೇನು-ಸ್ಥಿರಬುದ್ಧಿಗೆ ದಾರಿದ್ರ್ಯ!

ಬೊಂಬಾಯಿಯಲ್ಲಿ ಸೇರಿದ ಆಶ್ರಿತರಾಜರುಗಳ ಪರಿಷತ್ತಿನಲ್ಲಿ. ಸೂಚಿಸಲ್ಪಟ್ಟ ಫೆಡರೇಶನ್ ಕ್ರಮದಲ್ಲಿ ಸಾರವಿಲ್ಲ, ಆದ್ದರಿಂದ ಅಂಗೀಕರಿಸಲು ಸಾಧ್ಯವಿಲ್ಲ ಎಂದು ನಿರ್ಣಯವಾಗಿತ್ತಷ್ಟೆ. ಈ ನಿರ್ಣಯವಾದ ಮೇಲೂ ತಿನ್ನದವರಂತೆ ಒತ್ತಾಯದಿಂದ ತಿನ್ನಿಸುವ ತನ್ನ ಚಿಕಿತ್ಸಕಬುದ್ಧಿಯನ್ನು ಬ್ರಿಟಿಷ್ ಸರಕಾರವು ಬಿಟ್ಟುಕೊಡಲಿಲ್ಲ ಆಶ್ರಿತರಾಜರ ಮಟ್ಟಿಗೆ ಈ ಪರಿಸ್ಥಿತಿಯು ಬಡಿಗೆ ಬಿಟ್ಟ ಕುರುಡನಂತಾಯಿತು. ಅವರ ದಿರ್ಣಯವು ತನ್ನಂತೆ ಸಡಿಲಾಗುತ್ತಾ ಬರುತ್ತಿದೆ. ಈಗ ಒಬ್ಬೊಬ್ಬ ಸಂಸ್ಥಾನಿಕರೇ ಫೆಡರೇಶನಿಗೆ ಸೇರುವ ಆಲೋಚನೆಯನ್ನು ತಮ್ಮೊಳಗೇ ಮಾಡಲಾರಂಭಿಸಿದ್ದಾರೆ ದೊಡ್ಡ ದೊಡ್ಡ ಸಂಸ್ಥಾನಗಳೆಲ್ಲ ಅಂದು 'ಅಸಾಧ್ಯ'ವೆಂದು ತಿರಸ್ಕರಿಸಿದುದನ್ನೇ ಇಂದು ಸ್ವಸಾಧವೆಂದು ಅಲ್ಪವನ್ನಾದರೂ ಸ್ವೀಕರಿಸಿ ಕೈಮುಗಿಯೋಣ ಎಂಬ ನಿರ್ಧಾರಕ್ಕೆ ಒಂದಿದ್ದಾವೆ ಜುಲಾಯಿ ಅಂತ್ಯದೊಳಗೆ ಬ್ರಿಟಿಷ್ ಸರಕಾರದ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂಬ ವಾಯಿದ ಆಶ್ರಿತ ರಾಜರಿಗೆ. ಈ ಅವಧಿಯಲ್ಲಿ ಕೈಸೇರುವ ಉತ್ತರಗಳಲ್ಲೆಲ್ಲಾ ಫೆಡರೇಶನಿಗ 'ಊಹುಂ' ಇರುವ ಬದಲಿಗೆ 'ಹೂಂ' ಇರುವದೆಂದು ಖಂಡಿತವಾಗಿ ಹೇಳಲನುಮಾನವಿಲ್ಲ 'ಗಂಡಹೆಂಡಿರ ಕಲಹ ಜಗಲು ಮುಗಿಯುವ ವರೆಗೆ' ಎಂಬ ಗಾದೆ ಸುಳ್ಳೆ?

ಬಡವ-ದರಿದ್ರರಿಗೆ ನಂಟು!

ಸಿಂಗಪುರದಲ್ಲೊಂದು ಉತ್ತೇಜಕ ವಿದ್ಯಮಾನ ನಡೆಯಿತು ಅಲ್ಲಿಯ ಟಿನ್ ಕಾರ್ಯಾಲಯವೊಂದರಲ್ಲಿ ಕೆಲಸಕ್ಕಿದ್ದ ಚೀನೀಯರು ಮುಷ್ಕರ ಹೂಡಿದರು. ಆ ಟಿನ್ನುಗಳು ಜಪಾನಿನ ಯುದ್ಧಸಾಮಗ್ರಿಗಳ ಫೇಕ್ಟರಿಯೊಂದಕ್ಕೆ ಸರಬರಾಯಿ ಆಗುತ್ತಿದ್ದವು. ತಾವಿಲ್ಲಿ ಬೆವರು ಸುರಿಸಿ ದುಡಿದು ಚೀನದಲ್ಲಿ ತಮ್ಮವರ ರಕ್ತಸುರಿಸಲು ಈ ಟಿನ್ನುಗಳು ಹೋಗಬೇಕೇ ಎಂದು ಚೀನೀಯರೆಲ್ಲಾ ಕೆಲಸಬಿಟ್ಟು ಕುಳಿತರು ಯಾರು ಕೈಬಿಟ್ಟರು ನೀ ಕೈಯ್ಯ ಬಿಡದಿರು' ಎಂದು ಬ್ರಿಟಿಷರು ಇಂತಹ ಸಂದರ್ಭಗಳಲ್ಲೆಲ್ಲಾ ಹಿಂದೀಯರ ಆಧಾರದಿಂದ ಬದುಕುವದೊಂದು ಪದ್ಧತಿಯಷ್ಟೆ. ಸಿಂಗಪುರದಲ್ಲಿ ಹಿಂದೀ ಕೆಲಸಗಾರರನ್ನು ನೇಮಿಸಿಕೊಂಡು ; ಕೆಲಸ ಸಾಗಿಸಹತ್ತಿದರು ಅಧಿಕಾರಿಗಳು ಅಲ್ಲಿಯ ಚೀನೀ ಕೆಲಸಗಾರ ಸಂಘದವರು ಈ ವಾರ್ತೆಯನ್ನು ಭಾರತ ರಾಷ್ಟ್ರ ಸಭೆಯ ವಿದೇಶಾಂಗ ಶಾಖೆಗೆ 'ಕೇಬಲ್' ಮೂಲಕ ತಿಳಿಸಿದರು, 'ಚೀನೀಯರೊಡನೆ ಸಹಕರಿಸಿರಿ' ಎಂಬ ಕಾಂಗ್ರೆಸಿನ ಸೂಚನೆ ಅಲ್ಲಿದ್ದ ಹಿಂದೀ ಮುಖಂಡರ ಮೂಲಕ ಹಿಂದೀ ಕೂಲಿಗಳಿಗೆ ಹೋಯಿತು. ಈ ಸೂಚನೆ ಬಂದೊಡನೆ ಹಿಂದೀಯರೆಲ್ಲಾ ಕೆಲಸಬಿಟ್ಟು ಹೊರಗೆ ಬಂದರು. ಸರಿ ಮುಷ್ಕರವು ಜಯಶೀಲವಾಗಿ ನಡೆದು ಜಪಾನಿಗೆ ಟಿನ್ ಕಳುಹಿಸುವದಿಲ್ಲವೆಂಬ ಫೇಕ್ಟರಿಯ ಮಾಲೀಕರ ನೀಲೆಯೇ ರಾಜಿಯಾಯಿತು! ಭಾರತದಲ್ಲಿರುವ ಹಿಂದೀಯರ 'ಪಕ್ಷಗಳ ವೈಯ್ಯೋವೈಮನಸ್ಯ' ಇದ್ದರೂ ಪರಸ್ಪರ ಕೂಡಿಹಡೆಯುವದಂತರೆ ಹಗಲು ರಾತ್ರಿಗಳ ಉಗ್ರಂಟಿವಂತೆಯೋ ಸರಿ. ಆದರೂ ಸಿಂಗಪುರದ ಹಿಂದೀಯರಿಗೆ ತಮ್ಮೊಡನೆ ಅನ್ಯ ಜನಾಂಗದವರೊಡನೆ ಯೂ ಬೆರೆಯಲು ತಿಳಿದಿದೆ ಈ ವ್ಯತ್ಯಾಸಕ್ಕೆ ಭಾರತ ಮತ್ತು ಸಿಂಗಪುರಗಳ ಹವೆಯಲ್ಲಿರುವ ವ್ಯತ್ಯಾಸವೇ ಕಾರಣವೇನೋ!

ಎರಡು ವರುಷಗಳ ಚೀನಾ ಯುದ್ಧ

ಈ ತಿಂಗಳ ತಾ. ೮ಕ್ಕೆ ಚೀನಾ ಯುದ್ಧ ಪ್ರಾರಂಭವಾಗಿ ಪೂರ್ತಿ ಎರಡು ವರುಷಗಳಾದವು. ಏನು ಒಂದೆರಡುತಿಂಗಳ ಕಾರ್ಯವೆಂದು ಕೈಹಾಕಿದ್ದ ಜಪಾನರ ಭವಿಷ್ಯ ಶಿಕ್ಷೆಯು ತಿಂಗಳ ಬದಲು ವರುಷವನ್ನು ಲೆಕ್ಕಿಸುವಷ್ಟಕ್ಕೇರಿತೇ ಹೊರತು ಮತ್ತಾವ ಭಾಗದಲ್ಲೂ ಏರಿಲ್ಲ. ಎರಡನೇ ವರ್ಷಾಂತ್ಯದ ತನ್ನ ಸಂದೇಶದಲ್ಲಿ ಚೀನೀ ನಾಯಕರಾದ ಮಾರ್ಷಲ್ ಚಿಯಾಂಗ್ ಕೈಶೇಕರು ಕೊನೆಯವರೆಗೂ ಹೋರಾಡುವ ಚೀನದ ದೃಢ ನಿರ್ಧಾರವನ್ನು ಪುನರುಚ್ಚರಿಸಿರುವರು. ಆಕ್ರಮಣ ಶೀಲತೆಯನ್ನು ತ್ಯಜಿಸುವಂತೆ ಜಪಾನಿನ ಮಹಾಜನರನ್ನು ವಿನಂತಿಸಿಕೊಂಡಿರುವರು ವಾಂಗ್‌ಚಿಂಗ್ ವೀ ಎಂಬ ಚೀನೀ ನಾಯಕನ ರಾಜೀಯತ್ನವನ್ನು ತಿರಸ್ಕರಿಸಿರುವರು ಯಾಂಗ್ಸೆ ರಣರಂಗದ ದಳಪತಿ ಜನರಲ್ ಚೆಂಚಾಂಗರು 1911ರಲ್ಲಿ ಚೀನವು ವಿಜಯದುಂದುಭಿಯನ್ನು ಬಾರಿಸುವದೆಂದು ನುಡಿದಿದ್ದಾರೆ.

ಹಂದೀ ಬೇಟೆಗೆಂದು ಕಾಡು ನುಗ್ಗಿದವನಿಗೆ ಕಾಡಾನೆಯಿದಿರಾಗುವಂತೆ ಚೀನದ ಮೇಲೆ ಬಿದ್ದ ಜಪಾನಿಗೆ ಬೇಡವಾದ ಸಮಸ್ಯೆಗಳೂ ಬಂದುಬೀಳುತ್ತಿವೆ ಇತ್ತ ಟಿಯಂಟ್ಸಿನಲ್ಲಿ ಬ್ರಿಟಿಷರೊಡನೆ ತಿಕ್ಕಾಟ! ಅತ್ತ ಸರಹದ್ದಿನಲ್ಲಿ ರಷ್ಯದ ಕಾಟ! ಹಾದಿಯು ಇಷ್ಟು ಕವಲೊಡೆಯುವದೆಂದು ಅಪರಿಚಿತರಾದ ಜಪಾನರಿಗೇನು ಗೊತ್ತು ಆದಿಯಲ್ಲಿ?

ನೆಹರುಗಳಿದ್ದಾರೆಂಬುದೊಂದೇ ಆಶೆಯಂತೆ!

ರಾಷ್ಟ್ರಸಂಯೋಜನಾಸಮಿತಿ (National Planning Committee) ಯ ಓರ್ವ ಮೆಂಬರ ಪ್ರೊ. ಎಮ್ ಎನ್. ಸಹಾರವರನ್ನುತ್ತಾರೆ— ಭಿನ್ನೋದ್ದೇಶಗಳುಳ್ಳ ಮೆಂಬರರಿರುವ ಈ ಸಮಿತಿಯು ಜಯಶೀಲವಾಗಿ ರಾಷ್ಟ್ರಹಿತಕಾರ್ಯಗಳನ್ನು ಸಂಯೋಜಿಸುವದಂಬುದಕ್ಕೆ ಪಂಡಿತ ನೆಹರುಗಳು ಅಧ್ಯಕ್ಷರಾಗಿರುವರೆಂಬ ಒಂದೇ ಆಶೆಯುಳಿದಿದೆ! ಸರಿ, ರಾಷ್ಟ್ರೀಯೋದ್ಯಮಗಳ ಸಂಯೋಜನೆಗಾಗಿ ತಯಾರಿಸಲ್ಪಟ್ಟ ಈ ಸಮಿತಿಯನ್ನು ಸಂಯೋಜಿಸಿದ ರೀತಿಯಾದರೂ ಉತ್ತಮವಿದೆ ಎಂಬಾಯಿತು. ಪಂಡಿತ ನೆಹರುಗಳನ್ನು ಅಧ್ಯಕ್ಷರಾಗಿ ಮಾಡಿಕೊಂಡುದರಿಂದ ಸಮಿತಿಯಲ್ಲಿ ಆಶೆಯುಳಿಯುವಂತಾಯಿತು. ಪ್ಲೇನಿಂಗ್ ಕಮಿಟಿಯು ಮಿಕ್ಕ ಪ್ಲೇನುಗಳ ಮಾತು ಆ ಮೇಲ ತಾನೆ?



WANTED candidates Allowance Rs. 28 Uniform, passage and quarter free Service essential. Classes Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight Director, Royal Telegraph and ...

ಉಡುಪಿಗೆ ಮಾನ್ಯ ಗೋಪಾಲ ರೆಡ್ಡಿಯವರ ಆಗಮನ

ಮದ್ರಾಸ್ ಸರಕಾರದ ಲೋಕಲ್ ಎಡ್ಮಿನಿಸ್ಟ್ರೇಶನ್ ಮಂತ್ರಿಗಳಾದ ಶ್ರೀ. ಬಿ. ಗೋಪಾಲ ರೆಡ್ಡಿಯವರು ತಾ. 9-7-39ನೇ ಆದಿತ್ಯವಾರ ಸಂಜೆ ಪಾರ್ಲಿಮೆಂಟರಿ ಸಕ್ರೆಟರಿಗಳಾದ ಶ್ರೀ. ಭಕ್ತವತ್ಸಲಂ ಮತ್ತು ಎ. ಬಿ. ಶೆಟ್ಟರೊಂದಿಗೆ ಆಗಮಿಸಿದರು. ಡಾಕ್ಟರ್ ವಿಠಲ ಶೆಟ್ಟಿ, ಶ್ರೀ. ಕೆ. ಶ್ರೀನಿವಾಸ ಮಲ್ಯ, ಶ್ರೀ ಬಿ. ವೆಂಕಟಪ್ಪಯ್ಯ ಪಾಕಳ ಮೊದಲಾದವರೂ ಬಂದಿದ್ದರು.

ಮುನಿಸಿಪಲ್ ಆಫೀಸಿನಲ್ಲಿ ಉಪಹಾರ ಸತ್ಕಾರ ನಡೆದ ಬಳಿಕ ಮುನಿಸಿಪಲ್ ಚೆಯರ್ ಮೇನ್ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರು ನಗರಸಭೆಯ ಪರವಾಗಿ ಮಾನಪತ್ರವೊಂದನ್ನು ಓದಿಕೊಟ್ಟರು. ಮುನಿಸಿಪಾಲಿಟಿಯು ಸ್ಥಾಪಿತವಾದ ಕಾಲದಲ್ಲಿ ಮದ್ರಾಸು ಸರಕಾರವು ಸಾಲವಾಗಿ ಕೊಟ್ಟ ಹಣದಲ್ಲಿ ರೂಪಾಯಿ 5,370 ಈ ತನಕ ಮರುಪಾವತಿಯಾಗಿದ್ದು, ಇನ್ನುಳಿದ ರೂ. 14,630ಕ್ಕೆ ವಿನಾಯಿತಿ ಕೊಟ್ಟು ಹೊಸ ಯೋಜನೆಗಳಿಗೆ ಹೊಸ ಸಾಲ ಸಂಕ್ಷನ್ ಆಗಬೇಕೆಂಬುದು ಮನವಿಯಲ್ಲಿ ಉಲ್ಲೇಖಿಸಲ್ಪಟ್ಟಿತ್ತು. ಇದಾಗಿ ಮಾನ್ಯ ಮಂತ್ರಿಗಳು ಮುನಿಸಿಪಲ್ ನೌಕರರ ಮಾನಪತ್ರವನ್ನು ಕವಿರಾಜನ್ ಶ್ರೀ. ಸೂರ್ಯನಾರಾಯಣ ರಾಯರ ಮುಖೇನ ಸ್ವೀಕರಿಸಿದರು. ಅಲ್ಲಿಂದ ಶ್ರೀ. ರೆಡ್ಡಿಯವರು ಗಾಂಧಿಮೈದಾನಕ್ಕೆ ಹೋಗಿ ಭುಜಂಗಪಾರ್ಕಿನ ಮುಹೂರ್ತಕಲ್ಲನ್ನು ಹಾಕಿದರು. ಶ್ರೀ. ಭಕ್ತವತ್ಸಲಂರವರು ಹೊಸ ಕಾಲ್ದಾರಿಯನ್ನು (foot path) ತೆರೆದರು.

ಮುನಿಸಿಪಲ್ ಮೈನ್ ಶಾಲೆಯ ಹಾಲಿನಲ್ಲಿ ಸಾರ್ವಜನಿಕ ಸಭೆ ಜರಗಿಸಲಾಗಿತ್ತು. ಶ್ರೀ. ಭಕ್ತವತ್ಸಲಂರವರು ಪ್ರಸಂಗಿಕ ಭಾಷಣವನ್ನು ಮಾಡಿದರು. ಕಾಲುದಾರಿಯಲ್ಲಿ ಹೊಸ ಯೋಜನೆಯ ಕುರಿತು ಸಂತೋಷವನ್ನು ವ್ಯಕ್ತಪಡಿಸಿ ನಗರವ್ಯವಹಾರ ಕ್ಷೇತ್ರದಲ್ಲೆಲ್ಲಾ ಕಾಲ್ದಾರಿಗಳಾಗಬೇಕೆಂದರು. ಬಸ್ ಅಪಘಾತ, ಬೀದಿನ ಹಾವಳಿ ಇವುಗಳನ್ನು ತಡೆಗಟ್ಟಲು ಕಾಲ್ದಾರಿಗಳು ಅತ್ಯಾವಶ್ಯಕವೆಂದರು. ರಾಜಕೀಯ ಪರಿಸ್ಥಿತಿಯನ್ನು ಸಂಕ್ಷೇಪವಾಗಿ ವಿವರಿಸಿ ಸರ್ವರೂ ಕಾಂಗ್ರೆಸ್ ಸಂಸ್ಥೆಗೆ ಬೆಂಬಲವಿತ್ತು ಮುಂದಣ ಕಾರ್ಯದಲ್ಲಿ ಭಾಗವಹಿಸಲು ಸಿದ್ಧರಾಗಿರಬೇಕೆಂದೂ ಸೂಚಿಸಿದರು.

ಮಾನ್ಯ ರೆಡ್ಡಿಯವರು ಭಾಷಣಮಾಡುತ್ತಾ ಹೀಗೆಂದರು. "ಉಡುಪಿಯ ಪುರಜನರು ತಮ್ಮ ಮನೆಗೆ ವಿದ್ಯುದ್ದೀಪಗಳನ್ನು ಉಪಯೋಗಿಸುತ್ತಿರುವುದೂ ಪೇಟೆ ಶಹರು ವಿದ್ಯುದ್ದೀಪಗಳಿಂದ ಬೆಳಗುತ್ತಲಿರುವುದೂ ಸಂತೋಷದ ಸಂಗತಿಯಾಗಿದೆ. ಇಂದು ಕೆಸರುಗಲ್ಲು ಹಾಕಿದ ಭುಜಂಗಪಾರ್ಕಿನ ಸದುಪಯೋಗವನ್ನು ಎಲ್ಲರೂ ಅನುಭವಿಸಬೇಕು. ಈ ಪಾರ್ಕಿಗೆ ಧನಸಹಾಯವಿತ್ತ ಡಾ. ಯು. ಎಲ್. ನಾರಾಯಣರಾಯರ ಔದಾರ್ಯವು ಕೊಂಡಾಡತಕ್ಕದ್ದು. ಆ ಬಗ್ಗೆ ನಿಮ್ಮೆಲ್ಲರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಹೊಸ ಸೌಕರ್ಯ ಯೋಜನೆಗಳನ್ನು ಬಾಲ್ಯಾವಸ್ಥೆಯಲ್ಲಿರುವ ನಿಮ್ಮ ಮುನಿಸಿಪಾಲಿಟಿಯು ಕೈಕೊಂಡುದು ಆನಂದಕರ. ಆದರೆ ಸಾಲವಾಗಿ ತೆಗೆದುಕೊಂಡ ಹಣವನ್ನು ಸಹಾಯಧನವಾಗಿ ಮಾರ್ಪಡಿಸಬೇಕೆನ್ನುವುದು ಎಷ್ಟರಮಟ್ಟಿಗೂ ಸರಿಯಲ್ಲ. ಆದುದರಿಂದ ಕೊಂಡಸಾಲವನ್ನು ಪಾವತಿಸತಕ್ಕದ್ದು. ಇತರ ಉತ್ಪತ್ತಿದಾಯಕವಾದ ಮಾರ್ಕೆಟ್ಟು, ಬಸ್ ಸ್ಟೇಂಡ್ ಇತ್ಯಾದಿ ಕಾರ್ಯಗಳಿಗೆ ನ್ಯಾಯವಾದ ಸಾಲಗಳು ಕೊಡಲಾಗುವುವು.

ಲ್ಯಾಟ್ರಿನುಗಳಿಗೆ ಈಗ ಗ್ರಾಂಟು ಕೊಡಲು ಸಾಧ್ಯವಿಲ್ಲ. ಸರಕಾರದ ಟೇಕ್ಸೇಶನ್ ಪೊಲಿಸಿಯನ್ನು ನೀವು ಒಪ್ಪಿ ಬೆಂಬಲವಿತ್ತರೆ ಏನಾದರೂ ದ್ರವ್ಯ ಸಹಾಯ ಸಿಕ್ಕಲೂಬಹುದು.

ಕಾಂಗ್ರೆಸ್ ಮುನಿಸಿಪಲ್ ಪಾರ್ಟಿಯಾಗಬೇಕೆಂಬ ಲವಲವಿಕೆ ನಿಮ್ಮಲ್ಲಿದೆಯೆಂದು ತೋರುತ್ತದೆ. ಆದರೆ ಕಾಂಗ್ರೆಸ್ ಶಿಸ್ತನ್ನು ಪರಿಪಾಲಿಸುವ ಮಹಾಜನಾಭ್ಯಾದಿಯಿದ್ದರೆ ಮಾತ್ರ ಅಂತಹ ಕಾರ್ಯಕ್ಕೆ ಕೈಹಚ್ಚಬಹುದು. ಕಾಂಗ್ರೆಸ್ ಪಕ್ಷವು ನಿರ್ಮಿಸಲ್ಪಟ್ಟ ಮರುಕ್ಷಣದಲ್ಲೇ ಏನಾದರೂ ಅಲ್ಪ ಕಾರಣಗಳಿಂದ ಒಡೆದು ಹೋಗುವುದಕ್ಕಿಂತ ಕಾಂಗ್ರೆಸ್ ಮುನಿಸಿಪಲ್ ಪಾರ್ಟಿ ಸ್ಥಾಪನೆಯಾಗದಿರುವುದು ಒಳ್ಳೆಯದು. ಮುನಿಸಿಪಲ್ ನೌಕರರು ಸರಕಾರದ ಧೋರಣೆಯ ಕುರಿತು ಸಂತೋಷ ಪ್ರದರ್ಶಿಸಿ ಮಾನಪತ್ರವನ್ನಿತ್ತಿರುವರು. ನ್ಯಾಯ ರೀತಿಯಲ್ಲಿ ಅವರುಗಳು ತಮ್ಮ ಕಾರ್ಯಗಳನ್ನು ಪೂರೈಸಿದ್ದಲ್ಲಿ ಇದೇ ಧೋರಣೆಯಿಂದಲೇ ಒಂದೂರಿಂದ ಇನ್ನೊಂದೂರಿಗೆ ಮೆನೇಜರರಾಗಲೀ ಅಕೌಂಟೆಂಟರಾಗಲೀ ಯಾವ ಮುನಿಸಿಪಾಲಿಟಿಯವರೇ ಇರಲಿ ವರ್ಗಾಯಿಸಲ್ಪಡುವರು ಎಂಬುದನ್ನು ತಿಳಿದಿರತಕ್ಕದ್ದು ಎಂದರು.

ಸ್ವೀಕಾರ

ಗೋಪಾಲ ಭೇಷಜಾಶ್ರಮ.

ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳ ಗೋಪಾಲ ಭೇಷಜಾಶ್ರಮ, ಕದ್ರಿ, ಮಂಗಳೂರು ಇದರ 1938ನೇ ದಶಂಬರ 31ಕ್ಕೆ ಅಂತ್ಯವಾಗುವ 28ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯ ವರ್ಷದಲ್ಲಿ 4209 ಹೊಸ ರೋಗಿಗಳು ಇಲ್ಲಿ ಚಿಕಿತ್ಸೆ ಹೊಂದಿದ್ದಾರೆ. ರೋಗಿಗಳಿಗೂ ಇತರ ಗ್ರಾಹಕರಿಗೂ ಅನುಕೂಲವೂ ಸುಲಭವೂ ಆಗುವಂತೆ ಔಷಧಗಳನ್ನು ಅಷ್ಟು ಕಡಿಮೆ ಬೆಲೆಗೆ ಕೊಡಲಾಗಿದೆ. ಸ್ಥಿತಿಗತಿಯನ್ನು ಪರಿಶೀಲಿಸಿ ಹಲವರಿಗೆ ಅರ್ಧ ಕ್ರಯಕ್ಕೆ ಔಷಧೋಪಚಾರ ನಡೆದಿದೆ. ಬಡ ರೋಗಿಗಳಿಗೆ ಧರ್ಮಾರ್ಥ ಚಿಕಿತ್ಸೆಯೂ ನಡೆಸಲ್ಪಟ್ಟಿದೆ. ಜೋಡಿಗುಡ್ಡೆಯ ಶಾಖೆಯಲ್ಲಿ ಜನರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಲ್ಪಟ್ಟಿದೆ. ಇದು ಶ್ರೀ. ಶಾಸ್ತ್ರಿಗಳ ಜನಸೇವಾ ಬುದ್ಧಿಯನ್ನು ವ್ಯಕ್ತಪಡಿಸುತ್ತದೆ. ಇಂತಹ ಆದರ್ಶ ಡಾಕ್ಟರರು ನಮ್ಮಲ್ಲಿ ಹೆಚ್ಚು ಜನರಿರಲಾರರು. ಭೇಷಜಾಶ್ರಮವನ್ನು ಸರ್ವಜನೋಪಕಾರಿ ಸಂಸ್ಥೆಯನ್ನಾಗಿ ಮಾಡಿ, ಅವಿಶ್ರಾಂತವಾಗಿ ದುಡಿದು ಜನಸೇವೆ ಮಾಡುತ್ತಿರುವ ಶ್ರೀ. ಶಾಸ್ತ್ರಿಗಳು ಆಯುರ್ವೇದ ಭೂಷಣರು ಮಾತ್ರವಲ್ಲ, ಕರ್ನಾಟಕಕ್ಕೆ ಮುಖ್ಯವಾಗಿ ನಮ್ಮ ಜಿಲ್ಲೆಗೆ ಭೂಷಣಪ್ರಾಯರಾಗಿದ್ದಾರೆನ್ನಬಹುದು. ಇವರ ಜನಸೇವಾಶಕ್ತಿ ಇನ್ನಷ್ಟು ಹೆಚ್ಚಿ, ಯಶಸ್ಸು ಉತ್ತರೋತ್ತರ ಅತಿಶಯವಾಗಿ ಬೆಳೆಯಲಿ, ಅಂತೆಯೇ ಭೇಷಜಾಶ್ರಮವೂ ಅಭಿವೃದ್ಧಿ ಹೊಂದಿ ಆದರ್ಶ ಸಂಸ್ಥೆಯಾಗಲಿ. ಶ್ರೀ. ಶಾಸ್ತ್ರಿಗಳು ಚಿರಕಾಲ ಬಾಳಲಿ ಎಂದು ಹಾರೈಸುವೆವು.

ದಿ ಪ್ರೀಮಿಯರ್ ಬ್ಯಾಂಕ್ ಓಫ್ ಇಂಡಿಯಾ ಲಿಮಿಟೆಡ್, ಮದ್ರಾಸು.

1938ನೇ ದಶಂಬರ 31ಕ್ಕೆ ಅಂತ್ಯವಾಗುವ ನಾಲ್ಕನೇ ವರ್ಷದ ವರದಿಯು ನಮ್ಮ ಬಳಿಗೆ ಬಂದಿದೆ. ವರದಿಯ ವರ್ಷದಲ್ಲಿ ತಾ. 4--3--38ರಲ್ಲಿ ನೆಲ್ಲೂರಿನಲ್ಲಿ ಬ್ಯಾಂಕಿನ ಶಾಖೆಯೊಂದು ತೆರೆಯಲ್ಪಟ್ಟಿದೆ. ಅಲ್ಪ ಸಮಯದ ಅನುಭವದಲ್ಲಿಯೇ ಮುಂದಕ್ಕಲ್ಲಿ ಉತ್ತಮ ವ್ಯಾಪಾರವಾಗಬಹುದೆಂದು ನಿರೀಕ್ಷಿಸಲಾಗಿದೆ.

1938ನೇ ಇಸವಿಯು ಬ್ಯಾಂಕುಗಳ ಆಡಳಿತಕ್ಕೆ ಧಕ್ಕೆ ತಗಲಿದ ಕಾಲ. ಆಗ ಎಷ್ಟು ಹಳೆಯ ಮತ್ತು ಭದ್ರವಾದ ಬ್ಯಾಂಕುಗಳು ಕೂಡ ಜನರ ಅನುಮಾನಕ್ಕೊಳಗಾಗಿದ್ದುವು. ಡಿಪಾಸಿಟನ್ನು ಹೊರಸೆಳೆಯಿಸುವ ಒತ್ತಾಯಕ್ಕೆ ಬಲಿಯಾಗಿದ್ದುವು. ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಎಲ್ಲ ಬ್ಯಾಂಕುಗಳಂತೆ ಇವರೂ ಹಣವನ್ನು ಹೊರಹಾಕದೆ ಶೇಖರಿಸಿಟ್ಟುಕೊಳ್ಳಬೇಕಾಗಿತ್ತು. ಈ ಪರಿಸ್ಥಿತಿಯೊದಗದಿರುತ್ತಿದ್ದರೆ ಇದರ ವ್ಯವಹಾರವು ಅಧಿಕವಾಗುವುದರಲ್ಲಿ ಅನುಮಾನವಿರಲಿಲ್ಲ. ಈಗ ವಾತಾವರಣವು ಶಾಂತವಾಗಿರುವುದರಿಂದ ಮುಂದಿನ ವರ್ಷದಲ್ಲಿ ಒಳ್ಳೆಯ ವ್ಯಾಪಾರವಾಗಬಹುದೆಂದು ಡೈರೆಕ್ಟರರ ಅಭಿಪ್ರಾಯವಿದೆ.

ಬ್ಯಾಂಕಿನಲ್ಲಿ, ರಿಜರ್ವ್ ಫಂಡವಾಗಿ ರೂ. 30,595 ರಷ್ಟಿದೆ. ಫಿಕ್ಸೆಡ್, ಕರೆಂಟ್ ಮೊದಲಾಗಿ ರೂ. 76015-14-3 ಮತ್ತು ಚಿಟ್‌ಫಂಡ್ ಬಾಬ್ತು ರೂ. 1,15,861-14-7 ಠೇವಣಾತಿ ಇರುವುದು. ಪ್ರಗತಿಸೂಚಕವಾಗಿದೆ. ಬ್ಯಾಂಕಿನ ವಹಿವಾಟುಗಳನ್ನು ನೋಡುವಾಗ ಒಳ್ಳೆಯ ಭವಿಷ್ಯವಿರುವಂತೆ ತೋರುತ್ತದೆ.

ಬ್ಯಾಂಕಿನ ಚೆಯರ್‌ಮ್ಯಾನರು ನಮ್ಮ ಜಿಲ್ಲೆಯವರಾದ, ಮದ್ರಾಸಿನಲ್ಲಿ ಪ್ರಸಿದ್ಧ ಡಾಕ್ಟರರಾದ ಶ್ರೀ. ಯು. ಎಲ್. ನಾರಾಯಣ ರಾಯರು. ಇವರ ಪ್ರಸಿದ್ಧಿಯು ವಾಣಿಜ್ಯಕ್ಷೇತ್ರದಲ್ಲೂ ವಿಶೇಷವಾಗಿದೆ. ಇಂಥವರು ಇದರ ಚೆಯರ್‌ಮ್ಯಾನರಾಗಿರುವುದು ಇದರ ಉನ್ನತಿಗೆ ವಿಶೇಷ ಸಾಧಕವಾಗಿರುವುದೆನ್ನಬಹುದು. ಇದರ ಮೇನೇಜಿಂಗ್ ಡೈರೆಕ್ಟರರಾದ ಶ್ರೀ. ಎಸ್. ವಿ. ರಾವ್ D'co.m ಇವರೂ ದಕ್ಷಿಣ ಕನ್ನಡಿಗರೇ. ಬ್ಯಾಂಕಿನಲ್ಲಿ ತಜ್ಞರಾದ ಇವರು ಬ್ಯಾಂಕಿನ ಪ್ರಗತಿಗಾಗಿ ಬಹಳವಾಗಿ ಶ್ರಮಿಸುತ್ತಿದ್ದಾರೆ. ಬ್ಯಾಂಕಿಂಗ್ ವ್ಯವಹಾರದಲ್ಲಿ ದಕ್ಷಿಣಕನ್ನಡವು ಹೆಸರು ಪಡೆದಿದೆ. ಇಲ್ಲಿಯ ಕೆಲವರೊಂದಾಗಿ ಮದ್ರಾಸಿನಂತಹ ದೊಡ್ಡ ನಗರದಲ್ಲಿಯೂ ಬ್ಯಾಂಕನ್ನು ಸ್ಥಾಪಿಸಿ, ಅದನ್ನು ಜನಪ್ರೀತವಾಗಿಯೂ ಉತ್ತಮವಾಗಿಯೂ ನಡೆಸಿಕೊಂಡು ಬರುತ್ತಿರುವುದು ಅಭಿನಂದನೀಯವಾಗಿದೆ. ಮಾತ್ರವಲ್ಲ ನಮಗೊಂದು ಭೂಷಣವಾಗಿದೆ. ಈ ಬ್ಯಾಂಕು ಇನ್ನಷ್ಟು ಪ್ರಗತಿಹೊಂದಿ ತನ್ನ ಶಾಖೆಗಳನ್ನು ಪ್ರಾಂತದಲ್ಲೆಲ್ಲಾ ವ್ಯಾಪಿಸಿ ಪ್ರಸಿದ್ಧವಾಗಲೆಂದು ಹಾರೈಸುತ್ತೇವೆ.

ಇನ್ಕಮ್ ಟೇಕ್ಸು ಮತ್ತು ವಿಕ್ರಯ ಟೇಕ್ಸು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-'39 ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟೇಕ್ಸಿನ ಆಕ್ಟಿನಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಕೊಡಕಿನ ವಿಷಯಗಳು ಅನೇಕ ಇವೆ.

ಕ್ರಮವಾದ ಜಮಾ ಖರ್ಚಿನ ಲೆಕ್ಕ ಇದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜಕ್ಕವು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಇವುಗಳಿಗೆ ಕಾಣಿಸಿದವರಿಂದ ಅನುಭವ ಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದು ತೀರ್ಮಾನವಾಗಬಹುದು.

"ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಕ್ಕ ಹಾಜರುಮಾಡುವ 15 ದಿನಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ವಕೀಲ,
ಕುಂದಾಪುರ ಪೋಸ್ಟ್.

THE
BOMBAY LIFE
ASSURANCE CO., LTD.

ಸ್ಥಾಪನೆ 1908

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ವಿವೇಜು.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೋಂಬೆ ಲೈಫ್ ಬಿಲ್ಡಿಂಗ್, ಸರ್ ಲಾಲುಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ. ಬಾಕ್ಸ್ ನಂ. 337, ಮೌಂಟ್‌ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವೆಂಡ್ರಮ್.

ಚೀನದ ಜನರಲ್ ಚಾಂಗ್ ಕೈಶೇಕನ ವೀರಪತ್ನಿ

ಶ್ರೀಮತಿ ಚಾಂಗ್ ಕೈಶೇಕಳ ಗೌರವಪೂರ್ಣ ವೀರಜೀವನ.

ಶಕ್ತಿಯ ಸದುಪಯೋಗ

ಚೀನಾ ಜಾಪಾನ್ ಯುದ್ಧವು ಇನ್ನೂ ಮುಗಿದಿಲ್ಲ. ಅಲ್ಲಿನ ಜನರಲ್ ಶೇಕ್ ಮತ್ತು ಆತನ ವೀರ ಪತ್ನಿಯು ದೇಶದ ರಕ್ಷಣೆಗೆಂದು ಮಾಡುತ್ತಿರುವ ವೀರ ಪ್ರಯತ್ನಗಳು ಎಲ್ಲರಿಗೂ ಗೊತ್ತು. ಜಾಪಾನಿಯರಿಗೆ ಮಣ್ಣು ಮುಕ್ಕಿಸುವಂತೆ ಮಾಡಿದ ವೀರ ರಣಮಣಿ ಈಕೆ. ಇಷ್ಟೇ ಅಲ್ಲದೆ ಯುದ್ಧ ಭೂಮಿಗೆ ಪ್ರವೇಶಿಸಿ ಸೈನ್ಯವನ್ನು ಸಹ ನಡೆಸಿದ ವೀರ ಸ್ತ್ರೀ. ಈಕೆಯ ವಿಚಾರದಲ್ಲಿ ಬಹಳ ಮನೋರಂಜಕ ವಿಷಯಗಳನ್ನೊಳಗೊಂಡಿರುವ ಲೇಖನವಿದನ್ನು ನಮ್ಮ ವಾಚಕರಿಗೆ ಇಲ್ಲಿ ಕೊಡಲಾಗಿದೆ. ಸಂ.

ಚೀಣದ ಸರ್ವಶಕ್ತಿವಂತ ವ್ಯಕ್ತಿಯ ಸಹಚಾರಿಣಿಯಾದ ಮೇಡಮ್ ಚಾಂಗ್ ಕಾಯಿಶೇಕಳು 'ತಲೆಯನ್ನೂ ತೆಗೆಯಬೇಕೆ'ಂದು ಹೇಳಿದ್ದಳು. ತಮ್ಮ ದೇಶಕ್ಕೆ ದ್ರೋಹ ಮಾಡಿದವರಿಗೆ ಇದೇ ಶಿಕ್ಷೆಯನ್ನೇ ವಿಧಿಸುತ್ತಿದ್ದುದು. ಒಂದು ಸಾರಿ ನೋಡಿದ ಮಾತ್ರದಿಂದಲೇ ಯಾರೂ ಈಕೆಯ ಮೂಲಕ ಪ್ರಭಾವಿತನಾಗುವುದಿಲ್ಲ. ಆದರೆ ಆಕೆಯ ವಿಚಾರದಲ್ಲಿ ಹೆಚ್ಚು ವಿಚಾರವನ್ನು ತಿಳಿದಂತೆಲ್ಲ ಆಕೆಯ ಮಹತ್ತ್ವ ಮತ್ತು ಆಕರ್ಷಣಾಶಕ್ತಿಯಿಂದ ಪ್ರಭಾವಿತನಾಗುವುದರಲ್ಲಿ ಸಂಶಯವಿಲ್ಲ.

ಮೇಡಂ ಚಾಂಗ್ ಕಾಯಿಶೇಕ್‌ಗೆ ಇಬ್ಬರು ಸಹೋದರಿಯರಿರುವರು. ಎಲ್ಲರಿಗಿಂತ ಹಿರಿಯವಳು ಚೀನದ ಪ್ರಜಾತಂತ್ರದ ಅಸ್ತಿಭಾರಕ್ಕೆ ಕಾರಣನಾದ ಸುನ್-ಯಟ್-ಸೇನ್-ನನ ವಿಧವೆ. ಎರಡನೆಯವಳಾದ ಮ್ಯಾಡಂ ಕಾಂಗಳು ಆರ್ಥಿಕ ಜಗತ್ತಿನ ತೇಜಸ್ವಿಯೂ ಕುಶಲಳೂ ಆದ ಸ್ತ್ರೀಯಾಗಿದ್ದಾಳೆ. ಈ ಮೂರು ಸಹೋದರಿಯರೂ ಮತ್ತು 4 ವ್ಯಕ್ತಿಗಳೂ ಜನರಲ್ ಲಿಸೀಮೊ ಚಾಂಗ್ ಕಾಯಿಶೇಕ್, ಡಾ. ಎಚ್. ಎಚ್. ಕಾಂಗ್, ಟಿ.ಬಿ ಸುಂಗ್ ಮತ್ತು ಟಿ ಎಲ್. ಸುಂಗ್ ಸೇರಿ ಪರಸ್ಪರವಾಗಿ ಚೀಣದ ಆರ್ಥಿಕ, ರಾಜನೈತಿಕ ಮತ್ತು ರಾಷ್ಟ್ರೀಯ ಜೀವನನಿರ್ವಾಹವನ್ನು ಮಾಡುತ್ತಿರುವರು.

ಸುಂಗ್ ವಂಶ

ಈ ಸುಂಗ್ ವಂಶಜರು ಬಹಳ ಬಡತನದಿಂದ ಮುಂದೆ ಬಂದವರು. ಸಮಯ ಬಂದಾಗ ಈಕೆಯು ಕೇವಲ ಒಂದು ವ್ಯಕ್ತಿಯ ಸಲಹೆಯನ್ನೂ ಕೇಳುವಳು. ಆ ವ್ಯಕ್ತಿಯು ಆಸ್ಟ್ರೇಲಿಯನ್‌ನಾದ ಮಿ. ಡೋನಾಡ್.

ಮೇಡಂ ಚಾಂಗ್ ಕಾಯಿಶೇಕಳು ಅಮೇರಿಕದ ವೆಲ್ಲೆಸ್ಲಿ ಕಾಲೇಜಿನಲ್ಲಿ ಬಿ. ಎ. ಮಾಡಿದಳು. ಯಾರೂ ನೋಡದೆ, ಒಂಟಿಯಾಗಿರುವ ಸಮಯದಲ್ಲಿ ಈಕೆಯು ಅಮೇರಿಕದವರಂತೆ ವೇಗವಾಗಿ ನಡೆಯುತ್ತಾಳೆ. ಈಕೆಯ ಸೋದರಿಯಾದ ಕಾಂಗಳು ಇದಕ್ಕೆ ತೀರವಿರುದ್ಧ. ಒಂಟಿಯಾಗಿರುವಾಗ ಬಹಳ ನಿಧಾನವಾಗಿ ನಡೆಯುವಳು.

ಇವಳ ಮನೆಯೂ ಸಹ ಅಮೇರಿಕದವರಂತೆಯೇ ಇದೆ. ಅಮೇರಿಕದ ಊಟವನ್ನೇ ಪ್ರೀತಿಸುವುದು. ಆಂಗ್ಲ ಭಾಷೆಯಲ್ಲಿ ತುಂಬ ಪರಿಶ್ರಮವಿದೆ.

"ಕಾಲೇಜಿನ ಒಬ್ಬ ಸ್ವತಂತ್ರ ಬಾಲಿಕೆಯಾದ ಕಾರಣ ನಾನು ಎಲ್ಲ ವಿಚಾರಗಳನ್ನೂ ಮರೆತಿದ್ದೆನು. ಆದರೆ ಸ್ವದೇಶಕ್ಕೆ ಬಂದ ಮೇಲೆ ನೋಡಿದ್ದೇನು— ಮಾಡಲು ಬೇಕಾದಷ್ಟು ಕೆಲಸಬಿದ್ದಿದೆ, ಆಗಿನಿಂದ ನಾನು ದೇಶಸೇವೆಗೋಸ್ಕರ ಪೂರ್ಣವಾಗಿ ಸಿದ್ಧಳಾದೆನು" ಎಂದು ಒಂದು ಸಾರಿ ಹೇಳಿದ್ದಳು.

ಕೆಲವರಲ್ಲಿ ಎಲ್ಲ ಗುಣಗಳೂ ಇರುವುದು ವಿಶೇಷವೇನೂ ಅಲ್ಲ. ಆದರೂ ಈಕೆಗೆ ಇದು ಬಹಳ ಅರುಚಿಕರ. ತನ್ನ ಏಕಾಂತ ಜೀವನವನ್ನು ಸಹ ದೇಶಸೇವೆಗೆಂದು ಅರ್ಪಿಸಿಬಿಟ್ಟಳು. ಚೀಣದಲ್ಲಿ ನಡೆಯುತ್ತಿರುವ ದುಃಖಾಂತ ನಾಟಕಕ್ಕೆ ಈಕೆಯು ಇಷ್ಟ ಯಿಲ್ಲದಿದ್ದರೂ ನಾಯಿಕೆಯಾಗಿರುವಳು. ಈಕೆಯ ಸ್ಫೂರ್ತಿಯ ಪರಿಣಾಮದಿಂದಲೇ ಇಂದು ಅಲ್ಲಿನ ಜನತೆಯು ಜಪಾನರ ಗುಲಾಮರಾಗದಿರಲು ಹಟತೊಟ್ಟಿರುವುದು. ಜೀವನ ಮರಣದ ಈ ಆಟದಲ್ಲಿ ಶಕ್ತಿಯೇ ಮೂಲವಾದ ಆಧಾರ. ಈಕೆಯ ಆಜ್ಞೆಯಿಂದ ಜಪಾನಿಕ ಹಡಗನ್ನೂ ಮುಳುಗಿಸುವ ಯತ್ನ ನಡೆದುದು. ಆದರೆ ದುರ್ದೈವದಿಂದ ಫ್ರೈ. ಹೂವರಿಗೆ ಅದರ ಪೆಟ್ಟು ತಗಲಿತು.

ಈಕೆಯ ಪ್ರಯತ್ನದಿಂದಲೇ ಚೀನದ ಯುದ್ಧಸಾಮಗ್ರಿಯ ವ್ಯಾಪಾರದಿಂದ ಲಾಭ ಹೊಂದುತ್ತಿದ್ದವರ ಪತ್ತೆಯಾಯಿತು. ನ್ಯಾಷನಲ್ ಏವಿಯೇಷನ್ ಸೆಕ್ರೆಟರಿಯಾಗಿ ಅನೇಕರನ್ನು ಪತ್ತೆಮಾಡಿ ಅವರ ತಲೆಗಳನ್ನು ತೆಗೆದುಕೊಂಡಳು.

ತನ್ನ ಪತಿಯನ್ನು ಬಿಟ್ಟರೆ, ಮಂತ್ರಿಮಂಡಲದಲ್ಲಿ ಈಕೆಯು ಪ್ರಮುಖ ಸದಸ್ಯಳು. ಆದರೆ ಸರಕಾರಿ ದೃಷ್ಟಿಯಿಂದೇನೂ ಸದಸ್ಯಳಲ್ಲ. ಆಕೆಯು ಮಾಡುವ ಅದ್ಭುತ ಕಾರ್ಯವನ್ನು ಅನೇಕ ಅಧಿಕಾರಿಗಳು ಮಾಡಲು ಹಿಂಜರಿಯುವರು. ಯಾವಾಗ ಇವರ ವಿರೋಧಿಗಳು, ಚಾಂಗ್ ಕೈಶೇಕರನ್ನು ಎಬ್ಬಿಸಿಬಿಟ್ಟದ್ದಾರೋ, ಆಗ ಈಕೆಯ ಹೃದಯವು ಸ್ತ್ರೀತ್ವ ಮತ್ತು ಮಾತೃತ್ವದಿಂದ ತುಂಬಿಹೋಗಿ, ಪತಿಯ ಸಹಾಯಕ್ಕಾಗಿ, ಹಡಗಿನ ಮೂಲಕ ಹೋದಳು. ಅಲ್ಲಿಂದ ವಿಜಯಿಯಾಗಿ ಬರಲು, ಜನತೆಯು ಈಕೆಯನ್ನು ಸರ್ವಶ್ರೇಷ್ಠ ಸ್ತ್ರೀ ಎಂದು ಭಾವಿಸಿತು.

ಶಾಂಟಿಂಗ್‌ನಲ್ಲಿ ಜಪಾನಿಯರನ್ನು ತಡೆಗಟ್ಟುವುದರಲ್ಲಿ ಯಾರ ಕೈವಾಡವಿದೆ? ನಿಜವಾಗಿಯೂ ಈಕೆಯದೇ! ಅಲ್ಲದೆ ಮೊದಲೇ ಈಕೆಯ ಸಲಹೆಯಂತೆ ನಡೆದಿದ್ದರೆ ನಾನ್ಕಿಂಗ್ ಮತ್ತು ಶಾಂಗಾಯಿಯನ್ನು ಸಹಾ ಉಳಿಸಿಕೊಳ್ಳಬಹುದಾಗಿತ್ತು. ಅದರಲ್ಲಿ ನಡೆದ ಅಚಾತುರ್ಯವು ನಡೆಯದಂತೆ ಮಾಡಬಹುದಿತ್ತು.

ತನ್ನ ಶಕ್ತಿಯ ಸದುಪಯೋಗ

ಎಲ್ಲಿಯೇ ಆಗಲಿ, ಒಬ್ಬ ದುರ್ಬಲ ಸ್ತ್ರೀಯ ಕೈಗೆ ಅಧಿಕಾರ ಬಂದರೆ ಅದು ಬಹಳ ಹಾನಿಕಾರಕವಾಗುವುದು. ಆದರೆ ಈಕೆಯು ಮಾತ್ರ ತನ್ನ ಶಕ್ತಿಯನ್ನು ಎಂದೂ ದುರುಪಯೋಗಪಡಿಸಿಲ್ಲ. ಆಕ್ರಮಣಕಾರಿಗಳ ನಿರಂಕುಶತೆಗೆ ಉತ್ತರವಾಗಿ ಈಕೆಯು ಒಂದು ವೇಳೆ ಶಸ್ತ್ರಗಳ ಮೇಲೆ ಬಾಂಬು ಸುರಿಸುವ ಆಜ್ಞೆ ಮಾಡಿದ್ದರೂ, ನಿರಾಶ್ರಿತರಿಗೆ ದಯೆಯನ್ನು ತೋರಿಸದೆ ಇಲ್ಲ.

ದಿನವೆಲ್ಲ ಕಾರ್ಯಕ್ರಮಗಳಿರುವುವು. ದೇಶದ ಎಲ್ಲ ಎಡೆಗಳಿಂದಲೂ ನ್ಯಾಯವನ್ನು ಬೇಡುವ ಪ್ರಾರ್ಥನಾಪತ್ರಗಳು ಬರುವುವು. ಯಾರಿಗೇ ಆಗಲಿ ರಕ್ಷಣೆಯ ಅಗತ್ಯವಿದ್ದಲ್ಲಿ ಕೂಡಲೆ ಅಲ್ಲಿಗೆ ಹೋಗಬೇಕಾಗುವುದು. ಅಧಿಕಾರದ ಅಚಣೆಯಿಂದ ಪತಿಯ ಸಲಹೆಯನ್ನು ಪಡೆಯಬೇಕಾಗುವುದು. ಪತ್ರವ್ಯವಹಾರವಂತೂ ಬಹಳವಿರುತ್ತದೆ. ಆಕೆಯನ್ನು ಭೇಟಿಮಾಡಬೇಕಾದರೆ ಬಹಳ ಕಷ್ಟ ಹಾಗೂ ಕಠಿನವಾಗುವುದು. ಒಂದು ಸಾರಿ ಒಬ್ಬ ಪತ್ರಿಕಾಪ್ರತಿನಿಧಿಯು ಆಕೆಯನ್ನು ನೋಡಲು ಅರ್ಧ ರಾತ್ರಿಯವರೆಗೆ ಕಾಯಬೇಕಾಯಿತಂತೆ.

ಕ್ರೋಧದ ಪ್ರದರ್ಶನ

ಸಿಟ್ಟುಬಂದಾಗ ಉಚಿತ ರೀತಿಯಲ್ಲಿ ಅದನ್ನು ತೋರಿಸುವಳು. ಶಾಂತಿಯ ವಿಚಾರದಲ್ಲಿ ಪ್ರಶ್ನಿಸಲು ಮಿತ್ರತ್ವ ಮತ್ತು ಸಹಯೋಗಗಳಿಲ್ಲದೆ ಇದು ಅಸಂಭವವೆಂದುತ್ತರಕೊಟ್ಟಳು."ಜಪಾನಿಯರ ಪ್ರಯತ್ನವು ನಮ್ಮ ಮೇಲೆ ಯಾವ ಪ್ರಭಾವವನ್ನೂ ಸಹ ಉಂಟುಮಾಡಲಾರದು. ಚೀಣದ ಇತಿಹಾಸವು ಜಪಾನಿನದಕ್ಕಿಂತ ಪ್ರಾಚೀನವಾದುದು. ನಾವು ಎಂದಿಗೂ ಜಪಾನರ ಗುಲಾಮರಾಗಲಾರೆವು" ಇಂತಹ ಸ್ತ್ರೀಯಿರುವ ದೇಶವು ಜಪಾನನ್ನು ವಿರೋಧಿಸುವುದರಲ್ಲಿ ಆಶ್ಚರ್ಯವೇನು?

ಈ ದೇಶಭಕ್ತ ನಾರಿಯ ಶಬ್ದಚಿತ್ರವು ಜನರಲ್ ಸಿಯೋ ಮತ್ತು ಅವರ ಪತ್ನಿಯ ಉಲ್ಲೇಖನ ಮಾಡದೆ ಪೂರ್ಣವಾಗುವಂತಿಲ್ಲ ಅವರು ಪರಸ್ಪರ ಭಕ್ತರು, ಜನರಲ್ ಲಿಸಿಯೋ ಚೀನದ ಶಕ್ತಿಯ ಆಧಾರ. ಇವನ ಪತ್ನಿಯು ಯಾವಾಗಲೂ ಪತಿಯ ಗೌರವವನ್ನು ವೃದ್ಧಿಗೊಳಿಸುವುದರಲ್ಲಿ ಕಾತರಳಾಗಿರುವಳು.

ಆಂದೋಳನದ ಸೂತ್ರಧಾರ

ನವಜೀವನದ ಆಂದೋಳನದ ನಿರ್ಮಾಣವಾದಾಗ ಈ ಎರಡು ತಲೆಗಳಲ್ಲಿ ನಡೆದ ಭಯಂಕರ ಸಂಗ್ರಾಮವು ಅವರ್ಣನೀಯ. ಇವರಿಬ್ಬರ ಪ್ರಯತ್ನದ ಫಲವಾಗಿ ಚೀಣದ ಆಧ್ಯಾತ್ಮಿಕ ಹಾಗೂ ರಾಜಕೀಯ ಪುನರುತ್ಥಾನವಾಯಿತು.

ಅಮೇರಿಕದಲ್ಲಿ ಭಾಷಣಮಾಡಲು ತಿರಸ್ಕರಿಸಿ ಬರುವ ಆದಾಯವನ್ನು ಕಳೆದುಕೊಂಡಳು. ಅಲ್ಲಿ ಒಬ್ಬ ರಾಣಿಗಾಗುವಂತೆ ತನ್ನ ಸ್ವಾಗತವಾಗುವಂತೆ ತಿಳಿದಿದ್ದಳು ಆದರೆ ದೇಶ ಮತ್ತು ಪತಿಯ ಪ್ರೇಮವು ಈ ರೀತಿ ಹೇಳುವಂತೆ ಮಾಡಿತು. "ಜನರಲ್ ಲಿಸಿಯೋ ನನ್ನನ್ನು ಹೋಗಗೊಡುವುದಿಲ್ಲ. ಇಂತಹ ಕಠಿಣ ದಿನಗಳಲ್ಲಿ ನಾನು ಅವರೊಡನಿರುವುದು ತೀರ ಅಗತ್ಯವೆಂದು ಭಾವಿಸುತ್ತೇನೆ."

Transport & Car Owners

ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.

ನವೀನ ಪುಸ್ತಕಗಳು

೧. **ಕರಿನೀರು**—ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ೨ರೂಪಾಯಿ

೨. **ಹನ್ನೆ**—ಐತಿಹಾಸಿಕ ನಾಟಕ. ಪುಟ ೮೦, ನುಣುಪು ಕಾಗದ, ಬೆಲೆ ೬ಆಣೆ.

೩. **ಬಲಿದಾನ**—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೬ಪುಟ ಬೆಲೆ ರೂ. ೧-೪-೦

೪. **ಎಚ್ಚಮ್ಮ ನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೦೮ಪುಟ ಬೆಲೆ ೮ಆಣೆ

೫. **ಅಮಾತ್ಯ ನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—**ಶ್ರೀ ಶೇಷಾಚಲ ಪ್ರೆಸ್**, ಪೊ. ಅನಂದವನ (ಹಾವೇರಿ) ಧಾರವಾಡ.

ನಮ್ಮ ಎಲ್ಲಾ ಪುಸ್ತಕಗಳು ಉಡುಪಿಯಲ್ಲಿ ನವಭಾರತ ಪುಸ್ತಕ ಭಂಡಾರದಲ್ಲಿ ಸಿಗುತ್ತವೆ.

ಆರೋಗ್ಯ ವಿಚಾರ

ಹಿಂದುಸ್ಥಾನದಲ್ಲಿ ಕೊಲೆರಾ ರೋಗದ ಹಾವಳಿ

ಇನಾಕ್ಯುಲೇಶನ್ ಮಾಡಿಸಿಕೊಳ್ಳುವ ಪ್ರಯೋಜನ— ಸರಿಯಾದ ಕೊಲೆರಾ ಔಷಧಿಯನ್ನೇ ಇನಾಕ್ಯುಲೇಶನಿನ ಬಗ್ಗೆ ಉಪಯೋಗಿಸಬೇಕಾದ ಅವಶ್ಯಕತೆ

1938ನೇ ಇಸವಿಯಲ್ಲಿ ಅನೇಕ ಸಂಸ್ಥಾನಗಳಲ್ಲಿಯೂ ಆಶ್ರಿತ ರಾಜ್ಯಗಳಲ್ಲಿಯೂ ಸಂಭವಿಸಿದ ಕೊಲೆರಾ ರೋಗದ ಪ್ರಾಬಲ್ಯವು ಹಿಂದುಸ್ಥಾನದ ಸರ್ವಸಾಮಾನ್ಯ ಎಲ್ಲ ಆರೋಗ್ಯ ಖಾತೆಗಳಲ್ಲಿಯೂ ಗಣನೆಗೆ ಬಂದ ಮುಖ್ಯ ವಿಷಯವಾದ್ದರಿಂದ ಅದು ಡಿಶಂಬರದಲ್ಲಿ ದಿಲ್ಲಿಯಲ್ಲಿ ನಡೆದ ವೈದ್ಯ ಪರಿಶೋಧನಾ ಸಭೆಯಲ್ಲಿಯೂ ಜನವರಿಯಲ್ಲಿ ಮದರಾಸಿನಲ್ಲಿ ಜರಗಿದ ಕೇಂದ್ರ ಆರೋಗ್ಯ ಪ್ರಬೋಧನಾ ಮಂಡಳಿಯ ಎರಡನೆಯ ಸಭೆಯಲ್ಲಿಯೂ ಪೂರ್ಣ ಚರ್ಚೆಗೆ ಬಂದುದರಲ್ಲಿ ಆಶ್ಚರ್ಯವಿಲ್ಲ. 1938ನೇ ಇಸವಿಯಲ್ಲಿ ಬ್ರಿಟಿಷ ಹಿಂದುಸ್ಥಾನದಲ್ಲಿ ಮಾತ್ರವಾದ ಕೊಲೆರಾ ತಗಲಿದ ಜನರ ಸಂಖ್ಯೆಯು ಸುಮಾರು 323,243 ಮತ್ತು ಕೊಲರಾ ರೋಗದಿಂದ ಆದ ಮರಣಗಳು 1[illegible]8,010 ಇದರಲ್ಲಿ ವಿಶೇಷವಾಗಿ ಕೊಲರಾ ಸಂಭವಿಸಿದ ಸಂಸ್ಥಾನಗಳು ಯಾವುವೆಂದರೆ, ಸಂಯುಕ್ತ ಪ್ರಾಂತ್ಯಗಳು, ಇಲ್ಲಿ 70000 ಕೊಲರಾ ರೋಗವು ತಗಲಿದವರ ಪೈಕಿ 34000 ಮರಣಗಳು. ಮದ್ರಾಸು ಪ್ರಾಂತ್ಯಗಳು ಇಲ್ಲಿ 94000 ರೋಗ ತಗಲಿದವರ ಪೈಕಿ 45000 ಮರಣಗಳು, ಬಂಗಾಳಾ ಪ್ರಾಂತ್ಯ, ಇಲ್ಲಿ 80000 ರೋಗ ತಗಲಿದವರ ಪೈಕಿ 45000 ಮರಣಗಳು. ಇದೇ ಕಾಲದಲ್ಲಿ ಪಂಜಾಬಿನಲ್ಲಿ 8500 ಜನರಿಗೆ ಕೊಲರಾ ತಗಲಿದ್ದು ಅವರ ಪೈಕಿ ಮರಣಗಳು 4600.

ಕೊಲರಾ ರೋಗವನ್ನು ತಡೆಗಟ್ಟಲಿಕ್ಕೆ ಇನಾಕ್ಯುಲೇಶನ್ ಮಾಡಿಸಿಕೊಳ್ಳುವ ಪ್ರಯೋಜನವು ಈಗ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯವು, ಹಿಂದುಸ್ಥಾನದಲ್ಲಿ ಇನಾಕ್ಯುಲೇಶನ್ ಮಾಡಿಸಿಕೊಂಡ ಜನರ ಸಂಖ್ಯೆಯು ಈಗ, ಕೆಲವು ವರ್ಷಗಳಿಂದ ಕ್ರಮವಾಗಿ ವೃದ್ಧಿಯಾಗುತ್ತಾ ಬಂದಿದೆ. ಹಿಂದುಸ್ಥಾನದ ಪರಿಶೋಧನಾ ಫಂಡ್ ಸಂಘದ ವತಿಯಿಂದ ನಡೆದ ಪರಿಶೋಧನಾ ಕೆಲಸದಿಂದ ಕೊಲರಾ ಕ್ರಿಮಿಯ ಸ್ವಭಾವದ ಕುರಿತು ಕೆಲವು ಹೊಸ ವಿಷಯಗಳು ಕಂಡುಹಿಡಿಯಲ್ಪಟ್ಟಿವೆ. ಪ್ರಕೃತಿಯಲ್ಲಿ ಕಾಣುವ ಕ್ರಿಮಿಗಳನ್ನು ಹೋಲುವ ಅನೇಕ ಕ್ರಿಮಿಗಳು ಇರುವವೆಂದೂ ಅವುಗಳು ಕೊಲರಾ ರೋಗವನ್ನು ಹುಟ್ಟಿಸುವುದಿಲ್ಲವೆಂದೂ ಕಂಡುಬಂದಿದೆ. ಅದ್ದರಿಂದ ಕೊಲರಾ ರೋಗವನ್ನು ತಡೆಗಟ್ಟಲಿಕ್ಕೆ ಉಪಯೋಗಿಸುವ ಔಷಧ (ವ್ಯಾಕ್ಸಿನ್) ನಿಜವಾದ ಕೊಲರಾ ಕ್ರಿಮಿಯಿಂದ ತಯಾರಿಸಲ್ಪಟ್ಟದ್ದಾಗಿರಬೇಕೆಂಬುದು ಅತಿ ಮುಖ್ಯ ವಿಷಯ. ಕೇಂದ್ರ ಆರೋಗ್ಯ ಪ್ರಬೋಧನಾ ಮಂಡಳಿಯವರು ಜನವರಿಯಲ್ಲಿ ಜರಗಿದ ಸಭೆಯಲ್ಲಿ ಈ ವಿಷಯವು ಹಿಂದುಸ್ಥಾನದಲ್ಲಿಯ ಎಲ್ಲಾ ಹೆಲ್ತ್ ಆಫೀಸರರಿಗೂ, ವೈದ್ಯ ಅಧಿಕಾರಿಗಳಿಗೂ, ಖಾಸಗಿ ವೈದ್ಯರಿಗೂ ಮಾತ್ರವಲ್ಲ, ಸರ್ವಜನರಿಗೂ ತಿಳಿಯುವಂತೆ ಇದನ್ನು ಪ್ರಕಟಿಸಬೇಕೆಂದು ಶಿಫಾರಸುಮಾಡಿದರು. ಹಿಂದುಸ್ಥಾನದ ಪರಿಶೋಧನಾ ಸಂಸ್ಥೆಯ ಕೊಲರಾ ಪ್ರಬೋಧನಾ ಕಮಿಟಿಯು ಕೊಲರಾ ಔಷಧಿಯನ್ನು ಒದಗಿಸಿಕೊಡುವ ಸಂಸ್ಥೆಗಳನ್ನು ಹಿಂದುಸ್ಥಾನದಲ್ಲಿ ಹಲವು ಸಂಸ್ಥಾನಗಳಲ್ಲಿ ಉಪಯೋಗಿಸುವ ಕೊಲರವನ್ನು ತಡೆಗಟ್ಟುವ ಔಷಧದ ಸ್ವಭಾವವನ್ನು ಪರಿಶೀಲಿಸಿ ನೋಡಿದ್ದಲ್ಲಿ ಈ ಔಷಧಿಗಳು ಹಲವು ಸಂಸ್ಥಾನಗಳಲ್ಲಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಮತ್ತು ಸಾರ್ವಜನಿಕ ಆರೋಗ್ಯ ಖಾತೆಯು ಒದಗಿಸಿದ ರಸಾಯನ ಶಾಲೆಗಳಿಂದ ಮತ್ತು ವ್ಯಾಪಾರ ಸಂಸ್ಥೆಗಳಿಂದ ಸಿಗತಕ್ಕವೆಂದು ಕಂಡುಬಂದವೆ. ಹಿಂದುಸ್ಥಾನದಲ್ಲಿ ಸುಮಾರು 18 ತಿಂಗಳಿನಿಂದ ಪೇಟೆಗಳಲ್ಲಿ ಸಿಕ್ಕುವ ಔಷಧಿಗಳನ್ನು ಪರಿಶೋಧನೆ ಮಾಡಲಾಗಿ ಕೆಲವು ಔಷಧಿಗಳು ನಿಜವಾದ ಕೊಲರ ಕ್ರಿಮಿಯ ಆಯ್ಕೆಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ತಿಳಿದಿದೆ. ಇಂಥ ಔಷಧಿಗಳ ಉಪಯೋಗದಿಂದ ಕೊಲರವನ್ನು ತಡೆಗಟ್ಟಲಾಗುವುದಿಲ್ಲವೆಂದು ವೈದ್ಯಶೋಧನಾ ಸಭೆಯಿಂದ ಅಂಗೀಕರಿಸಲ್ಪಟ್ಟ, ಕೊಲರಾ ಪ್ರಬೋಧನಾ ಕಮಿಟಿಯ ಅಭಿಪ್ರಾಯ. ಕೊಲರವನ್ನು ತಡೆಗಟ್ಟುವ ಔಷಧವನ್ನು ತಯಾರಿಸುವವರೆಲ್ಲರೂ ಈಚೆಗಿನ ಕ್ರಿಮಿಶಾಸ್ತ್ರ ವಿಜ್ಞಾನದಿಂದ ಕಂಡುಹಿಡಿದಿರುವ ಸಾಮಾನ್ಯ ಎಲ್ಲ ವಿಷಯಗಳ ತಿಳುವಳಿಕೆಯುಳ್ಳವರೆಂದು ಹೇಳಲಾಗುವುದಿಲ್ಲ.

ಆದರೆ ಹಿಂದುಸ್ಥಾನದ ಜನರು ಕೊಲರಾ ರೋಗವನ್ನು ತಡೆಗಟ್ಟುವ ಔಷಧಿಯು ಇನಾಕ್ಯುಲೇಶನ ಉಪಯೋಗದಲ್ಲಿ ನಂಬಿಕೆಯನ್ನು ತೋರಿದರೆ ವಿಶೇಷ ಹಾನಿ ಇದೆ. ಆದ್ದರಿಂದ ತಾವು ಉಪಯೋಗಿಸುವ ಕೊಲರ ಔಷಧಿಯು ಉತ್ತಮ ಪ್ರತಿಬಂಧಕಶಕ್ತಿಯುಳ್ಳದ್ದಾಗಿರಬೇಕೆಂದು ದೃಢಪಡಿಸಿಕೊಳ್ಳುವುದು ಎಲ್ಲಾ ಹೆಲ್ತ್ ಆಫೀಸರರ, ವೈದ್ಯ ಉದ್ಯೋಗಸ್ಥರ ಮತ್ತು ಖಾಸಗಿ ವೈದ್ಯರುಗಳ ಕರ್ತವ್ಯ. ಈ ಧ್ಯೇಯದಿಂದ ಕೊಲರಾ ಔಷಧವನ್ನು ತಯಾರಿಸುವ ವಿಧ ಮತ್ತು ಉಪಯೋಗಿಸುವ ಕ್ರಿಮಿಗಳ ಆಯ್ಕೆ ಇವುಗಳ ಕುರಿತು ಕೊಲರಾ ಪ್ರಬೋಧನಾ ಕಮಿಟಿಯವರು 1936ರಲ್ಲಿ ಮಾಡಿದ ಶಿಫಾರಸು ಮೇರೆಗೆ ಸರಿಯಾದ ಕ್ರಿಮಿಗಳ ಆಯ್ಕೆಯಿಂದ ತಯಾರಿಸಿದ ಔಷಧಿಯೇ ತಮ್ಮಲ್ಲಿ ಉಪಯೋಗಿಸಲ್ಪಡುತ್ತದೆ ಎಂಬುದರ ಕುರಿತು ಅವರು ದೃಢಪಡಿಸಿಕೊಳ್ಳಬೇಕು. ಸರಿಯಾದ ಆಯ್ಕೆಯಿಂದ ತಯಾರಿಸಲ್ಪಟ್ಟ ಔಷಧಿಯೆಂದು ದೃಢಪಡಿಸುವುದಕ್ಕಾಗಿ ಹಿಂದುಸ್ಥಾನದಲ್ಲಿ ಔಷಧಿ ತಯಾರಿಸುವವರು ತಮ್ಮ ಆಯ್ಕೆಗಳನ್ನು ಕೊಲರ ಕ್ರಿಮಿಗಳ ವಿಷಯ ನಿರಂತರ ಪರಿಶೋಧನೆ ನಡೆಸಲಿಕ್ಕಾಗಿ ನಿರ್ದಿಷ್ಟವಾದ ಕೆಲವು ರಸಾಯನ ಶಾಲೆಗಳಿಂದ ಪರೀಕ್ಷಿಸಲ್ಪಟ್ಟು ಅಲ್ಲಿಂದ ಸರಿ ಕೊಂಡವುಗಳಾಗಿರಬೇಕೆಂದು ಶಿಫಾರಸು ಮಾಡಲ್ಪಟ್ಟಿವೆ. ಇದಕ್ಕೋಸ್ಕರ ಕಸೋಲಿ ಸೆಂಟ್ರಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಕಲ್ಕತ್ತ ಟ್ರೋಪಿಕಲ್ ಮೆಡಿಸನಿನ ಮತ್ತು ಗಿಂಡಿಕಿಂಗ್ ಇನ್ಸ್ಟಿಟ್ಯೂಟಿನ ಡೈರೆಕ್ಟರರುಗಳು ಎಲ್ಲಾ ರಸಾಯನ ಶಾಲೆಗಳಿಗೂ ಸರಿಯಾದ ಆಯ್ಕೆಗಳನ್ನು ಒದಗಿಸಿಕೊಡಲು ತಮ್ಮ ಸಮ್ಮತಿಯನ್ನು ವ್ಯಕ್ತಗೊಳಿಸಿದ್ದಾರೆ. 1936ನೇ ಇಸ್ವಿಯಲ್ಲಿ ಕೊಲರಾ ಪ್ರಬೋಧನಾ ಕಮಿಟಿಯವರು ಮಾಡಿದ ಶಿಫಾರಸು ನಕಲುಗಳು ಇಂಡಿಯಾ ಸರಕಾರದ ಪಬ್ಲಿಕ್ ಹೆಲ್ತ್ ಕಮಿಶನರವರ ಆಫೀಸಿನಲ್ಲಿ ಸಿಕ್ಕುವವು.

(*Sd*) ಎ. ಜೆ. ಎಚ್ ರಸ್ಸೆಲ್,
ಕರ್ನಲ್ ಐ. ಎಮ್. ಎಸ್,
ಇಂಡಿಯಾ ಗವರ್ನಮೆಂಟಿನ ಪಬ್ಲಿಕ್ ಹೆಲ್ತ್ ಕಮಿಶನರ್ ಮತ್ತು ಆರೋಗ್ಯ ಪ್ರಬೋಧನಾ ಮಂಡಳಿಯ ಸೆಕ್ರೆಟರಿ.

ಲೈಬ್ರರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ **ದೊರೆಯುತ್ತವೆ**

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874]　**ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್**　[ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು **ಆರ್ಥಿಕ ಸ್ವಾತಂತ್ರ್ಯವು** ನಿಸ್ಸಂದೇಹವಾಗಿ ದೊರಕುವಂತಹ ಸ್ಥಿತಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ “**ಓರಿಯಂಟಲ್**”ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

ಪೂರ್ವ ದಿಕ್ಕಿನ ಯುದ್ಧರಂಗ

ದೂರ ಪ್ರಾಂತದಲ್ಲಿ ನಡೆಯುತ್ತಿರುವ ನಾಟಕ

ಭಾರತವು ಅದರಲ್ಲಿ ವಹಿಸುವ ಭಾಗವೇನು?

ದೂರದ ಪೂರ್ವದಲ್ಲಿ ನಡೆಯುತ್ತಿರುವ ನಾಟಕದಲ್ಲಿ ಭಾರತವು ಯಾವ 'ಪಾರ್ಟ'ನ್ನು ವಹಿಸುವುದೆಂಬುದನ್ನು ಬಹಳ ಜನರು ತಿಳಿದಿಲ್ಲ ಚೀಣ ಭಾರತ ಇವುಗಳೆರಡರ ಸಮಸ್ಯೆಗಳು ಹೆಚ್ಚು ಕಡಿಮೆ ಒಂದೇ ಆದ್ದರಿಂದ, ಭಾರತೀಯರ ದೃಷ್ಟಿಯು, ಚೀಣ ಜಪಾನು ವಿಭಾಗಗಳಲ್ಲಿ ತೀವ್ರವಾಗಿರಬೇಕಾದುದು ಸಹಜವೇ ಆಗಿದೆ.

ಶ್ರೀಮತಿ ಸರೋಜಿನೀ ದೇವಿಯವರು ಕೆಲವು ದಿನಗಳ ಹಿಂದೆ ಈ ರೀತಿ ಹೇಳಿದ್ದರು: "ಚೀಣಾದ ಸದ್ಯದ ಕಷ್ಟನಷ್ಟಗಳಲ್ಲಿ ಅಲ್ಲಿನ ನಿವಾಸಿಗಳಿಗುಂಟಾಗಿರುವ ತೊಂದರೆಯಲ್ಲಿ ಯಾವ ಭಾರತೀಯನಿಗಾದರೂ ಸಹಾನುಭೂತಿಯಿಲ್ಲದೆ ಇಲ್ಲ." ಆದರೆ ಈ ಸಹಾನುಭೂತಿಯನ್ನು ಕಾರ್ಯರೂಪಕ್ಕೆ ತರುವುದು ಹೇಗೆಂಬುದೇ ಮುಂದಿನ ಪ್ರಶ್ನೆ. ಇಂತಹ ಮಹತ್ವವಾದ ಸಮಸ್ಯೆಯನ್ನು ತಿಳಿಯುವ ಮೊದಲು, ನಾವು ಚೀಣಾದ ಪ್ರಾಕೃತಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳುವುದು ಅಗತ್ಯ.

ಚೀಣಾದ ಮಾರ್ಕೆಟ್ಟು ಇತರರಿಗೆ ಮುಚ್ಚಿರಬಾರದೆಂದು 1899ರಲ್ಲಿ ಜಾನ್ ಹೆಯು "ತೆರೆದಿಟ್ಟ ಬಾಗಿಲಿ"ನ ನೀತಿಯನ್ನು ಜಗತ್ತಿಗೆ ತೋರಿಸಿ, ಎಲ್ಲರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡಿದನು. ಈ ನೀತಿಯನ್ನು ಇತರ ಪ್ರಬಲ ರಾಷ್ಟ್ರಗಳೆಲ್ಲವೂ ಒಪ್ಪಿಕೊಂಡು ಇತರ ದೇಶಗಳು ಚೀಣಾದೊಡನೆ ವ್ಯಾಪಾರ ಮಾಡಲು ಅನುಕೂಲವನ್ನು ಕಲ್ಪಿಸಲಾಯಿತು! ಆ ಕಾಲದಲ್ಲಿ ಬಹಳ ಬೆಲೆಯುಳ್ಳ ಈ ವ್ಯಾಪಾರ ಕೇಂದ್ರವು ಎಲ್ಲರಿಗೂ ತೆರೆದಿದ್ದು ವ್ಯಾಪಾರದ ಸರಕುಗಳು, ಚೀಣಾದ ವಿಶಾಲವಾದ ಸಮುದ್ರ ತೀರದ ಕಡೆಯಿಂದ ದೇಶದೊಳಗೆ ಪ್ರವೇಶಿಸುತ್ತಿದ್ದವು. ಆ ಕಾಲದಲ್ಲಿ ಆಮದು ರಫ್ತುಗಳಿಗೆ ಈ ಮಾರ್ಗವೇ ಸುಲಭವಾಗಿದ್ದುದು. ಆದುದರಿಂದ ಕೆಲಸಗಾರರು "ಬ್ಯಾಕ್ ಡೋರಿ"ನ ಕಡೆಗೆ ಗಮನ ಕೊಡಲಿಲ್ಲ. ಏಕೆಂದರೆ ಈ ಮಾರ್ಗದಲ್ಲಿ ಚೀಣವನ್ನು ತಲಪುವುದು ಬಹಳ ಕಠಿಣವಾಗಿದ್ದುದಲ್ಲದೆ ಪ್ರಯಾಣದ ಖರ್ಚು ಸಹ ಬಹಳವಾಗುತ್ತಿತ್ತು.

ಆದರೆ ಕೆಲವು ದೂರದೃಷ್ಟಿಯುಳ್ಳ ವರ್ತಕರು ಎಂದಾದರೊಂದು ದಿನ ಈ ಮುಂಬಾಗಿಲು ಮುಚ್ಚಲ್ಪಡಬಹುದೆಂದು ಊಹಿಸಿ 'ಹಿಂಬಾಗಿಲಿ'ನಿಂದ ಬರಲು ಸಿದ್ಧತೆಯನ್ನು ಮಾಡಲಾರಂಭಿಸಿದರು. 1885ರಲ್ಲಿ ಫ್ರಾನ್ಸು 'ಇಂಡೋಚೀಣ'ವನ್ನು ತನ್ನ ಅಧಿಕಾರಕ್ಕೆ ಒಳಪಡಿಸಿಕೊಂಡುದು ಕೆಂಪು ಸಮುದ್ರವನ್ನು ತನ್ನ ವಶಮಾಡಿಕೊಳ್ಳುವ ಮತ್ತು ದಕ್ಷಿಣದ ಕಡೆಯಿಂದ ಚೀಣಾದ ಪಶ್ಚಿಮ ಭಾಗವಾದ ಯೂನಾನನ್ನು ಸುಲಭವಾಗಿ ಪ್ರವೇಶಿಸುವ ಉದ್ದೇಶದಿಂದಲೇ. 10ವರ್ಷಗಳ ನಂತರ ಅದು ಅಲ್ಲಿ ರೈಲನ್ನೂ ಸಹ ಹಾಕುವ ಅಧಿಕಾರವನ್ನು ಹೊಂದಿತು. ಇದರ ಮುಖ್ಯ ಗುರಿ ಏನೆಂದರೆ ಫ್ರಾನ್ಸಿನ ವ್ಯಾಪಾರಮಾರ್ಗವು ಹಾಂಕಾಂಗ್ ಮತ್ತು ಷಾಂಘಾಯಿಯ ಬಂದರುಗಳ ಮಾರ್ಗವನ್ನು ಬಿಟ್ಟು ಇಂಡೋ ಚೀಣದ ಕಡೆ ಆಗಬೇಕೆಂಬುದೇ.

ಬ್ರಿಟಿಷ್ ರಾಜಕೀಯ ನಿಪುಣರೂ ಈ ಕಾಲದಲ್ಲಿ ನಿದ್ದೆಮಾಡುತ್ತಿರಲಿಲ್ಲ ಮಾಂಡಲೆಯಿಂದ ಯುನಾನಿನ ವರೆಗೆ ಒಂದು ರೈಲ್ವೆಲೈನನ್ನು ಹಾಕುವುದರ ಅಗತ್ಯವಿತ್ತು ಅವರಿಗೆ. ಆದರೆ ಫ್ರೆಂಚರು ಮೊದಲೇ ಬರ್ಮದ ರಾಜನಿಂದ ಮಾಂಡಲೆಯಿಂದ ಟೋಂಗ್ ಕಿಂಗ್ ವರೆಗೆ ಒಂದು ದೊಡ್ಡ ರಸ್ತೆಯನ್ನು ಮಾಡಲು ಅಪ್ಪಣೆಯನ್ನು ಪಡೆದಿದ್ದರು. ಇದರ ಪರಿಣಾಮವಾಗಿ ಬ್ರಿಟಿಷರು ಭಾರತೀಯ ಸೈನಿಕರ ಸಹಾಯದಿಂದ ಬರ್ಮದ ಮೇಲೆ ದಂಡೆತ್ತಿಬಂದು ಅದನ್ನು ಗೆದ್ದು ಇಂಡಿಯಾಕ್ಕೆ ಸೇರಿಸಿಕೊಂಡುಬಿಟ್ಟರು. ಈಗ "ಹಿಂದಿನ ಬಾಗಿಲ"ನ್ನು ಹೊಂದುವ ಕಾರ್ಯವು ಆರಂಭವಾದಂತೆಯೇ.

1898ರಲ್ಲಿ ಫ್ರಾನ್ಸು ಚೀಣ ಸರ್ಕಾರದಿಂದ ಯೂನಾನನ್ನು ಪಡೆದುಕೊಂಡಿತು. ಇದಕ್ಕೆ ಉತ್ತರವನ್ನು ಬ್ರಿಟನ್ನು 1912ರಲ್ಲಿ ಕೊಟ್ಟಿತು. ಅಂದರೆ 'ಟಿಬೆಟ್ಟಿ'ನ ಮೇಲೆ ತಮ್ಮ ಸ್ವಾಮಿತ್ವವನ್ನು ಒಪ್ಪಿಕೊಳ್ಳುವಂತೆ ರಷ್ಯವನ್ನೂ ಒತ್ತಾಯಮಾಡಿ ಅದು ಒಪ್ಪುವಂತೆ ಮಾಡಿತು ಈ ಸಮಯದಲ್ಲಿ ಈ ಸ್ವಯಂ ರಷ್ಯವೇ ಉತ್ತರದ ಕಡೆಯಿಂದ ಚೀಣದ ಕಡೆ ನುಗ್ಗಲಾರಂಭಿಸಿ, ಮಂಗೋಲಿಯದ ವಿಶಾಲವಾದ ಪ್ರದೇಶವನ್ನು ವಶಮಾಡಿಕೊಂಡು ಚೀಣದಲ್ಲಿ ತನ್ನ ಆಡಳಿತವನ್ನು ಬಲಮಾಡಲಾರಂಭಿಸಿತು 1913ರಲ್ಲಿ ಚೀಣವು ರಷ್ಯಕ್ಕೆ ಈ ಭಾಗದ ವಿಶೇಷ ಅಧಿಕಾರವನ್ನು ಕೊಟ್ಟಿತು. ರಷ್ಯ ಚೀಣ ಒಪ್ಪಂದದಂತೆ ಮಂಗೋಲಿಯದಲ್ಲಿ ಸ್ವತಂತ್ರ ಆಡಳಿತವನ್ನು ಒಪ್ಪಿಕೊಂಡಿತು.

ರಷ್ಯದ ಕ್ರಾಂತಿಯ ನಂತರ 1919 ಮತ್ತು 1924ರಲ್ಲಿ ರಷ್ಯಾದ ಸೈನ್ಯಗಳು ಮಂಗೋಲಿಯದ ಪ್ರಜಾಧಿಕಾರವನ್ನು ಸ್ಥಾಪಿಸುವ ಬಗ್ಗೆ ಬಹಳ ಸಹಾಯಮಾಡಿ ಆ ದೇಶದೊಡನೆ ಮೈತ್ರಿಯನ್ನು ಬೆಳೆಸಿಕೊಂಡಿತು. ಈ ರೀತಿ ಮಂಗೋಲಿಯದ ಸ್ವಾತಂತ್ರ್ಯವನ ಚೀನ ರಷ್ಯಾಗಳೆರಡೂ ಒಪ್ಪಿಕೊಂಡುವು. ಈಗಲೂ ಉತ್ತರ ಪಶ್ಚಿಮದ ಕಡೆ ಹಿಂಬಾಗಿಲು ಇದ್ದು ಒಂದು ದೊಡ್ಡ ರಸ್ತೆಯು ಗೋಬಿ ಮರುಭೂಮಿಯ ಪಕ್ಕದಿಂದ ಹಾಯ್ದು ಚೀಣಾದ ಕಡೆ ಹೋಗುವುದು. ಈಗಲೂ ಚೀಣದ ಸಹಾಯಕ್ಕಾಗಿ ರಷ್ಯವು ಉತ್ತರದ ರಸ್ತೆಯಿಂದಲೂ, ಫ್ರಾನ್ಸಿನ ಸಹಾಯವು ಇಂಡೋ ಚೀಣದ ಮಾರ್ಗವಾಗಿಯೂ, ಬ್ರಿಟಿಷರ ಸಹಾಯವು ಬರ್ಮಾದ ರಸ್ತೆಯ ಮೂಲಕವೂ ಒದಗುತ್ತಿದೆ. ಈ ರಸ್ತೆಯ ನಿರ್ಮಾಣವು 1 ಲಕ್ಷ 80 ಸಾವಿರ ಚೀಣದ ಸ್ವಯಂಸೇವಕರ ಮೆಹನತ್ತಿನಿಂದ ಆಯಿತು. ಇದು ಚೀಣದ ಕಡೆ ಕೋಮಿಂಗ್ ಎಂಬಲ್ಲಿಂದ ಆರಂಭವಾಗುತ್ತದೆ. ಈ ಪ್ರದೇಶವು ರಂಗೂನಿನಿಂದ ಕೇವಲ 1350 ಮೈಲು ದೂರದಲ್ಲಿದೆ.

ಪೂರ್ವ ಚೀಣದ ಮೇಲೆ ಜಪಾನಿನ ಧಾಳಿಯಿಂದಲೂ ಮತ್ತು ಶಾಂಘಾಯಿ, ಕ್ಯಾಂಟನ ಆದಿ ವ್ಯಾಪಾರ ಕೇಂದ್ರಗಳ ಮತ್ತು ರೇವು ಪಟ್ಟಣಗಳ ಮೇಲೆ ಬಾಂಬು ಹಾಕಿ ನಾಶಪಡಿಸಿದುದರಿಂದಲೂ, ಇವುಗಳಿಂದ ಅನೇಕರು ಹೊರಟು ಪಶ್ಚಿಮ ಮತ್ತು ದಕ್ಷಿಣ ಚೀಣದ ಕಡೆ ಹೋಗಿರುತ್ತಾರೆ. ಜಗತ್ತಿನ ಇತಿಹಾಸದಲ್ಲಿ ತಮ್ಮ ದೇಶವನ್ನು ತ್ಯಜಿಸಿಹೋದ ಉದಾಹರಣೆಗಳಲ್ಲಿ ಇದು ಅತ್ಯಂತ ದೊಡ್ಡದು. ಲಕ್ಷಾಂತರ ಜನರು ಊರುಬಿಟ್ಟು ಹೋಗಿರುವವರಲ್ಲದೆ ಸುಮಾರು 300 ಕಾರ್ಖಾನೆಗಳೂ ಸಹ ನಿರ್ನಾಮವಾಗಿರುವುವು. ಚೀಣದ ದಕ್ಷಿಣ ಭಾಗವು ಹೊಸದೊಂದು ಕ್ಷೇತ್ರವಾಗಿ ಹೊಸದಾಗಿ ಬಂದಿರುವವರೆಲ್ಲರಿಗೂ ಆಶ್ರಯಕೊಟ್ಟಿದೆ. ಇಲ್ಲಿ ಖನಿಜಗಳೂ ಬೇಕಾದಷ್ಟಿದ್ದು, ಭೂಮಿಯೂ ಬಹಳ ಫಲವತ್ತಾಗಿದೆ, ಹವೆಯೂ ಹಿತಕರವಾಗಿದೆ. ತಾಂಬ್ರ, ಕಲ್ಲಿದ್ದಲು, ಚಿನ್ನ, ಬೆಳ್ಳಿ, ಉಪ್ಪು, ಗಂಧಕ, ಪಾದರಸ ಇವು ಬಹಳವಾಗಿ ದೊರೆಯುವುವು. ರೇಶ್ಮೆ, ಟೀ, ಸಕ್ಕರೆ, ಜೂಟ್ ಹತ್ತಿಯೂ ಉತ್ತಮವಾದ ಮರಗಳೂ ಆಗುತ್ತವೆ.

ಭವಿಷ್ಯದಲ್ಲಿ ಹೊಸ ಸಂಸ್ಕೃತಿಯ ಪ್ರಭಾವವು ಈ ಹೊಸ ಕೇಂದ್ರದ ಮೇಲೆ ಯಾವ ರೀತಿ ಆಗುವುದು? ಈ ಪ್ರಶ್ನೆಯ ಉತ್ತರವು ಸುಲಭವಲ್ಲ. ಇದು ಅನೇಕ ವಿಷಯಗಳನ್ನವಲಂಬಿಸಿರುವುದು ಉದಾ:- ಚೀಣದ ಅಂತರ್ಗತ ಶಕ್ತಿ, ಚೀಣೀಯರಲ್ಲಿನ ಪರಸ್ಪರ ಏಕಮತ್ಯ, ಹೊರಗಿನವರ ಕಾರ್ಬಾರಿನ ಪ್ರಭಾವ, ಆಡಳಿತದ ಭದ್ರತೆ, ಚೀಣಾ ಜಪಾನ್ ಯುದ್ಧದ ಕೊನೇ ತೀರ್ಮಾನ ಇತ್ಯಾದಿಗಳು. ಮುಖ್ಯವಾದ ಇನ್ನೊಂದು ವಿಚಾರವೇನೆಂದರೆ ದೇಶದೊಳಗೆ ಪ್ರವೇಶಿಸುವ ಮಾರ್ಗಗಳು.

ಚೀಣದ ಕಡೆ ಹೋಗುತ್ತಿರುವ ರಸ್ತೆಯು ಕ್ರಮೇಣ ವಿಶಾಲವಾಗಿಯೂ ಒಂದೇ ಸಮಟ್ಟವುಳ್ಳದ್ದಾಗಿಯೂ ಆಗುತ್ತಿದೆ. ಭಾರತದೊಡನೆ ಸಹ ಒಂದು ರಸ್ತೆಯಾಗಬಹುದು! ಇದೊಂದರಿಂದಲೇ ಚೀಣ ಬ್ರಿಟಿಷ್ ಸಂಬಂಧದ ವಿಚಾರಕ್ಕೆ ಅವಕಾಶವಾಗುವುದು. ಆದರೆ ಈ ರಸ್ತೆಯ ನಿರ್ಮಾಣವು ಬ್ರಿಟಿಷರಿಗೆ ಸಾಧ್ಯವೇ ಇಲ್ಲವೇ? ಸಾಧ್ಯವಾದರೆ ಅವರು ಅದನ್ನು ವ್ಯಾಪಾರಕ್ಕೆ ಉಪಯೋಗಿಸುವರೇ ಇವೆಲ್ಲ ಭಾರತವು ಅನುಸರಿಸುವ ನೀತಿಯನ್ನವಲಂಬಿಸಿದೆ ಭಾರತೀಯರಿಗೆ ಸ್ವರಾಜ್ಯಬಂದರೆ ಅವರು ಚೀಣದೊಡನೆ ಯಾವ ರೀತಿಯ ಸಂಬಂಧವನ್ನಿಟ್ಟುಕೊಳ್ಳಬಹುದೆಂಬುದನ್ನು ನಿರ್ಧರಿಸಬಲ್ಲವರಾಗುತ್ತಾರೆ. ಆದುದರಿಂದ ಈ ವಿಚಾರವು ಭಾರತಕ್ಕೆ ಬಹಳ ಮಹತ್ವದ್ದಾಗಿರುವುದು.

ಇಂದು ಜಗತ್ತಿನ ಯಾವ ಮೂಲೆಯಲ್ಲಿ ಏನೇ ನಡೆಯಲಿ, ಅದು ದೂರದೂರದ ದೇಶಗಳ ಮೇಲೆಲ್ಲ ತನ್ನ ಪರಿಣಾಮವನ್ನುಂಟುಮಾಡಿಯೇ ಮಾಡುತ್ತದೆ. ಇಂಗ್ಲೆಂಡು ಏಷ್ಯದಲ್ಲಿ ಅನುಸರಿಸುವ ನೀತಿಯು ಯೂರೋಪು ಮತ್ತು ದೂರಪ್ರಾಚ್ಯದ ಸಿದ್ಧತೆಗಳ ಮೇಲೆ ಅವಲಂಬಿಸಿರುವುದು. ಇತ್ತೀಚೆಗೆ ಕೆಂಪುಬಣ್ಣದವರ ಬೆಲೆಯು ಪೂರ್ವದಲ್ಲಿ ಕಡಿಮೆಯಾಗುತ್ತ ಬಂದಿದೆ. ಕಾಂಗೋನಲ್ಲಿ ಬೆಲ್ಜಿಯಂನ ಕಾರ್ಯರೀತಿ, ಭಾರತದಲ್ಲಿ ಸಿಪಾಯಿ ದಂಗೆ, ನಂತರ ಅಮೃತಸರ ಇವುಗಳಲ್ಲಿ ಬ್ರಿಟಿಷರು ಅನುಸರಿಸಿದ ನೀತಿಯು, ಜಪಾನಿನವರು ನಾನ್ಕಿಂಗಿನಲ್ಲಿ ಅನುಸರಿಸಿದ ನೀತಿಗಿಂತ ಉತ್ತಮವಾಗಿರಲಿಲ್ಲ. ಬಿಳಿಯರಲ್ಲಿ ಅಂತಃಕಲಹವುಂಟಾಗಿದೆ. ಈ ಜಗಳದಲ್ಲಿ ಅವರು ಪೂರ್ವದೇಶಗಳಲ್ಲಿರುವ ಸೈನ್ಯವನ್ನು ಕರೆಸಿಕೊಳ್ಳುವುದು ಅನಿವಾರ್ಯ. ಪೂರ್ವದೇಶಗಳ ಜನರಲ್ಲಿ ಅಪೂರ್ವ ಜಾಗೃತಿಯುಂಟಾಗಿದೆ.

ಪುಟ ೧೭ರಲ್ಲಿ

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED

ಅಂತರ್ರಾಷ್ಟ್ರೀಯ ಗಡಿಬಿಡಿಯಲ್ಲಿ ಚೇಂಬರ್ಲೇನರು

ಅವರ ಕುಮಾರಿ ಕಾರ್ಯದರ್ಶಿಯೊಡನೆ ಸಂಭಾಷಣೆ.

(ಬ್ರಿಟಿಷ್ ಪ್ರಧಾನರಾದ ಮಿ. ಚೇಂಬರ್ಲೇನರು ಇಂದು ಬ್ರಿಟಿಷ್ ವಿರೋಧಿ ಮತ್ತು ಅಂತರ್ರಾಷ್ಟ್ರೀಯ ಗಡಿಬಿಡಿಯಲ್ಲಿ ಬಹಳವಾಗಿ ಸೋತಾಡುತ್ತಿದ್ದಾರೆ. ಈ ಲೇಖನದಲ್ಲಿ ಅವರೂ ಅವರ ಕಾರ್ಯದರ್ಶಿಯೂ ಮಾತನಾಡಿರುವಂತೆ ಒಂದು ಆಂಗ್ಲ ಲೇಖನದಲ್ಲಿ ಬಂದಿದ್ದ ವರ್ಣನೆಯಿದೆ.)

ತಮ್ಮ ಕೊಡೆಯನ್ನು ಒಂದು ಕಡೆ ಇಟ್ಟು ಚೇಂಬರ್ಲೇನರು ತಮ್ಮ ಕುಮಾರಿ ಕಾರ್ಯದರ್ಶಿಯ ಬಳಿ ಹೋಗುವರು.

ಚೇಂ—ಕುಮಾರಿ! ಕೆಲಸಮಾಡಬೇಕಾಗಿದೆ, ಕೆಲಸ. ಘಟನೆಗಳ ವೇಗದಿಂದ ನಾವು ಘಾಬರಿಯಾಗಿಹೋಗಿರುವೆನೆಂದು ಯಾರಿಗೂ ತಿಳಿಯಲವಕಾಶವಿರಕೂಡದು. ಹೂಂ, ನಾನು ಹಿಂದೆ ಏನೋ ಹೇಳುತ್ತಿದ್ದೆನಲ್ಲ, ಏನದು?

ಕಾರ್ಯದರ್ಶಿ—(ನೋಟ್-ಬುಕ್ಕನ್ನು ನೋಡಿ)ಹಿಂದೆ ತಾವು ಹೇಳಿದ್ದುದೇನೆಂದರೆ, ಸರಕಾರವು ತಿರಸ್ಕಾರಮಾಡಿ,......

ಚೇಂ—ಹೌದು, ಹೌದು, ಈಗ ನೆನಪಾಯಿತು. ನಮ್ಮ ಸರಕಾರವು ಅಬಿಸೀನಿಯವನ್ನು ಸ್ವೀಕಾರಮಾಡುವುದಿಲ್ಲ. ಅಲ್ಲದೆ ಅದಕ್ಕೆ ಈ ರೀತಿ ವಿಶ್ವಾಸವಿದೆ, ಏನಂದರೆ,......ಹೂಂ—ಏನು?

ಕಾರ್ಯ—ಇದನ್ನೇ ನಾನು ತಮಗೆ ತಿಳಿಸಬೇಕಾಗಿರುವುದು, ಹಿಂದೆ ಅಬಿಸೀನಿಯದ ವಿಚಾರದಲ್ಲಿ ಬರಸದೆ ಇದ್ದ ಕೆಲವು...

ಚೇಂ—ಹೌದು, ಹೌದು, ಆಸ್ಟ್ರಿಯವಲ್ಲವೆ! ಆಸ್ಟ್ರಿಯ, ನಾನು ಯೋಚಿಸುತ್ತಿದ್ದುದೇನೆಂದರೆ ನೀನು ಅದೇನು ಆಸ್ಟ್ರಿಯ ಎಂದೋ ಏನೋ!

ಕಾರ್ಯ—ಸ್ವಾಮಿ, ಸ್ವಲ್ಪ ನೆನಪುಮಾಡಿಕೊಳ್ಳಿ. ಹಿಂದಿನ ಸಾರಾಂಶವು ಹೇಳಿದ್ದುದು ಜೆಕೋಸ್ಲೋವೇಕಿಯಾದ ಸುದ್ದಿಯಲ್ಲವೆ?

ಚೇಂ—(ಕೈಗಳನ್ನು ಹಿಸುಕಿಕೊಳ್ಳುತ್ತ) ಹೌದು, ಹೌದು, ಸಮಯದಲ್ಲಿ ನೆನಪುಕೊಟ್ಟೆ.(ಸಂವೇದನಾಪೂರ್ಣವಾಗಿ ನಗುತ್ತ) ಘಟನಾವಳಿಗಳಿಂದ ನಾವು ಹೆದರಿರುವೆವೆಂದು ಅನೇಕರು ನಮ್ಮನ್ನು ಏನೇನೋ ಅನ್ನುತ್ತಿರುವರಲ್ಲವೆ? ಸುಡೆಟನ್ ಸಂಬಂಧದಲ್ಲಂತೂ ನಾನಾಗಲೇ ಕೆಲಸಕ್ಕೆ ಆರಂಭಿಸಿಯೇ ಇರುವೆನು.

ಕಾರ್ಯ—ಹೌದು, ನಾವು ಜೆಕ್‌ನ ವಿಚಾರದಲ್ಲಿ ನೋಟ್ ಮಾಡಿಕೊಂಡಿದ್ದೇವೆ.

ಚೇಂ—ಹೌದು, ನಾವು ಅದರ ಮಧ್ಯದಲ್ಲಿದ್ದೆವು. ಎಲ್ಲಿ ಓದು ನೋಡೋಣ.

ಕಾರ್ಯ—ಬ್ರಿಟಿಷ್ ಸರಕಾರವು...

ಚೇಂ—(ಮುಗಿಸುತ್ತಾ) 'ಸರಕಾರವು ಈ ಸೈನ್ಯವನ್ನು ಖಾಯಂ ಆಗಿ ಇಡಬಯಸುತ್ತದೆ.'........

ಕಾರ್ಯ—ಮೆಮೆಲ್ ವಿಚಾರದಲ್ಲಿ ಸಹ ನಮ್ಮ ವಿರೋಧವುಂಟೇನು?

ಚೇಂ—ಮೆಮೆಲ್, ಏನು, ಮೆಮೆಲ್ ಹೌದು, ನಿಸ್ಸಂದೇಹವಾಗಿ ನಾವು ವಿರೋಧಿಗಳೇ. (ಹಣೆ ಸವರಿಕೊಂಡು) ಈ ಹಾಳುಜನರು ನಮ್ಮನ್ನು ಒಂದು ವಾರ ಸಹ ಶಾಂತಿಯಿಂದ ಇರಗೊಡರಲ್ಲ!

ಕಾರ್ಯ—ಆ ಮೇಲೆ ಆಲ್ಬೇನಿಯವೋ!

ಚೇಂ—ಅಯ್ಯಯ್ಯೋ! ಎಲ್ಲ ಒಂದೇ ಸಾರಿ ತಲೆಯ ಮೇಲೆ ಬಂತಲ್ಲಪ್ಪ. ನೋಡಿ ನೀವೆಲ್ಲ ಸೇರಿ, ಈ ರೀತಿ ನನಗೆ ಗಡಿಬಿಡಿ ಮಾಡಿದರೆ, ನನಗೆ ದಾರಿಯೇ ತೋರದಂತಾಗುವುದು.

ಕಾರ್ಯ—ನನ್ನಲ್ಲಿ ಬೈಲೆರಿಕ್ ಸಂಬಂಧದಲ್ಲಿ ಸಹ ಒಂದು 'ನೋಟ್' ಇದೆ.

ಚೇಂ—(ಸಂತೋಷದಿಂದ) ನಾವು ಇದನ್ನು ನೆನೆಯಲೇ ಏಕೆ ಯೋಚಿಸಲಿಲ್ಲ, ಸರಿ, ದುರ್ಭಿಕ್ಷ ಜಾಗದಲ್ಲಿ ಮೆಜೋರಿಕ್ ಎಂದು ಬದಲಾಯಿಸಿ (ಟೆಲಿಫೋನ್‌ನಲ್ಲಿ ಶಬ್ದ) ಹಲೋ, ಏನು, ಈಗ ಯಾರ ಸರ್ತಿಯಪ್ಪ, ಯಾರು ಕುಮಾರಿಯೋ, ಸರಿ.

ಕಾರ್ಯ—ಹೌದು, ಹೌದು.

ಚೇಂ—'ಬ್ರಿಟಿಷ್ ವಿರೋಧ'ಎಂಬ 24 ಪ್ರತಿಗಳಲ್ಲಿಯೂ 'ದೇಶ'ವೆಂಬ ಜಾಗದಲ್ಲಿ ಖಾಲಿಬಿಟ್ಟು ಟೈಪ್ ಮಾಡಿರುವಿರಲ್ಲ...

ಕಾರ್ಯ—ಏನದು? ತಾವು ಎಲ್ಲಿಯಾದರೂ ಹೋಗುವರಿದ್ದೀರೇನು?

ಚೇಂಬರ್ಲೇನರು—ಇಲ್ಲ, ಇಲ್ಲ; ಎಲ್ಲಿಗೂ ಇಲ್ಲ. ಸ್ವಲ್ಪ ಹಾಗೇ......

(ಹಾಸ್ಯರಸದ ಈ ಪ್ರಹಸನಕ್ಕೆ ಅಂತರ್ರಾಷ್ಟ್ರೀಯ ರಾಜಕೀಯದೊಡನೆ ಸಂಬಂಧವಿದೆ. ಇದನ್ನು ಸ್ವಲ್ಪ ಎಚ್ಚರಿಕೆಯಿಂದ ತಿಳಿಯಬೇಕಾಗುವುದು. ಇದರಲ್ಲಿ ಚೇಂಬರ್ಲೇನರ ಚಂಚಲ ಬುದ್ಧಿಯು ಒಡೆದು ಕಾಣುತ್ತದೆ.)

ಹೊಗೆಸೊಪ್ಪಿನ ಕಾನೂನು.

ಈ ಕೆಳಗಿನ ಪ್ರಕಟಣೆಯು ಪ್ರಕಟಣಾ ಖಾತೆಯ ಮಂತ್ರಿಯವರಿಂದ ಪ್ರಕಟಗೊಳಿಸಲ್ಪಟ್ಟಿದೆ:—

ನಂಬ್ರ 65ನೇ ಪ್ರಕಟಣೆ.

ಫೋರ್ಟ್ ಸ್ಯಾಂಟ್ ಜಾರ್ಜ್, 1939ನೇ ಇಸವಿ ಜೂನ್ 21ನೇ ತಾರೀಖು.

1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅದರ ವ್ಯಾಪಾರದ ಬಗ್ಗೆ ಲೈಸನ್ಸು ಕೊಡುವ ಕುರಿತ) ಆಕ್ಟು (1939ನೇ ಇಸವಿಯ 8ನೇ ನಂಬರು ಮದ್ರಾಸ್ ಆಕ್ಟು)—

1939ನೇ ಇಸವಿಯ ಜೂನ್ 21ನೇ ತಾರೀಖಿನ ನಂ 63ನೇ ಪ್ರಕಟಣೆಯಲ್ಲಿ, 1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅದರ ವ್ಯಾಪಾರದ ಬಗ್ಗೆ ಲೈಸೆನ್ಸು ಕೊಡುವ ಕುರಿತ) ಆಕ್ಟಿನ ನಿಬಂಧನೆಗಳ ಮೇರೆಗೆ ಲೈಸೆನ್ಸು ಕೊಡಲ್ಪಡಬೇಕೆಂದು ಅಪೇಕ್ಷಿಸುವ ಮನುಷ್ಯರಿಂದ ಕೊಡಲ್ಪಡಬೇಕಾದ ಸಮಾಚಾರದ ಕುರಿತು ಒಂದು ಫಾರ್ಮ್ ಯಾನೆ ನಮೂನೆಯು ನಿರ್ದೇಶಿಸಲ್ಪಟ್ಟಿತ್ತು. ಇದು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಚಿಲ್ಲರೆ ವ್ಯಾಪಾರಿಗಳಿಗೆ ಸಹಾ ಲಾಗೂ ಆಗುತ್ತದೆಂದೂ, ಈ ಫಾರ್ಮಿನಲ್ಲಿ ಸಮಾಚಾರವು ಸದರಿ ಆಕ್ಟಿನ 3 (1) ನೇ ಪ್ರಕರಣದಿಂದ ಇರಾಧಿಸಲ್ಪಟ್ಟ ಮೇರೆಗೆ ಯಾವುದಾದರೂ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಚಿಲ್ಲರೆಯಾಗಿ ಮಾರಾಟಮಾಡಲು ಯಾ ಮಾರಾಟಮಾಡುವ ಬಗ್ಗೆ ಪ್ರದರ್ಶಿಸಲು ಅಥವಾ ಯಾವುದಾದರೂ ನಮೂನೆಯಲ್ಲಿ ಹೊಗೆಸೊಪ್ಪನ್ನು ರಖಮಾಗಿ ಮಾರಾಟಮಾಡಲು ಅಥವಾ ಅನ್ಯಥಾ ಒಬ್ಬ ರಖಂ ವ್ಯಾಪಾರಿಯಾಗಿ, ತಯಾರಿಸುವವನಾಗಿ ದಲಾಲಿಯಾಗಿ ಯಾ ಕಮಿಷನ್ ಏಜಂಟನಾಗಿ ವ್ಯಾಪಾರ ನಡೆಸಲು ಅಪೇಕ್ಷಿಸುವ ಯಾವನೊಬ್ಬ ಮನುಷ್ಯನಿಂದ ಕೊಡಲ್ಪಡತಕ್ಕದ್ದೆಂದೂ ಇದರ ಮೂಲಕ ವಾಗಿ ತಿಳಿಯಪಡಿಸಲಾಗುತ್ತಿದೆ.

ಬಿ. ಜಿ. ಹೊಲ್ಡ್ಸ್‌ವರ್ತ್,
ಗವರ್ನಮೆಂಟ್ ಸೆಕ್ರೆಟರಿ.

ಪ್ರಕಟಣೆ.

ದಿ ಕೆನರಾ ಬಿಲ್ಲವರ ಅನಾಥ ಸಂಘ ಮುಂಬಾಯಿ

ಈ ರೆಜಿಸ್ಟರ್ ಆದ ಸಂಘದಲ್ಲಿ 1938ನೇ ಇಸ್ವಿಯ ಸಹಾಯಕ ಕಾರ್ಯದರ್ಶಿಯಾಗಿಯೂ 1939ನೇ ಇಸ್ವಿಯ ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟ ಹೆಜಮಾಡಿ ದೊಡ್ಡಮನೆ ಶೀನ ಎ. ಕೋಟ್ಯಾನರು ಸ್ವದೇಶದಲ್ಲಿ ಮೇ ತಿಂಗಳಲ್ಲಿ ಅಕಾಲ ಮರಣಕ್ಕೆ ತುತ್ತಾದುದರಿಂದ ಸಂಘದ ಕಾರ್ಯನಿರ್ವಾಹಕ ಸಮಿತಿಯವರು ಮೃತರ ಕುಟುಂಬಿಕರೊಡನೆ ದುಃಖಕ್ಕೆ ಭಾಗಿಗಳಾಗಿರುವೆವು. ಮಾತ್ರವಲ್ಲದೆ ಮೃತರ ಆತ್ಮಕ್ಕೆ ಅಗಾಧ ಲೀಲಾಮಯನು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸಿಕೊಳ್ಳುವೆವು.

ಈ ಮೂಲಕ ರೆಜಿಸ್ಟರ್ ಆದ ಸಂಘದ ಸಾರ್ವಜನಿಕ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ:-ನಮ್ಮ ಸಂಸ್ಥೆಯಲ್ಲಿ 1938ನೇ ಇಸ್ವಿಯ ಕೋಶಾಧಿಕಾರಿಯು ಸ್ವಾರ್ಥತನದಿಂದಲೂ, ವಿಶ್ವಾಸಘಾತುಕದಿಂದಲೂ, ಕಾರ್ಯ ನಿರ್ವಾಹಕ ಸಮಿತಿಯವರನ್ನು ವಂಚಿಸಿದುದರಿಂದ ಅಧ್ಯಕ್ಷರಾದ ಮೈ. ಮುತ್ತಪ್ಪನವರು ಕಮಿಟಿ ಸದಸ್ಯರಿಂದೊಡಗೂಡಿ ಕರೆದ ಕಮಿಟಿ ಮೀಟಿಂಗುಗಳಿಗೆ ಮತ್ತು ವಿಶೇಷ ಮಹಾಸಭೆಗೆ ಹಾಜರಾಗದೆ ಕಮಿಟಿಯವರಿಗೆ ಲೆಕ್ಕಪತ್ರಗಳನ್ನು ತೋರಿಸದೆ ಕೆಲವು ಸಂಗಡಿಗರೊಡನೆ ಈ ಸಂಘಕ್ಕೆ ಹಲವು ತರದ ಕಷ್ಟನಷ್ಟಗಳನ್ನು ತಂದೊಡ್ಡಿದರೂ ಮೆಂಬರರುಗಳ ಸಹಾನುಭೂತಿಯಿಂದ ಅವೆಲ್ಲವನ್ನು ತೃಣೀಕರಿಸಿ ಸಮಾಜದ ಉನ್ನತಿಯ ಕಡೆಗೂ, ಸಂಘದ ಉದ್ದೇಶದ ಕಡೆಗೂ ದೃಷ್ಟಿಯಿಟ್ಟು ಯೋಗ್ಯರೀತಿಯಲ್ಲಿ ಸಂಘದ ಕಾರ್ಯಗಳನ್ನು ನೆರವೇರಿಸುತ್ತ ಇರುವೆವು. ಇಂಥಾ ಸ್ವಾರ್ಥಿಗಳ ಅಭಿಪ್ರಾಯವನ್ನು ವಿಶೇಷ ಮಹಾಸಭೆಗೆ ಬಂದು ತೀರ್ಮಾನಿಸಿಕೊಳ್ಳಬಹುದೆಂದು **ಇದೇ ಜುಲಾಯಿ ತಿಂಗಳ ತಾ. 23ನೇ ಆದಿತ್ಯವಾರ ಹಗಲು ಗಂಟೆ 2-30ಕ್ಕೆ** *(S. T.)* ಸರಿಯಾಗಿ ಈ ಸಂಘದ ಒಂದು ವಿಶೇಷ ಮಹಾಸಭೆಯನ್ನು 80ನೇ ಮಹಾತ್ಮಾ ಗಾಂಧಿರಸ್ತೆಯ 1ನೇ ಮಾಳಿಗೆಯಲ್ಲಿ ಜರಗಿಸುವೆವು, ಅಂದು ಈ ಸಂಸ್ಥೆಯ ಶ್ರೇಯೋಭಿವೃದ್ಧಿಯನ್ನು ಬಯಸುವ ಪ್ರತಿಯೊಬ್ಬ ಸದಸ್ಯರೂ ತಕ್ಕ ಸಮಯಕ್ಕೆ ಬಂದು ಅಂದಿನ ಅಧ್ಯಕ್ಷರ ಅನುಮತಿ ಮೇರೆಗೆ ತಮ್ಮ ವಿಷಯಗಳನ್ನು ತಿಳಿಸಿ, ಯೋಗ್ಯ ಕಂಡ ವಿಷಯಗಳನ್ನು ಬಹುಮತ ಪ್ರಕಾರ ತೀರ್ಮಾನಿಸಿಕೊಳ್ಳಬಹುದು.

ವಿ. ಸೂ:—ಅಂದಿನ ಸಭೆಗೆ ಹಾಜರಾಗದ ಮೆಂಬರರ ತಕ್ಷೀರು ಮುಂದಕ್ಕೆ ಈ ಸಂಘಕ್ಕೆ ಲಗ್ತೇ ಕಂಸಲಿಕ್ಕಿಲ್ಲ.

ಕಾರ್ಯನಿರ್ವಾಹಕ ಸಮಿತಿಯ ಅನುಮತಿ ಮೇರೆಗೆ-

ಎರ್ಮಾಳ ಗುರುವ ಬಂಗೇರ,
ಗೌರವ ಕಾರ್ಯದರ್ಶಿ.

ಕುಂದಾಪುರದಲ್ಲಿ ನಮ್ಮ ಏಜಂಟರು
ಶ್ರೀ. ಕೆ. ರಾಘವೇಂದ್ರ ಭಟ್,
ಸಚ್ಚಿದಾನಂದ ಸ್ಟೋರ್ಸ್

ಮೂಲವ್ಯಾಧಿಗೆ

ವಿಶೇಷ ಗುಣಕಾರಿ.
ಮಹಾತ್ಮರವರ ಪ್ರಸಾದ
ಆಶ್ಚರ್ಯಕರವಾದ ಔಷಧಿ

ಸಾಮಾನ್ಯ ಅಥವಾ ರಕ್ತಸ್ರಾವ, ಮೊಳೆ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.

ಅರ್ಶಮಾರ

ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿಕೆ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುತ್ತದೆ. ಸಾವಿರಾರು ಜನರಿಂದ ಶಿಫಾರಸು ಪಡೆದಿರುತ್ತದೆ.

೧.೫ ಕಂಡುಬಾರದಿದ್ದಲ್ಲಿ ಹಣ ವಾಪಾಸು.

ಬೆಲೆ ರೂ. 2-0-0

ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

AROGYA SADANA
Durgadevi Street, BOMBAY 4

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 153/1939

N. ಚಂದಪ್ಪ ಶೆಟ್ಟಿ —ವಾದಿ
ಮತ್ತು

(1) ಕನ್ನಿಯಾನೆ ಪದ್ಮಾವತಿ ದೇಜಮ್ಮ ಹೆಂಗ್ಸಿನ ಮೊಮ್ಮಗಳು, (2) ಗುಮ್ಮಡ್ಡ ಶೆಟ್ಟಿ—1ನೇ ಪ್ರತಿವಾದಿಯ ಮಗ, (3) ದಮ್ಮು ಹೆಗ್ಗಡ್ತಿ, (4) ಲಕ್ಷ್ಮೀ ಹೆಗ್ಗಡ್ತಿ, (5) ಅಪ್ಪಿ ಹೆಗ್ಗಡ್ತಿ, (6) ಕೋಸಮ್ಮ ಹೆಗ್ಗಡ್ತಿ, (7) ಮುತ್ತಕ್ಕ ಹೆಗ್ಗಡ್ತಿ. ಇವರು ಮಂಜಮ್ಮ ಹೆಗ್ಗಡ್ತಿ ಮಕ್ಕಳು. (8) ಪದ್ಮಯ್ಯ ಹೆಗ್ಡೆ 3ನೇ ಪ್ರತಿವಾದಿಯ ಮಗ, (9) ವೆಂಕಪ್ಪ ಹೆಗ್ಡೆ 4ನೇ ಪ್ರತಿವಾದಿಯ ಮಗ, ವಕೀಲ್ (10) ಮೋನಪ್ಪ ಹೆಗ್ಡೆ ಬುಕ್ಕಿ ಹೆಗ್ಗಡ್ತಿ ಮಗ.

1, 2ನೇ ಪ್ರತಿವಾದಿಗಳು ಕಾರ್ಕಳ ತಾಲೂಕು ತಿರ್ಕಾಡಿ ಗ್ರಾಮದಲ್ಲಿಯೂ 3, 4, 6, 8, 9, 10ನೇ ಪ್ರತಿವಾದಿಗಳು ಕಾರ್ಕಳ ಕಸಬಾ ಹಾವಂಜೆ ಎಂಬಲ್ಲಿಯೂ 5, 7ನೇ ಪ್ರತಿವಾದಿಗಳು ಮಾಳ್ವಾಡಿ ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ದಾವೆಯ 4, 6, 10ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

1ನೇ ಪ್ರತಿವಾದಿಯ ಅಜ್ಜಿ ಮೃತಪಟ್ಟ ದೇಜಮ್ಮಳು ಬಂಟ್ವಾಳ ಶೇಕ್ ಅಬ್ದುಲ್ಲಾ ಸಾಹೇಬರಿಗೆ ತಾ. 11-7-1917ರಲ್ಲು ರೂಪಾಯಿ 2300ಕ್ಕೆ ಬರಕೊಟ್ಟ ತೋರಮಾ ದಸ್ತಾವೇಜು ವ ತಾ. 1-12-1919ರಲ್ಲು ಬರಕೊಟ್ಟ ರೂಪಾಯಿ 250ರ ಗೇಣಿ ದಸ್ತಾವೇಜು ಕೂಡಾ 2 ದಸ್ತಾವೇಜುಗಳ ಹಕ್ಕನ್ನು ತಾ. 31-8-35ರಲ್ಲು ಸದ್ರಿ ಅಬ್ದುಲ್ಲಾ ಸಾಹೇಬರು ವಾದಿಗೆ ಬರಕೊಟ್ಟ ಟ್ರಾನ್ಸ್‌ಫರ್ ಪ್ರಕಾರ ಬಾಕಿ ಒಟ್ಟು ರೂಪಾಯಿ 2347-15-0ಕ್ಕೆ ವಾದಿಯು ಮಾಡಿದ ಸದ್ರಿ ದಾವೆಯು ತಾ. 7-8-1939ಕ್ಕೆ ಇಟ್ಟಿದೆ. ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ದಿವಸ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟ್ ಮುಂದೆ ಹಾಜರಾಗಿ ಅವರ ಆಕ್ಷೇಪಗಳನ್ನು ಹೇಳಿಕೊಳ್ಳತಕ್ಕದ್ದು ಎಂಬ ಸಂಗತಿ ಕೋರ್ಟ್ ಹುಕುಂ ಪ್ರಕಾರ ಈ ಮೂಲಕ ತಿಳಿಸಿಯದೆ.

H. K. Gopalakrishna Rau
and
K. Sadananda Hegde,
Pleaders for Plaintiff.

Karkal, 6-7-1939

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 30/1938
R. E.P.No. 805/1938
R.E.A.No 330/1939

ಶ್ರೀಮದ್ ರಘುಮಾನ್ಯತೀರ್ಥ ಸ್ವಾಮಿಗಳು
ಸಹಾ ಅರ್ಜಿದಾರರು—

ಭಾಗೀರಥಿ ಅಮ್ಮ, ಸಹಾ ಎದ್ರಿರು—

(1) ಭಾಗೀರಥಿ ಅಮ್ಮ ಮಂಗೋಣಿ ಗೋವಿಂದರಾಯರ ವಿಧವೆ

(2) ರಾಮಚಂದ್ರ, ಮಂಗೋಣಿ ಗೋವಿಂದರಾಯರ ಮಗ, ಉಡುಪಿ ತಾಲೂಕು ಫಲಿಮಾರು ಗ್ರಾಮದಲ್ಲಿಯವರು-ಎದ್ರಿರು

ಸದರಿ ಅಪ್ಲಿಕೇಶನಿಯಲ್ಲಿ ಎದ್ರಿರ ಸ್ಥಿರಾಸ್ತಿಗಳು ಏಲಂ ಕುರಿತು ಅರ್ಜಿದಾರರ ಕಡೆಯಿಂದ ದಾಖಲಾದ ಏಲಂ ಯಸ್ತಾರ ಪ್ರೈಫ್ಟ್ ಮಂಜೂರುಮಾಡುವರೆಯೂ ಸದರಿ ಆಸ್ತಿಗಳು ಏಲಂ ಸಮಯ 2ನೇ ಅರ್ಜಿದಾರಗೆ ಯಾ ಆತನ ಕಡೆ ವಕೀಲರಿಗೆ ಬಿಡ್‌ಮಾಡುವರೆ ವ ಏಲಮಿಗೆ ನಿತ್ತ ಹಣ Set off ಮಾಡುವರಿತ ಪರ್ಮಿಶನ್ ಕೇಳಿ ಕೊಟ್ಟ ಅರ್ಜಿಯ ಕುರಿತು ಕೂಡ ಆಕ್ಷೇಪವಿದ್ದರೆ ಎದ್ರಿರು ಸ್ವತಃ ಯಾ ವಕೀಲರ ದ್ವಾರ ತಾ. 3-8-1939ನೇ ದಿನ ಹಗಲು 10 ಘಂಟೆಗೆ ಈ ಕೋರ್ಟ್ ಮುಂದೆ ಹಾಜರಾಗಿ ಜ್ಯಾಹೀರ ಮಾಡತಕ್ಕದ್ದು. ಇಲ್ಲವಾದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು. ಎಂತ ಈ ಮೂಲಕ ತಿಳಿಸಲಾಗುತ್ತದೆ.

M. Mukunda Kamath,
ಅರ್ಜಿದಾರರ ಕಡೆ ವಕೀಲ.

ಕಾರ್ಕಳ, ತಾ. 6—7—1939.

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

THE CANARA BANKING CORPORATION LTD.

(Incorporated in British India)

ESTD: **1906**

ನವಯುಗ

ಉಡುಪಿ, ಗುರುವಾರ, ತಾ. ೧೩-೭-೩೯

ಚೀನಾಯುದ್ಧ

ಚೀನವೆಂದರೆ ಅಂಗೈ ಕುತ್ತು ಎಂಬಷ್ಟು ಲಗುಬಗೆಯಿಂದ ಜಪಾನರು ಧಾಳಿಯಾರಂಭಿಸಿ ಇದೇ ತಾ. 6ಕ್ಕೆ ಪೂರ್ತಿ ಎರಡು ವರುಷಗಳಾದವು. ಈ ಅವಧಿಯಲ್ಲಿ ಮಂಚೂರಿಯಾ ಮತ್ತು ಜೆಹೋಲ್ ಎಂಬೆರಡು ಪ್ರಾಂತಗಳು ಜಪಾನರ ವಶವಾದುವು. ಈ ರೀತಿ ಒಂದು ಪಕ್ಷಕ್ಕಾಗಿರುವ ಲಾಭ ಮತ್ತು ಇನ್ನೊಂದಕ್ಕಾಗಿರುವ ನಷ್ಟಕ್ಕಿಂತಲೂ ಇತ್ತಂಡದವರು ಈ ಅವಧಿಯಲ್ಲಿ ಕಲಿತುಕೊಂಡ ಪಾಠಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಸಲ್ಲಬೇಕಾಗಿದೆ. ಈ ವರೆಗಿನ ಯುದ್ಧದ ಪರಿಣಾಮವು ಜಪಾನರ ಆದಿಯ ನಿರೀಕ್ಷೆಗಿಂತ ತೀರ ಭಿನ್ನವಾದುದು; ಆದರೆ ಚೀನೀಯರ ಭರವಸೆಯು ಈ ತನಕ ಹುಸಿಯಾಗಲಿಲ್ಲ. ಯುದ್ಧವು ಹೀಗೆಯೇ ಮುಂದೊತ್ತಿದಲ್ಲಿ ಕಾಲಹೋದಂತೆ ಜಪಾನು ಕೈಗುಂದುತ್ತಾ ಹೋಗುವದೂ, ಚೀನವು ಒಂದಲ್ಲೊಂದು ರೀತಿಯಿಂದ ಕಡೆತನಕ ವಿರೋಧಿಸಲು ಶಕ್ತವಾಗಿಯೇ ಇರುವದೂ ಸಂಭವನೀಯ ಪರಿಸ್ಥಿತಿ. ಯುದ್ಧದಿಂದ ಚೀನಾ ಸಂಪಾದಿಸಿರುವ ಅಮೂಲ್ಯಲಾಭವೆಂದರೆ ಚೀನೀಯರ ಒಗ್ಗಟ್ಟು. ಮಾತೃಭೂಮಿಯ ಆಪತ್ಕಾಲದಲ್ಲಿ ತಮ್ಮ ಪಕ್ಷಪಂಥಗಳ ಭೇದವನ್ನು ಬದಿಗೊತ್ತಿ ಅವರೆಲ್ಲರೂ ಚಿಯಾಂಗ್ ಕೈಶೇಕರ ಧುರೀಣತ್ವದಲ್ಲಿ ಒಂದಾಗಿರುವರು. ದೇಶಾಭಿಮಾನದಿಂದ ವಿರೋಧಿಯ ಪ್ರಬಲ ಶಕ್ತಿಯನ್ನು ಕಡೆಗಣಿಸುವ ಅವರು ತಮ್ಮ ಭಿನ್ನಾಭಿಪ್ರಾಯಗಳನ್ನು ಆ ಬಲದಿಂದಲೇ ಮಾಯಮಾಡಿಕೊಂಡರು. ಚೀನದಲ್ಲಿ ಒಗ್ಗಟ್ಟನ್ನುಂಟುಮಾಡುವ ಸಲುವಾಗಿ ಯುದ್ಧ ಪೂರ್ವದಲ್ಲಿ ಚಿಯಾಂಗ್ ಕೈಶೇಕರು ಪಟ್ಟಿದ್ದ ಶ್ರಮವೆಷ್ಟಿತ್ತಲ್ಲಿ—ಎಲ್ಲವೂ ನೀರಲ್ಲಿಟ್ಟ ಹೋಮದಂತಾಗಿತ್ತು. ಜಪಾನ್ ಧಾಳಿಯ ಒಂದೆರಡು ವರುಷಗಳಿಗೆ ಮೊದಲೊಮ್ಮೆ ವಿರುದ್ಧ ಪಕ್ಷದ ಓರ್ವ ಸೇನಾನಿಯು ಮಾರ್ಶಲ್ ಚಿಯಾಂಗರನ್ನೇ ಸೆರೆಹಿಡಿದಿಡುವಷ್ಟು ಬೆಳೆದಿತ್ತು ಒಳ ವೈಷಮ್ಯ. ಆದರೆ ಇಂದು ಚೀನವು ಬೇರ್ಪಡಿಸಲಾಗದ ಶರಧಿಯಂತೆ ಭೋರ್ಗರೆಯುತ್ತಿದೆ. ಜಪಾನರು ಹೂಡಿದ ಭೇದೋಪಾಯಗಳೆಲ್ಲಾ ನಿಷ್ಫಲವಾಗಿವೆ.

ಈ ಯುದ್ಧಕ್ಕೆ ಕೊನೆಯೆಲ್ಲಿ? ಗೆಲ್ಲುವವರಾರು, ಸೋಲುವವರಾರು? ಎಂಬುದನ್ನು ಊಹಿಸುವದು ಕಷ್ಟ. ಆದರೆ ಚೀನೀಯರು ಪ್ರದರ್ಶಿಸಿದ-ಪ್ರದರ್ಶಿಸುತ್ತಿರುವ ಧೈರ್ಯ ಸಾಹಸಗಳು ಚರಿತ್ರಾರ್ಹವಿವೆ; ಸ್ಮರಣೀಯವಿವೆ. ಈ ಎರಡು ವರುಷಗಳಲ್ಲಿ ಅಂದಾಜು ಪ್ರಕಾರ ಕಡಿಮೆಯೆಂದರೆ ಹತ್ತು ಸಾವಿರ ಚೀನೀಯರು ಮಡಿದರು; ಅಷ್ಟೇ ಮಂದಿ ಘಾಯಗೊಂಡು ಅಂಗಹೀನರಾದರು. ಅವರ ಮನೆಮಠಗಳು ಭಸ್ಮೀಭೂತವಾದವು; ಪುರಾತನ ಕಟ್ಟಡಗಳು, ಕಲಾಭರಿತ ಕೃತಿಗಳು, ವಿದ್ಯಾಮಂದಿರಗಳು, ಸರಕಾರೀ ನಿಲಯಗಳು, ಹೆಚ್ಚೇನು—ಪ್ರಾಣಕ್ಕೆ ರಕ್ಷಣೆಯಾಗಬಲ್ಲ ನೂರು ಸಲಕರಣೆಗಳು ಜಪಾನ್ ಧಾಳಿಯಿಂದ ವಿನಾಶಹೊಂದಿದುವು. ಆದರೂ ಚೀನೀಯರ ದೇಶಾಭಿಮಾನ ನಷ್ಟಹೆಚ್ಚಿದಂತೆ ಪುಟವೇರುತ್ತಿದೆ. ವಿರೋಧಿಗಳನ್ನು ಗೆಲ್ಲಬೇಕೆಂಬ ಛಲ ಮತ್ತು ಗೆಲ್ಲುನೆವೆಂಬ ಭರವಸೆಯಿದೆ.

ಈ ಯುದ್ಧದ ತೀರ್ಮಾನದ ದಿನವು ಭವಿಷ್ಯದ ಗರ್ಭದಲ್ಲಿ ಈ ರೀತಿ ಅಡಗಿಹೋಗಿರುವ ಭವಣೆಯಿರುತ್ತಿದ್ದಿಲ್ಲ, ಲೋಕಶಾಂತಿಗಾಗಿ ಜನ್ಮವೆತ್ತಿರುವ ರಾಷ್ಟ್ರಸಂಘದ ಸದಸ್ಯ ರಾಷ್ಟ್ರಗಳು ಬಲಹೀನರಿಗೆ ಸಹಾಯವನ್ನಲ್ಲ—ಲೀಗಿನ ನಿಯಮ ಪಾಲನೆಯ ತಮ್ಮ ಕರ್ತವ್ಯವನ್ನು ಪರಿಪಾಲಿಸುತ್ತಿದ್ದರೆ ಅದು ಇಷ್ಟರಲ್ಲೇ ತೀರ್ಮಾನ ಹೊಂದುತ್ತಿತ್ತು. ಕೆಲವು ಆರ್ಥಿಕ ಬಹಿಷ್ಕಾರಗಳನ್ನು ಹಾಕುತ್ತಿದ್ದರೂ, ಹಣದ ಮುಗ್ಗಟ್ಟಿನಲ್ಲಿರುವ ಜಪಾನು ಹಾದಿಗೆ ಬರುವಂತಾಗುತಿತ್ತು. ಕೊನೆಗೆ ಪೆಟ್ರೋಲಿನಂತಹ ಕೆಲವು ಆಗತ್ಯವುಳ್ಳ ಯುದ್ಧ ಸಾಧನಗಳ ಮೇಲೆ ತಡೆ ಹಾಕುತ್ತಿದ್ದಲ್ಲಿ ಕೂಡ ಜಪಾನಿನ ಮೇಲೆ ಪರಿಣಾಮವಾಗಿಯೇ ತೀರುತಿತ್ತು. ಆದರೆ ಯುರೋಪಿನ ಬಿಳಿ ಜನಾಂಗಗಳ ರಾಷ್ಟ್ರಗಳೆಲ್ಲಾ ಅನ್ಯರ ಹೋರಾಟದಿಂದ ಲಾಭ ಸಂಪಾದಿಸುವ ಧೋರಣೆ ವಹಿಸಲಿವೆ. ಚೀನಾ ಗೆಲ್ಲಲಿ, ಜಪಾನು ಗೆಲ್ಲಲಿ, ಹಣದ ಮಟ್ಟಿಗೆ ಗೆದ್ದವರೂ ಸೋತಂತೆಯೇ ಸರಿ; ಕೊನೆಗೆ ಸಾಲಕ್ಕಾಗಿ ಬೊಗಸೆಯೊಡ್ಡಬೇಕು ಲಂಡನಿನ ಕಡೆಗೆ; ಹೀಗಿರುವಾಗ ಅಧಿಕ ಪ್ರಸಂಗವೇಕೆ ಎಂಬ ಒಳಾರ್ಥವನ್ನಿನ್ನು ಬ್ರಿಟಿಷ್ ಪ್ರಧಾನ ಚೇಂಬರ್ಲಿನರು ಚೀನಾ ಸಂಬಂಧದ ಪ್ರಶ್ನೆಗಳನ್ನು ಪಾರ್ಲಿಮೆಂಟಿನಲ್ಲಿ ಉತ್ತರಿಸುವಾಗ ಮಾತನಾಡಿರುವರು. ಅಮೇರಿಕವು ಚೀನಾಕ್ಕೆ ಮಾನಸಿಕ ಸಹಾನುಭೂತಿಯನ್ನಲ್ಲದೆ ಯಾವ ಸುಸ್ಪಷ್ಟ ವಿರೋಧವನ್ನೂ ಜಪಾನಿಗೆ ತೋರಿಸಿಲ್ಲ. ಕಾರ್ಯಮುಖೇನ ಚೀನಾಕ್ಕೆ ಸಹಾಯವಮಾಡಿಯೂ ಇಲ್ಲ. ವಿಶೇಷವೆಂದರೆ ಜಪಾನು ಉದ್ದೇಶ ಪೂರ್ವಕವಾಗಿ ಕೆಣಕಿದರೂ ಈ ರಾಷ್ಟ್ರಗಳು ತಪ್ಪಿಸಿಕೊಳ್ಳುವ ಹಾದಿ ಹುಡುಕುತ್ತಿವೆ! ಆದ್ದರಿಂದ ಚೀನವು ತನ್ನ ಸಹಾಯಕ್ಕಾಗಿ ಈ ರಾಷ್ಟ್ರಗಳ ಕಡೆಗೆ ಕತ್ತು ನೀಡಿ ಫಲವಿಲ್ಲ. ಸಂಬಂಧವುಳ್ಳ ರಾಷ್ಟ್ರಗಳ ಪೈಕಿ ಯುದ್ಧ ಸಾಧನಗಳನ್ನೊದಗಿಸಿಕೊಟ್ಟು ಸಹಾಯ ಮಾಡುತ್ತಿರುವ ರಾಷ್ಟ್ರವೆಂದರೆ ಸೋವಿಯಟ್ ರಶ್ಯವೊಂದೇ; ಅದರ ಬೆಂಬಲದ ಬಲದಿಂದಲೇ ಚೀನವಿಂದು ವೈರಿಯನ್ನು ಹಲವೆಡೆಗಳಲ್ಲಿ ಜಯಶೀಲವಾಗಿ ಇದಿರಿಸಿ ಹಿಮ್ಮೆಟ್ಟಿಸಿದೆ. ಸರಹದ್ದಿನಲ್ಲಿ ಜಪಾನರನ್ನು ಸಂದರ್ಭ ಸಾಧಿಸಿ ಪೀಡಿಸುತ್ತಲೂ ಇದೆ. ಮಂಚೂಕುವೋ ಗಡಿಯಲ್ಲಿ ಮೇಲೆ ಮೇಲೆ ನಡೆಯುತ್ತಿರುವ ರಶ್ಯಾ-ಜಪಾನ್ ತಿಕ್ಕಾಟವು ಬೆಳೆದುಹೋದರೆ ಆಗ ಚೀನಕ್ಕೊಂದು ಸಂದರ್ಭ ದೊರೆಯದೆ ಹೋಗದು. ಆದರೆ ಅಲ್ಲಿಯ ಕಲಹವನ್ನು ಮೇರೆ ಮೀರಿ ಬೆಳೆಯಿಸಲು ಇತ್ತಂಡದವರೂ ಹಿಂಜರಿಯುವಂತೆ ಕಾಣುತ್ತಿದೆ. ಹೀಗೆ ಹೊರಗಿನ ಸಹಾಯವು ಸಿಗುವ ಸ್ಪಷ್ಟ ಚಿಹ್ನೆಯಾವುದೂ ಕಂಡುಬಾರದಿರುವಾಗ ದುರ್ಬಲ ಚೀನವು ಜಪಾನರನ್ನೆಷ್ಟು ಕಾಲ ಎದುರಿಸಿ ನಿಲ್ಲಬಲ್ಲದು? ಆದರೆ ಜಪಾನು ಕೂಡ ದೀರ್ಘಕಾಲ ಯುದ್ಧಮಾಡಲಾಗದಷ್ಟು ಆರ್ಥಿಕ ರೀತ್ಯಾ ಸೋಲುತ್ತಾ ಬರುತ್ತಿದೆ. ಜನರಲ್ ಇಟಗಾಕಿಯವರು ಜಪಾನೀ ಪ್ರಜೆಗಳನ್ನು "ಐದು ಹತ್ತು ಅಥವಾ ಇಪ್ಪತ್ತು ವರುಷಗಳ ವರೆಗಾದರೂ ಹೋರಾಟ ಮುಂದೊತ್ತಲು ತಯಾರಾಗಿರಿ" ಎಂದು ಕೇಳಿಕೊಂಡಿರುವರು. ಇದರಿಂದ ಜಪಾನರಿಗೆ ಅಪಾಯಕಾರಿಯಾಗಿರುವ ಯುದ್ಧ ದೀರ್ಘತೆಯು ಅನಿವಾರ್ಯವೆಂದು ಅರ್ಥವಾಯಿತು.

ಚೀನೀ ಸೈನ್ಯಾಧಿಕಾರಿಗಳು ಇನ್ನು ಎರಡೇ ವರುಷಗಳೊಳಗೆ ಜಪಾನ್ ಸಂಧಾನಕ್ಕಾಗಿ ಡೊಗ್ಗಾಲೂರುವ ಸ್ಥಿತಿಯನ್ನು ತಂದೊಡ್ಡದಿರುವೆವೆ? ಎಂದು ಶಪಥ ಪೂರ್ವಕ ಹೇಳುತ್ತಿದ್ದಾರೆ. ಭವಿಷ್ಯದ ಕುರಿತು ಯೋಚಿಸುವಾಗ ಈ ದಳಪತಿಗಳ ಮಾತನ್ನು ಸುಳ್ಳೆನ್ನಲಾಗುವದಿಲ್ಲ. ಜಪಾನ್ ಒಂದೊಂದೇ ಪ್ರಾಂತವನ್ನು ಹಿಡಿದು ಮುಂದೊತ್ತಿದರೂ ಸ್ವಾಧೀನಪಡಿಸಿಕೊಂಡ ಸ್ಥಳಗಳಲ್ಲಿ ನಾಮ ಮಾತ್ರ ಸೈನ್ಯಗಳನ್ನಿಡಲು ಸಾಧ್ಯವಾಗಿದೆ; ಹೀಗೆ ಉದ್ದಕ್ಕೂ ಮಾಡುತ್ತಾ ಹೋದಲ್ಲಿ ಚೀನೀಯರು ಸಂದರ್ಭ ನೋಡಿ ಮೇಲೆಬಿದ್ದಲ್ಲಿ ಈ ವರೆಗೆ ಸ್ವಾಧೀನಪಡಿಸಿಕೊಂಡವುಗಳು ಆಕಾಶದಲ್ಲಿ ಬರೆದ ಅರಮನೆಗಳಂತೆ ಮಾಯವಾಗುವದು ಖಂಡಿತ. ಇನ್ನೂ ಹೆಚ್ಚಿನ ಆಶೆಯೆಂದರೆ ದಿನದಿಂದ ದಿನಕ್ಕೆ ಕೆಡುತ್ತಿರುವ ಜಪಾನರ ಆರ್ಥಿಕ ಪರಿಸ್ಥಿತಿ. ಈ ದಿನದ ಚೀನದಂತಹ ನಿಸ್ಸಹಾಯ ರಾಷ್ಟ್ರವೊಂದಕ್ಕೂ ಯುದ್ಧದಲ್ಲಿ ಜಯದ ಆಶೆಯಿರುವದಾದರೆ ವಿರೋಧಿಯ ಇಂತಹ ಒಳರೋಗಗಳ ಆಧಾರದಿಂದ. ಹೀಗೆ ಎರಡು ಪಕ್ಷಗಳಲ್ಲಿ ಒಂದನ್ನೊಂದು ಸೋಲಿಸುವದೆನ್ನುವದಕ್ಕಿಂತಲೂ ಯುದ್ಧವು ಇತ್ತಂಡಗಳನ್ನೂ ಸೋಲಿಸುವದೆನ್ನುವದಕ್ಕಡ್ಡಿಯಿಲ್ಲ. ಇಂತಹ ಅನುಭವವು ಕಣ್ಣ ಮುಂದಿರುವಾಗ ಇನ್ನೊಂದು ಯುದ್ಧಕ್ಕೆಳೆಯುವರೆದಟ್ಟ ಚೆಲ್ಲಾಣ ತೊಡುತ್ತಿರುವ ರಾಜ್ಯಗಳ ಮಂಕುಬುದ್ಧಿಗೇನೆನ್ನಲಿ?

'ಅಪ್ಪಣೆ ವಿನಹ ಪ್ರವೇಶಿಸಕೂಡದು.'

ಕಾಂಗ್ರೆಸ್ ಮೆಂಬರರು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಅಭಿಮತ ಪಡೆಯದೆ ಖಾಸಗಿಯಾಗಿ ಕೂಡ ಕಾಯಿದೇ ಭಂಗ ಹೂಡಬಾರದೆಂದು ಕಾಂಗ್ರೆಸಿನ ನಿರ್ವಾಹಕ ಕರಣದ ಬೊಂಬಾಯಿಯ ಕಾಂಗ್ರೆಸ್ ಸಭೆಯು ನಿರ್ಧರಿಸಿತು. ಇದರಿಂದ ಆಗಬಾರದ್ದೆಲ್ಲಾ ಆಗುವ ಲಕ್ಷಣಗಳು ಕಂಡುಬರುತ್ತವೆ. ಶ್ರೀ ಸುಭಾಸಚಂದ್ರ ಭೋಸರು ಅದರ ನಿಷೇಧಕ್ಕಾಗಿ ದೇಶದಲ್ಲೆಲ್ಲಾ ಜುಲಾಯಿ ಒಂಭತ್ತನ್ನು ನಿಷೇಧ ದಿನವಾಗಿ ಆಚರಿಸಬೇಕೆಂದು ವಿನಂತಿಮಾಡಿಕೊಂಡಿದ್ದರು. 'ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವ ನಿಮ್ಮ ವರ್ತನೆಯು ಶಿಸ್ತಿಗೆ ವಿರುದ್ಧ, ಆದ್ದರಿಂದ ದಯವಿಟ್ಟು ಆ ಕಾರ್ಯಕ್ರಮವನ್ನು ರದ್ದುಗೊಳಿಸಿರಿ' ಎಂದು ರಾಷ್ಟ್ರಪತಿಗಳು ಕೇಳಿಕೊಂಡರು. ಪಂಡಿತ ನೆಹರೂಗಳು ಒಂದಿಷ್ಟು ತೀವ್ರವಾಗಿಯೇ ಸುಭಾಸರ ವರ್ತನೆಯನ್ನು ಖಂಡಿಸಿದರು. ಆದರೂ ಶ್ರೀ ಭೋಸರು ಅಧ್ಯಕ್ಷರ ಅಪ್ಪಣೆಯನ್ನು ಪಾಲಿಸಲಿಲ್ಲ. ರಾಷ್ಟ್ರಪತಿಗಳ ಮಾತಿನಂತೆ, [ಪ್ರಾಂತಿಕಾಧಿಕಾರಿಯಾದ ಅವರು ತನ್ನ ಕರ್ತವ್ಯ'ವನ್ನೂ ಪಾಲಿಸಲಿಲ್ಲ. ಶ್ರೀ ಸುಭಾಸರ ಮಟ್ಟಿಗೆ ತನ್ನ ವರ್ತನೆಯು ಘಟನಾತ್ಮಕವಾದುದು, ಮತ್ತು ಪ್ರಜಾಸತ್ತಾತ್ಮಕವಾದುದು.

ನಾವೀಗ ಇಂತಹ ವರ್ತನೆಗಳ ರೂಪರೇಖೆಯಲ್ಲಿರುವ ಗುಣದೋಷಗಳನ್ನು ವಿಮರ್ಶಿಸಲು ಹೋಗದೆ, ಅವುಗಳೆಷ್ಟು ಟೊಳ್ಳಾಗಿರುವವೆಂಬುದನ್ನು ತಿಳಿದುಕೊಂಡರೆ ಇದು ದೇಶದ ದುರ್ದೈವಗಳಲ್ಲೊಂದೆಂದು ಹೇಳಬೇಕಾಗುವದು, ಒಂದು ಸಂಸ್ಥೆಯ ನಿಯಮಗಳಿಂದ ಮಾತ್ರಕ್ಕೆ ಅವು ಅಮೃತತುಲ್ಯವಿರಬೇಕೆಂದು ಅಪೇಕ್ಷಿಸಬಹುದಾದರೂ ಹಾಗಾಗುವದೆಂದು ನಿರೀಕ್ಷಿಸುವದು ತಪ್ಪು. ಮಾನವ ಕೈಸ್ಪರ್ಶದ ಅಗತ್ಯವಿಲ್ಲದೆ ನಿರ್ಧಾರಗಳನ್ನು ಸ್ವರ್ಗದಿಂದ ಆಮದು ಮಾಡಿಕೊಳ್ಳುವದಾಗಿದ್ದರೆ ಅವುಗಳಲ್ಲಾವ ಕೊರತೆಯನ್ನೂ ಕಾಣದಂತಾಗುತ್ತಿತ್ತು. ಮುಂದೆ ನಿರ್ಮಾಣವಾಗಲಿರುವ ಕೊರತೆಗಳನ್ನು ತಡೆಯುವ ಸಲುವಾಗಿಯಾದರೂ, ನಿರ್ಧಾರವೊಂದು ಆದಮೇಲೆ ಅದಕ್ಕೊಳಗಾಗುವವರು ಅಗಲೇಬೇಕು. ಕಾಂಗ್ರೆಸ್ ನಿರ್ಣಯವು ಶ್ರೀ. ಸುಬಾಸಭೋಸರೂ ಅವರ ಅನುಯಾಯಿಗಳೂ ಮಿಕ್ಕವರಂತೆಯೇ ಮತಾಧಿಕಾರ ಪಡೆದು ಮಂಡಿಸಿದ ಸಮಿತಿಯಲ್ಲೇ ಆಗಿತ್ತು. ಅಲ್ಲಿಯೂ ವಿರೋಧಿಸಿದ್ದೆವು; ಇಲ್ಲಿಯೂ ವಿರೋಧಿಸುತ್ತೇವೆ—ಎಂದುತ್ತರವಿತ್ತರೆ ನ್ಯಾಯವೆನಿಸದು. ಕಾಂಗ್ರೆಸ್ ಸಮಿತಿಯೊಳಗೊಡ್ಡುವ ವಿರೋಧಕ್ಕೂ, ಹೊರಗೆ ಬಂದು 'ಬನ್ನಿ, ಅದನ್ನು ಖಂಡಿಸೋಣ' ಎಂದು ಸಾರ್ವಜನಿಕರನ್ನು ಕರೆಯುವುದಕ್ಕೂ ಅಂತರವಿದೆ. ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಆ ನಿರ್ಣಯದ ರಚನೆಯ ಕಾರ್ಯ ನಡೆದಿತ್ತು. ಅದನ್ನುರೂಪಿಸುವಾಗ, ಅಥವಾ ಬೇಕು-ಬೇಡವೆಂದು ಮೆಂಬರರೊಳಗೆ ನಡೆಯುವ ತಿಕ್ಕಾಟವು ಸಂಸ್ಥೆಯೊಂದರಲ್ಲಿ ಅನಿವಾರ್ಯವಾದುದು. ಆದರೆ ಒಮ್ಮೆ ನಿರ್ಧಾರವಾದ ಮೇಲೆ ಅದಕ್ಕೆ, ಜನ್ಮಕಾಲದಲ್ಲಿದ್ದ ವಿರೋಧಿಗಳು ವಿರೋಧಿಗಳಲ್ಲ—ಸಹಾಯಕರು ಮಾತ್ರ ಸಹಾಯಕರಲ್ಲ. ಅದು ಮೆಂಬರರೆಲ್ಲರಿಗೂ ಏಕರೀತಿ ಅನ್ವಯಿಸುತ್ತದೆ. ಈ ದೃಷ್ಟಿಯಿಂದ ಶ್ರೀ ಭೋಸರ ವರ್ತನೆ ನ್ಯಾಯವೆನಿಸದು.

ಡಾನ್ಜಿಗಿನಲ್ಲಿ ಜರ್ಮನಿ ಪೋಲೆಂಡುಗಳು ಖಡ್ಗ ಹಿಡಿದು ಇದಿರಿದಿರು ನಿಂತಿವೆ

ಜರ್ಮನಿಗೆ ಇಟಲಿಯ ಬೆಂಬಲ!

ಡಾನ್ಜಿಗ್ ನಗರವು ಲೋಕಾನುಹುತ ಕಾರೀ ಜ್ವಾಲಾಮುಖಿಯಾಗುವ ಚಿಹ್ನೆಗಳೆಲ್ಲ ತೋರಿ ಬರಲಾರಂಭಿಸಿವೆ. ನಾಜೀ ಸೈನ್ಯಗಳು ಇರವೆ ಸಾಲನಂತೆ ಡಾನ್ಜಿಗ್ ನಗರವನ್ನು ಪ್ರವೇಶಿಸುತ್ತಿವೆ. ಲಂಡನ್ ಮತ್ತು ಪ್ಯಾರಿಸಿನಲ್ಲಿ ವಿಶೇಷ ಚಟುವಟಿಕೆಗಳು ಕಂಡುಬರುತ್ತವೆ. ಪೋಲೆಂಡಿನ ರಾಯಭಾರಿಗಳನ್ನು ಬ್ರಿಟನ್ ಮತ್ತು ಫ್ರಾನ್ಸ್ ಮಂತ್ರಿಗಳು ಕರೆಯಿಸಿಕೊಂಡು ಸುದೀರ್ಘ ಮಾತುಕತೆ ನಡೆಸಿದರು. ಬ್ರಿಟನ್ ವಿದೇಶೀ ಮಂತ್ರಿ ಲಾರ್ಡ್ ಹಲಿಫಾಕ್ಸರು ತನ್ನ ವಾರಾಂತ್ಯದ ಸಮಾರಂಭವನ್ನು ರದ್ದುಪಡಿಸಿರುವರು. ಫ್ರೆಂಚ್ ಮಂತ್ರಿಮಂಡಲವು ಸಭೆ ಸೇರಿ ಡಾನ್ಜಿಗಿನ ಪರಿಸ್ಥಿತಿಯನ್ನೆಲ್ಲ ಪರ್ಯಾಲೋಚಿಸಿತು. ಪೋಲೆಂಡಿನಿಂದ ಇಂಗ್ಲೆಂಡ್ ಫ್ರಾನ್ಸುಗಳಿಗೂ ಈ ವಿಷಯದಲ್ಲಿ ಸರಿಯಾದ ವಿವರಗಳನ್ನು ಸಲ್ಲಿಸುತ್ತಿವೆ. ಕಳೆದ ವಾರ ಪೋಲೆಂಡಿನ ರಾಯಭಾರಿ ಲಂಡನಿನಲ್ಲಿ ಲಾರ್ಡ್ ಹಲಿಫಾಕ್ಸರೊಡನೆ ಮಾತಾಡಿ ವಿಮಾನ ಮೂಲಕ ವಾರ್ಸಾವಿಗೆ ಹೋಗಿರುವರು.

ಯುದ್ಧವಾಗುವುದೆ?

ಡಾನ್ಜಿಗ್ ನಗರದೊಳಗೆ ಜರ್ಮನ ಸೈನಿಕ ಚಲನವಲನಗಳನ್ನು ಕೈಕೊಂಡುದಕ್ಕಾಗಿ ಪೋಲೆಂಡಿನ ಸರಕಾರವು ಜರ್ಮನರಿಗೆ ತನ್ನ ನಿಷೇಧಸೂಚನೆಯನ್ನು ಮಾಡಲಿರುವದು. ಆದರೆ ಮುಂದಿನ ಕಾರ್ಯಕ್ರಮದ ನಿಶ್ಚಯಕ್ಕಾಗಿ ಈ ವರೆಗೆ ಮಾಡಿಲ್ಲ. ಪೋಲೆಂಡಿನ ಸರಕಾರವು ಡಾನ್ಜಿಗಿನ ಕುರಿತು ವಿಶೇಷ ವ್ಯವಸ್ಥೆ ಇಲ್ಲವೆಂದೂ ಡಾನ್ಜಿಗನ್ನು ಜರ್ಮನರು ವ್ಯವಹರಿಸಿಕೊಂಡರೂ ಅಲ್ಲಿಯ ತನ್ನ ಹಕ್ಕುಗಳಿಗೆ ಬಾಧೆ ಬರುವ ವರೆಗೆ ಪೋಲೆಂಡಿನವರು ಯುದ್ಧಕ್ಕಿಳಿಯಲಾರರೆಂದೂ ಒಂದು ಊಹೆಯಿದ್ದಿದೆ. ಆದರೆ ಈಗೀಗ ಪೋಲೆಂಡು ದೃಢತರವಾಗಿ ಸನ್ನದ್ಧವಾಗುತ್ತಿದೆ.

ಪರಿಸ್ಥಿತಿ ಕೆಡುತ್ತಿದೆ

ಮುಖ್ಯಮಂತ್ರಿ ಮಿ. ಚೇಂಬರ್ಲೇನರು, ಡಾನ್ಜಿಗ್ ಸಮಸ್ಯೆ ವಿಷಮವಾಗುತ್ತಾ ಬಂದುದನ್ನು ಕಳೆದ ತಾ ೧೦ರಲ್ಲಿ ಒಕ್ಸ್ಫರ್ಡ್ ಹ್ಯಾಮ್ ಆರಮನೆಯಲ್ಲಿ ಚಕ್ರವರ್ತಿಗಳ ಭೇಟಿಮಾಡಿದರು. ಡಾನ್ಜಿಗಿನಲ್ಲಾಗುತ್ತಿರುವ ಸೈನಿಕ ಸಿದ್ಧತೆಗಳು ವಿಶೇಷ ರೀತಿಯವುಗಳೆಂದೂ ಬ್ರಿಟನು ತನ್ನ ವಚನದಂತೆ ನಡೆಯಲು ಕಟಿಬದ್ಧವಾಗಿರುವುದೆಂದೂ ಪೋಲೆಂಡ್ ಸರಕಾರದ ಚಾತುರ್ಯಪೂರ್ಣ ವರ್ತನೆಯನ್ನು ತಾವು ಪ್ರಶಂಸಿಸುವದಾಗಿಯೂ ಚೇಂಬರ್ಲೇನರು ಪ್ರಶ್ನೋತ್ತರಗಳ ಸಮಯ ಪಾರ್ಲಿಮೆಂಟಿನಲ್ಲಿ ಹೇಳಿರುವರು. ಡಾನ್ಜಿಗಿನಲ್ಲಿ ಸೈನ್ಯಸಿದ್ಧತೆ ನಡೆದಿರುವದೆಂಬುದು ಪೂರ್ತಿ ಸುಳ್ಳು; ಅಲ್ಲಿಯ ಸುಳ್ಳು ವಾರ್ತೆಗಳನ್ನು ನಂಬುವ ಮೊದಲು ಚೇಂಬರ್ಲೇನರು ಸರಿಯಾಗಿ ವಿವರ ತಿಳಿಸಿಕೊಳ್ಳಲಿ ಎಂದು ಜರ್ಮನ್ ಅಧಿಕಾರಿಗಳೆನ್ನುತ್ತಿದ್ದಾರೆ. 'ಡಾನ್ಜಿಗಿನ ಭವಿಷ್ಯವು ನಿರ್ಧಾರವಾಗಿದೆ. ಈಗ ಉಳಿದಿರುವದೆಂದರೆ ಅದು ಯಾವಾಗ ಎಂಬ ಅಂಶ ಮಾತ್ರ. ಅದು ಮಾತ್ರ ಹಿಟ್ಲರರ ಕೈಯಲ್ಲಿದೆ" ಎಂದು ನಾಜೀಪತ್ರಿಕೆಗಳು ಘೋಷಿಸುತ್ತಿವೆ.

ನ ಆಸ್ಟ್ರಿಯಲ್ಲಿ ಜರ್ಮನ್ ಸೈನ್ಯ ಸಂಗ್ರಹವಾಗುತ್ತಿದೆಯೆಂದು ಡಾನ್ಜಿಗ್ ವಶವಾಗುವ ಕಾರ್ಯಕ್ರಮವು ನಿಶ್ಚೈಸಲ್ಪಟ್ಟಿದೆ. ಡಾನ್ಜಿಗನ್ನು ಹಿಟ್ಲರರು ಸಂದರ್ಶಿಸುವ ಸನ್ನಾಹವು ನಡೆಯುತ್ತಿದೆ. ಇದೇ ಸುಳ್ಳೆಂಬ ಆಕ್ಷೇಪವಿದ್ದರೂ ಹರ್ ಫಾರ್ಸ್ಟರು ಸ್ವೀಡನ್ ಪ್ರತಿನಿಧಿಗಳಿಗೆ ಪದ್ಧತಿಯಂತೆ ನೋಟೀಸುಗಳನ್ನು ಕೊಟ್ಟಿರುವುದರಿಂದ ಹಿಟ್ಲರರ ಸಂದರ್ಶನವು ಸತ್ಯವೆಂದು ನಂಬಲಾಗಿದೆ.

ಹೆಚ್ಚಿನ ಸನ್ನಾಹ

ಜರ್ಮನಿಯು ಡಾನ್ಜಿಗ್ ಬೇಂಕು ಪರವಾನಗಳಿಗೆ ಸಲ್ಲತಕ್ಕ ಸಾಲಗಳನ್ನು ಅವಮಾನಿಸಿರುವದು. ಇದಕ್ಕೂ ಜರ್ಮನರ ಬೇರೆಯೇ ಕಾರಣವನ್ನು ಕೂಡಾ ಕೊಡುತ್ತಿದ್ದಾರೆ. ಪೋಲೆಂಡಿನವರ ಪ್ರತಿಭಟನೆಯಿಂದಾಗಿ ಹಣದ ಕೊರತೆ ಬಿದ್ದು ಹಾಗೆ ಮಾಡಬೇಕಾಯಿತೆನ್ನುತ್ತಿದ್ದಾರೆ. ಜರ್ಮನರು ಡಾನ್ಜಿಗ ಮತ್ತು ಗಿಡ್ನಿಯಾಡ್ ಸಮುದ್ರದ ಹಳ್ಳಿಯೊಂದರ ಮೇಲೆ ಹಾರಿಬಂದ ಜರ್ಮನಿ ವಿಮಾನವೊಂದರ ಕಡೆಗೆ ಪೋಲೆಂಡು ಸೈನಿಕರು ಎಚ್ಚರಿಕೆಗಾಗಿ ಗುಂಡೊಂದನ್ನು ಹಾರಿಸಿದರು. 'ಬಿಶೋಪ್ಸ್ ಹಿಲ್' ಭಾಗದಲ್ಲಿ ಜರ್ಮನರು ಗುಪ್ತ ಕೋಟೆ ಕೊತ್ತಳಗಳನ್ನು ಬಲು ತ್ವರಿತದಿಂದ ರಚಿಸಿರುವರು. ಅಲ್ಲಿ ವಿಮಾನಭೇದಕ ತೋಪುಗಳನ್ನು ಸಜ್ಜಾಗಿರಿಸಲಾಗಿದೆ. ಜನರಾರೂ ಆ ಕಡೆಗೆ ಸುಳಿಯದಂತೆ ಕಠಿಣ ನಿರ್ಬಂಧವಿದೆ. ಇದು ಮಕ್ಕಳ ಆಟದ ಬಯಲಿಗಾಗಿ ಮಾಡಲ್ಪಟ್ಟ ಕೆಲಸವೆಂದು ಜರ್ಮನರು ಹೇಳುತ್ತಿರುವರು. ಯಾವುದೋ ಕಾರಣದಿಂದ ಕೆಲವು ಜರ್ಮನ್ ಕೆಲಸಗಾರರ ದಸ್ತಗಿರಿಯಾಗಿದೆ. ಡಾನ್ಜಿಗಿನ ಸರಹದ್ದಿನಲ್ಲೀಗ ಪೋಲೆಂಡ್ ಸೈನ್ಯಗಳೂ ಬಂದು ಜಮೆಯಾಗಹತ್ತಿವೆ. ಪೋಲೆಂಡಿನ ಮಂತ್ರಿಗಳ ಸಭೆಯು ವಾರ್ಸಾವಿನಲ್ಲಿ ಸೇರಿ ಬ್ರಿಟಿಷ್ ಸೂಚನೆಯನ್ನು ಪಡೆದು ಸುದೀರ್ಘವಾಗಿ ಡಾನ್ಜಿಗ್ ಪ್ರಶ್ನೆಯನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದಿರುವದು. ಕೆಲವು ದಿನಗಳಿಂದ ಬ್ರಿಟಿಷ್ ಮಂತ್ರಿಮಂಡಲದ ಸಭೆಯು ಆಗಾಗ ನಡೆಯುತ್ತಿದೆ.

ವಾತಾವರಣ ಕಾವೇರುತ್ತಿದೆ

ಪೋಲೆಂಡ್ ಜರ್ಮನಿ ಸಂಬಂಧವು ಕ್ಷಣಕ್ಷಣಕ್ಕೆಂಬಂತೆ ಕೆಡುತ್ತಿದೆ. ಡಾನ್ಜಿಗಿನ ಹಡಗು ನಿಲ್ದಾಣದಲ್ಲಿ ಪೋಲಿಷ್ ಕೆಲಸಗಾರರನ್ನೆಲ್ಲಾ ಕೆಲಸದಿಂದ ತೆಗೆದುಹಾಕುತ್ತಿದ್ದಾರೆ. ೨೦೦೦ ಸೈಲೆಷ್ಯ ಕೆಲಸಗಾರರಿಗೆ ಯುದ್ಧ ರೈಲ್ವೆಯಲ್ಲಿ ಕೆಲಸಮಾಡುವದಕ್ಕೆ ಶಿಕ್ಷಣ ತರಬೇತಿಯನ್ನೀಯಲು ಜರ್ಮನರು ತೊಡಗಿರುವರು. ಕಳೆದ ಮಹಾಯುದ್ಧದ ನಂತರ ಡಾನ್ಜಿಗಿನ ಕರಾವಳಿಯು ಸ್ಲೆಸ್ವಿಗ್ ಮತ್ತು ಸ್ಟೀವನ್ ಹೋಸ್ಟ್ ಎಂಬಲ್ಲಿ ಜರ್ಮನ್ ಗನ್ನುಗಳು ತಯಾರಾಗಿ ಇರಿಸಲ್ಪಟ್ಟಿವೆ. ಕ್ವೆಲ್ಲಿನ್ ಬರ್ಗ್ ಎಂಬಲ್ಲಿ ದೊಡ್ಡ ಗನ್ನುಗಳನ್ನಿರಿಸಲಾಗಿದೆ. ಡಾನ್ಜಿಗಿನ ಪೋಲಿಷ್ ಕಮಿಷನರಾದ ಎಮ್. ಚೋಡಕ್ಕಿಯವರು "ಇಂತಹ ಎಲ್ಲಾ ಪರಿಸ್ಥಿತಿಗಳಿಗೂ ತಕ್ಕಂತೆ ಪೋಲೆಂಡು ತಯಾರಾಗಿ ನಿಂತಿದೆ" ಎಂದಿರುವರು. ವಾರ್ಸಾವಿನ ಹೇಳಿಕೆಯೊಂದರಲ್ಲಿ ಪೋಲೆಂಡು ತನ್ನ ಕಾರ್ಯವನ್ನು ನಿಶ್ಚೈಸಿಕೊಂಡಿರುವದೆಂದೂ, ಇನ್ನು ಕೂಡ ಆಶೆಗೆ ಹಾದಿಯೆಂದೂ ನಿಷೇಧ ಸೂಚನೆಯನ್ನು ಡಾನ್ಜಿಗೆ ಕಳುಹುವಂತಿಲ್ಲವೆಂದೂ ತಿಳಿದುಬರುತ್ತದೆ. ಬ್ರಿಟನ್, ಫ್ರಾನ್ಸುಗಳೊಡನೆ ಯೋಚಿಸಿ ಮೂವರ ನಿರ್ಧಾರದಂತೆ ಡಾನ್ಜಿಗಿನಲ್ಲಿ ಸೈನಿಕ ತಯಾರಿ ನಡೆಸುವ ಹಂಚಿಕೆಗಳನ್ನು ಪೋಲೆಂಡು ಸರಕಾರವು ಕೈಗೊಂಡಿದೆ.

ಪೋಲೆಂಡಿನ ಶರ್ತಗಳು

ಡಾನ್ಜಿಗಿನ ವಿಷಯದಲ್ಲಿ ಪೋಲೆಂಡಿನ ಧೋರಣೆಯು ದೃಢವಾಗಿಯೇ ಇದೆ, ಇಂಗ್ಲೆಂಡು ಫ್ರಾನ್ಸುಗಳೂ ಆ ಧೋರಣೆಯನ್ನು ಸಮರ್ಥಿಸಿವೆ, ಎಂದು ಈಗ ತೋರುವಿಕೆಯ ಮಟ್ಟಿಗೆ ಹೇಳಬಹುದು. ಡಾನ್ಜಿಗ್ ನಗರದ ಕುರಿತು ವಾರ್ಸಾವಿನ ಆಫೀಸಿನಿಂದ ಪೋಲೆಂಡ್ ಸರಕಾರದ ರಾಜೀಶರ್ತಗಳು ಹೊರಬಿದ್ದಿವೆ. ಅವು ಈ ಕೆಳಗಿನವು. ಮೊದಲನೆಯದಾಗಿ ಡಾನ್ಜಿಗ್ ಜರ್ಮನ್ ರೀಚಿನ ಹೊರಗೆ ಪ್ರತ್ಯೇಕವಾಗಿಇರಬೇಕು. ಎರಡನೆಯದಾಗಿ ಅದು ಪೋಲೆಂಡಿನ ಕಸ್ಟಮ್ಸ್ ಕ್ಷೇತ್ರದ ಒಳಗಿರಬೇಕು. ಮೂರನೆಯದಾಗಿ ಡಾನ್ಜಿಗ್ ನಿವಾಸೀ ಪೋಲಿಷ್ ಜನರ ಹಕ್ಕು ಬಾಧ್ಯತೆಗಳು ಯಾವುದೇ ಅನ್ಯ ರಾಷ್ಟ್ರದ ಆಕ್ರಮಣಕ್ಕೊಳಗಾಗಿರಬಾರದು. ನಾಲ್ಕನೆಯದಾಗಿ ಡಾನ್ಜಿಗಿನ ಜನತೆಯು ಸಂಪೂರ್ಣವಾಗಿ ತಮ್ಮ ಸಾಂಸ್ಕೃತಿಕ ಹಕ್ಕನ್ನು ಅನುಭವಿಸುವ ಸ್ವಾತಂತ್ರ್ಯವಿರಬೇಕು. ಗನ್ ಬೇಲಿಗಳು ಕಂದರಗಳು ತಂತೀ ಬೇಲಿಗಳೆಲ್ಲಾ ಡಾನ್ಜಿಗ್ ಪೋಲೆಂಡ್ ಸರಹದ್ದಿನಲ್ಲಿ ಸಾಧ್ಯವಿದ್ದಷ್ಟು ತ್ವರೆಯಿಂದ ರಚಿಸಲ್ಪಡುತ್ತಿವೆ. ಪೂರ್ವ ಪ್ರಶ್ಯಾದಿಂದ ಪೋಲೆಂಡಿಗೋಡಿಹೋಗಲು ಪ್ರಯತ್ನಿಸುತ್ತಿದ್ದ 15 ಮಂದಿ ಜೆಕ್ಕರನ್ನು ದಸ್ತಗಿರಿ ಮಾಡಲಾಗಿದೆ. ಜರ್ಮನ್ ಯುದ್ಧನಾವೆ "ಕ್ರೂಯಿಸರ್" ಬರುವದು ಲೋಕದ ಆತುರವನ್ನು ಕಡಿಮೆ ಮಾಡುವದಕ್ಕೆ ಮಾತ್ರವೆಂದೂ ಜರ್ಮನಿಯು ಡಾನ್ಜಿಗಿನಲ್ಲಿ ಕ್ರಮವಿರುದ್ಧವಾದುದನ್ನೇನನ್ನೂ ಕೈಗೊಂಡಿಲ್ಲವೆಂದೂ, ಆದ್ದರಿಂದ ಪರಿಸ್ಥಿತಿಯನ್ನು ಕೆಡಿಸುವ ಮೊದಲು ಪೋಲೆಂಡಿನವರು ಲಕ್ಷ್ಯಪೂರ್ವಕ ವರ್ತಿಸಬೇಕೆಂದೂ ಜರ್ಮನ್ ಪತ್ರಿಕೆಗಳು ಎಚ್ಚರಿಸುತ್ತಿವೆ. ನಾಜಿಗಳು ಯುದ್ಧ ಸನ್ನಾಹ ತಾವು ಮಾಡುತ್ತಿರುವೆವೆಂಬುದೆಲ್ಲ ಸುಳ್ಳೆಂದೂ ಬಿಶೋಪ್ಸ್ ಪರ್ವತ ಕ್ಷೇತ್ರವನ್ನು ಸಾರ್ವಜನಿಕರಿಗೆ ಮುಚ್ಚಿದುದು ಅಲ್ಲಿ ಆಟದ ಬಯಲನ್ನು ಮಕ್ಕಳಿಗಾಗಿ ರ



ಮಂಚಿಲಮನೆ,
ಅತ್ತೂರು, ನಿಟ್ಟೆಗ್ರಾಮ,
ನಿಟ್ಟೆ ಪಿ. ಒ., ಕಾರ್ಕಳ ತಾಲೂಕು
16ನೇ ಜೂನ್, 1939

ನನ್ನ ಮಗ ಮಂಚಿಲ ದೇಜಪ್ಪ ಅಜರಿ(?) ಜೀವವಿಮಾ ಕರಾರು ನಂಬ್ರ 12807ರ ಬಾಬ್ತು ವಿಮಾನಿಧಿಯ ಹಕ್ಕನ್ನು ಚುಕ್ತಾಪಡಿಸಿದುದಕ್ಕಾಗಿ ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂಡೆಲ್ಲಿ—ಇವರಿಗೆ ನಾನು ಕೃತಜ್ಞಳಾಗಿದ್ದೇನೆ.

ವಿಮಾಹಣವನ್ನು ಅತಿ ಶೀಘ್ರದಲ್ಲಿಯೇ [illegible] ಊರು ಶಾಖೆಯ ಮೆನೇಜರರಾದ ಶ್ರೀ ಎಂ. ಸುಂದರರಾಮ [illegible] ಸಿದುದರಿಂದ ನನಗೆ ಪರಮಾನಂದವಾಗಿದೆ. ಕೂಡಲೇ ಶ್ರೀಯುತ [illegible] ಯಿಯ ಚೆಕ್ಕು ಒಂದನ್ನು ನನಗಿತ್ತರು.

ಆದುದರಿಂದ ವಿಮೆ ಇಳಿಸಬೇಕೆ [illegible] ದೇಶೀಯ ಸಂಸ್ಥೆಗಳಲ್ಲೆಲ್ಲಾ ಪ್ರಾಮುಖ್ಯವಾದ ಈ ಟ್ರೋಪಿಕಲ್ [illegible]ನ್ಸ್ ಕಂಪೆನಿ ಲಿಮಿಟೆಡ್ ನಲ್ಲಿಯೇ ವಿಮೆ ಇಳಿಸಬೇಕೆಂದು ನಾನವರಿಗೆ [illegible] ಮಾಡುತ್ತೇನೆ.

[ಸಹಿ] ಕಮಲು.

ಇನ್ನೊಂದು ಲೋಕಮಹಾ ಯುದ್ಧವು ಸಮೀಪಿಸಿತೆ?

ಚುಂಗ್‌ಕಿಂಗ್ ಗೊಂದಲ

ಪೋಲೆಂಡಿಗೆ ಬ್ರಿಟಿಷ್ ಫ್ರಾನ್ಸುಗಳ ಬಲ!

ಚಿಸುವರಿ ಮಾತ್ರವೆಂದೂ ಈಗಲೂ ಹೇಳುತ್ತಿರುವರು. ಪೋಲೆಂಡಿನ ದೃಢ ನಿರ್ಧಾರ, ಬ್ರಿಟನ್ ಫ್ರಾನ್ಸುಗಳ ಒಂದೆರಡು ದಿನಗಳಿಂದೀಚಿನ ವರ್ತನೆಗಳಿಂದ ಜರ್ಮನರ ಸ್ವರದ ಏರಿಕೆ ಸ್ವಲ್ಪ ತಗ್ಗಿದಂತೆ ತೋರುತ್ತಿದೆ. ಮುಂದೇನು ನಡೆಯುವದೆಂಬುದನ್ನು ಊಹಿಸುವದು ಸುಲಭವಲ್ಲ.

ಲ್ಲವಾದ್ದರಿಂದ ಯಾವ ಸಂಬಂಧವೂ ಇಲ್ಲವಾದರೂ ಪೋಲೆಂಡ್ ಮತ್ತು ಟರ್ಕಿ ರಾಷ್ಟ್ರಗಳು ರಶ್ಯದೊಡನೆ ಪ್ರತ್ಯಕ್ಷ ಸಂಬಂಧ ಬೆಳೆಸುವಂತೆ ಬ್ರಿಟನು ಮಾಡಿದಲ್ಲಿ ಅದಕ್ಕೊಪ್ಪಬಹುದೆಂದು ರಶ್ಯದ ವಿದೇಶಾಂಗ ಮಂತ್ರಿ ಮೊಲೊಟವರಿಂದಿರುವರು. ಯಾವುದೂ ಬಗೆಹರಿದಿಲ್ಲ. ಲಂಡನ್, ಪ್ಯಾರಿಸಿನಿಂದ ಹೊಸ ಹೊಸ ಸೂಚನೆಗಳು ಬರುತ್ತಲೇ ಇವೆ, ಮೋಸ್ಕೋದಿಂದ ಹೋಗುತ್ತಲೇ ಇವೆ.

ಸೋವಿಯೆಟ್—ಬ್ರಿಟನ್ ಸಂಧಾನ ವ್ಯವಹಾರ

ಬ್ರಿಟನ್ ರಶ್ಯಾ ಒಪ್ಪಂದವು ಹೊಸ ಹೊಸ ಬಣ್ಣಕ್ಕೆ ತಿರುಗಿ ಬೇರೆ ಬೇರೆ ರೂಪಾಗುತ್ತಿದೆ. ಆದಿಯಲ್ಲಿ ಬೆಲ್ಜಿಯಮ್, ಪೋಲೆಂಡ್, ಟರ್ಕಿ, ರುಮೇನಿಯಾ, ಮತ್ತು ಗ್ರೀಸುಗಳಿಗೆ ಆಶ್ವಾಸನೆಕೊಡುವಂತೆ ಬ್ರಿಟನು ರಶ್ಯವನ್ನು ಕೇಳಿಕೊಂಡಿತು. ಬಾಲ್ಟಿಕ್ ರಾಷ್ಟ್ರಗಳನ್ನೂ ಸೇರಿಸಿಕೊಳ್ಳುವುದಾದರೆ ಆಗಬಹುದೆಂದು ರಶ್ಯ ಉತ್ತರಕೊಟ್ಟಿತು. ಆದರೆ ಮೊನ್ನೆಯವರೆಗೂ ಇದಕ್ಕೆ ಹಿಂಜರಿಯುತಿದ್ದ ಬ್ರಿಟನು ಈಗ, ರಶ್ಯವು ಹೊಲೆಂಡ್, ಸ್ವಿಜರ್‌ಲೇಂಡ್ ಮತ್ತು ಲುಕ್ಸೆಂಬರ್ಗ್ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಯ ಭರವಸೆಕೊಟ್ಟಲ್ಲಿ ಆಗಬಹುದೆಂದು ಸೂಚಿಸಿದೆ. ಈ ರಾಷ್ಟ್ರಗಳು ಈ ವರೆಗೂ ಸೋವಿಯೆಟ್ ಸರಕಾರವನ್ನೊಪ್ಪಿಕೊಂಡಿ

ಅರಸರು ಬೆಲ್ಜಿಯಮಿಗೆ

ಇಂಗ್ಲೆಂಡಿನ ರಾಜರಾಣಿಯರು ಅಕ್ಟೋಬರ ತಿಂಗಳಲ್ಲಿ ಬೆಲ್ಜಿಯಮಿಗೆ ಹೋಗುವ ಕಾರ್ಯಕ್ರಮವು ನಿರ್ಧರಿಸಲ್ಪಟ್ಟಿದೆ.

ಅನ್ಯ ದೇಶಗಳೊಡನೆ ಚಿಯಾಂಗ್‌ದಂಪತಿಗಳ ಬಿನ್ನಹ

ಚೀನದ ಮಾರ್ಷಲ್ ಚಿಯಾಂಗ್ ಕೈಶೇಕರು ಲೋಕದವರೊಡನೊಂದು ವಿನಂತಿಯನ್ನು ಮಾಡಿಕೊಂಡಿರುವರು. ಲೀಗ್ ನಿಯಮ, ವಾಶಿಂಗ್ಟನ್ ಒಪ್ಪಂದ, ಕೆಲ್ಲೋಗ್ ಒಡಂಬಡಿಕೆಗಳಿಗೆಲ್ಲಾ ವಿರುದ್ಧವಾಗಿ ಜಪಾನು ವರ್ತಿಸುತ್ತಿರುವದೆಂದೂ, ಆ ಒಪ್ಪಂದಗಳಿಗೆ ಸಹಿ ಹಾಕಿರುವವರೆಲ್ಲಾ ಚೀನಾಕ್ಕೆ ಸಹಾಯವಿತ್ತು ಆ ಮೂರು ಒಡಂಬಡಿಕೆಗಳ ರಕ್ಷಣೆಗೆ ನೆರವಾಗಬೇಕೆಂದೂ ವಿನಂತಿಸಿರುವರು. ಮೇಡಮ್ ಚಿಯಾಂಗರು ಅಮೇರಿಕ ಸಂಯುಕ್ತ ಸಂಸ್ಥಾನಗಳಿಗಿತ್ತ ಭಾಷಣದಲ್ಲಿ ಇತರ ರಾಷ್ಟ್ರಗಳು ಜಪಾನಿನ ಮೇಲೆ ಆರ್ಥಿಕವಾಗಿ ನಿಂಬಂಧನ ಹಾಕಬೇಕೆಂದೂ ಚೀನಕ್ಕೆ ಸಾಮಗ್ರಿಗಳ ಸಹಾಯ ಮಾಡಬೇಕೆಂದೂ, ಹಾಗೆ ಮಾಡಿದಲ್ಲಿ ಅತಿ ಬೇಗನೆ ಜಪಾನರ ಪಲಾಯನ ಸಿದ್ಧವೆಂದೂ ಪ್ರಾರ್ಥಿಸಿಕೊಂಡಿರುವರು.

ಸ್ವಿಜರ್ಲೇಂಡಿನ ತಾಟಸ್ಥ್ಯ

ಆಂತರ್‌ರಾಷ್ಟ್ರೀಯ ತಾಕಲಾಟವೆದ್ದಾಗ ತಾನು ತಾಟಸ್ಥ್ಯ ಧೋರಣೆ ವಹಿಸಬೇಕೆಂಬುದು ಅದರ ಸರಕಾರದ ನಿರ್ಧಾರವೆಂದೂ ಆದ್ದರಿಂದ ಆ ಕುರಿತು ತರ್ಕವಿಲ್ಲವೆಂದೂ ಅಲ್ಲಿಯ ಫೆಡರಲ್ ಕೌನ್ಸಿಲಿನ ನಿರ್ಣಯವಾಗಿದೆ. ಜರ್ಮನಿಯೊಡನಾಗಿರುವ ಹೊಸ ಆರ್ಥಿಕ ಒಪ್ಪಂದವನ್ನು ಕೌನ್ಸಿಲು ಮಂಜೂರುಮಾಡಿತು.

ರಶ್ಯಾ ಒಪ್ಪಂದದ ಆತುರ

ಮೋಸ್ಕೋವಿನ ತಮ್ಮ ರಾಯಭಾರಿಗಳ ಮೂಲಕ ಆಂಗ್ಲೋ ಫ್ರೆಂಚರು ಹೊಸ ಸಂಧಾನ ಶರ್ತಗಳನ್ನು ಮೊಲೋಟೊವರಿಗೆ ಕಳುಹಿಸಿರುವರು. ಹೊಲೆಂಡ್ ಸ್ವಿಜರ್ಲೇಂಡಿನ ಸ್ವಾತಂತ್ರ್ಯದಲ್ಲಿ ಬ್ರಿಟಿಷ್ ಮತ್ತು ಫ್ರೆಂಚರಿಗೆ ಪ್ರತ್ಯೇಕರಿಯಾಯಿತಿ, ಪೋಲೆಂಡ್ ಮತ್ತು ಟರ್ಕಿಯೊಡನೆ ರಶ್ಯವು ಅಪೇಕ್ಷಿಸುವ ಸೈನಿಕ ಸಂಬಂಧ, ಪ್ರತ್ಯಕ್ಷ ಯಾ ಅಪ್ರತ್ಯಕ್ಷ ಆಕ್ರಮಣದ ವೇಳೆ ನಡೆದುಕೊಳ್ಳಬೇಕಾದ ರೀತಿ—ಇವುಗಳ ಕುರಿತು ಸೂಚನೆಗಳಿವೆಯಂತೆ. ಈ ಒಪ್ಪಂದವಿಳಂಬದಿಂದ ಬ್ರಿಟಿಷ್ ಫ್ರೆಂಚ್ ಅಧಿಕಾರಿಗಳು ಬೇಸರಗೊಂಡಿರುವರೆಂದೂ ಹೇಗಾದರೂ ಒಪ್ಪಂದವಾಗಬೇಕೆಂಬುದಕ್ಕಾಗಿ ಇಷ್ಟು ರಿಯಾಯತಿಯೀಯಲು ಸಿದ್ಧರಿರುವರೆಂದೂ ತಿಳಿದು ಬರುತ್ತದೆ. ರಶ್ಯದ ಉತ್ತರವೇನೋ ಗೊತ್ತಿಲ್ಲ.

ಚಾಂಗ್‌ಕಿಂಗ್ ಗೊಂದಲ

ಚಾಂಗ್‌ಕಿಂಗಿನ ಮೇಲೆ ಎಡೆಬಿಡದೆ ಜಪಾನರ ಬೋಂಬು ಧಾಳಿ ನಡೆಯುತ್ತಿದೆ. 27 ವಿಮಾನಗಳು ಹಾರಿಬಂದು ಗುಂಡಿನ ಮಳೆಗರೆದಾಗ ಒಂದು ಬೋಂಬು 'ಫಾಲ್ಕೊನ್' ಎಂಬ ಬ್ರಿಟಿಷ್ ಗನ್ ಬೋಟಿಗೆ ಹದಿನೈದೇ ಅಡಿ ದೂರಕ್ಕೆ ಬಿದ್ದು ಗನ್ ಬೋಟ್ ಕಂಪಿಸಿ ಹೊಳೆಯ ದಡ್ಡೆಗೆ ಬಡಿಯಿತು. ಬೇರೆ ಬ್ರಿಟಿಷ್ ಮತ್ತು ಅಮೇರಿಕನ್ ಗನ್ ಬೋಟುಗಳ ಬಳಿಯಲ್ಲಿಯೂ ಅಪಾಯಕರ ಬಾಂಬುಗಳು ಬಂದು ಬಿದ್ದವು. ಅಮೇರಿಕದ ರಾಯಭಾರಿ ನಿವಾಸದ ಬಳಿ 30 ಜನರು ಹುಗಿಯಲ್ಪಟ್ಟರು.

ಡಾನ್ಜಿಗ್ ಮ್ಯೂನಿಚಿನಂತಾಗದು

"ಡಾನ್ಜಿಗ್ ಪ್ರಶ್ನೆ ಮ್ಯೂನಿಚಿನಂತಾಗುವಂತಿಲ್ಲ. ಅದು ಪೋಲೆಂಡಿನ ಬದುಕು ಮರಣದ ಪ್ರಶ್ನೆ. ಹಾಗೆಯೇ ಲೋಕಕ್ಕೂ ಸಂಬಂಧಿಸಿದ ವಿಷಯ. ಆದ್ದರಿಂದ ಈ ಬಾರಿ ಮ್ಯೂನಿಚಿನ ಪುನರಾವರ್ತನೆಯಾಗುವದೆಂದು ಭಾವಿಸುವದು ಬೇಡ" ಪೋಲೆಂಡಿನ ಕೌನ್ಸಿಲ ಎಂ. ಉಗೆನೆಯವರು ಬೊಂಬಾಯಿಯಲ್ಲಿ ಭಾಷಣವೀಯುತ್ತಾ ಹೇಳಿದರು.

ಬಂಗಾಳಾ ಕೈದಿಗಳ ಅನ್ನ ಸತ್ಯಾಗ್ರಹ

ಬಂಗಾಳದ ಡಮ್ ಡಮ್ ಜೈಲಿನಲ್ಲಿರುವ ರಾಜಕೀಯ ಸತ್ಯಾಗ್ರಹಿಗಳು ಕೆಲವರು ಕಳೆದ ತಾ ೯ರಿಂದ ಅನ್ನ ಸತ್ಯಾಗ್ರಹ ಕೈಕೊಂಡಿರುವರು. ಈ ಕುರಿತು ಬಂಗಾಳಾ ಕೌನ್ಸಿಲಿನಲ್ಲಿ ಭಾಷಣವೀಯುತ್ತಾ ಗೃಹಮಂತ್ರಿ ಸರ್ ನಾಜೀ ಮುದ್ದೀನರು ಉಪವಾಸವೆಂದರೆ ಸರಕಾರಕ್ಕೆ ಹಾಕುವ ಜಾಹೀರು ಬೆದರಿಕೆಯೆಂದೂ, ಬಂಗಾಳಾ ರಾಜಕೀಯ ಕೈದಿಗಳ ಬಿಡುಗಡೆಗಾಗಿ ಸಮಿಯು ರಚಿಸಲ್ಪಟ್ಟಿರುವಾಗ ಶಾಂತ ವಾತಾವರಣವಿಲ್ಲದೆ ಕೆಲಸ ನಡೆಸುವದಸಾಧ್ಯವೆಂದೂ ಹೇಳಿದರು. ರಾಜಕೀಯ ಕೈದಿಗಳ ವಿಚಾರಣೆಯನ್ನು ಅವಮಾನಿಸಿಡಲಾಗಿದೆ. ಈ ಪ್ರಶ್ನೆಯು ಸದ್ಯದಲ್ಲಿಯೇ ಬಂಗಾಳಾ ಎಸೆಂಬ್ಲಿಯಲ್ಲಿ ಚರ್ಚಿಸಲ್ಪಡುವದು.

ಎಡಪಕ್ಷೀಯರ ಸಮ್ಮಿಶ್ರ ಸಮಿತಿಯ ನಿರ್ಣಯ

ಎಡಪಕ್ಷೀಯ ಸಮಿತಿಯ ಸಭೆಯು ಬೊಂಬಾಯಿಯಲ್ಲಿ ಸೇರಿ ಬಾಬು ರಾಜೇಂದ್ರ ಪ್ರಸಾದರ ಹೇಳಿಕೆಯನ್ನು ಪರಿಶೀಲಿಸಿ ನಿಷೇಧ ದಿನಾಚರಣೆ ಮಾಡಬೇಕೆಂದೇ ಠರಾಯಿಸಿರುವದು. 'ತ್ರಿಪುರಿಯ ಹೆಸರಿನಲ್ಲಿ ಕಾಂಗ್ರೆಸ್ಸಿನೊಳಗೆ ಪ್ರಜಾಸತ್ತೆಯು ಕೊರಳು ಹಿಸುಕಬೇಡಿ' ಎಂದು ಬಾಬು ರಾಜೇಂದ್ರ ಪ್ರಸಾದರನ್ನು ಕೇಳಿಕೊಳ್ಳಲಾಗಿದೆ.

ಅಧ್ಯಕ್ಷರಿಗೆ ಸುಭಾಸರ ಉತ್ತರ

ನಿಷೇಧ ಸಭೆಗಳನ್ನು ರದ್ದುಪಡಿಸಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸುಭಾಸರನ್ನು ವಿನಂತಿಸಿ ತಂತಿ ಬಿಟ್ಟಿದ್ದಾರೆಂದು ಪ್ರಕಟವಾಗಿತ್ತಷ್ಟೆ. ಅದಕ್ಕುತ್ತರವಾಗಿ ಶ್ರೀ ಸುಭಾಸರು ಈ ರೀತಿ ತಂತಿ ಕೊಟ್ಟಿದ್ದಾರೆ "ಪತ್ರಿಕೆಗಳಲ್ಲಿ ಪ್ರಕಟವಾಗಿರುವ ನನಗಾಗಿ ಬಿಟ್ಟ ತಂತಿ ನನಗೆ ಮುಟ್ಟಿಲ್ಲ. ಈ ನಿರ್ಣಯಗಳನ್ನು ಖಂಡಿಸುವ ಮತ್ತು ಕಾಂಗ್ರೆಸ್ ಅಭಿಪ್ರಾಯವನ್ನು ವಿಧಿಸುವ ನಮ್ಮ ಘಟನಾತ್ಮಕ ಹಾಗೂ ಪ್ರಜಾ ಸತ್ತಾತ್ಮಕ ಹಕ್ಕುಗಳಿಗೆ ನಿಮ್ಮ ಆಕ್ಷೇಪವಿರುವದನ್ನು ನೋಡಿ ನನಗೆ ಆಶ್ಚರ್ಯವಾಯಿತು. ನಮ್ಮ ಈ ಮೊದಲಿನ ಹೇಳಿಕೆಯಲ್ಲಿ ನಾವೀ ಠರಾವುಗಳನ್ನು ಹಿಂದೆಗೆದುಗೊಳ್ಳುವಂತೆ ವರ್ಕಿಂಗ್ ಕಮಿಟಿಯನ್ನು ಬಿನ್ನವಿಸಿಕೊಂಡಿದ್ದೆವು. ನೀವು ಈ ಬಿನ್ನಹದ ಕುರಿತು ಪರ್ಯಾಲೋಚಿಸಿರೆಂದು ನಿಮ್ಮನ್ನು ಆಗ್ರಹಪೂರ್ವಕ ಕೇಳಿಕೊಳ್ಳುತ್ತೇವೆ. 9ನೇ ಜುಲಾಯಿಯಲ್ಲಿ ಆಚರಿಸಬೇಕೆಂದಿರುವ ಅಖಿಲಭಾರತ ದಿನಾಚರಣೆಯನ್ನು ಬಿಡಲು ಸಾಧ್ಯವಿಲ್ಲವೆಂದು ತಿಳಿಸಲು ಬಹಳ ವ್ಯಸನಪಡುತ್ತೇನೆ. ಸವಿವರ ಹೇಳಿಕೆಯನ್ನು ಪತ್ರಿಕೆಗಳಿಗೆ ಕೊಟ್ಟಿದ್ದೇವೆ"

ರಿಜರ್ವ್ ಬೇಂಕಿನ ಹೊಸ ಡೈರೆಕ್ಟರು

ಶ್ರೀ. ಸಿ. ಡಿ. ದೇಶಮುಖ, ಐ.ಸಿ.ಎಸ್., ಇವರು 'ರಿಜರ್ವ್ ಬೇಂಕ ಒಫ್ ಇಂಡಿಯಾ'ದ ಡೈರೆಕ್ಟರಾಗಿ ನೇಮಕ ಹೊಂದಿರುವರು. ಶ್ರೀ ದೇಶಮುಖರ, ಭಾರತ ಸರಕಾರದ ದೊಡ್ಡ ದೊಡ್ಡ ಉದ್ಯೋಗಗಳಲ್ಲಿದ್ದವರು.

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ 10-7-39

ಮಾನ್ಯ ಮಂತ್ರಿಗಳ ಆಗಮನ— ಮಾನ್ಯ ಮಂತ್ರಿಗಳಾದ ಶ್ರೀ. ಬಿ. ಗೋಪಾಲ ರೆಡ್ಡಿಯವರು ಕಳೆದ ತಾ| ೩ನೇ ಸಾಯಂಕಾಲ ಮಂಗಳೂರಿಗೆ ಬಂದರು. ಅವರನ್ನು ಸರಕಾರಿ ಅಧಿಕಾರಿಗಳೂ ಕೆಲ ಅನಧಿಕಾರಿಗಳೂ ಇದಿರುಗೊಂಡರು. ಕಾಂಗ್ರೆಸ್ ಮ್ಯುನಿಸಿಪಲ್ ಕೌನ್ಸಿಲರಲ್ಲಿ ಹೆಚ್ಚಿನವರು ಇವರನ್ನು ಎದುರುಗೊಳ್ಳಲು ಬರಲಿಲ್ಲ. ಶ್ರೀ. ಅಲ್ಬುಕರ್ಕರ ಭಾವಚಿತ್ರ ಅನಾವರಣ ಮಾಡಲು ಸಮ್ಮತಿಸಿದ್ದುದೇ ಇದಕ್ಕೆ ಕಾರಣ. ಮಾನ್ಯ ಮಂತ್ರಿಗಳು ಬಂದ ದಿನ ಸಾಯಂಕಾಲ ಜಿಲ್ಲಾ ಬೋರ್ಡು ಸಭಾ ಮಂದಿರದ ಉದ್ಘಾಟನೆಯನ್ನು ನೆರವೇರಿಸಿದರು. ಆ ಸಂದರ್ಭದಲ್ಲಿ ಬೋರ್ಡು ನೌಕರರ ಸಂಘದವರು ಮಾನಪತ್ರವನ್ನರ್ಪಿಸಿದರು.

ಮಾನ್ಯ ಮಂತ್ರಿಗಳು ಕಟ್ಟಡದ ಉದ್ಘಾಟನೆ ಮಾಡುತ್ತಾ ಕಟ್ಟಡವು ಚೆನ್ನಾಗಿದೆಯೆಂದು ಹೇಳಿ, ಇದನ್ನು ಕಟ್ಟಿಸುವುದಕ್ಕೆ ಶ್ರಮವಹಿಸಿದ ರಾ| ಶೆಟ್ಟಿಯವರನ್ನು ಅಭಿನಂದಿಸಿದರು; ಮತ್ತು ಇಂತಹ ಸಭಾಮಂದಿರವು ಆಗತ್ಯವೆಂದರು. ನೌಕರರ ಸಂಘದವರ ಮಾನಪತ್ರಕ್ಕೆ ಉತ್ತರಕೊಡುತ್ತಾ ನೌಕರರು ತಮ್ಮ ಕೇಳಿಕೆಗಳನ್ನು ಪದೇ ಪದೇ ಸರಕಾರಕ್ಕೆ ಕಳುಹಿಸುತ್ತಿರಬೇಕೆಂದೂ, ಅವುಗಳಲ್ಲಿ ನ್ಯಾಯವಾದವುಗಳಿಗೆ ಸರಕಾರದವರು ಗಮನಕೊಡುವರೆಂದೂ, ಹೇಳಿದರು. ಪ್ರಾಥಮಿಕ ವಿದ್ಯಾಭ್ಯಾಸದ ಕುರಿತು ಹೇಳುತ್ತಾ ಮೊದಲು ಜಿಲ್ಲಾ ಬೋ. ಸೆಕ್ರೆಟರಿಗಳ ಅಧಿಕಾರವನ್ನು ಪ್ರೊವಿನ್ಸಿಯಲ್ ಸರ್ವಿಸಾಗಿ ಮಾಡಿ ಅವರ ಕೈಕೆಳಗೆ ವಿದ್ಯಾಭ್ಯಾಸವನ್ನು (ಪ್ರಾಥಮಿಕ) ಬಿಡುವ ಅಭಿಪ್ರಾಯವಿತ್ತೆಂದೂ ಆದರೆ ಲೋಕಲ್ ಬೋರ್ಡುಗಳಿಂದ ಈ ಅಧಿಕಾರವನ್ನು ಕಿತ್ತುಕೊಳ್ಳುವುದು ಸರಿಯಲ್ಲವೆಂದು ಸದ್ಯ ಆ ಅಧಿಕಾರವನ್ನು ಸರಕಾರ ತನ್ನ ಕೈಗೆ ತೆಗೆದುಕೊಂಡಿಲ್ಲವೆಂದೂ ಹೇಳಿದರು. ಬಸ್ ಸರ್ವಿಸನ್ನು ಜಿಲ್ಲಾಬೋರ್ಡಿನವರು ತೆಗೆದುಕೊಳ್ಳುವ ವಿಷಯದಲ್ಲಿ ಖಾಸಗಿ ಕಂಪೆನಿಯವರಿಗೂ ಇತರರಿಗೂ ಸರಿಯಾದ ಮತ್ತು ನ್ಯಾಯವಾದ ಅನುಕೂಲತೆಗಳನ್ನು ಕೊಟ್ಟು ಕಾರ್ಯವು ಮುಂದರಿಸಲ್ಪಡುವುದೆಂದೂ ಯಾರನ್ನೂ ನಷ್ಟಕ್ಕೊಳಪಡಿಸುವುದಿಲ್ಲವೆಂದೂ ಆ ಪ್ರಶ್ನೆಯನ್ನು ಆತುರದಲ್ಲಿ ತೀರ್ಮಾನಿಸಬೇಕಾಗಿಲ್ಲವೆಂದೂ ಹೇಳಿದರು.

ರಾ| ಶೆಟ್ಟಿಯವರು ಮೊದಲು ಬೋರ್ಡು ಸಭಾಮಂದಿರದ ಚರಿತ್ರೆಯನ್ನು ಹೇಳಿ ಅನಂತರ ಮಂತ್ರಿಯವರಿಗೆ ಧನ್ಯವಾದಗಳನ್ನರ್ಪಿಸಿದರು. ಟೀಪಾರ್ಟಿಯೊಂದಿಗೆ ಸಭಾಂತ್ಯವಾಯಿತು.

ನಗರ ಸಭಾಧ್ಯಕ್ಷರ ರಾಜೀನಾಮೆ— ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಮಿ. ಫೆಲಿಕ್ಸ್ ಅಲ್ಬುಕರ್ಕರ ಭಾವಚಿತ್ರವನ್ನು ಮಾನ್ಯ ಮಂತ್ರಿಗಳ ಕೈಯಿಂದ ಅನಾವರಣ ಮಾಡಿಸಬೇಕೆಂದು ನಗರಸಭೆಯವರು ನಿರ್ಧರಿಸಿದ್ದರು. ಆದರೆ ಮಂತ್ರಿಗಳು ಮಂಗಳೂರಿಗೆ ಬರುವ ಕಾರ್ಯಕ್ರಮವನ್ನೇ ಹಿಡಿಸುವುದಾಗಿ ನಿರ್ಧರಿಸಿದ್ದರಿಂದ ಅಧ್ಯಕ್ಷರು ಅಸಮಾಧಾನಗೊಂಡು ರಾಜೀನಾಮೆ ಕಳುಹಿಸಿದರು. ರಾಜೀನಾಮೆ ಕೊಟ್ಟದ್ದೇನೆಂದು ಮಂತ್ರಿಗಳಿಗೆ ಅವರು ತಂತಿಕೊಟ್ಟರಂತೆ. ನನಗಾಗಿ ರಾಜೀನಾಮೆಕೊಡಬೇಕಾಗಿಲ್ಲವೆಂದು ಮರು ಟೆಲಿಗ್ರಾಮ್ ಕೊಟ್ಟರಂತೆ. ಇದಕ್ಕೆ ಉತ್ತರವಾಗಿ ನಿಲುವು ಬದಲುವುದಿಲ್ಲವೆಂದು ನಿಶ್ಚಯಮಾಡಿದುದು ಒಳ್ಳೆಯದೆಂದು ನಗರಸಭಾಧ್ಯಕ್ಷರು ತಿಳಿಸಿದರಂತೆ. ಪಟದ ತೆರೆಯೋಣದ ಕಾರಣದಿಂದ ಲೇ ಮ್ಯುನಿಸಿಪಲ್, (ಕಾಂಗ್ರೆಸ್) ಕೌನ್ಸಿಲರರು ಮಂತ್ರಿಗಳನ್ನಿದಿರುಗೊಳ್ಳಲು ಮತ್ತು ಜಿಲ್ಲಾ ಬೋರ್ಡಿನ ಸಭಾಸ್ಥಾನದ ಉದ್ಘಾಟನಾ ಸಮಾರಂಭಗಳಿಗೆ ಬರಲಿಲ್ಲವೆಂದು ತಿಳಿದುಬಂದಿದೆ.

ಮಂತ್ರಿಗಳು ಮ್ಯೂಸಿಯಮನ್ನು ಸಂದರ್ಶಿಸಿದರು— ಮಾನ್ಯ ಮಂತ್ರಿಗಳು ಫೆಲಿಕ್ಸ್ ಪೈಬಜಾರಿನಲ್ಲಿರುವ ಮ್ಯೂಸಿಯಮನ್ನು ಸಂದರ್ಶಿಸಿದರು. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಮ್ಯುನಿಸಿಪಲ್ ಪಾರ್ಟಿಯವರು ಅವರನ್ನು ಭೇಟಿಮಾಡಿ ಹನ್ನೊಂದನೇ ತಾರೀಕಿನೊಳಗಾದರೂ ಪಟವನ್ನು ಉದ್ಘಾಟನೆ ಮಾಡಬೇಕೆಂದು ಕೇಳಿಕೊಂಡರಂತೆ. ಮಂತ್ರಿಗಳು ಬರುವ ತಿಂಗಳ ೩ಕ್ಕೆ ಬಂದು ಆದರೆ ಉದ್ಘಾಟನೆ ಮಾಡುವುದಾಗಿಯೂ, ಮಾರ್ಕೆಟ್ ಪ್ರಶ್ನೆ ಬಾಕಿಯಿರುವಾಗ ಈಗ ಪಟ ತೆರೆಯಲಾಗುವುದಿಲ್ಲವೆಂದೂ ಹೇಳಿದರಂತೆ.

ಮಾರ್ಕೆಟ್ ರಿಟೆನ್ ಶನ್ ಕಮಿಟಿ— ನಿನ್ನೆ ಮೇಲಿನ ಕಮಿಟಿಯು ಒಂದು ನಿಯೋಗವಾಗಿ ಮಾನ್ಯ ಮಂತ್ರಿಗಳಲ್ಲಿಗೆ ಹೋಗಿ ಮಾರ್ಕೆಟಿನ ವಿಷಯವನ್ನು ಅವರಿಗೆ ನಿವೇದಿಸಿತು. ಮಾನ್ಯ ಮಂತ್ರಿಗಳು ತಾವು ಮಾರ್ಕೆಟನ್ನು ಸಂದರ್ಶಿಸಿ ತಮ್ಮ ಅಭಿಪ್ರಾಯವನ್ನು ಸದ್ಯದಲ್ಲಿಯೇ ತಿಳಿಸುವದಾಗಿ ಹೇಳಿದರು. ಅನಂತರ ಕಾರ್ಕಳಕ್ಕೆ ಮಂತ್ರಿಗಳು ಪ್ರವಾಸಮಾಡಿದರು.

ಮಂಗಳೂರಲ್ಲಿ ಮೋಟರು ಕೆಲಸಗಾರರ ಮುಷ್ಕರ

ಕೆಲವು ಸಮಯದಿಂದ ಹೊಗೆಯಾಡುತ್ತಿದ್ದ ಮೋಟರು ಕೆಲಸಗಾರರ ಚಳವಳವು ತಾ. 11ರಲ್ಲಿ ಮುಷ್ಕರದಲ್ಲಿ ಪರಿಣಮಿಸಿತು. ಕೆಲವು ಡ್ರೈವರರೂ ಕ್ಲಾರ್ಕರೂ ಕೆಲವು ಇತರ ಕೆಲಸಗಾರರೂ ಮುಷ್ಕರವನ್ನಾರಂಭಿಸಿದರು. ದಾರಿಯಲ್ಲಿ ಅಡ್ಡ ಮಲಗಿ ಬಸ್ಸು ಹೋಗದಂತೆ ತಡೆಮಾಡಿದರು. ಇದರಿಂದ ಕೆಲ ಬಸ್ಸು ಚಲಾವಣೆಯೇ ನಿಂತುಹೋಯಿತು. ಟಪ್ಪಾಲು ಒಯ್ಯುವ ಬಸ್ಸುಗಳೂ ತಡೆಯಲ್ಪಟ್ಟು ಟಪ್ಪಾಲಿಗೆ ತಡೆಯಾಯಿತು. ಮಧ್ಯಾಹ್ನ ಕಲೆಕ್ಟರ ಮಧ್ಯಸ್ತಿಕೆಯಿಂದ ಮುಷ್ಕರವು ನಿಲ್ಲಿಸಲ್ಪಟ್ಟಿರುವುದೆಂದು ತಿಳಿದುಬರುತ್ತದೆ. ಮಧ್ಯಾಹ್ನದ ನಂತರ ಕ್ರಮವಾಗಿ ಬಸ್ಸು ಚಲಾವಣೆ ನಡೆದಿರುವುದು.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

Degrees: Books: Medicines.

Free H. L. M. S., H. M. B. H. M. D. etc Free Homeo-Ay. r-Unani-Naturo degrees, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India)

ಉಡುಪಿ

ಗೋವಿಂದ ಪುಷ್ಕರಣಿ— ಮದರಾಸಿನ ಮೊಡರ್ನ್ ಕೆಫೆ ಅಧ್ಯಕ್ಷರುಗಳ ಮಾಲಕರಾದ ಶ್ರೀ. ಕೆ. ಸೀತಾರಾಮರಾಯರು ಈಚೆಗೆ ದಿವಂಗತರಾದ ತನ್ನ ಪೂಜ್ಯ ತಂದೆ ಕುತ್ಯತ್ತೂರು ಗೋವಿಂದದಾಸರ ಸ್ಮಾರಕಾರ್ಥವಾಗಿ ಮಾಡಿದ ಸಂಪೂರ್ಣ ಧನಸಹಾಯದಿಂದ, ಕಳೆದ ವರ್ಷ ಏರ್ಪಟ್ಟ ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿಸಹಾಯಕ ಸಂಸ್ಥೆಯು ಶ್ರೀ ಅದಮಾರು ಮಠಾಧಿಪತಿಗಳ ಬಗ್ಗೆ ಅವರ ಜನರಲ್ ಏಜಂಟ್ ಶ್ರೀ ವೆಂಕೋಬಾಚಾರ್ಯರು ಉದಾರತೆಯಿಂದ ದಾನಮಾಡಿದ ಬೈಲುಕೆರೆಯ ಗದ್ದೆಯಲ್ಲಿ "ಗೋವಿಂದ ಪುಷ್ಕರಣೀ" ಎಂಬ ಕೆರೆಯನ್ನೂ, ಅದರ ಪಕ್ಕದಲ್ಲಿ ಒಂದು ವಿಶಾಲ ಚಂದ್ರಶಾಲೆಯನ್ನೂ ಕಟ್ಟಿಸಿರುತ್ತದೆ. ಅದರ ಪ್ರವೇಶವು ಇದೇ ತಾ. 9 ರವಿವಾರ ಬೆಳಗ್ಗೆ 6 ಘಂಟೆಗೆ ನೆರವೇರಿಸಲ್ಪಟ್ಟಿತು. ಚಂದ್ರಶಾಲೆಯಲ್ಲಿ ಒಂದು ಮಹಾಸಭೆಯು ಜರಗಿತು. ಶ್ರೀ. ಕೆ. ಸೀತಾರಾಮರಾಯರ ಪ್ರತಿನಿಧಿಯಾಗಿ ಅವರ ಅಣ್ಣ ಶ್ರೀ. ಹಯಗ್ರೀವಾಚಾರ್ಯರು ಅಂದಿನ ಅಧ್ಯಕ್ಷ ಮ| ರಾ| ಸ| ಕಟ್ಟೆ ಶ್ರೀನಿವಾಸಾಚಾರ್ಯರನ್ನು ಇತರ ಸದ್ಗೃಹಸ್ಥರೊಡನೆ ಬಾಗಿಲಲ್ಲಿ ಇದಿರುಗೊಂಡು ವಾದ್ಯಘೋಷದಿಂದ ಒಳಗೆ ಕರೆದೊಯ್ದರು. ಜತೆಕಾರ್ಯದರ್ಶಿಗಳಾದ ಶ್ರೀ. ಕಲ್ಯಾಣಿ ವ್ಯಾಸಾಚಾರ್ಯರು, ವೇ. ಶ್ರೀನಿವಾಸಾಚಾರ್ಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸುವಂತೆ ಕೇಳಿಕೊಂಡರು. ಅನಂತರ ವೇ| ಬಿ. ಶ್ರೀನಿವಾಸ ಬಟ್ಟ, ಸಾಹಿತ್ಯ ಶಿರೋಮಣಿಯವರು ಈ ಸಂದರ್ಭಕ್ಕಾಗಿ ಸ್ವತಃ ರಚಿಸಿದ ಎಂಟು ಶ್ಲೋಕಗಳಲ್ಲಿ "ಗೋವಿಂದ ಪುಷ್ಕರಣಿಯ ವರ್ಣನ"ವನ್ನು ಓದಿ ಅರ್ಥ ವಿವರಿಸಿದರು. ಪಂಡಿತ ಕೆ. ವೆಂಕಟರಾಮಾಚಾರ್ಯರು ಸಂಸ್ಥೆಯ ಮೂಲೋದ್ದೇಶ, ಸ್ಥಾಪನೆ, ಇಂದಿನ ಅಭಿವೃದ್ಧಿಯ ಚಟುವಟಿಕೆಗಳನ್ನು ವಿವರಿಸಿ, ಸ್ಥಳವನ್ನು ದಾನಮಾಡಿದ ಮಠಕ್ಕೂ ಧನಸಹಾಯಮಾಡಿ ದ್ರಾವಿಡ ಬ್ರಾಹ್ಮಣರ ದೀರ್ಘಕಾಲದ ಈ ಕೊರತೆಯನ್ನು ನಿವಾರಿಸಿದುದಕ್ಕಾಗಿ ಶ್ರೀ. ಸೀತಾರಾಮರಾಯರಿಗೂ ಉತ್ತರೋತ್ತರ ಶ್ರೇಯಸ್ಸುಂಟಾಗುವಂತೆ ಪ್ರಾರ್ಥಿಸುವೆವೆಂದರು. ಆ ಮೇಲೆ ಶ್ರೀ. ಬಿ. ಶ್ರೀನಿವಾಸ ಭಟ್ಟರು ಈ ಸತ್ಕಾರ್ಯದಲ್ಲಿ ನೆರವಾದ ಸಮಸ್ತರಿಗೂ ಅಭಿನಂದನವನ್ನಿತ್ತು, ಪುಣ್ಯಕಾರ್ಯದಲ್ಲಿ ಪ್ರಧಾನ ಭಾಗವಹಿಸಿದ ಶ್ರೀ. ಸೀತಾರಾಮ ರಾಯರಿಗೂ ಅವರ ಕುಟುಂಬಿಕರಿಗೂ ಆರೋಗ್ಯ ಅಭಿವೃದ್ಧಿಗಳನ್ನು ಬಯಸಿದರು. ಶ್ರೀ. ಕೆ. ಹಯಗ್ರೀವಾಚಾರ್ಯರು ಶ್ರೀ. ಸೀತಾರಾಮ ರಾಯರ ಪರವಾಗಿ ಈ ಕೆರೆಕಟ್ಟಡಗಳನ್ನು ತಮ್ಮ ಪೂಜ್ಯ ತಂದೆಯವರ ಸ್ಮರಣವು ಆಚಂದ್ರಾರ್ಕವಾಗಿ ಇರುವಂತೆ ಸಂಸ್ಥೆ ಹಾಗೂ ಜಾತೀಯ ಮಹನೀಯರಿಗೂ ಉತ್ಸರ್ಗಮಾಡಿ ತಮ್ಮ ಈ ಅಲ್ಪ ಸೇವೆಯನ್ನು ಮಹತ್ತಾಗಿ ಸ್ವೀಕರಿಸಿದಕ್ಕಾಗಿ ಸರ್ವರನ್ನೂ ಕೊಂಡಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದಗಳಿಂದ ಸಭಾಂತ್ಯವಾಯಿತು.

ಉಡುಪಿಯಲ್ಲಿ ಉತ್ತರಕ್ರಿಯಾದಿಗಳಿಗಾಗಿ ದ್ರಾವಿಡ ಬ್ರಾಹ್ಮಣರಿಗೆ ಬಹುಕಾಲದಿಂದ ಇದ್ದ ತೊಂದರೆಯು ಈ ಉದಾರ ದಾನದಿಂದ ಪೂರ್ತಿ ಕೊನೆಗೊಂಡಿತು. ಅತ್ಯಲ್ಪ ಕಾಲದಲ್ಲಿಯೇ ಈ ಕೆರೆ ಕಟ್ಟಡವನ್ನು ಅವಿಶ್ರಾಂತ ಪರಿಶ್ರಮದಿಂದ ಕಟ್ಟಿಸಿದ ಜತೆಕಾರ್ಯದರ್ಶಿಗಳಾದ ಶ್ರೀ. ಕಲ್ಯಾಣಿ ವ್ಯಾಸಾಚಾರ್ಯರೂ ಪ್ರಶಂಸೆಗೆ ಪಾತ್ರರಾಗಿರುತ್ತಾರೆ.

ಡಾಕ್ಟರ್ ಕೋಣ್ಣಿ ಶೀನ ಶೆಟ್ಟರು— ಶೆಟ್ಟಿನಾಡಿನ ಡಾಕ್ಟರರಾದ ಇವರು ಉನ್ನತ ವ್ಯಾಸಂಗಕ್ಕೆ ವಿಯನ್ನ (ಯುರೋಪ)ಕ್ಕೆ ಹೋಗಿದ್ದು ಅಲ್ಲಿ ಎಂ. ಡಿ. ಪರೀಕ್ಷೆ ಕೊಟ್ಟು ಈಗ ಅಲ್ಲಿಂದ ಸ್ವದೇಶಕ್ಕೆ ಹೊರಟಿರುವರಾಗಿಯೂ ಇದೇ ತಾ. 13ಕ್ಕೆ ಬೊಂಬಾಯಿಗೆ ತಲುಪುವರಾಗಿಯೂ ತಿಳಿದುಬರುತ್ತದೆ.

ಎಯಿಡೆಡ್ ಶಾಲೆಗಳ ಮೆನೇಜರರ ಯೂನಿಯನ್ — ಸ್ಥಾಪನೆಯು ಇದೇ ತಾ. 15ನೇ ಬೆಳಗ್ಗೆ ಘಂ. 9ಕ್ಕೆ ಉಡುಪಿ ಬೋರ್ಡ್ ಹಾಯರ್ ಎಲಿಮೆಂಟರಿಶಾಲೆಯಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿಯೂ ಮಧ್ಯಾಹ್ನ 3ಕ್ಕೆ ಮೆನೇಜರರ ಪರಿಷತ್ತು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿಯೂ ಜರಗುವುದು.

ಬೈಂದೂರು— ಸ್ಥಳೀಕ ಮಾಧ್ಯಮಿಕ ಶಾಲೆಯ 'ಬಡವಿದ್ಯಾರ್ಥಿಗಳ ನಿಧಿ'ಗೆ ಶ್ರೀಗಳಾದ ಬಿ. ಸುಬ್ಬಣ್ಣ ಶೆಟ್ಟಿ, ರೂ. 15–0–0, ಮಾಲ್ಕಿ ರಾಮಕೃಷ್ಣ ಪ್ರಭು, ರೂ. 5–0–0.

ಶಾಲೆಯ ಮಕ್ಕಳ ಸಂಘದ ಕ್ಷೇಮನಿಧಿಯಿಂದ ರೂ. 50-0-0 ಸದ್ರಿ, ಶಾಲಾ ಸಹಾಯಕ ಉಪಾಧ್ಯಾಯರಾದ ಶ್ರೀ. ಯು. ಅನಂತರಾವ ರೂ. 2-0-0; ಶ್ರೀ. ಯಂ. ಗೋವಿಂದರಾವ (ವಿದ್ವಾನ್) ರೂ. 2-13-6; ಶ್ರೀ. ಕೆ. ತಿಮ್ಮಪ್ಪ ಶೆಟ್ಟಿಗಾರ ರೂ. 1-0-0; ಚಿಲ್ಲರೆ ವಂತಿಗೆ 0-4-0 ಕುಂದಾಪುರ ಹೈಸ್ಕೂಲಿನ ಶ್ರೀ. ಕೆ. ಯ.ಲ್. ಆಚಾರ್ಯ B.A. L. T. ರೂ. 5-0-0; ಮಾಲ್ಕಿ ಬೋರ್ಡು ಹೈಸ್ಕೂಲಿನಿಂದ ಶ್ರೀಗಳಾದ ಕೆ. ಶ್ರೀನಿವಾಸಶೆಣೈ ರೂ 2 ಜಪ್ತಿ ಗಣೇಶ ರಾವ್ ರೂ. 2-0-0, ಯಚ್. ಮುದ್ದಣ್ಣ ಶೆಟ್ಟಿ ರೂ. 2-0-0, ಗ್ರೆಗರಿ ಮಿನೇಜಸ್ ರೂ. 2-0-0. ಕೆ. ಏಟ್ಟಪ್ಪ ರೂ. 2-0-0, ಬಿ. ಪರಮೇಶ್ವರ ಬಾಯರಿ ರೂ. 5-0-0, ಯಚ್. ತ್ರಿಯಂಬಕ ರಾವ್ ರೂ. 2-0-0, ಎ. ನರ್ಸಪ್ಪಯ್ಯ 0-8-0 ಕೆ. ವಾಸುದೇವ ರಾವ್ 0-8-0, ಯಸ್. ಮುಕುಂದ ಕಾಮತ್ 0-8-0, ಯಂ. ನಾರಾಯಣ ಭಟ್ 0-8-0, ಐ. ಧರ್ಮಪಾಲ್ 0-8-0, ವಿ. ವೆಂಕಪ್ಪ ಶೆಟ್ಟಿ 0-8-0. ಈ ರೀತಿ ಧನಸಹಾಯ ಮಾಡಿದ ಸರ್ವ ಮಹಾಶಯರುಗಳಿಗೂ ಅನಂತ ಧನ್ಯವಾದಗಳು.

ಕಟಪಾಡಿ— ಮಾನ್ಯ ಬಿ. ಗೋಪಾಲ ರೆಡ್ಡಿ ಮತ್ತು ಶ್ರೀ. ಎಮ್. ಭಕ್ತವತ್ಸಲಂರವರು ಉಡುಪಿಯಿಂದ ಮುಲ್ಕಿಗೆ ಹೋಗುತ್ತಾ ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದರು. ಶಾಲಾ ಮುಖ್ಯ ಉಪಾಧ್ಯಾಯರು ಅವರನ್ನು ಸ್ವಾಗತೀಕರಿಸಿ ಶಾಲೆಯ ಸಮಸ್ತ ಕ್ಲಾಸುಗಳನ್ನು ತೋರಿಸಿದರು. ಸಂದರ್ಶಕರು ಶಾಲೆಯು ಉತ್ತಮ ಸ್ಥಿತಿಯಲ್ಲಿರುತ್ತದಾಗಿ ಅಭಿಪ್ರಾಯ ಸೂಚಿಸಿರುವರಾಗಿ ತಿಳಿದುಬರುತ್ತದೆ.

ಇಲ್ಲಿಯ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಸಂಸ್ಥೆಯನ್ನೂ ಇವರು ಸಂದರ್ಶಿಸಿ ಅದರ ಕುರಿತು ತಮ್ಮ ಸದಭಿಪ್ರಾಯಗಳನ್ನು ವ್ಯಕ್ತಪಡಿಸಿ ಸಂಸ್ಥೆಯ ಶ್ರೇಯೋಭಿವೃದ್ಧಿಯನ್ನು ಬಯಸಿರುವರು.

ನಮ್ಮ ಹೊಸ ಏಜಂಟರು.

ಮುಂಡಗದ್ದೆಯಲ್ಲಿ—
ಶ್ರೀ. ಕೆ. ವಿ. ಸರಳಾಯ

THE ASIAN ASSURANCE COMPANY, LTD.

ASIAN BUILDINGS — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	5,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

OR

Sri. J. A. PUTRAN, Branch Manager, Mangalore.

ಮಾತೃಮಂದಿರ

ಭಾರತದಲ್ಲಿ ಮಹಿಳೆಯರ ವ್ಯಾಪಾರ

ಅಬೋಧ ಸ್ತ್ರೀಯರನ್ನು ಮೋಸಗೊಳಿಸುವ ಕರುಣಾಜನಕ ಕಥೆ.

ಲೇಖಿಕೆ – ಶ್ರೀಮತಿ ವಿಮಲಾದೇವಿ, ಬಿ.ಎ.

ಕೇವಲ ಭಾರತದಲ್ಲಿ ಮಾತ್ರವಲ್ಲ, ಸಮಗ್ರವಿಶ್ವದ ಸಭ್ಯದೇಶಗಳಲ್ಲಿಯೂ ಸ್ತ್ರೀಯರ ವಿಚಾರದಲ್ಲಿ ಪುರುಷರು ಅತ್ಯಾಚಾರ ಮಾಡುತ್ತಿದ್ದಾರೆ. ಪುರುಷರ ವಾಸನಾತೃಪ್ತಿಗಾಗಿ ಸ್ತ್ರೀಯರು ಅಂಗಡಿಗಳಲ್ಲಿಟ್ಟು ಮಾರುವ ಮಣ್ಣಿನ ಬೊಂಬೆಗಳಂತೆ ಮಾರಲ್ಪಡುತ್ತಿರುವರು. ಭಾರತದಲ್ಲೇನೂ ವ್ಯಾಪಾರವು ಕಡಿಮೆಯಾಗಿಲ್ಲ.

ಬಡತನದ ಶಾಪ

ಅಧಿಕಾಂಶ ಬಡಹುಡುಗಿಯರು ಸುಖಮಯ ಜೀವನದ ಲೋಭದಿಂದ ತಮ್ಮನ್ನು ಮಾರಿಕೊಳ್ಳುವರು. ಇದೇ ಒಂದು ಪ್ರಮುಖ ವೃತ್ತಿಯನ್ನಾಗಿ ಉಳ್ಳ ಅನೇಕ ಸ್ತ್ರೀಪುರುಷರು ನಗರಗಳಲ್ಲಿ ದೊರೆಯುವರು. ಎಷ್ಟೋ ಜನರು ಈ ವ್ಯಾಪಾರದಿಂದ ಅಪಾರ ಹಣವನ್ನು ಗಳಿಸಿ ಸುಖವಾಗಿ ಜೀವಿಸುತ್ತಿರುವರು. ಇವರು ಹೆಚ್ಚಾಗಿ ಹಳ್ಳಿಗಳಿಂದ ಹುಡುಗಿಯರನ್ನು ಬೋಧಿಸಿ, ಪಟ್ಟಣಗಳಿಗೆ ಕರೆತಂದು ಇಂತಹುದೇ ವ್ಯಾಪಾರವನ್ನು ಮಾಡುವವರಿಗೆ ಮಾರುವರು.

ಸಮಾಜದ ವೇದಿಕೆಯಲ್ಲಿ

ಆದರೆ ಇಂತಹ ಪವಿತ್ರ ಮಾತೃತ್ವ ಅವಮಾನವು ಕೇವಲ ಬಡತನದಿಂದ ಮಾತ್ರ ಆಗುತ್ತಿಲ್ಲ. ನಮ್ಮ ಸಮಾಜವು ಎಷ್ಟೋ ಜನ ಅಬೋಧ ಬಾಲಕಿಯರನ್ನೂ, ಎಷ್ಟೋ ಮಂದಿ ವಿಧವೆಯರೆನಿಸಿಕೊಳ್ಳುವ ಕುಮಾರಿಯರನ್ನೂ ಕಾಲಿನಿಂದ ಒದ್ದು ನೂಕುತ್ತಿದೆ. ಅವರು ಸಮಾಜದ ಈ ಅವಮಾನದಿಂದ ರಕ್ಷಿಸಿಕೊಳ್ಳಲು ಸಮಾಜದಿಂದ ದೂರ ಓಡುವರು. ನಂತರ ಮೇಲೆ ಹೇಳಿದ ಸಮಾಜದ ರಾಕ್ಷಸರ ಕೈಗೆ ಸಿಕ್ಕಿ ಬಿದ್ದು ತೊಂದರೆಗೀಡಾಗುವರು. ಈ ವ್ಯಾಪಾರೀ ರಾಕ್ಷಸರು ಅವರನ್ನು ಪಶುಗಳಂತೆ ನೋಡುವರು. ಆ ಅಬೋಧ ಆತ್ಮಗಳು ಅನುಭವಿಸುವ ಕಷ್ಟಗಳೂ ರೋಗಗಳೂ ಅವರ್ಣನೀಯವಾಗಿವೆ.

ಕೆಲಸದ ಆಸೆ

ಆದರೆ ಸ್ತ್ರೀ ಜಾತಿಯ ಈ ವ್ಯಾಪಾರಿಗಳಿಗೆ ಈ ಬೇಟೆಯು ದೊರೆಯುವುದಾದರೂ ಹೇಗೆ? ಇದರ ರೀತಿನೀತಿಗಳು ಬಹಳ ಇವೆ. ಕೆಲವು ವೇಳೆ ಇವರ ಏಜೆಂಟರು ಹಳ್ಳಿಗಳಿಗೆ ಹೋಗಿ ತಿಳಿಯ ಬಾಲೆಯರಿಗೆ ಕೆಲಸದ ಆಸೆಯನ್ನು ಹುಟ್ಟಿಸಿ, ಪಟ್ಟಣಗಳಿಗೆ ಕರೆತರುವರು. ಪಟ್ಟಣಗಳಿಗೆ ಬಂದ ಕೂಡಲೇ, ಪಾಪ ಆ ಹುಡುಗಿಯರಿಗೆ ತಮ್ಮ ತಪ್ಪು ತಿಳಿಯುವುದು ತಾವು ಅಲ್ಲಿ ಏನು ಮಾಡಬೇಕೆಂಬುದನ್ನು ಅರಿತಾಗ ಬಹಳ ಹೆದರುವರು. ಆದರೆ ಈಗ ಮಾಡುವುದಾದರೂ ಏನು?

ಇಷ್ಟೇ ಅಲ್ಲ, ಸಮಾಜದ ಈ ರಾಕ್ಷಸರು ತಾವು ನಿಜವಾದ ಪ್ರೇಮಿಗಳೆಂದು ಹೇಳಿಕೊಳ್ಳುವರು. ತಮ್ಮ ಶಬ್ದಜಾಲದಲ್ಲಿ ಯಾವುದಾದರೊಂದು ರೀತಿಯಲ್ಲಿ ಸ್ತ್ರೀಯರು ಮನೆಗಳನ್ನು ಬಿಟ್ಟು ಹೊರಗೆ ಬರುವಂತೆ ಉಬ್ಬಿಸುವರು. ಹೊರಗೆ ಬರುವುದೇ ತಡ, ಆ ಸ್ತ್ರೀಯು ದಾರಿಕಾಣದಂತಾಗುವಳು. ನಂತರ ಅವರು ಅವಳನ್ನು ಪೇಟೆಯಲ್ಲಿ ಸುಲಭವಾಗಿ ಮಾರಿ ಹಣಗಳಿಸುವರು. ಒಬ್ಬನು 12ಮಂದಿ ಬಾಲಿಕೆಯರನ್ನು ವಿವಾಹವಾಗಿ ಅವರೆಲ್ಲರನ್ನೂ ಮಾರಿದ್ದು ನನಗೆ ಗೊತ್ತು.

ಹದ್ದಿನಲ್ಲಿಡುವ ರೀತಿ.

ಅಪಹರಣ ಮಾಡಲ್ಪಟ್ಟ ಯಾ ಓಡಿಸಿಕೊಂಡು ಬಂದ ಯುವತಿಯರನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಸಹ ಈ ವ್ಯಾಪಾರಿಗಳೂ ಅವರ ಏಜೆಂಟರೂ ರಾಕ್ಷಸೀ ರೀತಿಯಿಂದ ವರ್ತಿಸುತ್ತಾರೆ. ಅವರು ಅವರನ್ನು ಹೊಡೆದು, ಹೆದರಿಸಿ, ಘಾಬರಿಮಾಡಿ ಒಪ್ಪಿಸುತ್ತಾರೆ. ಆ ಸ್ತ್ರೀಯು ಸಹ ತನ್ನ ತಪ್ಪನ್ನು ತಿಳಿದ ಮೇಲೆ ಪಶ್ಚಾತ್ತಾಪ ಪಡುವುದು ವಿನಹ ಮತ್ತೇನು ತಾನೇ ಮಾಡಬಲ್ಲಳು! ಒಂದು ವೇಳೆ ಹಿಂದಿರುಗಿ ಬಂದರೂ ಅವಳ ಸ್ಥಿತಿಯು ಮತ್ತೂ ಶೋಚನೀಯವಾಗುವುದೆಂದು ಬಲ್ಲಳು.

ಧನಿಕರ ಜವಾಬ್ದಾರಿ.

ಸಮಾಜದ ಈ ಮಹಾಪಾತಕದ ಜವಾಬ್ದಾರಿಯು ಧನಿಕರ ಮೇಲಿದೆ. ಇವರಿಂದಲೇ ಇದು ನಡೆಯುತ್ತಿದೆ. ತಮ್ಮ ಕ್ಷಣಿಕ ವಾಸನೆಯ ತೃಪ್ತಿಗಾಗಿ ಅವರು ಸ್ತ್ರೀಸಮಾಜದ ಮೇಲೆ ಇಂತಹ ಭಯಂಕರ ಅಪರಾಧ ಮಾಡುತ್ತಿದ್ದಾರೆ. ಇಂತಹ ಪಾಪದ ಫಲವು ಸಮಾಜದ ಮೇಲೆ ಮಾತ್ರವಲ್ಲದೆ, ರಾಷ್ಟ್ರದ ಮೇಲೆ ಸಹ ಆಗುವುದು. ಪ್ರತಿಯೊಬ್ಬ ಯುವಕನೂ ಮಾತೃತ್ವದ ಮೇಲೆ ಆಗುತ್ತಿರುವ ಈ ಕ್ರೂರಕೃತ್ಯವನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕಲ್ಲದೆ, ಪ್ರತಿ ಯುವತಿಯೂ ಸಮಾಜದ ಈ ರಾಕ್ಷಸರ ವಿಚಾರದಲ್ಲಿ ಎಚ್ಚರಿಕೆಯಿಂದಿರುವುದು ಒಳ್ಳೆಯದು.

ಕಿವುಡರಿಗೆ
ಕಿವಿ ಕೇಳುತ್ತದೆ
ವಿಜ್ಞಾನ ಶಾಸ್ತ್ರದ ನವೀನ ಶೋಧೆ.
ಬಧಿರತಾ-ಹರಣ
ಕರ್ಣರೋಗಗಳಿಗೆ ಅಪ್ರತಿಮ ಔಷಧ. ಕಿವಿ ಸೋರುವುದು, ಕೀವು ಬರುವುದು, ಕಿವಿಯೊಳಗೆ ಘುಂಯಿ ಘುಂಯಿ ಶಬ್ದವಾಗುವುದು, ಕ್ರಿಮಿ ಬೀಳುವುದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ
ಬಧಿರತಾ-ಹರಣವು
ಅವ್ಯಾಹತ ಔಷಧಿ. ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂದೆ.
ಬೆಲೆ ರೂ. 2—0—0
ಪತ್ತೆ:-ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಯಿ 4.
AROGYA SADAN
Durgadevi Street, BOMBAY 4

ಆಯುರ್ವೇದ ಕೀರ್ತಿವಂತರ ರತ್ನ
55 ವರ್ಷಗಳಿಂದ ಪ್ರಸಿದ್ಧವಾದ
ಶಕ್ತಿಸುಧಾಕರ
ಗುಳಿಯು
(ರಿಜಿಸ್ಟರ್ಡ್)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧಿ ಮತ್ತು ಧಾತುವೃದ್ಧಿ ಹೊಂದುತ್ತದೆ, ಸ್ವಪ್ನದಲ್ಲಿ, ಮಿತಿಮೀರಿ ಸ್ತ್ರೀ ಸಂಗ, ಚಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತ (ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ, ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ. ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ ಎಷ್ಟೋ ಜನ ಇದರ ಉಪಯೋಗದಿಂದ ಮಾಯವಾಗ ತ್ರಾಣವನ್ನು ಹೊಂದಿರುವರಿಲ್ಲ. ತಾವು ಇದನ್ನು ಒಂದುವರ್ಷ ಉಪಯೋಗಮಾಡಿ ನೋಡಿದ್ದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವುದು. 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1 ಮಾತ್ರ.

Vaidya Shasthry Kalyanji Tagar *365, Kalabadevi Road* *(opp. Temple)* Hanuman Lane Corner, BOMBAY 2	ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಗರ್ 365, ಕಾಲಬಾ ದೇವಿ ರೋಡ, (ದೇವಾಲಯದ ಎದುರು.) ಹನುಮಾನ ಗಲ್ಲಿಯ ನಾಕೆ, ಮುಂಬ್ಬಾ ನಂ. 2

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ
ಯು. ಪಿ. ಮೇಸ್ತ ಗೋಲ್ಡ್ ಮೆಡಲ್ಡ್ ಫಿಸಿಶಿಯನ್.

ಪುಷ್ಪಗಂಧಾಮೋದಿತ
ಬಹುಗುಣಯುಕ್ತ

ಆಮಲಕೀ ತೈಲ
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ, ಪ್ರೌಢ ಸ್ತ್ರೀ ಪುರುಷರಿಗೂ ನಿತ್ಯ ಕೇಶಪ್ರಸಾದನಾರ್ಥ ಉತ್ತಮವಾದ ಚಿತ್ತಾಕರ್ಷಕ ತೈಲ.
10 ತೊಲೆ ಸೀಸೆ 1ರ ಕ್ರಯ 0-11-0,
5 ತೊಲೆ „ „ „ 0- 6-0.

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿಕಾ
ಅಜೀರ್ಣ, ಅತಿಸಾರ, ಉದರಶೂಲೆ, ಉಬ್ಬಸ, ಪಾರ್ಶ್ವಶೂಲೆ, ಕಟಿಶೂಲೆ, ಚುಚ್ಚುವ ಮತ್ತು ಎಳೆಯುವ ವೇದನೆ, ಸರ್ವವಾತರೋಗ, ಜ್ವರ, ಕೆಮ್ಮು, ಇವುಗಳಲ್ಲಿ ಗುಣಕಾರಿಯಾಗಿದೆ ಹಾಗೂ ಬಾಲವೃದ್ಧ ಸ್ತ್ರೀ ಪುರುಷರಿಗೂ, ಗರ್ಭಿಣಿಯರ ಸರ್ವರೋಗಗಳಲ್ಲಿಯೂ ಸಂಗ್ರಾಹ್ಯವಾದ ದಿವ್ಯ ಔಷಧಿಯಾಗಿದೆ.

ಮಾತ್ರೆ:—	12	25,	50,	100,	500,	1000
ಕ್ರಯ:	0-4-0,	0-7-0,	0-13-0,	1-5-0,	5-0-0,	9-0-0.

5 ಆಣೆ ಸ್ಟಾಂಪು ಕಳುಹಿಸಿದರೆ 12 ಮಾತ್ರೆಗಳನ್ನು ಕಳುಹಿಸುತ್ತದೆ.
ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್) ಕುಂಜಾಲ್
ಪೋಸ್ಟ್ ಬ್ರಹ್ಮಾವರ, ದ, ಕ.
ನಮ್ಮ ಸ್ಟಾಕಿಸ್ಟರು —
1. V. R. Prabhu, The Canara News & Books Agent, Batatawala Mansion, Lalbag, BOMBAY.
2 General Supplies Ltd., Udipi, S K.
3. Nava Bharata Book Depot, Udipi, S K.

HALT??? HAVE YOU RECEIVED ???.

OUR NEW ILLUSTRATED COPY CONTAINING LATEST VARIETIES OF MODERN SWISS MADE GUARANTEED LEVER WATCHES?
ರೂ. ೩ರಿಂದ ರೂ. ೬೦ರ ತನಕ ಬೆಲೆಯುಳ್ಳವು
ನಂ. 517 ಕ್ರೋಮಿಯಂ ಕೇಸ್ ರೂ. 6-8-0.
„ 518 ಬಂಗಾರದ ಕೇಸ್ ರೂ. 8-0-0.
„ 518A. ರೋಲ್ಡ್ ಗೋಲ್ಡ್ 10ವರ್ಷಗಳದ್ದು ರೂ 12-8-0.
ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚು 0-9 0 ಪ್ರತ್ಯೇಕ. ವಿಶ್ವಾಸವಂಗಳಿಗಾಗಿ ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ. ವಿ. ಸೂ ಪತ್ರವ್ಯವಹಾರವು ಇಂಗ್ಲಿಷಿನಲ್ಲಿ.
BAPALAL & Co., (N. U.)
101, ABDUL RAHIMAN ST BOMBAY. 3.

ಹೀಗಾದರೇನು ಅಳಿಯಕಟ್ಟಿನ ಸುಧಾರಣೆ?

ಮೊದಲೇ ಒಂದೆರಡು ಅಳಿಯಕಟ್ಟಿನ ಸುಧಾರಣಾ ಮಸೂದೆಗಳು ತಯಾರಾಗಿ, ಶಾಸನಸಭೆಗಳಿಂದ ವಿಷ್ಣುಹೋದದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈಗ ಮತ್ತೊಮ್ಮೆ 'ಸುಧಾರಣೆ ಸುಧಾರಣೆ!!' ಎಂಬ ಕೂಗು ಪತ್ರಿಕೆಗಳಲ್ಲಿ ಕೇಳಿಬರುತ್ತಿದೆ. ಇದು ಸುಳ್ಳು ಚಿಕ್ಕ ಸುಧಾರಣೆ ಬೇಕೆಂಬುದೇನೋ ನಿರ್ವಿವಾದವಾದುದು. ಆದರೆ ಎಂಥಾ ಸುಧಾರಣೆಯೆಂಬುದೇ ದೊಡ್ಡ ಸಮಸ್ಯೆಯಾಗಿದೆ. ದಕ್ಷಿಣ ದೇಶದ ವ್ಯಾಸ್ತ್ರೀಯುಪರಿಪಾಲನೆಯಲ್ಲಿ ಲೋಕಕ್ಕೆ ಮಾದರಿಯಾಗಿ ಕೊಟ್ಟಂತೆ ಅಳಿಯಕಟ್ಟನ್ನಾಚರಿಸುವ ದಕ್ಷಿಣಕನ್ನಡಿಗರಲ್ಲಿ ಮುಕ್ಕಾಲಂಶ ಜಮೀನಿನ ಅಧಿಕಾರಿಗಳಾದ ನಾವು ಸಮಾಜದ ಅಭಿವೃದ್ಧಿಗಾಗಿ ದರ್ಶನ್ ಆಡಳಿತದಂತೆ ಮಸೂದೆಯನ್ನು ತಯಾರಿಸುವುದು ಉತ್ತಮವೆಂದೇ ನನ್ನ ಅಭಿಪ್ರಾಯ. ಈ ಹೊಸ ಕಾರ್ಯಕ್ರಮವನ್ನು ಪ್ರಚಾರಪಡಿಸಲಿಕ್ಕೆ ಸಾಧಕವಾಗಿ, ಸುಭಾಷರು 'Forward bloc' ಎಂಬ ಒಂದು ಪಾರ್ಟಿಯನ್ನು ತಯಾರಿಸಿದಂತೆ, ಯುವಕರೆಲ್ಲರೂ ಒಂದು ಪಡೆಯನ್ನು ತಯಾರಿಸಿ ಸಮಾಜದ ಕಲ್ಯಾಣಕ್ಕಾಗಿ ಚಳವಳವಾಡಬೇಕಾಗಿ ಕೋರುವೆನು. ಅಲ್ಲದೆ, ಭಾರತಾಂಬೆಯು ತನ್ನ ಮಕ್ಕಳು ಒಂದೇ ಬಟ್ಟಲಲ್ಲಿ ಉಂಡುತಿಂದು, ಸಕಲರ ಜೀವನವು ಸುಖಮಯವಾಗಬೇಕೆಂದು, ಮುಂದೆ ಯಾವ ಸಮತಾವಾದವು ಬರಲೆಂದು ಬೊಬ್ಬೆ ಹಾಕುವಳೋ, ಅದೇ ಸಮತಾವಾದದ ಸಾಮ್ರಾಜ್ಯದ ರಚನೆಗೆ ಒಂದು ಅಲ್ಪ ಸಂಖ್ಯಾ ಜನಾಂಗವು ಉತ್ತೇಜನಕೊಟ್ಟು ಉದಾರಗುಣದಲ್ಲಿ ಆಚರಿಸಿದರೆ ಅಖಿಲ ಹಿಂದುಸ್ಥಾನಕ್ಕೇನೇ ಆದರ್ಶಪ್ರಾಯರಾಗುವುದಲ್ಲದೆ, ನಮ್ಮ ಸಮಾಜ ಒಂದುಂಟೆಂದು ಭೂಲೋಕಕ್ಕೇನೇ ತಿಳಿಸಿದಂತಾಗಿ ಒಂದು ಸ್ಥಾನವನ್ನು ನಾವು ಕಲ್ಪಿಸಿಕೊಳ್ಳಬಹುದಾಗಿದೆ.

ಅಲ್ಲದೆ ಸುಧಾರಣೆ ಎಂದು ಇಷ್ಟಾನುಸಾರಕ್ಕೆ ಬಿಟ್ಟರೆ ಎಷ್ಟೋ ವರುಷಗಳಿಂದ ಅನ್ಯರ ಕೈಸೇರಿದ ನಮ್ಮ ಜಮೀನು ಸ್ವಲ್ಪ ಸಮಯದಲ್ಲಿಯೇ ಪರಾಧೀನವಾಗುವುದರಲ್ಲಿ ಸಂಶಯವಿಲ್ಲ. ನಾವು ಬರೇ ಜಮೀನಿನ ಅಧಿಕಾರಿಗಳಾದ್ದರಿಂದ ನಮಗೆ ಜಿಲ್ಲೆಯ ಯಾವತ್ತು ರಾಜಕೀಯ ಯೋಜನೆಯಲ್ಲಿ ಸ್ಥಾನಮಾನ ಸಿಕ್ಕಿದ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇಂದು ಶಾಸನಗಳಿದ್ದರೆ ಬರೇ ನಮ್ಮ ಜಿಲ್ಲೆಯ ಹಳ್ಳಿಯ ಆಡಳಿತದಿಂದ ಹೀಗೆ ಬಿಟ್ಟರೆ ಆಡಳಿತ ನಡಿಸುವ ಅಧಿಕಾರಿಗಳು ತಮ್ಮ ಸ್ವಾರ್ಜಿತ ಸಂಪತ್ತಿನ ಅಧಿಕಾರಿಗಳಾದರೂ ಪಾಶ್ಚಾತ್ಯದ ವ್ಯಕ್ತಿಜಂ ಭಾವನೆಗಳಂತೆ ಸ್ವದೇಶೀ ಪ್ರಭುತ್ವವನ್ನು ತಮ್ಮ ರಕ್ತಬಂಧುಗಳ ಮೇಲೆಯೇ ಚಲಾಯಿಸುವದಲ್ಲದೆ, ಕುಟುಂಬದಲ್ಲಿ ಬಲಹೀನರಿದ್ದರೆ

> ಇದ್ದಂತಿರುವದು ಪ್ರಗತಿಯ ಸೂಚನೆಯಲ್ಲ; ಬದಲಾವಣೆಯೇ ಬೆಳವಣಿಗೆಯ ಲಕ್ಷಣ. ಕಾಲಕ್ಕೆ ತಕ್ಕ ಸುಧಾರಣೆಗಾಗಿ ವಿಶಾಲ ಮನಸ್ಸಿನಿಂದ ಅಳಿಯಸಂತಾನಿಗರು ಹೋರಾಡಲು ಮುಂದಾಗಬೇಕು.

ನಿತ್ಯಜೀವನಕ್ಕೆ (ಕುಟುಂಬದ ಸಂಪತ್ತು ಹೇರಳವಿದ್ದರೂ) ಕೊನ್ನಮಾಡಿದ್ದು ಪ್ರತ್ಯಕ್ಷ ಗೋಚರಕ್ಕೆ ಬಂದಿರುವುದು. ಇಂತಹ ಅಮಾನುಷ ವರ್ತನೆಗೆ ಎಷ್ಟಕ್ಕೂ ಎಡೆಕೊಡಬಾರದು. ಬಂಧುವರ್ಗದವರಲ್ಲಿ ದ್ವೇಷಾಸೂಯೆಯನ್ನಿಟ್ಟುಕೊಂಡು, ಕೊನೆಗೆ ಪಿಟ್ಟೆ! ಪೆಟ್ಟು!! ಕತ್ತಿ!!! ದೊಣ್ಣೆ!!!! ಕೋರ್ಟು!!!!! ಎಂದು ತಮ್ಮ ಸ್ವಾರ್ಥಕ್ಕಾಗಿ ಆ ಪೌರುಷವನ್ನು ತೋರಿಸಿ, ಅವರು ನಾಶವಾಗುವದಲ್ಲದೆ, ರಕ್ತಬಂಧುಗಳನ್ನು ನಿರ್ಗತಿಕರನ್ನಾಗಿ ಮಾಡಿಸಿ, ಕೊನೆಗೆ ಎಲ್ಲವೂ ಹಾಳಾದ ಮೇಲೆ ಅಯ್ಯೋ! ನಮ್ಮ ಅದೃಷ್ಟವೇ ನಾವು ಹುಟ್ಟಿದ್ದು ಇಂತಹ ಕಾದಾಟವನ್ನು ಮಾಡಲಿಕ್ಕೆ! ಎಂದು ಕೊರಗುವರು. ಇಂತಹ ಅನರ್ಥವುಂಟಾಗುತ್ತದು ಬರೇ ಸ್ವಾರ್ಥಕ್ಕಾಗಿ. ಆದುದರಿಂದ, ಮಿತ್ರರೇ, ಅದು ನಮ್ಮದು, ಇದು ನಿಮ್ಮದು ಎಂಬ ಸಂಕೋಚವನ್ನು ಬಿಟ್ಟು ವಿಶಾಲ ಬುದ್ಧಿಯಿಂದ ಈ ಜಿಲ್ಲೆಯ ನಮ್ಮ ಜಾತಿಯವರಿಗೆ ಸಂಬಂಧಪಟ್ಟ ಎಲ್ಲಾ ಜಮೀನನ್ನು, ಸಮಾಜದ ಒಂದು ಬೋರ್ಡನ್ನು ಸ್ಥಾಪಿಸಿ, ಆ ಬೋರ್ಡಿನ ಆಡಳಿತಕ್ಕೇನೇ ಬಿಟ್ಟುಕೊಡಬೇಕು. ಜಮೀನಿನ ರಯೋತಿಯನ್ನು ಬೋರ್ಡಿನವರೇ ಅಲ್ಲಲ್ಲಿ ಶಾಖೆಗಳನ್ನು ಸ್ಥಾಪಿಸಿ ನೋಡಿ ಕೊಂಡರೆ, ಈಗ ಜಮೀನ್ ತೀರ್ವೆ ತೆರಲಿಕ್ಕೆ ಸಾಧ್ಯವಿಲ್ಲದೆ ಆಸ್ತಿ ಏಲಂ ಮಾಡಿಸಿಕೊಳ್ಳುವದನ್ನು ತಪ್ಪಿಸಿಕೊಳ್ಳುವದಲ್ಲದೆ ಉತ್ಪತ್ತಿಯನ್ನು ಮೊದಲು ನೂರಕ್ಕೆ 30 ಪಡೆದರೆ ಈಗ 70 ಸಿಕ್ಕುವ ರೀತಿಯಲ್ಲಿ ಸುವ್ಯವಸ್ಥಿತ ರೀತಿಯಿಂದ ಸಂಪಾದಿಸಬಹುದಲ್ಲವೇ?

ಹಾಗಲ್ಲದಿದ್ದರೆ ಒಬ್ಬ ಆಡಳಿತದಾರನು, ದುರ್ವ್ಯಸನದಿಂದಲೂ, ಅವಿಚಾರದಿಂದಲೂ, ಸಂಪತ್ತನ್ನು ನಾಶಮಾಡಿ ತೀರ್ವೆ ತೆರಲಿಕ್ಕೆ ಅಸಾಧ್ಯವಂತನಾದರೆ, ಅವನ ಮನೆಯು ಅನಾಥ ಶಿಶುಮಂದಿರವು, ಪಿತ್ರಾರ್ಜಿತ ಜಮೀನನ್ನು ಸರಕಾರದ ತೀರ್ವೆ ತೆರಲಿಕ್ಕೆ ಏಲಂ ಹಾಕಿಸಿಕೊಂಡು ನಾಶಪಡಿಸಿಕೊಳ್ಳುವುದು ತಿಳಿಗೇಡಿತನವಲ್ಲವೇ? ಆದ್ದರಿಂದ ಹತ್ತು ಜನರ ಬದುಕು ಹತ್ತು ಜನರ ಹಿತಕ್ಕಾಗಿ, ಒಳ್ಳೆಯದಾಗುವದಾಗಲೀ, ಹಾಳಾಗುವುದಾಗಲೀ ಆ ಹತ್ತು ಜನರ ಕೈಯಲ್ಲಿದ್ದು ಏನೇ ಆದರೂ ಅನ್ಯಾಯವಲ್ಲ. ಒಬ್ಬನ ಗೃಹಚಾರ ಎಲ್ಲರನ್ನು ಸುತ್ತಲು ಬಿಡಬಾರದು.

ಹಳ್ಳಿಯ ಉದ್ಧಾರವಾಗಲೆಂದು ಕಾಂಗ್ರೆಸ್ ಸಂಸ್ಥೆಯು ಆಗ್ರಹದಿಂದಿರುವಾಗ, ನಮ್ಮ ಜಿಲ್ಲೆಯ ಮುಕ್ಕಾಲಂಶ ಹಳ್ಳಿಗಳು ನಮ್ಮ ಅಜ್ಞೆಯಲ್ಲಿರುವಾಗ, ಕಾಂಗ್ರೆಸಿನ ಯಾವ ಕಾರ್ಯಕ್ರಮವನ್ನಾದರೂ ಶಿಸ್ತಿನಿಂದ ಜಾರಿಗೆ ತರಬಹುದು. ಇಂತಹ ಅನುಕೂಲತೆಗಳೆಲ್ಲಾ ನಮ್ಮ ಹತ್ತಿರವಿರುವಾಗ ನಾವು ಕಾಲಚಕ್ರ ತಿರುಗಿದಂತೆ, ಉರುಳಿದರೆ, ಸುಖಮಯವಾದ ಜೀವನವನ್ನು ಸರ್ವರಿಗೂ ಕಲ್ಪಿಸಿಕೊಡಬಹುದು. ಕೃಷಿಯನ್ನು ಹೊಸ ಯೋಜನೆ ಪ್ರಕಾರ ಮಾಡಬಹುದಲ್ಲದೆ ಎಷ್ಟೋ ನಂಜಬಂಜರು ಅದನ್ನು ಊರ್ಜಿತಕ್ಕೆ ತರಬಹುದು. ನಿರುದ್ಯೋಗಿಗಳು, ಗಂಡು ಜೇನುನೊಣದಂತಿರುವ ನಿರಿಮಂಬವರು ತಮ್ಮ ಕುಟುಂಬದ ಸ್ವಂತ ಜಮೀನು ಕಣ್ಣಾರೆ ನಶಿಸಿಹೋಗುವುದನ್ನು ಕಂಡರೂ ಕಾಣದವರಂತೆ ಅವರೇ ನಿರಾಶಾಜೀವನದಿಂದ ನರಳುವುದನ್ನು ಸಹಾ ಕಾಣಾತ್ಕಲಿರುವುದನ್ನು ದೂರಮಾಡಬಹುದು.

ಆದುದರಿಂದ ಸರ್ವ ಜನರಿಗೂ ಉದ್ಯೋಗವನ್ನು ಕಲ್ಪಿಸಿಕೊಡುವ ಸಲುವಾಗಿ ಹೊಸ ರೀತಿಯಿಂದ ಆಡಳಿತ ಕ್ರಮವನ್ನು ನಡಿಸಿದರೆ ಎಲ್ಲರನ್ನು ಉದ್ಯೋಗಮಾಡಿರಿ ಎಂದು ಎಚ್ಚರಿಸಿದಂತಾಗುವುದಿಲ್ಲವೇ!

ನಮ್ಮ ಎಲ್ಲಾ ಜಮೀನನ್ನು ಸಮಾಜದ ಹಿತಕ್ಕಾಗಿ ಬಿಟ್ಟರೆ, ಮರಣಿಲಾಗಿ ಅನ್ನಕ್ಕೆ ಬಟ್ಟೆಗೆ ಗತಿಯಿಲ್ಲದ ಸಮಾಜದ ನಿರ್ಗತಿಕ ಬಂಧುಗಳಿಗೆ ಅನ್ನವಸ್ತ್ರ ಕೊಡುವುದಲ್ಲದೆ, ವಿದ್ಯೆಯಲ್ಲಿ, ಕೈಗಾರಿಕೆಯಲ್ಲಿ, ಕೃಷಿಯಲ್ಲಿ, ವ್ಯಾಪಾರದಲ್ಲಿ, ಬ್ಯಾಂಕಿಂಗ್‌ನಲ್ಲಿ, ಮುಂದೆ ಬರುವಂತೆ ಮಾಡಿಸಿ ಎಲ್ಲರೂ ಸುಖವಾಗಿರಬಹುದು. ಕೋರ್ಟುಕಚೇರಿಗೆ ಹೋಗುವ ಪ್ರಸಂಗವು ತಪ್ಪುವದು. ಒಂದು ಮುಡಿ ಗದ್ದೆಗಾಗಿ ಖೂನಿ ಮಾಡಿಕೊಳ್ಳುವದು ನಿಲ್ಲುವದು. ದಾಯಾದಿ ಮತ್ಸರಕ್ಕೆ ಎಡೆಯೇ ಇಲ್ಲ, ವರದಕ್ಷಿಣೆ ಎಂಬ ಪೈಶಾಚಿಕ ಪದ್ಧತಿಯು ಮಾಯವಾಗುವುದು, ಹೊಟ್ಟೆಗಿಲ್ಲದೆ, ವ್ಯಭಿಚಾರ, ಕಳವು, ಕೊಲೆ ಇಂತಹ ದುಷ್ಟಟಗಳು ನಾಶವಾಗಿ ಸುಖಶಾಂತಿಯುಂಟಾಗುವದು. ಆದ್ದರಿಂದ ನವ ತರುಣತರುಣಿಯರೇ ಎದ್ದೇಳಿರಿ, ಹೊಸ ಕಲ್ಪನಾ ಸಾಮ್ರಾಜ್ಯದಲ್ಲಿದ್ದಂತೆ ಸಮಾಜಾಡಳಿತಕ್ಕೆ ಗಮನವನ್ನಿಡಿರಿ. ಹೀಗಾಗಲೆಂದು ಬಂಧುಪ್ರೇಮವನ್ನುಂಟುಮಾಡಿಕೊಳ್ಳಿರಿ.

ಇತಿ

ಸಮಾಜ ಬಂಧು,

ಕೊಕ್ಕಿಬೈಲು ವಿಟ್ಠಲ ಸೆಟ್ಟಿ.

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

ತಾ. 7-7-1939,

ಸಂಪು—ನಾಗಪಾಡದಲ್ಲಿಯ ಫಿಲ್ಲಿಪ್ಸ್ ಕಾರ್ಖಾನೆಯವರು ತಮ್ಮ ಬೇಡಿಕೆಗಳಿಗೆ ಅಧಿಕಾರಿಗಳು ಗಮನವೀಯಲಿಲ್ಲವೆಂಬ ಕಾರಣದಿಂದ ಮಂಗಳವಾರ ದಿವಸ ಸಂಪುಹೂಡಿರುವರು. ಹೆಚ್ಚು ಸಮಯದಿಂದ ಕೆಲಸ ಮಾಡುತ್ತಿರುವವರನ್ನು ಖಾಯಮಾಗಿ ಕೆಲಸಕ್ಕಿಡಬೇಕೆಂದೂ, ಕೆಲಸದ ಸಮಯವನ್ನು 9 ಗಂಟೆಯಿಂದ 8 ಗಂಟೆಗೆ ಇಳಿಸಬೇಕೆಂದೂ, ಇವರ ಬೇಡಿಕೆ. ಲಾಲ್ ಬಾವಟ ಪ್ರೆಸ್ ಕಾಮಗಾರ ಯೂನಿಯನವರು ಈ ಸಂಪನ್ನು ಯೋಗ್ಯ ರೀತಿಯಲ್ಲಿ ನಡೆಸುತ್ತಿರುವರು.

ಯೋಗ್ಯ ಮಾದರಿ—ಎಕ್ಸಿಕ್ಯೂಟಿವಿನಿಂದ ಜ್ಯುಡಿಶಿಯರಿಯನ್ನು ಬೇರೆ ಮಾಡಬೇಕೆಂಬ ಗುಲ್ಲು ಈಗೀಗ ಕಾಂಗ್ರೆಸ್ ಸರಕಾರಗಳಲ್ಲೆಲ್ಲಾ ಹಬ್ಬಿದೆ. ಮುಂಬಯಿ ಸರಕಾರವು ಈ ವಿಷಯದಲ್ಲಿ ಧೈರ್ಯ ತಂದುಕೊಂಡು ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರಿಗಿರುವ ಹಕ್ಕನ್ನು ಮುಂಬಯಿಪ್ರಾಂತದ ಸಬ್ ಜಡ್ಜರಿಗಿತ್ತು ಯೋಗ್ಯ ಉದಾಹರಣೆಯನ್ನಿತ್ತಿದೆ. ಆದರೆ, ಸಬ್-ಜಡ್ಜರು ಈ ಅಧಿಕಾರವನ್ನು ಉಪಯೋಗಿಸ ಬಲ್ಲರೋ ಇಲ್ಲವೋ ಎಂಬುದನ್ನು ಪ್ರಾಕ್ಟೀಸಿನೊಡನೆ ಕಾಲದ ನಂತರ ನಿಶ್ಚೈಸಲ್ಪಡುವುದು.

ಸುಭಾಸ್ ಬಾಬು, ಜಿನ್ನ, ಮತ್ತು ಅಂಬೇಡ್ಕರ್—ಭಾರತದಲ್ಲಿರುವ ವಿರುದ್ಧ ಪಕ್ಷಗಳೊಡನೆ ಮೈತ್ರಿಯನ್ನು ಬೆಳಸಿ, ಸ್ವಾತಂತ್ರ್ಯದ ಹಾದಿಯನ್ನು ತಡೆವಿಹೀನವಾಗಿ ಮಾಡಬೇಕೆಂಬ ಅಭಿಪ್ರಾಯದಿಂದ ಶ್ರೀ. ಸುಭಾಸ್ ಭೋಸರವರು, ಮುಸ್ಲಿಂ ಲೀಗಿನ ಅಧ್ಯಕ್ಷರಾದ ಜಿನ್ನರೊಡನೆಯೂ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ, ಡಾ. ಅಂಬೇಡ್ಕರರೊಡನೆಯೂ ಒಂದು ತರದ ಒಪ್ಪಂದಕ್ಕೆ ಬರಬೇಕೆಂದು ವಿಚಾರಿಸಿದರು.

ಸುಭಾಸರವರು ಫೋರ್ವರ್ಡ್ ಬ್ಲೋಕಿನ ಧ್ಯೇಯಗಳನ್ನು ತಿಳಿಸಿ, ಜಿನ್ನರೊಡನೆ ನಾವಿಬ್ಬರೂ ಫೆಡರೇಶನಿಗೆ ವಿರುದ್ಧವಿದ್ದೇವೆ. ಭಾರತದ ಸ್ವಾತಂತ್ರ್ಯವೇ ನಮ್ಮೆಲ್ಲರ ಗೇಲು, ಜಾತಿಜಾತಿಗಳೊಳಗಿನ ವೈಮನಸ್ಸನ್ನು ಕಡಿದುಹಾಕಬೇಕೆಂದೇ ನಮ್ಮ ಪರಮ ಧ್ಯೇಯ. ಹೀಗಿರುವಾಗ ನಾವೇಕೆ ಜೊತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಬಾರದು? ಎಂದು ಕೇಳಿದರು. ಶ್ರೀ. ಜಿನ್ನಾರವರು ಇವೆಲ್ಲವುಗಳನ್ನೂ ವಿಚಾರಿಸಿ ಹೇಳುತ್ತೇನೆಂದೂ ಜಾತಿಭೇದವನ್ನು ಆದಷ್ಟು ತ್ವರಿತದಲ್ಲೇ ನಾಶಗೊಳಿಸಬೇಕೆಂದೂ ತನ್ನ ಅಭಿಪ್ರಾಯವೆಂದಿರುವರು.

ಹೀಗೆ ಸುಭಾಸರ ಕಾಂಗ್ರೆಸ್ ವಿರುದ್ಧ ಪಕ್ಷಗಳೊಡನೆ ಮೈತ್ರಿ ಬೆಳಸಲು ಪ್ರಯತ್ನಿಸುತ್ತಿರುವುದನ್ನು ನೋಡಿ ಕಾಂಗ್ರೆಸ್ ಜನರಿಗೆ ಮೈಯ್ಯುರಿಯು ತೊಡಗಿದೆ. ಆದರೆ ಸುಭಾಸರವರು ಕಾಂಗ್ರೆಸಿನ ಅಧ್ಯಕ್ಷರಾಗಿರುವಾಗ ಅಥವಾ ಇತರಹಾಕಮಂಡಿನವರ ಜಿನ್ನರೊಡನೆ ಹಲವಾರು ಸಾರಿ ಭೇಟಿಯಾದಾಗ ಯಾರೂ 'ಚಕಾರ' ಶಬ್ದವನ್ನೆತ್ತಿಲ್ಲ ಇದೇನು ಹೀಗೆ?

ದುಃಖ ಸೂಚನೆ—

ಮುಂಬಾಯಿ—ದಿ ಎಂಪ್ಲೋಯಿಸ್ ಕೋ ಓಪರೇಟಿವ್ ಬ್ಯಾಂಕಿನಲ್ಲಿ ಕೆಲಸಮಾಡುತ್ತಿದ್ದ ಶ್ರೀಯನ್. ಡಿ. ಸಾಲಿಯಾನ್‌ರು ತಾ. 2-7-39ನೇ ರಾತ್ರಿ 12½ ಗಂಟೆಗೆ ಜಿ.ಐ.ಪಿ.ರೈಲ್ವೆ ಆಫೀಸಿನ ಎರಡನೆ ಮಾಳಿಗೆಯಿಂದ ಕೆಳಗೆ ಹಾರಿ ಮರುದಿನ ಬೆಳಿಗ್ಗೆ 5½ ಗಂಟೆಗೆ ಜೆ. ಜೆ. ಆಸ್ಪತ್ರೆಯಲ್ಲಿ (ತನ್ನ 22ನೇ ವಯಸ್ಸಿನಲ್ಲಿ) ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಬಿಲ್ಲವ ಸಮಾಜಕ್ಕೆ ಸೇರಿದ ನಿಟ್ಟೆ ನಾಗುಪೂಜಾರಿಯರ ಪುತ್ರ ದಿವಂಗತರು ಜನ ಪ್ರೀತಿಯೂ ಉತ್ತಮ ನಡತೆಯವರೂ, ಸಮಾಜ ಸೇವಕರೂ ಆಗಿದ್ದರು.

"ಕನ್ನಡ ಸಂಗೀತ ಸಭಾ" (ಎಮೆಚ್ಯೂರ್ಸ್) ಮುಂಬಾಯಿ—ಇವರು ಸಭೆಯ ಅಧ್ಯಕ್ಷರಾದ ಶ್ರೀ. ಯಂ. ನಾರಾಯಣರಾಯರ ಲಗ್ನದ ಗೌರವಾರ್ಥವಾಗಿ ತಾ. 2-7-39ರಲ್ಲಿ ಜರಗಿಸಿದ ಸತ್ಕಾರ ಸಮಾರಂಭದಲ್ಲಿ ದಂಪತಿಗಳನ್ನು ಬಹುಮಾನಪೂರ್ವಕವಾಗಿ ಸತ್ಕರಿಸಿದರು ಇದೇ ಸಮಾರಂಭದಲ್ಲಿ ಸಭೆಯ ಸದಸ್ಯರಾಗಿದ್ದು ವಿವಾಹಿತರಾದ ಶ್ರೀ। ವಿ. ಯಂ. ಶಾಲ್ಯಾನರನ್ನೂ ಬಹುಮಾನವಿತ್ತು ಸತ್ಕರಿಸಲಾಯಿತು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳಸು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3 ವಿ ಪಿ ಖರ್ಚು 0-8-0 ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಸಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರಸ್ತೆ, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

Udipi is not secluded after all

FOR HERE COMES

TOOFAN MAIL

To carry you off your feet to ecstacy of joy!

Running at break-neck speed, it is bound towards the very core of your heart!

Some say it is worth seeing–others swear it is simply marvellous–But all are definite that money spent over it is amply returned!

By special arrangement, this 100% Thriller is brought over to

SRI RAMAKRISHNA THEATRE, UDIPI.

and will be flashed on the silver screen From 12—7—1939

RANJITS SPECIAL **TOOFAN MAIL**

THAT HAS BROKEN

RECORDS IN ITS ENTERTAINMENT VALUE

FEATURING:

E. BILLIMORIA, ISHWARLAL, DIXIT, GHORY, MADHURI, KHATOON & OTHERS.

ಅಂತೂ ಉಡುಪಿಯು ಒಂಟಿಯಾಗಿಲ್ಲ—

ಏಕೆಂದರೆ ನಿಮ್ಮನ್ನು ಸಂತೋಷ ಸಾಮ್ರಾಜ್ಯಕ್ಕೆ ಸಾಗಿಸಲು 'ಟೂಫನ್ ಮೈಲ್'

ಬಂದಿರುವುದು.

ವಾಯುವೇಗದಲ್ಲಿ ಧಾವಿಸುತ್ತಿರುವ ಇದರ ಗುರಿಯೇ ನಿಮ್ಮ ಹೃದಯದ ತಳ. ಇದನ್ನು ಎಲ್ಲರೂ ನೋಡತಕ್ಕದ್ದೆ ಎನ್ನುವರು ಕೆಲವರು! ನೋಡಿ ದಿಗ್ಭ್ರಮೆಗೊಳ್ಳಬೇಕು ಎನ್ನುವರು ಇತರರು!—ಆದರೆ ಇದಕ್ಕಾಗಿ ಖರ್ಚುಮಾಡಿದ ಹಣ ಆಸೆಗೆ ರೂಪಾಯಿಯಾಗಿ ತಿರುಗಿ ಸಿಕ್ಕಿತು ಎನ್ನುವರು ಎಲ್ಲರೂ!

ಶೇಕಡಾ ೧೦೦ರ ಸಲೆಯಲ್ಲಿ ನಿಮಗೆ ಮೈ ಜುಮ್ಮೆನಿಸುವ ಇದನ್ನು ಸ್ಪೆಶಲ್ಲಾಗಿ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿಗೆ ತರಿಸಿಯದೆ

ತಾರೀಕು 12-7-1939ರಿಂದ ರಜತ ಪರದೆಯ ಮೇಲೆ ವಿರಾಜಿಸಲಿದೆ!

ರಣಜಿತ್‌ನವರ ಸ್ಪೆಶಲ್ ಅತ್ಯುತ್ಕೃಷ್ಟ ಚಿತ್ರ

ಟೂ ಫಾ ನ್ ಮೈ ಲ್

ನಟರು:— ಇ. ಬಿಲ್ಲಿಮೋರಿಯಾ, ಈಶ್ವರಲಾಲ್, ದೀಕ್ಷಿತ, ಗೋರಿ, ಮಾಧುರಿ, ಕಾಟೂನ್ ಮೊದಲಾದವರು.

Next:—Krishna Movietone's prize-production 'Zamana' featuring Padma Devi, Nazir & other.

ಬರುವ ಚಿತ್ರ:—ಪದ್ಮಾದೇವಿ ಮತ್ತು ನಾಜಿರ್ ನಟಿಸಿರುವ ಕೃಷ್ಣಾ ಮೂವಿಟೋನಿನವರ ಬಹುಮಾನಾಂಕಿತ ಚಿತ್ರ,

" ಜ ಮಾ ನಾ "

Why do you hesitate?

Give us your Slide and reap a bumper business.

ಸಂದೇಹವೇಕೆ?

ನಿಮ್ಮ ಸ್ಲೈಡನ್ನು ಕೊಡಿರಿ—

ಅಂದರೆ ನಿಮ್ಮಲ್ಲಿ ಅನಿರೀಕ್ಷಿತ ವ್ಯಾಪಾರ ವಾಗುವುದು ಸಿದ್ಧಾಂತ!

TOOFAN MAIL

SYNOPSIS

Masked Terror Kidnaps the Prince, and gaggs down the Queen of Rajanagar, travelling in Toofan Mail. Subsequently, the Queen is rescued by Senapathy Samarsimh. The Maharaja commands Randhir Diwan's son, to proceed with the work of tracing the Prince, when the Maharaja is warned by the Masked Terror on the point of the dead body of the Dewan. Randhir, however, is more a pleasure seeking youth than a persistent fighter. When the Prince's beheading is arranged a Red Mask comes and rescuing him, safely escorts him to the Palace.

Senapathy Samarsimh, a hypocrite as he is, conspires to shoot the Maharaja and the Prince during their Birthday Sawari, but the danger is averted by the timely intervention of the Secretaries of Randhir. Haredeo, one of the gangsters of the Masked Terror, is ordered to kill Randhir, who accidentally falls in love with Rupkumari, daughter of Haredeo. Fearing that Hardeo might prove treacherous on account of this turn of event, Masked Terror captures Hardeo and Rupkumari though they are subsequently rescued by the Red Mask. The Masked Terror being thwarted in all his plans, is furious,a nd announces that Royal Treasury shall be plundered. Rupkumari and Hardeo get shelter in the Royal Palce. Randhir is put on duty to guard the Treasury. *What happens next? Who is the Masked Terror? Who is Red Mask? What becomes of Randhir? What about Samarsimh? See on the silver screen.*

ಮಿಸ್. ಮಾಧುರಿ.

ಕ ಥಾ ಸಾ ರಾ ಂ ಶ

ಟೂಫನ್ ಮೈಲಿನಲ್ಲಿ ಪ್ರಯಾಣ ಬೆಳೆಸುತ್ತಿದ್ದ ರಾಜನಗರದ ರಾಣಿ ಮತ್ತು ಯುವರಾಜನನ್ನು ಮುಸುಕು ಹಾಕಿಕೊಂಡ ವ್ಯಕ್ತಿಯೊಬ್ಬನ ಸಂಗಡದವರು ಸೆರೆಹಿಡಿಯುವರು. ಸೇನಾಪತಿ ಸಮರಸಿಂಹನು ಮಹಾರಾಣಿಯನ್ನು ಬಿಡಿಸಿದರೂ ಯುವರಾಜನು ಕಾಣೆಯಾಗುವನು, ರಾಜನು ಈ ವಿಷಯ ಚಿಂತಿಸುತ್ತಿರುವಾಗಲೇ ದಿವಾನನ ಹೆಣವು ಆಸ್ಥಾನದಲ್ಲಿ ತೋರಿಸಲ್ಪಡುವುದಲ್ಲದೆ, ಸಂಗಡದ ಪತ್ತೆ ಹಚ್ಚುವವರ ಪಾಡು ಹೀಗೆಯೇ ಆಗುವುದು ಎಂಬ ಎಚ್ಚರಿಕೆಯ ಪತ್ರವೂ ಸಿಗುವುದು. ದಿವಾನನ ಮಗನಾದ ರಣಧೀರನು ಯುವರಾಜನನ್ನು ಪತ್ತೆಹಚ್ಚುವ ಕಾರ್ಯಕ್ಕೆ ನಿಯಮಿಸಲ್ಪಡುವನು. ಆದರೆ ರಣಧೀರನು ಸ್ತ್ರೀಲೋಲನಾದ ಕಾರಣ ಯುವರಾಜನನ್ನು ಸಂಗಡದವರು ಕೊಲ್ಲುವುದರೊಳಗೆ ಕೆಂಪು ಮುಸುಕಿನವನೊಬ್ಬನು ಅವನನ್ನು ತಪ್ಪಿಸಿ ಆಸ್ಥಾನದಲ್ಲಿ ಒಪ್ಪಿಸುವನು.

ಮಹಾರಾಜನನ್ನೂ ಯುವರಾಜನನ್ನೂ ಸಂಗಡದವರು ಜನ್ಮದಿನಾಚರಣೆಯ ಸವಾರಿಯ ದಿನ ಗುಂಡು ಹೊಡೆದು ಕೊಲ್ಲಬೇಕೆಂದು ನಿಶ್ಚಯಿಸಿದರೂ, ರಣಧೀರನ ಸೆಕ್ರೆಟರಿಗಳು ಉಪಾಯಾಂತರದಿಂದ ಅದನ್ನು ತಪ್ಪಿಸುವರು. ಸಂಗಡದವರಲ್ಲೊಬ್ಬನಾದ ಹರದೇವನೆಂಬವನನ್ನು ರಣಧೀರನನ್ನು ಕೊಲ್ಲಲು ನಿಯಮಿಸುವರು. ರಣಧೀರನು ಹರದೇವನ ಮಗಳಾದ ರೂಪಕುಮಾರಿಯಲ್ಲಿ ಮೋಹಪರವಶನಾಗಿದ್ದ ಕಾರಣ, ಸಂದರ್ಭಾನುಸಾರ ಹರದೇವನಿಂದ ಗುಟ್ಟು ಹೊರಬಿದ್ದು ಕಾರ್ಯ ಕೆಡಬಹುದೆಂದು ಸಂಗಡದವರು, ಹರದೇವನನ್ನೂ ರೂಪಕುಮಾರಿಯನ್ನೂ ಸೆರೆಹಿಡಿದರೂ, ಈಗಲೂ ಕೆಂಪುಮುಸುಕಿನವನು ಬಂದು ತಡೆಯುವನು. ತನ್ನ ಪ್ರತಿಯೊಂದು ಗುಪ್ತಾಲೋಚನೆಯೂ ನಿಷ್ಫಲವಾಗುತ್ತಿರುವುದನ್ನು ನೋಡಿ ಕೋಪೋದ್ರೇಕದಿಂದ ಕಪ್ಪು ಮುಸುಕಿನವನು ರಾಜ ಭಂಡಾರವನ್ನು ಸೂರೆಮಾಡುವೆನೆಂದು ಹಟ ತೊಡುವನು. ಇತ್ತ ರೂಪಕುಮಾರಿಯೂ ಹರದೇವನೂ ರಾಜನ ಮರೆಹೊಕ್ಕು ಅರಮನೆಯಲ್ಲಿಯೇ ಉಳಿದುಕೊಳ್ಳುವರು. ರಾಜಭಂಡಾರವನ್ನು ಕಾಯಲು ರಣಧೀರನು ನಿಯಮಿಸಲ್ಪಡುವನು. ಮುಂದೇನಾಗುವುದು? ಕಪ್ಪು ಮುಸುಕಿನವನಾರು? ಕೆಂಪುಮುಸುಕಿನವನಾರು? ರಣಧೀರನೇನಾಗುವನು? ಸಮರಸಿಂಹನ ವಿಚಾರವೇನಾಗುವುದು? ನೋಡಿರಿ ರಜತ ಪರದೆಯಲ್ಲಿ!

Comming:-Pahadi Kanya, Achuta Kanya, Baktha Kuchela Etc.,

ಮುಂದಿನ ಚಿತ್ರ:---ಪಹಡಿ ಕನ್ಯಾ, ಅಚ್ಚುತ ಕನ್ಯಾ, ಭಕ್ತ ಕುಚೇಲ ಇತ್ಯಾದಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

THE
Canara Banking Corporation, Ltd.
(Incorporated in British India.)

THE REGISTER OF MEMBERS
&
TRANSFER BOOKS OF THE CORPORATION
will remain closed from 15-7-1939 to
31-7-1939 both days inclusive.
(By order)

V. R. KAMATH,
MANAGER.

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಶ್ವಾಸಕಾಸ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ 1ರ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.
ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಕ್ಕುವ ಸ್ಥಳ:-ದಿ ಕೆನರಾ ಟ್ರೈಡ್ಸ್ ಲಿಮಿಟೆಡ್, ಪುತ್ತೂರು, ಶ್ರೀ ರಾಮ ಸ್ಟೇಶನರಿ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು, ವಿಟ್ಠಲ್ ನಾರಾಯಣ ಶೆಣೈ, ಟ್ರಿಮ್ ಟರ್ಮಿನಸ್, ಮಜಗಾಂವ್, ಬೊಂಬಾಯಿ, ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗ್ಳೂರು ಸ್ಟೋರ್ಸ್, ಮಡಿಕೇರಿ, ಕೃಷ್ಣ ಫಾರ್ಮಸಿ, ಕುಂದಾಪುರ, ನವಭಾರತ ಬುಕ್ ಡಿಪೋ ,ಮತ್ತು ಕೊರಗಪ್ಪ, ನ್ಯೂಸ್ ಏಜಂಟ್ಸ್ ಉಡುಪಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಪರುಗಳ ಚೀಟು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಕ್ರಯಕೊಳ್ಳುವರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO.,
Balmat Road, MANGALORE.
Includ by the Mysore Govt. Stores, Purchase Committee in the list of approveFdirms

WANTED: 80 candidates of both sexes who after expert training as film artistes and technicians are prepared to work for the College Film Company for two years on decent salary Free hostel seat and other benefits. Illustrated Art Prospectus on 5 annas posatge. Prabhat Movietone College, Bombay 11

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರಿಯಲ್ಲಿ ಮೇಲುಗೈ, ದುರಾದೃಷ್ಟಗಳ ದುಷ್ಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0
ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

ಸ್ವದೇಶ ಸಮಾಚಾರ

ನೆಹರುಗಳೂ ಸುಭಾಸರನ್ನು ಖಂಡಿಸುತ್ತಾರೆ

ಜುಲಾಯಿ ತಾ. 9ನ್ನು ಎ. ಐ. ಸಿ ಸಿ. ನಿರ್ಣಯದ ನಿಷೇಧಾರ್ಥವಾಗಿ ಆಚರಿಸಬೇಕೆಂದು ಶ್ರೀ ಸುಭಾಷರೂ ಎಡಪಕ್ಷೀಯರೂ ನಿರ್ಣಯಿಸಿರುವದನ್ನು ನಿಷೇಧಿಸಿ ಪಂಡಿತ ನೆಹರುಗಳು ಅದು ಕಾಂಗ್ರೆಸಿನೊಡನೇ ಹೋರಾಡಿದಂತಾಗುವದೆಂದೂ ಕಾಂಗ್ರೆಸ್ ಹಿತಕ್ಕೆ ಧಕ್ಕೆತರುವ ಅಪಾಯಕರ ಸೂಚನೆಯೆಂದೂ, ತೀರಾ ಸಂಕುಚಿತ ದೃಷ್ಟಿಯ ಪರಿಣಾಮವೆಂದೂ ಸವಿವರವಾದ ಹೇಳಿಕೆಯೊಂದನ್ನಿತ್ತಿದಾರೆ.

ಅಹಮದಾಬಾದಿನಲ್ಲಿ ಮುಷ್ಕರಾರಂಭ

ಅಹಮದಾಬಾದಿನ ಮಿಲ್ ಮ್ಹಾಲಕರ ಸಂಘ ಮತ್ತು ಸರ್ನಿ ಖಾಮದಾರ ಸಂಘಗಳೊಳಗೆ ಕೆಲದಿನಗಳಿಂದ ನಡೆಯುತ್ತಿದ್ದ ಒಪ್ಪಂದದ ಚರ್ಚೆಯು ನಿಷ್ಫಲವಾಗಿರುವದು. ಸಾನಿರ್ ಖಾಮದಾರ್ ಸಂಘದವರು ಜುಲಾಯಿ 12ರಿಂದ ಮುಷ್ಕರವನ್ನು ಹೂಡಬೇಕೆಂದು ನಿರ್ಧರಿಸಿದ್ದಾರೆ. ಅಹಮದಾಬಾದಿನ ಮಿಲ್ಲುಗಳ ಕೆಲಸದ ಬೀಗವಕ್ಕೈ ಈ ಸಂಘದೊಡನಿದ್ದು, ಕೆಲವು ಮಿಲ್ಲುಗಳ ಕೆಲಸಗಾರರಿದನ್ನು ಸೇರಲಿಲ್ಲವಾದರೂ ಮುಷ್ಕರವು ಎಲ್ಲಾ ಮಿಲ್ಲುಗಳ ಮೇಲೂ ಪರಿಣಾಮವನ್ನುಂಟುಮಾಡಬಹುದೆಂದು ತಿಳಿದುಬರುತ್ತದೆ.

ಪುನಃ ನಂಗಪ್ರಭಾತ ಆರೋಹಣವೆ?

ಕೈಲಾಸಗಿರಿಯೆಂದು ಹೆಸರಾದ ಹಿಮಾಲಯದ ನಂಗಪರ್ವತವನ್ನು 1940ರಲ್ಲಿ ಪುನಃ ಹತ್ತುವ ಆಲೋಚನೆಯನ್ನು ಕಳೆದ ವರುಷದ ಆರೋಹಿಗಳ ದಳನಾಯಕ ಪಾವುಲ್ ಬಾಯೆರಿ ಎಂಬ ಜರ್ಮನಿಯವನು ಮಾಡಿರುವನು. 1936-37ರಲ್ಲಿ ದುರದೃಷ್ಟಕ್ಕೊಳಗಾದ ಆರೋಹೀ ದಳದಲ್ಲಿದ್ದ ಉಲ್ರಿಚ್ ಲುಫ್ಟ್‌ರವರು 1940ರ ದಳದ ನಾಯಕತ್ವ ವಹಿಸುವರು.

ಗಡಿನಾಡಿಗೆ ಗಾಂಧಿಯವರ ಪ್ರಯಾಣ

ಮಹಾತ್ಮಾಗಾಂಧಿಯವರು ಶ್ರೀ ಮ.ಹದೇವ ದೇಸಾಯಿ ಮೊದಲಾದವರೊಡನೆ ಗಡಿನಾಡಿಗೆ ತೆರಳಿ ಅಬ್ದುಲ್ ಗಫರ್ ಖಾನರೇ ಮೊದಲಾದವರಿಂದ ಸ್ವಾಗತಿಸಲ್ಪಟ್ಟಿರುವರು. ಅವರಿಗೆ ಲಾಹೋರು, ರಾವಲಪಿಂಡಿ ಮೊದಲಾದೆಡೆಗಳಲ್ಲಿ ಸಂಭ್ರಮದ ಸ್ವಾಗತ ದೊರೆತು ಗಾಂಧಿಯವರ ಗಡಿನಾಡಿನ ಕಾರ್ಯಕ್ರಮಗಳಲ್ಲಿ ಬಹಳ ಮಿತಿಯನ್ನಿಡಲಾಗಿದೆ.

ಶಂಕರರಾವ ದೇವರಿಗೆ ಪಂಜಾಬಿನ ತಡೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರ ಶ್ರೀ ಶಂಕರರಾವ್ ದೇವ್ರೂ ಇವರು ಪಂಜಾಬು ಪ್ರಾಂತವನ್ನು ಪ್ರವೇಶಿಸಬಾರದಾಗಿ ಅಲ್ಲಿಯ ಸರಕಾರವು ತಡೆಹಾಕಿರುವದು. ಪಂಜಾಬು ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿದನ್ನು ಖಂಡಿಸಿ ಠರಾವು ಮಾಡಿರುವರು.

ರಾಮದುರ್ಗ ವಿಚಾರಣೆ.

ರಾಮದುರ್ಗ ಗೋದಲದ ವಿಚಾರಣೆಯು ಹೈಕೋರ್ಟು ಜಡ್ಜರೊಬ್ಬರಿಂದ ಪ್ರಾರಂಭಿಸಲ್ಪಟ್ಟಿದೆ. ಶ್ರೀ. ಶಂಕರರಾವ ದೇವ್ರೂ ಮತ್ತು ಶ್ರೀ. ಗಂಗಾಧರ ರಾಯರು ತಮ್ಮ ಸಾಕ್ಷ್ಯವನ್ನಿತ್ತರು. ಅವರು ಹೇಳಿಕೆಯಲ್ಲಿ ಪ್ರಜಾ ಧುರೀಣರು ಜನಸಭೆಗಳಿದ್ದರೆಂದೂ, ಜನರು ದರ್ಬಾರಿನಿಂದ ದೊರೆತ ರಿಯಾಯಿತಿಗಳನ್ನು ತಿರಸ್ಕರಿಸಿದರೆಂದೂ, ಒಪ್ಪಂದವಾಗುವ ಹೊತ್ತಿನಲ್ಲಿ ಜನರು ಸ್ವಲ್ಪ ಸ್ವಲ್ಪ ತಿರಸ್ಕರಿಸಿ ಹೆಚ್ಚಿನದನ್ನು ಬೇಡುತ್ತಿದ್ದರೆಂದೂ, ದರ್ಬಾರಿನವರು ತಮ್ಮ ಮಾತಿನಂತೆ ನಡೆಕೊಂಡಿದ್ದರಾದರೂ ಪ್ರಜಾ ಪರಿಷದಿನ ಧುರೀಣರು ತಮ್ಮ ಪಾಲಿನ ಕರ್ತವ್ಯವನ್ನು ಎಂದೂ ಮಾಡಲಿಲ್ಲವೆಂದೂ ಹೇಳಿರುವರು.

ಪುಟ ೭ರಿಂದ

ಭಾರತದಲ್ಲಿ ಸಹ ಜನರು ಸ್ವಾತಂತ್ರ್ಯಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಿರುವರು. ತನ್ನ ಉದ್ದೇಶ ಸಾಧನೆಯಲ್ಲಿ ಭಾರತವು ವೇಗವಾಗಿ ಜಯ ಹೊಂದುತ್ತಿರುವುದಕ್ಕೆ ಕಾಂಗ್ರೆಸಿನ ಪ್ರಭಾವವೇ ನಿದರ್ಶನ. ಡಾ|| ರವೀಂದ್ರನಾಥ ಠಾಕೂರ್ ಮತ್ತು ಜಪಾನಿನ ಕವಿ ನೊಗೋಚಿ ಇವರ ಪತ್ರವ್ಯವಹಾರದಿಂದ ಭಾರತವು ಚೀಣೀಯರ ಕಷ್ಟದಲ್ಲಿ ಸಹಾನುಭೂತಿಯಿಂದಿರುವುದೆಂಬುದು ವ್ಯಕ್ತವಾಗುವುದು. ಚೀಣದಲ್ಲಿ ನೊಂದವರ ಸಹಾಯಕ್ಕೆ ಭಾರತದಿಂದ ಚಿಕಿತ್ಸಾಪಡೆಯೊಂದು ಹೋಗಿರುವುದು ಇದನ್ನು ಪುಷ್ಟಿಗೊಳಿಸುವುದು. ಈ ಎಲ್ಲ ಸ್ಥಿತಿಗಳಿಂದ ತೋರುವುದೇನೆಂದರೆ, ಇಂಗ್ಲೆಂಡಿಗೆ ಯಾವುದೇ ವಿಪತ್ತು ಬಂದರೂ ಭಾರತವು ತನ್ನ ಸ್ವಾತಂತ್ರ್ಯ ಸಾಧನೆಯ ಸಮಸ್ಯೆಯನ್ನು ಬಿಡಿಸಲೆತ್ನಿಸುವುದು. ಸದ್ಯಕ್ಕೆ ಇಂಡಿಯದ ಸೈನ್ಯವನ್ನು ಭಾರತೀಕರಣ ಮಾಡುವ ಆಂದೋಳನವೆದ್ದಿದೆ. ಚೀಣಜಪಾನಿನವರೇನಾದರೂ ರಾಜಿಗೆ ಸಿದ್ಧರಾದಲ್ಲಿ ಭಾರತವು ಚೀಣದಲ್ಲಿ ಬ್ರಿಟಿಷರು ಮುಂದಿಡುವ ಬೇಡಿಕೆಗೆ ಸಹಾಯ ಮಾಡುವುದಿಲ್ಲ. ಚೀಣದಲ್ಲಿ ಬ್ರಿಟಿಷರ ಆಧಿಪತ್ಯವನ್ನು ಭಾರತವು ಸಹಿಸಲಾರದಾದರೂ, ಚೀಣದಲ್ಲಿನ ಪ್ರಜಾತಂತ್ರವು ಜಪಾನಿನವರಿಂದ ಹರಣ ಮಾಡಲ್ಪಡುವುದನ್ನು ತಪ್ಪಿಸಲು ಇದು ಸಹಾಯವನ್ನಾದರೂ ಮಾಡಲು ಸಿದ್ಧವಾಗಿರುವುದು.

THE
PREMIER BANK OF INDIA, LIMITED.
Head Office: MADRAS.
Branches:
MADURA & NELLORE.
CHAIRMAN
Dr. U. L. Narayana Rao.
'Bhujanga Nivas' Madras.
FIXED DEPOSITS
are now received at the following
Rates:
For 6 Months at 3½% P. A.
12 Months at 4½% P. A.
24 Months at 5% P. A.
(Interest Paid Half-yearly.)
S. V. Rau, D. Com.,
Managing Director.

ಮೇಷರಾಶಿ—

"ನಕ್ರಂ ಸುಕರಂ, ದುಷ್ಕರಮಧ್ಯವಸಿತುಂ" ಎಂಬದಾಗಿ ಕವಿ ಕಾಳಿದಾಸನು ಹೇಳಿರುವನು. ಅಂದರೆ, ಯಾವುದೊಂದು ಕಾರ್ಯವನ್ನೇ ಆಗಲಿ ಬಾಯಿಯಿಂದ ಹೇಳುವುದು ಬಹಳ ಸುಲಭ, ಆದರೆ ಮಾತ್ರ, ಅದನ್ನು ಕಾರ್ಯತಃ ಮಾಡಿ ತೋರಿಸಿ ಕೊಡುವುದು ಬಹಳ ಕಷ್ಟಸಾಧ್ಯವೆಂದು. ಸದ್ಯದ ಸ್ಥಿತಿಯಲ್ಲಿ ನಿಮಗೀವಾಕ್ಯವು ಚೆನ್ನಾಗಿ ಅನ್ವಯಿಸುವುದು. ನಿಮ್ಮಿಂದಾದ ಕಾರ್ಯವು ಸಾಧ್ಯವಾಗಲಾರದಾದರೂ ಬಾಯಿತುಂಬ ಮಾತನಾಡಲು ನೀವು ಒಳ್ಳೇ ಸಮರ್ಥರಿರುವಿರಿ. ಪ್ರಕೃತ ನಿಮಗೆ ಬಂಧುಗಳಿಂದಾಗಲೀ ಮಿತ್ರರಿಂದಾಗಲೀ ಸಹಾಯವು ದೊರೆಯುವಂತಿಲ್ಲ. ಸ್ವಯಂ ನೀವು ಅಧೀರರಾಗಿರುವಿರಿ. ಕಾರ್ಯಗಳಿಗೆ ವಿಘ್ನಗಳು ಅಧಿಕವಾಗುವವು. ವಿಚಾರವಿಲ್ಲದೆ ಶತ್ರುಗಳನ್ನು ನೀವು ಸಂಪಾದಿಸುವಿರಿ. ಪರ್ಯಟನದಿಂದ ಬೆಟ್ಟದ ಕಷ್ಟನಷ್ಟಗಳು ಒದಗುವವಾದರೂ ನೀವದನ್ನು ಗಣನೆಗೆ ತರಲಾರಿರಿ. ತಾ. 15-16 ಈ ದಿನಗಳು ಉತ್ತಮವಾಗಿಲ್ಲವು.

ವೃಷಭರಾಶಿ—

ಪ್ರಕೃತ ನಿಮ್ಮ ಅದೃಷ್ಟವು ಉತ್ತಮವಾಗಿಯೇ ಇರುವುದು. ಮನಸ್ಸಿಗಾದ ರಂಜ ಕರೆಕರೆಯನ್ನೂ ಹಚ್ಚಿಕೊಳ್ಳದೆ ನಿಶ್ಚಿಂತರಿರುವಿರಿ. ಕೋರ್ಟು ವಗೈರೆ ಕಾರ್ಯಗಳಲ್ಲೂ, ನ್ಯಾಯಾಲಯಗಳಲ್ಲೂ ಇಷ್ಟಾರ್ಥವು ಸಿದ್ಧಿಸುವುದು. ಪ್ರಶಂಸಾರ್ಹವಾದ ಧಾರ್ಮಿಕ ಕರ್ಮಗಳಲ್ಲಿ ಆಸಕ್ತಿ ಹುಟ್ಟುವುದು, ಇದಿರಿಗೆ ನಿಮಗಲ್ಲದೆ ಮಿತ್ರರೆಂದೇ ತೋರುವುದಾದರೂ ಅಂತರ ಕೆಲವರು ಪ್ರತಿಪಕ್ಷಿಗಳಿರುವರು, ಇದರಿಂದ ನಿಮಗೆ ಭೂಸಂಬಂಧವಾದ ಕಲಹ, ವ್ಯರ್ಥ ಧನವ್ಯಯ ಉಂಟಾಗಲಿದೆ. ಉದ್ಯೋಗ ಭಾಗದಲ್ಲಿ ವಿಶೇಷವಾಗಿ ವರ್ತಿಸಿ ಅಧಿಕಾರಿಗಳ ಅಗ್ರಹಕ್ಕೆ ಗುರಿಯಾಗುವ ಸಂಭವವಿದೆ. ನಿರುದ್ಯೋಗಿಗಳು ಇಷ್ಟಸ್ಥಾನ ಪ್ರಾಪ್ತಿಯಿಂದ ತುಷ್ಟರಾಗುವರು. ಆರ್ಥಿಕ ಭಾಗವು ಬಹಳ ಉತ್ತಮ ರೀತಿಯಲ್ಲಿರುವುದರಿಂದ ಆವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ತಾ. 13-14-17-18 ಈ ದಿನಗಳು ಉತ್ತಮ.

ಮಿಥುನರಾಶಿ—

ಆರೋಗ್ಯಭಾಗ್ಯಕ್ಕೆ ಈ ವಾರವು ನಿಮಗೆ ಹೆಚ್ಚಿನ ಪ್ರತಿಕೂಲವಾಗಿರುವುದು. ಆದ್ದರಿಂದ "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂದಂತೆ ಧರ್ಮಕ್ರಿಯೆಗಳನ್ನು ಸಾಂಗವಾಗಿ ಮಾಡಲು ಶರೀರದ ಆರೋಗ್ಯವೇ ಮುಖ್ಯ ಕಾರಣವಾಗಿರುವುದರಿಂದ ಆ ಭಾಗದಲ್ಲಿ ವಿಶೇಷ ಜಾಗರೂಕರಾಗಿರಿ. ಜೀವಿತಕ್ಕೇನೇ ಆಧಾರಸ್ಥಂಭವಾಗಿರುವ ದೇಹದಲ್ಲಿ ರೋಗಗಳಿಗೆಡೆಕೊಡದೆ ಕಾಪಾಡಿಕೊಳ್ಳುವುದು ಪರಮ ಆದ್ಯ ಕರ್ತವ್ಯ. ಶತ್ರುಜನರಿಂದ ನಿಮ್ಮ ಉದ್ಯೋಗಕ್ಕೆ ಕೆಲವು ವಿಚಾರದಲ್ಲಿ ಹಾನಿಯುಂಟಾಗುವುದು, ಇದರಿಂದ ಸ್ಥಾನನಾಶವೂ ಸಂಭವಿಸಬಹುದು, ಆದರೂ ನೀವು ಸತ್ಕರ್ಮಚಾರಿಗಳಾಗಿರುವುದರಿಂದ ಇಷ್ಟಸಿದ್ಧಿಯನ್ನು ಹೊಂದುವಿರಿ. ಖರ್ಚಿಗೆ ಬೇಕಾದಷ್ಟು ಹಣವನ್ನು ದುಡಿಯುವಿರಿ. ಸಾಂಸಾರಿಕ ಸಂಬಂಧವಾದ ತಾಪತ್ರಯಗಳು ದೂರ ಕೊಲಗಿ ಸ್ತ್ರೀಸುಖವು ದೊರೆಯುವದು. ತಾ. 15-16-19-20 ಈ ದಿನಗಳಲ್ಲಿ ಇಷ್ಟಾರ್ಥ ಸಿದ್ಧಿ, ಆಸನವಸನಗಳ ಲಾಭ ಕಾರ್ಯ ಜಯವುಂಟಾಗಲಿದೆ.

ಕರ್ಕಾಟಕರಾಶಿ—

ಸದ್ಗುಣಶೀಲತ್ವದ ಬುದ್ಧಿಯು ನಿಮ್ಮಲ್ಲಿ ಚೆನ್ನಾಗಿ ಬಂದುದರಿಂದ ದುರ್ಭಾವನೆಗಳು ಹೆಚ್ಚಾಗಿ ಮೊಳೆಯುತ್ತಿರುವುವು. ಆದಕಾರಣದಿಂದಲೇ ಮಾತಿನಲ್ಲಿ ಕಾಠಿಣ್ಯವೂ ಕ್ರಿಯೆಯಲ್ಲಿ ಧಾರ್ಷ್ಟ್ಯವೂ ಕಂಡುಬರುತ್ತವೆ. ಸ್ವಯಂ ನಿಮ್ಮ ಆರೋಗ್ಯವು ಕೆಡುವುದಲ್ಲದೆ ಪತ್ನೀ ಪುತ್ರರಿಗೆ ಯೋಗಕ್ಷೇಮದ ವಿಚಾರವಾಗಿಯೂ ಹಣ ವ್ಯಯಿಸಬೇಕಾಗಿ ಬರುವುದು. ಮಾತ್ರವಲ್ಲ ಜನತೆಯ ಅಪವಾದಕ್ಕೂ ಗುರಿಯಾಗಲಿರುವಿರಿ. ಆದರೂ ಗುರ್ವನುಗ್ರಹವೂ ಗುರುದೃಷ್ಟಿಯೂ ನಿಮ್ಮ ರಾಶಿಯ ಮೇಲೆ ಸಂಪೂರ್ಣವಿರುವುದರಿಂದ ಪ್ರಾಪ್ತವಾಗಿ ಬರತಕ್ಕ ಅನಿಷ್ಟಗಳು ಅಲ್ಪ ರೂಪವನ್ನು ತಾಳುವವು. ವ್ಯಾಪಾರಿಗಳಿಗೆ ಧಾನ್ಯ ಭಾಗದಲ್ಲಿ ಲಾಭ ಸಿಗುವುದು. ದುಡಿದ ಧನವನ್ನು ಸಂಗ್ರಹಿಸಲು ನಿಮ್ಮಿಂದ ಸಾಧ್ಯವಾಗುವಂತಿಲ್ಲವು. ತಾ. 13-14-17-18 ಈ ದಿನಗಳು ಇಷ್ಟುದರಲ್ಲಿ ಉತ್ತಮವಾಗಿವೆ.

ವಾರದ ಭವಿಷ್ಯ

ಮುಂದಾಗುವುದನ್ನು ಇಂದೇ ತಿಳಿಯಿರಿ.

(ತಾ. 13-7-39ರಿಂದ ತಾ. 20-7-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ. ನ.]

ಸಿಂಹರಾಶಿ—

"ಆಚಾರಃ ಪ್ರಥಮೋ ಧರ್ಮಃ" ಎಂಬ ವಾಕ್ಯದಂತೆ ಧರ್ಮಾರ್ಜನೆಗೆ ಆಚಾರವು ಪ್ರಥಮ ಸೋಪಾನವೆಂತೆನಿಸುವದು. ಎಂತಹ ಶ್ರೋತ್ರಿಯನಾದರೂ ಆಚಾರ ಹೀನನಾಗಿದ್ದರೆ ಅವನನ್ನು ಯಾರೂ ಮನ್ನಿಸುವಂತಿಲ್ಲ, ಅವನೆಂದಿಗೂ ಪೂಜಾರ್ಹನಾಗಲಾರನು. ಅಂತೂ ಸದಾಚಾರದಿಂದ ನರನು ತನ್ನನ್ನು ತಾನೇ ಉದ್ಧರಿಸಿಕೊಳ್ಳಲು ಸಮರ್ಥನಾಗುವನು. ಆದಕಾರಣ ನೀವು ಸದಾಚಾರಕ್ಕೆ ಮೂಲಕಾರಣವಾದ ಸಜ್ಜನಸಂಗಾದಿಗಳನ್ನು ಮಾಡಿದರೆ ನಿಮಗೀ ವಾರವು ಹೆಚ್ಚಿನ ಅನಿಷ್ಟಕಾರಿಯಾಗದು. ಒಟ್ಟಿನಲ್ಲಿ ನಿಮ್ಮ ಅವಸ್ಥೆಯು ಬಹಳ ಹೀನಸ್ಥಿತಿಗೆ ಬರಲಿದೆ. ಈಗಲೀಗ ನಿಮ್ಮಲ್ಲಿ ನಾಸ್ತಿಕ ಬುದ್ಧಿಯು ಪ್ರಬಲವಾಗ ತೊಡಗಿದೆ. ಸತ್ಕಾರ್ಯಗಳೊಂದೂ ನಿಮಗೆ ರುಚಿಸವು. ಆರೋಗ್ಯವು ಬಹಳ ಹೀನದೆಶೆಗೆ ಬರಲಿದೆ. ಆದರೂ ಸುಖಭಾಗ್ಯಪತಿಯಾದ ಅಂಗಾರಕನು ಉಚ್ಚನಾಗಿರುವದರಿಂದಲೂ ಶುಕ್ರನು ಅನುಕೂಲನಿರುವುದರಿಂದಲೂ ಮಿತ್ರ ಬಂಧುಗಳ ಮಾನಸಿಕ ಸುಖ ಅನ್ನದಿನದ ಖರ್ಚಿಗೆ ಕಡಿಮೆಯಾಗದು. ತಾ. 17, 18 ಈ ದಿನಗಳು ಮಾತ್ರ ಶ್ರೇಯಸ್ಕರವಾಗಿಲ್ಲ.

ಕನ್ಯಾರಾಶಿ—

ನಿಮ್ಮ ಭವಿಷ್ಯವು ಈ ವಾರದಲ್ಲಿ ಎಲ್ಲಾ ವಿಚಾರಗಳಲ್ಲೂ ಮಧ್ಯಮಸ್ಥಿತಿಗೆ ಬಂದು ನಿಂತಿರುವುದು. ಕಾರ್ಯತತ್ಪರರಾದ ಮತ್ತು ಒಳ್ಳೇ ಮಾರ್ಗಿಗಳಾದ ನಿಮಗೆ ಸ್ವೀಕೃತ ಕಾರ್ಯಗಳಲ್ಲಿ ವಿಜಯ ಪ್ರಾಪ್ತಿಯೂ ಧನಮಾನ ಲಾಭವೂ ಇರುವುದು. ಅಭಿಲಾಷೆಯು ನಿರ್ವಿಘ್ನದಿಂದ ಪೂರೈಸುವುದು ರಾಜಕೀಯ ವಿಭಾಗದಲ್ಲಿ ಹೆಚ್ಚಿನ ಸೌಕರ್ಯವಿದೆ. ವಿದ್ಯಾಫಲಾಪೇಕ್ಷಿಗಳಿಗಿದು ಒಳ್ಳೇ ಅನುಕೂಲ ಕಾಲವು, ಆದರೂ ನಿಮಗೆ ಮಕ್ಕಳ ವಿಷಯಕವಾದ ಚಿಂತೆಯೊಂದಿರುವುದು. ಮತ್ತು ಆರೋಗ್ಯದ ಮಟ್ಟಿಗೂ ಸ್ವಲ್ಪ ಕೆಡುತಿದೆ. ಕಲಹ ಭೀರುಗಳಾದ ನೀವು ವ್ಯವಹಾರದಲ್ಲಿ ಎಷ್ಟೇ ಹಿತಮಿತದಿಂದಿದ್ದರೂ ಕಲಹ ಶತ್ರುಮಿತ್ರೀಕೃತ್ಯ ಮಾನಹಾನಿ ಇತ್ಯಾದಿಗಳು ಒದಗದಿರವು. ಸಂಸಾರದ ವಿಚಾರವು ಉತ್ತಮ ರೀತಿಯಲ್ಲಿರುವುದು ಸಂತೋಷದ ವಿಚಾರ. ತಾ. 15ರಿಂದ 18ರ ವರೆಗೂ ಕಾಲವು ಹೆಚ್ಚಿನ ಅನುಕೂಲವಾಗಿರುವುದು.

ತುಲಾರಾಶಿ—

ಎಷ್ಟೆಂದರೂ ಮನಸ್ಸಿಗೆ ನೆಮ್ಮದಿಯಿರದು. ಸದಾ ಒಂದಲ್ಲೊಂದು ಚಿಂತೆಯು ನಿಮ್ಮನ್ನು ಪೀಡಿಸುತ್ತಲೇ ಇರುವುದು. ಸಹಜಾತರಲ್ಲಿ ಮನಸ್ತಾಪ, ಕಲಹಗಳು ದೃಢಿಸುವವು. ಶತ್ರುಜನರು ಒಂದಲ್ಲೊಂದು ವಿಧದಿಂದ ನಿಮ್ಮನ್ನು ಕೆಣಕುತ್ತಲೇ ಇರುವರು. ಕಾಲದೋಷಕ್ಕೆ ಸಂಸರ್ಗದೋಷವೂ ಪ್ರಬಲವಾಗಿ ಪೀಡಿಸುವುದು. ನೌಕರಿ ವಿಚಾರದಲ್ಲಿ ಉತ್ತಮವಿದೆ. ಶ್ರಮಕ್ಕೆ ತಕ್ಕುದಾದ ಪ್ರತಿಫಲವು ದೊರೆತೇ ತೀರುವುದು. ಹಣದ ಅಡಚಣೆಯು ದೂರವಾಗುವದು. ಕೋರ್ಟು ಕಾರ್ಯಗಳಲ್ಲಿ ನಿಮ್ಮ ಕೈಯೇ ಮೇಲಾಗುವುದು. ಸಂಸಾರ ಸುಖವು ಕಡಿಮೆಯಾಗದು. ಆರೋಗ್ಯದ ಸಲುವಾಗಿ ಮತ್ತು ಪರ್ಯಟನದ ನಿಮಿತ್ತ ಸ್ವಲ್ಪ ಧನವ್ಯಯವಾಗುವುದಾದರೂ ಹೆಚ್ಚಿನ ಗಾಬರಿಯ ವಿಷಯವಿಲ್ಲ. ಅಂತೂ ವಾರಾದಿಯ ನಾಲ್ಕು ದಿನಗಳಿಗಿಂತಲೂ ಮೇಲಿನ ನಾಲ್ಕು ದಿನಗಳು ಎಷ್ಟೋ ಹಿತಕರವಿರುವವು.

ವೃಶ್ಚಿಕರಾಶಿ—

ಹಲವು ವಿಚಾರಗಳಲ್ಲಿ ನಿಮ್ಮ ಅದೃಷ್ಟವು ಬಹಳ ಉತ್ತಮ ರೀತಿಯ ವರ್ಗಕ್ಕೆ ಬಂದಿರುವುದು. "ಹತ್ತಿದ ಕೂಟೆ ಹನ್ನೊಂದು, ಹರಿ ಕೂಡ ಗೋವಿಂದ" ಎಂಬ ಗಾದೆಯಂತೆ ನಿಮ್ಮ ಪ್ರಯತ್ನವು ಯಾವ ಕಾರ್ಯದಲ್ಲೂ ನಿಶೇಷವಾಗಿ ಬೇಕಿಲ್ಲವು. ನೆನಸಿಕ್ಕೆ ಮಾತ್ರ ಇದ್ದರೆ ಸಾಕು. ಕೃಷಿ ವಿಭಾಗದಲ್ಲೂ ವ್ಯಾಪಾರ ವ್ಯತ್ಯಯದಲ್ಲೂ ಫಲವು ಅಧಿಕವಾಗದೊರೆಯುವುದು. ಸನ್ಮಾನಿಗಳಿಗೂ ಸೇವಕ ಜನರಿಗೂ ಕಾಲವು ಕಳೆದುಹೋಗುತ್ತಿರಲಾರದು. ಶಾರೀರಿಕ ಮಾನಸಿಕ ಸಾಂಸಾರಿಕಸುಖಗಳಿಗೇನೂ ಕೊರತೆ ಬಾರದು, ಹಣದ ಲೇವಾದೇವಿ ವಿಚಾರದಲ್ಲಿ ಮಾತ್ರ ಸ್ವಲ್ಪ ಜಾಗರೂಕರಾಗಿ. ವೃಥಾ ಕಲಹ ಗಂಟುಬೀಳುವ ಸಂಭವವಿದೆ. ತಾ. 13-14 ಮತ್ತು 19-20 ಈ ದಿನಗಳು ಸರ್ವೋತ್ಕೃಷ್ಟಗಳಾಗಿರುವವು.

ಧನುರಾಶಿ—

ಪಲವಾರು ಗ್ರಹರು ಅನಿಷ್ಟಸ್ಥಾನಗತರಾಗಿರುವುದರಿಂದ ನಿಮ್ಮ ಜೀವನ ಪಥವು ಬಹಳ ಕಷ್ಟದಿಂದ ಸಾಗುವುದು. ಮುಂಚೆಯೇ ನೀವು ರೋಗಬಾಧೆಗೆ ಸಿಲುಕಿರುವಿರಿ. ಸಾಲದುದಕ್ಕೆ ಬಂಧು ಜನರ ಉಪದ್ರವವೂ ಸೇರಿದೆ. ಕೋರ್ಟು ವಗೈರೆಗಳಲ್ಲಿನ ಕಲಹವೂ ಪ್ರಾಪ್ತವಾಗಲಿದೆ. ಅಂತೂ ಗುರುವಿನಿಂದ ಬಹಳ ಪೀಡಿತರಾಗಿರುವವರಿಗೆ ಅದರ ಮೇಲೊಂದು ಬೊಕ್ಕೆ ಅದಂತೆ ಮತ್ತೆ ಮತ್ತೂ ಕಷ್ಟದ ಪ್ರಸಂಗಗಳೇ ಬರುತ್ತಿವೆ. ಸಂಸಾರದಲ್ಲಿ ಪುತ್ರರಿಂದಾಗಲಿ ಯಾ ಹೆಂಡತಿಯಿಂದಾಗಲೀ ನಿತ್ಯ ಕಲಹವೇ ಹೊರತು ಎಳ್ಳಷ್ಟು ಸುಖ ದೊರೆಯದು. ಆರ್ಥಿಕ ಅಡಚಣೆಯು ಬಹಳೇ ಅಧಿಕವಾಗುವುದು. [ಈ ದುಃಖಪರಂಪರೆಗಳಿಂದ ರಾತ್ರಿ ನಿದ್ದೆ ಕೂಡ ಹತ್ತಲೊಲ್ಲದು. ವಾರಾಂತ್ಯದ ನಾಲ್ಕು ದಿನಗಳನ್ನಂತೂ ಬಹಳ ಕಷ್ಟದಿಂದ ಕಳೆಯಬೇಕಾಗುವುದು.

ಮಕರರಾಶಿ—

ನಿಮ್ಮ ದುರ್ದೈವವೇ ಮೂರ್ತಿಮತ್ತಾಗಿ ಬಂದಿದೆಯೋ ಎಂಬಂತಿದೆ ಈ ವಾರದಲ್ಲಿ ನಿಮಗೆ. ರವ್ಯಾದಿಯಾಗಿ ಸಕಲ ಗ್ರಹರೂ ನಿಮಗೆ ಪ್ರತಿಕೂಲರಾಗಿರುವರೆಂದ ಮೇಲೆ ಹೆಚ್ಚಿಗೆ ಹೇಳಬೇಕಾದ ಆವಶ್ಯಕತೆಯಿಲ್ಲವು. ಇಂತಹ ಅನಿಷ್ಟ ಕಾಲವು ಬರುವುದು ಬಹಳ ದುರ್ಲಭ, ಆದಕಾರಣ ನೀವೀ ವಾರದಲ್ಲಿ ಎಷ್ಟು ಜಾಗರೂಕತೆಯಿಂದಿದ್ದರೂ ಅಷ್ಟು ಹಿತಕರವೆಂದೇ ಭಾವಿಸಿಕೊಳ್ಳಿರಿ. ನಿಮ್ಮ ಕಾರ್ಯಗಳು ವಿಘ್ನಗಳಿಂದಾಗಿ ಕೊನೆ ಹೊಂದಲಾರವು. ವ್ಯರ್ಥ ಪ್ರವಾಸಮಾಡಬೇಕಾಗಿ ಬಂದು ಹೆಚ್ಚಿನ ದ್ರವ್ಯಹಾನಿಗೆ ಕಾರಣವಾಗುವುದು. ಅಪಮೃತ್ಯುವೇ ಮೊದಲಾದ ಅನಿಷ್ಟಗಳೂ ಅಕಸ್ಮಾತ್ ಬಂದಾವು. ಇಂತಹ ಕಾಲದಲ್ಲಿ ಗ್ರಹರ ತುಷ್ಟಿಯೇ ಹೆಚ್ಚಿನ ಫಲಕಾರಿಯಾದ ಪರಿಂದ ನವಗ್ರಹ ಜಪ ಸ್ತುತಿ, ಮೊದಲಾದುವನ್ನು ಆಚರಿಸುವುದುಚಿತ. ತಾ. 13-14, 19-20 ಈ ದಿನಗಳು ಹೆಚ್ಚಿನ ಹಾನಿಕಾರಿಗಳಾಗಿವೆ.

ಕುಂಭರಾಶಿ—

ವ್ಯಯಸ್ಥಾನದಲ್ಲಿ ಉಚ್ಚನಾಗಿ ಕುಳಿತಿರುವ ಅಂಗಾರಕನೂ ಭಾಗ್ಯದಲ್ಲಿರತಕ್ಕ ರಾಹುವೂ ಕೇವಲ ಇವರೀರ್ವರೇ ನಿಮ್ಮ ಭಾಗಕ್ಕೆ ಅಡ್ಡಗಾಲಿಡುವವರು, ಇವರಿಂದಾಗಿ ಚಿಲ್ಲರೆ ವ್ಯವಹಾರದಲ್ಲಿ ಸ್ತ್ರೀಯರೊಡನೆ ಕಲಹ ಮತ್ತು ಸಂತಾಪವು ಉಂಟಾಗುವುದು. ಇತರ ಭಾಗಗಳಲ್ಲಿ ನೀವು ಅದ್ವಿತೀಯರಾಗಿರುವಿರಿ, ಸತ್ಸಂಗಸದಾಚಾರ ಸಂಪನ್ನರಾಗಿದ್ದ ನಿಮಗೆ ಸಕಲರೂ ಮಿತ್ರರೇ ಹೊರತು ಶತ್ರುಗಳೆಂಬವರೇ ಕಾಣಸಿಗರು. ಧನಬಲವೂ, ಜನಬಲವೂ ಪರಿಪೂರ್ಣವಾಗಿ ನಿಮಗಿರುವುದರಿಂದ ಅಸಾಧ್ಯವೆಂಬ ಶಬ್ದವೇ ನಿಮ್ಮ ಹತ್ತಿರ ಬರಲೊಲ್ಲದು. ಎಲ್ಲಾ ವಿಚಾರಗಳಲ್ಲೂ ನಿಶ್ಚಿಂತರಾದ ನಿಮಗೆ ಈ ವಾರವೆಂಬುದು ಬಹಳ ಚಿಕ್ಕದಾಗಿ ತೋರುವುದು. ಮಹತ್ಫಲದಾಯಕಗಳಾದ ಉತ್ತಮ ಕಾರ್ಯಗಳನ್ನು ತಾ. 17, 18, 19, 20 ಈ ದಿವಗಳಲ್ಲಾರಂಭಿಸುವುದುತ್ತಮ.

ಮೀನರಾಶಿ—

ಇತರ ಭಾಗಗಳು ಹೇಗೇ ಇರಲಿ ನಿಮ್ಮ ಆರ್ಥಿಕ ಭಾಗವು ಬಹಳ ಉತ್ತಮವಾಗಿರುವುದು. ಈ ವಿಭಾಗದಲ್ಲಿ ನೀವು ಎಳ್ಳಷ್ಟೂ ಚಿಂತಿಸಬೇಕಾಗಿಲ್ಲ. ಸನ್ಮಿತ್ರರ ಬಲವೂ ನಿಮಗೆ ಸಾಕಷ್ಟು ಇರುವುದು. ಕುಟುಂಬ ವಿಷಯಕವಾಗಿ ನಿಮಗೆ ಹೆಚ್ಚಿನ ಚಿಂತೆಯುಂಟಾದೀತು. ಶತ್ರುಜನರಿಂದ ಪೀಡೆಗಳು ಪ್ರತಿಯೊಂದು ಕಾರ್ಯಕ್ಕೂ ಒದಗಬಹುದು. ನಿಮ್ಮ ಮನಸ್ಸಿನಲ್ಲಿ ಭಯವು ಹೆಚ್ಚಾಗಿರುವುದರಿಂದ ಯಾವ ಕಾರ್ಯವನ್ನೂ ಮುಂದೊತ್ತಲು ನಿಮಗೆ ಧೈರ್ಯವಿಲ್ಲದಾಗಿರುವುದು. ಮಾತ್ರವಲ್ಲ ಅಂತಹ ಉತ್ಸಾಹ ಶಕ್ತಿಯೂ ನಿಮ್ಮಲ್ಲಿಲ್ಲವು. ಕೈಗೆ ದೊರೆತ ಹಣವಾದರೋ ಮರುಕ್ಷಣದಲ್ಲೇ ವ್ಯಯವಾಗಿಹೋಗುವುದು. ತಾ. 13-14-19-20 ಈ ದಿನಗಳಲ್ಲಿ ಜನರಿಂದ ಮನ್ನಣೆ ಮಿತ್ರ ಸಮಾಗಮ, ಸುಖಗಳು ದೊರೆಯುವವು.



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೦೭, ಮದ್ರಾಸ್
ಸ್ಟಾಕಿಸ್ಟರು:— ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ನವಯುಗಕ್ಕೆ
ಏಜಂಟರಿಲ್ಲದಲ್ಲಿ
ಏಜಂಟರು ಬೇಕಾಗಿದ್ದಾರೆ.

ಮದನರತಿಕಾಮಶಾಸ್ತ್ರವೆಂಬ ಪ್ರೇಮರಹಸ್ಯಗಳು

ಕನ್ನಡ ಭಾಷೆಯಲ್ಲಿ ಸ್ತ್ರೀ-ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯಾ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ ವಿಲಾಸಗಳು ಸ್ತ್ರೀ-ಪುರುಷರು

ದಿಗಂಬರವಾಗಿರುವ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು ಮುತ್ತಿಡುವ ವಿಧಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು ಇನ್ನೂ ಅನೇಕ ಪ್ರೀತಿಯ ಮುತ್ತಿಡುವ, ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸ್ಸುಬಾರದು.

ಫೋಟೋಗಳು ಸಹಿತ ಇರುವ ಪುಸ್ತಕ ರೂ. 0-14-0

ಸಿಗುವ ವಿಳಾಸ:—**T. V. ದೇವಕರ್ ಎಂಡ್ ಕಂಪೆನಿ,**

ನಂಬುಲಿಯರ್ ಬೀದಿ, ಜಿ. ಟಿ. ಮದರಾಸು.

T. V. Devkar & Co., *Nambulier Street*, G. T. MADRAS.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟಿದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ. ಆರಿಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಸ್ಥೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ಬ್ರಾಂಚ್—ಮಂಗಳೂರು.

ದಿ ವಿಜಯ ಬೇಂಕ್, ಲಿಮಿಟೆಡ್,

ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಜನರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯಲ್ಪಡುತ್ತಿರುವ ಮತ್ತು ಭದ್ರತೆಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತಿದೆ.

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir,

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahosthawam Committee.

THULUNAD BANK
OF SUPPLY AGENCY LTD., UDIPI.
[ESTD. 1933]

Authorised & Issued Capital		**Rs. 1,00,000**
Subscribed & Paid up	....	**Rs. 31,300**

RATE OF INTEREST FOR FIXED DEPOSITS.

3 to 6 Months	4%	p. a.
7 to 12 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES,

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

BUSINESS HOURS

I Period 12 n. to 3 p. m.
II „ 5 p. m. to 8 p. m.
ON WEEK DAYS.

I Period 12 n. to 1 p. m.
II „ 5 p. m. to 7 p. m.
ON SATURDAYS

Cheques may be presented in II Period, only with Previous arrangement.

3—7—'39.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

ನವಯುಗ

NAVAYUGA

The Prosperity of your District lies in the progress of its commercial enterprise.

Place your Insurance with a local Company.
Be convinced of its safety and efficiency.

Applications for agencies and organiserships invited.

THE
POPULAR
INSURANCE COMPANY LIMITED,
MANGALORE, S. INDIA.

೧೦ ಗಡಿಯಾರಗಳು ಬರೇ ೩॥ ರೂಪಾಯಿಗೆ



ಏಳು ಪಾಕೆಟ್ ಕೈಗಡಿಯಾರಗಳು, ೩ ಟೇಬಲ್ ಗಡಿಯಾರಗಳು, ಮತ್ತು ಒಂದು ಗಟ್ಟಿಮುಟ್ಟಾದ ಸರಿ ಸಮಯ ತೋರಿಸುವ ಜರ್ಮನ ಕಂಪೆನಿಯ, ೩೦ ಗಂಟೆಗೊಮ್ಮೆ ಕೀ, ೧೫ವರ್ಷದ ಗ್ಯಾರಂಟಿ ಈ ಗಡಿಯಾರವನ್ನು ಬಲಾಯಿತಿಯಿಂದ ಹೆಚ್ಚು ಸಂಖ್ಯೆಯಲ್ಲಿ ತರಿಸಿದ್ದೇವೆ. ಈ ರಿಯಾಯಿತಿಯಲ್ಲಿ ಕೇವಲ ೧೭,೦೦೦ ಗಡಿಯಾರಗಳನ್ನು ಮಾತ್ರವೇ ಮಾರುವೆವು. ತ್ವರೆ ಮಾಡಿರಿ! ಸುಸಂದರ್ಭ ತಪ್ಪಿಹೋದೀತು. ಇದರೊಂದಿಗೆ ೧೪ ಕ್ಯಾರೆಟ್ ರೋಲ್ಡ್‌ಗೋಲ್ಡ್ ನಿಬ್ಬಿನ ಫೌಂಟನ್ ಪೆನು ಒಂದು, ಟ್ರಿಸ್ಟ್‌ಚೆಕ್ ಒಂದು, ಮುತ್ತಿನ ಹಾರ ಒಂದು—ಇಷ್ಟು ಉಚಿತ, ಅಂಚೆವೆಚ್ಚ ಬೇರೆ. ಅತೃಪ್ತಿಯಾದರೆ ಹಣ ಹಿಂದೆ. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

ದೊರೆಯುವ ಸ್ಥಳ:—
ಜರ್ಮನ್ ವಾಚ್ ಕಂಪೆನಿ,
ಪೋಸ್ಟು ಬಾಕ್ಸ್ ನಂ. ೨೭
(N.Y.U.) ಅಮೃತಸರ [ಇಂಡಿಯಾ]

German Watch Co.
P. B. No. 27 (N.Y.U.)
AMRITSAR, (India),

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ 406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್, ಡಬ್ಬಲ್ ಕೋಣೆಗಳು!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇದೇ ಮ್ಹಾಲೀಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೇಫ್**

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800 -. Paid up Capital: Rs. 1,82,100/-.
PRINCIPAL OFFICE: COURT ROAD, UDIPI.
OTHER OFFICES:
UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% p. a. for the earlier half and at 1% p. a. for the latter half of every calendar year.

Fixed Deposits are accepted at all the above offices for one and two years and interest allowed at 3½% P. A. and 4% P. A. respectively; interest being payable every half year of the calendar year. Savings Bank & cumulative Deposits are also received on remunerative terms.

Negotiable Instruments payable on demand and also genuine short dated trade bill are discounted on fairly easy terms.

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಅಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕ್‌ಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.
ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು ತೈಲ ಮತ್ತು ಅರಿಷ್ಟಾಸವಗಳು.

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮೀ, ಧನ್ವಂತರಿ, ಹಿಮಸಾಗರ, ನಾರಾಯಣ, ಚಂದನಾದಿ, ಲಾಕ್ಷಾದಿ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ, ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.
ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು, ಲೇಪ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ ಯಾವಾಗಲೂ ತಯಾರಿವೆ.

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ ಬರೆಯಿರಿ.

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂಮಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ವರ್ಗದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯ ಹೊಂಬಂತೆ ಸಾಮಾನುಗಳು ಬಿಲುಗಟ್ಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ESTD. 1921 ಸ್ಥಾಪನೆ

FOUNDER
Sri. A B SHETTY, M.L.A.
Parliamentary Secretary, Govt of Madras.
ಸಂಸ್ಥಾಪಕರು;
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ ಸಂಚಿಕೆ ೪೬	ಉಡುಪಿ, ಗುರುವಾರ ೨೦-೭-೧೯೩೯ Udipi, Thursday 20—7—1939	Vol. XVIII No. 46

ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾಲೋಕನ

ತಪ್ಪುಮಾಡಿದವರ ಜಾಯಿಮೇಲು!

"ನಾನು ಶಿಸ್ತು ಜಾರಿಯಾಗುವದೆಂದು ಹೆದರಲಾರೆ; ಬಂದುದನ್ನೆದುರಿಸಲು ನಾನು ಸಿದ್ಧನಿದ್ದೇನೆ" ಎಂದು ಮಾಜಿ ರಾಷ್ಟ್ರಪತಿ ಸುಭಾಸಚಂದ್ರಭೋಸರು ಪೂನೆಯ ಸಾರ್ವಜನಿಕ ಸಭೆಯೊಂದರಲ್ಲಿ ಎದೆತಟ್ಟಿಕೊಂಡರು. ಶ್ರೀ. ಭೋಸರ ಈ ರಣಗರ್ಜನೆಯಲ್ಲಾದರೂ ಅವರ ಎದೆ ಧೈರ್ಯವಲ್ಲದೆ ಮತ್ತಾವ ವಿಷಯವೂ ಧ್ವನಿಸುವದಿಲ್ಲ; ಆದರೆ "ಶಿಸ್ತು, ಸಂಸ್ಥೆಯನ್ನು ಬಲಗೊಳಿಸಿ ರಾಷ್ಟ್ರವನ್ನು ಸಂಗ್ರಾಮಕ್ಕೆ ಸಿದ್ಧಗೊಳಿಸುವದಕ್ಕಾಗಿ ಇರಬೇಕು; ಹಾಗಿರದೆ ಹೋದರೆ ಶಿಸ್ತು ಎಂಬುದಕ್ಕಾವ ಬೆಲೆಯೂ ಇಲ್ಲ" ಎಂಬ ಸುಭಾಸರ ಮಾತಿನ ಅರ್ಥವೇನು? ಕಾಂಗ್ರೆಸನ್ನು ಬಲಗೊಳಿಸಿ, ಗುರಿಸೇರಿಸುವುದಕ್ಕಾಗಿಯೇ ಅದರಲ್ಲಿ ಶಿಸ್ತು, ನಿಯಮಗಳ ರಚನೆಯಾಗಿದೆ. ಸುಭಾಸರ ಸರ್ಟಿಫಿಕೇಟಿಲ್ಲವೆಂದಮಾತ್ರಕ್ಕೆ ನಿಯಮಗಳೆಲ್ಲಾ ಟೊಳ್ಳು ಎಂದಾಯಿತೇನು? ಸುಭಾಸರ ರೀತಿಯಲ್ಲಿ ನೀತಿಯ ಅಣುವನ್ನಾದರೂ ಕಂಡುಹಿಡಿಯಲಾಗುವದೋ ಎಂಬುದಕ್ಕಾಗಿ ಇಂದಿನ ಕಾಂಗ್ರೆಸ್ ಶಿಸ್ತು ಸ್ವಾತಂತ್ರ್ಯ ಸಾಧನೆಗನುಕೂಲವಲ್ಲವೆಂಬುದನ್ನು ಒಪ್ಪಿಕೊಳ್ಳೋಣ. ಅದನ್ನು ಮುರಿದೀಡಾಡಿ ತಾಂಡವವಾಡಿದೊಡನೆ ಕಾಂಗ್ರೆಸಿಗೆ ಶಕ್ತಿಬಂತೇನು? ವಿಶ್ವಾಮಿತ್ರನು ಹೂಂಕರಿಸಿದೊಡನೆ ತ್ರಿಶಂಕುಸ್ವರ್ಗಕ್ಕೇರಿದಂತೆ ಸುಭಾಸರ ಇಂದಿನ ಹೂಂಕಾರವೊಂದೇ ಕಾಂಗ್ರೆಸನ್ನು ಮೇಲ್ಮಟ್ಟಕ್ಕೇರಿಸುವದೆಂದು ನಾವು ಭಾವಿಸಬೇಕೆ? ಸಾಂಸಾರ ವಿಚಾರ ಜಾಣ್ಮೆಯನ್ನು ಭೋಸರಂತಹ ನುರಿತ ಧುರೀಣರಲ್ಲಿಯೂ ಕಾಣಲಾರದ ಈ ಕಾಲವು ವಿಚಾರಬುದ್ಧಿಯ ಬರಗಾಲವಲ್ಲದೆ ಬೇರಾವುದು?

(✻)

ಕಾಂಗ್ರೆಸ್ ಶಿಸ್ತಿಗೆ ಕಾರ್ತವೀರ್ಯಾರ್ಜುನನ ಕೈ!

ಶ್ರೀ ಸುಭಾಸಚಂದ್ರಭೋಸರ ಮುಷ್ಟಿಗಾಟಿಕೆಯು ಕಾಂಗ್ರೆಸು ಸಾವಿರ ಕೈಗಳಿಂದ ಅಖಿಲಭಾರತದಲ್ಲಿ ಹಲವರ ಮೇಲೆ ಶಿಸ್ತು ಜಾರಿ ಮಾಡುವ ಸಂದರ್ಭವನ್ನೊದಗಿಸಿದೆ. ಬಂಗಾಳದ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಕಳೆದ ತಾ. ೯ರಲ್ಲಿ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯ ವಿರೋಧಕ ದಿನವನ್ನಾಚರಿಸಬೇಕೆಂದು ಬಹುಮತದಿಂದ ನಿರ್ಧರಿಸಿ ದ್ವೇಷಾಗ್ನಿಗೆ ತುಪ್ಪ ಹೊಯ್ದಿದೆ. ಬಂಗಾಳದ ಮುಖಂಡರಾದ ಡಾ| ಪ್ರಫುಲ್ಲ ಚಂದ್ರ ಘೋಷರು ಈ ಕೃತ್ಯವನ್ನು ಆತ್ಮಹತ್ಯಾ ಸಮಾನವಾದುದೆಂದು ಖಂಡಿಸಿರುವರು. ಬೊಂಬಾಯಿಯಲ್ಲಿ ಶ್ರೀ ನರಿಮೇನರೇ ಆದಿಯಾಗಿ ಒಂಭತ್ತು ಜನ ಮುಖಂಡರಿಂದ ಕಾಂಗ್ರೆಸ್ ನಿರ್ಣಯ ವಿರೋಧಾಚರಣೆಯಲ್ಲಿ ಹೇಗೆ ಭಾಗವಹಿಸಿದಿರೆಂದು ಅಲ್ಲಿಯ ಪ್ರಾಂತಿಕ ಸಮಿತಿಯವರು ಕಾರಣ ಕೇಳಿರುವರು. ಇಂತಹ ಮೆಂಬರರು ಮೂರು ವರುಷಗಳ ವರೆಗೆ ಯಾವ ಚುನಾಯಿತ ಸ್ಥಾನಕ್ಕೂ ಅನರ್ಹರೆಂಬ ನಿಷೇಧವನ್ನು ಸಮಿತಿಯವರು ವಿಧಿಸಲಿರುವರೆಂದು ತಿಳಿದುಬರುತ್ತದೆ. ಅಂತೆಯೇ ತಮ್ಮ ಮೆಂಬರರಿಕೆಗೆ ರಾಜಿಕೊಡುವಂತೆ ನರಿಮೇನರನ್ನು ಕೇಳಿಕೊಳ್ಳಬೇಕೆಂದು ಸಮಿತಿಯು ಬೊಂಬಾಯಿ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷಕ್ಕೆ ಸೂಚಿಸಿರುವದು. ಬಂಗಾಳ ಪ್ರಾಂತಿಕ ಸಮಿತಿಯ ಮೇಲೆ ಶಿಸ್ತು ಜ್ಯಾರಿಮಾಡುವ ವಿಚಾರವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಾಡಲಿರುವುದು. ಇವೆಲ್ಲಾ ಸಲ್ಲಕ್ಷಣಗಳೇ? ಇಂತಹ ಪ್ರಕ್ರಿಯವನ್ನೆಬ್ಬಿಸಿಯೂ ಕಾಂಗ್ರೆಸನ್ನು ಸುಧಾರಿಸುವೆನೆನ್ನುವ ಸುಭಾಸರ ರೀತಿಮಾತು ಇಂದು ಲೋಕ ಸುಧಾರಣೆಗೆ ಹೊರಟಿರುವ ಹಿಟ್ಲರ್ ಮುಸಲಿನಿಗಳ ರೀತಿನೀತಿಗಳಿಗಿಂತ ಭಿನ್ನವಾಗಿಲ್ಲ!

(✻)

ಪಂಡಿತರ ಖಂಡಿತೋಕ್ತಿ

ಎಡಪಕ್ಷೀಯರ ಸಮ್ಮಿಶ್ರ ಮಂಡಲದವರು ಕೈಕೊಂಡಿರುವ ಈ ಕಾರ್ಯವು ಕಾಂಗ್ರೆಸ್ ಸಂಸ್ಥೆಯ ಬುಡಕ್ಕೇ ಕೊಡಲಿಯಿಟ್ಟಂತೆ ಎಂದು ಪಂಡಿತ ನೆಹರುಗಳು ಸ್ಪಷ್ಟವಾಗಿ ಇನ್ನೊಮ್ಮೆ ಎಚ್ಚರಿಸಿರುವರು. ಸದ್ಯಸ್ಥಿತಿಯಲ್ಲಿ ರಾಷ್ಟ್ರಹಿತದ ಭದ್ರತೆಯ ದೃಷ್ಟಿಯಿಂದ ಇಂದಿನ ಕಾಂಗ್ರೆಸ್ ಧುರೀಣತ್ವವನ್ನು ಬದಲಾಯಿಸುವದು ಕೂಡ ಸಾಧ್ಯವಿಲ್ಲವೆಂದು ಪಂಡಿತರ ಅಭಿಪ್ರಾಯ. ಒಬ್ಬ ಸಮತಾವಾದಿಯಾಗಿ ನೋಡುವುದಾದರೂ ಇಂತಹ ಕೃತ್ಯದಿಂದ ಯಾವುದನ್ನು ತನ್ನ ಹಾದಿಯೆಂದು ಎಡಪಕ್ಷವು ಸಾರುತ್ತಿರುವುದೋ ಆ ಸಾಧನೆಗನೇ ಈ ನಿಯಮೋಲ್ಲಂಘನಕಾರ್ಯವು ಘಾತಕವಾದುದು ಎಂದು ನೆಹರುಗಳನ್ನುತ್ತಾರೆ. ಎ. ಐ. ಸಿ. ಸಿ. ಯ ನಿರ್ಣಯದ ವಿರೋಧಕ್ಕಾಗಿ ದೇಶವ್ಯಾಪೀ ಆಂದೋಲನಕ್ಕಿಳಿಯುವ ಮೊದಲು ಬಂಗಾಳ ಕಾಂಗ್ರೆಸ್ ಅಧ್ಯಕ್ಷರಿಗೆ ರಾಜೀನಾಮೆ ಕೊಡಿರೆಂದು ಸುಭಾಸರಿಗವರ ಹಿತಸೂಚನೆ. ಆದರೆ ಸುಭಾಸರ ದಕ್ಕೊಪ್ಪುವರೆ? ತಾನಾಗಿ ಪ್ರಾಂತಿಕ ಅಧ್ಯಕ್ಷಪದವನ್ನು ಬಿಟ್ಟುಹೋಗುವಂತಹ ಅಡಚಣೆ ಸುಭಾಸರಿಗೆಲ್ಲಿ ಬಂದಿದೆ? ಅವರನ್ನು ಆ ಪದದಿಂದ ಇಳಿಸುವ ಕಷ್ಟ ಬಂದಿರುವದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಗೆ ಮಾತ್ರ!

(✻)

ಪಾನದ ಕುರಿತು ನೂತನ ಜ್ಞಾನ!

ಶ್ರೀ. ಸುಭಾಸರೀಗ ಕಾಂಗ್ರೆಸನ್ನು ಮತ್ತು ಕಾಂಗ್ರೆಸ್ ಮಂತ್ರಿಗಳನ್ನು ಟೀಕಿಸಲು ದೊರೆಯುವ ಯಾವ ಸಂದರ್ಭದಲ್ಲಿಯೂ ಆಲಸ್ಯಮಾಡುವದಿಲ್ಲ. "ಅಬ್ಕಾರಿ ಖಾತೆಯಿಂದ ಬೀಳುವ ನಷ್ಟವನ್ನು ತುಂಬಿಸುವ ಸಲುವಾಗಿ ಬೊಂಬಾಯಿಯೊಂದರಲ್ಲೇ ಒಂದು ಕೋಟಿ ರೂ.ಗಳಿಗೂ ಮಿಕ್ಕಿ ಹೊಸ ತೆರಿಗೆಯನ್ನು ವಿಧಿಸುವ ವಿಪತ್ಕಾರಿಯಾದ ಈ ಧೋರಣೆಯನ್ನು ಸರಿಯೆನ್ನಲು ಸಾಧ್ಯವಿಲ್ಲ" ಎಂದು ಬೊಂಬಾಯಿ ಪಟ್ಟಣದೊಳಗೆ ಸಾರ್ವತ್ರಿಕ ಪಾನ ನಿಷೇಧವನ್ನು ಜಾರಿಗೆ ತಂದಿರುವ ಕಾಂಗ್ರೆಸ್ ಮಂತ್ರಿಗಳನ್ನು ಸುಭಾಸರು ಟೀಕಿಸಿರುವರು. "ಬೊಂಬಾಯಿಯಲ್ಲಿ ಶರಾಯಿ ವ್ಯಾಪಾರವು ಮುಖ್ಯವಾಗಿ ಯಾರ ಕೈಯಲ್ಲಿರುವದೋ ಆ ಅಲ್ಪ ಸಂಖ್ಯಾಕ ಪಾರ್ಸಿ ಸಮಾಜಕ್ಕೆ ಮಹದನ್ಯಾಯವಾಗುವದು ಮುಸಲ್ಮಾನರು ತತ್ವತಃ ಪಾನ ನಿಷೇಧಕ್ಕೆ ವಿರುದ್ಧರಿಲ್ಲವಾದರೂ, ಅದರಿಂದಾಗಿ ಬೀಳುವ ಶೇಕಡಾ 10ರಷ್ಟರ ನೂತ್ನ ತೆರಿಗೆಗೆ ಅವರು ವಿರುದ್ಧವಿದ್ದಾರೆ. ಜನಸಂಖ್ಯೆಯ ದಾಮಾಶಯದಲ್ಲಿ ಮುಸಲ್ಮಾನ್ ಸಮಾಜಕ್ಕೆ ಈ ತೆರಿಗೆಯು ಹೆಚ್ಚು ಬೀಳುವದಲ್ಲದೆ ಮುಸಲ್ಮಾನೇತರರನ್ನು ಪಾನ ಪದ್ಧತಿಯಿಂದ ಬಿಡಿಸುವದಕ್ಕಾಗಿ ಮುಸಲ್ಮಾನರು ತೆರಿಗೆಕೊಡಬೇಕಾಗುವದು" ಎಂದು ಸುಭಾಸರು ತನ್ನ ಪದ್ಧತಿ ವಿರುದ್ಧ ತತ್ವವೊಂದನ್ನು ಸಾರಿರುವರು. ಅಲ್ಪ ಸಂಖ್ಯಾಕ ಪ್ರಶ್ನೆಯನ್ನು ಭಾರತದ ರಾಜಕೀಯ ಸಮಸ್ಯೆಯಲ್ಲೊಂದು ತೊಡಕಾಗಿ ಮಾಡಿ ಹಿಡಿಯುವವರ ಸಾಲಿನಲ್ಲಿ ಶ್ರೀ ಸುಭಾಸರನ್ನೂ ಕಾಣುವಂತಾಯಿತು! ಮಾಜೀ ರಾಷ್ಟ್ರಪತಿಗಳ ಇಂತಹ ವರ್ತನೆಗೆ ಕಾರಣವಾವುದು? ಬೇರಾವುದೂ ಅಲ್ಲ-ವರ್ಗಪ್ರೇಮ; ಸುಭಾಸರ ಪಕ್ಷವು ಕಾಂಗ್ರೆಸಿನೊಳಗೆ ಅಲ್ಪ ಸಂಖ್ಯಾಕವಾದುದು; ಪಾರ್ಸೀ ಮುಸಲ್ಮಾನ್ ಸಮಾಜಗಳು ಭಾರತದೊಳಗೆ ಕಡಿಮೆ ಸಂಖ್ಯಾಕರು! 'ಅಲ್ಪರ ಸಂಗ.......'ವೆನ್ನುವದು ಇಂತಹ ಸ್ನೇಹಕ್ಕಾಗಿಯೇ.

(✻)

ಮಾತಿಗೆ ಮಾತು!

ಶ್ರೀ ಸುಭಾಸರ ಆರೋಪಕ್ಕೆ ಬೊಂಬಾಯಿ ಮಂತ್ರಿಗಳಾದ ಡಾ| ಗಿಲ್ಡರ್, ಶ್ರೀ.

ಪುಟ ೫ಕ್ಕೆ

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru	**Sjt. S. Srinivasa Iyengar**
Dr. M. A. Ansari	**Hakim Ajmal Khan**

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty,
BRANCH MANAGER,
Hampankatta, **Mangalore.**

OR

K. S. Ramamurthi, M.A.
BRANCH SECRETARY,
160, Mount Road, **Madras.**

ಕಡ್ಡಾಯ ಸೈನ್ಯ ಶಿಕ್ಷಣ

ಬೇರೆ ಬೇರೆ ದೇಶಗಳಲ್ಲಿರುವ ಪದ್ಧತಿಗಳು

("ಸೆಕೆಂಡ್ ಕ್ಲಾಸಿನ ರಿಜರ್ವ್ ಸಿಪಾಯಿಗಳು ಸಿದ್ಧರಾಗಿರತಕ್ಕದ್ದು"ಎಂದು ಈ ಮೂಲಕ ತಿಳಿಸಲಾಗಿದೆ ಎಂಬ ಪ್ರಕಟಣೆಗಳು ಕಳೆದ ಕೆಲವು ತಿಂಗಳಿಂದ ನಮಗೆ ಕೇಳಬರುತ್ತಿವೆ ಬಲಾತ್ಕಾರ ಸೈನ್ಯಶಿಕ್ಷಣದ ಅನುಭವವಿಲ್ಲದವರಿಗೆ ಬೇರೆಬೇರೆ ಗುಂಪುಗಳನ್ನು ಇದಕ್ಕಾಗಿ ವಿಂಗಡಿಸುವುದನ್ನು ತಿಳಿಯುವುದು ಕಷ್ಟ. ಆದುದರಿಂದ ಅಂತಹ ತಿಳಿಯದವರ ಅನುಕೂಲಕ್ಕಾಗಿ ಈ ಲೇಖನವನ್ನು ಪ್ರಕಟಿಸಲಾಗಿದೆ.)

ಬಲಾತ್ಕಾರವಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುವ ಪದ್ಧತಿಯು ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ರೀತಿಯಲ್ಲಿದೆ. ಎಲ್ಲವೆ ಈ ಸೇವೆಯನ್ನು ಮೂರು ವಿಧಗಳಲ್ಲಿ ಪಡೆಯಲಾಗುವುದು. 1-2 ವರ್ಷಗಳ ವರೆಗೆ ಧ್ವಜದ ಗುಂಪಿನಲ್ಲಿರಬೇಕು. ಈ ಕಾಲದಲ್ಲಿ ಹೊಸ ಬರು ಸೈನ್ಯದ ಪೂರ್ಣ ಶಿಕ್ಷಣವನ್ನು ಪಡೆಯುತ್ತಾರೆ. ಮೊದಲು ರಕ್ಷಣಾಭಾಗದಲ್ಲಿರಬೇಕು. ಯುದ್ಧದ ಭಯವುಂಟಾದ ಕೂಡಲೆ ನಳನನ್ನು ಕರೆಸಲಾಗುವುದು. ಆಗ ಬಲವಂತವಾಗಿ ಸೇರಿಸಲ್ಪಟ್ಟಿರುವವರು ಇನ್ನೊಂದು ರಕ್ಷಣೆಯ ದಳದಲ್ಲಿ ಶಿಕ್ಷಣ ಪಡೆಯುವುದು. ಈ ರೀತಿಯಾಗಿ ಬಲಾತ್ಕಾರ ಸೈನ್ಯ ಪದ್ಧತಿ ಇರುವ ದೇಶಗಳಲ್ಲಿ 40ರಿಂದ 50ವಯಸ್ಸಿನ ವರೆಗಿರುವವರು ಯಾವಾಗಲೂ "ರೆಗ್ಯುಲರ್" ಸೈನ್ಯದಲ್ಲಿ ಟ್ರೈನಿಂಗ್ ಹೊಂದಿದವರೇ ಆಗಿರುವರು.

ವಯಸ್ಸಿನ ದೃಷ್ಟಿಯಿಂದ

ಅನೇಕ ದೇಶಗಳಲ್ಲಿ ಮೀಸಲು ಸೈನ್ಯದವರು ವಯಸ್ಸಿನ ಗುಂಪಿನವರ ಲೆಕ್ಕದಲ್ಲಿ ಬೇರೆಬೇರೆ ದಳಗಳಾಗಿ ವಿಂಗಡಿಸಲ್ಪಟ್ಟಿರುವರು. 23ವರ್ಷ ವಯಸ್ಸಿನವರು (ಧ್ವಜದ ದಳದಲ್ಲಿ ಶಿಕ್ಷಣಹೊಂದಿರುವರು.) 1916 ನೇ ತರಗತಿಯವರೆಂದೆನಿಸಿಕೊಳ್ಳುವರು. ಏಕೆಂದರೆ ಅವರು ಹುಟ್ಟಿದುದು ಆ ಇಸವಿಯಲ್ಲಿ.

ಈ ಮೀಸಲು ಸೈನ್ಯದಲ್ಲಿ ಮಾಡಬೇಕಾದ ಕೆಲಸಗಳೂ ಬೇರೆಬೇರೆಯಾಗಿರುತ್ತವೆ. ಟ್ರೈನಿಂಗ್ ಆದಕೂಡಲೆ ಸೇವೆಗೆ ಸಿದ್ಧರಾಗಬೇಕೆಂಬ ನಿಯಮವೇ ಅನೇಕ ಕಡೆಗಳಲ್ಲಿರುವುದು.

ಒತ್ತಾಯದ ಶಿಕ್ಷಣವೆಂದರೆ ಯಾವಾಗಲೂ ಒಂದು ದೊಡ್ಡ ತರಬೇತಾದ ಸೈನ್ಯವಿರಬೇಕೆಂದಲ್ಲ. ಕ್ರಮವಾದ ಶಿಕ್ಷಣ ಪಡೆದ ಒಂದು ರಿಜರ್ವ್ ಸೈನ್ಯ ಪಡೆಯು ಯಾವಾಗಲೂ ಸಿದ್ಧವಾಗಿದ್ದು, ಸಮಯಬಿದ್ದಲ್ಲಿ ಒದಗಬೇಕೆಂಬುದೇ ಅದರ ಉದ್ದೇಶ.

ಸೈನ್ಯದಲ್ಲಿ ಕೆಲಸಮಾಡುವುದಕ್ಕೆ ನಿಯಮಿತವಾಗಿರುವ ಕಾಲದಲ್ಲಿ ಸಹ ಬೇರೆ ಬೇರೆ ದೇಶಗಳಲ್ಲಿ ವ್ಯತ್ಯಾಸವಿದೆ. ಸಾಧಾರಣವಾಗಿ 17ರಿಂದ 21ನೇ ವಯಸ್ಸಿನವರೆಗೆ ಯುವಕರನ್ನು ತೆಗೆದುಕೊಳ್ಳುವರು. 50ರಿಂದ 55ರ ವರೆಗಿನವರನ್ನು ನಿವೃತ್ತಿ ಮಾಡುವರು. ಹಾಲೆಂಡಿನಲ್ಲಿ 40ವರ್ಷದ ವರೆಗೂ ಒಬ್ಬನು ಸೈನ್ಯದಲ್ಲಿ ಸೇರಬಹುದು. ಜನರನ್ನು ವಿಂಗಡಿಸುವುದರಲ್ಲಿ ಡೆನ್ಮಾರ್ಕಿನಲ್ಲಿರುವಷ್ಟು ಕಠಿಣತೆಯು ಇನ್ನೆಲ್ಲಿಯೂ ಇಲ್ಲ. ಅಲ್ಲಿ ಪಾದರಿಗಳನ್ನೂ ವೈದ್ಯ ಶಾಖೆಯ ವಿದ್ಯಾರ್ಥಿಗಳನ್ನೂ ಸಹ ಸೈನ್ಯಕ್ಕೆ ಸೇರಿಸಿಕೊಳ್ಳುವರಂತೆ. ಸ್ವಿಜರ್ಲೆಂಡಿನಲ್ಲಾದರೋ, ಶಾರೀರಕ ದುರ್ಬಲತೆ ಇರುವವರನ್ನು ಮಾತ್ರ ಬಿಡಲಾಗುತ್ತದೆ.

ಫ್ರಾನ್ಸಿನಲ್ಲಿ ಕೆಲವು ದಿನಗಳ ಹಿಂದಿನ ವರೆಗೂ ಇದರಲ್ಲಿ ಬಹಳ ರಿಯಾಯತಿ ಇತ್ತು. ಆದರೆ ಇತ್ತೀಚಿನ ಘಟನೆಗಳಿಂದ ಅವರೂ ಸ್ವಲ್ಪ ಕಠಿಣತೆಯನ್ನೇ ಅನುಸರಿಸಬೇಕಾಗಿ ಬಂದಿದೆ. ಮೊದಲು ಯಾರಾದರೂ ಸರಿ, ಏನಾದರೂ ಸರಿಯಾದ ಕಾರಣವನ್ನು ತೋರಿಸಿದಲ್ಲಿ, ಬಿಟ್ಟುಬಿಡುತ್ತಿದ್ದರು. ಸ್ವಿಜರ್ಲೆಂಡಿನಲ್ಲಿ ಈ ರೀತಿ ತಪ್ಪಿಸಿಕೊಳ್ಳುವವರ ಮೇಲೆ ವಿಶೇಷ ರೀತಿಯ ತೆರಿಗೆಗಳನ್ನು ಹಾಕುವರು!

ಇನ್ನು ಈ ಸೈನಿಕರ ಜೀವನದ ರೀತಿಯನ್ನು ನೋಡೋಣ. ಸಾಧಾರಣವಾಗಿ ಪ್ರತಿ ವರ್ಷವೂ (ಫ್ರಾನ್ಸಿನಲ್ಲಿ ೬ತಿಂಗಳಿಗೊಮ್ಮೆ) ಒಂದು ದಿನವನ್ನು ಗೊತ್ತುಮಾಡುವರು. ಆ ದಿನ ಸೈನ್ಯಕ್ಕೆ ಸೇರುವ ವಯಸ್ಸಿನವರೆಲ್ಲರೂ ಹತ್ತಿರದ ಸೈನ್ಯದ ಅಧಿಕಾರಿಯ ಬಳಿ ಹೋಗಿ ರಿಪೋರ್ಟ್ ಮಾಡಿಕೊಳ್ಳತಕ್ಕದ್ದು. ನೂರು ವಿಧವಾದ ಶಿಕ್ಷಣವನ್ನು ಮುಗಿಸುವವರಿಗೆ 'ಡಿಸ್ಚಾರ್ಜ್ ಪೇಪರ್ಸ್' ಕೊಡಲಾಗುವುದು.

ಜರ್ಮನಿಯಲ್ಲಿನ ರೀತಿ

ಇಲ್ಲಿ 20ನೇ ವರ್ಷದಲ್ಲಿ ಸೈನ್ಯಕ್ಕೆ ಸೇರಬೇಕೆಂಬ ನಿಯಮವಿದೆ. ಆದರೆ ಅದಕ್ಕೂ ಮೊದಲು ಲೇಬರ್ ಕ್ಯಾಂಪಿನಲ್ಲಿ 6 ತಿಂಗಳ ವರೆಗಿರಬೇಕಾಗುವುದು. ಕ್ರಮವಾದ ಸೈನ್ಯದಲ್ಲಿ ನಂತರ 2 ವರ್ಷಗಳ ವರೆಗಿರಬೇಕು.

ಮುಸಲೋನಿಯ ಸಿಪಾಯಿಗಳು 21ನೇ ವಯಸ್ಸಿನಲ್ಲಿ ರೆಗ್ಯುಲರ್ ಸೈನ್ಯಕ್ಕೆ ಸೇರುವರು. ಇವರಿಗೆ 8 ತಿಂಗಳ ತನಕ ಶಿಕ್ಷಣ ಕೊಡಲಾಗುವುದು. ನಂತರ ಇವರಿಗೆ ಬಿಡುಗಡೆ. ಇಟಲಿಯಲ್ಲಿ ಸರ್ಕಾರದ ರಿಜರ್ವ್ ಸೈನ್ಯವೆಂಬುದಿಲ್ಲ. ಇದು 55ನೇ ವರ್ಷದ ವರೆಗಿನ ನಿಯಮ. ಫ್ರಾನ್ಸಿಗೂ ಇದಕ್ಕೂ ವ್ಯತ್ಯಾಸವೇನೆಂದರೆ ಅಲ್ಲಿ ವರ್ಷಕ್ಕೆರಡು ಸಲ ಸೈನ್ಯಕ್ಕೆ ಸೇರಿಸಿಕೊಳ್ಳುವರು. 21 ವರ್ಷದಿಂದ ಯುವಕರು ಮೇ ಅಥವಾ ಸೆಪ್ಟೆಂಬರಿನಲ್ಲಿ ಸೈನ್ಯಕ್ಕೆ ಸೇರುವರು.

1932ರ ನಂತರ ರೆಗ್ಯುಲರ್ ಸೈನ್ಯದವರು ಮಾಡುವ ಸೇವೆಯಲ್ಲಿ ಬದಲಾವಣೆಯಾಗಿದೆ. ಮೊದಲು ಇದು 2ವರ್ಷವಿತ್ತು. ಈಗ 3 ವರ್ಷವಾಗಿದೆ. ಮುಂದೆ 12 ವರ್ಷದ ವರೆಗೆ ರಿಜರ್ವ್ ಸೈನ್ಯದಲ್ಲೂ 8 ವರ್ಷದ ವರೆಗೆ ಇಲಾಖೆ ಸೈನ್ಯದಲ್ಲೂ ಇರಬೇಕು.

ಬೆಲ್ಜಿಯಂನಲ್ಲಿ ಜಪ್ಪನ ಯುವಕರ ಮೇಲೆಯೇ ಈ ಮಾತು ಅವಲಂಬಿಸಿದೆ. ಅವರು 17ನೇ ವರ್ಷದಲ್ಲಿ ವಾಲಂಟಿಯರ್ ಆಗುವರು. 18ನೇ ವರ್ಷವಾದ ಮೇಲೆ ಬಲಾತ್ಕಾರ ಸೈನ್ಯಶಿಕ್ಷಣದಲ್ಲಿ ಸೇವೆ ಮಾಡುವರು. ವಾಲಂಟಿಯರು 4 ವರ್ಷ ಶಿಕ್ಷಣ ಹೊಂದುವರು. ಬಲಾತ್ಕಾರ ಸೇವೆಯ ಕಾಲವು 2 ವರ್ಷ ಮಾತ್ರ. ಹಾಲೆಂಡಿನಲ್ಲಿ ಸಹ ಅಲ್ಲಿನ ನಿವಾಸಿಗಳ ಅಭಿಪ್ರಾಯದಂತೆಯೇ ಎರಡರಲ್ಲಿ ಯಾವುದಕ್ಕೆ ಬೇಕಾದರೂ ಸೇರಬಹುದೆಂಬ ನಿಯಮವಿದೆ. ಮೇಲ್ಕಂಡ 2 ದೇಶಗಳಲ್ಲೂ ವಾಲಂಟಿಯರುಗಳ ಸಂಖ್ಯೆಯು ಬಹಳ ಕಡಿಮೆಯಾಗಿದೆ.

ಚಿಕ್ಕ ರಾಷ್ಟ್ರಗಳು

ಪೋಲೆಂಡು, ಯೂನಾನ್ ಮತ್ತು ಯುಗೋಸ್ಲೋವೇಕಿಯಗಳಲ್ಲಿ ಸಹ ಇದೇ ಪರಿಮಿತಿಯೇ. ಆದರೆ ಕೊನೇದರಲ್ಲಿ ಯುದ್ಧಕಾಲದಲ್ಲಿ 17ರಿಂದ 55ರ ವರೆಗಿನವರೆಲ್ಲರೂ ಸೈನ್ಯದಲ್ಲಿ ಸೇವೆ ಮಾಡಲೇಬೇಕು.

ರುಮೇನಿಯಾದಲ್ಲಿ ಪ್ರತಿಯೊಬ್ಬರೂ 21ರಿಂದ 23ನೇ ವಯಸ್ಸಿನ ಮಧ್ಯದಲ್ಲಿ ಸೈನ್ಯಶಿಕ್ಷಣವನ್ನು ಹೊಂದಲೇಬೇಕು. ಇದರಲ್ಲಿ ಜನಾಂಗದ ಸೈನ್ಯ ಬೇರೆ ಇದೆ. ಇದರಲ್ಲಿ 50 ವರ್ಷದವರೂ ಸಹ ಸೇರಲೇಬೇಕು.

ರಶ್ಯದಲ್ಲಿ 19ನೇ ವರ್ಷದ ಯುವಕರು ಸೈನ್ಯಕ್ಕೆ ಸೇರಬೇಕು. ವಿರಾಮ ಕಾಲದಲ್ಲಿ ಅವರು ಶಿಕ್ಷಣವನ್ನು ಹೊಂದುತ್ತಿರುವರು. 6 ವಾರದಲ್ಲಿ 96 (Period) ಗಂಟೆಗಳ ಶಿಕ್ಷಣ ಹೊಂದಬೇಕಾಗುವುದು. 21ನೇ ವರ್ಷವಾದ ಮೇಲೆ ಯುನಿಫಾರಂನಲ್ಲಿ 28 ದಿನಗಳ ಹಾಜರಿಯು ಅನಿವಾರ್ಯವಾಗುವುದು. ಇದಾದ ನಂತರ ಸೈನ್ಯದಿಂದ ಬಿಡುಗಡೆಯಾಗುವುದೂ ಉಂಟು. ಇಲ್ಲವೆ ಗೊತ್ತಾದ ಕಾಲದ ವರೆಗೆ ಸೈನ್ಯದಲ್ಲೇ ಇರುವುದೂ ಉಂಟು.

ಅಮೃತವಾಣಿ

ಇತರರಿಗೆ ತೊಂದರೆಯನ್ನುಂಟುಮಾಡುವವನು ತನಗೆ ತಾನೇ ತೊಂದರೆಯನ್ನುಂಟುಮಾಡಿಕೊಳ್ಳುವನು

—ಮಹಾತ್ಮಾ ಬುದ್ಧ.

WANTED candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight-Director, Royal Telegraph and Rly.Duties College, Bombay 11.

ಲೈಬ್ರರಿ

ಮತ್ತು

ಸ್ಕೂಲ್ ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

THE BOMBAY LIFE ASSURANCE CO., LTD.

ಸ್ಥಾಪನೆ 1908

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ವಿವರ.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.

ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.

ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಲಾಲುಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ —

ರಥಬೀದಿ ಮಂಗಳೂರು	ಪುತ್ತೂರು, ಕಲ್ಲಿಕೋಟೆ	ಪೋ. ಬಾಕ್ಸ್ ನಂ.337, ಮೌಂಟ್‌ರೋಡ್, ಮದರಾಸ್.	ವಿಶ್ವೇಶ್ವರಪುರಂ ಸರ್ಕಲ್ ಬೆಂಗಳೂರು ಸಿಟಿ	ಚರ್ನರೋಡ್, ಗಿರ್ಗಾಂ, ಬೊಂಬಾಯಿ ನಂ. 4	ಸೆಂಟ್ರಲ್ ಸ್ಟೇಶನ್ ರೋಡ್, ತ್ರಿವೆಂಡ್ರಮ್.

ಗ್ರಹಮಿತ್ರತ್ವ

(ಶ್ರೀ. ಪಿ. ವಿ. ಉಪಾಧ್ಯಾಯ)

> ಲಕ್ಷ್ಮಿಯನ್ನು ಶ್ಯಾಮರಾಯರಿಗೆ ಕೊಟ್ಟು ವಿವಾಹ ಮಾಡಬೇಕೆಂದು ಆವಳ ತಂದೆಗೆ ಆಶೆಯಿತ್ತು. 'ಗ್ರಹಮಿತ್ರತ್ವ' ಸರಿಯಿಲ್ಲದ್ದರಿಂದ ವಿವಾಹಕ್ಕೆ ಅಡ್ಡಿಯಾಯಿತು. ಇಬ್ಬರೂ ಬೇರೆಯೇ ಮದುವೆಯಾಗಿ ಶ್ಯಾಮರಾಯ ವಿಧುರನಾದ; ಲಕ್ಷ್ಮಿ ವಿಧವೆ ಯಾದಳು. ವಿಧವೆ ನಿರ್ಗತಿಕ ಲಕ್ಷ್ಮಿ ವಿಧುರ ಶ್ಯಾಮರಾಯನಲ್ಲೇ ಅಡಿಗೆಗಾದಳು. ಹೇಗಿದೆ 'ಗ್ರಹಮಿತ್ರತ್ವ' ನೋಡಿ!

ಶಾಮರಾಯರು ಎರಡನೇ ಮದುವೆ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳ ಬಹುದಿತ್ತು. ಎಷ್ಟೋ ಜನರು ಅವರಿಗೆ ಹುಡುಗಿಕೊಡಲಿಕ್ಕೆ ಸಿದ್ಧರಿದ್ದರು. ಅವ ರಿಗೆ ಪ್ರಾಯ ನೂವತ್ತೈದಕ್ಕಿಂತ ಹೆಚ್ಚು ಆಗಿರಲಿಲ್ಲ. ಆರುವರ್ಷದ ಹುಡುಗನೊಬ್ಬ, ಒಂದು ವರ್ಷದ ಹುಡುಗಿಯೊಬ್ಬಳು ಹೀಗೆ ಎರಡೇ ಜನ ಮಕ್ಕಳು. ಮನೆಯಲ್ಲಿಯೂ ಒಳ್ಳೇ ಅನುಕೂಲವಿತ್ತು. ಪಿತ್ರಾರ್ಜಿತ ಆಸ್ತಿಯಿಂದ ಊಟಕ್ಕೆ ಬೇಕಾದಷ್ಟು ಬತ್ತ ಬರುತ್ತಿತ್ತು. ತಿಂಗಳಿಗೆ ಎಂಭತ್ತು ರೂಪಾಯಿ ಸಂಬಳ. ಹೀಗಿರುವಾಗ ಅವರಿಗೆ ಹುಡುಗಿ ಸಿಕ್ಕುವುದೊಂದು ಕಷ್ಟವೇ? ಆದರೂ ಶಾಮರಾಯರು ಏನೋ ಮದುವೆಯ ಯೋಚನೆಯನ್ನು ಬಿಟ್ಟುಬಿಟ್ಟಿದ್ದರು. 'ಯಾಕೆ ನನಗಿನ್ನು ಮದುವೆ, ಎರಡು ಜನ ಮಕ್ಕಳಿದ್ದಾರೆ. ಹುಡುಗಿಗೆ ವಿದ್ಯಾಭ್ಯಾಸ ಮಾಡಿಸಬೇಕು. ಹುಡುಗಿಗೊಂದು ಮದುವೆಯಾಗಬೇಕು. ಇಷ್ಟಾದರೆ ನನ್ನ ಕೆಲಸ ವಾಯಿತು. ನನ್ನೊಬ್ಬನ ಮಟ್ಟಿಗೆ ನಾನು ಹೇಗೂ ಜೀವಿಸಿಕೊಂಡೇನು' ಎಂದು ಶಾಮರಾಯರು ಬಹಳ ವೈರಾಗ್ಯದಿಂದ ಹೇಳಿಕೊಳ್ಳುತ್ತಿದ್ದರು.

ಮನೆಯಲ್ಲಿಯೂ ಅವರಿಗೆ ತಾಪತ್ರಯ ವಿರಲಿಲ್ಲ. ಮಕ್ಕಳ ಆರೈಕೆಯನ್ನು ಅಡಿಗೆಯ ಹೆಂಗಸು ಲಕ್ಷ್ಮಿ ಬಹಳ ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದಳು. ಅಷ್ಟು ಪ್ರೀತಿಯಿಂದ ಎರಡನೇ ಹೆಂಡತಿ ಮಕ್ಕಳನ್ನು ನೋಡುತ್ತಿರಲಿಲ್ಲ. ಅಡಿಗೆ ಮನೆಕೆಲಸ ಎಲ್ಲವನ್ನೂ ಲಕ್ಷ್ಮಿಯೇ ಸಂಭಾಳಿಸಿಕೊಳ್ಳುತ್ತಿದ್ದಳು. ರಾಯರು ಆಫೀಸಿನಿಂದ ಮನೆಗೆ ಬರುವಾಗ ಅವರಿಗೆ ಬೇಕಾದ ಊಟ ಉಪಚಾರಗಳನ್ನು ಲಕ್ಷ್ಮಿಯು ಬಹಳ ಆದರದಿಂದ ಮಾಡುತ್ತಿದ್ದಳು. ಲಕ್ಷ್ಮಿಯು ಮನೆಯಲ್ಲಿದ್ದುದರಿಂದ ಶಾಮರಾಯರಿಗೆ ಮನೆಯ ಯೋಚನೆಯೇ ಇರಲಿಲ್ಲ.

ಶಾಮರಾಯರ ಹೆಂಡತಿ ಸತ್ತ ಕೆಲವು ದಿನಗಳಲ್ಲಿಯೇ ಲಕ್ಷ್ಮಿಯು ಅಲ್ಲಿ ಅಡಿಗೆಗೆ ಬಂದು ಸೇರಿದ್ದಳು. ಮಕ್ಕಳನ್ನು ಸಾಕುವುದರಲ್ಲಿ ಅವಳು ಬಹಳ ನಿಪುಣೆ. ಮಕ್ಕಳಿಗೆ ಲಕ್ಷ್ಮಿಯೆಂದರೆ ಬಹಳ ಪ್ರೀತಿ. ಶಾಮರಾಯರು ಲಕ್ಷ್ಮಿಗೆ ಮನೆಯಲ್ಲಿ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ಸಂಬಳ ಬಂದ ಕೂಡಲೇ ಹಣವನ್ನೆಲ್ಲಾ ಲಕ್ಷ್ಮಿಯ ಹತ್ತಿರ ತಂದುಕೊಟ್ಟುಬಿಡುತ್ತಿದ್ದರು. ಲಕ್ಷ್ಮಿಯು ಬಹಳ ಸೂಕ್ಷ್ಮದಲ್ಲಿ ಮನೆಯನ್ನು ನಡೆಯಿಸುತ್ತಿದ್ದಳು. ಲಕ್ಷ್ಮಿಯು ಮಾಡಿದ ಯಾವ ಕೆಲಸಕ್ಕೂ ಶಾಮರಾಯರು ಆಕ್ಷೇಪಿಸುತ್ತಿರಲಿಲ್ಲ. ಎಲ್ಲವೂ ಅವರಿಗೆ ಸಮ್ಮತ.

ಲಕ್ಷ್ಮಿಯು ಶಾಮರಾಯರಿಗೆ ಮೊದಲೇ ಪರಿಚಿತಳು. ಅವರು ಒಂದೇ ಶಾಲೆಗೆ ಹೋಗುತ್ತಿದ್ದರು. ಲಕ್ಷ್ಮಿಯನ್ನು ಶಾಮರಾಯರಿಗೆ ಕೊಟ್ಟು ವಿವಾಹಮಾಡಬೇಕೆಂದು ಲಕ್ಷ್ಮಿಯ ತಂದೆಗೆ ಬಹಳ ಆಶೆಯಿತ್ತು. ಶಾಮರಾಯರಿಗೂ ಅದರಲ್ಲಿ ಮನಸ್ಸಿತ್ತು. 'ಜಾತಕ ಆದರೆ ನನ್ನಿಂದ ಅಡ್ಡಿಯಿಲ್ಲ'ವೆಂದು ಶಾಮರಾಯರ ತಂದೆ ಹೇಳುತ್ತಿದ್ದರು. ಜಾತಕ ಘಟನೆ ಮಾತ್ರ ಸರಿಬೀಳಲಿಲ್ಲ. 'ಮತ್ತೆಲ್ಲಾ ಸರಿಯಿದೆ; ಗ್ರಹಮಿತ್ರತ್ವ ಮಾತ್ರ ಇಲ್ಲ'ವೆಂದು ಜೋಯಿಸರು ಹೇಳಿದರು. ಹೀಗಾಗಿ ಶಾಮರಾಯರು ಲಕ್ಷ್ಮಿಯನ್ನು ಮದುವೆಯಾಗಲಿಲ್ಲ.

ಜೋಯಿಸನೊಬ್ಬನಿಲ್ಲದಿದ್ದರೆ ತಾನು ಶಾಮರಾಯರ ಪತ್ನಿಯಾಗಿ ಸುಖದಲ್ಲಿರುತ್ತಿದ್ದೆ ಎಂದು ಲಕ್ಷ್ಮಿಯ ಮನಸ್ಸಿನಲ್ಲಿತ್ತು. ಬಡವರ ಹುಡುಗಿಯಾದುದರಿಂದ ಥಕ್ಕನೆ ಅವಳಿಗೆ ವಿವಾಹವಾಗಲಿಲ್ಲ. ಅರುವತ್ತು ವರುಷದ ಮೂರನೇ ಮದುವೆಯವನನ್ನು ಲಕ್ಷ್ಮಿಯು ವಿವಾಹಮಾಡಿಕೊಳ್ಳಬೇಕಾಯಿತು. ವಿವಾಹವಾದ ಎರಡು ವರ್ಷಗಳಲ್ಲಿ ಲಕ್ಷ್ಮಿಯು ವಿಧವೆಯಾದಳು. ನಿರ್ಗತಿಕಳಾಗಿ ಅಲ್ಲಲ್ಲಿ ಅಡಿಗೆಮಾಡಿಕೊಂಡು ಕಷ್ಟದಲ್ಲಿ ಜೀವಿಸುತ್ತಿದ್ದಳು. ಶಾಮರಾಯರಲ್ಲಿ ಅಡಿಗೆಗೊಂದು ಹೆಂಗಸು ಬೇಕೆಂದು ಕೇಳಿದೊಡನೆಯೇ ಲಕ್ಷ್ಮಿಯು ಶಾಮರಾಯರಲ್ಲಿ ಬಂದು ಸೇರಿಕೊಂಡಳು. ಶಾಮರಾಯರಿಗೆ ಅನುಗುಣವಾಗಿ ಬಹಳ ಶ್ರದ್ಧೆಯಿಂದ ಕೆಲಸಮಾಡಿಕೊಂಡಿದ್ದಳು.

ಒಂದು ದಿನ ಶಾಮರಾಯರೂ ಮಕ್ಕಳೂ ಊಟಕ್ಕೆ ಕುಳಿತಿದ್ದರು. ಲಕ್ಷ್ಮಿಯು ಬಡಿಸುತ್ತಿದ್ದಳು. 'ಸಾರಿಗೆ ಉಪ್ಪು ಹಾಕಲಿಕ್ಕೆ ಮರೆತೆಯೋ ಲಕ್ಷ್ಮಿ? ಒಂದಿಷ್ಟು ಉಪ್ಪು ತಾ' ಎಂದು ಶಾಮರಾಯರು ಅಂದರು. ಆರುವರ್ಷದ ನಾರಾಯಣನು 'ಅಪ್ಪಾ! ಅಮ್ಮ ಇರುವಾಗ ಎಷ್ಟು ಸಣ್ಣ ತಪ್ಪಿಗೂ ನೀವು ಅವಳ ಕೂಡೆ ಜಗಳಾಡುತ್ತಿದ್ದಿರಿ. ಅವಳು ಎಷ್ಟು ಬೇಗ ಅಡಿಗೆ ಮಾಡಿದರೂ ತಡವಾಯಿತೆಂದು ಸಿಟ್ಟುಮಾಡುತ್ತಿದ್ದಿರಿ. ಅವಳ ಮೇಲೋಗರ ಯಾವುದೂ ರುಚಿಸುವುದಿಲ್ಲವೆಂದು ಗುಣುಗುಟ್ಟುತ್ತಿದ್ದಿರಿ. ಲಕ್ಷ್ಮಮ್ಮ ಏನು ಮಾಡಿದರೂ ನಿಮಗೆ ಸಿಟ್ಟಿಲ್ಲ. ಅವಳ ವಿಷಯ ನಿಮಗಷ್ಟು ಸಮಾಧಾನವೆಲ್ಲಿಂದ ಬಂತು' ಎಂದು ಕೇಳಿದನು. ಶಾಮರಾಯರು ಮುಗುಳು ನಗೆಯಿಂದ ಲಕ್ಷ್ಮಿಯ ಮುಖ ನೋಡಿದರು. ಲಕ್ಷ್ಮಿಯು ಸೆರಗನ್ನು ಎಳೆದುಕೊಂಡು 'ನಮ್ಮೊಳಗೆ ಗ್ರಹಮಿತ್ರತ್ವ ಇಲ್ಲವಂತೆ ಮಗೂ' ಎಂದು ಹೇಳಿದಳು. ಶಾಮರಾಯರು ಗಟ್ಟಿಯಾಗಿ ನಗಾಡಿಬಿಟ್ಟರು. ಆರು ವರ್ಷದ ನಾರಾಯಣ ಏನೆಂದು ಅರ್ಥವಾಗದಿದ್ದರೂ ಅವನೂ ನಗಾಡಿಬಿಟ್ಟ. ಒಂದು ವರ್ಷದ ಮಾಲತಿಯೂ ನಗಾಡಿಬಿಟ್ಟಳು. ನಂತರ ಶಾಮರಾಯರು ಆಫೀಸಿನಿಂದ ಬಂದವರು ಲಕ್ಷ್ಮಿಯ ಹತ್ತಿರ ಮಾತಾಡಿಕೊಂಡಿರುತ್ತಿದ್ದುದನ್ನು ನಾರಾಯಣ ನೋಡಿದರೆ 'ಅಪ್ಪಾ, ಗ್ರಹಮಿತ್ರತ್ವ ಹೇಗಿದೆ?' ಎನ್ನುತ್ತಿದ್ದ. ಒಬ್ಬರನ್ನೊಬ್ಬರು ನೋಡಿ ಅವರು ನಗಾಡುತ್ತಿದ್ದರು.

ಸಮಾಚಾರ ಸಮಾಲೋಚನ

ಪುಟ ೩ರಿಂದ

ಕೆ. ಎಮ್. ಮುನ್ಶಿಯವರು ಉತ್ತರವಿತ್ತಿರುವರು. ಮಾಜಿ ಕಾಂಗ್ರೆಸ್ ಅಧ್ಯಕ್ಷರನ್ನು ಇಷ್ಟು ಸುಲಭದಲ್ಲಿ ತಮ್ಮ ಜಾತಿಗೆ ಮತಾಂತರಿಸಿಕೊಂಡದ್ದಕ್ಕಾಗಿ ಬೊಂಬಾಯಿಯ ಪಾನ ಪ್ರೇಮಿಗಳ ಸಾಹಸವನ್ನು ಶ್ರೀ ಮುನ್ಶಿಯವರು ಶ್ಲಾಘಿಸುತ್ತಾ, ಶ್ರೀ ಭೋಸರು ತನ್ನನ್ನು ತಾನು ನೋಡಿಕೊಂಡಿಲ್ಲವೆಂಬಂತಹ ಉತ್ತರವಿತ್ತಿರುವರು. "ಪಾನ ನಿಷೇಧದ ಮೂರು ವರುಷಗಳ ಯೋಜನೆಯನ್ನು 1938ನೇ ಇಸವಿಯಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯು ಮೊದಲಾಗಿ ಮಂಜೂರು ಮಾಡಿತು. ಹಾಗೆಯೇ 1939ರಲ್ಲಿ ಬೊಂಬಾಯಿ ಪಟ್ಟಣದ ಒಳಗೆ ಪಾನ ನಿಷೇಧವನ್ನು ಮಾಡುವ ಧೋರಣೆ ಮತ್ತು ಅದಕ್ಕಾಗಿ ಹೊಸ ತೆರಿಗೆ ವಿಧಿಸುವ ಯೋಜನೆ ಇವರಡೂ ಕಾಂಗ್ರೆಸಿನ ಒಪ್ಪಿಗೆ ಪಡೆದಿದ್ದುವು. ಈ ಸಂದರ್ಭಗಳಲ್ಲೆಲ್ಲಾ ಶ್ರೀ ಸುಭಾಷರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರಲ್ಲದೆ ಬೊಂಬಾಯಿಯಲ್ಲಿ ಪಾನ ನಿಷೇಧವನ್ನು ಕೈಗೊಂಡಾಗ ಅವರು ಮಂತ್ರಿಗಳನ್ನು ಅಭಿನಂದಿಸಿಯೂ ಇದ್ದರು. ಆದರೆ ಈಗ ಹೊಸರೂಪ ಪ್ರದರ್ಶಿಸುತ್ತಿದ್ದಾರೆ 'ಫೋರ್ವರ್ಡ್ ಬ್ಲೋಕಿನ ಸಂಸ್ಥಾಪಕರು, ತಾನು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಮಾಡಿದ್ದುದೆಲ್ಲಾ ತಪ್ಪು ಎಂಬುವನ್ನೀಗ ಸ್ವತಃ ತೋರಿಸುವಂತಿದೆ." ಇದು ಶ್ರೀ ಭೋಸರಂತಹ ಧುರೀಣರ ಮನೋವ್ಯತ್ಯಾಸವೆನ್ನುವದಕ್ಕಿಂತ ಕಾಲವ್ಯತ್ಯಾಸದ ಪ್ರಭಾವವೆನ್ನುವದು ವಾಸಿ. ಭೂತಕಾಲದಲ್ಲಿ ಹಾಗೆ ಮಾಡಿದ್ದ ಭೋಸರು ವರ್ತಮಾನ ಕಾಲದಲ್ಲಿ ಹೀಗೆ ಆಡುತ್ತಾರೆ; ಇನ್ನು ಭವಿಷ್ಯತ್ಕಾಲದಲ್ಲಿ ಹೇಗೋ?

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು. ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906

CANARA BANK LIMITED



ಚೈತನ್ಯ ಮತ್ತು
ಹೊಸ ಹುರುಪು

ನಿಮ್ಮ ಯೌವನ ಶರೀರಕ್ಕೆ ಚೈತನ್ಯ ಹುರುಪು ... ... ನೆಶಕಾರಿಯಾಗಿದೆ

ತಯಾರಿಸುವವರು—
ಆಯುರ್ವೇದಾಶ್ರಮಂ, ಪ್ರೋ. ಬಾಕ್ಸಾನಂ ೨೮೭, ಮದ್ರಾಸು
ಸ್ಟಾಕಿಸ್ಟರು—
ಶ್ರೀವೈಷ್ಣವ ಸ್ಟೋರ್ಸ್, ರಥಬೀದಿ, ಮಂಗಳೂರು.



... ...

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಆಮಲಕೀ ತೈಲ

Swadeshi Oushadhi Bhandara (Reg.) Kunjal P O Brahmavar S India

1 V S Prabhu, The Canara News & Books Agent Lutataw la Mansion, Lalbag, BOMBAY
2 General Supplies Ltd, Udipi S K
3 Nava Bharata Book Depot Udipi S K

೩೫ ವರ್ಷಗಳಿಂದ ಪ್ರಸಿದ್ಧವಾದ
ಶಕ್ತಿಸುಧಾಕರ
ಗುಳಿಗೆಯು
(ರಿಜಿಸ್ಟರ್ಡ್)

... ... 32 ಗುಳಿಗೆಗಳು ಡಬ್ಬಿ 1ಕ್ಕೆ ಬೆಲೆ ರೂ 1 ಮಾತ್ರ

Vaidya Shasthry Kalyanji Jagar
360, Kalbadevi Road
(opp Temple)
Hanuman ... BOMBAY

ಪ್ರಸಿದ್ಧ ... ... (ಮಂಗಳೂರು)

ಸ್ಥಾಪನ ... 1926

18 ಬಲ್ಮಠ ರಸ್ತೆ, ಮಂಗಳೂರು,

... ...

CROWN RUBBER STAMP CO,
Balmat Road, MANGALORE
Included by the Mysore Govt Stores Purchase Committee in the list of approved firms

ಬೊಂಬಾಯಿ

(ನಮ್ಮ ಸ್ವಂತ ಪತ್ರಿಕಾ ವರದಿಗಾರರಿಂದ)

ತಾ 13-7-1939

ಎ ಐ ಸಿ ಸಿ ಠರಾವಿನ ವಿರುದ್ಧ ಮಹಾಸಭೆ—ಮುಂಬಯಿ ಎ ಐ ಸಿ ಸಿ ಯಲ್ಲಿ ಎಡಪಕ್ಷದವರ ... ... ಪ್ರಾಂತಿಕ ಮಂತ್ರಿಮಂಡಲದ ... ... ನ್ಯಾಯದಿಂದ ಶ್ರೀ ಸುಭಾಸಚಂದ್ರ ಬೋಸರವರು ಎಡಪಕ್ಷದವರ ಆಜ್ಞೆಮೇರೆಗೆ ಜುಲೈ 9ಕ್ಕೆ ಈ ವಿರೋಧ ದಿನವನ್ನಾಚರಿಸಬೇಕೆಂದು ಪ್ರಕಟಿಸಿದನ್ನೂ ... ಈ ಮೇರೆಗೆ ಮುಂಬಯಿಯಲ್ಲಿ ಈ ಸಭೆಯು ಶ್ರೀ ... ಅಧ್ಯಕ್ಷತೆಯಲ್ಲಿ ಜರಗಿತು ... ... ಭಾಷಣದ ಮುಖ್ಯ ... ... ವಿಲ್ಲದೆ ... ... 1921 ಮತ್ತು 1930ರ ನಮ್ಮ ಪರಿಸ್ಥಿತಿಯನ್ನೂ ಇಂದಿನ ಅವಸ್ಥೆಯನ್ನೂ ನೋಡಿದರೆ ... ... ಕಂಡುಬರುತ್ತದೆ 8 ಪ್ರಾಂತಗಳಲ್ಲಿ ಕೋಂಗ್ರೆಸ್ ಮಂತ್ರಿಮಂಡಲಗಳಿದ್ದು, ಜನತೆಯು ಸ್ವಾತಂತ್ರ್ಯಕ್ಕಾಗಿ ... ... ಬ್ರಿಟಿಷ್ ಸರಕಾರವನ್ನು ಎದುರಿಸಲು ... ... ಧೈರ್ಯವಿಲ್ಲ ... ...

ಬಿ ಪಿ ಸಿ ಸಿ ಯ ಎಚ್ಚರಿಕೆ—ಬಿ ಪಿ ಸಿ ಸಿ ಯವರು ಸಭೆಯು ... ... ಕೋಂಗ್ರೆಸ್ ಸದಸ್ಯರು ... ... ಭಾಗವಹಿಸಕೂಡದೆಂದು ಎಚ್ಚರಿಕೆ ಪತ್ರವನ್ನು ಕಳುಹಿಸಿದ್ದರು ... ... ಸಭೆಯಲ್ಲಿ ಹಾಜರಿದ್ದರು ... ... ಬಿ ಪಿ ಸಿ ಸಿ ಯವರ, 9 ... ... ಪ್ರತ್ಯುತ್ತರವಾಗಿ ... ... ವಿರುದ್ಧ ... ...

ಮದ್ಯಪಾನ ನಿಷೇಧ—ಮದ್ಯಪಾನ ಬಂದಿಗೆ ಇನ್ನು ಎರಡೇ ವಾರಗಳು ಉಳಿದಿರಲು, ಮುಂಬಯಿ ಸರಕಾರವು ತನ್ನ ಕಾರ್ಯವನ್ನು ... ... ಬಣ್ಣದ ... ... ಚಿತ್ರಗಳು, ಮುಂಬಯಿ ನಗರದಲ್ಲೆಲ್ಲಾ ಶೋಭಿಸುತ್ತಿವೆ ... ... ಕಂಡೆ ಬರುತ್ತಿದೆ ಮದ್ಯಪಾನ ನಿಷೇಧಕ್ಕೆ ವಿರುದ್ಧ ಸಭೆಗಳು ಜರಗಲು ... ... ಜನರು ... ಬಂದ ... ... 10ಸಾವಿರ ... 10 ... ... ಆಗಸ್ಟ್ ಒಂದನೆ ತಾರೀಕಿನಿಂದ ... ...

ದಿ ದೇವಾಡಿಗ ಉದ್ಧಾರಕ ಸಂಘ—ಇದರ ... ... 9ರಲ್ಲಿ ಸಂಘದ ... ... 1939-40ನೇ ವರ್ಷದ ಕಾರ್ಯಕಾರಿ ಮಂಡಳಿಗೆ ಸದಸ್ಯರನ್ನು ಆರಿಸಲಾಯಿತು ಶ್ರೀಗಳಾದ ಬಿ ನಾರಾಯಣ್ ರಾವ್, (ಅಧ್ಯಕ್ಷ) ... ... (ಉಪಾಧ್ಯಕ್ಷ) ... ... (ಜೊತೆ ಕಾರ್ಯದರ್ಶಿಯರು) ... ... (ಜೊತೆ ...) ... ... (ಕೋಶಾಧಿಕಾರಿ)

1 ... 2 ... ...

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

S C 129/39

ಡಿ ಮೋಹನ ರಾವ್—ವಾದಿ

ಮತ್ತು

ರಾವ್ ಬಹದ್ದೂರ್ ಎನ್ ವೆಂಕಟ್ರಾಯ್—ಪ್ರತಿವಾದಿ

ಮಂಗಳೂರು ಶಹರಿನಲ್ಲಿ 'ಮನೋಹರ ವಿಲಾಸ' ಬಂಗ್ಲೆಯಲ್ಲಿರುವ ಎನ್ ಗುಂಡ್ರಾಯರ ಮಗ ... ... ಪ್ರತಿವಾದಿ ರಾವ್ ಬಹದ್ದೂರ್ ಎನ್ ವೆಂಕಟ್ರಾಯರಿಗೆ—

ವಾದಿ ಡಿ ಮೋಹನ ರಾವ್ ನು ನಿಮ್ಮ ಮೇಲೆ ಮಂಗಳೂರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ ರೂಪಾಯಿ 129 1 6 ವಸೂಲಿ ... ... S C 129/39 ನೆ ವ್ಯಾಜ್ಯವನ್ನು ತಾ 31-7-1939 ಹಗಲು 11 ಘಂಟೆಗೆ ... ... ಸದ್ರಿ ವ್ಯಾಜ್ಯದಲ್ಲಿ ನಿಮಗೆ ಆಕ್ಷೇಪ ವಗೈರೆ ಹೇಳುವದು ಇದ್ದಲ್ಲಿ ಆದಿನ್ನ ಹಗಲು 11 ಘಂಟೆ ... ... ಸದ್ರಿ ವ್ಯಾಜ್ಯವನ್ನು ... ... ಮೂಲಕ ಕೋರ್ಟಿನ ಹುಕುಂ ಪ್ರಕಾರ ತಿಳಿಸಲಾಗಿದೆ

ಮಂಗಳೂರು 12-7-39 D Mohan Rao ವಾದಿ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C No 1085/39

ಕೆ ... ... ಶೆಟ್ಟಿ, ... ಪುತ್ತೂರು ತಾಲ್ಲೂಕು ... ... ಗ್ರಾಮದ ... — ವಾದಿ

... ... ಮಂಗಳೂರು ... ... — ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿ ... ... ತಿಳಿಸುವದೇನಂದ್ರೆ—

ವಾದಿಗೆ ಪ್ರತಿವಾದಿಯು ಬರಕೊಟ್ಟ ... ... ನೋಟ್ ... 55 9 10 ... ... ಸದ್ರಿ ವ್ಯಾಜ್ಯವು ತಾರೀಕು 21-7-39 ಕ್ಕೆ ... ... ಸದ್ರಿ ... ನಿಮ್ಮ ಆಕ್ಷೇಪಣೆಯಿದ್ದರೆ ಸದ್ರಿ ... ಈ ಕೋರ್ಟಿಗೆ ಹಾಜರಾಗಿ ... ... ಇಲ್ಲವಾದರೆ ಸದ್ರಿ ವ್ಯಾಜ್ಯದ ... ... ತೀರ್ಮಾನಿಸಲಾಗುವದು

ಪುತ್ತೂರು 6-7-39 H Sanjiva Shetty ವಾದಿ ಪರ ಎಡ್ವೋಕೇಟು

ಸೌಭಾಗ್ಯಸಿದ್ಧ ತಾಯಿತ



ದೇಹಸಂಪತ್ತು, ಕುಟುಂಬ ಸುಖ ಸೌಖ್ಯ, ಉದ್ಯೋಗ ಯಶಸ್ಸು, ವಿದ್ಯೆಯಲ್ಲಿ ... ... ವ್ಯವಹಾರ ... ... ಆರೋಗ್ಯ, ದುರಾದೃಷ್ಟ ... ... ಸೌಭಾಗ್ಯ ... ... ತಾಯಿತವ ಧರಿಸಿರಿ

ಕ್ರಯ ರೂ 2-8 0 ವಿ ಪಿ 0-7-0

ಪ್ರತ್ಯೇಕ ಪತ್ರವ್ಯವಹಾರ ಇಂಗ್ಲೀಷಿನಲ್ಲೇ

Hanuman Ahsramam,
Tirumani, S India

3 ... ಗೋಪಾಲ್, 4 ... ... 5 ... ... 6 ... ... 7 ಪಿ ... ... ದೇವಾಡಿಗ, 8 ... ... (ಸದಸ್ಯರು)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಕಾಂಗ್ರೆಸ ಸದಸ್ಯರನ್ನು ಮಾಡುವುದು.

ಈ ವರ್ಷ ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಖು ೧೫-೯-೩೯ ಎಂದು ವರ್ಕಿಂಗ್ ಕಮಿಟಿಯವರು ನಿರ್ಣಯಿಸಿರುವರು. ಕಾರಣ ಇನ್ನು ಎರಡು ತಿಂಗಳು ಮಾತ್ರ ಈ ಕೆಲಸಕ್ಕೆ ಉಳಿದಿರುವದು. ಅಷ್ಟರಲ್ಲಿಯೇ ಎಲ್ಲ ಅಧೀನ ಸಮಿತಿಗಳು ಈ ಬಗ್ಗೆ ನಾವು ಆಗಾಗ್ಗೆ ಕೊಟ್ಟ ನಿಯಮ ಸಲಹೆಗಳನ್ನು ಲಕ್ಷ್ಯದಲ್ಲಿಟ್ಟು ಮನವುಟ್ಟಿ ಕಾರ್ಯಮಾಡಬೇಕು. ಮೊನ್ನೆ ಮುಂಬಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಕೆಲವು ಘಟನಾತ್ಮಕ ತಿದ್ದುಪಡಿಗಳಾದ್ದರಿಂದ ಸದಸ್ಯತ್ವ ಫಾರ್ಮಿನಲ್ಲಿ ತುಸು ಹೆಚ್ಚು ಕಡಿಮೆಯಾಗಿರುವದು. ಆದರೆ ಈಗಾಗಲೇ ಮುಕ್ಕಾಲು ಪಾಲು ಸದಸ್ಯತ್ವ ಪುಸ್ತಕಗಳು ಜಿಲ್ಲಾ ಸಮಿತಿಗೆ—ಮುಂದೆ ತಾಲೂಕು ಸಮಿತಿ ಹಾಗೂ ವ್ಯಕ್ತಿಗಳಿಗೆ ಹಂಚಲಾಗಿವೆ. ಕಾರಣ ಈ ಸಲ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದರೂ ಸಹ ಫಾರ್ಮುಗಳನ್ನು ಇನ್ನು ಮುಂದೆ ತುಂಬುವಾಗ್ಗೆ—ಸದಸ್ಯರಾಗಲಿಚ್ಛಿಸುವವರು ಪುರುಷರಿದ್ದರೆ ತಂದೆಯ ಹೆಸರನ್ನೂ, ವಿವಾಹಿತ ಸ್ತ್ರೀಯರಿದ್ದರೆ ಗಂಡನ ಹೆಸರನ್ನೂ, ಇತರರು ತಂದೆಯ ಹೆಸರನ್ನೂ ಬರಿಯಬೇಕು. ಸದಸ್ಯನ ಸಹಿ 'ಹಾಗು' ಹಣ ಪಡೆಯುವವನ ಸಹಿ ಈ ಮಧ್ಯದಲ್ಲಿ ಒಬ್ಬ ಸಾಕ್ಷೀದಾರನ ಸಹಿಯನ್ನೂ ಮಾಡಿಸಬೇಕು.

ಈ ಪ್ರಕಾರ ಕಾಂಗ್ರೆಸ್ ಘಟನೆಯಲ್ಲಿ ಬದಲಾವಣೆಗಳನ್ನು ಮಾಡಲು ಮುಖ್ಯ ಕಾರಣವೆಂದರೆ ಸದ್ಯಕ್ಕೆ ಪ್ರಚಲಿತದಲ್ಲಿರುವ ಖೋಟ್ಟಿ ಸಭಾಸದತ್ವವನ್ನು ದೂರ ಮಾಡುವದು. ಇದೇ ಉದ್ದೇಶದಿಂದಲೇ ಇಲ್ಲಿ ಕೆಲವು ಸೂಚನೆಗಳನ್ನು ಕೊಡಲಾಗಿದೆ. ಅವುಗಳನ್ನೆಲ್ಲಾ ಅಧೀನ ಸಮಿತಿಗಳು ಮನಃಪೂರ್ವಕವಾಗಿ ಹಾಗು ಕಟ್ಟುನಿಟ್ಟಿನಿಂದ ಅನುಸರಿಸಿದರೆ ಬಹು ಮಟ್ಟಿಗೆ ಈ ಕೊಳೆಯು ದೂರಾಗುವದರಲ್ಲಿ ಸಂದೇಹವಿಲ್ಲ.

೧. ಸದಸ್ಯರನ್ನು ಮಾಡಲು ಪುಸ್ತಕಗಳನ್ನು ತೆಗೆದುಕೊಂಡ ವ್ಯಕ್ತಿಗಳು ತಾಲೂಕು ಸಮಿತಿಗಳ ಕಡೆಗೆ ಸಕಾಲಕ್ಕೆ—(೧) ಸದಸ್ಯತ್ವದ ಪೂರ್ಣ ವರದಿ. (೨) ಸದಸ್ಯತ್ವದಷ್ಟು ೦-೪-೦ ಆಣೆ ಹಣ. (೩) ಸಂಪೂರ್ಣವಾಗಿ ಮುಗಿದ ಪುಸ್ತಕಗಳು:—ಇಲ್ಲವುಗಳನ್ನು ಒಪ್ಪಿಸಬೇಕು. (ಕೊಟ್ಟ ಪುಸ್ತಕಗಳನ್ನೆಲ್ಲಾ ಪೂರ್ಣ ಮುಗಿಸಿ ಎಲ್ಲವನ್ನೂ ಲೆಕ್ಕದೊಂದಿಗೆ ಒಪ್ಪಿಸಿದ ಬಳಿಕ ಆಯಾ ವ್ಯಕ್ತಿಗಳಿಗೆ ಹೊಸ ಪುಸ್ತಕಗಳನ್ನು ಕೊಡಬೇಕು. ೨. ಗ್ರೂಪ ಹಾಗು ಗ್ರಾಮ ಸಮಿತಿಗಳು ತಾಲೂಕು ಸಮಿತಿಗೆ ಸಕಾಲಕ್ಕೆ ವರದಿಯನ್ನೊಪ್ಪಿಸಬೇಕಲ್ಲದೆ ಸದಸ್ಯರಾದಷ್ಟು ನಾಲ್ಕು ಆಣೆ ಹಣವನ್ನು (ಪೂರ್ಣ) ಎಂಟು ದಿನಕ್ಕೊಮ್ಮೆ ತಾಲೂಕು ಕಾಂಗ್ರೆಸು ಸಮಿತಿಗಳಲ್ಲಿ ಜಮೆಮಾಡಿ ಪಾವತಿಪಡೆಯಬೇಕು. ೩. ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಪ್ರತಿ ವಾರಕ್ಕೊಮ್ಮೆ ಈ ಕೆಳಗಿನ ಮಾಹಿತಿ ಕಳಿಸಬೇಕು:—೧. ತಮ್ಮ ತಾಲೂಕಿನಲ್ಲಿಯ ಆ ವಾರದಲ್ಲಿ ಆಗಲಿ ಅಲ್ಲಿಯವರೆಗೆ ಆದ ಒಟ್ಟು ಸಂಖ್ಯೆ. ೨. ತಾವು ವ್ಯಕ್ತಿಗಳಿಗೆ ಹಂಚಿದ ಪುಸ್ತಕಗಳ ಪೂರ್ಣ ವಿವರ. (ಇದರಲ್ಲಿ ವ್ಯಕ್ತಿಗಳ ವಿಳಾಸ, ಕೊಟ್ಟ ಪುಸ್ತಕಗಳ ಮೇಲಿನ ಕ್ರಮಾಂಕ ಹಾಗು ಸಂಖ್ಯೆ ಸೇರುವದು.) ೪. ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯಲ್ಲಾದ ಸದಸ್ಯರ ಸಂಖ್ಯೆ ಹಾಗು ವ್ಯಕ್ತಿಗಳಿಗೆ ಕೊಡಲ್ಪಟ್ಟ ಪುಸ್ತಕಗಳ ಪೂರ್ಣ ವಿವರ (ಮೇಲಿನಂತೆ) ಗಳನ್ನೊಳಗೊಂಡ ಒಂದು ವರದಿಯನ್ನು ಪ್ರತಿ ೧೫ದಿನಗಳಿಗೊಮ್ಮೆ ಪ್ರಾಂತೀಯ ಸಮಿತಿಗೆ ಕಳಿಸಬೇಕು. ಈ ಸಂಬಂಧವಾದ ತಾರೀಕುಗಳು ಎಲ್ಲರಿಗೂ ಅನುಕೂಲವಾಗಿರಬೇಕೆಂದು ಕೆಳಗಿನಂತೆ ಗೊತ್ತುಮಾಡಿದೆ:-(A) ಪ್ರತಿ ತಿಂಗಳು ೧, ೮, ೧೫ ಮತ್ತು ೨೨ನೇ ತಾರೀಕುಗಳಲ್ಲಿ ತಾಲೂಕು ಸಮಿತಿಗಳು ಜಿಲ್ಲಾ ಸಮಿತಿಗೆ ಮೇಲ್ಕಾಣಿಸಿದ ಮಾಹಿತಿ ತಿಳಿಸುವದು. (B) ಪ್ರತಿ ತಿಂಗಳ ೫ ಹಾಗು ೨೦ನೇ ತಾರೀಕುಗಳಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ವರದಿಯನ್ನು ಒಪ್ಪಿಸಬೇಕು. ಈ ಸಂಬಂಧದ ಮೊದಲನೇ ವರದಿಯು ತಾಲೂಕು ಸಮಿತಿಗಳಿಂದ ಜಿಲ್ಲಾ ಸಮಿತಿಗಳಿಗೆ ೧೫-೭-೩೯ರ ಒಳಗಾಗಿ ಹಾಗು ಜಿಲ್ಲೆಗಳಿಂದ ಪ್ರಾಂತೀಯ ಸಮಿತಿಗೆ ೨೦-೭-೩೯ರ ಒಳಗೆ ಒಪ್ಪಿಸಲ್ಪಡಬೇಕು.

ಈ ಸದಸ್ಯತ್ವದ ಸಂಬಂಧವಾದ ಪ್ರಾಂತೀಯ ವೇಳಾ ಪತ್ರಿಕೆಯನ್ನು ಬೇಗನೆ ಪ್ರಸಿದ್ಧಿಸಲಾಗುವದು. ಅವರೆಲ್ಲ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ಹಣಯೂ ಬಿಟ್ಟ ಸ್ಥಳಗಳನ್ನು ಒಪ್ಪಿಸುವ ಕೊನೆಯ ತಾರೀಕು ನಿರ್ದೇಶಿಸಲ್ಪಡುವದು. ಅಷ್ಟರಲ್ಲಿ ಸಂಪೂರ್ಣ ಮಾಹಿತಿಯು ಒಪ್ಪಿಸಲ್ಪಡಬೇಕು. ಎಲ್ಲ ಪುಸ್ತಕಗಳು ನಿರ್ದಿಷ್ಟ ಅವಧಿಯಲ್ಲಿ ಪ್ರಾಂತೀಯ ಸಮಿತಿಗೆ ಬಾರದೆ ಇದ್ದಲ್ಲಿ ಜಿಲ್ಲಾ ಸಮಿತಿಗಳಿಂದ ಪ್ರತಿಯೊಂದು ಪುಸ್ತಕಕ್ಕೆ ರೂ. ೧೨-೮-೦ಯಂತೆ ವಸೂಲು ಮಾಡಲು ಬರುವದು. (ಅವಧಿ ಮೀರಿ ಪುಸ್ತಕ ಒಪ್ಪಿಸಿದರೆ ದಂಡದ ಹಣದಲ್ಲಿ ಕಡಿತವು ಸಿಗಲಾರದು.) ಈ ಬಂಧನಗಳನ್ನು ಹೇಳುವ ಉದ್ದೇಶಗಳನ್ನು ಅಧೀನ ಸಮಿತಿಗಳು ಸಂಪೂರ್ಣವಾಗಿ ತಿಳಿದುಕೊಂಡು ಈಗಿನಿಂದೀಗಲೇ ಸರಿಯಾಗಿಯೂ ಅಚ್ಚುಕಟ್ಟಾಗಿಯೂ ಕೆಲಸಮಾಡಲು ಪ್ರಾರಂಭಿಸಬೇಕು. ಅಂದರೆ ಈ ಸದಸ್ಯರನ್ನು ಮಾಡುವ ಕಾರ್ಯದಲ್ಲಿ ಶ್ರೇಯಸ್ಸು ದೊರೆಯುವುದು.

ಕಾಂಗ್ರೆಸ ವೇಳಾಪತ್ರಿಕೆ.

೧. ಸದಸ್ಯರನ್ನು ಮಾಡುವ ಕೊನೆಯ ತಾರೀಖು ೧೫-೯-೧೯೩೯, ೨. ಪ್ರತಿನಿಧಿಗಳ ಚುನಾವಣೆ ೮-೧೧-೩೯, ೩. ಅಧ್ಯಕ್ಷ ಚುನಾವಣೆ ನಾಮಪತ್ರ ಕೊಡುವದು ೧೫-೧೧-೩೯, ೪. ವಾರ್ಷಿಕ ಸಭೆ ೨೯-೧೧-೩೯, ೫. ಅಧ್ಯಕ್ಷರ ಚುನಾವಣೆ ಪರಿಣಾಮ ಪ್ರಕಟಣೆ ೩-೧೨-೩೯, ೬. ಕಾಂಗ್ರೆಸ ಅಧಿವೇಶನ ಡಿಸೆಂಬರ ಕೊನೆಯ ವಾರ.

ಅಧೀನ ಸಮಿತಿಗಳಿಗೆ ಎಚ್ಚರಿಕೆ.

ಮೊನ್ನೆ ಮೊನ್ನೆ ಮುಂಬೈಯಲ್ಲಾದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯಲ್ಲಿ ಪಾಸಾದ ಗೊತ್ತುವಳಿಗಳ ಬಗ್ಗೆ ವಿರೋಧವನ್ನು ಕೆಲವು ಕಾಂಗ್ರೆಸು ಸಮಿತಿಗಳು ಪ್ರದರ್ಶಿಸುತ್ತಿರುವುದು ಮೇಲಿನ ಸಮಿತಿಯ ಗಮನಕ್ಕೆ ಬಂದಿದೆ. ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳ ನಿರ್ಣಯಗಳನ್ನು ಈ ಪ್ರಕಾರ ಖಂಡಿಸುವುದು ಶಿಸ್ತುಭಂಗವೆಂದು ಗಣಿಸಲ್ಪಡುವುದು. ಕಾರಣ ಈ ಪ್ರಕಾರ ನಮ್ಮ ಪ್ರಾಂತದಲ್ಲಿಯ ಯಾವ ಸಮಿತಿಗಳೂ ವರ್ತಿಸಬಾರದೆಂದು ಬಿನ್ನವಿಸುತ್ತೇನೆ. ಒಂದು ವೇಳೆ ವಿರೋಧ ಪ್ರದರ್ಶಿಸಿದಲ್ಲಿ ಆಯಾ ಸಮಿತಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ. ಆದರೆ ಅಧೀನ ಸಮಿತಿಗಳು ತಮ್ಮ ಮೇಲಿನ ಸಮಿತಿಗಳಿಗೆ ವಿನಂತಿ ಹಾಗೂ ಸೂಚನೆಗಳನ್ನು ಕಳುಹಿಸಿಕೊಡಲು ಯಾವ ಅಡ್ಡಿಯೂ ಇಲ್ಲ' ಎಂದು ಗೌ| ಕಾರ್ಯದರ್ಶಿ ಶ್ರೀ. ನಾ. ಸು. ಹರ್ಡೀಕರರು ತಿಳಿಸುತ್ತಾರೆ.

ಧಾರವಾಡ, ತಾ. 8-7-'39

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಖಾಸಶ್ವಾಸ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ 1ಕ್ಕೆ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಜನೋಪಯೋಗದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಕ್ಕುವ ಸ್ಥಳಗಳು:—ದಿ ಕೆನರಾ ಟ್ರೇಡ್ಸ್ ಲಿಮಿಟೆಡ್, ಪುತ್ತೂರು. ಶ್ರೀ ರಾಮಾ ಸ್ಟೇಶನರಿ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು. ವಿಟ್ಠಲ್ ನಾರಾಯಣ ಶೆಣೈ, ಟ್ರಾಮ್ ಟರ್ಮಿನಸ್, ಮಜಗಾಂವ್, ಬೊಂಬಾಯಿ, ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗ್ಳೂರು ಸ್ಟೋರ್ಸ್, ಮಡಿಕೇರಿ. ಕೃಷ್ಣ ಫಾರ್ಮೆಸಿ, ಕುಂದಾಪುರ. ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ.

ನವೀನ ಪುಸ್ತಕಗಳು

೧. **ಕಣ್ಣೀರು**—ಎಮ್ಮೆ ಭೀಮರಾವ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ಎರಡು ರುಪಾಯಿ
೨. **ಹನ್ನೆ**—ಐತಿಹಾಸಿಕ ನಾಟಕ. ಪುಟ ೮೦, ನುಣುಪು ಕಾಗದ, ಬೆಲೆ ೬ ಆಣೆ.
೩. **ಬಲಿದಾನ**—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೧೬ ಪುಟ ಬೆಲೆ ರೂ. ೧-೪-೦
೪. **ಎಚ್ಚಮ್ಮ ನಾಯಕ**—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕ ೧೦೮ ಪುಟ ಬೆಲೆ ೮ ಆಣೆ
೫. **ಅಮಾತ್ಯ ನಂದಿನಿ**—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ. ೧-೮-೦

ವಿಳಾಸ:—ಶ್ರೀ ಶೇಷಾಚಲ ಪ್ರೆಸ್, ಪ್ರೊ. ಆನಂದವನ (ಹಾವೇರಿ) ಧಾರವಾಡ.

ನಮ್ಮ ಎಲ್ಲಾ ಪುಸ್ತಕಗಳು ಉಡುಪಿಯಲ್ಲಿ ನವಭಾರತ ಪುಸ್ತಕ ಭಂಡಾರದಲ್ಲಿ ಸಿಗುತ್ತವೆ.

ಪ್ರ ಕ ಟ ಣೆ

ಮಂಗಳೂರು ತಾಲೂಕು ಮುಂಡ್ಕೂರು ಗ್ರಾಮದ ಸಚ್ಚರ ಪರಾರಿಯಲ್ಲಿರುವ ಮೋಟು ಸೆಟ್ಟಿ ಮಗಳು ಪರಮೇಶ್ವರಿ ಸೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದ್ರೆ—

ನಾನು ಇಡೀ ಒಂದು ಪಾವು ಕಾಗದದಲ್ಲಿ 3ನೇ ಪುಟದಲ್ಲಿ ೭ ಕಡೆಗಳಲ್ಲಿ ನನ್ನ ಹೆಬ್ಬೆಟ್ಟಿನ ಗುರ್ತುಗಳನ್ನು ಮಾಡಿ ನನ್ನ ಮಗ ಸುಬ್ಬಯನ ಸಾಕ್ಷಿ ಹಾಕಿಸಿ ಕಾರ್ಕಳಕ್ಕೆ ಕೊಂಡುಹೋಗುವ ಬಗ್ಗೆ ಮುಳ್ಳಿಕ್ಕ ಕೋರಿಪಟ್ಟು ಹೊಸಮನೆ ವೆಂಕಟನ್ನ ಸ್ವಾಧೀನ ಕೊಟ್ಟು ಕಳುಹಿಸಿದ್ದು ಅವರ ಕೈಯಲ್ಲಿ ಗೈರವಿಲೆಯಾಗಿರುವದಾಗಿ ಅವರಿಂದಲೇ ನನಗೆ ತಿಳಿದು ಬಂದದ್ದರಿಂದ ಸದ್ರಿ ಕಾಗದವು ಯಾರಿಗಾದರೂ ಸಿಕ್ಕಿ ಅದರ ಮೇಲೆ ಯಾರಾದರೂ ಏನಾದರೂ ರಿಕಾರ್ಡುಗಳನ್ನು ಕಲ್ಪಿಸಿಕೊಂಡಲ್ಲಿ ಅಂಥಾ ಯಾವತ್ತು ರಿಕಾರ್ಡುಗಳು ನನ್ನ ಮೇಲೆ ಅಥವಾ ನನ್ನ ಕುಟುಂಬದ ಮೇಲೆ ಬಾಧಿಸತಕ್ಕದ್ದಲ್ಲ. ನಾನು ಸ್ವತಃ ಯಾ ಕುಟುಂಬದ ಕಡೆಯಿಂದಲೂ ಈವರೆಗೆ ಎಂದೂ ಯಾರಿಗೂ ಡಿಮಾಂಡ ನೋಟು, ಜೋಡು ಸಗೈರೆ ಯಾವ ಜವಾಬ್ದಾರಿ ಪತ್ರಗಳನ್ನು ಬರಕೊಟ್ಟದ್ದೂ ಇಲ್ಲ, ಯಾರಿಂದಲೂ ಯಾವಾಗಲೂ ಎಷ್ಟನ್ನಾದರೂ ಸಾಲಪಡೆದದ್ದೂ ಇಲ್ಲ ಎಂಬುದನ್ನು ಈ ಮೂಲಕ ಪ್ರಕಟಿಸಿದ್ದೇನೆ.

||| ¦ ಈ ಗೆರೆ ವ ಎಡಕೈ ಹೆಬ್ಬೆಟ್ಟಿನ ಗುರ್ತ ಪರಮೇಶ್ವರಿ ಸೆಟ್ತಿ ರುಜು.

ಮೊಕ್ಕಾಂ: ಮುಂಡ್ಕೂರು, ತಾ. 13-7-1939.

NOTICE.

ದ. ಕನ್ನಡ ಪುತ್ತೂರು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
S. 1. A. $\frac{1}{1}\frac{8}{9}\frac{3}{3}\frac{9}{9}$ ನಂಬ್ರ $\frac{1}{1}\frac{4}{9}\frac{3}{3}\frac{9}{9}$ [illegible]
ವಾದಿ—ಜಾರ್ಗೆಬೈಲು ಲಕ್ಷ್ಮಿ ಅಮ್ಮ.
ಪ್ರತಿವಾದಿಯು—ಲಕ್ಷ್ಮಿ ಹೆಂಗಸು ಕೂಡಾ ೩ ಜನರು.

3ನೇ ಪ್ರತಿವಾದಿ ಪಕ್ಕಪ್ಪ ಶೆಟ್ಟಿ, ಐತಪ್ಪ ಸೆಟ್ರ ಆಳಿಯ, ಕುಕ್ಕುಂದೂರು ಗ್ರಾಮ, ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ಸದ್ರಿ ವಾದಿಯು ನಿಮ್ಮ ಮೇಲೆ ಕೂಡಾ 1935, 1936, 1937 ಮತ್ತು 1938ನೇ ಇಸವಿ ಮಾರ್ಚ ತಾರೀಕು 15ಕ್ಕೆ 4 ವರ್ಷಗಳಿಗೆ ಬರುವ ಮೂಲಗೇಣಿ ಬಾಕಿ ವ ಬಡ್ಡಿ ಕೂಡಾ ರೂಪಾಯಿ 99-6-5 ನ್ನು ಬರಪಡಿಸಿಕೊಳ್ಳಲು ಮೇಲ್ಕಂಡ ಕೋರ್ಟಿನಲ್ಲಿ ಈ ವ್ಯಾಜ್ಯ ದಾಖಲುಮಾಡಿದ್ದಾಳೆ. ಸದ್ರಿ ವ್ಯಾಜ್ಯವು ತಾ. 29-7-1939ಕ್ಕೆ ತಸ್ಕಿಗೆ ಸದ್ರೀ ಕೋರ್ಟಿನಲ್ಲಿ ಇಂಟು, ಆ ದಿವಸ ಹಗಲು 11 ಘಂಟೆಗೆ ನೀವು ಖುದ್ದಾಗಿ ಯಾ ವಕೀಲರ ಮೂಲಕ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂದ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಟ್ಟಿದೆ.

Puttur, 17-7-39 | B. Achuta Baliga, *Pleader for Plaintiff.*

UNSOLICITED APPRECIATION.

T. Sriramulu Chetty, B. A.
Pleader & Municipal Councillor

PRODDATUR,
(CUDDAPAH DT.)
3rd JULY, 1939.

The Manager,

The Canara Mutual Assurance Co., Limited, Udipi.

Dear Sir,

Ref: Policy No. 2214 for Rs 1000/-on the life of Tangatoor Chennappa (*deceased*)

My client Tangatoor Ramakka the widow of the insured under the above policy is in receipt of your cheque for the full amount due under the above policy.

In this connection, my client desires to express her sense of gratitude to you for the prompt settlement of her claim within such a short time after the death of the insured though her husband had paid only a single quarterly premium of Rupees 13—10—0. . . .

I am glad to mention that in my experience as a pleader acting for claimants, I have found that you have been very prompt in the matter of settlement of claims.

....

Wishing you every success,

Yours faithfully,

(Sd) *T. Sriramulu Chetty,*
Pleader.

THE CANARA MUTUAL ASSURANCE COMPANY, LIMITED.

Head Office: UDIPI, S. India.

The Company is Mutual. There are no Shareholders

ಬಟವಾಡೆಯ ದಿನಗಳಲ್ಲಿ ಮದ್ಯ ಮಾರಾಟವಿಲ್ಲ.
ಮೈಸೂರು ಸಂಸ್ಥಾನದ ಮಾದರಿ.

ಕೂಲಿಗಾರರು ತಿಂಗಳೆಲ್ಲಾ ಕಷ್ಟಪಟ್ಟು ದುಡಿದು ಸಂಪಾದಿಸಿದ ಕೂಲಿಯಲ್ಲಿ ಬಹು ಭಾಗವನ್ನು ಸಂಬಳ ಕೊಡುವ ದಿನವೇ ಮದ್ಯವನ್ನು ಕುಡಿಯುವುದಕ್ಕಾಗಿ ಪೋಲುಮಾಡುತ್ತಾರೆ. ಹೀಗೆ ಹಣವನ್ನು ಪೋಲುಮಾಡಲು ಅವರಿಗೆ ಇರುವ ಅವಕಾಶವನ್ನು ತಪ್ಪಿಸಬೇಕು, ಅದಕ್ಕಾಗಿ ಬೆಂಗಳೂರು ನಗರ, ಕೋಲಾರದ ಚಿನ್ನದ ಗಣಿಯ ಪ್ರದೇಶ, ಮೈಸೂರು, ಭದ್ರಾವತಿ, ದಾವಣಗೆರೆ ಮತ್ತು ಮಂಡ್ಯ ಈ ಪ್ರದೇಶಗಳಲ್ಲಿ ಕೆಲಸಗಾರರಿಗೆ ಸಂಬಳವು ದೊರೆಯುವ ದಿನಗಳಲ್ಲಿ ಹೆಂಡದಂಗಡಿಗಳು ತೆರೆದಿರಕೂಡದೆಂದು ವಿಧಿಸಬೇಕೆಂದು ಸಂಸ್ಥಾನದ ಮದ್ಯಪಾನ ನಿರೋಧ ಸಂಘದವರು ಏಪ್ರಿಲ್ 4ನೆಯ ತಾರೀಖಿನ ದಿನ ದಿವಾನರವರೊಡನೆ ಸಂಭಾಷಣೆ ನಡೆಸುವಾಗ ಅರಿಕೆಮಾಡಿಕೊಂಡರು

ಸರ್ಕಾರದವರು ಈ ಸಲಹೆಯನ್ನು ಪರಿಶೀಲಿಸಿದರು. ಈಗಿರುವ ಕಾನೂನಿನ ಮೇರೆಗೆ, ಡೆಪ್ಯುಟಿ ಕಮಿಷನರುಗಳಿಗೆ, ಕೈಗಾರಿಕೆಯ ಪ್ರದೇಶಗಳಲ್ಲಿ, ವಾರದ ದಿನಗಳಲ್ಲಿ 11-30ರಿಂದ 1-30 ಗಂಟೆಯ ವರೆಗೂ ಬಟವಾಡೆಯ ದಿನ ಮಧ್ಯಾಹ್ನವೂ ಅಂಗಡಿಗಳನ್ನು ಮುಚ್ಚಬೇಕೆಂದೂ, ಆದಿತ್ಯವಾರದ ದಿನ ಬೆಳಗ್ಗೆ 11-30ರಿಂದ ಸಾಯಂಕಾಲ 4 ಗಂಟೆಯ ವರೆಗೆ ಮಾತ್ರ ಅಂಗಡಿಗಳು ತೆರೆದಿರಬೇಕೆಂದೂ ವಿಧಾಯಕವಾಡುವ ಅಧಿಕಾರವಿದೆ.

ಡೆಪ್ಯುಟಿ ಕಮಿಷನರು ಈ ಅಧಿಕಾರವನ್ನು ಕಟ್ಟುನಿಟ್ಟಾಗಿ ಚಲಾಯಿಸುವುದರಿಂದ ಬಟವಾಡೆಯ ದಿನಗಳಲ್ಲಿ ಮದ್ಯದ ಮಾರಾಟವನ್ನು ಕಡಮೆಮಾಡಬಹುದು. ಡೆಪ್ಯುಟಿ ಕಮಿಷನರು ಈ ಅಧಿಕಾರವನ್ನು ತಕ್ಕ ರೀತಿಯಲ್ಲಿ ಚಲಾಯಿಸಬೇಕೆಂದು ಸರ್ಕಾರದವರು ಹುಕುಂಮಾಡಿರುತ್ತಾರೆ. ಡೆಪ್ಯುಟಿ ಕಮಿಷನರುಗಳು ಕಾರ್ಖಾನೆಗಳ ಮಾಲಿಕರೊಡನೆ ಸಮಾಲೋಚಿಸಿ ಬಟವಾಡೆಯ ದಿನವನ್ನು ಗೊತ್ತುಮಾಡುತ್ತಾರೆ. ಆದಿನ, ಹೆಂಡದಂಗಡಿಗಳನ್ನು ಮುಚ್ಚಿಸಿರಲಾಗುತ್ತದೆ.

ಈ ನಡುವೆ, ಕ್ಲೋಸ್ಪೇಟೆಯಲ್ಲಿ ಪಾನ ನಿರೋಧದ ಕೆಲಸವು ನಡೆಯುತ್ತಲೇ ಇದೆ. ಇಲ್ಲಿಯವರೆಗೂ ಶೇಖರಿಸಲಾದ ಅಂಕೆಗಳಿಂದ, ಕ್ಲೋಸ್ಪೇಟೆ ಮತ್ತು ಚನ್ನಪಟ್ಟಣ ತಾಲೂಕುಗಳಲ್ಲಿ ಕ್ರಮವಾಗಿ ಸಾರಾಯಿಯ ವ್ಯಾಪಾರವು 142ಗ್ಯಾಲನು ಮತ್ತು 13 ಗ್ಯಾಲನುಗಳಷ್ಟು ಕಡಿಮೆಯಾಗಿದೆ ಎಂದು ಕಂಡುಬಂದಿದೆ. ಚನ್ನಪಟ್ಟಣ ತಾಲೂಕಿನಲ್ಲಿ, ಗಾಂಜಾದ ಮತ್ತು ಅಫೀಮಿನ ಸೇವನೆಯು ಅಷ್ಟು ಕಡಮೆಯಾದಂತೆ ತೋರುವುದಿಲ್ಲ. ಆದರೆ, ಕ್ಲೋಸ್ಪೇಟೆ ತಾಲೂಕಿನಲ್ಲಿ ಗಾಂಜಾದ ಸೇವನೆಯು 47 ಸೇರಿನಷ್ಟು ಕಡಿಮೆಯಾಗಿದೆ. ಮತ್ತು ಅಫೀಮಿನ ಸೇವನೆಯು ３½ ಸೇರಿನಷ್ಟು ಕಡಮೆಯಾಗಿದೆ. ಕ್ಲೋಸ್ಪೇಟೆ ತಾಲೂಕಿನಲ್ಲಿ ಹೆಂಡವನ್ನಿಳಿಸಿದ ಈಚಲು ಮರಗಳ ಸಂಖ್ಯೆಯು 331ರಷ್ಟು ಮತ್ತು ತೆಂಗಿನ ಮರಗಳ ಸಂಖ್ಯೆಯು 62ರಷ್ಟು ಕಡಮೆಯಾಯಿತು. ಚನ್ನಪಟ್ಟಣ ತಾಲೂಕಿನಲ್ಲಿ ಹೆಂಡವನ್ನಿಳಿಸಿದ ತೆಂಗಿನ ಮರಗಳ ಸಂಖ್ಯೆಯು ಮೊದಲಿಗಿಂತ 144ರಷ್ಟು ಕಡಿಮೆಯಾಗಿದ್ದಿತು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್
ಕೋರ್ಟಿನಲ್ಲಿ

S. C. S. No. 134/1939

ಸಾಂತೂರು ಲೋಕಯ್ಯ ಸೆಟ್ಟಿ—ವಾದಿ

ಮತ್ತು

ಉಮ್ಮಕ್ಕ ಸೆಟ್ಟಿ ಸಹಾ— ಪ್ರತಿವಾದಿಗಳು

2ನೇ ಪ್ರತಿವಾದಿ—ನರ್ಸ ಸೆಟ್ಟಿ } ಉಮ್ಮಕ್ಕ ಸೆಟ್ಟಿ
4ನೇ ಪ್ರತಿವಾದಿ—ಕಮಲ ಸೆಟ್ಟಿ } ಯ ಮಕ್ಕಳು.

ಇವರು ಉಡ್ಪಿ ತಾಲ್ಲೂಕು ಸಾಂತೂರು ಗ್ರಾಮಸ್ಥರು.

ಮೇಲ್ಕಂಡ ದಾವೆಯು ಸದ್ರಿ 2 ನ 4ನೇ ಪ್ರತಿವಾದಿಗಳ ಹಾಜರಾತಿಯ ಉದಾಹರಣೆಯ ಬಗ್ಗೆ ತಾರೀಕು 7-8-1939ಕ್ಕೆ ಇಟ್ಟಿದೆ. ಸದ್ರಿ ದಾವೆಗೆ ಆಕ್ಷೇಪವಿದ್ದರೆ ಆ ದಿವಸ ಹಾಜರಾಗಿ ಆಕ್ಷೇಪಗಳನ್ನು ತಿಳಿಯಮಾಡಿಕೊಳ್ಳತಕ್ಕದ್ದು.

ಕೋರ್ಟಿನ ಹುಕುಂ ಪ್ರಕಾರ

ಕಾರ್ಕಳ } A. N ಸೀತಾರಾಮಾಚಾರ್ಯ
10-7-39 } ವಾದಿಕಡೆ ವಕೀಲ

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುತ್ತಿದ್ದುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಛಾಕ, ಬೆಂಗಳೂರು ಸಿಟಿ.

ಮುಂದೆ ಬರುವ ಲೇಖನಗಳು:-

ರಾಶಿಫಲ

(ಶ್ರೀ. ಪಿ. ವಿ. ಉಪಾಧ್ಯಾಯರ ವ್ಯಂಗ್ಯ ಬರಹ.)

ಪಂಜಾಬಿನ ಕೇಸರಿ
ರಣಜಿತ್ ಸಿಂಗ್

(ಪ್ರೊ. ಗಣಪತಿ ರಾವ್ ಸಾಹೇಬ್, ಎಂ. ಎ. ಯವರ ಐತಿಹಾಸಿಕ ಲೇಖನ.)

ಇತ್ಯಾದಿ.

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: **1906**

ಉಡುಪಿ, ಗುರುವಾರ, ತಾ. ೨೦-೭-೩೯

ಕಾಂಗ್ರೆಸ್ ಶಿಸ್ತು

ಇತ್ತೀಚೆಗೆ ಕಾಂಗ್ರೆಸಿನಲ್ಲಿ ಶಿಸ್ತಿನ ಹೆಸರಿನಿಂದ ಅನ್ಯಾಯವಾಗುತ್ತಿದೆ ಎಂಬ ಕೂಗು ಸರ್ವತ್ರ ಹಬ್ಬಲಾರಂಭಿಸಿದೆ. ಕಾಂಗ್ರೆಸ್ ಧುರೀಣರ ನೀತಿಯನ್ನು ಫೇಸಿಸ್ಟ್ ಮನೋವೃತ್ತಿಯೆಂದು ಕರೆಯುವವರ ಸಂಖ್ಯೆ ಕಡೆಗಣಿಸುವಷ್ಟು ಅಲ್ಪವಿಲ್ಲ. ಆರೋಪಪ್ರಿಯರಿಗೆ ನರಿಮನ್ ಪ್ರಕರಣ, ಆ ಮೇಲೆ ಖರೆಯವರ ವಿವಾದ, ಈಗ ಸುಭಾಸರ ವಿರೋಧ–ಇವೆಲ್ಲಾ ನಿದರ್ಶನಗಳಾಗಿ ದೊರೆಯುತ್ತಿವೆ. ಈ ಒಳರೋಗಕ್ಕಿದು ವಸಂತಕಾಲವೆಂಬಂತೆ ವಾತಾವರಣವನ್ನು ಕಂಡು ಹೇಳಬೇಕಾಗುತ್ತದೆ. ಪರಿಸ್ಥಿತಿಯು ಹೀಗೆಯೇ ಮುಂದುವರಿದರೆ ನ್ಯಾಯವಾಗಿಯೋ ಅನ್ಯಾಯವಾಗಿಯೋ ಕಾಂಗ್ರೆಸು ಒಡೆದು ಹೋಗುವುದೆಂಬುದರಲ್ಲಿ ಅನುಮಾನವಿಲ್ಲ. ಯಾವುದು ನ್ಯಾಯವಿದ್ದರೂ ಕಾಂಗ್ರೆಸಿನ ಶಕ್ತಿಯು ಯಾವ–ಯಾರ ಹೆಸರಿನಿಂದಲೇ ಕುಂದಲಿ, ಅದು ದೇಶಕ್ಕಾಗುವ ಮಹಾ ನ್ಯಾಯವಲ್ಲದೆ ಮತ್ತೇನೂ ಅಲ್ಲ.

'ಕಾಂಗ್ರೆಸ್ ಫೇಸಿಸ್ಟ್ ಪಂಥಕ್ಕಿಳಿದಿದೆ' ಎಂದು ಬೊಬ್ಬಿಡುವವರ ಬಾಯಿಬಿಡಿಸಿದ್ದಾವುದೆಂಬುದನ್ನು ನೋಡೋಣ. ಕಾಂಗ್ರೆಸಿನ ಇಂದಿನ ಘೋಷಣೆಯಲ್ಲಿ ಮಿತಿಮೀರಿಯ ಗಡಿಯನ್ನು ಸಂಕುಚಿತಗೊಳಿಸಲಾಗಿದೆ. ಹಿನ್ನೆಲೆ ಸೇರಿ ಭದ್ರತೆ ಹೊಂದುವದು ಕಾಂಗ್ರೆಸಿನಂತಹ ಸಂಸ್ಥೆಗೆ ಎಂದೂ ಭೂಷಣವಲ್ಲ, ಎಂಬುದನ್ನು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತೇವೆ. ಕಾಂಗ್ರೆಸ್ ಮಂತ್ರಿಗಳು, ಅಧಿಕಾರ ರುಚಿಯನ್ನು ನೋಡುವ ಭರದಲ್ಲಿ ಕಾಂಗ್ರೆಸ್ ತತ್ವದ ಶುಚಿಯನ್ನು ಕಾಪಾಡಲು ಮರೆಯುವ ನಿದರ್ಶನಗಳು ಪ್ರತಿ ದಿನವೆಂಬಂತೆ ನಮಗೆ ದೊರೆಯುತ್ತವೆ. ಈ ಕೊಂತೆಗಳಿಗೆ ನಿವಾರಣೆ ಬೇಕಾಗಿದೆ. ಆದರೆ ಆ ನಿವಾರಣೆ ಹೇಗೆ? ಹಾ! ಖರೆ, ನರಿಮನ್, ಸುಭಾಸರ ಘೋರಣೆಯನ್ನನುಸರಿಸಿಯೆ? ಸ್ಪಷ್ಟವಾದ ಮಾತಿನಲ್ಲಿ ಹೇಳುವದಾದರೆ ಕಾಂಗ್ರೆಸ್ ಭಕ್ತರು ಹಲವರಿಂದು ಸದ್ಯದ ಘೋರಣೆ ಮಾರ್ಪಾಟಾಗಬೇಕು, ಎನ್ನುವಾಗ ಅದನ್ನು ತೀವ್ರಗೊಳಿಸಬೇಕೆಂದು ಬಯಸುತ್ತಾರೆ; ಸುಭಾಸರಂತಹ ಧುರೀಣರು ಕಾಂಗ್ರೆಸನ್ನು ದುರ್ಬಲಗೊಳಿಸುವ ಕೆಲಸದಲ್ಲಿ ಕೈಯಿಕ್ಕಿ ತನ್ನೀ ಆಟವನ್ನು ಸುಗಮವಾಗಿ ಸಾಗಿಸುವ ಸಲುವಾಗಿ ತೀವ್ರತೆಯನ್ನು ಪಠನೆಯ ಮಟ್ಟಿಗೆ ಮಾತ್ರ ಅಂಗೀಕರಿಸಿದ್ದಾರೆ. ಇದರಿಂದ ಸಂಸ್ಥೆಗೆ ಹಾನಿಯಿದೆ.

ಇತ್ತೀಚಿನ ಸುಭಾಸರ ವರ್ತನೆಯು ಆಶ್ಚರ್ಯಕರವಿದೆ, ಮಾತ್ರವಲ್ಲ; ಶೋಚನೀಯವಿದೆ ಶ್ರೀಯುತ ಭೋಸರು ತನ್ನ ಪ್ರತಿಸ್ಪರ್ಧಿ ಮುಂದಾಳುಗಳ ಪ್ರತಿಷ್ಠೆ ತಗ್ಗಿಸುವ ಇಚ್ಛೆಯಿಂದ ಆಡುವ ಮಾತು, ಮಾಡುವ ಕೃತ್ಯಗಳೆಲ್ಲಾ ವಿರುದ್ಧ ಪರಿಣಾಮವನ್ನೀಯುವಂತಹದೆಂಬುದನ್ನು ಅವರರಿಯದಿರುವದು ವಿಷಾದಕರ. ಜನರು ತನ್ನ ಕಡೆಗೆ ಪ್ರದರ್ಶಿಸಿದ ವಿಶ್ವಾಸ, ಗೌರವಗಳ ರೂಪರೇಖೆಯನ್ನು ತಿಳಿಯದೆ, ಅವುಗಳನ್ನು ಕಟ್ಟಿಕೊಂಡು ಕೆಸರ ಕೊಳವನ್ನು ಮುಳುಗಿಯೂ ಶುಚಿಯಾಗಿ ಮೇಲೇರಬಲ್ಲೆನೆಂಬ ವಿಶ್ವಾಸವು ಶ್ರೀಯುತ ಭೋಸರಲ್ಲಿರುವಂತಿದೆ. ಜನತೆಯು ಮಾಜೀ ರಾಷ್ಟ್ರಪತಿಯ ಯಾವ ಗುಣವನ್ನು ಮೆಚ್ಚಿದ್ದಿತೋ, ಆ ಗುಣವು ಸಂದರ್ಭಕ್ಕೆ ತಕ್ಕುದಲ್ಲವೆಂದು ಸುಭಾಸರಿಗೆ ತೋರಹತ್ತಿದ ಮೇಲೆ ಜನರಿಗೆ ನಿರಾಶೆಯೇ ಗತಿ, ಸುಭಾಸರ ಇತ್ತೀಚಿನ ರೀತಿಯು ಮಾತಂತಿರಲಿ, ತನ್ನ ನಪ್ರಕಿವಜವಾದ ಜನತಾ ವಿಶ್ವಾಸವನ್ನು ಧರಿಸುವ ಮುಖಂಡ ಸಾಮಾನ್ಯ ಚತುರತೆ ಕೂಡ ಅವರಲ್ಲಿಲ್ಲದೆಹೋದುದು ಬಹು ವ್ಯಸನದ ಸಂಗತಿ.

ಬಂಗಾಳಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಎ. ಐ. ಸಿ. ಸಿ. ಯ ನಿರ್ಣಯ ಮೇಲೆ ದಂಗೆಯೆಬ್ಬಿಸುವದು ನಿಯಮ ದ್ರೋಹವೆಂದು ಕಾಂಗ್ರೆಸ್ ಅಧ್ಯಕ್ಷರ ವಿನಂತಿ ಹೋಯಿತು. ಅದನ್ನು ಉದ್ದೇಶಪೂರ್ವಕ ಸುಭಾಸರು ಉಲ್ಲಂಘಿಸಿದರು. ತಾನು ಅಧ್ಯಕ್ಷನಾಗಿರುವಾಗ ಒಪ್ಪಿಗೆಯಿತ್ತಿದ್ದ ಮತ್ತು ಮನಮೆಚ್ಚಿ ಶ್ಲಾಘಿಸಿದ್ದ ಬೊಂಬಾಯಿಯ ಪಾನನಿಷೇಧ ಘೋರಣೆಯನ್ನು ಅನರ್ಥಕಾರಿ ಎಂದು ಖಂಡಿಸಿದರು. ಆ ಖಂಡನೆಯು ಸ್ಥೂಲರೂಪದೊಳಗೆ ಸೂಕ್ಷ್ಮವಾದ ಮತ್ತೊಂದು ದುರುದ್ದೇಶವಿರದೆ ಹೋಗಲಿಲ್ಲ. ಮುಸಲ್ಮಾನ್ ಮತ್ತು ಪಾರ್ಸಿ ಸಮಾಜವನ್ನು ಎತ್ತಿ ಕಟ್ಟುವುದೇ ಆ ಉದ್ದೇಶ. ಇವೆಲ್ಲಾ ಸಲ್ಲಕ್ಷಣಗಳೇ? ಇವು ಸುಭಾಸರ ಕಿರುಕುಳ ಬುದ್ಧಿಯನ್ನು ತೋರಿಸುವದಿಲ್ಲವೆ? ಸದ್ಯದ ಕಾಂಗ್ರೆಸ್ ಧುರೀಣತ್ವದ ಕಡೆಗೆ ಶ್ರೀಯುತ ಭೋಸರು ಉದಾರವಾಗಿ ವರ್ತಿಸದಿದ್ದರೆ ಅದಕ್ಕೆ ಇಂದಿನ ಹಿರಿಯ ಮುಖಂಡರನ್ನೇ ಹೊಣೆ ಮಾಡಬಹುದು. ಸುಭಾಸರ ಕುರಿತು ಅಂತಹ ಉದಾರತೆಯನ್ನು ಅವರೂ ಪ್ರದರ್ಶಿಸಲಿಲ್ಲವೆಂದು ಸ್ಪಷ್ಟವಾಗಿ ಒಪ್ಪಬೇಕು. ಆದರೆ ಅದಕ್ಕೆ ಪ್ರತೀಕಾರವೆಂದು ಮಾಡಬಾರದ್ದನ್ನೂ ಮಾಡಲು ಸುಭಾಸರಿಗಧಿಕಾರವಿಲ್ಲ. ಸುಭಾಸರು ತನ್ನಂತಹ ಇತರ ಹಿರಿಯ ಮುಂದಾಳುಗಳೊಡನೆ ಕುಸ್ತಿ ಹಿಡಿಯುತ್ತಿದ್ದರೆ, ಅವರ ತೂಗುಬಾಗು ನೋಡಿ ಅಪ್ಪಳಿಸುವ ಕೆಲಸವನ್ನಷ್ಟೇ ಮಾಡುತ್ತಿದ್ದರೆ ಅದಕ್ಕಾಗಿ ಜನರು ಕನಿಕರಪಡುತ್ತಿದ್ದಿಲ್ಲ. ಇಂತಹಹೋರಾಟದಲ್ಲಿ ಸುಭಾಸ ಪಕ್ಷಪಾತಿಗಳ ಸಂಖ್ಯೆ ಕಡಿಮೆಯಿಲ್ಲವೆಂಬುದಕ್ಕೆ ಈ ಮೊದಲೇ ದೃಷ್ಟಾಂತ ದೊರೆತಿದೆ. ಆದರೆ ಪ್ರತಿಸ್ಪರ್ಧಿಯು ನಿಂತ ನೆಲವನ್ನು ತಿರುವಿಹಾಕಿ ಅವನನ್ನು ಕೆಡೆಯಿಸಲು ನೋಡುವ ಭೋಸರ ಬುದ್ಧಿಯನ್ನಷ್ಟೇ ನಾವೀಗ ಖಂಡಿಸುತ್ತೇವೆ. ಆ ಕ್ಷೇತ್ರವು ಸುಭಾಸರಿಗಾಗಿ ಮತ್ತು ಸುಭಾಸರ ಪ್ರತಿಸ್ಪರ್ಧಿಗೆ ಮಾತ್ರ ಸಂಬಂಧಪಟ್ಟದಲ್ಲ. ತನ್ಮೊಳಗೆ ಕುಸ್ತಿಹಿಡಿಯುವ ಧುರೀಣರ ಇತ್ತೀಚಿನ ಬುದ್ಧಿಬಲದಿಂದ ಅದು ನಿರ್ಮಾಣಗೊಂಡುದೂ ಅಲ್ಲ. ಅದು ಸಹಸ್ರಾರು ಜನರು ಬೆವರಿಳಿಸಿ ದುಡಿದು ನಿರ್ಮಿಸಿದ ನೆಲ. ಆ ಜನರಲ್ಲಿ ಸುಭಾಸರೂ ಅವರ ಸ್ಪರ್ಧಿಗಳೂ ಸೇರಿಯೇ ಇದ್ದಾರೆ. ಆದ್ದರಿಂದ ಕುಸ್ತಿ ಗೆಲ್ಲುವದಕ್ಕಾಗಿ ಕ್ಷೇತ್ರವನ್ನಗೆಯುವ ಸುಭಾಸರ ತಪ್ಪು ಕ್ಷಮಾರ್ಹವಾಗಲಾರದು.

ಅಂತು ಸುಭಾಸರು ಕಾಂಗ್ರೆಸಿನ ನಿಯಮೋಲ್ಲಂಘನೆಗೆ ಬದ್ಧ ಕಂಕಣರಾದಂತೆ ತೋರುತ್ತದೆ, "ದೇಶವನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧಗೊಳಿಸಿದ ನಿಯಮಕ್ಕೆ ಬೆಲೆಯಿಲ್ಲ" ಹೀಗೆಂದು ತಾನು ಬೆಲೆಕೊಡದ ಕಾರಣವನ್ನು ತಿಳಿಸಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮುಂದೇನು ಮಾಡಬೇಕು ಎಂಬ ಪ್ರಶ್ನೆ. ಅವರು ತುಸು ಕಠಿಣವಾದ ಅನುಭವವನ್ನು ಪಡೆಯಬೇಕಾಗುವುದೇನೋ ನಿಜ. ಖರೆ, ನರಿಮನ್ ಪ್ರಕರಣದಿಂದ ಹುಳುಕು ಪ್ರೇಮಿಗಳಿಗೆ ಸಂದರ್ಭದೊರೆತಿತ್ತು. ಸುಭಾಸರ ಪ್ರಕರಣವು ಹಲವು ಟೀಕೆಗಳಿಗಾಸ್ಪದವೀಯಬಹುದು ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ತಪ್ಪಿಗೆ ಪ್ರಾಯಶ್ಚಿತ್ತವನ್ನು ವಿಧಿಸದೆ ನಿರ್ವಾಹವುಂಟೆ? ಸುಭಾಸರಂಥಾ ಜನಮಾನ್ಯ ವ್ಯಕ್ತಿಗಳು ಚಂಚಲರಾಗುವದನ್ನು ಕಂಡು ಸಹಿಸಲಾಗುವದಿಲ್ಲ; ದೇಶದ ಹೊಣೆ ಹೊತ್ತ ಸಂಸ್ಥೆಯು ತನ್ನ ಕರ್ತವ್ಯ ಹಾದಿಯಿಂದ ಓರೆ ಸರಿದರೆ ಹೇಗಾದೀತು? ಸುಭಾಸರಲ್ಲಿ ತೋರಿಬಾರದ ನಿಯಮನಿಷ್ಠೆಯು ಕಾಂಗ್ರೆಸ್ ಸಮಿತಿಯಲ್ಲಿ ಕಂಡುಬರಲೇಬೇಕೆಂದು ನಮ್ಮ ನಿಶ್ಚಿತಾಭಿಪ್ರಾಯ.

ದೇವಾಲಯ ಪ್ರವೇಶ

ಮಧುರೆಯ ಸುಪ್ರಸಿದ್ಧವಾದ, ಪ್ರಾಚೀನವಾದ ಮೀನಾಕ್ಷಿ ದೇವಾಲಯವು ಸ್ಥಳೀಕರ ನ್ಯಾಯಬುದ್ಧಿಯ ಪರಿಣಾಮವಾಗಿ ಹರಿಜನರಿಗೆ ತೆರೆಯಲ್ಪಟ್ಟಿರುವದು. ಇದರಿಂದ ಮದ್ರಾಸು ಪ್ರಾಂತ್ಯವೇ ಉತ್ತೇಜನಗೊಂಡುದರ ಪರಿಣಾಮವಾಗಿ ಇತರ ಹಲವು ದೇವಸ್ಥಾನಗಳು ಹರಿಜನ ಪ್ರವೇಶಕ್ಕೊಪ್ಪಿಗೆಯೀಯುವ ಚಿಹ್ನೆಗಳು ಕಾಣುತ್ತಿವೆ. ಕೊಯಮುತ್ತೂರಿನಲ್ಲಿ 90 ದೇವಾಲಯಗಳನ್ನು ತೆರೆಯುವಾಕುವ ಪ್ರಕಟನೆಯು ದೇವಾಲಯಾಧಿಕಾರಿಗಳಿಂದ ಹೊರಟಿದೆ. ಮದ್ರಾಸಿನ ಸಾಮಾಜಿಕ ಕ್ರಾಂತಿಯಲ್ಲಿ ಇದು ಅತ್ಯಂತ ಗಣನೀಯವಾದುದು.

ಅಸ್ಪರ್ಶತಾ ಕಳಂಕವು ಮದ್ರಾಸಿನ ಕೆಲಸೆಡೆಗಳಲ್ಲಿ ಮುತ್ತಿರುವಷ್ಟು ದಪ್ಪವಾಗಿ ಹಿಂದುಸ್ಥಾನದ ಬೇರೆ ಕಡೆಗಳಲ್ಲಿಲ್ಲ. ಅಂತೆಯೇ ಅದನ್ನು ತೊಳೆಯುವ ಕೆಲಸವನ್ನು ಎಲ್ಲರಿಗಿಂತ ಮುಂದಾಗಿ, ಮತ್ತು ಬಲವಾಗಿ ಮಾಡುವ ಜವಾಬ್ದಾರಿಯು ಮದ್ರಾಸು ಪ್ರಾಂತ್ಯದ ಮೇಲಿರುವದು ಸ್ವಾಭಾವಿಕವೇ. ಪ್ರಾಂತ್ಯವು ತನ್ನ ಕರ್ತವ್ಯಪಾಲನೆಯಲ್ಲಿ ಹಿಂದುಳಿಯಲಿಲ್ಲವೆಂಬುದು ಆತ್ಮಾನಂದದ ವಿಷಯ.

ದೇವಾಲಯ ಪ್ರವೇಶವು ಕಾನೂನಿನ ಮೂಲಕ ಸಾಧಿಸಲ್ಪಡುವದೆಂದು ಕಾಂಗ್ರೆಸು ಅಧಿಕಾರಕ್ಕೆ ಬಂದೊಡನೆ ಹಲವರು ನಿರೀಕ್ಷಿಸಿದ್ದರು. ಮಾನ್ಯ ರಾಜಗೋಪಾಲಾಚಾರ್ಯರ ಸೂಕ್ಷ್ಮ ಪರಿಶೀಲನಾ ಬುದ್ಧಿಯು ತೀರಾ ಸಾದಾ ರೀತಿಯ ಮಸೂದೆಯೊಂದಕ್ಕೆ ಜನ್ಮಕೊಟ್ಟಿತು. ಆ ಮಸೂದೆಯ ರೀತಿಯಂತೆ ಕೂಡ ಹರಿಜನರು ದೇವಾಲಯ ಪ್ರವೇಶಿಸಬೇಕಾದರೆ ಸಂಬಂಧಪಟ್ಟ ಸವರ್ಣೀಯರ ಸಮ್ಮತಿಯು ಬೇಕು. ಮಧುರೆಯ ಭಜಕರಲ್ಲಿ ಹುಟ್ಟಿದ ಸದ್ಬುದ್ಧಿಯು ಹುಟ್ಟದೆ ಗತ್ಯಂತರವಿಲ್ಲ. ಭಜಕರಲ್ಲಿ ಸದ್ಬುದ್ಧಿಯಿದ್ದರೆ ಜತೆಯಲ್ಲೊಂದು ಕಾನೂನಿರುವ ಆಗತ್ಯವಿಲ್ಲವೆಂಬುದನ್ನು ಮಧುರೆಯ ವಿದ್ಯಮಾನವು ಕಲಿಸಿದೆ. ಮೇಲಾಗಿ ಕಾನೂನು ಹುಟ್ಟಿಸುವ ವಾತಾವರಣದಲ್ಲಿ ಎಷ್ಟೋ ತಡೆ ತೊಡರುಗಳೇಳಬಹುದು. ಎಲ್ಲವೂ ಜನರ ಇಚ್ಛೆಗೆ ಹೊಂದಿಕೊಂಡೇ ನಡೆಯಬೇಕಾದರೂ ಆ ಇಚ್ಛಾಪ್ರವರ್ತನವು ಕಾನೂನಿನ ಒತ್ತಾಯದಿಂದ ನಡೆಯುವುದೆಂಬಷ್ಟಾದರೂ ಬಿರುಸು ಅದರಲ್ಲಿರುತ್ತದೆ. ಆದರೆ ಮಧುರೆಯಂತೆ ಜನರು, ದೇವಸ್ಥಾನದ ಪೂಜೆಗೆ ಸಂಬಂಧಪಟ್ಟವರು ಪ್ರೇರಣೆಗೊಂಡು ದೇವಸ್ಥಾನಗಳ ಬಾಗಿಲು ತೆರೆಯುವದೆಂದರೆ ನಿಜವಾಗಿಯೂ ಆ ಬಾಗಿಲ ಮೂಲಕ ಒಳಗಿನ ಕತ್ತಲೆಯ ಕಡೆಗೆ ಬೆಳಕು ಹಾಯಿಸುವದು! ಮಧುರೆಯ ಮಾದರಿಯು ಎಲ್ಲೆಲ್ಲಿಯೂ ಅನುಕರಿಸಲ್ಪಟ್ಟಿ ಭಾರತದ ಅಸ್ಪರ್ಶತೆಯು ಹುಟ್ಟಡಗಿದರೆ ದೇಶೋದ್ಧಾರದ ಹಾದಿಯ ಪ್ರಬಲ ತೊಡಕೊಂದನ್ನು ಕಿತ್ತು ಬಿಸಾಡಿದಂತೆಯೇ ಸರಿ. ಮಿಕ್ಕವರೂ ಮಧುರೆ ಕಲಿಸಿದ ಪಾಠವನ್ನು ಕಲಿಯಲಾರರೆ?

ಮುಡಾಮುಕ್ತಿ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಗಾಗಿ ಶ್ರೀ. ಕುಂಜಬೆಟ್ಟು ನಾರಾಯಣ ತಂತ್ರಿಗಳು ಹೊಸತಾಗಿ ಕಟ್ಟಿಸಿದ ಕಟ್ಟೋಣದ ಪ್ರವೇಶೋತ್ಸವವು ತಾ. 26-7-39ಕ್ಕೆ ಡಿ. ಬೋ. ವೈಸ್ ಪ್ರೆಸಿಡೆಂಟರಾದ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗುವದು. ಈ ಸಂದರ್ಭದಲ್ಲಿ ಶಾಲಾ ಮಕ್ಕಳಿಗೆ ಇನಾಮು ಹಂಚುವಿಕೆ, ರಾತ್ರಿ 'ಅರ್ಜುನ ಬಾಹುದರ್ಪಹರಣ' ನಾಟಕಾದಿ ಕಾರ್ಯಕ್ರಮಗಳಿರುವವು ಎಲ್ಲರಿಗೂ ಸ್ವಾಗತವಿದೆಯೆಂದು ಮುಖ್ಯ ಅಧ್ಯಾಪಕರಾದ ಶ್ರೀ. ಕೌಡೂರು ನಾಗಯ್ಯ ಶೆಟ್ಟರು ತಿಳಿಸುತ್ತಾರೆ.

ಬರುವ ವಾರ

ತಿಂಗಳ ಕಾಣಿಕೆಯನ್ನು

ಓದಲು ಮರೆಯಬೇಡಿರಿ

ಹೆಚ್ಚು ಪುಟಗಳು!

ಹೆಚ್ಚು ವಿಷಯಗಳು!!

ಡಾನ್ಜಿಗ್ ಕಾವೇರುತ್ತಾ ಬರುತ್ತಿದೆ.

ಚೀನಿಯರಿಂದ ಬಹಿಷ್ಕಾರ | ಬ್ರಿಟಿಷ್ ಕ್ಷೇತ್ರಕ್ಕೆ ಬಾಂಬು | ಚೇಂಬರ್ಲೇನರ ಭಾಷಣ

'ನಮ್ಮೊಳಗೆ ಸ್ನೇಹ ಮೊದಲಿಂದ ನಮಸ್ಕಾರ.'

ಇಟಲಿಗೆ ಸೇರಿರುವ ಟಿರೋಲ್ ಎಂಬಲ್ಲಿರುವ ಜರ್ಮನಿ ಮಾತನಾಡುವ ನಿವಾಸಿಕರನ್ನು ಅಲ್ಲಿಂದ ನಿಧಾನವಾಗಿ ಹೊರಗೆ ಕಳುಹಿಸಲಾಗುತ್ತಿದೆ. ಈ ಕುರಿತು ಮುಸಲೋನಿಯ ಬಾಯಿಯಂತಿರುವ ಸೀನರ್ ಗ್ಯಾಡಾ ತನ್ನ ಪತ್ರಿಕೆಯಲ್ಲಿ ಹೀಗೆಂದು ಪ್ರಕಟಿಸಿದ್ದಾನೆ. "ಇದು ಹೊರಗಟ್ಟುವದೆಂಬ ಅರ್ಥವಲ್ಲ. ಸ್ಪಷ್ಟವಾದ ಹಾಗೂ ಸ್ನೇಹಪೂರ್ಣವಾದ ಒಪ್ಪಂದದ ಮೂಲಕ ನಡೆಯುವ ಸ್ಥಾನಾಂತರ ಮಾತ್ರ. ಈ ಸ್ಥಾನಾಂತರವು ಪೂರ್ಣವಾಗಿ ಸ್ವೇಚ್ಛೆಯನ್ನು ಹೊಂದಿಕೊಂಡಿದೆ. ಇದರ ಮೂಲೋದ್ದೇಶವೆಂದರೆ ಜರ್ಮನಿ ಇಟಲಿಗಳೊಳಗಣ ಸ್ನೇಹವು ಶತಮಾನಗಳ ವರೆಗಿರುವಂತೆ ಭದ್ರಗೊಳಿಸುವದಾಗಿದೆ."

ಟಿಯೆಂಟ್ಸಿನ್ ಸಮಸ್ಯೆಯ ಕುರಿತು ಆಂಗ್ಲೋ—ಜಪಾನ್ ಭಿನ್ನಾಭಿಪ್ರಾಯ.

ಟೋಕಿಯೋದ ಬ್ರಿಟಿಷ್ ಪ್ರತಿನಿಧಿ ಮತ್ತು ಜಪಾನಿನ ವಿದೇಶಾಂಗ ಮಂತ್ರಿಗಳೊಳಗೆ ಟಿಯೆಂಟ್ಸಿನ್ ದಿಗ್ಬಂಧನದ ಕುರಿತು ಆರಂಭವಾದ ಮಾತುಕತೆಯು ಜಯ ಹೊಂದುವ ಲಕ್ಷಣ ಕಾಣುವದಿಲ್ಲ. ಜಪಾನ್ ವಿದೇಶ ಮಂತ್ರಿ ಮಿ. ಅರಿಟಾ ಇವರು ಜಪಾನು ಪೂರ್ವದೇಶಗಳಲ್ಲಿ ಕೈಕೊಳ್ಳಲಿರುವ ಬದಲಾವಣೆಯಲ್ಲಿ ತನ್ನ ಸಹಕಾರವ ನ್ನೀಯುವೆನೆಂದು ಇಂಗ್ಲಾಂಡು ಸಾರಬೇಕೆಂದು ಕೇಳಿಕೊಂಡರು. ಪ್ರಥಮತಃ ಟಿಯೆಂಟ್ಸಿನ್ ಗೊಂದಲದ ಕಾರಣಗಳನ್ನು ಇತ್ಯರ್ಥಪಡಿಸಿ, ಆ ನಂತರ ಮೂಲಭೂತ ಉದ್ದೇಶಗಳನ್ನು ಚರ್ಚಿಸತಕ್ಕದ್ದೆಂದು ಬ್ರಿಟಿಷ್ ರಾಯಭಾರಿ ಸರ್. ರೋಬರ್ಟ್ ಕ್ರೈಜೀಯವರು ಸೂಚಿಸಿದರು. ಸಂಧಾನದ ಮಾತಿಗೆ ಮೂಲೋದ್ದೇಶವನ್ನೇ ಅಡಿಗಲ್ಲಾಗಿಟ್ಟು ಪ್ರಾರಂಭಿಸಬೇಕೆಂದೂ, ಜಪಾನಿನ ಅಭಿಪ್ರಾಯವನ್ನು ಹೊಂದಿಕೊಂಡು ಮಾತುಕತೆಯ ರೀತಿಯಿರಬೇಕೆಂದೂ ಜಪಾನ್ ಮಂತ್ರಿಗಳು ಉತ್ತರಿಸಿರುವರು.

ಸ್ವಾಟೊ, ಹಿಂಗ್ಪ್ವಾಗಳ ಮೇಲೂ ಧಾಳಿ

ಹೋಂಗ್‌ಕೊಂಗಿಗೆ 65ಮೈಲು ದೂರದಲ್ಲಿರುವ ಸ್ವಾಟೊವಿನ ಮೇಲೆ ಧಾಳಿ ನಡೆಯಲಿರುವದರಿಂದ ಜುಲಾಯಿ 17ರ ಒಳಗೆ ವಿದೇಶೀ ಯುದ್ಧ ಹಡಗುಗಳೂ ಇತರ ಹಡಗುಗಳೂ ಆ ಬಂದರವನ್ನು ಬಿಟ್ಟು ಹೋಗತಕ್ಕದ್ದೆಂದು ಜಪಾನೀ ನಾವೆಯ ಅಧಿಕಾರಿಗಳ ಎಚ್ಚರಿಕೆ ಹೋಗಿದೆ. ಹಾಗೆಯೇ ಜುಲಾಯಿ 19ರಲ್ಲಿ ಹಿಂಗ್ಪ್ವಾವನ್ನು ಮುತ್ತಲಿರುವೆವೆಂದು ಪ್ರಕಟಿಸಿದ್ದಾರೆ.

ಸ್ಪೇಯಿನು ತಾಟಸ್ಥ್ಯವಹಿಸುವದಂತೆ

ಇನ್ನೊಂದು ಯುದ್ಧದಲ್ಲಿ ಸ್ಪೇಯಿನಿನ ಯಾವದೇ ವಿಭಾಗಕ್ಕೆ ಭಕ್ತಿಯಿರದ ಸಂದರ್ಭದಲ್ಲಿ ತಾವು ತಟಸ್ಥರಾಗಿ ಉಳಿಯುವೆನೆಂದು ಜನರಲ್ ಫ್ರಾಂಕೋನು ಪತ್ರಿಕಾ ಪ್ರತಿನಿಧಿಗಿತ್ತ ಭೇಟಿಯಲ್ಲಿ ತಿಳಿಸಿರುವನು. "ಸ್ಪೇಯಿನ್ ಸೈನ್ಯವು ಜರ್ಮನಿಯದೂ ಅಲ್ಲ; ಇಟಲಿಯದ್ದೂ ಅಲ್ಲ- ಅದು ಸ್ಪೇಯಿನಿನದು" ಎಂದು ಫ್ರಾಂಕೋನ ಉದ್ಗಾರ.

ಇಟಲಿ ಸ್ಪೇಯಿನು ಸಂಬಂಧ

ಇಟಲಿಯ ಕೌಂಟ್ ಸಿಯಾನೋ ಮತ್ತು ಸ್ಪೇಯಿನಿನ ಜನರಲ್ ಫ್ರಾಂಕೋನವರು ಇಟಲಿ–ಸ್ಪೇಯಿನುಗಳೊಳಗಿರಬೇಕಾದ ಆರ್ಥಿಕ ಮತ್ತು ಸೈನಿಕ ಒಪ್ಪಂದದ ಕರಾರುಗಳ ಕರಡು ಪ್ರತಿ ತಯಾರಿಸಿರುವರು. ಕೂಡಲೇ ಇತ್ತಂಡದವರ ಸಹಿ ಬೀಳದಿದ್ದರೂ ಪರಿಸ್ಥಿತಿಯು ಅಗತ್ಯಬಿದ್ದಾಗ ಸಹಿಯೂ ಬೀಳುವದಂತೆ.

ಮಾವನಂತೆ ಅಳಿಯನೂ ಅದೃಷ್ಟಶಾಲಿ!

ಮುಸಲನಿಯ ಅಳಿಯ ಕೌಂಟ್ ಸಿಯಾನೋ ಮೇದ್ರಿದಿನ ಬಳಿಯ ಬಾರಜೋಸ್ ವಿಮಾನ ನಿಲ್ದಾಣದಲ್ಲಿ ವಿಮಾನ ಸಹಿತ ಇಳಿಯುವಾಗ ಅಪಘಾತ ಸಂಭವಿಸಿ ವಿಮಾನಕ್ಕೆ ಪೆಟ್ಟಾದರೂ ಯಾರೂ ಜಖಂ ಹೊಂದಲಿಲ್ಲ.

ಆಂಗ್ಲೋ ಫ್ರೆಂಚರ ಐಕ್ಯತೆ

ಬ್ರಿಟಿಷ್ ಸೈನಿಕದಳವು ಫ್ರಾನ್ಸನ್ನು ಸಂದರ್ಶಿಸಿ ಸಂಭ್ರಮದ ಸ್ವಾಗತ ಪಡೆಯಿತು. ಈ ಸಂದರ್ಭದಲ್ಲಿ ಫ್ರಾನ್ಸಿನ ಅಧ್ಯಕ್ಷರು ಜೋರ್ಜ್ ಸಾರ್ವಭೌಮರಿಗಿತ್ತ ತಂತಿಗೆ ಉತ್ತರವಾಗಿ ಇಂಗ್ಲಿಷ್ ಚಕ್ರವರ್ತಿಗಳು ಬ್ರಿಟಿಷ್ ಸೈನಿಕರ ಸಂದರ್ಶನವು ಎರಡು ರಾಷ್ಟ್ರಗಳ ಸೈನ್ಯಶಕ್ತಿಗಳೊಳಗಣ ಪೂರ್ಣ ಸಹಕಾರದ ಚಿಹ್ನೆಯೆಂದೂ, ಅಲ್ಲಿ ಅವರಿಗೆ ದೊರೆತ ಸ್ವಾಗತವು ಎರಡೂ ರಾಷ್ಟ್ರಗಳ ಗಾಢಸ್ನೇಹದ ಕುರುಹೆಂದೂ ತಿಳಿಸಿರುವರು.

ಡಾನ್ಜಿಗ್ ಕಾವೇರುತ್ತಾ ಇದೆ!

ಡಾನ್ಜಿಗಿನ ವಾತಾವರಣವು ದಿನದಿಂದ ದಿನಕ್ಕೆ ಉದ್ವೇಗಕಾರಿಯಾಗುತ್ತಾ ಬರುತ್ತಿದೆ. ಕೊನೆಯ ವಾರ್ತೆಯಂತೆ ಜರ್ಮನ್ ಸೈನಿಕರು ಬಹಿರಂಗವಾಗಿ, ಅತ್ಯಾಧುನಿಕ ರೀತಿಯ ಮೆಶಿನುಗನ್ನು ಮತ್ತು ತೋಪುಗಳೊಡನೆ ರಸ್ತೆಗಳಲ್ಲಿ ಸವಾರಿ ನಡೆಸುತ್ತಿರುವರು, ಹಲವು ಮೋಟರ್ ಲೋರಿಗಳನ್ನು ತಡೆಯಲಾಗಿತ್ತಲ್ಲದೆ ಸರಹದ್ದಿನಲ್ಲಿರುವ ಜನರು ಸ್ಥಳಬಿಟ್ಟು ಚದರಲು ಸಿದ್ಧರಿರಬೇಕೆಂದು ಎಚ್ಚರಿಕೆ ಹೋಗಿದೆ. ನಾಜೀ ಪತ್ರಿಕಾ ಧುರೀಣರು ಹಲವರು ಡಾನ್ಜಿಗಿಗೆ ಬಂದಿರುವರು. ಸುಳ್ಳುವಾರ್ತೆಗಳನ್ನೆಬ್ಬಿಸದಿರುವ ಒಂದು ವ್ಯತ್ಯಾಸವನ್ನು ಬಿಟ್ಟರೆ ಮಿಕ್ಕ ವಿಷಯಗಳಲ್ಲಿ ಡಾನ್ಜಿಗಿನ ಪರಿಸ್ಥಿತಿಯಲ್ಲಾವ ಬದಲಾವಣೆಯೂ ಈ ವರೆಗೆ ಕಂಡು ಬರವುದಿಲ್ಲವೆಂಬು ಪೋಲೆಂಡಿನ ರಾಜಧಾನಿಯ ವಾರ್ತೆ.

ಇಟಲಿ ಜರ್ಮನಿ ಸಂಬಂಧದ ವಿಕಲ್ಪನೆ

ಇಟಲಿಯಲ್ಲಿ ಜರ್ಮನಿ ಸೈನಿಕ ದಲಗಳಿರುವ ಕುರಿತು ಮತ್ತು 'ಟ್ರೇಯಸ್ಟೀ'ಯನ್ನು ಜರ್ಮನಿಗೆ ಇಟಲಿ ಬಿಟ್ಟುಕೊಡುವದೆಂಬ ಕುರಿತು ನಡೆದಿರುವ ಪ್ರಚಾರವು ಹಾಸ್ಯಾಸ್ಪದವಾದುದು, ಅವಿವೇಕತನದ್ದು ಎಂದು ಇಟಲಿ ಪ್ರಚಾರ ಮಂತ್ರಿಗಳು ಅಲ್ಲಗಳೆದಿರುವರು.

ಇಂಗ್ಲಿಷ್ ವಿರುದ್ಧ ಪ್ರದರ್ಶನ

ಜಪಾನಿನ ರಾಜಧಾನಿ ಟೋಕಿಯೋದಲ್ಲಿ ಇಂಗ್ಲಂಡಿನ ವಿರುದ್ಧ ಪ್ರಚಾರ ಪ್ರದರ್ಶಗಳಾರಂಭವಾಗಿವೆ. ಟೋಕಿಯೋದಲ್ಲಿರುವ ಬ್ರಿಟಿಷ್ ರಾಯಭಾರಿ ಕ್ಷೇತ್ರವನ್ನು ಸುಮಾರು 4000 ಜಪಾನರು ಗೇಟು ಮುರಿದು ಒಳನುಗ್ಗಲು ಪ್ರಯತ್ನಿಸಿದಾಗ ಬಲವಾದ ಪೋಲಿಸು ಪಡೆಯು ತಡೆಗಟ್ಟಿತು. ಇಂತಹ ವಿರುದ್ಧ ಪ್ರದರ್ಶನ ಸಭೆಯೊಂದರಲ್ಲಿ ಜನರಲ್ ಕೈಶೇಕರ ಬೆಂಬಲಿಗ ರಾಷ್ಟ್ರಗಳ ಮುಂದಾಳುವಾದ ಬ್ರಿಟಿಷ್ ಸಾಮ್ರಾಜ್ಯವನ್ನು ಕಿತ್ತೊಗೆಯದೆ ಚೀನದಲ್ಲಿ ಬ್ರಿಟಿಷ್ ಜಪಾನ್ ಧ್ವಜವನ್ನು ಹಾರಾಡಿಸುವ ಸದುದ್ದೇಶವು ಫಲಿಸದೆಂಬ ನಿರ್ಣಯವಾಗಿರುವದು. ಹೊನಾನ್ ಪ್ರಾಂತ್ಯದ ಅಧಿಕಾರಿಗಳು ಕೈಫೆಂಗ್ ಪಟ್ಟಣದಲ್ಲಿರುವ ಬ್ರಿಟಿಷರು ಆದರಲ್ಲೂ ಮಿಶನರಿಗಳು ನಾಲ್ಕು ದಿನಗಳೊಳಗೆ ಅಲ್ಲಿಂದ ಹೊರಡಬೇಕೆಂದು ಅಪ್ಪಣೆಯಿತ್ತಿರುವರು.

ಬ್ರಿಟಿಷ್ ಕ್ಷೇತ್ರಕ್ಕೆ ಬಾಂಬು

ಟ್ಸೆಂಗ್ಪ್ರಾವೊ ಎಂಬಲ್ಲಿಯ ಬ್ರಿಟಿಷ್ ನಿವಾಸದ ಮೇಲೆ ಎರಡು ಬಾಂಬುಗಳು ಹೊಡೆಯಲ್ಪಟ್ಟವೆ. ಕಿಟಕಿಗಳು ಪುಡಿಯಾಗಿ ಸಣ್ಣ ಸಣ್ಣ ಪುಟ್ಟ ನಷ್ಟಗಳಾದರೂ ಯಾರಿಗೂ ಅಪಾಯವಾಗಿಲ್ಲ.

ಚೀನೀಯರಿಂದ ಬಹಿಷ್ಕಾರ

ಟ್ಸೆಂಗ್ಪ್ರಾವೊ ಎಂಬಲ್ಲಿ ಬ್ರಿಟಿಷ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಚೀನೀಯರೆಲ್ಲಾ ಪೋಲೀಸರಿಗೆ ರಿಪೋರ್ಟ್ ಮಾಡಬೇಕೆಂಬ ಆಜ್ಞೆಯಾಗಿದೆ. ಚೀನೀಯರು ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಡುವಂತೆ ಮಾಡುವರೆಂದು ತಿಳಿದುಬರುತ್ತದೆ. ಇಂಗ್ಲಿಷ್ ನಿವಾಸದ ಮೇಲೆ ಬಾಂಬು ಚೆಲ್ಲಿದುದರ ಪರಿಣಾಮವಾಗಿ ಅಲ್ಲಿ ಬಲವಾದ ಸೈನಿಕ ಪಹರೆಯನ್ನಿಡಲಾಗಿದೆ. ಟ್ಸೆಂಗ್ಪ್ರಾವೊ ಬಂದರಕ್ಕೆ ಕೋರ್ನವಲ್ ಎಂಬ ಇಂಗ್ಲಿಷ್ ಕ್ರೂಯಿಸರ್ ಕೂಡ ಬಂದಿರುವದು.

ಅಮೇರಿಕದ ತಾಟಸ್ಥ್ಯ ಕಾನೂನು

ಯುದ್ಧ ಸಂಭವದಲ್ಲಿ ಅಮೇರಿಕವು ತಾಟಸ್ಥ್ಯ ಘೋಷಣೆ ವಹಿಸುವ ಕಾನೂನಿದೆ. ಅಧ್ಯಕ್ಷ ರೂಸ್‌ವೆಲ್ಟರು ಆ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಸೂಚನೆಯನ್ನು ಕಾಂಗ್ರೆಸಿನ ಮುಂದಿಟ್ಟಿದ್ದರು. ಈ ತಿದ್ದುಪಡಿಯಂತೆ ಸಣ್ಣ ರಾಷ್ಟ್ರಗಳಿಗೆ ಯುದ್ಧಕಾಲದಲ್ಲಿ ಶಸ್ತ್ರಾಸ್ತ್ರ ವ್ಯಾಪಾರ ಮಾಡುವ ಹಾಗಾಗುವದು. ಇದರಿಂದ ಇಂಗ್ಲಂಡು ಫ್ರಾನ್ಸುಗಳಿಗೆ ಹೆಚ್ಚಿನ ಸಹಾಯ ದೊರೆಯುವಂತಾಗುತ್ತಿತ್ತು. ಆದರೆ ಅಮೇರಿಕದಲ್ಲಿ ಈ ತಿದ್ದುಪಡಿಯನ್ನು ನಿರೋಧಿಸುವವರೂ ಬಹಳ ಮಂದಿಯಿದ್ದಾರೆ. ಪ್ರೆಸಿಡೆಂಟರ ಸೂಚನೆಯು ವಿದೇಶೀ ಸಾಂಬಂಧಿಕ ಸಮಿತಿಯಿಂದ ಪರ್ಯಾಲೋಚಿಸಲ್ಪಟ್ಟು ಮುಂದಿನ ಕಾಂಗ್ರೆಸ್ ಅಧಿವೇಶನದ ವರೆಗೆ ಈ ಸೂಚನೆಯನ್ನು ಮುಂದುಮಾಡಬೇಕೆಂದು ಆ ಕಮಿಟಿಯು ಠರಾಯಿಸಿರುವದು. ಇದು ಪ್ರೆಸಿಡೆಂಟ್ ರೂಸ್‌ವೆಲ್ಟರ ಅಪೇಕ್ಷೆಗೆ ವಿರುದ್ಧವಾಗಿದ್ದು ಅವರೀಗ ಕಾಂಗ್ರೆಸಿಗೆ ಕೊಟ್ಟಿರುವ ಸಂದೇಶದಲ್ಲಿ ಈ ಸಲದ ಅಧಿವೇಶನದಲ್ಲಿಯೇ ಅಂತಹ ತಿದ್ದುಪಡಿಯನ್ನು ತರುವ ಅಗತ್ಯವಿರುವದೆಂದೂ, ಅಮೇರಿಕದ ತಾಟಸ್ಥ್ಯ ಮತ್ತು ಭದ್ರತೆಗಾಗಿ ಹಾಗೆ ಮಾಡುವ ಅಗತ್ಯವಿರುವದೆಂದೂ ತಿಳಿಸಿರುವರು.

ಚೇಂಬರ್ಲೇನರ ಭಾಷಣ

"ಡಾನ್ಜಿಗಿನ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿದೆ; ಹಾಗೆಂದೊಡನೆ ಈಗ ಜರ್ಮನರಿಗಲ್ಲಿ ಅನ್ಯಾಯವಾಗುತ್ತದೆಂಬ ಅರ್ಥವಲ್ಲ. ಡಾನ್ಜಿಗಿನಲ್ಲಿ ಜರ್ಮನರು ಅಧಿಕಸಂಖ್ಯಾಕರೆಂಬುದು ನಿಜವಾದರೂ ಅದರ ಸಂಬಂಧವನ್ನು ಕಡಿದುಕೊಂಡಲ್ಲಿ ಇವಸ್ಥಿತಿಗೆ ಹಾನಿ ತಟ್ಟುವಷ್ಟು ಪೋಲೆಂಡಿಗೆ ಆರ್ಥಿಕ ರಾಜಕೀಯಾಸಕ್ತಿಗಳಿವೆ ಪೋಲೆಂಡಿನ ಸ್ವಾತಂತ್ರ್ಯಕ್ಕೆ ನಿಜವಾದ ಹಾನಿಯೊದಗುವಾಗ ತಾನು ಸಹಾಯಕ್ಕೊದಗುವೆನೆಂದು ಬ್ರಿಟನು ಕೊಟ್ಟ ಆಶ್ವಾಸನೆಯಂತೆ ಅದು ಖಂಡಿತವಾಗಿ ನಡೆದುಕೊಳ್ಳುವದು. ಡಾನ್ಜಿಗಿನ ಪ್ರಶ್ನೆಯನ್ನು ಯುರೋಪಿನ ಶಾಂತಿಗೆ ಹಾನಿಯೊದಗುವ ಪರಿಸ್ಥಿತಿಗೆ ತಿರುಗಿಸುವ ಯಾವ ಕಾರ್ಯವನ್ನೂ ಯಾರೂ ಮಾಡಬಾರದು" ಎಂದು ಮಿ. ಚೇಂಬರ್ಲೇನರು, ಲೋಕವು ಆತುರದಿಂದ ನಿರೀಕ್ಷಿಸುತ್ತಿದ್ದ ತನ್ನ ಭಾಷಣದಲ್ಲಿ ಹೇಳಿರುವರು.

ಫ್ರೆಂಚ್ ಕ್ರಾಂತಿಯ **150**ನೇ ವರ್ಧಂತಿ

ಫ್ರೆಂಚ್ ಸಾಮ್ರಾಜ್ಯದಲ್ಲೆಲ್ಲಾ ಕಳೆದ ತಾ. 14ರಲ್ಲಿ ಫ್ರೆಂಚ್ ಕ್ರಾಂತಿಯ 150ನೇ ವರ್ಧಂತಿಯು ಆಚರಿಸಲ್ಪಟ್ಟಿರುವದು. ಪ್ಯಾರಿಸಿನಲ್ಲಿ ಬ್ರಿಟಿಷ್ ಸೈನಿಕರು, ನಾವಿಕರು, ವೈಮಾನಿಕರು, ಫ್ರೆಂಚ್ ದಲಗಳೊಡನೆ ಸಹಕರಿಸಿ ನಡೆದ ಮಹಾವಿಜಯೋತ್ಸವವು ಅತ್ಯಪೂರ್ವವಿದ್ದಿತು. 1919ನೇ ಜುಲಾಯಿ 11ರಲ್ಲಿ ನಡೆದ ವಿಜಯ ಯಾತ್ರೆಯ ನಂತರ ಇಂತಹ ಸಂಭ್ರಮದ ಹಾಗೂ ಬ್ರಿಟಿಷ್ ಫ್ರೆಂಚ್ ಸಹಕಾರಪೂರ್ವಕವಾದ ಬೇರೊಂದು ಸೈನಿಕ ಸವಾರಿ ನಡೆದುದಿಲ್ಲವಂತೆ. ಈ ಮೆರವಣಿಗೆಯಲ್ಲಿ ಭಾಗವಹಿಸಿದ ಬ್ರಿಟಿಷ್ ವಿಮಾನಗಳು ಫ್ರಾನ್ಸ್ ಅಧ್ಯಕ್ಷರಿಗೆ ಸೆಲ್ಯೂಟ್ ಕೊಡುತ್ತಾ ನೇಲ್ಗಡೆಯಲ್ಲಿಯೂ, ಸೈನಿಕರು, ಆಫೀಸರರು ಶಿಸ್ತಿನಿಂದ ಕೆಳಗಡೆಯಲ್ಲಿಯೂ ಹೊರಟ ಸವಾರಿ ಬಹು ಪ್ರೇಕ್ಷಣೀಯವಿದ್ದು ಪ್ಯಾರಿಸ್ ರಸ್ತೆಗಳು ಜನಸಂದಣಿಯ ನೂಕುನುಗ್ಗಲಿಂದ ತುಂಬಿಹೋಗಿದ್ದವು.

ಮಿ. ದಲಾದಿಯೂರರ ಗಣಘೋಷ!

ಈ ಮಹಾ ವರ್ಧಂತಿಯ ದಿನ ಭಾಷಣವೀಯುತ್ತಾ ಫ್ರೆಂಚ್ ಪ್ರಧಾನರಾದ ಎಮ್. ದಲಾದಿಯೂರರು ಹೀಗೆಂದರು–

ಸಿಲೋನಿಗೆ ಪಂಡಿತ ನೆಹರುಗಳ ನಿರ್ಗಮನ

ಸಿಲೋನಿನಲ್ಲಿ ಸುಸ್ವಾಗತ

ಮುಂಬಯಿಯಲ್ಲಿ ಪಾನನಿರೋಧ ಚಳವಳಿ

"ನಾವು ಎಲ್ಲಾ ಜನರೊಳಗೆ ಶಾಂತಿಯಿರಬೇಕೆಂಬುದನ್ನಲ್ಲದೆ ಅನ್ಯಥಾ ಅಪೇಕ್ಷಿಸುವದಿಲ್ಲ. ನಾವು ಇದೇ ಸ್ಫೂರ್ತಿಯನ್ನಿಟ್ಟುಕೊಂಡು, ನಾಗರಿಕತೆಯನ್ನು ರಕ್ಷಿಸುವ ಮಾನವೀಯತೆಯನ್ನು ಆಧರಿಸಿಕೊಂಡು ಪ್ರಯತ್ನಮಾಡಬೇಕೆಂದು ದೃಢಸಂಕಲ್ಪ ಮಾಡಿದ್ದೇವೆ. ಆದರೆ ಯಾವದೇ ಬೆದರಿಕೆ ಬಿದ್ದಾಗ, ಅಥವಾ ಅಂತಹ ಪ್ರಯತ್ನ ನಡೆವಾಗ ಫ್ರಾನ್ಸಿನ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಇದಿರಿಸಿಯೇ ಸಿದ್ಧವಲ್ಲದೆ ತಮ್ಮ ಸ್ವಾತಂತ್ರ್ಯ ರಕ್ಷಿಸುವ ಇತರ ದೇಶಗಳೊಡನೆ ಅದಕ್ಕಾಗಿ ಸಹಕರಿಸುವೆವೆಂದೂ ಶಪಥಮಾಡಿದ್ದೇವೆ. ಈ ದಿನ ನೀವು ಗೌರವಿಸಿದ ಸೈನ್ಯವು ನಿಮ್ಮ ರಕ್ಷಕವಾಗಿದೆ. ನಮ್ಮ ದೇಶವನ್ನು ತೊಂದರೆಗೊಳಿಸುವ ಯಾವುದೇ ಆಕ್ರಮಣವನ್ನು ಈ ಸೈನ್ಯಶಕ್ತಿಯು ಪುಡಿಗುಟ್ಟುವದನ್ನು ನೀವು ಕಾಣಲಿರುವಿರಿ."

ಸಿಲೋನಿಗೆ ಪಂಡಿತ ನೆಹರುಗಳ ನಿರ್ಗಮನ

ಮದ್ರಾಸಿನಲ್ಲಿ ಅತ್ಯಪೂರ್ವ ಸ್ವಾಗತ

ಸಿಲೋನಿಗೆ ಕಾಂಗ್ರೆಸ್ ರಾಯಭಾರಿಯಾಗಿ ತೆರಳಲಿಕ್ಕಾಗಿ ಪಂಡಿತ ಜವಾಹಿರಲಾಲರು ತನ್ನ ತಂಗಿ ಶ್ರೀಮತಿ ಹತೀಸಿಂಗರೊಡನೆ ತಾ. 15ರಲ್ಲಿ ಪೂನೆಯಿಂದ ಮದ್ರಾಸಿಗೆ ಸ್ಪೆಶಲ್ ವಿಮಾನದಲ್ಲಿ ಬಂದಿಳಿದರು. ಅವರ ವಿಮಾನವಿಳಿಯುವ ಮೀನಂಬಕಮ್ ವಿಮಾನ ನಿಲ್ದಾಣವು ಬಹಳವಾಗಿ ಶೃಂಗರಿಸಲ್ಪಟ್ಟಿದ್ದಿತು. ಸಾವಿರಾರು ಜನರು ನೆರೆದು ಬಂದು ಪಂಡಿತರ ವಿಮಾನವು ನೆಲಕ್ಕಿಳಿಯುವ ನೋಟವನ್ನು ಕಂಡ ಜನ ಸಮುದಾಯವು 'ಮಹಾತ್ಮಾ ಗಾಂಧೀಕೀ ಜೈ' 'ಪಂಡಿತ ನೆಹರು ಕೀ ಜೈ' ಎಂದು ಸಮುದ್ರ ಘೋಷವೆಬ್ಬಿಸಿತು. ಮಾನ್ಯ ರಾಜಗೋಪಾಲಾಚಾರ್ ಶ್ರೀಗಳಾದ ರಮಾನಾಥನ್, ಸುಬ್ಬರಾಯನ್ ಮೊದಲಾದ ಮಂತ್ರಿಗಳೂ ಶ್ರೀಮತಿ ಸುಬ್ಬರಾಯನ್‌ರೂ ಪಾರ್ಲಿಮೆಂಟರೀ ಸೆಕ್ರೆಟರಿಗಳೂ ಪಂಡಿತರ ಸ್ವಾಗತಕ್ಕಾಗಿ ವಿಮಾನ ನಿಲ್ದಾಣಕ್ಕೆ ತೆರಳಿದ್ದರು. ಪೋಲೀಸು ಸುಪರಿಂಟೆಂಡೆಂಟರ ವ್ಯವಸ್ಥಾಪಕತ್ವದಲ್ಲಿ ಪೋಲೀಸರ ಏರ್ಪಾಡು ಚೆನ್ನಾಗಿತ್ತು. ಪಂಡಿತರು ಹೂಮಾಲೆ ಹಾಕಲ್ಪಟ್ಟು ಧುರೀಣರೊಡನೆ ಸಂಭಾಷಿಸುತ್ತಿದ್ದಾಗ ಒಬ್ಬ ಮನುಷ್ಯ ಒಳಗೆ ಬಂದು ಹೊರಗೆ ಜನರು ಅತ್ಯಾತುರದಿಂದ ಕಾಯುತ್ತಿರುವರೆಂದೊಡನೆ ಹೊರಗೆ ಬಂದು ಸಜ್ಜುಗೊಳಿಸಲ್ಪಟ್ಟಿದ್ದ ಪೀಠವನ್ನೇರಿ ಜನರಿಗೆ ದರ್ಶನವಿತ್ತರು.

ಲೋಕಸಮಸ್ಯೆಯ ಒಂದು ಭಾಗ

"ಸಿಲೋನಿನ ಪ್ರಶ್ನೆಯು, ಸದ್ಯದ ಜಾಗತಿಕ ಹಾಗೂ ಭಾರತೀಯ ಮಹಾಸಮಸ್ಯೆಗಳೊಡನೆ ಹೋಲಿಸಿದರೆ ಅಲ್ಪವೆಂದೇ ಹೇಳಬೇಕು. ಆದರೆ ಅದು ಕೂಡ ಆರ್ಥಿಕ ಅವ್ಯವಸ್ಥೆಯಿಂದ ಲೋಕದಲ್ಲೆದ್ದಿರುವ ಸಮಸ್ಯೆಯ ಭಾಗವಲ್ಲದೆ ಬೇರಲ್ಲ. ಭಾರತೀಯರು ಸಿಲೋನಿನವರಿಗೆ ಕೆಡುಕು ಬಗೆಯಲಾರರು. ಯಾವುದಾದರೊಂದೇ ದೇಶವು ಬಗೆಹರಿಸಲಾಗುವ ಪ್ರಶ್ನೆ ಇದಲ್ಲ. ಪ್ರತಿಯೊಂದು ದೇಶವೂ ನ್ಯಾಯವಾದ ಹಾದಿಯನ್ನನುಸರಿಸಿದಲ್ಲಿ ಇದರ ನಿರ್ಣಯವು ಸುಲಭದಲ್ಲಿ ಆಗುವದು. ಇದು ಸಂಬಂಧಪಟ್ಟವರಿಗೆಲ್ಲಾ ಹಿತವಾಗುವ ರೀತಿಯಲ್ಲಿ ತೀರ್ಮಾನ ಹೊಂದುವವೆಂದು ನನಗೆ ಭರವಸೆಯಿದೆ." ಎಂದು ತನ್ನ ಸಿಲೋನ್ ಪ್ರವಾಸದ ಕುರಿತು ಪಂಡಿತ ನೆಹರುಗಳಂದಿರುವರು.

ಸಿಲೋನಿನಲ್ಲಿ ಸುಸ್ವಾಗತ

ತಾ. 16ರಲ್ಲಿ ಪಂಡಿತನೆಹರು ತಂಗಿಯೊಡನೆ ಕೊಲೊಂಬೋದಲ್ಲಿಳಿದಾಗ ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಜನರು ಹಿಂಡುಗಟ್ಟಿ ಅತ್ಯುತ್ಸಾಹದ ಸ್ವಾಗತವಿತ್ತರು. ವಿಮಾನ ನಿಲ್ದಾಣದ ಸುತ್ತಣ ಬೇಲಿಯನ್ನು ಮುರಿದು ಪಂಡಿತರ ದರ್ಶನಾತುರದಿಂದ ಜನಸಮುದ್ರವು ಒಳನುಗ್ಗಿತು. ಪಂಡಿತರ ಆಗಮನದಿಂದ ಅಲ್ಲಿಯ ಭಾರತೀಯರಲ್ಲಿ ಆಶೋದಯವಾಗಿದೆ. ಅಲ್ಲಿಯ ಮುಖ್ಯಮಂತ್ರಿಗಳು ಅನಿವಾರ್ಯ ತೊಂದರೆಯಿಂದ ಗೈರುಹಾಜರಾಗಿದ್ದರೂ ಇನ್ನೊಬ್ಬ ಮಂತ್ರಿ ಮೇಜರ್ ಜೆ ಎಲ್. ಕೋತಲವಾಲರು ಪಂಡಿತರನ್ನು ಸ್ವಾಗತಿಸಲು ಬಂದಿದ್ದರು. ತಾ. 17ರಿಂದ ಅಲ್ಲಿಯ ಮಂತ್ರಿಗಳೊಡನೆ ಪಂಡಿತ ಜವಾಹಿರಲಾಲರ ಸಂಭಾಷಣೆಯಾರಂಭವಾಗಿದೆ.

ಶ್ರೀ. ಭೋಸರ ಆಕ್ಷೇಪದ ಕುರಿತು ಮಹಾತ್ಮರ ಹೇಳಿಕೆ.

ಬೊಂಬಾಯಿ ಪಾನನಿರೋಧ ಕ್ರಮದ ವಿಷಯದಲ್ಲಿ ಶ್ರೀ. ಸುಭಾಷ್‌ಚಂದ್ರ ಬೋಸರು ಮಾಡಿದ ಖಂಡನೆಯನ್ನು ಕುರಿತು ಮಹಾತ್ಮಾ ಗಾಂಧಿಯವರು ತಮ್ಮ ವಿಷಾದವನ್ನು ವ್ಯಕ್ತಗೊಳಿಸಿ ಹೇಳಿಕೆಯೊಂದನ್ನಿತ್ತಿದ್ದಾರೆ. "ಶ್ರೀ ಸುಭಾಷ್‌ಚಂದ್ರ ಬೋಸರು ಹೇಳಿರುವ ಆಕ್ಷೇಪಣೆಗಳು ನನಗೆ ವ್ಯಸನವನ್ನುಂಟುಮಾಡಿವೆ. ನಾನು ಬೊಂಬಾಯಿ ನಗರದಲ್ಲಿದ್ದಾಗ ಶ್ರೀ ಬೋಸರು ನನ್ನೊಡನೆ ಪಾನನಿರೋಧ ವಿಚಾರದಲ್ಲಿ ಮಾತುಕತೆ ನಡೆಸಿದ್ದರು. ಬೊಂಬಾಯಿ ಮಂತ್ರಿಗಳೊಡನೆ ಈ ವಿಚಾರವನ್ನು ಮಾತನಾಡಿರಿ ಎಂದು ಶ್ರೀ ಬೋಸರಿಗೆ ಹೇಳಿದೆನು. ಅವರು ಮಾತುಕತೆ ನಡೆಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಪಾನನಿರೋಧವನ್ನು ವಿರೋಧಿಸುವವರು ಮಾತನಾಡುವಂತೆ ಶ್ರೀ ಬೋಸರು ಆಕ್ಷೇಪಣೆ ಮಾಡಿದರು. ಶ್ರೀ ಬೋಸರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಅವರಿಗೆ ಎಲ್ಲಾ ವಿಷಯಗಳು ತಿಳಿದಿವೆ. ಈಗ ಅವರು ಬಂಗಾಳ ಕಾಂಗ್ರೆಸ್ಸಿನ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರಾಗಿದ್ದಾರೆ. ಶ್ರೀ ಬೋಸರು ಈಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಇಲ್ಲವೆಂದು ಅವರು ಪಾನನಿರೋಧವನ್ನು ಖಂಡಿಸುವುದು ಸರಿಯಲ್ಲ. ಶ್ರೀ ಬೋಸರು ಹೇಳುವುದು ಯಾವುದೊಂದು ಕಾಂಗ್ರೆಸ್ ಸಂಸ್ಥೆಯ ಅಭಿಪ್ರಾಯವಲ್ಲ. ಅವರ ವೈಯಕ್ತಿಕ ಅಭಿಪ್ರಾಯವಾಗಿರಬಹುದು. ಬೊಂಬಾಯಿ ಮಂತ್ರಿಗಳ ಕರ್ತವ್ಯವು ಖಚಿತವಾಗಿಯೇ ಇದೆ. ಯಾರು ಏನೇ ಹೇಳಲಿ ಬೊಂಬಾಯಿ ಸರಕಾರವು ಪಾನನಿರೋಧವನ್ನು ಆಚರಣೆಯಲ್ಲಿ ತರಲೇಬೇಕು.' ಇದು ಅವರ ನಿರ್ಧಾರವಾದ ಕರ್ತವ್ಯ. ಪಾನನಿರೋಧವು ಕಾಂಗ್ರೆಸಿನ ಅತಿ ಮುಖ್ಯವಾದ ಕಾರ್ಯಕ್ರಮ, ಹಿಂದಿನ ಸರಕಾರಗಳು ಜಾರಿಗೆ ತರಲು ಸಾಧ್ಯವಿಲ್ಲದ್ದನ್ನು ಈಗಿನ ಕಾಂಗ್ರೆಸ್ ಸರಕಾರವು ಧೈರ್ಯವಾಗಿ ಕೈಗೊಂಡಿದೆ.

ಕಾಂಗ್ರೆಸ್ ಸರಕಾರಗಳಿಗೆ ಜನತೆಯ ಬೆಂಬಲವಿದೆ. ಪಾನ ನಿರೋಧಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲವನ್ನು ವಿಮರ್ಶೆ ಮಾಡಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪಾನನಿರೋಧವನ್ನು ನಿರ್ಧಾರಮಾಡಿರುವುದು. ಶ್ರೀ ಬಾಬು ಸುಭಾಷ್ ಚಂದ್ರಬೋಸರು ಮಾಡುವಂತೆ, ಕಾಂಗ್ರೆಸ್ ಮಂತ್ರಿಗಳಿಗೆ, ಯಾವನೊಬ್ಬ ಕಾಂಗ್ರೆಸ್ ಸದಸ್ಯನಾದರೂ ಪ್ರತಿಭಟಿಸಿ ಆತಂಕಗಳನ್ನುಂಟುಮಾಡುವುದು ಆಶ್ಚರ್ಯವಾಗುತ್ತದೆ. ಪಾನನಿರೋಧ ಆಚರಣೆಯಲ್ಲಿ ಕೋಮುವಾರು ಪ್ರಶ್ನೆಯು ಸಂಬಂಧಿಸಿಲ್ಲ. ಈ ವಿಷಯದಲ್ಲಿ ಶ್ರೀ ಬೋಸರು ಕೋಮುವಾರು ಸಮಸ್ಯೆಯನ್ನೂ ಮೈನಾರಿಟಿಗಳ ಪ್ರಶ್ನೆಯನ್ನೂ ಬೆರೆಸಿರುವುದು ಸರಿಯಾದುದಲ್ಲ. ಶ್ರೀ. ಬೋಸರು ಕಾಂಗ್ರೆಸಿಗೇ ಅಹಿತವನ್ನು ಮಾಡಿದ್ದಾರೆ. ಪಾನ ನಿರೋಧವು ಬರಿಯ ನೈತಿಕ ಸುಧಾರಣೆ. ಎಲ್ಲಾ ಜಾತಿಯವರಿಗೂ ಪಾನ ನಿರೋಧದಿಂದ ಒಳ್ಳೆಯದಾಗುತ್ತದೆ. ಬೊಂಬಾಯಿನಲ್ಲಿ ಸೊತ್ತುಗಳ ತೆರಿಗೆಯನ್ನು ಹೊಸದಾಗಿ ಹಾಕಿರುವುದು ನ್ಯಾಯವಾಗಿದೆ. ಇದರಿಂದ ಒಂದು ಕೋಟಿ ರೂಪಾಯಿ ಹುಟ್ಟುವಳಿ ಬರುತ್ತದೆ. ಈ ತೆರಿಗೆಯು ತೀರಾ ಬಡವರ ಮೇಲೆ ಬೀಳುವುದಿಲ್ಲ. ಸೊತ್ತುಗಳ ಮಾಲೀಕರು ನ್ಯಾಯವಾಗಿ ತೆರಿಗೆಯನ್ನು ಕೊಡಬೇಕು.

ಪಾರ್ಸಿಗಳು ಶ್ರೀಮಂತರು ಧರ್ಮಕಾರ್ಯಮಾಡಿದವರು. ಪಾನನಿರೋಧಕ್ಕೆ ಅವರು ಸಹಾಯಮಾಡುವುದು ಉಚಿತವಾಗಿದೆ. ಜನರ ನೈತಿಕ ಅಭಿವೃದ್ಧಿಗೆ ಅವರು ಸಹಾಯ ಮಾಡಬೇಕು. ಬೊಂಬಾಯಿಯಂಥಾ ಮಹಾ ನಗರದಲ್ಲಿ ಭರೂಚಾ, ಪಟೇಲರೂ, ನೌರೋಜಿಯವರೂ ಮೊದಲಾಗಿ ಅನೇಕ ಮಹನೀಯರು ಇದಕ್ಕೆ ಬೆಂಬಲವಿತ್ತಿದ್ದಾರೆ. ಶ್ರೀ ಸುಭಾಷರು ತಾವು ಆಡಿದ ಪ್ರತಿಬಂಧಕ ಆಕ್ಷೇಪಣೆಗಳನ್ನು ವಾಪಸು ತೆಗೆದುಕೊಂಡು ಪಾನನಿರೋಧ ಕಾರ್ಯಕ್ಕೆ ಸಹಾಯಮಾಡುವವರಾಗಲಿ, ಪಾರ್ಸಿಗಳಿಗೆ ಸರಿಯಾದ ಸಲಹೆಗಳನ್ನು ಕೊಡಲಿ. ಕಾಂಗ್ರೆಸಿನ ಮಾಜೀ ಅಧ್ಯಕ್ಷರಾಗಿಯೂ, ರಾಷ್ಟ್ರಪತಿ ರಾಜೇಂದ್ರ ಬಾಬುಗಳ ಮುಂಚೆ ಇದ್ದವರೂ ಆಗಿರುವುದರಿಂದ ಶ್ರೀ ಭೋಸರು ಪಾನನಿರೋಧಕ್ಕೆ ಬೆಂಬಲವೀಯಬೇಕು.

ಮದ್ರಾಸು ಪ್ರಾಂತ್ಯದಲ್ಲಿ ದೇವಾಲಯ ಪ್ರವೇಶ ಸಮಾರಂಭ

ಮಧುರೆಯ ಸುಪ್ರಸಿದ್ಧ ಮೀನಾಕ್ಷಿ ದೇವಾಲಯವು ಕಳೆದ ತಾ. ೮ರಿಂದ ಹರಿಜನರಿಗೂ ತೆರೆಯಲ್ಪಟ್ಟಿರುವದಲ್ಲದೆ ಅಲ್ಲಿಯ ಇನ್ನೆರಡು ದೇವಸ್ಥಾನಗಳೂ ತೆರೆಯಲ್ಪಟ್ಟಿವೆ. ಈಗ ತಂಜಾವೂರಿನ 90ದೇವಾಲಯಗಳನ್ನು ಹರಿಜನರಿಗಾಗಿ ತೆರೆಯುವ ಪ್ರಕಟಣೆ ಅಲ್ಲಿಯ ದೇವಾಲಯಾಧಿಕಾರಿಗಳಿಂದ ದೊರೆತಿದೆ.

ಮುಂಬಯಿಯಲ್ಲಿ ಪಾನ ನಿರೋಧ ಚಳವಳಿ

ನಾಮದಾರ್ ಮುನ್ಷಿ ಮತ್ತು ಶ್ರೀ. ಸುಭಾಸು ಬಾಬುಗಳೊಳಗಣ ಭಿನ್ನಾಭಿಪ್ರಾಯಗಳು

ಇದೇ ತಾ. 14ರಲ್ಲು ಮುಂಬಯಿ ಸರಕಾರದ ಗೃಹಮಂತ್ರಿಗಳಾದ ನಾಮದಾರ್ ಮುನ್ಷಿಯವರು ಪಾನನಿರೋಧ ಚಳವಳದ ಕುರಿದು ಶ್ರೀ. ಸುಭಾಸು ಬಾಬುಗಳು ಮಾಡಿದ ಟೀಕೆಯ ಕುರಿತು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ ಹೀಗೆಂದರು:- "ಶ್ರೀ ಸುಭಾಸಚಂದ್ರ ಭೋಸರು ಕಾಂಗ್ರೆಸ್ ಪ್ರೆಸಿಡೆಂಟರಿದ್ದ ವೇಳೆ ಮುಂಬಯಿ ಮಂತ್ರಿಮಂಡಲದ ಪಾನನಿರೋಧ ಚಳವಳ ಮತ್ತು ಪ್ರೊಪರ್ಟಿ ಟೇಕ್ಸ್ ಧೋರಣೆಯನ್ನು ಸಮರ್ಥಿಸಿದವರು ಫಾರ್ವರ್ಡ್ ಬ್ಲಾಕಿನ ಜನ್ಮದಾತರಾದೊಡನೆಯೇ ಅವೆರಡನ್ನೂ ವಿರೋಧಿಸಿ ಟೀಕಿಸ ಲಾರಂಭಿಸಿರುವರು. ಹೀಗೆ ಟೀಕಿಸುವ ಉದ್ವೇಗದಲ್ಲಿ ಶ್ರೀ. ಭೋಸರು ಮುಂಬಯಿಯ 25,000 ಸಂಪನ್ನ ವ್ಯಕ್ತಿಗಳು ಬಡತನದ ಸೋಂಕಣೆ ಸಹ ಇಲ್ಲದವರ ಸ್ಥಿತಿಗತಿಗಳನ್ನೇ ತನ್ನ ಮುಂದಿರಿಸಿಕೊಂಡಂತೆ ಭಾಸವಾಗುತ್ತದೆ. ಮುಂಬಯಿ ಸರಕಾರಕ್ಕೆ ಸೇಂದಿ ಶರಾಬುಗಳಿಂದ ಒಂದುಕೋಟಿ ಐವತ್ತು ಲಕ್ಷ ರೂಪಾಯಿಗಳು ವರ್ಷಾವಧಿ ಉತ್ಪತ್ತಿ ದೊರೆಯುತ್ತದೆ ಈ ಉತ್ಪತ್ತಿಯ ಹೆಚ್ಚಿನಂಶವು ಬಡವರದೇ ಆಗಿರುತ್ತದೆ. ಈ ಹಣವನ್ನು ಪ್ರೋಪರ್ಟಿ ಟೇಕ್ಸುಗಳ ಮೂಲಕ ಗಳಿಸಬೇಕೆಂಬುದಲ್ಲದೆ ಹೆಚ್ಚಿನ ಟೇಕ್ಸುಗಳನ್ನು ಹೊರಿಸಬೇಕೆಂದು ಸರಕಾರಕ್ಕೆ ಎಳ್ಳಷ್ಟೂ ಇಚ್ಛೆಯಿಲ್ಲ. ಬಡವರು ಸರಕಾರದ ಬೊಕ್ಕಸವನ್ನು ತುಂಬಿಸುವುದರ ಬದಲಾಗಿ ಈಗಣ ಪ್ರೋಪರ್ಟಿ ಟೇಕ್ಸ್ ಧೋರಣೆಯಂತೆ ಶಹರಿನ 25 ಸಾವಿರ ಸಂಪನ್ನ ಆಸ್ತಿ ಕಟ್ಟಡಗಳಿರುವವರು ಒಂದು ಕೋಟಿ ಐವತ್ತುಲಕ್ಷ ರೂಪಾಯಿ ಕೊಟ್ಟರಾಯಿತು. ಫಾರ್ವರ್ಡ್ ಬ್ಲಾಕಿನ ಕ್ರಾಂತಿಕಾರರಾದ ಶ್ರೀ. ಭೋಸರು, ದಾರಿದ್ರ್ಯದಲ್ಲಿ ನರಳುವ ಬಡವರೇ ಇನ್ನೂ ಇನ್ನೂ ಕುಡಿದು ಸರಕಾರಕ್ಕೆ ಉತ್ಪತ್ತಿಯನ್ನು ಮಾಡಿಕೊಡಬೇಕು, ಧನಾಢ್ಯರು ಭವ್ಯಮನೆಗಳಲ್ಲಿದ್ದುಕೊಂಡು ಸತತ ಸಂಪನ್ನರಾಗಿಯೇ ಇರಬೇಕು ಎಂಬ ಈ ದೃಷ್ಟಿಯಿಂದಲೇ ಪಾನನಿರೋಧ ಚಳವಳವನ್ನು ವಿರೋಧಿಸಿ ಟೀಕಿಸುವುದರ ಅರ್ಥವೇನು?

ವಿದೇಶೀ ಮದ್ಯಗಳ ಮೇಲೆ ಅತ್ಯಧಿಕ ಸುಂಕವನ್ನು ಹೊರಿಸಬೇಕೆಂದು ಕೆಲವರ ಸೂಚನೆ. ಈ ಸೂಚನೆಯನ್ನು ಅಂಗೀಕರಿ

ಪುಟ ೧೩ರಲ್ಲಿ ನೋಡಿರಿ

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ಮಂಗಳೂರು, ತಾ 16-7-39

ವಿದ್ಯಾರ್ಥಿ ಫೆಡರೇಶನಿನಲ್ಲಿ ಭಾಷಣ- ಕಳೆದ ತಾ 10ನೇ ಸೋಮವಾರ ಮಂಗಳೂರು ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ ಮಿ ಗೋಪಾಲಕೃಷ್ಣಯ್ಯನವರು ವಿದ್ಯಾರ್ಥಿಗಳ ಮುಂದೆ ಒಂದು ವಿಚಾರಪೂರ್ಣ ಭಾಷಣವಿತ್ತರು. ಸಭೆಗೆ ತಾವು ಶತವಾಗಿ ಬಂದುದಕ್ಕೆ ಕ್ಷಮೆ ಕೇಳಿ ಹೇಳಿದ್ದು ಕಾಂಗ್ರೆಸ ಮಂತ್ರಿಗಳು ಎಷ್ಟು ಕಾರ್ಯಕ್ರಮವನ್ನು ನಡೆಸಬೇಕೆಂದರೂ ಜನ ಸಹಕಾರವಿಲ್ಲದಾಗಿ ನಡೆಸುವಂತಿಲ್ಲವಾದರೂ, ರಾಜಕೀಯ ಕ್ರಮಗಳು ಕ್ಷಣಕ್ಷಣಕ್ಕೂ ಬದಲಾಯಿಸಲ್ಪಡುತ್ತಿವೆಯೆಂದೂ ಹೇಳಿ, ಪ್ರಜೆಗಳ ಸಂಬಂಧವಿರುವಂತೆ ಮಂತ್ರಿಗಳು ಜನರ ಇಷ್ಟಕ್ಕೆ ವಿರುದ್ಧವಾಗಿ ನಡೆಯಲು ಸಾಧ್ಯವಿಲ್ಲವೆಂದೂ ಮಂತ್ರಿಗಳು ಅವಕ್ಕೆ ಸಂತೋಷವನ್ನೇ ಪಡುವರೆಂದೂ ಕಾಂಗ್ರೆಸ ಕಡೆಯ ಮಂತ್ರಿಗಳನ್ನು ಪಾರ್ಲಿಮೆಂಟರಿ ಸಬ್ ಕಮಿಟಿ ಮೊದಲಗೊಂಡು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ವರೆಗಿನ ಎಲ್ಲಾ ಅಧಿಕಾರಿಗಳೂ ಪ್ರಶ್ನಿಸಬಹುದೆಂದೂ, ಹೀಗಿರುವುದರಿಂದ ಮಂತ್ರಿಗಳಿಗೆ ತಮ್ಮ ಸಮದುಕ್ಕೆ ಸರಿಯಾಗಿ ಕೆಲಸ ನಡೆಸಲು ಸಾಧ್ಯವಿಲ್ಲವೆಂದೂ ಹೇಳಿ ಅವರಾಗಿ ಕ್ಷಮೆ ಕೇಳಿದರು ವಿದ್ಯಾರ್ಥಿಗಳು ಶಿಸ್ತು ಪಾಲಿಸಬೇಕೆಂಬುದನ್ನು ಹೇಳುತ್ತಾ ಒಂದಾನೊಂದು ಸಮಯದಲ್ಲಿ ವಿದ್ಯಾರ್ಥಿಗಳನ್ನು ಕಾಲೇಜುಗಳಿಗೆ ಬಹಿಷ್ಕಾರ ಹಾಕಬೇಕೆಂದು ಕಾಂಗ್ರೆಸ್ ಕೇಳಿದ್ದಿತೆಂದೂ ಆದರೆ ಈಗ ವಿದ್ಯಾರ್ಥಿಗಳು ಈಗಲೂ ಮುಷ್ಕರಗಳನ್ನು ಏಕೆ ಮಾಡಬಾರದೆಂದು ಕೇಳುವ ಪ್ರಸಂಗ ಬಂದಿದೆಯೆಂದೂ, ಆದರೆ ಆಗಿನ ಸ್ಥಿತಿಯೂ ಈಗಿನದೂ ಬಹಳ ವ್ಯತ್ಯಾಸವಾದ್ದರಿಂದ ಮತ್ತು ಈಗ ಜನರ ಕಡೆಯವರಾದ ಕಾಂಗ್ರೆಸ್ ಕಡೆಯ ಮಂತ್ರಿಗಳೇ ಅಧಿಕಾರದಲ್ಲಿರುವುದರಿಂದ ಅಂತಹ ಚಳವಳಿಗಳಿಗೆ ಎಡೆಯಿಲ್ಲವೆಂದೂ ಹೇಳಿದರು, 144ನೇ ಕಲಮಿನ ಪ್ರಯೋಗದ ವಿಷಯವಾಗಿ ಹೇಳುತ್ತಾ ಜನರು ಸರಿಯಾಗಿ ರಾಜ್ಯಭಾರ ನಡಿಸುವ ಜವಾಬ್ದಾರಿಯನ್ನು ಕಾಂಗ್ರೆಸ್ ಮಂತ್ರಿಗಳಿಗೆ ಕೊಟ್ಟಿರುವುದರಿಂದ ಸರಿಯಾದ ರಾಜ್ಯಭಾರ ನಡೆಸಲು ಬೇಕಾದ ಕಾನೂನನ್ನು ಸಹ ಪ್ರಯೋಗಿಸಲು ಅವರಿಗೆ ಅಧಿಕಾರ ಕೊಡುವುದನ್ನು ಯುವೆಂದರು.

ಡಾ| ಕೆ. ವಿಟ್ಠಲ ಶೆಟ್ಟಿಯವರೂ ಕೆಲವು ಮಾತುಗಳನ್ನಾಡಿದರು ಶ್ರೀ| ಬಿ. ಎಸ್ ಭಾಸ್ಕರ ರೈಗಳು ಧನ್ಯವಾದಗಳನ್ನರ್ಪಿಸಿದರು.

ಮಹಾತ್ಮರ ಪ್ರತಿಮೆಯ ಅನಾವರಣ—ಅಂದೇ ಮಾನ್ಯ ಮಂತ್ರಿಗಳು ಕೆನರಾ ಹೈಸ್ಕೂಲಿಗೆ ಚಿತ್ತೈಸಿ ಅಲ್ಲಿ ಮಹಾತ್ಮಾ ಗಾಂಧಿಯವರ ಪ್ರತಿಮೆಯ ಅನಾವರಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಮಂತ್ರಿವರ್ಯರು ಮಹಾತ್ಮರನ್ನು ಬುದ್ಧನಿಗೂ, ವರ್ಧಮಾನ ಮಹಾವೀರನಿಗೂ ಹೋಲಿಸಿದರು. ವಿದ್ಯಾರ್ಥಿಗಳು ಮಹಾತ್ಮರ ಉಚ್ಚ ಉದಾಹರಣೆಯನ್ನು ಅನುಸರಿಸುವುದು ಅಗತ್ಯವೆಂದರು,

ಇದೇ ಸಂದರ್ಭದಲ್ಲಿ ಕೆನರಾ ಹೈಸ್ಕೂಲ್ ವಸ್ತು ಪ್ರದರ್ಶನಾಲಯವನ್ನು ಗಾಂಧಿ ವಸ್ತುಪ್ರದರ್ಶನಾಲಯವೆಂದು ನಾಮಕರಣಮಾಡಿದರು. ಮತ್ತು ಈ ಸಮಾರಂಭವು ನೆರವೇರಿದ ಮೇಲೆ ಸ್ಪೋರ್ಟ್ ಕೆನರಾ ಹಾಲ್ ಎಂಬ ಮುಂದಿನ ಶಂಕುಸ್ಥಾಪನೆಮಾಡಿದರು.

ನಗರಸಭೆಗೆ ಭೇಟಿ—ಮಾನ್ಯ ಮಂತ್ರಿಗಳಾದ ಬಿ. ಗೋಪಾಲರೆಡ್ಡಿಯವರು ಕಳೆದ ತಾ. 11ನೇ ಸಾಯಂಕಾಲ ಮಂಗಳೂರು ನಗರಸಭೆಗೆ ಭೇಟಿಯಿತ್ತರು. ಮಾನ್ಯ ಮಂತ್ರಿಗಳನ್ನೂ ಅವರ ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನೂ ಸಗರಸಭಾಧ್ಯಕ್ಷರು ಇದಿರುಗೊಂಡು ಉಚಿತ ಸ್ಥಳದಲ್ಲಿ ಕುಳ್ಳಿರಿಸಿದರು. ಮಂಗಳೂರು ನಗರಕ್ಕೆ ಅಗತ್ಯವಿರುವ ನೀರಿನ ಸರಬರಾಯಿ, ಚರಂಡಿ ಇತ್ಯಾದಿ ಹಲವಾರು ವಿಷಯಗಳಲ್ಲಿ ಮಂತ್ರಿವರ್ಯರು ಪ್ರಶ್ನೆ ಕೇಳಿ ಅನುಭವಪಡೆದರು ಸುಮಾರು ಒಂದು ತಾಸಿನವರೆಗೆ ಪರಸ್ಪರ ಸಂಭಾಷಣೆಯಾಗಿ ಒಬ್ಬೊಬ್ಬರು ಹೊರಟು ಹೋದರು. ತಾ 12ರಲ್ಲಿ ಸ್ಪೆಶಲ್ ಟ್ರೇನಿನಲ್ಲಿ ಮಾನ್ಯಮಂತ್ರಿಗಳು ಕಾಸರಗೋಡಿಗೆ ಪ್ರಯಾಣ ಬೆಳೆಸಿದರು.

ಎಡಿಶನಲ್ ಪಬ್ಲಿಕ್ ಪ್ರಾಸಿಕ್ಯೂಟರ್—ಬಿಲ್ಲವ ಸಮಾಜದ ಮುಂದಾಳುಗಳೂ, ಪ್ರಸಿದ್ಧ ವಕೀಲರೂ ಆದ ಶ್ರೀಮಾನ್ ಯಂ ಆನಂದ ತಲ್ಯಾರರು ಮಂಗಳೂರು ಸಬೋರ್ಡಿನೇಟ್ ಕೋರ್ಟಿನಲ್ಲಿ ಮೂರು ವರ್ಷ ಪರ್ಯಂತ ಎಡಿಶನಲ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲ್ಪಟ್ಟಿರುವರು.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಅಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 18ನೇ ವರ್ಷವು ಕೊನೆಗೊಂಡು ಸೆಪ್ಟಂಬ್ರ ಆರಿಯಿಂದ 19ನೇ ವರ್ಷವು ಆರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾಹಣವನ್ನೂ ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ಬಾಕಿ ಚಂದಾ ಹಣವನ್ನೂ ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್.

ಯುನಿವರ್ಸಿಟಿ ಎಕ್ಸ್‌ಟೆನ್‌ಶನ್ ಬೋರ್ಡು—ಯುನಿವರ್ಸಿಟಿ ಎಕ್ಸ್‌ಟೆನಶನ್ ಬೋರ್ಡಿನ ಸಭೆಯು ಕಳೆದ ತಾ. 12ರಲ್ಲಿ ಸೇರಿತು. ಡಾ. ಟಿ. ಗೋವಿಂದಪ್ಪಿಸರು ಕನ್ವೀನರರಾಗಿಯೂ, ಪ್ರೊ. ಎಸ್. ರಾಮಚಂದ್ರ ಅಯ್ಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಉಪನ್ಯಾಸ ಕೊಡಲು ಇಚ್ಛೆಯುಳ್ಳವರು ಕನ್ವೀನರರಿಗಾಗಲಿ, ಅಥವಾ ಕಾರ್ಯದರ್ಶಿಗಳಿಗಾಗಲಿ ಇದೇ ತಾ 22ರಿ ಒಳಗಾಗಿ ಬರೆದುಕೊಳ್ಳಬೇಕೆಂದು ಗೊತ್ತಾಗಿದೆ

ಆಕಸ್ಮಿಕ ಮರಣ—ಸ್ಥಳೀಯ ಅಳ್ಕೆ ಸಂಕದ ಹತ್ತಿರ ತೆಂಗಿನ ಮರವೊಂದನ್ನು ಕಡಿಯುತ್ತಿದ್ದಾಗ ಮರದ ತುಂಡೊಂದು ನಿವೃತ್ತ ಹೆಡ್ ಕಾನ್ಸ್‌ಟೇಬಲ್ ಮಿ| ಕಾಸ್ಮಿರ್ ಸಾಲ್ದಾಂಞ ಎಂಬವರ ಮೇಲೆ ಬಿದ್ದು ಅವರಿಗೆ ಬಹಳ ಪೆಟ್ಟಾಯಿತು, ಆಸ್ಪತ್ರೆಗೆ ಸಾಗಿಸಲ್ಪಟ್ಟರು ಆದರೆ ಪೆಟ್ಟು ಬಹಳ ಬಲವಾದ್ದರಿಂದ ಮಡಿದರು.

ಸಾಯಿನ್ಸ್ ಫೈನ್ ಆರ್ಟ್ಸ್ ಎಂಡ್ ಕ್ರಾಫ್ಟ್ಸ್ ಇನ್ಸ್ಟಿಟ್ಯೂಟ್—ತಾ. 16-7-39ರಲ್ಲಿ ಗವರ್ನಮೆಂಟ್ ಕಾಲೇಜಿನ ಡ್ರಾಯಿಂಗ್ ಟೀಚರ್ ಶ್ರೀ. ಬಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿದೆ ಇಲ್ಲಿ ಬುಕ್ ಬೈಂಡಿಂಗ್, ಹೋಮ್ ಇಂಡಸ್ಟ್ರಿ, ಸ್ಟೆನೋಗ್ರಾಫಿ, ಟೈಲರಿಂಗ್ ಮೊದಲಾದ ಈಗಿನ ಕಾಲಕ್ಕೆ ಆವಶ್ಯಕವಾದ ಹಲವು ಕಸಬುಗಳನ್ನು ಕಲಿಸಲಾಗುವುದು. ಶ್ರೀ. ಪಿ. ಆರ್ ನಾಯಕ್, ಆರ್ಟಿಸ್ಟ ಇವರ ಈ ನವೀನ ಉದ್ಯೋಗ ಮುಂದಿರುವ ಈಗಿನ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪವಾದರೂ ಬಿಡಿಸಲು ಸಹಕಾರಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಉಡುಪಿ

ತಿದ್ದುಪಡಿ

ಕಳೆದ ಸಂಚಿಕೆಯ 1ನೇ ಪುಟದಲ್ಲಿ ಉಡುಪಿ ವರ್ತಮಾನದಲ್ಲಿ 'ಗೋವಿಂದ ಪುಷ್ಕರಣಿ'ಯನ್ನು ಕಟ್ಟಿಸಲು ಸಂಪೂರ್ಣ ಧನಸಹಾಯ ಮಾಡಿದವರು ಮುದರಾಸ್ ಮೋರ್ಟನ್ ಕೇಫೆ ಇತ್ಯಾದಿಗಳ ಮಾಲಕರಿಂದ ಶ್ರೀ. ಕೆ. ಸೀತಾರಾಮ ರಾಯರೆಂದು ಪ್ರಕಟವಾಗಿರುವದಷ್ಟೆ! ಆದರೆ ಈ ಪುಣ್ಯಕಾರ್ಯಕ್ಕೆ ಮೈಸೂರು ಕೆಫೆ ಇತ್ಯಾದಿಗಳ ಮಾಲಕರಾದ ಶ್ರೀ. ಕೆ ಗುರುರಾಜಾಚಾರ್ಯ, ಶ್ರೀ. ಕೆ ಗೋಪಾಲಾಚಾರ್ಯ ಇವರೇ ಆದಿಯಾಗಿ ಇತರ 6 ಜನ ಸಹೋದರರೂ ತಮ್ಮ ತಮ್ಮ ಶಕ್ತ್ಯನುಸಾರ ಹಣವಿತ್ತಿರುವರೆಂದೂ ಇದು ಎಲ್ಲಾ ಸಹೋದರರು ಮಾಮೂಲಾಗಿ ಪುಣ್ಯಕೆಲಸಕ್ಕೆ ಸಹಾಯಿಸುವ ನಿಧಿಯ ಧರ್ಮಸೇವೆಯಿಂದ ದೊರಕಿದುದಾಗಿರುತ್ತದೆ. ಆದ್ದರಿಂದ ಈ ಪುಣ್ಯಕಾರ್ಯದ ಕೀರ್ತಿಗೂ ಶ್ರೀಭಗವಂತನ ಆಶೀರ್ವಾದಕ್ಕೂ ಎಲ್ಲಾ ಸಹೋದರರೂ ಪಾತ್ರರಾಗಿರುವರೆಂದು ಪ್ರತ್ಯೇಕ ಹೇಳಬೇಕಾಗಿಲ್ಲವಷ್ಟೆ!

ಸಂ- ನಂ.

ನಮಗೆ ಬಂದ ಬಾತ್ಮಿ

ಹಾಲಾಡಿ ಕೇಂದ್ರ ಕೋಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಹಾಲಾಡಿ ಮಹಾಬಲ ಶೆಟ್ಟರು, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಬಾಗಕೂರು ಪ್ರಾತಿನಿಧ್ಯಸ್ಥಾನದಿಂದ ನಡೆದ ಚುನಾವಣೆಯು ಸರಿಯಲ್ಲವೆಂದುದಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಪ್ರಭಾತದಲ್ಲಿ ಪ್ರಕಟಿಸಿದ ಉತ್ತರಕ್ಕೆ ಒಂದು ಪ್ರತ್ಯುತ್ತರವನ್ನು ಬರೆದು ನಮಗೆ ಕಳಿಸಿದ್ದಾರೆ. ಅದರಲ್ಲಿ ಶ್ರೀ ಶೆಟ್ಟರು ತನ್ನ ಮೊದಲಿನ ವಾದವನ್ನೇ ಸಮರ್ಥಿಸಿ, ಕಾರ್ಯದರ್ಶಿಗಳು ನಿಷ್ಪಕ್ಷಪಾತಿಗಳಲ್ಲವೆಂದು ಖಂಡಿಸಿದ್ದಾರೆ. ಸ್ಥಳಾಭಾವದಿಂದವನ್ನು ಮುದ್ರಿಸಲಾಗಲಿಲ್ಲ.

ಸಂ. ನ.

ಎಯಿಡೆಡ್ ಶಾಲಾ ಮೆನೇಜರ ಸಂಘಸ್ಥಾಪನೆ—ಉಡುಪಿ ತಾಲೂಕು ಎಯಿಡೆಡ್ ಶಾಲಾ ಟೀಚರ ಮೆನೇಜರರ ಹಾಗೂ ಮೆನೇಜರರ ಸಂಘಸ್ಥಾಪನೆಯು ತಾ 15-7-'39ರಲ್ಲು ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಮಂಡಳಿಯ ಚುನಾವಣೆಯೂ ಆಯಿತು. ಶ್ರೀಗಳಾದ ಡಾ. ಟಿ. ಮಾಧವ ಪೈ (ಅಧ್ಯಕ್ಷ), ಯು. ಕೆ. ಗೋವಿಂದ ಸೆಟ್ಟಿ (ಉಪಾಧ್ಯಕ್ಷ), ಲಕ್ಷ್ಮಯ್ಯ (ಕಾರ್ಯದರ್ಶಿ), ಜಗನ್ನಾಥ ನಾಯಕ್ (ಖಜಾನ್ಜಿ), ಕೆ. ಗಣಪಯ್ಯ ಸೆಟ್ಟಿ, ವಾಸುದೇವ ಕಲ್ಕೂರ, ಸೀತಾರಾಮಯ್ಯ, ಶೇಷಪ್ಪಯ್ಯ, ನಾರಾಯಣಪ್ಪಯ್ಯ, ಎಮ್. ಎಲ್. ಕಲ್ಕೂರ, ಸಂಜೀವ ಹೆಗ್ಡೆ, ರಾಮಚಂದ್ರಯ್ಯ ಮತ್ತು ರೇ. ಫಾದರ್, ವಿ. ಡಿ. ಸೋಜಾ (ಇತರ ಸದಸ್ಯರು)

ಪರಿಷತ್ತು—ಮಧ್ಯಾಹ್ನ ಡಾ| ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಪರಿಷತ್ತು ಸೇರಿತು. ತಾಲೂಕು ಎಡ್ವೈಸರಿ ಕಮಿಟಿಯ ಚೆಯರ ಮೇನ್ ಶ್ರೀ ಕೆ. ಜೆ ಬಲ್ಲಾಳ್, ಶ್ರೀಮತಿ ಲೀಲಾಬಾಯಿ ಕಾಮತ್ ಮೊದಲಾದವರು ಹಾಜರಿದ್ದರು. ಶ್ರೀ ಬಲ್ಲಾಳರು ಪರಿಷತ್ತನ್ನು ತೆರೆದರು. ಶಾಲಾ ಮೆನೇಜರರಿಗಿರುವ ಕಷ್ಟ ಪರಂಪರೆಗಳ ಕುರಿತು ಹಲವು ನಿರ್ಣಯಗಳಾದುವು. ಲೇಬರ್ ಮತ್ತು ಫಿಶರೀಸ್ ಶಾಲೆಗಳು ಅನಗತ್ಯ, ಎಡ್ವೈಸರಿ ಕಮಿಟಿಯಲ್ಲಿ ಈ ಸಂಘದ ಪ್ರತಿನಿಧಿಗಳಿಬ್ಬರಿಗೆ ಎರಡು ಸೀಟುಗಳ ವ್ಯವಸ್ಥೆ, ಮುನಿಸಿಪಲ್ ಮತ್ತು ಬೋರ್ಡು ಶಾಲೆಗಳ ಆಡಳಿತದಲ್ಲಿರುವ ಶಾಲೆಗಳಿಗೆ ಶಾಲಾ ಫೀಸು ಧರ್ಮಾರ್ಥದಿಂದುಂಟಾಗುವ ನಷ್ಟದ ಬಿಕ್ಕಟ್ಟು ದೊರೆಯುವುದು ಇತ್ಯಾದಿ. ತಾಲೂಕು ಎಡ್ವೈಸರಿ ಕಮಿಟಿಯ ಸಭೆಗಳಿಗೆ ಪತ್ರಿಕೆಯವರಿಗಾಗಲೀ ಇತರರಿಗಾಗಲೀ ಅಧ್ಯಕ್ಷರ ಅನುಮತಿವಿನಹಾ ಪ್ರವೇಶವಿಲ್ಲವೆಂದು ಮಾಡಿದ ರೆಜೊಲ್ಯೂಶನಿನ ನಿಷೇಧ ಸೂಚನೆಯಾಯಿತು. ಉಪಹಾರ ಸತ್ಕಾರವಾಗಿ ಧನ್ಯವಾದಾರ್ಪಣೆಯೊಂದಿಗೆ ಪರಿಷತ್ತು ಮುಕ್ತಾಯವಾಯಿತು

ವಿಕ್ಟೋರಿಯಾ ನಾಣ್ಯಗಳು—ವಿಕ್ಟೋರಿಯಾ ರೂಪಾಯಿ ನಾಣ್ಯಗಳನ್ನು ಚಲಾವಣೆಯಿಂದ ತೆಗೆದು ಹಾಕಲಾಗುವುದೆಂದು ತಿಳಿದು ಬರುತ್ತದೆ. ಅಂತಹ ನಾಣ್ಯಗಳುಳ್ಳವರು ಬೇಗನೇ ಸಮೀಪದ ತಾಲೂಕು ಖಜಾನೆಗೊಯ್ದು ಇತರ ನಾಣ್ಯಗಳನ್ನು ಪಡೆಯುವುದು ಉತ್ತಮ.

ಕಳವು—ತಾ. 15-7-39ನೇ ಶನಿವಾರ ರಾತ್ರೆ ಶ್ರೀ ಗರಡಿಹಾಡಿ ದೇವಕೃಷ್ಣರಾಯರ ಬಡಗುಬೆಟ್ಟು ಮನೆಯಲ್ಲಿ ಸುಮಾರು 1000 ರೂ. ಬೆಲೆಬಾಳುವ ಆಭರಣ ಕಳವಾಗಿರುವುದೆಂದು ತಿಳಿದು ಬರುತ್ತದೆ

ಪುಟ ೧೧ರಿಂದ

ಸಿವಾಗಿಯೂ ಮುಂಬಯಿ ಸರಕಾರಕ್ಕೆ ಹೆಚ್ಚು ಕಮ್ಮಿ 1 ಕಲಕ್ಷ ರೂಪಾಯಿ ಉತ್ಪತ್ತಿಯಾಗಬಹುದು. ಬ ಕಿ ಹಣಕ್ಕೆ ಇತರ ರೀತಿಯಿಂದ ವರ್ತಿಸಬೇಕಾಗುವುದಷ್ಟೆ! ಆದುದರಿಂದ ಈ ಸೂಚನೆಯು ನಿಷ್ಫಲವಾದುದು ಪಾನ ನಿರೋಧ ಚಳವಳಿಯಿಂದಾಗಿ ಪಾರ್ಸಿ ಜನರಿಗೆ ತುಂಬಾ ನಷ್ಟವಾಗುವುದೆಂದು ಶ್ರೀ ಭೋಸರ ಟೀಕೆ. ಇದು ತಪ್ಪಾಗಿರುವುದು. ಕಾರಣ 360 ಮಂದಿ ಮಾತ್ರ ಪಾರ್ಸಿ ಜನರು ಮದ್ಯದ ವ್ಯಾಪಾರಿಗಳು. ಅದು ಕೂಡಾ ಅವರೆಲ್ಲರೂ ಹಣವಂತರು, 60,000 ಪಾರ್ಸಿಗಳಿರುವ ಮುಂಬಯಿ ಶಹರಿನಲ್ಲಿ ಹೆಚ್ಚೆಂದರೆ 400 ಮಂದಿ ಮಾತ್ರ ಪಾನ ನಿರೋಧದ ನಿಮಿತ್ತ ನಿರುದ್ಯೋಗಿಗಳಾಗಬಹುದು. 13,50,000 ಜನಸಂಖ್ಯೆಯಿರುವ ಸಿಟಿಯಲ್ಲಿ ಇದೇನೂ ಮಹತ್ವದ ಸಂಖ್ಯೆಯಲ್ಲ. ಆದುದರಿಂದ ಕಳೆದ ಮಾರ್ಚಿ ತಿಂಗಳಲ್ಲಿ ಮುಂಬಯಿ ಮಂತ್ರಿಮಂಡಳದ ಪಾನ ನಿರೋಧ ಕಾರ್ಯಕ್ರಮವನ್ನು ಅಭಿನಂದಿಸಿದ ಸುಭಾಸ ಚಂದ್ರರೇ ನಾಲ್ಕು ತಿಂಗಳೊಳಗಾಗಿ ಅಂತರಂಗ ಹೊಡೆದು ಈಗ ಟೀಕಿಸುವುದರ ರಹಸ್ಯವೇನು?"

ಮಹಾರಾಷ್ಟ್ರ, ಕರ್ನಾಟಕ ಪ್ರಾಂತಗಳನ್ನು ಸಂಚರಿಸಿ ಮುಂಬಯಿಗೆ ತಿರುಗಿ ಬಂದೊಡನೆ ಶ್ರೀ ಸುಭಾಸಚಂದ್ರ ಬಾಬುಗಳು ಮಾನ್ಯ ಮುನ್ಶಿಯವರು ತನ್ನ ಮೇಲೆ ಹೊರಿಸಿದ ತಪ್ಪುಗಳ ಕುರಿತು ಪ್ರಕಟಣೆಯೊಂದನ್ನು ಕೊಟ್ಟಿರುವರು. "ಪಾನನಿರೋಧ ಚಳವಳಿಯ ಆರಾಧ್ಯ ಸೇವಕನು ನಾನು. ಆದರೆ ಅದು ನ್ಯಾಯನೀತಿಗನುಸಾರವಾಗಿ ನಡೆಯುತ್ತಿದ್ದಲ್ಲಿ ಮಾತ್ರ ನಾನು ಅದನ್ನು ವಿರೋಧಿಸುವವನು ಮತ್ತು ರಚನಾತ್ಮಕ ಕಾರ್ಯಕ್ರಮದಲ್ಲಿ ಕುಂದುಕೊರತೆಗಳು ತೋರಿದರೆ ಟೀಕಿಸತಕ್ಕವನೇ. ಆದುದರಿಂದ ನಾನು ಮದ್ಯಪಾನ ತ್ಯಾಗ ಚಳವಳಿಕ್ಕೆ ವಿರೋಧಿ ಎಂದು ಯಾರೂ ಅನ್ಯಥಾ ಭಾವಿಸಕೂಡದು. ದಾರಿದ್ರ್ಯ ನಿವಾರಣೆಯಾಗಿ ಬಹುಜನೋದ್ಧಾರವಾಗಬೇಕೆಂಬುದು ನನ್ನ ಪರಮಧ್ಯೇಯವಾಗಿರು

IS THIS NOT AN EXAMPLE OF OUR POPULARITY?

A speciman enquiry from London—

C. MITCHELL & CO. LTD., LONDON

20th June 1939.

The Proprietors,
"NAVAYUGA"
UDIPI.

Dear Sirs,

Will you please send us per return your latest rate card together with your circulation statement.

This is required to keep our records to date, and we shall be glad to receive any further information you may wish to supply us in regard to the territory covered by your paper.

Yours truly,
C. Mitchell & Co. Ltd.

ಜಪಾನಿನ ಕುಬೇರನ ವಂಶ

• ಮಿಟಸೂಯಿ ವಂಶದ ವರ್ಣನೆ •

• ಚೀಣಾ ಜಾಪಾನ್ ಯುದ್ಧದ ಕೆಲವು ರಹಸ್ಯಗಳು •

ಲೇಖಕಿ—ಶ್ರೀಮತಿ ವಿದ್ಯಾವತಿ ಬಿ. ಎ

ಜಪಾನಿನ ಸಂಪೂರ್ಣ ಶಕ್ತಿಯು ಕೇಂದ್ರವು ಸೇನೆಯು ವಿಮಾನಬಲದ, ಶಸ್ತ್ರ ಸಂಗ್ರಹದ—ಅಲ್ಲಿನ ನಾಲ್ಕು ಕುಟುಂಬಗಳಷ್ಟು ಅಧಿಕವಾಗಿಲ್ಲ ಆ ನಾಲ್ಕೂ ಕುಟುಂಬಗಳಾವುವೆಂದರೆ ಮಿಟ್‌ಸೂಯಿ, ಮಿಟ್‌ಸುಬಿಶೀ, ಸುಮಿಟೋಗೀ, ಮತ್ತು ಯಸೂದಾಸ್. ಜಪಾನಿನ ಸರ್ವ ಸಂಪತ್ತು ಮತ್ತು ಉತ್ಪಾದನ ಶಕ್ತಿಯ ಅಧಿಕಾಂಶವು ಇವರ ಅಧಿಕಾರದಲ್ಲಿದೆ ಇವರ ಪೈಕಿ ಮಿಟ್‌ಸೂಯಿ ವಂಶಜರೇ ಎಲ್ಲರಿಗಿಂತ ಹೆಚ್ಚು ಬಲವಾದರು. ಆ ದೇಶದ ವ್ಯವಸಾಯದಲ್ಲಿ ಕಾಲುಭಾಗಕ್ಕಿಂತ ಅದಿಕವಾದ ಭಾಗವು ಇವರ ಕೈಯಲ್ಲಿದೆ ಅಲ್ಲದೆ ಅನೇಕ ಬೇಂಕುಗಳು, ಗನಿಗಳು, ಕಾರ್ಖಾನೆಗಳು ಹಡಗುಗಳು ಇತ್ಯಾದಿಗಳ ಅಧಿಕಾರ ಸಹ ಇವರಿಗಿದೆ ಜಗತ್ತಿನ ಪ್ರತಿಯೊಂದು ಪ್ರಮುಖ ನಗರದಲ್ಲಿಯೂ ಇವರ ಪ್ರತಿನಿಧಿಗಳು (Agents) ಇದ್ದಾರೆ.

ವಂಶ ಪರಿಚಯ

ಈ ವಂಶವು 300 ವರ್ಷಗಳಿಂದ ವ್ಯಾಪಾರ ಮಾಡುತ್ತ ಬಂದಿದೆ ಇದಕ್ಕೆ ಮೊದಲು ಇವರು ಸೈನಿಕರಾಗಿದ್ದರು. 1673ರಲ್ಲಿ ಹಚಿರೋ ಬೋಡ್ ಮಿಟ ಸೂಯಿ ಎಂಬವನು ಟೋಕಿಯುವಲ್ಲಿ ಚಿಲ್ಲರೆ ಅಂಗಡಿಯೊಂದನ್ನು ತೆರೆದನು ಇವನ ಆದಾಯವು ವೃದ್ಧಿಯಾದಂತೆಲ್ಲ, ಅವನು ಹಣವನ್ನು ಸಾಲ ಕೊಡುವುದಕ್ಕೆ ಆರಂಭಿಸಿದನು ಈ ವಂಶದವರ ಜಪಾನಿನಲ್ಲೆಲ್ಲಾ ಪ್ರಸಿದ್ಧವಾದ 'ಟೋಕಿಯೋ ಬೇಂಕು' 'ಇಂಗ್ಲೆಂಡ್ ಬೇಂಕಿ'ಗಿಂತಲೂ 10 ವರ್ಷ ಮೊದಲೇ ಪ್ರಾರಂಭವಾಗಿತ್ತು.

ಹಚಿರೋ ಬೋಡ್ ಟೋಕಿಯೋದಲ್ಲಿ ಅಂಗಡಿಯನ್ನು ತೆರೆದಾಗ ಅವನಿಗೆ 51 ವರ್ಷವಾಗಿತ್ತು. ಅವನ ವ್ಯಾಪಾರವು ವೃದ್ಧಿಯಾದಂತೆಲ್ಲ, ಜಾಹೀರಾತು ಕೊಡುವ ರೀತಿನೀತಿಗಳೂ ಬದಲಾಯಿಸಿದುವು ಮಳೆಗಾಲದಲ್ಲಿ ತನ್ನ ವ್ಯಾಪಾರದ ಗುರ್ತಿನ ಛತ್ರಿಯನ್ನು ಇವನ್ನು ಉಚಿತವಾಗಿ ಹಂಚುತ್ತಿದ್ದನು. ಇವನು ಈ ರೀತಿ ವ್ಯವಸಾಯವನ್ನಾರಂಭಿಸಿದಾಗ, ಇಂಗ್ಲಂಡಿನಲ್ಲಿ ಅದರ ಹೆಸರನ್ನೇ ತಿಳಿದಿರಲಿಲ್ಲವಂತೆ 1860ರಲ್ಲಿ ಜಪಾನು ಜಗತ್ತಿನ ಇತರ ದೇಶಗಳೊಡನೆ ವ್ಯವಸಾಯದಲ್ಲಿ ಸಂಬಂಧ ಬೆಳೆಸಿದಾಗ ಈ ಮಿಟ್‌ಸೂಯಿ ವಂಶದವರಿಗೆ ಪಾಶ್ಚಿಮಾತ್ಯರೊಡನೆ ಸಂಪರ್ಕವುಂಟಾಯಿತು ಬ್ಯಾಂಕಿನ ಸಹಾಯದ ಅಗತ್ಯವಿದ್ದುದರಿಂದ ಸರಕಾರವೂ ಇವರಿಗೆ ನೆರವಾಗಲೇ ಬೇಕಾಯಿತು ಅಂದಿನಿಂದ ಪಶ್ಚಿಮ ದೇಶಗಳೊಡನೆ ವ್ಯಾಪಾರವು ಆರಂಭವಾದುದಲ್ಲದೆ ಅಲ್ಲಿನ ಸರಕುಗಳೂ ಜಪಾನಿನ ಅಂಗಡಿಗಳಲ್ಲಿ ಮಾರಲ್ಪಡಲಾರಂಭವಾಯವು

ಕಾರ್ಖಾನೆ ಮತ್ತು ವ್ಯವಸಾಯ

ಕೆಲವು ಕಾಲದ ನಂತರ ಇವನು 'ಕನೆಗಾಫ್ಯೂಸಿ' ಕಾಟನ್‌ಮಿಲ್ಲನ್ನು ತೆರೆದನು ಅಂದಿನಿಂದ ಜಪಾನಿನಲ್ಲಿ ಬಟ್ಟೆಯ ಪ್ರಮುಖ ವ್ಯವಸಾಯವು ಆರಂಭವಾಯಿತು ಅಲ್ಲದೆ 'ಓಜಿ ಪೇಪರ್‌ಮಿಲ್ಸ್'ನ ಸ್ಥಾಪನೆಗೆ ಸಹಾಯವನ್ನೂ ಮಾಡಿದ್ದಲ್ಲದೆ ರೇಷ್ಮೆಯ ಗಿರಣಿಯನ್ನೂ ಸ್ಥಾಪಿಸಿದನು 'ಮಾಯಿಕ್' ಎಂಬ ಕಲ್ಲಿದ್ದಲ ಗಣಿಯನ್ನು ಸರಕಾರದಿಂದ ಕೊಂಡುಕೊಂಡನು. ಇಂದು ಜಪಾನಿನ ಒಟ್ಟು ಕಲ್ಲಿದ್ದಲಿನ ವ್ಯವಸಾಯದಲ್ಲಿನೇ 30ರಷ್ಟು ಇವನ ಕೈಯಲ್ಲಿದೆ ವ್ಯವಸಾಯದ ಅಭಿವೃದ್ಧಿಗಾಗಿ. ನಿಪುಣರನ್ನು ನೇಮಿಸಿ, ಅದಕ್ಕಾಗಿ ಲಕ್ಷಾಂತರ ರೂ. ಗಳನ್ನು ಖರ್ಚುಮಾಡಿದನು ಫಾರ್ಮೋಸದ ಟೀ, ಸಕ್ಕರೆ ಮತ್ತು ಕರ್ಪೂರದ ಉನ್ನತಿಯ ಶ್ರೇಯಸ್ಸು ಸಹ ಇವರ ವಂಶಕ್ಕೇ ಸೇರಿದ. ಮಿಟಸೂಯಿ ವಂಶಜರ ಕೈಯಲ್ಲಿ ಸಮಗ್ರ ಜಪಾನಿನ ಆಯವ್ಯಯದ ಸೇ 40ರಷ್ಟಿದ್ದು ಇವರ ಉತ್ಪತ್ತಿಯು ರಾಜ್ಯದ ಉತ್ಪತ್ತಿಗಿಂತಲೂ ಅಧಿಕವಾಗಿದೆ.

ಮಾಯಿಕದ ಕಲ್ಲಿದ್ದಲಿನ ಗಣಿಗಳೂ ಮಾಯಿಕದ ಬಂದರೂ ಇವರಿಗೇ ಸೇರಿವೆ ಈ ಬಂದರಿನಲ್ಲಿ 10 ಸಾವಿರ ಜನರು ಕೆಲಸ ಮಾಡುತ್ತಿರುವರಾದರೂ, ಇದು ವರೆಗೆ ಅವರಲ್ಲಿ ಅಶಾಂತಿಯುಂಟಾಗಿರುವುದಿಲ್ಲ ಸಮಾಜವಾದದ ಪ್ರಚಾರವೇನೂ ಅಲ್ಲಿ ಇದು ವರೆಗೆ ನಡೆದಿರುವುದಿಲ್ಲವಾದರೂ, ಮಿಟ್ಸೂಯಿಯು ಅವರನ್ನು ಬಹಳ ಸುಖ ಸಂತುಷ್ಟಿಗಳಲ್ಲಿ ಇಟ್ಟಿರುವ ಕಾರಣದಿಂದಲೇ ಅವರು ಯಾವ ವಿಧವಾದ ಆಂದೋಳನವನ್ನೂ ಮಾಡದೆ ಇರುವುದು. ಯಜಮಾನನು ತನ್ನ ನೌಕರರ ಪ್ರತಿಯೊಂದು ವ್ಯವಸ್ಥೆಯನ್ನೂ ಮಾಡಲು, ಒಂದು ಕಂಪೆನಿಯನ್ನೇ ಇಟ್ಟಿರುವನು

ರಾಜಕೀಯದಲ್ಲಿ ಕೈವಾಡ

ಮಿಟ್ಸೂಯಿ ವಂಶವು ಜಪಾನಿನಲ್ಲೆಲ್ಲಾ ಅತ್ಯಂತ ಶಕ್ತಿಶಾಲಿಯಾದುದು ನಿಜವಾಗಿ ಶಾಸನ ನಡೆಸುವುದೂ ಸಹ ಇವರ ಕೈಯಲ್ಲೇ ಇದೆ ಇತರ ಮೂರು ವಂಶಗಳಿಗೂ ಇದಕ್ಕೂ ವಿವಾಹ ದಿ ಸಂಬಂಧವಿದ್ದೇ ಇದೆ ಆದರೆ ಆ ಮೂರೂ ಒಂದು ರಾಜಕೀಯ ಸಂಗದಕ್ಕೆ ಸೇರಿದ್ದರೆ, ಮಿಟ್ಸೂಯಿ ವಂಶದವರು ಒಂದು ಪಂಗಡಕ್ಕೆ ಸೇರಿರುವರು. ಇವರ ವ್ಯವಸಾಯಕ್ಕೆ ಚೀಣದ ಮೇಲೆ ಅಧಿಕಾರವಿರುವುದು ಅಗತ್ಯ ಚೀಣವು ಜಪಾನೀ ವಸ್ತುಗಳ ಮಾರ್ಕೆಟ್ ಇವನ್ನು ಗಮನದಲ್ಲಿಟ್ಟುಕೊಂಡು ಯೋಚಿಸಿದರೆ, ಚೀಣಾ ಜಪಾನ್ ಯುದ್ಧದಲ್ಲಿ ಈ ಮಿಟ್ಸೂಯಿ ವಂಶದ ಕೈವಾಡವಿದೆಯೆಂಬುದರ ಗುಟ್ಟು ತಿಳಿಯುವುದು.

ಈ ವಂಶದವರು ಮಾಡದಿರುವ ಕೆಲಸವಿಲ್ಲ, ಪ್ರವೇಶಿಸದಿರುವ ಕಾರ್ಯ-ಕ್ಷೇತ್ರಗಳಿಲ್ಲ, ಮಿಟ್ಸೂಯಿ ಬ್ಯಾಂಕ್ ಲಿ , ಲೈಫ್ ಇನ್ಶ್ಯೂರೆನ್ಸು ಕಂ ಎಕ್ಸ್‌ಚೇಂಜ್ ವಿಭಾಗ, ಸಿಮೆಂಟ್, ಗಣಿ, ಇಂಜಿನಿಯರಿಂಗ್, ಹೊಗೆ ಹಡಗುಗಳು, ಕಬ್ಬಿಣದ ಸಾಮಾನಿನ ಕಾರ್ಖಾನೆ, ರಸಾಯನ ವಸ್ತುಗಳು, ಟೀ, ಬಟ್ಟೆ, ಸಲ್ಫೇಟ್ ಇತ್ಯಾದಿ ವಸ್ತುಗಳು ಇತ್ಯಾದಿ ವಸ್ತುಗಳನ್ನು ನಿರ್ಮಿಸುವ ಕಾರ್ಖಾನೆಗಳೆಲ್ಲ ಇವರ ಕೈಯಲ್ಲಿವೆ ಇವುಗಳೆಲ್ಲ ಒಟ್ಟು 110 ಕಂಪೆನಿಗಳವು

ಜಪಾನಿನಲ್ಲಿ ಸಿಗುವ ಸಾಮಾನೆಲ್ಲ ಅಗ್ಗವಾದುದೆಂದು ಹೇಳುವುದು ಸರಿಯಲ್ಲ ಹೆಚ್ಚು ಬೆಲೆ ಕೊಡಲಾರದ ದೇಶಗಳಿಗೆ ಮಾತ್ರ ಅದು ಆ ರೀತಿ ಕಡಿಮೆ. ದರದ ಸರಕುಗಳನ್ನು ಕಳುಹಿಸುವುದು ಒಳ್ಳೆ ಬೆಲೆ ಬಾಳುವ ಸಾಮಾನು ಅಮೇರಿಕದಲ್ಲಿ ಮಾರಾಟವಾಗುತ್ತದೆ

ಬ್ಯಾರನ್ ಹಚೀರೋ ಯೆಮೋನ್

ಮಿಟ್ಸೂಯಿ ವಂಶದ ಹನ್ನೊಂದು ಶಾಖೆಗಳವೆ ಕೇವಲ ಇವರ ವಂಶದ ಜನರೇ ಅವರ ಕಾರ್ಖಾನೆಗಳಲ್ಲಿ ಶೇರುಗಳನ್ನು ತೆಗೆದುಕೊಳ್ಳಬಲ್ಲರು ಇವರದೇ ಒಂದು ಕೌಟುಂಬಿಕ ಸಭೆಯಿದೆ. ಅದರಲ್ಲಿ ಎಲ್ಲರೂ ಕುಳಿತು ಯಾವುದಾದರೂ ನಿರ್ಣಯವನ್ನು ಮಾಡುವರು. ಆದರೆ ಕೆಲ ಸದಸ್ಯರ ವ್ಯವಸ್ಥೆಯನ್ನು ಮಾತ್ರ ವಿಶೇಷಜ್ಞರು ಮಾಡುವರು ಅವರಿಗೆ ಬಹಳ ಹೆಚ್ಚಿನ ವೇತನಗಳು ಕೊಡಲ್ಪಡುವವು ಈ ವಂಶದ ಈಗಿನ ಪ್ರಧಾನನಿಗ ಹಚೀರೋ ಯೆಮೋನ್ ಮಿಟ್ಸೂಯಿ ಎಂದು ಹೆಸರು ಈಗ ಇವರಿಗೆ 42 ವರ್ಷ, ಈ ವಂಶದ 300ನೇ ಉತ್ಸವದ ನಂತರದಂತೆ ಇವನ ತಂದೆಯು ಕಾರ್ಯದಿಂದ ನಿವೃತ್ತನಾದುದು (1934ರಲ್ಲಿ) ಪ್ರಧಾನನ ಈ ಕೆಲಸಕ್ಕೆ 1 ಕೋಟಿ ಪೌಂಡು ತೆರಿಗೆಯನ್ನು ಕೊಡಬೇಕಾಯಿತು

ಇವನು ತನ್ನ ತಮ್ಮನೊಂದಿಗೆ ಅನೇಕ ವರ್ಷ ಆಕ್ಸ್‌ಫರ್ಡಿನಲ್ಲಿ ಶಿಕ್ಷಣ ಹೊಂದಿ ಲಂಡನಿನಲ್ಲಿ ವ್ಯವಸಾಯ ಶಿಕ್ಷಣವನ್ನು ಹೊಂದಿರುವನು ಇವನಿರುವುದು ಸಾಧಾರಣವಾದ ಒಂದು ಮನೆಯಲ್ಲಿ. ವಂಶದ ವ್ಯವಸಾಯದಲ್ಲಿ ಭಾಗವಹಿಸುವ ಮೊದಲು ಪ್ರತಿ ವ್ಯಕ್ತಿಯೂ ಪ್ರಮಾಣವನ್ನು ಮಾಡಬೇಕಾದುದು ಅಗತ್ಯವಂತೆ!

Degrees. Books Medicines

Free H L M S H M B H M D etc Free Homeo Ayur Unani Naturo degrees by post also—Practitioners also get some Homeo Materiamedica Rs 5 Homeo Practice book Rs 4 Insanity Cure Pills Rs 10 Enclose 2 annas stamps —

Principal Indian Homeopathic Institute and Society (Govt Regd)
P O M[illegible] (Kutta[illegible] Dt India)

THE ASIAN ASSURANCE COMPANY, LTD.

ASIAN BUILDINGS — — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,45,40,801	9 24 965	24,50,254
1935	2,52,08,418	18 39,296	42 98 820
1938	3,61,56,764	22 34,301	67 66,528

ದಿ ಏಶಿಯನ್ ಏಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
" M Shivarama Rao, Organizer, Puttur

Sri J. A PUTRAN Branch Manager, Mangalore

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ವೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್

ಕೋಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಶೆಟ್ಟಿ, ಗೋಲ್ಡ್ ಮೆಡಲ್ಡ್ ಫಿಸಿಯನ್ಸ್.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ರಾಜಧಾನಿಯಲ್ಲಿ ಮುಂಬೈ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರ್

ಜುಲೈ ೧೭.

ಮುಂಬೈ ಕಾಂಗ್ರೆಸ್ ಮಂತ್ರಿಮಂಡಲದ ಮುಖ್ಯ ಮಂತ್ರಿಗಳಾದ ಮಾನ್ಯ ಖೇರರವರು ತಮ್ಮ ಪತ್ನಿ ಸಮೇತರಾಗಿ ಮೈಸೂರಿಗೆ ಬಂದು ಗವರ್ನಮೆಂಟ್ ಬಂಗಲೆಯಲ್ಲಿ ತಂಗಿದ್ದರು. ಶ್ರೀಯುತರು ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು, ಅನೇಕ ಸಂಸ್ಥೆಗಳನ್ನು, ಮಹಾರಾಜರವರ ಜೋಗದಲ್ಲಿಗೂ ಭೇಟಿಕೊಟ್ಟು ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ಪ್ರಶಂಸಿಸಿದರು.

ಮೈಸೂರು ಕಾಂಗ್ರೆಸ್ ಮುಖಂಡರು ಶ್ರೀಯುತರನ್ನು ಭೇಟಿಯಾದಾಗ ಮುಂಬೈ ಮಂತ್ರಿಯವರು ಇಲ್ಲಿಯ ಪರಿಸ್ಥಿತಿಯ ವಿಷಯದಲ್ಲಿ ಏನನ್ನೂ ಅಭಿಪ್ರಾಯ ಪಡಲಿಲ್ಲವೆಂದೂ, ಮೈಸೂರು ಕಾಂಗ್ರೆಸ್ ವಿಷಯವಾಗಿ ಏನೂ ಗೊತ್ತಿಲ್ಲವಾಗಿ ಯಾವುದನ್ನೂ ತಿಳಿಸಲಿಲ್ಲವೆಂದು ಹೇಳಲಾಗಿದೆ.

ಬೆಂಗಳೂರು ಮಹಾರಾಷ್ಟ್ರ ಮಂಡಳಿಯವರು ಶ್ರೀ ಖೇರ್ ಮತ್ತು ಅವರ ಧರ್ಮಪತ್ನಿಯವರಿಗೆ ಸನ್ಮಾನಿಸಿದರು. ಇವರು ಸಂಪೂರ್ಣ ಆರೋಗ್ಯ ಹೊಂದಿದ ಮೇಲೆ ಪೂನಾಕ್ಕೆ ಪ್ರಯಾಣ ಬೆಳೆಸಿದರು

ಶ್ರೀಮದ್ಯುವರಾಜರ ಪ್ರವಾಸ—ಶ್ರೀ ಯುವರಾಜರು ತಮ್ಮ ಕುಟುಂಬ ಮತ್ತು ಅಧಿಕಾರಿಗಳೊಡನೆಯೂ ಇತರ ಕೆಲ್ಲ ಪರಿವಾರದೊಡನೆ, ಕಳೆದ ವಾರ ಮುಂಬೈನಿಂದ ಹೊರಟ 'ಕಾಂತೆ ಬ್ಲಾನ್ ಕವಾನಾ' ಹಡಗಿನಲ್ಲಿ ಇಂಗ್ಲಾಂಡಿಗೆ ಪ್ರಯಾಣ ಬೆಳೆಸಿದರು. ಇವರು ಯುರೋಪ್, ಅಮೇರಿಕ ಮತ್ತು ಜಪಾನ್ ದೇಶಗಳಿಗೆ ಹೋಗಿ ಅಲ್ಲಿಂದ ವಾಪಸ್ ಬರುವರೆಂದು ಗೊತ್ತಾಗಿದೆ

ಬೆಂಗಳೂರು ಮಂಡಪ—ಬೆಂಗಳೂರು ಮಂಡಪವನ್ನು ಮೈಸೂರಿಗೆ ಕೊಡುವ ವಿಚಾರವಾಗಿ ಸ್ಟೇಟ್ ಸೆಕ್ರೆಟರಿಯವರು ಶೀಘ್ರದಲ್ಲೇ ಒಂದು ಪ್ರಕಟಣೆ ಹೊರಡಿಸುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಸಂಧಾನ ಪ್ರಯತ್ನ
ದಿವಾನರು ಭೇಟಿಗೆ ಅವಕಾಶವೀಯು

ದಿಲ್ಲಿ—ಎ ಐ ಸಿ. ಸಿ ಯಲ್ಲಿ ಅಂಗೀಕರಿಸಿದ ನಿರ್ಣಯದ ಪ್ರಕಾರ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಹೆಚ್. ಸಿ. ದಾಸಪ್ಪನವರು ಮೈಸೂರು ದಿವಾನರಿಗೊಂದು ಪತ್ರಬರೆದು ಕಾಂಗ್ರೆಸಿನೊಂದಿಗೆ ಸಂಧಾನ ಪ್ರಯತ್ನಕ್ಕೆ ಪ್ರಯತ್ನಪಟ್ಟರು. ಇದಕ್ಕೆ ದಿವಾನರು ಅಗುವುದಿಲ್ಲವೆಂದು ಉತ್ತರವೀಯಲು ಕಾಂಗ್ರೆಸ್ ಅಧ್ಯಕ್ಷರು ಮತ್ತೊಂದು ಪತ್ರವನ್ನು ದಿವಾನರಿಗೆ ಬರೆಯಲು, ಇದಕ್ಕೂ ಉತ್ತರಕೊಡುವ ಅವಶ್ಯವಿಲ್ಲವೆಂದು ಮತ್ತೆ ದಿವಾನರು ತಿಳಿಸಿದರು. ಈ ವಿಷಯವನ್ನು ಮಹಾತ್ಮಾ ಗಾಂಧಿಯವರಿಗೆ ತಂತಿಮೂಲಕ ತಿಳಿಸಲಾಗಿದೆಯಲ್ಲದೆ, ಶೀಘ್ರದಲ್ಲೇ ಕಾಂಗ್ರೆಸಿನವರು ಸಭೆಸೇರಿ ಯಾವುದನ್ನು ಆಲೋಚಿಸುವರೆಂದು ಹೇಳಲಾಗಿದೆ.

ಹಿಂದೀ ಘಟಿಕೋತ್ಸವ—ಹಿಂದೀಯ ಪ್ರಚಾರಕರುಗಳಾದ ಶ್ರೀ. ಆಚಾರ್ಯ ಕಾಕಾ ಕಾಲೇಲ್ಕರ್, ಶ್ರೀ. ಆರ್. ಆರ್. ದಿವಾಕರ ಮತ್ತು ಶ್ರೀಮತಿ ನಾನಾವಟ್ಟಿಯವರು ಇಲ್ಲಿಗೆ ಆಗಮಿಸಿದರು. ಟೌನ್ ಹಾಲಿನಲ್ಲಿ, ಹಿಂದೀ ಘಟಿಕೋತ್ಸವವು, ಶ್ರೀ ದಿವಾಕರರ ಅಧ್ಯಕ್ಷತೆಯಲ್ಲಿ ಜರಗಿ, ಪ್ರಮಾಣ ಪತ್ರ ವಿನಿಯೋಗ ನಡೆಯಿತು. ಇವರುಗಳನು ಅನೇಕ ಸಂಸ್ಥೆ ಮತ್ತು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಟ್ಟರು. ಸ್ಥಳೀಯ ಹಿಂದೀ ಸಂಸ್ಥೆಯವರು ಇವರಿಗೆ ಸ್ವಾಗತವಿತ್ತರು. ಶ್ರೀ. ಕಾಲೇಲ್ಕರ್‌ರವರು ಮೈಸೂರು ವಿಶ್ವವಿದ್ಯಾನಿಲಯದ ಸಂಘದಾಶ್ರಯದ ಮತ್ತು ಆಕಾಶವಾಣಿ ರೇಡಿಯೋದಲ್ಲಿ ಹಿಂದೀ ಪ್ರಚಾರಕ್ಕಾಗಿ ಉಪನ್ಯಾಸವಿತ್ತರು. ಇವರುಗಳು ಹಾಸನದ ಮೂಲಕ ಶಿವಮೊಗ್ಗ, ದಾವಣಗೆರೆ ಮುಖಾಂತರ ಪ್ರಯಾಣ ಬೆಳೆಸಿದರು.

ಅಸೆಂಬ್ಲಿ ಅಧಿವೇಶನ—ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಅಕ್ಟೋಬರ 16ರಲ್ಲಿ ಪ್ರಾರಂಭವಾಗುತ್ತೆ.

ಶ್ರೀಸುಭಾಸ್ ಭೋಸ್—ಶ್ರೀ ಸುಭಾಷಚಂದ್ರ ಬೋಸರವರು ಮುಂದಿನ ತಿಂಗಳು ಮದ್ರಾಸಿಗೆ ಬಂದಾಗ ಮೈಸೂರಿಗೆ ಬರುವರೆಂದುಗೊತ್ತಾಗಿದೆ

ನೋಟೀಸು

ಯೇಣಗುಡ್ಡೆ
ಪಂಚಾಯತ ಕೋರ್ಟಿನಲ್ಲಿ

ಶಿ ವ್ಯಾ. ನಂಬ್ರ ³⁄₃₉

ಕೆ. ರಾಘವೇಂದ್ರ ಬಾಳಿಗ, ವಾಮನ ಬಾಳಿಗರ ಮಗ, ಉಡ್ಪಿ ಕಸಬಾ . . ... —ವಾದಿ

ಮತ್ತು

ಲಕ್ಷ್ಮಣ ಶೆಣೈ, ಮೂಲ್ಕಿ ದಾಮೋದರ ಶ್ಯಾನುಭಾಗರ ಮಗ, ಉಡುಪಿ ತಾಲೂಕು, ಕಟಪಾಡಿ ಪೇಟೆ ... ... —ಪ್ರತಿವಾದಿ

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿ, ಲಕ್ಷ್ಮಣ ಶೆಣೈರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸದ್ರಿ ವ್ಯಾಜ್ಯವನ್ನು ತಾ. 29-7-39ಕ್ಕೆ ತನ್ನಿಗೆ ಇಟ್ಟಿದೆ. ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ನೀವು ಹಾಜರಾಗಿ ಒಂದು ಬರಹ ಮೂಲಕ ಉಹಾಪರಣೆಯನ್ನು ದಾಖಲುಮಾಡತಕ್ಕದ್ದು. ಇದಕ್ಕೆ ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೆ. ಗಣಪಯ್ಯ ಶೆಟ್ಟಿ,
ಯೇಣಗುಡ್ಡೆ ಪಂಚಾಯ್ತ ಕೋರ್ಟಿನ
ಪ್ರೆಸಿಡೆಂಟ್

ಮೊಕ್ಕಾಂ. ಯೇಣಗುಡ್ಡೆ, ತಾ. 8-7-39.

ನೋಟೀಸು

ಯೇಣಗುಡ್ಡೆ
ಪಂಚಾಯತ ಕೋರ್ಟಿನಲ್ಲಿ

ಶಿ. ವ್ಯಾ ನಂಬ್ರ ³⁄₃₉

ಪಾಂಗಾಳ ಚರ್ನಪ್ಪ ನಾಯಕ್, ಅಣ್ಣಪ್ಪ ನಾಯಕರ ಮಗ, ಯೇಣಗುಡ್ಡೆ ಗ್ರಾಮ ... ವಾದಿ

ಮತ್ತು

1. M. ಲಕ್ಷ್ಮಣ ಶೆಣೈ, ದಾಮೋದರ ಶೆಣೈರ ಮಗ
2. ಜೋಸೆಫ್ ಡಿ'ಸಿಲ್ವ, ಮತ್ತಾಯಸ ಡಿ'ಸಿಲ್ವರ ಮಗ
ಯೇಣಗುಡ್ಡೆ ಗ್ರಾಮ ... ಪ್ರತಿವಾದಿರು

ಇವರೊಳಗೆ

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ M. ಲಕ್ಷ್ಮಣ ಶೆಣೈರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಸದ್ರಿ ವ್ಯಾಜ್ಯವನ್ನು ತಾ. 29-7-39ನೇ ಪೂರ್ವಾಹ್ನ ಗಂಟೆ 11ಕ್ಕೆ ತನ್ನಿಗೆ ಇಟ್ಟಿದೆ ನೀವು ಹಾಜರಾಗಿ ನಿಮ್ಮ ಬರಹ ಮೂಲಕ ಉದಾಹರಣೆಯನ್ನು ದಾಖಲುಮಾಡತಕ್ಕದ್ದು. ಇದಕ್ಕೆ ತಪ್ಪಿದ್ರೆ ನಿಮ್ಮ ಗೈರಹಾಜ್ರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೆ. ಗಣಪಯ್ಯ ಶೆಟ್ಟಿ,
ಪ್ರೆಸಿಡೆಂಟ್.

ಮೊಕ್ಕಾಂ. ಯೇಣಗುಡ್ಡೆ, ತಾ. 8-7-39.

LEVER WRIST WATCHES FOR RUPEES 2-4-0 ONLY.

The watches are guaranteed for 5 solid years. Accurate Time keeper. Round or square Rs. 2/8 Best Rs 3-4-0, extra best Rs 3-12-0, Golden cases Rs. 4-4-0, Rec. 6-8-0, Rectangular Rs. 7-4-0, Best Rs 11-0-0, Guaranteed for 10 years. Postage annas 8 extra. If purchased three at a time postage free

Ceylon orders must accompany full advance ORIENTAL FANCY STORES. Post Box No. 12204, Calcutta(S.C L.184)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೋನೋಕಿಲರ್" (ರಜಿಸ್ಟರ್ಡ್)

ಪ್ರಮೇಹ ...

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗದೆ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ ¹⁰⁵⁄₁₉₃₉

ವಾದಿ:— ಪರ್ಲಡ್ಕ ಪಕ್ಕ್ರು ಬ್ಯಾರಿ

ಪ್ರತಿವಾದಿಯು:—ಮಹಮ್ಮದ ಮುಕ್ರಿ ಬ್ಯಾರಿ ಕೂಡಾ

ಪುತ್ತೂರು ತಾಲೂಕು ಆರ್ಯಾಪು ಗ್ರಾಮದಲ್ಲಿರುವ ಇಬ್ರಾಯಿನ್ ಬ್ಯಾರಿಗಳ ಮಗ ಅಬ್ಬು ಬ್ಯಾರಿಗಳಿಗೆ ಈ ಮೂಲಕ ತಿಳಿಸುವದೇನೆಂದ್ರೆ—

ಮೇಲ್ಕಂಡ ವಾದಿಗೆ ಸದ್ರಿ ಆರ್ಯಾಪು ಗ್ರಾಮದ ಪಟ್ಟಾನಂಬ್ರ 61ಕ್ಕೆ ಒಳಪ್ಪಿದ ಸರ್ವೆನಂಬ್ರ 280, 347/2ನೇ ಸ್ಥಳಗಳನ್ನು ಅವುಗಳಲ್ಲಿರುವ ಕಿನಾರಿ ದಾಗ್ಯಾತು ಕಟ್ಟೋಣಗಳ ಸಮೇತ ಬಿಡಿಸಿಕೊಡಬೇಕಾಗಿಯೂ, ಮಿಗತೆ ಕೊಡಿಸಬೇಕಾಗಿಯೂ ನಿಮ್ಮ ಮೇಲೆ ಕೂಡ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 3-8-1939ಕ್ಕೆ ಇಟ್ಟಿದೆ. ಆ ದಿವಸ ಹಗಲು 10 ಗಂಟೆಗೆ ನೀವು ಖುದ್ದಾಗಲೀ, ವಕೀಲರ ಮುಖಾಂತ್ರವಾಗಲೀ ಹಾಜರಾಗದಿದ್ರೆ, ನಿಮ್ಮನ್ನ ಕಿವ್ವಾಮಾಡಿ ವ್ಯಾಜ್ಯವು ಮುಂದರಿಸಲಾದೀತು.

ಪುತ್ತೂರು 15-7-1939 | **Savoor Anand Rao**, *Vakil for Plaintiff*

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance.
ANARA AUTOMOBILES - - - - - MANGALORE.

HALT???



HAVE YOU RECEIVED ???.
Our new illustrated copy containing latest varieties of modern Swiss made Guaranteed Lever Watches?

ರೂ. 3ರಿಂದ ರೂ. 60ರ ತನಕ ಬೆಲೆಯುಳ್ಳವು

ನಂ. **517** ಕ್ರೋಮಿಯಂ ಕೇಸ್ ರೂ. **6-8-0.**
,, **518** ಬಂಗಾರದ ಕೇಸ್, ರೂ. **8-0-0.**
,, **518A.** ರೋಲ್ಡ್ ಗೋಲ್ಡ್ **10**ವರ್ಷಗಳದ್ದು ರೂ. **12-8-0.**

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚು **0-9-0** ಪ್ರತ್ಯೇಕ. ಹೆಚ್ಚು ವಿವರಗಳಿಗಾಗಿ ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ. ವಿ. ಸೂ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ.

BAPALAL & Co., (N. U.)
101, ABDUL RAHIMAN ST. BOMBAY, 3.

Some Sing in Delight! Others Wail in Woe!!

This is ZAMANA!!

Mysterious are its ways! Unfathomable is its depth!

But, you will be surprised at the tree to life portrayal of it

in Krishna Movietone's prize production.

'ZAMANA'

FEATURING

Colour Queen **Padma Devi,** Versatili Actor **Nazir,** Miss Gulab, Hansa Wadkar, Master Vasant & others.

If a singing lark of the village, an ideal wife too, marries a young man, whose eloquence had imbibed in the youth the high ideals of Emancipation of Womanhood, **is not their married life an Unparalalled bliss?**

Mark, their Marriage, moreover is a **love *Marriage*!**

They should have been happy, — but they were not!

Was slavery to the dictates of conservative parents responsible for this?

JUST VERIFY AT

SRI RAMAKRISHNA THEATRE, UDIPI.

from 19-7-1939

ಸಂತೋಷದಲ್ಲಿ ಹಾಡುವವರು ಕೆಲವರು! ದುಃಖದಲ್ಲಿ ಗೋಳಾಡುವವರು ಹಲವರು!

ಇದೇ—ಝುಮಾನಾ ಅಥವಾ ಪ್ರಪಂಚ!

ಇದರ ರೀತಿನೀತಿ ನಿಗೂಢವಾದುದು! ಇದರ ಆಳವು ಅಗಾಧವಾದುದು!!

ಆದರೆ,

ಕೃಷ್ಣಾ ಮೂವಿಟೋನಿನವರ, ವರ್ಣರಾಣಿ ಪದ್ಮಾದೇವಿ, ನಾಜರ್, ಮಿಸ್. ಗುಲಾಬ್, ಹನ್ಸಾ ವಾಡ್ಕರ್, ಮಾಸ್ಟರ್ ವಸಂತ್ ಮೊದಲಾದವರು ನಟಿಸಿರುವ

ಝುಮಾನಾ

ದಲ್ಲಿ ಇದರ ಅಂತರಂಗವು ಒಡೆದು ಕಾಣುತ್ತಿದೆ!

ಇದರ ತತ್ಪ್ರತಿ ಬಿಡಿಸಿ ತೋರುತ್ತಿದೆ!

ಹಳ್ಳಿಯ ಹುಡುಗಿಯಾದರೂ ಯೋಗ್ಯ ಗೃಹಿಣಿಯೊಬ್ಬಳನ್ನು ಸ್ತ್ರೀಸಮಾಜೋದ್ಧಾರಕ್ಕೆ ಬದ್ಧಕಂಕಣನಾದ ಯುವಕನೋರ್ವನು ಪ್ರೇಮವಿವಾಹವಾಗುವಲ್ಲಿ; ಆ ದಂಪತಿಗಳ ಸಾಂಸಾರಿಕ ಜೀವನವು ಸ್ವರ್ಗಾನಂದವನ್ನು ಕೊಡಬೇಕಲ್ಲವೆ?

ಕೊಡಬೇಕಿತ್ತು—ಆದರೆ, ಹಾಗೆ ಕೊಡಲಿಲ್ಲ! ಕಾರಣವೇನು?

* * ಮಾತಾಪಿತೃಗಳ ಮೂಢತ್ವವೇ? * *

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾರೀಕು **19—7—1939**ರಿಂದ — ನಿಜಾಂಶ ನೋಡಿ ತಿಳಿಯಿರಿ!

'ZAMANA'

SYNOPSIS

Professor Govind is a staunch supporter of Emancipation of womanhood, and his cousin Hansa is his admirer. His father Parumal is orthodox enough to phoo-phoo at his ideas. He comes to a village to spend his vacation. Here he meets Sushila, a singing lark and ideal village girl, and their love for each other becomes too deep rooted for wordly obstacles. Mohan and Gulab, Sushila's brothers, know that the Matching is not alright so far as the question of their rank is considered. Govind and Sushila, in the ardour of their love, are infatuated, and they marry, though Mohan has to sell his properties to meet the demand of dowry by the greedy parents of Govind.

Govind & Sushila come to town, and Hansa fondly hopes that their marriage life would all be a bliss. But the orthodox parents-in-low, taunt Sushila day and night and make her life an everlasting misery. She bravesit out, and complains to none. Govind tries to assert his rights to no avail. His parents are too strong for him. Sushila is temporarily separated. Govind instead, of fighting like a man, takes refuse in drink and gambles. The last hope of Sushila is shattered. Her brothers are penniless Mohan is confined tobed. Heroically Hansa rushes to the gambling den to give a bit of her mind to Govind. What happens next?

∗ ಕಥಾಸಾರಾಂಶ ∗

ಪ್ರೊಫೆಸರ್ ಗೋವಿಂದನು ಸ್ತ್ರೀಸಮಾಜೋದ್ಧಾರಕ್ಕೆ ಬದ್ಧ ಕಂಕಣನು. ಅವನ ಸೊಸೆ ಹಂಸಳು ಅವನ ಆರಾಧಕಳು. ಗೋವಿಂದನ ತಂದೆ ಪಾರುಮಲನು ಮಗನ ಹುಚ್ಚು ತತ್ವಕ್ಕೆ ಅಪಹಾಸ್ಯಮಾಡುತ್ತಿದ್ದನು. ರಜೆಯ ಸಮಯ ಹಳ್ಳಿಗೆ ಬಂದಾಗ ಸುಶೀಲೆಎಂಬ ತರುಣಿಯಲ್ಲಿ ಮೋಹಗೊಳ್ಳುವನು. ಸುಶೀಲಳ ಅಣ್ಣ ಮೋಹನನು ಪ್ರಾರಂಭದಲ್ಲಿ ಇವಕ್ಕೆ ಒಪ್ಪಲಿಲ್ಲ. ಲಕ್ಷಾಧೀಶನ ಮಗನೊಬ್ಬನು ಬಡ ಸುಶೀಲೆಯನ್ನು ವರಿಸುವುದೆಂದರೆ, ಅವರ ಸಾಂಸಾರಿಕ ಜೀವನವು ಸರಿಯಾಗದು ಎಂದೇ ಅವನ ಹೆದರಿಕೆ. ಆದರೆ ಸುಶೀಲೆ ಮತ್ತು ಗೋವಿಂದನ ಪ್ರೀತಿಯು ಅಂತಹುದು. ಅವರು ಮದುವೆಯಾಗುವರು. ಗೋವಿಂದನ ತಂದೆಯು 'ವರದಕ್ಷಿಣೆ' ದಾಹವನ್ನು ಅಡಗಿಸಲು, ಮೋಹನನಿಗೆ ತನ್ನ ಮನೆಮಾರನ್ನು ಮಾರಿಕೊಳ್ಳಬೇಕಾಯಿತು.

ಗೋವಿಂದನೂ ಸುಶೀಲೆಯೂ ಪಟ್ಟಣಕ್ಕೆ ಬರುವರು. ಅವರ ದಾಂಪತ್ಯವು ಸುಗಮವಾಗಿ ಸಾಗಬಹುದೆಂದು ಹಂಸಳು ನಿರೀಕ್ಷಿಸುವಳು. ಆದರೆ. ಅತ್ತೆ ಮಾವಂದಿರ ಕಾಟ—ಇದು ಸುಶೀಲೆಗೂ ತಪ್ಪಿರಲಿಲ್ಲ. ಅವಳದನ್ನು ಸಹಿಸಿದಳು. ಯಾರಲ್ಲಿಯೂ ದೂರಲಿಲ್ಲ. ಗೋವಿಂದನು ತಂದೆ ತಾಯಿಗಳ ಮೂರ್ಖತ್ವವನ್ನು ಖಂಡಿಸುವನು. ಪ್ರಯೋಜನವೇನು?

ಅಂತೂ, ಸುಶೀಲೆಯು ಸ್ವಲ್ಪ ಸಮಯ ಬೇರ್ಪಟ್ಟಿರಬೇಕೆಂದು ನಿಶ್ಚಯವಾಗಲು, ಗೋವಿಂದನು ವೀರನಂತೆ ಹೋರಾಡುವುದನ್ನು ಬಿಟ್ಟು, ತನ್ನ ದುಃಖವನ್ನು ಅಡಗಿಸಿಕೊಳ್ಳಲು ಸುರೆಯ ದಾಸನಾಗಿ ಜುಗಾರಿಯಾಡುವನು. ಸುಶೀಲೆಗಿದ್ದ ಒಂದೇ ಒಂದು ಆಶೆಯೂ ಚೂರಾಯಿತು. ಅವಳ ಅಣ್ಣನೂ ಕಾಸಿಲ್ಲದವ. ಮೇಲಾಗಿ ಹಾಸಿಗೆ ಹಿಡಿದಿದ್ದನು ಜ್ವರದಿಂದ. ಹಂಸಳು ಗೋವಿಂದನಲ್ಲಿಗೆ ಧಾವಿಸುವಳು. ಅವನನ್ನು ಸರಿದಾರಿಗೆ ತರಲು—ಮುಂದೇನು?

NEXT:-

LONE DEFENDER

ಬರುವ ಚಿತ್ರ:-

ಲೋನ್ ಡಿಫೆಂಡರ್

Every visit is a new delight at

Sri Ramakrishna Theatre.

Comming: **Bhaktha Kuchela** to Sri Krishna abode, Udipi, **Wadia's Pahadi Kanya,** *featuring fearless Nadia:* **Becky Sharp, Mastana Mashuk, Jailor.**

ಮುಂದಿನ ಚಿತ್ರ: 'ಭಕ್ತಕುಚೇಲನು' ಶ್ರೀಕೃಷ್ಣನ ನಿವಾಸ (ಉಡುಪಿ) ಕ್ಕೆ! ವಾಡಿಯಾ ಮೂವಿಟೋನಿನವರ 'ಪಹಡಿ ಕನ್ಯಾ' ಬೆಕ್ಕಿಶಾರ್ಪ್, ಮಸ್ತಾನಾ ಮಶೂಕ್, ಜೈಲರ್ ಇತ್ಯಾದಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ. 20-7-39ರಿಂದ ತಾ. 27-7-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ.

ಸಂ. ನ.]

ಮೇಷರಾಶಿ—

ಈಗಲೀಗ ನಿಮ್ಮ ಪರಿಸ್ಥಿತಿಯು ಪೂರ್ತಿ ಕೆಡಲಾರಂಭಿಸಿದೆ. ಮನೆಯವರೆಲ್ಲರೂ ನಿಮ್ಮ ಭಾಗಕ್ಕೆ ವಿರೋಧಿಗಳಂತಿರುವರು. ಆಪ್ತಮಿತ್ರರ ಭೇಟಿಯೂ ಕೂಡ ದುರ್ಲಭವಾಗುವುದು. ಕೆಲವೊಂದು ವೇಳೆ ಶತ್ರು ಜನರ ಮರೆಹೊಕ್ಕು ದಿನಗಳೆಯಬೇಕಾದ ಪ್ರಸಂಗವೂ ಕೂಡ ಒದಗಬಹುದು. ನಿತ್ಯ ದುಃಖಕಾರಿಯಾದ ಸಂಸಾರದಲ್ಲಿ ವಿರಕ್ತಿಯು ಹೆಚ್ಚುವುದು. ಆರೋಗ್ಯವೂ ಕೂಡ ಕೆಡುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣಿಸಲು ಸಾಧ್ಯವಾಗುವಂತಿಲ್ಲ. ಆರ್ಥಿಕವ್ಯವಸ್ಥೆಯಿಂದಂತೂ ಈ ವಾರವು ನಿಮಗೆ ತೀರ ಪ್ರತಿಕೂಲವಾಗಿರುವುದು. ಅಭಿಲಷಿತ ಪದಾರ್ಥಗಳು ಸಮಯಕ್ಕೆ ದೊರೆಯಲಾರವು. ಪ್ರವಾಸಮಾಡುವುದರಿಂದ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವವು. ವಿದ್ಯಾಭಿಲಾಷಿಗಳಿಗೆ ವಿಶೇಷ ಹಾನಿಕರವಾದುದೀ ವಾರವು. ತಾ. 21ರಿಂದ 24ರ ವರೆಗೆ ಇಷ್ಟವು ಸಿದ್ಧಿಸಲೊಲ್ಲದಾದರೂ ಅನಿಷ್ಟಗಳು ಕಡಿಮೆಯಾಗಲಿವೆ.

ವೃಷಭರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಉತ್ತಮವಾಗಿದ್ದರೂ ಕುಜ ಶನಿ ರಾಹುಗಳು ಪ್ರತಿಕೂಲರಾಗಿರುವರು. ಇವರೆಲ್ಲರೂ ಪಾಪಿಗ್ರಹರಾದುದರಿಂದ ಉಪಕಾರವನ್ನು ಮಾಡಲು ಹಿಂಜರಿದರೂ ಅಪಕಾರವನ್ನು ತಂದೊಡ್ಡಲು ನಾಮುಂದೆ ತಾಮುಂದೆ ಎಂದು ಹಾತೊರೆಯುವ ಸ್ವಭಾವದವರು. ಅದರಲ್ಲೂ ಭಾಗ್ಯಪತಿಯು ವ್ಯಯದಲ್ಲೂ ವ್ಯಯಾಧಿಪತಿಯು ಭಾಗ್ಯದಲ್ಲೂ ಪರಸ್ಪರ ಸ್ಥಾನ ವಿನಿಮಯ ಹೊಂದಿ ನೀಚೋಚ್ಚರಾಗಿ ಕೇಂದ್ರದಲ್ಲಿರುವುದರಿಂದ ಧನಾಗಮ ನಿರ್ಗಮ ವಿಚಾರದಲ್ಲಿ ಅನರ್ಥ ಶತಗಳು ಉಂಟಾಗಲಿವೆ. ಆದರೂ ಲಾಭಾಧಿಪತಿಯಾದ ಬೃಹಸ್ಪತ್ಯಾಚಾರ್ಯರು ಸ್ವಕ್ಷೇತ್ರಗತರಾಗಿರುವುದರಿಂದ ಕೈಯಲ್ಲಿ ಯಾವಾಗಲೂ ಹಣ ಕಾಸಿಗೆ ತೊಂದರೆ ಬಾರದು. ಸಾಹಸಕಾರ್ಯಗಳಲ್ಲಿ ನಿಮಗೆ ಸದಾ ವಿಜಯ ದೊರೆಯುವುದು. ಅರ್ಧಾಂಗಿಯ ಆರೋಗ್ಯವು ಕೆಡಲಿರುವುದರಿಂದ ಸ್ವಲ್ಪಮಟ್ಟಿಗೆ ಚಿಂತೆಯೂ ಧನವ್ಯಯವೂ ಅಧಿಕವಾಗಲಿದೆ. ವಿದ್ಯೋಪಜೀವಿಗಳಿಗೆ ಈ ವಾರವು ಹೆಚ್ಚಿನಂಶ ಉತ್ತಮವಾಗಿರುವುದು. ತಾ. 23ರಿಂದ ವಾರಾಂತ್ಯದ ವರೆಗೂ ನಿಮ್ಮ ಇಷ್ಟಾರ್ಥಗಳು ಅನಾಯಾಸದಿಂದ ಕೈಗೂಡುವವು.

ಮಿಥುನರಾಶಿ—

ಕೈ ಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಸ್ವಕಾರ್ಯ ಸಾಧನೆಗಾಗಿ ಹೆಚ್ಚಿನ ಶ್ರಮವಹಿಸಬೇಕಾಗುವುದು. ಯಾವ ಕಾರ್ಯವೂ ಅನಾಯಾಸದಿಂದ ಸಾಧ್ಯವಾಗಲೊಲ್ಲದು. ಪ್ರಕೃತದಲ್ಲಿ ನಿಮಗೆ ವಿಶ್ವಾಸಾರ್ಹರಾದ ಜನರೇ ಇಲ್ಲವೆಂದು ಹೇಳಬಹುದು. ಆದಕಾರಣ ಪ್ರತಿಯೊಂದು ಕಾರ್ಯವನ್ನೂ ಅದ್ವಿತೀಯರಾಗಿಯೇ ಮುಂದುವರಿಸಬೇಕಾಗುವುದು. ಶರೀರಾಲಸ್ಯದಿಂದ ನಿಶ್ಶಕ್ತಿಯು ಅಧಿಕವಾಗುವುದರಿಂದ ಕೋಪವು ಸ್ವಲ್ಪ ಅಧಿಕವಾಗಿ ಮಾತುಮಾತಿಗೆ ಕಲಹವಾದೀತು. ಆಯುವ್ಯಯಗಳು ಸಮತೂಕದಲ್ಲಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಲಾರಿರಿ. ಗೃಹಸುಖವು ಅವ್ಯಾಹತವಾಗಿ ದೊರೆಯುವುದು. ನೌಕರಿಗಳಿಗೆ ಸ್ವಕಾರ್ಯದಲ್ಲಿ ಔದಾಸೀನ್ಯವು ಹೆಚ್ಚಾಗುವುದು. ತಾ 21ರಿಂದ 24ರ ವರೆಗೂ ಕಾರ್ಯವಿಘ್ನ, ರೋಗಭಯ ಇತ್ಯಾದ್ಯನಿಷ್ಟಗಳು ಅಧಿಕವಾಗಲಿವೆ.

ಕರ್ಕಾಟಕರಾಶಿ—

ನಿಸರ್ಗತಃ ಶುಭರಾಗಿದ್ದವರು ಸುಸ್ಥಾನಗತರಾಗಿಯೂ ಅಶುಭರಾಗಿದ್ದವರು ದುಃಸ್ಥಾನಗತರಾಗಿಯೂ ಇರುವುದರಿಂದ ಇಷ್ಟಾನಿಷ್ಟ ಫಲಗಳು ಸರಿಸಮಾನವಾಗಿ ಪ್ರಾಪ್ತವಾಗಲಿವೆ. ಕಡಿವಾಣ ತಪ್ಪಿದ ಕುದುರೆಯಂತೆ ಮನಸ್ಸು ದುರ್ಮಾರ್ಗದಲ್ಲಿ ಮುಂದರಿಯಲು ಹಾತೊರೆಯುತ್ತಿರುವುದಾದರೂ ಬುದ್ಧಿಬಲದಿಂದ ಅದನ್ನು ಹತೋಟಿಯಲ್ಲಿಡಲು ಶಕ್ತರಿರುವಿರಿ. ಇಲ್ಲಸಲ್ಲದ ಕಲಹಗಳು ಗಂಟುಬಿದ್ದು ತನ್ನಿಮಿತ್ತ ಧನವ್ಯಯವಾಗಲಿದೆ. ವಿದ್ಯಾ ವಿಷಯಕವಾದ ಬುದ್ಧಿಯು ಸಮೀಚೀನವಾಗಿದ್ದರೂ ಇತರ ತೊಡಕು ತೊಂದರೆಗಳಿಂದ ಅಧ್ಯಯನ ಭಾಗಕ್ಕೆ ಪ್ರತಿಬಂಧಕವುಂಟಾಗುವುದು. ಉದ್ಯೋಗಿಗಳಿಗೂ, ವ್ಯಾಪಾರಿಗಳಿಗೂ ಇತರ ನೈಧಿಕವೃಂದದವರಿಗೂ ಖರ್ಚಿಗೆ ಸಾಕಷ್ಟು ಉತ್ಪತ್ತಿಯಾಗುವುದು. ಪತ್ನಿಯೊಡನೆ ನಿತ್ಯ ಕಲಹವಾಗಲಿದೆ. ಉದರ ರೋಗವು ಆಗಾಗ ತಲೆದೋರೀತು. ತಾ. 21, 22 ಈ ದಿನಗಳನ್ನುಳಿದು ಇತರ ದಿನಗಳು ಹೆಚ್ಚಿನ ಅನುಕೂಲಗಳಾಗಿಲ್ಲ.

ಸಿಂಹರಾಶಿ—

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಉಕ್ತಿಯಂತೆ ಆಯಾಯ ವರ್ಣಾಶ್ರಮಿಗಳಿಗೆ ಶಾಸ್ತ್ರದಲ್ಲಿ ಹೇಳಿದ ಧರ್ಮಾಚರಣೆಯಿಂದ ಸದ್ಯದಲ್ಲಿ ಒಂದೊಮ್ಮೆ ಕೆಡುಕು ಕಂಡುಬಂದರೂ ಅದು ಮುಂದಿನ ಕಲ್ಯಾಣಕ್ಕಾಗಿಯೇ. ಈ ವಿಷಯವನ್ನು ನೀವು ಗಮನಿಸದೆ ಧರ್ಮದ್ರೋಹಿಗಳಾಗಿ ಮುಂದಿನ ಕಲ್ಯಾಣವನ್ನು ಕೈಯ್ಯಾರೆ ಕೆಡಿಸಿಕೊಳ್ಳುವುದು ಎಷ್ಟರಮಟ್ಟಿಗೂ ಉಚಿತವಲ್ಲ. ಕಾಹಿಲೆ ಬಂದವರಿಗೆ ಔಷಧಿ ಸೇವನೆಯು ರುಚಿಸದಿದ್ದರೂ ಅದು ಮುಂದೆ ಒಳ್ಳೇ ಪರಿಣಾಮಕಾರಿಯಾಗುವುದಿಲ್ಲವೇ? ಪ್ರಕೃತದಲ್ಲಿ ನೀವು ಯಾವದೊಂದು ಕಾರ್ಯಕ್ಕೂ ಮುಂದೊತ್ತಿ ಹೋಗಬೇಡಿ. ವ್ಯವಹಾರ ನಿಮಿತ್ತ ಜನತೆಯಲ್ಲಿ ಕಲಹವುಂಟಾಗಿ ವೈರತ್ವಕ್ಕೆ ಕಾರಣವಾಗುವದು. ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನಕೊಡಿರಿ. ಸದ್ಯ ಪ್ರವಾಸವನ್ನು ಕೈಬಿಡುವುದೊಳ್ಳಿತು. ಸತ್ಯಮಾರ್ಗಚರಣೆಯಲ್ಲಿರತಕ್ಕ ತರುಣ ಜನವೃಂದಕ್ಕೆ ಮಿತ್ರ ಜನರ ಬಲದಿಂದ ಹೆಚ್ಚಿನ ಅನುಕೂಲತೆಗಳು ಒದಗುವವು. ತಾ. 21, 22, 25, 26, 27, ಈ ದಿನಗಳಲ್ಲಿ ಮಾನಚ್ಯುತಿ ಕಾರ್ಯವಿಘ್ನಗಳು ಸಂಭವಿಸಲಿವೆ.

ಕನ್ಯಾರಾಶಿ—

"ಬಲ್ಲವರ ಮಾತು ಬೆಲ್ಲಕ್ಕಿಂತ ಸಿಹಿ" ಎಂಬ ಗಾದೆಯಂತೆ ನಿಮ್ಮ ಮಾತಿನಲ್ಲಿ ಅದೊಂದು ಬಗೆಯ ಸ್ವಾರಸ್ಯಮಯವಾದ ರಸವಿರುವುದು. ಅದರಿಂದಲೇ ನಿಮ್ಮನ್ನು ಹಲವರು ಮೆಚ್ಚುವರು. ಈ ಕಾರಣದಿಂದಲೇ ನಿಮ್ಮ ಮೇಲೆ ಎರಡೆಂಟೆಣಿಸತಕ್ಕವರೂ ಕೂಡ ನಿಮ್ಮಿದಿರಿಗೆ ಬಂದಾಗ ಸ್ನೇಹಿತರಂತೆಯೇ ವರ್ತಿಸುವರು. ಹೆಚ್ಚಿನವರು ನಿಮ್ಮನ್ನು ಗೌರವಪೂರ್ವಕವಾಗಿ ಕಾಣುವರು. ಕೋರ್ಟು ವಗೈರೆ ರಾಜಕೀಯ ಕಾರ್ಯಾಲಯಗಳಲ್ಲೂ ನಿಮ್ಮ ಇಷ್ಟಾರ್ಥವು ಕೈಗೂಡುವುದು. ನೌಕರಿ ಮಾಡತಕ್ಕವರಿಗೆ ಇದಿರಾಳಿಗಳಿಂದ ಕೆಲವು ವಿಚಾರದಲ್ಲಿ ಹಾನಿಯೊದಗುವ ಸಂಭವವಿದೆ. ಸಂಸಾರದಲ್ಲೂ ಕೂಡ ಸುಖ ಸಿಗಲಾರದು. ಪತ್ನೀಪುತ್ರರ ವಿಯೋಗವುಂಟಾಗಿ ತತ್ಸಂಬಂಧವಾದ ದುಃಖಕ್ಕೊಳಗಾಗುವಿರಿ. ಮನಸ್ಸಿಗೆ ಹೆಚ್ಚಿನ ಕೆಲಸಕೊಡುವುದರಿಂದ ನಿದ್ದೆ ಕೂಡಾ ಸಮಯಕ್ಕೆ ಸರಿಯಾಗಿ ಬರಲೊಲ್ಲದೆ ಆರೋಗ್ಯ ಕೆಡುವ ಸಂಭವವಿದೆ. ತಾ. 21, 22, 26, 27 ಈ ದಿನಗಳಲ್ಲಿ ಧನಲಾಭ ಕಾರ್ಯಜಯ ಇಷ್ಟವಸ್ತುಗಳ ಪ್ರಾಪ್ತಿಯುಂಟಾಗುವದು.

ತುಲಾರಾಶಿ—

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' ಎಂಬ ಸೂಕ್ತಿಯಂತೆ ಸುಖದುಃಖಗಳೆರಡೂ ರಾತ್ರಿಹಗಲುಗಳಂತೆ ನರಜೀವನದಲ್ಲಿ ಸುತ್ತು ತಿರುಗುತ್ತಿವೆ. ಈಗಲೀಗ ನೀವು ಆ ದುಃಖವೆಂಬ ಕಾಳರಾತ್ರಿಯನ್ನು ಕಳೆಯಲಾರಂಭಿಸಿ ಅದರ ಅಂತ್ಯಯಾಮಾಂತ್ಯಕ್ಕೆ ಬಂದಿರುವಿರಿ. ಆದಕಾರಣದಿಂದಲೇ ಕಾರ್ಯದಲ್ಲಿ ಉತ್ಸಾಹವು ಹೆಚ್ಚುತ್ತಿದೆ. ಆಪ್ತೇಷ್ಟರ ಪತ್ನೀ ಪ್ರಿಯಜನರ ಸಹಾಯವು ನಿಮಗೆ ದೊರೆಯುವುದು. ಆರಂಭಿಸಿದ ಕಾರ್ಯಗಳು ಹೆಚ್ಚಾಗಿಯಾಗಿ ನಿರ್ವಿಘ್ನದಿಂದ ಕೊನೆಗಾಣುವವು. ಕರ್ಮಕ್ಕೆ ತಕ್ಕದಾಗಿ ಧನವಸನಾದಿಗಳ ಪ್ರಾಪ್ತಿಯಾಗುವದು. ಆದರೂ ನಿಮ್ಮ ವಿರೋಧಿಗಳು ಹೆಚ್ಚಾಗಿ ನಿಮ್ಮನ್ನು ಪೀಡಿಸುವುದರಿಂದ ಮಾನಸಿಕ ಸುಖವು ಸಿಗಲಾರದು. ಕೆಲವೊಂದು ಅಲ್ಪ ಜನರ ಸಹವಾಸದಿಂದ ಗೌರವವು ಕಡಿಮೆಯಾಗಿ ಜನರ ನಗೆಗೀಡಾಗುವ ಪ್ರಸಂಗಬರಲಿದೆ. ಅಂತಲ್ಲಿ ನಿಲ್ಲದೆ ಹೆಚ್ಚಾಗಿ ತಿರುಗಾಡತಕ್ಕದ್ದೇ ಇದ್ದು ಸಮಯವನ್ನು ತಿಕ್ಕಿಬಿಡುವಿರಿ. ತಾ. 20, 23, 24 ಈ ಮೂರು ದಿನಗಳ ಮಟ್ಟಿಗೆ ಕಿಂಚಿತ್ತು ತಾಪ.

ವೃಶ್ಚಿಕರಾಶಿ—

ಗ್ರಹ ಮಂಡಲದಲ್ಲಿ ಹೆಚ್ಚಿನ ಗ್ರಹರು ನಿಮಗೆ ಅನುಕೂಲರಾಗಿರುವಾಗ ಕೇವಲ ರವಿ ರಾಹುಗಳಿಂದ ಏನೊಂದೂ ಕಾರ್ಯಸಾಗದು. ಆದರೂ ಗ್ರಹರಾಜರಾಗಿರುವ ಪ್ರಯುಕ್ತ ರವಿಯು ತನ್ನ ಶಕ್ತಿಯನ್ನು ಕಿಂಚಿತ್ತಾದರೂ ತೋರಿಸದಿರನು. ಆ ಕಾರಣ ಸಾಲಿಗರೊಳು ಪರಸ್ಪರ ಮನಸ್ತಾಪವನ್ನು ಹುಟ್ಟಿಸುವನು. ಇಷ್ಟೇ ಅಲ್ಲದೆ ಇತರ ವಿಚಾರಗಳಲ್ಲಿ ನಿಗ್ರಹಬಲವೇ ಅಧಿಕವಾಗಿರುವುದರಿಂದ ನೀವು ಉದಾಸೀನದಿಂದ ಕುಳಿತರೂ ನಿಮ್ಮ ಕೈಹಿಡಿದು ಎಳೆದೊಯ್ಯುವರು. ಕಾರ್ಯ ಪ್ರವೃತ್ತರಾಗುವ ಸಲುವಾಗಿ, ದುಃಖವೆಂಬುದು ದುರ್ಲಭವಾಗುವುದು. ಆರೋಗ್ಯವು ಉತ್ತಮವಾಗಿರುವುದು. ಉತ್ಸಾಹ ಶಕ್ತಿಯು ದಿನದಿಂದ ದಿನಕ್ಕೆ ಏರುತ್ತಾ ಹೋಗುವುದು. ಸರ್ವಕ್ಕೂ ಮೂಲವಾದ ಕಾಂಚನವು ನಿಮಗೆ ಅನಾಯಾಸವಾಗಿ ದೊರೆಯುವುದು. ಅಂತ್ಯಾಂತಗಾಮಿಗಳಾದ ನೀವು ಸದಾ ವಿಜಯ ಮಾಲಿಕೆಯಿಂದ ಕಂಗೊಳಿಸುವಿರಿ. ತಾ. 23, 24, ಈ ದಿನಗಳನ್ನು ಹೊರತು ಇತರ ಎಲ್ಲಾ ದಿನಗಳು ಅತ್ಯುತ್ತಮವಿವೆ.

ಧನೂರಾಶಿ—

ನಿಮ್ಮ ಅದೃಷ್ಟವು ಅವನತಿಯ ಪರಾಕಾಷ್ಠೆಯನ್ನು ಹೊಂದಿರುವುದು. ಆದಕಾರಣ ಕೈಗೆ ಬಂದ ತುತ್ತೂ ಕೂಡ ಬಾಯಿಗೆ ದೊರಕಲಾರದು. ನೀವೊಂದೆಣಿಸಿ ಕಾರ್ಯಪ್ರವೃತ್ತರಾದರೆ ಅದು ಮತ್ತೊಂದು ರೀತಿಯಲ್ಲಿ ಪರಿಣಮಿಸುವದು. ಹಿಂದೆ ಪರೀಕ್ಷಿದ್ವಾಜನು ನಿಂಬೆಹಣ್ಣೆಂದು ಹಿಡಿದು ಅರ್ಪಿಸಲದು ಹಾವಾಗಿ ಪರಿಣಮಿಸಿ ಅತನಿಗೆ ಮೃತ್ಯುವನ್ನು ತಂದಿತಲ್ಲವೇ? ಇದೇ ರೀತಿಯ ಘಟನೆಗಳೇ ಹೆಚ್ಚಾಗಿ ಸಂಭವಿಸುವವು. ಸಕಲವಿಚಾರದಲ್ಲೂ ನಿಮ್ಮ ಕೌಟುಂಬಿಕ ಪರಿಸ್ಥಿತಿಯೇ ದಿನ ದಿನಕ್ಕೆ ಇಳಿಯುತ್ತಾ ಹೋಗುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ ನೀವೀವಾರದಲ್ಲಿ ಸಕಲ ಕಷ್ಟನಷ್ಟಗಳಿಗೆ ಗುರಿಯಾಗುವಿರಲ್ಲದೆ ಸ್ವಪ್ನದಲ್ಲೂ ಕೂಡ ಸುಖಲೇಶವನ್ನು ಕಾಣಲು ಸಮರ್ಥರಾಗುವಂತಿಲ್ಲ. ಆದಕಾರಣ ಭಕ್ತವತ್ಸಲನ ಶರಣುಹೊಂದುವವರಿಗೆ ಕಿಂಚಿದಿಷ್ಟಗಳು ಲಭಿಸಲೂ ಬಹುದು.

ಮಕರರಾಶಿ—

ನೀವೀವಾರದಲ್ಲಿ ಹಣಕ್ಕಾಗಿ ಬಹಳ ಕಷ್ಟ

1939ನೇ ಇಸ್ವಿ ಜುಲಾಯಿ ತಾ. 10ನೇ ಸೋಮವಾರ ದಿವಸ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

			ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡೆ ಮುಡಿಗೆ	...	...	1—14—0	...
,, ದುಯಂ ,, ,,	..	...	1—12—0	...
,, ಅವ್ವಲ್ ತರದ ಸುಗ್ಗಿ ಮುಡಿಗೆ	..	..	1—12—0	...
,, ದುಯಂ ,, ,,	...	...	1—10—0	..
ಅಕ್ಕಿ-ಅವ್ವಲ್ ತರದ ಗುಡ್ಡೆ ಮುಡಿಗೆ	..	...	4—12—0	...
,, ದುಯಂ ,, ,,	.	...	4— 8—0	4—10—0
,, ಅವ್ವಲ್ ಸುಗ್ಗಿ ,,	..	...	4— 7—0	..
,, ದುಯಂ ,, ,,	...	...	4— 3—0	4— 5—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ		...	27— 8—0	35— 0—0
,, ಸಿಪ್ಪೆ ಇದ್ದದ್ದು ,,		...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	...	...	50— 0—0	...
,, ದೀವಿ	...	...	...	...
,, ದಿಲ್‌ಪಸಂದ್	..	...	...	..
ತೆಂಗಿನ ಎಣ್ಣೆ ಮಣಕ್ಕೆ	...	...	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	...	...	3— 8—0	4— 4—0
ಗೇರುಬೀಜ ಮುಡಿಗೆ ...	...	...	3—10—0	...
ಕಬ್ಬಿನ ಬೆಲ್ಲ ಖಂಡಿಗೆ	...	...	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	..	..	14— 8—0	15— 8—0

ಮೂಲವ್ಯಾಧಿಗೆ
ವಿಶೇಷ ಗುಣಕಾರಿ.
ಮಹಾತ್ಮರವರ ಪ್ರಸಾದ
ಆಶ್ಚರ್ಯಕರವಾದ ಔಷಧಿ
ನಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ
ಮೂಲವ್ಯಾಧಿಗೆ ರಾಮಬಾಣ ಔಷಧ.
ಅರ್ಶಮಾರಾ
ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿಕೆ ಇತ್ಯಾದಿ ಸಂಕಷ್ಟಗಳು ಕೂಡಲೆ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುವುದು. ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು.
ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.
ಬೆಲೆ ರೂ. 2-0-0.
ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4
AROGYA SADANA
Durgadevi Street, BOMBAY 4

ಕಿವುಡರಿಗೆ
ಕಿವಿ ಕೇಳುತ್ತದೆ
ವಿಜ್ಞಾನ ಶಾಸ್ತ್ರದ ನವೀನ ಶೋಧೆ.
ಬಧಿರತಾ-ಹರಣ
ಕರ್ಣರೋಗಗಳಿಗೆ ಅಪ್ರತಿಮ ಔಷಧ. ಕಿವಿ ಸೋರುವುದು, ಕೀವು ಬರುವುದು, ಕಿವಿಯೊಳಗೆ ಛೆಂಯಿ ಛುಂಯಿ ಶಬ್ದ ಮಾಗುವುದು, ಕ್ರಿಮಿ ಬೀಳುವುದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ
ಬಧಿರತಾ-ಹರಣವು
ಅವಶ್ಯ ಔಷಧ ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂತೆ.
ಬೆಲೆ ರೂ 2—0—0
ಪತ್ತೆ:-ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.
AROGYA SADAN
Durgadevi Street, BOMBAY 4

‘ZAMANA’

SYNOPSIS

Professor Govind is a staunch supporter of Emancipation of womanhood, and his cousin Hansa is his admirer. His father Parumal is orthodox enough to phoo-phoo at his ideas. He comes to a village to spend his vacation. Here he meets Sushila, a singing lark and ideal village girl, and their love for each other becomes too deep rooted for wordly obstacles. Mohan and Gulab, Sushila's brothers, know that the Matching is not alright so far as the question of their rank is considered. Govind and Sushila, in the ardour of their love, are infatuated, and they marry, though Mohan has to sell his properties to meet the demand of dowry by the greedy parents of Govind.

Govind & Sushila come to town, and Hansa fondly hopes that their marriage life would all be a bliss. But the orthodox parents-in-low, taunt Sushila day and night and make her life an everlasting misery. She bravesit out, and complains to none Govind tries to assert his rights to no avail. His parents are too strong for him. Sushila is tempoarily separated. Govind instead, of fighting like a man, takes refuse in drink and gambles. The last hope of Sushila is shattered. Her brothers are penniless Mohan is confined tobed. Heroically Hansa rushes to the gambling den to give a bit of her mind to Govind. What happens next?

✱ ಕಥಾ ಸಾರಾಂಶ ✱

ಪ್ರೊಫೆಸರ್ ಗೋವಿಂದನು ಸ್ತ್ರೀಸಮಾಜೋದ್ಧಾರಕ್ಕೆ ಬದ್ಧ ಕಂಕಣನು. ಅವನ ಸೊಸೆ ಹಂಸಳು ಅವನ ಆರಾಧಕಳು. ಗೋವಿಂದನ ತಂದೆ ಪಾರುಮಲನು ಮಗನ ಹುಚ್ಚು ತತ್ವಕ್ಕೆ ಅಪಹಾಸ್ಯಮಾಡುತ್ತಿದ್ದನು. ರಜೆಯ ಸಮಯ ಹಳ್ಳಿಗೆ ಬಂದಾಗ ಸುಶೀಲೆಎಂಬ ತರುಣಿಯಲ್ಲ ಮೋಹಗೊಳ್ಳುವನು. ಸುಶೀಲಳ ಅಣ್ಣ ಮೋಹನನು ಪ್ರಾರಂಭದಲ್ಲಿ ಇದಕ್ಕೆ ಒಪ್ಪಲಿಲ್ಲ. ಲಕ್ಷಾಧೀಶನ ಮಗನೊಬ್ಬನು ಬಡ ಸುಶೀಲೆಯನ್ನು ಪರಿಸುವುದೆಂದರೆ, ಅವರ ಸಾಂಸಾರಿಕ ಜೀವನವು ಸರಿಯಾಗದು ಎಂದೇ ಅವನ ಹೆದರಿಕೆ. ಆದರೆ ಸುಶೀಲೆ ಮತ್ತು ಗೋವಿಂದನ ಪ್ರೀತಿಯು ಅಂತಹುದು. ಅವರು ಮದುವೆಯಾಗುವರು. ಗೋವಿಂದನ ತಂದೆಯು ‘ವರದಕ್ಷಿಣೆ’ ದಾಹವನ್ನು ಅಡಗಿಸಲು, ಮೋಹನನಿಗೆ ತನ್ನ ಮನೆಮಾರನ್ನು ಮಾರಿಕೊಳ್ಳಬೇಕಾಯಿತು.

ಗೋವಿಂದನೂ ಸುಶೀಲೆಯೂ ಪಟ್ಟಣಕ್ಕೆ ಬರುವರು. ಅವರ ದಾಂಪತ್ಯವು ಸುಗಮವಾಗಿ ಸಾಗಬಹುದೆಂದು ಹಂಸಳು ನಿರೀಕ್ಷಿಸುವಳು. ಆದರೆ, ಅತ್ತೆ ಮಾವಂದಿರ ಕಾಟ—ಇದು ಸುಶೀಲೆಗೂ ತಪ್ಪಿರಲಿಲ್ಲ. ಅವಳದನ್ನು ಸಹಿಸಿದಳು. ಯಾರಲ್ಲಿಯೂ ದೂರಲಿಲ್ಲ. ಗೋವಿಂದನು ತಂದೆ ತಾಯಿಗಳ ಮೂಢತ್ವವನ್ನು - ಖಂಡಿಸುವನು. ಪ್ರಯೋಜನವೇನು?

ಅಂತೂ, ಸುಶೀಲೆಯು ಸ್ವಲ್ಪ ಸಮಯ ಬೇರ್ಪಟ್ಟಿರಬೇಕೆಂದು ನಿಶ್ಚಯವಾಗಲು, ಗೋವಿಂದನು ವೀರನಂತೆ ಹೊಡೆದಾಡುವುದನ್ನು ಬಿಟ್ಟು, ತನ್ನ ದುಃಖವನ್ನು ಅಡಗಿಸಿಕೊಳ್ಳಲು ಸುರೆಯ ದಾಸನಾಗಿ ಜುಗಾರಿಯಾಡುವನು. ಸುಶೀಲೆಗಿದ್ದ ಒಂದೇ ಒಂದು ಆಶೆಯೂ ಹೋಯಿತು. ಅವಳ ಅಣ್ಣನೂ ಕಾಸಿಲ್ಲದವ. ಮೇಲಾಗಿ ಹಾಸಿಗೆ ಹಿಡಿದಿದ್ದನು ಜ್ವರದಿಂದ. ಹಂಸಳು ಗೋವಿಂದನಲ್ಲಿಗೆ ಧಾವಿಸುವಳು. ಅವನನ್ನು ಸರಿದಾರಿಗೆ ತರಲು—ಮುಂದೇನು?

NEXT:-

LONE DEFENDER

ಬರುವ ಚಿತ್ರ:-

ಲೋನ್ ಡಿಫೆನ್ಡರ್

Every visit is a new delight at

Sri Ramakrishna Theatre.

Comming: **Bhaktha Kuchela** to Sri Krishna abode, Udipi, **Wadia's Pahadi Kanya,** *featuring fearless Nadia:* **Becky Sharp, Mastana Mashuk, Jailor.**

ಮುಂದಿನ ಚಿತ್ರ: ‘ಭಕ್ತಕುಚೇಲನು’ ಶ್ರೀಕೃಷ್ಣನ ನಿವಾಸ (ಉಡುಪಿ)ಕ್ಕೆ! ವಡಿಯಾ ಮೂವಿಟೋನಿನವರ ‘ಪಹಡಿ ಕನ್ಯಾ’ ಬೆಕ್ಕಿಶಾರ್ಪ್, ಮಸ್ತಾನಾ ಮಶೂಕ್, ಜೈಲರ್ ಇತ್ಯಾದಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾ ರ ದ ಭ ವಿ ಷ್ಯ

(ತಾ. 20-7-39ರಿಂದ ತಾ. 27-7-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.
ಸಂ. ನ.]

ಮೇಷರಾಶಿ—

ಈಗಲೀಗ ನಿಮ್ಮ ಪರಿಸ್ಥಿತಿಯು ಪೂರ್ತಿ ಕೆಡಲಾರಂಭಿಸಿದೆ. ಮನೆಯವರೆಲ್ಲರೂ ನಿಮ್ಮ ಭಾಗಕ್ಕೆ ವಿರೋಧಿಗಳಂತಿರುವರು. ಆಪ್ತಮಿತ್ರರ ಭೇಟಿಯೂ ಕೂಡ ದುರ್ಲಭವಾಗುವುದು. ಕೆಲವೊಂದು ವೇಳೆ ಕಷ್ಟ ಜನರ ಮರೆಹೊಕ್ಕು ದಿನಗಳೆಯಬೇಕಾದ ಪ್ರಸಂಗವೂ ಕೂಡ ಒದಗಬಹುದು. ನಿತ್ಯ ದುಃಖಕಾರಿಯಾದ ಸಂಸಾರದಲ್ಲಿ ವಿರಕ್ತಿಯು ಹೆಚ್ಚುವುದು. ಆರೋಗ್ಯವೂ ಕೂಡ ಕೆಡುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣಿಸಲು ಸಾಧ್ಯವಾಗುವಂತಿಲ್ಲ. ಆರ್ಥಿಕದೃಷ್ಟಿಯಿಂದಂತೂ ಈ ವಾರವು ನಿಮಗೆ ತೀರ ಪ್ರತಿಕೂಲವಾಗಿರುವುದು. ಅಭಿಲಷಿತ ಪದಾರ್ಥಗಳು ಸಮಯಕ್ಕೆ ದೊರೆಯಲಾರವು. ಪ್ರವಾಸಮಾಡುವುದರಿಂದ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವವು. ವಿದ್ಯಾಭಿಲಾಷಿಗಳಿಗೆ ವಿಶೇಷ ಹಾನಿಕರವಾದುದೀ ವಾರವು. ತಾ. 21ರಿಂದ 24ರ ವರೆಗೆ ಇಷ್ಟವು ಸಿದ್ಧಿಸಲೊಲ್ಲದಾದರೂ ಅನಿಷ್ಟಗಳು ಕಡಿಮೆಯಾಗಲಿವೆ.

ವೃಷಭರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಉತ್ತಮವಾಗಿದ್ದರೂ ಕುಜ ಶನಿ ರಾಹುಗಳು ಪ್ರತಿಕೂಲರಾಗಿರುವರು. ಇವರೆಲ್ಲರೂ ಪಾಪಿಗ್ರಹರಾದುದರಿಂದ ಉಪಕಾರವನ್ನು ಮಾಡಲು ಹಿಂಜರಿದರೂ ಅಪಕಾರವನ್ನು ತಂದೊಡ್ಡಲು ನಾಮುಂದೆ ತಾಮುಂದೆ ಎಂದು ಹಾತೊರೆಯುವ ಸ್ವಭಾವದವರು. ಅದರಲ್ಲೂ ಭಾಗ್ಯಪತಿಯು ವ್ಯಯದಲ್ಲೂ ವ್ಯಯಾಧಿಪತಿಯು ಭಾಗ್ಯದಲ್ಲೂ ಪರಸ್ಪರ ಸ್ಥಾನ ವಿನಿಮಯ ಹೊಂದಿ ನೀಚೋಚ್ಚರಾಗಿ ಕೇಂದ್ರದಲ್ಲಿರುವುದರಿಂದ ಧನಾಗಮ ನಿರ್ಗಮ ವಿಚಾರದಲ್ಲಿ ಅನರ್ಥ ಪಥಗಳು ಉಂಟಾಗಲಿವೆ. ಆದರೂ ಲಾಭಾಧಿಪತಿಯಾದ ಬೃಹಸ್ಪತ್ಯಾಚಾರ್ಯರು ಸ್ವಕ್ಷೇತ್ರಗತರಾಗಿರುವುದರಿಂದ ಕೈಯಲ್ಲಿ ಯಾವಾಗಲೂ ಹಣ ಕಾಸಿಗೆ ತೊಂದರೆಬಾರದು. ಸಾಹಸಕಾರ್ಯಗಳಲ್ಲಿ ನಿಮಗೆ ಸದಾ ವಿಜಯ ದೊರೆಯುವುದು. ಅರ್ಧಾಂಗಿಯ ಆರೋಗ್ಯವು ಕೆಡಬಹುದಾದುದರಿಂದ ತತ್ಸಂಬಂಧ ಚಿಂತೆಯೂ ಧನವ್ಯಯವೂ ಅಧಿಕವಾಗಲಿವೆ. ವಿದ್ಯೋಪಜೀವಿಗಳಿಗೆ ಈ ವಾರವು ಹೆಚ್ಚಿನಂಶ ಉತ್ತಮವಾಗಿರುವುದು. ತಾ. 23ರಿಂದ ವಾರಾಂತ್ಯದ ವರೆಗೂ ನಿಮ್ಮ ಇಷ್ಟಾರ್ಥಗಳು ಅನಾಯಾಸದಿಂದ ಕೈಗೂಡುವವು.

ಮಿಥುನರಾಶಿ—

ಕೈ ಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಸ್ವಕಾರ್ಯ ಸಾಧನೆಗಾಗಿ ಹೆಚ್ಚಿನ ಶ್ರಮವಹಿಸಬೇಕಾಗುವುದು. ಯಾವ ಕಾರ್ಯವೂ ಅನಾಯಾಸದಿಂದ ಸಾಧ್ಯವಾಗಲೊಲ್ಲದು. ಪ್ರಕೃತದಲ್ಲಿ ನಿಮಗೆ ವಿಶ್ವಾಸಾರ್ಹರಾದ ಜನರೇ ಇಲ್ಲವೆಂದು ಹೇಳಬಹುದು. ಆದಕಾರಣ ಪ್ರತಿಯೊಂದು ಕಾರ್ಯವನ್ನೂ ಅದ್ವಿತೀಯರಾಗಿಯೇ ಮುಂದುವರಿಸಬೇಕಾಗುವುದು. ಶರೀರಾಲಸ್ಯದಿಂದ ನಿಶ್ಶಕ್ತಿಯು ಅಧಿಕವಾಗುವುದರಿಂದ ಕೋಪವು ಸ್ವಲ್ಪ ಅಧಿಕವಾಗಿ ಮಾತುಮಾತಿಗೆ ಕಲಹವಾದೀತು. ಆಯುವ್ಯಯಗಳು ಸಮತೂಕದಲ್ಲಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಲಾರಿರಿ. ಗೃಹಸುಖವು ಅಪ್ಯಾಯಿತವಾಗಿ ದೊರೆಯುವುದು. ನೌಕರಿಗಳಿಗೆ ಸ್ವಕಾರ್ಯದಲ್ಲಿ ಔದಾಸೀನ್ಯವು ಹೆಚ್ಚಾಗುವುದು. ತಾ. 21ರಿಂದ 24ರ ವರೆಗೂ ಕಾರ್ಯವಿಘ್ನ, ರೋಗಭಯ ಇತ್ಯಾದ್ಯನಿಷ್ಟಗಳು ಅಧಿಕವಾಗಲಿವೆ.

ಕರ್ಕಾಟಕರಾಶಿ—

ನಿಸರ್ಗತಃ ಶುಭರಾಗಿದ್ದವರು ಸುಸ್ಥಾನಗತರಾಗಿಯೂ ಅಶುಭರಾಗಿದ್ದವರು ದುಃಸ್ಥಾನಗತರಾಗಿಯೂ ಇರುವುದರಿಂದ ಇಷ್ಟಾನಿಷ್ಟ ಫಲಗಳು ಸರಿಸಮಾನವಾಗಿ ಪ್ರಾಪ್ತವಾಗಲಿವೆ. ಕಡಿವಾಣ ತಪ್ಪಿದ ಕುದುರೆಯಂತೆ ಮನಸ್ಸು ದುರ್ಮಾರ್ಗದಲ್ಲಿ ಮುಂದರಿಯಲು ಹಾತೊರೆಯುತ್ತಿರುವುದಾದರೂ ಬುದ್ಧಿಬಲದಿಂದದನ್ನು ಹತೋಟಿಯಲ್ಲಿಡಲು ಶಕ್ತರಿರುವಿರಿ. ಇಲ್ಲಸಲ್ಲದ ಕಲಹಗಳು ಗಂಟುಬಿದ್ದು ತನ್ನಿಮಿತ್ತ ಧನವ್ಯಯವಾಗಲಿದೆ. ವಿದ್ಯಾ ವಿಷಯಕವಾದ ಬುದ್ಧಿಯು ಸಮೀಚೀನವಾಗಿದ್ದರೂ ಇತರ ತೊಡಕುತೊಂದರೆಗಳಿಂದ ಅಧ್ಯಯನ ಭಾಗಕ್ಕೆ ಪ್ರತಿಬಂಧಕವುಂಟಾಗುವುದು. ಉದ್ಯೋಗಿಗಳಿಗೂ, ವ್ಯಾಪಾರಿಗಳಿಗೂ ಇತರ ವೈದಿಕವೃಂದದವರಿಗೂ ಖರ್ಚಿಗೆ ಸಾಕಷ್ಟು ಉತ್ಪತ್ತಿಯಾಗುವುದು. ಪತ್ನಿಯೊಡನೆ ನಿತ್ಯ ಕಲಹವಾಗಲಿದೆ. ಉದರ ರೋಗವು ಆಗಾಗ ತಲೆದೋರೀತು. ತಾ. 21, 22 ಈ ದಿನಗಳನ್ನುಳಿದು ಇತರ ದಿನಗಳು ಹೆಚ್ಚಿನ ಅನುಕೂಲಗಳಾಗಿಲ್ಲ.

ಸಿಂಹರಾಶಿ—

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತೋಕ್ತಿಯಂತೆ ಆಯಾಯ ವರ್ಣಾಶ್ರಮಿಗಳಿಗೆ ಶಾಸ್ತ್ರದಲ್ಲಿ ಹೇಳಿದ ಧರ್ಮಾಚರಣೆಯಿಂದ ಸದ್ಯದಲ್ಲಿ ಒಂದೊವ್ಮೆ ಕೆಡುಕು ಕಂಡುಬಂದರೂ ಅದು ಮುಂದಿನ ಕಲ್ಯಾಣಕ್ಕಾಗಿಯೇ. ಈ ವಿಷಯವನ್ನು ನೀವು ಗಮನಿಸದೆ ಧರ್ಮದ್ರೋಹಿಗಳಾಗಿ ಮುಂದಿನ ಕಲ್ಯಾಣವನ್ನು ಕೈಯ್ಯಾರೆ ಕೆಡಿಸಿಕೊಳ್ಳುವುದು ಎಷ್ಟಕ್ಕೂ ಉಚಿತವಲ್ಲ. ಕಾಹಿಲೆ ಬಂದವರಿಗೆ ಔಷಧಿ ಸೇವನೆಯು ರುಚಿಸದಿದ್ದರೂ ಅದು ಮುಂದೆ ಒಳ್ಳೇ ಪರಿಣಾಮಕಾರಿಯಾಗುವುದಿಲ್ಲವೇ? ಪ್ರಕೃತದಲ್ಲಿ ನೀವು ಯಾವದೊಂದು ಕಾರ್ಯಕ್ಕೂ ಮುಂದೊತ್ತಿ ಹೋಗಬೇಡಿ. ವ್ಯವಹಾರ ನಿಮಿತ್ತ ಜನತೆಯಲ್ಲಿ ಕಲಹವುಂಟಾಗಿ, ವೈರತ್ವಕ್ಕೆ ಕಾರಣವಾಗುವದು. ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನಕೊಡಿರಿ. ಸದ್ಯ ಪ್ರವಾಸವನ್ನು ಕೈದಿಸುವುದೊಳ್ಳಿತು. ಸತ್ಯಮಾರ್ಗಚರಣೆಯಲ್ಲಿರತಕ್ಕ ತರುಣ ಜನವೃಂದಕ್ಕೆ ಮಿತ್ರ ಜನರ ಬಲದಿಂದ ಹೆಚ್ಚಿನ ಅನುಕೂಲತೆಗಳು ಒದಗುವವು. ತಾ. 21, 22, 25, 26, 27, ಈ ದಿನಗಳಲ್ಲಿ ಮಾನಚ್ಯುತಿ ಕಾರ್ಯವಿಘ್ನಗಳು ಸಂಭವಿಸಲಿವೆ.

ಕನ್ಯಾರಾಶಿ—

"ಬಲ್ಲವರ ಮಾತು ಬೆಲ್ಲಕ್ಕಿಂತ ಸಿಹಿ" ಎಂಬ ಗಾದೆಯಂತೆ ನಿಮ್ಮ ಮಾತಿನಲ್ಲಿ ಅದೊಂದು ಬಗೆಯ ಸ್ವಾರಸ್ಯಮಯವಾದ ರಸವಿರುವುದು. ಆದುದರಿಂದಲೇ ನಿಮ್ಮನ್ನು ಹಲವರು ಮೆಚ್ಚುವರು. ಈ ಕಾರಣದಿಂದಲೇ ನಿಮ್ಮ ಮೇಲೆ ಎರಡೆಂಟೆಣಿಸತಕ್ಕವರೂ ಕೂಡ ನಿಮ್ಮೆದುರಿಗೆ ಬಂದಾಗ ಸ್ನೇಹಿತರಂತೆಯೇ ವರ್ತಿಸುವರು. ಹೆಚ್ಚಿನವರು ನಿಮ್ಮನ್ನು ಗೌರವ ಪೂರ್ವಕವಾಗಿ ಕಾಣುವರು. ಕೋರ್ಟು ಮತ್ತಿತರ ರಾಜಕೀಯ ಕಾರ್ಯಾಲಯಗಳಲ್ಲೂ ನಿಮ್ಮ ಇಷ್ಟಾರ್ಥವು ಕೈಗೂಡುವುದು. ನೌಕರಿ ಮಾಡತಕ್ಕವರಿಗೆ ಇದಿರಾಳಿಗಳಿಂದ ಕೆಲವು ವಿಚಾರದಲ್ಲಿ ಹಾನಿಯೊದಗುವ ಸಂಭವವಿದೆ. ಸಂಸಾರದಲ್ಲೂ ಕೂಡ ಸುಖ ಸಿಗಲಾರದು. ಪತ್ನೀಪುತ್ರರ ವಿಯೋಗವುಂಟಾಗಿ ತತ್ಸಂಬಂಧವಾದ ದುಃಖಕ್ಕೊಳಗಾಗುವಿರಿ. ಮನಸ್ಸಿಗೆ ಹೆಚ್ಚಿನ ಕೆಲಸಕೊಡುವುದರಿಂದ ನಿದ್ದೆ ಕೂಡಾ ಸಮಯಕ್ಕೆ ಸರಿಯಾಗಿ ಬರಲೊಲ್ಲದೆ ಆರೋಗ್ಯ ಕೆಡುವ ಸಂಭವವಿದೆ. ತಾ. 21, 22, 26, 27 ಈ ದಿನಗಳಲ್ಲಿ ಧನಲಾಭ ಕಾರ್ಯಜಯ ಇಷ್ಟವಸ್ತುಗಳ ಪ್ರಾಪ್ತಿಯುಂಟಾಗುವದು.

ತುಲಾರಾಶಿ—

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' ಎಂಬ ಶಾಸ್ತ್ರೋಕ್ತಿಯಂತೆ ಸುಖದುಃಖಗಳೆರಡೂ ರಾತ್ರಿಹಗಲುಗಳಂತೆ ನರಜೀವನದಲ್ಲಿ ಸುತ್ತು ತಿರೆಯುತ್ತಿವೆ. ಈಗಲೀಗ ನೀವು ಆ ದುಃಖವೆಂಬ ಕಾಳ ರಾತ್ರಿಯನ್ನು ಕಳೆಯಲಾರಂಭಿಸಿ ಅದರ ಅಂತ್ಯಯಾಮಾಂತ್ಯಕ್ಕೆ ಬಂದಿರುವಿರಿ. ಆದಕಾರಣದಿಂದಲೇ ಕಾರ್ಯದಲ್ಲಿ ಉತ್ಸಾಹವು ಹೆಚ್ಚುತ್ತಿದೆ. ಆಪ್ತೇಷ್ಟರ ಮತ್ತು ಪ್ರಿಯಜನರ ಸಹಾಯವು ನಿಮಗೆ ದೊರೆಯುವುದು. ಆರಂಭಿಸಿದ ಕಾರ್ಯಗಳು ಹೆಚ್ಚಾಗಿಯಾಗಿ ನಿರ್ವಿಘ್ನದಿಂದ ಕೊನೆಗಾಣುವವು. ಕರ್ಮಕ್ಕೆ ತಕ್ಕುದಾಗಿ ಧನವಸನಾದಿಗಳ ಪ್ರಾಪ್ತಿಯಾಗುವದು. ಆದರೂ ನಿಮ್ಮ ವಿರೋಧಿಗಳು ಹೆಚ್ಚಾಗಿ ನಿಮ್ಮನ್ನು ಪೀಡಿಸುವುದರಿಂದ ಮಾನಸಿಕ ಸುಖವು ಸಿಗಲಾರದು. ಕೆಲವೊಂದು ಅಲ್ಪ ಜನರ ಸಹವಾಸದಿಂದ ಗೌರವವು ಕಡಿಮೆಯಾಗಿ ಜನರ ನಗೆಗೀಡಾಗುವ ಪ್ರಸಂಗಬರಲಿದೆ. ನಿಂತಲ್ಲಿ ನಿಲ್ಲದೆ ಹೆಚ್ಚಾಗಿ ತಿರುಗಾಡುತ್ತಲೇ ಇದ್ದು ಸಮಯವನ್ನು ಕಳೆಯುವಿರಿ. ತಾ. 20, 23, 24 ಈ ಮೂರು ದಿನಗಳ ಮಟ್ಟಿಗೆ ಕಿಂಚಿದುತ್ತಮ.

ವೃಶ್ಚಿಕರಾಶಿ—

ಗ್ರಹ ಮಂಡಲದಲ್ಲಿ ಹೆಚ್ಚಿನ ಗ್ರಹರು ನಿಮಗೆ ಅನುಕೂಲರಾಗಿರುವಾಗ ಕೇವಲ ರವಿ ರಾಹುಗಳಿಂದ ಏನೊಂದೂ ಕಾರ್ಯಸಾಗದು. ಆದರೂ ಗ್ರಹರಾಜನೆನಿರುವ ಪ್ರಯುಕ್ತ ರವಿಯು ತನ್ನ ಶಕ್ತಿಯನ್ನು ಕಿಂಚಿತ್ತಾದರೂ ತೋರಿಸದಿರನು. ಆ ಕಾರಣ ಸಾಲಿಗರೊಳು ಪರಸ್ಪರ ಮನಸ್ತಾಪವನ್ನು ಹುಟ್ಟಿಸುವನು. ಇಷ್ಟೇ ಅಲ್ಲದೆ ಇತರ ವಿಚಾರಗಳಲ್ಲಿ ಸದ್ಗ್ರಹರ ಬಲವೇ ಅಧಿಕವಾಗಿರುವುದರಿಂದ ನೀವು ಉದಾಸೀನದಿಂದ ಕುಳಿತರೂ ನಿಮ್ಮ ಕೈಹಿಡಿದು ಎಳೆದೊಯ್ಯುವರು ಕಾರ್ಯ ಪ್ರವೃತ್ತರಾಗುವ ಸಲುವಾಗಿ. ದುಃಖವೆಂಬುದು ದುರ್ಲಭವಾಗುವುದು. ಆರೋಗ್ಯವು ಉತ್ತಮವಾಗಿರುವುದು. ಉತ್ಸಾಹ ಶಕ್ತಿಯು ದಿನದಿಂದ ದಿನಕ್ಕೆ ಏರುತ್ತಾ ಹೋಗುವುದು. ಸರ್ವಕ್ಕೂ ಮೂಲವಾದ ಕಾಂಚನವು ನಿಮಗೆ ಅನಾಯಾಸವಾಗಿ ದೊರೆಯುವುದು. ಆರಬ್ಧಾಂತಗಾಮಿಗಳಾದ ನೀವು ಸದಾ ವಿಜಯಮಾಲಿಕೆಯಿಂದ ಕಂಗೊಳಿಸುವಿರಿ. ತಾ. 23. 24, ಈ ದಿನಗಳನ್ನು ಹೊರತು ಇತರ ಎಲ್ಲಾ ದಿನಗಳು ಅತ್ಯುತ್ತಮವಿವೆ.

ಧನುರಾಶಿ—

ನಿಮ್ಮ ಅದೃಷ್ಟವು ಅವನತಿಯ ಪರಾಕಾಷ್ಠತೆಯನ್ನು ಹೊಂದಿರುವುದು. ಆದಕಾರಣ ಕೈಗೆ ಬಂದ ತುತ್ತೂ ಕೂಡ ಬಾಯಿಗೆ ದೊರಕಲಾರದು. ನೀವೊಂದೆಣಿಸಿ ಕಾರ್ಯಪ್ರವೃತ್ತರಾದರೆ ಅದು ಮತ್ತೊಂದು ರೀತಿಯಲ್ಲಿ ಪರಿಣಮಿಸುವದು. ಹಿಂದೆ ಪರೀಕ್ಷಿದ್ರಾಜನು ನಿಂಬೆಹಣ್ಣೊಂದು ಹಿಡಿದು ಆಘ್ರಾಣಿಸಲದು ಹಾವಾಗಿ ಪರಿಣಮಿಸಿ ಅತನಿಗೆ ಮೃತ್ಯುವನ್ನು ತಂದಿತಲ್ಲವೇ? ಇದೇ ರೀತಿಯ ಘಟನೆಗಳೇ ಹೆಚ್ಚಾಗಿ ಸಂಭವಿಸುವವು. ಸಕಲವಿಚಾರದಲ್ಲೂ ನಿಮ್ಮ ಜನರ ಪರಿಸ್ಥಿತಿಯೇ ದಿನ ದಿನಕ್ಕೆ ಏರುತ್ತಾ ಹೋಗುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಶ್ರೀನಿವಾಸದಲ್ಲಿ ಸಕಲ ಕಷ್ಟನಷ್ಟಗಳಿಗೆ ಗುರಿಯಾಗುವಿರಲ್ಲದೆ ಸ್ವಪ್ನದಲ್ಲೂ ಕೂಡ ಸುಖಲೇಶವನ್ನು ಕಾಣಲು ಸಮರ್ಥರಾಗುವಂತಿಲ್ಲ. ಆದಕಾರಣ ಭಕ್ತವತ್ಸಲನ ಶರಣುಹೊಂದುವವರಿಗೆ ಕಿಂಚಿದಿಷ್ಟಗಳು ಲಭಿಸಲೂ ಬಹುದು.

ಮಕರರಾಶಿ—

ಶ್ರೀನಿವಾರದಲ್ಲಿ ಹಣಕ್ಕಾಗಿ ಬಹಳ ಕಷ್ಟ

ಮೂಲವ್ಯಾಧಿಗೆ
ವಿಶೇಷ ಗುಣಕಾರಿ.
ಮಹಾತ್ಮರವರ ಪ್ರಸಾದ
ಆಶ್ಚರ್ಯಕರವಾದ ಔಷಧಿ
ಸಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.
ಅರ್ಶಮಾರಾ
ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿವಿಕೆ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುವುದು. ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು. ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.
ಬೆಲೆ ರೂ. 2-0-0.
ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4
AROGYA SADANA
Durgadevi Street, BOMBAY 4

1939ನೇ ಇಸ್ವಿ ಜುಲಾಯಿ ತಾ. 10ನೇ ಸೋಮವಾರ ದಿವಸ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

			ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡ ಮುಡಿಗೆ	...	...	1—14—0	...
,, ದುಯಂ ,, ,,	...	...	1—12—0	...
,, ಅವ್ವಲ್ ತರದ ಸುಗ್ಗಿ ಮುಡಿಗೆ	...	...	1—12—0	...
,, ದುಯಂ ,, ,,	...	...	1—10—0	...
ಅಕ್ಕಿ-ಅವ್ವಲ್ ತರದ ಗುಡ್ಡ ಮುಡಿಗೆ	...	...	4—12—0	...
,, ದುಯಂ ,, ,,	...	...	4— 8—0	4—10—0
,, ಅವ್ವಲ್ ಸುಗ್ಗಿ ,,	...	...	4— 7—0	...
,, ದುಯಂ ,, ,,	...	...	4— 3—0	4— 5—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ		...	27— 8—0	35— 0—0
,, ಸಿಪ್ಪೆ ಇದ್ದದ್ದು ,,		...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	...	...	50— 0—0	...
,, ದೀಪಿ	...	...	...	...
,, ದಿಲ್‌ಪಸಂದ್	...	...	...	...
ತೆಂಗಿನ ಎಣ್ಣೆ ಮಣಕ್ಕೆ	...	...	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	...	...	3— 8—0	4— 4—0
ಗೇರುಬೀಜ ಮುಡಿಗೆ ...	...	...	3—10—0	...
ಕಬ್ಬಿನ ಬೆಲ್ಲ ಖಂಡಿಗೆ	...	...	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	...	...	14— 8—0	15— 8—0

ಕಿವುಡರಿಗೆ
ಕಿವಿ ಕೇಳುತ್ತದೆ
ವಿಜ್ಞಾನ ಶಾಸ್ತ್ರದ ನವೀನ ಶೋಧೆ.
ಬಧಿರತಾ-ಹರಣ
ಕರ್ಣರೋಗಗಳಿಗೆ ಅಪ್ರತಿಮ ಔಷಧ. ಕಿವಿ ಸೋರುವುದು, ಕೀವು ಬರುವುದು, ಕಿವಿಯೊಳಗೆ ಘುಂಯಿ ಘುಂಯಿ ಶಬ್ದವಾಗುವುದು, ಕ್ರಿಮಿ ಬೀಳುವುದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ
ಬಧಿರತಾ-ಹರಣವು
ಅಮೂಲ್ಯ ಔಷಧಿ. ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂದೆ.
ಬೆಲೆ ರೂ. 2—0—0
ಪತ್ತೆ:—ಆರೋಗ್ಯ ಸದನ,
ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.
AROGYA SADAN
Durgadevi Street, BOMBAY 4

'ZAMANA'

SYNOPSIS

Professor Govind is a staunch supporter of Emancipation of womanhood, and his cousin Hansa is his admirer. His father Parumal is orthodox enough to phoo-phoo at his ideas. He comes to a village to spend his vacation. Here he meets Sushila, a singing lark and ideal village girl, and their love for each other becomes too deep rooted for wordly obstacles. Mohan and Gulab, Sushila's brothers, know that the Matching is not alright so far as the question of their rank is considered. Govind and Sushila, in the ardour of their love, are infatuated, and they marry, though Mohan has to sell his properties to meet the demand of dowry by the greedy parents of Govind.

Govind & Sushila come to town, and Hansa fondly hopes that their marriage life would all be a bliss. But the orthodox parents-in-lew, taunt Sushila day and night and make her life an everlasting misery. She bravesit o ut, and complains to none. Govind tries to assert his rights to no avail. His parents are too strong for him. Sushila is temporarily separated. Govind instead, of fighting like a man, takes refuse in drink and gambles. The last hope of Sushila is shattered. Her brothers are penniless. Mohan is confined tobed. Heroically Hansa rushes to the gambling den to give a bit of her mind to Govind. What happens next?

* ಕಥಾ ಸಾರಾಂಶ *

ಪ್ರೊಫೆಸರ್ ಗೋವಿಂದನು ಸ್ತ್ರೀಸಮಾಜೋದ್ಧಾರಕ್ಕೆ ಬದ್ಧ ಕಂಕಣನು. ಅವನ ಸೊಸೆ ಹಂಸಳು ಅವನ ಆರಾಧಕಳು. ಗೋವಿಂದನ ತಂದೆ ಪಾರುಮಲನು ಮಗನ ಹುಚ್ಚುತತ್ವಕ್ಕೆ ಅಪಹಾಸ್ಯಮಾಡುತ್ತಿದ್ದನು. ರಜೆಯ ಸಮಯ ಹಳ್ಳಿಗೆ ಬಂದಾಗ ಸುಶೀಲೆಎಂಬ ತರುಣಿಯಲ್ಲಿ ಮೋಹಗೊಳ್ಳುವನು. ಸುಶೀಲಳ ಅಣ್ಣ ಮೋಹನನು ಪ್ರಾರಂಭದಲ್ಲಿ ಇವಕ್ಕೆ ಒಪ್ಪಲಿಲ್ಲ. ಲಕ್ಷಾಧೀಶನ ಮಗನೊಬ್ಬನು ಬಡ ಸುಶೀಲೆಯನ್ನು ವರಿಸುವುದೆಂದರೆ, ಅವರ ಸಾಂಸಾರಿಕ ಜೀವನವು ಸರಿಯಾಗದು ಎಂದೇ ಅವನ ಹೆದರಿಕೆ. ಆದರೆ ಸುಶೀಲೆ ಮತ್ತು ಗೋವಿಂದನ ಪ್ರೀತಿಯು ಅಂತಹುದು. ಅವರು ಮದುವೆಯಾಗುವರು. ಗೋವಿಂದನ ತಂದೆಯ 'ವರದಕ್ಷಿಣೆ' ದಾಹವನ್ನು ಅಡಗಿಸಲು, ಮೋಹನನಿಗೆ ತನ್ನ ಮನೆಮಾರನ್ನು ಮಾರಿಕೊಳ್ಳಬೇಕಾಯಿತು.

ಗೋವಿಂದನೂ ಸುಶೀಲೆಯೂ ಪಟ್ಟಣಕ್ಕೆ ಬರುವರು. ಅವರ ದಾಂಪತ್ಯವು ಸುಗಮವಾಗಿ ಸಾಗಬಹುದೆಂದು ಹಂಸಳು ನಿರೀಕ್ಷಿಸುವಳು. ಆದರೆ. ಅತ್ತೆ ಮಾವಂದಿರ ಕಾಟ—ಇದು ಸುಶೀಲೆಗೂ ತಪ್ಪಿರಲಿಲ್ಲ. ಅವಳದನ್ನು ಸಹಿಸಿದಳು. ಯಾರಲ್ಲಿಯೂ ದೂರಲಿಲ್ಲ. ಗೋವಿಂದನು ತಂದೆ ತಾಯಿಗಳ ಮೂಢತ್ವವನ್ನು ಖಂಡಿಸುವನು. ಪ್ರಯೋಜನವೇನು?

ಅಂತೂ, ಸುಶೀಲೆಯು ಸ್ವಲ್ಪ ಸಮಯ ಬೇರ್ಪಟ್ಟಿರಬೇಕೆಂದು ನಿಶ್ಚಯವಾಗಲು, ಗೋವಿಂದನು ವೀರನಂತೆ ಹೊಡೆದಾಡುವುದನ್ನು ಬಿಟ್ಟು, ತನ್ನ ದುಃಖವನ್ನು ಅಡಗಿಸಿಕೊಳ್ಳಲು ಸುರೆಯ ದಾಸನಾಗಿ ಜುಗಾರಿಯಾಡುವನು. ಸುಶೀಲೆಗಿದ್ದ ಒಂದೇ ಒಂದು ಆಶೆಯೂ ದೂರಾಯಿತು. ಅವಳ ಅಣ್ಣನೂ ಕಾಸಿಲ್ಲದವ. ಮೇಲಾಗಿ ಹಾಸಿಗೆ ಹಿಡಿದಿದ್ದನು ಜ್ವರದಿಂದ. ಹಂಸಳು ಗೋವಿಂದನಲ್ಲಿಗೆ ಧಾವಿಸುವಳು, ಅವನನ್ನು ಸರಿದಾರಿಗೆ ತರಲು—ಮುಂದೇನು?

NEXT:-

LONE DEFENDER

ಬರುವ ಚಿತ್ರ:-

ಲೋನ್ ಡಿಫೆಂಡರ್

Every visit is a new delight at

Sri Ramakrishna Theatre.

Comming: **Bhaktha Kuchela** to Sri Krishna abode, Udipi, **Wadia's Pahadi Kanya,** *featuring fearless Nadia:* **Becky Sharp, Mastana Mashuk, Jailor.**

ಮುಂದಿನ ಚಿತ್ರ: 'ಭಕ್ತಕುಚೇಲನು' ಶ್ರೀಕೃಷ್ಣನ ನಿವಾಸ (ಉಡುಪಿ)ಕ್ಕೆ! ವಡಿಯಾ ಮೂವಿಟೋನಿನವರ 'ಪಹಡಿ ಕನ್ಯಾ' ಬೆಕ್ಕಿಶಾರ್ಪ್, ಮಸ್ತಾನಾ ಮಶಕ್, ಜೈಲರ್ ಇತ್ಯಾದಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ. 20-7-39ರಿಂದ ತಾ. 27-7-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದುದಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.

ಸಂ. ಸ.]

ಮೇಷರಾಶಿ—

ಈಗಲೀಗ ನಿಮ್ಮ ಪರಿಸ್ಥಿತಿಯು ಸ್ಫೂರ್ತಿ ಕೆಡಲಾರಂಭಿಸಿದೆ. ಮನೆಯವರೆಲ್ಲರೂ ನಿಮ್ಮ ಭಾಗಕ್ಕೆ ವಿರೋಧಿಗಳಂತಿರುವರು. ಆಪ್ತಮಿತ್ರರ ಭೇಟಿಯೂ ಕೂಡ ದುರ್ಲಭವಾಗುವುದು. ಕೆಲವೊಂದು ವೇಳೆ ಶತ್ರು ಜನರ ಮರೆಹೊಕ್ಕು ದಿನಗಳೆಯಬೇಕಾದ ಪ್ರಸಂಗವೂ ಕೂಡ ಒದಗಬಹುದು. ನಿತ್ಯ ದುಃಖಕಾರಿಯಾದ ಸಂಸಾರದಲ್ಲಿ ವಿರಕ್ತಿಯು ಹೆಚ್ಚುವುದು. ಆರೋಗ್ಯವೂ ಕೂಡ ಕೆಡುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣಿಸಲು ಸಾಧ್ಯವಾಗುವಂತಿಲ್ಲ. ಆರ್ಥಿಕದೃಷ್ಟಿಯಿಂದಂತೂ ಈ ವಾರವು ನಿಮಗೆ ತೀರ ಪ್ರತಿಕೂಲವಾಗಿರುವುದು. ಅಭಿಲಷಿತ ಪದಾರ್ಥಗಳು ಸಮಯಕ್ಕೆ ದೊರೆಯಲಾರವು. ಪ್ರವಾಸಮಾಡುವುದರಿಂದ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗುವವು. ವಿದ್ಯಾಭಿಲಾಷಿಗಳಿಗೆ ವಿಶೇಷ ಹಾನಿಕರವಾದುದೀ ವಾರವು. ತಾ. 21ರಿಂದ 24ರ ವರೆಗೆ ಇಷ್ಟವು ಸಿದ್ಧಿಸಲೊಲ್ಲದಾದರೂ ಅನಿಷ್ಟಗಳು ಕಡಿಮೆಯಾಗಲಿವೆ.

ವೃಷಭರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಉತ್ತಮವಾಗಿದ್ದರೂ ಶುಭ ಶನಿ ರಾಹುಗಳು ಪ್ರತಿಕೂಲರಾಗಿರುವರು. ಇವರೆಲ್ಲರೂ ಪಾಪಗ್ರಹರಾದುದರಿಂದ ಉಪಕಾರವನ್ನು ಮಾಡಲು ಹಿಂಜರಿದರೂ ಅಪಕಾರವನ್ನು ತಂದೊಡ್ಡಲು ನಾಮುಂದೆ ತಾಮುಂದೆ ಎಂದು ಹಾತೊರೆಯುವ ಸ್ವಭಾವದವರು. ಆದರಲ್ಲೂ ಭಾಗ್ಯಪತಿಯು ವ್ಯಯದಲ್ಲೂ ವ್ಯಯಾಧಿಪತಿಯು ಭಾಗ್ಯದಲ್ಲೂ ಪರಸ್ಪರ ಸ್ಥಾನ ವಿನಿಮಯ ಹೊಂದಿ ನೀಚೋಚ್ಚರಾಗಿ ಕೇಂದ್ರದಲ್ಲಿರುವುದರಿಂದ ಧನಾಗಮ ನಿರ್ಗಮ ವಿಚಾರದಲ್ಲಿ ಅನರ್ಥ ಶತಗಳು ಉಂಟಾಗಲಿವೆ. ಆದರೂ ಲಾಭಾಧಿಪತಿಯಾದ ಬೃಹಸ್ಪತ್ಯಾಚಾರ್ಯರು ಸ್ವಕ್ಷೇತ್ರಗತರಾಗಿರುವುದರಿಂದ ಕೈಯಲ್ಲಿ ಯಾವಾಗಲೂ ಹಣ ಕಾಸಿಗೆ ತೊಂದರೆಬಾರದು. ಸಾಹಸಕಾರ್ಯಗಳಲ್ಲಿ ನಿಮಗೆ ಸದಾ ವಿಜಯ ದೊರೆಯುವುದು. ಅರ್ಧಾಂಗಿಯ ಆರೋಗ್ಯವು ಕೆಡಲಿರುವುದರಿಂದ ಕಸ್ತಲುವಾಗಿ ಚಿಂತೆಯೂ ಧನವ್ಯಯವೂ ಅಧಿಕವಾಗಲಿದೆ. ವಿದ್ಯೋಪಜೀವಿಗಳಿಗೆ ಈ ವಾರವು ಹೆಚ್ಚಿನಂಶ ಉತ್ತಮವಾಗಿರುವುದು. ತಾ. 23ರಿಂದ ವಾರಾಂತ್ಯದ ವರೆಗೂ ನಿಮ್ಮ ಇಷ್ಟಾರ್ಥಗಳು ಅನಾಯಾಸದಿಂದ ಕೈಗೂಡುವವು.

ಮಿಥುನರಾಶಿ—

ಕೈ ಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಸ್ವಕಾರ್ಯ ಸಾಧನೆಗಾಗಿ ಹೆಚ್ಚಿನ ಶ್ರಮವಹಿಸಬೇಕಾಗುವುದು. ಯಾವ ಕಾರ್ಯವೂ ಅನಾಯಾಸದಿಂದ ಸಾಧ್ಯವಾಗಲೊಲ್ಲದು. ಪ್ರಕೃತದಲ್ಲಿ ನಿಮಗೆ ವಿಶ್ವಾಸಾರ್ಹರಾದ ಜನರೇ ಇಲ್ಲವೆಂದು ಹೇಳಬಹುದು. ಅಪಕಾರಕ್ಕೆ ಪ್ರತಿಯೊಂದು ಕಾರ್ಯವನ್ನೂ ಅದ್ವಿತೀಯರಾಗಿಯೇ ಮುಂದುವರಿಸಬೇಕಾಗುವುದು. ಶರೀರಾಲಸ್ಯದಿಂದ ನಿದ್ರೆಯು ಅಧಿಕವಾಗುವುದರಿಂದ ಕೋಪವು ಸ್ವಲ್ಪ ಅಧಿಕವಾಗಿ ಮಾತುಮಾತಿಗೆ ಕಲಹವಾದೀತು. ಆಯವ್ಯಯಗಳು ಸಮತೂಕದಲ್ಲಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಲಾರಿರಿ. ಗೃಹಸುಖವು ಅವ್ಯಾಹತವಾಗಿ ದೊರೆಯುವುದು. ನೌಕರಿಗಳಿಗೆ ಸ್ವಕಾರ್ಯದಲ್ಲಿ ಔದಾಸೀನ್ಯವು ಹೆಚ್ಚಾಗುವುದು. ತಾ. 21ರಿಂದ 24ರ ವರೆಗೂ ಕಾರ್ಯವಿಘ್ನ, ರೋಗಭಯ ಇತ್ಯಾದ್ಯನಿಷ್ಟಗಳು ಅಧಿಕವಾಗಲಿವೆ.

ಕರ್ಕಾಟಕರಾಶಿ—

ನಿಸರ್ಗತಃ ಶುಭರಾಗಿದ್ದವರು ದುಸ್ಥಾನಗತರಾಗಿಯೂ ಅಶುಭರಾಗಿದ್ದವರು ದುಃಸ್ಥಾನಗತರಾಗಿಯೂ ಇರುವುದರಿಂದ ಇಷ್ಟಾನಿಷ್ಟ ಫಲಗಳು ಸರಿಸಮಾನವಾಗಿ ಪ್ರಾಪ್ತವಾಗಲಿವೆ. ಕಡಿವಾಣ ತಪ್ಪಿದ ಕುದುರೆಯಂತೆ ಮನಸ್ಸು ದುರ್ಮಾರ್ಗದಲ್ಲಿ ಮುಂದರಿಯಲು ಹಾತೊರೆಯುತ್ತಿರುವುದಾದರೂ ಬುದ್ಧಿಬಲದಿಂದದನ್ನು ಹತೋಟಿಯಲ್ಲಿಡಲು ಶಕ್ತರಿರುವಿರಿ. ಇಲ್ಲಸಲ್ಲದ ಕಲಹಗಳು ಗಂಟುಬಿದ್ದು ತನ್ನಿಮಿತ್ತ ಧನವ್ಯಯವಾಗಲಿದೆ. ವಿದ್ಯಾ ವಿಷಯಕವಾದ ಬುದ್ಧಿಯು ಸಮೀಚೀನವಾಗಿದ್ದರೂ ಇತರ ತೊಡಕು ತೊಂದರೆಗಳಿಂದ ಅಧ್ಯಯನ ಭಾಗಕ್ಕೆ ಪ್ರತಿಬಂಧಕವುಂಟಾಗುವುದು. ಉದ್ಯೋಗಿಗಳಿಗೂ, ವ್ಯಾಪಾರಿಗಳಿಗೂ ಇತರ ವೈದಿಕವೃಂದದವರಿಗೂ ಖರ್ಚಿಗೆ ಸಾಕಷ್ಟು ಉತ್ಪತ್ತಿಯಾಗುವುದು. ಪತ್ನಿಯೊಡನೆ ನಿತ್ಯ ಕಲಹವಾಗಲಿದೆ. ಉದರ ರೋಗವೂ ಆಗಾಗ ತಲೆದೋರೀತು. ತಾ. 21, 22 ಈ ದಿನಗಳನ್ನುಳಿದು ಇತರ ದಿನಗಳು ಹೆಚ್ಚಿನ ಅನುಕೂಲಗಳಾಗಿಲ್ಲ.

ಸಿಂಹರಾಶಿ—

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತೋಕ್ತಿಯಂತೆ ಆಯಾಯ ವರ್ಣಾಶ್ರಮಿಗಳಿಗೆ ಶಾಸ್ತ್ರದಲ್ಲಿ ಹೇಳಿದ ಧರ್ಮಾಚರಣೆಯಿಂದ ಸದ್ಯದಲ್ಲಿಒಂದೊಮ್ಮೆ ಕೆಡುಕು ಕಂಡುಬಂದರೂ ಅದು ಮುಂದಿನ ಕಲ್ಯಾಣಕ್ಕಾಗಿಯೇ. ಈ ವಿಷಯವನ್ನು ನೀವು ಗಮನಿಸದೆ ಧರ್ಮದ್ರೋಹಿಗಳಾಗಿ ಮುಂದಿನ ಕಲ್ಯಾಣವನ್ನು ಕೈಯ್ಯಾರೆ ಕೆಡಿಸಿಕೊಳ್ಳುವುದು ಎಷ್ಟಕ್ಕೂ ಉಚಿತವಲ್ಲ. ಕಾಹಿಲೆ ಬಂದವರಿಗೆ ಔಷಧಿ ಸೇವನೆಯು ರುಚಿಸದಿದ್ದರೂ ಅದು ಮುಂದೆ ಒಳ್ಳೇ ಪರಿಣಾಮಕಾರಿಯಾಗುವುದಿಲ್ಲವೇ? ಪ್ರಕೃತದಲ್ಲಿ ನೀವು ಯಾವದೊಂದು ಕಾರ್ಯಕ್ಕೂ ಮುಂದೊತ್ತಿ ಹೋಗಬೇಡಿ. ವ್ಯವಹಾರ ನಿಮಿತ್ತ ಜನತೆಯಲ್ಲಿ ಕಲಹವುಂಟಾಗಿ ವೈರತ್ವಕ್ಕೆ ಕಾರಣವಾಗುವದು. ಆರೋಗ್ಯ ವಿಚಾರದಲ್ಲಿ ಹುಟ್ಟು ಗಮನಕೊಡಿರಿ. ಸದ್ಯ ಪ್ರವಾಸವನ್ನು ಕೈಬಿಡುವುದೊಳ್ಳಿತು. ಸತ್ಕಾರ್ಯಾಚರಣೆಯಲ್ಲಿರತಕ್ಕ ತರುಣ ಜನವೃಂದಕ್ಕೆ ಮಿತ್ರ ಜನರ ಬಲದಿಂದ ಹೆಚ್ಚಿನ ಅನುಕೂಲತೆಗಳು ಒದಗುವವು. ತಾ. 21, 22, 25, 26, 27, ಈ ದಿನಗಳಲ್ಲಿ ಮಾನಚ್ಯುತಿ ಕಾರ್ಯವಿಘ್ನಗಳು ಸಂಭವಿಸಲಿವೆ.

ಕನ್ಯಾರಾಶಿ—

"ಬಲ್ಲವರ ಮಾತು ಬೆಲ್ಲಕ್ಕಿಂತ ಸವಿ" ಎಂಬ ಗಾದೆಯಂತೆ ನಿಮ್ಮ ಮಾತಿನಲ್ಲಿ ಅದೊಂದು ಬಗೆಯ ಸ್ವಾರಸ್ಯಮಯವಾದ ರಸವಿರುವುದು. ಆದುದರಿಂದಲೇ ನಿಮ್ಮನ್ನು ಹಲವರು ಮೆಚ್ಚುವರು. ಈ ಕಾರಣದಿಂದಲೇ ನಿಮ್ಮ ಮೇಲೆ ಎರಡೆಂಟೆಣಿಸತಕ್ಕವರೂ ಕೂಡ ನಿಮ್ಮೆದುರಿಗೆ ಬಂದಾಗ ಸ್ನೇಹಿತರಂತೆಯೇ ವರ್ತಿಸುವರು. ಹೆಚ್ಚಿನವರು ನಿಮ್ಮನ್ನು ಗೌರವ ಪೂರ್ವಕವಾಗಿ ಕಾಣುವರು. ಕೋರ್ಟು ಮತ್ತಿತರ ರಾಜಕೀಯ ಕಾರ್ಯಾಲಯಗಳಲ್ಲೂ ನಿಮ್ಮ ಇಷ್ಟಾರ್ಥವು ಕೈಗೂಡುವುದು. ನೌಕರಿ ಮಾಡತಕ್ಕವರಿಗೆ ಇದಿರಾಳಿಗಳಿಂದ ಕೇವಲ ವಿಚಾರದಲ್ಲಿ ಹಾನಿಯೊದಗುವ ಸಂಭವವಿದೆ. ಸಂಸಾರದಲ್ಲೂ ಕೂಡ ಸುಖ ಸಿಗಲಾರದು. ಪತ್ನೀಪುತ್ರರ ವಿಯೋಗವುಂಟಾಗಿ ತತ್ಸಂಬಂಧವಾದ ದುಃಖಕ್ಕೊಳಗಾಗುವಿರಿ. ಮನಸ್ಸಿಗೆ ಹೆಚ್ಚಿನ ಕೆಲಸಕೊಡುವುದರಿಂದ ನಿದ್ರೆ ಕೂಡಾ ಸಮಯಕ್ಕೆ ಸರಿಯಾಗಿ ಬರಲೊಲ್ಲದೆ ಆರೋಗ್ಯ ಕೆಡುವ ಸಂಭವವಿದೆ. ತಾ. 21, 22, 26, 27 ಈ ದಿನಗಳಲ್ಲಿ ಧನಲಾಭ ಕಾರ್ಯಜಯ ಇಷ್ಟವಸ್ತುಗಳ ಪ್ರಾಪ್ತಿಯುಂಟಾಗುವದು.

ತುಲಾರಾಶಿ—

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' ಎಂಬ ಶಾಸ್ತ್ರೋಕ್ತಿಯಂತೆ ಸುಖದುಃಖಗಳೆರಡೂ ರಾತ್ರಿಹಗಲುಗಳಂತೆ ನರಜೀವನದಲ್ಲಿ ಸುತ್ತುತ್ತಿರುತ್ತವೆ. ಈಗಲೀಗ ನೀವು ಆ ದುಃಖವೆಂಬ ಕಾಳ ರಾತ್ರಿಯನ್ನು ಕಳೆಯಲಾರಂಭಿಸಿ ಅದರ ಅಂತ್ಯಯಾಮಾಂತ್ಯಕ್ಕೆ ಬಂದಿರುವಿರಿ. ಆದಕಾರಣದಿಂದಲೇ ಕಾರ್ಯದಲ್ಲಿ ಉತ್ಸಾಹವು ಹೆಚ್ಚುತ್ತಿದೆ. ಆಪ್ತೇಷ್ಟರ ಮತ್ತು ಪ್ರಿಯಜನರ ಸಹಾಯವು ನಿಮಗೆ ದೊರೆಯುವುದು. ಆರಂಭಿಸಿದ ಕಾರ್ಯಗಳು ಹೆಚ್ಚುಗೆಯಾಗಿ ನಿರ್ವಿಘ್ನದಿಂದ ಕೊನೆಗಾಣುವವು. ಕರ್ಮಕ್ಕೆ ತಕ್ಕುದಾಗಿ ಧನವಸನಾದಿಗಳ ಪ್ರಾಪ್ತಿಯಾಗುವವು. ಆದರೂ ನಿಮ್ಮ ವಿರೋಧಿಗಳು ಹೆಚ್ಚಾಗಿ ನಿಮ್ಮನ್ನು ಪೀಡಿಸುವುದರಿಂದ ಮಾನಸಿಕ ಸುಖವು ಸಿಗಲಾರದು. ಕೆಲವೊಂದು ಅಲ್ಪ ಜನರ ಸಹವಾಸದಿಂದ ಗೌರವವು ಕಡಿಮೆಯಾಗಿ ಜನರ ನಗೆಗೀಡಾಗುವ ಪ್ರಸಂಗಬರಲಿದೆ. ನಿಂತಲ್ಲಿ ನಿಲ್ಲದೆ ಹೆಚ್ಚಾಗಿ ತಿರುಗಾಡುತ್ತಲೇ ಇದ್ದು ಸಮಯವನ್ನತಿಕ್ರಮಿಸುವಿರಿ. ತಾ. 20, 23, 24 ಈ ಮೂರು ದಿನಗಳ ಹೊರತಾಗಿ ಕಿಂಚಿದುತ್ತಮ.

ವೃಶ್ಚಿಕರಾಶಿ—

ಗ್ರಹ ಮಂಡಲದಲ್ಲಿ ಹೆಚ್ಚಿನ ಗ್ರಹರು ನಿಮಗೆ ಅನುಕೂಲರಾಗಿರುವಾಗ ಕೇವಲ ರವಿ ರಾಹುಗಳಿಂದ ಏನೊಂದೂ ಕಾರ್ಯಸಾಗದು. ಆದರೂ ಗ್ರಹರಾಜನೆನಿರುವ ಪ್ರಯುಕ್ತ ರವಿಯು ತನ್ನ ಶಕ್ತಿಯನ್ನು ಕಿಂಚಿತ್ತಾದರೂ ತೋರಿಸದಿರನು. ಆ ಕಾರಣ ಸಾಲಿಗರೊಳು ಪರಿಸ್ಪರ ಮನಸ್ತಾಪವನ್ನು ಹುಟ್ಟಿಸುವನು. ಇಷ್ಟೇ ಅಲ್ಲದೆ ಇತರ ವಿಚಾರಗಳಲ್ಲಿ ಸದ್ಗ್ರಹರ ಬಲವೇ ಅಧಿಕವಾಗಿರುವುದರಿಂದ ನೀವು ಉದಾಸೀನದಿಂದ ಕುಳಿತರೂ ನಿಮ್ಮ ಕೈಹಿಡಿದು ಎಳೆದೊಯ್ಯುವರು. ಕಾರ್ಯ ಪ್ರವೃತ್ತರಾಗುವ ಸಲುವಾಗಿ, ದುಃಖವೆಂಬುದು ದುರ್ಲಭವಾಗುತ್ತದೆ. ಆರೋಗ್ಯವು ಉತ್ತಮವಾಗಿರುವುದು. ಉತ್ಸಾಹ ಶಕ್ತಿಯು ದಿನದಿಂದ ದಿನಕ್ಕೆ ಏರುತ್ತಾ ಹೋಗುವುದು. ಸರ್ವಕ್ಕೂ ಮೂಲವಾದ ಕಾಂಚನವು ನಿಮಗೆ ಅನಾಯಾಸವಾಗಿ ದೊರೆಯುವುದು. ಆರಬ್ಧಾಂತಗಾಮಿಗಳಾದ ನೀವು ಸದಾ ವಿಜಯಮಾಲಿಕೆಯಿಂದ ಕಂಗೊಳಿಸುವಿರಿ. ತಾ. 23, 24, ಈ ದಿನಗಳನ್ನು ಹೊರತು ಇತರ ಎಲ್ಲಾ ದಿನಗಳು ಅತ್ಯುತ್ತಮವಿವೆ.

ಧನೂರಾಶಿ—

ನಿಮ್ಮ ಇದ್ದಷ್ಟವು ಆಪನ್ನತೆಯು ಪರಾಕಾಷ್ಠತೆಯನ್ನು ಹೊಂದಿರುವುದು. ಆದಕಾರಣ ಕೈಗೆ ಬಂದ ತುತ್ತೂ ಕೂಡ ಬಾಯಿಗೆ ದೊರಕಲಾರದು. ನೀವೊಂದೆಣಿಸಿ ಕಾರ್ಯಪ್ರವೃತ್ತರಾದರೆ ಅದು ಮತ್ತೊಂದು ರೀತಿಯಲ್ಲಿ ಪರಿಣಮಿಸುವದು. ಹಿಂದೆ ಪರೀಕ್ಷಿದ್ರಾಜನು ನಿಂಬೆಹಣ್ಣೆಂದು ಹಿಡಿದು ಆಘ್ರಾಣಿಸಲದು ಹಾವಾಗಿ ಪರಿಣಮಿಸಿ ಆತನಿಗೆ ಮೃತ್ಯುವನ್ನು ತಂದಿತಲ್ಲವೇ? ಇದೇ ರೀತಿಯ ಘಟನೆಗಳೇ ಹೆಚ್ಚಾಗಿ ಸಂಭವಿಸುವವು. ಸಕಲವಿಚಾರದಲ್ಲೂ ನಿರಾಶಾಜನಕ ಪರಿಸ್ಥಿತಿಯೇ ದಿನ ದಿನಕ್ಕೆ ಏರುತ್ತಾ ಹೋಗುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ ನೀವೀವಾರದಲ್ಲಿ ಸಕಲ ಕಷ್ಟನಷ್ಟಗಳಿಗೆ ಗುರಿಯಾಗುವಿರಲ್ಲದೆ ಸ್ವಪ್ನದಲ್ಲೂ ಕೂಡ ಸುಖಲೇಶವನ್ನು ಕಾಣಲು ಸಮರ್ಥರಾಗುವಂತಿಲ್ಲ. ಆದಕಾರಣ ಭಕ್ತವತ್ಸಲನ ಶರಣುಹೊಂದುವವರಿಗೆ ಕಿಂಚಿದಿಷ್ಟಗಳು ಲಭಿಸಲೂ ಬಹುದು.

ಮಕರರಾಶಿ—

ನೀವೀವಾರದಲ್ಲಿ ಹಣಕ್ಕಾಗಿ ಬಹಳ ಕಷ್ಟ

ಮೂಲವ್ಯಾಧಿಗೆ

ವಿಶೇಷ ಗುಣಕಾರಿ.

ಮಹಾತ್ಮರವರ ಪ್ರಸಾದ

ಆಶ್ಚರ್ಯಕರವಾದ ಔಷಧಿ

ಸಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.

ಅರ್ಶಮಾರಾ

ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿಕೆ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುವುದು. ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು.

ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.

ಬೆಲೆ ರೂ. 2-0-0.

ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

AROGYA SADANA

Durgadevi Street, BOMBAY 4

1939ನೇ ಇಸ್ವಿ ಜುಲೈ ತಾ. 10ನೇ ಸೋಮವಾರ ದಿವಸ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

			ರಿಂದ	ವರೆಗೆ
ಭತ್ತ ಅವ್ವಲ್ ತರದ ಗುದ್ದು ಮುಡಿಗೆ	...	...	1—14—0	...
„ ದುಯಂ „ „	...	...	1—12—0	...
„ ಅವ್ವಲ್ ತರದ ಸುಗ್ಗಿ ಮುಡಿಗೆ	...	...	1—12—0	...
„ ದುಯಂ „ „	...	...	1—10—0	...
ಅಕ್ಕಿ-ಅವ್ವಲ್ ತರದ ಗುದ್ದು ಮುಡಿಗೆ	...	...	4—12—0	...
„ ದುಯಂ „ „	...	...	4— 8—0	4—10—0
„ ಅವ್ವಲ್ ಸುಗ್ಗಿ „	...	...	4— 7—0	...
„ ದುಯಂ „ „	...	...	4— 3—0	4— 5—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ		...	27— 8—0	35— 0—0
„ ಸಿಪ್ಪೆ ಇದ್ದದ್ದು „		...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	...	...	50— 0—0	...
„ ದೀವಿ	...	...	...	...
„ ದಿಲ್‌ಪಸಂದ್	...	...	...	...
ತೆಂಗಿನ ಎಣ್ಣೆ ಮುಡಿಕ್ಕೆ	...	...	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	...	...	3— 8—0	4— 4—0
ಗೇರುಬೀಜ ಮುಡಿಗೆ	...	...	3—10—0	...
ಕಬ್ಬಿನ ಬೆಲ್ಲ ಖಂಡಿಗೆ	...	...	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	...	...	14— 8—0	15— 8—0

ಕಿವುಡರಿಗೆ

ಕಿವಿ ಕೇಳುತ್ತದೆ

ವಿಜ್ಞಾನ ಶಾಸ್ತ್ರದ ನವೀನ ಶೋಧೆ.

ಬಧಿರತಾ-ಹರಣ

ಕರ್ಣರೋಗಗಳಿಗೆ ಅಪ್ರತಿಮ ಔಷಧ. ಕಿವಿ ಸೋರುವುದು, ಕೀವು ಬರುವುದು, ಕಿವಿಯೊಳಗೆ ಭೊಂಯಿ ಭೊಂಯಿ ಶಬ್ದವಾಗುವುದು, ಕ್ರಿಮಿ ಬೀಳುವುದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ

ಬಧಿರತಾ-ಹರಣವು

ಅಮೂಲ್ಯ ಔಷಧಿ. ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂದೆ.

ಬೆಲೆ ರೂ. 2—0—0

ಪತ್ತೆ:—ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

AROGYA SADAN

Durgadevi Street, BOMBAY 4

'ZAMANA'

SYNOPSIS

Professor Govind is a staunch supporter of Emancipation of womanhood, and his cousin Hansa is his admirer. His father Parumal is orthodox enough to phoo-phoo at his ideas. He comes to a village to spend his vacation. Here he meets Sushila, a singing lark and ideal village girl, and their love for each other becomes too deep rooted for wordly obstacles. Mohan and Gulab, Sushila's brothers, know that the Matching is not alright so far as the question of their rank is considered. Govind and Sushila, in the ardour of their love, are infatuated, and they marry, though Mohan has to sell his properties to meet the demand of dowry by the greedy parents of Govind.

Govind & Sushila come to town, and Hansa fondly hopes that their marriage life would all be a bliss. But the orthodox parents-in-low, taunt Sushila day and night and make her life an everlasting misery. She bravesit out, and complains to none. Govind tries to assert his rights to no avail. His parents are too strong for him. Sushila is temporarily separated. Govind instead, of fighting like a man, takes refuse in drink and gambles. The last hope of Sushila is shattered. Her brothers are penniless Mohan is confined tobed. Heroically Hansa rushes to the gambling den to give a bit of her mind to Govind. What happens next?

* ಕಥಾ ಸಾರಾಂಶ *

ಪ್ರೊಫೆಸರ್ ಗೋವಿಂದನು ಸ್ತ್ರೀಸಮಾಜೋದ್ಧಾರಕ್ಕೆ ಬದ್ಧ ಕಂಕಣನು. ಅವನ ಸೊಸೆ ಹಂಸಳು ಅವನ ಆರಾಧಕಳು. ಗೋವಿಂದನ ತಂದೆ ಪಾರುಮಲನು ಮಗನ ಹುಚ್ಚುತತ್ವಕ್ಕೆ ಅಪಹಾಸ್ಯಮಾಡುತ್ತಿದ್ದನು. ರಜೆಯ ಸಮಯ ಹಳ್ಳಿಗೆ ಬಂದಾಗ ಸುಶೀಲೆಎಂಬ ತರುಣಿಯಲ್ಲಿ ಮೋಹಗೊಳ್ಳುವನು. ಸುಶೀಲಳ ಅಣ್ಣ ಮೋಹನನು ಪ್ರಾರಂಭದಲ್ಲಿ ಇದಕ್ಕೆ ಒಪ್ಪಲಿಲ್ಲ. ಲಕ್ಷಾಧೀಶನ ಮಗನೊಬ್ಬನು ಬಡ ಸುಶೀಲೆಯನ್ನು ವರಿಸುವುದೆಂದರೆ, ಅವರ ಸಾಂಸಾರಿಕ ಜೀವನವು ಸರಿಯಾಗದು ಎಂದೇ ಅವನ ಹೆದರಿಕೆ. ಆದರೆ ಸುಶೀಲೆ ಮತ್ತು ಗೋವಿಂದನ ಪ್ರೀತಿಯು ಅಂತಹುದು. ಅವರು ಮದುವೆಯಾಗುವರು. ಗೋವಿಂದನ ತಂದೆಯ 'ವರದಕ್ಷಿಣೆ' ದಾಹವನ್ನು ಅಡಗಿಸಲು, ಮೋಹನನಿಗೆ ್ವ ಮನೆಮಾರನ್ನು ಮಾರಿಕೊಳ್ಳಬೇಕಾಯಿತು.

ಗೋವಿಂದನೂ ಸುಶೀಲೆಯೂ ಪಟ್ಟಣಕ್ಕೆ ಬರುವರು. ಅವರ ದಾಂಪತ್ಯವು ಸುಗಮವಾಗಿ ಸಾಗಬಹುದೆಂದು ಹಂಸಳು ನಿರೀಕ್ಷಿಸುವಳು. ಆದರೆ. ಅತ್ತೆ ಮಾವಂದಿರ ಕಾಟ—ಇದು ಸುಶೀಲೆಗೂ ತಪ್ಪಿರಲಿಲ್ಲ. ಅವಳದನ್ನು ಸಹಿಸಿದಳು. ಯಾರಲ್ಲಿಯೂ ದೂರಲಿಲ್ಲ. ಗೋವಿಂದನು ತಂದೆ ತಾಯಿಗಳ ಮೂಢತ್ವವನ್ನು ಖಂಡಿಸುವನು. ಪ್ರಯೋಜನವೇನು?

ಅಂತೂ, ಸುಶೀಲೆಯು ಸ್ವಲ್ಪ ಸಮಯ ಬೇರ್ಪಟ್ಟಿರಬೇಕೆಂದು ನಿಶ್ಚಯವಾಗಲು, ಗೋವಿಂದನು ವೀರನಂತೆ ಹೋರಾಡುವುದನ್ನು ಬಿಟ್ಟು, ತನ್ನ ದುಃಖವನ್ನು ಅಡಗಿಸಿಕೊಳ್ಳಲು ಸುರೆಯ ದಾಸನಾಗಿ ಜುಗಾರಿಯಾಡುವನು. ಸುಶೀಲೆಗಿದ್ದ ಒಂದೇ ಒಂದು ಆಶೆಯೂ ಜೂರಾಯಿತು. ಅವಳ ಅಣ್ಣನೂ ಕಾಸಿಲ್ಲದವ. ಮೋಲಾಗಿ ಹಾಸಿಗೆ ಹಿಡಿದಿದ್ದನು ಜ್ವರದಿಂದ. ಹಂಸಳು ಗೋವಿಂದನಲ್ಲಿಗೆ ಧಾವಿಸುವಳು. ಅವನನ್ನು ಸರಿದಾರಿಗೆ ತರಲು—ಮುಂದೇನು?

NEXT:-

LONE DEFENDER

ಬರುವ ಚಿತ್ರ:-

ಲೋನ್ ಡಿಫೆಂಡರ್

Every visit is a new delight at Sri Ramakrishna Theatre.

Comming: **Bhaktha Kuchela** to Sri Krishna abode, Udipi, **Wadia's Pahadi Kanya,** *featuring fearless Nadia:* **Becky Sharp, Mastana Mashuk, Jailor.**

ಮುಂದಿನ ಚಿತ್ರ: 'ಭಕ್ತಕುಚೇಲನು' ಶ್ರೀಕೃಷ್ಣನ ನಿವಾಸ (ಉಡುಪಿ) ಕ್ಕೆ! ವಡಿಯಾ ಮೂವಿಟೋನಿನವರ 'ಪಹಡಿ ಕನ್ಯಾ' ಬೆಕ್ಕಿಶಾರ್ಪ್, ಮಸ್ತನಾ ಮಶೂಕ್, ಜೈಲರ್ ಇತ್ಯಾದಿ.

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ. 20-7-39ರಿಂದ ತಾ. 27-7-39ರ ವರೆಗೆ)

[ಜ್ಯೋತಿಸವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

ಈಗಲೀಗ ನಿಮ್ಮ ಪರಿಸ್ಥಿತಿಯು ಪೂರ್ತಿ ಕೆಡಲಾರಂಭಿಸಿದೆ. ಮನೆಯವರೆಲ್ಲರೂ ನಿಮ್ಮ ಭಾಗಕ್ಕೆ ವಿರೋಧಿಗಳಂತಿರುವರು. ಆಪ್ತಮಿತ್ರರ ಭೇಟಿಯೂ ಕೂಡ ದುರ್ಲಭವಾಗುವುದು. ಕೆಲವೊಂದು ನೀಚ ಶತ್ರು ಜನರ ಮರೆಹೊಕ್ಕು ದಿನಗಳೆಯಬೇಕಾದ ಪ್ರಸಂಗವೂ ಕೂಡ ಒದಗಬಹುದು. ನಿತ್ಯ ದುಃಖಕಾರಿಯಾದ ಸಂಸಾರದಲ್ಲಿ ವಿರಕ್ತಿಯು ಹೆಚ್ಚುವುದು. ಆರೋಗ್ಯವೂ ಕೂಡ ಕೆಡುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣಿಸಲು ಸಾಧ್ಯವಾಗುವಂತಿಲ್ಲ. ಆರ್ಥಿಕದೃಷ್ಟಿಯಿಂದಂತೂ ಈ ವಾರವು ನಿಮಗೆ ತೀರ ಪ್ರತಿಕೂಲವಾಗಿರುವುದು. ಅಭಿಲಷಿತ ಪದಾರ್ಥಗಳು ಸಮಯಕ್ಕೆ ದೊರೆಯಲಾರವು. ಪ್ರವಾಸಮಾಡುವುದರಿಂದ ಬಹಳ ಕಷ್ಟ ನಷ್ಟಗಳು ಪ್ರಾಪ್ತವಾಗುವವು. ವಿದ್ಯಾಭಿಲಾಷಿಗಳಿಗೆ ವಿಶೇಷ ಹಾನಿಕರವಾದುದೀ ವಾರವು. ತಾ. 21ರಿಂದ 24ರ ವರೆಗೆ ಇಷ್ಟವು ಸಿದ್ಧಿಸಲಿಕ್ಕಿಲ್ಲವಾದರೂ ಅನಿಷ್ಟಗಳು ಕಡಿಮೆಯಾಗಲಿವೆ.

ವೃಷಭರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಉತ್ತಮವಾಗಿದ್ದರೂ ಕುಜ ಶನಿ ರಾಹುಗಳು ಪ್ರತಿಕೂಲರಾಗಿರುವರು. ಇವರೆಲ್ಲರೂ ಪಾಪಿಗ್ರಹರಾದುದರಿಂದ ಉಪಕಾರವನ್ನು ಮಾಡಲು ಹಿಂಪರಿದರೂ ಅಪಕಾರವನ್ನು ತಂದೊಡ್ಡಲು ನಾಮುಂದೆ ತಾಮುಂದೆ ಎಂಬು ಹಾತೊರೆಯುವ ಸ್ವಭಾವದವರು. ಅವರಲ್ಲೂ ಭಾಗ್ಯಪತಿಯು ವ್ಯಯದಲ್ಲೂ, ವ್ಯಯಾಧಿಪತಿಯು ಭಾಗ್ಯದಲ್ಲೂ ಪರಸ್ಪರ ಸ್ಥಾನ ವಿನಿಮಯ ಹೊಂದಿ ನೀಚೋಚ್ಚರಾಗಿ ಕೇಂದ್ರದಲ್ಲಿರುವುದರಿಂದ ಧನಾಗಮ ನಿರ್ಗಮ ವಿಚಾರದಲ್ಲಿ ಅನರ್ಥ ಶತಗಳು ಉಂಟಾಗಲಿವೆ. ಆದರೂ ಲಾಭಾಧಿಪತಿಯಾದ ಬೃಹಸ್ಪತ್ಯಾಚಾರ್ಯರು ಸ್ವಕ್ಷೇತ್ರಗತರಾಗಿರುವುದರಿಂದ ಕೈಯಲ್ಲಿ ಯಾವಾಗಲೂ ಹಣ ಕಾಸಿಗೆ ತೊಂದರೆಬಾರದು. ಸಾಹಸಕಾರ್ಯಗಳಲ್ಲಿ ನಿಮಗೆ ಸದಾ ವಿಜಯ ದೊರೆಯುವುದು. ಅರ್ಧಾಂಗಿಯ ಆರೋಗ್ಯವು ಕೆಡಲಿರುವುದರಿಂದ ತಪ್ಪಲುವಾಗಿ ಚಿಂತೆಯೂ ಧನವ್ಯಯವೂ ಅಧಿಕವಾಗಲಿದೆ. ವಿದ್ಯೋಪಜೀವಿಗಳಿಗೆ ಈ ವಾರವು ಹೆಚ್ಚಿನಂಶ ಉತ್ತಮವಾಗಿರುವುದು. ತಾ. 23ರಿಂದ ಮುರಾಂತ್ಯದ ವರೆಗೂ ನಿಮ್ಮ ಇಷ್ಟಾರ್ಥಗಳು ಅನಾಯಾಸದಿಂದ ಕೈಗೂಡುವವು.

ಮಿಥುನರಾಶಿ—

ಕೈ ಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ಸ್ವಕಾರ್ಯ ಸಾಧನೆಗಾಗಿ ಹೆಚ್ಚಿನ ಶ್ರಮವಹಿಸಬೇಕಾಗುವುದು. ಯಾವ ಕಾರ್ಯವೂ ಅನಾಯಾಸದಿಂದ ಸಾಧ್ಯವಾಗಲೊಲ್ಲದು. ಪ್ರಕೃತದಲ್ಲಿ ನಿಮಗೆ ವಿಶ್ವಾಸಾರ್ಹರಾದ ಜನರೇ ಇಲ್ಲವೆಂದು ಹೇಳಬಹುದು. ಆದಕಾರಣ ಪ್ರತಿಯೊಂದು ಕಾರ್ಯವನ್ನೂ ಅದ್ವಿತೀಯರಾಗಿಯೇ ಮುಂದುವರಿಸಬೇಕಾಗುವುದು. ಶರೀರಾಲಸ್ಯದಿಂದ ಸಿಟ್ಟು ಸಿಡುಕು ಅಧಿಕವಾಗುವುದರಿಂದ ಕೋಪವು ಸ್ವಲ್ಪ ಅಧಿಕವಾಗಿ ಮಾತುಮಾತಿಗೆ ಕಲಹವಾದೀತು. ಆಯವ್ಯಯಗಳು ಸಮತೂಕದಲ್ಲಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಲಾರಿರಿ. ಗೃಹ್ಯಸುಖವು ಅವ್ಯಾಹತವಾಗಿ ದೊರೆಯುವುದು. ನೌಕರರಿಗೆ ಸ್ವಕಾರ್ಯದಲ್ಲಿ ಔದಾಸೀನ್ಯವು ಹೆಚ್ಚಾಗುವುದು. ತಾ. 21ರಿಂದ 24ರ ವರೆಗೂ ಕಾರ್ಯವಿಘ್ನ, ರೋಗಭಯ ಇತ್ಯಾದ್ಯನಿಷ್ಟಗಳು ಅಧಿಕವಾಗಲಿವೆ.

ಕರ್ಕಾಟಕರಾಶಿ—

ನಿಸರ್ಗತಃ ಶುಭರಾಗಿದ್ದವರು ಸುಸ್ಥಾನಗತರಾಗಿಯೂ ಅಶುಭರಾಗಿದ್ದವರು ದುಃಸ್ಥಾನಗತರಾಗಿಯೂ ಇರುವುದರಿಂದ ಇಷ್ಟಾನಿಷ್ಟ ಫಲಗಳು ಸರಿಸಮಾನವಾಗಿ ಪ್ರಾಪ್ತವಾಗಲಿವೆ. ಕಡಿವಾಣ ತಪ್ಪಿದ ಕುದುರೆಯಂತೆ ಮನಸ್ಸು ದುರ್ಮಾರ್ಗದಲ್ಲಿ ಮುಂದರಿಯಲು ಹಾತೊರೆಯುತ್ತಿರುವುದಾದರೂ ಬುದ್ಧಿಬಲದಿಂದದನ್ನು ಹತೋಟಿಯಲ್ಲಿಡಲು ಶಕ್ತರಿರುವಿರಿ. ಇಲ್ಲಸಲ್ಲದ ಕಲಹಗಳು ಗಂಟುಬಿದ್ದು ತನ್ನುಬಾಂಧವರ ಧನ ವ್ಯಯವಾಗಲಿದೆ. ವಿದ್ಯಾ ವಿಷಯಕವಾದ ಬುದ್ಧಿಯು ಸಮಾಚೀನವಾಗಿದ್ದರೂ ಇತರ ತೊಡಕುತೊಂದರೆಗಳಿಂದ ಅಧ್ಯಯನ ಭಾಗಕ್ಕೆ ಪ್ರತಿಬಂಧಕವುಂಟಾಗುವುದು. ಉದ್ಯೋಗಿಗಳಿಗೂ, ವ್ಯಾಪಾರಿಗಳಿಗೂ ಇತರ ನೈಧಿಕವೃಂದದವರಿಗೂ ಖರ್ಚಿಗೆ ಸಾಕಷ್ಟು ಉತ್ಪತ್ತಿಯಾಗುವುದು. ಪತ್ನಿಯೊಡನೆ ನಿತ್ಯ ಕಲಹವಾಗಲಿದೆ. ಉದರ ರೋಗವು ಆಗಾಗ ತಲೆದೋರೀತು. ತಾ. 21, 22 ಈ ದಿನಗಳನ್ನುಳಿದು ಇತರ ದಿನಗಳು ಹೆಚ್ಚಿನ ಅನುಕೂಲಗಳಾಗಿಲ್ಲ.

ಸಿಂಹರಾಶಿ—

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಎಂಬ ಗೀತೋಕ್ತಿಯಂತೆ ಆಯಾಯ ವರ್ಣಾಶ್ರಮಿಗಳಿಗೆ ಶಾಸ್ತ್ರದಲ್ಲಿ ಹೇಳಿದ ಧರ್ಮಾಚರಣೆಯಿಂದ ಸದ್ಯದಲ್ಲಿ ಒಂದೊಮ್ಮೆ ಕೇಡುಕು ಕಂಡು ಬಂದರೂ ಅದು ಮುಂದಿನ ಕಲ್ಯಾಣಕ್ಕಾಗಿಯೇ. ಈ ವಿಷಯವನ್ನು ನೀವು ಗಮನಿಸದೆ ಧರ್ಮದ್ರೋಹಿಗಳಾಗಿ ಮುಂದಿನ ಕಲ್ಯಾಣವನ್ನು ಕೈಯ್ಯಾರೆ ಕೆಡಿಸಿಕೊಳ್ಳುವುದು ಎಷ್ಟಕ್ಕೂ ಉಚಿತವಲ್ಲ. ಕಾಹಿಲೆ ಬಂದವರಿಗೆ ಔಷಧಿ ಸೇವನೆಯು ರುಚಿಸದಿದ್ದರೂ ಅದು ಮುಂದೆ ಒಳ್ಳೇ ಪರಿಣಾಮಕಾರಿಯಾಗುವುದಿಲ್ಲವೇ? ಪ್ರಕೃತದಲ್ಲಿ ನೀವು ಯಾವದೊಂದು ಕಾರ್ಯಕ್ಕೂ ಮುಂದೊತ್ತಿ ಹೋಗಬೇಡಿ. ವ್ಯವಹಾರ ನಿಮಿತ್ತ ಜನತೆಯಲ್ಲಿ ಕಲಹವುಂಟಾಗಿ ವೈರತ್ವಕ್ಕೆ ಕಾರಣವಾಗುವದು. ಆರೋಗ್ಯ ವಿಚಾರದಲ್ಲಿ ಹೆಚ್ಚು ಗಮನಕೊಡಿರಿ. ಸದ್ಯ ಪ್ರವಾಸವನ್ನು ಕೈದಿಡುವುದೊಳ್ಳಿತು. ಸತ್ಕರ್ಮಾಚರಣೆಯಲ್ಲಿರತಕ್ಕ ತರುಣ ಜನವೃಂದಕ್ಕೆ ಮಿತ್ರ ಜನರ ಬಲದಿಂದ ಹೆಚ್ಚಿನ ಅನುಕೂಲತೆಗಳು ಒದಗುವವು. ತಾ. 21, 22, 25, 26, 27, ಈ ದಿನಗಳಲ್ಲಿ ಮಾನಹಾನಿ ಕಾರ್ಯವಿಘ್ನಗಳು ಸಂಭವಿಸಲಿವೆ.

ಕನ್ಯಾರಾಶಿ—

"ಬಲ್ಲವರ ಮಾತು ಬೆಲ್ಲಕ್ಕಿಂತ ಸವಿ" ಎಂಬ ಗಾದೆಯಂತೆ ನಿಮ್ಮ ಮಾತಿನಲ್ಲಿ ಅದೊಂದು ಬಗೆಯ ಸ್ವಾರಸ್ಯಮಯವಾದ ರಸವಿರುವುದು. ಆದುದರಿಂದಲೇ ನಿಮ್ಮನ್ನು ಹಲವರು ಮೆಚ್ಚುವರು. ಈ ಕಾರಣದಿಂದಲೇ ನಿಮ್ಮ ಮೇಲೆ ಎರಡೆಂಟಣಿಸತಕ್ಕವರೂ ಕೂಡ ನಿಮ್ಮೆದುರಿಗೆ ಬಂದಾಗ ಸ್ನೇಹಿತರಂತೆಯೇ ವರ್ತಿಸುವರು. ಹೆಚ್ಚಿನವರು ನಿಮ್ಮನ್ನು ಗೌರವ ಪೂರ್ಣವಾಗಿ ಕಾಣುವರು. ಕೋರ್ಟು ಮತ್ತು ರಾಜಕೀಯ ಕಾರ್ಯಾಲಯಗಳಲ್ಲೂ ನಿಮ್ಮ ಇಷ್ಟಾರ್ಥವು ಕೈಗೂಡುವುದು. ನೌಕರಿ ಮಾಡತಕ್ಕವರಿಗೆ ಇದಿರಾಳಿಗಳಿಂದ ಕೆಲವು ವಿಚಾರದಲ್ಲಿ ಹಾನಿಯೊದಗುವ ಸಂಭವವಿದೆ. ಸಂಸಾರದಲ್ಲೂ ಕೂಡ ಸುಖ ಸಿಗಲಾರದು. ಪತ್ನೀಪುತ್ರರ ವಿಯೋಗವುಂಟಾಗಿ ತತ್ಸಂಬಂಧವಾದ ದುಃಖಕ್ಕೊಳಗಾಗುವಿರಿ. ಮನಸ್ಸಿಗೆ ಹೆಚ್ಚಿನ ಕೆಲಸಕೊಡುವುದರಿಂದ ನಿದ್ರೆ ಕೂಡಾ ಸಮಯಕ್ಕೆ ಸರಿಯಾಗಿ ಬರಲೊಲ್ಲದೆ ಆರೋಗ್ಯ ಕೆಡುವ ಸಂಭವವಿದೆ. ತಾ. 21, 22, 26, 27 ಈ ದಿನಗಳಲ್ಲಿ ಧನಲಾಭ ಕಾರ್ಯಜಯ ಇಷ್ಟವಸ್ತುಗಳ ಪ್ರಾಪ್ತಿಯುಂಟಾಗುವದು.

ತುಲಾರಾಶಿ—

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ' ಎಂಬ ನೀತಿಶಾಸ್ತ್ರೋಕ್ತಿಯಂತೆ ಸುಖದುಃಖಗಳೆರಡೂ ರಾತ್ರಿಹಗಲುಗಳಂತೆ ನರನಜೀವನದಲ್ಲಿ ಸುತ್ತು ತಿರುಗುತ್ತಿವೆ. ಈಗಲೀಗ ನೀವು ಆ ದುಃಖವೆಂಬ ಕಾಳರಾತ್ರಿಯನ್ನು ಕಳೆಯಲಾರಂಭಿಸಿ ಅದರ ಅಂತ್ಯಯಾಮಾಂತ್ಯಕ್ಕೆ ಬಂದಿರುವಿರಿ. ಆ ಕಾರಣದಿಂದಲೇ ಕಾರ್ಯದಲ್ಲಿ ಉತ್ಸಾಹವು ಹೆಚ್ಚುತ್ತಿದೆ. ಆಪ್ತೇಷ್ಟರ ಮಿತ್ರ ಪ್ರಿಯಜನರ ಸಹಾಯವು ನಿಮಗೆ ದೊರೆಯುವುದು. ಆರಂಭಿಸಿದ ಕಾರ್ಯಗಳು ಹೆಚ್ಚಿಗೆಯಾಗಿ ನಿರ್ವಿಘ್ನದಿಂದ ಕೊನೆಗಾಣುವವು. ಕರ್ಮಕ್ಕೆ ತಕ್ಕುದಾಗಿ ಧನವಸನಾದಿಗಳ ಪ್ರಾಪ್ತಿಯಾಗುವದು. ಆದರೂ ನಿಮ್ಮ ವಿರೋಧಿಗಳು ಹಟ್ಟಾಗಿ ನಿಮ್ಮನ್ನು ಪೀಡಿಸುವುದರಿಂದ ಮಾನಸಿಕ ಸುಖವು ಸಿಗಲಾರದು. ಕೆಲವೊಂದು ಅಲ್ಪ ಜನರ ಸಹವಾಸದಿಂದ ಗೌರವವು ಕಡಿಮೆಯಾಗಿ ಜನರ ನಗೆಗೀಡಾಗುವ ಪ್ರಸಂಗಬರಲಿದೆ. ನಿಂತಲ್ಲಿ ನಿಲ್ಲದೆ ಹೊಸ್ತಾಗಿ ತಿರುಗಾಡುತ್ತಲೇ ಇದ್ದು ಸಮಯವನ್ನತಿಕ್ರಮಿಸುವಿರಿ. ತಾ. 20, 23, 24 ಈ ಮೂರು ದಿನಗಳ ಮಟ್ಟಿಗೆ ಕಿಂಚಿದುತ್ತಮ.

ವೃಶ್ಚಿಕರಾಶಿ—

ಗ್ರಹ ಮಂಡಲದಲ್ಲಿ ಹೆಚ್ಚಿನ ಗ್ರಹರು ನಿಮಗೆ ಅನುಕೂಲರಾಗಿರುವಾಗ ಕೇವಲ ರವಿ ರಾಹುಗಳಿಂದ ಏನೊಂದೂ ಕಾರ್ಯಸಾಗದು. ಆದರೂ ಗ್ರಹರಾಜನೆನಿರುವ ಪ್ರಯುಕ್ತ ರವಿಯು ತನ್ನ ಶಕ್ತಿಯನ್ನು ಕಿಂಚಿತ್ತಾದರೂ ತೋರಿಸದಿರನು. ಆ ಕಾರಣ ಸಾಲಿಗರೊಳು ಪರಿಸ್ಪರ ಮನಸ್ತಾಪವನ್ನು ಹುಟ್ಟಿಸುವನು. ಇಷ್ಟೇ ಅಲ್ಲದೆ ಇತರ ವಿಚಾರಗಳಲ್ಲಿ ಸದ್ಗ್ರಹರ ಬಲವೇ ಅಧಿಕವಾಗಿರುವುದರಿಂದ ನೀವು ಉದಾಸೀನದಿಂದ ಕುಳಿತರೂ ನಿಮ್ಮ ಕೈಹಿಡಿದು ಎಳೆದೊಯ್ಯುವರು ಕಾರ್ಯ ಪ್ರವೃತ್ತರಾಗುವ ಸಲುವಾಗಿ. ದುಃಖವೆಂಬುದು ದುರ್ಲಭವಾಗುವುದು. ಆರೋಗ್ಯವು ಉತ್ತಮವಾಗಿರುವುದು. ಉತ್ಸಾಹ ಶಕ್ತಿಯು ದಿನದಿಂದ ದಿನಕ್ಕೆ ಏರುತ್ತಾ ಹೋಗುವುದು. ಸರ್ವಕ್ಕೂ ಮೂಲವಾದ ಕಾಂಚನವು ನಿಮಗೆ ಅನಾಯಾಸವಾಗಿ ದೊರೆಯುವದು. ಆರಬ್ಧಾಂತಗಾಮಿಗಳಾದ ನೀವು ಸದಾ ವಿಜಯಮಾಲಿಕೆಯಿಂದ ಕಂಗೊಳಿಸುವಿರಿ. ತಾ. 23, 24, ಈ ದಿನಗಳನ್ನು ಹೊರತು ಇತರ ಎಲ್ಲಾ ದಿನಗಳು ಅತ್ಯುತ್ತಮವಿವೆ.

ಧನುರಾಶಿ—

ನಿಮ್ಮ ಅದೃಷ್ಟವು ಅವನತಿಯ ಪರಾಕಾಷ್ಠತೆಯನ್ನು ಹೊಂದಿರುವುದು. ಆದಕಾರಣ ಕೈಗೆ ಬಂದ ತುತ್ತೂ ಕೂಡ ಬಾಯಿಗೆ ದೊರಕಲಾರದು. ನೀನ್ನೊಂದೆಣಿಸಿ ಕಾರ್ಯಪ್ರವೃತ್ತರಾದರೆ ಅದು ಮತ್ತೊಂದು ರೀತಿಯಲ್ಲಿ ಪರಿಣಮಿಸುವದು. ಹಿಂದೆ ಪರೀಕ್ಷಿದ್ರಾಜನು ನಿಂಬೆಹಣ್ಣಿಂದು ಹಿಡಿದು ಆಘ್ರಾಣಿಸಲದು ಹಾವಾಗಿ ಪರಿಣಮಿಸಿ ಆತನಿಗೆ ಮೃತ್ಯುವನ್ನು ತಂದಿತಲ್ಲವೇ? ಇದೇ ರೀತಿಯ ಘಟನೆಗಳೇ ಹೆಚ್ಚಾಗಿ ಸಂಭವಿಸುವವು. ಸಕಲವಿಚಾರದಲ್ಲೂ ನಿಮ್ಮವಸನದ ಪರಿಸ್ಥಿತಿಯೇ ದಿನ ದಿನಕ್ಕೆ ಏರುತ್ತಾ ಹೋಗುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಜೀವನಪಥದಲ್ಲಿ ಸಕಲ ಕಷ್ಟನಷ್ಟಗಳಿಗೆ ಗುರಿಯಾಗುವಿರಲ್ಲದೆ ಸ್ವಪ್ನದಲ್ಲೂ ಕೂಡ ಸುಖಲೇಶವನ್ನು ಕಾಣಲು ಸಮರ್ಥರಾಗುವಂತಿಲ್ಲ. ಆದಕಾರಣ ಭಕ್ತವತ್ಸಲನ ಶರಣುಹೊಂದುವವರಿಗೆ ಕಿಂಚಿದಿಷ್ಟಗಳು ಲಭಿಸಲೂ ಬಹುದು.

ಮಕರರಾಶಿ—

ಜೀವನಪಥದಲ್ಲಿ ಹಣಕ್ಕಾಗಿ ಬಹಳ ಕಷ್ಟ

1939ನೇ ಇಸ್ವಿ ಜುಲ್ಯೆ ತಾ. 10ನೇ ಸೋಮವಾರ ದಿವಸ ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

			ರಿಂದ	ವರೆಗೆ
ಬೆತ್ತ ಅವ್ವಲ್ ತರದ ಗುಡ್ಡ ಮುಡಿಗೆ	...	...	1—14—0	...
,, ದುಯಂ ,, ,,	...	...	1—12—0	...
,, ಅವ್ವಲ್ ತರದ ಸುಗ್ಗಿ ಮುಡಿಗೆ	...	...	1—12—0	...
,, ದುಯಂ ,, ,,	...	...	1—10—0	...
ಅಕ್ಕಿ-ಅವ್ವಲ್ ತರದ ಗುಡ್ಡ ಮುಡಿಗೆ	...	...	4—12—0	...
,, ದುಯಂ ,, ,,	...	...	4— 8—0	4—10—0
,, ಅವ್ವಲ್ ಸುಗ್ಗಿ ,,	...	...	4— 7—0	...
,, ದುಯಂ ,, ,,	...	...	4— 3—0	4— 5—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ		...	27— 8—0	35— 0—0
,, ಸಿಪ್ಪೆ ಇದ್ದದ್ದು ,,		...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	...	...	50— 0—0	...
,, ದೇವಿ	...	...	...	...
,, ದಿಲ್‌ಪಸಂದ್	...	...	...	...
ತೆಂಗಿನ ಎಣ್ಣೆ ಮಣಕ್ಕೆ	...	...	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	...	...	3— 8—0	4— 4—0
ಗೇರುಬೀಜ ಮುಡಿಗೆ ...	...	...	3—10—0	...
ಕಬ್ಬಿನ ಬೆಲ್ಲ ಖಂಡಿಗೆ	...	...	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	...	...	14— 8—0	15— 8—0

ಮೂಲವ್ಯಾಧಿಗೆ

ವಿಶೇಷ ಗುಣಕಾರಿ,

ಮಹಾತ್ಮರವರ ಪ್ರಸಾದ

ಆಶ್ಚರ್ಯಕರವಾದ ಔಷಧಿ

ಸಾಮಾನ್ಯ ಅಥವಾ ರಕ್ತಸ್ರಾವ, ಹೊಸ, ಹಳೆ ಮೂಲವ್ಯಾಧಿಗೆ ರಾಮಬಾಣ ಔಷಧ.

ಅರ್ಶಮಾರಾ

ಇದನ್ನು ಒಮ್ಮೆ ಉಪಯೋಗಿಸಿದರೆ ಮೂಲವ್ಯಾಧಿ ಪೀಡಿತರ ನಾನಾ ತರದ ವೇದನೆ ರಕ್ತಸ್ರಾವ, ಉರಿವಿಕೆ ಇತ್ಯಾದಿ ಸಂಕಷ್ಟಗಳು ಕೂಡಲೇ ಪರಿಹಾರವಾಗುವವು. ಮೂರೇ ಮೂರು ದಿವಸಗಳಲ್ಲಿ ಖಾತ್ರಿಯಾಗಿ ಗುಣಪಡಿಸುವುದು. ಸಾವಿರಾರು ಜನರಿಂದ ಶಿಫಾರಸು ಪಡೆದಿರುವುದು. ಗುಣ ಕಂಡುಬಾರದಿದ್ದಲ್ಲಿ ಹಣ ವಾಪಾಸು.

ಬೆಲೆ ರೂ. 2-0-0.

ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

AROGYA SADANA

Durgadevi Street, BOMBAY 4

ಕಿವುಡರಿಗೆ

ಕಿವಿ ಕೇಳುತ್ತದೆ

ವಿಜ್ಞಾನ ಶಾಸ್ತ್ರದ ನವೀನ ಶೋಧೆ.

ಬಧಿರತಾ-ಹರಣ

ಕರ್ಣರೋಗಗಳಿಗೆ ಅಮೃತವು ಔಷಧ. ಕಿವಿ ಸೋರುವುದು, ಕೀವು ಬರುವುದು, ಕಿವಿಯೊಳಗೆ ಘುಂಯಿ ಘುಂಯಿ ಶಬ್ದವಾಗುವುದು, ಕ್ರಿಮಿ ಬೀಳುವುದು, ಕಿವುಡುತನ ಇವೇ ಮೊದಲಾದ ನಾನಾ ತರದ ಕರ್ಣರೋಗಗಳಿಗೆ

ಬಧಿರತಾ-ಹರಣವು

ಅಮೂಲ್ಯ ಔಷಧಿ. ಈಗಾಗಲೇ ಸಾವಿರಾರು ಮಂದಿ ಗುಣ ಹೊಂದಿರುವರು. ಗುಣ ಕಂಡು ಬಾರದಿದ್ದಲ್ಲಿ ಹಣ ಹಿಂದೆ.

ಬೆಲೆ ರೂ. 2—0—0

ಪತ್ತೆ:-ಆರೋಗ್ಯ ಸದನ,

ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

AROGYA SADAN

Durgadevi Street, BOMBAY 4

ಜನಮತ

ಸಾರ್ವಜನಿಕ ಹಿತದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಬರೆದು ಬರುವ ಪತ್ರಿಕೆಗಳಿಗೆ ಈ ವಿಭಾಗದಲ್ಲಿ ಎಡೆಗೊಡಲಾಗುವುದು. ಪತ್ರಿಕೆಗಳು ಅತಿ ಚುಟುಕಾಗಿ, ಸ್ಪಷ್ಟವಾಗಿ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. ಪತ್ರಿಕಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕು. ಹೆಸರುಕೊಟ್ಟು ಬರುವ ಪತ್ರಿಕೆಗಳಿಗೆ ವಿಶೇಷ ಗಮನಕೊಡಲಾಗುವುದು. ಪತ್ರಿಕಾರರ ಅಭಿಪ್ರಾಯಗಳಿಗೆ ನಾವು ಹೊಣೆಯಲ್ಲ. ಸಂ. ನ.

ಬಿಲ್ಲವ ಸಮಾಜ ಸುಧಾರಣೆಯು ಬಗೆಯೆಂತು?

ಮುಂಬಯಿ ಯುವಕ ಸಂಘದವರ ಕಾರ್ಯಕಲಾಪಗಳು

ಸಮಾಜ ಸೇವಾಸಕ್ತಿಯಿಂದ ಉತ್ತೇಜಿತರಾದ ಕೆಲವು ಬಿಲ್ಲವ ತರುಣರಿಂದ ದಿ ಬಿಲ್ಲವ ಯುವಕ ಸಂಸ್ಥೆಯೆಂಬುದು ಸ್ಥಾಪಿಸಲ್ಪಟ್ಟಿರುವುದಾದರೂ ಈ ಸಂಸ್ಥೆಯ ಅನೇಕ ಕಾರ್ಯಕಲಾಪಗಳು ಸದ್ಯದಲ್ಲಿಯೇ ಮುಂದಕ್ಕೆ ನಡೆಯಲಿರುತ್ತವು. ನಮ್ಮ ಬಿಲ್ಲವ ಸಮಾಜದಲ್ಲಿ ಹಲವು ಸಂಸ್ಥೆಗಳು ಹಲವು ಮಹನೀಯರಿಂದ ಮುಂಬಯಿ ಪ್ರಾಂತ್ಯದಲ್ಲಿ ಸ್ಥಾಪಿಸಲ್ಪಟ್ಟು ಹಲವು ಪರೋಪಕಾರ ಕೆಲಸಗಳನ್ನು ಮಾಡಿವೆ. ಕೆಲವು ಸಂಸ್ಥೆಯವರು ಮುಂಬಾಯಿಯಲ್ಲಿ ಮೃತಪಟ್ಟ ಶವದ ಸಂಸ್ಕಾರಕ್ಕೂ ಮತ್ತು ಊರಿಗೆ ಹೋಗಲು ಗತಿಯಿಲ್ಲದೆ ನರಳುತ್ತಿರುವವರನ್ನು ಕಂಡು ಸಹಿಸಲಾರದೆ ಸ್ವದೇಶಕ್ಕೆ ಕಳುಹಿಸುವುದಕ್ಕೂ ಕೊಟ್ಟಿರುತ್ತವೆ. ಇವುಗಳ ಪೈಕಿ ಬಿಲ್ಲವ ಎಸೋಸಿಯೇಶನ್, ಬಿಲ್ಲವ ಚೇರಿಟಿಸಂಸ್ಥೆ, ಬಿಲ್ಲವ ವಿದ್ಯಾದಾಯಿನಿ ಸಂಸ್ಥೆ, ಇವು ಮುಖ್ಯ ಸಂಸ್ಥೆಯಾಗಿವೆ. ಬಿಲ್ಲವ ಎಸೋಸಿಯೇಶನ್ ಸಂಸ್ಥೆಯು ಹಲಕೆಲವು ಅವಿದ್ಯಾವಂತರಿಗೆ ವಿದ್ಯೆ ಕೊಡುವ ಏರ್ಪಾಡು ಮಾಡಿದೆಯಲ್ಲದೆ ಏಕಗಂಟಿನಿಂದ ಬಿಲ್ಲವ ಜಾತಿಯ ದೇವಸ್ಥಾನಕ್ಕೆ ಮಾಡುವರೆ ಸಾವಿರದಷ್ಟು ಧನಸಹಾಯವಿತ್ತಿದೆ. ಇನ್ನು ಉಪಸಂಘಗಳು ಎಷ್ಟೋ ನಮ್ಮವರೆ ತಮ್ಮ ಕರ್ತವ್ಯಗಳಿಗೆ ಕೆಲಸಮಾಡುತ್ತಾ ಒಂದು ಸ್ಥೆಯು ಹೆಂಗಸರ ಕೊಡದವನೂ ಸಂಸ್ಥೆಗಳಿಗೆ ವಿರುದ್ಧ ಆಚರಿಸಿ ಅದರ ಹೆಸರಿನಿಂದ ಬೇರೆ ಸಂಸ್ಥೆಗಳನ್ನು ಮಾಡಿ, ಬೇರೆ ಬೇರೆ ಕಡೆಯಿಂದ ಚಂದಾ ಹಣ ವಸೂಲು ಮಾಡಲು ಹೋಗುತ್ತಾರೆ. ಇದರಿಂದ ಇಡೀ ಬಿಲ್ಲವ ಸಮಾಜಕ್ಕೇನೇ ಕೊರತೆ ಬರಬಹುದೆಂದು ನಮ್ಮ ಬಂಧುಗಳು ಯಾರೂ ತಿಳಿಯುವುದಿಲ್ಲ. ಅಲ್ಲದೆ ಬೇರೆ ಯಾವ ಬಿಲ್ಲವ ಸಂಸ್ಥೆಗಳೂ ಅದರ ವಿಚಾರಕ್ಕೆ ಗಮನ ಕೊಡುವುದಿಲ್ಲ. ಈ ಬಿಲ್ಲವ ಸಮಾಜದಲ್ಲಿ ನಡೆಯಬೇಕಾದ ಒಂದೇ ಒಂದು ಮುಖ್ಯ ಕರ್ತವ್ಯ ನಡೆಯಲಿಲ್ಲವೆಂದು ಹೇಳಬಹುದು. ಏಕದೃಷ್ಟಿಯಿಂದ ನಮ್ಮ ಜನ್ಮಸ್ಥಾನವನ್ನು ನೋಡುವುದಾದರೆ ಬಿಲ್ಲವ ಸಮಾಜವು ಎಷ್ಟೊಂದು ಹೀನಸ್ಥಿತಿಗೆ ಇಳಿದಿದೆಯೆಂದು ಹೇಳಲು ಅಸಾಧ್ಯವಾದರೂ ಒಂದೆರಡು ಮಾತುಗಳನ್ನು ಇಲ್ಲಿ ವ್ಯಕ್ತಗೊಳಿಸುತ್ತೇವೆ, ಬಿಲ್ಲವ ತರುಣರು ಅದನ್ನು ಅನುಸರಿಸಿ ನಡೆಯಬೇಕೆಂದೇ ನಮ್ಮ ವಿನಂತಿ.

೧. ಬಿಲ್ಲವ ತರುಣರು ಅಲ್ಲಲ್ಲಿ ಬಿಲ್ಲವ ತರುಣರ ಸಂಸ್ಥೆಗಳನ್ನು (The Billava Youth League) ಸ್ಥಾಪಿಸಲು ಟೊಂಕಕಟ್ಟಬೇಕು. ಬಿಲ್ಲವರ ಎಲ್ಲಾ ಸಂಸ್ಥೆಗಳನ್ನು ಒಂದಾಗಿ ಮಾರ್ಪಡಿಸುವ ಕಾರ್ಯಕ್ಕೆ ಕೈಯಿಕ್ಕಬೇಕು. ಮುಖ್ಯವಾಗಿ ಮುಂಬಾಯಿ ನಗರದಲ್ಲಿ ಸಾವಿರಕ್ಕಿಂತಲೂ ಮೇಲಿನ ಬಿಲ್ಲವ ತರುಣರಿದ್ದರೂ, ಅಂಥವರಲ್ಲಿ ಕೆಲವರು ಹೋಟೇಲುಗಳಲ್ಲಿ ತಮ್ಮ ಉದರಪೋಷಣೆಗಾಗಿ 24 ಗಂಟೆಯೂ ಕೆಲಸ ಮಾಡುತ್ತಾ ತಮ್ಮ ಮುಂದಿನ ಜೀವಮಾನವನ್ನರಿಯಲು ಸಾಧ್ಯವಾಗದೆ ವಿದ್ಯೆಯಲ್ಲಿ ಹಿಂದುಳಿದಿದ್ದಾರೆ, ಅವರಿಗೆ ವಿದ್ಯೆ ಕೊಡಲು ಎಲ್ಲಾ ಬಿಲ್ಲವ ತರುಣರು ಈ ಯುವಕ ಸಂಘಕ್ಕೆ ಸೇರಿ ತನುಮನಧನವನ್ನು ಸಮಾಜಕ್ಕೋಸ್ಕರ ಅರ್ಪಿಸಿ ಸ್ವಾರ್ಥವನ್ನು ಬಯಸದ ನಿಸ್ವಾರ್ಥಿಗಳಾಗಿ ಸಮಾಜದ ಏಳಿಗೆಯನ್ನು ಬಯಸಬೇಕು.

ಎರಡನೆಯದಾಗಿ ಇನ್ನು ನಮ್ಮ ಸ್ವದೇಶದ ಕಡೆಗೆ ನೋಡುವುದಾದರೆ ನಮ್ಮ ಸಮಾಜವು ಎಳ್ಳಿನ ಏಳು ಭಾಗದಷ್ಟಾದರೂ ಸುಧಾರಣೆಗೆ ಬರಲಿಲ್ಲ. ಅಂತೂ ನಮ್ಮ ಜಾತಿಯಲ್ಲಿ ನಡೆಯುವ ಹಾಸ್ಯವು ಇನ್ನು ಯಾವ ಸಮಾಜದಲ್ಲಿಯೂ ನಡೆಯುದಿಲ್ಲವೆಂದು ಹೇಳಬಹುದು. ದೃಷ್ಟಾಂತವಾಗಿ ನೋಡುವುದಾದರೆ, ಬಿಲ್ಲವ ಜಾತಿಯ ಲಗ್ನಸಮಾರಂಭದಲ್ಲಿಯೇ ಕಂಡುಬರುತ್ತದೆ. ಅದನ್ನು ಇಲ್ಲಿ ಬರೆಯಹೋದರೆ ಹಾಸ್ಯ ವಿಚಾರವೆಂದೆನಿಸುವುದಲ್ಲದೆ, ನಮ್ಮ ಬಿಲ್ಲವ ಸಮಾಜಕ್ಕೇನೆ ಅಸಹ್ಯರೂಪವಾಗಿ ಪರಿಣಮಿಸಬಹುದು, ಹೆಚ್ಚೇಕೆ? ನಮ್ಮ ಮಾತಾಪಿತೃಗಳು ಮರಣಪಟ್ಟಾಗ ಅವರಿಗೆ ಪಿತೃತರ್ಪಣಮಾಡುವುದಕ್ಕೋಸ್ಕರ ನಾವು ಯಥೇಷ್ಟ ಹಣವ್ಯಯಮಾಡಿದರೂ ಅದರ ಸಂಪೂರ್ಣ ಹಕ್ಕು ವಿಪ್ರರಿಗೆ ಬಿಟ್ಟುಕೊಡುತ್ತೇವೆ. ಇನ್ನು ದೇವಸ್ಥಾನಕ್ಕೆ ಬೇಕಾದಷ್ಟು ಹರಕೆಯನ್ನು ಸಲ್ಲಿಸಿದರೂ ಬಾಗಿಲಿನ ಹೊರಗೆ ನಿಂತು ಪ್ರಸಾದಕ್ಕೆ ಕೈಯೊಡ್ಡಬೇಕು. ಇನ್ನು ನಮ್ಮ ಸಮಾಜದ ಗರಡಿಯ ಹಕ್ಕು ನಮಗಿಲ್ಲವೆಂದ ಬಳಿಕ ಯಾವುದನ್ನು ಬರೆದರೂ ಪ್ರಯೋಜನವಿಲ್ಲ. ಇದಕ್ಕೆಲ್ಲಾ ಕಾರಣರಾರು? ಇಂಥಾ ಅವಸ್ಥೆಗಳನ್ನು ಪರಿಹಾರಮಾಡುವವರಾರು? ನಮ್ಮ ಸಮಾಜದಲ್ಲಿ ಮಹಾನುಭಾವರಾದ ಶ್ರೀ ನಾರಾಯಣ ಗುರುಸ್ವಾಮಿ ಪರಮಹಂಸರೇ ಜನ್ಮವೆತ್ತಿದ ಬಳಿಕ ಸಮಾಜವನ್ನು ಮಾರಿ ಫಲವಿಲ್ಲ. ನಮ್ಮನ್ನು ನಾವೇ ಹೀನಸ್ಥಿತಿಗೆ ತಂದಿದ್ದೇವೆಂದು ಹೇಳಿದರೂ ತಪ್ಪಾಗಲಾರದು. ಇತರರ ಸಮಾಜಗಳು ಸುಧಾರಿಸಿಕೊಂಡರೂ ನಮ್ಮ ಬಿಲ್ಲವ ಸಮಾಜದ ಹಲಕೆಲವು ಜನರು ಅಷ್ಟ ನಷ್ಟ ಗೋಳಿ ಮರಕ್ಕೇನೇ ನೀರೆರೆಯುತ್ತಾರಲ್ಲದೆ ಸಮಾಜವು ಹೇಗೆ ಉದ್ಧಾರವಾಗಬೇಕು? ನಮ್ಮ ಅನಾಥ ಬಾಲಕ ಬಾಲಿಕೆಯರನ್ನು ಹೇಗೆ ರಕ್ಷಿಸಬೇಕು? ಸಮಾಜದಲ್ಲಿ ನಡೆಯುವ ಒದಕುತೊಡಕುಗಳನ್ನು ಹೇಗೆ ಪರಿಹರಿಸಬೇಕು? ಬಾಲ್ಯವಿವಾಹದಲ್ಲಿ ಎಂತೆಂತಹ ಘಟನೆಗಳು ನಡೆಯುತ್ತಿವೆ? ನವನಾಗರಿಕತೆಗೆ ತಕ್ಕಂತೆ ಹೇಗೆ ವರ್ತಿಸಬೇಕೆಂದು ಅಂದಿನಿಂದ ಇಂದಿನ ತನಕವೂ ನಮ್ಮ ಪೂರ್ವಿಕರು ಗಮನಕೊಡಲಿಲ್ಲ. ಇದನ್ನೆಲ್ಲಾ ಮೀರಿಸಿ ಮೊದಲಿನ ಮರಕ್ಕೇನೇ ನೀರೆರೆಯದೆ ಮುಂದಿನ ಉದ್ಧಾರವನ್ನು ಬಯಸಲು ಈಗಿನ ನವತರುಣರು ಭರದಿಂದ ಮುಂದಾಗಬೇಕು. ಇನ್ನು ನಮ್ಮ ಮತ್ಸರವೇನಾದರೂ ಸಮಾಜದಲ್ಲಿ ಕಡಿಮೆಯೇ? ನಮ್ಮ ಸಮಾಜದ ನವತರುಣರು ನವನಾಗರಿಕತೆಗೆ ತಕ್ಕಂತೆ ನಡೆದರೆ, ಹಳೇ ಸಂಪ್ರದಾಯದವರು ಅದಕ್ಕೆ ವಿರುದ್ಧವನ್ನೇ ತಂದೊಡ್ಡುತ್ತಾರೆ. ಅಷ್ಟುಮಾತ್ರವಲ್ಲದೆ ಯಾರಾದರೂ ಸಮಾಜದ ಯುವಕರು ಉದ್ಯೋಗದ ಮೆಟ್ಟಿಲನ್ನು ಹತ್ತಿದರೆ ಇತರ ಸುಧಾರಿತ ಸಮಾಜಗಳು ಸಂತೋಷಪಟ್ಟರೂ, ಬಿಲ್ಲವ ಸಮಾಜದ ಅಂಧದೃಷ್ಟಿಯು ಇನ್ನೂ ಸುಧಾರಿಸಲಿಲ್ಲ. ಪರಂತು ತನ್ನ ಜಾತಿಯವರು ಸುಧಾರಿಸಿದರೆಂದು ಬಿವರೇ ವಿಷಾದಪಡುತ್ತಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿಯಸಂತಾನಕಟ್ಟಿನ ಬೇರನ್ನೇ ಕಿತ್ತೊಗೆಯಬೇಕೆಂದು ಶ್ರೀ. ಎ. ಬಿ. ಶೆಟ್ಟಿ ಯಮ್. ಎಲ್. ಎ. ಪಾರ್ಲಿಮೆಂಟ್ ಸೆಕ್ರೆಟರಿ ಮದ್ರಾಸು ಇವರ ಸತತಪ್ರಯತ್ನದಿಂದಲೂ ಮತ್ತು ಹಲಕೆಲವು ಮಹನೀಯರು ಇದರ ಏಳಿಗೆಗೋಸ್ಕರ ಅದಮ್ಯ ಭರದಿಂದ ಕೆಲಸಮಾಡುತ್ತಾರೆಂಬುದು ನಮಗೆ ಗೊತ್ತಿದ್ದ ಸಂಗತಿ.

ಇದಕ್ಕೆ ಅಳಿಯಸಂತಾನ ಕಟ್ಟಿಗೊಳಗಾಗಿರುವ ಎಲ್ಲಾ ಮಹನೀಯರು ಗಮನಕೊಡುವುದಲ್ಲದೆ ಬಿಲ್ಲವ ಸಮಾಜದ ಯುವಕರು ಅಳಿಯಸಂತಾನದ ಕಟ್ಟನ್ನು ಕಿತ್ತೊಗೆಯುವ ಕಾರ್ಯಕ್ಕೆ ಪ್ರಯತ್ನಿಸಬೇಕು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಅನೇಕರು ವಿದ್ಯೆ ಕಲಿಯದೆ ಗೋವುಗಳನ್ನು ಮೇಯಿಸುತ್ತಾ ತಮ್ಮ ಹೊಟ್ಟೆಪಾಡಿಗಾಗಿ ದುಡಿಯುತ್ತಾರೆ. ಅವರಿಗೆ ಪಕ್ಕ ವಿದ್ಯೆ ಕೊಡಲು ಏರ್ಪಾಡುಮಾಡುವವರಾರು? ಯಾಜಾತನಿಗ ಕೆಲವು ಹೆಣ್ಣುಮಕ್ಕಳು ಇದ್ದಂಥಾ ಪಕ್ಷಕ್ಕೆ ಈ ಹಾಳು ವರದಕ್ಷಿಣೆಯ ಕಾಟದಿಂದ ಹೆಣ್ಣುಮಕ್ಕಳು ಮೂಗುದಾರ ಕಟ್ಟಿದ ಪಶುವಿನಂತೆ ನರಳಬೇಕು. ಇದರಲ್ಲೂ ಅಂಥವರಿಗೆ ಸಮಾಜವೇ ಅವಮಾನವನ್ನು ಹೇಳುತ್ತದೆ. ಇದನ್ನೆಲ್ಲಾ ನೋಡುವಾಗ ನಮ್ಮ ಅಧೋಗತಿಗೆ ನಾವೇ ಕಾರಣರೆಂಬುದಕ್ಕೆ ಸಂಶಯವಿಲ್ಲ. ಇದಕ್ಕಾಗಿಯೇ ಬಿಲ್ಲವ ಯುವಕ ಸಂಘವು ಈ ಮುಂಬಯಿ ಪಟ್ಟಣದಲ್ಲಿ ಹಲಕೆಲವು ಮಹನೀಯರಿಂದ ಇದೇ ವರ್ಷ ಜನ್ಮವೆತ್ತಿದರೂ, ಅದರ ಸುಧಾರಣೆಗಳು ಇನ್ನೂ ಹೆಚ್ಚು ನಡೆಯಲಿರುವುದೆಂದು ನಮ್ಮ ಭಾವನೆ. ಮುಂಬೈಯಂತೆ ದಕ್ಷಿಣಕನ್ನಡದಲ್ಲಿಯೂ ಬಿಲ್ಲವ ತರುಣರ ಸಂಸ್ಥೆಗಳನ್ನು ಅಲ್ಲಲ್ಲಿ ಸ್ಥಾಪಿಸಲು, ತರುಣರು ಪ್ರಯತ್ನಿಸಬೇಕು. ಮೇಲಿನ ಕೆಲವು ನಿಯಮಗಳನ್ನು ಪಾಲಿಸಬೇಕು. ಸಮಾಜದಲ್ಲಿ ನಡೆಯುವ ಕೆಲವು ಅನ್ಯಾಯಗಳನ್ನು ನಾಶಪಡಿಸಲು ಯತ್ನಿಸಬೇಕು. ಹೀಗೆ ಮಾಡಿದರೇನೇ ನಮ್ಮ ಬಿಲ್ಲವಸಮಾಜವು ಸದ್ಯದಲ್ಲಿಯೇ ಉತ್ತಮಸ್ಥಾನಕ್ಕೆ ಬರಬಹುದೆಂದು ಹೇಳಲು ಸಂದೇಹವೊಂದೂ ಅಷ್ಟಯಿಲ್ಲ. ಇದನ್ನೆಲ್ಲಾ ಪರಿಶೀಲಿಸಿ ಮುಂಬಯಿ ನಗರದಲ್ಲಿ ವಾಸಿಸುವ ಬಿಲ್ಲವರಲ್ಲದೆ, ದಕ್ಷಿಣ ಜಿಲ್ಲೆಯ ನವತರುಣರೂ ಬಿಲ್ಲವಸಮಾಜದ ಏಳಿಗೆಯನ್ನು ಬಯಸಲು ಗಮನಕೊಡಬೇಕೆಂದು ಪ್ರಾರ್ಥನೆ.

ಬಿಲ್ಲವ ತರುಣರಲ್ಲೊಬ್ಬ.

(ಈ ಲೇಖನವನ್ನು ಮುಂಬಯಿಯಿಂದ ಶ್ರೀ. ಯು. ಕೆ. ರಂಗರವರು ಪ್ರಕಟಣೆಗಾಗಿ ಕಳುಹಿಸಿದ್ದಾರೆ. ಇದು ಯಾವ ಸಮಾಜವನ್ನೂ ದೂಷಿಸುವ ಉದ್ದೇಶದಿಂದ ಬರೆಯಲ್ಪಟ್ಟಿಲ್ಲ. ಬಿಲ್ಲವ ಸಮಾಜದವರು ಈಗಲೀಗ ಸುಧಾರಣೆ ಹೊಂದುತ್ತಾ ಬರುತ್ತಿರುವುದು ಅವರ ಧಾರ್ಮಿಕ ಏಳಿಗೆಯನ್ನು ಸೂಚಿಸುತ್ತದೆ. ವಿದ್ಯಾವಂತ ಮತ್ತು ಉತ್ಸಾಹೀ ತರುಣರು ಸಮಾಜೋನ್ನತಿಗಾಗಿ ಸತತ ದುಡಿಯುವಂತಾದರೆ ಲೇಖಕರ ಉದ್ದೇಶವು ನೆರವೇರಬಹುದು. ಈ ಕಡೆಗೆ ಬಿಲ್ಲವ ಸಮಾಜವು ಗಮನಕೊಡುವುದೂ ಶ್ರೀ. ಯು. ಕೆ. ರಂಗರಂತಹ ಸಮಾಜಸೇವಾಭಿಲಾಷಿಗಳಿಗೆ ಪ್ರೋತ್ಸಾಹವೀಯುವುದೂ ಅತ್ಯಾವಶ್ಯಕವಲ್ಲವೇ? ಸಂ. ನ.)

PIGMY DEPOSIT SCHEME

A special thrift Deposit and unique feature of our Bank. It will enable you to build a fortune for the rainy day. It is a fountain of happiness.

Further particulars can be had from

The Canara Industrial & Banking Syndicate, Ltd.

UDIPI, (S. India.)

ವಾರದ ಭವಿಷ್ಯ

೧೧ನೇ ಪುಟದಿಂದ

ಪಡುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿಯು ಏನೇನೂ ಚೆನ್ನಾಗಿರುವುದಿಲ್ಲ. ಈ ಬಿಕ್ಕಟ್ಟಿನಿಂದ ಪಾರಾಗುವನ್ನು ಬಿಡಿಸಿಕೊಳ್ಳುವುದು ನಿಮ್ಮಿಂದಾಗದ ಮಾತು. ಗುಣನಡತೆಗಳಲ್ಲಿ ಹಿಂದಿನ ಸ್ಥಿತಿಗೂ ಇಂದಿನ ರೀತಿಗೂ ರಾತ್ರಿಹಗಲಿನಷ್ಟು ಅಂತರವಿರುವುದು. ಆದಕಾರಣದಿಂದಲೋ ಎಂಬಂತೆ ಮಿತ್ರರು ಪುತ್ರರು ಕಳತ್ರರು ಎಲ್ಲರೂ ನಿಮಗೆ ಪ್ರತಿಕೂಲರಾಗಿ ವರ್ತಿಸುವರು. ಇಲ್ಲದಿದ್ದ ಖರ್ಚುಗಳು ನಿಮಗೆ ಗಂಟುಬೀಳುವವು. ದೇಹದ ಆರೋಗ್ಯವೂ ಕೂಡ ಚೆನ್ನಾಗಿರಲಾರದು. ತಾನು ಬಲವಾಗಿದ್ದರೆ ಎಲ್ಲರೂ ಇರುವರು, ತಾನು ಕೈಸೋತು ಬಡವಾದರೆ ವಿಚಾರಿಸುವವರಿಗೆ ಗತಿಯಿಲ್ಲ ಎಂಬೀ ಕಠಿಣವಾದ ಲೋಕಾನುಭವವು ನಿಮಗೆ ಈ ವಾರದಲ್ಲಿ ಸಂಪೂರ್ಣ ಬರಲಿದೆ, ಇದ್ದುದರಲ್ಲಿ ಉತ್ತಮವೆಂದರೆ ನೌಕರಿಯಿಂದ ಜೀವಿಸತಕ್ಕವರಿಗೆ ಸಾಕಷ್ಟು ಅನುಕೂಲಗಳೊದಗುವವು. ವಾರಾಂತ್ಯದ ಮೂರು ದಿನಗಳಂತೂ ವಿಶೇಷ ಹಾನಿಕಾರಿಗಳಾಗಿವೆ.

ಕುಂಭರಾಶಿ—

ಸದ್ಯದಲ್ಲಿ ನಿಮಗೆ ದೇಹಾರೋಗ್ಯವೂ ದೈಹಿಕ ಬಲವೂ ಮಾನಸಿಕ ಧೈರ್ಯವೂ ಕಳತ್ರರ ಬೆಂಬಲವೂ ಧನದ ಅನುಕೂಲತೆಯೂ ಬಹಳ ಉತ್ತಮವಾಗಿರುವುದು. ಯಾವ ಕಾರ್ಯದಲ್ಲೂ ನೀವು ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ. ಕೋರ್ಟು ವಗೈರೆಗಳ ಕಾರ್ಯಗಳಲ್ಲೂ ನಿಮ್ಮ ಪಂಥವೇ ಮೇಲಾಗುವದು. ಯಾವ ಕಾರ್ಯದಲ್ಲೇ ಆಗಲಿ ಲಾಭವು ನಿಶ್ಚಿತ್ತವಾಗಿರುವುದು. ಖರ್ಚಿನ ಭಾಗಗಳು ತೀರ ವಿರಳವಾಗುವವು. ಪುತ್ರರ ಮೂಲಕ ಸಂತೋಷದ ವಾರ್ತೆಯನ್ನು ಕೇಳುವಿರಿ. ಬಂಧುಮಿತ್ರರ ಸಹಾಯಬಲದಿಂದ ಶತ್ರುಜನರನ್ನು ತಲೆಯೆತ್ತದಂತೆ ಮಾಡುವಿರಿ, ನಿಮ್ಮಿಂದಲೂ ಅಧಿಕಬಲವುಳ್ಳ ವಿರೋಧಿಗಳು ಈ ಕಾಲದಲ್ಲಿ ನಿಮಗೆ ಬೆದರುವರು, ಇತರ ಜಾತಿಯವರೊಡನೆ ಕಲಹವಾಗುವ ಸಂಭವವಿದೆ. ಪಿತ್ತಾಧಿಕ್ಯದಿಂದ ಕಣ್ಣುನೋವು ಬರಬಹುದು. ತಾ. 20, 23, 25, 27, ಈ ದಿನಗಳು ಇಷ್ಟಸಿದ್ಧಿಕಾರಿಗಳಾಗಿವೆ.

ಮೀನರಾಶಿ—

ನಿಮ್ಮ ಬುದ್ಧಿ ದೌರ್ಬಲ್ಯದಿಂದಾಗಿ ಕೆಲವಂಶ ವ್ಯರ್ಥ ಧನವ್ಯಯಿಸುವಿರಿ. ಮಾತ್ರವಲ್ಲ ನಿಷ್ಕಾರಣವಾಗಿ ಜನರೊಡನೆ ಕಲಹವೂ ಉಂಟಾಗುವುದು, ಇಷ್ಟವಸ್ತುಗಳು ದುರ್ಲಭವಾಗುವುದರಿಂದ ಚಿತ್ತಕ್ಕೆ ಸ್ವಾಸ್ಥ್ಯ ಇರದು. ಹಲವು ವಿಧಾನಗಳಿಂದ ನೀವು ಧನವನ್ನು ಸಂಗ್ರಹಿಸಿದರೂ ನಿಮ್ಮ ಅಡಚಣೆಯು ತೀರುವಂತಿಲ್ಲ. ಕಾರ್ಯೋತ್ಕರ್ಷಕ್ಕೆ ಶಕ್ತಿಯು ಸಾಕಷ್ಟಿರುವುದರಿಂದ ಹಿಡಿದ ಕಾರ್ಯಗಳೊಂದೂ ಹುಸಿಯಾಗಲಾರವು. ಮಿತ್ರರ ಸಹಾಯವೂ ನಿಮಗೆ ಸಾಕಷ್ಟಿರುವುದು. ನೌಕರಿ ಭಾಗದಲ್ಲಿ ವಿಶೇಷ ಲಾಭವೂ ಉನ್ನತಿಯೂ ಇರುವುದು. ರಾಜಕೀಯ ವಿಚಾರದಲ್ಲಿ ಕೈಹಾಕುವುದರಿಂದ ಮಾನಹಾನಿ ಸಂಭವಿಸೀತು. ಪಶುಧೈನ್ಯಾದಿಗಳಿಂದ ಕೂಡಿದ ಸಂಸಾರದ ಸುಖವು ಪೂರ್ಣವಾಗಿರುವುದು.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

SELF ENGLISH STUDY ಸೆಲ್ಫ ಇಂಗ್ಲಿಷ್ ಸ್ಟಡಿ

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೨ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೬೪ ಪೇಜುಗಳು ಇರುವ ದೊಡ್ಡ ಪುಸ್ತಕ.ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss Co.	ವೆಸ್ಟರನ್ ಸ್ವಿಸ್ ಕಂಪೆನಿ
Book-Sellers, P. A. No. 68	ಪೋಸ್ಟ್ ಬಾಕ್ಸ್ ನಂ 68, ಮದರಾಸ್
G. P. O. MADRAS	

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,	ಯಂ. ಆರ್. ಪುಂಜ,
President & Manager,	ಪ್ರಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager.

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಅಶಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟಿ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:- ನವ ಭಾರತ ಬುಕ್ ಡಿಪ್ಪೋ, ಉಡುಪಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ

ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಮುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ

ಬಹಿಷ್ಠೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತುಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನರಗಳಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು "ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ ಅಗತ್ಯವಾಗಿ ಇರಲೇಬೇಕಾದ್ದು.

ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,

ದಿ ವಿಜಯ ಬೇಂಕ್, ಲಿಮಿಟೆಡ್,

ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	....	3½%
6 ,,	....	4%
1 ವರ್ಷಕ್ಕೆ	....	4½%
2 ,,	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

Rev. Fr. P. W. Farias,

St. Paul's Church,
Bolkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To

THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahosthawam Committee.

THULUNAD BANK
OF SUPPLY AGENCY LIMITED, UDIPI.
[ESTD. 1933]

Authorised & Issued Capital Rs. **1,00,000**
Subscribed & Paid up .... Rs. **31,300**

RATE OF INTEREST FOR FIXED DEPOSITS.

3 to 6	Months	4% p. a.
7 to 11	„	5% „
12 to 18	„	6% „

SPECIAL RATE FOR LONG TERM DEPOSITS ON APPLICATION.

Current Accounts are accepted at
3% p. a.

JOIN ANY OF THE SCHEMES.
INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

BUSINESS HOURS
I Period 12 n. to 3 p. m.
II „ 5 p. m. to 8 p. m.
ON WEEK DAYS.

I Period 12 n. to 1 p. m.
II „ 5 p. m. to 7 p. m.
ON SATURDAYS

Cheques may be presented in II Period, only with Previous arrangement.

3—7—'39.

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

27-7-1939

ನವಯುಗ

NAVAYUGA

The Prosperity of your District lies in the progress of its commercial enterprise.

Place your Insurance with a local Company. Be convinced of its safety and efficiency.

Applications for agencies and organiserships invited.

THE

POPULAR

INSURANCE COMPANY LIMITED,
MANGALORE. S. INDIA.

ತಿಂಗಳ ಕಾಣಿಕೆ-೧೧ ...thly Special

THE ASIAN ASSURANCE COMPANY, LTD.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,15,40,601	9,24,965	24,50,234
1935	2,52,02,418	15,39,296	42,98,820
1938	3,61,56,764	22,54,301	67,66,328

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency, terms etc.
Sri B. Narasan Shetty, Organizer, Brahmavar
„ M. Shivarama Rao, Organizer, Puttur.
Or
Sri J. A. PUTRAN, Branch Manager, Mangalore.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್.

[illegible]

Reserves Rs 2,02,500 - Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p.a. for the earlier half and at 1% p.a. for the latter half of every calendar year.

Fixed Deposits are accepted at all the above offices for one and two years and interest allowed at 3½% p.a. and 4% p.a. respectively, interest being payable every half year of the calendar year. Savings Bank & Cumulative Deposits are also received on reasonable terms.

Negotiable Instruments payable on demand and also genuine short dated trade bills are discounted on fairly easy terms.

For business proper please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ಪತ್ರ ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು.

ಅಸನ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ,
ಧನ್ವಂತರಿ, ಪಿಂಡತೈಲ, ನಾರಾಯಣ,
ಚಂದನಾದಿ, ಲಾಕ್ಷಾ ಇತ್ಯಾದಿ.

ಅಶೋಕಾರಿಷ್ಟ, ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ,
ಪಿಪ್ಪಲ್ಯಾಸವ, ಲೋಹಾಸವ, ಮೃತಸಂಜೀವನ,
ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ.

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು,
ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ
[illegible]

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

[illegible]

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ಶಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಸ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರಕ್
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ.

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್:—ಹೂವಿನಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತ ಅನುಕೂಲ ಹಾಗೂ ಕೇಂದ್ರಸ್ಥಳ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯ ಬೇಕಾಗುವ ಸಾಮಾನುಗಳು ಬಾಲ ಗಟ್ಟಿ ಬರುತ್ತವೆ, ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೨—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ- ಗೋಲ್ಡ್ ಮೆಡಲ್ಡ್ ಫಿಸಿಶಿಯನ್.

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary, Govt. of Madras.

ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೨೭-೭-೧೯೩೯ | Vol. XVIII
ಸಂಚಿಕೆ ೪೭ | Udipi, Thursday 27—7—1939 | No. 47

ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦.
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಮಾವಲೋಕನ

ಚೇಂಬರ್ಲೀನರ "ಇಲ್ಲ" ಮತ್ತು "ಅಲ್ಲ"

ಪಾರ್ಲಿಮೆಂಟಿನಲ್ಲಿ ಟೋಕಿಯೋ ಒಪ್ಪಂದ ಸಂಭಾಷಣೆಯ ಪ್ರಶ್ನೆ ಬಂತು. 'ಇಂಗ್ಲೆಂಡು ಪೂರ್ವ-ಪ್ರಾಚ್ಯ ದೇಶಗಳ ಧೋರಣೆಯನ್ನೇ ಬದಲಾಯಿಸಿ ತನಗನುಕೂಲವಾಗಿ ವರ್ತಿಸುವ ಭರವಸೆಯಿತ್ತಲ್ಲಿ ಮಾತ್ರ ಸಂಧಾನ ಹೂಡಲು ಸಾಧ್ಯ' ಎಂದು ಜಪಾನು ಹೇಳಿರುವದೇ ಎಂದು ಪ್ರಶ್ನಿಸಲ್ಪಟ್ಟಾಗ ಮಿ. ಚೇಂಬರ್ಲೀನರೆಂದರು. "ಹಾಗೇನೂ ಇಲ್ಲ. ನಮ್ಮ ದೇಶವು ಅನ್ಯ ದೇಶಗಳ ಒತ್ತಾಯದಂತೆ ತನ್ನ ವಿದೇಶೀ ಧೋರಣೆಯನ್ನು ಎಂದಿಗೂ ಮಾರ್ಪಡಿಸಿಕೊಳ್ಳಲಾರದೆಂದು ನಾನು ಸ್ಪಷ್ಟವಾಗಿ ತಿಳಿಯುತ್ತೇನೆ. ಮತ್ತು ಅಂತಹ ಬೇಡಿಕೆಯೂ ಜಪಾನಿನವರಿಂದ ಬಂದಿಲ್ಲ. ಪೂರ್ವದೇಶಗಳಲ್ಲಿ ತನ್ನ ತೊಡಕುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡು ಸಹಾನುಭೂತಿ ಪೂರ್ವಕ ವರ್ತಿಸಬೇಕೆಂದು ಜಪಾನು ನಮ್ಮನ್ನು ಕೇಳಿರುವದೇ ಹೊರತು ಅದಕ್ಕಿಂತ ಬಿರುಸಾದ ಬೇಡಿಕೆ ಮುಂದೊಡ್ಡಿಲ್ಲ!"

ಚೇಂಬರ್ಲೀನರ ಮೇಲೆ ಜಪಾನಿಗಿರುವಷ್ಟು ಕರುಣೆ ಪ್ರಶ್ನೆ ಹಾಕಿದ ಪಾರ್ಲಿಮೆಂಟ್ ಸದಸ್ಯರಿಗಿಲ್ಲವೆಂಬಾಯಿತು; ಅವರು ಕೇಳದ್ದನ್ನೂ ಇವರು ಹೇಳಿಬಿಟ್ಟರಲ್ಲ!

❋

ಡಾನ್ಜಿಗ್‌ಗೆ ಸೈನ್ಯ ಕಳುಹುವದಿಲ್ಲ.

ಮಿ ವೇಂಡರ್ ಎಂಬವರು ಪ್ರಶ್ನಿಸಿದರು: "ನಾವು ಡಾನ್ಜಿಗಿನ ವಿಷಯದಲ್ಲಿ ಅಚಲರಾಗಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುವ ಸಲುವಾಗಿ ಇಂಗ್ಲೆಂಡು ಮತ್ತು ಫ್ರೆಂಚ್ ಸೈನಿಕ ದಳಗಳನ್ನು ಡಾನ್ಜಿಗಿಗೆ ಕಳುಹಿಸುವ ಆಲೋಚನೆ ಮಾಡಲಾಗುವದೆ?" ಎಂದು. ಮಿ ಬಟ್ಲರರದಕ್ಕೆ 'ಇಲ್ಲ' ವೆಂಬ ಉತ್ತರವಿತ್ತರು. ಇದೇನು? ಚೇಂಬರ್ಲೀನರ ಸರಕಾರವು ಹಳ್ಳೀ ಸಾಹುಕಾರನಂತೆ ಕೇಳಿದ್ದಕ್ಕೆಲ್ಲಾ ಇಲ್ಲವೆನ್ನ ಹತ್ತಿದೆ. 'ಹಿಟ್ಲರನು ಡಾನ್ಜಿಗನ್ನು ನುಂಗುವ ಮನಸ್ಸು ಮಾಡಿರುವನೆ?' ಎಂದು ಯಾರಾದರೂ ಕೇಳುವದೂ, ಚೇಂಬರ್ಲೀನರು 'ಇಲ್ಲ' ಎಂದು ಉತ್ತರ ಕೊಡುವದೂ ಮಾತ್ರ ಬಾಕಿಯಿದೆ! ಚೇಂಬರ್ಲೀನರ ಈ ವರೆಗಿನ ಎಲ್ಲಾ 'ಇಲ್ಲ'ಗಳನ್ನು ಜಮೆ ಮಾಡಿ ಗುಣಿಸಿದರೆ ಲೋಕಕ್ಕೆ ಶಾಂತಿ 'ಇಲ್ಲ' ಎಂಬ ಅರ್ಥವಲ್ಲದೆ ಬೇರೆ 'ಇಲ್ಲ'!

❋

ಶೀತೋಷ್ಣ ವಲಯಗಳಲ್ಲಿ ವಿಕರೀತಿ

ರಾಜಕೀಯದ ಥಂಡಾ ಹವೆ ತಮ್ಮ ಕಡೆಗೆ ಬೀಸದಿದ್ದರೆ ತಲೆ ಬಿಸಿಯೇರುವ ಹಿಂದೀ ಧುರೀಣರು ನಮ್ಮಲ್ಲಿ ಬಹಳ. ಆದರೆ ಪಂಡಿತ ನೆಹರುಗಳೊಬ್ಬರು ಇದಕ್ಕಪವಾದವೆಂದು ತೋರುತ್ತದೆ. ಅವರೀಗ ನಾಲ್ಕು ಕಡೆಗಳಲ್ಲಿ ಸಮುದ್ರದಿಂದ ಸುತ್ತಲಟ್ಟು ಸ್ವಾಭಾವಿಕ ತಂಪು ಹವೆಯಿಂದ ಕೂಡಿರುವ ಸಿಲೋನಿನಲ್ಲಿರುವದಾದರೂ ಇಲ್ಲಿಯ ಸ್ಫೂರ್ತಿ, ಆವೇಶಗಳನ್ನೇ ಅಲ್ಲಿಯೂ ಪ್ರದರ್ಶಿಸಲು ಶಕ್ತರಿದ್ದಾರೆ. ಕೊಲೊಂಬೋದ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುವಾಗ ನೆಹರುಗಳು ಆವೇಶಗೊಂಡು ಹೇಳಿದರು: ನಾನೊಬ್ಬ ಭಾರತೀಯ. ಅವಮಾನಕರವಾಗಿ ಅಥವಾ ಹೀನರೀತಿಯಿಂದ, ಇಲ್ಲವೇ ತಪ್ಪಾಗಿಯಾವನೊಬ್ಬ ಭಾರತೀಯನ ಒಂದುಕೂದಲೆಳೆಯಾದರೂ ಸ್ಪರ್ಶಿಸಲ್ಪಟ್ಟರೆ ನಾಹದನ್ನು ಸಹಿಸಲಾರೆ. ಎಲ್ಲಿ ಭಾರತೀಯರು ಸ್ವಾಗತಿಸಲ್ಪಡುವುದಿಲ್ಲವೊ ಅಲ್ಲಿ ಅವರು ಹೋಗಕೂಡದೆಂದೇ ನಾನನ್ನುತ್ತೇನೆ" ಸಿಲೋನ್ ಸರಕಾರದ ಮಂತ್ರಿಗಳೊಡನೆ ಮಾತಾಡಿದ ಪಂಡಿತರು "ಮಂತ್ರಿಗಳಲ್ಲಿ ವಿಶಾಲ ಧೋರಣೆಯ ಕೊರತೆಯಿದೆ" ಎಂದು ಸರ್ಟಿಫಿಕೇಟು ಕೊಟ್ಟಿದ್ದಾರೆ. ಪಂಡಿತರು ಹಿಂದೀಯರ ಕೂದಲೆಳೆಯೂ ನೋಂಕಲ್ಪಡಕೂಡದೆನ್ನುವಾಗ ಸಿಲೋನ್ ಸರಕಾರವೂ ಅದಕ್ಕೊಪ್ಪಿ ಸಿಲೋನಿನಲ್ಲಿ ಹಿಂದೀಯರ ಕೂದಲೆಳೆಯೂ ಉಳಿಯಬಾರದೆಂಬ ಧೋರಣೆ ವಹಿಸಿದಂತಿದೆ. ಪಂಡಿತರೀ ಅಸಾಧ್ಯ ಸಮಸ್ಯೆಯನ್ನು ಬಗೆಹರಿಸುವ ರೀತಿ ಹೇಗೊ!

❋

ಭೋಸ್ ಪಟೇಲ್ ವಿವಾದ

ಸರದಾರ ವಲ್ಲಭಾಯಿಯವರು ರಣಕ್ಕಿಳಿದಾಗ ಬರುವ ಸ್ಫೂರ್ತಿಯು ಎದುಪಕ್ಷದವರಿಗೆ ಇನ್ನೊಬ್ಬ ಇದಿರಾಳಿಯನ್ನು ಕಂಡಾಗ ಬರುವದಿಲ್ಲ. ಈಗ ಸರದಾರರು ಶ್ರೀ ಸುಭಾಸಭೋಸರ ವರ್ತನೆಯನ್ನು ಖಂಡಿಸುವ ವಾದ ಹೂಡಿದ್ದಾರೆ; ಶ್ರೀಯುತ ಭೋಸರು ಅದಕ್ಕೆ ಉತ್ತರವಿತ್ತಿದ್ದಾರೆ. ಸುಭಾಸರು ಇತ್ತೀಚೆಗೆ ಕಾಂಗ್ರೆಸ್ ವಿರೋಧಿಗಳ ಸೂತ್ರ ಬದ್ಧರಾಗಿ ಕುಣಿಯುತ್ತಿರುವರೆಂದೂ ಕಾಂಗ್ರೆಸಿನ ವಿರುದ್ಧ ದಂಗೆಯೆಬ್ಬಿಸುವದಕ್ಕಾಗಿ ಅರ್ಥರಹಿತ ವಿಮರ್ಶೆಗಿಳಿದಿದ್ದಾರೆಂದೂ ಪಟೇಲರ ಆರೋಪ. ಕಾಂಗ್ರೆಸಿನ ವಿರುದ್ಧಾಚರಣೆಗೆ ತೊಡಗಿರುವವರು ಕಾಂಗ್ರೆಸ್ ಮಂತ್ರಿಗಳಲ್ಲದೆ ತಾನಲ್ಲ, ಸರದಾರ ಪಟೇಲರು ಪಾನ ನಿರೋಧ ಮೊದಲಾದ ವಿಷಯಗಳಲ್ಲಿ ತನಗಿಂತ ಹಿರಿಯರಲ್ಲ, ಮಿ. ಜಿನ್ನಾರೊಡನೆ ಗಾಂಧಿಯವರ ಒಪ್ಪಿಗೆ ಪಡೆಯದೇ ಸಂಭಾಷಿಸಿದ್ದೆನಲ್ಲದೆ, ಪಾನ ನಿಷೇಧದ ಕುರಿತು ಒಂದು ಶಬ್ದವೂ ಆ ಸಂಭಾಷಣೆಯಲ್ಲಿ ಬಂದಿಲ್ಲ. ಸರದಾರರ ಆರೋಪವು ಅರ್ಥರಹಿತವಾದುದೆಂದು ಭೋಸರ ಉತ್ತರ. ಕಾಂಗ್ರೆಸಿನ ಧುರೀಣರುಗಳಲ್ಲಿ ಹೆಚ್ಚಿನವರು ವಕೀಲರಾಗಿದ್ದವರೆಂಬುದು ಹಲವರಿಗೆ ಇತ್ತೀಚಿನವರೆಗೆ ತಿಳಿಯದಿರಬಹುದು; ಕಳೆದ ಒಂದೆರಡು ವರುಷಗಳಿಂದ ಎರಡೂ ಕಡೆಗಳಿಂದ ನಡೆದಿರುವ 'ಹೇರಿಂಗು'ಗಳು, ಅದ್ದು ಸವಾಲುಗಳು ಅದನ್ನೆಲ್ಲರಿಗೂ ತಿಳಿಸಿವೆ!

❋

ಶಾಂತಾ ಆಪ್ಟೆಯ ಏಕಾದಶಿ

ಪ್ರಭಾತ ಫಿಲ್ಮ್ ಕಂಪೆನಿಯ ಸುಪ್ರಸಿದ್ಧ ನಟಿ, ಮಿಸ್. ಶಾಂತಾ ಆಪ್ಟೆಯು ಕಳೆದ ತಾ. 18ರಲ್ಲಿ ಪ್ರಭಾತ ನಗರದಲ್ಲೇ ಉಪವಾಸ ಕೈಗೊಂಡಳು. ಕಂಪೆನಿಯವರು ತನ್ನ ರಜೆಯ ಸಂಬಳವನ್ನೂ ಕೊಡಬೇಕು. ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಾಗ ಸಂಬಂಧದವರದಕ್ಕೆ ಒಪ್ಪಲಿಲ್ಲವಂತೆ. ಕೂಡಲೇ ನನ್ನ ಅಪೇಕ್ಷೆಗಳೆಲ್ಲಾ ಈಡೇರುವವರೆಗೆ ಅನ್ನ ಸ್ವೀಕರಿಸಲಾರೆ; ಮನೆಗೆ ಹೋಗಲಾರೆ-ಎಂದು ಹಠತೊಟ್ಟು, ಅಲ್ಲಿಯೇ ಬೆಂಚೊಂದರಲ್ಲಿ ಮಲಗಿಬಿಟ್ಟಳು. ಈ ಉಪವಾಸದಿಂದ ಕಂಪೆನಿಯ ಅಧಿಕಾರಿಗಳ ಮೇಲೆ ಯಾವ ಪರಿಣಾಮವೂ ಆಗದಿದ್ದರೂ ನಟಿಯ ದೇಹದ ಮೇಲೆ ತುಂಬಾ ಪರಿಣಾಮವಾಯಿತು. ಡಾಕ್ಟರರು ಬಂದು ನೋಡಿ ದೇಹ ದೌರ್ಬಲ್ಯ ಮತ್ತು ನಾಡಿಗಳ ಬಡಿತ ವಿಪರೀತವಿರುವದರಿಂದ ಮನೆಗೆ ಹೋಗಿ ಆಹಾರ ಸ್ವೀಕರಿಸುವದು ಪಾಸಿ ಎಂದು ಉಪವಾಸಕ್ಕೆ ಸರ್ಟಿಫಿಕೇಟು ಕೊಟ್ಟರು. ಹತ್ತೊಂಭತ್ತನೇ ತಾರೀಕು ಬೆಳಗಾಗುವದರೊಳಗೆ ಮನೆಗೆ ಹೋಗಿ ಫಲಾಹಾರ ಸ್ವೀಕರಿಸಿದಳು.--ನಟಿಯ ಮಟ್ಟಿಗೆ 18ನೇ ತಾರೀಕು ಏಕಾದಶಿಯೂ ಆಯಿತು!

ಪಾಪ! ಶಾಂತಾ ಆಪ್ಟೆ ತಾನು ಉಪವಾಸ ಕುಳಿತರೆ ಕಂಪೆನಿಯ ಅಧಿಕಾರಿಗಳ ನಾಡಿಯ ಬಡಿತ ಬಲವಾಗಿ ಅವರೇ ಡಾಕ್ಟರರ ಪರೀಕ್ಷೆಗೊಳಗಾಗುವರೆಂದು ಭಾವಿಸಿದ್ದಳೇನೊ! ಡಾಕ್ಟರರು ಮಾತ್ರ ಶಾಂತಾ ಆಪ್ಟೆಯ ಕೋಣೆಗೇ ಧಾವಿಸಿದರು. ಆ ಕಾಲದಲ್ಲೇ ಅವಳ ಚಿತ್ರ ತೆಗೆಯುತ್ತಿದ್ದರೆ, ಹಿಂದೂಸ್ಥಾನದಲ್ಲಿ ಈಗ ಅಧಿಕವಾಗುತ್ತಿರುವ ಇನ್ನೊಂದು ಸತ್ಯಾಗ್ರಹದ ಮಾದರಿಯೊಂದನ್ನು ಪ್ರದರ್ಶಿಸುವಂತಾಗುತ್ತಿತ್ತು.

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru — Sjt. S. Srinivasa Iyengar
Dr. M. A. Ansari — Hakim Ajmal Khan

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS, INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty, BRANCH MANAGER, Hampankatta, Mangalore.
OR
K. S. Ramamurthi, M.A. BRANCH SECRETARY, 160, Mount Road, Madras.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9 24,965	24 50 2,4
1935	2,52,08,418	18,39 296	42,98,820
1938	3,61,56,764	22,31,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ M Shivarama Rao, Organizer, Puttur
Or
Sri J. A PUTRAN, Branch Manager, Mangalore.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/- Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p a. for the earlier half and at 1% p. a for the latter half of every calendar year

Fixed Deposits are accepted at all the above offices for one and two years and interest allowed at 3½% p a and 4% p. a. respectively; interest being payable every half year of the calendar year Savings Bank & cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ಎಲಿಯಮ್ ಎಂಡ್ ಕೋ ರವರ
ದಾದ ಮತ್ತು ರಾಣಿಯ ಟ್ರೇಡ್‌ಮಾರ್ಕ್‌ಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ.

ಅತ್ಯಂತ ಗುಣಕಾರಿಯಾದ
ಜನಪ್ರೀತ ಔಷಧಗಳು.

ಎಲ್ಲೆಲ್ಲಿಯೂ ಪ್ರಚಾರದಲ್ಲಿರುವ ಕೆಲವು
ತೈಲ ಮತ್ತು ಅರಿಷ್ಟಾಸವಗಳು

ಆಸವ ಬಿಲ್ವಾದಿ, ಭೃಂಗಾಮಲಕ, ಬ್ರಾಹ್ಮಿ,
ಧನ್ವಂತರಿ, ಹಿಮಸಾಗರ, ನಾರಾಯಣ,
ಚಂದನಾದಿ, ಲಾಕ್ಷಾದಿ ಇತ್ಯಾದಿ

ದಶಮೂಲಾರಿಷ್ಟ, ಖದಿರಾರಿಷ್ಟ, ದ್ರಾಕ್ಷಾರಿಷ್ಟ,
ಪಿಪ್ಪಲ್ಯಾಸವ, ಲೋಹಾಸವ, ವೃದ್ಧಿಕಾಸವ,
ಚಂದನಾಸವ, ದ್ರಾಕ್ಷಾಸವ ಇತ್ಯಾದಿ.

ಶಾಸ್ತ್ರೀಯವಾಗಿ ತಯಾರಿಸಿದ ಅಮೃತ
ಸಮಾನ ಔಷಧಗಳು.

ಕ್ರಯ ಕಡಿಮೆ ! ಫಲ ಅಧಿಕ !!

ಯಾವತ್ತೂ ರೋಗಗಳಿಗೆ ತಕ್ಕ ಔಷಧಗಳಿವೆ

ಅರಿಷ್ಟಗಳು, ಆಸವಗಳು, ತೈಲಗಳು, ಮಾತ್ರೆಗಳು, ಚೂರ್ಣಗಳು,
ಲೇಹ್ಯಗಳು, ಅರ್ಕಗಳು, ಘೃತಗಳು ಇತ್ಯಾದಿ
ಯಾವಾಗಲೂ ತಯಾರಿವೆ

ನಮ್ಮ ಔಷಧಗಳು ಎಲ್ಲೆಲ್ಲಿಯೂ ದೊರೆಯುತ್ತವೆ

ಕಟಲಾಗಿಗೂ ಇತರ ವಿವರಗಳಿಗೂ ಯಾವತ್ತೂ ಔಷಧಗಳಿಗೂ
ಬರೆಯಿರಿ

ಅನುಭವಸಿದ್ಧ ಆಯುರ್ವೇದ ಔಷಧಗಳು.

ಶಿರೋವೇದನೆ ಬಂದಾಗ	—ಭುವನಾಂಜನ
ನೇತ್ರ ವ್ಯಾಧಿಗಳಿಗೆ	—ತಾರಾಂಜನ
ಹಲ್ಲುನೋವು, ಅಜೀರ್ಣಗಳಿಗೆ	—ಚಂದ್ರಮುಖ್
ದದ್ದು, ಗಜಕರ್ಣಗಳಿಗೆ	—ಕ್ರಿಮಿಘಾತಿನಿ
ಕಜ್ಜಿ, ರಕ್ತದೋಷಗಳಿಗೆ	—ಕೃಷ್ಣಾರ್ಕ
ಸ್ತ್ರೀಯರ ಗರ್ಭರಕ್ಷಣೆಗೆ	—ಗರ್ಭಪಾಲ
ಮಕ್ಕಳ ಗ್ರಹಣಿಗೆ	—ಚಿತ್ರಕ
ಬೆಳವಣಿಗೆಗೆ	—ಚ್ಯವನಪ್ರಾಶ

ಇವನ್ನು ಅವಶ್ಯ ಉಪಯೋಗಿಸಿರಿ

BHUVANENDRA PRODUCTS LIMITED, KATAPADI, S. K.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್:—ಹೂವಿನ ಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು,
ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತ
ಅನುಕೂಲ ಹಾಗೂ ಕೇಂದ್ರಸ್ಥಳ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿ
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯ ಬೆಂಬುತ ಸಾಮಾನುಗಳು ಬಂಗಲೆ ಗಟ್ಟಿ ಬರುತ್ತವೆ ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಫಿಲ್ಸ್	ಭೈರವ ಮಾತ್ರೆಗಳು
ಕೋಲರಾ ರೋಗಕ್ಕೆ ರಾಮಬಾಣ ಔಷಧ	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦	೧೦೦ ಮಾತ್ರೆಗಳಿಗೆ ರೂ ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಸಿಜಿಯನ್

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary Govt. of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮
ಸಂಚಿಕೆ ೪೭

ಉಡುಪಿ, ಗುರುವಾರ ೨೭-೭-೧೯೩೯
Udipi, Thursday 27—7—1939

Vol. XVIII
No. 47

ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಚೇಂಬರ್ಲಿನರ "ಇಲ್ಲ" ಮತ್ತು "ಇಲ್ಲ"

ಪಾರ್ಲಿಮೆಂಟಿನಲ್ಲಿ ಟೋಕಿಯೋ ಒಪ್ಪಂದ ಸಂಭಾಷಣೆಯ ಪ್ರಶ್ನೆ ಬಂತು. 'ಇಂಗ್ಲೆಂಡು ಪೂರ್ವ ಸಾಮ್ರಾಜ್ಯ ದೇಶಗಳ ಧೋರಣೆಯನ್ನೇ ಬದಲಾಯಿಸಿ ತಮಗನುಕೂಲವಾಗಿ ವರ್ತಿಸುವ ಭರವಸೆಯಿತ್ತಲ್ಲಿ ಮಾತ್ರ ಸಂಧಾನ ಹೂಡಲು ಸಾಧ್ಯ' ಎಂದು ಜಪಾನು ಹೇಳಿರುವದೇ ಎಂದು ಪ್ರಶ್ನಿಸಲ್ಪಟ್ಟಾಗ ಮಿ. ಚೇಂಬರ್ಲಿನರೆಂದರು. "ಹಾಗೇನೂ ಇಲ್ಲ. ನಮ್ಮ ದೇಶವು ಅನ್ಯ ದೇಶಗಳ ಒತ್ತಾಯದಂತೆ ತನ್ನ ವಿದೇಶೀ ಧೋರಣೆಯನ್ನು ಎಂದಿಗೂ ಮಾರ್ಪಡಿಸಿಕೊಳ್ಳಲಾರದೆಂದು ನಾನು ಸ್ಪಷ್ಟವಾಗಿ ತಿಳಿಯುತ್ತೇನೆ. ಮತ್ತು ಅಂತಹ ಬೇಡಿಕೆಯೂ ಜಪಾನಿನವರಿಂದ ಬಂದಿಲ್ಲ ಪೂರ್ವದೇಶಗಳಲ್ಲಿ ತನ್ನ ತೊಡಕುಗಳನ್ನೆಲ್ಲಾ ಸರಿಯಾಗಿ ತಿಳಿದುಕೊಂಡು ಸಹಾನುಭೂತಿ ಪೂರ್ವಕ ವರ್ತಿಸಬೇಕೆಂದು ಜಪಾನು ನಮ್ಮನ್ನು ಕೇಳಿರುವದೇ ಹೊರತು ಅದಕ್ಕಿಂತ ಬಿರುಸಾದ ಬೇಡಿಕೆ ಮುಂದೊಡ್ಡಿಲ್ಲ!"

ಚೇಂಬರ್ಲಿನರ ಮೇಲೆ ಜಪಾನಿಗಿರುವಷ್ಟು ಕರುಣೆ ಪ್ರಶ್ನೆ ಹಾಕಿದ ಪಾರ್ಲಿಮೆಂಟ್ ಸದಸ್ಯರಿಗಿಲ್ಲವೆಂದಾಯಿತು, ಅವರು ಕೇಳದ್ದನ್ನೂ ಇವರು ಕೇಳಿಬಿಟ್ಟರಲ್ಲ!

ಡಾನ್ಜಿಗ್‌ಗೆ ಸೈನ್ಯ ಕಳುಹುವದಿಲ್ಲ

ಮಿ ಮೇಂಡರ್ ಎಂಬವರು ಪ್ರಶ್ನಿಸಿದರು: "ನಾವು ಡಾನ್ಜಿಗಿನ ವಿಷಯದಲ್ಲಿ ಅಚಲರಾಗಿದ್ದೇವೆ ಎಂಬುದನ್ನು ಸ್ಪಷ್ಟಪಡಿಸುವ ಸಲುವಾಗಿ ಇಂಗ್ಲೆಂಡು ಮತ್ತು ಫ್ರೆಂಚ್ ಸೈನಿಕ ದಳಗಳನ್ನು ಡಾನ್ಜಿಗಿಗೆ ಕಳುಹಿಸುವ ಆಲೋಚನೆ ಮಾಡಲಾಗುವದೆ?" ಎಂದು. ಮಿ ಬಟ್ಲೆರರದಕ್ಕೆ 'ಇಲ್ಲ' ವೆಂಬ ಉತ್ತರವಿತ್ತರು. ಇದೇನು? ಚೇಂಬರ್ಲಿನರ ಸರಕಾರವು ಹಳ್ಳೀ ಸಾಹುಕಾರನಂತೆ ಕೇಳಿದ್ದಕ್ಕೆಲ್ಲಾ ಇಲ್ಲವೆನ್ನಹತ್ತಿದೆ 'ಹಿಟ್ಲರನು ಡಾನ್ಜಿಗನ್ನು ನುಂಗುವ ಮನಸ್ಸು ಮಾಡಿರುವನೆ?' ಎಂದು ಯಾರಾದರೂ ಕೇಳುವದೂ, ಚೇಂಬರ್ಲಿನರು 'ಇಲ್ಲ' ಎಂದು ಉತ್ತರ ಕೊಡುವದೂ ಮಾತ್ರ ಬಾಕಿಯಿದೆ! ಚೇಂಬರ್ಲಿನರ ಈ ವರೆಗಿನ ಎಲ್ಲಾ 'ಇಲ್ಲ'ಗಳನ್ನು ಜಮೆ ಮಾಡಿ ಗುಣಿಸಿದರೆ ಲೋಕಕ್ಕೆ ಶಾಂತಿ 'ಇಲ್ಲ' ಎಂಬ ಅರ್ಥವಲ್ಲದೆ ಬೇರೆ 'ಇಲ್ಲ'!

ಬೀತೋವನ್ನ ವಲಯಗಳಲ್ಲಿ ಏಕರೀತಿ

ರಾಜಕೀಯದ ಥಂಡಾ ಹವೆ ತಮ್ಮ ಕಡೆಗೆ ಬೀಸದಿದ್ದರೆ ತಲೆ ಬಿಸಿಯೇರುವ ಹಿಂದೀ ಧುರೀಣರು ನಮ್ಮಲ್ಲಿ ಬಹಳ ಆದರೆ ಪಂಡಿತ ನೆಹರುಗಳೊಬ್ಬರು ಇದಕ್ಕಪವಾದವೆಂದು ತೋರುತ್ತದೆ. ಅವರೀಗ ನಾಲ್ಕು ಕಡೆಗಳಲ್ಲಿ ಸಮುದ್ರದಿಂದ ಸುತ್ತಲ

ಸಮಾಚಾರ ಸಮಾಲೋಕನ

ಟ್ಟು ಸ್ವಾಭಾವಿಕ ತಂಪು ಹವೆಯಿಂದ ಕೂಡಿರುವ ಸಿಲೋನಿನಲ್ಲಿರುವದಾದರೂ ಅಲ್ಲಿಯ ಸ್ಫೂರ್ತಿ, ಆವೇಶಗಳನ್ನೇ ಅಲ್ಲಿಯೂ ಪ್ರದರ್ಶಿಸಲು ಶಕ್ತರಿದ್ದಾರೆ. ಕೊಲೊಂಬೋದ ಪ್ರಚಂಡ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುವಾಗ ನೆಹರುಗಳು ಆವೇಶಗೊಂಡು ಹೇಳಿದರು: ನಾನೊಬ್ಬ ಭಾರತೀಯ. ಅವಮಾನಕರವಾಗಿ ಅಥವಾ ಹೀನರೀತಿಯಿಂದ, ಇಲ್ಲವೇ ತಪ್ಪಾಗಿಯಾವನೊಬ್ಬ ಭಾರತೀಯನ ಒಂದುಕೂದಲೆಳೆಯಾದರೂ ಸ್ಪರ್ಶಿಸಲ್ಪಟ್ಟರೆ ನಾನದನ್ನು ಸಹಿಸಲಾರೆ ಎಲ್ಲಿ ಭಾರತೀಯರು ಸ್ವಾಗತಿಸಲ್ಪಡುವುದಿಲ್ಲವೋ ಅಲ್ಲಿ ಅವರು ಹೋಗಕೂಡದೆಂದೇ ನಾನನ್ನುತ್ತೇನೆ" ಸಿಲೋನ ಸರಕಾರದ ಮಂತ್ರಿಗಳೊಡನೆ ಮಾತಾಡಿದ ಪಂಡಿತರು "ಮಂತ್ರಿಗಳಲ್ಲಿ ವಿಶಾಲ ಧೋರಣೆಯ ಕೊರತೆಯಿದೆ" ಎಂದು ಸಟೀಕಾ ಕೇಟು ಕೊಟ್ಟಿದ್ದಾರೆ. ಪಂಡಿತರು ಹಿಂದೀಯರ ಕೂದಲೆಳೆಯೂ ನೋಂಕಲ್ಪಡಕೂಡದೆನ್ನುವಾಗ ಸಿಲೋನ್ ಸರಕಾರವೂ ಅದಕ್ಕೊಪ್ಪಿ ಸಿಲೋನಿನಲ್ಲಿ ಹಿಂದೀಯರ ಕೂದಲೆಳೆಯೂ ಉಳಿಯಬಾರದೆಂಬ ಧೋರಣೆ ವಹಿಸಿದಂತಿದೆ. ಪಂಡಿತರೀ ಅಸಾಧ್ಯ ಸಮಸ್ಯೆಯನ್ನು ಬಗೆಹರಿಸುವ ರೀತಿ ಹೇಗೋ!

ಭೋಸ್ ಪಟೇಲ್ ವಿವಾದ

ಸರದಾರ ವಲ್ಲಭಭಾಯಿಯವರು ರಣಕ್ಕಿಳಿದಾಗ ಬರುವ ಸ್ಫೂರ್ತಿಯು ಎದುಪಕ್ಷದವರಿಗೆ ಇನ್ನೊಬ್ಬ ಇದಿರಾಳಿಯನ್ನು ಕಂಡಾಗ ಬರುವದಿಲ್ಲ ಈಗ ಸರದಾರರು ಶ್ರೀ ಸುಭಾಸಭೋಸರ ವರ್ತನೆಯನ್ನು ಖಂಡಿಸುವ ವಾದ ಹೂಡಿದ್ದಾರೆ; ಶ್ರೀಯುತ ಭೋಸರು ಅದಕ್ಕೆ ಉತ್ತರವಿತ್ತಿದ್ದಾರೆ. ಸುಭಾಸರು ಇತ್ತೀಚೆಗೆ ಕಾಂಗ್ರೆಸ್ ವಿರೋಧಿಗಳ ಸೂತ್ರ ಬದ್ಧರಾಗಿ ಕುಣಿಯುತ್ತಿರುವರೆಂದೂ ಕಾಂಗ್ರೆಸಿನ ವಿರುದ್ಧ ದಂಗೆಯೆಬ್ಬಿಸುವದಕ್ಕಾಗಿ ಅರ್ಥರಹಿತ ವಿಮರ್ಶೆಗಿಳಿದಿದ್ದಾರೆಂದೂ ಪಟೇಲರ ಆರೋಪ ಕಾಂಗ್ರೆಸಿನ ವಿರುದ್ಧಾಚರಣೆಗೆ ತೊಡಗಿರುವವರು ಕಾಂಗ್ರೆಸ್ ಮಂತ್ರಿಗಳಲ್ಲದೆ ತಾನಲ್ಲ, ಸರದಾರ ಪಟೇಲರು ಪಾನ ನಿರೋಧ ಮೊದಲಾದ ವಿಷಯಗಳಲ್ಲಿ ತನಗಿಂತ ಹಿರಿಯರಲ್ಲ, ಮಿ. ಜಿನ್ನಾರೊಡನೆ ಗಾಂಧಿಯವರ ಒಪ್ಪಿಗೆ ಪಡೆದೇ ಸಂಭಾಷಿಸಿದ್ದೆನಲ್ಲವೆ, ಪಾನ ನಿಷೇಧನ ಕುರಿತು ಒಂದು ಶಬ್ದವೂ ಆ ಸಂಭಾಷಣೆಯಲ್ಲಿ ಬಂದಿಲ್ಲ ಸರದಾರರ ಆರೋಪವು ಅರ್ಥರಹಿತವಾದುದೆಂದು ಭೋಸರ ಉತ್ತರ ಕಾಂಗ್ರೆಸಿನ ಧುರೀಣರುಗಳಲ್ಲಿ ಹೆಚ್ಚಿನವರು ಪಟೇಲರಾಗಿದ್ದವರೆಂಬುದು ಕೆಲವರಿಗೆ ಇತ್ತೀಚಿನವರೆಗೆ ತಿಳಿಯದಿರಬಹುದು; ಕಳೆದ ಒಂದೆರಡು ವರುಷಗಳಿಂದ ಎರಡೂ ಕಡೆಗಳಿಂದ ನಡೆದಿರುವ 'ಹೇರಿಂಗ್'ಗಳು, ಬದ್ಧ ಸವಾಲುಗಳು ಅದನ್ನೆಲ್ಲರಿಗೂ ತಿಳಿಸಿವೆ!

ಶಾಂತಾ ಆಪ್ಟೆಯ ಏಕಾದಶಿ

ಪ್ರಭಾತ ಫಿಲ್ಮ್ ಕಂಪೆನಿಯ ಸುಪ್ರಸಿದ್ಧ ನಟಿ ಮಿ-ಸ್. ಶಾಂತಾ ಆಪ್ಟೆಯು ಕಳೆದ ತಾ. 18ರಲ್ಲಿ ಪ್ರಭಾತ ನಗರದಲ್ಲೇ ಉಪವಾಸ ಕೈಗೊಂಡಳು. ಕಂಪೆನಿಯವರು ತನ್ನ ರಜೆಯ ಸಂಬಳವನ್ನೂ ಕೊಡಬೇಕು ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಾಗ ಸಂಬಂಧಪಟ್ಟವರದಕ್ಕೆ ಒಪ್ಪಲಿಲ್ಲವಂತೆ. ಕೂಡಲೇ ನನ್ನ ಅಪೇಕ್ಷೆಗಳೆಲ್ಲಾ ಈಡೇರುವವರೆಗೆ ಅನ್ನ ಸ್ವೀಕರಿಸಲಾರೆ; ಮನೆಗೆ ಹೋಗಲಾರೆ-ಎಂದು ಹಠತೊಟ್ಟು ಅಲ್ಲಿಯೇ ಬೆಂಚೊಂದರಲ್ಲ ಮಲಗಿಬಿಟ್ಟಳು. ಈ ಉಪವಾಸದಿಂದ ಕಂಪೆನಿಯ ಅಧಿಕಾರಿಗಳ ಮೇಲೆ ಯಾವ ಪರಿಣಾಮವೂ ಆಗದಿದ್ದರೂ ನಟಿಯ ದೇಹದ ಮೇಲೆ ತುಂಬಾ ಪರಿಣಾಮವಾಯಿತು ಡಾಕ್ಟರರು ಬಂದು ನೋಡಿ ದೇಹ ದೌರ್ಬಲ್ಯ ಮತ್ತು ನಾಡಿಗಳ ಬಡಿತ ವಿಪರೀತವಿರುವದರಿಂದ ಮನೆಗೆ ಹೋಗಿ ಆಹಾರ ಸ್ವೀಕರಿಸುವದು ಲೇಸು ಎಂದು ಉಪವಾಸಕ್ಕೆ ಸರ್ಟಿಫಿಕೇಟು ಕೊಟ್ಟರು ಹತ್ತೊಂಭತ್ತನೇ ತಾರೀಕು ಬೆಳಗಾಗುವದರೊಳಗೆ ಮನೆಗೆ ಹೋಗಿ ಫಲಾಹಾರ ಸ್ವೀಕರಿಸಿದಳು-ನಟಿಯ ಮಟ್ಟಿಗೆ 18ನೇ ತಾರೀಕು ಏಕಾದಶಿಯಾದಂತಾಯಿತು!

ಪಾಪ! ಶಾಂತಾ ಆಪ್ಟೆ ಆರಂಭಿಸಿದ ಉಪವಾಸ ಕುಳಿತರೆ ಕಂಪೆನಿಯ ಅಧಿಕಾರಿಗಳ ನಾಡಿಯ ಬಡಿತ ಬಲವಾಗಿ ಅವರೇ ಡಾಕ್ಟರರ ಪರೀಕ್ಷೆಗೊಳಗಾಗುವರೆಂದು ಭಾವಿಸಿದ್ದಳೇನೋ! ಡಾಕ್ಟರರು ಮಾತ್ರ ಶಾಂತಾ ಆಪ್ಟೆಯ ಕೋರಿಕೆಗೇ ಧಾವಿಸಿದರು. ಆ ಕಾಲದಲ್ಲೇ ಅವಳ ಚಿತ್ರ ತೆಗೆಯುತ್ತಿದ್ದರೆ, ಹಿಂದೂಸ್ಥಾನದಲ್ಲಿ! ಈಗ ಅಧಿಕವಾಗುತ್ತಿರುವ ಚಿನ್ನ ಸತ್ಯಾಗ್ರಹದ ಮಾದರಿಯೊಂದನ್ನು ಪ್ರದರ್ಶಿಸುವಂತಾಗುತಿತ್ತು

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru – Sjt. S Srinivasa Iyengar
Dr. M. A. Ansari – Hakim Ajmal Khan

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS, INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty, BRANCH MANAGER, Hampankatta, Mangalore.
OR
K. S. Ramamurthi, M.A. BRANCH SECRETARY, 160, Mount Road, **Madras.**

ಸಿಲೋನಿನಲ್ಲಿ ಪಂಡಿತ ನೆಹರುಗಳ ರಾಯಭಾರ

ಪಂಡಿತ ಜವಾಹಿರಲಾಲರು ಸಿಲೋನಿನಲ್ಲಿ ಸಂಚರಿಸುತ್ತಿರುವರು. ಜನರು ಅತ್ಯುತ್ಸಾಹದಿಂದ ಮೈಲುಗಟ್ಲೆ ನಡೆದುಕೊಂಡು ಬಂದು ಅವರನ್ನು ಸ್ವಾಗತಿಸುತ್ತಿರುವರು. ಪಂಡಿತರು ಸಿಲೋನ್ ಸರಕಾರದ ಮಂತ್ರಿಗಳೊಡನೆ ಮನಬಿಚ್ಚಿ ಮಾತಾಡಿರುವರಾದರೂ ಅವರು ತಮ್ಮ ಧೋರಣೆ ಬದಲಾಯಿಸುವ ಲಕ್ಷಣ ಕಾಣುವದಿಲ್ಲ. "ಮಂತ್ರಿಗಳಲ್ಲಿ ವಿಶಾಲ ಧ್ಯೇಯದ ನ್ಯೂನತೆ ಕಾಣುತ್ತದೆ" ಎಂದು ಪಂಡಿತರ ಮಾತು. ಸಿಲೋನಿನ ವರ್ತಕ ಮಂಡಳಿ ಮೊದಲಾದ ಸಂಸ್ಥೆ ಸಮಾಜಗಳವರು ಪಂಡಿತರನ್ನು ಡೆಪ್ಯುಟೇಶನ್ ಮೂಲಕ ಭೇಟಿಯಾಗುವರು.

ಸಹಕಾರ ಮತ್ತು ಮಿತ್ರತ್ವದಿಂದ ಎಲ್ಲರ ಹಿತ

ಸಿಲೋನಿನ ಹಿಂದೀ ವ್ಯಾಪಾರೀ ಸಂಘದ ಅಧ್ಯಕ್ಷ ಶ್ರೀ. ಎಚ್. ಎಸ್. ದೇಸಾಯಿಯವರು ಪಂಡಿತರ ಸನ್ಮಾನಾರ್ಥವಾಗಿ ಇತ್ತ ಔತಣ ಸಮಾರಂಭವೊಂದಕ್ಕೆ ಸಿಲೋನಿನ ಮಂತ್ರಿಗಳೂ ಆಗಮಿಸಿದ್ದರು. ಶ್ರೀ ದೇಸಾಯಿಯವರು ಪಂಡಿತರನ್ನು ತರುಣ ಭಾರತದ ಆದರ್ಶ ಮೂರ್ತಿಯೆಂದು ಪರಿಚಯಮಾಡಿಕೊಟ್ಟರು. ಮಂತ್ರಿಗಳಲ್ಲೊಬ್ಬರಾದ ಶ್ರೀ. ಕೋರಿಯಾರವರು ಭಾಷಣಮಾಡುತ್ತಾ ತಮ್ಮದು ಸಣ್ಣನಾಡು, ದುರ್ಬಲ ಜನಾಂಗವೆಂದೂ ಹಿಂದುಸ್ಥಾನದ ಸಹಕಾರವು ಅಗತ್ಯವೆಂದೂ ಎರಡೂ ದೇಶಗಳವರು ಪರಸ್ಪರರನ್ನು ಸರಿಯಾಗಿ ತಿಳಕೊಂಡು ವರ್ತಿಸಿದಲ್ಲಿ ಸರಕಾರಕ್ಕೆ ಹಾದಿಯಿದೆಯೆಂದೂ ಹೇಳಿದರು.

ಪಂಡಿತರ ಭಾಷಣ

"ಭಾರತದ ಚಳವಳವು ದೊಡ್ಡ ದೊಡ್ಡ ಧುರೀಣರಿಂದ ನಡೆಯಿಸಲ್ಪಡುತ್ತಿದೆ ಎಂದು ಭಾವಿಸುವದು ತಪ್ಪು; ಸಾರ್ವಜನಿಕ ಚಳವಳವದು.

ಹೋದಲ್ಲೆಲ್ಲಾ ಸಂಭ್ರಮದ ಸ್ವಾಗತ!
ನೆಹರುಗಳ ಸ್ಫೂರ್ತಿದಾಯಕ ಭಾಷಣ!

ಭಾರತ ಮತ್ತು ಸಿಲೋನುಗಳು ತಮ್ಮ ಸಂಬಂಧವನ್ನು ತಿಕ್ಕಾಟದಿಂದ ನಿರ್ಣಯಿಸಿಕೊಳ್ಳದೆ ಮಿತ್ರತ್ವ ಮತ್ತು ಸಹಕಾರದಿಂದ ತೀರ್ಮಾನಿಸಿಕೊಳ್ಳಬೇಕು. ಅವರು

ಸಂಗತಿಗಳನ್ನು ಯಥಾರ್ಥವಾಗಿ ತಿಳಿದುಕೊಂಡು ಒಬ್ಬರನ್ನೊಬ್ಬರು ಸರಿಯಾಗಿ ತಿಳಿದುಕೊಳ್ಳಬೇಕು.

19ನೇ ಶತಮಾನದ ಪ್ರಜಾಪ್ರಭುತ್ವವು ಅಳಿಗಾಲವನ್ನು ಕಾಣುತ್ತಿದೆ. ನಾವೀಗ ಕೇವಲ ರಾಷ್ಟ್ರೀಯತಾ ದೃಷ್ಟಿಯಿಂದಲೇ ಅಲ್ಲ, ಅಂತರಾಷ್ಟ್ರೀಯ ದೃಷ್ಟಿಯಿಂದ ಪ್ರಜಾಸತ್ತೆಗಳನ್ನು ರಚಿಸಬೇಕು. ಆಕ್ರಮಣಶೀಲ ರಾಷ್ಟ್ರೀಯತ್ವದ ದೃಷ್ಟಿಯಲ್ಲಾದರೆ ಭಾರತವು ದೊಡ್ಡ ರಾಷ್ಟ್ರ, ಸಿಲೋನು ಸಣ್ಣದೇಶ. ಆದರೆ ಹಿಂದೂದೇಶವು ಆ ತತ್ವವನ್ನಂಗೀಕರಿಸಿಲ್ಲ. ಮಿತ್ರತ್ವದಲ್ಲಿ ದೊಡ್ಡತನ ಮತ್ತು ಬಡತನವು ಗಣ್ಯವಾಗುವುದಿಲ್ಲ. ಎಲ್ಲಾ ರಾಷ್ಟ್ರಗಳಿಗೂ ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯದ ದೊಡ್ಡತನವೇ ಮುಖ್ಯವಲ್ಲದೆ ಸ್ಥಳವಿಸ್ತಾರವಲ್ಲ.

ಪ್ರಪಂಚದಲ್ಲೆಲ್ಲಾ ದೊಡ್ಡ ದೊಡ್ಡ ಚಳವಳಿಗಳು ಕಂಡುಬರುತ್ತಿವೆ. ಒಕ್ಕಟ್ಟು ಅಥವಾ ಹೋರಾಟವು ಒಂದೆಡೆಯಲ್ಲಿ ಪ್ರಾರಂಭವಾದರೆ ಹಲವು ರಾಷ್ಟ್ರಗಳಲ್ಲಿ ಪರಿಣಾಮವನ್ನುಂಟುಮಾಡುತ್ತಿದೆ. ದೊಡ್ಡ ದೊಡ್ಡ ಆರ್ಥಿಕ ಸಮಸ್ಯೆಗಳೆದ್ದು ನಿಂತಿವೆ. ಒಂದೆಡೆಯಲ್ಲಿ ವಿಪರೀತ ಸಂಗ್ರಹವಿರುವಾಗ ಇನ್ನೊಂದೆಡೆಯಲ್ಲಿ ತೀರಾ ಗರೀಬತನವಿದೆ. ಒಳ್ಳೆಯದಕ್ಕಿರಲಿ ಕೆಡುವದಕ್ಕಿರಲಿ ಜಗತ್ತೊಮ್ಮೆ ಬದಲಾಗಲೇಬೇಕು.

ಸಣ್ಣ ರಾಷ್ಟ್ರ ಸಿಲೋನು

ಸಿಲೋನ್ ಟೈಮ್ಸ್ ಪತ್ರಿಕಾ ಪ್ರತಿನಿಧಿ ಭೇಟಿಯಾದಾಗ ಪಂಡಿತನೆಹರುಗಳೆಂದರು "ಸಿಲೋನ್ ತಾನೊಬ್ಬನೇ ಸ್ವತಂತ್ರವಾಗಿ ನಿಲ್ಲಲಾರದಷ್ಟು ಸಣ್ಣ ರಾಜ್ಯವೆಂಬುದು ನಿಮಗೆ ಗೊತ್ತಿದೆ. ತನ್ನ ವ್ಯಾಪಾರಕ್ಕಾಗಿ ಅವರು ಅನ್ಯರೊಡನೆ ಸಂಬಂಧಬೆಳೆಸಲೇಬೇಕಾಗಿದೆ; ಭಾರತದ ಹೊರತು ಅಂತಹ ಸಂಬಂಧಕ್ಕೆ ಯೋಗ್ಯವಾದ ಇನ್ನೊಂದು ರಾಜ್ಯವಾವುದು ಅದಕ್ಕೆ ದೊರಕಬಲ್ಲುದು?"

ಒಕ್ಕಲು ಹಿತಮಸೂದೆಯ ಆವಶ್ಯಕತೆ!
ಪ್ರಧಾನ ಮಂತ್ರಿ ಸಿ. ರಾಜಗೋಪಾಲಾಚಾರ್ಯರಿಗೆ
ಹಳ್ಳಿಗರ ಮನವಿ.

ದ. ಕ. ಜಿಲ್ಲೆಯ ಕರಾವಳಿಯಲ್ಲಿ ಚಾಲಗೇಣಿ ಒಕ್ಕಲುಗಳನೇಕರು ಸೇರಿ ತಮ್ಮ ಹಕ್ಕು ಬಾಧ್ಯತೆಗಳ ಸ್ಥಿರತೆಯ ಬಗ್ಗೆ ಒಕ್ಕಲುತನ ಮಸೂದೆಯೊಂದು ಬೇಗನೆ ಜಾರಿಗೆ ಬರುವಂತಾಗಬೇಕೆಂದು ಮನವಿಯೊಂದನ್ನು ಮದ್ರಾಸು ಸರಕಾರದ ಪ್ರಧಾನ ಮಂತ್ರಿ ಶ್ರೀ. ರಾಜಗೋಪಾಲಾಚಾರ್ಯರಿಗೆ ಕಳುಹಿಸಿರುವರು. ಮನವಿಯ ಸಾರಾಂಶವು ಈ ತೆರನಾಗಿದೆ:—ಕರಾವಳಿಯ ಹಳ್ಳಿಗಳ ಮುಖ್ಯ ಉತ್ಪತ್ತಿಯು ತೆಂಗಿನಕಾಯಿ ಮತ್ತು ಅಕ್ಕಿಯಾಗಿರುತ್ತದೆ. ಕೆಲವು ವರ್ಷಗಳ ಹಿಂದೆ ಅಕ್ಕಿ ಮತ್ತು ತೆಂಗಿನಕಾಯಿಗೆ ಕ್ರಯ ಜಾಸ್ತಿಯಿದ್ದಿತ್ತು. ಆ ಕಾಲದಲ್ಲಿ ಅನೇಕರು ಜಮೀನ್ದಾರರಿಂದ ತೋಟಗಳನ್ನೊ ಗದ್ದೆಗಳನ್ನೊ ಆಗಿನ ಧಾರಣೆಯ ಮೇರೆಗೆ ಗೇಣಿ ನಿಶ್ಚಯಿಸಿ ಪಡೆದಿದ್ದರು. ವರ್ಷದಿಂದ ವರ್ಷಕ್ಕೆ ಅಕ್ಕಿ ಮತ್ತು ತೆಂಗಿನಕಾಯಿಗಳ ದರವು ಏರುತ್ತ ಹೋಗಬಹುದೆಂದು ನೆನಸಿ ಚಾಲಗೇಣಿ ಒಕ್ಕಲುಗಳು ತಮ್ಮಲ್ಲಿದ್ದ ಕಾಸುದುಡ್ಡುಗಳನ್ನು ತೋಟಗದ್ದೆಗಳ ಜೀರ್ಣಾವಸ್ಥೆಗೆ ವ್ಯಯಿಸಿದರು. ಇದರಿಂದಾಗಿ ತಾವು ಹಾಕಿದ ಹಣಕ್ಕೆ ತುಂಬಾ ಬಡ್ಡಿರೂಪದ ಅಧಿಕ ಉತ್ಪತ್ತಿ ಸಿಕ್ಕೀತೆಂದು ಭಾವಿಸಿದ್ದರು. ಆದರೆ ದಿನೇ ದಿನೇ ಅಕ್ಕಿ ಮತ್ತು ತೆಂಗಿನಕಾಯಿಯ ಕ್ರಯವು ಕಡಿಮೆಯಾಗುತ್ತ ಬಂದು ಮುಂಚಿನ ದರದ ನೇಕಡಾ 40ರಷ್ಟು ಸಹ ಈಗ ಸಿಕ್ಕುವುದು ದುರ್ಲಭವಾಗಿರುತ್ತದೆ. ಧನಿಗೆ ಗೇಣಿ ಸಲಾಯಿಸುವುದು ಕೂಡ ಈಗ ಕಷ್ಟಸಾಧ್ಯವಾಗಿ ಕೈಯಲ್ಲಿದ್ದ ಕಾಸೂ ಕಳಕೊಂಡು ಕೃತಸಮೇತ ತೋಟಗದ್ದೆಗಳನ್ನು ಧನಿಗೆ ಬಿಟ್ಟುಕೊಡುವ ದುಸ್ಥಿತಿ ಪ್ರಾಪ್ತವಾಗಿದೆ. ಇದು ಮಾತ್ರವಲ್ಲದೆ ಗೇಣಿ ಬಾಕಿಯಾದುದಕ್ಕೆ ಡಿಕ್ರಿಯಾಗಿ ಜಪ್ತಿ, ವಾರಂಟು ಸಿವಿಲ್ ಜೈಲುಗಳ ಸುಖವನ್ನನುಭವಿಸುವ ಶೋಚನೀಯಾವಸ್ಥೆಗೆ ಒಕ್ಕಲುಗಳು ಗುರಿಯಾಗಿರುತ್ತಾರೆ. ಧನಿಗಳ ಉಪಟಳ ಜಾಸ್ತಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯೇ ಲೇಸೆಂದು ಸ್ವಾಭಿಮಾನಿ ಒಕ್ಕಲುಗಳಿಗೆ ಅನ್ನಿಸುತ್ತದೆ. ಸಹಸ್ರ ಸಂಖ್ಯೆಯಲ್ಲಿ ನರಳುತ್ತಿರುವ ಈ ತೆರನಾದ ಒಕ್ಕಲುಗಳ ಹಿತಾರ್ಥವಾಗಿ ಸರಕಾರದವರು ಒಂದು ಕಾನೂನನ್ನು ಬೇಗನೇ ಜಾರಿ ಮಾಡಿ ಅದರಂತೆ ಉತ್ಪತ್ತಿಯ ಕೆಲವಂಶ ಮಾತ್ರ ಧನಿಗೆ ಸಲ್ಲುವಂತಾಗಿ ಬಾಕಿ ಹೆಚ್ಚಿನಂಶಗಳು ಒಕ್ಕಲುಗಳಿಗೇನೇ ಸಿಕ್ಕುವಂತಾಗಬೇಕು. ಇಂದು ಹಳ್ಳಿಯ ಒಕ್ಕಲುಗಳ ಪರಿಸ್ಥಿತಿಯು ಅತಿ ಕರುಣಾಜನಕವಿದೆ. ತಮ್ಮ ಪರಿಸ್ಥಿತಿಯನ್ನು ಸಾಮುದಾಯಿಕವಾಗಿ ಸರಕಾರದ ಮುಂದಿಟ್ಟು ಚಳವಳ ಹೂಡುವ ವ್ಯವಸ್ಥೆಯು ಇನ್ನೂ ಆಗಿಲ್ಲ. ಆದರೆ ಹಾಗಾಗದೆ ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಹಳ್ಳಿಗರು ಜಾಗ್ರತರಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಚಳವಳಿಸುವುದು ಅತ್ಯಾವಶ್ಯಕವಾಗಿದೆ.

THE
BOMBAY LIFE ASSURANCE CO, LTD
ಸ್ಥಾಪನೆ 1908
ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.
ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಮೊತ್ತ.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಬಾಲಾಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ. ಬಾಕ್ಸ್ ನಂ.337, ಮೌಂಟ್ ರೋಡ್,	ವಿಕ್ಟೋರಿಯಾಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವಂಡ್ರಮ್.

ರಾಶಿಫಲ

ಲೇಖಕರು:—ಶ್ರೀ. ಪಿ. ಬಿ. ಉಪಾಧ್ಯಾಯರು, ಬಿ.ಎ., ಎಲ್ ಎಲ್.ಬಿ.

ವಾರವಾರದಲ್ಲಿ ರಾಶಿಫಲವನ್ನು ನೋಡುವುದಕ್ಕಿಂತಲೂ ಒಂದು ರಾಶಿಯ ಜನರ ಸಾಮಾನ್ಯ ಭವಿಷ್ಯವನ್ನು ಒಮ್ಮೆಯೇ ತಿಳಿಯಲು ಸಾಧ್ಯವಿದ್ದರೆ ಎಷ್ಟು ಒಳ್ಳೆಯದಿತ್ತೆಂದು ನೀವು ಯೋಚಿಸುವುದಿಲ್ಲವೇ? ಅದೂ ಸಾಧ್ಯವಿದೆ. ಭೂಲೋಕದಲ್ಲಿರುವ ಜನರನ್ನು ಒಂದೇ ಸಲ ಹನ್ನೆರಡು ರಾಶಿಗಳನ್ನಾಗಿಮಾಡಬಹುದು. ಅವರು ಹುಟ್ಟಿದ ನಕ್ಷತ್ರವನ್ನು ನೋಡಿ ಅಲ್ಲ;—ಅವರ ಸ್ವಭಾವ ನೋಡಿ.

ಸ್ವಭಾವಕ್ಕನುಸಾರವಾಗಿ ವಿಭಾಗಿಸುವಾಗ ಭೂಲೋಕದ ಜನರಲ್ಲಿ ನೂರರಲ್ಲಿ ತೊಂಭತ್ತು ಮಂದಿ ಮೇಷರಾಶಿಗೆ ಸೇರುವವರು. ಮೇಷರಾಶಿಯ ಜನರು ಸ್ವತಂತ್ರವಾಗಿ ಯೋಚಿಸುವುದು ಬಹಳ ಕಡಿಮೆ. ಅವರು ಯಾವಾಗಲೂ ಬಹುಜನರು ನಡೆಯುವ ದಾರಿಯಲ್ಲಿಯೇ ನಡೆಯುವವರು. ಅದು ತಪ್ಪು ದಾರಿಯೆಂದು ತಿಳಿದರೂ ಬದಲಾಯಿಸುವವರಲ್ಲ; ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಗಳೆಲ್ಲವೂ ಸರಿಯೆಂದು ಅವರ ದೃಢನಂಬಿಕೆ. ನಮ್ಮ ಹಿರಿಯರು ಅಷ್ಟು ತಿಳಿಯದೆ ಹೀಗೆ ಮಾಡಿಟ್ಟಿರುವರೇ ಎಂಬುದು ಅವರ ಸಮಾಧಾನ. ಸ್ವಲ್ಪವೂ ವಿಚಾರವಿಲ್ಲದೆ ಸರ್ವನಾಶವಾದರೂ ಹಿಂದಿನವರ ಕ್ರಮದಂತೆ ತಾವು ನಡೆಯಬೇಕೆನ್ನುವ ಸ್ವಭಾವ ಈ ರಾಶಿಯವರದು.

ಎರಡನೇ ವೃಷಭರಾಶಿ. ಈ ರಾಶಿಯವರ ಸ್ವಭಾವವು ಮೇಷರಾಶಿಯವರ ಸ್ವಭಾವಕ್ಕೆ ಬದ್ಧ ವಿರೋಧವಿದೆ. ವೃಷಭರಾಶಿಯವರು ಯಾರ ಮಾತನ್ನೂ ಕೇಳುವವರಲ್ಲ ತಾವು ಮಾಡುವುದೆಲ್ಲಾ ಸರಿಯೆಂದು ಅವರ ಮತ ಯಾರಾದರೂ ಸನ್ಮಾರ್ಗವನ್ನು ಬೋಧಿಸಿದರೆ ಅವರು ಅದನ್ನು ನಿರ್ಲಕ್ಷಿಸುವರು. ತಾವು ಸೋತು ಹೋದರೂ ಅವಮಾನಹೊಂದಿದರೂ ಅವರು ಅದಕ್ಕೆ ಗಮನಿಸುವುದಿಲ್ಲ. ಸಾಮಾನ್ಯ ಕಷ್ಟಗಳು ಅವರನ್ನು ಬಾಧಿಸುವುದಿಲ್ಲ. ಇವರ ಜೀವನವು ಸುಖಮಯವಲ್ಲ. ಇತರರಿಗಾಗಿ ಸದಾ ದುಡಿಯುತ್ತಿರುವ ಯೋಗ್ಯತೆ ಇವರದು

ಮೂರನೇ ಮಿಥುನರಾಶಿ. ಈ ರಾಶಿಯ ಜನರು ತಮ್ಮ ಭೋಗಸುಖವನ್ನೇ ಸದಾ ಯೋಚಿಸುತ್ತಿರುವರು. ಇದಕ್ಕಾಗಿಯೇ ತಾವು ಜನ್ಮವೆತ್ತಿರುವೆವೆಂದು ಅವರ ಯೋಚನೆ. ತಮ್ಮ ಧನ, ಮಾನ, ಆರೋಗ್ಯವನ್ನೂ ಸುಖಕ್ಕಾಗಿ ಹಾಳುಮಾಡಿಕೊಳ್ಳಲೂ ಅವರು ಸಿದ್ಧರಿರುವರು. ಇವರು ಅನಾರೋಗ್ಯದಲ್ಲಿ ನರಳುತ್ತಿದ್ದು ಕಷ್ಟದಲ್ಲಿ ಜೀವಿಸುತ್ತಿರುವವರು.

ನಾಲ್ಕನೇ ಕರ್ಕಾಟಕರಾಶಿ. ಈ ರಾಶಿಯವರು ಇತರರು ಯಾರಾದರೂ ಶಾಂತರೀತಿಯಿಂದ ಇರುವುದನ್ನು ಮೆಚ್ಚುವುದಿಲ್ಲ. ಶಾಂತತೆ ಇರುವಲ್ಲಿ ಇಲ್ಲದ ಕೆಸರನ್ನೆಬ್ಬಿಸುವರು. ಸ್ನೇಹಿತರೊಳಗೆ, ಸಂಬಂಧಿಕರೊಳಗೆ ಕಲಹವನ್ನೆಬ್ಬಿಸುವ ಸ್ವಭಾವ. ಹೀಗಾಗಿ ಈ ರಾಶಿಯವರನ್ನು ಎಲ್ಲರೂ ದೂರಮಾಡುವುದು ಸಹಜವಿದೆ. ಆದರೂ ಇವರು ಎಷ್ಟು ಭದ್ರವಾದ ಸ್ಥಳಗಳಿಗೂ ಪ್ರವೇಶಿಸಿ ತಮ್ಮ ಕಾರ್ಯವನ್ನು ನಡೆಯಿಸಬಲ್ಲರು.

ಐದನೇ ಸಿಂಹರಾಶಿ. ಈ ರಾಶಿಯವರು ಸ್ವಲ್ಪ ಕಠಿಣ ಹೃದಯದವರಾದರೂ ಗಂಭೀರ ಸ್ವಭಾವವುಳ್ಳವರು. ಅಲ್ಪ ಕೆಲಸಗಳಿಗೆ ಕೈ ಹಾಕುವವರಲ್ಲ ಮೋಸ ಕೃತ್ಯಗಳನ್ನು ಅರಿಯರು. ಧೈರ್ಯಶಾಲಿಗಳಾಗಿ ರಾಜಕೀಯದಲ್ಲಿ ಮೆರೆಯುತ್ತಿರುವರು.

ಆರನೇ ಕನ್ಯಾರಾಶಿ. ಈ ರಾಶಿಯ ಜನರು ಮನೆಯಲ್ಲಿ ತುಂಬಾ ಮದುವೆಯಾಗದ ಹುಡುಗಿಯರಿದ್ದು ಅವರಿಗೆ ಯೋಗ್ಯರಾದ ವರರನ್ನು ಹುಡುಕುವುದರಲ್ಲಿಯೇ ಮಗ್ನರಾಗಿರುವರು. ಜಾತಕದ ಕಟ್ಟೊಂದು ಸದಾ ಅವರ ಕೈಯಲ್ಲೇ ಇರುವುದು. ಯಾರೊಬ್ಬ ಹೊಸ ವ್ಯಕ್ತಿಯನ್ನು ನೋಡಿದೊಡನೆಯೇ ಅವರು ಎಲ್ಲಿಯವರು ಅವರ ಸ್ಥಿತಿಯೇನು, ಅವರಿಗೆ ಗಂಡುಮಕ್ಕಳು ಎಷ್ಟು ಅವರಿಗೆಲ್ಲರಿಗೂ ಮದುವೆಯಾಗಿದೆಯೇ, ಎಂದೆಲ್ಲಾ ವಿಚಾರಿಸುತ್ತಿರುವುದು ಅವರ ಲಕ್ಷಣ. ಅವರ ಸಂಪಾದನೆಯ ಹಣವನ್ನೆಲ್ಲಾ ವರರನ್ನು ಕೊಂಡುಕೊಳ್ಳುವುದಕ್ಕಾಗಿ ವೆಚ್ಚ ಮಾಡಿ ಕಷ್ಟದಲ್ಲಿ ಜೀವನ ಮಾಡಬೇಕಾಗುವುದು

ಏಳನೇ ತುಲಾರಾಶಿ ಈ ರಾಶಿಯವರು ಕೇವಲ ವ್ಯಾಪಾರದೃಷ್ಟಿಯವರು. ತಾವು ಯಾವ ಕೆಲಸವನ್ನೂ ಮಾಡದೆ ಇತರರ ಕಷ್ಟದ ಫಲವನ್ನು ಸುಲಭದಲ್ಲಿ ಉಂಡು ಸುಖಿಗಳಾಗಿರುವರು. ಯಾವಾಗಲೂ ಲಾಭದ ಕಡೆಗೆನೇ ಮನಸ್ಸು ಕೊಡುವರು. ಲಾಭ ದೊರೆಯುವುದೆಂದಾದರೆ ಇತರರಿಗೆ ಅದರಿಂದ ಉಂಟಾಗುವ ದುಃಖವನ್ನು ಲಕ್ಷಿಸರು. ಲಾಭಕ್ಕೋಸ್ಕರ ಎಷ್ಟು ಸುಳ್ಳನ್ನಾಗಲಿ ಹೇಳಲು ಅಂಜುವವರಲ್ಲ ಆದರೂ ಎಲ್ಲರಿಗೂ ಅತ್ಯಂತ ಸ್ನೇಹಿತರೆಂದು ತೋರಿಸಿಕೊಂಡು ತಮ್ಮ ಕಾರ್ಯವನ್ನು ಪೂರೈಸಿಕೊಳ್ಳುವ ಸ್ವಭಾವ ಇವರದು.

ಎಂಟನೇ ವೃಶ್ಚಿಕರಾಶಿ. ಈ ರಾಶಿಯ ಜನರು ಮಹಾ ಕ್ರೂರಿಗಳು. ನೋಡುವಾಗ ಸಜ್ಜನರಂತೆ ಕಂಡರೂ ಅವರ ಕಾರ್ಯದ ಅಂತ್ಯದಲ್ಲಿ ವಿಷವಿದೆ. ಏನೊಂದೂ ತಮಗೆ ಪ್ರಯೋಜನವಿಲ್ಲದಿದ್ದರೂ ಇತರರಿಗೆ ಅತಿಯಾಗಿ ನೋವು ಉಂಟುಮಾಡುವ ಸ್ವಭಾವ ಇವರದು. 'ಯಾರು ಮುದ್ದು ಕೊಟ್ಟರೂ ಚೇಳು ಮುದ್ದು ಕೊಟ್ಟೀತೇ' ಎಂಬ ಗಾದೆಯಂತೆ ಇವರಿಂದ ಯಾವ ಉಪಕಾರವನ್ನೂ ನಿರೀಕ್ಷಿಸುವುದು ವ್ಯರ್ಥ

ಒಂಭತ್ತನೇ ರಾಶಿ ಧನು ಈ ರಾಶಿಯವರು ಡೊಂಕು ಸ್ವಭಾವದವರು. ಸೀದಾ ಮಾರ್ಗವೇ ಅವರಿಗೆ ತಿಳಿಯದು. ಯಾವಾಗಲೂ ಇತರರಿಗೆ ಚುಚ್ಚಿ ನೋಯಿಸುವುದೇ ಅವರ ಉದ್ದೇಶ ಇವರ ಮಾತುಗಳು ಮತ್ತು ಕಾರ್ಯವು ಯಾವಾಗಲೂ ಬಹಳ ತೀಕ್ಷ್ಣ. ಇಂಥವರ ಸಹವಾಸವನ್ನು ಎಲ್ಲರೂ ತ್ಯಜಿಸುವರು

ಹತ್ತನೇ ಮಕರರಾಶಿ. ಈ ರಾಶಿಯ ಜನರು ನಡೆಯಿಸುವ ಮೋಸಗಳು ಜನರಿಗೆ ಥಕ್ಕನೆ ತಿಳಿಯುವಂತಿಲ್ಲ. ನೋಡುವಾಗ ಬಹಳ ಸಜ್ಜನರಾಗಿರುವರು. ಒಳಗಿಂದೊಳಗೆ ಒಂದು ಕಾಲನ್ನು ಹಿಡಿದು ಎಳೆದು ಮುಳುಗಿಸಿ ಬಿಡುವ ಸ್ವಭಾವ. ಇವರ ವಿಷಯವಾಗಿ ಎಷ್ಟು ಜಾಗರೂಕರಾಗಿದ್ದರೂ ಸಾಲದು. ಇತರರು ಕಷ್ಟದಲ್ಲಿರುವುದನ್ನು ನೋಡಿ ಬಹಳ ಸಹಾನುಭೂತಿ ಉಳ್ಳವರಂತೆ ಕಣ್ಣೀರು ಬಿಡುವರು. ಆದರೆ ಇತರರನ್ನು ಗೋಳಾಡುವುದಕ್ಕೆ ಅನೇಕ ವೇಳೆ ಇವರೇ ಕಾರಣರಿರುವರು

ಹನ್ನೊಂದನೇ ಕುಂಭರಾಶಿ. ಈ ರಾಶಿಯ ಜನರನ್ನು ನೋಡುವಾಗ ಅವರು ಸುಖಸಂತೋಷದಲ್ಲಿ ತುಂಬಿತುಳುಕುತ್ತಿರುವಂತೆ ಕಾಣುವರು. ಆದರೆ ಅವರ ನಿಜಸ್ಥಿತಿಯು ಹೆಚ್ಚಾಗಿ ಟೊಳ್ಳಾಗಿರುವುದು. ಅತೀ ಅಲ್ಪವಾದ ಕಷ್ಟವನ್ನೂ ಅವರು ಸಹಿಸಲಾರರು. ಎಷ್ಟು ಸಣ್ಣ ಪೆಟ್ಟಿಗೂ ಪುಡಿಪುಡಿ ಆಗುವ ಸ್ವಭಾವ ಅವರದು. ಬಹಳ ಜಾಗ್ರತೆಯಿಂದ ತಮ್ಮ ಆರೋಗ್ಯವನ್ನು ಇವರು ಕಾಪಾಡಿಕೊಂಡಿರಬೇಕು.

ಹನ್ನೆರಡನೇ ಮೀನರಾಶಿ. ಈ ರಾಶಿಯ ಜನರು ಸುಖಜೀವಿಗಳು ಯಾರ ಕೈಗೂ ಸಿಕ್ಕದೆ ಹಿಡಿವಾಗ ಥುಸಕ್ಕನೆ ಜಾರಿಬಿಡುವರು ಯಾವಾಗಲೂ ಮನೆಬಿಟ್ಟು ಹೊರಡುವವರಲ್ಲ. ಈ ರಾಶಿಯವರಿಗೆ ಶತ್ರುಗಳು ಬಹಳ. ಇವರನ್ನು ಹಿಡಿದು ತಿನ್ನಬೇಕೆಂದು ಎಷ್ಟೋ ಜನರು ಹೊಂಚುಹಾಕುತ್ತಿರುವರು. ಇವರಿಗೆ ಅಲ್ಪ ವಿಷಯಗಳಲ್ಲಿ ಆಸೆ ಆದುದರಿಂದ ಅಲ್ಪ ಆಶೆ ತೋರಿಸಿ ಇವರನ್ನು ಹಿಡಿಯುವುದು ಸುಲಭವಿದೆ. ಇಷ್ಟು ಜಾಗ್ರತೆಯವರಾದರೂ ಈ ರಾಶಿಯ ಜನರು ಸುಲಭದಲ್ಲಿ ಇತರರ ಬಲೆಯಲ್ಲಿ ಬೀಳುವರು

ಹೀಗೆ ಭೂಲೋಕದ ಎಲ್ಲಾ ಜನರನ್ನು ಅವರವರ ಸ್ವಭಾವಕ್ಕನುಸಾರವಾಗಿ ಹನ್ನೆರಡು ರಾಶಿಗಳನ್ನಾಗಿ ಹೊಸ ಜ್ಯೋತಿಷ್ಯದ ರೀತ್ಯಾ ವಿಭಾಗಿಸಿಯದೆ. ಇದನ್ನು ನೋಡಿ ಎಲ್ಲರೂ ತಾವು ಯಾವ ರಾಶಿಗೆ ಸೇರಿದವರೆಂದು ಸುಲಭದಲ್ಲಿ ತಿಳಿದುಕೊಳ್ಳಬಹುದು. ಈ ಫಲವು ಗ್ರಹಗಳ ಚಲನೆಯನ್ನು ಹೊಂದಿಕೊಂಡು ಇಲ್ಲವಾದುದರಿಂದ ವಾರವಾರಕ್ಕೆ ಇದು ಬದಲಾಗುವುದಿಲ್ಲ. ಆದರೆ ಜನರು ತಮ್ಮ ಸ್ವಭಾವವನ್ನು ಬದಲಾಯಿಸಿಕೊಂಡು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸೇರಬಹುದು.

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೇಲ್

(ಫೋನ್ ನಂಬ್ರ:106) ಹಳೆ ಪೋಸ್ಟಾಫೀಸು ರೋಡ್ ಮೈಸೂರು.
ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!
ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ
ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347
ಇದೇ ಪ್ಯಾಲೇಕರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ
ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.
ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ
ಪ್ರೊಪ್ರೈಟರ್—ಕೆ. ಗುರುರಾಜಾಚಾರ್.

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸುಖವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಮಾಸಿಸ್ರಾವ, ಎದೆನೋವು ಇವುಗಳಿಗೆ ದಿವ್ಯ ಔಷಧಿ.
ಪೌಂಡ್ 1ರ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ, ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.
ಬಾಟ್ಲಿ 1ರ ರೂ 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ನಂಬ್ರ 11 ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಮಂಗಳೂರು.
ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಕ್ಕುವ ಸ್ಥಳಗಳು:—ಬಿ ಕೆನರಾ ಡ್ರಗ್ಸ್ ಲಿಮಿಟೆಡ್, ಕಾರ್ಕಳ; ರಾ.ಶ್ರೀ ರಾಮ ಸ್ಟೇಶನರಿ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು: ವಿಟ್ಠಲ್ ನಾರಾಯಣ ಶೆಣೈ, ಬ್ರದರ್ ಟರ್ವಿ ಸಸ್, ವಪಗಾಂವ್, ಬೊಂಬಾಯಿ, ಬಿ. ವೆಂಕಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗಳೂರು ಸ್ಟೋರ್ಸ್, ಮಡಿಕೇರಿ, ಕೃಷ್ಣ ಫಾರ್ಮಸಿ, ಕುಂದಾಪುರ, ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ.

ಆಶ್ರಿತರಾಜರ ನಿರ್ಣಯಕ್ಕೆ ಹೆಚ್ಚಿನ ಅವಧಿ

ಪಂಜಾಬು ಪ್ರಾಂತ್ಯದ ಕೆಲವು ರಾಜರುಗಳು ಕೇಳಿಕೊಂಡಂತೆ ಮಾನ್ಯ ವೈಸರಾಯರು ಫೆಡರೇಶನಿಗೆ ಸೇರುವ ಕುರಿತು ಆಶ್ರಿತ ರಾಜರಿಗೆ ಬರೆದಿದ್ದ ಪತ್ರಕ್ಕೆ ಉತ್ತರ ಕೊಡುವ ವಾಯಿದೆಯನ್ನು ಸಪ್ಟಂಬರ ತಾ. 1ರ ವರೆಗೆ ಮುಂದರಿಸುವ ಪ್ರಕಟಣೆ ಕೊಟ್ಟಿರುವರು. ಹೀಗೆ ವಾಯಿದೆ ಇತ್ತುದುದರಿಂದ ಬ್ರಿಟಿಷ್ ಸರಕಾರವು ಘೋಷಣೆಯನ್ನು ಬದಲಾಯಿಸುವದೆಂಬ ಅರ್ಥವಿಲ್ಲವೆಂದೂ ಸೂಚಿಸಲ್ಪಟ್ಟಿದೆ.

ಗಾಂಧಿಯವರ ಕಾಶ್ಮೀರ ಯಾತ್ರೆ ರದ್ದಾಯಿತು

ಈಗ ಗಡಿನಾಡಿನಲ್ಲಿರುವ ಗಾಂಧಿಯವರನ್ನು ತನ್ನ ಅತಿಥಿಯಾಗಿ ಬರಬೇಕೆಂದು ಕಾಶ್ಮೀರ ಸಂಸ್ಥಾನದ ಸರಕಾರವು ಆಮಂತ್ರಿಸಿದಂತೆ ಗಾಂಧಿಯವರದಕ್ಕೆ ಒಪ್ಪಿದ್ದರು. ಆದರೆ ಕಾಶ್ಮೀರದ ಪ್ರಜಾ ಪ್ರಮುಖರಾದ ಶೇಖ್ ಅಬ್ದುಲ್ಲಾ ಮೊದಲಾದವರು ಗಾಂಧಿಯವರೊಡನೆ ಚರ್ಚಿಸಿದುದರ ಪರಿಣಾಮವಾಗಿ ಅವರು ಸರಕಾರದ ಅತಿಥಿಯಾಗಿರದೆ ಪ್ರಜೆಗಳ ಅತಿಥಿಯಾಗಿ ನಿಲ್ಲುವ ತೀರ್ಮಾನಮಾಡಿ ಕಾಶ್ಮೀರ ಸರಕಾರಕ್ಕೆ ತಿಳಿಸಿದರು. ಇದರಿಂದ ತಮಗೆ ಅವಮಾನವಾಯಿತೆಂದು ಕಾಶ್ಮೀರದ ಸರಕಾರವು ಪುನಃ ಗಾಂಧಿಯವರೊಡನೆ ತಂತೀ ವ್ಯವಹಾರ ಬೆಳೆಸಿದುದರ ಪರಿಣಾಮವಾಗಿ ಈ ತಿಕ್ಕಾಟವೇ ಬೇಡವೆಂದು ಗಾಂಧಿಯವರು ಕಾಶ್ಮೀರ ಪ್ರವಾಸವನ್ನೇ ರದ್ದುಪಡಿಸಿಕೊಂಡರು.

ಶ್ರೀ ಭುಲಾಬಾಯಿಯವರ ಆಗಮನ

ಯುರೋಪಿಗೆ ತೆರಳಿದ್ದ ಶ್ರೀ ಭುಲಾಭಾಯಿ ದೇಸಾಯಿಯವರು ತಾ. 20ರಲ್ಲಿ ಕರಾಚಿಯಲ್ಲಿ ಬಂದಿಳಿದು 21ಕ್ಕೆ ಬೊಂಬಾಯಿಗೆ ಹೋಗಿರುವರು. ಹಿಂದೂದೇಶದ ರಾಜಕೀಯ ಪರಿಸ್ಥಿತಿಯು ಬಿಕ್ಕಟ್ಟಿನಿಂದಾಗಿ ತಾನು ಬೇಗನೇ ಮರಳಬೇಕಾಯಿತೆಂದು ಅವರಂದರು. ಯುರೋಪಿನ ರಾಜಕಾರಣದ ಕುರಿತು ಮಾತಾಡುತ್ತಾ ಯುದ್ಧವು ಕೂದಲೆಳೆಯಿಂದ ತೂಗಾಡುತ್ತಿರುವದೆಂದೂ ಹೆಚ್ಚುಕಡಿಮೆ ಸ್ವಲ್ಪ ಸಮಯದೊಳಗೆ ಇನ್ನೊಂದು ಯುದ್ಧವಾಗುವದು ನಿಶ್ಚಯವೆಂದೂ ಹಿಟ್ಲರನು ನಿಸ್ಸಂದೇಹವಾಗಿ ತನ್ನ ಆಕ್ರಮಣವನ್ನು ಮುಂದೊತ್ತುವನಾದರೂ ಇಂಗ್ಲೆಂಡು ಫ್ರಾನ್ಸುಗಳು ತಮ್ಮ ಘೋಷಣೆಯನ್ನು ಕಾರ್ಯಕ್ಕೆ ಹಚ್ಚಿರುವದು ಸಾಲದೆಂದೂ ಶ್ರೀ. ದೇಸಾಯಿಯವರಂದರು.

ತಿರುವಾಂಕೂರು ಬಜೆಟ್

ತಾ. 21ರಲ್ಲಿ ಪ್ರಾರಂಭವಾದ ತಿರುವಾಂಕೂರು ಎಸೆಂಬ್ಲಿಯ ಎರಡು ಸಭೆಗಳ ಸಮ್ಮಿಳಿತ ಅಧಿವೇಶನದಲ್ಲಿ ಬಜೆಟ್ ಭಾಷಣವೀಯುತ್ತಾ ಆರ್ಥಿಕ ಮಂತ್ರಿಗಳಾದ ಶ್ರೀ. ಎಮ್. ಗೋವಿಂದ ಪಿಳ್ಳೆಯವರು ಸಂಸ್ಥಾನದ ರಾಜಕೀಯ ಗೊಂದಲ ಮೊದಲಾದ ಬಿಕ್ಕಟ್ಟಿನ ಕಾಲದಲ್ಲಾದರೂ ಆರ್ಥಿಕ ಸ್ಥಿತಿ ಬಲಗೊಳ್ಳುತ್ತಾ ಬಂದಿರುವದೆಂದೂ 1939-40ನೇ ಇಸವಿಯ ಬಜೆಟಿನಲ್ಲಿ ಹೆಚ್ಚಿನ ತೆರಿಗೆ ಯಾವುದನ್ನೂ ವಿಧಿಸದೆ 2.70ಲಕ್ಷ ರೂಗಳ ಉಳಿತಾಯವಾಗಬಹುದೆಂದೂ ತಿಳಿಸಿದರು.

ಸ್ವದೇಶ ಸಮಾಚಾರ

ಬಂಗಾಳಾ ಕೈದಿಗಳಿಗೆ ಮಹಾತ್ಮರ ಬುದ್ಧಿವಾದ

ಬಂಗಾಳಾ ಜೈಲುಗಳಲ್ಲಿರುವ ರಾಜಕೀಯ ಕೈದಿಗಳು ತಮ್ಮ ಬಿಡುಗಡೆಯನ್ನಿಚ್ಛಿಸಿ ಅನ್ನಸತ್ಯಾಗ್ರಹವನ್ನು ಕೆಲವು ದಿನಗಳಿಂದ ಕೈಗೊಂಡಿರುವರು. ಈ ಕುರಿತು ಮಹಾತ್ಮಾ ಗಾಂಧಿಯವರು ಗಡಿನಾಡಿನ ಅಬೋಟಾಬಾದಿನಿಂದ ಹೀಗೆಂದು ವಿನಂತಿಸಿರುವರು. "ಬಂಗಾಳಾ ಅನ್ನಸತ್ಯಾಗ್ರಹೀ ಕೈದಿಗಳು ನನಗೊಂದು ಪತ್ರವನ್ನು ಕಳುಹಿಸಿರುವರೆಂದೂ, ಸಾರ್ವಜನಿಕ ವಿನಂತಿಯೊಂದನ್ನು ಹೊರಡಿಸಿರುವರೆಂದೂ ನಾನು ಪತ್ರಿಕೆಗಳಿಂದ ತಿಳಿಯುತ್ತೇನೆ. ಅವರ ಹಿಂದೆ ಒಮ್ಮತದ ಸಾರ್ವಜನಿಕ ಅಭಿಪ್ರಾಯವು ಬೆಂಬಲಕ್ಕಿರುವದೆಂಬುದರ ಅನುಮಾನವಿಲ್ಲ. ಈ ಬೆಂಬಲದಿಂದ ತೃಪ್ತಿ ಹೊಂದಿ ಅವರು ಅನ್ನತ್ಯಾಗ ವ್ರತವನ್ನು ಬಿಡಬೇಕೆಂದು ನಾನವರನ್ನು ಕೇಳಿಕೊಳ್ಳುತ್ತೇನೆ. ಅವರು ಧೈರ್ಯಶಾಲಿಗಳು. ಅವರ ಅನ್ನತ್ಯಾಗ ವ್ರತವು ಅನುಚಿತ ರೀತಿಯಲ್ಲಿ ಕೈಗೊಳ್ಳಲ್ಪಟ್ಟಿತೆಂದೂ ಅದು ಧೀರತನದ ಒಂದಂಗವಲ್ಲವೆಂದೂ ನಾನವರಿಗೆ ಸೂಚಿಸುತ್ತೇನೆ. ಗೌರವಾರ್ಹ ರೀತಿಯಿಂದ ಅವರ ಬಿಡುಗಡೆ ಸಾಧಿಸಬಲ್ಲೆನೆಂಬ ನನ್ನ ಕಾರ್ಯದ ಮೇಲೆ ಅವರು ನಂಬಿಗೆಯಿಡಲಿ."

ಸತ್ಯಾಗ್ರಹಿಗಳ ಶೋಚನೀಯ ಸ್ಥಿತಿ

ತಾ. 19ಕ್ಕೆ ಬಂಗಾಳ ಕೈದಿಗಳು ಅನ್ನಸತ್ಯಾಗ್ರಹಮಾಡಿ 13ದಿನಗಳಾಗುತ್ತವೆ. ಆಲಿಪುರ ಜೈಲಿನ 50ಮಂದಿಯೂ ದಮ್‌ದಮ್ ಜೈಲಿನ 4ಮಂದಿಯೂ ಉಪವಾಸ ಕುಳಿತಿದ್ದು ಅವರೆಲ್ಲಾ ಈಗ ಆಸ್ಪತ್ರೆಯಲ್ಲಿರುವರು. ಆ ಪೈಕಿ ಮೂವರ ಪರಿಸ್ಥಿತಿಯು ಬಹಳ ವಿಷಮಕ್ಕೆ ಬಂದಿದೆ. ಬಂಗಾಳದಲ್ಲಿ ಸರಕಾರದ ವರ್ತನೆಯನ್ನು ಖಂಡಿಸಿ ಸಭೆಗಳಾಗುತ್ತಿವೆ. ಢಕ್ಕಾ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸಭೆ ಸೇರಿ ಬಂಗಾಳದಲ್ಲೆಲ್ಲಾ ಕಾನೂನುಉಲ್ಲಂಘನಾ ಚಳವಳವನ್ನು ಹೂಡುವರೆ ಅನುಮತಿಯಾಗಬೇಕೆಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರಾದ ಬಾಬು ರಾಜೇಂದ್ರಪ್ರಸಾದರು ಬಂಗಾಳದ ಮುಖ್ಯ ಮಂತ್ರಿ ಫಜಲುಲ್ ಹಕ್ಕರಿಗೆ ಈ ಕುರಿತು ಪತ್ರಬರೆದಿರುವರು. ಪ್ರಸಾದರು ಅದಕ್ಕಾಗಿ ಕಲ್ಕತ್ತೆಗೆ ಹೋಗಲಿರುವರೆಂದೂ ತಿಳಿದುಬರುತ್ತದೆ.

ಅಗೋಸ್ತು ತಾ. 9ಕ್ಕೆ ಎ. ಐ. ಸಿ. ಸಿ. ಸಭೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಅಗೋಸ್ತು ತಾ. 9ಕ್ಕೆ ಮಹಾತ್ಮಾ ಗಾಂಧಿಯವರು ತನ್ನ ಸಂಚಾರ ಮುಗಿಸಿಕೊಂಡು ಮರಳುವ ಹೊತ್ತಿಗೆ ವಾರ್ಧದಲ್ಲಿ ಸೇರಲಿರುವದು. ಸಭೆಯ ಮುಂದೆ ಬರಲಿರುವ ಮುಖ್ಯ ವಿಷಯವೆಂದರೆ ಜುಲಾಯಿ ತಾ. 9ರಲ್ಲಿ ನಿರ್ಣಯ ವಿರೋಧ ದಿನವಾಚರಿಸಿದ ಕಾಂಗ್ರೆಸ್ ಪ್ರಮುಖರ ಮೇಲೆ ಮತ್ತು ಕಾಂಗ್ರೆಸ್ ಕಮಿಟಿಗಳ ಮೇಲೆ ಶಿಸ್ತು ಜಾರಿಮಾಡುವ ವಿಚಾರ.

ಪಂಡಿತನೆಹರುಗಳು ಚೀನಕ್ಕೆ ಹೋಗುವದಿಲ್ಲ

ಸಿಲೋನ್ ಪ್ರವಾಸವನ್ನು ಮುಗಿಸಿದ ಪಂಡಿತ ಜವಾಹಿರಲಾಲರು ಚೀನವನ್ನು ಸಂದರ್ಶಿಸುವರೆಂದೂ ಲಂಡನಿನ ಚೀನೀ ರಾಯಭಾರಿಯು ಅದಕ್ಕೆ ವ್ಯವಸ್ಥೆಮಾಡಿದ್ದನೆಂದೂ ಮೆಡಮ್ ಚಿಯಾಂಗ್ ಕೈಶೇಕರವರನ್ನಿದಿರುಗೊಳ್ಳುವರೆಂದೂ ಪ್ರಕಟವಾಗಿತ್ತು. ಈಗ ಪಂಡಿತ ನೆಹರುಗಳು ಅಂತರ್ರಾಷ್ಟ್ರೀಯ ಹಾಗೂ ಭಾರತೀಯ ಪರಿಸ್ಥಿತಿಯು ಕೆಟ್ಟಿರುವದರಿಂದಾಗಿ ಚೀನಕ್ಕೆ ಹೋಗುವ ಮನಸಿದ್ದರೂ ಹೋಗಲಾಗುವದಿಲ್ಲವೆಂದು ತಿಳಿಸಿರುವರು.

ಕಾಂಗ್ರೆಸ್ ಮಹಾಧಿವೇಶನಕ್ಕೆ ಸಿದ್ಧತೆ

ಬಿಹಾರಿನಲ್ಲಿ ಇವೇ ದಶಂಬರಕ್ಕೆ ಸೇರಲಿರುವ ಅಖಿಲಭಾರತ ರಾಷ್ಟ್ರ ಸಭೆಯ ಮಹಾಧಿವೇಶನಕ್ಕೆ ರಾಮಗಡ ಎಂಬಲ್ಲಿ ಸರ್ವಸಿದ್ಧತೆಗಳಾಗುತ್ತಿವೆ. ಕಾಂಗ್ರೆಸ್ ನಗರದ ರಚನೆಯು ಇಷ್ಟರಿಂದಲೇ ಆರಂಭಿಸಲ್ಪಟ್ಟು ಸುಮಾರ 1ಲಕ್ಷ ಜನರಿಗೆ ಸಾಕಾಗುವಷ್ಟು ಸ್ಥಳಾನುಕೂಲತೆಯನ್ನಿಡಲಾಗುವದು. ಐದುಸಾವಿರ ಜನರನ್ನು ತುಂಬುವ ಸಬ್ಜೆಕ್ಟ್ ಕಮಿಟಿ ಚಪ್ಪರ, 3000 ಪ್ರತಿನಿಧಿಗಳು 3000ವಿದೇಶೀಯ ಅತಿಥಿಗಳು 4000ಕೆಲಸಗಾರರು ಹಾಗೂ ಸ್ವಯಂಸೇವಕರು ಇವರಿಗೆಲ್ಲಾ ಪ್ರತ್ಯೇಕ ಶಿಬಿರಗಳ ಏರ್ಪಾಡಾಗುವದು. ಕಾಂಗ್ರೆಸ್ ನಗರದಲ್ಲಿ ಸ್ವದೇಶೀ ಮತ್ತು ಪಾನನಿಷೇಧದ ಮಹತ್ವವನ್ನು ಸಾರುವ ಸಿನೆಮಾಗಳು ಮೊದಲನೇ ಬಾರಿ ಪ್ರದರ್ಶಿಸಲ್ಪಡಲಿರುವವು. ನಗರ ರಚನೆಯು ಸುಪ್ರಸಿದ್ಧ ಕಲಾವಿದರಿಗೊಪ್ಪಿಸಲ್ಪಟ್ಟಿದೆ.

ಇದೀಗ ಪ್ರಕಟವಾಗಿದೆ! ಇದೀಗ ಪ್ರಕಟವಾಗಿದೆ!

ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ

ಕರ್ನಾಟಕದ ಪ್ರಸಿದ್ಧ ನಾಟಕಕಾರರೈವರ
ಐದು ಏಕಾಂಕ ನಾಟಕಗಳ ಸಂಗ್ರಹ.
ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಸಂಪಾದಿಸಲ್ಪಟ್ಟು
ಭಾರತೀ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ ನವೀನ ಪುಸ್ತಕ.
ನಾಟಕಕಾರರ ಪಡಿಯಚ್ಚುಗಳೂ ಕೊಡಲ್ಪಟ್ಟಿವೆ.
ಬೆಲೆ ೦-೪-೦. ಐದಾಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೈದರಾಬಾದಿಗೆ ಸುಧಾರಣೆ

ಹೈದರಾಬಾದಿನ ನಿಜಾಮರು ತನ್ನ ಸಂಸ್ಥಾನಕ್ಕೆ ಸುಧಾರಣೆಯನ್ನು ದಾನಮಾಡಿ ಪ್ರಕಟಣೆಯೊಂದನ್ನು ಹೊರಡಿಸಿರುವರು. ಈ ಸುಧಾರಣೆಯಂತೆ 85ಮಂದಿ ಮೆಂಬರರಿರುವ ನ್ಯಾಯವಿಧಾಯಕ ಸಭೆಯೊಂದು ರಚಿಸಲ್ಪಡುವದು. ಅವರಲ್ಲಿ 42 ಮಂದಿ ಆರ್ಥಿಕ ಪರಿಸ್ಥಿತಿಯ ಆಧಾರದಿಂದ ರಚಿಸಲ್ಪಡುವ ಮತದಾರ ಕ್ಷೇತ್ರಗಳ ಮಿಶ್ರ ಮತದಾನದ ಮೂಲಕ ಆರಿಸಲ್ಪಡಬೇಕು. ಧಾರ್ಮಿಕ ಹಕ್ಕು ಬಾಧ್ಯತೆಗಳ ಕುರಿತು ಬರುವ ದೂರುಗಳನ್ನು ಕೇಳಿಕೊಂಡು ಮಂತ್ರಿಗಳಿಗೆ ಸೂಚನೆಗಳನ್ನು ಕೊಡುವರೆ 'ರಿಲಿಜಿಯಸ್ ಎಫೇರ್ಸ್ ಕಮಿಟಿ'ಯೊಂದು ನೇಮಕಹೊಂದುವದು. ಸ್ಥಳೀಕ ಸಂಸ್ಥೆಗಳು ಚುನಾವಣಾ ಮೂಲಕ ರಚಿಸಲ್ಪಡುವವಲ್ಲದೆ ಅವುಗಳಿಗೆ ಹೆಚ್ಚಿನ ಅಧಿಕಾರವೀಯಲಾಗುವದು. ಮತ್ತು ಹಳ್ಳಿಗಳಿಗೆಲ್ಲಾ ಪಂಚಾಯಿತುಗಳನ್ನು ಸ್ಥಾಪಿಸಲಾಗುತ್ತದೆ. ಹೈದರಾಬಾದಿನ ನಿಜಾಮರೇ ಸಂಸ್ಥಾನಿಕ ಸರಕಾರದ ಶಿರಸ್ಸಾಗಿರುವರಲ್ಲದೆ ಪ್ರಜೆಗಳ ಪ್ರಭುವಾಗಿಯೂ ಇರುವರು. ಎಸೆಂಬ್ಲಿಯಲ್ಲಿ ಬಜೆಟ್ಟಿನ ಮೇಲೆ ಚರ್ಚಿಸುವ ಮತ್ತು ಠರಾವು ತರುವ ಅಧಿಕಾರವೂ ಇದೆ. ರಾಜಕುಟುಂಬ, ವಿದೇಶಸಂಬಂಧ, ಸೈನ್ಯ ಮತ್ತು ಪೋಲೀಸು, ಜಾಗೀರದಾರ ಸಂಬಂಧ, ದಾನಧರ್ಮಗಳು, ಪೆನ್ಶನುಗಳು, ಮತ್ತು ಸಾರ್ವಜನಿಕ ಸಾಲ, ಈ ಘಟನೆಯ ತಿದ್ದುಪಡಿ ಮೊದಲಾದ ಕೆಲವು ಕಾದಿಟ್ಟ ಹಕ್ಕುಗಳನ್ನು ಬಿಟ್ಟರೆ ಮಿಕ್ಕ ವಿಷಯಗಳಲ್ಲಿ ಮೆಂಬರರಿಗೆ ಚರ್ಚಿಸುವ ಅಧಿಕಾರವಿರುವದು. ಈ ಸುಧಾರಣೆಯನ್ನು ಜಾಹೀರುಪಡಿಸುವದರೊಂದಿಗೆ ನಿಜಾಮರು ಒಂದು ಹೇಳಿಕೆ ಹೊರಡಿಸಿ ಯಾವ ಹೊಸ ಸ್ಫೂರ್ತಿಯಿಂದ ಈ ಸುಧಾರಣೆಯು ರಚಿಸಲ್ಪಟ್ಟಿರುವದೋ ಅದೇ ಸ್ಫೂರ್ತಿ ಮತ್ತು ಸಹಕಾರದಿಂದ ಕೆಲಸಮಾಡಿ ಸರಕಾರ ಮತ್ತು ಪ್ರಜೆಗಳು ಅನುಭವಹೊಂದುವಂತಾಗಿ ಮುಂದಕ್ಕೆ ಇನ್ನೂ ಹೆಚ್ಚಿನದು ಕೈಗೂಡುವಂತಾಗಲೆಂದು ಪ್ರಾರ್ಥಿಸಿರುವರು. ಹೈದರಾಬಾದಿನ ಒಟ್ಟು ಜನಸಂಖ್ಯೆ 1,44,36,148 ಇದ್ದು ಅವರಲ್ಲಿ 1,22,03,500 ಹಿಂದುಗಳು. ಮುಸಲ್ಮಾನರು 15,34,666 ಮಂದಿ, ಕ್ರೈಸ್ತರು 151,382, ಪಾರ್ಶಿಗಳು 7,084, ಯಹೂದಿಯರು 27, ಮಿಕ್ಕವರು 5,44,789 ಮಂದಿ. ಹಿಂದುಗಳು ಶೇಕಡಾ 88ರಷ್ಟು. ಮುಸಲ್ಮಾನರು 10½ರಷ್ಟು ಇರುವರು. ಅಲ್ಲಿಯ ಭಾಷೆಗಳಲ್ಲಿ ತೆಲುಗು ಹೆಚ್ಚಿನ ಜನರಾಡುವ ಭಾಷೆ, ಆಮೇಲೆ ಮರಾಠಿ, ಮೂರನೆಯದಾಗಿ ಕನ್ನಡ. ಅಲ್ಲಿ ಕನ್ನಡಿಗರ ಸಂಖ್ಯೆ 16,30,094.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಪಂಜಾಬಿನ ಕೇಸರಿ — ರಣಜಿತಸಿಂಗ್ —

ಅವನ ಜೀವನದ ಕೆಲವು ಪ್ರಾಮುಖ್ಯ ಘಟನೆಗಳು

ಲೇಖಕರು:—ಪ್ರೊಫೆಸರ್ ಗಣಪತಿ ರಾವ್‌ಸಾಹೆಬ್, ಎಂ. ಎ., ಇತಿಹಾಸದ ಪಂಡಿತರು,
ದೆಹಲಿ ಯುನಿವರ್ಸಿಟಿ.

●

ಈಗ ಈ ಮಹಾಪುರುಷನ ಶತಮಾನೋತ್ಸವವು ಭಾರತದಲ್ಲೆಲ್ಲಾ ಆಚರಿಸಲ್ಪಡುತ್ತಿದೆಯಾಗಿ, ಅವನ ಜೀವನ ಚರಿತ್ರೆಯನ್ನು ವಾಚಕರಿಗಾಗಿ ಕೊಡಲಾಗಿದೆ.

ಸಿಕ್ಕರ ಇತಿಹಾಸದಲ್ಲಿ 1469ನೇ ವರ್ಷವು ಬಹಳ ಮಹತ್ವದ್ದು. ಆ ವರ್ಷವೇ ಲಾಹೋರಿನ ಬಳಿ ತಲ್ವಾಂಡಿ ಎಂಬಲ್ಲಿ ಗುರು ನಾನಕರು ಹುಟ್ಟಿದ್ದು. ತಮ್ಮ ಜೀವನದ ಪ್ರಾರಂಭದ 25 ವರ್ಷಗಳಲ್ಲಿ ನಾನಕರು ಕಾಲಚಕ್ರಕ್ಕೆ ವಿರೋಧವಾಗಿ ಕೆಲಸ ಮಾಡಲು ಸಿದ್ಧತೆಯನ್ನು ಮಾಡಿಕೊಂಡು ಜೀವಿತದ ಉಳಿದ ಭಾಗವನ್ನು ಈ ಕದನದಲ್ಲೇ ಕಳೆದರು. ಸರಿಯಾದ ವಾಯುಗುಣವುಳ್ಳ ಫಲವತ್ತಾದ ಭೂಮಿಯಲ್ಲಿ ಒಂದು ಧಾರ್ಮಿಕ ತತ್ವವನ್ನು ಬೀರಿದರು. ಇವರ ವಂಶಜರು ಇವರು ನಟ್ಟ ಬೀಜವನ್ನು ಎಚ್ಚರಿಕೆಯಿಂದ ಪೋಷಿಸಿ ಬೆಳಸಿದರು. ಮೊದಲು ಸಣ್ಣ ಗಿಡವಾದ ಈ ಬೀಜವು ಅತ್ಯಂತ ಬೃಹದಾಕಾರವಾದ ವೃಕ್ಷವಾಯಿತು. ಇದರ ಪರಿಣಾಮವಾಗಿ "ಸಿಖ್ ಚರ್ಚ್" (ಧಾರ್ಮಿಕ ತತ್ವಗಳು) ಗೋಪುರ್ಮುಖಿ ಲಿಪಿಯಲ್ಲಿ ಆದಿಗ್ರಂಥವಾಗಿ 'ನಿಜವಾದ ರಾಜ'ನೆಂದು ವಿಖ್ಯಾತವಾಯಿತು. ಅಮೃತಸರದಂತಹ ಪವಿತ್ರ ಪಟ್ಟಣವೂ ಗುರುದ್ವಾರ ಜನ್ಮದೇವಿಯ ನಿರ್ಮಾಣವಾಯಿತು. 1606ರ ವರೆಗೆ ಒಂದು ಭದ್ರವಾದ ಆರ್ಥಿಕ ಯೋಜನೆಯೊಡನೆ ಒಂದು ಬಲವಾದ ಧಾರ್ಮಿಕ ಸಂಸ್ಥೆಯು ರೂಪುಗೊಂಡಿತು. ಆವರ ಇತಿಹಾಸದಲ್ಲಿ 1606ನೇ ವರ್ಷವನ್ನು ಕ್ರಾಂತಿಕಾರಕ ವರ್ಷವೆನ್ನಬಹುದು. ಏಕೆಂದರೆ ಆ ವರ್ಷದಲ್ಲಿಯೇ ಮೊಗಲ್ ಸಾಮ್ರಾಟರಿಗೂ ಸಿಕ್ಕರಿಗೂ ತಿಕ್ಕಾಟವಾರಂಭವಾಗಿ ಸಿಕ್ಕರದೊಂದು ಹೊಸ ರೂಪವೇ ಉಂಟಾಯಿತು. ಈ ಹೋರಾಟವನ್ನೇ ಗುರು ನಾನಕರು ಮುಂದುವರಿಸಿದರು. ಗುರು ತೇಗ್ (ತೇಜ್ ಅಲ್ಲ) ಬಹದ್ದೂರರೂ, ಗುರು ಗೋವಿಂದರೂ ಪರಿಪೂರ್ಣತೆಗೆ ತಂದರು.

ಮೊಗಲ್ ಚಕ್ರವರ್ತಿಗಳ ಆಳ್ವಿಕೆಯ ಅಂತ್ಯದಲ್ಲಿ ಸಿಕ್ಕರನ್ನು ಪೂರ್ಣವಾಗಿ ತುಳಿಯುವ ಪ್ರಯತ್ನವು ನಡೆಯಿತು. ಉತ್ತರ ಮತ್ತು ಪಶ್ಚಿಮದ ಆ ಸರಹದ್ದುಗಳ ನಾಶ, ನಾದಿರ್‌ಷಾ ಮತ್ತು ಅಹ್ಮದ್‌ಷಾ ಅಬ್ದಾಲಿಯ ಮುತ್ತಿಗೆ ಇವುಗಳಿಂದ ರಾಜಕೀಯ ಜಾಗೃತಿಯುಂಟಾಗಿ, ಸಿಕ್ಕರು ಸಹ ತಮ್ಮ ಐತಿಹಾಸಿಕ ಮಹತ್ವದೊಡನೆ ಬೆಳಕಿಗೆ ಬಂದರು. ಮೊಗಲರ ಕಿರುಕುಳದಿಂದ ಲಾಭ ಹೊಂದಿ, ಬೇರೊಂದು ಬಲವಾದ ಚಳುವಳಿಗೆ ಸಿದ್ಧರಾದರು. 1748ರಿಂದ 1799ರ ವರೆಗೆ ಸಿಕ್ಕರ ರಾಜಕೀಯ ಶಕ್ತಿಯು ಹೆಚ್ಚಿತು. "ಮಿಸಲ್" ಎಂದು ಕರೆಯಲ್ಪಡುತ್ತಿದ್ದ, ಸಿಕ್ಕರ ಸಣ್ಣ ರಾಷ್ಟ್ರಗಳು, ಭದ್ರವಾದ ಪ್ರಭುತ್ವಗಳಾದುವು. ಇದೇ ಸಿಕ್ಕರ 'ಕಾನ್ಫಡ್ರೆಸಿ'ಯ ಕಾಲ. ಆದರೆ ಇದು ಶಾಶ್ವತವಾದ ಒಂದು ಸಂಸ್ಥೆಯಾಗಲಿಲ್ಲ. ಏನಾದರೂ ಆಪತ್ತಿನ ಸಂಭವವಾದಾಗ ಮಾತ್ರ ಒಟ್ಟುಗೂಡಿ ಹೊಡೆದಾಡುವುದು, ನಂತರ ಚೆದರಿಹೋಗುವುದು, ಇವೇ ಅವರಲ್ಲಿದ್ದ ಗುಣದೋಷಗಳು.

ರಣಜಿತಸಿಂಗನು ಭಾರತದ ಇತಿಹಾಸದಲ್ಲಿ ಮುಂದೆ ಬಂದುದು ಈ ಕಾಲದಲ್ಲೇ. ಇವನು ತನ್ನ ಅದ್ಭುತ ಮೇಧಾಶಕ್ತಿಯಿಂದ ಸಿಕ್ಕರ ಚರಿತ್ರೆಯನ್ನೇ ಬದಲಾಯಿಸಿದನು. ತಾನೊಬ್ಬ ಅತ್ಯಂತ ಮೇಧಾವಿಯೆಂಬುದನ್ನೂ, ತನ್ನ ಕಾರ್ಯರೀತಿಯಲ್ಲಿ ದೃಢಚಿತ್ತದಿಂದ ಮುಂದರಿದು ಒಂದು ಪ್ರಬಲವಾದ ಜನಾಂಗದ ನಿರ್ಮಾಣ ಮಾಡಬಲ್ಲೆನೆಂಬುದನ್ನೂ ಇವನು ತನ್ನ ಕೃತಿಯಿಂದ ಮಾಡಿತೋರಿಸಿದನು. ಸಿಕ್ಕರ ಚರಿತ್ರೆಯಲ್ಲಿ ಈ ಮಹಾಪುರುಷನ ಕಾರ್ಯಗಳು ಅನಂತ ಕಾಲದ ವರೆಗೂ ಸ್ಮರಣೆಯಲ್ಲಿರಲು ಯೋಗ್ಯವಾಗಿವೆ.

ಒಂದು ಜನಾಂಗದ, ಒಂದು ನಾಡಿನ ಸ್ಥಾಪನೆ, ರಚನೆ, ರಕ್ಷಣೆಯ ದೃಷ್ಟಿಯಲ್ಲಿ ಮೊಗಲ್ ವಂಶದ ಮೂಲ ಪುರುಷನಾದ ಬಾಬರ್ ಮರಾಟೆಯವರ ಮೂಲ ಪುರುಷನಾದ ಶಿವಾಜಿ ಮಹರಾಜ, ಭಾರತದಲ್ಲಿ ಬ್ರಿಟಿಷ ಚಕ್ರಾಧಿಪತ್ಯಕ್ಕೆ ಮೂಲಕಾರಣನಾದ ಕ್ಲೈವ, ಮೈಸೂರಿನ ಚರಿತ್ರೆಯಲ್ಲಿ ಹೈದರ್ ಆಲಿ ಇವರುಗಳಿಗಿರುವ ಸ್ಥಾನವೇ ರಣಜಿತ ಸಿಂಗನಿಗೂ ಇರುವುದು.

ರಣಜಿತ ಸಿಂಗನು ಹುಟ್ಟಿದುದು 1780ರಲ್ಲಿ. ಇವನು ಅಕ್ಬರನಷ್ಟು ವಯಸ್ಸಿನವನಾಗಿದ್ದಾಗಲೇ 1797ರಲ್ಲಿ ಅಂದರೆ ಕೇವಲ 16ನೇ ವರ್ಷದಲ್ಲೇ ಸಿಕರ್ ಚಕಿ (ಗುರುಜನ್‌ವಾಲಾ ಮಿಸಲ್)ಯ ಮುಂದಾಳುತನವನ್ನೂ ವಹಿಸಿದನು. ಮೊಗಲ್ ಸಾಮ್ರಾಜ್ಯದ ಅವಶೇಷಗಳ ಮೇಲೆ ಒಂದು ದೊಡ್ಡ ಸಿಕ್ ಸಾಮ್ರಾಜ್ಯವನ್ನೂ ಸ್ಥಾಪಿಸಬೇಕೆಂಬುದೇ ಇವನ ಆಕಾಂಕ್ಷೆ. ಎರಡನೇ ಮರಾಟೆಯುದ್ಧವಾದ ಮೇಲೆ ಮಹಾರಾಜಾ ರಣಜಿತಸಿಂಗನಿಗೂ ಇಂಗ್ಲಿಷರಿಗೂ ಮೊದಲನೇ ಸಾರಿ ಸಂಧಿಯಾಯಿತು. ಇದಕ್ಕನುಸಾರವಾಗಿ ಸಿಂಗನಿಗೆ ತನ್ನ ಸ್ಕೀಮನ್ನು ಯಶಸ್ವಿಯಾಗಿ ಮಾಡುವ ಅಧಿಕಾರವು ದೊರೆಯಿತು. 1809ರಲ್ಲಿ ಆದ ಇಂಗ್ಲಿಷ್ ಸಿಕ್ಕರ ಒಪ್ಪಂದವು ಸಟ್ಲೆಜ್ ನದಿಯ ಪೂರ್ವಪಶ್ಚಿಮದ ಕಡೆಗೆ ತಮ್ಮ ರಾಜ್ಯವನ್ನು ಮತ್ತಷ್ಟು ಹೆಚ್ಚಿಸುವ ಅವಕಾಶವನ್ನೂ ಕೊಟ್ಟಿತು. 1835ರ ವೇಳೆ ಕಾಶ್ಮೀರದಿಂದ ಮುಲ್ತಾನಿನವರೆಗೂ ಸಟ್ಲೆಜ್‌ನಿಂದ ಪೇಷಾವರ್ ವರೆಗೂ ಹರಡಿದ್ದ ವಿಸ್ತೀರ್ಣ ರಾಜ್ಯದ ಅಧಿಪತಿಯಾದನು.

ರಾಜ್ಯನಿರ್ಮಾಣಕ

ರಣಜಿತ ಸಿಂಗನಿಗೆ ಮೊದಲು ಸಿಕ್ಕರ ರಾಜ್ಯಭಾರ ಪದ್ಧತಿಯು ಮೂಲತಃ ಪ್ರಜಾತಂತ್ರಾತ್ಮಕವಾಗಿಯೂ, ಕಾರ್ಯತಃ "ಫ್ಯೂಡಲ್ ಕಾನ್‌ಫೆಡರೇಶನ್" ತತ್ವಕ್ಕನುಸಾರವಾಗಿಯೂ ಇದ್ದು ತನ್ನಲ್ಲಿದ್ದ ದೋಷಗಳ ಕಾರಣದಿಂದ ಬೇಗನೆ ನಿರ್ನಾಮವಾಯಿತು. ನಂತರವೇ ಒಬ್ಬ ಚಕ್ರವರ್ತಿಯ ಅಧಿಕಾರವಾರಂಭವಾದುದು. ಇದು ರಣಜಿತ ಸಿಂಗನ ಪಾಲಿಗೆ ಬಂತು. ಇವನು ಛಿನ್ನಭಿನ್ನವಾಗಿದ್ದ ಭಾಗವೆಲ್ಲವನ್ನೂ ಒಟ್ಟುಗೂಡಿಸಿ ಒಂದು ಸುವ್ಯವಸ್ಥಿತವಾದ ಪ್ರಭುತ್ವವನ್ನು ಏರ್ಪಡಿಸಿದನು. ಸಿಕ್ಕ ಜನಾಂಗದ ವಿವಿಧ ಹಾಗೂ ಹರಿದು ಹಂಚಿಹೋಗಿದ್ದ ಶಕ್ತಿ ಎಲ್ಲವನ್ನೂ ಒಂದುಗೂಡಿಸಿ ಬಲವಾದ ಒಂದು ಜನಾಂಗವನ್ನಾಗಿ ಮಾಡಿದನು. ಇವನ ಕಾಲದಲ್ಲಿ 'ಫ್ಯೂಡಲಿಜಂ' 'ನಿರಂಕುಶ ಚಕ್ರಾಧಿಪತ್ಯ'ವು ಕೊನೆಗೊಂಡು ನಿಜವಾದ ಪ್ರಭುಪ್ರಭುತ್ವವೇ ಏರ್ಪಟ್ಟಿತು.

ಇವನ ಪ್ರಯತ್ನದ ಫಲವಾಗಿಯೇ ಒಂದು ಜೀವಸಹಿತವಾದ, ಸುವ್ಯವಸ್ಥಿತವಾದ ಐಕಮತ್ಯದಿಂದೊಡಗೂಡಿದ ಶರೀರದಂತೆ 'ಸಿಖ್‌ಸ್ಟೇಟ್' ಎಂಬುದು ಅಸ್ತಿತ್ವಕ್ಕೆ ಬಂದಿತು. ಒಟ್ಟಿನಲ್ಲಿ ರಣಜಿತಸಿಂಗನು ಸಿಕ್ ಸಾಮ್ರಾಜ್ಯದ ಸ್ಥಾಪಕನಾದನು. ಇವನ ರಾಜನೀತಿಯು ಅತ್ಯಂತ ನ್ಯಾಯಸಮ್ಮತವಾಗಿತ್ತು. ಜನಾಂಗ ಸೈನ್ಯದ ಆಡಳಿತ ವಿಚಕ್ಷಣೆಯಲ್ಲಿ ಬಹಳ ನಿಪುಣತನಾಗಿದ್ದನು.

ಒಬ್ಬ ಉತ್ತಮ ಸೇನಾನಾಯಕ

ಇವನು ಮೊಗಲರಿಗಿಂತ ಭಿನ್ನವಾದ ಮಾರ್ಗವನ್ನು ಅನುಸರಿಸಿದ್ದನು. ಫ್ಯೂಡಲ್ ಪದ್ಧತಿಯ ದೋಷಗಳನ್ನೆಲ್ಲಾ ದೂರ ಮಾಡಿ ನಿಜವಾದ ಜನಾಂಗದ ತಳಹದಿಯ ಮೇಲೆ ಸೈನ್ಯದ ಆಡಳಿತವನ್ನು ಬಲಪಡಿಸಿದ್ದನು. ಸೈನ್ಯದಲ್ಲಿ ಕಾಲಾಳು ಸೈನ್ಯಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದನು. ಪ್ರಾಯಶಃ ಈ ಕಾರಣದಿಂದಲೇ ಬ್ರಿಟಿಷರೂ ಸಹ ಸಿಕ್ ಕಾಲಾಳು ಬಲಕ್ಕೇ ಬಹಳ ಮಹತ್ವವನ್ನು ಕೊಟ್ಟಿರುವುದು. ಅವರು ಭಾ

ಚರ್ಮವನ್ನು
ನಯವಾಗಿರಿಸುತ್ತದೆ



ನಿಮ್ಮ ಮೈ ಚರ್ಮವನ್ನು
ನುಣುಪಾಗಿಯೂ ನಯವಾ
ಗಿಯೂ ಇರಿಸುವ ಮತ್ತು
ದೇಹ ಸೌಂದರ್ಯವನ್ನು
ಬೆಳಗಿಸುವ ಸಾಬೂನುಗಳಲ್ಲೆಲ್ಲಾ
ಸರ್ವೋತ್ಕೃಷ್ಟವಾದುದು
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು
ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು
ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD. 1906
CANARA BANK
LIMITED



ಎಲ್ಲಾ ಔಷಧಿ ಅಂಗಡಿಗಳಲ್ಲೂ ಸಿಗುತ್ತದೆ. ವಿವರಣಾ ಪತ್ರಿಕೆ ಉಚಿತ.
ತಯಾರಕರು:— ಆಯುರ್ವೇದಾಶ್ರಮಂ, ಪೋ. ಬಾಕ್ಸ್ ೨೮೭, ಮದ್ರಾಸ್
ಸ್ಟಾಕಿಸ್ಟರು:— ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.



ಮನುಷ್ಯಪ್ರಾಣಿಯು ಶರೀರವೆಂದರೆ ದುರ್ಗಂಧದ ಬೀಡಾಗಿದೆ. ಯಂತ್ರವಂತಿರುವ ದೇಹವು ಎಲ್ಲಾ ತರದ ದುರ್ಗಂಧಯುಕ್ತವಾಗಿದೆ. ಹಾಗೂ ಮೆದುಳು ಮತ್ತು ಇತರ ದೇಹದ ದುರ್ಗಂಧದಿಂದಲೇ ರೋಗೋತ್ಪತ್ತಿಯಾಗುತ್ತವೆ. ಮನುಷ್ಯನಿಗೆ ಮೆದುಳೆಂಬುದೇ ದೇಹದ ಮುಖ್ಯಾಂಶವಾಗಿದೆ. ಇದರ ಸುಖದಿಂದಲೇ ಸರ್ವ ಅವಯವಗಳ ಸುಖ ದುಃಖಗಳು ಅವಲಂಬಿಸಿರುತ್ತವೆ. ಅಂಥಾ ಮೆದುಳೇ ಕೆಟ್ಟರೆ ಅದು ಸುಧಾರಿಸಬೇಕಾದರೆ ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ಅಲ್ಪಮೌಲ್ಯದಲ್ಲಿ ಬಹುಗುಣ ಕೊಡುವ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)
ಇವರ ಸುಗಂಧಯುಕ್ತ

ಆಮಲಕೀ ತೈಲವೇ

ನಿಮ್ಮ ಆನಂದದ ಭಂಡಾರವಾಗಿದೆ
ಕ್ರಯ ಸೀಸೆ ೧೦ ೬ ಆಣೆ.

Swadeshi Oushadhi Bhandara(*Reg.*) *Kunjal*.P.O.Brahmavar, S. India.
ನಮ್ಮ ಸ್ಟಾಕಿಸ್ಟರು:—
1. V. R. Prabhu, The Canara News & Books Agent, Batatawala Mansion; Lalbag, BOMBAY.
2. General Supplies Ltd., Udipi, S. K.
3. Nava Bharata Book Depot, Udipi, S. K.

ಆಯುರ್ವೇದ ಕೀರ್ತಿವಂತರ ರತ್ನ
೫೦ ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗೂಳಿಯು

(ರಿಜಿಸ್ಟರ್ಡ್)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧ ಮತ್ತು ಧಾತುವೃದ್ಧಿ ಹೊಂದುತ್ತದೆ. ಸ್ವಪ್ನದಲ್ಲಿ, ಹುಡುಗಾಟಿ ಸ್ತ್ರೀ ಸಂಗ, ಕೆಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತ (ರಕ್ತ) ಕೆಲವು ದಿವಸದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ; ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ. ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ. ಎಷ್ಟೋ ಜನರು ಇದರ ಉಪಯೋಗದಿಂದ ನಿರಾಯಾಸವಾಗುತ್ತದೆನ್ನಲು ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದ್ದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವದು. 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1 ಮಾತ್ರ.

Vaidya Shasthry Kalyanji Tagar *365, Kalabadevi Road* *(opp. Temple)* Hanuman Lane Corner, BOMBAY 2.	ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಾಕರ್ 365, ಕಾಲಬಾ ದೇವಿ ರೋಡು, (ದೇವಾಲಯದ ಎದುರು.) ಹನುಮಾನ ಗಲ್ಲಿಯ ನಾಕೆ, ಮುಂಬಯಿ ನಂ. 2

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೀಲ್ ಚೋಪುಗಳೂ ಹೇವೆಗಳ ಜೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವದು.

CROWN RUBBER STAMP CO.,
Balmat Road, MANGALORE.
Inclúd by the Mysore Govt Stores, Purchase Committee in the list of approved firms

ಪಂಜಾಬಿನ ಕೇಸರಿ — ರಣಜಿತಸಿಂಗ್

(೭ನೇ ಪುಟದಿಂದ)

ರತೀಯ ಯುದ್ಧದಲ್ಲಿ ಒಂದು ಹೊಸ ವಿಷಯವನ್ನು ಸೇರಿಸಿದರು. ಆದೇ ಬಂದೂಕು. ಭಾರತದ ರೀತಿಯಲ್ಲಿ ಯೂರೋಪಿನ ರೀತಿಯನ್ನು ಸೇರಿಸಿದುದರಿಂದ ಸಿಕ್ಕರ ಎರಡು ಯುದ್ಧಗಳಲ್ಲಿಯೂ ಜಯವಾಯಿತೆಂದು ಘಂಟಾಘೋಷವಾಗಿ ಹೇಳಬಹುದು.

ರಣಜಿತಸಿಂಗನ ಸೈನ್ಯದ ಆಡಳಿತವು ಬಹಳ ಮನೋರಂಜಕವಾಗಿದ್ದಿತು. ಸೈನ್ಯದ ಮೊದಲನೇ ವಿಭಾಗದಲ್ಲಿ ಕಾಲಾಳು, ಸವಾರರು, ಮತ್ತು ಮದ್ದುಗುಂಡುಗಳಿದ್ದುವು ಇದನ್ನೇ ಈಗ 'ರೆಗ್ಯೂಲೇಷನ್ ಆರ್ಮಿ' ಎನ್ನುವರು. ಇವಲ್ಲದೆ 'ಸವಾರಿಯ ಸೈನ್ಯ'ವೆಂಬ ದಳವೊಂದಿತ್ತು. ಮೂರನೆಯ ವಿಭಾಗದಲ್ಲಿ 'ಕೋಟೆಸೈನ್ಯ' ಇದರಲ್ಲಿ ಕಾಲಾಳು, ಸವಾರರು, ಮದ್ದುಗುಂಡುಗಳೂ ಇರುತ್ತಿದ್ದುವು. ಈ ಸೈನ್ಯವು ಕೋಟೆ ಕೊತ್ತಳಗಳ ರಕ್ಷಣೆಯನ್ನು ಮಾಡುತ್ತಿತ್ತು.

ಸೈನ್ಯದ ಯೋಗ್ಯತೆ ಮತ್ತು ಶಿಸ್ತಿನ ವಿಚಾರದಲ್ಲಿ ಸ್ವಯಂ ಲಾರ್ಡ್ ಆಕ್ಲೆಂಡನೇ ಈ ರೀತಿ ಹೇಳಿರುವನು. "ನಾನು ರಣಜಿತಸಿಂಗರ 20ಸಾವಿರ ಸಿಪಾಯಿಗಳ ಸೈನ್ಯವನ್ನೂ 100 ಗುಂಡುಗಳನ್ನೂ ಪರೀಕ್ಷಿಸಿದೆನು. ಎಲ್ಲವೂ ಪೂರ್ಣವಾಗಿದ್ದುವಲ್ಲದೆ ತುಂಬ ಶಿಸ್ತಿನಿಂದ ಕೂಡಿದ್ದುವು. ಸೈನ್ಯದ ಸಾಮಾನು ಸಹ ಬಹಳ ತೃಪ್ತಿಕರವಾಗಿತ್ತು." ಮೊದಲೊಂದು ಬಾರಿ ಇದೇ ಆಕ್ಲೆಂಡನು ಈ ರೀತಿ ಬರೆದಿದ್ದನು. ಸೈನ್ಯದ ಶಿಸ್ತು, ನಿರ್ಮಾಣ, ಚಲನೆಯಲ್ಲಿನ ಅನುಕೂಲಗಳು, ಇವೆಲ್ಲ ವಿಚಾರದಲ್ಲಿಯೂ ರಣಜಿತ ಸಿಂಗರ ಸೈನ್ಯವು ನಮ್ಮ ಸೈನ್ಯಕ್ಕಿಂತ ಕಡಿಮೆಯಾಗಿಲ್ಲ."

ಇಂದಿಗೂ ಸಹ ಭಾರತದ 'Man Power' ಪುರುಷ ಶಕ್ತಿಯಲ್ಲಿ ರಣಜಿತಸಿಂಗ ಸೈನ್ಯ ಪದ್ಧತಿಯು ಇದ್ದು, ಅದಕ್ಕೆ ಬಹಳ ಮಹತ್ವವಿದೆ. ಮುಂದಾದರೂ ಸೈನ್ಯದಲ್ಲಿ ಸಿಕ್ಕರೇ ಪ್ರಧಾನಪಾತ್ರವನ್ನು ವಹಿಸುವರು.

ರಾಜಕೀಯ ನಿಪುಣ

ರಣಜಿತಸಿಂಗನ ಉದ್ದೇಶಗಳೂ, ಆ ಉದ್ದೇಶಸಾಧನೆಗಳ ರೀತಿಗಳೂ ಫ್ರಾನ್ಸಿನ ವೀರ ನೆಪೋಲಿಯನ್ನನನುಸರಿಸಿವೆ. ನೆಪೋಲಿಯನ್ನನಂತೆಯೇ ರಣಜಿತಸಿಂಗನ ಅಭಿವೃದ್ಧಿಯು ಬಹಳ ವೇಗದಿಂದಲೇ ಆಯಿತು. ಆದರೆ ಅಲ್ಲಿನ ವಿದೇಶೀ ನೀತಿಯು ಮಾತ್ರ ಬೇರೆಯಾಗಿದ್ದು ಆಂಗ್ಲ ಸೈನ್ಯವನ್ನು ತನ್ನ ಹತ್ತಿರಕ್ಕೆ ಸಹ ಬರದಂತೆ ಮಾಡಿದ್ದನು. ಚರಿತ್ರಕಾರನಾದ ಪೀನ್ನನು ಈ ರೀತಿ ಹೇಳಿದ್ದಾನೆ. "ತನ್ನ ನೆರೆಯವರಾದ ಆಂಗ್ಲರೊಡನೆ ಸ್ನೇಹ ಬೆಳೆಸುವುದು ತನ್ನ ಆಡಳಿತದ ಮುಖ್ಯ ಗುಟ್ಟೆಂದು ರಣಜಿತ ಸಿಂಗನು ಅರಿತಿದ್ದನು. 1805, 1809, 1831, 1834, 1838ರಲ್ಲಿ ಅವರೊಡನೆ ಮಾಡಿಕೊಂಡ ಕರಾರುಗಳಲ್ಲೆಲ್ಲ ಈ ತತ್ವವೇ ಪ್ರಧಾನವಾಗಿದ್ದು ಮಹಾರಾಜ ರಣಜಿತ ಸಿಂಗನು 1809ರಲ್ಲಿ ಮಾಳವ ಮತ್ತು 1831ರಲ್ಲಿ ಸಿಂಧುದೇಶಗಳ ಕಡೆ ಹೋಗುವುದನ್ನು ನಿಲ್ಲಿಸಿದನು.

ಭಾರತದ ವಿಚಾರದಲ್ಲಿ ರಣಜಿತ ಸಿಂಗನ ಭವಿಷ್ಯವಾಣಿಯು ತೀರ ನಿಜವಾಗಿತ್ತು. ಇವನ ಸರದಾರನೊಬ್ಬನ ಮಗನು ಲೂದಿಯಾನದ ಒಂದು ಮಿಶನ್ ಶಾಲೆಯಲ್ಲಿ ಓದುತ್ತಿದ್ದನು. ಒಂದು ಸಾರಿ ಈ ಹುಡುಗನು ಕೆಲವು ಭೂಪಟಗಳನ್ನು ತೆಗೆದುಕೊಂಡು ಮನೆಗೆ ಬಂದನು. ಮಹಾರಾಜಾ ರಣಜಿತಸಿಂಗನು ಭಾರತದ ನಕ್ಷೆಯನ್ನು ಕೈಗೆ ತೆಗೆದುಕೊಂಡು "ಇದರಲ್ಲಿರುವ ಈ ಕೆಂಪು ಬಣ್ಣದ ಈ ಎಲ್ಲೆಗಳು ಏನು?" ಎಂದು ಕೇಳಿದನು. ಹುಡುಗನು "ಇದು ಇಂಗ್ಲಿಷರ ರಾಜ್ಯದ ಎಲ್ಲೆ" ಎಂದುತ್ತರಕೊಟ್ಟನು. ರಣಜಿತಸಿಂಗನಿಗೆ ಕೋಪ ಬಂದು ಆ ನಕ್ಷೆಯನ್ನು ಬಿಸಾಡಿ "ಒಂದು ದಿನ ಈ ನಕ್ಷೆಯೆಲ್ಲಾ ಸಂಪೂರ್ಣವಾಗಿ ಕೆಂಪಾಗುವುದು" ಎಂದು ಹೇಳಿದನಂತೆ. ಆತನ ಮರಣವಾದ ನಂತರ ವಿದೇಶೀ ನೀತಿಯು ಬದಲಾಯಿಸಿತು. ಇದರ ಪರಿಣಾಮವಾಗಿ 'ಆಂಗ್ಲೋಸಿಕ್ಕರಿಗೆ ಕದನಕ್ಕಾರಂಭವಾಗಿ ಕ್ರಮೇಣ ಸಿಕ್ಕರ ನಾಶವಾಗಿ ಹೋಯಿತು.

ಧಾರ್ಮಿಕ ದೃಷ್ಟಿಯಲ್ಲಿ

ಸಿಕ್ ಮತ ಮತ್ತು ಅದರ ಪವಿತ್ರಗ್ರಂಥಗಳ ಮೇಲೆ ಸಿಂಗನಿಗೆ ಬಹಳ ಭಕ್ತಿ ಇತ್ತು. ಯಾವಾಗಲೂ ಆದಿ ಗ್ರಂಥವನ್ನು ಓದಿಸಿ ಕೇಳುತ್ತಿದ್ದನು. ವರ್ಷಕ್ಕೆರಡು ಬಾರಿ 'ಗೋಲ್ಡನ್ ಟೆಂಪಲ್' ಯಾತ್ರೆ ಮಾಡುತ್ತಿದ್ದನು. ಧಾರ್ಮಿಕ ಸಂಸ್ಥೆಗಳಿಗೆ ಬಹಳ ಹಣವನ್ನೂ ಕೊಡುತ್ತಿದ್ದನು. ತನ್ನ ಮೊಹರಿನ ಮೇಲೆ 'ಅಕಾಲ್ ಸಹಾಯೆ' ಎಂಬ ಶಬ್ದವನ್ನು ಕೆತ್ತಿಸುತ್ತಿದ್ದನು. ಅದರ ಅರ್ಥ "ದೇವರ ಸಹಾಯದಿಂದ" ಎಂದು. ಬ್ರಿಟನ್ನಿನ ಪ್ರ್ಯೂರ್ಟನ್ ಚಕ್ರವರ್ತಿಯಾಗಿದ್ದ ಕ್ರಾಮ್ವೆಲ್ಲನು ಸಹ 'God with us' ಎಂಬ ಶಬ್ದಗಳನ್ನು ಉಪಯೋಗಿಸುತ್ತಿದ್ದನು. ಧರ್ಮ ಸಹಿಷ್ಣುವಾಗಿದ್ದು ಔರಂಗಜೇಬನಷ್ಟು ಕಠೋರವಾದವನಾಗಿಯೂ ಇರಲಿಲ್ಲ; ಅಕ್ಬರನಂತೆ ಬೇರೊಂದು ಧರ್ಮವನ್ನು ಸ್ಥಾಪಿಸುವ ಯೋಚನೆಯೂ ಇರಲಿಲ್ಲ. ಆಡಳಿತದಲ್ಲಿ ಸಾಮರಸ್ಯ ಮತ್ತು ಸಹಿಷ್ಣುತೆಗಳೆರಡೂ ಬೇಕೆಂಬುದೇ ಇವನ ಉದ್ದೇಶ 'ಇಂಡೋ ಆರ್ಯನ್' ತತ್ವವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಕೋಮುವಾರು ಐಕಮತ್ಯ ಮತ್ತು ಸಂಘಟನೆಯ ಅಸ್ತಿಭಾರವನ್ನು ಹಾಕಿದನು.

ಉರ್ದುವಿನಿಂದ ಕನ್ನಡಿಸಿದವ
"ನಾಗರಾಜ"

ಸೌಭಾಗ್ಯಸಿದ್ಧಿ ತಾಯಿತ



ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರಗಳಲ್ಲಿ ಮೇಲುಗೈ, ದುರದೃಷ್ಟಗಳ ದುಷ್ಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ಪಿ. ಪಿ. 0-7-0
ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degrees. by post als o—Practioners also get soons Homeo Materiamedica, Rs. 5. Homeo Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India)

ನೂತನ ವಿಮಾ ಕಾನೂನಿನಿಂದ ಆಗಿರುವ ಬದಲಾವಣೆಗಳು

ವಿಮಾ ಏಜಂಟರು ಗಮನಿಸತಕ್ಕ ವಿಷಯಗಳು.

ಬ್ರಿಟಿಷ್ ಇಂಡಿಯಾದಲ್ಲಿ ಇದೇ ಜುಲೈ ೧ನೇ ತಾರೀಖಿನಿಂದ ಜಾರಿಗೆ ಬಂದಿರುವ ನೂತನ ವಿಮಾ ಕಾನೂನಿನಲ್ಲಿ ವಿಮಾ ಏಜೆಂಟರುಗಳ ಸಂಬಂಧವಾಗಿ ಹಲವು ನಿಬಂಧನೆಗಳನ್ನು ಮಾಡಲಾಗಿದೆ. ಅವುಗಳನ್ನು ಪ್ರತಿಯೊಬ್ಬ ವಿಮಾ ಏಜೆಂಟರೂ ಅತ್ಯವಶ್ಯಕವಾಗಿ ತಿಳಿದುಕೊಳ್ಳಬೇಕಾಗಿರುವುದರಿಂದ ಅವುಗಳನ್ನು ಈ ಕೆಳಗೆ ಕೊಡಲಾಗಿದೆ. ಇನ್ನುಮುಂದೆ ಈ ನಿಬಂಧನೆಗಳಿಗೆ ವ್ಯತಿರಿಕ್ತವಾಗಿ ಏನಾದರೂ ನಡೆದಲ್ಲಿ ಕಾನೂನು ರೀತ್ಯಾ ಶಿಕ್ಷೆಗೊಳಗಾಗಬೇಕಾಗುವುದರಿಂದ ಎಲ್ಲಾ ವಿಮಾ ಏಜೆಂಟರುಗಳೂ ಇದನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಂಡು ಅದರಂತೆ ನಡೆಯಲು ಸಿದ್ಧರಾಗಿರಬೇಕು.

ಏಜಂಟರುಗಳಿಗೆ ಕಮಿಷನ್

ಈ ವಿಮಾ ಕಾನೂನು ಜಾರಿಗೆ ಬಂದಂದಿನಿಂದ ವಿಮಾ ಉದ್ಯಮವನ್ನು ಸಾಧಿಸಿಕೊಡಲು ಲೈಸೆನ್ಸು ಪಡೆದ ಏಜೆಂಟರಿಗೆ ಅಥವಾ ಲೈಸೆನ್ಸು ಪಡೆದ ಏಜೆಂಟರುಗಳನ್ನು ನೇಮಕ ಮಾಡಿಕೊಳ್ಳುವವರಿಗಲ್ಲದ ಬೇರೆ ಯಾರಿಗೂ ಯಾವ ಕಂಪೆನಿಯೂ ಕಮಿಷನನ್ನು ಕೊಡಲಾಗದು. ಯಾವ ವಿಮಾ ಕಂಪೆನಿಯಾಗಲೀ ಅಥವಾ ಅದರ ಪರವಾಗಿ ಆಡಳಿತ ನಡೆಸುವವರಾಗಲೀ ಲೈಸೆನ್ಸು ಪಡೆದಿಲ್ಲದವರನ್ನು ವಿಮಾ ಏಜೆಂಟರಾಗಿ ನೇಮಕ ಮಾಡಿಕೊಳ್ಳುವುದಾಗಲೀ, ಅಥವಾ ಅಂಥಾ ಲೈಸೆನ್ಸು ಪಡೆಯದವರಿಂದ ವಿಮಾ ಉದ್ಯಮವನ್ನು ಸಾಧಿಸಿಕೊಳ್ಳುವುದಾಗಲೀ ನಡೆಸಿದಲ್ಲಿ ಅಂಥವರಿಗೆ ೧೦೦ ರೂ. ವರೆಗೆ ಹೆಚ್ಚಿಸಬಹುದಾದಂಥಾ ಜುಲ್ಮಾನೆ ಶಿಕ್ಷೆಗೆ ಒಳಗಾಗುವರು. ಲೈಸೆನ್ಸು ಪಡೆದ ವಿಮಾ ಏಜೆಂಟರುಗಳನ್ನು ನೇಮಕಮಾಡಿಕೊಂಡ ಪ್ರತಿಯೊಂದು ವಿಮಾ ಕಂಪೆನಿಯೂ ಮತ್ತು ಅದರ ಪರವಾಗಿ ಕಾರ್ಯ ನಡೆಸತಕ್ಕ ಪ್ರತಿಯೊಬ್ಬರೂ ತಮ್ಮಿಂದ ನೇಮಕವಾದ ಪ್ರತಿಯೊಬ್ಬ ಲೈಸೆನ್ಸು ಪಡೆದ ಏಜೆಂಟರುಗಳ ಹೆಸರು, ವಿಳಾಸ ಇತ್ಯಾದಿಗಳನ್ನು ನಮೂದಿಸಿದ ಒಂದು ರಿಜಿಸ್ಟರನ್ನು ಇಡಬೇಕು.

ಲೈಸೆನ್ಸು ಪಡೆದ ಏಜೆಂಟನಿಗೆ ಹೆಚ್ಚೆಂದರೆ ಹೆಚ್ಚಾಗಿ ಜೀವ ವಿಮಾ ಉದ್ಯಮದಲ್ಲಿ ಕೊಡಬಹುದಾದ ಕಮಿಷನ್—ಸ್ಥಾಪಿತವಾಗಿ ಹತ್ತು ವರ್ಷಗಳಾಗಿಲ್ಲದ ಕಂಪೆನಿಗಳು ಪ್ರಥಮ ವರ್ಷದ ಪ್ರೀಮಿಯಂ ಹಣದ ಮೇಲೆ ಶೇಕಡಾ ೫೫, ರಿನ್ಯೂಯಲ್ ಪ್ರೀಮಿಯಂಗಳ ಮೇಲೆ ಶೇಕಡಾ ೬; ಕಂಪೆನಿಗೆ ಹತ್ತು ವರ್ಷಗಳ ಮೇಲ್ಪಟ್ಟ ವಯಸ್ಸಾಗಿದ್ದರೆ ಪ್ರಥಮ ವರ್ಷದ ಪ್ರೀಮಿಯಂ ಹಣದ ಮೇಲೆ ಶೇಕಡ ೪೦, ರಿನ್ಯೂಯಲ್ ಪ್ರೀಮಿಯಂಗಳ ಮೇಲೆ ಶೇಕಡ ೫.

ಜೀವವಿಮೆಯಲ್ಲದೆ ಬೇರೆ ತರದ ವಿಮಾ ಉದ್ಯಮಗಳಿಗೆ ಎಲ್ಲಾ ಕಂಪೆನಿಗಳೂ ವಾರ್ಷಿಕ ಪ್ರೀಮಿಯಂ ಮೇಲೆ ಶೇಕಡ ೧೫ ರಂತೆ ಕಮಿಷನ್ ಕೊಡಬಹುದು.

ಲೈಸೆನ್ಸ್

ಈ ಕಾನೂನು ಜಾರಿಗೆ ಬಂದ ಆರು ತಿಂಗಳ ನಂತರ, ಯಾರೊಬ್ಬರೂ ವಿಮಾ ಸುಪರಿಂಟೆಂಡೆಂಟರಿಂದ (ಬ್ರಿಟಿಷ್ ಇಂಡಿಯಾದಲ್ಲಿಯೂ, ಮೈಸೂರು ಸಂಸ್ಥಾನದಲ್ಲಿಯೂ ಪ್ರತ್ಯೇಕ ವಿಮಾ ಸುಪರಿಂಟೆಂಡೆಂಟರುಗಳಿರುವರು) ವಿಮಾ ಏಜೆಂಟನಾಗಲು ಲೈಸೆನ್ಸು ಪಡೆಯದೆ ವಿಮಾ ಉದ್ಯಮವನ್ನು ನಡೆಸಲಾಗದು.

ಲೈಸೆನ್ಸನ್ನು ಪಡೆಯಲು ಗೊತ್ತಾದ ಫಾರಂಮನ್ನು ಭರ್ತಿಮಾಡಿ, ಒಂದು ರೂಪಾಯಿ ಪ್ರವೇಶ ಧನದೊಡನೆ ವಿಮಾ ಸುಪರಿಂಟೆಂಡೆಂಟರಿಗೆ ಅರ್ಜಿಯನ್ನು ಕಳುಹಿಸಿಕೊಡಬೇಕು. ಈ ಲೈಸೆನ್ಸು ಪ್ರತಿ ಸಾಲಿನ ಮಾರ್ಚಿ ೩೧ಕ್ಕೆ ಅಂತ್ಯವಾಗುವುದರಿಂದ ಪ್ರತಿ ವರ್ಷವೂ ಅದನ್ನು ಪುನರುಜ್ಜೀವನಗೊಳಿಸಿಕೊಳ್ಳಬಹುದು. ಈ ಕೆಳಗೆ ಕಂಡ ಅನರ್ಹತೆಯುಳ್ಳವರ ಹೊರತು ಉಳಿದವರಿಗೆಲ್ಲಾ ಲೈಸೆನ್ಸನ್ನು ಕೊಡಲಾಗುವುದು

೧ ಅರ್ಜಿದಾರನು ಮೈನರ್ ಆಗಿರುವುದು.

೨ ಅರ್ಜಿದಾರನಿಗೆ ಬುದ್ಧಿ ಸ್ವಾಧೀನವಿಲ್ಲವೆಂದು ಅರ್ಹತೆಯುಳ್ಳ ಕೋರ್ಟಿನಿಂದ ತಿಳಿದುಬರುವುದು.

೩ ಅರ್ಜಿದಾರನು ಕ್ರಿಮಿನಲ್ ರೀತ್ಯಾ ಹಣ ದುರುಪಯೋಗಪಡಿಸಿರುವುದು, ನಂಬಿಕೆ ದ್ರೋಹ ಮಾಡಿರುವುದು ಅಥವಾ ಮೋಸಮಾಡಿರುವುದು. ಇವುಗಳ ಅರ್ಹತೆಯನ್ನುಳ್ಳ ಕೋರ್ಟಿನಲ್ಲಿ ಗೊತ್ತುಮಾಡಲ್ಪಟ್ಟಿರುವುದು.

೪ ಯಾವ ವಿಮಾ ಪಾಲಿಸಿ ಸಂಬಂಧವಾಗಿಯಾಗಲಿ ಇನ್ಸೂರೆನ್ಸ್ ಕಂಪೆನಿಯು ಮುಚ್ಚಿಹೋಗುವ ಸಂಬಂಧವಾಗಿಯಾಗಲೀ ಅಥವಾ ಒಂದು ಕಂಪೆನಿಯ ಆಡಳಿತ ವಿಷಯದಲ್ಲಿ ಪರಿಶೀಲನೆ ನಡೆದ ಸಂಬಂಧವಾಗಿಯಾಗಲೀ ತಪ್ಪಿತಸ್ಥನೆಂದು ಕಂಡುಹಿಡಿಯಲ್ಪಟ್ಟಿದ್ದರೆ, ಅದರಲ್ಲಿ ಭಾಗವಹಿಸಿದ್ದರೆ, ವಿಮಾ ಕಂಪೆನಿ ಅಥವಾ ವಿಮಾದಾರನ ವಿಷಯವಾಗಿ ಮೋಸ ಅಥವಾ ಅಪನಂಬಿಕೆ ಅಥವಾ ಸತ್ಯಾಂಶವನ್ನು ತಿಳಿಸದ ಮರೆಮಾಚುವಂಥ ವಿಷಯಗಳಲ್ಲಿ ಉಪೇಕ್ಷಿಸುವುದು. ಈ ವಿಷಯಗಳಲ್ಲಾಗಲೀ ಕೋರ್ಟು ವ್ಯವಹಾರವು ನಡೆಯುತ್ತಿರುವುದು.

ಮೇಲ್ಕಂಡ ಅನರ್ಹತೆಗಳಲ್ಲಿ ಯಾವುದನ್ನೂ ವಿಮಾ ಏಜೆಂಟನು ಪಡೆದಿದ್ದರೂ ವಿಮಾ ಸುಪರಿಂಟೆಂಡೆಂಟರು ಆತನಿಗೆ ಕೊಡಲ್ಪಟ್ಟಿರುವ ಲೈಸೆನ್ಸನ್ನು ವಜಾಮಾಡುವರು. ಮತ್ತು ಈ ಕಾನೂನಿನ ಯಾವ ನಿಬಂಧನೆಯನ್ನಾಗಲೀ, ವಿಮಾ ಏಜೆಂಟನು ಗೊತ್ತಿದ್ದು ಉಲ್ಲಂಘಿಸಿದರೆ ಆತನ ಲೈಸೆನ್ಸನ್ನು ವಜಾಮಾಡಬಹುದು

ಲೈಸನ್ಸಿಲ್ಲದೆ ವಿಮಾ ಏಜಂಟಾಗಿ ಕೆಲಸವನ್ನು ಯಾರಾದರೂ ಮಾಡಿದಲ್ಲಿ ೫೦ ರೂಪಾಯಿಗಳವರೆಗೆ ಅವರಿಗೆ ಜುಲ್ಮಾನೆ ಹಾಕಲಾಗುವುದು.

ಲೈಸೆನ್ಸುಗಳನ್ನು ಒಬ್ಬೊಬ್ಬರಿಗೆ ಮಾತ್ರ ಕೊಡಲಾಗುವುದು. ಮೇಲ್ಕಂಡ ಅನರ್ಹತೆಗಳಿಂದ ಬಾಹಿರರಾದವರಿಗೆ ವಿಮಾ ಸುಪರಿಂಟೆಂಡೆಂಟರು ಲೈಸೆನ್ಸನ್ನು ಕೊಡಲು ನಿರಾಕರಿಸಲು ಅರ್ಹರಲ್ಲ.

ಲೈಸೆನ್ಸನ್ನು ಪಡೆದ ಏಜೆಂಟರು ಪ್ರತಿ ದಿನ ಈ ಕೆಲಸವನ್ನೇ ಮಾಡಬೇಕೆಂದಿಲ್ಲ. ಅಂದರೆ ಬೇರೆ ಕಸಬು-ಉದ್ಯೋಗದ ಜೊತೆಗೆ ಈ ವಿಮಾ ಉದ್ಯಮವನ್ನೂ ನಡೆಸಬಹುದು.

ಸ್ತ್ರೀಯರೂ ಲೈಸೆನ್ಸು ಪಡೆದು ವಿಮಾ ಏಜೆಂಟರಾಗಬಹುದು.

ಸೋಡಿಬಿಡುವುದಕ್ಕೆ ಬಹಿಷ್ಕಾರ

(Prohibition of Rabates)

ಒಂದು ಪಾಲಿಸಿಯನ್ನು ಬರೆಸುವುದಕ್ಕಾಗಲಿ ಅಥವಾ ರದ್ದಾದ ಪಾಲಿಸಿಯನ್ನು ಪುನರುಜ್ಜೀವನಗೊಳಿಸುವುದಕ್ಕಾಗಲೀ ಪಾಲಿಸೀದಾರರನ್ನು ಪ್ರೇರಿಸುವುದಕ್ಕಾಗಿ ಪಾಲಿಸಿಯಲ್ಲಿ ಕಾಣಿಸಿರುವ ಪ್ರೀಮಿಯಂ ಹಣದಲ್ಲಿ ಸೋಡಿಬಿಡುವುದು ಅಥವಾ ಪ್ರತ್ಯಕ್ಷವಾಗಿಯಾಗಲೀ, ಅಪ್ರತ್ಯಕ್ಷವಾಗಿಯಾಗಲೀ ತನಗೆ ಬರುವ ಕಮಿಷನ್ನಿನಲ್ಲಿ ಪೂರ್ತಿ ಅಥವಾ ಸ್ವಲ್ಪ ಭಾಗವನ್ನು ಪಾಲಿಸೀದಾರರಿಗೆ ಬಿಟ್ಟುಕೊಡುವುದು ಅಥವಾ ಬಿಟ್ಟುಕೊಡುತ್ತೇನೆಂದು ವಾಗ್ದಾನ ಮಾಡುವುದು ಇವೆಲ್ಲವೂ ಕಾನೂನಿಗೆ ವಿರುದ್ಧವು.

ಈ ರೀತಿ ಸೋಡಿ ಕೊಡುವ ಅಥವಾ ಕೊಡುತ್ತೇನೆಂದು ವಾಗ್ದಾನ ಮಾಡುವ ಏಜೆಂಟನು ೧೦೦ ರೂ. ಗಳ ವರೆಗೆ ಹೆಚ್ಚಬಹುದಾದ ಜುಲ್ಮಾನೆ ಶಿಕ್ಷೆಗೆ ಒಳಗಾಗುವನು.

ರಿನ್ಯೂಯಲ್ ಕಮಿಷನನ್ನು ನಷ್ಟಪಡಿಸದಿರುವುದು.

(Non-forfeiture of renewal Commission)

ಏಜೆಂಟನು ಕಂಪೆನಿಗೆ ಒಂದೇ ಸಮನಾಗಿ ಮತ್ತು ಈ ಉದ್ಯಮಕ್ಕಾಗಿಯೇ ಹತ್ತು ವರ್ಷಗಳ ಕಾಲವಾದರೂ ಸೇವೆ ಸಲ್ಲಿಸದೇ ಇದ್ದರೆ ಮತ್ತು ಆ ಕಂಪೆನಿಯಲ್ಲಿ ತಾನು ಏಜೆಂಟಾಗಿ ಕೆಲಸಮಾಡುವುದನ್ನು ಬಿಟ್ಟನಂತರ ಪ್ರತ್ಯಕ್ಷವಾಗಿ ಬೇರೊಂದು ಕಂಪೆನಿಗೆ ಉದ್ಯಮ ನಡೆಸಲು ಪ್ರಾರ್ಥಿಸಿಕೊಂಡರೆ ಅಲ್ಲದೆ ಮೋಸಮಾಡಿದರೆ ಹೊರತು, ಏಜೆಂಟನ ಒಪ್ಪಂದವು (Agreement) ತೀರಿಹೋಯಿತೆಂಬ ಒಂದೇ ಕಾರಣದಿಂದ ರಿನ್ಯೂಯಲ್ ಕಮಿಷನ್ ಕೊಡುವುದನ್ನು ನಿಲ್ಲಿಸಲಾಗದು.

ಚೀಫ್ ಏಜೆಂಟರಿಗೆ ಸೂಚನೆಗಳು

ತನ್ನ ಹುದ್ದೆಯು ಯಾವುದೇ ಇರಲಿ, "ಚೀಫ್ ಏಜೆಂಟ್" ಎಂದರೇ ವಿಮಾ ಏಜೆಂಟರುಗಳನ್ನು ನೇಮಕಮಾಡಿಕೊಳ್ಳುವವನೆಂದು ಕಾನೂನಿನಲ್ಲಿ ಗೊತ್ತುಮಾಡಲಾಗಿದೆ.

ಮೇಲೆ ಹೇಳಿದಂತೆ ಚೀಫ್ ಏಜೆಂಟನು ವಿಮಾ ಏಜೆಂಟರುಗಳನ್ನು ನೇಮಕಮಾಡಿಕೊಳ್ಳುವವನಾದ್ದರಿಂದ ವಿಮಾ ಕಂಪೆನಿಯಂತೆಯೇ ತಾನು ನೇಮಕ ಮಾಡಿಕೊಳ್ಳುವ ಲೈಸೆನ್ಸು ಪಡೆದಿರುವ ಏಜೆಂಟರುಗಳ ರಿಜಿಸ್ಟರೊಂದನ್ನು ಇಟ್ಟಿರಬೇಕು; ಈ ರಿಜಿಸ್ಟರು ವಿಮಾ ಸುಪರಿಂಟೆಂಡೆಂಟರಿಂದ ಪರಿಶೀಲಿಸಲು ಸಿದ್ಧವಾಗಿರಬೇಕು.

ಚೀಫ್ ಏಜೆಂಟನು ಲೈಸೆನ್ಸು ಪಡೆದ ಏಜೆಂಟರುಗಳನ್ನು ನೇಮಕಮಾಡಿಕೊಳ್ಳುವವನಾದ್ದರಿಂದ ತಾನು ಲೈಸೆನ್ಸು ಪಡೆಯಬೇಕಾದದ್ದಿಲ್ಲ; ಈ ಕಾರಣದಿಂದ ಆತನು ಸ್ವತಃ ವಿಮಾ ಉದ್ಯಮವನ್ನು ನಡೆಸಬಹುದಾಗಿಲ್ಲ

ವಿಮಾ ಕಂಪೆನಿಯು ಚೀಫ್ ಏಜೆಂಟರುಗಳಿಗೆ ಇಷ್ಟೇ ಕಮಿಷನ್ ದರವನ್ನು ಕೊಡಬೇಕೆಂದಾಗಲೀ ಅಥವಾ ಇಷ್ಟೇ ಸಂಭಾವನೆಯನ್ನು ಕೊಡಬೇಕೆಂದಾಗಲೀ ನಿರ್ಬಂಧವಿಲ್ಲ. ಚೀಫ್ ಏಜೆನ್ಸಿಗಳನ್ನು ಸಂಸ್ಥೆಗಳಾಗಲೀ, ಜಾಯಿಂಟ್ ಸ್ಟಾಕ್ ಕಂಪೆನಿಗಳಾಗಲಿ ತೆಗೆದುಕೊಳ್ಳಬಹುದು.

—ವಿಮಾಮಿತ್ರ.

ನಮ್ಮ ಹೊಸ ಏಜಂಟರು.

ಮಂಡಗದ್ದೆಯಲ್ಲಿ—

ಶ್ರೀ. ಕೆ. ವಿ. ಸರಳಾಯ

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೮—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ ೧ಕ್ಕೆ ರೂ. 5—0—0

'ಕಾಮಶಾಸ್ತ್ರ'ದರ್ಪಣ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಚಿತ್ರ ಸಮಾಚಾರ್

ಇಡೀ ಕರ್ಣಾಟಕದಲ್ಲೇ ಚಲಚ್ಚಿತ್ರಗಳಿಗಾಗಿ ಮೀಸಲಾಗಿರುವ ಕನ್ನಡ ಮಾಸ ಪತ್ರಿಕೆ ಇದೊಂದೇ

- ಬಿಸಿ ಬಿಸಿ ಚಲಚ್ಚಿತ್ರ ಸುದ್ದಿಗಳು
- ಸುಂದರ ಚಿತ್ರಗಳು.
- ಮನಸೆಳೆವ ಕಥೆಗಳು.
- ವಿವಿಧ ವಿಚಿತ್ರ ವಾರ್ತೆಗಳು.
- Solutions to "ILLUSTRATED WEEKLY OF INDIA" Competitions.

ಇತ್ಯಾದಿ – ಇತ್ಯಾದಿ – ಇತ್ಯಾದಿಗಳೊಂದಿಗೆ ಸುಂದರವಾಗಿ ಪ್ರಕಟವಾಗುವುದು.

ಇದುವರೆವಿಗೂ ನೀವು ಚಂದಾದಾರರಾಗದಿದ್ದರೆ ಕೂಡಲೇ ೧೯೩೯. ರ ವಾರ್ಷಿಕ ಚಂದಾದಾರರಾಗಿರಿ.

For wide publicity & BEST RESULTS Advertise in "CHITRA SAMACHAR" The only leading Anglo Kannada Films monthly.

Rates Cheap-Results Quick

Apply:— The Manager. 'CHITRA SAMACHAR' Chamarajapet ... Bangalore City.

ಓ ರಿ ಯಂ ಟ ಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕನಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓ ರಿ ಯಂ ಟ ಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತ್ತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

32,000 ರೂಪಾಯಿ

ಸರಿಯಾದ 16 ಉತ್ತರಗಳಿಗೆ ಇನಾಮಾಗಿ ಹಂಚಲಾಗುವುದು.

20 ರೂಪಾಯಿಗಳ ಐವತ್ತು ಬಹುಮಾನಗಳು ಕಾದಿಡಲ್ಪಟ್ಟಿವೆ. (ಯಾವುದಾದರೊಂದು ಸಾಲಿನ ಸಂಖ್ಯೆಗಳು ಮೊಹರು ಮಾಡಿಟ್ಟುದಕ್ಕೆ ಸರಿಯಾದರೆ) ಅಷ್ಟಗರೆಯ ಎರಡು ಸಾಲಿನ ಸಂಖ್ಯೆಗಳು ಮಾಡಿಟ್ಟುದಕ್ಕೆ ಸರಿಯಾದರೆ 50 ರೂಪಾಯಿಗಳ ಗ್ಯಾರಂಟಿ ಹೆಚ್ಚಿನ ಉತ್ತರಗಳನ್ನು ಕಳುಹಿಸುವವರಿಗೆ ರೂ. 150ರ ಬಹುಮಾನ ಕಾದಿರಿಸಲ್ಪಟ್ಟಿವೆ.

ಈ ಚೌಕದಲ್ಲಿಯ ನಾಲುಗಳನ್ನು ಅಡ್ಡಕ್ಕೂ ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿದರೆ ಜುಮಲಾ 46 ಬರುವಂತೆ 4 ರಿಂದ 19ರ ವರೆಗಿನ ಸಂಖ್ಯೆಗಳನ್ನು ಸೇರಿಸತಕ್ಕದ್ದು. ಯಾವ ಸಂಖ್ಯೆಯನ್ನು ಒಂದು ಬಾರಿಗಿಂತ ಹೆಚ್ಚಾಗಿ ಉಪಯೋಗಿಸಕೂಡದು.

ಕಳುಹಿಸುವ ಕೊನೆಯ ದಿನ 7-8-'39 ಫಲಿತಾಂಶ ಪ್ರಕಟಣೆಯ ದಿನ 15-8-'39.

ಪ್ರವೇಶಧನ:- ಒಂದು ಉತ್ತರಕ್ಕೆ ರೂ. 1/- ಮೂರಕ್ಕೆ ರೂ. 2/- 8 ಉತ್ತರಗಳ ಪ್ರತಿಯೊಂದು ಸೆಟ್ಟಿಗೂ ರೂ. 5/- ರಂತೆ.

ಶರ್ತಗಳು:— ಮೇಲೆ ಕಾಣಿಸಿದ ದರದ ಮೇರೆಗೆ ಯುಕ್ತ ಮೌಲ್ಯದೊಂದಿಗೆ ಸಾಮಾನ್ಯ ಕಾಗದದಲ್ಲಿ ಸ್ಪಷ್ಟವಾಗಿ ಬರೆದು ಬೇಕಾದಷ್ಟು ಉತ್ತರಗಳನ್ನು ಕಳುಹಿಸಿದರೂ ಸ್ವೀಕರಿಸಲಾಗುವುದು. ಹಣವನ್ನು ಮನಿಯಾರ್ಡರು ಇಲ್ಲವೆ ಪೋಸ್ಟಲ್ ಆರ್ಡರು ದ್ವಾರಾ ರವಾನಿಸತಕ್ಕದ್ದು.

ಬಹುಮಾನವು ಸ್ವೀಕರಿಸಲ್ಪಡುವ ಮೊಬಲಗಿಗನುಸಾರವಾಗಿ ವ್ಯತ್ಯಾಸಹೊಂದುವುದು. ಹಾಗೂ ರೂ 2,000 ಇನಾಮಿಗೆ ಗ್ಯಾರಂಟಿಯಿದೆ. **ಮುಂಬಯಿಯ ಪ್ರಸಿದ್ಧವಾದ ಬೇಂಕೊಂದರಲ್ಲಿ ಭದ್ರವಾಗಿರಿಸಿದ ಉತ್ತರಕ್ಕೆ ಸರಿಹೋಲುವ ಉತ್ತರವು ಸರಿಯಾದ ಉತ್ತರವೆಂದು ಪರಿಗಣಿಸಲ್ಪಡುವುದು.** ಫಲಿತಾಂಶ ತಿಳಿಯುವುದಕ್ಕಾಗಿ ಕಳುಹಿಸುವ ಉತ್ತರದೊಂದಿಗೆ ವಿಳಾಸ ಸಹಿತವಾದ ಕವರನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು. ವ್ಯವಸ್ಥಾಪಕರ ತೀರ್ಮಾನವೇ ಅಖೈರಿ ತೀರ್ಮಾನವಿದ್ದು ಎಲ್ಲರಿಕ್ಕೂ ಬಾಧಕವಾಗತಕ್ಕದ್ದಿದೆ.

ಜುಲಾಯಿ 42 ಬರುವ ಕೆಳಗಿನ ಬಾರಿಯ ಪ್ರಕಟನೆ ಉತ್ತರ ಈ ತೆರನಾಗಿದೆ.

1ನೇ ಸಾಲು	7,	12,	13,	10
2ನೇ ಸಾಲು	17,	6,	3,	16
3ನೇ ಸಾಲು	4,	15,	18,	5
4ನೇ ಸಾಲು	14,	9,	8,	11

ನಿಮ್ಮ ಉತ್ತರ ಮತ್ತು ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

ದಿ ಮೆನೇಜರ್:
ಪ್ರೆಸಿಡೆನ್ಸಿ ಕಮರ್ಶಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ, 2

The Manager,
Presidency Commercial Syndicate
Mumbadevi, BOMBAY 2

ಖಾದಿಯ ಮಹತ್ವ

ಯುದ್ಧಕಾಲದಲ್ಲಿ ಹಿಂದುಸ್ಥಾನವನ್ನು ಸಂರಕ್ಷಿಸುವುದಾವುದು?
ಪವಿತ್ರ ಖಾದಿ.

— ಪಂಡಿತ ನೆಹರು.

ಅಲಹಾಬಾದಿನ ಗಾಂಧಿ ಆಶ್ರಮದವರು ಮಹಾತ್ಮರ ಜನ್ಮದಿನೋತ್ಸವದ ಆಚರಣೆಯ ಸಲುವಾಗಿ ಕನಿಷ್ಟಪಕ್ಷ ಎರಡು ಲಕ್ಷ ರೂಪಾಯಿಯಷ್ಟರ ಖಾದಿ ಹುಂಡಿಗಳನ್ನು ವಿಕ್ರಯಿಸಲು ನಿರ್ಧರಿಸಿರುವರು. ಈ ಸಂದರ್ಭದಲ್ಲಿ ಪಂಡಿತ ನೆಹರುಗಳು ಆಡಿದ ಮಾತುಗಳು ಮನನೀಯವಿವೆ. 'ಮಹಾಯುದ್ಧದ ಕಾರ್ಮೋಡಗಳು ಹೆಚ್ಚುತ್ತ ಬಂದಂತೆ ಖಾದಿ ಮಹತ್ವವು ದಿನೇ ದಿನೇ ಅಭಿವೃದ್ಧಿ ಹೊಂದುತ್ತಲಿದೆ. ಹಿಂದೀಯರೆಲ್ಲರೂ ಇದನ್ನು ಚೆನ್ನಾಗಿ ಮನಗಂಡು ಖಾದಿ ಪ್ರಸಾರವನ್ನು ದ್ವಿಗುಣಿತ ಉತ್ಸಾಹದಿಂದ ಮುಂದೊತ್ತಿದರೆ ಒಂದು ವೇಳೆ ಯುದ್ಧವಾರಂಭವಾದರೂ ನಮ್ಮ ದೇಶದ ಕೂಲಿ ಜನರನ್ನೂ ಮಜೂರ ವರ್ಗವನ್ನೂ ಯಾರೂ ಕೊಳ್ಳೆ ಹೊಡೆಯದಂತೆ ಮಾಡಲು ಸಾಧ್ಯವಾಗುವುದು. ಪವಿತ್ರವಾದ ಖಾದಿಗೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ ತುಂಬಾ ಮಹತ್ವವಿದೆ. ಯುದ್ಧ ಸಮಯದಲ್ಲಂತೂ ಇನ್ನೂ ಹೆಚ್ಚಿನ ಪ್ರಾಧಾನ್ಯತೆ ಬರುವುದು. ಕಳೆದ ಮಹಾಯುದ್ಧದ ವೇಳೆ ಗಿರಣಿ ಬಟ್ಟೆಗಳಿಗೆ ಕ್ರಯವೇರಿ ಗಿರಣಿ ಮಾಲಿಕರು ಎಷ್ಟೋ ಮಂದಿ ಶ್ರೀಮಂತರಾಗಿ ಹೋದರು. ಇದು ನಮ್ಮಲ್ಲನೇಕರಿಗೆ ನೆನಪಿರಬಹುದು. ಆದುದರಿಂದ ಒಂದು ವೇಳೆ ಯುದ್ಧವಾರಂಭವಾದರೆ ಗಿರಣಿ ಮಾಲಿಕರೇ ತುಂಬಾ ವ್ಯಾಪಾರಪಡೆಯದಂತಾಗಬೇಕಾದರೆ ನಾವೀಗಲೇ ನೂಲುವುದಕ್ಕೂ ಖಾದಿಗೂ ಪ್ರೋತ್ಸಾಹ ನೀಡಬೇಕು. ಅಂದರೆ ಖಾದಿ ಉತ್ಪತ್ತಿಯು ಜಾಸ್ತಿಯಾಗುವಂತೆ ಸರ್ವ ವಿಧದಿಂದಲೂ ಸಹಕರಿಸಬೇಕು. ಗಿರಣಿ ಬಟ್ಟೆಗಳು ಇಂದೇನೋ ಕಡಿಮೆ ದರದಲ್ಲಿ ಸಿಕ್ಕಬಹುದು. ಸಂದರ್ಭಾನುಸಾರ ಒಂದಕ್ಕೆ ಇಮ್ಮಡಿಯಾಗಲೂ ಬಹುದು. ಖಾದಿಯೆಂದರೆ ತೋರಿಕೆಗೆ ಮಾತ್ರ ಖಾದಿಬಟ್ಟೆಯನ್ನು ಸರಿಹೋಲುವಂತಹುದಲ್ಲ. ಅನೇಕರು ಇದರಿಂದಾಗಿ ಮೋಸ ಹೋಗಿರುವರು. ಅಖಿಲ ಭಾರತ ಚರಕಾಸಂಘದವರಿಂದ ಸರ್ಟಿಫಿಕೇಟು ಹೊಂದಿ ಮೊಹರುಮಾಡಲ್ಪಟ್ಟ ಬಟ್ಟೆಯೇ ಶುದ್ಧ ಖಾದಿಯು. ಮೊಹರುಳ್ಳ ಖಾದಿಯನ್ನು ಪಡೆದರೆ ನಿಜವಾಗಿಯೂ ಚರಕದಲ್ಲಿ ನೂಲು ತೆಗೆಯುವವರಿಗೂ ಮಗ್ಗದಲ್ಲಿ ನೇಯುವವರಿಗೂ ಜೀವನಾಂಶ ಕೊಟ್ಟಂತಾಗುವುದು.

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: 1906

ನವಯುಗ

ಉಡುಪಿ, ಗುರುವಾರ, ತಾ. ೨೭-೭-೩೯

ಮಂದಿರ ಪ್ರವೇಶ ಸಂರಕ್ಷಣಾ ಓರ್ಡಿನೆನ್ಸ್

ಕಳೆದ ಒಂದೆರಡು ವಾರಗಳಿಂದ ಮದರಾಸು ಪ್ರಾಂತ್ಯದ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮೌನ ಕ್ರಾಂತಿಯೊಂದು ಆರಂಭವಾಗಿದೆಯೆನ್ನಬಹುದು. ಮಧುರೆಯ ಸುಪ್ರಸಿದ್ಧ ಮೀನಾಕ್ಷಿ ದೇವಾಲಯ ಮತ್ತು ಇನ್ನೆರಡು ದೇವಾಲಯಗಳು ಮತ್ತು ತಂಜಾವೂರಿನ 90 ದೇವಾಲಯಗಳು ಹರಿಜನರಿಗೆ ತೆರೆಯಲ್ಪಟ್ಟಿರುವದು ಒಂದು ಉತ್ಕ್ರಾಂತಿಯೇ ಸರಿ. ಇನ್ನಷ್ಟು ಸ್ಫೂರ್ತಿದಾಯಕ ವಿಷಯವೆಂದರೆ ಮಂತ್ರಿಮಂಡಲದ ಇಚ್ಛೆಗನುಸಾರವಾಗಿ ಮದ್ರಾಸಿನ ಗವರ್ನರರು ಹೊರಡಿಸಿರುವ ಮಂದಿರ ಪ್ರವೇಶದ ಆತಂಕ ನಿವಾರಣೇ ಓರ್ಡಿನೆನ್ಸ್. ಈ ವರೆಗಿರುವ ಕಾನೂನಿನಂತೆ ಪೂರ್ವಾಚಾರ ವಿರುದ್ಧವಾಗಿ ಹರಿಜನರನ್ನು ದೇವಸ್ಥಾನದೊಳ ಹೊಗಿಸುವವರ ಮೇಲೆ ತಕ್ಷೀರು ಮಾಡಲು ಸಾಧ್ಯವಿದೆ. ಅಂತೆಯೇ ಮಧುರೆಯ ದೇವಾಲಯದ ಅರ್ಚಕರೇ ಮೊದಲಾದವರ ಮೇಲೆ ಸನಾತನಿಗಳು ಕೆಲವರು ದಾವೆ ಹೂಡಿದ್ದರು. ಇಂತಹ ತಡೆಯನ್ನು ತೆಗೆದುಹಾಕುವ ಕಾಯಿದೆ ಮಾಡುವರೆ ಎಸೆಂಬ್ಲಿಯ ಅಧಿವೇಶನ ಕೂಡ ಈಗ ನಡೆಯುತ್ತಿಲ್ಲ. ಆದ್ದರಿಂದ ಗವರ್ನರರು ಮಂತ್ರಿಗಳ ಅಪೇಕ್ಷೆಯಂತೆ ತನ್ನ ವಿಶೇಷಾಧಿಕಾರವನ್ನು ಪ್ರಯೋಗಿಸಿ ಹೊಸ ಕಾನೂನೊಂದನ್ನು ಜಾರಿಗೆ ತಂದಿದ್ದಾರೆ. ಈ ಕಾನೂನಿಗೆ ಗವರ್ನರ್ ಜನರಲರ ಸಮ್ಮತಿಯೂ ದೊರೆತಿದೆ. ಇದಕ್ಕನುಸಾರವಾಗಿ ಒಂದು ದೇವಾಲಯದ ಭಜಕರ ಬಹುಮತವು ಹರಿಜನ ಪ್ರವೇಶಕ್ಕೆ ಅನುಕೂಲವಿದ್ದಲ್ಲಿ ಅಂತಹ ಪ್ರವೇಶವನ್ನು ಕಾಯಿದೇ ಮೂಲಕ ಆತಂಕಿಸಲು ಯಾರಿಗೂ ಸಾಧ್ಯವಾಗದು. ಪ್ರವೇಶವಿತ್ತವರು ಯಾವುದೇ ರೀತಿಯ ಶಿಕ್ಷೆಗೊಳಗಾಗಲಾರರು.

ಮದರಾಸು ಪ್ರಾಂತ್ಯದಲ್ಲುಂಟಾಗಿರುವ ಈ ಸುಧಾರಿತ ವಾತಾವರಣದ ಸದುಪಯೋಗವನ್ನಾಡಿಕೊಳ್ಳಲು ಸುಧಾರಕರು ಹಿಂಜರಿಯಬಾರದು. ಕಾಂಗ್ರೆಸ್ ಸರಕಾರವು ಅಧಿಕಾರಕ್ಕೆ ಬಂದೊಡನೆ ರಾಜಕೀಯ ಸಾಮಾಜಿಕ ಸುಧಾರಣೆಯ ಜವಾಬ್ದಾರಿಯನ್ನೆಲ್ಲಾ ಅದರ ಹೆಗಲಮೇಲೆ ಹೊರಿಸಿ, ನಿರೀಕ್ಷಣೆಯೊಂದೇ ತಮ್ಮ ಹಕ್ಕೆಂದು ಪ್ರಾಂತ್ಯದ ಸುಧಾರಕರು ಕೈಕಟ್ಟಿ ನಿಂತಿರುವದು ಈಗ ಕಂಡು ಬರುತ್ತಿದೆ. ತಾವು ಹಿಂದೆ ನಿಂತಾಗ ಜತೆಯಲ್ಲೇ ತಮ್ಮ ಪಾಲಿನ ಕರ್ತವ್ಯವೂ ಹಿಂದೆ ಬಿದ್ದಿದೆ ಎಂಬುದನ್ನರಿಯಲು ದೃಷ್ಟಾಂತಗಳೆಷ್ಟೋ ಅರಿವಗೆ ದೊರೆತಿವೆ. ದೇವಾಲಯ ಪ್ರವೇಶದ ವಿಜಯವಾದರೂ ಇದಕ್ಕೆ ಹೊರತಾಗಿಲ್ಲ. ಕಾಂಗ್ರೆಸ್ಸು ಆದರೂ ಸರಕಾರವೆನ್ನಿಸಿಕೊಳ್ಳುವಾಗ ಬೀಳುವ ಹೊಣೆಗಾರಿಕೆಯಿಂದ ಕ್ರಾಂತಿದಾಯಕ ಸುಧಾರಣೆಗಳಲ್ಲಿ ಹಲವು ವೇಳೆ ಕೈತಡೆಯಬೇಕಾಗುತ್ತದೆ. ಸರಕಾರದ ಗತಿ ಮಂದವಾಗಿದೆ ಎಂದು ಟೀಕಿಸಿ ಆ ಮೂಲಕ ತಮ್ಮ ನಿಮರ್ಶಾತ್ಮಕ ಬುದ್ಧಿಯನ್ನು ತಣಿಸಿ ಕುಳಿತುಕೊಂಡರೆ ಕಾರ್ಯವಾಗದು. ಸರಕಾರವು ತಾನು ಪ್ರತ್ಯಕ್ಷ ಕೈಗೊಳ್ಳದುದನ್ನು ಅನ್ಯರು ಕೈಗೊಳ್ಳುವಾಗ ಅವರಿಗೆ ಪೂರ್ಣ ನೆರವಾಗುವದೆಂಬುದಕ್ಕೆ ಗವರ್ನರರ ಓರ್ಡಿನೆನ್ಸೇ ದೃಷ್ಟಾಂತ. ಈ ವಿಶೇಷ ಕಾನೂನು ಹಾದಿಯ ಮುಳ್ಳೊಂದನ್ನು ಕಿತ್ತುಹಾಕಿದೆ ಹೊರತು ಯಾರನ್ನೂ ಒಳಗೆಳೆಯುವುದಿಲ್ಲ; ಆದರೆ ಒಳಹೋಗುವವರ ಪಥವು ಸುಗಮವಾಯಿತು. ದೇವಸ್ಥಾನ ಪ್ರವೇಶವಾಗಬೇಕಾದರೆ ಬಹುಮತದ ಬೆಂಬಲಬೇಕೆಂಬುದು ಮಾನ್ಯ ರಾಜಗೋಪಾಲಾಚಾರ್ಯರು ಎಸೆಂಬ್ಲಿಯಲ್ಲಿ ತಂದಿದ್ದ ಮಸೂದೆಯಂತೆಯೇ ಈ ಕಾನೂನಿನ ಪಟ್ಟಿಗೂ ಅಗಳ್ಯ. ಬಹುಮತವಿದ್ದಲ್ಲಿ ಮಿಕ್ಕ ಯಾವ ವಿಧದ ಆತಂಕಗಳನ್ನೂ ಒಡ್ಡದಂತೆ ದೇವಾಲಯಾಧಿಕಾರಿಗಳನ್ನೂ ಪ್ರತಿಬಂಧಿಸುವಷ್ಟು ಸರಕಾರದ ಕಾಯಿದೆಯು ಮುಂದುವರಿಯುತ್ತಿದ್ದರೆ ಎಷ್ಟೋ ಹಿತವಿತ್ತು; ಕಾಂಗ್ರೆಸ್ ಸರಕಾರವು ಹಾಗೆ ಮಾಡುವದರಲ್ಲಿ ನ್ಯಾಯವೂ ಇತ್ತು. ಬದಲಾಗಿ ಇಂದಿನ ಕಾನೂನು ಹರಿಜನ ಪ್ರವೇಶವನ್ನು ಆತಂಗಿಸಲು ದೇವಾಲಯಾಧಿಕಾರಿಗಳಿಗಿದ್ದ ಕಾನೂನಿನ ಬೆಂಬಲವನ್ನು ಹಿಂದೆಗೆದು ಅಮಟ್ಟಿಗೆ ಅವರನ್ನು ನಿಸ್ಸಹಾಯಕ ಸ್ಥಿತಿಯಲ್ಲಿಡುತ್ತದೆ. ವ್ಯಕ್ತಿಶಃ ಮಾನ್ಯ ರಾಜಗೋಪಾಲಾಚಾರ್ಯರು ಹರಿಜನ ಪ್ರವೇಶದ ಅನನ್ಯ ಉಪಾಸಕರು.

ಮಹಾತ್ಮರ ಉಪವಾಸದಿಂದ ಸ್ಫೂರ್ತಿ ಹೊಂದಿದ ವಾತಾವರಣದಲ್ಲಿ ಹಿಂದೊಮ್ಮೆ ಗುರುವಾಯೂರಿನ ದೇವಾಲಯ ಪ್ರವೇಶಕ್ಕೆ ಶ್ರೀ. ಸಿ. ರಾಜಗೋಪಾಲಾಚಾರ್ಯರೇ ಮೊದಲಾದ ಕಾಂಗ್ರೆಸ್ ಪ್ರಮುಖರು ಜನಮತ ಸಂಗ್ರಹಿಸಿದಾಗ ಹೆಚ್ಚಿನವರು ಪ್ರವೇಶಕ್ಕನುಕೂಲವಿದ್ದರು. ಆದರೂ ಅಲ್ಲಿಯ ಅಧಿಕಾರಿ ಜಾಮೊರಿನ್ ರಾಜರು ಎಲ್ಲವನ್ನೂ ತಿರಸ್ಕರಿಸಿ ತನ್ನ ಹಠವನ್ನೇ ಎತ್ತಿ ಹಿಡಿದುದರಿಂದ ಅಲ್ಲಿ ಪ್ರವೇಶವಾಗಲಿಲ್ಲ. ಅಂದು ಅಖಿಲಭಾರತದ ಒತ್ತಾಯ, ವಾತಾವರಣದ ಕ್ಷೋಭೆ, ಮುಖಂಡರ ಶತಪ್ರಯತ್ನ ಇವುಗಳಾವುವೂ ಜಾಮೋರಿನ್ ರಾಜರೊಬ್ಬರ ಹಠದಿದಿರು ಸಫಲವಾಗದೆ ಹೋದವು; ಇಂದು ಮಧುರೆಯ ಪುರಾತನ ದೇವಿ ಮೀನಾಕ್ಷಿಯ ಬಾಗಿಲು ಸಂಬಂಧಪಟ್ಟವರ ಉತ್ಸಾಹದಿಂದಾಗಿಯೇ ತೆರೆಯಲ್ಪಟ್ಟಿತು. ಇದಕ್ಕೆ ಗುರುವಾಯೂರು ಮತ್ತು ಮಧುರಾ ದೇವಾಲಯಗಳ ಆಡಳಿತಾಧಿಕಾರದಲ್ಲಿರುವ ವ್ಯತ್ಯಾಸವೂ ಕಾರಣವೆಂಬುದು ನಿಜ. ಅಂತೆಯೇ ಒಳಗೊಳಗೆ ಪಕ್ವವಾಗುತ್ತಾ ಬಂದ ಪರಿಸ್ಥಿತಿಯೂ ಒಂದು ಪ್ರಬಲ ಕಾರಣವೆಂಬುದನ್ನು ಮರೆಯಬಾರದು.

ಮಧುರೆ ತಂಜಾವೂರುಗಳ ಮಾದರಿಯು ಇಡೀ ಪ್ರಾಂತ್ಯದ ಕಣ್ಣನ್ನು ತೆರಯಿಸಿದೆ. ಹಲವರ ಹಗಲು ಕನಸುಗಳನ್ನು ಕಾರ್ಯಮುಖೇನ ಹುಸಿಮಾಡಿ ತೋರಿಸಿದೆ. ಹೀಗೆ ತೆರೆದಿಡಲ್ಪಟ್ಟ ಹಾದಿಯಲ್ಲಿರುವ ಆತಂಕವೊಂದನ್ನು ಸರಕಾರವು ಕಿತ್ತುಹಾಕಿ, ಮುಂದೆಬರಬಹುದೆಂದು ಕರೆಯುತ್ತಿದೆ. ಮೇಲಾಗಿ ವಾತಾವರಣವು ಶಾಂತತೆಯಿಂದಲೇ ತುಂಬಿದೆ. ಈ ಸುಮುಹೂರ್ತವನ್ನು ದೇವಾಲಯಾಧಿಕಾರಿಗಳೂ ಸುಧಾರಕರೂ ಕಳೆದುಕೊಳ್ಳದೆ ಹಿಂದೂಧರ್ಮ ಮತ್ತು ಭಾರತದ ಜನಜೀವನಕ್ಕಂಟಿರುವ ಕೊಳೆಯನ್ನು ನಿವಾರಿಸಲು ಆ ಹಾದಿಯಿಂದ ಮುಂದರಿದರಾದರೆ ಭಾರತದ ಮಹತ್ತಾದ ಹಿತವೊಂದನ್ನು ಸಾಧಿಸಿದರೆನ್ನಬೇಕು.

ಸಿಲೋನಿನಲ್ಲಿ ಪಂಡಿತ ನೆಹರುಗಳು

ಪಂಡಿತ ಜವಾಹರಲಾಲರು ಸಿಲೋನಿನ ಮಂತ್ರಿಗಳೊಡನೆ ಸಂಭಾಷಿಸಿ, ಸಾರ್ವಜನಿಕ ಭಾಷಣಗಳನ್ನಿತ್ತು ಅಲ್ಲಿಯ ಹಿಂದೀಯರಲ್ಲೊಂದು ಆಶೋದಯವನ್ನುಂಟು ಮಾಡಿರುವರು. ಈ ವರೆಗಿನ ವಿದ್ಯಮಾನಗಳಿಂದ ಹಿಂದೀ ಕೂಲಿಗಾರರನ್ನು ಹೊರಗಟ್ಟುವ ಸಿಲೋನ್ ಸರಕಾರದ ಧೋರಣೆಯಲ್ಲಿ ವ್ಯತ್ಯಾಸವಾದಂತೆ ತೋರುವದಿಲ್ಲ. ಸಿಲೋನಿನ ವಾತಾವರಣವು ಜಡ್ಡುಕಟ್ಟಿಕೊಂಡಿತ್ತು. ನೆಹರುಗಳ ಆಗಮನದಿಂದ ಆ ಕಡೆಗೆ ಕಿರಣಗಳು ಬಿದ್ದಂತಾಗಿದೆ. ಅಷ್ಟೇ ಹೊರತು ಅಲ್ಲಿಯ ಸರಕಾರದ ಮನೋಮಂದಿರವು ಬೆಳಗಿದಂತೆ ತೋರುವದಿಲ್ಲ. "ಮಂತ್ರಿಗಳು ವಿಶಾಲ ಧೋರಣೆಯಿಂದ ನನ್ನ ಮಾತುಗಳು ಅರ್ಥಮಾಡಿಕೊಳ್ಳುವಂತೆ ತೋರುವದಿಲ್ಲ. ಎಂದು ನೆಹರುಗಳು ಉದ್ಗರಿಸಿರುವರು. ಪಂಡಿತರು ಹಿಂದೀಯರ ಸ್ವಾಭಿಮಾನವನ್ನೂ ಸಾರಿದರು; ಸಣ್ಣ ದ್ವೀಪವಾದ ಸಿಲೋನಿಗೆ ವ್ಯಾಪಾರವಹಿವಾಟಿಗಾಗಿ ಇತರ ರಾಷ್ಟ್ರವೊಂದರ ಸಂಬಂಧವು ಅಗತ್ಯವಿರುವಾಗ ಭಾರತಕ್ಕಿಂತ ಯೋಗ್ಯ ಸಂಬಂಧ ಬೇರೆ ಅವಕ್ಕೆ ದೊರೆಯಲಾರದೆಂಬುದನ್ನು ಮುಂದಿಟ್ಟು ಮಾಡಿದರು. ಅಂತು ತನ್ನ ಸ್ವಾಭಾವಿಕ ಸ್ಫೂರ್ತಿ, ಸೌಹಾರ್ದ್ರತೆಯಿಂದ ಪಂಡಿತ ನೆಹರುಗಳು ಸಿಲೋನು ಸರಕಾರವನ್ನು ಸಮಜಾಯಿಸಲು ಪ್ರಯತ್ನಿಸಿರುವರೇನೋ ನಿಜ. ಬರಿಯ ಹಿತಬೋಧೆಯಿಂದ ಹಾದಿ ಕಂಡುಕೊಳ್ಳುವ ಸ್ಥಿತಿಯಲ್ಲಿ ಸಿಲೋನು ಸರಕಾರವಿಲ್ಲವೆನ್ನಬಹುದು. ಹಿಂದೀ ಸರಕಾರವು ಸಿಲೋನಿನೊಡನೆ ವ್ಯಾಪಾರ ಕರಾರನ್ನು ರಚಿಸಲಿರುವಾಗ ಈ ಪ್ರಶ್ನೆಯನ್ನು ಪ್ರಾಮುಖ್ಯವಾಗಿ ಮುಂದೊತ್ತಬೇಕು. ಹಿಂದೀಯರಿಗಿರುವ ತೊಡಕು ಭಾರತ-ಸಿಲೋನು ಸಂಬಂಧಕ್ಕೆ ತೊಡಕಾಗಿ ಗಣಿಸಲ್ಪಡಬೇಕು. ಪಂಡಿತ ನೆಹರುಗಳಿಂದ ನಿರ್ಮಿಸಲ್ಪಟ್ಟ ಕ್ಷೇತ್ರದಲ್ಲಿ ಸತ್ಪರಿಣಾಮದ ವಿಜಯ ಸಸಿ ನೆಡಲ್ಪಡಬೇಕಾದರೆ ಹಿಂದೀ ಸರಕಾರವು ಕೈಹಾಕಬೇಕು.

ಹಿಟ್ಲರನ ದೃಢ ನಿರ್ಧಾರ

ಡಾನ್ಜಿಗಿನ ಒಂದಿಂಚನ್ನೂ ಬಿಡದೆ ಜರ್ಮನಿಗೆ ಸೇರಿಸಿಕೊಳ್ಳುವರೆ ಹಿಟ್ಲರನು ನೂರಕ್ಕೆ ನೂರರಷ್ಟೂ ದೃಢ ನಿರ್ಧಾರದಿಂದಿರುವನೆಂದೂ, ಅಂತೆಯೇ ಯುದ್ಧ ವಿನಹಾ ಅದನ್ನು ಪಡೆಯುವ ಕುರಿತು ನೂರು ಪರ್ಸೆಂಟ್ ಆತುರದಿಂದಿರುವನೆಂದೂ ಪ್ರಕಟವಾಗಿದೆ. ಯುರೋಪು ಸಂಚಾರಮಾಡಿಕೊಂಡು ಬಂದ ಶ್ರೀ. ಭೂಲಾಭಾಯಿ ದೇಸಾಯಿಯವರು, ಹಿಟ್ಲರನು ಆಕ್ರಮಣವನ್ನು ನಡೆಯಿಸಿಯೇ ತೀರುವಂತಿವೆ. ಯಾದರೂ ಇಂಗ್ಲೆಂಡು ಫ್ರಾನ್ಸುಗಳ ಸಿದ್ಧತೆಯೇನೂ ಸಾಲದೆಂದು ತಿಳಿಸಿರುವರು. ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಯುದ್ಧವು ಅನಿವಾರ್ಯವಾದಲ್ಲಿ ಇಂಗ್ಲೆಂಡು ಫ್ರಾನ್ಸುಗಳು ಅನಿವಾರ್ಯವಾಗಿ ಅದರಲ್ಲಿ ಸೇರಬೇಕಾಗುವುದು; ಹಿಟ್ಲರನ ಶಪಥದಂತೆ ಯುದ್ಧವೂ ಅನಿವಾರ್ಯವಾಗುವದು. ಜರ್ಮನಿಯು ಈ ವರೆಗೂ ಕಾಯುತ್ತಿರುವುದು ಇಂಗ್ಲೆಂಡು ಫ್ರಾನ್ಸುಗಳ ಚಲನವಲನದ ರೀತಿಯನ್ನು. ಡಾನ್ಜಿಗ್ ಸಮಸ್ಯೆಯನ್ನು ವ್ಯವಹಾರ ಮೂಲಕ ತೀರ್ಮಾನಿಸೋಣ ಎಂದಾರಂಭಿಸಿ, ಡಾನ್ಜಿಗ್‌ನಲ್ಲಿ ಸುಧಾರಣೆಯಾಗಲಿಕ್ಕಿದೆ ಎಂಬವರೆಗೂ ಚೇಂಬರ್ಲಿನರು ಹಾಡುತ್ತಿರುವಾಗ ಹಿಟ್ಲರನಾದರೂ ರಕ್ತ ಸುರಿಸದೆ ಡಾನ್ಜಿಗನ್ನು ಇಡಿಯಾಗಿ ನುಂಗಲಾಗುವನೋ ಎಂದು ನಿರೀಕ್ಷಿಸುವದು ತಪ್ಪಲ್ಲ. ಅಂತು ಜರ್ಮನಿಯ ಸರ್ವಾಧಿಕಾರಿಯು ಮುಂದೆ ಡಾನ್ಜಿಗನ್ನು ಕಚ್ಚಿ ನುಂಗಬೇಕೋ, ಆ ಕಷ್ಟವಿಲ್ಲದೆ ಸವರಿ ಸಂತೈಸಿ ನುಂಗಲಾಗುವದೋ ಎಂಬ ಪ್ರಶ್ನೆಯಲ್ಲದೆ ಬೇರೆಯಿಲ್ಲ. ಆದ್ದರಿಂದ ನಿರೀಕ್ಷಣೆಯಲ್ಲಿರುವ ಅಪಾಯವು ಸಂಭವಿಸುವದಂತೂ ಸಿದ್ಧ. ಇಷ್ಟು ಖಂಡಿತವಾದಿಯಾಗಿರುವ ವಿರೋಧಿಯ ಮುಂದೆ ಇಂಗ್ಲೆಂಡು ಫ್ರಾನ್ಸುಗಳು ತೋರಿಸುತ್ತಿರುವ ಚಾಂಚಲ್ಯವು ಸ್ವಘಾತಕತನದ್ದು; ಸದ್ಯದ ವಿಷಮ ಪರಿಸ್ಥಿತಿಗೆ ಎಷ್ಟು ಕ್ಕೂ ಯೋಗ್ಯವಾದುದಲ್ಲ. ಅಪಾಯಜನಕ ವಿಷದ ಸಸಿಯನ್ನು ಮೊಳಕೆಯಲ್ಲಿ ಚಿವುಟದೆ ಮರವಾಗಲು ಬಿಟ್ಟ ಆಂಗ್ಲೋ-ಫ್ರೆಂಚರು ಇಂದಾದರೂ ಕೈತಡವರಿಸುತ್ತಿರುವದನ್ನು ಕಂಡರೆ ಅದು ಫಲ ಬಿಡುವಂತಾಗುವದೋ ಎಂಬ ಭಯವಿದೆ.

ಆಶ್ರಿತ ರಾಜರಿಗೆ ಮತ್ತೊಂದು ಸಂದರ್ಭ.

ಫೆಡರೇಶನಿಗೆ ಸೇರುವ ಕುರಿತು ಬ್ರಿಟಿಷ್ ಸರಕಾರವು ಆಶ್ರಿತ ರಾಜರುಗಳಿಗೆ ಕಳುಹಿಸಿಕೊಟ್ಟ ಪತ್ರಕ್ಕೆ ಉತ್ತರಕೊಡುವ

ಭಾರತದ ಗಡಿಭದ್ರತೆಯ ಭಯ!

ದಕ್ಷಿಣ ಚೀನಕ್ಕೊತ್ತಿಬಂದ ಜಪಾನರು ಬರ್ಮದ ಮೇಲೆ ಬಿದ್ದರೆ?

ಭಾರತ ಸರಕಾರದ ಮುಂಜಾಗ್ರತೆ

ಹಿಂದುಸ್ಥಾನದ ನೆರೆಯ ದೇಶವಾದ ಚೀನದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ವಿಶೇಷ ಆತುರ ತೋರಿಸುತ್ತಿರುವ ಅನ್ಯರಾಷ್ಟ್ರಗಳೆಂದರೆ ರಶ್ಯಾ ಮತ್ತು ಇಂಗ್ಲಂಡು. ರಶ್ಯಕ್ಕೆ ತನ್ನ ಚೀನಾ ಸಂಬಂಧವನ್ನುಳಿಸಿಕೊಳ್ಳುವ ಹವಣು ಇದೆ. ಇಂಗ್ಲೆಂಡಿಗೆ ಚೀನಾದೊಳಗಿನ ತನ್ನ ಹಿತ ಸಂಬಂಧಗಳು ರಕ್ಷಿಸಲ್ಪಡಬೇಕೆಂಬುದೊಂದು; ಚೀನಾ ಯುದ್ಧವು ಮುಂದುವರಿದು ಜಪಾನರು ಗೆಲ್ಲುವಾಗ ಭಾರತದ ನೆರೆಯ ಸ್ಥಳವನ್ನಾಕ್ರಮಿಸಿದಂತಾಗುವದು ಮಾತ್ರವಲ್ಲ, ಭಾರತಕ್ಕೆ ಉಪದ್ರಕೊಡಲೂ ಸಾಧ್ಯವಿದೆ ಎಂಬುದಿನ್ನೊಂದು. ಹೀಗಾಗಿ ಚೀನೀಯುದ್ಧದಲ್ಲಿ ಬ್ರಿಟಿಷರ ಜೋಕೈಯುರಿ ವಿಶೇಷ!

ನೈಋತ್ಯ ಚೀನಾಧಾಳಿ

ಇತ್ತೀಚೆಗೆ ಯುದ್ಧಾನಲವು ಒಂದೇ ಸಮನೆ ಚೀನದ ನೈಋತ್ಯ ದಿಕ್ಕಿಗೆ ಹಬ್ಬಲಾರಂಭಿಸಿದೆ. ಜಪಾನರ ಸೈನ್ಯಶಕ್ತಿಯ ದೊಡ್ಡ ಭಾಗವು ನೈಋತ್ಯ ಚೀನಾದ ಕಡೆಗೆ ಮುಖಮಾಡಿ ಮುಂದೊತ್ತುವದು ಕಂಡುಬರುತ್ತಿದೆ. ವಿದೇಶೀಯರೊಡನೆ ಜಪಾನರು ತಿಕ್ಕಾಟ ಹೂಡಿದ್ದ ಟಿಟ್ಸಿನ ನಗರಗಳು ಚೀನದ ನೈಋತ್ಯ ಭಾಗದಲ್ಲಿಯೇ ಇವೆ. ಹೀಗಾಗಿ ಹಿಂದೀ ಸರಕಾರವು ಆತುರಗೊಳ್ಳುವಂತಾಗಿದೆ. ಚೀನದ ನೈಋತ್ಯ ಬರ್ಮವಿದೆ, ಚೀನಕ್ಕೆ ತಾಗಿಕೊಂಡೇ ಇದೆ. ಈಗ ನಡೆಯುತ್ತಿರುವ ಯುದ್ಧವೆಂದರೆ ಬರ್ಮಕ್ಕೆ ಮೂರು ಗಳತೆಯಷ್ಟು ದೂರದಲ್ಲಿ ಇನ್ನಬಹುದು. ಜಪಾನರ ಇತ್ತೀಚಿನ ಮನೋವೃತ್ತಿಯು ಬ್ರಿಟಿಷರನ್ನು ಕೆಣಕುವ ರೂಪಾಂತರ ಹೊಂದಿದೆ. ಮಾತ್ರವಲ್ಲ, ಚೀನವನ್ನು ಗೆದ್ದ ಮೇಲೆ ಜಪಾನು ಧಾಳಿ ನಡಿಸಬೇಕಾದ ಇನ್ನೊಂದು ಒತ್ತಿನ ರಾಜ್ಯವೆಂದರೆ ಬರ್ಮ ಮತ್ತು ಆ ಮೂಲಕ ಹಿಂದುಸ್ಥಾನ. ಹೀಗೆ ಅಪಾಯವು ಹೆಬ್ಬಾಗಿಲ ವರೆಗೆ ಬಂದಿರುವದರಿಂದ ಭಾರತ ಸರಕಾರವು ಆತುರದಿಂದ ಬರ್ಮಾ ಭಾರತಗಳ ನಡುವೆ ಒಂದು ರಸ್ತೆಯನ್ನೇ ಮಾಡಿಸುವ ಯೋಜನೆಯನ್ನು ಕೂಡಲೇ ಕೈಕೊಳ್ಳಬೇಕೆಂದು ಅಸ್ಸಾಮು ಸರಕಾರವನ್ನು ಕೇಳಿಕೊಂಡಿರುವದು.

ಬರ್ಮಾ-ಭಾರತ ಜೋಡಣೆ

ಅದರಂತೆ ಅಸ್ಸಾಮು ಸರಕಾರವು ಒಂದು ಕೋಟಿ ರೂಪಾಯಿಗಳ ವರೆಗೆ ಖರ್ಚು ಮಾಡಿ ಬರ್ಮಾ-ಭಾರತಗಳ ನಡುವೆ ರಸ್ತೆಯನ್ನುಂಟುಮಾಡುವ ಯೋಜನೆಯನ್ನು ಶೀಘ್ರವೇ ಕೈಕೊಳ್ಳಲಿರುವದು. ಇದಕ್ಕಾಗಿ ಮೂರನೆಯವನಾದ ಇಂಜಿನಿಯರನೊಬ್ಬನನ್ನು ಮೇಲ್ವಿಚಾರಣೆಗಾಗಿ ನೇಮಿಸಲಾಗುವದು. ಕೆಲಸವು ಬೇಗನೇ ಮುಗಿಯಬೇಕೆಂಬ ಆತುರದಿಂದ ಎರಡು ವಿಭಾಗಗಳಾಗಿ ತತ್ಕಾಲಕ್ಕೆ ವಿಂಗಡಿಸಿ ಕಾರ್ಯಾರಂಭವಾಗಲಿದೆ. ಹಿಂದೀ ಸರಕಾರವು ಈ ಕುರಿತು ವಿಶೇಷ ಆತುರಗೊಂಡಂತಿದೆ. ರಸ್ತೆಯ ಅತ್ಯವಸರದ ಜೋಡಣೆಯು ಮುಖ್ಯವಾಗಿ ಬರ್ಮಾಕ್ಕೆ ಸೈನ್ಯಸಾಗಿಸುವ ಅನುಕೂಲತೆಗಾಗಿ. ಈ ನಡುವೆ ಬರ್ಮದ ಗವರ್ನರರಾದ ಸರ್. ಎ. ಕೋಕ್ರೇನ್ ಇವರು ಸಿಮ್ಲಾಕ್ಕೆ ಆಗಮಿಸಿ, ಇಂಡೋ ಬರ್ಮಾ ರಕ್ಷಣೆಯ ವಿಷಯವಾಗಿ ಮಾತುಕತೆ ನಡೆಸಿರುವರು. ಆ ಸಂಭಾಷಣೆ ಮುಗಿದೊಡನೆ ಪ್ರಾಮುಖ್ಯ ರಾಜಕೀಯ ಸಂಭಾಷಣೆ ನಡೆಸುವ ಸಲುವಾಗಿ ಬರ್ಮದ ಗವರ್ನರರು ಇಂಗ್ಲೆಂಡಿಗೆ ವಿಮಾನ ಮೂಲಕ ಹಾರಲಿರುವರು.

ಈಗಿರುವ ಅನಾನುಕೂಲತೆ

ಈಗ ಬರ್ಮಾ ಮತ್ತು ಅಸ್ಸಾಮುಗಳ ನಡುವೆ ಎರಡು ಮುಖ್ಯ ರಸ್ತೆಗಳಿವೆ. ಒಂದು ಮಣಿಪುರ ನಾಗಪರ್ವತಗಳ ಮೂಲಕ ಟಾಮು ಎಂಬಲ್ಲಿಂದ ಬರ್ಮದ ಗಡಿಗೆ ಹೋಗಿ ತಲಪಿಸುತ್ತದೆ. ಮತ್ತೊಂದು ಲುಶಾಯಿ ಪರ್ವತವನ್ನು ಹಾದು ಐಜಲ್ ಮತ್ತು ಲುಂಗ್ಲೆ ಎಂಬಲ್ಲಿಂದ ಕೆಳಗಿನ ಬರ್ಮದ ಪಾಕಾ ಎಂಬಲ್ಲಿಗೆ ಹೋಗಿ ಸೇರುತ್ತದೆ. ಇರುವ ಮತ್ತೊಂದು ಹಾದಿಯೆಂದರೆ ಸಾದಿಯಾ ಸರಹದ್ದಿನಿಂದ ಹೊಂಟು ಮಿಶ್ಮೀ ಪರ್ವತಗಳಗಡ್ಡವಾಗಿ ರಿಮಾ ಎಂಬಲ್ಲಿಂದ ಟಿಬೆಟ್-ಚೀನ್-ಕರ್ಮ್-ಬರ್ಮಾ ಭಾರತಗಳೊಟ್ಟಾಗುವ ಸರಹದ್ದನ್ನು ಪ್ರವೇಶಿಸುವ ರಸ್ತೆ. ಈ ಮೂರನೇ ರಸ್ತೆಯೇ ವಿದೇಶೀಯರ ಆದರಲ್ಲೂ ಚೀನೀಯುದ್ಧದಲ್ಲಿ ಗೆದ್ದ ಜಪಾನರ ಪ್ರವೇಶಕ್ಕೆ ಅನುಕೂಲವಿರುವುದರಿಂದ ಸಾದಿಯಾ ಜಿಲ್ಲೆಯಲ್ಲಿ ಭಾರತ ಸರಕಾರವು ಬಲವಾದ ಸೈನ್ಯಗಳನ್ನಿರಿಸಿದೆ. ಇನ್ನೂ ಹೆಚ್ಚಿನ ಸೈನ್ಯಗಳು ಅಪಾಯ ಕಾಲದಲ್ಲಿ ಬರ್ಮಕ್ಕೆ ಅನುವಾಗಬೇಕಾಗುವುದು. ಹಾಗೆ ಅತ್ಯವಸರದಿಂದ ಸೈನ್ಯ ಕಳುಹಿಸಲು ಈಗ ಇರುವ ಗುಡ್ಡಗಾಡು ಹಾದಿಗಳು ಅನುಕೂಲವಲ್ಲವಾದ್ದರಿಂದ ಈ ಹೊಸ ಯೋಜನೆಯನ್ನು ಕೈಕೊಳ್ಳಲಾಗಿದೆ.

ಧಾಳಿ ಸುಲಭವಲ್ಲ

ಚೀನದ ಮೂಲಕ ಹಿಂದುಸ್ಥಾನಕ್ಕೆ ನುಗ್ಗಬೇಕಾದರೆ ಸಾದಿಯಾದಿಂದ ಹೊರಟ ಮೂರನೇ ರಸ್ತೆಯೊಂದೇ ಹಾದಿಯೆಂದು ತಿಳಿಸಿದೆವಷ್ಟೆ. ಆ ಹಾದಿಯಾದರೂ ವಿರೋಧಿಗಳಿಗೆ ಎಡೆಕೊಡುವ ರೀತಿಯಲ್ಲಿಲ್ಲ. ಗುಡ್ಡಗಾಡುಗಳಿಂದ ತುಂಬಿದ್ದು ಸೈನಿಕ ಚಲನೆ ಮತ್ತು ಸೈನ್ಯದ ಇತರ ಆಯುಧ ಸಲಕರಣೆಗಳೆಂದರೆ ಬಹು ಕಷ್ಟಸಾಧ್ಯವಾದ ಕಾರ್ಯ. ಇಂತಹ ಹಾದಿಯು ಇನ್ನೊಂದನ್ನು ಕಾಣಬೇಕಾದರೆ ಅಬಿಸೀನಿಯದಲ್ಲಿ ಸಾಧ್ಯ. ಹೊರತು ಬೇರೆ ದೊರೆಯಲಾರದು. ಅಷ್ಟು ಬಿಕ್ಕಟ್ಟಾದ ಹಾದಿ ಆದ್ದರಿಂದ ಈ ಕಡೆಯಿಂದ ಜಪಾನರ ಧಾಳಿಯಾಗಬಹುದೆಂದು ಬ್ರಿಟಿಷರು ಬೆದರಿ ಹೋಗಿಲ್ಲ. ಆದರೆ ತಮ್ಮ ಸಿದ್ಧತೆಯನ್ನು ಮಾಡಿ ಮುಗಿಸಬೇಕೆಂಬುದಕ್ಕಾಗಿಯೇ ಇಷ್ಟೆಲ್ಲಾ ಆತುರ, ಅವಸರಗಳೆಂದು ನಂಬಲಾಗಿದೆ.

ಇನ್ನು ಜಪಾನಾದರೂ ಅಷ್ಟು ಮುಂದೊತ್ತಬಲ್ಲುದೇ ಎಂಬ ಪ್ರಶ್ನೆಯಿದೆ. ಚೀನದಲ್ಲಿ ನೈಋತ್ಯಕ್ಕೆ ಮುಖಮಾಡಿದುದು ಕರಿ ಬೆಕ್ಕಿನ ಕಡೆಗೆ ತಿರುಗಿದಂತಾಗಿದೆ ಜಪಾನಿಯರಿಗೆ! ಅವರು ನೈಋತ್ಯ ದಿಕ್ಕಿನಲ್ಲಿ ಆಕ್ರಮಿಸಹತ್ತಿಯೇ ಹಲವು ಅಪಜಯಗಳನ್ನು ಬರಮಾಡಿಕೊಂಡರು. ವಿದೇಶೀಯರನ್ನು ಕೆಣಕಿ ಸಂಕಟಪಡಿಸಿ ತಾವೂ ಪೇಚಾಡಿದರು. ಒಂದೊಮ್ಮೆಗೆ ನೈಋತ್ಯ ಕಡೆಯ ಧಾಳಿಯನ್ನು ಪೂರ್ತಿ ಮುಗಿಸಿ ಚೀನವನ್ನೆಲ್ಲಾ ನುಂಗಿದರೂ ಭಾರತದ ಮೇಲೇರುವಷ್ಟು ಸಾಮರ್ಥ್ಯ ಜಪಾನರಲ್ಲಾಗ ಉಳಿಯುವಂತಿಲ್ಲ. ಆಕ್ರಮಿಸಿಕೊಂಡ ಚೀನದಲ್ಲಿ ವ್ಯವಸ್ಥೆಯನ್ನು ಸ್ಥಾಪಿಸಲು ಯುದ್ಧದ ಪೀಡೆಯಿಂದ ಚೇತರಿಸಿಕೊಳ್ಳಲು ಜಪಾನರಿಗೆ ಕೆಲವು ವರುಷಗಳು ಹಿಡಿಯಬಹುದು. ಈಗ ಎಲ್ಲಕ್ಕೂ ಮೊದಲಿನ ಪ್ರಶ್ನೆಯೆಂದರೆ ಜಪಾನು ಚೀನವನ್ನು ಗೆಲ್ಲುವದು ನಿಜವೆ? ಎಂಬುದು. ಈ ಪ್ರಶ್ನೆಯನ್ನು ನಿಸ್ಸಂಕೋಚವಾಗಿ ಉತ್ತರಿಸಲು ಸಾಧ್ಯವಿಲ್ಲ. ಆದರೆ ಇಷ್ಟು ಹೇಳಬಹುದು; ಚೀನವು ಕೊನೆಯ ವರೆಗೂ ಸ್ವಶಕ್ತಿಯೊಂದನ್ನೇ ಅವಲಂಬಿಸುವಂತಾದರೆ ಒಂದಲ್ಲೊಂದು ದಿನ ಜಪಾನರಿದಿರಲ್ಲಿ ಅದರ ಪತನ ನಿಶ್ಚಯ. ಅದಕ್ಕಾಗಿ ಜಪಾನರೆಷ್ಟು ಕಾಲ ಧನ, ಜನ ವ್ಯಯಿಸಬೇಕಾಗುವದೆಂಬುದು ಬೇರೆ ಮಾತು. ಹಾಗೆ ಆಗುವ ದಿನಬಂದಲ್ಲಿಯೂ ಜಪಾನು ಚೇತರಿಸಿಕೊಳ್ಳಲು ಬಹು ಕಾಲ ಹಿಡಿಯಬಹುದೆಂಬುದರಲ್ಲಿ ಅನುಮಾನವಿಲ್ಲ. ಆ ಮೊದಲು ಅಂತರ್ರಾಷ್ಟ್ರೀಯ ಪರಿಸ್ಥಿತಿ ಬೇರೆಯೇ ರೂಪವನ್ನು ತಾಳಬಹುದು. ಹಾಗಾಗಿ ಜಪಾನರಿಂದ ಕೂಡಲೇ ಆಪತ್ತಿದೆ ಎಂಬುದು ಭಾರತದ ಮಟ್ಟಿಗೆ ಸುಳ್ಳು.

ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ.

ಸರ್ಕಾರದೊಂದಿಗೆ ಮೈಸೂರು ಕಾಂಗ್ರೆಸ್ಸಿನವರು ಸಂಧಾನ ನಡೆಸಲು ಮೈ| ಕಾಂ| ಅಧ್ಯಕ್ಷರು ದಿವಾನರ ಭೇಟಿಗೆ ಕೇಳಲು ಅದನ್ನು ದಿವಾನರು ನಿರಾಕರಿಸಿದ್ದು ಹಿಂದೆ ತಿಳಿಸಲಾಗಿದೆ. ಇದರ ಮೇಲೆ ಮೈ| ಕಾಂ| ವ| ಸಭೆ ಸೇರಿ ಬಹಳ ಘಂಟೆಗಳ ಕಾಲ ಚರ್ಚೆ ನಡೆಸಿದ ಮೇಲೆ ಭೇಟಿ ಕೊಡದಿದ್ದಕ್ಕೆ ವಿಷಾದಿಸಲಾಯಿತು. ಮುಂದಿನ ಸೆಪ್ಟಂಬರ್ 1ರೊಳಗೆ ಭೇಟಿಗೆ ತಕ್ಕ ಅವಕಾಶ ದೊರೆಯುವಂತೆ ಮಾಡುವುದು, ಶ್ರೀಮನ್ಮಹಾರಾಜ ಮತ್ತು ಇತರರ ಮೇಲೆ ವೈಯಕ್ತಿಕ ಆಪಾದನೆ ಮಾಡಕೂಡದು. ಜುಲೈ 30ರಲ್ಲಿ ಜವಾಬ್ದಾರಿ ದಿನಾಚರಣೆ

ಬಾರಕೂರು ಸರ್ಕಲ್ ಚುನಾವಣೆ

ತಾ. 9-7-'39ರ ಪ್ರಭಾತದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಶ್ರೀ. ಬಿ. ಗೋಪಾಲರಾವ್ ಅವರ ಅಸಂಬದ್ಧ ಪ್ರಲಾಪದ ನಿಜಸ್ಥಿತಿ ಎಂಬ ಶಿರೋನಾಮೆಯಲ್ಲಿ 6-2-39ರಂದು ನಡೆದ ಬಾರಕೂರು ಸರ್ಕಲ್ ಚುನಾವಣೆಯ ವಿಷಯ ಏಕಪಕ್ಷೀಯವಾದ ಹೇಳಿಕೆಯ ತಿರುಳನ್ನು ಸಾರ್ವಜನಿಕ ಗಮನಕ್ಕೆ ತರಲೆಂದು ಶ್ರೀ. ಎಚ್. ಸೋನಪ್ಪ ಶೆಟ್ಟರು ದೀರ್ಘ ಪತ್ರವೊಂದನ್ನು ನಮ್ಮ ಬಳಿಗೆ ಕಳುಹಿಸಿದ್ದಾರೆ. ಸ್ಥಳ ಸಂಕೋಚದ ದೆಸೆಯಿಂದ ಅದರ ಸಾರಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ. (1) ಚುನಾವಣೆಯ ರಿಟರ್ನಿಂಗ್ ಆಫೀಸರಾದ ಡಾ. ಸುಂದರರಾವ್ ಪೈಗಳು ಮೊದಲು ಬಾರಕೂರಲ್ಲಿ ಮಾತ್ರವೇ ಒಂದು ಪೋಲಿಂಗ್ ಸ್ಟೇಶನ್ ಕೊಟ್ಟಿದ್ದರು. ಮತದಾರರಿಗೆ ಆಗುವ ಅನಾನುಕೂಲತೆಗಳನ್ನು ಅವರಿಗೆ ತಿಳಿಸಿದಾಗ ಹಾಲಾಡಿಗೂ ಒಂದು ಪೋಲಿಂಗ್ ಸ್ಟೇಶನ್ ಕೊಟ್ಟದ್ದರು. ಅದು ಅಗತ್ಯವೆಂದು ಶ್ರೀ. ಬಿ. ಗೋಪಾಲಕೃಷ್ಣ ಕಮ್ತಿರೂ ರಿಟರ್ನಿಂಗ್ ಆಫೀಸರ ಹತ್ತಿರ ಹೇಳಿದ್ದರಂತೆ. ತಮ್ಮ ಆಕ್ಷೇಪಣಾ ಅರ್ಜಿಯಲ್ಲಿಯೂ ಬರೆದಿರುವರಂತೆ. ಹೀಗಾಗಿ ಹಾಲಾಡಿ ಪೋಲಿಂಗ್ ಸ್ಟೇಶನು ಉಭಯಪಕ್ಷಕ್ಕೆ ಒಪ್ಪಿತವಾದದ್ದಾಗಿದ್ದು ಅದರ ನ್ಯಾಯಾನ್ಯಾಯದ ಚರ್ಚೆಗೆ ಎಡೆಯೇ ಇರುವುದಿಲ್ಲ. (2) ಸುಳ್ಳು ಓಟು ಪೋಲಾಗಿದ್ದುವೆಂಬ ಆಕ್ಷೇಪ. ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಬೇಕಾದರೆ ಹಾಲಾಡಿಯಲ್ಲಿ ವಿಚಾರಣೆ ನಡೆಸಲಿ, ಹಾಲಾಡಿಯಲ್ಲಿ ಪೋಲಾದ ಮತಗಳ ಪೈಕಿ ನನಗೆ ಸಿಕ್ಕಿದ ಸಂಖ್ಯೆಯಷ್ಟು ಮತದಾರರನ್ನು ಹಾಜರುಪಡಿಸಿ ಅವರಿಂದ ಹೇಳಿಕೆಗಳನ್ನು ಕೊಡಿಸಲು ನಾನು ಸಿದ್ಧನಿದ್ದೇನೆ. (3) ಓಟು ಪಡೆಯಲು ಬಲಾತ್ಕಾರ ಪ್ರಯೋಗವಾಗಿತ್ತೆಂಬ ಆರೋಪ. ಇದಕ್ಕೆ ಅಂದಿನ ಪೋಲಿಂಗ್ ಆಫೀಸರರಿಗಿಂತ ಉತ್ತಮ ಸಾಕ್ಷಿ ಬೇರೆ ದೊರೆಯಲಾರದು. ಅವರನ್ನು ವಿಚಾರಿಸಲಿ. (4) ವಿಚಾರಣಾ ಸಮಿತಿ. ಇದರ ಕನ್ವೀನರ್ ಶ್ರೀ. ಕೆ. ಎಲ್. ಕಾರಂತರಿಂದ ತಾ. 18-3-39ಕ್ಕೆ ಉಡುಪಿ ಕಾಂಗ್ರೆಸ್ ಆಫೀಸಿನಲ್ಲಿ ವಿಚಾರಣೆಯೆಂದೂ, ಅದಕ್ಕೆ ಹಾಜರಾಗಬೇಕೆಂದೂ ಕಾಗದ ಬಂದಿತ್ತು. ನಾನು ಕಾಲಕ್ಕೆ ಸರಿಯಾಗಿ ಬಂದು ಕಾಂಗ್ರೆಸ್ ಆಫೀಸಿನಲ್ಲಿ ಕಾದರೂ ಯಾರೂ ಬಾರದ್ದರಿಂದ ಹಿಂತಿರುಗಿದೆ. ಆ ಮೇಲೆ ತಾ. 26-3-39ಕ್ಕೆ ಬಾರಕೂರಲ್ಲಿ ವಿಚಾರಣೆಯೆಂದು ಸದ್ರಿ ಕನ್ವೀನರಿಂದ ಇನ್ನೊಂದು ಕಾಗದ ಬಂತು. ಅದರಲ್ಲಿ ನಾನು ತಾ. 18-3-'39ಕ್ಕೆ ಬಾರದ್ದರಿಂದ ವಿಚಾರಣೆ ಮುಂದರಿಸಿದ್ದೆಂದು ಇತ್ತು. ನಾನದಕ್ಕೆ ಅಂದು ಬಂದು ನಿರಾಶನಾಗಿ ಹಿಂತಿರುಗಿದ ನಿಜಸಂಗತಿಯನ್ನೂ ವಿಚಾರಣೆಯನ್ನು ಹಾಲಾಡಿಯಲ್ಲಿಯೇ ಮಾಡುವ ಅವಶ್ಯಕತೆಯನ್ನೂ ವಿವರಿಸಿ ಕಾಗದ ಬರೆದೆನು. ಅನಂತರ ಏನಾಯಿತೆಂದು ನನಗೆ ತಿಳಿದಿಲ್ಲ. ನನ್ನ ವಿಚಾರಣೆ ಮಾಡಲೂ ಇಲ್ಲ. ಆದರೆ ತಾ. 9-7-'39ರ ಪತ್ರದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳು ನನ್ನ ಮೆಂಬರಶಿಪ್ ರದ್ದಾಗಿರುವದಾಗಿಯೂ ವಿಚಾರಣಾಸಮಿತಿಯವರು ಹಾಗೆ ಅಭಿಪ್ರಾಯಪಟ್ಟಿರುವದಾಗಿಯೂ ತಿಳಿಸಿದರು.

ಮೇಲಿನ ಪತ್ರಕ್ಕನುಸರಿಸಿ ನನ್ನ ಸಾಕ್ಷಿಗಾರರನ್ನು ಬಾರಕೂರಿಗೆ ಕೊಂಡುಹೋಗಲು ಅನಾನುಕೂಲವಾದ್ದರಿಂದ ವಿಚಾರಣಾಸಮಿತಿಯವರು ಏಕಪಕ್ಷೀಯವಾಗಿ ತೀರ್ಮಾನಿಸಿರಬಹುದಾಗಿದೆ. ಆದರೆ ನನ್ನ ವಾದವು ನ್ಯಾಯವೋ ಅನ್ಯಾಯವೋ ಎಂಬುದನ್ನು ಜನತೆಯೇ ನಿರ್ಣಯಿಸಲಿ.

ಅಲ್ಲದೆ ಹಾಲಾಡಿಯಲ್ಲಿ 100 ಮಂದಿ ಕಾಂಗ್ರೆಸ್ ಮೆಂಬರರಿದ್ದರೂ ಮತದಾರರ ಪಟ್ಟಿಯಲ್ಲಿ 69 ಜನರ ಹೆಸರು ಮಾತ್ರ ಹಾಕಿದುದರ ಮರ್ಮವೇನು?

[ಈ ಕುರಿತು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳ ಬಾಯಿಬಡಕತನ" ಎಂಬ ಇನ್ನೊಂದು ಪತ್ರಿಕೆಯನ್ನು ಶ್ರೀ. ಬಿ. ಗೋಪಾಲರಾಯರೆಂಬವರು ಕಳಿಸಿದ್ದಾರೆ. ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ.]

ಸಂ. ಸ.

ಪಾನನಿರೋಧವನ್ನು ಜಯಶೀಲಗೊಳಿಸಿರಿ

ಸರ್ದಾರ್ ಪಟೇಲರ ಎಚ್ಚರಿಕೆ

ಮಾಡಬೇಕು. ಜವಾಬ್ದಾರಿ ಸರ್ಕಾರಕ್ಕೆ ತೀವ್ರವಾದ ಚಳುವಳಿ ನಡೆಸಬೇಕು. ಕಾಂಗ್ರೆಸ್ ಚಟುವಟಿಕೆಯನ್ನು ಮುಂದುವರಿಸಬೇಕು. ಇದಕ್ಕೆ ಸರ್ಕಾರದ ಅಡ್ಡಿ ಆತಂಕ ಬಂದಲ್ಲಿ ಅದನ್ನು ಶಾಂತರೀತಿಯಲ್ಲಿ ಪ್ರತಿಭಟಿಸಲು ಸಿದ್ಧರಾಗಬೇಕು ಮತ್ತು ಪ್ರಜೆಗಳು ಇದರೊಂದಿಗೆ ಸಹಕರಿಸುವರೆಂದು ನಂಬಲಾಗಿದೆ ಎಂಬ ಠರಾವುಗಳನ್ನು ಪಾಸುಮಾಡಿತೆಂದು ಹೇಳಲಾಗಿದೆ. ಕಾಂ| ವ| ಸದಸ್ಯರು ಸಂಸ್ಥಾನದಾದ್ಯಂತವೂ ಸಂಚರಿಸುತ್ತಾರೆ.

ಶ್ರೀ| ಯನ್. ಯಸ್. ಸುಬ್ಬರಾಯರು ಇಂಗ್ಲಾಂಡಿಗೆ ಹೋಗುವರು

ಇಂಪೀರಿಯಲ್ ರಿಲೇಷನ್ ಟ್ರಸ್ಟಿನ ನಿಧಿಯಿಂದ ಸುಮಾರು ೪೦೦ ಪೌಂಡು ಮಂಜೂರಾಗಿರುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಹೆಚ್ಚು ಶಿಕ್ಷಣ ಪಡೆಯಲು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ರಾಜಕಾರ್ಯ ಪ್ರವೀಣ ಶ್ರೀ. ಯನ್. ಯಸ್. ಸುಬ್ಬರಾಯರು, ಶೀಘ್ರದಲ್ಲೇ ವಿಲಾಯಿತಿಗೆ ಪ್ರಯಾಣಮಾಡುತ್ತಾರೆಂದು ಗೊತ್ತಾಗಿದೆ.

ಸಾಹಿತ್ಯ ಬಹುಮಾನ

ದೇವರಾಜ ಬಹದ್ದೂರ್ ಸಾಹಿತ್ಯದ ಬಹುಮಾನದಲ್ಲಿ ಶ್ರೀ. ಕೆ. ವಿ. ಪುಟ್ಟಪ್ಪನವರು ಬರೆದಿರುವ "ಕಾನೂರು ಸುಬ್ಬಮ್ಮ ಹೆಗ್ಗಡತಿ" ಎಂಬ ಕಾವ್ಯಕ್ಕೆ 400 ರೂ. ಬೆಂಗಳೂರಿನ ಶ್ರೀ. ಕೆ. ವಿ. ರಾಘವಾಚಾರ್ಯರು ರಚಿಸಿರುವ "ಅಂತಿಗೊನೆ" ಪುಸ್ತಕಕ್ಕೆ 150 ರೂ. ಮತ್ತು ಮಂಗಳೂರಿನ ಶ್ರೀ. ಮುಳಿಯ ತಿಮ್ಮಪ್ಪನವರ" ನಾಡೋಜಪಂಪ" ಗ್ರಂಥಕ್ಕೆ 150 ರೂ. ಬಹುಮಾನ ಕೊಡಲಾಗಿದೆ.

ಸರ್ದಾರ್ ಪಟೇಲರ ಎಚ್ಚರಿಕೆ

ಇದೇ ತಾ. 21ರಲ್ಲು ಸರ್ದಾರ್ ಪಟೇಲರು ಅಹಮ್ಮದಾಬಾದಿನಲ್ಲಿ ಪಾನನಿರೋಧ ದಿನಾಚರಣೆಯಂದು ಒಂದು ಲಕ್ಷಕ್ಕೂ ಮಿಕ್ಕಿದ ಜನಸಮುದಾಯದ ಮುಂದೆ ಮಾಡಿದ ಭಾಷಣವು ಈ ತೆರನಾಗಿದೆ. 'ಪಾನನಿರೋಧ ಚಳವಳದ ಪೂರ್ವಾಪರಗಳನ್ನು ಪರಿಶೀಲಿಸಿದ ನಂತರವೇ ಕಾಂಗ್ರೆಸ್ ಮಂತ್ರಿಮಂಡಳವು ಈ ವಿಧಾಯಕ ಕಾರ್ಯಕ್ರಮವನ್ನು ಕೈಗೊಂಡುದು ಇದು ಜಯಪ್ರದವಾಗುವರೆ ಕೆಲವು ಆಧ್ಯ ಮಹನೀಯರ ಮೇಲೆ ಪ್ರೊಪರ್ಟಿ ಟೇಕ್ಸಿನ ಅಲ್ಪಸ್ವಲ್ಪ ಭಾರಬಿದ್ದುದೂ ನಿಜ. ಆದರೆ ಬಡಜನರ ಕುಡಿತದ ಹಣದಿಂದ ಇವರ ಮಕ್ಕಳು ವಿದ್ಯಾವಂತರಾದುದು ಎಂಬುದನ್ನು ಮರೆಯಲಾಗದು. ಪಾನನಿರೋಧ ಹಡಗವು ಜಯಶೀಲವಾಗಿ ಮಧ್ಯಸಾಗರದಲ್ಲಿರುವಾಗ ಅದರಲ್ಲೊಂದು ತೂತನ್ನು ಮಾಡುವುದು ಒಳ್ಳೆತಲ್ಲ. ವೈಜ್ಞಾನಿಕ ಪಂಡಿತರು ಸಹ ಪಾನ ನಿರೋಧವು ಮಾನ್ಯವಾದುದೆಂದೇ ಅಭಿಪ್ರಾಯಪಡುತ್ತಾರೆ. ಎಷ್ಟೋ ಜನರು ಕುಡಿಯುವುದಕ್ಕೆ ತಿಲಾಂಜಲಿಯನ್ನಿತ್ತುದರಿಂದ ಅವರಿಂದು ಮರ್ಯಾದೆಯಲ್ಲಿ ಜೀವನನಡೆಸುತ್ತಿದ್ದಾರೆ. ಅಶಕ್ತರಾಗಿರದೆ ದೇಹದಾರ್ಢ್ಯತೆಯುಳ್ಳವರಾಗಿದ್ದಾರೆ. ಇಡೀ ದೇಶದ ದೃಷ್ಟಿಯು ಮುಂಬಯಿಯತ್ತ ಬೀರಿದೆ. ಚಳವಳವು ಸಂಪೂರ್ಣ ಯಶಸ್ವಿಯಾಗಬೇಕಾದರೆ ನಿಮ್ಮೆಲ್ಲರ ಸಹಕಾರ ಸಹಾನುಭೂತಿ ಅತ್ಯಾವಶ್ಯಕವು. ನಿಮ್ಮಲ್ಲಿ ಪಾನತ್ಯಾಗದ ಬೀಜವು ಹಾಕಲ್ಪಟ್ಟಿದೆ. ಇದು ಮರವಾಗಿ ಫಲಬಿಡುವಂತೆಮಾಡುವುದು ನಿಮ್ಮೆಲ್ಲರ ಜವಾಬ್ದಾರಿ ಕೆಲಸವಿದೆ. ದಂಡಿಯ ಉಪ್ಪನ್ನು ತಿಂದ ನನ್ನಂತಹ ಹಣ್ಣು ಮುದುಕರಿಗೆ ಇಂತಹ ಉತ್ಸಾಹವಿರುವಾಗ ನಿಮ್ಮಂತಹ ಕುಶಲ ಯುವಕರಿಗೆಷ್ಟು ಉತ್ಸಾಹವಿರಬೇಕೆಂಬುದನ್ನು ಪ್ರತ್ಯೇಕ ಹೇಳಬೇಕೆ? ನೀವೆಲ್ಲರೂ ಮುಂಬಯಿ ಸರಕಾರದ ಈ ಚಳವಳವನ್ನು ಜಯಪ್ರದವಾಗುವಂತೆ ಮಾಡುವಿರೆಂದು ನನ್ನಲ್ಲಿ ಆತ್ಮವಿಶ್ವಾಸವಿದೆ. ನಿಯಮಿತ ಸಮಯದೊಳಗಾಗಿ ಈ ವಿಧಾಯಕ ಕಾರ್ಯಕ್ರಮವು ಸಂಪೂರ್ಣ ಜಯಪ್ರದವಾಗುವರೆ ಬರುವ ವರ್ಷವೇ ಕೇಂದ್ರ ಸರಕಾರದೊಡನೆ ಕಾಂಗ್ರೆಸ್ ಸರಕಾರವು ಮಿಲಿಟರಿ ಖಾತೆಯ ಖರ್ಚನ್ನು ಕಡಮೆಮಾಡಬೇಕು ಇಲ್ಲವಾದರೆ ಉತ್ಪತ್ತಿದಾಯಕವಾದ ಇನ್ಕಮ್ ಟೇಕ್ಸು ಅಥವಾ ಇತರ ಬಾಬುಗಳಲ್ಲಿ ಸಮಾನವಾದ ಪಾಲನ್ನು ಕೊಡಬೇಕೆಂದು ಹಟತೊಟ್ಟು ಕಾದಾಡಲು ಹಿಂದುಮುಂದು ನೋಡಲಾರದು."

ಕೊಚ್ಚಿಯ ಪ್ರಗತಿ

ಕೊಚ್ಚಿ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಭಾಷಣಮಾಡುತ್ತಾ ದಿವಾನ್ ಸರ್. ಷಣ್ಮುಖಂ ಚೆಟ್ಟಿಯಾರರು, ಅಲ್ಪ ತೀರ್ವೆ ಹೇರಿಸಲ್ಪಟ್ಟ ರಾಜ್ಯಗಳಲ್ಲಿ ಕೊಚ್ಚಿ ಸಂಸ್ಥಾನವೂ ಒಂದೆಂದು ಹೇಳಿ ಗ್ರಾಮ ಸುಧಾರಣೆಗಾಗಿ ಪ್ರತಿ ವರುಷ ಒಂದು ಲಕ್ಷಕೊಡಲಾಗುತ್ತದಲ್ಲದೆ ಖರ್ಚಿನ ಹಾದಿಗಳನ್ನು ಕಡಿಮೆಮಾಡಿರುವದರಿಂದ ಈ ವರುಷದ ಉಳಿತಾಯದ ಬಜೆಟನ್ನು ಮುಂದಿಡಲಾಗುವದೆಂದು ತಿಳಿಸಿದರು.

ತಬಾರಾ ಚಳವಳ

ಲಕ್ನೋವಿನ ಶಿಯಾ–ಸುನ್ನೀ ಜಗಳವು ಬಲಗುಂದಿರುವದಾದರೂ ಪೂರ್ತಿ ನಿರ್ನಾಮಹೊಂದಿಲ್ಲ. ತಾ. 20ರಲ್ಲಿ 54 ಶಿಯಾಗಳ ದಸ್ತಗಿರಿಯಾಗಿದೆ. 22ನೇ ತಾರೀಕಿಗೆ ಈ ತಬಾರಾ ಚಳವಳಿ ಪ್ರಾರಂಭವಾಗಿ 115 ದಿನಗಳಾದವು.

ತಿಲಕ ದಿನಾಚರಣೆ

ಬೊಂಬಾಯಿಯಲ್ಲಿ ಇದೇ ಆಗೋಸ್ತು ತಾ. 1ರಲ್ಲಿ ತಿಲಕ ದಿನಾಚರಣೆಯನ್ನು ಸಂಭ್ರಮದಿಂದ ನಡೆಸುವ ಏರ್ಪಾಡಾಗುತ್ತಿದೆ. ಅದೇ ದಿನ ಬೊಂಬಾಯಿ ಸರಕಾರದವರು ಬೊಂಬಾಯಿ ಪಟ್ಟಣ ಮತ್ತು ಸರಹದ್ದಿನಲ್ಲಿ ಪಾನನಿಷೇಧದ ಅನಾವರಣ ನಡೆಸಲಿರುವರು.

ಪೋಲೀಸ್ ಆಫೀಸರನ ಕೊಲೆ

ಡಾನ್ಜಿಗಿನ ಪೋಲಿಸ್ ಕಸ್ಟಮ್ಸ್ ಆಫೀಸರನಾಗಿದ್ದ ಬುಡ್ಜೀವಿಸ್ ಎಂಬವನನ್ನು ನಾಜೀ ಕಸ್ಟಮ್ಸ್ ಆಫೀಸರನು ಗುಂಡಿಕ್ಕಿ ಕೊಂದಿರುವನು. ಡಾನ್ಜಿಂಗ್ ಸಿನೆಟಿನವರು ಇವಕ್ಕಾಗಿ ಪೋಲೆಂಡಿಗೆ ಪಶ್ಚಾತ್ತಾಪ ಸೂಚಿಸಿರುವರು. ಪೋಲೆಂಡು ಈ ಕುರಿತು ಕಠಿಣ ಧೋರಣೆ ವಹಿಸಿ ಕೊಲೆಗಾರರಿಗೆ ನ್ಯಾಯವಾದ ಶಿಕ್ಷೆ ವಿಧಿಸಿ ಪ್ರಾಯಶ್ಚಿತ್ತ ಮಾಡದಿದ್ದಲ್ಲಿ ಕಸ್ಟಮ್ಸ್ ಆಫೀಸರರು ಸ್ವೇಚ್ಛೆಯಿಂದ ಆಯುಧ ಉಪಯೋಗಿಸುವ ಆಯವಜ್ಞೆನ್ನೀಯುವೆವೆಂದು ಎಚ್ಚರಿಸಿರುದು

ಮುಸಲ್ಮಾನರ ಅಸಮಾಧಾನ

ಈ ಸುಧಾರಣೆಯಿಂದ ಹೈದರಾಬಾದಿನ ಮುಸಲ್ಮಾನರು ಅಸಮಾಧಾನಗೊಂಡಿರುವರು. ಸಿಕಂದರಾಬಾದಿನಲ್ಲಿ ಸುಧಾರಣೆಯ ವಾರ್ತೆ ಬಂದೊಡನೆ ತಾ. 19ರಲ್ಲಿ ಮುಸಲ್ಮಾನರು ಹರತಾಳವಾಚರಿಸಿದರು.

ದೇವಸ್ಥಾನಾಧಿಕಾರಿಗಳ ರಕ್ಷಣಾ ಕಾನೂನು

ಮದ್ರಾಸು ಗವರ್ನರರು ಮಂತ್ರಿಮಂಡಲದ ಸೂಚನೆಯಂತೆ ತನ್ನ ವಿಶೇಷಾಧಿಕಾರದಿಂದ ಹೊಸ ಕಾನೂನೊಂದನ್ನು ಹೊರಡಿಸಿರುವರು. ಜನಮತವು ಅನುಕೂಲವಿದ್ದಲ್ಲಿ ಹಿಂದಿನ ಪದ್ಧತಿಗೆ ವಿರುದ್ಧವಾದರೂ ಹರಿಜನರನ್ನು ದೇವಾಲಯ ಪ್ರವೇಶಿಸಲು ಬಿಟ್ಟ ದೇವಸ್ಥಾನದ ಅಧಿಕಾರಿಗಳ ಮೇಲೆ ಯಾವ ದಾವೆಯನ್ನೂ ಮಾಡದಂತೆ ಈ ಕಾನೂನು ಆತಂಕಿಸುತ್ತದೆ. ಎಸೆಂಬ್ಲಿಯ ಸಭೆ ಸೇರದಿದ್ದಾಗ ಮಧುರೆಯ ದೇವಸ್ಥಾನ ಪ್ರವೇಶ ಬಿಟ್ಟ ಅಲ್ಲಿಯ ಚರ್ಜಿಕರೇ ಮೊದಲಾದವರ ಮೇಲೆ ಕೆಲವರು ದಾವೆ ಹೂಡಿದುದರಿಂದ ಅದನ್ನು ತಡೆಗಟ್ಟಲು ಈ ಕಾನೂನು ಬಂದುದಾಗಿದೆ. ಇದು ಮದ್ರಾಸು ಪ್ರಾಂತ್ಯಕ್ಕೆಲ್ಲಾ ಅನ್ವಯಿಸುವದು.

ಪುಟ ೧೧ರಿಂದ

ವಾಯಿದೆಯನ್ನು ಮಾನ್ಯ ನೈಜಾಮರು ಸೆಪ್ಟೆಂಬರ ಒಂದರ ವರೆಗೆ ಮುಂದುವರಿಸಿರುವದು ಬ್ರಿಟಿಷರ ಚಾಣಾಕ್ಷತೆಯ ಒಂದು ಮಾದರಿಯೆನ್ನಬೇಕು. ಬೊಂಬಾಯಿಯಲ್ಲಿ ಸೇರಿದ್ದ ಭಾರತ ನರೇಂದ್ರರ ಪರಿಷತ್ತು ಫೆಡರೇಶನಿನ ಶರ್ತಗಳು ತೃಪ್ತಿಕರವಾಗಿಲ್ಲವೆಂಬ ಕಾರಣದಿಂದ ಅವನ್ನು ನಿರಾಕರಿಸುವ ನಿರ್ಣಯ ಮಾಡಿತು. ಆ ಮೇಲೆ ಹಿಂದೀ ನರೇಂದ್ರರಲ್ಲಿ ಭಿನ್ನಾಭಿಪ್ರಾಯಗಳು ತೋರಲಾರಂಭಿಸಿ ಹೆಚ್ಚಿನ ಆಶ್ರಿತರಾಜರು ಫೆಡರೇಶನಿಗೆ ಸಮ್ಮತಿಸಿರುವರೆಂದೂ ತಿಳಿದು ಬಂತು.

ಬೊಂಬಾಯಿ ನಿರ್ಣಯವು ಪೂರ್ತಿ ಸಡಿಲಾಗಿ ನರೇಂದ್ರರಾದರೂ ಆದರ ಕಡೆಗೆ ನಿಷ್ಠೆಯಿಂದಿಲ್ಲವೆಂಬುದಂತೂ ಸ್ವತಃ ಸಿದ್ಧ. ನರೇಂದ್ರರ ಬೇಡಿಕೆಗುತ್ತರವಾಗಿ ಬ್ರಿಟಿಷ್ ಸರಕಾರವು ಹೆಚ್ಚಿನ ರಿಯಾಯತಿಯನ್ನೀಯಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದುದೇ ನರೇಂದ್ರರ ಮತಾಂತರಕ್ಕೆ ಕಾರಣವೆನ್ನಬಹುದು. ಆಶ್ರಿತ ರಾಜರುಗಳಿಂದು ಫೆಡರೇಶನ್ ಧೋರಣೆಯ ಮಟ್ಟಿಗೆ ಚಲ್ಲಾಪಿಲ್ಲಿಯಾಗಿರುವಂತೆ ತೋರುತ್ತದೆ. ಅವರೊಂದು ನೆಲೆಸೇರುವಾಗ ಫೆಡರೇಶನಿಗನುಕೂಲವಾಗಿ ನಿಲ್ಲುವರೆಂದು ಊಹಿಸಲೂ ಆಪ್ಪವಿಲ್ಲ. ಇದನ್ನರಿತೇ ಮಾನ್ಯ ನೈಜಾಮರು ಅವರಿಗೆ ಸರಿಯಾಗಿ ನಿಲ್ಲಲು ಬೇಕಾಗುವಷ್ಟು ಸಮಯವನ್ನು ದಯಪಾಲಿಸಿರುವರೆನ್ನಬಹುದು. ಇದೀಗ ಬ್ರಿಟಿಷರ ಚಾತುರ್ಯ!

When God Adopts Manhood?

Truthfullness is all powerful and it is Heavenly peace to all souls. **Who says** that man is helpless? Who says that man cannot fulfill his wishes? Who beleives anything impossible on this earth? Those who are tired of life. Those who have ill luck. Those who are downhearted are wellcome What are your wishes that you cannot fulfilling? What diserious is there which cannot be cured? What is it that you cannot do? **Look, Open your eyes** and see Gods powers are present in mankind. A pious spiritualist shows you Heavenly Astrological wonders, releives you of all kinds of diseases, and removes all difficulties in fulfilling your diserious in life. With all powerful truthfullness he brings you Heavenly peace and prosperity. The success of great man like Mahathma Gandhi, Hittler Napolean will be explained, and men will be shown their way to salvation within 24 hours. Truth is all powerful and it is Heavenly bless A man can do wonders with, if he is true in heart and soul. If you want to do this, come, Hindoo, Muslims, Parsis and all others will be given advise, how to remove all difficulties in life with spiritualism. On consulting this wonderfulman, you will have some idea about the real powers of nature, and nature itself.

N. B. : (For 3 questions Rs. 2 only.)
Money to be sent by post or parsonaly

Address: SPIRITUAL SPART
First Floor'
Mahakali Mandir Chawl
PYDHONY, BOMBAY

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ 24-7-39

"ರಾಷ್ಟ್ರೀಯ ಹೋರಾಟದಲ್ಲಿ ವಿದ್ಯಾರ್ಥಿಗಳ ಭಾಗ—"ದೇಶ್ಮಸೇವೆಯನ್ನು ನಮ್ಮ ವಿದ್ಯಾರ್ಥಿಗಳು ದ ಸ್ವಪ್ರೇರಣೆಯಿಂದಾಗಿಯೂ, ತ್ಯಾಗ ಬುದ್ಧಿಯಿಂದಲೂ ಮಾಡಿರುವರು. ದೇಶಸೇವೆಮಾಡುವ ವಿಷಯದಲ್ಲಿ ನಮ್ಮ ವಿದ್ಯಾರ್ಥಿಗಳು ಇತರ ಯಾವ ಜನಾಂಗದ ವಿದ್ಯಾರ್ಥಿಗಳಿಗೂ ಹಿಂದುಳಿದಿಲ್ಲ. ಇನ್ನು ಹೆಚ್ಚಿನ ಕೆಲಸಮಾಡದಿದ್ದರೆ ಅವಕ್ಕೆ ಸಂದರ್ಭ ದೊರಕದಿರುವದೇ ಕಾರಣವಲ್ಲದೆ, ಬೇರೆಯಲ್ಲ" ಎಂಬುದಾಗಿ ಶ್ರೀ. ಕೆ. ಕೃಷ್ಣರಾಯರು ದ. ಕ. ಜಿಲ್ಲಾದ ವಿದ್ಯಾರ್ಥಿ ಭವನದ ಸಂಘದ ಪ್ರಥಮ ಸಭೆಯ ಆರಂಭೋತ್ಸವವನ್ನು ನೆರವೇರಿಸುತ್ತಾ ಹೇಳಿದರು. ಶ್ರೀ. ಬಿ. ಎಸ್. ಭಾಸ್ಕರ ರೈಗಳು ಅಧ್ಯಕ್ಷತೆ ವಹಿಸಿದ್ದರು. ಭಾಷಣಕರ್ತರು ಮೇಲಿನ ವಿಷಯವನ್ನೆತ್ತಿಕೊಂಡು ಹಿಂದಿನ ಮತ್ತು ಇಂದಿನ ವಿದ್ಯಾರ್ಥಿಗಳು, ಇತರ ದೇಶಗಳ ವಿದ್ಯಾರ್ಥಿಗಳು, ದೇಶದ ಸ್ವಾತಂತ್ರ್ಯ ಚಳವಳದಲ್ಲಿ ವಿದ್ಯಾರ್ಥಿಗಳು ವಹಿಸಿದ ಭಾಗ ಮೊದಲಾದುವನ್ನು ವಿವರಿಸಿದರು. ಕೊನೆಯದಾಗಿ ದೇಶಸೇವೆಮಾಡುವುದು ಎಷ್ಟು ಮುಖ್ಯವೋ ಅಷ್ಟೇ ಮುಂದಿನ ಜೀವನೋಪಾಯದ ಮಾರ್ಗವನ್ನು ಹುಡುಕಿಕೊಳ್ಳುವುದೂ ಮುಖ್ಯವೆಂದೂ ಈ ಕಡೆಗೆ ವಿದ್ಯಾರ್ಥಿಗಳು ಲಕ್ಷ್ಯ ಕೊಡದಿರಬಾರದೆಂದೂ ಒತ್ತಿ ಹೇಳಿದರು. ಅಧ್ಯಕ್ಷರ ಸಮಯೋಚಿತ ಭಾಷಣ, ಕಾರ್ಯದರ್ಶಿಗಳ ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕೆ ತಡೆಯಾಗುವುದು—ನಿನ್ನೆಯದಿನ ಸಾಯಂಕಾಲ ಕದ್ರಿ ವಿದ್ಯಾಬೋಧಿನಿಶಾಲೆಯಲ್ಲಿ ಹಿಂದುಳಿದ ಹಿಂದೂ ವರ್ಗಗಳ ಪ್ರತಿನಿಧಿಗಳ ಸಭೆಯು ಮಿ. ಜೈನ್ನು ಸಾಲ್ಡಾನ ಯಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ಯು. ಗೋಪಾಲನ್ಯಾಕರು ಸಭೆಕರೆಸಿದ ಉದ್ದೇಶವನ್ನು ವಿವರಿಸುತ್ತಾ ಈಚೆಗೆ ಬಂದ ಸರಕಾರಿ ಹುಕುಮು, ಹಿಂದುಳಿದ ವರ್ಗದವರಿಗೆ ಬಹಳ ಕೇಡುಕುಮಾಡುವುದೆಂದೂ, ಒಂದು ವರ್ಷ ಫೈಲಾದ ಮಕ್ಕಳಿಗೆ ಅರ್ಧಫೀಸು ಇದ್ದುದನ್ನು ಸಲ್ಲಿಸಿ ಅವರು ಪೂರ್ಣ ಫೀಸುಕೊಡಬೇಕಾಗುವುದು. ವಿದ್ಯಾಭ್ಯಾಸವನ್ನು ಪಡೆಯಲು ಕಷ್ಟವಾಗಿರುವವರು ಅಧಿಕ ಫೀಸು ಕೊಟ್ಟು ಕಲಿಯಲು ಸಾಧ್ಯವೇ ಇಲ್ಲ. ಇಡೀ ಫೀಸು ಕೊಡಲಾರದೆ ಆ ಮಕ್ಕಳು ಶಾಲೆಯನ್ನೇ ಬಿಡಬೇಕಾಗುವ ಸಂಭವ ಬರಬಹುದು. ಆದ್ದರಿಂದ ಸರಕಾರದವರು ಮೊದಲಿದ್ದ ನಿಯಮವನ್ನೇ ಅನುಸರಿಸಬೇಕಲ್ಲದೆ ಹೊಸ ನಿಯಮವನ್ನು ಜಾರಿಮಾಡಬಾರದು ಎಂದು ಹೇಳಿದರು.

ರಾವ್ ಬಹದ್ದೂರು ಎನ್. ಎಸ್. ಸುವರ್ಣರು ಭಾಷಣಮಾಡುತ್ತ, ಪ್ರತ್ಯೇಕದ ನಿಯಮದಿಂದ ಬಹಳ ಕೆಡ್ಡದಾಗುವುದಿಲ್ಲವಾದರೂ, ಅದನ್ನು ಬದಲಾವಣೆ ಹಿತದೃಷ್ಟಿಯಿಂದ ಸರಕಾರಕ್ಕೆ ಮನವಿಮಾಡಿಕೊಳ್ಳಬಹುದೆಂದೂ ಮುಖ್ಯವಾಗಿ ಹಿಂದುಳಿದವರ ಎಲ್ಲ ಕೇಳಿಕೆಗಳನ್ನು ಸರಕಾರದ ಮುಂದಿರಿಸುವುದಕ್ಕೆ ಎಲ್ಲಾ ಹಿಂದುಳಿದ ವರ್ಗಗಳವರ ಒಂದು ಸಂಘ ಏರ್ಪಡಬೇಕೆಂದೂ ಸೂಚಿಸಿದರು. ಅನಂತರ ಮೇಲಿನ ಠರಾವು ಮಂಜೂರಾಗಿ, ಹಿಂದುಳಿದ ವರ್ಗಗಳವರ ಒಂದು ಸಂಘವೂ ಸ್ಥಾಪಿತವಾಯಿತು. ಅಧ್ಯಕ್ಷರು ಹಿಂದುಳಿದವರ ಸಂಕಷ್ಟಗಳ ನಿವಾರಣೆಯ ಬಗ್ಗೆ ತಮ್ಮಿಂದಾಗುವ ಸಹಾಯವನ್ನು ಮಾಡಲು ತಾವು ಸಿದ್ಧರಿದ್ದೇವೆಂದು ಹೇಳಿದರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ರಜೆ—ನಮ್ಮ ಜಿಲ್ಲಾ ಕಲೆಕ್ಟರರಾದ ದಿವಾನ್ ಬಹದ್ದೂರ್ ಎಂ. ವಿ. ವೆಲ್ಲೋಡಿಯವರಿಗೆ ಅಗೋಸ್ತು ತಾ. ೧೦ರಿಂದ ದಶಂಬರ ತಾ. ೩೧ರ ವರೆಗೆ ಅಂದರೆ ಅವರು ತಮ್ಮ ಹುದ್ದೆಯಿಂದ ನಿವೃತ್ತಿ ಹೊಂದುವ ತನಕ ೪ ತಿಂಗಳು ೨೨ದಿನಗಳ ರಜೆಯು ಸರಕಾರದವರಿಂದ ಮಂಜೂರಾಗಿರುತ್ತದೆ.

ಹುದ್ದೆಯಲ್ಲಿ ಉನ್ನತಿ— ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರಾಗಿದ್ದ ಶ್ರೀ. ಎಂ. ಎಸ್. ಜಗನ್ನಾಯಕುಲು ನಾಯ್ಡು ಯವರು ಈಸ್ಟ್ ಗೋದಾವರಿಯ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿ ನೇಮಿಸಲ್ಪಟ್ಟುದರಿಂದ ರಜೆಯ ಮೇಲಿದ್ದ ಹುಜೂರು ಶಿರಸ್ತೇದಾರರಾದ ಶ್ರೀ. ಯು. ಕುಮಾರಯ್ಯ ಬಿ. ಎ.ಯವರು ಅವರ ಸ್ಥಾನಕ್ಕೆ ನೇಮಿಸಲ್ಪಟ್ಟಿದ್ದು ತಾ. ೧೪ರಲ್ಲು ಅವರು ಚಾರ್ಜು ವಹಿಸಿಕೊಂಡಿರುವರು.

ಹೊಸ ಕಮರ್ಶಿಯಲ್ ಟ್ಯಾಕ್ಸ್ ಆಫೀಸರುಗಳು—ಮಾಜಲೀ ಪಟ್ಟಣದಲ್ಲಿ ಅಸ್ಸಿಸ್ಟೆಂಟ್ ಇನ್‌ಸ್ಪೆಕ್ಟರರಾಗಿದ್ದ ಶ್ರೀ. ಸವೂರು ಶಂಕರರಾಯರವರು ಈ ಜಿಲ್ಲೆಯ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿ ನೇಮಕಹೊಂದಿದ್ದು ತಾ. 19ರಲ್ಲು ಚಾರ್ಜು ವಹಿಸಿಕೊಂಡಿರುವರು. ಇವರ ಕೈಕೆಳಗೆ ಈ ಕೆಳಗಣ ಸಿಬ್ಬಂದಿಯು ನೇಮಕವಾಗಿದೆ.

ಶ್ರೀ. ಜಿ. ಎಸ್. ಸುವರ್ಣನವರು ಡಿಪ್ಯೂಟಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿ ನೇಮಕಹೊಂದಿದ್ದು ಇವರ ಆಫೀಸು ಮಂಗಳೂರಿನಲ್ಲಿಯೇ ಇರುತ್ತದೆ.

ಶ್ರೀ ಗಳಾದ ಎಸ್. ಯು. ಪಿ ನಾಯಕ್ (ಮಂಗಳೂರು), ಪಿ. ಎಸ್. ತಿಮ್ಮಪ್ಪಶೆಟ್ಟಿ (ಕಾಸರಗೋಡ.), ಯು. ಪಳ್ಳಿ ಬ್ಯಾರಿ (ಪುತ್ತೂರು), ಕೆ. ಜನಾರ್ದನ ಶೆಟ್ಟಿ (ಕಾರ್ಕಳ), ಎಚ್. ಸುಂದರರಾವ (ಉಡುಪಿ ಮತ್ತು ಕುಂದಾಪುರ) ಇವರುಗಳು, ಅವರವರ ಹೆಸರುಗಳ ಜೊತೆಯಲ್ಲಿ ನಮೂದಿಸಿರುವ ತಾಲೂಕುಗಳ ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರುಗಳಾಗಿ ನೇಮಕಹೊಂದಿರುವರು.

ರೆವಿನ್ಯೂ ಖಾತೆಯ ವರ್ಗಾವರ್ಗಿಗಳು—ಶ್ರೀ. ಬಿ. ಗಣಪತಿ ಬಿ. ಎ.ಯವರು ಹುಜೂರು ಶಿರಸ್ತೇದಾರರಾಗಿಯೂ, ಶ್ರೀ. ಯು. ಜನಾರ್ದನ ಬಿ. ಎ.ಯವರು ಉಡುಪಿ ತಹಶೀಲ್ದಾರರಾಗಿಯೂ, ಶ್ರೀ. ಎ. ಸದಾನಂದ ಶೈ, ಬಿ. ಎ.ಯವರು ಹೊಸದುರ್ಗ ಡೆಪ್ಯುಟಿ ತಹಶೀಲ್ದಾರರಾಗಿಯೂ, ಶ್ರೀ. ಎಚ್. ನರಸಿಂಹ, ಮಿ. ಎಫ್. ಎಂ. ಪಿಂಟೋ, ಶ್ರೀ. ಪಿ. ದೇವರಾವ್ ಮತ್ತು ಶ್ರೀ. ಪಿ. ವೆಂಕಟ್ರಾವ್ ಇವರುಗಳು ಕ್ರಮವಾಗಿ ಪುತ್ತೂರು, ಉಡುಪಿ, ಮಂಗಳೂರು ಮತ್ತು ಕಾಸರಗೋಡಿನ ಸ್ಪೇಶಲ್ ಸಬ್ ಮೆಜಿಸ್ಟ್ರೇಟರುಗಳಾಗಿಯೂ, ಶ್ರೀ. ಪಿ. ಸೀತಾರಾಮ ಶೆಟ್ಟಿಯವರು ಬೆಳ್ತಂಗಡಿ ಡೆಪ್ಯುಟಿ ತಹಸಿಲ್ದಾರರಾಗಿಯೂ, ಮಿ. ಬಿ. ಜೆ. ಪಿಂಟೋ ಬಿ. ಎ. ಯವರು ಡಿಸ್ಟ್ರಿಕ್ಟ್ ಲೇಬರ್ ಆಫೀಸರರಾಗಿಯೂ, ಶ್ರೀ. ಯು. ಬಿ. ಗೋಪಾಲಕೃಷ್ಣ ರಾವ್ ಬಿ. ಎ. ಯವರು ಹುಜೂರು ಹೆಡ್ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ದಕ್ಷಿಣ ಕನ್ನಡ

ಇನ್ನಂಜೆ—ಶ್ರೀ ವಿಷ್ಣುಮೂರ್ತಿ ಸ್ವಾಮಿ ಗ್ರಾಮಾಭಿವೃದ್ಧಿ ಸಂಘದವರು ನಡೆಸಿಕೊಂಡು ಬರುತ್ತಿರುವ ಶ್ರೀವಿಷ್ಣುಮೂರ್ತಿ ಎಲಿಮೆಂಟರಿ ಶಾಲೆಯು ಉತ್ತಮರೀತಿಯಲ್ಲಿ ನಡೆಯುತ್ತಿರುವುದು. ಮಕ್ಕಳ ಸಂಖ್ಯೆಯು ತುಂಬಾ ಏರಿರುವುದು. ಉಪಾಧ್ಯಾಯರು ಹೊಸ ಹುರುಪಿನಿಂದ ಕೆಲಸಮಾಡುತ್ತಿರುವರು. ಗ್ರಾಮಸ್ಥರು ಶಾಲೆಯ ಏಳಿಗೆಗೆ ತುಂಬಾ ನೆರವಾಗುತ್ತಿರುವರು. ಆದಷ್ಟು ಬೇಗನೆ ಈ ಶಾಲೆಯು ಹಾಯರ್ ಎಲಿಮೆಂಟರಿ ಶಾಲೆಯಾಗಬೇಕೆಂದು ಊರವರು ಪ್ರಯತ್ನಿಸುತ್ತಿರುವರು

ಮೇಲಿನ ಗ್ರಾಮಾಭಿವೃದ್ಧಿ ಸಂಘದವರು ಬಡ ಗ್ರಾಮಸ್ಥರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿಯನ್ನು ಮಾರಿಕೊಡುವ ವ್ಯವಸ್ಥೆ ಕೂಡ ಮಾಡಿರುವರು. ಇದರ ಉಪಯೋಗವನ್ನು ಹಲವರು ಪಡೆಯುತ್ತಿರುವರು ಈ ಸಂಘವು ಸೆಪ್ಟೆಂಬರದೊಳಗಾಗಿ ರಿಜಿಸ್ಟರಾಗಲಿರುವುದೆಂದು ತಿಳಿದುಬರುತ್ತದೆ. ಅಂತೂ ಯಾವತರದ ವಿಧಾನಗಳಿಂದ ಗ್ರಾಮಾಭಿವೃದ್ಧಿಗಾಗಿ ದುಡಿಯುತ್ತಿರುವ ಸಂಘದ ಮೆಂಬರು, ಮುಖ್ಯವಾಗಿ ಬಾಲಕರ ಉದ್ಯಮವು ಅಭಿನಂದನೀಯವಿದೆ. ಈ ಮಾದರಿಯನ್ನು ಇತರ ಗ್ರಾಮದವರೂ ಅನುಸರಿಸುವರೇ?

ಬೈಂದೂರು—ಇಲ್ಲಿಂದ ಕೊಲ್ಲೂರಿಗಾಗಿ ಬೆಸ್ತ್ಕಕ್ಕೆ ಹೋಗುವ ಭಟ್ಕಳದ ಜನಾಬ್ ಕಾಸಿಮ್ ಸಾಹೇಬರ ಬಸ್ಸು ಸರ್ವೀಸು ಕಳೆದ ಸುಮಾರು ಒಂದು ತಿಂಗಳಿನಿಂದ, ಕೀರೂರು ಸಂಕದ ಕೆಡುಕಿದರೆಸಯಿಂದ, ನಿಂತುಹೋಗಿರುವುದಾಗಿ ಪ್ರಯಾಣಿಕರ ಅನಾನುಕೂಲತೆಯನ್ನು ತಿಳಿದು ತಾ. 17-7-39ರಿಂದ ಉಡುಪಿಯ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯವರು ತಮ್ಮ ಸರ್ವೀಸನ್ನು ತೆರೆದಿರುವದು ಸ್ತುತ್ಯವಾಗಿದೆ.

ಸ್ಥಳೀಯ ಪ್ರಾಥಮಿಕ ಶಾಲೆಯ 4ನೇ ತರಗತಿಯನ್ನು ಆರಂಭಿಸುವರೇ ಜಿಲ್ಲಾ ಬೋರ್ಡು ಅಧ್ಯಕ್ಷರಿಂದ ಅನುಮತಿ ದೊರಕಿದೆ.

ಇಲ್ಲಿಯ ಶಯನೇಶ್ವರ ದೇವಸ್ಥಾನದ ಬಳಿ ಇರುವ ದೇವಾಡಿಗ ಜಾತಿಯ ದೋಬ ಮಂಜನೆಂಬ ಪ್ರಾಯಸ್ಥನೊಬ್ಬನು ಬಾವಿಗೆ ಹಾರಿ ಪ್ರಾಣಹತ್ಯ ಮಾಡಿಕೊಂಡನೆಂದೂ ಬಹಳ ಬಡತನ ಮತ್ತು ಬಹಳ ಕಾಲದ ಕರಿಣ ತರದ ಒಂದು ರೋಗವು ಅದಕ್ಕೆ ಕಾರಣವೆಂದೂ ತಿಳಿದು ಬರುತ್ತದೆ.

ಸ್ಥಳೀಯ ಪಂಚಾಯತಿ ಬೋರ್ಡು ಸದಸ್ಯರಾದ ಶ್ರೀ ಉಪ್ಪೂರ್ ಪಾಂಡುರಂಗ ರಾಯರು ಕೆಲವು ಸಮಯದಿಂದೀಚೆ Cancer ಎಂಬ ರೋಗ ಚಿಕಿತ್ಸೆಗಾಗಿ ಮುಂಬಯಿಗೆ ಹೋದವರು ಇದೇ ತಾ. 18ನೇ ಮಂಗಳವಾರ ರಾತ್ರಿ ಅಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತಿದೆ. ಮೃತರು ಉದಾರಿಗಳೂ, ಸರಳ ಸ್ವಭಾವದವರೂ, ನಿಗರ್ವಿಯೂ ಪರೋಪಕಾರಿಯೂ ಆಗಿದ್ದು ದೊಡ್ಡ ಸಾರಸ್ವತ ಮನೆತನಕ್ಕೆ ಸೇರಿದ ಅಚ್ಚ ಜಮೀನ್ದಾರರಾಗಿದ್ದರು.

ಕಡೇಕಾರು—ತಾ. 16-7-39ನೇ ಅಪರಾಹ್ನ ಘಂಟೆ ೭ಕ್ಕೆ ಡಿ. ಬೋ. ಮೆಂಬರರಾದ ಡಾ. ಪಿ. ಡಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಕಡೇಕಾರು ಬೋರ್ಡು ಶಾಲೆಯ ಪ್ರಥಮ ವಾರ್ಷಿಕ ವರ್ಧಂತ್ಯುತ್ಸವವು ಜರಗಿತು. ಈ ಸಮಾರಂಭಕ್ಕೆ ಊರ ಮಹನೀಯರೆಲ್ಲರೂ ನೆರೆದುದಲ್ಲದೆ ಉಡುಪಿಯಿಂದ ಕೂಡಾ ಮಹಾನುಭಾವರು ದಯಮಾಡಿದ್ದರು. ಕ್ರಮದಂತೆ ಶಾಲಾ ವರದಿವಾಚನ ಶಾಲಾ ಮಕ್ಕಳಿಗೆ ಇನಾಮು ಹಂಚೋಣ, ಸಭಿಕರ ಭಾಷಣವಾದ ಬಳಿಕ ಅಧ್ಯಕ್ಷರು ಶಾಲಾಭಿವೃದ್ಧಿಯ ಕುರಿತು ಸುರಸವಾದ ಭಾಷಣಮಾಡಿದರು. ಅನಂತರ ಶಾಲಾಮಕ್ಕಳು 'ಸಾವಿತ್ರಿ ಸತ್ಯವಾನ'ವೆಂಬ ಸಂಗೀತ ನಾಟಕ, ದಕ್ಷಿಣಕನ್ನಡ ಜಿಲ್ಲೆಯ ಸೌಂದರ್ಯ ಸ್ಪರ್ಧೆಯೆಂಬ ವಚನನಾಟಕ, ಮತ್ತು ಹಲವು ವಿನೋದಾವಳಿಗಳಿಂದ ಸಭಿಕರನ್ನು ಆನಂದಗೊಳಿಸಿದರು. ರಾತ್ರಿ ಕಣಂಜಾರು ಪಟೇಲರಾದ ಶ್ರೀ. ಚಂದಯ್ಯ ಹೆಗ್ಗಡೆಯವರು ಪ್ರಹ್ಲಾದ ಚರಿತ್ರೆ ಹರಿಕೀರ್ತನೆ ಮಾಡಿ ಸಭಿಕರನ್ನು ಸಂತೋಷಗೊಳಿಸಿದರು. ಶಾಲೆಯ ಏಳಿಗೆಗಾಗಿ ಶ್ರೀಗಳಾದ ಕೆ. ಮಹಾಬಲ ಶೆಟ್ಟಿ (ಹೆಡ್ಮಾಸ್ಟರ್) ಶ್ರೀ ಸುಬ್ರಾಯ ಭಟ್ (ಪಿಡ್ಮಾನ್) ಇವರು ಪಡುವ ಶ್ರಮವು ಅಭಿನಂದನೀಯವಿದೆ.

ಕುಂದಾಪುರ—ಇಲ್ಲಿಯ ಡಾಕ್ಟರರಾದ ಶ್ರೀ. ಪೈ ಆರ್. ಶೆಟ್ಟಿ, ಎಂ. ಬಿ. & ಬಿ. ಎಸ್. ಇವರು ಸ್ಥಳೀಯ ಸರಕಾರಿ ಆಸ್ಪತ್ರೆಯ ಓವರಿ ಸರ್ಜನರಾಗಿ ನೇಮಕಹೊಂದಿರುವುದು ಸಂತೋಷಕರವಿದೆ. ಶ್ರೀಯುತರು ಇತ್ತೀಚೆಗೆ ಪ್ರಾಕ್ಟೀಸು ಆರಂಭಿಸಿದರಾದರೂ ತನ್ನ ಸರಳ ವರ್ತನೆ, ಶಾಂತ ಸ್ವಭಾವಾದಿಗಳಿಂದ ಈಗಾಗಲೇ ಜನಪ್ರೀತರಾಗಿದ್ದಾರೆ. ಇವರು ತನ್ನ ಉದ್ಯೋಗದಲ್ಲಿ ತುಂಬಾ ಯಶಸ್ಸು ಪಡೆಯುವರೆಂದು ನಿರೀಕ್ಷಿಸಲಾಗಿದೆ ಎಂತ ವಾರ್ತೆ.

ಉಡುಪಿ

ನಗರ ಸಭೆ—ಉಡುಪಿ ನಗರ ಸಭೆಯ ಸಾಮಾನ್ಯ ಮೀಟಿಂಗು ತಾ. 24-7-3೯ನೇ ಸಂಜೆ ಚೆಯರ್ ಮೇನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ಎಕ್ಸಾಂಜ್ ಎಪ್ರಾಸಿರಿ ಕಮಿಟಿಗೆ ಶ್ರೀ. ರಾಮಚಂದ್ರನವರನ್ನು ಒಮ್ಮತದಿಂದ ಆರಿಸಲಾಯಿತು. ವಕೀಲ್ ಶ್ರೀ. ವಿಠಲದಾಮತರು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಕಟ್ಟಿಸಿಕೊಟ್ಟ ಬಿಡರ್ ಮತ್ತು ಸ್ಟಾಂಡನ್ನು ಧನ್ಯವಾದ ಪೂರ್ವಕವಾಗಿ ಸ್ವೀಕರಿಸಲಾಯಿತು. ಮುನಿಸಿಪಲ್ ಗರ್ಲ್ಸ್ ಶಾಲೆಯಲ್ಲಿ ನೂಲುವುದನ್ನು ಆರಂಭಿಸಬಹುದೆಂದಾಯಿತು. ಸೆನಿಟರಿ ಬಂಡಿಗಳನ್ನು ಕೊಂಡುಕೊಳ್ಳುವರೆ ರೂ. 420 ಮತ್ತಿತರ ಉಪಕರಣಗಳಿಗೆ ರೂ. 125 ಸಂಕ್ಷನ್‌ಮಾಡಲಾಯಿತು. ಹಲವು ಸರಕಾರಿ ಆರ್ಡರುಗಳು ರಿಕಾರ್ಡುಮಾಡಲಾದುವು.

ಎಯಿಡೆಡ್ ಶಾಲಾ ಮಾಸ್ತರುಗಳ ಮಹಾಸಭೆ—ಉಡುಪಿ ತಾಲೂಕಿನ ಎಯಿಡೆಡ್ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಮಹಾ ಸಭೆಯು ತಾ. 29-7-39ನೇ ಶನಿವಾರ ಮಧ್ಯಾಹ್ನ ಕಾಡಬೆಟ್ಟು ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದು. ಅಂದು ಟೀಚರ್ಸ್ ಯೂನಿಯನ್ ಸ್ಥಾಪನೆಯಾಗಲಿರುವುದು.

ನಮ್ಮಲ್ಲಿ ಸಿಗುವ **ಹೊಸ** ಪುಸ್ತಕಗಳು

ಹತ್ತು ಕತೆಗಳು (ಕರ್ನಾಟಕದ ಹತ್ತು ಪ್ರಸಿದ್ಧ ಕತೆಗಾರರಿಂದ)	೦ ೬ ೦
ನಟಿ (ಕೆ. ಗೋಪಾಲಕೃಷ್ಣಯ್ಯರ ೯ ಸಣ್ಣ ಕತೆಗಳು)	೦ ೬ ೦
ಪರಾಗ (ವಿವಿಧ ಕನ್ನಡ ಕವಿಗಳ ಕವನಸಂಗ್ರಹ)	೦ ೬ ೦
ಕಾಶ್ಮೀರ ಪ್ರವಾಸ (ಗುರುನಾಥ ಜೋಶಿ)	೦ ೬ ೦
ನಡುಮನೆಯಲ್ಲಿ (ಎಸ್. ಕೆ. ಕುಲಕರ್ಣಿಯವರ ೮ ಏಕಾಂಕ ನಾಟಕಗಳು)	೦ ೬ ೦
ಚಂದ್ರನಾಥ (ಶರತ್‌ಚಂದ್ರ ಚಟರ್ಜಿಯವರ ಕಾದಂಬರಿಯ ಅನುವಾದ)	೦ ೬ ೦
ಭಾವಪ್ರಭಾತ (ಹ. ಪಿ. ಜೋಶಿಯವರ ೧೪ ಸಣ್ಣ ಕತೆಗಳು)	೦ ೬ ೦
ನರಕದಲ್ಲಿ ನರಸಿಂಹ (ಶ್ರೀರಂಗರ ನಾಟಕ)	೦ ೬ ೦
ಅದ್ಭುತ ರಮ್ಯ ಕತೆಗಳು (ಗ್ರೀಕ್ ಪುರಾಣದಿಂದ)	೦ ೧೨ ೦
ಬಣ್ಣದ ಬೀಸಣಿಗೆ (ಅ. ನ. ಕೃಷ್ಣರಾಯರ ೭ ಏಕಾಂಕ ನಾಟಕಗಳು.)	೦ ೧೨ ೦

ಪ್ರೇಮ ಪ್ರಕಟನಾಲಯದ ಅತ್ಯುತ್ತಮ ಪುಸ್ತಕಗಳಿವು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮದ್ರಾಸು ಹೊಗೆಸೊಪ್ಪಿನ ಕಾನೂನು

ತೆರಿಗೆ ಹೊರಿಸಲ್ಪಡುವ ವಿಧಾನಗಳು.

ಹೊಗೆಸೊಪ್ಪಿನ ವ್ಯಾಪಾರಿಗಳು ಗಮನಿಸತಕ್ಕ ಮುಖ್ಯಾಂಶಗಳು.

ಪಬ್ಲಿಕ್ ಇನ್‌ಫರ್ಮೇಷನ್ (ಪ್ರಕಟಣಾ ಖಾತೆಯ) ಮಂತ್ರಿಯವರು ಈ ಕೆಳಗಣ ಪ್ರಕಟಣೆಯನ್ನು ಹೊರಡಿಸಿರುತ್ತಾರೆ:

ಇತ್ತೀಚೆಗೆ ಕಾನೂನಾಗಿ ಏರ್ಪಟ್ಟಿರುವ 1939ನೇ ಇಸವಿಯ ಮದ್ರಾಸ್ ಹೊಗೆಸೊಪ್ಪಿನ (ಮಾರಾಟಗಳ ಮೇಲೆ ತೆರಿಗೆ ಹೊರಿಸುವ ಮತ್ತು ಅವುಗಳ ಬಗ್ಗೆ ಲೈಸೆನ್ಸು ಕೊಡುವ ಕುರಿತು) ಆಕ್ಟಿನಲ್ಲಿ ಕಲೆಕ್ಟರಿಂದ ಕೊಡಲ್ಪಟ್ಟ ಒಂದು ಲೈಸೆನ್ಸಿನ ಮೇರೆಗೆ ವಿನಾ ಯಾವನಾದರೂ ಮನುಷ್ಯನು, ಯಾವುದಾದರೂ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಚಿಲ್ಲರೆಯಾಗಿ ಮಾರಾಟ ಮಾಡಲು ಅಥವಾ ಯಾವುದಾದರೂ ನಮೂನೆಯ ಹೊಗೆಸೊಪ್ಪನ್ನು ರಖಮಾಗಿ ಮಾರಾಟಮಾಡಲು ಯಾ ಅನ್ಯಥಾ ಒಬ್ಬ ರಖಮ್ ವ್ಯಾಪಾರಿಯಾಗಿ, ತಯಾರಿಸುವವನಾಗಿ, ದಲಾಲಿಯಾಗಿ ಯಾ ಕಮಿಶನ್ ಏಜಂಟನಾಗಿ ಹೊಗೆಸೊಪ್ಪಿನ ವ್ಯಾಪಾರವನ್ನು ನಡೆಸಲು ತಕ್ಕುದಲ್ಲವೆಂದು ನಿಬಂಧಿಸೋಣಾಗಿದೆ ಒಂದು ಕ್ಲಬ್ಬಿನವರು ಅವರ ಮೆಂಬರುಗಳಿಗೆ ಇಲ್ಲವೇ ಒಂದು ಹೋಟೇಲಿನವರು ಅವರ ಅತಿಥಿಗಳಿಗೆ ಯಾ ಗಿರಾಕಿಗಳಿಗೆ ಹೊಗೆಸೊಪ್ಪನ್ನು ಒದಗಿಸಿ ಕೊಡೋಣವು ಮತ್ತು (ರಖಮಾಗಿ ಆಗಲಿ ಚಿಲ್ಲರೆಯಾಗಿ ಆಗಲಿ) ಒಬ್ಬ ತಯಾರಿಸುವವನು ಆತನಿಂದ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ಮಾರಾಟಮಾಡೋಣವು ಈ ಆಕ್ಟಿನ ಉದ್ದೇಶದ ಬಗ್ಗೆ "ಮಾರಾಟಗಳು" ಆಗಿರುತ್ತವೆ.

2. ಒಬ್ಬ ಹೊಗೆಸೊಪ್ಪು ಬೆಳೆಯಿಸುವವನು ಎಲೆಯ ರೂಪದಲ್ಲಿ ವಿಕ್ರಯಿಸುವ ಉದ್ದೇಶದ ಬಗ್ಗೆ ಆತನಿಂದ ಬೆಳೆಯಿಸೋಣಾದ ಯಾ ಆತನಿಂದ ಬೆಳೆಯಿಸಿ, ಹದ ಮಾಡೋಣಾದ ಯಾವುದಾದರೂ ಹೊಗೆಸೊಪ್ಪನ್ನು, ಎಲೆಯ ರೂಪದಲ್ಲಿ, ಲೈಸೆನ್ಸು ಆಗಲಿ ನಿರ್ಬಂಧ ಆಗಲಿ ಇಲ್ಲದ ಮಾರಾಟಮಾಡಬಹುದು.

3. "ಹೊಗೆಸೊಪ್ಪು" ಎಂಬುದರಲ್ಲಿ ತಯಾರಿಸಲ್ಪಟ್ಟ ಹೊಗೆಸೊಪ್ಪು, ಹದ ಮಾಡಿದ ಮತ್ತು ಹದಮಾಡದ ಹೊಗೆಸೊಪ್ಪು, ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಪದಾರ್ಥ ಯಾ ಅದರ ಮಿಶ್ರಣ ಮತ್ತು ಹೊಗೆಸೊಪ್ಪಿನ ಗಿಡದ ಎಲ್ಲ ಇವೆಲ್ಲಾ ಸೇರುತ್ತವೆ "ತಯಾರಿಸಲ್ಪಟ್ಟ ಹೊಗೆಸೊಪ್ಪು" ಎಂದರೆ ಸಿಗಾರುಗಳು, ಚೆರೂಟುಗಟುಗಳು, ಸಿಗರೇಟುಗಳು, ಸಿಗರೇಟಿನ ಬಗ್ಗಿನ ಹೊಗೆಸೊಪ್ಪು, ಪೈಪಿನ ಬಗ್ಗಿನ ಹೊಗೆಸೊಪ್ಪು, ಬೀಡಿಗಳು ಮತ್ತು ನಸ್ಯ ಎಂಬುದಾಗಿ ಅರ್ಥವಾಗುತ್ತದೆ, ಪರಂತು ಅದರಲ್ಲಿ ತಿನ್ನುವ ಹೊಗೆಸೊಪ್ಪು, ಅಥವಾ ಇನ್ನೂ ಹೆಚ್ಚಿಗೆಯ ತಯಾರಿಯ ವಿಧಾನದ ಬಗ್ಗೆ ಉದ್ದೇಶಿಸಲ್ಪಟ್ಟ ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಪದಾರ್ಥವು ಯಾ ಅದರ ಮಿಶ್ರಣವು ಸೇರುವುದಿಲ್ಲ.

4. (1) ತಯಾರಿಸಲ್ಪಡದ ಹೊಗೆಸೊಪ್ಪಿನ ರಖಂ ವ್ಯಾಪಾರಿಗಳಿಗೆ, (2) ತಯಾರಿಸಲ್ಪಟ್ಟ ಹೊಗೆಸೊಪ್ಪಿನ ರಖಂ ವ್ಯಾಪಾರಿಗಳಿಗೆ, (3) ತಯಾರಿಸುವವರಿಗೆ, (4) ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು (5) ದಲಾಲಿಗಳಿಗೆ ಯಾ ಕಮಿಶನ್ ಏಜಂಟುಗಳಿಗೆ, ಪ್ರತ್ಯೇಕ ಲೈಸೆನ್ಸುಗಳು ಕೊಡೋಣಾಗುವುವು. ಒಬ್ಬನೇ ಮನುಷ್ಯನು, ಒಂದೇ ಫರ್ಮು ಯಾ ಕಂಪೆನಿಯು ಎರಡು ಯಾ ಅಧಿಕ ನೆಲೆಗಳಲ್ಲಿ ಕೆಲಸಮಾಡುವಲ್ಲಿ, ಪ್ರತಿ ನೆಲೆಯ ವಿಷಯದಲ್ಲಿ ಒಂದು ಪ್ರತ್ಯೇಕ ಲೈಸೆನ್ಸು ಪಡೆದುಕೊಳ್ಳಲ್ಪಡಬೇಕಾಗುವುದು. ಪರಂತು ತಯಾರಿಸುವವನ ಲೈಸೆನ್ಸು ತಯಾರಿಸೋಣಾದ ಹೊಗೆಸೊಪ್ಪಿನ ರಖಂ ಮಾರಾಟಕ್ಕೆ ಸಹಾ ಲಗಾವಾಗುತ್ತದೆ. ಒಬ್ಬ ಚಿಲ್ಲರೆ ವ್ಯಾಪಾರಿಯು ಲೈಸೆನ್ಸು ಕೊಡುವ ಬಗ್ಗೆ ಯಾವ ಫೀಸೂ ಹೊರಿಸಲ್ಪಡುವುದಿಲ್ಲ. ಪರಂತು ಪ್ರತಿ ಚಿಲ್ಲರೆ ವ್ಯಾಪಾರಿಯು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಆತನ ಚಿಲ್ಲರೆ ಮಾರಾಟಗಳಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ A ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ದರಗಳ ಮೇರೆಗೆ ಒಂದು ತೆರಿಗೆಯನ್ನು ಪಾವತಿ ಮಾಡಬೇಕಾಗುವುದು.

5. ಪ್ರತಿ ರಖಂ ವ್ಯಾಪಾರಿಯು ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಆತನ ರಖಂ ಮಾರಾಟಗಳಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ ಶೇಕಡ ಎರಡರಷ್ಟು ತೆರಿಗೆ ಪಾವತಿಮಾಡಬೇಕಾಗುವುದು ಪರಂತು, ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ಈ ತೆರಿಗೆಯನ್ನು ರಖಂ ವ್ಯಾಪಾರಿಗಳಿಗೆ ಒದಗಿಸಿ ಕೊಡುವ ಬಗ್ಗೆ ವರ್ಷಪ್ರತಿವರ್ಷ ರೂಪಾಯಿ 1000ಕ್ಕೆ ಮೀರದ ಮೌಲ್ಯದ ತಯಾರಿಸಲ್ಪಟ್ಟ ಹೊಗೆಸೊಪ್ಪನ್ನು ತಯಾರಿಸುವ ಯಾವನಾದರೂ ಮನುಷ್ಯನು ಸಲ್ಲಿಸಬೇಕಾಗಿರುವುದಿಲ್ಲ ಚಿಲ್ಲರೆಯಾಗಿ ಆಗಲಿ ರಖಂ ಆಗಿಯಾಗಲಿ ಮಾಡಿದ ತಯಾರಿಸಲ್ಪಡದ ಹೊಗೆಸೊಪ್ಪಿನ ಮಾರಾಟದ ವಿಷಯದಲ್ಲಿ ಆ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲೆ ಯಾವ ತೆರಿಗೆಯೂ ಹೊರಿಸಲ್ಪಡತಕ್ಕದ್ದಲ್ಲ.

6. B ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ದರಗಳ ಮೇರೆಗೆ ವಾರ್ಷಿಕ ಫೀಸನ್ನು ಪಾವತಿಮಾಡಿದಲ್ಲಿ, ರಖಂ ವ್ಯಾಪಾರಿಗಳಿಗೆ, ತಯಾರಿಸುವವರಿಗೆ, ದಲಾಲಿಗಳಿಗೆ ಮತ್ತು ಕಮಿಶನ್ ಏಜಂಟರುಗಳಿಗೆ ಲೈಸೆನ್ಸುಗಳು ಕೊಡೋಣಾಗುವುವು ತಮ್ಮ ರಖಂ ಮಾರಾಟಗಳ ಮೇಲೆ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯನ್ನು ಪಾವತಿ ಮಾಡುವ ಮನುಷ್ಯರ ಸಂಗತಿಯಲ್ಲಿ, ಒಂದು ಲೈಸೆನ್ಸಿನ ಬಗ್ಗೆ ಅವರು ತೆರಬೇಕಾದ ಫೀಸು B ಅವಶಿಷ್ಟದಲ್ಲಿ ನಮೂದಿಸಲ್ಪಟ್ಟ ಫೀಸಿನ ಬದಲಾಗಿ 10 ರೂಪಾಯಿಗೆ ಕಡಿಮೆ ಮಾಡಲ್ಪಡುವುದು. 7. ಹೊಗೆಸೊಪ್ಪನ್ನು ಸ್ವಂತ ಉಪಯೋಗಿಸುವುದಕ್ಕೆ ಸದರಿ ಆಕ್ಟಿನಲ್ಲಿ ನಿರ್ಬಂಧವೇನೂ ಇಲ್ಲ. ಪರಂತು, ಅದರಲ್ಲಿ ಖಾಸಗಿ ಉಪಯೋಗದ ಬಗ್ಗೆ ಯಾವಾಗಲಾದರೂ ಒನ್ನಿಗೆ ಒಂದು ಲೈಸೆನ್ಸು ಇಲ್ಲದೆ ಸ್ವಾಧೀನದಲ್ಲಿಟ್ಟುಕೊಳ್ಳಬಹುದಾದ ಪರಮಾಧಿಕ ಪ್ರಮಾಣವನ್ನು ನಿರ್ದೇಶಿಸುವರೆ ಗವರ್ನಮೆಂಟಿನವರಿಗೆ ಅಧಿಕಾರ ಕೊಡಲಾಗಿದೆ. 8. ಒಂದಕ್ಕಿಂತ ಅಧಿಕ ಅಂಗಡಿಗಳು—ಯಾ ವ್ಯಾಪಾರದ ಸ್ಥಳಗಳು ಇರುವ ಒಬ್ಬ ಲೈಸನ್ಸುದಾರನು ಅಂಥ ಪ್ರತಿ ಅಂಗಡಿಯ ಯಾ-ವ್ಯಾಪಾರದ ಸ್ಥಳದ ವಿಷಯದಲ್ಲಿ ಒಂದು ಪ್ರತ್ಯೇಕ ಲೈಸನ್ಸು ಪಡೆದುಕೊಳ್ಳಬೇಕಾಗಿ ವಿಧಿಸಲ್ಪಡುವನು. 9. ಪ್ರತಿ ಲೈಸನ್ಸುದಾರನು ಲೆಕ್ಕದ ಪುಸ್ತಕಗಳನ್ನು ಇಡಲು ಮತ್ತು ಆ ಉದ್ದೇಶದ ಬಗ್ಗೆ ನಿರ್ದೇಶಿಸಲ್ಪಡಬಹುದಾದಂಥ ಫಾರ್ಮುಗಳಲ್ಲಿ ಕಾಲಾನುಕಾಲಿಕ ರಿಟರ್ನುಗಳನ್ನು ಕಳುಹಿಸಲು ವಿಧಿಸಲ್ಪಡಬಹುದು. 10. ಹೊಗೆಸೊಪ್ಪಿನ ಮಾರಾಟದ ಬಗ್ಗೆ ಕೊಡಲ್ಪಟ್ಟ ಲೈಸನ್ಸುಗಳಿಗೆ ಮತ್ತು ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯ ಪಾವತಿಗೆ ಸಂಬಂಧಪಟ್ಟ ಸದರಿ ಆಕ್ಟಿನ ನಿಬಂಧನೆಗಳ ಪೈಕಿ ಯಾವುದನ್ನಾದರೂ ಉಲ್ಲಂಘಿಸಿದ ಯಾವನಾದರೂ ಮನುಷ್ಯನು 1000 ರೂಪಾಯಿ ವರೆಗಿನ ಜುಲುಮಾನೆಯಿಂದ ಮತ್ತು ಸದರಿ ಉಲ್ಲಂಘನೆಯು ಮುಂದುವರಿಯುತ್ತಿರುವಲ್ಲಿ ಮೊದಲನೆಯದರ ನಂತರ ಸದರಿ ಉಲ್ಲಂಘನೆಯು ಮುಂದುವರಿಯುತ್ತಿರುವ ಪ್ರತಿದಿನದ ಬಗ್ಗೆ 50 ರೂಪಾಯಿ ವರೆಗಿನ ಹೆಚ್ಚಿನ ಜುಲುಮಾನೆಯಿಂದ ಶಿಕ್ಷಿಸಲ್ಪಡಲು ಗುರಿಯಾಗತಕ್ಕದ್ದು. ಒಬ್ಬ ಹೊಗೆಸೊಪ್ಪಿನ (ಟೊಬಾಕೊ) ಆಫೀಸರನಿಗೆ ಆತನ ಅಧಿಕಾರಗಳನ್ನು—ಯಾ-ಕರ್ತವ್ಯಗಳನ್ನು ಚಲಾಯಿಸುವಲ್ಲಿ ಬುದ್ಧಿಪೂರ್ವಕವಾಗಿ ಆತಂಕಪಡಿಸಿದ ಯಾವನೊಬ್ಬ ಮನುಷ್ಯನು ಮೂರು ತಿಂಗಳ ವರೆಗಿನ ಕೈದಿನ ಶಿಕ್ಷೆಗೆ—ಯಾ-500 ರೂಪಾಯಿ ವರೆಗಿನ ಜುಲುಮಾನೆಗೆ ಅಥವಾ ಇವೆರಡಕ್ಕೂ ಗುರಿಯಾಗುತ್ತಾನೆ. ಸದರಿ ಆಕ್ಟಿಗೆ ವಿರೋಧವಾದ ಯಾವತ್ತು ತಪ್ಪುಗಳು ಜಾಮೀನು ತೆಗೆಯತಕ್ಕಂಥವುಗಳಾಗಿವೆ.

11. ಮಾರಾಟದಲ್ಲಿ ಬಂದ ಒಟ್ಟು ಮೊಬಲಗನ್ನು ನಿರ್ಣಯಿಸುವ ಮತ್ತು ತೆರಿಗೆಯನ್ನು ಹೊರಿಸುವ-ವ-ವಸೂಲು ಮಾಡುವ ವಿಧಾನವನ್ನು, ಕಲೆಕ್ಟರರ-ವ-ಟೊಬಾಕೊ ಆಫೀಸರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು ಅವರಿಂದ ಅನುಸರಿಸಲ್ಪಡಬೇಕಾದ ನಡವಳಿಕೆಯನ್ನು ನಿರ್ದೇಶಿಸಿ, ಮತ್ತು ಸದರಿ ಆಕ್ಟಿನ ಪರಿಪಾಲನೆಯ ವಿಷಯದಲ್ಲಿ ಸಾಮಾನ್ಯವಾಗಿ ನಿಬಂಧಿಸಿ ಮಾಡೋಣಾಗುವ ಕ್ರಮಗಳು ಬೇಗನೆ ಪ್ರಕಟಪಡಿಸೋಣಾಗುವುವು.

ಇಷ್ಟೇ ಅಲ್ಲದೆ, ಫಲಾನಾ ತರಗತಿಗಳ ಆಫೀಸರುಗಳು ಈ ಆಕ್ಟು ಮೇರೆಗಿನ ಕಲೆಕ್ಟರರ ನಾನಾ ಕರ್ತವ್ಯಗಳನ್ನು ನಡೆಸಬೇಕೆಂಬುದನ್ನು ತಿಳಿಸುವ ಮತ್ತು ಲೈಸನ್ಸುಗಳನ್ನು ಪಡೆದು ಕೊಳ್ಳುವ ವಿಧಾನದ ಕುರಿತ ಅನುಜ್ಞೆಗಳಿರುವ ಇಸ್ತಿಹಾರುಗಳು ಪ್ರಚುರಗೊಳಿಸಲ್ಪಡುವುವು.

ಬಿ. ಜಿ. ಹೋಲ್ಡ್ಸ್‌ವರ್ತ್,
ಗವರ್ನಮೆಂಟ್ ಸೆಕ್ರೆಟರಿ

A—ಅವಶಿಷ್ಟ

ತಯಾರಿಸಲ್ಪಟ್ಟ ಹೊಗೆಸೊಪ್ಪಿನ ಚಿಲ್ಲರೆ ಮಾರಾಟಗಳ ಮೇಲೆ ಹೊರಿಸಲ್ಪಡುವ ಮಾರಾಟದಿಂದ ಬಂದ ಒಟ್ಟು ಮೊಬಲಗಿನ ಮೇಲಣ ತೆರಿಗೆಯ ದರಗಳು:—

a. ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಇನ್ನೂರು ರೂಪಾಯಿಗಳಿಗೆ ಮೀರಿದ್ದ ಪಕ್ಷದಲ್ಲಿ—ವರ್ಷ ಒಂದಕ್ಕೆ ಆರು ರೂಪಾಯಿ.

b ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಇನ್ನೂರು ರೂಪಾಯಿಗೆ ಮೀರಿದ್ದು ಪರಂತು ನಾನ್ನೂರು ರೂಪಾಯಿಗೆ ಮೀರದಿದ್ದ ಪಕ್ಷದಲ್ಲಿ—ವರ್ಷ ಒಂದಕ್ಕೆ ಹನ್ನೆರಡು ರೂಪಾಯಿ.

c ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ನಾನ್ನೂರು ರೂಪಾಯಿಗೆ ಮೀರಿದ ಪಕ್ಷದಲ್ಲಿ—ವರ್ಷ ಒಂದಕ್ಕೆ ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಪೈಕಿ, ಮೊದಲನೆಯ ನಾನ್ನೂರು ರೂಪಾಯಿಯ ಮೇಲೆ ಶೇಕಡ ಮೂರರಷ್ಟು, ಮತ್ತು ಮಾರಾಟದಲ್ಲಿ ಬಂದ ಒಟ್ಟು ಮೊಬಲಗಿನ ಪೈಕಿ ಉಳಿದ ಮೊಬಲಗಿನ ಮೇಲೆ ಶೇಕಡ ಎರಡರಷ್ಟು.

B. ಅವಶಿಷ್ಟ

6 (1)ನೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ದರಗಳು.

(i) ಹದಮಾಡಿದ ಯಾ ಹದಮಾಡದ ಹೊಗೆಸೊಪ್ಪಿನ ಎಲೆಯನ್ನು ಅಥವಾ (ತಯಾರಿಸಲ್ಪಟ್ಟ ಹೊಗೆಸೊಪ್ಪು ಆಗಿರದ) ಹೊಗೆಸೊಪ್ಪಿನಿಂದ ಸಿದ್ಧಪಡಿಸಿದ ಯಾವುದಾದರೂ ಪದಾರ್ಥವನ್ನು ಯಾ ಅದರ ಮಿಶ್ರಣವನ್ನು ಅದರ ವ್ಯಾಪಾರ ನಡೆಸುವ ಬಗ್ಗೆ ಇಲ್ಲವೆ ಅದನ್ನು ತಯಾರಿಸಲ್ಪಟ್ಟ ಹೊಗೆಸೊಪ್ಪನ್ನಾಗಿ ಮಾರ್ಪಡಿಸುವ ಬಗ್ಗೆ ಮಾರಾಟಮಾಡುವ ಯಾ ಕೊಂಡುಕೊಳ್ಳುವ ಯಾವನಾದರೂ ರಖಂ ವ್ಯಾಪಾರಿಯು—ನೂರು ರೂಪಾಯಿ.

ಪರಂತು, ಸಣ್ಣ ಪ್ರಮಾಣದಲ್ಲಿ ವ್ಯಾಪಾರ ನಡೆಸುವ ಯಾವನಾದರೂ ಮನುಷ್ಯನಿಗೆ—

(a) ಆತನ ವ್ಯಾಪಾರದಲ್ಲಿ ಬಂದ ಒಟ್ಟು ಮೊಬಲಗು ವರ್ಷ ಒಂದಕ್ಕೆ ಒಂದು ಸಾವಿರ ರೂಪಾಯಿಗಿಂತ ಕಡಿಮೆ ಎಂಬುದಾಗಿ ಅಂದಾಜು ಮಾಡಲ್ಪಟ್ಟ ಪಕ್ಷದಲ್ಲಿ—ವರ್ಷ ಒಂದಕ್ಕೆ ಐದು ರೂಪಾಯಿ ಫೀಸನ್ನು ವಸೂಲುಮಾಡಿ,

(b) ಆತನ ಮಾರಾಟದಲ್ಲಿ ಬಂದ ಒಟ್ಟು ಮೊಬಲಗು ಒಂದು ಸಾವಿರ ರೂಪಾಯಿ ಯಾ ಅದಕ್ಕೂ ಅಧಿಕ, ಪರಂತು ಮೂರು ಸಾವಿರ ರೂಪಾಯಿಗಿಂತ ಕಡಿಮೆ ಎಂಬುದಾಗಿ ಅಂದಾಜು ಮಾಡಲ್ಪಟ್ಟ ಪಕ್ಷದಲ್ಲಿ ವರ್ಷ ಒಂದಕ್ಕೆ ಹತ್ತು ರೂಪಾಯಿ ಫೀಸನ್ನು ವಸೂಲುಮಾಡಿ, ಕಲೆಕ್ಟರು ಒಂದು ಲೈಸೆನ್ಸನ್ನು ಕೊಡಬಹುದು.

(ii) ಕೆಳಗಿನ (iii)ನೇ ಬಾಬು ಲಗಾವಾಗುವ ಒಬ್ಬ ತಯಾರಿಸುವವನಾಗಿರದ ಇತರ ಯಾವನಾದರೂ ರಖಂ ವ್ಯಾಪಾರಿಯು—ಐವತ್ತು ರೂಪಾಯಿ.

(iii) (a) ಯಾವ ತಯಾರಿಸುವವನ ನಿವೇಶನಗಳಿಗೆ 1934ನೇ ಇಸವಿಯ ಕಾರ್ಖಾನೆಗಳ ಕುರಿತು ಆಕ್ಟು ಲಗಾವಾಗುತ್ತದೋ ಯಾ ವ್ಯಾಪ್ತಗೊಳಿಸೋಣಾಗಿದೆಯೋ ಮತ್ತು ಯಾವ ತಯಾರಿಸುವವನ ನಿವೇಶನಗಳಲ್ಲಿ ಇಪ್ಪತ್ತು ಯಾ ಅದಕ್ಕೂ ಅಧಿಕಮಂದಿ ಕೆಲಸಗಾರರು ಕೆಲಸಮಾಡುತ್ತಾರೋ ಅಥವಾ ಹಿಂದಿನ ಹನ್ನೆರಡು ತಿಂಗಳುಗಳ ಪೈಕಿ ಯಾವುದೊಂದು ದಿನದಲ್ಲಿ ಕೆಲಸಮಾಡುತ್ತಿದ್ದರೋ

ಪುಟ ೨೭

ಮೆಟ್ರಿಕ್ — ಮದುವೆ ಮತ್ತು ನಡತೆ

ವಿದ್ಯೆಯನ್ನು ವಿದ್ಯೆಗಾಗಿ ಕಲಿಯಬೇಕು. ವಿದ್ಯೆಯು ಹಣ ಗಳಿಸುವ ಸಾಧನವೆಂದು ನಂಬುವುದರಿಂದ ಮೋಸಹೋಗಬೇಕಾಗುವುದು. ಸ್ತ್ರೀಯರಿಗೆ ವಿದ್ಯೆಯೆಂಬುದು ಉತ್ತಮ ತಾಯಿಯಾಗಿ, ಒಳ್ಳೇ ಪತ್ನಿಯಾಗಿ ಬಾಳುವಂತೆ ದಾರಿ ತೋರುವುದಾಗಿದೆ.

ಮಾತೃ ಮಂದಿರ

ವರ್ಷ ವರ್ಷವೂ ಶಾಲಾ ಕಾಲೇಜುಗಳಿಂದ ಅನೇಕರು ತಮ್ಮ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ, ಹೊರಬರುವರು. ಪರೀಕ್ಷೆಯಲ್ಲಿ ಉತ್ತೀರ್ಣರಾಗದವರು, ತಮ್ಮ ಅವಸ್ಥೆಯನ್ನು ಹಳಿದು ದೂರುವರು, ಪಾಸಾಗಿ ಬಂದವರ ಜೀವನ ಪರಿಸ್ಥಿತಿಯಲ್ಲೇನಾದರೂ ಸುಖವಿದೆಯೇ? ಹಲವರು ತಮ್ಮ ಯೋಗ್ಯತೆಗನುಸಾರ ಉದ್ಯೋಗ ಲಭಿಸುವುದಿಲ್ಲನೆಂದು ಅಪವಾದ ಹೇಳುವರು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಅದೊಂದೇ ಬಯಕೆಯಲ್ಲಿ ವಿದ್ಯಾಮಂದಿರದಲ್ಲಿ ಹೋರಾಡುವರು. ತಮ್ಮ ವಿದ್ಯಾರ್ಜನೆಯ ಕಾಲದಲ್ಲಿ ಜೀವನೋಪಾಯದ ವಿಚಾರವು ಏನೊಂದೂ ಅವರ ಗಣನೆಗೆ ಬಾರದಿರುವುದೆಂಬುದು ದುರ್ದೈವವೇ ಸರಿ.

ಯುವಕ ಯುವತಿಯರ ಇಂದಿನ ಮದುವೆಯ ವಿಚಾರವನ್ನು ವಿಚಾರಿಸೋಣ. ತಮ್ಮ ಹುದ್ದೆಯಲ್ಲಿ ಉನ್ನತ ಸ್ಥಾನವನ್ನು ಗಳಿಸಬಲ್ಲೆವೆನ್ನುವ ಶಿಕ್ಷಿತ ತರುಣರಿಗೆ ಸರಿಯಾಗಿ ಇಂಗ್ಲಿಷು ಮಾತಾಡಬಲ್ಲ ಮೆಟ್ರಿಕ್ಯುಲೇಶನ್ ವರೆಗಾದರೂ ಕಲಿತ ಹುಡುಗಿಯರಲ್ಲದಿದ್ದರೆ ಮೆಚ್ಚುಗೆಯಾಗಲಾರದು. ಹೀಗಾಗಿ ಹೆತ್ತವರು ತಮ್ಮ ಹೆಣ್ಮಕ್ಕಳನ್ನು ಪಾಠಶಾಲೆಯ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಲಕ್ಷ್ಯಕೊಡುವಂತೆ ನೋಡುವರಲ್ಲದೆ, ಅವರನ್ನು ಗೃಹಜೀವನಕ್ಕೆ ಸಾಧನವಾದ ವಿದ್ಯೆವಿಚಾರಗಳ ಕಡೆಗೆ ಲಕ್ಷ್ಯಕೊಡುವಂತೆ ನೋಡುವುದಿಲ್ಲ. ಬಾಲಿಕೆಯು ತಮ್ಮ ಸಹೋದರನಂತೆ ಕಲಾಶಾಲೆಯ ಶಿಕ್ಷಣವನ್ನು ಹೊಂದುವಳಾಗಿ ದಾಂಪತ್ಯಜೀವನ ಸ್ವಾರಸ್ಯ ವಿಚಾರಗಳಿಂದ ಬಾಹಿರಳಾಗುವಳು. ತರುಣರಂತೂ ಇಂಥಾ ಹುಡುಗಿಯರನ್ನು ಮತ್ತು ವರದಕ್ಷಿಣೆಯನ್ನು ಪಡೆಯಲಪೇಕ್ಷಿಸಲು ಕಾಲೇಜು ವಿದ್ಯಾಭ್ಯಾಸ ಪಡೆದವರಾಗಬೇಕಾಗಿರುವುದು. ಅಂತೂ, ಪ್ರತಿಯೊಂದು ಕುಟುಂಬವು ಹಾಗೂ ಸಮಾಜವು ಇಂಥಾ ತರುಣ ಶಿಕ್ಷಿತ ದಂಪತಿಗಳಿಂದ ದಿನೇ ದಿನೇ ಹೆಚ್ಚುತ್ತಿರುವುದು. ಉತ್ಕೃಷ್ಟ ಕಲಾಶಿಕ್ಷಣವನ್ನು ಗಳಿಸಿದ ತರುಣನಿಗೆ ಕೆಲಸ ಸಿಕ್ಕುವುದೆಂಬುದು ಕಷ್ಟ. ಸಿಕ್ಕಿದರೂ 50 ಯಾ 60 ರೂ. ಮಾಸಿಕ ಸಂಬಳವೆಂದರೆ ಹೆಚ್ಚು. ಮುಂದೆ ಇದರಲ್ಲಿ ವೃದ್ಧಿಯಿರಲಾರದು. ತನ್ನ ಶಿಕ್ಷಿತ ಪತ್ನಿಯು ಸರಿಯಾಗಿ ತನ್ನ ಮನೆಗೆಲಸ ನಡಸುವುದರಲ್ಲಿ ತಾಯಿಯಷ್ಟು ಚತುರಳಲ್ಲ. ಅಡುಗೆ ಕೆಲಸದಲ್ಲಿ ಮತ್ತು ಮಕ್ಕಳ ಪೋಷಣೆಯಲ್ಲಿಯೂ ಹಿಂದುಳಿದಿರುವವಳಾಗಿರುವಳು.

ದೂರದೃಷ್ಟಿಯ ಅಭಾವ

ತಂದೆಯು 400-500ರೂ. ಸಂಬಳ ಪಡೆಯುತ್ತಿದ್ದರೆ, ಉಚ್ಚ ಶಿಕ್ಷಣವನ್ನು ಪಡೆದ ಮಗನು 60-70 ರೂ. ತಲಬಿನ ಹುದ್ದೆಯನ್ನು ಗಳಿಸುವುದೆಂಬುದು ಕೂಡಾ ಕಷ್ಟವೆನಿಸುವುದು. ಉತ್ತಮ ವಿದ್ಯಾಭ್ಯಾಸ ಗಳಿಸದೆ ವ್ಯಾಪಾರ, ವಹಿವಾಟುಗಳಲ್ಲಿ ತೊಡಗಿದವರು ಸುಖದಲ್ಲಿ ಸಂಸಾರ ಜೀವನವನ್ನು ನಡೆಸಿಕೊಂಡಿರುವಾಗ, ಶಿಕ್ಷಿತ ತರುಣನು ತನ್ನ ಗೃಹಜೀವನವನ್ನು ಸಾಮಾನ್ಯ ರೀತಿಯಲ್ಲಿ ನಡಸಿಕೊಂಡಿರಲಿಕ್ಕೂ ಕಷ್ಟವೆಂದು ದುಃಖಪಡುವನು.

ವಿದ್ಯೆಯನ್ನು ವಿದ್ಯೆಗಾಗಿ ಕಲಿಯಬೇಕಲ್ಲದೆ, ಹಣಗಳಿಸಲು ಅದು ಉತ್ತಮದಾರಿಯೆಂದು ನಂಬಕೂಡದು. ಯಾವೊಂದೂ ಡಿಗ್ರಿಯನ್ನು ಪಡೆಯದವರನೇಕರು ಕೋಟ್ಯಾಧೀಶರಾಗಿರುವುದನ್ನು ನಾವು ನೋಡಬಹುದು. ಆರ್ಥಿಕ ವ್ಯವಸ್ಥೆಯೂ ವಿದ್ಯಾಭ್ಯಾಸ ಪದ್ಧತಿಯೂ ಒಂದಕ್ಕೊಂದು ಹೊಂದಿಕೆಯಾಗಿರದಿರಲು ಹೆತ್ತವರ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ದೂರದೃಷ್ಟಿಯ ಅಭಾವವೇ ಕಾರಣವೆಂದರೆ ತಪ್ಪಾಗಲಾರದು. ಹೆತ್ತವರು ಏನಾದರೂ ಸರಿಯೆ, ಮಕ್ಕಳು ಶಿಕ್ಷಣ ಹೊಂದುತ್ತಿರಲಿ, ಮುಂದೇನಾದರೂ ದೊರೆಕೀತು, ಎಂದು ನಿರ್ಲಕ್ಷ್ಯರಾಗಿರುವ ಬದಲಿಗೆ ಮಕ್ಕಳು ತಮ್ಮ ಮುಂದಣ ಜೀವನದಲ್ಲಿ ಯೋಗ್ಯರೀತಿಯ ಜೀವನ ನಡೆಸಲು ಯಾವ ರೀತಿಯ ಕಸಬನ್ನು ಪಡೆಯುವಂಥವರಾಗಬೇಕೆಂಬುದನ್ನು ಲಕ್ಷಿಸತಕ್ಕದ್ದು.

ಸುಧಾರಣೆಯು ಗೃಹದಲ್ಲಿಯೇ ಆರಂಭವಾಗಬೇಕು.

ತಂದೆಯು ತಾನಾಗಿ ತನ್ನ ಮಕ್ಕಳ ಕುರಿತಾದ ವಿಚಾರದಲ್ಲಿ ತಕ್ಕ ಎಚ್ಚರ ತೆಗೆದು ಅವರನ್ನು ಉಚಿತ ರೀತಿಯಲ್ಲಿ ತರಬೇತಿಗೊಳಿಸುತ್ತಿರಬೇಕು. ತಾನೇ ಗಣಿತ, ಓದು, ಹಾಡು, ಯಂತ್ರ ವಿಚಾರ ಇವುಗಳ ಪ್ರಥಮ ಪಾಠವನ್ನು ಕೊಡಬಹುದು. ತಾಯಿಯು, ಪಾಕಶಾಲೆ, ಹೊಲಿಗೆ, ಶುಶ್ರೂಷೆ ಮತ್ತು ಮನೆಯ ಬೇರಲ್ಲಾ ವಿಚಾರದಲ್ಲಿ ತರಬೇತುಗೊಳಿಸಲು ಶಕ್ತಳಿರುವಳು. ಬಂದವರನ್ನು ಒಳ್ಳೇ ರೀತಿಯಿಂದ ಉಪಚರಿಸುವದು, ಮರ್ಯಾದೆ, ನಡತೆಯ ವಿಚಾರ ಇವೆಲ್ಲಾ ವಿದ್ಯೆಯ ಪ್ರಾಮುಖ್ಯ ಅಂಗವಾಗಿರುವುದು. ಸಮಾಜದಲ್ಲಿ ವ್ಯವಹಾರದಲ್ಲಿ ಚತುರರಾಗಿರುವಂತೆ ತಕ್ಕ ಶಿಕ್ಷಣವು ಬಾಲ್ಯದಲ್ಲೇ ದೊರೆಯಬೇಕು. ಇಂದಿನ ಹೆಚ್ಚಿನ ಶಿಕ್ಷಿತ ತರುಣರಲ್ಲಿ ಆಂಗ್ಲೇಯ ಉಚ್ಚ ನಡತೆಗಳ ಅರಿವೂ ಇರದು. ತಮ್ಮ ದೇಶದ ಸಂಸ್ಕೃತಿಯೂ ತಿಳಿಯದೆಂಬಂತಾಗಿರುವುದು.

ಸಮಾಜದಲ್ಲಿ ಮನ್ನಣೆ-ವ್ಯಾಪಾರದಲ್ಲಿ ಜಯ ಮತ್ತು ಜೀವನದಲ್ಲಿ ಉತ್ಕೃಷ್ಟತೆ-ಇವುಗಳಿಗೆಲ್ಲಾ ಬಾಲ್ಯದ ಮನೆಯ ತರಬೇತಿಯೇ ಬಹಳ ಮಟ್ಟಿಗೆ ಕಾರಣವಾಗಿರುವುದು. ಬಾಲ್ಯದ ಹೃದ್ಗತವಾದ ನೆನಪುಗಳೇ ಸ್ಥಿರವಾಗಿ ಉಳಿಯತಕ್ಕವುಗಳಾಗಿವೆ. ಆದುದರಿಂದ ಶಾಲೆಕಾಲೇಜುಗಳ ಶಿಕ್ಷಣವು ಜೀವನದ ಮೇಲ್ಮೆಗೆ ಎರಡನೆಯ ಸಾಧನವಾಗಿರುವುದು. ಮನೆಯಲ್ಲೇ ಉತ್ತಮ ರೀತಿಯ ತರಬೇತಿ ಗಳಿಸಿದ ಬಾಲಕಿಗೆ ಮೆಟ್ರಿಕ್ಯುಲೇಶನಿನ ವಿಚಾರವು ನಿಜವಾಗಿ ಅಗತ್ಯವಿರದು. ಉತ್ತಮ ವಿದ್ಯೆಯೆಂಬುದು ಉತ್ತಮ ತಾಯಿಯಾಗಿ ಒಳ್ಳೇ ಪತ್ನಿಯಾಗಿ ಬಾಳುವಂತೆ ದಾರಿಯನ್ನು ತೋರಿಸುವಂಥಾದ್ದಾಗಿರುವುದು-ಆದರೆ, ಮೆಟ್ರಿಕ್ಯುಲೇಶನ್ ಅಂಥಾದ್ದೇನನ್ನೂ ಒದಗಿಸಿಕೊಡುವುದೆನ್ನಲಾಗುವುದಿಲ್ಲ. ಇಂದಿನ ಶಿಕ್ಷಿತ ತರುಣಿಯರು ತಮ್ಮ ಬಾಲ್ಯದಲ್ಲಿ ಮನೆಶಿಕ್ಷಣವನ್ನು ಸರಿಯಾಗಿ ಗಳಿಸುತ್ತಿದ್ದರೆ, ಅದೆಷ್ಟೋ ಉತ್ತಮ ರೀತಿಯ ಗೃಹಿಣಿಯರಾಗಿ ಸಮಾಜಕ್ಕೆ ಭೂಷಣಪ್ರಾಯರಾಗುತ್ತಿದ್ದರು. ಮನೆಜೀವನ, ಸಾಮಾಜಿಕ ವಿಚಾರ ಮತ್ತು ವ್ಯಾಪಾರ ವಹಿವಾಟುಗಳೆಂಬುದು ಒಂದಕ್ಕೊಂದು ಹೊಂದಿಕೆಯಾಗಿರುವಂಥವುಗಳು. ಇವುಗಳ ಜಯಕ್ಕೆ ಬಾಲ್ಯದ ಮನೆಯಲ್ಲಿ ಹೆತ್ತವರಿಂದ ಪಡೆದ ಶಿಕ್ಷಣವು ಪ್ರಥಮ ಸ್ಥಾನವನ್ನು ಪಡೆಯುವುದು.

ಚಂದಾದಾರರಲ್ಲಿ ವಿನಂತಿ.

ಇದೇ ಬರುವ ಆಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 18ನೇ ವರ್ಷವು ಕೊನೆಗೊಂಡು ಸಪ್ಟಂಬ್ರ ಆದಿಯಿಂದ 19ನೇ ವರ್ಷವು ಆರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾಹಣವನ್ನೂ ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ಬಾಕಿ ಚಂದಾ ಹಣವನ್ನೂ ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರೆಲ್ಲಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವು, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತಿ ಡಿಸ್ಪೆನ್ಸರಿ.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

Sole Manufacturer Dr. D. N. JASANI, Vitalbhai Patel Road, BOMBAY 4

TENDER NOTICE

It is hereby notified that sealed tender will be received by the undersigned up to 4 p. m. on 12-8-1939 for the construction of High School Building, Mulki.

The Contract documents plans, specifications etc Can be seen in the office of 'The Moolky Bank Ltd.' & copies of conditions of contract and schedule of estimate Quantities can be obtained therefrom on payment of Rs. 2/- per Sec.

M. R Kamath,
President.

High School Committee,
MULKI, S. K
18th July 1939

Listen! Bang your Doors!!

Two **WHITE DEVILS** are let loose, one double-crossing the other!

And all these bloody fightings are over a leather packet, containing some secret papers!!

Search your suit cases, and be doubly sure that you do not happen to possess it !!!

Prince Pratap is assassinated; the Maharaja is shot dead, innocent Narendra is accused of murder and Chandrika is kidnapped! all, because of this blessed packet!

What is this packet? What connection it has with the White Devils? Why are all these Dare-Devil feats?

SEE VISHNU MOVIETONE'S SMASHING THRILLER

WHITE DEVIL
OR
DELHI-Ka-THUG

FEATURING

Anasuya, Hussein, Nazir, Anvari, Narendra and others

AT

SRI RAMAKRISHNA THEATRE, UDIPI.

from 25-7-1939

ತಿಳಿದಿರಲಿ! — ಮನೆಯ ಬಾಗಿಲುಗಳನ್ನು ಭದ್ರವಾಗಿ ಹಾಕಿಕೊಳ್ಳಿರಿ !!

ಒಬ್ಬನಿಗಿಂತ ಇನ್ನೊಬ್ಬನು ಮಿಗಿಲಾದ ಸಾಹಸವುಳ್ಳ ಇಬ್ಬರು "ಡಿಲ್ಲಿಯ ಕಳ್ಳರು" ಇಳಿದಿರುವರು!
ಇವರ ಅಮಾನುಷ ಕಾದಾಟವೆಲ್ಲವೂ ಅದೊಂದು 'ಚರ್ಮದ ಪೊಟ್ಟಣ'ದ ಸಲುವಾಗಿ:-ಅದರಲ್ಲಿ ಕೆಲವು ಗುಪ್ತ ಪತ್ರಗಳಿವೆಯಂತೆ!!

ನಿಮ್ಮನಿಮ್ಮ ಪೆಟ್ಟಿಗೆಗಳನ್ನೆಲ್ಲಾ ಹುಡುಕಿ ಈ ಪೊಟ್ಟಣವು ಕಾರಣಾಂತರದಿಂದ ನಿಮ್ಮ ವಶವಿಲ್ಲವೆಂದು ಖಚಿತಪಡಿಸಿಕೊಳ್ಳಿರಿ.
ಯಾಕೆಂದರೆ, ಇದರ ದೆಸೆಯಿಂದಲೇ ಯುವರಾಜ ಪ್ರತಾಪನು ಬಂದೂಕಿನ ಪೆಟ್ಟಿಗೆ ಆಹುತಿಯಾದನು, ಮಹಾರಾಜನು ಕೊಲ್ಲಲ್ಪಟ್ಟನು, ಚಂದ್ರಿಕೆಯನ್ನು ಕದ್ದೊಯ್ದರು, ಮತ್ತು ನಿರಾಪರಾಧಿ ನರೇಂದ್ರನ ಮೇಲೆ ಕೊಲೆಯ ಆರೋಪಣೆಯಾಯಿತು.

ಆ ಪೊಟ್ಟಣವು ಯಾವುದು? ಅದಕ್ಕೂ ಈ ಕಳ್ಳರಿಗೂ ಇರುವ ಸಂಬಂಧವೇನು? ಕ್ರೂರತನದ ಪರಮಾವಧಿಯೇ ಎಂಬಂತಿರುವ ಈ ಬಡಿದಾಟವು ಏತಕ್ಕೆ?

ನೋಡಿರಿ: ಅನಸೂಯ, ಹುಸ್ಸೇನ್, ನಾಜಿರ್, ಅನ್ವಾರಿ, ನರೇಂದ್ರ ಮೊದಲಾದವರು ನಟಿಸಿರುವ

* * 'ವಿಷ್ಣು ಮೂವಿಟೋನಿ'ನವರ * *

'ವೈಟ್ ಡೆವಿಲ್' ಅಥವಾ 'ಡೆಲ್ಲಿ-ಕಾ-ತಗ್'

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾರೀಕು **25—7—1939**ರಿಂದ — ನಿಜಾಂಶ ನೋಡಿ ತಿಳಿಯಿರಿ!

WHITE DEVIL

* ಕಥಾಸಾರಾಂಶ *

ಚಂದ್ರಿಕೆಯನ್ನು ಹೊಂದಲು ಯುವರಾಜ ಪ್ರತಾಪನೂ, ನರೇಂದ್ರನೂ ಪ್ರತಿಸ್ಪರ್ಧಿಗಳು. ಚಂದ್ರಿಕೆಯು ಪ್ರತಾಪನನ್ನು ವಿವಾಹವಾಗುವುದೆಂದು ನಿಶ್ಚಯವಾದೊಡನೆಯೇ ನರೇಂದ್ರನು ಪ್ರತಾಪನ ಮೇಲೆ ಪ್ರತೀಕಾರದ ಹಠವನ್ನು ಹಿಡಿಯುವನು.

ಇತ್ತ ಪ್ರತಾಪನಿಗೆ ಒಂದು ಚರ್ಮದ ಪೊಟ್ಟಣವು ಸಿಗಲು, ಅವನು ಅದನ್ನು ಬಿಚ್ಚಿ ಅದರೊಳಗಿನ 'ವೈಟ್ ಡೆವಿಲ್'ನ ಗೂಢ ವಿಚಾರವುಳ್ಳ ಕೆಲವು ಪತ್ರಗಳನ್ನು ಓದುತ್ತಲೇ ಆಶ್ಚರ್ಯಚಕಿತನಾಗುವನು. ಅವನು ಓದಿ ಮುಗಿಸುವುದರೊಳಗೆ, ಶ್ವೇತಕಳ್ಳನು ಬಂದು ಅದನ್ನು ಕಸಕೊಂಡು ಹೋಗುವನು. ಮುಂದೆ ಪ್ರತಾಪನು ಅದೊಂದು ದಿನ ಶಿಕಾರಿಗೆ ಹೋಗಿದ್ದಾಗ ಅವನ ಕೊಲೆಯಾಗುತ್ತದೆ. ಅಪರಾಧಿಯು ಅವನ ನಂತರ ಪಟ್ಟಕ್ಕೆ ಬಾಧ್ಯನಾದ ರಣಧೀರನೆಂದು ಅನುಮಾನವಿದ್ದಿತು. ಇಷ್ಟರಲ್ಲಿ ಮಹಾರಾಜನೂ ಕೊಲ್ಲಲ್ಪಡುವನು. ಚಂದ್ರಿಕೆಯು ಅಪಹರಿಸಲ್ಪಡುವಳು. ಅಂತೂ, ನರೇಂದ್ರನೇ ಕೊಲೆಪಾತಕ ಎಂದು ನಿರ್ಣಯವಾಗಿ ಅವನ ದಸ್ತಗಿರಿಯಾಗುವುದು. ಅವನ ವಿಚಾರಣೆಯನ್ನು ರಾಣಿ ವಿಲಾಸವತಿಯು ಮಾಡುತ್ತಿರುವಲ್ಲಿ ರಾಣಿ ವಿಲಾಸವತಿಯು ಮುಂಚಿನ ಮಹಾರಾಣಿಗೆ ವಿಷಪಾನಮಾಡಿಸಿ ಮಹಾರಾಜನನ್ನು ಮದುವೆಯಾದ ಧೂರ್ತೆ ಎಂದು ನರೇಂದ್ರನು ಗುಟ್ಟನ್ನು ಹೊರಗೆಡಹುವಷ್ಟರಲ್ಲಿ, ವಿಲಾಸವತಿಯು ಅವನನ್ನು ಪಿಸ್ತೂಲಿನಿಂದ ಹೊಡೆಯುವಳು. ಪಿಸ್ತೂಲಿನ ಗುರಿತಪ್ಪಿ,ನರೇಂದ್ರನು ತಪ್ಪಿಹೋಗುವನು.

ಇತ್ತ ಚಂದ್ರಿಕೆಯನ್ನು ಶ್ವೇತಕಳ್ಳನು ಬಲಾತ್ಕಾರದಿಂದ ಭೋಗಿಸಬೇಕೆನ್ನುವಷ್ಟರಲ್ಲಿ ಇನ್ನೊಬ್ಬ ಶ್ವೇತಕಳ್ಳನು ಬಂದು ಚರ್ಮದ ಪೊಟ್ಟಣವನ್ನು ಕೊಡೆಂದು ಗದರಿಸುವನು. ಮೊದಲನೆಯವನು ಈ ಮುಂಚೆ ನಿಯಮಿಸಿದಂತೆ ಎರಡನೆಯವನಿಂದ ಆ ಊರುಬಿಟ್ಟುಹೋಗುವ ಹಾಗೆ ಭಾಷೆ ತೆಗೆದುಕೊಂಡು ಪೊಟ್ಟಣವನ್ನು ಕೊಡುವನು. ಅಷ್ಟರಲ್ಲಿ ಎರಡನೆಯವನು ಪಿಸ್ತೂಲನ್ನು ತೋರಿಸುತ್ತಾ ಮೊದಲನೆಯವನನ್ನು ಹೊಡೆಯಲು ಬರುವನು. ಅದೇ ಸಮಯಕ್ಕೆ ಸರಿಯಾಗಿ ಇನ್ನೊಂದು ಮುಸುಕಿನ ವ್ಯಕ್ತಿಯು ಬಂದು ಭಯಂಕರ ಕಾದಾಟವಾಗುವುದು. ಓಹೋ!--ಫಲಿತಾಂಶವೇನು?

SYNOPSIS

Prince Pratap and Narendra are rivals for the hands of Chandrika, who having been betrothed to the former, Narendra swears vengeance on him.

Pratap happens to get a leather packet containing some secret papers revealing the mystery of **White Devil** Scarcely had he gone through the papers, the packet is snatched away from him by the White Devil When Pratap encamps in a hunting ground, he is murdered Narendra and Randhir, the heir apparent, are suspected, whenthe Maharaja too is killed, and Chandrika kidnapped Taking Narendra to be the culprit, he is arrested and tried in an assembly of courtiers. Rani Vilasavathi, who has poisoned the late Maharani and managed to marry the Maharaja, and whose history Narendra courageously narrates in the court, shoots Narendra openly, though Narendra narrowly escapes.

In the meantime the White Devil is preparing to molest Chandrika on her despising its atrocities. In the mean while, there comes another White Devil, and demands the leather packet from the first Devil. On taking a promise from the 2nd White Devil to leave the place forth with as per previous arrangements, the first White Devil hands over the leather packet to the second, which double crosses the first, and shoots it straight. Then comes another masked terror—and lo! what is the result?

Ticket Rates: Reserved 1-2-0, Special 0-9-6, Gallery 0-5-11, Benches 0-4-0, 0-2-0

NEXT:—A pleasant surprise to you-Aye! Sagar's proud presentation

'POSTMAN' *featuring, Bibboo, Mazhar & Kumar.*

ಬರುವ ಚಿತ್ರ:— ಓ ಓ ಹೋ! ನಿಮಗೆ ಬಹಳ ಆಶ್ಚರ್ಯವಾಗಿರಬೇಕಲ್ಲವೇ ?

ಸಾಗರ ಮೂವಿಟೋನಿನವರ ಕುಮಾರ್, ಮಜಾರಾಖಾನ್ ಬಿಬ್ಬು ಮೊದಲಾದವರು ನಟಿಸಿರುವ

ಪೋಸ್ಟ್ ಮೇನ್

Comming: Hoore Samandar, Becky sharp, Bhaktha Kuchela, Jailor, Bhedi Kumar, Achut Kanya ect.

ಮುಂದಿನ ಚಿತ್ರ: ಹೂರೇ ಸಮುಂದಾರ್, ಬೆಕ್ಕಿ ಶಾರ್ಪ್, ಭಕ್ತಕುಚೇಲ ಜೈಲರ್, ಭೇದಿ ಕುಮಾರ್, ಅಚ್ಯುತಕನ್ಯಾ ಇತ್ಯಾದಿ.

Engines and Dyramos are for sale: For quotations and other particulars enquire

S. R. Theatre, Udipi, S. Kanara

ವಿದೇಶ ವಾರ್ತೆ

ಹಿಟ್ಲರನ ಉದ್ದೇಶ

ಡಾನ್ಜಿಗಿನ ನಾಜೀ ಮುಖಂಡರುಗಳಾದ ಫೂರ್ಸ್ಟರ್ ಮತ್ತು ಹೆರ್. ಗ್ರೂಸ್ಕೆಯವರು ಜರ್ಮನಿಗೆ ಬಂದು ಹಿಟ್ಲರನೊಡನೆ ಮಾತನಾಡಿ ಮರಳಿರುವರು. ಹಿಟ್ಲರನು ಆಶಾಪೂರ್ಣನಾಗಿರುವನೆಂದೂ ಡಾನ್ಜಿಗಿನ ಪ್ರಶ್ನೆಯಲ್ಲಿ ಅನ್ಯ ರಾಷ್ಟ್ರಗಳು ಕೈಹಾಕದೆ ಇದ್ದಲ್ಲಿ ಪೋಲೆಂಡು ಮತ್ತು ತಾನು ಆ ತೀರ್ಮಾನವನ್ನು ಇತ್ಯರ್ಥಿಸಲನುಕೂಲವಿದೆ ಎಂದು ತಿಳಿಸಿರುವನೆಂದೂ ವಾರ್ತೆಯಿದೆ

ಬ್ರಿಟಿಷ್ ಧೋರಣೆ ಅರ್ಥರಹಿತವಾದುದು

ಪಾರ್ಲಿಮೆಂಟಿನ ಕಾಮನ್ಸ್ ಭವನದಲ್ಲಿ ಪೆಲೆಸ್ಟೈನ್ ಪ್ರಶ್ನೆಯು ಚರ್ಚಿಸಲ್ಪಟ್ಟಾಗ ಲೇಬರ್ ಮೆಂಬರರಾದ ಮಿ. ಟೋಮ್ ವಿಲಿಯಮ್ಸರು ಬ್ರಿಟಿಷರ ಪೆಲೆಸ್ಟೈನ್ ಧೋರಣೆಯಲ್ಲಿ ಶಾಯಿದೇಶೀರ ಅಥವಾ ನೀತಿಯುತವಾದ ಅಂಶವೇನೂ ಇಲ್ಲವೆಂದೂ ಈಗಲಾದರೂ ಆ ಧೋರಣೆಯನ್ನು ಬಿಟ್ಟು ಅರಬ ಯಹೂದಿಗಳ ತ್ಯಂಡಕ್ಕೂ ಒಪ್ಪಿಗೆಯಾಗುವ ಹಾದಿಯನ್ನನುಸರಿಸುವುದುತ್ತಮವೆಂದೂ ವಾದಿಸಿದರು. ಮಿ. ಮಾಲ್ಕೋಮ್ ಮೆಕ್ಡೊನಾಲ್ಡರು ಇದಕ್ಕುತ್ತರವೀಯುತ್ತಾ ಒಪ್ಪೆ ಒಂದು ಹಾದಿ ಹಿಡಿದು ಮುಂದೂತ್ತಿ ಮತ್ತೆ ಹಿಂಜರಿಯುವುದರಲ್ಲಿರುವಷ್ಟು ಅಪಾಯವು ಬೇರಾವುದರಲ್ಲಿಯೂ ಇಲ್ಲವೆಂದೂ, ಪೆಲಸ್ಟೈನಿನಲ್ಲಿ ಇದಕ್ಕಿಂತ ಉತ್ತಮ ತೀರ್ಮಾನವೀಯಲು ಸಾಧ್ಯವಿಲ್ಲವೆಂದೂ ಹೇಳಿದರು. ವಿರುದ್ಧಪಕ್ಷೀಯರ ಸೂಚನೆಯು ಬಿದ್ದುಹೋಯಿತು.

ಜರ್ಮನಿ ಪೋಲೆಂಡುಗಳು ಇದಿರಿವರು ಸೆಟೆದುನಿಂತಿವೆ!

ಜರ್ಮನಿಗೆ ಪೋಲೆಂಡಿನ ಎಚ್ಚರಿಕೆ

ಡಾನ್ಜಿಗ್ ಸಿನೇಟಿನ ಪ್ರೆಸಿಡೆಂಟನಾಗಿ ಹೆರ್ ಹಿಟ್ಲರನನ್ನು ಆರಿಸಲಾಗುವದೆಂಬ ಸುದ್ದಿ ಹರಡಿದೆ ಇದರಿಂದಲೂ ಡಾನ್ಜಿಗ್ ನಾಜಿಗಳ ಸನ್ನಾಹದಿಂದಲೂ ಎಚ್ಚರಗೊಂಡ ಪೋಲೆಂಡು ಜರ್ಮನಿಗೆ ಸ್ಪಷ್ಟವಾದ ಎಚ್ಚರಿಕೆಯನ್ನಿತ್ತಿದೆ ವಾರ್ಸಾವಿನ ಅಧಿಕಾರಯುತ ಪ್ರಕಟಣೆಯಲ್ಲಿ ಹೀಗೆ ಸಾರಲಾಗಿದೆ "ಜರ್ಮನಿಯು ಯಾವ ವಿಧದಿಂದಲೇ ಇರಲಿ, ಡಾನ್ಜಿಗನ್ನು ತನ್ನೊಳಗೆ ಸೇರಿಸಿಕೊಳ್ಳುವ ಕಾರ್ಯ ಕೈಕೊಂಡರೆ, ಅದು ಸದ್ಯದ ರಾಜಕೀಯ ಕ್ಷೇತ್ರ ಹಾಗೂ ಗಡಿವಿಭಾಗಗಳಲ್ಲಿ ಸಹನಾತೀತ

ಹಿಂಸಾಕೃತಿಯಾಗಿರುವದಲ್ಲದೆ ಆಗತ್ಯವುಳ್ಳ ತಡೆಯನ್ನದಕ್ಕೆ ಹಾಕಲೇಬೇಕಾಗುವದು.

ಸೈನ್ಯ ಏಕೀಕರಣದ ಸಿದ್ಧತೆ

ಇಂಗ್ಲೆಂಡಿನ ಜನರಲ್ ಸರ್. ಎಡ್ಮಂಡ್ ಐರನ್‌ಸೈಡ್‌ರು ವಾರ್ಸಾವಿಗೆ ಬಂದು ವಿದೇಶಾಂಗ ಮಂತ್ರಿ ಕರ್ನಲ್ ಬೆಕ್ಕರೊಡನೆಯೂ ಪೋಲೆಂಡಿನ ಸೈನ್ಯಾಧಿಕಾರಿಯೊಡನೆಯೂ ಮಾತುಕತೆಗಾರಂಭಿಸಿರುವರು. ಪೋಲೆಂಡ್, ಇಂಗ್ಲಾಂಡು, ಫ್ರಾನ್ಸ ಸೈನ್ಯಗಳನ್ನು ಏಕೀಕರಿಸಿ ವಿರೋಧವೊಡ್ಡುವ ಕಾರ್ಯಕಲಾಪಗಳಿಗಾಗಿ ಅವರ ಆಗಮನವಾಯಿತಂತೆ.

ವಿದೇಶೀ ಹಡಗುಗಳ ಮೇಲೆ ಜಪಾನಿನ ನಿರ್ಬಂಧ

ಸ್ವಾಂಟಾವೋ ಮತ್ತು ಲೋಯುವನ್ ಬಂದರುಗಳಲ್ಲಿರುವ ವಿದೇಶೀ ಹಡಗುಗಳು ಮತ್ತು ವಿದೇಶೀ ವ್ಯಾಪಾರಿಗಳು ತಾ. 21 ನೇ ಪ್ರಾತಃಕಾಲ 8ಘಂಟೆಯೊಳಗೂ ಸ್ಯಾಟೆಂಗಿನಲ್ಲಿರುವವರು ಶನಿವಾರ 8ರ ಒಳಗೂ ಬಂದರಗಳನ್ನು ಬಿಟ್ಟು ಹೋಗತಕ್ಕದ್ದೆಂದು ಚೀನೀ ಸಮುದ್ರದ ಮುಖ್ಯ ಜಪಾನೀ ಕಮಾಂಡರರಾದ ವೈಸ್ ಆಡ್ಮಿರಲ್ ಲಿಕಾವಾರವರು ವಿದೇಶೀಯರಿಗೆ ಅಲ್ಟಿಮೇಟಮ್ ಕೊಟ್ಟಿರುವರು. ಬ್ರಿಟಿಷರೀ ಬೆದರಿಕೆಗೆ ಬಗ್ಗದೆ ನಿರಾಕರಿಸಿರುವರೆಂದು ತಿಳಿದುಬರುತ್ತದೆ.

ಚೀನವೇ ಜಯಿಸಿಬಿಡುವುದೇ?

ಚೀನಾದ ಯುದ್ಧೋಪ ಮಂತ್ರಿ ಜನರಲ್ ಚಿಂಚೆಂಗ್‌ರವರು ಚೀನವೇ ಯುದ್ಧದಲ್ಲಿ ಗೆಲ್ಲುವದೆನ್ನುತ್ತಾರೆ ಅವರ ಹೇಳಿಕೆಯಂತೆ ಯುದ್ಧಾರಂಭದಲ್ಲಿ ಚೀನದಲ್ಲಿ ಒಂದು ಮಿಲಿಯಕ್ಕ ಸ್ವಲ್ಪ ಅಧಿಕ ಸೈನ್ಯ ಮಾತ್ರವಿತ್ತೆಂದೂ ಈಗ ಅದು ೩ವರೆ ಮಿಲಿಯ ಸರ್ವ ಸನ್ನದ್ಧ ಸೈನಿಕರಿಂದ ಕೂಡಿರುವದೆಂದೂ ಮಂತ್ರಿಗಳ ಹೇಳಿಕೆ. ಅವಸರದ ನೋಟೀಸು ಹೊರಡಿಸಿ 1೬ ಮಿಲಿಯ ಸೈನಿಕ ಪ್ರಾಯದ ಯೋಧರನ್ನು ಸೇರಹಲು ಸಂಧ್ಯವಿರುವದಲ್ಲದೆ ಸ್ವಲ್ಪ ಸಮಯದ ತರಬೇತಿಕೊಟ್ಟು ಯುದ್ಧರಂಗಕ್ಕೂ ಕಳುಹಬಹುದಂತೆ ಈ ವರೆಗಿನ ಯುದ್ಧದಲ್ಲಿ ಚೀನಾದ ಸೈನಿಕ ದಳದ ಬಹು ಸಣ್ಣ ಭಾಗವು ಮಾತ್ರ ಭಾಗವಹಿಸಿತ್ತೆಂದೂ ಯುದ್ಧಾಂತ್ಯದಲ್ಲಿ ಯಾರ ಸೈನ್ಯಬಲ ಮಿಗಿಲೋ ಅವರೇ ವಿಜಯಿಗಳಾಗಬೇಕಾದುದರಿಂದ ತಮಗೆ ಜಯ ಸಿದ್ಧವೆಂದೂ ಚೀನೀ ಮಂತ್ರಿಗಳವರ ಭರವಸೆ.

ಜಪಾನು ಸ್ಟೀಮರು ಮುಳುಗಿತು

ಟೋಕ್ಯಮಾರು ಎಂಬ ಜಪಾನೀ ಹಡಗವೊಂದು ಪೆಸಿಫಿಕ್ ಸಮುದ್ರದ ಮಧ್ಯದಲ್ಲಿ ಬೆಂಕಿ ಹಿಡಿದು ಮುಳುಗಿ ಹೋಗಿರುವುದು. ಅದರಲ್ಲಿದ್ದ 110 ಮಂದಿಯಲ್ಲಿ ಇಬ್ಬರ ವಿನಹ ಮಿಕ್ಕವರನ್ನು ಅಮೇರಿಕದ ಹಡಗವೊಂದರ ಸಹಾಯದಿಂದ ಜಪಾನೀ ಸ್ಟೀಮರುಗಳು ರಕ್ಷಿಸಿರುವವು.

ಒಂದಿಂಚು ಡಾನ್ಜಿಗನ್ನು ಬಿಡದ ದೃಢನಿರ್ಧಾರ.

ಇತ್ತೀಚಿನ ವಾರ್ತೆಯಂತೆ ಡಾನ್ಜಿಗನ್ನು ಒಂದಿಂಚಿನಷ್ಟು ಬಿಡಲಾರೆನೆಂದು ಹಿಟ್ಲರನು ನೂರಕ್ಕೆ ನೂರರಷ್ಟು ದೃಢಪ್ರತಿಜ್ಞೆಯಿಂದಿರುವನಂತೆ. ಹಾಗೆಯೇ ಸಂಧಾನದಿಂದಲೇ ಡಾನ್ಜಿಗನ್ನು ಸ್ವಾಧೀನಪಡಿಸಿ ಬಿಂದು ರಕ್ತ ಸುರಿಸದೆ ಸಾಮ್ರಾಜ್ಯ ಕಟ್ಟುತ್ತಾ ಬಂದ ತನ್ನ ಕಲೆಯನ್ನು ಪುಟವೇರಿಸಬೇಕೆಂದೂ ಸಂಕಲ್ಪಿಸಿರುವನಂತೆ ಈ ವಿಷಯವು ಜರ್ಮನಿಯ ರಾಜಕೀಯ ಪ್ರಕಟಣಾಗಾರನೊಬ್ಬನಿಂದ ಪ್ರಕಟಿಸಲ್ಪಟ್ಟಿದೆ. ಈ ಮಾತು ಜರ್ಮನಿಗಲ್ಲದ ಪೋಲೆಂಡಿಗನ್ವಯಿಸುವುದಿಲ್ಲವೆಂದೂ ಈಗ ಶಾಂತಿ ಸಂಧಾನದ ವಾತಾವರಣವನ್ನು ಕೆಡಿಸಿರುವವು ಜರ್ಮನರಲ್ಲದೆ ತಾವಲ್ಲವೆಂದೂ ಪೋಲೆಂಡು ಸರಕಾರದ ಉತ್ತರ.

ಸರ್. ಯಸ್. ರಾಧಾಕೃಷ್ಣರಿಗೆ ಕೆಲಿಫೋರ್ನಿಯಾದ ಕರೆ

ಭಾರತದ ಸುಪ್ರಸಿದ್ಧ ತತ್ವವೇತ್ತರುಗಳಾದ ಸರ್. ಯಸ್. ರಾಧಾಕೃಷ್ಣರಿಗೆ ದಕ್ಷಿಣ ಕೆಲಿಫೋರ್ನಿಯಾ ಯುನಿವರ್ಸಿಟಿಯವರು ತಮ್ಮ ಸಂದರ್ಶಕ ಪ್ರೊಫೆಸರರಾಗಿ ಕೆಲವು ಕಾಲದವರೆಗೆ ನಿಲ್ಲಬೇಕೆಂದು ಕೇಳಿಕೊಂಡಿರುವರು. ಸರ್. ರಾಧಾಕೃಷ್ಣರು ಈಗ ಇರುವ ಕಲ್ಕತ್ತಾ ಯುನಿವರ್ಸಿಟಿಯವರು ಅದನ್ನು ರಾಧಾಕೃಷ್ಣರ ನಿರ್ಣಯಕ್ಕೆ ಬಿಟ್ಟರೂ ರಾಧಾಕೃಷ್ಣನವರದನ್ನು ನಿರಾಕರಿಸಿರುವರು

ರಷ್ಯಾ ಒಪ್ಪಂದವಾಗುವದೆ?

ಮೇಲಿನ ಪ್ರಶ್ನೆ ಪಾರ್ಲಿಮೆಂಟಿನಲ್ಲಿ ಬಂದಾಗ 'ನಾನು ಹಾಗೆಂದು ಆಶಿಸುತ್ತೇನೆ' ಎಂದು ಮಿ. ಚೇಂಬರ್ಲೀನರು ಉತ್ತರವಿತ್ತರು. "ಈಗಿನ ಪಾರ್ಲಿಮೆಂಟು ಅಧಿವೇಶನವು ಮುಗಿಯುವ ಮೊದಲು ರಶ್ಯಾ ಒಪ್ಪಂದವನ್ನು ಜಾಹೀರುಪಡಿಸುವಂತಾಗಬಹುದೋ?" ಎಂಬ ಪ್ರಶ್ನೆಗುತ್ತರವೀಯುತ್ತಾ ಮಿ. ಚೇಂಬರ್ಲೀನರು "ಈ ವರೆಗೂ ನಾವಾವ ತೀರ್ಮಾನಕ್ಕೂ ಬಂದಿಲ್ಲ; ಬರುವ ಆಶೆಯಿದೆ"ಎಂದರು ಜರ್ಮನಿಯು ದಕ್ಷ್ಯಾಕ್ಕೆ 25 ಮಿಲಿಯ ಪೌಂಡು ಸಾಲವೀಯುವದಂಬ ಕುರಿತು ಏನಾದರೂ ತಿಳಿದು ಬಂದಿವೆಯೋ ಎಂದು ಪ್ರಶ್ನಿಸಲ್ಪಟ್ಟಾಗ ಮಿ. ಚೇಂಬರ್ಲೀನರು ಅಸ್ಪಷ್ಟ ಉತ್ತರವಿತ್ತರು

ಟಿಯೆಂಟ್ಸಿನ್ ಒಪ್ಪಂದವೆ?

ಕೆಲವು ಮುಖ್ಯ ವಿಷಯಗಳಲ್ಲಿ ಟಿಯೆಂಟ್ಸಿನ್ ಪ್ರಶ್ನೆಯ ಕುರಿತು ಇಂಗ್ಲೆಂಡು ಜಪಾನುಗಳೊಳಗೆ ಒಪ್ಪಂದವಾಗಿದೆಯೆಂಬ ವಾರ್ತೆಬರುತ್ತಿದೆ, ಆದಿಯಲ್ಲಿ ಜಪಾನರು ತಮ್ಮ ರಾಜಕೀಯ, ಸೈನಿಕ ಮತ್ತು ಆರ್ಥಿಕ ರೀತಿಗಳಿಗೆ ಪೂರ್ಣ ಮನ್ನಣೆಕೊಡದೆ ಒಪ್ಪಂದವಸಾಧ್ಯವೆಂದು ಹಠತೊಟ್ಟಿದ್ದರೆಂದೂ ತಿಳಿದುಬರುತ್ತದೆ.

ಇಂಡಿಯಾ ಆಕ್ಟ ತಿದ್ದುಪಡಿ ಮಸೂದೆ ಮುಂದೆ ಹೋಯಿತು

ಪಾರ್ಲಿಮೆಂಟಿನ ವಸಂತಕಾಲದ ಅಧಿವೇಶನಕ್ಕೆ ಮುಂದುವರಿಸಲ್ಪಟ್ಟ ಮಸೂದೆಗಳಲ್ಲಿ ಇಂಡಿಯಾ ಮತ್ತು ಬರ್ಮಾ ಆಕ್ಟುಗಳ ತಿದ್ದುಪಡಿ ಮಸೂದೆಗಳೂ ಸೇರಿವೆ.

ಟಿಯೆಂಟ್ಸಿನ್ ಒಪ್ಪಂದವಾದೀತೆ?

ಬ್ರಿಟಿಷ್ ರಾಯಭಾರಿ ಸರ್. ರೋಬರ್ಟ್ ಕ್ರೈಜಿಯವರು ಟೋಕಿಯೋದಲ್ಲಿ ಜಪಾನೀ ವಿದೇಶಾಂಗ ಮಂತ್ರಿ ಮಿ. ಅರಿತಾರವರೊಡನೆ ಟಿಯೆಂಟ್ಸಿನ್ ದಿಗ್ಬಂಧನ ಕುರಿತು ಮೂರುಸಲ ಸಂಭಾಷಿಸಿರುವರು. ಸರ್. ರೋಬರ್ಟರು ಬ್ರಿಟಿಷರ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಜಪಾನೀ ಮಂತ್ರಿಗಳಿಗೆ ತಿಳಿಸಿರುವರೆಂದು ನಂಬಲಾಗಿದೆ.

ಬ್ರಿಟಿಷ್ ವಿರುದ್ಧ ಪ್ರಚಾರ

ಸಂಧಾನದ ಮಾತುಕತೆಯಿಂದಾದ ಪರಿಣಾಮವೂ ತೋರದೆ ಬ್ರಿಟಿಷ್ ವಿರುದ್ಧ ಪ್ರಚಾರಕಾರ್ಯವು ಟೋಕಿಯೋ ಮೊದಲಾದೆಡೆಗಳಲ್ಲಿ ಬಲವಾಗಿ ನಡೆಯುತ್ತಲೇ ಇದೆ ಏಸ್ಯಾದಿಂದ ಬ್ರಿಟಿಷರನ್ನು ಹೊರಗಟ್ಟಬೇಕೆಂಬ ಕೂಗೂ ಪ್ರಕಟಣೆಗಳೂ ಕೇಳಿ, ಕಂಡುಬರುತ್ತಿವೆ

ಚಲನ ಚಿತ್ರವೆಂದರೆ ಮೂಗು ಮುರಿಯುವವರು

ದೇವದಾಸ! **ದೇವದಾಸ!** ದೇವದಾಸ!

ಎಂದು ಹಾಡೊರೆದು ಮತ್ತೆ ಮತ್ತೆ ಚಿತ್ರದಲ್ಲಿ ನೋಡಿ ಮನಸಾರೆ ಹೊಗಳಿದ್ದಾರೆ.

ಆ ಪ್ರಣಯ! ಆ ಶೃಂಗಾರ! ಆ ಹುಡುಗಾಟ!
ಆ ವಿಯೋಗ! ಆ ಕೊರಗು! ಆ ತ್ಯಾಗ!
ಯಾವುದು ಹೆಚ್ಚು! ಯಾವುದು ಕಡಿಮೆ!

ಶರಚ್ಚಂದ್ರರ ಲೇಖನಿಯಲ್ಲಿ ಎಲ್ಲವೂ ಪರಿಪೂರ್ಣತೆಯನ್ನೈದಿವೆ
ಕನ್ನಡಿಗರಿಗಾಗಿ ಶ್ರೀ. ಗುರುನಾಥ ಜೋಶಿಯವರು ಅನುವಾದಿಸಿದ್ದಾರೆ.
ಹುಬ್ಬಳ್ಳಿಯ ಸಾಹಿತ್ಯಭಂಡಾರದವರು ಹೊಸತಾಗಿ ಪ್ರಕಟಿಸಿದ
ಈ ದೇವದಾಸ ಪುಸ್ತಕದ ಬೆಲೆ ೧—೦—೦

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ. 27-7-39ರಿಂದ ತಾ. 3-8-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು ಎಂಬ ಲೋಕೋಕ್ತಿಯಂತೆ ಮೊದಲೇ ದುಃಖಪೀಡಿತರಾಗಿರತಕ್ಕವರಿಗೆ ಸುತ್ತಲಿಂದಲೂ ಮೇಲಿಂದ ಮೇಲೆ ಅನರ್ಥಗಳೊದಗುವುದು ಸಾಮಾನ್ಯ ಲೋಕಸಂಪ್ರದಾಯವಾಗಿರುತ್ತದೆ. ಸದ್ಯದಲ್ಲಿ ಇದೇ ರೀತಿಯ ಪರಿಸ್ಥಿತಿಯು ನಿಮಗೆ ಬಂದಿರುವುದು. ದುಃಸ್ವಭಾವಯುಕ್ತರೊಬ್ಬರಿಂದ್ಲೂ ಆತರ ಸಕಲ ಗ್ರಹರೂ ನಿಮಗೆ ಪ್ರತಿಕೂಲರಾಗಿರುವರು. ಅದಕಾರಣದಿಂದ ಉದ್ಯೋಗದಲ್ಲಿ ಅಲಸ್ಯವು ಅಧಿಕವಾಗುವುದು. ಪಕ್ಕಿಗೆ ಮೇಲೆ ಬಿರಾರವೆಂಬಂತೆ ಬೂರವರಿಗೆಲ್ಲಾ ಒಂದು ಮಾರ್ಗವಾದರೆ ನಿಮಗೆ ಇನ್ನೊಂದು ಮಾರ್ಗ. ಈ ರೀತಿಯು ನಿಮ್ಮ ಕಾದಿಂದ ಸಾಲದ ಕಲಹ ಹುಟ್ಟಲಿದೆ. ಮನೋರೋಗದಿಂದ ನೊಂದ ನಿಮಗೆ ವಿಷ ಮತ್ತು ಉಷ್ಣಜನ್ಯ ರೋಗಗಳು ಗಂಟುಬೀಳುವವು. ಧನಸಂಪತ್ತಿಗೆ ಕೊರತೆಯಾದರೂ ಮಿತ್ರಸಂಪತ್ತಿಗೆ ಕಡಿಮೆಯಿಲ್ಲವು. ವಾರಾಂತ್ಯ ನಾಲ್ಕು ದಿನಗಳನ್ನು ಹೆಚ್ಚು ಕಷ್ಟದಿಂದ ಕಳೆಯಬೇಕಾಗುವುದು.

ವೃಷಭರಾಶಿ—

ಸದ್ಯದಲ್ಲಿ ನಿಮಗೆ ಸಕಲಾನುಕೂಲತೆಗಳಿದ್ದರೂ ಕರೀರಾಲಸ್ಯ ನಿಮಿತ್ತ ಮೇಹಸೀಡೆ ನಿಶ್ಶಕ್ತಿ ಇವುಗಳು ಹೆಚ್ಚುವವು. ಅದಲ್ಲದೆ ಬೇರಾವ ಹಾನಿಯೂ ನಿಮಗುಂಟಾಗಲಾರದು. ಕುಟುಂಬಿಕರಲ್ಲಿಯೂ ಬಂಧುಗಳಲ್ಲಿಯೂ ನಿಮ್ಮ ಹೇಳಿಕೆಯ ನಾಮಕೆ ಹೆಚ್ಚುವುದು. ಕೆಲವು ಜನರೂ ಕೂಡ ಮಿತ್ರರಾಗಿ ಪರಿಣಮಿಸುವರು. ವಿದ್ಯೋಪಜೀವಿಗಳಿಗೂ ವಿದ್ಯಾಭಿಲಾಷಿಗಳಿಗೂ ಕಾಲವು ಪರಿಶುದ್ಧವಾಗಿರುವುದರಿಂದ ಯಶಸ್ಸು ದೊರೆಯುವುದು. ದುಷ್ಟರ ಆಸಡೆಯು ನಿಮ್ಮ ಸಮೀಪ ಸೇರಲಾರದು. ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಸತ್ಕಾರ್ಯ ಸಭಾಚಾರಗಳಲ್ಲಿ ವಿಶ್ವಾಸವು ಹೆಚ್ಚುವುದು. ಜನಾದರಕ್ಕೆ ಪಾತ್ರರಾದ ನಿಮಗೆ ಎಲ್ಲೆಲ್ಲೂ ಸಮಾನಸನ್ಮಾನಗಳು ದೊರೆಯುವವು. ದಿನದಿಂದ ದಿನಕ್ಕೆ ನವನವೋತ್ಸಾಹವು ವೃದ್ಧಿ ಹೊಂದುವುದು. ಸಕಲ ಗ್ರಹೋಪಕರಣಗಳಿಂದ ಕೂಡಿದ ಸಂಸಾರಯುಕ್ತರಾದ ನಿಮಗೆ ದಿನ ಕಳೆದುದೇ ತಿಳಿಯಲೊಲ್ಲದು. ತಾ. 27-2-3 ಈ ದಿನಗಳು ಇಷ್ಟಾರ್ಥಪ್ರದಗಳಾಗಿವೆ.

ಮಿಥುನರಾಶಿ—

ಈ ವಾರದಲ್ಲಿ ನಿಮ್ಮ ಅದೃಷ್ಟವು ಬಹಳ ಹೀನ ಸ್ಥಿತಿಯಲ್ಲಿದೆ. ಜೀವನದಲ್ಲಿನ ಸರ್ವ ಕಾಲಗಳೂ ಒಂದೇ ತೆರನಾಗಿರಲಾರವು. ಗ್ರಹಸ್ಥಿತಿಯು ಬದಲಾಯಿಸಿದಂತೆ ಜಯಾಪಜಯಗಳೂ ಸುಖದುಃಖಗಳೂ ಬದಲಾವಣೆಹೊಂದುತ್ತಾ ಬರುವವು. ಆದಾಯವೂ ವೆಚ್ಚವೂ ಒಂದೇ ತೆರನಾಗಿರುವುದರಿಂದ ಹಣದ ವಿಚಾರದಲ್ಲಿ ನಿಮಗೆ ಚಿಂತೆಯೊದಗದು. ಆದರೂ ನಿಮ್ಮ ಪ್ರತಿಯೊಂದು ಉದ್ಯೋಗಕ್ಕೂ ಪ್ರತಿಸ್ಪರ್ಧಿಗಳ ಉಪದ್ರವು ಪ್ರತ್ಯಕ್ಷವಾಗಿಲ್ಲದಿದ್ದರೂ ಅಪ್ರತ್ಯಕ್ಷವಾಗಿ ಇದ್ದೇ ಇರುವುದು. ನಿಮ್ಮ ಚಿತ್ತ ಚಾಂಚಲ್ಯದಿಂದಾಗಿ ನಿಮಗಾರಲ್ಲಿಯೂ ವಿಶ್ವಾಸವಿರದು. ಸಾಂಸಾರಿಕ ಭಾಗದಲ್ಲಿ ಏನೊಂದೂ ಕೊರತೆಗಳಿಲ್ಲದಿದ್ದರೂ ಮನೋರೋಗವು ದಿನದಿಂದ ದಿನಕ್ಕೆ ಹೆಚ್ಚುವುದು. ತಿಳಿದೂ ತಿಳಿದೂ ಅಕಾರ್ಯವನ್ನು ಮಾಡಿ ಅಧಿಕಾರಿಗಳ ಅಪಿಶ್ವಾಸಕ್ಕೆ ಪಾತ್ರರಾಗುವಿರಿ. ಸದಾ ಚಿಂತಾಗ್ರಸ್ತರಾದ ನಿಮ್ಮ ಆರೋಗ್ಯವೂ ಕೂಡ ಒಂದಲ್ಲೊಂದು ರೀತಿಯಿಂದ ಕೆಟ್ಟಿದ್ದು ಚಿಕಿತ್ಸೆಯಿಂದಾಗಿ ಧನವ್ಯಯವಾಗುತ್ತಲೇ ಇರುವುದು. ತಾ. 30ರಿಂದ ವಾರಾಂತ್ಯದವರೆಗಿನ ದಿನಗಳು ಅನಿಷ್ಟಕಾರಿಗಳಾಗಿವೆ.

ಕರ್ಕಾಟಕರಾಶಿ—

"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" ಎಂಬ ಶಾಸ್ತ್ರೋಕ್ತಿಯಂತೆ ಧರ್ಮವೇ ಸಮಸ್ತ ಲೋಕಗಳ ಸ್ಥಿತಿಗೆ ಮೂಲಕಾರಣವಾಗಿರುವುದು. ಈ ಆಚಾರರೂಪವಾದ ಧರ್ಮವಿರುವಲ್ಲೇ ನರರು ತಮ್ಮ ತಮ್ಮ ಮುಂದಿನ ಮಾರ್ಗವನ್ನು ಪರಿಷ್ಕರಿಸಿಕೊಳ್ಳುವರು. ಸದಾಚಾರದಿಂದ ಕೂಡಿದ ನರನು ಜನರ ಮೆಚ್ಚುಗೆಗೆ ಪಾತ್ರನಾಗಿ ಶ್ರೇಯಸ್ಸನ್ನು ಪಡೆಯುವನು. ಅಂತೆಯೇ ಅನಾಚಾರಿಯಾದ ಪುರುಷನು ಲೋಕನಿಂದೆಗೆ ಗುರಿಯಾಗಿ ಜನರಿಂದ ದೂಷಿಸಲ್ಪಟ್ಟು ಭಾವೀ ಕಲ್ಯಾಣವನ್ನು ಕೆಡಿಸಿಕೊಳ್ಳುವನು. ಪ್ರಕೃತದಲ್ಲಿ ನಿಮಗೆ ದೈವಾನುಗ್ರಹವು ತಕ್ಕಮಟ್ಟಿಗೆ ಉತ್ತಮವಾಗಿರುವುದಾದರೂ ಧರ್ಮದಲ್ಲಿ ಶ್ರದ್ಧೆಯು ಕಂಡುಬರುವುದಿಲ್ಲ. ಕಾರಣ ಕರ್ಮಸ್ಥಾನದಲ್ಲಿರತಕ್ಕ ಶನೈಶ್ಚರನು ನಿಮ್ಮ ಮನಸ್ಸನ್ನು ಅಪಹರಿಸಿ ತನ್ನದನ್ನಾಗಿ ಮಾಡಿಕೊಂಡಿರುವನು. ಆದಕಾರಣ ನಿಮ್ಮಲ್ಲಿ ಬುದ್ಧಿವಂತಿಕೆ, ಧನಸಂಪತ್ತು ಬೇಕಾದಷ್ಟಿದ್ದರೂ ಸುಹೃದರನು ಕೂಡ್ಯವಿದ್ದರೂ ಕರ್ಮದೋಷದಿಂದಾಗಿ ಅಪವಾದದ ಮಾತಿಗೆ ಸಿಲುಕುವಿರಿ. ತಾ. 27-2-3 ಈ ದಿನಗಳು ಪ್ರತಿಕೂಲಗಳಾಗಿವೆ.

ಸಿಂಹರಾಶಿ—

ಸಾಹಸಪ್ರಿಯರಾದ ನಿಮ್ಮಂತವರಿಗೆ ಕಾಲವು ಸ್ವಲ್ಪಮಟ್ಟಿನ ಅನುಕೂಲವಾಗಿರುವುದು. ಮಾನಸಿಕ ಸುಖವು ಬೇಕಾದಷ್ಟು ಧನವೂ ಸಿಗಲಿದೆ. ನಿತ್ಯ ಸಂಸಾರದ ಖರ್ಚಿಗೆ ಸಾಕಾಗುವಷ್ಟು ಧನಧಾನ್ಯವಸನಗಳು ಅನಾಯಾಸದಿಂದ ದೊರೆವುವು. ಆದರೆ ನೀವು ಪರವಂಚನೆ, ವಿಶ್ವಾಸಘಾತುಕತನ, ಪರೋತ್ಕರ್ಷದಲ್ಲಿ ಅಸೂಯೆ ಇವುಗಳನ್ನು ಎಣಿಸಬೇಡಿ. ನಿಶ್ಚಯವಾಗಿ ಇದರಿಂದ ನಿಮಗೆ ಶ್ರೇಯಸ್ಸಿದೆ. ಅದರೆ ಸದ್ಯದ ಗ್ರಹಸ್ಥಿತಿಯಲ್ಲಿ ನೀವು ಉಪಕೃತರಿಗೆ ಎರಡೆಣಿಸತಕ್ಕವರಾಗುವಿರಿ. ನಯನುಡಿಗಳೆಂಬುದು ನಿಮ್ಮಲ್ಲಿ ಇಲ್ಲವೇ ಇಲ್ಲ. ಆದಕಾರಣ ಜನರಲ್ಲಿ ಕಲಹ, ಅಪಮಾನ ತಿರಸ್ಕಾರಗಳೇ ದೊರೆಯುವವು. ವಿದ್ಯಾಭಿಲಾಷಿಗಳಿಗಂತೂ ಈ ವಾರವು ಬಹಳ ಪ್ರತಿಕೂಲವಾಗಿರುವುದು, ಅಧ್ಯಯನ ಭಾಗಕ್ಕೆ ಪ್ರತಿಕೂಲಗಳು ಅಧಿಕವಾಗುವವು. ಆರೋಗ್ಯದ ಮಟ್ಟಿಗೆ ಉತ್ತಮವಾಗಿಲ್ಲವು. ತಾ. 27ರಿಂದ 30ರವರೆಗೂ, ಶತ್ರುಪೀಡೆ ಕಾರ್ಯಹಾನಿ ಶೋಕಗಳೇ ಅಧಿಕವಾಗುವವು.

ಕನ್ಯಾರಾಶಿ—

ಇಷ್ಟರ ವರೆಗೆ ಕಷ್ಟದಲ್ಲಿ ನರಳಿ ಬಹಳ ಬೇಸತ್ತಿರುವ ನಿಮ್ಮ ಜೀವನದಲ್ಲಿ ಈಗೀಗ ಸ್ವಲ್ಪ ಆಮೋದಯುಕ್ತಂಟಾಗಿದೆ. ಒಳ್ಳೇ ಸೂಕ್ಷ್ಮವಿಚಾರದಿಂದ ಮಾಡತಕ್ಕ ನಿಮ್ಮ ಪ್ರತಿಯೊಂದು ಕಾರ್ಯಗಳೂ ಯೋಗ್ಯ ಫಲವನ್ನು ಕೊಡುತ್ತವೆ. ನಿಮ್ಮ ಆರ್ಥಿಕ ಭಾಗವು ಬಹಳವಾಗಿ ಸುಧಾರಿಸುವುದು. ವಿರೋಧಿಗಳೂ ಕೂಡ ನಿಮ್ಮ ಕಾರ್ಯ ಚಾತುರ್ಯಕ್ಕೆ ತಲೆದೂಗುವರು. ಹಿಂದುಮುಂದಿನ ವಿಚಾರಮಾಡದೆ ಕೇವಲ ಉತ್ಸಾಹಾತಿರೇಕದಿಂದ ಕಾರ್ಯವನ್ನು ಮುಂದರಿಸಿದರೆ ಪಶ್ಚಾತ್ತಾಪ ಪಡಬೇಕಾದ ಪ್ರಸಕ್ತಿ ಬಂದೀತು. ವಿದ್ಯಾರ್ಥಿಗಳಿಗೆ ಅನೇಕ ತೊಂದರೆಗಳು ಗಂಟುಬೀಳುವವು, ನೌಕರರಿಗೆ ಕೆಲಸಕ್ಕೆ ತಕ್ಕ ಫಲವು ದೊರೆಯಲಾರದು. ಮಕ್ಕಳ ಅನಾರೋಗ್ಯ ನಿಮಿತ್ತ ಧನ ವ್ಯಯಿಸುವಿರಿ. ಇಷ್ಟಮಿತ್ರರ ಸಮಾಗಮವಾಗುವುದು. ಅವರ ಮೂಲವಾಗಿ ಇಷ್ಟಭೋಜನ ಧನಲಾಭಾದಿಗಳೂ ಕೂಡ ಉಂಟಾಗಲಿವೆ. ಆಡಿದ ಮಾತನ್ನು ಸಾಧಿಸಲು ಬೇಕಾದ ಶಕ್ತಿ ಯುಕ್ತಿ ಸೈಮರ್ಥ್ಯಗಳು ತುಂಬಾ ಇರುವವು. ತಾ. 27-2-3 ಈ ದಿನಗಳು ಅತ್ಯುತ್ತಮಗಳಾಗಿವೆ.

ತುಲಾರಾಶಿ—

ವರಂ ಪರ್ವತದುರ್ಗೇಷು ಭ್ರಾಂತಂ ವನಚರೈಸ್ಸಹ ! ನ ಮೂರ್ಖ ಜನಸಂಸರ್ಗಃ ಸುರೇಂದ್ರಭವನೇಷ್ವಪಿ ॥ ಮೂರ್ಖಜನರಿಂದ ಕೂಡಿಕೊಂಡು ಸ್ವರ್ಗದಲ್ಲಿ ವಾಸಿಸುವುದಕ್ಕಿಂತಲೂ ವನ್ಯಪ್ರಾಣಿಗಳಾದ ಹುಲಿ ಚಿಂಕೆ ಮೊದಲಾದ ಮೃಗಗಳಿಂದ ಕೂಡಿಕೊಂಡು ಕಾಡಿನಲ್ಲಿ ವಾಸಿಸುವುದು ಎಷ್ಟೋ ಮೇಲು ಎಂದು ನೀತಿವಾಕ್ಯವಿರುವುದು. ಕಾರಣ ಸರ್ಪ ಚೇಳು ಮುಂತಾದ ಪ್ರಾಣಿಗಳಿಗೆ ಹಲ್ಲು ಬಾಲಗಳಲ್ಲಿ ವಿಷವಿರುವುದಾದರೂ ಮೂರ್ಖಜನರ ದೇಹವೇ ವಿಷಮಯವಾಗಿರುವುದು ಈ ವಿಚಾರವನ್ನು ನೀವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ನಿಮ್ಮ ಕಾರ್ಯಕ್ಕೆ ಶತ್ರುಗಳು ನಾನಾರೀತಿಯಿಂದ ವಿಘ್ನಮಾಡುವರು. ನಿಮ್ಮ ಮನೋರೋಗವು ವಿಶೇಷ ಪ್ರಬಲವಾಗುವುದು. ಪ್ರವಾಸಗಳನ್ನು ಈ ವಾರದಲ್ಲಿ ಕೈಬಿಡುವುದೊಳ್ಳಿತು. ರಾಜಕೀಯವಿಚಾರದಲ್ಲಿ ನಿಮ್ಮ ಅಭೀಷ್ಟವು ನೆರವೇರುವುದು. ಸಂಸಾರವು ಕ್ರಮದಂತಿರುವುದು. ತಾ. 28-29 ಈ ದಿನಗಳಲ್ಲಿ ಕೆಲಸಕ್ಕೆ ತಕ್ಕ ಫಲ ಸ್ವೀಕೃತಕಾರ್ಯ ಸಿದ್ಧಿಯಾಗಲಿದೆ.

ವೃಶ್ಚಿಕರಾಶಿ—

ನಿಮ್ಮ ರಾಶಿಯನ್ನು ನೋಡಿದೊಡನೆ ಪಕ್ಕನೊಂದು ಶ್ಲೋಕವು ನೆನಪಾಯಿತು. ಏನಂದರೆ, ಭಾಗ್ಯವಂತಂ ಪ್ರಸೂಯೇಥಾಃ ಮಾ ಶೂರಂ ಮಾ ಚ ಪಂಡಿತಂ । ಶೂರಾಶ್ಚ ಕೃತವಿದ್ಯಾಶ್ಚ ವನೇ ಸೀದಂತಿ ಪಾಂಡವಾಃ ॥ ಒಳ್ಳೇ ಭಾಗ್ಯವಂತರಾದ ಮಕ್ಕಳನ್ನೇ ಪಡೆ. ಪರಾಕ್ರಮಿಗಳನ್ನಾಗಲೀ ಪಂಡಿತರನ್ನಾಗಲಿ ಹೊಂದಬೇಡ. ಯಾಕೆಂದರೆ ತ್ರಿಲೋಕ ವಿಜಯಿಗಳೂ ಅಸದೃಶ ಪಂಡಿತರೂ ಆದ ಪಾಂಡವರು ವಾಸಿಸಿದ್ದು ಅರಣ್ಯದಲ್ಲಷ್ಟೆ. ಆದಕಾರಣ ಪರಾಕ್ರಮ ವಿದ್ಯೆಗಳಿಗಿಂತಲೂ ಅದೃಷ್ಟವೇ ಮೇಲಾಗಿರುವುದು. ಸದ್ಯದ ಗ್ರಹರ ವಿನ್ಯಾಸವನ್ನು ನೋಡುವಾಗ ನೀವು ಒಳ್ಳೇ ಅದೃಷ್ಟಶಾಲಿಗಳಾಗಿರುವಿರಿ. ಯಾವ ಭಾಗದಲ್ಲೂ ನಿಮ್ಮ ಇಷ್ಟಕ್ಕೆ ವಿರೋಧ ಕಾಣದು. ಧನವಿಷಯವಾಗಿಯೂ ಮಾನಸಿಕ ಶಾರೀರಿಕ ಸುಖದ ಸಲುವಾಗಿಯೂ ನೀವು ವಿಚಾರಮಾಡಬೇಕಾದ ಆವಶ್ಯಕತೆಯಿಲ್ಲ. ಸಾಲದ ಹಣವಸೂಲಿ ಬಗ್ಗೆ ಕೋರ್ಟಿಗೆ ಹೋಗುವ ಪ್ರಸಕ್ತಿ ಬರಬಹುದು. ತಾ. 27-30-31-1 ಈ ದಿನಗಳು ನಿಮ್ಮ ಇಷ್ಟಪ್ರದಗಳಾಗಿವೆ.

ಧನೂರಾಶಿ—

ಯಾವುದೊಂದು ಕಾರ್ಯದಲ್ಲೂ ನಿಮ್ಮ ಮನೋರಥವು ನೆರವೇರದಿರುವುದರಿಂದ ಕಾರ್ಯದಲ್ಲಿ ನಿರುತ್ಸಾಹ, ಜಿಗುಪ್ಸೆಗಳು ಹೆಚ್ಚುವುವು. ರಾಜಕೀಯ ವಿಚಾರದಲ್ಲಿ ಅನಿಷ್ಟಗಳೇ ಪ್ರಾಪ್ತವಾಗಿ ತನ್ನಿಮಿತ್ತ ಧನವ್ಯಯವು ಅಧಿಕವಾಗುವುದು. ವಿಪಕ್ಷೀಯರಿಂದ ಸದಾ ವಿಘ್ನಗಳು ಉಪಸ್ಥಿತವಾಗುವುವಲ್ಲದೆ ಬಂಧುಜನರೂ ಕೂಡ ಅವರ ಸಾಲನ್ನೇ ಅನುಸರಿಸುವರು. ನಿತ್ಯ ಕಲಹಯುಕ್ತರಾದ ನಿಮಗೆ ಸ್ವಗೃಹದಲ್ಲೂ ಸುಖ ದೊರೆಯದು. ಪುತ್ರಭೃತ್ಯರೂ ನಿಮಗೆ ವಿರೋಧವಾಗಿ ವರ್ತಿಸುವರು. ಪತ್ನಿಯಂತೂ 'ನಾರೀ ಪ್ರತ್ಯಕ್ಷರಾಕ್ಷಸೀ' ಎಂಬ ಹೆಸರನ್ನು ಸಾರ್ಥಕಗೊಳಿಸುವಳು. ಅಂತೂ ನಿಮಗೀ ವಾರದಲ್ಲಿ ಹಿತಚಿಂತಕರೆಂಬವರಾರೂ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಸದಾ ಮನೋರೋಗದಿಂದ ಪೀಡಿತರಾದ ನಿಮಗೆ ನಿದ್ರಾಹಾರಗಳು ಕಾಲಕಾಲಕ್ಕೆ ದೊರೆಯದೆ ಪಿತ್ತೋಷ್ಣ ಸಂಬಂಧಗಳಾದ ರೋಗಗಳುದ್ಭವಿಸುವವು. ದುಃಸ್ವಪ್ನಗಳು ಹೆಚ್ಚಾಗಿ ಬೀಳುವವು. ಆರ್ಥಿಕ ಭಾಗದಲ್ಲಂತೂ ನಿಮಗೆ ನೆಮ್ಮದಿಯಿಲ್ಲವು. ತಾ. 28, 29, 2, 3 ಈ ದಿನಗಳಲ್ಲಿ ಇಷ್ಟಾರ್ಥಗಳು ನೆರವೇರದಿದ್ದರೂ ಅನಿಷ್ಟಗಳು ಸ್ವಲ್ಪ ಕಡಿಮೆಯಾಗುವವು

ಮಕರರಾಶಿ—

ನರನು ಕೈಸೋತ ಕಾಲಕ್ಕೆ ಎರೆಹುಳಗಳೂ ಕೂಡ ನಾಗರಹಾವಿನಂತೆ ವರ್ತಿಸುವವು. ಇದೇ ರೀತಿಯಾದ ಅವಸ್ಥೆಯು ನಿಮಗೆ ಬಂದಿದೆ ಈ ವಾರದಲ್ಲಿ ನೀವು ಏನೊಂದು ಪ್ರತಿಕ್ರಿಯೆಯನ್ನು ಮಾಡಲು ಶಕ್ತಿಯಿಲ್ಲದ ಮೂವಿ ಸಿಂಹದಂತಾಗಿರುವಿರಿ. ಆದಕಾರಣ ಶತ್ರುಜನರು ಸುತ್ತಲಿಂದಲೂ ನಿಮ್ಮ ಮೇಲೆ ಕಲ್ಲೆಸೆಯುತ್ತಿರುವರು. ಚೆದರಿದ ಹುಲ್ಲೆಯಂತಿರುವ ನಿಮ್ಮ ಮನಸ್ಸನ್ನು ಸ್ಥಿರೀಕರಿಸಿ ಒಂದೆಡೆ ನಿಲ್ಲಿಸುವುದು ನಿಮ್ಮಿಂದಾಗದ ಮಾತು. ಆದಕಾರಣ ನೀವು ಯಾವ ಕಾರ್ಯವನ್ನೇ ಆಗಲಿ ಪೂರ್ತಿಮಾಡುವಂತಿಲ್ಲ. ಒಂದು ವೇಳೆ ದೈವಾನುಕೂಲವಿರುತ್ತಿದ್ದರೆ ನಿಮ್ಮ ಶ್ರಮವಿಲ್ಲದೇನೇ ಕಾರ್ಯ ಸಾಗುತ್ತಿತ್ತು. ಆದರೆ ದೈವಬಲವು ನಿಮಗಿಲ್ಲದಾಗಿದೆ. ಅನ್ಯಾಯ ಅನಾಚಾರಗಳು ನೆಲೆಯೂರಿದಲ್ಲಿ ದೈವಾನುಗ್ರಹವಿರುವಂತಿಲ್ಲವು. ನಿಮ್ಮ ವರ್ತನೆಯು ಕೈಹಿಡಿದಾಕೆಗೂ ಮಿತ್ರರಿಗೂ ಸರಿ ತೋರದು. ವಾತಜನಿತ ರೋಗವು ಶರೀರದಲ್ಲಿ ಅಲ್ಲಲ್ಲಿ ತೋರಿಬರಲಿದೆ. ತಾ. 27, 30, 31 ಈ ದಿನಗ

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES — — — — — MANGALORE.

HALT???



HAVE YOU RECEIVED ???.

Our new illustrated copy containing latest varieties of modern Swiss made Guaranteed Lever Watches?

ರೂ. ೩ರಿಂದ ರೂ. ೬೦ರ ವರೆಗೆ ಬೆಲೆಯುಳ್ಳವು.

ನಂ. 517 ಕ್ರೋಮಿಯಂ ಕೇಸ್ ರೂ. 6-8-0.

„ 518 ಬಂಗಾರದ ಕೇಸ್, ರೂ. 8-0-0.

„ 518A. ರೋಲ್ಡ್ ಗೋಲ್ಡ್ 10ವರ್ಷಗಳದ್ದು ರೂ 12-8-0.

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚು 0-9-0 ಪ್ರತ್ಯೇಕ.

ಮುಕ್ತವಿವರಗಳಿಗಾಗಿ ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ.

ವಿ. ಸೂ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ.

BAPALAL & Co., (N. U.)

101, ABDUL RAHIMAN ST. BOMBAY, 3.

ನವಸೃಷ್ಟಿ

ಈ ವಿಭಾಗದಲ್ಲಿ ಪುಸ್ತಕಗಳ ವಿಮರ್ಶೆಯನ್ನು ಕೊಡಲಾಗುವುದು. ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗುವುದು.

ಸಂ. ಸ.

ಪ್ರೇಮಾಹುತಿ (ಎನ್ನಾ ಕೆರಿನಿನಾ):- ಮನೋಹರ ಗ್ರಂಥಮಾಲೆಯ ೩೨-೩೩ನೆಯ ಕುಸುಮ, ಅನುವಾದಕರು:-ಗುರುರಾಜ ಭೀ ಜೋಶಿ, ಎಂ. ಎ. ಬಿ. ಟಿ.

ಬೆಲೆ: ೧—೮—೦.

ಇದು ರಷ್ಯದ ಕ್ರಾಂತಿಪುರುಷ ಮಹರ್ಷಿ ಟಾಲಸ್ಟಾಯಿಯರು ಬರೆದ 'ಎನ್ನಾ ಕೆರಿನಿನಾ' ಎಂಬ ಅದ್ಭುತ ರಮ್ಯವಾದ ಕಾದಂಬರಿಯ ಸಂಗ್ರಹಿತ ಅನುವಾದ. ಟಾಲಸ್ಟಾಯಿಯವರಂತೆ ಪ್ರಸಿದ್ಧರಾದ ಬರೆಹಗಾರರು, ತಾತ್ವಿಕರು ಜಗತ್ತಿನಲ್ಲಿ ಹೆಚ್ಚು ಮಂದಿ ದೊರೆಯಲಾರರು. ಅವರ ಪ್ರತಿಭೆಯು ಅಪಾರವಾದುದು, ಅವರ ಅನುಭವವು ಅಗಾಧವಾದುದು, ಅವರ ತಿಳುವು ಅಸಾಧಾರಣವಾದುದು, ಎನ್ನಾ ಕೆರಿನಿನಾ ಎಂಬ ಈ ಕಾದಂಬರಿಯು ಜಗತ್ಪ್ರಸಿದ್ಧವಾದುದು.

ಎನ್ನಾ ಕೆರಿನಿನಾ—ಇದು ಕಾದಂಬರಿಯೆಂದರೂ, ಇದೊಂದು ನಿಜವಾದ ಜೀವನ ಚರಿತ್ರೆಯಂತೆಯೇ ತೋರುವುದು. ರಶಿಯನರ ಜನಜೀವನ, ರಾಜಕೀಯ ವಿಚಾರ, ಧಾರ್ಮಿಕ ರೀತಿನೀತಿಗಳು, ತತ್ವ ವಿಚಾರವು, ಪ್ರೇಮ, ಪ್ರಣಯ, ರಾಜಕಾರಣ ಪಟುತ್ವ, ಸಂಸಾರದ ಸಾರಾಸಾರ ವಿಚಾರ ವಿಷಯಗಳನ್ನು ಟಾಲಸ್ಟಾಯಿಯವರು ತನ್ನಲ್ಲಾದ ವಿಚಾರ ಪರಿಪಾಕದಿಂದ ಮನಮುಟ್ಟುವಂತೆ ಚಿತ್ರಿಸಿರುವರು. ಈ ಕಾದಂಬರಿಯನ್ನು ಓದುವುದರಿಂದ ಮಹರ್ಷಿ ಟಾಲಸ್ಟಾಯರ ಅದ್ಭುತ ಕಲ್ಪನಾ ಶಕ್ತಿ, ಪ್ರಪಂಚದ ಜೀವಿತ ವಿಚಾರ ಪರಂಪರೆಗಳ ಮೂಲೆಗಳನ್ನೇ ಹೆಣೆಯುವ ಬುದ್ಧಿಶಕ್ತಿ, ಪ್ರೇಮ ಮೋಹಗಳ ರೂಪರೇಖೆಗಳನ್ನು ಚಿತ್ರಿಸುವ ವಿಪುಲ ಪ್ರತಿಭೆ, ಅವರ ರಸವಂತಿಕೆಯ ಕಲಾಕೌಶಲ್ಯ, ಅಂತರಾಳದಲ್ಲಿ ಅವರು ಜಗತ್ತನ್ನು ಕಾಣುತ್ತಿರುವ ತತ್ವಭಾವ—ಇವೆಲ್ಲಾ ವ್ಯಕ್ತವಾಗುವುವು.

ಪ್ರೇಮಾಹುತಿಯಲ್ಲಿ ಜಿ. ಬಿ. ಜೋಶಿಯವರು, ಮಹಾತ್ಮ ಟಾಲಸ್ಟಾಯಿಯವರ ಸಭಾವಗಳಿಗೆ ಭಂಗಬಾರದಂತೆ 'ಎನ್ನಾ ಕೆರಿನಿನಾ' ಅದ್ಭುತ ಕಾದಂಬರಿಯ ಅನುವಾದವನ್ನು ಸಂಗ್ರಹಿಸಿ ಕೃತಾರ್ಥರಾಗಿರುವರು. ಬಹು ವಿಸ್ತಾರವಾದ ಮೂಲ ಕಾದಂಬರಿಯನ್ನು 300 ಪುಟಗಳೊಳಗೆ ಬಿಪ್ಪಿಯಳಿಸಿ, ಮೂಲ ಲೇಖಕರ ಆಶಯವನ್ನೇ ಪರಿಪಾಲಿಸುವ ಹೊಣೆಗಾರಿಕೆಯನ್ನು ನಿರ್ವಹಿಸುವುದರಲ್ಲಿ ಶ್ರೀ. ಜೋಶಿಯವರು ಕೃತಕೃತ್ಯರಾಗಿರುವರು.

ಇದರಲ್ಲಿ ನಿರೂಪಿತವಾದ ಪಾತ್ರಗಳ ವರ್ಣನೆ ಹೃದಯಾಕರ್ಷಕವಿದೆ. ಎನ್ನಾ ಮತ್ತು ಕೆರಿನಿನ್ನ, ಡೋಲಿ ಮತ್ತು ಅಬ್ಲಾಂಸ್ಕಿ, ಕಿಟಿ ಮತ್ತು ಲೆವ್ಹಿನ್ನ—ಇವರ ದಾಂಪತ್ಯ ಜೀವನದಲ್ಲಿ ಪ್ರೇಮದ ವಿಲಿಳಿತಗಳ ಕಾರಣದಿಂದ ಉಂಟಾಗುವ ಸುಖದುಃಖಗಳ ಪರಿಣಾಮ, ಆಶೆನಿರಾಶೆಗಳ ವಿಚಾರ, ಪ್ರೇಮವು ಸಾಂಸಾರಿಕ ಜೀವನದಲ್ಲಿ ಪಡೆದಿರುವ ಮಹತ್ವ ಇವೆಲ್ಲ ಮಾರ್ಮಿಕವಾಗಿ ಚಿತ್ರಿತವಾಗಿವೆ. ಎನ್ನಳ ಗಂಡ ಕೆರಿನಿನ್ನನು ಪ್ರತಿಷ್ಠಿತ ಮನುಷ್ಯ, ರಾಜಕಾರಣ ಪಟು, ದೂರದರ್ಶಿ, ಆದರೆ, ಎನ್ನಳು ಅವನಿಗಿಂತ ಎಷ್ಟೋ ಕಿರಿಯಳು ಮತ್ತು ರಸಿಕಳು. ಅವಳು ಕೆರಿನಿನ್ನನಲ್ಲಿ ತನಗೆ ಬೇಕಾದ ಪ್ರೇಮ ಹೊಳಪನ್ನು ಕಾಣದೆ ಒಬ್ಬ ಶ್ರೀಮಂತ ಸೈನಿಕನಾದ ವ್ರೊನಸ್ಕಿಯ ರೂಪ, ಡೌಲು, ಮೋಜು ಇವುಗಳಿಂದ ಆಕರ್ಷಿತಳಾಗುವಳು, ಅವನನ್ನು ಬಹಿರಂಗವಾಗಿ ಪ್ರೀತಿಸುವಳು, ಸಮಾಜದಲ್ಲಿ ಅಗ್ರಗಣ್ಯಸ್ಥಾನವನ್ನು ಪಡೆದ ಕೆರಿನ್ನನು ತನ್ನ ಪತ್ನಿಯನ್ನು ಸಮಾಜದ ಹೊರದೃಷ್ಟಿಗಾದರೂ ನೇರವಾಗಿ ನಡೆದರೆ ತಾನು ಅವಳಿಗೆ ಬೇಕಾದ ಸ್ವಾತಂತ್ರ್ಯವನ್ನು ಕೊಡಬೊಪ್ಪಿಗೆಯವನಿದ್ದನು, ಆದರೆ ಎನ್ನಳು ಮನಬಂದಂತೆ ನಡೆಯುವಳು, ಮದುವೆ, ಸಮಾಜ, ರೂಢಿ, ಪದ್ಧತಿಯನ್ನು ಪ್ರೇಮದ ಭರದಲ್ಲಿ ಒಡೆಯಲು ನೋಡುವಳು, ಆದರೆ, ಹಿಡಿತ ತಪ್ಪಿ ನಡೆದ ಅವಳ ಜೀವನವು ಶಾಂತಿರಹಿತವಾಯಿತು, ಕೊನೆಗೆ ವ್ರೊನಸ್ಕಿಯ ಪ್ರೇಮದಲ್ಲಿಯೂ ಸಂಶಯಗೊಂಡು ಹೃದಯದ ಬೇಗುದಿಯನ್ನು ಸಹಿಸಲಾರದೆ, ಭೀಕರ ಅವಸಾನವನ್ನು ಹೊಂದುವಳು. ಎನ್ನಳ ಹೃದಯದ ಬೇಗೆ, ನಿರಾಶೆ, ದುಃಖ, ಭಯಾನಕ ಅವಸಾನದ ವೇಳೆ, ಹಾ! ಇಂಥಾ ಕುಲೀನೆ, ರೂಪವತಿ, ಯೋಗ್ಯ ಹೆಂಗಸು, ಪ್ರೇಮವಿಲ್ಲದ ಮದುವೆಯಿಂದ, ಮನಬಂದಂತೆ ನಡೆದು ದುರ್ಭಾಗಿಯಾದಳಲ್ಲಾ! ಎಂದು ಮನಮರುಗುವುದು. ಕೆರಿನಿನ್ನನ ಕ್ಷಮಾಶೀಲತೆ, ಔದಾರ್ಯಭಾವಗಳ ಕಡೆಗೂ ಓದುವವರ ಸಹಾನುಭೂತಿ ಹೋಗುವುದು. ಡೋಲಿಯು ಒಂದು ಮನೆತನದ ಯಜಮಾನತಿಯಾಗಲು ಯೋಗ್ಯಳು, ಚಂಚಲೆಯಂಥ ಬಳಲಿ ಬತ್ತಿದ ಹೆಣ್ಣು, ಗಂಡನಿಗಿಂತ ಒಂದೇ ವಯಸ್ಸಿಗೆ ಪ್ರಾಯದಲ್ಲಿ ಚಿಕ್ಕವಳು. ಗಂಡನು ಕೇವಲ ತನ್ನ ಸುಖಭೋಗಕ್ಕಾಗಿ, ಸ್ವಲ್ಪ ಅದ್ದಕಾಲು ತುಳಿದರೆ ಆವಳು ಲಕ್ಷ್ಯಕ್ಕೆ ತರಬಾರದೆಂದು ಭಾವಿಸುವ ಅವಳ ಗಂಡ ಅಬ್ಲಾಂಸ್ಕಿಯ ವಿಚಾರವು ಸಾಮಾನ್ಯವಾಗಿ ನಮ್ಮ ಕಣ್ಣ ಮುಂದಿರುವ ಹಲ ಗೃಹಸ್ಥರ ಚಿತ್ರದಂತಿವೆ. ಡೋಲಿಯು ತನ್ನ ಗಂಡನು ಮಕ್ಕಳ ಶಿಕ್ಷಕಿಯೊಂದಿಗೆ ಗುಪ್ತಸಂಬಂಧವನ್ನಿಟ್ಟುಕೊಂಡ ಕಾರಣಕ್ಕಾಗಿ ಮಾರ್ಮಿಕವಾಗಿ ಸ್ತ್ರೀ ಹೃದಯದ ಮಾತುಗಳಿಂದ ತನ್ನ ಗಂಡನ ಅಪರಾಧವನ್ನು ಹೊರಗೆಡಹುವಾಗ, ಸ್ತ್ರೀ ಹೃದಯಕ್ಕೆ ಗಂಡನ ಹೊರಪ್ರೇಮದಿಂದ ಎಷ್ಟು ದುಃಖವಾಗುತ್ತಿದೆಯೆಂಬುದು ಭಾಸವಾಗುತ್ತದೆ. ಕಿಟಿಯು ಪ್ರೇಮವು ಒಮ್ಮೊಮ್ಮೆ ಹೊರಮಿಂಚುಗಳಿಗೆ ಆಕರ್ಷಿತವಾಗಿ, ಚಂಚಲತೆಗೆ ಒಳಪಡುವ ವಿಚಾರವು ಕೆಲವೇಳೆ ಕುಲೀನೆಯರು ಹೋಗಿನ ಸೆಳತಕ್ಕೆ ಜಾರಬೀಳಬಹುದಾದ ಅಪಾಯವನ್ನು ಸೂಚಿಸುತ್ತದೆ.

ಲೆವ್ಹಿನ್ನನು ನೀತಿವಂತನು. ಅವನ ಜೀವನವೆಂದರೆ ವಿಚಾರಸಾಧಕನದ್ದು. ಸಾಧಕನಿಗೆ ಜೀವನದ ಗುಟ್ಟನ್ನು ಅರಿಯಬೇಕೆಂಬ ಚಿಂತೆ. ಜಗತ್ತಿನ ವೈವಿಧ್ಯ, ಸುಖದುಃಖಗಳ ಕಾರಣವನ್ನು ಕಂಡರಿಯದ ಚಿಂತೆ. ದೇವರು ಇರುವನೇ? ಇದ್ದರೆ ದಯಾಮಯನಾದ ದೇವರ ಸೃಷ್ಟಿಯಲ್ಲಿ ಅನ್ಯಾಯ, ಪಕ್ಷಪಾತವೇಕೆ? ದೀನ ದುಃಖಿಗಳ ಪಾಡೇನು? ಎಂಬ ಪ್ರಶ್ನೆಯು ಮೊದಲಾಗಿ ವಿಚಾರವಂತ ಸಾಧಕನದು. ಆವನು ಅಂತಃಕರಣವುಳ್ಳವನು. ಜಗತ್ತಿನ ಭೀಕರ ಸ್ಥಿತಿ, ವಿಷಮತೆಯಿಂದ ಅವನು ದೇವರ ನ್ಯಾಯನೀತಿ, ಇರುವಿಕೆಯನ್ನು ಒಪ್ಪಲು ವಿಶ್ವಾಸಪಡಲಿಲ್ಲ. ಆದರೂ ಮಾನವನ ಹೃದಯದಲ್ಲಿ ದುರ್ಬಲತೆಯಿರುವಷ್ಟು ಕಾಲ, ಮರಣವೆಂಬುದು ಕಣ್ಣಮುಂದೆ ಸುಳಿಯುತ್ತಿರುವಷ್ಟು ಕಾಲ, ನಾಸ್ತಿಕನೆನಿಸಿದವನು ಕೂಡಾ ಒಮ್ಮೊಮ್ಮೆ 'ದೇವಾ, ರಕ್ಷಿಸು,' ಎಂದು ಆಪತ್ಕಾಲದಲ್ಲಿ ಮರುಗುವನೆಂಬುದಕ್ಕೆ ಅವನು ತನ್ನ ಪತ್ನಿ ಕಿಟಿಯ ಸಂಕಟ ಕಾಲದಲ್ಲಿ ದೇವರಿಗೆ ಮೊರೆಯಿಟ್ಟ ವಿಚಾರದಿಂದ ತಿಳಿಯಬಹುದಾಗಿದೆ. ಮಾನವನು ಹೊಟ್ಟೆಗಾಗಿ ಬಾಳುವುದಲ್ಲ. ತನ್ನ ಆತ್ಮದ ಉದ್ಧಾರಕ್ಕಾಗಿ, ದೇವರಿಗಾಗಿ ಬಾಳಬೇಕೆಂಬುದು ಅವನಿಗೆ ಅನಿಸಿದತ್ತ ಅವನ ಹೃದಯದಲ್ಲಿ ವಿಶ್ವಾಸ ಹುಟ್ಟಿತು, ದೇವರನ್ನು ವಿಚಾರದಿಂದ ಪಡೆಯಲು ಸಾಧ್ಯವಲ್ಲ. ವಿಶ್ವಾಸವೇ ಪ್ರಧಾನವಾದುದು ಎಂದು ಅವನು ಕಂಡುಕೊಂಡನು. ದೈವಿಕ ಪ್ರಕಾಶವು ಅವನ ಅಂತಃಕರಣದಲ್ಲಿ ಹೊಳೆಯತೊಡಗಿತು. ವಿಶ್ವಾಸದಲ್ಲೇ ದೇವರ ಸಾಕ್ಷಾತ್ಕಾರವೆಂದು ಅರಿತುಕೊಂಡಾಗ ಬರುವ ಶಾಂತಿ ಸಮಾಧಾನ—ಇವೆಲ್ಲಾ ಲೆವ್ಹಿನನ ಜೀವನದ ಚಿತ್ರ. ಎನ್ನಾಕೆರಿನಿನದಲ್ಲಿ ಲೆವ್ಹಿನ್ನ ಚಿತ್ರವು ಟಾಲಸಾಸ್ಟಾಯಿಯವರ ಜೀವನ ಚಿತ್ರವನ್ನು ಹೋಲುವುದು. ಅವರ ಜೀವನದ ಹಾದಿಯು ಲೆವ್ಹಿನ್ನನ ಜೀವನದಂತಿದೆ.

ಮಹಾತ್ಮಾ ಟಾಲಸ್ಟಾಯಿಯವರ ಕಾದಂಬರಿಯನ್ನು ಕನ್ನಡಕ್ಕೆ ಅನುವಾದವಾಡಿದ ಶ್ರೀಯುತ ಗುರುರಾಜ ಭೀ ಜೋಶಿ ಎಂ. ಎ. ಬಿ. ಟಿ.—ಇವರ ಕಾರ್ಯವು ಅಭಿನಂದನೀಯವಿದೆ. ಮನಸ್ಸನ್ನು ಅರಳಿಸುವ, ಹೃದಯಾಕರ್ಷಕವಾದ ಟಾಲಸ್ಟಾಯಿಯವರ ಉತ್ಕೃಷ್ಟ ಮನೋಭಾವನೆಗಳನ್ನು ಪ್ರೇಮಾಹುತಿಯಲ್ಲಿ ಸಾಧ್ಯವಾದ ರೀತಿಯಲ್ಲಿ ಒಡಮೂಡಿಸಲು ಪ್ರಯತ್ನಿಸಿ ಯಶಸ್ವಿಯಾದ ಗುರುರಾಜ ಭೀ ಜೋಶಿಯವರು ಕನ್ನಡಿಗರನ್ನು ಉಪಕೃತರನ್ನಾಗಿ ಮಾಡಿರುವರು. ಮನೋಹರ ಗ್ರಂಥಮಾಲೆಯವರು 'ಪ್ರೇಮಾಹುತಿ'ಯನ್ನು ಪ್ರಕಾಶಗೊಳಿಸಿ, ಕನ್ನಡ ಭಾಷೆಯಲ್ಲಿ ಟಾಲಸ್ಟಾಯಿಯವರ 'ಎನ್ನಾಕೆರಿನಿನಾ' ಕಾದಂಬರಿಯನ್ನೋದುವ ಸುಯೋಗವನ್ನು ತಂದುಕೊಟ್ಟುದು ಶ್ಲಾಘನೀಯವಿದೆ. ಈ ಅಮೂಲ್ಯ ಕಾದಂಬರಿಯ ಪ್ರಯೋಜನವನ್ನು ಕನ್ನಡಿಗರು ಪಡೆಯಲೆಂದು ನಮ್ಮ ಹಾರೈಕೆಯಿದೆ.

N. S. S.

ಮೊಗವೀರ ಸಾಂವತ್ಸರಿಕ (Mogaveera Annual 1939):— ಮುಂಬಾಯಿಯ ಮೊಗವೀರ ಯುವಕ ಸಂಘದವರು ನೂತನವಾಗಿ ಸಿದ್ಧಪಡಿಸಿದ ವಾರ್ಷಿಕ ಪತ್ರಿಕೆಯ ಮೊದಲ ಸಂಚಿಕೆ. ಬೆಲೆ 0-4-0.

'ಮೊಗವೀರ ಸಮಾಜದ ಕಲ್ಯಾಣಕ್ಕಾಗಿ ಜಾತಿಯದೇ ಆದ ವೃತ್ತಪತ್ರಿಕೆಯು ಅತ್ಯಗತ್ಯವೆಂ'ದು ಈ ವಾರ್ಷಿಕವು ಪ್ರಾರಂಭವಾಗಿದೆ. ಈ ಸಂಚಿಕೆಗೆ, ಶ್ರೀ. ಯು. ನಾಗಪ್ಪ, 'ಇನ್ಸ್‌ಪೆಕ್ಟರ್ ಆಫ್ ಮದ್ರಾಸು ಫಿಶ್ಶರೀಸ್ ಡಿಪಾರ್ಟ್‌ಮೆಂಟ್', ಮಂಗಳೂರು ಇವರು ಅಮೂಲ್ಯ ಸಂದೇಶವಿತ್ತು ಹರಸಿದ್ದಾರೆ. ಈ ಸಂಚಿಕೆಯಲ್ಲಿ ಮೊಗವೀರ ಸಮಾಜಕ್ಕೆ ಸಂಬಂಧಿಸಿದ ಕೆಲವು ಲೇಖನಗಳೂ ಇತರರಿಗೂ ಅನುಕೂಲವಾದ ಕೆಲವು ಲೇಖನ್ಯಕತೆ-ಕವನಗಳೂ ಇವೆ. 'ಮೊಗವೀರ ಸಮಾಜದ ಸಂಕ್ಷಿಪ್ತ ಚರಿತ್ರೆ' ಮೊಗವೀರರ ಅವನತಿಯೂ, ಅದರ ನಿವಾರಣೋಪಾಯವೂ, ಮೊಗವೀರ ಮಹಿಳೆಯರ ಅವನತಿಯೂ ಅದರ ನಿವಾರಣೋಪಾಯವೂ Health & Sanitation of Mogaveera Community ಎಂಬಿತ್ಯಾದಿ ಲೇಖನಗಳು ಪ್ರತಿಯೊಬ್ಬ ಮೊಗವೀರನೂ ಅತ್ಯಾವಶ್ಯಕವಾಗಿ ಓದತಕ್ಕವುಗಳಾಗಿವೆ.

ಇವರಲ್ಲಿ ಕೆಲವು ಇಂಗ್ಲಿಷ್ ಲೇಖನಗಳಿಗೂ ಎಡೆಗೊಡಲಾಗಿದೆ. ಸಾಮಾನ್ಯವಾಗಿ ಇಂಗ್ಲಿಷ್ ಕನ್ನಡ ಲೇಖನಗಳೆಲ್ಲವೂ ವಾಚನೀಯವಾಗಿವೆ. ಮಂಗಳೂರಿನ ಕೆನರಾ ಪ್ರೆಸ್ಸಿನಲ್ಲಿ ಮುದ್ರಣಗೊಂಡ ಈ ಸಂಚಿಕೆಯ ಅಂತರಂಗ ಬಹಿರಂಗಗಳು ಉತ್ತಮವಿದ್ದು ಪ್ರತಿಯೊಬ್ಬರೂ ಮುಖ್ಯವಾಗಿ ಪ್ರತಿಯೊಬ್ಬ ಮೊಗವೀರನೂ ಸಂಗ್ರಹಿಸುವಂಥದಾಗಿದೆ. ಇದು ಯುವಕ ಸಂಘದ ಪ್ರಥಮ ಪ್ರಯತ್ನವಿದ್ದಾಗ್ಯೂ ಸಾಕಷ್ಟು ಸಫಲವಾಗಿದೆಯೆನ್ನಬಹುದು. ಸಾರ್ವಜನಿಕರ ಮತ್ತು ಸಮಾಜದವರ ಸಾಕಷ್ಟು ಪ್ರೋತ್ಸಾಹವು ದೊರೆತು ಸಾಂವತ್ಸರಿಕವು ಮಾಸಿಕವಾಗಿ ಹೊರಡುವಂತಾಗಲೆಂದೂ ಯುವಕ ಸಂಘದವರ ಮತ್ತು ಸಂಪಾದಕರ ಈ ಹೊಸ ಸಾಹಸೋದ್ಯಮವು ಜಯಶೀಲವಾಗಲೆಂದೂ ಹಾರೈಸುವೆವು.

ಜನರಲ್ ಸೇಲ್ಸ್ ಟೇಕ್ಸ್ ಮಸೂದೆ (Madras General Sales Tax Act IX of 1939)— ಸಾಮಾನುಗಳ ವಿಕ್ರಯದ ಮೇಲೆ ಸಾಮಾನ್ಯ ತೆರಿಗೆಯನ್ನು ಹೊರಿಸುವುದಕ್ಕೋಸ್ಕರ ತಯಾರಿಸಲಾದ ಕಾನೂನಿನ ಪುಸ್ತಕವಿದು. ಇದರಲ್ಲಿ ಇಂಗ್ಲಿಷ್ ಮೂಲವೂ ಕನ್ನಡ ಭಾಷಾಂತರವೂ ಇದ್ದು ಸಕಲರಿಗೂ ಸಂಗ್ರಹಯೋಗ್ಯವಾಗಿದೆ. ವ್ಯಾಪಾರಿಗಳಿಗಂತೂ ಈ ಪುಸ್ತಕವು ಅತ್ಯಂತ ಉಪಯುಕ್ತವಾದುದು. ಇದನ್ನು ಭಾಷಾಂತರಿಸಿದವರು ಶ್ರೀ. ಕೆ. ಯಂ. ಬಾಬುಸೆಟ್ಟರು ಕಾಸರಗೋಡು. ಪ್ರಕಾಶಕರು ಶ್ರೀ. ಕೆ. ವಾಮನ ಶೆಣೈಯವರು, ಮುದ್ರಣಗಾರರು ಕಾಸರಗೋಡಿನ ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್‌ನವರು. ಇದಕ್ಕೆ ಶ್ರೀ. ಬಿ. ವೆಂಕಟರಾಯ ಬಾಳಿಗ, ಬಿ. ಎ. ಬಿ. ಎಲ್. ಎಂ. ಎಲ್. ಎ. ರವರು ಮುನ್ನುಡಿಯನ್ನು ಬರೆದಿದ್ದಾರೆ. ದಕ್ಷಿಣ ಜಿಲ್ಲೆಯ ವ್ಯಾಪಾರಿಗಳು ಈ ಪುಸ್ತಕದ ಪ್ರಯೋಜನವನ್ನು ಪಡೆಯುವರೆಂದು ನಂಬುತ್ತೇವೆ. ಪ್ರತಿಯೊಂದರ ಬೆಲೆ: 0-4-0.

ವರದಿಗಳು

ಅಖಿಲ ಕರ್ನಾಟಕ ಮಕ್ಕಳ ಕೂಟ

ಬೆಂಗಳೂರು—ಇದರ ಮೊದಲನೇ ವರ್ಷದ ವರದಿ ಪ್ರಕಟಣೆಗೊಂಡು ನಮ್ಮ ಬಳಗೆ ಬಂದಿದೆ. ಇದರ ಅಧ್ಯಕ್ಷರು 'ಸರಸ್ವತಿ'ಯ ಶ್ರೀಮತಿ ಆರ್. ಕಲ್ಯಾಣಮ್ಮನವರು, ಉಪಾಧ್ಯಕ್ಷರು 'ವಿಮಾವಾಣಿಜ್ಯ'ದ ಶ್ರೀ ಜಿ. ವಿ. ದೊಡ್ಡವೀರಪ್ಪನವರು. ಮಕ್ಕಳ ಕೂಟಗಳನ್ನು ನಿರಂತರವಾಗಿ ಏರ್ಪಡಿಸುತ್ತ, ಮಕ್ಕಳ ತಿಳುವಳಿಕೆ, ಉತ್ಸಾಹ, ಆನಂದಗಳನ್ನು ಹೆಚ್ಚಿಸುವ ಕಾರ್ಯಗಳನ್ನು ಕೈಗೊಳ್ಳಲಿಕ್ಕೂ ಈ ಕೂಟವು ಏರ್ಪಟ್ಟಿದೆ. ಸಂಸ್ಥೆಯು ರಿಜಿಸ್ಟರು ಮಾಡಲ್ಪಟ್ಟು ಕೆಲಸ ಮಾಡುತ್ತಿದೆ. ವರದಿಯ ವರ್ಷದಲ್ಲಿ 8 ಸಭೆಗಳಾಗಿವೆ, ಎರಡು ಸಂತೋಷ ಕೂಟಗಳಾಗಿವೆ, ಮುಂದ್ಯ ಕೋಲಾರಗಳಲ್ಲಿ ಎರಡು ಶಾಖೆಗಳಾಗಿವೆ. ಮಕ್ಕಳ ಕೆಲವು ಸಾಹಿತ್ಯ ಪ್ರಕಟಣೆಗಳಾಗಿವೆ. ಅನೇಕ ಸ್ಪರ್ಧೆಗಳಾಗಿವೆ. ಸಂಸ್ಥೆಯು ಬೇಗನೆ ಅಭಿವೃದ್ಧಿ ಹೊಂದಿ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಪಡೆಯಲೆಂದು ಹಾರೈಸುವೆವು.

ಇಡ್ಯ ವಿದ್ಯಾದಾಯಿನಿ ಶಾಲೆ—ಜಿಲ್ಲೆಯ ಉತ್ತಮ ಹಾಯರ್ ಎಲಿಮೆಂಟರಿ ಶಾಲೆಗಳಲ್ಲೊಂದಾದ ಸುರತ್ಕಲ್ ಇಡ್ಯ ವಿದ್ಯಾದಾಯಿನಿ ಶಾಲೆಯ ೭೨ನೇ ವರ್ಷದ ವರದಿಯು ನಮ್ಮ ಬಳಿಗೆ ಬಂದಿದೆ. ಘನವಾದ ಆಡಳಿತ ಮಂಡಳಿ, ಅಧ್ಯಾಪಕ ವರ್ಗದಿಂದ ಶಾಲೆಯು ಸುವ್ಯವಸ್ಥಿತವಾಗಿ ನಡೆಯುತ್ತಿದೆಯೆಂದು ವರದಿಯಿಂದ ತಿಳಿದುಬರುತ್ತದೆ. ವರದಿಯ ವರ್ಷದಲ್ಲಿ ೨೩೦ + ೯೬ ಮಂದಿ ಮಕ್ಕಳು ವ್ಯಾಸಂಗಮಾಡುತ್ತಿರುವರು. ೧೩ ಮಂದಿ ಅಧ್ಯಾಪಕರಿರುವರು. ಮಕ್ಕಳ ದೈಹಿಕ, ಮಾನಸಿಕ ಮತ್ತು ನೈತಿಕ ಅ

ವಾರದ ಭವಿಷ್ಯ

ಛನ್ನು ಜೊತೆ ಇತರ ದಿನಗಳು ಬಹಳ ಅನಿಷ್ಟಕಾರಿಗಳೇ ಆಗಿವೆ.

ಕುಂಭರಾಶಿ—

'ವಿಘ್ನೈಃ ಪುನಃಪುನರಪಿ ಪ್ರತಿಹನ್ಯಮಾನಾ ಪ್ರಾರಬ್ಧಮುತ್ತಮಜನಾ ನ ಪರಿತ್ಯಜಂತಿ' ಪುರುಷಶ್ರೇಷ್ಠರು ಸಂಕಲ್ಪಿಸಿ ಪ್ರಾರಂಭಿಸಿದ ಕಾರ್ಯಕ್ಕೆ ಮೇಲಿಂದ ಮೇಲೆ ಎಷ್ಟೇ ವಿಘ್ನಗಳು ಬಂದರೂ ಎಂದೆಂದಿಗೂ ಅದನ್ನು ಪೂರ್ತಿಗೊಳಿಸದೆ ಅರ್ಧದಲ್ಲಿ ಕೈಬಿಡಲಾರರು. ತದ್ವತ್ ನೀವೂ ಕೂಡ ಹಿಡಿದ ಕಾರ್ಯವನ್ನು ಕೊನೆಗಾಣಿಸುವ ಸ್ವಭಾವ ಮತ್ತು ಶಕ್ತಿಯುಳ್ಳವರಾಗಿರುವಿರಿ. ಮಧ್ಯೆ ಮಧ್ಯೆ ಸ್ತ್ರೀಯರಿಂದಲೂ ವಿರೋಧಿಗಳಿಂದಲೂ ನಾನಾ ರೀತಿಯಿಂದ ವಿಘ್ನಗಳು ಬರಲಿವೆ. ಆದರೂ ಅವುಗಳು ಯುದ್ಧಕ್ಕೆ ಸಿದ್ಧನಾಗಿದ್ದ ಸಿಪಾಯಿಗೆ ಗುಂಡಿನೇಟು ರಣೋತ್ಸಾಹವನ್ನು ಹೆಚ್ಚಿಸುವರೀತಿ ನಿಮ್ಮ ಶೌರ್ಯ ಮತ್ತು ಕಾರ್ಯತತ್ಪರತೆಯನ್ನು ಹೆಚ್ಚಿಸಲಿಕ್ಕೇನೇ ಕಾರಣಗಳಾಗುತ್ತವೆಯೇ ಹೊರತು ಕಾರ್ಯಹಾನಿಯನ್ನು ಮಾಡಲು ಸಮರ್ಥಗಳಾಗುವಂತಿಲ್ಲ. ಆರೋಗ್ಯವು ಕೆಡದಿದ್ದರೂ ಸ್ವಲ್ಪ ಮೈಗ್ಗೆ ಆಲಸ್ಯವುಂಟಾಗಲಿದೆ. ಆಯವ್ಯಯಗಳು ಏಕರೀತಿಯಾಗಿ ಪರಿಣಮಿಸುವವು. ತಾ. 27, 28, 29, 2, 3 ಈ ದಿನಗಳಲ್ಲಿ ಇಷ್ಟಸಿದ್ಧಿಯನ್ನು ಹೊಂದುವಿರಿ.

ಮೀನರಾಶಿ—

ಜೀವನ ಸಂಗ್ರಾಮದಲ್ಲಿ ಅತಿಶಯವಾಗಿ ಕಾದಾಡಿದ ಆಪ್ತರು ವೀರರೆಂತಿರುವ ನಿಮಗೆ ಸದ್ಯದ ಸ್ಥಿತಿಯಲ್ಲಿ ಗೆಲುವೂ ಸೋಲೂ ಎರಡೂ ಇಲ್ಲವೆನಿಸಬಹುದು. ಕಾರ್ಯಕುಶಲರಾದ ನೀವು ಕೆಲಸಕ್ಕಿಂತಲೂ ಅಧಿಕವಾಗಿ ತಕ್ಷಲವನ್ನು ಪಡೆಯುವಿರಿ. ಆದರೆ ನಿಮ್ಮ ಖರ್ಚು ಅದಕ್ಕಿಂತಲೂ ಮಿಗಿಲಾಗಿರುವುದರಿಂದ ಇದ್ದದ್ದು ಸಾಲದೆ ಆಸದೃಶವಾಗಿ ಸಂಗ್ರಹಿಸಿದ್ದದ್ದೂ ಕೂಡ ವ್ಯಯವಾಗಿ ಹೋದೀತು. ದೇಹಮಾಲಿನ್ಯದಿಂದಾಗಿ ಅನಾರೋಗ್ಯಕ್ಕೆಡೆಗೊಡುವಿರಿ. ಕಷ್ಟಜನಕವಿಷಯಕವಾದ ಭೀತಿಯು ನಿಮ್ಮಲ್ಲಿ ಬಲವಾಗಿ ಅಂಟಿಕೊಂಡಿರುವುದಲ್ಲದೆ ಸೂಕ್ಷ್ಮ ವಿಚಾರಶಕ್ತಿಯೂ ಸ್ವಲ್ಪ ಕಡಿಮೆಯಿರುವುದು. ಆದ ಕಾರಣದಿಂದ ಕಾರ್ಯೋತ್ಸುಕ್ಯವು ಬಹಳ ಮಂದವಾಗಿರುವುದು. ಬಂಧುಮಿತ್ರರ ಸಹಾಯ ಜನಮನ್ನಣೆ ಇವು ಚೆನ್ನಾಗಿರುವವು. ತಾ. 28ರಿಂದ 1ರ ವರೆಗೂ ಮಿತ್ರಭೇಟಿ ಇಷ್ಟಸಿದ್ಧಿ, ಧನಲಾಭ, ಸಂತೋಷ, ಸುಖಾದಿಗಳು ಪ್ರಾಪ್ತವಾಗಲಿವೆ.

ಭಿನ್ನರುಚಿಗೆ ಅನುಕೂಲವಾದ ಆಟಪಾಠಗಳನ್ನು ಹಾರ್ದಪಟ್ಟಿಗನುಸಾರವಾಗಿ ಕಲಿಸಲಾಗುತ್ತಿದೆ. 5ನೇ ತರಗತಿ ಮೊದಲ್ಗೊಂಡು 'ಹಿಂದುಸ್ಥಾನಿ' ಕಲಿಸುವ ವ್ಯವಸ್ಥೆ ಮಾಡಲಾಗಿದೆ. ಮೇಲ್ತರಗತಿಯ ವಿದ್ಯಾರ್ಥಿಗಳಿಗೆ ಸಾಹಿತ್ಯ, ಸಂಗೀತ, ಮತ್ತು ನೇಯ್ಗೆಯನ್ನು ಸ್ವತಂತ್ರವಾಗಿ ಮಾಡುವುದರಲ್ಲಿ ಸಹಾಯ ಕೊಡಲಾಗುತ್ತಿದೆ. ಶಾಲಾ ಪಾಠದ ನಂತರ ವಿವಿಧ ಚಟುವಟಿಕೆಗಳಾಗಿ ತರ್ಕಸಭೆ, ಕಾವ್ಯವಾಚನ, ಸಾಹಿತ್ಯಸಭೆ, ಸಂಗೀತ, ಭಜನೆ, ನಾಟಕಾಭಿನಯ, ಹಸ್ತಕೃತಿ ಪತ್ರಿಕೆ ಮೊದಲಾದುವು ನಡೆಯುತ್ತವೆ. ತೋಟಗಾರಿಕೆ, ಹೊಲಿಗೆ, ಹಾಡುಗಾರಿಕೆ, ಚಿತ್ರಕಲೆ ಮೊದಲಾದವು ಕಲಿಸಲ್ಪಡುತ್ತವೆ.

ಶಾಲೆಯ ಪುಸ್ತಕ ಭಂಡಾರದಲ್ಲಿ 1000 ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳು ಇವೆ. ಈ ಸಂಖ್ಯೆಯನ್ನು ವರುಷ ವರುಷ ಹೆಚ್ಚಿಸುತ್ತಿದ್ದೇವೆ.

21 ಮಕ್ಕಳಿಗೆ ಮಧ್ಯಾಹ್ನ ಊಟವನ್ನು ಉಚಿತವಾಗಿ ಕೊಡಲಾಗುತ್ತಿದೆ. ಸದ್ಯಕ್ಕೆ ಅನಾಥಾಲಯವೊಂದನ್ನು ಸ್ಥಾಪಿಸಬೇಕೆಂದು ಉದ್ದೇಶ ಮಾಡಿದ್ದೇವೆ. ಸರ್ಕಾರದ ಸಹಾಯ ದೊರೆತರೆ, ಒಂದೆರಡು ವರ್ಷದಲ್ಲಿ ಪ್ರಗತಿ ಹೊಂದಬಹುದು. ವಾಚನಾಲಯವನ್ನು ನಡೆಯುತ್ತಿರುವ ಆದರ್ಶಶಾಲೆಯ ಬಗ್ಗೆ ಸಾರ್ವಜನಿಕರ ಸಹಕಾರ ಹೆಚ್ಚು ಯೋಗ್ಯವಾಗಿದೆ. ಇದಕ್ಕೆ ಮುಕ್ತ ಹಸ್ತದಿಂದ ಸಹಾಯ ಮಾಡಿ ಇದನ್ನು ಇನ್ನಷ್ಟು ಉತ್ತಮ ಸ್ಥಿತಿಗೆ ತರಬೇಕೆಂಬುದೇ ನಮ್ಮ ಆಶಯವಾಗಿದೆ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪು, ವ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-'39 ರಿಂದ ಬಹಳ ವ್ಯತ್ಯಾಸಗಳಾಗಿವೆ, ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಹೊದಿಕೆನ ವಿಷಯಗಳು ಅನೇಕ ಇವೆ.

ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜಕ್ಕೆ ಪ್ರತಿ ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವ ಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು, ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದು ತೀರ್ಮಾನವಾಗಬಹುದು.

"ರಿಟರ್ನ್" ತಪ್ಪಾಗಿ ಹೋಗಿದ್ದರೂ ತಡವಾಗಿಲ್ಲ. ಟಪ್ಪಾಲು ಹಾಜರುಮಾಡುವ 15 ದಿವಸಗಳ ಮುಂಚೆಯೇ ಕೆಳಗೆ ಹೆಸರು ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಮಂಜುನಾಥ ಪೊಲಿಸ ಇನ್ಕಮ್ ಟೇಕ್ಸ ವಕೀಲ
ಜ್ಯೋತಿರ್ಲಯದ ಕಟ್ಟಡ, ಕುಂದಾಪುರ ಪೋಸ್ಟು.

ಲೈಬ್ರರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಶರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಬೊಂಬಾಯಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ರೈಲ್ವೆ ಕೆಲಸಗಾರರ ಮಹಾಸಭೆ— ಆಲ್ ಇಂಡಿಯಾ ರೈಲ್ವೆ ಕೆಲಸಗಾರರ ಮಹಾಸಭೆಯು ಬುಧವಾರ ರಾತ್ರಿ ಆಜಾದ ಮೈದಾನದಲ್ಲಿ ಜರಗಿತು. 15000 ಮಿಕ್ಕಿ ರೈಲ್ವೆ ಕಾಮಗಾರರು ಬಂದು ನೆರೆದಿದ್ದರು. ಈ ಸಭೆಯು ನಡೆಯಲು ಸಂಜೆ 6 ಗಂಟೆಗೆ ಕಾಮಗಾರ ಮೈದಾನದಿಂದ ಬಹು ದೊಡ್ಡ ಮೆರವಣಿಗೆಯು ಹೊರಟು 6 ಮೈಲು ದೂರದಲ್ಲಿರುವ ಆಜಾದ ಮೈದಾನಿಗೆ ಬಂತು. ಇದು ಅತ್ಯಂತ ಪ್ರೇಕ್ಷಣೀಯ ಮೆರವಣಿಗೆಯು. ಸಿನ್ಡ್ ದಲ್ಲಿದ್ದಂಥ ರೈಲ್ವೆ ಬೋರ್ಡು, ರೈಲ್ವೆ ಕೆಲಸಗಾರರ ಕೊರತೆಗಳನ್ನು ಕೇಳಿಕೊಳ್ಳುವರೆ ಮುಂಬಯಿಯಲ್ಲಿ ಬಂದಿಳಿದಿದೆ. ಈ ಮಹಾಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಜಮ್ನಾದಾಸ ಮೆಹತಾರವರು ತಮ್ಮ ಭಾಷಣದಲ್ಲಿ ರೈಲ್ವೆ ಕೆಲಸಗಾರರಿಗಿರುವ ಕೊರತೆಗಳನ್ನು ವಿವರಿಸಿ ಹೇಳಿ ರೈಲ್ವೆಯ ನಿಯಮಗಳೆಲ್ಲಾ ಇನ್ನೂ ಸರಕಾರದಿಂದ ಒಪ್ಪಿಗೆ ಪಡೆಯಲಿಲ್ಲವೆಂದೂ 6 ಲಕ್ಷ ರೈಲ್ವೆ ಕೆಲಸಗಾರರಲ್ಲಿ 3½ ಲಕ್ಷ ಮಂದಿಗೆ ಪ್ರಾವಿಡೆಂಟ್ ಫಂಡ್ ಸಿಗುತ್ತಿಲ್ಲವಾಗಿ ಕೆಲವು ಕೆಲಸಗಾರರ ಸಂಬಳದಲ್ಲಿ ನೂರಕ್ಕೆ 30ರಂತೆ ಕಡಿತವಿದೆ ಎಂದೂ ಇದನ್ನೆಲ್ಲಾ ಈ ಬೋರ್ಡು ಚೆನ್ನಾಗಿ ಪರಿಶೀಲಿಸಿ ತಕ್ಕ ಉತ್ತರವೀಯದಿದ್ದಲ್ಲಿ ಆಲ್ ಇಂಡಿಯಾ ರೈಲ್ವೆ ಸಂಪು ಕಾಣಬೇಕಾಗುವುದೆಂದೂ ಸರಕಾರಕ್ಕೆ ಎಚ್ಚರಿಕೆಯ ಸ್ಪಷ್ಟಿ ಕೊಟ್ಟರು.

ಸಿಹಿಕಳ್ಳು (ನೀರಾ) ಕುಡಿಯಬಹುದು

ಮುಂಬಯಿಯಲ್ಲಿ ಸಂಪೂರ್ಣ ಮದ್ಯಪಾನ ನಿಷೇಧ ಶಾಸನವು ಜಾರಿಗೆ ಬಂದ ನಂತರ, ಮದ್ಯದ ತಂಗಿಯಾದ 'ನೀರಾ'ಳನ್ನು ಸೇವಿಸಬಹುದು, ಇದರಲ್ಲೇನೂ ದೋಷವಿಲ್ಲೆಂದು ಪ ಹಾತ್ಮಾಜಿಯವರು ಹೇಳಿದ ಮೇಲೆಗೆ, ಅಕ್ಕನ ಸ್ಥಾನದಲ್ಲಿ ತಂಗಿಯನ್ನಾದರೂ ನಿಲ್ಲಿಸಿ, ಜನರ ಮನಸ್ಸಂತೋಷಗೊಳಿಸಬೇಕೆಂಬ ಅಭಿಪ್ರಾಯದಿಂದ ಮುಂಬಯಿ ಮದ್ಯಪಾನ ನಿಷೇಧ ಪ್ರಚಾರ ಬೋರ್ಡಿನವರು, ತಂಗಿಯು ಶರೀರದಲ್ಲೇನಾದರೂ ಕೊಳಕು, ವಾಸನೆಗಳಿವೆಯೋ ಎಂಬುದನ್ನು ತಿಳಿದುಕೊಳ್ಳಲು, ಆಕೆಯನ್ನು ಹಫ್ಕಿನ್ ಇನ್ಸ್ಟಿಟ್ಯೂಟಿಗೆ ಕಳುಹಿಸಿದ್ದರು. ಈ ಇನ್ಸ್ಟಿಟ್ಯೂಟಿನವರು ಆಕೆಯನ್ನು ರಸಾಯನಶಾಸ್ತ್ರದ ಮೂಲಕ ಪರೀಕ್ಷಿಸಿ ಆಕೆಯಲ್ಲೇನೂ ದೋಷವಿಲ್ಲೆಂದೂ, ಆಕೆಯನ್ನು ಸೇವಿಸುವುದರಿಂದ ಶರೀರವು ಬಲಗೊಳ್ಳುವುದೆಂದೂ ಬರೆದಿರುವರು. ಈಗ ಮುಂಬಯಿ ಸರಕಾರದವರ ಅಭಿಪ್ರಾಯವೇನೆಂದರೆ, ನೀರಳನ್ನು ಬಾಟ್ಲಿಗಳಲ್ಲಿ ತುಂಬಿಸಿ, ಆರೋಗ್ಯ ಭವನಗಳಲ್ಲಿ ಇಟ್ಟು, ಸೋಡಾ ಲೆಮನಗಳಂತೆ ಮಾರಬೇಕೆಂದು. ಇದರಿಂದ ಶರೀರ ಪುಷ್ಟಿಯಾಗುವುದೆಂದು ಕೆಲವರ ಅಭಿಪ್ರಾಯ. ಒಂದೇ ತಾಯಿಯ ಉದರದಿಂದ ಜನಿಸಿದ ಅಕ್ಕ ತಂಗಿಯರೊಳಗೆ ಎಷ್ಟು ವ್ಯತ್ಯಾಸವಿದ್ದಿತೆಂಬುದನ್ನು ತಿಳಿದುಕೊಳ್ಳುವಷ್ಟರ ಜಾಗ್ರತೆಯೂ ಮುಂಬಯಿ ಸರಕಾರಕ್ಕಿಲ್ಲವೇ? ಅಕ್ಕ ಯಾ ತಂಗಿ ಮನಸೋತ ಜನರಿಗೆ ಏನಾದರೇನು? ಅಕ್ಕ ಮದಿರಾಂಗಡಿಯಲ್ಲಿ, ತಂಗಿ ಆರೋಗ್ಯ ಭವನಗಳಲ್ಲಿ, ಇನ್ನೆಂದು ಕಾಂಗ್ರೆಸ್ ಸರಕಾರವು ಬರುವಾಗ ತಂಗಿಯನ್ನೂ ಓಡಿಸಬೇಕಾದೀತು!

ಪ್ರಕಟಣೆ.

ದಿ ಕೆನರಾ ಬಿಲ್ಲವರ ಅನಾಥ ಸಂಘ ಮುಂಬಾಯಿ.

ತಾ. 13-7-39ರ ನವಯುಗದ ಸಂಚಿಕೆಯಲ್ಲಿ ಈ ಮೇಲ್ಕಂಡಿರುವ ಸಂಸ್ಥೆಯ ಹೆಸರಿನಲ್ಲಿ ಶ್ರೀ. ಎಮ್. ಗುರುವ ಬಂಗೇರರು ಒಂದು ಪ್ರಕಟಣೆಯನ್ನು ಪ್ರಕಟಿಸಿರುವರಷ್ಟೆ.

ಶ್ರೀ. ಎಮ್. ಗುರುವ ಬಂಗೇರರು ಇಂದಿನವರೆಗೂ ಮೇಲ್ಕಂಡಿರುವ ಸಂಘದ ಗೌರವ ಕಾರ್ಯದರ್ಶಿಯಾಗಲಿ ಸಾಲ್ಕಾಣೆಯ ಸಾಮಾನ್ಯ ಮೆಂಬರರಾಗಲಿ ಅಲ್ಲ. ಇತ್ತೀಚೆಗೆ ಶ್ರೀಯುತರು ತನ್ನ ಸ್ವಾರ್ಥಕ್ಕಾಗಿ ದಿ ಕೆನರಾ ಬಿಲ್ಲವರ ಅನಾಥ ಸಂಘದ ಸದಸ್ಯರನ್ನು ವಂಚಿಸುವ ಕುಯುಕ್ತಿಯಿಂದಲೂ, ತನ್ನ ನಾಮಾಂಕಿತವನ್ನು ಮೆರೆಯಿಸಬೇಕೆಂಬ ಅಭಿಲಾಷೆಯಿಂದಲೂ ಇಂಥ ಪ್ರಕಟಣೆಯನ್ನು ನವಯುಗ ಪತ್ರಿಕೆಯಲ್ಲಿ ಪ್ರಕಟಿಸಿರುವರಲ್ಲದೆ ಅವರು ಕೊಟ್ಟ ಕೆಲವು ವಿಷಯಗಳು ತೀರಾ ಸುಳ್ಳು.

ದಿ ಕೆನರಾ ಬಿಲ್ಲವರ ಅನಾಥ ಸಂಘದ ಹೆಸರಿನಲ್ಲಿ ಹಲವು ಬಿಲ್ಲವರ ಜನಾಂಗದವರನ್ನು ಸದಸ್ಯರನ್ನಾಗಿ ಮಾಡಿ ಕಾರ್ಯದರ್ಶಿಯೆಂದು ಮೆರೆಯಿಸಿ ಹಣ ವಸೂಲು ಮಾಡುತ್ತಿರುವರೆಂಬ ಸುದ್ದಿಯನ್ನು ಕೇಳುತ್ತೇವೆ. ಆದುದರಿಂದ ದಿ ಕೆನರಾ ಬಿಲ್ಲವರ ಅನಾಥ ಸಂಘದವರು ತಿಳಿಯಪಡಿಸುವುದೇನೆಂದರೆ ಸದ್ರಿಯವರು ವಸೂಲು ಮಾಡಿದ ಚಂದಾಹಣಕ್ಕಾಗಲಿ ಯಾ ಇನ್ನಿತರ ಯಾವ ವಿಷಯಕ್ಕಾಗಲಿ ಈ ಮೇಲೆ ಹೆಸರು ಕಾಣಿಸಿದ ಸಂಘದವರು ಜವಾಬ್ದಾರರಲ್ಲ. ಅಂದು ಸ್ವಾರ್ಥಿಗಳ ವಿಷಯಕ್ಕೆ ಗಮನಕೊಡಬಾರದಾಗಿ ವಿನಂತಿ.

ದಿ ಕೆನರಾ ಬಿಲ್ಲವರ ಅನಾಥ ಸಂಘದ ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ—

ಯುಮ್. ಎ. ಸಾಲಿಯಾನ್,
ಗೌ. ಕಾರ್ಯದರ್ಶಿ.

WANTED candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight-Director, Royal Telegraph and Rly. Duties College, Bombay 11.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply. Padubidri Bros., Bombay 8.

ಹೊಗೆಸೊಪ್ಪಿನ ಕಾನೂನು

ಪುಟ ೧೫ರಿಂದ

ಆ ಯಾವನಾದರೂ ತಯಾರಿಸುವವನು—ನೂರು ರೂಪಾಯಿ.

b. 1934ನೇ ಇಸವಿಯ ಕಾರ್ಖಾನೆಗಳ ಕುರಿತ ಆಕ್ಟು ಯಾವ ತಯಾರಿಸುವವನ ನಿವೇಶನಗಳಿಗೆ ಲಗಾವಾಗುತ್ತದೋ— ಯಾ— ವ್ಯಾಪ್ತಗೊಳಿಸಲ್ಪಟ್ಟಿದೆಯೋ ಆ ಇತರ ಯಾವನಾದರೂ ತಯಾರಿಸುವವನು —ಐವತ್ತು ರೂಪಾಯಿ.

c. ಯಾವ ತಯಾರಿಸುವವನ ನಿವೇಶನಗಳಿಗೆ 1934ನೇ ಇಸವಿಯ ಕಾರ್ಖಾನೆಗಳ ಕುರಿತ ಆಕ್ಟು ಲಗಾವಾಗುವುದಿಲ್ಲವೋ ಮತ್ತು ವ್ಯಾಪ್ತಗೊಳಿಸಲ್ಪಟ್ಟಿಲ್ಲವೋ ಆ ಯಾವನಾದರೂ ತಯಾರಿಸುವವನು —ಎರಡು ರೂಪಾಯಿ.

iv. ಒಬ್ಬ ದಲಾಲಿ-ಯಾ-ಕಮಿಶನ ಏಜಂಟ್ —ಐವತ್ತು ರೂಪಾಯಿ.

ಹರಿಜನರ ಬೇಡಿಕೆ

ಬೇಡಿಕೊಂಬೆವು ನಾವು ಸಮಸ್ತ ಜನರೊಳಗೆ
ನೀಡಿ ಧರ್ಮದ ನಮ್ಮ ವಿದ್ಯಾರ್ಥಿಗಳಿಗೆ ॥ಪಲ್ಲ॥
ಹರಿಜನರು ನಾವೆಂದು ದೂರವಿಡಬೇಡಿ ।
ಸರಿಜನರು ಭ್ರಾತೃಗಳೆಂದು ತಿಳಿದು ನೋಡಿ ॥
ಭಗವಂತನಾಜ್ಞೆಯು ಮರೆಯಲ್ಲರೊಡಗೂಡಿ ।
ಪರಿಹರಿಪುದೆಮ್ಮ ಮಾತೆಯ ದಾಸ್ಯ ಬೇಡಿ ॥೧॥
ನಮ್ಮ ಹೊಲೆತನವೆಲ್ಲ ಭರದಿ ಪರಿಹರಿಸಿ ॥
ನಿಮ್ಮ ಜ್ಞಾನಕೆನ ತೆರೆದಿಟ್ಟು ಮನವರಿಸಿ ॥
ನಮ್ಮ ಪಶುಪಾತಕೆ ಹೊಸ ಬೆಳಕ ಹರಿಸಿ ॥
ತಿಮ್ಮನದಿ ಉದ್ಧರಿಪುದೈ ಒಳಗ ಕರೆಸಿ ॥೨॥
ಓದೆ ಪುಸ್ತಕ ಬರೆಯ ಸ್ಲೇಟು ಕೊಡಿಯಲಿಕೆ।
ಪಾಠ, ಉಡಲು ಬೇಕು ಅನ್ನ ಬದುಕಲಿಕೆ ॥
ಭೇದಭಾವವ ತೊರೆದು ನೀಡಿರಿದೆಗಳಿಗೆ ॥
ಓದು ಬರಹವ ಕಲಿಯು ದೀನ ಬಾಲರಿಗೆ ॥೩॥

ಪಿ. ಅಂತಯ್ಯ ಸೆಟ್ಟಿ,
ಕಾರ್ಯದರ್ಶಿ, ಉಡುಪಿ ತಾಲೂಕು ಹರಿಜನ ಸೇವಾಸಂಘ ಬ್ರಹ್ಮಾವರ.

LEVER WRIST WATCHES FOR RUPEES 2-4-0 ONLY.

The watches are guaranteed for 5 solid years. Accurate Time keeper. Round or square Rs 2/8 Best Rs. 3-4 0, extra best Rs 3-12-0, Golden cases Rs 4-4-0, Rec. 6 8-0. Rectangular Rs. 7-4-0, Best Rs 11-0-0, Guaranteed for 10 years. Postage annas 8 extra. If purchased three at a time postage free.

Ceylon orders must accompany full advance ORIENTAL FANCY STORES Post Box No. 12204, Calcutta (S.C.E.184).

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

	ರಿಂದ	ವರೆಗೆ
ಫಸ್ಟ್ ಅವ್ವಲ್ ತರದ ಗುಡ್ಡು ಮುಡಿಗೆ	1—14—0	..
,, ದುಯಂ ,, ,, ...	1—12—0	...
,, ಅವ್ವಲ್ ತರದ ಸುಗ್ಗಿ ಮುಡಿಗೆ .. .	1—12—0	...
,, ದುಯಂ ,, ,, ...	1—10—0	..
ಅಕ್ಕಿ-ಅವ್ವಲ್ ತರದ ಗುಡ್ಡು ಮುಡಿಗೆ	4—12—0	..
,, ದುಯಂ ,, ,, ...	4— 8—0	4—10—0
,, ಅವ್ವಲ್ ಸುಗ್ಗಿ ,, ...	4— 7—0	.
,, ದುಯಂ ,, ,, ...	4— 3—0	4— 5—0
ತೆಂಗಿನ ಕಾಯಿ-ಸಿಪ್ಪೆ ಬಿದ್ದ ತೆಂಗಿನ ಕಾಯಿ 1000ಕ್ಕೆ ...	27— 8—0	35— 0—0
,, ಸಿಪ್ಪೆ ಇದ್ದದ್ದು ,, ...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	50— 0—0	...
,, ದೇಸಿ	..	...
,, ದಿಲ್‌ಪಸಂದ್	...	..
ತೆಂಗಿನ ಎಣ್ಣೆ ಮಣಕ್ಕೆ	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	3— 8—0	4— 4—0
ಗೇರುಬೀಜ ಮುಡಿಗೆ	3—10—0	..
ಕಬ್ಬಿನ ಬೆಲ್ಲ ಖಂಡಿಗೆ	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	14— 8—0	15— 8—0

ನವಯುಗಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದ್ದಾರೆ.

ಬೆಂಗಳೂರು,

ಮಂಗಳೂರು, ಧಾರವಾಡ ಮೊದಲಾದ ಕರ್ನಾಟಕದ ಯಾವದೇ ಭಾಗದ

ಪುಸ್ತಕ

ಬೇಕಾದರೂ

ನಮ್ಮೊಡನೆ ವಿಚಾರಿಸಿರಿ.
ಕೆಟಲಾಗು ಉಚಿತ.

ನವಭಾರತ ಪುಸ್ತಕ ಭಂಡಾರ,
ಉಡುಪಿ, ದ. ಭಾರತ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ
SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೬೭೪ ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೀ ಈ ಪುಸ್ತಕ ಓದಿರಿ. ಇಂಗ್ಲೀಷ್ ಓದು-ಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss Co.
Book-Sellers P O No 68
G. P O MADRAS

ವೆಸ್ಟರನ್ ಸ್ವಿಸ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ 68. ಮದರಾಸ್

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಮಲಿನತೆಯನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು

III **ಸುಖಸೇವನ.**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

THE

MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ನೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5ಕ್ಕೆಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja,
President & Manager,

ಯಂ. ಆರ್. ಪುಂಜ,
ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt College Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಕ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಅಳಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ಟಿ ಖ ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು, ಹೊಟ್ಟೆಯುರಿ, ಇವುಗಳನ್ನು ಮೂರೇ ದಿವಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಟೆಯಾದ ನಾಲ್ಕನೇ ದಿನದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ಸರಗೀಗೆ ಚೈತನ್ಯವನ್ನುಂಟುಮಾಡುತ್ತದ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ್ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ.

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3 ತಿಂಗಳಿಗೆ	...	3½%
6 ,,	....	4%
1 ವರ್ಷಕ್ಕೆ	....	4½%
2 ,,	.	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯನ್ನುದತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ

Rev. Fr. P. W. Farias,

St. Paul's Church,
Balkunje Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir,

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahothsawam Committee.

Thulunad Bank
OF SUPPLY AGENCY LIMITED,
·ESTD] **UDIPI** [1933

Authorised & Issued Capital Rs. 1,00,000
Subscribed & Paid up .... Rs. 31,300

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲೀಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:* **GENERAL SUPPLIES, LTD., UDIPI**)

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

Registered No. M. 3618

3-8-1939

ನವಯುಗ

NAVAYUGA

PROMPTNESS!

SADAR BAZAR, (CAMP)
AHMEDABAD,
30TH JUNE, 1939.

THE MANAGING DIRECTOR,
The Popular Insurance Co., Ltd.,
MANGALORE.

Dear Sir,

Re Claim Policy No. 1307 on the life of my wife
Mrs. Anandi Manilal Tripathi.

I heartily congratulate and thank you for the prompt settlement of the above claim in payment of which your Bombay Branch Secretary, Mr K. N. Gaitonde handed over the cheque for Rs. 985-7-0 on the local Branch of the Imperial Bank of India.

I am sure this prompt service of yours will go a long way in making your Company really popular in our province and I personally wish you success in this humane service.

I am also highly indebted to your Chief Agents—Messrs. B. Trivedi & Co., for their prompt services in this connection.

Thanking you again,
Yours faithfully,
(Sd) RANCHODHLAL JAYSHANKER TRIVEDI,
Headmaster, Cantonment School.

'opular Insurance Company, Limited.

MANGALORE.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1 48 40 601	9,24,965	2 50,234
1935	2,57 08 418	18,39,296	42,98 820
1938	3 61,36 761	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms

Sri B Narayan Shetty, Organizer Brahmavar
, M Shivarama Rao, Organizer, Puttur

Or

Sri J A PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/ Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p a for the earlier half and at 1% p a for the latter half of every calendar year

Fixed Deposits are accepted at all the above offices for one and two years and interest allowed at 3½% p a and 4% p a respectively, interest being payable every half year of the calendar year Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪತ್ತು ವರ್ಷಗಳ ಹಿಂದಿನ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್

ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮುಖಾಂತರದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವು ಕುರಿತು ಸಾರ್ವಜನಿಕರ ಈ ಮೂಲಕ ಅರಿಕೆ ಮಾಡಲಾಗಿದೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಇದೀಗ ಪ್ರಕಟವಾಗಿದೆ! ಇದೀಗ ಪ್ರಕಟವಾಗಿದೆ!

ಪಂಚಾರತಿ

ಪಂಚಾರತಿ

ಪಂಚಾರತಿ

ಪಂಚಾರತಿ

ಪಂಚಾರತಿ

ಕರ್ನಾಟಕದ ಪ್ರಸಿದ್ಧ ನಾಟಕಕಾರರ್ವರು ಒರೆದ

ಐದು ಏಕಾಂಕ ನಾಟಕಗಳ ಸಂಗ್ರಹ.

ಶ್ರೀ. ಕ ಪೂನ್ನಯ್ಯ ವಟ್ಟೆರಿಂದ ಸಂಪಾದಿಸಲ್ಪಟ್ಟು

ಭಾರತೀ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ ನವೀನ ಪುಸ್ತಕ

ನಾಟಕಗಳೊಂದಿಗೆ ನಾಟಕಕಾರರ ಪಡಿಯಚ್ಚುಗಳೂ ಕೂಡಲ್ಪಟ್ಟಿವೆ

ಬೆಲೆ ೦-೪ ೦ ಐದಾಣೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು

ಟಪ್ಪಾಲು ದ್ವಾರ ಕಳಿಸಲಾಗುವುದು ಪ್ರಕಿಗಳಿಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ವ ಸ್ತ್ರೀಪ್ರಾಣಿಯ ಶರೀರವೆಂದರೆ ದುರ್ಗಂಧದ ಬೀಡಗಿದೆ ಯಂತ್ರ ದಿಂದುರುವ ದೇಹಕ್ಕೆ ಎಲ್ಲಾ ತರದ ದುರ್ಗಂಧವಿರುತ್ತದಾಗದು ಹಾಗೂ ನಮ್ಮ ಈ ವ ತ್ತು ಇವೀ ಜನದ [illegible] ಸದಿಂದವೇ ರೋಗೋತ್ಪತ್ತಿ ಯಾಗುತ್ತದೆ [illegible] ಇ.೦ ನ ಜಿಂದದೇ [illegible] ಅವಯವಗಳ [illegible] ಕೆಟ್ಟದ [illegible] ಸುವಾಸಿತವೀರಾದರೆ ಹೆಚ್ಚಿನ ವೆಚ್ಚವಾದವೇತ ಗತ್ತದೆ ಅದಕ್ಕಾಗಿಯೇ ಅಲ್ಪಮೌಲ್ಯದಲ್ಲಿ ಬಹುಗಣ ಕೆೀಡುವ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ)

ಇವರ ಸುಗಂಧಯುಕ್ತ

ಆಮಲಕೀ ತೈಲವೇ

ನಿಮ್ಮ ಆನಂದದ ಭಾಂಡಾರವಾಗಿದೆ

ಕ್ರಯ ೧ಕ್ಕೆ ೧೭ ೬ ಆಣೆ

Swadeshi Oushadhi Bhandara(*Reg*) *Kunjal* P O Brahmavar, S India

ನಮ್ಮ ಸ್ಟಾಕಿಸ್ಟರು —

1. V R Prabhu, The Canara News & Books Agent, Batatawala Mansion, Lalbag, BOMBAY
2. General Supplies Ltd, Udipi, S K
3. Nava Bharata Book Depot Udipi, S K

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್.—ಹೂವಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಒತ್ತನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ಏದದಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿನಿದ ಪಾತ್ರಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯರ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಾದ ಸಾಮಾನುಗಳಿವೆ ದಿನ ನಿತ್ಯ ಬಳಕೆಯ ಸಾಮಾನುಗಳು ಬೇಲ ಗಟ್ಟಿ ಬರುತ್ತಿವೆ ಇಲ್ಲಿಂದಲೇ ನಿಮಗೆ ಬೇಕಾದ ಸಾಮಾನುಗಳನ್ನು ಹಿಡಿದೊಯ್ಯಬಹುದು, ರಫಿ ಆಗಿಯಾಗಿಲೇ ತೆಗದುಕೊಳ್ಳುವುದು ಅತಿ ಉಚಿತ

ಶೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲರಾ ರೋಗಕ್ಕೆ ರಾಮಬಾಣ ಔಷಧ	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೧—೦—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

ESTD. 1921 ಸ್ಥಾಪನೆ

FOUNDER
Sri. A. B. SHETTY, M.L.A.
Parliamentary Secretary Govt. of Madras.
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ.

ಸಂಪಾದಕ.
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೮-೩-೧೯೩೯ | Vol. XVIII
ಸಂಚಿಕೆ ೪೮ | Udipi, Thursday 8—3—1939 | No. 48

ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ. ೧—೧೨—೦.

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಮಾಚಾರ ಸಂಗ್ರಹ

ಜಾಪಾನಿಗೊಂದು ಪಾಠಬೇಕಾಗಿದೆ

ಜಪಾನಿಗೂ ರಷ್ಯಾನರಿಗೂ ಔಟರ್ ಮಂಗೋಲಿಯದಲ್ಲಿಯೂ, ಮಂಚೂರಿಯದ ಎಲ್ಲೆಯಲ್ಲಿಯೂ ಯುದ್ಧವು ನಡೆದೇ ಇರುತ್ತದೆ. ಆದರೆ ಪ್ರತ್ಯಕ್ಷವಾಗಿ ದೊಡ್ಡ ಯುದ್ಧವೇನೋ ನಡೆದಿರುವುದಿಲ್ಲ. ಇತ್ತಂಡದವರೂ ಅದಕ್ಕಾಗಿ ಹಾತೊರೆಯುತ್ತಿರುವಂತಿದೆ. ಚೀನಾಯುದ್ಧವಿಲ್ಲದಿರುತ್ತಿದ್ದರೆ ಇಷ್ಟರೊಳಗೆ ಜಾಪಾನ್ ರಷ್ಯಾಯುದ್ಧವುಂಟಾಗಬಹುದಿತ್ತು. ಇನ್ನು ಮುಂದಾದರೂ ಯುದ್ಧವು ಯಾವಾಗ ಆರಂಭವಾದೀತೆಂದು ಹೇಳಬರುವುದಿಲ್ಲ. ಎರಡು ರಾಷ್ಟ್ರಗಳೂ ಹಲ್ಲು ಮಸೆಯುತ್ತಿವೆ. "ನಮ್ಮ ಪೂರ್ವದ ನೆರೆಯ ರಾಷ್ಟ್ರವಾದ ಜಾಪಾನು ಬಹಳ ಅಸಹಿಷ್ಣುತೆಯಿಂದಿದೆ. ನಮ್ಮ ಸೇನೆಯಿಂದ ಅದಕ್ಕೊಂದು ಪಾಠಬೇಕಾಗಿರುವಂತಿದೆ. ನಮ್ಮ ಗಡಿನಾಡಿನ ಮೇಲೆ ಯಾರಾದರೂ ಆಕ್ರಮಣ ನಡೆಸಿದರೆ ಅವರಿಗೊಂದು ಪಾಠವು ಸಿಕ್ಕಿಯೇ ಸಿಕ್ಕುವುದು." ಎಂದು ಸೋವಿಯೆಟ್ ಸರಕಾರದ ನೌಕಾ ಮಂತ್ರಿಗಳು ಎಚ್ಚರಿಸಿರುತ್ತಾರೆ.

ವಾಯುವ್ಯ ಗಡಿನಾಡಿನಲ್ಲಿ ಅತ್ಯಾಚಾರ

ವಾಯುವ್ಯ ಗಡಿನಾಡಿನ ಬನ್ನು ಮೊದಲಾದ ಪ್ರದೇಶಗಳಲ್ಲಿ ವಜೀರಿ ಮೊದಲಾದ ಪಂಗಡಿಗರ ಅತ್ಯಾಚಾರವು ಬಹಳವಾಗಿ ಹೆಚ್ಚುತ್ತಿದೆ. ಇದರಿಂದ ಹಿಂದುಗಳೇ ಮೊದಲಾದ ಅಲ್ಪ ಸಂಖ್ಯಾಕರಿಗೆ ಸುರಕ್ಷಿತ ಜೀವನವೇ ಅಸಾಧ್ಯವಾಗಿದೆ. ಗಡಿನಾಡಿನ ಅಲ್ಪ ಸಂಖ್ಯಾಕರ ಪ್ರತಿನಿಧಿಗಳು ಗಾಂಧಿಜಿಯವರ ಬಳಿಗೆ ಹೋಗಿ ಮೊರೆಯಿಟ್ಟರು. ಗಾಂಧಿಜಿಯವರು ಈ ಕುರಿತು ಗಡಿನಾಡಿನ ಮುಖ್ಯ ಮಂತ್ರಿ ಡಾಕ್ಟರ್ ಖಾನರೊಡನೆ ಸುದೀರ್ಘಮಾತುಕತೆ ನಡಿಸಿದರ. ಜುಲ್ಯೈ ತಾ. 24ರಲ್ಲಿ ರೋಚಿರಾಮನೆಂಬ ಹಿಂದು ಕೆಲಸಗಾರನು ಕದ್ದೊಯ್ಯಲ್ಪಟ್ಟಿರುವನು. ಹಿಂದು ಬೇಂಕರನೊಬ್ಬನ ಪುತ್ರ ಉತ್ತಮ ಚಂದನೆಂಬವನು ಕುದುರೆಯ ಮೇಲೆ ಹೋಗುತ್ತಿದ್ದಾಗ ಕುದುರೆಯನ್ನು ಗುಂಡುಹೊಡೆದು ಕೊಂದು ಆತನನ್ನು ಸೆರೆಹಿಡಿಯಲಾಗಿದೆ. ಬನ್ನು ಜಿಲ್ಲೆಯಲ್ಲಿ ಕಳೆದ 15 ದಿವಸಗಳಲ್ಲಿ 8 ಕಡೆ ಟೆಲಿಫೋನು ಸಂಗಿಗಳು ತುಂಡುಮಾಡಲ್ಪಟ್ಟಿವೆ. ಇಂತಹ ಅತ್ಯಾಚಾರಗಳು ದಿನನಿತ್ಯವೆಂಬಂತೆ ನಡೆಯುತ್ತಿರುತ್ತವೆ.

ಸಿಂಧಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ?

ತಮ್ಮನ್ನು ಸರಿಸಮಾನತೆಯಿಂದ ಕಂಡಲ್ಲಿ ತಾನೂ ಪ್ರಧಾನ ಮಂತ್ರಿಗಳಾದ ಖಾನ್ ಬಹದ್ದೂರು ಅಲ್ಲಾ ಬಕ್ಷರೂ ಯಾವ ದಿನವಾದರೂ ಕಾಂಗ್ರೆಸಿಗೆ ಸೇರಲು ಸಿದ್ಧರೇ ಇದ್ದೇವೆಂದು ಸಿಂಧಿನ ಪಬ್ಲಿಕ್ ವರ್ಕ್ ಖಾತೆಯ ಮಂತ್ರಿಗಳಾದ ಶ್ರೀ ನಿಚ್ಚಲ್ದಾಸ್ ವಜೀರಾನಿಯವರು ವ್ಯಕ್ತಗೊಳಿಸಿರುವರು. ಖಾನ್ ಬಹದೂರು ಅಲ್ಲಾಬಕ್ಷರ ವಿಷಯದಲ್ಲಿ ಕಾಂಗ್ರೆಸಿನವರು ವಹಿಸಿರುವ ಧೋರಣೆಯು ತಮಗೆ ಗರ್ಥವಾಗುವುದಿಲ್ಲ. ಅಲ್ಲಾ ಬಕ್ಷರು ಕಾಂಗ್ರೆಸಿಗೆ ಸೇರಿದರೆಂದರೆ ಸಿಂಧಿನಲ್ಲಿ ಜಾತೀಯ ಮತ್ತು ಅಪ್ರಾಗತಿಕ ಪಕ್ಷಗಳಿಗೆ ಸ್ಥಳವೇ ಇರಲಾರದೆಂದು ವಜೀರಾನಿಯವರ ಅಭಿಮತ. ಅಲ್ಲಾ ಭಕ್ಷರು ಕಾಂಗ್ರೆಸಿಗೆ ಸೇರಲು ಆತುರಪಡುತ್ತಿರುವಾಗ ಅವರ ಕೇಳಿಕೆಯನ್ನು ಮೂಲೆಗೊತ್ತುವುದು ಸರಿಯಲ್ಲೆಂದು ವಜೀರಾನಿಯವರ ಅಭಿಮತ.

ಫೋರ್ವರ್ಡ್ ಬ್ಲೋಕಿನ ಕುರಿತು ಅಪಪ್ರಚಾರ

ಫೋರ್ವರ್ಡ್ ಬ್ಲೋಕಿಗೆ ಮುಸ್ಲಿಮ್ ಲೀಗ್ ಮತ್ತು ಮದ್ರಾಸಿನ ಜಸ್ಟಿಸ್ ಪಕ್ಷೀಯರು ಸೇರಬೇಕೆಂದು ಶ್ರೀ. ಭೋಸರು ಅವರನ್ನು ಆಮಂತ್ರಿಸಿರುವರೆಂದು ಕೆಲವು ಪತ್ರಿಕೆಗಳು ಮತ್ತು ಕೆಲವಂದಿ ಕಾಂಗ್ರೆಸ್ ಜನರು ಅಪಪ್ರಚಾರ ನಡಿಸಿರುತ್ತಾರೆ. ಇದು ಶುದ್ಧ ಸುಳ್ಳು. ಫೋರ್ವರ್ಡ್ ಬ್ಲೋಕಿಗೆ ಸೇರುವವರು ಮೊದಲು ಕಾಂಗ್ರೆಸ್ಸಿಗೆ ಸೇರಿಕೊಳ್ಳಬೇಕು. ಅದು ಹೊರತು ಯಾವ ಜಾತೀಯ ವಾದಿಗಳಾಗಿರದೆ ಪ್ರಗಾಮಿಗಳಾಗಿರಬೇಕೆಂದು ಶ್ರೀ. ಭೋಸರು ಪ್ರಕಟಿಸಿರುವರು. ಮತ್ತು ಪಂಡಿತ ಜವಾಹರಲಾಲರು, ಅನಾವಶ್ಯಕವಾಗಿ ಫೋರ್ವರ್ಡ್ ಬ್ಲೋಕನ್ನು ಸಿಲೋನಿನಲ್ಲಿ ಟೀಕಿಸಿದುದು ಶೋಚನೀಯವೆಂದು ಪಂಡಿತರ ವರ್ತನೆಯನ್ನು ಟೀಕಿಸಿರುವರು.

1941ನೇ ಜನಗಣನೆ

ಬರುವ ಮಾರ್ಚ್ ತಿಂಗಳಲ್ಲಿ ನಡೆಯಲಿರುವುದು. ಅದಕ್ಕೀಗಲೇ ಸಿದ್ಧತೆಗಳು ನಡೆದಿರುತ್ತವೆ. ಹಿಂದೂದೇಶದಲ್ಲಿ ಪ್ರಥಮವಾಗಿ 1687ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಖಾನೆಷುಮಾರಿ ನಡಿಸಿದ್ದರು. ಆ ವೇಳೆ ಕ್ರಮವಾಗಿ ಮದ್ರಾಸಿನಲ್ಲಿ ಖಾನೆಷುಮಾರಿಗಳು ನಡೆದಿರುತ್ತವೆ. 1802ರಿಂದ 1866ರ ವರೆಗೆ 9 ಸಲ ಜನಗಣನೆ ನಡೆದಿರುತ್ತದೆ. ಇಡೀ ದೇಶದ ಜನಗಣನೆ ಮಾಡಲು ನಡೆದ ಪ್ರಥಮ ಪ್ರಯತ್ನವೆಂದರೆ 1867ರಲ್ಲಿ. 1881ನೇ ಫೆಬ್ರವರಿ ತಾ. 17ರಲ್ಲಿ ಮೊದಲನೇ ಬಾರಿ ಕ್ರಮವಾದ ಜನಗಣನೆ ನಡೆಯಿತು. ಆ ನಂತರ ಪ್ರತಿ 10 ವರ್ಷಗಳಿಗೊಮ್ಮೆ ಕ್ರಮವಾಗಿ ಜನಗಣನೆ ನಡೆದಿರುವುದು. 1881ರಿಂದ 1931ರ ವರೆಗೆ ಹಿಂದೂದೇಶದ ಜನಸಂಖ್ಯೆಯು ಸುಮಾರು ಸೇಕಡ 35ರಷ್ಟು ಹೆಚ್ಚಿರುವುದು. 1941ರ ಜನಗಣನೆಯಲ್ಲಿ ಹಿಂದೂದೇಶದ ಜನಸಂಖ್ಯೆಯು ಕಡಿಮೆಯೆಂದರೆ ಸೇಕಡ 13ರಷ್ಟು ಅಧಿಕವಾಗಿ 400 ಮಿಲ್ಯವಾಗುವುದೆಂದು ನಿರೀಕ್ಷಿಸಲಾಗಿದೆ.

ಬೊಂಬಾಯಿಯಲ್ಲಿ ಮದ್ಯಪಾನನಿಷೇಧ

ಇದೇ ತಾ. 1ರಲ್ಲಿ ಬೊಂಬಾಯಿ ಪಟ್ಟಣದಲ್ಲಿ ಮದ್ಯಪಾನ ನಿಷೇಧವು ಜ್ಯಾರಿಗೆ ಬಂದಿರುವುದು. ಬೊಂಬಾಯಿಯಂತಹ ಪಟ್ಟಣದಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವುದು ಬಹು ಪ್ರಯಾಸವಾದುದರಿಂದ ಇಡೀ ಲೋಕದ ದೃಷ್ಟಿಯು ಈ ಪ್ರಯೋಗದ ಕಡೆಗೆ ಹರಿದಿರುವುದೆಂದರೆ ಅತಿಶಯೋಕ್ತಿಯಾಗಲಾರದು. ಆಗೋಸ್ತು ತಾ 1ನ್ನು ಸರಕಾರವು ರಜಾದಿನವಾಗಿ ಮಾಡಿರುವುದು. ಈ ಮದ್ಯಪಾನ ನಿಷೇಧಕ್ಕೆ ಬೊಂಬಾಯಿಯ ಹೆಚ್ಚಿನ ಪಾರ್ಸಿಗಳು ಬದ್ಧವಿರೋಧವಿರುವರು. ತಮ್ಮ ಸಮಾಜದವರು ಬೊಂಬಾಯಿಸರಕಾರದ ಮಂತ್ರಿ ಡಾಕ್ಟರ್ ಗಿಲ್ಡರರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕುವ ನಿರ್ಧಾರಮಾಡಿರುವರು. ಸರಕಾರದವರು, ಈ ಮದ್ಯಪಾನ ನಿಷೇಧದಿಂದ ನಿರುದ್ಯೋಗಿಗಳಾಗುವ ಜನರಿಗೆ ಉದ್ಯೋಗವನ್ನೊದಗಿಸಲು ಬೇರೆ ಬೇರೆ ಏರ್ಪಾಡು ಮಾಡಿರುವರು. ತೆಂಗಿನ ರಸದಿಂದ ಸಕ್ಕರೆ ತಯಾರಿಸುವ ಪ್ರಯೋಗ ನಡೆದಿರುವುದು. ಈ ಸಕ್ಕರೆಯು ಬಹಳ ರುಚಿಯಾಗಿಯೂ ಸುವಾಸನೆಯುಳ್ಳದಾಗಿಯೂ ಇರುವುದೆಂದು ತಿಳಿದುಬರುತ್ತದೆ.

ಕಾಂಗ್ರೆಸು ನಮ್ಮ ಏಕಮಾತ್ರ ಶಸ್ತ್ರ

"20 ವರ್ಷಗಳ ಶ್ರಮದಿಂದ ನಾವು ನಮ್ಮ ದೇಶದ ಸ್ವಾತಂತ್ರ್ಯಯುದ್ಧ ನಡಿಸಲು ಏಕಮಾತ್ರನಾದ ಆಯುಧವನ್ನು ಸಿದ್ಧಗೊಳಿಸಿರುವೆವು. ಅದೇ ನಮ್ಮ ಸರ್ವಸಮರ್ಥ ಶಸ್ತ್ರ. ಆ ಶಸ್ತ್ರವನ್ನು ನಾವು ದುರ್ಬಲಗೊಳಿಸಲೂ ಮೊಂಡು ಮಾಡಲೂ ಕೂಡದು." ಎಂದರು ಪಂಡಿತ ಜವಾಹರಲಾಲ ನೆಹರುಗಳು ಪೂನದ ಶನಿವಾರವಾಡೆ ಮೈದಾನಿನಲ್ಲಿ 15,000 ಜನಸಂದಣಿಯಲ್ಲಿ ಭಾಷಣಮಾಡುವಾಗ. ಹಿಂದೆಯೂ ನಮ್ಮಲ್ಲಿಬುದ್ಧಿ ಶಕ್ತಿ, ಧೈರ್ಯಸ್ಥೈರ್ಯಗಳಕ್ಕೇನೂ ಕಡಿಮೆ ಇರಲಿಲ್ಲ. ಆದರೆ ನಮ್ಮಲ್ಲಿ ಐಕ್ಯವಿಲ್ಲದ್ದೇ ದೊಡ್ಡ ಹಾನಿ. ಈಗ ಅದೇ ಹಾನಿಯು ದೇಶಕ್ಕೆ ಘಾತವನ್ನುಂಟುಮಾ

THE
TROPICAL
INSURANCE COMPANY, LTD.
NEW DELHI

CHAIRMAN:
SJT. SUBHAS CHANDRA BOSE.

FOUNDER DIRECTORS:

Pandit Motilal Nehru — Sjt. S Srinivasa Iyengar
Dr. M. A. Ansari — Hakim Ajmal Khan

THIS LEADING NATIONAL COMPANY FOUNDED AND MANAGED BY FIVE CONGRESS PRESIDENTS, INVITES APPLICATIONS FOR REPRESENTATION ON SALARY AND COMMISSION.

APPLY TO:

M. Sunder Ram Shetty, BRANCH MANAGER, Hampankatta, Mangalore. OR K. S. Ramamurthi, M.A. BRANCH SECRETARY, 160, Mount Road, Madras.

ಅಹಿಂಸೆಯಲ್ಲಿ ನಿಜವಾದ ವಿಶ್ವಾಸವಿಲ್ಲದಿದ್ದರೆ ಅದನ್ನು ಬಿಡಬೇಕು.

ಮಹಾತ್ಮಾ ಗಾಂಧಿಯವರ ಸ್ಪಷ್ಟೋಕ್ತಿ.

ಈಗ ಕಾಂಗ್ರೆಸು ಅಂತಃಕಲಹದಿಂದ ತುಂಬಿದೆ.

ತಾನು ವಿವರಿಸಿಕೊಂಡು ಬಂದಿರುವಂತಹ ಅಹಿಂಸೆಯಿಂದ ಫಲವಿಲ್ಲೆಂದಾದರೆ ಅಥವಾ ಆ ಮೂಲಕ ಕಾರ್ಯ ಸಾಧಿಸುವುದು ಅಸಂಭವನೀಯವೆಂದಾದರೆ ಕಾಂಗ್ರೆಸ್ ಮುಖಂಡರೆಲ್ಲಾ ಒಂದು ಪರಿಷತ್ತನ್ನು ಅಥವಾ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯನ್ನು ಕರೆದು ಚರ್ಚಿಸಿ ಈಗಣ ಧೋರಣೆಯನ್ನು ಬದಲಾಯಿಸಿ ತಮ್ಮ ಮನೋವೃತ್ತಿಗೆ ಸರಿಹೋಗುವ ಹೊಸ ಕಾರ್ಯಕ್ರಮವನ್ನು ಕೈಕೊಳ್ಳಬಹುದೆಂದು ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಸ್ಪಷ್ಟಪಡಿಸಿರುವರು. 'ನೀವು ಸತ್ಯಾಗ್ರಹವನ್ನೂ ನಿಮ್ಮ ಕಾರ್ಯಕ್ರಮವನ್ನೂ ಒಂದಿಷ್ಟು ಬದಲಾಯಿಸಲೊಪ್ಪಲಾರಿರಿ. ಸತ್ಯಾಗ್ರಹವನ್ನು ಮಜೂರ ಕೃಷಿಕರದೇ ಮೊದಲಾದ ಚಳವಳಿಕ್ಕಾಗಿ ಉಪಯೋಗಿಸಲಾಗುವುದಿಲ್ಲವೇ? ಈಗಣ ನಿಮ್ಮ ಕಾರ್ಯಕ್ರಮ ಮತ್ತು ಮಂತ್ರಿಗಳ ಕಾರ್ಯಕ್ರಮದಿಂದ ಕೆಲವರು ತೃಪ್ತರಿರುವುದಿಲ್ಲ. ಇನ್ನೇನಾದರೊಂದು ಕಾರ್ಯಕ್ರಮವು ಅಗತ್ಯವೆಂದು ಅವರಿಗನಿಸಹತ್ತಿದೆ. ಆದುದರಿಂದ ಅವರು ಕೃಷಿಕ ಚಳವಳವೇ ಮೊದಲಾದ ಹೊಸ ಪ್ರಯೋಗಗಳನ್ನು ನಡಿಸುತ್ತಿದ್ದಾರೆ. ಇಂತಹ ಪ್ರಯೋಗಗಳನ್ನು ದಬಾಯಿಸುವುದು ಸರಿಯೇ?" ಎಂದು ಡಾಕ್ಟರ್ ಲೋಹಿಯರವರು ಮಹಾತ್ಮ ಗಾಂಧಿಯವರನ್ನು ಪ್ರಶ್ನಿಸಿದುದಕ್ಕೆ ಅವರು ಕೊಟ್ಟ ಉತ್ತರದ ಸಾರಾಂಶವೇ ಮೇಲಿನದು. ಹೊಸ ಕಾರ್ಯಕ್ರಮವೇನಿದ್ದರೂ ಅದನ್ನು ತಾನು ಸ್ವಾಗತೀಕರಿಸುತ್ತೇನೆ. ಆದರೆ ಅಂತಹ ಕಾರ್ಯಕ್ರಮವೇನೂ ಈ ವರೆಗೆ ತನ್ನ ಗೋಚರಕ್ಕೆ ಬಂದುದಿಲ್ಲ. ತನ್ನ ಕಾರ್ಯಕ್ರಮವು ಕಾಂಗ್ರೆಸಿನೊಳಗಣ ಶಿಕ್ಷಿತರಿಗೆಲ್ಲಾ ಒಪ್ಪಿಗೆಯಾಗಿಲ್ಲೆಂದು ತನಗೆಗೊತ್ತಿದೆ. ಅಹಿಂಸೆಯಲ್ಲಿದೃಢ ವಿಶ್ವಾಸವಿಲ್ಲದಿರುವುದೇ ತನ್ನ ಕಾರ್ಯಕ್ರಮದ ಕುರಿತು ಕಾಂಗ್ರೆಸ್‌ವಾದಿಗಳು ಹಲವರ ಅಸಮ್ಮತಿಗೆ ಕಾರಣವೆಂದು ತಾನು ನಂಬುತ್ತೇನೆ. ಸಂಪೂರ್ಣ ಹಿಂದು ಮುಸಲ್ಮಾನ ಬಾಂಧವ್ಯವುಂಟಾಗನೆ, ಅಸ್ಪೃಶ್ಯತೆಯು ನಿರ್ಮೂಲಿಸಲ್ಪಡದೆ, ಮದ್ಯಪಾನವು ಸಂಪೂರ್ಣ ನಿಷೇಧಿಸಲ್ಪಡದೆ, ಗಿರಣಿ ವಸ್ತ್ರದ ಬದಲಿಗೆ ಖಾದಿ ವಸ್ತ್ರವು ಸಾರ್ವತ್ರಿಕವಾಗಿ ಉಪಯೋಗಿಸಲ್ಪಡದೆ ಅಹಿಂಸಾತ್ಮಕ ಸ್ವರಾಜ್ಯ ಸಾಧ್ಯವಿಲ್ಲೆಂದೇ ತನ್ನ ಸೂಚನೆ. ಕಾಂಗ್ರೆಸ್‌ವಾದಿಗಳೆಲ್ಲರೂ ಈ ವಿಧಾಯಕ ಕಾರ್ಯಕ್ರಮದ ಕಡೆಗೆ ಸಂಪೂರ್ಣ ಲಕ್ಷ್ಯಕೊಟ್ಟರೆ ಇಡೀ ದೇಶದಲ್ಲಿ ಸಾರ್ವತ್ರಿಕ ಸತ್ಯಾಗ್ರಹ ಹೂಡಲು ಅನುಕೂಲವಾದ ವಾತಾವರಣವು ಸ್ವತಃ ಉಂಟಾಗುವುದು. ಡಾಕ್ಟರ್ ಲೋಹಿಯರವರು ಸೂಚಿಸುವ ಕೃಷಿಕಚಳವಳವದ ಕುರಿತು ವಿಚಾರಿಸುವ. ಅವರನ್ನು ಅಹಿಂಸಾತ್ಮಕ ಹೋರಾಟದಲ್ಲಿ ತರಬೇತಿ ಮಾಡಲಾಗಿಲ್ಲೆಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಅವರಿಗೆ ನಾನಾ ಆಶೆ ತೋರಿಸಿ ಸದಾ ಉತ್ತೇಜಿತ ಸ್ಥಿತಿಯಲ್ಲಿರಿಸಲಾಗುತ್ತದೆ. ಇದು ಹಿಂಸಾತ್ಮಕ ಕಾರ್ಯದಲ್ಲಿ ಪರಿಣಾಮ ಹೊಂದದಿರಲಾರದು. ಕೃಷಿಕರನ್ನೂ ಮಜೂರರನ್ನೂ ಅಹಿಂಸಾತ್ಮಕ ಚಳವಳಿಕ್ಕಾಗಿ ತರಬೇತಿಮಾಡಬಹುದೆಂದೇ ತನ್ನ ಭಾವನೆ. ಆದರೆ ಕಾಂಗ್ರೆಸ್‌ವಾದಿಗಳು ಯಥಾರ್ಥವಾಗಿ ಅವರನ್ನು ಆ ರೀತಿ ತರಬೇತಿ ಮಾಡಬೇಕು. ಅವರಿಗೇನೇ ಅಹಿಂಸೆಯಲ್ಲಿ ವಿಶ್ವಾಸವಿಲ್ಲದಿದ್ದರೆ ಮಾತ್ರ ಆದು ಸಾಧ್ಯವಿಲ್ಲ. ಅಹಿಂಸಾತ್ಮಕ ಚಳವಳದಲ್ಲಿ ನಿಜವಾದ ತರಬೇತಿ ಹೊಂದಿದರೆ ಆ ಸಂಘಟನಾ ಶಕ್ತಿಯು ಅಜೇಯವಾಗುವುದು. ಆದರೆ ಈಗ ಮಜೂರರು ಮತ್ತು ಕೃಷಿಕರು ಹಿಂಸೆ ಮತ್ತು ಬಲಾತ್ಕಾರದ ಮೇಲೆ ಅವಲಂಬಿಸಿರುವಂತೆ ತರಬೇತಿ ಹೊಂದುತ್ತಾರೆ. ಇಂತಹ ಮಜೂರ ಮತ್ತು ಕೃಷಿಕ ಚಳವಳಿವು ನವೀನವಾದುದೇನೂ ಅಲ್ಲ.

ತಾನು ತನ್ನ ಸುತ್ತಲೂ ಈಗ ಹಿಂಸಾತ್ಮಕ ಚಳವಳದ ಸಿದ್ಧತೆಯನ್ನು ನೋಡುತ್ತಿದ್ದೇನೆ. 20 ವರ್ಷಗಳ ಪ್ರಯತ್ನದ ಈ ರೀತಿಯ ಪರಿಣಾಮಕ್ಕೆ ತನ್ನನ್ನು ಯಾರಾದರೂ ಜವಾಬ್ದಾರಿಯಾಗಿ ಮಾಡಿದಲ್ಲಿ ನಾನದಕ್ಕೆ ತಲೆಬಾಗಬೇಕಾಗಿದೆ. ಅಹಿಂಸೆಯಲ್ಲಿ ಶುದ್ಧ ಹಾಗೂ ದೃಢ ವಿಶ್ವಾಸವಿಲ್ಲದ ವಿನಹ ಪೂರ್ಣ ಸ್ವರಾಜ್ಯವನ್ನು ಗಳಿಸಲು ಸಾಧ್ಯವಿಲ್ಲ. ಹಾಗಾದಲ್ಲಿ ಕಾಂಗ್ರೆಸಿನೊಳಗಣ ಕಚ್ಚಾಟವೆಲ್ಲಾ ನಿಂತು ಹೋಗುವುದು. ಅಧಿಕಾರಕ್ಕಾಗಿ ಹೋರಾಟ ನಡೆಯಬಾರದು. ಪರಸ್ಪರ ನಿಂದೆ ವೈಷಮ್ಯದ ಬದಲಿಗೆ ಸಹಕಾರ ಮತ್ತು ಸೌಹಾರ್ದವುಂಟಾಗುವುದು.

ಈಗ ಕಾಂಗ್ರೆಸಿನೊಳಗೆ ಉಪಸ್ಥಿತವಾಗಿರುವ ಈ ಪ್ರಾಮುಖ್ಯ ಪ್ರಶ್ನೆಯ ಕುರಿತು ಕಠಿಣ ಆತ್ಮಶೋಧಮಾಡುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಿದೆ. ನಿಶ್ಚಿತ ಕಾರ್ಯಕ್ರಮವೇನೂ ಇಲ್ಲದೆ ತೇಲುತ್ತಾ ಇರುವುದು ವಿಹಿತವಲ್ಲ. ಕಾಂಗ್ರೆಸಿನೊಳಗಣ ಎಲ್ಲಾ ತಂಡದವರೂ ತಾವು ಬೇರೆಬೇರೆ ತಂಡಗಳಿಗೆ ಸೇರಿದವರೆಂಬುದನ್ನು ಮರೆತು, ತಾವೆಲ್ಲರೂ ಪ್ರಥಮವಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪ್ರತಿಜ್ಞಾಬದ್ಧರಿರುವ ದೇಶಸೇವಕರೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಪರಸ್ಪರ ಸಹಕರಿಸಿ ಒಮ್ಮನಸ್ಸಿನಿಂದ ಮುಂದಿನ ಕಾಂಗ್ರೆಸ್ ಧೋರಣೆಯನ್ನು ನಿಶ್ಚೈಸತಕ್ಕದ್ದು. ಈಗ ಕಾಂಗ್ರೆಸಿನ ಪಾಳ್ಯದೊಳಗೆ ಕಚ್ಚಾಟವು ತುಂಬಿಕೊಂಡಿದೆ. ಅದನ್ನು ನಿವಾರಿಸದೆ ಗತ್ಯಂತರವಿಲ್ಲ.

ಪುಟ ೩ರಿಂದ

ಡುತ್ತಿದೆ. ಕಾಂಗ್ರೆಸಿನೊಳಗೆ ಈಗ ಉಂಟಾಗಿರುವ ಬಿಕ್ಕಟ್ಟು ಅತ್ಯಂತ ಶೋಚನೀಯವಿದೆ. ಆತ್ಮನಿಗ್ರಹ ಮತ್ತು ಸಂಯಮವಿಲ್ಲದೆ ಪ್ರಜಾಸತ್ತೆಯು ಸಾಧ್ಯವೇ ಇಲ್ಲ. ಶಿಸ್ತೇ ಪ್ರಜಾಸತ್ತೆಯ ತಿರುಳು. ಕಾಂಗ್ರೆಸಿನೊಳಗೆ ತರುಣೋತ್ಸಾಹಿಗಳಲ್ಲಿ ಹಲವು ವಿಷಯಗಳ ಕುರಿತು ಅತೃಪ್ತಿಯುಂಟಾಗಿರುವುದೆಂಬುದು ನನಗೆ ಗೊತ್ತಿದೆ. ಬೇರೆ ಬೇರೆ ಮನೋವೃತ್ತಿಗಳೊಳಗೆ ಅಭಿಪ್ರಾಯ ಭೇದವು ಸಹಜವೇ ಸರಿ. ಆದರೆ ಒಮ್ಮೆ ಬಹುಪಕ್ಷದಿಂದ ಯಾವುದಾದರೊಂದು ನಿರ್ಧಾರವಾಯಿತೆಂದರೆ ಅನಂತರ ಅದಕ್ಕೆ ತಲೆಬಾಗಲೇಬೇಕು. ಕಾಂಗ್ರೆಸಿನೊಳಗೆ ಎಡಬಲಪಕ್ಷಗಳಿಗೆ ಸೇರಿದ ದೇಶಸೇವಾತತ್ಪರರಾದ ಜನರಿರುವರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅಂಥವರು ಲೆಫ್ಟಿಸ್ಟರನ್ನು ಕೇವಲ ವಿಘ್ನಕಾರಿಗಳೆಂದು ನಂಬುವಂತಾಗಬಾರದೆಂದೇ ಪಂಡಿತ ನೆಹರುಗಳ ಎಚ್ಚರ.

ಸ್ಪೈನಿನ ಸೇನಾನಿಗಳಲ್ಲಿ ಅತೃಪ್ತಿ

ಸ್ಪೈನು, ಜರ್ಮನಿ ಮತ್ತು ಇಟಲಿಗಳೊಂದಿಗೆ ಸೇರುವ ವಿಷಯದಲ್ಲಿ ಜನರಲ್ ಫ್ರೇಂಕೋವಿನ ಪಕ್ಷೀಯರೊಳಗೆ ತೀವ್ರ ಭಿನ್ನಾಭಿಪ್ರಾಯವುಂಟಾಗಿರುವುದು. ಇಟಲಿಯ ವಿದೇಶ ಮಂತ್ರಿ ಕೌಂಟ್ ಸಿಯಾನೋರವರು ಇತ್ತಲಾಗಿ ಸ್ಪೈನಿಗೆ ಹೋದಾಗ ಅವರಿಗೆ ಕೊಡಲ್ಪಟ್ಟ ಸ್ವಾಗತದ ಕುರಿತು ಜನರಲ್ ಆರನ್ಸೋ, ಜನರಲ್ ಯಾಗ್, ಜನರಲ್ ಸೋಲ್ಚಾಗ ಮತ್ತು ಜನರಲ್ ಅರಾಂಡರವರು ಅತೃಪ್ತಿ ಸೂಚಿಸಿರುವರು. ಜನರಲ್ ಫ್ರೇಂಕೋರವರು ಈ ಸೇನಾನಿಗಳನ್ನು ಕೆಳಗೆ ಹಾಕಿ ಅವಮಾನಿಸಿರುವರು. ಫ್ರಾನ್ಸ್ ಮತ್ತು ಇಂಗ್ಲೆಂಡಿನೊಡನೆ ಮೈತ್ರಿಯಿಂದಿರಬೇಕೆಂದೇ ಈ ಸೇನಾನಿಗಳ ಅಪೇಕ್ಷೆ. ಆದರೆ ಫೆಲೆಂಜಿಸ್ಟರೆಂಬವರು ಸ್ಪೈನಿನಲ್ಲಿ ಫೆಸಿಸ್ಟ್ ರಾಜ್ಯಭಾರ ಸ್ಥಾಪಿಸುವ ಉದ್ದೇಶದಿಂದಿರುವರು. ಜನರಲ್ ಫ್ರೇಂಕೋರವರ ಬಾವನೇ ಈ ಪಕ್ಷದ ನಾಯಕರಾಗಿರುವರು. ಹೀಗೆ ಜನರಲ್ ಫ್ರೇಂಕೋವಿನ ಅನುಯಾಯಿಗಳೊಳಗೆ ಒಡಕುಂಟಾಗಿರುವುದು. ಜನರಲ್ ಫ್ರೇಂಕೋರವರು, ಸ್ಪೈನಿನ ಮೊದಲಿನ ಅರಸರಾದ ಅಲ್ಫಾನ್ಸೋರವರೊಡನೆ ಮಾತಾಡಲು ಡ್ಯೂಕ್ ಆಫ್ ಡಿ ಮೋರಾ ಎಂಬವರನ್ನು ಕಳುಹಿಸಿರುವರು. ಅಲ್ಫಾನ್ಸೋರವರನ್ನು ಪುನಃ ಪಟ್ಟಕ್ಕೇರಿಸುವುದೇ ಇದರ ಉದ್ದೇಶವೆಂದು ತಿಳಿದುಬರುತ್ತದೆ.

THE BOMBAY LIFE ASSURANCE CO, LTD.

ಸ್ಥಾಪನೆ 1908

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಐವಜು.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನನ್ನೊಡನೆ ವಿಚಾರಿಸುವುದು ಲಾಭದಾಯಕವಾಗಿದೆ.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.

ದಿ ಬೋಂಬೆ ಲೈಫ್ ಬಿಲ್ಡಿಂಗ್, ಸರ್ ಲಾಲೂಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುತ್ತ್ಯಾರ,	ಪೋ. ಬಾಕ್ಸ್ ನಂ.337, ಮೌಂಟ್ ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವೆಂಡ್ರಮ್.

Degrees: Books: Medicines.

Free H. L. M. S., H. M., B. H., M. D. etc Free Homeo-Ayur-Unani-Naturo degrees, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps.—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India)

ವಾರದ ವಿಮರ್ಶೆ

ನಿರಶನ ವ್ರತದಲ್ಲಿ ತಪ್ಪೇನು?

ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯು ಬಹಳ ಸಮಯದ ಮೊದಲೇ ಆಗಬೇಕಿತ್ತು. ಆದರೆ ಅವರು ತಮ್ಮ ಬಿಡುಗಡೆಗಾಗಿ ನಿರಶನವ್ರತ ಕೈಗೊಂಡುದು ತಪ್ಪು. ಅದು ನಿಷೇಧನೀಯವೆಂದು ಗಾಂಧಿಜಿಯವರ ಅಭಿಮತ. ಈ ಅಭಿಮತವನ್ನೇ ಕಾಂಗ್ರೆಸಿನ ಹಲವು ಮಂದಿ ಮುಖಂಡರು ಪ್ರತಿಧ್ವನಿಸುತ್ತಿರುವರು. ಅದೊಂದು ಅಂಧಾನುಕರಣವೆನ್ನುವ. ಆದರೆ ಈ ಕೈದಿಗಳು 'ಇವತ್ತು ಬಿಡುಗಡೆಯಾಗುತ್ತದೆ, ನಾಳೆ ಆಗುತ್ತದೆ'ಂದು ಎಷ್ಟು ಕಾಲ ಕಾದುಕೊಂಡಿರುವುದು? ಪಂಡಿತ ಜವಾಹರಲಾಲರೆಂದಂತೆ, ಕೇವಲ ಅಧಿನಿರಾಶೆಗಳ ಹೊಯ್ದಾಟದಲ್ಲಿ ಅವರ ಬಾಳೆಂಬುದು ಯಮಯಾತನೆಯಾಗಿರುವುದು. ಈ ಮೊದಲೊಮ್ಮೆ ಅನ್ನ ಸತ್ಯಾಗ್ರಹವಮಾಡಿದಾಗ, ಗಾಂಧಿಜಿಯವರು ಅವರ ಬಿಡುಗಡೆಯ ಜವಾಬ್ದಾರಿ ಹೊತ್ತು ನಿಲ್ಲಿಸುವಂತೆ ಮಾಡಿದರು. ಆದರೆ ಬಿಡುಗಡೆಮಾಡಲು ಅವರು ನಡಿಸಿದ ಪ್ರಯತ್ನವು ಸಂಪೂರ್ಣ ಫಲಿಸಲಿಲ್ಲ ಬಂಗಾಳ ಸರಕಾರವು ತನ್ನ ಛಲ ಬಿಡಲಿಲ್ಲ. ಗಾಂಧಿಜಿಯವರು ಮಾತು ಕೊಟ್ಟೀಗ 1 ವರ್ಷ ದಾಟಿತು. ರಾಜಕೀಯ ಕೈದಿಗಳಾದರೂ ಎಷ್ಟು ಸಮಯ ಬಿಡುಗಡೆಯ ಆಶೆ ಕಟ್ಟಿಕೊಂಡು ಸೆರೆಮನೆಯಲ್ಲಿ ನರಳಿಕೊಂಡಿರುವುದು? ಗಾಂಧಿಜಿಯವರೇಕೆ ಈ ವಿಷಯದಲ್ಲಿ ಮೈಸರಾಯರ ಮಧ್ಯಸ್ತಿಕೆಗಾಗಿ ಪ್ರಯತ್ನಿಸಲಿಲ್ಲ? ದೇಶವು ಈ ಕೈದಿಗಳ ಕಡೆಗಿನ ತನ್ನ ಕರ್ತವ್ಯವನ್ನು ಮರೆತು ಮೌನವಾಗಿರುವಾಗ, ಈ ಕೈದಿಗಳು ಕಾದು ಕಾದು ತಾಳ್ಮೆಗೆಟ್ಟು ಅನ್ನ ಸತ್ಯಾಗ್ರಹ ಹಿಡಿದುದರಲ್ಲಿ ತಪ್ಪೇನು? ಇಡೀ ದೇಶದ ಲಕ್ಷ್ಯವು ಈಗ ಅವರ ಕಡೆಗೆ ಹರಿದಿರುವುದಿಲ್ಲವೇ? ಅವರ ಬಿಡುಗಡೆಗಾಗಿ ಈಗ ತೀವ್ರ ಚಳವಳ ನಡೆದಿರುವುದಿಲ್ಲವೇ? ಇಲ್ಲವಾದರೆ ಅವರ ಕಡೆಗೆ ಯಾರು ಲಕ್ಷ್ಯಕೊಡುತ್ತಿದ್ದರು? ಕಾರಾಗೃಹದೊಳಗಣ ಅವರ ಗೋಳು ಯಾರಿಗೆ ಕೇಳಿಸುತ್ತಿತ್ತು?

ಟೈನ್ ಸ್ಟೈನ್ ಒಪ್ಪಂದವು ಇನ್ನೊಂದು ಮ್ಯುನಿಚೇ?

ತಾವು ಏಸ್ಯಾ ಖಂಡದ ಜರ್ಮನರು. ಬ್ರಿಟಿಷರ ಬೆದರಿಕೆ, ಬಾಯ್ಬಡಕತನಗಳಿಗೆ ಸೊಪ್ಪುಹಾಕದೆ ಚೈನವನ್ನು ಸಂಪೂರ್ಣವಾಗಿ ತಮ್ಮ ಅಧೀನಗೊಳಿಸಿಯೇ ಸಿದ್ಧವೆಂಬ ಜಪಾನರ ನಿರ್ಧಾರವು ಸಫಲವಾಗುತ್ತಿದೆ ಸ್ವತಃ ಹಿಟ್ಲರರಬಳಿಗೋಡಿ ಮ್ಯುನಿಚ್ ಒಪ್ಪಂದವನ್ನು ಮಾಡಿ ಜರ್ಮನಿಯ ಪ್ರೀತಿಗಳಿಸಬೇಕು; ಯುರೋಪಿನಲ್ಲಿ ಶಾಂತಿ ಸ್ಥಾಪಿಸಬೇಕೆಂಬ ಮಿ ಚೇಂಬರ್ಲೇನರ ಇಚ್ಛೆಯು ಹೇಗೆ ಬಯಲು ಭ್ರಾಂತಿಯಾಯಿತೋ ಅದೇ ರೀತಿ ಈಗ ಚೈನದಲ್ಲಿಯೂ ಆಗಲಿದೆ. ಯುರೋಪಿನಲ್ಲಿ ಯುದ್ಧವು ಇಂದು ನಾಳೆಯಂತಿರುವಾಗ ತಮ್ಮ ನೌಕಾ ಬಲವನ್ನು ಪೂರ್ವಕ್ಕೆ ಕಳುಹಿಸಿ ಜಪಾನನ್ನು ಪ್ರತಿಭಟಿಸಲು ಸಾಧ್ಯವಿಲ್ಲೆಂದು ಚೇಂಬರ್ಲೇನರು, ಜಪಾನು ತಮಗೆ ಮಾಡಿರುವ ಎಂತಹ ಅವಮಾನವನ್ನಾದರೂ ತಾಳಿಕೊಂಡು ಆತ್ಮರಕ್ಷಣೆಗಾಗಿ ಎಂಬಂತೆ ಜಪಾನಿನೊಡನೆ ಒಪ್ಪಂದಮಾಡಲು ಮುಂದಾಗಿದ್ದಾರೆ. ತಮ್ಮ ಜನರ ಸ್ವಾರ್ಥವನ್ನಷ್ಟೆ ಹೇಗಾದರೂ ರಕ್ಷಿಸಿಕೊಳ್ಳಬೇಕೆಂಬುದೇ ಟೈನ್ ಸ್ಟೈನ್ ಒಪ್ಪಂದದ ಉದ್ದೇಶವಿರುವಂತೆ ತೋರುತ್ತದೆ ಇದರಿಂದ ಜಪಾನು ಚೈನದ ಮೇಲೆ ನಡೆಸಿರುವ ಆಕ್ರಮವನ್ನು ಅಂಗೀಕರಿಸಿ ಒಂಭತ್ತು ರಾಷ್ಟ್ರಗಳ ಒಪ್ಪಂದವನ್ನು ಪ್ರತ್ಯಕ್ಷವಾಗಿಯಲ್ಲದಿದ್ದರೂ ಅಪ್ರತ್ಯಕ್ಷವಾಗಿ ಮುರಿದು ಹಾಕಿದಂತಾಯಿತು. ಇದರಿಂದ ಜಪಾನು ಹಿಟ್ಲರರಂತೆಯೇ ಮತ್ತಷ್ಟು ಎದೆಗೊಂಡು ಚೈನದ ಮೇಲೆ ತನ್ನ ಸಂಪೂರ್ಣ ಅಧಿಕಾರ ಸ್ಥಾಪಿಸಲು ಮುಂದೂತ್ತುವಂತಾಗದಿರಲಾರದು. ಚೈನದ ವಿದೇಶೀ 'ಕನ್‌ಸೆಸ್ಸನ್'ಗಳುಳ್ಳ ಬಂದರುಗಳನ್ನು ಒಂದರ ಹಿಂದೊಂದು ನಿರ್ಭಯವಾಗಿ ವಶಪಡಿಸಿಕೊಳ್ಳುವುದು. ಚೇಂಬರ್ಲೇನರು ಜಪಾನರಿಗೆ ಶರಣಾಗತವಾಗುವಂತಹ ಈ ಅಂಜುಗೂಳಿ ಧೋರಣೆಯಿಂದ ಚೀನೀಯರು ತೀವ್ರ ಅತೃಪ್ತಿಗೊಂಡಿರುತ್ತಾರೆ. ಚೀನದಲ್ಲಿರುವ ಬ್ರಿಟಿಷ್ ಜನರೇ ಅದನ್ನು ನಿಷೇಧಿಸಿರುತ್ತಾರೆ.

ಅಮೇರಿಕದ ಪ್ರತೀಕಾರ

ಚೈನದಲ್ಲಿ ಇಂಗ್ಲೆಂಡು ಬಿಕ್ಕಟ್ಟಿನಲ್ಲಿ ಸಿಕ್ಕಿದಾಗ ಅಮೇರಿಕವು ಸಹಾಯಕ್ಕೆ ಬರಲಿಲ್ಲೆಂದು ಇಂಗ್ಲೆಂಡಿನ ದೂರು. ಆದರೆ ಈಗ ಅಮೇರಿಕವು ಸ್ವತಂತ್ರವಾಗಿ ಜಪಾನಿನ ಮೇಲೆ ಪ್ರತೀಕಾರಮಾಡಿ, ಒಂಭತ್ತು ರಾಷ್ಟ್ರಗಳ ಒಪ್ಪಂದವನ್ನು ರದ್ದುಗೊಳಿಸಿರುವುದು ಇದರಿಂದ ಅಮೇರಿಕವು ಜಪಾನಿನ ವ್ಯಾಪಾರ ಸಂಬಂಧವನ್ನು ಕಡಿದು ಹಾಕಿ ಅದಕ್ಕೆ ಯುದ್ಧ ಮತ್ತು ಇತರ ಸಾಮಗ್ರಿ ಕಳುಹಿಸುವುದನ್ನು ನಿಲ್ಲಿಸಿಬಿಡುವಂತಾಗಿದೆ ಅಮೇರಿಕದ ಪ್ರೆಸಿಡೆಂಟ್ ರೂಸವೆಲ್ಟರ ಹಠಾತ್ತಾದ ಈ ಪ್ರತೀಕಾರದಿಂದ ಜಪಾನು ತಳಮಳಗೊಂಡಿದೆ. ಚೈನವು ಹುರುಪುಗೊಂಡಿದೆ. ಇದೇ ರೀತಿ ಇಂಗ್ಲೆಂಡು, ಫ್ರಾನ್ಸ್ ಮೊದಲಾದ ರಾಷ್ಟ್ರಗಳು ವರ್ತಿಸಿದ ಪಕ್ಷದಲ್ಲಿ ಜಪಾನಿಗೆ ಚೈನದ ಮೇಲೆ ಹೆಚ್ಚುಕಾಲ ಯುದ್ಧ ನಡಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ಜಪಾನಿಗೆ ಯುದ್ಧ ಸಾಮಗ್ರಿಗಳು ಹೆಚ್ಚಾಗಿ ಈ ರಾಷ್ಟ್ರಗಳಿಂದಲೇ ಹೋಗುತ್ತವೆ.

ಭಾರತದ ಹೊರಗಣ ಭಾರತೀಯರ ಗತಿಯೇನು?

ಅನೇಕ ವರ್ಷಗಳ ಹಿಂದೆ ಸ್ವದೇಶವನ್ನು ಬಿಟ್ಟು ದೂರದ ಅನ್ಯ ದೇಶಗಳಿಗೆ ಹೋಗಿ ವಾಸಿಸಿ ವ್ಯಾಪಾರ, ಉದ್ಯೋಗ ನಡಿಸಿ, ಮನೆಮಾರು ಮಾಡಿಕೊಂಡಿರುವ ಸಾಹಸಿಗರಾದ ಹಿಂದೀಯರೀಗ ಬಹಳ ವಿಪತ್ತಿಗೊಳಗಾಗಿರುತ್ತಾರೆ. ದಕ್ಷಿಣ ಆಫ್ರಿಕದ ಹಿಂದೀಯರನ್ನು ನಿರ್ಬಂಧಪೂರ್ವಕವಾಗಿ ಪ್ರತ್ಯೇಕಿಸಿ, ತಮಗೆ ಅವರಿಂದ ಯಾವ ತರದ ಬಾಧಕವೂ ಆಗದಂತೆ ಮಾಡುವ ಕಾನೂನುಗಳನ್ನು ಅಲ್ಲಿಯ ಬಿಳಿಜನ ಪಕ್ಷಪಾತಿ ಸರಕಾರವು ಮಾಡಿದೆ. ಈ ಕಾನೂನುಗಳನ್ನು ಹಿಂದೀಯರು ಉಗ್ರವಾಗಿ ನಿಷೇಧಿಸಿದರೂ, ಇಂಡಿಯಾ ಸರಕಾರವು ಆಕ್ಷೇಪಿಸಿದರೂ ಗಣ್ಯಮಾಡದೆ ದಕ್ಷಿಣ ಆಫ್ರಿಕ ಸರಕಾರವು ಜ್ಯಾರಿಗೆ ತರುವ ಛಲ ತೊಟ್ಟಿರುವುದು. ಇದರಿಂದ ದಕ್ಷಿಣ ಆಫ್ರಿಕದ ಹಿಂದೀಯರು ಉದ್ವಿಗ್ನಗೊಂಡಿರುತ್ತಾರೆ. ತಾವು ನಾಯಿನರಿಗಳಂತೆ ಬದುಕುವಂತಾಗುವುದು ತಮ್ಮ ದೇಶದ ಗೌರವಕ್ಕೆ ಕುಂದು; ತಮ್ಮ ಸ್ವಾಭಿಮಾನಕ್ಕೆ ದೊಡ್ಡ ಕೊರತೆಯೆಂದು ಅವರು ಸತ್ಯಾಗ್ರಹ ಹೂಡುವ ನಿರ್ಧಾರಮಾಡಿದ್ದಾರೆ ದಕ್ಷಿಣ ಆಫ್ರಿಕದ ಹಿಂದೂದೇಶದ ಏಜೆಂಟರನ್ನು ಹಿಂದೆಕರೆಯಬೇಕೆಂದು ಕೇಳಿಕೊಂಡಿರುತ್ತಾರೆ. ಗಾಂಧಿಜಿಯವರು ದಕ್ಷಿಣ ಆಫ್ರಿಕದ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಸಲಹೆಕೊಡಲಿದ್ದಾರೆ. ಹಿಂದೂದೇಶದ ಭಾಗಗಳಂತೆಯೇ ಇದ್ದು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಸಾಂಪತ್ತಿಕ ನಿಕಟಸಂಬಂಧವಿರುವ ನೆರೆಕರೆಯ ಬರ್ಮ ಮತ್ತು ಸಿಲೋನ್ ದೇಶಗಳು ಕೂಡಾ ಅಲ್ಲಿಯ ಹಿಂದೀಯರನ್ನು ಹೊರಗಟ್ಟಲುದ್ಯುಕ್ತವಾಗಿವೆ. ಬರ್ಮದಲ್ಲಿ ಹಲವು ಹಿಂದೀಯರು ಅಸಹನೀಯ ಹಿಂಸೆಗೊಳಗಾಗಿ ತಮ್ಮ ಮನೆಮಾರುಗಳನ್ನು ಕಳಕೊಂಡಿರುತ್ತಾರೆ. ಹಲವರ ಜೀವನವು ಅಸುರಕ್ಷಿತವಾಗಿದೆ. ಸಿಲೋನ್ ಸರಕಾರವು, ತಮ್ಮ ಜನರು ನಿರುದ್ಯೋಗಿಗಳಾಗಿರುವರೆಂದು ಹಲವು ವರ್ಷಗಳಿಂದ ಸಿಲೋನಿನಲ್ಲಿ ಉದ್ಯೋಗ ನಡಿಸುತ್ತಿರುವ ಹಿಂದೀಯರನ್ನು ಹೊರಗೆ ಕಳುಹಿಸುವ ಏರ್ಪಾಡುಮಾಡಿದೆ. ಪಂಡಿತ ಜವಾಹರಲಾಲರು ಹಿಂದೂದೇಶದ ರಾಯಭಾರಿಯಾಗಿ ಹೋಗಿ ಮಾಡಿದ ಪ್ರಯತ್ನ ಕೂಡಾ ಹಿಂದೀಯರನ್ನು ಹೊರಗೆ ಕಳುಹಿಸುವುದನ್ನು ನಿಲ್ಲಿಸುವ ವಿಷಯದಲ್ಲಿ ಜಯಶೀಲವಾದಂತೆ ತೋರುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದೊಳಗಣ ನಾಗರಿಕರ ಸರಿಸಮಾನ ಹಕ್ಕುಬಾಧ್ಯತೆಗಳ ರೀತಿಯಿದು. ಹಿಂದೂದೇಶವು ಹಿಂದೀಯರನ್ನು ಪೀಡಿಸಿ, ಹೊರಗಟ್ಟುವ ದೇಶಗಳ ಮೇಲೆ ತೀವ್ರ ಪ್ರತೀಕಾರಮಾಡುವ ಧೋರಣೆ ವಹಿಸದಿದ್ದರೆ ಅನ್ಯದೇಶವಾಸಿ ಭಾರತೀಯರಿಗೆ ಗತಿಯೇ ಇಲ್ಲದಂತಾಗುವುದು.

ಕಂಟಕದ ತಿಂಗಳು ಆಗೋಸ್ತು

ಯುರೋಪಿನಲ್ಲಿ ಯುದ್ಧವಾಗುವುದಾದರೆ ಆಗೋಸ್ತು ತಿಂಗಳಲ್ಲಿ ಈ ಕಂಟಕದ ತಿಂಗಳೊಂದು ದಾಟಿದ ಪಕ್ಷದಲ್ಲಿ ಮತ್ತೆ ಬೇಗನೆ ಯುದ್ಧ ಭಯವಿಲ್ಲೆಂದು ಹಲವು ರಾಜನೀತಿಜ್ಞರ ಅಭಿಮತ. ಡಾನ್ಜಿಗನಲ್ಲಿದ್ದ ತುಫಾನು ಈಗ ಸ್ವಲ್ಪ ಶಾಂತವಾಗಿದೆ. ಯುರೋಪಿನಲ್ಲೆಲ್ಲಾ ಸ್ಮಶಾನ ಶಾಂತಿಯು ನೆಲೆಗೊಂಡಿದೆ. ಡಾನ್ಜಿಗಿನ ವಿಷಯದಲ್ಲಿ ತಾನು ಒಮ್ಮೆಯೇ ಗಲಾಟೆಯೆಬ್ಬಿಸಿದುದು ಅವಿವೇಕವಾಯಿತೆಂದು ಹಿಟ್ಲರರು ಒಮ್ಮೆ ಎದ್ದಿರುವ ಕ್ಷೋಭೆಯು ತಣ್ಣಗಾಗುವವರೆಗೆ ಕಾದಿರುವಂತೆ ತೋರುತ್ತದೆ. ಯುದ್ಧ ಮಾಡುವುದು ತನ್ನ ಉದ್ದೇಶವೇ ಅಲ್ಲ ಶಾಂತಿಯಿಂದಲೇ ತಾನು ಡಾನ್ಜಿಗನ್ನು ಜರ್ಮನಿಗೆ ಸೇರಿಸಲಿಚ್ಛಿಸುತ್ತೇನೆಂದು ಮಾರ್ಜಾಲ ಸನ್ಯಾಸಿ ನೀತಿ

ಪುಟ ೧೭ಕ್ಕೆ.

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು

ಗಾರ್ಡನ್ ಹೋಟೆಲ್

(ಫೋನ್ ನಂಬ್ರ:406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!

ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ

ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347

ಇದೇ ಮ್ಯಾನೇಜರಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜ ಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ ಮೈಸೂರು ಕೆಫೆ

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

ಪ್ರೊಪ್ರೈಟರ್-ಕೆ. ಗುರುರಾಜಾಚಾರ್.

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಬಾಸರಿಸ್ವಕ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ 1ರ ರೂ 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನುಭವಿಸಿದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವವಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲುಸಿಕ್ಕುವಂತೆ ಮಾಡುವುದು.

ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— ಯಂ. ಗಣಪಯ್ಯ ಎಂಡ್ ಸನ್ಸ್,

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಕ್ಕುವ ಸ್ಥಳ:- ದಿ ಕೆನರಾ ಟ್ರೇಡ್ಸ್ ಲಿ.ಟೆಡ್, ಪುತ್ತೂರು, ಶ್ರೀ ರಾಮ ಸ್ಟೋರ್ಸ್ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು, ವಿಟ್ಠಲ್ ನಾರಾಯಣ ಶೆಣೈ, ಟ್ರೇಡ್ ಟರ್ಮಿನಸ್, ಮಡಗಾಂವ್, ಬೊಂಬಾಯಿ, ಬಿ. ಪಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗ್ಲೂರು ಸ್ಟೋರ್ಸ್, ಮಡಿಕೇರಿ, ಕೃಷ್ಣ ಫಾರ್ಮಸಿ, ಕುಂದಾಪುರ, ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ.

"ಸರ್ಕಾರದವರು ಈ ಜಮೀನನ್ನು ನಮಗೆ ಮುಫತ್ತಾಗಿ ಕೊಟ್ಟಿರುತ್ತಾರೆ. ಅಲ್ಲದೆ, ಅಲ್ಲಿ ಕಾಣುತ್ತಿರುವ ಬಾವಿಯನ್ನೂ ಸಹ ನಮ್ಮ ಉಪಯೋಗಕ್ಕಾಗಿಯೇ ತೆಗೆಯಿಸಿರುತ್ತಾರೆ."

"ನಾನು ಒಂದು ಸೊಗಸಾದ ಹಾಸ್ಟೆಲಿನಲ್ಲಿದ್ದು ವಿದ್ಯಾಭ್ಯಾಸವನ್ನು ಮಾಡುತ್ತಿದ್ದೇನೆ. ಆ ಹಾಸ್ಟಲನ್ನು ಸರ್ಕಾರದವರು ನಮ್ಮವರಿಗಾಗಿಯೇ ಏರ್ಪಡಿಸಿರುತ್ತಾರೆ."

ಇದು, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಆದಿಕರ್ಣಾಟಿಕ ಅಥವಾ ಹರಿಜನರ ಪಂಗಡದವರಾದ ತಂದೆ ಮಕ್ಕಳ ಸಂಭಾಷಣೆಯಾಗಿದೆ.

ವೈಜ್ಞಾನಿಕ ಸಂಶೋಧನೆಗಳ ಫಲಿತಾಂಶವಾಗಿ, ಕೋಲಾರದಲ್ಲಿ ಕಲ್ಲಿನಿಂದ ಚಿನ್ನವನ್ನು ತೆಗೆಯುತ್ತಿದ್ದಾರೆ. ಆದರೆ ಆ ಡಿಸ್ಟ್ರಿಕ್ಟ್ ಇನ್ನೂ ಆಶ್ಚರ್ಯಕರವಾದ ಪರಿವರ್ತನೆಯನ್ನೂ ಸಹ ಗಮನಿಸಬಹುದಾಗಿದೆ. ಆ ಡಿಸ್ಟ್ರಿಕ್ಟಿನಲ್ಲಿ ವಾಸವಾಗಿರುವ ಬಹಳ ಹಿಂದುಳಿದ ಪಂಗಡದವರಾದ ಹರಿಜನರನ್ನು ಸರ್ಕಾರದವರು, ಸಂಸ್ಥಾನದ ಬಹಳ ನಾಗರಿಕರಾದ ಪ್ರಜೆಗಳನ್ನಾಗಿ ಮಾರ್ಪಡಿಸುತ್ತಿದ್ದಾರೆ. ಹರಿಜನೋದ್ಧಾರ ಕೆಲಸ ಕಾರ್ಯಗಳು ನಡೆಯುತ್ತಿರುವುದು ಕೋಲಾರ ಜಿಲ್ಲೆಯಲ್ಲಿ ಮಾತ್ರವೇ ಅಲ್ಲ. ಸಂಸ್ಥಾನದ ಪ್ರತಿಯೊಂದು ಭಾಗದಲ್ಲಿಯೂ ನಡೆಯುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಸುಮಾರು 58,000 ಮಂದಿ ಹರಿಜನರಿದ್ದಾರೆ. ಕಳೆದ ಹತ್ತು ವರ್ಷಗಳಲ್ಲಿ 14,453 ರೂಪಾಯಿಗಳ ಆಕಾರವುಳ್ಳ 7,920 ಎಕರೆಗಳಷ್ಟು ಜಮೀನನ್ನು ಹರಿಜನರಿಗೆ ಕೊಡಲಾಯಿತು. 1938-

ಮೈಸೂರು ಸಂಸ್ಥಾನದಲ್ಲಿ
ಹರಿಜನೋದ್ಧಾರ

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಹರಿಜನರಿಗೇರ್ಪಡಿಸಿರುವ ಸೌಕರ್ಯಗಳು

39ನೇ ಸಾಲು ಒಂದರಲ್ಲಿಯೇ ಸುಮಾರು 591 ಎಕರೆಗಳನ್ನು ಅವರಿಗೆ ಮುಫತ್ತಾಗಿ ಕೊಡಲಾಗಿದೆ.

ಆದಿಕರ್ಣಾಟಕರು ವಾಸಿಸುವುದಕ್ಕಾಗಿಯೇ ಪ್ರತ್ಯೇಕವಾದ ಎರಡು ಕಾಲೊನಿಗಳನ್ನು ಏರ್ಪಡಿಸಲಾಗಿದೆ. 1928-29ನೇ ಇಸವಿಯು ಆಗಾಯಿತು ಇಲ್ಲಿಯವರೆಗೂ 989 ಮಂದಿಗೆ ಮನೆಗಳನ್ನು ಕಟ್ಟಲು ಉಚಿತವಾಗಿ ನಿವೇಶನಗಳನ್ನು ಕೊಡಲಾಗಿದೆ.

ಕೋಲಾರದಲ್ಲಿ ಹರಿಜನರಿಗಾಗಿಯೇ ಒಂದು ಪರಸ್ಪರ ಸಹಾಯ ಸಂಘವೇರ್ಪಟ್ಟಿದೆ; ಅಲ್ಲಿ ಕೆಲವು ಹರಿಜನರು ಫಿಕ್ಸೆಡ್ ಡಿಪಾಜಿಟುಗಳನ್ನು ಸಹಾ ಇಟ್ಟಿರುತ್ತಾರೆ. ಈ ಸಂಘದ ಷೇರು ಮೊಬಲಗು 21,288 ರೂಗಳು. ಠೇವಣಿಯ ಮೊಬಲಗು 1,421 ರೂಗಳು, ವರ್ಷದ ಲೇವಾದೇವಿ 14914 ರೂಗಳು. ನಿವ್ವಳ ನಫೆ. 711 ರೂಪಾಯಿಗಳು, ಹರಿಜನರಿಗಾಗಿಯೇ ಪ್ರತ್ಯೇಕವಾದ ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದಕ್ಕಾಗಿಯೇ ಒಂದು ಕಾರ್ಯಕ್ರಮವೇರ್ಪಟ್ಟಿದೆ. ಕೋಲಾರ ಡಿಸ್ಟ್ರಿಕ್ಟೊಂದರಲ್ಲಿಯೇ, ಹರಿಜನರಿಗಾಗಿ, ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲು 40,000 ರೂಪಾಯಿಗಳನ್ನು ವೆಚ್ಚಮಾಡಲಾಯಿತು. ಪ್ರಸಕ್ತ ವರ್ಷದಲ್ಲಿ ಎರಡುಬಾವಿಗಳನ್ನು ತೋಡಿಸಲಾಯಿತು. ಇನ್ನೂ 9ಬಾವಿಗಳನ್ನು ತೋಡಿಸುವ ಕೆಲಸವು ಸರ್ಕಾರದವರಿಂದ ಮಂಜೂರಾಗಿ ಆ ಸಂಬಂಧದಲ್ಲಿ ಈಗಾಗಲೇ ಕೆಲಸಗಳು ಪ್ರಾರಂಭವಾಗಿವೆ.

ಕೋಲಾರ ಜಿಲ್ಲೆಯಲ್ಲಿ ಆದಿಕರ್ಣಾಟಕರಿಗಾಗಿ (ಹರಿಜನರಿಗಾಗಿ) 33 ಸ್ಪೆಷಲ್ ಸ್ಕೂಲುಗಳಿವೆ. ಆ ಶಾಲೆಗಳಲ್ಲಿ 393 ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವರ ಪೈಕಿ 305 ಮಂದಿ ಬಾಲಕರು ಮತ್ತು 88 ಮಂದಿ ಬಾಲಕಿಯರು. ಅವರಿಗಾಗಿ ಕೋಲಾರದಲ್ಲಿಯೂ ಬೌರಿಂಗ್‌ಪೇಟೆಯಲ್ಲಿಯೂ ಹಾಸ್ಟೆಲುಗಳನ್ನು ಏರ್ಪಡಿಸಲಾಗಿದೆ. ಕೋಲಾರದ ಹಾಸ್ಟೆಲು ಸರ್ಕಾರದವರಿಂದಲೇ ಸ್ಥಾಪಿಸಲ್ಪಟ್ಟು ನಡೆಯುತ್ತಿದೆ. ಬೌರಿಂಗ್ ಪೇಟೆಯಲ್ಲಿರುವ, ಹರಿಜನರ ಹಾಸ್ಟೆಲಿಗೆ ಸರ್ಕಾರದವರು ದ್ರವ್ಯಸಹಾಯವನ್ನು ಮಾಡುತ್ತಿದ್ದಾರೆ.

ಸ್ಥಳೀಯ ಸಂಸ್ಥೆಗಳಿಗೂ ಸಹ ಹರಿಜನರನ್ನು ನಾಮಿನೇಟು ಮಾಡಲಾಗುತ್ತಿದೆ. ಈ ಜಿಲ್ಲೆಯ ಪಂಚಾಯಿತಿಗಳು, ಮುನಿಸಿಪಾಲಿಟಿಗಳು, ಇವೇ ಮೊದಲಾದ ಸ್ಥಳೀಯ ಸಂಸ್ಥೆಗಳಲ್ಲಿ 69 ಮಂದಿ ಹರಿಜನರನ್ನು ನಾಮಿನೇಟು ಮಾಡಿದೆ. "ನಮ್ಮ ಚಿಕ್ಕಪ್ಪನವರೂ, ಸೊಗಸಾದ ಉಡುಪನ್ನು ಹಾಕಿಕೊಂಡು ಕಛೇರಿಗೆ ಹೋಗುತ್ತಾರೆ." ಎಂದು ಹರಿಜನ ಬಾಲಕನು ಹೇಳಿಕೊಂಡು ಹೆಮ್ಮೆಪಟ್ಟುಕೊಳ್ಳುತ್ತಾನೆ. ಕೋಲಾರ ಜಿಲ್ಲೆಯಲ್ಲಿ ಆಫೀಸು ಸಿಬ್ಬಂದಿಯ ಪೈಕಿ 16 ಮಂದಿ ಹರಿಜನರಿರುತ್ತಾರೆ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟವಾಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆಮಾಡುತ್ತವೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು, ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತವೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದವರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧಸೇರು ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಬಿವಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡುಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪೪ ಚಿಕ್ಕಪೇಟೆ ಪಾರ್ಕ್, ಬೆಂಗಳೂರು ಸಿಟಿ.

UNSOLICITED APPRECIATION

T. Sriramulu Chetty, B.A.,
Pleader & Municipal Councillor.

PRODDATUR,
(CUDDAPAH DT.)
3rd JULY, 1939.

The Manager,

The Canara Mutual Assurance Co., Limited, Udipi.

Dear Sir,

Ref: Policy No. 2214 for Rs 1000/-on the life of Tangatoor Chennappa (*deceased*)

My client Tangatoor Ramakka the widow of the insured under the above policy is in receipt of your cheque for the full amount due under the above policy.

In this connection, my client desires to express her sense of gratitude to you for the prompt settlement of her claim within such a short time after the death of the insured though her husband had paid only a single quarterly premium of Rupees 13—10—0. . . .

I am glad to mention that in my experience as a pleader acting for claimants, I have found that you have been very prompt in the matter of settlement of claims.

....

Wishing you every success,

Yours faithfully,
(Sd) *T. Sriramulu Chetty,*
Pleader.

THE CANARA MUTUAL ASSURANCE COMPANY, LIMITED.

Head Office: UDIPI, S. India.

The Company is Mutual. There are no Shareholders

ಹಿಂದೀ ರಾಜಕೀಯ ಪರಿಸ್ಥಿತಿಯ ಪರಿಶೀಲನೆ

ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರ ವಿಮರ್ಶಾತ್ಮಕ ಭಾಷಣ

ಸ್ವರಾಜ್ಯಸಾಧನೆಯ ದೃಷ್ಟಿಯಲ್ಲಿ ಕಳೆದ ೨೦ ವರ್ಷಗಳ ಸತ್ಯಾಗ್ರಹದ ಪರಿಣಾಮವೇನೆಂದರೆ ಸೊನ್ನೆ. ರಾಜಕೀಯಕ್ಕೆ ಧರ್ಮವನ್ನು ಬೆಸುಗೆ ಹಾಕಲೆತ್ನಿಸುವುದು ದೊಡ್ಡ ಅನಾಹುತ. ರಾಜಕೀಯ ಸಾಮಾಜಿಕ ಮತ್ತು ಸಾಂಪತ್ತಿಕ ಪ್ರಶ್ನೆಗಳನ್ನು ಕೇವಲ ವಿಚಾರಾತ್ಮಕ ಅಥವಾ ಭೌತಿಕ ದೃಷ್ಟಿಯಿಂದ ಕಂಡು ಬಗೆಹರಿಸಲೆತ್ನಿಸದಿದ್ದಲ್ಲಿ ಧರ್ಮಕ್ಕೂ ರಾಜಕೀಯಕ್ಕೂ ಒಳಿತಿಲ್ಲ. ಕಾಂಗ್ರೆಸನ್ನು ಪಾರ್ಲಿಮೆಂಟರಿ ಕೆಲಸ ಮತ್ತು ಸ್ವರಾಜ್ಯ ಸಮರ ಸಿದ್ಧತೆಯ ಕಾರ್ಯನಡಿಸುವ ಎರಡು ಭಾಗಗಳನ್ನಾಗಿ ವಿಂಗಡಿಸಬೇಕು.

(ಕಳೆದ ಜುಲೈ ತಾ 27ರಲ್ಲು ಮದ್ರಾಸ್ ಪಟ್ಟಣದಲ್ಲಿ ದಕ್ಷಿಣ ಮದ್ರಾಸ್ ಸಂಘಸಂಘದ ಆಶ್ರಯದಲ್ಲಿ, ಶ್ರೀ ಸ್ವಾಮಿ ವೆಂಕಟ ಚಲಮ್ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀಮಾನ್ ಎಸ್. ಶ್ರೀನಿವಾಸಯ್ಯಂಗಾರರಿತ್ತ ವಿಚಾರಣೀಯ ಭಾಷಣದ ಸಾರಾಂಶ)

ಕಳೆದ 20 ವರ್ಷಗಳ ಹಿಂದೀ ಸ್ವಾತಂತ್ರ್ಯ ಚಳವಳಿದ ಇತಿಹಾಸವನ್ನು ನಾವು ಯಾವ ಆಗ್ರಹವೂ ಇಲ್ಲದೆ ಶಾಂತವಾಗಿ ಪರಿಶೀಲಿಸಿ ಗುಣದೋಷಗಳನ್ನು ಕಂಡುಕೊಳ್ಳೋಣ. ದೊಡ್ಡ ದೊಡ್ಡ ಸಭೆ, ಭಾಷಣ, ಪ್ರದರ್ಶನಗಳು ಎಷ್ಟು ನಡೆದರೂ, ಕಾಂಗ್ರೆಸ್ಸಿನ ನಿಜವಾದ ಗುರಿಯಾದ ಸ್ವರಾಜ್ಯ ಸಾಧನೆಯ ವಿಷಯ ಜನತೆಯಲ್ಲಿ ಒಂದು ಬಗೆಯ ಅನಾಸಕ್ತಿಯು ಇಂದು ತೋರಿಬರುತ್ತದೆಂದು ನನ್ನ ಅಭಿಮತ. ಮೊದಲು ಯಾವಾಗಲೂ ಎಲ್ಲರ ನಾಲಿಗೆ ತುದಿಗಳಲ್ಲಿ ನಲಿದಾಡುತ್ತಿದ್ದ ಸ್ವರಾಜ್ಯವು ಈಗ ಮೂಲೆಗೆ ಸೇರಿದೆ. ನಾವು ಇಷ್ಟರಲ್ಲೇ ಸ್ವರಾಜ್ಯ, ರಾಮರಾಜ್ಯ ಅಥವಾ ಏರಡನ್ನೂ ಸಂಪಾದಿಸಿರುವವೆಂಬುದು ಅದಕ್ಕೊಂದು ಕಾರಣವಿರಬಹುದು. ಇನ್ನೊಂದು ಕಾರಣವೆಂದರೆ, ನಮಗೀಗ ಎಲ್ಲಕ್ಕಿಂತಲೂ ಅಧಿಕಾರ ಸ್ವೀಕಾರವೇ ಸರ್ವಸ್ವವಾಗಿ ಹೋಗಿರುವುದು. ಜನತೆಯು ಸ್ವರಾಜ್ಯದ ತಮ್ಮ ಹಕ್ಕು ಬಾಧ್ಯತೆಗಳೇನೆಂಬುದನ್ನು ಮರೆತು ತಮ್ಮ ತಮ್ಮ ಪ್ರಾಂತದ ಮಂತ್ರಿಮಂಡಲದ ಗುರಿತು ಮತ್ತು ಅವಿುಲಾಪ ರತ ಮುಂದಾಳುಗಳ ಕುರಿತು ಚಿಂತಿಸುತ್ತಿರುತ್ತಾರೆ. ಎಲ್ಲೆಲ್ಲಿಯೂ ಅದೇ ಗದ್ದಲ ಕೇಳಿಬರುತ್ತದಲ್ಲದೆ ಸಂಪೂರ್ಣ ಸ್ವರಾಜ್ಯದ ಸುದ್ದಿಯೇ ಸುಳಿದಾಡುವುದಿಲ್ಲ.

ಸಿಂಹಾವಲೋಕನ

ಕಳೆದ 20 ವರ್ಷಗಳ ಕಾಂಗ್ರೆಸ್ ಚಳವಳದ ವಿಶಿಷ್ಟತೆಯೆಂದರೆ, ನಾವು ಒಮ್ಮೆ ಕೆಲವು ಮೈಲು ಮುನ್ನಡೆದು ಆ ಮೇಲೆ ಹಿಂದೆಸರಿಯುತ್ತಾ ಬಂದಿರುವುದು. ಪ್ರಥಮದ ಅಸಹಕಾರ ಚಳವಳವು ಆರಂಭದಲ್ಲಿ ಜಯಶೀಲವಾಗಿ ನಡೆಯಿತು. ಜನತೆಯಲ್ಲಿ ಪ್ರಚಂಡ ಜಾಗ್ರತಿಯುಂಟಾಗಿ ಒಳ್ಳೇ ಬಂಬಲ ಸಿಕ್ಕಿತು. ಆದರೆ ಕೊನೆಯಲ್ಲಿ ಇಡೀ ಚಳವಳವು ಅಪಜಯ ಹೊಂದಿ ಮುಂದಾಳುಗಳು ಸೆರೆಯೊಳಗೆ ಸೇರಿದರು. ಈ ಸಂದರ್ಭದಲ್ಲಿ ಸ್ವರಾಜ್ಯ ಪಕ್ಷವು ಸ್ಥಾಪಿಸಲ್ಪಟ್ಟು ಕಾಂಗ್ರೆಸಿನ ಪ್ರತಿಷ್ಠೆ ಮತ್ತು ವರ್ಚಸ್ಸು ಬೆಳೆಯಿತು. ಉತ್ಸಾಹ ಭಗ್ನರಾದ ಜನರಲ್ಲಿ ಹೊಸ ಹುರುಪುಂಟಾಯಿತು. ಕೌನ್ಸಿಲ್ ಪ್ರವೇಶದಿಂದ ಸ್ವರಾಜ್ಯ ಸಿಗುವುದೆಂದು ಯಾರೂ ಭಾವಿಸಿದವರಿಲ್ಲ. ಅದು ಒಂದು ಯೋಜಕವಾಯಿತು. ಅನಂತರ ಸಂಪೂರ್ಣ ಸ್ವರಾಜ್ಯ ಚಳವಳವು ಆರಂಭಿಸಲ್ಪಟ್ಟಿತು. ಆದರೆ ಅದರಲ್ಲಿ ಯಥಾರ್ಥತೆ ಇರಲಿಲ್ಲ. ರೌಂಡ್ ಟೇಬಲ್ ಪರಿಷತ್ತಿನಲ್ಲದು ಕೇವಲ ಪ್ರಾಂತಿಕ ಸ್ವಾತಂತ್ರ್ಯವಾಗಿ ಮಾರ್ಪಟ್ಟಿತು. ಆದರೆ ಲಾಹೋರು ಕಾಂಗ್ರೆಸಿನಲ್ಲಿ ಪಂಡಿತ ಜವಾಹರಲಾಲರು ಅವನ್ನು ಪುನರುಜ್ಜೀವಿಸಿ, ಸಂಪೂರ್ಣ ಸ್ವರಾಜ್ಯವೆಂದರೆ ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವನ್ನು ಕಡಿದೊಗೆಯುವುದೆಂದು ಸ್ಪಷ್ಟಗೊಳಿಸಿ, ಕಾಂಗ್ರೆಸನ್ನು ಆ ಪ್ರತಿಜ್ಞಾಬದ್ಧವನ್ನಾಗಿ ಮಾಡಿದರು. ಲಾಹೋರು ಕಾಂಗ್ರೆಸಿನ ನಂತರ ಪುನಃ ಸತ್ಯಾಗ್ರಹ ಹೂಡಲ್ಪಟ್ಟು ಪ್ರಚಂಡ ಬೆಂಬಲವದೆಯಿತು. ಜನರು ಅಪಾರ ತ್ಯಾಗ ಮತ್ತು ಕಷ್ಟವಹಿಸಿದರು. ಕೊನೆಯಲ್ಲಿ ಈ ಸತ್ಯಾಗ್ರಹವೂ ಅಪಜಯ ಹೊಂದಿತು. ಈ ಚಳವಳದಿಂದ ಪೂರ್ಣ ಸ್ವರಾಜ್ಯಸಾಧನೆಯ ಕುರಿತು ಉಂಟಾಗಿರುವ ಪ್ರತಿಫಲವೆಂದರೆ ಸೊನ್ನೆಯೇ ಸರಿ. ಇಲ್ಲವಾದರೆ ಗಾಂಧಿಜಿಯವರು ಕಾಯಿದೆಭಂಗವನ್ನು ನಿಲ್ಲಿಸಿಬಿಟ್ಟು ತನ್ನ ಧೋರಣೆಯನ್ನೇ ಬದಲಾಯಿಸಿ ಕೌನ್ಸಿಲ್ ಪ್ರವೇಶಕ್ಕೆ ಸಮ್ಮತಿ ಕೊಡುತ್ತಿದ್ದಿಲ್ಲ. ಅಂತೂ ಇಂತೂ ನಾವೀಗ ಎಲ್ಲಿಂದ ಹೊರಟಿದ್ದೆವೋ ಅಲ್ಲಿಯೇ ಇದ್ದೇವೆ. ಸತ್ಯಾಗ್ರಹದ ಪರಿಣಾಮವಾಗಿ ನಮಗೆ ಸುಧಾರಣೆ ಮತ್ತು ಪ್ರಾಂತಿಕ ಸ್ವಾತಂತ್ರ್ಯ ಸಿಕ್ಕಿತುವೆಂದು ಹೇಳಲು ಸಾಧ್ಯವಿಲ್ಲ. ಸತ್ಯಾಗ್ರಹ ಚಳವಳದ ತ್ಯಾಗ ಮತ್ತು ಸಂಕಷ್ಟಕ್ಕೊಳಗಾಗದೇನೇ 1935ರ ಸುಧಾರಣೆಯನ್ನು ನಾವು ಪಡೆಯುತ್ತಿದ್ದೆವು. ಪ್ರಾಂತಗಳಲ್ಲಿ ನಮ್ಮ ಮಂತ್ರಿಗಳನ್ನು ಅಧಿಕಾರಕ್ಕೆ ತರುವುದಾಗಿ ನಾವು ಅಪಾರ ತ್ಯಾಗ ಮತ್ತು ಅಸಹನೀಯ ಸಂಕಷ್ಟವ ಅಗ್ನಿ ಪರೀಕ್ಷೆಗೊಳಗಾದುದೇ?

ಸತ್ಯಾಗ್ರಹದಿಂದ ಸ್ವರಾಜ್ಯವು ಸಾಧ್ಯವಿಲ್ಲ

20 ವರ್ಷಗಳ ಚಳವಳದ ನಂತರ ಈಗ ದೇಶವು ಸತ್ಯಾಗ್ರಹಕ್ಕೆ ಸಿದ್ಧವಿಲ್ಲೆಂದು ಉದ್ಘೋಷಿಸಲ್ಪಡುತ್ತಿದೆ. ಸಂಪೂರ್ಣ ಸ್ವರಾಜ್ಯ ಸಾಧಿಸಲು ಸತ್ಯಾಗ್ರಹದ ಹೊರತು ಬೇರೆ ಉಪಾಯವೇ ಇಲ್ಲವೇ? ಹಾಗಾದ ಪಕ್ಷದಲ್ಲಿ ಇನ್ನೊಮ್ಮೆ ಸತ್ಯಾಗ್ರಹ ಹೂಡಲ್ಪಟ್ಟರೂ ಸ್ವರಾಜ್ಯ ಸಾಧನೆಯಲ್ಲಿ ಅದು ಜಯಶಾಲಿಯಾಗಲಾರದೆಂದು ನಾನು ನಿಶ್ಚಯವಾಗಿ ಹೇಳುತ್ತೇನೆ. ಮಂತ್ರಿ ಪದವಿಯಲ್ಲಿದ್ದು ಬ್ರಿಟಿಷ್ ಸರಕಾರದೊಡನೆ ಸಹಕರಿಸಿ, ಪೋಲೀಸರನ್ನು ಉಪಯೋಗಿಸಿ ಆಡಳಿತ ನಡಿಸುವುದು ದೇಶವನ್ನು ಸ್ವರಾಜ್ಯದ ಹೋರಾಟಕ್ಕೆ ತಯಾರಿಸುವುದೇ? ಅದಲ್ಲದಿದ್ದಲ್ಲಿ ಮತ್ತಾವುದು? ಸ್ವರಾಜ್ಯ ಸಮರಕ್ಕೆ ಸಿದ್ಧತೆಮಾಡುವ ಆಲೋಚನೆ ಏನಾದರೂ ಇದ್ದ ಪಕ್ಷದಲ್ಲಿ ಈಗಿನಿಂದಲೇ ಆರಂಭಿಸಬೇಕು. ಹಾಗೇನಾದರೂ ಸಿದ್ಧತೆಮಾಡುವ ಬದಲಿಗೆ, ಕಾಂಗ್ರೆಸ್ ಮಂತ್ರಿಗಳಿಗೆ ಬೆಂಬಲವೀಯಬೇಕೆಂಬ ಕೂಗು ಎಲ್ಲೆಲ್ಲಿಯೂ ಹಬ್ಬಿದೆ. ಮಂತ್ರಿಗಳ ಆಡಳಿತದ ವಿಷಯದಲ್ಲಿ ತಾನೇನೂ ತೃಪ್ತನಿಲ್ಲ; ಬಹಳ ಕಳವಳಗೊಂಡಿರುತ್ತೇನೆಂದು ಪಂಡಿತ ನೆಹರೂರವರು ಕೂಡಾ ಹೇಳಿದ್ದಾರೆ. ಆದರ ಈಗಿನ ಶೋಚನೀಯ ಪರಿಸ್ಥಿತಿಯನ್ನು ಸರಿಪಡಿಸಲು ಯಾವ ಪ್ರಯತ್ನವೂ ನಡಿಸಲ್ಪಡುವುದಿಲ್ಲ. ಜನರೆಲ್ಲಾ ಕಾಂಗ್ರೆಸಿಗೆ ಸೇರಬೇಕೆಂಬ ಒಂದೆಡೆ ಕೇಳಿಕೊಳ್ಳಲಾಗುತ್ತದೆ. ಇನ್ನೊಂದೆಡೆ, ಮಂತ್ರಿಗಳ ಆಡಳಿತವನ್ನೇನೂ ಟೀಕಿಸಲಾರದೆಂದು ವಿಜ್ಞಾಪಿಸಲಾಗುತ್ತದೆ. ಹೀಗೆ ಕಾಂಗ್ರೆಸೆಂಬುದು ಯಾವಾಗಲೂ ಕಾಂಗ್ರೆಸ್ ಮಂತ್ರಿಗಳಿಗೆ ಬೆಂಬಲವೀಯುವ ಕೇವಲ ಚುನಾವಣಾ ಸಂಸ್ಥೆಯಾಗಿ ಮಾರ್ಪಡುತ್ತಿದೆ. ಸಂದಾಳುತನಕ್ಕಾಗಿ ಪ್ರತಿಯೊಬ್ಬನೂ ಗಾಂಧಿಜಿಯವರ ಕಡೆಗೆ ಕತ್ತು ನೀಡಿಕೊಂಡಿರುತ್ತಾನೆ. ಗಾಂಧಿಯವರು ಸತ್ಯಾಗ್ರಹ ಚಳವಳವನ್ನು ಮಾತ್ರ ನಡಿಸಬಲ್ಲರು. ಹಿಂದಿನ ಅನುಭವದಿಂದ, ಮುಂದಿನ ಸತ್ಯಾಗ್ರಹ ಚಳವಳದ ಪರಿಣಾಮವು ಇಂತಹದೇ ಆಗಬಹುದೆಂದು ಕಲ್ಪಿಸುವುದೇನೂ ಕಷ್ಟವಲ್ಲ. ತನ್ನ ದೃಷ್ಟಿಯಿಂದ ದೇಶವು ಇನ್ನೊಂದು ಹೋರಾಟಕ್ಕೆ ಸಿದ್ಧವಿರುವುದಿಲ್ಲೆಂದು ಗಾಂಧಿಯವರೇ ಹೇಳುವರು. 20 ವರ್ಷಗಳ ನಂತರ ದೇಶವು ಮೊದಲಿಗಿಂತಲೂ ಹೆಚ್ಚು ಅಸಿದ್ಧವಾಗಿರುವುದಾದರೆ ಈಗಿನ ಚಳವಳ


ಚರ್ಮವನ್ನು ನಯವಾಗಿರಿಸುತ್ತದೆ
ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು
ಮೈಸೂರು ಸ್ಯಾಂಡಲ್ ಸೋಪು
ಈ ಸಾಬೂನನ್ನು, ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ!
ಮೈಸೂರು ಸ್ಯಾಂಡಲ್ ಸೋಪು
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು!

SAVING MONEY AND TIME

Thousands of prudent and thriving businessmen prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

ದಲ್ಲಿ ಎಲ್ಲಿಯೋ ಏನೋ ಲೋಪವಿರಬೇಕು

ಅಧಿಕಾರದಲ್ಲಿದ್ದು ಮೋರಾಪೆಕ್ಷೆ ಸಿದ್ಧಗೊಳಿಸಲು ಸಾಧ್ಯವಿಲ್ಲ.

ಕಾಂಗ್ರೆಸು ಅಧಿಕಾರವನ್ನು ವಹಿಸಿದ ಬಳಿಕ ತಯಾರಿಸಿದ ಪ್ರಾಂತೀಯ ಪರಿಸ್ಥಿತಿಯು ತಪ್ಪುಭಾವನೆಯು ಇದಿ ಹಾಪ ನಗಿದೆ. ಕಾಂಗ್ರೆಸನ್ನು ಏಳಿಗೆ ತಂಡವಾಗಿ ಮಾಡತಕ್ಕದ್ದು ಒಂದು ಪಕ್ಷವರು ಅಧಿಕಾರಕ್ಕೆ ಎಂದು ನಿರ್ದಿಷ್ಟವಾಗಿ ಹೇಳುವಂತೆ ಒಂದು ತಂತ್ರವನ್ನು ಕೌನ್ಸಿಲ್ ಕೆಲಸಮಾಡಬೇಕು. ಇನ್ನೊಂದು ವಿಭಾಗದವರು ಸ್ವರಾಜ್ಯದ ಹೋರಾಟಕ್ಕೆ ಜನತೆಯನ್ನು ಅಣಿಗೊಳಿಸುವುದರಲ್ಲಿ ನಿರತರಾಗಬೇಕು. ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೂ ಪಾರ್ಲಿಮೆಂಟರಿ ಕಮಿಟಿಗಳಿಗೂ ಯಾವ ಸಂಬಂಧವೂ ಇರಕೂಡದು. ಕಾಂಗ್ರೆಸಿನ ಎರಡು ಪಕ್ಷಗಳು, ಸ್ವಂತ ವ್ಯವಹಾರಕ್ಕೆ ದೇಶವನ್ನು ತಯಾರಿಸುವ ಕೆಲಸದಲ್ಲಿ ಮಾತ್ರ ಸಾಧ್ಯವಾದಷ್ಟು ಸಹಕರಿಸಿಕೊಳ್ಳಬೇಕು. ಕಾಂಗ್ರೆಸ್ ನವರು ತಾವು ಹಿಂದೆಗಳಿಸಿದ ಕೀರ್ತಿ-ಪ್ರಕಾಶಕ್ಕನೇ ಸೈಯೊಡ್ಡಿಕೊಂಡಿರುವುದನ್ನು ಬಿಟ್ಟು ತಮ್ಮ ಉದ್ದೇಶಸಾಧನೆಯ ಕಡೆಗೆ ದೃಷ್ಟಿ ಹರಿಸಲಿ. ತನ್ನ ಹಿಂದಿನ ಕಾರ್ಯಪ್ರಶಂಸೆ ಮತ್ತು ತನ್ನ ಮಂತ್ರಿಗಳ ಮಹಿಮೆಯ ಪಲ್ಲವಿ ಹಾಡುವುದನ್ನು ಬಿಟ್ಟು, ತಾವು ಇನ್ನೂ ತಮ್ಮ ಗುರಿಯಿಂದ ಅದೆಷ್ಟು ದೂರವಿರುವೆವು, ಅದನ್ನು ಬೇಗನೆ ಮುಟ್ಟುವ ಬಗೆ ಹೇಗೆಂಬ ಕಳವಳವುಳ್ಳವರಾಗಲಿ.

ಕಾಂಗ್ರೆಸಿನ ಧೋರಣೆಯ ಕುರಿತು ಅತೃಪ್ತಿಯುಂಟಾಗಿದೆ.

ಕಾಂಗ್ರೆಸಿನ ಈಗಣ ಧೋರಣೆಯ ಕುರಿತು ದೇಶದಲ್ಲಿ ಅತೃಪ್ತಿಯುಂಟಾಗಿದೆಯೆಂಬುದಕ್ಕೆ ಸಂದೇಹವೇ ಇಲ್ಲ. ಆ ಗುಡುಗಾಟವು ಕೇಳಿಸುತ್ತಿದೆ. ಅತೃಪ್ತಿಯು ಒಳಗಿಂದೊಳಗೆ ಹೊಗೆಯಾಡುತ್ತಿದೆ. ಕೆಲವರು ಬಹಿರಂಗವಾಗಿ ಟೀಕಿಸಲು ಧೈರ್ಯಗೊಂಡಿದ್ದಾರೆ. ಕಾಂಗ್ರೆಸ್ ಮಂತ್ರಿಗಳ ಕುರಿತು ಜನತೆಯಲ್ಲಿ ಆರಂಭದ ಉತ್ಸಾಹವೇ ತೋರಿಬರುವುದಿಲ್ಲ. ಕಾಲುಬಂದಂತೆ ಕೋಲಕಟ್ಟುವ ಜನರು ಮಂತ್ರಿಗಳ ಪರಮಮಿತ್ರರಾಗಿ ಅವರ ತಾಳಕ್ಕೆ ತಕ್ಕ ಹೆಜ್ಜೆ ಹಾಕುತ್ತಿದ್ದಾರೆ. ಬಹಿರಂಗವಾಗಿ ಬಂಡಾಯವೆಂಬುವ ಮೊದಲು ಜನರು ಇನ್ನೂ ಸ್ವಲ್ಪ ತಾಳ್ಮೆಯಿಂದಿರಬಹುದು. ಕಪಿಲ್‌ಪಾಶಾ ಅಥವಾ ಹಿಟ್ಲರನಂತಹ ನಾಯಕತ್ವವಿದ್ದರೆ ನಾವು ನಮ್ಮ ಗುರಿಯನ್ನು ಯಾವಾಗ ಮುಟ್ಟುತ್ತಿದ್ದೆವು? ೨೦ ವರ್ಷಗಳ ಒಳ್ಳೆಯ ಕಷ್ಟಸಹನೆಯ ನಂತರ ಸ್ವರಾಜ್ಯ ದೊರೆಯುವುದಾದರೆ, ಎಲ್ಲರೂ ಖಾದಿಧಾರಿಗಳಾಗಬೇಕು, ಇಡೀ ಹಿಂದುಸ್ಥಾನದಲ್ಲಿ ಮದ್ಯಪಾನ ನಿಷೇಧವು ಜಾರಿಗೆ ಬರಬೇಕು, ಎಲ್ಲಾ ಹಿಂದು ದೇವಸ್ಥಾನಗಳು ಹರಿಜನರಿಗೆ ತೆರೆದು ಹಾಕಲ್ಪಡಬೇಕೆಂದು ಹೇಳಲ್ಪಡುತ್ತದೆ. ಖಾದಿ, ಮದ್ಯಪಾನ ನಿಷೇಧ, ಹರಿಜನೋದ್ಧಾರವೆಲ್ಲಾ ಒಳ್ಳೆ ಕೆಲಸಗಳಾಗಿವೆ. ಆದರೆ ಸ್ವರಾಜ್ಯಕ್ಕೂ ಅವುಗಳಿಗೂ ಸಂಬಂಧವೇನು? ಇಡೀ ಹಿಂದೂದೇಶವು ಖಾದಿಮಯವಾದರೆ, ಮದ್ಯಪಾನ ತ್ಯಾಗಮಾಡಿದರೆ, ಹರಿಜನರನ್ನು ಸರಿಸಮಾನ ಸಹೋದರರಾಗಿ ಕಂಡರೆ ಸ್ವರಾಜ್ಯ ದೊರೆಯುವುದೇ? ಜನರು ಸರಳ ಸ್ವಭಾವಿಗಳೂ, ನೀತಿವಂತರೂ, ಸಚ್ಚಾರಿತರೂ ಆಗುವುದಕ್ಕೂ ರಾಜಕೀಯ ಸ್ವಾತಂತ್ರ್ಯಕ್ಕೂ ಅರ್ಥಾರ್ಥಸಂಬಂಧವಾದರೂ ಏನು?

ಧರ್ಮವನ್ನು ರಾಜಕೀಯದೊಂದಿಗೆ ಬೇರಿಸಬಾರದು.

ಅಹಿಂಸಾತ್ಮಕ ಅಸಹಕಾರ ಮತ್ತು ಸತ್ಯಾಗ್ರಹವೆಂದರೇನೆಂಬುದನ್ನು ಬೇರೆಬೇರೆ ರೀತಿಯಲ್ಲಿ ವಿವರಿಸಲಾಗಿದೆ. ಗಾಂಧಿಜಿಯವರು ಅದೊಂದು ಉದಾತ್ತ ತತ್ವವನ್ನು ವ್ಯಾಪಕ ರಾಷ್ಟ್ರೀಯ ಕ್ಷೇತ್ರದಲ್ಲಿ ಪ್ರಯೋಗ ಮಾಡುತ್ತಿದ್ದಾರೆ. ಅವರ ಸತ್ಯಾಗ್ರಹ ಒಂದೊಂದು ವೇದಾಂತವು ಸರಿಯೋ ತಪ್ಪೋ ಎಂಬ ಪರೀಕ್ಷೆಗಾಗಿ ಹಿಂದಿಯರ ಮೇಲೆ ನಡಿಸಲ್ಪಡುವ ಪ್ರಯೋಗವದು. ಗಾಂಧಿಜಿಯವರು ತನ್ನ ಅಂತರಾತ್ಮನ ಪ್ರೇರಣೆ ಮೇರೆಗೆ ನಡಿಸುತ್ತಿರುವ ಆತ್ಮಶೋಧೆಯದು. ಅದೇ ಅವರ ಮುಕ್ತಿಯ ಸಾಧನ. ಅದರಿಂದ ಹಿಂದೂ ಜಾತಿಯು ಇನ್ನೊಂದು ಹೊಸ ವೇದಾಂತದ ತಾಯಿಯಾಗಬಹುದು. ಮತ್ತೊಬ್ಬ ಅವತಾರ ಪುರುಷನ ಜನ್ಮದಾತೆಯಾಗಬಹುದು. ಆದರೆ ಅಷ್ಟು ಮಾತ್ರದಿಂದ ಬ್ರಿಟಿಷರ ಬಂಧನದಿಂದವಳು ಮುಕ್ತಳಾಗಲಾರಳು. ಈಗಿನ ನಾಯಕತ್ವದಿಂದ ದೇಶಕ್ಕೆ ಸ್ವರಾಜ್ಯ ದೊರೆಯುವ ಸಂಭವ ತೋರುವುದಿಲ್ಲ. ಕಾಂಗ್ರೆಸಿನ ಇಂದಿನ ನಾಯಕತ್ವವು ಬದಲಾಗಲೇಬೇಕು. ಆದರೆ ಗಾಂಧಿಜಿಯವರು ಅದಕ್ಕೆ ಸಿದ್ಧರಿಲ್ಲ. ಸತ್ಯಾಗ್ರಹವು ಅವರ ಧಾರ್ಮಿಕ ಸಾಧನ. ಈಗ 20 ವರ್ಷಗಳಿಂದ ನಾವು ಸತ್ಯಾಗ್ರಹವನ್ನು ಪ್ರಯೋಗ ಮಾಡಿ ನೋಡಿದ್ದಾಯಿತು. ಬೌದ್ಧ ಧರ್ಮವು ಜಯಶೀಲವಾಗದಲ್ಲಿ ಈ ಪ್ರಯೋಗವು ಜಯವಾಗಲಾರದು. ಧರ್ಮವನ್ನು ರಾಜಕೀಯದೊಡನೆ ಬೆರಸುವುದೇ ಹಾನಿಕರ. ಧಾರ್ಮಿಕ ಮನೋವೃತ್ತಿಯಿಂದ ಜನತೆಯ ಮನಸ್ಸನ್ನು ನಾವು ಸುಲಭವಾಗಿ ಒಲಿಸಿಕೊಳ್ಳಬಹುದು. ಆದರೆ ಕಟ್ಟಕಡೆಯಲ್ಲಿ ಅದರ ಪರಿಣಾಮವು ನೆಟ್ಟಗಾಗಲಾರದು. ನಾನು ನಿಮಗೆ ಸ್ಪಷ್ಟವಾಗಿ ಹೇಳುವುದೇನೆಂದರೆ, ನೀವು ಧರ್ಮವನ್ನೂ ರಾಜಕೀಯವನ್ನೂ ಭಿನ್ನಗೊಳಿಸದಿದ್ದರೆ, ಸಾಮಾಜಿಕ, ರಾಜಕೀಯ ಮತ್ತು ಸಾಂಪತ್ತಿಕ ಪ್ರಶ್ನೆಗಳನ್ನು ಕೇವಲ ವಿಚಾರಪರ ಮತ್ತು ಲೌಕಿಕ ದೃಷ್ಟಿಯಿಂದ ಪರಿಶೀಲಿಸುವ ನಿರ್ಧಾರ ಮಾಡದಿದ್ದರೆ ನಿಮ್ಮ ಧರ್ಮಕ್ಕೂ ರಾಜಕೀಯಕ್ಕೂ ಹಾನಿತಪ್ಪಲಾರದು. ರಾಜಕೋಟೆಯಲ್ಲಿ ಗಾಂಧಿಯವರ ಸತ್ಯಾಗ್ರಹವು ಜಯಶೀಲವಾಗಲು ಅವರ ಉಪವಾಸವಲ್ಲ, ಕಾಂಗ್ರೆಸ್ ಮಂತ್ರಿಗಳು ಅವರಿಗಿತ್ತ ಬೆಂಬಲವೇ ಕಾರಣ. ಕಾಂಗ್ರೆಸ್ ಮಂತ್ರಿಗಳ ರಾಜಕೀಯ ಅಧಿಕಾರದ ಒತ್ತಾಟದಿಂದ ವೈಸರಾಯರು ಗಾಂಧಿಯವರ ಸಹಾಯಕ್ಕೆ ಬಂದರು. ಈ ರೀತಿ ಮಂದಾಳುತ್ವದ ಮಹಿಮೆಯನ್ನೇನೋ ಹೆಚ್ಚಿಸಿಕೊಳ್ಳಬಹುದು. ಆದರೆ ಕೆಲಸವೇನೂ ಆಗಲಾರದು. ಹಿಂದೀಯರ ಅವರ್ಣನೀಯ ಕಷ್ಟ ಮತ್ತು ಸಹಿಷ್ಣುತಾಶಕ್ತಿಯು, ನೈಲ್ ನದಿಯ ನೀರು ಸಹಾರ ಮರುಭೂಮಿಗೆ ಹೋಗಿಬೀಳುವಂತೆ ಹಾಳಾಗುತ್ತಿದೆ. ಆದುದರಿಂದ ಈಗ ಜನರು ಸ್ವತಂತ್ರವಾಗಿ ಆಲೋಚಿಸಿಕೊಳ್ಳಬೇಕು. ಕಾಂಗ್ರೆಸಿನ ಈಗಣ ಮುಂದಾಳುತ್ವವು ಅದೆಷ್ಟು ಮಹತ್ವದ್ದಿದ್ದರೂ ಅದರ ಮಾಂತ್ರಿಕತನಕ್ಕೆ ಮರುಳಾಗಬಾರದು. ಗಾಂಧಿಜಿಯವರಿಗೆ ಸ್ವರಾಜ್ಯಕ್ಕಿಂತಲೂ ಸತ್ಯಾಗ್ರಹವು ಮಹತ್ವದುದು. ಅವರು ಮಹಾ ಸಾಧುವು, ಲೋಕದ ಅತಿದೊಡ್ಡ ಧಾರ್ಮಿಕ ಪುರುಷರು. ಆದರೆ ಅವರೂ ನಮ್ಮಂತೆಯೇ ಮಾನವರಾದುದರಿಂದ ಅವರ 'ಮಾಂತ್ರಿಕ ಅತ್ಮಪ್ರೇರಣೆ'ಯನ್ನು ನಾನು ಒಪ್ಪಲಾರೆ. ಧಾರ್ಮಿಕದಲ್ಲಿ ದೈವಸಂಪರ್ಕ ಮತ್ತು ಪ್ರೇರಣೆಯೆಂಬುದು ಸರಿಯಾಗಿರಬಹುದು. ಆದರೆ ರಾಜಕೀಯದಲ್ಲದು ತಪ್ಪಾಗುವುದು. ಆದುದರಿಂದ ಈಗಣ ಕಾಂಗ್ರೆಸ್ ಮುಖಂಡರನ್ನು, ಶ್ರೀ ಎನ್ ರಮಾನಾಥನರನ್ನು ಮಂತ್ರಿದ್ವೈನ ಸ್ವರೂಪರು, ಅವತಾರಪುರುಷರೆಂದು ಪೂಜಿಸಿದರೆ ಸ್ವರಾಜ್ಯ ದೊರೆಯಲಾರದು. ಯಾವುದಕ್ಕಾದರೂ ಒಂದು ಮಿತಿಯು ಬೇಕು. ಆ ಮಿತಿಯು ಮುಟ್ಟಿದೊಡನೆಯೇ ಅದನ್ನು ನಿಲ್ಲಿಸಿಬಿಡಬೇಕು. ಇದೇ ಪ್ರಸ್ತುತದ ರಾಜಕೀಯ ಪರಿಸ್ಥಿತಿಯ ನನ್ನ ವಿಮರ್ಶೆ.

Madary Pills

(REGISTERED)

ಮದಾರಿ ಗುಳಿಗೆಗಳು

(ರಿಜಿಸ್ಟರ್ಡ್)

ಜಯಪ್ರದ ಹಾಗೂ ಅನುಭವದಾಯಿ ಧನುರ್ವಾತ- ಸನ್ನಿ, ಅಪಸ್ಮಾರ ಇತ್ಯಾದಿಗಳಿಗೆ

ದೋಷರಹಿತವಾದ ಅತ್ಯುತ್ತಮ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟಿವೆ. ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ.

ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನಪುಂಸಕತ್ವ, ಸಹಾಯಕವಾಯು, ಗರ್ಭಾಶಯ ದೋಷ, ನಿದ್ರಾರಹಿತತೆ, ಹಿಸ್ಟೀರಿಯಾ, ಉನ್ಮಾದ, ಸ್ವಪ್ನಸ್ಖಲನ, ಮೂರ್ಛೆ, ಚಿತ್ತಭ್ರಮೆ ಇತರ ಮಾನಸಿಕ ಮತ್ತು ಶಾರೀರಿಕ ರೋಗಗಳನ್ನು ಹೋಗಲಾಡಿಸುತ್ತದೆ.

ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳ ದ್ವೀಪ ಮೊದಲಾದ ಪ್ರಮುಖ ರಾಜ್ಯಗಳ ಪ್ರಸಿದ್ಧ ಡಾಕ್ಟರುಗಳು ಸಹ ರೋಗಿಗಳಿಗೆ ಇದೇ ಔಷಧವನ್ನು ಕೊಡುವುದೇ ಸರ್ಟಿಫಿಕೇಟುಗಳ ಮಾತ್ರವನ್ನು ಓದಿದರೆ ತಕ್ಕದಕ್ಕೆ ಸಾಕ್ಷಿ.

50 ಗುಳಿಗೆಗಳುಳ್ಳ ಒಂದು ಡಬ್ಬಿಯ ಕ್ರಯ ರೂ 3 8 0 ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

The Imperial Chemist Coy,
106, Vithalbhai Patel Road Bombay 4

WANTED District and Taluk a Organisers in Districts and Taluks of Karnataka on a monthly salary of Rs 50/ and Rs 20/ Special facilities for initial business Only influential and educated Organisers who can guarantee Rs 50,000/ and Rs 25 000/ per year need apply Padubidri Bros, Bombay 8

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ

ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮೊದಲಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ ಕೊನೆಗೆ, ಒಂದಾವರ್ತಿಯಾದರೂ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ಹಿಂದಿನ ರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 ವಿ ಪಿ ಖರ್ಚು 0 5 0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷನಲ್ಲಿ ಮಾಡಬೇಕು.

ತಯಾರಿಸುವ ಏಜೆಂಟರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲಭಾಯಿ ಪಟೇಲ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೊಮ್ಯೊಪತ್ ಡಿಸ್‌ಪೆನ್ಸರಿ

ನಕಲಿ ವಿದ್ಯೆಗಳಿಗೆ ಮರುಳಾಗದೇ ಔಷಧ ಕೊಳ್ಳುವ ಮೊದಲು ಕೆಳಗೆ ಗುರುತಿಸಿದ ಸರಿಯಾದ ಗುರುತನ್ನು 'ಗೊನೊಕಿಲರ್' ಹೆಸರನ್ನೂ ಗಮನಿಸಿ

Sole Manufacturer DR. D. N. JASANI, Vitalbhai Patel Road, BOMBAY 4

TENDER NOTICE

It is hereby notified that sealed tender will be received by the undersigned up to 4 p m on 12-8 1939 for the construction of High School Building, Mulki.

The Contract documents plans, specifications etc Can be seen in the office of 'The Moolky Bank Ltd' & copies of conditions of con tract and schedule of estimate Quantities can be obtained therefrom on payment of Rs 2/ per Set.

M R Kamath,
President
High School Committee
MULKI S K
13th July 1939

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: 1906

ಉಡುಪಿ, ಗುರುವಾರ, ತಾ. ೩-೮-೩೯

ಅಳಿಯಕಟ್ಟಿನ ಸುಧಾರಣೆ.

ಅಳಿಯಕಟ್ಟು ಅಸ್ವಾಭಾವಿಕ ಮತ್ತು ಅಸ್ವೈಸರ್ಗಿಕವಾದುದು. ತನ್ನ ಪೀಳಿಗೆಯ ಪ್ರೀತಿ ಪೋಷಣೆ ಮತ್ತು ಪಾಲನೆಯು ಭಾವವು ನಿಸರ್ಗಸಿದ್ಧವಾದುದು. ಪಶುಪಕ್ಷಿಗಳಲ್ಲಿಯೂ ತೋರಿಬರುವ ಗುಣವದು. ಅದಾವುದೋ ವಿಲಕ್ಷಣ ಇತಿಹಾಸದ ಅವಶೇಷವಾಗಿ ನಿಂತಿದೆ ಇಂದು ಅಳಿಯಕಟ್ಟು. ಇಂತಹ ವಿಜಾತೀಯ ಸಮಾಜ ಕಟ್ಟೊಂದೂ ಇತ್ತೆಂದು ಪುರಾತನ ವಸ್ತು ಪ್ರದರ್ಶನಾಲಯದಲ್ಲಿ ಅದು ದರ್ಶನೀಯವಾಗಿ ಇಡಲ್ಪಡಬಹುದೇ ಹೊರತು ಆಚರಣೀಯವಲ್ಲೆಂದೂ ಅದನ್ನು ಇನ್ನೂ ಇನ್ನೂ ಅಚ್ಚಳಿಯದಿರಿಸಲೆತ್ನಿಸುವುದೆಂದರೆ ಅಚ್ಚ ಸಟ್ಟೆ ಆಲದ ಮರವೆಂದು ಕುತ್ತಿಗೆಗೆ ನೇಣುಹಾಕಿಕೊಂಡಂತೆಂದೂ ನಾವಿಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದೆ,

ಹೇಳುವುದು ಶಾಸ್ತ್ರ, ಇಕ್ಕುವುದು ಗಾಳಿ.

ಅಳಿಯಕಟ್ಟಿನ ಕುರಿತಾದ ಕಟ್ಟುಕತೆಯೋ ಅದರ ನಿಜ ಇತಿಹಾಸವೆಂದಾದರೆ, ಅದನ್ನು ಆಚರಣೆಗೆ ತಂದ ದೇವಪಾಂಡ್ಯನೇ ತನ್ನ ಹಲವು ಮಂದಿ ಹೆಂಡಿರಿಗೆ ಹಲವು ತಾಲೂಕುಗಳನ್ನು ಕೊಟ್ಟಿರುತ್ತಾನೆಂದು ತಿಳಿದು ಬರುತ್ತದೆ. ಅಂದ ಮೇಲೆ ಆದಿಯಲ್ಲೇ ಆರಂಭವಾಗಿದೆ ತದ್ವಿರುದ್ಧಾಚರಣೆ. ಜೀವನದ ಹೋರಾಟವು ಕಡಿಮೆಯಾಗಿದ್ದು ಕೇವಲ ತನ್ನ ಹಳ್ಳಿ ತಾಲೂಕು ಅಥವಾ ಹೆಚ್ಚೆಂದರೆ ಒಂದು ಜಿಲ್ಲೆಯೇ ಬಹುತೇಕ ಒಬ್ಬನ ಲೋಕವಾಗಿರುವ ಮಾಧ್ಯಮಿಕ ಕಾಲದಲ್ಲಿ ಪೂರ್ವಕಾಲದಿಂದ ನಡೆದು ಬಂದ ಕಟ್ಟೆಂದು ಪೂರ್ವಸಂಪ್ರದಾಯನಿಷ್ಠರಾದ ಜನರು ಅದನ್ನು ಕೆಲವಮಟ್ಟಿಗೆ ಚೆನ್ನಾಗಿ ಆಚರಿಸಿಕೊಂಡು ಬಂದಿರಬಹುದು. ಆದರೆ ಈಗ ಹೆಚ್ಚಿನವರು ಆಚರಿಸುತ್ತಿರುವುದು ಮಕ್ಕಳಕಟ್ಟನ್ನು. ಬಾಯಲ್ಲಿ ಹೊಗಳುತ್ತಿರುವುದು ಮಾತ್ರ ಅಳಿಯಕಟ್ಟನ್ನು. ಜೀವನದ ಹೋರಾಟವು ಪ್ರಬಲವಾಗಿ ಪ್ರತಿಯೊಬ್ಬನೂ ತನ್ನ ಜೀವನದ ಜವಾಬ್ದಾರಿಯನ್ನು ತಾನೇ ಹೊತ್ತು ಉದ್ಯಮಿಸಬೇಕಾದ ಈ ಕಾಲದಲ್ಲಿ ಅಳಿಯಕಟ್ಟು ಕುತ್ತಿಗೆಗೊಂದು ಕೊರಡಾಗಿ ನಿಂತಿದೆ. ಬಾಯಲ್ಲಿ ಪ್ರತ್ಯಕ್ಷ ಭೂತಾಳಪಾಂಡ್ಯರೇ ಆಗಿರುವ ತಲೆಸರೆತ ಯಜಮಾನರುಗಳು ಕೂಡ ತಮ್ಮ ಹೆಂಡತಿಮಕ್ಕಳೊಂದಿಗೆ ಪ್ರತ್ಯೇಕವಾಗಿ ಸುಖವಾಗಿರಲೆಳಸಿ ಯಾವ ರೀತಿಯಿಂದಾದರೂ ಅವರಿಗೆ ಆದಷ್ಟು ಹೆಚ್ಚು ಆಸ್ತಿ ಒದುಕು ಮಾಡಿ ಕೊಡುವಂತೆ ನೋಡುವುದೀಗ ಸರ್ವಸಾಮಾನ್ಯ ಸಂಗತಿ. ಇಂತಹ ಕಣ್ಣುಕಟ್ಟನ್ನು ಎಷ್ಟರವರೆಗೆ ನಡೆಸಬಹುದು? ಅದರಿಂದ ಸಮಾಜವು ಉದ್ಧಾರವಾಗುವುದಾದರೂ ಹೇಗೆ?

ಕಾಲಸ್ಥಿತಿಗತಿಗನುಗುಣವಾಗಿ ಬದಲಾಗಬೇಕು

ಜೀವಿತದ ಲಕ್ಷಣವೆಂದರೆ ಪ್ರಗತಿ, ಬೆಳವಣಿಗೆ. ಒಂದೋ ಸತ್ತು ಬೂದಿಯಾಗಿ ಹೊಸ ಬೆಳವಣಿಗೆಗೆ ಗೊಬ್ಬರವಾಗಬೇಕು. ಇಲ್ಲವಾದರೆ ತೇಜಸ್ವಿಯಾಗಿ ಬಾಳಿ ಬೆಳಗಬೇಕು. ಬದುಕಿ ಬೆಳೆಯಬೇಕು; ಬೆಳೆದು ಬದುಕಬೇಕು. ಇದ್ದಂತೆ ಬಿದ್ದುಕೊಂಡಿರುವುದು ಮಾನವ ಜೀವಿತದ ಲಕ್ಷಣವಲ್ಲ. ಯಾವ ಸಾಮಾಜಿಕ, ಸಾಂಪತ್ತಿಕ, ರಾಜಕೀಯ ಮತ್ತು ಧಾರ್ಮಿಕ ರೀತಿನೀತಿಗಳಾದರೂ ಕಾಲಸ್ಥಿತಿಗನುಸಾರ ಬದಲಾಗಲೇಬೇಕು. ಹಾಗೆ ಬದಲಾಗದಿದ್ದರೆ ಬೆಳವಣಿಗೆ ಇಲ್ಲದೆ ಬಿದ್ದುಕೊಂಡಿರಬೇಕು. ಅನುದರಿಂದ ಇಂದೀಗ ಅಳಿಯಕಟ್ಟಿನ ಸುಧಾರಣೆಯಾಗದೆ ಅಳಿಯ ಸಂತಾನಿಗರ ಅಭ್ಯುದಯವಾಗಲಾರದು. ಆ ಸಮಾಜಗಳವರಿಗೆ ಕ್ಷೇಮ ದೊರೆಯಲಾರದು. ಅವರು ಸಾಹಸಿಗರಾಗಿ ಉದ್ಯಮಶೀಲರಾಗಿ ಬಾಳುವಂತಾಗಲಾರದು.

ಪೌರುಷಹೀನ ಸುರಕ್ಷಿತತಾಭಾವ

ಎಲ್ಲಿ ಹೋದರೂ ತಮಗೆ ನಿತ್ಯದ ಗಂಜಿಗೊಂದು ಗತಿ ಇಲ್ಲದಂತಾಗಲಾರದು, ತಮ್ಮ ಹಿರಿಯರು ಮಾಡಿಟ್ಟ ಆಸ್ತಿ ಇದೆ. ಮನೆತನವಿದೆಯೆಂಬ ಸುರಕ್ಷಿತತಾಭಾವನೆಯನ್ನು, ಅಳಿಯಕಟ್ಟನ್ನು ಅಚ್ಚಳಿಯದಿರಿಸಲು ಕೆಲವರು ದೊಡ್ಡ ಸಾಧನವಾಗಿ ಹೂಡುತ್ತಾರೆ. ಹಂಗಿನರಮನೆಗಿಂತ ಇಂಗಿತದ ಗುಡಿ ಲೇಸೆಂಬಂತೆ, ದಿನ ಕೂಲಿಯವನಾದರೂ, ಕೆಲವು ಅಳಿಯಕಟ್ಟಿನ ಮನೆತನಗಳ ಕಿರಿ ಮೆಂಬರರಿಗಿಂತ ಸುಖವಾಗಿ ನಿತ್ಯದ ಗಂಜಿ ಉಣ್ಣುತ್ತಾನೆಂದು ನಾವು ಧೈರ್ಯದಿಂದ ಹೇಳಬಹುದು. ಇಂತಹ ಮನೋವೃತ್ತಿಯು ಅವನನ್ನು ಹೆಡ್ಡ ದಡ್ಡನಾಗಿ ಮಾಡಿರುವುದು. ಸ್ವತಂತ್ರೋದ್ಯಮ ಮತ್ತು ಸಾಹಸಕ್ಕೆ ಹಸಿವಿನ ಚೇಗೆಯು 'ಇಲೆಕ್ಟ್ರಿಕ್ ಪವರ್'ನಂತಾಗಿದೆ. ಒಂದು ಕುಟುಂಬದ ಎಲ್ಲಾ ಮೆಂಬರರೂ, ತಮ್ಮ ದೊಡ್ಡ ಮನೆತನ, ಕೋರ್ಜಿಗಳ್ಲ ಆಸ್ತಿಯ ಮೇಲೆಯೇ ದೃಷ್ಟಿಯಿಟ್ಟು, ತಮಗೂ ಯಜಮಾನತನ ಬರುತ್ತದೆ, ತಾವು ಧನ ದೌಲತ್ತಿನಿಂದ ಮೆರೆಯಬಹುದೆಂದು ಯಾವಾಗಲೋ ಬರುವ ಯಜಮಾನತನಕ್ಕೆ ಬಾಯ್ತೆರೆದುಕೊಂಡು ಬಿದ್ದುಕೊಂಡಿರುವುದಕ್ಕಿಂತ ತನಗೆ ವೈಯಕ್ತಿಕವಾಗಿ ಸಿಗುವುದು ಇಂತಿಷ್ಟು; ಅದರಿಂದ ತನ್ನ ಮತ್ತು ಕುಟುಂಬದ ಜೀವನ ನಡಿಸಲು ಸಾಧ್ಯವಿಲ್ಲ; ಆದುದರಿಂದ ತಾನೇನಾದರೂ ಸ್ವತಂತ್ರ ಉದ್ಯೋಗ ಮಾಡಲೇಬೇಕೆಂಬ ಆಲೋಚನೆಯನ್ನೂ ಹುರುಪನ್ನೂ ಆವಶ್ಯಕತೆಯು ಅತನಲ್ಲಿ ತಾನಾಗಿ ಹುಟ್ಟಿಸಿ ಅತನು ಏನಾದರೂ ಸ್ವತಂತ್ರ ವೃತ್ತಿಯಿಂದ ಜೀವನ ನಿರ್ವಾಹಮಾಡುವುದು ಎಷ್ಟೋ ಮೇಲು. ಇಂತಹ ಉದ್ಯಮಶೀಲ ಜನರೇ ಮನೆತನಗಳ ಮೂಲ ಕರ್ತರಲ್ಲದೆ ತಮಗೆ ಯಾವಾಗ ಯಜಮಾನತನದ ಪಟ್ಟ ಬರುವುದೆಂದು ಬೈಗಳ್ಳರಾಗಿ ಕಾದು ಕಾಲಕಳೆಯುವ ನಿರುದ್ಯೋಗಿಗಳಲ್ಲ ಬದುಕಬೇಕಾದರೆ ದುಡಿಯಬೇಕು. ದುಡಿಯಲು ಜಡವಾದವನು ಬಿಕ್ಕೆಬೇಡಿ ಸತ್ತರೂ ಸರಿಯೆಂಬ ಮನೋವೃತ್ತಿಯು ಪ್ರಬಲವಾಗಿ ಬೆಳೆದ, ಈಗಣ ಭ್ರಾಮಕ ಹಾಗೂ ಪೌರುಷಹೀನ ಸುರಕ್ಷಿತತಾ ಭಾವನೆಯು ಅಳಿದರೆ ಮಾತ್ರ ಅಳಿಯಕಟ್ಟಿನವರು ಇತರ ಸಮಾಜಗಳವರಂತೆ ತೇಜೋಶಾಲಿಗಳಾಗಿ ಬಾಳಬಹುದು,

ಒಣ ಪ್ರತಿಷ್ಠೆ ಮತ್ತು ಮನೆತನದ ಗೌರವ

ಕಾಲಚಕ್ರದ ಉರುಳಾಟದಲ್ಲಿ ಸಾಮ್ರಾಜ್ಯ ಸಾಮ್ರಾಜ್ಯಗಳೇ ಅಳಿದು ಮಣ್ಣುಪಾಲಾಗಿರುವಾಗ ಅಳಿಯಕಟ್ಟಿನ ಮನೆತನಗಳ ಪಾಡಾವುದೂ ಏನು? ಮನೆ 'ಗಳ ಒಣ ಗೌರವ ಮತ್ತು ಪ್ರಭಾವದ ಕುರಿತು ಮಾತಾಡುವವರು ಅರ್ವಾಚೀನ ಇತಿಹಾಸದ ಪರಿಶೀಲನೆ ಕೂಡಾ ಮಾಡುವುದಿಲ್ಲೆಂಬುದು ಶೋಚನೀಯ. ಈಗಣ ಕಾಲಸ್ಥಿತಿಯಲ್ಲಿ ಎಷ್ಟು ಸಮಯ ಈ ಮನೆತನಗಳನ್ನು ಇದ್ದ ಹಾಗೆಯೇ ಉಳಿಸಿಕೊಳ್ಳಬಹುದು? ಇದು ಹೊರತು ಉಪ್ಪರಿಗೆಯು ತಿಪ್ಪೆ, ತಿಪ್ಪೆಯೂ ಉಪ್ಪರಿಗೆಯಾಗುವುದನ್ನು ಪ್ರತ್ಯಕ್ಷ ಕಂಡು ಮನೆತನಗಳ ಕುರಿತು ವಾದಿಸುವುದೆಂದರೆ ಅರ್ಥವಿಲ್ಲದ ವಾದವದು. ಹಿಂದಿನ ಎಷ್ಟೋ ಮನೆತನಗಳು ಈಗ ಬಡತನದಲ್ಲಿ ಬಿದ್ದು ನಿರ್ನಾಮವಾಗಿವೆ. ಬೊಂಬಾಯಿಗೆ ಹೋಗಿ ಹೊಟೆಲೋ ಇನ್ನಿತರ ವ್ಯಾಪಾರವೋ ಮಾಡಿ, ಅಥವಾ ಘಟ್ಟಕ್ಕೆ ಅಳುಕಟ್ಟು ದುಡ್ಡುಮಾಡಿದ ಹಲವು ಬಡ ಮನೆತನಗಳು ಎದ್ದು ಅಭಿವೃದ್ಧಿಹೊಂದಿವೆ. ಮನೆತನಗಳ ಇತಿಹಾಸವೆಂದರೆ ಬಹುತೇಕ ಕೇವಲ ಒಂದೆರಡು ತಲಾಂತರವಷ್ಟೆ. ಅವುಗಳ ಗೌರವಕ್ಕಾಗಿ ಒದಬಡಿಸುವವರಲ್ಲಿ ಒಂದಿಷ್ಟು ಹುರುಳಿಲ್ಲ. ಇನ್ನು ಮುಂದಿನ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ, ಪ್ರತಿಯೊಬ್ಬನೂ ತನ್ನ ಯೋಗ್ಯತೆಯಿಂದ ಸ್ಥಾನಮಾನವಡೆಯಬೇಕೇ ಹೊರತು ಮನೆತನದ ಗೌರವ ಮತ್ತು ಜಾತಿಯ ಪ್ರತಿಷ್ಠೆಯಿಂದದು ಸಾಧ್ಯವಿಲ್ಲ. ಅಂಗೈ ನೋಡಲು ಕನ್ನಡಿ ಬೇಕಿಲ್ಲವಷ್ಟೆ.

ಅಳಿಯಸಂತಾನ ಸುಧಾರಣಾ ಮಸೂದೆ

ಅಳಿಯಕಟ್ಟನ್ನೇ ಹೋಲುವ ಮರುಮಕ್ಕತ್ತಾಯ ಕಟ್ಟನ್ನಾಚರಿಸುವ ತಿರುವಾಂಕೂರು, ಕೊಚ್ಚಿ ಮತ್ತು ಮಲಬಾರಿನ ಸಮಾಜಗಳು ತಮ್ಮ ಕಟ್ಟಿನಲ್ಲಿ ಬೇಕಾದ ಸುಧಾರಣೆಗಳನ್ನು ಮಾಡಿಕೊಂಡಿವೆ. ದಕ್ಷಿಣ ಕನ್ನಡದ ಅಳಿಯಕಟ್ಟನ್ನಾಚರಿಸುವ ಸಮಾಜಗಳೇ ಹಿಂದೆ ಬಿದ್ದಿರುವುದು ಶ್ರೀ ಕೆ. ಆರ್. ಕಾರಂತ್ ಮತ್ತು ಶ್ರೀ. ಎ. ಬಿ. ಶೆಟ್ರು ಅಳಿಯಕಟ್ಟನ್ನು ಸುಧಾರಿಸಲು ನಡಿಸಿದ ಪ್ರಯತ್ನವು ಫಲಕಾರಿಯಾಗಿರುವುದಿಲ್ಲ. ಶ್ರೀ. ಎ. ಬಿ. ಶೆಟ್ರು ತಂದ ಮಸೂದೆಯು ಸಿಲೆಕ್ಟ್ ಕಮಿಟಿಯಲ್ಲಿ ಪಾಸಾಗುವವರೆಗೆ ಅದಕ್ಕಾವ ವಿರೋಧವೂ ಇರಲಿಲ್ಲ. ಆ ಮೇಲೆ ಕೌನ್ಸಿಲಿನಲ್ಲಿ ಅದಕ್ಕೆ ಇಚ್ಛಾನುಸಾರ ಪಾಲಿನ ಪ್ರಕರಣವು ಸೇರಿಸಲ್ಪಟ್ಟದ್ದೇ ಅದು ಬಿದ್ದು ಹೋಗಲು ಮುಖ್ಯ ಕಾರಣ. ಈಗ ಪುನಃ ಅಳಿಯಕಟ್ಟಿನ ಸಮಾಜಗಳವರೆಲ್ಲರೂ ಸಭೆ ಸೇರಿ ಕಮಿಟಿಯೊಂದನ್ನು ನೇಮಿಸಿ ಹೊಸ ಮಸೂದೆಯೊಂದು ತಯಾರಾಗಿರುವುದು. ಅದನ್ನು ಈ ವಾರದಲೇ ನವಯುಗದ ಪುರವಣಿಯಾಗಿ ಪ್ರಕಟಿಸಲಾಗಿದೆ. ಅದರ 10,000 ಪ್ರತಿಗಳು ತಯಾರಾಗಿ ಜಿಲ್ಲೆಯಲ್ಲೆಲ್ಲಾ ಹಂಚಲ್ಪಡುತ್ತಿವೆ. ಅಳಿಯಸಂತಾನ ಸುಧಾರಣಾ ಪರಿಷತ್ತಿನವರು ಒಮ್ಮೆ ಜಿಲ್ಲೆಯಲ್ಲೆಲ್ಲಾ ತಿರುಗಿ ಜನತೆಯ ಅಭಿಪ್ರಾಯ ಪಡೆದು ಪರಿಷತ್ತು ನಡಿಸಿ ಸುಧಾರಣೆಯು ಅವಶ್ಯವೆಂದು ಸರ್ವಸಮ್ಮತಿಯಿಂದ ನಿರ್ಧರಿಸಿ ಮಸೂದೆಯೊಂದನ್ನು ತಯಾರಿಸಿರುತ್ತಾರೆ. ಸದ್ರಿ ಮಸೂದೆಯ ಕುರಿತು ಅಭಿಪ್ರಾಯ ಸಂಗ್ರಹಿಸಲು ಪುನಃ ಪ್ರತಿ ತಾಲೂಕಿನಲ್ಲೂ ಸಭೆ ಕರೆದು ಪ್ರತಿನಿಧಿಗಳನ್ನು ಆರಿಸಿ ಸೆಪ್ಟಂಬರ ತಾ. 17ಕ್ಕೆ ಮಂಗಳೂರಲ್ಲಿ ಇನ್ನೊಂದು ಪರಿಷತ್ತು ಜರಗುವುದು. ಈಗ ತಯಾರಿಸಲ್ಪಟ್ಟಿರುವ ಮಸೂದೆಯು ಹೆಚ್ಚಿನವರನ್ನು ತೃಪ್ತಿಪಡಿಸಿರುವಂತೆ ತೋರುತ್ತದೆ. ಅದರಲ್ಲಿ ಅಲ್ಪಸ್ವಲ್ಪ ತಿದ್ದುಪಡಿಗಳು ಅಗತ್ಯವಿರಬಹುದು. ಅವುಗಳನ್ನು ಜನರು ಸೂಚಿಸಿದಲ್ಲಿ ಬರುವ ಪರಿಷತ್ತಿನಲ್ಲಿ ಬೇಕಾದ ಬದಲಾವಣೆ ಮಾಡಬಹುದು.

ಮಸೂದೆಯು ಬೇಗನೆ ತರಲ್ಪಡಬೇಕು

ಈ ಮಸೂದೆಯು ಬೇಗನೆ ಅಸೆಂಬ್ಲಿ ಮುಂದೆ ಬರುವಂತೆ ಸುಧಾರಣಾ ಪರಿಷತ್ತಿನವರು ತಕ್ಕ ವ್ಯವಸ್ಥೆ ಮಾಡಬೇಕು. ಶ್ರೀ ಎ. ಬಿ. ಶೆಟ್ರು ಪಾರ್ಲಿಮೆಂಟರಿ ಸೆಕ್ರೆಟರಿಗಳಾದುದರಿಂದ ಅವರಿಗೆ ಸ್ವತಃ ಈ ಮಸೂದೆಯನ್ನು ತರಲು ಸಾಧ್ಯವಿಲ್ಲ ಸರಕಾರದವರು ಅಫೀಶಿಯಲ್ ಬಿಲ್ಲಾಗಿ ತೆಗೆದುಕೊಳ್ಳುವ ಹಾಗಿಲ್ಲ. ಮಸೂದೆಯನ್ನು ಆದಷ್ಟು ಬೇಗನೆ ತಂದು ಮಂಜೂರು ಮಾಡಿಸುವ ಯೋಗ್ಯತೆ ಮತ್ತು ಅನುಭವವುಳ್ಳವರು ಶ್ರೀ ಕೆ. ಆರ್. ಕಾರಂತರು. ಪರಿಷತ್ತಿನವರು ಅವರನ್ನು ಕೇಳಿಕೊಂಡರೆ ಅವರು ಅದಕ್ಕೆ ಒಪ್ಪದಿರಲಾರರು. ಮತ್ತು ಮಸೂದೆಯ ಕುರಿತು ಜನಮತವನ್ನು ಸರಿಯಾಗಿ ಪಡೆಯುವ ಕೆಲಸವು ಮೊದಲೇ ನಡೆದಿರುವುದರಿಂದ ಮತ್ತು ಇದು ಬಹುತೇಕ ಶ್ರೀ. ಎ. ಬಿ. ಶೆಟ್ರ ಮಸೂದೆಯನ್ನೇ ಹೋಲುವುದಿದ್ದು, ಅತಿ ಹೆಚ್ಚಿನ ಜನ ಬೆಂಬಲ ಪಡೆದಿರುವುದರಿಂದ ಅದನ್ನು ಒಮ್ಮೆಯೇ ಸಿಲೆಕ್ಟ್ ಕಮಿಟಿಯ ವಿಚಾರ

ಬಂಗಾಲದ ಕೈದಿಗಳು ಉಪವಾಸ ಬಿಡಲಿಲ್ಲ

ಬಂಗಾಳದಲ್ಲಿ ಸತ್ಯಾಗ್ರಹ ಹೂಡುವ ಸಿದ್ಧತೆ ಲೋಕಕ್ಕೆ ಬೊಂಬಾಯಿಯ ಆದರ್ಶ

ಕಾಂಗ್ರೆಸ್ ಪ್ರೆಸಿಡೆಂಟರ ೩೦ ದಿವಸಗಳ ಪ್ರಯತ್ನ ನಿರರ್ಥಕವಾಯಿತು.

ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರ ಪ್ರಸಾದರು ಜುಲೈ ತಾ. ೨೮ರಲ್ಲಿ ಕಲ್ಕತ್ತಕ್ಕೆ ಹೋಗಿ ಸಂಭ್ರಮದ ಸ್ವಾಗತಪಡೆದರು. ತಾ. ೨೯ರಲ್ಲಿ ಶ್ರೀ ಮಹದೇವ ದೇಸಾಯಿಗಳೊಂದಿಗೆ ಡಮ್ ಡಮ್ ಸೆಂಟ್ರಲ್ ಜೈಲಿಗೆ ಹೋಗಿ ೨ ಘಂಟೆಗಳ ವರೆಗೆ ಉಪವಾಸ ದೀಕ್ಷೆ ಹಿಡಿದಿರುವ ಕೈದಿಗಳೊಡನೆ ಮಾತಾಡಿದರು. ಕೈದಿಗಳು ತಮ್ಮ ಉಪವಾಸವನ್ನು ನಿಲ್ಲಿಸಬೇಕೆಂದು ಗಾಂಧಿಯವರು ಅವರಿಗೆ ಕಳುಹಿಸಿರುವ ಸಂದೇಶವನ್ನವರಿಗೆ ತಿಳಿಸಿ ಉಪವಾಸ ನಿಲ್ಲಿಸಬೇಕೆಂದು ಬಹಳವಾಗಿ ಕೇಳಿಕೊಂಡರು. ತಾ. ೩೦ರಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರು ಶ್ರೀ ಮಹದೇವ ದೇಸಾಯಿ ಮತ್ತು ಡಾಕ್ಟರ್ ಬಿಧನ್ ಚಂದ್ರ ರೋಯಿಗಳೊಂದಿಗೆ ಬಂಗಾಳದ ಹೋಮ್ ಮಿನಿಸ್ಟರರಾದ ಸರ್. ನಜೀಮುದ್ದೀನರೊಡನೆ ೨ ಘಂಟೆಗಳ ವರೆಗೆ ಮಾತಾಡಿದರು.

ಕಾಂಗ್ರೆಸ್ ಪ್ರೆಸಿಡೆಂಟರ ಪ್ರಯತ್ನ ಫಲಿಸಲಿಲ್ಲ

ಸರ್. ನಜೀಮುದ್ದೀನರೊಡನೆ ಮಾತಾಡಿದ ಮೇಲೆ ಡಾಕ್ಟರ್ ರಾಜೇಂದ್ರ ಪ್ರಸಾದರು, ಡಾಕ್ಟರ್ ಬಿ. ಸಿ. ರೈ, ಶ್ರೀ ಶರಚ್ಚಂದ್ರಭೋಸ್ ಮತ್ತು ಶ್ರೀ ಮಹದೇವ ದೇಸಾಯಿಗಳೊಂದಿಗೆ ಕೈದಿಗಳ ಬಳಿಗೆ ಹೋಗಿ ಮೂರುವರೆ ಘಂಟೆಗಳ ವರೆಗೆ ಅವರೊಡನೆ ಮಾತಾಡಿ ಅವರು ಉಪವಾಸ ನಿಲ್ಲಿಸುವಂತೆ ಪ್ರಯತ್ನಪಟ್ಟರು. ಆದರೆ ಕೈದಿಗಳು ಶೀಘ್ರವಾಗಿ ಇಂತಿಷ್ಟೇ ಅವಧಿಯೊಳಗೆ ಬಿಡುಗಡೆಯ ಆಶ್ವಾಸನೆ ದೊರೆಯದೆ ಸತ್ಯಾಗ್ರಹವನ್ನು ಎಷ್ಟುಕ್ಕೂ ನಿಲ್ಲಿಸಲು ಸಾಧ್ಯವಿಲ್ಲೆಂದು ಹೇಳಿದರು. ಕೈದಿಗಳು ಉಪವಾಸ ನಿಲ್ಲಿಸದೆ ಅವರ ಬಿಡುಗಡೆಯ ವಿಷಯದಲ್ಲಿ ಯಾವ ಆಶ್ವಾಸನೆಯನ್ನೂ ಕೊಡಲು ಸಾಧ್ಯವಿಲ್ಲೆಂದೂ ತಮ್ಮ ಯಥಾ ಪ್ರಕಾರದ ಧೋರಣೆಯನ್ನು ಬದಲಾಯಿಸಲು ಸಾಧ್ಯವಿಲ್ಲೆಂದು ಸರ್ ನಜೀಮುದ್ದೀನರು ಛಲಹಿಡಿದರು. ಆದುದರಿಂದ ಈ ಬಿಕ್ಕಟನ್ನು ಪರಿಹರಿಸುವ ದಾರಿಕಾಣದೆ ಕಾಂಗ್ರೆಸ್ ಪ್ರೆಸಿಡೆಂಟರೂ, ಶ್ರೀ ಮಹದೇವ ದೇಸಾಯಿಯವರೂ ನಿರಾಶರಾಗಿ ಜುಲೈ ತಾ. ೩೧ರಲ್ಲಿ ಕಲ್ಕತ್ತದಿಂದ ಹೊರಟು ಹೋಗಿರುವರು. ಬಾಬು ರಾಜೇಂದ್ರ ಪ್ರಸಾದರು ಜಮ್ಷೆಡ್ ಪುರಕ್ಕೂ ಶ್ರೀ ಮಹದೇವ ದೇಸಾಯಿಗಳು ವಾರ್ಧಾಕ್ಕೂ ತೆರಳಿರುವರು.

ಸತ್ಯಾಗ್ರಹ ಹೂಡುವ ನಿರ್ಧಾರ

ಜುಲಾಯಿ ತಾ. ೩೦ರಲ್ಲಿ ಕಲ್ಕತ್ತದ ಯುನಿವರ್ಸಿಟಿ ಹಾಲಿನಲ್ಲಿ ಪ್ರಚಂಡ ಸಭೆಯಲ್ಲಿ ಭಾಷಣಮಾಡುವಾಗ ರಾಷ್ಟ್ರಗೌರವ ಶ್ರೀ. ಸುಭಾಸಚಂದ್ರ ಭೋಸರು, ಸೂತ್ರಬದ್ಧವಾದ ಚಳವಳದಿಂದ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಅಸಾಧ್ಯವಾದರೆ ಸತ್ಯಾಗ್ರಹ ಹೂಡಬೇಕಾಗುವುದು. ಅದಕ್ಕಾಗಿ ಒಂದು ವಾರದೊಳಗೆ 10,000 ಸ್ವಯಂಸೇವಕರನ್ನೂ ರೂಪಾಯಿ 10,000ವನ್ನೂ ಕೂಡಿಸಬೇಕೆಂದು ಹೇಳಿದರು. ಇತರ ಪ್ರಾಂತಗಳಿಂದ ಈ ಸತ್ಯಾಗ್ರಹಕ್ಕಾಗಿ ಕಡಿಮೆಯೆಂದರೆ ಇನ್ನು 10,000 ಸ್ವಯಂಸೇವಕರು ಬರುವರೆಂಬ ಭರವಸೆ ತನಗಿದೆಯೆಂದರು.

ಮಂತ್ರಿಗಳಿಗೆ ಶ್ರೀ. ಸುಭಾಸರ ಆಶ್ವಾಸನೆ

ರಾಜಕೀಯ ಕೈದಿಗಳ ಬಿಡುಗಡೆಯ ವಿಷಯದಲ್ಲಿ ಬಂಗಾಳದ ಮಂತ್ರಿಗಳಿಗೂ ಗವರ್ನರರಿಗೂ ಅಭಿಪ್ರಾಯ ಭೇದವುಂಟಾಗಿ ಮಂತ್ರಿಗಳು ರಾಜಿನಾಮೆ ಕೊಟ್ಟರೆ ಕಾಂಗ್ರೆಸ್ ಪಕ್ಷೀಯರು ಎಷ್ಟುಕ್ಕೂ ಆ ಸಂದರ್ಭವನ್ನು ಉಪಯೋಗಿಸಿಕೊಳ್ಳದೆ ಮಂತ್ರಿಗಳಿಗೆ ಬೇಕಾದ ಸಹಾಯ ಮಾಡಲು ಸಿದ್ಧರಿರುವರೆಂದೂ ಆಶ್ವಾಸನೆ ಕೊಟ್ಟರು. ಇದು ಹೊರತು, ಬಂಗಾಳದ ಮಂತ್ರಿಮಂಡಲವು ಯುರೋಪಿಯಾನರ ಮೇಲೆ ಸಹಕಾರವನ್ನು ತ್ಯಜಿಸಿಬಿಟ್ಟು ಕಾಂಗ್ರೆಸ್ ಪಕ್ಷೀಯರು ಅವರೊಂದಿಗೆ ಸಹಕರಿಸಲು ಸಿದ್ಧರಿರುವರೆಂದು ಕೂಡಾ ಹೇಳಿದರು. ಶಾಂತರೀತಿಯಿಂದ ಕೈದಿಗಳನ್ನು ಬಿಡುಗಡೆ ಮಾಡಲು ಎಷ್ಟುಕ್ಕೂ ಅಸಾಧ್ಯವಾದಲ್ಲಿ ಸತ್ಯಾಗ್ರಹ ಹೂಡುವುದು ನಿಶ್ಚಯ ಮತ್ತು ಅದು ಯಾವರೀತಿ ನಡೆಸಲ್ಪಡಬೇಕೆಂಬ ವಿಷಯವನ್ನು ತಾನು ಸಂಪೂರ್ಣವಾಗಿ ನಿಶ್ಚಯಿಸಿರುವೆನೆಂದರು. ತಾ. ೩೦ರಲ್ಲಿ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಗ್ಜಿಕ್ಯೂಟಿವ್ ಕಮಿಟಿಯವರು ಸಭೆ ಸೇರಿ ಶ್ರೀ. ಭೋಸರ ಮೇಲಿನ ಹೇಳಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸಿರುವರು.

ಪಂಡಿತ ಜವಾಹರಲಾಲರ ಹೇಳಿಕೆಯ ಕುರಿತು ಟೀಕೆ

ಕಳೆದ ಶುಕ್ರವಾರ ಬೊಂಬಾಯಿಯಲ್ಲಿ ಪಂಡಿತ ಜವಾಹರಲಾಲರು ಭಾಷಣಮಾಡುವಾಗ, ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆಯು ಅಖಿಲಭಾರತ ಪ್ರಶ್ನೆಯಲ್ಲ. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳೊಳಗಣ ಬಿಕ್ಕಟ್ಟೇನೂ ಆ ಕುರಿತು ಉಂಟಾಗಿಲ್ಲ. ಅದು ಕೇವಲ ಬಂಗಾಳ ಮಂತ್ರಿಮಂಡಲದ ಪ್ರಶ್ನೆ. ಆದುದರಿಂದ ಆ ಸಂಬಂಧವಾಗಿ ಇತರ ಪ್ರಾಂತದ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಡಲು ಸಾಧ್ಯವಿಲ್ಲೆಂದು ಹೇಳಿರುವರಷ್ಟೆ. ಇದನ್ನು ಶ್ರೀ ಸುಭಾಸರು ತನ್ನ ಭಾಷಣದಲ್ಲಿ ಖಂಡಿಸಿ, ಕಾಂಗ್ರೆಸ್ ಮಂತ್ರಿಗಳು ರಾಜಕೋಟೆಯ ಪ್ರಶ್ನೆಯ ಕುರಿತು ರಾಜಿನಾಮೆಕೊಡಲು ಸಿದ್ಧರಾಗಿದ್ದರು. ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧಿಯವರು ಬಿಡುಗಡೆಯ ಜವಾಬ್ದಾರಿ ವಹಿಸಿರುವ ಬಂಗಾಳದ ರಾಜಕೀಯ ಕೈದಿಗಳ ಪ್ರಶ್ನೆಯ ಕುರಿತು ರಾಜಿನಾಮೆಕೊಡಲು ಸಿದ್ಧರಿಲ್ಲ. ವೈಸರಾಯರು ರಾಜಕೋಟೆಯ ಪ್ರಶ್ನೆಯಲ್ಲಿ ಮಾತ್ರ ಕೈಹಾಕಲು ಸಾಧ್ಯ; ಬಂಗಾಳದ ರಾಜಕೀಯ ಕೈದಿಗಳ ಪ್ರಾಣಾಪತ್ತಿನ ಪ್ರಶ್ನೆಯಲ್ಲಿ ಕೈಹಾಕಲು ಸಾಧ್ಯವಿಲ್ಲವೆಂದಾಗ ಸಭೆಯಲ್ಲಿ 'ನಾಚಿಕೆ! ನಾಚಿಕೆ!!' ಎಂಬ ಕೂಗೆದ್ದಿತು.

ಶಿಸ್ತು ಜಾರಿಗೆ ಬೆದರುವುದಿಲ್ಲ

ಜುಲೈ ೨೦ರ ನಿಷೇಧ ಪ್ರದರ್ಶನದ ಕುರಿತು ಮಾತಾಡುತ್ತಾ ಆಗತ್ಯಬಿದ್ದರೆ ಅಂತಹ ನಿಷೇಧ ಸಭೆಗಳನ್ನು ಇನ್ನು ಮುಂದೆಯೂ ಮಾಡಲಾಗುವುದು. ತಮ್ಮ ಮೇಲಿನ ಶಿಸ್ತು ಜಾರಿಯ ಕುರಿತು ತಾವೇನೂ ಬೆದರುವ ಹಾಗಿಲ್ಲ. ಕಾಂಗ್ರೆಸಿನಿಂದ ಹೊರಹಾಕಲ್ಪಡುವ ಭೀತಿಯಿಂದ ತಾವು ಸುಮ್ಮನಿರುವ ಹಾಗಿಲ್ಲ. ಶಿಸ್ತಿಗೆ ತಾನು ಮೆಚ್ಚಿನ ಬೆಲೆಕೊಡುತ್ತೇನೆ. ಆದರೆ ಅದು ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ವಿರೋಧಿಸಲು ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸುವಂತಹದಾಗಿರಬೇಕಲ್ಲದೆ ಕುಗ್ಗಿಸುವಂತಹದಾಗಿರಬಾರದು. ಕಾಂಗ್ರೆಸನ್ನು ದುರ್ಬಲಗೊಳಿಸುವ ಶಿಸ್ತಿಗೆ ತಾವು ಎಷ್ಟುಕ್ಕೂ ತಲೆಬಾಗಲಾರೆವು. ತಮಗೆ ವ್ಯಕ್ತಿಗಳ ಮೇಲೆ ಯಾವ ವೈಷಮ್ಯವೂ ಇಲ್ಲ. ಕ್ರಾಂತಿಕಾರರ ಮುಂದಾಳುತನಬೇಕಾಗಿದೆ. ಹೋರಾಟದ ಕಾರ್ಯಕ್ರಮವನ್ನು ದೇಶದ ಮುಂದಿಟ್ಟು ಕಾಂಗ್ರೆಸನ್ನು ಮುನ್ನಡೆಸಲು ಡಾಕ್ಟರ್ ರಾಜೇಂದ್ರ ಪ್ರಸಾದರಾಗಲಿ, ಗಾಂಧಿಯವರಾಗಲಿ, ಪಂಡಿತ ಜವಾಹರಲಾಲರಾಗಲಿ ಮುಂದೆ ಬಂದರೆ ತಾವು ಅವರ ಅನುಯಾಯಿಗಳಾಗಲು ಸದಾ ಸಿದ್ಧರಿದ್ದೇವೆಂದರು. ಶ್ರೀ ಭೋಸರು ಒಂದು ಘಂಟೆಯವರೆಗೆ ಆವೇಶ ಪೂರ್ಣವಾಗಿ ಮಾತಾಡಿದರು. ಈ ಭಾಷಣದ ನಂತರ, ಬಂಗಾಳದ ಮಾಜಿ ಮಂತ್ರಿಗಳಾದ ಮಿ. ನೌಶರಾಲಿಯವರು ಸತ್ಯಾಗ್ರಹದ ಪ್ರತಿಜ್ಞೆಗೆ ಸಹಿಹಾಕಿ ಪ್ರಥಮ ಸ್ವಯಂ ಸೇವಕರಾಗಿ ಸೇರಿದರು. ಅನೇಕರು ಸೇರಿದರು.

ಲೋಕಕ್ಕೆ ಬೊಂಬಾಯಿಯ ಆದರ್ಶ

ಒಂದುವರೆ ಮಿಲ್ಯ ಜನಸಂಖ್ಯೆಯ ಬೊಂಬಾಯಿಯಂತಹ ದೊಡ್ಡ ಪಟ್ಟಣ

ಪುಟ ೯ರಿಂದ

ಸೆಗೊಪ್ಪಿಸಿ ಅಸೆಂಬ್ಲಿ ಎಸೆಂಬ್ಲಿಯಲ್ಲಿಯೂ ಕೌನ್ಸಿಲಿನಲ್ಲಿಯೂ ಮಂಜೂರುಮಾಡಿಸಬಹುದು.

ಚಂದಾದಾರರಲ್ಲಿ ವಿನಂತಿ

ಇದೇ ಬರುವ ಆಗೋಸ್ತು ತಿಂಗಳ ಅಂತ್ಯಕ್ಕೆ **'ನವಯುಗ'**ದ ೧೮ನೇ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ ೧೯ನೇ ವರ್ಷವು ಆರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿಮುಗಿಯುವವರು ತಮ್ಮ ಮುಂದಿನ ವರ್ಷದ ಚಂದಾ ಹಣವನ್ನೂ **ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ಬಾಕಿ ಚಂದಾ ಹಣವನ್ನೂ** ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮೆನೇಜರ್.

ಪುಟ 16ರಲ್ಲಿ ತಾ. 27-7-39ರಿಂದ ತಾ. 3-8-39ರ ವರೆಗೆ ಎಂಬುದನ್ನು ತಾ. 3-8-39ರಿಂದ ತಾ. 10-8-39ರ ವರೆಗೆ ಎಂದು ತಿಳಿಯತಕ್ಕದ್ದು.

ಮೈಸೂರು ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಪ್ರಾಚೀನ ಗ್ರಂಥಗಳು—ಮೈಸೂರು ಸರಕಾರದ ಓರಿಯಂಟಲ್ ಲೈಬ್ರರಿಯ ಶ್ರೀ. ಹೆಚ್. ಅನಂತರಂಗಾಚಾರ್ಯರವರು ಒಂದು ತಿಂಗಳು ಕಾಲ ಬೇಲೂರು ಮತ್ತು ಸಕಲೇಶಪುರದಲ್ಲಿ ಸಂಚರಿಸಿ ಸುಮಾರು 60 ಬಹಳ ಪುರಾತನ ಕಾಲದ ಗ್ರಂಥಗಳನ್ನು ಹುಡುಕಿದ್ದಾರೆಂದೂ, ಇವುಗಳಲ್ಲಿ ಕೆಲವು 13ನೇ ಶತಮಾನಕ್ಕೆ ಸೇರಿದುವೆಂದೂ, ಇವುಗಳ ಸಂಶೋಧನೆ ನಡೆಯುವುದೆಂದೂ ಹೇಳಲಾಗಿದೆ.

ಮೈಸೂರು ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮ್ಮೇಲನ ಮತ್ತು ಜವಾಬ್ದಾರಿ ಸರ್ಕಾರ ದಿನಾಚರಣೆ

ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಕೆಲಸವನ್ನು ಸುವ್ಯವಸ್ಥೆಗೆ ತರುವ ಸಲುವಾಗಿ ಮೇಲ್ಕಂಡ ಕೆಲಸಗಾರರ ಸಮ್ಮೇಲನವೊಂದು ನಿನ್ನೆಯ ದಿನ, ನಜರ್ ಬಾದಿನಲ್ಲಿರುವ ಶ್ರೀ. ಚೆನ್ನಯ್ಯನವರ ಬಂಗ್ಲೆಯಲ್ಲಿ ನಡೆಯಿತು. ಬೆಂಗಳೂರಿನ ಶ್ರೀ. ಕೆ. ಟಿ. ಭಾಷ್ಯಂರವರು ಅಧ್ಯಕ್ಷತೆ ವಹಿಸಿದ್ದರು. ಮೈ। ಕಾಂ। ಅಧ್ಯಕ್ಷರಾದ ಶ್ರೀ. ಹೆಚ್. ಸಿ. ದಾಸಪ್ಪನವರು ಸಮ್ಮೇಲನ ಆರಂಭೋತ್ಸವ ನೆರವೇರಿಸಿದರು. ಬೆಳಗ್ಗೆ ಪ್ರಭಾತಫೇರಿ ನಡೆದು, ತ್ರಿವರ್ಣ ಕಾಂಗ್ರೆಸ್ ಮತ್ತು ಮೈಸೂರು ರಾಷ್ಟ್ರಧ್ವಜಾರೋಹಣ ನಡೆಯಿತು. ಮಧ್ಯಾಹ್ನ ಸಭೆನಡೆದು ಅನೇಕ ವಿಷಯಗಳ ಮೇಲೆ ಚರ್ಚೆ ನಡೆಯಿತು. ಇನ್ನು ಮುಂದೆ ಜಿಲ್ಲೆಯಲ್ಲಿ ಕಾಂಗ್ರೆಸ್ ಕೆಲಸವನ್ನು ಯಾವ ರೀತಿ ಮಾಡಬೇಕೆಂದು ನಿರ್ಧರಿಸಲಾಯಿತು.

ಸಂಜೆ, ಸುಬ್ರಾಯನ ಕೆರೆಯಲ್ಲಿ ಸಭೆನಡೆದು "ಜವಾಬ್ದಾರಿ ಸರ್ಕಾರದ" ವಿಷಯವಾಗಿ ಕಾಂಗ್ರೆಸ್ ಮುಖಂಡರುಗಳು ಭಾಷಣಮಾಡಿದರು. ಸರ್ಕಾರದ ದಬ್ಬಾಳಿಕೆ ಖಂಡಿಸುವ ಠರಾವು ಸಭೆಯಲ್ಲಿ ಪಾಸಾದ ಮೇಲೆ ಸಭೆ ಮುಗಿಯಿತು.

ಆರ್ಮಿ ಇಂಡಿಯ ನ್ಯಾಷನಲ್ ಸಮಿತಿ—ಮೇಲ್ಕಂಡ ಸಮಿತಿಯು ಆಗಸ್ಟ್ 3ನೇ ತಾ. ಬೆಂಗಳೂರಿಗೆ ಬಂದು, 4ನೇ ತಾ. ರಾಜಧಾನಿಗೆ ಶಿವನಸಮುದ್ರದ ಮೂಲಕ ಬರುವುದು. ಶ್ರೀಮನ್ ಮಹಾರಾಜರನ್ನು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತ ಮೇಲೆ, ರಾಜಧಾನಿಂದ ಶ್ರೀರಂಗಪಟ್ಟಣದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳಸಿ ಅಲ್ಲಿಂದ ಹೈದರಾಬಾದಿಗೆ ಹೊರಡುವುದು.

ತುಮಕೂರಿಗೆ ಮಹಾಪ್ರಭುಗಳ ಆಗಮನ—ಶ್ರೀಮನ್ ಮಹಾರಾಜರು, ದಿವಾನರೊಡಗೂಡಿ ಕಳೆದ ಮಂಗಳವಾರ ತಾ. 25ರಲ್ಲಿ ತುಮಕೂರಿಗೆ ಆಗಮಿಸಿದರು, ಇವರನ್ನು ಸ್ಥಳೀಯ ಅಧಿಕಾರಿಗಳೂ, ಇತರರೂ ಸ್ವಾಗತಿಸಿದ ನಂತರ ಪೌರಸಭೆ ಮತ್ತು ಜಿಲ್ಲಾ ಬೋರ್ಡಿನವರು ಮಹಾಪ್ರಭುಗಳಿಗೆ ಬಿನ್ನವತ್ತಳೆಗಳನ್ನು ಅರ್ಪಿಸಲು, ಈ ಬಿನ್ನವತ್ತಳೆಗೆ ಉತ್ತರವಿತ್ತು ಅವುಗಳ ಸೇವೆಯನ್ನು ಪ್ರಶಂಸಿಸಿದರು.

ಮಾರನೆಯ ದಿನ ರಾಜಬೀದಿಗಳಲ್ಲಿ ಮಹಾಪ್ರಭುಗಳ ರಾಜಮೆರವಣಿಗೆ ನಡೆಯಿತು. ಈ ಮೆರವಣಿಗೆಯನ್ನು ನೋಡಲು ತುಮಕೂರಿಗೆ ತುಮಕೂರೇ ಬಂದು, ರಾಜಭಕ್ತಿ ತೋರಲಾಯಿತು.

ಶ್ರೀಮನ್ಮಹಾರಾಜರು ಡಾಬ್ಸ್ ಬಂಗಲೆಯಲ್ಲಿ ತಂಗಿದ್ದರು, ತಾ. 28ರಲ್ಲಿ ತುಮಕೂರಿನಿಂದ ಹೊರಟು ಮಾರ್ಕೋನಹಳ್ಳಿ ಮೇಲೆ ಬೆಂಗಳೂರಿಗೆ ಆಗಮಿಸಿದರು.

ಜೀವನ ದಾನ—ಮೈಸೂರು ಪ್ರಕಟಣಾ ಶಾಖಾಧಿಕಾರಿಗಳಾದ ಶ್ರೀ. ಯಸ್. ರಂಗೈಯ್ಯರ್ ರವರಿಗೆ ಬರುವ ಡಿಸೆಂಬರ್ ತಿಂಗಳಿಂದ ತ್ರಿವರ್ಷ ಜೀವನದಾನ ದೊರೆತಿದೆ.

ಬಾಬು ರಾಜೇಂದ್ರ ಪ್ರಸಾದರ ಪ್ರಯತ್ನ ನಿಷ್ಫಲ

ವೈಸರಾಯರಿಗೆ ಜಿನ್ನಾರವರ ವಿನಂತಿ

ಶ್ರೀ. ವಾರ್ಕಿಗಳ ಅಸಭ್ಯ ವರ್ತನೆ!

ದಲ್ಲಿ ಮದ್ಯಪಾನ ನಿಷೇಧವು ಜ್ಯಾರಿಗೆ ತಂದಿರುವುದು ಇಡೀ ಲೋಕದಲ್ಲೆಲ್ಲಿಯೂ ಇಲ್ಲ. ಆದರ 800ಕ್ಕಿಂತಲೂ ಮಿಕ್ಕಿದ ಮದ್ಯದಂಗಡಿಗಳು ಬಂದುಮಾಡಲ್ಪಟ್ಟು. ಹೆಂಡ ಮೊದಲಾದ ಮದ್ಯವು ಸಂಪೂರ್ಣ ನಿಷೇಧಿಸಲ್ಪಟ್ಟ ಬೊಂಬಾಯಿಯು ಮೊದಲಿನಷ್ಟು ಆಮೋದಪ್ರಮೋದ ಗಲಭೆ ಗಲಾಟೆಯುಳ್ಳುದಾಗಲಾರದಾದರೂ ಮೊದಲಿಗಿಂತ ಎಷ್ಟೋ ಸುಖಶಾಂತಿಯಿಂದಿರ ಬಲ್ಲುದು. ಗಾಂಧಿಜಿಯವರು ಹೇಳುವಂತೆ ಬೊಂಬಾಯಿಯ ಲಕ್ಷಗಟ್ಟಳೆ ಕೆಲಸಗಾರರ ಜೀವನದಲ್ಲಿ ಹೊಸ ಯುಗವೇ ಆರಂಭವಾಗಲಿರುವುದು. ಬೊಂಬಾಯಿಯಂತಹ ದೊಡ್ಡ ಪಟ್ಟಣದಲ್ಲಿ ಒಮ್ಮೆಯೇ ಮದ್ಯಪಾನ ನಿಷೇಧವನ್ನಾರಂಭಿಸಿರುವುದು ಖೇರ್ ಮಂತ್ರಿಮಂಡಲದ ಅತಿ ದೊಡ್ಡ ಸಾಹಸವೇ ಸರಿ. ಪಾರ್ಸಿಗಳೇ ಮೊದಲಾದ ಮದ್ಯವ್ಯಾಪಾರಿಗಳು ಎಷ್ಟೊಂದು ವಿರೋಧಿಸಿದರೂ ಅಂಜದೆ ಧೈರ್ಯದಿಂದ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತಂದುದಕ್ಕಾಗಿ ಖೇರ್ ಮಂತ್ರಿಮಂಡಲವು ಅಭಿನಂದನೀಯವಿದೆ. ಈ ವಿಷಯದಲ್ಲಿ ಬೊಂಬಾಯಿಯ ಹೆಚ್ಚಿನ ಜನತೆಯ ಬೆಂಬಲವು ಮಂತ್ರಿಗಳ ಕಡೆಗಿದೆ. 600ಕ್ಕಿಂತಲೂ ಮಿಕ್ಕಿದ ಬೇರೆ ಬೇರೆ ಸಂಘಗಳು ಮದ್ಯಪಾನ ನಿಷೇಧ ಕಾರ್ಯದಲ್ಲಿ ಅವರಿಗೆ ನೆರವಾಗಲು ಮುಂದೆ ಬಂದಿವೆ. ಜುಲೈ ತಾ. 31ನೇ ಮಧ್ಯರಾತ್ರಿ 12 ಗಂಟೆ ಬಡಿದಾಗ ಇಡೀ ಬೊಂಬಾಯಿ ಪಟ್ಟಣದಲ್ಲಿ ಮದ್ಯದಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿರುವವು ಸುಮಾರು 20,000 ಸ್ವಯಂಸೇವಕರು ಆಗೋಸ್ತು ತಾ. 1ರಲ್ಲಿ ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವ ಕೆಲಸ ಮಾಡಲು ಮುಂದೆ ಬಂದಿರುವರು. ಪಟ್ಟಣದ 4000 ಪೋಲೀಸರ ಹೊರತು 600 ಮಂದಿಯನ್ನು ಹೊರಗಣಿಂದ ತರಿಸಲಾಗಿದೆ 800 ಮಂದಿ ಮದ್ಯಪಾನ ನಿಷೇಧಕಿಗಾರ್ಡರು ಧರ್ಮಾರ್ಥ ಕೆಲಸ ಮಾಡುತ್ತಿದ್ದಾರೆ ಇಡೀ ಪಟ್ಟಣವನ್ನು 8 ಭಾಗಗಳನ್ನಾಗಿ ಮಾಡಿ ಒಂದೊಂದು ಭಾಗಕ್ಕೆ ಒಂದೊಂದು ಕಮಿಟಿಯನ್ನು ನೇಮಿಸಲಾಗಿದೆ ಇಡೀ ಬೊಂಬಾಯಿಯಲ್ಲಿ ವರ್ಷಕ್ಕೆ 30 ಮಿಲ್ಯ ಬಾಟ್ಲ ಮದ್ಯ ಖರ್ಚಾಗುತ್ತಿತ್ತು ಈಗ ಸುಮಾರು 20,000 ಮಂದಿ ಯುರೋಪಿಯಾನರೇ ಮೊದಲಾದವರಿಗೆ ಮಾತ್ರ, ಇಂತಿಷ್ಟೇ ಕುಡಿಯಬೇಕೆಂಬ ನಿರ್ಬಂಧದಿಂದ ಮದ್ಯವನ್ನುಪಯೋಗಿಸಲು ಪರ್ಮಿಟ್ ಕೊಡಲಾಗಿದ.

ಗವರ್ನರರು ಕೂಡಾ ಅಧಿಕಾಧಿಕವಾಗಿ ಭೋಜನ ಸತ್ಕಾರಾದಿಗಳನ್ನೀಯುವಾಗ ಮದ್ಯವನ್ನು ವರ್ಜಿಸುವ ನಿರ್ಧಾರಮಾಡಿರುವರು. ಆಗೋಸ್ತು ೧ನೇ ತಾರೀಕಿನ ನಂತರ ಬೊಂಬಾಯಿಯಲ್ಲಿ ಮಾರಾಟವಾಡುತ್ತಿದ್ದ ೯ ಮಿಲ್ಯ ಬಾಟ್ಲ ಹೆಂಡವು ನಿಲ್ಲಿಸಲ್ಪಡುವುದು. ನೀರ ಅಥವಾ ಬೆಲ್ಲಕ್ಕಾಗಿ ಮಾತ್ರ ಪರ್ಮಿಟ್ ಪಡೆದು ಮಾರಾಟಮಾಡಬಹುದು. ಕಳ್ಳತನದಿಂದ ಮದ್ಯ ವಿಕ್ರಯಿಸದಂತೆ ಎಚ್ಚರದಿಂದಿರಲು ತಕ್ಕ ವ್ಯವಸ್ಥೆ ಮಾಡಲಾಗಿದೆ

ಜುಲಾಯಿ ತಾ. ೩೦ ಮತ್ತು ೩೧ರಲ್ಲಿ ಬೊಂಬಾಯಿಯಲ್ಲಿ ವಿಪರೀತ ಮದ್ಯ ವಿಕ್ರಯವಾಗಿರುವುದು. ಮದ್ಯಗಳ ಕ್ರಯಾ ಸುಮಾರು ಒಂದುವರೆ ಪಾಲಷ್ಟು ಹೆಚ್ಚಿರುವುದು ಆಗೋಸ್ತು ತಾ. ೧ರಲ್ಲು ಸರ್ದಾರ್ ವಲ್ಲಭಾಯಿಯವರೇ ಮೊದಲಾದ ಮುಖಂಡರ ನೇತೃತ್ವದಲ್ಲಿ ಪಟ್ಟಣದಲ್ಲೆಲ್ಲಾ ಮೆರವಣಿಗೆ ಭಾಷಣಗಳು ನಡೆದಿರುವವು. ಪಾರ್ಸಿಗಳಾರೂ ಇವುಗಳಲ್ಲಿ ಭಾಗವಹಿಸಕೂಡದೆಂದು ಪಾರ್ಸಿ ಪಂಚಾಯತ ಬೋರ್ಡಿನವರು ಸಂದೇಶವಿತ್ತಿರುವರು ಮಹಾತ್ಮಗಾಂಧಿ ಬೇರೆ ಬೇರೆ ಪ್ರಾಂತಗಳ ಕಾಂಗ್ರಿಸ್ ಪ್ರಧಾನಮಂತ್ರಿಗಳೇ ಮೊದಲಾದವರು ಮದ್ಯಪಾನ ನಿಷೇಧವನ್ನು ಪ್ರಶಂಸಿಸಿ ಸಂದೇಶ ಕಳುಹಿಸಿರುವರು.

ಫೆಡರೇಶನನ್ನು ಬಲಾತ್ಕಾರದಿಂದ ಹೊರಿಸಬೇಡಿ

ಮಿ. ಜಿನ್ನಾರವರು ಜುಲೈ ತಾ. ೩೦ರಲ್ಲಿ ಸ್ಟೇಟ್‌ಮೆಂಟೊಂದನ್ನು ಹೊರಡಿಸಿ, ಮುಸ್ಲಿಮ್ ಲೀಗಿನವರು ಫೆಡರೇಶನನ್ನು ಎಷ್ಟಕ್ಕೂ ಸ್ವೀಕರಿಸಲಾರರು. ಆದುದರಿಂದ ಯಾರಿಗೂ ಬೇಡವಾದ ಅದನ್ನು ಹಿಂದೂದೇಶದ ಮೇಲೆ ಬಲಾತ್ಕಾರದಿಂದ ಹೊರಿಸಬೇಡಿರೆಂದು ವೈಸರಾಯರೊಡನೆ ಕೇಳಿಕೊಂಡಿರುವರು ದೇಶೀಯ ರಾಜರುಗಳು ಫೆಡರೇಶನನ್ನು ಸಂಪೂರ್ಣವಾಗಿ ನಿರಾಕರಿಸಿರುವರು. ಅವರದನ್ನು ಸ್ವೀಕರಿಸುವಂತೆ ನಾನಾ ಬೆದರಿಕೆ ಹಾಕಿ ಒತ್ತಾಯ ನಡೆಯುತ್ತಿದೆಯೆಂದು ತಿಳಿದುಬರುತ್ತದೆ. ಆದರೂ ಅವರು ಒಪ್ಪಲಾರರೆಂದು ನಾನು ನಂಬುತ್ತೇನೆ ಕಾಂಗ್ರಿಸ್ ಫೆಡರೇಶನಿಗೆ ಬದ್ಧ ವಿರೋಧವಾಗಿದೆ. ಆದರೆ ಮುಸಲ್ಮಾನರು ತಮ್ಮದೇ ಆದ 'ಫಕಿಸ್ಥಾನ'ವೆಂಬುದನ್ನು ಸ್ಥಾಪಿಸಿ ಅಖಿಲಭಾರತ ಐಕ್ಯವನ್ನೇ ಮುರಿಯುವುದರಲ್ಲಿದ್ದಾರೆಂಬ ಬೆದರಿಕೆಯಿಂದ ಕಾಂಗ್ರೆಸಿನವರು ಫೆಡರೇಶನಿಗೊಪ್ಪುವರೇ ಎಂಬುದೀಗ ಪ್ರಶ್ನೆ. ಫೆಡರೇಶನನ್ನು ಸ್ವೀಕರಿಸಬೇಕಾಗುವುದೆಂದು ಗಾಂಧಿಜಿಯವರು ರಾಜಕೋಟೆಯಲ್ಲಿ ತನ್ನ ಅನುಯಾಯಿಗಳು ಕೆಲವರೊಡನೆ ಹೇಳಿದುದಾಗಿ ಸುದ್ದಿಯುಂಟಾಗಿದೆ. ಕೆಲವು ದಿನಗಳ ಮೊದಲು ಲಾಹೋರಿನಲ್ಲಿ ಫೆಡರೇಶನಿನ ಕುರಿತು ಅವರ ಅಭಿಪ್ರಾಯವೇನೆಂದು ಕೇಳಲ್ಪಟ್ಟಾಗ ಅವರು ಉತ್ತರಕೊಡಲಿಲ್ಲ. ಮುಸಲ್ಮಾನರ ಬೆದರಿಕೆಯಿಂದ ಗಾಂಧಿಜಿಯವರು, ಹಿಂದೂದೇಶದ ಕುತ್ತಿಗೆಗೆ ನೇಣಾಗಿರುವ ಫೆಡರೇಶನನ್ನು ಸ್ವೀಕರಿಸಲು ಮುಂದಾಗುವರೇ? ಅವರು ಹಾಗೆ ಮಾಡಲಾರರೆಂದು ತನ್ನ ನಂಬಿಕೆ. ಕಾಂಗ್ರೆಸು ಅಂತಹ ದೇಶ ಘಾತುಕ ಧೋರಣ ವಹಿಸಲಾರದೆಂದು ನಂಬುತ್ತೇನೆ. ಮುಸ್ಲಿಮ್ ಲೀಗು ಫೆಡರೇಶನಿಗೆ ಬದ್ಧ ವಿರೋಧವಿದೆ. ಆದುದರಿಂದ ಯಾರಿಗೂ ಬೇಡವಾಗಿ ಎಲ್ಲಾ ಪಕ್ಷೀಯರೂ ವಿರೋಧಿಸುವ ಫೆಡರೇಶನನ್ನು ಲೋರ್ಡ್ ಲಿನ್ಲಿತ್ ಗೋರವರು ಹಿಂದೂದೇಶದ ಮೇಲೆ ಹೊರಿಸದೆ ಇಂಗ್ಲೆಂಡಿನ ಕೀರ್ತಿ ಮತ್ತು ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಬೇಕೆಂದು ಮಿ. ಜಿನ್ನಾರವರ ಆಗ್ರಹದ ವಿನಂತಿ.

ಫ್ರಾನ್ಸು ಎತ್ತ ಸರಿಯುತ್ತಿದೆ?

ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯ ತಾಯಾರಾದ ಫ್ರಾನ್ಸು ಈಗ ಎತ್ತ ಸರಿಯುತ್ತಿದೆಯೆಂದು ಹೇಳಬರುವುದಿಲ್ಲ. ಯುದ್ಧಭೀತಿಯ ನೆವದಿಂದ ಅದರ ಪ್ರಧಾನ ಮಂತ್ರಿಗಳಾದ ಡೆಲಾಡಿಯರ್, ತನ್ನ ನೆರೆಯ ಡಿಕ್ಟೇಟರರುಗಳನ್ನು ಅಣಕಿಸಲು ಹೊರಟಿರುವಂತಿದೆ. ಅವರು ಜನರಲ್ ಇಲೆಕ್ಷನನ್ನು 2ವರ್ಷ ಮುಂದೆ ಹಾಕಿದ್ದಾರೆ. ಉಪಚುನಾವಣೆಗಳನ್ನು ಕೂಡಾ ನಡೆಸುವುದನ್ನು ನಿಲ್ಲಿಸಿದ್ದಾರೆ. ಮಜೂರರ ಹಕ್ಕುಬಾಧ್ಯತೆಗಳನ್ನು ಮೂಲೆಗೊತ್ತಿದ್ದಾರೆ. ಯುದ್ಧದ ದಿಗಿಲಿನಿಂದಾಗಿ ಅವರು ಏನು ಮಾಡಿದರೂ ಆಕ್ಷೇಪಿಸುವವರಿಲ್ಲದಂತಾಗಿದೆ. ಈಗ ಅವಿವಾಹಿತರು, ಮಕ್ಕಳಿಲ್ಲದ ವಿಧವೆ ವಿಧುರರು ಮತ್ತು ದಂಪತಿಗಳ ಮೇಲೆ ಹೊಸತಾಗಿ ಕರಹಾಕುವ ನಿರ್ಧಾರಮಾಡಿರುತ್ತಾರೆ. ಈ ಕರದಿಂದ 6ಮಿಲ್ಯ ಪವನು ಸಂಗ್ರಹಿಸಿ ಮಕ್ಕಳು ಹೆಚ್ಚಾಗಿ ಹುಟ್ಟಿಸುವವರಿಗೆ ಇನಾಮಾಗಿ ಕೊಡುವ ಆಲೋಚನೆ ಮಾಡಿರುತ್ತಾರೆ. ಸಂತತಿ ನಿರೋಧವು ಕಠಿಣ ದಂಡನೀಯ ತಕ್ಷೀರಾಗಿ ಮಾಡಲ್ಪಟ್ಟಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಮೊದಲೊಮ್ಮೆ ಪ್ರಕಟವಾಗಂತೆ ಇದೇ ತಾ. 1ಕ್ಕೆ ನಡೆಯದೆ ಆರಂಭದಲ್ಲಿ ಪ್ರಕಟಿಸಲ್ಪಟ್ಟಂತೆ ತಾ 9ಕ್ಕೇನೇ ವಾರ್ಧದಲ್ಲಿ ನಡೆಯಲಿರುವುದು ಈ ಸಭೆಗೆ ಪಂಡಿತ ಜವ್ಹಾರಲಾಲರು ಆಮಂತ್ರಿಸಲ್ಪಟ್ಟಿರುವರು. ವರ್ಕಿಂಗ್ ಕಮಿಟಿ ಸಭೆಯಾದೊಡನೆಯೇ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಸೇರಲಿರುವುದು.

ವಾರ್ಕಿಯವರ ಅಸಭ್ಯವರ್ತನೆ

ಶಿಕ್ಷಣ ಮಂತ್ರಿಗಳಾದ ಮಿ. ಸಿ ಜೆ. ವಾರ್ಕಿಯವರು ಜುಲೈ ತಾ. ೨೮ರಲ್ಲು ನಂದ್ಯಾಲಿಗೆ ಹೋಗಿದ್ದಾಗ ಅಲ್ಲಿಯ ಟೌನ್ ಕಾಂಗ್ರೆಸ್ ಕಮಿಟಿಯವರು ನಿಶ್ಚೈಸಿದ ಕಾರ್ಯಕ್ರಮವನ್ನು ನಡಿಸಲು ಅಸೌಖ್ಯದ ನಿಮಿತ್ತ ಸಾಧ್ಯವಿಲ್ಲೆಂದರು. ಅವರೂ ಟೌನ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಸಿ ಕ. ನರಸಿಂಗರಾಯರೂ ಶ್ರೀ. ಜ. ವೆಂಕಟರೆಡ್ಡಿ, ಎಮ್. ಎಲ್. ಎ. ಇವರೂ ಮಿ. ವಾರ್ಕಿಯವರ ಬಳಿಗೆ ಹೋಗಿ ಕಾಂಗ್ರೆಸ್ ಕಮಿಟಿಯ ಕಾರ್ಯಕ್ರಮವನ್ನು ನಡಿಸಬೇಕೆಂದು ಕೇಳಿಕೊಂಡರು. ಆಗ ಮಿ. ವಾರ್ಕಿಯವರು ತನ್ನ ಆರೋಗ್ಯವು ನೆಟ್ಟಗಿಲ್ಲೆಂದರು ಈ ಗೃಹಸ್ಥರು ಮತ್ತೂ ಒತ್ತಾಯಮಾಡಿದಾಗ ಮಿ ವಾರ್ಕಿಯವರು ಟೈಪ್ ಮಾಡಲ್ಪಟ್ಟ ಕಾರ್ಯಕ್ರಮವನ್ನು ಅವರ ಕೈಯಿಂದ ತೆಗದು, ಸ್ಟೇಶನಿನಲ್ಲಿ ನೆರೆದು ಬಂದಿದ್ದ ಎಲ್ಲಾ ಜನರ ಸಮಕ್ಷಮದಲ್ಲಿಯೇ ಅದನ್ನು ಹರಿದುಹಾಕಿ ಶ್ರೀಗಳಾದ ರೆಡ್ಡಿ ಮತ್ತು ರಾಯರನ್ನ "ಅತ್ತಸರಿಯಿರಿ" ಎಂದು ಸಿಟ್ಟಿನಿಂದ ಹೇಳಿ ಅವಮಾನಿಸಿದರು ಇದರಿಂದ ಸಂತಪ್ತರಾದ ಕಾಂಗ್ರೆಸ್ ಕಮಿಟಿಯವರು, ಸಾರ್ವಜನಿಕ ಸಭೆ ನಡಿಸಿ ಮಿ ವಾರ್ಕಿಯವರ ವರ್ತನೆಯನ್ನು ನಿಷೇಧಿಸಿ, ಅವರು ಸಾರ್ವಜನಿಕವಾಗಿ ಕ್ಷಮಾಪಣೆ ಕೇಳದೆ ಅವರ ಸನ್ಮಾನಾರ್ಥವಾಗಿ ನಡಿಸಲ್ಪಡುವ ಸಮಾರಂಭಗಳಲ್ಲಿ ಕಾಂಗ್ರೆಸ್ ಪಕ್ಷೀಯರಾರೂ ಭಾಗವಹಿಸಕೂಡದೆಂದು ನಿರ್ಧರಿಸಿರುವರು ನಂದ್ಯಾಲ್ ಮುನಿಸಿಪಾಲಿಟಿಯವರು ಮಿ. ವಾರ್ಕಿಯವರಿಗೆ ಕೊಡಲು ನಿರ್ಧರಿಸಿದ್ದ ಮಾನಪತ್ರವನ್ನು ರದ್ದುಮಾಡಿರುವರು.

ಕಾಂಗ್ರೆಸ್ ಕಮಿಟಿಯವರು, ಮಿ. ವಾರ್ಕಿಯವರ ವರ್ತನೆಯ ಕುರಿತು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೂ, ಕಾಂಗ್ರೆಸ್ ಎಸಂಬ್ಲಿ ಪಾರ್ಟಿಗೂ ಬರೆದುಕೊಂಡಿರುವರು. ಮಿ. ವಾರ್ಕಿಯವರಿಗೆ ಪ್ಲೀಕ ಕ್ಲಬ್ಬಿನ ಕಾರ್ಯಕ್ರಮವನ್ನು ನಡಿಸಲು ಸಮಯವಿತ್ತು. ೩೬ಮೈಲು ದೂರದ ಅಲ್ಲಗಡ್ಡಕ್ಕೆ ಹೋಗಿ ಅಧ್ಯಾಪಕ ಪರಿಷತ್ತು ತೆರೆಯಲು ಆರೋಗ್ಯ ನೆಟ್ಟಗಿತ್ತು ಕಾಂಗ್ರೆಸ್ ಕಮಿಟಿಯವರ ಕಾರ್ಯಕ್ರಮ ನಡಿಸಲು ಮಾತ್ರ ಆರೋಗ್ಯ ನೆಟ್ಟಗಿರಲಿಲ್ಲ ಕಾಂಗ್ರೆಸ್ ಮಂತ್ರಿಗಳಾದ ಮಿ. ವಾರ್ಕಿಯವರ ಕಾಂಗ್ರೆಸ್ ಭಕ್ತಿಯ ರೀತಿಯಿದು.

ಪ್ರಕಟಣೆ

ಉಡುಪಿ ತಾಲೂಕು ಕೊಡವೂರು ಗ್ರಾಮದ ಪ.ಪ್ಪ ನಿಕಿತೋಟದಲ್ಲಿರುವ ಆದಿದ್ರಾವಿಡ ಜಾತಿಯ ಉಪ್ಪರ ಸಂಗಡಕ್ಕೆ (ಸುಂದರಾ) ಸೇರಿದ ಕುಂದುಬಳ ಮಗಳು ಕಿಟ್ಟು ಹೆಂಗಸು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಾನು 19 ವರ್ಷ ಪ್ರಾಯದವಳಾಗಿದ್ದು ಸದ್ರಿ ತಾಲೂಕು ಪುತ್ತೂರು ಲೇಬರ್ ಕೋಲೊನಿಯಲ್ಲಿರುವ ಕಲ್ಲಿನ ಸುಬ್ಬವೆಸ್ತ್ರಿ ಮಗ ರಾಮನೆಂಬಾತನಿಗೆ ಮದುವೆಯಾಗಿ ಸುಮಾರು 5 ವರ್ಷ ದಾಟಿರುವುದಾದರೂ ಸದ್ರಿಯವನು ಈ ತನಕ ನನ್ನ ಯಾವ ತರದ ಸುಖಕಷ್ಟವನ್ನು ನೋಡದೆಯೂ ಕನಿಷ್ಟ ವಸ್ತ್ರಕ್ಕೆ ಒಂದೇ ಒಂದು ಕಾಸಾದರೂ ಅದದೆಯೂ ತಿರಸ್ಕಾರಭಾವದಿಂದ ಇದ್ದುದರಿಂದ [illegible] ಹೇಗೂ ಒಂದೆರಡು ವರ್ಷ ಕಳೆದೆನು. ಈ ವಿಷಯವನ್ನು ಲಜ್ಜೆಗೆಟ್ಟು ನನ್ನ ಕುಟುಂಬದವರೊಡನೆ ಹೇಳಿದಾಗ ಅವರು ಇನ್ನೂ ತಾಳ್ಮೆಯಿಂದಿರಬೇಕೆಂದೂ ಅವನು ಮತ್ತೂ ಇಚ್ಛಿಸಿದ ರೀತಿ ರಡಿಬಂದ್ದಲ್ಲಿ ಪುನರ್ವಿವಾಹಮಾಡೋಣವೆಂದೂ ಸಮಾಧಾನಿಸಿದರೂ ಜೀವನವು ದುಃಖಮಯವಾಗುತ್ತಿದ್ದುದರಿಂದ ಪೂರ್ಣ ನಿರಾಶಳಾಗಿ ನನ್ನನ್ನು ಹೊಡೆದು ಬಡೆದು ಬಲವಂತಪಡಿಸುವುದಾದರೂ ಸದ್ರಿ ಗಂಡನನ್ನು ಒಲ್ಲೆನೆಂದು ಕಾರಣ ಸಹಿತ ಉತ್ತಮ ಮತ್ತು ಜಾತಿಗೃಹಸ್ಥರ ಮುಂದೆ ತಾ 15-5-39ರಲ್ಲಿ ನನ್ನ ಸ್ವಂತ ಖುಶಿಯಿಂದ ಒಪ್ಪಿರುತ್ತೇನೆ. ಮತ್ತು ದೊಡ್ಡ ಜಗುಲಿ ಜಾತಿಗೃಹಸ್ಥರ ಕೂಟದಲ್ಲಿ ಸದ್ರಿಯಾತನು ಕಟ್ಟಿದ 'ತಿರ' ಹತ್ತು ರೂಪಾಯಿ ವಾಪಾಸು ಕಟ್ಟಿರುತ್ತದೆ ಈ ಎಲ್ಲಾ ವಿಷಯಗಳು ಶ್ರೀ. ಮಲ್ಪೆ ಪಡುವಿನ ಏಟ್ಟು ಉಪಾಧ್ಯಾರವರಿಗೂ ವಿಚಾರಣೆಯಿಂದ ತಿಳಿದಿರುವದು ನಾನು ನನ್ನ ಸ್ವಂತ ಇಚ್ಛೆಯಿಂದ ಸದ್ರಿಗಂಡನ ಸಂಬಂಧವನ್ನು ಬಿಟ್ಟುದರಿಂದ ಇನ್ನು ಮುಂದೆ ನನ್ನನ್ನು ವರಿಸುವ ವರನಾಗಲೀ, ಇನ್ಯಾರಾಗಲೀ ಯಾವ ತರದ ಯಾರ ಎಲ್ಲಿಯ ಯಾತನಾಯುದ ಅಪವಾದಕ್ಕೂ ಸರ್ವಥಾ ಅರ್ಹರಲ್ಲ. ಅಂಥಾ ಅಪವಾದವನ್ನು ಯಾವ ಕಾರಣದಿಂದಲಾದರೂ ಹೊರಿಸಿದ್ದಾದರೆ ಒದಗಬಹುದಾದ ಸರ್ವ ನಷ್ಟ ಕಷ್ಟಕ್ಕೂ ಅವಮಾನಕ್ಕೂ ಸದ್ರಿ ಅಪವಾದ ಹೊರಿಸಿದವರೇ ಯಾ ಅವರ ಹೊರಿಸದಕ್ಕೆ ವರೇ ಜವಾಬ್ದಾರರಾಗಿರತಕ್ಕದ್ದೆಂದು ತಿಳಿದಿರುವದು.

●||| ಈ ಮೂರು ಗೆರೆ ಮತ್ತು ಎಡ ಹೆಬ್ಬೆಟ್ಟಿನ ಗುರುತು ಕಿಟ್ಟು ಹೆಂಗಸಿನ ದಸ್ತು.

ಮಂಗಳೂರು

(ನಮ್ಮ ಸ್ವಂತ ವಾರ್ತಾಹರರಿಂದ)

ತಾ. 30-7-39.

ಮಂಗಳೂರು ನಗರಸಭೆ— [illegible]

ಪ್ರೆಸ್ಸ್ ಕೆಲಸಗಾರರ ಸಂಘ— [illegible]

ಬಂಗಾಳದ ರಾಜಕೀಯ ಕೈದಿಗಳ ವಿಷಯದಲ್ಲಿ ಸಹಾನುಭೂತಿ— [illegible]

ಶಿಸ್ತು— [illegible]

ಹೊಸ ಜಿಲ್ಲಾ ಕಲೆಕ್ಟರರು— [illegible]

ಡಿ. ಕಲೆಕ್ಟರ್ ಶ್ರೀ ವೆಲ್ಲೋಡಿಯವರಿಗೆ ಸತ್ಕಾರ— ತಾ. 28ನೇ ಶುಕ್ರವಾರ [illegible]

ಹಿಂದೀ ಕ್ಲಾಸು ತೆರೆಯಲ್ಪಟ್ಟಿತು— ಕಳೆದ ತಾ. 28ನೇ ಶುಕ್ರವಾರ [illegible]

WANTED candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight-Director, Royal Telegraph and Rly. Duties College, Bombay 11.

ಉಡುಪಿ

ಹರಿಜನ ಬೋರ್ಡಿಂಗ್ ಸ್ಥಾಪನೆ— ತಾ. 27-7-39ರಲ್ಲಿ ಕುಂಜಿಬೆಟ್ಟಿನಲ್ಲಿ ಶ್ರೀ. ಬಿ. ಅಂತಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಹರಿಜನರ ಸಭೆಯೊಂದರಲ್ಲಿ ನಿಶ್ಚಯಿಸಿದಂತೆ ಉಡುಪಿ ತಾಲೂಕು ಹರಿಜನ ಸೇವಾಸಂಘದವರೂ ಉಡುಪಿ [illegible] ಸೇರಿ ಉಡುಪಿಯಲ್ಲಿ ಪ್ರೌಢ ವಿದ್ಯಾಭ್ಯಾಸಹೊಂದುವ ಹರಿಜನ ವಿದ್ಯಾರ್ಥಿಗಳಿಗಾಗಿ ತಾ. 28-7-39ರಿಂದ ತಾತ್ಕಾಲಿಕವಾಗಿ ಶ್ರೀ. ಯು. ರಾಮಚಂದ್ರನವರ ಸ್ವಂತ ಕಟ್ಟಡದಲ್ಲಿ ಬೋರ್ಡಿಂಗನ್ನು ತೆರೆಯಲಾಗಿದೆಯೆಂದು ತಿಳಿದುಬರುತ್ತದೆ. ಶ್ರೀ. ರಾಮಚಂದ್ರನವರು ಇದರ ಮೆನೇಜರರಾಗಿ ಚುನಾಯಿತರಾಗಿರುವರು. ಇದಕ್ಕೆ ತಕ್ಕ ಕಮಿಟಿಯೂ ರಚನೆಯಾಗಿದೆ.

ಅಳಿಯಸಂತಾನಿಗರ ಸಭೆ— ಅಳಿಯಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿರುವ ಅಳಿಯಸಂತಾನ ಮಸೂದೆಯ ಕುರಿತು ಅಭಿಪ್ರಾಯವನ್ನು ಪಡಕೊಳ್ಳಲಿಕ್ಕೂ ತಾ. 17-9-39ಕ್ಕೆ [illegible] ತಾ. 4-8-39ನೇ ಶುಕ್ರವಾರ ಸಂಜೆ 4-30ಕ್ಕೆ [illegible]

ಹರಿಜನರಿಗೆ ಇನ್ನೊಂದು ವಿದ್ಯಾರ್ಥಿ ಭವನ— [illegible] ತಾ. 1-8-39ರಿಂದ [illegible]

ಎಯಿಡೆಡ್ ಸ್ಕೂಲ್ ಟೀಚರ್ಸ್ ಯೂನಿಯನ್— ಉಡುಪಿ ತಾಲೂಕು [illegible] ತಾ. 29-7-39ರಲ್ಲಿ [illegible]

ಉಡುಪಿ ತಾಲೂಕು ಎಜ್ಯುಕೇಶನಲ್ ಕಮಿಟಿಯ ಸಭೆ— ಕಳೆದ ತಾ. 30ರಲ್ಲಿ [illegible]

ರಾತ್ರಿ ಶಾಲೆ— ತಾ. 1-8-39ರಿಂದ [illegible]

ಕಟಪಾಡಿ— [illegible]

ಬೈಂದೂರು— [illegible] ರೂ. 4-1-0; [illegible] M. A. L. T. ರೂ. 2-0-0, [illegible] ರೂ. 2-0-0

ಕಾಸರಗೋಡು ಬೋರ್ಡ್ ಹೈಸ್ಕೂಲಿನ ಕರ್ನಾಟಕ ಸಂಘ— ಈ ಸಂಘದ [illegible] 20ನೇ ಗುರುವಾರ [illegible]

ಕುಂದಾಪುರ— [illegible]

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES ----- MANGALORE.

HALT??? HAVE YOU RECEIVED ???.

Our new illustrated copy containing latest varieties of modern Swiss made Guaranteed Lever Watches?



ರೂ. ೩ರಿಂದ ರೂ. ೬೦ರ ತನಕ ಬೆಲೆಯುಳ್ಳವು.

ನಂ. 517 ಕ್ರೋಮಿಯಂ ಕೇಸ್ ರೂ. 6-8-0.

„ 518 ಬಂಗಾರದ ಕೇಸ್, ರೂ. 8-0-0.

„ 518A. ರೋಲ್ಡ್ ಗೋಲ್ಡ್ 10 ವರ್ಷಗಳದ್ದು ರೂ. 12-8-0.

ಅಂಚೆ ಮತ್ತು ಪ್ಯಾಕಿಂಗ್ ಖರ್ಚು 0-9-0 ಪ್ರತ್ಯೇಕ. [illegible]

BAPALAL & Co., (N. U.)

101, ABDUL RAHIMAN ST. BOMBAY, 3.

"Breathes there a man with soul so dead,
Who never to himself hath said,
This is my own my native land"

Hark ye! Patriots !! you say civil disobedience movement is suspended !!! But, does that mean that you may shirk off your responsibilities, and whistle for an accidental aggrandizement of your country?

NEVER! ———— NEVER!!

There must be movement - - - - -

Movement to close Unhealthy channels draining Mother India's cheese!
Movement to replenish Mother India's resources !!

How? See General film's crowning success of the year

INDUSTRIAL INDIA

STARRING:

Shobhana Samartha, Baby Indira, Prem Adib, Kale & others.

A mighty message to India's millions—

A message of the times for the people of the times, Man or Woman, young or old irrespective of cast or colour.

AT

SRI RAMAKRISHNA THEATRE, UDIPI.

from 3-8-1939

"ಮಾತೃ ಭೂಮಿ ಜನನಿ ನಿನ್ನ ಚರಣಸೇವೆ ಮಾಡುವಾ,
ಪರಮ ಹರುಷದಿಂದ ನಿನ್ನ ಸುಖಕೆ ದೇಹನೀಡುವಾ ||
ತನುಮನದಿಂದ ನಿನ್ನ ಘನತೆಯನ್ನು ಬೆಳೆಸುವಾ |
ದಣಿಯದೆ ಅನುದಿನವು ದುಡಿದು ಗುಣಿಗಳೆನಿಸಿಕೊಳ್ಳುವ" ||

ದೇಶಾಭಿಮಾನಿಗಳೇ ಕೇಳಿರಿ!

ಸತ್ಯಾಗ್ರಹ ಚಳವಳವು ನಿಂತಿತು ಎಂದಿರಾ?--ಇರಬಹುದು! ಆದರೆ ಇದರಿಂದ ಭಾರತೀಯರು ತಮ್ಮ ತಮ್ಮ ಜವಾಬ್ದಾರಿಯನ್ನು ಕಿತ್ತೊಗೆದು, ಅಕಸ್ಮಾತ್ ಯಾವುದಾದರೊಂದು ಮಾಯಾಜಾಲದಿಂದ ದೇಶೋದ್ಧಾರವಾಗಬಹುದೆಂದು ಎಣಿಸಲಾಗದು.

ಚಳವಳವಿದ್ದೇ ಇರಬೇಕು!--ಅಂದರೆ, ಅನಾವಶ್ಯಕ ಮುಂದುಗಾರಿಕೆ, ದುಷ್ಟಚಾಳಿಯಿಂದ ಹಾಳಾಗುವ ದ್ರವ್ಯವನ್ನು ಉಳಿಸಲು ಚಳವಳವಿರಬೇಕು! ಭಾರತಮಾತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಚಳವಳವಿರಬೇಕು! - - - ಹೇಗೆ?

ನೋಡಿರಿ:—ಜನರಲ್ ಫಿಲ್ಮ್ಸಿನವರ ವರುಷದ ಆದರ್ಶಕ ಚಿತ್ರವೆಂದೆನಿಸುವ
ಶೋಭನ ಸಮರ್ಥ, ಬೇಬಿ ಇಂದಿರಾ, ಪ್ರೇಮ ಅಡಿಬ್, ಕಾಲೆ ಮೊದಲಾದವರು ನಟಿಸಿರುವ

ಇಂಡಸ್ಟ್ರಿಯಲ್ ಇಂಡಿಯಾ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾರೀಕು 3—8—1939 ರಿಂದ

ಮಿಲಿಯಾಂತರ ಹಿಂದೀಯರಿಗೆ ಉಪಯುಕ್ತ ಸಂದೇಶ!—ಆಧುನಿಕ ಸಂದೇಶ—ಇಂದಿನ ದುಃಸ್ಥಿತಿಯನ್ನು ಪರಿಹರಿಸುವ ಸಂದೇಶ!

ಜಾತಿಭೇದವಿಲ್ಲದೆ ಹೆಂಗಸರು, ಗಂಡಸರು--ಹಳಬರು, ಎಳೆಯವರು—ಎಲ್ಲರೂ ನೋಡತಕ್ಕ ಚಿತ್ರ.

INDUSTRIAL INDIA

—* ಕಥಾಸಾರಾಂಶ *—

ಮನೋರಮೆಯು ಆಧುನಿಕ ತರುಣಿಯರಲ್ಲೊಬ್ಬಳು. ಅವಳ ಅಣ್ಣ ಸತೀಶನು ಕೈಗಾರಿಕೆಯಲ್ಲಿ ಪಾಶ್ಚಾತ್ಯ ದೇಶದಲ್ಲಿ ಪಾಂಡಿತ್ಯವನ್ನು ಪಡೆದು, ತನ್ನ ಮಿತ್ರನಾದ ಜಗದೀಶನೊಂದಿಗೆ ಊರಿಗೆ ಬರುವನು. ಜಗದೀಶನು ನವೀನ ಕಾಲಕ್ಕೆ ಸರಿಯಾಗಿ ಮನೋರಮೆಯಲ್ಲಿ ಪ್ರೇಮವನ್ನು ಹೊಂದಿ ಅವಳನ್ನು ಪ್ರೇಮಿಸಲು ಪ್ರಯತ್ನಿಸುವನು. ಅವಳು ಇವನನ್ನು ನಿರಾಕರಿಸಲು ಸೇಡನ್ನು ಬಗೆದು ಅಲ್ಲಿಂದ ಹೊರಡುವನು.

ಇತ್ತ ಸತೀಶನ ತಂದೆ, ಸಿರಿವಂತ ವರ್ತಕನಾದರೂ ಜೂಗಾರಿಯಿಂದ ಸಂಪೂರ್ಣ ಕ್ಷೀಣದಶೆಗೆ ಬಂದಿದ್ದನು. ಅದನ್ನು ನಿಲ್ಲಿಸಲು ಸತೀಶನು ಜೂಗಾರಿಯ ಅಡ್ಡೆಗೆ ಹೋಗಿ ತಂದೆಯ ಜೂಜಿನ ಸ್ನೇಹಿತನಿಂದ ವಿಪರೀತ ಪೆಟ್ಟು ತಿನ್ನುವನು. ಇಷ್ಟರಲ್ಲಿ ಅವನ ತಂದೆಯು ಜೂಗಾರಿಯಲ್ಲಿ ಹಣ ಸೋತು, ಹುಚ್ಚು ಹಿಡಿದಂತೆ ರಸ್ತೆಯಲ್ಲಿ ನಿಂತಿರಲು, ಅದೊಂದು ಕಾರಿನ ಅಡಿಯಲ್ಲಿ ಸಿಕ್ಕಿ ಸಾಯುವನು. ಈ ವಿಷಾದ ಪೂರ್ವಕ ವರ್ತಮಾನವನ್ನು ಕೇಳಿ ಅವನ ತಾಯಿಯೂ ಮಡಿಯುವಳು.

ಇತ್ತ ಸಾಲಗಾರರ ಉಪದ್ರವವು ಹೆಚ್ಚು ಹೆಚ್ಚಾಗಲು, ಮನೋರಮೆಯು ತನ್ನ ರೂಪಲಾವಣ್ಯಗಳನ್ನು ಒತ್ತೆಯಾಗಿಟ್ಟು ಒಂದು ಫಿಲಂ ಕಂಪೆನಿಯಲ್ಲಿ ಸೇರಿ ಪ್ರಖ್ಯಾತಳಾಗುವಳು. ಸ್ವಲ್ಪ ಸಮಯದಲ್ಲಿಯೇ ಜೂಗಾರಿಗೆ ಬಲಿಬಿದ್ದ ಕಂಪನಿಯ ಪ್ರೊಪ್ರೈಟರ್ ಓವಾಳಿಯಾಗಿ ಕೆಲಸದವರಿಗೆ ಸಂಬಳ ಕೊಡಲಾಗದೆ ಆತ್ಮಹತ್ಯ ಮಾಡಿಕೊಳ್ಳಲು, ಡೈರೆಕ್ಟರ್ ಸುರೇಶನು ಕಂಪೆನಿಯನ್ನು ನಡಯಿಸಿಕೊಂಡು ಬರುವನು. ಸುರೇಶನು ಮನೋರಮೆಯಲ್ಲಿ ಪ್ರೇಮಪರವಶನಾಗಿದ್ದನು.

ಅವರು ತಯಾರಿಸುತ್ತಿದ್ದ ಚಿತ್ರದಲ್ಲಿ ಮನೋರಮೆಯಿಂದ ನಿರಾಕರಿಸಲ್ಪಟ್ಟಿದ್ದ ಜಗದೀಶನೇ ದುಷ್ಟ ಪಾತ್ರವನ್ನು ವಹಿಸುವನು. ಕಥೆಯಲ್ಲಿ ಅವನು ಕಥಾನಾಯಕಿಯಾದ ಮನೋರಮೆಯನ್ನು ಅಪಹರಿಸಬೇಕಿತ್ತು. ಜಗದೀಶನು ಸೀನಿನ ಮಧ್ಯದಲ್ಲಿ ನಿಜವಾಗಿಯೂ ಮನೋರಮೆಯನ್ನು ಹಾರಿಸಿಕೊಂಡು ಹೋಗುವನು. ಸುರೇಶನು ಶ್ರಮಪಟ್ಟು ಅವಳನ್ನು ಬಿಡಿಸಿ ತಂದರೂ, ಕಥೆಯು ಅಪೂರ್ಣವಾದ ಕಾರಣ ತುಂಬಾ ನಷ್ಟಕ್ಕೆ ಗುರಿಯಾಗುವನು. ಸುರೇಶನು ಪುನಃ ತನ್ನ ತಂದೆಯಿಂದ ದ್ರವ್ಯ ಸಹಾಯ ಕೇಳುವನು. ಆದರೆ ಅವನ ಇಷ್ಟಕ್ಕೆ ವಿರೋಧವಾಗಿ ಸುರೇಶನು ಮನೋರಮೆಯನ್ನು ಈಗ ಮದುವೆಯಾದ ಕಾರಣ, ಅವನು ಹಣಕೊಡಲೊಪ್ಪಲಿಲ್ಲ. ದಾರಿಯಲ್ಲಿ ಆಶಾಭಗ್ನನಾಗಿ ಬರುತ್ತಿರುವಾಗ, ಅವನ ಸ್ನೇಹಿತನೊಬ್ಬನು ದುರ್ವ್ಯಯಕ್ಕಾಗಿ ಹೇರಳ ಹಣದೊಡನೆ ಬರುತ್ತಿದ್ದನು. ಸುರೇಶನು ಬಲಾತ್ಕಾರದಿಂದ ಆ ಹಣವನ್ನು ಕಸಿದುಕೊಂಡು, ಸ್ಟುಡಿಯೋ ಕೆಲಸಗಾರರಿಗೆ ಸಂಬಳ ಹಂಚುವನು. ಇದನ್ನು ಕೇಳಿದ ಅವನ ತಂದೆಯು ಗರ್ವದಿಂದ, ಸುರೇಶನನ್ನು ಪೋಲೀಸರ ವಶಮಾಡಲು ಸಂಕಲ್ಪಿಸುವನು. **ಮುಂದೇನು?**

— SYNOPSIS —

Manorama is a modern girl. Her brother Satish having finished his training in industries abroad, comes home with his friend Jagdish, who quite in the modern fashion falls in love with Manorama. He makes advances which are rejected, when Jagdish leaves the house vowing revenge.

Satish's father, a very wealthy merchant, is on the verge of ruin by his weakness for gambling, to resist which, one night, Satish goes to the pedhi and encounters a row with his father's gambling friend. He is brutally wounded, and in the meanwhile, his father having lost heavily in the game, is almost driven out of his mind, and is knocked down and instantly killed by a car. When the news of the double tragedy reaches home, Manorama's mother is shocked to death.

In this juncture, creditors press them on all sides, when Manorama is forced to capitalise her youth and good looks to offer herself to work in a film company. The proprietor of the company leaves the staff unpaid and commits suicide, having lost again in gambling. Director Suresh who is by this time, headlong in love with Manorama, floats the concern himself. Jagdish, Manorama's rejected lover, takes the villain part in the story under production, and in conformity with the story, actually kidnaps Manorama, whom, Suresh manages to rescue, though the picture on which they had rested their hopes is ruined. Suresh approaches his father for further financial help, which is refused especially as Suresh, by this time, has married Manorama against his father's wish. When Suresh is returning disappointed, he meets a friend of him, with a huge sum of money for speculation. Desperately he robs the latter of his money and calms down the row of the unpaid studio workers. Hearing this, Suresh's father is bent on handing over Suresh to the Police. What happens next?

ಟಿಕೇಟಿನ ದರ ಟೇಕ್ಸ್ ಸಮೇತ: ರಿಜರ್ವಡ್ **1-8-0**, ಸ್ಪೆಷಲ್ **0-11-9**, ಗೆಲರಿ **0-7-0**, ಬೆಂಚು **0-4-6 0 2-3**, ಸಾಟಿ **0-1-6**

ಬರುವ ಚಿತ್ರ:
R K. O ರೇಡಿಯೋ ಪಿಕ್ಚರ್ಸನವರ
ಬೆಕ್ಕಿಶಾರ್ಪ್ ವರ್ಣಚಿತ್ರ

NEXT.
R. K. O. Radio's Technicoloured
"BECKY SHARP"

ಮುಂದಿನ ಚಿತ್ರ:- ಭಕ್ತ ಕುಚೇಲ, ಗೋರಕ್ ಆಯಾ, ಅಚ್ಯುತ ಕನ್ಯಾ, ಪಹಡಿ ಕನ್ಯಾ ಇತ್ಯಾದಿ.

COMING - **Baktha Kuchela, Gorakh Aya, Achut Kanya, Pahadi Kanya etc.**

ಜಪಾನಿನ ಮುಂದಿನ ಬೇಟೆ ಯಾವುದು?

ಅದರ ವಿದೇಶೀ ಚಳವಳಿಯ ಗುಟ್ಟು.

ಆಸ್ಯಾಖಂಡದಲ್ಲೆಲ್ಲಾ ತನ್ನ ಅಧಿಕಾರವನ್ನು ಸ್ಥಾಪಿಸಿ ಸಾಮ್ರಾಜ್ಯ ಕಟ್ಟುವುದೇ ಜಾಪಾನಿನ ಒಳಗಿಂದೊಳಗಿನ ಉದ್ದೇಶ. ಆ ದೃಷ್ಟಿಯಿಂದ ಅದು ಸಂದರ್ಭ ನೋಡಿ ಹೆಜ್ಜೆಗಳನ್ನು ಮುಂದಿಡುತ್ತಾ ಬಂದಿರುವುದು. ಪಾಶ್ಚಾತ್ಯ ರಾಷ್ಟ್ರಗಳನ್ನು ಹೊರಗಟ್ಟುವ ತಂತ್ರ ನಡಿಸಿರುವುದು.

ಜಪಾನು ಚೀನಾದ ಪ್ರಮುಖ ಹಾಗೂ ಲಾಭದಾಯಕವಾದ ಭಾಗಗಳನ್ನು ಆಕ್ರಮಿಸಿಕೊಂಡಿರುವದರಿಂದ ಉಳಿದ ಸಾಮಾನ್ಯ ಭಾಗಗಳನ್ನು ಗೆಲ್ಲುವುದಿನ್ನು ಸಮಯದ ಪ್ರಶ್ನೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಜಪಾನಿನ ಮುಂದಿನ ಬೇಟೆ ಏನೆಂಬ ಪ್ರಶ್ನೆಯು ಸಾಮಾನ್ಯವಾಗಿ ಎಲ್ಲರ ಮುಂದೆಯೂ ಬರುತ್ತದೆ. ಅದನ್ನು ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಈಗ ನೋಡಿದರೆ ಜಪಾನು ಕಾಲವನ್ನು ನೂಕುತ್ತ ಸಮಯದ ನಿರೀಕ್ಷಣೆಯಲ್ಲಿರುವಂತೆ ತೋರುತ್ತದೆ. ಇಂಗ್ಲೆಂಡು ಅಮೇರಿಕಗಳು ಅನುಸರಿಸುವ ನೀತಿಯನ್ನು ನೋಡಿ ಜಪಾನು ತನ್ನ ಮಾರ್ಗವನ್ನು ಮುಂದುವರಿಸುವುದು.

ಮೊದಲನೇ ಘಟ್ಟ

ಚೀನಾ ಜಪಾನ್ ಯುದ್ಧದಲ್ಲಿ ಜಪಾನು ಮೊದಲನೇ ಘಟ್ಟವನ್ನು ಮುಟ್ಟಿದೆ. ಅದು ೨ ವರ್ಷಗಳಲ್ಲಿ ಚೀನದ ೭ ದೊಡ್ಡ ಪ್ರದೇಶಗಳನ್ನು ಗೆದ್ದು ೪ ಸಣ್ಣ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡಿದೆ ಈ ರೀತಿ ಗೆದ್ದಿರುವ ಭೂಭಾಗದ ವಿಸ್ತೀರ್ಣವು ೫೫೦,೦೦೦ ಚ. ಮೈ. ಇದರ ಒಟ್ಟು ಜನಸಂಖ್ಯೆ 180,000,000. ಇಂಡೋ ಚೀನದಿಂದ ಬರುವ "ಚಿಕ್ಕ ರೈಲ್ವೆ ಲೈನು" ಬರ್ಮದಿಂದ ಬರುವ ಮೋಟಾರು ರಸ್ತೆ, ರಶ್ಯ ತುರ್ಕಿಸ್ತಾನದ ಕಾಲುದಾರಿ ಇವುಗಳ ವಿನಹ ಚೀನದ ಎಲ್ಲ ರೈಲ್ವೆಗಳೂ ಮತ್ತು ಬಂದರುಗಳೂ ಜಪಾನಿನವರ ವಶವಾಗಿಹೋಗಿವೆ.

ಜಪಾನಿಯರು ಚೀನಾ ಸೈನ್ಯವನ್ನು ಬಹಳ ಹಿಂದಕ್ಕೆ ಓಡಿಸಿರುವರು. ಕ್ಯಾಂಟನ್ನಿನಿಂದ ಉತ್ತರ ಮಂಗೋಲಿಯದ ವರೆಗೆ ಜಪಾನಿ ಸೈನ್ಯವು ಆಕ್ರಮಿಸಿದೆ. ಅಲ್ಲದೆ ಚೀನದ ಮಧ್ಯಭಾಗವೂ ಜಪಾನಿನವರ ವಶದಲ್ಲೇ ಇದೆ. ಇದರ ವಿಚಾರದಲ್ಲಿ ಈ ರೀತಿ ಹೇಳಲಾಗಿದೆ. "ಚೀನದ ಮಧ್ಯಭಾಗವು ಯಾರ ಅಧೀನದಲ್ಲಿರುವುದೋ, ಅವರು ಸಮಗ್ರ ಚೀನವನ್ನು ಆಳುವರು." ಚೀನೀಯರು ಎಲ್ಲೋ ಒಂದು ಇಲ್ಲೊಂದರಂತೆ ಆಕ್ರಮಣವನ್ನೇನೋ ನಡೆಸುತ್ತಲೇ ಇರುವರಾದರೂ, ಜಪಾನ್ ಚಕ್ರಾಧಿಪತ್ಯದ ಒಂದು ಅಂಗವಾಗುವುದು ಅಸಂಭವವೇನೂ ಅಲ್ಲ. ಆದುದರಿಂದ ಜಪಾನಿನ ಮುಂದಿನ ಬೇಟೆ ಯಾವುದೆಂಬುದನ್ನು ನೋಡೋಣ.

ಸುವ್ಯವಸ್ಥಿತ ವಿದೇಶೀ ಕಾರ್ಯಕ್ರಮ

ವನ್ನು ತಿಳಿದುಕೊಳ್ಳುವ ಮೊದಲು ಜಪಾನಿನ ಚರಿತ್ರೆಯನ್ನೂ ಸ್ವಲ್ಪ ತಿಳಿದುಕೊಳ್ಳೋಣ. ಕಳೆದ ೫೦ ವರ್ಷಗಳಿಂದೀಚೆಗೆ ಇದು ನಡೆಸಿರುವ ಅದ್ಭುತ ಕಾರ್ಯವನ್ನು ನಾವು ಅಲಕ್ಷಿಸುವಂತಿಲ್ಲ. ಜಪಾನಿನ ಅಂತರ್ಗತ ಅಭಿಲಾಷೆಯೊಂದಿದೆ. ಏಕೆಂದರೆ, ಕೇವಲ ಚೀಣವನ್ನು ಪೂರ್ತಿಯಾಗಿ ಗೆಲ್ಲುವುದು ಮಾತ್ರವಲ್ಲ, ಮಧ್ಯ ಏಸ್ಯದಲ್ಲಿ ಬ್ರಿಟಿಷ್ ಸರಹದ್ದಿಗೆ ಸೇರುವಂತೆ ದೊಡ್ಡದೊಂದು ಸಾಮ್ರಾಜ್ಯವನ್ನು ಕಟ್ಟಿ, ಅದರ ಆವರಣದಲ್ಲಿ ಫ್ರೆಂಚ್ ಇಂಡೋ ಚೀಣ, ಇಂಡಿಯಾ ದ್ವೀಪಗಳು, ಬ್ರಿಟಿಷ್ ಮಲಯ, ಫಿಲಿಪೈನ್ ದ್ವೀಪಗಳು ಸೇರಬೇಕೆಂಬುದೇ ಈ ಉದ್ದೇಶ. ನಾಥನೆಗೆಂದು ನಿಧಾನವಾಗಿಯೂ ಮತ್ತು ಸುವ್ಯವಸ್ಥಿತ ರೀತಿಯಿಂದಲೂ ಮುಂದುವರಿಯುತ್ತಿದೆ. ಅದೃಷ್ಟ ಯೂರೋಪಿನ ಶಕ್ತಿಶಾಲೀ ರಾಷ್ಟ್ರಗಳ ಬಲವನ್ನು ಕಂಡು ಸ್ವಲ್ಪ ನಿಧಾನಿಸುವುದು, ನಂತರ ತನ್ನ ಗಮನವನ್ನು ಸಾಗಿಸುವುದು.

ರಷ್ಯ ಜಪಾನ್ ಯುದ್ಧ

ಜಪಾನು ರಷ್ಯವನ್ನು ಆಕ್ರಮಿಸಿಕೊಳ್ಳಬೇಕೆಂಬ ಅದರ ಅಭಿಲಾಷೆಯು ೧೮೯೪ರಲ್ಲಿ ಹೊರಬಿದ್ದಿತು. ಆಗ ಇದು ಕೋರಿಯವನ್ನು ಆಕ್ರಮಿಸಿಕೊಳ್ಳಲು, ಚೀಣದೊಡನೆ ಯುದ್ಧಮಾಡಿ ಅದರಲ್ಲಿ ಯಶಸ್ವಿಯಾಯಿತು. ದಕ್ಷಿಣ ಮಂಚೂರಿಯಾದ ಪರ್ಯಾಯ ದ್ವೀಪವಾದ ಲಿಯಾವ್‌ಟಂಗನ್ನು ಫ್ರಾನ್ಸ್ ಮತ್ತು ಜರ್ಮನಿಯ ಸಹಾಯದಿಂದ ಆಕ್ರಮಿಸಿಕೊಂಡಿತು ಆದರೆ ನಂತರ ಅದರ ಪ್ರಯತ್ನಗಳು ವಿಫಲವಾಗಿ, ಆ ಪರ್ಯಾಯ ದ್ವೀಪವನ್ನು ಚೀಣಕ್ಕೆ ಕೊಡಬೇಕಾಯಿತು.

ಇದರಿಂದ ಜಪಾನಿಗೆ ಕಹಿಯಾದ ಅನುಭವವುಂಟಾಗಿ ತನ್ನ ಶಕ್ತಿ ಎಲ್ಲವನ್ನೂ, ತನ್ನಂತೆಯೇ ಸಮಬಲವುಳ್ಳ ರಷ್ಯವನ್ನು ಮೊದಲು ಓಡಿಸುವುದರಲ್ಲಿ ವಿನಿಯೋಗಿಸಲಾರಂಭಿಸಿತು. ಜರ್ಮನಿ ಮತ್ತು ಫ್ರಾನ್ಸನ್ನು ಸುಮ್ಮನಿರುವಂತೆ ಮಾಡಿದ ಬ್ರಿಟಿಷ್ ಸ್ನೇಹದ ಆಧಾರದ ಮೇಲೆ, ಜಪಾನು ರಷ್ಯಾದೊಡನೆ ಯುದ್ಧಮಾಡಿ ವಿಜಯಿಯಾಯಿತು. ನಂತರ ಆದ ಒಪ್ಪಂದದಂತೆ ದಕ್ಷಿಣ ಮಂಚೂರಿಯವು ಜಪಾನಿಗೆ ಸೇರಿಹೋಯಿತು.

ಬ್ರಿಟಿಷರಿಗಂತೂ ಏಸ್ಯದಲ್ಲಿ ರಷ್ಯರ ಭಯವಿದ್ದೇ ಇದ್ದುದರಿಂದ ರಷ್ಯದ ಪೂರ್ವ ಗಡಿಗಳಲ್ಲಿ ಅದರ ಪ್ರಭಾವವನ್ನು ಕಡಿಮೆ ಮಾಡುವ ಯತ್ನವನ್ನು ಬ್ರಿಟಿಷರು ಮಾಡುತ್ತಲೇ ಇದ್ದರು. ಈ ಕಾರಣದಿಂದಲೇ ಜಪಾನಿಗೆ ಚೀಣದಲ್ಲಿ ಕಾಲಿಡುವ ಅವಕಾಶವುಂಟಾಯಿತು. ಅಲ್ಲದೆ ಪಶ್ಚಿಮದ ರಾಷ್ಟ್ರಗಳೂ ಸಹ ಚೀನದಲ್ಲಿ ತಮ್ಮ ಆಕ್ರಮಣವನ್ನು ನಡೆಸಲಾರಂಭಿಸಿದುವು. ಇಂತಹ ಸುಸಂದರ್ಭವನ್ನು ಜಪಾನು ಕಳೆದುಕೊಳ್ಳದೆ ತನ್ನ ಕಾರ್ಯವನ್ನು ಗುಟ್ಟಾಗಿ ಸಾಧಿಸುತ್ತಲೇ ಇದ್ದಿತು.

ಮಹಾ ಯುದ್ಧ

ಈ ಕಾಲದಲ್ಲಿ ಜಪಾನು ದಕ್ಷಿಣ ಮಂಚೂರಿಯಾದಿಂದ ಮುಂದೆ ಹೋಗಲವಕಾಶವಿರಲಿಲ್ಲ ಇದಕ್ಕೆ ಕಾರಣವೇನೆಂದರೆ ಪಶ್ಚಿಮದ ರಾಷ್ಟ್ರಗಳೊಡನೆ ಹೋರಾಡುವ ಧೈರ್ಯವಿರಲಿಲ್ಲ ಆಗ ಇದಕ್ಕೆ. ಆದರೆ ಮಹಾಯುದ್ಧದಿಂದ ಜಪಾನಿಗೆ ಸುವರ್ಣ ಸಂದರ್ಭವೊದಗಿತು. ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಗಳು ಯುದ್ಧದಲ್ಲಿ ಮಗ್ನರಾದ್ದರಿಂದ ಜಪಾನು ನಿಲ್ಲನಿಲ್ಲಗೆ ಚೀಣದ ಮೇಲೆ ತನ್ನ ಪ್ರಭಾವನ್ನು ತೋರಿಸಲಾರಂಭಿಸಿ ದಕ್ಷಿಣ ಮಂಚೂರಿಯವನ್ನು ಪುನಃ ೭೫ ವರ್ಷಗಳ ವರೆಗೆ ತನ್ನ ಅಧೀನಪಡಿಸಿಕೊಂಡಿತು. ಅಲ್ಲದೆ ವರ್ಸೇಲ್ಸ್ ಒಪ್ಪಂದದ ಮೇರೆಗೆ, ಷಿಂಟಿಂಗ್ (ಜರ್ಮನಿಯ ವಶದಲ್ಲಿತ್ತು) ಸಹ ಜಪಾನಿಗೆ ಸೇರಿಹೋಯಿತು. ಆದರೆ ಮುಂದೆ ಅಮೇರಿಕದವರು ಮಧ್ಯೆ ಬಂದುದರಿಂದ ಅದನ್ನು ಬಿಟ್ಟುಬಿಡಬೇಕಾಯಿತು.

ಚೀಣದೊಡನೆ ಯುದ್ಧ

ನಂತರ ಜಪಾನು ಸಮಯವನ್ನು ಕಾಯುತ್ತ ಕುಳಿತಿತ್ತು. ಸಮಯ ಬಂದ ಕೂಡಲೇ ಲೀಗ್ ಆಫ್ ನೇಷನ್ಸನ್ನೂ ದೂರ ಮಾಡಿ ಮಂಚೂರಿಯನ್ನು ನುಂಗಿತು. ಉತ್ತರ ಚೀಣದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ನಂತರ ಮುಂದುವರಿಯುತ್ತಾ ಹೋಗಿ ೩೭ನೇ ಜುಲೈನಲ್ಲಿ ಇಡೀ ವಿಶ್ವವೇ ವಿರೋಧಿಸಿದರೂ ಚೀಣದ ಮೇಲೆ ದಂಡೆತ್ತಿಹೋಯಿತು. ಪಶ್ಚಿಮದ ರಾಷ್ಟ್ರಗಳಲ್ಲಿ ತಮ್ಮತಮ್ಮಲ್ಲೇ ಜಗಳವಿದ್ದುದರಿಂದ, ಅವುಗಳಿಗೆ ಜಪಾನಿನ ಆಕ್ರಮಣಕ್ಕೆ ವಿರೋಧವಮಾಡಲಾಗಲಿಲ್ಲ.

ಸಾಮ್ರಾಜ್ಯದ ಆಶೆ

ಇದನ್ನು ನೋಡಿದರೆ ನಾವು ಮೇಲೆ ಹೇಳಿದಂತೆ ಜಪಾನು ಕೇವಲ ಚೀಣವನ್ನು ಗೆಲ್ಲುವುದರಿಂದ ಮಾತ್ರ ತೃಪ್ತವಾಗುವುದಿಲ್ಲವೆಂದು ಗೊತ್ತಾಗುವುದು. ಅದು ಬಹಳ ದೊಡ್ಡ ಕೈಗಾರಿಕೆಯ ರಾಷ್ಟ್ರವಾಗಿದ್ದು ದೊಡ್ಡದೊಂದು ಸಾಮ್ರಾಜ್ಯದ ಆಸೆಯನ್ನಿಟ್ಟುಕೊಂಡಿದೆ. ಇಂದು ಜರ್ಮನಿ ಇಟಲಿಗಳು ಬ್ರಿಟಿಷ್ ಚಕ್ರಾಧಿಪತ್ಯವನ್ನು ಸಂಕಟದಲ್ಲಿರುವಂತೆ ಮಾಡದೇ ಇದ್ದಿದ್ದರೆ ಜಪಾನಿ ಸೈನ್ಯ ನಾನ್‌ಕಿಂಗ್‌ನಲ್ಲಿರುವುದು ಅಸಂಭವವಾಗುತ್ತಿರಲಿಲ್ಲ. ಯೂರೋಪಿನಲ್ಲಿ ಯುದ್ಧಾರಂಭವಾದರೆ ಜಪಾನು ತನ್ನ ಬೇಟೆಯನ್ನು ವೇಗದಿಂದ ಸಾಗಿಸುವದು.

ಅಮೇರಿಕದ ತೀರ್ಮಾನ

ಫಿಲಿಫೈನ್ ದ್ವೀಪವನ್ನು ಸ್ವತಂತ್ರ ಮಾಡಿ ಅಲ್ಲಿಂದ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವುದಾಗಿ ಮಾಡಿರುವ ಅಮೇರಿಕದ ತೀರ್ಮಾನದಿಂದ ಹಾಲೆಂಡ್ ಬೆಲ್ಜಿಯಂಗಳಿಗೆ ಯೋಚನೆಗಿಟ್ಟುಕೊಂಡಿದೆ. ಈ ಕಾರಣದಿಂದಲೇ ಡಚ್ಚರು ಸೈನ್ಯ ವೆಚ್ಚವನ್ನು ಈ ಸಾರಿ ಹೆಚ್ಚಿಸಿರುವರು. ಆದರೂ ಅಮೆರಿಕ ಯಾ ಬ್ರಿಟನರ ಸಹಾಯವಿಲ್ಲದೆ, ಡಚ್ಚರು ಜಪಾನನ್ನು ಎದುರಿಸುವುದು ಅಸಾಧ್ಯದ ಮಾತೇ.

ಕಚ್ಚಾ ಪದಾರ್ಥಗಳು

ಹಾಲೆಂಡಿನ ಸಮುದ್ರಶಕ್ತಿಯು ಕಡಿಮೆಯಿರುವುದರ ಜೊತೆಗೆ ಅದರ ದ್ವೀಪಗಳಲ್ಲೆಲ್ಲಾ ಕಚ್ಚಾಪದಾರ್ಥಗಳು ಬಹಳವಾಗಿ ಆಗುತ್ತಿವೆ. ಜಾಪಾನು ಐಶ್ವರ್ಯಕ್ಕೆ ಹಸರುವಾಸಿಗಿದೆ. ನ್ಯೂಗಿನಿಯೊಂದರ ವಿನಹ ಈಸ್ಟ್ ಇಂಡೀಸ್ ದ್ವೀಪಗಳೆಲ್ಲಾ ಬಹಳ ಫಲವತ್ತಾದ ಪ್ರದೇಶಗಳು.

ಬ್ರಿಟನ್ನು ಏನುಮಾಡುವುದು?

ಬ್ರಿಟನ್ನು ಈಗೇನು ಮಾಡುವುದು ಎಂಬ ಪ್ರಶ್ನೆ ಏಳುತ್ತದೆ. ಪೂರ್ವದಲ್ಲಿ ವಿಶಾಲವಾದ ಮತ್ತು ಸಮೃದ್ಧವಾದ ಸಾಮ್ರಾಜ್ಯವುಳ್ಳ ಬ್ರಿಟನ್ನು ಜಪಾನಿನ ವೃದ್ಧಿಯಾಗುತ್ತಿರುವ ಶಕ್ತಿಯನ್ನು ನೋಡಿ ಸಹಿಸಲಾರದು. ನ್ಯಾಯಕ್ಕೆ ಕಟ್ಟುಬಿದ್ದು ಅಮೇರಿಕೆಯು ಡಚ್ಚರಿಗೆ ಸಹಾಯಮಾಡಬಹುದು. ಜಪಾನಾದರೋ ಈ ಎಲ್ಲವನ್ನೂ ಚೆನ್ನಾಗಿ ತಿಳಿದುಕೊಂಡೇ ಇದೆ. ಅದಕ್ಕಾಗಿಯೇ ಅದು ಅಮೇರಿಕವೂ, ಬ್ರಿಟನ್ನೂ ಬೇರೆಯಾವುದಾದರೂ ಯುದ್ಧದಲ್ಲಿ ಮಗ್ನವಾಗಲೆಂದು ಪ್ರಾರ್ಥಿಸುತ್ತಿದ್ದು ತನ ಸಮಯ ನಿರೀಕ್ಷಣೆ ಮಾಡುತ್ತಿದೆ.

೧೯೧೩ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

ಕ್ಲೇಮುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಪಕ್ಷದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—.

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್ ಕೆ. ಆರ್. ಕೆ ಶೆಟ್ ಬಿಲ್ಡಿಂಗ್, ಮಿಷನ್ ಹೈಸ್ಕೂಲ್ ರೋಡು. ಅಥವಾ ಎಚ್. ವೆಂಕಟರಾಮಯ್ಯ ಡಿವಿಷನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ. **27-7-39**ರಿಂದ ತಾ. **3-8-39**ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ. ನ.]

ಮೇಷರಾಶಿ—

ಈ ವಾರದಲ್ಲಿ ನಿಮಗೆ ವ್ಯವಹಾರ ದೃಷ್ಟಿಯಿಂದಲೂ ಶರೀರ ಪ್ರಕೃತಿಯ ದೃಷ್ಟಿಯಿಂದಲೂ ಸ್ವಲ್ಪ ಕೆಟ್ಟದ್ದಿರುವುದು. ಆರ್ಥಿಕ ದೃಷ್ಟಿಯಿಂದ ಸ್ವಲ್ಪ ಮಟ್ಟಿಗೆ ಉತ್ತಮವೆಂದೇ ಹೇಳಬಹುದು. ಅಂತೂ ಕಳೆದ ವಾರಕ್ಕಿಂತ ಈ ವಾರವು ಕಿಂಚಿನ್ಮಾತ್ರವಾಗಿ ರುವುದು. ದೇಹಾಲಸ್ಯ ಮತ್ತು ಮನೋರೋಗದಿಂದಾಗಿ ನಿರುತ್ಸಾಹವು ಹೆಚ್ಚುವದು. ಇಷ್ಟಸಿದ್ಧಿಗೆ ನಿಮ್ಮ ಶೀಘ್ರಿಯಿಂದ ವಿಘ್ನಗಳು ಪ್ರಾಪ್ತವಾಗಿ ಮನೋರಥವು ಅರ್ಧದಲ್ಲೇ ಭಗ್ನವಾಗುವುದು. ಪ್ರಕೃತ ರಾಜಕೀಯ ವಿಚಾರದಲ್ಲಿ ಕೈಹಾಕಿದರೆ ವಾನಕ್ಷಯ ಧನವ್ಯಯ ಗಳಿಗೆ ಗುರಿಯಾಗುವಿರಿ. ಎಷ್ಟೊಂದು ಜಾಗ್ರತೆಯಿಂದ ನಡೆದರೂ ಕರ್ತವ್ಯತೆಯಲ್ಲಿ ದೋಷವಿಲ್ಲದೆ ಸಂಚರಿಸತಕ್ಕವರಂತೆ ಎಡವಿತಡವಿ ಹೋಗಲಿರುವಿರಿ. ಇವಕ್ಕೆಲ್ಲಾ ಅನಿಷ್ಟಸ್ಥಾನಗತರಾದ ರಾಹ್ವಾದಿ ಪಾಪಿ ಗ್ರಹರೂ ಬೃಹಸ್ಪತಿಯೂ ಕಾರಣರಾಗಿರುವರು. ಆದರೂ ಇಷ್ಟಸ್ಥಾನಸ್ಥಿತ ಸೌಮ್ಯ ಗ್ರಹರಿಂದ ಮಿತ್ರವೃಂದವೂ ಬಂಧುವರ್ಗವೂ ನಿಮಗೆ ಅನುಕೂಲವಾಗಿ ವರ್ತಿಸುವರು. ತಾ. 3-7-8 ಈ ದಿನಗಳು ವಿದ್ಯೋದ್ಯೋಗಿಗಳಿಗೂ ವ್ಯಾಪಾರಿಗಳಿಗೂ ಸ್ವಲ್ಪ ಉತ್ತಮವಾಗಿರುವುದು.

ವೃಷಭರಾಶಿ—

ಬುದ್ಧಿಪೂರ್ವಕವಾಗಿ ಮಾಡತಕ್ಕ ದುರಾಚಾರದಿಂದಾಗಿ ನಿಮಗೆ ಯಾವಾಗ ಯಾರಿಂದ ಏನು ವಿಪತ್ತು ಸಂಭವಿಸುವದೋ ಎಂಬ ಆಶಂಕೆಯು ನಿಮ್ಮ ಅಂತರಂಗದಲ್ಲಿ ವಿಶೇಷವಾಗಿ ಬಾಧಿಸುತ್ತಿರುವುದಾದರೂ ಬರತಕ್ಕ ಅಪಾಯಗಳನ್ನು ಉಪಾಯದಿಂದ ಪಾರುಗಾಣಿಸಲಿಕ್ಕೂ ಒಂದು ವೇಳೆ ಬಂದರೂ ಅವನ್ನು ಇದಿರಿಸಿ ಕಾದಾಡಲಿಕ್ಕೂ ಬೇಕಾದ ಶಕ್ತಿಯುಕ್ತಿಗಳು ನಿಮ್ಮಲ್ಲಿ ಸಾಕಷ್ಟಿರುವ ಕಾರಣ ಈ ವಾರವನ್ನು ಹೆಚ್ಚಿನಂಶ ಸುಖದಿಂದಲೇ ಕಳೆಯಲಿರುವಿರಿ. ಇತ್ತೀಚೆಗೆ ಕೆಲಸ ಸಮಯದಿಂದ ನಿಮ್ಮ ಶರೀರದಲ್ಲಿ ನಿಶ್ಶಕ್ತಿಯು ಅಧಿಕವಾಗಿರುವುದು. ವ್ಯರ್ಥ ಧನವ್ಯಯಕಾರಿಗಳಾದ ಅನಿರೀಕ್ಷಿತ ಅನರ್ಥಗಳೂ ಸಂಭವಿಸುತ್ತವೆ. ಆದರೆ ನೀವು ಇವೊಂದನ್ನೂ ಗಣನೆಗೆ ತರಲಾರಿರಿ. ಹಣದ ವಿಚಾರದಲ್ಲಿ ನಿಮಗೇನೂ ಕೊರತೆಯುಂಟಾಗದು. ಸ್ವೀಕೃತ ಕಾರ್ಯಗಳು ಅನಾಯಾಸದಿಂದ ಕೊನೆಗೊಳ್ಳುವುದರಿಂದ ಮನಸ್ಸಿಗೆ ಯಾವಾಗಲೂ ಸಂತೋಷವಿರುವುದು. ತಾ. 4-5-6-9-10 ಈ ದಿನಗಳು ಅತ್ಯುತ್ತಮಗಳಾಗಿವೆ.

ಮಿಥುನರಾಶಿ—

ದಿನದಿಂದ ದಿನಕ್ಕೆ ನಿಮ್ಮ ಜೀವನವು ಸ್ವಲ್ಪಸ್ವಲ್ಪವಾಗಿ ಸುಧಾರಿಸುತ್ತಾ ಬರುವುದು ಸಂತೋಷದ ವಿಚಾರ. ಹಿಡಿದ ಕಾರ್ಯಗಳು ಅಲ್ಪಾಯಾಸದಿಂದ ಕೊನೆಗೊಳ್ಳುವವು. ಸಂಪದ್ಭಾಗವೂ ಕೂಡ ಹೆಚ್ಚಿನಂಶ ಸುಧಾರಣೆ ಹೊಂದಿರುವುದು. ಕಾರಣಾಂತರದಿಂದ ನಿಮಗೆ ಸದ್ಯ ಹಂಕೀಯ ಸ್ತ್ರೀಧನ ಸಿಗಲಿದೆ. ನಿಮ್ಮ ಪ್ರತಿಸ್ಪರ್ಧಿಗಳು ನಾನಾ ರೀತಿಯಿಂದ ನಿಮ್ಮ ಧನಮಾನಗಳನ್ನ ಪಹರಿಸಲು ಹವಣಿಸುತ್ತಿರುವರು. ಆದಕಾರಣ ಪ್ರತಿಯೊಂದು ಕಾರ್ಯಾರಂಭದಲ್ಲೂ ಹಿಂದು ಮುಂದಿನ ವಿಚಾರವನ್ನು ಚೆನ್ನಾಗಿ ಮಾಡಿ, ಸದಾ ಜಾಗರೂಕರಾಗಿಯೇ ಇರತಕ್ಕದ್ದು. ನಿಮ್ಮ ಆರೋಗ್ಯದ ವಿಚಾರವು ಆಹಾರದ ಮಿತಿಯನ್ನನುಸರಿಸಿದೆ. ವಾಹನಾದಿಗಳ ಅಪಾಯಗಳಿಗೆ ಸಿಗುವ ಸಂಭವವೂ ಕೂಡ ಇದೆ. ಸಕಲ ಸಲಕರಣೆಯಿಂದಲೂ ಆರೋಗ್ಯದಿಂದಲೂ ಕೂಡಿರತಕ್ಕ ಕುಟುಂಬದ ವಿಚಾರದಲ್ಲಿ ನೀವು ನಿಶ್ಚಿಂತರಾಗಿರುವಿರಿ. ತಾ. 4ರಿಂದ 8ರವರೆಗೂ ಉತ್ತಮವಾಗಿದೆ.

ಕರ್ಕಾಟಕರಾಶಿ—

ಈ ವಾರವು ನಿಮಗೆ ಹೆಚ್ಚಿನಂಶ ಅನಿಷ್ಟಕರವಾಗಿರುವುದು. ಉದ್ಯೋಗದಲ್ಲಿ ಪ್ರಯತ್ನಕ್ಕೆ ತಕ್ಕ ಫಲ ದೊರೆತರೂ ಸದ್ಯದ ನಿಮ್ಮ ಖರ್ಚು ಉತ್ಪತ್ತಿಗಿಂತ ಮುಮ್ಮಡಿಯಾಗಿರುವುದು. ಆದಕಾರಣ ಹಣದ ಅಡಚಣೆಯು ಯಾವಾಗಲೂ ತಪ್ಪದು. ವ್ಯಾಪಾರಿಗಳಿಗೆ ಧಾನ್ಯಗಳಲ್ಲಿ ಹೆಚ್ಚಿನ ಲಾಭಸಿಗುವುದು. ಗೃಹಸ್ಥಧರ್ಮಾವಲಂಬಿಗಳಿಗೆ ಗೃಹದ ಚಿಂತೆ ವೃದ್ಧಿಕರವಾಗಿದ್ದರೂ ಮನೆಯಲ್ಲಿನ ನಿತ್ಯಕಲಹವು ತಪ್ಪಿದ್ದಲ್ಲ. ಆರೋಗ್ಯದ ಮಟ್ಟಿಗೆ ಈ ವಾರವು ಪ್ರತಿಕೂಲವಾಗಿರುವುದು. ಪ್ರಕೃತದಲ್ಲಿ ನೀವು ನಿಮ್ಮ ಲಾಭಾಸಿಗಳಾಗಿ ಜನರಲ್ಲಿ ಕಲಹ ಬೆಳೆಸುವಿರಿ. ನಡತೆಯೂ ಕೂಡ ಸಕ್ರಮವಾಗಿರದುದರಿಂದ ಮಿತ್ರರೂ ಕೂಡ ನಿಮಗೆ ಕಡಿಮೆಯಾಗುವರು. ವಿದ್ಯಾಭಿಲಾಷಿಗಳಿಗೆ ಈ ಕಾಲವು ಪ್ರತಿಕೂಲವಾಗಿರುವುದು. ಪ್ರಯಾಣಿಕರಿಗೆ ಕಷ್ಟನಷ್ಟಗಳಧಿಕವಾಗುವವು. ತಾ. 3ರಿಂದ 6ರವರೆಗೂ ಇಷ್ಟಾರ್ಥಗಳ ಸಿದ್ಧಿ ಸಲಾರವು.

ಸಿಂಹರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮಗೆ ಹಾನಿಯು ಅಧಿಕವಾಗಿರುವುದು. ವ್ಯವಹಾರಭಾಗದಲ್ಲಿ ಕಲಹವು ಸಂಭವಿಸಿ ತತ್ಸಂಬಂಧ ತುಂಬಾ ಧನವ್ಯಯವಾಗುವುದಲ್ಲದೆ ಮಾನಚ್ಯುತಿಯೂ ಕೂಡ ಉಂಟಾಗುವ ಸಂಭವವಿದೆ. ಆದಕಾರಣ ಪ್ರತಿಯೊಂದು ಕಾರ್ಯವನ್ನೂ ಪೂರ್ವಾಪರ ನಿರ್ಣಯಮಾಡಿ ಯುಕ್ತ ಕಂಡಲ್ಲಿ ಮುಂದರಿಸುವುದೊಳ್ಳಿತು. ಶತ್ರುಗಳು ನಿಮ್ಮ ವಿಚಾರದಲ್ಲಿ ಉದಾಸೀನರಾಗಿದ್ದರೂ ಅದೃಷ್ಟಹೀನರಾದ ನಿಮಗೆ ಸರ್ವತ್ರ ವಿರೋಧಗಳೇ ಹುಟ್ಟುತ್ತಿರುವವು. ನಿಮ್ಮ ಅನುದಿನದ ಖರ್ಚಿಗೆ ಬೇಕಷ್ಟು ನಿಮ್ಮ ಉದ್ಯಮದಲ್ಲಿ ಫಲಸಿಗುವದು. ಆಚಾರಹೀನರಾದ ನಿಮಗೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟಖರ್ಚುಗಳು ಅಧಿಕವಾಗುವುವು. ಶೋಕಸಂತಪ್ತರಾದ ನಿಮ್ಮ ಪ್ರಕೃತಿಯು ಕೆಟ್ಟು ಪ್ರಾಣಾಪಾಯದ ರೋಗವೂ ಕೂಡ ತಗಲಲಿದೆ. ಆದಕಾರಣ ಸಜ್ಜನಕೂಟ ಸದಾಚಾರದಲ್ಲಿ ನಿರತರಾಗಿ ಆದಷ್ಟು ಅನಿಷ್ಟಗಳನ್ನು ಕಡಿಮೆಮಾಡಿಕೊಳ್ಳಿರಿ. ತಾ 3, 9, 10, ಈ ದಿನಗಳು ಇದ್ದುದರಲ್ಲಿ ಉತ್ತಮಗಳಾಗಿವೆ.

ಕನ್ಯಾರಾಶಿ—

ಈ ತನಕ ಪರತಂತ್ರರಾಗಿ ಪೇಚಾಡುತ್ತಿದ್ದ ನೀವೀಗ ಸ್ವತಂತ್ರರಾಗಿರುವಿರಿ. ಆದಕಾರಣದಿಂದಲೇ ಎಂತಹ ದುಸ್ಸಾಧ್ಯವಾದ ಕಾರ್ಯವೂ ನಿಮ್ಮ ಭಾಗಕ್ಕೆ ತೃಣಸಮಾನವಾಗಿರುವುದು. ಸದ್ಯದಲ್ಲಿ ನಿಮ್ಮಲ್ಲಿ ಧನಜನಬಲವು ತುಂಬಾ ಇರುವುದು. ಆದುದರಿಂದ ನೀವು ಕೈಕೊಂಡ ಕಾರ್ಯಗಳಲ್ಲಿ ಜಯಶ್ರೀಯು ನಿಮ್ಮ ವಶವಾಗುವಳು. ಜನಸಾಮಾನ್ಯರಲ್ಲಿ ಗಣನೀಯ ಸ್ಥಾನವನ್ನು ಕೂಡ ಹೊಂದಲಿರುವಿರಿ. ವಿ ಶ್ರುಜನರಿಂದಾಗಿ ಇಷ್ಟಭೋಜನವನ್ನೂ ಧನವನ್ನೂ ಪಡೆಯುವಿರಿ. ಆರೋಗ್ಯವೂ ಸಂಸಾರಸುಖವೂ ಕೂಡ ತೃಪ್ತಿಕರವಾಗಿರುವುದು. ಇಷ್ಟಾರ್ಥಗಳೂ ಭೋಗ್ಯವಸ್ತುಗಳೂ ಅನಾಯಾಸವಾಗಿ ದೊರೆಯುವವು. ಒಳ್ಳೇ ನಿಪುಣರೂ ವಾಕ್ಚತುರರೂ ಆದ ನಿಮಗೆ ವಾರಾಂತ್ಯದ ನಾಲ್ಕು ದಿನಗಳಲ್ಲಿ ಶತ್ರುಕ್ಷಯ, ವಾಹನಯಾನ, ಮಾನ ಭಲಗಳು ಸಿಗಲಿವೆ.

ತುಲಾರಾಶಿ—

ರವಿಬುಧೇತರ ಸಕಲ ಗ್ರಹರೂ ನಿಮ್ಮ ಮೇಲೆ ತಮ್ಮ ವಕ್ರದೃಷ್ಟಿಯನ್ನು ಬೀರಿರುವರು. ಆದಕಾರಣ ನೀವೀವಾರದಲ್ಲಿ ಎಷ್ಟು ಜಾಗ್ರತೆಯಿಂದಿದ್ದರೂ ಸಾಲದು. "ನ ಸ್ಥಾತವ್ಯಂ ನ ಗಂತವ್ಯಂ ದುರ್ಜನೇನ ಸಮಂ ಕ್ವಚಿತ್" ಎಂದು ಒಂದೆಡೆ ಆರ್ಯರು ಹೇಳಿರುವರು. ದುರ್ಜನರಿಂದ ಕೂಡಿ ಒಂದೆಡೆ ಹೋಗಲೂ ಬಾರದು, ನಿಲ್ಲಲೂ ಕೂಡದು. ಕಳ್ಳರ ಒಡನಾಟದಿಂದ ನಿರಪರಾಧಿಯೂ ಕೈದಿಯಾಗುವಂತೆ ನಿಮಗೆ ಸಿಗತಕ್ಕ ದುರ್ಮಿತ್ರರಿಂದ ನೀವು ಕಷ್ಟಕ್ಕೊಳಗಾಗಲಿರುವಿರಿ. ಶತ್ರುಪೀಡೆಯು ನಿಮ್ಮನ್ನು ಚಿಂತಾಗ್ನಿಗೆ ತುತ್ತುಮಾಡುವುದು. ಎಷ್ಟೊಂದು ವಿವೇಕಿಯಾಗಿದ್ದರೂ ಕೂಡ ಕಲಹ ಅವಮಾನಗಳು ವೇಳೆಯಿಂದವೇಳಕ್ಕೆ ಸಂಭವಿಸುವವು. ಆದರೂ ರವಿಬುಧರ ದಯೆಯಿಂದಾಗಿ ಸ್ವೀಕೃತಕಾರ್ಯದಲ್ಲಿ ಜಯ ಲಾಭಗಳು ಸಿಗಲಿವೆ. ಸಂಸಾರ ತಾಪತ್ರಯವೂ ಕೆಲ ಮಟ್ಟಿಗೆ ಕಡಿಮೆಯಾಗುವುದು. ತಾ. 4ರಿಂದ 8ರ ವರೆಗೆ ಅನಿಷ್ಟಗಳೊದಗಲಾರವು.

ವೃಶ್ಚಿಕರಾಶಿ—

ಹಣದ ವಿಷಯದಲ್ಲಿ ನೆಂಟರಿಷ್ಟರೂ ಇಲ್ಲ, ಬಂಧುಬಾಂಧವರೂ ಇಲ್ಲ, ಆಪ್ತಮಿತ್ರರೂ ಇಲ್ಲ. ಎಂತಹ ಅಚ್ಚುನೆಚ್ಚಿನವರನ್ನೂ ಕೂಡ ಈ ಹಣವು ಬೇರ್ಪಡಿಸುವುದು. ಅಂತೂ ಕಲಹಕ್ಕೆ ಬೀಜರೂಪವಾಗಿರುವುದೀ ಧನವು. ಈ ವಾರದಲ್ಲಿ ನೀವೀಧನನಿಮಿತ್ತವಾಗಿ ಕಲಹಮಾಡುವಿರಿ, ಸಮಯಬಂದರೆ ಕೋರ್ಟಿಗೆ ಹೋಗಲು ಹಿಂಜರಿಯಲಾರಿರಿ. ನಿಮ್ಮ ಅದೃಷ್ಟವು ಬಲವತ್ತರವಾಗಿರುವುದರಿಂದ ನಿಮ್ಮ ಶಕ್ತಿಚಾತುರ್ಯಕ್ಕೆ ಬಲಿಷ್ಠರಾದ ಶತ್ರುಗಳೂ ಹಿಂಜರಿಯುವರು. ಗೃಹಕೃತ್ಯ ವಿಚಾರದಲ್ಲಿ ಸಂಪೂರ್ಣ ಮನಸ್ಸಿಗೆ ಸಮಾಧಾನವಿರುವುದು. ವಕೀಲರಿಗೆ ಕ್ರಿಮಿನಲ್ ಕೇಸುಗಳಲ್ಲಿ ಹೆಚ್ಚಿನ ಧನಲಾಭವಿದೆ. ಆರೋಗ್ಯವು ಉತ್ತಮವಾಗಿರುವುದು. ಸ್ವೀಕೃತ ಕಾರ್ಯಗಳು ಅನಾಯಾಸದಿಂದ ಕೊನೆಗಾಣುವುವು. ಅಂತೂ ಈ ವಾರವು ಸುಖಮಯವಾಗಿ ಪರಿಣಮಿಸೀತು. ತಾ. 8ರಿಂದ 10ರವರೆಗಿನ ದಿನಗಳು ಉತ್ತಮಗಳಾಗಿವೆ.

ಧನೂರಾಶಿ—

ಹಲವಾರು ಅನಿಷ್ಟಗಳು ನಿಮಗೆ ಈ ವಾರದಲ್ಲಿ ಸಂಭವಿಸುವ ಯೋಗವಿದ್ದರೂ ಕಿಂಚಿದಿಷ್ಟಾರ್ಥವೂ ಕೈಗೂಡುವುದು. ವಿರೋಧಿಗಳ ಕೈವಾಡವು ನಿಮ್ಮ ಕಾರ್ಯದಲ್ಲಿ ತುಂಬಿರುವುದಾದರೂ ನೀವದನ್ನು ಅರ್ಧದಲ್ಲಿ ಕೈಬಿಡದೆ ಕೊನೆಗಾಣಿಸುವಿರಿ. ವಿದ್ಯಾನುಕೂಲವಾಗಿಯೂ ವ್ಯಾಪಾರದಲ್ಲಿಯೂ ಚೆನ್ನಾಗಿ ಸಂಪಾದಿಸುವಿರಾದರೂ ಖರ್ಚು ಉತ್ಪತ್ತಿಯನ್ನತಿಕ್ರಮಿಸಿ ಹೋಗುವುದು. ಮಿತ್ರರೆಲ್ಲಾ ಬಾಂಧವರೆಲ್ಲಾ ಮನಸ್ತಾಪವುಂಟಾಗುವುದು ಸಂಸಾರದಲ್ಲಿ ಎಳ್ಳಷ್ಟು ಸುಖ ಸಿಗಲಾರದು. ಕೀಳು ತರಗತಿಯವರೊಡನೆಯೂ ಭೃತ್ಯಜನರೊಡನೆಯೂ ಕಲಹಪ್ರಸಕ್ತವಾಗಲಿದೆ. ಸ್ತ್ರೀ ಕಲಹವಂತೂ ಅನಿವಾರ್ಯವಾದುದು. ಆರೋಗ್ಯವು ತೃಪ್ತಿಕರವಾಗಿರಲಾರದು. ಕೋರ್ಟು ವಗೈರೆ ಕಾರ್ಯಗಳಲ್ಲಿ ವಿಜಯವು ದೊರೆಯದು. ತಾ. 8-9-10 ಈ ದಿನಗಳ ಮಟ್ಟಿಗೆ ಸ್ವಲ್ಪ ಉತ್ತಮವಿರುವುದರಿಂದ ಶತ್ರುಕ್ಷಯ ಧನವಸನಗಳ ಪ್ರಾಪ್ತಿಯಾಗಲಿದೆ

ಮಕರರಾಶಿ—

ಈ ವಾರದಲ್ಲಿ ನಿಮ್ಮ ಭವಿಷ್ಯವು ಅತ್ಯಂತ ಚಿಂತಾಜನಕವಾಗಿರುವುದು. ನವಗ್ರಹರೂ ಏಕಕಾಲದಲ್ಲಿ ನಿಮ್ಮ ಮೇಲೆ ಮುನಿದಿರುವರಿಂದ ಮೇಲೆ ನೀವು ದುರ್ದೈವದ ಪರಾಕಾಷ್ಠತೆಯನ್ನೇರಿರುವಿರೆಂದರೆ ಅತಿಶಯೋಕ್ತಿಯಾಗಲಾರದು. ಆದಕಾರಣ ನಿಮ್ಮ ಚಿತ್ತಚಾಂಚಲ್ಯವು ಅತ್ಯಧಿಕವಾಗುವುದು. ಪರವಂಚನೆ ಮೋಸ ವಿಶ್ವಾಸಘಾತುಕ ಇತ್ಯಾದಿ ಕ್ರಿಯೆಗಳಲ್ಲಿ ನಿಮ್ಮನ್ನು ಬುದ್ಧಿಯು ಪ್ರೇರಿಸುವುದು. ನೀವು ಮಾಡತಕ್ಕ ಕಾರ್ಯಗಳು ಆತ್ಮಸಾಕ್ಷಿಗೆ ವಿರೋಧವಾದವುಗಳೇ. ನಿಮಗೆ ಸಿಗತಕ್ಕ ಫಲವೂ ನಿಮ್ಮ ಆತ್ಮಕ್ಕೆ ವಿರೋಧವಾದುದೇ. ಆರ್ಥಿಕ ಅಡಚಣೆಯಿಂದ ಬಹಳವಾಗಿ ಪೇಚಾಡುವಿರಲ್ಲದೆ ನಿಮ್ಮ ಕೈಕಟ್ಟಿಹೋಗುವುದು. ಪತ್ನೀಪುತ್ರರಿಂದಲೂ ಮಿತ್ರರಿಂದಲೂ ವಿಯೋಗ ಹೊಂದುವಿರಿ. ಅಂತೂ ಮನಸ್ಸಿಗೆ ಕಿಂಚಿತ್ತೂ ಸುಖಶಾಂತಿಗಳು ದೊರೆಯಲಾರವು. ತಾ. 3-7-8-9-10 ಈ ದಿನಗಳಲ್ಲಿ ಕಷ್ಟದ ಪರಮಾವಧಿಯನ್ನು ಹೊಂದಲಿರುವಿರಿ.

ಕುಂಭರಾಶಿ—

ನಿಮ್ಮ ಅದೃಷ್ಟವು ಬಲವತ್ತರವಾಗಿರುವುದರಿಂದ, ಪ್ರತಿಸ್ಪರ್ಧಿಗಳು ಕಾರ್ಯತಃ ನಿಮಗೆ ವಿಪರೀತವಾಗಿ ವರ್ತಿಸಿದರೂ ಅವರನ್ನು ನೀವು ತೃಣೀಕರಿಸಿ ಸ್ವಕಾರ್ಯವನ್ನು ಸಾಧಿಸುವಿರಿ. ಗೃಹಕೃತ್ಯವಿಚಾರವು ಉತ್ತಮವಾಗಿರುವುದರಿಂದ, ನೀವು ನಿತ್ಯ ತೃಪ್ತರಾಗುವಿರಿ. ಆರೋಗ್ಯವು ಕೆಡುವ ಸಂಭವವಿದ್ದರೂ ನೀವದನ್ನು ಆರಂಭದಲ್ಲೇ ಸುಧಾರಿಸಿಕೊಳ್ಳುವಿರಿ. ಸ್ಥಾನಬಲ, ಮಿತ್ರಸಹಾಯ, ಧನಬಲವು ವಿಪುಲವಾಗಿರುವುದರಿಂದ ಎಂತಹ ದುಸ್ಸಾಧ್ಯವಾದ ಕಾರ್ಯವನ್ನಾದರೂ ಹಿಂಜರಿಯದೆ ಮುಂದರಿಸುವಿರಿ. ಸಕಲಕಾರ್ಯಗಳಲ್ಲೂ ವಿಜಯಿಗಳಾಗುವುದರಿಂದ ಅನೇಕರು ನಿಮ್ಮ ಅನುಯಾಯಿಗಳಾಗಿರುವರು. ಸಂಪದ್ಭಾಗದಲ್ಲಿ ಬಹಳ ಮುಂದರಿದಿರುವಿರಿ. ಬಹುಜನರ ವಿಶ್ವಾಸಾದರಕ್ಕೆ ಪಾತ್ರರಾಗುವಿರಿ. ತಾ. 3-7-8 ಈ ದಿನಗಳು ಅತ್ಯುತ್ತಮಗಳಾಗಿರುವುದರಿಂದ ಬೃಹತ್ಫಲದಾಯಕವಾದ ಕಾರ್ಯಗಳನ್ನು ಪಶಿದ್ದಿನಗಳಲ್ಲಿ ಆರಂಭಿಸಿರಿ.

ಮೀನರಾಶಿ—

"ಆರೇನು ಮಾಡುವರು ಆರಿಂದಲೇನಹುದು ಪೂರ್ವಜನ್ಮದ ವಿಧಿಯು ಬೆನ್ನಬಿಡದು." ಎಂಬಂತಾಗಿದೆ ನಿಮ್ಮ ಅವಸ್ಥೆ. ಸ್ತ್ರೀಯ ಅವಿವೇಕದಿಂದಾಗಿ ಅಪತ್ತುಗಳನ್ನು ಕೈಯ್ಯಾರೆ ಬರಮಾಡಿಕೊಳ್ಳುವಿರಿ. ವಿರೋಧಿಗಳ ಆಧಿಕ್ಯಕ್ಕೆ ನಿಮ್ಮ ಔದಾಸೀನ್ಯವೇ ಕಾರಣವಾಗಿರುವುದು. ಗೃಹಕಲಹವು ದಿನೇ ದಿನೇ ವೃದ್ಧಿಯನ್ನೈದಿ ತಲೆಗೊಂದು ಬುದ್ಧಿಯಾಗುವುದು. ಬಂಧುಗಳ ಮತ್ತು ಮಿತ್ರರ ಬಲದಿಂದ ನಿರಾಯಾಸದಿಂದ ಧನಸಂಗ್ರಹಿಸುವಿರಿ. ಹಲವರು ನಿಮ್ಮನ್ನು ಪೂಜ್ಯಭಾವದಿಂದ ಕಾಣುವರು. ಆದರೂ ನಿಮ್ಮ ದುರ್ದೈವದಿಂದಾಗಿ ಕಲಹಗಳು ಅಧಿಕವಾಗಿ ಉಂಟಾಗುವವು. ದೇಹದಲ್ಲಿ ಸ್ವಾಸ್ಥ್ಯ ಇರದು, ಅಡಚಣೆಯು ತಪ್ಪದು. 3-7-8 ಈ ದಿನಗಳಲ್ಲಿ ಧನಮಾನಗಳಿಗೆ ಕೊರತೆಯುಂಟಾಗಲಿದೆ

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

			ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡು ಮುಡಿಗೆ	..	...	1—14—0	..
„ ದುಯಂ „ „	..	...	1—12—0	...
„ ಅವ್ವಲ್ ತರದ ಸುಗ್ಗಿ ಮುಡಿಗೆ	...	...	1—12—0	...
„ ದುಯಂ „ „	...	...	1—10—0	...
ಅಕ್ಕಿ-ಅವ್ವಲ್ ತರದ ಗುಡ್ಡು ಮುಡಿಗೆ	...	...	4—12—0	...
„ ದುಯಂ „ „	..	..	4— 8—0	4—10—0
„ ಅವ್ವಲ್ ಸುಗ್ಗಿ „	..	...	4— 7—0	...
„ ದುಯಂ „ „	...	...	4— 3—0	4— 5—0
ತೆಂಗಿನ ಕಾಯಿ-ಸುಲಿದ ತೆಂಗಿನ ಕಾಯಿ 1000ಕ್ಕೆ		...	27— 8—0	35— 0—0
„ ಸಿಪ್ಪೆ ಇದ್ದದ್ದು „		...	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	...	...	50— 0—0	..
„ ದೀವಿ	...	...	...	...
„ ದಿಲ್‌ಪಸಂದ್	..	...	...	..
ತೆಂಗಿನ ಎಣ್ಣೆ ಮಣಕ್ಕೆ	...	...	3— 6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	...	...	3— 8—0	4— 4—0
ಗೇರುಬೀಜ ಮುಡಿಗೆ ...	...	...	3—10—0	..
ಕಬ್ಬಿನ ಬೆಲ್ಲ ಖಂಡಿಗೆ	...	...	52— 8—0	57— 8—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	...	..	14— 8—0	15— 8—0

ಭೋಸ್—ನೆಹರೂ ವಿವಾದ

ಸುಭಾಸ್ ಬಾಬುಗಳ ಹೋರಾಡುವ ಬುದ್ಧಿಗೆ ಈಗೀಗ ಬೇಕಾದಷ್ಟು ಕೆಲಸ ದೊರೆಕುತ್ತಿದೆ. ಅವರ ಇತ್ತೀಚಿನ ವರ್ತನೆಯು ಸೈನಿಕನೊಬ್ಬನ ಕತೆಯನ್ನು ನೆನಪಿಗೆ ತರುತ್ತಿದೆ. ಸೈನ್ಯದಿಂದ ನಿವೃತ್ತನಾದ ಸೋಲ್ಜರನೊಬ್ಬನು ಒಂದು ವಿವಾಹ ಸಮಾರಂಭಕ್ಕೆ ತೆರಳಿದ್ದನಂತೆ. ಅಲ್ಲಿ ಸಂತೋಷದ 'ಗರ್ನಾಲು' ಹಾರಿದಾಗ ಈ ಸೋಲ್ಜರನು ಆವೇಶಗೊಂಡು ಪ್ರತಿ ಗುಂಡನ್ನು ಜಡಿಯಬೇಕೆಂದು ಥಕ್ಕನೆ ಕಾತರಿಸಿನನಂತೆ. ವಸ್ತುಸ್ಥಿತಿಯ ಅರಿವಿಲ್ಲದಿದ್ದರೆ ಗರ್ನಾಲು-ಸೋಲ್ಜರರ ಹಿಂದಿನ ಸಂಬಂಧವೇ ಸ್ಮರಣೆಗೆ ಬರುವದು ವಿಶೇಷವಲ್ಲ. ಅಂತೆಯೇ ಸುಭಾಸಚಂದ್ರ ಭೋಸರೀಗ ಶಬ್ದಶಬ್ದಕ್ಕೆ ಆವೇಶಗೊಳ್ಳುವಂತಿದ್ದಾರೆ. ಅವರ ಇತ್ತೀಚಿನ ಟೀಕೆ ಪಂಡಿತ ನೆಹರುಗಳ ಮೇಲೆ. ಸಿಲೋನಿನಲ್ಲಿ ಪಂಡಿತರು 'ಸುಭಾಸರ ಮುನ್ನಡೆಯ ಪಕ್ಷದಲ್ಲಿ ಫೇಸಿಸ್ಟರು ಮತ್ತು ಸಂದರ್ಭಸಾಧಕರು ಸೇರಿಹೋಗಿರುವರು' ಎಂದು ಖಂಡಿಸಿದ್ದಾರೆನ್ನುತ್ತಾ ಶ್ರೀ. ಭೋಸರು ಕೇಳುತ್ತಾರೆ. "ಪಂಡಿತಜೀಯವರಿಗೆ ನನ್ನ ಮೊದಲನೇ ಪ್ರಶ್ನೆ-ಫೋರ್ವರ್ಡ್ ಬ್ಲೋಕಿನ ಕಾರ್ಯಕಲಾಪದಲ್ಲಿ ಫೇಸಿಸಮ್ ಮತ್ತು ಸಂದರ್ಭ ಸಂಬಂಧವೇನಿದೆ ಎಂಬುದು; ಎರಡನೆಯ ಪ್ರಶ್ನೆ ಫೋರ್ವರ್ಡ್ ಬ್ಲೋಕಿನಲ್ಲಿ ಸಂದರ್ಭ ಸಾಧಕರು ಅಥವಾ ಫೇಸಿಸ್ಟರು ಯಾರಿದ್ದಾರೆ, ಹೇಳಲಿ ಎಂಬುದು."

ಬಹು ಸ್ಪಷ್ಟವಾದ ಪ್ರಶ್ನೆಗಳಿವು; ಫೋರ್ವರ್ಡ್ ಬ್ಲೋಕಿನ ಮುಂದೆ ಸ್ಪಷ್ಟವಾದ ಹಾದಿಯಿಲ್ಲ ಎಂಬ ಆರೋಪಕ್ಕೆ ಈ ಪ್ರಶ್ನೆಗಳೇ ಉತ್ತರವಾಗಬಲ್ಲವೇ?

ಏಟಿಗೆ ಪ್ರತಿಯೇಟು!

ಶ್ರೀ. ಭೋಸರು ಬರಿಯ ಪ್ರಶ್ನೆ ಕೇಳಿ ಉತ್ತರವನ್ನು ಕಾದು ಕುಳಿತು ಕೊಳ್ಳಲಿಲ್ಲ. ತನ್ನನ್ನು ಕೆಣಕಿದವರನ್ನು ಅಣಕಿಸದೆ ಬಿಡುವವರು ಅವರಲ್ಲ. 'ಯಾರು ಎಡಪಕ್ಷೀಯರೆಂದು ನಟಿಸಿ, ಬಲಪಕ್ಷೀಯರ ಪಕ್ಷ ಹಿಡಿದು ಕಾರ್ಯಮಾಡುತ್ತಾರೋ, ಯಾರು ಒಳಗಿರುವಾಗ ಒಂದು ರೀತಿಯಿಂದಾಡಿ ಹೊರಗೆ ಬಂದೊಡನೆ ಬೇರೊಂದು ಹಾದಿ ಹಿಡಿಯುತ್ತಾರೋ ಅವರೇ ಸಂದರ್ಭಸಾಧಕರಲ್ಲದೆ ನಾವಲ್ಲ!' ಎಂದು ಶ್ರೀ. ಸುಭಾಸಚಂದ್ರರ ಖಂಡ ತುಂಡವಾತು. ಇದು ಪಂಡಿತ ನೆಹರುಗಳ ಕಡೆಗೆ ಗುರಿನೋಟ ವಿಟ್ಟು ಹೊಡೆದ ಬಾಣ! ಈ ಬಾಣದ ಮೊನೆ ಹೂರಟಕಡೆಗೇ ತಿರುಗಿರುವದನ್ನು ಸೂಕ್ಷ್ಮ ದೃಷ್ಟಿಯುಳ್ಳವರು ಕಾಣಬಹುದು. ಎಡಪಕ್ಷೀಯರಂತೆ ನಟಿಸಿ ಬಲ ಪಕ್ಷೀಯರಾಗಿ ವರ್ತಿಸುವವರು ಎಡಬಲ ಗಿರ್ರನೆ ತಿರುಗುತ್ತಿರುವವರೆಂದು ಭಾವಿಸೋಣ. ಕಾಂಗ್ರೆಸಿನ ತೀವ್ರಗಾಮಿಗಳಂತೆ ನಟಿಸಿ, ಜಾತೀಯವಾದಿಗಳ ಬೆನ್ನು ಹಿಡಿಯುವವರಿಗಾವ ಬಿರುದು? ಅಧಿಕಾರದಲ್ಲಿರುವಾಗ ಆಡಿದ್ದಕ್ಕೆಲ್ಲಾ ಪೀಠದಿಂದಿಳಿದೊಡನೆ ಪ್ರತಿವಾದಿಸುತ್ತಾ ಹೋಗುವವರಿಗಾವ ಉಡುಗೊರೆ.

ಹಾಗಲ್ಲ—ಹೀಗೆ

ಸುಭಾಸರ ಕ್ರೋಧವನ್ನು ಕಂಡು ನೆಹರುಗಳು ವಿಸ್ಮಯಗೊಂಡಿದ್ದಾರೆ. 'ನನಗೆ ಸಿಲೋನಿನಲ್ಲಿ ಭಾರತದ ರಾಜಕೀಯದ ಒಳರೂಪವನ್ನು ಚರ್ಚಿಸಲು ಸಂದರ್ಭವೂ ಬರಲಿಲ್ಲ. ಸಮಯವೂ ಇರಲಿಲ್ಲ. ಅಲ್ಲಿಯ 'ಸಾಮ ಸಮಾಜಪಕ್ಷ'ದ ಕೆಲವು ಮೆಂಬರರೊಡನೆ ಮಾತನಾಡುವಾಗ 'ಫೋರ್ವರ್ಡ್ ಬ್ಲೋಕಿಗೆ ಸ್ವಚ್ಛ ಧೋರಣೆಯಾವುದೂ ಇಲ್ಲದುದರಿಂದ ಸಂದರ್ಭಸಾಧಕರು ಅದರೊಳನುಗ್ಗುವ ಅಪಾಯವಿದೆ" ಎಂದಿಷ್ಟೇ ಹೇಳಿದ್ದೆ ಹೊರತು ವ್ಯಕ್ತಿಶಃ ಯಾರನ್ನೂ ಟೀಕಿಸಿಲ್ಲ. ಸುಭಾಸರ ಪಕ್ಷದೊಡನೆ ನನಗೆ ಹಿತವಿರಲಿ, ಇಲ್ಲದಿರಲಿ ಅದು ಧೋರಣೆಯ ಸಂಬಂಧದ ವಿಷಯ ಹೊರತು ವ್ಯಕ್ತಿ ಸಂಬಂಧವಲ್ಲ ಎಂದು ಪಂಡಿತ ನೆಹರುಗಳನ್ನುತ್ತಾರೆ. ಸುಭಾಸರಿಗೊಪ್ಪಿಗೆಯಾಗದ ವಿಷಯವೂ ಅದೇ ಇರಬಹುದು. ಪಂಡಿತರು ಧೋರಣೆಯನ್ನೇ ಹಿಡಿದುಕೊಂಡು ಸುಭಾಸರಂತಹ ವ್ಯಕ್ತಿಗಳನ್ನು ಮರೆತಿದ್ದಾರೆ. ಸುಭಾಸರ 'ಮುನ್ನಡೆಯ ಪಕ್ಷಕ್ಕೆ ಧೋರಣೆಯಿಲ್ಲವೆಂದು'ಹೇಳುವದಾದರೂ ಹೇಗೆ? ಮುನ್ನಡೆಯುವದೊಂದು ಧೋರಣೆಯಲ್ಲವೆ? ಈಗೀಗ ಸಿಕ್ಕಾಬಟ್ಟೆ ವಿಮರ್ಶೆಗೂ ತೊಡಗಿರುವುದರಿಂದ ಮುನ್ನಡೆಯುವ ಒಟ್ಟಿಗೆ ಮುನ್ನುಡಿಯುವ ಇನ್ನೊಂದು ಧೋರಣೆಯೂ ಸೇರಿಲ್ಲವೆ?

'ನಮಗೊಂದು ಚಾನ್ಸ್ ಕೊಡಿ'

ಈ ನಡುವೆ ಶ್ರೀ. ಎಮ್. ಎನ್. ರೋಯಿಗಳ ರಾಗವೇ ಬೇರೆ. ಜುಲಾಯಿ ೩೧ರಲ್ಲಿ ಅಹಮ್ಮದಾಬಾದಿನ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣವೀಯುತ್ತಾ ಸರದಾರ ವಲ್ಲಭಾಯಿಯವರು ಶ್ರೀ. ಸುಭಾಸಚಂದ್ರ ಭೋಸರಿಗೆ ಉತ್ತರವಾಗಿ "ಎಡಪಕ್ಷೀಯರು ಜವಾಬ್ದಾರಿ ಹೊರಲು ತಯಾರಾಗಿ ಬರಲಿ; ನಾವವರಿಗಾಗಿ ಸರಿದುನಿಲ್ಲುವೆವು" ಎಂದರಂತೆ. ಇನ್ನೊಂದು ವಾರ್ತೆಯೆಂದರೆ ವಲ್ಲಭಾಯಿಯವರು "ಯಾವದೇ ಪಕ್ಷವು ಕಾಂಗ್ರೆಸಿನ ವಿಶೇಷ ಸಭೆ ಕರೆದು ೩೦೦೦ ಪ್ರತಿನಿಧಿಗಳ ಮುಂದೆ ಅದರ ಕಾರ್ಯಕ್ರಮಗಳನ್ನಿಟ್ಟು ಮಂಜೂರು ಮಾಡಿಸಿಕೊಳ್ಳಲಿ" ಎಂದರಂತೆ. ಹೇಗಿದ್ದರೂ ಈ ಮಾತುಗಳಲ್ಲಿ ತಮ್ಮನ್ನು ಸರದಾರರು ಕರೆದಿದ್ದಾರೆಂಬಂತೆ ಶ್ರೀ. ರೋಯಿಗಳು ಒಕೊಳ್ಳುತ್ತಾ ಮುಂದೆಬಂದಿದ್ದಾರೆ. "ನಮಗೊಂದು ಸಂದರ್ಭವನ್ನೊದಗಿಸಿಕೊಡಿ; ಎಡಪಕ್ಷೀಯರಾದ ನಾವು ಜವಾಬ್ದಾರಿಹೊರಲು ಸಿದ್ಧರಿಲ್ಲವೆಂದಾದರೆ ಸದ್ಯದ ಅಧಿಕಾರಿಗಳನ್ನು ಟೀಕಿಸುವ ಅಧಿಕಾರಕ್ಕೂ ನ್ಯಾಯ ಪ್ರಕಾರ ಬಾಹಿರರಾಗುವೆವು. ವಿಶೇಷ ಸಭೆ ಕರೆಯುವದು ಅಸಾಧ್ಯ. ಜವಾಬ್ದಾರಿಹೊರುವ ಯುದ್ಧಾಹ್ವಾನವನ್ನು ಅಂಗೀಕರಿಸಿಯೇ ಬಿಡುವೆವು" ಎಂದು ರೋಯಿಗಳನ್ನುತ್ತಾರೆ. "ನಮಗೆ ಕಾಂಗ್ರೆಸಿನ ಅಧಿಕಾರಸ್ಥಾನವನ್ನೇರಲು ತಿಳಿದಿಲ್ಲವೆಂದು ಭಾವಿಸಬೇಡಿ ಬಲಪಕ್ಷೀಯರೇ! ನೀವು ನಮ್ಮನ್ನೆತ್ತಿ ಅಲ್ಲಿ ಒಮ್ಮೆ ನಿಲ್ಲಿಸಿ ನೋಡಿ-ನಾವು ಆ ಸ್ಥಾನವನ್ನೇರುವ ಚೆಂದ!" ಎಂದಂತಾಯಿತು.

M. V. H.

The Canara Banking Corporation Limited.,

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ವ್ಯಾದಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ವಾಪಾಸು ಬಂದ ಕಾರಣದಿಂದಲೂ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ— ಸದ್ರಿಯವರು ಇಡಾಗಿಟ್ಟ ನಗಗಳನ್ನು ತಾ. 14-8-1939ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ 19-8-1339ರಲ್ಲು ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರುವದು.

ಲೋನ್ ನಂಬ್ರ	ಇಡಿಟ್ಟವರ ಹೆಸರು ವ ವಿಳಾಸ	ಮೊಬಲಗು ರೂ.	ಆ.	ಪೈ.
337/35	ಪಡುಮನೆ ಹಮ್ಮದ್ ಸಾಹೇಬರ ಮಗ ಟಿ. ಇಬ್ರಾಹಿಂ ಸಾಹೇಬ. ಕೆಮ್ಮಣ್ಣು	15	0	0
323/35	ತಿಮ್ಮಣ್ಣಕುದ್ರು ಹಸನ್ ಸಾಹೇಬರ ಮಗ ಹುಸೇನ್ ಸಾಹೇಬ ಕಲ್ಯಾಣಪುರ.	35	0	0
559/34	ಹೇರೂರು ಮದಗ ಮಂಜಯ್ಯ ಸೆಟ್ಟಿ, ಕೃಷ್ಣಪ್ಪ ಸೆಟ್ರ ಅಳಿಯ ಬ್ರಹ್ಮಾವರ ಪೋಸ್ಟ್.	135	0	0
734/34	ಟಿ. ಇಬ್ರಾಹಿಂ ಸಾಹೇಬ, ಪಡುಮನೆ ಹಮ್ಮದ್ ಸಾಹೇಬರ ಮಗ ಕೆಮ್ಮಣ್ಣು.	10	0	0
315/36	ಮೋಸೆಸ್ ಜತ್ತನ್ನ, ಯೋಹನ್ ಜತ್ತನ್ನರ ಮಗ, ಅಜ್ಜರಕಾಡು ಉಡ್ಪಿ.	15	0	0
578/36	ಯು. ವಿಠಲದಾಸಭಟ್ಟ, ಸುಬ್ಬಣ್ಣ ಭಟ್ಟರ ಮಗ, ಪುತ್ತೂರು ಕಲ್ಯಾಣಪುರ ಪೋಸ್ಟ್.	22	0	0
80/37	ಶ್ರೀನಿವಾಸರಾಯರ ಮಗ ಪಿ. ಎನ್. ವೆಂಕಟಕೃಷ್ಣರಾವ್, ಪೆರಂಪಳ್ಳಿ, ಕಲ್ಯಾಣಪುರ.	20	0	0

ಬೇಂಕಿನ ಆಫೀಸು,
ಉಡ್ಪಿ.
ತಾ. 31-7-'39

N. R. Bhat,
Agent at, Udipi

ಸ್ಥಾಪನೆ: ಕ್ರೌನ ರಬ್ಬರ ಸ್ಟಾಂಪ ಕಂಪನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್‌ಬೋರ್ಡು, ಹೆಸರುಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.

CROWN RUBBER STAMP CO.,
Balmat Road, MANGALORE.
Includ by the Mysore Govt. Stores, Purchase Committee in the list of approveFdirms

---

ಪುಟ ೫ ರಿಂದ

ಯುಳ್ಳವರಾಗಿದ್ದಾರೆ. ಆದರೆ ಡಾನ್ಜಿಗಿನ ಯುದ್ಧ ಸಿದ್ಧತೆಯು ಯಥಾ ಪ್ರಕಾರ ನಡೆಯುತ್ತದೆ. ಸಂಧಿಯಿಂದಾಗಲಿ ಸಂಗ್ರಾಮದಿಂದಾಗಲಿ ಡಾನ್ಜಿಗನ್ನು ಬಿಟ್ಟುಕೊಡಲು ಸಾಧ್ಯವೇ ಇಲ್ಲ. ಡಾನ್ಜಿಗಿನಲ್ಲಿ ಹಿಟ್ಲರರು ವಿಜಾಪೆ ಹೊಕ್ಕಿಸಿದರೆಂದರೆ ಅನಂತರ ಇಡೀ ಪೋಲೆಂಡಿನ ಮೇಲೆ ಅಧಿಕಾರ ನಡೆಸದಿರಲಾರರೆಂದು ಪೋಲೀಸ್ ಸರಕಾರವು ಕಠಿಣ ಧೋರಣೆ ವಹಿಸಿರುವುದು. ಪೋಲೆಂಡಿಗೆ ಸಹಾಯಕೊಡದೆ ನಿರ್ವಾಹವೇ ಇಲ್ಲದಾಗಿದೆ ಇಂಗ್ಲೆಂಡ್ ಫ್ರಾನ್ಸುಗಳಿಗೆ. ಆದುದರಿಂದ ಅವುಗಳೀಗ ಜರ್ಮನಿಗಿಂತಲೂ ಜೋರಿನಿಂದ ಸಮರಗರ್ಜನೆಗೈಯತೊಡಗಿವೆ.

LEVER WRIST WATCHES FOR RUPEES 2-4-0 ONLY.

The watches are guaranteed for 5 solid years. Accurate Time keeper. Round or square Rs. 2/8 Best Rs. 3-4-0, extra best Rs 3-12-0, Golden cases Rs. 4-4-0, Rs. 6-8-0, Rectangular Rs. 7-4-0, Best Rs. 11-0-0, Guaranteed for 10years. Postage annas 8 extra. If purchased three at a time postage free.

Ceylon orders must accompany full advance. ORIENTAL FANCY STORES, Post Box No. 12204, Calcutta(S.C.E.184).

ನವಯುಗಕ್ಕೆ ಏಜಂಟರಿಲ್ಲದಲ್ಲಿ ಏಜಂಟರು ಬೇಕಾಗಿದಾರೆ.

ಐರಿಷ್ ರಿಪಬ್ಲಿಕನ್ ಪಕ್ಷೀಯರ ಅತ್ಯಾಚಾರ!

ಜುಲಾಯಿ ತಾ. ೨೬ರಲ್ಲು ಇಂಗ್ಲೆಂಡಿನಲ್ಲಿ ಐರಿಷ್ ರಿಪಬ್ಲಿಕನ್ ಪಕ್ಷೀಯರು ೫ ಕಡೆಗಳಲ್ಲಿ ಬೋಂಬಿಟ್ಟು ಸ್ಫೋಟಗೊಳಿಸಿ ಅತ್ಯಾಚಾರ ನಡೆಸಿರುವರು. ಆಯರ್ಲೆಂಡಿನ ಅಲ್‌ಸ್ಟರ್ ಪ್ರದೇಶವನ್ನು ಬ್ರಿಟಿಷರು ಬಿಟ್ಟುಕೊಟ್ಟು ಇಡೀ ಆಯರ್ಲೆಂಡು ಐರಿಷರದಾಗಬೇಕೆಂಬುದೇ ರಿಪಬ್ಲಿಕನ್ ಪಕ್ಷೀಯರ ಈ ಅತ್ಯಾಚಾರದ ಉದ್ದೇಶ. ಜುಲಾಯಿ ತಾ. ೨೬ರಲ್ಲು ಲಂಡನಿನ ವಿಕ್ಟೋರಿಯ ಸ್ಟೇಶನಿನಲ್ಲಿ ದೊಡ್ಡ ಸ್ಫೋಟವಾಗಿ 16 ಮಂದಿ ಗಾಯಗೊಂಡಿರುವರು. ಒಬ್ಬನು ಕೊಲ್ಲಲ್ಪಟ್ಟಿರುವನು. ಲಿವರ್‌ಪೂಲಿನಲ್ಲಿ ಮೂರು ಸ್ಫೋಟಗಳು ನಡೆದಿರುವವು. ಆಯರ್ಲೆಂಡಿನ ಪ್ರೆಸಿಡೆಂಟರಾದ ಡಿ. ವೆಲೆರಾರವರು ಈ ಅತ್ಯಾಚಾರಗಳನ್ನು ಖಂಡಿಸಿರುತ್ತಾರೆ. ಇಂತಹ ಅತ್ಯಾಚಾರಿಗಳೆಂದು ಗುಮಾನಿಯಿರುವ ಐರಿಷ್ ಜನರನ್ನು ಇಂಗ್ಲೆಂಡಿನಿಂದ ಹೊರಹಾಕಲು ವಿಶೇಷತರದ ಕಾನೂನೊಂದು ಅತ್ಯವಸರದಿಂದ ತಯಾರಿಸಲ್ಪಟ್ಟು ಪಾರ್ಲಿಮೆಂಟಿನಲ್ಲಿ ಮಂಜೂರಾಗಿದೆ.

ನಮ್ಮ ಹೊಸ ಏಜಂಟರು.

ಮುಂಡಗದ್ದೆಯಲ್ಲಿ—
ಶ್ರೀ. ಕೆ. ವಿ. ಸರಳಾಯ

ಬೊಂಬಾಯಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 28-7-39

ಮುನ್ನಿ, ಗಿಲ್ಡರರ ಘರ್ಜನೆ—ಗಾಂಧಿ ಜೀಯವರ ಸ್ಫೂರ್ತಿಯಿಂದ, ಕೋಂಗ್ರೆಸಿನ ಬಲಂ ದಾಳುತ್ವದಿಂದ, ಜನತೆಯ ಸಂಪೂರ್ಣ ಸಹಾಯದಿಂ ದ ಮತ್ತು ಸರ್ವ ಜನತ್ವೇ ನೋಡುತ್ತಿದ್ದಂತೆ ಮುಂ ಬಯಿ, ವಿರೋಧಿಗಳ ಅಲ್ಪ ಟೀಕೆಗಳಿಗೆ, ಕುತಂ ತ್ರ ವಿರ್ಣಯಗಳಿಗೆ ಮತ್ತು ಕುಟಿಲ ಸ್ವಾರ್ಥಿಗಳಿ ಗೆ ಹೆದರದೆ, ಬರುವ ಮಂಗಳವಾರ ದಿವಸ ತನ್ನ ಪ ವಿತ್ರ ಪರಿವರ್ತನೆಯಲ್ಲಿ ಒಲಿಶವಾಗಿ, ಎದಕಟ್ಟಿ ಮುನ್ನಡೆಯುತ್ತದೆ.

ಶಾಸನವು ಸಿದ್ಧವಾಗಿದೆ; ಮಂತ್ರಿಗಳು ತಯಾರಿ ದ್ದಾರೆ, ಜನತೆಯು ಸಿದ್ಧವಾಗಿದೆ. ಆಗಸ್ಟ್ ಒಂದನೆ ಯ ದಿವಸ ಮುಂಬಯಿಯು "ಮದ್ಯ'ವೆಂಬ ಕಡಿ ವಾಣದಿಂದ ಬಿಡಿಸಲ್ಪಡುತ್ತದೆ.

900 ಸ್ವಯಂಸೇವಕರು—ಮುಂಬ ಯಿಯನ್ನು "ಪಿಣಿಗಿನ್"ರಲ್ಲಿ ನಗರ ಪೋಲೀಸ ರಿಗೆ ಸಹಾಯಮಾಡುವರು. "ಬಿದ್ದವರಿಗೆ ಕರುಣೆ, ದಾರಿತಪ್ಪಿದವರಿಗೆ ಸಹಾಯ, ಮೋಸಗಾರರಿಗೆ ಎಚ್ಚ ರಿಕೆ ಮತ್ತು ಕೊಲೆಗಾರರಿಗೆ ಸಾವು" ಎಚ್ಚರಿಕೆ!! ದಾರುಬಂದಿ ಸ್ವಯಂಸೇವಕರ ಮುಂದೆ, ಅನರಬಲ ಮುನ್ನಿ ಮತ್ತು ಗಿಲ್ಡರರ ಘರ್ಜನೆ!

ಸರಕಾರದ ಸಹಾಯ—ದಾರು ಬಂದಿ ಯಿಂದ ಯಾರೆಲ್ಲ ನಿರುದ್ಯೋಗಿಗಳಾಗುತ್ತಾರೋ, ಅವರಿಗೆ ತಮ್ಮಿಂದ ಸಾಧ್ಯವಾದ ಮಟ್ಟಿಗೆ ಕೆಲಸಗಳ ನ್ನು ತೆಗೆಕೊಡಬೇಕೆಂದು ಸರಕಾರವು ನಿಶ್ಚೈಸಿ, ಇ ದಕ್ಕಾಗಿ ಒಬ್ಬ ವಿಶೇಷ ಆಫೀಸರನನ್ನು ನೇಮಿಸಿದೆ. ನಿರುದ್ಯೋಗಿಗಳು ತಮ್ಮ ಹೆಸರುಗಳನ್ನು ಈ ಆಫೀ ಸಿನಲ್ಲಿ ರಿಜಿಸ್ಟರುಮಾಡಬೇಕು. ವಿದ್ಯಪಾನ ನಿಷೇ ಧದಿಂದ ನಿರುದ್ಯೋಗಿಗಳಾಗಿ ತಮ್ಮ ಹಳ್ಳಿಗಳಿಗೆ ಹಿಂ ದಿರುಗುತ್ತೇವೆಂದು ಹೇಳುವವರಿಗೆ ಸರಕಾರವು ಪ್ರ ಯಾಣ ಖರ್ಚು ಕೊಡುವುದು, ಕೆಲವರನ್ನು "ನೀ ರಾ" ತಯಾರಿಸಲು ಬಿಡುವುದು. ಇತರರಿಗೆ 1. ಕಾ ಡುಗಳಲ್ಲಿ ರಸ್ತೆಗಳ ಕೆಲಸ, 2. ಕಟ್ಟೋಣದ ಕೆಲಸ, ಮೊದಲಾದವುಗಳಲ್ಲಿ ಸೇರಿಸಲು ಪ್ರಯತ್ನಿಸುವುದು. ಕೃಷಿಮಾಡಿ ಜೀವಿಸಬೇಕೆನ್ನುವವರಿಗೆ ಗದ್ದೆಗಳನ್ನು ಕೊಟ್ಟು, ಕೃಷಿಕರನ್ನಾಗಿ ಮಾಡುವುದು.

ಹೋಟೆಲುಗಾರರು 2,000 ಮದ್ಯಪಾನ ನಿರು ದ್ಯೋಗಿಗಳಿಗೆ ಕೆಲಸ ಕೊಡಿಸುತ್ತೇವೆಂದು ಹೇಳಿರು ವರು! ಇದು ಎಷ್ಟರತನಕ ಕೈಗೂಡುತ್ತದೆಂಬುವ ನ್ನು ನೋಡಬೇಕಾಗಿದೆ.

ಧಿ ಬಾರ್ಕೂರು ಬಿಲ್ಲವರ ಚಾರಿಟಿ ಸಂಘ ಮುಂಬಯಿ—ಇದರ ಚುನಾವಣೆ ಯ ಸಭೆಯೊಂದು ತಾ. 23-7-39ರಲ್ಲು ಶ್ರೀ. ಪಿ. ಕೆ. ಸುವರ್ಣನವರ ಅಧ್ಯಕ್ಷತೆಯಲ್ಲಿ ನಡೆದು 1939-40ನೇ ವರ್ಷದ ಕಾರ್ಯನಿರ್ವಾಹಕ ಮಂಡಳಿಗೆ ಈ ಕೆಳಗಿನವರನ್ನು ಚುನಾಯಿಸಲಾ ಯಿತು ಶ್ರೀಗಳಾದ ಪಿ. ಕೆ. ಸುವರ್ಣ (ಅಧ್ಯ ಕ್ಷ) ಯನ್. ಯಂ. ಉದ್ಯಾವರ್. (ಉಪಾ ಧ್ಯಕ್ಷ) ವೈ. ಸುಬ್ಬ (ಕಾರ್ಯದರ್ಶಿ) ಎರ್. ಎಸ್. ಅಂಚನ್ (ಉಪಕಾರ್ಯದರ್ಶಿ) ಟಿ. ತನಿಯ (ಕೋಶಾಧಿಕಾರಿ). ಕೆ. ಯಂ. ಬಂಗೇ ರ, ಎ. ಪಿ. ಅಮೀನ್, ಪಿ. ಯಲ್. ಕೋಟ್ಯಾ ನ್, ಯು. ಎ. ತೌಡಪ್ಪ, ಕೆ. ಅನಂತು, ಯಸ್. ಜನಾರ್ದನ, ಯಂ. ಬಿ. ಅಂಚನ್, ಯು ಮಂ. ಕೋಟ್ಯಾನ್, ಎ. ಪಿ. ಅಮೀನ್ ಮತ್ತು ಟಿ. ತನಿಯ ಬಂಗೇರ (ಸದಸ್ಯರು.)

ಮೊಗವೀರ ಯುವಕ ಸಂಘ ಮುಂ ಬಾಯಿ—ಸಂಘದ 1938ನೇ ಇಸವಿಯ ಮೆಂಬರರ ಮಹಾಸಭೆಯು ತಾ. 23-7-39ರಲ್ಲಿ ಮೊಗವೀರ ರಾತ್ರಿ ಶಾಲಾ ಮಂದಿರದಲ್ಲಿ ಸಂಘ ದ ಅಧ್ಯಕ್ಷರಾದ ಶ್ರೀ ಬಿ. ಕೆ. ಟಿ. ಸ್ವರ್ಣರ ಅಧ್ಯಕ್ಷತೆಯಲ್ಲಿ ಜರಗಿತು.

ಸಂಘದ ಮೆಂಬರರಾಗಿದ್ದ ಶ್ರೀಗಳಾದ ಕೃ ಷ್ಣಪ್ಪ ಯಸ್. ಅಮೀನ್ ಮತ್ತು ತುಕ್ರ ಪುತ್ರ ನ್‌ರವರ ಅಕಾಲ ಮರಣಕ್ಕಾಗಿ ಸಂತಾಪಸೂಚ ಕ ಠರಾವನ್ನು 1938ನೇ ಇಸವಿಯ ಲೆಕ್ಕಪತ್ರ ಗಳನ್ನೂ ಕಳಗಿನ ಚತುರ್ಥವಾರ್ಷಿಕ ವರದಿ ಯನ್ನೂ ಮಂಜೂರು ಮಾಡಲಾಯಿತು.

1939ನೇ ಇಸವಿಯ ಆಡಳಿತ ಸಭೆಗೆ ಈ ಳಗಿನವರು ಚುನಾಯಿಸಲ್ಪಟ್ಟರು. ಶ್ರೀ. ಜಿ. ಎಸ್. ಕರ್ಕೇರ, ಅಧ್ಯಕ್ಷ, ಶ್ರೀ. ಯನ್. ಕೆ. ಪುತ್ರನ್ ಉ. ಅಧ್ಯಕ್ಷ, ಶ್ರೀಯುತರು ಗಳಾದ ವೈ. ಯಸ್. ಪುತ್ರನ್, ಸಿ. ಎ. ಸಾಲಿ ಯಾನ್, ಗೌರವ ಕಾರ್ಯದರ್ಶಿಗಳು, ತಾ. ರಾಮರಾವ್ ಬಿ. ಅಮೀನ್ (ಜೊತೆ ದೋಣಿ) ಮತ್ತು ಶ್ರೀ. ಯಸ್. ಎ. ಪುತ್ರನ್, ಗೌರವ ಜತೆ ಕೋಶಾಧಿಕಾರಿಗಳು, ಶ್ರೀಗಳಾದ ಬಿ. ಕೆ. ಟಿ. ಸ್ವರ್ಣ, ಯಸ್. ವಿ. ಕಾಂಚನ್, ಬಿ. ಎಲ್. ಕೋಟ್ಯಾರ್, ಯನ್. ಕೆ. ಬಂಗೇರ, ಕೆ. ಎಮ್. ಕುಂದರ್, ಯನ್. ಎ. ಕರ್ಕೇರ, ಬಿ. ಎಸ್. ಸಾಲಿಯಾನ್, ಡಿ. ಬಿ. ಪುತ್ರನ್, ಆರ್. ಎ. ಅಮೀನ್, ಪಿ. ಸಿ. ಸಾಲಿ ಯಾನ್, ಯಸ್. ಜಿ. ಪುತ್ರನ್, ಸಿ. ಬಿ ಕೋ ಟಿಂಕಾರ್ ಮತ್ತು ಡಿ. ಟಿ. ಕಾಂಚನರು, ಮೆಂಬ ರರಾಗಿಯೂ ದೃಢೀಕರಿಸಲ್ಪಟ್ಟ ನಂತರ ಶ್ರೀಗಳಾದ ಪಿ. ಬಿ. ದೇವ್ರಾಲ್‌ಕಾರ್ (A. C. R. A.) ಮತ್ತು ಯಸ್. ಕೆ. ಮೈಂದನರು 1939ನೇ ಇಸವಿಯ ಗೌರವ ಲೆಕ್ಕಪರಿಶೋಧ ಕರಾಗಿ ಆರಿಸಲ್ಪಟ್ಟರು.

ಸಭಿಕರಲ್ಲಿ ಅನೇಕರು ಸಂಘದ ವಿವಿಧ ಕಾ ರ್ಯಗಳನ್ನು ಶ್ಲಾಘಿಸಿ, ಮೊಗವೀರರಲ್ಲಿ ನಾಟಿ ಕೊಂಡಿರುವ ಬಾಲ್ಯವಿವಾಹ, ವರದಕ್ಷಿಣೆ, ಕಂಡಿಕತನ ಮುಂತಾದ ಸಾಮಾಜಿಕ ಕೆಡುಕು ಗಳನ್ನು ಸಂಪೂರ್ಣ ನಾಶಮಾಡುವುದಕ್ಕೆ ಸ್ವ ದೇಶದಲ್ಲಿ ಪ್ರತಿನಿಧಿಗಳನ್ನು ನೇಮಿಸಬೇಕೆಂದೂ ಯುವಕರ ಸಂಘಟನೆಯನ್ನು ಬಲಪಡಿಸಿ ಪ್ರ ಚಾರಕಾರ್ಯವನ್ನು ಸ್ವದೇಶದಲ್ಲಿಯೂ ನಡೆಸ ಬೇಕೆಂದೂ ಮುಂತಾಗಿ ಭಾಷಣಗಳನ್ನಿತ್ತರು. ಅಧ್ಯಕ್ಷರು ತನ್ನ ಸಮಯೋಚಿತ ಭಾಷಣದಲ್ಲಿ ಸಂಘದ ಪ್ರಗತಿಯನ್ನು ವಿವರಿಸಿದರು. ಮೊಗ ವೀರ ಸ್ವಯಂ ಸೇವಾದಳವು ನಿರ್ವಹಿಸಿದ ಕಾರ್ಯವನ್ನು ವಿವರಿಸಿ ಮೆಂಬರರು ಸ್ವಯಂ ಸೇವಾದಳಕ್ಕೆ ಮೆಂಬರರಾಗಿಯೂ ಮತ್ತು ಇನ್ನಿತರ ಸಂಘದ ಕಾರ್ಯಭಾರಗಳಲ್ಲಿ ಭಾಗ ವಹಿಸಿಯೂ ಪ್ರೋತ್ಸಾಹವನ್ನೀಯಬೇಕೆಂದು ವಿನಂತಿಸಿಕೊಂಡರು. ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಮೊಗವೀರ ಮಹಾಜನ ಸಭಾ ಮುಂ ಬಾಯಿ—ತಾ. 16-7-39ರಲ್ಲಿ ಈ ಸಂಸ್ಥೆ ಯ ಒಂದು ಮಹಾಸಭೆ ಜರಗಿ ಸಭೆಯ ಒಂದ ನಾಳವು ನಿಕ್ರಿಯಾವಸ್ಥೆಯಲ್ಲಿರುವುದರಿಂದ ದ ಕ್ಷಿಣಕನ್ನಡ ಮೊಗವೀರ ಮಹಾಜನ ಸಂಘದ ಹೆಸರಲ್ಲಿರುವ ಸಭೆಗೆ ಸಂಬಂಧಪಟ್ಟ ಹಣದ ಬಡ್ಡಿಯನ್ನು ತಾ. 30 8-39ರೊಳಗೆ ಸಭೆಯ ಖರ್ಚಿಗಾಗಿ ಇಲ್ಲಿಗೆ ರವಾನಿಸತಕ್ಕದ್ದು, ಸಂಸ್ಥೆ ಗೆ ಸಂಬಂಧಪಟ್ಟ ಆಯಾಯ ಊರು ಕೂಡು ಕಟ್ಟಿನವರಿಗೆ 1937ನೇ ಇಸವಿಯ ಬಾಬ್ತು ನಿರ್ಧರಿಸಿದ ವಂತಿಗೆ ಹಣವನ್ನು ಬಾಕಿಮಾಡಿ ಕೊಂಡವರು ಸಭೆಯ ಮುಂದಾಭಿವೃದ್ಧಿಯ ನ್ನು ಬಯಸಿ ಈ ಮೇಲಿನ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು, ಸಭೆಗೆ ಸಲ್ಲತಕ್ಕ ಯಾವುದೇ ತರದ ಲೆಕ್ಕಾಚಾರವನ್ನೂ ಮತ್ತು ಲೇವಾದೇವಿ ಸಂಘದಿಂದ ಪಡಕೊಂಡ ಸಾಲವನ್ನೂ ಸಂಬಂ ಧಪಟ್ಟವರು ತಾ. 30-8-39ರೊಳಗಾಗಿ ಪಾವ ತಿಮಾಡತಕ್ಕದ್ದು. ತಪ್ಪಿದಲ್ಲಿ ತಕ್ಕ ಕ್ರಮ ಜರಗಿಸಲಾದೀತು ಎಂಬ ಠರಾವುಗಳಾದವು. ಇದೇ ಬರುವ ಸೆಪ್ಟಂಬರ್ ಅಂತ್ಯದೊಳಗಾಗಿ ಇನ್ನೊಂದು ಮಹಾಸಭೆಯನ್ನು ಜರಗಿಸಬೇ ಕೆಂದೂ ನಿರ್ಣಯಿಸಲಾಯಿತು.

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರಣೆಯಲ್ಲಿ ಮೇಲುಗೈ, ದುರದೃಷ್ಟಗಳ ದುಷ್ಟಪೀಡೆ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಸಿನಲ್ಲೇ,

Hanuman Ahsramam,

Tuutani, S. India.

ಆಯುರ್ವೇದ ಕೀರ್ತಿವಂತರ ರತ್ನ

55 ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗೊಳಿಯು

(ರಿಜಿಸ್ಟರ್ಡ್)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧ ಮತ್ತು ಧಾತುವೃದ್ಧಿ ಹೊಂದುತ್ತದೆ. ಸ್ವಪ್ನದಲ್ಲಿ, ಮಿತಿಮೀರಿ ಸ್ತ್ರೀ ಸಂಗ, ಕೆಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತು(ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ; ಅಲ್ಲದೆ ಸ್ಮರಣೆಶಕ್ತಿ ವೃದ್ಧಿಯಾಗಿ ದೇಹ ವನ್ನು ಪುಷ್ಟೀಕರಿಸುತ್ತವೆ. ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯ ವನ್ನುಂಟುಮಾಡುತ್ತದೆ. ಎಷ್ಟೋ ಎಂತೂ ಇದರ ಉಪಯೋಗದಿಂದ ವಾಯಿಮಾಗುತ್ತದೆನ್ನಲು ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದ್ದಲ್ಲಿ ತಕ್ಷಣಕ್ಕೆ ತಾನೇ ಇದರ ಗುಣಾಂಶವು ತಿಳಿಯಬರುವುದು. 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1 ಮಾತ್ರ.

ಆಫೀಸು ಸಮಯ:—ಬೆಳಗ್ಗೆ 8ರಿಂದ 12 ಗಂಟೆ. ಮಧ್ಯಾಹ್ನ 2ರಿಂದ 8.

Vaidya Shasthry Kalyanji Tagar *365, Kalabadevi Road* *(opp. Temple)* Hanuman Lane Corner, BOMBAY 2.	ವೈದ್ಯಶಾಸ್ತ್ರಿ ಕಲ್ಯಾಣ್‌ಜಿ ಹರಿಕೃಷ್ಣ ಟಾಕರ್ 365, ಕಾಲಬಾ ದೇವಿ ರೋಡ, (ದೇವಾಲಯದ ಎದುರು) ಹನುಮಾನ ಗಲ್ಲಿಯ ನಾಕ, ಮುಂಬಾ, ನಂ. 2

When God Adopts Manhood?

Truthfullness is all powerful and it is Heavenly peace to all souls. **Who says** that man is helpless? Who says that man cannot fulfill his wishes? Who beleives anything impossible on this earth? Those who are tired of life. Those who have ill luck. Those who are downhearted are wellcome. What are your wishes that you cannot fulfilling? What diserious is there which cannot be cured? What is it that you cannot do? **Look, Open your eyes** and see Gods powers are present in mankind. A pious spiritualist shows you Heavenly Astrological wonders, releives you of all kinds of diseases, and removes all difficulties in fulfilling your diserious in life. With all powerful truthfullness he brings you Heavenly peace and prosperity. The success of great man like Mahathma Gandhi, Hittler Napolean will be explained, and men will be shown their way to salvation within 24 hours. Truth is all powerful and it is Heavenly bless A man can do wonders with, if he is true in heart and soul. If you want to do this, come, Hindoo, Muslims, Parsis and all others will be given advise, how to remove all difficulties in life with spiritualism. On consulting this wonderfulman, you will have some idea about the real powers of nature, and nature itself.

***N. B.*: (For 3 questions Rs. 2 only.)**

Money to be sent by post or personaly

Address: SPIRITUAL SPART

First Floor'

Mahakali Mandir Chawl

PYDHONY, BOMBAY

ಲೈಬ್ರೆರಿ

ಮತ್ತು

ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ **ದೊರೆಯುತ್ತವೆ.**

ಕೆಟಲಾಗಿಗೆ ಬರೆಯಿರಿ.

ಸಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಶರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಗಳೂರು,

ಮಂಗಳೂರು, ಧಾರವಾಡ ಮೊದಲಾದ ಕರ್ನಾಟಕದ ಯಾವದೇ ಭಾಗದ

ಪುಸ್ತಕ

ಬೇಕಾದವರೂ

ನಮ್ಮೊಡನೆ ವಿಚಾರಿಸಿರಿ. ಕೆಟಲಾಗು ಉಚಿತ.

ನವಭಾರತ ಪುಸ್ತಕ ಭಂಡಾರ,
ಉಡುಪಿ, ದ. ಭಾರತ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ
SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**

ಕನ್ನಡ ಓದಲಿಕ್ಕೆ ತಿಳಿದವರು ಬಲ್ಲವರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೨೬೪ ಪೇಜುಗಳು ಇರುವ ದೊಡ್ಡ ಪುಸ್ತಕ.ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯ ದಿಂದ ಕನ್ನಡ ಓದಬಲ್ಲವನ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದು ಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss Co.
Book Sellers, Post Box No 68
G. P O MADRAS

ವೆಸ್ಟರನ್ ಸ್ವಿಸ್ ಕಂಪೆನಿ
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ.**—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ2 0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಕೆ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
President & Manager, ಪ್ರಸಿಡೆಂಟ್ ಮತ್ತು ಮೆನೇಜರ್.

DAIMONDS! **DAIMONDS!**

K R. K. SHET

Opposite Govt College Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾಕ (first quality, selected) ಎಮ್ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ
ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,
Kanara Printing Works,
Hampankatte, **MANGALORE**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ೬ ಖ ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪ್ಪೋ, ಉಡುಪಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಶೋಣಿತಾಮೃತ ಸ್ತ್ರೀಯರಿಗೆ ಋತುಕಾಲದಲ್ಲಿ ಉಂಟಾಗುವ ಅಧಿಕಸ್ರಾವ, ನಡುನೋವು ಹೊಟ್ಟೆಯುರಿ, ಇವುಗಳನ್ನು ಮೂರೇ ದಿನಗಳಲ್ಲಿ ನಿಲ್ಲಿಸುವ ಅದ್ಭುತವಾದ ಅಮೃತ, ಸಹಸ್ರಾರು ಜನರ ಹೊಗಳಿಕೆಗೆ ಪಾತ್ರವಾಗಿರುತ್ತದೆ. ಬೆಲೆ 1—8—0

ಜೀವನಿ ಬಹಿಷ್ಠೆಯಾದ ನಾಲ್ಕನೇ ದಿವಸದಿಂದ ಉಪಯೋಗಿಸುತ್ತಾ ಬಂದಲ್ಲಿ ಋತು ಸಂಬಂಧವಾದ ಎಲ್ಲಾ ದೋಷಗಳೂ ಪರಿಹಾರವಾಗಿ ನಾರಿಯರಿಗೆ ಚೈತನ್ಯವನ್ನುಂಟುಮಾಡುತ್ತದೆ. ಬೆಲೆ 1—0—0.

ನಮ್ಮ ರಿಜಿಸ್ಟರ್ಡ "ಶ್ರೀಕರ ಕಸ್ತೂರೀ ಮಾತ್ರೆ" ಮತ್ತು
"ಶ್ರೀಕರ ಬಾಲಸಂಜೀವಿನಿ" ಇವೆರಡೂ ಮಕ್ಕಳಿರುವ ಪ್ರತಿ ಮನೆಯಲ್ಲೂ
ಅಗತ್ಯವಾಗಿ ಇರಲೇಬೇಕಾದ್ದು.
ವಿವರವಾದ ಕ್ಯಾಟಲಾಗಿಗೆ ಬರೆಯಿರಿ,

ನಂಜನಗೂಡು ಸದ್ವೈದ್ಯಶಾಲಾ,
ಬ್ರಾಂಚ್—ಮಂಗಳೂರು.

ದಿ ವಿಜಯ ಬೇಂಕ್, ಲಿಮಿಟೆಡ್,
ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡೆಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು

3 ತಿಂಗಳಿಗೆ	...	3½%
6 ,,	...	4%
1 ವರ್ಷಕ್ಕೆ	...	4½%
2 ,,	..	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಶರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ

Rev. Fr. P. W. Farias,

St. Paul's Church,
Balkunje Post, S. K.
Dated 4th January 1939.

To

THE JOINT MANAGERS.
The C. P. C. Co. Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalayana Mahothsawam Committee.

Thulunad Bank

OF SUPPLY AGENCY LIMITED,

ESTD] **UDIPI** [1933

Authorised & Issued Capital Rs. **1,00,000**
Subscribed & Paid up .... **Rs. 31,300**

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3½ p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ 'ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲೀಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:* **GENERAL SUPPLIES, LTD, UDIPI**)

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India.

ನವಯುಗ

NAVAYUGA

Sri Krishna Jayanthi Special

YET ANOTHER GREAT PUBLICATION!

'Navayuga' announces the special Number for the second time on the Avatar Day of Lord Sri Krishna.

Extra Pages. Extra Selections. Fully illustrated.

SIZE: As usual. Crown half (Printed Area 13" × 8½".)

Last date of receipt of the advertisement matter 31-8-39
Date of publication 7-9-39

ADVT. TARIFF AS USUAL:

One page Rs. 25/-,	½ page Rs. 15/-,
¼ page Rs. 8/-,	⅛ page Rs. 5/-,

Cover pages extra. Rates on application.

Advertisement assures Commercial Success.

Send your advertisements now and achieve success.

Advt. Manager, NAVAYUGA, UDIPI, S. INDIA

THE ASIAN ASSURANCE COMPANY, LTD.

ASIAN BUILDINGS — — BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc.

Sri. B. Narayan Shetty, Organizer, Brahmavar
,, M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% p. a. for the earlier half and at 1% p. a. for the latter half of every calendar year.

Fixed Deposits are accepted at all the above offices for one and two years and interest allowed at 3½% p. a. and 4% p. a. respectively; interest being payable every half year of the calendar year. Savings Bank & Cumulative Deposits are also received on remunerative terms.

Negotiable Instruments payable on demand and also genuine short dated trade bills are discounted on fairly easy terms.

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಇದೀಗ ಪ್ರಕಟವಾಗಿದೆ! ಇದೀಗ ಪ್ರಕಟವಾಗಿದೆ!

ಪಂಚಾರತಿ

ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ

ಕರ್ನಾಟಕದ ಪ್ರಸಿದ್ಧ ನಾಟಕಕಾರರೈವರು ಬರೆದ

ಐದು ಏಕಾಂಕ ನಾಟಕಗಳ ಸಂಗ್ರಹ.

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಸಂಪಾದಿಸಲ್ಪಟ್ಟು

ಭಾರತೀ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ ನವೀನ ಪುಸ್ತಕ.

ನಾಟಕಗಳೊಂದಿಗೆ ನಾಟಕಕಾರರ ಪಡಿಯಚ್ಚುಗಳೂ ಕೊಡಲ್ಪಟ್ಟಿವೆ.

ಬೆಲೆ ೦-೪-೦. ಐದಾಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರ ಕಳಿಸಲಾಗುವುದು. ಪ್ರತಿಗಳಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನುಷ್ಯಪ್ರಾಣಿಯು ಶರೀರವೆಂದರೆ ದುರ್ಗಂಧದ ಬೀಡಾಗಿದೆ. ಯಂತ್ರದಂತಿರುವ ದೇಹವು ಎಲ್ಲಾ ತರದ ದುರ್ಗಂಧಯುಕ್ತವಾಗಿದೆ. ಕೂಗೂ ಮೆದುಳು ಮತ್ತು ಇಡೀ ದೇಹದ ದುರ್ಗಂಧದಿಂದಲೇ ರೋಗೋತ್ಪತ್ತಿಯಾಗುತ್ತದೆ. ಮನುಷ್ಯನಿಗೆ ಮೆದುಳೆಂಬುದೇ ದೇಹದ ಮುಖ್ಯಾಂಶವಾಗಿದೆ ಇದರ ಸುಖದಿಂದಲೇ ಸರ್ವ ಅವಯವಗಳ ಸುಖ ದುಃಖಗಳು ಅವಲಂಬಿಸಿರುತ್ತವೆ. ಅಂಥಾ ಮೆದುಳೇ ಕೆಟ್ಟರೆ ಅದು ಸುಧಾರಿಸಬೇಕಾದರೆ ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ಅಲ್ಪಮೌಲ್ಯದಲ್ಲಿ ಬಹುಗುಣ ಕೊಡುವ

ಸ್ವದೇಶೀ ಔಷಧಿ ಭಂಡಾರ (ರಜಿಸ್ಟರ್ಡ್)

ಇವರ ಸುಗಂಧಯುಕ್ತ

ಆಮಲಕೀ ತೈಲವೇ

ನಿಮ್ಮ ಆನಂದದ ಭಾಂಡಾರವಾಗಿದೆ.
ಕ್ರಯ ಸೀಸೆ 1ರ 6 ಆಣೆ.

Swadeshi Oushadhi Bhandara(*Reg.*) *Kunjal*, P.O. Brahmavar, S. India.

ನಮ್ಮ ಸ್ಟಾಕಿಸ್ಟರು:—

1. **V. R. Prabhu**, The Canara News & Books Agent, Batatawala Mansion: Lalbag, BOMBAY.
2. **General Supplies Ltd., Udipi**, S. K.
3. **Nava Bharata Book Depot, Udipi**, S. K.

ಮೈಸೂರಿನಲ್ಲಿ ಶ್ರೇಷ್ಠವರ್ಗದ ಬ್ರಾಹ್ಮಣರ ಉಪಹಾರ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

(ಫೋನ್ ನಂಬ್ರ 406) ಹಳೆ ಪೋಸ್ಟಾಫೀಸು ರೋಡ್ ಮೈಸೂರು.

ಆಧುನಿಕ ಸೌಕರ್ಯಗಳಿಂದ ಕೂಡಿದ ವಿಶಾಲವಾದ ಸಿಂಗ್ಲ್ ಡಬ್ಬಲ್ ಕೋಣೆಗಳು!

ಕುಟುಂಬ ಪರಿವಾರ ಸಮೇತರಾಗಿ ಬರುವವರಿಗೆ

ಉಳಕೊಳ್ಳುವರೆ ಅತೀ ಯೋಗ್ಯ ಸ್ಥಳ.

ಉಡುಪಿ ಆನಂದ ಭವನ

ಫೋನ್ ನಂಬ್ರ 347

ಇದೇ ಪ್ಯಾಲೇಸಿನಿಂದ ಅರಮನೆಯ ಎದುರು ನವನಾಗರಿಕತೆಗೆ ತಕ್ಕಂತೆ ನಡೆಯಿಸಿಕೊಂಡು ಬರುವ ನವೀನ ಉಪಹಾರ ಗೃಹ

ಮೈಸೂರಿಗೆ ಬಂದಲ್ಲಿ ಇದನ್ನು ಸಂದರ್ಶಿಸಲು ಮರೆಯದಿರಿ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು. ಕೃಷ್ಣರಾಜ ಸಾಗರ್ ರೆಸ್ಟೋರೆಂಟ್, ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ರೆಸ್ಟೋರೆಂಟ್ ಮತ್ತು ಬೋರ್ಡಿಂಗ್, ಲಾಡ್ಜಿಂಗ್ ಸಂದರ್ಶಿಸಲು ತಪ್ಪದಿರಿ

ಪ್ರೊಪ್ರೈಟರ್ - ಕೆ. ಗುರುರಾಜಾಚಾರ್.

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಶ್ವಾಸಕ್ಷಯ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ 1ಕ್ಕೆ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಕ್ಕುವ ಸ್ಥಳಗಳು:—ದಿ ಕೆನರಾ ಟ್ರೇಡರ್ಸ್ ಲಿಮಿಟೆಡ್, ಪುತ್ತೂರು. ಶ್ರೀ ರಾಮ ಸ್ಟೇಶನರಿ ಹೌಸ್, ಪೋಸ್ಟ್ ಆಫೀಸು ಎದುರು, ಕಾಸರಗೋಡು. ವಿಟ್ಠಲ್ ನಾರಾಯಣ ಶೆಣೈ, ಟ್ರಾಮ್ ಟರ್ಮಿನಸ್, ಮಜಗಾಂವ್, ಬೊಂಬಾಯಿ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗ್ಳೂರು ಸ್ಟೋರ್ಸ್, ಮಡಿಕೇರಿ. ಕೃಷ್ಣ ಫಾರ್ಮಸಿ, ಕುಂದಾಪುರ. ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ.

ESTD. 1921 ಸ್ಥಾಪನೆ

FOUNDER
Sri. A B. SHETTY, M.L.A.
Parliamentary Secretary, Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ
ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಸಂಚಿಕೆ ೪೯
ಉಡುಪಿ, ಗುರುವಾರ ೧೦-೮-೧೯೩೯
Udipi, Thursday 10—8—1939
Vol. XVIII No. 49

ಚಂದಾ ವಿವರ:
೧ ವರ್ಷಕ್ಕೆ ರೂ. ೩—೪—೦.
೬ ತಿಂಗಳಿಗೆ ರೂ. ೧—೧೨—೦.
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.
ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಭೋಸ್ ಸಹೋದರರ ವಿಜಯ

ಭೋಸ್ ಸಹೋದರರು ಬಹಳವಾಗಿ ಪ್ರಯತ್ನಿಸಿ, ಆಲಿಪುರ ಮತ್ತು ಡಮ್‌ಡಮ್ ಜೈಲುಗಳಿಗೆ ಓಡಾಡಿ ರಾಜಕೀಯ ಕೈದಿಗಳು ಉಪವಾಸ ವ್ರತ ಬಿಡುವಂತೆ ಮಾಡಿರುವರು. ಗಾಂಧಿಜಿ ಮತ್ತು ಕಾಂಗ್ರೆಸ್ ಪ್ರೆಸಿಡೆಂಟರು ಜಯಶೀಲವಾಗದಲ್ಲಿ ಭೋಸ್ ಸಹೋದರರು ಜಯ ಪಡೆದಿರುವರು. ಸಹಾನುಭೂತಿ ಸೌಹಾರ್ದದಿಂದ ಮನಸ್ಸನ್ನು ಒಲಿಸಿಕೊಂಡು ಕೆಲಸಮಾಡಬೇಕಲ್ಲದೆ ತಾತ್ವಿಕದೃಷ್ಟಿಯಿಂದ ಖಂಡಿಸಿ ನಿಷೇಧಿಸಿಯಲ್ಲ. ಈ ಕೈದಿಗಳು ಸುಶಿಕ್ಷಿತರು, ಸಾರಾಸಾರ ವಿಚಾರವುಳ್ಳವರು. ತಮ್ಮ ಮನಸ್ಸಾಕ್ಷಿಯ ಪ್ರೇರಣೆ ಮೇರೆಗೆ ಉಪವಾಸದೀಕ್ಷೆ ಹಿಡಿದಿರುವಾಗ ಗಾಂಧಿಜಿಯವರಿಗೆ ಅದನ್ನು ಕಠಿಣವಾಗಿ ಟೀಕಿಸಿ ನಿಷೇಧಿಸುವ ಅವಶ್ಯವೇನಿತ್ತೋ ತಿಳಿಯದು. ಉರಿಯುವ ಬೆಂಕಿಗೆ ತುಪ್ಪ ಹೊಯ್ದಂತಾಗಿದೆ ಇದರಿಂದ. ಮೊದಲೇ ಸಂತಾಪಗೊಂಡಿರುವ ಬಂಗಾಳವು ಈಗ ಕಾಂಗ್ರೆಸ್ 'ಹ್ಯಾಕಮಾಂಡಿ'ನ ಕುರಿತು ಉರಿದುಬೀಳುವಂತಾಗಿದೆ.

ಯುದ್ಧದೊಳಗೊಂದು ಯುದ್ಧ

ಪೂರ್ವದಲ್ಲಿ ಚೈನಾ ಮತ್ತು ಜಪಾನರೊಳಗೆ ಯುದ್ಧ ನಡೆಯುತ್ತಿದೆಯಷ್ಟೆ! ಅದರೊಳಗೆ ಔಟರ್ ಮಂಗೋಲಿಯ ಮತ್ತು ಮಂಚೂರಿಯ ಸರಕಾರಗಳೊಳಗೆ ಹೋರಾಟವೆದ್ದಿದೆ. ಮಂಗೋಲಿಯನರ ಪಕ್ಷಕ್ಕೆ ರಷ್ಯಾನರಿದ್ದಾರೆ. ಮಂಚೂರಿಯದ ಕಡೆಯಿಂದ ಜಪಾನರು ಹೋರಾಡುತ್ತಿದ್ದಾರೆ. ಯಾರೂ ನಂಬದ ವಿಜಯದ ವಾರ್ತೆಯನ್ನು ಜಪಾನು ಹಬ್ಬುತ್ತಿದೆ. ಪ್ರತಿ ಹೋರಾಟದಲ್ಲಿಯೂ ಜಪಾನು ಪರಾಜಿತವಾಗಿರುವುದೆಂದು ರಷ್ಯವು ಪ್ರಕಟಿಸುತ್ತಿದೆ. ಔಟರ್ ಮಂಗೋಲಿಯವು ಸೋವಿಯೆಟ್ ಸರಕಾರದ ರಕ್ಷಣೆಗೊಳಗಾಗಿರುವ ರಾಜ್ಯ. ಆಧುನಿಕ ಯುದ್ಧ ಸಾಮಗ್ರಿಗಳಿಂದ ಸುಸಜ್ಜಿತವಾದ 2,50,000 ಸೇನೆಯುಳ್ಳದಾಗಿದೆ. ನಡಿ ಪ್ರದೇಶದ ಬೋರ್ ಸರೋವರದ ಸಂಬಂಧವಾಗಿ ಆರಂಭವಾದ ಈ ಜಗಳವು ದೊಡ್ಡ ಸಮರವಾಗಿ ಪರಿಣಮಿಸಿದೆ.

ಮದ್ಯಪಾನ ಪ್ರಶ್ನೆಯ ಕುರಿತು ಬಿಕ್ಕಟ್ಟು

ಕಾಂಗ್ರೆಸ್ ಮಂತ್ರಿಗಳು ಮದ್ಯಪಾನ ನಿಷೇಧವನ್ನು ಜ್ಯಾರಿಗೆ ತರುವ ದೃಢ ನಿರ್ಧಾರ ಮಾಡಿದ್ದಾರೆ. ಇದರಿಂದಾಗಿ ಪ್ರಾಂತಿಕ ಸರಕಾರಗಳಿಗೆ ಹೆಚ್ಚಿನ ಹಣ ನಷ್ಟವಾಗುತ್ತಿದೆ. ಕೇಂದ್ರಸರಕಾರವು ಪ್ರಾಂತಗಳ ಸಹಾಯಕ್ಕೆ ಬರಬೇಕು. ಇಲ್ಲವಾದರೆ ಮದ್ಯಪಾನ ನಿಷೇಧ ಪ್ರಶ್ನೆಯನ್ನೆತ್ತಿ ಹಿಡಿದು ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಡುವಂತಹ ಬಿಕ್ಕಟ್ಟುಂಟಾಗಬ

ವಾರದ ವಿಮರ್ಶೆ

ಹುದೆಂದು ಸರ್ದಾರ್ ವಲ್ಲಭಭಾಯಿಯವರು ಅಹಮ್ಮದಾಬಾದಿನ ಒಂದು ಭಾಷಣದಲ್ಲಂದಿರುವರು. ಗಾಂಧಿಯವರು ಇದಕ್ಕೆ 'ತಪ್ಪು' ಎಂದು ಹೇಳಿ, ಕೇಂದ್ರಸರಕಾರವು ಸೇನಾವೆಚ್ಚವನ್ನಿಳಿಸಿ ಹಣಸಹಾಯಮಾಡಲೇ ಬೇಕೆಂದಿರುವರು. ಅಂತೂ ಬೇಗನೆ ಬಿಕ್ಕಟ್ಟೊಂದು ಉಂಟಾಗಿ ಕಾಂಗ್ರೆಸ್ ಮಂತ್ರಿಗಳು ಹೊರಬಾರದಿದ್ದಲ್ಲಿ ಜನಮತವೇ ಅವರನ್ನು ಹೊರಹಾಕುವ ಪರಿಸ್ಥಿತಿಯೂ ಉಂಟಾಗಬಹುದು. ಮೊದಲಿನ ಆವೇಶಿಯಷ್ಟು ಜನಬೆಂಬಲವು ಈಗ ಅವರಿಗಿರುವುದಿಲ್ಲ.

ಸನಾತನಿಗಳ ಗಲಾಟೆ

ದಕ್ಷಿಣ ಹಿಂದುಸ್ಥಾನದ ಸನಾತನಿಗಳಿಗೀಗ, ಶ್ರೀ. ರಾಜಗೋಪಾಲಾಚಾರ್ಯರ ಸರಕಾರಕ್ಕಿಂತ ಅಬ್ರಾಹ್ಮಣ ಜಸ್ಟಿಸ್ ಮಂತ್ರಿಮಂಡಲವೇ ಲೇಸೆನಿಸಬಹುದು. ಸಾಂಕ್ರಾಮಿಕ ರೋಗದಂತೆ ಒಂದೇಸಮನೆ ತಮಿಳುನಾಡಿನಲ್ಲೆಲ್ಲಾ ಹಬ್ಬುತ್ತಿರುವ ಹರಿಜನ ದೇವಸ್ಥಾನ ಪ್ರವೇಶದಿಂದ ಅವರಿಷ್ಟೊಂದು ಉದ್ವೇಗಗೊಂಡಿದ್ದಾರೆ. ಅವರು ದೇವಸ್ಥಾನಾಧಿಕಾರಿಗಳ ರಕ್ಷಣೆಗಾಗಿ ಓರ್ಡಿನೆನ್ಸೊಂದನ್ನೇ ರಾಜಗೋಪಾಲಾಚಾರ್ಯರು ಜ್ಯಾರಿಮಾಡಿ ಕೋರ್ಟುಗಳಲ್ಲಾದರೂ ತಮ್ಮ ಹೋರಾಟ ನಡಿಸದಂತೆ ಮಾಡಿದ್ದಾರೆ. ಅವರನ್ನು 'ಮದ್ರಾಸ್ ಗವರ್ನರರು ಕಂಡು ಮಾತಾಡುವುದಕ್ಕೂ ನಿರಾಕರಿಸಿದ್ದಾರೆ. ಕಾಂಗ್ರೆಸ್ ಸರಕಾರವು ಧರ್ಮನಾಶ ಮಾಡುತ್ತಿದೆ! ಅನಾಯಕತ್ವಕ್ಕೆ ಪ್ರೋತ್ಸಾಹವೀಯುತ್ತಿದೆ! ಅಯ್ಯೋ! ಪಾರ್ಲಿಮೆಂಟಿನವರಾದರೂ ಕೈಹಾಕಿ ಈ ಅತ್ಯಾಚಾರ ನಿಲ್ಲಿಸಬೇಕೆಂದು ಸೇಲಮಿನ ರಾಜಾಜಿಯವರ ಬಂಧುಗಳು ಬೊಬ್ಬೆ ಹಾಕುತ್ತಿದ್ದಾರೆ. ಮಧುರೆಯವರು, ವೈಸರಾಯರೊಡನೆ ಮಾತಾಡಬೇಕೆಂದು ನೇಪಾಳದ ಮಹಾರಾಜರಿಗೆ ತಂತಿ ಬಿಟ್ಟಿದ್ದಾರೆ. ಎಲ್ಲಾ ಸನಾತನಿಗಳೂ ಒಟ್ಟುಸೇರಿ ವೈಸರಾಯರಿಗೆ ಡೆಪ್ಯುಟೇಶನ್ ಹೋಗಲಿದ್ದಾರೆ, ಸರ್. ಶಿವಸ್ವಾಮಿ ಅಯ್ಯರ್, ಸರ್. ವೆಂಕಟ್ರಮಣ ಅಯ್ಯರ್, ವಿ. ವಿ. ಶ್ರೀನಿವಾಸ ಅಯ್ಯರರೇ ಮೊದಲಾದ ರಾಜಾಜಿಯವರ ಆಪ್ತರೇ ರೇಗಿಬಿದ್ದಿದ್ದಾರೆ.

ಇಂಗ್ಲೆಂಡ್ ರಷ್ಯಾ ಒಪ್ಪಂದ

ಕಟ್ಟಕಡೆಗೆ ಹೇಗಾದರೂ ಇಂಗ್ಲೆಂಡ್ ರಷ್ಯಾಗಳೊಳಗೆ ಒಪ್ಪಂದವಾಗುವುದು ನಿಶ್ಚಯವೆಂದು ಹೇಳಬಹುದು. ಅಷ್ಟು ದೃಢವಿಲ್ಲದೆ ಚೇಂಬರ್ಲೇನರು ರಷ್ಯಾದ ಸೇನಾನಿಗಳೊಡನೆ ಮಂತ್ರಾಲೋಚನೆ ನಡಿಸಲು ಬ್ರಿಟಿಷ್ ಸೇನಾನಾಯಕರನ್ನು ಕಳುಹಿಸಿಕೊಡಲೊಪ್ಪುತ್ತಿದ್ದಿಲ್ಲ. ರಾಜಕೀಯ ಒಡಂಬಡಿಕೆಯಾಗದೆ ಸೇನಾನಿಗಳ ಮಂತ್ರಾಲೋಚನೆ ನಡಿಸುವುದು ಇಂಗ್ಲೆಂಡಿನ ಇತಿಹಾಸದಲ್ಲಿ ಇದೇ ಮೊದಲು. ಇಟಲಿ ಮತ್ತು ಜರ್ಮನಿಗಳು ಮುಂಮುಂದಾಗಿ ಯುದ್ಧಸಿದ್ಧತೆ ಮಾಡುತ್ತಿದ್ದು, ಯುದ್ಧವು ಇಂದೋ ನಾಳೆಯೋ ಎಂಬಂತಿರುವಾಗ ಚೇಂಬರ್ಲೇನರು ಹೆದರಿ ರಷ್ಯದ ಸಹಾಯ ಪಡೆಯಲು ಅವಸರಗೊಂಡಿರುತ್ತಾರೆ.

ಹೋರಾಟಕ್ಕೆ ತಯಾರಿ.

ಭಯಂಕರ ಸಮರಾಂಗಣಕ್ಕೆ ಜರ್ಮನಿ ಮತ್ತು ಇಟೆಲಿಗಳು ಭರದಿಂದ ತಯಾರು ಮಾಡುತ್ತಿವೆ. ಪ್ರಚಂಡ ಸೇನಾಪ್ರದರ್ಶನಗಳನ್ನವು ನಡಿಸುತ್ತಿವೆ ಇತ್ತಲಾಗಿ ಇಟೆಲಿ ಮತ್ತು ಜರ್ಮನಿಗಳು ನಡಿಸುತ್ತಿರುವ ನೆಲ, ಜಲ, ಮತ್ತು ವೈಮಾನಿಕ ಹೋರಾಟದ ಗುಪ್ತ ಅಭ್ಯಾಸವನ್ನು ನೋಡಿದರೆ ಯುದ್ಧವು ಈ ತಿಂಗಳೊಳಗೇನೇ ನಡೆಯುವುದು ನಿಶ್ಚಯವೆಂಬಂತೆ ತೋರುತ್ತಿದೆ. ಪ್ರಚಂಡ ಹೋರಾಟದ ಪ್ರದರ್ಶನಮಾಡಿ ಪ್ರಜಾರಾಜ್ಯ ರಾಷ್ಟ್ರಗಳನ್ನು ಬೆದರಿಸಿ ತಮ್ಮ ಉದ್ದೇಶ ಸಾಧಿಸುವ ತಂತ್ರವನ್ನು ಡಿಕ್ಟೇಟರುಗಳು ಹೂಡುತ್ತಿರುವರಾದರೆ ಅವರು ಇನ್ನೂ ತಮ್ಮದೇ ಆದ ಭ್ರಾಂತಿ ಲೋಕದಲ್ಲಿರುವಂತಿದೆ. ಯಾಕೆಂದರೆ ಪ್ರಜಾಸತ್ತಾಕ ರಾಷ್ಟ್ರಗಳೂ ಈಗ ಯುದ್ಧಕ್ಕೆ ಮುಂದಾಗುತ್ತಿವೆ. ಬರಿಯ ಪ್ರದರ್ಶನದ ಬೆದರಿಕೆಗಳಿಗೆ ಅವು ಸೊಪ್ಪು ಹಾಕದೆ ಯುದ್ಧವನ್ನೇ ಹೂಡಿ ಡಿಕ್ಟೇಟರುಗಳ ಹಮ್ಮನ್ನೊಮ್ಮೆ ಇಳಿಸುವ ದೃಢನಿರ್ಧಾರವಮಾಡಿರುತ್ತವೆ.

ಶಿಸ್ತು ಜ್ಯಾರಿಯಾಗುವುದೇ?

ಇದೇ ತಾ 9ರಲ್ಲಿ ನಡೆಯಲಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಶ್ರೀ ಸುಭಾಷಚಂದ್ರರೇ ಮೊದಲಾದವರ ಮೇಲೆ ಶಿಸ್ತು ಜ್ಯಾರಿಯ ಕುರಿತು ಆಲೋಚಿಸಲಾಗುವುದು. ಈಗೀಗ ಕಾಂಗ್ರೆಸಿನೊಳಗೆ ಶಿಸ್ತು ಜ್ಯಾರಿಯೆಂಬುದು ಅದೊಂದು ಅಂಟುರೋಗದಂತಾಗಿದೆ! ಕಾಂಗ್ರೆಸಿನ ಪ್ರಭಾವವನ್ನದು ಬಹಳವಾಗಿ ಕುಂದಿಸಿದೆ. ಶಿಸ್ತಿನಿಂದ ಯಾವ ಸಂಸ್ಥೆಯು ತನ್ನ ಅಧಿಕಾರವನ್ನು ಪಾಲಿಸಬೇಕಾಗುವುದೋ ಆಗ "ಅದರಲ್ಲೇನಾದರೂ ದೋಷವಿರುವುದು ನಿಶ್ಚಯವೆಂದು ಭಾವಿಸಬೇಕು. ಶ್ರೀ. ಸುಭಾಷಚಂದ್ರರೇ ಮೊದಲಾದವರ ಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಶಿಸ್ತು ಜ್ಯಾರಿಮಾಡದೆ ಅವರನ್ನು ಈ ಸಲ ಎಚ್ಚರಿಸಿಬಿಡಬೇಕು. ಯಾಕೆಂದರೆ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವನ್ನು ನಿಷೇಧಿಸಿ ಕೆಳಕಮಿಟಿಗಳ ಮೆಂಬರರು ಸಭೆ ನಡಿಸಬಹುದೋ ಕೂಡದೋ ಎಂಬುದು ಚರ್ಚೆಯ ಪ್ರಶ್ನೆ ಇರುತ್ತದೆ.

PIGMY DEPOSIT SCHEME

Special thrift deposit and unique feature of our Bank. It will enable you to build a fortune for the rainy day. It is a fountain of happiness.

Further particulars can be had from

The Canara Industrial & Banking Syndicate, Ltd.
UDIPI, (S. India.)

ಚೀನಿಯರ ಹೃದಯವೇಧಕ ಪರಿಸ್ಥಿತಿ

* ಜಪಾನರ ವಿಜಯದ ಅಪ್ರಯೋಗತೆ

* ಚೀನೀ ರಾಷ್ಟ್ರೀಯ ಸರಕಾರದ ಹೊಸ ಯುದ್ಧಕ್ರಮ

ಜುಲೈ ತಾ 7ಕ್ಕೆ ಜಪಾನರು ಚೈನದ ಮೇಲೆ ಆಕ್ರಮಣ ನಡಿಸಿ ಎರಡು ವರ್ಷಗಳಾದುವು. ಆದರೆ ಇನ್ನೂ ಚೀನೀ ರಾಷ್ಟ್ರೀಯ ಸರಕಾರವು ಪರಾಜಿತವಾಗದೆ ದಿನೇ ದಿನೇ ಬಲಗೊಳ್ಳುತ್ತಿದೆ. ಜಪಾನು ಇನ್ನು ಮುಂದೆ ಪ್ರಬಲ ಹೋರಾಟ ನಡಿಸುವ ಆಲೋಚನೆಯನ್ನು ನಿಲ್ಲಿಸಿ ಗೆದ್ದ ಪ್ರದೇಶಗಳ ಮೇಲಿನ ತನ್ನ ಅಧಿಕಾರವನ್ನು ಭದ್ರಪಡಿಸಲೆತ್ನಿಸುತ್ತಿದೆ. ಸುಮಾರು ೧೦ ಮಿಲಿಯ ಜಪಾನ ಸೈನಿಕರೀಗ ಚೀನದ ಬೇರೆ ಬೇರೆ ಕಡೆಗಳಲ್ಲಿ ಚಿಕ್ಕ ಪುಟ್ಟ ಹೋರಾಟಗಳಲ್ಲಿ ನಿರತರಾಗಿರುತ್ತಾರೆ. ಜಪಾನರು ಹೇಂಕೋ ಪಟ್ಟಣವನ್ನು ವಶಪಡಿಸಿಕೊಂಡ ನಂತರ ದೊಡ್ಡ ಹೋರಾಟವೇನೂ ನಡೆದಿಲ್ಲ. ಅವರು ಪ್ರಬಲ ವಿಜಯವನ್ನು ಪಡೆದಿರುವುದಿಲ್ಲ. ನಾಂಕಿಂಗ್ ಪಟ್ಟಣವನ್ನು ಅವರು ವಶಪಡಿಸಿಕೊಂಡರೂ ಫಲವಿಲ್ಲದಂತಾಗಿದೆ. ಇಡೀ ಪಟ್ಟಣವು ನಾಶವಾಗಿರುವುದಲ್ಲದೆ ಅಲ್ಲಿ ನಡೆದ ಭೀಷಣ ಕದನದಲ್ಲಿ ಹೆಚ್ಚಿನ ಪ್ರಾಣಹಾನಿ ಕೂಡಾ ಆಗಿದೆ. ಜಪಾನಿನ ಸಾಂಪತ್ತಿಕ ಸ್ಥಿತಿಯು ಬಹಳವಾಗಿ ಕೆಟ್ಟುಹೋಗಿದೆ. ಅದಕ್ಕೆ ಇನ್ನು ಹೆಚ್ಚು ಸಮಯ ಚೀನದಲ್ಲಿ ಯುದ್ಧನಡಿಸಿಕೊಂಡಿರಲು ಸಾಧ್ಯವಿಲ್ಲ. ಆದರೆ ಚೀನೀ ರಾಷ್ಟ್ರೀಯ ಸರಕಾರವು ಸಮರಂಗ ಯುದ್ಧವನ್ನೇ ನಿಲ್ಲಿಸಿಟ್ಟು ಗೊರಿಲ್ಲ ಯುದ್ಧಕ್ರಮವನ್ನನುಸರಿಸುತ್ತಿದೆ. ಹೊಸತಾಗಿ ಸೈನಿಕರು ತರಬೇತಿ ಹೊಂದುತ್ತಿದ್ದಾರೆ. ವಿಶೇಷವಾಗಿ ಜನಸಾಮಾನ್ಯರು ಚೀನೀಯರನ್ನು ತೀವ್ರವಾಗಿ ದ್ವೇಷಿಸಿ ರಾಷ್ಟ್ರೀಯ ಸರಕಾರಕ್ಕೆ ಹಿಂದಿಗಿಂತಲೂ ಹೆಚ್ಚಾಗಿ ಸಹಾಯವೀಯುತ್ತಿದ್ದಾರೆ. ಚೀನೀ ರಾಷ್ಟ್ರೀಯ ಸರಕಾರವು, ಜಪಾನು ವಶಪಡಿಸಿಕೊಂಡಿರುವ ವಿಸ್ತಾರವಾದ ಪ್ರದೇಶದ ಸಂದುಗೊಂದುಗಳಲ್ಲಿ ಚಿಕ್ಕ ಪುಟ್ಟ ಯುದ್ಧ ನಡಿಸಿ ಪೀಡೆಕೊಡುತ್ತಿದೆ. ಮತ್ತು ಸ್ವಲ್ಪ ಸ್ವಲ್ಪವಾಗಿ ತಾನು ಕಳಕೊಂಡ ಪ್ರದೇಶವನ್ನು ವಶಪಡಿಸಿಕೊಳ್ಳುತ್ತಿದೆ. ಅದು ಇದೇ ಕ್ರಮದಲ್ಲಿ ಇನ್ನೂ ಐದಾರು ವರ್ಷಗಳ ವರೆಗಾದರೂ ಹೋರಾಡಿ ಜಪಾನಿಗೆ ಬೇಸರ ಹುಟ್ಟಿಸಿ ಅದನ್ನು ಸೋಲಿಸುವ ಧೋರಣೆ ವಹಿಸಿದೆ.

ಚೀನೀ ರಾಷ್ಟ್ರೀಯ ಸರಕಾರವನ್ನು ಸಂಪೂರ್ಣವಾಗಿ ಮತ್ತು ಶೀಘ್ರವಾಗಿ ಗೆಲ್ಲುವುದರಲ್ಲಿ ಭಗ್ನಮನೋರಥವಾದ ಜಪಾನು ತೀವ್ರ ಅಸಹಿಷ್ಣುತೆಯಿಂದ, ಅದಕ್ಕೆ ಅಪ್ರತ್ಯಕ್ಷವಾಗಿ ಸಹಾಯ ಮಾಡುತ್ತಿರುವ ಆಂಗ್ಲೇಯರೇ ಮೊದಲಾದವರ ಮೇಲೆ ಮುನಿದುಬಿದ್ದಿದೆ. ಅವರನ್ನು ನಾನಾ ವಿಧವಾಗಿ ಹಿಂಸಿಸಿ ಅವರ ವ್ಯಾಪಾರಕ್ಕೆ ಹಾನಿಯುಂಟುಮಾಡಿ ಬಗ್ಗುಬಡಿಯಬೇಕೆಂದು ಜಪಾನೀಗ ಪ್ರಯತ್ನಿಸುತ್ತಿದೆ. ಟೈನ್‌ಸ್ಟಿನ್ ಬಂದರಕ್ಕೆ ನೌಕಾ ಮುತ್ತಿಗೆ ಹಾಕಿರುವ ಉದ್ದೇಶವೇ ಇದು. ಯುರೋಪಿನ ವಿಷಮ ಪರಿಸ್ಥಿತಿಯಿಂದಾಗಿ ಪೂರ್ವಕ್ಕೆ ತನ್ನ ನೌಕೆಯನ್ನು ಕಳುಹಿಸಲಾಗದೆ ಇಂಗ್ಲೆಂಡು ಉಭಯ ಸಂಕಟದಲ್ಲಿ ಬಿದ್ದು, ಎಂತಹ ಅಪಮಾನವನ್ನಾದರೂ ಸಹಿಸಿ ಒಂದೊಮ್ಮೆ ಜಪಾನಿನೊಡನೆ ಒಪ್ಪಂದ ಮಾಡಿಕೊಳ್ಳಲು ಮುಂದಾವರಿದ ಬ್ರಿಟಿಷ್ ಪ್ರಧಾನಮಂತ್ರಿಗಳು ಈಗ ಜಪಾನನ್ನು ಅಗತ್ಯಬಿದ್ದರೆ ವಿರೋಧಿಸಬೇಕೆಂಬ ಕಠಿಣ ಧೋರಣೆಯುಳ್ಳವರಾಗಿರುವರು. ಇದಕ್ಕೆ ಅಮೇರಿಕದ ಕಠಿಣಧೋರಣೆಯೇ ಕಾರಣವೆನ್ನಬಹುದು. ಪ್ರೆಸಿಡೆಂಟ್ ರೂಸವೆಲ್ಟರು ಒಮ್ಮೆಯೇ ಜಪಾನಿನೊಡನೆ ——— ಮಾಡಿಕೊಂಡಿರುವ ಒಪ್ಪಂದವನ್ನು ಮುರಿದು ಹಾಕಿ ಜಪಾನಿನೊಡನೆ ಯಾವ ವ್ಯಾಪಾರ ವ್ಯವಹಾರವನ್ನೂ ನಡಿಸಬಾರದೆಂಬಷ್ಟು ಮುಂದುವರಿದುದರಿಂದ ಜಪಾನು ಚಕಿತವಾಗಿದೆ. ಅಮೇರಿಕ, ಇಂಗ್ಲೆಂಡ್ ಮತ್ತು ಫ್ರಾನ್ಸುಗಳೊಂದುಗೂಡಿ ಪೂರ್ವದಲ್ಲಿ ಜಪಾನನ್ನು ನಿರಾತಂಕವಾಗಿ ಇಚ್ಛಾನುಸಾರ ನಡೆಯಗೊಡಬಾರದೆಂಬ ನಿರ್ಧಾರಕ್ಕೆ ಬಂದಿರುವಂತಿದೆ.

ಜಪಾನರು ವಶಪಡಿಸಿಕೊಂಡಿರುವ ಚೀನದ ದೊಡ್ಡದೊಡ್ಡ ಪಟ್ಟಣಗಳ ಪರಿಸ್ಥಿತಿಯು ಹೃದ್ರಾವಕವಿದೆ. ದೊಡ್ಡದೊಡ್ಡ ಚೀನೀ ಪಟ್ಟಣಗಳು ಈಗ ಒಂದು ವರ್ಷದಿಂದ ಜಪಾನರ ಅಧೀನವಿವೆ. ಜಪಾನರು ಈ ಪಟ್ಟಣಗಳಲ್ಲಿ ತಮ್ಮ ಹೊಸ ಆಳ್ವಿಕೆಯನ್ನು ಸ್ಥಾಪಿಸಿದ ಮೇಲೆ ನೊದಲು ಅವುಗಳಲ್ಲಿದ್ದ 5,800 000 ಜನಸಂಖ್ಯೆಯು 3,400,000ಕ್ಕಿಳಿದು ಹೋಗಿದೆ. ಮೊದಲು ಅಭಿವೃದ್ಧಿ ಸ್ಥಿತಿಯಲ್ಲಿದ್ದ ಈ ಪಟ್ಟಣಗಳು ಈಗ ದಾರಿದ್ರ್ಯದ ನೆಲೆಬೀಡಾಗಿ ಜನರು ಅಸಹನೀಯ ಕಷ್ಟಕೋಟಲೆಗಳಿಗಾಗಿ ನರಳುತ್ತಿದ್ದಾರೆ. ಶಿಕ್ಷಿತರೂ, ಶ್ರೀಮಂತರೂ, ಉದ್ಯೋಗಿಗಳೆಲ್ಲರೂ ಆದ ಚೀನೀಯರು ಈ ಪಟ್ಟಣಗಳನ್ನು ಬಿಟ್ಟು ಹೋಗಿರುತ್ತಾರೆ. ಉಳಿದಿರುವ ಹೆಚ್ಚಿನ ಜನರು ವಿದೇಶೀಮಿಷನುಗಳ ಸಹಾಯದಿಂದ ಹೊಟ್ಟೆ ಹೊರಕೊಳ್ಳಬೇಕಾಗಿದೆ. ದೊಡ್ಡ ಪಟ್ಟಣಗಳ ಆಸುಪಾಸಿನ ಪ್ರದೇಶಗಳಲ್ಲಿ ಮಾತ್ರ ಜಪಾನರು ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದಾರೆ. ಉಳಿದ ಕಡೆಗಳಲ್ಲಿ ಅನಾಯಕತ್ವವು ಹಬ್ಬಿದೆ. ತಸ್ಕರರುಗಳು ಬಹಳವಾಗಿ ಹೆಚ್ಚಿವೆ. ಜನತೆಗೆ ಸುರಕ್ಷಿತತೆಯು ಇಲ್ಲದಂತಾಗಿದೆ.

ಘಟಿ ಲಕ್ಕೆ

ಯಾರು ಶೀಕ್ಷಿಸಬಹುದು?

ಕಾಂಗ್ರೆಸಿನ ನಿರ್ಣಯಗಳನ್ನು ಜ್ಯಾರಿಗೆ ತರುವವರು ಬೇರೆ ಬೇರೆ ಕಾಂಗ್ರೆಸ್ ಕಮಿಟಿಗಳ ಕಾರ್ಯಕಾರಿ ಮಂಡಲಿಯವರು. ಅವರೇ ಅವುಗಳನ್ನು ಮುರಿದು ವಿರೋಧಿಸ ಹತ್ತಿದರೆ ಕಾಂಗ್ರೆಸಿನ ಶಕ್ತಿ ಮತ್ತು ಪ್ರತಿಷ್ಠೆಯು ಕುಂದಿಹೋಗುವುದು. ಆದುದರಿಂದ ಅವರು ಕಾಂಗ್ರೆಸಿನ ನಿರ್ಣಯಗಳನ್ನು ವಿರೋಧಿಸಬಾರದು. ವಿರೋಧಿಸುವವರು ತಮ್ಮ ಕಾರ್ಯಕಾರಿ ಮಂಡಲಿಯ ಸ್ಥಾನಗಳಿಗೆ ರಾಜೀನಾಮೆ ಕೊಡತಕ್ಕದ್ದು. ಆದರೂ, ತಾತ್ವಿಕ ಭಿನ್ನಾಭಿಪ್ರಾಯವೇನಾದರೂ ಇದ್ದರೆ ಅದನ್ನು ಮುಂದೊಡ್ಡುವ ಸ್ವಾತಂತ್ರ್ಯವು ಕಾರ್ಯಕಾರಿ ಮಂಡಲಿಯ ಸದಸ್ಯರಿಗೂ ಇರಬೇಕು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯಗಳನ್ನು, ಪ್ರಾಥಮಿಕ ಕಾಂಗ್ರೆಸ್ ಮೆಂಬರರು ಕರೆಸಿ ಕಾಂಗ್ರೆಸ್ ಅಧಿವೇಶನದ ಮೂಲಕ ಅವನ್ನು ಬದಲಾಯಿಸಲೆತ್ನಿಸಬಹುದೆಂದು ಪಂಡಿತ ಜವಾಹರಲಾಲ ನೆಹರುಗಳು ಸಂಯುಕ್ತ ಪ್ರಾಂತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಸರ್ಕ್ಯುಲರೊಂದನ್ನು ಹೊರಡಿಸಿರುವರು. ಶ್ರೀ ಸುಭಾಸ್ ಭೋಸರೇ ಮೊದಲಾದವರಿಗೆ ಕಾಂಗ್ರೆಸಿನ ನಿರ್ಣಯಗಳನ್ನು ನಿಷೇಧಿಸುವ ಹಕ್ಕಿದೆ. ಆದರೆ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಅವರು ಮಾಡಿದುದು ತಪ್ಪೆಂದು ಪಂಡಿತರ ವಾದ. ಲಖ್ನೋ ಕಾಂಗ್ರೆಸಿನ ಪ್ರೆಸಿಡೆಂಟರಾಗಿದ್ದಾಗ ಪಂಡಿತರು, ಬಹುಮತದಿಂದ ನಿರ್ಧರಿಸಲ್ಪಟ್ಟಿದ್ದ ಅಧಿಕಾರ ಸ್ವೀಕಾರವನ್ನು ಜಾಹೀರಾಗಿ ನಿಷೇಧಿಸಲಿಲ್ಲವೇ? ಸಂಪೂರ್ಣ ಸ್ವರಾಜ್ಯದ ಧ್ಯೇಯವನ್ನು ಮುಂದೊತ್ತಲು ಕಾಂಗ್ರೆಸಿನೊಳಗೆ ಒಮ್ಮೆ ಇಂಡಿಪೆಂಡೆಂಟ್ ಲೀಗನ್ನು ಸ್ಥಾಪಿಸಲಿಲ್ಲವೇ? ಎಂದು ನರಿಮೆನರೇ ಮೊದಲಾದವರ ಪ್ರತಿವಾದ. ಆಗ ಪಂಡಿತರು ಮಾಡಿದುದು ಶಿಸ್ತಿಗೆ ವಿರೋಧವೆಂದು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ. ಈಗ ಸುಭಾಸರು ಮಾಡಿದುದು ತಪ್ಪೆಂದು ಉದ್ಘೋಷಿಸುವವರೇ ಕಾಂಗ್ರೆಸಿನೊಳಗೆ ಹೆಚ್ಚಾಗಿದ್ದಾರೆ ಭೇದ ಅಷ್ಟೆ.

ಮಿ. ಜಿನ್ನಾರವರ ಹೊಸ ಶೋಧ

ಇದೇ ತಾ. ೭ರಲ್ಲು ಮುಸ್ಲಿಮ್ ಲೀಗಿನ ಪ್ರೆಸಿಡೆಂಟರಾದ ಮಿ. ಜಿನ್ನಾರವರು ಬೊಂಬಾಯಿಯಲ್ಲಿ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣವೀಯುವಾಗ, ಪ್ರಜಾಸತ್ತೆಯು ಹಿಂದೂ ದೇಶಕ್ಕೆ ಹೇಳಿಸಿದುದಲ್ಲ. ಬೇರೆ ಬೇರೆ ಮತದವರಿರುವ ದೇಶದಲ್ಲಿ ಪ್ರಜಾ ಸತ್ತಾತ್ಮಕ ಸರಕಾರವು ಅಸಾಧ್ಯವೆಂದು ಕಂಠೋಕ್ತವಾಗಿ ಹೇಳಿರುವರು. ಅವರು ಮತ್ತಾವ ರೀತಿಯ ರಾಜ್ಯಭಾರಕ್ರಮವು ಹಿಂದೂದೇಶಕ್ಕೆ ಯೋಗ್ಯವಾದುದೆಂದು ಮಾತ್ರ ಹೇಳಲಿಲ್ಲ. ಮಿ. ಜಿನ್ನಾರನ್ನು ಇಡೀ ದೇಶದ ಡಿಕ್ಟೇಟರನ್ನಾಗಿ ಮಾಡಿದರೆ ಸಂಯೋಗವಾದೀತೋ ಏನೋ? ಪ್ರಜಾ ಪ್ರತಿನಿಧಿಸಭೆಗಳ ಕಾರ್ಯ ಕಲಾಪಗಳಲ್ಲಿ ಹಲವು ವರ್ಷಗಳಿಂದ ಭಾಗವಹಿಸಿಕೊಂಡು ಬಂದಿರುವ ಜಿನ್ನಾ ಸಾಹೇಬರಿಗೆ ಆ ಕುರಿತು ಜುಗುಪ್ಸೆಯುಂಟಾಗಿರಬೇಕು. ಇಲ್ಲವಾದರೆ ಮುದಿಪ್ರಾಯದಲ್ಲಿ ಅವರಿಗೇನಾದರೂ ಭ್ರಾಂತಿ ಹಿಡಿದಿರಬೇಕು.

THE
BOMBAY LIFE ಸ್ಥಾಪನೆ 1908 ದಿ ಬೊಂಬೇ ಲೈಫ್
ASSURANCE CO, LTD ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.
ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಐವೇಜು.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಲಲ್ಲೂಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ
ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ	ಪುವ್ವಾಡ,	ಪೋ. ಬಾಕ್ಸ್ ನಂ.337, ಮೌಂಟ್‌ರೋಡ್,	ವಿಶ್ವೇಶ್ವರಪುರಂ ಸರ್ಕಲ್	ಚರ್ನಿರೋಡ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ. 4	ತ್ರಿವಂಡ್ರಮ್.

ವಾರ್ತಾ ಸಂಗ್ರಹ

ಹಿಟ್ಲರನು ಲೋಕಯುದ್ಧಕ್ಕೆ ಸಿದ್ಧನೇ ಇದ್ದಾನೆ

'ಪಗಡೆ ಚೆಲ್ಲಿಯಾಯಿತು. ಇನ್ನು ಹಿಂದೆ ಸರಿಯಲು ಸಾಧ್ಯವಿಲ್ಲ. ಡಾನ್ಜಿಗನ್ನು ಜರ್ಮನಿಗೆ ಸೇರಿಸಿಕೊಳ್ಳಬೇಕೆಂದು ನಾವು ನಿರ್ಧಾರವಮಾಡಿಯಾಯಿತು ಇನ್ನು ಅದರ ಉಚಿತ ಅನುಚಿತತೆಯ ಪ್ರಶ್ನೆಯೇ ಇಲ್ಲ. ಅದನ್ನು ಸಾಧಿಸಲು ನಾವು ಸಿದ್ಧರಾಗಬೇಕು ಪರಿಣಾಮ ಏನಾದರೂ ನಾವು ನಮ್ಮ ಕಾರ್ಯ ಸಾಧಿಸಬೇಕು ಇನ್ನು ನಮ್ಮ ಮುಂದಿರುವುದು ಕೆಲವೇ ವಾರಗಳು ಇದರಿಂದ ಇಡೀ ಲೋಕದಲ್ಲೇ ಸರ್ವ ಸಾಮಾನ್ಯವಾಗಿ ಯುದ್ಧವಾಗಬಹುದೆಂದು ನಿಮ್ಮಲ್ಲಿ ಕೆಲವರು ನನಗೆ ಹೇಳಬಹುದು. ಹಾಗಾದರೆ ಮತ್ತೂ ಒಳ್ಳೆಯದೇ ಆಯಿತು ನಮಗೆ ಇನ್ನು ಮುಂದೆ ಇಷ್ಟೊಂದು ಅನುಕೂಲ ಸಂದರ್ಭಗಳು ಸಿಗಬಹುದೆಂದು ನಾನೆಣಿಸುವುದಿಲ್ಲ ಇಂದು ಜರ್ಮನಿ ಇಟಲಿ ಮತ್ತು ಜಪಾನಗಳು, ಅವರ ಎಲ್ಲಾ ವೈರಿಗಳೊಟ್ಟಾದರೂ ಅವರನ್ನು ಗೆಲ್ಲುವ ಸ್ಥಿತಿಯಲ್ಲಿರುವವು ಆದುದರಿಂದ ಮಹತ್ತಾದ ಸಾಹಸದ ಸಂದರ್ಭವೀಗ ಬಂದಿದೆ." ಎಂದು ಹಿಟ್ಲರನು 'ತನ್ನ ಯುದ್ಧ ಮಂತ್ರಾಲೋಚಕರೊಡನೆ ಕಳೆದ ತಿಂಗಳಲ್ಲಿ ಹೇಳಿರುವನೆಂದು ಪ್ರಕಟವಾಗಿದೆ.

ತಂಬಾಕಿನ ಮೇಲಿನ ತೆರಿಗೆ

ಆಗೋಸ್ತು ತಾ 5ರವರೆಗೆ ಮದ್ರಾಸ್ ಪ್ರಾಂತದ ಬೇರೆ ಬೇರೆ ತಾಲೋಕುಗಳಿಂದ 70,000 ಜನರು ತಂಬಾಕಿನ ವ್ಯಾಪಾರ ನಡಿಸಲು ಲೈಸನ್ಸಿಗಾಗಿ ಅರ್ಜಿಮಾಡಿಕೊಂಡಿರುವರೆಂದು ತಿಳಿದು ಬರುತ್ತದೆ ಇನ್ನೂ ಹೆಚ್ಚಿನ ಅರ್ಜಿಗಳು ಬರುವುದರಲ್ಲಿವೆ. ತಂಬಾಕಿನ ಮೇಲಿನ ತೆರಿಗೆಯಿಂದಾಗಿ ತಂಬಾಕು ವ್ಯಾಪಾರವು ಕಡಿಮೆಯಾಗುವುದೆಂಬ ಭೀತಿಯು ಆಧಾರರಹಿತವಾದುದೆಂದು ಮದ್ರಾಸ್ ಸರಕಾರದ ಅಭಿಮತ,

ಶ್ರೀ ಸುಭಾಸಚಂದ್ರ ಭೋಸರು

ಇದೇ ತಾ. 5ರಲ್ಲು ಅಖಿಲ ಒರಿಸ್ಸ ಯುವಕ ಪರಿಷತ್ತಿನ ಅಧ್ಯಕ್ಷತನ ವಹಿಸಲು ಕಟಕ್ ಪಟ್ಟಣಕ್ಕೆ ಹೋದಾಗ ಅವರನ್ನು ಸ್ಟೇಶನಿನಲ್ಲಿ ಇಳ್ಳಿರಿಸಿ ದೊಡ್ಡ ಮೆರವಣಿಗೆ ನಡೆಯಿತು ಅವರೊಂದಿಗೆ ಒರಿಸ್ಸ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ನೀಲಕಾಂತ ದಾಸರೂ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಮಿ ಅಶ್ರಫುದ್ದೀನರೂ ಬಂದಿದ್ದರು.

ಡಾನ್ಜಿಗಿನ ಪರಿಸ್ಥಿತಿ

ಡಾನ್ಜಿಗ್ ಸೆನಟಿಗೂ ಪೋಲೆಂಡ್ ಸರಕಾರಕ್ಕೂ ಒಂದಲ್ಲೊಂದು ವಿಷಯದಲ್ಲಿ ತಿಕ್ಕಾಟವು ನಡೆಯುತ್ತಲೇ ಇದೆ ಡಾನ್ಜಿಗಿನ ಎಲ್ಲೆಯನ್ನು ಮೀರಿ ಯಾವ ರಾಷ್ಟ್ರಕ್ಕಾದರೂ ತೆರೆದಲ್ಲಿ ಪೋಲೆಂಡು ಅದನ್ನು ಅತ್ಯಂತ ಗಂಡಾಂತರದ ವಿಷಯವಾಗಿ ಪರಿಗಣಿಸುವುದೆಂದು ಎಚ್ಚರಿಸಲಾಗಿದೆ ಇತ್ತಲಾಗಿ ಡಾನ್ಜಿಗಿನಲ್ಲಿ ಯುದ್ಧ ಸಿದ್ಧತೆಯು ಅಧಿಕವಾಗಿ ನಡೆಸಲ್ಪಡುತ್ತಿದೆ ಪೋಲೆಂಡು ಡಾನ್ಜಿಗಿನ ಪರಿಸ್ಥಿತಿಯನ್ನು ಎಚ್ಚರದಿಂದ ಕಾಯುತ್ತಿದೆ

ಪೋಲೆಂಡಿನ ಎಲ್ಲೆಯಲ್ಲಿ ಜರ್ಮನ್ ಸೇನಾಸಂಗ್ರಹ

ಪೋಲೆಂಡ್ ಮತ್ತು ಜೆಕೋಸ್ಲೊವೇಕಿಯದ ಎಲ್ಲೆಯಲ್ಲಿ ಜರ್ಮನಿಯು 1,50,000 ಸೇನೆಯನ್ನು ಸಂಗ್ರಹಿಸಿರುವುದೆಂದು ತಿಳಿದುಬಂದಿದೆ ಜೆಕೋಸ್ಲೋವೇಕಿಯದಿಂದ ಪೋಲೆಂಡಿನ ಗಡಿಗೆ ಹೋಗಿ ಸೇರುವ ರಸ್ತೆಗಳ ರಿಪೇರಿ ಮೊದಲಾದ ಕೆಲಸವನ್ನು ಆಗೋಸ್ತು ತಾ. 15ರೊಳಗೆ ಸಂಪೂರ್ಣಗೊಳಿಸಬೇಕೆಂದು ಹುಕುಮು ಕೊಡಲ್ಪಟ್ಟಿದೆ.

ಟ್ಯೆನ್‌ಸ್ಟಿನಲ್ಲಿ ಬ್ರಿಟಿಷ್ ವಿರೋಧ ಲೂಟಿ

ಇದೇ ತಾ 1ರಲ್ಲು ಟ್ಯೆನ್‌ಸ್ಟಿನಿನ ಬೆಲ್‌ಜಿಯನ್ ವಸಾಹತಿನ ಮೇಲೆ 200ಮಂದಿ ಚೀನೀಯರು ಪಕ್ಕನೆ ಧಾಳಿನಡಿಸಿ ಅತಿ ದೊಡ್ಡ ಬ್ರಿಟಿಷ್ ಕಂಪೆನಿಯೊಂದರ ಕಟ್ಟಡಕ್ಕೆ ನುಗ್ಗಿ ಲೂಟಿಮಾಡಿರುವರು. ಕಂಪೆನಿ ನೌಕರರು, ಹತ್ತಿರದ ಟೆಕ್ಸಾಸ್ ಎಣ್ಣೆ ಕಂಪೆನಿಯ ಕಟ್ಟಡದಲ್ಲಿ ಆಶ್ರಯಪಡೆದರು. ಜಪಾನಿನಲ್ಲಿಯೂ, ಜಪಾನರು ಗದ್ದಿರುವ ಚೈನಾದ ಹಲವು ಕಡೆಗಳಲ್ಲಿಯೂ ಬ್ರಿಟಿಷರ ತೀವ್ರ ವಿರೋಧ ಪ್ರದರ್ಶನಗಳು ನಡೆಯುತ್ತಿವೆ. ಟ್ಯೆನ್‌ಸ್ಟೀನಿನ ಸುತ್ತಲಿನ ನಾಕಾಬಂದಿಯು ಮತ್ತಷ್ಟು ಕಠಿಣ ಮಾಡಲ್ಪಟ್ಟಿದೆ ಬ್ರಿಟಿಷ್ ವಸಾಹತಿಗೆ ಅರ್ಧರಾತ್ಲು ಮಾಂಸವನ್ನು ಕೂಡಾ ತರಬಿಡುವುದಿಲ್ಲ ಇದರಿಂದಾಗಿ ಟ್ಯೆನ್‌ಸ್ಟಿನನ ಪರಿಸ್ಥಿತಿಯು ಪುನಃ ಅತಿ ವಿಷಮಾವಸ್ಥೆಗೆ ಮುಟ್ಟಿದೆ

ಜಪಾನಿಗೆ ಬ್ರಿಟಿಷ್ ಪ್ರಧಾನ ಮಂತ್ರಿಗಳ ಎಚ್ಚರ

"ಕಳೆದ ಕಲವು ತಿಂಗಳುಗಳಲ್ಲಿ ಜಪಾನರು ಪೂರ್ವದಲ್ಲಿ ನಡಿಸುವ ಕೃತ್ಯಗಳು ಅತ್ಯಂತ ಆಕ್ಷೇಪಣೀಯವಿವೆ ಆದರೆ ಇಂಗ್ಲೆಂಡು ದೊಡ್ಡ ಉಭಯಸಂಕಟದಲ್ಲಿ ಬಿದ್ದಿದೆ. ಪ್ರಕೃತ ಪೂರ್ವದಲ್ಲಿರುವ ನಮ್ಮ ನೌಕೆಯು ಜಪಾನಿನದಕ್ಕಿಂತ ಪ್ರಬಲವಾಗಿರುವುದಿಲ್ಲ. ಯುರೋಪಿನ ವಿಷಮ ಪರಿಸ್ಥಿತಿಯಿಂದಾಗಿ ನಾವು ನಮ್ಮ ಹೆಚ್ಚಿನ ನೌಕೆಯನ್ನು ಇಲ್ಲಿಯೇ ಇರಿಸಿಕೊಳ್ಳಬೇಕಾಗಿದೆ. ಆದರೆ ಕಲವೊಂದು ವಿಸ್ಮಯಾನಗಳಲ್ಲಿ ನಮ್ಮ ಹಡಗ ಪಡೆಯನ್ನು ನಾವು ಪೂರ್ವಕ್ಕೆ ಕಳುಹಿಸುವ ಆಗತ್ಯಬೀಳಬಹುದೆಂದು ನಾನು ಜಪಾನಿಗೆ ಎಚ್ಚರವೀಯಬೇಕಾಗಿದೆ ಬ್ರಿಟಿಷ್ ರಾಯಭಾರಿಯು ಜಪಾನಿನ ಪ್ರತಿನಿಧಿಗಳೊಡನೆ ನಡಿಸುವ ಸಂಧಿಪ್ರಸ್ತಾಪವು ಇನ್ನುವರೆಗೆ ಮುಗಿದಿಲ್ಲ ಅದು ಯಾವ ರೀತಿ ಆಗುವುದೆಂದು ಈಗ ಹೇಳಲು ಬರುವುದಿಲ್ಲ ಟ್ಯೆನ್‌ಸ್ಟಿನಿನ ಸಂಬಂಧವಾಗಿ ಒಪ್ಪಂದಮಾಡಿಕೊಳ್ಳಬಹುದು ಆದರ ಇತರ ಕಡೆಗಳ ಕುರಿತೂ ಒಪ್ಪಂದವಾಗಬೇಕು ಚೈನದಲ್ಲಿ ಜಪಾನರು ನಮ್ಮ ಜನರ ಮೇಲೆ ನಡೆಸುವ ಅತ್ಯಾಚಾರಗಳಿಂದ ನನ್ನ ರಕ್ತವೂ ಕದಿಯುತ್ತದೆ ಆದರ ಯುರೋಪಿನಲ್ಲಿ ಯುದ್ಧವಾಗುವ ಸಂಭವವಿದ್ದು ನಾವು ದೊಡ್ಡ ಜವಾಬ್ದಾರಿ ಹೊತ್ತಿರುವಾಗ ಪೂರ್ವದಲ್ಲಿಯ ಧ್ವದ ಅನ್ಯಾಯ ಕೃತ್ಯಗಳಿಗಾಗಿ ಯುದ್ಧ ಸಾಧ್ಯವಿಲ್ಲ"ವೆಂದು ಮಿ ಚೇಂಬರ್ಲೇನರು ಇದೇ ತಾ 1ರಲ್ಲು ಪಾರ್ಲಿಮೆಂಟಿನಲ್ಲಿ ಹೇಳಿದರು

ಅಸ್ಸಾಮ್ ಮಂತ್ರಿಮಂಡಲದ ವಿಜಯ

ಅಸ್ಸಾಮ್ ಮಂತ್ರಿಮಂಡಲವು, ವ್ಯವಸಾಯೋತ್ಪತ್ತಿಯ ಮೇಲೆ ಆದಾಯ ತೆರಿಗೆ ಹಾಕುವ ಮಸೂದೆಯನ್ನು ಇದೇ ತಾ 4ರಲ್ಲಿ ಎಸಂಬ್ಲಿ ಮತ್ತು ಕೌನ್ಸಿಲಿನ ಸಂಯುಕ್ತ ಅಧಿವೇಶನದ ಮುಂದೆ ತಂದಿತು ಈ ಸಂಬಂಧವಾಗಿ ಮಂತ್ರಿಮಂಡಲಿಯೊಳಗೇನೇ ಭಿನ್ನಾಭಿಪ್ರಾಯವುಂಟಾಗಿರುವುದೆಂದೂ, ಆದುದರಿಂದ ಮಂತ್ರಿಮಂಡಲವು ಅಪಜಯ ಹೊಂದುವ ಸಂಭವವಿದೆಯೆಂದೂ ಸುದ್ದಿಹಬ್ಬಿದ್ದಿತು ಆದರೆ ಮತಗಣನೆಯಾಗ ಮಸೂದೆಯ ಪರವಾಗಿ 65 ಮತ್ತು ಪ್ರತಿಕೂಲ 56 ಮತಗಳು ದೊರೆತು ಮಂತ್ರಿಮಂಡಲವು ದೊಡ್ಡ ವಿಜಯಪಡೆಯಿತು

ಉಪವಾಸವ್ರತ ನಿಲ್ಲಿಸಲ್ಪಟ್ಟಿತು

ಶ್ರೀ ಬೋಸ್ ಸಹೋದರರ ಎಡೆಬಿಡದ ಪ್ರಯತ್ನದಿಂದಾಗಿ ಬಂಗಾಳದ ರಾಜಕೀಯ ಕೈದಿಗಳು 27 ದಿವಸಗಳ ನಂತರ ತಮ್ಮ ಉಪವಾಸ ವ್ರತವನ್ನು ಇದೇ ತಾ. 3ರಲ್ಲು ನಿಲ್ಲಿಸಿರುವರು ಇವರ ಬಿಡುಗಡೆಯ ಜವಾಬ್ದಾರಿಯನ್ನು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ವಹಿಸಿರುವರು. ಮತ್ತು ಬಿಡುಗಡೆಗಾಗಿ ಬಂಗಾಳ ಮಂತ್ರಿ ಮಂಡಲಕ್ಕೆ 2ತಿಂಗಳ ವಾಯಿದೆ ಕೊಡಲಾಗಿದೆ. ಆ ಮೊದಲು ಬಿಡುಗಡೆ ಮಾಡದಿದ್ದಲ್ಲಿ ಬಂಗಾಳ ಕಾಂಗ್ರೆಸ್ ಕಮಿಟಿಯವರು ಉಗ್ರ ಚಳವಳವನ್ನೇನಾದರೂ ಹೂಡಲಿರುವರು ಅದಕ್ಕಾಗಿ ಈಗಲೇ ಸಿದ್ಧತೆ ನಡೆಯುತ್ತಿರುವುದು ಇಷ್ಟರತನಕ 2000 ಕ್ಕಿಂತಲೂ ವಿಕ್ಕಿದ ಸ್ವಯಂ ಸೇವಕರು ಸೇರಿಸಲ್ಪಟ್ಟಿರುತ್ತಾರೆ. ಇದೇ ತಾ. 4ರಲ್ಲು ಶ್ರೀ ಸುಭಾಸ ಚಂದ್ರರು ಕಲ್ಕತ್ತೆಯಲ್ಲಿ ಭಾಷಣವೀಯುತ್ತಾ, ಎಲ್ಲಾ ರಾಜಕೀಯ ಕೈದಿಗಳು ನಿಶ್ಶರ್ತವಾಗಿ ಬಿಡುಗಡೆಮಾಡಲ್ಪಡುವ ವರೆಗೆ ಚಳವಳವನ್ನು ತೀವ್ರವಾಗಿ ಮುನ್ನಡೆಸಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಂಡರು. ಇದೇ ತಾ 5ರಲ್ಲು ಶ್ರೀಗಳಾದ ಜೋಗೇಂದ್ರಬೆನರ್ಜಿ ಮತ್ತು ಹರಿಪಾದ ಬೋಸರೆಂಬ ಇಬ್ಬರು ರಾಜಕೀಯ ಕೈದಿಗಳು ಬಿಡುಗಡೆ ಮಾಡಲ್ಪಟ್ಟಿರುತ್ತಾರೆ ಇವರ ಇನ್ನೆರಡು ವರ್ಷಗಳ ಶಿಕ್ಷೆಯನ್ನು ಮಾಫಿಮಾಡಲಾಗಿದೆ ಬಂಗಾಳ ಮಂತ್ರಿ ಮಂಡಲವು ನೇಮಿಸಿರುವ ಕಮಿಟಿಯವರು ಈ ಕೈದಿಗಳ ಕುರಿತು ಸಮಾಲೋಚಿಸಿ ಕ್ರಮಶಃ ಅವರನ್ನು ಬಿಡುಗಡೆ ಮಾಡಲಾಗುವುದೆಂದೂ, ಇಂತಿಷ್ಟೇ ಸಮಯದೊಳಗೆ ಬಿಡುಗಡೆಮಾಡುವ ಶರ್ತವನ್ನೇನೂ ಸರಕಾರವು ಸ್ವೀಕರಿಸುವುದಿಲ್ಲೆಂದೂ ಬಂಗಾಳದ ಹೋಮ್ ಮಿನಿಸ್ಟರರಾದ ಸರ್ ನಜೀಮುದ್ದೀನರು ಪ್ರಕಟಗೊಳಿಸಿರುವರು

ಮುಸ್ಲಿಮ್ ಲೀಗಿನೊಳಗೆ ಒಡಕು.

ಮುಸ್ಲಿಮ್ ಲೀಗಿನಲ್ಲಿ ಒಡಕುಂಟಾಗುವ ಸಂಭವ ತೋರುತ್ತವೆ ಮಿ. ಜಿನ್ನಾರವರ ಸರ್ವಾಧಿಕಾರತ್ವದಿಂದ ಉತ್ತರ ಹಿಂದುಸ್ಥಾನದ ಹಲವು ಮಂದಿ ಮುಸಲ್ಮಾನ ಮುಖಂಡರು ಅತೃಪ್ತಿಗೊಂಡಿರುತ್ತಾರೆ, ಫೆಡರೇಶನಿನ ಕುರಿತಾದ ಅವರ ವಿಚಾರವೂ, ಕಾಂಗ್ರೆಸಿನ ಅವರ ದ್ವೇಷವೂ ಈ ಮುಖಂಡರಲ್ಲಿ ಅಸಮಾಧಾನವನ್ನುಂಟುಮಾಡಿದೆ ಸರ್ ಸಿಕಂದರ್ ಹಯಾತ್ ಖಾನರ ನಾಯಕತ್ವದಲ್ಲಿ ಆ ಮುಖಂಡರು ತಮ್ಮ ಪಕ್ಷವೊಂದನ್ನು ಸ್ಥಾಪಿಸಿ ಲೀಗಿನಿಂ

When God Adopts Manhood?

Truthfulness is all powerful and it is Heavenly peace to all souls **Who says** that man is helpless? Who says that man cannot fulfill his wishes? Who believes anything impossible on this earth? Those who are tired of life Those who have ill luck Those who are downhearted are wellcome What are your wishes that you cannot fulfilling? What diseaseous is there which cannot be cured? What is it that you cannot do? **Look, Open your eyes** and see Gods powers are present in mankind A pious spiritualist shows you Heavenly Astrological wonders relieves you of all kinds of diseases, and removes all difficulties in fulfiling your diseaseous in life. With all powerful truthfulness he brings you Heavenly peace and prosperity. The success of great man like Mahathma Gandhi, Hittler Napolean will be explained, and men will be shown their way to salvation within 24 hours Truth is all powerful and it is Heavenly bless A man can do wonders with, it he is true in heart and soul If you want to do this come, Hindoo, Muslims, Parsis and all others will be given advise, how to remove all difficulties in life with spiritualism On consulting this wonderfulman, you will have some idea about the real powers of nature, and nature itself.

N B. (For 3 questions Rs. 2 only.)
Money to be sent by post or personaly

Address: SPIRITUAL SPERT
First Floor
Mahakali Mandir Chawl
PYDHONY, BOMBAY

ದ ಪ್ರತ್ಯೇಕವಾಗುವ ಚಿಸ್ನೆಗಳು ತೋರಿಬರುತ್ತವೆ. ಇದು ಹೊರತು ಪಾಲೆಸ್ತೈನ ಪಜ್ರತ್ ಮೋಹನಿಯವರು, ಮುಸ್ಲಿಮ್ ಲೀಗೆಂಬುದು ಕೇವಲ ಮೇಲು ವರ್ಗದ ಶ್ರೀಮಂತರ ಪಕ್ಷ, ಜನಸಾಮಾನ್ಯರ ಪಕ್ಷವಾಗಿಲ್ಲ. ಜನಸಾಮಾನ್ಯರ ಹಿತವನ್ನೇ ನೋಡುವ ಸಂಸ್ಥೆ ಜನಸಾಮಾನ್ಯರ ಹಿತಸಾಧನೆಗೆ ತಕ್ಕ ತೀವ್ರಗಾಮಿಗಳು ಮುಸ್ಲಿಮರ ಒಳಗಿನಲ್ಲಿ ಹಲವರಿದ್ದಾರೆ ಅವರನ್ನೆಲ್ಲಾ ಒಟ್ಟುಗೂಡಿಸಿ ಪ್ರತ್ಯೇಕವಾದ ಪಕ್ಷವನ್ನು ಸ್ಥಾಪಿಸಬೇಕೆಂದು ಆಲೋಚಿಸುತ್ತಿದ್ದಾರೆ. ಈ ಸಂಬಂಧವಾಗಿ ಅವರಿಗೂ ಶ್ರೀ. ಎಮ್. ಎನ್. ರಾಯ್‌ರವರಿಗೂ ಮಾತುಕತೆ ನಡೆದಿದೆ.

ಇಪ್ಪಿಯ ಫಕೀರರ ಪ್ರತೀಕಾರ

ಇದೇ ತಾ. 1ನೇ ರಾತ್ರಿ ನಾಯಿಶ್ಯಗಡಿ ನಾಡಿನ ಬನ್ನುಪಟ್ಟಣದಿಂದ ಸುಮಾರು 3 ಮೈಲು ದೂರವಿರುವ ನಿಜಾಮ್ ಬಜಾರ್ ಎಂಬ ಹಳ್ಳಿಯ ಮೇಲೆ ಗಡಿನಾಡಿನ ಸಂಗಡಿಗರು ಕೆಲವರು ಧಾಳಿನಡಿಸಿ 4 ಹಿಂದು ಅಂಗಡಿಗಳನ್ನು ಲೂಟಿಯಿಸಿ ಗುರುದ್ವಾರವೊಂದನ್ನು ಸುಟ್ಟುಹಾಕಿದರು. ಈ ಹಳ್ಳಿಯ ಚೌಕಿದಾರರಿಗೂ ಈ ದರೋಡೆಗಾರರಿಗೂ ಹೋರಾಟ ನಡೆದು ದರೋಡೆಗಾರರ ತರುಣ ನಾಯಕನೂ, ಇಪ್ಪಿಯ ಫಕೀರರ ಮುಖ್ಯ ಸೇನಾನಾಯಕರಲ್ಲೊಬ್ಬನೂ ಆದ ಮುಷ್ಕಿ ಅಲಮ್ ಖಾನನು ಕೊಲ್ಲಲ್ಪಟ್ಟನು. ಇದೇ ತಾ. 4ನೇ ರಾತ್ರಿ ಇಪ್ಪಿಯ ಫಕೀರರ ಬಲೀಪನೆಂದು ಪ್ರಖ್ಯಾತನಾಗಿರುವ ಗುಲ್ ನವಾಜನು 150 ಮಂದಿಯೊಂದಿಗೆ, ಮುಷ್ಕಿ ಅಲಮನನ್ನು ಗುಂಡುಹೊಡೆದ, ಕೊಂದ ಚೌಕಿದಾರನಾದ ಜಮಾಲ್ ಮಿಯಾನನ ದೊಡ್ಡ ಮನೆಯ ಮೇಲೆ ಧಾಳಿಯಿಟ್ಟು, ಮನೆಯೊಳಗಿದ್ದ ಇಬ್ಬರು ಸ್ತ್ರೀಯರನ್ನು ಹಿಡಿದೊಯ್ದು ಮನೆಗೆ ಬೆಂಕಿಕೊಡಿಸಿದನು. ಈ ದರೋಡೆಗಾರರು 45 ನಿಮಿಷಗಳ ವರೆಗೆ ಈ ಹಳ್ಳಿಯಲ್ಲಿದ್ದು, ಜಮಾಲ್ ಮಿಯಾನನನ್ನು ಹುಡುಕುತ್ತಾ ನಿಜಾಮ್ ಬಜಾರಿಗೆ ಹೋಗುವುದರಲ್ಲಿರಲು, ಪೋಲೀಸರು ಬರುವ ಸುದ್ದಿ ಕೇಳಿ ಕೂಡಲೇ ಹೊರಟುಹೋದರು. ಇಪ್ಪಿಯ ಫಕೀರರು ಮುಸಲ್ಮಾನರ ಹೊಸ ರಾಜ್ಯವೊಂದನ್ನೇ ಸ್ಥಾಪಿಸುವ ಕಲ್ಪನೆಯಲ್ಲಿರುವರಂತೆ.

ಸಿಂಧಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ

ಸಿಂಧಿನ ಮಂತ್ರಿಗಳಾದ ಶ್ರೀ ನಿಚಲ್ದಾಸ್ ವಜೀರಾನಿಯವರು ಬೊಂಬಾಯಿಗೆ ಬಂದು ಸಿಂಧಿನಲ್ಲಿ ಸಂಪೂರ್ಣ ಕಾಂಗ್ರೆಸ್ ಮಂತ್ರಿಮಂಡಲಿಯನ್ನು ಸ್ಥಾಪಿಸುವ ಕುರಿತು ಸರ್ದಾರ್ ವಲ್ಲಭಾಯಿಯವರೊಡನೆ ಮಾತುಕತೆ ನಡೆಸುತ್ತಿರುವರು. ಸಿಂಧಿನ ಪ್ರಧಾನಮಂತ್ರಿಗಳಾದ ಖಾನ್ ಬಹದೂರ್ ಅಲ್ಲಾಬಕ್ಷರ, ಪಕ್ಷದವರು, ಕಾಂಗ್ರೆಸ್ ಪಕ್ಷದೊಳಗೆ ಅವರನ್ನು ಸರಿಸಮಾನತೆಯಿಂದ ಸೇರಿಸಿಕೊಂಡ ಪಕ್ಷದಲ್ಲಿ ಸಂತೋಷದಿಂದ ಸೇರಿ ಕಾಂಗ್ರೆಸ್ ಕಾರ್ಯಕ್ರಮವನ್ನು ಮುಂದೊತ್ತಲು ಸಿದ್ಧರಿರುವರು.

ಬಿಹಾರ್ ಬಂಗಾಳ ಮತ್ತು ಅಸ್ಸಾಮ್‌ಗಳಲ್ಲಿ ನೆರೆ ಹಾವಳಿ

ಇದೇ ತಾ. 2ರಲ್ಲಿ ಎಡಬಿಡದೆ ಮಳೆ ಸುರಿದ ಪರಿಣಾಮವಾಗಿ ಬಿಹಾರ್, ಬಂಗಾಳ ಮತ್ತು ಅಸ್ಸಾಮ್ ಪ್ರಾಂತಗಳಲ್ಲಿ ದೊಡ್ಡ ನೆರೆ ಬಂದು ಹಲವು ಹಳ್ಳಿಗಳು ಮುಳುಗಿ ಹೋಗಿವೆ. ಉತ್ತರ ಬಿಹಾರಿನ ಕಮಲ ನದಿಯ ಮೇಲಿನ ದೊಡ್ಡ ಸೇತುವೆಯೊಂದು ಬಿದ್ದು ಹೋಗಿದೆ. ಅದರ ಮೇಲೆ ನಿಂತುಕೊಂಡು ನೋಡುತ್ತಿದ್ದ ಕೆಲವರು ನೀರಿಗೆ ಹಾರಿ ಪ್ರಾಣ ಉಳಿಸಿಕೊಂಡರು. ಇಬ್ಬರು ಪ್ರವಾಹದಿಂದ ಒಯ್ಯಲ್ಪಟ್ಟಿರುವರು. ಬಂಗಾಳದ ಚಿತ್ತಗೋಂಗ್, ನವಕಾಳಿ, ಢಕ್ಕಾ ಮೊದಲಾದ ಜಿಲ್ಲೆಗಳಲ್ಲಿ ನೆರೆ ಹಾವಳಿಯಿಂದ ಹೆಚ್ಚಿನ ಹಾನಿಯಾಗಿದೆ. ಕಲ್ಕತ್ತ ಪಟ್ಟಣದಲ್ಲಿ ನೆರೆ ನೀರು ತುಂಬಿದ್ದಿತು. ಹುಗ್ಲಿ ನದಿಯಲ್ಲಿ ಒಂದು ದೋಣಿ ಕವಚಿಬಿದ್ದು ಕೆಲವರ ಪ್ರಾಣಹಾನಿಯಾಗಿದೆ. ಕಿತ್ತನಾರು ಬೆಳೆಗೆ ಹೆಚ್ಚಿನ ಹಾನಿಯುಂಟಾಗಿದೆ. ಅಸ್ಸಾಮಿನ ಕೆಲವು ಕಡೆಗಳಲ್ಲಿಯೂ ಹಾವಳಿಯಾಗಿದೆ.

ಅಂತರ್ಯುದ್ಧದ ನಂತರದ ಸ್ಪೈನು

ಭಯಂಕರ ಪ್ರತೀಕಾರ

ಸ್ಪೈನಿನ ಅಂತಃಕಲಹವು 2½ ವರ್ಷಗಳ ವರೆಗೆ ಭೀಕರವಾಗಿ ನಡೆದು ಈಗ ತಾನೆ ಕೊನೆಗೊಂಡಿರುವುದು. ಬೇರೆಬೇರೆ ಯುದ್ಧರಂಗಗಳಲ್ಲಿ 10,00,000ಕ್ಕಿಂತಲೂ ಮಿಕ್ಕಿದ ಜನರು ಕೊಲ್ಲಲ್ಪಟ್ಟಿರುವರೆಂದು ಅಂದಾಜುಮಾಡಲಾಗಿದೆ. ಯುದ್ಧದ ಬೇರೆ ಬೇರೆ ರೀತಿಯ ಹಾವಳಿ, ಸಾಂಕ್ರಮಿಕ ರೋಗರುಜಿನೋಪಳಾದುವುಗಳಿಂದ ಪುನಃ ಒಂದು ಮಿಲ್ಯ ಜನರು ಹತರಾಗಿರಬಹುದು. ಹೀಗೆ ಒಟ್ಟು 2ಮಿಲ್ಯ ಜನರು, ಅಂದರೆ ಸ್ಪೈನಿನ ಜನ ಸಂಖ್ಯೆಯು ನೇಕಡ 10 ಷ್ಟು ಮಂದಿ ನಾಶವಾಗಿರುವರು. ಸ್ಪೈನಿನ ಅರವಾಸಿ ಯುವಕರು ಹತರಾಗಿರುವರು. ಸ್ಪೆನಿಶ್ ಜನಾಂಗವು ಬಹಳ ಕ್ರೂರ ಪ್ರತೀಕಾರ ಮಾಡುವ ಮನೋವೃತ್ತಿಯದು. ಅಂತಃಕಲಹವು ಮುಗಿದ ನಂತರ ಈಗ ರಿಪಬ್ಲಿಕನ್ ಪಕ್ಷೀಯರ ಮೇಲೆ ಭಯಂಕರ ಪ್ರತೀಕಾರವು ನಡೆಸಲ್ಪಡುತ್ತಿದೆ. ಮೇಡ್ರಿಡ್, ಬಾರ್ಸಿಲೋನ ಮೊದಲಾದ ಪಟ್ಟಣಗಳಲ್ಲಿ ಸಾವಿರಾರು ಮಂದಿ ರಿಪಬ್ಲಿಕಾನರು ಕೈದುಮಾಡಲ್ಪಟ್ಟು ಕಾರಾಗೃಹಗಳಲ್ಲಿ ನಾನಾ ಪೀಡೆಗೊಳಗಾಗಿರುತ್ತಾರೆ. ಸಾಮುದಾಯಿಕ ಕೊಲೆಯು ಈಗಲೂ ನಡೆಯುತ್ತಿದೆ. ರಿಪಬ್ಲಿಕನ್ ಪಕ್ಷಕ್ಕೆ ಸೇರಿ ಕಾದಾಡಿದವರನ್ನು ಕೂಡಲೆ ಗುಂಡು ಹೊಡೆದು ಕೊಲ್ಲಲಾಗುವುದು. ರಿಪಬ್ಲಿಕನ್ ಪಕ್ಷದ ಸೇನಾಧಿಪತಿಗಳು, ರಾಜಕೀಯ ಮುಖಂಡರೇ ಮೊದಲಾದವರಿಗೆ ಇದೇ ಗತಿಯಾಗಿದೆ. ಮೇಡ್ರಿಡ್ ಒಂದೇ ಪಟ್ಟಣದ ಶೇಕಡ ನೇ ಒಂದಂಶ ಜನಸಂಖ್ಯೆಯು ಇಂತಹ ಪ್ರತೀಕಾರಕ್ಕೊಳಗಾಗಿ ನಾಶಹೊಂದಿರುತ್ತದೆ. ಇದರಲ್ಲಿ ಯುದ್ಧದಲ್ಲಿ ಮಡಿದವರು ಮತ್ತು ಆಹಾರವಿಲ್ಲದೆ ಸತ್ತವರು ಸೇರಿರುವುದಿಲ್ಲ.

ಕೇವಲ ಮಂದಗಾಮಿಗಳಾಗಿದ್ದು ರಿಪಬ್ಲಿಕನ್ ಪಕ್ಷದಲ್ಲಿ ಅಧಿಕಾರದಲ್ಲಿದ್ದವರನ್ನು ಕೂಡಾ ! ಕ್ರೂರವಾಗಿ ಶಿಕ್ಷಿಸಲಾಗುತ್ತದೆ. ಮೊದಲು ಪ್ರೊಫೆಸರರಾಗಿದ್ದು ಅನಂತರ ರಿಪಬ್ಲಿಕನ್ ಸರಕಾರದಲ್ಲಿ ವಿದೇಶ ಮಂತ್ರಿಗಳಾಗಿ ಅತ್ಯಂತ ಮಂದಗಾಮಿಯಾಗಿದ್ದ ಸೆನಾರ್ ಜೂಲಿಯನ್ ಬೆಸ್ಟೀರಿಯೋರವರಿಗೆ 30 ವರ್ಷ ಕಠಿಣ ಕಾರಾಗಾರ ಶಿಕ್ಷೆ ವಿಧಿಸಲಾಗಿದೆ. ರಿಪಬ್ಲಿಕನ್ ಪತ್ರಿಕೆಗಳೆಲ್ಲಾ ನಿಲ್ಲಿಸಲ್ಪಟ್ಟಿರುವವಲ್ಲದೆ ಅವುಗಳ ಸಂಪಾದಕರೆಲ್ಲಾ ತಲೆ ಕಡಿಯಲ್ಪಟ್ಟಿದ್ದಾರೆ.

ಸ್ಪೈನಿನಲ್ಲಿ ಈಗ ಫೆಸಿಸ್ಟ್ ರೀತಿನೀತಿಗಳನ್ನನುಸರಿಸುವ ಫೆಲೆಂಜಿಸ್ಟ್ ಪಕ್ಷದ ಕೈಮೇಲಾಗಿದೆ. ಈ ಪಕ್ಷದವರಿಗೇನೇ ಜನರಲ್ ಫ್ರೇಂಕೋರವರು ಹೆಚ್ಚಿನ ಅಧಿಕಾರ ಕೊಟ್ಟಿರುತ್ತಾರೆ. ಇದರಿಂದಾಗಿ ಸ್ಪೆನಿಶ್ ಸೇನಾನಾಯಕರುಗಳಲ್ಲಿ ಅತೃಪ್ತಿಯುಂಟಾಗಿದೆ. ಸ್ಪೆನಿಶ್ ಸೇನೆಯು ಪ್ರತೀಕಾರ ಕಾರ್ಯದಲ್ಲೇನೂ ಭಾಗವಹಿಸುವುದಿಲ್ಲ. ಹತ್ಯಾಖಾಂಡವನ್ನು ನಡಿಸುವವರೆಂದರೆ ಫೆಲೆಂಜಿಸ್ಟ್ ಪಕ್ಷೀಯರೇ. ಸ್ಪೈನಿನಲ್ಲಿ ಈಗ ಒಂದುಮಿಲ್ಯ ಸೇನೆಯಿದೆ. 100,000 ಮೂರ್ ಸೈನಿಕರು ಕಳೆದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಆಫ್ರಿಕಕ್ಕೆ ಕಳುಹಿಸಲ್ಪಟ್ಟಿರುತ್ತಾರೆ. ಜನರಲ್ ಫ್ರೇಂಕೋರವರು ಈ ಸೇನೆಯನ್ನು ಆದಷ್ಟು ಕಡಿಮೆಮಾಡುವ ಹಂಚಿಕೆಮಾಡುತ್ತಿದ್ದಾರೆ. ಆದರೆ ಸೈನಿಕರಿಗೆ ಬೇರೆ ಉದ್ಯೋಗಗಳನ್ನೊದಗಿಸಿಕೊಡದೆ ಹಾಗೆ ಮಾಡಲು ಅಸಾಧ್ಯವಾಗಿದೆ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಮಂಗಳೂರು ಡಿ. ಮು. ಕೋರ್ಟಿನ

S. O. 705/37.

ಈ ಕೋರ್ಟಿನ

R.E.P. 1535/1939 & R E.A. 2831/1939

ಇದಿನೆ ಬ್ಯಾರಿ— ಅರ್ಜಿದಾರ

ಮತ್ತು

ಇಬ್ರಾಯಿ ಬ್ಯಾರಿ— ಎದ್ರಿ

ಇವರೊಳಗೆ

ಎದ್ರಿ

ಇಬ್ರಾಯಿ ಬ್ಯಾರಿ, ಕಡಜೆ ತೋಟ ಬಯ್ಯಬ್ಯಾರಿಗೆ ಮಗ ಮಂಗಳೂರು ತಾಲೋಕು ಪಡುಪಣಂಬೂರು ಗ್ರಾಮದಲ್ಲಿರುವವ, ಇವರಿಗೆ—

ಸದರಿ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಪಡುಪಣಂಬೂರು ಗ್ರಾಮದ ಸ್ಥಿರಾಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ಏಲಂ ಆಸ್ತಿ ಹಾರಿನ ಡ್ರೈಫ್ಟ್ ಮತ್ತು ಸದ್ರಿ ಆಸ್ತಿಗಳ ಏಲಂ ಸಮಯ ತನಗೆ ಬಿಡ್ ಮಾಡುವದೆ ಯ ಸೆಟ್ ಒಫ್ ಕೇಳುವರಿಯೂ ಪರ್ಮಿಶನ್ ಕೇಳಿ ಬಿಡ್ ಅರ್ಜಿ ಸೂಚ ಹಾಜರುಪಡಿಸಿರುವದರಿಂದ ಅವುಗಳ ಕುರಿತು ನಿಮಗೇನಾದರೂ ಆಕ್ಷೇಪ ಇದ್ದಲ್ಲಿ ನೀವು ಬರುವ ತಾರೀಕು 23-8-'39ನೆ ದಿನ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಗೈರು ಹಾಜರಾಗಿ ಏಕಪಕ್ಷವಾಗಿ ಸದ್ರಿ ಸಂಗ್ತಿಗಳು ತೀರ್ಮಾನಿಸಲ್ಪಡುವವು ಎಂಬುದನ್ನು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿದೆ.

ಕಾರ್ಕಳ, ತಾ. 3-8-'39. } P. Ramachandra Rao.

Pleader for petitioner.

LEVER WRIST WATCHES FOR RUPEES 2-4-0 ONLY.

The watches are guaranteed for 5 solid years Accurate Time keeper Round or square Rs. 2/8 Best Rs 3 4 0 extra best Rs 3-12-0, Golden cases Rs 4-4-0, Rec. 6-8-0, Rectangular Rs. 7-4-0, Best Rs 11-0 0, Guaranteed for 10years. Postage annas 8 extra. If purchased three at a time postage free

Ceylon orders must accompany full advance. ORIENTAL FANCY STORES, Post Box No. 12204, Calcutta (S C E.154).

ADVERTISE IN

NAVAYUGA

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದುಸರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರಿಯ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಚಾಪಲ್ಯ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3 ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತಿ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ದೇವಸ್ಥಾನಪ್ರವೇಶವು ಸಾಧ್ಯವೇ?

(ಪಿ. ವಿ. ಉಪಾಧ್ಯಾಯ.)

ಬರೇ ಕಲ್ಲಿನ ವಿಗ್ರಹ ದೇವರಲ್ಲ. ದೇವಸ್ಥಾನವೆಂದರೆ ದೇವರನ್ನು ಪ್ರತಿಷ್ಠಾಪನೆ ಮಾಡಲು ಆಗಮಶಾಸ್ತ್ರ ಪ್ರಕಾರ ಕಟ್ಟಿಸಿದ ಕಟ್ಟಡ. ಈ ಕಟ್ಟಡದ ಗರ್ಭಗುಡಿಯಲ್ಲಿ ಶಾಸ್ತ್ರವಿಧಿಪ್ರಕಾರ ಪ್ರತಿಷ್ಠೆ ಮಾಡಲ್ಪಟ್ಟ ವಿಗ್ರಹವೇ ದೇವರು. ದೇವಸ್ಥಾನದೊಳಗೆ ವಿಗ್ರಹವನ್ನು ಪ್ರತಿಷ್ಠಾಪಿಸುವುದೆಂದರೆ ಭೂತಗನ್ನಡಿಯಲ್ಲಿ ಸೂರ್ಯರಶ್ಮಿಯನ್ನು ಕೇಂದ್ರೀಕರಿಸಿದಂತೆ. ಆಗಮಶಾಸ್ತ್ರಪ್ರಕಾರ ದೇವರ ಸಾನ್ನಿಧ್ಯವನ್ನು ವಿಗ್ರಹದಲ್ಲಿ ಸ್ಥಾಪಿಸಿದ ನಂತರವೇ ಆ ವಿಗ್ರಹವು ಪ್ರತಿಷ್ಠಾಪಿಸಲ್ಪಟ್ಟ ಕಟ್ಟಡವು ದೇವಸ್ಥಾನವಾಗುವುದು. ಶಾಸ್ತ್ರಪ್ರಕಾರ ಪಂಚಮರು ದೇವಸ್ಥಾನ ಪ್ರವೇಶಿಸಿದರೆ ದೇವಸಾನ್ನಿಧ್ಯವು ಅಲ್ಲಿಂದ ಮಾಯವಾಗುವುದು. ಅನಂತರವಿರುವುದು ಕಲ್ಲು ವಿಗ್ರಹ ಮತ್ತು ಕಟ್ಟಡ ಮಾತ್ರ. ಆದುದರಿಂದ ಹರಿಜನರಿಗೆ ದೇವಸ್ಥಾನ ಪ್ರವೇಶಿಸಲು ಸಾಧ್ಯವೇ ಇಲ್ಲ. ಅವರು ಪ್ರವೇಶಿಸಿದ ಮೇಲೆ ಅಲ್ಲಿ ದೇವರಿರುವುದೇ ಇಲ್ಲ. ಅದು

ದೇವಸ್ಥಾನವೇ ಅಲ್ಲ.

'ಹರಿಜನರು ದೇವಸ್ಥಾನವನ್ನು ಪ್ರವೇಶಿಸಿದರು' ಎಂದು ನಮ್ಮ ಸುಧಾರಕರು ಉತ್ಸಾಹದಿಂದ ಹೇಳುತ್ತಿರುವಾಗ ನನಗೆ ತಡೆಯಲಿಲ್ಲದ ನಗೆ ಬರುತ್ತಿದೆ. ದೇವಸ್ಥಾನವನ್ನು ಹರಿಜನರು ಪ್ರವೇಶಿಸಲಿಕ್ಕೆ ಸಾಧ್ಯವೇ ಇಲ್ಲ. ಈ ಮಾತನ್ನು ನಾನು ರುಜುವಾತುಪಡಿಸಲು ಸಿದ್ಧನಿದ್ದೇನೆ.

ಅಲ್ಲಾ! ಈ ಜನರು ದೇವಸ್ಥಾನವೆಂದರೆ ಏನೆಂದು ತಿಳಿದುಕೊಂಡಿದ್ದಾರೋ? ದೊಡ್ಡ ಕಟ್ಟೋಣವೇ ದೇವಸ್ಥಾನವೆಂದೂ ಅದರೊಳಗಿರುವ ಕಲ್ಲಿನ ವಿಗ್ರಹವೇ ದೇವರೆಂದೂ ಇವರು ತಿಳಿದುಕೊಂಡಿರಬೇಕು. ವಿಗ್ರಹವು ದೇವರಲ್ಲವೆಂದು ಪಾಪ ಇವರಿಗೆ ಹೇಗೆ ತಿಳಿಯಬೇಕು? ಶಿಲ್ಪಿಯ ಅಂಗಡಿಯಲ್ಲಿ ಸಾಲುಸಾಲಾಗಿ ವಿಗ್ರಹಗಳು ನಿಂತಿವೆಯಲ್ಲಾ. ಅಲ್ಲಿಗೆ ಏಕೆ ಯಾರೂ ಹಣ್ಣುಕಾಯಿ ತರುವುದಿಲ್ಲ? ಹಾಗಾದರೆ ಕಲ್ಲಿನ ವಿಗ್ರಹವು ದೇವರಲ್ಲ. ವಿಗ್ರಹವಿರುವ ಕಟ್ಟೋಣವು ದೇವಸ್ಥಾನವೂ ಅಲ್ಲ. ತಿಳಿಯಿತೇ?

ದೇವಸ್ಥಾನವೆಂದರೆ ದೇವರನ್ನು ಪ್ರತಿಷ್ಠೆ ಮಾಡುವುದಕ್ಕಾಗಿ ಆಗಮಶಾಸ್ತ್ರ ಪ್ರಕಾರ ಕಟ್ಟಿಸಿದ ಒಂದು ಕಟ್ಟೋಣ. ಇದು ಇಷ್ಟು ಉದ್ದ ಇಷ್ಟು ಅಗಲವಿರಬೇಕು. ಇದರ ಬಾಗಿಲು ಈ ಕಡೆ ಇರಬೇಕು. ಇದೆಲ್ಲಾ ಆ ಆಗಮಶಾಸ್ತ್ರದಲ್ಲಿ ಮೊದಲೇ ಬರೆದಿದೆ. ಅದರೊಳಗಿನ ಗರ್ಭಗೃಹದಲ್ಲಿ ಶಾಸ್ತ್ರೋಕ್ತರೀತ್ಯಾ ಮಾಡಲ್ಪಟ್ಟ ವಿಗ್ರಹವನ್ನು ಶಾಸ್ತ್ರರೀತ್ಯಾ ಪ್ರತಿಷ್ಠೆ ಮಾಡಬೇಕು. ಆಗ ಆ ವಿಗ್ರಹದಲ್ಲಿ ದೇವರ ಸಾನ್ನಿಧ್ಯ ಬರುತ್ತದೆ. ಆ ಕಟ್ಟೋಣವು ದೇವಸ್ಥಾನವೆಂದು ಎಣಿಸಲ್ಪಡುತ್ತದೆ. ಸರ್ವಾಂತರ್ಯಾಮಿ ದೇವರು ಆ ವಿಗ್ರಹದಲ್ಲಿಯೂ ಇರಬೇಕಲ್ಲವೇ? ಅಲ್ಲಿ ವಿಶೇಷವಾಗಿ ಪ್ರತಿಷ್ಠೆ ಮಾಡುವುದೇನಿದೆ?—ಎಂದು ಕೆಲವರು ನಾಸ್ತಿಕರು ಹೇಳಬಹುದು. ವಿಷಯ ಹಾಗಲ್ಲ. ಎಲ್ಲೆಲ್ಲಿಯೂ ದೇವರಿರುವನೆಂಬುದು ನಿಜ. ಆದರೆ ಎಲ್ಲಾ ಕಡೆಗಳಲ್ಲಿಯೂ ಇರುವಷ್ಟೇ ಸಾನ್ನಿಧ್ಯ ಆ ವಿಗ್ರಹದಲ್ಲಿರುವುದಿಲ್ಲ. ಸೂರ್ಯನ ಬೆಳಕು ಎಲ್ಲಾ ಕಡೆಗಳಲ್ಲಿಯೂ ಇದೆ. ಆದರೆ ಒಂದು ಭೂತಗನ್ನಡಿಯನ್ನು ಬಿಸಿಲಲ್ಲಿ ಹಿಡಿದರೆ ಬಿಸಿಲು ಒಂದು ಕಡೆಯಲ್ಲಿ ಕೇಂದ್ರೀಕರಿಸಿ ಒಂದು ಪದಾರ್ಥವನ್ನು ಸುಡುವಷ್ಟು ಶಾಖ ಉಂಟಾಗುತ್ತದಲ್ಲವೇ? ಅಥವಾ ರೇಡಿಯೋ ಸ್ಟೇಶನಿನಲ್ಲಿ ಒಬ್ಬನು ಹಾಡಿದರೆ ಅದನ್ನು ಅಂತರಿಕ್ಷದಲ್ಲಿ ತೆರೆಗಳು ಎಲ್ಲಾ ಕಡೆಗಳಿಗೂ ಕೊಂಡುಹೋಗುತ್ತವೆ. ಆದರೆ ಅದು ಎಲ್ಲಾ ಕಡೆಗಳಲ್ಲಿ ಕೇಳುವುದಿಲ್ಲ. ರೇಡಿಯೋ ಸೆಟ್ ಇದ್ದಲ್ಲಿ ಮಾತ್ರ ಕೇಳಿಸುತ್ತದೆ. ಹಾಗೆಯೇ ಆಗಮಶಾಸ್ತ್ರದಲ್ಲಿ ಹೇಳಿರುವ ಮಂತ್ರತಂತ್ರಗಳ ಸಹಾಯದಿಂದ ಸರ್ವವ್ಯಾಪಿಯಾದ ದೇವರನ್ನು ವಿಗ್ರಹದಲ್ಲಿ ಕೇಂದ್ರೀಕರಿಸಿ ಅಲ್ಲಿಂದ ಅದರ ಪ್ರಭಾವವನ್ನು ಪಡೆಯಲು ಸಾಧ್ಯವಿದೆ. ವಿಗ್ರಹದಲ್ಲಿ ದೇವರನ್ನು ಕೇಂದ್ರೀಕರಿಸಿದೆ ಎಂಬ ಮಾತ್ರಕ್ಕೆ ಇತರ ಕಡೆಗಳಲ್ಲಿ ದೇವರು ವ್ಯಾಪಿಸಿಕೊಂಡು ಇರುವುದಿಲ್ಲವೆಂದು ಅರ್ಥವಲ್ಲ.

ಈ ಪ್ರಕಾರ ದೇವರ ಸಾನಿಧ್ಯವನ್ನು ವಿಗ್ರಹದಲ್ಲಿ ಸ್ಥಾಪಿಸಿದ ನಂತರವೇ ಆ ಕಟ್ಟೋಣಕ್ಕೆ ದೇವಸ್ಥಾನವೆಂದು ಹೆಸರು ಬರುತ್ತದೆ. ಆಗಮಶಾಸ್ತ್ರದಲ್ಲಿ ನಂಬಿಗೆಯಿಲ್ಲದ ಈ ಸುಧಾರಕರು ಆಗಮಶಾಸ್ತ್ರರೀತ್ಯಾ ವಿಗ್ರಹವನ್ನು ಪ್ರತಿಷ್ಠಿಸಿರುವ ಕಟ್ಟೋಣವನ್ನು ದೇವಸ್ಥಾನವೆಂದು ಏಕೆ ಕರೆಯುತ್ತಿರುವರು? ದೇವರು ಸರ್ವಾಂತರ್ಯಾಮಿಯಾಗಿರುವಾಗ ಬೇರೆ ಎಲ್ಲಾ ಸ್ಥಳಗಳನ್ನು ಬಿಟ್ಟು ನಮ್ಮ ದೇವಸ್ಥಾನಕ್ಕೇನೇ ಏಕೆ ಅವರು ಹರಿಜನರನ್ನು ಪ್ರವೇಶಿಸಬೇಕು? ಅವರ ಈ ವರ್ತನೆಯನ್ನು ನೋಡುವಾಗ ದೇವರು ಇತರ ಕಡೆಗಳಲ್ಲಿರುವುದಕ್ಕಿಂತಲೂ ವಿಶೇಷವಾಗಿ ನಮ್ಮ ದೇವಸ್ಥಾನದಲ್ಲಿರುವನೆಂದು ಅವರು ತಿಳಿದುಕೊಂಡಂತೆ ಕಾಣುತ್ತದೆ. ಹಾಗಿದ್ದರೆ ಆಗಮಶಾಸ್ತ್ರವನ್ನು ಅವರು ಒಪ್ಪಿದಂತಾಗಲಿಲ್ಲವೇ? ಯಾವ ಆಗಮಶಾಸ್ತ್ರವು ದೇವರು ಇತರ ಕಡೆಗಳಿಗಿಂತಲೂ ಹೆಚ್ಚಾಗಿ ದೇವಸ್ಥಾನದಲ್ಲಿರುವನೆಂದು ಹೇಳುತ್ತದೋ ಅದೇ ಆಗಮಶಾಸ್ತ್ರದಲ್ಲಿ ಪಂಚಮರು ದೇವಸ್ಥಾನಗಳೊಳಗೆ ಪ್ರವೇಶಿಸಬಾರದೆಂದೂ ಬರೆದಿದೆ. ಶಾಸ್ತ್ರದ ಒಂದು ಭಾಗವನ್ನು ನಾವು ನಂಬುವುದಿಲ್ಲವೆನ್ನುವುದಕ್ಕೆ ಅರ್ಥವಿದೆಯೋ? ಆಗಮಶಾಸ್ತ್ರವನ್ನು ಅವರು ನಂಬುತ್ತಾರಾದರೆ ದೇವಸ್ಥಾನದೊಳಗೆ ದೇವರ ವಿಶೇಷ ಸಾನ್ನಿಧ್ಯ ಇದೆಯೆಂದೂ, ಪಂಚಮರ ಪ್ರವೇಶದಿಂದ ಅದು ಮಾಯವಾಗುವುದೆಂದೂ ಅವರು ನಂಬಲೇಬೇಕು. ಅವರು ಅದನ್ನು ನಂಬುವುದಿಲ್ಲವಾದರೆ ನಮ್ಮ ದೇವಸ್ಥಾನಗಳಲ್ಲಿ ದೇವರ ವಿಶೇಷ ಸಾನ್ನಿಧ್ಯ ಇರುವುದಿಲ್ಲ. ಆದುದರಿಂದ ಅವರು ಪಂಚಮರನ್ನು ಆ ದೇವಸ್ಥಾನಗಳೊಳಗೆ ಹೊಕ್ಕಿಸುವುದು ಅಗತ್ಯವಿಲ್ಲ.

ನಮ್ಮ ಮಟ್ಟಿಗೆ ಆಗಮ ಶಾಸ್ತ್ರದಲ್ಲಿ ನಮಗೆ ಸಾಕಷ್ಟು ನಂಬಿಗೆ ಇದೆ. ಇಲೆಕ್ಟ್ರಿಸಿಟಿ ನಿಂತ ಕೂಡಲೇ ಹೇಗೆ ದೀಪಗಳು ನೊಂದಿ ಹೋಗುತ್ತವೋ ಹಾಗೆ ಪಂಚಮರು ಒಳಗೆ ಪ್ರವೇಶಿಸಿದ ಕೂಡಲೇ ವಿಗ್ರಹದಿಂದ ದೇವರ ಸಾನ್ನಿಧ್ಯವು ತನ್ನಷ್ಟಕ್ಕೆನೇ ಹೊರಟು ಹೋಗುತ್ತದೆ. ನಂತರವೂ ವಿಗ್ರಹವೊಂದು ದೇವಸ್ಥಾನದಲ್ಲಿ ನಿಂತುಕೊಂಡಿದ್ದರೂ ಅದು ಬರೇ ಕಲ್ಲೆಂದು ನಮ್ಮ ಭಾವನೆ. ಪಂಚಮರು ಧ್ವಜಸ್ತಂಭವನ್ನು ದಾಟಿ ಮುಂದೆ ಬಂದೊಡನೆಯೇ ವಿಗ್ರಹದಲ್ಲಿರುವ ದೇವರ ಸಾನ್ನಿಧ್ಯವು ಹೊರಟು ಹೋಗುವುದರಿಂದ ಅವರು ಪ್ರವೇಶಿಸಿದ ನಂತರ ಒಳಗಿರುವುದು ದೇವರೂ ಅಲ್ಲ. ಆ ಕಟ್ಟೋಣವು ದೇವಸ್ಥಾನವೂ ಅಲ್ಲ. ಅನಂತರ ಪಂಚಮರು ಅಲ್ಲ. ಹರಿಜನರೆಂತಲೇ ಬೇಕಾದರೆ ಕರೆಯುವ. ಒಮ್ಮೆ ಇವರನ್ನು ಹರಿ ಮಂದಿರಕ್ಕೆ ಪ್ರವೇಶಿಸಬೇಕೆಂದೇ ಇವರಿಗೆ ಹರಿಜನರೆಂದು ನಾಮಕರಣವಾಗಿರಬೇಕೆಂದು ಈಗ ಯೋಚಿಸಬೇಕಾಗಿದೆ. ಆದರೊಳಗೆ ಹೊಕ್ಕಿದರೆ ಅದು ದೇವಸ್ಥಾನ ಪ್ರವೇಶವೆಂದು ಹೇಗಾಯಿತು? ಆದುದರಿಂದ ಹರಿಜನರು ದೇವಸ್ಥಾನದೊಳಗೆ ಪ್ರವೇಶಿಸಲು ಸಾಧ್ಯವೇ ಇಲ್ಲ. ಇದು ಕರೆಂಟ್ ನಿಂತ ನಂತರ ವರಿಗೆಯನ್ನು ಮುಟ್ಟಿ ತಾನು ಇಲೆಕ್ಟ್ರಿಕ್ ವರಿಗೆ ಮುಟ್ಟಿದೆನೆಂದು ಹೇಳಿದಂತೆಯೇ ಸರಿ!

ಆದುದರಿಂದ ನಮ್ಮ ಸುಧಾರಕರು ತಾವು ಹರಿಜನರನ್ನು ದೇವಸ್ಥಾನದೊಳಗೆ ಪ್ರವೇಶಿಸಿಬಿಟ್ಟೆವೆಂದು ಹೆಮ್ಮೆ ಪಡಲು ಕಾರಣವಿಲ್ಲ ಅದು ಅಸರಿಂದ ಸಾಧ್ಯವೂ ಅಲ್ಲ. ಆದರೆ ಅವರು ಹೀಗೆ ಮಾಡುವುದರಿಂದ ಆಗುವ ಮಹಾ ಅನರ್ಥವೊಂದಿದೆ. ಅದೇನೆಂದರೆ ಅವರ ಈ ಕಾರ್ಯದಿಂದಾಗಿ ನಾವು ಶತಪ್ರಯತ್ನ ಮಾಡಿ ಅಲ್ಲಲ್ಲಿ ಜನರಿಗಾಗಿ ದೇವತ್ವವನ್ನು ಸಂಗ್ರಹಿಸಿಟ್ಟದ್ದು ಮಾತ್ರ ನಷ್ಟವಾಗುತ್ತದೆ. ದೇವಸ್ಥಾನವೆಂದರೆ ಇಡೀ ಊರಿಗೆ ಒಂದು ಪವರ್ ಹೌಸ್ ಇದ್ದ ಹಾಗೆ. ಊರಿಗೆ ಬೇಕಾದ ಇಲೆಕ್ಟ್ರಿಸಿಟಿಯನ್ನು ಒದಗಿಸಲಿಕ್ಕಾಗಿ ಮಧ್ಯದಲ್ಲಿ ಒಂದು ಪವರ್ ಹೌಸ್ ನಿರ್ಮಾಣ ಮಾಡಿ ಅದರಲ್ಲಿರುವ ಪವರ್ ಹಾಳಾಗದಂತೆ ಒಳಗೆ ಯಾರೂ ಪ್ರವೇಶಿಸಕೂಡದೆಂದು ಒಂದು ಬೋರ್ಡು ಹಾಕಿದ್ದರೆ ನಾವು ಏಕೆ ಒಳಗೆ ಹೋಗಕೂಡದು ಎಂದು ಕೆಲವರು ಹಟದಿಂದ ಒಳನುಗ್ಗಿ ಅಲ್ಲಿರುವ ಇಂಜನನ್ನು ಹಾಳುಮಾಡಿಬಿಟ್ಟರೆ ಅದರ ಪರಿಣಾಮವೇನಾದೀತು? ದೀಪವಿಲ್ಲದೆ ಎಲ್ಲರೂ ಹೇಗೆ ಕಷ್ಟಪಡಬೇಕಾಗುತ್ತದೋ ಹಾಗೆಯೇ ಆಗಮ ಶಾಸ್ತ್ರಕ್ಕೆ ವಿರೋಧವಾಗಿ ಹರಿಜನರನ್ನು ನಮ್ಮ ದೇವಸ್ಥಾನದೊಳಗೆ ಪ್ರವೇಶಿಸಿದರೆ ನಂತರ ಊರಿಗೆ ಆ ದೇವಸ್ಥಾನದ ದೇವರಿಂದ ಸಿಕ್ಕತಕ್ಕ ಯಾವ ಸೌಕರ್ಯವೂ ದೊರೆಯುವುದಿಲ್ಲ. ಅಷ್ಟೇ ಇದರ ಪರಿಣಾಮ.

ಇದರಿಂದ ಯಾರಿಗೆ ಕಷ್ಟವಾಯಿತು? ಯಾರಿಗೆ ನಷ್ಟವಾಯಿತು? ದೇವಸ್ಥಾನವು ಬ್ರಾಹ್ಮಣರಿಗಾಗಿ ಇರುವುದಲ್ಲ. ನಮ್ಮ ಮಟ್ಟಿಗೆ ಪ್ರತಿಮನೆಯಲ್ಲಿಯೂ ದೇವರಿದ್ದಾರೆ. ದೇವಸ್ಥಾನದಲ್ಲಿ ನಡೆಯುವಂತೆಯೇ ಪೂಜೆ ಪುರಸ್ಕಾರವು ನಮ್ಮಲ್ಲಿ ಸಾಂಗವಾಗಿ ನಡೆಯುತ್ತಿದೆ. ಮನೆಯಲ್ಲಿ ಸಣ್ಣ ಡೈನಮಾ ಇಟ್ಟುಕೊಂಡವನು ಇಲೆಕ್ಟ್ರಿಕ್ ಪವರ್ ಹೌಸ್ ಹಾಳಾಗಿ ಹೋದರೆ ಅಷ್ಟೊಂದು ಕಷ್ಟದಲ್ಲಿ ಬಾಳುವಂತಿಲ್ಲ. ಕಷ್ಟಪಡುವವರು ಇಲೆಕ್ಟ್ರಿಸಿಟಿ ಹೇಗೆ ಉಂಟುಮಾಡುವುದೆಂದು ಗೊತ್ತಿಲ್ಲದ ಸಾಮಾನ್ಯರು. ಮನೆಯಲ್ಲಿ ದೇವರನ್ನಿಟ್ಟುಕೊಂಡು ಪೂಜೆ ಪುರಸ್ಕಾರಗಳನ್ನು ನಡೆಯಿಸಲಾರದವರ ಕಲ್ಯಾಣಕ್ಕಾಗಿಯೇ ಊರಿಗೊಂದು ದೇವಸ್ಥಾನ ಮಾಡಿರುತ್ತಾರೆ.

ಯಾರ ಪ್ರಯೋಜನಾರ್ಥಕ್ಕಾಗಿ ಈ ದೇವಸ್ಥಾನಗಳು ಸ್ಥಾಪಿಸಲ್ಪಟ್ಟಿವೆಯೋ ಅವರೇ ಅದನ್ನು ಹಾಳುಮಾಡಿದರೆ ನಮಗೆ ಬಂದ ಕಷ್ಟವೇನು? ಬರಲಿ ಎಷ್ಟು ಜನ ಹರಿಜನರು ಬೇಕಾದರೂ ಈ ಕಟ್ಟೋಣಗಳನ್ನು ಪ್ರವೇಶಿಸಲಿ. ಅಲ್ಲಿರುವ ದೇವತ್ವವನ್ನು ಓಡಿಸಲಿ. ನಂತರ ಅಂಧಕಾರದಲ್ಲಿ ನರಳಲಿ. ನಮಗೇನು? ಅದರ ಪರಿಣಾಮವು ನಂತರವಾದರೂ ತಿಳಿದೀತು! ಆದರೆ ಈ ಸುಧಾರಕರು ತಾವು ಹರಿಜನರನ್ನು ದೇವಸ್ಥಾನದೊಳಗೆ ಪ್ರವೇಶಿಸಿಬಿಟ್ಟೆವೆಂದು ಹೆಮ್ಮೆ ಮಾತ್ರ ತೋರಿಸದಿರಲಿ. ದೇವಸ್ಥಾನದಿಂದ ದೇವರನ್ನು ಓಡಿಸಿಬಿಟ್ಟೆವೆಂದು ಬೇಕಾದರೆ ಅವರು ಹೇಳಿಕೊಳ್ಳಲಿ. ಮತ್ತೇನು ಹೇಳಬೇಕು! ಇಂಥವರಿಗೆ ಕಲಿಯುಗದ ಮಹಿಮೆಯು ಕಾಣಬಂತೇನೊ ಎಂದು ದಾಸರು ಅಂದೇ ಹಾಡಿದ್ದಾರೆ. ಎಲ್ಲವೂ ಪರಮಾತ್ಮನ ಇಚ್ಛೆಯಂತೆ ನಡೆಯುತ್ತದೆಂದಿಷ್ಟೇ ನನ್ನ ಸಮಾಧಾನ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ಧಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೀರ್ತಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ. ಆರ್. ಕೆ. ಶೆಟ್ ಬಿಲ್ಡಿಂಗ್,
ಮಿಶ್ಯನ್ ಹೈಸ್ಕೂಲ್ ರೋಡು.

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಜರ್ಮನಿಯು ವಿನಾಶದ ಹಾದಿ ಹಿಡಿದಿದೆ

ಇಡೀ ಲೋಕದ ಮೇಲೆ ಅಧಿಕಾರ ನಡೆಸುವ ಹಿಟ್ಲರನ ಭ್ರಾಮಕ ಆಕಾಂಕ್ಷೆ.

“ಜರ್ಮನಿಯು ವಿನಾಶದ ಕಡೆಗೆ ಧಾವಿಸುತ್ತಿದೆ. ಎಷ್ಟೊಂದು ಬೇಗನೆ ಜಾಗದ ರೂ, ಜರ್ಮನಿಯು ಅಪಾಯವಾಗಿದೆಯೆಂದು ಎಷ್ಟು ಜನ ಜರ್ಮನರೂ ಹಿಟ್ಲರನ ಪತನದ ದಿನವು ಸಮೀಪಿಸುತ್ತಿದೆ”ಯೆಂದು ಮೊದಲು ನಾಝಿ ಪಕ್ಷದ ನಾಯಕರ ಲೆಕ್ಕಪತ್ರ ನಾಝಿ ತತ್ವದ ವಿಶ್ವಾಸವುಳ್ಳವರಾಗಿ ಅನಂತರ ಅದರ ನಿರರ್ಥಕತೆಯನ್ನು ಮನಗಂಡು ಅದನ್ನು ಸಂಪೂರ್ಣವಾಗಿ ದ್ವೇಷಿಸುತ್ತಿರುವ ಹರ್ಮನ್ ರೋಷ್ನಿಂಗರೆಂಬವರು ಅಭಿಪ್ರಾಯ ಕೊಟ್ಟಿರುವರು.

ಯುದ್ಧ ಬಗೆ ಆಗಿರಲಿ, ಬಲಾತ್ಕಾರದಿಂದ ಇಡೀ ಲೋಕದ ಮೇಲೆ ಅಧಿಕಾರ ನಡೆಸುವ ನಾಝಿ ಜರ್ಮನಿಯ ಆಕಾಂಕ್ಷೆಯು ನಿಶ್ಚಯವಾಗಿಯೂ ನಿರರ್ಥಕವಾಗುವುದು. ಇಡೀ ಲೋಕವನ್ನೇ ತಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬುದೇ ನಾಝಿಗಳ ಆಕಾಂಕ್ಷೆ. ಅದು ಸಾಧ್ಯವೆಂದು ಅವರೆಣಿಸಿಕೊಂಡಿರುತ್ತಾರೆ. ಜರ್ಮನಿಯು ಕಳೆದ ಮಹಾಯುದ್ಧದಲ್ಲಿ ಕಳಕೊಂಡ ವಸಾಹತುಗಳನ್ನು ತಿರುಗಿ ಪಡೆದರೆ ನಾಝಿಗಳು ತೃಪ್ತಿ ಹೊಂದಬಾರರು. “ಇಂದು ಜರ್ಮನಿಯ ಸ್ವಾಮಿತ್ವವನ್ನು ನಾವು ಪಡೆದಿರುವೆವು. ನಾಳೆ ಇಡೀ ಲೋಕವು ನಮ್ಮದಾಗುವದು” ಎಂದು ತರುಣತರುಣಿಯರು ದೊಡ್ಡ ದೊಡ್ಡ ಪ್ರದರ್ಶನಗಳಲ್ಲಿ ಸಾಲುಗಟ್ಟಿ ನಡೆಯುವಾಗ ಹಾಡುತ್ತಾರೆ.

ಹೀಗೆ ಅವಿಶ್ರಾಂತವಾಗಿ ಕವಾತು ಪ್ರದರ್ಶನಗಳನ್ನು ನಡಿಸುವುದು, ಮತ್ತು ಇಡೀ ಜನಾಂಗವನ್ನು ನಿರಂತರವಾಗಿ ಯುದ್ಧಕ್ಕೆ ತಯಾರುಮಾಡಿಕೊಂಡುಬರುವುದು ಹಣ ಸಮಯ ಮತ್ತು ದೇಹಶಕ್ತಿಯ ಅರ್ಥರಹಿತ ದುರ್ವ್ಯಯವಾಗಿದೆ. ಆದರೆ ಇದು ಹಿಟ್ಲರನದೊಂದು ಸ್ವಭಾವಾಗಿದೆ. ಇದರಿಂದಾಗಿ ಇಡೀ ಜರ್ಮನ್ ಜನಾಂಗದ ಮನಸ್ಸು ಸದಾ ಉದ್ವೇಗಗೊಂಡಿದ್ದು ಇತರ ವಿಚಾರಕ್ಕೆ ಅವಕಾಶವೇ ಇರುವುದಿಲ್ಲ. ಸ್ವತಂತ್ರ ವಿಚಾರಕ್ಕೆ ಒಂದಿಷ್ಟೂ ಅವಕಾಶವಿಲ್ಲದಾಗುವುದು. ಸರ್ವಸಾಮಾನ್ಯ ಜರ್ಮನರು, ಘೂರಾರನ ಆವೇಶಪೂರ್ಣ ಭಾಷಣ, ಅವನು ನಡೆಯುವ ಪ್ರಚಂಡ ಕರತಾಡನ, ಜನಪ್ರಶಂಸೆ ಮತ್ತು ಬೆಂಬಲದಿಂದ ಮರುಳಾಗಿ ಹೋಗುತ್ತಾರೆ.

ಹಿಟ್ಲರನ ಪೂಜೆ

ಹಿಟ್ಲರನು ದೇವಾಂಶಸಂಭೂತನೆಂದು ಉದ್ದೇಶಪೂರ್ವಕವಾಗಿ ಜನತೆಯಲ್ಲಿ ಎಡೆಬಿಡದೆ ಪ್ರಚಾರ ನಡೆಯುತ್ತಿದೆ. ಅವನೊಬ್ಬ ಪ್ರವಾದಿ. ಜರ್ಮನಿಯ ರಕ್ಷಣೆಗಾಗಿ ಅವತರಿಸಿರುವವನು. ಆತನಿಗೆ ಅದ್ಭುತ ಮಾಂತ್ರಿಕ ಶಕ್ತಿಯಿದೆ ಎಂದೆಲ್ಲಾ ಮೂಢ ನಂಬಿಕೆಯನ್ನುಂಟುಮಾಡಿ ಜನರನ್ನು ಗುಲಾಮರಂತೆ ವಶಪಡಿಸಿಕೊಳ್ಳುವುದೇ ನಾಝಿ ಪಕ್ಷದವರ ಗುರಿಯೋಗಿದೆ. ಹಿಟ್ಲರನ ವ್ಯಕ್ತಿತ್ವವು ಜನತೆಗೆ ಅದ್ಭುತವಾಗಿ ಕಾಣಬೇಕು. ಅವನು ಜನಸಾಮಾನ್ಯರಿಂದ ಅದಷ್ಟು ದೂರವಾಗಿರಬೇಕು. ಅಕ್ಷರಶಃ ಚಕಿತ ಕೆಲಸಗಳನ್ನು ಸಾಧಿಸುವ ಸಂ ಬಿಗ್ಗ ... ಭಾಷಣಗಳನ್ನು ... ಕ್ಕೆ ಬರಬೇಕೆಂಬುದೇ ನಾಝಿ ಪಕ್ಷದವರ

ಇಡೀ ಜರ್ಮನ್ ಜನಾಂಗವೇ ಮಂಕುಬೂದಿ ಬಳೆಯಲ್ಪಟ್ಟಿದೆ.

ಇಷ್ಟೇ. ಆದರೆ ರೋಷ್ನಿಂಗರು ಈ ಸಟನೆಯಂಥ ಜೊಸತ್ತು ನಾಝಿಗಳಿಂದ ದೂರವಾದರು. ನಾಝಿ ಪಕ್ಷದೊಳಗೇ ಆಗಿರುವ ಕೆಲವರು, ಹಿಟ್ಲರನ ಧಾರ್ಮಿಕ ಸ್ವರೂಪದ ವಸ್ತು,

ಅವನ ಸಂಪತ್‌ಶಾಸ್ತ್ರ, ಅವನ ಒರಟು ಜರ್ಮನ್ ಭಾಷೆ ಮೊದಲಾದುವುಗಳ ಕುರಿತು ಒಳಗಿಂದೊಳಗೆ ಅಪಹಾಸ್ಯ ಮಾಡುತ್ತಾರೆ. ಮತ್ತು ಹಿಟ್ಲರನು ಭಾಷಣವೀಯುವುದೆಂದರೆ ಭೀತಿಗೊಳ್ಳುತ್ತಿದ್ದಾರೆ. ಆದರೂ ಉಪಾಯವಿಲ್ಲದೆ ಅವರು ವಿಧೇಯರಂತೆ ನಟಿಸಿಕೊಂಡು ಅದನ್ನು ಕಿವಿಗೊಟ್ಟು ಕೇಳುತ್ತಾರೆ. ಹಿಟ್ಲರನ ವಿರೋಧವಾಗಿ ಕ್ರಾಂತಿಯುಂಟಾಗುವುದಾದರೆ, ಕೆಲಸಗಾರರಿಂದಲ್ಲ; ನಾಝಿ ಪಕ್ಷದೊಳಗಿನ ಯುವಕರಿಂದ. ಅವರು ಒರಟು ಸ್ವಭಾವದವರಿರುತ್ತಾರೆ. ಅವರಿಗೇನೂ ಹೆಚ್ಚಿನ ಶಿಕ್ಷಣವಿರುವುದಿಲ್ಲ. ಪಾಶವಿಕ ಕೃತ್ಯಗಳಲ್ಲಿ ಅವರು ಹೆಗ್ಗಳಿಕೆ ಪಡುತ್ತಾರೆ. ಅವರೊಮ್ಮೆ ಹಿಟ್ಲರನ ಕುರಿತು ಅತೃಪ್ತಿಗೊಂಡರೆಂದರೆ ಮತ್ತೆ ಅನಾಯಕತ್ವವೇ ಸರಿ. ಈಗ ಅವರು ಗುಲಾಮರಂತಿದ್ದಾರೆ ನಾಝಿ ತತ್ವದ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ಅತಿ ವಿಧೇಯರಾಗಿ ನಡೆಯುತ್ತಾರೆ. ಇಡೀ ಜರ್ಮನ್ ಜನಾಂಗಕ್ಕೆ ಹಿಟ್ಲರನು ಮಂಕುಬೂದಿ ಬಳೆದಿದ್ದಾನೆ. ಅವರನ್ನು ಅದೊಂದು ಭ್ರಾಮಕ ಲೋಕದಲ್ಲಿರಿಸಿರುತ್ತಾನೆ. ವಾಸ್ತವವು ಅವರಿಗೆ ತಿಳಿದು ಅವರಲ್ಲಿ ವಿವೇಕೋದಯವಾಯಿತೆಂದರೆ ಮತ್ತೆ ಭಯಂಕರ ವಿಪ್ಲವ ಉಂಟಾಗದಿರಲಾರದು.

ಹಿಟ್ಲರನು ಮಾಡಿದುದೇನು?

ಹಿಟ್ಲರನು ಜರ್ಮನಿಗೆ ಮಾಡಿದುದೇನು? ಜರ್ಮನರನ್ನು ಬಲಶಾಲಿ ಜನಾಂಗವಾಗಿ ಮಾಡಿದ್ದಾನೆ. ಇತರ ಜನಾಂಗಗಳು ಜರ್ಮನಿಯೆಂದರೆ ಈಗ ಬೆಚ್ಚಿಬೀಳ ಹತ್ತಿವೆ ಜರ್ಮನರೆಲ್ಲರೊಳ್ಳಾ ಒಕ್ಕಟ್ಟನ್ನುಂಟುಮಾಡಿದ್ದಾನೆ. ನಿರುದ್ಯೋಗವನ್ನು ನಿವಾರಿಸಿದ್ದಾನೆ. ಜರ್ಮನರು ಎಷ್ಟೊಂದು ಸ್ವಾತಂತ್ರ್ಯವುಳ್ಳವರಿರುವರೆಂದರೆ, ಯಾರಾದರೂ ತನಗೆ ತೋರಿದಂತೆ ಮಾತಾಡಲು, ಬರೆಯಲು ಮತ್ತು ಕೆಲಸಮಾಡಲು ಸಾಧ್ಯವಿಲ್ಲ. ತನ್ನ ಪರಮ ಆತ್ಮಸನ್ನಾಗಲಿ, ಸಮೀಪದ ಬಂಧುವನ್ನಾಗಲಿ ಅವನು ನಂಬಲುಸಾಧ್ಯವಿಲ್ಲ. ಒಬ್ಬನು ವ್ಯಾಪಾರಿಯಾದರೆ, ಫ್ಯೂರರನೊಡನೆ ಕೇಳದೆ ಅವನು ಏನುಮಾಡುವುದಕ್ಕೂ ಸಾಧ್ಯವಿಲ್ಲ. ಅವನೊಬ್ಬ ಒಕ್ಕಲಿಗನಾದರೆ ! ತನಗೆ ಬೇಕಾದುದನ್ನು ಬೆಳೆಸಲು ಸಾಧ್ಯವಿಲ್ಲ. ಫ್ಯೂರರನು ಹೇಳಿದುದನ್ನು ಅವನು ಬೆಳೆಸಬೇಕು. ಫ್ಯೂರರನು ಹೇಳಿದಂತೆ ಮತದಾನ ಮಾಡಬೇಕು. ರಾತ್ರಿಹಗಲು ಗುಪ್ತಚರರ ಕಾಟವು ತಪ್ಪಲಿಕ್ಕೇನೇ ಇಲ್ಲ. ಯಾವಾಗ ಯಾವ ಗತಿಯುಂಟಾಗುವುದೋ ಎಂಬ ಭೀತಿಯು ಸದಾ ತಪ್ಪಲಿಕ್ಕಿಲ್ಲ. ಇಡೀ ಜರ್ಮನಿಯಲ್ಲಿ ಗುಪ್ತ ಅತೃಪ್ತಿಯು ತೀವ್ರವಾಗಿ ಹಬ್ಬಿದೆ. ಎಲ್ಲಾ ವರ್ಗದ ಜನರಲ್ಲಿಯೂ ಪ್ರತಿಕುಟುಂಬದಲ್ಲಿಯೂ ಅಸಮಾಧಾನವಿದೆ. ನಾಝಿಗಳ ಅಧಿಕಾರ ದರ್ಪ, ಉಪಟಳ, ಹಿಂಸೆ ಮತ್ತು ನಿರ್ಬಂಧದಿಂದಾಗಿ ಜನರು ಉಪಾಯವಿಲ್ಲದೆ ಮೌನ ಧಾರಣೆಮಾಡಿರುತ್ತಾರೆ.

ಸ್ವಾಟ ಅರಿಂದ

ಎಲ್ಲೆಲ್ಲಿಯೂ ಜಪಾನ ಪೋಲೀಸರ ಬಾನಯು ಅಧಿಕಾಗಿದೆ. ಅವರು ಸಿಕ್ಕಸಿಕ್ಕವರನ್ನೆಲ್ಲಾ ಹಿಡಿದು ಬಲಾತ್ಕಾರದಿಂದ ಕೆಲಸಮಾಡಿಸುತ್ತಿದ್ದಾರೆ. ಇಲ್ಲವೇ ಸೇನಾ ಕೆಲಸಕ್ಕೆ ಸೇರಿಸುತ್ತಿದ್ದಾರೆ. ಒಮ್ಮೆ ನಿಲ್ಲಿಸಲ್ಪಟ್ಟಿದ್ದ ಅಫೀಮು ವ್ಯಾಪಾರವು ಈಗ ಜಪಾನರ ಆಶ್ರಯದಲ್ಲೇ ಯಥೇಚ್ಛವಾಗಿ ನಡಿಸಲ್ಪಡುತ್ತಿದೆ. ವಂಚನೆ, ಸುಲಿಗೆ, ಕಳವು, ದರೋಡೆ ಬಹಳ ಹೆಚ್ಚಾಗಿದೆ. ಜಪಾನರು ತಮ್ಮ ವಸ್ತುಗಳೇ ಎಲ್ಲೆಲ್ಲಿಯೂ ಮಾರಲ್ಪಟ್ಟು ಇತರ ವಿದೇಶೀ ಸಾಮಾನುಗಳು ಎಲ್ಲಿಯೂ ವಿಕ್ರಯಿಸಲ್ಪಡದಂತೆ ನಿರ್ಬಂಧಿಸಾಕುತ್ತಿದ್ದಾರೆ.

ಆಗಬಾರದಿತ್ತು; ಆದರೆ ಆಗಿಹೋಯಿತು

ಒಂದು ನಾಮಾಂಕಿತ ಕುಟುಂಬದ ಆಧಾರ ಸ್ತಂಭದಂತಿದ್ದ ಒಬ್ಬನೇ ಒಬ್ಬ ತರುಣನು ಅಕಸ್ಮಾತ್ತಾಗಿ ಮರಣಕ್ಕೆ ತುತ್ತಾದನು. ತನ್ನ ಹೆಸರಲ್ಲಿ ಹಣದ ಯಾವ ವ್ಯವಸ್ಥೆಯನ್ನೂ ಮಾಡದಿದ್ದ ಕಾರಣ ಅವನ ಹೆಂಡತಿ ಮಕ್ಕಳು ಬಹಳ ಕಷ್ಟಕ್ಕೆ ಗುರಿಯಾದರು, ಹಾಗೂ ಕುಟುಂಬದ ತುಚ್ಛೀಕಾರಕ್ಕೆ ಒಳಗಾದರು.

ಅಂತಹ ಅನಿಷ್ಟ ಪ್ರಸಂಗವು ಕುಟುಂಬದವರ ಮೇಲೆ ಬರಬಾರದು. ಇದಕ್ಕೆ ಒಂದೇ ಉಪಾಯವೆಂದರೆ-ಜೀವವಿಮೆ ಮಾಡುವುದು-ಮತ್ತು ಅದು ಸಹ-

ಈಸ್ಟ್ ಎಂಡ್ ವೆಸ್ಟ್ ಕಂಪನಿಯಲ್ಲಿ ಮಾತ್ರ

ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಅಪೋಲೊ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮಂಗಳೂರಿನಲ್ಲಿ ಗೃಹಸ್ಥರು ಈ ಕಂಪನಿಯಲ್ಲಿ ವಿಮೆಮಾಡಿ, ತಮ್ಮ ಭವಿಷ್ಯ ಕಾಲವನ್ನು ಪ್ರಕಾಶಮಯವಾಗಿ ಮಾಡಬಹುದು.
ವಿಶೇಷ ಮಾಹಿತಿಗೋಸ್ಕರ ಈ ಹೊತ್ತೇ ಬರೆಯಿರಿ:—
(ಮಹಾರಾಷ್ಟ್ರ ವ ಕರ್ನಾಟಕದ ಚೀಫ್ ಏಜಂಟರಿಗೆ)
ಮೆಸರ್ಸ್ ಪಡುಬಿದ್ರಿ ಬ್ರದರ್ಸ್,
ನಾರಾಯಣಲಾಲ ಬನ್ಸಿಲಾಲ ಬಿಲ್ಡಿಂಗ್ 73, ಆರಿಂಗ್ಟನ್ ರೋಡ್
ಮುಂಬಯಿ

EAST END WEST
INSURANCE CO. LTD.,

Madary Pills
(REGISTERED)
ಮದಾರಿ ಗುಳಿಗೆಗಳು
(ರಿಜಿಸ್ಟರ್ಡ)

ಸಮುದ್ರದ ಹಾಗೂ ಅನುಭವವಾಯಿಸಿರು ವ್ಯಾಪಾರ - ಸಿಸ್ಟ, ಅಪಸ್ಮಾರ ಇತ್ಯಾದಿಗಳಿಗೆ.

ದೋಷರಹಿತವಾದ ಅತ್ಯುಪಯುಕ್ತ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟಿದ್ದು, ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ.

ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನರ್ವಸನೆಸ್, ಸೂತಕವಾಯು, ಗರ್ಭಾಶಯ ದೋಷ, ನಿದ್ರೆಯಲ್ಲಿ ಮುದಿತನ, ಹುಚ್ಚು, ಉನ್ಮಾದ, ಸ್ವಪ್ನದೋಷ, ಮೂಲವ್ಯಾಧಿ, ಚಿತ್ತಭ್ರಮೆ ಮತ್ತು ಮೆದುಳಿನ ಅಶಕ್ತತೆಗಳನ್ನು ಹೋಗಲಾಡಿಸುತ್ತದೆ.

ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳದ್ವೀಪ ಮೊದಲಾದ ಪ್ರಮುಖ ರಾಷ್ಟ್ರಗಳ ಪ್ರಸಿದ್ಧ ಡಾಕ್ಟರರುಗಳು, ಮದಾರಿ ಮಾತ್ರೆಗಳಿಗೆ ಪದೇ ಪದೇ ಅಭಿನಂದನೆಗಳನ್ನು ಕೊಡುವುದೇ ನಮ್ಮ ಗುಳಿಗೆಗಳ ಶಕ್ತಿಯನ್ನು ಬಲಪಡಿಸುವಂತಹುದಕ್ಕೆ ನಿದರ್ಶನ.

50 ಗುಳಿಗೆಗಳುಳ್ಳ ಸೀಸೆಯೊಂದಕ್ಕೆ ಕ್ರಯ ರೂ. 3-8-0 ಬಯಸುವವರು ಈ ಕೆಳಗಿನ ವಿಳಾಸದಂತೆ ಬರೆಯಿರಿ:—

The Imperial Chemist Coy,
100, Vithalbhai Patil Road Bombay 4.

ಕೂಲಿಯಾಗಿದ್ದವಳು ರಾಣಿಯಾದ ಬಗೆ

- ಇಂದು ಅಲ್ಬೇನಿಯದ ರಾಣಿ!
- ಅಂದು ಹಂಗೇರಿಯದ ಸಾಮಾನ್ಯ ಹುಡುಗಿ!
- ಜೋಗ್ ರಾಜನೊಡನೆ ಆದ ವಿವಾಹ ರಹಸ್ಯ!

ಹಂಗೇರಿಯ ಈ ಹುಡುಗಿಯು ಹೇಗೆ ರಾಣಿಯಾದಳೆಂಬುದು ಬಹಳ ಆಕರ್ಷಕವಾದ ಕತೆ. ೬ ವರ್ಷಗಳ ಹಿಂದೆ ಇವಳು ಬುಡಾಪೆಸ್ಟಿನ ವಿಚಿತ್ರ ವಸ್ತುಸಂಗ್ರಹಾಲಯದಲ್ಲಿ ಕೆಲಸಗಾರಳಾಗಿದ್ದಳು. ಇವಳ ಹೆಸರು ಕೌಂಟೆಸ್ ಜೆರಾಲ್ಡಿನ್ ಲಿಯೋನಿ ಎಂದು. ಮೊದಲು ಬುಡಾಪೆಸ್ಟಿನ ಕೌಂಟ್ ಜ್ಯಾಲಿಯನ್ ಲಿಯೋನಿಯೊಡನೆ ವಿವಾಹವಾಗಿದ್ದ ಒಬ್ಬ ಅಮೇರಿಕದ ಸ್ತ್ರೀಯ ಮಗಳಿವಳು. ನಂತರ ಈಕೆಯ ತಾಯಿಯು ವ್ರಾನ್ಸಿನ ದನಿಕನಾದ ಜೆರಾಲ್ಡ್‌ನೊಡನೆ ವಿವಾಹವಾದಳು.

ರಾಜವಂಶಜಳಲ್ಲ

ರಾಜಕುಟುಂಬದ ಇತರ ರಾಣಿಯರಂತೆ ಇವರಿಗೆ ಸಹ ಹೆಮ್ಮೆ ಪಡಲು ಇವಳಲ್ಲಿ ಆ ರಾಜವಂಶದ ರಕ್ತವೇ ಇಲ್ಲ! ಐಶ್ವರ್ಯವಂತೂ ಇಲ್ಲವೇ ಇಲ್ಲ. ಇನ್ನು ಇವಳಲ್ಲಿದ್ದ ಆಸ್ತಿ ಎಂದರೆ ಅವಳಲ್ಲಿದ್ದ ಗುಣಗಳು, ಬುದ್ಧಿವಂತಿಕೆ ಮತ್ತು ಸೌಂದರ್ಯ.

ಒಂದು ಸಾರಿ ಆಕಸ್ಮಾತ್ತಾಗಿ ಇವಳಿಗೂ ಅಲ್ಬೇನಿಯದ ರಾಜನಿಗೂ ಭೇಟಿಯಾಯಿತು. ರಾಜನು ಇವಳ ಸೌಂದರ್ಯಕ್ಕೆ ಮನಸೋತನು. ಜೆರಾಲ್ಡಿನ್‌ಳೂ ಸಹ ಪ್ರೀತಿಸಲಾರಂಭಿಸಿದಳು. ಹುಡುಗಿಯ ತಾಯಿಯು ಇವರ ಪ್ರಣಯದ ವಿಚಾರದಲ್ಲಿ ಈ ರೀತಿ ಹೇಳಿದ್ದಳು—"ನನ್ನ ಮಗಳು ಪ್ರೀತಿಸುವುದು ಆ ಮನುಷ್ಯನನ್ನಲ್ಲದ ರಾಜನನ್ನಲ್ಲ. ರಾಜನೂ ಸಹ ಇವಳನ್ನು ಬಹಳವಾಗಿ ಪ್ರೀತಿಸುತ್ತಾನೆ"

ಜೆರಾಲ್ಡಿನ್‌ಳು ರಾಜಾ ಜೋಗನನ್ನು ಪ್ರಥಮತಃ ಪ್ರೀತಿಸಿದಳೋ ಇಲ್ಲವೋ ಹೇಳಲಾಗದಿದ್ದರೂ, ರಾಜನು ಮಾತ್ರ ಅಷ್ಟು ಹೊತ್ತಿಗೆ ಅನೇಕರನ್ನು ಪ್ರೀತಿಸಿದ್ದನೆಂದು ದಾರಾಳವಾಗಿ ಹೇಳಬಹುದು. ರಾಜನಿಗೆ ಆಗಲೇ ಮದುವೆಯಾಗಿತ್ತು. ತನಗೆ ಮುಸಲ್ಮಾನರ ಸಹಾಯವು ದೊರೆಯಬಹುದೆಂಬ ಆಶೆಯಿಂದ ಈ ರಾಜನು ತನ್ನ ಯೌವನದಲ್ಲೇ ಷುಕ್ ಕೇಡ್‌ವರ್ಲಾಟಬೀಯನ ಮಗಳನ್ನು ವಿವಾಹವಾಗಿದ್ದನು. ಆದರೆ ಕೊನೆಯಲ್ಲಿ ಇದನ್ನು ಬಿಟ್ಟುಬಿಟ್ಟನು. ತಾನು ಒಪ್ಪಿದ ಎರಡನೆಯ ರಾಣಿಯು ಎರಡನೇ ಭೇಟಿಯಾದ ಕೂಡಲೇ ವದಿಸಲ್ಪಟ್ಟಳು. ರಾಜನ ಒಬ್ಬ ಸ್ತ್ರೀಮಿತ್ರಳು ವೈಟ ಹಾಲಿನ ಬ್ಲೋರಾ ಗೊ... ಯ ಮೇಲೆ ಆತ್ಮಹತ್ಯೆ ಮಾಡಿಕೊಂಡಳು. ಈ ಘಟನೆಯಿಂದ ಯುರೋಪಿನಲ್ಲಿ ಈ ರಾಜನ ವಿಚಾರದಲ್ಲಿ ಎಲ್ಲರಿಗೂ ಆಸಕ್ತಿ ಹೆಚ್ಚಿತು.

ರಾಜವಂಶಜರಾದ ಕೆಲವು ಯುವತಿಯರು ರಾಜನೊಡನೆ ವಿವಾಹವಾಗುವುದಾಗಿ ಮಾತುಕೊಟ್ಟಿದ್ದರಂತೆ. ಆದರೆ ಅದರಂತೆ ನಡೆಯಲಿಲ್ಲ. ಇಟಲಿಯ ರಾಜಪುತ್ರಿಯು ಸಹ ಈ ರೀತಿ ಮಾತುಕೊಟ್ಟು ಕೊನೆಗೆ ಬೇರೆಯವನನ್ನು ವಿವಾಹವಾದಳು. ರುಮಾನಿಯದ ಇಲಿಯೋನಾಳು ಸಹ ಮಾತುಕೊಟ್ಟು ಬೇರೆಯವನನ್ನು ಮದುವೆಯಾದಳು. ರಾಜನಿಗಾದರೋ ಮದುವೆಯಾಗಬೇಕೆಂಬ ಉತ್ಸಾಹವು ಬಹಳವಾಗಿದ್ದುದರಿಂದ ಅದಕ್ಕಾಗಿ ಕೆಲವು ದಳ್ಳಾಳಿಗಳನ್ನು ನಿಯಮಿಸಿದನು.

ಇದಾದ ಮೇಲೆ ರಾಜನು, ಈಜಿಪ್ಟಿನ ಒಬ್ಬ ಉತ್ತರಾಧಿಕಾರಿಣಿಯನ್ನು ಮೋಹಿಸಿದನಂತೆ. ಅಲ್ಲದೆ ಚಿಕಾಗೋವಿನ ಒಬ್ಬ ಸಂಗೀತಗಾರಳೊಡನೆಯೂ ರಷ್ಯದ ಒಬ್ಬ ನರ್ತಕಿಯೊಡನೆಯೂ ಪ್ರೇಮವಿಟ್ಟನಂತೆ. ಇವುಗಳಲ್ಲಿ ಯಾವುದೂ ಸ್ಥಾಯಿಯಾಗಲಿಲ್ಲ.

ಈ ಸಮಯದಲ್ಲೇ ರಾಜನಿಗೆ ಜೆರಾಲ್ಡಿನ್ನೊಡನೆ ಭೇಟಿಯಾದುದು. ರಾಜಾ ಜೋಗನು ತನ್ನ ಭಾವಿಪತ್ನಿಗಾಗಿ, ಬಲೆಬಾಳುವ ಒಡವೆಗಳನ್ನೂ ಮೋಟಾರು ಆದಿಗಳನ್ನೂ ಕೊಂಡುಕೊಟ್ಟನು.

ಮದುವೆ

ಅನೇಕರು ಈ ವಿವಾಹವನ್ನು ವಿರೋಧಿಸಿದರು. ಜೆರಾಲ್ಡೀನಳು ಹಂಗೇರಿಯವಳಾದುದರಿಂದ, ವಿವಾಹಕ್ಕೆ ಸಮ್ಮತಿಸಲಿಲ್ಲ. ಪೋಪರು ಸಹ ಅವರ ಮಕ್ಕಳು ರೋಮನ್ ಕ್ಯಾಥೋಲಿಕ್ ಮತದಲ್ಲೇ ಬೆಳೆಯದ ಹೊರತು ಆಜ್ಞೆ ಕೊಡುವಂತಿಲ್ಲ. ಜೋಗದೊರೆಯಾದರೋ ಪೋಪರ ಮಾತಿಗೆ ಸೊಪ್ಪು ಹಾಕಲಿಲ್ಲ. ಈ ರೀತಿ ಎಲ್ಲರೂ ವಿರೋಧಿಸಿದರೂ ಸಹ 1937ನೇ ಏಪ್ರಿಲ್ 27ರಲ್ಲಿ ಇಬ್ಬರಿಗೂ ಮದುವೆಯಾಯಿತು.

ಈ ರೀತಿ ಸಾಧಾರಣ ವಂಶಜಳಾಗಿದ್ದ ಜೆರಾಲ್ಡಿನಳ ಚರಿತ್ರೆಯು ಬದಲಾಯಿತು, ಆಕೆಯು ಅಲ್ಬೇನಿಯದ ರಾಣಿಯಾದಳು.

ನೃತ್ಯಪ್ರೇಮ

ಅರಮನೆಯಲ್ಲಿ ಆಕೆಯ ಜೀವನವು ಸರಳವಾಗಿಯೂ ಶಾಂತರೀತಿಯಿಂದಲೂ ಇರುತ್ತಿತ್ತು. ರಾಜರಾಣಿಯರಿಬ್ಬರೂ ಪ್ರತ್ಯೇಕ ಕೋಣೆಗಳಲ್ಲೇ ಊಟಮಾಡುತ್ತಿದ್ದುದು. ಸಂಜೆಯಲ್ಲಿ ರಾಜನು ಸಿನೇಮಾಕ್ಕೆ ಹೋಗುತ್ತಿದ್ದನು. ಅವನ ಸಂಗಡ ಅವನ ಸಹೋದರಿಯರೂ ದರ್ಬಾರಿಗಳೂ ಹೋಗುತ್ತಿದ್ದರು.

ರಾಜರಾಣಿಯರಿಬ್ಬರಿಗೂ ನೃತ್ಯದ ಮೇಲೆ ಬಹಳ ಆಸಕ್ತಿ. ಸಂಜೆಯಲ್ಲಿ ಅವರಿಬ್ಬರೂ ಅರಮನೆಯ ಮೇಲ್ಭಾಗದಲ್ಲಿ ಗ್ರಾಮಫೋನ್ ರಿಕಾರ್ಡುಗಳನ್ನು ಹಾಕಿ, ಅದರ ಗಾನಕ್ಕೆ ತಕ್ಕಂತೆ ಕುಣಿಯುತ್ತಿದ್ದರು. ರಾಣಿಯು ಒಬ್ಬ ಪ್ರಸಿದ್ಧ ನರ್ತಕಿ.

ರಾಣಿಯು ಏಳುವುದು ಬಹಳ ತಡ. ಒಂದೊಂದು ವೇಳೆ ಹಾಸಿಗೆಯಲ್ಲೇ ಊಟವಾಗುತ್ತಿತ್ತು. ನಂತರ ಫ್ರೆಂಚ್ ಅನೇಕದ ಉಪನ್ಯಾಸಗಳನ್ನು ಓದುತ್ತಿದ್ದಳು.

ರಾಜನ ರಕ್ಷಣೆ

ರಾಣಿಯು ಯಾವಾಗಲೂ ರಾಜನೊಡನೆಯೇ ಇರುತ್ತಿದ್ದಳು. ಪ್ರಾತಃಕಾಲದಲ್ಲಿ ಮಾತ್ರ ಇರುತ್ತಿರಲಿಲ್ಲ ಅಷ್ಟೆ. ಏಕೆಂದರೆ ಆಗ ಅವಳು ಮಲಗುವ ಮನೆಯಲ್ಲಿಯೂ, ರಾಜನ ವ್ಯಾಸಂಗದ ಕೋಣೆಯಲ್ಲಿಯೂ ಇರುತ್ತಿದ್ದಳು. ಯಾರಾದರೂ ರಾಜನ ಮೇಲೆ ಕೈಮಾಡಿಯಾರೆಂಬ ಎಚ್ಚರಿಕೆಯಲ್ಲಿಯೇ ರಾಣಿ ಇರುತ್ತಿದ್ದುದು.

ಜೋಗ್ ದೊರೆಗೆ 100ಕ್ಕಿಂತ ಹೆಚ್ಚು ಶತ್ರುಗಳಿದ್ದರು. ಆ ದೇಶದಲ್ಲಿ ಯಾರೇ ಆಗಲಿ ಶತ್ರುವನ್ನು ಹಿಂಬಾಲಿಸಿ ಅವನನ್ನು ಕೊಂದರೆ, ಬಹಳ ಗೌರವಿಸಲ್ಪಡುತ್ತಿದ್ದನು. ಆದರೆ ಮನುಷ್ಯನೊಡನೆ ಅತನ ಸ್ತ್ರೀಯರೂ ಇದ್ದಲ್ಲಿ, ಅಂಥವವನನ್ನು ಕೊಲ್ಲುವುದು ಮಹಾಪಾತಕ. ಈ ಕಾರಣದಿಂದಲೇ ಜೋಗನು ರಾಣಿಯೊಡನೆ ಇರುತ್ತಿದ್ದುದು.

ಹಿಂದಿನ ಮಂತ್ರಿಯ ಕೊಲೆಯಿಂದ ಜಾಗರೂಕನಾಗಿ, ರಾಜನು ಎಚ್ಚರಿಕೆಯಿಂದಿರುತ್ತಿದ್ದನು. ಒಂದು ದಿನ ಆ ಮಂತ್ರಿಯು ರಾಜಧಾನಿಯಲ್ಲಿ ತನ್ನ ಪತ್ನಿಯೊಡನೆ ಸಂಚರಿಸುತ್ತಿದ್ದಾಗ ಆಕೆಯು ಪೌಡರ್ ತರಲು ಅಂಗಡಿಗೆ ಹೋದಳು. ಕೂಡಲೆ ಒಬ್ಬ ಶತ್ರುವು ಮಂತ್ರಿಯನ್ನು ಗುಂಡಿನಿಂದ ಹೊಡೆದನು. ಆದುದರಿಂದಲೇ ರಾಣಿಯು ಯಾವಾಗಲೂ ರಾಜನ ಜೊತೆಯಲ್ಲಿಯೇ ಇರುತ್ತಿದ್ದುದು.

ಪತಿಗೆ ಭೋಜನ

ರಾಣಿಯ ಎರಡನೆ ಕೆಲಸವೇನೆಂದರೆ ಪತಿಗೆ ಭೋಜನವನ್ನು ತಯಾರಿಸುವುದು. ಜೋಗನ ತಾಯಿಯು ಇರುವ ತನಕ, ಅವನು ಆಕೆಯ ಕೈಯಲ್ಲಿ ವಿನಹ ಮತ್ತಾರಿಂದಲೂ ಊಟಮಾಡುತ್ತಿರಲಿಲ್ಲ. ತಾಯಿಯ ನಂತರ ಈ ಕೆಲಸವು ಜೆರಾಲ್ಡೀನಳದಾಯಿತು. ಆದರೆ ತನ್ನ ತಾಯಿಯ ಕೈಲಿ ಮಾಡಿದಷ್ಟು ರುಚಿಯು ಪತ್ನಿಯ ಅಡಿಗೆಯಲ್ಲಿರಲಿಲ್ಲವಂತೆ. ಆದುದರಿಂದ ತನಗೆ ಚೆನ್ನಾಗಿ ಬರುತ್ತಿದ್ದ ಹಂಗೇರಿ ದೇಶದ ಊಟವನ್ನೇ ಅವನಿಗೆ ಅಭ್ಯಾಸಮಾಡಿಸಿದಳು.

ರಾಣಿಯ ಮೂರನೇ ಕೆಲಸವೆಂದರೆ ರಾಜನಿಗೆ ತನ್ನ ಪ್ರೇಮದಿಂದ ಪ್ರಸನ್ನತೆಯನ್ನುಂಟುಮಾಡುವುದು. ಈ ಕಲಸದಲ್ಲಿ ಈಕೆಯು ಬಹಳ ಚತುರಳು. ಈಕೆಯು ಈಜುವುದರಲ್ಲಿ ಬಹಳ ನಿಪುಣೆ. ಆಕೆಯ ಮನರಂಜನೆಗಾಗಿ ರಾಜನು ಸಮುದ್ರ ತೀರದಲ್ಲಿ ಒಂದು ಅರಮನೆಯನ್ನು ಕಟ್ಟಿಸಿದನು. ಇಲ್ಲಿ ಆಕೆಗೆ ಈಜುವುದಕ್ಕೆ ತಕ್ಕ ಸೌಕರ್ಯವಿದ್ದು ಪ್ರತಿದಿನವೂ ಬೆಳಗ್ಗೆ 9 ಘಂಟೆಗೆ ರಾಜರಾಣಿಯರಿಬ್ಬರೂ ಈಜುತ್ತಿದ್ದರು.

(ಈಗ ಈ ರಾಜದಂಪತಿಗಳು ದೇಶಭ್ರಷ್ಟರಾಗಿ ಟರ್ಕಿಯಲ್ಲಿದ್ದಾರೆ. ಮುಸೋಲಿನಿಯು ಅಲ್ಬೇನಿಯವನ್ನೂ ತನ್ನ ಅಧೀನಕ್ಕೆ ಒಳಪಡಿಸಿಕೊಂಡಿರುವನು.)

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ಶುಚಿಯಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು

ಮೈಸೂರು ಸ್ಯಾಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸ್ಯಾಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು

SAVING MONEY AND TIME

Thousands of prudent and thriving business-men prefer this Bank because attention is prompt and personal. To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906
CANARA BANK
LIMITED

ಹೊಸತಾಗಿ ಬಂದ ನವನವೀನ ಪುಸ್ತಕಗಳು

ಕಥೆಗಳು

[illegible]	(ನರಸಿಂಹಮೂರ್ತಿ)	.	೧	೦	೦
	(,,)	..	೦	೬	೦
[illegible]	([illegible])	...	೦	೧೦	೦
ಜೋಡುಮಲ್ಲಿಗೆ	(ಸಿ. ಕೆ. ನಾಗರಾಜನ್)		೦	೫	೦
[illegible]	([illegible] ಶಾಸ್ತ್ರಿ)	....	೧	೨	೦
[illegible]	(ಪ. ಕೆ. ಗ್ರಂಥಮಾಲೆ)	.	೧	೦	೦
ಹತ್ತು ಕತೆಗಳು	(ಪ್ರೇಮ ಪ್ರಕಟಣೆ)	.	೦	೬	೦
ರಾಜಸ್ಥಾನ ಕಥಾವಳಿ	(ಮು. ರಾಮರಾವ್)	.	೦	೮	೦
ಪ್ರೇಮ ಕಥಾವಳಿ	(ಪ್ರೇಮ ಪ್ರಕಟಣೆ)	.	೧	೦	೦
[illegible]	([illegible])		೦	೮	೦
[illegible]	(ಭಾರತಿ ಗ್ರಂಥಮಾಲೆ)	..	೦	೪	೦
[illegible]	(,,)	...	೦	೪	೦
[illegible]	(,,)	....	೦	೪	೦

ಕಾದಂಬರಿಗಳು

[illegible]	(ಆರ್. ವ್ಯಾಸರಾವ್)	.	೦	೧೪	೦
[illegible]	(ಬಿ ನರಹರಿ ಶಾಸ್ತ್ರಿ)	.	೧	೬	೦
[illegible]	(ಗಳಗನಾಥ)	.	೧	೨	೦
[illegible]	(,,)	....	೧	೦	೦
[illegible]	(,,)	..	೦	೮	೦
[illegible]	(ಮನೋಹರ ಗ್ರಂಥಮಾಲೆ)	.	೩	೨	೦
[illegible]	(,,)	....	೧	೦	೦
[illegible]	(,,)	...	೦	೧೨	೦
[illegible]	(,,)	...	೧	೮	೦
[illegible] ಗಳು	(,,)	....	೧	೮	೦
[illegible]	(,,)	..	೦	೧೪	೦
ಎರಡು ಧ್ರುವ	(,,)	.	೨	೦	೦
ಸಂಧ್ಯಾರಾಗ	(,,)	....	೧	೦	೦
[illegible]	(ಹೊ ರಾಮರಾವ್)	..	೧	೬	೦
[illegible]	(ದೇವುಡು)	..	೦	೬	೦
ಸೌಭಾಗ್ಯ [illegible]	(ನಾಗಭೂಷಣ)	.	೦	೬	೦
ಭಗವತಿ	(ಅಚ್ಯುತ)	...	೦	೮	೦
ದೇವದಾಸ	(ಗುರುನಾಥ ಜೋಶಿ)	....	೧	೦	೦
ಪ್ರತಿಬಿಂಬ	(ಬಾಲಚಂದ್ರ ಘಾಣೇಕರ)	..	೦	೪	೦
ಮನೋರಮಾ	(ಕರ್ಪೂರ)	.	೦	೧೪	೦
[illegible]	(ಶೇಷಾಚಲ ಗ್ರಂಥಮಾಲೆ)	....	೩	೦	೦
[illegible]	(,,)	...	೦	೮	೦
[illegible]	(,,)		೦	೮	೦
[illegible]	(,,)	...	೧	೦	೦
[illegible] ಕನಕಲತ	(,,)	....	೦	೩	೦
[illegible]	(,,)	....	೦	೪	೦
ಮಾಯಾವತಿ	(,,)	....	೧	೪	೦
ಕಮಲಾಕಾಂತ ಸಾಧು	(,,)	...	೦	೧೦	೦
ನನ್ನ [illegible]	(,,)	....	೦	೬	೦
[illegible]	(ಭಾರತೀ ಗ್ರಂಥಮಾಲೆ)	....	೦	೯	೦
ವೀರಸಿಂಹನ ಸಾಹಸ	(ಗೋದಾವರಿ ಬಾಯಿ)	...	೦	೪	೦
ಯಶೋಧರಾ	(ಕೆ ಬಿ ರಾಮಕೃಷ್ಣ)	...	೦	೮	೬
[illegible] ಕಲ್ಯಾಣ	(ಮಾತೃಮಂದಿರ)	...	೦	೮	೦
[illegible]	(ಸೀತಾರಾಮಯ್ಯ)	....	೦	೬	೦
ಸುಶೀಲೆ	(ನಾಗಪ್ಪ ಬಿ. ಎ)	.	೦	೧೨	೦
ಲಕ್ಷ್ಮಣಮೂರ್ತಿ	(ಗುಂಡಪ್ಪ)	.	೦	೬	೦
[illegible]		..	೦	೯	೦
[illegible]	(ರಾಬಿನ್ಸನ್)	..	೦	೧೪	೦

ನಾಟಕಗಳು

ಅಕ್ಕ ಮಹಾದೇವಿ	(ರಂ. ಶ್ರೀ. ಮುಗಳಿ)	...	೦	೧೦	೦
ನರಕದಲ್ಲಿ ನರಸಿಂಹ	(ಪ್ರೇಮ ಪ್ರಕಟನಾಲಯ.)	....	೦	೬	೦
ನಡುಮನೆಯಲ್ಲಿ	(,,)	...	೦	೬	೦
ಪ್ರೇಮ ನಾಟಕಾವಳಿ	(,,)	..	೧	೦	೦
ಬಣ್ಣದ ಬೀಸಣಿಗೆ	(,,)	....	೦	೧೨	೦
ಪ್ರಮೀಳಾರ್ಜುನೀಯಂ	(ಶ್ರೀಕಂಠ)	....	೦	೧೨	೦
ಸ್ತ್ರೀ	(ಕೋಳಿ ಶಾಂತಪ್ಪ)	..	೧	೦	೦
ಗಮಾನಂದ	(ಮಾತೃಮಂದಿರ)	....	೨	೧೦	೦
ವ್ಯಾಮೋಹ	(ರಾಮಸ್ವಾಮಿ ಐಯ್ಯಂಗಾರ್)	...	೦	೮	೦
ರೋಜಿ	(,,)	.	೨	೮	೦
ನಿಷ್ಕಾಮ ಪ್ರೇಮ	(,,)	.	೦	೮	೦
ವಿಧಿ	(,,)	....	೦	೮	೦
ನವೀನ ಭರತಖಂಡ	(ವೆಂಕಟ್)	...	೦	೮	೦
ವೀರ ಅಭಿಮನ್ಯು	(ವಾಮನ ರಾವ್)	....	೦	೧೨	೦
ಪಾರ್ವತಿ ಸತ್ವ ಪರೀಕ್ಷೆ	(,,)	....	೦	೧೨	೦
ಪ್ರೇಮಲೀಲಾ	(ಶೇಷಾಚಲಗ್ರಂಥಮಾಲೆ)	....	೦	೧೨	೦
ಪ್ರತೀಕಾರ	(ಭಾರತೀ ಗ್ರಂಥಮಾಲೆ)	....	೦	೪	೦
ಪಂಜರಕಿ	(,,)		೦	೪	೦

ಇತಿಹಾಸ ಮತ್ತು ಜೀವನ ಚರಿತ್ರೆಗಳು

ಶ್ರೀ ಸುರೇಶ್ವರಾಚಾರ್ಯ	(ಶೇಷಾಚಲ ಗ್ರಂಥಮಾಲೆ)	೦	೧೨	೦
ಜ್ಞಾನೇಶ್ವರರು	(,,)	೦	೨	೦
ಆನಂದ ಮೂರ್ತಿ	(,,)	೦	೩	೦
ಕೇಶವ ಸ್ವಾಮಿಗಳು	(,,)	೦	೨	೦
ಗುಜರಾಥದ ಇತಿಹಾಸ	(,,)	೦	೬	೦
ಶ್ರೀ. ಜಯರಾಮಸ್ವಾಮಿ	(,,)	೦	೩	೦
ಟೆಂಬೇ ಮಹಾರಾಜರು	(,,)	೦	೧೦	೦
ಏಕನಾಥೀ ಅವಧೂತ ಗೀತೆ	(,,)	೧	೦	೦
ದಿನಕರ ಪಲಗೀತೆ	(,,)	೦	೮	೦
ಕಥಾಸರಿತ್ಸಾಗರ	(,,)	೨	೮	೦
ಮಡಿ ವೈಲಿಗೆಗಳ ಗುಟ್ಟು	(,,)	೦	೪	೦
ಮಲ್ಹಾರಿ ಮಹಾತ್ಮೆ	(,,)	೦	೮	೦
ರೇಣುಕಾ ಮಹಾತ್ಮೆ	(,,)	೦	೪	೦
ವೆಂಕಟೇಶ ಮಹಾತ್ಮೆ	(,,)	೧	೦	೦
ಶ್ರೀಪಾದ ಕಥಾಮೃತ	(,,)	೦	೧೨	೦
ಬೋಧಾಮೃತ	(,,)	೧	೦	೦
ಹಂಸಗೀತೆ	(,,)	೦	೬	೦
ನಾರಾಯಣ ಭಗವಾನರು	(,,)	೦	೮	೦
ನಾರಾಯಣ ಮಹಾರಾಜ	(,,)	೧	೪	೦
ನಾಗಲಿಂಗಪ್ಪನವರು	(,,)	೦	೨	೦
ಬ್ರಹ್ಮಾನಂದರು	(,,)	೦	೨	೦
ಬ್ರಹ್ಮೇಂದ್ರ ಸ್ವಾಮಿಗಳು	(,,)	೦	೪	೦
ರಾಘವೇಂದ್ರ ಗುರುಕಥಾಮೃತ	(,,)	೧	೨	೦
ರಂಗನಾಥ ಸ್ವಾಮಿ	(,,)	೦	೫	೦
ಸ್ವಾಮಿ ಶ್ರದ್ಧಾನಂದ	(,,)	೦	೧೨	೦
ಸಂಕುಕಾರಾಮ	(,,)	೧	೦	೦
ಸಾಧು ನಾಮದೇವ ಲೀಲೆ	(,,)	೦	೪	೦
ಸೌರಾಷ್ಟ್ರ	(,,)	೦	೫	೦
ಗಾಂ ಶೀಲ್ಬನ ಚರಿತ್ರೆ	(ಸಾಹಿತ್ಯಪರಿಷತ್ತು)	೦	೧೨	೦
ಚರಿತ್ರ ಸಂಗ್ರಹ	(ಶ್ರೀನಿವಾಸಯ್ಯಂಗಾರ)	೦	೧೨	೦
ಹಾಗಲವಾಡಿ ಪಾಳೆಯಗಾರರು	(ಪುಟ್ಟಣ್ಣ)	೦	೬	೦
ಇಕ್ಕೇರಿಸಂಸ್ಥಾನ ಚರಿತ್ರೆ	(,,)	೧	೬	೦
ಚಿತ್ರದುರ್ಗ ಪಾಳೆಯಗಾರರು	(,,) ...	೧	೨	೦
ಪಾಳೆಯಗಾರರು	(,,)	೦	೧೪	೦

ನಿಮಗೆ ಯಾವ ಪುಸ್ತಕ ಬೇಕಾದರೂ ಮೊದಲು ನಮ್ಮೊಡನೆ ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD 1906

ಉಡುಪಿ, ಗುರುವಾರ, ತಾ. ೧೦ ೮-೩೯

ದೇಶೀಯ ಸಂಸ್ಥಾನಗಳು ಮತ್ತು ಕಾಂಗ್ರೆಸು

ಇತ್ತಲಾಗಿ ದೇಶೀಯ ಸಂಸ್ಥಾನಗಳ ಪ್ರಜೆಗಳಲ್ಲೆಲ್ಲಾ ವಿಚಿತ್ರ ಜಾಗ್ರತೆಯುಂಟಾಗಿ ಅವರು ತಮ್ಮ ಸಂಸ್ಥಾನಗಳಲ್ಲಿನ ನಿರಂಕುಶ ಪ್ರಭುತ್ವವನ್ನು ಕೊನೆಗೊಳಿಸಿ ಪ್ರಜಾ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ಪ್ರಬಲವಾಗಿ ಚಳವಳಿಸಹತ್ತಿರುವರು. ಬ್ರಿಟಿಷ್ ಹಿಂದುಸ್ಥಾನದ ಪ್ರಜೆಗಳು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡಿಸಿ ಪ್ರಾಂತಗಳ ಮಟ್ಟಿಗಾದರೂ ಪ್ರಜಾಜವಾಬ್ದಾರಿ ರಾಜ್ಯಭಾರ ಪಡೆದಿರುವಾಗ, ಈ ಪ್ರಾಂತಗಳ ನಡುವೆ ಇರುವ ದೇಶೀಯ ಸಂಸ್ಥಾನಗಳಲ್ಲಿ ಮಧ್ಯಮಿಕ ಕಾಲದ ನಿರಂಕುಶ ಪ್ರಭುತ್ವ ಇರುವುದು ಕೇವಲ ವಿಪರ್ಯಾಸವೇ ಸರಿ. ಇದು ಹೊರತು ಇಡೀ ಹಿಂದುಸ್ಥಾನವನ್ನು ಸ್ವತಂತ್ರವನ್ನಾಗಿ ಮಾಡಿ ಸಂಯುಕ್ತ ರಾಜ್ಯಭಾರವನ್ನು ಸ್ಥಾಪಿಸುವುದೇ ಕಾಂಗ್ರೆಸಿನ ಉದ್ದೇಶ. ಆದುದರಿಂದ ದೇಶೀಯ ಸಂಸ್ಥಾನಗಳ ಪ್ರಜೆಗಳೂ ಜವಾಬ್ದಾರಿ ರಾಜ್ಯಭಾರ ಪಡೆಯುವುದು ಅತ್ಯಾವಶ್ಯಕ. ಮತ್ತು ಕಾಂಗ್ರೆಸು ಆ ಕುರಿತು ಪ್ರಯತ್ನಿಸುವುದು ಅದರ ಆದ್ಯ ಕರ್ತವ್ಯ. ಬ್ರಿಟಿಷ್ ಸಾಮ್ರಾಜ್ಯಶಾಹಿಯು ಯಾವ ರೀತಿ ಪ್ರಯತ್ನಿಸುತ್ತಿರುವ ಫೆಡರೇಶನು ಕೂಡಾ ಸಾಧ್ಯವಾಗಬೇಕಾದರೆ ಬ್ರಿಟಿಷ್ ಪ್ರಾಂತಗಳಂತೆಯೇ ದೇಶೀಯ ಸಂಸ್ಥಾನಗಳು ಪ್ರಜಾಜವಾಬ್ದಾರಿ ಸರಕಾರ ಪಡೆಯಲೇಬೇಕು. ಪ್ರಜಾಜವಾಬ್ದಾರಿ ರಾಜ್ಯಭಾರದೊಂದಿಗೆ ನಿರಂಕುಶ ಪ್ರಭುತ್ವವನ್ನು ಜೋಡಿಸಿ ಬೆಸುಗೆ ಹಾಕಲೆತ್ನಿಸುವುದರಲ್ಲಿ ಅರ್ಥವಿಲ್ಲ. ಆದುದರಿಂದ ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಜವಾಬ್ದಾರಿ ಸರಕಾರವು ಆದಷ್ಟು ಶೀಘ್ರವಾಗಿ ಸ್ಥಾಪಿಸಲ್ಪಡುವಂತೆ ನೋಡುವುದು ಚಕ್ರವರ್ತಿ ಸರಕಾರದ ಕರ್ತವ್ಯ ಕೂಡಾ ಆಗಿದೆ.

ಕಾಂಗ್ರೆಸಿನೊಳಗಣ ಎರಡು ಅಭಿಪ್ರಾಯಗಳು

ದೇಶೀಯ ಸಂಸ್ಥಾನಗಳಲ್ಲಿ ಪ್ರಜಾ ಜವಾಬ್ದಾರಿ ಸರಕಾರವು ಸ್ಥಾಪಿಸಲ್ಪಡುವಂತೆ ಪ್ರಯತ್ನಿಸುವ ವಿಷಯದಲ್ಲಿ ಕಾಂಗ್ರೆಸಿನೊಳಗೆ ಎರಡು ಅಭಿಪ್ರಾಯಗಳಿರುತ್ತವೆ. ದೇಶೀಯ ಸಂಸ್ಥಾನಗಳ ಪ್ರಜೆಗಳು ತಾವಾಗಿ ತಮ್ಮ ಸ್ವಾತಂತ್ರ್ಯ ಚಳವಳಿಯನ್ನು ಹೂಡಬೇಕು. ಅದನ್ನು ನಡಿಸುವ ಎಲ್ಲಾ ಜವಾಬ್ದಾರಿಯು ಅವರದೇ ಆಗಬೇಕು. ಕಾಂಗ್ರೆಸು ಅವರಿಗೆ ಬೇಕಾದ ಸಲಹೆ ಮಾತ್ರ ಕೊಡಬೇಕೆಂಬುದು ಮಹಾತ್ಮಾ ಗಾಂಧಿಯವರೇ ಮೊದಲಾದ ಮಂದಗಾಮಿಗಳ ಅಭಿಪ್ರಾಯ. ಕಾಂಗ್ರೆಸೆಂಬುದು ಅಖಿಲ ಭಾರತ ರಾಷ್ಟ್ರೀಯ ಸಂಸ್ಥೆ. ಇಡೀ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆ. ದೇಶೀಯ ಸಂಸ್ಥಾನಗಳು ರಾಷ್ಟ್ರದ ಅಂಗವೇ ಆಗಿರುವಾಗ ಅವುಗಳ ಸ್ವಾತಂತ್ರ್ಯ ಸಾಧಿಸುವುದೂ ಕಾಂಗ್ರೆಸಿನ ಜವಾಬ್ದಾರಿಯಾಗುವುದು. ಆದುದರಿಂದ ಕಾಂಗ್ರೆಸು ದೇಶೀಯ ಸಂಸ್ಥಾನಗಳ ಪ್ರಶ್ನೆಯಲ್ಲಿ ಪ್ರತ್ಯಕ್ಷ ಕೈಹಾಕಿ ಈ ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಚಳವಳಿಯನ್ನು ತಾನೇ ನಡಿಸಬೇಕೆಂಬುದು ಕಾಂಗ್ರೆಸಿನೊಳಗಣ ತೀವ್ರಗಾಮಿಗಳ ಮತ. ಯಾಕೆಂದರೆ ದೇಶೀಯ ಸಂಸ್ಥಾನಾಧಿಪತಿಗಳು ಚಕ್ರವರ್ತಿ ಸರಕಾರದ ಅಧೀನವಿರುವರು. ಚಕ್ರವರ್ತಿ ಸರಕಾರವು ಹೇಳಿದಂತೆ ಕೇಳಿಕೊಂಡಿರುವರು. ಅವರು ತಮ್ಮ ಪ್ರಜೆಗಳಿಗೆ ಪ್ರಜಾಜವಾಬ್ದಾರಿ ಸರಕಾರವನ್ನೀಯುವುದು ಚಕ್ರವರ್ತಿ ಸರಕಾರಕ್ಕೇನೇ ಮನಸ್ಸಿಲ್ಲ. ಸಂಸ್ಥಾನಾಧಿಪತಿಗಳು ಪ್ರಜಾಜವಾಬ್ದಾರಿ ಸರಕಾರವನ್ನು ಸ್ಥಾಪಿಸಲು ತಮ್ಮ ಆಕ್ಷೇಪವೇನೂ ಇಲ್ಲೆಂದು ಹೇಳಿಸಿಕೊಂಡು ಒಳಗಿಂದೊಳಗೆ ಈ ದೇಶೀಯ ರಾಜರುಗಳಿಗೆ ಆಶ್ರಯವನ್ನೀಯುತ್ತಿವೆ ಬ್ರಿಟಿಷ್ ಸರಕಾರ. ಯಾಕೆಂದರೆ ಈ ರಾಜರುಗಳು ಸದಾ ಬ್ರಿಟಿಷ್ ಸರಕಾರದ ಬೆಂಬಲಕ್ಕೆ ನಿಲ್ಲುವವರಿದ್ದಾರೆ. ಆದುದರಿಂದ ಬ್ರಿಟಿಷ್ ಹಿಂದುಸ್ಥಾನದ ಮತ್ತು ದೇಶೀಯ ಸಂಸ್ಥಾನಗಳ ಪ್ರಜೆಗಳು ಪರಸ್ಪರ ಸಹಕರಿಸಿಕೊಂಡು ಇಡೀ ಹಿಂದುಸ್ಥಾನದ ಪಾರತಂತ್ರ್ಯವನ್ನು ತೊಲಗಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಮಣಿಯಲೆತ್ನಿಸಬೇಕೆಂದೇ ಕಾಂಗ್ರೆಸಿನೊಳಗಣ ತೀವ್ರಗಾಮಿಗಳ ಮತ.

ಗಾಂಧಿಯವರ ಹೊಸ ಧೋರಣೆ

ಆದರೆ ಗಾಂಧಿಯವರ ಸಲಹೆ ಮೇರೆಗೆ ಕಾಂಗ್ರೆಸ, ರಾಜಮಹಾರಾಜರುಗಳನ್ನೊಲಿಸಿಕೊಂಡು ಅವರು ತಮ್ಮ ಪ್ರಜೆಗಳಿಗೆ ಪ್ರಜಾಜವಾಬ್ದಾರಿ ರಾಜ್ಯವನ್ನೀಯುವಂತೆ ಮಾಡುವ ಹೊಸ ಧೋರಣೆ ವಹಿಸಿರುತ್ತದೆ. ಆ ಪ್ರಕಾರ ಪ್ರತಿಯೊಂದು ಸಂಸ್ಥಾನದಲ್ಲಿಯೂ ಸ್ವಾಭಾವಿಕವಾಗಿ ಎದ್ದು ಪ್ರಬಲವಾಗಿರುವ ಸ್ವಾತಂತ್ರ್ಯ ಚಳವಳಿಗಳನ್ನೆಲ್ಲ ನಿಲ್ಲಿಸಲಾಗಿದೆ. ಸಂಸ್ಥಾನಗಳ ಸರಕಾರದ ಕುಟಿಲ ತಂತ್ರ ಮತ್ತು ಹೃದಯಶೂನ್ಯ ವರ್ತನೆಯಿಂದಾಗಿ ಕೆಲವೆಡೆ ಗಲಭೆಯುಂಟಾದದರಿಂದ ಗಾಂಧಿಜಿಯವರು ಅಲ್ಲಿ ಹಿಂಸಾತ್ಮಕ ಅತ್ಯಾಚಾರಗಳು ಹೆಚ್ಚುವವೋ ಎಂಬ ಬೆದರಿ ಎಲ್ಲೆಲ್ಲಿಯೂ ಪ್ರಚಂಡವಾಗಿ ಹಬ್ಬುತ್ತಿದ್ದ ಚಳವಳಿಯನ್ನು ಒಮ್ಮೆಯೇ ನಿಲ್ಲಿಸಿಬಿಟ್ಟು ದೇಶೀಯ ಸಂಸ್ಥಾನಾಧಿಪತಿಗಳ ಹೃದಯ ಪರಿವರ್ತನೆಯ ಹೊಸ ಪ್ರಯೋಗಕ್ಕಾಗಿ ಹೊರಟಿದ್ದಾರೆ. ರಾಜಕೋಟೆಯ ಪ್ರಕರಣದಲ್ಲಿ ಶ್ರೀ ವೀರವಾಲರು ಕಲಿಸಿದ ಪಾಠವು ಸಾಲದೆಂದು ತೋರುತ್ತದೆ!

ದೇಶೀಯ ರಾಜರುಗಳ ಕೈ ಮೇಲಾಗಿದೆ

ಗಾಂಧಿಜಿಯವರ ಈ ಹೊಸ ಧೋರಣೆಯಿಂದಾಗಿ ಈ ದೇಶೀಯ ಸಂಸ್ಥಾನಾಧಿಪತಿಗಳ ಕೈ ಮೇಲಾದಂತಾಗಿ ಅವರು ತಮ್ಮ ಸಂಸ್ಥಾನಗಳ ಪ್ರಜಾ ಮಂಡಲಗಳನ್ನು ಮಾತ್ರವಲ್ಲದೆ ಕಾಂಗ್ರೆಸನ್ನು ಧಿಕ್ಕರಿಸಿ ನಡೆಯತೊಡಗಿದ್ದಾರೆ. ತಿರುವಾಂಕೂರಿನ ಪ್ರಜೆಗಳ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ಹೊರಗಿನವರಾರಾಗಲೂ ಕೈಹಾಕಲೇ ಕೂಡದೆಂದು ಅಲ್ಲಿಯ ದಿವಾನರು ಸ್ಪಷ್ಟವಾಗಿ ಹೇಳಿ ಗಾಂಧಿಜಿಯವರು ಅಲ್ಲಿಗೆ ಹೋಗ ಬಹುದೆಂದು ಕೂಡ ಎಚ್ಚರಿಸುತ್ತಿರುತ್ತಾರೆ. ಮೈಸೂರಿನ ಸ್ಟೇಟ್ ಕಾಂಗ್ರೆಸಿನ ಪ್ರೆಸಿಡೆಂಟರು ಮೂರು ಮೂರು ಸಲ ಭೇಟಿ ಕೇಳಿದರೂ ದಿವಾನರು ನಿರಾಕರಿಸಿಬಿಟ್ಟಿರುವರಲ್ಲದೆ, ತಾನು ಸರ್ದಾರ್ ವಲ್ಲಭಾಯಿಯವರೊಡನೆ ಯಾವ ಒಪ್ಪಂದವನ್ನೂ ಮಾಡಿಲ್ಲೆಂದು ಸ್ಪಷ್ಟವಾಗಿ ಹೇಳುತ್ತಾರೆ. ಜಯಪುರದ ಮಹಾರಾಜರು, ಸೇಠ್ ಜಮನಾಲಾಲ ಬಜಾಜರನ್ನು ನಿರ್ಬಂಧದಲ್ಲಿರಿಸಿ ಅವರೊಡನೆ ಒಬ್ಬರ ಪ್ರತಿನಿಧಿ ಮಾತಾಡಲು ಕೂಡಾ ಬಿಡುವುದಿಲ್ಲ. ಇನ್ನು ಚಿಕ್ಕಪುಟ್ಟ ಸಂಸ್ಥಾನಗಳಲ್ಲಿ, ಗುಂಡ ಹಾರಿಸಿ ಜನತೆಯ ಚಳವಳಿ ಅಡಗಿಸಲ್ಪಟ್ಟಿದೆ. ಇಷ್ಟು ಮಾತ್ರವಲ್ಲದೆ, ಕಾಂಗ್ರೆಸಿನ ಪ್ರೋತ್ಸಾಹ ಮತ್ತು ಸಹಾಯದಿಂದ ದಿನೇ ದಿನೇ ಪ್ರಬಲವಾಗುತ್ತಿರುವ ತಮ್ಮ ಪ್ರಜೆಗಳ ಚಳವಳಿಯನ್ನು ಅದಿರಿಸಲು ರಾಜಮಹಾರಾಜರುಗಳೆಲ್ಲ ಒಂದಾಗಿ ಒಕ್ಕಟ್ಟಿನ ಧೋರಣೆ ವಹಿಸುವ ಪ್ರಯತ್ನವೂ ನಡೆಯುತ್ತಿದೆ.

ಕಾಂಗ್ರೆಸನ್ನು ಮನ್ನಿಸಲೇಬೇಕು

ಇದರಿಂದ ಮಹಾತ್ಮಾ ಗಾಂಧಿಯವರು ತಪ್ಪುಗೊಂಡಂತೆ ತೋರುತ್ತದೆ. ಅವರು ಇತ್ತಲಾಗಿ ಪ್ರಕಟಿಸಿರುವ ಹೇಳಿಕೆಯೊಂದರಲ್ಲಿ ಹಿಂದೆಯಿದ್ದಿರ ಹಿತವಾದವನ್ನಾಗಿ ಹೋರಾಡಿ ದಾರಿಯಲ್ಲಿ ಸಾಗಿ ಬಹುದಿಯ ವರ ಕಾಂಗ್ರೆಸನ್ನು ದೇಶೀಯ ರಾಜರುಗಳು ಮನ್ನಿಸಲೇ ಬೇಕು. ದೇಶೀಯ ಸಂಸ್ಥಾನಗಳ ಪ್ರಜೆಗಳಿಗೆ ಬೇಕಾದ ಸಹಾಯ ಮತ್ತು ಸಹಾಯ ಕೊಡುವುದು ಕಾಂಗ್ರೆಸಿನ ಕರ್ತವ್ಯ. ಆಗ ದೇಶೀಯ ಸಂಸ್ಥಾನಿಕ ಪ್ರಜೆಗಳು ಸಂಸ್ಥಾನಿಕ ಪ್ರಜಾ ಪರಿಷತ್ತಿನ ಸ್ಟೇಂಡಿಂಗ್ ಕಮಿಟಿಯವರಿಂದ ಸಲಹೆ ಪಡೆದು ಎಲ್ಲ ಚಳವಳಿಯನ್ನು ನಡೆಸಬೇಕೆಂದು ಸೂಚಿಸಿರುವರು. ಇನ್ನು ಮುಂದಿಟ್ಟ ಹೆಜ್ಜೆಯನ್ನು ಹಿಂದಿಟ್ಟು ಹಿಂದ ಸರಿಯ ಹೇಳಿ ಅತೀಲ ಸೆ. ಮುಂದೊಡ್ಡಿದಂತೆ ಸೂಚಿಸುವ ಗಾಂಧಿಜಿಯವರ ಮನೋವೃತ್ತಿಯನ್ನು ಇತರರಿಗೆ ತಿಳಿದು ಕೊಳ್ಳಲು ಅಸಾಧ್ಯವಾಗಿದೆ. ವರಿಯ ಸಂಸ್ಥಾನದ ಪ್ರಜೆಗಳು ಗಾಂಧಿಜಿಯವರ ಸೈಧ್ಧಾಂತಿಕ ಅಭಿವೃತ್ತಿಯು ಹೇಳಿದಂತೆ ಒಂಟಿಸಿಕೊಂಡಿರುವ ಒಡಲಿಗ ದೇಶೀಯ ಸಂಸ್ಥಾನಿಕ ಪ್ರಶ್ನೆಯನ್ನೇ ಪರಿಶೀಲಿಸಲು ನೇಮಿಸಲ್ಪಟ್ಟಿರುವ ಸಂಸ್ಥಾನಿಕ ಪ್ರಜಾ ಪರಿಷತ್ತಿನ ಸ್ಟೇಂಡಿಂಗ್ ಕಮಿಟಿಯವರ ಸೂಚನೆ ಮತ್ತು ಸಲಹೆಯಂತೆ ನಡೆಯುವುದು ಉಚಿತವಾದೆ ಮತ್ತು ಕಾಂಗ್ರೆಸಿನ ಸ್ಟೇಂಡಿಂಗ್ ಕಮಿಟಿಯವರು, ಅಂದರೆ ದೇಶದ ಎಲ್ಲಾ ದೇಶೀಯ ಸಂಸ್ಥಾನಗಳ ಕುರಿತು ನಿಶ್ಚಿತನಾದೊಂದು ನೀತಿ ಮತ್ತು ಕಾರ್ಯಕ್ರಮವನ್ನು ಆದಷ್ಟು ಬೇಗ ನಿರ್ಧರಿಸಿ ಆ ಪ್ರಕಾರ ನಡೆಯುವಂತೆ ಸಂಸ್ಥಾನಿಕ ಪ್ರಜಾಮಂಡಲಗಳಿಗೂ ತಿಳಿಸುವುದು ಅತ್ಯಗತ್ಯವಾಗಿರುತ್ತದೆ.

ಒಂದೇ ವರ್ಷದೊಳಗೆ ಹನ್ನೊಂದು ಮನೆಯ ಎರಡು ರತ್ನಗಳು ಕಳೆದು ಹೋದವು

ಹಿರಿಯಡಕ ಶ್ರೀ ಪದ್ಮನಾಭ ಸೂರಪ್ಪಯ್ಯನವರು ನಿಧನರಾಗಿ ಒಂದು ವರ್ಷ ಸಾಗದ ಮೊದಲು ಅವರ ಕಿರಿಯ ಮಗ ಸಮಾಧಾನ ... ಇಷ್ಟರಲ್ಲಿಯೇ ಇದೇ ಸಂಸಾರದಲ್ಲಿ ಅವರ ಜೇಷ್ಠ ಪುತ್ರರಾದ ಶ್ರೀ ಎಚ್. ರಾಘವಯ್ಯನವರು ನಿಧನರಾದ ವಾರ್ತೆಯು ... ಸಾಗರದಲ್ಲಿ ಮುಳುಗಿಸಿದೆ. ಶ್ರೀಯುತರು ಕಲ್ಯಾಣ ಸಮಾಜ ವ್ಯಸನದ ವ್ಯಾಪಕ ... ವಕೀಲರು. ಇವರು ... ಆಗರ್ಭ ಶ್ರೀಮಂತರಾಗಿದ್ದರೂ ಸದಾ ನಗುಮೊಗವುಳ್ಳವರೂ ಆಗಿದ್ದರಲ್ಲದೆ ... ಯಾವ ವಿಷಯದಲ್ಲಿಯೂ ಇವರಲ್ಲಿರಲಿಲ್ಲ. ತಮ್ಮ ... ವೃತ್ತಿಯನ್ನು ... ಸಹ ... ಒಂದೇ ವರ್ಷದಲ್ಲಿ ಎರಡು ರತ್ನಗಳನ್ನು ಕಳೆದುಕೊಂಡ ... ದುಃಖವನ್ನು ... ಶಾಂತಿ ಪರಿವಾರ ... ದೇವರು ... ನಮ್ಮ ... ಸಂತಾಪ ...

ಹೊಬಾರ್ಟ — ೧೮೩೦ ... [illegible]

ಜನರಲ್ ಫ್ರೇಂಕೋರವರ ಭೀಷಣ ಪ್ರತೀಕಾರ

ಜರ್ಮನಿಗೆ ಪೋಲೆಂಡಿನ ಎಚ್ಚರಿಕೆ!

ಜನರಲ್ ಫ್ರೇಂಕೋರವರ ಪ್ರತೀಕಾರ

53 ಮಂದಿ ಬಲಿ ಕೊಡಲ್ಪಟ್ಟರು

ಜನರಲ್ [illegible] ಪಟ್ಟಕ್ಕೆ [illegible] ಪೋಲೀಸ್ [illegible]



ರಲಾದ ಮೇಜರ್ ಗಬಾಲ್ಡನರೂ, ಅವರ ಚಿಕ್ಕ ಮಗಳೂ ಮೋಟಾರ್ ಡ್ರೈವರನೂ ಗುಂಡೇಟಿಗೆ ಬಲಿಯಾಗಿ ಕೊಲ್ಲಲ್ಪಟ್ಟ ನಿಮಿತ್ತದಿಂದ ಜನರಲ್ ಫ್ರೇಂಕೋರವರು ಮಾರ್ಕ್ಸ್‌ವಾದಿಗಳೆನಿಸಲ್ಪಡುವ 60 ಮಂದಿಯ ಸ್ಪೇನಿನ ಕೂಲಿಯ ಫ್ರೀಮೇಸನ್ನರು ಮತ್ತು ಹೋರಾಟಗಾರರನ್ನು ಮಿಲಿಟರಿ ಕೋರ್ಟಿನ ವಿಚಾರಣೆಗೊಳಪಡಿಸಿ 53 ಮಂದಿ ಇದೇ ತಾ 6ರಲ್ಲಿ ಬಲಿಗರಿಸಲ್ಪಟ್ಟಿರುವರು. ಗುಪ್ತ ಕಮ್ಯೂನಿಸ್ಟ್ ಕೂಟದವರೇ ಈ ಕೊಲೆಗೆ ಕಾರಣವೆಂದು ಸ್ಪೈನ್ ಸರಕಾರದ ಪ್ರಕಟಣೆ. ಇಂತಹ ಅತ್ಯಾಚಾರಗಳನ್ನು ನವಸ್ಪೈನು ಎಂದೂ ಸಹಿಸಲಾರದೆಂದು ಸರಕಾರವು ಸ್ಪಷ್ಟಪಡಿಸಿರುವುದು. ಇಂದು ಕಟಲೋನಿಯ ಪಟ್ಟಣದಲ್ಲಿ ಸೀಕರೆಯೇ ನೆಲೆಗೊಂಡಿರುವುದು. ರಿಪಬ್ಲಿಕನ ಪಕ್ಷಕ್ಕೆ ತಾವಾಗಿ ಸಹಾಯ ಮಾಡಿದವರನ್ನು, ಅವರಿಗೆ ಗೌರವ ರೀತಿಯಿಂದಲೇ ವರ್ತಿಸಿದ ವಿತ್ತವರನ್ನೂ ಹಿಡಿದು ಬಿಳ್ಳಗ ಗುರಿಪಡಿಸಿ, 15, 10 ವರ್ಷಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಇಲ್ಲವ ವಾದಿ [illegible] ಗುತ್ತದ [illegible] ತಿ ಶಿಕ್ಷೆ [illegible] ವಿಧಿಸಲ್ಪಡುತ್ತಿದೆ. [illegible] 117 ಮಂದಿ [illegible] 3 [illegible] 59 [illegible] ಇಬ್ಬರು ಮಾತ್ರ [illegible] ಬಿಡುಗಡೆ ಹೊಂದಿದರು. [illegible] 101 ಮಂದಿ [illegible] ಯಾಗ ಕೊಡಲಾಗಿದೆ.

"ಡಾನ್ಜಿಗ್ ನಮ್ಮ ಶ್ವಾಸೋಚ್ಛ್ವಾಸವಾಗಿದೆ" ಜರ್ಮನಿಗೆ ಪೋಲೆಂಡಿನ ಎಚ್ಚರಿಕೆ

[illegible] ಪ್ರಯಾಣಿಕರೆ ೧೦

ನ ನಾರ್ಶಲ್ ಸ್ಮಿಗ್ಲಿ ಸ್ಮಿಡ್ಲಿಯವರು ಕ್ರೀ ಕೋವ್ ಪಟ್ಟಣದಿಂದ ನಾಗರಿಕ ಸೇನೆಯ ನಡಿಸಿದ 25ನೇ ವಾರ್ಷಿಕೋತ್ಸವವು ಇದೇ ತಾ 6ರಲ್ಲಿ ಆಚರಿಸಲ್ಪಡುವಾಗ ಪೋಲೆಂಡಿನ ಸೇನಾಧ್ಯಕ್ಷರಾದ ಮಾರ್ಶಲ್ ಸ್ಮಿಗ್ಲಿಯವರು, 'ಪೋಲೆಂಡಿಗೆ ಅನ್ಯ ದೇಶವನ್ನು ಆಕ್ರಮಿಸುವ ಉದ್ದೇಶವೇನೂ ಇಲ್ಲ. ಆದರೆ ಅದರ ಮೇಲೆ ಯಾರಾದರೂ ಆಕ್ರಮಣಮಾಡಿದರೆ ಅದೆಂದಿಗೂ ಸಹಿಸಲಾರದು. ಆ ಸಂದರ್ಭದಲ್ಲಿ ಅವರ ಸಹಾಯಕ್ಕಾಗಿ ಇತರ ರಾಷ್ಟ್ರಗಳೂ ಬರಲಿವೆ. ಡಾನ್ಜಿಗ್ ಪಟ್ಟಣವು ಶತಮಾನಗಳಿಂದ ಪೋಲೆಂಡಿನೊಡನೆ ನಿಕಟ ಸಂಬಂಧವುಳ್ಳದಿದ್ದು ಅವರ ಶ್ವಾಸಕೋಶದಂತಾಗಿದೆ. ಆ ವಿಷಯದಲ್ಲಿ ಪೋಲೆಂಡು ತನ್ನ ಧೋರಣೆಯನ್ನು ಸ್ಪಷ್ಟಗೊಳಿಸಿದೆ. ಇನ್ನು ಇತರರ ವರ್ತನೆಗನುಗುಣವಾಗಿ ಪೋಲೆಂಡು ಕೂಡ ತನ್ನ ಧೋರಣೆಯನ್ನು ಮಾರ್ಪಡಿಸಲಿದೆ" ಎಂದು ಘಣವಿತ್ತಿರುವರು. ಸುಮಾರು ಒಂದು ಲಕ್ಷ ಮಂದಿ ಈ ಭಾಷಣವನ್ನು ಕೇಳಿ ಜಯಘೋಷಮಾಡಿದರು. ಮತ್ತು "ಡಾನ್ಜಿಗ್ ಪಟ್ಟಣವು ಪೋಲೆಂಡಿಗೆ ಸೇರಿದುದು, ಮುಂದೆಯೂ ಅದು ಪೋಲೆಂಡಿನದೇ ಆಗಿರುವುದು' ಎಂದು ಉದ್ಘೋಷಿಸಿದರು. ಆ ಸಂದರ್ಭ, ನೆರೆದವರೆಲ್ಲರೂ ಯುದ್ಧದಲ್ಲಿ ಜಯಶೀಲವಾಗುವ ತನಕ ಸಾವು ಕಾದಾಡುವೆವು. ಶಾಂತಿಯಲ್ಲಿ ನಿಕಟ ಸಹಕಾರದಿಂದ ಒಟ್ಟು ಸೇರಿರುವೆವು" ಎಂಬ ಪ್ರತಿಜ್ಞಾಬದ್ಧರಾದರು.

ಪ್ರಚಂಡ ಸಿದ್ಧತೆಯು ಬೆದರಿಕೆಯು ಕೇವಲ ಬೂಟಾಟಿಕೆಯಾಗಿದೆ

ಕಳೆದ 6 ವಾರಗಳಿಂದ ಯುರೋಪಿನ ಪರಿಸ್ಥಿತಿಯು ಪ್ರಕ್ಷುಬ್ಧವೇ ಆಗಿರುವುದು. ಮಾತಿನ ಗರ್ಜನೆ ತರ್ಜನೆಯಲ್ಲಿಯೂ ಪ್ರಜಾಶಾಹಿ ರಾಷ್ಟ್ರಗಳು ಡಿಕ್ಟೇಟರರಿಗೆ ಬಿಟ್ಟಿಲ್ಲ. ಯುದ್ಧಸಿದ್ಧತೆಯಂತೂ ಇತ್ತಂಡದಲ್ಲಿಯೂ ಸರಿಮಿಗಿಲೆಂಬಂತೆ ನಡೆದಿರುತ್ತದೆ. ಡಾನ್ಜಿಗಿನ ಪರಿಸ್ಥಿತಿಯು ದಿನೇ ದಿನೇ ಕಡಲ್ತಾ ಬರುತ್ತಿದೆ. ಇಡೀ ಪಟ್ಟಣವು ತಡೊಂದು ಸೇನಾಶಿಬಿರವೇ ಆಗಿಹೋಗಿದೆ. ಹಿಟ್ಲರನ ಏಜೆಂಟರು ಯುದ್ಧಕ್ಕೆ ಸಿದ್ಧರಾಗಿ ಸೂಟಕಟ್ಟಿ ನಿಂತಿದ್ದಾರೆ. ಪಶ್ಚಿಮದಿಂದ ಪೋಲೆಂಡಿನ ಮೇಲೆ ಧಾಳಿ ನಡಿಸಲು ಜರ್ಮನಿಯು ಸ್ಲೊವೇಕಿಯದ ಎಲ್ಲೆಯಲ್ಲಿ ಸೈನ್ಯಸಂಗ್ರಹಿಸುತ್ತಿದೆ. ಈ ತಿಂಗಳ ಮಧ್ಯಭಾಗ ಜರ್ಮನಿಯ 3 ಮಿಲ್ಯ ಸೈನಿಕರು ಯುದ್ಧಸಿದ್ಧರಾಗುತ್ತಾರೆ. ಯುದ್ಧ ನೌಕೆಗಳು ಸಮೀಪದಲ್ಲಿಯೇ ತಯಾರಾಗಿ ನಿಂತಿವೆ. ವಿಮಾನಪಡೆಯು ಪ್ರಚಂಡ ಪ್ರದರ್ಶನಮಾಡಿ ಆಣೆಮಾಡಿಕೊಂಡಿದೆ. ಪೋಲೆಂಡಿನ ಎದೆಯನ್ನು ನಡುಗಿಸಿ ದಿಗಿಲುಗೊಳಿಸುವ ತಂತ್ರವಿದು. ಪೋಲೆಂಡಿಗೆ ಇಂಗ್ಲೆಂಡೇ ಮೊದಲಾದ ರಾಷ್ಟ್ರಗಳು ಸಹಾಯಮಾಡುವಂತಿಲ್ಲೆಂದು ಕೂಡಾ ಜರ್ಮನಿಯ ಗುಪ್ತಚರರು ಪ್ರಚಾರ ನಡಿಸುತ್ತಿದ್ದಾರೆ. ಆದರೆ ನಾಝಿಗಳ ಈ ತಂತ್ರಗಳಲ್ಲಾ ನಿಷ್ಫಲವಾಗಿದೆ.

ಹೊಸೂರು ದೇವಸ್ಥಾನ ತೆರೆದುಹಾಕಲ್ಪಟ್ಟಿತು.

ಶ್ರೀ. ರಾಜಗೋಪಾಲಾಚಾರ್ಯರ ಜಿಲ್ಲೆಯಾದ ಸೇಲಮಿನ ಹೊಸೂರು ತಾಲೂಕಿನ ಚೆನ್ನಕೇಶವ ದೇವಸ್ಥಾನವು ಇದೇ ತಾ 1ರಲ್ಲಿ ಹರಿಜನ ಪ್ರವೇಶಕ್ಕಾಗಿ ತೆರೆಯಲ್ಪಟ್ಟಿರುವುದು. ಸುಮಾರು 300 ಮಂದಿ ಸವರ್ಣ ಹಿಂದುಗಳು ಮತ್ತು 75 ಮಂದಿ ಹರಿಜನರು ಮೆರವಣಿಗೆಯಿಂದ ಹೋಗಿ ದೇವಸ್ಥಾನ ಪ್ರವೇಶಮಾಡಿದರು.

ಜರ್ಮನಿಗೆ ಇದ್ದಲು ಬೇಕಾಗಿದೆ

ಜರ್ಮನಿಯಲ್ಲಿ ಇದ್ದಲಿನ ಅಭಾವವುಂಟಾಗಿದೆ. ಮಾರ್ಶಲ್ ಗೋರಿಂಗರು ಇದ್ದಲಿನ ಸರಬರಾಯಿಯನ್ನು ಹೆಚ್ಚಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಇಂಗ್ಲೆಂಡಿನ ಮೇಲೆ ಗೋರಿಂಗರ ಆರೋಪ

1914ರ ಪುನರಾವರ್ತನ

ಇದೇ ತಾ 6ರಲ್ಲಿ ಫೀಲ್ಡ್ ಮಾರ್ಶಲ್ ಗೋರಿಂಗರು ಡೆಸ್ಸೋ ಎಂಬಲ್ಲಿ ಭಾಷಣಮೀಯುವಾಗ ಇಂಗ್ಲೆಂಡು 1914ರ ನಾಟಕವನ್ನು ಪುನರಾವರ್ತಿಸಲೆಳಸುತ್ತದೆಂದರು. "ಬೆದರಿಕೆಯಿಂದಾಗಲಿ, ಪ್ರಣಯ ಪತ್ರಗಳಿಂದಾಗಲಿ ನಮ್ಮ ಮನಸ್ಸಿನ ಮೇಲೆ ಪರಿಣಾಮವಾಗಲಾರದು. ನಮಗೆ ಯುದ್ಧ ಬೇಡ, ನಮಗೆ ಯುದ್ಧವೆಂದರೇನೆಂದು ಗೊತ್ತಿದೆ. ಅದೊಂದು ಅತಿ ಮಹತ್ವದ ಜವಾಬ್ದಾರಿ. ನಾವು ಈಗ ಯುದ್ಧದ ತೀವ್ರ ಸಿದ್ಧತೆಯಲ್ಲಿ ನಿರತರಾಗಿರುವುದೆಂದರೆ ನಮ್ಮನ್ನಾರಾದರೂ ಹೋರಾಟಕ್ಕೆಳೆದರೆ ಜಯಶೀಲವಾಗಿ ರಕ್ಷಿಸಿಕೊಳ್ಳಲಿಕ್ಕೆ. ವರ್ಸಲೆಗಿಂತಲೂ ಕೆಟ್ಟದಾದ ಒಡಂಬಡಿಕೆಯನ್ನು ಜರ್ಮನಿಯ ಮೇಲೆ ಹೊರಿಸಲು ಇಂಗ್ಲೆಂಡೀಗ 1914ರ ನಾಟಕವನ್ನು ಪುನರಾವರ್ತಿಸಲು ಹಾತೊರೆಯುತ್ತಿದೆ. ಆದರೆ ಒಂದು ಸಂಗತಿಯು ಮಾತ್ರ ಇಂದು ಸಂಪೂರ್ಣ ಬದಲಾಗಿದೆ. ಇನ್ನೊಂದು ವರ್ಸಲೆ ಒಪ್ಪಂದವು ನಮ್ಮ ಮೇಲೆ

ಹೊರಿಸಲ್ಪಡದಂತೆ ನಾವೆಲ್ಲರೂ ದೃಢನಿರ್ಧಾರವುಳ್ಳವರಾಗಿ ಒಕ್ಕಟ್ಟಾಗಿರುತ್ತೇವೆ. ನಾವು ಇಂಗ್ಲೆಂಡಿನ ನೌಕೋಸೇನೆಯ ಏರಿ ಹೋಗುವ ಹಾಗಿಲ್ಲ. ಆದರೆ ಇಂಗ್ಲೆಂಡು ಲೋಕದಲ್ಲಿ ಎಲ್ಲೆಲ್ಲಿಯೂ ಜರ್ಮನಿಗೆ ವಿರೋಧವಾಗಿ ಬಂದರೆ ಶಾಂತಿಭಂಗವನ್ನುಂಟುಮಾಡುವ ಜವಾಬ್ದಾರಿಯನ್ನದು ವಹಿಸಬೇಕಾಗುವುದು. ಜರ್ಮನಿಯ ಮೇಲೆ ನೌಕಾ ಮುತ್ತಿಗೆ ಹಾಕಿ ಅದಕ್ಕೆ ಆಹಾರ ದೊರೆಯದಂತೆ ಮಾಡುವ ಬೆದರಿಕೆಯು ಇನ್ನೊಮ್ಮೆ ನಡೆಯದು. ಜರ್ಮನಿಯ ವಿಮಾನಪಡೆಯು ಅದನ್ನು ಭೇದಿಸುವುದು. ಇದು ಹೊರತು ಜರ್ಮನಿಯು ಹೇರಳ ಧವಸಧಾನ್ಯ ಸಂಗ್ರಹಿಸಿರುವುದು" ಎಂದು ಗೋರಿಂಗರು ಎಚ್ಚರಿಸಿರುವರು.

ಬಂಗಾಳ ಮಂತ್ರಿ ಮಂಡಳಕ್ಕೆ ಗಾಂಧಿಜಿಯವರ ವಿನಂತಿ

ಪುನಃ 3 ಮಂದಿ ಕೈದಿಗಳ ಬಿಡುಗಡೆ

ಇದೇ ತಾ 6ರಲ್ಲಿ ಗಾಂಧಿಜಿಯವರು ಪ್ರಕಟಿಸಿರುವ ಹೇಳಿಕೆಯೊಂದರಲ್ಲಿ ಬಂಗಾಳದ ರಾಜಕೀಯ ಕೈದಿಗಳು ಉಪವಾಸ ವ್ರತವನ್ನು ನಿಲ್ಲಿಸುವಂತೆ ಮಾಡಿದುದಕ್ಕಾಗಿ ಶ್ರೀ ಸುಭಾಸ ಬೋಸರನ್ನು ಅಭಿನಂದಿಸಿರುವರು ಮತ್ತು ಉಪವಾಸ ನಿಲ್ಲಿಸಿದ ವಿಷಯ [illegible] ಕೈದಿಗಳು ಗಾಂಧಿಜಿಯವರಿಗೆ ತಿಳಿಸಿ ಅವರ ಬಿಡುಗಡೆಗಾಗಿ ಇನ್ನು ಮುಂದೆ ಅವರು ಪ್ರಯತ್ನಿಸಬೇಕೆಂದು ಕೇಳಿಕೊಂಡಿರುವುದರಿಂದ ಗಾಂಧಿಯವರು ತನ್ನಿಂದ ಕೂಡಿದ ಪ್ರಯತ್ನ ಮಾಡುವೆನೆಂದು ಭರವಸೆಕೊಟ್ಟಿರುವರು. ಮತ್ತು ಬಂಗಾಳ ಮಂತ್ರಿಗಳು ಉದಾರ ಧೋರಣೆಯುಳ್ಳವರಾಗಿ ಈ ವೇದನೆಯನ್ನು ಪರಿಹರಿಸಬೇಕೆಂದು ವಿನಂತಿಮಾಡಿಕೊಂಡಿರುವರು. ಈ ಸಂದರ್ಭದಲ್ಲಿ ಬಂಗಾಳದ ಕೈದಿಗಳ ಬಿಡುಗಡೆಯ ಪ್ರಯತ್ನವು ಜಯಶೀಲವಾಗಬಹುದೆಂಬ ಆಶಯುಳ್ಳವರಾಗಿರುವರು.

ಇದೇ ತಾ. 7ರಲ್ಲಿ ಇನ್ನು ಮೂರು ಮಂದಿ ಕೈದಿಗಳು ಉಪವಾಸ ನಿಲ್ಲಿಸಿದ ನಂತರ ಒಟ್ಟು 5 ಮಂದಿ ಬಿಡುಗಡೆ ಹೊಂದಿರುವರು.

ಉಗ್ರ ಕಾರ್ಯಕ್ರಮದ ಸಂದರ್ಭ ಬಂದಿದೆ

ಕೈದಿಗಳ ಉಪವಾಸ ಮತ್ತು ಅವರ

ನಾಝಿಗಳು ಅಂಜಿಹೋಗಿದ್ದಾರೆ

ಬಂಗಾಳದಲ್ಲಿ ಉಗ್ರಕಾರ್ಯಕ್ರಮ ಕೈಕೊಳ್ಳುವ ಸಮಯ ಬಂದಿದೆ

ಒಡುಗಡೆಯ ಕುರಿತು ಬಂಗಾಳದ ಗೃಹ ಮಂತ್ರಿಗಳಾದ ಸರ್ ನಜೀಮುದ್ದೀನರು ಪ್ರಕಟಿಸಿರುವ ಹೇಳಿಕೆಯು, ಕೇವಲ ನೌಕರಶಾಹಿ ಮನೋವೃತ್ತಿಯನ್ನು ವ್ಯಕ್ತಪಡಿಸುತ್ತದೆ ಆದುದರಿಂದ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕೂಡಲೆ ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಬಂಗಾಳ ಲೇಬರ್ ಪಕ್ಷದ ಕಾರ್ಯಕಾರಿ ಮಂಡಲಿಯವರು ನಿರ್ಧಾರ ಮಾಡಿರುವರು ಇದೇ ತಾ ೯ರಲ್ಲಿ ಕಲ್ಕತ್ತದಲ್ಲಿ ನಡೆದ ಸಭೆಯೊಂದರ ಅಧ್ಯಕ್ಷರಾಗಿ, ಮಾಜಿ ಮಂತ್ರಿಗಳಾದ ಮಿ ಸೈಯದ್ ನೌಶರಾಲಿಯವರು, ಇಂದೀಗ ಉಗ್ರಕಾರ್ಯಕ್ರಮ ಕೈಕೊಳ್ಳುವ ಸಮಯ ಬಂದಿದೆ. ನಾವು ಆಡಿದಂತೆ ಮಾಡುವರೆಂಬುದನ್ನು ಇಡೀ ಜಗತ್ತಿಗೆ ತೋರಿಸಿಕೊಡಬೇಕು. ಕೊಟ್ಟ ಮಾತನ್ನು ಪಾಲಿಸಲು ಇಡೀ ಬಂಗಾಳದ ಜನರು ಜೈಲಿಗೆ ಹೋಗುವುದು ಆವಶ್ಯಬಂದಲ್ಲಿ ಅದಕ್ಕೆ ಅವರೆಲ್ಲರೂ ಸಿದ್ಧರಾಗಬೇಕು ಎಂದು ಹೇಳಿ, ಸರ್. ನಜೀಮುದ್ದೀನರ ಧೋರಣೆಯನ್ನು ಕಠಿಣವಾಗಿ ಟೀಕಿಸಿದರು, ಶ್ರೀ ಡಾಕ್ಟರ್ ರಾಮಮನೋಹರ ಲೋಹಿಯ ಮತ್ತು ಶ್ರೀ ಎಸ್ ಎಸ್. ಬಾಟ್ಲಿವಾಲರು ಕೂಡಾ ಭಾಷಣಗಳನ್ನಿತ್ತರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ತಾ ೯ರಲ್ಲಿ ವಾರ್ಧದಲ್ಲಿ ನಡೆಯಲಿರುವುದು ವರ್ಕಿಂಗ್ ಕಮಿಟಿ ಮೆಂಬರರಾದ ಶ್ರೀಗಳಾದ ಸರ್ದಾರ್ ವಲ್ಲಭಾಯಿ ಪಟೇಲ, ಶ್ರೀ ಶಂಕರರಾವ್ ದೇವ್ ಮತ್ತು ಶ್ರೀ. ಭೂಲಭಾಯಿ ದೇಸಾಯಿಯವರು ಇದೇ ತಾ ೮ರಲ್ಲಿ ಬೊಂಬಾಯಿಯಿಂದ ವಾರ್ಧಕ್ಕೆ ಹೋಗಿರುವರು. ಪಂಡಿತ ಜವಾಹರಲಾಲ ನೆಹರುಗಳೂ ಈ ಸಭೆಗೆ ಆಮಂತ್ರಿಸಲ್ಪಟ್ಟಿರುವರು. ಹಲವು ಪ್ರಾಮುಖ್ಯ ವಿಷಯಗಳು ಈ ಸಭೆಯಲ್ಲಿ ಚರ್ಚಿಸಲ್ಪಡಲಿರುವುದರಿಂದ ಸಭೆಯು ದೀರ್ಘಕಾಲ ನಡೆಯಲಿದೆ. ಸಿಂಹಳದ ಹಿಂದೀಯರ ಪ್ರಶ್ನೆ, ಬಂಗಾಳದ ರಾಜಕೀಯ ಕೈದಿಗಳ ಬಿಡುಗಡೆ, ಹಿಂದೀ ಸಂಸ್ಥಾನಗಳ ಸಮಸ್ಯೆ, ಕಾಂಗ್ರೆಸಿನೊಳಗಿನ ಶಿಸ್ತು ಉಲ್ಲಂಘನೆಯ ಪ್ರಶ್ನೆಯೇ ಮೊದಲಾದ ಪ್ರಾಮುಖ್ಯ ವಿಷಯಗಳ ಚರ್ಚೆ ನಡೆಯಲಿದೆ ಈ ಎಲ್ಲಾ ಪ್ರಶ್ನೆಗಳೂ ಹೆಚ್ಚಾಗಿ ಗಾಂಧೀಜಿಯವರ ಸಲಹೆ ಮೇರೆ ಇತ್ಯರ್ಥ ಹೊಂದಲಿವೆ ಸಿಂಧಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ಸ್ಥಾಪಿಸುವ ಪ್ರಶ್ನೆಯೂ ಈ ಸಲದ ಸಭೆಯ ಮುಂದೆ ಬರುವುದು

ನಾಜಿಗಳೇ ಹೆದರುತ್ತಿದ್ದಾರೆ

ಜರ್ಮನಿಯ ನಾಝಿ ಮುಖಂಡರೇ ಯುದ್ಧಮಾಡಲು ಅಂಜುತ್ತಿರುವಂತಿದೆ ಜುಲೈ ತಾ. ೩೧ರಲ್ಲಿ ಡಾನ್ಜಿಗನ್ನು ವಶಪಡಿಸಿಕೊಳ್ಳುವ ಪ್ಲೇನುಹಾಕಿದ್ದಿತು. ಆದರೆ ಅದು ಮುಂದುವರಿಸಲ್ಪಟ್ಟಿತು ಪೋಲಿಸ್ ಕಸ್ಟಮ್ಸ್ ಅಧಿಕಾರಿಗಳನ್ನು ಒಮ್ಮೆ ಡಿಸ್‌ಮಿಸ್ ಮಾಡಿದ ಡಾನ್ಜಿಗಿನ ಸೆನೆಟು ಈಗ ಅವರನ್ನು ಪುನಃ ತೆಗೆದುಕೊಳ್ಳಬೇಕಾಗಿದೆ ಡಾನ್ಜಿಗಿನ ನಾಝಿಮುಖಂಡರು ಅತ್ತಿತ್ತ ಓಡಾಡುತ್ತಿದ್ದಾರೆ ಹಿಟ್ಲರರೊಡನೆ ಆಗಾಗ ಮಾತಾಡಿ ಬರುತ್ತಿದ್ದಾರೆ ಆದರೆ ಅವೆಲ್ಲಾ ಪರ್ವತ ಪ್ರಸವದಂತಾಗಿದೆ ಡಾನ್ಜಿಗನ್ನು ಎಷ್ಟು ಮಾತ್ರಕ್ಕೂ ಬಿಟ್ಟುಕೊಡಲು ಸಾಧ್ಯವಿಲ್ಲೆಂದು ಪೋಲೆಂಡು ಧೈರ್ಯದಿಂದ ಯುದ್ಧವಾದರೆ ಯುದ್ಧವೆಂದು ಸಡ್ಡು ಹೊಡೆದು ಮುಂದೆಬಂದಿರುವುದರಿಂದ ನಾಝಿಗಳು ಕಳವಳಗೊಂಡಿದ್ದಾರೆ. ಪೋಲೆಂಡೇನೂ ಚಿಕ್ಕ ದೇಶವಲ್ಲ ಪೋಲಿಸರು ಉಜ್ವಲ ಅಭಿಮಾನಿ ಜನಾಂಗ ಒಮ್ಮೆಗೆ ಜರ್ಮನಿಗೇನೂ ಬಿಟ್ಟುಕೊಡಲಿಕ್ಕಿಲ್ಲ, ಇದು ಹೊರತು ಅವರ ಸಹಾಯಕ್ಕೆ ಇಂಗ್ಲೆಂಡು ಫ್ರಾನ್ಸು ಮತ್ತು ರಶ್ಯವಿದೆ, ಎಷ್ಟಕ್ಕೂ ಪೋಲೆಂಡನ್ನವು ಬಿಟ್ಟುಹಾಕಲಾರವು ಡಾನ್ಜಿಗಿನ ಸಂಬಂಧವಾದ ಯುದ್ಧವೆಂದರೆ ಇಡೀ ಯೂರೋಪಿನ ಯುದ್ಧವೆಂದು ಜರ್ಮನರಿಗೀಗ ಖಚಿತವಾಗಿದೆ ಅವರು ಎರಡು ರಣರಂಗದಲ್ಲಿ ಹೋರಾಡಬೇಕಾಗಿದೆ ಇಂಗ್ಲೆಂಡು ಮತ್ತು ರಶ್ಯಾ ದೇಶಗಳೊಳಗಣ ಒಪ್ಪಂದವಾದ ಮೇಲೆ ಹಿಟ್ಲರರ ಆಟವು ನಡೆಯಲು ಸಾಧ್ಯವೇ ಇಲ್ಲ ಅವರ ವಿರೋಧಿಗಳು ಅವರನ್ನು ಸದೆಬಡಿಯುವುದು ನಿಶ್ಚಯ. ಆದುದರಿಂದಲೇ ನಾಝಿಗಳೀಗ ಅಂಜಿಹೋಗಿದ್ದಾರೆ

ಚುಂಕಿಂಗಿನ ಮೇಲೆ ವಿಮಾನ ಧಾಳಿ.

ಇದೇ ತಾ ೯ರಲ್ಲಿ ಜಪಾನ ವಿಮಾನಗಳು ಚೈನದ ಹೊಸ ಪ್ರಧಾನ ಪಟ್ಟಣವಾದ ಚುಂಕಿಂಗಿನ ಮೇಲೆ ಧಾಳಿ ನಡಿಸಿ ನಾಲು ಸಾಲು ಕಟ್ಟಡಗಳನ್ನು ನೆಲಸಮ ಮಾಡಿರುವವು ಕಳೆದ ಒಂದೇ ವಾರದಲ್ಲಿ ಚುಂಕಿಂಗಿನ ಮೇಲೆ ೪ ಸಲ ವಿಮಾನಧಾಳಿ ನಡೆದಿರುವುದು ಚೀನೀ ವಿಮಾನ ಪಡೆ ಕೋಪುಗಳೂ ಯುದ್ಧವಿಮಾನಗಳೂ ಜಪಾನ ವಿಮಾನಗಳೊಡನೆ ಹೋರಾಡಿದುವು. ಹೆಚ್ಚಿನ ಪ್ರಾಣಹಾನಿಯಾಗಿರುವುದೆಂದು ತಿಳಿದು ಬರುತ್ತದೆ ಹೇಂಕೋ ಪಟ್ಟಣದ ಉತ್ತರದಕ್ಷಿಣ ಚೀನೀ ಸೇನೆಯು ಜಪಾನ ಸೇನೆಯ ಮೇಲೇರಿಹೋಗಿ ಮಿಂಕಾಂಗ್ ಎಂಬ ಸ್ಥಳವನ್ನು ವಶಮಾಡಿಕೊಂಡಿರುತ್ತದೆ ಇಲ್ಲಿಯ ಜಪಾನ ಸೇನೆಯೆಲ್ಲಾ ಹಿಂದಕ್ಕೋಡಿಸಲ್ಪಟ್ಟಿರುವುದು

ಸತ್ಯಾಗ್ರಹಕ್ಕೆ ಇದೇ ಸುಸಂದರ್ಭ

ಶ್ರೀ ಸುಭಾಷಚಂದ್ರ ಭೋಸರು ಇದೇ ತಾ ೫ರಲ್ಲಿ ಕಟಕಿನಲ್ಲಿ ಒರಿಸ್ಸ ಯುವಕ ಪರಿಷತ್ತಿನ ಅಧ್ಯಕ್ಷರಾಗಿ ಭಾಷಣಮಾಡುತ್ತಾ, "ಜೀವಂತವಿರುವ ನಾನಾ ಚಳವಳದಲ್ಲಾದರೂ ತಾತ್ವಿಕ ಭೇದ ಮತ್ತು ಒಳಪಕ್ಷಗಳು ಇದ್ದೇ ಇರುತ್ತವೆ ಮಂದಗಾಮಿಗಳು ಕಾಂಗ್ರೆಸಿನಿಂದ ತೀವ್ರಗಾಮಿಗಳು ಅದನ್ನು ವಶಪಡಿಸಿಕೊಳ್ಳುವುದು ಸ್ವಾಭಾವಿಕವಾಗಿದೆ, ಕಾಂಗ್ರೆಸಿನ ಇತಿಹಾಸದಿಂದಲೇ ಇದು ಸಿದ್ಧವಾಗುತ್ತದೆ. ಸತ್ಯಾಗ್ರಹ ಹೂಡಲು ಕಾಂಗ್ರೆಸಿಗೆ ಇದೇ ಸುಸಂದರ್ಭವಾಗಿದೆ ಈಗ ಸತ್ಯಾಗ್ರಹ ಹೂಡಿದ ಪಕ್ಷದಲ್ಲಿ ಅದನ್ನಡಗಿಸಲು ಕೇಂದ್ರ ಸರಕಾರವು ಓರ್ಡಿನನ್ಸನ್ನು ಜ್ಯಾರಿಗೆ ತರುವುದು. ಅದನ್ನು ಕಾಂಗ್ರೆಸ್ ಮಂತ್ರಿಗಳು ಜ್ಯಾರಿಗೆ ತರಲು ನಿರಾಕರಿಸಬೇಕು. ದೇಶವು ಹೋರಾಟಕ್ಕೆ ಸಿದ್ಧವೇ ಇದೆ ಆದರೆ ಮುಖಂಡರಲ್ಲಿಯೇ ದುರ್ಬಲತೆಯು ತೋರಿಬರುತ್ತದೆ. ಈಗಣ ಕಾಂಗ್ರೆಸ ಕಾರ್ಯಕ್ರಮವು ದುರ್ಬಲವಾಗಿದೆಯೆಂದು ಹೇಳಿ, ಕಾಂಗ್ರೆಸು ತೀವ್ರಗಾಮಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಮಾಡಲು ಎಲ್ಲರೂ ಫಾರ್ವರ್ಡ್ ಬ್ಲೋಕಿಗೆ ಸೇರಿ ಅದನ್ನು ಬಲಗೊಳಿಸಬೇಕೆಂದು ಕೇಳಿಕೊಂಡರು. ಇದೇ ತಾ. ೬ರಲ್ಲಿ ಕಟಕ್ ಮ್ಯುನಿಸಿಪಾಲಿಟಿಯವರು ಶ್ರೀ ಸುಭಾಸ್ ಚಂದ್ರ ಭೋಸರಿಗೆ ಮಾನಪತ್ರವಿತ್ತು ಸತ್ಕರಿಸಿದಾಗ ಅವರು, ಮ್ಯುನಿಸಿಪಾಲಿಟಿಯವರು ಹೆಚ್ಚಾಗಿ ಬಡವರ ಅನುಕೂಲತೆ ಮತ್ತು ಸಂಕಷ್ಟ ನಿವಾರಣೆಯ ಕಡೆಗೆ ಲಕ್ಷ್ಯವಿಡಬೇಕೆಂದು ಕೇಳಿಕೊಂಡರು

ಪಂಡಿತ ಜವಾಹರಲಾಲ ನೆಹರುಗಳು

ಚೀನದ ರಾಷ್ಟ್ರೀಯ ಸರಕಾರದಿಂದ ಬಂದಿರುವ ಒತ್ತಾಯದ ಆಮಂತ್ರಣದ ಮೇರೆಗೆ ಈ ತಿಂಗಳ ಅಂತ್ಯದಲ್ಲಿ ವಿಮಾನ ಮೂಲಕ ಚೀನಕ್ಕೆ ಹೋಗಿ ಬರುವರೆಂದು ತಿಳಿದುಬರುತ್ತದೆ

ಸರ್. ಮಿರ್ಜಾರವರ ಭಾಷಣ

ಮೈಸೂರು ಸಂಸ್ಥಾನದ ದಿವಾನರವರಾದ ಅಮೀನ್-ಉಲ್ ಮುಲ್ಕ್ ಸರ್. ಮಿರ್ಜಾ ಎಂ ಇಸ್ಮಾಯಿಲ್, ಕೆ ಸಿ ಐ.ಇ ಒ ಬಿ ಇ. ಅವರು ಇದೇ ತಾ. ೭ರಲ್ಲಿ ನಾಗಮಂಗಲದ ಹೆಂಗಸರ ಶಾಲೆಯ ಹೊಸ ಕಟ್ಟಡದ ಪ್ರವೇಶಮಹೋತ್ಸವವನ್ನು ನೆರವೇರಿಸ ಮಾಗ್ಗ ಕೊಟ್ಟ ಭಾಷಣದ ಸಾರಾಂಶವು ಹೀಗಿದೆ

ಹೆಂಗಸರ ಶಾಲೆಯು ಮಹಿಳೆಯರಿಗೆ ಬಹಳ ಅವಶ್ಯವಾಗಿದೆ ಸ್ವಲ್ಪ ಕೆಟ್ಟುಹೋದರೂ ಯಾವುದರೂ ಪ್ರಾಣಕ್ಕೇ ಅಪಾಯವುಂಟಾಗುವ ಸಂಭವ ಹೆಚ್ಚು ಹಳ್ಳಿಗಳಲ್ಲಿ ಹೆಂಗಸರು ಕೆಲಸ ತಿಳಿಯದವರು ಒಂಟಿಗರಾಗಿಯೂ ಅಜ್ಞಾನಿಗಳಾಗಿಯೂ ಸೂಲಗಿತ್ತಿಯರ ಕೆಲಸಮಾಡುವರೆ ಹೇಳಬೇಕಾದ್ದೇ ಇಲ್ಲ ಸರಿಯಾದ ಶಿಕ್ಷಣವಿಲ್ಲದವರು ಸೂಲಗಿತ್ತಿಯ ಕೆಲಸಮಾಡಿ ಅನೇಕ ಮಹಿಳೆಯರ ಪ್ರಾಣಗಳನ್ನೇ ಕಳೆದ ನಿದರ್ಶನಗಳಿವೆ ಆದರೆ ಈ ದೃಷ್ಟಿಯಿಂದ ನೋಡಿದರೆ, ವೈದ್ಯಶಾಲೆಗಳು ಹೆರಿಗೆಯ ಆಸ್ಪತ್ರೆಗಳು, ಮಂತ್ರಸೂಲಗಿತ್ತಿಯರನ್ನು ಕಟ್ಟಿಸಿಕೊಟ್ಟಿರುವ ಧರ್ಮಾತ್ಮರ ಉಪಕಾರವು ಅಷ್ಟಿಷ್ಟಲ್ಲ. ಶ್ರೀಮಾನ್ ಎ ತಮ್ಮಯ್ಯನವರೂ ಇಂಥ ಧರ್ಮಾತ್ಮರಲ್ಲೊಬ್ಬರು. ಅವರು ತಮ್ಮ ಮಾತೃಶ್ರೀಯವರಾದ ಶ್ರೀಮತಿ ತಿಮ್ಮಮ್ಮನವರ ಹೆಸರಿನಲ್ಲಿ ಇಲ್ಲಿ ಈ ಹೆರಿಗೆಯ ಶಾಲೆಯನ್ನು ಕಟ್ಟಿಸಿಕೊಟ್ಟಿರುವುದು ಶ್ಲಾಘ್ಯವಾಗಿದೆ

ಈ ಊರಿನಲ್ಲಿ ಹೆರಿಗೆ ಶಾಲೆ ಸ್ಥಾಪನೆಯಾದ್ದು ಸಂತೋಷ. ಆದರೆ ಅಷ್ಟರಿಂದಲೇ ಜನಗಳೂ ಎಚ್ಚರಿಕೆಯಿಂದ ನಡೆಯದೆ ಹೋದರೆ ಹೆಚ್ಚು ಪ್ರಯೋಜನವಿಲ್ಲ ಬಸುರಿ ಬಾಣಂತಿಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದರಲ್ಲಿ ಎಷ್ಟು ಎಚ್ಚರಿಕೆಯಿದ್ದರೂ ಸಾಲದು. ವಿದೇಶಗಳಲ್ಲಿ ಈ ವಿಷಯದ ಕುರಿತು ಜನಗಳು ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇಂಥ ವಿಚಾರಗಳಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಬಸುರಿ ಬಾಣಂತಿಯರ ದೇಹಸ್ಥಿತಿಯನ್ನು ಸರಿಯಾಗಿ ನೋಡಿಕೊಳ್ಳುವ ವಿಚಾರದಲ್ಲಿ, ಅವರ ಕುಟುಂಬದವರಿಗೆ ಅನಾದರವಿರುವ ನಿದರ್ಶನಗಳಿವೆ ಗರ್ಭಿಣಿಯರ ದೇಹಸ್ಥಿತಿಯನ್ನು ಸರಿಯಾಗಿ ನೋಡಿಕೊಳ್ಳದೆ ಹೋದರೆ ಮಕ್ಕಳು ನೆಟ್ಟಗಿರುವುದೇ ಇಲ್ಲ ಆದುದರಿಂದ ಹುಟ್ಟುವ ಜನಾಂಗಕ್ಕೇ ನಷ್ಟ. ಮಗುವು ಗರ್ಭದಲ್ಲಿರುವಾಗ ಅದರ ಬೆಳವಣಿಗೆಗೆ ಬೇಕಾದ ಪೋಷಕ ಸಾಮಗ್ರಿಯೆಲ್ಲಾ ತಾಯಿಯ ದೇಹದಿಂದಲೇ ದೊರೆಯಬೇಕು. ಹೆರಿಗೆಯಾದ ಮೇಲೆ ಸ್ತನ್ಯಪಾನದಲ್ಲಿ ತಾಯಿಯ ದೇಹದಿಂದಲೇ ಮಗುವಿಗೆ ಪೋಷಕ ಸಾಮಗ್ರಿಯು ದೊರೆಯುವುದು ಆದಕಾರಣ, ಹೆರಿಗೆಯಿಂದ ಹೆಂಗಸರ ದೇಹವೆಷ್ಟು ದುರ್ಬಲವಾಗುತ್ತದೆಂಬುವನ್ನು ಹೇಳಬೇಕಾದುದೇ ಇಲ್ಲ ಮತ್ತು ಅವರಿಗೆ ಯಥಾಸ್ತ್ರವಾದ ವಿಶ್ರಾಂತಿ ಬೇಕು ಆದ್ದರಿಂದ ಅನುಕೂಲವಿರುವಂತೆ ಸ್ಥಾನ ಸೌಕರ್ಯ ಮತ್ತು ಪುಷ್ಟಿಕರವಾದ ಆಹಾರ ವಸ್ತುಗಳನ್ನು ಅವರಿಗೆ ಸಕಾಲಕ್ಕೆ ಸಮಾಗಿ ಕೊಟ್ಟು ನೋಡಿಕೊಳ್ಳಬೇಕು ಬಸುರಿ ಬಾಣಂತಿಯರ ದೇಹಸ್ಥಿತಿಯನ್ನೂ, ಮಕ್ಕಳ ದೇಹಸ್ಥಿತಿಯನ್ನೂ ಆಗಾಗ್ಗೆ ವೈದ್ಯರಿಂದ ಪರೀಕ್ಷೆಮಾಡಿಸಿ ವೈದ್ಯರು ಹೇಳಿದಂತೆ ನಡೆಯಬೇಕು ಮುಂದಿನ ಜನಾಂಗದ ಯೋಗಕ್ಷೇಮದ ದೃಷ್ಟಿಯಿಂದ ಇದು ಅತ್ಯಾವಶ್ಯಕ ಜನರು ಹಾಗೆ ಮಾಡಿದರೆ ಮಾತ್ರವೇ ಸರ್ಕಾರದವರೂ ಶ್ರೀಕರರೂ ಸೌಕರ್ಯಗಳನ್ನು ಕಲ್ಪಿಸಿದ ಶಿಬಿರವು ಸಾರ್ಥಕ ನೀವೆಲ್ಲ ಈ ಸೌಕರ್ಯಗಳನ್ನು ಅವಶ್ಯವಾಗಿ ಉಪಯೋಗಿಸಿಕೊಳ್ಳಬೇಕೆಂದು ಸೂಚಿಸಬಯಸುವೆನು

ಕೋಪನ್ನನದ ಬಿಳೀ ಟೂಥಪೇಸ್ಟ ಅಗಲುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ



ಅಗಲಾದ ಹಲ್ಲುಗಳನ್ನು ಮತ್ತ ಗಟ್ಟಿಮಾಡಿ ರಕ್ತ ಸೋರುವದನ್ನು ಬಿಡದೆ ಮಾಡಿ ವಸಡುಗಳನ್ನು ಗಟ್ಟಿ ಮಾಡವದು ತಯಾರಿಸುವವರು— ಕೇಂಬ್ರಿಡ್ಜ್ ಕೆಮಿಕಲ್ ಕಂ (ಮಾಲಕರ —ಮಂಗನ ಮಯು ಆರ್ನೋ ಆಂಡ್ ಕಂಪೆನಿ ಮುಂಬಯಿ

ಮಂಗಳೂರು

(ಸ್ವಂತ ವರದಿಗಾರರಿಂದ 6-8-39)

ಉಪಾಧ್ಯಾಯರ ಸಭೆ— ದ. ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ [illegible] ದ ತಾ 31ರಲ್ಲಿ [illegible] ಭವನದಲ್ಲಿ ಸಭೆ ಜರಗಿತು. [illegible] ಗಳಲ್ಲಿ [illegible] ನೂತನ [illegible] ವಿದ್ಯಾ [illegible] ತಮ್ಮ [illegible].

ಹೊಸ ವಾಚನಾಲಯ— ಕಳೆದ ತಾ. 31ನೇ ಸೋಮವಾರ ಸಾಯಂಕಾಲ [illegible] ಬಜಾರಿನಲ್ಲಿ [illegible] ವಿದ್ಯಾರ್ಥಿಗಳಿಂದ [illegible] ಒಂದು [illegible] ವಾಚನಾಲಯದ ಉದ್ಘಾಟನಾ ಸಮಾರಂಭವು ಶ್ರೀ. ಪಿ. ಎಸ್. [illegible] ರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀ. ವಿ. ಪಿ. [illegible] ಅಧ್ಯಕ್ಷತೆ ವಹಿಸಿದ್ದರು.

ಚಿಮಣಿ ದೀಪ— ಮಂಗಳೂರಿನ ಅನೇಕ ಬ [illegible] ಗಳು ಹಿಂದೂಸ್ತಾನ್ [illegible] ಸಹಿತ [illegible] ದಳಗಳು ಬೇಗನೆ [illegible] ಸೇರುತ್ತ ದೆ [illegible].

ಲೋಕಮಾನ್ಯರ ಪುಣ್ಯ ದಿನಾಚರಣೆ— ತಾ. ೧ನೇ ಸಾಯಂಕಾಲ ಸ್ಥಳೀಯ ವಿದ್ಯಾರ್ಥಿ ಭವನದಲ್ಲಿ ವಿದ್ಯಾರ್ಥಿಗಳು ಒಂದು ಸಭೆಯನ್ನು ಜರಗಿಸಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರವರ ಪುಣ್ಯ ದಿವಸದ ಸ್ಮರಣೆಯ ಬಗ್ಗೆ ಸಭೆ ಸೇರಿದ್ದಿತ್ತು. ಶ್ರೀ. ಬಿ. ವೆಂಕಟಕೃಷ್ಣ ರಾಯರು ಅಧ್ಯಕ್ಷತೆ ವಹಿಸಿದ್ದರು. ಅನೇಕ ಮಹನೀಯರು ಲೋಕಮಾನ್ಯ ತಿಲಕರ ಗುಣಕಥನ ಮಾಡಿ ಭಾಷಣ ಮಾಡಿದರು.

ಇದೇ ಸಂದರ್ಭದಲ್ಲಿ ಶ್ರೀ. [illegible] ರಾಮಯ್ಯ, ಎಂ. ಎ. ಬಿ. ಎಲ್. ಇವರ ಅಕಾಲ ಮರಣಕ್ಕಾಗಿ ಸಂತಾಪ ಸೂಚಿಸಲಾಯಿತು.

ಅಭಿನಂದನಾ ಸಭೆ— ಸ್ಥಳೀಯ [illegible] ರ್ ಮಾರ್ಕೆಟಿನ ವಿಷಯದಲ್ಲಿ ಸರಕಾರದವರು ಮಾಡಿರುವ ನಿರ್ಧಾರಕ್ಕಾಗಿ ಮದ್ರಾಸ್ ಸರಕಾರದವರನ್ನು [illegible] ಮಂಗಳೂರು ಪುರಜನರ ಸಭೆಯು [illegible] ಕಳೆದ ತಾ. 30ರ್ [illegible] ಶ್ರೀ. ಕೆ. ಆರ್. [illegible] ಅಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರು [illegible] ಸರಕಾರದವರು [illegible] ನ್ಯಾಯ [illegible] ಗಿದೆಯೆಂದರು.

ಅನಂತರ ಶ್ರೀ. ರಂಗರಾವ್ [illegible] ಮಾರ್ಕೆಟಿನ ಆಮೂಲಾಗ್ರ ಚರಿತ್ರೆಯನ್ನು ವಿವರಿಸಿ, ಸರಕಾರಕ್ಕೆ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಲ್ಲಿಸಬೇಕೆಂಬ ಮತ್ತು ಸರಕಾರದವರು [illegible] ನ ಕಟ್ಟಿಸಿಕೊಡುವಂತೆ ನಗರಸಭೆಯವರನ್ನು [illegible] ವರನ್ನು [illegible] ವಾಡಿ [illegible] ನ್ನು ಯಶಸ್ವಿಯಾಗಿ ನಡೆಸಲು ಸಹಾಯಮಾಡಿದ ಶ್ರೀಗಳಾದ ರಂಗರಾಯರಿಗೂ, [illegible] ಗೂ, ರಾಘವೇಂದ್ರ [illegible] ಗೂ, [illegible] ಮತ್ತು ಇತರ [illegible] ಸಂಗಡಿಗರಿಗೂ ಧನ್ಯವಾದಗಳನ್ನರ್ಪಿಸಿ [illegible] ಅದರ ಸಭೆ ಮುಗಿಯಿತು. ಅಧ್ಯಕ್ಷರ [illegible] ಧನ್ಯವಾದ [illegible] ಸಭೆ ಮುಕ್ತಾಯವಾಯಿತು.

ಉಪನ್ಯಾಸ— [illegible] ಕಾಲೇಜು [illegible] ದಲ್ಲಿ [illegible] "[illegible]" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು.

ನ್ಯೂ ಎಲ್ಯೂಸಿಯಸ್ ಕಂಪೆನಿ ಯೂನಿಯನ್— ಈ [illegible] ಕಾರ್ಯದರ್ಶಿ [illegible] ಪ್ರೆಸಿಡೆಂಟ್ [illegible] ಇವರು ಬಹುಮತದಿಂದ ಆರಿಸಲ್ಪಟ್ಟರು.

ಪ್ರೆಸ್ ಕೆಲಸಗಾರರ ಸಂಘದ ವಾರ್ಷಿಕ ಉತ್ಸವ— [illegible] ಪ್ರೆಸ್ [illegible] ವಾರ್ಷಿಕ [illegible] ಶ್ರೀ. [illegible] ಅಧ್ಯಕ್ಷತೆಯಲ್ಲಿ ಜರಗಿದೆ. [illegible].

ಜಿಲ್ಲಾ ಸಮಾಚಾರ

ಮಂಗಳೂರು— ಶ್ರೀ. [illegible] ನ್ನ ಸಂಘದವರು [illegible] ಕಟ್ಟಿಸಿದ [illegible] ಮಹೋತ್ಸವವು ತಾ. 16-8-39ನೇ ಬೆಳಿಗ್ಗೆ 9-30 ಕ್ಕೆ [illegible] ಅವರ ಅಧ್ಯಕ್ಷತೆಯಲ್ಲಿ ಜರಗುವುದು. ಇದೇ ಸಮಯದಲ್ಲಿ [illegible] ಅಧಿಕಾರಿಗಳು 6ನೇ ತರಗತಿಯ [illegible], ನಂತರ ಮತ್ತೂ ವಿವಿಧ ವಿನೋದಗಳ [illegible] ಎಲ್ಲರಿಗೂ ಸ್ವಾಗತವಿದೆಯೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೆಳಿಮಾರು— ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಳೆಯಲ್ಲಿ ತಾ. 3-8-39ರಲ್ಲಿ ಈ [illegible] ವರ್ಗವಾಗಿ [illegible] ಹೋಗುವ ಶ್ರೀ. [illegible] ಒಂದು ಕೂಟವು ದಾಕ್ತರ್ [illegible] ನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕೆಲ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕೂಡ ಶ್ರೀ. [illegible] ರ ಗುಣಕಥನ ಮಾಡಿದರು.

ಬ್ರಹ್ಮಾವರ— ತಾ. 6-8-1939ರಿಂದ ಬ್ರಹ್ಮಾವರ ಬೋರ್ಡು ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಹಿಂದೀ ಕ್ಲಾಸುಗಳು ಪ್ರಾರಂಭವಾಗಿರುವುವು. ಆದ್ದರಿಂದ ಹಿಂದೀ ಕಲಿಯಲಿಚ್ಛಿಸುವ ಎಲ್ಲಾ ಹಿಂದೀ ಪ್ರೇಮಿಗಳು ಬಂದು ಸಹಕರಿಸಬೇಕಾಗಿ ವಿನಂತಿ. ದೇವನಾಗರಿ ಲಿಪಿ (ಉರ್ದು)ಯಲ್ಲಿ ಹಿಂದೀ ಕಲಿಯುವವರಿಗೂ ಕೂಡಾ ಇದು ಸುಸಂದರ್ಭ. ಹೆಚ್ಚಿನ ವಿವರಗಳನ್ನು ಶ್ರೀ. ಎಂ. ಎಸ್. ಗಿರಿ 'ರಾ. ಭಾ. ವಿಶಾರದ' 'ಪ್ರಚಾರಕ' ಇವರಿಂದಾಗಲೀ ಶ್ರೀ. ಕೆ. ರಾಮದಾಸ [illegible] ಇವರಿಂದಾಗಲೀ ಪಡೆಯಬಹುದು.

ಎಣ್ಣೆಹೊಳೆ— ತಾ. 6-8-39ರಲ್ಲಿ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ. ಬಿ. ಗೋಪಾಲಕೃಷ್ಣ ಕಾಮತ್. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ. ಕೆ. ಗಣಪಯ್ಯ ಶೆಟ್ಟರು ಇಲ್ಲಿಗೆ ಆಗಮಿಸಿದರು. ಸಾಯಂಕಾಲ 4 ಗಂಟೆಗೆ ಶ್ರೀ. [illegible] ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಸದಸ್ಯರ ಮಹಾಸಭೆಯು ಜರಗಿತು. ಶ್ರೀ. ಪೊಲ್ಯ ದೇಜಪ್ಪ ಶೆಟ್ರು, ಶ್ರೀ. ಕೆ. ಗಣಪಯ್ಯ ಶೆಟ್ರು ಇಂದಿನ ಸಭೆಯ ಉದ್ದೇಶವನ್ನು ವಿವರಿಸಿ ಮಾತನಾಡಿದರು. ಎಣ್ಣೆಹೊಳೆದಲ್ಲಿ ಕೇಂದ್ರ ಕಾಂಗ್ರೆಸ ಕಮಿಟಿಯೊಂದನ್ನು ತೆರೆಯುವ ಪ್ರಸ್ತಾಪವು ಮಂಜೂರಾಯಿತು. ಶ್ರೀ. ಟಿ. ಎಂ. [illegible] ರು ಅಧ್ಯಕ್ಷ ಮತ್ತು ಖಜಾನ್ಜಿ, ಶ್ರೀ. ಸಂಕಪ್ಪ ಶೆಟ್ರು ಕಾರ್ಯದರ್ಶಿ ಮತ್ತು ತಾಲೂಕು ಪ್ರತಿನಿಧಿ, ಶ್ರೀಗಳಾದ ಎನ್. ವಿ. [illegible], ವೈ. ಅಚ್ಚಣ್ಣ ಶೆಟ್ರು ಮತ್ತು ಪೊಲ್ಯ ದೇಜಪ್ಪ ಶೆಟ್ರು ಕಮಿಟಿಗೆ ಆರಿಸಲ್ಪಟ್ಟರು. ಕಾರ್ಯದರ್ಶಿಗಳು ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಸಭೆ ಮುಕ್ತಾಯವಾಯಿತು.

ಕಾಪು— ಇಲ್ಲಿಯ ದೇವಾಲಯದ ಮುಂದುಗಡೆ ಶ್ರೀ. ಎಂ. [illegible] ಲಿಂಗ ಶೆಟ್ಟರ ಅಧ್ಯಕ್ಷತೆಯಲ್ಲಿ ಮೂಳೂರು, ಮಲ್ಲಾರು, ಉಳಿಯಾರಗೋಳಿ, ಕಾಪು, ಪಡು ಈ ಗ್ರಾಮಗಳಿಗೆ ಕೇಂದ್ರ ಕಾಂಗ್ರೆಸ್ ಕಮಿಟಿಯೊಂದನ್ನು ತೆರೆಯಲಾಯಿತು. ಶ್ರೀ. ಕೆ. ಎಚ್. ರಾಮಣ್ಣ ಸಪ್ಪರು ಅಧ್ಯಕ್ಷರಾಗಿಯೂ ಶ್ರೀ. ಕೆ. ಪಿ. ನರಸು ಶೆಟ್ರು ಕಾರ್ಯದರ್ಶಿಯಾಗಿಯೂ ಶ್ರೀಗಳಾದ ಎಂ. ಭಾಸ್ಕರ ಶೆಟ್ಟಿ, ಎಂ. ಭರತ ರಾಯ ಕಾಮತ್ ಕೆ. ಗೋಪಾಲಕೃಷ್ಣ ಶೆಣೈ, ಕೆ. ದಾಸು ಹೆಗ್ಗಡೆ ಮತ್ತು ಕೆ. ಮಾಧವ ಇವರು ಕಾರ್ಯಕಾರಿ ಸಮಿತಿಗೆ ಆರಿಸಲ್ಪಟ್ಟರು. ಕಾರ್ಯದರ್ಶಿಯವರು ಧನ್ಯವಾದಗಳನ್ನು ಅರ್ಪಿಸಿದರು.

ಬೈಂದೂರು— [illegible] ಸಮಯ [illegible] ಪ್ರಯಾಣಿಕರಿಂದ ಹೆಚ್ಚು ಸಂಕಟವನ್ನು [illegible] ಶ್ರೀ. ಬಿ. ಸುಬ್ಬಣ್ಣ ಶೆಟ್ಟರು [illegible] 9ಕ್ಕೆ ಕೊಟ್ಟು [illegible]. [illegible] ಕೇಳಿದನೆಂದೂ ಮುಂದೆ ತಾನು ಹಾಗೆ ಮಾಡುವುದಿಲ್ಲವಾಗಿ ಬರೆಕೊಟ್ಟನೆಂದೂ ತಿಳಿದು ಬರುತ್ತದೆ.

ಹಾಗೆಯೇ ಶ್ರೀ. ಶೆಟ್ಟರು [illegible] ಗದ ಶಾಸ್ತ್ರಿ ಮತ್ತು ಮೊಗೇರ ಹೆಂಗಸರಿಗೆ ಉಪದ್ರವ ಕೊಡುತ್ತಿದ್ದ [illegible] ಕೆಲವು ಹುಡುಗರನ್ನು ಪೋಲೀಸರಿಂದ ಹಿಡಿಸಿ ಅವರಿಂದ ಜಾಮೀನು [illegible] ತೆಗೆಸಿಕೊಂಡದ್ದಲ್ಲದೆ ನಷ್ಟಹೊಂದಿದ ಹೆಂಗಸರಿಗೆ ಸ್ವಲ್ಪ ಪರಿಹಾರ ದ್ರವ್ಯವನ್ನು ಕೊಡಿಸಿದರೆಂದೂ ತಿಳಿದುಬರುತ್ತದೆ. ಬಡವರ ಸೇವೆಗಾಗಿ ದುಡಿಯುತ್ತಿರುವ ಶ್ರೀ. ಶೆಟ್ಟರ ಸಾಹಸವು ಶ್ಲಾಘ್ಯವಿದೆ.

ಶ್ರೀ. ಬಿ. ಸುಬ್ಬಣ್ಣ ಶೆಟ್ಟಿ ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ. [illegible] ಅವರು [illegible] 'ವಿಲೇಜ್ ಸ್ಕ್ವಾಡ್' ಕಮಿಟಿಗೆ ಸುಮಾರು 160 ಜನ ಮೆಂಬರರು ಸೇರಿಸಲ್ಪಟ್ಟಿರುವುದು ಸ್ತುತ್ಯ.

ಸ್ಥಳೀಯ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾರ್ಥಿ ಸಂಖ್ಯೆ ತುಂಬಾ ಏರಿದ್ದು ಕೆಲವು ಕ್ಲಾಸುಗಳಲ್ಲಿ ವಿಭಜನೆಗೊಳ್ಳುವ ಸಂಭವವಿದೆ. ಜಿಲ್ಲಾ ಬೋರ್ಡಿನವರು ಧಾರಾಳವಾಗಿ ಏರಿರುವ ಮಕ್ಕಳ ಸಂಖ್ಯೆಯನ್ನು ನೋಡಿಯಾದರೂ ಈ ಶಾಲೆಯನ್ನು ಶಾಶ್ವತವಾಗಿ ಇರಿಸಬೇಕೆಂದೇ ಊರವರ ಹಾರೈಕೆ.

ಇಲ್ಲಿಂದ ಶಿರಿ ಮಂಜೇಶ್ವರದ ವರೆಗಿನ ನಾಗರದ [illegible] ಗಳಲ್ಲೂ ಶ್ರೀ. ಸುಬ್ಬಣ್ಣ ಶೆಟ್ಟರು [illegible] ಗಳನ್ನು ಸ್ವಂತ ಖರ್ಚಿನಿಂದ ನಡೆಸುತ್ತಿದ್ದಾರೆ. ಅಭಿನಂದನೀಯ.

—ಚಂದಾದಾರರಲ್ಲಿ ವಿನಂತಿ—

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 18ನೇ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ 19ನೇ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ತಮ್ಮ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ತಮ್ಮ ಬಾಕಿ ಚಂದಾ ಹಣವನ್ನೂ ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಈ ತಿಂಗಳಾಂತ್ಯಕ್ಕೆ ನಮ್ಮ ವರ್ಷಾವಧಿಯ ಲೆಕ್ಕವು ಮುಗಿಯಬೇಕಾದ್ದರಿಂದಲೂ ಚಂದಾಹಣ ಬಾಕಿ ಇರುವುದರಿಂದ ಅದಕ್ಕೆ ಬಹಳ ತೊಂದರೆಯಾಗಿರುವುದರಿಂದಲೂ ಎಲ್ಲರೂ ಅತ್ಯಾದರ ಮನಸ್ಸಿನಿಂದ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ಕಳುಹಿಸುವಲ್ಲಿ ಈ ತಿಂಗಳೊಳಗಾದರೂ ನಮಗೆ ತಲುಪುವಂತೆ ಕಳಿಸಬೇಕಾಗಿ ವಿನಂತಿ.

ಮುಂದೆ 'ನವಯುಗ'ದಲ್ಲಿ ಹಲವು ಸುಧಾರಣೆಗಳು ಆಗಲಿರುವುದರಿಂದಲೂ, ಕ್ರಮ ವ್ಯವಸ್ಥೆಗಳನ್ನು ಬಹುಕಠಿಣವಾಗಿ ಪಾಲಿಸಬೇಕಾದುದರಿಂದಲೂ, ಎಲ್ಲಾ ಚಂದಾದಾರರು ತಮ್ಮ ಚಂದಾಹಣವನ್ನು ಮುಂದಾಗಿಯೇ ಕಳುಹಿಸಬೇಕೆಂದು ಈ ಮೂಲಕ ನಿವೇದಿಸಿಕೊಳ್ಳುವೆವು.

ಚಂದಾದಾರರು ತಮ್ಮ ಚಂದಾಹಣವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಎಲ್ಲಾ ಬ್ರಾಂಚುಗಳಲ್ಲಿ ನಮ್ಮ ಲೆಕ್ಕಕ್ಕೆ ಕೊಡಬಹುದು. ಬ್ರಾಂಚುಗಳ ಅನುಕೂಲತೆಯಿಲ್ಲದವರು ದಯಮಾಡಿ ಮನಿಯಾರ್ಡರು ಮಾಡಬೇಕು. ಮಂಗಳೂರಲ್ಲಿ ಕೆನರಾ ಪ್ರೆಸ್ಸಿನ ಮೆನೇಜರರೊಡನೆಯೂ ಬೊಂಬಾಯಿಯಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀ. ಯು. ಕೆ. ರಂಗರೊಡನೆಯೂ ಚಂದಾಹಣ ಪಾವತಿಮಾಡಬಹುದು.

ಪತ್ರಿಕೆಯು ಸಾಮಾನ್ಯ ಸರ್ವರ ಮೆಚ್ಚುಗೆಗೂ ಪಾತ್ರವಾಗುವಂತೆ ಆದಷ್ಟು ಹೆಚ್ಚಿನ ಸಾಧ್ಯವಾದಷ್ಟು ಬದಲಾವಣೆಗಳನ್ನು ಮಾಡಲಾಗುವುದು. ಹೊಸತಾಗಿ ಚಂದಾದಾರರಾಗಿ ಪ್ರೋತ್ಸಾಹಿಸುವವರಿಗೂ ಇದು ಸುಸಂದರ್ಭ.

(ಪತ್ರಿಕೆ ಬೇಡವೆಂದಿರುವವರು ತಮ್ಮ ಚಂದಾಹಣ ಬಾಕಿಯಿದ್ದರೆ ಅದನ್ನು ಕಳಿಸಿಕೊಟ್ಟು ನಮಗೆ ಸಕಾಲದಲ್ಲಿ ತಿಳಿಸಬೇಕಾಗಿ ಸಾದರ ವಿನಂತಿ.)

ಮೆನೇಜರ್.

ಉಡುಪಿ

ಅಳಿಯಕಟ್ಟಿನವರ ಸಭೆ— ಪ್ರಕೃತ ಮುಂದೆ ಬಂದಿರುವ ಮದ್ರಾಸ್ ಅಳಿಯಸಂತಾನ ಮಸೂದೆಯ ವಿಷಯವನ್ನು ಚರ್ಚಿಸಲು ಶ್ರೀ. ಬಿ. ರಾಮರಾಯ ಶೆಟ್ಟಿ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಅಳಿಯ ಸಂತಾನಿಗರ ಸಭೆಯೊಂದು ಸ್ಥಳೀಯ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಜರಗಿತು. ಶ್ರೀ. ಎನ್. ಎಸ್. ಕಿಲ್ಲೆಯವರು ಮಸೂದೆಯ ಮುಖ್ಯ ಪ್ರಾಮುಖ್ಯಾಂಶಗಳನ್ನು ವಿವರಿಸಲಾಗಿ, ಕೆಲ ಚರ್ಚೆ ನಡೆದು ಮಸೂದೆಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ಬರುವ ಮಹಾಸಭೆಗೆ ಉಡುಪಿ ತಾಲೂಕಿನಿಂದ ಪ್ರತಿನಿಧಿಗಳನ್ನು ಪ್ರತಿ [illegible] ಚೆಟ್ಟು, ಸರಕಾರಕ್ಕೆ ಹೋಗಿ ಸಭೆ ಕೂಡಿಸಿ ಆ ಮೂಲಕ ಚುನಾಯಿಸುವುದು ಯುಕ್ತವೆಂದು ಆ ವಿಚಾರವನ್ನು ಮುಂದರಿಸಲಾಯಿತು. ಶ್ರೀಗಳಾದ ಬಿ. ಸುಬ್ಬಯ್ಯ ಹೆಗ್ಗಡೆ, ಮೊದಲ್ತಾಯ ಜಗನ್ನಾಥ ಶೆಟ್ಟಿ ಮೊದಲಾದವರು ಕೊಟ್ಟ ಸೂಚನೆಗಳನ್ನು ಪರಿಷತ್ತಿನ ಮುಂದೆ ಇಡುವರೆ ರಿಕಾರ್ಡು ಮಾಡಲಾಯಿತು. ಶ್ರೀ. ಹೊನ್ನಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಲು ಸಭೆ ಮುಕ್ತಾಯವಾಯಿತು.

ವಿಕ್ಟೋರಿಯಾ ನಾಣ್ಯ:—

ವಿಕ್ಟೋರಿಯಾ ರೂಪಾಯಿಗಳನ್ನು ಸರಕಾರದವರು ಚಲಾವಣೆಯಿಂದ ಹಿಂತೆಗೆದುಕೊಳ್ಳುವುದಾಗಿ ನಿಶ್ಚಯಿಸಿದ್ದು ಅವರು ಟ್ರೆಜರಿ ಆಫೀಸಲ್ಲಿ ಎಕ್ಸ್‌ಚೇಂಜ್ ಮಾಡಿಕೊಳ್ಳಬಹುದೆಂದು ಪ್ರಕಟಿಸಿರುವುದಾದರೂ, ಉಡುಪಿ ಸಬ್ ಟ್ರೆಜರಿ ಆಫೀಸರರು ಸಾರ್ವಜನಿಕರಿಂದ ತರಲ್ಪಟ್ಟ ನಾಣ್ಯಗಳಿಗೆ ಸ್ವಸ್ತ ಸಮಯಕ್ಕೆ ಎಕ್ಸ್‌ಚೇಂಜ್ ಮಾಡಿಕೊಡದೆ ಸತಾಯಿಸುತ್ತಿರುವ ಕಾರಣದಿಂದ ಪಟ್ಟಣದವರು ಮತ್ತು ಹಳ್ಳಿಗರು ನಿರಾಶರಾಗಿ ಮೂರು ದಿವಸಗಳ ವರೆಗೂ ಕಾದು ನಿರಾಶರಾಗಬೇಕಾಗಿ ಬಂದಿರುವುದೆಂದೂ ಶ್ರೀ. ಟಿ. ರಮಾನಾಥ ಪೈಗಳು ತಿಳಿಸುತ್ತಾರೆ.

ತಿದ್ದುಪಡಿ

ತಾ. 27-7-39ನೇ ಸಂಚಿಕೆಯ 4ನೇ ಪುಟದಲ್ಲಿ 'ಒಕ್ಕಲು ಮಸೂದೆಯ ಆವಶ್ಯಕತೆ' ಎಂಬ ಶಿರೋನಾಮೆಯ ಕೆಳಗೆ ಪ್ರಕಟಿಸಿದ ಹಳ್ಳಿಗರ ಮನವಿಯಲ್ಲಿ ದ. ಕ. ಜಿಲ್ಲೆಯ ಕೆಲ ಭಾಗದಲ್ಲಿಯ [illegible] ಗೇಣಿ ಒಕ್ಕಲುಗಳು ಎಂಬುದು ಮೂಲಗೇಣಿ ಒಕ್ಕಲುಗಳೆಂದೂ, ದನಿಗಳು ಎಂಬುದು ಧಾರಾಳಿಕ ಎಂದೂ ಆಗಬೇಕು. ಸಂ. ನ.

Is Germany's militant preparation a menace to world's peace?

Hark ! - 65,000,000 Voices trained to shout 'Heil Hitler' !!

Do you know how Germany is building the greatest war Machines in the world's history, and how she is regimenting the people for future war ?

Hear Hitler's spirited lecture in 'March of Time Series'

INSIDE NAZI GERMANY

SHOWN ALONG WITH

R. K. O. Radio's Mighty Screen Achievement in new Techni-colour, the warmth of which will pulsate your flesh and blood.

BECKY SHARP

FEATURING.

Miriam Hopkins, Frances, Dee, Cedrik Hard wicke & others

BEAUTIFUL ! CHARMING ! DANGEROUS !!

She rose from the Mud of a great Battlefiled to the Palace of a king !
How sweeter than the honey-dew the lips of Becky sharp !!
How sharper than the Serpent's tooth her stings !!!
How her silvery laugh was the toast & scourge of common men & king !!!
Enjoy this picture as deep as human heart as big as the stirring events through which its drama rolls

AT

SRI RAMAKRISHNA THEATRE, UDIPI.

from 9-8-1939

ಜರ್ಮನಿಯ ಸನ್ನಾಹವು ಭೂಲೋಕದ ಕಂಟಕವೇ ?

ಕೇಳಿರುವಿರಾ .. **65,000,000** ಧ್ವನಿಗಳು 'ಹೈಲ್ ಹಿಟ್ಲರ್' ಎಂದು ಜಯಘೋಷಮಾಡಲು ತಯಾರಾಗಿರುವುದೆಂದು ?

ಭೂಲೋಕದ ಚರಿತ್ರೆಯಲ್ಲಿ ಹೊಸತೆಂದು ಎಣಿಸಬಲ್ಲ ನವೀನ ರೀತಿಯ ಭಯಾನಕ ಯುದ್ಧ ಸಾಮಾಗ್ರಿಗಳ ತಯಾರಿಕೆಯನ್ನು ?

ಮುಂದಿನ ಯುದ್ಧಕ್ಕೆ ಇಂದಿನ ಜನಾಂಗವನ್ನು ಹೇಗೆ ಹಿಟ್ಲರನು ತನ್ನ ಆವೇಶ ಪೂರಿತ ಭಾಷಣಗಳಿಂದ ಹುರಿದುಂಬಿಸುತ್ತಿರುವನೆಂದು ?

ನೋಡಿರಿ: ಸ್ಪಷ್ಟಲಾ ಎರಡು 'ಮಾರ್ಚ್ ಆಫ್ ಟೈಮ್' ರೀಲುಗಳು 'ಇನ್ಸೈಡ್ ನಾಜಿ ಜರ್ಮನಿ' ಇದನ್ನು ನೋಡಿ,
ಮಿರಿಯಮ್, ಹೋಪ್ ಕಿನ್ಸ್, ಫ್ರಾನ್ಸಿಸ್ ಡೀ ಮೊದಲಾದವರು ನಟಿಸಿರುವ
R-K O· ರೇಡಿಯೋ ಪಿಕ್ಚರ್ಸ್‌ನವರ ಉತ್ಕೃಷ್ಟ ವರ್ಣಚಿತ್ರವಾದ

ಬೆಕ್ಕಿ ಶಾರ್ಪ್

ನೋಡುವಿರಾದರೆ, ಮಂದಹಾಸವನ್ನು ಬೀರುತ್ತ ಮುಂದೆ ನಡೆಯುವಿರಿ.

ಬೆಕ್ಕಿ ಶಾರ್ಪ್ !——ಅತೀ ಸುಂದರಿಯವಳು !——ನವ ಮೋಹನಾಂಗಿ!——ಆದರೆ, ಮುಟ್ಟಿದರ ಚುಚ್ಚುವುದು — ಕಿಚ್ಚಲ್ಲ, ಚೇಳಲ್ಲ !

ಅವಳ ಅಧರದ ಸವಿಯನ್ನು ಉಣ್ಣ ಬಯಸದವರಾರು?... ....ಆದರೆ ಅವಳ ಹಲ್ಲಿನ ಕಡಿತವು ಮಾತ್ರ ಸರ್ಪಕ್ಕಿಂತಲೂ ವಿಷವತ್ತಾದುದು ! ಕಾಲಾಳಿನಿಂದಾದಿಯಾಗಿ, ಚಕ್ರವರ್ತಿಯ ವರೆಗಿನವರನ್ನು ಮೋಹಿಸಿದವಳಿವಳು! ರಣರಂಗದ ಧೂಳಿನಲ್ಲಿ ಮುಚ್ಚಲ್ಪಟ್ಟಿದ್ದ ಅವಳು, ಅರಮನೆಯ ಸುವಿಲಾಸಿನಿಯಾದಳೆಂದರೆ ....ಅವಳಾರು ?... ....ನೋಡಿರಿ !

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾರೀಕು **9—8—1939** ರಿಂದ

BECKY SHARP

— ಕಥಾ ಸಾರಾಂಶ —

ಬೆಕ್ಕಿ ಶಾರ್ಪ್ ಅನಾಥ ವಿದ್ಯಾರ್ಥಿನಿಯಾದ ಕಾರಣ, ಅವಳು ಎಮಿಲಿಯ ಮನೆಯಲ್ಲಿ ಇದ್ದಳು. ಬೆಕ್ಕಿಯು ಎಮಿಲಿಯ ಅಣ್ಣನನ್ನು ಅಡ್ಡದಾರಿಗೆ ಎಳೆಯಲು ಪ್ರಯತ್ನಿಸಿದ ಕಾರಣದಿಂದ ಅಲ್ಲಿಂದ ಹೊರತೆರಳಬೇಕಾಯಿತು. ನಂತರ ಅವಳು ತನ್ನ ಮೋಹಜಾಲದಲ್ಲಿ ಸರ್ ಪೀಟರ್ ಕ್ರೌಲೆ, ಅವನ ಮಗ ಪಿಟರ್ ಮತ್ತು ಕಾಸಿಲ್ಲದ ಕೆಪ್ಟನ್ ಕ್ರೌಲೆ, ಇವರು ಮೂವರನ್ನು ಒಲಿಸಿಕೊಳ್ಳುವಳು. ಕೊನೆಗೆ ಅವಳು ಕಪ್ಟನ್ ಕ್ರೌಲೆಯನ್ನು ಗುಪ್ತವಾಗಿ ವಿವಾಹವಾದರೂ ಇದರ ಪರಿಣಾಮವಾಗಿ ಕ್ರೌಲೆಯ ತಾಯಿಯು ಅವನನ್ನು ಹೊರಗಟ್ಟುವಳು. ಇದರಿಂದ ನವದಂಪತಿಗಳು ನಿರ್ಗತಿಕರಾದರು. ಆದರೂ ಬೆಕ್ಕಿಯು ತನ್ನ ರೂಪಲಾವಣ್ಯಗಳಿಂದ ಜನರನ್ನು ಮರುಳುಗೊಳಿಸಿ ತನ್ನ ಗಂಡನ ಜುಗಾರಿಯಾಟದ ಬೇಡಿಗೆ ಅವರನ್ನು ತಂದೊಡ್ಡುತ್ತಾ ಆಡಂಬರದ ಜೀವನವನ್ನು ನಡಿಸುತ್ತಿದ್ದಳು

ಇತ್ತ ಎಮಿಲಿಯ ಗಂಡನು ಬೆಕ್ಕಿಯಲ್ಲಿ ಮೋಹಪರವಶನಾಗಲು ಬೆಕ್ಕಿಯು ಈ ಸಂದರ್ಭವು ಸಾಧ್ಯವಾಗಲು ಬಿಡದಂತೆ ತನ್ನ ಗಂಡನಿಂದ ಅವನನ್ನು ಕೂಡಿದಷ್ಟು ಸುಲಿಗೆ ಮಾಡಿಸುವಳು. ಸ್ವಲ್ಪ ಸಮಯದಲ್ಲಿಯೇ ಬೆಕ್ಕಿಯು ತನ್ನ ಗಂಡನೊಂದಿಗೆ ನೆಪೋಲಿಯನ್ ಯುದ್ಧದ ಸಂಬಂಧ ಬ್ರುಸ್ಸೆಲ್ಸ್‌ಗೆ ಹೋಗುವಳು. ಅಲ್ಲಿ ಸ್ಟೀನ್ ಮಾರ್ಕ್ವಿಸನನ್ನು ಮರುಳುಗೊಳಿಸಿ ತನ್ನ ಬಲೆಯಲ್ಲಿ ಹಾಕಿಕೊಳ್ಳುವಳು. ಇದರಿಂದಬೆಕ್ಕಿಗೆ ಇಂಗ್ಲಿಷ್ ಕೋರ್ಟಿನಲ್ಲಿ ಮರ್ಯಾದೆಗೆ ಪಾತ್ರಳಾಗಲು ಸಂದರ್ಭವೊದಗಿತು. ಅವಳು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗುವುದರಲ್ಲಿದ್ದಳು. ಆದರೆ ಅಷ್ಟರಲ್ಲಿ ಅನುಮಾನಿತನಾದ ಇವಳ ಗಂಡನು ಅವಳನ್ನು ವಿವಾಹ ಬಂಧನದಿಂದ ದೂರೀಕರಿಸುವನು. ಇದರಿಂದ ಬೆಕ್ಕಿಯ ಜೀವನದಲ್ಲಿ ಒಂದು ಅನಘಡ ಬಂದಂತಾಗುವುದು. ಮುಂದೇನು?

— SYNOPSIS —

Becky Sharp, being a charity pupil at the School, lives with Amelia, whose fat brother Sedly, she tries to trap in her net. As a result she is ousted. Again she charms Sir Pitt crawly his son Pitt and a baronett's penniless on Captain crawluy Ultimetely she secretly marries pCatain crawly and goes to London Unexpectedly Captin Crawly is disinhereted for having married a girl below his station and the newlyweds are cast penniless. Becky now uses her beauty and wit to lure victims to her husband's gaming Table, and leads a luxurious life George Osbom Amelia's husband, falls in love with Becky, who allows her husband to fleece him to the extent possible taking advantage of this infatuation Becky now accompanies her husband to Brussles when the latter is ordered to join welling ton campaign against Napoleon She attracts the Marquis of Steyne through whom she is presented at the English Court and her social Success is assured. Her husband denunciate her on account of her suspicions contact with the Marquis. Becky exposed and denounced drifts down——Until what happens?

COMING:--Ranjits wonder Picture, GORKHAYA featuring Rajkumari & *Mazhar*; New Theatre's crowning *success* VIDHYAPATHI featuring Kannanbala & Pahani Sanyal; **Serial Stunt Thriller 'Lone Defender'; Bombay Talkies' 'Jeevan Naiya' featuring Devikarani & Ashoka Kumar etc.**

ಮುಂದಿನ ಚಿತ್ರ—ರಣಜಿತನವರ ರಾಜಕುಮಾರಿ ಮತ್ತು ಮಝಾರ್ ನಟಿಸಿರುವ ಉಜ್ವಲ 'ಗೋರಕ್ ಆಯಾ'; ನ್ಯೂ ಥಿಯೇಟರಿನವರ ಕನನ್‌ಬಾಲಾ ಮತ್ತು ಪಹಾರಿನ ಸ್ಯಾಲ್ ನಡಿಸಿರುವ ಅತ್ಯುತ್ಕೃಷ್ಟ ಚಿತ್ರ "ವಿದ್ಯಾಪತಿ" ಇಂಗ್ಲಿಷ್ ಸೀರಿಯಲ್ "ಲೋನ್ ಡಿಫೆಂಡರ್" ಬಾಂಬೆಟಾಕೀಸ್ ನವರ ದೇವಿಕಾರಾಣಿ ಮತ್ತು ಅಶೋಕ್ ಕುಮಾರ್ ನಟಿಸಿರುವ "ಜೀವನ್‌ನಯ್ಯಾ,, ಇತ್ಯಾದಿ.

ಟಿಕೇಟಿನ ದರ: ಟೇಕ್ಸ್ ಸಮೇತ: ರಿಜರ್ವ್ಡ್ 1-8-0; ಸ್ಪೆಶಲ್ 0-11-9; ಗೆಲರಿ 0-7-0, ಬೆಂಚು 0-4-6 0-2-3; ಮಟಿನಿ 0-1-6

ENGINES & DYNAMAS ARE FOR SALE.
For particulars apply to: **Sri Ramakrishna Theatre.**

ಬೊಂಬಾಯಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

4--8--39

ತಿಲಕ ದಿನಾಚರಣೆ—ಲೋಕಮಾನ್ಯ ಬಾಲ ಗಂಗಾಧರ ತಿಲಕರ ದಿನಾಚರಣೆಯು, ಆಗಸ್ಟ್ ಒಂದನೆಯ ತಾರೀಕಿನ ದಿವಸ ವಿಜೃಂಭಣೆಯಿಂದ ನಡೆಗಿಸಲ್ಪಟ್ಟಿತು. ಮುಂಜಾನೆ ಸಾವಿರಾರು ಜನರಿಂದ ಕೂಡಿದ ಬಹು ದೊಡ್ಡ ಮೆರವಣಿಗೆಯು ಕೋಂಗ್ರೆಸ್ ಹಾಲಿನಿಂದ ಹೊರಟು, ಚೌಪಾಟಿಯಲ್ಲಿ ತಿಲಕರ ಪ್ರತಿಮೆಯು ಸುತ್ತ ನೆರೆದು, ಜಯಘೋಷಿಸಿದೊಡನೆ, ಪ್ರತಿಮೆಯನ್ನು ಪುಷ್ಪಹಾರಗಳಿಂದ ಅಲಂಕರಿಸಿತು.

ಮದ್ಯಪಾನ ನಿಷೇಧ—ಮುಂಬಯಿಯ ಚರಿತ್ರೆಯಲ್ಲಿ ಈ ದಿನವು ಅವಿಸ್ಮರಣೀಯವಾದದ್ದು. ಜನತೆಯು ಆತ್ಮವನ್ನೇ ಕೊರೆಯುತ್ತಿರುವ "ಪಾನ"ವೆಂಬ ಈ ಕೀಟಕ್ಕೆ ವಿರುದ್ಧ ಭಯಂಕರ ಯುದ್ಧ ಹೂಡಿದೆ. ಈ ಹುಳವು ಭಾರತ ಸಮಾಜವನ್ನೇ ಬಲಹೀನಗೊಳಿಸುತ್ತಿದೆ. ಆ ಅವಮಾನದಿಂದ ಸಮಾಜವನ್ನು ಉದ್ಧರಿಸಬೇಕು. ಮುಂಬಯಿಯಲ್ಲಿ ಮದ್ಯಪಾನ ನಿಷೇಧವನ್ನು ತಂದದ್ದರಿಂದ, ಜನತೆಗಿತ್ತ ಅಭಿಮಾನವನ್ನು ಪರಿಪೂರ್ಣಗೊಳಿಸಿದಂತಾಯಿತು." ಎಂದು ತಮ್ಮ ಗಂಭೀರ ಭಾಷಣದೊಡನೆ, ಮುಂಬಯಿಯ ಮುಖ್ಯ ಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು, ಮದ್ಯಪಾನ ನಿಷೇಧ ದಿನಾಚರಣೆಯ ತಮ್ಮ ಪವಿತ್ರ ಮಂತ್ರವನ್ನು, ಜನರಿಗೆ ಬೋಧಿಸಿದರು.

ಹಿಂದುಗಳು, ಮುಸಲ್ಮಾನರು, ಕಾಮಗಾರರು ಒಳ್ಳೆಯವರು, ಬಡವರು, ಎಂಬ ಜಾತಿಭೇದವಿಲ್ಲದೆ, ಮದ್ಯಪಾನ ನಿಷೇಧದ ಮೊದಲನೆಯ ದಿನವಾದ ಆಗಸ್ಟ್ ಒಂದನೆಯ ತಾರೀಕಿನ ದಿವಸ, ಮುಂಬಯಿಯ ಜನಸಮೂಹವು, ಅತ್ಯುತ್ಸಾಹದಿಂದ, ಕೋಂಗ್ರೆಸ್ ಹೌಸಿನಲ್ಲಿ ನೆರೆದು, ಸಾಧಾರಣ ಎರಡು ಮೈಲುದ್ದದ ಮೆರವಣಿಗೆಯನ್ನು ಬೆಳೆಸಿಕೊಂಡು, ಶಹರನ್ನೆಲ್ಲಾ ಸುತ್ತಾಡುತ್ತಾ ಆಜಾದ ಮೈದಾನಿಗೆ ಬಂದು ತಲ್ಪಿತು. ಮುಂಬಯಿ ಮಂತ್ರಿಮಂಡಲವೂ ಇನ್ನಿತರ ಮುಖ್ಯ ಕೋಂಗ್ರೆಸ್ ಮುಂದಾಳುಗಳೂ, ಮೆರವಣಿಗೆಯಲ್ಲಿ ಸೇರಿದ್ದರು, 60ಸಾವಿರಕ್ಕೂ ಮಿಕ್ಕಿದ ಕಾಮಗಾರರು ಪರೇಲಿನಿಂದ ಮೆರವಣಿಗೆಯಲ್ಲಿ ಹೊರಟು, "ಕೋಂಗ್ರೆಸೆಂದರೆ ನಾವೇ, ನಮಗೂ, ಕೋಂಗ್ರೆಸಿಗೂ ಭೇದವಿಲ್ಲ" ಎಂದು ಜನತೆಗೂ, ಕೋಂಗ್ರೆಸ್ ಮುಂದಾಳುಗಳಿಗೂ ತಿಳಿಯಗೊಳಿಸುತ್ತಾ, ಮದ್ಯ ನಿಷೇಧಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನೀಯುವುದಕ್ಕಾಗಿ, ಮೆರವಣಿಗೆಯಲ್ಲಿ, ಆಜಾದ ಮೈದಾನಿನಲ್ಲಿ ನೆರೆದರು, ಮುಖ್ಯ ಮಂತ್ರಿಯವರು ತಮ್ಮ ಭಾಷಣಕ್ಕಾಗಿ ಎದ್ದು ನಿಂತಾಗ 2 ಲಕ್ಷಕ್ಕಿಂತಲೂ ಮಿಕ್ಕಿ ಜನರು ನೆರೆದಿದ್ದರು. ಇದರಿಂದ ಮುಂಬಯಿ ಸರಕಾರದ ಈ ಕಾರ್ಯಕ್ಕೆ ಜನತೆಯ ಸಂಪೂರ್ಣ ಬೆಂಬಲವಿದೆಯೆಂದು ಕಂಡುಬರುತ್ತದೆ. ಈ ದಿವಸ ಮುಂಬಯಿ ಸರಕಾರವು, ಮುಂಬಯಿ ನಗರವನ್ನು ಒಣಗಿಸಬೇಕೆಂದು ಪ್ರಯತ್ನಿಸುತ್ತಿರುವಾಗ, ಮೇಘರಾಜನು ತಣ್ಣಗಿರದು, ನಗರವನ್ನು ಒದ್ದೆ ಮಾಡಿದನು.

ಜನರ ಮೇಲೆ ಗೋಳೀಬಾರು—ಆಗಸ್ಟ್ ಒಂದನೆಯ ತಾರೀಕಿನ ದಿವಸ ಜಗಳ ದಿಂದಾಗಿ, 19 ಪೋಲೀಸರಿಗೂ, 34 ಜನರಿಗೂ ಪೆಟ್ಟು ತಗಲಿದೆ. ಮುಂಬಯಿ ಸರಕಾರವು ಜನರ ಮೇಲೆ ಹೊರಿಸಲಿರುವ "ಆಸ್ತಿಯ ತೆರಿಗೆ"ಗೆ ತಮ್ಮ ವಿರೋಧವನ್ನು ಸೂಚಿಸುವ ಮುಸ್ಲಿಂ ಮೆರವಣಿಗೆಗೂ ಜಾಹೀರ ಕಮಿಟಿಯವರಿಂದ ಹೊರಡಿಸಲ್ಪಟ್ಟ ಮೆರವಣಿಗೆಯವರಿಗೂ ಅತರರಿಗೂ ಜಗಳ ಉಂಟಾಗಲು, ಪೋಲೀಸರು ಬಂದು ಗೋಳೀಬಾರು ಮಾಡಿದರು. ಇದರಿಂದಾಗಿ 19 ಜನರಿಗೆ ಜಖಮಾಗಿದೆ. ಇವರೆಲ್ಲ ಆಸ್ಪತ್ರೆಯಲ್ಲಿರುವರು. ಇದಕ್ಕೂ ದಾರುಬಂದಿಗೂ ಏನೂ ಸಂಬಂಧವಿಲ್ಲೆಂದು ಕಂಡುಬರುತ್ತದೆ.

ಪತ್ರಿಕೆಗಳ ಮೇಲೆ ನಿಷೇಧ ಕಾನೂನು

ನೂರು ಮುಸ್ಲಿಂ ಪತ್ರಿಕೆಗಳ ಮೇಲೆ, ಮತ್ತು ಎರಡು ಪಾರ್ಸಿ ಪತ್ರಿಕೆಗಳ ಮೇಲೆ ದಾರುಬಂದಿಯ ಕುರಿತು ಅಥವಾ ಒಂದನೆಯ ತಾರೀಕಿಗೆ ನಡೆದ ಜಗಳದ ಕುರಿತು ಯಾವುದೇ ಅಥವಾ ವಾರ್ತೆಯನ್ನು ಬರೆಯಕೂಡದೆಂದು ನಿಷೇಧ ಶಾಸನವನ್ನು ಜಾರಿಸಿದೆ. ಕೋಂಗ್ರೆಸ್ ಸರಕಾರದಲ್ಲಿ ಪತ್ರಿಕೆಗಳಿಗೀಯುವ ಸ್ವಾತಂತ್ರ್ಯವಿದೇ?

ಆಗಸ್ಟ್ ಒಂದನೆಯ ತಾರೀಕಿನ ದಿವಸದ ಘಟನೆಯ ಪರಿಣಾಮವಾಗಿ, ಈ ತಿಂಗಳ 15 ನೆಯ ತಾರೀಕಿನ ವರೆಗೆ, ಕೋಟೆಯನ್ನು ಬಿಟ್ಟು ಇತರ ಸ್ಥಳಗಳಲ್ಲೆಲ್ಲಾ ರಾತ್ರೆ 10 ಗಂಟೆಯ ನಂತರ ಕರ್ ಫ್ಯೂ ಆರ್ಡರನ್ನು ಜಾರಿಮಾಡಿರುವರು.

ದಿ. ಕೆನರಾ ಬಿಲ್ಲವರ ಅನಾಥ ಸಂಘ ಮುಂಬಾಯಿ:—ತಾ. 23-7-39 ರಲ್ಲಿ ಸಂಘದ ಒಂದು ವಿಶೇಷ ಮಹಾಸಭೆಯು ಕರ್ನಾಟಕ ಧರ್ಮಾರ್ಥ ರಾತ್ರಿ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಯುತ ಯಸ್. ಯಸ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ 80ನೇ ಮಹಾತ್ಮಾಗಾಂಧಿ ರಸ್ತೆಯ 1ನೇ ಮಾಳಿಗೆಯಲ್ಲಿ ಸುಮಾರು ನಲ್ವತ್ತೊಂದು ಮೆಂಬರರಿಂದೊಡಗೂಡಿ ಜರಗಿತು. ಸಭಿಕರುಗಳಾದ ಶ್ರೀಯುತ ವಿ. ಟಿ. ಕುತ್ಯಾರ್; ಕೆ. ಸಿ. ಕುಂದರ್, ವೆಂಕಪ್ಪ ಸುವರ್ಣ, ವೈ. ಮುತ್ತಪ್ಪ ಕೋಟ್ಯಾನ್, ವೈ. ವಿ. ಬಂಗೇರರುಗಳು ಸಂಘದ ಏಳಿಗೆಯ ಕುರಿತು ಭಾಷಣವಿತ್ತ ನಂತರ ಅಧ್ಯಕ್ಷರು ಸರ್ವಾನುಮತದಿಂದ ಕಾರ್ಯಕ್ರಮಗಳನ್ನು ನೆರವೇರಿಸಿ ತಮ್ಮ ಮಧುರ ಭಾಷಣದಿಂದ ಸಭಿಕರನ್ನು ಆಹ್ಲಾದಗೊಳಿಸಿದರು.

ಬೊಂಬಾಯಿ ಮೊಗವೀರರು ಒಂದಾಗಬೇಕು—ಎಂಬ ಅರ್ಥವುಳ್ಳ ದೀರ್ಘ ಬಾತ್ಮಿಯೊಂದನ್ನು ಶ್ರೀ. ವೈ. ಕೊರಗಪ್ಪ ಎ. ಪುತ್ರನ್ ಎಂಬವರು '1939ನೇ ಇಸವಿ' ಎಂಬ ಶಿರೋನಾಮೆಯಿಂದ ನಮ್ಮೆಡೆಗೆ ಕಳಿಸಿದ್ದಾರೆ. ಅದರಲ್ಲಿ 1939ನೇ ಇಸವಿಯು ಮೊಗವೀರ ಸಮಾಜದಲ್ಲಿ ಚಿರಸ್ಮರಣೀಯವಾದದ್ದೂ 'ಮೊಗವೀರ ಸಂವತ್ಸರ' ವಾಗಿಯೂ, ಮೊಗವೀರ ತ್ರೈಮಾಸಿಕ ಪತ್ರಿಕೆಗಳು ಹುಟ್ಟಿಯೇ ಹೊರಬಿದ್ದುದು ನೋಡುವಾಗ ಉಗಮವಲ್ಲೇ ಕವಲೊಡೆದು ಇಬ್ಭಾಗವಾದಂತಿದೆ. ಇದು ಸಂಘಗಳಿಗೂ ಸಮಾಜಕ್ಕೂ ಹಿತಕರವಲ್ಲ. ಬೊಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿ, ಮೊಗವೀರ ಧರ್ಮೋದ್ಧಾರ ಮಂಡಳಿ, ಮೊಗವೀರ ಯುವಕ ಸಂಘ, ಇವೆಲ್ಲವೂ ಸಮಾಜ ಸುಧಾರಣೆಯ ಏಕೋದ್ದೇಶವುಳ್ಳವುಗಳಾದುದರಿಂದ ಎಲ್ಲವೂ ತಮ್ಮ ಭಿನ್ನ ಭಾವನೆಯನ್ನು ಬಿಟ್ಟು ಒಕ್ಕಟ್ಟಾಗಬೇಕು. ಯಾವುದಾದರೂ ಒಂದೇ ಪತ್ರಿಕೆಯನ್ನು ಹೊರಡಿಸಬೇಕು. ಮುಂದಾಳುಗಳು ಬೇಗನೇ ಐಕ್ಯತೆಗಾಗಿ ಪ್ರಯತ್ನಿಸಬೇಕು ಎಂಬ ಸೂಚನೆಗಳು ಕೊಡಲ್ಪಟ್ಟಿವೆ. ಈ ಸೂಚನೆಗಳ ಕಡೆಗೆ ಮೊಗವೀರ ಸಮಾಜದವರು ಅವಶ್ಯವಾಗಿ ಗಮನಿಸಬೇಕಾಗಿ ಕೋರುತ್ತೇವೆ. ಸಂ. ನ.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ತಾ. 7-8-39.

ಆಲ್ ಇಂಡಿಯ ನ್ಯಾಷನಲ್ ಸಮಿತಿ

ಮೇಲ್ಕಂಡ ಸಮಿತಿಯ ಸದಸ್ಯರುಗಳು ಬೆಂಗಳೂರಿಗೆ ಕಳೆದ ವಾರ ಆಗಮಿಸಿ, ಸರ್ಕಾರದ ಅತಿಥಿಗಳಾಗಿ ಕುಮಾರ ಪಾರ್ಕಿನಲ್ಲಿ ಬಿಡಾರ ಮಾಡಿದ್ದರು. ಇವರನ್ನು ದಿವಾನರು ಸ್ವಾಗತಿಸಿದರು. ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತು ಮೇಲೆ ದಂಡಿನಲ್ಲಿರುವ ಮಿಲಿಟರಿ ಯಂತ್ರಗಳನ್ನು ಪರೀಕ್ಷಿಸಿದರು. ಇವರುಗಳು ಮೊನ್ನೆ ಚಿಕ್ಕಣಾರ ರಾಜಧಾನಿಗೆ ಆಗಮಿಸಿ, ಚಾಮುಂಡಿ ಬೆಟ್ಟ, ಕನ್ನಂಬಾಡಿ ಕಟ್ಟೆ, ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತರು. ಈ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಡಾ! ಮೇಘನಾದ ಸಹಾರವರು ವಿಶ್ವವಿದ್ಯಾನಿಲಯದ ಸಂಘದಾಶ್ರಯದಲ್ಲಿ ಸೈನ್ಸ್ ವಿಚಾರವಾಗಿ ಒಂದು ಸ್ವಾರಸ್ಯವಾದ ಭಾಷಣವಿತ್ತರು. ಇವರುಗಳು ಶ್ರೀರಂಗಪಟ್ಟಣದ ಮುಖಾಂತರ ಬೆಂಗಳೂರಿಗೆ ಪ್ರಯಾಣ ಬೆಳಸಿ ಅಲ್ಲಿಂದ ಸಿಕಂದ್ರಾಬಾದಿಗೆ ಹೋದರು.

ಪ್ರಾರಂಭೋತ್ಸವ—ದಿವಾನರಾದ ಸರ್. ಮಿ. ಜಾ. ಇಸ್ಮಾಯಿಲ್‌ರವರು ನಿನ್ನೆಯ ದಿನ ಬಿ. ಸನ್ ಸೀವುರಕ್ಕೆ ತಕ್ಷ ಪರಿವಾರದೊಡನೆ ಪ್ರಯಾಣ ಬೆಳಸಿ ಅಲ್ಲಿ ಸ್ಥಾಪಿಸಲ್ಪಟ್ಟಿರುವ ನೂತನ ಸಿಲ್ಕ್ ಫಿಲೇಚರ್‌ನ ಪ್ರಾರಂಭೋತ್ಸವ ನೆರವೇರಿಸಿದರು. ಈ ಸಮಾರಂಭಕ್ಕೆ ಅನೇಕರು ಬಂದಿದ್ದರು.

ನಾಗಮಂಗಲದಲ್ಲಿ ಕಟ್ಟಲಾಗಿರುವ ತಿಮ್ಮಮ್ಮ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ದಿವಾನರು ಈ ದಿನ ನೆರವೇರಿಸಿದರು.

ಸುಂಕ ಕೊಡಬೇಕಾಗಿಲ್ಲ—ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರವರಿಗೆ ಪರದೇಶದಿಂದ ಬರುವ ವಸ್ತುಗಳಿಗೆ ಸುಂಕ ಕೊಡಬೇಕಾಗಿಲ್ಲವೆಂದು, ಸೌಧಸಭೆಯಲ್ಲಿ ತೀರ್ಮಾನಿಸಿದರು.

ಮೈಸೂರು ಸರಕಾರದ ಉದಾರ ದಾನ—ತಾ. ಮುಂಜಯವರು ನಾಸಿಕದಲ್ಲಿ ಸ್ಥಾಪಿಸುವ ಭಾಸಲ್ಲೆ ಮಿಲಿಟರಿ ಶಾಲೆಗೆ, ಮೈಸೂರು ಸರಕಾರದವರು 10 ಸಾವಿರ ರೂ ಕೊಟ್ಟಿರುತ್ತಾರೆಂದು ಹೇಳಲಾಗಿದೆ.

ಪತ್ರಿಕೋದ್ಯೋಗಿಗಳ ಸ್ಮಾರಕಕ್ಕೆ—ಗತಿಸಿದ ಪತ್ರಿಕೋದ್ಯೋಗಿಗಳೂ, ದಾವಣಗೆರೆಯವರೂ ಆದ ಶ್ರೀ. ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ, ಒಂದು ಉಪನ್ಯಾಸ ನಡೆಸುವ ಸಲುವಾಗಿ, ಬೆಂಗಳೂರಿನ ಶ್ರೀ. ಸಿ. ಆರ್. ರಾಮಯ್ಯನವರು, ಪತ್ರಿಕೋದ್ಯೋಗಿಗಳ ಸಂಘಕ್ಕೆ ೧೦೦ ರೂ. ದಾನವಾಗಿತ್ತಿರುತ್ತಾರೆ.

ಲೇಬರ್ ಮುಖಂಡರಿಗೆ ಶಿಕ್ಷೆ—ಲೇಬರ್ ಮುಖಂಡರಾದ ಶ್ರೀ. ಯಸ್. ರಾಮಸ್ವಾಮಿಗಳು ಪ್ರತಿಬಂಧಕಾಜ್ಞೆ ಮೀರಿದರೆಂದು ಸ್ಥಳೀಯ ಮ|| ಇವರಿಗೆ 5 ತಿಂಗಳು ಕಠಿಣ ಸಜ 150 ರೂ. ಜುಲ್ಮಾನೆ, ಅದು ತಪ್ಪಿದಲ್ಲಿ ಮತ್ತೆ ಒಂದು ತಿಂಗಳು ಸಜ ವಿಧಿಸಿದರು.

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 3 ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. 284 ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲ ವಿದ್ಯಾರ್ಥಿ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ಶಾಲೆ ಆದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss watch Co.
Book-Sellers, Post Box No. 68
G. P. O. MADRAS

ವೆಸ್ಟರ್ನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ಕಾರ್ಕಳ ದಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 221/1939

The Mooiky Sri Venkatramana Temple by its Council of Trustees ಯು. ಕೃಷ್ಣಯ್ಯ ಶ್ಯಾನುಭೋಗ ಕೂಡ } ವಾದಿ-

ಮತ್ತು

ಸೇಸು ಸೆಟ್ಟಿ ಕೂಡಾ—ಪ್ರತಿವಾದಿದು.

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿ ಸೇಸು ಸೆಟ್ಟಿ 2ನೇ ಪ್ರತಿವಾದಿ ಮುದ್ದು ಸೆಟ್ಟಿ, ಪಜೆಯಾರು ಭಂಡಾರ ಮನೆ ತೌಡಸೆಟ್ಟಿ ಮಕ್ಕಳು, ಉಡುಪಿ ತಾಲೂಕು ಬೆಳಪುಗ್ರಾಮದಲ್ಲಿರುವವರು—

ಸದರಿ 1-2ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ, ಸದರಿ ಮೂಲ್ಕಿ ವೆಂಕಟ್ರಮಣ ದೇವರ ಭಂಡಾರದ ಕಡೆಯಿಂದ ಟ್ರಸ್ಟಿಗಳು ನಿಮ್ಮ ಮೇಲೆ ಕೂಡಾ ಗೇಣಿಬಾಕಿ ವಗೈರೆ ವಸೂಲಾತಿ ಆಸ್ತಿ ಸ್ವಾಧೀನತೆ ಕೇಳಿ ದಾಖಲು ಮಾಡಿದ ದಾವೆಯು ತನ್ನಿ ಬಗ್ಗೆ ಇದೇ ಬರುವ ತಾ. 26-8-39ಕ್ಕೆ ಇಟ್ಟಿರುತ್ತದೆ. ಈ ಕುರಿತು ನಿಮ್ಮ ಆಕ್ಷೇಪಣೆಗಳು ಏನಾದರೂ ಇದ್ದ ಪಕ್ಷದಲ್ಲಿ ಸದ್ರಿ ದಿವಸ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹಾಜರುಮಾಡತಕ್ಕದ್ದು. ತಪ್ಪಿದ್ದೆ ನಿಮ್ಮ ಗೈರುಹಾಜರಿಯಿಂದ ನಿರ್ಣಯವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿಯನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಪಡಿಸಲಾಗುತ್ತದೆ.

K. Vasudeva Kamath,
Advocate for Plaintiff.

Karkala, Date 3-8-1939

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ಶಕ್ತಿ ಕುಂದಿದುದನ್ನು ಪೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು, ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ಮೈಯೂರ್ವ ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ಸ್ವಲ್ಪ ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಪುಸ್ತಕ. ಪುಸ್ತಕದ ... ಕಳುಹಿಸುವೆವು ... .

ಆತಂಕನಿಗ್ರಹ ಫಾರ್ಮಸಿ, ... ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಮುಂದೆ ಬರುವ ಲೇಖನಗಳು

ಕೋಂಗ್ರೆಸಿನೊಳಗಿನ ಕೆಲವು ಪಕ್ಷಗಳು
(ಶ್ರೀ ಪಿ ಮ ...)

ಕಂಕುಳಲ್ಲಿ ಶ್ಶೈಬಲ್ಲು;
ಕೈಯಲ್ಲಿ ಕತ್ತಿ
(ಶ್ರೀ. ಮಿ. ಜಾನ್ ಅಪ್ಪಾ. ಬ್ಲಾಜೇಸ್, ...)

ಅಳಿಯಸಂತಾನ ಮಸೂದೆ
(ಕೆಲವು ತಿದ್ದುಪಡಿ ಸೂಚನೆಗಳು)
(ಶ್ರೀ. ಕೆ. ... ಹೆಗ್ಡೆ)

ಇತ್ಯಾದಿ - ಇತ್ಯಾದಿ.

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ 10-8-39ರಿಂದ ತಾ. 17-8-39ರ ವರೆಗೆ)

[ಜ್ಯೋತಿಷವು ಅಪ್ರಸ್ತುತವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ. ನ.]

ಮೇಷರಾಶಿ—

ಎಂತಹ ಕಠಿಣ ಪ್ರಸಂಗದಲ್ಲಿ ನೀವು ಸಿಲುಕಿದರೂ ಕೇವಲ ಧೈರ್ಯದಿಂದ ಪರೀಕ್ಷಿಸುವ ಅದೊಂದು ವಿಶೇಷತರವಾದ ಯೋಗ್ಯತೆಯು ನಿಮ್ಮಲ್ಲಿರುವುದು. ಆದಕಾರಣದಿಂದಲೇ ಹಲವು ಜನ ಮಿತ್ರರೂ ಬಂಧುಗಳೂ ನಿಮ್ಮ ಮಾತನ್ನು ಅತಿಕ್ರಮಿಸಿ ಒಂದು ಹೆಜ್ಜೆ ಮುಂದಿಡಲಾರರು. ನಿಮ್ಮ ಆರ್ಥಿಕ ಪರಿಸ್ಥಿತಿಯೂ ನಾಕಷ್ಟು ಉತ್ತಮವೇ ಆಗಿದ್ದರೆಂದು ಹೇಳಬಹುದು. ವಿದ್ಯಾರ್ಥಿಗಳಿಗಾದರೆ ಉದ್ಯೋಗವಾಂಛೆಯುಳ್ಳವರಿಗೂ ಈ ವಾರ ಶುಭಫಲವು ಲಭಿಸಲಿದೆ. ಆದರೆ ಅನಾರೋಗ್ಯವು ನಿಮ್ಮನ್ನು ಬಹುವಾಗಿ ಪೀಡಿಸುತ್ತಿರುವುದು. ಇಷ್ಟ ವಸ್ತುಗಳನ್ನು ಪಡೆಯುವರೆ ಅತೀವ ಕಷ್ಟವಾಗುವುದು. ವಿರೋಧಿಗಳ ಪ್ರತಿಕ್ರಿಯೆಯು ಮಾನಸಿಕ ವ್ಯಥೆಯನ್ನು ಹೆಚ್ಚಿಸುವುದು. ಪ್ರಯಾಣದಲ್ಲಿ ಗಂಡಾಂತರಗಳೊದಗುವವು. ತಾ. 11-12 ಮತ್ತು 17 ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಸಂಭವಿಸಲಿರುವವು.

ವೃಷಭರಾಶಿ—

ಈ ವಾರದಲ್ಲಿ ನೀವು ಸ್ವಕೀಯ ಪರಕೀಯ ಜನರಿಂದಲೂ ಮಿತ್ರವೃಂದದವರಿಂದಲೂ ಬಹುಮಾನಿಸಲ್ಪಡುವಿರಿ. ನಿಮ್ಮ ಜಾಣ್ಮೆಯಿಂದಲೂ ಸಾಹಸದಿಂದಲೂ ಕೈಗೊಂಡ ಕಾರ್ಯವು ಅನಾಯಾಸದಿಂದ ಕೊನೆಗೊಳ್ಳುವುದು. ಕೋರ್ಟು ವ್ಯವಹಾರಗಳಲ್ಲಿ ನಿಮ್ಮ ಇಷ್ಟಾರ್ಥವು ಪೂರೈಸಲ್ಪಡುವುದು. ಉದ್ಯೋಗಕ್ಕೆ ತಕ್ಕುದಾದ ಪ್ರತಿಫಲ ದೊರೆಯುವುದರಿಂದ ಧನ ವಿಷಯಕವಾದ ಚಿಂತೆ ನಿಮಗೊದಗದು. ಆದರೂ ಪ್ರಸಾದವಶಾತ್ ಕೆಲವು ತಪ್ಪುಗಳನ್ನು ಮಾಡಿ ಮೇಲಧಿಕಾರಿಗಳ ಆಗ್ರಹಕ್ಕೆ ಪಾತ್ರರಾಗಲಿರುವಿರಿ. ಆರೋಗ್ಯ ಸಾಮಾನ್ಯ ಸ್ಥಿತಿಯಲ್ಲಿರುವುದು. ಕೆಳತ್ರ ವಿಷಯಕವಾದ ವ್ಯಸನವು ಸದಾ ನಿಮ್ಮ ಮನಸ್ಸಿನಲ್ಲಿ ಅಂಟಿಕೊಂಡಿರುವುದು. ದುರ್ದೈವವಶಾತ್ ಸುಘಟಿಸತಕ್ಕ ಅನರ್ಥಗಳಿಂದಲೂ ದುರ್ವ್ಯಸನದಿಂದಲೂ ಜನಾಪವಾದಕ್ಕೆ ಸಿಲುಕುವಿರೋ ಎಂಬೀ ಭಯವು ನಿಮ್ಮ ಅಂತಃಕರಣದಲ್ಲಿ ಸದಾ ನೆಲೆಸಿರುವುದು. ತಾ. 11-12-15-16-17 ಈ ದಿನಗಳಲ್ಲಿ ಎಚ್ಚರತಪ್ಪಿ ನಡೆದರೆ ಧನಮಾನಗಳಿಗೆ ಹಾನಿಯೂ ಕಾರ್ಯಕ್ಕೆ ವಿಘ್ನವೂ ಅನಿವಾರ್ಯವಾದುದೇ ಸರಿ.

ಮಿಥುನರಾಶಿ—

ಭಾಗ್ಯಲಕ್ಷ್ಮಿಯು ನಿಮ್ಮ ಶುಭಾಗಮನವನ್ನು ನಿರೀಕ್ಷಿಸುತ್ತಿರುವಳು. ಮನಸ್ಸಿನ ಚಾಂಚಲ್ಯವನ್ನು ದೂರಮಾಡಿ ಆತ್ಮವಿಶ್ವಾಸವನ್ನು ಪಡೆಯಿರಿ. "ಉದ್ಯೋಗೇ ಪುರುಷಲಕ್ಷಣಂ" ಎಂದಂತೆ ಔದಾಸೀನ್ಯವನ್ನು ಬಿಟ್ಟು ಉದ್ಯೋಗದಲ್ಲಿ ಪ್ರವರ್ತಿಸಿರಿ. ದೈವವೂ ನಿಮ್ಮಗೆ ಸಹಾಯಮಾಡಲಿದೆ. ಕೋಪವು ಮಿತ್ರರಿಗಳೊಳ್ಳೊಂದಾಗಿರುವ ಪ್ರಯುಕ್ತ ಮನುಷ್ಯನ ಭಾವೀ ಶ್ರೇಯಸ್ಸಿಗದು ಕಂಟಕಪ್ರಾಯವಾಗಿರುವುದು. ಪ್ರಗತಿಯನ್ನು ಹೊಂದಬೇಕೆನ್ನುವವರು ಅದನ್ನು ಜಯಿಸುವುದೊಳ್ಳಿತು. ಶತ್ರುಜನರಿಂದ ನಿಮ್ಮ ಧನಮಾನಗಳಿಗೆ ಹಾನಿಸಂಭವಿಸಲಿದೆಯಾದರೂ ನೀವದನ್ನು ತಡೆಗಟ್ಟಲು ಶಕ್ತರಾಗಿರುವಿರಿ. ಕಣ್ಣು ನೋವಿನಿಂದಾಗಿ ನೀವು ಸ್ವಲ್ಪ ಪೀಡಿಸಲ್ಪಡುವಿರಾದರೂ ಈ ಸಾಂಕ್ರಾಮಿಕ ರೋಗದಿಂದ ಕ್ಷೇಮ ಹೊಂದುವಿರಿ. ಉದ್ಯಮದಲ್ಲಿ ಒಳ್ಳೇ ಸಂಪತ್ತನ್ನೂ ಕೀರ್ತಿಯನ್ನೂ ಗಳಿಸಲಿರುವಿರಿ. ತಾ. 11-12-15-16 ಈ ದಿನಗಳು ಅತ್ಯುತ್ತಮವಾಗಲಿವೆ.

ಕರ್ಕಾಟಕರಾಶಿ—

ಅನಿಷ್ಟಸ್ಥಾನಗತರಾದ ಗ್ರಹರ ಬಲವು ಅಧಿಕವಾಗಿರುವುದರಿಂದ ನಿಮಗೀ ವಾರದಲ್ಲಿ ಕಷ್ಟನಷ್ಟಗಳೇ ಅಧಿಕವಾಗಲಿವೆ. ಕಷ್ಟಪಟ್ಟು ನಿಮ್ಮ ಬುದ್ಧಿಶಕ್ತಿಯನ್ನು ಸಂಪೂರ್ಣ ಪ್ರಯೋಗಿಸಿ ದುಡಿಯುವಿರಿ. ಆದರೇನು, ಖರ್ಚಿನ ಮಾರ್ಗಗಳು ಹಲವಾರು ಇರುವುದರಿಂದಲೂ ನಿಮ್ಮ ವಕ್ರಬುದ್ಧಿಯ ಪರಿಣಾಮವಾಗಿಯೂ ಅದು ನಿಮ್ಮ ಕೈಸೇರುವ ಮುಂಚೆಯೇ ಖರ್ಚಾಗಿ ಹೋಗುವುದು. ಆರೋಗ್ಯ ವಿಚಾರದಲ್ಲಿ ನಿಶ್ಚಿಂತರಾಗಿ. ಸಂಸಾರದಲ್ಲಿಯಾದರೋ ಅನುದಿನವೂ ಕಲಹ ತಪ್ಪುವಂತಿಲ್ಲ. ಜನತೆಯ ಸಂಸರ್ಗ ಪಡೆದಲ್ಲಿ ನಿಮ್ಮ ಗರ್ವಿಷ್ಟತೆಯಿಂದ ನಿಮಗೆ ಸಕಲ ಕಡೆಗಳಲ್ಲೂ ಕಲಹ ಪ್ರಾಪ್ತವಾಗುವುದು ಮಾತ್ರವಲ್ಲದೆ ಅವರಿಂದ ಅಪಮಾನ ತಿರಸ್ಕಾರಗಳನ್ನು ಕೂಡ ಹೊಂದಬೇಕಾಗುವುದು. ಆದರೂ ಗುರುಶುಕ್ರರ ಕೃಪಾದೃಷ್ಟಿಯು ನಿಮ್ಮ ಮೇಲೆ ಕಿಂಚಿತ್ತಾದರೂ ಪರಿಣಾಮವನ್ನುಂಟುಮಾಡದಿರಲಾರದು. 11-12-15-16 ಈ ದಿನಗಳು ಅತ್ಯಂತ ಅನಿಷ್ಟಕಾರಿಗಳಾಗಿವೆ.

ಸಿಂಹರಾಶಿ—

ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರ ದೋಷಃ॥ ಅದೃಷ್ಟವಿಲ್ಲ, ವಿಧಿ ಬರೆದಂತಾಗುವುದು ಎಂದು ಉದಾಸೀನರಾಗಿರಲು ಇದು ಸಮಯವಲ್ಲ. ನಿಮ್ಮ ಆತ್ಮಶಕ್ತಿಯನ್ನು ಸಂಪೂರ್ಣ ಉಪಯೋಗಿಸಿ ಕಾರ್ಯದಲ್ಲಿ ಮುಂದರಿಯಿರಿ. ಬಹ್ವಂಶ ಅದು ವ್ಯರ್ಥವಾಗದು. ಒಂದು ವೇಳೆ ನೀವಗದು ಫಲವನ್ನು ಕೊಡದೆ ಹೋದರೂ ನಿಮ್ಮದೇನೂ ತಪ್ಪಿಲ್ಲವು. ಪ್ರಕೃತದ ನಿಮ್ಮ ಉದ್ಯಮದಲ್ಲಿ ಪ್ರಯತ್ನಕ್ಕೆ ತಕ್ಕುದಾದ ಫಲಪ್ರಾಪ್ತಿಯುಳ್ಳದಿದ್ದರೂ ಕಾರ್ಯವನ್ನು ಮುಂದರಿಸಲು ಬೇಕಾದಷ್ಟರ ಮಟ್ಟಿನ ಅನುಕೂಲತೆಗೆ ಕೊರತೆಯಿಲ್ಲವು. ಸಾಮಾನ್ಯ ನಿತ್ಯದ ಖರ್ಚಿಗೆ ಬೇಕಾದಷ್ಟು ಧನ ಸಿಗುವುದು. ನಿಮ್ಮಲ್ಲಿನ ಧರ್ಮಶ್ರದ್ಧೆಯಿಂದಾಗಿ ಇತ್ತೀಚೆಗೆ ನಿಮ್ಮವರೇ ನಿಮಗೆ ವಿರೋಧಿಗಳಾಗಿರುವರು. ಶತ್ರುಗಳೂ ಕೂಡ ವಿಶೇಷವಾಗಿ ಪೀಡಿಸಲಿರುವರು. ತಾ. 13-14-17 ಈ ದಿನಗಳ ಅನಾರೋಗ್ಯದಿಂದಲೂ ಆರ್ಥಿಕವ್ಯವಸ್ಥೆಯಿಂದಲೂ ಕಳೆಯುವಿರಿ.

ಕನ್ಯಾರಾಶಿ—

"ಮೂರಿಟ್ಟರಾರಕ್ಕು ಆರು ಮೂರಕ್ಕು, ಹೋರುವ ಗೊಡ್ಡು ಹೈನಕ್ಕು ಕವರತಾ, ಹಾದುವಾಳಿನಕೆ 'ಸರ್ವಜ್ಞ'" ಅದೃಷ್ಟವು ಅನುಕೂಲವಾಗಿ ಪರಿಣಮಿಸುವ ಕಾಲಕ್ಕೆ ನಿಷ್ಫಲವಸ್ತುವೂ ಸಫಲವಸ್ತು, ಒಂದಕ್ಕೆ ಎರಡಕ್ಕು ಎಂಬ ಸರ್ವಜ್ಞೋಕ್ತಿಯಂತೆ ನಿಮಗೆ ಈಗ ಹೆಚ್ಚಿನ ಅನುಕೂಲಕಾಲವೊದಗಿರುವುದರಿಂದ ಶತ್ರುಗಳೂ ಮಿತ್ರರಾಗುವರು. ಮಿತ್ರರ ಸಹಾಯದಿಂದಾಗಿ ಸಕಲ ಕಾರ್ಯಗಳಲ್ಲೂ ಕೋರ್ಟು ಪ್ರಕರಣಗಳಲ್ಲೂ ಜಯವಾದೀತು. ನಿರುದ್ಯೋಗದಿಂದಲೇ ಇರುವವರಿಗೆ ಶಾಶ್ವತವಾಗಿ ಉದ್ಯೋಗ ದೊರೆಯಬಹುದು. ಆರೋಗ್ಯ ಭಾಗ್ಯಕ್ಕೆ ಹಾನಿಯಾಗದು. ಆರ್ಥಿಕಸಂಪತ್ತಿನಿಂದ ಪರಿಪೂರ್ಣರಾಗುವಿರಿ. ಪರೋಪಕಾರ್ಯದಿಂದಾಗಿ ಕೀರ್ತಿಶಾಲಿಗಳಾಗುವಿರಿ. ಆದರೂ ನಿಮಗೆ ಸಾಂಸಾರಿಕ ಅನಾರೋಗ್ಯದ ನಿಮಿತ್ತವಾದ ಚಿಂತೆಯು ತಪ್ಪುವಂತಿಲ್ಲವು. ತಾ. 11-12-13-14-17 ಈ ದಿನಗಳನ್ನು ಸುಖಸಂತೋಷದಿಂದ ಕಳೆವಿರಿ.

ತುಲಾರಾಶಿ—

ಪ್ರತಿಸ್ಪರ್ಧಿಗಳಧಿಕವಾಗಿರತಕ್ಕ ಈ ಕಾಲದಲ್ಲಿ ನೀವೆಷ್ಟು ಜಾಗ್ರತೆಯಿಂದಿದ್ದರೂ ಕಷ್ಟ ತಪ್ಪುವಂತಿಲ್ಲವು. ಬಾಹ್ಯಾಡಂಬರದಿಂದ ನಿಮ್ಮ ಮಿತ್ರಜನರಂತೆ ವರ್ತಿಸಿ ಗುಟ್ಟನ್ನು ತಿಳಿದು ಅಂತರಂಗದಲ್ಲಿ ನಿಮ್ಮ ವಿನಾಶಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿರುವರು. ಈ ಶತ್ರುಮಿತ್ರರ ಸಾದಸ್ಥಾನದಿಂದ ನೀವು ಪಾರಾಗುವದು ಬಲು ದುರ್ಲಭವಾಗಿರುವುದು. ಆದರೂ ನೀವು ಸದರ ಮಾತಿಗೆ ಕಿವಿಗೊಡದೆ ನಿಮ್ಮ ಸ್ವಂತ ಬುದ್ಧಿಯಿಂದಲೇ ವರ್ತಿಸಿದಲ್ಲಿ ಸ್ವೀಕೃತ ಕಾರ್ಯದಲ್ಲಿ ಜಯವಾಗುವ ಲಕ್ಷಣವಿದೆ. ವ್ಯರ್ಥ ಖರ್ಚುಮಾಡುವವರಲ್ಲದ ಕಾರಣ ಮತ್ತು ಖರ್ಚಿನ ದಾರಿಗಳೂ ನಿಮಗೆ ವಿಶೇಷವಿಲ್ಲದ ದರಿಂದಲೂ ಹಣದ ತಾಪತ್ರಯವು ಉಂಟಾಗುವಂತಿಲ್ಲ. ಉದರರೋಗ ಶಸ್ತ್ರಪೀಡಾ ನಿಮಿತ್ತ ಮನೋರೋಗ ಇವುಗಳಿಂದ ನೀವು ವಿಶೇಷ ವ್ಯಥೆಗೊಳ್ಳುವಿರಿ. ನಿರರ್ಥಕವಾಗಿ ಪ್ರವಾಸಮಾಡಬೇಕಾದ ಪ್ರಸಂಗವೂ ಬರುವದು. ತಾ. 13ರಿಂದ 16ರ ವರೆಗೆ ಹೆಚ್ಚಿನ ಅನಿಷ್ಟಗಳು ಸಂಭವಿಸುವಂತಿಲ್ಲವು.

ವೃಶ್ಚಿಕರಾಶಿ—

"ಧನಾನಾಂ ಅರ್ಜನೇ ದುಃಖಂ ಅರ್ಜಿತಾನಾಂ ಚ ರಕ್ಷಣೇ । ನಾಶೇ ದುಃಖಂ ವ್ಯಯೇ ದುಃಖಂ ಧಿಗ್‌ಧನಂ ದುಃಖಭಾಜನಂ"॥ ಧನವನ್ನು ಸಂಗ್ರಹಿಸುವಾಗಲೂ, ಸಂಗ್ರಹಿಸಿದ್ದನ್ನು ಕಾಪಾಡುವಾಗಲೂ ಅದು ನಾಶವಾದಾಗಲೂ ವಾ ಖರ್ಚಾದರೂ ಸರ್ವತ್ರ ನರನು ದುಃಖಿತನಾಗುವನು. ಆದಕಾರಣ ದುಃಖಸ್ಥಾನವಾದ ಹಣಕ್ಕೆ ಧಿಕ್ಕಾರವಿರಲಿ ಎಂದು ಭರ್ತೃಹರಿಯೆಂದಿರುವನು. ಸದ್ಯ ನಿಮಗೆ ಅದೃಷ್ಟಬಲದಿಂದಾಗಿ ಹಿಡಿದ ಕಾರ್ಯದಲ್ಲೂ ವ್ಯಾಪಾರದಲ್ಲೂ ಧನಲಾಭವು ಅನಾಯಾಸವಾಗಿ ಆದೀತು. ಆದರೂ ಲೇವಾದೇವಿ ವಿಚಾರದಲ್ಲಿ ಹೊರ ಕೊಟ್ಟಿದ್ದು ನಾಶವಾಗಲೂ ಬಹುದು. ಹಾ ಅದರ ನಿಮಿತ್ತವಾಗಿ ಕೋರ್ಟಿಗೆ ಹೋಗಲೂ ಬೇಕಾದೀತು, ಅಂತೂ ನಿಮಗೆ ನೆಮ್ಮದಿಯಿಂದಿರಲಾಗದು. ಇತರ ಸಾಂಸಾರಿಕ ವಿಚಾರದಲ್ಲೂ ದೈಹಿಕ ವಿಚಾರದಲ್ಲೂ ನೀವು ನಿಶ್ಚಿಂತರಿರುವಿರಿ. ಮಿತ್ರರಿಂದಲೂ ಧನಾಗಮವಾದರೂ ತನ್ನಿಮಿತ್ತ ಚಿಂತೆಯು ತಪ್ಪಿದ್ದಲ್ಲ. ತಾ. 10-15-16-17 ಅನುಕೂಲ.

ಧನುರಾಶಿ—

ಅನೇಕ ವಿಚಾರಗಳಲ್ಲಿ ನಿಮಗೀವಾರವು ಅನಿಷ್ಟಕಾರಿಯಾಗಿ ಪರಿಣಮಿಸಲಿದೆ. ದುಃಖಾತಿರೇಕದ ನಿಮಗೆ ದಿನಗಳು ವರ್ಷದಂತೆ ಬಹುದೀರ್ಘಗಳಾಗುವವು. ನಿಮ್ಮ ಯೋಗ್ಯತೆಗನುಗುಣವಾಗಿ ನೀವು ದುಡಿಯುವಿರಾದರೂ ನಿಮಗೆ ಗಂಟುಬಿದ್ದ ಮಾತ್ರ ಸಂಭವಿಸಲಿರುವ ಖರ್ಚುಗಳು ನಿರರ್ಥಕವಾಗಿರುವವು. ಆದಕಾರಣ ಹಣದ ನಿಮಿತ್ತವಾಗಿ ಪಾತ್ರಾಪಾತ್ರ ವಿಚಾರಮಾಡದೆ ಸಾಲಕೊಡುವಿರಿ. ಕಾಲೇಜಿನ ಮಾನಸಿಕ ಸುಖಗಳಂತೂ ನಿಮಗೀವಾರದಲ್ಲಿಲ್ಲವೆಂದರೆ ತಪ್ಪಾಗಲಾರದು. ಬಂಧುವರ್ಗದ ಜನರಿಂದ ಮನೋರೋಗವು ಮತ್ತಷ್ಟು ವೃದ್ಧಿಯಾಗುವುದು. ಸಂಸಾರದಲ್ಲಿ ಪರಸ್ಪರ ಭಿನ್ನಮತಗಳು ತಲೆದೋರಿ ಕಲಹವು ವೃದ್ಧಿಯಾಗುವುದು. ರಾಜಕೀಯ ವಿಚಾರಕ್ಕೆ ಸದ್ಯ ಕೈಹಾಕದಿರಿ. ಅನಿಷ್ಟಗಳು ಅನಿವಾರ್ಯವಾಗಿವೆ. ವಾರದ ಮೂರು ದಿನಗಳಲ್ಲಿ ಅನಿಷ್ಟಗಳು ಸ್ವಲ್ಪ ಕಡಿಮೆಯಾಗಿವೆ.

ಮಕರರಾಶಿ—

ಬಲಹೋದ ಕಾಲಕ್ಕೆ ನೆಲಸಿದ್ದು ಬಡಿಯುವದು, ಕಲ್ಲು, ಛಲ, ಕಲಹ, ಸಿರಿಯು, ಸಂಗ್ರಾಮವು ಬಲವಿರುವನಿಗೆ" ಎಂಬ ಪ್ರಾಚೀನರ ಮಾತಿನಂತೆ ವಿಧಿಬಲದಿಂದ ಸಂಪೂರ್ಣ ಮುಕ್ತರಾದ ನಿಮಗೆ, ಈವಾಗ ಸರ್ವತೋಮುಖದಿಂದ ವಿಪತ್ತುಗಳು ಒದಗುವವು. ಪ್ರಯಾಣ ನಿಮಿತ್ತವಾಗಿಯೂ ಆರೋಗ್ಯದ ನಿಮಿತ್ತವಾಗಿಯೂ ಆಗಾಗ ಧನವ್ಯಯಮಾಡಬೇಕಾಗಬಹುದು. ಹತ್ತು ಜನರೆದುರಲ್ಲಿ ಮಾನಚ್ಯುತಿಯ ಪ್ರಸಂಗವೂ ಘಟಿಸೀತು. ಸ್ತ್ರೀಪುರುಷ ವರ್ಗವೆಲ್ಲವೂ ನಿಮಗೆ ವಿರೋಧವಾಗಿ ನಿಂತಿರುವುದು. ಹಿಡಿದ ಕಾರ್ಯಗಳಾವುದೂ ಕೊನೆಮುಟ್ಟುವ ಚಿಹ್ನೆಗಳು ಕಾಣಲಾರವು. ವ್ಯವಹಾರ ಮಾಡಿದವರೊಡನೆ ಜಗಳವಾಗುವುದು. ಪ್ರಯಾಣಕಾಲದಲ್ಲಿ ಅಕಸ್ಮಾತ್ ಅಪಘಾತಗಳಿಗೆ ಸಿಲುಕುವ ಪ್ರಸಂಗವಿದೆ, ಜಾಗ್ರತೆ. ತಾ. 11-15-16-17 ಈ ದಿನಗಳಲ್ಲಿ ವಿಶೇಷ ಜಾಗರೂಕರಾಗಿರಿ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES — — — — — MANGALORE.

HALT???



HAVE YOU RECEIVED ???.

Our new illustrated copy containing latest varieties of modern Swiss made Guaranteed Lever Watches?

ರೂ. ೩ರಿಂದ ರೂ. ೬೦ರ ತನಕ ಬೆಲೆಯುಳ್ಳವು.

ನಂ. 517 ಕ್ರೋಮಿಯಂ ಕೇಸ್ ರೂ. 6-8-0.

„ 518 ಬಂಗಾರದ ಕೇಸ್, ರೂ. 8-0-0.

„ 518A. ರೋಲ್ಡ್ ಗೋಲ್ಡ್ 10 ವರ್ಷಗಳದ್ದು ರೂ. 12-8-0.

ಟಪ್ಪಾಲು ಮತ್ತು ಪ್ಯಾಕಿಂಗ್ ಖರ್ಚು 0-9-0 ಪ್ರತ್ಯೇಕ. ಮಿಕ್ಕವಿವರಗಳಿಗಾಗಿ ನಮ್ಮ ಹೊಸ ಕೆಟಲಾಗಿಗೆ ಬರೆಯಿರಿ. ವಿ. ಸೂ. ಪತ್ರವ್ಯವಹಾರವು ಇಂಗ್ಲಿಷಿನಲ್ಲಿ.

BAPALAL & Co., (N. U.)

101, ABDUL RAHIMAN ST. BOMBAY, 3.

ನವಸೃಷ್ಟಿ

ಈ ವಿಭಾಗದಲ್ಲಿ ಪುಸ್ತಕಗಳ ವಿಮರ್ಶೆಯನ್ನು ಕೊಡಲಾಗುವುದು. ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗುವುದು.

ಸಂ. ಸ.

ದೇವದಾಸ—ದಿವಂಗತ ಶರಚ್ಚಂದ್ರ ಚಟರ್ಜಿಯವರ ಕಾದಂಬರಿ, ಪರಿವರ್ತಕರು: ಶ್ರೀ. ಗುರುನಾಥ ಜೋಶಿ; ಪ್ರಕಾಶಕರು:—ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಶ್ರೀ. ಮಂಗಳೂರು ಗೋವಿಂದರಾಯರು. ಬೆಲೆ:—ಸಾದಾ ಪ್ರತಿ ರೂ. ೧-೦-೦; ಕ್ಯಾಲಿಕೋ ರೂ. ೧-೮-೦.

ಜಗದ್ವಂದ್ಯ ವ್ಯಕ್ತಿಗಳಲ್ಲೊಬ್ಬನೂ, ಪ್ರಸಿದ್ಧ ಲೇಖಕರೂ ಆದ ಶ್ರೀ. ಶರಚ್ಚಂದ್ರರ ಉತ್ತಮ ಕಾದಂಬರಿಯೊಂದರ ಅನುವಾದವಿದು, ಪ್ರಕಾಶಕರೆನ್ನುವಂತೆ ಕಾದಂಬರಿಯೊಳಗಿನ ದೇವದಾಸ, ಪಾರ್ವತಿ, ಚಂದ್ರ, ಧರ್ಮದಾಸ ಈ ನಾಲ್ಕು ವ್ಯಕ್ತಿಗಳು ಯಾವಾಗಲೂ ನೆನಪಿನಲ್ಲುಳಿಯತಕ್ಕವುಗಳು. ದೇವದಾಸ-ಪಾರ್ವತಿಯರನ್ನಂತೂ ಮರೆಯುವುದೇ ಅಸಾಧ್ಯ. ಅವರ ದುಃಸ್ಥಿತಿಯನ್ನು ಕಂಡು ಯಾರೂ ಮರುಗದಿರರು. ನಿರಾಶಾಂತವಾದ ಈ ಕಾದಂಬರಿಯನ್ನೋದಿದವರು ವಿಷಾದಗೊಂಡು ಕಣ್ಣೀರು ಸುರಿಸದಿರಲಾರರು. ಪವಿತ್ರ ಪ್ರೇಮಕ್ಕಾಗಿ ಸಂಕಟಪಡುತ್ತಿರುವ ಪ್ರೇಮಿಗಳ ಪ್ರತಿರೂಪವೇ ಈ ಕಾದಂಬರಿಯೊಳಗಿನ ವ್ಯಕ್ತಿಗಳು. ಸ್ತ್ರೀ ಪುರುಷರ ಪ್ರೇಮದ ಕುರಿತು ಚಂದ್ರಮುಖಿಯು ಹೇಳುವ ಮಾತುಗಳಂತೂ ಥಟ್ಟನೆ ಮರೆಯುವಂಥವುಗಳಲ್ಲ. ಇವನ್ನು ಸ್ತ್ರೀ ಪುರುಷರೆಲ್ಲರೂ ಅವಶ್ಯವಾಗಿ ಓದಲೇಬೇಕು. ಪೌರ್ವಾತ್ಯ ಭಾಷೆಗಳಲ್ಲಿ ಉತ್ತಮ ಸಾಹಿತ್ಯವನ್ನೊಳಗೊಂಡ ಬಂಗಾಳಿಯ ಅನುವಾದವೆಂದ ಮೇಲೆ ಬೇರೆ ಹೊಗಳಿಕೆ ಬೇಕಾಗಿಲ್ಲ. ಇದು ಭಾಷಾಂತರವಾದರೂ ಒಂದು ಸ್ವತಂತ್ರ ಕಾದಂಬರಿಯಂತೆಯೇ ಇದೆ. ಆದರೆ ಅಷ್ಟು ಚೊಕ್ಕವಾಗಿ ಕನ್ನಡಕ್ಕೆ ಇಳಿಸಿಕೊಟ್ಟಿದ್ದಾರೆ ಶ್ರೀ. ಜೋಶಿಯವರು. ಕನ್ನಡಿಗರು ಈ ಉಪಕಾರವನ್ನು ಸ್ಮರಿಸಬೇಕು.

ಪ್ರಾರಂಭದಲ್ಲಿ 'ಶರಚ್ಚಂದ್ರರ ಜೀವನ ಮತ್ತು ಸಾಹಿತ್ಯ'ದ ಪರಿಚಯವನ್ನು ಶ್ರೀ. ಗೋವಿಂದ ಪೈಗಳವರು ಮಾಡಿಕೊಟ್ಟಿದ್ದಾರೆ. ಇದನ್ನು ಕನ್ನಡಿಗರು ಅತ್ಯಾವಶ್ಯಕವಾಗಿ ಓದಬೇಕು. ಇಂತಹ ಉತ್ತಮ ಗ್ರಂಥಗಳು ಕನ್ನಡದಲ್ಲಿ ಹೆಚ್ಚಿ ಕನ್ನಡ ಸಾಹಿತ್ಯವು ಬೆಳೆಯಲೆಂದು ಹಾರೈಸುವೆವು. ಅತ್ಯಲ್ಪ ಬೆಲೆಗೆ ಉತ್ತಮ ಗ್ರಂಥಗಳನ್ನೊದಗಿಸುತ್ತಿರುವ ಹುಬ್ಬಳ್ಳಿಯ ಸಾಹಿತ್ಯ ಭಂಡಾರದವರ ಸಾಹಿತ್ಯ ಪ್ರೇಮವು ಅವರ್ಣನೀಯವಿದೆ. ಪ್ರತಿಯೊಬ್ಬರೂ ದೇವದಾಸವನ್ನೋದಬೇಕೆಂದು ಸೂಚಿಸುವೆವು.

ಪಂಚಾರತಿ—ಐದು ಏಕಾಂಕ ನಾಟಕಗಳ ಸಂಗ್ರಹ. ಸಂಪಾದಕರು:—ಶ್ರೀ. ಕೆ. ಹೊನ್ನಯ್ಯ ಶೆಟ್ಟಿ, ಪ್ರಕಾಶಕರು:—ಕಟೀಲಿನ ಭಾರತೀ ಗ್ರಂಥಮಾಲೆ ಬೆಲೆ ೦-೪-೦.

ಒಂದು ವರ್ಷದ ಕೆಳಗೆ ಹೊರಟ ಭಾರತೀ ಗ್ರಂಥಮಾಲೆಯು ಈಗಾಗಲೇ ಕರ್ನಾಟಕದಲ್ಲಿ ಪ್ರಸಿದ್ಧವಾಗಿದೆ. ಗ್ರಂಥಮಾಲೆಯವರು ಈ ವರೆಗೆ ಐದು ಮಣಿಗಳನ್ನು ಹೊರಡಿಸಿದ್ದಾರೆ. ಇದು ೬ನೆ ಮಣಿ. ಇದರಲ್ಲಿ ಕರ್ನಾಟಕದ ಐದು ಹಸರಾದ ನಾಟಕಕಾರರ ೫ ಏಕಾಂಕ ನಾಟಕಗಳಿವೆ. ಪ್ರತಿಯೊಂದೂ ಒಂದೊಂದು ಸ್ವಭಾವಚಿತ್ರವನ್ನು ನಮ್ಮ ಕಣ್ಣ ಮುಂದಿರಿಸುತ್ತವೆ. ಸ್ತ್ರೀಯರ ಅಜ್ಞಾನದ ಮುಸುಕನ್ನು ತೆಗೆಯಬೇಕಾದರೆ ಶ್ರೀ. ಎನ್. ಕೆ. ಕುಲಕರ್ಣಿಯವರ 'ಮುಸುಕ'ನ್ನು ಓದಬೇಕು; ದೊಡ್ಡವರು ಮಾಡಿದ ತಪ್ಪಿಗೆ 'ಪ್ರಾಯಶ್ಚಿತ್ತ' ಬೇಕಾದರೆ ಶ್ರೀ. ಎಸ್. ವೆಂಕಟರಾಜರ 'ಪ್ರಾಯಶ್ಚಿತ್ತ'ವನ್ನು ಓದಬೇಕು. ನಾರಿಯ ಹೃದಯದಲ್ಲಿ ಪ್ರೇಮದ ಬಿಂದು ಸ್ರವಿಸದಿದ್ದರೆ ಅದು ಬೆಂಗಾಡು. ಸಂಗಡಲೇ ದಾಹವೂ ಸೇರಿದರೆ ಕೇರಳಪುತ್ರರಲ್ಲಿನ 'ಜ್ವಾಲಾಮುಖಿ' ಎಂದು ತಿಳಿಯಬೇಕಾದರೆ ಶ್ರೀ. ಬಿ. ಅಶ್ವತ್ಥನಾರಾಯಣರಾಯರ 'ಜ್ವಾಲಾಮುಖಿ'ಯನ್ನೋದಬೇಕು; ಸ್ತ್ರೀಯರ ಉದ್ಧಾರವು ಹೇಗಾದೀತು ಎಂಬುದರ ಅಭಿಮಾನಿಗಳಾದರೆ ಶ್ರೀ. ಆರ್. ವಿ. ಜಹಗೀರ್‌ದಾರರ 'ಸ್ವಾಮಿನಿಯ ಭಾಗ್ಯೋದಯ'ವನ್ನೋದಬೇಕು. ಹುಸಿ ಪ್ರೇಮದ ಸೇವನು 'ಚೋರಿ ಬಸ್ಯಗ' ಎಂಬ ದಸ್ಯುವಿನಂತೆ ಕಾಣಬೇಕಾದರೆ ಶ್ರೀ. ಕೊರಡ್ಕಲ್ಲರ 'ಓಂ ಚೋರಿ ಬಸ್ಯಗ ಮೂರು ನಾಮ' ಎಂಬುದನ್ನು ಓದಬೇಕು. ನಾಟಕಗಳೊಂದಿಗೆ ಪ್ರತಿ ನಾಟಕಕಾರರ ಪರಿಚಯ ಚಿತ್ರಗಳೂ ಕೊಡಲ್ಪಟ್ಟಿವೆ. ಅಂತೂ ಈ ಮಣಿಯು ಇದುವರೆಗಿನ ಮಣಿಗಳಿಗಿಂತ ಪ್ರತಿಯೊಂದು ವಿಷಯದಲ್ಲೂ ಉತ್ತಮವಾಗಿದ್ದು ಅತ್ಯಾಧುನಿಕವಾಗಿದೆ. ಪ್ರತಿಯೊಬ್ಬರೂ ಓದಿ ಆನಂದಿಸಬೇಕೆಂದು ಹಾರೈಸುವೆವು. ಇಂತಹ ಉತ್ತಮ ಪುಸ್ತಕಗಳನ್ನು ನಾಲ್ಕಾಣೆ ಬೆಲೆಗೆ ಒದಗಿಸಿಕೊಡುತ್ತಿರುವ ಭಾರತೀ ಗ್ರಂಥಮಾಲೆಯು ಸಂಚಾಲಕರಾದ ಶ್ರೀ. ಕೆ. ಬಿ. ಸೀತಾರಾಮ ಧೋರಬೇಳ್ಳಾಲರ ಕಾರ್ಯವು ಶ್ಲಾಘ್ಯವಾಗಿದೆ. ಕನ್ನಡಿಗರ ಪ್ರೋತ್ಸಾಹವು ಅಧಿಕವಾಗಿ ದೊರೆತು ಈ ಗ್ರಂಥಮಾಲೆಯು ಚಿರಕಾಲ ಸಾಹಿತ್ಯ ಸೇವೆ ಮಾಡುವಂತಾಗಲಿ!

ಕುಂಭರಾಶಿ—

ದೈವಾನುಗ್ರಹವಾಗುವ ಕಾಲಕ್ಕೆ "ಭೋಗವಿಲ್ಲದ ದಿನಕೆ ಆಗಿದ್ದ ಧನಪೋಕು ಭೋಗ ತನಗಿದ್ದ ದಿನಕೆದ್ದು ಹೋದ ಧನವಾಗಲೇ ಟಕ್ಕು" ಎಂಬಂತೆ ಕೈಬಿಟ್ಟು ಹೋದ ಧನವೂ ಕಳ್ಳರ ವಶವಾದ ಸೊತ್ತೂ ತಾವಾಗಿ ಬಂದು ನಿಮ್ಮನ್ನು ಸೇರುವವು. ಸಾಮಾಜಿಕ ಕಾರ್ಯಗಳಲ್ಲಿ ಮುಂದರಿಯುತಕ್ಕ ನಿಮಗೆ ಶತ್ರುಗಳೂ ಮಿತ್ರರಾಗಿ ಸಹಾಯಮಾಡುವರು. ಇತರ ಜನಬೆಂಬಲವೂ ಸಾಕಷ್ಟು ದೊರೆಯುವುದರಿಂದ ತತ್ಕಾರ್ಯದಲ್ಲಿ ನೀವು ವಿಜಯಿಗಳಾಗಲು ಸಂದೇಹವಿಲ್ಲ. ಉದ್ರೇಕಪೂರ್ವಕವಾಗಿ ನಿಮಗೆ ಕೆಡುಕುಮಾಡಿದರೂ ಅದು ಅನುಕೂಲವಾಗಿ ಶ್ರೇಯಸ್ಸಿಗೇ ಕಾರಣವಾದೀತು. ಸಂಸಾರದಲ್ಲೂ ಧನವಿಷಯದಲ್ಲೂ ನಿಶ್ಚಿಂತರಾಗಿರತಕ್ಕ ನಿಮಗೆ ಸ್ತ್ರೀಯರಿಂದ ಕೆಲವು ತಾಪತ್ರಯಗಳು ಒದ್ದೊಮ್ಮೆ ಕಾಣಿಸಿಕೊಳ್ಳುವವು. ತಾ. 13ರಿಂದ 16ರ ವರೆಗಿನ ದಿನಗಳನ್ನು ಸುಖದಿಂದ ಕಳೆವಿರಿ.

ಮೀನರಾಶಿ—

ಕಾಲಗತಿಯನ್ನತಿಕ್ರಮಿಸಲು ಕಾಲ (ಯಮ) ನಿಂದಲೂ ಶಕ್ಯವಲ್ಲವು. ಅಂತಿರಲು ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಭಂಗುರವಾದ ಜೀವಿತವುಳ್ಳ ನರರು ಅದನ್ನತಿಕ್ರಮಿಸುವರೇ! ನಿಷ್ಠುರ ಮಾತುಗಳಿಂದ ನಿಮಗೆ ಹೆಚ್ಚಿನ ಜನರಲ್ಲಿ ಕಲಹವು ಅನಿವಾರ್ಯವಾದೀತು. ಮನಸ್ಸಿಗೆ ಶಾಂತಿಯೆಂಬುದು ಸ್ವಪ್ನದಲ್ಲೂ ದುರ್ಲಭವೇ ಸರಿ. ಬಂಧುಮಿತ್ರರ ಸಹಕಾರದಿಂದ ಹಲವು ಕಾರ್ಯಗಳಲ್ಲಿ ವಿಜಯಿಗಳಾಗಿ ತಕ್ಕ ಪ್ರತಿಫಲವನ್ನು ಪಡೆದರೂ ನಿಮಗದು "ಸಾಗರಕ್ಕೆ ಹಿಂಗು ಕದಡಿದಂತೆ" ಯಾವ ಭಾಗಕ್ಕೂ ಸಾಕಾಗಲಾರದು. ಶತ್ರುಪೀಡೆ ಸಾಂಸಾರಿಕ ಚಿಂತೆಗಳಿಂದ ಪೀಡಿತರಾದ ನಿಮಗೆ ಭಯವೂ ದೈನ್ಯಭಾವವೂ ವೃದ್ಧಿಹೊಂದುವುದು. ತಾ. 11ರಿಂದ 14 ಮತ್ತು 17 ಈ ದಿನಗಳಲ್ಲಿ ಅನಾರೋಗ್ಯ ಆಪ್ತರಲ್ಲಿನ ಕಲಹ ವೈಮನಸ್ಯಕೋಶಗಳು ಪಟ್ಟಲಿವೆ.

ಸೌಭಾಗ್ಯಸಿದ್ಧಿ ತಾಯಿತ

ಬೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರಗಳಲ್ಲಿ ಮೇಲುಗೈ, ದುರದೃಷ್ಟಗಳ ದುಷ್ಟಪೀಡೆ ನಿವಾರಣೆ ಇನ್ನಿತರ ಸಕಲ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0

ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಸೀಲುಗಳ ಜೀನು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುತ್ತದೆ.

CROWN RUBBER STAMP CO.,
Balmat Road. MANGALORE.

Inclad by the Mysore Govt. Stores, Purchase Committee in the list of approved firms

ಆಯುರ್ವೇದ ಕೀರ್ತಿವಂತರ ರಕ್ಷ
55 ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗೋಳಿಯು

(ರಿಜಿಸ್ಟರ್ಡ)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧಿ ಮತ್ತು ಧಾತುವೃದ್ಧಿಯಾಗುತ್ತವೆ, ಸ್ವಪ್ನದಲ್ಲಿ, ಮಿತಿಮೀರಿ ಸ್ತ್ರೀ ಸಂಗ, ಕೆಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತ (ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತವೆ; ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ, ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ. ಎಷ್ಟೋ ಜನರು ಇದರ ಉಪಯೋಗದಿಂದ ವಾಸಿಯಾಗುತ್ತವೆನ್ನಲು ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದ್ದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವುದು. 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1 ಮಾತ್ರ.

ಆಫೀಸು ಸಮಯ:—ಬೆಳಗ್ಗೆ 8ರಿಂದ 12 ಗಂಟೆ. ಮಧ್ಯಾಹ್ನ 2ರಿಂದ 8.

Vaidya Shasthry Kalyanji Tagar *365, Kalabadevi Road* *(opp. Temple)* Hanuman Lane Corner, BOMBAY 2.	ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಾಗರ್ 365, ಕಾಲಬಾ ದೇವಿ ರೋಡ್, (ದೇವಾಲಯದ ಎದುರು.) ಹನುಮಾನ ಗಲ್ಲಿಯ ನಾಕೆ, ಮುಂಬಯಿ ನಂ. 2

NOTICE

In the Court of the District Munsiff of Udipi

O. S. No. ೩೨೨

Between—

1. Jerom Rebello
2. Charles Rebello
3. Stany J. Rebello
sons of J. S. B. Rebello } *Plaintiffs.*

and

The Kallianpur mount Ruzario Church-by its priest Rev. Fr. W. Gonsalves & 23 others } *Defendants*

The plaintiffs have filed the above suit as the heirs of the late Rev. Father Juvam Bavthis Rebello for a declaration that the unregistered will dated 13-5-1884 executed by the said Father Juvam Bavthis Rebello in so far as it bequeathes the plaint A schebule properties to the 1st defendant and the registered mulgeni lease—entered in to by the 1st defendant and 2nd defendant Dulcin Rebello Bai under a registered lease deed dated 24-11-31 in respect of the plaint A and B Schedule properties are void, inoperative etc. and not binding on the heirs of the said Father Juvam Bavthis Rebello and also for possession of the plaint properties.

The plaintiffs in the suit have been permitted by the court in its order passed in R. I. A. ೩೩೩ dated 2-8-39 to continue the suit in a representative capacity that is on behalf of the body of heirs of the late Father Juvam Bavthis Rebello The suit stands posted to 25 8 1939 for hearing. Any of the heirs of the said Rev. Father Juvam Bavthis Rebello who have not been already impleaded as defendants in the suit may appear before the said Court on 25-8 1939 at 10 A. M. and file their written statements if any. Failing which the suit will be heard in their absence.

Udipi S.K. 3-8-39 } Lakshminarayana Aithala
Vakil for plaintiffs

Degrees: Books: Medicines.

Free H. L. M. S. H. M. B. H. M. D. etc Free Homeo Ayur-Unani-Naturo degrees, by post also—Practioners also get soons Homeo Materiamedica, Rs. 5. Homeo Practice book Rs. 4. Insanity Cure Pills Rs. 10 Enclose 2 annas stamps.—

Principal, Indian Homeopathic Institute and Society (Govt Regd)
P. O. MAHUVA, (Kathiawar Dt. India)

ಲೈಬ್ರರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎನ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಅಳಿಯಸಂತಾನ ಮಸೂದೆ

ದಿವಾನ ಬಹದ್ದೂರ ಹೆಗ್ಡೇರ ಅಧ್ಯಕ್ಷತೆಯಲ್ಲಿ ಅಳಿಯ ಸಂತಾನ ಲೀಗಿನವರ ಸಭೆ.

೧೯೩೯ನೇ ಇಸವಿ ಜುಲಾಯಿ ತಾ. ೩೦ರಲ್ಲಿ ಮಂಗಳೂರು ನಗರ ಕೊಡಿಯಾಲಬೈಲಿನಲ್ಲಿರುವ ದಿವಾನ್ ಬಹದ್ದೂರ್ ಬಿ. ಮಹಾಬಲ ಹೆಗ್ಡೆಯವರ ವಾಸ್ತವ್ಯದ ಮನೆಯಲ್ಲಿ ನಡೆದ ಅಳಿಯಸಂತಾನ ಲೀಗಿನ ಒಂದು ಸಾಧಾರಣ ಮೀಟಿಂಗಿನ ಪ್ರೊಸೀಡಿಂಗ್ಸ್:—

೧. ಸಭಾಪತಿ ದಿವಾನ್ ಬಹದ್ದೂರು ಮಹಾಬಲ ಹೆಗ್ಡೇರು ಜಿಲ್ಲೆಯ ಕೆಲವು ಗೃಹಸ್ಥರಿಗೆ ಬರೆದ ಕಾಗದದ ನಕಲನ್ನು ಓದಿನೋಡಿ ಅದನ್ನು ಮಂಜೂರು ಮಾಡಲಾಯಿತು.

೨. ನಾವು ತಿಳಿದ ಮಟ್ಟಿಗೆ ಜಿಲ್ಲೆಯ ಎಲ್ಲಾ ಅಳಿಯಸಂತಾನದ ಕೂಟದವರು ಬಹುಪಕ್ಷವಾಗಿ ಮುಂದೆ ಬಂದಿರುವ ಅಳಿಯ ಸಂತಾನ ಬಿಲ್ಲಿನ ಮಸೂದೆಯನ್ನು ಆಕ್ಷೇಪಿಸುತ್ತಾರೆ. ಕಾರಣ ಈ ಬಿಲ್ಲು ಯಾವ ರೂಪದಲ್ಲಿಯಾದರೂ ಜಾರಿಗೆ ಬಂದಲ್ಲಿ ಪ್ರತಿ ಮನೆಯಲ್ಲಿ ವ್ಯಾಜ್ಯ ಉಂಟಾಗಿ ಸ್ವಲ್ಪ ಸಮಯದಲ್ಲಿಯೇ ತಲೆಪಾಲಾಗಿ ಅಂಥಾ ಪಾಲುಗಳು ಜೀವನಕ್ಕೆ ಏನೂ ಸಾಲದೆ ಆಸ್ತಿಗಳೆಲ್ಲಾ ಇತರ ಜಾತಿಯವರಿಗೆ ಯಾ ವ್ಯಾಪಾರಸ್ಥರಿಗೆ ಪರಾಧೀನವಾಗುವುದು. ಕೃಷಿಯನ್ನೇ ಹೊಂದಿರುವ ಅಳಿಯ ಸಂತಾನ ಜಾತಿಗಳೇ ಉದ್ಯೋಗವಿಲ್ಲದೆ ಅನಾಥರಾಗುವರು.

೩. ಮೇಲೆ ಹೇಳಿದ ಪ್ರಕಾರ ಪಾಲುಗಳಾದಲ್ಲಿಯೂ ಅಳಿಯಸಂತಾನ ಆಚರಿಸುವವರೆಲ್ಲರಿಗೆ ವಿದ್ಯೆಯಿಲ್ಲದೆ ಹೋಗುವದು. ಮತ್ತು ಹುಡುಗಿಯರಿಗೆ ಯೋಗ್ಯರಾದ ಗಂಡಂದಿರು ಸಿಕ್ಕಲಾರರು.

೪. ಅಳಿಯಕಟ್ಟು ಆಚರಿಸುವ ಲಕ್ಷಾಂತರ ಜನರು ಜಿಲ್ಲೆಯಲ್ಲಿ ಅನಾದಿಯಿಂದ ಹಳ್ಳಿವಾಸಿಗಳಾಗಿದ್ದು ಕೃಷಿವೃತ್ತಿಯನ್ನೇ ಹೊಂದಿರುವವರಾಗಿದ್ದು ಕೃಷಿಯಲ್ಲೇ ಜೀವನ ನಡೆಸುವವರಾಗಿದ್ದು ಬೇರೆ ವೃತ್ತಿ ತಿಳಿಯದ ಈ ಕೂಟದವರು ಈ ಬಿಲ್ಲಿನಲ್ಲಿ ಹೇಳಿದ ಮೇರೆಗೆ ಬಿಲ್ಲು ಜಾರಿಗೆ ಬಂದಲ್ಲಿ ಇವರ ಗತಿ ದರಿದ್ರಾವಸ್ಥೆಯೇ.

೫. ಮೇಲಿನ ವಿಚಾರಗಳು ಹೇಗಿದ್ದರೂ ಊರಲ್ಲಿ ದುಃಸ್ಥಿತಿ ಬಂದು ದವಸಗಳಿಗೆ ಬೆಲೆ ಇಲ್ಲದೆ ಹಣದ ಅಡಚಣೆಯಲ್ಲಿದ್ದಾರೆ. ಈ ಬಿಲ್ಲಿನಿಂದ ಉಂಟಾಗುವ ವ್ಯಾಜ್ಯದ ಕಷ್ಟನಷ್ಟಗಳನ್ನು ಅನುಭವಿಸುವರೆ ಜನರು ತಯಾರಿಲ್ಲ. ಎಷ್ಟೋ ಶತಮಾನಗಳಿಂದ ನಡೆದು ಬಂದ ಕ್ರಮವನ್ನು ಈ ದುಸ್ಸಮಯದಲ್ಲಿ ತಪ್ಪಿಸಲು ಮಾಡುವ ಯೋಚನೆಯನ್ನು ಬಿಟ್ಟುಬಿಡಬೇಕು. ಅನೇಕ ಮನೆಗಳಲ್ಲಿ ಕರಾರು ಪಾಲುಪಟ್ಟಿ ವಗೈರೆ ಮಾಡಿಕೊಂಡು ಒಳ್ಳೇ ರೀತಿಯಲ್ಲಿರುತ್ತಾರೆ.

ಈ ಮೇಲಿನ ನಿರ್ಣಯಗಳಿಗೆ ಜನರ ಸಮ್ಮತಿ ಪಡೆದರೆ ಪ್ರತಿ ತಾಲೂಕಿನಲ್ಲಿ ಸಭೆ ಕೂಡಿಸಿ ನಿರ್ಣಯಗಳನ್ನು ಮಾಡಿ ತಾಲೂಕಿನಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಮಂಗಳೂರಲ್ಲಿ ಸಭೆ ಕೂಡಿ ವಿಷಯಗಳ ನಿರ್ಣಯ ಮಾಡಬೇಕಾಗಿ ನಮ್ಮ ಸೂಚನೆ.

೬. ಕೆಲಸಗಳು ಮುಂದರಿಸುವ ಉದ್ದಿಷ್ಟ ಹಣದ ಅಗತ್ಯವಿರುವುದರಿಂದ ಪ್ರತಿ ತಾಲೂಕಿನಲ್ಲಿ ಫಂಡು ಮಾಡಿ ಹಣ ಕೂಡಿಸಿ ಕ್ರಮವಾದ ಲೆಕ್ಕವಿಟ್ಟು ದೊಡ್ಡ ಸಭೆಗೆ ಕಳುಹಿಸಬೇಕು.

೭. ೫ನೇ ನಿರ್ಣಯದಲ್ಲಿ ಸೂಚಿಸಿದ ಇಡೀ ಜಿಲ್ಲೆಯ ಸಭೆಯು ಆದಷ್ಟು ತ್ವರೆಯಲ್ಲಿ ಕೂಡಿಸುವುದು ಅಗತ್ಯ.

ಈ ದಿನ ಕೂಡಿದ ಮೆಂಬರರ ಹೆಸರು.

೧. ಜಲಿತಪ್ಪಾಡಿ ನಾರಾಯಣ ನಾಯಕರು, ಮಂಗಳೂರು, ೨. ಪೆಂಗ್ರಾಲ ಸಾಂತಪ್ಪ ಹೆಗ್ಗಡೆಗಳು, ಪುತ್ತೂರು, ೩. ಇರ್ನಾಡಿ ವಿಟ್ಠಲ ಶೆಟ್ಟಿ, ಉಡುಪಿ. ೪. ಬಡ್ಡಗುತ್ತು ಶ್ಯಾಂಪ ರೈ, ಮಂಗಳೂರು, ೫. ಬಡ್ಡ ನಾರಾಯಣ ನಾಯಕರು, ಮಂಗಳೂರು, ೬. ಬಡ್ಡ ಲಕ್ಷ್ಮಪ್ಪ ನಾಯಕರು, ಮಂಗಳೂರು, ೭. ಕುಂಯಗುತ್ತು ರಾಮಣ್ಣ ರೈ, ಪುತ್ತೂರು, ೮. ಅರಿಯಡ್ಕ ಚತ್ತಪ್ಪ ರೈ, ಪುತ್ತೂರು. ೯. ವಕೀಲ್ ಸಿ... ಹೆಗ್ಡೆ, ಉಡುಪಿ. ೧೦. ಮೂಗಜಳಿ ಕೃಷ್ಣ ಮೇಲಾಂಟರು, ಮಂಗಳೂರು. ೧೧. ವಕೀಲ್ ಬಿ. ಮಂಜಯ್ಯ ಹೆಗ್ಡೆ, ಮಂಗಳೂರು, ೧೨. ದಿವಾನ್ ಬಹದ್ದೂರ್ ಮಹಾಬಲ ಹೆಗ್ಡೇರು, ಮಂಗಳೂರು. ೧೩. ಮರ್ಕಜಗುತ್ತು ರಾಮಣ್ಣ ಶೆಟ್ಟಿ, ಕಾರ್ಕಳ, ೧೪. ಮರ್ಕಜಗುತ್ತು ರಾಘವ ಹೆಗ್ಡೆ, ಕಾರ್ಕಳ, ೧೫. ವಕೀಲ್ ಮಹಾಬಲ ರೈಗಳು, ಪುತ್ತೂರು. ೧೬. ಬಡ್ಡ ತಿಮ್ಮಪ್ಪ ರೈಗಳು, ಮಂಗಳೂರು. ೧೭. ಬಡ್ಡ ಸಂಜೀವ ರೈಗಳು, ಮಂಗಳೂರು. ೧೮. ತಿಮ್ಮಂಗೂರು ಲಿಂಗ ಭಂಡಾರಿಗಳು, ಕಾಸರಗೋಡು. ೧೯. ಮೇಲ್ಮ ಕೊರಗಪ್ಪ, ಮಂಗಳೂರು.

○

ಅಳಿಯ ಸಂತಾನ ಲೀಗಿನವರ ಹೇಳಿಕೆಗೆ ಉತ್ತರ.

ನ್ಯಾಯವಾದ ಮತ್ತು ಯಥಾರ್ಥವಾದ ಅಭಿಪ್ರಾಯ ಭೇದ ಮತ್ತು ವಿರೋಧವು ಯಾವಾಗಲೂ ಸ್ವಾಗತಾರ್ಹವು. ಆದರಿಂದ ಹೆಚ್ಚಿನ ಜನಜಾಗೃತಿಗೆ ಆಸ್ಪದವಾಗಿ ಸುಧಾರಣಾ ಕಮಿಟಿಯವರ ಉದ್ದೇಶಕ್ಕೆ ಒಂದು ರೀತಿಯ ಸಹಾಯ ಮಾಡಿದಂತಾಗುವುದು. ಯಾಕೆಂದರೆ ಹೆಚ್ಚಿನ ಜನಮತಕ್ಕೆ ವಿರೋಧವಾಗಿ ಬಹುಪಕ್ಷೀಯರಿಗೆ ಬೇಡವಾದ ಮತ್ತು ಹಾನಿಕರವಾದ ಮಸೂದೆಯನ್ನು ಅಳಿಯಕಟ್ಟಿನವರ ಮೇಲೆ ಹೊರಿಸಬೇಕೆಂಬ ಉದ್ದೇಶವು ಸುಧಾರಣಾ ಕಮಿಟಿಯವರಿಗಿರುವುದಿಲ್ಲ.

ಯಾವುದಾದರೊಂದು ರೀತಿಯ ಸುಧಾರಣೆಯು ಅತ್ಯಾವಶ್ಯಕವಾಗಿ ಬೇಕು. ಈಗಣ ಅತ್ಯಂತ ಶೋಚನೀಯ ಪರಿಸ್ಥಿತಿಯೊಮ್ಮೆ ನಿವಾರಿತವಾಗಬೇಕು. ಶೀಘ್ರವಾಗಿ ಸುಧಾರಣಾ ಮಸೂದೆಯೊಂದು ರಚಿಸಲ್ಪಡಬೇಕೆಂಬ ಕೂಗು ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಕೇಳಿ ಬಂದ ಪರಿಣಾಮವಾಗಿಯೇ ಅಳಿಯಸಂತಾನ ಸುಧಾರಣಾ ಪರಿಷತ್ತು ಜನ್ಮವೆತ್ತಿರುವುದು. ಸುಧಾರಣಾ ಕಮಿಟಿಯವರು ತಯಾರಿಸಿದ ಮಸೂದೆಗೆ ಈಗ ಸರ್ವಸಾಮಾನ್ಯವಾಗಿ ಜಿಲ್ಲೆಯಲ್ಲೆಲ್ಲಾ ಬೆಂಬಲ ದೊರೆತಿರುತ್ತದೆ.

ಸುಧಾರಣೆಯು ಅವಶ್ಯವೆಂಬ ಅಭಿಪ್ರಾಯವು ಎಲ್ಲೆಲ್ಲಿಯೂ ತೋರಿಬಂದ ಮೇಲೆ ಎಲ್ಲಾ ಸಮಾಜಗಳ ಪ್ರತಿನಿಧಿಗಳನ್ನು ಸೇರಿಸಿ ಪರಿಷತ್ತನ್ನು ಜರಗಿಸಿದುದಾಗಿದೆ. ಸುಧಾರಣೆಯು ಅವಶ್ಯವೆಂದು ಸರ್ವಸಮ್ಮತವಾದ ಅಭಿಪ್ರಾಯವು ಈ ಪರಿಷತ್ತಿನಲ್ಲುಂಟಾದುದರಿಂದ ಪ್ರತಿ ತಾಲೂಕಿನ ಪ್ರತಿಯೊಂದು ಸಮಾಜದ ಹಳ್ಳಿ ಪಟ್ಟಣದ, ಕಿರಿ ಮೆಂಬರು ಮತ್ತು ಯಜಮಾನರ ಪ್ರತಿನಿಧಿಗಳನ್ನೊಳಗೊಂಡು 27 ಮಂದಿ ಕಮಿಟಿ ಮೆಂಬರರಿಗೆ ಮಸೂದೆಯನ್ನು ತಯಾರಿಸುವ ಅಧಿಕಾರ ಕೊಡಲಾಯಿತು. ಈ ಕಮಿಟಿಯವರು ಮೂರು ಸಲ ಸಭೆ ಸೇರಿ, ಇಂದಿನ ಅನುಭವದ ದೃಷ್ಟಿಯಿಂದ ಹಿಂದಿನ ಮಸೂದೆಗಳನ್ನೆಲ್ಲಾ ಪರಿಶೀಲಿಸಿ ಬೇಕಾದ ತಿದ್ದುಪಡಿಗಳನ್ನು ಮಾಡಿ ಹೊಸ ಮಸೂದೆಯನ್ನು ತಯಾರಿಸಿರುವರು. ಈ ಮಸೂದೆಯ 10 ಸಾವಿರ ಪ್ರತಿಗಳು ಪತ್ರಿಕೆಗಳಲ್ಲಿಯೂ ಇಡೀ ಜಿಲ್ಲೆಯಲ್ಲಿಯೂ ಪ್ರಕಟಿಸಲ್ಪಟ್ಟಿವೆ. ಇನ್ನು ಮುಂದೆ ಪ್ರತಿ ತಾಲೂಕು ಕೇಂದ್ರದಲ್ಲಿಯೂ ಇತರ ಪ್ರಾಮುಖ್ಯ ಸ್ಥಳಗಳಲ್ಲಿಯೂ ಸಭೆ ಸೇರಿಸಿ ಅಭಿಪ್ರಾಯ ಸಂಗ್ರಹಿಸಿ, ಪ್ರತಿನಿಧಿಗಳನ್ನು ಆರಿಸಿ ಬರುವ ಸಪ್ಟೆಂಬರ ತಿಂಗಳ ತಾ. 17ರಲ್ಲಿ ಇನ್ನೊಂದು ಪರಿಷತ್ತನ್ನು ಕರೆಯಲಾಗುವುದು. ಅನಂತರ ಮಸೂದೆಯಲ್ಲಿ ಬೇಕಾದ ತಿದ್ದುಪಡಿಗಳನ್ನು ಮಾಡಿ ಮದ್ರಾಸ್ ಎಸೆಂಬ್ಲಿಯ ಮುಂದೆ ತರುವ ಏರ್ಪಾಡು ಮಾಡಲಾಗುವುದು.

ಹೊಸ ಮಸೂದೆಯ ಪ್ರಕಾರ ಆಸ್ತಿಯನ್ನು ಯಾರಿಗೂ ಪರಾಧೀನ ಮಾಡಲು ಸಾಧ್ಯವೇ ಇಲ್ಲ. ಮತ್ತು ಮಂಡೆಪಾಲಿನ ಏರ್ಪಾಡೇ ಅದರಲ್ಲಿರುವುದಿಲ್ಲ. ಅಂದಮೇಲೆ ಅಳಿಯಸಂತಾನ ಲೀಗಿನವರು ಪ್ರಕಟಿಸಿರುವಂತೆ ಆಸ್ತಿಗಳೆಲ್ಲಾ ತಲೆಪಾಲಾಗಿ ಮಾರಿಹೋಗಲು ಸಾಧ್ಯವೇ ಇಲ್ಲ. ಈಗ ಅಳಿಯಕಟ್ಟಿನ ಹೆಚ್ಚಿನ ದೊಡ್ಡ ದೊಡ್ಡ ಮನೆಗಳು ಅಂತಃಕಲಹ ಮತ್ತು ವ್ಯಾಜ್ಯಗಳಿಂದ ತುಂಬಿರುತ್ತವೆಂಬುದನ್ನು ನಿಸ್ಸಂದೇಹವಾಗಿ ಸಿದ್ಧಗೊಳಿಸಬಹುದು. ಕಾಲಡಿಯ ಕೆಂಬಳ ಕಾಯಿಯ ಕುರಿತು ಯಾರಾದರೂ ಕಣ್ಮುಚ್ಚಿಕೊಂಡಿರುವುದು ವಿವೇಕತನವಲ್ಲ. ಇಂತಹ ಕೇಸು, ಕಜ್ಜಾಟ, ಖರ್ಚು, ಕ್ರಿಮಿನಲು ಮತ್ತು ಸಿವಿಲ್‌ಗಳನ್ನು ನಿವಾರಿಸಿ ಅಳಿಯಸಂತಾನಿಗನು ತನ್ನ ಹಕ್ಕುಬಾಧ್ಯತೆಯೇನು, ಸಮಷ್ಟಿ ಹಕ್ಕಿನ ಆಸ್ತಿಯಲ್ಲಿ ತನ್ನೊಬ್ಬನ ಪಾಲೆಷ್ಟು, ಅದನ್ನು ನ್ಯಾಯವಾಗಿ ಪಡಕೊಳ್ಳುವ ವಿಧಾನ ಹೇಗೆಂಬುದನ್ನು ನಿಶ್ಚಯವಾಗಿ ಮತ್ತು ನಿಸ್ಸಂದೇಹವಾಗಿ ತಿಳಿದು ತನ್ನ ಜವಾಬ್ದಾರಿಯ ಸ್ಮರಣೆಯಿಂದ ಉದ್ಯೋಗಶೀಲನಾಗಿ ಜೀವಿಸುವುದೇ ಸುಧಾರಣಾ ಕಮಿಟಿಯವರ ಮತ್ತು ಅವರೀಗ ತಯಾರಿಸಿರುವ ಮಸೂದೆಯ ಉದ್ದೇಶವಾಗಿದೆ.

ಈಗ ಅಳಿಯಕಟ್ಟಿನವರು ವಿದ್ಯೆ ಬುದ್ಧಿ ಮತ್ತು ಉದ್ಯೋಗದಲ್ಲಿ ಹೆಚ್ಚು ಮುಂದುವರಿದಿರುವುದೋ ಮಕ್ಕಳ ಕಟ್ಟಿನವರೋ ಎಂದು ನಾವು ವಿಚಾರಿಸಬೇಕು. ಇದು ಹೊರತು ಈಗ ಅಳಿಯ ಸಂತಾನಿಗರಲ್ಲಿ ವಿದ್ಯೆ ಬುದ್ಧಿ ಪಡೆದು ಉದ್ಯೋಗಶೀಲರಾದ ಜನಸಂಖ್ಯೆಯನ್ನೇ ನೋಡಿದರೆ ಅವರು ಬಹು ಜನ ದೊಡ್ಡ ಮನೆತನದವರಾಗಿರದೆ ತಮ್ಮ ಆಸ್ತಿಗಳನ್ನು ಪಾಲು ಮಾಡಿಕೊಂಡಿರುವ ಮಧ್ಯ ಮತ್ತು ಬಡತರಗತಿಯವರಾಗಿರುತ್ತಾರೆ. ಹುಡುಗಿಯರಿಗೆ ಗಂಡಂದಿರು ಸಿಗದೆ ಮುಖ್ಯವಾಗಿ ಹಲವು ವರ್ಷ ಉಳಿಯುವುದು ಕೂಡಾ ಹೆಚ್ಚಾಗಿ ದೊಡ್ಡ ದೊಡ್ಡ ಮನೆತನಗಳಲ್ಲಲ್ಲದೆ ಪಾಲಾಗಿರುವ ಮಧ್ಯ ಅಥವಾ ಬಡ ತರಗತಿಯ ಮನೆಗಳಲ್ಲಲ್ಲ. ಲೀಗಿನವರನ್ನುವ ಯೋಗ್ಯ ಗಂಡಂದಿರೆಂಬುದನ್ನು ಯಾವ ಪ್ರಮಾಣದಿಂದ ಅಳೆದು ನೋಡುವರೋ ತಿಳಿಯದು. ಈಗ ಎಷ್ಟೋ ದೊಡ್ಡ ದೊಡ್ಡ ಮನೆತನಗಳ ಹುಡುಗಿಯರು ಯಾರನ್ನು ಮದುವೆಯಾಗುತ್ತಿದ್ದಾರೆ ಮತ್ತು ಮನೆತನ ಎಂಬುದು ಎಲ್ಲಿದೆ ಎಂಬುದನ್ನು ಕೂಡಾ ಆಲೋಚಿಸಿಕೊಳ್ಳುವುದು ಲೇಸು.

ಸುಧಾರಣಾ ಕಮಿಟಿಯವರು ತಯಾರಿಸಿರುವ ಮಸೂದೆಯ ಮೇರೆಗೆ ದೊಡ್ಡ ದೊಡ್ಡ ಮನೆತನಗಳು ಪಾಲಾದರೆ, ಈಗ ಬೇಸಾಯ ಮಾಡಲು ಮನಸ್ಸಿಲ್ಲದೆ ಮತ್ತು ಅಸ್ಪದ ಕೂಡಾ ಇಲ್ಲದೆ ನಿರುದ್ಯೋಗಿಗಳಾಗಿ ಕಾಲ ಕಳೆಯುವ ಎಷ್ಟೋ ಮಂದಿ ಕಿರಿ ಮೆಂಬರರು, ತಮ್ಮ ತಮ್ಮ ಪಾಲಿನ ಆಸ್ತಿಗಳನ್ನು ಸರಿಯಾಗಿ ಕೃಷಿಮಾಡಿ ಈಗ ಪಾಳು ಬಿದ್ದಿರುವ ಕುಮ್ಕಿ, ದರ್ಖಾಸ್ತು ಮತ್ತು ಬಂಜರು ಸ್ಥಳಗಳನ್ನು ಸಾಗು ಮಾಡಿ ತಮ್ಮ ಜಮೀನನ್ನು ಅಭಿವೃದ್ಧಿಗೊಳಿಸಲು ಅಸ್ಪದವಾಗುವುದು. ಇದರಿಂದ ಈ ಅಳಿಯಸಂತಾನಿಗರ ಉದ್ಯೋಗವಾದ ಕೃಷಿಗೆ ಪ್ರೋತ್ಸಾಹವೇ ದೊರೆಯುವಂತಾಗುವುದು ಹೊರತು ಲೀಗಿನವರನ್ನುವಂತೆ ಅವರು ಕೆಲಸವಿಲ್ಲದೆ ನಿರುದ್ಯೋಗಿಗಳಾಗುವುದಾದರೂ ಹೇಗೆ?

ಕರಾರು, ಪಾಲುಪಟ್ಟಿ ಮಾಡಿಕೊಂಡು ಅನೇಕ ಮನೆಗಳು ಒಳ್ಳೇ ರೀತಿಯಲ್ಲಿರುತ್ತವೆಂದು ಲೀಗಿನವರ ಹೇಳಿಕೆ. ಹಾಗಾದರೆ ಕರಾರು ಪಾಲುಪಟ್ಟಿಗಳು ಅವಶ್ಯವೆಂದು ಅವರೇ ಒಪ್ಪಿಕೊಂಡ ಹಾಗಾಯಿತು. ಆದರೆ ಹೆಚ್ಚಿನ ಈ ಕರಾರು ಪಾಲುಪಟ್ಟಿನ ತತ್ವವೇ ಅವಕಾಶವಾಗಿರುವ ನಿಶ್ಚಿತವಾದ ಕಾನೂನು ಮಾಡಲೆತ್ನಿಸಿದರೆ ಮಾತ್ರ ಅದೇಕೋ ಲೀಗಿನವರಿಗೆ ಬೇಸರವೆನಿಸುತ್ತದೆ. ದವಸಧಾನ್ಯಗಳಿಗೆ ಬೆಲೆ ಬಿದ್ದುಹೋಗಿ ಜನತೆಯು ಸಾಂಪತ್ತಿಕ ದುಃಸ್ಥಿತಿಗೆ ಸಿಕ್ಕಿ ಜೀವನದ ಹೋರಾಟವು ತೀವ್ರ ಸ್ವರೂಪ ತಾಳಿರುವುದರಿಂದಲೇ ಪ್ರತಿಯೊಬ್ಬನು ತನ್ನ ತನ್ನ ಪಾಲನ್ನು ಪಡೆದು ಉದ್ಯೋಗಶೀಲನಾಗಿ ದುಡಿದು ಬಾಳುವಂತೆ ಹೊಸತಾದ ಏರ್ಪಾಡು ಅವಶ್ಯವಾಗಿದೆ. ಹೆಚ್ಚಾಗಿ ಪ್ರತಿಯೊಂದು ದೊಡ್ಡ ದೊಡ್ಡ ಮನೆತನಗಳೂ ಈಗ ನಿಕೃಷ್ಟಾವಸ್ಥೆಗಿಳಿದು ನಾಮಾವಶೇಷವಾಗುತ್ತಿರುವುದರಿಂದ ಬಹಳ ದುರವಸ್ಥೆಗೀಡಾಗಿರುವ ಕುಟುಂಬಿಕರನ್ನು ಸುಖಜೀವನದ ಹಾದಿ ಹಿಡಿಸುವುದಕ್ಕೋಸ್ಕರ ಸುಧಾರಣಾ ಮಸೂದೆಯು ಅತ್ಯಗತ್ಯವಾಗಿದೆ. ರೋಗವು ತೀವ್ರವಾಗಿರುವಾಗಲೇ ಔಷಧಿಯು ತೀವ್ರವಾದ ಜರೂರು ಬರುವುದು ಮತ್ತು ಕೂಡಲೆ ಆ ವ್ಯವಸ್ಥೆ ಮಾಡಬೇಕಾಗುವುದು. ಆ ಸಂದರ್ಭದಲ್ಲಿ ಸ್ವಲ್ಪ ಗುಣವಾದ ಮೇಲೆ ಔಷಧಿ ಮಾಡಬಹುದೆಂದು ಕಾದುಕೊಂಡಿರಲು ಸಾಧ್ಯವಿದೆಯೇ?

ಅಳಿಯಕಟ್ಟಿನ ಸಮಾಜಗಳವರಲ್ಲಿ ವಿನಂತಿ.

ಸರ್ವರ ಹಿತವನ್ನೂ ಸಾಧಿಸಿ ಸರ್ವರನ್ನೂ ಸಮಾಧಾನ ಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ಅತಿ ಹೆಚ್ಚಿನ ಜನಸಂಖ್ಯೆಯ ಅತಿಹೆಚ್ಚಾದ ಹಿತದೃಷ್ಟಿಯಿಂದ ಯಾವುದನ್ನಾದರೂ ಪರೀಕ್ಷಿಸತಕ್ಕದ್ದು. ವೈಯಕ್ತಿಕ ಹಾನಿ ಯಾ ಲಾಭದ ದೃಷ್ಟಿಯಿಂದ ಯಾವ ಸುಧಾರಣೆಯನ್ನಾದರೂ ಅಳೆದು ಅದನ್ನು ವಿರೋಧಿಸುವುದು ಯಾ ಅದಕ್ಕೆ ಬೆಂಬಲವೀಯುವುದು ಕೇವಲ ಸಂಕುಚಿತತನವಾಯಿತು. ಹೆಚ್ಚಿನ ಅಳಿಯಕಟ್ಟಿನವರ ಹಿತಸಾಧನೆಯ ದೃಷ್ಟಿಯಿಂದ ಸುಧಾರಣಾ ಕಮಿಟಿಯವರು ಈ ಮಸೂದೆಯನ್ನು ತಯಾರಿಸಿ ಜನತೆಯ ಮುಂದಿಟ್ಟಿರುವರು. ಅದು ಜನತೆಗೆ ಅಹಿತವೆಂದು ತೋರಿದರೆ ಸುಧಾರಣಾ ಕಮಿಟಿಯವರು ನಡೆಸುವ ಸಭೆ ಮತ್ತು ಪರಿಷತ್ತುಗಳಲ್ಲಿ ಜನರದನ್ನು ವ್ಯಕ್ತಗೊಳಿಸಲು ಯಾವ ಆಕ್ಷೇಪವೂ ಇರಲಾರದು.

ಈ ಸಲ ಮಸೂದೆಯು ನಿರಾತಂಕವಾಗಿ ಮಂಜೂರಾಗುತ್ತದೆ ಯಾರೂ ಆಕ್ಷೇಪಿಸಲಾರರೆಂದು ಜನರು ಸುಮ್ಮನಿದ್ದರೆ ಪ್ರಯೋಜನವಿಲ್ಲ. ನಾವು ನಮ್ಮ ಪಾಲಿನ ಕರ್ತವ್ಯವನ್ನು ಮಾಡಿರುವೆವು. ಇನ್ನೂ ಸಾಧ್ಯವಾದ ಪ್ರಯತ್ನ ಮಾಡಿ ಮಸೂದೆಯು ಬೇಗನೆ ಕಾನೂನಾಗಿ ಬರುವಂತೆ ನೋಡುವೆವು. ಆದರೆ ಜನತೆಯು ತಮ್ಮ ಪಾಲಿನ ಕರ್ತವ್ಯವನ್ನು ಮಾಡದಿದ್ದರೆ ನಾವು ಎಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗಲಾರದು. ಪ್ರತಿ ತಾಲೂಕು ಕೇಂದ್ರಗಳಲ್ಲಿಯೂ ಶ್ರೀ. ಎನ್. ಎಸ್. ಶೆಟ್ಟಿಯವರು ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಿ ಪ್ರತಿನಿಧಿಗಳನ್ನು ಆರಿಸಲಿರುವರು. ಅವರಿಗೆ ಉತ್ಸಾಹದಿಂದ ಜನರು ಬೆಂಬಲವೀಯಬೇಕೆಂದು ವಿನಂತಿ. ಇದು ಹೊರತು ಜನರೇ ತಾವಾಗಿ ಅಲ್ಲಲ್ಲಿ ಆದಷ್ಟು ಹೆಚ್ಚಿನ ಸಭೆಗಳನ್ನು ನಡೆಸಿ ಸುಧಾರಣಾ ಕಮಿಟಿಯವರಿಗೆ ಬೆಂಬಲವಿತ್ತು ಮಸೂದೆಯ ಕುರಿತು ತಮ್ಮ ಅಭಿಪ್ರಾಯವನ್ನು ಕಳುಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಅಳಿಯಕಟ್ಟಿನ ಬೇರೆ ಬೇರೆ ಸಮಾಜಗಳ ಸಂಘಗಳವರು ಮಸೂದೆಯ ಕುರಿತು ಅಭಿಪ್ರಾಯವನ್ನು ಕೊಡಬೇಕಾಗಿ ಬೇಡಿಕೊಳ್ಳುತ್ತೇನೆ. ಕಮಿಟಿಯವರು ಸ್ವತಃ ಬಂದು ಸಭೆಗಳಲ್ಲಿ ಭಾಷಣ ಕೊಡಬೇಕಾದಲ್ಲಿ ಕಾರ್ಯದರ್ಶಿಯವರಿಗೆ ತಿಳಿಸಬಹುದು. ಮಸೂದೆಯ ಮುಂದಿನ ಕೆಲಸಕ್ಕೆ ಹಣವು ಬೇಕಾಗಿರುವುದರಿಂದ ಹಣ ಸಹಾಯ ಮಾಡುವವರು ಶ್ರೀ. ಪಿ. ಎಂ. ಹೆಗ್ಡೆ ಆಡಿಟರ್, ಮಂಗಳೂರು ಈ ವಿಳಾಸಕ್ಕೆ ಕಳಿಸಬಹುದು.

ಇತಿ,
ಕೆ. ಕೆ. ಶೆಟ್ಟಿ,
ಕಾರ್ಯದರ್ಶಿ.
ಅಳಿಯಸಂತಾನ ಸುಧಾರಣಾ ಕಮಿಟಿ, ನವಯುಗ ಆಫೀಸು, ಉಡುಪಿ.

ಶ್ರೀರಾಮಾ ರೆಸ್ಟೋರೆಂಟ್
ಬೋರ್ಡಿಂಗ್ ಮತ್ತು ಲೋಜಿಂಗ್
ಕಾಶೀಮಠದ ಕಟ್ಟೋಣ, ಉಡುಪಿ
ಬ್ರಾಂಚ್:—ಹೂವಮಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.


ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲುಗಟ್ಲೆ ಬರುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ.

ಪ್ರೇಮ ವಿದ್ಯಾಪೀಠ ತುಂಗಭದ್ರ

ಮೆಡಿಕಲ್ ಕೋಲೇಜ್‌ನ ಆರಂಭೋತ್ಸವ ಮತ್ತು ಲೋಕಮಾನ್ಯ ತಿಲಕರ ಜಯಂತ್ಯುತ್ಸವ.

ಜಯಂತ್ಯುತ್ಸವ — ಕಾರ್ಯಕ್ರಮವು ಆಗಸ್ಟ್ ಒಂದರಲ್ಲಿ ಒಳ್ಳೇ ಹುರುಪಿನಿಂದ ಜರಗಿತು. ಆರಂಭದಲ್ಲಿ ವಿದ್ಯಾಪೀಠದ ಅಧ್ಯಾಪಕರಲ್ಲಿ ಓರ್ವರಾದ ಆಯುರ್ವೇದ ಚೂಡಾಮಣಿ ಸ್ವಾಮಿರಾಜಾಚಾರ್ಯರು ಹೊಸ ವಿದ್ಯಾರ್ಥಿಗಳಿಗೆ ಸ್ವಾಗತವೀಯುತ್ತ ಲೋಕಮಾನ್ಯರ ಪುಣ್ಯತಿಥಿಯು ನಮ್ಮ ಕೋಲೇಜ್ ಆರಂಭವೂ ಇಂದೇ ಕೂಡಿ ಬಂದಿರುವುದೇ ನಮ್ಮೆಲ್ಲರ ಹುರುಪಿನ ಕಾರಣವೆಂದೂ, ಇಂಥಾ ಶಿಕ್ಷಣ ಸಂಸ್ಥೆಗಳ ವಿಷಯ ಲೋಕಮಾನ್ಯರಲ್ಲಿ ಎಷ್ಟು ಸಹಾನುಭೂತಿ ಇತ್ತೆಂಬುದನ್ನೂ ಹೇಳಿ ಅನಂತರ ಈ ತರ್ಹದ ಶಿಕ್ಷಣ, ಪಂಡಿತ ತಾರಾನಾಥರ ವ್ಯಕ್ತಿತ್ವ, ವಿದ್ಯಾಪೀಠದ ವೈಶಿಷ್ಟ್ಯಗಳನ್ನು ವಿವರಿಸಿ, ಆಯುರ್ವೇದವನ್ನು ಹೇಳುವಾಗ, "ಆಯುರ್ವೈದ್ಯರ ಪ್ರಸಾರದಿಂದ (1) ಪರದೇಶದ ಔಷಧಿಗಳಿಗಾಗಿ ಇಲ್ಲಿಂದ ಹರಿದುಹೋಗುವ ದುಡ್ಡನ್ನು ಉಳಿಸಬಹುದು. (2) ವನಸ್ಪತಿಗಳ ಜ್ಞಾನಮಾಡಿಕೊಟ್ಟು ಇಲ್ಲಿಯೇ ಔಷಧೀಕರಣ ಕಂಪೆನಿಗಳನ್ನು ಸ್ಥಾಪಿಸಿ ಇಲ್ಲಿಯ ನಿರುದ್ಯೋಗವನ್ನು ಕೆಲಮಟ್ಟಿಗಾದರೂ ಅಳಿಸಬಹುದು. (3) ಮತ್ತು ಅತೀವ ಅಜ್ಞಾಧಾರಕ ಗುಲಾಮರಾಗಿರುವುದರಲ್ಲಿಯೇ ನಮ್ಮ ಶ್ರೇಯಸ್ಸೆಂದು (Your most obidient Servant) ಬರೆದುಕೊಂಡು ಅರ್ಜಿ ಹಿಡಿದು ಅಲೆದಾಡುವ ಹೀನ ಕೆಲಸಕ್ಕೆ ಹೋಗದೆ, ಜನಸೇವೆಮಾಡಿ, ಧನ-ಮಾನ ಕೀರ್ತಿ-ಅಂತಸ್ತನ್ನು ಗಳಿಸಬಹುದು" ಮುಂತಾಗಿ ಹೇಳಿ ಆಯುರ್ವೇದ ವೈಶಿಷ್ಟ್ಯವನ್ನು ಬಹು ಹೃದಯಂಗಮವಾಗಿ ವಿವರಿಸಿದರು. ಅನಂತರ ಡಾ. ವೆಂಕಟೇಶರವರು, ಪಂಡಿತ ತಾರಾನಾಥರು, ಅನಾರೋಗ್ಯ ನಿಮಿತ್ತ ಬೆಂಗಳೂರಿನಲ್ಲಿದ್ದ ಮೂಲಕ ಅವರು ತಮ್ಮ ಪ್ರಿಯ ವಿದ್ಯಾರ್ಥಿಗಳಿಗೆ ತಿಳಿಸಿದ ಸಂದೇಶವನ್ನು ಹಾಗೂ ಮಹಾಮಹೋಪಾಧ್ಯಾಯ ಶ್ರೀಮತಿ ಸುಮತೀಬಾಯಿ, B. A. L. T. F. P. M. S. ರಿಜಿಸ್ಟ್ರಾರ್ ಪ್ರೇಮಾ ಮೆಡಿಕಲ್ ಕಾಲೇಜ್ ಹಾಗೂ ಡಾ। ಲಕ್ಷ್ಮೀಪತಿ ಚಂದೂರವರು ಕಳಿಸಿದ ಸಂದೇಶವನ್ನು ಓದಿಹೇಳಿ ಕಾಲೇಜ್ ಕೆಲಸವನ್ನು ಆರಂಭಿಸುವದಾಗಿ ಹೇಳಿದರು.

ಪಂಡಿತ ತಾರಾನಾಥರ ಸಂದೇಶದ ಸಾರಾಂಶ—"ಇಂದಿನ ಕಲಿತ ಯುವಕರ ನಿರುದ್ಯೋಗ ನಿವಾರಣೆಯೇ ನಮ್ಮ ಗುರಿ. ಜನಸೇವೆಯನ್ನು ಮಾಡುತ್ತ ಧನ-ಮಾನ ಕೀರ್ತಿ-ಅಂತಸ್ತುಗಳನ್ನು ಹೇಗೆ ಗಳಿಸಬಹುದೆಂಬುದನ್ನು ಯುವಕ ಯುವತಿಯರಿಗೆ ಕಲಿಸುವದೇ ಪ್ರೇಮವಿದ್ಯಾಪೀಠದ ಮುಖ್ಯ ಶಿಕ್ಷಣ. ಇಲ್ಲಿ ಶಿಕ್ಷಣ ಮುಗಿಸಿಕೊಂಡು ಹೋದವರಾರೂ ನಿರುದ್ಯೋಗಿಗಳಾಗಿಲ್ಲ. ನೌಕರಿಗಾಗಿ ಅರ್ಜಿ ಹಿಡಕೊಂಡು ಅಲೆದಾಡುತ್ತಿಲ್ಲ. ಜನಸೇವೆ ಮಾಡುತ್ತ ಧನ-ಮಾನಗಳಿಗೆ ಸ್ವತಂತ್ರರಾಗಿ ಸಮಾಜದಲ್ಲಿ ಅಂತಸ್ತನ್ನು ಸಂಪಾದಿಸಿಕೊಂಡಿದ್ದಾರೆ-ಅತಿ ಸ್ವಲ್ಪ ಸಮಯದಲ್ಲಿ, ಬಹಳ ಕಡಿಮೆ ಖರ್ಚಿನಲ್ಲಿ ಈ ತರದ ಶಿಕ್ಷಣವನ್ನು ಕೊಡುವದೇ ಈ ಸಂಸ್ಥೆಯ ವೈಶಿಷ್ಟ್ಯ. ಸ್ವಾತಂತ್ರ್ಯ ಸಿಂಹರಾದ ಲೋಕಮಾನ್ಯರ ವಿಶಿಷ್ಟ ಧ್ಯೇಯಗಳಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಇಂಥ ಸಂಘ ಶಿಕ್ಷಣ ಸಂಸ್ಥೆ ಅಥವಾ ಸ್ಥಾಪನೆ ಪ್ರಚಾರಗಳನ್ನು ನಡೆಸುವದೂ ಒಂದು ಧ್ಯೇಯವಾಗಿತ್ತು. ಇತ್ಯಾದಿ.

WANTED

A Secondary Grade Trained Teacher for the Headmaster's post in the Sri Vani Vilas Higher Elementary School, Ashwathpur, Mijar. Vacancy permanent. Decent monthly salary given. Apply sharp to the undersigned.

Selected candidate should join duty on 15-8-39

The Secretary,
Sri Vani Vilas Vidya Sangha,
Ashwathpur, MIJAR.

NOTICE.

ALL MEN KNOW that I K. Narasimha Pai have cancelled and revoked all the General Powers of Attorney up to date including those of 30-11-32 registered at Bombay and 9-5-38 registered at Madras in favour of my brother Mr. K. Venkatrai Pai son of K. Thimmarsa Pai, Stamp-Vendor Puttur, South Kanara.

Any person dealing with the above named on the strength of any Powers, purported to be given by me shall do so at his own risk and I shall not be liable or responsible for anything done for me or on my behalf by the above named K. Venkatrai Pai from 31st July 1939 on which date I have addressed to him a notice of cancellation of all my Powers to him.

K. Narasimha Pai,
Butter Merchant,
Shalwalla Building,
Lalbaug, Bombay No 12

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನುಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

ORIENTAL Govt. Security Life Assurance Co., Ltd.

ದಾರಿಹೋಕನ ಡೈರಿ

ಹರಿಜನರು ತನ್ನ ದೇವಸ್ಥಾನಕ್ಕಾದರೂ ಪ್ರವೇಶಿಸದಂತಾಗಬೇಕೆಂದು ಟೊಂಕಬರೆದ ಸನಾತನಿಗಳು ಮುಂಜಪವನ್ನಾರಂಭಿಸಿರುವರಂತೆ. ನಮ್ಮಲ್ಲಿಯ ಸನಾತನಿಗಳೂ ಅಂತಹದೇ ವಿಧಾನವೊಂದು ಜಪವನ್ನು ಶೀಘ್ರವಾಗಿ ಆರಂಭಿಸಿ ತಮ್ಮ ಗ್ರಹಚಾರ ಪರಿಹರಿಸಿಕೊಳ್ಳಬೇಕು. ಯಾಕೆಂದರೆ ದಕ್ಷಿಣ ಕನ್ನಡ ಹರಿಜನ ಸೇವಕ ಸಂಘದವರು, ದೇವಸ್ಥಾನ ಪ್ರವೇಶಕ್ಕಾಗಿ ಒಂದು 'ಸಬ್ ಕಮಿಟಿ' ಸ್ಥಾಪಿಸಿದ್ದಾರೆ. ಈ ಕಮಿಟಿಯ. ಗ್ರಹವು ಎಲ್ಲಿಯಾದರೂ ಸ್ಥಿರವಾಗಿ ಬಿಟ್ಟಲ್ಲಿ ನಮ್ಮಲ್ಲಿಯು ಸನಾತನ ಮಂಡಲಿಯವರ ಗ್ರಹಚಾರವಾಗಿ ಹೋದೀತು. ಮುಂಜಾಗ್ರತೆ ತೆಗೆದುಕೊಳ್ಳುವುದು ಲೇಸು.

೦ ೦ ೦

ಮು. ರಾ. ರಾ. ವನ್ನು ತೆಗೆದು ಶ್ರೀ ಎಂದು ಬದಲಾಯಿಸಿದಾಕ್ಷಣ ಕ್ರಾಂತಿ ನಡೆದಂತಾಗಲಿಲ್ಲ. ಊಟಿಗೆ ಹೋಗುವುದನ್ನು ನಿಲ್ಲಿಸಿ ಬೆಂಗಳೂರಿಗೆ ಹವಾ ಬದಲಾವಣೆಗೆ ಹೋದಾಕ್ಷಣ ಕ್ರಾಂತಿಯಾಗಲಿಲ್ಲ. ತಿಂಗಳೊಂದರ ರೂ. 500 ಸಂಬಳ ತೆಗೆದುಕೊಳ್ಳುವುದು ಮಹತ್ವದ ಸಂಗತಿಯೇನೂ ಅಲ್ಲ. ಹರಿಜನರು ದೇವಸ್ಥಾನ ಪ್ರವೇಶಿಸುವಂತೆ ಮಾಡಿದರೆ ಹಿಂದುಗಳಿಗೊಂದು ಕ್ರಾಂತಿಯಾಗಬಹುದು. ಹಿಂದೀಯವರಿಗದು ಕ್ರಾಂತಿಯಾಗಲಾರದು. ಮದ್ಯಪಾನ ನಿಷೇಧವು ಕುಡುಕರಿಗೆ ಕ್ರಾಂತಿಯಾಗಬಹುದೇ ಹೊರತು ಇತರರಿಗೇನೂ ಅಲ್ಲ. ಕಾಂಗ್ರೆಸ್ ಮಂತ್ರಿಗಳು ತಾವು ಕ್ರಾಂತಿಕಾರಕ ಮಾರ್ಪಾಟ ಮಾಡಿರುತ್ತೇವೆಂದು ಕೊಚ್ಚುವುದೇನೂ ಬೇಡ. ಅವರು ಅಂತಹುದೇನೂ ಮಾಡಿಲ್ಲೆಂದು ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರ ಟೀಕೆ.

೦ ೦ ೦

ರಾಜಕೀಯದಲ್ಲಿ ಪೌರಾಣಿಕ ಸಾಮ್ಯಗಳನ್ನು ತೆಗೆದುಕೊಂಡು ಮಾತಾಡುವುದೇ ತಪ್ಪು. ಶ್ರೀ. ರಾಜಗೋಪಾಲಾಚಾರ್ಯರು ಸಿಲೋನಿನ ರಾಯಭಾರ ಕಾರ್ಯ ಮುಗಿಸಿ ಹಿಂದಿರುಗಿ ಬಂದ ಪಂಡಿತ ನೆಹರುಗಳನ್ನು ಹನುಮಂತನಿಗೆ ಹೋಲಿಸಿದರು. ಹಾಗಾದರೆ ಸಿಲೋನಿನ ಪ್ರಧಾನ ಮಂತ್ರಿ ಸರ್. ಜಯಂತಕರು ರಾವಣನೇ? ಸಿಂಹಳೀಯರು ರಾಕ್ಷಸರೇ? ಎಂದು ಶ್ರೀಮಾನ್ ಅಯ್ಯಂಗಾರರ ಪ್ರಶ್ನೆ. ಶ್ರೀ. ಸತ್ಯಮೂರ್ತಿಗಳವರಿಗೆ ಕಹಿಕಹಿಯಾದರೂ ದಾರಿಹೋಕನಿಗೆ ಸ್ವಾದಿಸುತ್ತದೆ ಶ್ರೀಮಾನ್ ಅಯ್ಯಂಗಾರರು ಮಾಡುತ್ತಿರುವ ಇತ್ತಲಾಗಿನ ಭಾಷಣಗಳು.

೦ ೦ ೦

ಕಾಲಕ್ಕೆ ತಕ್ಕ ಕೋಲಕಟ್ಟ ಕಲಿತರೇನೇ ಬಾಳಬಹುದು ಈ ಕಾಲದಲ್ಲಿ. ಹರಿಜನ ದೇವಸ್ಥಾನ ಪ್ರವೇಶವೆಂದರೆ ಒಳಗಿಂದೊಳಗೆ ಆಗದಿದ್ದ ಶ್ರೀ ಸತ್ಯಮೂರ್ತಿಗಳು ಇಂದೀಗ ಅದರ ಸಮರ್ಥಕರಾಗಿ ಹೋಗಿದ್ದಾರೆ. ಮದ್ರಾಸ್ ಕಾಂಗ್ರೆಸ್ ಮಂತ್ರಿಗಳನ್ನೊಮ್ಮೆ ಬಾಹಿರಂಗ ಟೀಕಿಸುತ್ತಿದ್ದವರು ಈಗ ಅವರ ಹೊಗಳುಭಟ್ಟರಾಗಿ ಹೋಗಿದ್ದಾರೆ. ಬರುವ ವರ್ಷ ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷತನಕ್ಕೆ ಸಂಪೂರ್ಣವಾಗಿ ಅರ್ಹರಾಗಿದ್ದಾರೆ ಈಗ. ಇಂತಹ ಮಾರ್ಪಾಟ ತೋರುತ್ತಿರುವ ಇನ್ನೊಬ್ಬ ದೊಡ್ಡ ವ್ಯಕ್ತಿಯೆಂದರೆ ಶ್ರೀ ಪಟ್ಟಾಭಿಯವರು. ಕಳೆದ ಸಲ ಗಾಂಧಿಜಿಯವರು ಅವರನ್ನು ಕಾಂಗ್ರೆಸ್ ಪಟ್ಟಕ್ಕೆ ಶಿಫಾರಸು ಮಾಡಿದ ಮೇಲೆ ಗಾಂಧಿಗಿಂತಲೂ ದೊಡ್ಡ ಗಾಂಧಿಯಾಗಿ ಹೋಗಿದ್ದಾರೆ ಅವರು, ಗಾಂಧಿ ತತ್ವದ ಟೀಕಾಚಾರ್ಯರೇ ಆಗಿ ಹೋಗಿದ್ದಾರೆ. ಶ್ರೀ ಕೃಪಾಲನಿಯವರಿಗೊಬ್ಬ ಪ್ರತಿಸ್ಪರ್ಧಿ ಶ್ರೀ ಪಟ್ಟಾಭಿಯವರು.

೦ ೦ ೦

ಓರ್ಡಿನೆನ್ಸ್ ಮೂಲಕ ರಾಜ್ಯಭಾರ ಮಾಡುವದು ಘೋರ ಹಿಂಸೆ. ಓರ್ಡಿನೆನ್ಸ್ ಮೂಲಕ ಹರಿಜನ ದೇವಸ್ಥಾನ ಪ್ರವೇಶ ಮಾಡುವುದು ಮಹತ್ವದ ಅಹಿಂಸೆ! ನೌಕರ ಶಾಹಿಯು 144ನೇ ಸೆಕ್ಷನ್, ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಅಕ್ಟ್ ಗೋಳಿಬಾರು ಮೊದಲಾದುವುಗಳನ್ನೆಲ್ಲಾ ಜ್ಯಾರಿಮಾಡುವುದು ಅತ್ಯಾಚಾರ. ಕಾಂಗ್ರೆಸ್ ಸರಕಾರದವರು ಮಾಡುವುದು ಸದಾಚಾರ. ಇತರ ಪಕ್ಷೀಯರು ರಾಜ್ಯಭಾರ ಮಾಡಿದರೆ ಹೊಸ ರಾಜಕೀಯ ಘಟನೆಯನ್ನು 'ವರ್ಕ್'ಮಾಡಿ ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಸಹಕರಿಸುವುದು. ಕಾಂಗ್ರೆಸ್ ಪಕ್ಷೀಯರು ಹಾಗೆ ಮಾಡಿದರೆ ಎಸೆಂಬ್ಲಿ ಕೌನ್ಸಿಲುಗಳನ್ನು 'ರೆಕ್' ಮಾಡಿ ಅಸಹಕಾರಮಾಡುವುದು. ಕಾಂಗ್ರೆಸ್ ರಾಜ್ಯಭಾರದಲ್ಲಿ ಜ್ಯಾರಿಗೆ ಬಂದಿರುವ ನವೀನ ಶಬ್ದಾರ್ಥವಿದು!

೦ ೦ ೦

"ಹಳದಿ ಪೆಟ್ಟಿಗೆಗೆ ಹಾಕಿ ನಿಮ್ಮ ಓಟು! ಹಳದಿ ಪೆಟ್ಟಿಗೆಗೆ ಹಾಕಿ!" ಎಂದು ದಸ್ತಗಳೆಲ್ಲಾ ಕೂಗಿಕೂಗಿ ಊರಲ್ಲೆಲ್ಲಾ ಬೊಬ್ಬೆಯೆಬ್ಬಿಸಿ ಗಲಾಟೆಮಾಡಿದಿರಿ ನೀವು. ನಾವೆಲ್ಲಾ ಹಾಗೆಯೇ ಮಾಡಿದೆವು. ಈಗ ನೋಡಿ ಅದರ ಕರ್ಮ ತಿನ್ನುತ್ತಿದ್ದೇವೆ ಎರಡು ಕೈಗಳಲ್ಲಿ! ತಂಬಾಕು ಟೇಕ್ಸು! ಸೇಲ್ಸ್ ಟೇಕ್ಸು! ವಸ್ತ್ರದ ಟೇಕ್ಸು! ಇನ್ನೇನೆಲ್ಲಾ ಟೇಕ್ಸು ಬರಲಿದೆಯೋ ನಮ್ಮ ಮೇಲೆ! ಬರುವ ಸಲ ಬನ್ನಿ ಓಟು ಕೇಳಲಿಕ್ಕೆ! ಕಲಿಸುತ್ತೇವೆ ನೋಡಿ ಪಾಠ!" ಎಂದರು ಹಲವರು. ನನ್ನೊಡನೆ ನಾನು ಅಡ್ಡಾಡುತ್ತಿದ್ದಾಗ. ನನಗೆ ಕೇಳಿ ಕೇಳಿ ಸಾಕಾಯಿತು. "ಬರುವ ಸಲ ನಾನು ಓಟು ಕೇಳಲಿಕ್ಕೇನೇ ಬರುವುದಿಲ್ಲ ಸ್ವಾಮಿ. ನನ್ನಂಥವರಿಗೂ ಬೇಡವಾಗಿದೆ ಕಾಂಗ್ರೆಸ್ ಸರಕಾರ!" ಎಂದು ಸಿಡುಕಿಬಿಟ್ಟೆ ನಾನು ಸಿಟ್ಟಿನಿಂದ. ಎಲ್ಲಿ ಶಿಸ್ತು ಜ್ಯಾರಿಯಾಗುವುದೋ ಎಂದು ಹೆದರಿಕೆ ಹಿಡಿದುಬಿಟ್ಟಿದೆ ನನಗೀಗ!

೦ ೦ ೦

ಶ್ರೀ. ಎ. ಬಿ. ಶೆಟ್ಟಿ ತಂದಿದ್ದ ಮಸೂದೆಯನ್ನು ಮುರಿದುಹಾಕಲು ಅಳಿಯ ಸಂತಾನ ಲೀಗಿನ ಪರಶುರಾಮ ಅವತಾರವೆದ್ದಿದ್ದಿತು ಅಂದೊಮ್ಮೆ. ಅನಂತರ ಅದರ ಸುದ್ದಿಯೇ ಇಲ್ಲ. ಈಗ ಇನ್ನೊಮ್ಮೆ ಅಳಿಯಸಂತಾನ ಮಸೂದೆಯನ್ನು ತರುವ ಪ್ರಯತ್ನ ನಡೆದಿದೆಯಷ್ಟೆ ಪುನಃ ತಲೆಯೆತ್ತಿದಂತಿದೆ ಲೀಗು. ಆದರೆ ಪ್ರತಿ ಅವತಾರಕ್ಕೂ ಒಂದು ಕಾಲಾವಧಿ ಇದೆ. ಆ ಅವಧಿ ದಾಟಿದ ಮೇಲೂ ಅಧಿಕಾರ ತೋರಿಸಹೋದರೆ ಅನ್ಯಾಯವಾದ ಆಕ್ರಮಣವಾಗುವುದು. ಕಾಲ ಮತ್ತು ಸಂದರ್ಭ ನೋಡಿ ಕೊಡಲಿಯೆತ್ತಿದರೆ ಸಾರ್ಥಕವಾದೀತು. ಇಲ್ಲವಾದರೆ ವಿಪರ್ಯಾಸವಾದೀತು.

೦ ೦ ೦

ಮಂಗಳೂರಿನ ವೆಬ್‌ಸ್ಟರ್ ಮಾರ್ಕೆಟಿನ ಪ್ರಶ್ನೆಯನ್ನು ಸರಕಾರದವರು ಮುನಿಸಿಪಾಲಿಟಿಗೆ ವಿರೋಧವಾಗಿ ತೀರ್ಮಾನಿಸಿರುವರು. ಕೆಲವುಂದಿ ಕ್ಷುಲ್ಲಕ ಜನರ ಚಳವಳಿಕ್ಕೆ ಬೆಲೆಕೊಟ್ಟಿತು ಮದ್ರಾಸ್ ಸರಕಾರ. ಇನ್ನು ಮುಂದೆ ಮುನಿಸಿಪಾಲಿಟಿಯವರೇನುಮಾಡುವರೋ ನೋಡಲಿದೆ. ಖಡ್ಗ ಹಿಡಿದು ಮಾರ್ಕೆಟಿನ ಗೇಟಿನಲ್ಲಿ ನಿಂತು, 'ಕಾಯಿಪಲ್ಯ ಮಾರುವವರನ್ನು ತಡೆಯುವವರಾದರೂ ತಾವು ನುಡಿದಂತೆ ನಡೆದು ಮುನಿಸಿಪಾಲಿಟಿಗೆ ನೆರವಾದರಾದೀತು.

—ದಾರಿಹೋಕ

'ಶ್ರೀಕೃಷ್ಣ ಜಯಂತಿ' ವಿಶೇಷ ಸಂಚಿಕೆಯನ್ನು ನಿರೀಕ್ಷಿಸಿರಿ!

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

	ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡ ಮುಡಿಗೆ	1—14—0	...
,, ದುಯಂ ,, ,,	1—12—0	...
,, ಅವ್ವಲ್ ತರದ ಸುಗ್ಗಿ ಮುಡಿಗೆ	1—12—0	...
,, ದುಯಂ ,, ,,	1—10—0	...
ಅಕ್ಕಿ ಅವ್ವಲ ತರದ ಗುಡ್ಡ ಮುಡಿಗೆ	4—12—0	...
,, ದುಯಂ ,, ,,	4—7—0	...
,, ಅವ್ವಲ್ ಸುಗ್ಗಿ ,,	4—8—0	...
,, ದುಯಂ ,, ,,	4—6—0	...
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
,, ಸಿಪ್ಪೆ ಇದ್ದದ್ದು ,,	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	...
,, ದೀಪ ಮತ್ತು ದಿಲ್‌ಪಸಂದ್	...	...
ತೆಂಗಿನ ಎಣ್ಣೆ ಮಣಕ್ಕೆ	3—6—0	...
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	2—8—0	3—8—0
ಗೇರುಬೀಜ ಮುಡಿಗೆ	3—6—0	3—8—0
ಕಬ್ಬಿನ ಬೆಲ್ಲ ಖಂಡಿಗೆ	47—8—0	53—12—0
ಒಳ್ಳೇ ಮೆಣಸು ಹುಂಡ್ರೆಡ್‌ವೇಟಿಗೆ	14—8—0	15—8—0

ಪ್ರಕಟಣೆ.

ಕನ್ನಡ ಜಿಲ್ಲೆಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಅವಗಾಹನೆ ಬಗ್ಗೆ

ವಾರ್ಧಾ ಸ್ಕೀಮಿಗೆ ಅನ್ವಯಿಸಿ ಸರಕಾರದವರು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ ಹೊಸ ಸಿಲೆಬಸ್ಸನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಲಿರುವೆವು. ಈ ಭಾಷಾಂತರದೊಡನೆ ಸದ್ಯದಲ್ಲಿಯೇ ಸರಕಾರದವರು ಪ್ರಕಟಿಸಲಿರುವ ರೂಲ್ಸು (ಆಚರಿಸತಕ್ಕ ನಿಯಮ)ಗಳನ್ನೂ, ಶಾಲಾ ಉಪಾಧ್ಯಾಯರು ಕಳುಹಿಸತಕ್ಕ ರಿಟರ್ನ್ ಫೋರ್ಮ್‌ಗಳನ್ನೂ ಸೇರಿಸಿ ಈ ಭಾಷಾಂತರವನ್ನು ಉಪಾಧ್ಯಾಯರಿಗೆ ಅನುಕೂಲವಾಗುವಂತೆಯೇ ಪ್ರಕಟಿಸುವೆವು. ಅಲ್ಲದೆ ಉಪಾಧ್ಯಾಯರಿಂದ ಬರಬಹುದಾದ ಉತ್ತಮ ಸಲಹೆಗಳೂ ಸೇರಿಸಲ್ಪಡುವವು. ಈ ಭಾಷಾಂತರವು ಜಿಲ್ಲೆಯ ವಿದ್ಯಾ ಇಲಾಖೆಯವರಿಂದ ಪರಿಶೋಧಿಸಲ್ಪಟ್ಟು ಅವರ ಮುನ್ನುಡಿಯೊಡನೆ ಪ್ರಕಟಿಸಲ್ಪಡುವುದು. ಇಷ್ಟರಲ್ಲಿಯೇ ಮುದ್ರಣದ ಅರ್ಧಭಾಗವನ್ನು ಮುಗಿಸಿರುವೆವು. ಸಲಹೆಗಳನ್ನು ಕಳುಹಲಿಚ್ಛಿಸುವ ಉಪಾಧ್ಯಾಯರು ಅಂತಹ ಸಲಹೆಗಳನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮ್ಮೊಡನೆ ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ. ಈ ಪುಸ್ತಕವು ಕ್ರೌನ್ ⅛ ಸ್ಯಾಜಿನಲ್ಲಿದ್ದು ಉತ್ತಮವಾದ ಮುದ್ರಣದೊಡನೆ ಇದೇ ತಿಂಗಳ ಅಂತ್ಯಭಾಗದಲ್ಲಿ ಹೊರಬೀಳುವುದು

ಪ್ರಕಾಶಕರು,

ಶ್ರೀನಿವಾಸ ಪ್ರಿಂಟಿಂಗ್ ವರ್ಕ್ಸ್
ಕಾಸರಗೋಡು, ದ. ಕನ್ನಡ.

WANTED candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight-Director, Royal Telegraph and Rly. Duties College, Bombay 11.

WANTED

A Qualified tutor for "Shri Durga School of Commerce" (to be newly opened shortly) Mulki. The applicant should be competent in Short-hand and Type-writing. Pay according to Qualifications. Application should reach the undersigned by 25-8-1939 with one anna stamp for reply.

B. Bhoja Rao,
Manager,
Shri Durgadevi Free Night School,
Mulki, S. K.

WANTED District and Taluk a Organisers in Districts and Taluks of Karnataka on a monthly salary of Rs. 50/- and Rs. 20/-. Special facilities for initial business. Only influential and educated Organisers who can guarantee Rs. 50,000/- and Rs. 25,000/- per year need apply: Padubidri Bros., Bombay 8.

ಮುಂದೆ ಬರುವ ಲೇಖನ—

ಕಾಂಗ್ರೆಸಿನೊಳಗಿನ ಕೆಲವು ಪಕ್ಷಗಳು

(ಶ್ರೀ. ಪಿ. ವಿ. ಉಪಾಧ್ಯಾಯರಿಂದ)

ಚಲನ ಚಿತ್ರವೆಂದರೆ ಮೂಗು ಮುರಿಯುವವರು

ದೇವದಾಸ! **ದೇವದಾಸ!** ದೇವದಾಸ!

ಎಂದು ಹಾದೊರೆದು ಮತ್ತೆ ಮತ್ತೆ ಚಿತ್ರದಲ್ಲಿ ನೋಡಿ
ಮನಸಾರೆ ಹೊಗಳಿದ್ದಾರೆ.

ಆ ಪ್ರಣಯ! ಆ ಶೃಂಗಾರ! ಆ ಹುಡುಗಾಟ!
ಆ ವಿಯೋಗ! ಆ ಕೊರಗು! ಆ ತ್ಯಾಗ!

ಯಾವುದು ಹೆಚ್ಚು! ಯಾವುದು ಕಡಿಮೆ!

ಶರಚ್ಚಂದ್ರರ ಲೇಖನಿಯಲ್ಲಿ ಎಲ್ಲವೂ ಪರಿಪೂರ್ಣತೆಯನ್ನೈದಿವೆ.

ಕನ್ನಡಿಗರಿಗಾಗಿ ಶ್ರೀ. ಗುರುನಾಥ ಜೋಶಿಯವರು
ಅನುವಾದಿಸಿದ್ದಾರೆ.

ಹುಬ್ಬಳ್ಳಿಯ ಸಾಹಿತ್ಯಭಂಡಾರದವರು ಹೊಸತಾಗಿ ಪ್ರಕಟಿಸಿದ
ಈ ದೇವದಾಸ ಪುಸ್ತಕದ ಬೆಲೆ ೧—೦—೦

ಪ್ರತಿಗಳಿಗೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಪೂರ್ವ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವ್ರದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.

ಮೈಸೂರು ಸ್ಟೇಟಿನ ಏಜಂಟರು:– ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾಯಿತ (first quality, selected) ಎಕ್ಸ್‌ಸ್ಪ್ರೆಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು:– ನವಭಾರತ ಬುಕ್‌ಡಿಪ್ಪೋ, ಉಡುಪಿ.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦	೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರಹ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರಿ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್.

ದಿ ವಿಜಯ ಬೇಂಕ್, ಲಿಮಿಟೆಡ್,

ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3	ತಿಂಗಳಿಗೆ	....	3½%
6	„	....	4%
1	ವರ್ಷಕ್ಕೆ	....	4½%
2	„	....	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/- ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ.

Rev. Fr. P. W. Farias,
St. Paul's Church,
Balkunja Post, S. K.
Dated 4th January 1939.

To

THE JOINT MANAGERS,
The C. P. C. Co. Ltd., MANGALORE.

Sir

I thank you most sincerely for the promptness with which you arranged to take us to Mangalore and back during the grand occasion of the Diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the congress.

The glorious success of our congress is also due to your exertion in putting up the various lights some of which I hear were done voluntarily.

May the blessings of the Almighty fall on you all and may you be able to do much good to the public.

Renewing my thanks,
I remain,
Yours sincerely,
(*Sd.*) P. W. Farias.

To
THE JOINT MANAGERS,
THE COMBINED BOOKING AGENCY,
MANGALORE.

Sri Parshwanathaswamy
Panchakalyana Pooja Mahothsawam
VENOOR (S. Kanara 1939).

Dear Sirs,

Please permit us to express our thanks on behalf of the above committee for the efficient service rendered by your Combined Booking Agency staff at Venoor to the visitors of the Panchakalyana Pooja Mahosthamam celebrations held this year.

Our thanks are also due to Moodabidre Booking Clerk Mr. B. Krishnayya and also his other mates and Mr. Raghavendra Bhandary who was specially come down from Mangalore to see the needs of and comforts of the travelling Public.

Thanking you once again,
We remain,
Yours faithfully,
(*Sd.*) **M. Jagathpal,**
(*Sd.*) **M. Pachappa Shetty,**
VENOOR, (*Sd.* in Canarese) **Anantharaja Shetty,**
Dated 6-2-'39. (Sd.) **B. Chandappa Indra,**
(*Secretary, P. M. Committee*).
Members, Panchakalyana Mahothsawam Committee.

Thulunad Bank

OF SUPPLY AGENCY LIMITED,

ESTD] **UDIPI** [1933

Authorised & Issued Capital	Rs.	**1,00,000**
Subscribed & Paid up	Rs.	**31,300**

RATE OF INTEREST FOR FIXED DEPOSITS.

3 to 6 Months	4%	p. a.
7 to 11 „	5%	„
12 to 18 „	6%	„

SPECIAL RATE FOR LONG TERM DEPOSITS ON APPLICATION.

Current Accounts are accepted at

3½ p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲೀಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಮಿತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors*: **GENERAL SUPPLIES, LTD, UDIPI**)

PRINTED BY S. S. KARANTH AT THE THULUNAD PRESS, UDIPI
and Published by K. H. SHETTY at "NAVAYUGA" OFFICE, UDIPI, South India,

Registered No. M. 3618

17-8-1939

ನವಯುಗ

NAVAYUGA

SRI KRISHNA JAYANTHI SPECIAL

YET ANOTHER GREAT PUBLICATION!

'Navayuga' announces the special Number for the second time on the Avatar Day of Lord Sri Krishna.

Extra Pages. Extra Selections. Fully illustrated.

SIZE: As usual. Crown half (Printed Area 13" × 8½".)

Last date of receipt of the advertisement matter .. 31-8-39

Date of publication 7-9-39

ADVT. TARIFF AS USUAL:

One page Rs. 25/-,	½ page Rs. 15/-,
¼ page Rs. 8/-,	⅛ page Rs. 5/-,

Cover pages extra. Rates on application.

Advertisement assures Commercial Success.

Send your advertisements now and achieve success.

Advt. Manager, NAVAYUGA, UDIPI, S. INDIA

ಶ್ರೀ ಕೃಷ್ಣಜಯಂತಿ ಸಂಚಿಕೆ

ತಾ. ೭-೯-೩೯ಕ್ಕೆ ವಿಶೇಷ ರೀತಿಯಲ್ಲಿ ಹೊರಡುವ ಈ ಸಂಚಿಕೆಯು ಜಾಹಿರಾತಿಗೂ ವಾಚನಕ್ಕೂ ಅತ್ಯುತ್ತಮವಾಗಿದೆ.

THE ASIAN ASSURANCE COMPANY, LTD.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9 24,905	24,50,234
1935	2,52 08,418	18,39,296	42,98,820
1938	3,61,56,764	22,54,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar

,, M Shivarama Rao, Organizer, Puttur

Or

Sri J. A PUTRAN,
Branch Manager, MANGALORE

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2,02 800/- Paid up Capital Rs 1,82,100/-.

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p a for the earlier half and at 1% p. a for the latter half of every calendar year

Fixed Deposits are accepted at all the above offices for one and two years and interest allowed at 3½% p a and 4% p. a respectively, interest being payable every half year of the calendar year. Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್ ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಇಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಇದೀಗ ಪ್ರಕಟವಾಗಿದೆ! ಇದೀಗ ಪ್ರಕಟವಾಗಿದೆ!

ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ

ಕರ್ನಾಟಕದ ಪ್ರಸಿದ್ಧ ನಾಟಕಕಾರರೈವರು ಬರೆದ

ಐದು ಏಕಾಂಕ ನಾಟಕಗಳ ಸಂಗ್ರಹ.

ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ ಸಂಪಾದಿಸಲ್ಪಟ್ಟು

ಭಾರತೀ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ ನವೀನ ಪುಸ್ತಕ

ನಾಟಕಗಳೊಂದಿಗೆ ನಾಟಕಕಾರರ ಪಡಿಯಚ್ಚುಗಳೂ ಕೊಡಲ್ಪಟ್ಟಿವೆ.

ಬೆಲೆ ೦-೪-೦ ಐದಾಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಟಪ್ಪಾಲು ದ್ವಾರ ಕಳಿಸಲಾಗುವುದು. ಪ್ರತಿಗಳಿಗ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನುಷ್ಯಪ್ರಾಣಿಯ ಶರೀರವೆಂದರೆ ದುರ್ಗಂಧದ ಬೀಡಾಗಿದೆ. ಯಂತ್ರ ದಂತರುವ ದೇಹವು ಎಲ್ಲಾ ರೀತಿ ದುರ್ಗಂಧಯುಕ್ತವಾಗಿದೆ. ಹಾಗೂ ಮೆದುಳು ಮತ್ತು ಇಡೀ ದೇಹದ ದುರ್ಗಂಧದಿಂದಲೇ ರೋಗೋತ್ಪತ್ತಿ ಯಾಗುತ್ತದೆ. ಮನುಷ್ಯನಿಗೆ ಮೆದುಳೆಂಬುದೇ ದೇಹದ ಮುಖ್ಯಾಂಶವಾಗಿದೆ ಇದರ ಸುಖದಿಂದಲೇ ಸರ್ವ ಅವಯವಗಳ ಸುಖದ ಮೀಗಳು ಅವಲಂಬಿ ಸಿರುತ್ತವೆ. ಅಂದು ಮೆದುಳು ಕೆಟ್ಟರೆ ಅದು ಸುಧಾರಿಸಬೇಕಾದರೆ ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ. ಅದಕ್ಕಾಗಿಯೇ ಅಲ್ಪಮೌಲ್ಯದಲ್ಲಿ ಬಹುಗುಣ ಕೊಡುವ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)

ಇವರ ಸುಗಂಧಯುಕ್ತ

ಆಮಲಕೀ ತೈಲವೇ

ನಿಮ್ಮ ಆನಂದದ ಭಾಂಡಾರವಾಗಿದೆ

ಕ್ರಯ ಸೀಸೆ 1ಕ್ಕೆ 6 ಆಣೆ

Swadeshi Oushadhi Bhandara(*Reg.) Kunjal* P O Brahmavar, S India

ನಮ್ಮ ಏಜೆಂಟರು —

1 V R Prabhu, The Canara News & Books Agent, Batatawala Mansion, Lalbag BOMBAY

2 General Supplies Ltd, Udipi, S K.

3. Nava Bharata Book Depot, Udipi, S K

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್ —**ಹೂವಮಾರ್ಕೇಟಿನ ಬಳಿ, ಮಂಗಳೂರು.**

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ. ದಿನ ನಿತ್ಯವೆಂಬಂತೆ ಸಾಮಾನುಗಳು ಬೇಲಾಗ್ ಆಗುತ್ತಿವೆ. ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ತೆಗೆದುಕೊಳ್ಳುವುದು ಅತಿ ಲಾಭಕರವಾಗಿದೆ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ESTD 1921 ಸ್ಥಾಪನೆ

FOUNDER
Sri A B SHETTY, M.L.A
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ

ಸಂಪಾದಕ
ಕೆ. ಕೆ. ಶೆಟ್ಟಿ.

ನವಯುಗ
NAVAYUGA WEEKLY UDIPI

ಸಂಪುಟ ೧೮ | ಉಡುಪಿ, ಗುರುವಾರ ೧೭-೮-೧೯೩೯ | Vol. XVIII
ಸಂಚಿಕೆ ೫೦ | Udipi, Thursday 17—8—1939 | No. 50

ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦.
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ವಾರದ ವಿಮರ್ಶೆ

ಕಾಂಗ್ರೆಸು ರೈಟಿಸ್ಟರ ಸಂಸ್ಥೆಯೇ?

ಕಾಂಗ್ರೆಸೆಂಬುದು ರೈಟಿಸ್ಟರ ಅಥವಾ ಕೇವಲ ಗಾಂಧಿವಾದಿಗಳ ಸಂಸ್ಥೆಯೇ ಎಂಬ ಸಂದೇಹವು ಈಗೀಗ ಬಲವಾಗುತ್ತಿದೆ! ಕಾಂಗ್ರೆಸ್ 'ಹೈಕಮಾಂಡಿನ ಆಜ್ಞೆಗಳಿಗೆ ವಿರೋಧವಾಗಿ ನಡೆಯುವ ಮತ್ತು ಕಾಂಗ್ರೆಸ್ ಮಂತ್ರಿಗಳಿಗೆ ತೊಡಕನ್ನುಂಟುಮಾಡುವ ದಂಗೆಕೋರ 'ಲೆಫ್ಟಿಸ್ಟ'ರನ್ನೆಲ್ಲಾ ಹೊರಹಾಕುವ ಒಳಸಂಚೊಂದು ನಡೆದಿದೆಯೆಂದು ಡಿಲ್ಲಿಯ ಪ್ರಮುಖ ಕಾಂಗ್ರೆಸ್ ವಾಲಾರಾದ ಲಾಲಾ ಶಂಕರಲಾಲರು ವಿದಿತಗೊಳಿಸಿರುತ್ತಾರೆ. ಕಾಂಗ್ರೆಸಿನೊಳಗೆ ಒಂದೋ ನೀವಿರಬೇಕು, ಇಲ್ಲವೆ ನಾವಿರಬೇಕು' ಎಂದು ಸರ್ದಾರ್ ಪಟೇಲರು ಚಲೆಂಜ್ ಕೊಡುವ ಗುಟ್ಟೂ ಇದೇ. ರಾಮಘರ ಕಾಂಗ್ರೆಸ್ ಅಧಿವೇಶನದಲ್ಲೇ ಕಾಂಗ್ರೆಸಿನೊಳಗಣ ಸೋಶಿಯಲಿಸ್ಟ್, ರೋಯಿಸ್ಟ್, ಕಮ್ಯೂನಿಸ್ಟ್, ಲೇಬರೈಟ್, ಕಿಸನ್ ಸಭ್ಯಾಟ್ ಮತ್ತು ಫೋರ್‌ವರ್ಡ್ ಬ್ಲೋಕಿನವರನ್ನೆಲ್ಲಾ ಹೊರಗಟ್ಟುವ ಪ್ರಬಲ ಪ್ರಯತ್ನ ನಡೆಯಲಾರದು. ಆಗ ಕಾಂಗ್ರೆಸು ರಾಷ್ಟ್ರೀಯ ಸಂಸ್ಥೆಯಾಗುವ ಬದಲಿಗೆ ರೈಟಿಸ್ಟ್ ಸಂಸ್ಥೆಯಾಗುವುದು.

ಅನುಸರಣೀಯ ಮಾದರಿ

ಕಾಡುಪ್ರಾಣಿಗಳ ಹಾವಳಿಯಿಂದ ತಮ್ಮ ಬೆಳೆಗಳನ್ನು ರಕ್ಷಿಸಲು ಕೋವಿ ಅವಶ್ಯವಿರುವ ಬೇಸಾಯಗಾರರಿಗೆಲ್ಲಾ ಕೋವಿ ಲೈಸೆನ್ಸ್ ಕೊಡುವ ನಿರ್ಧಾರಮಾಡಿದೆ ಮಧ್ಯಪ್ರಾಂತದ ಕಾಂಗ್ರೆಸ್ ಸರಕಾರ. ಕಾಡುಪ್ರಾಣಿಗಳ ಹಾವಳಿ ಇರುವ ಪ್ರದೇಶದಲ್ಲಿ ೨೦ಎಕ್ರೆ ಜಮೀನಿರುವ ಪ್ರಾಯಸ್ಥ ಗಂಡಸೊಬ್ಬನು ಅರ್ಜಿಹಾಕಿ ಕೋವಿ ಲೈಸೆನ್ಸ್ ಪಡೆಯಬಹುದು. ತಕ್ಷೀರುಗಾರನ ಹೊರತು ಇತರರಿಗೆಲ್ಲಾ ಅರ್ಜಿಹಾಕಿದೊಡನೆ ಲೈಸೆನ್ಸ್ ಕೊಡಲೇ ಬೇಕಾಗುವುದು. ಹಿಂದೂದೇಶವು ನಿರ್ವೀರ್ಯವಾಗಲು ಒಂದು ಕಾರಣವೆಂದರೆ ಕೋವಿ ಮೊದಲಾದುವುಗಳ ಲೈಸೆನ್ಸ್ ಅಪಹಾರ. ಕಾಂಗ್ರೆಸ್ ಮಂತ್ರಿಗಳು ಈ ವಿಷಯದಲ್ಲಿ ಹಿಂದಿನ ಧೋರಣೆಯನ್ನು ಬದಲಾಯಿಸುವುದು ಅತ್ಯಾವಶ್ಯಕ.

ಒನರರಿ ಮೆಜಿಸ್ಟ್ರೇಟರನ್ನು ತೆಗೆದು ಹಾಕಬೇಕು

ಬೆಂಚ್ ಕೋರ್ಟೆಂಬುದು ಅದೊಂದು ನಕಲಿ ಕೋರ್ಟಾಗಿದೆ. ಅದನ್ನಾಶ್ರೈಸಬೇಕಾದವರ ಅವಸ್ಥೆಯು ಶೋಚನೀಯವಿದೆ. ಹೆಚ್ಚಿನ ಈ ಕೋರ್ಟಮೆಂಬರರಿಗೆ ಪೆನಲ್ ಕೋಡಿನ ಒಂದಿಷ್ಟು ಅನುಭವವಾಗಲೀ ಅನುಭವಮಾಡಿಕೊಳ್ಳುವಷ್ಟರ ಚೇತನವಾಗಲೀ ಇರುವುದಿಲ್ಲ. ತಮ್ಮ ಸಮಕ್ಷಮ ನಡೆಯುವ ವಿಚಾರಣೆಯನ್ನು ತಿಳಕೊಳ್ಳುವಷ್ಟರ ಜ್ಞಾನವು ಹಲವರಲ್ಲಿರುವುದಿಲ್ಲ. ಬೊಂಬಾಯಿ ಸರಕಾರವು ಈ ಒನರರಿ ಬೆಂಚ್ ಮೆಜಿಸ್ಟ್ರೇಟರನ್ನೇ ತೆಗೆದುಹಾಕುವ ನಿರ್ಧಾರಮಾಡಿರುವುದು ಅಭಿನಂದನೀಯ.

ಬ್ರಿಟಿಷ್ ಪ್ರತಿಷ್ಠೆ ಕುಸಿಯುತ್ತಿದೆ

ಪೂರ್ವದಲ್ಲಿ ಬ್ರಿಟಿಷ್ ಪ್ರತಿಷ್ಠೆ ಮಟ್ಟವು ಬಹಳವಾಗಿ ಕೆಳಗಿಳಿದಿದೆ ಜಾಪಾನರು ಬೇಕೆಂದು ಆಂಗ್ಲೇಯರನ್ನಾರಿಸಿ ಅವಮಾನ ಮಾಡುತ್ತಿದ್ದಾರೆ. ಇತ್ತಲಾಗಿ ಚೀನದ ಕೈಫೆಂಗ್ ಎಂಬಲ್ಲಿ ಇಬ್ಬರು ಸ್ತ್ರೀಯರನ್ನು ಜಾಪಾನರು ಬಲಾತ್ಕಾರದಿಂದ ಬತ್ತಲೆ ಮಾಡಿ ಪರೀಕ್ಷಿಸಿಬಿಟ್ಟಿರುವರು. ಪೂರ್ವದಲ್ಲಿ ಬ್ರಿಟಿಷರ ಪ್ರತಿಷ್ಠೆಯನ್ನು ಸಂಪೂರ್ಣ ನಿರ್ನಾಮಗೊಳಿಸುವ ದೀಕ್ಷೆ ಹಿಡಿದಿದ್ದಾರೆ ಜಾಪಾನರು. ಇದನ್ನೆಲ್ಲಾ ನುಂಗಿಕೊಂಡು "ನನ್ನ ರಕ್ತ ಕುದಿಯುತ್ತಿದೆ" ಎಂದು ಉದ್ಗಾರ ಮಾತ್ರ ಎತ್ತಿ ಬ್ರಿಟಿಷ್ ಪ್ರಧಾನ ಮಂತ್ರಿಗಳು ಸುಮ್ಮನಿರಬೇಕಾಗಿದೆ. ಟೈನ್‌ಸ್ಟಿನಿನ ಪ್ರಕರಣವು ಬ್ರಿಟಿಷ್ ಸರಕಾರವು ಜಾಪಾನಿಗೆ ಡೊಗ್ಗು ಸಲಾಮು ಹಾಕಿ ಚೈನದ ತನ್ನ ಜನರ ಸ್ವಾರ್ಥವನ್ನು ಹೇಗಾದರೂ ರಕ್ಷಿಸಿಕೊಳ್ಳಲೆತ್ನಿಸುತ್ತಿದೆಂಬುದನ್ನು ಸಿದ್ಧಗೊಳಿಸುತ್ತದೆ.

ಬರ್ಮದ ಅಕ್ಕಿಗೆ ತಡೆ

ಬರ್ಮದಿಂದ ಅಗ್ಗವಾಗಿ ಅಕ್ಕಿಯು ಹಿಂದೂದೇಶಕ್ಕೆ ಹೆಚ್ಚಾಗಿ ಆಮದಾಗುವುದರಿಂದಲೇ ಇಲ್ಲಿ ಅಕ್ಕಿ ಬೆಲೆಯು ಬಹಳವಾಗಿ ಇಳಿದು ಹೋಗಲು ಕಾರಣ. ಆದುದರಿಂದ ಇದೇ ತಾ. 10ರಲ್ಲು ಮದ್ರಾಸ್ ಕೌನ್ಸಿಲಿನಲ್ಲಿ ಸರ್. ಕೆ. ವಿ ರೆಡ್ಡಿಯವರು ಬರ್ಮದ ಅಕ್ಕಿಗೆ ತಡೆಹಾಕುವಂತೆ ಮದ್ರಾಸ್ ಸರಕಾರವು ಕೇಂದ್ರ ಸರಕಾರವನ್ನು ಒತ್ತಾಯಪಡಿಸಬೇಕೆಂದು ತಂದ ಠರಾವು ಸಂದರ್ಭೋಚಿತವಿದೆ. ಇಷ್ಟರವರೆಗೆ ಈ ಕುರಿತು ಮದ್ರಾಸ್ ಸರಕಾರವು ಒತ್ತಾಯ ಮಾಡಿದುದು ನಿರರ್ಥಕವಾಗಿದೆ. ಬರ್ಮ ಮತ್ತು ಹಿಂದುದೇಶಗಳೊಳಗಾಗಿರುವ ವ್ಯಾಪಾರ ಒಪ್ಪಂದವು 1940ನೇ ಇಸ್ವಿಗೆ ಕೊನೆಗೊಳ್ಳುತ್ತದೆ. ಪುನಃ ಒಪ್ಪಂದ ಮಾಡುವಾಗ ಹಿಂದೀ ಸರಕಾರವು ಬರ್ಮದಿಂದ ಬರುವ ಅಕ್ಕಿಯ ಪ್ರಶ್ನೆಯ ಕುರಿತು ಮದ್ರಾಸ್ ಸರಕಾರದ ಅಭಿಪ್ರಾಯದಂತೆ ನಡೆಯದಿದ್ದರೆ ದಕ್ಷಿಣ ಹಿಂದುಸ್ಥಾನದ ಭತ್ತದ ವ್ಯವಸಾಯವು ಅಭಿವೃದ್ಧಿ ಹೊಂದುವ ಹಾಗಿಲ್ಲ.

ರಾಷ್ಟ್ರಕ್ಕೆ ದೊಡ್ಡ ಅವಮಾನ

ಹಿಂದುದೇಶದ ವೆಚ್ಚದಿಂದ ಪೋಷಿಸಲ್ಪಡುವ ಹಿಂದೀ ಸೇನೆಯನ್ನು ಕಾಂಗ್ರೆಸಿನ ಮತ್ತು ಕೇಂದ್ರ ಎಸೆಂಬ್ಲಿಯ ಅಭಿಪ್ರಾಯವನ್ನು ಕಡೆಗಣಿಸಿ ಎಸೆಂಬ್ಲಿ ಮೆಂಬರರೊಡನೆ ಒಂದು ಮಾತು ಕೂಡಾ ಕೇಳದೆ ಬ್ರಿಟಿಷ್ ಸರಕಾರವು ಸಿಂಗಪುರ ಮತ್ತು ಐಗುಪ್ತಕ್ಕೆ ಕಳುಹಿಸಿ ಇಡೀ ರಾಷ್ಟ್ರಕ್ಕೇನೇ ದೊಡ್ಡ ಅವಮಾನ ಮಾಡಿರುವುದು. ಇದಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಸರಿಯಾದ ಉತ್ತರವಿತ್ತಿರುವರು.

ಇಂಗ್ಲೆಂಡಿನ ಚುನಾವಣೆ

ಯುದ್ಧವೇನೂ ಸಂಭವಿಸದಿದ್ದಲ್ಲಿ ಬರುವ ನವಂಬರ ಮಧ್ಯದಲ್ಲಿ ಇಂಗ್ಲೆಂಡಿನಲ್ಲಿ ಚುನಾವಣೆ ನಡೆಯುವ ಸಂಭವವಿದೆ. ಮಿ. ಚೇಂಬರ್ಲೇನರು ಅಕ್ಟೋಬರದಲ್ಲಿ ಪಾರ್ಲಿಮೆಂಟ್ ಸಭೆಕರೆದು ಅನಂತರ ಪಾರ್ಲಿಮೆಂಟನ್ನು ಮುಕ್ತಾಯಗೊಳಿಸಬಹುದೆಂದು ನಿರೀಕ್ಷಿಸಲಾಗಿದೆ. ಈ ಸಲ ಮತದಾರರ ಮುಂದಿಡಲು ಮಹತ್ವದ ವಿಷಯವೇನೂ ಇಲ್ಲ. ಆದರೂ ಚೇಂಬರ್ಲೇನರು, ತನ್ನ ಮೇಲೆ ಜನತೆಗೆ ವಿಶ್ವಾಸವಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಚುನಾವಣೆನಡಿಸಬಹುದು. ಯುದ್ಧದ ದಿಗಿಲಿನಿಂದಾಗಿ ಪುನಃ ಚೇಂಬರ್ಲೇನರ ಪಕ್ಷವೇ ಬಹುಪಕ್ಷವಾಗಿ ಆರಿಸಿಬಂದು ಅವರೇ ಪ್ರಧಾನ ಮಂತ್ರಿಗಳಾಗುವ ಸಂಭವವೇ ಹೆಚ್ಚಿರುತ್ತದೆ. ಚೇಂಬರ್ಲೇನರ ಧೋರಣೆಯಿಂದ ಜನತೆಗೆ ತೃಪ್ತಿಯುಂಟಾಗಿರುವುದಲ್ಲ. ಆದರೆ ಅವರ ಪಟ್ಟಕ್ಕೇರಿರುವ ಇನ್ನೊಬ್ಬ ಮುಖಂಡ ಇಂಗ್ಲೆಂಡಿನಲ್ಲಿಲ್ಲ. ಲೇಬರ್ ಪಕ್ಷದ ಮುಖಂಡರುಗಳಾದ ಮೇಜರ್ ಎಟ್ಲೆ, ಮಿ. ಗ್ರೀನ್ ವುಡ್, ಮೊರಿಸನ್ ಮೊದಲಾದವರು ಅಗ್ರಗಣ್ಯ ಮುಖಂಡರ ಪಟ್ಟಕ್ಕೇರಿದವರಲ್ಲ. ಮಿ. ಚರ್ಚಿಲ್ಲರಿಗೆ ಹೆಚ್ಚಿನ ಅನುಯಾಯಿಗಳಿಲ್ಲ. ಮಿ. ಏಡನರು ಇನ್ನೂ ಎಳೆಯ ಮುಖಂಡರು. ಆದುದರಿಂದ ಇನ್ನೊಮ್ಮೆಯೂ ಚೇಂಬರ್ಲೇನರೇ ಪ್ರಧಾನಮಂತ್ರಿಗಳಾಗುವುದು ನಿಶ್ಚಯವೆಂದು ಹೇಳಬಹುದು.

ಜಸ್ಟಿಸ್ ಪಾರ್ಟಿಯು ಬಲಗೊಳ್ಳುತ್ತಿದ್ದೆ

ಜಸ್ಟಿಸ್ ಪಾರ್ಟಿಯು ಈಗ ನವಸ್ಫೂರ್ತಿ ಹೊಂದಿ ಪ್ರಬಲವಾಗುತ್ತಿರುವಂತಿವೆ. ಕಳೆದ ವಾರ ಈರೋಡಿನಲ್ಲಿ ಶ್ರೀ ರಾಮಸ್ವಾಮಿ ನಾಯ್ಕರರ ಅಧ್ಯಕ್ಷತೆಯಲ್ಲಿ ನಡೆದ ಜಸ್ಟಿಸ್ ಪಕ್ಷದ ಸಭೆಗೆ ಸುಮಾರು ೩೦೦ ಮಂದಿ ಹಾಜರಿದ್ದರು. ಸಿಲೋನಿನಲ್ಲಿ ಹೆಚ್ಚಾಗಿ ಇರುವ ಹಿಂದೀಯರು ಮದ್ರಾಸ್ ಸಂಸ್ಥಾನದವರಾದುದರಿಂದ ಅವರ ಸಂಕಷ್ಟದ ಕುರಿತು ವಿಚಾರಿಸಲು ಶ್ರೀ ಗಳಾದ ರಾಮಸ್ವಾಮಿ ನಾಯ್ಕರು ಕುಮಾರರಾಜಾ

ಪುಟ ೧೨ಕ್ಕೆ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 18ನೇ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ 19ನೇ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ತಮ್ಮ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ತಮ್ಮ ಬಾಕಿ ಚಂದಾ ಹಣವನ್ನೂ ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಈ ತಿಂಗಳಂತ್ಯಕ್ಕೆ ನಮ್ಮ ವರ್ಷಾವಧಿಯ ಲೆಕ್ಕವು ಮುಗಿಯಬೇಕಾದ್ದರಿಂದಲೂ ಚಂದಾಹಣ ಬಾಕಿ ಇರುವುದರಿಂದ ಇದಕ್ಕೆ ಬಹಳ ತೊಂದರೆಯಾಗಿರುವುದರಿಂದಲೂ ಎಲ್ಲರೂ ಅತ್ಯುದಾರ ಮನಸ್ಸಿನಿಂದ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ಕನಿಷ್ಟಪಕ್ಷ ಈ ತಿಂಗಳೊಳಗಾದರೂ ನಮಗೆ ತಲಪುವಂತೆ ಕಳಿಸಬೇಕಾಗಿ ವಿನಂತಿ.

ಮುಂದೆ "ನವಯುಗ"ದಲ್ಲಿ ಹಲವು ಸುಧಾರಣೆಗಳು ಆಗಲಿರುವುದರಿಂದಲೂ, ಕ್ರಮ ವ್ಯವಸ್ಥೆಗಳನ್ನು ಬಹುಕಠಿಣವಾಗಿ ಪಾಲಿಸಬೇಕಾದುದರಿಂದಲೂ, ಎಲ್ಲಾ ಚಂದಾದಾರರು ತಮ್ಮ ಚಂದಾಹಣವನ್ನು ಮುಂದಾಗಿಯೇ ಕಳುಹಿಸಬೇಕೆಂದು ಈ ಮೂಲಕ ನಿವೇದಿಸಿಕೊಳ್ಳುವೆವು.

ಚಂದಾದಾರರು ತಮ್ಮ ಚಂದಾಹಣವನ್ನು ದಿ ಕನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಎಲ್ಲಾ ಬ್ರಾಂಚ್‌ಗಳಲ್ಲಿ ನಮ್ಮ ಲೆಕ್ಕಕ್ಕೆ ಕೊಡಬಹುದು. ಬ್ರಾಂಚ್‌ಗಳ ಅನುಕೂಲತೆಯಿಲ್ಲದವರು ದಯಮಾಡಿ ಮನಿಯಾರ್ಡರು ಮಾಡಬೇಕು. ಮಂಗಳೂರಲ್ಲಿ ಕೆನರಾ ಪ್ರೆಸ್ಸಿನ ಮೆನೇಜರರೊಡನೆಯೂ ಬೊಂಬಾಯಿಯಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀ. ಯು. ಕೆ. ರಂಗರೊಡನೆಯೂ ಚಂದಾಹಣ ಪಾವತಿಮಾಡಬಹುದು

ಪತ್ರಿಕೆಯು ಸಾಮಾನ್ಯ ಸರ್ವರ ಮೆಚ್ಚುಗೆಗೂ ಪಾತ್ರವಾಗುವಂತೆ ಆದಷ್ಟು ಬೇಗನೆ ಸಾಧ್ಯವಾದಷ್ಟು ಬದಲಾವಣೆಗಳನ್ನು ಮಾಡಲಾಗುವುದು ಹೊಸತಾಗಿ ಚಂದಾದಾರರಾಗಿ ಪ್ರೋತ್ಸಾಹಿಸುವವರಿಗೂ ಇದು ಸುಸಂದರ್ಭ.

(ಪತ್ರಿಕೆ ಬೇಡವೆಂದಿರುವವರು ತಮ್ಮ ಚಂದಾಹಣ ಬಾಕಿಯಿದ್ದರೆ ಅದನ್ನು ಕಳಿಸಿಕೊಟ್ಟು ನಮಗೆ ಸಕಾಲದಲ್ಲಿ ತಿಳಿಸಬೇಕಾಗಿ ಸಾದರ ವಿನಂತಿ. —ಮೆನೇಜರ್.

ಶ್ರೀ. ಸುಭಾಸ ಭೋಸರ ವರ್ತನೆಯ ಸಮರ್ಥನೆ

ಜುಲ್ಯಾ ತಾ. ೯ರಲ್ಲಿ ಅಖಿಲಭಾರತ ದಿನಾಚರಣೆಯು ಪಾಪಕೃತ್ಯವಾದರೆ

ನಾನು ಪಾಪಿಯೇ ಸರಿ

ಕಾಂಗ್ರೆಸ್ ಪ್ರೆಸಿಡೆಂಟರಿಗೆ ಶ್ರೀ. ಸುಭಾಸ ಬಾಬುಗಳು ಬರೆದ ಪತ್ರದ ಸಾರಾಂಶ.

ತನ್ನ ವರ್ತನೆಯನ್ನು ಸಮರ್ಥಿಸಿ ಶ್ರೀ ಸುಭಾಸಚಂದ್ರ ಭೋಸರು ಆಗೋಸ್ತು ತಾ. 7ರಲ್ಲಿ ಈ ಕೆಳಗಣ ಸಾರಾಂಶದ ಪತ್ರವೊಂದನ್ನು ಕಾಂಗ್ರೆಸ್ ಪ್ರೆಸಿಡೆಂಟರಾದ ಡಾಕ್ಟರ್ ರಾಜೇಂದ್ರ ಪ್ರಸಾದರಿಗೆ ಬರೆದಿರುತ್ತಾರೆ 'ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ' ನಿರ್ಣಯಗಳನ್ನು ವಿರೋಧಿಸುವುದು ಮತ್ತು ಉಲ್ಲಂಘಿಸುವುದೆಂಬುದು ಬೇರೆ ಬೇರೆಯಾಗಿದೆ ನಾನು ನಿರ್ಣಯಗಳನ್ನು ವಿರೋಧಿಸಿರುವುದು ಮಾತ್ರವಲ್ಲವೆ ಉಲ್ಲಂಘಿಸಿರುವುದಿಲ್ಲ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಯಾವುದಾದರೊಂದು ನಿರ್ಣಯವು ನನಗೆ ಸಮ್ಮತವಾಗದಿದ್ದರೆ ಅದನ್ನು ವಿರೋಧಿಸುವುದು ನನ್ನ ಸೂತ್ರಬದ್ಧ ಹಕ್ಕಾಗಿದೆ.

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಥವಾ ಕಾಂಗ್ರೆಸಿನೊಳಗಣ ಬಹುಪಕ್ಷದ ಅಭಿಪ್ರಾಯಕ್ಕೆ ಸಮ್ಮತಿ ಇಲ್ಲದಿದ್ದ ಪಕ್ಷದಲ್ಲಿ ಆ ಕುರಿತು ವಿರೋಧಾಭಿಪ್ರಾಯ ವ್ಯಕ್ತಪಡಿಸಲು ಅಸಾಧ್ಯವಾದರೆ ಭಾಷಣಸ್ವಾತಂತ್ರ್ಯವಾದರೂ ಎಲ್ಲುಳಿಯಿತು! ಬ್ರಿಟಿಷ್ ಸರಕಾರದೊಡನೆ ನಾವು ಈ ಹಕ್ಕಿಗಾಗಿ ಹೋರಾಡುತ್ತೇವೆ. ಕಾಂಗ್ರೆಸಿನೊಳಗೆ ಅದು ಅಯುಕ್ತವಾಗುವುದಾದರೂ ಹೇಗೆ?

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಒಮ್ಮೆ ಒಂದು ನಿರ್ಣಯವು ಮಂಜೂರಾಯಿತೆಂದರೆ ಅನಂತರದ ಸಭೆಗಳಲ್ಲಿ ಅದನ್ನು ಬದಲಾಯಿಸಬಹುದು, ರದ್ದುಗೊಳಿಸಬಹುದೆಂಬುದನ್ನೂ, ಈ ನಿರ್ಣಯದ ವಿರೋಧವಾಗಿ ಕಾಂಗ್ರೆಸಿನ ಅಧಿವೇಶನದಲ್ಲಿ ಅಪೀಲುಮಾಡಬಹುದೆಂಬುದನ್ನೂ ನೀವು ಒಪ್ಪುವಿರೆಂದು ನಂಬುತ್ತೇನೆ. ಅಲ್ಪಸಂಖ್ಯಾಕರು, ಬಹುಸಂಖ್ಯಾಕರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವಂತೆ ಪ್ರಚಾರಮಾಡುವ ಹಕ್ಕು ಅವರಿಗಿರುವುದೆಂಬುದನ್ನು ನೀವು ಒಪ್ಪುವಿರೆಂದು ನೆನಸುತ್ತೇನೆ ಅಂದಮೇಲೆ, ನಾವು ಸಾರ್ವಜನಿಕ ಸಭೆ ನಡೆಸದೆ, ಪತ್ರಿಕೆಗಳಲ್ಲಿ ಬರೆಯದೆ ಹಾಗೆ ಮಾಡುವುದಾದರೂ ಹೇಗೆ? ಇಂದು ಕಾಂಗ್ರೆಸೆಂಬುದು ಕೇವಲ ಕೆಲವೇ ಮಂದಿಯ ಸಂಸ್ಥೆಯಲ್ಲ ಅದರ ಸದಸ್ಯರ ಸಂಖ್ಯೆಯು 45ಲಕ್ಷಕ್ಕೆ ಮುಟ್ಟಿರುವುದೆಂದು ನನ್ನ ನೆನಪು. ನಮ್ಮನ್ನು ಸಭೆಗಳನ್ನು ಕೂಡಿಸಿ ಭಾಷಣಮಾಡಲು ಮತ್ತು ಪತ್ರಿಕೆಗಳಲ್ಲಿ ಬರೆಯಬಿಟ್ಟರೆ ಮಾತ್ರ ಕಾಂಗ್ರೆಸಿನ ಸರ್ವಸಾಮಾನ್ಯ ಸದಸ್ಯರಲ್ಲಿ ನಾವು ಪ್ರಚಾರಮಾಡಿ ಅವರನ್ನು ನಮ್ಮ ಕಡೆಗೆ ಒಲಿಸಿಕೊಳ್ಳಲೆತ್ನಿಸಬಹುದು. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಒಮ್ಮೆ ಆದ ನಿರ್ಣಯ ಪವಿತ್ರವಾದದ್ದು, ಮತ್ತು ಅದು ಯಾವಾಗಲೂ ಅದೇ ರೀತಿ ಇರಬೇಕೆಂದು ನಿಮ್ಮ ಅಭಿಪ್ರಾಯವಾದರೆ ನೀವು ಆ ಕುರಿತಾದ ಟೀಕೆಯನ್ನು ನಿಷೇಧಿಸಬಹುದು. ಆದರೆ ನಿರ್ಣಯವನ್ನು ಪುನಃ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಥವಾ ಕಾಂಗ್ರೆಸ್ ಅಧಿವೇಶನದ ಮೂಲಕ ಒಪ್ಪಲಾಯಿಸುವ ಅಥವಾ ರದ್ದುಪಡಿಸುವ ಹಕ್ಕಿರುವುದೆಂದು ನೀವು ಒಪ್ಪುವಿರಾದರೆ ಆ ಕುರಿತಾದ ಖಂಡನೆಯನ್ನು ನೀವು ನಿಷೇಧಿಸುವುದಾದರೂ ಹೇಗೆಂದು ನನಗೆ ತಿಳಿಯದು.

ನಾನೊಬ್ಬ ಕಠಿಣ ಶಿಸ್ತುಚಾಲಕನೆಂದು ನನ್ನ ಣಿಕೆ. ಆದರೆ ಶಿಸ್ತಿಗೆ ನೀವು ಕೊಡುವ ಸಂಕುಚಿತ ಅರ್ಥವನ್ನು ನಾನೊಪ್ಪಲಾರೆ. ಶಿಸ್ತಿನ ಹೆಸರಲ್ಲಿ ನೀವು ನ್ಯಾಯವಾದ ಟೀಕೆಯ ಬಾಯಿಮುಚ್ಚಿಸಲೆತ್ನಿಸುವಿರಿ ಶಿಸ್ತೆಂದರೆ ಒಬ್ಬ ಪ್ರಜೆ ಸತ್ತ್ವಾತ್ಮಕವಾದ ಸೂತ್ರಬದ್ಧವಾದ ಹಕ್ಕನ್ನು ನಿರಾಕರಿಸುವುದಲ್ಲ

ಬೊಂಬಾಯಿಯ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಸತ್ಯಾಗ್ರಹದ ಮತ್ತು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೂ ಕಾಂಗ್ರೆಸ್ ಮಂತ್ರಿಗಳಿಗೂ ಇರತಕ್ಕ ಸಂಬಂಧದ ಕುರಿತು ಆಗಿರುವ ನಿರ್ಣಯಗಳು ನಿಜವಾದ ದೇಶಹಿತಕ್ಕೆ ಹಾನಿಕರವಿರುತ್ತವೆ. ಅದರಿಂದ ಕಾಂಗ್ರೆಸ್ ಮಂತ್ರಿಗಳ ಕೈಮೇಲಾಗಿ ಕಾಂಗ್ರೆಸ್ ಕಮಿಟಿಗಳು ಮೂಲೆಗೊತ್ತಲ್ಪಡುವಂತಾಗುತ್ತದೆ. ಕಾಂಗ್ರೆಸಿನ ಕ್ರಾಂತಿಕಾರಕ ಮನೋವೃತ್ತಿಯನ್ನವು ನಿರ್ಮೂಲಿಸುವಂಥವಾಗಿವೆ ಆದುದರಿಂದ ಈ ಎರಡೂ ನಿರ್ಣಯಗಳನ್ನು ಈಗ ಜ್ಯಾರಿಗೆ ತರದ ಹಾಗೆಯೇ ಇರಿಸಿ ಕ್ರಮೇಣ ರದ್ದುಪಡಿಸುವುದು ಅತ್ಯಾವಶ್ಯಕವಾಗಿದೆ.

1922ರಲ್ಲಿ ಗಯಾ ಕಾಂಗ್ರೆಸಿನ ಅನಂತರ ಸ್ವರಾಜ್ಯ ಪಕ್ಷದವರೇನು ಮಾಡಿರುವರೆಂಬುದನ್ನು ದಯಮಾಡಿ ಸ್ಮರಿಸಿಕೊಳ್ಳಿರಿ. ಗಯಾ ಕಾಂಗ್ರೆಸಿನ ನಿರ್ಣಯವನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ತಿದ್ದುಪಡಿಮಾಡಿದಾಗ ಗುಜರಾಥ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಅದನ್ನು ಧಿಕ್ಕರಿಸಲು ಬಂಡಾಯವೆಬ್ಬಿಸಿದುದನ್ನು ಮರೆಯಬೇಡಿರಿ. ಅಲ್ಪಸಂಖ್ಯಾಕರಿಗೆ ಬಂಡಾಯವೆಬ್ಬಿಸುವ ಹಕ್ಕಿದೆ ಎಂದು ಮಹಾತ್ಮ ಗಾಂಧಿಯವರೇ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದಿರುವುದನ್ನು ಮರೆಯಬೇಡಿರಿ. ನಾವು ಕೇವಲ ಕೆಲವು ನಿರ್ಣಯಗಳನ್ನು ಖಂಡಿಸಿರುವನೇ ಹೊರತು ಮತ್ತೇನೂ ಮಾಡಿಲ್ಲ

ನಮ್ಮ ಮೂಲಭೂತ ಹಕ್ಕೆಂದು ನಾವು ಪರಿಗಣಿಸುವ ವಿಷಯವನ್ನು ನೀವು ಅಷ್ಟೊಂದು ಮಹತ್ತಾಗಿ ಮಾಡುವುದು ಆಶ್ಚರ್ಯಕರ ನನ್ನೀ ಉದಾಹರಣೆಯನ್ನು ನೀವು ತೃಪ್ತಿಕರವೆಂದು ಸ್ವೀಕರಿಸುವಿರೆಂದು ಆಶಿಸುತ್ತೇನೆ. ನೀವು ಹಾಗೆ ಮಾಡದೆ ಶಿಸ್ತುಜ್ಯಾರಿ ಮಾಡುವ ನಿರ್ಧಾರಮಾಡುವಿರಾದರೆ ನಾನದನ್ನು ಸಂತೋಷದಿಂದ ಎದುರಿಸುವೆನು. ಜುಲ್ಯೈ ತಾ. 9ರ ಪ್ರದರ್ಶನಕ್ಕಾಗಿ ಕಾಂಗ್ರೆಸ್‌ವಾದಿ ಯಾರಾದರೂ ದಂಡಿಸಲ್ಪಟ್ಟಲ್ಲಿ ನನಗೂ ದಂಡನೆ ವಿಧಿಸಲೇ ಬೇಕು ಜುಲ್ಯಾ ತಾ 9ರ ಅಖಿಲಭಾರತ ದಿನಾಚರಣೆಯು ಪಾಪಕೃತ್ಯವಾದರೆ ನಾನೊಬ್ಬ ಮಹಾ ಪಾಪಿಯೆಂಬುದನ್ನು ನಾನೊಪ್ಪುತ್ತೇನೆ"

ವರ್ಕಿಂಗ್ ಕಮಿಟಿಯ ಶಿಸ್ತುಜಾರಿಯ ನಿರ್ಣಯವು ತಿಳಿಸಲ್ಪಟ್ಟಾಗ ಶ್ರೀ. ಸುಭಾಸರು "ಅಷ್ಟೆಯೋ?" ಎಂದರು ಉದ್ಗಾರವೆತ್ತಿದರು. "ವರ್ಕಿಂಗ್ ಕಮಿಟಿಯವರ ರಾಜಕೀಯ ವಿವೇಚನೆಗಾಗಿ ನಾನು ಅವರನ್ನು ಅಭಿನಂದಿಸುತ್ತೇನೆ." ಎಂದರು ಶ್ರೀ. ಸುಭಾಸ್ ಭೋಸರ ಅಣ್ಣ ಶರಚ್ಚಂದ್ರರು. ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯಲ್ಲಿ ಶ್ರೀ. ಭೋಸರ ಮೇಲಿನ ಶಿಸ್ತುಜ್ಯಾರಿಯ ಪ್ರಶ್ನೆಯು ಚರ್ಚಿಸಲ್ಪಡುವುದೆಂದು ತಿಳಿಯಬರುತ್ತದೆ. ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ. ಸುಭಾಸಚಂದ್ರರ ಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಶಿಸ್ತುಜ್ಯಾರಿ ಮಾಡುವರೆಂದು ಬಂಗಾಳವು ಎಂದೂ ನಿರೀಕ್ಷಿಸಲಿಲ್ಲ. ಇದು ಪ್ರತೀಕಾರಬುದ್ಧಿ ಮತ್ತು ಅಸಹಿಷ್ಣುತೆಯ ಪ್ರದರ್ಶನವಾಯಿತು. ಅಹಿಂಸಾತತ್ತ್ವಕ್ಕಿದು ಹೇಗೆ ಸರಿಹೋಗುವುದೋ?" ಎಂದು ಬಂಗಾಳದ ಮಾಜಿ ಮಂತ್ರಿಗಳಾದ ಸೈಯದ್ ನೌಶರಾಲಿಯವರೆಂದಿರುವರು. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರೆಸಿಡೆಂಟರಾದ ಡಾಕ್ಟರ್ ಸತೀಶಚಂದ್ರ ಬೆನರ್ಜಿ, ಎಮ್. ಎಲ್. ಎ. ಶ್ರೀದತ್ತ ಮಜೂಮ್ದಾರ್, ಎಮ್ ಎಲ್. ಎ. ಮೊದಲಾದವರು ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಕಠಿಣವಾಗಿ ಟೀಕಿಸಿರುವರು ಕಲ್ಕತ್ತದ ಹಿಂದುಸ್ಥಾನ ಸ್ಟೇಂಡರ್ಡ್ ಅಮೃತ ಬಜಾರ್ ಪತ್ರಿಕೆ ಮತ್ತು ಆನಂದ ಬಜಾರ್ ಪತ್ರಿಕೆಯು ಕೂಡಾ ಖಂಡಿಸಿರುವುದು

THE

BOMBAY LIFE ಸ್ಥಾಪನೆ 1908 ದಿ ಬೊಂಬೇ ಲೈಫ್

ASSURANCE CO, LTD ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ಮಹಿಮಾಟುಗಳು.

ವಿಮಾ ಅರ್ಜಿಗಳ ನೊಬಲಗು ವಿವೇಜು	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.

ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,

ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.

ದಿ ಬೊಂಬೆ ಲೈಫ್ ಬಿಲ್ಡಿಂಗ, ಸರ್ ಲಾಲುಭಾಯಿ ಸಮಲ್ದಾಸ್ ರೋಡ, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ—

ರಥಬೀದಿ. ಮಂಗಳೂರು	ಪುತ್ತ್ಯಾರ, ಕಲ್ಲಿಕೋಟೆ	ಪೋ. ಬಾಕ್ಸ್ ನಂ 337, ಮೌಂಟ್‌ರೋಡ್, ಮದರಾಸ್	ವಿಕ್ಟೋರಿಯಾಪುರಂ ಸರ್ಕಲ್ ಬೆಂಗಳೂರು ಸಿಟಿ	ಹರ್ನಬಿ ರೋಡ್, ಗಿರ್ಗಾಂ, ಬೊಂಬಾಯಿ ನಂ 4	ಸೆಂಟ್ರಲ್ ಸ್ಟೇಶನ್ ರೋಡ್, ತ್ರಿವೇಂಡ್ರಮ್.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ.

ಶ್ರೀ. ಸುಭಾಸರ ಮೇಲೆ 3 ವರ್ಷ ಶಿಸ್ತು ಜ್ಯಾರಿ

ಇಂಡಿಯಾ ಸರಕಾರದ ಧೋರಣೆಯ ನಿಷೇಧ.

ಡಿಲ್ಲಿ ಎಸೆಂಬ್ಲಿಯ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ಮೆಂಬರರು ಭಾಗವಹಿಸಕೂಡದು.

ಮುಂದಿನ ಯುದ್ಧದ ಕುರಿತು ಕಾಂಗ್ರೆಸಿನ ಧೋರಣೆಯ ಸ್ಪಷ್ಟೀಕರಣ.



ಇದೇ ತಾ. 9ನೇ ಬೆಳಿಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ವಾರ್ಧ ದಲ್ಲಿ ಆರಂಭವಾಯಿತು. ಹಾಜರಿದ್ದವರು ಶ್ರೀಗಳಾದ ಡಾಕ್ಟರ್ ರಾಜೇಂದ್ರ ಪ್ರಸಾದರು, ಸರ್ದಾರ್ ವಲ್ಲಭಾಯಿ ಪಟೇಲರು, ಭೂಲಾಭಾಯಿ ದೇಸಾಯಿಯವರು, ಸರೋಜಿನಿ ದೇವಿಯರು, ಶಕರರಾವ್ ದೇವ್, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ, ಹರಿಕೃಷ್ಣ ಮೆಹತಬ್, ಆಚಾರ್ಯ ಕೃಪಾಲನಿ, ಡಾಕ್ಟರ್ ಬಿ ಸಿ ರ್ಡ್ರೊ ಮತ್ತು ಡಾಕ್ಟರ್ ಪ್ರಫುಲ್ಲ ಘೋಷರು. ಪಂಡಿತ ಜವ್ಹಾರಲಾಲ ನೆಹರುಗಳು ಅಪರಾಹ್ನ ಬರಲಿದ್ದುದರಿಂದ ಮತ್ತು ಗಾಂಧಿಜಿಯವರೂ ಅಪರಾಹ್ನದ ಸಭೆಯಲ್ಲಿ ಭಾಗವಹಿಸಲಿದ್ದುದರಿಂದ ಬೆಳಿಗ್ಗೆ ಬೇರೆ ಬೇರೆ ವಿಷಯಗಳ ಕುರಿತು ಸಾಮಾನ್ಯ ಚರ್ಚೆ ಮಾತ್ರ ನಡೆಯಿತು. ಬಂಗಾಳ ಪ್ರಾಂತಿಕ ಕಾರ್ಯಕಾರಿ ಮಂಡಲಿಯನ್ನು ತೆಗೆದುಹಾಕಿ, ಹೊಸ ಕಾರ್ಯಕಾರಿ ಮಂಡಲಿಯನ್ನೂ ಚುನಾವಣಾ ವಿಚಾರಣಾ ಕಮಿಟಿಯನ್ನೂ ರಚಿಸಿದ ಮತ್ತು ಜುಲೈ ತಾ. 9ರ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯಗಳ ನಿಷೇಧಪ್ರದರ್ಶನದಲ್ಲಿ ಬಂಗಾಳ ಪ್ರಾಂತಿಕ ಕಾರ್ಯಕಾರಿ ಮಂಡಲಿಯವರು ಭಾಗವಹಿಸಿದ ಕುರಿತು ಉದಾಹರಣೆಯು ಬಾರದುದರಿಂದ ಅದನ್ನು ಕೂಡಲೇ ಕಳುಹಿಸಬೇಕೆಂದು ತಂತಿ ಮೂಲಕ ತಿಳಿಸಲಾಯಿತು ಮಧ್ಯಪ್ರಾಂತ ಎಸೆಂಬ್ಲಿಯ ಶ್ರೀ ಎ. ಎಸ್. ಉಘೋಜಿ ಎಂಬವರು ಕಾಂಗ್ರೆಸಿನ ಶಿಸ್ತಿಗೆ ಭಂಗವನ್ನುಂಟು ಮಾಡುವ ರೀತಿಯಲ್ಲಿ ವರ್ತಿಸಿರುವುದರಿಂದ ಅವರಿಂದ ಉದಾಹರಣೆ ಪಡೆಯಲಾಗಿತ್ತು. ಅದು ಅತೃಪ್ತಿಕರವಿರುವದರಿಂದ ಅವರ ಹೆಸರನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯರ ಪಟ್ಟಿಯಿಂದ ತೊಡೆದುಹಾಕಿ 3 ವರ್ಷ ಅವರು ಕಾಂಗ್ರೆಸ್ ಕಮಿಟಿಗಳಲ್ಲಿ ಯಾವ ಅಧಿಕಾರವನ್ನೂ ಪಡೆಯದಂತೆ ನಿಷೇಧಿಸಲಾಯಿತು. ಮತ್ತು ಅವರು ತನ್ನ ಎಸೆಂಬ್ಲಿ ಮೆಂಬರಿಕೆಗೆ ರಾಜಿನಾಮೆ ಕೊಡಬೇಕೆಂದು ನಿರ್ಧರಿಸಲಾಯಿತು ಬಂಗಾಳ ಪ್ರಾಂತಿಕ ಕಾರ್ಯಕಾರಿ ಕಮಿಟಿಯನ್ನು ತೆಗೆದುಹಾಕಿ ಹೊಸ ಕಮಿಟಿಯನ್ನು ನೇಮಿಸಿದ ಕುರಿತು ಶ್ರೀ. ಕಿರಣಶಂಕರ ರ್ರಾಯವರು ಸ್ವತಃ ವರ್ಕಿಂಗ್ ಕಮಿಟಿಯ ಮುಂದೆ ತನ್ನ ಆಕ್ಷೇಪಗಳನ್ನು ಹೇಳಿಕೊಂಡರು.

ಮಂತ್ರಿಗಳ ಮೇಲೆ ಆರೋಪ

ಮಧ್ಯಪ್ರಾಂತ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ 12 ಮಂದಿ ಕಾಂಗ್ರೆಸ್ ಮೆಂಬರರು, ಮಧ್ಯಪ್ರಾಂತದ ಮಂತ್ರಿಗಳಾದ ಶ್ರೀ. ಮಿಶ್ರರವರ ಮೇಲೆ ಕೆಲವು ಆರೋಪಗಳನ್ನು ಮಾಡಿ ಪಾರ್ಲಿಮೆಂಟರಿ ಸಬ್ ಕಮಿಟಿಯ ಅಧ್ಯಕ್ಷ ಸರ್ದಾರ್ ವಲ್ಲಭಾಯಿಯವರಿಗೆ ಎಪ್ರಿಲ್ ತಾ. 5ರಲ್ಲಿ ಬರೆದುಕೊಂಡಿದ್ದರು. ಇವರನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆ ಹಾಜರಾಗಬೇಕೆಂದು ಪಟೇಲರು ಕೇಳಿಕೊಂಡಿದ್ದರು. ಈ ಮೆಂಬರರು ಮಾಡಿರುವ ಆರೋಪಗಳು ನಿಜವಾಗಿದ್ದರೆ ಶ್ರೀ. ಮಿಶ್ರರವರು ಮಂತ್ರಿಪದವಿಯಿಂದ ತಳ್ಳಿಹಾಕಲ್ಪಡಬೇಕು. ನಿಜವಲ್ಲವೆಂದಾದರೆ ಈ 12 ಮಂದಿ ಮೆಂಬರರನ್ನು ದಂಡಿಸಬೇಕೆಂದೇ ಸರ್ದಾರ್ ವಲ್ಲಭಾಯಿಯವರ ಅಭಿಮತವಿರುತ್ತದೆ. ತಾ. 10ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಶ್ರೀ. ಮಿಶ್ರರ ಮೇಲಿನ ಆರೋಪಗಳನ್ನೆಲ್ಲಾ ಪರಿಶೀಲಿಸಿ, ಇನ್ನು ನಾಗಪುರಕ್ಕೆ ಹೋಗಿ ರೆಕಾರ್ಡುಗಳನ್ನು ನೋಡಿ ಹೆಚ್ಚಿನ ವಿಚಾರಣೆ ನಡಿಸಲು ಶ್ರೀ. ಭೂಲಾಭಾಯಿಯವರು ನೇಮಿಸಲ್ಪಟ್ಟರು. ಆಪ್ತರುಗಳ ರುಜವಾತಿನಿಂದ ಶ್ರೀ. ಮಿಶ್ರರ ಮೇಲಿನ ಆರೋಪಗಳಿಗೆ ಆಧಾರವಿರುವಂತೆ ತೋರಿಬಂದಿರುವುದಿಲ್ಲ

ಸಿಲೋನಿನ ಹಿಂದೀಯರ ಪ್ರಶ್ನೆ

ಸಿಲೋನಿನ ಹಿಂದೀಯರ ಪ್ರಶ್ನೆಯ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪಂಡಿತ ಜವಾಹಿರಲಾಲ ನೆಹರುಗಳ ವರದಿಯನ್ನು ಪರಿಶೀಲಿಸಿ ಅವರ ಪ್ರಯತ್ನವನ್ನು ಪ್ರಶಂಸಿಸಲಾಯಿತು. ಮತ್ತು ಸಿಲೋನ್ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸದೆ ಹಿಂದೀಯರನ್ನು ಹೊರ ಕಳುಹಿಸುತ್ತಿರುವುದು ಶೋಚನೀಯ. ಸಿಂಹಳೀಯರಿಗೂ ಹಿಂದೂದೇಶಕ್ಕೂ ಪ್ರತಿಯೊಂದು ರೀತಿಯಲ್ಲಿಯೂ ನಿಕಟ ಸಂಬಂಧವಿದೆ ಸಿಲೋನಿನ ಜನತೆಯಲ್ಲಿ ಈಗ ಉಂಟಾಗಿರುವ ಜಾಗ್ರತಿ, ಮತ್ತು ರಾಷ್ಟ್ರಾಭಿಮಾನವು ಸಂತೋಷಕರವಿದೆ ಸಿಂಹಳೀಯರಲ್ಲಿ ಈಗ ತೀವ್ರವಾಗಿ ಹಬ್ಬಿರುವ ನಿರುದ್ಯೋಗ ಮತ್ತು ಸಾಂಪತ್ತಿಕ ದುಸ್ಥಿತಿಯು ವಿಷಾದಕರವಿದೆ ಹಿಂದೂದೇಶವು ಸಿಲೋನಿನೊಂದಿಗೆ ಸಹಕಾರ, ಸೌಹಾರ್ದದಿಂದಿರಲು ಕಾತೊರೆಯುತ್ತಿದೆ ಆದರೆ ಸಿಲೋನಿಗೆ ಹೋಗಿ ಶ್ರಮಿಸಿ ಜೀವನ ನಡಿಸುತ್ತಿರುವ ಹಿಂದೀಯರನ್ನು ಏಕಾಏಕಿಯಾಗಿ ಸಿಲೋನ್ ಸರಕಾರವು ಹೊರ ಕಳುಹಿಸುತ್ತಿರುವುದು "ಅನ್ಯಾಯವಾಗಿದೆಯೆಂದು" ದೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿರ್ಣಯ ಇನ್ನು ಮುಂದೆ ಸಿಲೋನಿಗೆ ಹಿಂದೀ ಕೆಲಸಗಾರರನ್ನು ಕಳುಹಿಸುವುದನ್ನು ನಿಲ್ಲಿಸಬೇಕೆಂದೂ, ಆ ಸಂಬಂಧವಾಗಿ ಸಿಲೋನಿನ ಮಂಡಪಮ್ ಎಂಬಲ್ಲಿರುವ ಡಿಪ್ಪೋವನ್ನು ಮುಚ್ಚಬೇಕೆಂದೂ ವರ್ಕಿಂಗ್ ಕಮಿಟಿಯು ನಿಶ್ಚಯಿಸಿರುತ್ತದೆ

ಶ್ರೀ ಸುಭಾಸರ ಮೇಲೆ ಶಿಸ್ತು ಜ್ಯಾರಿ

ಇದೇ 11ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಸಭೆ ಸೇರಿ ದೀರ್ಘಕಾಲ ಆಲೋಚಿಸಿ ಶ್ರೀ ಸುಭಾಸರನ್ನು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಅನರ್ಹರನ್ನಾಗಿ ಮಾಡುವ ಮತ್ತು 3ವರ್ಷಗಳ ತನಕ ಅವರು ಕಾಂಗ್ರೆಸ್ ಕಮಿಟಿಗಳ ಯಾವ ಅಧಿಕಾರವನ್ನೂ ಪಡೆಯಕೂಡದೆಂದು ನಿಷೇಧಿಸುವ ನಿರ್ಣಯ ಮಾಡಿರುವರು. ತನ್ನ ವರ್ತನೆಯ ಕುರಿತು ಶ್ರೀ ಸುಭಾಸ್ ಚಂದ್ರರು ಕಾಂಗ್ರೆಸ್ ಪ್ರಸಿಡೆಂಟರಿಗೆ ಬರೆದಿರುವ ದೀರ್ಘ ಪತ್ರವನ್ನು ವರ್ಕಿಂಗ್ ಕಮಿಟಿಯವರು ಪರಿಶೀಲಿಸಿದರು ಕಾಂಗ್ರೆಸ್ ಪ್ರೆಸಿಡೆಂಟರ ಅನುಜ್ಞೆ ಬಂದೊಡನೆಯೇ ಅದನ್ನು ಶಿರಸಾವಹಿಸುವುದು ಮಾಜಿ ಕಾಂಗ್ರೆಸ್ ಪ್ರೆಸಿಡೆಂಟರೂ ರಾಷ್ಟ್ರಸೇವಕರೂ ಆದ ಸುಭಾಸರ ಸ್ಪಷ್ಟ ಕರ್ತವ್ಯವಿತ್ತು ಆ ಕುರಿತು ಅವರು ಆವ "ಆಕ್ಷೇಪವಿದ್ದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಬರೆದು ತಿಳಿಸಬಹುದಿತ್ತು ಆದರೆ ಒಂದೊಮ್ಮೆಗೆ ಪ್ರೆಸಿಡೆಂಟರ ಆಜ್ಞೆಯನ್ನು ಅವರು ಪಾಲಿಸಲೇ ಬೇಕಿತ್ತು ಯಾವುದಾದರೊಂದು ಸಂಸ್ಥೆಯು ಸರಿಯಾಗಿ ನಡೆಯಬೇಕಾದರೆ ಅವಶ್ಯವಾಗಿರುವ ಪ್ರಥಮ ವಿಷಯವಿದು ಲೋಕದಲ್ಲೆಲ್ಲಾ ಅತಿ ಪ್ರಬಲವಾಗಿರುವ ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಮಹತ್ತಾದ ಹೋರಾಟದಲ್ಲಿ ನಿರತವಾಗಿರುವ ಕಾಂಗ್ರೆಸಿನಂತಹ ಸಂಸ್ಥೆಗಂತೂ ಇದು ಜೀವನಾಡಿಯು.

ಶ್ರೀ ಸುಭಾಸರನ್ನು ನಂತರ ಕಾಂಗ್ರೆಸಿನ ಘಟನೆಗೆ ಅವರ ಪ್ರತಿಯೊಬ್ಬ ಸದಸ್ಯನೂ ಅಂಗ ತೋರಿದ ಅದ ವಿತ್ತು ಆ ಪ್ರಕಾರ

ಪುಟ ೨ಕ್ಕೆ

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8 0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ ೭೭೪ ಪೇಜುಗಳು ಇರುವ ದೊಡ್ಡ ಪುಸ್ತಕ.ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ, ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss watch Co.
Book-Sellers Post Box No 68
G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ನಾಲ್ಕಾರು ವರುಷಗಳ ಮೊದಲು ಕೋಂಗ್ರೆಸು ಒಂದೇ ಅಭಿಪ್ರಾಯದ ಜನರಿಂದ ಕೂಡಿತ್ತು. ಕೋಂಗ್ರೆಸಿಗೆ ಹೊರಗಿನವರಿಂದ ಸ್ವಲ್ಪ ಮನ್ನಣೆ ದೊರೆತ ಕೂಡಲೇ ಅದರ ನಾಯಕತ್ವದ ವಿಷಯದಲ್ಲಿ ಸ್ಪರ್ಧೆಯು ಪ್ರಾರಂಭವಾಯಿತು. ಕೋಂಗ್ರೆಸಿನ ಎಲ್ಲಾ ಕಾರ್ಯಗಳನ್ನು ನಡೆಯಿಸುತ್ತಿದ್ದ ಪಟೇಲ್ ರಾಜೇಂದ್ರ ಪ್ರಸಾದ್ ಅಬ್ದುಲ್ ಕಲಂ ಅಜದ್ ಇವರ ಮೇಲೆ ಕೆಲವರು ಆಕ್ಷೇಪಿಸಲಾರಂಭಿಸಿದರು. ಅಧಿಕಾರವನ್ನು ಅವರ ಕೈಯಿಂದ ತಪ್ಪಿಸಬೇಕೆಂದು ಕೆಲವರು ಪ್ರಯತ್ನಿಸಿದರು.

ಈ ಉದ್ದೇಶದಿಂದ ಸಮತಾವಾದಿಗಳ ಪಕ್ಷವೊಂದು ತಲೆದೋರಿತು. ಸಮತಾವಾದಿಗಳೆಂದರೆ ರಷ್ಯದ ಕ್ರಮವನ್ನು ನಮ್ಮ ದೇಶಕ್ಕೆ ತರಬೇಕೆನ್ನುವವರು. ಆದರೆ ಕೋಂಗ್ರೆಸು ಸಮತಾವಾದಿಗಳು ಸಮತಾವಾದದ ತತ್ವಗಳನ್ನು ಪ್ರಚಾರಮಾಡುವುದಕ್ಕಿಂತಲೂ ಗಾಂಧಿ ತತ್ವವು ಪ್ರಯೋಜನವಿಲ್ಲವೆಂಬ ಪ್ರಚಾರವನ್ನೇ ಮಾಡುತ್ತಾ ಬಂದರು. ಪಟೇಲ್ ಮೊದಲಾದವರ ಕಾರ್ಯಕ್ರಮಗಳಿಗೆ ವಿರೋಧ ಪ್ರಚಾರವು ಬೇಕಾದಷ್ಟು ನಡೆಯಿತು. ಅವರಿಗಿಂತ ತಾವು ತೀವ್ರಗಾಮಿಗಳೆಂದು ಹೇಳಿಕೊಂಡು ಸಮತಾವಾದಿಗಳು ತಿರುಗಾಡುತ್ತಿದರು. ಜಿಲ್ಲೆಯ ಕಮಿಟಿಗಳಲ್ಲಿ ಕೆಲವು ಕಡೆ ಇವರಿಗೆ ಸ್ವಲ್ಪ ಪ್ರಾಧಾನ್ಯ ದೊರೆಯುತ್ತಿದ್ದರೂ ಪ್ರಾಂತಿಕ ಅಖಿಲ ಭಾರತ ಕೋಂಗ್ರೆಸು ಕಮಿಟಿಗಳಲ್ಲಿ ಪ್ರಾಧಾನ್ಯ ದೊರೆಯಲಿಲ್ಲ. ಜಯಪ್ರಕಾಶ ನಾರಾಯಣ, ನರೇಂದ್ರದೇವ್ ಮಸಾನಿ, ಮೆಹರಾಲಿ, ಕಮಲಾದೇವಿ ಇವರೇ ಸಮತಾವಾದಿಗಳ ಮುಖಂಡರು. ಇವರು ಎಷ್ಟು ಪ್ರಯತ್ನಮಾಡಿದರೂ ಪಟೇಲ್ ಮೊದಲಾದವರಿಂದ ಕೋಂಗ್ರೆಸಿನ ಅಧಿಕಾರವನ್ನು ತಪ್ಪಿಸಲಾಗಲಿಲ್ಲ.

ಪಟೇಲ್ ಮೊದಲಾದವರಿಂದ ಅಧಿಕಾರವನ್ನು ಕಿತ್ತುಕೊಳ್ಳಬೇಕೆಂದು ಹಟತೊಟ್ಟವರಲ್ಲಿ ಶ್ರೀ. ಎಂ ಎನ್. ರೋಯಿಗಳೂ ಒಬ್ಬರು. ಇವರು ರಷ್ಯದಲ್ಲಿ ಲೆನಿನ್ ಇವರೊಡನೆ ಕೆಲಸ ಮಾಡಿ ಅನುಭವಶಾಲಿಗಳಾಗಿರುವುದರಿಂದ ಸಮತಾವಾದಿಗಳ ನಾಯಕರಾಗುವರೆಂದು ಕೆಲವರು ಎಣಿಸುತ್ತಿದ್ದರು. ಆದರೆ ಸಮತಾವಾದಿಗಳ ಮುಖಂಡರು ಇತರರ ನಾಯಕತ್ವವನ್ನು ಒಪ್ಪುವವರಲ್ಲ. ರೋಯಿಗಳು ಇನ್ನೊಬ್ಬರೊಳಗೆ ಕೆಲಸ ಮಾಡುವವರೂ ಅಲ್ಲ. ಹೀಗಾಗಿ ರೋಯಿಗಳು ಸಮತಾವಾದಿಗಳೊಡನೆ ಸೇರದೆ ತನ್ನ ಅಲ್ಪ ಸ್ವಲ್ಪ ಅನುಯಾಯಿಗಳನ್ನು ಕಟ್ಟಿಕೊಂಡು ಪ್ರತ್ಯೇಕವಾಗಿ ಇದ್ದರು. ಇವರೊಡನೆ ಕೆಲಸಮಾಡುವವರಿಗೆ ರೋಯಿಸ್ಟರೆಂದು ಹೆಸರು. ರೋಯಿಗಳು ಇಲ್ಲಿಯ ಕೋಂಗ್ರೆಸ್ ಸಮತಾವಾದಿಗಳಿಗೆ ಬದ್ಧ ವಿರೋಧಿಗಳು. ಪಟೇಲರಿಗೂ ಸಮತಾವಾದಿಗಳಿಗೂ ಸಂಧಿ ಬಿದ್ದಾಗಲೆಲ್ಲಾ ಪಟೇಲರೊಡನೆ ಸೇರಿ ಸಮತಾವಾದಿಗಳಿಗೆ ವಿರೋಧ ಮಾಡುತ್ತಿದ್ದರು. ಆದರೆ ಪಟೇಲರನ್ನು ಅಧಿಕಾರದಿಂದ ಕೆಳಗೆ ಹಾಕಬೇಕೆಂಬ ಉದ್ದೇಶದಿಂದ ಪಟೇಲರ ಗಾಂಧಿಯವರ ಮತ್ತು ಕೋಂಗ್ರೆಸ್ ಮಂತ್ರಿಮಂಡಲದವರ ಕಾರ್ಯಗಳನ್ನು ಸಾಧ್ಯವಿದ್ದಲ್ಲೆಲ್ಲಾ ನಿರ್ದಾಕ್ಷಿಣ್ಯದಿಂದ ಟೀಕಿಸುತ್ತಿದ್ದರು.

ಪಟೇಲ್, ರಾಜೇಂದ್ರ ಪ್ರಸಾದ್, ಅಜದ್ ಮೊದಲಾದವರ ಕೈಯಿಂದ ಅಧಿಕಾರವನ್ನು ಕಿತ್ತುಕೊಳ್ಳಬೇಕೆಂದು ಹಾತೊರೆ

ಕಾಂಗ್ರೆಸಿನೊಳಗಿನ ಕೆಲವು ಪಕ್ಷಗಳು

- ನಿಜವಾದ ಕೆಲಸಗಾರರು ಕಾಂಗ್ರೆಸ್ಸಿನಿಂದ ಹಿಂದೆ ಸರಿಯುವಂತಾದ ಪರಿಸ್ಥಿತಿ.
- ಬರುವ ಕಾಂಗ್ರೆಸಿನಲ್ಲಿ ನಿಯಮಗಳನ್ನು ತಿದ್ದಬೇಕಾದ ಆವಶ್ಯಕತೆಯ ನಿರೀಕ್ಷೆ

(ಶ್ರೀ ಪಿ. ವಿ ಉಪಾಧ್ಯಾಯ, ವಕೀಲ್, ಕಾರ್ಕಳ)

ಯುತ್ತಿದ್ದವರಲ್ಲಿ ಬೋಸರು ಒಬ್ಬರು. ಇವರು ಕೋಂಗ್ರೆಸ್ ಅಧ್ಯಕ್ಷರಾಗಿದ್ದರೂ ವರ್ಕಿಂಗ್ ಕಮಿಟಿಯು ಪಟೇಲ್ ಪ್ರಭೃತಿಗಳ ಕೈಯಲ್ಲಿದ್ದುದರಿಂದ ಇವರಿಗೆ ಏನು ಮಾಡಲಿಕ್ಕೂ ಆಗಲಿಲ್ಲ. ತನಗೂ ವರ್ಕಿಂಗ್ ಕಮಿಟಿಗೂ ಸರಿಯಿಲ್ಲವೆಂದು ಹೊರಗೆ ತೋರಿಸಲೂ ಉಪಾಯವಿರಲಿಲ್ಲ. ಏನು ಮಾಡುವುದೆಂದು ತಿಳಿಯದೆ ಭೋಸರು ಹೇಗೂ ಒಂದು ವರ್ಷ ಮೌನವಾಗಿ ದಿನ ತೆಗೆದರು. ಇನ್ನೊಂದು ವರ್ಷವೂ ತಾನೇ ಅಧ್ಯಕ್ಷನಾಗಬೇಕು. ವರ್ಕಿಂಗ್ ಕಮಿಟಿಯಲ್ಲಿ ಪಟೇಲ್ ಪ್ರಭೃತಿಗಳಿಗೆ ಸ್ಥಾನಕೊಡಬಾರದು. ತನಗೆ ಬೇಕಾದ ಜನರನ್ನು ವರ್ಕಿಂಗ್ ಕಮಿಟಿಗೆ ಆರಿಸಿಕೊಂಡು ಸುಖವಾಗಿ ಅಧಿಕಾರ ನಡೆಯಿಸಬೇಕು ಎಂದು ಭೋಸರು ಬಹಳವಾಗಿ ಆಶಿಸುತ್ತಿದ್ದರು. ಭೋಸರು ಇದಕ್ಕಾಗಿ ಪಟೇಲರಿಗೆ ವಿರೋಧಿಗಳು ಯಾರ್‍ಯಾರೆಂದು ಹುಡುಕಿಕೊಂಡು ಗುಪ್ತವಾಗಿ ಅವರ ಸಹಾಯವನ್ನು ಕೇಳಿದರು. ಹಲವರು ಹಲವು ಕಾರಣಗಳಿಂದ ಭೋಸರನ್ನು ಪುನಃ ಅಧ್ಯಕ್ಷನನ್ನಾಗಿ ಮಾಡುವ ಕಾರ್ಯದಲ್ಲಿ ನೆರವಾದರು. ನಮ್ಮ ಬಾಯಿಯ ನರಿಮೆನರ, ಸಿ ಪಿ ಯ ಖೇರರು, ಮದ್ರಾಸಿನ ಶ್ರೀನಿವಾಸ ಅಯ್ಯಂಗಾರರು ಅಲ್ಲದೆ ಸಮತಾವಾದಿಗಳು ರೋಯಿಸ್ಟರು ಕಮ್ಯೂನಿಷ್ಟರು ಎಲ್ಲರೂ ಗುಪ್ತವಾಗಿ ಶತ ಪ್ರಯತ್ನ ಮಾಡಿ ಭೋಸರನ್ನು ಹೇಗಾದರೂ ಅಧ್ಯಕ್ಷ ಪದವಿಗೆ ಪುನಃ ಆರಿಸಿದರು. ಭೋಸರು ಜ್ವರದಲ್ಲಿ ನರಳುತ್ತಿದ್ದರೂ ತ್ರಿಪುರಿಗೆ ಹೋದರು.

ಭೋಸರ ಇಂಗಿತವು ಪಟೇಲ ಪ್ರಭೃತಿಗಳಿಗೆ ತಿಳಿದ ಕೂಡಲೇ ಅವರ ತನ್ನ ಇಷ್ಟವಿದ್ದಂತೆ ನಡೆಯಿಸದಂತೆ ಗಾಂಧಿಯವರು ಸೂಚಿಸುವವರನ್ನೇ ವರ್ಕಿಂಗ್ ಕಮಿಟಿಗೆ ಆರಿಸಬೇಕೆಂದು ತ್ರಿಪುರಿಯಲ್ಲಿ ನಿರ್ಣಯಮಾಡಿಬಿಟ್ಟರು. ಭೋಸರ ಆಶೆಯೆಲ್ಲವೂ ಮಣ್ಣುಪಾಲಾಯಿತು. ಗಾಂಧಿಯವರ ಜನರೊಂದಿಗೆ ಕೆಲಸಮಾಡಿ ನೋತ ಭೋಸರು ಪುನಃ ಅವರೊಡನೆ ಕೆಲಸಮಾಡಲಾದೀತೇ? ಇದನ್ನು ಸಹಿಸಲಾರದೆ ಭೋಸರು ಅಧ್ಯಕ್ಷತನಕ್ಕೆ ರಾಜಿನಾಮೆ ಕೊಟ್ಟರು.

ಇಷ್ಟು ಪ್ರಯತ್ನ ಮಾಡಿ ತಾನು ಅಧ್ಯಕ್ಷನಾದರೂ ಆ ಪದವಿಯಿಂದ ತನ್ನನ್ನು ಉಪಾಯದಲ್ಲಿ ತಳ್ಳಿಹಾಕಿಬಿಟ್ಟ ಪಟೇಲ ಪ್ರಭೃತಿಗಳಿಗೆ ಬುದ್ಧಿ ಕಲಿಸದೆ ಬಿಡೆನೆಂದು ಭೋಸರು ಈಗ ಹೊರಟಿರುತ್ತಾರೆ. ಕೋಂಗ್ರೆಸಿನ ಒಳಗಿರುವ ಎಲ್ಲರೂ ತನ್ನ ಈ ಹೊಸ ಕಾರ್ಯದಲ್ಲಿ ಸಹಾಯಮಾಡ್ಯಾರೆಂದು ಭೋಸರು ಎಣಿಸಿದ್ದರು. ಸಮತಾವಾದಿಗಳು ಭೋಸರನ್ನು ತ್ರಿಪುರಿಯಲ್ಲಿಯೇ ಕೈಬಿಟ್ಟುಬಿಟ್ಟರು. ರೋಯಿಸ್ಟರು ಅವರ ಹಿಂದ ಹೆಚ್ಚು ಸಮಯ ನಿಲ್ಲಲಿಲ್ಲ. ಕೋಂಗ್ರೆಸಿನ ಒಳಗಿರುವವರು ಯಾರೂ ತನಗೆ ಹೆಚ್ಚಿನ ಬೆಂಬಲಕೊಡದಿರುವುದನ್ನು ನೋಡಿ ಭೋಸರು ಕೋಂಗ್ರೆಸು ವಿರೋಧಿಗಳಾದ ಅಂಬೇಡ್ಕರ್, ಜಿನ್ನ, ಜಸ್ಟಿಸ್ ಪಾರ್ಟಿಯ ರಾಮಸ್ವಾಮಿ ನಾಯ್ಕರ್ ಇವರ ಕೂಡೆ ಸಹಾಯ ಕೇಳುತ್ತಿದ್ದಾರೆ. ಹೇಗಾದರೂ ಮಾಡಿ ಒಮ್ಮೆ ಗಾಂಧಿತತ್ವದವರನ್ನು ಅಧಿಕಾರದಿಂದ ತಳ್ಳಬೇಕೆಂದು ಭೋಸರ ಯೋಚನೆ. ಭೋಸರ ಹೊಸ ಪಕ್ಷಕ್ಕೆ ಫೋರ್ವರ್ಡ್ ಬ್ಲೋಕ್ ಎಂದರೆ ಮುಂದು ಹೋಗುವ ಪಂಗಡವೆಂದು ಹೆಸರು. ಭೋಸರು ಹೋದಲ್ಲೆಲ್ಲಾ ಸಾವಿರಾರು ಜನರು ಅವರನ್ನು ಸ್ವಾಗತೀಕರಿಸುತ್ತಿದ್ದಾರೆ. ಆದರೆ ಅವರ ನಾಯಕತ್ವದಲ್ಲಿ ಕೆಲಸಮಾಡುವವರು ಎಷ್ಟು ಜನರಿರುವರೆಂದು ಗೊತ್ತಿಲ್ಲ.

ಮೇಲೆ ಹೇಳಿದ ಈ ಮೂರು ಪಕ್ಷಗಳಿಗೂ ಸೇರದೆ ಗಾಂಧಿ, ಪಟೇಲ್, ರಾಜೇಂದ್ರ ಪ್ರಸಾದ್ ಇವರ ನಾಯಕತ್ವದಲ್ಲಿ ವಿಶ್ವಾಸವಿರುವವರನ್ನು ರೈಟಿಸ್ಟ್ ಎಂದು ಕರೆಯುತ್ತಾರೆ. ಅಧಿಕಾರದಲ್ಲಿರುವವರಿಗೆ ರೈಟಿಸ್ಟ್ ಎಂದೂ ಅವರನ್ನು ವಿರೋಧಿಸುವವರಿಗೆ ಲೆಫ್ಟಿಸ್ಟ್ ಎಂದೂ ಕರೆಯುವುದು ಪಾಶ್ಚಾತ್ಯ ಪದ್ಧತಿ.

ಕೋಂಗ್ರೆಸ್ ಮೆಂಬರರ‍್ಯಾರೂ ಇತರ ರಾಜಕೀಯ ಪಕ್ಷಗಳ ಮೆಂಬರರಾಗಕೂಡದೆಂದು ಬರುವ ರಾಮಘರ್ ಕೋಂಗ್ರೆಸಿನಲ್ಲಿ ಒಂದು ನಿರ್ಣಯವಾಗುವ ಸಂಭವವಿದೆ. ಆ ಪ್ರಕಾರ ನಿರ್ಣಯವಾಗದಿದ್ದರೆ ಕೋಂಗ್ರೆಸಿನ ಶಕ್ತಿಯು ಕುಂದುತ್ತಾ ಹೋಗುವುದೆಂಬುದರಲ್ಲಿ ಸಂದೇಹವಿಲ್ಲ. ಅಧಿಕಾರದಲ್ಲಿ ಆಶೆ ಇತರರ ಮೇಲೆ ಅಸೂಯೆ ಇವು ಇತ್ತಲಾಗಿ ಕೋಂಗ್ರೆಸ್ ಜನರೊಳಗೆ ಏರುತ್ತಾ ಬಂದಿದೆ. ಏನೊಂದೂ ಜವಾಬ್ದಾರಿಯಿಲ್ಲದವರು ಅಧಿಕಾರದ ಆಶೆಗಾಗಿ ಕೋಂಗ್ರೆಸಿನೊಳಗೆ ನುಗ್ಗಿಕೊಂಡು ಹಳೇ ಕೆಲಸಗಾರರನ್ನು ಹೊರಗೆಹಾಕಲಿಕ್ಕೆ ಶತಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಯೋಗ್ಯರು ಕೋಂಗ್ರೆಸಿನಿಂದ ಹಿಂದೆ ಸರಿಯುವಂತಾಗಿದೆ. ಕೋಂಗ್ರೆಸು ಹಿಂದಿನಂತೆಯೇ ಯೋಗ್ಯ ಕೆಲಸಗಾರರಿಂದ ಕೂಡಿಕೊಂಡಿದ್ದು ತನ್ನ ಉದ್ದೇಶವನ್ನು ಶೀಘ್ರದಲ್ಲಿ ಪೂರ್ತಿಸಿಕೊಳ್ಳುವಂತೆ ಬೇಕಾದ ನಿಯಮಾವಳಿಗಳನ್ನು ಬರುವ ಕೋಂಗ್ರೆಸ್ ಮಾಡುವುದೆಂದು ಆಶಿಸಲಾಗಿದೆ.

When God Adopts Manhood?

Truthfullness is all powerfull and it is Heavenly peace to all souls **Who says** that man is helpless? Who says that man cannot fulfill his wishes? Who beleives any thing impossible on this earth? Those who are tired of life Those who have ill luck Those who are downhearted are wellcome what are your wishes that you cannot fulfilling? what diserious is there which cannot be cured? What is it that you cannot do? **Look, Open your eyes** and see Gods powers are present in mankind A pious spiritualist shows you Heavenly Astrological wonders, releives you of all kinds of diseases, and removes all difficulties in fulfilling your diserious in life With all powerfull truthfullness he brings you Heavenly peace and prosperity The success of great man like Mahathma Gandhi, Hittler, Napolean will be explained and men will be shown their way to salvation within 24 hours Truth is all powerfull and it is Heavenly bless A man can do wonders with, if he is true in heart and soul If you want to do this, come, Hindoo, Muslims, Parsis and all others will be given advise, how to remove all dificulties in life with spiritualism On consulting this wonderful man, you will have some idea about the real powers of nature, and nature itself

N B (For 3 questions Rs 2 only)
Money to be sent by post or personaly

Address: SPIRITUAL SPART

First Floor'
Mahakali Mandir Chawl
PYDHONY, BOMBAY

WANTED

A Qualified tutor for 'Shri Durga School of Commerce (to be newly opened shortly) Mulki The applicant should be competent in Short and and Typewriting Pay according to Qualifications Application should reach the undersigned by 25-8 1939 with one anna stamp for reply

B. Bhoja Rao,
Manager,
Shri Durgadevi Free Night School,
Mulki, S K

ದೇಶಪ್ರೇಮವೊಂದೇ ಭೂಷಣ

ಇದು ಗಾದೆಯ ಮಾತಲ್ಲ;

ಜಪಾನಿಗೊದಗಿರುವ ಸದ್ಯದ ತಗಾದೆ.

ಚೀನದಲ್ಲಿ ಕಳೆದೆರಡು ವರುಷಗಳಿಂದ ನಡೆಸಿದ ಯುದ್ಧದ ಪರಿಣಾಮವು ಜಪಾನರ ಮೇಲೆ ವಿಶೇಷ ರೀತಿಯಲ್ಲಾಗಿದೆ. ದುರ್ಬಲ ರಾಷ್ಟ್ರವೊಂದರ ಮೇಲೆ ಪ್ರಬಲ ರಾಷ್ಟ್ರವು ಬೀಳುವಾಗ ಅದರ ದೃಷ್ಟಿಪದದಲ್ಲಿ ವಿಜಯದ ನಿಜರೂಪವಿದ್ದೇ ಇರುತ್ತದೆ. ದಂಡೆತ್ತಿ ಹೊರಡುವ ರಾಷ್ಟ್ರದ ಯುದ್ಧತಜ್ಞರು ವಿರೋಧಿಗಳ ಬಲದ ಪರಮಾವಧಿಯನ್ನು ಗಣಿಸಿ, ಇಮ್ಮಡಿ ಮುಮ್ಮಡಿ ಕೂಡಿಸಿ ಕಳೆದು ನೋಡಿಯೇ ಯುದ್ಧದ ಅಂದಾಜನ್ನು ಮೊದಲಾಗಿ ಮಾಡಿಕೊಳ್ಳುತ್ತಾರೆ. ಆದರೆ ಎಷ್ಟೇ ಮುಂಜಾಗ್ರತೆ ವಹಿಸಿದರೂ, ವಿಚಿತ್ರ ಸನ್ನಿವೇಶಗಳು, ಆಕಸ್ಮಿಕ ಅಪಾಯಗಳು, ಅನಿರೀಕ್ಷಿತ ಸೋಲುಗಳು ಮುಂದೊತ್ತಿ ದವರಿಗೊದಗುವದಿದೆ. ಅಬಿಸೀನಿಯದಲ್ಲಿ ಇಟಲಿ ಅಂತಹ ಅನುಭವವನ್ನೇ ಪಡೆದಿತ್ತು, ಇಂದು ಚೀನದಲ್ಲಿ ಜಪಾನರೂ ಆ ಪಾಠವನ್ನೇ ಕಲಿಯುತ್ತಿದ್ದಾರೆ

ಕತ್ತು ಸಣ್ಣದು, ತುತ್ತು ದೊಡ್ಡದು!

ಚೀನವೆಂದರೆ ಜಪಾನಿನ ಗಂಟಲೊಳಗೆ ತುರುಕದಷ್ಟು ದೊಡ್ಡ ತುತ್ತು. ಆದರೂ ಹೆಬ್ಬಾವಿನಂತೆ–ಕಾಲಾವಧಿಯ ಮೇರೆ ಎಲ್ಲಿಯೇ ಇರಲಿ, ಚೀನವನ್ನು ನುಂಗಿ ಜೀರ್ಣಿಸಿಕೊಳ್ಳುವ ಜಪಾನಿನ ಹಠ ಅಚಲವಾದುದು, ಚೀನವಾದರೂ ಈ ಹಠದ ಮಟ್ಟಿಗೆ ಜಪಾನಿಗಿಂತ ಹಿಂದಿಲ್ಲ. ಅಂತು ಚೀನಾಯುದ್ಧವೆಂದರೆ ಪಂಥದ ಎರಡು ಅಂತಿಮ ಕೊನೆಗಳಿಂದೆದ್ದಿರುವ ಎಳೆದಾಟ! ಇದರ ಪರಿಣಾಮವನ್ನು ಜಯಾಪಜಯದ ರೀತಿಯಿಂದ ಮತ್ತು ಅಂತ್ಯಕಾಲದಲ್ಲಿ ಸಂಬಂಧಿಸಿದ ರಾಷ್ಟ್ರಗಳಲ್ಲುಂಟಾಗುವ ಸ್ಥಿತಿಗಳಿಂದ ಹೀಗೆಯೇ ಎಂದು ಈಗ ಊಹಿಸುವದು ಕಷ್ಟ. ಈ ವರೆಗೆ ಜಪಾನರು ಚೀನದಲ್ಲಿ ಬಹು ಪ್ರಯಾಸದ ಎಷ್ಟೋ ವಿಜಯಗಳನ್ನು ಸಂಪಾದಿಸಿರುವರು. ಚೀನದ ಹತ್ತು ಲಕ್ಷ ಚದರ ಮೈಲುಗಳಷ್ಟು ಸ್ಥಳವು ಜಪಾನೀ ವಾಮನನ ಬಗಲೊಳಗೆ ಇಷ್ಟರಲ್ಲೇ ಸೇರಿಹೋಗಿದೆ. ತನ್ನ 2½ ಪಾಲಷ್ಟಾಗುವ ಸ್ಥಳವನ್ನು ಜಪಾನು ಸಂಪಾದಿಸಿಕೊಂಡಂತಾಯಿತು. ಇಷ್ಟನ್ನು ಸಂಪಾದಿಸಬೇಕಾದರೆ ಜಪಾನಿನ ಕಡೆಯ ವರದಿಯಂತೆ ಜಪಾನರು ತಮ್ಮ ಕಡೆಯ ೪೭, ೧೩೧ ಜನರನ್ನು ಬಲಿಕೊಟ್ಟು ಚೀನೀಯರ ೮,೩೩,೫೯೬ ಮಂದಿಯನ್ನು ರಣಹದ್ದುಗಳಿಗುಣಿಸಿದ್ದರು. ಆದರೆ ಜಪಾನು ತನ್ನ ೨½ ಪಾಲಷ್ಟರ ಸ್ಥಳವನ್ನು ದೊರಕಿಸಿಕೊಂಡುದು ಹೆಸರಿಗೆ ಮಾತ್ರ. ಸ್ಥಳವನ್ನು ದರ್ಖಾಸ್ತು ಮಾಡಿಕೊಳ್ಳಲಿಚ್ಛಿಸುವವನು ಮೊದಲೇ ಬೇಲಿಹಾಕಿಟ್ಟು, ಕೃಷಿಮಾಡಿ, ತನ್ನ ನಾಮಕರಣ ಮಾಡಿಡುವ ಪದ್ಧತಿ ನಮ್ಮಲ್ಲುಂಟಲ್ಲಾ–ಹಾಗೆ ಜಪಾನರು ಅಷ್ಟು ಸ್ಥಳವನ್ನು ಚೀನೀಯರ ಖಾಡಾಖಾಡಿ ವಿರೋಧವನ್ನಡಗಿಸಿ ಒಮ್ಮೆ ಆಕ್ರಮಿಸಿಕೊಂಡಿದ್ದಾರೇನೋ ನಿಜ. ಆದರೆ ಆ ಸ್ಥಳಗಳಲ್ಲಿರುವ ಚೀನೀ ಗೋರಿಲ್ಲಾ ಸೈನಿಕರು ಆಗಾಗ ವಿರುದ್ಧ ದಂಗೆಯೆಬ್ಬಿಸುತ್ತಿದ್ದಾರೆ, ಬಂದು ನಿಂತ ಜಪಾನರು ಕಾದ ಕಾವಲಿಯಲ್ಲಿ ಕಾಲಿಟ್ಟಂತಿದ್ದಾರೆ

ದುಡ್ಡಿನ ಕೈಕಟ್ಟಿದೆ!

ಇತ್ತ ಚೀನಾ ಯುದ್ಧಕ್ಷೇತ್ರದ ಸ್ಥಿತಿ ಹೀಗಾಯಿತು. ಅತ್ತ ಜಪಾನಿನಲ್ಲಿ ಆರ್ಥಿಕ ಸ್ಥಿತಿ ಒರತೆಯೊಣಗಿದ ಕೆರೆಯಂತೆ ದಿನದಿಂದ ದಿನಕ್ಕೆ ಬತ್ತುತ್ತಾ ಬರುತ್ತಿದೆ. ಎರಡು ವರುಷದ ಯುದ್ಧವು ಜಪಾನಿನ ಆರ್ಥಿಕ ಕ್ಷೇತ್ರದಲ್ಲಿ ತೋಡಿದ ಸುರಂಗವನ್ನು ಮುಚ್ಚಲು ಎರಡು ತಲೆಮಾರುಗಳೇ ಬೇಕೆಂಬಷ್ಟು ದೊಡ್ಡದಿದೆ. ಈ ಅಡಚಣೆಯಾದರೂ ಯಾವಾಗ? ಯುದ್ಧವು ಭರದಿಂದ ನಡೆಯುತ್ತಿರುವ ಸಂದಿಗ್ಧಕಾಲದಲ್ಲಿಯೇ. ಯುದ್ಧ ಸಾಧನಗಳು ಎಷ್ಟೋ ಬೇಕು; ತರಿಸಿಕೊಳ್ಳಲು ಜಪಾನು ಸರಕಾರದಿಂದ ಹಣವಿಲ್ಲ ಗೊತ್ತೇನು? ಪರದೇಶಗಳಿಂದ ಆಮದಾಗುತ್ತಿರುವ ಪ ಸೇಲುಗಳನ್ನು ತೆಗೆದುಕೊಳ್ಳಲು, ಹಣಕ್ಕಾಗಿ ಜಪಾನು ಸರಕಾರವು ಒದ್ದಾಡುವ ಪರಿಸ್ಥಿತಿ ಒಂದಿದೆ

ಭಂಗಾರಗಳ ಸುಲಿಗೆ

ಹೀಗಾಗಿ ಜಪಾನ್ ಸರಕಾರವು ಭಂಗಾರ ಸುಲಿಯುವವರ ವೃತ್ತಿಯನ್ನು ಕೈಗೊಳ್ಳಬೇಕಾಗಿ ಬಂದಿದೆ. ಅಲ್ಲಿ ಈಗ ದೇಶದಲ್ಲಿರುವ ಭಂಗಾರಗಳನ್ನೆಲ್ಲಾ ಸರಕಾರದ ಬೊಕ್ಕಸ ಹೊರಿಸುವ ಕಠಿಣ ಶಾಸನಗಳಾಗಿವೆ. ಜುಲಾಯಿ ಒಂದನೇ ತಾರೀಕಿನೊಳಗೆ ತಮ್ಮಲ್ಲಿರುವ ಭಂಗಾರವೆಷ್ಟು, ಅದರ ಜಾತಿ ಯಾವುದೆಂಬ ವಿವರವನ್ನು ಸರಕಾರದ ಯುದ್ಧಖಾತೆಯ ಮಂತ್ರಿಗಳಿಗೆ ತಿಳಿಸಬೇಕೆಂಬ ಆಜ್ಞೆಯಾಗಿದೆ. ಖಾಸಗಿ ಜನರಿಂದ ಹಿಡಿದು ಬ್ಯಾಂಕು, ಸೊಸೈಟಿ, ಭಂಗಾರದ ಏಜಂಟರುಗಳೆಲ್ಲರಿಗೂ ಈ ಅಪ್ಪಣೆ ಅನ್ವಯಿಸುತ್ತದೆ. ವಿದೇಶಿಯರು, ಸ್ವದೇಶೀಯರು ಎಂಬ ಭೇದವಿಡದೆ ಜಪಾನಿನಲ್ಲಿರುವವರೆಲ್ಲರ ಮೇಲೂ ಈ ಕಾನೂನನ್ನು ಜ್ಯಾರಿಮಾಡಲಾಗಿದೆ. ಸರಕಾರದ ನೋಟೀಸು ಬಂದಾಗ ತಮ್ಮ ಒಡವೆಗಳನ್ನು ತಪ್ಪದೆ ಖಜಾನೆಗೊಪ್ಪಿಸಬೇಕು. ಅದು ರಾಷ್ಟ್ರಕ್ಕಾಗಿ ಮಾಡುವ ದಾನವೆಂದು ಗಣಿಸಲ್ಪಡುತ್ತದೆ. ಆದರೆ ನಾಮಮಾತ್ರ ಪ್ರತಿಫಲವಾಗಿ ಕಡಿಮೆ ಮೌಲ್ಯದ 'ಯೆಂಗ್' ನಾಣ್ಯಗಳೇನೋ ದೊರೆಯುತ್ತವೆ. ಭಂಗಾರವನ್ನಡಗಿಸಿಡಲು ಯತ್ನಿಸಿದವರು ಅಥವಾ ಕಾರ್ಪಣ್ಯ ತೋರಿದವರು ಕಠಿಣದಂಡನೆಗೊಳಗಾಗುತ್ತಾರೆ.

ಚಕ್ರವರ್ತಿಯ ಮಾದರಿ

ಈ ಸಂದರ್ಭದಲ್ಲಿ ಎತ್ತಿ ಹೇಳಬೇಕಾದ ವಿಷಯವೆಂದರೆ ಜಪಾನರ ಸ್ವಯಂ ಸ್ಫೂರ್ತಿ, ದೇಶಭಕ್ತಿ, ರಾಜಪ್ರೇಮವೆಂಬುವನ್ನು ಇಡೀ ಭೂಖಂಡದ ಯಾವ ರಾಷ್ಟ್ರವಾದರೂ ಕಲಿಯಬೇಕು ಜಪಾನಿನಿಂದ! ಈ ಕಾಲದಲ್ಲಾದರೂ ಜಪಾನು ಅಂಧಶ್ರದ್ಧೆಯ ರಾಷ್ಟ್ರ. ಅಲ್ಲಿಯ ಚಕ್ರವರ್ತಿಯೆಂದರೆ ಜಪಾನೀ ಪ್ರಜೆಗಳಿಗೆ ಸಾಕ್ಷಾತ್ ಭಗವಂತನಂತೆ! ಚಕ್ರವರ್ತಿಯ ನಾಮೋಚ್ಚಾರಣೆ ಮಾಡಿದ ದೈವದ್ರೋಹಕ್ಕೆ ಆತ್ಮಹತ್ಯೆ ಮಾಡಿಕೊಂಡು ಪ್ರಾಯಶ್ಚಿತ್ತ ವಿಧಿಯನ್ನಾಚರಿಸುವವರಿದ್ದಾರೆ. ಇದು ಕಟ್ಟುಕಥೆಯಲ್ಲ–ಈ ದಿನದ ವರೆಗೂ ನಡೆಯುವ ವಿದ್ಯಮಾನ. ಆದರೆ ಈ ಶ್ರದ್ಧೆಯೆಲ್ಲಾ ದೇಶಭಕ್ತಿಯಾಗಿ ಸಂದರ್ಭದೊರೆತಾಗ ರೂಪಾಂತರಗೊಳ್ಳುತ್ತದೆ. ಜಪಾನು ಚಕ್ರವರ್ತಿಯಾದರೂ ಪ್ರಜೆಗಳನ್ನು ಮಕ್ಕಳಂತೆ ಭಾವಿಸುತ್ತಾನೆ, ತನ್ನ ರಾಷ್ಟ್ರದ ಕಲ್ಯಾಣಕ್ಕಾಗಿ ಚಕ್ರವರ್ತಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧನಿದ್ದಾನೆ. ಈಗ ಯುದ್ಧದಿಂದಾಗಿ ಆರ್ಥಿಕ ಮುಗ್ಗಟ್ಟು ದೇಶದಲ್ಲೆದ್ದಿರುವದನ್ನು ಕಂಡ ಜಪಾನಿನ ರಾಜನು ತನ್ನ ಖಾಸಗಿ ವೆಚ್ಚವನ್ನು ಬಹಳ ಕಡಿಮೆಮಾಡಿಕೊಂಡು ಇತರರಿಗೆ ಮಾದರಿಯಾಗಿದ್ದಾನೆ. ಚಕ್ರವರ್ತಿಯ ಭಂಗಾರಗಳೆಲ್ಲಾ ಸರಕಾರೀ ಖಜಾನೆಗೆ ಸೇರಿದವು. ಜಪಾನೀಗ ಅಂಗಡಿಯಲ್ಲಿ ದೊರೆಯುವ ಕಡಿಮೆ ಮೌಲ್ಯದ ಚಿಣ್ಣ ಕೋಟು ತೊಡುತ್ತಿರುವನಂತೆ. ಪೆಟ್ರೋಲು, ಗ್ಯಾಸೋಲಿನ್ ಮೊದಲಾದುವು ಯುದ್ಧಸಾಧನಗಳಿಗೆ ಬೇಕಾಗಿರುವದರಿಂದ ಚಕ್ರವರ್ತಿ ಈಗ ಸಂಚರಿಸುತ್ತಿರುವುದು ಕಲ್ಲಿದ್ದಲಿನಿಂದ ಓಡುವ ಕಾರಿನಲ್ಲಿ. ಜಪಾನರು ತಮ್ಮ ರಾಜಭಕ್ತಿಯ ಕಲ್ಮಿತ ಕೊಳೆಯನ್ನು ತೊಳೆಯುವುದಕ್ಕಾಗಿ ಸ್ವಂತ ರಕ್ತ ಚೆಲ್ಲುತ್ತಿರುವ ಆ ಚಕ್ರವರ್ತಿ ದೇಶಕ್ಕಾಗಿ ವೇಷ ಭೂಷಣ, ಒಡವೆ ಶೃಂಗಾರಗಳನ್ನೆಲ್ಲಾ ತ್ಯಾಗಮಾಡಲು ಸಿದ್ಧನಿದ್ದಾನೆ. ಜಪಾನೀ ಪ್ರಜೆಗಳಿಗೆ ತಮ್ಮ ದೇಶಕ್ಕಿಂತ ದೇವ ಸಮಾನ ಚಕ್ರವರ್ತಿಯ ಮೇಲೆ ಪ್ರೀತಿ ಹೆಚ್ಚಾಗೆ, ಆ ದೇವನಿಗೆ ದೇಶವೊಂದೇ ಸರ್ವಸ್ವ. ಹೀಗಾಗಿ ಜಪಾನಿನಲ್ಲಿ ಲೋಕದ ಬೇರಾವ ರಾಷ್ಟ್ರದಲ್ಲಿಯೂ ಕಾಣಲಾರದ ಅತ್ಯದ್ಭುತ ರಾಷ್ಟ್ರಪ್ರೇಮವನ್ನು ಕಾಣಬಹುದು–ಅಪರೂಪವಾಗಿಯಲ್ಲ, ಪ್ರತಿಯೊಬ್ಬ ಜಪಾನಿನವನಲ್ಲಿಯೂ ಕಾಣಬಹುದು.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫ್ಯಾಕ್ಟರಿ, ಬೆಂಗಳೂರು.

SAVING MONEY AND TIME

Thousands of prudent and thriving business-men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting. They have chosen the CANARA BANK because here they never need wait. We make a point of giving every customer immediate and personal attention.

RESOURCES OF A CRORE

ESTD 1906

CANARA BANK LIMITED

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ 17-8-39ರಿಂದ ತಾ. 24-8-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅನು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ನಿಮ್ಮ ಚಿನ್ನವೇ ಪೆಟ್ಟಿಯವಾಗಿರುವಾಗ ಅಕ್ಕಸಾಲಿಗನನ್ನು ದೂರಿ ಪ್ರಯೋಜನವೇನು? ಅಂತೆಯೆ ನಿಮ್ಮ ಅದೃಷ್ಟವೇ ಕೆಟ್ಟುಹೋಗಿರುವಾಗ ಇತರರನ್ನು ಟೀಕಿಸುವುದರಲ್ಲಿ ಫಲವಿಲ್ಲವು. ನಿಮ್ಮ ಜನ್ಮಸ್ಥಾನದ ನೀಚ ಶನಿಯಿಂದಾಗಿ ನಿಮ್ಮ ಆರೋಗ್ಯವು ಒಡಿದವಲ್ಲಿ ನಿಲ್ಲುವಂತಿಲ್ಲ. ಮತ್ತು ಕೈಯಲ್ಲಿ ಹಣವಿದ್ದರೂ ಉಳಿಯಲಾರದು. ಇತರ ವಿಗ್ರಹದಿಂದಾಗಿ ಶತ್ರುಗಳ ಪೀಡೆಯೂ ಹೆಚ್ಚಾಗುವದರಿಂದ ಕ್ಲೇಶವೂ ನಿಶ್ಚಿತವಾಗಿರಲಾರದು. ರಾಜಕೀಯ ರಂಗದಲ್ಲಿ ನಿಮ್ಮ ಮನೋರಥವು ವಿಫಲವಾಗುವುದು. ಆದರೂ ಬಾಲಮಿತ್ರರ ಬೆಂಬಲವೂ ಬಂಧುಗಳ ಸಹಾಯವೂ ತಕ್ಕಮಟ್ಟಿಗಿರುವುದರಿಂದ ನಿತ್ಯ ಜೀವನವು ಕಷ್ಟವಾಗಲಾರದು. ಪ್ರವಾಸ ನಿಮಿತ್ತ ಧನವ್ಯಯ ಕಷ್ಟಗಳು ಸಂಭವಿಸುವುದಾದರೂ ಪುಣ್ಯಕ್ಷೇತ್ರಗಳ ದರ್ಶನ ಲಾಭ ದೊರೆಯುವುದು. ವಾರಾಂತ್ಯದ ಮೂರು ದಿನಗಳು ವಿಶೇಷ ಪ್ರತಿಕೂಲವಾಗಿರುವವು.

ವೃಷಭರಾಶಿ—

ಕೆಲವು ಸಮಯದಿಂದ ನಿಮ್ಮ ಆರೋಗ್ಯವು ವಿಶೇಷವಾಗಿ ಕೆಟ್ಟಿದ್ದರೂ ಈಗೀಗ ಸ್ವಲ್ಪ ಸುಧಾರಿಸುತ್ತಾ ಬಂದಿದೆ. ನಕ್ಷತ್ರರ ಕೂಟದಿಂದ ಕೂಡಿರುವ ನಿಮಗೆ ಸದ್ಧರ್ಮ ಸಮಾಜಗಳಲ್ಲಿ ಆಸಕ್ತಿಯು ಹೆಚ್ಚುವುದು. 'ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ'ಯೆಂಬ ನ್ಯಾಯದಂತೆ ಕರ್ಮಕ್ಕೆ ತಕ್ಕ ಫಲ ದೊರೆಯದಿರದು. ಆದರೂ ನಿಮ್ಮ ನಡತೆಯು ಪೂರ್ಣ ಸುಧಾರಿಸಿಲ್ಲವು. ಆದುದರಿಂದ ನೀವು ಬಹಿರಂಗವಾಗಿ ಯಾವ ಕಾರ್ಯವನ್ನೂ ಒಬ್ಬಂಟಿಗರಾಗಿ ಸಾಧಿಸಲು ಹೆದರುವಿರಿ. ಉಪಾಧ್ಯಾಯರೂ, ವೈದ್ಯರೂ ವಕೀಲರೂ ಕೂಡ ಪೂರ್ಣ ಮನಸ್ಕರಾಗುವ ಸಂಭವವಿಲ್ಲ. ವ್ಯಯಗತನಾದ ರವಿಸ್ಥಿರನಿಂದಾಗಿ ಆಗಾಗ ಲೋಕದಾಯಕ ಕಾರ್ಯಗಳು ಜರಗಿ ಧನವನ್ನು ಹೆಚ್ಚಾಗಿ ವ್ಯಯಿಸುವಿರಿ. ತಾ. 17, 18, 19 ಮತ್ತು 24 ಈ ದಿನಗಳಲ್ಲಿ ಹಗೆಯವರಿಂದ ಕಾರ್ಯಕ್ಕೆ ವಿಘ್ನಗಳೂ, ಪ್ರವಾಸದ ಪ್ರಕರಣವೂ, ಇತರರಿಗೆ ತಲೆಬಗ್ಗಿಸಿ ನಡೆಯುವ ಪ್ರಸಂಗವೂ ಬರಬಹುದು.

ಮಿಥುನರಾಶಿ—

ನಿಮಗೀ ವಾರದಲ್ಲಿ ಹುಣ್ಣು ವಗೈರೆಗಳಿಂದ ದೇಹಪೀಡೆಯೂ ದುಡುಕು ಸ್ವಭಾವದಿಂದಾಗಿ ಕೆಲವು ಮಾನಚ್ಯುತಿಯೂ ಸಂಭವಿಸಬಹುದು. ಆದಕಾರಣ ಈ ವಿಭಾಗಗಳಲ್ಲಿ ಜಾಗರೂಕರಾಗಿರಿ. ಇತರ ಭಾಗಗಳಲ್ಲಿ ನಿಮ್ಮ ಅದೃಷ್ಟವು ಉತ್ತಮವಾಗಿರುವುದರಿಂದ ನಾನಾ ರೀತಿಯಿಂದ ಧನಪ್ರಾಪ್ತಿ ಯೋಗವಿದೆ. ವೈಗಳ್ಯರಾಗಿರತಕ್ಕವರೂ ಕೂಡ ನಿರಲಸರಾಗಿ ಉದ್ಯೋಗದಲ್ಲಿ ಪ್ರವರ್ತಿಸುವರು. ವಿರೋಧಿಗಳು ಅದೃಶ್ಯಭಾವವನ್ನು ಹೊಂದುವುದರಿಂದ ಕೈಗೊಂಡ ಕಾರ್ಯಗಳು ನಿರಾತಂಕವಾಗಿ ಕೊನೆಗೊಳ್ಳದಿರಲಾರವು. ಹಣ ಕಂಡರೆ ಹೆಣ ಬಾಯಿ ಬಿಡುವದೆಂಬಂತೆ ಧನಲೋಭದಿಂದ ಅನೇಕ ಮಿತ್ರಬಂಧುಗಳು ನಿಮ್ಮನ್ನು ಸೇರುವರು. ಭೂಸಂಬಂಧವಾಗಿ ಕೆಲವು ಧನ ವ್ಯಯಿಸುವಿರಿ. ಆದರೂ ನಿತ್ಯ ಸ ದಿನಗಳಾಗಿ ಸಂತೋಷದಿಂದಲೇ ಇರುವಿರಿ. ತಾ. 22, 23, 24 ಈ ದಿನಗಳಲ್ಲಿ ನಿಮ್ಮ ಅನೇಕ ಇಷ್ಟಾರ್ಥಗಳು ಸಿದ್ಧಿಸದೆ ಇರಲಾರವು

ಕರ್ಕಾಟಕರಾಶಿ—

ನೀವು ಒಳ್ಳೇ ವಿಚಾರಿಗಳಾಗಿರುವಿರಿ. ಯಾವ ಕೆಲಸವನ್ನು ಹಿಂದುಮುಂದು ನೋಡದೆ ಮಾಡತಕ್ಕವರಲ್ಲ. ಈ ಭಾಗದಲ್ಲಿ ನಿಮಗೆ ಪರಾಜಯವೇ ಇಲ್ಲವು ನಿಜ. ಆದರೆ ಸದ್ಯದ ಸ್ಥಿತಿಯಲ್ಲಿ ನಿಮಗೆ ಗುರುಶುಕ್ರರಿಬ್ಬರು ಸಹೆಲಗ್ನದಲ್ಲಿ ಪ್ರತಿಕೂಲರಾಗಿರುವುದರಿಂದ ಒಕ್ಕಟ್ಟಿನಲ್ಲಿ ಬಾಳಿದರೆ ಬಾಳೇಕೋಳಿಯಂತೆ ನೀವಿನ್ನು ಹೀಗೆ ನಿಲುಕಿರಿ. ಅತ್ತ ಮಿತ್ರರೂ ಸಹೋದರರೂ ಕೂಡ ನಿಮ್ಮ ಶತ್ರುಸ್ಥಾನವನ್ನಾಕ್ರಮಿಸಲು ಹಿಂಜರಿಯರು. ಇದು ಸಾಮಾನ್ಯವಾಗಿ ಶೋಕಕರವಾಗಿದೆ. ಆದಕಾರಣ ಈ ಸಮರದಲ್ಲಿ ನಿಮಗೆ ಅಂತಹ ಇಲ್ಲ. ಪತ್ರೀಪುತ್ರರೂ ನಿಮ್ಮ ಭಾಗಕ್ಕೆ ಇಲ್ಲವೆಂದೂ ಹೇಳಬಹುದು. ಇದರಿಂದ ನಿಮ್ಮ ಮನಸ್ಸು ಹತೋಟಿಯಲ್ಲಿ ಇಲ್ಲದು. ಯಾವ ಮೇಲೂ ನಿಮಗೆ ಬೇಸರವುಂಟಾಗಿದೆ. ನಿಷ್ಕರುಣೆಯಿಂದಲೂ ದಾರಿದ್ರ್ಯದಿಂದಲೂ ಜನರ ಉಪಹಾಸಕ್ಕೆ ಗುರಿಯಾಗುವಿರಿ. ಅಪಕೀರ್ತಿಯನ್ನು ಕೇಳುವ ಯೋಗವಿರುವುದು. ತಾ. 19ರಿಂದ 23ರ ವರೆಗಿನ ದಿನಗಳನ್ನು ಕಳೆವುದು ಬಲು ಕಷ್ಟಕ್ಕೆ ಬಂದೀತು.

ಸಿಂಹರಾಶಿ—

ಪ್ರಕೃತದ ಗೃಹಸ್ಥಿತಿಯಲ್ಲಿ ನಿಮಗಾದೂ ಎದೆಗುಂದಬೇಕಾಗತಕ್ಕದ್ದಿಲ್ಲ. ಇದ್ದರೂ ಕೂಡ ಆವರು ನಿಮ್ಮೊಡನೆ ಸಹಕರಿಸಿ ಮಿತ್ರರಂತೆ ವರ್ತಿಸುವರು. ಬೇರೆಬೇರೆ ರೀತಿಗಳಿಂದ ನಿಮ್ಮ ಇಷ್ಟಾರ್ಥ ಪೂರೈಕೆಯು ನಿರಾತಂಕದಿಂದ ಪರಿಪೂರ್ಣವಾಗಿ ದೊರೆಯುವದು. ಆದರೂ ನಿಮ್ಮ ದಾಡಿಮೆಗೆ ತಕ್ಕುದಾದ ಫಲವು ಸಿಗದಿರುವುದರಿಂದಲೂ ಅನಾರೋಗ್ಯದ ನಿಮಿತ್ತ ಸಲುವಾಗಿಯೂ ಸಂಸಾರದ ಖರ್ಚಿನ ಸಲುವಾಗಿಯೂ ಸಾಕಷ್ಟು ಉತ್ಪತ್ತಿಯಿಲ್ಲದಿರುವುದರಿಂದಲೂ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಿ ಬಹಳ ಬೇಜಾರಪಡುವಿರಿ. ಮುಳುಬಂದದ್ದು ಕೊಡೆಹಿಡಿಯುವ ಸ್ವಭಾವವು ನಿಮ್ಮದಾಗಿರುವುದರಿಂದ ಮೇಲಿನವರ ಆಗ್ರಹಕ್ಕೆ ಗುರಿಯಾಗುವಿರಿ. ಪೂರ್ವಾಚಾರಗಳಲ್ಲಿ ಅನಾಸಕ್ತರಾದ ನಿಮಗೆ ಗುರ್ವನುಗ್ರಹವೂ ಇಲ್ಲದಿರುವುದರಿಂದ ನಾನಾ ರೀತಿಯಿಂದ ವಿಘ್ನಗಳು ಸ್ಪಷ್ಟವಾಗುವವು. ತಾ. 20, 21 ಈ ಎರಡು ದಿನಗಳನ್ನುಳಿದು ಇತರ ದಿನಗಳನ್ನು ಬಹಳ ಕಷ್ಟದಿಂದ ಕಳೆಯಬೇಕಾಗುವುದು.

ಕನ್ಯಾರಾಶಿ—

ಭಾಗ್ಯಸ್ಥಾನದ ಬಧಗ ರುಕ್ರರ ಅನುಗ್ರಹಕ್ಕೆ ಪಾತ್ರರಾದ ನಿಮಗೆ ಈ ವಾರವು ಸ್ವಲ್ಪಮಟ್ಟಿಗೆ ಉತ್ತಮವಾಗಿಯೇ ಪರಿಣಮಿಸುವುದು. ಕಾಲಕ್ಕೆ ತಕ್ಕ ಕೋಲಕಟ್ಟುವ ಸ್ವಭಾವವು ನಿಮ್ಮದಾಗಿರುವುದರಿಂದ ಯಾರ್ಯಾರಿಗೆ ಯಾವ ಯಾವ ರೀತಿ ವರ್ತಿಸಬೇಕೋ ಆಯಾ ರೀತಿಯಲ್ಲಿದ್ದು ಸಕಲರ ಆದರಕ್ಕೆ ಪಾತ್ರರಾಗಿರುವಿರಿ. ಬಾಗಿಲಿಂದೂ ಮಿಥ್ಯವಾದದ ಬರೀ ಬಾಯ್ಮಾತಿನಿಂದಲೇ ಜನರನ್ನು ನಂಬಿಸಿಕೊಳ್ಳುವುದರಲ್ಲಿ ಅಗ್ರಗಣ್ಯರಿರುವಿರಿ. ಕಾಡಿದಲು ಸಾಲಗಾರರಿದ್ದರೂ ಅನುದಿನದ ಖರ್ಚಿಗೆ ಅನಾಯಾಸದಿಂದ ಹಣದೊರೆವುದು. ರಾಜಕೀಯ ವಿಚಾರದಲ್ಲಿ ಸದಸದ್ವಿವೇಕನ ಫಲಪ್ರಾಪ್ತಿ ದೊರೆವುದು. ಶರೀರಾಲಸ್ಯ ಮತ್ತು ಕುಟುಂಬ ವಿಷಯಕವಾಗಿ ಸ್ವಲ್ಪ ಚಿಂತೆಗಾಸ್ಪದವಾಗುವುದು. ಪುತ್ರರು ನಿಮ್ಮ ಆಜ್ಞೋಲ್ಲಂಘನೆ ಮಾಡುವರು ಯಾ ನಿಮ್ಮ ಹತೋಟಿಯಲ್ಲಿರರು. ತಾ. 17, 18, 22, 23 ಈ ದಿನಗಳಲ್ಲಿ ಧನವಸನಗಳ ಲಾಭ, ಸ್ತ್ರೀಸುಖವು ದೊರೆಯುವುದು.

ತುಲಾರಾಶಿ—

ಈ ತನಕ ಬಹಳ ಕಷ್ಟದಿಂದ ದಿನಗಳೆದು ನಿಮಗೆ ಈಗಲೀಗ ಕಾಲವು ಸ್ವಲ್ಪಮಟ್ಟಿಗೆ ಅನುಕೂಲವಾಗುತ್ತಾ ಬರುತ್ತಿದೆ "ಸುಖಂ ಹಿ ದುಃಖಾನ್ಯನುಭೂಯ ಶೋಭತೇ ಘನಾಂಧಕಾರೇಷ್ವಿವ ದೀಪದರ್ಶನಂ' ಎಂದಂತೆ ಕಗ್ಗತ್ತಲೆಯಲ್ಲಿರತಕ್ಕವನಿಗೆ ದೀಪದರ್ಶನವು ಎಷ್ಟು ಸಂತೋಷಕಾರಿಯಾಗುವುದೋ ಅಂತೆಯೇ ದುಃಖಾನಂತರದಲ್ಲಿ ಬಾಳಗಿದ್ದವನಿಗೆ ಸುಖದ ಜೀವನವು ಒದಗಿದಾಗ ಅಷ್ಟು ಸಂತೋಷವಾಗುವುದು ಸ್ವಾಭಾವಿಕ. ಮಿತ್ರರ ಆಶ್ರಯಬಲದಿಂದ ಆರ್ಥಿಕ ವಿಚಾರದಲ್ಲಿ ಅಭಿವೃದ್ಧಿಯನ್ನೈದುವಿರಿ. ಶತ್ರುಗಳಿಂದ ಬರತಕ್ಕ ವಿಘ್ನಗಳನ್ನು ಲೆಕ್ಕಿಸದೆ ಸ್ವಕಾರ್ಯವನ್ನು ಮುಂದೊತ್ತಿ ವಿಜಯಿಗಳಾಗುವಿರಿ. ಕೋರ್ಟುಕಛೇರಿಗಳ ವಿವಾದಗಳಲ್ಲೂ ಉದ್ಯೋಗದಲ್ಲಿ ವ್ಯಾಪಾರದಲ್ಲೂ ನಿಮ್ಮ ಅಪೇಕ್ಷೆಯು ವ್ಯರ್ಥವಾಗಲಾರದು. ಶತ್ರುಗಳು ಮಿತ್ರರಾದವರ ಬಾಯಿ ನಿಮ್ಮನ್ನು ವಂಚಿಸಬಯಸುವರು. ಆದಕ್ಕೆ ನೀವು ಸಿಲುಕದಿರಿ. ದೇಹಾಲಸ್ಯವು ಸ್ವಲ್ಪಮಟ್ಟಿಗಿರುವುದು. ತಾ 20, 21, 24 ಈ ದಿನಗಳು ನಿಮ್ಮ ಪಾಲಿಗೆ ಸ್ವಲ್ಪ ಉತ್ತಮವಾಗಿರುವುವು.

ವೃಶ್ಚಿಕರಾಶಿ—

"ಸರ್ವಸ್ವಾ ದೇವೀ ದೇವಃ ಶರಂಪೋಷಿ ದೈವಮಾಯತೇ' ಎಂಬ ಮಾತುಗಳಲ್ಲದ ವ್ಯವಹಾರದಲ್ಲಿ ಬಾಳೀಗಿಡವು ಮರವಾಗುವುದು ಎಂದು. ಇದನ್ನೇಕೆ ಹೇಳುವನೆಂದರೆ, ಇತರ ಎಲ್ಲಾ ರಾಶಿಗಳವರ ಅದೃಷ್ಟಕ್ಕಿಂತ ನಿಮ್ಮ ಅದೃಷ್ಟವೇ ಸದ್ಯದಲ್ಲಿ ಬಲವತ್ತರವಾಗಿ ಕಾಣುತ್ತಿದೆ. ಆದುದರಿಂದ ಕಾರ್ಯಸಿದ್ಧಿಗಾಗಿ ಕಾದಿರುವುದು ನಿಮಗೆ ಲೇಸಲ್ಲವು. ಪ್ರಕೃತ ನೀವು ದುಡುಕದೆ ಹಿತಮಿತವಾಗಿ ಮಾತನಾಡಿರಿ. ಕಾರ್ಯದಲ್ಲಿ ಆಲಸ್ಯ ಕೈಗೊಳ್ಳದಿರಿ. ಹೀಗೆ ವರ್ತಿಸಿದಲ್ಲಿ ನಿಮಗಾವ ಭಾಗದಲ್ಲೂ ಕಡಿಮೆಯಾಗದು. ಯಾವ ಉದ್ಯೋಗವನ್ನು ಮಾಡಲೂ ಮಾಡಿಸಲೂ ಕೂಡ ಸಮರ್ಥರಿರುವಿರಿ. ವಿರೋಧಿಗಳೂ ಕೂಡ ನಿಮ್ಮ ಹೆಸರು ಕೇಳಿದೊಡನೆ ನಿಮ್ಮ ತಲೆಬಾಗಿಸುವರು. ಹಿಡಿದ ಕಾರ್ಯಗಳು ವ್ಯರ್ಥವಾಗುವ ಸಂಭವವೇ ಇಲ್ಲವೆ. ಇನ್ನೇಕೆ ವಸ್ತುಗಳು ಉತ್ತಮವಾಗುವುದರಿಂದ ಆದ್ಯಂತವಾಗಿ ಕೆಲಸವನ್ನು ಸಂಗ್ರಹಿಸಿಡುವುದು ಸದ್ಯಕ್ಕೆ ವರ್ತಕರ ಆವಶ್ಯಕತೆ. ತಾ. 17, 18, 22 23 ಸಂಪೂರ್ಣತೃಪ್ತವಾಗಿದೆ.

ಧನುರಾಶಿ—

ನೀವು ಬಾಹ್ಯಾಡಂಬರದಿಂದ ನೋಡುವಾಗ ನಿಶ್ಚಿಂತರಾಗಿರುವಂತೆ ಕಾಣುವಿರಿ. ಹಣದ ಕೊರತೆಯಿಲ್ಲವೆನ್ನ. ಸಾಂಸಾರಿಕ ಚಿಂತೆಯಿಲ್ಲವು ಉದ್ಯೋಗವು ತೃಪ್ತಿಕರವಾಗಿರುವುದು ಎಂಬೀ ರೀತಿಯಲ್ಲಿ ಕಂಡುಬಂದರೂ "ಒಳಗಿನ ಗುಟ್ಟು ಶಿವನೇ ಬಲ್ಲ" ಎಂದಂತೆ ನಿಮ್ಮ ಅಂತರಂಗದ ಗುಟ್ಟು ಮಾತ್ರ ಬಹಳ ಕಷ್ಟಸ್ಥಿತಿಯಲ್ಲಿರುವುದು. ದೇಹಕ್ಕೆ ಸುಖವಿಲ್ಲ. ಮನಸ್ಸಿಗೆ ನೆಮ್ಮದಿಯಿಲ್ಲ. ಗುರುವಿನ ದೃಷ್ಟಿಯು ನರರ ಕೈಸೇರಿರುವುದನ್ನು ಪಡೆಯಲು ಬಹಳ ಕಷ್ಟಪಡಿಸುವುದು. ಮನೆಯವರ ಪಂಥವೊಂದಾದರೆ ನಿಮ್ಮ ಮಾರ್ಗ ಮತ್ತೊಂದು. ಆಪ್ತರು ಬಂಧುಗಳು ಆಪತ್ಕಾಲದಲ್ಲಿ ನೆರವಾಗತಕ್ಕವರು ಎಂದು ನೆನಸಿ ಸಮಯಕ್ಕೆ ಒದಗಿದರೆ ಅದೇ ನಿಮಗೆ ವಿಪರೀತವಾಗಿ ಬಹಳ ಚಿಂತೆಗೆ ಕಾರಣವಾಗುವದು. ಅವರೆಲ್ಲರಿಂದಲೂ ತಿರಸ್ಕಾರ ಕೆಲಸವನ್ನು ಹೊಂದುವಿರಿ. ಅಂತೂ ಮನೋವ್ಯಥೆಯಿಂದ ಅತ್ಯಂತ ಸಂತಪ್ತರಾದ ನಿಮ್ಮ ಮುಖ ಕಾಂತಿಯು ರಾಹುಗ್ರಸ್ತ ಚಂದ್ರನಂತಾಗಿರುವುದು. ತಾ 22, 23. ಈ ದಿನಗಳಲ್ಲಿ ಪಚ್ಚಿನ ಅನಾರೋಗ್ಯ ಅರ್ಥವ್ಯಯಕ್ಕೆ ಗುರಿಯಾಗುವಿರಿ.

ಮಕರರಾಶಿ—

ನಿಮ್ಮ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿರುವುದು. ಯಾವ ಭಾಗದಲ್ಲಿ ನೋಡಿದರೂ ಪರಾಜಯವು ಮುಂದಾಗಿ ಕಾಣುತ್ತಿದೆ. "ಅಂಬೀಸು ಕರುಣಾಮಯಿ ಏನೂ ಮಾಡಿದರೂ ಪೂರ್ವ ಜನ್ಮದ ವಿಧಿಯು ಬಿಡದು" ಎಂಬ ಹಿರಿಯರ ಮಾತಿನಂತೆ ಜನ್ಮಾಂತರದಲ್ಲಿ ಸಂಗ್ರಹಿಸಿದ ವಿಧಿಯು ಯಾರನ್ನೂ ಬಿಟ್ಟಿಲ್ಲ. ದತ್ತ ಫಲವನ್ನು ಅನುಭವಿಸಲೇಬೇಕಿನಲ್ಲದೆ ಬೇರೆ ಅನ್ಯಗತಿಯಿಲ್ಲವು. ಆದಕಾರಣ ನೀವು ಸಂಭವಿಸತಕ್ಕ ಈ ಕಷ್ಟ ಅನಿಷ್ಟಗಳಿಗೆ ಇತರರನ್ನು ದೂರಿ ಫಲವಿಲ್ಲ. ನಿಮ್ಮ ಅದೃಷ್ಟವನ್ನೇ ಹಳಿಯಬೇಕಾದದ್ದು. ಆಪ್ತರಿಂದ ತ್ಯಜಿಸಲ್ಪಟ್ಟ ನೀವು ಊರು ಬಿಟ್ಟು ಕಾಡಲ್ಲಿ ಅಲೆಯುವಿರಿ. ಆದರೂ ಮನಸ್ಸಿಗೆ ಸಮಾಧಾನ ಸಿಗದು. ನಿಮ್ಮಲ್ಲಿರತಕ್ಕ ಸದ್ಗುಣಗಳೆಲ್ಲವೂ ಈ ಗ್ರಹಕಾಟದಿಂದ ಅದೃಶ್ಯರಾಗಿ ಸಕಲರಿಗೂ ನೀವು ದುಷ್ಟರಂತೆ ಕಾಣುವಿರಿ. ಆರೋಗ್ಯವಾದರೂ ಚೆನ್ನಾಗಿದ್ದರೆ ಎಲ್ಲಾದರೂ ಕಷ್ಟಪಟ್ಟು ಜೀವಿಸಬಹುದೆಂದರೆ ಅದೂ ನಿಮ್ಮ ದುರ್ದೈವಕ್ಕೆ ಇಲ್ಲವೆಂದಮೇಲೆ ಜೀವನವು ಎಷ್ಟು ದುಃಖಮಯವಾದೀತೆಂದು ಹೇಳಬರುವಂತಿಲ್ಲ. ವಾರದ ಅಧ್ಯಂತ್ಯ ಭಾಗಗಳಲ್ಲಿ ವಿಶೇಷ ಕಷ್ಟವಾಗುವುದು. ಪುಟ ೧೩ಕ್ಕೆ

ಪುಟ ೧೩ಕ್ಕೆ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ದಿವ್ಯೌಷಧ.

ಇಂದಿನ ಅತ್ಯುತ್ತಮ ಔಷಧ ಅಲ್ಲೋಪತಿ ಮತ್ತು ಆಯುರ್ವೇದ ವೈದ್ಯರುಗಳಿಂದಲೂ ಫಲಕಾರಿಯಾಗದೆ ಇಂಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಹಳತಾಗಿ, ಹಿಂದುವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಧೆಗಳಿಗೆ, ಸರ್ವಪ್ರಮೇಹದ ಪ್ರವಾಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಸೂಕ್ಷ್ಮದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಪೆಟಿ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ 1. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು

ಗಳಲಿ ಮದ್ದುಗಳಿಗೆ ಮರುಳಾಗಬೇಡಿ ಸರಿತೋರುವ ಮೋಸ ಕೋಳ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ ಇಲೆಕ್ಟ್ರೊ ಹೋಮ್ಯೊಪತಿಕ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಹೈದರಾಬಾದಿನಲ್ಲಿ ಸತ್ಯಾಗ್ರಹ ನಡೆದುದೇಕೆ?

ಸೇಕಡ ೮೦ರಷ್ಟಿರುವ ಹಿಂದುಗಳ ವಿಷಾದಕರ ಪರಿಸ್ಥಿತಿ!

ಸೇ. ೧೦ರಷ್ಟಿರುವ ಮುಸಲ್ಮಾನರಿಗೇನೇ ಎಲ್ಲಾ ತರದ ಹಕ್ಕುಬಾಧ್ಯತೆ ಮತ್ತು ಸುಖಾನುಕೂಲತೆಗಳು!

ಹಿಂದುಗಳಿಗೆ ಪ್ರಾಥಮಿಕ ನಾಗರಿಕ ಹಕ್ಕುಗಳಿಲ್ಲ! ಧಾರ್ಮಿಕ ಸ್ವಾತಂತ್ರ್ಯವಿಲ್ಲ!

ಹಿಂದುಗಳ ಧರ್ಮಯುದ್ಧದ ಸತ್ಪರಿಣಾಮ.

ಹೈದರಾಬಾದು 82,000 ಚದರ ಮೈಲು ವಿಸ್ತೀರ್ಣವಿರುವ ರಾಜ್ಯ. 1931ನೇ ಇಸವಿಯ ಜನಗಣನೆಯ ಪ್ರಕಾರ ಅಲ್ಲಿಯ ಒಟ್ಟು ಜನಸಂಖ್ಯೆ 1 ಕೋಟಿ 44 ಲಕ್ಷ. ಇದರಲ್ಲಿ 1 ಕೋಟಿ 22 ಲಕ್ಷ ಹಿಂದುಗಳು. 15 ಲಕ್ಷ ಮುಸಲ್ಮಾನರು. ಅಂದರೆ ಸೇಕಡ 69¾ ಮಂದಿ ಹಿಂದುಗಳು ಮತ್ತು 10⅓ ಮಂದಿ ಮುಸಲ್ಮಾನರು. ಆದರೆ ಇಷ್ಟೊಂದು ಹೆಚ್ಚು ಜನಸಂಖ್ಯೆ ಇರುವ ಹಿಂದುಗಳ ಮೇಲೆ ಮುಸಲ್ಮಾನರು ಇಚ್ಛಾನುಸಾರ ಕುದುರೆ ಸವಾರಿ ಮಾಡುತ್ತಿದ್ದಾರೆ. ಹಿಂದುಗಳು ಯಾವ ತರದ ಅನುಕೂಲತೆಯೂ ಇಲ್ಲದೆ ಮುಸಲ್ಮಾನ ದರ್ಬಾರಿಗೊಳಗಾಗಿ ಬಹಳ ಹಿಂದುಳಿದಿರುತ್ತಾರೆ.

ಮಾಧ್ಯಮಿಕ ಕಾಲದ ನವಾಬ್‌ಶಾಹಿ

ಸರಕಾರದ ಬೇರೆ ಬೇರೆ ಖಾತೆಗಳಲ್ಲಿರುವ ನೌಕರರ ಸಂಖ್ಯೆಯನ್ನು ನೋಡಿದರೆ ಹೈದರಾಬಾದಿನಲ್ಲಿ ಮಾಧ್ಯಮಿಕ ಕಾಲದ ನವಾಬ್‌ಶಾಹಿಯೇ ನಡೆಯುತ್ತಿದೆಯೆಂಬುದು ಸ್ಪಷ್ಟವಾಗುವುದು. ಇಂತಹ ದೊಡ್ಡ ಅನ್ಯಾಯವು ಹಿಂದೂದೇಶದ ಎಷ್ಟೊಂದು ಹಿಂದುಳಿದಿರುವ ದೇಶೀಯ ಸಂಸ್ಥಾನದಲ್ಲಿಯೂ ನಡೆಯಲಾರದು. ನ್ಯಾಯ ಖಾತೆಯ 191 ಮುಖ್ಯ ನೌಕರರಲ್ಲಿ ಕೇವಲ 17ಮಂದಿ ಹಿಂದುಗಳು 173ಮಂದಿ ಮುಸಲ್ಮಾನರು. ಸರಕಾರಿ ವಕೀಲರ ಪೈಕಿ 8 ಮಂದಿ ಮುಸಲ್ಮಾನರು ಓರ್ವ ಮಾತ್ರ ಹಿಂದು. 19ಮಂದಿ ಹೈಕೋರ್ಟು ಜಡ್ಜರಲ್ಲಿ ಒಬ್ಬ ಹಿಂದು, 9ಮಂದಿ ಮುಸಲ್ಮಾನರು ಉಳಿದವರು ಬಿಳಿ ಜನರೇ ಮೊದಲಾದವರು. 107ಮಂದಿ ಮುನ್ಸೀಫರಲ್ಲಿ 96 ಮಂದಿ ಮುಸಲ್ಮಾನರು 11ಮಂದಿ ಹಿಂದುಗಳು. ಇದು ಹೊರತು ಇನ್ನೂ ಅನೇಕ ಕೋರ್ಟು, ಅರಮನೆ ಮತ್ತು ನಗರ ಸಂಬಂಧವಾದ ಅನೇಕ ಪ್ರಮುಖ ನೌಕರಿಗಳಲ್ಲಿ ಒಂದಾದರೂ ಹಿಂದುಗಳಿಗೆ ಕೊಡಲ್ಪಟ್ಟಿರುವುದಿಲ್ಲ. 1931ರಿಂದ 1934ನೇ ಇಸ್ವಿಯವರೆಗೆ ನೇಮಿಸಲ್ಪಟ್ಟಿರುವ 82ಮಂದಿ ದೊಡ್ಡ ದೊಡ್ಡ ಸಿವಿಲ್ ಅಧಿಕಾರಿಗಳಲ್ಲಿ 7 ಸ್ಥಳಗಳು ಮಾತ್ರ ಹಿಂದುಗಳಿಗೆ ದೊರೆತಿರುತ್ತವೆ. ಸೈನ್ಯದಲ್ಲಂತೂ ಸೇಕಡ 99 ಮಂದಿ ಮುಸಲ್ಮಾನರೇ. ಒಟ್ಟು 248 ಮಂದಿ ಹಿಂದು ಗಜೆಟೆಡ್ ಆಫೀಸರರಿರುತ್ತಾರೆ. ಮುಸಲ್ಮಾನರು 864ಮಂದಿ ಇರುತ್ತಾರೆ.

ನಿಜಾಮು ಸಂಸ್ಥಾನದ ಒಟ್ಟು ಉತ್ಪನ್ನ ವರ್ಷಕ್ಕೆ ಸುಮಾರು ರೂ 8½ ಕೋಟಿ. ಖರ್ಚು ಸುಮಾರು 7 ಕೋಟಿ 81 ಲಕ್ಷ. ಇದರಲ್ಲಿ ಕೇವಲ 1 ಕೋಟಿ ರೂ. ಶಿಕ್ಷಣಕ್ಕಾಗಿ ವ್ಯಯಿಸಲ್ಪಡುತ್ತದೆ. ಅದು ಕೂಡಾ ರೂಪಾಯಿಯಲ್ಲಿ 12 ಆಣೆಗಿಂತಲೂ ಹೆಚ್ಚು ಮುಸಲ್ಮಾನರಿಗೆ. ರೈತರ ಹಣದಿಂದ ರೂ 66 ಲಕ್ಷ ನಿಜಾಮರ ಮತ್ತು ಅವರ ಪುತ್ರರ ವೆಚ್ಚಕ್ಕಾಗಿ ಕೊಡಲ್ಪಡುವುದು. ಇದು ಹೊರತು ನಿಜಾಮರ ಖಾಸಗಿ ಉತ್ಪತ್ತಿಯು ವರ್ಷಕ್ಕೆ ರೂ 2 ಕೋಟಿಗಿಂತ ಮಿಕ್ಕಿದೆ. ನಿಜಾಮರು ಲೋಕದ ಅತಿದೊಡ್ಡ ಶ್ರೀಮಂತರು. ಅವರಲ್ಲಿರುವ ಐಶ್ವರ್ಯಕ್ಕೆ ಬೆಲೆಕಟ್ಟುವವರಿಲ್ಲ. ಆದರೆ ಸುಮಾರು 1½ ಕೋಟಿ ಪ್ರಜೆಗಳ ಶಿಕ್ಷಣಕ್ಕಾಗಿ ವೆಚ್ಚ ಮಾಡುವುದು ರೂ ಒಂದು ಕೋಟಿ ಮಾತ್ರ. ಈ ಶಿಕ್ಷಣವು ಉರ್ದು ಭಾಷೆಯಲ್ಲಿಯೇ ಕೊಡಲ್ಪಡುವುದು. ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಪ್ರೌಢಶಿಕ್ಷಣವೂ ಉರ್ದುವಿನಲ್ಲೇ ಕೊಡಲ್ಪಡುವುದು. ಆದುದರಿಂದ ಹಿಂದುಗಳೆಲ್ಲರೂ ಉರ್ದು ಕಡ್ಡಾಯವಾಗಿ ಕಲಿಯಬೇಕಾಗಿದೆ.

ಹಿಂದು ಪ್ರಜೆಗಳ ಭಾಷೆ ತೆಲುಗು, ಮರಾಠಿ ಮತ್ತು ಕನ್ನಡ. ಆದರೆ ಸರಕಾರವು ಅವುಗಳಿಗೆ ಯಾವ ರೀತಿಯ ಪ್ರೋತ್ಸಾಹವನ್ನೂ ಕೊಡದೆ ಮೂಲೆಗೊತ್ತುತ್ತಿದೆ. ಹಿಂದುಗಳ ಮಾತೃಭಾಷೆ ಮತ್ತು ಸಂಸ್ಕೃತಿಯು ಮೃತಪ್ರಾಯವಾಗುತ್ತಾ ಬಂದಿದೆ. ಉಸ್ಮಾನಿಯ ವಿಶ್ವವಿದ್ಯಾಲಯದಲ್ಲೇ ಜಾತಿಭೇದವಿರುವುದು. ಅದರಲ್ಲಿ ಮುಸಲ್ಮಾನರಿಗೆ ಎಲ್ಲಾ ರೀತಿಯ ಸೌಕರ್ಯಗಳಿರುವವು. ಹಿಂದುಗಳು ತಿರಸ್ಕೃತರಾಗಿರುವರು. ಇತರ ಸರಕಾರಗಳಂತೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನಿಜಾಮು ಸರಕಾರವು ಯಾವ ಆಶ್ರಯವನ್ನೂ ಕೊಡದೆ ಅವುಗಳನ್ನು ನಾಶಗೊಳಿಸಲೆತ್ನಿಸುತ್ತಿದೆ. ಆದುದರಿಂದಲೇ 1921ರಲ್ಲಿದ್ದ 1053 ಖಾಸಗಿ ಶಿಕ್ಷಣ ಸಂಸ್ಥೆಗಳು ಕಡಿಮೆಯಾಗುತ್ತ ಬಂದು 1936ರಲ್ಲಿ 130ಕ್ಕಿಳಿದಿರುವುದು. ಪರದೇಶಗಳಿಗೆ ಹೋಗಿ ವಿದ್ಯೆ ಕಲಿಯಲು ಶಿಷ್ಯವೇತನ ಮತ್ತು ಸಾಲಗಳು ಮುಸಲ್ಮಾನರಿಗೇನೇ ಕೊಡಲ್ಪಡುತ್ತವೆ.

ನಾಗರಿಕ ಸ್ವಾತಂತ್ರ್ಯವೆಂಬುದೇ ಇಲ್ಲ

ನಿಜಾಮು ರಾಜ್ಯದಲ್ಲಿ ನಾಗರಿಕ ಸ್ವಾತಂತ್ರ್ಯವೆಂಬುದೇ ಇಲ್ಲ. ಸ್ವತಂತ್ರವಾದ ಒಂದೇ ಒಂದು ಪತ್ರಿಕೆಯಾದರೂ ಅಲ್ಲಿಲ್ಲ. ಹೊರಗಣ ಎಂದರೆ ಮಿ. ಪತ್ರಿಕೆಗಳು ಕೂಡಾ ನಿಜಾಮು ರಾಜ್ಯಕ್ಕೆ ಪ್ರವೇಶಿಸದಂತೆ ನಿರ್ಬಂಧವಿದೆ. ಹಿಂದುಗಳ ಧಾರ್ಮಿಕ ಆಚಾರ ಮತ್ತು ವಿಚಾರಕ್ಕೆ ಹೆಚ್ಚಿನ ನಿರ್ಬಂಧವಿದೆ. ಎಲ್ಲೆಲ್ಲಿಯೂ ಹಬ್ಬಿರುವ ಮಸೀದಿಗಳ ಮುಂದೆ ವಾದ್ಯ ಬಾರಿಸಲಿಕ್ಕೇನೇ ಇಲ್ಲ. ಹೆಚ್ಚಿನ ರಾಜಮಾರ್ಗಗಳಲ್ಲಿ ಧಾರ್ಮಿಕ ಮೆರವಣಿಗೆ ಒಯ್ಯಲಿಕ್ಕಿಲ್ಲ. 1917ರಲ್ಲಿ ದಸರೆ ಮತ್ತು ಮೊಹರಮ್ ಹಬ್ಬವು ಒಟ್ಟಿಗೆ ಬಂದಾಗ ಹಿಂದುಗಳಲ್ಲಿ ತಮ್ಮ ಸ್ವಂತ ಮನೆಗಳಲ್ಲಿ ಕೂಡಾ ಘಂಟೆ ಬಾರಿಸಬಾರದೆಂದು ಹೈದರಾಬಾದ್ ಪಟ್ಟಣದಲ್ಲಿ ಹುಕುಮು ಸಾರಲಾಗಿದ್ದಿತು. ಇಸ್ಲಾಮ್ ಧರ್ಮಪ್ರಚಾರ ಮತ್ತು ಮಸೀದಿಗಳಿಗೆ ಬೇಕಷ್ಟು ಪ್ರೋತ್ಸಾಹ ಮತ್ತು ಆಶ್ರಯ ಕೊಡುವುದೂ, ಹಿಂದುಗಳ ಧರ್ಮಪ್ರಚಾರ ಮತ್ತು ದೇವಸ್ಥಾನಗಳನ್ನು ವಿರೋಧಿಸಿ ನಿರ್ಮೂಲನ ಮಾಡುವುದೂ ನಿಜಾಮು ಸರಕಾರದ ಸ್ಪಷ್ಟ ಧೋರಣೆಯಿದೆ. 1916ನೇ ಇಸ್ವಿಯಲ್ಲಿ ಮಸೀದಿಗಳ ಸ್ಥಾಪನೆ ಮತ್ತು ದುರಸ್ತಿಗಾಗಿ 6 ಲಕ್ಷ ರೂ. ವ್ಯಯಿಸಲ್ಪಟ್ಟಿತ್ತು. 1937ರಲ್ಲಿ ಈ ವೆಚ್ಚವು ರೂ. 11 ಲಕ್ಷಕ್ಕೇರಿದೆ. ಇದು ಹೊರತು ಪಬ್ಲಿಕ್ ವರ್ಕ್ಸ್ ಖಾತೆಯವರು ಬೇರೆ ವೆಚ್ಚ ಮಾಡುತ್ತಾರೆ. 1923ರಿಂದ 33ರ ವರೆಗಿನ ನಿಜಾಮ್ ಸರಕಾರದ ದಶವಾರ್ಷಿಕ ವರದಿಯ ಮೇರೆಗೇನೇ ಅದು ಕೇವಲ 6 ಹಿಂದುಸಂಸ್ಥೆಗಳಿಗೆ ರೂ.5449 ಖರ್ಚು ಮಾಡಿರುವಾಗ ಮುಸಲ್ಮಾನ ಸಂಸ್ಥೆಗಳಿಗೆ ರೂ 8,54,332ನ್ನು ವ್ಯಯಿಸಿರುತ್ತದೆ. ನಿಜಾಮ್ ರಾಜ್ಯದ ಹೊರಗಣ ಮಸೀದಿಗಳ ಜೀರ್ಣೋದ್ಧಾರಕ್ಕಾಗಿ ಹಿಂದು ಪ್ರಜೆಗಳ ರೂ 6 ಲಕ್ಷ ವ್ಯಯಿಸಲ್ಪಟ್ಟಿದೆಯೆಂದರೆ ಏನೆನ್ನಬೇಕು? ಮಕ್ಕಾ ಯಾತ್ರೆಗೆ ಹೋಗುವವರಿಗೆ 42 ಸಾವಿರ ಮತ್ತು ಡಿಲ್ಲಿಯ ಜುಮ್ಮಾ ಮಸೀದಿಗೆ ರೂ 1 ಲಕ್ಷ, ತುರ್ಕಸ್ಥಾನದ ಹಿಲಾಲ್ ಅಹಮ್ಮದ್ ಸಂಸ್ಥೆಗೆ ರೂ 50,000 ಪೆಲೆಸ್ಟೈನದ ಅಕ್ಷ ಜಲ್ ಮಸೀದಿಗೆ ರೂ 1 ಲಕ್ಷವನ್ನು ನಿಜಾಮ್ ಸರಕಾರವು ಕೊಟ್ಟಿರುವುದು. ತಮ್ಮದು ಇಸ್ಲಾಮ್ ರಾಜ್ಯವಿದೆಯೆಂದು ನಿಜಾಮ್ ಸರಕಾರವು ಸ್ಪಷ್ಟವಾಗಿ ಹೇಳುತ್ತದೆ. ಎಲ್ಲಿ ಮುಸಲ್ಮಾನರ ವಸತಿ ಇಲ್ಲವಾಗಿದೆಯೋ ಅಲ್ಲಿದ್ದ ದೇವಾಲಯಗಳನ್ನು ಅಭಿವೃದ್ಧಿಗೊಳಿಸಲಿಕ್ಕೂ, ದುರಸ್ತಿ ಮಾಡಲಿಕ್ಕೂ ಸಾಧ್ಯವಿಲ್ಲ. ಆಂಗ್ಲೇಯ ಗ್ರಂಥಕರ್ತರಾದ ಮಿ ಜಾರ್ಜ್ ಲೋ ಎಂಬವರು ನಿಜಾಮ್ ಸರಕಾರದ ಪ್ರಧಾನಾಮಾತ್ಯರಾದ ಸರ್ ಅಕ್ಬರ್ ಹೈದರಿಯವರ ಸಹಾಯದಿಂದಲೇ ಬರೆದಿರುವ ಪುಸ್ತಕದಲ್ಲಿ ಹಿಂದು ದೇವಸ್ಥಾನಗಳ ಕುರಿತು ಈ ರೀತಿ ಬರೆದಿರುವರು. "ಹೊಸ ಹಿಂದು ದೇವಾಲಯಗಳು ನನಗೆ ಹುಡುಕಿದರೂ ಕಾಣಸಿಗಲಿಲ್ಲ. ಹಳೆಯ ಮಂದಿರಗಳು ಜೀರ್ಣಾವಸ್ಥೆಯಲ್ಲಿರುವುದನ್ನು ನೋಡಿದೆನು. ಹೋದಲ್ಲೆಲ್ಲಾ ಹೊಸ ಹೊಸ ಮಸೀದಿಗಳು ಕಂಡುಬರುತ್ತಿದ್ದುವು. ಆದರೆ ಹಿಂದುಗಳು ದೇವರ ಪೂಜೆ ಮಾಡುವುದೆಲ್ಲಿ ಎಂದು ನಾನು ಕೇಳಿದಾಗ, ಊರುಗಳ ಹೊರವಲಯದಲ್ಲಿ ಜೀರ್ಣವಾಗಿದ್ದ ದೇವಾಲಯಗಳನ್ನು ತೋರಿಸಿದರು ಅಥವಾ ಅವರು ಗೋದಾವರಿ ನದಿಗೆ ಹೋಗಿ ಪೂಜಿಸುವರೆಂದು ಹೇಳಿದರು."

ಭಾಷಣ ಮತ್ತು ಸಭಾ ಸ್ವಾತಂತ್ರ್ಯವಂತೂ ಇಲ್ಲವೇ ಇಲ್ಲ. ಮಹಾತ್ಮ ಗಾಂಧಿಯವರ ಜಯಂತಿಯನ್ನು ಆಚರಿಸುವುದಕ್ಕೂ ಪರವಾನಗಿ ದೊರೆಯಲಿಲ್ಲ. ಒಂದೆಡೆ ವಾಚನಾಲಯವೊಂದರ ವಾರ್ಷಿಕೋತ್ಸವವನ್ನು ಕೂಡಾ ನಡೆಸಲು ಸಾಧ್ಯವಾಗಲಿಲ್ಲ. ದಿವಂಗತ ದೇಶಬಂಧು ಮತ್ತು ಮೋತಿಲಾಲ ನೆಹರು ನಿಧನದ ಬಗ್ಗೆ ದುಃಖಸೂಚಕ ಸಭೆಗಳು ಕೂಡಾ ತಡೆಯಲ್ಪಟ್ಟಿದ್ದುವು. ಹಿಂದುಗಳು ವ್ಯಾಯಾಮ ಮಂದಿರವನ್ನು ತೆರೆಯಲಿಕ್ಕಿಲ್ಲ. ಸಾರ್ವಜನಿಕ ಶಾಂತಿ ಮತ್ತು ಸಂರಕ್ಷಿತತೆಯ ಹೆಸರಲ್ಲಿ ನಿಜಾಮು ಸರಕಾರವು ಜನತೆಯ ಪ್ರಾಥಮಿಕ ನಾಗರಿಕ ಹಕ್ಕು ಬಾಧ್ಯತೆಗಳ ಬುಡಕ್ಕೇನೇ ಕೊಡಲಿಯಿಟ್ಟು ಪ್ರಜೆಗಳನ್ನು ತನ್ನ ಕೈಗೊಂಬೆಗಳಾಗಿ ಇಟ್ಟುಕೊಂಡಿರುವುದು.

ಆರ್ಯಸಮಾಜದ ಪ್ರಭಾವ

ಇತ್ತೀಚಿಗೆ ನಿಜಾಮು ಸಂಸ್ಥಾನದಲ್ಲಿ ಆರ್ಯಸಮಾಜದ ಪ್ರಚಾರವು ಹೆಚ್ಚಾಗಿ ಹಬ್ಬಲಾರಂಭಿಸಿರುವುದು. ಆದರೆ ಸರಕಾರವು ಅವರನ್ನು ಹಣಿಬಡಿಯಲು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಿರುವುದು. ಮುಸಲ್ಮಾನರು ಅವರಿಗೆ ನಾನಾ ರೀತಿಯ

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನ್‌ಮೆಂಟ್
ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಸರ್, ಕೆ ಆರ್ ಕೆ ಶೆಟ್ಟಿ ಬಿಲ್ಡಿಂಗ್, ಮಿಶನ್‌ಹೈಸ್ಕೂಲ್ ರೋಡು

ಅಥವಾ

ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

ಉಪಟಳಪಡಿಸುತ್ತಿರುವರು ಆದರೂ ಆರ್ಯಸಮಾಜದವರು ಎಲ್ಲಾ ತರದ ಪೀಡೆ ಮತ್ತು ಸಂಕಷ್ಟಗಳನ್ನು ಸಹಿಸಿಕೊಂಡು ಹಿಂದುಗಳನ್ನು ಸಂಘಟಿಸತೊಡಗಿದುದರಿಂದ ಹೈದರಾಬಾದಿನ ಹಿಂದುಗಳಲ್ಲಿ ನವಶಕ್ತಿಯುಂಟಾಗಿರುವುದೆಂದು ಹೇಳಬಹುದು ಇದನ್ನು ಕಂಡು ದಿಗಿಲುಗೊಂಡ ನಿಜಾಮ್ ಸರಕಾರವು ಆರ್ಯಸಮಾಜದ ಪ್ರಚಾರಕರು ಹೈದರಾಬಾದಿಗೆ ಪ್ರವೇಶಿಸಿ ಪ್ರಚಾರವಾಡದಂತೆಯೂ, ಆರ್ಯಸಮಾಜಗಳನ್ನು ಸ್ಥಾಪಿಸದಂತೆಯೂ ನಿರ್ಬಂಧಹಾಕಿತು ಆದುದರಿಂದ ಆರ್ಯಸಮಾಜದವರು ತಮ್ಮ ಧಾರ್ಮಿಕ ಮತ್ತು ನಾಗರಿಕ ಹಕ್ಕು ಬಾಧ್ಯತೆಗಳ ಸ್ಥಾಪನೆಗಾಗಿ ಸತ್ಯಾಗ್ರಹ ಹೂಡಬೇಕಾಯಿತು. ಈ ಸತ್ಯಾಗ್ರಹವು 8ತಿಂಗಳಿಂದ ಪ್ರಬಲವಾಗಿ ನಡೆದು ಸುಮಾರು 5000 ಹಿಂದುಗಳು ಜೈಲಿಗೆ ಹೋಗಿರುವರು ಕೆಲಮಂದಿ ಜೈಲಿನಲ್ಲೇ ಮೃತರಾಗಿರುವರು ಹಿಂದುಗಳ ಆದೊಂದು ಧರ್ಮಯುದ್ಧವೆಂಬಂತೆ ಈ ಚಳವಳವು ನಡೆದಿದ್ದಿತು ಸತ್ಯಾಗ್ರಹ ಹೂಡಿದವರು ಸಾರ್ವದೇಶಿಕ ಆರ್ಯಸಮಾಜ ಸಂಘದವರಾದರೂ, ಸನಾತನಿಗಳು, ಸಿಖ್ಖರೇ ಮೊದಲಾದ ಎಲ್ಲಾ ಹಿಂದುಗಳೂ ಅದಕ್ಕೆ ಸಹಾಯಪತ್ತಿದ್ದರು

ಸತ್ಯಾಗ್ರಹ ನಿಲ್ಲಿಸಲ್ಪಟ್ಟಿತು

ಇದೇ ತಾ. 8ರಲ್ಲು ನಾಗಪುರದಲ್ಲಿ, ನಾಗಪುರ ಎಸೆಂಬ್ಲಿಯ ಅಧ್ಯಕ್ಷರಾದ ಶ್ರೀ. ಜಿ ಎಸ್ ಗುಪ್ತರವರ ಅಧ್ಯಕ್ಷತೆಯಲ್ಲಿ ಸಾರ್ವದೇಶಿಕ ಆರ್ಯ ಸಂಘದ ಸಭೆ ನಡೆದು ಹೈದರಾಬಾದ್ ಸತ್ಯಾಗ್ರಹವು ನಿಲ್ಲಿಸಲ್ಪಟ್ಟು, ಬೇರೆ ಬೇರೆ ಕಡೆಗಳಲ್ಲಿ ಸತ್ಯಾಗ್ರಹಕ್ಕಾಗಿ ಸಂಗ್ರಹಿಸಲ್ಪಟ್ಟಿದ್ದ ಸುಮಾರು 2000ಮಂದಿ ಸ್ವಯಂಸೇವಕರು ಹಿಂದೆ ಕಳುಹಿಸಲ್ಪಟ್ಟಿರುವರು ಹೈದರಾಬಾದಿನ ಪ್ರಧಾನ ಮಂತ್ರಿಗಳಾದ ಸರ್. ಅಕ್ಬರ್ ಹೈದರಿಯವರ ಉದಾರ ಧೋರಣೆಯೇ ಈ ಸತ್ಯಾಗ್ರಹ ನಿಲ್ಲಿಸಲ್ಪಡಲು ಕಾರಣ. ಅವರ ಪ್ರಯತ್ನದಿಂದಾಗಿ ಇತ್ತಲಾಗಿ ಕೊಡಲ್ಪಟ್ಟಿರುವ ರಾಜಕೀಯ ಸುಧಾರಣೆಯ ಮೇರೆಗೆ ಹಿಂದುಗಳ ಮತ್ತು ಆರ್ಯಸಮಾಜದವರ ಧಾರ್ಮಿಕ ಮತ್ತು ನಾಗರಿಕ ಹಕ್ಕು ಬಾಧ್ಯತೆಗಳು ಮನ್ನಿಸಲ್ಪಡುವವೆಂದು ಆಶ್ವಾಸನೆ ದೊರೆತಿರುತ್ತದೆ ಈ ರಾಜಕೀಯ ಸುಧಾರಣೆಯು ಹೈದರಾಬಾದ್ ಸ್ಟೇಟ್ ಕಾಂಗ್ರೆಸಿನವರನ್ನು ಏನೇನೂ ತೃಪ್ತಿಪಡಿಸಿರುವುದಿಲ್ಲವಾದರೂ, ಮುಸಲ್ಮಾನರು ಅದನ್ನು ವಿರೋಧಿಸಿ, ಸರ್ ಅಕ್ಬರ್ ಹೈದರಿಯವರ ಇದಿರಾಗಿ ದೊಡ್ಡ ಬಂಡಾಯವನ್ನೇ ಎಬ್ಬಿಸಿರುವರು. ನಿಜಾಮ್ ಸರಕಾರದವರು ಕೊಟ್ಟಿರುವ ಆಶ್ವಾಸನೆ ಮೇರೆಗೆ ಇನ್ನು ಮುಂದೆ ಆರ್ಯಸಮಾಜದವರ ಮತ್ತು ಹಿಂದುಗಳ ದೇವರ ಪೂಜೆ, ಮಂದಿರಗಳ ಸ್ಥಾಪನೆ, ಧಾರ್ಮಿಕ ಪ್ರವಚನ, ಖಾಸಗಿ ಶಾಲೆಗಳ ಸ್ಥಾಪನೆಗಳಿಗೆ ಆತಂಕವೇನೂ ಇರಲಾರದು ನಿಜಾಮ ಸಂಸ್ಥಾನದ ಪ್ರಜೆಗಳ ಧಾರ್ಮಿಕ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಸರಕಾರವು ಶಾಸನಬದ್ಧ ಕಮಿಟಿಯನ್ನು ನೇಮಿಸುವುದು ಈ ಕಮಿಟಿಯ ಹುಕುಮಿನ ಕುರಿತು ಸರಕಾರಕ್ಕೆ ಅಪೀಲು ಮಾಡಿಕೊಳ್ಳುವ ಹಕ್ಕಿರುವುದು

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಕೋಪ್ರಾನದ ಬಿಳೀ ಟೂಥಪೇಸ್ಟ ಆಗಳಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಗಲಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಎಂದು ಮಾಡಿ ವಸಡಿಯನ್ನು ಗಟ್ಟಿಮಾಡುವದು ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ (ಮಾಲಕರ —ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ)

ಮೈಸೂರಲ್ಲಿ ಗೃಹ ಕೈಗಾರಿಕೆಗಳ ಬೆಳವಣಿಗೆ

ಪಾಶ್ಚಾತ್ಯ ದೇಶಗಳಲ್ಲಿ, ಯಂತ್ರಗಳ ಸಹಾಯದಿಂದ ನಡೆಯುವ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿ ಅವುಗಳು ಹೆಚ್ಚಾಗಿ ಅಭಿವೃದ್ಧಿಯಾದುದರ ಪರಿಣಾಮವಾಗಿ, ಹಿಂದಿನಿಂದಲೂ ನಡೆದು ಬಂದ ಹಲವು ಗ್ರಾಮ ಕೈಗಾರಿಕೆಗಳು ಸಂಪೂರ್ಣವಾಗಿ ನಶಿಸಿಹೋಗಿವೆ ಎಂದು ಹೇಳಲಾಗುತ್ತದೆ, ವಾಸ್ತವಿಕವಾಗಿ ಹಲವು ಪಾಶ್ಚಾತ್ಯ ದೇಶಗಳಲ್ಲಿ ಆಧುನಿಕ ಕೈಗಾರಿಕೆಯ ರೀತಿಯನ್ನನುಸರಿಸಿದುದರ ಪರಿಣಾಮವಾಗಿ ಗ್ರಾಮಾಂತರ ನಿವಾಸಗಳಿಗೆ ಬಹಳ ಪ್ರಯೋಜನಕರವಾಗಿಯೂ ಲಾಭದಾಯಕವಾಗಿಯೂ ಇದ್ದ ಗೃಹ ಕೈಗಾರಿಕೆಗಳು ನಾಶವಾಗಿ ಆದರಿಂದ ಗ್ರಾಮಾಂತರವಾಸಿಗಳಿಗೆ ಬಹಳ ತೊಂದರೆಯಾಗಿದೆ, ಆದರೆ ಮೈಸೂರಿನಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿದಾಗ್ಗೆ ಸಣ್ಣಪುಟ್ಟ ಕೈಗಾರಿಕೆಗಳಿಗೆ ಯಾವ ಹಾನಿಯೂ ಉಂಟಾಗುವ ಹಾಗಿಲ್ಲ

ಸಂಸ್ಥಾನದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಬಹ ಭಾಗದವರ ಆದಾಯವನ್ನು ತಕ್ಕಮಟ್ಟಿಗೆ ಹೆಚ್ಚಿಸಲು ಸಹಾಯಕವಾದ ಸಣ್ಣಪುಟ್ಟ ಗ್ರಾಮಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದಾರೆ. ಯಂತ್ರಗಳ ಸಹಾಯದಿಂದ ನಡೆಯುವ ಕೈಗಾರಿಕೆಗಳ ಅಭಿವೃದ್ಧಿಯು ಸಣ್ಣಪುಟ್ಟ ಕೈಗಾರಿಕೆಗಳಿಗೆ ಕಂಟಕನೆಂದು ಸರ್ಕಾರದವರು ಭಾವಿಸುವುದಿಲ್ಲ ದೊಡ್ಡ ದೊಡ್ಡ ಕೈಗಾರಿಕೆಗಳೂ, ಸಣ್ಣ-ಪುಟ್ಟ ಕೈಗಾರಿಕೆಗಳೂ, ಒಟ್ಟಿಗೆ ಅಭಿವೃದ್ಧಿ ಹೊಂದಲು ದೇಶದಲ್ಲಿ ಬೇಕಾದಷ್ಟು ಅವಕಾಶವಿದೆ ಎಂಬುದು ಬಹಳ ಹಿಂದೆಯೇ ಸರ್ಕಾರದವರಿಗೆ ಕಂಡು ಬಂದಿದೆ

ಈ ಭಾವನೆಯಿಂದ, ಸಂಸ್ಥಾನದಲ್ಲಿ ಸರ್ಕಾರದವರು, ಖಾದಿ ಕೈಗಾರಿಕೆಯಲ್ಲದೆ ಇನ್ನೂ ಹಲವು ಉಪಕಸಬುಗಳಿಗೆ ಉತ್ತೇಜನವನ್ನು ಕೊಡುತ್ತಿದ್ದಾರೆ. ಕೈಮಗ್ಗದಿಂದ ಬಟ್ಟೆಗಳನ್ನು ನೇಯುವುದ, ಕಬ್ಬಿಣದ ಸಾಮಾನುಗಳನ್ನು ತಯಾರಿಸುವುದು ಬಣ್ಣದ ಸಾಮಾನಗಳನ್ನು ತಯಾರಿಸುವುದು, ಹಗ್ಗಗಳನ್ನು ತಯಾರುಮಾಡುವುದು ಚಕ್ಕಳಗಳನ್ನು ಹದಮಾಡುವುದು, ಚರ್ಮವನ್ನು ಹೊಲಿಯುವುದು, ಚಾಪೆಗಳನ್ನು ಹೆಣೆಯುವುದು, ಕೈಯಿಂದ ಕಾಗದವನ್ನು ತಯಾರಿಸುವುದು, ಹತ್ತಿಯಿಂದ ಹಗ್ಗಗಳನ್ನು ತಯಾರಿಸುವುದು, ಹಂಚುಗಳನ್ನೂ ಮಣ್ಣಿನ ಸಾಮಾನುಗಳನ್ನೂ ತಯಾರಿಸುವುದು, ಇವೇ ಮೊದಲಾದ ಕೈಗಾರಿಕೆಗಳನ್ನು ಅಭಿವೃದ್ಧಿಸ್ಥಿತಿಗೆ ತರಲು ಕೈಗಾರಿಕೆ ಇಲಾಖೆಯವರು ಬಹಳವಾಗಿ ಶ್ರಮಿಸುತ್ತಿದ್ದಾರೆ.

ಕೈಗಾರಿಕೆ ಇಲಾಖೆಯವರು ಸಂಸ್ಥಾನದ ಗೃಹಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಮೂರು ವರ್ಷದ ಕಾರ್ಯಕ್ರಮವೊಂದನ್ನೇರ್ಪಡಿಸಿಕೊಂಡಿರುವುದನ್ನು ಈ ಸಂಬಂಧದಲ್ಲಿ ಸೂಚಿಸಬಹುದಾಗಿದೆ. ಮೂರು ವರ್ಷದ ಸೂಚನೆಗೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳು ವೆಚ್ಚವಾಗಬಹುದು ಮೇಲೆ ಹೇಳಿದ ಕೈಗಾರಿಕೆಗಳೆಲ್ಲವುಗಳು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ವರ್ಧಿಸುವಂತೆ ಸುವ್ಯವಸ್ಥಿತವಾದ ರೀತಿಯಲ್ಲಿ ಈ ಯೋಜನೆಯನ್ನು ಆಚರಣೆಗೆ ತರಲಾಗುವುದು. ಈ ಯೋಜನೆ ಮೇರೆಗೆ, ಪ್ರದರ್ಶನಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಲು ಮೊದಲನೆಯ ವರ್ಷದಲ್ಲಿ ಅಂದರೆ 1939-40ನೆಯ ಸಾಲಿನಲ್ಲಿ 60,000 ರೂಗಳು ವೆಚ್ಚವಾಗುವುದೆಂದು ಅಂದಾಜಾಗಿದೆ

ಪ್ರಕಟಣೆ

ಸಸಿಹಿತ್ಲು ಬಿಲ್ಲವರ ಹಿತವರ್ಧಕ ಸಂಘ ಮುಂಬಾಯಿ

ಮಂಗಳೂರು ತಾಲೂಕ ಮೂಲ್ಕಿ ಮಾಗಣೆ ಸಸಿಹಿತ್ಲು ಗ್ರಾಮದಲ್ಲಿರುವ ಒಂದನೇ ಗುರಿಕಾರ ಕಾಂತು ಲಕ್ಷ್ಮಣ ಯಾನೆ ದುಕ್ಕಯ್ಯ ಬಂಗೇರ ೧, ಬಂದಲೆ ತಿಮ್ಮ ಪೂಜಾರಿ ೨, ಕಾಂತಪ್ಪ ಪೂಜಾರಿ ೩, ಸಂಕಪ್ಪ ಪೂಜಾರಿ ೪ ಕೂಡಾ ಸಸಿಹಿತ್ಲು ನಾಲ್ಕು ಕರಿ ಹತ್ತು ಸಮಸ್ತರಿಗೆ—

ಹಾಲಿ ಮುಂಬಾಯಿಯಲ್ಲಿರುವ ಸಸಿಹಿತ್ಲು ಬಿಲ್ಲವರ ಹಿತವರ್ಧಕ ಸಂಘದವರು ಈ ಪ್ರಕಟನೆ ತಿಳಿಯಪಡಿಸುವದೇನೆಂದರೆ– ಸದ್ರಿ ಸಸಿಹಿತ್ಲು ಗ್ರಾಮದ ಶ್ರೀ ಉಳ್ಳಾಲ್ತಿ ದೈವದ ಗರಡಿ ಕಟ್ಟಲು ನೀವುಗಳು ಆಭರಣಗಳ ಕೂಡಿನ ವೇಳೆ ನಮ್ಮ ಸಂಸ್ಥೆಯಿಂದ ಸಾಲವಾಗಿ ಪಡಕೊಂಡ ನೂರೈವತ್ತು ರೂಪಾಯಿಗಳನ್ನು ಈವರೆಗೂ ಮರುಪಾವತಿಮಾಡದೆ ಬಾಕಿಯಿಟ್ಟುಕೊಂಡ ವಿಷಯದಲ್ಲಿ ನಿಮಗೆ ತಾ.17 10 33ರಲ್ಲು ರಿಜಿಸ್ಟ್ರಿ ನೋಟೀಸು ಜಾರೀ ಪಡಿಸಿದರೂ, ಈತನಕ ತಕ್ಕ ಉದಾಹರಣೆ ದೊರೆಯದ ಕಾರಣ, ಈ ಜಾರೀ ಪ್ರಕಟಣೆ ಮಾಡಿದ್ದಾಗಿರುತ್ತದೆ. ಈ ಪ್ರಕಟಣೆಯ ತಾರೀಕಿನ ಹದಿನೈದು ದಿನಗಳೊಳಗಾಗಿ, ನಿಮ್ಮಿಂದ ನಮ್ಮ ಸಂಸ್ಥೆಗೆ ಅಸಲು ಬಡ್ಡಿ ಲೆಕ್ಕಾಚಾರದ ಬಾಬ್ತು ಸಲಬೇಕಾದ ನೂರತೊಂಭತ್ತನಾಲ್ಕು ರೂಪಾಯಿ ಹತ್ತಾಣೆ ಎರಡು ಪೈಗಳನ್ನು ಸದ್ರಿ ಸಂಸ್ಥೆಗೆ ಪಾವತಿ ಮಾಡಿ ನಮ್ಮ ತಾಬೆಯಲ್ಲಿದ್ದ ಆಭರಣಗಳನ್ನು ವಾಪಾಸು ಪಡಕೊಳ್ಳತಕ್ಕದ್ದು ಇದಕ್ಕೆ ತಪ್ಪಿದ್ದಲ್ಲಿ ಸದ್ರಿ ನಮ್ಮಲ್ಲಿರುವ ಆಭರಣಗಳನ್ನು ನಮಗೆ ಯುಕ್ತ ಕಂಡ ರೀತಿಯಲ್ಲಿ ವಿಕ್ರಯಿಸುವೆವು ಎಂದು ಈ ಮೂಲಕ ನಿಮಗೆ ತಿಳಿಸಲಾಗುತ್ತದೆ

ವೀರಪ್ಪ ಟಿ. ಕೋಟಿಯಾನ್,
ಗೌರವ ಕಾರ್ಯದರ್ಶಿ.

ಸಮಿತಿಯ ಅನುಮತಿ ಮೇರೆಗೆ
ಮುಂಬಾಯಿ, ತಾ 9 8-39

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮನಂಬ್ರ 333/1939 R I.A.No 1273/1939

ಅಬ್ದುಲ್ಲ ಖಾದರ ಬ್ಯಾರಿ, ಚೆಳ್ಯಂಗಯ ಅಲಿಕುಂಞ ಬ್ಯಾರಿಗಳ ಮಗ, ಕಾಸರಗೋಡು ತಾಲೂಕು ಬಾಡೂರು ಗ್ರಾಮದಲ್ಲಿರುವವ—ವಾದಿ, ಅರ್ಜಿದಾರ.

ಮತ್ತು

1 ಗೋವಿಂದ ಭಟ್ಟ, 2. ಕೃಷ್ಣ ಭಟ್ಟ, ಪುಳಕ ವೆಂಕಟ್ರಮಣ ಭಟ್ಟನ ಮಕ್ಕಳು, ಕಾಸರಗೋಡು ತಾಲೂಕು ಬಾಡೂರು ಗ್ರಾಮದಲ್ಲಿರುವವರು— ಪ್ರತಿವಾದಿಗಳು, ರೆಸ್ಪಾಂಡೆಂಟರು.

ತಾರೀಕ 8-8-1939

ಸದ್ರಿ ವಾದಿಯ ಕಡೆ ನೋಟೀಸು.—

1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಬರಕೊಟ್ಟ ರಿಲೀಜು ಪತ್ರ ರದ್ದುಪಡಿಸುವ ಬಗ್ಗೆ ದಾಖಲುಮಾಡಿದ ಸದ್ರಿ ವ್ಯಾಜ್ಯದಲ್ಲಿ 1ನೇ ಪ್ರತಿವಾದಿಯ ಎಲ್ಲಾ ಸಾಲಗಾರರ ಕಡೆಯಿಂದ ಕೂಡಾ ಈ ವ್ಯಾಜ್ಯವನ್ನು ನಡಿಸುವರೆ ತನಗೆ ಪರ್ಮಿಶನ್ ಕೊಡಿಸಬೇಕಾಗಿ ವಾದಿಯು ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 8 9 1939ಕ್ಕೆ ಇಟ್ಟಿರುವ ಸಂಗತಿ ರೆಸ್ಪಾಂಡೆಂಟರಿಗೆ ಮ 1ನೇ ಪ್ರತಿವಾದಿಯ ಎಲ್ಲಾ ಸಾಲಗಾರರಿಗೆ ಕೂಡಾ ಈ ಮೂಲಕ ತಿಳಿಸಲಾಗಿಯದೆ, ಈ ಕುರಿತು ಆಕ್ಷೇಪವುಳ್ಳವರು ಆ ದಿವಸ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದೆಂತ ಕೂಡಾ ತಿಳಿಸಲಾಗಿಯದೆ,

(Sd) **P Ahmad,**
Advocate for Plaintiff.

ಕಾಸರಗೋಡು, 8-8 1939

NOTICE.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C No 123/1939

ಅಬೋಕ್ರೆ ಬ್ಯಾರಿ, ಇಬ್ರಾಯಿ ನೆ ಬೇರಾ ಮೊಯಿದಿನ್ ಬ್ಯಾರಿ ಮಗ ಕಾಸರಗೋಡು ತಾಲೂಕು ಕೊಡ್ಲು ಗ್ರಾಮದ ಕಾವುಗೋಳಿಯಲ್ಲಿರುವವ— ವಾದಿ.

ಮತ್ತು

ಶಿನಕಾವು ಭಟ್ಟ, ಕಾವುಮಠದ ವಾಸುದೇವ ಕಾವು ಭಟ್ಟನ ಮಗ, ಕಾಸರಗೋಡು ತಾಲೂಕು ಕೊಡ್ಲು ಗ್ರಾಮದ ಕಾವುಗೋಳಿಯಲ್ಲಿರುವವ— ಪ್ರತಿವಾದಿ ಇವರೊಳಗೆ—

ಮೇಲ್ಕಂಡ ಪ್ರತಿವಾದಿಯು ವಾದಿಯಿಂದ ತಾ. 6-5-1933ರಲ್ಲು ಪ್ರತಿಫಲ ಪಡೆದು ರೂ 500/-ಕ್ಕೆ ಬರಕೊಟ್ಟ ಪ್ರಾಮಿಸರಿ ನೋಟಿನ ಅಸಲು ಬಡ್ಡಿ ಐವೇಜಿನಲ್ಲಿ ವಸೂಲು ಕೊಟ್ಟದ್ದು ಕಳೆದು ಬಾಕಿ ಬಹ ಐವೇಜನ್ನು ವಸೂಲು ಮಾಡುವ ಬಗ್ಗೆ ವಾದಿಯು ದಾಖಲುಮಾಡಿದ ಮೇಲ್ಕಂಡ ಮುಕ್ಕದ್ದಮೆ ತಾರೀಕು 22 8 1939ಕ್ಕೆ ತನಿಕೆಗೆ ಇಟ್ಟಿರುವದರಿಂದ ಆ ದಿವಸ ಸದ್ರಿ ಪ್ರತಿವಾದಿಗೆ ಖುದ್ದಾಗಲೀ, ವಕೀಲರ ಮುಖಾಂತರವಾಗಲೀ, ಹಾಜರಾಗಲು ತಪ್ಪಿದ್ರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ,

K. Kamalaksha Kamath,
Advocate for Plaintiff

Kasaragod 12—8—1939

ಲೈಬ್ರೆರಿ
ಮತ್ತು
ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ
ಪುಸ್ತಕಗಳು ನಮ್ಮಲ್ಲಿ
ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.

ಟಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD 1906

ಉಡುಪಿ, ಗುರುವಾರ, ತಾ. ೧೭-೮-೩೯

ಶಿಸ್ತುಜ್ಯಾರಿಯೋ? ದ್ವೇಷಸಾಧನೆಯೋ?

ಇತ್ತಲಾಗಿ ಶಿಸ್ತುಜ್ಯಾರಿಯ ಅಂಟುರೋಗವೇ ಕಾಂಗ್ರೆಸಿನ ಅಧಿನಾಯಕರಲ್ಲಿ ಪ್ರಬಲವಾಗಿ ಹಬ್ಬುತ್ತಿರುವಂತಿದೆ ಕಾಂಗ್ರೆಸ್ಸಿನ ಗೌರವ ವರ್ಚಸ್ಸು ಮತ್ತು ಒಕ್ಕಟ್ಟನ್ನು ಹೆಚ್ಚಿಸುವ ಉದ್ದೇಶದಿಂದ ಅವರು ದೇಶದ ಸನ್ಮಾನ್ಯ ಮುಖಂಡರ ಮೇಲೆಲ್ಲಾ ನಿಷ್ಠುರವಾಗಿ ಶಿಸ್ತುಜ್ಯಾರಿ ಮಾಡುತ್ತಿದ್ದಾರೆ. ಈ ಶಿಸ್ತುಜ್ಯಾರಿಯು ಈಗೀಗ ಕಾಂಗ್ರೆಸ್ಸಿನೊಳಗಣ 'ರೈಟಿಸ್ಟ'ರು 'ಲೆಫ್ಟಿಸ್ಟ'ರ ಮೇಲೆ ನಡಿಸುವ ಪ್ರತೀಕಾರದ ಸ್ವರೂಪ ತಾಳಿ ಕಾಂಗ್ರೆಸ್ಸಿನ ಶಕ್ತಿಯನ್ನು ಹೆಚ್ಚಿಸುವ ಬದಲಿಗೆ ಕ್ಷಯಿಸುವುದೆಂದು ಧೈರ್ಯದಿಂದ ಹೇಳಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಶ್ರೀ. ಸುಭಾಸ್‌ಚಂದ್ರಭೋಸರ ಮೇಲೆ ಮಾಡಿರುವ ಶಿಸ್ತುಜ್ಯಾರಿಯಂತೂ, ಇಡೀ ದೇಶದಲ್ಲಿ ಮಾತ್ರವಲ್ಲದೆ, ಪರರಾಷ್ಟ್ರಗಳಲ್ಲಿಯೂ ಕಾಂಗ್ರೆಸಿನ ಪ್ರತಿಷ್ಠೆಯನ್ನು ಬಹಳವಾಗಿ ತಗ್ಗಿಸುವುದೆಂಬುದರಲ್ಲಿ ಸಂದೇಹವೇ ಇಲ್ಲ. ಎರಡು ಸಲ ರಾಷ್ಟ್ರಪತಿಯಾಗಿ ಆರಿಸಲ್ಪಟ್ಟಿರುವ ಭೋಸರು, ಸನ್ನೆಯ ತ್ರಿಪುರಿ ಕಾಂಗ್ರೆಸ್ಸಿನ ಅಧ್ಯಕ್ಷಪೀಠವನ್ನೇರಿದ್ದ ಸುಭಾಸಚಂದ್ರರು, ತನ್ನ ಉಜ್ವಲ ದೇಶಭಕ್ತಿ, ಅಪ್ರತಿಮತ್ಯಾಗ, ಅಸಾಧಾರಣ ಧೈರ್ಯ ಸ್ಥೈರ್ಯಾದಿಗುಣಗಳಿಂದ ಬಂಗಾಳದ ತರುಣ ಹೃದಯಮಂದಿರ ಮೂರ್ತಿಯಾಗಿರುವ ಅಗ್ರಗಣ್ಯ ತರುಣ ಮುಖಂಡರು ಇಂದು ಕಾಂಗ್ರೆಸ್ ಕಮಿಟಿಯ ಯಾವ ಅಧಿಕಾರಕ್ಕೂ ಅಯೋಗ್ಯರಾಗಿ ಅವಮಾನಿತರಾಗಿರುವರು.

ವರ್ಕಿಂಗ್ ಕಮಿಟಿಯು ತೇಜೋವಧೆ ಮಾಡಿಕೊಂಡಿದೆ

ರಾಜಕೀಯ ಕ್ಷೇತ್ರದಲ್ಲಿ ಶ್ರೀ ಭೋಸರು ನಿನ್ನೆ ಮೊನ್ನೆ ಕಣ್ಣು ಬಿಟ್ಟವರಲ್ಲ. ಗಾಂಧಿಜಿಯವರು ಅಸಹಕಾರ ಚಳವಳವನ್ನಾರಂಭಿಸಿದಂದಿನಿಂದ ಮಾತೃಭೂಮಿಯ 'ಬಂಧವಿಮೋಚನೆಗಾಗಿ ತನ್ನ ಸರ್ವಸ್ವವನ್ನೂ ಧಾರೆಯೆರೆದು ಸ್ವಾತಂತ್ರ್ಯ ಚಳವಳಕ್ಕೆ ಸೊಂಟಕಟ್ಟಿ ಒಮ್ಮೆಯೇ ಧುಮುಕಿದವರವರು. ಆ ಕಾಲದಲ್ಲಿ ಸ್ವರ್ಗೀಯ ಸುಖದಾಯಕವೆಂದು ಪರಿಗಣಿಸಲ್ಪಡುತ್ತಿದ್ದಂಥಾ ಆತ್ಯಾಕರ್ಷಣೀಯ ಹಿಂದೀ ಸಿವಿಲ್ ಸರ್ವಿಸಿನ ಹುದ್ದೆಯನ್ನು ಒದೆದು ಹೊರಬಂದು ಕಾಂಗ್ರೆಸಿನ ಪುರೋಭಿವೃದ್ಧಿಗಾಗಿ ಯಶಸ್ಸಿಗಾಗಿ ಅವಿಶ್ರಾಂತವಾಗಿ ದುಡಿದುಕೊಂಡು ಬಂದವರು ಸರಕಾರದ ಅತ್ಯುಗ್ರ ದಬ್ಬಾಳಿಕೆಯನ್ನು ಧಿಕ್ಕರಿಸಿ ಉರಿಯುಟಗಳಿಗೆ ಕೂಡಾ ಎದೆಗೊಟ್ಟು ತನ್ನ ನಡು ಯೌವನವನ್ನು ಕಾರಾಗೃಹಗಳಲ್ಲಿ ಕೊಳೆಯುತ್ತಾ ಕಳೆದು ಕಠಿಣ ಕಾಯಿಲೆಯಿಂದ ಪೀಡಿತರಾಗಿ ಆರೋಗ್ಯ ಹಾನಿ ಹೊಂದಿದವರು. ಅವರ ಹೋರಾಟದ ಉತ್ಸಾಹವು ಒಂದಿಷ್ಟು ಕುಂದಿಲ್ಲ. ಸಂಪೂರ್ಣ ಸ್ವರಾಜ್ಯವು ಹಿಂದೂದೇಶಕ್ಕೆ ಎಂದು ಲಭಿಸುವುದೆಂದು ಸದಾ ತಹತಹಿಸುತ್ತಿರುವ ಉಜ್ವಲ ಹೃದಯ ಅವರದು ಈಗಲೂ ಅವರ ಮೇಲೆ ಸರಕಾರದ ವಕ್ರದೃಷ್ಟಿಯು ಇದ್ದೇ ಇದೆ. ಅವರಷ್ಟು ತ್ಯಾಗಿ, ಸಾಹಸಿ, ದೇಶಾಭಿಮಾನಿ ಮುಖಂಡರನ್ನು ಇಡೀ ಹಿಂದೂದೇಶದಲ್ಲಿ ಬೆರಳಲ್ಲೆಣಿಸಬಹುದು. ಇಂತಹ ತೇಜೋಶಾಲಿ ವ್ಯಕ್ತಿಯ ಮೇಲೆ ಶಿಸ್ತುಜ್ಯಾರಿ ಮಾಡಿ ತೇಜೋವಧೆಮಾಡಹೊರಟವರ ಪರಿಣಾಮವು ಪ್ರತಿನಿರುದ್ಧವಾಗದಿರುವುದೇ?

ಭೋಸರ ಮಹಾಪರಾಧವೇನು?

ಶ್ರೀ ಸುಭಾಸ್ ಭೋಸರು ಮಾಡಿರುವ ಮಹಾಪರಾಧವಾದರೂ ಏನು? ಕಾಂಗ್ರೆಸಿನ ಮೂಲತತ್ವಗಳಿಗೆ ವಿರೋಧವಾಗಿ ನಡೆದು ಬ್ರಿಟಿಷ್ ಆಳ್ವಿಕೆಯನ್ನು ಸಮರ್ಥಿಸಿದರೇ? ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಒಳಗಿಂದೊಳಗೆ ಸಂಧಿಮಾಡುವ ಪಿತೂರಿ ನಡೆಸಿದರೇ? ಕಾಂಗ್ರೆಸಿನ ಹೆಸರನ್ನು ಯಾವ ರೀತಿಯಲ್ಲಾದರೂ ಕೆಡಿಸಲೆತ್ನಿಸಿದರೆ? ತನ್ನ ವೈಯಕ್ತಿಕ ಸ್ವಾರ್ಥಸಾಧನೆಯ ಪ್ರಯತ್ನವನ್ನೇನಾದರೂ ಮಾಡಿದರೇ? ದೇಶವು ಬೇಗನೆ ಪೂರ್ಣ ಸ್ವಾತಂತ್ರ್ಯ ಪಡೆಯಬೇಕು. ಅದಕ್ಕಾಗಿ ತೀವ್ರವಾದ ಹೋರಾಟ ಸಿದ್ಧತೆಮಾಡಬೇಕು. ಈಗಣ ಕಾಂಗ್ರೆಸಿನ ಧೋರಣೆಯು ಮಂದಗಾಮಿ ಮಾರ್ಗ ಹಿಡಿದಿದೆ. ಅದರಿಂದ ಕಾಂಗ್ರೆಸಿನ ಕ್ರಾಂತಿಕಾರಕ ಮನೋವೃತ್ತಿಯು ಮಾಯವಾಗಹತ್ತಿದೆ ಕಾಂಗ್ರೆಸ್ ಕಮಿಟಿಗಳ ಅಧೀನವಿರಬೇಕಾಗಿದ್ದ ಕಾಂಗ್ರೆಸ್ ಮಂತ್ರಿಗಳು ಅವುಗಳ ಮೇಲೆ ಅಧಿಕಾರ ನಡಿಸುವಂತಾಗಿದೆ. ಎಲ್ಲೆಲ್ಲಿಯೂ ಸುಧಾರಣಾ ಮನೋವೃತ್ತಿಯೇ ಬೆಳೆಯಹತ್ತಿ ಆಳರಸರೊಡನೆ ಸಹಕಾರ ಭಾವವು ಬೆಳೆಯಹತ್ತಿದೆ ಎಂದು ರೈಟಿಸ್ಟರ ಧೋರಣೆಯನ್ನು ಟೀಕಿಸುವ ತೀವ್ರ ಮಾರ್ಗ ಹಿಡಿದರೆ ಕಾಂಗ್ರೆಸಿನ ಶಿಸ್ತನ್ನು ಉಲ್ಲಂಘಿಸಿದಂತಾಯಿತೇ?

ಪ್ರೆಸಿಡೆಂಟರ ಆಜ್ಞೋಲ್ಲಂಘನೆ

ಕಾಂಗ್ರೆಸ್ ಪ್ರೆಸಿಡೆಂಟರ ಆಜ್ಞೋಲ್ಲಂಘನೆಯ ನೆವನದಿಂದ ಸರ್ದಾರ್ ವಲ್ಲಭಾಯಿಯವರೇ ಮೊದಲಾದವರು ಶ್ರೀ ಸುಭಾಸಚಂದ್ರರ ಮೇಲೆ ಸೇಡುತೀರಿಸಿ ಬಂಗಾಳದಲ್ಲಿ ತಾವು ಹೇಳಿದಂತೆ ಕೇಳುವ ಡಾಕ್ಟರ್ ಬಿ. ಸಿ. ರಾಯರವರ ಪಕ್ಷವನ್ನು ಅಧಿಕಾರಕ್ಕೆ ತರುವ ಪ್ರಯತ್ನದಲ್ಲಿದ್ದಾರೆಂಬುದು ಸ್ಪಷ್ಟವಿದೆ. ಇಂತಹ ಪ್ರತೀಕಾರ ಬುದ್ಧಿಯಿಂದ ಅಖಿಲ ಭಾರತ ಸಂಸ್ಥೆಯಾದ ಕಾಂಗ್ರೆಸಿನ ಆಡಳಿತ ನಡಿಸಿದರೆ ಪರಿಣಾಮ ಎಂದೂ ನೆಟ್ಟಗಾಗಲಿಕ್ಕಿಲ್ಲ. ಕಾಂಗ್ರೆಸಿನ ನಿರ್ಣಯಗಳನ್ನು ವಿರೋಧಿಸಿ ಪ್ರಚಾರ ಮಾಡುವ ಹಕ್ಕು ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳಿಗೆ ಇರುವುದೋ ಇಲ್ಲವೋ ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಮತ್ತು ಕಾಂಗ್ರೆಸಿನ ಆಡಳಿತದಲ್ಲಿ ಇಂತಹದೊಂದು ಸಮಸ್ಯೆಯುಂಟಾದುದು ಇದೇ ಮೊದಲೆನ್ನಬಹುದು ಆದುದರಿಂದ ಅತ್ಯಂತ ಚರ್ಚಾಸ್ಪದವಾದ ಈ ಪ್ರಶ್ನೆಯ ಕುರಿತು ವರ್ಕಿಂಗ್ ಕಮಿಟಿಯವರು ತಮ್ಮ ಧೋರಣೆಯನ್ನು ಈ ಸಲ ನಿರ್ದಿಷ್ಟಗೊಳಿಸಿ ಮುಂದೆ ಯಾರೂ ಹಾಗೆ ಮಾಡಬಾರದೆಂದು ಎಚ್ಚರಿಕೊಟ್ಟು ಬಿಡುವುದು ವಿವೇಕವಿತ್ತು. ಅವರೆ ಹಾಗೇನೂ ಮಾಡದೆ ಅವರು ಶ್ರೀ ಭೋಸರ ಮೇಲೆ ಒಮ್ಮೆಯೇ ಶಿಸ್ತುಜ್ಯಾರಿಮಾಡುವ ಉದ್ಧಟತನ ತೋರಿಸಿರುವರು ಮಾತ್ರವಲ್ಲದೆ ಇನ್ನೂ ಕೆಲವರ ಮೇಲೆ ಇದೇ ರೀತಿ ಶಿಸ್ತುಜ್ಯಾರಿಮಾಡುವ ಅಧಿಕಾರವನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಕೊಟ್ಟಿರುವರು. ಈ ಮೊದಲೇ ತಮಗಾಗದವರ ಮೇಲೆ ಶಿಸ್ತುಜ್ಯಾರಿಮಾಡಲು ಮುಂದುವರಿದಿದ್ದ ಕೆಲವು ಪ್ರಾಂತಿಕ ಕಮಿಟಿಗಳಿಗೆ ಈಗ ಸೇಡು ತೀರಿಸಲು ಬಹಳ ಅನುಕೂಲವೇ ಆಯಿತು

ಲೆಫ್ಟಿಸ್ಟರೆಲ್ಲರ ಕರ್ತವ್ಯ

ರೈಟಿಸ್ಟರ ಮಂದಗಾಮಿ ಧೋರಣೆಗೆ ತೊಡಕನ್ನುಂಟುಮಾಡುತ್ತಿರುವ ಲೆಫ್ಟಿಸ್ಟರೆಲ್ಲಾ ಕಾಂಗ್ರೆಸಿನಿಂದ ಹೊರಹಾಕಲ್ಪಡುವ ಅಶುಭಚಿಹ್ನೆಗಳೀಗ ತೋರಿಬರುತ್ತಿವೆ. ಇದಕ್ಕೆ ಲೆಫ್ಟಿಸ್ಟರ ದೌರ್ಬಲ್ಯ ಮತ್ತು ಅನೈಕ್ಯವೇ ಕಾರಣ. ಶ್ರೀ ಭೋಸರು ಕೂಡಾ ದೊಡ್ಡ ಪ್ರಮಾದವಮಾಡಿ ಈಗ ರೈಟಿಸ್ಟರ ಕೈಯೊಳಗ ಸಿಕ್ಕಿಬೀಳುವಂತಾಗಿದೆ. ಅವರು ಅಧ್ಯಕ್ಷರಾಗಿದ್ದಾಗ ಹಳೆಯ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ರಾಜಿನಾಮೆ ಕೊಟ್ಟೊಡನೆಯೇ ಆತ್ಮವಿಶ್ವಾಸದಿಂದ ಇಡೀ ಕಾಂಗ್ರೆಸ್ಸಿನ ಆಡಳಿತದ ಜವಾಬ್ದಾರಿ ಹೊತ್ತು ಹೊಸ ವರ್ಕಿಂಗ್ ಕಮಿಟಿ ಮೆಂಬರರನ್ನು ಆರಿಸಿ ಕಾಂಗ್ರೆಸ್ಸಿನ ಆಡಳಿತವನ್ನು ಸರಾಗವಾಗಿ ನಡಿಸಬೇಕಿತ್ತು ತ್ರಿಪುರಿ ಕಾಂಗ್ರೆಸ್ಸಿನ ಅನಂತರ ಕಾಂಗ್ರೆಸ್ಸಿನ ಹಿಂದಿನ ರೂಢಿಯಂತೆ ತನ್ನಿಚ್ಛೆಯ ವರ್ಕಿಂಗ್ ಕಮಿಟಿಯನ್ನು ರಚಿಸಬೇಕಿತ್ತು ಅವರು ಗಾಂಧಿಜಿಯವರ ಮತ್ತು ರೈಟಿಸ್ಟರ ಸಹಕಾರ ಪಡೆದು ಒಕ್ಕಟ್ಟಿನಿಂದ ನಡೆಯಬೇಕೆಂಬ ಮನಸ್ಸುಮಾಡಿ ಮೋಸಹೋದರು ರೈಟಿಸ್ಟರಂತೆ ನಿರ್ದಾಕ್ಷಿಣ್ಯ ಹಾಗೂ ನಿಷ್ಠುರವಾಗಿ ನಡೆಯುತ್ತಿದ್ದರೆ, ಇಂದು ಅವರ ವಿರೋಧವಾಗಿ ದೊಡ್ಡ ದೊಡ್ಡ ಸ್ಟೇಟ್‌ಮೆಂಟ್ ಹೊರಡಿಸಿ ಟೀಕಿಸುವ ಸರ್ದಾರ್ ವಲ್ಲಭಾಯಿ, ಶ್ರೀ ಸತ್ಯಮೂರ್ತಿ, ಶ್ರೀ. ಕೃಪಾಲಿನಿ ಮೊದಲಾದವರೆಲ್ಲಾ ಬಾಯಿಮುಚ್ಚಿಕೊಳತುಕೊಳ್ಳಬೇಕಿತ್ತು. ಈಗ ರೈಟಿಸ್ಟರು ಲೆಫ್ಟಿಸ್ಟರ ಮೇಲೆ ಯುದ್ಧವನ್ನೇ ಹೂಡಿರುವಂತಿದೆ. ಅವರಿಗೆ ಲೆಫ್ಟಿಸ್ಟರ ಸಹಕಾರಬೇಕಾಗಿಲ್ಲೆಂಬುದು ಸ್ಪಷ್ಟವಿದೆ ಆದುದರಿಂದ ಕಾಂಗ್ರೆಸ್ಸಿನೊಳಗಣ ಲೆಫ್ಟಿಸ್ಟರೆಲ್ಲಾ ಈ ಸಂದರ್ಭದಲ್ಲಿ ಒಕ್ಕಟ್ಟಾಗಿ ಕಾಂಗ್ರೆಸ್ಸಿನೊಳಗೆ ತಮ್ಮ ಶಕ್ತಿಯನ್ನು ಹೆಚ್ಚಿಸಬೇಕು. ತಮ್ಮೊಳಗಣ ಸಣ್ಣಪುಟ್ಟ ಬಿನ್ನಭೇದಗಳನ್ನು ಮೂಲೆಗೊತ್ತಿ ತಮ್ಮ ಅಸ್ತಿತ್ವಕ್ಕೇನೇ ಉಂಟಾಗಿರುವ ಗಂಡಾಂತರದಿಂದ ಪಾರಾಗಲು, ಎಲ್ಲರೂ ಒಟ್ಟಾಗಿ ಸೇರಿ,ನಿಶ್ಚಿತಕಾರ್ಯಕ್ರಮವನ್ನು ದೇಶದ ಮುಂದಿರಿಸಿ, ಜನಸಮುದಾಯದ ಬೆಂಬಲ ಪಡೆದು ರೈಟಿಸ್ಟರ ಆಟ ನಡೆಯದಂತೆ ಮಾಡುವುದು ಅವರ ಕರ್ತವ್ಯವಿದೆ.

ದಾರಿ ಹೋಕನ ಡೈರಿ

ಇಡೀ ಲೋಕದ ಅದೃಷ್ಟ ಒಬ್ಬ ವ್ಯಕ್ತಿಯ ಹಸ್ತಗತವಾಗಿದೆ ಈಗ. ಇಂತಹ ಜೀಕರ ತಲೆತಿರುಕತನವನ್ನು ಮುಂದೆ ಆಗಗೊಡಬಾರದೆಂದು ಮಿ. ವಿನ್‌ಸ್ಟನ್ ಚರ್ಚಿಲ್ಲರು ಉದ್ಘೋಷಿಸುತ್ತಿದ್ದಾರೆ. ಅದು ಜರ್ಮನಿಯ ಒಬ್ಬ ವ್ಯಕ್ತಿಯ ಬದಲಿಗೆ ಇಂಗ್ಲೆಂಡಿನ ಓರ್ವ ವ್ಯಕ್ತಿಯ ಕೈವಶವಾಗುತ್ತಿದ್ದರೆ ಸರಿಹೋಗುತ್ತಿತ್ತೋ ಏನೋ ಚರ್ಚಿಲ್ ಸಾಹೇಬರಿಗೆ!

೦೦ ೦೦ ೦೦

೩೫೦ ಮಿಲ್ಯ ಹಿಂದೀಯರ ಅದೃಷ್ಟ ಒಬ್ಬ ವೈಸರಾಯರ ಅಧೀನವಾಗಿರುವುದಕ್ಕೇನೆನ್ನುವರೋ ಚರ್ಚಿಲ್ ಸಾಹೇಬರು. ಹಿಂದೀ ಸೇನೆಯನ್ನು ಪೂರ್ವಕ್ಕೂ ಪಶ್ಚಿಮಕ್ಕೂ ಇಚ್ಛಾನುಸಾರ ಕಳುಹಿಸುವಾಗ ಅವರು ಯಾರೊಡನಾದರೂ ಕೇಳಿರುವರೇ? ನಾಳೆ ಯುದ್ಧವಾದರೆ ಹಿಂದೂದೇಶವು ಅವಕ್ಕೆಳೆಯಲ್ಪಡುವುದು ನಿಶ್ಚಯವಲ್ಲವೇ?

೦೦ ೦೦ ೦೦

ಹಿಟ್ಲರನು ಐದು ಜ್ಯೋತಿಷಿಗಳನ್ನು ಹತ್ತಿರವೇ ಇಟ್ಟುಕೊಂಡಿದ್ದಾನಂತೆ. ಅವರು ಕಾಲಗಣನೆ ಮಾಡಿ ಮುಹೂರ್ತ ಹೇಳುವಾಗ ಮಾತ್ರ ಅನ್ಯದೇಶಗಳ ಮೇಲೆ ಧಾಳಿನಡಿಸುವನಂತೆ ಡಾನ್ಸಿಗನ್ನು ವಶಪಡಿಸಿಕೊಳ್ಳುವ ಸುಮುಹೂರ್ತ ಇನ್ನೂ ಬಂದಿಲ್ಲವೋ ಏನೋ? ಪ್ರಾಯಶಃ ಜ್ಯೋತಿಷಿಗಳು ರಾತ್ರಿಹಗಲು ತಾರಾಗಣನೆ ಮಾಡಿಕೊಂಡಿರಬೇಕು. ಈ ಸಲ ಹಿಟ್ಲರನೊಂದಿಗೆ ಜ್ಯೋತಿಷಿಗಳ ಅದೃಷ್ಟ ಪರೀಕ್ಷೆಯೂ ಆಗುವುದೋ ಏನೋ?

೦೦ ೦೦ ೦೦

ಯುರೋಪನ್ನು ಯುದ್ಧದಿಂದ ರಕ್ಷಿಸಲೆಂದು ಮ್ಯುನಿಚ್ ಒಪ್ಪಂದ ಮಾಡಿದವರು ಚೇಂಬರ್ಲೇನ್ ಸಾಹೇಬರು ರಕ್ಷಣೆಯ ಸಿದ್ಧತೆಯ ಭರದಿಂದ ನಡೆಯುತ್ತಿದೆ ಈಗ ಇಂಗ್ಲೆಂಡಿನಲ್ಲಿ. ಈಗ 'ಪೀಸ್‌ಫ್ರಂಟಿ'ನಲ್ಲಿ ಪೂರ್ವದ ಮ್ಯುನಿಚನ್ನು ಮಾಡಿ ಏಷ್ಯಾಖಂಡದ ರಕ್ಷಣೆಗೆ ಹೊರಟಿದ್ದಾರೆ. ಹೋಗುತ್ತಿವೆ ಹಿಂದೀ ಸೈನ್ಯ ಮತ್ತು ಜಲಾಂತರ್ಗಾಮಿ ನಾವೆಗಳು ಸಿಂಗಪುರಕ್ಕೆ!

೦೦ ೦೦ ೦೦

ಪಂಡಿತ ಜವಾಹರಲಾಲರು ಸ್ವತಂತ್ರ ಹಿಂದುಸ್ಥಾನದ ರಾಜ್ಯಭಾರತನವನ್ನು ಪ

ಪುಟ ೧೩ಕ್ಕೆ

3 ವಾರಗಳಲ್ಲಿ ಪೋಲೆಂಡನ್ನು ಸದೆಬಡಿವ ಪ್ಲೇನು

ಲೋಕದ ಅದೃಷ್ಟ ಒಬ್ಬ ವ್ಯಕ್ತಿಯ ಕೈಯಲ್ಲಿದೆ—ಇಂಗ್ಲೆಂಡಿನ ಪ್ರಚಂಡ ವಿಮಾನ ಯುದ್ಧಸಿದ್ಧತೆ

ನಡೆದುಕೊಂಡೇ ಮಕ್ಕಕ್ಕೆ ಯಾತ್ರೆ

ಬಿಹಾರಿನ ಮುಸಲ್ಮಾನನೊಬ್ಬನು ನಡೆದುಕೊಂಡೇ ಮಕ್ಕಕ್ಕೆ ಯಾತ್ರೆಮಾಡಹೊರಟಿರುವನು ಮಾತ್ರವಲ್ಲದೆ ಪ್ರತಿ ಐದು ಹೆಜ್ಜೆಗೊಮ್ಮೆ ನಿಂತು ಪ್ರಾರ್ಥಿಸುವನು ಆನಂತರ ನಡೆಯುವನು. ಹೀಗೆ ಪ್ರಾರ್ಥನೆ ಮಾಡುತ್ತಾ ನಡೆಯುತ್ತಾ 7ವರ್ಷಕಾಲದಲ್ಲಿ ಪಂಜಾಬಿನ ಲುಧಿಯಾನಕ್ಕೆ ಮುಟ್ಟಿರುವನು. ಈ ರೀತಿ ಅವನಿಗೆ ಮಕ್ಕಕ್ಕೆ ಮುಟ್ಟಲು 40ವರ್ಷ ತಾಗುವುದು.

3 ವಾರಗಳಲ್ಲಿ ಪೋಲಂಡನ್ನು ಸದೆಬಡಿವ ಪ್ಲೇನು

ಜರ್ಮನಿಯು ಸುಮಾರು 1,50,000 ಸೈನ್ಯವನ್ನು ಪೋಲಂಡಿನ ಎಲ್ಲೆಯಲ್ಲಿ ಸಂಗ್ರಹಿಸುತ್ತಿರುವುದು. ಇದೇ ತಾ. 15ರಲ್ಲು ಜರ್ಮನಿಯಲ್ಲಿ ಪ್ರಚಂಡ ಸೇನಾ ಕವಾತು ನಡೆಯಲಿರುವುದು. ಇದೇ ಸಂದರ್ಭದಲ್ಲಿ ಫ್ರಾನ್ಸಿನ ಗಡಿಯಲ್ಲಿ ಇಟಲಿಯ ಸೇನಾಪ್ರದರ್ಶನವೂ ನಡೆಯುವುದು ಜರ್ಮನಿಯ ನಾಯಕರು ಯುದ್ಧಮಾಡಿಯೇ ಸಿದ್ಧವೆಂದಿರುತ್ತಾರೆಂದು, ಒಮ್ಮೆ ಹಿಟ್ಲರನ ವಿಶ್ವಾಸಕ್ಕೆ ಪಾತ್ರನಾಗಿದ್ದು ಈಗ ಗಡೀಪಾರಾಗಿರುವ ಡಾಕ್ಟರ್ ಒಟ್ಟೊ ಸ್ಟ್ರಾಸ್ಸರರೆಂಬವರು ವಿದಿತಪಡಿಸಿರುವರು ಡಾನ್ಜಿಗನ್ನು ಜರ್ಮನಿಗೆ ಸೇರಿಸುವ ವಿಷಯದಲ್ಲಿ ಪೋಲಂಡು ವಿರೋಧಿಸಿದಲ್ಲಿ ಹಿಟ್ಲರನು ಅದನ್ನು 3ವಾರಗಳಲ್ಲಿ ಸದೆಬಡಿಯಲು ಮಹತ್ತಾದ ಪ್ರಯತ್ನ ಮಾಡುವನು. ಆಗ ಇಡೀಲೋಕಯುದ್ಧವೇ ಆರಂಭಿಸುವುದು ಮಿಂಚಿನವೇಗದ ಧಾಳಿನಡಿಸಿ ಇಟಲಿಯು ಈಗ ಫ್ರಾನ್ಸಿನ ಅಧೀನವಿರುವ ಕೊರ್ಸಿಕವನ್ನು ವಶಪಡಿಸಿಕೊಳ್ಳುವುದು. ಜರ್ಮನ್, ಮತ್ತು ಇಟಲಿಯ ದೊಡ್ಡ ಸೇನೆಯೊಂದು ಐಗುಪ್ತ ಮತ್ತು ಸುದಾನಿನ ಮೇಲೆ ಧಾಳಿಯಿಟ್ಟು ಸುಯೇಜ್ ಕಾಲುವೆಯೇ ಮೊದಲಾದುವುಗಳನ್ನು ವಶಪಡಿಸಿಕೊಳ್ಳಲೆತ್ನಿಸುವುದು.

ಇಂಗ್ಲೆಂಡಿನ ಕುರಿತು ಜಾಪಾನರ ಕ್ರೋಧ

ಇಂಗ್ಲೆಂಡಿನ ಕುರಿತು ಜಾಪಾನ ಜನತೆಯಲ್ಲೀಗ ಮಹತ್ತಾದ ಕ್ರೋಧವೆದ್ದಿದೆ. ಅದೊಂದು ಪ್ರಚಂಡ ಪ್ರವಾಹದಂತೆ ಜಾಪಾನಿನಲ್ಲೆಲ್ಲಾ ವ್ಯಾಪಿಸಹತ್ತಿದೆ. ಕೋಬೆ ಎಂಬ ಒಂದೇ ಸ್ಥಳದಲ್ಲಿ ಸುಮಾರು 2 ಲಕ್ಷ ಜನರು ಮೆರವಣಿಗೆಯಿಂದ ಹೋಗಿ, ಏಸ್ಯಾಖಂಡದಲ್ಲಿ ಇಂಗ್ಲೆಂಡು ನಡಿಸುವ ಅನಾಚಾರದ ಕುರಿತು ತಮ್ಮ ತೀವ್ರ ನಿಷೇಧವನ್ನು ವ್ಯಕ್ತಪಡಿಸಿರುವರು, ಇಂಗ್ಲೆಂಡಿನ ಕುರಿತು ದ್ವೇಷವನ್ನುಂಟುಮಾಡುವ ಕರಪತ್ರಗಳು ಸಹಸ್ರಗಟ್ಲೆಯಲ್ಲಿ ಹಂಚಲ್ಪಡುತ್ತಿವೆ. ಹಿಂದೂದೇಶದ ಕುರಿತು ಎಲ್ಲೆಲ್ಲಿಯೂ ಸಾರ್ವಜನಿಕ ಸಹಾನುಭೂತಿ ತೋರಿಸಲ್ಪಡುತ್ತಿದೆ "ಬ್ರಿಟಿಷ್ ಸಾಮ್ರಾಜ್ಯಶಾಹಿ ನಿಪಾತವಾಗಲಿ! ಹಿಂದುದೇಶದಲ್ಲಿ ಬ್ರಿಟಿಷ್ ರಾಜ್ಯಭಾರವು ಅತ್ಯಂತ ಪಾಪಕರವಾದುದು. ಏಸ್ಯಾ ಖಂಡದ ಬ್ರಿಟಿಷರ ವಸತಿಯು ಪ್ರಚಂಡ ಸಮುದ್ರಗಳ್ಳತನ! ಏಸ್ಯಾಖಂಡವು ಸ್ವತಂತ್ರವಾಗಬೇಕಾದರೆ ಹಿಂದು ದೇಶವು ಸ್ವತಂತ್ರವಾಗಬೇಕು! ಸ್ವತಂತ್ರ ಹಿಂದುಸ್ಥಾನವಿಲ್ಲದ ಏಸ್ಯಾಖಂಡವೇ ನಿರರ್ಥಕ! ಹಿಂದುದೇಶದ ಸ್ವಾತಂತ್ರ್ಯಕ್ಕಾಗಿ ನೆರವಾಗಿ ಏಸ್ಯಾಖಂಡದ ಸ್ವಾತಂತ್ರ್ಯ ಸಾಧಿಸಿರಿ! ಅಮೃತಸರದ ಕೊಲೆ ಮತ್ತು ವಜೀರಿಸ್ತಾನದ ಬೋಂಬೆಸೆತವನ್ನ ಸ್ಮರಿಸಿಕೊಳ್ಳಿರಿ! ಏಸ್ಯಾಖಂಡವು ರಕ್ಷಿಸಲ್ಪಟ್ಟಿತೆಂದರೆ ಇಡೀ ಮಾನವಕೋಟಿಯೇ ರಕ್ಷಿಸಲ್ಪಟ್ಟ ಹಾಗೆ! ಹಿಂದುದೇಶವು ಸ್ವತಂತ್ರವಾಗದೆ ಲೋಕಶಾಂತಿಯುಂಬಾಗಲಾರದು! ಹಿಂದು ದೇಶದಿಂದ ಬ್ರಿಟಿಷರನ್ನೋಡಿಸುವುದೆಂದರೆ ಏಸ್ಯಾಖಂಡದಿಂದಲೇ ಓಡಿಸಿದಂತೆ!" ಎಂಬುದೇ ಜಾಪಾನರು ಉದ್ಘೋಷಿಸುವ ಕೆಲವು ನುಡಿಗಳು

ಬ್ರಿಟಿಷ್ ಜನಾಂಗದ ದುರ್ದೆಶೆ

ಸರ್ ವಿಂಡ್ಹೆಮ್ ಡೀಡ್ಸ್ ಎಂಬವರು, ಬ್ರಿಟಿಷ್ ಜನಾಂಗವು, ಮೋಜು, ಭೋಗವಿಲಾಸ ಮಗ್ನವಾಗಿ ದುರ್ದೆಶೆಗಿಳಿದು ಸಾಮ್ರಾಜ್ಯವನ್ನಾಳಲು ಅನರ್ಹವಾಗಿದೆ ಜನತೆಯಲ್ಲಿ ಸ್ವಾರ್ಥ, ಭೋಗಲಾಲಸೆ, ವಿಲಾಸಪ್ರಿಯತೆ, ಕುಡುಕತನಗಳು ಹೆಚ್ಚಿ ಅವರ ಮಾನಸಿಕ ಮತ್ತು ಶಾರೀರಿಕ ಸ್ಥಿತಿಯು ಕೆಟ್ಟುಹೋಗಿದೆಯೆಂದು ಅಭಿಪ್ರಾಯಪಿತ್ತಿರುವರು. 1932ರಲ್ಲಿ ಇಂಗ್ಲೆಂಡಿನ ಮದ್ಯಪಾನ ವೆಚ್ಚವು 232,500,000 ಪವನುಗಳಾಗಿದ್ದು 1937ರಲ್ಲಿ 259,387,000 ಪವನಿಗೇರಿರುವುದು. ಕುಡುಕತನಕ್ಕಾಗಿ ದಂಡಿಸಲ್ಪಟ್ಟವರ ಸಂಖ್ಯೆ 30,146 ರಿಂದ 41,625ಕ್ಕೇರಿರುವುದು ಜುಗಾರಿಯು ಬ್ರಿಟಿಷ್ ಜನತೆಯ ಚಾರಿತ್ರ್ಯವನ್ನೇ ಕೆಡಿಸಿಬಿಟ್ಟಿದೆ ಜುಗಾರಿಗಾಗಿ ವರ್ಷಂಪ್ರತಿ 350,000,000 ರಿಂದ 500,000,000 ಪವನುಗಳ ವರೆಗೆ ವ್ಯಯವಾಗುತ್ತದೆ, ಕೇವಲ ತಮ್ಮ ಸೌಂದರ್ಯ ವ್ಯವಸಾಯಕ್ಕಾಗಿ ಸ್ತ್ರೀಯರು ವರ್ಷಕ್ಕೆ 60,000,000 ಪವನು ಖರ್ಚುಮಾಡುತ್ತಾರೆ ತರುಣ ತಸ್ಕರಿಗಾರರ ಸಂಖ್ಯೆಯೂ ಬಹಳವಾಗಿ ಬೆಳೆದಿದೆ ಸೇಕಡ 03ರಷ್ಟು ಬ್ರಿಟಿಷರು ಪಟ್ಟಣವಾಸಿಗಳಾಗಿರುವುದೇ ಈ ದುರ್ದೆಶೆಗೆ ಕಾರಣವೆಂದು ಸರ್ ವಿಂಡ್ಹೆಮ್ ಡೀಡ್ಸರ ಅಭಿಮತ.

ಜಿಬ್ರಾಲ್ಟರನ್ನು ತನ್ನದಾಗಿ ಮಾಡಲು ಸ್ಪೈನಿನ ಚಳವಳ

ಭೂಮಧ್ಯ ಸಮುದ್ರವು ಇಂಗ್ಲೆಂಡಿನ ಸರೋವರ. ಜಿಬ್ರಾಲ್ಟರ್ ಜಲಸಂಧು ಅದರ ದ್ವಾರದಂತಿತ್ತು ಇಷ್ಟರವರೆಗೆ. ಆದರೆ ಈಗ ಭೂಮಧ್ಯಭಾಗರದಲ್ಲಿ ಇಟೆಲಿಯ ಬಲವು ಹೆಚ್ಚಹತ್ತಿದೆ ಫ್ರೇಂಕೋ ಸ್ಪೈನು, ಪ್ರಾಯಶಃ ಇಟೆಲಿಯ ಉತ್ತೇಜನದಿಂದ ಜಿಬ್ರಾಲ್ಟರನ್ನು ತನ್ನದಾಗಿ ಮಾಡಿಕೊಳ್ಳಲು ಚಳವಳಿಸಹತ್ತಿದೆ ಜಿಬ್ರಾಲ್ಟರ್ ಜಲಸಂಧಿಯ ಪ್ರದೇಶವು ಸಂಪೂರ್ಣವಾಗಿ ತಮ್ಮದು ಅದನ್ನು ಇಂಗ್ಲೆಂಡು 235ವರ್ಷಗಳ ಹಿಂದೆ ವಶಪಡಿಸಿಕೊಂಡು ದೊಡ್ಡ ಕೋಟೆ ಮತ್ತು ನೌಕಾನಿಲಯ ಕಟ್ಟಿ ತನ್ನಾಧೀನ ಇಟ್ಟುಕೊಂಡಿದೆ. ತಮ್ಮ ರಾಜ್ಯದ ಭಾಗವಾದ ಜಿಬ್ರಾಲ್ಟರಿನಲ್ಲಿ ಬ್ರಿಟಿಷ್ ಧ್ವಜವು ಸದಾ ಹಾರಾಡುತ್ತಿರುವುದು ತಮಗೆ ಅಪಮಾನ ಮತ್ತು, ಅದರಿಂದ ಜನ

ಡಾನ್ಜಿಗು ಜರ್ಮನಿಗೆ ಸೇರುವುದು ನಿಶ್ಚಯ.

ಇಂಗ್ಲೆಂಡು ಜಾಪಾನಿಗೆ ಡೊಗ್ಗುಸಲಾಮು ಹಾಕಿತು.

ಇಟಲಿ ಮತ್ತು ಜರ್ಮನ್ ಮಂತ್ರಿಗಳ ಗುಪ್ತ ಮಾತುಕತೆ.

ರು ಉದ್ವೇಗಗೊಳ್ಳುವಂತಾಗಿದೆಯೆಂದು ನವ ಸ್ಪೈನಿನ ಫೆಲೆಂಜಿಸ್ಟ ಪಕ್ಷೀಯರು ಆಂದೋಲನವೆಬ್ಬಿಸಿರುವರು ಸ್ಪೈನು ದುರ್ಬಲವಾಗಿರುವಾಗ ಜಿಬ್ರಾಲ್ಟರು ಭೂಮಧ್ಯಸಾಗರಕ್ಕೆ ಇಂಗ್ಲೆಂಡಿನ ದ್ವಾರವಾಗಬಹುದು ಆದರೆ ಸ್ಪೈನು ಸತ್ವಶಾಲಿಯಾಗಿ ನವಶಕ್ತಿ ಪಡೆಯುವಾಗ ಜಿಬ್ರಾಲ್ಟರಿನಿಂದೇನೂ ಪ್ರಯೋಜನವಿಲ್ಲೆಂದು ಕೆಲವರ ವಾದ ಆದರೆ ಇಂಗ್ಲೆಂಡು ಇದಾವುದನ್ನೂ ಲಕ್ಷಿಸದೆ ಜಿಬ್ರಾಲ್ಟರನಲ್ಲಿ ವಿಮಾನಧಾಳಿ ನಿರೋಧಕ ನೆಲಮಾಳಿಗೆಗಳನ್ನು ಭರದಿಂದ ಕಟ್ಟಿಸಿ, ಜಿಬ್ರಾಲ್ಟರ್ ಬಂಡೆಯ ಮೇಲೆ ವಿಮಾನ ಭೇದಕ ತೋಪುಗಳನ್ನಿರಿಸುತ್ತಿರುವುದು

ರಸ್ತೆಮಾಡುವಾಗ ೨೦೦೦ ಪ್ರಾಣ ಹಾನಿ

ಚೈನ ಮತ್ತು ತಿಬೇಟಿನ ಗಡಿಪ್ರದೇಶದಲ್ಲಿ ಜೆಕುವನ್ ಮತ್ತು ಸಿಕೊಂಗ್ ಪ್ರಾಂತಗಳ ನಡುವಿನ ಪರ್ವತ ಪ್ರದೇಶದಲ್ಲಿ ರಸ್ತೆ ಮಾಡ ವಾಗ 2000ಮಂದಿ ಚೀನೀ ಕೆಲಸಗಾರರು ಕೊಲ್ಲಲ್ಪಟ್ಟಿರುವರು. ಸಿಕೊಂಗ್ ಮತ್ತು ಕಲ್ಕತ್ತಕ್ಕೆ ರಾಜರಸ್ತೆಮಾಡಲು ಚೀನೀಯರು ಭರದಿಂದ ಕೆಲಸ ನಡಿಸುತ್ತಿರವರು ಸಿಕೊಂಗಿನ ಪ್ರಧಾನ ಪಟ್ಟಣವಾದ ಟೈಚಿಸ್ಲು ಮತ್ತು ಚಿಂಗ್ಟುಗಳೊಳಗೆ ರಸ್ತೆಮಾಡಲು 1,30,000ಮಂದಿ ಚೀನೀಯರು ಕೆಲಸಮಾಡುತ್ತಿರುವರು.

ಲೋಕದ ಅದೃಷ್ಟ ಓರ್ವ ವ್ಯಕ್ತಿಯ ಕೈಯಲ್ಲಿದೆ.

ಇಡೀ ಯುರೋಪಿನಲ್ಲಿ, ಏಕೆ ಇಡೀ ಲೋಕದಲ್ಲೇ ಒಂದು ಬಗೆಯ ಮೌನವು ನೆಲೆಗೊಂಡಿದೆ. ಚೀನದ ಪಟ್ಟಣ, ವಿಶ್ವವಿದ್ಯಾಲಯ ಅಥವಾ ಬ್ರಿಟಿಷ್ ಯಾ ಅಮೇರಿಕಾನ ಹಡಗುಗಳ ಬಳಿ ಜಪಾನರ ಸುರಿಯುವ ಬೋಂಬಿನ ಶಬ್ದಗಳಿಂದ ಮಾತ್ರ ಈ ಮೌನಕ್ಕೆ ಸ್ವಲ್ಪ ಭಂಗವುಂಟಾಗುತ್ತದೆ. ಯುರೋಪನ್ನು ಆವರಿಸಿರುವ ಮೌನವೆಂದರೆ ಯುದ್ಧದ ಭೀತಿಯದು, 2 ಮಿಲ್ಯ ಜರ್ಮನ್ ಸೈನಿಕರು ಮತ್ತು 1 ಮಿಲ್ಯಕ್ಕಿಂತಲೂ ಮಿಕ್ಕಿದ ಇಟೆಲಿಯಾನ ಸೈನಿಕರು ಸೇನಾಕವಾತನ್ನಾರಂಭಿಸಲಿರುವರು, ಕಳೆದ ವರ್ಷ ಇದೇ ರೀತಿಯ ಕವಾತಿನ ನಂತರ ಘಟನೆಗಳು ನಡೆದುವು. ಜರ್ಮನಿಯ ಪರ್ವತ ತುದಿಯಲ್ಲಿ ಬರ್ಚೆಸ್ಗೆಡನಿನಲ್ಲಿ ಕುಳಿತಿರುವ ಓರ್ವ ವ್ಯಕ್ತಿಯ ಕೈಯಲ್ಲಿದೆ ಇಡೀ ಲೋಕದ ಅದೃಷ್ಟ. ಅವನಿಚ್ಛಿಸಿದರೆ ಒಂದೇ ಒಂದು ದಿನದೊಳಗೆ ಇಡೀ ಲೋಕದಲ್ಲಿ ಶಾಂತಿಸ್ಥಾಪಿಸಬಹುದು ಇಲ್ಲವಾದರೆ ಲೋಕವೆಲ್ಲವನ್ನೂ ದೊಡ್ಡ ಜ್ವಾಲಾಮುಖಿಯ ಬಾಯಿಗೆ ದೂಡಬಹುದು. ಹಿಟ್ಲರನು ಯುದ್ಧವಾಶದಿದ್ದಲ್ಲಿ ಯುದ್ಧವಾಗಲಾರದು. ಒಬ್ಬನೇ ಒಬ ವ್ಯಕ್ತಿಯ ಗುಣಾವಗುಣ, ಸತ್ಕಾರ್ಯ ದುಷ್ಕೃತ್ಯಗಳ ಮೇಲೆ ಇಡೀ ಮಾನವಕೋಟಿಯ ಅದೃಷ್ಟವು ಅವಲಂಬಿಸಿರುವ ಈ ಭಯಂಕರ ಬುದ್ಧಿಭ್ರಷ್ಟತನವನ್ನು ನಾವು ಕೊನೆಗೊಳಿಸಲು ಮುಂದೇನಾದರೂ ಹೊಸರೀತಿಯ ಮಾನವ ಸಂಬಂಧವನ್ನು ರಚಿಸಿಕೊಳ್ಳಬೇಕು" ಎಂದು ಎಚ್ಚರಿಸಿರುವರು ಮಿ. ವಿನ್‌ಸ್ಟನ್ ಚರ್ಚಿಲ್ಲರು ಇದೇ ತಾ. 9ರಲ್ಲು ರೇಡಿಯೋ ಮೂಲಕ ಅಮೇರಿಕಕ್ಕೆ ಭಾಷಣವೀಯುವಾಗ—

ಇಂಗ್ಲೆಂಡಿನ ಯುದ್ಧಸಿದ್ಧತೆ

ಇಂಗ್ಲೆಂಡೀಗ ಯುದ್ಧವನ್ನಿದಿರಿಸಲು ಬೇಕಾದ ಸಿದ್ಧತೆಯನ್ನೆಲ್ಲಾ ಶೀಘ್ರವಾಗಿ ನಡಿಸಿರುವುದು ಅದರ ಹಡಗುಪಡೆಗೆ ಸರಿಯಾದ ಪಡೆಯು ಇಡೀ ಲೋಕದಲ್ಲೇ ಇರುವುದಿಲ್ಲ. ಇದೇ ತಾ. 9ರಲ್ಲು ಇಂಗ್ಲೆಂಡಿನ ಅತಿ ದೊಡ್ಡ ವಿಮಾನ ಕವಾತು ನಡೆಯಿತು. ಇದೇ ದಿನ ಜೋರ್ಜ್ ಚಕ್ರವರ್ತಿಗಳು, 133 ರಿಸರ್ವ್ ಯುದ್ಧ ನೌಕೆಗಳನ್ನು ಪರಿಶೀಲಿಸುವ ಸಮಾರಂಭ ನಡಿಸಿದರು. ತಾ. 9ನೇ ರಾತ್ರಿ ಬ್ರಿಟಿಷ್ ವಿಮಾನಗಳು ದೊಡ್ಡ ವಿಮಾನ ಯುದ್ಧವೊಂದನ್ನೇ ನಡಿಸಿದುವು ಇದರಲ್ಲಿ 1300 ಯುದ್ಧ ವಿಮಾನಗಳು ಭಾಗವಹಿಸಿದ್ದುವು. ಕೆಲವು ವೈರಿ ವಿಮಾನಗಳಾಗಿ ಇಂಗ್ಲೆಂಡಿನ ಬೇರೆ ಬೇರೆ ಭಾಗ ಮತ್ತು ಲಂಡನಿನ ಮೇಲೆ ಧಾಳಿ ನಡಿಸಲೆತ್ನಿಸಿದರೂ ಸಫಲವಾಗಲಿಲ್ಲ. ವೈರಿ ವಿಮಾನಗಳು ಒಟ್ಟು 160 ಧಾಳಿ ನಡಿಸಿದುವು ಈ ಧಾಳಿಗಳು ರಕ್ಷಣಾ ವಿಮಾನಗಳ ಮತ್ತು ವಾಯುಬುಟ್ಟೆ ಕೋಟೆಯಿಂದ ತಡೆಗಟ್ಟಲ್ಪಟ್ಟವು 1300ರಲ್ಲಿ 3 ವಿಮಾನಗಳು ಮಾತ್ರ ಹಿಂದೆ ಬಾರದೆ ನಾಶವಾಗಿರುವವು. ಇದೇ ತಾ 10ನೇ ರಾತ್ರಿ ಇಡೀ ಇಂಗ್ಲೆಂಡಿನಲ್ಲಿ ರಾತ್ರಿ ದೀಪವನ್ನೆಲ್ಲಾ ನಂದಿಸಿ, ವಾಹನ ಮತ್ತು ಜನಸಂಚಾರ ನಿಲ್ಲಿಸಿ, ಥಕ್ಕನೆ ವೈರಿ ವಿಮಾನಧಾಳಿ ನಡೆವರೆ ಯಾವ ರೀತಿ ನಡೆಯಬೇಕೆಂಬ ಕುರಿತು ಪೂರ್ವ ತರಬೇತಿಯ ಪ್ರಯೋಗವು ಜಯಶೀಲವಾಗಿ ನಡೆಯಿತು. 37,000ಚೌಕಮೈಲುಗಳು ಸಂಪೂರ್ಣ ಕತ್ತಲಿಂದ ಆವರಿತವಾಗಿ ವೈರಿ ವಿಮಾನಗಳಿಗೆ ದೊಡ್ಡ ದೊಡ್ಡ ಪಟ್ಟಣಗಳಾವುವೆಂದು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ ವೈರಿ ವಿಮಾನಗಳು, ರೈಲ್ವೆ ಸ್ಟೇಶನು, ಮದ್ದು ಗುಂಡು ತಯಾರಿ ಕಾರ್ಖಾನೆಗಳು, ಪವರ್ ಸ್ಟೇಶನು ಮೊದಲಾದ ಪ್ರಾಮುಖ್ಯ ಸ್ಥಳಗಳನ್ನು ಹುಡುಕುತ್ತಿದ್ದಾಗ ಸರ್ಚ್ ಲೈಟುಗಳ ಮೂಲಕ ಅವನ್ನು ಕಂಡು ಹಿಡಿದು ಪಡೆಗಟ್ಟಲಾಯಿತು. ವಿಮಾನ ಭೇದಕ ತೋಪುಗಳು ಸಿದ್ಧವಾಗಿದ್ದವು. ಸಂಕೇತವಾದೊಡನೆಯೇ ರಕ್ಷಣಾವಿಮಾನಗಳು ಭೋರ್ಗರೆದು ಮೇಲಕ್ಕೇರಿ ವೈರಿ ವಿಮಾನಗಳನ್ನು ಹೊರಗಟ್ಟಿದುವು. ಈ ನ

ವರ್ಕಿಂಗ್ ಕಮಿಟಿಯವರು ನನ್ನ ಮಾತು ಕೇಳುವುದಿಲ್ಲ

ಕಾಂಗ್ರೆಸ್ ಮಂತ್ರಿಗಳ ಕೆಲಸದಲ್ಲಿ ನಾನು ಕೈ ಹಾಕುವುದಿಲ್ಲ—ಟೀಕಾಕಾರರಿಗೆ ಗಾಂಧಿಯವರ ಉತ್ತರ

ಕಲಿ ಯುದ್ಧದ ವೆಚ್ಚವು 1,5,000 ಪವನುಗಳಾಗಿರುವವು ವಿಮಾನಧಾಳಿಯಾದರೆ ಇಂಗ್ಲೆಂಡನ್ನು ಯಾವ ಅಪಾಯವೂ ಇಲ್ಲದೆ ರಕ್ಷಿಸಿಕೊಳ್ಳಬಹುದೆಂಬ ವಿಶ್ವಾಸವು ಈ ನಕಲಿ ವಿಮಾನಯುದ್ಧದಿಂದ ಸರಕಾರಕ್ಕುಂಟಾಗಿದೆ

ಪೋಲಂಡಿಗೆ ಡಾನ್ಜಿಗಿನ ಎಚ್ಚರಿಕೆ

ಡಾನ್ಜಿಗಿನ ನಾಜಿ ಮುಖಂಡರಾದ ಹರ್ ಫೋರಿಸ್ಟರರು ಬರ್ಚೆಸ್ ಗೆಡನಿಗೆ ಹೋಗಿ ಹಿಟ್ಲರರೊಡನೆ ಮಾತಾಡಿ ಹಿಂತಿರುಗಿ ಇದೇ ತಾ. 10ರಲ್ಲು ಡಾನ್ಜಿಗಿನಲ್ಲಿ ನಡೆದ ಪ್ರಚಂಡ ಸಭೆಯೊಂದರಲ್ಲಿ ಭಾಷಣವೀಯುವಾಗ, 'ಡಾನ್ಜಿಗಿನ ವಿರೋಧವಾಗಿ ಯುದ್ಧ ಹೂಡಲು ಪೋಲಿಶ್ ಸರಕಾರವು ನಡಿಸುತ್ತಿರುವ ಸಮರ ಸಿದ್ಧತೆಯ ಕುರಿತು ನಾವು ಇಡೀ ಲೋಕಕ್ಕೆ ನಮ್ಮ ನಿಷೇಧ ಸೂಚಿಸಲು ಇಲ್ಲಿ ಸೇರಿರುವೆವು' ಎಂದರು ಪೋಲಂಡು ಜರ್ಮನಿಯ ಕುರಿತಾದ ದ್ವೇಷವನ್ನು ಹೆಚ್ಚಿಸುತ್ತದೆ ಇಡೀ ಪೂರ್ವ ಪ್ರಸ್ಯಾವನ್ನು ವಶಪಡಿಸಿ ಜರ್ಮನಿಯನ್ನು ಭಯಂಕರ ಯುದ್ಧದ ರಕ್ತಪಾತಕ್ಕೆಳೆಯಬೇಕೆಂಬುದೇ ಪೋಲಂಡಿನ ಉದ್ದೇಶ. ಪೋಲಂಡಿನ ಯುದ್ಧದ ಬೆದರಿಕೆಗೆ ತಾವೇನೂ ಸೊಪ್ಪುಹಾಕುವ ಹಾಗಿಲ್ಲೆಂದು ಪೋಲೆಂಡು ತಿಳಿದುಕೊಳ್ಳಲಿ ಫಕ್ಕನೆ ಡಾನ್ಜಿಗಿನ ಮೇಲೆ ಧಾಳಿನಡೆಸಲ್ಪಟ್ಟರೆ ತಡೆಗಟ್ಟುವ ಏರ್ಪಾಡು ನಡೆದಿರುವುದು ಡಾನ್ಜಿಗು ಏಕಾಕಿಯಾಗಿರುವುದಿಲ್ಲ ಪೋಲೆಂಡು ಅದರ ಮೇಲೆ ಧಾಳಿಯಿಟ್ಟರೆ ಜರ್ಮನ್ ರಾಷ್ಟ್ರ ಮತ್ತು ನಮ್ಮ ನಾಯಕರಾದ ಹಿಟ್ಲರರು ಅದರ ಸಹಾಯಕ್ಕೆ ಬರುವರೆಂದು ಪೋಲೆಂಡು ಸ್ಪಷ್ಟವಾಗಿ ತಿಳಿದಿರಲಿ" ಎಂದು ಫೋರಸ್ಟರರು ಎಚ್ಚರವಿತ್ತು ಡಾನ್ಜಿಗು ಇಂಗ್ಲಿಷರಿಗಾಗಲಿ ಫ್ರೆಂಚರಿಗಾಗಲಿ, ಪೋಲಂಡಿಗಾಗಲೀ ಸೇರಿದುದಲ್ಲ. ಡಾನ್ಜಿಗು ಜರ್ಮನರದು ಜರ್ಮನಿಗೆ ಸೇರುವ ಸಂದರ್ಭ ಒದಗಿದಾಗ ಅದು ಜರ್ಮನಿಗೆನೇ ಸೇರುವುದೆಂದು ಕಂಠೋಕ್ತವಾಗಿ ಹೇಳಿರುವರು

ಇಂಗ್ಲೆಂಡು ಜಪಾನಿಗೆ ಬಗ್ಗಿತು

ಇದೇ ತಾ. 11ರಲ್ಲು ಬ್ರಿಟಿಷ್ ಸರಕಾರವು ಜಪಾನ ಸರಕಾರಕ್ಕೆ ಬಗ್ಗಿ ಅದರ ಕೇಳಿಕೆ ಮೇರೆಗೆ, ಇಷ್ಟರ ವರೆಗೆ ಟೀನ್ ಸ್ಟೀನಿನ ಬ್ರಿಟಿಷ್ ಕನ್ ಸೆಶ್ಶನಿನಲ್ಲಿ ಇರಿಸಲ್ಪಟ್ಟಿದ್ದ ಕೊಲೆಗಾರರೆಂಬ ಅಪರಾಧಕ್ಕೊಳಗಾಗಿರುವ 4 ಮಂದಿ ಚೀನೀಯರನ್ನು ಬಿಟ್ಟುಕೊಡುವ ನಿರ್ಧಾರಮಾಡಿರುವುದು. ಇದರಿಂದ ಇಂಗ್ಲೆಂಡಿನಲ್ಲಿಯೂ ಚೀನದಲ್ಲಿರುವ ಆಂಗ್ಲೇಯರಲ್ಲಿಯೂ ಹೆಚ್ಚಿನ ಸಂತಾಪವುಂಟಾಗಿದೆ. ಬ್ರಿಟಿಷ್ ಸರಕಾರದ ಈ ನಿರ್ಧಾರದ ವಿರೋಧವಾಗಿ ಲಾಂಘಾಯಿಯ. ಬ್ರಿಟಿಷ್ ಕೋರ್ಟಿನಲ್ಲಿ ಈ ಕುರಿತು, ಮಿ ನೋರ್ಮನ್ ಬೆಂಟ್ವಿಚ್ ಮತ್ತು ಮಿಸ್ ಮಾರ್ಗರೆಟ್ ಪ್ರೈಯವರು ಅಪೀಲು ಮಾಡಿರುವರು ಈ ಚೀನೀಯರು ಕೊಲೆಗಾರರೆಂದು ಸ್ವಯಂ ಸಿದ್ಧ ರುಜುವಾತನ್ನು ಜಾಪಾನ್ ಸರಕಾರವು ತಮಗೊಪ್ಪಿಸಿರುವುದೆಂದೇ ಬ್ರಿಟಿಷ್ ಸರಕಾರದ ತರ್ಕ

ಇಟೆಲಿಯು ತಟಸ್ಥವಾಗಿರಲಾರದು

ಡಾನ್ಜಿಗು ಜರ್ಮನಿಗೇನೇ ಸೇರತಕ್ಕದ್ದೆಂದು ಇಟಲಿಸರಕಾರದ ಅಭಿಪ್ರಾಯವಿರುವುದು ಆ ಕುರಿತು ಯುದ್ಧವಾದಲ್ಲಿ ಇಟೆಲಿಯು ಜರ್ಮನಿಗೆ ಸಹಾಯಮಾಡುವುದೇ ಹೊರತು ತಟಸ್ಥ ನಿಲ್ಲಲಾರದು. ಒಂದೊಮ್ಮೆ ಯುದ್ಧವಾದರೆ ಏನೆಲ್ಲಾ ಮಾಡಬೇಕೆಂಬ ಕುರಿತು ಇಷ್ಟರಲ್ಲೇ ಇಟೆಲಿಯ ವಿದೇಶಮಂತ್ರಿ ಕೌಂಟ್ ಸಿಯಾನೋ ಮತ್ತು ಜರ್ಮನಿಯ ವಿದೇಶ ಮಂತ್ರಿ ಹರ್ ವಾನ್ ರಿಬೆಂಟ್ರಪ್ಪರೊಳಗೆ ಗುಪ್ತ ಮಾತುಕತೆಗಳು ನಡೆದಿರುತ್ತವೆ.

ಕಳೆದ ವಾರದಲ್ಲಿ ಮಧ್ಯಪ್ರಾಂತದ ಇಬ್ಬರು ಗೃಹಸ್ಥರು ಗಾಂಧಿಜಿಯವರ ಬಳಿಗೆ ಹೋಗಿ, 'ಮಧ್ಯಪ್ರಾಂತದಲ್ಲಿರುವ ನಾವು ನಿಮಗೆ ಬೇಕಾದುದನ್ನೆಲ್ಲಾ ನೀವು ಮಾಡಬಲ್ಲಿರೆಂದು ನಂಬುತ್ತೇವೆ ನಿಮಗಿಚ್ಛೆಯಿದ್ದರೆ ಮಂತ್ರಿಮಂಡಲಿಯನ್ನು ತೆಗೆದುಹಾಕಬಹುದು ಮತ್ತು ನಿಮಗೆ ಬೇಕಾದುದದನ್ನು ಅವರಿಂದ ಮಾಡಿಸಬಹುದು" ಎಂದು ಅವರಲ್ಲೊಬ್ಬರಂದರು. ಇನ್ನೊಬ್ಬರು, "ನೀವೇ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಆಗುವಿರಿ. ಆದುದರಿಂದ ಕಾಂಗ್ರೆಸಿನೊಳಗಣ ಪ್ರಕೃತದ ಅನೀತಿಗೆ ಜನರು ನಿಮ್ಮನ್ನೇ ದೂರುತ್ತಾರೆ ನೈತಿಕ ಅಧಿಕಾರವು ಅತಿ ಶ್ರೇಷ್ಠವಾದುದೆಂದು ಸಾರಿದವರು ನೀವು. ಈಗಣ ರಾಜ್ಯಭಾರ ಕ್ರಮವು ಸೈತಾನಿಕವಾದುದೆಂದು ಭಾವಿಸಲು ಕಲಿಸಿದವರು ನೀವು. ಕಾಂಗ್ರೆಸು ಅಧಿಕಾರಕ್ಕೆ ಬಂದಾಗ ಅಂತಹ ಸೈತಾನಿಕ ಕೆಲಸವೇನೂ ನಡೆಯಲಾರದೆಂದೂ ಎಲ್ಲೆಲ್ಲಿಯೂ ಪರಿಶುದ್ಧತೆಯು ನೆಲೆಗೊಳ್ಳುವುದೆಂದೂ ಹೇಳಿದಿರಿ. ಆದರೆ ಈಗ ಪ್ರತಿವಿರುದ್ಧವಾದುದನ್ನೇ ನಾವು ಕಾಣುತ್ತೇವೆ ಹಲವು ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರ ನಡಿಸುತ್ತಿದೆ ಆದರೆ ಅನೀತಿಯು ಪ್ರಬಲವಾಗಿಯೇ ಇದೆ ಕಾಂಗ್ರೆಸ್ ಪಕ್ಷೀಯರು ತಮ್ಮೊಳಗೇನೇ ಕಚ್ಚಾಡಿಕೊಳ್ಳುತ್ತಾರೆ ಅಕೃತ್ಯಗಳೇನೂ ಕಡಿಮೆಯಾಗಿಲ್ಲ. ಬದಲಿಗೆ ಹೆಚ್ಚಿದೆ. ಕೆಲವೇ ಮಂದಿ ಕಾಂಗ್ರೆಸ್ ವಾದಿಗಳು ತಮ್ಮ ನೈತಿಕ ಪ್ರಭಾವದಿಂದ ಇಡೀ ರಾಷ್ಟ್ರದ ಪ್ರತಿನಿಧಿಗಳಾಗಬಹುದೆಂದು ನೀವು ಹೇಳಿದ್ದೀರಿ. ಆದರೆ ಈಗ ಪ್ರತಿವಿರುದ್ಧ ಪರಿಸ್ಥಿತಿಯು ತೋರಿಬರುತ್ತದೆ ಸಂಖ್ಯಾಬಲಕ್ಕೇನೇ ಎಲ್ಲೆಲ್ಲಿಯೂ ಪ್ರಾಧಾನ್ಯ ದೊರೆತಿದೆ ಕಾಂಗ್ರೆಸಿನ ಘಟನೆಯಲ್ಲಿ ಈಗ ಮಾಡಿರುವ ತಿದ್ದುಪಡಿಗಳಿಂದ ಈಗ ನಡೆಯುತ್ತಿರುವ ಅನೀತಿಯು ತಡೆಗಟ್ಟಲ್ಪಡಲಾರದು ನೀವು ಹೇಳಿದ ಹಾಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೇಳುವುದಿಲ್ಲವಾದರೆ ಅದನ್ನಾದರೂ ತಿಳಿಸಿರಿ ನೀವು ಸರ್ವಶಕ್ತರಿದ್ದೀರೆಂದು ತಿಳಿಯುತ್ತೇವೆ. ಮತ್ತು ಇಂತಹ ಅನೀತಿಯನ್ನು ನೀವು ಹೇಗೆ ನಡೆಯಬಿಡುತ್ತೀರೆಂದು ಆಶ್ಚರ್ಯಪಡುತ್ತೇವೆ ನಿಮ್ಮ ಖಾದಿ ನಿಯಮವನ್ನು ನೋಡಿರಿ ಅದು ಕಾಂಗ್ರೆಸಿನಲ್ಲಿ ಅತಿ ಹೆಚ್ಚಿನ ವಂಚನೆಗೆ ಕಾರಣವಾಗಿದೆ. ಆದುದರಿಂದ ಖಾದಿಯು ಈಗ ಸುಳ್ಳು ಮತ್ತು ವಂಚನೆಯ ಚಿಹ್ನೆಯಾಗಿದೆ ದೇಶವನ್ನು ನೈತಿಕ ಉನ್ನತಿಗೇರಿಸಿದ ನೀವೇ ಅದನ್ನೀಗ ಕೆಳಗೆ ತರುತ್ತಿದ್ದೀರಿ ಸ್ಥಿತಿಗತಿಗಳು ಇದೇ ರೀತಿ ನಡೆದಲ್ಲಿ ಕಾಂಗ್ರೆಸು ಬೇಗನೆ ದೇಶದ ಅಪಹಾಸ್ಯಕ್ಕೊಳಗಾಗುತ್ತದೆ" ಎಂದು ಇನ್ನೊಬ್ಬರಂದರು ಗಾಂಧಿಜಿಯವರು ಇವರಿಗೆ ಈ ರೀತಿ ಉತ್ತರವಿತ್ತಿರುವರು

"ಬರಬೇಕೆಂದು ಕೇಳಿಕೊಳ್ಳಲ್ಪಟ್ಟಾಗ ಮಾತ್ರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಗಳಿಗೆ ಹೋಗುವುದು ನಾನು. ಹಾಗೆ ಹೋದಾಗ ಹೊರತು ಇತರ ಸಂದರ್ಭಗಳಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡುವ ನಿರ್ಣಯಗಳಿಗೂ ನನಗೂ ಸಂಬಂಧವಿರುವುದಿಲ್ಲ. ವರ್ಕಿಂಗ್ ಕಮಿಟಿಯ ಹೆಚ್ಚಿನ ಸಭೆಗಳಿಗೆ ನಾನು ಹೋಗುವುದೇ ಇಲ್ಲ ಅವುಗಳ ಹೆಚ್ಚಿನ ನಿರ್ಣಯಗಳ ತಿಳಿವು ಕೂಡಾ ನನಗಿರುವುದಿಲ್ಲ ಪ್ರಥಮವಾಗಿ ನಾನು ಕಾಂಗ್ರೆಸಿನೊಡನೆ ನನ್ನ ಸಂಬಂಧವನ್ನು ಕಡಿದು ಬೇರೆಯಾದಾಗ ಇದೇ ತಹವಾಡಿಕೊಂಡಿದ್ದೆ ಕಮಿಟಿಯ ಮೇಲೆ ನನ್ನ ವರ್ಚಸ್ಸೇನಾದರೂ ಇದ್ದಲ್ಲಿ ಅದು ಕೇವಲ ನೈತಿಕವಾದುದು ನನ್ನ ಅಭಿಪ್ರಾಯವು ವರ್ಕಿಂಗ್ ಕಮಿಟಿಯವರಿಗೆ ಸರಿಯೆಂದು ತೋರಿದಾಗ ಮಾತ್ರ ಅದರಂತೆ ಅವರು ನಡೆಯುತ್ತಾರೆ ಹಲವು ವೇಳೆ ನನ್ನ ಸಲಹೆಯು ಅವರಿಗೆ ಸಂತೋಷವಾಗುವುದಿಲ್ಲ. ನನ್ನ ಅಭಿಪ್ರಾಯದಂತೆ ನಡೆಯುವುದಾದರೆ ಕಾಂಗ್ರೆಸಿನ ಸಂಖ್ಯೆಯು ಸಾಧ್ಯವಾದಷ್ಟು ಕಡಿಮೆ ಮಾಡಲ್ಪಡುತ್ತಿತ್ತು ಅದಕ್ಕವರು ಒಪ್ಪುವುದಿಲ್ಲ.

ಖಾದಿ ನಿಯಮವು ಹೆಚ್ಚಿನ ಸುಳ್ಳು ಮತ್ತು ವಂಚನೆಗೆ ಆಸ್ಪದವನ್ನುಂಟುಮಾಡಿರುವದೆಂಬುದನ್ನು ನಾನು ಒಪ್ಪುತ್ತೇನೆ ನನ್ನಿಚ್ಛೆಯಂತಾಗುತ್ತಿದ್ದರೆ ಅದು ಬಹಳ ಮೊದಲೇ ತೆಗೆದುಹಾಕಲ್ಪಡುತ್ತಿತ್ತು ನಾನು ಕಾಂಗ್ರೆಸಿನಿಂದ ಬೇರೆಯಾದಾಗಲೇ ಅದನ್ನು ತೆಗೆದುಹಾಕಲು ಅಪೇಕ್ಷಪಟ್ಟಿದ್ದೆ ಆಮೇಲೆಯೂ ಒಂದಕ್ಕಿಂತ ಹೆಚ್ಚು ಸಲ ಪ್ರಯತ್ನಮಾಡಿ ಜಯಶೀಲನಾಗಲಿಲ್ಲ ಸರ್ವಸಾಮಾನ್ಯ ಕಾಂಗ್ರೆಸ್ ವಾದಿಗಳು ಅದಕ್ಕೊಪ್ಪಲಾರದೆಂಬುದೇ ಕಾರಣ ಕೊಡಲಾಗಿತ್ತು. ಇದೇ ರೀತಿ ಕಾಂಗ್ರೆಸಿನ ಘಟನೆಯಿಂದ 'ಶಾಂತಿ ಮತ್ತು ನ್ಯಾಯ ನೀತಿ' ಎಂಬುದನ್ನು ತೆಗೆದುಹಾಕಲು ಮಾಡಿದ ಪ್ರಯತ್ನ ಫಲಿಸಿರುವುದಿಲ್ಲ ವರ್ಕಿಂಗ್ ಕಮಿಟಿಯು ನಾನು ಹೇಳಿದಂತೆ ನಡೆಯದ ಉದಾಹರಣೆಗಳನ್ನು ಇನ್ನೂ ಹೆಚ್ಚು ಕೊಡಬಹುದು. ನಾನೇನೂ ವರ್ಕಿಂಗ್ ಕಮಿಟಿಯನ್ನು ದೂರುವುದಿಲ್ಲ ನನ್ನ ಮಾತು ಕೇಳದಿರಲು ವರ್ಕಿಂಗ್ ಕಮಿಟಿ ಮೆಂಬರಿಗೆ ಮಹತ್ವದ ಕಾರಣಗಳಿದ್ದುವು ಹಳೆಯ ವ್ಯವಸಾಯಿಗಳೊಡನೆ ನನ್ನ ನೈತಿಕ ಸಂಬಂಧವನ್ನು ಕಡಿದುಹಾಕಬೇಕೆಂಬ ಪ್ರೇರಣೆಯೇನೂ ನನ್ನಲ್ಲುಂಟಾಗಿಲ್ಲ ನಾನು ಅವರಿಗಿಂತ ಶ್ರೇಷ್ಠನೆಂದೇನೂ ಅಲ್ಲ. ಅವರೊಡನೆ ಕೆಲಸಮಾಡುವುದೊಂದು ಗೌರವವಾಗಿದೆ. ಅವರು ನನ್ನಷ್ಟೇ ವಿಧೇಯ ದೇಶಸೇವಕರಿದ್ದಾರೆ ಒಂದು ದಿನ ನನ್ನ ಅಭಿಪ್ರಾಯಕ್ಕವರು ಮತಾಂತರ ಹೊಂದುವರು, ಇಲ್ಲವೆ ನಾನವರ ಅಭಿಮತಕ್ಕೊಪ್ಪುವಂತಾಗುವುದೆಂಬ ವಿಶ್ವಾಸದಿಂದ ನಾನವರಿಗೆ ಕಟ್ಟುಬಿದ್ದಿರುತ್ತೇನೆ.

ಕಾಂಗ್ರೆಸು ಸಂಸ್ಥೆಗಳೊಳಗೆ ಬಹಳ ಅನೀತಿಯು ಸೇರಿರುತ್ತದೆಂಬುದನ್ನೂ, ಅವುಗಳೊಳಗೆ ಸ್ವಾರ್ಥಸಾಧಕರು ಅನೇಕ ಮಂದಿ ಇರುವರೆಂಬುದನ್ನೂ ನಾನೊಪ್ಪುತ್ತೇನೆ ಆದರೆ ಕಾಂಗ್ರೆಸ್ಸಿನ ಆಡಳಿತವು ಹಿಂದಿಗಿಂತ ಶುದ್ಧವಾಗಿರುವುದೆಂಬುದು ನನ್ನ ಮನೋನಿರ್ಧಾರ ಕಾಂಗ್ರೆಸ್ ಮಂತ್ರಿಗಳ ಆಡಳಿತವು ಜನತೆಯ ಪರಿಸ್ಥಿತಿಯನ್ನು ಸುಧಾರಿಸಿರುವುದೆಂದು ಕೂಡಾ ನನ್ನ ಭಾವನೆ ಮದ್ಯಪಾನ ನಿಷೇಧವು ಅತಿದೊಡ್ಡ ಸುಧಾರಣೆಯು ಆದರೆ ಇನ್ನೂ ಮಾಡಲು ಬಹಳ ಹೆಚ್ಚಿರುವುದೆಂಬುದರಲ್ಲಿ ಸಂದೇಹವಿಲ್ಲ ಒಂದುದಿನ ಕಾಂಗ್ರೆಸಿನೊಳಗಣ ಕೊಳಕು ಶುದ್ಧೀಕರಿಸಲ್ಪಟ್ಟು ಎರಡನೇ ಟೀಕಾಕಾರರ ಭೀತಿಯು ನಿವಾರಿತವಾಗುವುದೆಂಬ ಆಶೆಯನ್ನು ಕಟ್ಟಿಕೊಂಡಿದ್ದೇನೆ. ಅವರ ಭೀತಿಗಳಿಗೆ ಆಧಾರವಿಲ್ಲೆಂದು ನಿರಾಕರಿಸಲು ಸಾಧ್ಯವಿಲ್ಲ ಆದರೆ ದುರ್ದಮನೀಯ ಆಶಾವಾದಿಯಾದ ನನ್ನನ್ನು ಈ ವಿಷಯಗಳೇನೂ ಅವರಷ್ಟು ಬೆದರಿಸಲಾರವು ಪ್ರತಿಯೊಬ್ಬ ಕಾಂಗ್ರೆಸ್ ವಾದಿಯೂ ತನ್ನ ಕರ್ತವ್ಯಜಾಗ್ರತಿಯನ್ನು ಪಡಯಬೇಕಾಗುವಷ್ಟು ವಿಷಮವಾದುದಿವೆ ಇವು. ನೈತಿಕ ಪ್ರಭಾವದ ಅಚಲ ಬಂಡೆಯ ಮೇಲೆ ಕಾಂಗ್ರೆಸು ಸ್ಥಿರವಾಗಿ ನಿಲ್ಲದಿದ್ದ ಪಕ್ಷದಲ್ಲಿ ಅದರ ನಾಶ ನಿಶ್ಚಯ

ಪುಟ ೧೧ರಿಂದ

ಗಲೇ ವಹಿಸಿಕೊಂಡುಬಿಟ್ಟಿದ್ದಾರೆ. ಹಿಂದೊಮ್ಮೆ ಸ್ಪೈನ್ ಮೊದಲಾದ ರಾಷ್ಟ್ರಗಳಿಗೆ ಹೋಗಿಬಂದಿದ್ದರು ಇತ್ತಲಾಗಿ ಸಿಂಹಳಕ್ಕೆ ಹೋಗಿ ಬಂದರು ಇನ್ನು ಚೈನಕ್ಕೆ ಹೋಗುತ್ತಾರಂತೆ ಈ ತಿಂಗಳ ಅಂತ್ಯದೊಳಗೆ.

೦೦ ೦೦ ೦೦

ಹಿಂದುಸ್ಥಾನದ ಈಗಣ ವಾತಾವರಣ ಪಂಡಿತರಿಗೆ ಅಸಹನೀಯವಾಗಿರುವುದೋ ಏಬದೊಂದುಸಂದೇಹ ದಾರಿಹೋಕನದು ದೇಶದ ಪರಿಸ್ಥಿತಿಯಲ್ಲಿ ಬೇಸರಬಂದಾಗ ಎಲ್ಲಿಗಾದರೂ ಹೊರಗೆ ಹೋಗಿಬಿಡುವ ಚಟವಿರುವಂತಿವೆ ಪಂಡಿತರಿಗೆ

೦೦ ೦೦ ೦೦

"ನೆಹರುಗಳಿಗೂ ತನಗೂ ಭಿನ್ನಾಭಿಪ್ರಾಯವುಂಟಾದಾಗ ಅವರ ಅಭಿಪ್ರಾಯಕ್ಕೇನೇ ಒಪ್ಪಿಬಿಡುತ್ತೇನೆ' ಎನ್ನುತ್ತಾರೆ ಗಾಂಧಿಯವರು ಗಾಂಧಿಯವರೇ ಏಕೆ? ಒಂದು ಕಾಲದಲ್ಲಿ ನೆಹರುಗಳೆಂದರೆ ಉರಿದು ಬೀಳುತ್ತಿದ್ದ ಸರ್ದಾರ್ ಪಟೇಲ್ ರಾಜಾಜಿಯವರೇ ಮೊದಲಾದವರಿಗೆ ಈಗ ನೆಹರುಗಳೆಂದರೆ ಬಹಳ ಪ್ರೀತಿ. ಲೆಫ್ಟಿಸ್ಟರನ್ನು ಹದೆಬಡಿಯಲು ನೆಹರುಗಳಿಗಿಂತ ದೊಡ್ಡ ದೊಣ್ಣೆ ಇನ್ನೊಂದಿಲ್ಲೆಂದು ಚೆನ್ನಾಗಿ ಗೊತ್ತವರಿಗೆ

೦೦ ೦೦ ೦೦

ನೆಹರುಗಳೂ ಈಗೀಗ 'ಗುಡ್ ಬೊಯ್' ಆಗಿ ಹೋಗಿರ ವಂತಿವೆ. ಅವರ ಅಲಹಾಬದಿನ ಹುಲಿ, ವಾರ್ಧದ ಇಲಿ ಎಂದು ಒಬ್ಬರ ಟೀಕೆ. ಗಾಂಧಿಯವರ ನಂತರದ ಮುಖಂಡತನಕ್ಕವರು ಪ್ರಯತ್ನಿಸುತ್ತಿದ್ದಾರೆಂದು ಇನ್ನೊಬ್ಬರ ವಿಮರ್ಶೆ. ಅಂತೂ ಪಂಡಿತರು ಹಿಂದಿನ ಪಂಡಿತರಲ್ಲ ತಲೆನರೆತಂತೆ ಎಲ್ಲರೂ ಇದೇ ರೀತಿ ಆಗುವರೋ ಎಂಬ ಸಂಶಯ ದಾರಿಹೋಕನಿಗೆ —ದಾರಿಹೋಕ

ಜಿಲ್ಲಾ ಸಮಾಚಾರ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

13—8—39

ಪ್ರೆಸ್ ಕೆಲಸಗಾರರ ಸಂಘದ ದ್ವಿತೀಯ ವರ್ಧಂತಿ—ಮಂಗಳೂರು ಪ್ರೆಸ್ ಕೆಲಸಗಾರರ ಸಂಘದ ದ್ವಿತೀಯ ವಾರ್ಷಿಕೋತ್ಸವವು ಕಳೆದ ತಾ 6ನೇ ಬಾಸೆಲ್ ಮಿಷನ್ ಹಾಲಿನಲ್ಲಿ ನಡೆಯಿತು ಶ್ರೀ ಬಿ ವ್ಯಂಕಟ ಬಾಳಿಗರ ಅಧ್ಯಕ್ಷತೆ ವಹಿಸಿದ್ದರು. ಪ್ರೆಸ್ ಕೆಲಸಗಾರರು ತಮ್ಮ ನ್ಯಾಯವಾದ ಹಕ್ಕುಗಳನ್ನು ಸಂಘಟಿತರಾಗಿ ಸಂಪಾದಿಸಬೇಕೆಂದೂ ಕಾಂಗ್ರೆಸ್ ಸರಕಾರದವರು ಆ ಹಕ್ಕುಗಳನ್ನು ಅವರಿಗೆ (ಕೆಲಸಗಾರರಿಗೆ) ಕೊಡಿಸುವುದರಲ್ಲಿ ಸಂದೇಹವಿಲ್ಲವೆಂದರು. ಅನಂತರ ಶ್ರೀಗಳಾದ ಕೆ ಕೃಷ್ಣರಾಯರು, ವಿದ್ವಾನ್ ಬಿ ಅರ್ ಕ್ಯಾಡಿಗಳು ಮತ್ತು ಕಾಮ್ರೇಡ್ ಎಚ್ ಎಸ್ ದೊಡ್ಡರ ಉತ್ತೇಜಕ ಭಾಷಣಗಳಿತ್ತರು. ಸಂಘದಲ್ಲಿ ಕೆಲವರು ವಾಚ ದಿದರು. ಕಾರ್ಯದರ್ಶಿಗಳಾದ ಶ್ರೀ ಐತಪ್ಪ ಶೆಟ್ಟರು ವರದಿ ವಾಚನಮಾಡಿದರು. ಧನ್ಯವಾದಾರ್ಪಣೆಯೊಂದಿಗೆ ಸಭೆಯು ಮುಗಿಯಿತು. ಸಭೆ ಜರಗುವ ಮುಂಚಿತವಾಗಿ ಸದಸ್ಯರಿಗೂ ಆಮಂತ್ರಿತರಿಗೂ ಕಾಫಿ ಫಲಾಹಾರಾದ್ಯುಪಚಾರಗಳು ನಡೆದುವು

ನಗರ ಸಭೆ—ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯು ಕಳೆದ ತಾ 7ನೇ ಸೋಮವಾರ ಸಾಯಂಕಾಲ ಶ್ರೀ ಬಿ ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಯಲ್ಲಿ ಗತವರ್ಷದ ಆಡಳಿತ ವರದಿಯು ಚರ್ಚಿಸಲ್ಪಟ್ಟು ಕೆಲವು ತಿದ್ದುಪಡಿಗಳೊಂದಿಗೆ ಮಾನ್ಯವಾಯಿತು ಸಭೆಯವರು ಸ್ತ್ರೀಯರಿಗೆ ಮಂದಿರಕಟ್ಟಿಸಬೇಕೆಂದು ನಿರ್ಧರಿಸಿದ್ದ ಸ್ಥಳದಲ್ಲಿ ಆ ಮಂದಿರವನ್ನು ಕಟ್ಟಿಸಬಾರದಾಗಿ ಶ್ರೀ ಯಂ ಆರ್ ಚಟ್ಟರು ತಂದ ಠರಾವು ಮಾನ್ಯವಾಯಿತು ಅಧಿಕಸಂಖ್ಯಾಕರಾದ ಕಾಂಗ್ರೆಸ್ ಪಕ್ಷದವರು ಪ್ರಸ್ತರ ಅಭಿಪ್ರಾಯವನ್ನು ಮನ್ನಿಸಿ ಈ ಕಾರ್ಯವನ್ನು ನಿಲ್ಲಿಸಿದ್ದಕ್ಕಾಗಿ ಶ್ರೀ ಶ್ರೀಪ್ಪರು ಕಾಂಗ್ರೆಸ್ ಪಕ್ಷದವರಿಗೆ ತಮ್ಮ ಕೃತಜ್ಞತೆಯನ್ನು ತೋರಿಸಿದರು. ಹರಿಜನರನ್ನು ಹೆಚ್ಚಾಗಿ ಮ್ಯುನಿಸಿಪಲ್ ಸರ್ವೀಸಿಗೆ ತೆಗೆದುಕೊಳ್ಳಬೇಕೆಂದು ಡಾ ಆದಮರು ಸೂಚಿಸಿದರು ಅದು ಮಾನ್ಯವಾಯಿತು ಮೆಸ್ಸರ್ ಮಾರ್ಕೇಟಿನಲ್ಲಿ ಸ್ಟಾಲ್ ಇಟ್ಟವರನ್ನು ಎಂದರೆ ತರಕಾರಿ ಮತ್ತು ವಿಜಾಸುಮಾರ ಮವರನ್ನು ಫೆಲಿಕ್ಸ್ ಪೈಬಜಾರಿಗೆ ಹೋಗಲು ಒತ್ತಾಯಪಡಿಸಬೇಕೆಂದು ಠರಾವಾಯಿತು ಫೆಲಿಕ್ಸ್ ಪೈಬಜಾರಿನ ಮಾರ್ಕೇಟಿನಿಂದ ಹೆಂಡದಂಗಡಿಗಳ ಬಳಿಗೆ ಹೋಗಲಿರುವ ಗೇಟನ್ನು ಮುಚ್ಚಬೇಕೆಂದು ಶ್ರೀ ರಂಗರಾಯರು ತಂದ ಠರಾವನ್ನು ಶ್ರೀ ರಾಘವೇಂದ್ರ ಸ್ವಗಳು ಅನುಮೋದಿಸಿದರು ಆದರೆ ಮತಕ್ಕೆ ಬಿಟ್ಟಾಗ ಠರಾವು ಬಿದ್ದು ಹೋಯಿತು

ಬೀಡಿ ಲೇಬರ್ ಪರಿಷತ್ತು—ಕಲ್ಲಿಕೋಟೆಯ ವಿಜಯ ಮುನಿಂಸಿಪರಾದ ಶ್ರೀ ಮಂಜುನಾಥರಾಯರ ಅಧ್ಯಕ್ಷತೆಯಲ್ಲಿ ಬೀಡಿ ಲೇಬರ್ ಪರಿಷತ್ತು ಕಳೆದ ತಾ, 7ನೇ ಸೋಮವಾರ ಕೆನರಾ ಹೈಸ್ಕೂಲ್ ಹಾಲಿನಲ್ಲಿ ನಡೆಯಿತು. ಕೇರಳದ ಮುಖಂಡರಾದ ಕಾ. ಪಿ ಕೆ. ಗೋಪಾಲನ್‌ರವರೇ ಮೊದಲಾದವರು ಬಂದಿದ್ದರು ಹೊಳ್ಳರು ಸ್ವಾಗತ ಭಾಷಣಮಾಡಿದರು. ಹಲವು ಠರಾವುಗಳು ಪರಿಷತ್ತಿನ ಅಂತ್ಯದಲ್ಲಿ ಮಂಜೂರಾದುವು.

ರಾಷ್ಟ್ರೀಯ ಪ್ರಚಾರ—ನಿನ್ನೆ ದಿನ ಸಾಯಂಕಾಲ ವಿದ್ಯಾರ್ಥಿಭವನದ ಸಭೆಯಲ್ಲಿ (ಎಸ್ ಕೆ ಡಿ ಬಿ ಹಾಸ್ಟೆಲ್) ಕೆ ಕೃಷ್ಣರಾಯರು "ರಾಷ್ಟ್ರೀಯ ಪ್ರಚಾರದ ಯೋಜನೆಯ ಕುರಿತು ಭಾಷಣ ಮಾಡಿದರು ಶ್ರೀ ಬಿ ಜನಾರ್ದನರಾಯರು ಅಧ್ಯಕ್ಷತೆವಹಿಸಿದ್ದರು ಸಭಾಂತ್ಯದಲ್ಲಿ ಶ್ರೀ ವೈ ಸುಬ್ಬಣ್ಣಯ್ಯನವರು ಧನ್ಯವಾದಗಳನ್ನರ್ಪಿಸಿದರು

ಸಪ್ಲೈಸ್ ಕೋರ್ಟಿನ ತೀರ್ಮಾನ—ಕೆಲಕಾಲದ ಹಿಂದೆ ಲಕ್ಷ್ಮಿ ಹೋಟೆಲ್ ಕೀಪರ್ ಪದ್ಮನಾಭ ಉಪ್ಪರ ಕೊಲೆಯಾಗಿತ್ತಷ್ಟೆ ಆ ಸಂಬಂಧ ಕೆಲವರ ಮೇಲೆ ಖೂನಿ ಮೊಕದ್ದಮೆಯು ಹೂಡಲ್ಪಟ್ಟಿತ್ತು. ಈ ಮೊಕದ್ದಮೆಯ ತೀರ್ಪನ್ನು ಜಿಲ್ಲಾ ಸಪ್ಲೈಸ್ ಜಡ್ಜರು ಈ ಧ ತಾ 12ರಲ್ಲಿ ಕೊಟ್ಟು ಆಪಾದಿತರು ತಪ್ಪಿತಸ್ಥರಲ್ಲವೆಂದು ಅವರನ್ನು ಬಿಡುಗಡೆಮಾಡಿದರು

ಸಭೆಯಲ್ಲಿ ಭಾಗವಹಿಸಿಲ್ಲ—ಕಳೆದ ತಾ 4ರ 'ಕಂಠೀರವ'ನ ಸಂಚಿಕೆಯ ೫ನೇ ಪುಟದಲ್ಲಿ ಅಳಿಯಸಂತಾನ ಸಭೆಯ ಪ್ರೊಸಿಡಿಂಗ್ಸ್ ಪ್ರಕಟವಾಗಿದ್ದು, ಅದರಲ್ಲಿ ಶ್ರೀ "ಮಂಗಳೂರು ರಸರ್ ಮರ್ಚೆಂಟ್, ಮಂದಾರು ಮಂಜಯ್ಯ ಹೆಗ್ಡೆ"ರು ಸಭೆಯ ಠರಾವಿನ ನಿರ್ಣಯಕ್ಕೆ ದಸ್ಕತು ಹಾಕಿದವರಲ್ಲಿ ಒಬ್ಬರೆಂದು ಹೇಳಲಾಗಿದೆ ಶ್ರೀ ಹೆಗ್ಡೆಯವರು ತಾವು ಸಭೆಯಲ್ಲಿ ಯಾವ ಭಾಗವನ್ನೂ ವಹಿಸಿಲ್ಲವೆಂದೂ, ಅದೇನೋ ತಪ್ಪಾಗಿರಬೇಕೆಂದೂ ಬರೆದು ತಿಳಿಸಿದ್ದಾರೆ

ಅಳಿಯಸಂತಾನ ಸುಧಾರಣಾ ಪರಿಷತ್ತಿನ ಸಭೆಗಳು—ತಾ 17 9 1939ನೇ ದಿನ ಮಂಗಳೂರಲ್ಲಿ ಜರಗಲಿರುವ ಜಿಲ್ಲಾ ಪರಿಷತ್ತಿಗ ಇಡೀ ಜಿಲ್ಲೆಯಿಂದ ಪ್ರತಿನಿಧಿಗಳನ್ನು ಆರಿಸುವ ಅಗತ್ಯವಿದೆ. ಅದಕ್ಕಾಗಿ ಪ್ರತಿಯೊಂದು ಜಿಲ್ಲಾ ಬೋರ್ಡು ಫಿರ್ಕದಿಂದ 5ರಂತೆಯೂ ಮಂಗಳೂರು ಟೌನಿನಿಂದ 10, ಉಡುಪಿ ಟೌನಿನಿಂದ 5 ಮತ್ತು ಉಳಿದ ನಾಲ್ಕು ಟೌನುಗಳಿಂದ 3ರಂತೆಯೂ ಪ್ರತಿನಿಧಿಗಳನ್ನು ಆರಿಸಬೇಕೆಂದು ಕೂಡಾ ಕಳೆದ ಕಮಿಟಿ ಮೀಟಿಂಗಿನಲ್ಲಿ ನಿಶ್ಚಯಿಸಿರುತ್ತದೆ. ಈ ತನಕ ಪುತ್ತೂರು ತಾಲೂಕಿನಿಂದ ಮಾತ್ರ 33 ಪ್ರತಿನಿಧಿಗಳು ಆರಿಸಿ ಬಂದಿರುತ್ತಾರೆ ಉಳಿದ ಈ ಕೆಳಗೆ ಕಾಣಿಸಿದ ತಾಲೂಕು, ತಾರೀಕು, ದಿನ, ಸಮಯ ಮತ್ತು ಸ್ಥಳಗಳಲ್ಲಿ ಸಭೆಗಳನ್ನು ಕರೆಯುವ ಏರ್ಪಾಡು ಮಾಡಿರುತ್ತದೆ ಅಳಿಯಕಟ್ಟನ್ನಾಚರಿಸುವ ಮಹಿಳೆಯರೂ ಮಹನೀಯರೂ ತಮತಮಗೆ ಸಂಬಂಧಪಟ್ಟ ತಾಲೂಕು ಸಭೆಗಳಲ್ಲಿ ಬಹು ಸಂಖ್ಯೆಯಿಂದ ಕೂಡಿಬಂದು ಪ್ರತಿನಿಧಿಗಳನ್ನಾರಿಸಿಕೊಡ ಬೇಕಾಗಿ ನಂಬಿರುತ್ತೇನೆ. ಪ್ರತಿನಿಧಿ ಫೀಸಲು ರೂ. 1 ರಂತೆ ತೆರಬೇಕಾಗಿರುವುದರಿಂದ ಪ್ರತಿನಿಧಿಗಳಾಗಿ ಬರುವವರೆಲ್ಲಾ ರೂ. 1ರಂತೆ ಸಭೆಗಳಿಗೆ ಬರುವಾಗಲೇ ತರಬೇಕಾಗಿ ಅಪೇಕ್ಷಿಸುತ್ತೇನೆ.

ಕುಂದಾಪುರ 19 8–39 ಶನಿವಾರ ಮಧ್ಯಾಹ್ನ 2 ಘಂಟೆ ಸಮಯ ಬಿ ಸಿ ಟಿ ಯಸ್ ಹೋಮಿನಲ್ಲಿ, ಕಾರ್ಕಳ 20 8 39 ಆದಿತ್ಯವಾರ ಮಧ್ಯಾಹ್ನ 2 ಘಂಟೆಗೆ ಯನ್. ಆರ್ ಯಸ್. ಹೋಮಿನಲ್ಲಿ, ಕಾಸರಗೋಡು 27–8–39 ಆದಿತ್ಯವಾರ ಮಧ್ಯಾಹ್ನ 2 ಘಂಟೆಗ ಮಿಷನ್ ಶಾಲೆಯಲ್ಲಿ, ಉಡುಪಿ 28 8 39 ಸೋಮವಾರ 2ಘಂಟೆ, ಬಿ ಸಿ. ಆರ್ ಯಸ್. ಹೋಮಿನಲ್ಲಿ, ಮಂಗಳೂರು 3–9–39 ಆದಿತ್ಯವಾರ ಮಧ್ಯಾಹ್ನ 2 ಘಂಟೆಗ ಬಿಸಿ. ಆರ್. ಯಸ್ ಹೋಮಿನಲ್ಲಿ.

ನಾರಾಯಣ ಕಿಲ್ಲೆ,
ಮಂಗಳೂರು, ತಾ 12–8–39

ನಾರದ ವಿಮರ್ಶೆ

ಪುಟ ೩ರಿಂದ

ಜಿ ಮುತ್ತಯ್ಯ ಚೆಟ್ಟಿಯಾರ್, ಸರ್ ಪನ್ನೀರ್ ಸೆಲ್ವಂ ಮೊದಲಾದವರು ಶಿಲೋನಿಗೆ ಹೋಗಿ ವಿಚಾರಿಸಬೇಕೆಂದು ತೀರ್ಮಾನವಾಯಿತು ಪಕ್ಷದ ಕುರಿತು ಪ್ರಚಾರಕಾರ್ಯ ನಡಿಸಲು ಒಂದು ಉಪಸಮಿತಿಯು ನೇಮಿಸಲ್ಪಟ್ಟಿತು, ನಾಯಕರಾದ ಶ್ರೀರಾಮಸ್ವಾಮಿ ನಾಯ್ಕರರು, ಪಕ್ಷವನ್ನು ಬಲಗೊಳಿಸಲು ಆಂಧ್ರ, ತಮಿಳು ಮತ್ತು ಕನ್ನಡ ಜಿಲ್ಲೆಗಳಲ್ಲಿ ಸಂಚರಿಸಬೇಕೆಂದು ನಿರ್ಧಾರವಾಯಿತು. ಶ್ರೀ ರಾಮಸ್ವಾಮಿ ನಾಯ್ಕರರ ಹೆಚ್ಚಿನ ಜನಾದರಕ್ಕೆ ಪಾತ್ರರಾಗಿರುವರು ಕಾಂಗ್ರೆಸ್‌ಪಕ್ಷದ ಘೋಷಣೆಯ ಕುರಿತು ಜನತೆಯಲ್ಲಿ ಹೆಚ್ಚುತ್ತಿರುವ ಅನಾದರವು ಜಸ್ಟಿಸ್ ಪಕ್ಷೀಯರಿಗ ಹೊಸ ಹುರುಪನ್ನುಂಟುಮಾಡಿದ. ಅವರು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸಿನವರನ್ನು ಜೈಸುವ ಆಶೆಯುಳ್ಳವರಾಗಿದ್ದಾರೆ.

ಬಡಾಗ್ರಾಮ ಉಚ್ಚಿಲ—ಬಡಾ ಪಂಚಾಯತ ಬೋರ್ಡಿನ ಅಧ್ಯಕ್ಷರೂ, ಉಚ್ಚಿಲ ಸಹಕಾರ ಸಂಘದ ಪ್ರೆಸಿಡೆಂಟರೂ ತರುಣ ಸಾಹುಕಾರರೂ ಆದ ಶ್ರೀ ಉಚ್ಚಿಲ ಮದ್ದು ಶೆಟ್ಟರಿಗೆ ತಾ 10 8 39ರಲ್ಲಿ ಉಚ್ಚಿಲ ಸೋನ್ಸರ ಗಾರ್ಡನಿನಲ್ಲಿ ಸಭೆಸೇರಿ ಮಿತ್ರ ಮಂಡಳಿಯವರು 5ಪವನಿನ ಒಂದು ಬಂಗಾರದ ಚೈನನ್ನು ಪಾರಿತೋಷಕವಾಗಿತ್ತು ಸತ್ಕರಿಸಿದರು. ಟೀ ಪಾರ್ಟಿ, ಗ್ರೂಪ್ ಫೋಟೋಗಳೂ ಇದ್ದುವು. ಬಡಾ ಪಂಚಾಯತಬೋರ್ಡಿನ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ ರಾವರು ಸಭಾಧ್ಯಕ್ಷತೆ ವಹಿಸಿದ್ದರು ಈ ಸಂದರ್ಭದಲ್ಲಿ ಶ್ರೀಗಳಾದ ಚಿಕ್ಕಗುತ್ತು ಚಿನ್ನಯ್ಯ ಶೆಟ್ಟಿ, ಯಂ ಬಿ ಶೆಟ್ಟರು, ಸಾಮುವೇಲ್ ಕುಂದರ್, ಎಂಕಣ ಗುತ್ತು ರಾಜಪ್ಪಶೆಟ್ಟಿ ಮೊದಲಾದವರು ಶ್ರೀ ಮದ್ದು ಶೆಟ್ಟರ ಗುಣಕಥನಮಾಡಿದರು. ಶ್ರೀ. ಶೆಟ್ಟರು ಇತ್ತೀಚೆಗೆ ನಡೆದ ಒಂದು ಕ್ರಿಮಿನಲ್ ವ್ಯವಹಾರದಲ್ಲಿ ಜಯಶೀಲರಾಗಿದ್ದಾರೆ ಶ್ರೀ ಶೆಟ್ಟರು ದಯಾಳು, ಉದ್ಯೋಗಶೀಲರು, ನಿಃಸ್ವಾರ್ಥ, ಪರೋಪಕಾರಿ ಮೊದಲಾದ ಸದ್ಗುಣಭರಿತರಾಗಿರುವರೆಂತಲೂ ಮಿತ್ರ ಸಮೂಹದವರೆಲ್ಲರ ಬಾತ್ಮಿ. ಇವರು ಇನ್ನಷ್ಟು ಕೀರ್ತಿಗಳಿಸಲೆಂದು ಹಾರೈಕೆ

ಬ್ರಹ್ಮಾವರ—ತಾ. 13 8-39ರಲ್ಲಿ ವಾಮಕಳ ಗಣಪತಿ ದೇವಸ್ಥಾನದಲ್ಲಿ ಶ್ರೀ ಸಂಕ್ಯ ಶೆಟ್ಟರ (ಕುಮ್ರಗೋಡು ಗ್ರಾಮಮುನಸೀಪ) ಅಧ್ಯಕ್ಷತೆಯಲ್ಲಿ ಅಳಿಯಕಟ್ಟನ್ನಾಚರಿಸುವವರ ಪ್ರಚಂಡ ಸಭೆಯೊಂದು ಜರಗಿತು ಬಾರಕೂರು ಹಾ, ಎ ಮಿಡಿಯ ಹೆಡ್ಮಾ ಶ್ರೀ. ಬಿ ರಾಮಣ್ಣ ಶೆಟ್ಟರು ಅಳಿಯಸಂತಾನ ಮಸೂದೆಯ ಪ್ರತಿಯನ್ನು ಓದಿ ವಿವರಿಸಿ, ಅಳಿಯಕಟ್ಟಿನ ಸುಧಾರಣೆಯು ಅತ್ಯಾವಶ್ಯಕವೆಂದೂ ಇದರಲ್ಲಿ ಬೇಕಾದ ಕೆಲವು ತಿದ್ದುಪಡಿಗಳನ್ನು ಜಿಲ್ಲಾ ಪರಿಷತ್ತಿನಲ್ಲಿ ಮಾಡಿಕೊಳ್ಳಬಹುದೆಂದೂ ಭಾಷಣಮಾಡಿದರು ಬಿಲ್ಲನ್ನು ಮಂಜೂರ ಮಾಡಬಾರದೆಂದು ಶ್ರೀ ಪಡುಮಲೆ... ಶೆಟ್ಟರು ಈ ಬಿಲ್ಲನ್ನು ವಿರೋಧಿಸಹೊರಟಿರುವ ಅಳಿಯಸಂತಾನ ಲೀಗಿನವರ ಮೋಸವನ್ನು ಖಂಡಿಸಿ ಮಾತನಾಡಿದರು. ಕ್ಯಾಸುಭಾಗ ಶ್ರೀ ಬಿ ತಿಮ್ಮಪ್ಪ ಶೆಟ್ಟಿ ಇದನ್ನು ಅನುಮೋದಿಸಿದರು ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನಾರಿಸುವುದನ್ನು ಮುಂದರಿಸಲಾಯಿತು ಶ್ರೀ. ಬಿ ಅಂತಯ್ಯ ಶೆಟ್ಟರು ಅಳಿಯ ಸಂತಾನದವರ ಮನೆಗಳ ಸದ್ಯದ ಚಿತ್ರವನ್ನು ಸಭಿಕರ ಮುಂದಿಟ್ಟು ಸುಧಾರಣೆ ಅಗತ್ಯವೆಂದರು. ಸಭಾಧ್ಯಕ್ಷರು ಲೀಗಿನವರ ವರ್ತನೆಯು ಸರಿಯಲ್ಲವೆಂದೂ ಸುಧಾರಣೆ ಅತ್ಯಾವಶ್ಯಕವೆಂದೂ ಮಾತನಾಡಿದರು ಶ್ರೀ ಹಂದಾಡಿ ಪತ್ತುವನೆ ಅಂತ್ಯ ಶೆಟ್ಟರು ಧನ್ಯವಾದವಿತ್ತ ಮೇಲೆ ಸಭಾಂತ್ಯವಾಯಿತು

ಕಾಸರಗೋಡು—ತಾ 23-5-1939 ರಲ್ಲಿ ಜರಗಿದ ಅಳಿಯಕಟ್ಟನ್ನಾಚರಿಸುವ ಸಮಾಜಗಳ ಪರಿಷತ್ತಿನಲ್ಲಿ ನೇಮಿಸಲ್ಪಟ್ಟ ಕಮಿಟಿಯಿಂದ ತಯಾರಿಸಲ್ಪಟ್ಟ ಅಳಿಯಸಂತಾನ ಮಸೂದೆ ವಿಷಯ ಆಲೋಚಿಸುವರೆ ಮತ್ತು ಕಾಸರಗೋಡು ತಾಲೂಕಿನಿಂದ ಜಿಲ್ಲಾ ಪರಿಷತ್ತಿಗೆ ಸುಮಾರು 25 ಪ್ರತಿನಿಧಿಗಳನ್ನು ಆರಿಸುವರೆ ಕಾಸರಗೋಡು ತಾಲೂಕಿನ ಅಳಿಯಕಟ್ಟನ್ನಾಚರಿಸುವ ಸಮಾಜಗಳ ಸೇರಿಕೆಯ ಸಭೆಯು ತಾ 27 8 1939ರಲ್ಲಿ ಬೆಳಗ್ಗೆ 10 ಘಂಟೆಗ ಕಾಸರಗೋಡು ಮಿಷನ್ ಸೆಕೆಂಡರಿ ಶಾಲೆಯಲ್ಲಿ ಜರಗುವುದು ಎಲ್ಲರೂ ಬರಬೇಕಾಗಿ ವಕೀಲ್ ಶ್ರೀ ಕೆ ಸುಂದರರಾವ ಶೆಟ್ಟರು ಅಪೇಕ್ಷಿಸುತ್ತಾರೆ.

ಪುತ್ತೂರು—ಈಗ ಅಳಿಯಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿದ ಮಸೂದೆಯನ್ನು ಚರ್ಚಿಸುವರೆ ಮತ್ತು ಜನರ ಅಭಿಪ್ರಾಯವನ್ನು ಪಡೆಯುವರೆ ವಕೀಲ್ ಎಚ್. ಸಂಜೀವ ಶೆಟ್ರ ಅಧ್ಯಕ್ಷತೆಯಲ್ಲಿ ಸಹಕಾರ ಸಂಘದ ಕಟ್ಟಡದ ಸಭಾ ಮಂದಿರದಲ್ಲಿ ಒಂದು ಮಹಾಸಭೆಯು ಜರಗಿತು ಪುತ್ತೂರು ತಾಲೂಕಿನ ಸುಮಾರು 300 ಮಂದಿ ಅಳಿಯಕಟ್ಟಿನ ಗೃಹಸ್ಥರು ಹಾಜರಿದ್ದರು ಶ್ರೀ ನಾರಾಯಣ ಕಿಲ್ಲೆಯವರು ಅಳಿಯಸಂತಾನ ಮಸೂದೆ ವಿಷಯ ಮುಖ್ಯ ಅಂಶಗಳನ್ನು ವಿವರಿಸಿ ಮಸೂದೆಯನ್ನು ಅಗತ್ಯವಿದ್ದಷ್ಟು ಬದಲಾವಣೆಯಿಂದ ಅಂಗೀಕರಿಸಬೇಕೆಂದು ಸಭೆಯವರನ್ನು ಕೇಳಿಕೊಂಡರು. ಸಭೆಗೆ ಬಂದವರಲ್ಲಿ ಅನೇಕರು ತಮ್ಮ ಭಿನ್ನಾಭಿಪ್ರಾಯಗಳನ್ನು ಕೊಟ್ಟರು. ಶ್ರೀ. ಕಿಲ್ಲೆಯವರ ಉತ್ತರ ಸಹ ಆದ ನಂತರ ಅಧ್ಯಕ್ಷರು ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಬೇಕೆಂಬ ಸೂಚನೆ ಕೊಟ್ಟಾಗ ಶ್ರೀ. ವಕೀಲ್ ಬಿ ದಾಸ ರೈಗಳು ಠರಾವುಗಳನ್ನು ಪಾಸ್ ಮಾಡಬೇಕೆಂತ ಹೇಳಿ ಈ ಮಸೂದೆಯನ್ನು ಈ ಸಭೆಯು ಪೂರಾ ತಿರಸ್ಕರಿಸುತ್ತದೆ ಎಂಬ ಸೂಚನೆಯನ್ನು ಸಭೆಯ ಮುಂದಿಟ್ಟರು ಅಧ್ಯಕ್ಷರು ಆ ಸೂಚನೆಯನ್ನು ಈ ಸಭೆಯಲ್ಲಿ ನಿಶ್ಚಯಿಸಲಿಕ್ಕಾಗುವದಿಲ್ಲವೆಂತ ಹೇಳಿದಾಕ್ಷಣ ಸ್ವಲ್ಪ ಚರ್ಚೆ ನಡದು ಸಭೆಯಿಂದ ಹೊರಟುಹೋದರು. ಅನಂತರ ಶ್ರೀ ವಕೀಲ್ ಬಿ, ಲಕ್ಷ್ಮೀನಾರಾಯಣ ರೈ, ಎಸ್ಕ್ವೈರ್ ಇವರ ಸೂಚನೆಯಂತೆ ಮಸೂದೆಯನ್ನು ಮಂಜೂರು ಮಾಡಲಾಯಿತೆಂತಲೂ ಕೆಲವರು ಇದರಿಂದ ಗಲಿಬಿಲಿಯಾಗಿದ್ದಾರೆಂತಲೂ ತಿಳಿದುಬರುತ್ತದೆ.

ಉಡುಪಿ

ಜಿಲ್ಲಾ ವಿದ್ಯಾ ವಸ್ತು ಪ್ರದರ್ಶನ—ವನ್ನು ಉಡುಪಿಯಲ್ಲಿ ಜರಗಿಸುವ ವ್ಯವಸ್ಥೆಮಾಡುವ ಸಲುವಾಗಿ ತಾ 12 8 39ರಲ್ಲಿ ಸ್ಥಳೀಕ ಬೋರ್ಡು ಹೈಸ್ಕೂಲ್ ಕಟ್ಟಡದಲ್ಲಿ ಶ್ರೀ ಯು ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾಪ್ರೇಮಿಗಳ ಸಭೆಯೊಂದು ಜರಗಿತು ಪ್ರದರ್ಶನವನ್ನು ಉಡುಪಿ ಪರ್ಯಾಯ ಸಮಯದಲ್ಲಿ (ಜನವರಿ) ಮಾಡುವುದೆಂದು ನಿರ್ಣಯಿಸಿ ಶ್ರೀಗಳಾದ ಯು ಕಣ್ಣಪ್ಪ (ಅಧ್ಯಕ್ಷ) ಕೆ. ಜಿ. ಬಲ್ಲಾಳ (ಉಪಾಧ್ಯಕ್ಷ) ಜಿ ಕೌಂಡಿನ್ಯ (ಕಾರ್ಯದರ್ಶಿ) ಲೋಕಿ ಫೆರ್ನಾಂಡಿಸ್ (ಜತೆ ಕಾರ್ಯದರ್ಶಿ) ಎ ಲಕ್ಷ್ಮೀನಾರಾಯಣ ರಾವ್ (ಖಜಾಂಚಿ) ಮತ್ತು ಇತರ 6ಜನರ ಕಮಿಟಿಯೊಂದನ್ನು ರಚಿಸಲಾಯಿತ

ಸಮುದ್ರದಲ್ಲಿ ಬಿದ್ದು ಮರಣ—ತಾ. 12 8 39ರಲ್ಲಿ ಉಡುಪಿಯ ಕೆಲ ತರುಣರು ಒಡಭಾಂಡೇಶ್ವರಕ್ಕೆ ಹೋಗಿ ಸಮುದ್ರಸ್ನಾನಮಾಡುವಾಗ ಮಿ, ಆರ್ಬನ್ ವೇಗಸ್ ಎಂಬವನು ನೀರಲ್ಲಿ ಮುಳುಗಿ ಪತ್ತೆಇಲ್ಲದೆ ಹೋದನೆಂದೂ ಸೋಮವಾರ ಸಂಜೆ ಹೆಣವು ಸಿಕ್ಕಿರುವುದೆಂದೂ ತಿಳಿದುಬರುತ್ತದೆ, ಮೃತನ ಶವ ಸಂಸ್ಕಾರವು ತಾ, 15ರಲ್ಲಿ ನಡೆಯಿತು. ಇವನು ಜನಪ್ರಿಯನಾಗಿದ್ದ ಪೀಸ್ ಕ್ಲಬ್ಬಿನ ಸಂಸ್ಥಾಪನೆಯಲ್ಲಿ ಮುಂದಾಳಾಗಿದ್ದ ಇದ್ದನು. ಸಮುದ್ರಕ್ಕೆ ವಿಹಾರಾರ್ಥವಾಗಿ ಹೋಗಿ ವರು ಇದರಿಂದ ಪಾಠಕಲಿವರೆ?

ಹರಿಜನ ಅನಾಥಾಲಯ—ಉಡುಪಿ ತಾಲೂಕಿನ ಬನ್ನಂಜೆ ಎಂಬಲ್ಲಿ ತಾ. 13 8 39ರಲ್ಲಿ ತೆರೆಯಲ್ಪಟ್ಟ ಹರಿಜನ ಅನಾಥಾಲಯಕ್ಕೆ ಉಡುಪಿ ಮತ್ತು ಕುಂದಾಪುರ ತಾಲೂಕಿನಲ್ಲಿ ಅನಾಥರಾಗಿರುವ ಹರಿಜನ ಮಕ್ಕಳನ್ನು ಸೇರಿಸಿಕೊಳ್ಳಲಾಗುವುದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲಿಕ್ಕೆ ಇಚ್ಛೆಯುಳ್ಳವರಿಗೆ ಊಟ, ವಸತಿ ಮತ್ತು ಇತರ ಅನುಕೂಲತೆಗಳು ಧರ್ಮಾರ್ಥವಾಗಿಯೇ ಒದಗಿಸುವ ಸಲುವಾಗಿ ಸದ್ರಿ ಅರ್ಜಿದಾರನು ಅನಾಥನೆಂಬುದಕ್ಕೆ ಗ್ರಾಮದ ಪಟೇಲರೂ ಸದ್ಗೃಹಸ್ಥರ ಹಸ್ತಾಕ್ಷರವುಳ್ಳ ಪತ್ರದೊಂದಿಗೆ ಕೆಳಗಿನವರಿಗೆ ಕಳುಹಿಸಿಕೊಡತಕ್ಕದ್ದು, 4ನೇ ದರ್ಜೆಯ ಮೇಲೆ 4th ಫಾರ್ಮಿನ ಎಲ್ಲಾ ಕ್ಲಾಸುಗಳಿಗೆ ಮಕ್ಕಳನ್ನು ಈ ಟರ್ಮಿನ ಅಂತ್ಯದವರೆಗೆ ಸೇರಿಸಿಕೊಳ್ಳುವ ಏರ್ಪಾಡು ಮಾಡಿರುತ್ತದೆ, ಎಂದು ಯಸ್. ಗೋಪಾಲಸ್ವಾಮಿ, ಗೌರವ ಕಾರ್ಯದರ್ಶಿ, ಕಾರ್ಯ ನಿರ್ವಾಹಕ ಸಮಿತಿ, ಉಡುಪಿ ಹರಿಜನ ಅನಾಥಾಲಯ, ಕಾಡಬೆಟ್ಟು, ಉಡುಪಿ, ಇವರು ತಿಳಿಸುತ್ತಾರೆ

ಶಂಕರನಾರಾಯಣ—ಇಲ್ಲಿಯ ಪಂಚಾಯತ ಕೋರ್ಟಿನ ವರ್ತನೆಯು ತೀರಾ ವಿಚಿತ್ರವೂ ಆಶ್ಚರ್ಯಕರವೂ ಎಂದೂ, ನೋಟೀಸುಗಳನ್ನು ಸರಿಯಾಗಿ ಜಾರಿಮಾಡುವುದಿಲ್ಲವೆಂದೂ, ಪ್ರೆಸಿಡೆಂಟರನ್ನು ವಿಚಾರಿಸಿದರೆ ಸರಿಯಾದ ಉತ್ತರ ಸಿಗುವುದಿಲ್ಲವೆಂದೂ ಅಂತೂ ಇಲ್ಲಿ ಕಕ್ಷಿಗಾರರಿಗ ನ್ಯಾಯವು ಸರಿಯಾಗಿ ದೊರೆಯುವುದಿಲ್ಲವೆಂದೂ ಸುದೀರ್ಘ ಬಾತ್ಮಿಯೊಂದು ಬಂದಿದೆ ಈ ಕಡೆಗೆ ಸಂಬಂಧಪಟ್ಟವರು ಗಮನ ಕೊಡುವರೆಂದು ಹಾರೈಸಲಾಗಿದೆ.

ADVERTISE IN
NAVAYUGA

Was it not hypocrisy under the garb of religion——

If in the Temple Dance, mothers were in the arms of their sons, sisters were returning the sensuous kisses of their brothers and fathers were embracing with a grip their own daughters?

The sight oppressed Machendra and he contemplated for 7 long years on the mysterious ways of god & pernicious ways of Men! At last he evolved a faith of his own!

Man Unfettered by shackles can be a super man——

and the nastiest fetters that tie down a man to grovelling pitifulness are women"!!

Strange as it may seem

A loud peal of laughter burst the Sky—— It was cupid laughing! Queen Tilottama and Machendra fell into the arms of each other Until Gorakh his desciple, as a dramatist resounded

'Chet Chet Machender GORAKHAYA'

How did it all happen? —.— [From 16-8-39] —.— See on the silver screen at

Sri Ramakrishna Theatre, Udipi

ದೇವಾಲಯದ ನರ್ತನದಲ್ಲಿ—

ಸ್ವಂತ ಮಗನ ಆಲಿಂಗನದಲ್ಲಿ ತಾಯಿಯು ಪರವಶಳಾಗಿದ್ದರೆ–ತಂಗಿಯು ಅಣ್ಣನ ವಿಷಯವಾಸನಾ ಪೂರ್ವಕ ಮುತ್ತಿಗೆ ಮುತ್ತಿಡುತ್ತಿದ್ದರೆ–ತಂದೆಯು ಉದ್ರೇಕದಿಂದ ಮಗಳನ್ನು ಬಿಗಿಯಪ್ಪಿ ಹಿಡಿದಿದ್ದರೆ—

ಅದು 'ಮತಧರ್ಮ'ವೆಂಬ ಸೋಗಿನ ಕಪಟನಾಟ್ಯವಲ್ಲವೆ?

ಮಛೀಂದ್ರನಿಗೆ ಆ ನೋಟವು ವೇದನೆಯನ್ನುಂಟುಮಾಡಿತು!

ಪರಮಾತ್ಮನ ವಿಚಿತ್ರ ಘನತೆಯೂ ಜನರ ಅನುಚಿತ ನಡತೆಯೂ–7 ವರುಷಗಳ ತನಕ ವಿಚಾರಮಗ್ನನಾಗುವನು ಇದರ ವಿಷಯವಾಗಿ! ಪರಿಣಾಮವಾಗಿ ಅವನು

ತನ್ನದೇ ಒಂದು ಸಿದ್ಧಾಂತವನ್ನು ಕಂಡುಕೊಳ್ಳುವನು!
ಷಡ್ವೈರಿಗಳ ಹಿಡಿತದಿಂದ ಬಾಹಿರನಾದವನೇ ಶ್ರೇಷ್ಠನು!
ಮಾನವನನ್ನು ಕೆಡಹುವ ಪಾಪಕೂಪಗಳೆಂದರೆ ಸ್ತ್ರೀ!!
ಇಂದು ನಿಮಗೆ ಸೋಜಿಗವಾಗಬಹುದು!. ಆದರೆ

ನಗೆಯ ಹೊಳೆಪೊಂದು ಗಗನದಲ್ಲಿ ಮೊಳಗಿತು!— ಅದೇ ಮನ್ಮಥವಿಜಯ!— ಮಹಾರಾಣಿ ತಿಲೋತ್ತಮೆಯೂ, ಮಛೀಂದ್ರನೂ ಆಲಿಂಗನ ಬಂಧಿತರಾಗಿದ್ದರು! ಆಗಲೇ ಮಛೀಂದ್ರನ ಶಿಷ್ಯಗೋರಕ್‌ನು ನಾಟಕದ ಪಾತ್ರಧಾರಿಯು ಸೋಗಿನಲ್ಲಿ ಬಂದು ಹಾಡುವನು—

ಚೇತ್, ಚೇತ್, ಮಛೀಂದರ್ ಗೋರಖ ಆಯಾ

ಮಂದೇನು? ಹೀಗಾಗಲು ಕಾರಣವೇನು? ನೋಡಿರಿ ರಜತಪಂದೆಯಲ್ಲಿ

ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ

ತಾ. ೧೬–೮–೩೯ರಿಂದ

ಅನಾಚಾರದ ಬೀಡೆನಿಸಿದ ಅದೊಂದು ದೇವಾಲಯದಲ್ಲಿ ಕೆಲವು ದೃಶ್ಯಗಳನ್ನು ನೋಡಿ ಮಛೀಂದ್ರನು ಜಿಗುಪ್ಸೆಗೊಂಡು 7 ವರ್ಷಗಳ ಪರ್ಯಂತರ ಕಠಿಣ ವಿಚಾರ ಮಗ್ನನಾಗುವನು ಪರಿಣಾಮವಾಗಿ ಮಾನವನು ಶ್ರೇಷ್ಠಜೀವಿಯಾದರೂ ಸ್ತ್ರೀಯ ದೆಸೆಯಿಂದ ದುರ್ಗತಿಗೆ ಇಳಿಯುವನು ಎಂಬ ಸಿದ್ಧಾಂತವನ್ನು ಕಂಡುಕೊಂಡು ತನ್ನ ಸಂದೇಶವನ್ನು ಭಾರತ ಭೂಮಿಯ ಮೂಲೆಮೂಲೆಗೂ ಪಸರಿಸುವಂತೆ ಮಾಡುವನು. ಅನೇಕರು ಇವನ ಶಿಷ್ಯರಾಗುವರು, ಅನುಯಾಯಿಗಳಾಗುವರು!

ಇದೇ ಸಮಯದಲ್ಲಿ ಈಜಿಪ್ಟಿನ ರಾಣಿ ಹಿಂದೂದೇಶವನ್ನು ಕೊಳ್ಳೆಹೊಡೆಯಲು ಬರುವಳು ಆಗ ತಿಲನಾಟ ಸಂನ್ಯಾಸಿನಿಯು ಆ ದಾಳಿಯನ್ನು ಆಟಕಾಯಿಸಲು ಹುಡುಕಿ ಹುಡುಕಿ ಯೋಗ್ಯ ಪುರುಷನನ್ನೇ ಕಾಣದೆ ಹೆಂಗಸರ ದಳವೊಂದನ್ನು ಸಿದ್ಧಪಡಿಸಿ, ಯುದ್ಧಕ್ಕೆ ಮುಂದೊತ್ತುವಳು ಆದರೆ ಇಷ್ಟರಲ್ಲಿಯೇ ರಣವು ಪರಾಜಿತಳಾಗಿ ಓಡಿಸಲ್ಪಟ್ಟಿದ್ದಳು. ಮಛೀಂದ್ರನೂ ಅವನ ಅನುಯಾಯಿಗಳೂ ಈ ಕಾರ್ಯಭಾರವನ್ನು ಕೈಕೊಂಡವರು! ಅದನ್ನು ತಿಲೋತ್ತಮೆಯು ಸ್ತ್ರೀರಾಜ್ಯವನ್ನಾಗಿ ಮಾಡಿ ತಾನೇ ಅದರ ರಾಣಿಯಾಗುವಳು ಅಲ್ಲಿ ಪುರುಷವರ್ಗವನ್ನೇ ಲಂಡಿಗಳೆಂದು ಬಗೆದಿದ್ದ ತಿಲೋತ್ತಮೆಯೂ ಸ್ತ್ರೀಯೆಂದರೆ ಪಾಪಕೂಪವೆಂದು ತಿಳಿದಿದ್ದ ಮಛೀಂದ್ರನೂ ಸಂಧಿಸುವರು. ಸಂಭಾಷಣ ಮುಂದುವರಿಯುತ್ತ ಅವರವರ ಧ್ಯೇಯವನ್ನು ಮರೆತು ಬಿಡುತ್ತ ಇಬ್ಬರೂ ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುವರು—ಮನ್ಮಥನ ಕುಸುಮ ಶರಹತಿಯಿಂದ!—ಮಛೀಂದ್ರನ ಶಿಷ್ಯ ಗೋರಖನು ಇದನ್ನು ಸಹಿಸಲಾರದೆ ನಾಟಕದ ಪಾತ್ರಧಾರಿಯ ಸೋಗಿನಲ್ಲಿ ಬಂದು 'ಚೇತ್, ಚೇತ್, ಮಛೀಂದ್ರ ಗೋರಖ್ ಆಯಾ' ಎಂದು ಹಾಡಲು ಮಛೀಂದ್ರನಿಗೆ ಎಚ್ಚರವಾದಂತಾಗುವುದು! ಗುರುವನ್ನು ಸನ್ಮಾರ್ಗಕ್ಕೆ ತಂದೆನೆಂಬ ಗರ್ವೋನ್ಮತ್ತನಾದ ಗೋರಖ್‌ನಿಗೆ ಇನ್ನೇನಾಗುವುದು? ನೋಡಿರಿ ರಜತ ಪಂದೆಯಲ್ಲಿ

Machendra a young man fired by ideals contemplates for 7 years having been oppressed by the sight of pernicious ways of men, and establishes a faith that a man unfettered by shackles is super, and that the nastiest fetters that tie down man to grovelling pitifulness is woman His message in a flame of gold spreads from the silvery banks of the Ganges to the tropic luxury of Kanya Kumari From all the corners of India, ho ts of desciples, flock under his banner.

Simultaneously, it so happens that an Egyptian Queen invades India to plunder A Rishi girl Tilottama, starts in quest of men to resist this foreign aggression She organises an army of women soldiers, having found men as only drunkards or pedants, and marches on to fight Before she reaches the fields, She finds the adversary beaten back The credit goes to Machendra and his desciples Tila styles herself as the Queen of that Stri Rajya Guru Machendar and Queen Tilottama of antaganist faiths meet They conoincing each other, loses their own convictions and falls in to the arms of each other What is Gorakh, his desciple, doing then? See on the silver screen!

ವಿ ಸೂ — ಪರದೆಯಿಂದ 17 ಫೀಟು ದೂರದಲ್ಲಿ ಸೀಟುಗಳು ಇರಬೇಕೆಂಬ ನಿಯಮದ ಮೇರೆಗೆ ಅಧಿಕಾರಿಗಳಿಂದ ಆಕ್ಷೇಪಣೆ ಬಂದಿರುವುದರಿಂದ ಮೆಟನಿಯ 0–1–6 ಕ್ಲಾಸನ್ನು ತಾ 23–8–39ರಿಂದ ಮನ್ನಾ ಮಾಡಲಾಗುವುದು.

Please Note Special accommodation for matinees, (i. e 0–1–6 Class) will be abolished with effect from 23–8–39 as there is anthoritative objection. The rule requires the auditorium to be at a distance of 17ft from the sereen

ಟಿಕೇಟಿನ ದರ. ಟೇಕ್ಸ್ ಸಮೇತ ರಿಜರ್ವ್ 1 8-0; ಸ್ಪೆಶಲ್ 0 11-9; ಗೆಲರಿ 0-7-0, ಬೆಂಚು 0-4-6 0-2-3, ಮೆಟನಿ 0-1-6

A Golden leaf from the annals of NEW THEATRES will give you a pleasant surprise !

VIDYA PATHI

Featuring

Pahari Sanyal, Kannanbala, K C Dey, Leela Desai & others

Food to thinkers! Music to hearers & spectacle to seers!

Coming to S R Theatre, from 23 8-39

Some 500 years ago when King Shiva Singha, the young ruler of Mithila was celebrating the first spring festival of his reign, there assembled in the kingdom diverse people from far off and near. Festivity was in full swing within the palace, and in the adjoining bowers. On an occasion like this every soul was happy save one and he was no other than the Vidhushak, the court-jester who felt much perturbed because of his suspicion that his young and beautiful wife Chapala Devi was sweet on his faithfull servant Pitamber.

King Shiva Singh and his royal consort Lachmi Devi also participated in this merry making, and while roaming about from bower to bower, the King chanced to meet his poet friend Vidyapati, who had come all the way to Mithila to join in the celebration. Delighted beyond measure, the king lost no time in introducing him to Queen Lachmi, who found in this charming man the ideal of her heart.

The King entreated Vidyapathi to remain in the palace as his poet so that he might awaken the soul of the Queen with his poems and songs. Bidding adieu to his old blind servant Madhusudan and accompanied by the lovely Anuradha who was a silent worshipper of the poet all her life Vidyapathi left his native village for Mithila.

Time helped much to deepen the feelings of Queen Lachmi for Vidyapathi and she really began to adore the poet in her heart of hearts. The King realised this and he felt aggrieved, but never was bitter, for his love for Lachmi was ideal in greatness. Presently he had to leave for the battle field with a heavy heart as war broke out on the Frontier. He requested his friend Vidyapathi to look after his wife the queen. He trusted both of them.

As peace was in sight, the King thought of returning to Mithila and all the persuasion of his prime minister to keep him away from the influence of Vidyapati was of no avail. The Kings love for Queen Lachmi had not waned a bit, and with his usual gaity he went forth to greet the Queen, only to find that her love for Vidyapathi had but deepned during the period he was away in the battle field. It was too heavy a shock for the king to bear he fell ill. Reluctant as he was to wound the feelings of queen, who was the dearest object to him on earth, the king tried his best to maintain his outward gaity. This however, did not escape the notice of Queen Lachmi. She felt bitterly sorry for the King, although she was helpless, being torn between her love for the Poet and her sense of duty towards the King—her lord!

The ugly rumour, which the sublime love of Queen Lachmi gave rise to, told heavily upon Lachmi. She contemplated suicide. But she is rebuked by Anuradha for the cowardice, and asked her to be a silent lover, wherein lay the essence of true love. The King & Queen Lachmi both now prepared to offer their love at the feet Lord Vishnu.

In the meanwhile baffled in his attempts to do away with Vidyapathi, the prime minister, in whose opinion the martial spirit of the King and the country had considerably suffered through the teachings of Vidyapathi, again pressed the King to go to war, but the King did not agree. Then the prime minister approached Queen Lachmi to say that it was she who stood between the King and his Kingly duties and it was she who could save the country from utter ruin. He offered her a cup of poison as the way out, which the queen accepted and drunk.

The supreme Puja then started. Devadasi was dancing, Madhusudan was singing. The king, the poet and Anuradha all come to worship. The Queen stood entranced in front of the image of Vishnu. The king asked the poet not to disturb meditation but the poet saw that the King was breathing it, his heart was failing! **What happned next?**

ನ್ಯೂ ಥಿಯೇಟರಿನವರ ಚರಿತ್ರೆಯಲ್ಲಿ ಬಂಗಾರದ ಪುಟವೊಂದು ನಿಮ್ಮನ್ನು ಆನಂದ ಸಾಗರದಲ್ಲಿ ತೇಲಾಡಿಸಲಿದೆ!

ವಿದ್ಯಾಪತಿ

ಪಹರಿ ಸನ್ಯಾಲ್, ಕನನ್‌ಬಾಲಾ, ಕೆ ಸಿ ಡೇ, ಲೀಲಾ ದೇಸಾಯಿ ಮೊದಲಾದವರೇ ನಟಿಸಿರುವ ಉತ್ಕೃಷ್ಟ ಚಿತ್ರ!

ಜ್ಞಾನಿಗಳಿಗೆ ವಿಚಾರದ ಕೊಯಿಲ! ಕೇಳುವವರಿಗೆ ಕರ್ಣಾನಂದಕರ ಸಂಗೀತ!! ನೋಡುವವರಿಗೆ ಆನಂದದಾಯಕ ನೋಟ!!!

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ 23-8 39ರಿಂದ

500 ವರ ಷಗಳ ಹಿಂದಿನ ಮಾತು ಮಿಥಿಲನಗರದ ರಾಜನಾದ ಶಿವಸಿಂಗನು ತನ್ನ ರಾಜ್ಯಭಾರದ ಪ್ರಥಮ ವಸಂತೋತ್ಸವವನ್ನು ಆಚರಿಸುತ್ತಲಿದ್ದನು ದೇಶವಿದೇಶಗಳಿಂದ ನಾನಾ ಬಗೆಯ ಪಂಡಿತರು, ವಿದ್ಯಾವಂತರು ನೆರೆದಿದ್ದರು. ರಾಜನು ರಾಣಿ ಲಕ್ಷ್ಮಿಯೊಂದಿಗೆ ಅಲ್ಲಲ್ಲಿ ತಿರುಗಾಡುತ್ತಲಿದ್ದನು. ಎಲ್ಲರೂ ಸಂತಸಗೊಂಡಿದ್ದರು. ರಾಜಸ್ಥಾನದ ವಿದೂಷಕನ ಮಾತ್ರ ಖಿನ್ನವದನನಾಗಿದ್ದನು. ಕಾರಣ, ಅವನ ಹೆಂಡತಿ ಸುಂದರಿಯೂ ನವ ಯುವತಿಯೂ ಆದ ಚಪಲಳು ಸೇವಕ ಪೀತಾಂಬರನಲ್ಲಿ ಮೋಹಗೊಂಡಿರಬೇಕೆಂಬ ಶಂಕೆಯು ಅವನನ್ನು ಬಾಧಿಸುತ್ತಲಿತ್ತು.

ರಾಜ ಮತ್ತು ರಾಣಿಯು ಅಲ್ಲಲ್ಲಿ ಸಂಚರಿಸ ತ್ತಾ ಇರುವಾಗ ರಾಜನು ತನ್ನ ಪೂರ್ವ ಪರಿಚಿತ ಕವಿ ವಿದ್ಯಾಪತಿಯನ್ನು ನೋಡುವನು ಈ ಉತ್ಸವದಲ್ಲಿ ಭಾಗವಹಿಸಲು ಅಷ್ಟು ದೂರದಿಂದ ಅರಮನೆಗೆ ಬಂದಿದ್ದನವನು. ರಾಜನು ಅತಿ ಹರ್ಷಗೊಂಡು ಅವನನ್ನು ಉಪಚರಿಸುತ್ತ ರಾಣಿ ಲಕ್ಷ್ಮಿಗೆ ಪರಿಚಯಮಾಡಿಕೊಡುವನು ರಾಣಿಯು ಅವನನ್ನು ನೋಡಿದೊಡನೆಯೇ ಅವಳ ಹೃದಯದಲ್ಲಿ ಪ್ರೇಮ ಮೊಳೆಯುವುದು

ರಾಣಿಯ ಮನಸ್ಸಂತೋಷಕ್ಕಾಗಿ ಕವನಗಳನ್ನು ಕಟ್ಟಿ ಹಾಡುತ್ತಾ ತನ್ನ ಅರಮನೆ ಯಲ್ಲಿಯೇ ಇರಬೇಕೆಂದು ವಿದ್ಯಾಪತಿಯನ್ನು ರಾಜನು ಕೇಳಿಕೊಳ್ಳಲು, ವಿದ್ಯಾಪತಿಯು ತನ್ನ ಕುರುಡ ಸೇವಕ ಮಧುಸೂದನನಿಂದ ಬೀಳ್ಕೊಂಡು ತನ್ನನ್ನು ಬಾಲ್ಯದಿಂದಲೂ ಆರಾಧಿಸುತ್ತಲಿದ್ದ ಅನುರಾಧೆಯೊಡನೆ ಮಿಥಿಲೆಯಲ್ಲಿ ನೆಲಸಿದ್ದನು

ಸಮಯಸಂದಂತೆ, ರಾಣಿಯ ಹೃದಯವನ್ನು ವಿದ್ಯಾಪತಿಯ ಸ್ವರಮಾಧುರ್ಯವೂ ಮೇಧಾಶಕ್ತಿಯೂ ಸೂರೆಗೊಳ್ಳಲಾರಂಭಿಸಿತು. ರಭಸದಿಂದ ರಾಜನಿಗೆ ಇದು ತಿಳಿಯುವುದು ಹಾಗೂ ಬಹಳ ದುಃಖಿತನಾಗುವನು ಆದರೆ ಅವನು ಎಂದೂ ಸಿಡುಕಲಿಲ್ಲ ಯಾಕೆಂದರೆ ರಾಣಿ ಲಕ್ಷ್ಮಿಯಲ್ಲಿ ಅವನಿಗಿದ್ದ ಪ್ರೇಮದ ಆಳವು ಅಂತಹುದು. ಗಡಿನಾಡಿನಲ್ಲಿ ಯುದ್ಧ ಪ್ರಾರಂಭವಾಗುತ್ತಲೇ, ಇವನು ರಾಣಿಯ ಮೇಲ್ವಿಚಾರವನ್ನು ವಿದ್ಯಾಪತಿಗಿತ್ತು, ರಣರಂಗಕ್ಕೆ ಹೋಗುವನು. ಅವರಿಬ್ಬರ ಸದಾಚಾರದಲ್ಲಿ ಅವನಿಗೆ ನಂಬಿಕೆ ಇತ್ತು.

ಯುದ್ಧವು ಮುಗಿದೊಡನೆಯೇ ರಾಜನು ನಗರಿಗೆ ಮರಳುವನು ರಾಜನನ್ನು ವಿದ್ಯಾಪತಿಯ ಹಿಡಿತದಿಂದ ತಪ್ಪಿಸಬೇಕೆಂತಿದ್ದ ಪ್ರಧಾನಿಯ ಯೋಜನೆಯು ನಿಷ್ಫಲ ವಾಗುವುದು ತನ್ನ ಸ್ವಾಭಾವಿಕವಾದ ಸಡಗರದಿಂದ ರಾಣಿಯನ್ನು ನೋಡಲು ಧಾವಿಸಿ ಬರುವನು ನಗರಿಗೆ ಆದರೆ, ತಾನಿಲ್ಲದ ವೇಳೆಯಲ್ಲಿ ರಾಣಿಯ ಪ್ರೇಮವು ವಿದ್ಯಾಪತಿಯಲ್ಲಿ ಬಲವಾಗಿ ಬೇರೂರಿಕೊಂಡಿರುವುದೆಂಬುದನ್ನು ತಿಳಿಯುವನು. ರಾಜನ ಹೃದಯವು ಬಿರಿದಂತಾ ಗುವುದು. ಅವನು ಅಸ್ವಸ್ಥನಾಗುವನು. ರಾಣಿಯ ಮನಸ್ಸನ್ನು ನೋಯಿಸಲು ಮನಬಾರದೆ, ತನ್ನ ಬಹಿರಂಗ ನಡತೆಯನ್ನು ಮುಂಚಿನಂತೆಯೇ ಇರಗೊಳಿಸಲು ಬಹಳ ಪ್ರಯತ್ನಿಸು ವನು. ಇದು ರಾಣಿಗೂ ತಿಳಿಯಬರುವುದು ಅವಳು ಬಹಳ ದುಃಖಿತಳಾಗುವಳು. ಆದರೆ ಮಾಡುವದೇನು? ವಿದ್ಯಾಪತಿಯ ಮೇಲಣ ಅವಳ ಸ್ವರ್ಗೀಯ ಮೋಹವನ್ನು ಮಾತ್ರ ಅವಳು ಹೊಡೆದೋಡಿಸಲಾರದಾದಳು ಅವಳು ಇಕ್ಕಟ್ಟಿನ ಪ್ರಸಂಗಕ್ಕೆ ಬೀಳುವಳು. ದೈವವೆಂದೇ ನೆನೆಸಿಕೊಂಡಿದ್ದ ಅವಳ ಪತಿಯೋ? ಅಥವಾ ವಿದ್ಯಾಪತಿಯ ಕಲಾಪ್ರವೀಣತೆಯೊ?

ಇದರಿಂದ ಹಬ್ಬಿದ ದುರ್ಗಂಧದ ಸುದ್ದಿಯಿಂದ ರಾಣಿಯು ಜಿಗುಪ್ಸೆಗೊಂಡು ಆತ್ಮಹ ತ್ಯೆಯನ್ನು ಹವಣಿಸುತ್ತಿರುವಲ್ಲಿ, ಅನುರಾಧೆಯು ಅವಳಿಗೆ ವಿವೇಕವನ್ನು ಬೋಧಿಸುವಳು ಇದರಿಂದ ಸ್ವಲ್ಪ ಸಮಯ ಶಾಂತತೆಯು ನೆಲೆಗೊಳಿಸಿತು

ಪ್ರಧಾನಿಯು ರಾಜನನ್ನು ಯುದ್ಧಕ್ಕೆ ಹೋಗಲೇಬೇಕೆಂದು ಒತ್ತಾಯಿಸುವನು, ರಾಜನು ಒಲ್ಲೆನೆನ್ನುವನು ರಾಜನನ್ನೂ ರಾಜಧರ್ಮವನ್ನೂ ಬೇರ್ಪಡಿಸಲು ಮುಖ್ಯ ಕಾರ ಣವೇ ವಿದ್ಯಾಪತಿಯ ಪರಿಣಾಮವೆಂದು ಮೊದಲಿಂದ ಮನಗಂಡಿದ್ದ ಪ್ರಧಾನಿಯು, ರಾಜ ನನ್ನು ವಿದ್ಯಾಪತಿಯಿಂದ ಬೇರ್ಪಡಿಸಲು ಹಲವು ವಿಧದಿಂದ ಪ್ರಯತ್ನಿಸುವನು ನಿಷ್ಫಲ. ಕೊನೆಗೆ ರಾಣಿಲಕ್ಷ್ಮಿಯನ್ನು ಜರೆಯುವನು. ಈ ತರದ ರಾಜ್ಯದ ಅವ್ಯವಸ್ಥೆಗೆ ಅವಳೇ ಕಾರಣಭೂತಳೆಂದು. ದೇಶದ ಹಿತಕ್ಕಾಗಿ ಪ್ರಜೆಗಳ ಗೋಳಿನ ಪರಿಹಾರಕ್ಕಾಗಿ ವಿಷಪಾನ ಮಾಡಿ ಸಾಯಬೇಕೆಂದು ಮಂತ್ರಿಯು ರಾಣಿಗೆ ವಿಷವನ್ನು ಕೊಡುವನು. ರಾಣಿಯು ಸಂತೋಷದಿಂದ ಸ್ವೀಕರಿಸಿ ಪಾನಮಾಡುವಳು

ಇತ್ತ ದೇವಾಲಯದಲ್ಲಿ ಪೂಜೆಯು ನಡೆಯುತ್ತಿತ್ತು, ದೇವದಾಸಿಯು ನರ್ತನ ಮಾಡುತ್ತಿದ್ದಳು, ಮಧುಸೂದನನು ಹಾಡುತ್ತಿದ್ದನು, ರಾಜನೂ ವಿದ್ಯಾಪತಿಯೂ ಮತ್ತು ಅನುರಾಧೆ ಈ ಮೂವರು ದೇವಾಲಯಕ್ಕೆ ಬರುವರು. ವಿಷ್ಣುವಿನ ಪ್ರತಿಮೆಯ ಇದಿರು ರಾಣಿಲಕ್ಷ್ಮಿಯು ತಲ್ಲೀನಳಾಗಿ ಒರಗಿ ಕುಳಿತಿದ್ದಳು ರಾಜನು ರಾಣಿಯ ಧ್ಯಾನಕ್ಕೆ ಭಂಗ ತರಲಾಗದೆಂದು ವಿದ್ಯಾಪತಿಯೊಡನೆ ಹೇಳುವನು, ಹೀಗೆ ಹೇಳುತ್ತಿರುವಾಗಲೇ ರಾಜನ ಸ್ವರವು ಬೀಳುತ್ತಿದೆ ಅವನ ನಾಡಿಬಡಿತವು ಕುಗ್ಗುತ್ತಿದೆ ಎಂದು ವಿದ್ಯಾಪತಿಯು ತಿಳಿಯು ವನು ಮುಂದೇನು... ....?

ಕಂಠದಲ್ಲಿ ಬೈಬಲ್ಲು—ಕೈಯಲ್ಲಿ ಕತ್ತಿ

ವಚನ ಭ್ರಷ್ಟತೆಯೇ ಆಂಗ್ಲರ ಗಾಯಿತ್ರಿ

ಉಪ್ಪು ತಿಂದ ಮನೆಗೆ ಎರಡು ಬಗೆದ 'ನಮಕ್ ಹರಾಂ' ಮೀರ್‌ಜಾಫರ್.

ನವಾಬ್ ಸಿರಾಜುದ್ದೌಲನ ಸತ್ಯ ಮತ್ತು ಶಾಂತಿಪ್ರಿಯತೆ.

(ಲೇಖಕರು :—ಶ್ರೀ. ಮಿರ್ಜಾ ಅಜೀಜುಲ್ಲಾ ಬೇಗ್, M. A.)

೧೮೦ ವರ್ಷಗಳ ಕೆಳಗೆ ಬಂಗಾಳದ ಸ್ವತಂತ್ರ ನವಾಬನಾಗಿದ್ದ ಸಿರಾಜುದ್ದೌಲನು ಇಂಗ್ಲಿಷ್ ವ್ಯಾಪಾರಿಗಳ ಕುತಂತ್ರಕ್ಕೆ ಸಿಕ್ಕಿ ಬಿದ್ದು, ರಾಜ್ಯವನ್ನು ಕಳೆದುಕೊಂಡುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಈ ತಿಂಗಳ ೩ನೇ ತಾರೀಕಿನ ದಿನ ಸಿರಾಜುದ್ದೌಲನ ಸ್ಮೃತಿದಿನವು ಆಚರಿಸಲ್ಪಟ್ಟಿರುತ್ತದೆ. ಈ ಲೇಖನದಲ್ಲಿ ಇಂಗ್ಲಿಷ್ ವ್ಯಾಪಾರಿಗಳ ಮೋಸಕೃತ್ಯವು ಬಯಲಿಗೆ ಬೀಳುವುದು. [ಸಂ.

ಎಲ್ಲೆಲ್ಲಿಯೂ ನಿಶ್ಶಬ್ದ, ಮುರ್ಶಿದಾಬಾದಿನಲ್ಲಿ ಸ್ಮಶಾನದಂತಹ ಶಾಂತಿ. ಒಂದು ಆನೆಯ ಮೇಲೆ ಸಿರಾಜುದ್ದೌಲನ ಶವವು ತುಂಡುತುಂಡಾಗಿ ಮಾಡಲ್ಪಟ್ಟು, ಬೀದಿ ಬೀದಿಗಳಲ್ಲಿ ಮೆರವಣಿಗೆಯಾಗುತ್ತಿದೆ. ಏಕೆಂದರೆ, ಸಿರಾಜನ ಉಪ್ಪಿನಿಂದ ಬೆಳೆದ ನಮಕ್ ಹರಾಂ ದ್ರೋಹಿ ಮೀರ್ ಜಾಫರನಿಗೆ ಸಿರಾಜನು ಜೈಲಿನಲ್ಲಿರುವುದು ಸಹ ಸಹನೆ ಇರಲಿಲ್ಲ. ಜನತೆಯಲ್ಲಿ ಭಯಭೀತಿಗಳುಂಟಾಗಲೆಂದು ಆತನ ಶವವನ್ನೂ ಈ ರೀತಿ ಬೀದಿಗಳಲ್ಲಿ ತರಲಾಯಿತು. ಈ ರೀತಿ ಬಂಗಾಲದ ಕೊನೆಯ ಸ್ವಾಭಿಮಾನಿ ನವಾಬನ ಮರಣವು ಅವನ ರಾಜಧಾನಿಯಲ್ಲೇ ಆಯಿತು.

ಸಿರಾಜುದ್ದೌಲನು ಬಹಳ ದೂರದೃಷ್ಟಿಯ ರಾಜಕೀಯ ಜ್ಞಾನಿಯೂ, ಸತ್ಯಪ್ರಿಯನೂ ಆಗಿದ್ದನು. ಅಂತಹ ವೀರನ ಹೆಸರನ್ನು ಕೆಡಿಸುವ ದುರುದ್ದೇಶದಿಂದ ಇಂದು ಕಲ್ಕತ್ತೆಯ ನಾಗರಿಕರ ಎದೆ ಮೇಲೆ 'ಕಲ್ಕತ್ತೆಯ ಕತ್ತಲೆ ಕೋಣೆಯ ಸ್ಮಾರಕ'ವು ನಿಂತಿದೆ. ಚರಿತ್ರಕಾರರು ಈ ದುರ್ಘಟನೆಯು ನಡೆಯಲೇ ಇಲ್ಲವೆಂದು ಪ್ರಮಾಣಪೂರ್ವಕವಾಗಿ ತೋರಿಸಿದ್ದರೂ, ಭಾರತ ಸರಕಾರವು ಅದರ ಕಡೆಗೆ ಗಮನವನ್ನೇ ಕೊಟ್ಟಿರುವುದಿಲ್ಲ. ಇಂದು ಕಲ್ಕತ್ತೆ ಎಂದು ಕರೆಯಲ್ಪಡುತ್ತಿರುವ ನಗರಕ್ಕೆ ಮೊದಲು 'ಅಲೀ-ನಗರ'ವೆಂಬ ಹೆಸರಿತ್ತು. ನವಾಬನು ಜಗಳದ ಮೇಲೆ ಎಂದೂ ಆಸಕ್ತಿ ಇಟ್ಟವನಲ್ಲ. ಯಾವಾಗಲೂ ಶಾಂತಿ ಮತ್ತು ಪ್ರೀತಿಯ ಕಡೆಗೆ ಅವನ ಗಮನವು ಹೆಚ್ಚು ಆಕರ್ಷಿತವಾಗಿರುತ್ತಿತ್ತು. ಇಂಗ್ಲಿಷ್ ವ್ಯಾಪಾರಿಗಳು ತಲೆ ಎತ್ತುತ್ತಿದ್ದ ಸಮಯದಲ್ಲಿ ಸಿರಾಜನು ಸೈನ್ಯದೊಡನೆ ಅಲೀ ನಗರಕ್ಕೆ ಬಂದನು. ಆ ಸಮಯದಲ್ಲಿ ಇಂಗ್ಲಿಷರು ಹೆದರಿ ನವಾಬನೊಡನೆ ಅಲೀ ನಗರದ ಕರಾರನ್ನು ಮಾಡಿಕೊಂಡರು. ಅದರಂತೆ ಇಂಗ್ಲಿಷರು ನವಾಬನ ರಾಜ್ಯದಲ್ಲಿ ಎಂದಿಗೂ ಅಶಾಂತಿಯನ್ನೆಬ್ಬಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಈ ಸಮಯದಲ್ಲೇ ಇಂಗ್ಲಿಷರೂ, ಫ್ರೆಂಚರೂ ತಮ್ಮ ಬಲವನ್ನು ವೃದ್ಧಿಪಡಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದರು. ಇಂಗ್ಲಿಷರು ಚಂದ್ರನಗರವನ್ನು ಆಕ್ರಮಿಸಬೇಕೆಂದು ಹವಣಿಸುತ್ತಿದ್ದರು. ಅಲಿ-ನಗರದ ಸಂಧಿಯಾದ ಮೇಲೆ ನವಾಬನು ಪುನಃ ಮುರ್ಶಿದಾಬಾದಿಗೆ ಹೊರಟುಹೋದನು.

ಸಂಧಿಗಾಗಿ ನವಾಬನು ಆತುರದಿಂದೇನೂ ಇರಲಿಲ್ಲ. ಆದರೆ ತನ್ನ ಸೇನಾಧಿಪತಿಯಾದ ಮೀರ್‌ಜಾಫರನು ಶತ್ರುಪಕ್ಷದ ಕಡೆ ಸೇರಿಕೊಂಡನೆಂದು ತಿಳಿದುಬಂದುದರಿಂದ ಸಂಧಿಗೆ ಒಪ್ಪಬೇಕಾಯಿತು. ಇಂಗ್ಲಿಷರಿಗೇನಾದರೂ ತಮಗೆ ಜಯವಾಗುವುದೆಂದು ತಿಳಿದಿದ್ದರೆ ಅವರು ಎಂದಿಗೂ ಸಂಧಿಗೆ ಒಪ್ಪುತ್ತಿರಲಿಲ್ಲ. ಇದರಲ್ಲಿ ಕ್ಲೈವ್ ಮತ್ತು ವಾಟ್ಸನ್ ಇಬ್ಬರಿಗೂ ಮತಭೇದವಿತ್ತು. ವಾಟ್ಸನನಿಗೆ ಜಯದಲ್ಲಿ ನಂಬಿಕೆ ಇತ್ತು. ಕ್ಲೈವನು ಇದರಲ್ಲಿ ಸಂಶಯದಿಂದಿದ್ದು ಕುಟಿಲ ನೀತಿಯಿಂದಲೇ ಕಾರ್ಯಸಾಧನೆಮಾಡಬೇಕೆಂದೇ ಹಟಹಿಡಿದನು. ಈ ಕಾರಣದಿಂದಲೇ ಮೀರ್‌ಜಾಫರನನ್ನು ಬಂಗಾಳದ ನವಾಬನನ್ನಾಗಿ ಮಾಡುತ್ತೇನೆಂಬ ಪ್ರಲೋಭನವನ್ನು ತೋರಿಸಿದನು. ಇದರಲ್ಲಿ ಉಮಾಚಂದನ ಸಹಾಯವು ದೊರೆತು, ಇಂಗ್ಲಿಷರ ಕಾರ್ಯದಲ್ಲಿ ಸಿದ್ಧಿಯುಂಟಾಯಿತು.

ಅಲಿನಗರದ ಸಂಧಿಯಾಗಿ ಒಂದು ವಾರ ಸಹ ಆಗಿರಲಿಲ್ಲ. ಆಗಲೇ ಇಂಗ್ಲೀಷಿನವರು ಚಂದ್ರನಗರವನ್ನು ಆಕ್ರಮಿಸುವುದಕ್ಕೆ ಸಿದ್ಧತೆಗಳನ್ನು ಮಾಡುತ್ತಿದ್ದರು. ಇವರ ವಿಚಾರದಲ್ಲಿ ಸಿರಾಜನ ಅಭಿಪ್ರಾಯವನ್ನು ತಿಳಿಯುವ ಉದ್ದೇಶದಿಂದ ಅವರು ಅವನಿಗೆ ಪತ್ರಬರೆಯಲು ಅವನು "ಇಂಗ್ಲಿಷಿನವರಂತೆಯೇ ಫ್ರೆಂಚರೂ ಸಹ ನನ್ನ ಪ್ರಜೆಗಳೇ. ನನ್ನ ಆಶ್ರಿತರಿಗೆ ನಾನು ಎಂದಿಗೂ ತೊಂದರೆಯನ್ನುಂಟುಮಾಡುವವನಲ್ಲ.' ಎಂದುತ್ತರ ಕೊಡಲು ಇಂಗ್ಲಿಷರಿಗೆ ನಿರಾಶೆಯಾಗಿ ಒಳಗೊಳಗೇ ಫ್ರೆಂಚರ ಆಕ್ರಮಣದ ಬಗ್ಗೆ ಸಿದ್ಧತೆಯನ್ನು ಮಾಡುತ್ತಲೇ ಇದ್ದರು.

ಕಲ್ಕತ್ತವನ್ನು ಬಿಟ್ಟು ನವಾಬ ಸಿರಾಜುದ್ದೌಲನು ಮುರ್ಶಿದಾಬಾದಿಗೆ ಇನ್ನೂ ಹೋಗೇ ಇರಲಿಲ್ಲ. ಆಗಲೇ ಇಂಗ್ಲಿಷರ ಆಕ್ರಮಣದ ಸುದ್ದಿಯು ತಿಳಿದುಬಂತು. ಆಗ ವಾಟ್ಸನನು ನವಾಬನ ಜೊತೆಯಲ್ಲಿಯೇ ಇದ್ದನೆಂದು ಓರ್ಮನ್ ಎಂಬ ಲೇಖಕನು ಬರೆದಿದ್ದಾನೆ. ಅವನೂ ಉಮಾಚಂದನೂ, ಇಂಗ್ಲಿಷರು ಎಂದಿಗೂ ಹಾಗೆ ಮಾಡುವುದಿಲ್ಲವೆಂದು ನವಾಬನಿಗೆ ಭರವಸೆ ಕೊಟ್ಟರು. ಉಮಾಚಂದನಂತೂ "ಪ್ರಪಂಚದಲ್ಲಿ ಇಂಗ್ಲಿಷಿನವರನ್ನು ಬಿಟ್ಟು ನಿಜಹೇಳುವವರು ಬೇರೆ ಯಾರೂ ಇಲ್ಲ" ಎಂದು ಹೇಳಿದನು.

ಅವರೂ ನವಾಬನಿಗೆ ಸಂತೋಷವಾಗದೆ ಮುರ್ಶಿದಾಬಾದಿಗೆ ಹೋಗಿ ಈ ರೀತಿ ಪತ್ರಬರೆದು ಕಳುಹಿಸಿದನು. "ಎಲ್ಲ ಜಗಳಗಳನ್ನು ಪರಿಹರಿಸುವ ಉದ್ದೇಶದಿಂದಲೇ ನಾನು ನಿಮಗೆ ವ್ಯಾಪಾರದ ಅಧಿಕಾರವನ್ನೂ ಕೊಟ್ಟು ಸಂಧಿಮಾಡಿಕೊಂಡೆನು. ನೀವೂ ಸಹ ಅಶಾಂತಿಯನ್ನುಂಟುಮಾಡುವುದಿಲ್ಲವೆಂದು ಮಾತುಕೊಟ್ಟಿದ್ದಿರಿ. ಆದರೆ ಹುಬ್ಬಿ ಮೇಲೆ ದಂಡೆತ್ತಿ ಫ್ರೆಂಚರ ಕ್ಷೇತ್ರವನ್ನೂ ಆಕ್ರಮಿಸುವಿರೆಂಬುದಾಗಿ ಕೇಳುತ್ತೇನೆ. ತೈಮೂರನ ಕಾಲದಿಂದ ಇದುವರೆಗೂ ಫರಂಗಿಯವರು ರಾಜ್ಯದಲ್ಲಿ ಹೊಡೆದಾಡಿಲ್ಲ. ಒಂದು ವೇಳೆ ನೀವು ಜಗಳಕ್ಕೆ ಆರಂಭಿಸಿದರೆ, ನಾನೇನುಮಾಡುವೆನೆಂಬುದನ್ನೂ ನೀವು ಬಲ್ಲಿರಿ. ಒಬ್ಬ ರಾಜನ ಕರ್ತವ್ಯದ ದೃಷ್ಟಿಯಿಂದ ಅವನ ಮಾನ, ಪ್ರತಿಷ್ಠೆಗಳ ರಕ್ಷಣೆಗಾಗಿ, ಫ್ರೆಂಚರಿಗೆ ಸಹಾಯಮಾಡುವುದು ನನ್ನ ಕರ್ತವ್ಯ. ಮರಾಟೆಯವರೂ ಸಹ ಬಹಳ ಬಂಡಾಯ ಮಾಡಿದರೂ, ಸಂಧಿಯಾದ ಮೇಲೆ ತಮ್ಮ ಪ್ರತಿಜ್ಞೆಗೆ ವಿರೋಧವಾಗಿ ನಡೆದಿಲ್ಲ. ಮುಂದೆಯೂ ನಡೆಯಲಾರರು. ಧರ್ಮ ಸಾಕ್ಷಿಯಾಗಿ ಆದ ಸಂಧಿಯನ್ನು ಮುರಿಯುವುದು ಮಹಾಪರಾಧವು ಎಚ್ಚರಿಕೆ ಇರಲಿ, ನಮಗೆ ಕದನ ಬೇಡ, ಆಡಿದ ಮಾತಿಗೆ ವಿರೋಧವಾಗಿ ನಡೆಯುವನಲ್ಲ ನಾನು, ಎಚ್ಚರಿಕೆ '

ಮಾರನೇ ದಿನ ಮತ್ತೊಂದು ಪತ್ರದಲ್ಲಿ ಈ ರೀತಿ ಬರೆದನು. "ನಿನ್ನೆ ಬರೆದ ಪತ್ರ ಮುಟ್ಟಿರಬಹುದು. ನಂತರ ಒಬ್ಬ ಫ್ರೆಂಚ್ ದೂತನು ನನ್ನ ಬಳಿ ಬಂದು ನಿಮ್ಮ 1-5 ಯುದ್ಧದ ಹಡಗುಗಳು ಬಂದಿರುವುದಾಗಿಯೂ ಇನ್ನೂ ಅನೇಕ ಬರುವುದಾಗಿಯೂ ತಿಳಿಸಿದನು. ಚಂದ್ರ ನಗರವನ್ನು ಆಕ್ರಮಿಸುವುದು ಮಾತ್ರವಲ್ಲದೆ, ಮಳೆಗಾಲ ಕಳೆದ ಮೇಲೆ ನೀವು ಮುರ್ಶಿದಾಬಾದಿನ ಕಡೆಗೆ ಸಹ ಬರುವುದಾಗಿ ವರ್ತಮಾನವಿದೆ. ಇದು ವಿರೋಧಿತ ವ್ಯವಹಾರವೇ? ಉತ್ತಮರಾದವರಿಗೆ ಕೀರ್ತಿ ಬರುವ ಕೆಲಸವೇ ಇದು? ಸಂಧಾನವನ್ನು ಪಾಲಿಸಬೇಕೆಂದಿದ್ದರೆ ಕೂಡಲೆ ಹಿಂದಿರುಗಿ. ಮರಾಟೆಯವರಿಗೆ ಬೈಬಲ್ಲೇನು ಗೊತ್ತು? ಅದರೂ ಅವರು ವಚನ ಭ್ರಷ್ಟರಲ್ಲ. ಬೈಬಲ್ 'ಧರ್ಮ, ಪರಮಾತ್ಮನ ಸಾಕ್ಷಿಯಾಗಿ ಮತ್ತು ನಿಮ್ಮ ಏಸು ಪ್ರಭುವಿನ ಸಾಕ್ಷಿ ಸಂಧಿಮಾಡಿಕೊಂಡಿರುವಿರಿ. ಈಗ ಅದನ್ನೂ ಪೂರ್ತಿಮಾಡದೇ ಇರುವಿರಾ?"

ವಾಟ್ಸನನು ಇದಕ್ಕೆ ಈ ರೀತಿ ಉತ್ತರವಿತ್ತನು "ಫ್ರೆಂಚರ ಮೇಲೆ ಬೀಳುವುದು ನಿಮಗೆ ಒಪ್ಪಿಗೆ ಇಲ್ಲದಿದ್ದಲ್ಲಿ, ನಾವು ಅದನ್ನು ನಿಲ್ಲಿಸುವೆವು. ಫ್ರೆಂಚರೊಡನೆ ಸಂಧಿಯಾದರೆ ನೀವೇ ಅದಕ್ಕೆ ಜಾಮೀನು ಆಗಬೇಕು. ದೇವರ ಹೇಳಿನಾಣೆ, ನಾವು ಸತ್ಯವನ್ನು ಬಿಟ್ಟು ನಡೆಯುವವರಲ್ಲ." ಇದರಲ್ಲಿಯೂ ಸಿರಾಜನಿಗೆ ನಂಬಿಕೆಯಿಲ್ಲದೆ ಈ ರೀತಿ ಬರೆದನು. "ನಿಮ್ಮ ಪತ್ರ ಬಂತು. ನಿಮ್ಮಿಬ್ಬರ ಜಗಳದಿಂದ ನನ್ನ ಪ್ರಜೆಗಳಿಗೆ ತೊಂದರೆಯಾಗುತ್ತದೆ ಪ್ರಜಾರಕ್ಷಣೆಗಾಗಿ ನಾನು ಅಲ್ಲಲ್ಲೇ ಸೈನ್ಯವನ್ನಿಟ್ಟಿರುವೆನು. ಈ ಪತ್ರ ಮುಟ್ಟಿದ ಕೂಡಲೆ, ನೀವು ಚಂದ್ರನಗರದ ಸುದ್ದಿಯನ್ನು ಮರೆತು ಬಿಟ್ಟಿರುವಿರೆಂದು ಕೇಳಿ ನನಗೆ ಆನಂದವಾಗಿದೆ". ಮುಂದುವರಿಸುತ್ತ ನವಾಬನು ಅದೇ ಪತ್ರದಲ್ಲಿ ಈ ರೀತಿ ಬರೆದನು. "ದೆಹಲಿಯಿಂದ ಬಾದಶಹನು ಬಂಗಾಳದ ಮೇಲೆ ದಂಡೆತ್ತಿ ಬರುವುದಾಗಿ ವರ್ತಮಾನ ಬಂದಿದೆ. ಆದುದರಿಂದ ನಾನು ಪಾಟ್ನದ ಕಡೆಗೆ ಹೋಗುವೆನು. ಈ ಸಮಯದಲ್ಲಿ ಇಂಗ್ಲಿಷರು ನನಗೆ ಸಹಾಯಮಾಡಿದರೆ ನಾನು 1 ಲಕ್ಷ ರೂ. ಗಳನ್ನು ಕೊಡುವೆನು."

ವಾಸ್ತವವಾಗಿ ನವಾಬನಿಗೆ ಇಂಗ್ಲಿಷ್ ಸೈನ್ಯದ ಸಹಾಯದ ಅಗತ್ಯವಿರಲಿಲ್ಲ. ಆದರೆ ಹೇಗಾದರೂ ಮಾಡಿ ಇಂಗ್ಲಿಷ್ ಸೈನ್ಯವು ಅತ್ತಿತ್ತ ಚದರಿ ಹೋಗುವಂತೆ ಮಾಡಿದರೆ ಬಂಗಾಳದಲ್ಲಿ ಅಶಾಂತಿಯು ತಪ್ಪುವುದೆಂದು ಅವನು ಈ ರೀತಿ ಬರೆದನು. ಆದರೆ ಇಂಗ್ಲಿಷರು ಇದನ್ನು ಒಪ್ಪಲಿಲ್ಲ ವಾಟ್ಸನನು ಈ ರೀತಿಬರೆದನು "ಚಂದ್ರನಗರದಲ್ಲಿ ಫ್ರೆಂಚರ ಅಪಾರ ಸೈನ್ಯವಿದೆ. ಇಂತಹ ಸ್ಥಿತಿಯಲ್ಲಿ, ನಮ್ಮ ಸೈನ್ಯವು ಬಂಗಾಳವನ್ನು ಬಿಡುವುದು ಉಚಿತವಲ್ಲ. ಆದರೆ ನೀವು ನಮಗೆ ಸಹಾಯ ಮಾಡುವುದಾದರೆ ಮೊದಲು ಫ್ರೆಂಚರನ್ನು ಗೆದ್ದು ನಂತರ ನಿಮಗೆ ಸಹಾಯಮಾಡುವೆವು." ನವಾಬನು ಇದಕ್ಕೇನೂ ಉತ್ತರವನ್ನೇ ಕೊಡಲಿಲ್ಲ.

ಇಂಗ್ಲಿಷರು ಯಾವ ರೀತಿ ಅಲಿನಗರದ ಸಂಧಿಯನ್ನು ಮುರಿದರು ಯಾವರೀತಿ ಮೀರ್‌ಜಾಫರ್ ಮತ್ತು ಉಮಾಚಂದರ ವಿಶ್ವಾಸಘಾತುಕ ನೀತಿಯಿಂದ, ಸಿರಾಜುದ್ದೌಲನನ್ನು ಸಿಂಹಾಸನದಿಂದಿಳಿಸಿದರು. ಇವು ಯಾರಿಗೂ ತಿಳಿಯದೇ ಇಲ್ಲ. ಸಿರಾಜುದ್ದೌಲ ಮತ್ತು ಇಂಗ್ಲಿಷ್ ವ್ಯಾಪಾರಿಗಳ ನಡುವೆ ನಡೆದ ಪತ್ರವ್ಯವಹಾರದಿಂದಲೇ ಸಿರಾಜುದ್ದೌಲನು ಯಾವ ರೀತಿ ಭಾರತವನ್ನು ವಿದೇಶೀಯರಿಂದ ಉಳಿಸಿಕೊಳ್ಳ ಬಯಸುತ್ತಿದ್ದನು, ತನ್ನ ಪ್ರಜೆಗಳ ಹಿತ ಚಿಂತನೆಯಲ್ಲಿ ಎಷ್ಟು ಕಾತರನಾಗಿದ್ದನೆಂಬುದು ಗೊತ್ತಾಗುವುದು,

Degrees: Books: Medicines.

Free H L M. S. H M B H. M D etc Free Homeo Ayur-Unani-Naturo degrees, by post also—Practioners also get soons Homeo Materiamedica, Rs. 5 Homeo-Practice book Rs 1 Insanity Cure Pills Rs. 10 Enclose 2 annas stamps —

Principal, Indian Homeopathic Institute and Society (Govt Regd)
P O MAHIVA, (Kallurvar Dt. India

ಸೌಭಾಗ್ಯಸಿದ್ಧಿ ತಾಯಿತ

ದೇಹಸಂಪತ್ತು, ಕುಟುಂಬದ ಸಮೃದ್ಧಿ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟು ವ್ಯವಹಾರದಲ್ಲಿ ಗೆಲುವು, ದುರದೃಷ್ಟಗಳ ದುಷ್ಪೀಡೆ ನಿವಾರಣೆ ಇತರ ಸಮಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ ರೂ. 2-8-0. ಅ. ವಿ. 0-7-0
ಪ್ರಸ್ಪೆಕ್ಟಸ್, ಪತ್ರವ್ಯವಹಾರ ಇಂಗ್ಲೀಷಿನಲ್ಲೇ,

Hanuman Ahsramam,
Tuntam, S. India.

ಶ್ರೀಮಾನ್ ಕಾಡಿಪಟ್ಟಣ ಚಂದು ಎ. ಮಾಸ್ಟರ್.

ಇವರು ಈಗ ಸುಮಾರು ನಾಲ್ವತ್ತು ವರುಷಗಳ ಮೊದಲು ಮುಂಬಾಯಿಯ ಗುಜರಾಥಿ ಭಾಷೆಯ ವೃತ್ತಪತ್ರಿಕೆಗಳಲ್ಲಿ ಬರುತ್ತಿದ್ದ ವಿಶೇಷ ವರ್ತಮಾನ, ಸಮಾಜ ಸುಧಾರಣಾದಿ ವಿಷಯಗಳನ್ನು ಕನ್ನಡಕ್ಕೆ ಭಾಷಾಂತರಿಸಿ, ಶಿಲಾ ಮುದ್ರಣ (Lithography) ಗೈದು ಕನ್ನಡ ಓದುಗರಿಗೆ ಕೊಡುತ್ತಲೂ, ಓದುಗರಲ್ಲದ ಜಾತಿ ಮತ್ತು ದೇಶಬಾಂಧವರನ್ನು ಒಟ್ಟುಗೂಡಿಸಿ ತುಳುವಿನಲ್ಲಿ ತಿಳಿಯಪಡಿಸುತ್ತಲೂ ಪ್ರಚಾರ ಗೈಯುತ್ತಲಿದ್ದರು. ಸಂ 1902ನೇ ಇಸ್ವಿಯಲ್ಲಿ ಜನ್ಮವೆತ್ತಿರುವ ಮೊಗವೀರ ವ್ಯವಸ್ಥಾಪಕ ಮಂಡಳಿಯ ಸ್ಥಾಪಕರಾಗಿರುತ್ತಾರೆಂದು ಮಂಡಳಿಯ ವಾರ್ಷಿಕ ವರದಿ ಹಸ್ತ ಮತ್ತು ವೃತ್ತ ಪತ್ರಿಕೆಗಳಲ್ಲೂ ಪ್ರಸಿದ್ಧಿಯಾಗಿರುತ್ತದೆ. ಮೊಗವೀರ ಸಮಾಜದಲ್ಲಿ, ಸಮಾಜೋನ್ನತಿಯ ಕಾರ್ಯವನ್ನು ಸಾಮೂಹಿಕವಾಗಿ ಸಂಘಟನಾರೀತಿಯಲ್ಲಿ ಸಾಧಿಸಿಕೊಳ್ಳುವ ಸಂಘಶಕ್ತಿಯ ಅರಿವನ್ನು ಉಂಟುಮಾಡಿದವರೂ, ಮೊಗವೀರ ಸಮಾಜದ ಉನ್ನತಾಭಿವೃದ್ಧಿಗಾಗಿ ತನ್ನ ಅನುಭವವನ್ನು ಕಾರ್ಯರೂಪದಲ್ಲಿ ವಿನಿಯೋಗಿಸಿದ ಸ್ವಸಮಾಜದವರ ಪೈಕಿ ಪ್ರಥಮ ಪುರುಷರೂ, ಮೊ. ವ್ಯ. ಮಂಡಳಿಯ ಧ್ಯೇಯ ಪರಿಶ್ರಮೋಪಯುಕ್ತ ಕಾರ್ಯಕಲಾಪದಲ್ಲಿ ಪ್ರಥಮಸ್ಥಾನ ಪಡೆದವರೂ ಆಗಿರುತ್ತಾರೆ. ಇವರು ತನ್ನ 66ನೇ ವಯಸ್ಸಿನಲ್ಲಿ ಉದ್ಯೋಗದಿಂದ ನಿವೃತ್ತರಾಗಿ ಸ್ವಂತ ಊರಿಗೆ ಹೋಗುವ ಸಂದರ್ಭದಲ್ಲಿ ಇವರ ವಿಷಯವಾಗಿ ಇವರ ಭಾವಚಿತ್ರ ಸಮೇತ ಬೊಂಬಾಯಿ ಕ್ರೋನಿಕಲ್ ಪತ್ರಿಕೆಯ ತಾ 2-7-39ನೇ ರವಿವಾರ ಸಂಚಿಕೆಯಲ್ಲಿ ಈ ಕೆಳಗಣ ವಿವರದಂತೆ ಪ್ರಕಟಿಸಲ್ಪಟ್ಟಿರುತ್ತದೆ

"ಮೊಗವೀರ ವ್ಯವಸ್ಥಾಪಕ ಮಂಡಳಿಯ ಸ್ಥಾಪಕರಲ್ಲೊಬ್ಬರೂ ಕಾರ್ಯದರ್ಶಿಗಳಾಗಿದ್ದವರಲ್ಲಿ ಓರ್ವರೂ ಆದ ಶ್ರೀ. ಚಂದು ಎ. ಮಾಸ್ಟರ್

ಇವರು ಸಂ 1873ನೇ ಇಸ್ವಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಡಿಪಟ್ಟಣವೆಂಬ ಸಣ್ಣ ಹಳ್ಳಿಯಲ್ಲಿ ಮೊಗವೀರ ಸಮಾಜದ ಒಂದು ಬಡ ಕುಟುಂಬದಲ್ಲಿ ಜನ್ಮತಾಳಿದರು. ಶ್ರೀ. ಮಾಸ್ಟರ್ ತನ್ನ 12ನೇ ಪ್ರಾಯದಲ್ಲಿ ಪತ್ತೆಮಾರು ಮೂಲಕ ಮುಂಬಾಯಿಗೆ ಬಂದು ತನ್ನ ಸ್ಥಿರ ಪ್ರಯತ್ನದಿಂದ ಗುಜರಾಥಿ ಓದು ಬರಹ ಕಲಿತು ಗುಜರಾಥಿ ಭಾಷೆಯ ಒಳ್ಳೇ ಅನುಭವವನ್ನು ಪಡೆದರು! ಬಡಸ್ಥಿತಿಯ ಮತ್ತು ಅವಿದ್ಯಾವಂತರಾಗಿರುವ ತನ್ನ ಸಮಾಜವನ್ನು ಉತ್ತೀರ್ಣತೆಗೆ ತರಬೇಕೆಂಬ ಇವರ ಉತ್ಸಾಹವು ಸಂ 1902ನೇ ಇಸ್ವಿಯಲ್ಲಿ ಮುಂಬಾಯಿಯಲ್ಲಿರುವ ಮೊಗವೀರರ ವಿದ್ಯಾಪ್ರಸಾರಕ್ಕಾಗಿ ಒಂದು ಫಂಡನ್ನು ಸ್ಥಾಪಿಸುವಂತೆ ಪ್ರೇರೇಪಿಸಿತು.

ಸದರೀ ಫಂಡನ್ನು ನಡೆಸಿಕೊಂಡು ಬಂದ "ಮೊಗವೀರ ವ್ಯವಸ್ಥಾಪಕ ಮಂಡಳಿ" ಎಂದು ರಿಜಿಸ್ಟ್ರಿಯಿಂದ ಈಗ ಈ ಪಟ್ಟಣದಲ್ಲಿ ದೊಡ್ಡದಾದ ಒಂದು ಧರ್ಮಾರ್ಥ ರಾತ್ರಿ ಶಾಲೆಯನ್ನೂ, ಧರ್ಮಾರ್ಥ ವಾಚನಾಲಯ ಮತ್ತು ಪುಸ್ತಕ ಭಂಡಾರವನ್ನೂ ನಡಿಸಿಕೊಂಡುಬರುತ್ತದೆ. ಶ್ರೀ ಮಾಸ್ಟರ್ ಕಳೆದ ಈ ಎಲ್ಲಾ ವರುಷಗಳಲ್ಲಿ ಈ ಸಂಸ್ಥೆಯ ಒಬ್ಬ ಪ್ರಮುಖ ಕಾರ್ಯಕರ್ತರೂ, ಉಪದೇಶಕರೂ ಆಗಿದ್ದುದರಿಂದ ಇವರ ನಿಸ್ವಾರ್ಥ ಸೇವೆಯ ಸ್ಮರಣಾರ್ಥವಾಗಿ ಸಂ 1927ನೇ ಇಸವಿಯಲ್ಲಿ ಜರಗಿದ ಮಂಡಳಿಯ ರಜತೋತ್ಸವ ಸಮಾರಂಭದಲ್ಲಿ ಇವರಿಗೆ ಚಿನ್ನದ ಪದಕವನ್ನೂ, ಬೆಳ್ಳಿಯ ಫೋಟೋ ಫ್ರೇಮನ್ನೂ ಉಚಿತವಾಗಿ ಕೊಡಲಾಗಿದೆ.

ಸಂ. 1935ನೇ ಇಸವಿಯಲ್ಲಿ ಮಂಡಳಿಯು ಐದು ಮಂದಿ ಪಾರುಪತ್ಯಗಾರರನ್ನು ನೇಮಿಸಿದಾಗ ಶ್ರೀ ಮಾಸ್ಟರ್ ಪ್ರಥಮಸ್ಥಾನಕ್ಕೆ ಚುನಾಯಿಸಲ್ಪಟ್ಟರು. ಇದಲ್ಲದೆ ಉತ್ಸಾಹ ಸಮಾಜಸೇವೆಯ ಕಾರ್ಯದಿಂದ ನಿವೃತ್ತರಾಗುವಾಗ ಮಂಡಳಿಯ 36ನೇ ವಾರ್ಷಿಕೋತ್ಸವದಲ್ಲಿ ಇವರಿಗೆ ಬೆಳ್ಳಿಯ ಕಾಸ್ಕೆಟ್‌ನಲ್ಲಿ ಮಾನಪತ್ರವನ್ನು ಅರ್ಪಿಸಲಾಯಿತು"

ಮಂಡಳಿಯ ಮಾನಪತ್ರಕ್ಕೆ ಉತ್ತರವನ್ನು ಶ್ರೀ ಮಾಸ್ಟರ್ ತನ್ನ ಸಂಕ್ಷಿಪ್ತ ಜೀವನಚರಿತ್ರೆಯನ್ನು ಹೇಳುತ್ತಾ "ಮಂಡಳಿ ಸ್ಥಾಪನೆ ಸಂಬಂಧ ಈ ಮೊದಲಿನ ಆಡಳಿತ ಕಮಿಟಿಯವರು ಸತ್ಯಶೋಧನೆಗೈದು ಮಂಡಳಿಯ ವಾರ್ಷಿಕ ವರದಿ ಹಸ್ತಪತ್ರಾದಿಗಳಲ್ಲಿ ನಮೂದಿಸಿ ರಿಕಾರ್ಡುಗೈದಿರುತ್ತಾರೆ ಅದರಲ್ಲಿ ಯಥಾರ್ಥತೆಯುಂಟು, ಸತ್ಯ ಉಂಟು" ಇತ್ಯಾದಿ ಬರಹ ಮೂಲಕ ಇತ್ತು, ಮಂಡಳಿಯ ಉಪಕಾರ ಸ್ಮರಣೆಗೈದಿರುತ್ತಾರೆ

ಶ್ರೀ. ಮಾಸ್ಟರರನ್ನು—ಮೊಗವೀರ ಟೀಚರ್ಸ್ ಓನರ್ಸ್ ಮತ್ತು ಡ್ರೈವರ್ಸ್, ಮೊಗವೀರ ಯುವಕಸಂಘ, ಫಲಿಮಾರು ಲಾಗಾಯ್ತು ಕೈಪುಂಜಾಲು ವರೆಗಿನ ಬಾಕ್ಸರ್‌ಗಳು ಹೋಬಳಿಯವರೂ ತಂತಮ್ಮ ಸಭೆಗೆ ಆಮಂತ್ರಿಸಿ, ಮೊಗವೀರ ಸಮಾಜದ ಉನ್ನತಿಗಾಗಿ ಎಸಗಿದ ಸಮಾಜಸೇವೆಯನ್ನು ಕೊಂಡಾಡಿ ಪುಷ್ಪಹಾರ, ತಾಯಿಯ ಶಾಸಕ ಫಲಪುಷ್ಪಾದಿಗಳಿಂದಲೂ, ಕಾಡಿಪಟ್ಟಣ ಮೊಗವೀರ ಸಮಾಜಸೇವಾ ಸಂಘದವರು ಬೆಳ್ಳಿಯ ಕರಡಿಗೆ (ಕಾಸ್ಕೆಟ್)ಯಲ್ಲಿ ಮಾನಪತ್ರವನ್ನು ಅರ್ಪಿಸಿ, ಬಾ ಫಲಾಹಾರದಿಂದಲೂ ಸತ್ಕರಿಸಿ ಸನ್ಮಾನಿಸಿರುತ್ತಾರೆ. (ಮಂಡಳಿ ಸ್ಥಾಪನೆಯ ಸ್ಥಾಪಕರ ಸ್ಮರಣಾರ್ಥವೆಂಬಂತೆ) ಮೊಗವೀರ ವ್ಯ. ಮಂಡಳಿಯವರು ಶ್ರೀ. ಮಾಸ್ಟರರ ಭಾವಚಿತ್ರ ಅನಾವರಣೋತ್ಸವವನ್ನು ತಾ. 18-6-'39ರಲ್ಲು ಮಂಡಳಿಯ ಕೋಣೆಯಲ್ಲಿ ಶ್ರೀಮಾನ್ ಶಾ. ಮನ್‌ರಾವ್ ಜಿ. ತ್ರಿಲೋಕೇಕರ್‌ರವರ ಅಧ್ಯಕ್ಷತೆಯಲ್ಲಿ ಬಹುಸಂಭ್ರಮದಿಂದ ಜರಗಿಸಿರುತ್ತಾರೆ. ಅಂದಿನ ಸಮಾರಂಭದಲ್ಲಿ ಅವರ ಪುತ್ರರಿಂದ ಮತ್ತು ಹಿತಚಿಂತಕರಿಂದ ಹಣದ ಒಂದು ಥೈಲಿ "ಪರ್ಸ್" ಅರ್ಪಿಸಲ್ಪಟ್ಟಿರುತ್ತದೆಂದೂ, ಸದರೀ ಪರ್ಸಿಗೆ ಯಥಾಶಕ್ತಿ ಕೂಡಿಸಿ ಶ್ರೀ. ಮಾಸ್ಟರ್ "ಕೈಗಾರಿಕೆ ಕಲಿಯುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ರೂಪವಾಗಿ ವಿನಿಯೋಗಿಸಲ್ಪಡಬೇಕು" ಎಂತ ಅಪೇಕ್ಷೆಪಟ್ಟು ಪರ್ಸನ್ನು ಮಂಡಳಿಗೆ ದಾನರೂಪವಾಗಿ ಕೊಟ್ಟಿರುತ್ತಾರೆಂದೂ ತಿಳಿದು ಸಂತೋಷವೆನಿಸುತ್ತದೆ.

ಸಜ್ಜನ ವಿಧೇಯ,

Y. Koragappa A. Puthran.

WANTED candidates Allowance Rs 28 Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight-Director, Royal Telegraph and Rly Duties College, Bombay 11

UNSOLICITED APPRECIATION

T. Sriramulu Chetty,
B. A
Pleader & Municipal Councillor

PRODDATUR,
(CUDDAPAH DT)
3rd JULY, 1939.

The Manager,

The Canara Mutual Assuraace Co., Limited, Udipi.

Dear Sir,

Ref. Policy No. 2214 for Rs 1000/-on the life of Tangatoor Chennappa *(deceased)*

My client Tangatoor Ramakka the widow of the insured under the above policy is in receipt of your cheque for the full amount due under the above policy.

. In this connection, my client desires to express her sense of gratitude to you for the prompt settlement of her claim within such a short time after the death of the insured though her husband had paid only a single quarterly premium of Rupees 13—10—0. . . .

I am glad to mention that in my exp rience as a pleader acting for claimants, I have found that you have been very prompt in the matter of settlement of claims

. ...

Wishing you every success,

Yours faithfully,

(Sd) *T. Sriramulu Chetty,*
Pleader.

THE CANARA MUTUAL ASSURANCE COMPANY, LIMITED.

Head Office UDIPI, S. India

The Company is Mutual — There are no Shareholders

ಕಾ. ವರ್ಕಿಂಗ್ ಕಮಿಟಿ ಸಭೆ.

ಪುಟ ೫ರಿಂದ

ನಡೆದರೆ ಕಾಂಗ್ರೆಸಿನಲ್ಲಿ ಅನಾಯಕತ್ವವುಂಟಾಗಿ ಅದು ಚೂರು ಚೂರಾಗಿ ಒಡೆದು ಹೋಗಬಹುದು ಆದುದರಿಂದ ಶ್ರೀ ಸುಭಾಸ್ ಬೋಸರ ಉದ್ದೇಶಪೂರ್ವಕವಾದ ಅತ್ಯಂತ ವಿಷಮವಾದ ಶಿಸ್ತುಭಂಗವನ್ನು ಕಾಂಗ್ರೆಸಿಗೆ ಕಡೆಗಣಿಸಲು ಸಾಧ್ಯವಿಲ್ಲೆಂಬುದು ವಿಷಾದಕರವಿದೆ ಶ್ರೀಸುಭಾಸ್‌ಬಾಬುಗಳು ತನ್ನ ತಪ್ಪನ್ನು ಕಂಡುಕೊಂಡು ಈ ಶಿಸ್ತು ಜ್ಯಾರಿಗೆ ವಿಧೇಯವಾಗಿ ನಡೆಯುವರೆಂದು ವರ್ಕಿಂಗ್ ಕಮಿಟಿಯ ವಿಶ್ವಾಸ ಇನ್ನೂ ಹಲವು ಮಂದಿ ಪ್ರಾಮುಖ್ಯ ಕಾಂಗ್ರೆಸ್ ಅಧಿಕಾರಿಗಳೇ ಶಿಸ್ತು ಭಂಗಮಾಡಿರುವುದು ವರ್ಕಿಂಗ್ ಕಮಿಟಿಯ ಗಮನಕ್ಕೆ ಬಂದಿದೆ ಆದರೆ ಅವರು ಶ್ರೀ ಸುಭಾಸ್ ಬಾಬುಗಳ ಪ್ರೇರಣೆ ಮೇರೆಗೆ ಹಾಗೆ ಮಾಡಿರುವುದರಿಂದ ಅವರನ್ನು ದಂಡಿಸಹೋಗಿರುವುದಿಲ್ಲ ಶಿಸ್ತನ್ನುಲ್ಲಂಘಿಸಿರುವ ಮೆಂಬರರು ಪಶ್ಚಾತ್ತಾಪ ಸೂಚಿಸದಿದ್ದ ಪಕ್ಷದಲ್ಲಿ ಮತ್ತು ಕಾಂಗ್ರೆಸಿನೊಳಗೆ ಶಿಸ್ತನ್ನು ಪಾಲಿಸುವುದಕ್ಕಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ತಮಗೆ ತೋರಿದ ದಂಡನೆ ವಿಧಿಸಬಹುದೆಂಬುದೇ ವರ್ಕಿಂಗ್ ಕಮಿಟಿಯ ನಿರ್ಧಾರ

ಬರುವ ಎಸೆಂಬ್ಲಿ ಅಧಿವೇಶನದಲ್ಲಿ ಭಾಗವಹಿಸಕೂಡದು

ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ಯುದ್ಧದ ಅಪಾಯದ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಆಳವಾಗಿ ವಿಚಾರಿಸಿರುತ್ತಾರೆ. ಅವರ ಸಹಾನುಭೂತಿಯು, ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಷ್ಟ್ರಗಳ ಕುರಿತಾಗಿದೆ ಫೆಸಿಸ್ಟರು, ಯುರೋಪು, ಆಫ್ರಿಕ ಮತ್ತು ಪೂರ್ವದಲ್ಲಿ ನಡಿಸಿರುವ ಆಕ್ರಮಣದ ಕುರಿತು ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯು, ಜೆಕೋಸ್ಲೊವೇಕಿಯ ಮತ್ತು ಸ್ಪೈನಿನಲ್ಲಿ ಪ್ರಜಾಸತ್ತೆಯನ್ನು ಕೈಬಿಟ್ಟುಹಾಕಿದ ಕುರಿತು ಕಾಂಗ್ರೆಸು ನಿಷೇಧ ಸೂಚಿಸಿರುತ್ತದೆ, ಹಿಂದೂದೇಶದ ಮೇಲೆ ಯುದ್ಧವನ್ನು ಹೊರಿಸುವ ಪ್ರಯತ್ನವನ್ನು ಕಾಂಗ್ರೆಸು ವಿರೋಧಿಸುತ್ತದೆಂದು ಮೊದಲೇ ಸ್ಪಷ್ಟಗೊಳಿಸಿದೆ, ಬ್ರಿಟಿಷ್ ಸರಕಾರದ ಹಿಂದಿನ ಮತ್ತು ಇಂದಿನ ಘೋರಣೆಯಿಂದ ಅದು ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧವಿಲ್ಲೆಂದು ಸ್ಪಷ್ಟವಾಗಿರುವುದು. ಆದುದರಿಂದ ಹಿಂದೂದೇಶವು ಅಂತಹ ಸರಕಾರದೊಡನೆ ಸಹಕರಿಸಲು ಸಾಧ್ಯವಿಲ್ಲ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯವು ಹಿಂದೂದೇಶಕ್ಕೆ ನಿರಾಕರಿಸಲ್ಪಟ್ಟಿರುವಾಗ ಅದು ಯಾವ ರೀತಿಯಲ್ಲಿಯೂ ಯುದ್ಧಕ್ಕೆ ಸಹಾಯವೀಯಲಾರದು. ಹಿಂದೂದೇಶದಿಂದ ಹೊರಗೆ ಸೇನೆಯನ್ನು ಕಳುಹಿಸುವುದರ ಕುರಿತು ಅಸಮ್ಮತಿ ಸೂಚಿಸಿ ಕಲ್ಕತ್ತದಲ್ಲಿ ನಡೆದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ನಿರ್ಣಯವಾಗಿದೆ. ಅವರೂ ಜನತೆಯ ಅಭಿಪ್ರಾಯವನ್ನು ತೃಣೀಕರಿಸಿ ಇಂಡಿಯಾ ಸರಕಾರವು ಸಿಂಗಪುರ ಮತ್ತು ಐಗುಪ್ತಕ್ಕೆ ಸೇನೆಯನ್ನು ಕಳುಹಿಸಿರುವುದು. ಇದು ಹೊರತು ಎಸೆಂಬ್ಲಿಯ ಸಮ್ಮತಿಯಿಲ್ಲದೆ ಇಂಡಿಯಾ ಸರಕಾರವು ದೇಶದ ಹೊರಗೆ ಹಿಂದೀ ಸೇನೆಯನ್ನು ಕಳುಹಿಸಕೂಡದೆಂದು ಕೇಂದ್ರ ಎಸೆಂಬ್ಲಿಯಲ್ಲಿ ನಿರ್ಣಯವಾಗಿರುವುದು. ಬ್ರಿಟಿಷ್ ಸರಕಾರವು ಕಾಂಗ್ರೆಸನ್ನೂ ಎಸೆಂಬ್ಲಿಯನ್ನೂ ಧಿಕ್ಕರಿಸಿ ಹಿಂದೀ ಸೇನೆಯನ್ನು ಹೊರಗೆ ಕಳುಹಿಸಿ ಹಿಂದೂದೇಶವು ಯುದ್ಧಕ್ಕೆ ಸಿಲುಕಲ್ಪಡುವ ಅಪಾಯವನ್ನುಂಟುಮಾಡಿರುವುದು. ಇದು ಹೊರತು ಎಸೆಂಬ್ಲಿಗೆ ಇನ್ನೊಂದು ವರ್ಷ ಹೆಚ್ಚಿನ ಬಾಳ್ವೆಯನ್ನೀಯಲಾಗಿದೆ ಬ್ರಿಟಿಷ್ ಸರಕಾರದ ಈ ನಿರ್ಣಯಗಳನ್ನು ವರ್ಕಿಂಗ್ ಕಮಿಟಿಯು ಒಪ್ಪಲಾರದು ಅವುಗಳನ್ನು ನಿಷೇಧಿಸಲು ಪ್ರಥಮವಾಗಿ ಈಗ ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಮೆಂಬರರು ಬರುವ ಎಸೆಂಬ್ಲಿ ಅಧಿವೇಶನದಲ್ಲಿ ಭಾಗವಹಿಸಕೂಡದು. ಪ್ರಾಂತಿಕ ಸರಕಾರಗಳು ಯುದ್ಧದ ಕುರಿತು ಕಾಂಗ್ರೆಸಿನ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು, ಸರಕಾರದ ಯುದ್ಧ ಸಿದ್ಧತೆಗೆ ಯಾವ ರೀತಿಯ ಪ್ರೋತ್ಸಾಹವನ್ನೂ ಕೊಡಕೂಡದು ಇಂತಹ ಘೋರಣೆಯಿಂದ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಡಬೇಕಾಗಿ ಬಂದರೂ ಅದಕ್ಕೆ ಸಿದ್ಧರಾಗಿಯೇ ಇರಬೇಕು. ಯುದ್ಧದ ಗಂಡಾಂತರದ ಪರಿಣಾಮವಾಗಿ ಹಿಂದೂದೇಶದ ಯಾವುದಾದರೊಂದು ಭಾಗಕ್ಕೆ ವಿಮಾನ ಧಾಳಿ ಅಥವಾ ಇತರ ರೀತಿಯಿಂದ ಅಪಾಯ ಸಂಭವಿಸಲಿದ್ದಲ್ಲಿ, ಅದನ್ನು ನಿವಾರಿಸಲು ತಕ್ಕ ವ್ಯವಸ್ಥೆಯನ್ನೂ ಪ್ರಾಂತಿಕ ಮಂತ್ರಿಗಳು ತಾವಾಗಿ ಮಾಡಿದಲ್ಲಿ ಅದಕ್ಕೆ ಕಾಂಗ್ರೆಸು ಬೇಕಾದ ಪ್ರೋತ್ಸಾಹವೀಯುತ್ತದೆ. ಆದರೆ ಕೇಂದ್ರ ಸರಕಾರದ ಯುದ್ಧ ಸಿದ್ಧತೆಯ ಮುಸುಕಾಗಿ ಹಾಗೆ ಮಾಡಲು ಕಾಂಗ್ರೆಸು ಒಪ್ಪಲಾರದೆಂಬುದೇ ಯುದ್ಧ ಸಂಬಂಧವಾದ ಕಾಂಗ್ರೆಸಿನ ನಿರ್ಣಯವಾಗಿದೆ.

ಶ್ರೀ. ಸುಭಾಸಚಂದ್ರ ಭೋಸರ ಹೇಳಿಕೆ

"ನನ್ನ ಮೇಲೆ ಇಂದು ಶಿಸ್ತು ಜ್ಯಾರಿಯಾದಾಕ್ಷಣ ಏನಾಯಿತು? ನಾನು ಮೊದಲಿಗಿಂತಲೂ ಹೆಚ್ಚಿನ ಭಕ್ತಿಯಿಂದ ಕಾಂಗ್ರೆಸಿಗೆ ಕಟ್ಟುಬಿದ್ದುಕೊಂಡಿದ್ದು ರಾಷ್ಟ್ರದ ದೀನ ಸೇವಕನಾಗಿ ದೇಶಕ್ಕಾಗಿಯೂ, ಕಾಂಗ್ರೆಸಿಗಾಗಿಯೂ ದುಡಿಯುತ್ತಾ ಹೋಗುವೆನು"

ಇತಿಹಾಸದ ಪುನರಾವರ್ತನೆಯಿದು—ಮತ್ತೇನಲ್ಲ.

"ಕ್ರಾಂತಿಕಾರಕ ಚಟುವಟಿಕೆಯನ್ನು ಬಿಟ್ಟು ಕೌನ್ಸಿಲ್ ಕಾರ್ಯಕ್ರಮದ ಸುಧಾರಣಾ ಮನೋವೃತ್ತಿಯ ಕಡೆಗೆ ಕಾಂಗ್ರೆಸು ಸರಿಯುತ್ತಿರುವ ಕುರಿತು ದೇಶವನ್ನೆಚ್ಚರಿಸಿದ, ಕಾಂಗ್ರೆಸಿನೊಳಗಣ ಕ್ರಾಂತಿಕಾರಕ ಮನೋವೃತ್ತಿಯನ್ನೇ ನಿರ್ನಾಮಗೊಳಿಸುವ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯಗಳೆರಡನ್ನು ನಿಷೇಧಿಸಿ, ಕಾಂಗ್ರೆಸಿನೊಳಗಣ ತೀವ್ರಗಾಮಿಗಳೆಲ್ಲರೂ ಒಕ್ಕಟ್ಟಾಗುವಂತೆ ಕೆಲಸಮಾಡಿದ, ಮುಂದಿನ ಹೋರಾಟಕ್ಕಾಗಿ ಈಗಲೇ ಸಿದ್ಧತೆಮಾಡಬೇಕೆಂದು ವಿನಂತಿ ಮಾಡಿಕೊಂಡ ಪಾಪಕ್ಕಾಗಿ ನಾನೀಗ ಪ್ರಾಯಶ್ಚಿತ್ತಮಾಡಬೇಕಾಗಿದೆ" ಎಂದು ಶ್ರೀ ಸುಭಾಸಚಂದ್ರ ಭೋಸರು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ತನ್ನ ಮೇಲೆ ಶಿಸ್ತು ಜಾರಿಮಾಡಿದ ಕುರಿತು ಅಭಿಪ್ರಾಯವಿತ್ತಿರುವರು.

"ಮೂರು ವರ್ಷ ಕಾಂಗ್ರೆಸಿನಿಂದ ಹೊರಹಾಕಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ನಾನು ಸ್ವಾಗತೀಕರಿಸುತ್ತೇನೆ ರೈಟಿಸ್ಟ್ ಪಕ್ಷೀಯರು ತಮ್ಮ ಸ್ಥಾನವನ್ನು ಬಲಪಡಿಸಲು ಇತ್ತಲಾಗಿ ಕೆಲವು ವರ್ಷಗಳಿಂದ ನಡಿಸುತ್ತಿರುವ ಪ್ರಯತ್ನದ ಪರಿಣಾಮವಿದು. ಕಾಂಗ್ರೆಸನ್ನು ನಡಿಸುವ ಪ್ರಕೃತದ ಬಹು ಸಂಖ್ಯಾಕ ಪಕ್ಷದ ಮನೋವೃತ್ತಿಯನ್ನು ತೋರಿಸುವುದದು ಅವರ ದೃಷ್ಟಿಯಿಂದ ನನ್ನ ಮೇಲೆ ವಿಧಿಸಲ್ಪಟ್ಟಿರುವ ಶಿಕ್ಷೆಯು ನ್ಯಾಯವಾದುದೇ ಸರಿ. ನನ್ನ ಮೇಲಿನ ಶಿಸ್ತು ಜ್ಯಾರಿಯು ಹೆಚ್ಚಿನ ನನ್ನ ದೇಶ ಬಂಧುಗಳಲ್ಲಿ ವಿಸ್ಮಯವನ್ನುಂಟುಮಾಡಬಹುದು ಆದರೆ ನಾನೇನೂ ಆಶ್ಚರ್ಯಗೊಂಡಿಲ್ಲ ಸೂತ್ರಬದ್ಧ ಕಾರ್ಯಕ್ರಮ ಮತ್ತು ಸಾಮುದಾಯಿಕ ಚಳವಳಗಳೊಳಗಣ ಹೋರಾಟದ ಸ್ವಾಭಾವಿಕ ಪರಿಣಾಮವಿದು. ನಮ್ಮ ರಾಜಕೀಯ ಉತ್ಕ್ರಾಂತಿಯಲ್ಲಿ ಅನಿವಾರ್ಯವಾದುದದು. ಆದುದರಿಂದ ನನ್ನಲ್ಲಿದು ಒಂದಿಷ್ಟಾದರೂ ಕೋಪ ಮತ್ತು ಸಂತಾಪವನ್ನುಂಟುಮಾಡಿರುವುದಿಲ್ಲ. ಇಂತಹ ಕಾರ್ಯವು ನನಗಿಂತಲೂ ವರ್ಕಿಂಗ್ ಕಮಿಟಿಗೇನೇ ಹೆಚ್ಚು ಹಾನಿಕರವೆಂದು ಕಮಿಟಿಯವರು ಮನಗಾಣದುದು ವಿಷಾದಕರವಿದೆ.

ಫೋರ್ವರ್ಡ್ ಬ್ಲೋಕಿನ ಮೆಂಬರರೂ ಲೆಫ್ಟಿಸ್ಟರೂ, ಜನಸಾಮಾನ್ಯರೂ ಶಾಂತವಾಗಿದ್ದು ಎಂದಿಗಿಂತಲೂ ತಾಳ್ಮೆಯಿಂದ ಎಡೆಬಿಡದೆ ಕೆಲಸಮಾಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ ನನ್ನ ಮೇಲೆ ಶಿಸ್ತು ಜ್ಯಾರಿ ಯಾದಾಕ್ಷಣ ಏನಾಯಿತು? ನಾನು ಎಂದಿಗಿಂತಲೂ ಹೆಚ್ಚಿನ ಭಕ್ತಿಯಿಂದ ಕಾಂಗ್ರೆಸಿಗೆ ಕಟ್ಟುಬಿದ್ದು ರಾಷ್ಟ್ರದ ದೀನ ಸೇವಕನಾಗಿ ಸೇವೆಮಾಡುತ್ತಾ ಹೋಗುವೆನು. ನನ್ನ ದೇಶಬಂಧುಗಳು ಮಿಲ್ಯಗಟ್ಟಲೆಯಲ್ಲಿ ಕಾಂಗ್ರೆಸಿಗೆ ಸೇರಿ ಫೋರ್ವರ್ಡ್ ಬ್ಲೋಕಿನ ಮೆಂಬರರಾಗಿ ಅದನ್ನು ಬಲಪಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ ಹಾಗೆ ಮಾಡಿ ಚಳವಳಿಸುವುದರಿಂದ ಮಾತ್ರ ಈಗಣ ಕಾಂಗ್ರೆಸಿನ ಧೋರಣೆಯನ್ನು ಮಾರ್ಪಡಿಸಲು ಸಾಧ್ಯವಿದೆ.

ಇಂದು ನಡೆದಿರುವುದು ಹೊಸ ಸಂಗತಿಯೇನೂ ಇಲ್ಲ ಇತಿಹಾಸದ ಪುನರಾವರ್ತನೆಯಿದೆಂದು ಜನರು ತಿಳಿದುಕೊಳಬೇಕೆಂದು ಕೇಳಿಕೊಳ್ಳುತ್ತೇನೆ, ಹಲವು ವರ್ಷಗಳ ಹಿಂದೆ ಮೊದಲೊಮ್ಮೆ ತೀವ್ರಗಾಮಿಗಳು ಕಾಂಗ್ರೆಸಿನಿಂದ ಹೊರಹಾಕಲ್ಪಟ್ಟಿದ್ದರು. ಆದರೆ ಸ್ವಲ್ಪ ಸಮಯದಲ್ಲಿಯೇ ಅವರು ಹೆಚ್ಚು ಸಂಖ್ಯೆಯಿಂದ ಕಾಂಗ್ರೆಸಿನೊಳಗೆ ಸೇರಿ ತಮ್ಮ ಕಾರ್ಯಕ್ರಮ ಮತ್ತು ಧೋರಣೆಯನ್ನದು ಸ್ವೀಕರಿಸುವಂತೆ ಮಾಡಿದರು ಅದೇ ರೀತಿ ಇಂದಿನ ಲೆಫ್ಟಿಸ್ಟರ ಉದ್ದೇಶವೂ ನ್ಯಾಯವಾದುದಿದ್ದು ಜಯಶೀಲವಾಗುವುದೆಂದು ನನಗೆ ವಿಶ್ವಾಸವಿದೆ. ಇದಕ್ಕೆ ವರ್ಕಿಂಗ್ ಕಮಿಟಿಯವರು ತಮ್ಮ ವರ್ತನೆಯಿಂದ ಪ್ರೋತ್ಸಾಹವಿತ್ತಂತಾಗಿದೆ, ಸ್ವಲ್ಪ ಸಮಯದಲ್ಲಿಯೇ ಕಾಂಗ್ರೆಸನ್ನು ನಾವು ಪುನರುಜ್ಜೀವನಗೊಳಿಸಿ, ಕ್ರಾಂತಿಕಾರಕ ಕಾರ್ಯಕ್ರಮವನ್ನು ಅದು ಸ್ವೀಕರಿಸುವಂತೆ ಮಾಡಿ ಪೂರ್ಣ ಸ್ವರಾಜ್ಯ ಸಾಧನೆಗಾಗಿ ಹೋರಾಟವನ್ನಾರಂಭಿಸುವಂತಾಗುವುದೆಂದು ನನಗೆ ದೃಢವಿದೆ'

Madary Pills
(REGISTERED)
ಮದಾರಿ ಗುಳಿಗೆಗಳು
(ರಿಜಿಸ್ಟರ್ಡ್)

ಜಯಪ್ರದ ಹಾಗೂ ಅನುಭವದಾಯಿನಿ ರಾಮಬಾಣ– ಸನ್ನಿ, ಅಪಸ್ಮಾರ ಇತ್ಯಾದಿಗಳಿಗೆ

ದೇಶಪರಿಹಿತವುಳ್ಳ ಆಯುರ್ವೇದ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟದ್ದು. ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ.

ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನಪುಂಸಕತ್ವ, ಸೂತಿಕೆವಾಯು, ಗರ್ಭಾಶಯ ದಾಹ, ನಿದ್ರೆಬಾರದಿರುವಿಕೆ, ಹುಚ್ಚು, ಉನ್ಮಾದ, ಸ್ವಪ್ನೇಂದ್ರಿಯ, ಬಾಲಗ್ರಹ, ಮತ್ತಿತರ ಮಾನಸಿಕ ಮತ್ತು ಮಿದುಳಿನ ಆಕ್ರಮಣಗಳನ್ನು ಹೋಗಲಾಡಿಸುತ್ತದೆ

ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳ ದ್ವೀಪ. ಮೊದಲಾದ ಪ್ರಮುಖ ರಾಷ್ಟ್ರಗಳ ಸುಪ್ರಸಿದ್ಧ ಡಾಕ್ಟರರುಗಳು ಮದಾರಿ ಮಾತ್ರೆಗಳಿಗೆ ಪದೇ ಪದೇ ಆರ್ಡರುಗಳನ್ನು ಕೊಡುವುದೇ ನಮ್ಮ ಗುಳಿಗೆಗಳ ಖ್ಯಾತಿಯನ್ನು ಬಲಪಡಿಸುವಂತಹುದಕ್ಕೆ ನಿದರ್ಶನ

50 ಗುಳಿಗೆಗಳಿರುವ ಸೀಸೆಯೊಂದಕ್ಕೆ ಕ್ರಯ ರೂ 3 8 0 ಬಯಕೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ –

The Imperial Chemist Coy,
106, Vithalbhai Patel Road Bombay 4

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್ ಫೋನ್ 406 ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೆಫೆ** ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್.- **ಕೆ. ಗುರುರಾಜಾಚಾರ್ಯ.**

LEVER WRIST WATCHES FOR RUPEES 2 4 0 ONLY.

The watches are guaranteed for 5 solid years Accurate Time keeper. Round or square Rs 2/8 Best Rs 3 4 0 extra best Rs 3 12-0, Golden cases Rs. 4-4-0, Rec. 5 8 0 Rectangular Rs 7-4 0 Best Rs 11 0 0, Guaranteed for 10 years Postage annas 8 extra. If purchased three at a time postage free

Ceylon orders must accompany full advance ORIENTAL FANCY STORES Post Box No 12204 Calcutta(S C L 18)

Renowned Sisu Toilets perfumers require Agents Attractive commission. Apply SISU 1st Floor, Rahimtoola House, Homji Street, Sir Pherozshah Mehtha Road, Fort, Bombay

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರ, ತಾ 14 8 39

ವಿದೇಶೀಯರು—ಮೈಸೂರು ಸಂಸ್ಥಾನದಲ್ಲಿ 164ಜನ ವಿದೇಶೀಯರು ಇರುವರೆಂದು ತಿಳಿದುಬಂದಿದೆ

ಗರ್ಲ್ ಗೈಡ್ಸ್—ಶ್ರೀಮತಿ ರಾಜಕುಮಾರಿ ಲೀಲಾವತಿಯವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಗರ್ಲ್ಸ್ ಗೈಡ್ಸ್‌ಗಳ ಒಂದು ಕೂಟವು ಮಹಾರಾಣಿ ಕಾಲೇಜಿನಲ್ಲಿ ನಡೆಯಿತು

ರೋಜಿನ್ ದಿವಾನರು—ಕೌಂಟೆಸ್ ಡಿ ವಾಸನರಾದ ಸರ್ ಆರ್ ಕೆ ಷಣ್ಮುಖಂ ಶೆಟ್ಟರು ಬಂದು ಒಂದೆರಡು ದಿನವಿದ್ದರು ಆ ಕಾಲದಲ್ಲಿ ಶ್ರೀಯುತರು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಯಿತ್ತರಲ್ಲದೆ ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜಿನ ಸಂಘದ ಆರಂಭ ಭಾಷಣ ಮಾಡಿದರು

ಮುಂಬೈ ಮದ್ಯಪಾನ ನಿರೋಧಕ್ಕೆ ಬೆಂಬಲ—ಮೈಸೂರು ಮಹಾರಾಜ ಕಾಲೇಜಿನಲ್ಲಿ ಒಂದು ಚರ್ಚಾಕೂಟವು ನಡೆಯಿತು ಇದರಲ್ಲಿ ಮುಖ್ಯ ವಿಷಯ ಮುಂಬೈ ಮದ್ಯಪಾನಕ್ಕೆ ಸೇರಿದ್ದು ಚರ್ಚೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ತಿಳಿಸಿದ ಮೇಲೆ ವ ಹಾಲಿನೋಣಿಯವನ್ನು ಓಟಿಗೆ ಹಾಕಲು, ಮುಂಬೈ ಮದ್ಯಪಾನ ನಿರೋಧ ಶಾಸನಕ್ಕೆ ವಿದ್ಯಾರ್ಥಿಗಳ ಬೆಂಬಲ ದೊರೆಯಿತು

ರಜತಮಹೋತ್ಸವದ ಹಬ್ಬ— ಶ್ರೀಮನ್ ಮಹಾರಾಜರ ರಜತಮಹೋತ್ಸವದ ಹಬ್ಬವನ್ನು ಆಚರಿಸುವ ಸಲುವಾಗಿ, ಅರಮನೆಗೆ ಸೇರಿದ ನೌಕರರುಮಾನ್ಯರುಗಳೆಲ್ಲರೂ ಬಹಳ ಆಯಿಯದರ ಕೂಟದಲ್ಲಿ ಸಭೆಸೇರಿ, ಬಹಳ ಉತ್ಸಾಹದಿಂದ ನೆರವೇರಿಸಿದರು

ಬಂಗಾರದ ನಾಣ್ಯ—ಶಿವಮೊಗ್ಗ ಬಳಿ ಒಂದು ಹಳ್ಳಿಯಲ್ಲಿ ಓರ್ವ ರೈತನು ಉಳುತ್ತಿದ್ದಾಗ ಸ್ವಲ್ಪ ಬಂಗಾರದ ನಾಣ್ಯಗಳು ದೊರೆತವೆಂದು ಹೇಳಲಾಗಿದೆ

ಫಾರ್ವರ್ಡ್‌ಬ್ಲೋಕ್—ಶ್ರೀ ಸುಭಾಷ ಚಂದ್ರ ಬೋಸ್‌ರವರ ಫೊರ್ವರ್ಡ್‌ಬ್ಲೋಕ್ ಒಂದನ್ನು ಮೈಸೂರಿನಲ್ಲಿ ರಚಿಸಲಾಗುವುದು. ಇದಕ್ಕೆ ಶ್ರೀ ಕುಮಾರನ್‌ರೇ ಸಂಚಾಲಕರು.

ಕ್ಷಾಮದೋರಿಗೆ—ವ ಳೆಯಿಲ್ಲದೆ ಚಾಮರಾಜ ನಗರ ತಾಲೂಕಿನಲ್ಲಿ ಏಕದೇಶ ಕ್ಷಾಮಡೋರಿಕೆ ಬಂದಿರುವುದರಿಂದ, ಮೈಸೂರು ರೆವಿನ್ಯೂ ಕಮಿಷನರ್ರು ಅಲ್ಲಿ ಸಂಚಾರಮಾಡಿ, ಜನಬಗ್ಗೆ ಸಹಾಯಮಾಡುವದಕ್ಕೆ ತಕ್ಕ ಸ್ಕೀಮುಗಳನ್ನು ನಿರ್ಧರಿಸಿ ಮಾಡುವುದಾಗಿ ಭರವಸೆಯಿತ್ತಿದ್ದಾರೆ.

ಮೈಸೂರು ಸಿವಿಲ್ ಸರ್ವಿಸ್ ಸಂಘದ ಸಭೆ—ಮೇಲ್ಕಂಡ ಸಂಘದ ಸಭೆಯೊಂದು ದಿವಾನ ಸಹಾಯಕರಾದ ಶ್ರೀ ಕೆ.ವಿ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಯಿತು ಈ ಸಭೆಯ ಆರಂಭೋತ್ಸವವನ್ನು ದಿವಾನರು ನೆರವೇರಿಸಿದರು. ಸಂಸ್ಥಾನದಾದ್ಯಂತದಿಂದಲೂ ಸಿವಿಲ್ ಅಧಿಕಾರಿಗಳು ಆಗಮಿಸಿದ್ದರು

ಇಂದಿನ ಪತ್ರಿಕೋದ್ಯಮ—ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಇಂದಿನ ಪತ್ರಿಕೋದ್ಯಮ ನ ಕುರಿತು ವಿಚಾರವಾಗಿ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಈ ದಿನ ಬೆಂಗಳೂರು ಪತ್ರಿಕೋದ್ಯೋಗಿಗಳ ಸಂಘದಾಶ್ರಯದಲ್ಲಿತ್ತರು ಶ್ರೀ ಹಯವದನ ರಾಯರು ಅಧ್ಯಕ್ಷತೆ ವಹಿಸಿದ್ದರು

ಅನ್ನಕೋಶವೇ ಹಣದ ಕೋಶ

ಬೊಂಬಾಯಿಯ ಪೋಲೀಸ್ ಆಸ್ಪತ್ರೆಯಲ್ಲಿ ಹುಚ್ಚನೊಬ್ಬನು ಸತ್ತ. ಅವನ ಹೆಣ ಸಿಗಿಯುವಾಗ ಅನ್ನಕೋಶದಲ್ಲಿ 155 ನಾಣ್ಯಗಳಿದ್ದುವು ಅವುಗಳ ಒಟ್ಟು ಬೆಲೆ ರೂ 1-8-0 ಆಗಿದ್ದಿತು ಈ ನಾಣ್ಯಗಳಲ್ಲಿ ಹಲವು ನಿಕ್ಕಲ್ ಮತ್ತು ತಾ

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P [illegible]

1 ತಾಯಾಮ್ಮ-ವೆಂಕಟೇಶ ಕಾಮತರ ವಿಧವೆ, 2 ನಾರಾಯಣ ಕಾಮತ್-ವೆಂಕಟೇಶ ಕಾಮತರ ಮಗ, ಉಡುಪಿ ಕಸಬೆಯಲ್ಲಿರುವವರ — ಅರ್ಜಿದಾರರು.

1ನೇ ಅರ್ಜಿದಾರಳ ಗಂಡ, 2ನೇ ಅರ್ಜಿದಾರನ ಅಪ್ಪ, ಈಗ ಮೃತಪಟ್ಟಿರುವ ವೆಂಕಟೇಶ ಕಾಮತರ ಎಂಬವ್ರ ಹೆಸರಿಂದ ಬರತಕ್ಕ ಸಾಲ ವ ಬೇಂಕ್ ಡಿಪೋಜಿಟ್‌ಗಳ ವಸೂಲಿ ಕುರಿತು 1ನೇ ಅರ್ಜಿದಾರಳಿಗೆ ಒಂದು ವಾರಿಸುಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟಿರುವ ಅರ್ಜಿಯ , ಈ ಕೋರ್ಟಿನಲ್ಲಿ ತಾ. 31 8 1939ಕ್ಕೆ ತಕ್ಕಗೆ ಇಟ್ಟಿರುವದರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಕೋರ್ಟಿನಮುಂದೆ ಸದ್ರಿ ತಾರೀಕು ಹಗಲು ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ

Udipi 14-8 39 — **K Vittal Nayak** — *Vakil for Petitioners*

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S 112/39

ವ ದಿ—ನಾರಾಯಣ ಭಟ್ಟ

ಪ್ರತಿವಾದಿಯು—ನಾರ್ಣಪ್ಪಯ್ಯ ಕೊಡಾ

(2) ಸದ್ರಿ ಪ್ಯಾಷ್ಯದ 2ನೇ ಪ್ರತಿವಾದಿ ಸುಬ್ಬಣ್ಣಯ್ಯ, ದಿವಂಗತ ವೆಂಕಟ್ರಮಣಯ್ಯನ ಮಗ ಕೊಡಗು ಜಿಲ್ಲಾ ನಾಡುಕೊಟ್ಟು ಕೇರಿ ಗ್ರಾಮದಲ್ಲಿರ ವವನ— ಇವರಿಗೆ

ವಾದಿಯು, ನಿಮ್ಮ ಕೊಡಾ 4 ಜನರು ಬರಕೊಟ್ಟ ಆದವು ದಸ್ತಾವೇಜಿನ ಹಣ ವಸೂಲಿ ಬಗ್ಗೆ ಮಾಡಿದ ದಾವೆಯ ವ್ಯಾಜ್ಯವು ತನ್ನಗೆ ಇದೇ ಆಗೋಸ್ತು ತಿಂಗಳ ತಾ 25ಕ್ಕೆ ಇಟ್ಟಿದೆ ಆಬಗ್ಗೆ ನಿಮಗೋಸ್ಕರದ ಆಕ್ಷೇಪವಿದ್ದರೆ ಆ ದಿವಸ 11 ಘಂಟೆಗೆ ಈ ಕೋರ್ಟಿಗೆ ನೀವು ಖುದ್ದು ಯಾ ವಕೀಲರ ಮುಖಾಂತರ ಹಾಜರು ಮಾಡಬೇಕು ತಪ್ಪಿದ್ದರೆ ಕೋರ್ಟಿನವರಿಗೆ ಯುಕ್ತಕಂಡ ರೀತಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗಿಯದೆ

11 8 39 — **B Mangesh Rao,** — *Pleader for Plaintiff.*

ವೃದ್ಧ ನಾಣ್ಯಗಳು ಅವನಹೊಟ್ಟೆಗಳನ್ನು ಭದ್ರವಾಗಿ ಹೊಟ್ಟೆಯೊಳಗೆ ಮಡಗಿದ್ದನು. ಈ ಹೊಟ್ಟೆಯನ್ನೂ ಅವುಗಳೊಳಗಣ ನಾಣ್ಯಗಳನ್ನೂ ಬೊಂಬಾಯಿಯ ಗ್ರೇಂಟ್ ಮೆಡಿಕಲ್ ಕೋಲೇಜಿನ ಪಟೋಲೊಜಿಕಲ್ ವಿಭಾಗದಲ್ಲಿ ಪ್ರದರ್ಶಿಸಲಾಗಿದೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 20/939

ಬಾಗಿ ಸೆಟ್ಟಿ—ವಾದಿ

1 ವೆಂಕಮ್ಮ ಸೆಡ್ತಿ, 2 ಅಂತಕ್ಕೆ ಸೆಡ್ತಿ, 3 ದೇವಕಿ ಸೆಡ್ತಿ — ಪ್ರತಿವಾದಿರು

ಇವರೊಳಗೆ—

(1)1ನೇ ಪ್ರತಿವಾದಿಳು ವೆಂಕಮ್ಮ ಸೆಡ್ತಿ ಪೂವಕ್ಕೆ ಸೆಡ್ತಿ ಮಗಳ ವ ಂಗಳೂರು ತಾಲೂಕು ಮನ್ನಬೆಟ್ಟು ಗ್ರಾಮದ ಅಜಾರ ಎಂಬಲ್ಲಿ ಇರುವವಳು—

(2)3ನೇ ಪ್ರತಿವಾದಿಳು ದೇವಕಿ ಸೆಡ್ತಿ ಕೊರಪಳು ಸೆಡ್ತಿ ಮಗಳು ಸದರಿ ಮನ್ನಬೆಟ್ಟು ಗ್ರಾಮ—

ಈ 2 ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನೀವು ಕೊಡಾ 3 ಜನರಿಂದ ವಾದಿಗೆ ಬರಾವ ಹಲಗೇಣಿ ಗೇಣಿನಾಕಿ ಬಡ್ಡಿ ಕೂಡ ರೂಪಾಯಿ 345 2 8 ಮತ್ತು ಮುಂದಿನ ಬಡ್ಡಿ ಕೋರ್ಟು ಖರ್ಚು ಕೂಡು ಬರಮಾಡಿಕೊಳ್ಳುವ ಬಗ್ಗೆ ವಾದಿಯು ಮೇಲ್ಕಂಡ ದಾವೆಯ ನ್ನ ಈ ಕೋರ್ಟಿ ನಲ್ಲಿ ದಾಖಲು ಮಾಡಿರುತ್ತಾಳೆ

ಸದರಿ ದಾವೆಯು ತಾ 28 8 39ಕ್ಕೆ ತನಿಖೆಗೆ ಇಡಲಾಗಿದ ದೆ ಸದರಿ ತಾ 28 8 39ನೇ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಸ್ವತ ಯಾ ವಕೀಲರ ಮುಖಾಂತರ ಹಾಜರಾಗದೆ ಇದ್ದಲ್ಲಿ ಸದರಿ ದಾವೆಯ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿಯು ನೀವು ಈ ಮೂಲಕ ತಿಳಿದುಕೊಳ್ಳತಕ್ಕದ್ದು

ಕೋರ್ಟಿನಹುಕುಮು ಪ್ರಕಾರ

ತಾ. 14 8 39, ಮುನ್ಸಿಫ್ ಕಾರ್ಕಳ — ಯಂ ಯಸ್ ಅಧಿಕಾರಿ, ವಾದಿಪರದ ವಕೀಲ

ಕೆಮ್ಮಣ್ಣು—ದಕ್ಷಿಣಕನ್ನಡ ಜಿಲ್ಲಾ ಕರಾವಳಿ ಪ್ರದೇಶದ ಹಳ್ಳಿ ನಿವಾಸಿಗಳು ತಾ. 25 5 39 ರಲ್ಲಿ ಮದ್ರಾಸು ಪ್ರಧಾನ ಮಂತ್ರಿಗಳಿಗೆ ಒಕ್ಕಲು ಹಿತದ ಸಾದೆಯ ಅವಶ್ಯಕತೆಯನ್ನು ಕುರಿತು ವಿನಯಪೂರ್ವಕ ಕೇಳಿದ್ದರು ಇದು ಅತ್ಯಾವಶ್ಯಕವೆಂದು ವ್ಯಕ್ತಪಡಿಸುವುದಕ್ಕಾಗಿ ತಾ 10 8 39 ರಲ್ಲಿ ಗ್ರಾಮಸ್ಥರ ಮತ್ತು ಆಸುಪಾಸಿನವರ ಮಹಾಸಭೆಯೊಂದು ಶ್ರೀ ಉಡ್ಪಿ ಕೃಷ್ಣಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಮನವಿಯನ್ನು ಓದಿ ಹೇಳಲಾಗಿ ಬಾಷಣ ಆ ಮೇಲೆ ಕೆಲವು ಒಕ್ಕಲು ಹಿತ ಶಾಸನದ ನ್ನ ಬೇಗನೆ ಜಾರಿಗೆ ತರ ಬೇಕಾಗಿ ಗವರ್ನಮೆಂಟು ಸರಕಾರವನ್ನು ಬೇಡಲಾಯಿತು. ಇದೇ ರೀತಿ ಅಲ್ಲಲ್ಲಿ ಸಭೆಗಳು ನಡೆದು ಈ ಕುರಿತು ಒಕ್ಕಲುಗಳು ಚಳವಳಿ ನಡೆಸಿ ಂದು ನಿರೀಕ್ಷಿಸಲಾಗಿದೆ ಎಂದ ವಾರ್ತೆ

ಬೈಲೂರು—ಸಾಧಿ ಬ್ರಾಂಚ್ ಶಾಲೆಯ ಮುಖ್ಯೋಪಾಧ್ಯಾಯರಾದ ಸೀನಪ್ಪ ತಣೇಕಾರರವರು ತನ್ನ ಕೆಲಸಕ್ಕೆ ರಾಜಿನಾಮೆಕೊಟ್ಟ ಕಾರಣ ಬೈಲೂರು ಕೇಂದ್ರದ ಸಹೋದ್ಯೋಗಿಗಳೂ ಮತ್ತು ಊರ ಮಹನೀಯರೂ ಬೀಳ್ಕೊಡುವ ಬಗ್ಗೆ ಸಭೆ ಸೇರಿ ಶ್ರೀಯುತರ ಸ್ವಾತಂತ್ರ್ಯ ಪ್ರಿಯತೆ ಮತ್ತು ವಿನಯಾದಿ ಗುಣಗಳನ್ನು ಶ್ಲಾಘಿಸಿದರು ಉಪಹಾರವಿತ್ತು ಸತ್ಕರಿಸಿದರು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. 37/1939

ಕೆ ಪ್ರೇಮಾನಂದ ಶೆಣ್ಯೆ — ಅರ್ಜಿದಾರ

ಮತ್ತು

1 ಕೆ ನಿರಂಜನ ಶೆಣ್ಯೆ 2 ಕೆ ಮೋಹನ ಶೆಣ್ಯೆ 3 ಕೆ ಮನೋಹರ ಶೆಣ್ಯೆ, ಪ್ರಾಯಸ್ಥರು, ಹಿತಚಿಂತಕಳು ಇವರ ತಾಯಿ ರಮಾ ಯಾನೆ ಶಾಂತಾ ಬಾಯಿ — ಎದುರು

ಅರ್ಜಿದಾರರು ಮತ್ತು ಎದುರು ಕೆ. ವಾಸುದೇವ ಶೆಣ್ಯೆ ಇವರ ಮಕ್ಕಳು, ಉಡ್ಪಿ ಕಸಬೆಯಲ್ಲಿರುವವರು

ಅರ್ಜಿದಾರನ ಮ ಎದುರ ತಂದೆ ಈಗ ಮೃತರಾಗಿರುವ ಕೆ ವಾಸುದೇವ ಶೆಣ್ಯೆ ಇವರ ಬಾಬ್ತು ಹೊರಗಿಂದ ಬರತಕ್ಕ ಸಾಲ ವ ಇನ್ಶ್ಯೂರೆನ್ಸ್ ಕಂಪೆನಿಗಳಿಂದ ಬರತಕ್ಕ ವಿಮಾಹಣ ಕೂಡ ವಸೂಲಿ ಕುರಿತು ತನಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಕೊಟ್ಟ ಅರ್ಜಿಯು ಈ ಕೋರ್ಟಿನಲ್ಲಿ ತಾ 31 8 1939ಕ್ಕೆ ತನಿಖೆಗೆ ಇಟ್ಟಿರುವದರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಕೋರ್ಟಿನ ಮುಂದೆ ಸದ್ರಿ ತಾರೀಕು ಹಗಲು ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಬೇಕಾಗಿ ಈ ಮೂಲಕ ಸರ್ವಜನರಿಗೆ ತಿಳಿಸೋಣಾಗುತ್ತದೆ.

Udipi 14 8 39 — **K. Vittal Nayak,** — *Vakil for Petitioner*

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪು ಮ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆ ಮುಲ್ಲಿ 1-4-'39 ರಿಂದ ಬಹಳ ವ್ಯತ್ಯಾಸಗಳಾಗಿ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟ್‌ಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿಬೇಕಾದ ತೊಡಕಿನ ವಿಷಯಗಳ ಅನೇಕ ಇವೆ

ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಕ್ಷತ್ತು ಕೇಳಿದ ಕ್ರಮಗಳಲ್ಲಿ ತನ್ನಯ ಆಫೀಸರಿಗೆ ಒಪ್ಪಿಸಿದ ಯಾಗಿಬೇಕು ಅಂಥಾ ಭೇಟಿಗಳ ಸಮಯ ದಲ್ಲಿಯೇ ಎಲ್ಲ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಆನ ಭವಪಡೆದ ಆಫೀಸರರಿಂ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗತಕ್ಕ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು ಪರಿಣಾಮವಾಗಿ ಸಿಕ್ಕಿಂದ ವಸೂಲಾಗುವ ಟೇಕ್ಸ್ ಕಡಿಮೆಯಾಗುವುದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು.

"ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರುಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡೆಸಿರಿ

ಎಸ್. ಎಸ್. ಪುರಾಣಿಕ್,

ಮ ಜನಾರಿಂತ ಹೊಂದಿದ ಇನ್ಕಮ್ ಟೇಕ್ಸ್ ವಕೀಲರು ಜ್ಯೋತಿಷಾಲಯದ ಕಟ್ಟಡ, ಕೆ ಂದಾಪುರ, ಪೋಸ್ಟ್

ಬೈಂದೂರು—ಸ್ಥಳೀಯ ಮಾಧ್ಯಮಿಕ ಶಾಲೆಯ ಒಂದು ಚಿಕ್ಕ ಸಾಕ್ಷನಕ್ಕೆ ಕಾರ್ಕಳದಿಂದ ಶ್ರೀ ಯಂ ಬಸವ ಶೆಟ್ಟಿಯವರು ವರ್ಗಾ ಯಿಸಲ್ಪಟ್ಟಿರುತ್ತಾರೆ

ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕರ ಮಾಸಿಕ ಮಹಾಸಭೆಯು ತಾ 12ರಲ್ಲಿ ಯಡ್ತರೆ ಪ್ರಾಥಮಿಕ ಶಾಲೆಯಲ್ಲಿ ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರಾದ ಶ್ರೀ. ಕೆ ಲಕ್ಷ್ಮಣ ಭಟ್ಟ B A L T. ಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಟಪಾಡಿ—ಇಲ್ಲಿಯ ಜನಪ್ರೀತ ಸಾಹುಕಾರರಾದ ಶ್ರೀ ಶ್ರೀಧರ ಸೇಸಗಿರಿ ಕಾಮತರು ಕೆಲಕಾಲದಿಂದ ವ ತ್ರಿಕರೋಗ ಪೀಡಿತರಾಗಿದ್ದು ತಾ. 8ನೇ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ಚಿಕ್ಕಪ್ರಾಯದಲ್ಲೇ ಸುಪರಿಚಿತರಾಗಿದ್ದರು, ದಯಾಳುವೂ, ಸರಳ ಸ್ವಭಾವಿಯೂ, ಉದಾರಿಯೂ ಆಗಿದ್ದರು ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಹಾರೈಕೆ.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹೃದಯನ್ನು, ಶ್ವಾಸಕೋಶ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು ಕೆಮ್ಮು, ಶೀತವಾಧೆ, ಉಬ್ಬಸ, ಕ್ಷಯ, ಬಲಹೀನತೆ ಇತ್ಯಾದಿಗಳಿಗೆ ದಿವ್ಯ ಔಷಧಿ.

ಪೌಂಡ್ 1ರ ರೂ 2-8 0, ½ ಪೌಂಡಿಗೆ ರೂ 1-5 0.

ಕಸ್ತೂರಿಮಿಶ್ರಿತ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೇಕಗುಣದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ದೋಷವನ್ನು ನಿವಾರಿಸಿ, ಗರ್ಭದಿಂದ ಹೋಗಲಾಡಿಸಿ ಉದರದೋಷಗಳ ಅಂಗಗಳನ್ನು ಬಲಪಡಿಸುವುದು ಗತ ರಕ್ತವನ್ನು ಶುದ್ಧೀಕರಿಸಿ ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ 1-8 0.

ಕೆಟಲಾಗಿಗೆ ಬರೆಯಿರಿ:— **ಯಂ ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ

ಔಷಧಿ ಸಿಕ್ಕುವ ಸ್ಥಳ ದಿ ಕೆನರಾ ಟ್ರೇಡ್ಸ್ ಏಜೆಂಟ್ಸ್, ಪುತ್ತೂರು ಶ್ರೀ ರಾಮಾ ಸ್ಟೋರ್ಸ್ ಹೌಸ್, ಕಾಸರಗೋಡು ಪಿಟ್ಟಲ್ ನಾರಾಯಣ ಶೆಣ್ಯೆ, ಮಡಗಾಂವ್, ಬೊಂಬಾಯಿ, ಬಿ ವಿಠ್ಠಲ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ನ ಂಗ್ಲೂರು ಸ್ಟೋರ್ಸ್, ಮ ಡಿಕೇರಿ, ಕೃಷ್ಣ ಫಾರ್ಮಸಿ, ಕುಂದಾಪುರ ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ಸ್ಯಾಳ ಏಜಂಟ್ಸ್ ಉಡುಪಿ

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

	ರಿಂದ	ವರೆಗೆ
ಛತ್ತ ಅವ್ವಲ್ ತರದ ಗುಡ್ಡ ಮುಡಿಗೆ	1—14—0	
,, ದಯಂ ,, ,,	1—12—0	
,, ಅವ್ವಲ್ ತರದ ಸುಗ್ಗಿ ಮುಡಿಗೆ	1—12—0	...
,, ದುಯಂ ,, ,,	1—10—0	
ಅಕ್ಕಿ ಅವ್ವಲ್ ತರದ ಗುಡ್ಡ ಮುಡಿಗೆ ..	4—12—0	
,, ದಯಂ ,, ,,	4— 7—0	
,, ಅವ್ವಲ್ ಸುಗ್ಗಿ ,,	4— 8—0	
,, ದುಯಂ ,, ,,	4— 6—0	
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27— 8—0	35— 0—0
,, ಸಿಪ್ಪೆ ಇದ್ದದ್ದು ,,	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	50— 0—0	
,, ದೀವಿ ಮತ್ತು ಓಲ್‌ಪಸಂದ್ ..		
ತೆಂಗಿನ ಎಣ್ಣೆ ಮುಡಕ್ಕೆ ..	3— 6—0	
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	2— 8—0	3— 8—0
ಗೇರುಬೀಜ ಮುಡಿಗೆ	3— 6—0	3— 8—0
ಕಬ್ಬಿನ ಬೆಲ್ಲ ಖಂಡಿಗೆ	47— 6—0	53—12—0
ಒಳ್ಳೇ ಮೆಣಸು ತುಂಡ್ಸೈಡ್‌ವೇಟಿಗೆ	14— 8—0	15— 8—0

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು— ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,
President & Manager. ಪ್ರೆಸಿಡೆಂಟ್ ಮೆನೇಜರ್.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೋಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,

Hampankatte, **MANGALORE.**

ಚಿಕ್ಕಮಕ್ಕಳ ಶಕ್ತಿಗೆ **ಬಾಲಾರ್ಕ ಮಧು**

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅತಿಬಿಟ್ಟರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು ಬೆಲೆ ಸೀಸೆ 1ಕ್ಕೆ 12 ಆಣೆ, ಟಪಾಲು ೯ ಆಣೆ



ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

ಉಡುಪಿ ಸ್ಟಾಕಿಸ್ಟರು— **ನವಭಾರತ ಬುಕ್‌ಡಿಪೋ, ಉಡುಪಿ**

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್

ಕೋಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ ಮೇಸ್ತ್ರೆ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್.

ದಿ ವಿಜಯ ಬೇಂಕ್, ಲಿಮಿಟೆಡ್,

ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು.

3	ತಿಂಗಳಿಗೆ	....	3½%
6	,,	...	4%
1	ವರ್ಷಕ್ಕೆ	...	4½%
2	,,	...	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ.

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯನ್ನಿಡುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತಿದೆ

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ, ಮಂಗಳೂರು
ದಿ ಜೊಯಿಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚಯಮಾಡಿದವರಿರುವರೇ?

ಹಣದ ಬೆಲೆಯನ್ನು ಕಟ್ಟಬಹುದು. ಆದರೆ ಸಮಯದ ಬೆಲೆಯನ್ನು ನಿಶ್ಚಯಿಸಲಸಾಧ್ಯ

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶಕೊಡದಂತೆ, ನಮ್ಮ ಸರ್ವಿಸುಗಳು ಪ್ರಾತಃಕಾಲದಿಂದ—ಸಾಯಂಕಾಲದ ವರೆಗೆ ಬಿಡುವಿಲ್ಲದೇ ಓಡಾಡುತ್ತಿದ್ದು ನಿಮ್ಮ ಯಾವದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳೆಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡುಮಾಡಿರುವೆವು. ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು.

JOINT MANAGERS

THE COMBINED BOOKING AGENCY, MANGALORE.

THE JOINT BOOKING OFFICE,
MANGALORE

Thulu... Bank
...Y AGENCY LIMITED,

ESTD] UDIPI [1933

Authorised & Issued Capital	**Rs. 1,00,000**
Subscribed & Paid up	...	**Rs. 31,300**

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 18 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda ...	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲೀಷ್ .. .	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	1	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors* **GENERAL SUPPLIES, LTD, UDIPI)**

PRINTED BY S S KARANTH AT THE THULUNAD PRESS, UDIPI AND PUBLISHED BY K H SHETTY AT NAVAYUGA OFFICE ...

ನವಯುಗ

NAVAYUGA

Delightful Reading! *Spectacular Get up!*
Wide Range!!
EARN WHILE YOU SPEND!

Seems Paradoxical. But true all the same of an Advertisement, in

Sri Krishna Jayanthi Special

Date of publication 7-9-'39
Last date of receipt of advt. 31-8-39

Your goods are good, Yet your salesman can't shout as loudly as an ADVERTISEMENT in the Navayuga Sri Krishna Jayanthi Special.

To avoid disappointment send your advertisement immediately.

Advt. Manager: **NAVAYUGA, UDIPI**

RATES AS USUAL.

1 page Rs. 25/-. ½ page Rs. 15/-
¼ page Rs 8/-. ⅛ page Rs. 5/-.

ಹೊಸ ಮಾದರಿ! ಹೊಸ ಆಕರ್ಷಣ! ಹೊಸ ವಿಚಾರ

ಸೆಪ್ಟೆಂಬರ ತಿಂಗಳಿಂದ

ನವಯುಗದ

19ನೇ ಹೊಸ ವರ್ಷಾರಂಭ.

ನಿಮ್ಮಂತರಂಗವನ್ನು ಮುಟ್ಟುವ ಅಂತರಂಗದಿಂದ
ನಿಮ್ಮ ಕಣ್ಣನ ಸೆಳೆವ ರಮಣೀಯ ಬಹಿರಂಗದಿಂದ

ನವಯುಗದ **19**ನೇ ವರ್ಷದ
ಪ್ರಥಮ ಸಂಚಿಕೆಯು ತಾ. 7-9-39ಕ್ಕೆ ಹೊರಬೀಳುವುದು

ಈ ಹೊಸ ವರ್ಷದ ಹೊಸ ಸಂಚಿಕೆಯೇ

ಶ್ರೀ ಕೃಷ್ಣ ಜಯಂತಿ ಸಂಚಿಕೆ

ಎಂಬ ವಿಶೇಷ ರೂಪದಲ್ಲಿ ಹೊರಡುವುದು.
ನವಯುಗ ಆಕಾರದ ನಾಲ್ವತ್ತು ಪುಟಗಳು.
ಪ್ರಸಿದ್ಧರನೇಕರ ಲೇಖನ, ಕಥೆ, ಕವನಗಳು!
ಚಿತ್ರವಿಚಿತ್ರಗಳಿವೆ; ವ್ಯಂಗ ಚಿತ್ರಗಳಿವೆ.
ಕರ್ನಾಟಕದ ಪ್ರತಿ ಪೇಟೆ, ಪಟ್ಟಣಗಳಿಗೂ, ಹಳ್ಳಿಮನೆಗಳಿಗೂ
ಈ ಸಂಚಿಕೆಯು ಹೋಗುವುದರಿಂದ ಜಾಹೀರಾತಿಗೆ
ಅತ್ಯುತ್ತಮ ಸಾಧನವಾಗಿದೆ.

ಜಾಹೀರಾತಿನ ದರಗಳು ಎಂದಿನಂತೆ—1 ಪುಟ ರೂ. 25/-,
ಅರ್ಧಪುಟ ರೂ. 15/-, ¼ ಪುಟ ರೂ. 8/-, ⅛ ಪುಟ ರೂ 5/-
ಕವರು ಪುಟಗಳಿಗೆ ಪ್ರತ್ಯೇಕ ದರಗಳು.
(ಎದುರಿನ ಮತ್ತು ಹಿಂದಿನ ಕವರು ಪುಟಗಳು ಇಷ್ಟರಲ್ಲೇ ಕೊಡಲ್ಪಟ್ಟವೆ)
ಜಾಹೀರಾತುಗಳು ತಾ. 31-8-39ರೊಳಗೆ ನಮಗೆ ತಲಪಬೇಕು.

ಮೆನೇಜರ್, ನವಯುಗ. ಉಡುಪಿ

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1 48 40,801	9,24,905	24,50,234
1935	2,52,08,418	18,39,296	42,98,820
1938	3,61,55,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ M Shivarama Rao, Organizer, Puttur.

Or

Sri J. A PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 82 800/- Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p a for the earlier half and at 1% p a for the latter half of every calendar year

Fixed Deposits are accepted at all the above offices for one and two years and interest allowed at 3½% p a and 4% p. a respectively, interest being payable every half year of the calendar year Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೂ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಪುತ್ರ, ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾತ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಇದೀಗ ಪ್ರಕಟವಾಗಿದೆ! ಇದೀಗ ಪ್ರಕಟವಾಗಿದೆ!

ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ
ಪಂಚಾರತಿ

ಕರ್ನಾಟಕದ ಪ್ರಸಿದ್ಧ ನಾಟಕಕಾರರೈವರು ಬರೆದ
ಐದು ಏಕಾಂಕ ನಾಟಕಗಳ ಸಂಗ್ರಹ.
ಶ್ರೀ ಕೆ. ಹೊನ್ನಯ್ಯ ಶೆಟ್ಟರಿಂದ ಸಂಪಾದಿಸಲ್ಪಟ್ಟು
ಭಾರತೀ ಗ್ರಂಥಮಾಲೆಯಿಂದ ಪ್ರಕಟಿಸಲ್ಪಟ್ಟ ನವೀನ ಪುಸ್ತಕ
ನಾಟಕಗಳೊಂದಿಗೆ ನಾಟಕಕಾರರ ಪಡಿಯಚ್ಚುಗಳೂ ಕೊಡಲ್ಪಟ್ಟಿವೆ
ಬೆಲೆ ೦-೪-೦ ಐದಾಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು
ಟಪ್ಪಾಲು ದ್ವಾರ ಕಳಿಸಲಾಗುವುದು. ಪ್ರತಿಗಳಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮನುಷ್ಯಪ್ರಾಣಿಯ ಶರೀರವೆಂದರೆ ದುರ್ಗಂಧದ ಬೀಡಾಗಿದೆ ಯಂತ್ರದಂತಿರುವ ದೇಹವು ಎಲ್ಲಾ ತರದ ದುರ್ಗಂಧಯುಕ್ತವಾಗಿದೆ, ಹಾಗೂ ಮಲ ಮೂತ್ರ ಇವೇ ದೇಹದ ದುರ್ಗಂಧದಿಂದಲೇ ರೋಗೋತ್ಪತ್ತಿಯಾಗುತ್ತದೆ ಮನುಷ್ಯನಿಗೆ ಮೆದುಳೆಂಬುದೇ ದೇಹದ ಮುಖ್ಯಾಂಶವಾಗಿದೆ ಇದರ ಸುಖದಿಂದಲೇ ಸರ್ವ ಅವಯವಗಳ ಸುಖ ದುಃಖಗಳು ಅವಲಂಬಿಸಿರುತ್ತವೆ ಅಂಥಾ ಮೆದುಳೇ ಕೆಟ್ಟರೆ ಅದು ಸುಧಾರಿಸಬೇಕಾದರೆ ಹೆಚ್ಚಿನ ವೆಚ್ಚ ಮಾಡಬೇಕಾಗುತ್ತದೆ ಅದಕ್ಕಾಗಿಯೇ ಅಲ್ಪಮೌಲ್ಯದಲ್ಲಿ ಬಹುಗುಣ ಕೊಡುವ

ಸ್ವದೇಶೀ ಔಷಧಿ ಭಂಡಾರ (ರಿಜಿಸ್ಟರ್ಡ್)
ಇವರ ಸುಗಂಧಯುಕ್ತ

ಆಮಲಕೀ ತೈಲವೇ

ನಿಮ್ಮ ಆನಂದದ ಭಾಂಡಾರವಾಗಿದೆ
ಕ್ರಯ ಸೀಸೆ 1ರ 6 ಆಣೆ

Swadeshi Oushadhi Bhandara(*Reg*) *Kunjal*, P O Brahmavar, S. India.

ನಮ್ಮ ಸ್ಟಾಕಿಸ್ಟರು —

1 **V. R. Prabhu**, The Canara News & Books Agent, Batatawala Mansion, Lalbag, BOMBAY
2. **General Supplies Ltd, Udipi**, S K
3 **Nava Bharata Book Depot, Udipi**, S K

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್ —ಹೂವಮಾರ್ಕೆಟಿನ ಬಳಿ, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು,
ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ
ಅನುಕೂಲ ಹಾಗೂ ಕೇಂದ್ರಸ್ಥಳ.

Transport & Car Owners



ARE SPECIALLY INVITED TO VISIT

OUR SHOW ROOM

for economical transport maintenance.

CANARA AUTOMOBILES - - - - - MANGALORE.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ,
ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿ
ಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ

ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ ದಿನ ನಿತ್ಯ ಹೊಸ ಹೊಸ ಸಾಮಾನುಗಳು ಬರುತ್ತಿವೆ ಇಲ್ಲಿಂದಲೇ ನಿಮಗೆ ಬೇಕಾಗುವ ಸಾಮಾನುಗಳನ್ನು ಚಿಲ್ಲರೆಯಾಗಿಯಾಗಲೀ, ರಖಂ ಆಗಿಯಾಗಲೀ ಕೊಂಡುಕೊಳ್ಳುವುದು ಅತಿ ಲಾಭಕರವಾಗಿದೆ

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತು ಯಾವುದೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ESTD 1921 ಸ್ಥಾಪನೆ

FOUNDER
Sri A B SHETTY, M L A
Parliamentary Secretary Govt of Madras
ಸಂಸ್ಥಾಪಕರು.
ಶ್ರೀ ಎ. ಬಿ. ಶೆಟ್ಟಿ, ಎಂ ಎಲ್. ಎ

ಸಂಪಾದಕ
ಕೆ ಕೆ. ಶೆಟ್ಟಿ

ನವಯುಗ
NAVAYUGA WEEKLY UDIPI

ಸಂಪುಟ ೧೮	ಉಡುಪಿ, ಗುರುವಾರ ೨೪-೮-೧೯೩೯	Vol. XVIII
ಸಂಚಿಕೆ ೫೧	Udipi, Thursday 24—8—1939	No 51

ಚಂದಾ ವಿವರ:
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ರೂ ೧—೧೨—೦

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸೇಕಡ 75ರಷ್ಟು ಬಡ್ಡಿ!

ಮದ್ರಾಸ್ ಪಟ್ಟಣದ ತೋಟಿಗಳು, ಮಜೂರರೇ ಮೊದಲಾದವರಿಗೆ ಸಾಲಿಗರು ಕೆಲವರು ಸಾಲಕೊಟ್ಟು ಸೇಕಡ 75ರಷ್ಟು ಕೂಡಾ ಬಡ್ಡಿ ವಸೂಲು ಮಾಡುವ, ಮತ್ತು ಎಷ್ಟು ಸಲಾಯಿಸಿದರೂ ಮತ್ತೂ ಸಾಲವು ವರ್ಷಗಟ್ಲೆ ಉಳಿಯುವ ಘೋರ ಅನ್ಯಾಯವನ್ನು ಸ್ವಾಮಿ. ವೆಂಕಟಾಚಲಂ ಚೆಟ್ಟಿಯಾರರು ಬಯಲಿಗೆಳೆದಿರುವರು. ಇಡೀ ಪ್ರಾಂತದಲ್ಲೆಲ್ಲಾ ಪ್ರಬಲವಾಗಿ ಹಬ್ಬಿದೆ ಈ ಅನ್ಯಾಯ. ಈ ಸಾಲಿಗರು ದೊಣ್ಣೆಯ ಬಲದಿಂದ ತಮ್ಮ ಸಾಲ ವಸೂಲು ಮಾಡುವರೇ ಹೊರತು ಕೋರ್ಟಿಗೆ ಹೋಗಲಾರರು ಮುಲ್ತಾನಿ ಜನರ ಸಾಲದ ಸಂಗತಿಯು ಎಲ್ಲರಿಗೂ ತಿಳಿದೇ ಇದೆ. ಕೃಷಿಕರಿಂದ ವಿಪರೀತ ಬಡ್ಡಿಯನ್ನು ಸಾಲ ಕೊಡುವಾಗಲೇ ಕಳೆದು ಸಾಲನಿವಾರಣಾ ಮಸೂದೆಯನ್ನೇ ನಿರರ್ಥಕಗೊಳಿಸುವ ಕುಹಕತನವೂ ನಡೆದಿದೆ. ಆದೊಂದು ನಿಶ್ಚಿತ ಪ್ರಮಾಣಕ್ಕಿಂತ ಹೆಚ್ಚಿನ ಬಡ್ಡಿ ವಸೂಲು ಮಾಡುವುದೇ ತಕ್ಸೀರೆಂದು ಕಾನೂನು ಮಾಡದಿದ್ದರೆ ಹೃದಯರಹಿತ ಸಾಲಿಗರ ಹಾವಳಿಯನ್ನು ನಿಲ್ಲಿಸಲು ಸಾಧ್ಯವಿಲ್ಲ.

ದಾನಧರ್ಮದ ವಂಚನೆ

ಆ ಸಂಸ್ಥೆಗೆ, ಈ ಸಂಘಕ್ಕೆ, ಅಂತಹ ಪರೋಪಕಾರ ಕೆಲಸಕ್ಕೆ, ಇಂತಹ ಜನ ಸಹಾಯಕ್ಕೆಂದು ಹಣ ಸಂಗ್ರಹಿಸಿ ಒಂದಲ್ಲೊಂದು ರೀತಿಯಿಂದ ಅದನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುವವರ ಸಂಖ್ಯೆಯು ಇಂದು ಬಹಳವಾಗಿ ಬೆಳೆಯುತ್ತಿದೆ. ಇಂಗ್ಲೆಂಡಿನಲ್ಲಿ ಈ ಜನರು ಪ್ರತಿ ವರ್ಷ 2,000,000 ಪವನು ಸಂಗ್ರಹಿಸುತ್ತಿದ್ದಾರೆಂದು ತಿಳಿದುಬಂದಿದೆ. ಇವರು ನಿಜವಾದ ಜನೋಪಕಾರಕ ಕೆಲಸಕ್ಕಾಗಿಯೇ ಹಣ ಸಂಗ್ರಹಿಸಿ ಅದನ್ನು ಸದ್ವಿನಿಯೋಗಮಾಡುವಂತೆ ಅವರ ಮೇಲೆ ಯಾವ ನಿರ್ಬಂಧವೂ ಇರುವುದಿಲ್ಲ. ಆದುದರಿಂದ ಇಂತಹ ಜನರ ಕಾರ್ಯಕಲಾಪಗಳನ್ನು ಅಂಕೆಯಲ್ಲಿರಿಸುವ ಕಾನೂನೊಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಈಗ ತಾನೇ ಮಂಜೂರಾಗಿದೆ. ಈ ಪ್ರಕಾರ ಯಾವುದಾದರೊಂದು ಸಂಸ್ಥೆ ಅಥವಾ ಜನೋಪಕಾರಕ ಕೆಲಸಕ್ಕಾಗಿ ಹಣ ಸಂಗ್ರಹಿಸುವವರು ತಮ್ಮ ಉದ್ದೇಶವನ್ನು ಪೋಲೀಸರಿಗೆ ತಿಳಿಸಿ ಲೈಸನ್ಸು ಪಡಕೊಳ್ಳತಕ್ಕದ್ದು. ಲೈಸನ್ಸು ಕೊಡುವುದಕ್ಕೂ ನಿರಾಕರಿಸುವುದಕ್ಕೂ ಕೊಟ್ಟಮೇಲೆ ಅಗತ್ಯವಿದ್ದರೆ ಪುನಃ ರದ್ದುಪಡಿಸುವುದಕ್ಕೂ ಪೋಲೀಸರಿಗೆ ಅಧಿಕಾರವಿರುವುದು. ಇಂತಹ ಕಾನೂನೊಂದು ಹಿಂದೂ ದೇಶಕ್ಕೂ ಅತ್ಯಗತ್ಯವಿದೆ ದಾನ ಧರ್ಮಕ್ಕಾಗಿ ಹಣ ಸಂಗ್ರಹಿಸಿ ವಂಚಿಸುವವರ ಕಾಟವು ಇಂಗ್ಲೆಂಡಿಗಿಂತಲೂ ಈ ದೇಶದಲ್ಲಿ ಹೆಚ್ಚಿರುವುದೆನ್ನಬಹುದು.

ಬಂಗಾಳವೇನು ಮಾಡುವುದು?

ಬಂಗಾಳದ ಹಳೆಯ ಎಗ್ಸಿಕ್ಯೂಟಿವ್

ವಾರದ ವಿಮರ್ಶೆ

ಕಮಿಟಿಯನ್ನು ತೆಗೆದು ಹಾಕಿ ಹೊಸದನ್ನು ಆರಿಸಿದುದು ತಪ್ಪೆಂದು ಕಾಂಗ್ರೆಸ್ ಪ್ರೆಸಿಡೆಂಟರು ಎವಾರ್ಡು ಕೊಟ್ಟಿರುತ್ತಾರೆ ಹೊಸಕಮಿಟಿಯನ್ನು ಆರಿಸಲು ಸಭೆಸೇರಬೇಕೆಂದು ಕೊಟ್ಟ ನೋಟೀಸು ಅಸಿಂಧುವಾದುದೆಂದು ಡಾಕ್ಟರ್ ರಾಜೇಂದ್ರ ಪ್ರಸಾದರ ನಿರ್ಧಾರ ಶ್ರೀ ಸುಭಾಸಚಂದ್ರರು ಪ್ರೆಸಿಡೆಂಟರಾಗಲಿಕ್ಕಿಲ್ಲ ಹೊಸ ಎಗ್ಸಿಕ್ಯೂಟಿವ್ ಕಮಿಟಿಯೂ ಸಿಂಧುವಲ್ಲ ಬಂಗಾಳವು ಈಗದೊಡ್ಡ ಸಮಸ್ಯೆಯಲ್ಲಿ ಬಿದ್ದಿದೆ ಶ್ರೀ ಭೋಸರನ್ನೇ ಪುನಃ ಪ್ರೆಸಿಡೆಂಟರಾಗಿ ಆರಿಸಿ, ಹೊಸ ಎಗ್ಸಿಕ್ಯೂಟಿವ್ ಕಮಿಟಿಯನ್ನು ಹಾಗೆಯೇ ಇಟ್ಟು ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ಧಿಕ್ಕರಿಸಿ ನಡೆದರೆ ಇಡೀ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯೇ ರದ್ದುಗೊಳಿಸಲ್ಪಟ್ಟು ಹೊಸ ಕಮಿಟಿಯು ರಚಿಸಲ್ಪಡುವುದು. ಆಗ ಬಂಗಾಳದಲ್ಲಿ ಎರಡು ಕಮಿಟಿಗಳು ಸ್ಥಾಪಿತವಾಗುವುವು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ನಿಷೇಧಿಸಿದರೂ ಪುನಃ ಶಿಸ್ತು ಜ್ಯಾರಿಯ ಪ್ರಶ್ನೆ ಬರಬಹುದು. ಆದುದರಿಂದ ಭೋಸ್ ಸಹೋದರರೇ ಮೊದಲಾದವರು ಈ ಸಮಸ್ಯೆಯನ್ನು ಬಗೆಹರಿಸುವ ಕುರಿತು ಆಲೋಚಿಸುತ್ತಿರುವರು ಯಾವ ರೀತಿಯಲ್ಲಿ ಮುಂದುವರಿಯಬೇಕೆಂಬುದು ಇನ್ನೂ ರವರೆಗೆ ನಿಶ್ಚಯವಾಗಿಲ್ಲ.

ಫೋರ್ವರ್ಡ್ ಬ್ಲೋಕಿನ ಸಭೆ

ಫೋರ್ವರ್ಡ್ ಬ್ಲೋಕಿನ ವರ್ಕಿಂಗ್ ಕಮಿಟಿಯ ಸಭೆಯು ಕಳೆದವಾರ ಕಲ್ಕತ್ತದಲ್ಲಿ ನಡೆದು ಕೆಲವು ಪ್ರಾಮುಖ್ಯ ನಿರ್ಣಯಗಳು ಮಂಜೂರಾಗಿರುವವು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸತ್ಯಾಗ್ರಹ ಮತ್ತು ಮಂತ್ರಿಗಳ ಸಂಬಂಧವಾದ ನಿರ್ಣಯಗಳನ್ನು ಲೆಫ್ಟ್ ಕನ್ಸೋಲಿಡೇಶನ್ ಕಮಿಟಿಯವರು ನಿಷೇಧಿಸಿ ಸಭೆ ನಡಿಸಿದುದು ನ್ಯಾಯವಾದುದು ಶ್ರೀ ಭೋಸರಂತಹ ದೇಶ ಸೇವಕರ ಮೇಲೆ ವರ್ಕಿಂಗ್ ಕಮಿಟಿಯವರು ಶಿಸ್ತು ಜ್ಯಾರಿಮಾಡಿದುದು ಅವಿವೇಕ ಮತ್ತು ಅನ್ಯಾಯ. ಅದನ್ನವರು ತೆಗೆದು ಹಾಕುವಂತೆ ದೇಶದಲ್ಲೆಲ್ಲಾ ತೀವ್ರ ಚಳವಳಿ ನಡಿಸಬೇಕು. ರಾಷ್ಟ್ರೀಯ ಹೋರಾಟ ಸಪ್ತಾಹವನ್ನು ಆಚರಿಸಬೇಕು ಬಂಗಾಳ ರಾಜಕೀಯ ಕೈದಿಗಳ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವು ಅತ್ಯಂತ ವಿಷಾದಕರವಿರುತ್ತದೆ ಈ ಕೈದಿಗಳ ಬಿಡುಗಡೆಯ ಪ್ರಶ್ನೆಯನ್ನು ಅಖಿಲಭಾರತ ಪ್ರಶ್ನೆಯನ್ನಾಗಿಮಾಡಿ ಚಳವಳಿ ನಡಿಸುವ ಅವಶ್ಯವಿದೆ ಫೋರ್ವರ್ಡ್ ಬ್ಲೋಕಿನ ಕೆಲಸವನ್ನು ಮುಂದೊತ್ತಲು ಸುಸಂಘಟಿತ ಸ್ವಯಂ ಸೇವಕ ದಳವನ್ನು ದೇಶದಲ್ಲೆಲ್ಲಾ ಸ್ಥಾಪಿಸಬೇಕು ವಿದೇಶೀ ಮತ್ತು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವ ಚಳವಳಿ ಹೂಡಬೇಕು ಅಂತರರಾಷ್ಟ್ರೀಯ ಪರಿಸ್ಥಿತಿಯು ಕೆಟ್ಟು ಯುದ್ಧವುಂಟಾಗಿ ಬ್ರಿಟಿಷ್ ಸಾಮ್ರಾಜ್ಯವು ಅದರಲ್ಲಿ ಸೇರುವಾಗ ಹಿಂದೂದೇಶವು ಯಾವ ರೀತಿಯ ಸಹಾಯವನ್ನೂ ಕೊಡಕೂಡದು. ಕೇಂದ್ರ ಎಸೆಂಬ್ಲಿ ಮೆಂಬರರೆಲ್ಲರೂ ರಾಜಿನಾಮೆಕೊಟ್ಟು ಪುನಃ ಚುನಾವಣೆಗೆ ನಿಲ್ಲಬೇಕು ದೇಶೀಯ ಸಂಸ್ಥಾನದ ಪ್ರಜೆಗಳಲ್ಲಿ ಉಂಟಾಗಿರುವ ಪ್ರಚಂಡ ಜಾಗ್ರತಿಯು ಸ್ವಾಗತನೀಯವಿದ್ದು ಹಿಂದೀ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಕ್ಕದು ಬಹಳ ಸಹಾಯಕವಾಗಿದೆ. ದೇಶೀಯ ಸಂಸ್ಥಾನಿಕ ಪ್ರಜೆಗಳು ಪಡುತ್ತಿರುವ ಸಂಕಷ್ಟದ ಕುರಿತು ಫೋರ್ವರ್ಡ್ ಬ್ಲೋಕು ಸಂಪೂರ್ಣ ಸಹಾನುಭೂತಿ ತೋರಿಸಿ, ಅವರ ಚಳವಳಿಕ್ಕೆ ಬೆಂಬಲವೀಯುತ್ತದೆ. ದಿನೇ ದಿನೇ ಪ್ರಬಲವಾಗುತ್ತಿರುವ ಸಂಸ್ಥಾನಿಕ ಪ್ರಜೆಗಳ ಸ್ವಾತಂತ್ರ್ಯ ಚಳವಳಿವನ್ನು ನಿಲ್ಲಿಸಿ ಸಂಸ್ಥಾನಾಧಿಪತಿಗಳೊಡನೆ ಸಹಕರಿಸಿ ಸೌಹಾರ್ದದಿಂದ ನಡೆಯಲೆತ್ನಿಸಬೇಕೆಂಬ ಗಾಂಧಿಯವರ ಹೊಸ ಕಾರ್ಯವಿಧಾನ ನೀತಿಯನ್ನು ಈ ಕಮಿಟಿಯು ಖಂಡಿಸುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯೊಂದಿಗೆ ಹೋರಾಟವೆಸಗುವ ಗಂಡಾಂತರವು ಸಮೀಪಿಸಿರುವುದರಿಂದ ದೇಶವು ಅದಕ್ಕೆ ಬೇಕಾದ ಸಿದ್ಧತೆಯನ್ನು ಈಗಲೇ ಮಾಡತೊಡಗಬೇಕೆಂಬುದೇ ಮಂಜೂರಾಗಿರುವ ಮುಖ್ಯ ನಿರ್ಣಯಗಳಾಗಿವೆ.

ರಾಷ್ಟ್ರೀಯ ಹೋರಾಟ ಸಪ್ತಾಹ

ಲೆಫ್ಟ್ ಕನ್ಸೋಲಿಡೇಶನ್ ಕಮಿಟಿಯ ಸಭೆಯು ಕಲ್ಕತ್ತದಲ್ಲಿ ನಡೆದು ಹೆಚ್ಚು ಕಡಿಮೆ ಮೇಲಿನ ನಿರ್ಣಯಗಳನ್ನೇ ಮಂಜೂರು ಮಾಡಿರುವುದು ಇದೇ ಅಗೋಸ್ತು ತಾ ೩೦ರಿಂದ ಸೆಪ್ಟೆಂಬರ ತಾ ೬ರ ವರೆಗಿನ ಒಂದು ವಾರವನ್ನು ರಾಷ್ಟ್ರೀಯ ಹೋರಾಟ ಸಪ್ತಾಹವಾಗಿ ಆಚರಿಸಬೇಕೆಂದು ಈ ಕಮಿಟಿಯು ಕೇಳಿಕೊಂಡಿರುವುದು. ಸಾಮ್ರಾಜ್ಯಶಾಹಿಯ ಎದುರಾಗಿ ಹೋರಾಟ ನಡಿಸುವ ಪ್ರಾಮುಖ್ಯ ಪ್ರಶ್ನೆಯ ಕುರಿತು ಜನತೆಯ ಲಕ್ಷ್ಯವನ್ನೆಳೆಯುವುದೇ ಈ ಸಪ್ತಾಹದ ಉದ್ದೇಶವಾಗಿದೆ ಇನ್ನು ಮುಂದೆ ಕಾಂಗ್ರೆಸಿನೊಳಗೆ ಲೆಫ್ಟಿಸ್ಟು ಮತ್ತು ರೈಟಿಸ್ಟರೊಳಗೆ ಬಹಿರಂಗ ಹೋರಾ

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ 'ನವಯುಗ'ದ 18ನೇ ವರ್ಷವು ಕೊನೆಗೊಂಡು ಸೆಪ್ಟಂಬರ ಆದಿಯಿಂದ 19ನೇ ವರ್ಷವು ಪ್ರಾರಂಭವಾಗುವುದು. ಈ ಸಮಯಕ್ಕೆ ತಮ್ಮ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಮುಂದಿನ ವರ್ಷದ ಚಂದಾ ಹಣವನ್ನೂ ಈ ವರೆಗೆ ಚಂದಾಹಣವನ್ನು ಕೊಡದೆ ಬಾಕಿ ಇರಿಸಿಕೊಂಡವರು ತಮ್ಮ ಬಾಕಿ ಚಂದಾ ಹಣವನ್ನೂ ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಈ ಮೂಲಕ ಆಪೇಕ್ಷಿಸಲಾಗುತ್ತದೆ.

ಈ ತಿಂಗಳಂತ್ಯಕ್ಕೆ ನಮ್ಮ ವರ್ಷಾವಧಿಯ ಲೆಕ್ಕವು ಮುಗಿಯಬೇಕಾದ್ದರಿಂದಲೂ ಚಂದಾಹಣ ಬಾಕಿ ಇರುವುದರಿಂದ ಇದಕ್ಕೆ ಬಹಳ ತೊಂದರೆಯಾಗಿರುವುದರಿಂದಲೂ ಎಲ್ಲರೂ ಔದಾರ್ಯದಿಂದ ಮನಸ್ಸಿಟ್ಟು ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ಕನಿಷ್ಠಪಕ್ಷ ಈ ತಿಂಗಳೊಳಗಾದರೂ ನಮಗೆ ತಲಪುವಂತೆ ಕಳಿಸಬೇಕಾಗಿ ವಿನಂತಿ

ಮುಂದೆ "ನವಯುಗ"ದಲ್ಲಿ ಹಲವು ಸುಧಾರಣೆಗಳು ಆಗಲಿರುವುದರಿಂದಲೂ, ಕ್ರಮ ವ್ಯವಸ್ಥೆಗಳನ್ನು ಬಹುಕಠಿಣವಾಗಿ ಪಾಲಿಸಬೇಕಾದುದರಿಂದಲೂ, ಎಲ್ಲಾ ಚಂದಾದಾರರು ತಮ್ಮ ಚಂದಾಹಣವನ್ನು ಮುಂದಾಗಿಯೇ ಕಳುಹಿಸಬೇಕೆಂದು ಈ ಮೂಲಕ ನಿವೇದಿಸಿಕೊಳ್ಳುವೆವು

ಚಂದಾದಾರರು ತಮ್ಮ ಚಂದಾಹಣವನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಎಲ್ಲಾ ಬ್ರಾಂಚ್‌ಗಳಲ್ಲಿ ನಮ್ಮ ಲೆಕ್ಕಕ್ಕೆ ಕೊಡಬಹುದು ಬ್ರಾಂಚ್‌ಗಳ ಅನುಕೂಲತೆಯಿಲ್ಲದವರು ದಯಮಾಡಿ ಮನಿಯಾರ್ಡರುಮಾಡಬೇಕು ಮಂಗಳೂರಲ್ಲಿ ಕೆನರಾ ಪ್ರೆಸ್ಸಿನ ಮೆನೇಜರರೊಡನೆಯೂ ಬೊಂಬಾಯಿಯಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀ ಯು. ಕೆ. ರಂಗರೊಡನೆಯೂ ಚಂದಾಹಣ ಪಾವತಿಮಾಡಬಹುದು

ಪತ್ರಿಕೆಯು ಸಾಮಾನ್ಯ ಸರ್ವರ ಮೆಚ್ಚುಗೆಗೂ ಪಾತ್ರವಾಗುವಂತೆ ಆದಷ್ಟು ಬೇಗನೆ ಸಾಧ್ಯವಾದಷ್ಟು ಬದಲಾವಣೆಗಳನ್ನು ಮಾಡಲಾಗುವುದು ಹೊಸತಾಗಿ ಚಂದಾದಾರರಾಗಿ ಪ್ರೋತ್ಸಾಹಿಸುವವರಿಗೂ ಇದು ಸುಸಂದರ್ಭ.

(ಪತ್ರಿಕೆ ಬಿಡಬೇಕೆಂದಿರುವವರು ತಮ್ಮ ಚಂದಾಹಣ ಬಾಕಿ ಇದ್ದರೆ ಅದನ್ನು ಕಳಿಸಿಕೊಟ್ಟು ನಮಗೆ ಕಾಲದಲ್ಲಿ ತಿಳಿಸಬೇಕಾಗಿ ಸವಿನಯ ವಿನಂತಿ.
—ಮೆನೇಜರ್

ದಿ ಬೊಂಬೇ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಸುಪ್ರಸಿದ್ಧವಾದ ಈ ವಿಮಾಕಂಪೆನಿಯ 1938-1939ನೇ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ ವರದಿಯ ವರ್ಷದಲ್ಲಿ ಕಂಪೆನಿಗೆ ರೂ 1,76,83,250ರ 9393 ಪ್ರಪೋಸಲುಗಳು ಬಂದಿರುತ್ತವೆ ಕಳೆದ ವರ್ಷದ ಕೆಲವು ಪ್ರಪೋಸಲುಗಳು ಸೇರಿ ಒಟ್ಟು ಈ ವರ್ಷ ರೂ. 1,44,91,000 ಬಲಿಯ ಪ್ರಪೋಸಲುಂ ಪೊಲಿಸಿಗಳಾಗಿ ಮಾರ್ಪಟ್ಟವೆ. ಕಂಪೆನಿಯ ವಾರ್ಷಿಕ ಪ್ರೀಮಿಯಮ್ ಉತ್ಪತ್ತಿ ರೂ. 7,08,880 ಆಗಿರುತ್ತದೆ ರೂ 5,58,7500ರ ಪ್ರಪೋಸಲುಗಳು ಇನ್ನೂ ಪೊಲಿಸಿಗಳಾಗಿ ಮಾರ್ಪಟ್ಟಿಲ್ಲ ವರದಿಯ ವರ್ಷದಲ್ಲಿ 216 ಪೊಲಿಸಿಗಳ ರೂ. 5,23,210-2-0 ತೆರಲ್ಪಟ್ಟಿವೆ. ರೂ 2,22,641-10-0ರ 149 ಎಂಡೋಮೆಂಟ್ ಪೊಲಿಸಿಗಳು ಪೂರ್ತಿಗೊಂಡಿವೆ. ಈ ವರ್ಷ ನೇಕಡಾ 10ರಂತೆ ಡಿವಿಡೆಂಡು ಮತ್ತು 10ರಂತೆ ಬೋನಸು ಹಂಚಲ್ಪಟ್ಟಿದೆ.

1908ರಲ್ಲಿ ಸ್ಥಾಪಿತವಾಗಿ ದಿನೇ ದಿನೇ ಬೆಳೆದು ಬರುತ್ತಿರುವ ಈ ಕಂಪೆನಿಯು ಬಹಳ ದಕ್ಷತೆಯಿಂದ ಆಡಳಿತ ನಡಿಸಿ ನಿಸ್ಸಂದೇಹವಾದ ಭದ್ರತೆಯ ಸ್ಥಿತಿಗೇರಿ ಜನವಿಶ್ವಾಸವನ್ನು ಪಡೆದಿದೆ. ಕಂಪೆನಿಯ ಹಣವು ಭದ್ರವಾಗಿ ವಿನಿಯೋಗಿಸಲ್ಪಟ್ಟಿದೆ. ದಕ್ಷಿಣ ಹಿಂದುಸ್ಥಾನದಲ್ಲಿ ಈ ಕಂಪನಿಯು ಜನಾದರ ಮತ್ತು ಬೆಳವಣಿಗೆಗೆ ಮದ್ರಾಸ್ ಶಾಖಾ ಕಾರ್ಯದರ್ಶಿಗಳಾದ ಉಡುಪಿಯ ಶ್ರೀ ಕೊಚ್ಚಿಕಾರ ಸಹೋದರರ ಪರಿಶ್ರಮ ಕಾರ್ಯಚಾತುರ್ಯ ಮತ್ತು ಜನಪ್ರಿಯತೆಯೇ ಕಾರಣವಾಗಿದೆ ನಮ್ಮ ಜಿಲ್ಲೆಯಲ್ಲಿ ಂ

ಟವೇ ಆರಂಭವಾಗುವ ಸಂಭವ ತೋರುತ್ತದೆ ಶ್ರೀ ಎಮ್ ಎಸ್ ರೈಗಳ ಪಕ್ಷೀಯರಾದ ಕೆಲವೊಂದಿಯ ಹೊರತು ಉಳಿದ ಲಿಷ್ಟಿನ್ನವರೆಲ್ಲರೂ ಲಿಷ್ಟಕನ್‌ಸೋಲಿಡೇಶನ್ ಕಮಿಟಿಯಲ್ಲಿ ಸೇರಿರುತ್ತಾರೆ

• ನಮ್ಮ ಸಂಸ್ಥೆಗಳು •

[ಈ ವಿಭಾಗದಲ್ಲಿ ನಮ್ಮ ಸಂಸ್ಥೆಗಳ ಒಳಿತು ಕೊರತೆಗಳ ವಿಮರ್ಶೆಯನ್ನು ಕೊಡಲಾಗುವುದು [ಸಂ ಸ.]

ಕೂ ವಿಮಾಕ್ಷೇತ್ರವನ್ನು ರೂಪಿಸಿದಪ್ರಸಮ ಕೀರ್ತಿಯು ಶ್ರೀ ಕೊಚ್ಚಿಕಾರ್ ಬಂಧುಗಳಿಗೆ ಲತಕ್ಕದ್ದು.

ಉಡುಪಿ ಮುನಿಸಿಪಾಲಿಟಿ

ಉಡುಪಿ ನಗರಸಭೆಯ 1938-39ರ ಆಡಳಿತ ವರದಿಯು ನಮ್ಮ ಬಳಿಗೆ ಬಂದಿದೆ. ಆಡಳಿತ ವೆಚ್ಚವು ಕಳೆದ ವರ್ಷಕ್ಕಿಂತ ಈ ವರ್ಷ ರೂ. 1691 ಹೆಚ್ಚಾಗಿಯಾಗಿದೆ. ಮುನಿಸಿಪಾಲಿಟಿಯ ರಸ್ತೆಯು ಕಳೆದ ವರ್ಷಕ್ಕಿಂತ ಏನೂ ಹೆಚ್ಚಾಗಿಲ್ಲ. ವೆಚ್ಚ ಮಾತ್ರ ರೂ. 33 ಹೆಚ್ಚಿದೆ. ರಸ್ತೆಗಳಿಗೆಲ್ಲಾ ಜಲ್ಲಿ ಹಾಕಿ ಪರಿಸ್ಥಿತಿಯು ಸುಧಾರಿಸಿದೆ ಮುನಿಸಿಪಾಲಿಟಿಯು ಉಡುಪಿ ಇಲೆಕ್ಟ್ರಿಕ್ ಸಪ್ಲೈ ಕಾರ್ಪೊರೇಶನ್ ಲಿಮಿಟೆಡಿನಿಂದ 190 ರಸ್ತೆ ದೀಪಗಳನ್ನು 7 ವರ್ಷಗಳ ವಾಯಿದೆಗೆ ತೆಗೆದುಕೊಂಡಿದೆ. 1939ರಲ್ಲಿ 161 ಇಲೆಕ್ಟ್ರಿಕ್ ಲೈಟುಗಳು ಸ್ಥಾಪಿಸಲ್ಪಟ್ಟು ಅವುಗಳ ವೆಚ್ಚ ರೂ. 1050 ಆಗಿದೆ. ಮುನಿಸಿಪಾಲಿಟಿಯ ಒಳಗೆ ಶಾಲೆಗೆ ಹೋಗುವ ಪ್ರಾಯದ 1251 ಹುಡುಗರು ಮತ್ತು 321 ಹುಡುಗಿಯರಿರುವರೆಂದು ಅಂದಾಜುಮಾಡಲಾಗಿದೆ 209 ಹುಡುಗಿಯರಿಗೆ ಮಾತ್ರ ಮುನಿಸಿಪಾಲಿಟಿಯ ವಿದ್ಯೆಯ ಏರ್ಪಾಡಿರುವುದಿಲ್ಲ ಎಲ್ಲಾ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಶಿಕ್ಷಣ ಕೊಡಲ್ಪಡುತ್ತದೆ ಖಡ್ಡಾಯ ಶಿಕ್ಷಣವೀಯುವ ಕುರಿತು ಆಲೋಚನೆ ನಡೆದಿದೆ ಮುನಿಸಿಪಲ್ ಶಾಲೆಗಳ ಸರಾಸರಿ ಹಾಜರಿಯು ವರದಿಯ ವರ್ಷದಲ್ಲಿ ಹೆಚ್ಚಿಗೆಯಾಗಿದೆ ಶಾಲಾಕಟ್ಟಡಗಳ ಕುರಿತು ಮುನಿಸಿಪಾಲಿಟಿಯವರು ಹೆಚ್ಚಿನ ಲಕ್ಷ್ಯಕೊಡತಕ್ಕದ್ದಾಗಿದೆ. ಹೊಸ ಕಟ್ಟಡವಾದ ನಂತರ ಪುಸ್ತಕ ಭಂಡಾರ ಮತ್ತು ವಾಚನಾಲಯವು ಹೆಚ್ಚಿನ ಜನಾದರಕ್ಕೆ ಪಾತ್ರವಾಗಿದೆ ಮುನಿಸಿಪಾಲಿಟಿಯು ಒಬ್ಬನೇ ಒಬ್ಬ ವೈದ್ಯನನ್ನು ಇಟ್ಟಿರುವುದು. ಪಟ್ಟಣದ ಶುಚಿತ್ವವೂ ಆರೋಗ್ಯವೂ ಕೆಲಮಟ್ಟಿಗೆ ಸುಧಾರಿಸಿರುವುದೆನ್ನಬಹುದು ಶಿಶುಮರಣವು ಕಡಿಮೆಯಾಗಿದೆ. ಸಾರ್ವಜನಿಕ ಪಾಯಿಖಾನೆ ಮತ್ತು ಮೂತ್ರಖಾನೆಗಳ ಸಂಖ್ಯೆಯನ್ನು ಇನ್ನೂ ಅಲ್ಲಲ್ಲಿ ಹೆಚ್ಚಿಸಿ ಶುಚಿಯಾಗಿಡುವ ಅವಶ್ಯವಿದೆ ಖಾಸಗಿ ಪಾಯಿಖಾನೆಗಳನ್ನೂ ಶುದ್ಧವಾಗಿರಿಸುವಂತೆ ತೋಟಗಳ ಮೇಲಿನ ಮೇಲ್ವಿಚಾರವು ಇನ್ನೂ ಕಠಿಣವಾಗಬೇಕಾಗಿದೆ ಮುನಿಸಿಪಾಲಿಟಿಯವರು ಮಲದಿಂದ ಗೊಬ್ಬರ ತಯಾರಿಸುವ ಪ್ರಯೋಗವನ್ನು ಜಯಶೀಲವಾಗಿ ಮಾಡತೊಡಗಿದ್ದಾರೆ. ನಪೂರ ರಸ್ತೆ ಮತ್ತು ಗಲ್ಲಿಗಳ ಚರಂಡಿಗಳನ್ನು ಚೊಕ್ಕಟವಾಗಿರಿಸುವಂತೆ ಹೆಚ್ಚಿನ ನಿಗಾ ಕೊಡತಕ್ಕದ್ದು. ಮುನಿಸಿಪಲ್ ಮಾರ್ಕೆಟನ್ನು ಒಳ್ಳೇ ರೀತಿಯಿಂದ ಕಟ್ಟುವುದು ಅತ್ಯಾವಶ್ಯಕವಾಗಿದೆ ಈಗಿರುವ ಸ್ಥಳದಲ್ಲಿ ಕಟ್ಟಲು ಉಳ್ಳಿರುವ ಭೂತಸ್ಥಾನದ ನೇಮಕ್ಕೆ ತೊಂದರೆಯಾಗುವುದೆಂದು ನಿಲ್ಲಿಸಿದುದರಲ್ಲಿ ಹುರುಳಿರುವಂತೆ ತೋರುವುದಿಲ್ಲ ಭೂತಸ್ಥಾನವನ್ನು ಬೇರೆ ಕಡೆಗೊಯ್ಯುವಂತೆ ಮಾಡಿ ಮಾರ್ಕೆಟನ್ನು ಸರಿಪಡಿಸಬಹುದು ಮಾರ್ಕೆಟು ಜಟ್ಕಾ ಸ್ಟ್ಯಾಂಡು ಮತ್ತು ಬಸ್‌ಸ್ಟ್ಯಾಂಡ ಗಳನ್ನೇರ್ಪಡಿಸಿ ಮುನಿಸಿಪಾಲಿಟಿಯ ಆದಾಯವನ್ನು ವೃದ್ಧಿಗೊಳಿಸಬಹುದು. ಮೀನು ಮಾರ್ಕೆಟಿನ ಪರಿಸ್ಥಿತಿಯು ಕೆಟ್ಟದಾಗಿರುತ್ತದೆ. ಅದನ್ನು ಶುಚಿಯಾಗಿರಿಸುವುದು ಅತ್ಯಾವಶ್ಯಕ. ಆಟ, ವಿಹಾರ ವಿನೋದ ಸ್ಥಳಗಳನ್ನೆಲ್ಲಾ ಮುನಿಸಿಪಾಲಿಟಿಯವರು ಚೆನ್ನಾಗಿ ನಡಿಸುತ್ತಿರುವುದು ಸಂತೋಷಕರ. ಜುಮ್ನೇಸಿಯಮ್ ಮತ್ತು ರೇಡಿಯೋ ವ್ಯವಸ್ಥೆಯು ಅಭಿನಂದನೀಯವಿದೆ, ಆದರೆ ಇದೇ ರೀತಿ ಕೊಳಕು ಗಲ್ಲಿಗಳನ್ನೂ ಬಡಜನರ ಜೀವನದ ರೀತಿಯನ್ನೂ ಸುಧಾರಿಸುವ ಕುರಿತು ಮುನಿಸಿಪಾಲಿಟಿಯವರು ಹೆಚ್ಚಿನ ನಿಗಾಕೊಡತಕ್ಕದ್ದು ಮುನಿಸಿಪಾಲಿಟಿಯ ಆರ್ಥಿಕಸ್ಥಿತಿಗತಿಯು ತೃಪ್ತಿಕರವಿದೆ. ಕಮಿಶನರು ಮುನಿಸಿಪಲ್ ಚೇರ್ಮೆನ್ ಮತ್ತು ಮುನಿಸಿಪಲ್ ಮೆಂಬರರೊಳಗೆ ಸಹಕಾರ ಮತ್ತು ಸೌಹಾರ್ದವಿದ್ದು ಆಡಳಿತವು ಸುಗಮವಾಗಿ ನಡೆದಿರುವುದು ಅಭಿನಂದನೀಯವಿದೆ.

ಬೆಸೆಂಟ್ ನೇಶನಲ್ ಗರ್ಲ್ಸ್ ಸ್ಕೂಲ್, ಮಂಗಳೂರು

ಡಾಕ್ಟರ್ ಅನ್ನಿಬೆಸೆಂಟರ ಸ್ಮರಣಾರ್ಥವಾಗಿ ಸ್ಥಾಪಿಸಲ್ಪಟ್ಟು ಹೊಸ ರೀತಿಯ ರಾಷ್ಟ್ರೀಯ ಶಿಕ್ಷಣವನ್ನು ಬಾಲಿಕೆಯರಿಗೆ ಕೊಡುತ್ತಿರುವ ಈ ಶಾಲೆಯ 1938-39ನೇ ವರ್ಷದ ವರದಿಯು ನಮ್ಮ ಬಳಿಗೆ ಬಂದಿದೆ. ಸ್ವತಂತ್ರವೂ ಪ್ರೇಮಮಯವೂ ಆದ ವಾತಾವರಣದಲ್ಲಿ ಬಾಲಿಕೆಯರಿಗೆ ಸರ್ವಾಂಗಸ್ವಾತಂತ್ರ್ಯವೂ ಆದ ಶರಬೇತಿಯನ್ನೀಯುವ ನವೀನ ಪ್ರಯೋಗಕ್ಷೇತ್ರವೆಂದೇ ಈ ಶಾಲೆಯನ್ನು ಕರೆಯಬಹುದು. ವರದಿಯನ್ನೋದಿದರೆ ಬಾಲಿಕೆಯರಿಗೆ ವಿದ್ಯೆ ಕೊಡುವುದು ಮಾತ್ರವಲ್ಲದೆ ಅವರನ್ನು ಜೀವನದ ಹೋರಾಟಕ್ಕೆ ಸಿದ್ಧಗೊಳಿಸಲಾಗುವುದೆಂಬುದು ವ್ಯಕ್ತವಾಗುವುದು. ಕಳೆದ 13 ವರ್ಷಗಳಿಂದ ವಿಶಿಷ್ಟವಾದೊಂದು ಸಂಸ್ಕೃತಿಯ ನೆಲೆಯೇ ಆಗಿ ಬೆಳೆದುಕೊಂಡು ಬರುತ್ತಿರುವ ಈ ಶಾಲೆಯು ಮಂಗಳೂರಿನಂತಹ ಪಟ್ಟಣದಲ್ಲಿ ಧನದ ಕೊರತೆಗೊಳಗಾಗಿರುವುದು ಆಶ್ಚರ್ಯಕರವೇ ಸರಿ, ಧನಾಭಾವವು ಯಾವ ಹೊಸ ಪ್ರಯೋಗದ ಉತ್ಸಾಹದ ಕೈಯನ್ನಾದರೂ ಕುಗ್ಗಿಸಿಬಿಡುವುದು ಆದುದರಿಂದ ಬೆಸೆಂಟ್ ಗರ್ಲ್ಸ್ ಸ್ಕೂಲಿಗೆ ಉದಾರ ಸಹಾಯವಿತ್ತು ಪ್ರೋತ್ಸಾಹಿಸಿ ಅಲ್ಲಿ ನಡೆಯುವ ನವೀನ ಪ್ರಯೋಗಗಳು ಜಯಶೀಲವಾಗುವಂತೆ ನೋಡುವುದು ಮಂಗಳೂರವರ ಕರ್ತವ್ಯವಿದೆ.

THE
BOMBAY LIFE ಸ್ಥಾಪನೆ 1908 **ದಿ ಬೊಂಬೇ ಲೈಫ್**
ASSURANCE CO, LTD ಎಶ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ಸಂಸ್ಥೆಯ ಸಾರ್ವತ್ರಿಕವಾದ ಅಭಿವೃದ್ಧಿಯೇ ಇದರ ಉನ್ನತಿಗೆ ಸಾಧನವು.

ಹಿರಿಮೆಯ ಹೊಸ ವ್ಯಾಪಾರ ವಹಿವಾಟುಗಳು.

ವಿಮಾ ಅರ್ಜಿಗಳ ಮೊಬಲಗು ಐವಜು.	ವರ್ಷ	ಪೂರ್ತಿಯಾದುದು
1,25,50,250	1934	1,04,33,750
1,50,48,915	1935	1,23,28,665
1,68,38,200	1936	1,36,01,500
1,72 579,75	1937	1,40,08,725
1,76,83,250	1938	1,44,91,000

1939 ವ್ಯಾಲ್ಯುವೇಶನ್ ವರ್ಷ.

ಈಗಾಗಲೇ ಈ ಕಂಪೆನಿಯಲ್ಲಿ ವಿಮೆಯಿಳಿಸಿರಿ, ಮುನಾಫೆಯಲ್ಲಿ (Bonus) ಭಾಗಿಗಳಾಗಿರಿ.
ವಿಮೆಮಾಡಲು ಇಲ್ಲವೆ ಪ್ರತಿನಿಧಿಯಾಗಲು ಇಚ್ಛಿಸುವವರು ನಮ್ಮೊಡನೆ ವಿಚಾರಿಸುವುದು ಲಾಭದಾಯಕವಾಗಿದೆ

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್,
ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು.
ದಿ ಬೊಂಬೆ ಲೈಫ್ ಬಿಲ್ಡಿಂಗ್, ಸರ್ ಚಾಲಂಭಾಯಿ ಸಮಲ್ದಾಸ್ ರೋಡ್, ಗಾಂಧಿನಗರ, ಉಡುಪಿ

ಅಥವಾ ಯಾವುದಾದರೂ ಈ ಕೆಳಗಿನ ಆಫೀಸುಗಳಲ್ಲಿ ವಿಚಾರಿಸಿರಿ —

ರಥಬೀದಿ	ಪುತ್ತೂರು,	ಪೋ ಬಾಕ್ಸ್ ನಂ 337 ಮೌಂಟ್‌ರೋಡ್,	ವಿಕ್ಟೋರಿಯಾ ರಸ್ತೆ	ಚರ್ಚಗೇಟ್, ಗಿರ್ಗಾಂ,	ಸೆಂಟ್ರಲ್ ಸ್ಟೇಶನ್ ರೋಡ್,
ಮಂಗಳೂರು	ಕಲ್ಲಿಕೋಟೆ	ಮದರಾಸ್.	ಬೆಂಗಳೂರು ಸಿಟಿ	ಬೊಂಬಾಯಿ ನಂ 4	ತ್ರಿವಂಡ್ರಮ್

ಮಾನವನಿಗೆ ಮುಖ್ಯ ಬೇಕಾದುದೇನು?

ಹಣ ಹಾಗಾದರೆ ಇಲ್ಲಿಗೆ ಬನ್ನಿರಿ ಜಗತ್ತಿನ ಕನಾದ ಸರ್ವಕರ್ತನ ಮೇಲೆ ದೃಢಭಕ್ತಿಯನ್ನಿಟ್ಟು ಆತನ ಕಡೆಗೆ ಕಣ್ಣುಬಿಟ್ಟು ನೋಡುವವರಿಗೆ ಸ್ವಾಮಿಯು ನನ್ನ ಸರ್ವ ಮಾಯವನ್ನು ಬಿರಿ ಅವನ ಬೇಡಿಕೆಯನ್ನು ಪೂರೈಸುವನು ಎನ್ನಲೇನು ಸಂಶಯ?

ಕಾಟನ್ ಮತ್ತು ಶೇಯರ್ ಬಜಾರಿನಲ್ಲಿ ದುಡ್ಡನ್ನು ಸಂಪಾದಿಸುವುದಕ್ಕೆ ಜರೂರು ನನ್ನಲ್ಲಿ ಒಂದಾವರ್ತಿ ಬಂದು ಭೇಟಿಮಾಡಿರಿ ಬಜಾರಿನ ವಿಷಯ ಯೋಗ್ಯ ಸೂಚನೆಕೊಡಲ್ಪಡುವುದು. ಪತ್ರವ್ಯವಹಾರ ಇಂಗ್ಲಿಷ್ ಯಾ ಹಿಂದಿ, ಗುಜರಾತ್.

ಬಾರ್ಜಂತೂ ಬಹಳ ಕಡಿಮೆ. ಒಂದು ವಾರದಕ್ಕೆ Rs 5 0 0 ಒಂದು ತಿಂಗಳಿಗೆ Rs. 15-0 0 ಸಮಯ ಬೆಳಗ್ಗೆ 8-10, ಸಾಯಂಕಾಲ 4ರಿಂದ 6ರ ವರೆಗೆ.

J M Joshi
Astrologer & Palmist
25 Chandramahal BOMBAY. 4

ಟೈನ್‌ಸ್ಟಿನಿನ ಮೇಲೆ ಜಪಾನು ಮುತ್ತಿಗೆ ಹಾಕಿದ್ದೇಕೆ?

ಜಾಪಾನಿನ ಕೇಳಿಕೆಗಳಿಗೆ ಇಂಗ್ಲೆಂಡು ಒಪ್ಪಿದರೆ ಇಡೀ ಲೋಕದ ತಿರಸ್ಕಾರಕ್ಕೂ ಚೀನೀಯರ ದ್ವೇಷಕ್ಕೂ ಗುರಿಯಾಗುವುದು.

ಟೈನ್‌ಸ್ಟೀನು ಉತ್ತರ ಚೀನದ ಪ್ರಾಮುಖ್ಯ ಬಂದರು. ಉತ್ತರದಲ್ಲಿ ಶಾಂಘಾಯಿಯ ಅನಂತರ ಅದೇ ಪ್ರಾಮುಖ್ಯವಾದುದು. ಅದರ ಹೆಚ್ಚಿನ ವ್ಯಾಪಾರವು ಬ್ರಿಟಿಷರ ಆಧೀನವಿದೆ. ಬ್ರಿಟಿಷ್ ಹಡಗ ಕಂಪೆನಿಗಳೇ ಅಲ್ಲಿಯ ಆಮದು ರಫ್ತುಗಳನ್ನು ಹೆಚ್ಚಾಗಿ ನಡಿಸುತ್ತವೆ ಇಲ್ಲಿ ಬ್ರಿಟಿಷರ ಒಂದು ಪ್ರಾಮುಖ್ಯ ಕನ್‌ಸೆಶ್ಯನಿದೆ. ಚೀನೀ ಸರಕಾರವು ವಿದೇಶೀಯ ವ್ಯಾಪಾರಾನುಕೂಲತೆಗಾಗಿ ಅವರ ತಾಬೆಗೆ ಬಿಟ್ಟುಕೊಟ್ಟಿರುವ ಸ್ಥಳವೇ ಈ ಕನ್‌ಸೆಶ್ಯನುಗಳು. ಅವುಗಳು ಬಹುತೇಕ ಸ್ವಾವಲಂಬಿ ಪಟ್ಟಣಗಳೇ ಆಗಿವೆ. ಅವುಗಳಿಗೆ ಪ್ರತ್ಯೇಕ ಮುನಿಸಿಪಾಲಿಟಿಗಳಿವೆ ಪೋಲೀಸರಿದ್ದಾರೆ ಅವುಗಳ ಮೇಲಿನ ಚೀನೀ ಸರಕಾರದ ಅಧಿಕಾರವು ನಾಮಮಾತ್ರವಾಗಿದೆ.

ಕಳೆದ ಏಪ್ರಿಲ್ ತಿಂಗಳ ಆರಂಭದಲ್ಲಿ ಟೈನ್‌ಸ್ಟಿನಿನ ಕನ್ಸೆಶ್ಯನಿನ ಸಿನೆಮ ಒಂದರಲ್ಲಿ, ಜಾಪಾನರಿಂದ ನೇಮಿಸಲ್ಪಟ್ಟಿದ್ದ ಚೀನೀಯ ಕಸ್ಟಮ್ ಸುಪರಿಂಟೆಂಡೆಂಟನೊಬ್ಬನು ಗುಂಡುಹೊಡೆದು ಕೊಲ್ಲಲ್ಪಟ್ಟನು ಕೊಲೆಮಾಡಿದರೆಂಬ ಗುಮಾನಿಯ ಮೇಲೆ ಕೆಲವರು ಕೈದುಮಾಡಲ್ಪಟ್ಟು ಜಾಪಾನರಿಗೊಪ್ಪಿಸಲ್ಪಟ್ಟರು ಇದರಲ್ಲಿ ಈಗ ಪ್ರಖ್ಯಾತರಾಗಿರುವ 4ಮಂದಿ ಚೀನೀಯರ ವಿರೋಧವಾಗಿ ರುಜುವಾತೇನೂ ದೊರೆಯದೆ ಅವರನ್ನು ಬಿಟ್ಟುಬಿಡಲಾಯಿತು. ಅನಂತರ ಕೆಲವು ವಾರಗಳವರೆಗೆ ಈ ವಿದ್ಯಮಾನವೇ ಮರೆವೆಯಾಗಿಹೋಗಿತ್ತು

ಕಳೆದ ಮೇ ತಿಂಗಳಲ್ಲಿ ಜಾಪಾನರು ಕುಲಂಗ್ಸು ಎಂಬ ಬಂದರನ್ನು ವಶಪಡಿಸಲೆತ್ನಿಸಿದರು. ಇಂಗ್ಲೆಂಡು, ಫ್ರಾನ್ಸು ಮತ್ತು ಅಮೆರಿಕ ಸರಕಾರಗಳು ಒಟ್ಟುಗೂಡಿ ಇದನ್ನು ವಿರೋಧಿಸಿದುದರಿಂದ ಜಾಪಾನು ಹತಭಗ್ನವಾಯಿತು. ಇದರಿಂದ ಕೆರಳಿದಜಪಾನು ಸೈನ್ಯಾಧಿಕಾರಿಗಳು ಪುನಃ ಟೈನ್‌ಸ್ಟಿನಿನ ಕಡೆಗೆ ತಿರುಗಿ, ಇಂಗ್ಲೆಂಡೊಂದರ ಮೇಲೆಯೇ ಮುನಿದುಬಿದ್ದು, ತಾವು ಮೊದಲೊಮ್ಮೆ ಬಿಟ್ಟುಬಿಟ್ಟಿದ್ದ 4ಮಂದಿ ಚೀನೀಯರನ್ನು ಪುನಃ ಒಪ್ಪಿಸಬೇಕೆಂದು ಕೇಳಿದರು, ಅದಕ್ಕೆ ಬ್ರಿಟಿಷ್ ಕನ್ಸೆಶ್ಯನಿನ ಅಧಿಕಾರಿಗಳೊಪ್ಪಲಿಲ್ಲ ಆಗ ಇಡೀ ಟೈನ್‌ಸ್ಟಿನಿನ ಮೇಲೆ ಹಡಗ ಮುತ್ತಿಗೆಹಾಕಿ ಆಮದು ರಫ್ತು ಮಾತ್ರವಲ್ಲದೆ ಆಹಾರ ಸಾಮಗ್ರಿ ಕೂಡ ಒಳಗೆ ಪ್ರವೇಶಿಸದಂತೆ ತಡೆಗಟ್ಟಿದರು. ಕನ್ಸೆಶ್ಯನಿನ ಸುತ್ತಲೂ ವಿದ್ಯುಚ್ಛಕ್ತಿ ಸರಿಗೆಯ ಬೇಲಿಹಾಕಿ, ಅದರೊಳಗೆ ಹೋಗಿಬರುವ ಆಂಗ್ಲೇಯರನ್ನೆಲ್ಲಾ ವಸ್ತ್ರ ತೆಗೆದು ಪರೀಕ್ಷಿಸಿ, ಅವಮಾನಿಸಿರುವರು. ಹೆಂಗಸರನ್ನು ಕೂಡಾ ಇದೇ ರೀತಿ ಅವಮಾನಮಾಡಿರುವರು.

ಜಾಪಾನು ಉತ್ತರ ಚೈನದಲ್ಲಿ ತನ್ನ ಕೈಗೊಂಬೆಯಾದ ರಾಜ್ಯಭಾರವನ್ನು ಸ್ಥಾಪಿಸಿದೆ. ಮತ್ತು ಸ್ವತಂತ್ರವಾದ ನಾಣ್ಯ ಚಲಾವಣೆಮಾಡಿ ಚೀನೀ ರಾಷ್ಟ್ರೀಯ ಸರಕಾರದ ಡೋಲರನ್ನು ಮೂಲೆಗೊತ್ತುವ ಪ್ರಯತ್ನ ನಡಿಸುತ್ತಿದೆ. ಆದರೆ ಇದಕ್ಕೆ ಬ್ರಿಟಿಷರು ವಿರೋಧವಾಗಿದ್ದು ಚೀನೀ ಡೋಲರಿಗೆ ಬೆಂಬಲವೀಯುತ್ತಾ ಬಂದಿರುವರು. ಯಾಕೆಂದರೆ ಚೀನೀ ಡೋಲರು ಬಿದ್ದುಹೋದರೆ ಬ್ರಿಟಿಷ್ ವ್ಯಾಪಾರಿಗಳಿಗೆ ಬಹಳ ನಷ್ಟವಿದೆ. ಅವರ ವ್ಯಾಪಾರಕ್ಕೆ ದೊಡ್ಡ ಧಕ್ಕೆಯುಂಟಾಗುತ್ತದೆ ಉತ್ತರ ಚೈನದ ವ್ಯಾಪಾರವೆಲ್ಲಾ ಜಾಪಾನರ ಆಧೀನವಾಗುತ್ತದೆ ಬ್ರಿಟಿಷ್ ವ್ಯಾಪಾರಿಗಳು ಆನಂತರ ಜಾಪಾನು ಹೇಳಿದಂತೆ ನಡೆಯಬೇಕಾಗುತ್ತದೆ ಇದು ಹೊರತು ಚೀನೀ ರಾಷ್ಟ್ರೀಯ ಸರಕಾರದ ಬೇಂಕುಗಳಲ್ಲಿದ್ದ ಬೆಳ್ಳಿಯು ಟೈನ್‌ಸ್ಟಿನ್ ಕನ್ಸೆಶ್ಯನಿನ ಬ್ರಿಟಿಷ್ ಬ್ಯಾಂಕುಗಳ ಆಧೀನವಿರುತ್ತದೆ. ಅದನ್ನು ಕೊಡಬೇಕೆಂದು ಜಾಪಾನರು ಕೇಳಿದಾಗ ಬ್ರಿಟಿಷರು ನಿರಾಕರಿಸಿರುವರು. ಇವರಿಂದೆಲ್ಲಾ ಕ್ರೋಧಗೊಂಡ ಜಾಪಾನು ಬ್ರಿಟಿಷರನ್ನು ಬಗ್ಗುಬಡಿಯಬೇಕೆಂದು ಟೈನ್‌ಸ್ಟಿನ್ ಬಂದರದಮೇಲೆ ನೌಕಾಮುತ್ತಿಗೆ ಹಾಕುವ ಉಗ್ರಧೋರಣೆ ಕೈಕೊಂಡಿರುವುದು

ಬ್ರಿಟಿಷ್ ಸರಕಾರವೇನು ಮಾಡುವುದು?

ಟೈನ್‌ಸ್ಟಿನಿನ ಪ್ರಶ್ನೆಯ ಕುರಿತು ಬ್ರಿಟಿಷ್ ಸರಕಾರವು ಜಾಪಾನಿನೊಡನೆ ರಾಜಿಪ್ರಸ್ತಾಪ ನಡಿಸಿ, 4 ಮಂದಿ ಚೀನೀ ಕೈದಿಗಳ ಮೇಲೆ ಕೊಲೆಯ ಆರೋಪದ ಕುರಿತು ಜಾಪಾನರು ಸ್ವಯಂ ಸಿದ್ಧ ರುಜುವಾತನ್ನಿತ್ತಿರುವುದರಿಂದ ಅವರನ್ನು ಬಿಟ್ಟುಕೊಡಲೊಪ್ಪಿರುವುದು ಆದರೆ ಜಾಪಾನು ಇದರಿಂದ ತೃಪ್ತವಾಗದೆ, ಚೀನೀ ನಾಣ್ಯದ ಪ್ರಶ್ನೆಯೂ ಇತ್ಯರ್ಥವಾಗಬೇಕೆಂದು ಛಲ ಹಿಡಿದಿರುವುದು. ಇದರಿಂದಾಗಿ ಒಮ್ಮೆ ರಾಜಿಪ್ರಸ್ತಾಪವು ಮುರಿದು ಹೋದಂತಾಗಿರುವುದು. ಆದರೆ ಬ್ರಿಟಿಷ್ ರಾಯಭಾರಿಯಾದ ಸರ್. ರೋಬರ್ಟ್ ಕ್ರೇಗಿಯವರು, ಪುನಃ ಬ್ರಿಟಿಷ್ ಸರಕಾರದ ಸೂಚನೆಗಳು ಬರಲಿರುವವೆಂದು ತಿಳಿಸಿದುದರಿಂದ ಏನಾದರೂ ಸಂಧಾನವಾಗುವುದೋ ಎಂದು ಸ್ವಲ್ಪ ಆಶೆಯುಂಟಾಗಿರುವುದು.

4 ಮಂದಿ ಚೀನೀಯರ ಗತಿಯೇನು?

ಬ್ರಿಟಿಷ್ ಸರಕಾರವು ಕೊಲೆಪಾತಕಿಗಳಾದ 4 ಮಂದಿ ಚೀನೀಯರನ್ನು ಜಾಪಾನರಿಗೊಪ್ಪಿಸುವ ನಿರ್ಧಾರಮಾಡಿದ ಕುರಿತು ಬ್ರಿಟಿಷರಲ್ಲೇ ತೀವ್ರ ಅತೃಪ್ತಿಯುಂಟಾಗಿದೆ ಇಷ್ಟರ ವರೆಗೆ ಈ ಜನರು ಜಾಪಾನರಿಗೊಪ್ಪಿಸಲ್ಪಟ್ಟಿರುವುದಿಲ್ಲ ಅವರನ್ನು ಒಪ್ಪಿಸಕೂಡದೆಂದು, ಶಾಂಘಾಯಿಯ ಬ್ರಿಟಿಷ್ ಕೋರ್ಟಿನಲ್ಲಿ ಈಗ ಈ ಆರೋಪಿತರೇ ಸಹಿಹಾಕಿ 'ಹೇಬಿಯಸ್ ಕೋರ್ಪಸ್' ಅಪೀಲುಮಾಡಿರುವರು. ಟೈನ್‌ಸ್ಟಿನ್ ಕನ್ಸೆಶ್ಯನು ಬ್ರಿಟಿಷರ ಅಧಿಕಾರಕ್ಕೆ ಸೇರಿದ್ದು ಆದುದರಿಂದ ಈ ನಾಲ್ಕು ಮಂದಿ ಚೀನೀಯರಿಗೆ ಬ್ರಿಟಿಷ್ ಸರಕಾರವು ರಕ್ಷಣೆ ಕೊಡಲೇಬೇಕು. ಇಷ್ಟರ ವರೆಗೆ ಎಂದೂ ಇಂತಹ ಪ್ರಸಂಗ ನಡೆದುದಿಲ್ಲ ಬ್ರಿಟಿಷರು ಅವರನ್ನು ಜಾಪಾನರಿಗೊಪ್ಪಿಸಿದ ಪಕ್ಷದಲ್ಲಿ ಅವರ ಕೊಲೆ ನಿಶ್ಚಯ. ನಿರಪರಾಧಿಗಳಾದ ಅವರು, ಜಾಪಾನರನ್ನು ಸಮಜಾಯಿಸುವ ಬ್ರಿಟಿಷ್ ಸರಕಾರದ ಧೋರಣೆಗಾಗಿ ತಮ್ಮ ತಲೆ ಕೊಡಬೇಕಾಗುವುದು ಹಾಗಾದರೆ, ವ್ಯಕ್ತಿಗಳ ನ್ಯಾಯವಾದ ಹಕ್ಕು ರಕ್ಷಣೆಯ ಬ್ರಿಟಿಷ್ ಸಾಮ್ರಾಜ್ಯದ ಗೌರವವಾದರೂ ಎಲ್ಲುಳಿಯಿತು?

ಟೈನ್‌ಸ್ಟಿನಿನ ಬ್ರಿಟಿಷ್ ಕನ್ಸೆಶ್ಯನಿನ ರಕ್ಷಣೆಗಾಗಿ ತಮ್ಮ ಪೋಲೀಸರನ್ನೇ ತಾವು ನೇಮಿಸಬೇಕೆಂದು ಜಾಪಾನರ ಇನ್ನೊಂದು ಕೇಳಿಕೆ. ಇಷ್ಟರ ವರೆಗೆ ಕನ್ಸೆಶ್ಯನಿನ ಅಧಿಕಾರಿಗಳೇ ತಮ್ಮ ಪೋಲೀಸರನ್ನು ನೇಮಿಸಿದ್ದರು ಚೀನೀಸರಕಾರವು ಆ ಹಕ್ಕನ್ನವರಿಗೆ ಕೊಟ್ಟಿದ್ದಿತು. ನ್ಯಾಯವಾದ ಚೀನೀಸರಕಾರವೂ ಈ ಪೋಲೀಸರ ಆಡಳಿತದಲ್ಲಿ ಕೈಹಾಕಲಿಲ್ಲ ಈಗ ಚೀನವನ್ನು ಅಕ್ರಮವಾಗಿ ವಶಪಡಿಸಿಕೊಂಡು ತಮ್ಮ ದರ್ಪ ತೋರಿಸುತ್ತಿರುವ ಜಾಪಾನ ಸೈನ್ಯಾಧಿಕಾರಿಗಳ ಉಪಟಳಕ್ಕೆ ಬ್ರಿಟಿಷರು ಬಗ್ಗಿ ನಡೆಯುವುದಾದರೂ ಹೇಗೆ? ಆಗ ಅವರು ಜಾಪಾನ ಸರಕಾರದ ಅಧಿಕಾರವನ್ನೊಪ್ಪಿ ಅವರ ಅಧೀನವಾಗಿ ನಡೆದಂತಾಗುವುದು. ಇದು ಹೊರತು ವಿದೇಶೀ ಕನ್ಸೆಶ್ಯನುಗಳು ತಟಸ್ಥವಾಗಿರಬೇಕೆಂದು ಜಾಪಾನ ಸರಕಾರವೇ ಸಾರಿರುತ್ತದೆ ಟೈನ್‌ಸ್ಟಿನ್ ಕನ್ಸೆಶ್ಯನಿನಲ್ಲಿ ಜಾಪಾನ ಪೋಲೀಸರನ್ನುಪಯೋಗಿಸಿದರೆ ಅದರ ತಾಟಸ್ಥ್ಯವಾದರೂ ಎಲ್ಲುಳಿಯಿತು?

ಚೀನೀ ಬೇಂಕುಗಳ ಬೆಳ್ಳಿಯನ್ನು ಬ್ರಿಟಿಷ್ ಸರಕಾರವು ಈಗ ಯಾರಿಗಾದರೂ ಕೊಡುವುದರಲ್ಲಿ ನ್ಯಾಯವಿಲ್ಲ. ಯುದ್ಧದಲ್ಲಿ ಕಟ್ಟಕಡೆಗೆ ಯಾರು ಗೆಲ್ಲುವರೋ ಅವರಿಗದನ್ನು ಕೊಡತಕ್ಕದ್ದು, ಸ್ಪೈನಿನ ಚಿನ್ನವನ್ನು ಸ್ಪೆನಿಶ್ ಯುದ್ಧವು ಕೊನೆಗೊಳ್ಳುವವರೆಗೂ ಫ್ರಾನ್ಸು ಇಟ್ಟುಕೊಂಡಂತೆ ಬ್ರಿಟಿಷರು ಚೀನೀ ಬೆಳ್ಳಿಯನ್ನಿಟ್ಟುಕೊಳ್ಳತಕ್ಕದ್ದು ಜಾಪಾನರು ಧಾಳಿನಡಿಸುವರೆಂಬ ಭೀತಿಯಿಂದ ಅದನ್ನವರಿಗೆ ಕೊಡುವುದರಲ್ಲಿ ಅರ್ಥವಿಲ್ಲ ಚೀನೀ ಸರಕಾರದ ನೋಟುಗಳನ್ನು ವಿದೇಶೀ ವ್ಯಾಪಾರಿಗಳೆಲ್ಲಾ ಅಂಗೀಕರಿಸಿ ಚಲಾವಣೆಮಾಡುವವರೆಗೆ ಬ್ರಿಟಿಷರಿಗೆ ಆ ಕುರಿತು ಏನು ಮಾಡಲೂ ಸಾಧ್ಯವಿಲ್ಲ.

ಸಮಜಾಯಿಸಿ ಫಲವಿಲ್ಲ

ಬ್ರಿಟಿಷ್ ಸರಕಾರವು ಜಾಪಾನರನ್ನು ಸಮಜಾಯಿಸಹೋಗಿ ಫಲವಿಲ್ಲ ಜಾಪಾನಿನ ಕೇಳಿಕೆಗಳಿಗೆ ಬ್ರಿಟಿಷ್ ಸರಕಾರವು ಒಪ್ಪಿದುದೇಯಾದರೆ ಅದು ಇಡೀ ಲೋಕದ ತಿರಸ್ಕಾರ ಮತ್ತು ಅಪಹಾಸ್ಯಕ್ಕೂ ಚೀನೀಯರ ನಿರಂತರವಾದ ದ್ವೇಷಕ್ಕೂ ಒಳಗಾಗದಿರಲಾರದು. ನಾಣ್ಯ ಚಲಾವಣೆಯ ಪ್ರಶ್ನೆಯ ಕುರಿತು ಜಾಪಾನಿನ ಕೇಳಿಕೆಗೆ ಇಂಗ್ಲೆಂಡು ಒಪ್ಪದೆ ಸಂಧಿ ಮುರಿದುಹೋಗಿರುವುದೆಂದು ಈಗ ತಿಳಿದುಬಂದಿದೆ

ಆಗಬಾರದಿತ್ತು; ಆದರೆ ಆಗಿಹೋಯಿತು

ಒಂದು ನಾಮಾಂಕಿತ ಕುಟುಂಬದ ಆಧಾರ ಸ್ತಂಭದಂತಿದ್ದ ಒಬ್ಬನೇ ಒಬ್ಬ ತರುಣನು ಅಕಸ್ಮಾತ್ತಾಗಿ ಮರಣಕ್ಕೆ ತುತ್ತಾದನು ತನ್ನ ಹೆಸರಲ್ಲಿ ಹಣದ ಯಾವ ವ್ಯವಸ್ಥೆಯನ್ನೂ ಮಾಡದಿದ್ದ ಕಾರಣ ಅವನ ಹೆಂಡತಿ ಮಕ್ಕಳು ಬಹಳ ಕಷ್ಟಕ್ಕೆ ಗುರಿಯಾದರು. ಹಾಗೂ ಕುಟುಂಬದ ತುಚ್ಛೀಕಾರಕ್ಕೆ ಒಳಗಾದರು.

ಅಂತಹ ಅನಿಷ್ಟ ಪ್ರಸಂಗವು ಕುಟುಂಬದವರ ಮೇಲೆ ಬರಬಾರದು. ಇದಕ್ಕೆ ಒಂದೇ ಉಪಾಯವೆಂದರೆ-ಜೀವವಿಮೆ ಮಾಡುವುದು-ಮತ್ತು ಅದು ಸಹ-

ಈಸ್ಟ್ ಎಂಡ್ ವೆಸ್ಟ್

ಕಂಪೆನಿಯಲ್ಲಿ ಮಾತ್ರ

ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಅಪೊಲೊ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮರ್ಯಾದಸ್ಥ ಗೃಹಸ್ಥರು ಈ ಕಂಪನಿಯಲ್ಲಿ ವಿಮೆಮಾಡಿ, ತಮ್ಮ ಭವಿಷ್ಯ ಕಾಲವನ್ನು ಪ್ರಕಾಶಮಯವಾಗಿ ಮಾಡಬಹುದು.

ವಿಶೇಷ ಮಾಹಿತಿಗೋಸ್ಕರ ಈ ಹೊತ್ತೇ ಬರೆಯಿರಿ: —

(ಮಹಾರಾಷ್ಟ್ರ ವ ಕರ್ನಾಟಕದ ಚೀಫ್ ಏಜಂಟರಿಗೆ)

ಮೆಸರ್ಸ್ ಪಡುಬಿದ್ರಿ ಬ್ರದರ್ಸ್,

ನಾರಾಯಣಲಾಲ್ ಬನ್ಸಿಲಾಲ್ ಮೇನ್ಶನ್ 73, ಲೆಮಿಂಗ್ಟನ್ ರೋಡ್

ಮುಂಬಯಿ

EAST END WEST

INSURANCE CO. LTD.,

ಹಿಟ್ಲರನು ಡಾನ್ಸಿಗ್‌ನ್ನು ಒಮ್ಮೆಯೇ ನುಂಗುವ ಬದಲಿಗೆ ಸ್ವಲ್ಪಸ್ವಲ್ಪ ಕಚ್ಚುತಿನ್ನುತ್ತಿದ್ದಾನಂತೆ. ಒಮ್ಮೆಯೇ ನುಂಗಿದರೆ ಅಜೀರ್ಣವಾದೀತೆಂದು ಕಚ್ಚಿ ಕಚ್ಚಿ ತಿಂದು ಜೀರ್ಣಿಸಿಕೊಳ್ಳುತ್ತಾನೋ ಏನೋ?

೦೦೦ ೦೦೦ ೦೦೦

'ಲಿಬೆನ್‌ಸ್ರವ್‌' ಎಂದರೆ ಬೃಹತ್ ಜರ್ಮನಿಯು ಅಥವಾ ಹಿಟ್ಲರನು ಕಟ್ಟಬೇಕೆಂದಿರುವ ಜರ್ಮನ್ ಸಾಮ್ರಾಜ್ಯದ ಚಿತ್ರ. ಆ ಪ್ರಕಾರ ಹೊಸತೊಂದು ನಕಾಶೆಯೇ ತಯಾರಾಗಿ ಜರ್ಮನಿಯ ಮಕ್ಕಳಿಗೆ ಕಲಿಸಲ್ಪಡುವ ಭೂಗೋಳಶಾಸ್ತ್ರದಲ್ಲದು ಸೇರಿಸಲ್ಪಟ್ಟಿದೆ.

೦೦೦ ೦೦೦ ೦೦೦

ಧರ್ಮ, ನೀತಿ, ರೀತಿ, ಕಲೆ, ಸಾಹಿತ್ಯ, ಆಚಾರ, ವಿಚಾರ, ವ್ಯವಹಾರವೆಲ್ಲಾ ಒಮ್ಮೆಯೇ ಬದಲಾಗಿಬಿಟ್ಟಿದೆ ಜರ್ಮನಿಯಲ್ಲಿ. ಹೊಸ ಜನಾಂಗ, ಹೊಸ ಸಮಾಜ, ಹೊಸ ರಾಜ್ಯವನ್ನೇ ಕಟ್ಟಿಬಿಟ್ಟಿದ್ದಾನೆ ಹಿಟ್ಲರ!

೦೦೦ ೦೦೦ ೦೦೦

ಪರೀಕ್ಷಾರ್ಥವಾದ ವಿವಾಹ, ಸಂತತಿ ನಿರೋಧ ಮತ್ತು ಲೈಂಗಿಕ ಶಿಕ್ಷಣವನ್ನು ಇಂಗ್ಲೆಂಡಿನ ಮೆತೊಡಿಸ್ಟ್ ಚರ್ಚ್ ಪಂಪತ್ತಿನವರು ಒಪ್ಪಿರುತ್ತಾರೆ. ಪ್ರೇಮವು ಸಂದೇಹಕರವಿದ್ದಾಗ ವಿವಾಹದ ಜವಾಬ್ದಾರಿ ವಹಿಸುವುದು ಮೂರ್ಖತನ. ವಿಚಾರವಿಲ್ಲದೆ ಮನಬಂದಂತೆ ಮಕ್ಕಳು ಮಾಡುವುದು ಸಮಾಜದ್ರೋಹ. ಆರೋಗ್ಯಕರ ಕುಟುಂಬವನ್ನು ಆರೋಗ್ಯಕರವಾಗಿ ಉತ್ಪಾದಿಸುವುದೇ ಸಂತತಿನಿರೋಧ. ಸರಿಯಾದ ಲೈಂಗಿಕ ಶಿಕ್ಷಣದ ಅಭಾವವೇ ಸ್ತ್ರೀಪುರುಷ ಸಂಬಂಧವಾದ ಹೆಚ್ಚಿನ ಹಾನಿ ಮತ್ತು ನೈತಿಕ ಅಧೋಗತಿಗೆ ಕಾರಣವೆಂದೇ ಮೆತೊಡಿಸ್ಟರ ವಾದ. ನಮ್ಮ ಸನಾತನ ಧರ್ಮಿಯರೇನೆನ್ನುವರೋ ಇದಕ್ಕೆ!

೦೦೦ ೦೦೦ ೦೦೦

ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟತನಕ್ಕೆ ಬರುವ ವರ್ಷ ನವಂಬರಕ್ಕೆ ಇನ್ನೊಮ್ಮೆ ಚುನಾವಣೆ ನಡೆಯಲಿದೆ. ಎರಡು ಸಲ ಪ್ರೆಸಿಡೆಂಟರಾಗಿ ಆರಿಸಿ ಬಂದು 8 ವರ್ಷ ಆಡಳಿತ ನಡೆಸಿದ್ದಾರೆ ಪ್ರೆಸಿಡೆಂಟ್ ರೂಸ್‌ವೆಲ್ಟರು. ಇನ್ನೊಮ್ಮೆ ಕೂಡಾ ಆರಿಸಿಬರುವರೋ ಎಂಬ ಪ್ರಶ್ನೆ.

೦೦೦ ೦೦೦ ೦೦೦

ಅಮೇರಿಕದಲ್ಲಿ ಮೂರು ಸಲ ಪ್ರೆಸಿಡೆಂಟಾದವರು ಬಹಳ ಅಪರೂಪವಂತೆ. ಇಲ್ಲವೇ ಇಲ್ಲೆಂದರೂ ಹೇಳಬಹುದು. ಅಮೇರಿಕದ ಪ್ರಥಮ ಪ್ರೆಸಿಡೆಂಟ್ ಜೋರ್ಜ್ ವಾಶಿಂಗ್ಟನರು ವೃದ್ಧಾಪ್ಯದ ನಿಮಿತ್ತ ಮೂರನೇ ಸಲ ಪ್ರೆಸಿಡೆಂಟರಾಗಲೊಪ್ಪಲಿಲ್ಲ. ಪ್ರೆಸಿಡೆಂಟ್ ಲಿಂಕೊಲ್ನರು ಆಕಸ್ಮಿಕವಾಗಿ ಕೊಲ್ಲಲ್ಪಟ್ಟರು. ಪ್ರೆಸಿಡೆಂಟ್ ರೂಸ್‌ವೆಲ್ಟರು ಈ ದಾಖಲೆಯನ್ನು ಮುರಿದು ಮೂರನೇ ಸಲವೂ ಪ್ರೆಸಿಡೆಂಟರಾಗುವ ಭರವಸೆ ಇತ್ತು ಮೊದಲು. ಆದರೆ ಈಗೀಗ ಅವರಿಗೆ ವಿರೋಧ ಹೆಚ್ಚುತ್ತಿದೆ. ಅವರ 'ನ್ಯೂ ಡೀಲ್' ಹಿಂದೆ ಬಿದ್ದಿದೆ. ದೊಡ್ಡ ಕಂಪನಿಗಳವರೆಲ್ಲಾ ಅವರೆದುರಾಗಿ ಹೋರಾಡಲು ಸೊಂಟಕಟ್ಟಿದ್ದಾರೆ. ಮಜೂರರೊಳಗೆ ದೊಡ್ಡ ಅಂತಃಕಲಹವೆದ್ದಿದೆ. ಒಂದೊಮ್ಮೆ ಯುರೋಪಿನಲ್ಲಿ ಯುದ್ಧವಾದರೆ ರೂಸ್‌ವೆಲ್ಟರಿಗೆ ಇನ್ನೊಂದು ಚಾನ್ಸ್ ಖಂಡಿತ.

೦೦೦ ೦೦೦ ೦೦೦

ದಾರಿಹೋಕನ ಡೈರಿ

1946ರೊಳಗೆ ಡಿಕ್ಟೇಟರುಗಳೊಪ್ಪ್ರ ವಿಜಯಿಯಾಗುತ್ತಾರೆ. ಆಮೇಲೆ ಅವರ ಪತನ ನಿಶ್ಚಯವೆಂದೊಬ್ಬರ ಭವಿಷ್ಯ. ಆದರೊಳಗವರು ಇಡೀ ಲೋಕವನ್ನು ತಲೆಕೆಳಗೆ ಮಾಡಿಬಿಟ್ಟರೆ?

೦೦೦ ೦೦೦ ೦೦೦

ಹಿಂದೊಮ್ಮೆ ರಾಜಾಜಿಯವರು ನನ್ನ ಸರಕಾರವೆಂದಿದ್ದಾಗ, ನಿಮ್ಮ ಸರಕಾರವಲ್ಲ, ಬ್ರಿಟಿಷ್ ಸರಕಾರವೆಂದು ಎಚ್ಚರಿಸಿದ್ದಾರಂತೆ ರಾಷ್ಟ್ರಪತಿ ನೆಹರುಗಳು. ಈಗ ವೈಸರಾಯರದನ್ನು ಪುಷ್ಟೀಕರಿಸಿರುವಂತಿದೆ. ಪ್ರಾಂತಿಕ ಗುಪ್ತ ಪೋಲೀಸರಿರುವಾಗ ಕೇಂದ್ರ ಸರಕಾರದ ಸಿ. ಐ. ಡಿಗಳು ಆವಶ್ಯವಿಲ್ಲ ಆ ಖಾತೆ ತೆಗೆದುಹಾಕಬೇಕೆಂದು ರಾಜಾಜಿಯವರು ಸೂಚಿಸಿದುದಕ್ಕೆ ಕೇಂದ್ರ ಸರಕಾರ ನಿರಾಕರಿಸಿಬಿಟ್ಟಿದೆ.

೦೦೦ ೦೦೦ ೦೦೦

ಲೆಫ್ಟಿಸ್ಟರು ಫೋರ್ವರ್ಡ್ ಬ್ಲೋಕು ಸ್ಥಾಪಿಸಿ ಸಂಘಟಿತರಾಗುತ್ತಿರುವಾಗ ರೈಟಿಸ್ಟರು ರೈಟಿಸ್ಟ್ ಬ್ಲೋಕನ್ನು ಸ್ಥಾಪಿಸುವುದರಲ್ಲಿದ್ದಾರೆ. ಇದಕ್ಕೆ ಲಕ್ನೋಪಟ್ಟಣದಲ್ಲೊಂದು ಕಮಿಟಿ ಸ್ಥಾಪನೆಯಾಗಿದೆ. ಆಚಾರ್ಯ ಕೃಪಾಲಿನಿ, ಮೋಹನಲಾಲ ಸಕ್ಸೇನಾ ಮೊದಲಾದ ಗಾಂಧಿವಾದಿಗಳಿದ್ದಾರೆ ಈ ಕಮಿಟಿಯಲ್ಲಿ. ಗಾಂಧಿಯವರ ನಾಯಕತ್ವದಲ್ಲಿ, ಅವರ ಕಾರ್ಯಕ್ರಮದ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬಗ್ಗುಬಡಿದು ಪೂರ್ಣ ಸ್ವರಾಜ್ಯ ಸ್ಥಾಪಿಸಬಹುದೆಂದು ವಿಶ್ವಾಸಪರರಾದ ಗಾಂಧಿವಾದಿಗಳ ಬ್ಲೋಕಿದು. ಇನ್ನು ಮಧ್ಯಗಾಮಿ ನೆಹರು ವಾದಿಗಳು ಸೆಂಟರಿಸ್ಟ್ ಬ್ಲೋಕೊಂದನ್ನು ಸ್ಥಾಪಿಸಿದರಾಯಿತು.

೦೦೦ ೦೦೦ ೦೦೦

ಮಹದೇವ ದೇಸಾಯಿಗಳು ಅದೇನೋ ಗುಪ್ತಕೆಲಸದ ನಿಮಿತ್ತ ಸಿಮ್ಲಕ್ಕೆ ಹೋದರಂತೆ. ಅಲ್ಲಿಂದ ಡಿಲ್ಲಿಗೆ ತೆರಳಿದರಂತೆ. ಗುಪಿತವೇ ಪಾಪವೆನ್ನುವ ಗಾಂಧಿವಾದಿಗಳಿಗೂ ಈ ಗುಟ್ಟಿನ ವ್ಯವಹಾರವೇಕಪ್ಪ!

೦೦೦ ೦೦೦ ೦೦೦

ಈಗೀಗ ಕಾಂಗ್ರೆಸ್ಸಿನೊಳಗೆ ಗುಪ್ತತೆಯು ಅಧಿಕವಾಗುತ್ತಾ ಬರುತ್ತಿದೆ. ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಂಡು, ತಪ್ಪುಒಪ್ಪುಗಳನ್ನೆಲ್ಲಾ ಜನರ ಮೇಲೆ ಹಾಕಿ ಕಾಂಗ್ರೆಸ್ಸಿನ ವ್ಯವಹಾರವೆಲ್ಲಾ ನಡೆಯುತ್ತಿದೆಂದು ಹೇಳಬರುವುದಿಲ್ಲ. ಪ್ರಾಯಶಃ ಈ ವಿಷಯದಲ್ಲೂ ಗಾಂಧಿಜಿಯವರ ಮಾತಿಗೆ ವರ್ಕಿಂಗ್ ಕಮಿಟಿಯವರು ಅದೇನೋ ಮಹತ್ವದ ಕಾರಣದಿಂದಾಗಿ ಕಿವಿಕೊಡಲಾರರೋ ಏನೋ? ಆದರೆ ಗಾಂಧಿಜಿಯವರ ಸೆಕ್ರೆಟರಿಗಳೇ ಗುಟ್ಟಿನಲ್ಲಿ ಸಿಮ್ಲ ಮತ್ತು ಡಿಲ್ಲಿಗೆ ಹೋದುದೇಕೆ? ಅವರೂ ಮಹಾತ್ಮರು ಹೇಳಿದ ಹಾಗೆ ಕೇಳುವುದಿಲ್ಲವೊ?

೦೦೦ ೦೦೦ ೦೦೦

ಜರ್ಮನ್ ನಾಜಿಗಳು ಬೊಂಬಾಯಿಯಲ್ಲೊಂದು ಸಭೆಸೇರಿ ಹಿಂದೂದೇಶದಲ್ಲಿ ನಾಜಿ ತತ್ವಪ್ರಚಾರಕ್ಕಾಗಿ ರೂ. ಒಂದು ಲಕ್ಷ ಮಂಜೂರು ಮಾಡಿರುತ್ತಾರಂತೆ. ಕಾಂಗ್ರೆಸು ಬ್ರಿಟಿಷ್ ಪಕ್ಷಪಾತಿ ಸಂಸ್ಥೆ. ಆದುದರಿಂದ ಅದರ ಗೋಜಿ ಬೇಡ ತಮಗೆ, ತಾವು ಹಿಂದೂ ಮಹಾಸಭೆ, ಮುಸ್ಲಿಮ್ ಮೊದಲಾದ ಜಾತೀಯ ಸಂಸ್ಥೆಗಳ ಮೂಲಕ ತಮ್ಮಾಟ ನಡಿಸಬೇಕೆಂದೇ ಈ ನಾಜಿಗಳ ಹಂಚಿಕೆಯಂತೆ.

೦೦೦ ೦೦೦ ೦೦೦

ಮಿ. ಜಿನ್ನರು ಶಕ್ಯನೆ ಈಗ ಪ್ರಜಾಸತ್ತೆಯು ಹಿಂದೂದೇಶಕ್ಕೆ ಹೇಳಿಸಿದುದಲ್ಲೆಂದು ಸಾರಹತ್ತಿದ್ದಾರೆ. ಡಾಕ್ಟರ್ ಸಾವರ್ಕರರು ಇತ್ತಲಾಗಿ ಹಿಟ್ಲರರನ್ನು ಅಭಿನಂದಿಸಿ ಸಂದೇಶ ಕಳುಹಿಸಿದ್ದಾರಂತೆ. ನಾಜಿ ಸಂಕೇತ ಸ್ವಸ್ತಿಕಾ ಮತ್ತು ಅವರ ಆರ್ಯ ಜನಾಂಗ ಭಾವನೆಗೂ ತಮಗೂ ಸಾಮ್ಯವಿದೆಯೆಂದು ಹಿಂದೂ ಮಹಾಸಭೆಯವರ ಅಭಿಪ್ರಾಯವಂತೆ. ಹಿಂದುಮಹಾಸಭೆಯವರು ನಾಜಿಗಳನ್ನೇ ಅನುಸರಿಸಿ ಡಾಕ್ಟರ್ ಸಾವರ್ಕರರನ್ನು ಡಿಕ್ಟೇಟರರನ್ನಾಗಿ ಮಾಡಿದರಾಗಬಹುದೆಂದು ಕೂಡ ಕೆಲವರ ಸೂಚನೆಯಂತೆ. ಜಿನ್ನ ಮತ್ತು ಸಾವರ್ಕರರಿಬ್ಬರೂ ಡಿಕ್ಟೇಟರರಾಗಲು ಸಾಧ್ಯವೇ? ಈ ಸಮಸ್ಯೆಯನ್ನು ಮಾತ್ರ ಜರ್ಮನ್ ನಾಜಿಗಳೇ ಬಿಡಿಸಬೇಕು.

೦೦೦ ೦೦೦ ೦೦೦

ಅಸ್ಪೃಶ್ಯತೆಯು ಹಾನಿಯೇನೂ ಅಲ್ಲ. ಹಿಂದುಗಳ ಅಸಾಧಾರಣವಾದ ಧಾರ್ಮಿಕ ಸಂಸ್ಕೃತಿಯ ಆಧಾರ. ಮುಟ್ಟುವ, ಊಟ ಮಾಡುವ ಮತ್ತು ಮದುವೆ ಸಂಬಂಧವಾದ ನಿರ್ಬಂಧಗಳು ವಂಶವನ್ನು ಶುದ್ಧವಾಗಿರಿಸುವ ಸಾಧನವೆಂದು ಸಾರುತ್ತಿದ್ದಾರೆ ಕುರ್ತಕೋಟಿ ಪೀಠದ ಶ್ರೀ ಶಂಕರಾಚಾರ್ಯರು. ಹಿಂದೂಧರ್ಮವೆಂದರೆ ತಮ್ಮದು ಮಾತ್ರ, ಹಿಂದುಗಳೆಂದರೆ ಕೇವಲ ತಾವೇ ಎಂದು ಈ ಸನಾತನಿ ಆಚಾರ್ಯರುಗಳ ಭಾವನೆಯೇ?

೦೦೦ ೦೦೦ ೦೦೦

ಬೊಂಬಾಯಿ ಸರಕಾರವು ಅನ್ಯಾಯ ಮಾಡುತ್ತಿದೆ, ಕಾಂಗ್ರೆಸ್ 'ಮೆನಿಫೆಸ್ಟೋ'ದಂತೆ ಕೆಲಸ ಮಾಡಿರುವುದಿಲ್ಲೆಂದು ಪೂನದ ಶ್ರೀ. ವಿ. ವಿ. ಸಾತೆಯವರೆಂಬವರೊಬ್ಬರು ಗಾಂಧಿಯವರ ಬಳಿಯೇ ಉಪವಾಸ ಮಾಡ ಹೋದರು. ಇವರೂ ಒಬ್ಬ ಉಪವಾಸ ತಜ್ಞರಂತೆ. ಗಾಂಧಿಜಿಯವರೇ ನೀವು ಕಾಂಗ್ರೆಸಿನ ದೇವರು. ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆ ನಿಮ್ಮ ಚೀಲದೊಳಗಿದೆ ಎಂದವರ ಅಂಬೋಣವಂತೆ.

೦೦೦ ೦೦೦ ೦೦೦

ಆದರೆ ಗಾಂಧಿಯವರು ಇವರನ್ನು ಉಪವಾಸ ಮಾಡಬಿಡಲಿಲ್ಲ. ಅದು ಗೀತೆಯ ತಾಮಸಿಕ ತಪಸ್ಸಾಗುವುದೆಂದು ಹೇಳಬಿಟ್ಟರು. ಉಪವಾಸ ತಜ್ಞರಾದ ಭನ್ಸಾಲಿ, ವಿನೋಬ ಮತ್ತು ಕಾಕಾ ಸಾಹೇಬರೊಡನೆ ಬೇಕಾದರೆ ಕೇಳಿಕೊಳ್ಳಿರೆಂದರು. ಗುರು ಕಲಿಸಿದ ಪಾಠ ಗುರುವಿಗೇನೇ ಕಲಿಸ ಹೊರಟ ಶಿಷ್ಯ ಸಾತೆಯವರು. ಈಗಬೇಡ, ಇನ್ನೊಮ್ಮೆ ಬರುತ್ತೇನೆಂದು ವಾರ್ನಿಂಗ್ ಕೊಟ್ಟು ಹೋಗಿದ್ದಾರೆ ಬಂದಂತೆ ಹಿಂದೆ.

೦೦೦ ೦೦೦ ೦೦೦

ಡಾಕ್ಟರ್ ಪೌಲ್ ಬ್ರಂಟನರೆಂಬ ಆಂಗ್ಲೇಯರೊಬ್ಬರು ಒಂದೊಮ್ಮೆ ದೊಡ್ಡ ಯೋಗಿಯಾಗಿ ಬಿಟ್ಟರು. ಯೋಗಶಾಸ್ತ್ರ ಪಾರಂಗತರು. ಶ್ರೀರಮಣ ಮಹರ್ಷಿಗಳ ಆಪ್ತ ಶಿಷ್ಯರು, ಹಿಂದೂ ಯೋಗಿ, ಋಷಿಗಳಲ್ಲೆಲ್ಲಾ ಬಹಳ ವಿಶ್ವಾಸವುಳ್ಳವರೆಂದು ಅವರ ಹೊಗಳಿಕೆಯೇ ಹೊಗಳಿಕೆ! ಡಾಕ್ಟರ್ ಬ್ರಂಟನರು ಪುಸ್ತಕ ಬರೆದು ದುಡ್ಡು ಮಾಡಿದರು. ಆಶ್ರಮಕ್ಕೇನೂ ಪಾಲುಕೊಡಲಿಲ್ಲ.

೦೦೦ ೦೦೦ ೦೦೦

ಇನ್ನೊಮ್ಮೆ ಡಾಕ್ಟರ್ ಬ್ರಂಟನರು ಶ್ರೀರಮಣಾಶ್ರಮಕ್ಕೆ ಹೋದಾಗ ಮಹರ್ಷಿಗಳ ಬಳಿಗೆ ಅವರಿಗೆ ಪ್ರವೇಶ ಸಿಗಲಿಲ್ಲ. ಅವರು ನಿರಾಶೆಗೊಂಡು ಹಿಂದೂ ಯೋಗಿ ಮತ್ತು ಋಷಿಗಳು ಭ್ರಾಂತಿ ಲೋಕದಲ್ಲಿ ವಿಹರಿಸುತ್ತಿರುವರು. ಅವರಿಂದ ಪ್ರಕೃತಿಯ ರಹಸ್ಯಕ್ಕೆ ಬೀಗದಕೈ ಸಿಗಲಾರದು. ಅದಕ್ಕೆ ಬೌದ್ಧ ಧರ್ಮವು ಸಹಾಯಕಾರಿಯಾಗಿರುವುದೆಂದು ಹೇಳಹತ್ತಿದ್ದಾರೆ. ಹಿಂದೂಧರ್ಮವಾಯಿತು. ಇನ್ನು ಬೌದ್ಧ ಧರ್ಮ ಹಿಡಿದರೆ ಸರಿ.

೦೦೦ ೦೦೦ ೦೦೦

ಬಿಳಿಯವನೊಬ್ಬನು ಮತಾಂತರ ಹೊಂದುವುದು, ಇಲ್ಲವೆ ಹಿಂದೂ ಧರ್ಮಶಾಸ್ತ್ರದಲ್ಲಿ ಆಸಕ್ತನಾಗುವುದು. ಮಹತ್ವದ ವಿಷಯವೆಂದು ತಲೆಯಮೇಲೆ ಹೊತ್ತುಕೊಳ್ಳುವ [ಪುಟ ೧೯ಕ್ಕೆ]

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್ ಕೆ. ಆರ್. ಕೆ. ಶೆಟ್ ಬಿಲ್ಡಿಂಗ್, ಮಿಶ್ಶನ್ ಹೈಸ್ಕೂಲ್ ರೋಡು. ಅಥವಾ ಎಚ್. ವೆಂಕಟರಾಮಯ್ಯ ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಡಿಕ್ಟೇಟರರಿಗೆ ಯುದ್ಧ ಮಾಡುವ ಧೈರ್ಯವಿಲ್ಲ

ಡಿಕ್ಟೇಟರ ಮತ್ತು ಲೋಕಶಾಹಿ ರಾಷ್ಟ್ರಗಳು ಸಮಬಲವಾಗಿವೆ. ರಷ್ಯವು ಸೇರುವ ಕಡೆಯ ಬಲ ಹೆಚ್ಚುವುದು.

ಶಾಂತಿಯ ಸಂದರ್ಭದಲ್ಲೀಗ ಯುರೋಪಿನಲ್ಲಿ ಒಟ್ಟು ಶಸ್ತ್ರಸಿದ್ಧರಾಗಿರುವ 8½ ಮಿಲ್ಯ ಸೈನಿಕರಿರುವರೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ನೌಕಾ ಮತ್ತು ವೈಮಾನಿಕ ಸೈನ್ಯ ಸೇರಿರುವುದಿಲ್ಲ. ಲೋಕಶಾಹಿ ಮತ್ತು ಡಿಕ್ಟೇಟರಶಾಹಿ ರಾಷ್ಟ್ರಗಳ ಕಡೆಯಲ್ಲಿರುವ ಸೇನೆಯು ಬಹುತೇಕ ಸಮಸಮವಾಗಿದೆ ರಷ್ಯವು ಯಾರ ಕಡೆಗೆ ಹೋಗುವುದೋ ಅವರ ಬಲ ಹೆಚ್ಚುತ್ತದೆ. ಲೋಕಶಾಹಿ ರಾಷ್ಟ್ರಗಳ ಪಕ್ಷದಲ್ಲಿ ಒಟ್ಟು 2,875,000 ಸೇನೆ ಇರುತ್ತದೆ ಫ್ರಾನ್ಸಿನಲ್ಲಿ ಒಂದು ಮಿಲ್ಯ, ಇಂಗ್ಲೆಂಡಿನಲ್ಲಿ ಆರು ಲಕ್ಷ, ಪೋಲೆಂಡಿನಲ್ಲಿ 5 ಲಕ್ಷ, ಟರ್ಕಿಯಲ್ಲಿ 3 ಲಕ್ಷ, ರುಮೇನಿಯದಲ್ಲಿ 275,000 ಮತ್ತು ಗ್ರೀಸಿನಲ್ಲಿ 2 ಲಕ್ಷ ಸೈನಿಕರಿರುತ್ತಾರೆ. ಡಿಕ್ಟೇಟರಶಾಹಿ ಪಕ್ಷದಲ್ಲಿ ಒಟ್ಟು 2,700,000 ಸೈನಿಕರಿರುತ್ತಾರೆ ಜರ್ಮನಿಯಲ್ಲಿ 1,750,000, ಇಟೆಲಿಯಲ್ಲಿ 950,000, ಅಥವಾ ಹಂಗೇರಿಯ 2 ಲಕ್ಷ ಸೇನೆ ಸೇರಿದರೆ ಒಟ್ಟು 2,900,000 ಸೈನಿಕರಾಗುವರು ಸ್ಪೈನು ಡಿಕ್ಟೇಟರೊಂದಿಗೆ ಸೇರಿದರೆ 150,000 ಮತ್ತು ಯುಗೋಸ್ಲಾವಿಯ ಸೇರಿದಲ್ಲಿ 300,000 ಸೇನೆ ಮತ್ತೂ ಹೆಚ್ಚುವುದು ಸರ್ವಸಾಮಾನ್ಯ ಯುದ್ಧವೆದ್ದಲ್ಲಿ ಬಲ್ಗೇರಿಯ, ಹಾಲೆಂಡ್ ಪೋರ್ಚುಗಲ್ ಮತ್ತು ಸ್ವಿಝರ್ಲೆಂಡ್‌ಗಳು ಡಿಕ್ಟೇಟರ್‌ಶಾಹಿ ರಾಷ್ಟ್ರಗಳೊಂದಿಗೆ ಸೇರಲಾರವು ಇವುಗಳ ಸೇನೆ ಒಟ್ಟು 4 ಲಕ್ಷವಿದೆ. ಡಾನ್ಜಿಗಿನಲ್ಲಿ 10,000 ಸೈನಿಕರಿರುತ್ತಾರೆ ಇದರಲ್ಲಿ ಹಲವರು ಪೋಲಿಸ್ ಸೈನಿಕರಿರುತ್ತಾರೆ ರಷ್ಯದ ಅತಿ ದೊಡ್ಡದಾದ 2 ಮಿಲ್ಯ ಸೇನೆಯು ಯಾವ ಪಕ್ಷಕ್ಕೆ ಸೇರುವುದೋ ಆ ಕಡೆಯ ಬಲ ಹೆಚ್ಚುವುದು.

ಪ್ರಜಾಶಾಹಿ ರಾಷ್ಟ್ರಗಳ ಶಕ್ತಿಯೇ ಹೆಚ್ಚು.

ಜಪಾನಿನ ಸಹಾನುಭೂತಿಯು ಸಂಪೂರ್ಣವಾಗಿ ಡಿಕ್ಟೇಟರ್‌ಶಾಹಿ ರಾಷ್ಟ್ರಗಳ ಕಡೆ ಇರುವುದಾದರೂ ಯುದ್ಧದ ಸಂದರ್ಭದಲ್ಲಿ ಅದರಿಂದ ಇಟೆಲಿ ಮತ್ತು ಜರ್ಮನಿಗೆ ಹೆಚ್ಚಿನ ಸಹಾಯವೇನೂ ದೊರೆಯಲಾರದು. ಇಟೆಲಿ ಮತ್ತು ಜರ್ಮನಿಯ ಜಪಾನ ರಾಯಭಾರಿಗಳೂ, ಜಪಾನು ಜರ್ಮನಿ ಮತ್ತು ಇಟೆಲಿಗಳೊಂದಿಗೆ ಸೇರಿ ಒಂದಾಗಬೇಕೆಂದು ಸೂಚಿಸಿದರೂ ಜಪಾನ ಸರಕಾರವು ಅದಕ್ಕೊಪ್ಪಿರುವುದಿಲ್ಲ ಚೈನದ 2 ವರ್ಷಗಳ ಯುದ್ಧವೇ ಜಪಾನಿಗೆ ಸಾಕುಸಾಕಾಗಿದೆ ಅದು ಇನ್ನೊಂದು ಯುದ್ಧಕ್ಕೆ ಸಿದ್ಧವಿರಲಾರದು ತನ್ನ ಸ್ವಾರ್ಥ ಸಾಧನೆಗಾಗಿ ಡಿಕ್ಟೇಟರ್‌ಶಾಹಿ ರಾಷ್ಟ್ರಗಳೊಂದಿಗೆ ಸೇರಿ ನಡೆಯುವಂತೆ ತೋರಿಸಿಕೊಳ್ಳಬಹುದಷ್ಟೆ ರಷ್ಯವು ಪ್ರಜಾಶಾಹಿ ರಾಷ್ಟ್ರಗಳೊಂದಿಗೆ ಸೇರುವುದು ನಿಶ್ಚಯ. ರಷ್ಯಾ ಇಂಗ್ಲೆಂಡ್ ಮತ್ತು ಫ್ರಾನ್ಸಗಳೊಳಗಣ ಒಪ್ಪಂದದ ಕಟ್ಟಕಡೆಯ ಪರಿಣಾಮವೇನಾಯಿತೆಂದು ಈ ವರೆಗೂ ಸ್ಪಷ್ಟವಾಗಿ ತಿಳಿದಿಲ್ಲವಾದರೂ, ಈ ರಾಷ್ಟ್ರಗಳ ಸೇನಾತಜ್ಞರು ಇಷ್ಟರಲ್ಲೇ ಮಾತುಕತೆ ನಡಿಸಿರುವುದರಿಂದ ಯುದ್ಧವಾದರೆ ರಷ್ಯವು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೊಂದಿಗೆ ಸೇರುವುದು ನಿಶ್ಚಯ ಇನ್ನು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಕ್ಕೆ ಸೇರಿದ ಬೇರೆ ಬೇರೆ ರಾಷ್ಟ್ರಗಳ ಸೇನೆ ಪ್ರತ್ಯೇಕವಿರುತ್ತದೆ. ಅಮೇರಿಕದ ಸಹಾನುಭೂತಿಯು ಸಂಪೂರ್ಣವಾಗಿ ಪ್ರಜಾಶಾಹಿ ರಾಷ್ಟ್ರಗಳ ಪಕ್ಷಕ್ಕೆ ಸೇರುವುದಾದರೆ ಅಮೇರಿಕವು ಪ್ರಜಾಶಾಹಿ ರಾಷ್ಟ್ರಗಳ ಕಡೆಗೆ ಸೇರುವ ಸಂದರ್ಭ ಬರಬಹುದು ಇದು ಹೊರತು ಡಿಕ್ಟೇಟರಶಾಹಿ ರಾಷ್ಟ್ರಗಳ ಸಾಂಪತ್ತಿಕ ಸ್ಥಿತಿಯು ಒಹಳವಾಗಿ ಕಟ್ಟುಹೋಗಿದೆ. ದೀರ್ಘಕಾಲದ ಯುದ್ಧವನ್ನು ಅವುಗಳಿಗೆ ನಡಿಸಲು ಸಾಧ್ಯವೇ ಇಲ್ಲ. ಮಿಂಚಿನ ವೇಗದಿಂದ ವೈರಿ ರಾಷ್ಟ್ರಗಳ ಮೇಲೇರಿ ಹೋಗಿ ತಮ್ಮ ಸಂಪೂರ್ಣ ಬಲವನ್ನೊಮ್ಮೆಯೇ ಉಪಯೋಗಿಸಿ ಹೋರಾಡಿ ಥಕ್ಕನೆ ಜಯಶೀಲರಾದರಾಯಿತು ಇಲ್ಲವಾದರೆ ಅವರ ಸೋಲು ನಿಶ್ಚಯ ಮಿಂಚಿನ ವೇಗದ ಧಾಳಿಯೂ ಈಗ ಸಾಧ್ಯವಿಲ್ಲ ಯಾಕಂದರೆ ಪ್ರಜಾಶಾಹಿ ರಾಷ್ಟ್ರಗಳೂ ಈಗ ಯಾವ ಧಾಳಿಯನ್ನಾದರೂ ಜಯಶೀಲವಾಗಿ ತಡೆಗಟ್ಟಲು ಸಿದ್ಧವಾಗಿಯೇ ಇರುತ್ತವೆ

ಹಿಟ್ಲರರು ಹಿಂದೆ ಸರಿಯಹತ್ತಿದ್ದಾರೆ.

ಇತ್ತಲಾಗಿ ಸಾಲ್ಸಬರ್ಗನಲ್ಲಿಯೂ ಆ ನಂತರ ಬರ್ಚಿಸ್ ಗೆಡನಿನಲ್ಲಿಯೂ, ಇಟೆಲಿಯ ವಿದೇಶಮಂತ್ರಿ ಕೌಂಟ್ ಸಿಯಾನೋ, ಜರ್ಮನಿಯ ಮಂತ್ರಿ ಹರ್ ವಾನ್ ರಿಬೆಂಟ್ರೊಫ್ ಮತ್ತು ಹಿಟ್ಲರರೊಳಗೆ ನಡೆದ ದೀರ್ಘವಾದ ಮಾತುಕತೆಯ ಪರಿಣಾಮವಾಗಿ ಯುರೋಪಿನ ಎಲ್ಲಾ ಪ್ರಶ್ನೆಗಳ ಕುರಿತು ಇಟೆಲಿ ಮತ್ತು ಜರ್ಮನಿಗಳೊಳಗೆ ಹದಿನಾರಾಣೆ ಒಮ್ಮತವುಂಟಾಗಿದೆಯೆಂದು ಜರ್ಮನಿಯ ಪತ್ರಿಕೆಗಳು ಉದ್ಘೋಷಿಸಿದರೂ ಅದು ಕೇವಲ ಲೋಕದ ಕಣ್ಣಿಗೆ ಮಣ್ಣುಹಾಕುವ ಸುಳ್ಳು ಪ್ರಚಾರವೆಂಬುದು ಸ್ಪಷ್ಟವಿದೆ. ಯಾಕಂದರೆ ಡಾನ್ಜಿಗಿನ ಕುರಿತು ಇಷ್ಟರಲ್ಲೇ ರಾಜಿಪ್ರಸ್ತಾಪದ ಸುದ್ದಿಯುಂಟಾಗಿದೆ. ಹಿಟ್ಲರರು ಡಾನ್ಜಿಗಿನ ಲೀಗ್ ಕಮಿಶನರರಾದ ಪ್ರೊಫೆಸರ್ ಬರ್ಕಹಾರ್ಟರನ್ನು ಜರ್ಮನಿಗೆ ಕರೆಸಿ ಮಾತಾಡಿರುತ್ತಾರೆ. ರಾಜಿಯ ಶರ್ತುಗಳು ಹೊರಬಿದ್ದು ಸುಳಿಯಹತ್ತಿವೆ. ಮುಸಲೋನಿಯವರು ಮಧ್ಯಸ್ಥಿಕೆಮಾಡಿ ಜೆಕೋಸ್ಲೋವೇಕಿಯದ ಕುರಿತು ಮ್ಯುನಿಚ್ ಒಡಂಬಡಿಕೆ ಮಾಡಿದಂತೆ ಈ ಸಲವೂ ಡಾನ್ಜಿಗಿನ ಪ್ರಶ್ನೆಯ ಕುರಿತು ಮಧ್ಯಸ್ಥಿಕೆಮಾಡಲು ಇಟೆಲಿಯು ಮುಂದೆ ಬಂದಿರುವಂತೆ ತೋರುತ್ತದೆ ಕೇವಲ ಜರ್ಮನಿಗೆ ಸಂಬಂಧಿಸಿದ ಚಿಕ್ಕದೊಂದು ಬಂದರಿನ ಪ್ರಶ್ನೆಯ ಸಂಬಂಧವಾಗಿ ಇಟೆಲಿಯು ಯುದ್ಧದಲ್ಲಿ ಜರ್ಮನಿಯೊಂದಿಗೆ ಸೇರಲು ಸಿದ್ಧವಿಲ್ಲೆಂಬುದು ಇದರಿಂದ ಸ್ಪಷ್ಟವಿದೆ. ಕೌಂಟ್ ಸಿಯಾನೋರವರು ಈ ವಿಷಯವನ್ನು ಸ್ಪಷ್ಟವಾಗಿ ಹಿಟ್ಲರರಿಗೆ ತಿಳಿಸಿರಬೇಕು ಆದುದರಿಂದಲೇ ರಾಜಿ ಪ್ರಸ್ತಾಪದ ಗಾಳಿಸುದ್ದಿಯು ಈಗ ಹಾರಾಡಹತ್ತಿರುವುದು, ಆದರೆ ಪ್ರಜಾಶಾಹಿ ರಾಷ್ಟ್ರಗಳು ಥಕ್ಕನೆ ರಾಜಿಗೆ ಒಪ್ಪುವದಾಗಿಲ್ಲ. ಮ್ಯುನಿಚ್ ಒಡಂಬಡಿಕೆಯ ಪರಿಣಾಮವು ಅವುಗಳ ಹೃದಯಕ್ಕೆ ನಾಟಿಹೋಗಿದೆ. ಡಿಕ್ಟೇಟರರ ಮಾತು ಮತ್ತು ಒಪ್ಪಂದದ ಮೇಲೆ ವಿಶ್ವಾಸವಿಡಲು ಸಾಧ್ಯವಿಲ್ಲೆಂಬುದನ್ನು ಮ್ಯುನಿಚ್ ಒಪ್ಪಂದವು ಲೋಕ ವಿಶ್ರುತಗೊಳಿಸಿದೆ ಆದುದರಿಂದ ಇಂಗ್ಲೆಂಡ್, ಫ್ರಾನ್ಸ ಮತ್ತು ಪೋಲೆಂಡುಗಳು ಶಂಕೆಗೊಂಡು ಸುಮ್ಮನಿರುತ್ತವೆ. ಡಾನ್ಜಿಗಿನ ಕುರಿತು ಕೂಡಲೇ ಯುದ್ಧಹೂಡುವ ಹಿಟ್ಲರರ ಆಟೋಪವೆಂತೂ ನಿಂತುಹೋಗಿವೆ. ಮುಂದೆ ಹೋದವರವರು ಹಿಂದೆ ಸರಿಯಹತ್ತಿದ್ದಾರೆ.

Madary Pills
(REGISTERED)
ಮದಾರಿ ಗುಳಿಗೆಗಳು
(ರಿಜಿಸ್ಟರ್ಡ್)
ಜಯಪ್ರದ ಹಾಗೂ ಅನುಭವದಾಯಕ ದಾಮಿಷಾಣ- ಸನ್ನಿ, ಅಪಸ್ಮಾರ ಇತ್ಯಾದಿಗಳಿಗೆ
ದೋಷರಹಿತವಾದ ಆಕ್ಯುರ್ವೇದ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟದ್ದು. ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ
ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನಪುಂಸಕತೆ ಸೂತಿಕಾವಾಯು, ಗರ್ಭಾಶಯ ದಾಹ, ನಿದ್ರೆ ಬಾರದಿರುವಿಕೆ, ಹುಚ್ಚು, ಉನ್ಮಾದ, ಸ್ವಪ್ನೇಂದ್ರಿಯ, ಬಾಲಗ್ರಹ, ವಿಸ್ಮರಣೆ ಮಾನಸಿಕ ಮತ್ತು ಮೆದುಳಿನ ಅಸ್ವಸ್ಥತೆಗಳನ್ನು ಹೋಗಲಾಡಿಸುತ್ತದೆ
ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳ ದ್ವೀಪ, ಮೊದಲಾದ ಪ್ರಮುಖ ರಾಷ್ಟ್ರಗಳ ಪ್ರಸಿದ್ಧ ಡಾಕ್ಟರರುಗಳು ಮದಾರಿ ಮಾತ್ರೆಗಳಿಗೆ ಪದೇ ಪದೇ ಆರ್ಡರುಗಳನ್ನು ಕೊಡುವುದೇ ನಮ್ಮ ಗುಳಿಗೆಗಳ ಶಕ್ತಿಯನ್ನು ಬಲಪಡಿಸುವಂತಹ ದಕ್ಕೆ ನಿದರ್ಶನ
50 ಗುಳಿಗೆಗಳುಳ್ಳ ಸೀಸೆಯೊಂದಕ್ಕೆ ಕ್ರಯ ರೂ 3 8 0 ಬಯಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಿರಿ:-
The Imperial Chemist Coy,
106 Vithalbhai Patil Road Bombay 4

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು
ನುಣುಪಾಗಿಯೂ ನಯವಾ
ಗಿಯೂ ಇರಿಸುವ ಮತ್ತು
ದೇಹ ಸೌಂದರ್ಯವನ್ನು
ಬೆಳಗಿಸುವ ಸಾಬೂನುಗಳಲ್ಲೆಲ್ಲಾ
ಸರ್ವೋತ್ಕೃಷ್ಟವಾದುದು
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನು
ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು
ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

SAVING MONEY AND TIME

Thousands of prudent and thriving business-men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting They have chosen the CANARA BANK because here they never need wait We make a point of giving every customer immediate and personal attention.

RESOURCES OF
A CRORE

ESTD 1906
CANARA BANK
LIMITED

ಬೊಂಬಾಯಿಯಲ್ಲಿ ಮೋಟರ್ ಕಾರ್ಖಾನೆ

ಹೆನ್ರಿ ಫೋರ್ಡರ ಉದಾರಾಶಯ.

ಸರ್. ವಿಶ್ವೇಶ್ವರಯ್ಯನವರು 1936 ರಿಂದ ಬೊಂಬಾಯಿಯಲ್ಲಿ ಮೋಟರ್ ಕಾರ್ಖಾನೆ ಸ್ಥಾಪಿಸುವ ಚಳವಳಿ ಮಾಡುತ್ತಿರುವ ಪ್ರಯತ್ನವು ಸಫಲವಾಗುವಂತಿದೆ. ಶೇಟ್ ವಾಲ್ ಚಂದ್ ಹೀರಾಚಂದರು ಈ ಕಾರ್ಖಾನೆಯ ಮ್ಯಾನೇಜಿಂಗ್ ಏಜೆಂಟರಾಗಲಿರುವರು. ಅಮೇರಿಕದ ಸುಪ್ರಸಿದ್ಧ ಮೋಟರ್ ನಿರ್ಮಾಣಕರಾದ ಹೆನ್ರಿ ಫೋರ್ಡರು, ತಮ್ಮ ಕಾರ್ಖಾನೆಯಿಂದ ಯಂತ್ರ ಕಲಾ ಶಿಕ್ಷಣದಲ್ಲಿ ಪರಿಣತರಾದ ತಜ್ಞರನ್ನು ಬೊಂಬಾಯಿಗೆ ಕಳುಹಿಸಿ 5 ವರ್ಷ ಹಿಂದೀಯರನ್ನು ತರಬೇತಿ ಮಾಡಲೊಪ್ಪಿರುವರು. ಬೊಂಬಾಯಿ ಕೈಗಾರಿಕೆ ಖಾತೆಯ ಡೈರೆಕ್ಟರರಾದ ಶ್ರೀ. ಅದ್ವಾನಿಯವರು ಈ ಸಂಬಂಧವಾಗಿ ವ್ಯವಸ್ಥೆ ಮಾಡಲು ಅಮೇರಿಕಕ್ಕೆ ಹೋಗಿರುವರು. ಈ ಕಂಪೆನಿಯ ಪಾಲುಭಂಡವಾಳದಲ್ಲಿ ಜನರು ವಿನಿಯೋಗಿಸುವ ಹಣಕ್ಕೆ ಬೊಂಬಾಯಿ ಸರಕಾರವು 10 ವರ್ಷಗಳ ವರೆಗೆ ಸೇಕಡ 3½ಯಂತೆ ಬಡ್ಡಿ ಕೊಡಲೊಪ್ಪಿರುವುದು. ಸರ್. ವಿಶ್ವೇಶ್ವರಯ್ಯನವರ ಅಂದಾಜಿನಂತೆ ಈ ಕಾರ್ಖಾನೆಗೆ ಒಟ್ಟು ರೂ. 1½ ಕೋಟಿ ಭಂಡವಾಳ ಬೇಕಾಗುವುದು. ಪ್ರಥಮ ವರ್ಷದಲ್ಲಿ 4000 ಮತ್ತು 5 ವರ್ಷಗಳ ಅನಂತರ ಪ್ರತಿ ವರ್ಷ 15000 ಮೋಟರ್ ಕಾರುಗಳನ್ನು ಈ ಕಾರ್ಖಾನೆಯಲ್ಲಿ ತಯಾರಿಸಬಹುದೆಂದು ಕಲ್ಪಿಸಲಾಗಿದೆ. ಬೆಲೆ ವಿದೇಶೀ ಕಾರುಗಳಿಗಿಂತ ಕಡಿಮೆಯಾಗಿರುವುದು. ಅಮೇರಿಕದ ಕ್ರಿಸ್ಲರ್ ಕಂಪೆನಿಯವರು ಭಾರತದ ಹಿತ ದೃಷ್ಟಿಯಿಂದ ಈ ಕಂಪೆನಿಯ ಪ್ರೋತ್ಸಾಹಕ್ಕಾಗಿ ಪ್ರಯತ್ನಿಸಲಿರುವರು. ಮ್ಯಾನೇಜಿಂಗ್ ಏಜೆನ್ಸಿ ಪಡೆದಿರುವ ವಾಲ್‌ಚಂದ್ ಹೀರಾಚಂದರು ಯುರೋಪಿನಲ್ಲಿದ್ದು ಇಂಗ್ಲೆಂಡಿನ ಕಾರ್ಖಾನೆಗಳೊಡನೆ ವಿಚಾರ ವಿನಿಮಯ ಮಾಡುತ್ತಿದ್ದಾರೆ. ಕಾರ್ಖಾನೆಗೆ ಬೇಕಾದ ಉಕ್ಕನ್ನು ಟಾಟಾ ಕಂಪೆನಿಯವರು ಒದಗಿಸಿ ಕೊಡುತ್ತಾರೆ. ಹಿಂದೂದೇಶದಲ್ಲಿ ಮೋಟರ್ ಕಾರುಗಳು ತಯಾರಿಸಲ್ಪಟ್ಟರೆ ತನಗೇನೂ ಕಾಂಪಿಟೀಶನಿನ ಭಯವಿಲ್ಲೆಂದು ಹೆನ್ರಿ ಫೋರ್ಡರು ಹೇಳುತ್ತಾರೆ. ಕ್ರಾಂತಿಕಾರಕರಾದ ಕಮ್ಯೂನಿಸ್ಟರ ಸೋವಿಯೆಟ್ ಸರಕಾರದ ಮೋಟರ್ ಕಾರ್ಖಾನೆಯ ಯೋಜನೆಗೆ ಭಂಡವಾಳಶಾಹಿ ರಾಷ್ಟ್ರಗಳೆಲ್ಲ ವಿರೋಧವಿದ್ದಾಗ ಸಹಾಯ ಮಾಡಿದವರು ಹೆನ್ರಿ ಫೋರ್ಡರು. 5 ವರ್ಷಗಳ ಅನಂತರವೂ ಹಿಂದೀಯರನ್ನು ಅಮೇರಿಕದ ತನ್ನ ಕಾರ್ಖಾನೆಗೆ ತರಬೇತಿಗಾಗಿ ತೆಗೆದುಕೊಳ್ಳಲು ಫೋರ್ಡರು ಒಪ್ಪಿರುವರು.

ನೆಹರುಗಳ ಚೈನದ ಪ್ರವಾಸ

ನೆಹರುಗಳ ಚೀನದ ಪ್ರವಾಸ
190 ಚೀನೀ ಸಂಸ್ಥೆಗಳ ಸ್ವಾಗತ

ಪಂಡಿತ ನೆಹರುಗಳು ಇದೇ ತಾ. 20 ನೇ ಅಪರಾಹ್ನ ಫ್ರಾನ್ಸಿನ ವಿಮಾನ ಕಂಪೆನಿಯ ವಿಮಾನದಲ್ಲಿ ಹೊರಟು, ಕಲ್ಕತ್ತ, ರಂಗೂನು ಬಾಂಕೊಕ್, ಮತ್ತು ಹನೋಯಿ ಮಾರ್ಗವಾಗಿ, ಚೈನದ ರಾಷ್ಟ್ರೀಯ ಸರಕಾರದ ಈಗಣ ಮುಖ್ಯ ಪಟ್ಟಣವಾದ ಚುಂಕಿಂಗಿಗೆ ಹೋಗುವರು. ಅವರ ಮುಂದಿನ ಕಾರ್ಯಕ್ರಮವು ಚುಂಕಿಂಗಿನ ಲೀಗ್ ಆಫ್ ನೇಶನ್ಸ್ ಶಾಖೆಯ ಮೇಲೆ ಅವಲಂಬಿಸಿದೆ. ಹಿಂದೀ ವೈದ್ಯಕೀಯ ಶುಶ್ರೂಷಾ ಪಥಕದ ಈಗಣ ಕೇಂದ್ರ ಸ್ಥಳವಾದ ಯೆನಾನನ್ನೂ ಪಂಡಿತರು ಸಂದರ್ಶಿಸಲಿರುವರು. ಪಂಡಿತರು ವೈಯಕ್ತಿಕ ಜವಾಬ್ದಾರಿಯಿಂದ ಈ ಪ್ರವಾಸವನ್ನು ಕೈಕೊಂಡುದಾಗಿದೆ. ಅವರು ಒಂದು ತಿಂಗಳ ವರೆಗೆ ಚೈನದಲ್ಲಿ ಸಂಚರಿಸಲಿರುವರು. ಆದರೆ ಅಂತರ ರಾಷ್ಟ್ರೀಯ ಬಿಕ್ಕಟ್ಟೇನಾದರೂ ಉಂಟಾಗುವಂತಾದರೆ ಆ ಮೊದಲೇ ಹಿಂದಿರುಗುವರು. ಚುಂಕಿಂಗಿನ ಲೀಗ್ ಆಫ್ ನೇಶನ್ಸ್ ಶಾಖೆ ಮತ್ತು ಇತರ 190 ಬೌದ್ಧ ಕ್ರೈಸ್ತ ಮುಸಲ್ಮಾನ ರಾಷ್ಟ್ರೀಯ ಸಂಸ್ಥೆಗಳೂ, ಹಲವು ಜನತಾ ಸಂಘಗಳೂ ಪಂಡಿತರಿಗೆ ಸ್ವಾಗತದ ಸಂದೇಶ ಕಳುಹಿಸಿ ಅವರು ಚೀನವನ್ನೊಮ್ಮೆ ಸಂದರ್ಶಿಸಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಂಡಿರುವವು. ಪಂಡಿತರ ನೇತೃತ್ವದಲ್ಲಿ ಹಿಂದುದೇಶವು ಚೀನೀಯ ರಾಷ್ಟ್ರೀಯ ಆಕಾಂಕ್ಷೆಯ ಕುರಿತು ತೋರಿಸಿರುವ ಸಹಾನುಭೂತಿಗಾಗಿ ಅವರನ್ನು ಈ ಸಂಘಗಳು ವಂದಿಸಿರುತ್ತವೆ. "ನೆಹರುಗಳು ಚೀನವನ್ನು ಸಂದರ್ಶಿಸುವುದರಿಂದ ಚೀನೀ ಜನತೆಯಲ್ಲಿ ಬಹು ಮಹತ್ವದ ಉತ್ಸಾಹವನ್ನುಂಟುಮಾಡದಿರಲಾರದು. ಅದರಿಂದಾಗಿ ಚೈನ ಮತ್ತು ಹಿಂದುದೇಶಗಳೊಳಗೆ ಪರಸ್ಪರ ಸಹಾನುಭೂತಿ ಮತ್ತು ಸೌಹಾರ್ದವು ಬೆಳೆಯಲು ಪಂಥವಾಗುವುದೆಂದು ಶಾಂತಿನಿಕೇತನದ ಚೀನೀ ಭವನದ ಆಚಾರ್ಯರಾದ ಪ್ರೊಫೆಸರ್ ಟಾನ್‌ಯೂನ್ ಶಾನರು ಅಭಿಪ್ರಾಯ ಪಟ್ಟಿರುವರು. ಕೆಲಸಮಯದ ಮೊದಲು ಪ್ರೊಫೆಸರ್ ಟಾನರು ಸ್ವದೇಶಕ್ಕೆ ಹೋಗಿದ್ದಾಗ ಪಂಡಿತ ನೆಹರುಗಳಿಂದ ಸಂದೇಶ ಒಂದನ್ನೊಯ್ದಿದ್ದರು. ಅದು ಚೈನದ ಎಲ್ಲಾ ಪತ್ರಿಕೆಗಳಲ್ಲಿಯೂ ಪ್ರಕಟಿಸಲ್ಪಟ್ಟು ಚೀನೀಯರಲ್ಲಿ ಉತ್ಸಾಹವನ್ನುಂಟುಮಾಡಿದ್ದಿತು.

ಜಪಾನರಿಗೆ ಚೈನವನ್ನು ಗೆಲ್ಲಲು ಸಾಧ್ಯವಿಲ್ಲ.
ಚೈನವು ಹೊಸ ರೀತಿಯ ಯುದ್ಧಕ್ರಮವನ್ನಾರಂಭಿಸುವುದು.

ಶಾಂಘಾಯಿಯಲ್ಲಿ ಚೈನಾ ಮತ್ತು ಜಪಾನುಗಳೊಳಗೆ ಭೀಕರ ಕದನವಾಗಿ ಈಗ ೨ ವರ್ಷಗಳಾದುವು. ಈ ಸಂದರ್ಭದಲ್ಲಿ ಮಾರ್ಶಲ್ ಚ್ಯಾಂಗರು ಶಾಂಘಾಯಿ ಜನತೆಗೆ ಈ ಕೆಳಗಣ ಸಾರಾಂಶದ ಸಂದೇಶ ವಿತ್ತಿರುವರು. "ಪ್ರತಿದಿನವೂ ನಮ್ಮ ಕಟ್ಟಕಡೆಯ ವಿಜಯ ಸಮೀಪಿಸುತ್ತಿದೆ. ಜಪಾನಿಗೆ ಚೈನವನ್ನು ಗೆಲ್ಲಲು ಎಂದೂ ಸಾಧ್ಯವಿಲ್ಲ. ಚೈನವು ಶರಣಾಗತವಾಗಿ ಗುಲಾಮತನವನ್ನು ಸ್ವೀಕರಿಸುವುದನ್ನಂತೂ ಆಲೋಚಿಸಲೇ ಸಾಧ್ಯವಿಲ್ಲ. ಜಪಾನರನ್ನು ಎಡೆಬಿಡದೆ ವಿರೋಧಿಸಿ ವಿಜಯ ಸಾಧಿಸುವ ಮಾರ್ಗವೊಂದೇ ಉಳಿದಿದೆ ಚೀನೀಯರಿಗೀಗ. ರಾಷ್ಟ್ರೀಯ ಸರಕಾರದ ಅನುಸತ್ಯದ ವೆಚ್ಚಕ್ಕೇನೂ ಈಗ ಹಣದ ಕೊರತೆಯಿರುವುದಿಲ್ಲ. ಚೈನದ ಅಪಾರ ಸಂಪತ್ತಿನಿಂದಾಗಿ ರಾಷ್ಟ್ರೀಯ ಸರಕಾರದ ನಾಣ್ಯವಾದ ಡೋಲರಿನ ಬೆಲೆಗೆ ಭದ್ರತೆಯು ಇದ್ದೇ ಇರುವುದು. ಆದುದರಿಂದ ಪ್ರಕೃತ ಎಲ್ಲರೂ ಚೀನೀ ಡೋಲರಿಗೆ ಬೆಂಬಲವಿತ್ತು ಅದು ಬಿದ್ದು ಹೋಗದಂತೆ ನೋಡಬೇಕು. ಜಪಾನರ ಪ್ರಬಲ ಪ್ರಚಾರವನ್ನು ವಿರೋಧಿಸುವ ಆತ್ಮಬಲದ ಕೋಟೆಯನ್ನು ಭದ್ರವಾಗಿ ಕಟ್ಟಬೇಕು." ಜಪಾನರು ಚೈನದ ದೊಡ್ಡ ಗೋಡೆಯನ್ನನುಸರಿಸಿ ಧಾಳಿ ನಡಿಸಿದಾಗ ಮತ್ತು ಅನಂತರ ಒಳಪ್ರದೇಶಕ್ಕೆ ನುಗ್ಗಿದಾಗ ಚೈನವು ಅವರನ್ನು ತಡೆಗಟ್ಟ ಮಾತ್ರ ಹೋರಾಡುತ್ತಿತ್ತು. ಈಗ ಸಹಸ್ರಗಟ್ಲೆ ಚೀನೀ ಹಳ್ಳಿಗರು ಸೈನಿಕ ತರಬೇತಿ ಪಡೆದು ಯುದ್ಧಕ್ಕೆ ಸಿದ್ಧರಾಗಿದ್ದಾರೆ. ಆದುದರಿಂದ ಇನ್ನು ಮುಂದೆ ಚೀನೀಯರೇ ಜಪಾನರ ಮೇಲೇರಿ ಹೋಗಿ ಹೋರಾಡ ತೊಡಗುವರೆಂದು" ಶಾಂಘಾಯಿಯ ಘೋರ ಯುದ್ಧದಲ್ಲಿ ಚೀನೀ ಸೇನೆಯ ನಾಯಕರಾಗಿದ್ದ ಜನರಲ್ ಚೇಂಗ್‌ಚುಂಗರು ಪ್ರಕಟಗೊಳಿಸಿರುವರು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. S. No. 182/1939

ಲಕ್ಷ್ಮೀನಾರಾಯಣ ಭಟ್ಟ ವಗೈರಾ—ವಾದಿಗಳು
ಮತ್ತು
ಈಶ್ವರ ಉಡ್ಪ ವಗೈರಾ —ಪ್ರತಿವಾದಿಗಳು.
3. ಶಂಕರನಾರಾಯಣ } ಸೋಮಯ್ಯನವರ
4. ಕೃಷ್ಣಯ್ಯ } ಮಕ್ಕಳು

ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಹಾಲಿ ಮೃತಪಟ್ಟ ಪುತ್ತಿಗೆ ಶಂಕರನಾರಾಯಣಯ್ಯ, ಇವರ ಮಗ 2ನೇ ಪ್ರತಿವಾದಿ ಸುಬ್ರಾಯರು ವ 3-4ನೇ ಪ್ರತಿವಾದಿಗಳ ತಂದೆ ಸೋಮಯ್ಯ ಇವರು ಗೋಪಾಲಕೃಷ್ಣ ಭಟ್ರಿಗೆ ತಾ. 31-5-1919 ರಲ್ಲಿ ರೂ. 1800ಕ್ಕೆ ರಿಜಿಸ್ಟ್ರೀ ಮಾಡಿ ಬರಕೊಟ್ಟ ಹೋರದಾದ ದಸ್ತಾವೇಜಿನ ಹಕ್ಕನ್ನು ಸದರಿ ಗೋಪಾಲಕೃಷ್ಣ ಭಟ್ರು ಮೃತಪಟ್ಟ ನಂತರ ಅವರ ಮಕ್ಕಳಾದ ಸುಬ್ರಾಯಭಟ್ಟ, ವಿಠಲದಾಸಭಟ್ಟ, ಹರಿದಾಸಭಟ್ಟ ಇವರಿಂದ ಬೇರೆಬೇರೆಯಾಗಿ ರಿಜಿಸ್ಟ್ರೀ ಮಾಡಿ ಟ್ರಾನ್ಸ್‌ಫರ್ ಹೊಂದಿದ ವಾದಿಗಳು ದಾಖಲುಮಾಡಿದ ಸದರಿ ದಾವೆಯು ತಾರೀಕು 14-9-1939 ಕ್ಕೆ ಇಟ್ಟಿರುವುದರಿಂದ ಸದ್ರಿ ವ್ಯವಹಾರದಲ್ಲಿ ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಆ ದಿನ ಬೆಳಿಗ್ಗೆ 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ತಿಳುಹಿಸಿಕೊಳ್ಳತಕ್ಕದ್ದು. ತಪ್ಪಿದರೆ ಈ ದಾವೆಯ ತೀರ್ಮಾನವು ನಿಮ್ಮ ಪರೋಕ್ಷದಲ್ಲಿ ಮಂಜೂರಿಸಲಾಗುವದು. ತಿಳಿದಿರಲಿ.

By order of the Court.

ಕಾರ್ಕಳ 15-6-39 | P. Y. Upadhyaya B.A.,LL.B. *Vakil for Plaintiffs*

ಸ್ಥಾಪನೆ: ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡುಗಳು, ಪೇಟೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿ ಕೊಡಲಾಗುತ್ತದೆ.



CROWN RUBBER STAMP CO.,
Balmat Road, MANGALORE.
Includ by the Mysore Govt. Stores, Purchase Committee in the list of approveFdlrms

ಆಯುರ್ವೇದ ಕೀರ್ತಿವಂತರ ರತ್ನ
55 ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗುಳಿಗೆಯು

(ರಿಜಿಸ್ಟರ್ಡ್)

ಪುರುಷರು ಕಳೆಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧ ಮತ್ತು ಧಾತುವೃದ್ಧಿ ಹೊಂದುತ್ತದೆ ಸ್ವಪ್ನದಲ್ಲಿ, ಮಿತಿಮೀರಿ ಸ್ತ್ರೀ ಸಂಗ, ಕೆಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತು (ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ; ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ. ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ. ಎಷ್ಟೇ ಅಂತೂ ಇದರ ಉಪಯೋಗದಿಂದ ಮಾಯವಾಗುತ್ತದೆ ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದ್ದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವುದು. 32 ಗುಳಿಗೆಗಳ ಡಬ್ಬಿಯ ಬೆಲೆ ರೂ. 1 ಮಾತ್ರ.

ಆಫೀಸು ಸಮಯ:—ಬೆಳಿಗ್ಗೆ 8ರಿಂದ 12 ಗಂಟೆ, ಮಧ್ಯಾಹ್ನ 2ರಿಂದ 8.

Vaidya Shasthry Kalyanji Taker *365, Kalabadevi Road* *(opp. Temple)* Hanuman Lane Corner, BOMBAY 2.	ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಾಕರ್ 365, ಕಾಲಬಾದೇವಿ ರೋಡು, (ದೇವಾಲಯದ ಎದುರು.) ಹನುಮಾನ್ ಗಲ್ಲಿಯ ನಾಕೆ, ಮುಂಬಯಿ ನಂ. 2

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degres. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

ಸೌಭಾಗ್ಯಸಿದ್ಧಿ ತಾಯಿತ



ದೇಹಸಂಪತ್ತು, ಕುಟುಂಬದ ಸುಖ-ಸೌಖ್ಯ, ಉದ್ಯೋಗದಲ್ಲಿ ಯಶಸ್ಸು, ವಿದ್ಯೆಯಲ್ಲಿ ಜಯ, ಕೋರ್ಟ ವ್ಯವಹಾರದಲ್ಲಿ ಮೇಲುಗೈ, ದುರದೃಷ್ಟಗಳ ದುಷ್ಪರಿಣಾಮ ನಿವಾರಣೆ ಇನ್ನಿತರ ಸುಖ-ಸೌಭಾಗ್ಯಾದಿ ಲಾಭಕ್ಕಾಗಿ 'ಜಯ ವಶೀಕರಣ' ತಾಯಿತವನ್ನೇ ಧರಿಸಿರಿ.

ಕ್ರಯ: ರೂ. 2-8-0. ವಿ. ಪಿ. 0-7-0
ಪ್ರತ್ಯೇಕ, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Hanuman Ahsramam,
Tirutani, S. India.

ಕಾಂಗ್ರೆಸಿನಲ್ಲಿ ಪಂಗಡಗಳು

ಭಾರತದ ರಾಷ್ಟ್ರೀಯ ಗಗನದಲ್ಲಿ ಇಂದು ವಿಚಿತ್ರ ಪರಿಸ್ಥಿತಿಯುಂಟಾಗಿದೆ ಕಾಂಗ್ರೆಸಿನಲ್ಲೇ ಅನೇಕ ಪಂಗಡಗಳು ಹುಟ್ಟಿಕೊಳ್ಳುತ್ತಲಿವೆ ಎಲ್ಲಿಯಾದರೂ ನಾಲ್ಕು ಮಂದಿ ಕಲೆತು ತಮ್ಮತಮ್ಮಲ್ಲೇ ಚರ್ಚಿಸಿ, ತಮ್ಮದೇ ಆದ ಪ್ರತ್ಯೇಕ ಪಂಗಡವನ್ನು ಸ್ಥಾಪಿಸಿದರೆ ತಾವು ಜಗತ್ತಿನ ದೃಷ್ಟಿಯಲ್ಲಿ ಬಹಳ ಹೆಸರು ಪಡೆಯುವೆವೆಂದು ಭಾವಿಸಿ ಪ್ರತ್ಯೇಕ ದಳವನ್ನು ಸ್ಥಾಪನೆ ಮಾಡಿಯೇ ಬಿಡುವರು ಈ ರೀತಿ ಕಾಂಗ್ರೆಸಿನೊಳಗೇ ಅರ್ಧ ಡಜನ್ನಿಗಿಂತ ಹೆಚ್ಚು ಪಂಗಡಗಳಾಗಿ ಹೋಗಿವೆ ನಮ್ಮೆದುರಿನಲ್ಲಿ ಈಗ ಇರುವ ಅತ್ಯಂತ ಮುಖ್ಯವಾದ ಸಮಸ್ಯೆಯೆಂದರೆ ಕಾಂಗ್ರೆಸ್ಸಿನ ನೇತೃತ್ವದ್ದು "ಗಾಂಧಿಜಿಯವರು ವೈಜ್ಞಾನಿಕತೆಯ ಕಡೆಗೆ ತಿರಗಿರುವ 'ಅಂತರ್ವಾಣಿ'ಯು ಬಿನ್ನಭಿನ್ನವಾದ ರೂಪವನ್ನು ಧರಿಸಿ ನಮ್ಮೆದುರಿಗೆ ಒಂದು ನಿಲ್ಲುತ್ತಿದೆ ಅದನ್ನು ತಿಳಿಯಲು ನಾವು ಅಸಮರ್ಥರಿದ್ದೇವೆ ಅವರ 'ನವಜ್ಯೋತಿ'ಯಲ್ಲಿಯೂ ಸಹ ನಮಗೆ ಘೋರ ಅಂಧಕಾರವೇ ತೋರುತ್ತಿದೆ ಅವರಿಂದಾದದ್ದನ್ನೂ ಮಾಡಿ ಮುಗಿಸಿದರು ನಮ್ಮನ್ನು ಎಷ್ಟು ಮುಂದಕ್ಕೆ ತರಲು ಸಾಧ್ಯವಿತ್ತೋ, ಅಷ್ಟು ತಂದರು ಈಗ ಕಾಂಗ್ರೆಸಿನ ಮುಖಂಡತ್ವವು ಅವರ ಕೈಲಿರುವುದು ಹಿತಕರವಲ್ಲ'ವೆಂದು ಒಂದು ಗುಂಪಿನವರು ಹೇಳುವರು. ಮತ್ತೊಂದು ಪಂಥದವರು ದೇಶದ ಸದ್ಯದ ವಿಕಟ ಪರಿಸ್ಥಿತಿಯನ್ನು ಪಾರುಗಾಣಿಸಬೇಕಾದರೆ, ಗಾಂಧಿಜಿಯವರೇ ಸರಿಯಾದ ನಾಯಕರು" ಎನ್ನುತ್ತಾರೆ.

ವಿವಿಧತೆಯ ಪರಿಣಾಮ

ಈ ರೀತಿ ಭಿನ್ನಭಿನ್ನ ವ್ಯಕ್ತಿಗಳ ವಿಚಾರಗಳು ಬೇರೆಬೇರೆಯಾಗಿವೆ ಭಿನ್ನಾಭಿಪ್ರಾಯಗಳಿದ್ದರೂ ಸಹ, ಎಲ್ಲರೂ ಪರಸ್ಪರ ಕಲೆತು ಕೆಲಸ ಮಾಡುವಂತೆ ಮಾಡಲು ಜವಾಹರಲಾಲರು ವಿಶೇಷಪ್ರಯತ್ನ ಮಾಡುತ್ತಿರುವರು ಆದರೆ ಚಿಕಿತ್ಸೆ ನಡೆದಷ್ಟೂ

"ಎಚ್ಚರಿಕೆ! ಎಚ್ಚರಿಕೆ!"

ಹೀಗೆಂದು ಅಪಾಯದ ಗಂಟೆ ಬಾರಿಸುತ್ತಿದೆ!

ನಾವು ಈಗ ಎಲ್ಲಿದ್ದೇವೆಂಬುದನ್ನು ಓದಿ ತಿಳಿಯಿರಿ

ಶಿಸ್ತನ್ನು ಪಾಲಿಸಬೇಕೆ? ಅಥವಾ ಮುರಿಯಬೇಕೆ?

ರೋಗವು ವೃದ್ಧಿಯಾಗುತ್ತಲೇ ಇದೆ ವಿವಿಧತೆಯ ಕಡೆಗೆ ಗಮನಕೊಟ್ಟದ್ದರ ಕಹಿಯಾದಫಲವನ್ನು ನಾವು ಈಗ ಉಣ್ಣುತ್ತಿದ್ದೇವೆ ಮಂತ್ರಿಪದವಿಗಳನ್ನು ಸ್ವೀಕಾರ ಮಾಡಿದ್ದರ ಪರಿಣಾಮವಾಗಿ, ಕೆಲವು ತೋರಿಕೆಯ ವೈಭವವುಂಟಾಗಿದೆಯೆನ್ನಬಹುದು ಆದರೆ ಒಳಗಿನ ದುರ್ಗುಣಗಳು ಮಾತ್ರ ವಿಪರೀತವಾಗಿ ಹೆಚ್ಚಿ ಈ ವೈದಾನಿಕತೆಯು ನಮಗೊಂದು ಶಾಪವಾಗಿ ಪರಿಣಮಿಸಿದೆ ನಾನಾ ವಿಧವಾದ ಕಲಹಗಳುಂಟಾಗುತ್ತಿವೆ ಎಲ್ಲರೂ ಮನಸ್ವೀ ಕೆಲಸಮಾಡಬಯಸುತ್ತಿರುವರು. ಶ್ರೀ ಸಭಾಷರ ನೂತನ ನಿರ್ಮಿತ 'ಅಗ್ರಗಾಮಿ ದಳ'ವಂತೂ ಶಿಸ್ತನ್ನು ಲಕ್ಷ್ಯಕ್ಕೇ ತರದೆ ಮುಂದೊತ್ತುತ್ತಿದೆ.

ಸಂಸ್ಥೆಗೆ ಶಿಸ್ತು ಬೇಕು

ನಾವೆಲ್ಲಿಯೇ ಇರಲಿ, ಯಾವ ಸಂಸ್ಥೆಯಲ್ಲೇ ಇರಲಿ ಶಿಸ್ತನ್ನು ಪಾಲಿಸುವುದು ಅನಿವಾರ್ಯವಾಗಿರಬೇಕು. ನಮ್ಮ ಸಿದ್ಧಾಂತಗಳು ಎಷ್ಟೇ ಉಗ್ರವಾಗಿರಲಿ, ನಮ್ಮ ಕಾರ್ಯಕ್ರಮಗಳು ಎಷ್ಟೇ ಕಠಿಣವಾಗಿರಲಿ, ನಾವು ಹೆಚ್ಚು ನಮ್ರರೂ ಅನುಶಾಸನ ಪ್ರಿಯರೂ ಆಗಲೆತ್ನಿಸಬೇಕು ಅನುಶಾಸನ ರಹಿತವಾದ ಸಂಸ್ಥೆಯು ಜೀವಿಸಿರುವುದು ಅಸಂಭವ ಸಂಸ್ಥೆಯ ಸರ್ವ ವ್ಯವಸ್ಥೆಯೂ ಅದರ ಅನುಶಾಸನವನ್ನೇ ಅವಲಂಬಿಸಿರುವುದು ಎಲ್ಲರ ಅಭಿಪ್ರಾಯಗಳೂ ಒಂದೇ ರೀತಿಯಲ್ಲಿರಲು ಸಾಧ್ಯವಿಲ್ಲ ಶಿಸ್ತನ್ನು ಪಾಲಿಸಿಕೊಂಡ ಮೇಲೆ ಸಹ, ಭಿನ್ನಾಭಿಪ್ರಾಯವಿರಬಹುದು ಆದರೆ ಅದಕ್ಕೆ ಮಿತಿ ಇರಬೇಕು ಸಂಸ್ಥೆಯ ಮೂಲ ಸಿದ್ಧಾಂತಗಳಲ್ಲಿ ನಮಗೆ ಭಿನ್ನಾಭಿಪ್ರಾಯವಿದ್ದಲ್ಲಿ, ನಮಗೆ ಉಳಿಯುವುದು ಎರಡೇ ದಾರಿಗಳು, ಆ ಸಂಸ್ಥೆಯೊಳಗೇ ಇದ್ದುಕೊಂಡು ಅದರ ನಿಯಮಗಳನ್ನು ಪಾಲಿಸಿಕೊಂಡು, ತಮ್ಮ ಸಿದ್ಧಾಂತಗಳ ಪ್ರಚಾರ ಮಾಡುವುದು ಅಥವಾ ಆ ಸಂಸ್ಥೆಯೊಡನೆ ಸಂಬಂಧವನ್ನು ದೂರಮಾಡಿಕೊಳ್ಳುವುದು ನಾವು ಅದರಿಂದ ಹೊರಗೂ ಬಾರದೆ (ಹೊರಗ ಬರಲು ಯಾವ ಅಡ್ಡಿಯೂ ಇರವುದಿಲ್ಲ) ಅದರ ನಿಯಮಗಳನ್ನೂ ಸಹ ಪಾಲಿಸದೆ ಇದ್ದಲ್ಲಿ "ತೊಟ್ಟಿಲನ್ನು ತೂಗುತ್ತ ಕೂಸನ್ನು ಚಿವುಟಿದಂತಾ"ಗುವುದು ಆದುದರಿಂದ ಪ್ರತಿಯೊಂದು ಸಾರ್ವಜನಿಕಸಂಸ್ಥೆಯ ಸದಸ್ಯರೂ ಶಿಸ್ತಿಗೊಳಪಟ್ಟಿರಬೇಕು ಇಲ್ಲದಿದ್ದರೆ ಅವುಗಳಲ್ಲಿ ಭಯಂಕರ ಉಚ್ಛೃಂಖಲತೆಯು ಸಾಮ್ರಾಜ್ಯವೇರ್ಪಟ್ಟು, ಸಂಸ್ಥೆಯು ಅಸ್ತಿತ್ವಕ್ಕೇ ಸಂಚಕಾರ ಬರುವುದು

ಮೇರೆ ಮಿತಿಬೇಕು

ಒಂದು ಸಂಸ್ಥೆಯಲ್ಲಿ ಒಂದೇ ವಿಧವಾದ ವಿಚಾರಗಳುಳ್ಳವರಿರುವುದು ಅಸಂಭವ. ಸಂಸ್ಥೆಯ ಕಾರ್ಯಕ್ಷೇತ್ರವು ಎಷ್ಟು ವಿಸ್ತೃತ ಮತ್ತು ವ್ಯಾಪಕವಾಗವುದೋ, ಅಷ್ಟು ಮತಭೇದವೂ ಇರಲೇಬೇಕಾಗುವುದು. ಕಾಂಗ್ರೆಸ್ಸು ನಮ್ಮ ದೇಶದ ಅತ್ಯಂತ ದೊಡ್ಡದಾದ ರಾಜಕೀಯಸಂಸ್ಥೆ ಇದು ದೇಶದ ಸಮಸ್ತ ಜನರ ಪ್ರತಿನಿಧಿ ಸಂಸ್ಥೆ ಇದರಲ್ಲಿ ಪ್ರತಿಯೊಂದು ಸಮಾಜದ ಪ್ರತಿಯೊಂದು ವಿಚಾರದ ಜನರಿರುವರು ಇದರಲ್ಲಿ ಪ್ರಗತಿಗೆ ಸಂಬಂಧಪಟ್ಟಂತ ವಿಚಾರಗಳಿರುವುವು ಇದು ವೃದ್ಧಿಯಾಗುತ್ತಿರುವ ಶಕ್ತಿಯ ಸೂಚನೆ ಆದರೆ ಪಂಗಡ ನಿರ್ಮಾಣಗಳಿಗೂ ಮಿತಿ ಇರಬೇಕು. ಕೆಲವು ದಿನಗಳಿಂದ ನಮ್ಮಲ್ಲಿಯ ರಾಜಕೀಯ ವಾಯುಮಂಡಲವು ವಿಷಪೂರಿತವಾಗುತ್ತಾ ಬಂದಿದೆ ಕಾಂಗ್ರೆಸ್ಸಿನ ವಾತಾವರಣವೆಲ್ಲವೂ ಪರಸ್ಪರ ಅವಿಶ್ವಾಸ, ಘೃಣತೆ, ಇವುಗಳ ಕಾರಣದಿಂದ ದೂಷಿತವಾಗಿ ಹೋಗಿದೆ ಸ್ವಾರ್ಥಪರತೆಯು ಅಧಿಪತ್ಯ ನಡೆಸಿದೆ ಒಂದರಿಂದ ಅನೇಕರಾಗ ವೆ ಸಂದರ್ಭವುಂಟಾಗಿದೆ. ನಮ್ಮಲ್ಲಿ ಕೇವಲ ಸಿದ್ಧಾಂತಗಳಲ್ಲಿನ ಭೇದಗಳಲ್ಲವೆ, ದ್ವೇಷವೂ ಸಹ ತುಂಬಿಹೋಗಿದೆ 'ಕಿಸಾನ್ ಸಭೆ'ಯು ತನ್ನದೇ ಆದ ರಾಗವನ್ನು ಆಲಾಪಿಸುತ್ತಿದೆ ರಾಯ್ ವಾದಿಗಳು ಗುಂಪೇ ಬೇರೆ ಇದೆ.

ಪಂಗಡವಾಯಿತು. ತಿಕ್ಕಾಟಕ್ಕೆ ಮೊದಲಾಯಿತು

ಕೆಲವು ಕಮ್ಯೂನಿಸ್ಟರು ಇವರೆಲ್ಲರಿಗಿಂತ ದೂರ ಇರಲು ತಾವೇ ಬೇರೆ ಸಂಸ್ಥೆಯನ್ನು ಸ್ಥಾಪಿಸಿರುವರು ಗಾಂಧಿವಾದಿಗಳ ಪ್ರತ್ಯೇಕವಾದ ಸಂಘಟನೆ ಇರಲಿಲ್ಲ, ಆದರೆ ಅವರೂ ಸಹ ಬೇರೆ ಬೇರೆ ದಳಗಳನ್ನು ಮಾಡಿಕೊಳ್ಳುವುದರಲ್ಲಿನ ಓಟದಲ್ಲಿ ಹಿಂದೆ ಬೀಳಬಹುದೆಂಬ ಭಯದಿಂದ ತಮ್ಮಲ್ಲಿ ಸಂಘಟನಾಶಕ್ತಿಯನ್ನುಂಟುಮಾಡಿಕೊಳ್ಳುತ್ತಿರುವರು. ಚುನಾವಣೆಯ ಸಮಯದಲ್ಲಿ ಇವರ ಸಂಘಟನೆಯ ಶಕ್ತಿಯು ಗೊತ್ತಾಗುತ್ತಿತ್ತು ಸಾಲದ್ದಕ್ಕೆ ಸಮತಾವಾದಿಗಳ ಗುಂಪು ಬೇರೆ ಇದೆ ಗಾಂಧಿ ವಾದಿಗಳ ಗುಂಪನ್ನು ಬಿಟ್ಟರೆ ಇದೇ ಹೆಚ್ಚು ಶಕ್ತಿಯುತವಾಗಿದೆ ಕಾಂಗ್ರೆಸಿನ ಶಕ್ತಿಗೆ ಪೋಷಕವಾಗಿ ಇತರ ಸಂಸ್ಥೆಗಳೂ ಸಹ ಕಾಂಗ್ರೆಸ್ಸಿನ ಅಂಗವಾಗಿ ಇರಬಹುದು ತಮ್ಮ ಅಸ್ತಿತ್ವವನ್ನು ಭಿನ್ನರೀತಿಯಿಂದ ತೀರಿಯುವ ವರೆಗೂ ಅವುಗಳ ಮೇಲೆ ಯಾವ ಆರೋಪಣೆಯನ್ನೂ ಮಾಡುವಂತಿ

ಕಾಂಗ್ರೆಸು ಶಿಸ್ತು

ಶ್ರೀ ನರಿಮನ್
1937

ಡಾ॥ ಖಾರೆ
1938

ಶ್ರೀ ಸುಭಾಷಚಂದ್ರ ಬೋಸ್
1939

?

....??
1940

ಲ್ಲಿ. ಆದರೆ ಈಗಿರುವುದೇನು? ಚಿಕ್ಕ ಚಿಕ್ಕ ಸಂಸ್ಥೆಗಳು ಸ್ವಲ್ಪ ಗರಿಬಲಿತ ಕೂಡಲೇ ಮಹಾ ಸಂಸ್ಥೆಗಳ ಬೆಂಗೆ ನೀರುತರುವಂತೆ ಆಗುತ್ತಿವೆ ಇಂದು ಕಾಂಗ್ರೆಸ್ಸಿನಲ್ಲಿ ತಿಕ್ಕಾಟಕ್ಕೆ ಆರಂಭವಾಗಿದೆ ಇದೇ ಸಮಯದಲ್ಲೇ ನಮ್ಮ ದೇಶದ ಒಬ್ಬ ದೊಡ್ಡ ಯೋದ್ಧರು ಮತ್ತೊಂದು ಪ್ರಸ್ಥಾಪನೆಮಾಡಬೇಕೆಂದರೆ! ಸರಿ, ಕಾಂಗ್ರೆಸ್ಸಿನಿಂದ ದೂರವಾಗಿದ್ದವರನ್ನು ಸೇರಿಸಿಕೊಂಡು ಬೇರೆ ಒಂದು ಸಂಸ್ಥೆಯನ್ನು ನಿರ್ಮಾಣಮಾಡಿಯೇ ಬಿಟ್ಟರು ಜುಲೈ 9ರಲ್ಲಿ ಕಾಂಗ್ರೆಸ್ ವಿರೋಧಿ ಪ್ರದರ್ಶನವನ್ನು ಮಾಡಿಬಿಟ್ಟರು ವಾಮಪಂಥಿಗಳ ಸಂಘಟನೆಯು ಹೆಸರಿನಲ್ಲೇ ಇದಕ್ಕೆ ವೈರ್ಯವಿದ್ದುದು ಅಲ್ಲಿಯೂ ಐಕಮತ್ಯವಾಗಲಿಲ್ಲ

ಬೇಡವಾದರೆ ಹೊರಬರಬಹುದು

ಕಾಂಗ್ರೆಸ್ಸು ಒಂದು ಸೈನಿಕ ಸಂಸ್ಥೆ. ಇತರ ಸಂಸ್ಥೆಗಳಿಗಿಂತ ಸೈನಿಕ ಸಂಸ್ಥಗಳಲ್ಲಿ ಶಿಸ್ತಿರಬೇಕು. ನಮಗೆ ಕೊಡಲ್ಪಡುವ ಆಜ್ಞೆಯು ಎಂತಹುದೇ ಇರಲಿ, ವಿಚಾರಲವಕಾಶವೇ ಇಲ್ಲ ಸಹಿಸಲಾಗದಿದ್ದಲ್ಲಿ ಒಳಗೇ ಇದ್ದು ಕೆಲಸಮಾಡುವ ಧೈರ್ಯವೂ ಇಲ್ಲದಿದ್ದಲ್ಲಿ ಸುಮ್ಮನೇ ಹೊರಗೆ ಹೊರಟು ಹೋಗಬೇಕು ನಮ್ಮ ಹಿಂದಿನ ರಾಷ್ಟ್ರಪತಿಗಳೇನು ಮಾಡಿದರು? ಎಲ್ಲರಿಗೂ ಗೊತ್ತೇ ಇದೆ ಅವರು ಎಷ್ಟು ದೊಡ್ಡ ಯೋದ್ಧರೆಂಬುದನ್ನು ಎಲ್ಲರೂ ಬಲ್ಲರು ಅವರ್ಯಂತಲೂ ಅವರು ಹೆಚ್ಚಿನ ಭಾವುಕರು. ಎಲ್ಲರಲ್ಲಿಯೂ ಮಾನವ ಸಹಜವಾದ ದೌರ್ಬಲ್ಯವಿದ್ದೇ ಇರುತ್ತವೆ. ಸುಭಾಷರು ಇದರಿಂದ ಹೊರತೇನೂ ಅಲ್ಲ. ಅಗ್ರದಳದ ನಿರ್ಮಾಣವಾದುದು ವಾಮಪಕ್ಷದವರ ಐಕಮತ್ಯಕ್ಕೆಂದು ಆದರೆ ಅದು ಆದುದೇ ಬೇರೆ. ಈಗ ಅದು ಕಾಂಗ್ರೆಸ್ಸಿಗೇ ವಿರೋಧವಾಗಿ ಹೋಗಿದೆ. ಕಾಂಗ್ರೆಸ್ ಹೈಕಮಾಂಡಿನವರ ಕೃತ್ಯಗಳು ಕೆಲವು ಇದಕ್ಕೆ ಕಾರಣವಾದರೂ, ಅದರ ನಿರಾಕರಣೆಯ ರೀತಿಯು ಇದಲ್ಲ.

ಶ್ರೀ ಸುಭಾಷರ ಪಂಥ

ಒಡಕಿನಿಂದ ಕಾಂಗ್ರೆಸ್ ಬಲಗೊಳ್ಳುವುದೆಂದು ಸುಭಾಷರ ಮತ ಕಾಂಗ್ರೆಸೊಳಗಿರುವ ದೌರ್ಬಲ್ಯಯುಕ್ತವಾದ ವಾತಾವರಣವನ್ನು ಕಂಡೂ ಇವರು ಈ ರೀತಿ ಹೇಳಿರುವುದು ಆಶ್ಚರ್ಯ. ಶ್ರೀಯುತರು ಅಗತ್ಯಕ್ಕಿಂತ 'ಮುಂದೆ' ಹೋಗಿರುವರು ರಾಷ್ಟ್ರಪತಿಗಳ ಆದೇಶದ ಉಲ್ಲಂಘನೆಮಾಡಿ ಪ್ರದರ್ಶನಮಾಡುವುದು ವಿಚಿತ್ರವಾದುದು! ಸುಭಾಷರು ಅಲ್ಲೇ ನಿಲ್ಲದೆ, ಮುಂಬಯಿಯ ಮದ್ಯವಿರೋಧಪಕ್ಷಕ್ಕೂ ಸಹ ವಿರೋಧವಾಗಿರುವರು. ಈಗ ಎಲ್ಲೆಲ್ಲಿಯೂ ನವೀನ ಯೋಜನೆಗಳನ್ನುಳ್ಳವರೇ ಹೆಚ್ಚಾಗುತ್ತಿರುವರು. ಈ ಹೊಸ ಬೆಳಕು ಹೆಚ್ಚಾಗಿ ಹೋಗಿ, ಸ್ವಚ್ಛವಾಗಿ ಕಾಣಿಸುವುದರ ಬದಲು ಕಣ್ಣೇ ಮಂಕಾಗುವಂತೆ ಆಗುವುದೋ ಏನೋ? ಪಂ.ಜವಾಹರರು ಭೋಸರ ಕಾರ್ಯವನ್ನೂ ವಿರೋಧಿಸಿದರು ಶ್ರೀಯಂ. ಎನ್ ರಾಯರೂ ಸಹ ತಮ್ಮ ಅನುಯಾಯಿಗಳನ್ನು ಅಗ್ರಗಾಮಿ ದಳಕ್ಕೆ ಸೇರದಂತೆ ಹೇಳಿದರು ಜಯಪ್ರಕಾಶ ನಾರಾಯಣರೂ ಸಹ ಈ ಪ್ರದರ್ಶನವನ್ನು ವಿರೋಧಿಸಿದರು.

ಇಷ್ಟೆಲ್ಲಾ ಏಕೆ?

ಇಷ್ಟೆಲ್ಲಾ ಏಕೆ? ಕಾಂಗ್ರೆಸ್ಸಿನಲ್ಲಿ ಕೊಳೆತು ನಾರುತ್ತಿರುವುದನ್ನು ಬಿಸಾಡುವುದಕ್ಕಾಗಿ ಎಂದು ಸುಭಾಷರ ವಾದ. ಬಹುಮತದಳದ ಕಾಂಗ್ರೆಸನ್ನು ತಮ್ಮ ಕೈಯಿಂದ ಬಿಟ್ಟುಕೊಡಲು ಸಿದ್ಧರಾಗಿಲ್ಲ ಗಾಂಧಿವಾದಿಗಳ ಮರೆಯಲ್ಲಿ, ಗಾಂಧಿಜಿಯವರ ಹೆಸರಿನಲ್ಲಿ ಕಾಂಗ್ರೆಸಿನೊಳಗೆ ಅನೇಕ ಅನಾಚಾರಗಳು ನಡೆಯುವುವು. ಸನಾತನಿಗಳು ಹೇಗೆ ರಾಮನಾಮವನ್ನು ಉಪಯೋಗಿಸಿಕೊಳ್ಳುವರೋ ಹಾಗೆ ಇಂದು ಗಾಂಧಿವಾದಿಗಳು ಗಾಂಧಿಜಿಯ ಹೆಸರನ್ನೂ ಉಪಯೋಗಿಸಿಕೊಳ್ಳುತ್ತಿರುವರು. ಯಾವ ಘೋರ ಪಾಪವನ್ನೇ ಮಾಡಿರಲಿ, ರಾಮನಾಮಸ್ಮರಣೆಯಿಂದ ಅದರಿಂದ ಮುಕ್ತರಾಗಿ ಹೋಗುವರು ತಾನೇ, ಗಾಂಧಿವಾದಿಗಳೆನಿಸಿಕೊಳ್ಳುವರಲ್ಲಿ ಕೆಲವರು ನಿಜವಾದ ಗಾಂಧಿಭಕ್ತರೂ ಇರುವರು, ಮತ್ತೆ ಕೆಲವರು ಮಂತ್ರಿ ಮಂಡಲಗಳಿಂದ ಲಾಭಹೊಂದಬೇಕೆಂದಿರುವರು. ಕೆಲವರು ಬಂಡವಾಳಗಾರರೂ ಇದ್ದಾರೆ. ಶುದ್ಧ ಹೃದಯಿಗಳಾದ ಗಾಂಧಿವಾದಿಗಳಿಂದ ಯಾವ ಭಯವೂ ಇಲ್ಲ ಉಳಿದವರಿಲ್ಲರ 'ನೆರಳಿನಲ್ಲಿ ಬೆಂಕಿ'ಯೇ.

ವಾಮ ಪಂಥಿಗಳಲ್ಲೂ, ನಿಜವಾದ ಗಾಂಧಿವಾದಿಗಳಂತೆ ಕೆಲವರು ಪ್ರಗತಿಶೀಲರಿರುವರು ನಿಜವಾದ ದೇಶಭಕ್ತರಿರುವರು ಆದರೆ ಕೆಲವರು ಮಂತ್ರಿಮಂಡಲಗಳಿಂದ ಲಾಭಹೊಂದಬೇಕೆಂದಿದ್ದರೂ ಆಗಲಿಲ್ಲ ಇದನ್ನೆಲ್ಲ ನೋಡಿದರೆ, ಕೇವಲ ಪ್ರಗತಿಶೀಲ ಭಾವನೆಯಿಂದಲೇ ಸುಭಾಷರು ಹೊರಟಿರುವರೆಂದು ಹೇಳಲಾಗುವುದಿಲ್ಲ ಇದಕ್ಕೆ ಅವರು ಬೇಕಾದ ಕಾರಣವನ್ನು ಕೊಡಲಿ, ಇದರಿಂದ ಕಾಂಗ್ರೆಸಿನ ಶಕ್ತಿಯು ಭದ್ರವಾಯಿತೆನ್ನಲು ಅಡ್ಡಿಯಿಲ್ಲ ನಾವು ಸುಭಾಷರನ್ನು ಕಳೆದುಕೊಂಡದ್ದು ಅವರಲ್ಲಿನ ದೋಷಗಳಿಂದಲ್ಲವೆಂದಾಗ ನಮಗೆ ಬಹಳ ದುಃಖವಾಗುತ್ತದೆ ಇಂದು ಇಬ್ಬರ ಜಗಳದಲ್ಲಿ ಕಾಂಗ್ರೆಸ್ಸನ್ನು ಸುಗಮವಾಗಿ ನಡೆಸಿಕೊಂಡುಹೋಗಬೇಕಾಗಿದೆ. ಕಾಂಗ್ರೆಸ್ಸಿನ ಜನರು ಬಹಳ ಎಚ್ಚರಿಕೆಯಿಂದಿರಬೇಕು ನಮ್ಮ ಕಿವಿಯಲ್ಲಿ ಅಪಾಯದ ಗಂಟೆಯ ಶಬ್ದವು ಕೇಳಬರುತ್ತಿದೆ .. ಎಚ್ಚರಿಕೆ, ಸಾವಧಾನ!

(ಉದಯವಾಣಿ)

WANTED

Qualified Higher & Secondary Grade Trained (Canarese) Women Teachers on a pay Rs 18-1/2-25 and Rs 20-2/2-30-1/2-35 per mensem respectively for appointment in Board Elementary Schools from the following communities.

Secondary Grade Trained Women Teachers

1 Scheduled Classes 2 Mahomedan.
3 Anglo Indian or Christian or non Asiatic
4 Brahmin 5 Non Brahmin Hindu

Higher Grade Trained Women Teachers

1. Mahomedan. 2 Scheduled classes

The applications stating qualifications (Educational and Special if any) age, community and whether married or unmarried should reach the undersigned by 4-9-1939

South Kanara Dt Board Office, Mangalore 15—8—1939 (*Sd.*) **K Vittal Shetty,** *President, District Board South Kanara*

Madary Pills

(REGISTERED)

ಮದಾರಿ ಗುಳಿಗೆಗಳು

(ರಿಜಿಸ್ಟರ್ಡ್)

ಜಯಪ್ರದ ಹಾಗೂ ಅನುಭವದಾಯಿನಿ ರಾಮಬಾಣ– ಸನ್ನಿ, ಅಪಸ್ಮಾರ ಇತ್ಯಾದಿಗಳಿಗೆ

ದೋಷರಹಿತವಾದ ಅತ್ಯಮೂಲ್ಯ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟದ್ದು. ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ

ಅಂಗ ದೌರ್ಬಲ್ಯದಿಂದುಂಟುಗುವ ನಿದ್ರಾಭಂಗ, ನಪುಂಸಕತ್ವ, ಸೂತಿಕಾವಾಯು, ಗರ್ಭಪಾತ, ದಾಹ, ನಿದ್ರೆಯಲ್ಲಿ ಮೂತ್ರವಿಸರ್ಜನೆ, ಹುಚ್ಚು, ಉನ್ಮಾದ, ಸ್ಪರ್ಶೇಂದ್ರಿಯ, ಬಾಲಗ್ರಹ, ಮತ್ತಿತರ ಮಾನಸಿಕ ಮತ್ತು ಮೆದುಳಿನ ಅಕ್ಷಮತೆಗಳನ್ನು ಹೋಗಲಾಡಿಸುತ್ತದೆ

ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳ ದ್ವೀಪ. ಮೊದಲಾದ ಪ್ರಮುಖ ರಾಷ್ಟ್ರಗಳ ಸುಪ್ರಸಿದ್ಧ ಡಾಕ್ಟರರುಗಳು ಮದಾರಿ ಮಾತ್ರೆಗಳಿಗೆ ಪದೇ ಪದೇ ಆರ್ಡರುಗಳನ್ನು ಕೊಡುವುದೇ ನಮ್ಮ ಗುಳಿಗೆಗಳ ಖ್ಯಾತಿಯನ್ನು ಒಲಿಸಿದ ಪಂತಹ ಪ್ರಶಸ್ತಿ ನಿದರ್ಶನ

50 ಗುಳಿಗೆಗಳಿರುವ ಸೀಸೆಯೊಂದಕ್ಕೆ ಕ್ರಯ ರೂ 3 8 0 ಬಯಕೆಯುಳ್ಳವರು ಕೆಳಗಿನ ವಿಳಾಸದವರಿಗೆ ಬರೆಯಿರಿ—

The Imperial Chemist Coy, 106, Vithalbhai Patel Road Bombay 4

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S. No 107. ೧೯೩೯

1. ಪಿ ವೆಂಕಟರಾವ್ (ಪ್ರೌಢ)
2. ಪಿ. ಸಂಜೀವ ರಾವ್

ವಾದಿರು—

ಮತ್ತು

ವೆಂಕಮ್ಮ ಹೆಂಗಸು ಕೂಡಾ ಪ್ರತಿವಾದಿರು— 3ನೇ ಪ್ರತಿವಾದಿ ಮಂಗಳೂರು ತಾಲೂಕು ಕೊಂಡೆ ಮೂಲಗ್ರಾಮದಲ್ಲಿರುವ ಕೊರಪಳು ಹೆಂಗಸಿನ ಮಗಳು ದೇವಕಿ ಹೆಂಗಸಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದರೆ—

ಪ್ರತಿವಾದಿರ ಹಿರಿಯ ಹಾಲಿಮೃತಪಟ್ಟ ರಾಮಣ್ಣ ಶೆಟ್ಟಿಯು 1ನೇ ವಾದಿಗೆ ತಾ. 11-7 1907ರಲ್ಲಿ ರಿಜಿಸ್ತ್ರಿ ಬರಕೊಟ್ಟ ಮೂಲಗೇಣಿ ಎದುರ್ಗೆ ಪ್ರಕಾರ ವಾದಿರಿಗೆ ಕಳದ 1933ನೇ ಇಸವಿಯ ಪ್ಯಾದೆಯ ರಾಗ್ಯಾತು ಬರತಕ್ಕ ಬಾಕಿಗೋಸ್ಕರ ದಾವಾ ಆಸ್ತಿ ಸ್ವಾಧೀನತೆಗೂ ವಗೈರೆ ನಿವೃತ್ತಿ ಕೇಳಿ ದಾಖಲುಮಾಡಿದ ಸದರಿ ದಾವೆಯು ತಾ. 11 9-1939ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಗಳು ಇದ್ದಲ್ಲಿ ಅವುಗಳನ್ನು ಆ ದಿನ ಬೆಳಗ್ಗೆ 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ತಿಳುಹಿಸಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಸದರಿ ದಾವೆಯು ನಿಮ್ಮ ಪರೋಕ್ಷದಲ್ಲಿ ತೀರ್ಮಾನಿಸೋಣಾಗುವುದು. ತಿಳಿದಿರಲಿ,

(By Order of the Court,)

ಕಾರ್ಕಳ, 15 6-39. **P V. Upadhyaya,** B A LL B Vakil for Plaintiffs

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಶ್ವಾಸಕಾಸ, ಎದೆನೋವು ಇವುಗಳಿಗೆ ದಿವ್ಯ ಔಷಧ.

ಪೌಂಡ್ 1ರ ರೂ 2-8-0, ½ ಪೌಂಡಿಗೆ ರೂ 1–5–0.

ಕಸ್ತೂರಿಮಿಶ್ರಣ ದಶಮೂಲ.

ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು ಬಾಟ್ಲಿ 1ರ ರೂ 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ

ಔಷಧಿ ವಿಕ್ರಯ ಸ್ಥಳ ಕೆನರಾ ಟ್ರೇಡರ್ಸ್ ಲಿಮಿಟೆಡ್, ಪುತ್ತೂರು, ಶ್ರೀ ರಾಮಾ ಸ್ಟೇಶನರಿ ಹೌಸ್, ಕಾಸರಗೋಡು ವಿಟ್ಠಲ್ ನಾರಾಯಣ ಶೆಣೈ, ಮಜಗಾಂವ್, ಬೊಂಬಾಯಿ, ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗಳೂರು ಸ್ಟೋರ್ಸ್, ಮಡಿಕೇರಿ, ಕೃಷ್ಣ ಫಾರ್ಮಸಿ, ಕುಂದಾಪುರ ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು, ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ. ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೬೪ ಪೇಜುಗಳು ಇರುವ ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಖರೀದಿಸಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುವರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss watch Co. Book Sellers Post Box No 68 G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 68. ಮದ್ರಾಸ್

ಕೆಲವೇ ದಿನಗಳಲ್ಲಿ ಯುರೋಪಿನ ಅದೃಷ್ಟ ನಿಶ್ಚಯ

ಜರ್ಮನರ ಅಸಹಿಷ್ಣುತೆ

ಕೆಲವೇ ದಿನಗಳ ಪ್ರಶ್ನೆ

ಡಾನ್ಜಿಗಿನ ಪ್ರಶ್ನೆಯನ್ನು ಇತ್ಯರ್ಥಿಸುವ ಕುರಿತು ಹಿಟ್ಲರರು ಮಾಡಿರುವ ಪ್ಲೇನನ್ನು ಇನ್ನು ಕೆಲವೇ ದಿನಗಳಲ್ಲವರು ಜ್ಯಾರಿಗೆ ತರುವ ಸಂಭವ ತೋರುತ್ತದೆ. ಪೋಲಂಡಿಗೆ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಬೆಂಬಲವೀಯುವ ವಿಷಯದಲ್ಲಿ ಈಗ ಜರ್ಮನರಿಗೇನೂ ಸಂದೇಹವಿರುವುದಿಲ್ಲ. ಆದರೆ ಹಿಟ್ಲರರು ಮುಂದಿಟ್ಟ ಹೆಜ್ಜೆಯನ್ನು ಈಗ ಹಿಂದಿಡುವ ಕಾಲ ಮೊದಲೇ ಸಂದುಹೋಗಿದೆ. ಇಂದೀಗ ಡಾನ್ಜಿಗನ್ನು ವಶಪಡಿಸಿಕೊಳ್ಳುವುದು ಜರ್ಮನಿಯ ಗೌರವದ ಪ್ರಶ್ನೆಯಾಗಿದೆ. ಯುದ್ಧದಲ್ಲಿ ಅಪಜಯವಾದರೂ ಚಿಂತೆಯಿಲ್ಲ. ಡಾನ್ಜಿಗಿನ ವಿಷಯದಲ್ಲಿ ಏನನ್ನೂ ಬಿಟ್ಟುಕೊಡಲು ಸಾಧ್ಯವಿಲ್ಲೆಂದೇ ಜರ್ಮನರ ಅಭಿಮತ.

ಪೋಲಂಡನ್ನು ನಾಶಪಡಿಸುವ ಯತ್ನ

ಇಂದೀಗ ಡಾನ್ಜಿಗು ಜರ್ಮನಿಯ ಚಳವಳದ ಕೇಂದ್ರವಲ್ಲ. ಜರ್ಮನ್ ಅಲ್ಪಸಂಖ್ಯಾಕರಿಗೆ ಪೈಶಾಚಿಕಪೀಡೆಯಿತ್ತು ಹಿಂಸಿಸಿ, ಜರ್ಮನ್ ಜನಾಂಗವನ್ನು ತಿರಸ್ಕರಿಸಿ ಧಿಕ್ಕರಿಸಿ ನಡೆಯುವ ಪೋಲಂಡಿನ ಸ್ವಾತಂತ್ರ್ಯವನ್ನು ನಿರ್ನಾಮಮಾಡಿ, ಅದನ್ನು ತುಂಡು ತುಂಡಾಗಿ ವಿಂಗಡಿಸಿ ನಾಶಗೊಳಿಸಬೇಕೆಂದೇ ಜರ್ಮನರ ಕ್ರೋಧಾವೇಶ ಕಳೆದ ವರ್ಷ ಜೆಕೊಸ್ಲೋವೇಕಿಯವನ್ನು ಆಕ್ರಮಣಮಾಡುವಾಗಣ ಸಿದ್ಧತೆಗಿಂತಲೂ ಹೆಚ್ಚಿನ ತಯಾರಿಯು ಈಗ ಜರ್ಮನಿಯಲ್ಲಿ ನಡೆದಿದೆ.

ಸುಳ್ಳು ಪ್ರಚಾರ

ಪೋಲಂಡಿನಲ್ಲಿ ಜರ್ಮನ್ ಅಲ್ಪಸಂಖ್ಯಾಕರು ಯಮಯಾತನೆಗೀಡುಮಾಡಲ್ಪಟ್ಟಿರುವರೆಂಬ ಜರ್ಮನ್ ಪತ್ರಿಕೆಗಳ ಪ್ರಕಟಣೆಯು ಕೇವಲ ಕಲ್ಪಿತವಾದುದೆಂದೂ, ಪೋಲಂಡಿನ ವಿರೋಧವಾಗಿ ಜರ್ಮನನ್ನು ಉರಿದೆಬ್ಬಿಸಲು ಹೂಡಿರುವ ಕುತಂತ್ರವದೆಂದೂ ಪೋಲಂಡ್ ಸರಕಾರವು ವ್ಯಕ್ತಪಡಿಸಿರುವುದು.

ಅಸಹನೀಯ ಪರಿಸ್ಥಿತಿ

ಜರ್ಮನರಲ್ಲಿ ತೀವ್ರ ಅಸಹಿಷ್ಣುತೆಯುಂಟಾಗಿದೆ. ಪತ್ರಿಕೆಗಳೂ, ಡಾನ್ಜಿಗನ್ನು ಕೂಡಲೆ ವಶಪಡಿಸಬೇಕು, ಪೋಲಂಡನ್ನು ಸದೆಬಡಿಯಬೇಕೆಂದು ಕೂಗಿ ಜನತೆಯನ್ನು ಉದ್ವೇಗದ ಪರಮಾವಧಿಗೆ ಮುಟ್ಟಿಸಿರುತ್ತವೆ. ಆದುದರಿಂದ ಇನ್ನು ಮುಂದೆ ಪರಿಸ್ಥಿತಿಯು ಇದೇ ರೀತಿ ಹೆಚ್ಚು ಸಮಯ ಮುಂದುವರಿಯಲು ಸಾಧ್ಯವಿಲ್ಲ. ಸೆಪ್ಟಂಬರ ತಾ. ೨ರಲ್ಲಿ ಟಾನ್ನೆನ್ ಬರ್ಗಿನಲ್ಲಿ ನಡೆಯಲಿರುವ ನಾಝಿ ಪಕ್ಷದವರು ಕಾಂಗ್ರೆಸಿನ ಮೊದಲು ಏನಾದರೊಂದು ನಿಶ್ಚಯವಾಗಲೇಬೇಕಾಗಿದೆ. ಒಂದೋ ಹಿಟ್ಲರನು, ಯುದ್ಧವೇನೂ ಇಲ್ಲದೆ ಡಾನ್ಜಿಗನ್ನು ವಶಪಡಿಸಿಕೊಳ್ಳುವನು. ಇಲ್ಲವಾದರೆ ಯುರೋಪಿನಲ್ಲಿ ಭಯಂಕರ ಯುದ್ಧವೇಳುವುದು. ಈ ಎರಡರ ಹೊರತು ಮಧ್ಯಸ್ಥಿಕೆಯ ಸಂಗತಿಯು ಉಳಿದಿರುವಂತೆ ತೋರುವುದಿಲ್ಲ, ಇನ್ನಾವರೂ ಇಂಗ್ಲೆಂಡು ಪೋಲಂಡು ಪಕ್ಷ ಹಿಡಿದು ಹೋರಾಡುವುದೋ ಎಂದು ಕೆಲವುಂದಿ ಜರ್ಮನ್ ಸೈನ್ಯಾಧಿಕಾರಿಗಳಲ್ಲಿ ಸಂದೇಹವಿರುವುದು.

ಪ್ರಚಂಡ ಸೇನಾ ಸಿದ್ಧತೆ

ಜರ್ಮನಿಯು ಇನ್ನೂ ರಿಸರ್ವ ಸೇನೆಯನ್ನೆಲ್ಲಾ ಕರೆದು ಸಿದ್ಧಗೊಳಿಸುತ್ತಿರುವುದು. ಈ ಪ್ರಚಂಡ ಯುದ್ಧ ಸಿದ್ಧತೆಯಿಂದಾಗಿ ದೇಶದ ಸಾಂಪತ್ತಿಕ ಹಾಗೂ ನಾಗರಿಕ ಚಟುವಟಿಕೆಗಳು ನಿಂತುಹೋಗುವಂತಾಗಿದೆ. ಸರ್ವಸಾಮಾನ್ಯ ಪ್ರಜೆಗಳಿಗೆ ಬೇಕಾದ ಸಾಮಾನು ಪಡೆಯಲು ತೊಡಕಾಗಿದೆ. ಪೂರ್ವ ಪ್ರಸ್ಯಾ ಮತ್ತು ಸಿಲೇಸಿಯಾದಿಂದ ಹೆಚ್ಚಿನ ಸೇನೆಯು ಸಂಗ್ರಹಿಸಲ್ಪಟ್ಟಿದೆ. ಇದೇ ತಾ. 27ರಲ್ಲು ಟಾನ್ನೆನ್ ಬರ್ಗನಲ್ಲಿ ನಡೆಯುವ ನಾಝಿಪಕ್ಷದ ಪ್ರಚಂಡ ಪ್ರದರ್ಶನದಲ್ಲಿ ಹಿಟ್ಲರರು ಮಾತಾಡಲಿರುವರು.

ಹಂಗೇರಿಯ ಮೇಲೆ ಒತ್ತಾಟ

ಹಂಗೇರಿಯು ಇಷ್ಟರ ವರೆಗೆ ಯುದ್ಧದಲ್ಲಿ ಯಾವ ಕಡೆಗೂ ಸೇರದೆ ತಟಸ್ಥವಾಗಿರುವ ನಿರ್ಧಾರಮಾಡಿದ್ದಿತು. ಆದರೆ ಅದರ ಮೇಲೆ ಈಗಜರ್ಮನಿಯಒತ್ತಾಟವು ಬಹಳವಾಗಿ ಹೆಚ್ಚಿದೆ. ಆದುದರಿಂದ ಅದು ಜರ್ಮನಿಯೊಂದಿಗೆ ಸೇರದೆ ನಿರ್ವಾಹವಿಲ್ಲೆಂಬ ಪರಿಸ್ಥಿತಿಯುಂಟಾಗಿದೆ. ಇದರಿಂದ ಪೋಲೆಂಡಿಗೆ ಇನ್ನಷ್ಟು ಅಪಾಯ. ಜರ್ಮನ್ ಸೇನೆಯು ಹಂಗೇರಿಯ ಮಾರ್ಗವಾಗಿ ನೆಟ್ಟಗೆ ಪೋಲಂಡಿನ ದಕ್ಷಿಣ ಭಾಗದ ಮೇಲೆ ಧಾಳಿ ನಡಿಸಲು ಅನುಕೂಲವಾಗುತ್ತದೆ. ಸ್ಲೊವಾಕಿಯದಲ್ಲಿ ಜರ್ಮನಿಯು ಮೊದಲೇ ಸೇನಾಸಂಗ್ರಹಮಾಡಿ ಎಲ್ಲೆಯನ್ನು ಮುಚ್ಚಿಬಿಟ್ಟಿರುವುದು. ಜರ್ಮನಿಯ ಈ ಒತ್ತಾಟದಿಂದಾಗಿ ಹಂಗೇರಿಯ ವಿದೇಶಮಂತ್ರಿ ಕೌಂಟ್ ಕ್ಸಾಸ್ಕಿಯವರು ತಳಮಳಗೊಂಡಿರುವಂತಿದೆ. ಅವರು ಹಲವು ವೇಳೆ ಜರ್ಮನ್ ಮುಖಂಡರೊಡನೆ ಮಾತುಕತೆನಡಿಸಿ ರೋಮ್ ಪಟ್ಟಣಕ್ಕೆ ಹಾರಾಡಿ ಮುಸಲೋನಿಯವರೊಡನೆ ಮಾತಾಡಿರುವರು. ಜರ್ಮನಿಯ ಒತ್ತಾಟದಿಂದಾಗಿ ಹಂಗೇರಿಯಲ್ಲಿ ಉದ್ವೇಗವುಂಟಾಗಿದೆ ಹಂಗೇರಿಯ ಜೇಸಾಯಗಾರ ಪಕ್ಷದ ನಾಯಕರಾದ ವಾನ್ ರಿಕಾರ್ಟರೆಂಬವರು ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟು, "ಹಂಗೇರಿಗುಂಟಾಗಿರುವ ಅಪಾಯವನ್ನು ವಿರೋಧಿಸಲು ನಮ್ಮಿಂದ ಸಾಧ್ಯವಾದ ಪ್ರಯತ್ನವನ್ನು ನಾವು ಮಾಡಬೇಕು. ನಮ್ಮ ಮಾತೃಭೂಮಿಯು ಜರ್ಮನಿಗೆ ಸೇರುವುದೆಂಬ ಜರ್ಮನರ ಭಾವನೆಯು ನಮಗೆ ಊಹನಾತೀತವಿದೆ. ಜರ್ಮನಿಯ ಹೊರತು ನಮಗೆ ಇತರ ಅಮೂಲ್ಯ ಸ್ನೇಹಿತರಿದ್ದಾರೆ. ಅವರ ಹಿತವು ನಮ್ಮ ಹಿತದೊಂದಿಗೆ ಸೇರಿಕೊಂಡಿರುತ್ತದೆ" ಎಂದು ಎಚ್ಚರಿಸಿರುವರು.

ಇಟಲಿಯಲ್ಲಿ ನಿರಾಶೆ

ಡಾನ್ಜಿಗಿನ ಬಿಕ್ಕಟ್ಟು ರಾಜಿಯಿಂದ ಬಗೆಹರಿಸುವ ಸಂಭವವಿಲ್ಲೆಂದು ಇಟಲಿಯಲ್ಲಿ ನಿರಾಶೆಯುಂಟಾಗಿದೆ. ಡಾನ್ಜಿಗಿನ ಪ್ರಶ್ನೆಯನ್ನು ರಾಜಿಯಿಂದ ಇತ್ಯರ್ಥಪಡಿಸುವುದಕ್ಕಾಗಿ ಪೋಲಂಡಿನ ಕಮೀಶನರಾದ ಎಮ್. ಛಾಡಸ್ಕಿ, ಡಾನ್ಜಿಗ್ ಸೆನೆಟ್ ಅಧ್ಯಕ್ಷರಾದ ಹರ್ ಗ್ರೈಸರ್ ಮತ್ತು ಲೀಗ್ ಕಮೀಶನರರಾದ ಪ್ರೊಫೆಸರ್ ಬುರ್ಕಾರ್ಟರರವರು ನಡಿಸುವ ಮಾತುಕತೆಯು ನಿಷ್ಫಲವಾಗುವ ಸಂಭವ ತೋರುತ್ತದೆ. ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಟಲಿಗಳು ಸಭೆ ಕೂಡಿ ಯುರೋಪಿನ ಬಿಕ್ಕಟ್ಟನ್ನು ಬಗೆಹರಿಸಲೆತ್ನಿಸಬೇಕೆಂದು ಇಟಲಿಯ ಅಭಿಪ್ರಾಯವಿರುವುದಾದರೂ ಜರ್ಮನಿಯೂ ಪೋಲೆಂಡೂ ಆ ಕುರಿತು ಲಕ್ಷ್ಯ ಕೊಡುವುದಿಲ್ಲ. ಇದು ಹೊರತು ಇಂಗ್ಲೆಂಡು ಮತ್ತು ಫ್ರಾನ್ಸಗಳು, ರಶ್ಯ ಮತ್ತು ಪೋಲೆಂಡನ್ನು ಬಿಟ್ಟು ಯಾವ ಸಭೆಯಲ್ಲಿ ಭಾಗವಹಿಸುವುದಕ್ಕೂ ಈಗ ಸಿದ್ಧವಿಲ್ಲ. ಡಿಕ್ಟೇಟರರ ವಚನದ ಮೇಲೆ ಅವುಗಳಿಗೆ ಈಗ ನಂಬಿಗೆ ತಪ್ಪಿಹೋಗಿದೆ. ಡಾನ್ಜಿಗಿನ ಕುರಿತು ಹೊರಗಣ ಮಧ್ಯಸ್ಥಿಕೆಯನ್ನು ಹಿಟ್ಲರರು ಎಷ್ಟು ಮಾತ್ರಕ್ಕೂ ಒಪ್ಪುವ ಹಾಗಿಲ್ಲ. ಪೋಲೆಂಡ್ ಮತ್ತು ಜರ್ಮನಿಗಳು ಪರಸ್ಪರ ಮಾತಾಡಿಕೊಂಡು ಅದನ್ನು ಇತ್ಯರ್ಥಪಡಿಸಿಕೊಳ್ಳಬೇಕೆಂದು ಅವರ ಛಲ. ಮುಸಲೋನಿಯವರು ಇತ್ತಲಾಗಿ ತನ್ನ ಸೇನಾ ಮುಖ್ಯಸ್ಥರೊಡನೆಲ್ಲಾ ಮಾತಾಡಿ ಮುಂಜಾಗ್ರತೆ ತೆಗೆದುಕೊಂಡಿರುವರು.

ಗಗನಯಾತ್ರಿಕ ಪಂಡಿತ ನೆಹರು

ಚೈನಕ್ಕೆ ನೆಹರುಗಳ ಪಯಣ - . . . ಮುಖಂಡರ ಸಂದೇಶ

ವ್ಯಥೆಗೊಂಡು ನಾನು ಚೈನಕ್ಕೆ ತೆರಳುತ್ತೇನೆ.

"ನಾನು ಚೈನಕ್ಕೆ ಹೋಗುತ್ತೇನೆ. ಯಾಕೆಂದರೆ ಆ ದೇಶವು ನನ್ನನ್ನು ನೂರು ವಿಧಗಳಿಂದ ಎಳೆಯುತ್ತಿರುವುದು. ಪ್ರಕೃತದ ಬಿಕ್ಕಟ್ಟಿನಲ್ಲಿ ನಾನು ಮನಸ್ಸಿಲ್ಲದ ಮನಸ್ಸಿನಿಂದ ಹಿಂದೂದೇಶವನ್ನು ಬಿಟ್ಟು ಹೋಗುತ್ತೇನೆ. ಹೆಚ್ಚು ಸಮಯದ ವರೆಗಣ ಸಂದೇಹದ ನಂತರ ನಾನು ಚೈನಕ್ಕೆ ಹೋಗುವ ನಿರ್ಧಾರ ಮಾಡಿರುವೆನು. ಆ ಪ್ರಯಾಣದಲ್ಲುಂಟಾಗ ಬಹುದಾದ ಅಪಾಯ ಮತ್ತು ಗಂಡಾಂತರಗಳ ಕುರಿತು ಸ್ನೇಹಿತರು ನನಗೆ ಎಚ್ಚರವಿತ್ತರು. ವರ್ಷಗಳ ಭಾರವು ನನ್ನನ್ನು ಒತ್ತಿಟ್ಟಿತು. ಆದರೆ ಸಾಹಸದ ಕರೆಯು ನನ್ನನ್ನು ಮೇಲಕ್ಕೆತ್ತಿಬಿಟ್ಟಿತು. ವ್ಯಥೆಗೊಂಡ ಹೃದಯದಿಂದ ನಾನು ಚೈನಕ್ಕೆ ಹೋಗುವೆನು. ಈ ಹಲವು ವರ್ಷಗಳಲ್ಲಿ ಯಾವುದನ್ನು ಕಟ್ಟಲು ಹಿಂದೂದೇಶವು ಪರಿಶ್ರಮ ಪಟ್ಟಿತೋ ಅದು ಒಡೆದು ಹೋಗುವಂತಿರುವುದು ವಿಷಾದಕರವಿದೆ. ಆದರೂ ನಾನು ಅಪಾಯ ಬಂದಾಗ ಒಕ್ಕಟ್ಟಿನಿಂದ ಅದನ್ನು ವಿರೋಧಿಸುವ ಚೀನೀ ಜನತೆಯ ಧೈರ್ಯ ಮತ್ತು ಅದಮನೀಯ ಆಶಾವಾದದ ಪಾಠವನ್ನು ಹಿಂದೆ ಬರುವಾಗ ತರುತ್ತೇನೆ" ಎಂದು ತನ್ನ ಚೈನದ ಪ್ರವಾಸದ ಕುರಿತು ಪಂಡಿತ ಜವಾಹರಲಾಲರು ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆದಿರುವರು. ಅವರು ಇದೇ ತಾ. 20ರಲ್ಲು ಅಲಹಾಬಾದಿನ ಬಮ್ರೋಲಿಯ ವಿಮಾನ ನಿಲಯದಿಂದ ಏರ್ ಫ್ರಾನ್ಸ್ ಕಂಪೆನಿಯ ವಿಲ್ಲೆ ಡಿ ಕಲ್ಕತ್ತ ಎಂಬ ವಿಮಾನ ಮೂಲಕ ಚೈನಕ್ಕೆ ಹೊರಟುಹೋಗಿರುವರು.

ದೇಶಮುಖಂಡರ ಸಂದೇಶ

ಪಂಡಿತ ನೆಹರುಗಳು ಚೈನಕ್ಕೆ ಹೊರಟುಹೋಗುವ ಸಂದರ್ಭದಲ್ಲಿ ಅವರಿಗೆ ಮಂಗಳವನ್ನು ಹಾರೈಸಿ ಹಲವು ಮಂದಿ ದೇಶಮುಖಂಡರು ಸಂದೇಶ ಕಳುಹಿಸಿದ್ದರು. "ನಿಮ್ಮ ಚೀನೀ ರಾಯಭಾರತನವು ಜಯಶೀಲವಾಗಲಿ. ಭಗವಂತನು ನಿಮ್ಮೊಂದಿಗಿದ್ದು ನಿಮ್ಮನ್ನು ಸುರಕ್ಷಿತವಾಗಿ ಹಿಂದೆ ತರಲಿ" ಎಂದು ಗಾಂಧಿಯವರು ಆಶೀರ್ವದಿಸಿರುವರು. ಪ್ರಿಯ ಗಗನ ಯಾತ್ರಿಕನೇ! ನನ್ನ ಭಾವನೆಗಳು ನಿಮ್ಮೊಂದಿಗೇನೇ ನಿನ್ನೆಯ ಮತ್ತು ನಾಳೆಯ ಆ ಅಪ್ರತಿಮ ದೇಶಕ್ಕೆ ಹಾರಾಡುವುದು" ಎಂಬುದೇ ಶ್ರೀಮತಿ ಸರೋಜಿನಿಯವರ ಹಾರೈಕೆ. "ನೀವು ಹಿಂದೂದೇಶದ ಜನತೆಯ ರಾಯಭಾರಿಯು. ಈಗ ತನ್ನ ನೆರೆಯ ರಾಷ್ಟ್ರದ ನಿಷ್ಠುರ ಬಾಧೆಗೊಳಗಾಗಿರುವ ಸೋದರ ರಾಷ್ಟ್ರಕ್ಕೆ ಹಿಂದುಮಾತೆಯ ಸಂದೇಶವನ್ನೊಯ್ಯಿರಿ. ಚೈನದ ವೀರ ಹೋರಾಟದಲ್ಲಿ ಅದು ಜಯಶೀಲವಾಗುವಂತೆ ಭಾರತಾಂಬೆಯು ಹಾರೈಸುತ್ತಿರುವಳೆಂದು ತಿಳಿಸಿರಿ. ನಿಮ್ಮ ಪ್ರಯಾಣವು ಸುರಕ್ಷಿತವಾಗಲೆಂದು ಪ್ರಾರ್ಥಿಸುತ್ತೇನೆ" ಎಂದು ಕಾಂಗ್ರೆಸ್ ಪ್ರೆಸಿ

ಹಂಗೇರಿಯ ಮೇಲೆ ಒತ್ತಾಟ

ಈ ಕೆಳಗಿನ ಔಷಧಗಳಲ್ಲಿ
ಗುಣವಿಲ್ಲವೆಂದು
ಸಿದ್ಧಮಾಡಿಕೊಟ್ಟಲ್ಲಿ
೧೦೦ ರೂ. ಇನಾಮು

ಕಾಮಾಮೃತ

ಸ್ತ್ರೀ ಪುರುಷರಿಗೆ ಧಾತುಪುಷ್ಟಿ
ಕೊಡುವ ಲೋಕಪ್ರಸಿದ್ಧ
ಶಕ್ತಿವರ್ಧಕ ಸಿದ್ಧೌಷಧ.

ಇದು ಸ್ತ್ರೀ ಪುರುಷರಿಗೆ ಆನಂದವನ್ನುಂಟುಮಾಡುವ ಗುಳಿಗೆಗಳು, ಇದರಲ್ಲಿ ಪಾದರಸ ಇತ್ಯಾದಿಗಳಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳನ್ನು ಪ್ರಯೋಗಿಸಿದೆ. ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿದ್ದು. ಮುದುಕತನವನ್ನು ಲೋಕದಲ್ಲಿಲ್ಲದಂತೆ ಮಾಡುವುದು,

ಗುಣವಿಲ್ಲದಿದ್ದಲ್ಲಿ ಹಣ ವಾಪ್ಸು -- ಕೆಟಲಾಗು ಉಚಿತ

ಒಂದು ತಿಂಗಳ ಔಷಧ ಕಿಮ್ಮತ್ತು ರೂ. 4-8-0, 15 ದಿನಗಳಿಗೆ ರೂ. 2-8-9

ಡಾ|| ಎ. ಕನಕರಾಜು ಚಿಕಾಕೋಲ್, (ವಿಜಾಗ್ ಡಿಸ್ಟ್ರಿಕ್ಟ್)

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: **1906**

ನವಯುಗ

ಉಡುಪಿ, ಗುರುವಾರ, ತಾ. ೨೪-೮-೩೯

ದ. ಕ. ಜಿಲ್ಲೆಯ ಬಸ್ ಮಾಲಕ ಮತ್ತು ಕೆಲಸಗಾರರ ಕಲಹ

ಜಿಲ್ಲೆಯ ಬಸ್ ಕಂಪೆನಿಗಳೆಲ್ಲಾ ಒಂದಾಗಿ, ಒಕ್ಕಟ್ಟಿನಿಂದ ತಮ್ಮ ಅಭಿವೃದ್ಧಿ ಸಾಧಿಸಿ ಪ್ರಯಾಣಿಕರಿಗೆ ಸರ್ವಸಾಧಾರಣ ರೈಲ್ವೆಯಂತಹ ಸೌಕರ್ಯಗಳನ್ನೀಯುವ ವ್ಯವಸ್ಥೆಯನ್ನು ಮಾಡಲೆತ್ನಿಸುತ್ತಾ ಹೊರಗಣ ಜಿಲ್ಲೆಗಳಿಗೆಲ್ಲಾ ಅದೊಂದು ಮಾದರಿಯಾಗಿ ಪ್ರಶಂಸೆ ಪಡೆಯುತ್ತಿರುವಾಗ, ಇತ್ತಲಾಗಿ ಕಂಪೆನಿಗಳ ಮಾಲಕ ಮತ್ತು ಕೆಲಸಗಾರರೊಳಗೆ ವೈಷಮ್ಯವುಂಟಾಗಿರುವುದು ಅತ್ಯಂತ ವಿಷಾದಕರ. ಇದರಿಂದ ಜಿಲ್ಲೆಯ ಮೋಟರ್ ಕೈಗಾರಿಕೆಯ ಪ್ರಗತಿ ಮತ್ತು ಯಶಸ್ಸಿಗೆ ಕುಂದುಂಟಾಗಿರುವುದೆಂದೇ ಹೇಳಬಹುದು.

ಯೋಗ್ಯರೀತಿಯಲ್ಲಿ ಸಂಘಟಿತರಾದ ಕೆಲಸಗಾರರು ಶಿಸ್ತು ಮತ್ತು ಸಂಯಮದಿಂದ ಉತ್ತಮವಾಗಿ ಕೆಲಸಮಾಡುವವರಾಗುವರು. ಮಾಲಕರಿಗೆ ತಮ್ಮ ಸಂಘಗಳನ್ನು ಸ್ಥಾಪಿಸಿಕೊಳ್ಳುವ ಹಕ್ಕಿರುವಂತೆ ಕೆಲಸಗಾರರಿಗೂ ಆ ಹಕ್ಕಿದೆ. ಮಜೂರರ ಮೂಲಭೂತವಾದ ಈ ಹಕ್ಕನ್ನು ಯಾರೂ ನಿರಾಕರಿಸುವುದು ಸರಿಯಲ್ಲ. ಮತ್ತು ಅದು ಸಾಧ್ಯವೂ ಅಲ್ಲ. ಕೆಲಸಗಾರರು ತಮ್ಮ ಸಂಘಗಳನ್ನು ಸ್ಥಾಪಿಸಿ ಎಲ್ಲರೂ ಅವುಗಳಿಗೆ ಮೆಂಬರರಾಗಿ ಸೇರಿ ತಮ್ಮ ಸಂಘಶಕ್ತಿಯನ್ನು ಬೆಳೆಸಬೇಕೆಂದು ಮದ್ರಾಸ್ ಸರಕಾರ ಮಜೂರ ಖಾತೆಯ ಮಂತ್ರಿ ಮಾನ್ಯ ವಿ ವಿ ಗಿರಿಯವರು ಸರಕಾರದ ಘೋರಣೆಯನ್ನು ಸ್ಪಷ್ಟಗೊಳಿಸಿರುವರು. ಈ ದೃಷ್ಟಿಯಿಂದ ಜಿಲ್ಲೆಯ ಮೋಟರ್ ಕೆಲಸಗಾರರೆಲ್ಲಾ ತಮ್ಮದೊಂದು ಸಂಘವನ್ನು ಸ್ಥಾಪಿಸಿ ಅದನ್ನು ಬಲಪಡಿಸಲೆತ್ನಿಸುವುದನ್ನು ಮಾಲಕರು ಪ್ರೋತ್ಸಾಹಿಸಿ ಸಹಾಯವೀಯುವುದು ಅವರ ಕರ್ತವ್ಯವಿದೆ. ಮೋಟರ್ ಕೆಲಸಗಾರರು ತಮ್ಮ ಸಂಘವನ್ನು ಬಲಪಡಿಸಲೆತ್ನಿಸುವುದು ಅವರ ನ್ಯಾಯವಾದ ಹಕ್ಕಾಗಿದೆ.

ಕಳೆದ ಜನವರಿಯಲ್ಲಿ ಸಿ. ಪಿ. ಸಿ. ಕಂಪೆನಿ ಮತ್ತು ಯೂನಿಯನುಗಳೊಳಗುಂಟಾಗಿರುವ ಕಲಹವು, ಸಾರ್ವತ್ರಿಕವಾದ ಮುಷ್ಕರದ ಬಿಕ್ಕಟ್ಟಿಗೆ ಮುಟ್ಟಿದಾಗ ಮಾನ್ಯ ಮಜೂರ ಮಂತ್ರಿಗಳು ಮಧ್ಯಸ್ಥಿಕೆ ಮಾಡಿ ಅದನ್ನು ಹೇಗಾದರೂ ಇತ್ಯರ್ಥಪಡಿಸಿದುದು ಅಭಿನಂದನೀಯವಿದೆ. ಆದರೆ ಇತ್ಯರ್ಥದ ಶರ್ತುಗಳನ್ನು ಸಿ. ಪಿ. ಸಿ.ಯವರು ಸರಿಯಾಗಿ ಪಾಲಿಸಲಿಲ್ಲೆಂದು ಯೂನಿಯನಿನ ಆಕ್ಷೇಪ. ಕೆಲಸಗಾರರು ಮೆನೇಜ್ ಮೆಂಟನ್ನು ಧಿಕ್ಕರಿಸಿ ನಡೆದು ಶಿಸ್ತು ಪಾಲಿಸದಂತಾಗಿದೆಯೆಂದು ಮೆನೇಜ್‌ಮೆಂಟಿನ ದೂರು. ಹೀಗೆ ಮಾನ್ಯ ಮಂತ್ರಿಗಳು ಮಾಡಿದ ಇತ್ಯರ್ಥದ ವಿಷಯದಲ್ಲಿ ಪುನಃ ತಿಕ್ಕಾಟವುಂಟಾದಾಗ ಅದನ್ನು ಬೆಳೆಯಗೊಡದೆ ಕೂಡಲೆ ವಿಚಾರಿಸಿ ಸರಿಪಡಿಸುವುದು ಸರಕಾರದ ಕರ್ತವ್ಯವಿದ್ದಿತು. ಆದರೆ ಕಾಂಗ್ರೆಸ್ ಮಂತ್ರಿಗಳ ಕೈಕೆಳಗೂ ಸರಕಾರದ ಆಡಳಿತ ರಥವು ಯಥಾ ಪ್ರಕಾರ ವಿಳಂಬವಾಗಿಯೇ ಸಾಗುತ್ತಿರುವುದು ಶೋಚನೀಯ

ಯೂನಿಯನಿನ ಚಟುವಟಿಕೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ ಆರೇಳು ಮಂದಿ ಕೆಲಸಗಾರರನ್ನು ಬೇಕೆಂದು ಇಡೀ ರಾತ್ರಿ ಎಡೆಬಿಡದೆ ತಿಂಗಳುಗಟ್ಟಲೆ ಕೆಲಸಮಾಡಿಸುವ ಪ್ರತೀಕಾರ ಮಾಡಿದರೆಂದು ಯೂನಿಯನಿನವರ ಆರೋಪ. ಫೇಕ್ಟರಿ ಕಾನೂನಿನ ಮೇರೆಗೆ ಜರೂರಿನ ರಾತ್ರಿ ಕೆಲಸಮಾಡಲು ತಮಗೆ ಈ ರೀತಿಯ ವ್ಯವಸ್ಥೆ ಮಾಡದೆ ನಿರ್ವಾಹವಿಲ್ಲೆಂದು ಕಂಪೆನಿಯವರ ಅಂಬೋಣ. ಈ ಸಂಬಂಧವಾಗಿ ಕಂಪೆನಿಗೂ ಯೂನಿಯನಿಗೂ ತಿಕ್ಕಾಟವುಂಟಾದಾಗಲೇ ಯೂನಿಯನಿನ ಜೊಯಿಂಟ್ ಸೆಕ್ರಿಟರಿಗಳೊಬ್ಬರು ಹಾಜರುಪಟ್ಟಿಗೆ ಸಕಾಲದಲ್ಲಿ ದಸ್ಕತು ಹಾಕದೆ ಅನಂತರ ಸಹಿಹಾಕಿ ಮಾಡಿದ ಆರೋಪದ ಮೇಲೆ ಒಂದು ವಾರ ಸಸ್ಪೆಂಡ್ ಮಾಡಲ್ಪಟ್ಟರು. ಕೆಲಸಗಾರರು ಮಿಂಚು ಮುಷ್ಕರ ಹಿಡಿದರು.

ಕೆಲಸಗಾರರು ಒಮ್ಮೆಯೇ ಈ ಮಿಂಚು ಮುಷ್ಕರ ಹಿಡಿದುದು ಯುಕ್ತವಲ್ಲೆಂಬುದನ್ನು ನಾವು ಒಪ್ಪುತ್ತೇವೆ. ಹೇಗೂ ಕಲೆಕ್ಟರರ ಮಧ್ಯಸ್ಥಿಕೆಯಿಂದಾಗಿ ಅದು ಅರ್ಧ ದಿವಸದಲ್ಲೇ ಕೊನೆ ಹೊಂದಿದುದು ಸಂತೋಷಕರ. ಈ ಮುಷ್ಕರವನ್ನು ನಿಲ್ಲಿಸುವ ಸಂದರ್ಭದಲ್ಲಿ ಆಗಣ ಕಲೆಕ್ಟರರಾದ ಶ್ರೀ ವೆಲ್ಲೋಡಿಯವರು, ಬಸ್ ಕಂಪೆನಿ ಮಾಲಕ ಮತ್ತು ಕೆಲಸಗಾರರ ಕಲಹವನ್ನು ಒಂದು ಹಪ್ತೆಯೊಳಗೆ ಇತ್ಯರ್ಥಮಾಡುವೆನೆಂಬ ಆಶ್ವಾಸನೆಯಿತ್ತಿದ್ದರೆಂದು ತಿಳಿಯುತ್ತೇವೆ. ಅವರ ಸೂಚನೆ ಮೇರೆಗೆ ಸಿ. ಪಿ. ಸಿ. ಕಂಪೆನಿಯವರು ರಾತ್ರಿಕೆಲಸವನ್ನು ಸರ್ತಿ ಪ್ರಕಾರ ಹಪ್ತೆಗೊಮ್ಮೆ ಏಳೇಳು ಮಂದಿ ಮಾಡುವ ವ್ಯವಸ್ಥೆ ಮಾಡಿದರೆಂದೂ, ಮೊದಲು ರಾತ್ರಿಕೆಲಸಮಾಡುತ್ತಿದ್ದ ಕೆಲಸಗಾರರು ಇದಕ್ಕೊಪ್ಪದೆ, ಸರಿಯಾದ ಇತ್ಯರ್ಥವಾಗುವ ವರೆಗೆ ತಾವು ಯಥಾಪ್ರಕಾರ ಮೊದಲಿನಂತೆಯೇ ಕೆಲಸಮಾಡುವೆವೆಂದು ಹೇಳಿದರೆಂದೂ, ಅದಕ್ಕೆ ಮೆನೇಜ್‌ಮೆಂಟಿನವರು, ಕೆಲಸಮಾಡಲು ಸಾಧ್ಯವಿಲ್ಲದಿದ್ದರೆ ಹೋಗಬಹುದೆಂದು ಹೇಳಿದರೆಂದೂ, ಕೆಲಸಗಾರರು ಕೆಲಸಬಿಟ್ಟು ಬಂದರೆಂದೂ ತಿಳಿಯುತ್ತೇವೆ.

ಹೀಗೆ ಕೆಲಸಬಿಟ್ಟು ಹೊರಬಂದುದು ತಪ್ಪೆಂದು ನಾವು ನಮ್ಮ ಕೆಲಸಗಾರ ಬಂಧುಗಳಿಗೆ ಸ್ಪಷ್ಟವಾಗಿ ಹೇಳಬೇಕಾಗಿದೆ. ಅವರು ಯಥಾಪ್ರಕಾರ ಕೆಲಸಮಾಡುತ್ತಾ ನ್ಯಾಯಕ್ಕಾಗಿ ಚಳವಳಿಸಬೇಕಿತ್ತು. ಮಜೂರರು ತಮ್ಮ ಹಕ್ಕುಬಾಧ್ಯತೆಗಳನ್ನೀಗ ಸ್ವಲ್ಪ ಸ್ವಲ್ಪವಾಗಿ ಪಡೆಯುತ್ತಿದ್ದಾರೆ. ಅವರ ಸಂಘ ಬಲವು ದಿನೇದಿನೇ ಹೆಚ್ಚುತ್ತಿದೆ. ಆದರೆ ಅವರ ಅಥವಾ ಸಂಪೂರ್ಣವಾಗಿ ಅವರ ಹಕ್ಕು ಬಾಧ್ಯತೆಗಳನ್ನೆತ್ತಿಹಿಡಿಯುವ ಸರಕಾರವು ಈ ವರೆಗೂ ಬಂದಿಲ್ಲೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಸಾವಧಾನವಾಗಿ ಮುಂದುವರಿಯಬೇಕು. ಅಸಹಿಷ್ಣುತೆಯಿಂದ ದುಡುಕಿದರೆ ಅವರ ಉದ್ದೇಶಕ್ಕೇನೇ ಭಂಗವುಂಟಾಗುವುದು, ಹಿತಕ್ಕೇನೇ ಘಾತವಾಗುವುದು.

ತಾ. 3-7-39ರಲ್ಲು ಕೆಲಸಗಾರರ ಕನಿಷ್ಠ ಕೇಳಿಕೆಗಳೇ ಮೊದಲಾದ ಪ್ರಾಮುಖ್ಯ ಪ್ರಶ್ನೆಗಳನ್ನು ಸರಕಾರವು ಸೂಚಿಸುವ ರೀತಿಯ ಮಧ್ಯಸ್ಥಿಕೆಯಿಂದ ಇತ್ಯರ್ಥಮಾಡುವುದಕ್ಕೆ ಒಪ್ಪಿಗೆಕೊಡುವ ಮೊದಲು ಯೂನಿಯನಿನ ಅಧಿಕಾರಿಗಳು, ಸಿ. ಪಿ. ಸಿ.ಯಿಂದ ಹೊರಬರಬೇಕಾಗಿ ಬಂದ ಕೆಲಸಗಾರರನ್ನೂ, ಶಂಕರ್ ವಿಠಲ್ ಕಂಪೆನಿಯವರು ಸಸ್ಪೆಂಡ್ ಮಾಡಿರುವ ಓರ್ವ ಕ್ಲಾರ್ಕರನ್ನೂ ತಿರುಗಿ ಕೆಲಸಕ್ಕೆ ತೆಗೆದುಕೊಳ್ಳುವಂತಾಗಬೇಕೆಂದು ಮಂಗಳೂರು ಸಬ್. ಡಿವಿಜನಲ್ ಮೇಜಿಸ್ಟ್ರೇಟರೊಡನೆ ಕೇಳಿಕೊಂಡರೆಂದೂ, ಸದ್ರಿ ಕೆಲಸಗಾರರು ಪುನಃ ಕೆಲಸಕ್ಕೆ ತೆಗೆದುಕೊಳ್ಳಲ್ಪಟ್ಟ ಮೇಲೆ ಎಗ್ರಿಮೆಂಟಿಗೆ ಸಹಿ ಹಾಕಿದರೆಂದೂ ತಿಳಿದುಬರುತ್ತದೆ.

ಈ ಎಗ್ರಿಮೆಂಟಿಗೆ ಸಹಿಹಾಕಿ ಕಲಹದ ಮುಖ್ಯ ವಿಷಯಗಳ ಕುರಿತು ಮದ್ರಾಸ್ ಸರಕಾರವು ತನಗೆ ತೋರಿದ ರೀತಿಯ ಮಧ್ಯಸ್ಥಿಕೆ ಮಾಡಲಿರುವುದರಿಂದ ಇನ್ನು ಮೇಲಾದರೂ ಬಸ್ ಮಾಲಕ ಮತ್ತು ಕೆಲಸಗಾರರೊಳಗೆ ಶಾಂತಿಯುಂಟಾಗಬಹುದೆಂಬ ನಿರೀಕ್ಷೆಯು ನಿರಾಶೆಯಾಗಿದೆ. ಎಗ್ರಿಮೆಂಟಿಗೆ ಸಹಿ ಹಾಕಿದ ನಂತರ ಕೆಲಸ ಮಾಡದೆ ಹೊರಬಂದ ಸಿ. ಪಿ. ಸಿ.ಯ ಕೆಲಸಗಾರರ ವರ್ತನೆಯ ಕುರಿತು ಬೋರ್ಡ್ ಆಫ್ ಡೈರೆಕ್ಟರರು ವಿಚಾರಣೆ ನಡಿಸಿ ಅವರಲ್ಲಿ ಹೆಚ್ಚಿನವರನ್ನು 2 ಮತ್ತು 3 ತಿಂಗಳು ಸಸ್ಪೆಂಡ್ ಮಾಡಿರುತ್ತಾರೆ. ಶಂಕರ ವಿಠಲ ಕಂಪೆನಿಯವರೂ ಕ್ಲಾರ್ಕರನ್ನು ಅನಿಶ್ಚಿತಾವಧಿಯ ವರೆಗೆ ಸಸ್ಪೆಂಡ್ ಮಾಡಿರುತ್ತಾರೆ. ಇದರಿಂದ ಪರಿಸ್ಥಿತಿಯು ಪುನಃ ಪ್ರಕ್ಷುಬ್ಧವಾಗಿ ಇನ್ನೊಮ್ಮೆ ಕೆಲಸಗಾರರ ಮುಷ್ಕರವುಂಟಾಗುವ ಗಂಡಾಂತರ ಬಂದಿದೆ. ಈ ನಡುವೆ ಸಿ. ಪಿ. ಸಿ. ಕಂಪೆನಿಯ ಜನರಲ್ ಮೆನೇಜರರ ಪ್ರೋತ್ಸಾಹದಿಂದ, ಅವರ ಕಂಪೆನಿಯ ಕೆಲಸಗಾರರ ಪ್ರತ್ಯೇಕ ಸಂಘವೊಂದು ಸ್ಥಾಪಿಸಲ್ಪಟ್ಟಿರುವುದು ಶೋಚನೀಯ. ಯಾಕೆಂದರೆ ಇಂತಹ ಸಂಘಗಳನ್ನು ಮಾನ್ಯ ಗಿರಿಯವರೇ ನಿಷೇಧಿಸಿರುತ್ತಾರೆ.

ಈ ಕೆಲಸಗಾರ ಮತ್ತು ಮಾಲಕ ಕಲಹವು ಕೇವಲ ಆಂತರಿಕವಾಗಿರದೆ ಬಾಹ್ಯ ವಿದ್ಯಮಾನಗಳು ಕೆಲವು ಅದರ ಇತ್ಯರ್ಥಕ್ಕೆ ದೊಡ್ಡ ತೊಡಕಾಗಿ ಪರಿಸ್ಥಿತಿಯು ವಿಷಮವಾಗಿದೆಯೆಂದು ಹೇಳಬಹುದು. ಇತ್ತಂಡದವರೂ ವ್ಯಕ್ತಿದ್ವೇಷ ಮತ್ತು ರಾಜಕೀಯ ಭಾವನೆಗಳನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟು ಕೇವಲ ಬಸ್ ಕಂಪೆನಿಗಳ ಮತ್ತು ಕೆಲಸಗಾರರ ಸ್ಥಿತಿಗತಿಗಳ ಸುಧಾರಣೆಯ ಏಕಮಾತ್ರ ಉದ್ದೇಶಪ್ರೇರಿತರಾಗಿ ತಮ್ಮ ಹಿಂದಿನ ಆಗ್ರಹಗಳನ್ನೆಲ್ಲಾ ಬಿಟ್ಟು ಸುಮನಸ್ಸಿನಿಂದ ಒಂದು ಮೇಜಿಯ ಸುತ್ತು ಕೂತು ಮಾತುಕತೆ ನಡಿಸುವಂತಾದರೆ ಈ ಕಲಹವು ಇತ್ಯರ್ಥವಾಗಲು ಸಾಧ್ಯವಿದೆಯೆಂದು ನಾವು ಭಾವಿಸುತ್ತೇವೆ. ಪರಿಸ್ಥಿತಿಯು ಕೈಮೀರಿ ಹೋಗುವನಕ ಸುಮ್ಮನಿರದೆ ಜಿಲ್ಲಾ ಕಲೆಕ್ಟರರೂ ಪೋಲೀಸ್ ಸುಪರಿಂಟೆಂಡರೂ ಸಕಾಲದಲ್ಲೇ ಕೈಹಾಕಿ ಈ ಕಲಹವನ್ನು ರಾಜಿಯಿಂದ ತೀರ್ಮಾನಗೊಳಿಸಲೆತ್ನಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಪುಟ ೧೧ರಿಂದ

ಡೆಂಟರ ಸಂದೇಶ. ಕವೀಂದ್ರರು ದೀರ್ಘವಾದ ಸಂದೇಶವಿತ್ತಿರುವರು. ಅದರ ಸಾರಾಂಶವು ಹೀಗಿದೆ ಕಾಂಗ್ರೆಸಿನೊಳಗೆ ಈಗ ಉಂಟಾಗಿರುವ ಬಿಕ್ಕಟ್ಟಿನ ಕುರಿತು ನಾನು ಬಹಳ ವ್ಯಾಕುಲಪಡುತ್ತೇನೆ. ಇದು ಕೇವಲ ತಾತ್ಕಾಲಿಕವಾಗಿದ್ದು ರಾಷ್ಟ್ರದ ನವನಿರ್ಮಾಣಾತ್ಮಕ ಶಕ್ತಿಯು ಈ ಅಗ್ನಿಪರೀಕ್ಷೆಯಿಂದಾಗಿ ಮತ್ತಷ್ಟು ಬಲಗೊಂಡು ಉತ್ತೀರ್ಣವಾಗುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ.

ಚೈನದ ನೆರೆಕರೆಯವರಾದ ನಮ್ಮ ಪರವಾಗಿ ರಾಯಭಾರಿಯಾಗಿ ನಿಮಗೆ ಹೋಗುವ ನನ್ನ ಹಾರ್ದಿಕ ಆಶೀರ್ವಾದವಿರುವುದು, ನೀವು ಅಸ್ಯಾಖಂಡದ ನವಶಕ್ತಿಯ ಪ್ರತಿನಿಧಿಯಾಗಿ ಹೋಗುವಿರೆಂಬುದರಿಂದ ನಾನು ಹೆಮ್ಮೆ ಪಡುತ್ತೇನೆ. ನಮಗೂ ಪೂರ್ವದ ರಾಷ್ಟ್ರಗಳಿಗೂ ಸಾಂಸ್ಕೃತಿಕ ಸಂಬಂಧವು ಮೊದಲಿನಿಂದಲೂ ಬೆಳೆದು ಬಂದಿದೆಯೆಂಬುದನ್ನು ಪೂರ್ವದಲ್ಲಿ ಸಂಚರಿಸಿದಾಗ ನಾನು ಮನಗಂಡಿರುವೆನು. ಯುರೋಪಿನ ರಾಷ್ಟ್ರಗಳು ಈಗ ಮಾಡುತ್ತಿರುವಂತೆ ನಾವು ರಾಷ್ಟ್ರೀಯತೆಯ ಹಸಿವಿನಿಂದ ಪರಸ್ಪರ ಕಾದಾಡಿಕೊಂಡಿಲ್ಲ. ಚೈನದ ಭಾಳಿಯು ಜಪಾನರು ಪರಕೀಯರಿಂದ ಕಡವಾಗಿಪಡೆದ ಮನೋವೃತ್ತಿಯ ಪರಿಣಾಮವಿದ್ದು ಸರ್ವಸಾಮಾನ್ಯ ಜನತೆಯು ಆ ರೀತಿ ಇರುವುದಿಲ್ಲೆಂದು ಭಾವಿಸುತ್ತೇನೆ. ಚೈನ ಮತ್ತು ಹಿಂದೂದೇಶದೊಂದಿಗೆ ಪಾಲು ಪಡೆದಿರುವ ನಾಗರಿಕತೆಗೆ ಜಪಾನು ಕಳಂಕವನ್ನುಂಟುಮಾಡದಂತೆ ಎಚ್ಚರವಿರಲಿ. ಅದರಿಂದ ಅದು ತನ್ನ ಜನಾಂಗವನ್ನೇ ವಿನಾಶಪಡಿಸುವಂತಾಗುತ್ತದೆ. ನಿಮ್ಮ ಸಂಚಾರದಲ್ಲಿ ಜಪಾನನ್ನೂ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಸ್ಯದ ನೈತಿಕ ಮನೋವೃತ್ತಿಗೆ ನೀವು ಮಾಡಿಕೊಳ್ಳುವ ವಿನಂತಿಯಲ್ಲಿ ಹಿಂದೂದೇಶವು ನಿಮ್ಮೊಂದಿಗಿರುವುದು. ಜಾಪಾನು ತನ್ನ ಉನ್ಮತ್ತತೆಯಿಂದ ಆತ್ಮಿಕ ಆತ್ಮಘಾತ ಮಾಡಿಕೊಳ್ಳಲು ಸಾಧ್ಯವಿಲ್ಲ. ಇತ್ತಲಾಗಿ ಪರಸ್ಪರ ಉಂಟಾಗಿರುವ ವೈಷಮ್ಯವನ್ನು ನೀವು ನಿವಾರಿಸಿ ಪುನಃ ಯಥಾಪ್ರಕಾರ ಜಾಪಾನ್, ಚೀನಾ ಮತ್ತು ಹಿಂದೂದೇಶಗಳ ಜನಾಂಗಗಳೊಳಗೆ ಸೌಹಾರ್ದವುಂಟಾಗುವಂತಾಗಲಿ.'

ದಕ್ಷಿಣ ಕನ್ನಡ

ಶ್ರೀ ದಾಸ ರೈಗಳ ಅಪಪ್ರಚಾರ— ಪುತ್ತೂರಿನ ವಕೀಲ್ ಶ್ರೀ. ಬಿ. ದಾಸ ರೈಗಳು ಅಳಿಯಸಂತಾನ ಸುಧಾರಣಾ ಕಮಿಟಿ ಮೆಂಬರರಾಗಿ ಅದರ ಸಭೆಗಳಲ್ಲಿ ಭಾಗವಹಿಸಿದವರು. ಮತ್ತು ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸುವರೆ ಸಭೆ ಕರೆಯುವ ನೋಟೀಸು ಕೊಟ್ಟವರು ಇವರು ತಾ. ೨೦ರಲ್ಲು ಪುತ್ತೂರಲ್ಲಿ ನಡೆದ ಅಳಿಯಕಟ್ಟಿನವರ ಸಭೆಯ ಕುರಿತು ಸ್ವತಂತ್ರ ಭಾರತ ಮತ್ತು ಪ್ರಭಾತಪತ್ರಿಕೆಗಳಲ್ಲಿ ಎರಡು ವಿಧದ ಬಾತ್ಮಿಗಳನ್ನು ಪ್ರಕಟಿಸಿ ತಪ್ಪು ಅಭಿಪ್ರಾಯವನ್ನುಂಟುಮಾಡಿದುದು ಆಶ್ಚರ್ಯಕರ. ಶ್ರೀ ರೈಗಳು ಹೇಳುವಂತೆ ಸಭೆಯಿಂದ ಯಾರೂ ಎದ್ದು ಹೋದದನ್ನು ನಾನು ಕಾಣಲಿಲ್ಲ. ಬೇರೆ ಬೇರೆ ಸರ್ಕಲಿನ ಪ್ರತಿನಿಧಿಗಳ ಹೆಸರುಗಳನ್ನು ಸೂಚಿಸಿದುದು ನಾನು. ಇದಕ್ಕೆ ಸಭಿಕರೆಲ್ಲರ ಸಮ್ಮತಿ ಇತ್ತು ಮತ್ತು ಸದ್ರಿ ಪ್ರತಿನಿಧಿಗಳೆಲ್ಲರೂ ಯೋಗ್ಯರೇ ಆಗಿರುವರೆಂದು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಶ್ರೀ. ಪತ್ತಪ್ಪ ರೈಗಳು ಬಾತ್ಮಿಯೊಂದನ್ನು ಕಳುಹಿಸಿದ್ದಾರೆ ಸ್ಥಳಾಭಾವದಿಂದ ಅದನ್ನು ಸಂಪೂರ್ಣ ಪ್ರಕಟಿಸಲಾಗಲಿಲ್ಲ. ಪುತ್ತೂರಿನ ಸಭೆಗೆ 500 ಕ್ಕಿಂತಲೂ ಮಿಕ್ಕಿದ ಜನರು ಬಂದಿದ್ದರು. ಸುಧಾರಣಾ ಕಮಿಟಿ ಮೆಂಬರರೂ ಸಭೆ ಕರೆದವರೂ ಆದ ಶ್ರೀ! ದಾಸರೈಗಳಂತಹ ಮಹನೀಯರು ಇದೀ ಮಸೂದೆಯನ್ನು ತೆಗೆದುಹಾಕಬೇಕು, ಪ್ರತಿನಿಧಿಗಳನ್ನು ಆರಿಸಬಾರದೆಂದು ಸೂಚನೆ ತರವುದು ಸಖೇದಾಶ್ಚರ್ಯಕರ. ಆಮೇಲೆ ಸಭೆಯ ಕುರಿತು ಪತ್ರಿಕೆಗಳಿಗೆ ಏನೇನೋ ಕಲ್ಪಿಸಿ ಬರೆದು ಅಪಪ್ರಚಾರಕ್ಕೆ ಹೊರಟಿದ್ದಾರೆ ಶ್ರೀ. ರೈಗಳ ಈ ವಿಸ್ಮಯಕರ ವ್ಯಾಪಾರಕ್ಕೆ ಕಾರಣವೇನೋ ತಿಳಿಯದೆಂದು ಶ್ರೀ. ಎನ್. ಎಸ್. ಕಿಲ್ಲೆಯವರು ತಿಳಿಸುತ್ತಾರೆ

ಕುಂದಾಪುರದ ಸಭೆ—ಇದೇ ತಾ. 19 ರಲ್ಲು ಕುಂದಾಪುರ ತಾಲೋಕಿನ ಅಳಿಯಕಟ್ಟಿನವರ ಸಭೆಯು ಕುಂದಾಪುರ ಹೋಸ್ಟೆಲಿನಲ್ಲಿ ನಡೆಯಿತು. 200ಕ್ಕಿಂತ ಮೇಲೆ ಜನರು ನೆರೆದಿದ್ದರು ಶ್ರೀ. ಎನ್. ಎಸ್. ಕಿಲ್ಲೆಯವರು ಅಳಿಯಸಂತಾನ ಮಸೂದೆಯ ಕುರಿತು ಭಾಷಣವಿತ್ತರು. ಕಡೆಗೆ ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಲಾಯಿತು.

ಕಾರ್ಕಳದ ಸಭೆ—ಇದೇ ತಾ. 20ರಲ್ಲಿ ಕಾರ್ಕಳದ ವಿದ್ಯಾರ್ಥಿಭವನದಲ್ಲಿ ನಡೆದು ಪ್ರತಿನಿಧಿಗಳನ್ನು ಆರಿಸಲಾಯಿತು.

ಕಾವು ಮುಡ್ನೂರು—ತಾ 18 8 39 ರಲ್ಲಿ ಪುತ್ತೂರು ತಾಲೂಕಿನ ಕಾವು ಪಂಚಾಯತ ಕೋರ್ಟಿನ ವಠಾರದಲ್ಲಿ ಅಳಿಯ ಸಂತಾನ ಆಚರಿಸುವವರ ಸಭೆಯೊಂದು ಮುಂಡಾಲಗುತ್ತಿನ ಐತಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡು ಮೆಂಬರರಾದ ಶ್ರೀ ಪತ್ತಪ್ಪ ರೈಗಳು ಅಳಿಯ ಸಂತಾನದ ಇಂದಿನ ದುಃಖದಾಯಕ ಸ್ಥಿತಿಯಲ್ಲಿ ಸುಧಾರಣೆಯಾಕೆ ಆಗತ್ಯವೆಂಬುದನ್ನು ಡ್ರಾಫ್ಟ್ ಮಸೂದೆಯನ್ನು ಓದುತ್ತಾ ವಿವರಿಸಿ ಕೆಲವು ಮಹನೀಯರುಗಳು ಅಳಿಯ ಸಂತಾನ ಪರಿಷತ್ತಿನವರು 'ಅಳಿಯ ಸಂತಾನವನ್ನೇ ನಾಶಗೊಳಿಸಿ ಮಕ್ಕಳ ಸಂತಾನ ಮಾಡತ್ತಿರುವರು" ಎಂದು ಪ್ರಚಾರಮಾಡುವುದು ನ್ಯಾಯವಲ್ಲ. ಈಗಿನ ಮಸೂದೆಯಲ್ಲಿ ಅಂತಹ ಉದ್ದೇಶವೇನೂ ಇಲ್ಲ ಎಂದು ಸುರಸಭಾಷಣಮಾಡಿದರು. ಸಭಿಕರು ಸರ್ವರೂ ಅಳಿಯಸಂತಾನದಲ್ಲಿ ತಿದ್ದುಪಡಿ ಅಗತ್ಯವೆಂದೂ ಈಗ ಜಿಲ್ಲಾ ಪರಿಷತ್ತಿನವರು ತಯಾರಿಸಿದ ಮಸೂದೆಯು ನ್ಯಾಯ ಮತ್ತು ಯೋಗ್ಯವೆಂದೂ ಆದರಲ್ಲಿ ಸ್ವಲ್ಪ ತಿದ್ದುಪಡಿಗಳೊಂದಿಗೆ ಸದ್ರಿ ಮಸೂದೆಯು ಕಾನೂನಾಗಿ ಮಂಜೂರಾಗಬೇಕೆಂದೂ ಸ್ಪಷ್ಟಗೊಳಿಸಿ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಬ್ರಹ್ಮಾವರ—ತಾ 13-8-39ರಲ್ಲಿ ಬ್ರಹ್ಮಾವರದಲ್ಲಿರುವ ಇವರ್ಸಾಡಿ ಬ್ರದರ್ಸರ ಆಫೀಸಿನಲ್ಲಿ ಚೇರ್ಕಾಡಿ, ಹಾವಂಜೆ, ಆರೂರು, ನೀಲಾವರ, ಹೇರೂರು, ಬಾರಕೂರು, ವಾರಂಬಳ್ಳಿ, ಹಾರಾಡಿ, ಬೈಕಾಡಿ, ಹಂದಾಡಿ, ಕುಮ್ರಗೋಡು, ಬಾರ್ಕೂರು, ಶಿರಿಯಾರ, ಬಾಳ್ಕುದ್ರು, ಬಿಲ್ಲಾಡಿ, ಹೆಗ್ಗುಂಜೆ, ಯಡ್ತಾಡಿ, ಪೆಜಮಂಗೂರು, ವಗ್ಗರೆ ಗ್ರಾಮಗಳ ಅಳಿಯಸಂತಾನವನ್ನಾಚರಿಸುವ ಜನರು ಭೆಸೇರಿ ಈ ಕೆಳಗಿನಠರಾವ ಸರ್ವಾನುಮತದಿಂದ ಪಾಸುಮಾಡಲಾಯ್ತು.

ಈ ಹಿಂದೆ ಅಳಿಯಸಂತಾನಕ್ಕೆ ಸಂಬಂಧಿಸಿದ ಒಂದು ಬಿಲನ್ನು ತಯಾರಿಸಿ ಸಿಲೆಕ್ಟ್ ಕಮಿಟಿಯಲ್ಲಿ ಹಾಕಿದ್ದು, ಬಹುಮತದ ಆಕ್ಷೇಪದ ಮೇರೆಗೆ ರದ್ದು ಪಡಿಸಿದ್ದನ್ನು ಈಗ ಪುನಃ ಜಾರಿಗೆ ತರುವುದು ಎಷ್ಟುಕ್ಕೂ ಸರಿಯಲ್ಲ. ಈಗಿನ ಪರಿಸ್ಥಿತಿಯು ಕಷ್ಟಮಯವಾದುದರಿಂದ ಈ ಬಿಲಿನಿಂದ ಉಂಟಾಗುವ ವ್ಯಾಜ್ಯದ ಕಷ್ಟನಷ್ಟಗಳನ್ನು ಅನುಭವಿಸಲು ಜನರು ತಯಾರಿಲ್ಲ ಎಷ್ಟೋ ಶತಮಾನಗಳಿಂದ ನಡೆದುಬಂದ ಈ ಕಟ್ಟನ್ನು ಈ ದುಃಸ್ಸಮಯದಲ್ಲಿ ತಬ್ಬಿಬ್ಬುಮಾಡುವ ಈ ಯೋಚನೆಯನ್ನು ಮಾಡಬಾರದಾಗಿ ನಿರ್ಣಯಿಸಲಾಯಿತು ಕೂಳ್ಕೆ ಬೈಲು ರಾಮಣ್ಣ ಹೆಗ್ಗಡೆ ಅಧ್ಯಕ್ಷ

ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ, ಅಳಿಯಸಂತಾನ ಸುಧಾರಣೆಯ ಸಭೆಗೆ ತಾನು ಅಧ್ಯಕ್ಷನಾಗಿರಲಿಲ್ಲವೆಂದೂ ಅದರಲ್ಲಿಯ ಯಾವ ವಿಷಯಗಳೂ ತನಗೆ ಗೊತ್ತಿರುವುದಿಲ್ಲವೆಂದೂ ಶ್ರೀ ಎಚ್ ಸಂಕಯ್ಯ ಶೆಟ್ಟರು (ಗ್ರಾಮ ಚಾವಡಿ) ತಿಳಿಸುತ್ತಾರೆ. ಆದರೆ ಇವರ ಸಹಿಯು ಸಭೆಯ ಪ್ರೊಸಿಡಿಂಗ್ಸಿನಲ್ಲಿ ಇರುವುದನ್ನು ಸಂಬಂಧಿಸಿದವರು ತೋರಿಸುತ್ತಾರೆ ಇದರಲ್ಲಿ ಯಾವುದು ಸತ್ಯವೆಂಬುದನ್ನು ಊಹಿಸಬರುವುದಿಲ್ಲ

ಶ್ರೀ ಕುತ್ತಿಪಾಡಿ ಮುದ್ದಣ್ಣ ಶೆಟ್ರ ನಿಧನ

ಇವರು ಇತ್ತಲಾಗಿ ಕೆಲಸಮಯದಿಂದ ಕ್ಷಯರೋಗ ಪೀಡಿತರಾಗಿದ್ದು ಚಿಕಿತ್ಸೆಗಾಗಿ ಕೊಯಮತ್ತೂರಿಗೆ ಹೋಗಿ ಕೆಲಮಟ್ಟಿನ ಗುಣಹೊಂದಿ ಕನ್ನನೂರಿಗೆ ಬಂದು ತನ್ನ ಮಗನ ಬಳಿಯಲ್ಲಿದ್ದಾಗ ಪುನಃ ಕಠಿನ ಕಾಯಿಲೆಗೊಳಗಾಗಿ ಇದೇ 22ನೇ ಅಪರಾಹ್ಣ ಘಂಟೆ 3ಕ್ಕೆ ತನ್ನ ಕುತ್ಪಾಡಿಯ ಮನೆಯಲ್ಲಿ ಮೃತರಾಗಿರುವರೆಂಬುದು ಅತ್ಯಂತ ವಿಷಾದಕರವಿದೆ ಮೃತರು ಬದ್ಧಿಚತುರರೂ,ಬಡಜನೋಪಕಾರಿಯೂ ಸಚ್ಚರಿತರೂ ಆಗಿದ್ದು ಜನರಿಗೆ ಬೇಕಾದವರಾಗಿ ಗಣನೀಯರಾಗಿದ್ದರು. ದೇಶಾಭಿಮಾನಿಯಾಗಿ ಕಾಂಗ್ರೆಸಿಗಾಗಿ ದುಡಿದವರು. ಇವರ ನಿಧನದಿಂದ ಕುತ್ಪಾಡಿಯ ಮತ್ತು ಆಸಪಾಸಿನ ಹಳ್ಳಿಗಳ ಪ್ರಾಮುಖ್ಯ ಪುರುಷರೊಬ್ಬರು ಅಂತರ್ಧಾನವಾದಂತಾಯಿತು. ಇವರ ಮಕ್ಕಳ ಮತ್ತು ಕುಟುಂಬಿಕರ ದುಃಖದಲ್ಲಿ ನಾವು ಕೂಡಾ ಸಹಾನುಭೂತಿಯುಳ್ಳವರಿರತ್ತೇವೆ.

ಫಲಿಮಾರು—ಪಂಚಾಯತ ಬೋರ್ಡಿನ ಕಡೆಯಿಂದ ಈ ವರುಷ ಅವಂಬಲ್ ಮತ್ತು ನಡಿಯಾರುಗಳಲ್ಲಿ ಗಟ್ಟಿಮುಟ್ಟಾದ ಮರದ ಸೇತುವೆಗಳನ್ನು ಉತ್ಸಾಹೀ ಪ್ರಸಿಡೆಂಟರಾದ ಶ್ರೀ. ಹ್ಯಾಗೆ ನರಸಿಂಹ ಪ್ರಭುಗಳವರು ಕಟ್ಟಿಸಿರುವರು. ಇದರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾದಂತಾಗಿಯದೆ

ವಿಕ್ಟೋರಿಯ ರೂಪಾಯಿ ನಡೆಯುತ್ತದೆ

ವಿಕ್ಟೋರಿಯ ರೂಪಾಯಿಯು ನಡೆವುದಿಲ್ಲೆಂಬ ತಪ್ಪು ಅಭಿಪ್ರಾಯವು ಜನತೆಯಲ್ಲಿ ಹಬ್ಬಿ ಕೆಲವರು, ಸದ್ರಿ ರೂಪಾಯಿಗಳನ್ನು ಹಳ್ಳಿಗರಿಂದ ಕಡಿಮೆ ಬೆಲೆಗೆ ತೆಗೆದುಕೊಂಡು ಲಾಭಮಾಡಹೊರಟಿದ್ದಾರೆ ವಿಕ್ಟೋರಿಯ ರೂಪಾಯಿಗಳು ಚಲಾವಣೆ ಆಗುವುದಿಲ್ಲೆಂಬುದು ಶುದ್ಧ ತಪ್ಪು ಅವುಗಳು ಇತರ ರೂಪಾಯಿಗಳಂತೆಯೇ ಚಲಾವಣೆ ಆಗುತ್ತವೆಂದು ಮದ್ರಾಸ್ ಸರಕಾರವು ಪ್ರಕಟಿಸಿರುತ್ತದೆ

ಸಪ್ಟಂಬರ 2ಕ್ಕೆ ಕಂಟಕ

ಯುರೋಪಿನ ಬಿಕ್ಕಟ್ಟು ಸೆಪ್ಟಂಬರ ತಾ. ೭ಕ್ಕೆ ಪರಮಾವಧಿ ಮುಟ್ಟುವುದೆಂಬ ಅಭಿಪ್ರಾಯ ಬಲಗೊಳ್ಳುತ್ತಿದೆ. ಇದೇ ತಾ ೭೭ರಲ್ಲು ಟೌನೆನ್‌ಬರ್ಗನಲ್ಲಿ ಹರ್ ಹಿಟ್ಲರರು ಕೊಡುವ ಭಾಷಣ ಈ ಪ್ರಶ್ನೆಯನ್ನು ನಿರ್ಧರಿಸಬಹುದು 1911ರ ಯುದ್ಧವು ಆರಂಭವಾದುದು ಆಗೋಸ್ತು ತಾ. ೨೨ಕ್ಕೆ ಆಗೋಸ್ತು ತಿಂಗಳೇ ಈ ಸಲವೂ ಯುರೋಪಿನ ಕಂಟಕದ ತಿಂಗಳಾಗುವಂತಿದೆ ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳು ಪೋಲಂಡಿನ ಸಹಾಯಕ್ಕೆ ಬರುವ ಮೊದಲೇ ಪೋಲಂಡನ್ನು ನಾಶಗೊಳಿಸಿಬಿಡಬಹುದೆಂದೂ ಆ ಮೇಲೆ ಇಂಗ್ಲೆಂಡ್ ಫ್ರಾನ್ಸ್‌ಗಳೊಡನೆ ಒಪ್ಪಂದ ಮಾಡಿಕೊಂಡರಾಯಿತೆಂದೂ ಜರ್ಮನ್ ಸೈನ್ಯಾಧಿಕಾರಿಗಳು ಕೆಲವರು ಕಲ್ಪಿಸಿರುತ್ತಾರೆ ಆದರೆ ಅದು ಸಾಧ್ಯವೇ ಇಲ್ಲೆಂಬುದು ಈಗ ಸ್ಪಷ್ಟವಾಗಿದೆ. ಯಾಕೆಂದರೆ ಇಗ್ಲೆಂಡು ಜರ್ಮನಿಯೊಂದಿಗೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಳ್ಳಬಾರದೆಂದು ಪೋಲಂಡ್ ಮತ್ತು ಇಂಗ್ಲೆಂಡುಗಳು ಕರಾರುಮಾಡಿಕೊಂಡಿವೆ.

ಇಂಗ್ಲೆಂಡಿಗೆ ಜಪಾನಿನ ಎಚ್ಚರಿಕೆ

ಇಟೆಲಿ ಮತ್ತು ಜರ್ಮನಿಯ ಕುರಿತು ಜಪಾನಿನ ಧೋರಣೆಯು ಇದೇ ತಾ. 23 ರಲ್ಲು ನಡೆಯುವ ಮಂತ್ರಿಗಳ ಸಭೆಯಲ್ಲಿ ನಿಶ್ಚಯವಾಗಲಿರುವುದು ಉತ್ತರ ಚೈನದ ಜಪಾನಿನ ಕೇಳಿಕೆಗಳಿಗೆ ಇಂತಿಷ್ಟು ಸಮಯದೊಳಗೆ ಸಮ್ಮತಿ ಕೊಡದಿದ್ದ ಪಕ್ಷದಲ್ಲಿ ಜಪಾನು ತನಗಿಚ್ಛೆ ತೋರಿದಂತೆ ನಡೆಯುವುದೆಂದು ಇಂಗ್ಲೆಂಡಿಗೆ ಎಚ್ಚರವಿತ್ತಿರುವುದೆಂದು ತಿಳಿದುಬರುತ್ತದೆ ಈಗಣ ಒಪ್ಪಂದಗಳನ್ನು ಮಾರ್ಪಡಿಸುವ ಕುರಿತು ಚರ್ಚಿಸಲು ಇಂಗ್ಲೆಂಡು ಸಿದ್ಧವಿದೆ. ಆದರೆ ಚೀನೀ ನಾಣ್ಯ ಚಲಾವಣೆಯ ಪ್ರಶ್ನೆಯ ಕುರಿತು ಇತರ ರಾಷ್ಟ್ರಗಳ ಅಭಿಪ್ರಾಯ ಕೊಳ್ಳದೆ ಏನುಮಾಡಲೂ ಸಾಧ್ಯವಿಲ್ಲೆಂದು ಬ್ರಿಟಿಷ್ ಸರಕಾರವು ಜಪಾನಿಗೆ ಉತ್ತರವಿತ್ತಿರುವುದು.

ಮೋಸ್ಕೋ ಮಾತು ನಿಂತುಹೋಗಿದೆ

ಮೋಸ್ಕೋ ಪಟ್ಟಣದಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯದ ಸೇನಾ ತಜ್ಞರೊಳಗೆ ನಡೆಯುತ್ತಿದ್ದ ಮಾತುಕತೆಯು, ಅದೇನೋ ಭಿನ್ನಾಭಿಪ್ರಾಯದ ನಿಮಿತ್ತ ಈಗ 3ದಿನಗಳಿಂದ ನಿಂತುಹೋಗಿದೆ ಒಪ್ಪಂದದ ಗತಿಯೇನಾಯಿತೆಂದು ಈವರೆಗೂ ತಿಳಿದಿಲ್ಲ 2,000ಮಿಲ್ಯ ಮಾರ್ಕ್ಸ್‌ಗಳಷ್ಟು ಬೆಲೆಯ ಸಾಮಾನುಗಳನ್ನು ರಷ್ಯವು ಜರ್ಮನಿಯಿಂದ ಕಡವಾಗಿ ಪಡೆಯುವ ಒಡಂಬಡಿಕೆ ಮಾಡಿಕೊಂಡಿದೆ.

ಇಂಗ್ಲೆಂಡಿನ ಸ್ಪಷ್ಟ ಧೋರಣೆ

ಹಿಟ್ಲರರು ಇದೇ ರೀತಿ ನಡೆದಲ್ಲಿ ಯುರೋಪಿನಲ್ಲಿ ಯುದ್ಧ ನಿಶ್ಚಯ ಇಂಗ್ಲೆಂಡಿಗೆ ಪೋಲಂಡನ್ನು ಎಷ್ಟು ಮಾತ್ರಕ್ಕೂ ಬಿಟ್ಟುಹಾಕಲು ಸಾಧ್ಯವಿಲ್ಲ ಒಪ್ಪಂದವನ್ನದು ನಿಶ್ಚಯವಾಗಿಯೂ ಪಾಲಿಸುವುದೆಂದು ಟೈಮ್ಸ್ ಮೊದಲಾದ ಪತ್ರಿಕೆಗಳು ಬ್ರಿಟಿಷ್ ಸರಕಾರದ ಧೋರಣೆಯನ್ನು ಸ್ಪಷ್ಟಗೊಳಿಸಿ ಜರ್ಮನಿಯನ್ನು ಎಚ್ಚರಿಸಿವೆ. ಬ್ರಿಟಿಷ್ ನೌಕೆಯು ಯುದ್ಧವಾದಲ್ಲಿ ಸಾಮ್ರಾಜ್ಯದ ಯಾವ ಭಾಗವನ್ನಾದರೂ ರಕ್ಷಿಸಲು ಸಿದ್ಧವಾಗಿಯೇ ಇದೆ 1914 ಕ್ಕಿಂತ ಎಷ್ಟೋ ಬಲಶಾಲಿಯಾಗಿದೆ ಆದೀಗ.

ಬಾರಕೂರು ಬಿಲ್ಲವ ಚೆರಿಟಿ ಸಂಘ ಮುಂಬಯಿ—ತಾ ೯ 8-39ರಲ್ಲು ಈ ಸಂಘದ 22ನೇ ವಾರ್ಷಿಕ ಮಹಾಸಭೆಯು ಮಾಟ್ಲಬೋಯಿ ಎಕೌಂಟೆಂಟ್ಸ್ ಇನ್ಸ್ಟಿಟ್ಯೂಟಿನಲ್ಲಿ, ಸಂಘದ ಅಧ್ಯಕ್ಷರಾದ ಪಿ ಕೆ. ಸುವರ್ಣರವರ ಅಧ್ಯಕ್ಷತೆಯಲ್ಲಿ ಜರಗಿ ಇದೇ ಎಪ್ರಿಲ್ ತಿಂಗಳ ತಾ. 31ಕ್ಕೆ ಅಂತ್ಯವಾಗುವ ಒಂದು ವರ್ಷದ ಆಯವ್ಯಯದ ಪಟ್ಟಿಯನ್ನೂ, ಆ ದಿನ ವರ್ಷದ ಕಾರ್ಯನಿರ್ವಾಹಕ ಸಮಿತಿಯನ್ನೂ, ಸರ್ವಾನುಮತದಿಂದ ಮಂಜೂರು ಮಾಡಲಾಯಿತು ಬಳಿಕ ಸಭಿಕರಗಳಾದ ರಾಮ ಅಮಿನ್, ಯಂ ರೀಜಪ್ಪ ಎಮ್ ಎನ್. ಉದ್ಯಾವರ್, ವೈ ಸುಬ್ಬ, ವ್ಹಿ ಜಿ ಬಂಗೇರ, ಎಸ್, ಪೂಜಾರ್ [illegible], ಕೆ. ಎಮ್. ಬಂಗೇರ ಮತ್ತು ಅಧ್ಯಕ್ಷ ಭಾಷಣಗಳಾಗಿ ಸಭಾಂತ್ಯವಾಯಿತು.

ದಿ ಮೊಗವೀರ ಯುವಕ ಸಂಘ—ಈ ಸಂಘದ ಚತುರ್ಥ ವರ್ಷಂತ್ಯೋತ್ಸವವು ಇದೇ ತಾ. 29ಕ್ಕೆ ಅಪರಾಹ್ನ ಘಂಟೆ 2ಕ್ಕೆ ಸರ್ ಕಾವಸ್ಜಿ ಜಹಂಗೀರ್ ಪಬ್ಲಿಕ್ ಹೋಲಿನಲ್ಲಿ ಶ್ರೀ ಯುಸುಫ್ ಮೆಹರಲ್ಲಿಯವರ ಸನ್ಮಾನಾಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು. ಮಹಾಜನರೆಲ್ಲರೂ ಆಮಂತ್ರಿತರಾಗಿರುವರು. ಸಭಾಂತ್ಯದಲ್ಲಿ "[illegible] ಬಂಗಾರ" ಎಂಬ ತುಳುಸಾಮಾಜಿಕ ನಾಟಕಾಭಿನಯವಿರುವುದು.

ಮೂಲವ್ಯಾಧಿಯು ಆಮೂಲಾಗ್ರವಾಗಿ ಗುಣವಾಗುತ್ತದೆ

ನಾಥ-ಪ್ರೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ

ಆರ್ಶ್‌ಮಾರಾ

(ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಆರ್ಶ್‌ಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು. ನೋವು ತುರಿಸಾಟ, ಉರಿಯುವಿಕೆ, ಕೀವು, ರಕ್ತಸ್ರಾವವಾಗುವುದೆಲ್ಲವೂ ಕೂಡಲೆ ನಿಲ್ಲಿಸಿಬಿಡುವುದು ಕೇವಲ ಮೂರು ದಿವಸ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳಕೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನ ಶಿಫಾರಸು ಮಾಡುತ್ತಿದ್ದಾರೆ ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

Most Reliable New Model 1939

High Grade Lever Movement. Offered at 50% Reduction

No 517 STRONG & DURABLE.

ROUND OR SQUARE



No 401 Chromium Rs 3 0 0
„ 402 Golden Case „ 4 0 0
LEVER MOVT 15 JEWELS
No 561 Chromium Rs. 13 8 0
Guaranteed 5 Years

No 562 Rolled Gold Rs 17 0 0 No 517 Chromium Rs 6 8 0
For other Particulars No 518 Golden Case Rs 8 0 0 Ask for our Catalogue As 9/- Extra for postage & packing
(CORRESPONDENCE IN ENGLISH ONLY)

BAPALAL & CO., *101 Abdul Rehman Street,* **Bombay 3**

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

21—8—39

ಅಳಿಯಸಂತಾನದಲ್ಲಿ ಸುಧಾರಣೆ — ತಾ 13ರಲ್ಲಿ ಶ್ರೀರಾಮ ಕೃಷ್ಣ ವಿದ್ಯಾರ್ಥಿ ಭವನದ ಸದಸ್ಯರು ಶ್ರೀ ವೇಣುಗೋಪಾಲಯ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಳಿಯಸಂತಾನ ಕಟ್ಟಿನಲ್ಲಿ ಸುಧಾರಣೆಗಳಾಗಬೇಕೇ ಅಥವಾ ಬೇಡವೇ ಎಂಬ ವಿಷಯವನ್ನು ಚರ್ಚಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಳಿಯಸಂತಾನಕಟ್ಟಿನ ಚರಿತ್ರೆಯನ್ನೂ ಅದರ ಗುಣದೋಷಗಳನ್ನೂ ಆ ಕಟ್ಟನ್ನಾಚರಿಸುವವರ ಸ್ತ್ರೀಯರಿಗೆ ಇರುವ ಸ್ವಾತಂತ್ರ್ಯವನ್ನು ಹಿರಿಯಬರಲ್ಲಿಯೂ ಕಿರಿಯರಲ್ಲಿಯೂ ಸಾಧಾರಣವಾಗಿ ಉಂಟಾಗುವ ವ್ಯಾಜ್ಯದ ಕಾರಣವನ್ನು, ಇಂಥಾ ಒಡಕು ವಗೈರನ್ನು ಹೋಗಲಾಡಿಸಲು ತಕ್ಕ ಸೂಚನೆಗಳನ್ನು ವಿವರಿಸಿದ್ದಲ್ಲದೆ ನೂತನ ಮಸೂದೆಗಳಿಗೆ ಹಾನಾಂಶದ ರೀತಿಯಲ್ಲಿ ತಿಳುವಳಿಕೆ ಮಾಡಿದ್ದರಿಂದ ಪ್ರಯೋಜನವಾಯಿತೆಂದು ಸಭಿಕರು ಧನ್ಯವಾದಗಳೊಂದಿಗೆ ಸಮಾಪ್ತವಾಯಿತು.

ಮೋಟೆರ್ ಕೆಲಸಗಾರರ ಸಭೆ— ಮಂಗಳೂರು ಮೋಟರ್ ಎಂಪ್ಲೋಯಿಸ್ ಎಸೋಸಿಯೇಶನಿನ ಸಂಘದ ಆಶ್ರಯದಲ್ಲಿ ಕಳೆದ ತಾ 17ನೇ ಗುರುವಾರ ಸಾಯಂಕಾಲ ಸಾರ್ವಜನಿಕ ಸಭೆಯು ಮಂಗಳೂರು ಲೈಟ್ ಮೈದಾನದಲ್ಲಿ ಜರಗಿತು. ಶ್ರೀ. ಬಿ. ಆರ್. ಅಬಾರ ಬಿ. ಎ. ಎಲ್ ಎಲ್. ಬಿ. ವಕೀಲ್ ಇವರು ಅಧ್ಯಕ್ಷತೆ ವಹಿಸಿದ್ದರು. ಸಿ. ಪಿ. ಕಂಠರಾಯರು ತಮ್ಮ ಭಾಷಣದಲ್ಲಿ ಕೆಲಸಗಾರರನ್ನು ಒಟ್ಟುಗೂಡಿಸಿ ಈಗಿರುವ ಮೋಟಾರ್ ಎಂಪ್ಲೋಯಿಸ್ ಯೂನಿಯನ್ನಿಗೆ ವಿಶೇಷವಾಗಿ ಮತ್ತೊಂದು ಸಂಘವನ್ನು ಏರ್ಪಡಿಸಲು ಮಾಡಿದ ಪ್ರಯತ್ನವನ್ನು ಜಿಲ್ಲಾ ಕಾಂಗ್ರೆಸ್ ಧುರೀಣರೂ ಕಾಂಗ್ರೆಸ್ ಪಕ್ಷದ ಜಿಲ್ಲಾ ಬೋರ್ಡು ಅಧ್ಯಕ್ಷರೂ ಆದ ಡಾ| ಬಿ. ಟಿ. ಲಕ್ಷ್ಮಣರು ಬೆಂಬಲ ಕೊಟ್ಟುದನ್ನೂ ನಿವೇದಿಸುವುದೇ ಸಭೆಯ ಉದ್ದೇಶವಾಗಿದ್ದಿತು. ಅಧ್ಯಕ್ಷರು ಮೋಟರ್ ಕೆಲಸಗಾರರು ದೂಡಿದ ದುಃಸ್ಥಿತಿಯ ವಿಷಯದಲ್ಲಿ ಜನರಲ್ಲಿ ಏನಾದರೂ ಭಿನ್ನಾಭಿಪ್ರಾಯಗಳಿದ್ದುದರಿಂದ ಆ ಕಾರಣಗಳನ್ನು ಸಭೆ ಸಂಸ್ಥಾಪಕರು ಮಹಾಜನರಿಗೆ ವಿವರಿಸುತ್ತಾರೆಂದು ತಿಳಿಸಿದರು.

ಯೂನಿಯನಿನ ಅಧ್ಯಕ್ಷರಾದ ಶ್ರೀ ಸಾಲ್ಯಾನರು ಕೆಲಸಗಾರರ ಸಂಘವನ್ನು ಸ್ಥಾಪಿಸಿ ಗಿರಿಯವರು ಬಂದು ಹೋದ ಅನಂತರದ ಸಂಗತಿಗಳನ್ನು ಅರಿತು ಮಂದಿಯನ್ನು ಸುಮಾರು ನಾಲ್ಕೈದು ತಿಂಗಳು ಬಳಿಕೂಡ ಅಧಿಕವಾಗಿ ರಾತ್ರಿ ಕೆಲಸಕ್ಕೆ ನೇಮಿಸುವದನ್ನೂ, ಸಂಘದ ಸದಸ್ಯರು ರಾಜಿ ಪಂಚಾಯಿತಿಗೆ ಬರಬೇಕೆಂದು ಮಾಡಿಕೊಂಡ ವಿನಂತಿಯನ್ನು ಮಾಲೀಕರ ಕಡೆಯಿಂದ ಆ ವಿಷಯಕ್ಕೆ ನಿರಾಕರಿಸಲ್ಪಟ್ಟಿತೆಂದೂ ಈ ಕಾರಣದಿಂದ ಮುಷ್ಕರ ನಡೆದ್ದಾಗಿದೆಯೆಂದರು.

ಯೂನಿಯನ ಕಾರ್ಯದರ್ಶಿಗಳಾದ ಶ್ರೀ. ರಮಾನಂದರಾಯರು ಭಾಷಣಮಾಡುತ್ತಾ, ಈ ವಿದ್ಯಮಾನದಿಂದ ಯೂನಿಯನ್ನವರು ಕಾಂಗ್ರೆಸ್ಸನ್ನು ಅತಿಕ್ರಮಿಸಿಲ್ಲವೆಂಬುದನ್ನು ಸಹಕಾರದಿಂದ ಸ್ಪಷ್ಟೀಕರಿಸಿದರು. ಮತ್ತು ಮಾಲಕರು ಈ ಯೂನಿಯನ್ನು ನಾಶಮಾಡಿಯೂ ಪ್ರತ್ಯೇಕ ಯೂನಿಯನ್ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆಂದೂ, ಈ ಯತ್ನದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ಬೆಂಬಲವು ದೊರಕಿದೆಯೆಂದೂ, ರಿಜಿಸ್ಟರಾದ ಯೂನಿಯನಿಗೆ ವಿರುದ್ಧವಾಗಿ ಬೇರೆ ಸಂಸ್ಥೆಯನ್ನು ಸ್ಥಾಪಿಸಲು ಜಿಲ್ಲಾ ಬೋರ್ಡ ಅಧ್ಯಕ್ಷರಂತಹ ಗಣ್ಯ ಧುರೀಣರು ಪ್ರೋತ್ಸಾಹ ಕೊಡುವುದರಿಂದ ಕೆಲಸಗಾರರ ಮೂಲಭೂತ ಹಕ್ಕನ್ನೇ ಅಪಹರಿಸಲು ಕಾಯಿಮಾಡಿದಂತಾಗುತ್ತದೆಂದು ಹೇಳಿದರು. ಅಧೆರ ಶ್ರೀ. ಕೃಷ್ಣರಾಯರು ಮಾತಾಡುತ್ತಾ ಕೆಲಸಗಾರರು ಕಾಂಗ್ರೆಸ್ಸೂ ಒಂದೇ ಎಂಬ ಭಾವನೆಯಿಂದ ಸಹಾಯದ ಕೋರಿದೆ ಅವರ ಹಿತಸಾಧಿಸಿಕೊಳ್ಳ ಆಸಕ್ತಿಯಿಂದ ಮಾಲಕರಿಂದ ಸ್ಥಾಪಿಸಲ್ಪಡದ ಹೊಸ ಯೂನಿಯನ್ನಿಂದರೆ ಮಾತ್ರ ಗಿರಿಗಳ ವಾತ ಸೇರಿದ್ದು ಸಂಸ್ಥೆಗಳಿಂದೂ ಆದ್ದರಿಂದ ಕೆಲಸಗಾರರ, ಕೆಲಸಗಾರರ ಸಂಘವಾದ ಹಿಂದಿನ ಸಂಘವನ್ನೇ ಬಲಪಡಿಸಿಕೊಂಡು ತಮ್ಮ ಹಿತಸಾಧಿಸಬೇಕೆಂದರು.

ಇಂದಿನ ಸಭೆಯಿಂದ ಊರ ಪ್ರಮುಖರು ಮೋಟಾರ್ ಕೆಲಸಗಾರರ ಸ್ಥಿತಿ

ಜಿಲ್ಲಾ ಸಮಾಚಾರ

ವನ್ನು ಟಿಕೆಟ್, ಮಾಲಕರನ್ನು ಸಾಗಿಸಿ ಈಗ ಪರ ಪಾತ ಇದ್ದವರು, ಮೋಟಾರ್ ಕಂಪೆನಿಗಳಿಗೆ ವಿಷಾದ ಮಾಡುವರೆಂಬ ಅಭಿಪ್ರಾಯವನ್ನು ಕಾಪು ಬರೆದು ತಿಂದಿದ್ದ ಸಮಿತಿ, ಲೇಖನದಿಂದ ಓದಿದರು. ಮುಖ್ಯಾಧ್ಯಕ್ಷರು, ಶ್ರೀ ಸಾಲ್ಯಾನರು ವಿವರಿಸಿದ ಪರಿಸ್ಥಿತಿಯು ಎಂತಹ ಆತ್ಮತೆಯನ್ನೂ ಕರಗಿಸಬೇಕೆಂದೂ ಕೆಲಸಗಾರರು ತಮ್ಮ ಹಿತವನ್ನು ಸಾಧಿಸಿಕೊಳ್ಳಲು ಒಕ್ಕಟ್ಟಿನಿಂದ ಕೆಲಸಮಾಡಬೇಕೆಂದೂ ಕೆಲಸಗಾರರ ಸಂಘಟನೆಯನ್ನು ಮುರಿದು ಇದಿಕಾರನ್ನಾದರಲ್ಲಿ ಉದವವು. ಯುದ್ಧ ಸುದ್ದಿ ಉಚಿತವಲ್ಲವೆಂದೂ ಹೊಸ ಯೂನಿಯನ್ನಿನವರೂ ಸಹ ಕೃತೇಣ ಹಳೆಯ ಯೂನಿಯನನ್ನು ಸೇರಿ ಕೆಲಸಮಾಡುವ ಸಂಭವವು ಬೇಗನೆ ಬರಬಹುದೆಂದೂ ಹೇಳಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಚಿತ್ರರಂಜನ ಕ್ಲಬ್— ನಿನ್ನೆ ಸಾಯಂಕಾಲ ಸ್ಥಳೀಯ ಆರ್ಯ ಸಮಾಜದಲ್ಲಿ 'ಚಿತ್ರರಂಜನ ಕ್ಲಬ' ಎಂಬ ಹೆಸರಿನಿಂದ ಒಂದು ಕ್ಲಬ್ ಸ್ಥಾಪಿಸಲ್ಪಟ್ಟಿತು. ಶ್ರೀಮಾನ್ ಕೆ ಆರ್. ಆಚಾರ್ ಬಿ ಎ ಎಲ್. ಎಲ್ ಬಿ. ವಕೀಲ್ ಇವರು ಕ್ಲಬ್ಬಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶ್ರೀ. ಬಿ ಭೋಜರಾಯರು ಅಧ್ಯಕ್ಷತೆ ವಹಿಸಿದ್ದರು. ಉಪಾಹಾರಾನಂತರ ಸಭೆಯ ಕಾರ್ಯಕ್ರಮಗಳು ಜರಗಿದವು

ಜಿಲ್ಲಾ ಬೋರ್ಡುಸಭೆ— ಕಳೆದ ತಾ. 14ನೇ ಸೋಮವಾರ ಪೂರ್ವಾಹ್ನ ಜಿಲ್ಲಾ ಬೋರ್ಡಿನ ಸಭೆ ಭವನದಲ್ಲಿ ಬೋರ್ಡಿನ ಸಭೆಯು ಜರಗಿತು. ಡಾ| ವಿಟ್ಠಲ ಶೆಟ್ಟಿಯವರು ಅಗ್ರಾಸನ ವಹಿಸಿದ್ದರು. ಜಿ. ಬೋ. ಕಾಂಗ್ರೆಸ್ ಪಕ್ಷದ ವರನ್ನು ಬೋರ್ಡಿಗೆ ಪುನಃ ತೆಗೆದುಕೊಳ್ಳಲಾಯಿತು. ಅನಂತರ ಸರಕಾರಿ ಜಿ.ಕೆ ಮುಗಳನ್ನು ಓದಿ ಕಾರ್ಯ ಮಾಡಿದರು. ಮುಂಬಯಿ ಸರಕಾರದವರ ಕೈಕೊಂಡ ಮದ್ಯಪಾನ ನಿಷೇಧ ಯೋಜನೆಗಾಗಿ ಅವರನ್ನು ವಂದಿಸಿ ಇತ್ತ ಮದ್ಯನಿಷೇಧದ ಯೋಜನೆಯಿಂದ ಈ ಜಿಲ್ಲೆಯವರಿಗೆ ಸರಿಯೊಗವು ಪ್ರಾಪ್ತವಾದಲ್ಲಿ ಅನುಕೂಲವಿದ್ದರೆಲ್ಲಾ ಅದನ್ನು ಹಾಗೆ ಅಡಿಸಬೇಕೆಂಬ ಠರಾವು ಶ್ರೀ ಫರ್ನಾಂಡೀಸರಿಂದ ತರಲ್ಪಟ್ಟು ಅದು ಮಂಜೂರಾಯಿತು. ಬೋರ್ಡಿನಲ್ಲಿ ಅಧ್ಯಕ್ಷ-ಸದಸ್ಯರಲ್ಲಿ ಕಚ್ಚಾಟವಿಲ್ಲದ ಬೋರ್ಡಿನ ಕಾರ್ಯಕ್ರಮವು ಸುಸೂತ್ರವಾಗಿ ನಡೆದಿದೆಯೆಂದು ಸರಕಾರದವರು ಬರೆದಿದ್ದ ಹೇಳಿಕೆಯು ರಿಪೋರ್ಟು ವಾಚಲ್ಪಟ್ಟಿತು. ಮ್ಯಸೂರು ದಕ್ಷಿಣಕನ್ನಡಗಳ ಮಧ್ಯೆ ವ್ಯಾಪಾರಕ್ಕೆ ಸಮೀಪವಾಗಿ ಅದೆ ಕೂಡಲಪಡಿಸಿಕೊಡುವ ಶಿವಪುರ ಸೇತುವೆಯನ್ನು ತೆರೆಯುವರೆ ಮೈಸೂರು ದಿವಾನರನ್ನೂ ಕಲೆಕ್ಟರ್ ಸೇತುವೆಯನ್ನು ತೆರೆಯಲು ಮಾನ್ಯ ರಾಜಗೋಪಾಲಾಚಾರ್ಯರನ್ನು ಪ್ರಾರ್ಥಿಸಬೇಕಾಗುವುದೆಂದೂ ಅಧ್ಯಕ್ಷರು ಸೂಚಿಸಿದರು

ಇದು ಅನುಮೋದಿಸಲ್ಪಟ್ಟಿತು.

ಜನ್ಮ ದಿನಾಚರಣೆ

ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಆಧ್ಯಾತ್ಮಿಕ ಗುರುಗಳೆಂದು ಪ್ರಸಿದ್ಧಿಗೊಂಡಿರುವ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಜನ್ಮದಿನೋತ್ಸವವು ಇದೇ ಬರುವ ಆಗಸ್ಟು 30ನೇ ಬುಧವಾರ ಎಲ್ಲೆಲ್ಲಿಯೂ ವಿಜೃಂಭಣೆಯಿಂದ ಆಚರಿಸಲ್ಪಡುವುದು. ಇದರ ಆಚರಣೆಗಳಲ್ಲಿ ಭಾಗವಹಿಸಲು ಸುತ್ತ ಮಾಗದಿರುವ ಅನೇಕ ಕುಟುಂಬಗಳು ಇರಬಹುದು. ಅಂಥವರು ಆ ದಿನದಲ್ಲಿಯಾದರೂ ಆಹಾರ್ತು ಧರ್ಮ ಜರುಗಿ, ತಮ್ಮ ಅಂಗಳ ದೇಹಗಳನ್ನು ಶುಚಿಯಾಗಿರಿಸಿ ಹಿರಿಯ ರೀತಿ ವಂದಿಸಿ ನಂಬಿದವರೆಲ್ಲರೂ ಒಟ್ಟಾಗಿ ಸೇರಿ ಸಕಲ ಸಮಾಜಗಳಲ್ಲಿಯೂ ಐಕ್ಯಮತ್ಯ, ಬುದ್ಧಿಯೂ, ಆರೋಗ್ಯ ಲಕ್ಷ್ಮಿ ಬೆಳೆಯಬೇಕೆಂದು ದೇವರನ್ನು ಪ್ರಾರ್ಥಿಸುವರೆ ಅಹಿಂಸಾತತ್ವಕ್ಕಾಗಿ ದುಡಿದಂತ್ತಾಗುವುದಲ್ಲದೆ ಅಹಿಂಸಾತತ್ವಮೂರ್ತಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರಂತಹ ಮಹಾಪುರುಷರ ಜನ್ಮದಿನಾಚರಣೆಯನ್ನು ಮಾಡಿದಂತಾಗುವುದೆಂದು ನನ್ನದೊಂದು ವಿನಂತಿ.

ಇತಿ ಸಜ್ಜನ ವಿಧೇಯ, ಯಂ ಕೆ. ನೈವೇರ್.

ಕಲ್ಯಾಣಪುರದಲ್ಲಿ ಬೆಂಕಿ— ಕಲ್ಯಾಣಪುರ ಸಕ್ಕರೆ ಕಾರ್ಖಾನೆ ಸಮೀಪ ತಿಲಕ ಶೆಟ್ಟಿ ಕದವಿನಲ್ಲಿ ಕಟ್ಟಿಗೆಗೆ ಕಲ್ಲು ಕಟ್ಟಿಕೊಂಡ ಬಿದ್ದ ಪತ್ತೆಯೊಂದು ಕಳೆದ ಶುಕ್ರವಾರ ಸಿಕ್ಕಿತು. ಶನಿವಾರ ದಿನ ಸರಕಾರಿ ಅಧಿಕಾರಿಗಳು ಬಿದ್ದುಕೊಟ್ಟು ಆದಿತ್ಯವಾರ ದಿನ ಪೋಸ್ಟ್‌ಮಾರ್ಟೆಮ್ ಮಾಡಲಾಯಿತು. ಮೃತನು ದಾವಣಗೆರೆಯತ್ತ ಕಡೆಯವನೆಂದು ವದಂತಿ. ಇವನು ಆತ್ಮಹತ್ಯೆ ಮಾಡಿಕೊಂಡಿರುವನೋ ಏನೆಂದು ಸರಿಯಾಗಿ ತಿಳಿದುಬಂದಿಲ್ಲ.

ನವಯುಗ

— ನೋಟೀಸು —

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ಪದ್ಧತಿಯಂತೆ ಬರುವವಾರದ ಅಂದರೆ ತಾ. 31-8-39ರ ಸಂಚಿಕೆಯನ್ನು ನಿಲ್ಲಿಸಿದ್ದೇವೆ 19ನೇ ಮಾಸ ವರ್ಷದ ಪ್ರಾರಂಭದ ಸಂಚಿಕೆಯು ತಾ. 7-9-39 ಕ್ಕೆ ವಿಶೇಷ ರೀತಿಯಲ್ಲಿ ಹೊರಡುವುದು.

ಮೆನೇಜರ್

. ನೋಟೀಸು.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಬ್ರಾಂಚ್ ಉಡುಪಿ.

ಈ ಬ್ಯಾಂಕಿನಲ್ಲಿ ನಗಗಳನ್ನು ಅಡವಿಟ್ಟು ಪಡೆಯುದಗೆ ಸರಿಯಾಗಿ ಬಡ್ಡಿಯನ್ನು ಸಲ್ಲಿಸದ ರಿಜಿಸ್ಟ್ರಿಶಿಗದ ಮೂಲಕ ತಿಳಿಸಿದರೂ ಸಂಬಂಧಪಟ್ಟ ಲೇವಾದೇವಿಯನ್ನು ತೀರಿಸದಿರುವ ಈ ಕೆಳಗಿನವರ ಚಿನ್ನದ ನಗಗಳನ್ನು ತಾ 26-8-39ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂ ಅದೇ ದಿನ ಸಂಪೂರ್ಣ ಆಗದಿದ್ದರೆ ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಮುಂದರಿಸಲ್ಪಡುವುದು. ತಿಳಿದಿರುತ್ತದೆ—

ಸಾಲದ ನಂಬ್ರ	ತಾರೀಕು	ಹೆಸರು ಮತ್ತು ವಿಳಾಸ	ಬಾಕೀಬಾ ರೂಪಾಯಿ		
J.L No 13/576	2—2—'38	ಮರಿಯನ್ ಪಿಂಟೊ, s/o ಜಾಕೊಬ್ ಪಿಂಟೊ, ಶಂಕರನಾರಾಯಣ ಗ್ರಾಮ, ಕೋಟೇಶ್ವರ ಪೋಸ್ಟ್, ದ. ಕ	16	15	6
13/625	16—2—'38		17	4	0
13/263	7—10—'37	ಅಬ್ದುಲ್ ಸಾಹೇಬ್, s/o ಅಬ್ದುಲ್ ಖಾದರ ಸಾಹೇಬ್, ಮುಕಲ್ಸ್, ಮುಲ್ಕಿ, ಪೋಸ್ಟ್ ದ. ಕ.	88	8	6
13/419	16—12—'37	,, ,, ,,	107	0	6
13/912	1—6—'38	ಕೊಲೆಸ್ಟಸ್ ಡಿ' ಅಲ್ಮೇಡ, s/o ಫ್ರಾಂಸಿಸ್ ಡಿ' ಅಲ್ಮೇಡ, c/o ಮೊಕ್ಸ್ಲಸ್ ಕಿಟ್ಟಿ ಫ್ರೆಂಡ್ ರೋಡ್ ನಂಬ್ರ 11 ಕಣ್ಣೀವಾ ಡೆನಿಯಾ ಬೆನ್ನನ ಬೊಂಬಾಯಿ	55	13	6

Office of the Bank
Udipi, 22—8—39

V Andrade,
Agent

ಉಡುಪಿ

ಸಹಕಾರಿ ಡೈರಿ ಫಾರ್ಮಿನ ಯೋಜನೆ

ಉಡುಪಿಯ ಪಟ್ಟಣಿಗರಿಗೆ ಶುದ್ಧ ಹಾಲನ್ನು ದೊರಕಿಸಿಕೊಡುವ ಸಲುವಾಗಿ ಸಹಕಾರ ತತ್ವಕ್ಕನುಸಾರವಾಗಿ ಡೈರಿ ಫಾರ್ಮನ್ನು ಸ್ಥಾಪಿಸುವ ಕುರಿತು ಆಲೋಚಿಸುವದಕ್ಕೆ ಸ್ಥಳೀಯ ಮ್ಯುನ್ಸಿಪಾಲಿಟಿಯಲ್ಲಿ ಗಣನೀಯ ವ್ಯಕ್ತಿಗಳ ಸಭೆಯೊಂದು ಇದೇ ತಾ. 20ನೇ ಸಂಜೆ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ವ್ಯವಸ್ಥೆಗೊಳಿಸಿದ ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟರ್ ಶ್ರೀ. ಸರ್ವೋತ್ತಮರಾಯರು ಡೈರಿಫಾರ್ಮಿನ ಆವಶ್ಯಕತೆಯನ್ನು ವಿವರಿಸಿ ಸ್ಥಳೀಯ ಸಹಕಾರಿ ಡೈರಿ ಫಾರ್ಮನ್ನು ದೂರಾಂತರಗೊಳಿಸಿ ರಿಜಿಸ್ಟ್ರ ಮಾಡಿದ್ದಲ್ಲಿ ಹೇಗೆ ಲಾಭದಾಯಕವಾಗಬಹುದೆಂದು ಅಂಕೆ ಸಂಖ್ಯೆಗಳಿಂದ ತೋರಿಸಿದರು. ಈ ವಿಷಯದಲ್ಲಿ ತುಂಬಾ ಚರ್ಚೆ ನಡೆಯಿತು. ಡೈರಿ ಫಾರ್ಮು ಅಗತ್ಯವೋ, ಲಾಭದಾಯಕವೋ ಎಂಬಿತ್ಯಾದಿ ವಿಷಯಗಳ ಕುರಿತು ರಿಪೋರ್ಟು ಮಾಡುವರೆ ಶ್ರೀಗಳಾದ ಕೆ. ಜೆ ಬಲ್ಲಾಳ್, ಕೆ ಆರ್. ಶೆಣೈ, ಡಾ| ಟಿ. ಮಾಧವ ಪೈ ಮತ್ತು ಬಿ ಕೆ. ಕೃಷ್ಣರಾಯರೊಡಗೂಡಿದ ಸಮಿತಿ ನೇಮಕವಾಯಿತು.

'ವಿದ್ಯಾಪತಿ' ಬಂದಿದೆ— ಚಲಚಿತ್ರ ಪ್ರಪಂಚದಲ್ಲಿ ಅದ್ಭುತ ಕ್ರಾಂತಿಯನ್ನುಂಟುಮಾಡಿದ ನ್ಯೂ ಥಿಯೇಟರಿನವರ ಆಕ್ಟ್ರೆಸ್ಸ ಚಲಚಿತ್ರಗಳಲ್ಲೊಂದಾದ ವಿದ್ಯಾಪತಿ ಪ್ರದರ್ಶನವು ರಾಮಕೃಷ್ಣ ಥಿಯೇಟರಿನಲ್ಲಿ ಮೊನ್ನೆಯಿಂದ ನಡೆಯುತ್ತಿದೆ. ಇದು ಅಬಾಲವೃದ್ಧರನ್ನೂ, ಪಂಡಿತ ಪಾಮರರನ್ನೂ, ಸ್ತ್ರೀ ಪುರುಷರನ್ನೂ ರಂಜಿಸುವ ರಮಣೀಯ ಚಿತ್ರವಾದುದರಿಂದಲೇ ಪ್ರತಿ ದಿನ ಪ್ರೇಕ್ಷಕರ ನೂಗ್ಗಾಟವು ಹೆಚ್ಚುತ್ತಿದೆ. ಉತ್ತಮ ಚಿತ್ರಗಳಿಗೆ ಅತ್ಯಧಿಕ ಪ್ರೋತ್ಸಾಹವು ಸಿಗ ಸಿಗದಿರಲ್ಲೆನೂ ಅಶ್ಚರ್ಯವಿಲ್ಲವೆಂದು ಇದರಿಂದ ಸ್ಪಷ್ಟವಾಗುವುದು.

ಭಜನ ಸಪ್ತಾಹ— ತಾ. 20-8-39ರಿಂದ ಸ್ಥಳೀಕ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ವಾಡಿಕೆಯಂತೆ ಭಜನೆ ಸಪ್ತಾಹವು ಪ್ರಾರಂಭವಾಗಿದೆ. ತಾ. 26-8-39ಕ್ಕೆ ಇದು ಯಥಾ ಸಾಂಗವಾಗಿ ಕೊನೆಗೊಳ್ಳುವುದು.

ಹೂವಿನ ಪೂಜೆ— ತಾ 21-8-39ರಲ್ಲಿ ವರ್ಷಂಪ್ರತಿ ನಡೆಯುವಂತೆ ಅನಂತೇಶ್ವರ ದೇವಸ್ಥಾನದಲ್ಲಿ ದೊಡ್ಡ ಹೂವಿನ ಪೂಜೆಯು ಅದಮಾರು ಮಠದ ಕಡೆಯಿಂದ ನಡೆಯಿತು.

ಉಡುಪಿ ತಾಲೋಕಿನ ಅಳಿಯಸಂತಾನಿಗರಲ್ಲಿ ವಿನಂತಿ— ಎಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸುವರೆ ಇದೇ ತಾ 28ನೇ ಸೋಮವಾರ ಅಪರಾಹ್ನ ಘಂಟೆ 2ಕ್ಕೆ ಉಡುಪಿಯ ಶ್ರೀರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಉಡುಪಿ ತಾಲೋಕಿನ ಅಳಿಯಕಟ್ಟನ್ನಾಚರಿಸುವವರ ಸಭೆಯೊಂದು ನಡೆಯಲಿರುವುದು. ಈ ಸಭೆಯಲ್ಲಿ ಬ್ರಹ್ಮಾವರ, ಹಿರಿಯಡ್ಕ, ಉಡುಪಿ, ಶಿರ್ವ ಮತ್ತು ಕಾಪು ಸರ್ಕಲ್ಲುಗಳ ಪರವಾಗಿ ಪ್ರತಿ ಸರ್ಕಲ್ಲಿಗೆ 5ಮಂದಿ ಪ್ರತಿನಿಧಿಗಳನ್ನೂ ಉಡುಪಿ ಪಟ್ಟಣಕ್ಕೆ 4ಮಂದಿಯನ್ನೂ ಆರಿಸಬೇಕಾಗಿದೆ. ಆದುದರಿಂದ ಪ್ರತಿ ಸರ್ಕಲ್ಲಿಗೆ ಸೇರಿದ ಅಳಿಯಕಟ್ಟಿನ ಬಂಧುಬಳಗ ನಾಡವ, ಬಿಲ್ಲವ, ಮೊಗವೀರ ವಗೈರ ಸಮಾಜಗಳವರು ಈ ಸಭೆಗೆ ಬಂದು ಪ್ರೋತ್ಸಾಹಿಸಬೇಕಾಗಿ ಶ್ರೀಗಳಾದ ಬಿ. ಶೀನಪ್ಪ ಹೆಗ್ಡೆ ಬಿ. ಎ. ಬಿ. ಎಲ್, ಮತ್ತು ಶ್ರೀ ಎಲ್. ಎಲ್. ಶೆಟ್ಟಿ ಯವರ ವಿನಂತಿಯು.

ಭಜನೆ— ಹರಿಜನ ಅನಾಥಾಲಯದಲ್ಲಿ ತಾ. 7ರಲ್ಲಿ ಭಜನೆಯೊಂದು ನಡೆಯಿತು. ಹರಿಜನ ವಿದ್ಯಾರ್ಥಿಗಳಲ್ಲದೆ ಇತರ ಕೆಲವು ಹಿಂದೂಗಳೂ ಬಂದಿದ್ದರು. ಈ ಸಂದರ್ಭದಲ್ಲಿ ಭಾಷಣಗಳೂ ಆದ್ದವು.

ಉಡುಪಿ ತಾಲೋಕು ಕಾಂಗ್ರೆಸ್ ಕಮಿಟಿಯ ಮಹಾಸಭೆಯು ತಾ. 27-8-39ನೆಯ ದಿನ ಆದಿತ್ಯವಾರ ಮಧ್ಯಾಹ್ನ 2-30ಕ್ಕೆ ಉಡುಪಿ ಮೋಡರ್ನ ಹಾಯಿ ಎಲಿಮೆಂಟರಿ ಶಾಲೆಯಲ್ಲಿ ಜರಗುವುದು. ಈ ಸಭೆಯಲ್ಲಿ ಅತಿ ಮಹತ್ವದ ಕಾರ್ಯಕ್ರಮಗಳಿರುವುದರಿಂದ ಸದಸ್ಯರೆಲ್ಲರೂ ಸಮಯಕ್ಕೆ ಸರಿಯಾಗಿ ಬರಬೇಕಾಗಿ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ.

LOVE:-*Mysterious* are its ways—Unfathomable is its depth
Undefinable is its *Magnitude*!!

It is an all pervading factor in the whole creation, be in one way or the other!
Some say love is sublime! Others assert that it is intrinsic!! where as the rest swear that it is fithy!!
Whatever be its ways and means the Untackled problem of the day is

IS IT SIN TO LOVE? — — HERE COMES

VIDYAPATHI

With his message of love Divine! **Vidyapathy,**
who has petrified most fastidious critics, and who has been wielded on the anvil of ELEPHANT TRADE-MARK, **delivers his message of love and its various aspects!**

SRI RAMAKRISHNA THEATRE, UDIPI.

from 23-8-1939

"To love is neither Virtue nor sin: it is humanity that makes it either"

See how he establishes this, on the silver screen!

LOOK HERE! **A rare combination of master talents!!**
Lilting tunes of KANNAN DEVI who will whistle her way through your heart!
Supported by:—
Pahari Sanyal, Prithviraj Kapoor, K. C. Dey, Leela Desai, Chaya Devi & others

Food to thinkers! Music to hearesr! Spectacle to seers!

New Theatres prize production only for a few days

ಪ್ರೇಮ:—ಇದರ ಗತಿಯು ವಿಸ್ಮಯಕರವಾದುದು! ಆಳವು ಅಗಾಧವಾದುದು! ಪರಿಣಾಮ ನಿರ್ಧರಿಸಲು ಅಸಾಧ್ಯವಾದುದು! ಅದಾವುದಾದರೊಂದು ರೀತಿಯಲ್ಲಿ ಸೃಷ್ಟಿಯ ಸಜೀವ ವಸ್ತು ಒಂದನ್ನೂ ಇದು ಬಿಟ್ಟಿಲ್ಲ!
ಇದು ಪರಿಶುದ್ಧವಾದುದು ಎನ್ನುವರು ಕೆಲವರು! ಇದು ಸ್ವಾಭಾವಿಕವಾದುದು ಎನ್ನುವರು ಹಲವರು!!
ಇದು ಹೇಯವಾದುದು ಎನ್ನುವರು ಇತರರು!!! ಅದರ ರೀತಿ ನೀತಿಗಳು ಹೇಗೂ ಇರಲಿ!—ಆದರೆ

'ಪ್ರೇಮವು ಪಾಪವೆ?' ಎಂಬ ಈ ಒಗಟನ್ನು ಯಾರೂ ಬಿಡಿಸಿಲ್ಲ.

ಪ್ರೇಮವು ಪಾಪವೂ ಅಲ್ಲ—ಪುಣ್ಯವೂ ಅಲ್ಲ! "ಪ್ರೀತಿಯಿಂದ ಮಾನವನು ಪಾಪವನ್ನೂ ಮಾಡಬಲ್ಲನು, ಪುಣ್ಯವನ್ನೂ ಮಾಡಬಲ್ಲನು" ಎಂಬ ಸಿದ್ಧಾಂತವನ್ನು ನಿಮ್ಮ ಹೃದಯದಲ್ಲಿ ಕೆತ್ತಲು ಬಂದಿರುವನು.

ನ್ಯೂ ಥಿಯೇಟರಿನವರ ಬಹುಮಾನಾಂಕಿತ

ವಿದ್ಯಾಪತಿ

ವಿಮರ್ಶಕರನ್ನು ಬೆರಗುಗೊಳಿಸಿರುವನು ಅವನು! ದೇಶ ವಿದೇಶಗಳಲ್ಲಿ ತನ್ನ ಕೀರ್ತಿಯನ್ನು ಅಚಲಗೊಳಿಸಿರುವನು!
ಕಲಾಕೋವಿದರಿಗೂ ನಿಲುಕದ ಪರಿಪೂರ್ಣತೆಯಿಂದ ತುಂಬಿ ತುಳುಕಾಡುತ್ತಿರುವನು ಅವನು!

ಸಂಶಯವೇಕೆ? ಪ್ರೀತಿ ಮತ್ತು ಅದರ ವಿವಿಧ ವಿಚಾರಗಳ ಕುರಿತು ಅವನಿಂದ ಕೇಳಿ ನಿಮ್ಮ ಸಂಶಯ ನಿವೃತ್ತಿ ಹೊಂದಿರಿ
ಜ್ಞಾನಿಗಳಿಗೆ ಉದಾತ್ತ ವಿಚಾರ! ಕೇಳುವವರಿಗೆ ಕರ್ಣಾನಂದಕರ ಗಾಯನ!! ನೋಡುವವರಿಗೆ ಆನಂದದಾಯಕ ನೋಟ!!!

ಈ ನಟವೃಂದವು ಒಂದುಗೂಡಿದುದು ಎಂದಾದರೂ ನೋಡಿರುವಿರಾ?

ಹಾಡಿನ ಹೆಗ್ಗುರಿ ಕನನ್‌ಬಾಲಾ ಮತ್ತು ಪಹರಿ ಸನ್ಯಾಲ್, ಪೃಥ್ವೀರಾಜ್, ಛಾಯಾದೇವಿ, ಕೇ. ಸಿ. ಡೇ!!

ಕೆಲವೇ ದಿನಗಳಿರುವುದು! ಲೀಲಾ ದೇಸಾಯಿಯ ಲೀಲೆಯ ನರ್ತನ! **ಇಂದೇ ಬಂದು ನೋಡಿರಿ!!**

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾರೀಕು 23-8-1939

ವಿ. ಸೂ.—ಪರದೆಯಿಂದ 17 ಫೀಟು ದೂರದಲ್ಲಿ ಸೀಟುಗಳು ಇರಬೇಕೆಂಬ ನಿಯಮದ ಮೇರೆಗೆ ಮೆಟನಿಯ 0-1-6 ಕ್ಲಾಸನ್ನು ಇಂದಿನಿಂದ ಮನ್ನಾ ಮಾಡಿಯದೆ.

Please Note:—Special accommodation (e. i. 0-1-6 class) will be abolished from to-day, as there is authoritative objection. The rule requires the auditorium to be at a distance of 17 feet from the screen!

ಟಿಕೇಟಿನ ದರ:—(ಟೇಕ್ಸ್ ಸಮೇತ) ರಿಜರ್ವ 1-8-0, ಸ್ಪೆಶಲ್ 0-11-9, ಗೆಲರಿ 0-7-0, ಬೆಂಚು 0-4-6, 0-2-3

ವಿದ್ಯಾಪತಿಯ ಅಚ್ಚುಮೆಚ್ಚಿನ ಪದ್ಯಾವಳಿ ಪುಸ್ತಕಗಳು ಸಿದ್ಧವಿವೆ! ವಿಚಾರಿಸಿರಿ.

— SYNOPSIS —

Some 500 years ago, when King Shiva Singha, the young ruler of Mithila, was celebrating the first spring festival of his reign, there assembled in the kingdom diverse people from far off and near. Festivity was in full swing within the palace, and in the adjoining bowers. On an occasion like this every soul was happy save one and he was no other than the Vidhushak, the court-jester who felt much perturbed because of his suspicion that his young and beautiful wife Chapala Devi was sweet on his faithfull servant Pitamber.

King Shiva Singh and his royal consort Lachmi Devi also participated in this merry making, and while roaming about from bower to bower, the King chanced to meet his poet friend Vidyapati, who had come all the way to Mithila to join in the celebration Delighted beyond measure, the king lost no time in introducing him to Queen Lachmi, who found in this charming man the ideal of her heart.

The King entreated Vidyapathi to remain in the palace as his poet so that he might awaken the soul of the Queen with his poems and songs. Bidding adieu to his old blind servant Madhusudan and accompanied by the lovely Anuradha who was a silent worshipper of the poet all her life Vidyapathi left his native village for Mithila.

Time helped much to deepen the feelings of Queen Lachmi for Vidyapathi and she really began to adore the poet in her heart of hearts. The King realised this and he felt aggrived, but never was bitter, for his love for Lachmi was ideal in greatness. Presently he had to leave for the battle field with a heavy heart as war broke out on the Fontier. He requested his friend Vidyapathi to look after his wife the queen. He trusted both of them.

As peace was in sight, the King thought of returning to Mithila and all the persuasion of his prime minister to keep him away from the influence of Vidyapati was of no avail. The Kings love for Queen Lachmi had not waned a bit, and with his usual gaity he went forth to greet the Queen, only to find that her love for Vidyapathi had but deepned during the period he was away in the battle field. It was too heavy a shock for the king to bear-he fell ill. Reluctant as he was to wound the feelings of queen, who was the dearest object to him on earth, the King tried his best to maintain his outward gaity. This however, did not escape the notice of Queen Lachmi. She felt bitterly sorry for the King, although she was helpless, being torn between her love for the Poet and her sense of duty towards the King – her Lord!

The ugly rumour, which the sublime love of Queen Lachmi gave rise to, told heavily upon Lachmi. She contemplated suicide. But she is rebuked by Anuradha for the cowardice, and asked her to be a silent lover, wherein lay the essence of true love. The King & Queen Lachmi both now prepared to offer their love at the feet Lord Vishnu.

In the meanwhile baffled in his attempts to do away with Vidyapathi, the prime minister, in whose opinon the martial spirit of the King and the country had considerably suffered through the teachings of Vidyapathi, again pressed the King to go to war; but the King did not agree. Then the prime minister approached Queen Lachmi to say that it was she who stood between the King and his Kingly duties and it was she who could save the country from utter ruin. He offered her a cup of poison as the way out, which the queen accepted and drunk.

The supreme Puja then started Devadasi was dancing, Madhusudana was singing. The king, the poet and Anuradha all come to worship. The Queen stood entranced in front of the image of Vishnu. The King asked the poet not to disturb her meditation but the poet saw that the King was breathing his last, his heart was failing! **What happned next?**

Next:—**Mascot Serial LONE DEFENDER!**

—• ಕಥಾಸಾರಾಂಶ •—

500 ವರುಷಗಳ ಹಿಂದಿನ ಮಾತು. ಮಿಥಿಲನಗರದ ರಾಜನಾದ ಶಿವಸಿಂಗನು ತನ್ನ ರಾಜ್ಯಭಾರದ ಪ್ರಥಮ ವಸಂತೋತ್ಸವವನ್ನು ಆಚರಿಸುತ್ತಲಿದ್ದನು. ದೇಶವಿದೇಶಗಳಿಂದ ನಾನಾ ಬಗೆಯ ಪಂಡಿತರು, ವಿದ್ಯಾವಂತರು ನೆರೆದಿದ್ದರು. ರಾಜನು ರಾಣಿ ಲಕ್ಷ್ಮಿಯೊಂದಿಗೆ ಅಲ್ಲಲ್ಲಿ ತಿರುಗಾಡುತ್ತಲಿದ್ದನು. ಎಲ್ಲರೂ ಹರುಷಗೊಂಡಿದ್ದರು. ರಾಜಸ್ಥಾನದ ವಿದೂಷಕನು ಮಾತ್ರ ಖಿನ್ನವದನನಾಗಿದ್ದನು. ಕಾರಣ, ಅವನ ಹೆಂಡತಿ ಸುಂದರಿಯೂ ನವ ಯುವತಿಯೂ ಆದ ಚಪಲಳು ಸೇವಕ ಪೀತಾಂಬರನಲ್ಲಿ ಮೋಹಗೊಂಡಿರಬೇಕೆಂಬ ಶಂಕೆಯು ಅವನನ್ನು ಬಾಧಿಸುತ್ತಲಿತ್ತು.

ರಾಜ ಮತ್ತು ರಾಣಿಯು ಅಲ್ಲಲ್ಲಿ ಸಂಚರಿಸುತ್ತಾ ಇರುವಾಗ ರಾಜನು ತನ್ನ ಪೂರ್ವ ಪರಿಚಿತ ಕವಿ ವಿದ್ಯಾಪತಿಯನ್ನು ನೋಡುವನು. ಈ ಉತ್ಸವದಲ್ಲಿ ಭಾಗವಹಿಸಲು ಅಷ್ಟು ದೂರದಿಂದ ಅರಮನೆಗೆ ಬಂದಿದ್ದನವನು. ರಾಜನು ಅತಿ ಹರುಷಗೊಂಡು ಅವನನ್ನು ಉಪಚರಿಸುತ್ತ ರಾಣಿ ಲಕ್ಷ್ಮಿಗೆ ಪರಿಚಯಮಾಡಿಕೊಡುವನು. ರಾಣಿಯು ಅವನನ್ನು ನೋಡಿದೊಡನೆಯೇ ಅವಳ ಹೃದಯದಲ್ಲಿ ಪರಿಣಾಮವಾಗುವುದು.

ರಾಣಿಯ ಮನಸ್ಸಂತೋಷಕ್ಕಾಗಿ ಕವನಗಳನ್ನು ಕಟ್ಟಿ ಹಾಡುತ್ತಾ ತನ್ನ ಅರಮನೆಯಲ್ಲಿಯೇ ಇರಬೇಕೆಂದು ವಿದ್ಯಾಪತಿಯನ್ನು ರಾಜನು ಕೇಳಿಕೊಳ್ಳಲು, ವಿದ್ಯಾಪತಿಯು ತನ್ನ ಕುರುಡ ಸೇವಕ ಮಧುಸೂದನನಿಂದ ಬೀಳ್ಕೊಂಡು ತನ್ನನ್ನು ಬಾಲ್ಯದಿಂದಲೂ ಆರಾಧಿಸುತ್ತಲಿದ್ದ ಅನುರಾಧೆಯೊಡನೆ ಮಿಥಿಲೆಯಲ್ಲಿ ನೆಲೆನಿಲ್ಲುವನು.

ಸಮಯಸಂದಂತೆ, ರಾಣಿಯ ಹೃದಯವನ್ನು ವಿದ್ಯಾಪತಿಯ ಸ್ಫುರದ್ರೂಪವೂ ಮೇಧಾಶಕ್ತಿಯೂ ಸೂರೆಗೊಳ್ಳಲಾರಂಭಿಸಿತು. ರಭಸದಿಂದ ರಾಜನಿಗೆ ಇದು ತಿಳಿಯುವುದು. ಹಾಗೂ ಬಹಳ ದುಃಖಿತನಾಗುವನು. ಆದರೆ ಅವನು ಎಂದೂ ಸಿಡುಕಲಿಲ್ಲ. ಯಾಕೆಂದರೆ ರಾಣಿ ಲಕ್ಷ್ಮಿಯಲ್ಲಿ ಅವನಿಗಿದ್ದ ಪ್ರೇಮದ ಆಳವು ಅಂತಹುದು. ಗಡಿನಾಡಿನಲ್ಲಿ ಯುದ್ಧ ಪ್ರಾರಂಭವಾಗುತ್ತಲೇ, ಇವನು ರಾಣಿಯ ಮೇಲ್ವಿಚಾರವನ್ನು ವಿದ್ಯಾಪತಿಗಿತ್ತು ರಣರಂಗಕ್ಕೆ ಹೋಗುವನು. ಅವರಿಬ್ಬರ ಸದಾಚಾರದಲ್ಲಿ ಅವನಿಗೆ ನಂಬಿಕೆ ಇತ್ತು.

ಯುದ್ಧವು ಮುಗಿದೊಡನೆಯೇ ರಾಜನು ನಗರಿಗೆ ಮರಳುವನು. ರಾಜನನ್ನು ವಿದ್ಯಾಪತಿಯ ಹಿಡಿತದಿಂದ ತಪ್ಪಿಸಬೇಕೆಂತಿದ್ದ ಪ್ರಧಾನಿಯ ಯೋಜನೆಯು ನಿಷ್ಫಲವಾಗುವುದು. ತನ್ನ ಸ್ವಾಭಾವಿಕವಾದ ಸಡಗರದಿಂದ ರಾಣಿಯನ್ನು ನೋಡಲು ಧಾವಿಸಿ ಬರುವನು ನಗರಿಗೆ. ಆದರೆ, ತಾನಿಲ್ಲದ ವೇಳೆಯಲ್ಲಿ ರಾಣಿಯ ಪ್ರೇಮವು ವಿದ್ಯಾಪತಿಯಲ್ಲಿ ಬಲವಾಗಿ ಊರಿಕೊಂಡಿರುವುದೆಂಬುದನ್ನು ತಿಳಿಯುವನು. ರಾಜನ ಹೃದಯವು ಬಿರಿದಂತಾಗುವುದು. ಅವನು ಅಸ್ವಸ್ಥನಾಗುವನು. ರಾಣಿಯ ಮನಸ್ಸನ್ನು ನೋಯಿಸಲು ಮನಬಾರದೆ, ತನ್ನ ಬಹಿರಂಗ ನಡತೆಯನ್ನು ಮುಂಚಿನಂತೆಯೇ ಇರಗೊಳಿಸಲು ಬಹಳ ಪ್ರಯತ್ನಿಸುವನು. ಇದು ರಾಣಿಗೂ ತಿಳಿಯಬರುವುದು. ಅವಳು ಬಹಳ ದುಃಖಿತಳಾಗುವಳು. ಆದರೆ ಮಾಡುವದೇನು? ವಿದ್ಯಾಪತಿಯ ಮೇಲಣ ಅವಳ ಸ್ವರ್ಗೀಯ ಮೋಹವನ್ನು ನಾಶ ಅವಳು ಹೊಡೆದೋಡಿಸಲಾರದಾದಳು. ಅವಳು ಇಕ್ಕಟ್ಟಿನ ಪ್ರಸಂಗಕ್ಕೆ ಬೀಳುವಳು. ದೈವವೆಂದೇ ನೆನಸಿಕೊಂಡಿದ್ದ ಅವಳ ಪತಿಯೇ? ಅಥವಾ ವಿದ್ಯಾಪತಿಯ ಕಲಾಪ್ರವೀಣತೆಯೆ?

ಇದರಿಂದ ಹಬ್ಬಿದ ದುರ್ಗಂಧದ ಸುದ್ದಿಯಿಂದ ರಾಣಿಯು ಜಿಗುಪ್ಸೆಗೊಂಡು ಆತ್ಮಹತ್ಯೆಯನ್ನು ಹವಣಿಸುತ್ತಿರುವಲ್ಲಿ, ಅನುರಾಧೆಯು ಅವಳಿಗೆ ವಿವೇಕವನ್ನು ಬೋಧಿಸುವಳು. ಇದರಿಂದ ಸ್ವಲ್ಪ ಸಮಯ ಶಾಂತತೆಯು ನೆಲೆಗೊಳಿಸಿತು.

ಪ್ರಧಾನಿಯು ರಾಜನನ್ನು ಯುದ್ಧಕ್ಕೆ ಹೋಗಲೇಬೇಕೆಂದು ಒತ್ತಾಯಿಸುವನು, ರಾಜನು ಒಲ್ಲೆನೆನ್ನುವನು. ರಾಜನನ್ನೂ ರಾಜಧರ್ಮವನ್ನೂ ಬೇರ್ಪಡಿಸಲು ಮುಖ್ಯ ಕಾರಣವೇ ವಿದ್ಯಾಪತಿಯ ಪರಿಣಾಮವೆಂದು ಮೊದಲಿಂದ ಮನಗಂಡಿದ್ದ ಪ್ರಧಾನಿಯು, ರಾಜನನ್ನು ವಿದ್ಯಾಪತಿಯಿಂದ ಬೇರ್ಪಡಿಸಲು ಹಲವು ವಿಧದಿಂದ ಪ್ರಯತ್ನಿಸುವನು. ನಿಷ್ಫಲ. ಕೊನೆಗೆ ರಾಣಿಲಕ್ಷ್ಮಿಯನ್ನು ಜರೆಯುವನು. ಈ ತರದ ರಾಜ್ಯದ ಅವ್ಯವಸ್ಥೆಗೆ ಅವಳೇ ಕಾರಣಭೂತಳೆಂದು, ದೇಶದ ಹಿತಕ್ಕಾಗಿ ಪ್ರಜೆಗಳ ಗೋಳಿನ ಪರಿಹಾರಕ್ಕಾಗಿ ವಿಷಪಾನ ಮಾಡಿ ಸಾಯಬೇಕೆಂದು ಮಂತ್ರಿಯು ರಾಣಿಗೆ ವಿಷವನ್ನು ಕೊಡುವನು. ರಾಣಿಯು ಸಂತೋಷದಿಂದ ಸ್ವೀಕರಿಸಿ ಪಾನಮಾಡುವಳು.

ಇತ್ತ ದೇವಾಲಯದಲ್ಲಿ ಪೂಜೆಯು ನಡೆಯುತ್ತಿತ್ತು. ದೇವದಾಸಿಯು ನರ್ತನ ಮಾಡುತ್ತಿದ್ದಳು, ಮಧುಸೂದನನು ಹಾಡುತ್ತಿದ್ದನು, ರಾಜನೂ ವಿದ್ಯಾಪತಿಯೂ ಮತ್ತು ಅನುರಾಧೆ ಈ ಮೂವರು ದೇವಾಲಯಕ್ಕೆ ಬರುವರು. ವಿಷ್ಣುವಿನ ಪ್ರತಿಮೆಯ ಇದಿರು ರಾಣಿಲಕ್ಷ್ಮಿಯು ತಲ್ಲೀನಳಾಗಿ ಒರಗಿ ಕುಳಿತಿದ್ದಳು. ರಾಜನು ರಾಣಿಯ ಧ್ಯಾನಕ್ಕೆ ಭಂಗ ತರಲಾಗದೆಂದು ವಿದ್ಯಾಪತಿಯೊಡನೆ ಹೇಳುವನು. ಹೀಗೆ ಹೇಳುತ್ತಿರುವಾಗಲೇ ರಾಜನ ಸ್ವರವು ಬೀಳುತ್ತಿದೆ. ಅವನ ನಾಡಿಬಡಿತವು ಕುಗ್ಗುತ್ತಿದೆ ಎಂದು ವಿದ್ಯಾಪತಿಯು ತಿಳಿಯುವನು. ಮುಂದೇನು..........?

ಬರುವ ಚಿತ್ರ:—ಮೆಸ್ಕಟ್ ಇಂಗ್ಲಿಷ್ ಸೀರಿಯಲ್:—ಲೋನ್ ಡಿಫೆಂಡರ್.

Coming—**Bombay Talkies JEEVAN NAIYA featuring Devika Rani & Ashok Kumar; Kaliamardan; Hunterwali of Wadia Movietone featuring fearless Nadia, Sagar's Watan featuring Kumar & Maya; Gungutwali; etc. etc.**

ಮುಂದಿನ ಚಿತ್ರ:—ದೇವಿಕಾರಾಣಿ ಮತ್ತು ಅಶೋಕ್ ಕುಮಾರ್ ನಟಿಸಿರುವ 'ಜೀವನ್‌ನಯ್ಯಾ'; 'ಕಾಳೀಯ ಮರ್ದನ್'; ವಾಡಿಯಾ ಮೂವಿಟೋನಿನವರ 'ಹಂಟರ್‌ವಾಲಿ'; ಮಾಯಾ ಮತ್ತು ಕುಮಾರ್ ನಟಿಸಿರುವ ಸಾಗರ ಮೂವಿಟೋನಿನವರ 'ವತನ್'; 'ಗುಂಗುಟ್‌ವಾಲಿ' ಇತ್ಯಾದಿ

ಜ ನ ಮ ತ

ಮದ್ರಾಸ್ ಅಳಿಯಸಂತಾನ ಮಸೂದೆ

ಎಂಬ ಶಿರೋನಾಮದಿಂದ ಶ್ರೀ ಸೌಕೂರು ಅಂತಯ್ಯ ಶೆಟ್ಟಿ ಕೆಲವು ಸೂಚನೆಗಳನ್ನಿತ್ತಿರುತ್ತಾರೆ ಮಸೂದೆಯ **ಮರಣಶಾಸನ ರಹಿತ ಮೃತನ ವಾರಿಸ್ದಾರಿಗೆಯು** ಪರಿಚ್ಛೇದ IVರ ಪ್ರಕರಣ 16ರಲ್ಲಿ ವಿವರಿಸಿದಂತೆ ಪ್ರಕರಣ 17ಕ್ಕನುಸರಿಸಿ, ಅಳಿಯಸಂತಾನದ ಗಂಡ ಮೆಂಬರನೊಬ್ಬನು ಮರಣಶಾಸನವಿಲ್ಲದೆ ಮೃತನಾದ ಪಕ್ಷದಲ್ಲಿ ಆತನಿಗಿರುವ ಸ್ವಾರ್ಜಿತ ಆಸ್ತಿಗಳು, ಲೈಫ್ ಇನ್ಶೂರೆನ್ಸ್, ಮತ್ತು ನಗದಿಭಂಡವಾಳ ರಿಕಾರ್ಡ ಮೂಲಕ ಇರುತ್ತಿದ್ದರೆ ಅವುಗಳ ಹಕ್ಕು ಆತನ ಸಮೀಪದ ವಾರೀಸ್ದಾರರಿಗೆ ಹೋಗತಕ್ಕದ್ದು.

ಆದರೆ ಅವನು ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಮದುವೆ ವಗೈರೆ ನಡಿಸದೆ ಅಕಸ್ಮಾತ್ ಮೃತನಾದಲ್ಲಿ ಆತನ ಇನ್ಶೂರೆನ್ಸ್ ಈದು ಅದವು ವಗೈರೆ ಇದ್ದರೆ ಅವು ಸಂಪೂರ್ಣ ಹೆಂಡತಿ ಮಕ್ಕಳಿಗೆ ಹೋಗತಕ್ಕದ್ದು. ಸ್ಥಿರಾಸ್ತಿ ಇರುವಲ್ಲಿ ಅರ್ಧಾಂಶ ಆಸ್ತಿ ಹೆಂಡತಿ ಮಕ್ಕಳಿಗೂ, ಅರ್ಧಾಂಶ ಸಮೀಪ ವಾರೀಸ್ದಾರರಿಗೂ ಹೋಗತಕ್ಕದ್ದು ಮೃತನಿಗೆ ಮಕ್ಕಳಿಲ್ಲದೆ ಹೋದಪಕ್ಷದಲ್ಲಿ ಮೇಲೆ ವಿವರಿಸಿರುವ ಹಕ್ಕು ಅವಳಿಗೆ ಬರಲಾರದು.

ಪ್ರಕರಣ 26ರಲ್ಲಿ ಹೇಳುವಂತೆ ಹಿರಿಯಗಂಡಸು ವ ಹೆಂಗಸು ಕೂಡಾ ಆಡಳಿತದ ಹಕ್ಕುದಾರಳಾಗಿರತಕ್ಕದ್ದು.

ಪರಿಚ್ಛೇದ V ಕುಟುಂಬದ ಆಡಳಿತೆ. ಈ ಪರಿಚ್ಛೇದದ ಪ್ರಕರಣ 27ರಲ್ಲಿ ವಿವರಿಸಿದಂತೆ ಯಜಮಾನನು ಕುಟುಂಬದ ಆದಾಯವೆಚ್ಚಗಳ ನಿಜವಾದ ಲೆಕ್ಕಪತ್ರಗಳನ್ನು ಜಮಾಖರ್ಚು ಮತ್ತು ಶಿಲ್ಕು ತೋರಿಸಿ ಇಡುವುದಲ್ಲದೆ, ಮೆಂಬರನು ಕೇಳುವಲ್ಲಿ ಹಿಂದಿನ ಫಸಲಿಯ ಲೆಕ್ಕಪತ್ರಗಳ ನಕಲುಗಳನ್ನು ಸರಿಯಾಗಿ ಸಹಿಹಾಕಿ ಕೊಡತಕ್ಕದ್ದು ಯಜಮಾನನು ಸಾರ್ಥಕ್ಕೆ ಮನಸ್ಸುಕೊಟ್ಟು ಲೆಕ್ಕಪತ್ರ ಕೊಡದಿದ್ದ ಪಕ್ಷದಲ್ಲಿ ಮಸೂದೆಯ 41ನೇ ಪ್ರಕರಣದಲ್ಲಿ ಹೇಳುವಂತೆ ಕಲೆಕ್ಟರರು 37ಮತ್ತು 38ನೇ ಪ್ರಕರಣಗಳ ಮೇರೆಗೆ ಮನವಿಮೂಲಕ ಲೆಕ್ಕಪತ್ರ ಕೇಳುದಲ್ಲಿ ಸರಿಯಾದ ಇತ್ಯರ್ಥಹೊಂದಲು ಕಿರಿಮೆಂಬರರು ಅರ್ಹರಿರುತ್ತಾರೆ.

ಪ್ರಕರಣ 28(3)ರಲ್ಲಿ ಹೇಳುವಂತೆ ಕುಟುಂಬದ ಯಜಮಾನನೊಬ್ಬನು 5ವರ್ಷಗಳೊಳಗಣ ಕಾಲ ಗೇಣಿಯು ವಿನಹ ಕುಟುಂಬದ ಸ್ಥಿರಾಸ್ತಿಯನ್ನು ಆದವು ಮೂಲಗೇಣಿ ವಗೈರೆ ಒಟ್ಟನಾಗಿ ಕೊಟ್ಟಲ್ಲಿ ಅವು ಸಿಂಧುವಾಗಲಾರವು.

ಪರಿಚ್ಛೇದ VI ಆಸ್ತಿವಿಭಾಗದ ಪ್ರಕರಣ 33ರಲ್ಲಿ ಕುಟುಂಬದ ಆಸ್ತಿಯಲ್ಲಿ 3 ಪಾಲು ಮಾಡಿ ಒಂದು ಭಾಗವು ಕವರುವಾರು ಮತ್ತು 2ಭಾಗವು ತಲೆ ಮೇರೆಗೆ ಪಾಲಾಗತಕ್ಕದ್ದು. ಉಪಕವರುಗಳಿಗೂ ಇದೇ ಕ್ರಮವು ಅನ್ವಯವಾಗತಕ್ಕದ್ದು ಇದೇ ಪ್ರಕರಣದ ಎರಡನೇ ಉಪಪ್ರಕರಣದ ಮೇರೆಗೆ ನಿಸ್ಸಂತತಿ ಕವರಿಗೆ ದೊರೆಯುವ ಪಾಲು, ಸದರಿ ಕುಟುಂಬದಲ್ಲಿ ಒಂದು ಅಥವಾ ಹೆಚ್ಚು ಸಂತತಿ ಕವರುಗಳಿದ್ದ ಪಕ್ಷದ, ಕೇವಲ ಜೀವನಾಂಶವಾಗಿರಬೇಕು ಸದರಿ ನಿಸ್ಸಂತತಿ ಹೆಣ್ಣು ಯಾ ಗಂಡು ಮೆಂಬರನಿಗೆ ಸಿಕ್ಕುವ ಜೀವನಾಂಶವು ಸಂತತಿ ಇರುವ ಕವರಿಗೆ ಹೋಗತಕ್ಕದ್ದು. 1 (1) ಒಂದು ಕುಟುಂಬದಲ್ಲಿ ಸಂತತಿ ಇಲ್ಲದ ಪಕ್ಷದಲ್ಲಿ ನಿಸ್ಸಂತತಿ ಕವರಿನ ಎಲ್ಲಾ ಮೆಂಬರರಿಗೆ ಇಡೀ ಆಸ್ತಿಯು ಇಚ್ಛಾನುಸಾರ ಹೋಗತಕ್ಕದ್ದು.

4ನೇ ಪ್ರಕರಣದಲ್ಲಿ ಹೇಳುವಂತೆ ಅಳಿಯ ಸಂತಾನ ಕಟುಂಬದ ಮನೆಯಲ್ಲಿ, ಈ ಮೊದಲು ನಿಸ್ಸಂತತಿಯಾಗಿರುವಲ್ಲಿ ಮೊದಲ್ ದತ್ತಸ್ವೀಕಾರ ಮಾಡಿಕೊಂಡಿದ್ದು ಸಂತತಿ ಅಭಿವೃದ್ಧಿ ಹೊಂದಿದ್ದರೆ ಅಂಥಾ ಮನೆಯು ಸಂತತಿ ಯುಕ್ತವಾಗಿಯೇ ಪರಿಗಣಿಸಲ್ಪಡಬೇಕು ಅಂಥಾ ಕುಟುಂಬದಲ್ಲಿ ಗಂಡು ಮೆಂಬರರು ಇದ್ದು ಅವರಿಗೆ ಸ್ವಂತ ಆಸ್ತಿ ಇದ್ದು ಹೆಂಡತಿ ಮಕ್ಕಳು ಇಲ್ಲದೆ ಹೋದಲ್ಲಿ ಅವರ ಆಸ್ತಿಯು ದತ್ತ ಕುಟುಂಬಕ್ಕೆ ಸಿಕ್ಕಬೇಕಲ್ಲದೆ ಸದ್ರಿ ವ್ಯಕ್ತಿಗಳ ಇಚ್ಛಾನುಸಾರ ಇತರಸಂಬಂಧಿಕರಿಗಾಗಲಿ ವೀಲ ವಗೈರೆ ಯಾವತರದ ದಸ್ತಾವೇಜುಗಳಿಂದಲೂ ಈ ವರೆಗೆ ಮಾಡಿದ್ದಾಗಲಿ ಇನ್ನು ಮುಂದೆ ಮಾಡುವುದಾಗಲಿ ಸಿಂಧುವಾಗಕೂಡದು

ಸುಧಾರಣೆಯ ಸೋಗಿನಲ್ಲಿ

ಎಂಬ ಶಿರೋನಾಮೆಯಿಂದ ಶ್ರೀ ಸಂಜೀವ ಶೆಟ್ಟಿ ಕೊಚ್ಚಿಕೈ ಬೈಲ್, ಎಡ್ವಕೇಟ್ ಕುಂದಾಪುರ ಇವರು

ಅಳಿಯ ಸಂತಾನ ಮಸೂದೆ

[ಈ ಮಸೂದೆಯ ಕುರಿತು ನಮಗೆ ಹಲವು ಬಾತ್ಮಿಗಳು ಬಂದಿರುತ್ತವೆ ಅವುಗಳನ್ನೆಲ್ಲಾ ಸಂಪೂರ್ಣವಾಗಿ ಕೊಡಲು ಸ್ಥಳಾಭಾವದಿಂದ ಸಾಧ್ಯವಿಲ್ಲ ಆದ ದರಿಂದ ಅವುಗಳ ಸಾರಾಂಶವನ್ನು ಮಾತ್ರ ಕೊಟ್ಟಿರುತ್ತೇವೆ]

○

[ಸಂ. ನ

ಕಳುಹಿಸಿರುವ ಲೇಖನದ ಸಾರಾಂಶ ಹೀಗಿರುತ್ತದೆ

ಅಳಿಯಸಂತಾನ ಸಧಾರಣಾ ಪರಿಷತ್ತಿನವರ ಪರಿಶ್ರಮವು ಪರ್ವತ ಪ್ರಸವದಂತಾಗಿದೆ, ಹೊಸ ಹರುಪಿನಿಂದ ಮುನ್ನಡೆಯುವ ಸಲಹೆಗಳನ್ನು ನಿರೀಕ್ಷಿಸುತ್ತಿದ್ದ ಜನತೆಯ ತಲೆಯ ಮೇಲೆ ಸಿಡಿಲು ಬಡಿದಂತಾಗಿದೆ ಅಳಿಯಸಂತಾನ ಸಮಾಜದ ರಚನೆಯ ಸೂತ್ರವೆಂದರೆ ಕುಟುಂಬದ ಎಲ್ಲಾ ಮೆಂಬರರೊಳಗೆ ಸಮಾನತೆ, ಪ್ರತಿಯೊಬ್ಬನಿಗೂ ಸಮಾನಹಕ್ಕು. ಮಸೂದೆಯಲ್ಲಿ ಇಂತಹ ಸಮತೆಯನ್ನು ನಿರ್ಮೂಲಿಸಿ ಕೆಲವರ ಹಿತಕ್ಕಾಗಿ ಹಲವರನ್ನು ಬಲಿಗೊಡಲೆತ್ನಿಸದ ಯಾವ ಸುಧಾರಣೆಯೇ ಇರಲಿ, ಅದು ಅಂದಿನ ಸ್ಥಿತಿಗತಿಗನುಸಾರವಾಗಿ ನ್ಯಾಯಬದ್ಧವೂ ನೀತಿಯುಕ್ತವೂ ಆದ ನಿರ್ಮಾಣದನ್ನು ಮುಂದಿನ ವ್ಯವಹಾರಗಳಲ್ಲಿ ತರುವುದು ಉಚಿತ ಮಸೂದೆಯು ಒಂದು ಶತಮಾನದ ಹಿಂದಿನ ಪರಿಸ್ಥಿತಿಗೆ ಅನ್ವಯಿಸುತ್ತದ

ತಲೆವಾರು ಪಾಲಾಗಬೇಕು

ಮಸೂದೆಯು ಬಹುಪಕ್ಷೀಯರ ಹಿತ ಮತ್ತು ನ್ಯಾಯಸಾಧಕವಾಗಬೇಕಾದರೆ ಕುಟುಂಬದ ಇಡೀ ಆಸ್ತಿಯು ತಲೆವಾರು ಪಾಲಾಗಬೇಕು ಒಂದು ಕುಟುಂಬದಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ಅದರ ಸೊತ್ತಿನಲ್ಲಿ ಸಮಾನಹಕ್ಕಿರುವುದು ಇದು ಅಳಿಯಕಟ್ಟಿನ ಮೂಲಸೂತ್ರ ಒಂದೇ ಕುಟುಂಬದ ಹೆಚ್ಚಿನ ಜನರಿಗೆ ಊಟಕ್ಕೆ ಗತಿ ಇಲ್ಲದಂತಾಗಿ ಅತೀ ಕಡಿಮೆ ಜನರಿರುವ ಕವರುಗಳು ವಿಶೇಷ ಲಾಭ ಹೊಂದುತ್ತವೆ ಬಹು ಸಂಖ್ಯಾಕರ ತಲೆಯೊಡೆದು ಅಲ್ಪಸಂಖ್ಯಾಕರ ಹೊಟ್ಟೆ ತುಂಬಿಸುವುದು ನ್ಯಾಯವಾಗಲಾರದು. ಆದ ದರಿಂದ ಸಧಾರಣಾ ಪರಿಷತ್ತಿನವರು ಆವ್ಯಗತ್ಯವೂ ನ್ಯಾಯವೂ ಆದ ಈ ತಿದ್ದುಪಡಿಯನ್ನು ಮಾಡಬೇಕೆಂದು ವಿನಂತಿ ಇದು ಹೊರತು ಮಸೂದೆಯಲ್ಲಿ ಈ ಕೆಳಗಣ ತಿದ್ದುಪಡಿ ಅಗತ್ಯ IVನೇ ಪರಿಚ್ಛೇದದ 17ನೇ ಪ್ರಕರಣದ ಉದ್ದೇಶಕ್ಕಾಗಿ, ಕುಟುಂಬದ ಯಜಮಾನನ ತನ್ನ ಆಡಳಿತದ ಕಾಲದಲ್ಲಿ ತನ್ನ ಹೆಸರಲ್ಲಿ ಮಾಡಿಕೊಂಡ ಆಸ್ತಿಗಳು ಕೂಡಾ ಸ್ವಾರ್ಜಿತ ಅಥವಾ ಸ್ವಂತ ಆಸ್ತಿಯಾಗಿ ಪರಿಗಣಿಸಲ್ಪಡಬೇಕು

IVನೇ ಪರಿಚ್ಛೇದದ 18ನೇ ಪ್ರಕರಣದಲ್ಲಿ ಅರಿವಾಸಿ ಆಸ್ತಿಯು ವ್ಯಕ್ತಿನ ಕುಟುಂಬಕ್ಕೆ ಮತ್ತು ಬಾಕಿ ಅರೆವಾಸಿ ಅವರಲ್ಲಿ ಈಗ ನಿರ್ದೇಶಿಸಿದಂತೆ ವಿಭಾಗವಾಗತಕ್ಕದ್ದು

ಅಳಿಯಸಂತಾನ ಲೀಗಿನವರಲ್ಲೊಂದು ವಿನಂತಿ

ಅಳಿಯಸಂತಾನ ಸುಧಾರಣಾ ಪರಿಷತ್ತಿನವರು ತಯಾರಿಸಿರುವ ಮಸೂದೆಯನ್ನು ವಿರೋಧಿಸಹೊರಟಿರುವ ಅಳಿಯಸಂತಾನ ಲೀಗಿನವರು ಸದುದ್ದೇಶಪ್ರೇರಿತರಿರುವಂತೆ ತೋರ ವುದಿಲ್ಲ. ಮಸೂದೆಯನ್ನು ವಿರೋದಿಸಲು ಅವರು ಕೊಟ್ಟಿರುವ ಕಾರಣಗಳು ಅಪಹಾಸ್ಯಕರವಿವೆ ಅಳಿಯ ಕಟ್ಟಿನವರಿಗೆ ಖಂಡಿತವಾಗಿಯೂ ಸುಧಾರಣೆ ಬೇಕು, ಆದುದರಿಂದ ಈ ಲೀಗು ಮೆಂಬರರು, ಸುಧಾರಣಾ ಪರಿಷತ್ತಿನವರು ತಯಾರಿಸಿರುವ ಮಸೂದೆಯು ಕುಂದುಕೊರತೆಗಳನ್ನು ನಿವಾರಿಸಲೆತ್ನಿಸಿ ಅದು ಬೇಗನೆ ಜ್ಯಾರಿಗೆಬರುವಂತೆ ಮಾಡುವುದು ಅವರ ಕರ್ತವ್ಯವಿದೆ

ಅಳಿಯಸಂತಾನ ಲೀಗಿನವರು ಕಳೆದ ಸಲದ ಶ್ರೀ. ಎ ಬಿ ಶೆಟ್ಟಿ ಮಸೂದೆ ಮುರಿದ ಹಾಕುವ ವಿನಾಶಕ ಕಾರ್ಯವನ್ನಲ್ಲದ ವಿಧಾಯಕ ಕಾರ್ಯವನ್ನೇನಾದರೂ ಮಾಡಿರುವುದು ತೋರಿಬರ ವುದಿಲ್ಲ. ಅಳಿಯಕಟ್ಟಿನ ಕೆಲವು ಮನೆತನಗಳು ಕೋರ್ಟುಪಾಲಾಗಿ ಖೂನಿ ವಗೈರೆ ಅಕೃತ್ಯಗಳ ಆವಾಸಸ್ಥಾನಗಳಾಗಿವೆ. ಕೋರ್ಟಿಗಾಗಿ ಆಸ್ತಿಗಳು ಏಲಂ ಆಗುತ್ತಿವೆ. ಇದನ್ನೆಲ್ಲಾ ಲೀಗಿನವರು ಕಂಡೂ ಕಾಣದಂತಿರುವುದು ಆಶ್ಚರ್ಯ ಈಗ ತಯಾರಾಗಿರುವ ಮಸೂದೆಯ ಪ್ರತಿಗಳು ಎಲ್ಲಾ ಹಳ್ಳಿಗಳಿಗೂ ಹೋಗಿರುತ್ತವೆ ಎಲ್ಲರೂ ಸದ್ರಿ ಮಸೂದೆಯನ್ನು ಚೆನ್ನಾಗಿ ಪರೀಲಿಸಿ, ಅದರಲ್ಲೇನೂ ತಿದ್ದುಪಡಿಮಾಡಬೇಕಾದಲ್ಲಿ, ಅಲ್ಲಲ್ಲಿ ಸಣ್ಣ ಸಣ್ಣ ಸಭೆಸೇರಿಸಿ ನಿರ್ಣಯಮಾಡಿ ಬಹುಮತದ ಅಭಿಪ್ರಾಯವನ್ನು ಅಳಿಯಸಂತಾನ ಸುಧಾರಣಾ ಕಮಿಟಿಯ ಕಾರ್ಯದರ್ಶಿಗಳಿಗೆ ಕಳುಹಿಸಿ ಮಸೂದೆಗೆ ಬೆಂಬಲಕೊಡಬೇಕಾಗಿ ಬೇಡಿಕೊಳ್ಳುತ್ತೇನೆಂದು ಶ್ರೀ. ಬಿ ವೆಂಕಪ್ಪ ಶೆಟ್ಟಿ ಬರೆಯುತ್ತಾರೆ

ಅಳಿಯಕಟ್ಟಿನವರಿಗೆ ಸುಧಾರಣೆ ಆಗತ್ಯವೇ?— ಎಂಬ ತಲೆಬರಹದಿಂದ ಶ್ರೀ. ಬಿ ಅಂತಯ್ಯ ಶೆಟ್ಟಿ ಕಳುಹಿಸಿರುವ ಲೇಖನದ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುತ್ತೇವೆ — ಮಕ್ಕಳ ಕಟ್ಟಿನವರು ವಿದ್ಯೆ ಉದ್ಯೋಗಾದಿಗಳಿಂದ ಸುಖದಿಂದಿರುವುದನ್ನು ನಾವು ನೋಡುತ್ತೇವೆ ಆದರೆ ಅಳಿಯಕಟ್ಟಿನವರಂತೆ ಹೆಚ್ಚಿನ ಆಸ್ತಿ ಇರುವುದಿಲ್ಲ ಉದ್ಯೋಗಾದಿಗಳಿಗೆ ಅಸ್ಪದವಾಗಲೀ ಪ್ರೋತ್ಸಾಹನವಾಗಲೀ ಇಲ್ಲ. ಆದರೂ ಅವರು ಎಷ್ಟೊಂದು ಅಭಿವೃದ್ಧಿ ಹೊಂದಿರುತ್ತಾರೆಂದರೆ, ಅಳಿಯಸಂತಾನ ಲೀಗಿನವರಿಗೆ, ಎಲ್ಲಿ ಅಳಿಯಕಟ್ಟಿನವರ ಆಸ್ತಿಯೆಲ್ಲಾ ಅವರ ಪಾಲಾಗಿಬಿಡುವುದೋ ಎಂಬ ಭೀತಿಯುಂಟಾಗಿದೆ ಕೆಲವು ಶತಮಾನಗಳ ಮೊದಲು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ವಾಸಿಸಿದ ಸಮಾಜಗಳವರು ಇಂದಿಗೆ ಬಹಳ ಅಭಿವೃದ್ಧಿಗೊಂಡ ಇಡೀ ಜಿಲ್ಲೆಯ ಮೇಲೆಯೇ ಅಧಿಕಾರನಡೆಸುವಂತಹ ಸ್ಥಾನಕ್ಕೇರಿರುವುದನ್ನು ಪ್ರತ್ಯಕ್ಷ ಕಂಡು ಮತ್ತೂ ನಮ್ಮವರು ಹಳೆಯ ಕಟ್ಟುಕಟ್ಟು ಸಂಪ್ರದಾಯಗಳಿಗೆ ಕಟ್ಟುಬಿದ್ದಿರುವುದು ಆಶ್ಚರ್ಯಕರ

ಕೇವಲ ಹಣ ಗೌರವ ಮತ್ತು ಪ್ರತಿಷ್ಠೆಯಾಗಲೀ, ಆಸ್ತಿ ಬೇರೆಯವರಿಗೆ ಪಾಲಾಗಿಹೋಗುವುದೆಂಬ ಹಾರಹೀನ ಭೀತಿಯಾಗಲಿ, ಪ್ರಾಚೀನ ಸ್ಥಿತಿಗತಿಗಳನ್ನು ಹಿಡಿದುಕೊಂಡಿರುವದರಿಂದ ಸ್ಥಿತಿಗತಿಗಳನ್ನೇ ಹೊಗಳುವ ಭಿನ್ನಾಕ ಮನೋವೃತ್ತಿಯಾದಾಗಲಿ, ದೂರದರ್ಶಿತೆಯಿಲ್ಲದ ಸಂಕುಚಿತ ವೈಯಕ್ತಿಕ ರಾಗೂ ಜ ತೀ ಯ ಭಾವನೆಯಿಂದಾಗಲೀ ಸಮಾಜದೆಸಗೊಂಡ ಉದ್ಧಾರವಾಗಲಾರದು. ಗತವೈಭವದ ನೆನಪಲ್ಲಿ ಇದ್ದಂತೆ ಬಿದ್ದುಕೊಳ್ಳುವ ಕಾಲವೀಗ ಹೋಗಿದೆ. ಸಮಾಜದ ತರುಣರು ಜೀವನದ ತೀವ್ರ ಹೋರಾಟದ ಪ್ರವಾಹಕ್ಕೆ ಸಿಕ್ಕಿ ಅಂಗಲಾಚುತ್ತಿರುತ್ತಾರೆ ಸಮಾಜದ ಸ್ಥಿತಿಗತಿ ರೀತಿನೀತಿಗಳು ಬದಲಾಗದೆ ಅವರಿಗೆ ಸುಖವಿಲ್ಲ, ಗತಿಯಿಲ್ಲ ಆದುದರಿಂದ, ಹಳೆಯ ಮನೋವೃತ್ತಿಯ ಕೆಲವು ಯಜಮಾನರ, ಕೇವಲ ವ್ಯಕ್ತಿ ಮತ್ತು ಜಾತಿ ಗೌರವಪ್ರೇರಿತರಾದ ಕೆಲವರ, ಮತ್ತು ಮಸೂದೆಯನ್ನು ತಮ್ಮ ಲಾಭನಷ್ಟದ ದೃಷ್ಟಿಯಿಂದಲೇ ಅಳೆದು ಅದನ್ನು ವಿರೋಧಿಸುವವರ ಅಭಿಪ್ರಾಯದಂತೆ ನಡೆಯುವದಂತೆ ಮಾಡಲು ಅಳಿಯಕಟ್ಟಿನ ತರುಣರು ಸಕಾಲದಲ್ಲಿ ಜಾಗ್ರತರಾಗಿ ಸಂಘಟಿತರಾಗಿ, ಸುಧಾರಣಾ ಪರಿಷತ್ತಿನವರಿಗೆ ಬೆಂಬಲವೀಯುವುದು ಅವರ ಕರ್ತವ್ಯವಿದೆ ಅಳಿಯಕಟ್ಟಿನ ಎಲ್ಲಾ ಸಮಾಜಗಳ ತರುಣರೂ ಈ ಸಂದರ್ಭದಲ್ಲಿ ಆಸಕ್ತಿಯಿಂದಿರದೆ ಆದಷ್ಟು ಹೆಚ್ಚಿನ ಸಭೆಗಳನ್ನು ನಡಿಸಿ ಮಸೂದೆಗೆ ಬೆಂಬಲವೀಯಬೇಕು ಅಗತ್ಯ ಬಿದ್ದರೆ ಸಂಘಟಿತರಾಗಿ ಕೆಲಸ ಮಾಡಲು ಅಳಿಯಸಂತಾನ ಯುವಕ ಸಂಘವನ್ನು ಸ್ಥಾಪಿಸಿಕೊಳ್ಳಬೇಕು.

YOUR LUCK

Simply send us a post card with the name of any flower together with your name and address and we will send you by VPP for Rs 1-8-0 only detailed account of your forth coming 12 months showing among other things profit and loss in business, promotion, transfer and reduction in service, birth marriage, happiness and bodily ailments and directions will be sent to safeguard yourself from the coming evil influence of the star A trial will convince you of the accuracy of our prophecies Sold under money return Guraantee

BHARAT JOTISHASHRAM (N.U.)

JULLUNDUR CITY, (Punjab)

ಶ್ರೇಷ್ಠ ವರ್ಗದ ಬ್ರಾಹ್ಮಣರ ಆತ್ಯಾಧುನಿಕ ವಸತಿ ಗೃಹಗಳು

ಗಾರ್ಡನ್ ಹೋಟೆಲ್ ಫೋನ್ 406 ಹಳೆ ಪೋಸ್ಟಾಫಿಸು ರೋಡು **ಮೈಸೂರು.**

ಅರಮನೆಯ ಎದುರು ಫೋನ್ ನಂಬ್ರ 347 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೇಫ್** ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್.-ಕೆ. ಗುರುರಾಜಾಚಾರ್ಯ.

ನೋಟೀಸು

ಮೂಡುತೋನ್ಸೆ ಪಂಚಾಯತ ಕೋರ್ಟಿನಲ್ಲಿ

ಶಿ ವ್ಯಾ ನಂ 35

ಧಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇವರ ಏಜಂಟ್ ಎನ್. ವೆಂಕಟನಾಥರಾವ್, ಅನಂತರಾಯರ ಮಗ, ಉಡುಪಿ ಕಸಬಾ — ವಾದಿ

ಮತ್ತು

1. ಅನಂತ ಪೆಂಗಾಳ-ಚಂದ ಭಂಡಾರಿಯವರ ಕಾಂತಿ, ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ
2. ಅಪ್ಪಾಯಣೆ ನರಸಿಂಹ ಭಟ್ಟ-ಸುಬ್ರಾಯ ಪಟ್ಟರ ಮಗ ಮೂಡುತೋನ್ಸೆ ಗ್ರಾಮದ ಕಲ್ಯಾಣಪುರ ಕೂಡ

} ಪ್ರತಿವಾದಿರು

ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ವಾದಿಯು ಈ ಕೋರ್ಟಿನಲ್ಲಿ ರೂಪ್ಯಾ 26-13-6ಕ್ಕೆ ದಾವಾದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾ 8-9-39ಕ್ಕೆ ತನಿಖೆಗೆ ಇಟ್ಟಿರುತ್ತದೆ ಸದ್ರಿ ದಿವಸ ನೀನು ಸ್ವತಃ ಹಾಜರಾಗಿ ಉದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾದೀತೆಂಬ ಸಂಗ್ತಿಯು ಈ ಮೂಲಕ ತಿಳಿಸಿರುತ್ತವೆ

ತೋನ್ಸೆ ವಾಮನ ಶೆಣೈ
ಪ್ರೆಸಿಡೆಂಟ್

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

ಶ್ರೀ

(ತಾ 24 8 39ರಿಂದ ತಾ. 31-8-39ರ ವರೆಗೆ)

[ಜ್ಯೋತಿಷವು ಅಸ್ಪಷ್ಟವಾದವಲ್ಲ ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ. ಸಂ ನ.]

ಮೇಷರಾಶಿ—

ಪಶ್ಚಿಮದಿಂದ ಕಲಕಿತವಾದ ಸರೋವರದ ಜಲದಂತೆ ಮನಸ್ಸು ಸದಾ ವಿರೋಧಿಗಳ ಪೀಡೆಯಿಂದಲೂ ಅಭೀಷ್ಟವು ನಿಷ್ಫಲವಾಗುವುದರಿಂದಲೂ ಅಲ್ಲೋಲ ಕಲ್ಲೋಲವಾಗಿರುವುದು ಈ ಭಾಗಕ್ಕೆ ನಿಮಗೆ ಸಂತತಿ [illegible] ಒಂದು ಕಾರಣವಾಗಿರುವುದು [illegible] ಅಲ್ಪಸಲ್ಪ ಧನವೂ [illegible] ವಿಸ್ತರ [illegible] ವಸ್ತು [illegible] ವ್ಯವಸಾಯ [illegible] ನಡೆಸುವ ವಿಷಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಲಾರಿರಿ ಆದರೆ ನಿಮ್ಮ ಮಾತ್ರ ನಿಶ್ಚಿಂತೆಯಿಂದಾಗಿರಾದ ಒಮ್ಮೆ ಕಷ್ಟ [illegible] ಸ್ವಭಾವಕಾಗಿದೆ ಹಾಗೆ ಇದ್ದಷ್ಟೇ ಕಾಲ [illegible] ವಿಚಾರವನ್ನು ನೀವು ಚೆನ್ನಾಗಿ ಬಲ್ಲಿರಾದರೂ ಪ್ರಕೃತ ನೀವದನ್ನು ಉಲ್ಲಂಘಿಸಬೇಕಾಗುವುದು ತಾ 26ರಿಂದ 30ರ ವರೆಗಿನ ದಿನಗಳು ಇಷ್ಟಸಿದ್ಧಿಯಲ್ಲೂ ಆರ್ಥಿಕವಿಚಾರದಲ್ಲೂ ಉತ್ತಮವಾಗಿವೆ

ವೃಷಭರಾಶಿ—

ನಾಟಿದ ಸೀವೆ ಅವರ ಭಕ್ತಿ [illegible] ಎಂಬ ಗಾದೆಯಂತೆ ನಿಮಗೆ ಗುರು ಶುಕ್ರ ರಾಹುಗಳ ಬೆಂಬಲವಿದ್ದರೂ ಇತರ ಗ್ರಹರ ಪ್ರತಿಕೂಲವು ಬಲವತ್ತರವಾಗಿರುವುದು ಆದಕಾರಣ ಸಮುದ್ರದ ಅಲೆಗಳಂತೆ ಮೇಲಿಂದ ಮೇಲೆ ಚಿಂತಾಪ್ರಸಂಗಗಳು ತಪ್ಪಲಾರವು ಧನಬಲ [illegible] ನೀವು ಅವೀಯರಾಗಿದ್ದರೂ ಹಿಡಿದ ಕಾರ್ಯದಲ್ಲಿ [illegible] ವಂತಿಲ್ಲವು [illegible] ಯಿಂದಾಗಿ ಮಾನಸಿಕ ತಿಯೂ ಶರೀರ [illegible] ಯಿಂದಾಗಿ ಧನವ್ಯಯವೂ ಅತೀವವಾಗುವುದು ಮಾತ್ರವಲ್ಲದೆ ಆಕಸ್ಮಿಕ [illegible] ಗಳ [illegible] ದನವನ್ನು ವ್ಯಯಿಸುವಿರಿ. ಸೋದರರೊಳ್ಳಿನ [illegible] ವನವಿಕವಾಗುವುದು ಆದರೂ [illegible] ದಿನಗಳಲ್ಲಿ ನೀವು ಇಷ್ಟ [illegible] ಯಿಂದ [illegible] ಯಿಂದಿರುವಿರಿ

ಮಿಥುನರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮ್ಮ ಭವಿಷ್ಯವು ಉತ್ತಮವಾಗಿದೆ [illegible] "ಕರ್ಮಾನುಯತ್ತಂ ಫಲಂ ಪುಂಸಾಂ ಬುದ್ಧಿಃ ಕರ್ಮಾನುಸಾರಿಣೀ" [illegible] ಭಾವ [illegible] ಸುವಿಚಾರ [illegible] ಎಂಬಂತೆ ಸದ್ಬುದ್ಧಿಗಳೂ ಸುವಿಚಾರ [illegible] ಕರ್ಮಾಧೀನವಿರುವವು ತಥಾಪಿ ಬುದ್ಧಿವಂತನ ದ ಮನಸ್ಸು ಪ್ರತಿಯೊಂದು ಕಾರ್ಯವನ್ನೂ ವಿಚಾರಪೂರ್ವಕವಾಗಿಯೇ ಮಾಡಬೇಕಿತ್ತು ಉದ್ಯೋಗದಲ್ಲೂ ವ್ಯಾಪಾರದಲ್ಲೂ ರಾಜಕೀಯ ಕಾರ್ಯದಲ್ಲೂ ಮತ್ತು ಸಂಸಾರ [illegible] ಉಲ್ಲಾಸವು ಉತ್ತಮ ತರವಾಗಿರುವುದು ಆದರೂ ಕೆಲವೊಮ್ಮೆ ನಿಮ್ಮ ಕ್ರಿಯಾದೋಷದಿಂದಾಗಿ ಶತ್ರುಮೂಲಕ ಮೂಲಕ ಮಾನಹಾನಿಯ ಪ್ರಸಂಗವೊದಗಬಹುದು ದುದರಿಂದ ಸದ್ಯಾಗದಲ್ಲಿ ಜಾಗರೂಕರಾಗಿ [illegible] ವನ್ನು [illegible] ಕೊಳ್ಳಿರಿ. ತಾ 26ರಿಂದ 30ರ ವರೆಗೆ ಸ್ವಲ್ಪ ಅನಿಷ್ಟಗಳು ಸಂಭವಿಸುವ ಚಿಹ್ನೆಗಳಿರುವುದರಿಂದ ಮುಂಜಾಗ್ರತೆ ವಹಿಸಿರಿ

ಕರ್ಕಾಟಕರಾಶಿ—

ಕಡಿವಾಣವಿಲ್ಲದ ಕುದುರೆಯಂತಾಗಿರುವ ನಿಮ್ಮ ಮನಸ್ಸನ್ನು ಬಿಗಿಹಿಡಿಯುವುದು ಬಹಳ ಕಷ್ಟವಾದೀತು ಆತ್ಮವಿಶ್ವಾಸವೇ ನಿಮ್ಮಲ್ಲಿಲ್ಲದ ಮೇಲೆ ಹತ್ತು ಜನರಿಂದ ಕಾಡಿಕೊಂಡು ಹೋಗುವುದು ಸಾಗದ ಮಾತು ಬುದ್ಧಿಬಲದಿಂದಾಗಿ ನೀವು ದುಡಿಯುವಿರಿ ಆದರದನ್ನು ರಕ್ಷಿಸುವ ದಾರಿ ನಿಮಗೆ ತಿಳಿಯದಾಗಿದೆ. ಕರ್ಕಶವಾಣಿ ಮತ್ತು ದುರ್ಮನಸ್ಸಿನಿಂದ ಜನರೊಡನೆ ನಿಸ್ಸಾರ ಕಲಹಗಳು ಹೆಚ್ಚುವವು ಅಂತರಿಕ ಬಯಸ್ತ ಅಧಿಕವಾಗಿರುವುದರಿಂದ ಕಾರ್ಯಗಳಲ್ಲಿ ವಿಜಯಗಳಿಸಗವಂತಿಲ್ಲ. ಕಾರ್ಯವೂ ಕೊನೆಗೊಳ್ಳದಂತಿಲ್ಲ ಶರೀರಾಲಸ್ಯವು ಹೆಚ್ಚುವುದು. ಹಲವಾರು ಬಗೆಯಿಂದ ಹಣವ್ಯಯವಾಗುವುದರಿಂದ ಆರ್ಥಿಕ ಇಕ್ಕಟ್ಟಿಗೆ ಸಿಲುಕುವಿರಿ ಕಳೆದ ವಾರದಲ್ಲೂ ಕೆಲವೊಮ್ಮೆ ಕೇಳಬೇಕಾದ ಪ್ರಸಂಗಬರಬಹುದು. ಸಂಸಾರಕ ಮತ್ತು ಪೂರ್ಣವಿದ್ದರೂ ಕಳತ್ರ ಕಲಹವು ತಪ್ಪುವಂತಿಲ್ಲ ತಾ 29, 30, 31 ಈ ದಿನಗಳು ನಿಮಗೆ ಹಿತಕರಗಳಲ್ಲವು.

ಸಿಂಹರಾಶಿ—

ಸದ್ಯದಲ್ಲಿನ ಗ್ರಹಬಲವು ಅತೀವ ಕಡಿಮೆಯಾಗಿರುವುದರಿಂದಲೂ ಗುರ್ವನುಗ್ರಹದಿಂದ ಮುಕ್ತಿರ [illegible] ದಿಂದಲೂ ಕಾರ್ಯಾಕಾರ್ಯ ವಿಚಾರಶಕ್ತಿಯು ನಿಮ್ಮಲ್ಲಿ ಶೂನ್ಯವಾಗಿರುವುದು 'ಸರ್ವನ್ಯಾಪದನಸ್ತಿ [illegible] ಸರ್ವಸ್ವ ನಾಸ್ತ್ಯಕ್ಷರಂ' ಎಂಬ ನೀತಿವಚನದಂತೆ ಸರ್ವೋಪದ್ರವಗಳಿಗೂ [illegible] ತವಾದ ನಿರಾಟಿಯ ಪತ್ನಿ ಮೂಲ (ಎವೇಕಹೀನತ್ವ)ನಿಗೆ ಯಾರುಂದೂ ಔಷಧಿಯಿಲ್ಲವು ಆದಕಾರಣ ಹಿರಿಯವರು ಬಲವಂತದಿಂದ ನಿಮ್ಮನ್ನು ಸರಿದಾರಿಗೆ ತರುವುದೆಂದರದು ಸದ್ಯಕ್ಕೆ ಆಕಾಶ ಕುಸುವದಂತೆಯೇ ಸರಿ. ಸಿಕ್ಕುತ್ತಿಗಳಾದ ನಿಮಗೆ ಭೋಗಾಭಿಲಾಷೆಗಿನೂ ಕಂಟಕವಿಲ್ಲವು ಆರೋಗ್ಯ ವಿಚಾರವನ್ನು ಮಾತ್ರ ಮುಂಜಿತ ನೋಡಿಕೊಳ್ಳಿರಿ ಬಲವತ್ತರಗಳಾದ ರೋಗಗಳಿಂದ ಪಾರಾಗುವುದು ಬಹಳ ಕಷ್ಟ ಹಣದ ವಿಚಾರ [illegible] ಕ್ಷಣೀಕ್ಷಣೇ ಹೆಚ್ಚುತ್ತಿರುವದಾದರೂ ಸಂಪಾದನೆಯ ದಾರಿಗಳು ಕಾಣದಾಗಿದೆ

ತಾ 24, 25, 31 ಈ ದಿನಗಳಲ್ಲಿ ಕಾರ್ಯನಾಶ ಶೋಕ ಅಪಮೃತ್ಯುವೇ ಮೊದಲಾದ ಅನಿಷ್ಟಗಳು ಪ್ರಾಪ್ತವಾಗಬಹುದು

ಕನ್ಯಾರಾಶಿ—

ನಿಮ್ಮ ಪಾಲಿಗೆ ಈ ವಾರವು ಸಾಕಷ್ಟು ಉತ್ತಮವಾಗಿರುವುದು. ನಿಮ್ಮಲ್ಲಿರತಕ್ಕ ವಿದ್ಯಾಬುದ್ಧಿಗಳ ಬಲದಿಂದ ಸರ್ವಮಾನ್ಯರಾಗುವಿರಿ ಮಹಾತ್ಮರ ಸ್ನೇಹ ಇಷ್ಟ ಸಿದ್ಧಿ ಧನವಸನ [illegible] ಗಳು ಅನಾಯಾಸವಾಗಿ ದೊರೆಯುವವು ಪ್ರಾಕೃತೆಯ ಅನುಕೂಲದಿಂದ ಈಗ ಮುಕ್ತರಾಗುವಿರಿ ವಿದ್ಯಾರ್ಥಿಗಳಿಗಂತೂ ಕಾಲವು ಅತ್ಯುತ್ತಮವಾಗಿರುವುದು. ಈ ಕಾಲದಲ್ಲೂ ನಿಮ್ಮ ಮೇಲೆ ಎರಡೆಂಟಿನಸತಕ್ಕವರೇನೂ ಕಡಿಮೆಯಿಲ್ಲವು ಸಮಯವನ್ನು ಹೊಂಚುಹಾಕುತ್ತಿರುವರು ಕಾಲು ಜಾರಿದಲ್ಲಿ ತಲೆಮೇಲೆ ಕಲ್ಲಿಡಲು ಎಳ್ಳಷ್ಟು ಹಿಂಜರಿಯರು ಸಂಸಾರದ ವಿಚಾರವಾಗಿ ಮನಸ್ಸಿಗೆ ಸ್ವಲ್ಪ [illegible] ಕೊಳ್ಳಬೇಕಾಗುವುದು. ಆರೋಗ್ಯವು ಸಂಪೂರ್ಣ ಉತ್ತಮವಿರದು ತಾ 29, 30, 31ಈ ದಿನಗಳು ಸರ್ವಾಭೀಷ್ಟ ಪ್ರದಗಳಾಗಿವೆ

ತುಲಾರಾಶಿ—

ಇಷ್ಟಾನಿಷ್ಟ ಗ್ರಹರಿಂದ ಮಿಶ್ರಿಭೂತವಾದ ಈ ವಾರದಲ್ಲಿ ಯಾವುದರಲ್ಲೂ ಅಧಿಕ್ಯವಿರದು ಈಗ ಕಾಲಗತಿಯು ವಿಪರೀತ ಸ್ಥಿತಿಗೆ ಬಂದಿರುವುದರಿಂದ "ಅಲ್ಪಸಂ [illegible] ಕೈಟೀರುತು [illegible]" ಎಂಬ ಲೋಕೋಕ್ತಿಯಂತೆ ವಕ್ರಬುದ್ಧಿಯವ (ದುರ್ಜನ)ರಲ್ಲಿ ನ್ಯಾಯನೀತಿಯು [illegible] ಪ್ರದು ನೀತಿಗೆ ವಿರೋಧವಾದುದ. ಹೃದಯದಲ್ಲಿ ಒಂದನ್ನೆಣಿಸಿ ಬಾಯಲ್ಲಿ ನಿಮಗೆ ಬೇಕಾದಂತೆ ಮಾತನಾಡುವವರ ಮಾತಿಗೆ ಮರುಳಾಗಿ ಪೆಚ್ಚು [illegible] ಗುರಿಯಾಗಲಿರುವಿರಿ ವಿರೋಧಿಗಳಿಂದ ನಿಮ್ಮ ಮನೋವ್ಯಥೆಯು ಅಧಿಕವಾಗುವುದು ಆದರೂ ಸತ್ಪುತ್ರರೂ ಪೂರ್ಣ ಸಹಾನುಭೂತಿಯು ನಿಮಗಿರುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ಜಯ ಮತ್ತು ಧನವನ್ನೂ ಪಡೆಯುವಿರಿ ಆತ್ಮೀಯ ದೇಹದ ಸಲುವಾಗಿ ಹುತ್ತು [illegible] ನಿಮಿತ್ತ ಸ್ವಲ್ಪ ಧನವ್ಯಯ

ವಾಗುವುದಾದರೂ ನಿಮ್ಮ ಆರ್ಥಿಕ ಭಾಗವು ಉತ್ತಮವಿರುವುದು ತಾ. 24-25-31 ಉತ್ತಮ.

ವೃಶ್ಚಿಕರಾಶಿ—

ನಿಮ ಗೆ ಈ ವಾರವು ಹಲವು ವಿಚಾರಗಳಲ್ಲಿ ಅನುಕೂಲಕರವಾಗಿದೆ ಎಂದರೆ ತಪ್ಪಾಗಲಾರದು. ಪ್ರಕೃತ ನಿಮಗಾದ ತರದ ಚಿಂತೆಯೂ ಇಲ್ಲವೆನಬಹುದು. ಆರಂಭಿಸಿದ ಕಾರ್ಯವು ನಿಮ್ಮಿಚ್ಛೆಗೆ ಅವಿರೋಧವಾಗಿ ಅನಾಯಾಸದಿಂದ ಕೊನೆಗೊಳ್ಳಲಿರುವುದು. ಕೈಬಿಟ್ಟುಹೋದ ಧನವೂ ಪುನಃ ನಿಮ್ಮನ್ನೇ ಸೇರಲಿದೆ ಸೇರುವುದು ಶರೀರವು ಒಳ್ಳೇ ಆರೋಗ್ಯದಿಂದ ಕೂಡಿರುವುದು ವನಿತಾಸುಖಕ್ಕೆ ಕಡಿಮೆಯಾಗದು. ಶತ್ರುಜನರು ಮುಗ್ಧರಾಗಿ ವರು ಸಂಸಾರದೊಳಗಿಯೂ ಸುಖದಿಂದ ನಾಗಿಯ ಕಡೆಗೆ ಸಾಗುತ್ತಿರುವುದು. ಆದರೂ ವಿದ್ಯಾರ್ಥಿಗಳ ಅಧ್ಯಯನ ವಿಚಾರಕ್ಕೆ ವಿಘ್ನಗಳಧಿಕವಾಗುವವು ವಾಕ್ ಸಂಬಂಧವಾದ ಕಲಹವು ವಿಶೇಷತಃ ಸ್ತ್ರೀಯರಿಗೆ [illegible] ಆಗಲಿರುವದ. ತಾ. 24 25-30-31 ಈ ದಿನಗಳಲ್ಲಿ ಮಿತಭಾಷಿಯೂ, ಮಿತವ್ಯಯಿಯೂ ಆಗಿರುವುದೊಳ್ಳಿತು

ಧನುರಾಶಿ—

ಭಾಗ್ಯಹೀನರಿಗೆ ಮೇಲಿಂದ ಮೇಲೆ ಕಷ್ಟಗಳೂ ದಿನದಿಂದ ದಿನಕ್ಕೆ ಹೀನಾವಸ್ಥೆಯೂ ಅಪ್ರಾಪ್ತವಾಗುವದು ಲೋಕ [illegible] ಈಗ ನಿಮ್ಮ ರಾಶಿಯನ್ನು ನೋಡುವಾಗಲೂ ನೀವು ಅತೀವ ಅದೃಷ್ಟಹೀನರಾಗಿ ಕಾಣುವಿರಿ. ಕಾರಣ ಕಷ್ಟಪಟ್ಟುದುಡಿದರೂ ಬಿಸಗಳಿಸುವುದು ಬಹಳ ಕಷ್ಟವೆಂದೆನಿಸುವುದ [illegible] ಒಟ್ಟರೆಲ್ಲೂಟ್ಟಿರಿಗೆ ಕಾಣಿಕೆ ತಪ್ಪದು. ಅಪ್ತಜನರು ಮಾತುಕೊಟ್ಟು ವಂಚಿಸುವರು ಕೈಕೆಳಗಿನ ಜನರೂ ನಿಮ್ಮ ಮೇಲೆ ಅಧಿಕಾರ [illegible] ಹಣ ಎರವುವಾಗಿ ಕಳೆದುಕೊಳ್ಳಬೇಕಾಗುವುದು. ಇಂತಿರುವ ಸಮಯದಲ್ಲಿ ನಿದ್ರಾಹಾರಗಳು ನಿಮಗಿಲ್ಲದಾಗಿಬೇಕು. ಇದರಿಂದ ದೇಹದಲ್ಲಿ ದುಷ್ಟವೂ ಪಿತ್ತವೂ ಅಧಿಕವಾಗಿ ಅಸ್ವಸ್ಥಗಳ ಅನಾರೋಗ್ಯವೂ ಕಾಣಬಹುದು. ಶ್ವದೇವಿಗಳಿಗೆ ತಾ 24-25-29-30 ಸಾಮಾನ್ಯ ಉತ್ತಮವಿರಬಹುದು

ಮಕರರಾಶಿ—

ಮನೋವಾಂಛೆಯಗಳು ಒಂದೇ ರೀತಿಯಾಗಿರದೆ ಒಂದೊಂದು ವಿಧವಾಗಿರುವುದರಿಂದ ನಿಮ್ಮಲ್ಲಿ ಯಾರಿಗೂ ವಿಶ್ವಾಸವಿಲ್ಲದಾಗಿದೆ. ಆದಕಾರಣ ದೈವವೇ ನಿಮ್ಮ ಮೇಲೆ ಮುನಿದಿರುವುದು. ಇದರಿಂದ ನೀವು ಗಾನ ಕಾರ್ಯದಲ್ಲೂ ಏಳಿಗೆಯಿಲ್ಲವು ಚಿನ್ನವನ್ನು ಮುಟ್ಟಿದರೂ ಅದು ಕಲ್ಲಾಗುವದು ಮಿತ್ರಜನರೂ ಶತ್ರುಗಳಾಗುವರು ಹೆಚ್ಚೇಕೆ ನಿಮ್ಮ ಆಪ್ತ ಬಂಧಗಳೇ ನಿಮಗೆ ವಿರೋಧವಾಗಿ ಪ್ರತಿಕ್ರಿಯೆ ಹೂಡುವರು. ಕೈಹಿಡಿದಾಕೆಯೂ ನಿಮಗಿಲ್ಲದಾಗುವಳು. ಕೈಯಲ್ಲಿ ಕಾಸಿಲ್ಲ ಮೈಯಲ್ಲಿ ಮಾನವಿಲ್ಲ, ಎಂಬೀ ತೆರನಾದ ಅವಸ್ಥೆಗೆ ಬಂದು ಮುಟ್ಟುವಿರಿ ಶುಕ್ರಾಚಾರ್ಯರ ದೃಷ್ಟಿಯೊಂದು ನಿಮ್ಮ ಮೇಲಿರುವುದರಿಂದ ತಾ. 26, 27, 28 ಈ ದಿನಗಳಲ್ಲಿ ಕಿಂಚಿದ್ಧನ ಲಾಭ ಇಷ್ಟಾನ್ನಭೋಜನ ಸಿಗಲಿದೆ.

ಕುಂಭರಾಶಿ—

ಸುಖ [illegible] ಗಳಿಂದ ಕೂಡಿ ಸಾಮಾನ್ಯ ಮಧ್ಯಮ ರೀತಿಗೆ ಬಂದಿರುವುದು ನಿಮ್ಮ ದೈವವು. ಇತ್ತೀಚಿನ ಕೆಲವು ಸನ್ನಿವೇಶಗಳಿಂದ ನಿಮ್ಮ ಪರಿಸ್ಥಿತಿಯು ದಿನೇ ದಿನೇ ಹಾನಿವಾಗುತ್ತಾ ಬರುತ್ತಿದೆ ಉತ್ಪತ್ತಿಯು ಕಡಿಮೆಯಾಗುತ್ತಾ ಬಂದಂತೆ ಖರ್ಚು ಏರುತ್ತಾ ಹೋಗುತ್ತಿದೆ ಪಿತ್ತಾಧಿಕ್ಯದಿಂದ ಅನಾರೋಗ್ಯ ಕಣ್ಣುನೋವು ವಗೈರೆಗಳು ತಲೆದೋರಲಾರಂಭಿಸಿವೆ. ಆಗಾಗ ಪ್ರವಾಸಮಾಡಬೇಕಾಗಿ ಬಂದು ವಿಶೇಷ ಧನವ್ಯಯವಾಗುವುದು ಸ್ತ್ರೀವಿಷಯಕವಾದ ಚಿಂತೆ ತತ್ಸಂಬಂಧವಾದ ಅನಿಷ್ಟಗಳಿಗೆ ಗುರಿಯಾಗುವಿರಿ. ಆದರೂ ಉದ್ಯೋಗದಲ್ಲಿ ಕೊರತೆಯಿಲ್ಲವು ಕಷ್ಟಜೀವಿಗಳಿಗೆ ಇಚ್ಛಾಧಿಕವಾಗಿ ಧನಪ್ರಾಪ್ತಿಯಿದೆ. ಹಲವು ಜ್ಯೇಷ್ಠಾದಿಗಳಿಂದೊದಗೋದ ಸಂಸಾರಸುಖವು ಚೆನ್ನಾಗಿರುವುದು. ಸಂಗಸುಖ ನಿಮ್ಮ ಕಂಡ ಸರ್ಪದಂತೆ ಶತ್ರುಜನರು ತಲೆಬಾಗುವರು ತಾ 26-27-28 ಈ ದಿನಗಳಲ್ಲಿ ಆರೋಗ್ಯದಲ್ಲಿ ವ್ಯತ್ಯಯಾ ವ್ಯಯದಲ್ಲಿ ಮಿತಿಯೂ ಇರಲಿ

ಪುಟ ೧೯ ನೋಡಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದುವರ್ಷಿಯವಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಒಡ್ಡೊಂದಕ್ಕೆ ರೂ ೧ ವಿ ಪಿ ಖರ್ಚು ೦ ೮ ೦ ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡೆಯುವಾಗ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರ —ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತಿಕ್ ಡಿಸ್ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ದಾರಿಹೋಕನ ಡೈರಿ

ಭ್ರಾಂತರಿಗೆ ಡಾಕ್ಟರ್ ಬ್ರಂಟನರಂಥವರೇ ಪಾಠ ಕಲಿಸಬೇಕು.

೦೦೦ ೦೦೦ ೦೦೦

ಬಿಹಾರಿನ ಹತ್ವಾ ಎಂಬ ಜಮೀನ್ದಾರಿಯ ಮಹಾರಾಜ ಬಹದೂರರೊಬ್ಬರು ತಮ್ಮ ಪ್ರೀತಿಯ ಮಡದಿಮಕ್ಕಳನ್ನು ಬಿಟ್ಟುಹೋಗಿ ಸನ್ಯಾಸಿಯಾಗಿ ಅತ್ಯಂತ ಸರಳಜೀವನ ನಡಿಸುವುದನ್ನು ಮಹತ್ತಾದ ಸಂಗತಿಯೆಂದು ಪ್ರಕಟಿಸಹತ್ತಿವೆ ಪತ್ರಿಕೆಗಳು. ಇವರು ತಿಂಗಳಿಗೆ ರೂ. 2,000 ಎಲೋವೆನ್ಸ್ ಪಡೆಯುತ್ತಾರಂತೆ. ಒಂದು ಪೈ ಎಲೋವೆನ್ಸ್ ಕೂಡಾ ಇಲ್ಲದೆ ಹೆಂಡತಿ ಮಕ್ಕಳು ಮನೆಮಾರನ್ನೆಲ್ಲಾ ಬಿಟ್ಟು ದೇಶಾಂತರ ಹೋಗುವ ಸನ್ಯಾಸಿಗಳು ಲಕ್ಷಗಟ್ಲೆ ಇಲ್ಲವೆ ಹಿಂದೂದೇಶದಲ್ಲಿ!

೦೦೦ ೦೦೦ ೦೦೦

ಕಡಲೂರಲ್ಲಿ ಖಾಲಿಬಿದ್ದಿರುವ ಮದ್ರಾಸ್ ಕೌನ್ಸಿಲ್ ಸೀಟಿಗೆ ನಡೆದಿದೆ ಹೋರಾಟ, ಕಾಂಗ್ರೆಸ್, ಜಸ್ಟಿಸ್ ಮತ್ತು ಸನಾತನಿಸ್ಟ್ ಉಮೇದ್ವಾರಿಗಳೊಳಗೆ. ತಮಿಳುನಾಡು ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರೇ ನಿಂತಿದ್ದಾರೆ ಕಾಂಗ್ರೆಸ್ ಪರವಾಗಿ. ನೋಡಬೇಕು ಯಾರ್ಯಾರ ಹಣೆಬರಹ ಹ್ಯಾಗ್ಯಾಗುಂಟೆಂತ!

೦೦೦ ೦೦೦ ೦೦೦

ಕಾಂಗ್ರೆಸು ಹೋರಾಡುವ ಸಂಸ್ಥೆ. ಕ್ರಾಂತಿಕಾರಕ ಸಂಸ್ಥೆ. ಹೊರಗಣ ಹೋರಾಟವಿಲ್ಲದಾಗ ಒಳಗಣ ಹೋರಾಟ! ಹೊರಗೆ ಕ್ರಾಂತಿಮಾಡಲು ಅಸಾಧ್ಯವಾದಾಗ ಒಳಗೆ ಕ್ರಾಂತಿಮಾಡುವುದು. ಹೇಗೂ ಸಂಸ್ಥೆಯ ಗುಣವನ್ನು ಮಲಿನವಾಗಗೊಡದೆ ಉಜ್ವಲವಾಗಿರಿಸಬೇಕಲ್ಲವೇ? ಖಡ್ಗವನ್ನು ಒರಿಯೊಳಗೇನೇ ಇಟ್ಟರೆ ತುಕ್ಕು ಹಿಡಿದರೆ ಮತ್ತೆ?

೦೦೦ ೦೦೦ ೦೦೦

'ಕನ್‌ಸ್ಟಿಟ್ಯೂಶನ್, ಕನ್‌ಸ್ಟಿಟ್ಯೂಶನ್' ಎಂಬ ಶಬ್ದ ಈಗ ಎಲ್ಲೆಲ್ಲಿಂದಲೂ ಕೇಳಿಬರುವಾಗ ನನ್ನ ತಲೆ ಹೋಕತಲೆಗೂ ಒಂದು 'ಕನ್‌ಸ್ಟಿಟ್ಯೂಶನಲ್ ಪೈಂಟು' ಥಕ್ಕನೆ ಹೊಳೆಯಿತು. ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳಿಂದ ನೆಟ್ಟಗೆ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟು ಬಹುಪಕ್ಷದ ವಿಶ್ವಾಸಕ್ಕೆ ಪಾತ್ರರಾದವರು ರಾಷ್ಟ್ರಗೌರವ ಸುಭಾಸಬಾಬುಗಳು. ಅಂಥವರ ಮೇಲೆ ಕೇವಲ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರಿಂದ ಆರಿಸಲ್ಪಟ್ಟ ಪ್ರೆಸಿಡೆಂಟರು ಮತ್ತು ವರ್ಕಿಂಗ್ ಕಮಿಟಿಯವರು ಶಿಸ್ತು ಜ್ಯಾರಿಮಾಡುವುದಾದರೂ ಹೇಗೆ?

೦೦೦ ೦೦೦ ೦೦೦

ದಿವಂಗತ ದೇಶಬಂಧು ದಾಸರು ಮತ್ತು ಪಂಡಿತ ಮೋತಿಲಾಲರು ಕಾಂಗ್ರೆಸಿನೊಳಗೆ ಬಂಡಾಯವೆಬ್ಬಿಸಿ ಸ್ವರಾಜ್ಯ ಪಕ್ಷಸ್ಥಾಪಿಸಿ ಕಾಂಗ್ರೆಸಿನ ನಿರ್ಣಯಗಳಿಗೆ ವಿರೋಧವಾಗಿ ಪ್ರಚಾರಮಾಡಿದ್ದರು, ಪಂಡಿತ ಜವಾಹರಲಾಲರು ಪೂರ್ಣ ಸ್ವರಾಜ್ಯದ ಧ್ವಜವನ್ನೆತ್ತಿ ಹಿಡಿದು ಅದನ್ನು ಸಾಧಿಸಲೊಂದು 'ಇಂಡಿಪೆಂಡೆಂಟ್ ಲೀಗ್' ಎಂಬ ಪ್ರತ್ಯೇಕ ಲೀಗನ್ನೇ ಸ್ಥಾಪಿಸಿದ್ದರು. ಅವರ ಮೇಲೆಲ್ಲಾ ಶಿಸ್ತು ಜ್ಯಾರಿಯಾಗಲಿಲ್ಲ. ಶ್ರೀ. ಬೋಸರ ಮೇಲೆ ಮಾತ್ರ ಶಿಸ್ತು ಜ್ಯಾರಿಯೋ? ಎಂದು ಕೆಲವರ ಆಕ್ಷೇಪ.

೦೦೦ ೦೦೦ ೦೦೦

ಆಗ ಮರೆತು ಹೋಯಿತು. ಈಗ ನೆನಪಾಯಿತು ಯಾರಿಗಾದರೂ ತಾಳಕ್ಕೆ ತಕ್ಕಂತೆ ಮರವೆ ನೆನಪೆಂದಿಲ್ಲವೇನ?

೦೦೦ ೦೦೦ ೦೦೦

ಖಾದಿ ನಿಯಮದಿಂದಾಗಿ ಕಾಂಗ್ರೆಸಿನೊಳಗೆ ಬಹಳವಾಗಿ ಸುಳ್ಳು ಮತ್ತು ವಂಚನೆ ಹಬ್ಬುವಂತಾಗಿದೆಯೆಂಬುದನ್ನು ಒಪ್ಪುತ್ತಾರೆ ಗಾಂಧಿಯವರು. ಇಲ್ಲವಾದರೆ ದಕ್ಷಿಣ ಕನ್ನಡ ಜಿಲ್ಲೆಯ ಈಗಣ ದೊಡ್ಡ ದೊಡ್ಡ ಕಾಂಗ್ರೆಸ್‌ಭಕ್ತರು, ಮನೆಯಲ್ಲಿ, ಕೋರ್ಟು ಅಥವಾ ಆಫೀಸಿನಲ್ಲಿ, ಸಾರ್ವಜನಿಕ, ಸಭೆಗಳಲ್ಲಿ ಮಂತ್ರಿಗಳೇ ಮೊದಲಾದವರ ಭೇಟಿಯ ಸಂದರ್ಭದಲ್ಲಿ, ಸ್ಪೆನ್ಸರ್ ಅಥವಾ ಮಿನರ್ವದಲ್ಲಿ ಯಾವ ರೀತಿಯಲ್ಲಿರುತ್ತಾರೆಂದು ಅವರ ಬೇರೆ ಬೇರೆ 'ಪೋಸ್'ಗಳ ಫೋಟೋ ತೆಗೆದು ಕಳುಹಿಸಬೇಕೆಂದು ಮನಸ್ಸು ಮಾಡಿದ್ದೆ ನಾನು ಗಾಂಧಿಯವರಿಗೆ.

೦೦೦ ೦೦೦ ೦೦೦

ಈಗ ದೊಡ್ಡ ಗಾಂಧಿ ಭಕ್ತರುಗಳೆಂದರೆ, ಇವರೇ. ಹಳೆಯ ಕಾಂಗ್ರೆಸ್ ಕೆಲಸಗಾರರು ಎಲ್ಲಿಯಾದರೂ ಕಾಂಗ್ರೆಸನ್ನೋ ಕಾಂಗ್ರೆಸ್ ಮಂತ್ರಿಗಳನ್ನೋ ಸ್ವಲ್ಪ ಟೀಕಿಸಿದರೆ 'ಶಾಂತಂ ಪಾಪಂ, ಶಾಂತಂ ಪಾಪಂ' ಎಂದು ಕಿವಿಮುಚ್ಚಿಕೊಳ್ಳುವವರು. ಖಾದಿ ಹರಿಜನೋದ್ಧಾರ, ಮದ್ಯಪಾನ ನಿಷೇಧ ಮೊದಲಾದ ಗಾಂಧಿವಾದದಲ್ಲಿ ಕಾಂಗ್ರೆಸು ಅಧಿಕಾರಕ್ಕೆ ಬಂದೊಡನೆಯೇ ಒಮ್ಮೆಯೇ ಅತ್ಯಂತ ವಿಶ್ವಾಸಪಡೆದವರು. 'ದೇವರೇ ನನ್ನೀ ಮಿತ್ರರಿಂದ ನನ್ನನ್ನು ರಕ್ಷಿಸು!' ಎಂದು ಗಾಂಧಿಜಿಯವರು ಅನುನಿತ್ಯ, ರಾತ್ರಿಹಗಲು ಕ್ಷಣ ಕ್ಷಣ ಪ್ರಾರ್ಥಿಸಿಕೊಂಡರೂ ಪ್ರಯೋಜನವಾಗಲಾರದು. ಸುಳ್ಳು ವಂಚನೆಗಳನ್ನು ಅದೊಂದು ಲಲಿತ ಕಲೆಯನ್ನಾಗಿಯೇ ಮಾಡಿಕೊಂಡು ನಡೆಯುವವರಿಗೆ ಗಾಂಧಿಜಿಯವರು ಪ್ರಾರ್ಥಿಸಿದರೇನು? ಉಪವಾಸಬಿದ್ದು ಸತ್ತರೇನು?

೦೦೦ ೦೦೦ ೦೦೦

ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಹೋರಾಟದ ಎಚ್ಚರವೀಯುವ ಸಮಯವೀಗ ಬಂದಿಲ್ಲ ಎಂಬ ಸೂಚನೆಯ ಕುರಿತು ಮಂಗಳೂರಿನ ಸ್ಟೂಡೆಂಟ್ಸ್ ಯೂನಿಯನಿನಲ್ಲಿ ದೊಡ್ಡ ಚರ್ಚೆ ನಡೆದು 46 ಅನುಕೂಲ ಮತ್ತು 61 ಪ್ರತಿಕೂಲ ಮತಗಳಿಂದ ಬಿದ್ದುಹೋಗಿದೆ ಮೂಲಸೂಚನೆ. ಹಾಗಾದರೆ ಮಂಗಳೂರು ವಿದ್ಯಾರ್ಥಿಗಳ ಓಟು ಬೋಸರಿಗಾಯಿತು.

೦೦೦ ೦೦೦ ೦೦೦

ಸಿ. ಪಿ. ಸಿ. ಬಸ್ ಕಂಪೆನಿ ಮತ್ತು ದ. ಕ. ಮೋಟರ್ ಕೆಲಸಗಾರ ಸಂಘಗಳೊಳಗಣ ತಿಕ್ಕಾಟವು ಗುಣಹೊಂದದ ರೋಗದಂತಾಗಿಹೋಗಿದೆ ದಿನೇ ದಿನೇ ಉಲ್ಬಣವಾಗುವಂತಿದೆ ಪರಿಸ್ಥಿತಿ. ಈ ರೋಗಕ್ಕೊಂದು ಔಷಧಿಯೇ ಇಲ್ಲವೇ? ಕೆಲಸಗಾರರೂ ಮ್ಯಾನೇಜರೂ ಅನುನಿತ್ಯ ಹೋರಾಡುತ್ತಾ ಇದ್ದರೆ ಹೇಗೆ?

—ದಾರಿಹೋಕ



ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ಸ್ಮಾಲ್ ಕಾಸ್ ನಂಬ್ರ $\frac{೨೩೮}{೧೯೩೮}$

R. E. P No. $\frac{38}{1938}$

ಉಗ್ರಾಣಿ ಲಕ್ಷ್ಮಣಯ್ಯ—ವಾದಿ, ಅರ್ಜಿದಾರ ಮತ್ತು

ಶೇಕ್ ಅಲ್ಲಿ ಸಾಹೇಬ್. ಅಂಬಾರಕಟ್ಟೆ ಶೇಕ್ ಇಮಾಮು ಸ್ಯಾಬರ ಮಗ. ಕಾಸರಗೋಡು ತಾಲೂಕು ಮಂಗಲ್ಪಾಡಿ ಗ್ರಾಮದಲ್ಲಿರುವವ } ಪ್ರತಿವಾದಿ ರೆಸ್ಪೋಂಡೆಂಟ್

ಮೇಲ್ಕಂಡ ಅಮಲ್‌ಜ್ಯಾರಿಯಲ್ಲಿ ರೆಸ್ಪೋಂಡೆಂಟಿನ ಸ್ಥಿರಾಸ್ತಿ ಏಲಂಮಾಡುವ ಉದ್ದೇಶ್ಯ ಹಾಜ್ರುಪಡಿಸಿದ ಏಲಂ ಇಸ್ತಿಹಾರು ಮಂಜೂರುಮಾಡುವ ಬಗ್ಗೆ, ಏಲಂಮಿನ ಸಮಯ ಅರ್ಜಿದಾರಗೆ ವಾರ್ಡಿಕೆರೆಯುವರೆ ಅನುಮತಿ ಕೊಡಿಸಿ ವಾರಿನ ಹಣ ಡಿಕ್ರಿಯ ಹಣದಲ್ಲಿ ಮುಜ್ರೆಕೊಡಿಸುವ ಬಗ್ಗೆ, ಸದರೀ ಅಮಲ್‌ಜ್ಯಾರಿಯು ತಾ. 5-9-1939ರಲ್ಲಾ ತನಿಖೆಗೆ ಇಟ್ಟಿದೆ. ಆ ಕುರಿತು ರೆಸ್ಪೋಂಡೆಂಟಿಗೆ ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿದೆ

ಕಾಸರಗೋಡು }
ತಾ. 16 8 1939 } **C. Rama Rao,** ಅರ್ಜಿದಾರನ ವಕೀಲ.

ಪ್ರಕಟಣೆ.

ಮದ್ರಾಸು ಸಂಸ್ಥಾನದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ತಯಾರಾಗುತ್ತಿರುವ ಗುಡಿಸಲು ಕೈಗಾರಿಕೆ ಮತ್ತು ಇನ್ನಿತರ ಕೈಗಾರಿಕೆಗಳ ಪರಿಚಯವನ್ನು ಸಾರ್ವತ್ರಿಕ ಹರಡುವ ಉದ್ದೇಶದಿಂದ ಮದ್ರಾಸು ನಗರದಲ್ಲಿ ಒಂದು ವಸ್ತು ಪ್ರದರ್ಶನ ಸಂಸ್ಥೆಯು ಮದ್ರಾಸು ಸರಕಾರದ ನೇತೃತ್ವದಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವವಷ್ಟೆ ನಮ್ಮ ಜಿಲ್ಲೆಯಲ್ಲಿ ತಯಾರಾಗುತ್ತಿರುವ ಅಂತಹ ಯಾವುದಾದರೂ ಕೈಗಾರಿಕೆಗಳ ಮಾದರಿ ಒಡವೆಗಳನ್ನು ಈ ವಸ್ತು ಪ್ರದರ್ಶನ ಸಂಸ್ಥೆಗೆ ಕಳುಹಿಸಿಕೊಡಬಹುದು. ಇದರಿಂದ ಸಂಸ್ಥಾನದ ಯಾವ ಯಾವ ಪ್ರದೇಶಗಳಲ್ಲಿ ಎಂತೆಂಥ ಕೈಗಾರಿಕೆಗಳು ಆಗುತ್ತಿವೆ ಎಂಬುದು ಸಾಮಾನ್ಯ ಜನರಿಗೂ ತಿಳಿಯುವದಕ್ಕೆ ಅನುಕೂಲವಾಗುವದಲ್ಲದೆ ಅಂಥ ಸಾಮಾನುಗಳನ್ನು ಬೇಕಾದವರು ತರಿಸಿಕೊಳ್ಳುವದಕ್ಕೂ ಅವಕಾಶವಾಗಬಹುದು.

ಗುಡಿಸಲು ಕೈಗಾರಿಕೆಗಳ ಬಗ್ಗೆ ಯಾವ ವಿಧದ ಫೀಸೂ ಕೊಡುವದು ಆಗತ್ಯವಿಲ್ಲವೆಂದು ಅಧಿಕಾರಿಗಳು ತಿಳಿಸುತ್ತಾರೆ. ಆದರೆ ಸಾಮೂಹಿಕ ಕೈಗಾರಿಕೆಗಳ ಸಂಗತಿಯಲ್ಲಿ ಸ್ಥಳದ ಆಕ್ರಮಣಕ್ಕನುಸರಿಸಿ ವಿವಿಧ ದರಗಳನ್ನು ಹೇರಿಸುವ ಏರ್ಪಾಡು ಮಾಡಿರುತ್ತಾರೆ.

ಯಾವುದಾದರೂ ಕೈಗಾರಿಕೆಗಳನ್ನು ನಡೆಯಿಸುತ್ತಿರುವ ನಮ್ಮ ಜಿಲ್ಲೆಯ ಜನರು ಈ ವಸ್ತು ಪ್ರದರ್ಶನ ಸಂಸ್ಥೆಯ ಪೂರ್ಣ ಪ್ರಯೋಜನಕ್ಕೆ ಭಾಗಿಗಳಾಗಬಹುದೆಂದು ಈ ಮೂಲಕ ಸಕಲ ಜನರಿಗೆ ತಿಳಿಸೋಣಾಗುತ್ತದೆ.

ಈ ಕುರಿತು ಅಗತ್ಯದ ವಿಶೇಷ ಮಾಹಿತಿಗಳನ್ನು ಮದ್ರಾಸಿನ ಡೈರೆಕ್ಟರ್ ಓಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇವರಿಗೆ ಬರೆದು ತರಿಸಿಕೊಳ್ಳಬಹುದು.

(*Sd*)K. Vittal Shetty, ***President,***
South Kanara Dt. Bo. office,
Mangalore. 8th August 1939.

ವಾರದ ಭವಿಷ್ಯ

ಪುಟ ೧೮ರಿಂದ

ಮೀನರಾಶಿ—

ರವಿಕುಜೇತರ ಸಕಲ ಗ್ರಹವೃಂದವೂ ನಿಮ್ಮ ಮೇಲೆ ಪ್ರತಿಕೂಲದೃಷ್ಟಿಯನ್ನಿಟ್ಟಿರುವುದರಿಂದ ಹಲವಾರು ವಿಚಾರಗಳಲ್ಲಿ ನಿಮ್ಮಲ್ಲಿ ಕೊರತೆಯುಂಟಾಗಿದೆ. ಆರೋಗ್ಯವು ತಕ್ಕಮಟ್ಟಿಗಿರುವುದಾದರೂ ದೇಹವು ಅಬಲವಾಗಿರುವುದು. ಸಂಸಾರದಲ್ಲಿ ಮೇಲಿಂದ ಮೇಲೆ ಕಷ್ಟಗಳು ಹೆಚ್ಚುತ್ತಿವೆ ಖರ್ಚಿನ ಬಾಯಿ ಕಟ್ಟುವಂತಿಲ್ಲ. ಇದರಿಂದ ಇತಿಕರ್ತವ್ಯತಾಮೂಢರಾದ ನೀವು ವಿವೇಕಶೂನ್ಯರಾಗುವಿರಿ. "ವಿವೇಕಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ। ಎಂಬಂತೆ ಬುದ್ಧಿಶೂನ್ಯರಾದವರಿಗೆ ಅಧಃಪತನವು ಅಂದರೆ ಸ್ಥಾನಚ್ಯುತಿ ನಿಶ್ಚಿತವು. ಅದರಿಂದ ಜನಾಪವಾದ ತಿರಸ್ಕಾರಗಳಿಗೆ ಗುರಿಯಾಗುವರು. ಆದಕಾರಣ ಆಪತ್ತು ಬಂದರೂ ಧೈರ್ಯದಿಂದಿದ್ದು ಕರ್ತವ್ಯವನ್ನು ನಿರ್ವಹಿಸತಕ್ಕದ್ದು. ಸರಿಯಾದ ಮಾರ್ಗದಲ್ಲಿ ಪ್ರವರ್ತಿಸಿದರೆ ನಿಮಗೆ ಉತ್ಪತ್ತಿಯು ಬಹಳ ಚೆನ್ನಾಗಿರುವುದು ಕಾರಣ, ದನಭಾಗ್ಯಾಧಿಪತಿಯು ಲಾಭದಲ್ಲಿ ಉಚ್ಚನಾಗಿರುವಾಗ ಚಿನ್ನಕ್ಕೆ ಪರಿಮಳವು ಸೇರಿದರೆ ಎಂತೋ ಅಂತಾಗುವುದು. ತಾ. 29-30-31 ಈ ದಿವಸಗಳಲ್ಲಿ ಅನಾರೋಗ್ಯ ಧನವ್ಯಯಗಳಧಿಕ.

ತುಂಗಭದ್ರ—ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಗಳ ಕಾಶೀ ವಿದ್ಯಾಪೀಠವಲ್ಲಿ 'ಭಿಷಕ್' ಪರೀಕ್ಷೆಗೆ ನಿಂತ ವಿದ್ಯಾರ್ಥಿಗಳ ಪೈಕಿ ಶೇಕಡಾ ೮೮ಮಂದಿ ತೇರ್ಗಡೆಹೊಂದಿರುವುದಲ್ಲದೆ ಶ್ರೀಗಳಾದ ಉಪ್ಪೂರು ಕೃಷ್ಣ ಶೆಟ್ಟಿ, ವೆಂಕಟಸುಬ್ಬಯ್ಯ, ವೆಂಕಟರಮಣ ಶಾಸ್ತ್ರಿ ಈ ಮೂವರು 'ಸೆಕೆಂಡ್ ಕ್ಲಾಸಿ'ನಲ್ಲಿ ತೇರ್ಗಡೆಹೊಂದಿರುತ್ತಾರೆ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

- ವಾಜೀಕರಣ ತೈಲ

ವೀರ್ಯವು ಪಕ್ವವಾಗುವದಕ್ಕೆ ಪೂರ್ವದಲ್ಲಿ ಭೋಗಮಾಡುವದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ ೧ಕ್ಕೆ ರೂ. 5—0—0

'ಕಾಮಶಾಸ್ತ್ರ'ಧರ್ಮಾರ್ಥ. ಪುಸ್ತಕವು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೩೬೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಮುಂದಾಗುವುದನ್ನು ಇಂದೇ ತಿಳಿಯಿರಿ.

ವಾರದ ಭವಿಷ್ಯ

(ತಾ 24-8-39ರಿಂದ ತಾ. 31-8-39ರ ವರೆಗೆ)

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ವಾರದ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ.
ಸಂ ಪ.]

ಮೇಷರಾಶಿ—

ಪದ್ಮಾಸೆಯಿಂದ ಕಲುಷಿತವಾದ ಸರೋವರದ ಜಲದಂತೆ ಮನಸ್ಸು ಸದಾ ವಿರೋಧಿಗಳ ಪೀಡೆಯಿಂದಲೂ ಅಭೀಷ್ಟವು ನಿಷ್ಫಲವಾಗುವುದರಿಂದಲೂ ಅಲ್ಲೋಲ ಕಲ್ಲೋಲವಾಗಿರುವುದು. ಈ ಭಾಗಕ್ಕೆ ನಿಮಗೆ ಸಂಭವಿಸಿದ ದೀರ್ಘಾಲಸ್ಯವೂ ಒಂದು ಕಾರಣವಾಗಿರುತ್ತದೆ. ನಿಮಗೆ ನಿಗದಿತ ಅಲ್ಪಸ್ವಲ್ಪ ಧನವೂ ಕೂಡ ಮಿತ್ರರ ಕಟಂಬದ ಮತ್ತು ಬಂಧುಗಳ ಮೂಲಕ ವ್ಯಯವಾಗುವುದು. ಸದ್ಯ ನೀವಾವ ವಿಷಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಡಿ. ಆದರೆ ಫಲವು ಮಾತ್ರ ನಿರೀಕ್ಷೆಯಂತೆ ಆಗದು. ಬಹಳ ಕಷ್ಟಸಾಧ್ಯವೆನಿಸಬೇಕಾಗಿದೆ. ದಾನಿಗೆ ಇದ್ದಷ್ಟೇ ಕಾಲುಚಾಚಬೇಕೆಂಬ ನಿಯಮವನ್ನು ನೀವು ಚೆನ್ನಾಗಿ ಬಲ್ಲಿರಾದರೂ ಪ್ರಕೃತ ನೀವದನ್ನು ಉಲ್ಲಂಘಿಸಬೇಕಾಗುವುದು. ತಾ 26ರಿಂದ 30ರ ವರೆಗಿನ ದಿನಗಳು ಇಷ್ಟಸಿದ್ಧಿಯಲ್ಲೂ ಆರ್ಥಿಕವಿಚಾರದಲ್ಲೂ ಉತ್ತಮವಾಗಿವೆ.

ವೃಷಭರಾಶಿ—

ಮಾಡಿದ ಸೇವೆ ಅಪರಾಧಕ್ಕೆ ಸಾಲದು ಎಂಬ ಗಾದೆಯಂತೆ ನಿಮಗೆ ಗುರು ಶುಕ್ರ ರಾಹುಗಳ ಬೆಂಬಲವಿದ್ದರೂ ಇತರ ಗ್ರಹರ ಪ್ರತೀಕಾರವು ಬಲವತ್ತರವಾಗಿರುವುದು. ಅದಕಾರಣ ಸಮುದ್ರದ ಅಲೆಗಳಂತೆ ಮೇಲಿಂದ ಮೇಲೆ ಚಿಂತಾಪ್ರಕರಣಗಳು ತಪ್ಪಲಾರವು. ಧನಬಲ ಸುಹೃದ್ಬಲಗಳಿಂದ ನೀವು ಅಜೇಯರಾಗಿದ್ದರೂ ಹಿಡಿದ ಕಾರ್ಯದಲ್ಲಿ ಜಯಶೀಲರಾಗುವಂತಿಲ್ಲವು. ಸ್ವದುರ್ವಿದಗ್ಧತೆಯಿಂದಾಗಿ ಮಾನಚ್ಯುತಿಯೂ ಶರೀರಾಲಸ್ಯ ಪೀಡೆಯಿಂದಾಗಿ ಧನವ್ಯಯವೂ ಅತೀವವಾಗುವುದು ಮಾತ್ರವಲ್ಲದೆ ಅಶಕ್ತರೂ ರೋಗಿಗಳ ಸಲುವಾಗಿಯೇ ಧನವನ್ನು ವ್ಯಯಿಸುವಿರಿ. ನೋಡಲಿಕ್ಕೆ ಮನಸ್ಸು ಖಿನ್ನವಾಗುವುದು. ಆದರೂ ವಾರಾಂತ್ಯದ ಮೂರು ದಿನಗಳಲ್ಲಿ ನೀವು ಇಷ್ಟಸಿದ್ಧಿಯ ದೆಸೆಯಿಂದ ಸಂತೋಷಪಡುವಿರಿ.

ಮಿಥುನರಾಶಿ—

ಸದ್ಯದ ಗ್ರಹಸ್ಥಿತಿಯಲ್ಲಿ ನಿಮ್ಮ ಭವಿಷ್ಯವು ಉತ್ತಮವಾಗಿಯೇ ಇರುವುದಾದರೂ "ಕರ್ಮಾಯತ್ತಂ ಫಲಂ ಪುಂಸಾಂ ಬುದ್ಧಿಃ ಕರ್ಮಾನುಸಾರಿಣೀ । ತಥಾಪಿ ಸುಧಿಯಾ ಭಾವ್ಯಂ ಸುವಿಚಾರ್ಯೈವ ಕುರ್ವತಾ ॥" ಎಂಬಂತೆ ಸದ್ಬುದ್ಧಿಗಳೂ ಸುಖದುಃಖಾದಿಗಳೂ ಕೂಡ ನರನ ಕರ್ಮಾಧೀನವಾಗಿರುವವು. ತಥಾಪಿ ಬುದ್ಧಿವಂತನಾದ ಮನುಷ್ಯನು ಪ್ರತಿಯೊಂದು ಕಾರ್ಯವನ್ನೂ ವಿಚಾರಪೂರ್ವಕವಾಗಿಯೇ ಮಾಡತಕ್ಕದ್ದು. ಉದ್ಯೋಗದಲ್ಲೂ ವ್ಯಾಪಾರದಲ್ಲೂ ರಾಜಕೀಯ ಕಾರ್ಯದಲ್ಲೂ ಮತ್ತು ಸೇವಾವೃತ್ತಿಯಲ್ಲೂ ಫಲವು ಉತ್ತಮ ತರವಾಗಿರುವುದು. ಆದರೂ ಕೆಲವೊಮ್ಮೆ ನಿಮ್ಮ ಕ್ರಿಯಾದೋಷದಿಂದಾಗಿ ಶತ್ರುಮೂಲಕ ಮೂಲಕ ಧನಹಾನಿಯ ಪ್ರಸಂಗವೊದಗಬಹುದಾದುದರಿಂದ ಕದ್ಯಾಗದಲ್ಲಿ ಜಾಗರೂಕರಾಗಿರಿ. ಕೋಪವನ್ನು ಹತೋಟಿಯಲ್ಲಿಟ್ಟುಕೊಳ್ಳಿರಿ. ತಾ. 26ರಿಂದ 30ರ ವರೆಗೆ ಸ್ವಲ್ಪ ಅನಿಷ್ಟಗಳು ಸಂಭವಿಸುವ ಚಿಹ್ನೆಗಳಿರುವುದರಿಂದ ಮುಂಜಾಗ್ರತೆ ವಹಿಸಿರಿ.

ಕರ್ಕಾಟಕರಾಶಿ—

ಕಡಿವಾಣವಿಲ್ಲದ ಕುದುರೆಯಂತಾಗಿರುವ ನಿಮ್ಮ ಮನಸ್ಸನ್ನು ಬಿಗಿಹಿಡಿಯುವದು ಬಹಳ ಕಷ್ಟವಾದೀತು. ಆತ್ಮ ವಿಶ್ವಾಸವೇ ನಿಮ್ಮಲ್ಲಿಲ್ಲದ ಮೇಲೆ ಹತ್ತು ಜನರಿಂದ ಕೂಡಿಕೊಂಡು ಹೋಗುವುದು ಸಾಗದ ವಿಷಯ. ಬುದ್ಧಿಬಲದಿಂದಾಗಿ ನೀವು ದುಡಿಯುವಿರಿ. ಆದರದನ್ನು ರಕ್ಷಿಸುವ ದಾರಿ ನಿಮಗೆ ತಿಳಿಯದಾಗಿದೆ. ಕರ್ಕಶವಾಣಿ ಮತ್ತು ದುರ್ಮನಸ್ಸಿನಿಂದ ಜನರೊಡನೆ ನಿಷ್ಕಾರ ಕಲಹಗಳು ಹುಟ್ಟುವವು. ಆಂತರಿಕ ಭಯವು ಅಧಿಕವಾಗಿರುವುದರಿಂದ ಕಾರ್ಯಗಳಲ್ಲಿ ವಿಜಯಗಳಿಸುವಂತಿಲ್ಲ. ಕಾರ್ಯವು ಕೊನೆಗಾಣುವಂತಿಲ್ಲ. ಶರೀರಾಲಸ್ಯವು ಹೆಚ್ಚುವುದು. ಹಲವಾರು ಬಗೆಯಿಂದ ಧನವ್ಯಯವಾಗುವುದರಿಂದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕುವಿರಿ. ಕೇಳದ ಮಾತನ್ನೂ ಕೆಲವೊಮ್ಮೆ ಕೇಳಬೇಕಾದ ಪ್ರಸಂಗಬರಬಹುದು. ಸಂಸಾರಸುಖವು ಪೂರ್ಣವಿದ್ದರೂ ಕಳತ್ರ ಕಲಹವು ತಪ್ಪುವಂತಿಲ್ಲ. ತಾ. 29, 30, 31 ಈ ದಿನಗಳು ನಿಮಗೆ ಹಿತಕರಗಳಲ್ಲವು.

ಸಿಂಹರಾಶಿ—

ಸದ್ಯದಲ್ಲಿನ ನಿಮ್ಮ ಗ್ರಹಬಲವು ಅತೀವ ಕಠಿಣವಾಗಿರುವುದರಿಂದಲೂ ಗುರ್ವನುಗ್ರಹದಿಂದ ಮುಕ್ತರಾದುದರಿಂದಲೂ ಕಾರ್ಯಾಕಾರ್ಯ ವಿಚಾರಶಕ್ತಿಯು ನಿಮ್ಮಲ್ಲಿ ಶೂನ್ಯವಾಗಿರುವುದು. "ಸರ್ವಸ್ಯೌಷಧಮಸ್ತಿ ಶಾಸ್ತ್ರವಿಹಿತಂ ಮೂರ್ಖಸ್ಯ ನಾಸ್ತ್ಯೌಷಧಂ" ಎಂಬ ನೀತಿವಚನದಂತೆ ಸರ್ವೋಪದ್ರವಗಳಿಗೂ ಶಾಸ್ತ್ರವಿಹಿತವಾದ ನಿವಾರಣೆಯಿರುವಲ್ಲಿ ಮೂರ್ಖ (ವಿವೇಕಶೂನ್ಯ)ನಿಗೆ ಯಾವೊಂದೂ ಔಷಧಿಯಿಲ್ಲವು. ಅದಕಾರಣ ಬೇರೆಯವರು ಬಲವಂತದಿಂದ ನಿಮ್ಮನ್ನು ಸರಿದಾರಿಗೆ ತರುವುದೆಂದರದು ಸದ್ಯಕ್ಕೆ ಆಕಾಶ ಕುಸುಮದಂತೆಯೇ ಸರಿ. ನಿಕೃಷ್ಟಗಳಾದ ನಿಮಗೆ ಭೋಗಾಭಿಲಾಷೆಗೇನೂ ಕಂಟಕವಿಲ್ಲವು. ಆರೋಗ್ಯ ವಿಚಾರವನ್ನು ಮಾತ್ರ ಮುಂಚಿತ ನೋಡಿಕೊಳ್ಳಿರಿ. ಬಲವತ್ತರಗಳಾದ ರೋಗಗಳಿಂದ ಪಾರಾಗುವದು ಬಹಳ ಕಷ್ಟ. ಹಣದ ವಿಚಾರಗಳು ಕ್ಷಣೇ ಕ್ಷಣೇ ಹೆಚ್ಚುತ್ತಿರುವವಾದರೂ ಸಂಪಾದನೆಯ ಮಾರ್ಗವು ಕಾಣದಾಗಿದೆ ತಾ 24, 25, 31 ಈ ದಿನಗಳಲ್ಲಿ ಕಾರ್ಯನಾಶ ಶೋಕ ಅಪಮೃತ್ಯುವೇ ಮೊದಲಾದ ಅನಿಷ್ಟಗಳು ಪ್ರಾಪ್ತವಾಗಬಹುದು.

ಕನ್ಯಾರಾಶಿ—

ನಿಮ್ಮ ಪಟ್ಟಿಗೆ ಈ ವಾರವು ಸಾಕಷ್ಟು ಉತ್ತಮವಾಗಿರುವುದು. ನಿಮ್ಮಲ್ಲಿರತಕ್ಕ ವಿದ್ಯಾಬುದ್ಧಿಗಳ ಬಲದಿಂದ ಸರ್ವಮಾನ್ಯರಾಗುವಿರಿ. ಮಹಾತ್ಮರ ಸ್ನೇಹ ಇಷ್ಟಸಿದ್ಧಿ ವಸನ ಭೂಷಣಗಳು ಅನಾಯಾಸವಾಗಿ ದೊರೆಯುವವು. ಪ್ರಾಕೃತಿಕ ಉಪದ್ರವದಿಂದ ಈಗ ಮುಕ್ತರಾಗುವಿರಿ. ವಿದ್ಯಾರ್ಥಿಗಳಿಗಂತೂ ಕಾಲವು ಅತ್ಯುತ್ತಮವಾಗಿರುವುದು. ಈ ಕಾಲದಲ್ಲೂ ನಿಮ್ಮ ಮೇಲೆ ಎರಡೆಂಟೆನಿಸತಕ್ಕವರೇನೂ ಕಡಿಮೆಯಿಲ್ಲವು. ಸಮಯವನ್ನು ಹೊಂಚುಹಾಕುತ್ತಿರುವರು. ಕಾಲುಜಾರಿದಲ್ಲಿ ತಲೆಮೇಲೆ ಕಲ್ಲಿಡಲು ಎಳ್ಳಷ್ಟೂ ಹಿಂಜರಿಯರು. ಸಂಸಾರದ ವಿಚಾರವಾಗಿ ಮನಸ್ಸಿಗೆ ಸ್ವಲ್ಪ ಶೋಕವುಂಟಾಗುವುದು. ಆರೋಗ್ಯವು ಸಂಪೂರ್ಣ ಉತ್ತಮವಿರದು. ತಾ. 29, 30, 31ಈ ದಿನಗಳು ಸರ್ವಾಭೀಷ್ಟ ಪ್ರದಗಳಾಗಿವೆ

ತುಲಾರಾಶಿ—

ಇಷ್ಟಾನಿಷ್ಟ ಗ್ರಹರಿಂದ ಮಿಶ್ರೀಭೂತವಾದ ಈ ವಾರದಲ್ಲಿ ಯಾವುದರಲ್ಲೂ ಅಧಿಕ್ಯವಿರದು. ಈಗ ಕಾಲಗತಿಯು ವಿಪರೀತ ಸ್ಥಿತಿಗೆ ಬಂದಿರುವುದರಿಂದ "ಅರ್ಜವಂ ಹಿ ಕುಟಿಲೇಷು ನ ನೀತಿಃ" ಎಂಬ ಲೋಕೋಕ್ತಿಯಂತೆ ವಕ್ರಬುದ್ಧಿಯುಳ್ಳ (ದುರ್ಜನ) ರಲ್ಲಿ ನ್ಯಾಯನೀತಿಯಿಂದ ವರ್ತಿಸುವುದು ನೀತಿಗೆ ವಿರೋಧವಾದುದು. ಹೃದಯದಲ್ಲಿ ಒಂದನ್ನೆಣಿಸಿ ಬಾಯಲ್ಲಿ ನಿಮಗೆ ಬೇಕಾದಂತೆ ಮಾತನಾಡುವವರ ಮಾತಿಗೆ ಮರುಳಾಗಿ ಪಟ್ಟಣ ಆಪತ್ತಿಗೆ ಗುರಿಯಾಗಲಿರುವಿರಿ. ವಿರೋಧಿಗಳಿಂದ ನಿಮ್ಮ ಮನೋವ್ಯಥೆಯು ಅಧಿಕವಾಗುವುದು. ಆದರೂ ಸನ್ಮಿತ್ರರ ಪೂರ್ಣ ಸಹಾನುಭೂತಿಯು ನಿಮಗಿರುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ಜಯ ಮತ್ತು ಧನವನ್ನೂ ಪಡೆಯುವಿರಿ. ಅಶ್ಮೀಯ ದೇಹದ ಸಲುವಾಗಿ ಮತ್ತು ಪ್ರಯಾಣದ ನಿಮಿತ್ತ ಸ್ವಲ್ಪ ಧನವ್ಯಯವಾಗುವುದಾದರೂ ನಿಮ್ಮ ಆರ್ಥಿಕ ಭಾಗವು ಉತ್ತಮವಾಗಿರುವುದು. ತಾ. 24-25-31 ಉತ್ತಮ.

ವೃಶ್ಚಿಕರಾಶಿ—

ನಿಮಗೀವಾರವು ಹಲವು ವಿಚಾರಗಳಲ್ಲಿ ಅತ್ಯುತ್ತಮವಾಗಿದೆ ಎಂದರೆ ತಪ್ಪಾಗಲಾರದು. ಪ್ರಕೃತ ನಿಮಗಾವ ತರನಾದ ಚಿಂತೆಯೂ ಇಲ್ಲವೆನಬಹುದು. ಆರಂಭಿಸಿದ ಕಾರ್ಯವು ನಿಮ್ಮಿಚ್ಛೆಗೆ ಅವಿರೋಧವಾಗಿ ಅನಾಯಾಸದಿಂದ ಕೊನೆಗೊಳ್ಳಲಿರುವುದು. ಕೈಬಿಟ್ಟುಹೋದ ಧನವೂ ಪುನಃ ನಿಮ್ಮನ್ನೇ ತಾನಾಗಿ ಸೇರುವುದು. ಶರೀರವು ಒಳ್ಳೇ ಆರೋಗ್ಯದಿಂದ ಕೂಡಿರುವುದು ವನಿತಾಸುಖಕ್ಕೆ ಕಡಿಮೆಯಾಗದು. ಶತ್ರುಜನರು ಮುಗ್ಧರಾಗುವರು. ಸಂಸಾರನೌಕೆಯು ಸುಖದಿಂದ ಗುರಿಯ ಕಡೆಗೆ ಸಾಗುತ್ತಿರುವುದು. ಆದರೂ ವಿದ್ಯಾರ್ಥಿಗಳಿಗೆ ಅಧ್ಯಯನ ವಿಚಾರಕ್ಕೆ ವಿಘ್ನಗಳಧಿಕವಾಗುವವು. ವಾಕ್ ಸಂಬಂಧವಾದ ಕಲಹವು ವಿಶೇಷತಃ ವ್ಯಾಪಾರಿಗಳಿಗೆ ಆಗಲಿರುವುದು. ತಾ. 24-25-30-31 ಈ ದಿನಗಳಲ್ಲಿ ಮಿತಭಾಷಿಯೂ, ಮಿತವ್ಯಯಿಯೂ ಆಗಿರುವುದೊಳ್ಳಿತು.

ಧನುರಾಶಿ—

ಭಾಗ್ಯಹೀನರಿಗೆ ಮೇಲಿಂದ ಮೇಲೆ ಕಷ್ಟನಷ್ಟಗಳೂ ದಿನದಿಂದ ದಿನಕ್ಕೆ ಹೀನಾವಸ್ಥೆಯೂ ಪ್ರಾಪ್ತವಾಗುವುದು ಲೋಕ ರೂಢಿ. ಈಗ ನಿಮ್ಮ ರಾಶಿಯನ್ನು ನೋಡುವಾಗಲೂ ನೀವು ಅತೀವ್ರ ಅದೃಷ್ಟಹೀನರಾಗಿ ಕಾಣುವಿರಿ. ಕಾರಣ ಕಷ್ಟಪಟ್ಟು ದುಡಿದರೂ ದಿನಗಳೆಯುವುದು ಬಹಳ ಕಷ್ಟವೆಂದೆನಿಸುವುದು. ಮನೆಯಲ್ಲಿ ಒಬ್ಬರಲ್ಲೊಬ್ಬರಿಗೆ ಶಾಂತಿ ತಪ್ಪದು. ಆಪ್ತಜನರು ಮಾತುಕೊಟ್ಟು ಮಿಥ್ಯೆಮಾಡುವರು. ಕೈಕೆಳಗಿನ ಜನರೂ ನಿಮ್ಮ ಮೇಲೆ ಅಧಿಕಾರ ನಡೆಸಲು ಹವಣಿಸುವರು. ಹಣದ ವಿಷಯವಾಗಿ ಕಲಹವಾಗುವುದು. ಇಂತಿರುವ ಸಮಯದಲ್ಲಿ ನಿದ್ರಾಹಾರಗಳು ನಿಮಗೆಲ್ಲಿಯಬೇಕು. ಇದರಿಂದ ದೇಹದಲ್ಲಿ ಪಿತ್ತವೂ ಪಿತ್ತವೂ ಅಧಿಕವಾಗಿದುಃಸ್ವಪ್ನಗಳೂ ಅನಾರೋಗ್ಯವೂ ಉಂಟಾಗುವವು. ಕಷ್ಟಜೀವಿಗಳಿಗೆ ತಾ. 24-25-29-30 ಸಾಮಾನ್ಯ ಉತ್ತಮವೆನಬಹುದು.

ಮಕರರಾಶಿ—

ಮನೋವಾಂಛೆಯಗಳು ಒಂದೇ ರೀತಿಯಾಗಿರದೆ ಒಂದೊಂದು ವಿಧವಾಗಿರುವುದರಿಂದ ನಿಮ್ಮಲ್ಲಿ ಯಾರಿಗೂ ವಿಶ್ವಾಸವಿಲ್ಲದಾಗಿದೆ. ಆದಕಾರಣ ದೈವವೇ ನಿಮ್ಮ ಮೇಲೆ ಮುನಿದಿರುವುದು. ಇದರಿಂದ ನಿಮಗಾವ ಕಾರ್ಯದಲ್ಲೂ ಏಳಿಗೆಯಿಲ್ಲವು. ಚಿನ್ನವನ್ನು ಮುಟ್ಟಿದರೂ ಅದು ಕಲ್ಲಾಗುವದು. ಮಿತ್ರಜನರೂ ಶತ್ರುಗಳಾಗುವರು. ಹೆಚ್ಚೇಕೆ ನಿಮ್ಮ ಆಪ್ತ ಬಂಧುಗಳೇ ನಿಮಗೆ ವಿರೋಧವಾಗಿ ಪ್ರತಿಕ್ರಿಯೆ ಹೂಡುವರು. ಕೈಹಿಡಿದಾಕೆಯೂ ನಿಮಗಿಲ್ಲದಾಗುವಳು. ಕೈಯಲ್ಲಿ ಕಾಸಿಲ್ಲ ಮೈಯಲ್ಲಿ ಮಾಂಸವಿಲ್ಲ ಎಂಬೀ ತೆರನಾದ ಅವಸ್ಥೆಗೆ ಬಂದು ಮುಟ್ಟುವಿರಿ. ಶುಕ್ರಾಚಾರ್ಯರ ದೃಷ್ಟಿಯೊಂದು ನಿಮ್ಮ ಮೇಲಿರುವುದರಿಂದ ತಾ. 26, 27, 28 ಈ ದಿನಗಳಲ್ಲಿ ಕಿಂಚಿತ್ಸನ ಲಾಭ ಇಷ್ಟಾನ್ನಭೋಜನ ಸಿಗಲಿದೆ.

ಕುಂಭರಾಶಿ—

ಸುಖೇಚ್ಛೆಗಳಿಂದ ಕೂಡಿ ಸಾಮಾನ್ಯ ಮಧ್ಯಮ ರೀತಿಗೆ ಬಂದಿರುವುದು ನಿಮ್ಮ ದೈವವು. ಇತ್ತೀಚಿನ ಕೆಲವು ಸನ್ನಿವೇಶಗಳಿಂದ ನಿಮ್ಮ ಪರಿಸ್ಥಿತಿಯು ದಿನೇ ದಿನೇ ಹ್ರಾಸವಾಗುತ್ತಾ ಬರುತ್ತಿದೆ. ಉತ್ಪತ್ತಿಯು ಕಡಿಮೆಯಾಗುತ್ತಾ ಬಂದಂತೆ ಖರ್ಚು ಏರುತ್ತಾ ಹೋಗುತ್ತಿದೆ. ಪಿತ್ತಾಧಿಕ್ಯದಿಂದ ಅನಾರೋಗ್ಯ ಕಣ್ಣುನೋವು ವಗೈರೆಗಳು ತಲೆದೋರಲಾರಂಭಿಸಿವೆ. ಆಗಾಗ ಪ್ರವಾಸಮಾಡಬೇಕಾಗಿ ಬಂದು ವಿಶೇಷ ಧನವ್ಯಯವಾಗುವುದು. ಸ್ತ್ರೀವಿಷಯಕವಾದ ಚಿಂತೆ ತತ್ಸಂಬಂಧವಾದ ಅನಿಷ್ಟಗಳಿಗೆ ಗುರಿಯಾಗುವಿರಿ. ಆದರೂ ಉದ್ಯೋಗದಲ್ಲಿ ಕೊರತೆಯಿಲ್ಲವು. ಕಷ್ಟಜೀವಿಗಳಿಗೆ ಇಚ್ಛಾಧಿಕವಾಗಿ ಧನಪ್ರಾಪ್ತಿಯಿದೆ. ಹಲವು ವ್ಯಾಧಿಗಳಿಂದೊಡಗೂಡಿದ ಸಂಸಾರವು ಚಿಂತಾಕ್ರಾಂತವಾಗಿರುವುದು. ಮುಂಗುಸಿಯನ್ನು ಕಂಡ ಸರ್ಪದಂತೆ ಶತ್ರುಜನರು ತಲೆಬಾಗುವರು ತಾ. 26-27-28 ಈ ದಿನಗಳಲ್ಲಿ ಆರೋಗ್ಯದಲ್ಲಿ ವೃದ್ಧಿಯೂ ವ್ಯಯದಲ್ಲಿ ಮಿತಿಯೂ ಇರಲಿ.

ಪುಟ ೧೯ ನೋಡಿರಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 ವಿ. ಪಿ. ಖರ್ಚು 0-8-0 ಪ್ರತ್ಯೇಕ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ನಕಲಿ ಮದ್ದುಗಳಿಗೆ ಮರುಳಾಗದೇದಿ ಮೋಸಹೋಗದಿರಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನು 'ಗೊನೊಕಿಲರ್' ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ದಾರಿಹೋಕನ ಡೈರಿ

ಭ್ರಾಂತರಿಗೆ ಡಾಕ್ಟರ್ ಬ್ರಂಟನರಂಥವರೇ ಪಾಠ ಕಲಿಸಬೇಕು

೦೦೦ ೦೦೦ ೦೦೦

ಬಿಹಾರಿನ ಹತ್ವಾ ಎಂಬ ಜಮೀನ್ದಾರಿಯ ಮಹಾರಾಜ ಬಹದೂರರೊಬ್ಬರು ತಮ್ಮ ಪ್ರೀತಿಯ ಮಡದಿಮಕ್ಕಳನ್ನು ಬಿಟ್ಟುಹೋಗಿ ಸನ್ಯಾಸಿಯಾಗಿ ಅತ್ಯಂತ ಸರಳಜೀವನ ನಡಿಸುವುದನ್ನು ಮಹತ್ವಾದ ಸಂಗತಿಯೆಂದು ಪ್ರಕಟಿಸಹತ್ತಿವೆ ಪತ್ರಿಕೆಗಳು. ಇವರು ತಿಂಗಳಿಗೆ ರೂ 2,000 ಎಲ್ಲೊವೆನ್ಸ್ ಪಡೆಯುತ್ತಾರಂತೆ. ಒಂದು ಪೈಎಲ್ಲೋವೆನ್ಸ್ ಕೂಡಾ ಇಲ್ಲದೆ ಹೆಂಡತಿ ಮಕ್ಕಳು ಮನೆಮಾರನ್ನೆಲ್ಲಾ ಬಿಟ್ಟು ದೇಶಾಂತರ ಹೋಗುವ ಸನ್ಯಾಸಿಗಳು ಲಕ್ಷಗಟ್ಲೆ ಇಲ್ಲವೆ ಹಿಂದೂದೇಶದಲ್ಲಿ!

೦೦೦ ೦೦೦ ೦೦೦

ಕಡಲೂರಲ್ಲಿ ಖಾಲಿಬಿದ್ದಿರುವ ಮದ್ರಾಸ್ ಕೌನ್ಸಿಲ್ ಸೀಟಿಗೆ ನಡೆದಿದೆ ಹೋರಾಟ, ಕಾಂಗ್ರೆಸ್, ಜಸ್ಟಿಸ್ ಮತ್ತು ಸನಾತನಿಸ್ಟ್ ಉಮೇದ್ವಾರಿಗಳೊಳಗೆ. ತಮಿಳುನಾಡು ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರೇ ನಿಂತಿದ್ದಾರೆ ಕಾಂಗ್ರೆಸ್ ಪರವಾಗಿ. ನೋಡಬೇಕು ಯಾರ್ಯಾರ ಹಣೆಬರಹ ಹ್ಯಾಗ್ಯಾಗುಂಟೆಂತ!

೦೦೦ ೦೦೦ ೦೦೦

ಕಾಂಗ್ರೆಸು ಹೋರಾಡುವ ಸಂಸ್ಥೆ. ಕ್ರಾಂತಿಕಾರಕ ಸಂಸ್ಥೆ. ಹೊರಗಣ ಹೋರಾಟವಿಲ್ಲದಾಗ ಒಳಗಣ ಹೋರಾಟ! ಹೊರಗೆ ಕ್ರಾಂತಿಮಾಡಲು ಅಸಾಧ್ಯವಾದಾಗ ಒಳಗೆ ಕ್ರಾಂತಿಮಾಡುವುದು. ಹೇಗೂ ಸಂಸ್ಥೆಯ ಗುಣವನ್ನು ಮಲಿನವಾಗಗೊಡದೆ ಉಜ್ವಲವಾಗಿರಿಸಬೇಕಲ್ಲವೇ? ಖಡ್ಗವನ್ನು ಒರೆಯೊಳಗೇನೇ ಇಟ್ಟರೆ ತುಕ್ಕು ಹಿಡಿದರೆ ಮತ್ತೆ?

೦೦೦ ೦೦೦ ೦೦೦

'ಕನ್‌ಸ್ಟಿಟ್ಯೂಶನ್, ಕನ್‌ಸ್ಟಿಟ್ಯೂಶನ್' ಎಂಬ ಶಬ್ದ ಈಗ ಎಲ್ಲೆಲ್ಲಿಂದಲೂ ಕೇಳಿಬರುವಾಗ ನನ್ನ ತಲೆ ಹೋಕತಲೆಗೂ ಒಂದು 'ಕನ್‌ಸ್ಟಿಟ್ಯೂಶನಲ್ ಪೈಂಟು' ಪಕ್ಕನೆ ಹೊಳೆಯಿತು ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳಿಂದ ನೆಟ್ಟಗೆ ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟು ಬಹುಪಕ್ಷದ ವಿಶ್ವಾಸಕ್ಕೆ ಪಾತ್ರರಾದವರು ರಾಷ್ಟ್ರಗೌರವ ಸುಭಾಸಬಾಬುಗಳು. ಅಂಥವರ ಮೇಲೆ ಕೇವಲ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರಿಂದ ಆರಿಸಲ್ಪಟ್ಟ ಪ್ರೆಸಿಡೆಂಟರು ಮತ್ತು ವರ್ಕಿಂಗ್ ಕಮಿಟಿಯವರು ಶಿಸ್ತು ಜ್ಯಾರಿಮಾಡುವುದಾದರೂ ಹೇಗೆ?

೦೦೦ ೦೦೦ ೦೦೦

ದಿವಂಗತ ದೇಶಬಂಧು ದಾಸರು ಮತ್ತು ಪಂಡಿತ ಮೋತಿಲಾಲರು ಕಾಂಗ್ರೆಸಿನೊಳಗೆ ಬಂಡಾಯವೆಬ್ಬಿಸಿ ಸ್ವರಾಜ್ಯ ಪಕ್ಷಸ್ಥಾಪಿಸಿ ಕಾಂಗ್ರೆಸಿನ ನಿರ್ಣಯಗಳಿಗೆ ವಿರೋಧವಾಗಿ ಪ್ರಚಾರಮಾಡಿದ್ದರು. ಪಂಡಿತ ಜವಾಹರಲಾಲರು ಪೂರ್ಣ ಸ್ವರಾಜ್ಯದ ಧ್ವಜವನ್ನೆತ್ತಿ ಹಿಡಿದು ಅದನ್ನು ಸಾಧಿಸಲೊಂದು 'ಇಂಡಿಪೆಂಡೆಂಟ್ ಲೀಗ್' ಎಂಬ ಪ್ರತ್ಯೇಕ ಲೀಗನ್ನೇ ಸ್ಥಾಪಿಸಿದ್ದರು. ಅವರ ಮೇಲೆಲ್ಲಾ ಶಿಸ್ತು ಜ್ಯಾರಿಯಾಗಲಿಲ್ಲ. ಶ್ರೀ. ಭೋಸರ ಮೇಲೆ ಮಾತ್ರ ಶಿಸ್ತು ಜ್ಯಾರಿಯೋ? ಎಂದು ಕೆಲವರ ಆಕ್ಷೇಪ.

೦೦೦ ೦೦೦ ೦೦೦

ಆಗ ಮರೆತು ಹೋಯಿತು. ಈಗ ನೆನಪಾಯಿತು ಯಾರಿಗಾದರೂ ತಾಳಕ್ಕೆ ತಕ್ಕಂತೆ ಮರವೆ ನೆನಪೆಂಗಿಲ್ಲವೇನ?

೦೦೦ ೦೦೦ ೦೦೦

ಖಾದಿ ನಿಯಮದಿಂದಾಗಿ ಕಾಂಗ್ರೆಸಿನೊಳಗೆ ಬಹಳವಾಗಿ ಸುಳ್ಳು ಮತ್ತು ವಂಚನೆ ಹಬ್ಬುವಂತಾಗಿದೆಯೆಂಬುದನ್ನು ಒಪ್ಪುತ್ತಾರೆ ಗಾಂಧಿಯವರು. ಇಲ್ಲವಾದರೆ ದಕ್ಷಿಣ ಕನ್ನಡ ಜಿಲ್ಲೆಯ ಈಗಣ ದೊಡ್ಡ ದೊಡ್ಡ ಕಾಂಗ್ರೆಸ್‌ಭಕ್ತರು, ಮನೆಯಲ್ಲಿ, ಕೋರ್ಟು ಅಥವಾ ಆಫೀಸಿನಲ್ಲಿ, ಸಾರ್ವಜನಿಕ, ಸಭೆಗಳಲ್ಲಿ ಮಂತ್ರಿಗಳೇ ಮೊದಲಾದವರ ಭೇಟಿಯ ಸಂದರ್ಭದಲ್ಲಿ, ಸ್ಪೆನ್ಸರ್ ಅಥವಾ ಮಿನರ್ವದಲ್ಲಿ ಯಾವ ರೀತಿಯಲ್ಲಿರುತ್ತಾರೆಂದು ಅವರ ಬೇರೆ ಬೇರೆ 'ಪೋಸ್' ಗಳ ಫೋಟೋ ತೆಗೆದು ಕಳುಹಿಸಬೇಕೆಂದು ಮನಸ್ಸು ಮಾಡಿದ್ದೆ ನಾನು ಗಾಂಧಿಯವರಿಗೆ

೦೦೦ ೦೦೦ ೦೦೦

ಈಗ ದೊಡ್ಡ ಗಾಂಧಿ ಭಕ್ತರುಗಳೆಂದರೆ ಇವರೇ ಹಳೆಯ ಕಾಂಗ್ರೆಸ್ ಕೆಲಸಗಾರರು ಎಲ್ಲಿಯಾದರೂ ಕಾಂಗ್ರೆಸನ್ನೋ ಕಾಂಗ್ರೆಸ್ ಮಂತ್ರಿಗಳನ್ನೋ ಸ್ವಲ್ಪ ಟೀಕಿಸಿದರೆ 'ಶಾಂತಂ ಪಾಪಂ, ಶಾಂತಂ ಪಾಪಂ' ಎಂದು ಕಿವಿಮುಚ್ಚಿಕೊಳ್ಳುವವರು. ಖಾದಿ ಹರಿಜನೋದ್ಧಾರ, ಮದ್ಯಪಾನ ನಿಷೇಧ ಮೊದಲಾದ ಗಾಂಧಿವಾದದಲ್ಲಿ ಕಾಂಗ್ರೆಸು ಅಧಿಕಾರಕ್ಕೆ ಬಂದೊಡನೆಯೇ ಒಮ್ಮೆಯೇ ಅತ್ಯಂತ ವಿಶ್ವಾಸಪಡೆದವರು. 'ದೇವರೇ ನನ್ನೀ ಮಿತ್ರರಿಂದ ನನ್ನನ್ನು ರಕ್ಷಿಸು!' ಎಂದು ಗಾಂಧಿಜಿಯವರು ಅನುನಿತ್ಯ, ರಾತ್ರಿಹಗಲು ಕ್ಷಣ ಕ್ಷಣ ಪ್ರಾರ್ಥಿಸಿಕೊಂಡರೂ ಪ್ರಯೋಜನವಾಗಲಾರದು. ಸುಳ್ಳು ವಂಚನೆಗಳನ್ನು ಅದೊಂದು ಲಲಿತ ಕಲೆಯನ್ನಾಗಿಯೇ ಮಾಡಿಕೊಂಡು ನಡೆಯುವವರಿಗೆ ಗಾಂಧಿಜಿಯವರು ಪ್ರಾರ್ಥಿಸಿದರೇನು? ಉಪವಾಸಬಿದ್ದು ಸತ್ತರೇನು?

೦೦೦ ೦೦೦ ೦೦೦

ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಹೋರಾಟದ ಎಚ್ಚರವೀಯುವ ಸಮಯವೀಗ ಬಂದಿಲ್ಲ ಎಂಬ ಸೂಚನೆಯ ಕುರಿತು ಮಂಗಳೂರಿನ ಸ್ಟೂಡೆಂಟ್ಸ್ ಯೂನಿಯನಿನಲ್ಲಿ ದೊಡ್ಡ ಚರ್ಚೆ ನಡೆದು 46 ಅನುಕೂಲ ಮತ್ತು 61 ಪ್ರತಿಕೂಲ ಮತಗಳಿಂದ ಬಿದ್ದುಹೋಗಿದೆ ಮೂಲಸೂಚನೆ. ಹಾಗಾದರೆ ಮಂಗಳೂರು ವಿದ್ಯಾರ್ಥಿಗಳ ಓಟು ಭೋಸರಿಗಾಯಿತು.

೦೦೦ ೦೦೦ ೦೦೦

ಸಿ. ಪಿ. ಸಿ. ಬಸ್ ಕಂಪೆನಿ ಮತ್ತು ದ. ಕ. ಮೋಟರ್ ಕೆಲಸಗಾರ ಸಂಘಗಳೊಳಗಣ ಬಿಕ್ಕಟವು ಗುಣಹೊಂದದ ರೋಗದಂತಾಗಿಹೋಗಿದೆ ದಿನೇ ದಿನೇ ಉಲ್ಬಣವಾಗುವಂತಿದೆ ಪರಿಸ್ಥಿತಿ. ಈ ರೋಗಕ್ಕೊಂದು ಔಷಧಿಯೇ ಇಲ್ಲವೇ? ಕೆಲಸಗಾರರೂ ಮ್ಹಾಲಕರೂ ಅನುನಿತ್ಯ ಹೋರಾಡುತ್ತಾ ಇದ್ದರೆ ಹೇಗೆ?

—ದಾರಿಹೋಕ



ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ಗ್ರಾಮು ನಂಬ್ರ 233/1938

R E P No. 33/1938

ಉಗ್ರಾಣಿ ಲಕ್ಷ್ಮಣಯ್ಯ—ವಾದಿ, ಅರ್ಜಿದಾರ ಮತ್ತು

ಶೇಕ್ ಅಲ್ಲಿ ಸಾಹೇಬ್, ಅಂಬಾರಪಳ್ಳಿ ಶೇಕ್ ಇಮಾಮು ಸ್ಯಾಬರ ಮಗ ಕಾಸರಗೋಡು ತಾಲೂಕು ಮಂಗಲ್ಪಾಡಿ ಗ್ರಾಮದಲ್ಲಿರುವವ } ಪ್ರತಿವಾದಿ ರೆಸ್ಪಾಂಡೆಂಟ್

ಮೇಲ್ಕಂಡ ಅನ್ ಲ್‌ಜ್ಯಾರಿಯಲ್ಲಿ ರೆಸ್ಪಾಂಡೆಂಟಿನ ಸ್ಥಿರಾಸ್ತಿ ಏಲಂಮಾಡವ ಉದ್ದೇಶ್ಯ ಹಾಜ್ರುಪಡಿಸಿದ ಏಲಂ ಇಸ್ತಿಹಾರು ಮಂಜೂರುಮಾಡುವ ಬಗ್ಗೆ, ಏಲಂಮಿನ ಸಮಯ ಅರ್ಜಿದಾರಗೆ ಪಾರ್ಟಿಕೆಯವರೆ ಅನುಮತಿ ಕೊಡಿಸಿ ವಾರಿನ ಹಣ ಡಿಕ್ರಿಯ ಹಣದಲ್ಲಿ ಮುಜ್ರೆಕೊಡಿಸುವ ಬಗ್ಗೆ, ಸದರೀ ಅನ್ ಲ್‌ಜ್ಯಾರಿಯು ತಾ॥ 5-9-1939 ನೇಲ್ಲು ತನಿಖೆಗೆ ಇಟ್ಟಿದೆ. ಆ ಕುರಿತು ರೆಸ್ಪಾಂಡೆಂಟಿಗೆ ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣ ಗಿಯದೆ

ಕಾಸರಗೋಡು, ತಾ. 16 8 1939 — **C Rama Rao**, ಅರ್ಜಿದಾರನ ವಕೀಲ.

ಪ್ರಕಟಣೆ.

ಮದ್ರಾಸು ಸಂಸ್ಥಾನದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ತಯಾರಾಗುತ್ತಿರುವ ಗುಡಿಸಲು ಕೈಗಾರಿಕೆ ಮತ್ತು ಇನ್ನಿತರ ಕೈಗಾರಿಕೆಗಳ ಪರಿಚಯವನ್ನು ಸಾರ್ವತ್ರಿಕ ಹರಡುವ ಉದ್ದೇಶದಿಂದ ಮದ್ರಾಸು ನಗರದಲ್ಲಿ ಒಂದು ವಸ್ತು ಪ್ರದರ್ಶನ ಸಂಸ್ಥೆಯು ಮದ್ರಾಸು ಸರಕಾರದ ನೇತೃತ್ವದಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವದಷ್ಟೆ. ನಮ್ಮ ಜಿಲ್ಲೆಯಲ್ಲಿ ತಯಾರಾಗುತ್ತಿರುವ ಅಂತಹ ಯಾವುದಾದರೂ ಕೈಗಾರಿಕೆಗಳ ಮಾದರಿ ಒಡವೆಗಳನ್ನು ಈ ವಸ್ತುಪ್ರದರ್ಶನ ಸಂಸ್ಥೆಗೆ ಕಳುಹಿಸಿಕೊಡಬಹುದು. ಇದರಿಂದ ಸಂಸ್ಥಾನದ ಯಾವ ಯಾವ ಪ್ರದೇಶಗಳಲ್ಲಿ ಎಂತೆಂಥ ಕೈಗಾರಿಕೆಗಳು ಆಗುತ್ತಿವೆ ಎಂಬುದು ಸಾಮಾನ್ಯ ಜನರಿಗೂ ತಿಳಿಯುವದಕ್ಕೆ ಅನುಕೂಲವಾಗುವದಲ್ಲದೆ ಅಂಥ ಸಾಮಾನುಗಳನ್ನು ಬೇಕಾದವರು ತರಿಸಿಕೊಳ್ಳುವುದಕ್ಕೂ ಅವಕಾಶವಾಗಬಹುದು.

ಗುಡಿಸಲು ಕೈಗಾರಿಕೆಗಳ ಬಗ್ಗೆ ಯಾವ ವಿಧದ ಫೀಸೂ ಕೊಡುವದು ಅಗತ್ಯವಿಲ್ಲವೆಂದು ಅಧಿಕಾರಿಗಳು ತಿಳಿಸುತ್ತಾರೆ. ಆದರೆ ಸಾಮೂಹಿಕ ಕೈಗಾರಿಕೆಗಳ ಸಂಗತಿಯಲ್ಲಿ ಸ್ಥಳದ ಆಕ್ರಮಣಕ್ಕನುಸರಿಸಿ ವಿವಿಧ ದರಗಳನ್ನು ಹೊರಿಸುವ ಏರ್ಪಾಡು ಮಾಡಿರುತ್ತಾರೆ.

ಯಾವುದಾದರೂ ಕೈಗಾರಿಕೆಗಳನ್ನು ನಡೆಯಿಸುತ್ತಿರುವ ನಮ್ಮ ಜಿಲ್ಲೆಯ ಜನರು ಈ ವಸ್ತುಪ್ರದರ್ಶನ ಸಂಸ್ಥೆಯ ಪೂರ್ಣ ಪ್ರಯೋಜನಕ್ಕೆ ಭಾಗಿಗಳಾಗಬಹುದೆಂದು ಈ ಮೂಲಕ ಸಕಲ ಜನರಿಗೆ ತಿಳಿಸಲಾಗುತ್ತದೆ

ಈ ಕುರಿತು ಅಗತ್ಯದ ವಿಶೇಷ ಮಾಹಿತಿಗಳನ್ನು ಮದ್ರಾಸಿನ ಡೈರೆಕ್ಟರ್ ಓಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್ ಇವರಿಗೆ ಬರೆದು ತರಿಸಿಕೊಳ್ಳಬಹುದು.

(Sd)K. Vittal Shetty, *President,*
South Kanara Dt Bo., office,
Mangalore, 8th August 1939

ವಾರದ ಭವಿಷ್ಯ

ಪುಟ ೧೮ರಿಂದ

ಮೀನರಾಶಿ—

ರವಿಕುಜಶುಕ್ರ ಸಕಲ ಗ್ರಹವೃಂದವೂ ನಿಮ್ಮ ಮೇಲೆ ಪ್ರತಿಕೂಲದೃಷ್ಟಿಯನ್ನಿಟ್ಟಿರುವುದರಿಂದ ಹಲವಾರು ವಿಚಾರಗಳಲ್ಲಿ ನಿಮ್ಮಲ್ಲಿ ಕೊರತೆಯುಂಟಾಗಿದೆ ಆರೋಗ್ಯವು ತಕ್ಕಮಟ್ಟಿಗಿರುವುದಾದರೂ ದೇಹವು ಅಬಲವಾಗಿರುವುದು ಸಂಸಾರದಲ್ಲಿ ಮೇಲಿಂದ ಮೇಲೆ ಕಷ್ಟಗಳು ಹೆಚ್ಚುತ್ತಿವೆ ಖರ್ಚಿನ ಬಾಯಿ ಕಟ್ಟುವಂತಿಲ್ಲ ಇದರಿಂದ ಇತಿಕರ್ತವ್ಯತಾಮೂಢರಾದ ನೀವು ವಿವೇಕಶೂನ್ಯರಾಗುವಿರಿ. "ವಿವೇಕಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ" ಎಂಬಂತೆ ಬದ್ಧಿಶೂನ್ಯರಾದವರಿಗೆ ಅಧಃಪತನವು ಅಂದರೆ ಸ್ಥಾನನಾಶವು ನಿಶ್ಚಿತವು ಅದರಿಂದ ಜನಾಪವಾದ ತಿರಸ್ಕಾರಗಳಿಗೆ ಗುರಿಯಾಗುವಿರಿ ಆದಕಾರಣ ಆಪತ್ತು ಬಂದರೂ ಧೈರ್ಯದಿಂದಿದ್ದು ಕರ್ತವ್ಯವನ್ನು ನಿರ್ವಹಿಸತಕ್ಕದ್ದು ಸರಿಯಾದ ಮಾರ್ಗದಲ್ಲಿ ಪ್ರವರ್ತಿಸಿದರೆ ನಿಮಗೆ ಉತ್ಪತ್ತಿಯು ಬಹಳ ಚೆನ್ನಾಗಿರುವುದು ಕಾರಣ, ಧನಭಾಗ್ಯಾಧಿಪತಿಯು ಲಾಭದಲ್ಲಿ ಉಚ್ಚನಾಗಿರುವಾಗ ಚಿನ್ನಕ್ಕೆ ಪರಿಮಳವು ಸೇರಿದರೆ ಎಂತೋ ಅಂತಾಗುವುದು. ತಾ. 29-30-31 ಈ ದಿವಸಗಳಲ್ಲಿ ಅನಾರೋಗ್ಯ ಧನವ್ಯಯಗಳಧಿಕ.

ತುಂಗಭದ್ರ—ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಗಳ ಕಾಶೀ ವಿದ್ಯಾಪೀಠದಲ್ಲಿ 'ಭಿಷಕ್' ಪರೀಕ್ಷೆಗೆ ನಿಂತ ವಿದ್ಯಾರ್ಥಿಗಳ ಪೈಕಿ ಶೇಕಡಾ ೮೮ಮಂದಿ ತೇರ್ಗಡೆಹೊಂದಿರುವುದಲ್ಲದೆ ಶ್ರೀಗಳಾದ ಉಪ್ಪೂರು ಕೃಷ್ಣ ಶೆಟ್ಟಿ, ವೆಂಕಟಸುಬ್ಬಯ್ಯ, ವೆಂಕಟರಮಣ ಶಾಸ್ತ್ರಿ ಈ ಮೂವರು 'ಸೆಕೆಂಡ್‌ಕ್ಲಾಸಿ'ನಲ್ಲಿ ತೇರ್ಗಡೆಹೊಂದಿರುತ್ತಾರೆ.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ ಕ್ರಯ ಡಬ್ಬಿಗಳ್ಕೆ ೧—೦—೦

- ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತು ಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಜನ್ಮಾರಭ್ಯವಾಗಿ ನಪುಂಸಕತ್ವವನ್ನು ಹೊಂದಿದವರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸ 1ಕ್ಕೆ ರೂ 3—0—0

'ಕಾಮಶಾಸ್ತ್ರ' ಧರ್ಮಾರ್ಥ ಪುಸ್ತಕ ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡುಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೨೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ನವಸೃಷ್ಟಿ

ಈ ವಿಭಾಗವಲ್ಲಿ ಪುಸ್ತಕಗಳ ವಿಮರ್ಶೆಯನ್ನು ಕೊಡಲಾಗುವುದು. ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳಿಸಬೇಕಾಗುವುದು.

ಸಂ. ಸ.

ಸುಳುವು ಹೊಳವು—ಮನೋಹರ ಗ್ರಂಥ ಮಾಲೆಯ ಆರನೆಯ ಕುಸುಮ. ಸಂಪಾದಕರು: ಶ್ರೀ. ಜ. ಬ. ಜೋಶಿ ಇವರು. ಕ್ರಯ ರೂ ೧. ಪ್ರಕಾಶಕರು.. ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ.

ಸುಳುವು-ಹೊಳವು ಇಪ್ಪತ್ತಾರು ಪ್ರಬಂಧಗಳ ಸಂಗ್ರಹ. ಕ್ರೌ. ೮. ಪತ್ರದ ೧೯೨ ಪುಟಗಳಷ್ಟು ವಿಸ್ತಾರವಿದೆ. ಮುದ್ರಣವು ಉತ್ತಮವಾಗಿದೆ ಇವರಲ್ಲಿ ಕನ್ನಡನಾಡಿನ ಹಲವು ಪ್ರಸಿದ್ಧ ಬರಹಗಾರರ ಲೇಖನಗಳಿವೆ. ಪ್ರೊ. ವಿ. ಕೆ. ಗೋಕಾಕರ ವಿಸ್ತಾರವಾದ ಮುನ್ನುಡಿಯಿದೆ. ಶ್ರೀಯುತರು ತಮ್ಮ ಮುನ್ನುಡಿಯಲ್ಲಿ ನವನಾಗರಿಕತೆಯ ಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯ ಪ್ರಕಾರವು ಲಘುಪ್ರಬಂಧವೆಂದು ಹೇಳಿರುವರು.

ಸುಳುವು-ಹೊಳವಿನ ಆರಂಭ ಲೇಖನವು ಶ್ರೀ. ಶ್ರೀನಿವಾಸರದು. ಶ್ರೀನಿವಾಸರ 'ಶಾಂತಿ'ಯಲ್ಲಿ ಜೀವನದ ನಡುಗಡ್ಡೆಯನ್ನು ದಾಟದ ಸಂಸಾರಿಯು ಪ್ರಪಂಚದ ಸುಖದುಃಖಗಳ ಗೊಂದಲದಲ್ಲಿ ಸಿಕ್ಕಿಬಿದ್ದು ಶಾಂತಿಯನ್ನು ಕಾಣದೆ ಹಂಬಲಿಸುವ, ಹೃದಯ ಮರುಕದ ಹೃದಯಾಕರ್ಷಕ ಚಿತ್ರವಿದೆ. ಏನಿದ್ದರೇನ? ಶಾಂತಿಯಿರದ ಮಾನವಗೆ-ಎಂಬ ಹೃದಯದ ಕೊರಗೂ ತಾತ್ವಿಕ ಭಾವನೆಯ ಪ್ರಭಾವವೂ ಅಂತಃಕರಣಕ್ಕೆ ಮುಟ್ಟುವಂತೆ 'ಶಾಂತಿ'ಯಲ್ಲಿ ವರ್ಣಿತವಾಗಿದೆ. ಶ್ರೀ. ಮುದುಂಚೆನ್ನರ 'ಇತಿಹಾಸ'ವೆಂಬ ಚಿಕ್ಕ ಪ್ರಬಂಧವು ವಿಚಾರಾತ್ಮಕವಿದ್ದು, ಸೊಗಸಾಗಿದೆ ವಿ. ಸೀ.ಯವರ 'ಮುಗಿಲುಗಳು' ಎಂಬ ಲೇಖನದಲ್ಲಿ ಅವರ ಭಾವನಾಶೀಲತೆಯು ಹೃದಯಸಂಗೀತದ ಉತ್ಕೃಷ್ಟತೆಯನ್ನು ಮನಗಾಣಬಹುದು. ಕಾಯಿಲೆಗಳು, ಎಂಬ ವಿಡಂಬನಾತ್ಮಕ ಪ್ರಬಂಧವು ರಸಭಾವಪೂರ್ಣ ವಿಚಾರವರ ಲೇಖನವಿದೆ. ಇದರ ಬರಹಗಾರರಾದ ಶ್ರೀ. ವಿ. ಸಿ.ಯವರು ಭಾವನೆಗಳನ್ನು ಸೊಗಸಾಗಿ ಮನಮುಟ್ಟಿಸುವ ಮಾತುಗಳಲ್ಲಿ ಬಣ್ಣಿಸಬಲ್ಲ ಉತ್ತಮ ಸಾಹಿತಿಗಳೆಂಬುದು ಒಡೆದು ಕಾಣುವುದು. ಶ್ರೀ. ಬೇಂದ್ರೆಯವರ, 'ನಾವಿನ ಕೂಡ ಸರಸ'ವು ಅತ್ಯುತ್ತಮವಾದ ಲೇಖನಗಳಲ್ಲೊಂದು ಇದರಲ್ಲಿ ಬೇಂದ್ರೆಯವರ ವಿಡಂಬನಾತ್ಮಕ ಭಾವಗೀತೆಯ ಸೊಬಗು ಪ್ರತಿಬಿಂಬಿತವಾಗಿರುವುದು. ಜಡಭರತರ 'ಇನ್ನೊಂದು ಪುರಾಣ'ವು ಬಹು ಸೊಗಸಾದ ಚಿಂತನಾತ್ಮಕ ಪ್ರಬಂಧವಾಗಿದೆ.

ಶ್ರೀ. ಅ. ನ. ಕೃಷ್ಣರಾಯರ 'ಆತ್ಮಹತ್ಯಾ ಯೋಗ'ವು ವಿಮರ್ಶಾತ್ಮಕವಾದ ಕಲ್ಪನಾಶಕ್ತಿಯ ಉತ್ಕಟತೆಯಿಂದ ಕೂಡಿದ ಪ್ರಬಂಧವಾಗಿದೆ. ಪ್ರತಿಭಾವಂತರ, ಕಲಾಸಿರಿಯ ಪಂಡಿತರ ಹರಟೆಯಿಂದ, ಸಾಹಿತ್ಯಕ್ಕೆ ಕಳೆಯೇರುವುದು. ರಸಿಕರಲ್ಲದ ತಿಳಗೇಡಿಗಳ ಹರಟೆಯಿಂದ ಕಲೆಯ ಕೊಲೆಯಾಗುವಂತಿದೆಯೆಂಬುದನ್ನು ಬಿಚ್ಚಿ ಕೋರರು ತಮ್ಮ ನೆನಸಿನ ಕನಸಿನಲ್ಲಿ ಕಂಡಿರುವಾಕೆಯಿಂದ ತಿಳಿದುಕೊಂಡಿರುವರೆಂದು ಅವರ ಹರಟೆಯಿಂದ ತಿಳಿಯಬಹುದಾಗಿದೆ. ವರ್ಣನೆಯು ಸ್ವಾರಸ್ಯವಾಗಿದೆ 'ವಿಧಿಯು ಯಮುನನ್ನೇ ಸೋಲಿಸಿತು' ಎಂಬ ಗೊರೂರ ರಾಮಸ್ವಾಮಯ್ಯನವರ ಪ್ರಬಂಧದಲ್ಲಿ ಸಮಾಜದ ಜೀವನ ವಿಚಾರವು ಬಹು ಸೊಗಸಾಗಿ ವಿಚಾರಪೂರ್ಣವಾಗಿ ವರ್ಣಿತವಾಗಿದೆ. ಕನ್ನಡ ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ಮುಂದಾಳುಗಳೆಲ್ಲೊಬ್ಬರಾದ ಶ್ರೀಯುತ ಕಾರಂತರು, 'ಮುಂದಾಳುಗಳು ಮುಂದಾಳುಗಳು' ಎಂಬ ವಿಡಂಬನಾತ್ಮಕ ವರ್ಣನೆಯಲ್ಲಿ ಸಮಾಜದ ಹಲ ಮುಂದಾಳುಗಳೆನಿಸುವವರ ನಿಜ ಚಿತ್ರವನ್ನು ಕಟುವಾಗಿ ವ್ಯಂಗ್ಯಭಾವದಿಂದ ಮನವಟ್ಟುವಂತೆ ಹೊರಗೆಡಹಿದ್ದಾರೆ ರಂ. ಶ್ರೀ. ಮುಗಳಿಯವರ, 'ನಾಡುಪಸ್ತು' ಎನ್. ಕೆ. ಕುಲಕರ್ಣಿಯವರ 'ಜೋಗದರ್ಶನ' ಶ್ರೀ. ಕೆ ಗೋಪಾಲಕೃಷ್ಣರಾಯರ,' ಕೆನ್‌ಸಿಂಗ್‌ಟನ್ ಪಾರ್ಕ,' ಮೊದಲಾದವುಗಳು ಸೊಗಸಾಗಿವೆ. ಶ್ರೀ ಎನ್. ನಾಡಿಗೇರ್, ಇವರ 'ಹೊಟೇಲುಗಳು' ಮತ್ತು ಶ್ರೀ. ಸ್ವಾಮಿಯವರ 'ಮಾನ ಮತ್ತು ಮರ್ಯಾದೆ' ಇವುಗಳು ಉತ್ತಮ ಶ್ರೇಣಿಯ ವಿಮರ್ಶಾತ್ಮಕ ಪ್ರಬಂಧಗಳಾಗಿವೆ.

ಒಟ್ಟಾರೆ ಹೇಳುವುದಾದರೆ, ಮನೋಹರ ಗ್ರಂಥ ಮಾಲೆಯವರ 'ಸುಳುವು-ಹೊಳವು' ಈ ಗ್ರಂಥಮಾಲೆಯ ಮನೋಹರವಾದ ಕುಸುಮವಿದೆ. ಇಂದಿನ ನಮ್ಮ ನಾಡಿನ ಸಾಹಿತಿಗಳ ವಿಚಾರ, ಪದ್ಧತಿ, ಭಾವನಾಶೀಲತೆ, ಪ್ರತಿಭಾ ಸಂಪನ್ನತೆಯನ್ನು ಕಾಣುವ ಕೈಗನ್ನಡಿ ಸುಳುವು-ಹೊಳವು ಎನ್ನಬಹುದು. ಸಾಮಾನ್ಯ ವಿಷಯ ವಿಚಾರಗಳನ್ನು ಸಾಹಿತ್ಯವಾಗಿ ಮಾರ್ಪಡಿಸಿ, ಕಲ್ಪನಾಶಕ್ತಿಯ ಪ್ರತಿಭೆಯಿಂದ, ಪ್ರಪಂಚದ ಒಳತಿರುಳನ್ನು, ಶಬ್ದಸೃಷ್ಟಿಯಲ್ಲಿ ಮೂಡಿಸುವ ಸಾಹಿತಿಗಳ ಸಾಹಸವನ್ನು ಸುಳುವು-ಹೊಳವಿನ ವಿವಿಧ ವಿಚಾರಗಳ ಪ್ರಬಂಧಗಳಿಂದ ಗ್ರಹಿಸಬಹುದಾಗಿದೆ.

N. S. S.

ದೇವೀ ಮಹಾತ್ಮೆ—ಶ್ರೀ. ಹುಲ್ಪೆಶಂಕರನಾರಾಯಣ ಸಾಮುಗರಿಂದ ಬರೆಯಲ್ಪಟ್ಟ ಪೌರಾಣಿಕ ಕಥೆಯು ತತ್ವ ವಿಚಾರದ ಚಿಕ್ಕ ಪುಸ್ತಕವಿದು. ಇದರಲ್ಲಿ ದೇವೀ ಮಹಾತ್ಮೆಯ ಪ್ರಥಮಾಧ್ಯಾಯದ ತತ್ವ ವಿಷಯಗಳನ್ನೇ ಕೊಡಲ್ಪಟ್ಟಿವೆ ಜ್ಞಾನ, ಭಕ್ತಿ, ವೈರಾಗ್ಯದಾಯಕವಾದೀ ತತ್ವ ವಿಚಾರವು ಭಗವದ್ಭಕ್ತರಿಂದ ಸ್ವೀಕೃತವಾದೀತೆಂದು ಹಾರೈಸಬಹುದು.

ಮತ ವೈಷಮ್ಯವೇ ಭಾರತದ ಅಧೋಗತಿಗೆ ಕಾರಣ—ಈ ಚಿಕ್ಕ ಪ್ರಕಟನೆಯೂ ಶ್ರೀ ಶಂಕರನಾರಾಯಣ ಸಾಮುಗರಿಂದ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ಶ್ರೀ. ಸಾಮುಗರು ಎಲ್ಲಾ ಮತಗಳ ಮೂಲತತ್ವವು ಒಂದೇ ಎಂಬುದನ್ನೂ ಮತ ವೈಷಮ್ಯಗಳಿಂದ ಭಾರತದ ಅಧೋಗತಿಯಾಯಿತೆಂಬುದನ್ನೂ ಸಂಕ್ಷೇಪದಲ್ಲಿ ವಿವರಿಸಿದ್ದಾರೆ. ಪ್ರಸಿದ್ಧ ಹರಿದಾಸರೆಂದು ಕೀರ್ತಿ ಪಡೆದ ಶ್ರೀ ಸಾಮುಗರಿಂದ ಇದಕ್ಕೂ ಉತ್ತಮವಾದ ಪ್ರಕಟನೆಗಳನ್ನು ಹಾರೈಸಬಹುದಾಗಿದೆ.

ರಾಯ್ ಮತ್ತು ರಾಯ್‌ವಾದ—

ಲೇಖಕರು-ಶ್ರೀ ಸ. ರಂ. ಕುಂಠಣಕರ ಮತ್ತು ಶ್ರೀ ಕೆ. ರಾಮರಾವ. ಪ್ರಕಾಶಕರು-ಶ್ರೀ ಆರ್. ವಿ. ಜಠಾರ, ಬಿ. ಎ., ಎಲ್.ಎಲ್ ಬಿ. ಕ್ರೌನ್ ೧೬ ಸೈಜಿನ ೨೫+೬೦+೧೨೨ ಪುಟಗಳು. ಬೆಲೆ ೦-೧೨-೦.

'೧೯ನೆಯ ಶತಮಾನದಲ್ಲಿ ಬಂಡವಾಳಗಾರರ ಉತ್ಕರ್ಷದ ಜೊತೆಗೆ ಪ್ರಬಲ ಮತ್ತು ಪ್ರಚಂಡ ಕೂಲಿಕಾರ ವರ್ಗವು ಅಸ್ತಿತ್ವದಲ್ಲಿ ಬಂದಿತು. ಅವರ ಮುಕ್ತತೆಯು ಸಲುವಾಗಿ ಹೊಸತಾಗಿ ನಿರ್ಮಿತವಾದ ತತ್ವಜ್ಞಾನವನ್ನೂ ಚಳವಳಿಯನ್ನೂ ಪ್ರಾರಂಭಿಸಿದಾತನು, ಈ ತತ್ವಜ್ಞಾನವನ್ನು ನಿರ್ಮಿಸಲು ಕಾರ್ಲಮಾರ್ಕ್ಸ ಎಂಬ ಯೋಗ ಪ್ರವರ್ತಕನು ಮುಂದೆ ಬಂದನು? ಈ ತತ್ವವನ್ನು ಭಾರತದಲ್ಲಿ ಪ್ರಚಾರಮಾಡಿ ಹೊಸ ಬೆಳಕನ್ನು ಕೊಡುವ ವ್ಯಕ್ತಿಯೆಂದರೆ ಕಾಮ್ರೇಡ್ ಎಂ. ಎನ್. ರಾಯರುಗಳು. ಇವರು ಹಿಂದೀ ರಾಜಕೀಯ ಪಟುಗಳಲ್ಲೊಬ್ಬರು. ಅವರ ತತ್ವಜ್ಞಾನದ ಪ್ರಚಾರವು ಅಷ್ಟೊಂದು ಆಗಲಿಲ್ಲ. ಈ ಪುಸ್ತಕವು ಅಂಥಾ ಪ್ರಚಾರಕ್ಕೆ ತುಂಬಾ ಸಹಕಾರಿಯಾಗಿದೆಯೆನ್ನಲು ಅಡ್ಡಿಯಿಲ್ಲ. ಈ ಪುಸ್ತಕಕ್ಕೆ ನಾಂದಿಕರು ಶ್ರೀ. ಎಂ. ಅ. ಡಾಂಗೆ, ಎಲ್. ಎಲ್. ಬಿ. ಎಂಬವರ. ಇಂಗ್ಲಿಷಿನಲ್ಲಿ ಒಂದು ಮುನ್ನುಡಿ ಬರೆದಿದ್ದಾರೆ ಕನ್ನಡ ಪುಸ್ತಕಕ್ಕೆ ಇಂಗ್ಲಿಷ್ ಮುನ್ನುಡಿಯ ಆವಶ್ಯಕತೆಯು ನಮಗೆ ತಿಳಿಯದು, ಇಂಗ್ಲಿಷ್ ಬಾರದ ವಾಚಕರಿಗಾಗಿ ಅದರ ಭಾಷಾಂತರವನ್ನಾದರೂ ಕೊಡಬಹುದಿತ್ತು. ಪ್ರಾರಂಭದಲ್ಲಿ ಎಂ ಎನ್. ರಾಯರುಗಳ ಮತ್ತು ಅವರ ಪತ್ನಿ ಎಲೆನ್ ರಾಯರುಗಳ ಭಾವಚಿತ್ರಗಳು ಕೊಡಲ್ಪಟ್ಟಿವೆ. ಇವು ಪುಸ್ತಕದ ಕಳೆಯನ್ನು ಹೆಚ್ಚಿಸಿವೆ.

ಈ ಪುಸ್ತಕದಲ್ಲಿ ಎಂ. ರಾಯರುಗಳು ರಷ್ಯದ ಮಾರ್ಕ್ಸಿಸಂ ತತ್ವವನ್ನು ನಮ್ಮ ದೇಶಕ್ಕೆ ತಕ್ಕಂತೆ ಬದಲಾಯಿಸಿ ಈ ತನಕ ಮಾಡಿದ ಪ್ರಯತ್ನಗಳ ಪರಿಪೂರ್ಣ ವಿವರಗಳು ಕೊಡಲ್ಪಟ್ಟಿವೆ. ರಾಯರ ತತ್ವವನ್ನು ಸಾಮಾನ್ಯನೂ ತಿಳಿಯುವಂತೆ ವಿವರಿಸಲಾಗಿದೆ. ಎಂ. ಎನ್. ರಾಯ ಯಾರು, ಹೇಗೆ ಕ್ರಾಂತಿಕಾರನಾದ, ಮಾರ್ಕ್ಸವಾದರೆಂದರೇನು? ಅದು ಹೇಗೆ ಬೆಳೆಯಿತು? ಹಿಂದೀ ಮಾರ್ಕ್ಸವಾದ ಚಳವಳಿಯ ಇತಿಹಾಸವೇನು ಮೊದಲಾದ ವಿವರಗಳನ್ನೆಲ್ಲಾ ತಿಳಿಯಬೇಕಾದರೆ ಈ ಪುಸ್ತಕವನ್ನು ಓದಬೇಕು. ಈ ದೃಷ್ಟಿಯಿಂದ ಇದು ವ ಕನ್ನಡಿಗರಿಗೆ ತುಂಬ ಸಹಕಾರಿಯಾಗಬಹುದು. ಅವಸರದಲ್ಲಿ ಪ್ರಿಂಟಾದುದರಿಂದಲೋ ಏನೋ ಈ ಪುಸ್ತಕದಲ್ಲಿ ತುಂಬಾ ಭಾಷಾದೋಷಗಳೂ ಮುದ್ರಾದೋಷಗಳೂ ಇವೆ. ಲೇಖಕರು ಮುಂದೆ ಪ್ರಕಟಿಸಲಿರುವ ಗ್ರಂಥಗಳಲ್ಲಿ ಈ ದೋಷಗಳು ಬಾರದಂತೆ ನೋಡುವರೆಂದು ನಿರೀಕ್ಷಿಸಬಹುದೇ? ಅಂತೂ ಈ ಪುಸ್ತಕವನ್ನು ಕನ್ನಡಿಗರೆಲ್ಲರೂ ತರಿಸಿ ಓದಿ ರಾಯರುಗಳ ತತ್ವವನ್ನು ತಿಳಿಯಬೇಕೆಂದು ಬಯಸುವೆವು.

ಸುಧಾರಣೆಯ ಯುಗದಲ್ಲಿ?—ಬೊಂಬಾಯಿಯಲ್ಲಿ ಹೊಸತಾಗಿ ಜನ್ಮತಾಳಿದ ನವಜ್ಯೋತಿ ಗ್ರಂಥಮಾಲೆಯ ಪ್ರಥಮ ಪುಷ್ಪ. ಲೇಖಕರು ಶ್ರೀ. ಯನ್. ಸಿ. ಪಾಲ್. ಪ್ರಕಾಶಕರು ಶ್ರೀ ಮಾಧವ. ಡೆಮ್ಮಿ ೧/೧೬ ಸೈಜಿನ ಪುಟ 19. ಬೆಲೆ 0—2—0.

ಇದೊಂದು ಚಿಕ್ಕ ಸಾಮಾಜಿಕ ಕತೆ. ದೇವದತ್ತನೆಂಬವನೇ ಇದರಲ್ಲಿ ಕಥಾನಾಯಕ. ಇವನು ವಿದ್ಯಾವಂತ ಹಾಗೂ ಸುಧಾರಕ. ಆದರೆ ನಿರುದ್ಯೋಗ ಮತ್ತು ಬಡತನದಿಂದ ಸಂಸಾರಸುಖದಲ್ಲಿ ಜುಗುಪ್ಸೆ ಬರುವುದು. ಹುಟ್ಟಿದ ಶಿಶು-ಹತ್ಯೆಗೂ ಅವನ ಮನಸ್ಸು ಮುಂದಾಗುವುದು. ಇಷ್ಟೇ ಇದರ ಕಥಾವಸ್ತು. ಅದು ಅಸ್ತವ್ಯಸ್ತವಾಗಿ ಪೋಣಿಸಲ್ಪಟ್ಟಿದೆ ಮುಂದಿನ ಪುಸ್ತಕಗಳು ಇದಕ್ಕಿಂತ ಉತ್ತಮವಾಗಿ ಹೊರಬೀಳಬಹುದೆಂದು ಹಾರೈಸುವೆವು. ಮುಂಬಯಿ ಕನ್ನಡಿಗರು ಇದಕ್ಕೆ ತಕ್ಕ ಪ್ರೋತ್ಸಾಹಕೊಡದಿರಲಾರರೆಂದೇ ನಂಬಿಕೆ.

PIGMY DEPOSIT SCHEME

Special thrift deposit and unique feature of our Bank. t will enable you to build a fortune for the rainy day. It is a fountain of happiness.

Further particulars can be had from

The Canara Industrial & Banking Syndicate, Ltd.

UDIPI, (S. India.)

ಲೈಬ್ರರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ **ದೊರೆಯುತ್ತವೆ**

ಕೆಟಲಾಗಿಗೆ ಬರೆಯಿರಿ.

ಪಿ. ಎ. ಉಪಾಧ್ಯಾಯ.
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

ಪ್ರಕಟಣೆ.

ಮೂಡಬಿದ್ರೆ ಲೋಕಲ್ ಫಂಡ್ ಆಸ್ಪತ್ರೆಯ ಬಡರೋಗಿಗಳ ಸಹಾಯಕ ನಿಧಿ.

ಮೂಡಬಿದ್ರೆಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧವಾಗಿದೆ. ಈ ಸಣ್ಣ ಪಟ್ಟಣಕ್ಕೆ ಸಂಬಂಧಪಟ್ಟ ಸುಮಾರು 50 ಹಳ್ಳಿಗಳಿವೆ. ಇಲ್ಲಿ ಪ್ರಕೃತ ಇರುವ ಲೋಕಲ್ ಫಂಡ್ ಆಸ್ಪತ್ರೆಗೆ ಜನರು ಬಹಳ ದೂರದ ಹಳ್ಳಿಗಳಿಂದ ಔಷಧಿಗಾಗಿ ಬಂದು ತುಂಬಾ ಪ್ರಯೋಜನ ಪಡೆಯುತ್ತಿರುವರು. ಬಡಜನರು ಎಷ್ಟೋ ದೂರದಿಂದ ಬಂದು ಔಷಧಿಯ ಪ್ರಯೋಜನ ಹೊಂದಿದರೂ ಇಲ್ಲಿಯೇ ಇರಬೇಕಾದ ಸಂದರ್ಭದಲ್ಲಿ ಕಟ್ಟೋಣಗಳಿಲ್ಲ. ಅನುಪಾನದ ವ್ಯವಸ್ಥೆಗಳಿಲ್ಲ. ಇತರ ಅನುಕೂಲತೆಗಳಿಲ್ಲ. ಸೆಂಗಸರಿಗೆ ಹೆರಿಗೆ ಗೃಹಗಳಿಲ್ಲ. ಆರೈಕೆ ನೋಡುವ ಅನುಕೂಲತೆಗಳಿಲ್ಲ. ಸಲಕರಣೆ ಸೌಕರ್ಯಗಳಿಲ್ಲ.

ಜಿಲ್ಲೆಯ ಇತರ ಕಡೆಗಳಲ್ಲಿಯ ಆಸ್ಪತ್ರೆಗಳನ್ನು ಅಲ್ಲಲ್ಲಿಯ ಪ್ರಮುಖ ಮಹನೀಯರು ತನು, ಮನ ಧನಾದಿಗಳಿಂದ ಅಭಿಮಾನ ಪೂರ್ವಕ ಉತ್ತಮ ಸ್ಥಿತಿಗೆ ಮಾರ್ಪಡಿಸಿಕೊಂಡಿರುವರು. ಆದರೆ ಮೂಡಬಿದ್ರೆಯು ಮಾತ್ರ ಇಂತಹ ಸಾರ್ವಜನಿಕ ಸೌಕರ್ಯವನ್ನು ಒದಗಿಸಿಕೊಂಡಿಲ್ಲ ಎಂಬುದು ಬಹಳ ಶೋಚನೀಯ.

ಆದುದರಿಂದ ಪ್ರಕೃತ ಮೂಡಬಿದ್ರೆ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಒಂದು ಹೆರಿಗೆ ಗೃಹವೂ, ಬಡ ಒಳರೋಗಿಗಳ ಸೌಕರ್ಯಕ್ಕೋಸ್ಕರ ಒಂದು ವಸತಿ ಗೃಹವೂ ಅಗತ್ಯ ಬೇಕಾಗಿವೆ. ಈ ಕಟ್ಟೋಣಗಳಿಗೋಸ್ಕರವೂ, ಬಡರೋಗಿಗಳ ಅನುಪಾನ ವ್ಯವಸ್ಥೆಗಳಿಗಾಗಿ ಬೇಕಾಗುವ ಸಹಾಯ ದ್ರವ್ಯಕ್ಕೋಸ್ಕರವೂ "ಬಡರೋಗಿಗಳ ಸಹಾಯ ನಿಧಿ" ಎಂಬ ಒಂದು ಫಂಡನ್ನು ಏರ್ಪಡಿಸಿಯಿದೆ. ಉದಾರಿಗಳಾದ ಮಹನೀಯರು ತನು, ಮನ, ಧನಾದಿಗಳಿಂದ ಹೃತ್ಪೂರ್ವಕ ಸಹಕರಿಸಬೇಕಾಗಿ ವಿನಂತಿ.

ಎಲ್ಲಾ ಪತ್ರವ್ಯವಹಾರಗಳನ್ನೂ ಸಹಾಯದ್ರವ್ಯವನ್ನೂ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

ಧರ್ಮಸಾಮ್ರಾಜ್ಯಯ್ಯ, ಅಧ್ಯಕ್ಷ.
ಬಡರೋಗಿಗಳ ಸಹಾಯಕನಿಧಿ, ಮೂಡಬಿದ್ರೆ.

Renowned Sisu Toilets perfumers require Agents. Attractive commission. Apply SISU 1st Floor, Rahimtoola House, Homji Street, Sir Pherozshah Mehtha Road, Fort, Bombay

ಮೈಸೂರು ಕಾಂಗ್ರೆಸ್ ಮುಂದಾಳುಗಳ ದಸ್ತಗಿರಿ

ಸಂಸ್ಥಾನದಲ್ಲಿ ಅಶಾಂತಿಯು ತಲೆದೋರುತ್ತಿದೆ.

(ನಮ್ಮ ಮೈಸೂರು ಪ್ರತಿನಿಧಿಗಳಿಂದ)

ಅಖಿಳ ಮೈಸೂರು ಕಾಂಗ್ರೆಸ್ ನಿರ್ಣಯದಂತೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರು, ವರ್ಕಿಂಗ್ ಕಮಿಟಿ ಸದಸ್ಯರೊಂದಿಗೆ ಸಂಸ್ಥಾನದಾದ್ಯಂತವೂ ಪ್ರವಾಸಮಾಡಿ, ಕಳೆದ 11ನೇ ತಾ. ರಾತ್ರಿ ಕೋಲಾರದ ಚಿನ್ನದ ಗಣಿಗೆ ಆಗಮಿಸಿದರು. ಆದರೆ ಅಲ್ಲಿಯ ಡಿ ಮ್ಯಾ.ರು ಪೋಲಿಸ್ 3ಂ ನೆ ಪ್ರಕಾರ ಒಂದು ಆಜ್ಞೆ ಹೊರಡಿಸಿ "ಕೋಲಾರದ ಚಿನ್ನದಗಣಿ ಪ್ರಾಂತ್ಯದಲ್ಲಿ ಶ್ರಮಜೀವಿಗಳು ಜಾಸ್ತಿಯಿರುವುದರಿಂದ, ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡಿದರೆ, ಶ್ರಮಜೀವಿಗಳು ಉದ್ರೇಕಗೊಳ್ಳುವರೆಂಬ ಅರ್ಥಬರುವ ರೀತಿಯಲ್ಲಿ" ಕಾಂಗ್ರೆಸ್ ಮುಂದಾಳುಗಳ ಮೇಲೆ ಜಾರಿಮಾಡಿಸಿದರು ಇಷ್ಟಲ್ಲದೆ ಅಲ್ಲಿಯ ಪೊ. ಸೂ.ರು ಮತ್ತೊಂದು ಆಜ್ಞೆ ಹೊರಡಿಸಿ, ಕಾಂಗ್ರೆಸ್ ಮುಂದಾಳುಗಳು 24 ಗಂಟೆಯೊಳಗೆ ಆ ಪ್ರದೇಶದಿಂದ ಹೊರಡಬೇಕೆಂದರು. ಆದರೆ ಕಾಂಗ್ರೆಸಿನವರು ಈ ಆಜ್ಞೆಗಳಿಗೆ ಹೆದರದೆ, ಅದನ್ನು ಉಲ್ಲಂಘಿಸಿ ಭಾಷಣಮಾಡಿಯೇ ಬಿಟ್ಟರು ಸರಿ ಇವರ ಮೇಲೆ ಶ್ರೀ ಹೆಚ್ ಸಿ. ದಾಸಪ್ಪ (ಮೈ. ಕಾಂ ಅಧ್ಯಕ್ಷ) ಶ್ರೀ ಕೆ. ಟಿ. ಭಾಷ್ಯಂ, ಶ್ರೀ ಕೆ ಸಿ ರೆಡ್ಡಿ ಮತ್ತು ಇನ್ನಿತರ ಒಂಭತ್ತು ಕಾಂಗ್ರೆಸ್ ಮುಂದಾಳುಗಳು ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟರು.

ಇವರ ದಸ್ತಗಿರಿ ಸುದ್ದಿಯು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಕಾಡ್ಗಿಚ್ಚಿನಂತೆ ಹಬ್ಬಿತು. 'ನವಯುಗ'ದ ಬಾತ್ಮೀದಾರರಿಗೆ 15ನೇ ತಾ. ಬೆಳಿಗ್ಗೆ 6ಘಂಟೆಗೋಸ್ಕರ ಎಲ್ಲರಿಗಿಂತಲೂ ಮುಂಚೆ ಫೋನ್ ಮೂಲಕ ಸುದ್ದಿ ಗೊತ್ತಾಗಲು ರಾಜಧಾನಿಯಲ್ಲೆಲ್ಲಾ ತಿಳಿಸಿದರು ಶ್ರೀ. ದಾಸಪ್ಪನವರು ತಮ್ಮ ಐವಜಿನಲ್ಲಿ ಶ್ರೀ. ಟಿ. ಸಿದ್ಧಲಿಂಗಯ್ಯನವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಆದರೆ ಶ್ರೀ ಸಿದ್ಧಲಿಂಗಯ್ಯನವರು ಹುಕ್ಕೇರಿಯಲ್ಲಿ, ಕ ಯಿಲೆಯಿಂದ ನರಳುತ್ತಿರುವುದರಿಂದ ಸಾ ಚೆನ್ನಯ್ಯನವರು ಹಂಗಾಮಿ ರಾಷ್ಟ್ರಪತಿಗಳಾಗಿದ್ದಾರೆ ಶ್ರೀ. ಸಿದ್ಧಲಿಂಗಯ್ಯನವರು ಆದಷ್ಟು ಬೇಗ ಬರಬೇಕೆಂದು ಕೋರಲಾಗಿದೆ ಕಾಂಗ್ರೆಸ್ ಮುಂದಾಳುಗಳ ದಸ್ತಗಿರಿ ಪ್ರಯುಕ್ತ ಸಂಸ್ಥಾನದಾದ್ಯಂತವೂ ಶಿಸ್ತಿನಿಂದ ಹರತಾಳ. ಬಹಿರಂಗ ಸಭೆನಡೆದು, ಸರ್ಕಾರದ ದಬ್ಬಾಳಿಕೆ ಖಂಡಿಸುವ ಠರಾವು ಮಾಡಲಾಯಿತು. ಇವರ ದಸ್ತಗಿರಿಯಿಂದ ಸಂಸ್ಥಾನದಲ್ಲಿ ಅಶಾಂತಿ ತಲೆದೋರಿ, ಪುನಃ ಹೋರಾಟವು ಪ್ರಾರಂಭವಾಗಬಹುದು.

ಮುಖಂಡರುಗಳಿಗೆ ಶಿಕ್ಷೆ.

ದಸ್ತಗಿರಿಮಾಡಿದ ಮುಖಂಡರುಗಳನ್ನು ಕೋಲಾರದ ಸ್ಪೆಶಲ್ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಿಲ್ಲಿಸಿದ ಮೇಲೆ, ವಿಚಾರಣೆ ನಡೆದು ಹನ್ನೊಂದು ಜನರಿಗೆ 3 ತಿಂಗಳು ಮತ್ತು ಇಬ್ಬರಿಗೆ 2 ತಿಂಗಳು ಕಠಿಣ ಸಜಾ ವಾಯಿತು ಇವರುಗಳೆಲ್ಲರೂ ಸಂತೋಷದಿಂದ ಜೈಲಿಗೆ ತೆರಳಿದರು

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರ, ತಾ 21 8 39.

ಮೆಡಿಕಲ್ ಸ್ಕೂಲ್— ಬೆಂಗಳೂರಿನಲ್ಲಿರುವ ಮೆಡಿಕಲ್ ಸ್ಕೂಲನ್ನು ಮುಚ್ಚುತಲು, ಮೈಸೂರು ವಿಶ್ವವಿದ್ಯಾನಿಲಯದವರು ಯೋಚಿಸುವರಂತೆ

ಉಪದೇಶ ಭಾಷಣ— ಈ ಬಾರಿ ನಡೆಯುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣವನ್ನು ಇಂಡಿಯಾ ಸರ್ಕಾರದ ನ್ಯಾಯ ಸದಸ್ಯರಾದ ಸರ್ ಯನ್. ಯನ್ ಸರ್ಕಾರರವರು ಮಾಡುವರಂತೆ

ಶ್ರೀ ತಿಮ್ಮಾರೆಡ್ಡಿಗಳ ದಸ್ತಗಿರಿ— ಕಾಂಗ್ರೆಸ್ ಮುಂದಾಳುಗಳಾದ ಶ್ರೀ. ಯನ್ ಸಿ. ತಿಮ್ಮಾರೆಡ್ಡಿಗಳನ್ನು ರಾಜದ್ರೋಹಕರವಾದ ಭಾಷಣ ಮಾಡಿದರೆಂಬ ಆಪಾದನೆ ಮೇರೆ ಕೋಲಾರದ ಪೋಲೀಸರು, ಬೆಂಗಳೂರಿನಲ್ಲಿ ದಸ್ತಗಿರಿಮಾಡಿ, ಕೋಲಾರದ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದ್ದಾರೆ. ಈ ದಿನ ವಿಚಾರಣೆ ನಡೆಯಲಿದೆ

ಅಖಿಲ ಬಲಿಜ ಸಮ್ಮೇಳನ— ನಿಲ್ಲಿಂದ ಸಮ್ಮೇಳನವೊಂದು, ನಿನ್ನೆಯ ದಿನ ಕೋಲಾ

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಒಂದು ಲಿಖಿತ ಹೇಳಿಕೆಯಲ್ಲಿ "ತಾವುಗಳು ಭಾಷಣಮಾಡುವುದಕ್ಕಿಂತ ಮುಂಚೆಯೇ ಪೋಲೀಸರಿಂದ ದಸ್ತಗಿರಿಯಾದ ವನ್ನು" ಖಂಡಿಸಿದ್ದಾರೆ. ಈ ನಿಜಾರವಾಗಿ ಬಹು ಜವಾಬ್ದಾರಿಯುಳ್ಳವರನ್ನೂ, ಅರಿತು ಸುರಿತರವರನ್ನೂ ನವಯುಗದ ಪ್ರತಿನಿಧಿಗಳು ಭೇಟಿಮಾಡಿ ಕೇಳಲು ಸರ್ಕಾರದವರು ಈ ರೀತಿ ದಸ್ತಗಿರಿ ಮಾಡಿದ್ದು ಶುದ್ಧ ಅನ್ಯಾಯವೆಂದು ಅಭಿಪ್ರಾಯಪಟ್ಟಿದ್ದಾರೆ

ರದ ರಾಜಿರಸ್ತೆ ಪಾಠಶಾಲೆಯಲ್ಲಿ ನಡೆಯಿತು ಪದ್ಮಾಸನ ನೇಯರ್ ಶ್ರೀ ವೆಂಕಟಪ್ಪ ರವರ ಮುಂದಾಳು ಇವರ ಪ್ರಾರಂಭೋತ್ಸವವನ್ನು ನಡೆಸಿದರು, ಶ್ರೀ. ಜಿ ಲಕ್ಷ್ಮಣಯ್ಯನವರು ಅಧ್ಯಕ್ಷತೆವಹಿಸಿದ್ದರು ಸ್ವಾಗತ ಭಾಷಣ ನಡೆಯಿತು.

ಮೈಸೂರು ಪ್ರಜಾಪರಿಷತ್ತು— ವೇಲ್ಲಂದ ಪರಿಷತ್ತಿನ ಸಭೆ, ಕಳೆದ ಬುಧವಾರ ... ನಡೆಯಿತು ಶ್ರೀ. ಡಿ ಹು ಟಿ ಚೆನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು ಮ್ಯಾ|| ಡಿ| ಎಂ| ಅಧ್ಯಕ್ಷರು, ಶ್ರೀ. ಬಿ. ಯಸ್. ಭಷ್ಯಂ ಮತ್ತು ಇತರರು ಮಾತನಾಡಿದರು.

ರಜಾಕೊಡಲಾಗಿದೆ— ಇದೇ ಮಾಹೆ27 ತಾ. ಶ್ರೀಮಾನ್ ಮಹಾರಾಜರು ಮಂತ್ರ್ಯಕ್ಕೆ ಭೇಟಿಕೊಟ್ಟ ನೂತನ ಭವನವನ್ನು ಮತ್ತು 9 ನೇ ಜಿಲ್ಲೆಯ ಪ್ರಾರಂಭೋತ್ಸವ ನಡೆಸುತ್ತಾರೆ. ಆದ್ದರಿಂದ ತಾ 26ನೇ ಶನಿವಾರ ಮಧ್ಯಾಹ್ನದ ಸರ್ಕಾರಿ ಸಂಸ್ಥೆಗಳಿಗೆ ರಜಕೊಡಲಾಗಿದೆ

ಶ್ರೀ ಸುಭಾಸಚಂದ್ರ ಭೋಸರಿಗೆ ಬೆಂಬಲ— ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ. ಯನ್ ಶ್ರೀನಿವಾಸ ಮೂರ್ತಿಗಳ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಘದಲ್ಲಿ ನಡೆದ ಒಂದು ಚರ್ಚಾಗೋಷ್ಠಿ (Debate) ಯಲ್ಲಿ ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಬಾಬೂಜೀ ... ಮೇಲೆ ಕೈಕೊಂಡಿರುವ ಶಿಸ್ತಿನ ಕ್ರಮವನ್ನು ಖಂಡಿಸುವ ಮತ್ತು ಶ್ರೀ ಬೋಸರಿಗೆ ಬೆಂಬಲವಿತ್ತುದು ಚರ್ಚೆಯಲ್ಲಿ ಅನೇಕ ಯುವಕರು ಮಾತನಾಡಿದರು ಇದನ್ನು ನೋಡಿದಲ್ಲಿ ವಿದ್ಯಾರ್ಥಿ ಯುವಕರು ಭೋಸರನ್ನು ಹಿಂಬಾಲಿಸುವರೆಂದರೆ ತಪ್ಪಾಗಲಾರದು

ವೃತ್ತಪತ್ರಿಕಾ ಮಸೂದೆ ಸಭೆ— ಮೇಲ್ಕಂಡ ಸಮಿತಿಯು ನಡೆದು ಮೈಸೂರು ವೃತ್ತಪತ್ರಿಕೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಚರ್ಚಿಸಲಾಯಿತು,

ಉಪಾಧ್ಯಕ್ಷಿಣಿ— ಮೈಸೂರು ಡಿ. ಬೋ ಸಭೆಯೊಂದು ನಡೆದು, ಶ್ರೀಮತಿ ಡಿ ನಾಕಮ್ಮನವರನ್ನು ಡಿ. ಬೋ. ಗೆ ಉಪಾಧ್ಯಕ್ಷಿಣಿಯನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು

34,000 ರೂಪಾಯಿಗಳು

17 ಸರ್ವ ಸಮ ಉತ್ತರಗಳಿಗೆ ಹಂಚಲ್ಪಡುವುದು.

ರನ್ನರ್ಸ್ ಅಪ್‌ರವರಿಗೆ (ಯಾರ ಉತ್ತರದ ಒಂದು ಸಾಲು ನಮ್ಮ ಭದ್ರಪಡಿಸಿದ ಉತ್ತರದ ಅಂಥದೇ ಒಂದು ಸಾಲನ್ನು ಹೋಲುವವುಗಳಿಗೆ) ಪ್ರತಿ 20 ರೂಪಾಯಿಗಳ 50 ಕನ್ಸೊಲೇಶನ್ ಬಹುಮಾನಗಳು ಪ್ರತ್ಯೇಕ ಇವೆ ಉತ್ತರದ ಮೊದಲನ ಎರಡು ಅಡ್ಡ ಸಾಲುಗಳು ನಮ್ಮ ಉತ್ತರದ ಅದೇ ಎರಡು ಸಾಲುಗಳಿಗೆ ಸರಿಯಾಗಿದ್ದರೆ ಅಂಥವಕ್ಕೆ 60 ರೂಪಾಯಿ ಖಂಡಿತ ಇದೆ ಅತೀ ಹೆಚ್ಚು ಸಂಖ್ಯೆಯಲ್ಲಿ ಉತ್ತರ ಕಳುಹಿಸಿದವರಿಗೆ 200 ರೂಪಾಯಿ ಪ್ರತ್ಯೇಕ ಇರಿಸಿದೆ

ಬದಿಯಲ್ಲಿರುವ ಚೌಕಣದಲ್ಲಿ 5ರಿಂದ 20ರ ವರೆಗಿನ ಅಂಕೆಗಳನ್ನು ತುಂಬಿಸಿ ಪ್ರತಿಯೊಂದು ಅಡ್ಡ ನೀಟ ಮತ್ತು ಮೂಲೆಯಿಂದ ಮೂಲೆ ವರೆಗಿರುವ ಸಾಲಿನ ಮೊತ್ತವು 50 ಬರುವಂತೆ ಮಾಡಿರಿ ಪ್ರತಿ ಅಂಕೆಯನ್ನು ಒಮ್ಮೆ ಮಾತ್ರ ಉಪಯೋಗಿಸಬೇಕು. ಕೊನೆ ಟಪಾಲಿನ ದಿನ 9-9-'39, ಫಲಿತಾಂಶ 18-9-'39

ಪ್ರವೇಶಧನ:— ಒಂದು ಉತ್ತರಕ್ಕೆ 1 ರೂಪಾಯಿ ಅಥವಾ 3ಕ್ಕೆ 2 ರೂಪಾಯಿ ಅಥವಾ ಪ್ರತಿ ಎಂಟೆಂಟರ ಒಂದೊಂದು ಗುಂಪಿಗೆ ರೂ. 5/-

ನಿಯಮಗಳು:— ಮೇಲಿನ ದರದಲ್ಲಿ ತಕ್ಕ ಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟು ಉತ್ತರಗಳು ಬಂದರೂ ಸ್ವೀಕರಿಸಲ್ಪಡುವವು. ಮನಿಯಾರ್ಡರ್ ಅಥವಾ ಇಂಡಿಯನ್ ಪೋಸ್ಟಲ್ ಆರ್ಡರಿನ ಮೂಲಕ ಹಣ ಕಳುಹಿಸಬೇಕು. ಸಂಗ್ರಹಕ್ಕೆ ಸರಿಯಾಗಿ ಇನಾಮು ವ್ಯತ್ಯಾಸ ಹೊಂದುವುದು ಆದರೆ ಮುಂಬಯಿಯ ಪ್ರಸಿದ್ಧ ಬೇಂಕೊಂದರಲ್ಲಿ ಭದ್ರವಾಗಿರಿಸಲ್ಪಟ್ಟ ಸರಿಯಾದ ಉತ್ತರಕ್ಕೆ ಸರಿಸಾಟಿಯಾದ ಪ್ರತಿಯೊಂದಕ್ಕೂ ಕನಿಷ್ಠ 2000 ರೂಪಾಯಿಯ ಇನಾಮು ಗ್ಯಾರಂಟಿ. ಫಲಿತಾಂಶ ಬೇಕಾದ್ದಲ್ಲಿ ಉತ್ತರದೊಂದಿಗೆ ಸ್ವವಿಳಾಸ ಬರೆದ ಅಂಚೆಚೀಟು ತಾಗಿಸಿದ ಲಕೋಟೆಯನ್ನು ಕಳುಹಿಸಿರಿ. ಮೆನೇಜರರ ತೀರ್ಮಾನವೇ ಅಖೈರು ಮತ್ತು ಕಾನೂನು ಬದ್ಧವಾದುದು.

46 ಮೊತ್ತದ ಹಿಂದಿನ ಸ್ಪರ್ಧೆಯ ಭದ್ರಪಡಿಸಿದ ಉತ್ತರ ಮತ್ತು ಹಣವನ್ನು ಇವರಿಗೆ ಕಳುಹಿಸಿರಿ -

ಉತ್ತರ.-				
1ನೇ ಸಾಲು	7,	5,	18,	16
2ನೇ ಸಾಲು	10,	19,	4,	13
3ನೇ ಸಾಲು	17,	11,	9,	6
4ನೇ ಸಾಲು	12,	8,	15,	11

ದಿ ಮೆನೇಜರ್,
ಪ್ರೆಸಿಡೆನ್ಸಿ ಕಮರ್ಸಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ 2

The Manager
Presidency Commercial Syndicate,
Mumbadevi BOMBAY 2

Advertising in 'NAVAYUGA' Means Increasing Business.

When God Adopts Manhood?

ದೇವರು ಮಾನವತ್ವವನ್ನೆಂದು ವಹಿಸುವನು?

ಸತ್ಯಶಕ್ತಿ ಸ್ವರೂಪವಾದ ದೇವನು ಎಲ್ಲಾ ಆತ್ಮಗಳಿಗೂ ಅವು ಸ್ವರ್ಗೀಯ ಆನಂದದಾಯಕವಾದುದು ಮಾನವನ ನಿಸ್ಸಹಾಯಕನೆಂದು ಹೇಳುವವನಾರು? ಮಾನವನು ತನ್ನ ಇಷ್ಟಗಳನ್ನು ನೆರವೇರಿಸಿಕೊಳ್ಳಲಾರನೆಂದು ಹೇಳುವವನಾರು? ಈ ಲೋಕದಲ್ಲಿ ಯಾವುದಾದರೂ ಅಸಾಧ್ಯವೆಂಬುದುಂಟೇ? ಯಾರಿಗೆ ಜೀವನದಲ್ಲಿ ಬೇಸರವುಂಟಾಗಿರುವುದೋ, ಯಾರನ್ನು ದರಿದ್ರತ್ವವು ಹಿಡಿದಿರುವುದೋ, ಯಾರು ಅಸ್ವಸ್ಥರಾಗಿರುವರೋ ಅವರಿಗೆಲ್ಲಾ ಸುಸ್ವಾಗತ ನೀವು ನೆರವೇರಿಸಿಕೊಳ್ಳದ ಅಪೇಕ್ಷೆಗಳಾದರೂ ಯಾವುವು? ನೀವು ಗುಣಪಡಿಸಿಕೊಳ್ಳಲಾರದ ರೋಗವಾದರೂ ಯಾವುದು? ಯಾವುದೂ ನಿಮಗೆ ಮಾಡಲು ಅಸಾಧ್ಯವಿಲ್ಲ? ನೋಡಿರಿ, ಕಣ್ಣುತೆರೆಯಿರಿ ಮಾನವನಲ್ಲಿ ದೇವರ ಶಕ್ತಿಯಿರುವುದೆಂಬುದನ್ನು ಕಂಡು ಕೊಳ್ಳಿರಿ. ಸಚ್ಚಿದಾನಂದ ಆತ್ಮವಿದ್ಯಾ ಕೋವಿದನೊಬ್ಬನು ನಿಮಗೆ ವಿನೋದದ ಜ್ಯೋತಿಷ ಮಂಡಲದ ವೈಚಿತ್ರ್ಯವನ್ನು ತೋರಿಸುವನು ಎಲ್ಲಾ ತರದ ರೋಗಗಳಿಂದ ನಿಮ್ಮನ್ನು ವಿಮುಕ್ತರನ್ನಾಗಿ ಮಾಡುವನು. ನಿಮ್ಮ ಜೀವನದ ಲಕ್ಷ್ಯಗಳನ್ನು ನೆರವೇರಿಸುವ ಮಾರ್ಗದಲ್ಲಿರುವ ಅಡಚಣೆಗಳನ್ನೆಲ್ಲಾ ನಿವಾರಿಸುವನು. ಸರ್ವಶಕ್ತಿ ಸತ್ಯದ ಪ್ರಭಾವದಿಂದ ಅವನು ನಿಮಗೆ ನಿತ್ಯಶಾಂತಿ ಮತ್ತು ಅಭಿವೃದ್ಧಿಯನ್ನುಂಟು ಮಾಡುವನು ಮಹಾತ್ಮ ಗಾಂಧಿ, ಹಿಟ್ಲರ್, ನೆಪೋಲಿಯನರೇ ಮೊದಲಾದ ಮಹಾಪುರುಷರ ಜಯಶೀಲತೆಯ ರಹಸ್ಯವು ವಿವರಿಸಲ್ಪಡುವುದು ಮತ್ತು 21 ಘಂಟೆಯೊಳಗೆ ಪರಮ ಮುಕ್ತಿಯ ಮಾರ್ಗವು ತೋರಿಸಲ್ಪಡುವುದು ಸತ್ಯವು ಸರ್ವಶಕ್ತನಾದ ದೇವನು ಮತ್ತು ದಿವ್ಯ ಆನಂದದಾಯಕವು ಆತ್ಮ ಮತ್ತು ಹಾರ್ದಿಕವಾಗಿ ಒಬ್ಬನು ಸತ್ಯಶೀಲನಾಗಿದ್ದರೆ ವಿಚಿತ್ರ ಕೆಲಸ ಮಾಡಬಹುದು. ನೀವು ಗಿರನ್ನು ಸ ... ದಿದ್ದರೆ, ಎಷ್ಟಿರಿ, ಹಿಂದು, ಮುಸಲ್ಮಾನ, ಪಾರ್ಸಿ ಮೊದಲಾದವರೆಲ್ಲರಿಗೂ, ಆತ್ಮನಿಷ್ಠೆಯುಳ್ಳ ಜೀವನದ ಎಲ್ಲಾ ಸಂಕಷ್ಟಗಳನ್ನು ಈಗ ನಿವಾರಿಸಿಕೊಳ್ಳಬಹುದೆಂದು ಕರೆದು ಉಪದೇಶಿಸಲಾಗುವುದು ಈ ವಿಚಿತ್ರ ಮಾನಸ್ಯಂದದೊಡನೆ ಸಂಬಂಧವಿರುವ ವಿಷ್ಯದಲ್ಲಿ, ಪ್ರತ್ಯೇಕ ನಿಜವಾದ ಶಕ್ತಿಗಳ ಮತ್ತು ಪ್ರಕೃತಿಯ ವಿಷಯ ವಾಗಿಯೇ ನಿಮಗೆ ಸಾಧಾರಣ ಅಭ್ಯಾಸವಾಗುವುದು.

ವಿ. ಸೂ—(3 ಪ್ರಶ್ನೆಗಳಿಗೆ ರೂ. 2 ಮಾತ್ರ)

ಹಣವನ್ನು ಟಪ್ಪಾಲ ದ್ವಾರಾ ಅಥವಾ ಸ್ವತಃ ಕೊಡಬಹುದು,

ವಿಳಾಸ—ಸ್ಪಿರಿಚುವಲ್ ಸ್ಪಾರ್ಕ, 1 ನೇ ಪ್ಲೋರ್,

ಮಹಾಕಾಳಿ ಮಂದಿರ, ಚಾಳ, ಪಾಯಧೋನಿ, ಮುಂಬಯಿ,

N L (For 3 questions Rs 2 only) Money to be sent by post or personally

Address —SPIRITUAL SPARK

First Floor Mahakali Hindu chawl

PYDHONY, BOMBAY

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕ ಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ನಾವಿರಾರು ಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆ ಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,	ಅ	ಬ್ರಾಂಚ್ ಸೆಕ್ರಿಟರಿ,
ಓರಿಯಂಟಲ್ ಲೈಫ್ ಆಫೀಸು,	ಥ	ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು)	ವಾ	ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು

ORIENTAL Govt. Security Life Assurance Co., Ltd.

ಮೈಸೂರಿನಲ್ಲಿ ಹಿಂದಿಯ ಪ್ರಚಾರ

ಹಿಂದಿಯ ಪ್ರಚಾರದ ಸಂಬಂಧದಲ್ಲಿ ಸಂಸ್ಥಾನದ ಹೊರಗಿನ ಕೆಲವು ಪ್ರದೇಶಗಳಲ್ಲಿ ಕ್ರಿಮಿನಲ್ ಲಾ ಅಮೆಂಡುಮೆಂಟ್ ಆಕ್ಟು 144ನೇ ಸೆಕ್ಷನು, ಇವೆಲ್ಲಾ ಜಾರಿಗೆ ಬರಬೇಕಾಯಿತು ಆದರೆ ಮೈಸೂರು ಸಂಸ್ಥಾನದಲ್ಲಿ ಹಿಂದಿ, ಹಿಂದುಸ್ಥಾನಿಯ ಪ್ರಚಾರಕ್ಕೆ ಸರಕಾರದವರು ಏನ ಸಹಾಯ ಮಾಡಿರುತ್ತಾರೆಂಬುದು ಎಲ್ಲರಿಗೂ ಸಂಪೂರ್ಣವಾಗಿ ತಿಳಿದಿರಲಾರದು. ಈಚೆಗೆ ಮೈಸೂರು ರಿಯಾಸತ್ ಹಿಂದೀ ಪ್ರಚಾರ ಸಮಿತಿಯವರು ಆಚಾರ್ಯ ಕಾಕಾಕಾಲೇಲ್‌ಕರ್‌ರವರ ಮುಖಂಡತ್ವದಲ್ಲಿ ದಿವಾನ್‌ರವರನ್ನು ಸಂದರ್ಶಿಸಿ, ಸಂಸ್ಥಾನದಲ್ಲಿ ಹಿಂದೀ ಪ್ರಚಾರದ ಸಂಬಂಧದಲ್ಲಿ ಕೆಲವು ವಿಷಯಗಳನ್ನು ತಿಳಿಸಿದರಷ್ಟೆ. ಅವರು ಕೋರಿದುದಾದರೂ ಏನು? ಈಗ ನೇಮಕವಾಗಿರುವ ಹಿಂದೀ ಉಪಾಧ್ಯಾಯರುಗಳನ್ನು ಖಾಯಂ ದರ್ಜೆಗಳಲ್ಲಿ ತೆಗೆದುಕೊಳ್ಳಬೇಕೆಂದೂ, ಮಾಧ್ಯಮಿಕ ಶಾಲೆಗಳಲ್ಲಿ ಕಡೆಯ ಮೂರು ವರ್ಷಗಳಲ್ಲಿ ಹಿಂದಿಯನ್ನು ಒಂದು ಪಠ್ಯ ಭಾಗವನ್ನಾಗಿ ಏರ್ಪಡಿಸಬೇಕೆಂದೂ, ಇಂಟರ್‌ಮಿಡಿಯೇಟ್ ಕಾಲೇಜಿನಲ್ಲಿ ಹಿಂದಿಯ ವ್ಯಾಸಂಗಕ್ಕೆ ಅನುಕೂಲಗಳನ್ನೇರ್ಪಡಿಸಬೇಕೆಂದೂ, ನಿಯೋಗ ಗೋಷ್ಠಿಯವರು ದಿವಾನ್‌ರವರನ್ನು ಪ್ರಾರ್ಥಿಸಿದರು ಈ ಕೋರಿಕೆಗಳನ್ನು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರ ಪರ್ಯಾಲೋಚನೆಗೆ ಕಳುಹಿಸಲಾಗಿದೆ

ಈಗಾಗಲೇ ವಿದ್ಯಾರ್ಥಿಗಳು ಹೈಸ್ಕೂಲು ತರಗತಿಗಳಲ್ಲಿ ಹಿಂದಿಯನ್ನು ಐಚ್ಛಿಕ ಭಾಗವನ್ನಾಗಿ ವ್ಯಾಸಂಗ ಮಾಡಬಹುದಾಗಿದೆ. ಈ ಏರ್ಪಾಡು ಬಹಳ ಹಿಂದಿನಿಂದಲೂ ಜಾರಿಯಲ್ಲಿದೆ. ಅಲ್ಲದೆ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿಯನ್ನು 'ಅಡಿಷನಲ್' ಪಠ್ಯ ಭಾಗವನ್ನಾಗಿ ವ್ಯಾಸಂಗ ಮಾಡಬಹುದಾಗಿದೆ. ಮಲ್ಲೇಶ್ವರ, ಕೋಲಾರ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ, ದಾವಣಗೆರೆ, ಮಧುಗಿರಿ, ಹಾಸನ, ಇಲ್ಲಿಯ ಹೈಸ್ಕೂಲುಗಳಲ್ಲಿಯೂ, ಬೆಂಗಳೂರು ಸೆಂಟ್ರಲ್ ಹೈಸ್ಕೂಲು, ಮೈಸೂರಿನಲ್ಲಿ ಮಹಾರಾಣಿ ಹೈಸ್ಕೂಲಿನಲ್ಲಿಯೂ, ಹಿಂದಿಯನ್ನು ಬೋಧಿಸಲಾಗುತ್ತಿದೆ. ಸರಕಾರದವರಿಂದ ದ್ರವ್ಯಸಹಾಯವನ್ನು ಪಡೆಯುತ್ತಿರುವ ನ್ಯಾಷನಲ್ ಹೈಸ್ಕೂಲು, ಎಸ್ ಎಲ್. ಎನ್. ಹೈಸ್ಕೂಲು ಮೈಸೂರಿನಲ್ಲಿ ಬನುಮಯ್ಯ ಹೈಸ್ಕೂಲು, ಈ ಮೂರು ಹೈಸ್ಕೂಲುಗಳವರೂ ಹಿಂದೀ ವ್ಯಾಸಂಗಕ್ಕೆ ಅನುಕೂಲವನ್ನೇರ್ಪಡಿಸಿರುತ್ತಾರೆ, ಶಿವಮೊಗ್ಗ, ಹಾಸನ, ತುಮಕೂರು, ಮಧುಗಿರಿ, ಕೋಲಾರ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು, ಈ ಪ್ರದೇಶಗಳಲ್ಲಿ ಹಿಂದೀ ಉಪಾಧ್ಯಾಯರುಗಳಿಗೆ ತಿಂಗಳಿಗೆ 20 ರೂಪಾಯಿಯ ವೇತನವನ್ನು ಮಂಜೂರುಮಾಡಲಾಗಿದೆ.

ಇಂಟರ್ ಮೀಡಿಯೇಟು ಮತ್ತು ಬಿ. ಎ ಪರೀಕ್ಷೆಗಳಿಗೆ ಹಿಂದಿಯನ್ನು ಐಚ್ಛಿಕ ಭಾಗವನ್ನಾಗಿ ಏರ್ಪಡಿಸಿದೆ ಇಂಟರ್ ಮೀಡಿಯೇಟ್ ಇನ್ ಆರ್ಟ್ಸ್ ಪರೀಕ್ಷೆಗೆ ಹಿಂದಿಯನ್ನು ಐಚ್ಛಿಕ ಭಾಗವನ್ನಾಗಿ ತೆಗೆದುಕೊಂಡು ವ್ಯಾಸಂಗಮಾಡಿದ ವಿದ್ಯಾರ್ಥಿಗಳಿಗಾಗಿ ಒಂದು ಪರೀಕ್ಷಾ ಕ್ರಮವನ್ನೇರ್ಪಡಿಸಿದೆ ಹಿಂದೀ ಭಾಷೆಯ ಪ್ರಚಾರಕ್ಕೆ ಪ್ರೋತ್ಸಾಹವನ್ನು ಕೊಡುವುದರ ಸಲುವಾಗಿ, ಮೈಸೂರಿನ ಇಂಟರ್ ಮೀಡಿಯೇಟು ಕಾಲೇಜಿನಲ್ಲಿ, 75-5-100 ರೂಪಾಯಿಗಳ ಗ್ರೇಡಿನಲ್ಲಿ ಒಬ್ಬ ಹಿಂದೀ ಉಪಾಧ್ಯಾಯರನ್ನು ನೇಮಕಮಾಡಲಾಗಿದೆ

WANTED District and Taluka Organisers in Districts and Taluks of Karnataka on a monthly salary of Rs 50/ and Rs 20/- Special facilities for initial business Only influential and educated Organisers who can guarantee Rs 50,000/- and Rs 25,000/ per year need apply. Padubidri Bros Bombay 8

WANTED candidates Allowance Rs 28. Uniform, passage and quarter free Service essential Classes Telegraph, Station Master Wireless, Radio, Electrical, Civil and Automobile Engineering, Commerce and Filmcraft Rules and Entrance form on annas eight Director, Royal Telegraph and Rly Duties College, Bombay 11

ಇನ್ಕಮ್ ಟೇಕ್ಸ್ ವಿಕ್ರಯ ಟೇಕ್ಸ್

ಬೀಡಿ, ಹೊಗೆಸೊಪ್ಪು, ನಶ್ಯ

ಈ ಮೊದಲಿನ ನನ್ನ ಪ್ರಕಟಣೆಗಳಲ್ಲಿ ನನ್ನ ಹೆಸರಿನ ಕೆಳಗೆ 'ಟೊಬೆಕೊ ಟೇಕ್ಸ್ ಕನ್ಸಲ್ಟಂಟ್ ಮತ್ತು ಕಮರ್ಶಿಯಲ್ ಟೇಕ್ಸ್ ವಕೀಲ' ಎಂದು ಕಾಣಿಸಿದ್ದರಿಂದ ನಾನು ಟೇಕ್ಸ್ ವಸೂಲಿಯ ಉದ್ಯೋಗಸ್ಥನೆಂದು ಜನರು ತಿಳಿಯುವ ಸಂದರ್ಭವಿದೆಯೆಂದು ನನಗೆ ಕೆಲವರು ತಿಳಿಸುತ್ತಾರೆ

ನಾನು ಟೇಕ್ಸ್ ವಸೂಲಿಯ ಉದ್ಯೋಗಸ್ಥನಲ್ಲ. ಇನ್ಕಮ್ ಟೇಕ್ಸ್-ವಿಕ್ರಯ ಟೇಕ್ಸ್-ಹೊಗೆಸೊಪ್ಪಿನ ಟೇಕ್ಸ್ ಈ ಮೂರು ತೆರಿಗೆಗಳ ಸಂಬಂಧದ ಕಾಯಿದೆಯ ಅನುಭವವನ್ನುಳ್ಳೊಡು ಆ ಟೇಕ್ಸ್ ಕೊಡುವವರಿಂದ ಫೀ ಪಡೆದು ಹೊಂದಿ, ಸರಕಾರದ ಆಫೀಸರರ ಮುಂದೆ ವ್ಯಾಪಾರಗಾರರ ಹಿತಕ್ಕೆ ವ್ಯವಹರಿಸುವವ ಮತ್ತು ಲೆಕ್ಕ ಹಾಜರುಮಾಡಿ ಸಮಾಧಾನ ಪಡಿಸುವವ.

ನನಗೆ ಕಕ್ಷಿಗಾರರು ಕೊಡುವ ಫೀಸಿನ್ನ ಯಾವದೇ ಅಂಶವು ಸರಕಾರಕ್ಕೆ ಸಲ್ಲುವದಿಲ್ಲ. ಅಂಥ ತಿಳುವಳಿಕೆಗೆ ನಾನು ಈ ವರೆಗೆ ಎಡೆ ಕೊಟ್ಟದ್ದಿಲ್ಲ

ಕೆಲವು ಜಾಹಿರಾತುಗಳಲ್ಲಿ Government recognised Income tax practitioner ಎಂದು ಇದ್ದು ಹೊಸ ಕಾಯಿದೆಯಂತೆ ನಾನು ಒಬ್ಬ Income practitioner ನಾದ ಮಾತ್ರದಿಂದ 'Government recognised' ಎಂಬ ವಿಶೇಷಣ ಉಪಯೋಗಿಸಿದ್ದು ತಪ್ಪೆಂದು ನನ್ನ ಸ್ನೇಹಿತ ವಕೀಲರೊಬ್ಬರ ಅಭಿಪ್ರಾಯವಿದೆ. ನಾನು ಸಹ ಅದು ತಪ್ಪೆಂದು ತಿಳಿಯುತ್ತೇನೆ.

ಎಸ್ ಎಸ್. ಪುರಾಣಿಕ,
ಇನ್ಕಮ್ ಟೇಕ್ಸ್ ವಕೀಲ.
ಕುಂದಾಪುರ ತಾ. 13-8-1939

ಮಂಗಳೂರು ಪೇಟೆಯ ದವಸ ಧಾನ್ಯ ವಗೈರೆಗಳ ಧಾರಣೆ.

	ರಿಂದ	ವರೆಗೆ
ಭತ್ತ ಅವ್ವಲ್ ತರದ ಗುಡ್ಡ ಮುಡಿಗೆ	1—14—0	
,, ದುಯಂ ,, ,,	1—12—0	
,, ಅವ್ವಲ್ ತರದ ಸುಗ್ಗಿ ಮುಡಿಗೆ	1—12—0	...
,, ದುಯಂ ,, ,,	1—10—0	
ಅಕ್ಕಿ ಅವ್ವಲ್ ತರದ ಗುಡ್ಡ ಮುಡಿಗೆ	4—12—0	
,, ದುಯಂ ,, ,,	4— 7—0	
,, ಅವಲ್ ಸುಗ್ಗಿ ,,	4— 8—0	
,, ದುಯಂ ,, ,,	4— 6—0	
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27— 8—0	35— 0—0
,, ಸಿಪ್ಪೆ ಇದ್ದದ್ದು ,,	30— 0—0	40— 0—0
ಕೊಬ್ಬರಿ ಆಫೀಸು ಖಂಡಿಗೆ	50— 0—0	
,, ದೀವಿ ಮತ್ತು ದಿಲ್‌ಪಸಂದ್		
ತೆಂಗಿನ ಎಣ್ಣೆ ಮಣಕ್ಕೆ ..	3— 6—0	
ಸಿಪ್ಪೆ ಇದ್ದ ಅಡಿಕೆ 1000ಕ್ಕೆ	2— 8—0	3— 8—0
ಗೇರುಬೀಜ ಮುಡಿಗೆ	3— 6—0	3— 8—0
ಕಬ್ಬಿನ ಬೆಲ್ಲ ಖಂಡಿಗೆ	47— 8—0	53—12—0
ಒಳ್ಳೇ ಮೆಣಸು ಹಂಡ್ರೆಡ್‌ವೇಟಿಗೆ	14— 8—0	15— 8—0

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I ಶೋಧನ ಗುಣ —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು

II ರಸಾಯನ ಗುಣ.—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III ಸುಖಸೇವನ —ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ದೂರಗೊಳಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು

ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಎಮ್. ಆರ್. ಪೂಂಜ,

President & Manager, ಪ್ರಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟೆಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,

ಗವರ್ನಮೆಂಟ್ ಕೊಲೇಜಿನ ಎದುರು,

ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ

ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ

ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Manager,

Kanara Printing Works,

Hampankatte, MANGALORE

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ, ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವವು ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು ನವಭಾರತ ಬುಕ್ ಡಿಪೋ, ಉಡುಪಿ

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೋಲೆರಾ ಪಿಲ್ಸ್	ಭೈರವ ಮಾತ್ರೆಗಳು
ಕೋಲೆರಾ ರೋಗಕ್ಕೆ ರಾಮಬಾಣ ಔಷಧ	ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
ಮಾತ್ರೆಗಳಿಗೆ ರೂ ೧—೮—೦	೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೇಸ್ತ್ರೆ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

ದಿ ವಿಜಯ ಬೇಂಕ್, ಲಿಮಿಟೆಡ್,

ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ.

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು

3 ತಿಂಗಳಿಗೆ	....	3½%
6 ,,	...	4%
1 ವರ್ಷಕ್ಕೆ	.	4½%
2 ,,		5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ, ಮಂಗಳೂರು
ದಿ ಜೋಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ಸಮಯದ ಬೆಲೆಎಷ್ಟೆಂದು ನಿಶ್ಚಯಮಾಡಿದವರಿರುವರೇ?

ಹಣದ ಬೆಲೆಯನ್ನು ಕಟ್ಟಬಹುದು. ಆದರೆ ಸಮಯದ ಬೆಲೆಯನ್ನು ನಿಶ್ಚಯಿಸಲಸಾಧ್ಯ

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶಕೊಡದಂತೆ, ನಮ್ಮ ಸರ್ವಿಸುಗಳು ಪ್ರಾತಃಕಾಲದಿಂದ—ಸಾಯಂಕಾಲದ ವರೆಗೆ ಬಿಡುವಿಲ್ಲದೇ ಓಡಾಡುತ್ತಿದ್ದು ನಿಮ್ಮ ಯಾವದೇ ಕೆಲಸಗಳಸ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡುಮಾಡಿರುವೆವು. ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು.

JOINT MANAGERS

THE COMBINED BOOKING AGENCY, MANGALORE.

THE JOINT BOOKING OFFICE,
MANGALORE.

Thulunad Bank

OF SUPPLY AGENCY LIMITED,

ESTD] **UDIPI** [1933

Authorised & Issued Capital	Rs.	**1,00,000**
Subscribed & Paid up	Rs.	**31,300**

RATE OF INTEREST FOR FIXED DEPOSITS.

3 to 6	Months	4% p. a.
7 to 11	„	5% „
12 to 18	„	6% „

SPECIAL RATE FOR LONG TERM DEPOSITS ON APPLICATION

Current Accounts are accepted at

3% p. a.

JOIN ANY OF THE SCHEMES

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—

THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Budda	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲೀಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	[illegible]
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	[illegible]
ಮಿತ್ಯನಾರಯಣ ಕತೆ	0	8	[illegible]
ಪುರಂದರದಾಸರ ಪದಗಳು ಭಾಗ ೧	0	[illegible]	[illegible]
„ ಭಾಗ ೨	0	[illegible]	[illegible]
„ ಭಾಗ ೩	0	[illegible]	[illegible]
ತುಳುನಾಡ್ ತಿಲಕ ಪಂಚಾಂಗ	[illegible]	[illegible]	[illegible]
ವೈಜಯಂತೀ ಪಂಚಾಂಗ	[illegible]	[illegible]	[illegible]
ಕುಕ್ಕುಟಿ ಪಂಚಾಂಗ	[illegible]	[illegible]	[illegible]

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ

(*Proprietors.* **GENERAL SUPPLIES, LTD.**)

PRINTED BY S. S. KARANTH AT THE TULUNAD PRESS, UDIPI AND PUBLISHED BY K. H. SHETTY AT "NAVAYUGA OFFICE, UDIPI

(ಸ್ವಂತ ಬಾತ್ಮೀದಾರರಿಂದ)
26-8-'38

ಗಿರ್ಗಾಂ ಕಮಿಟಿಯ ಚುನಾವಣೆ:- ಗಿರ್ಗಾಂ ವಾರ್ಡ್ ಕಾಂಗ್ರೆಸ್ ಕಮಿಟಿಯ ಚುನಾವಣೆಯು ನೆನ್ನೆ ರವಿವಾರ, ಬೇಟಿಟ್ ರೋಡಿನಲ್ಲಿ ಜರಗಿತು. ಬಿ. ಪಿ. ಸಿ. ಯ ಕಡೆಯಿಂದ 27ನೆ ಎಂ, ಸಮತಾವಾದಿ ಪಕ್ಷದಿಂದ 9 ಮತ್ತು ಇತರ ಜೊತೆಯವರು 9, ಹೀಗೆ 45

ನೋಟೀಸು
ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. A. 5⁄38- O S 5⁄37

R. E P. 318⁄38

ಐತಪ್ಪ ಕೂಡಾ ... Petrs
ನಾರಾಯಣ ಭಟ್ಟ ಕೂಡಾ Respts

3ನೇ ಎದ್ರಿ ಸರಸ್ವತಿ ಯಾನೆ ಸಾವಿತ್ರಿ ಅಮ್ಮ, ಹರಿಯಣ್ಣ ಭಟ್ಟ ವಿಧವೆ, ಆದೂರ ಗ್ರಾಮ —

ಮೇಲಿನ ಸದ್ರಿ ವ್ಯವಹರಣೆಯಲ್ಲಿ ಎದ್ರಿ ರ ಸ್ಥಿರ ಆಸ್ತಿಯನ್ನು ಏಲಮಿಗೆ ಇಡಿಸಿ ಆ ಕುರಿತು 7—9—1938ಕ್ಕೆ ಇಸ್ತಿಹಾರು ಬಿಟ್ಟು ನೋಟೀಸಿನ ವ್ಯಾಡೆ ಆಗಿರುತ್ತದೆ. ಆ ವ್ಯಾಡೆಗೆ ಎದ್ರಿರ ಆಕ್ಷೇಪಣೆಗಳೇನಾದರೂ ಇದ್ದರೆ ಕೋರ್ಟಿಗೆ ತಪ್ಪದೆ 10 ಘಂಟೆಗೆ ಹಾಜರ್ರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಎದ್ರಿರನ್ನು ಶಿವಾಯಿ ಎಂತಮಾಡಿ ವ್ಯವಹರಣೆಯನ್ನು ಮುಂದರಿಸಲಾದೀತು. ಅರ್ಜಿದಾರರು ಕೊಟ್ಟ R E A. 722/38ನೆ ಅರ್ಜಿಯ ಹುಕುಂ ಪ್ರಕಾರ ಈ ನೋಟೀಸು ಮಾಡ್ಸಿಯದೆ.

B. Ramachandra Rao, M. A. B. L.
Pleader.
Puttur, 24-8-1938.

ಬೊಂಬಾಯಿ ಸಮಾಚಾರ

ಜನರು ಚುನಾವಣೆಗೆ ನಿಂತಿದ್ದರು. ಒಟ್ಟು ಬಿದ್ದಿರುವ ಓಟುಗಳು 25 ಸಾವಿರದ ಮೇಲೆ... ಬಿ. ಪಿ. ಸಿ. ಸಿಯ ಅಧ್ಯಕ್ಷರಾದ ಶ್ರೀ. ಎಸ್. ಕೆ. ಪಾಟೀಲರವರು ತಮ್ಮ ಪಾರ್ಟಿಯವರಿಗೆ ಜಯವಾಗಬೇಕೆಂಬ ಅಭಿಲಾಷೆಯಿಂದ 'ಯ' ವಾರ್ಡಿನಿಂದ ಹಾಲು ಮಾರುವ ಭಯ್ಯನವರನ್ನು ಒತ್ತಾಯದಿಂದ ಲಾರಿಗಳಲ್ಲಿ ತುಂಬಿಸಿ ತಂದು ಮಾರಾಟು 'ಬೋಗಸ್' ಓಟುಗಳನ್ನು ಕೊಡಿಸಿರುವರು. ಇವರು ಭಯ್ಯನವರನ್ನು ಮೋಟರು ಗಳಲ್ಲಿ ತುಂಬಿಸಿ ತಂದು, ಕಾಂಗ್ರೆಸ್ ಆಫೀಸಿನಲ್ಲಿ ಇಳಿಸುವ ಫೋಟೋಗಳನ್ನು ತೆಗೆದು ಸ್ಥಳೀಯ ಪತ್ರಿಕೆಗಳು ಪ್ರಕಟಿಸಿ, ಗಾಂಧಿಯವರ "ಸತ್ಯ ಮತ್ತು ಅಹಿಂಸಾ ತತ್ವ" ಗಳನ್ನನುಸರಿಸುವ, ವಿರೋಧಿವೀರರು ಸ್ವಾವಲಂಬನಕ್ಕಾಗಿ ಏನೆಲ್ಲ ಕೊಳಕು ಕೆಲಸಗಳನ್ನು ಮಾಡುತ್ತಿರುವರೆಂಬುದನ್ನು ಜನತೆಗೆ ತೋರಿಸಿಕೊಟ್ಟಿವೆ. ಸಮತಾವಾದಿ ಪಕ್ಷದವರಿಗೆ ಬಹುಮತ ಸಿಗಬಹುದೆಂದು ಸಂಶಯವಿದೆ. ಬರುವ ಆದಿತ್ಯವಾರ ಇದರ ಪ್ರತಿಫಲವು ಪ್ರಕಟಿಸಲ್ಪಡುವುದು.

ಕಾಮಗಾರರ ಮುಷ್ಕರ:— ಮುಂಬಯಿಯ ಬ್ರೇಡ್ ಬರಿ ಮಿಲ್ಲಿನ ಸಾಧಾರಣ 600 ಮಂದಿ ಕಾಮಗಾರರು, ತಮ್ಮಲ್ಲಿ ಕೆಲವರನ್ನು ಕೆಲಸದಿಂದ ತೆಗೆದದ್ದಕ್ಕಾಗಿ ಮುಷ್ಕರ ಹಿಡಿದಿರುವರು. ಶಾಂತತೆಯಲ್ಲಿ ಪಿಕೆಟಿಂಗು ನಡೆಸುತ್ತಾ ಇತರ ಗೆಲಸಗಾರರನ್ನೂ ಇದಕ್ಕೆ ಸೇರಿಸಬೇಕೆಂದು ಕೇಳಿಕೊಳ್ಳುತ್ತಿರುವರು.

ನಿನ್ನೆ ಸಂಜೆಗೆ ಈ ಮುಷ್ಕರದ ಪರವಾಗಿ ಒಂದು ಸಾರ್ವಜನಿಕ ಸಭೆಯನ್ನು ಜರಗಿಸಬೇಕೆಂದು, ಗಿರ್ಣೀ ಕಾಮಗಾರ ಸಂಘದ ಕಾರ್ಯದರ್ಶಿಯವರಾದ ಶ್ರೀ ನಿಂಬಕರ್‌ರವರು ಕೆಂಪು ಧ್ವಜವನ್ನು ... ಗುತ್ತಿರಲು, ಪೋಲೀಸರು ಇವರ ಮೇಲೆ ಬಿದ್ದು ಧ್ವಜವನ್ನು ಚೂರು ಚೂರು ಮಾಡಿದರು. ಸಾರ್ವಜನಿಕ ಸಭೆಯು ಜರಗಲಿದೆ ಎಂಬುದನ್ನು ಕೇಳಿದೊಡನೆಯೇ ಪೋಲೀಸ್ ಕಮಿಷನರು, ಸಭೆ ಜರಗಿಸಕೂಡದೆಂದು ಆಜ್ಞೆ ಇತ್ತರೂ ಇವರದನ್ನು ಗಣಿಸದೆ ಮುಂದುವರಿದದ್ದನ್ನು ನೋಡಿ ಪೋಲೀಸರು ಮೆರವಣಿಗೆಯನ್ನು ತಡೆಯಲೆತ್ನಿಸಿದರು. ಅದರೆ ಜನರೆಲ್ಲಾ ಮನೆಯೊಂದನ್ನು ಹೊಕ್ಕು ಸಭೆ ಜರಗಿಸಿದರು, ಇದರಲ್ಲಿ ಯಾರಿಗೂ ಪೆಟ್ಟಾಗಲಿಲ್ಲ.

ಸದ್ಯದಲ್ಲೇ ಮುಂಬಯಿಯಲ್ಲಿ ಜರಗಲಿರುವ ಕಾಂಗ್ರೆಸ್ ಪ್ರಾವಿನ್ಸುಗಳ ಕೈಗಾರಿಕೆಯ ಮಂತ್ರಿಗಳ ಸಮ್ಮೇಳನದಲ್ಲಿ, ಭಾರತಕ್ಕೆ ಕಡಿಮೆ ಬೆಲೆಯ ರೇಡಿಯೋಗಳನ್ನು ಇಲ್ಲಿಯೇ ತಯಾರಿಸುವ ಯೋಜನೆಯ ಕುರಿತು ಚರ್ಚಿಸಲಿರುವರು.

ಒಕ್ಕಲಿಗರ ರಕ್ಷಣೆಗಾಗಿ ಬಿಲ್ಲು— ಮುಂಬಯಿ ಪ್ರಾಂತ್ಯದಲ್ಲಿಯ ಒಕ್ಕಲಿಗರ ರಕ್ಷಣೆಗಾಗಿ, ಮುಂಬಯಿ ಸರಕಾರದವರು ಒಂದು ಬಿಲ್ಲನು ಜಾರಿಗೆ ತರಲಿರುವರು. ಈ ಬಿಲ್ಲಿನ ಪ್ರಕಾರ 1938ನೇ ಜನವರಿ 1 ರಿಂದ ಮುಂಚೆ 6 ವರ್ಷಗಳ ತನಕ ಒಟ್ಟು ಒಕ್ಕಲಿಗನು ಆಸ್ತಿಯೊಂದನ್ನು ಕೃಷಿಮಾಡುತ್ತಿದ್ದಲ್ಲಿ ಅಂಥವನು ರಕ್ಷಿಸಲ್ಪಟ್ಟ ಒಕ್ಕಲಾಗುವನು ಮತ್ತು ಸ್ವತಃ ಜಮೀನನ್ನು ಕೃಷಿಮಾಡುತ್ತಿರಬೇಕು.

ಇಂಥ ರಕ್ಷಿತ ಒಕ್ಕಲಿಗನು ತನ್ನ ಒಡೆಯ ಮತ್ತು ಕಸ್ತೂರಿಗೆ ನಿಶ್ಚಯಿಸಲ್ಪಟ್ಟ ಬಾಡಿಗೆಯನ್ನು ತರಬೇಕು. 1938 ಡಿಸೆಂಬ್ರ 1ನೇ ತಾರೀಕುವರೆಗೆ ಏನಾದರೂ ಸಾಲವಿದ್ದಲ್ಲಿ ಅದನ್ನು 4 ಕಂತುಗಳಲ್ಲಿ ಮೇ 31ರೊಳಗೆ ಒಂದೆ ತರಬೇಕು.

ತಾನೇ ಸ್ವತಃ ಕೃಷಿಮಾಡುವೆನೆಂಬ ಧ್ಯೇಯದಿಂದ ಅಥವಾ ಅದನ್ನು ಇತರ ಕೃಷಿಗಳಿಗಾಗಿ ಉಪಯೋಗಿಸುವ ಆಂಬೋಣದಿಂದ ಜಮೀನ್ದಾರನು ಒಕ್ಕಲಿಗ ಒಂದು ವರ್ಷದ ನೋಟೀಸು ಕೊಟ್ಟು ಭೂಮಿಯನ್ನು ... ತೆಗೆದುಕೊಂಡು ಅದನ್ನು ಮೂರು ವರ್ಷಗಳ ವರೆಗೆ ಮೇಲಿನ ಧ್ಯೇಯಗಳಿಗೆ ಉಪಯೋಗಿಸದೆ, ಅಥವಾ ಅದನ್ನು ಮೂಲಗೇಣಿಯಲ್ಲಿ ಬೇರೆಯವರಿಗೆ ಕೊಟ್ಟ ಪಕ್ಷದಲ್ಲಿ ಅದನ್ನು ಮುಂಚಿನ ಶರ್ತಗಳ ಪ್ರಕಾರ ಸಾಗುವಳಿಮಾಡುವೆನೆಂಬ ಶರ್ತದ ಮೇರೆಗೆ ಒಕ್ಕಲಿಗನು ಆ ಆಸ್ತಿಯನ್ನು ತಿರುಗಿ ಪಡೆಯಬಹುದು.

ಈ ಬಿಲ್ಲಿನ ಮುಖ್ಯ ಧ್ಯೇಯವೆಂದರೆ ಜಮೀನ್ದಾರನು ತನ್ನ ಒಕ್ಕಲಿಗೆ ನ್ಯಾಯವಾದ ಬಾಡಿಗೆ ಹೊರತು ಇತರ ಕಂದಾಯಗಳನ್ನು ಹೊರಿಸಕೂಡದೆಂದಾಗಿರುತ್ತದೆ. ಈ ಕಾನೂನಿಗೆ ವಿರೋಧ ಹೋಗುವವನು 1000ರೂಪಾಯಿ ವರೆಗೂ ದಂಡತೆರಬೇಕಾದೀತು.

ಲಿವರ್ ರಿಸ್ಟುವಾಚು
ರೂ. 2-15-0ಕ್ಕೆ
ಒಂದು ವಾರದ ವರೆಗೆ ನೀವೇ ಪರೀಕ್ಷಿಸಿರಿ.

ಗಟ್ಟಿಮುಟ್ಟಾದ ಕೆಲಸವಾಯ ಕೊಡುವ ಖಾತ್ರಿ ಗಡಿಯಾರಗಳು ಈಗತಾನೆ ಅತ್ಯಲ್ಪ ಬೆಲೆಗೆ ದೊರೆಯುವವು. 3 ವರ್ಷಗಳ ಗ್ಯಾರಂಟಿ. ಒಂದೇ ಸಲ 3 ಗಡಿಯಾರಗಳನ್ನು ಕೊಂಡು ಕೊಳ್ಳುವವರಿಗೆ ಟಪ್ಪಾಲು ಖರ್ಚು ಮಾಫಿ. ಉರುಟು ನಿಕ್ಕಲ್ ಲಿವರ್ ರಿಸ್ಟುವಾಚಿಗೆ ರೂ. 2-15-0 ಉತ್ತಮ ತರದ್ದಕ್ಕೆ ರೂ 3-8-0, ಬಂಗಾರದಕ್ಕೆ ರೂ 1-0-0, ರೇಡಿಯಂದಕ್ಕೆ ರೂ. 1-0-0, ಚೌಕಾಕೃತಿಯ ನಿಕ್ಕಲ್ ಕೇಸಿನದ್ದಕ್ಕೆ ರೂ 6-8-0, ಸುವರ್ಣ ವರ್ಣದ್ದಕ್ಕೆ ರೂ 7-8-0 ಲಿವರ್ ಪಾಕೆಟ್ ವಾಚಿಗೆ ರೂ 3-1-0 'ಬ್ರಿಟಾನಿಯಂ' ಕೇಸಿಗೆ ರೂ 1-15-0

M. L. Watch Co., (N U)
108 Cotton Street, Calcutta.

ಸುಸಂದರ್ಭ !!! **ಸುಸಂದರ್ಭ !!!**

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ.

ಪ್ರಭಾತ ಫಿಲ್ಮ್ ಕಂಪೆನಿಯವರ

ಚಂದ್ರಸೇನ

ವೆಂಬ ಪೌರಾಣಿಕ ಚಿತ್ರವು ಸದ್ಯದಲ್ಲೇ ಪ್ರದರ್ಶಿಸಲ್ಪಡುವುದು. ರಜನಿ, ಸುರೇಶಬಾಬು, ಕುಲಕರ್ಣಿ, ಕೇಲಕರ, ಮಾನಾಜಿ ರಾವು, ಬುವಾಸಾಹೇಬ, ಮೊದಲಾದವರು ನಟಿಸಿರುವರು.

ಆಶಾಭಂಗವಾಗದಂತೆ ಇಂದೇ ನಿಮ್ಮ ಸೀಟುಗಳನ್ನು ರಿಜರ್ವಮಾಡಿರಿ.

ನಡೆಯುವ ಚಿತ್ರ —
ಮಾಸ್ಟರ್ ಜಯಂತ್, ಪದ್ಮಾದೇವಿ ನಟಿಸಿರುವ
ನವರಸಗಳಿಂದ ತುಂಬಿ ತುಳುಕಾಡುವ

"ಪಾಸಿಂಗ್ ಷೊ"

ಸಮಾಜ ಜೀವನದ ದೃಶ್ಯಗಳನ್ನು ಇದ್ದಕ್ಕಿದ್ದಂತೆ ತೋರಿಸುವ **ಚಿತ್ರವಿದೊಂದೇ.**

ಸದ್ವೈದ್ಯಶಾಲಾ ನಂಜನಗೂಡು
ದಕ್ಷಿಣ ಭಾರತದ ಪ್ರಸಿದ್ಧ ಆಯುರ್ವೇದೀಯೌಷಧಗಳ ದವಾಖಾನೆ.

— ಜೀವರತ್ನಗಳು —

ಶ್ರೀಕರ ಕಸ್ತೂರಿ ಮಾತ್ರೆ

ಅಮೋಘ ಸುವಾಸನೆಯುಳ್ಳ ಈ ಮಾತ್ರೆಗಳು ನಿತ್ಯಾರೋಗ್ಯ ಕಾಪಾಡುವುದಕ್ಕೂ ಮಕ್ಕಳ ಕೆಮ್ಮು, ನೆಗಡಿ, ಜ್ವರ, ಪಕ್ಕೆ ಶೀತಗಳಿಗೂ ಅಮೃತ.
ಬೆಲೆ 0-4-0, 0-2-0

ಶ್ರೀಕರ ಬಾಲಸಂಜೀವಿನಿ

ಮಕ್ಕಳ ಸುಖಭೇದಿ, ಅಜೀರ್ಣ, ವಾಯು, ಜ್ವರಗಳಿಗೆ. ಬೆಲೆ: 0-1-0

ನಮ್ಮ ರಜಿಸ್ಟರ್ಡ್ **ನಂಜನಗೂಡು ಟೂತ್ ಪೌಡರನ್ನು**
ಉಪಯೋಗಿಸಿರಿ. ಅನುಕರಣಗಳಿಗೆ ಮೋಸಹೋಗಬೇಡಿರಿ.

ಜ್ವರಕೇಸರಿ

ಎಲ್ಲಾ ವಿಧವಾದ ಜ್ವರಗಳನ್ನು ಜಾಗ್ರತೆ ಗುಣಮಾಡುವ ಅದ್ಭುತ ಶಕ್ತಿಯುಳ್ಳ ಮಾತ್ರೆ. ಬೆಲೆ: 0-8-0, 0-1-0.

ಪ್ರೊಪ್ರೈಟರ್ —
ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತ್.

ಸ್ಟಾಕಿಸ್ಟರು—
ಉಡುಪಿ—1 ನವಭಾರತ ಬುಕ್ ಡಿಪೊ, 2 ಯು. ಕೊರಗಪ್ಪ, ನ್ಯೂಸ್ ಏಜಂಟ್. ಕುಂದಾಪುರ—ಕಾಮತ್ಸ್ ಸ್ಟೇಶನರಿ ಎಂಪೋರಿಯಂ. ಕಾಸರಗೋಡು— ಭಕ್ತಾ ಬ್ರದರ್ಸ್, ಶ್ರೀರಾಮ ಸ್ಟೇಶನರಿ ಹೌಸ್, ಕಾರ್ಕಳ—ಎ. ವಿ. ಶೆಣೈ, ಕೆಮಿಸ್ಟ್. ಜಿ. ಕೃಷ್ಣ ಕಾರಂತ, ಏಜಂಟ್, ಆಯುರ್ವೇದೀಯ ಔಷಧಗಳು, ಬ್ರಹ್ಮಾವರ

ನೋಟೀಸು

ಪುತ್ತೂರು

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ ⁷⁵⁷/₁₉₃₈ R. I A No ⁶/₃₈

ವಾದಿ–ಬಿ ಪ್ರಭಾಕರ ರಾವ್–ಅರ್ಜಿದಾರ

ಪ್ರತಿವಾದಿರು–ಮೋನು ಯಾನೆ ಹಮ್ಮದ್ ಕೂಡಾ—ಎದ್ರಿರು

ಎದ್ರಿರು—1 ಮೋನು ಯಾನೆ ಹಮ್ಮದ 2 ಬಿಪಾತುಂಮ್ಮಾ, 3 ಐಸಂಮಾ–ಮಾಳ ಅಜ್ಜಬ್ಬ ಯಾನೆ ಹಸನೆ ಬ್ಯಾರಿ ಮ್ಯಾನರ ಮಕ್ಕಳು ಗಾಡಿ‍ಯನ ತಾಯಿ 4ನೇ ಪ್ರತಿವಾದಿಳು ಹಲೀಮಮ್ಮಾ.

4 ಹಲೀಮಮ್ಮಾ ಸದ್ರಿ ಅಜ್ಜಬ್ಬ ಯಾನೆ ಹಸನೆ ಬ್ಯಾರಿ ವಿಧವ.

ಮಂಗಳೂರು ತಾಲೂಕು ಕುಕ್ಕಳ ಗ್ರಾಮದ ಪುಂಜಾಲಕಟ್ಟೆ ಇವರಿಗ—

ಸದರೀ ವ್ಯವಹರಣಯಲ್ಲ ಡಿಕ್ರಿ ರದ್ದುಸ್ತಿ ಕುರಿತು ಅರ್ಜಿದಾರನು ಕೊಟ್ಟ R I. A ⁶/₃₈ನೇ ಅರ್ಜಿಯ ಸ್ಕಿಯು 1938ನೇ ಇಸವಿ ಸಪ್ಟಂಬರ ತಾರೀಕು 10ನೇ ದಿವಸ ಇಟ್ಟಿರುತ್ತದೆ. ಆ ದಿವಸ ನೀವು 10 ಘಂಟೆಗ ಸದರೀ ಕೋರ್ಟಿನಮುಂದೆ ಖುದ್ದಾಗಿ ಆಗಲೀ, ವಕೀಲ ದ್ವಾರವಾಗಲೀ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಪಿಮ್ಯಾಮಾಡಿ ಏಕಪಕ್ಷವಾಗಿ ತೀರ್ಮಾನಿಸಲಂದೀತು.

ಪುತ್ತೂರು, 26-8-'38 } **B Prabhakara Rao,** *Petitioner*

ಕಮ್ಮಿ ಕ್ರಯದ ಖಾತ್ರಿ ವಾಚುಗಳು

ಹೊಸ ಸ್ವಾಕಿನ ನವೀನ ವಾಚುಗಳು ಅಗ್ಗವಾದ ಇತರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿವೆ. ಹೆಚ್ಚು ಬಾಳಿಕೆಬರುವ ಮತ್ತು ಸರಿ ಸಮಯ ಸೂಚಿಸುವ ಲಿವರ್ ವಾಚುಗಳಾಗಿವೆ ಖಾತ್ರಿ 3 ವರ್ಷದ ಗ್ಯಾರಂಟಿ ... ಬಂಗಾರದಕ್ಕೆ ರೂ. 3 4 0 10ರ ವರೆಗಿನ ವಾಚುಗಳವರೆಗೆ 10ಆಣೆ ಟಪ್ಪಾಲುಖರ್ಚು ಬೀಳುತ್ತೆ ನಂತರದ ಪ್ರತಿ 1ಕ್ಕೆ 4ಆಣೆ ಮಾತ್ರಹೆಚ್ಚು

ಟಿ. ಜ ಎಂಡ್ ಕೋ,

ಪೋಸ್ಟ್ ಬಾಕ್ಸ್ ನಂಬ್ರ 6757. ಕಲ್ಕತ್ತಾ.

T. Jha & Co ,

Post Box No. 6757, Calcutta



ಕಟ್ಟಕಡೆಗೆ

ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು

ಶೀತಲ ಉಲ್ಲಾಸಕರ ಮತ್ತು ಸಂಭ್ರಮದ ಸ್ನಾನಕ್ಕೆ

ಸ್ವಸ್ತಿಕ

'ಕಾಂತಿ'

ಟ್ಯೊಲೆಟ್ ಸೋಪಿನ ಹೊರತು

ಇನ್ನೊಂದು ಉತ್ತಮವಾದುದಿರಲಾರದು.

ಅಲ್ಪ ಬೆಲೆಗೆ ಅತಿ ದೊಡ್ಡ ತುಂಡು

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ಯೊಲೆಟ್ ಸೋಪನ್ನು ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.

53

ವಿನೋದ ಸ್ಪರ್ಧೆ

೫ರ ಉತ್ತರ.

ಗ	ಜ	ನ	ವ	ಧಿ
ತ್ರಿ	ನೀ	ಲ	ಗ	ರಿ
ಪ್ರ	ಥಾ	ರ	ವಾ	ಹ
ಳ	ಹಿ	ಮಾ	ಲ	ಯ

ಸಮರ್ಪಕ ಉತ್ತರಬಿತ್ತವರು

(1) ಶ್ರೀ ಕಂಜರ್ಪಣೆ ಸಾವಿತ್ರಿಯಮ್ಮ, ಬೆಳ್ಳಾರೆ (2) ಶ್ರೀಮತಿ ಕಲ್ಯಾಣಿ, ಎಸ್. ಆರ್. ಶೆಟ್ಟಿ ಬೊಂಬಾಯಿ, (3) ಕುಮಾರಿ ಇಂದಿರಾ ಕೊರಡ್ಕಲ್ ಉಡುಪಿ (4) ಕೆ. ಟಿ ಕರ್ಕೇರ, ಬೊಂಬಾಯಿ (5) ಯಂ ದತ್ತ, ಬೊಂಬಾಯಿ (6) ಬೊಂಬಾಯಿ ಮಲ್ಲಿಗೆ (7) ನಾರಾಯಣ ಕರ್ಕೇರ, ಬೊಂಬಾಯಿ (8) ದೂಮಪ್ಪ ಟಿ ಸಾಲಿಯಾನ್, ಬೊಂಬಾಯಿ (9) ಕೆ ರಾಮಶೆಟ್ಟಿ ಬೊಂಬಾಯಿ (10) ಕೆ. ದಂಬಶೆಟ್ಟಿ, ಬೊಂಬಾಯಿ (11) ಮಲ್ಲೇಶಪ್ಪ ಎನ್ ಕರಾಜ್ಗಿ ಸವಣೂರು, ಧಾರವಾಡ (12) ಕೃಷ್ಣ ಪೊನ್ನಯ್ಯ ಶೆಟ್ಟಿ, ಬೊಂಬಾಯಿ. (13) ಕೆ ಪದ್ಮನಾಭ ಪ್ರಭು, ಮಂಗಳೂರು (14) ರಾಮ ಡಿ ಕರ್ಕೇರ, ಬೊಂಬಾಯಿ (15) N ರಾಮಕೃಷ್ಣ ಬಲ್ಲಾಳ, ಅಂಬ್ಲಪಾಡಿ (16) H ದೇವದಾಸ ರಾವ್, ಕುಂದಾಪುರ (17) ನಾಲ್ಕೂರು ಮೋಹನ ರಾವ್, ಬೊಂಬಾಯಿ (18) N. ವ ಹಾಬಲ ಶೆಟ್ಟಿ, ಬೊಂಬಾಯಿ (19) P N. ಭೀಮರಾವ್ ಉಡುಪಿ (20) ಕೆ ... ಶೆಟ್ಟಿ, ಬೊಂಬಾಯಿ (21) ಆ. ಕೆ ಯಬ್ರ್ಮಿ ಮಾಸ್ತರ, ಹುಬ್ಬಳ್ಳಿ (22) ಕೆ ಗೋಪಾಲಕೃಷ್ಣ ಕಾಮತ್, ಮಂಗಳೂರು. (23) ಮಂಗಳೂರು ಮಲ್ಲಿಗೆ ಮಂಗಳೂರು (24) ಕೆ. ಸುಬ್ರಾಯ ಪುರಾಣಿಕ, ಬೆಂಗಳೂರು. (25) ವಾಮನ ಸುಬ್ರಾಯ ನಾಯಕ ಬೊಂಬಾಯಿ. (26) ಸುಶೀಲ ಆರ್ ಶೆಟ್ಟಿ, ಬೊಂಬಾಯಿ. (27) ಯು. ಇಬ್ರಾಹೀಂ, ಕುಂದಾಪುರ (28) ಕೆ ಬಾಲಕೃಷ್ಣ ಶೆಣೈ, ಕಾರ್ಕಳ (29) ಕೆ ಎನ್ ಸುವರ್ಣ, ಬೊಂಬಾಯಿ (30) ಎಸ್. ಸುಕುಮಾರ ರಾವ, ಬೊಂಬಾಯಿ (31) ಪಾರ್ವತಮ್ಮ ಮೈಸೂರು, (32) ವಿಜಯಲಕ್ಷ್ಮಮ್ಮ, ಧಾರವಾಡ (33) ಕೆ ಲಕ್ಷ್ಮೀನಾರಾಯಣ ಭಟ್ಟ, ಹುಬ್ಬಳ್ಳಿ, (34) ಕೆ ಪಿ ಪುರಾಣಿಕ ತಿವೆಂಡ್ರಮ್ (35) ಯಜ್ಞನಾರಾಯಣ ಉಪಾಧ್ಯ ಮದ್ರಾಸು (36) ಜಿ ೦ ಪೂವಪ್ಪ, ಬೊಂಬಾಯಿ (37) ಕೆ. ಗೋಪಾಲಕೃಷ್ಣ ಹೆಗ್ಗಡೆ, ಉಡುಪಿ (38) ಎಂ. ಗಂಗಾ ಬಾಯಿ, ತೀರ್ಥಹಳ್ಳಿ. ಇವರೊಳಗೆ ಚೀಟಿ ಹಾಕಲಾಗಿ 1ನೇ ಇನಾಮು ನಂಬ್ರ 33ರನೇಯವರಿಗೂ IIನೆಯ 5 ಇನಾಮುಗಳು ನಂಬ್ರ 24, 35, 27, 31, 30ನೇಯವರಿಗೂ ಬಂದಿವೆ ಉಳಿದವರೆಲ್ಲರಿಗೆ ಆಣೆ 8 ರಂತೆ ಹಂಚಲಾಗಿದೆ. ಎಲ್ಲಾ ಇನಾಮುಗಳು ಪುಸ್ತಕರೂಪದಲ್ಲಿ ಕೊಡಲ್ಪಡುವವು ವ್ಯವಸ್ಥಾಪಕ.

ನೋಟೀಸು.

ಪುತ್ತೂರು ಸಿ. ಮು ಕೋರ್ಟಿನಲ್ಲಿ

S. C. ¹³²/₃₈

ಅಹಮ್ಮದ್ ಸಾಹೇಬ—**ವಾದಿ**

ರಾಮಕೃಷ್ಣಯ್ಯ, ಕಳಂಜ ಲಕ್ಷ್ಮೀನಾರ್ಣಪ್ಪಯ್ಯನವರ ಮಗ, ಧರ್ಮಸ್ಥಳ ಗ್ರಾಮ, ಪುತ್ತೂರು ತಾಲೂಕು, ಇವರಿಗೆ } **ಪ್ರತಿವಾದಿ**

ಪ್ರತಿವಾದಿಯಾದ ನಿಮ್ಮಿಂದ ದಾವಾ ನೋಟು ಪ್ರಕಾರ ಬಹಾ ರೂ 91—8—0 ವಾ ಕೋರ್ಟು ಖರ್ಚು ವ ಬಡ್ಡಿಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯು ತಾ. 16-9-38ಕ್ಕೆ ಇಟ್ಟದೆ. ಈ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ನೀವು ಆ ದಿನ ಬೆಳಗ್ಗೆ ಘಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸದಿದ್ದರೆ ನಿಮ್ಮನ್ನು ಠಿಮಾಯಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ನಿಮಗೆ ತಿಳಿಸಿಯದೆ—

(*Sd*) **H Pundarik Bhat,**
Pleader for Plaintiff.

ಪುತ್ತೂರು, ತಾ 30 8-38

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಕೂದಲು ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಲೇಪನದಿಂದ ಎಂತಹ ನರೆತ ಬಿಳಿ ಕೂದಲಾಗಲೀ ಸ್ಥಿರವಾಗಿ ಕಪ್ಪಗಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ದಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ನೂರಾರು ಸರ್ಟಿಫಿಕೇಟುಗಳು ನಮಗ ದೊರೆತಿರುವುದೇ ನಮ್ಮ ತೈಲದ ಮಹಾತ್ಮೆಯ ನಿಜತ್ವಕ್ಕೆ ಖಾತ್ರಿ ದೃಷ್ಟಾಂತ

ಸ್ವಲ್ಪ ಬಿಳಿಯಾದ ಕೂದಲ ಲೇಪನಕ್ಕೆ ಬೇಕಾಗುವ ತೈಲಕ್ಕೆ ರೂ 5-0-0 ಕಾಲಂಶಕ್ಕೂ ಮಿಕ್ಕಿದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ 7-0-0 ಬೆಲೆಯ ಎಣ್ಣೆ ಬೇಕಾಗುವುದು ಪತ್ರವ್ಯವಹಾರ ಇಂಗ್ಲಿಷಿನಲ್ಲೇ.

HAZRA & Co.,

P O **Bihar Nursery,** (DARBHANGA)

ಮೋಹಧ್ವಂಸಿನಿ

(Regd)

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ಮೋಹವನ್ನು ಕೊಲುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ ಶರೀರವಸ್ತ್ರ ಕೃತಿಶಿ ಮಾನವನ ಜೀವಶ್ರ್ಯವಗ್ಗೆ ಯ್ಯಾಕ್ತಿರುವ ಬಿಳುಪು, ಕೆಂಪು, ಪದಂಗಿಪುಣ್ಣು, ವೇಹಗಣ್ಣ, ಮೋಹಜ್ವರ, ಚರ್ಮವ್ಯಾಧಿ, ಕೀಲು ಗಂಟುನೋವ ಅತಿಮೂತ್ರ ವಗೈರೆ ಚಿಹ್ನೆಗಳನ್ನು 'ಮೋಹಧ್ವಂಸಿನಿ'ಯು ಶೀಘ್ರವಾಗಿ ಕುಂದಿಸಿ ರಕ್ತಶುದ್ಧಿಮಾಡಿ ನರಗಳಿಗೆ ಬಲವನ್ನೀಯುವದು, ಸೇವಿಸುವದಕ್ಕೆ ಹಿತಕರ, ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವಿದೆ

ದೊಡ್ಡ ಸೈಜು 4-0 0 ಮೀಡಿಯಂ ಸೈಜು 2-4-0 ಟ್ರಯಲ್ 1-2 0

ಹಂಚಿಕೊಡುವ ಪ್ರಮುಖರು-ಬಾಸೆಲ್ ಮಿಶ್ಶನ್ ಪ್ರೆಸ್, ಮಂಗಳೂರು

ಸಬ್ ಏಜಂಟರು:-ಉಡ್ಪಿ ಮಿಶ್ಶನ್ ಶೋಪ್, ಸಂತೆಕಟ್ಟೆ, ಉಡುಪಿ.

ವಿ. ಪಿ ಶೆಣೈ, ಕಾರ್ಕಳ ಭಕ್ತಾ ಬ್ರದರ್ಸ್, ಕಾಸರಗೋಡು.

Established] [1906

THE

UNITED INDIA

LIFE ASSURANCE COMPANY. LTD.,

HEAD OFFICE—MADRAS.

Trustee —**THE OFFICIAL TRUSTEE OF MADRAS.**

Policies in force	**Rs 486 Lakhs**
Annual income Exceeds	**Rs. 28 Lakhs**
Total Assets Exceed	**Rs. 100 Lakhs**
Total claims paid over	**Rs. 36 Lakhs**

The oldest and largest Life Assurance Company of South India, having 31 years of record service

A POLICY IN THE **UNITED INDIA** *COMBINES PERFECT SAFETY WITH PRUDENCE*

BRANCHES ALL OVER INDIA.

WANTE AGENTS

For particulars, please apply to:—

THE BRANCH MANAGER
The United India,
Life Assurance Company Ltd
BLOCK No 2, Ittu Pai Bazaar,
BRANCH MANGALORE S. K

OR

K. Keshava Shenoy, M. A
Organiser, Shantiniketan,
PENTLANDPET,
MANGALORE

ನೋಟೀಸು

ಪುತ್ತೂರು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮನಂಬ್ರ $\frac{371}{37}$ R. I A No $\frac{1}{38}$

ವಾದಿ-ಬಿ ಪ್ರಭಾಕರ ರಾವ್-ಅರ್ಜಿದಾರ
ಪ್ರತಿವಾದಿರು-ಮೋನು ಯಾನ ಹಮ್ಮದ್ ಕೂಡಾ—ಎದ್ರಿರು

ಎದ್ರಿರು—1 ಮೋನು ಯಾನೆ ಹಮ್ಮದ 2 ಬಿಪಾತುಮ್ಮಾ 3 ಐಸಂಮಾ-ಮೂಳ ಅಚ್ಚಬ್ಬ ಯಾನೆ ಹಸನೆ ಬ್ಯಾರಿ ಮ್ಯಾನರ ಮಕ್ಕಳು ಗಾಡಿ ಯನ ತಾಯಿ 4ನೇ ಪ್ರತಿವಾದಿಲು ಹಲೀಮಮ್ಮಾ
4 ಹಲೀಮಮ್ಮಾ ಸದ್ರಿ ಅಚ್ಚಬ್ಬ ಯಾನೆ ಹಸನೆ ಬ್ಯಾರಿ ವಿಧವೆ.

ಮಂಗಳೂರು ತಾಲೂಕು ಕುಕ್ಕಳ ಗ್ರಾಮದ ಪುಂಜಾಲಕಟ್ಟೆ ಇವರಿಗ—

ಸದರೀ ವ್ಯವಹರಣೆಯಲ್ಲಿ ಡಿಕ್ರಿ ದುರಸ್ತಿ ಕುರಿತು ಅರ್ಜಿದಾರನು ಕೊಟ್ಟ R. I. A $\frac{1}{38}$ನೇ ಅರ್ಜಿಯ ತನಿಖೆಯು 1938ನೇ ಇಸವಿ ಸಪ್ಟಂಬರ ತಾರೀಕು 10ನೇ ದಿವಸ ಇಟ್ಟಿರುತ್ತದೆ. ಆ ದಿವಸ ನೀವು 10 ಘಂಟೆಗೆ ಸದರೀ ಕೋರ್ಟಿನ ಮುಂದೆ ಖುದ್ದಾಗಿ ಆಗಲೀ, ವಕೀಲ ದ್ವಾರವಾಗಲೀ ಹಾಜರಾಗಿ ಉಡಹರಿಸಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಶಿವ್ಯಾಯವಾಡಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಪುತ್ತೂರು, 26-8-38) B Prabhakara Rao, *Petitioner*

ಕಮ್ಮಿ ಕ್ರಯದ ಖಾತ್ರಿ ವಾಚುಗಳು

ಹೊಸ ಸ್ವಿಸ್ ನ ನವೀನ ವಾಚುಗಳು ಅಗ್ಗವಾದ ಇತರ ಎಲ್ಲಾ ವಾಚುಗಳಿಗಿಂತ ಖಾತ್ರಿಯಾಗಿವೆ, ಹೆಚ್ಚು ಬಾಳಿಕೆಬರುವ ಮತ್ತು ಸರಿಯಾದ ಸಮಯ ಸೂಚಿಸುವ ಲಿವರ್ ವಾಚುಗಳಿಗಿರು ಮಾತ್ರ 3 ವರ್ಷದ ಗ್ಯಾರಂಟಿ ... 0 ಟಂಗಾರದಕ್ಕೆ ರೂ 3 4 0 1ರಿಂದ 3ವಾಚು ಗಳವರೆಗೆ 10ಆಣೆ ಟಪ್ಪಾಲು ಖರ್ಚು ಎಲ್ಲಕ್ಕೆ ನಂತರದ ಪ್ರತಿ 1ಕ್ಕೆ 4ಆಣೆ ಮಾತ್ರಹೆಚ್ಚು.

ಟಿ. ಜ ಎಂಡ್ ಕೋ,
ಪೋ ಸ್ಟ್ ಬಾಕ್ಸ್ ನಂಬ್ರ 6757, ಕಲ್ಕತ್ತ.
T Jha & Co
Post Box No 6757, Calcutta

ಕಟ್ಟಕಡೆಗೆ

ಲಕ್ಷಾಂತರ ಜನರು ಮನಗಂಡಿರುವ ವಿಷಯವಿದು
ಶೀತಲ ಉಲ್ಲಾಸಕರ ಮತ್ತು ಸಂಭ್ರಮದ ಸ್ನಾನಕ್ಕೆ
ಸ್ವಸ್ತಿಕ

'ಕಾಂತಿ'

ಟ್ವಾಲೆಟ್ ಸೋಪಿನ ಹೊರತು
ಇನ್ನೊಂದು ಉತ್ತಮವಾದುದಿರಲಾರದು.
ಅಲ್ಪ ಬೆಲೆಗೆ ಅತಿ ದೊಡ್ಡ ತುಂಡು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.
ಒಮ್ಮೆ ನೀವು ಸ್ವಸ್ತಿಕ ಕಾಂತಿ ಟ್ವಾಲೆಟ್ ಸೋಪನ್ನು ಉಪಯೋಗಿಸಿದರೆ ಆ ಮೇಲೆ ಇತರ ಸೋಪನ್ನು ಮೆಚ್ಚಲಾರಿರಿ.
53

ವಿನೋದ ಸ್ಪರ್ಧೆ

೫ರ ಉತ್ತರ.

೧	ಜ	ನ	ವ	ರಿ
೨	ಸೀ	ಲ	ಗ	ರಿ
೩	ಧಾ	ದ	ವಾ	ಡ
೪	ಹಿ	ಮಾ	ಲ	ಯ

ಸಮರ್ಪಕ ಉತ್ತರವಿತ್ತವರು

(1) ಶ್ರೀ ಕಂಡರ್ವಣಿ ಸಾವಿತ್ರಿಯಮ್ಮ, ಬೆಳ್ಳಾರೆ (2) ಶ್ರೀಮತಿ ಕಲ್ಯಾಣಿ, ಎಸ್ ಆರ್ ಶೆಟ್ಟಿ ಬೊಂಬಾಯಿ, (3) ಕುಮಾರಿ ಇಂದಿರಾ ಕೊರಡ್ಕಲ್ ಉಡುಪಿ (4) ಕೆ. N ಕಕೇರ, ಬೊಂಬಾಯಿ (5) ಯಂ ದತ್ತ, ಬೊಂಬಾಯಿ (6) ಬೊಂಬಾಯಿ ಮಲ್ಲಿಗೆ (7) ನಾರಾಯಣ ಕಕೇರ, ಬೊಂಬಾಯಿ (8) ದೂಮಪ್ಪ ಬಿ ಸಾಲಿಯಾನ್, ಬೊಂಬಾಯಿ (9) ಕೆ ರಾಮಶೆಟ್ಟಿ ಬೊಂಬಾಯಿ (10) ಕೆ ದುಬಿಶೆಟ್ಟಿ, ಬೊಂಬಾಯಿ (11) ಮಲ್ಲಿಕಾರ್ಜುನ ಎಸ್ ಕರಿಜಿನ್ನಿ ಸವಣೂರು, ಧಾರವಾಡ (12) ಕೃಷ್ಣ ಕುಕ್ಕನಯ್ಯ ಶೆಟ್ಟಿ, ಬೊಂಬಾಯಿ (13) ಕೆ ಪದ್ಮನಾಭ ಪ್ರಭು, ಮಂಗಳೂರು (14) ರಾಮ ಬಿ ಕಕೇರ, ಬೊಂಬಾಯಿ (15) N ರಾಮಕೃಷ್ಣ ಬಲ್ಲಾಳ, ಅಂಬ್ಲಪಾಡಿ (16) H ದೇವದಾಸ ರಾವ್, ಸ್ಕಂದೂರು (17) ನಾಟ್ಕೂರು ವೋಹನ ರಾವ್, ಬೊಂಬಾಯಿ (18) N. ಮಹಾಬಲ ಶೆಟ್ಟಿ ಬೊಂಬಾಯಿ (19) P N ಭಾವ ರಾವ್ ಉಡುಪಿ (20) ಕೆ ... ಶೆಟ್ಟಿ, ಬೊಂಬಾಯಿ (21) ಕೆ ... ವಿ ಮಾಸ್ತರ, ಹಬ್ಬಳ್ಳಿ (22) ಕೆ ಗೋಪಾಲಕೃಷ್ಣ ಕಾಮತ್, ಮಂಗಳೂರು (23) ಮಂಗಳೂರು ಮಲ್ಲಿಗೆ ಮಂಗಳೂರು (24) ಕೈ ಸುಬ್ಬಾಯ ಪುರಾಣಿಕ ಬೆಂಗಳೂರು (25) ಮಾಮನ ಸುಬ್ಬಾಯ ನಾಯಕ ಬೊಂಬಾಯಿ. (26) ಸುಶೀಲ ಆರ್ ಶೆಟ್ಟಿ, ಬೊಂಬಾಯಿ (27) ಯು. ಇಬ್ರಾಹೀಂ, ಕುಂದಾಪುರ (28) ಕೆ ಬಾಲಕೃಷ್ಣ ಶೆಣೈ, ಕಾರ್ಕಳ (29) ಕೆ ಎಸ್ ಸುವರ್ಣ, ಬೊಂಬಾಯಿ (30) ಎಸ್. ಸುಕುಮಾರ ರಾವ, ಬೊಂಬಾಯಿ (31) ಪಾರ್ವತಮ್ಮ ಸ್ಕೈಪೂರು, (32) ವಿಜಯ ಲಕ್ಷ್ಮಮ್ಮ, ಧಾರವಾಡ (33) ಕೆ ಲಕ್ಷ್ಮೀನಾರಾಯಣ ಭಟ್ಟ, ಪುತ್ತಿಗೆ, (34) ಕೆ. ಪಿ ಪುರಾಣಿಕ ತಿರೆಂದ್ರಮ್ (35) ಯದ್ಯ ನಾರಾಯಣ ಉಡುಪ ಮದ್ರಾಸು (36) ಯಂ ಪೂವಪ್ಪ, ಬೊಂಬಾಯಿ (37) ಕೆ. ಗೋಪಾಲಕೃಷ್ಣ ಹೆಗ್ಗಡೆ, ಉಡುಪಿ (38) ಎಂ ಗಂಗಾ ಬಾಯಿ, ತೀರ್ಥಹಳ್ಳಿ ಇವರೊಳಗೆ ಚೀಟ್ರಿ ಹಾಕಲಾಗಿ 1ನೇ ಇನಾಮು ನಂಬ್ರ 33ನೇಯವರಿಗೂ IIನೆಯ 5ಇನಾಮುಗಳು ನಂಬ್ರ 24, 35, 27, 31, 30ನೇಯವರಿಗೂ ಬಂದಿವೆ ಉಳಿದವರೆಲ್ಲರಿಗೆ ಆಣೆ 8ರಂತೆ ಹಂಚಲಾಗಿದೆ ಎಲ್ಲಾ ಇನಾಮುಗಳು ಪುಸ್ತಕರೂಪದಲ್ಲಿ ಕೊಡಲ್ಪಡುವವು ವ್ಯವಸ್ಥಾಪಕ

ನೋಟೀಸು.

ಪುತ್ತೂರು ಡಿ. ಮು ಕೋರ್ಟಿನಲ್ಲಿ
S. O $\frac{132}{38}$
ಅಹಮ್ಮದ್ ಸಾಹೇಬ—ವಾದಿ
ರಾಮಕೃಷ್ಣಯ್ಯ, ಕಳಂಜ ಲಕ್ಷ್ಮೀನಾರ್ಣಪ್ಪಯ್ಯನವರ ಮಗ, ಧರ್ಮಸ್ಥಳ ಗ್ರಾಮ, ಪುತ್ತೂರು ತಾಲೂಕು, ಇವರಿಗೆ } ಪ್ರತಿವಾದಿ

ಪ್ರತಿವಾದಿಯಾದ ನಿಮ್ಮಿಂದ ದಾವಾ ನೋಟು ಪ್ರಕಾರ ಬರಬೇಕಾದ ರೂ 91—8—0 ಮತ್ತು ಕೋರ್ಟು ಖರ್ಚು ವ ಬಡ್ಡಿಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯು ತಾ 16-9 38ಕ್ಕೆ ಇಟ್ಟದೆ ಈ ಕುರಿತು ನಿಮಗೇನಾದರೂ ಆಕ್ಷೇಪವಿದ್ದರೆ ನೀವು ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉಡಾಹರಿಸದಿದ್ದರೆ ನಿಮ್ಮನ್ನು ಗೈರುಹಾಜರೆಂದು ತೀರ್ಮಾನಿಸಲಾಗುವುದೆಂತ ಈ ಮೂಲಕ ನಿಮಗೆ ತಿಳಿಸಿಯದೆ—

(*Sd*) **H Pundarik Bhat,**
Pleader for Plaintiff.
ಪುತ್ತೂರು, ತಾ 30-8-38

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಕೂದಲು ಬೆಳ್ಳಗಾಗುವುದನ್ನು ನಿಲ್ಲಿಸಿರಿ.

ನಮ್ಮ ಎಣ್ಣೆಯ ಉಪಯೋಗದಿಂದ ಎಂತಹ ನರೆತ ಬಿಳಿ ಕೂದಲುಗಳೂ ಸ್ಥಿರವಾಗಿ ಕಪ್ಪಗಾಗಿ ಉಳಿಯದಿದ್ದ ಸಂದರ್ಭದಲ್ಲಿ ಕೊಟ್ಟ ಹಣಕ್ಕೆ ಡಬ್ಬಲ್ ವಾಪಾಸು ಕೊಡಲು ಗ್ಯಾರಂಟಿ ನೂರಾರು ಸರ್ಟಿಫಿಕೇಟುಗಳು ನಮಗೆ ದೊರೆತಿರುವುದೇ ನಮ್ಮ ತೈಲದ ಮಹಾತ್ಮೆಯು ನಿಜವೆಂಬುದಕ್ಕೆ ಖಾತ್ರಿ ದೃಷ್ಟಾಂತ

ಸ್ವಲ್ಪ ಬಿಳಿಯಾದ ಕೂದಲ ಶೀಷೆಗೆ ಬೇಕಾಗುವ ತೈಲಕ್ಕೆ ರೂ 5-0-0 ತಲೆಯ ಕಕ್ಕೂ ಮಿಕ್ಕದ ಬಿಳಿ ಕೂದಲನ್ನು ಕಪ್ಪುಮಾಡುವರೆ ರೂ 7-0-0 ಬೆಲೆಯ ಎಣ್ಣೆ ಬೇಕಾಗುವುದು ಪತ್ರವ್ಯವಹಾರ ಇಂಗ್ಲಿಷಿನಲ್ಲೇ

HAZRA & Co.,
P O Bihar Nursery, (DARBHANGA)

ಮೋಹಧ್ವಂಸಿನಿ

(Regd)

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಸ್ವಪ್ನ ಚಿಕಿತ್ಸೆ ಅನಾವಶ್ಯಕ ಶರೀರವನ್ನು ಕೃಶಿಸಿ ಮಾನವನ ಜೀವಶ್ರವನ್ನು ಯ ಕ್ಕತ್ತಿರುವ ಬಿಳುಪು, ಕೆಂಪು ಸಂಬಂಧಿಸುತ್ತಿದ್ದ, ಜೀವಹಾನಿಕರ ಮೇಹರೋಗ, ಚರ್ಮವ್ಯಾಧಿ, ಕೀಲುನೋವುಗಳಿಗೆ ಅತಿಮಾತ್ರ ವ್ಯಕ್ತಿ ಚಿಕಿತ್ಸೆಗೆ 'ಮೋಹಧ್ವಂಸಿನಿ'ಯು ಶೀಘ್ರವಾಗಿ ಬಿಂದುಸಿ ರಕ್ತ ಶುದ್ಧಿ ಮಾಡಿ ಅಂಗಗಳಿಗೆ ಬಲವನ್ನುಂಟುಮಾಡುವುದು, ಸೇವಿಸುವುದ ಕ್ಕೆ ರುಚಿಕರ, ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವಿದೆ

ದೊಡ್ಡ ಸೀಸೆ 4 0-0 ಮಧ್ಯಮ ಸೀಸೆ 2-4-0, ಚಿಕ್ಕ 1 2-0
ಹಂಚಿಕೊಡುವ ಪ್ರಮುಖರು -ಬಾಸೆಲ್ ಮಿಶ್ಶನ್ ಪ್ರೆಸ್, ಮಂಗಳೂರು
ಸಬ್ ಏಜಂಟರು -ಉಡ್ಪಿ ಮಿಶ್ಶನ್ ಶೋಪ್, ಸಂತೆಕಟ್ಟೆ, ಉಡುಪಿ.
ವಿ. ವಿ ಶೆಣೈ, ಕಾರ್ಕಳ ಭಕ್ತಾ ಬ್ರದರ್ಸ್, ಕಾಸರಗೋಡು

Established] [1906

THE
UNITED INDIA
LIFE ASSURANCE COMPANY, LTD.,
HEAD OFFICE—MADRAS.
Trustee—THE OFFICIAL TRUSTEE OF MADRAS

Policies in force	Rs 486 Lakhs
Annual income Exceeds	Rs. 28 Lakhs
Total Assets Exceed	Rs 100 Lakhs
Total claims paid over	Rs. 36 Lakhs

The oldest and largest Life Assurance Company of South India having 31 years of record service

A POLICY IN THE UNITED INDIA *COMBINES PERFECT SAFETY WITH PRUDENCE*
BRANCHES ALL OVER INDIA.
WANTE AGENTS
For particulars, please apply to—

THE BRANCH MANAGER
The United India,
Life Assurance Company Ltd
BLOCK No 2 Pilot Pai Bazaar
BRANCH MANGALORE S. K

OR

K Keshava Shenoy, M A
Organiser, Shartinikelan,
PENTLANDPET
MANGALORE

ಶ್ರೀಕೃಷ್ಣಜಯಂತಿ ಸಂಚಿಕೆ

7-9-1939.

ನವಯುಗ

NAVAYUGA

Chairman:

Sjt. Subhas Chandra Bose

Insist on

A "POLICY"

With

The Tropical Insurance Co., Ltd.

HEAD OFFICE—NEW DELHI

Growing public confidence is strengthening the pillar as a solid rock

For Particulars or Agency Apply to:

M. SUNDERRAM SHETTY,
BRANCH MANAGER,
Hampankatta, Mangalore.

OR

K. S. RAMAMURTHY, M.A.,
SECRETARY
160, Mount Road, Madras.

ಟ್ರೊಪಿಕಲ್

ಇನ್ಸೂರೆನ್ಸ್

ಕಂಪೆನಿ ಲಿಮಿಟೆಡ್

ನ್ಯೂ ಡೆಲ್ಲಿ.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ, ಮಂಗಳೂರು
ದಿ ಜೊಯಿಂಟ್ ಬುಕ್ಕಿಂಗ್ ಆಫೀಸು, ಕೊಡಿಯಾಲಬೈಲು.

ಸಮಯದ ಬೆಲೆ ಎಷ್ಟೆಂದು ನಿಶ್ಚಯಮಾಡಿದವರಿರುವರೇ?

ಹಣದ ಬೆಲೆಯನ್ನು ಕಟ್ಟಬಹುದು. ಆದರೆ ಸಮಯದ ಬೆಲೆಯನ್ನು ನಿಶ್ಚಯಿಸಲಸಾಧ್ಯ

ಇಂತಹ ಅತ್ಯಮೂಲ್ಯ ಸಮಯವನ್ನು ನಿರರ್ಥಕವಾಗಿ ಹಾಳುಮಾಡಲವಕಾಶಕೊಡದಂತೆ, ನಮ್ಮ ಸರ್ವಿಸುಗಳು ಪ್ರಾತಃಕಾಲದಿಂದ—ಸಾಯಂಕಾಲದ ವರೆಗೆ ಬಿಡುವಿಲ್ಲದೇ ಓಡಾಡುತ್ತಿದ್ದು ನಿಮ್ಮ ಯಾವದೇ ಕೆಲಸಗಳನ್ನಾದರೂ ನೀವು ಒಂದೂರಿನಿಂದ ಇನ್ನೊಂದೂರಿಗೆ ನಮ್ಮ ಬಸ್ಸುಗಳಲ್ಲಿ ತ್ವರ್ಯದಲ್ಲಿ ಪ್ರಯಾಣ ಬೆಳಸಿ, ನಿಮ್ಮ ಅತ್ಯಮೂಲ್ಯ ಸಮಯವನ್ನು ನಿರರ್ಥಕಗೊಳಿಸದಂತೆ, ನಾವು ಏರ್ಪಾಡುಮಾಡಿರುವೆವು. ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ನಾವು ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಲಿರುವೆವು.

JOINT MANAGERS

THE COMBINED BOOKING AGENCY, MANGALORE.

THE JOINT BOOKING OFFICE,
MANGALORE.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಏರ್ಪಾಸ್ತ್ರ ದನ್ನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೨ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ನಿಮ್ಮ ಹಲ್ಲುಗಳು

ಆರೋಗ್ಯವಾಗಿಯೂ ಮತ್ತು ಗಟ್ಟಿಯಾಗಿಯೂ ಇರಲು

S. N. V. Naidu ಇವರ

ಪ್ರಭಾ (ರಿಜಿಸ್ಟರ್ಡ್)

ಆಂಟಿಸೆಪ್ಟಿಕ್ ಟೂತ್ ಪೌಡರನ್ನೇ
ಉಪಯೋಗಿಸಿರಿ.

ಇದನ್ನು ಬೇವು ಮತ್ತು ಇತರ ಕ್ರಿಮಿನಾಶಕ ದ್ರವ್ಯಗಳಿಂದ ತಯಾರಿಸಿರುತ್ತೆ.

ಪ್ರಭಾ ಸುಗಂಧ ಕಾರ್ಯಾಲಯ, (ರಿಜಿಸ್ಟರ್ಡ್)
ಸಕಲೇಶಪುರ, (ಹಾಸನ ಡಿಸ್ಟ್ರಿಕ್ಟ್)

20ನೇ ಶತಮಾನದ ವಿಚಿತ್ರ
ಎಲ್ಲರೂ ಚಿನ್ನವನ್ನು ಪಡಕೊಳ್ಳಬಹುದು.

ಸ್ವಸ್ತಿಕಾ ಚಿನ್ನ

ತೊಲೆಗೆ ರೂ. 2 ಮಾತ್ರ.

ಆಧುನಿಕ ರಸಾಯನಶಾಸ್ತ್ರದ ವಿಜಯವು, ದೀರ್ಘಕಾಲದಿಂದ ಪರೀಕ್ಷಿಸಲ್ಪಟ್ಟ ಚಿನ್ನದ ಪ್ರತಿ ಚಿನ್ನ ವನ್ನು ಲೋಕಕ್ಕೆ ಕೊಟ್ಟಿರುವುದು.

ಸ್ವಸ್ತಿಕಾ ಚಿನ್ನದ ಗಟ್ಟಿಗಳು ನಿಜವಾದ ಚಿನ್ನದ ಗಟ್ಟಿಗಳನ್ನೇ ಹೋಲುವವು

ಪರೀಕ್ಷೆಯ ದ್ರಾವಕದಲ್ಲಿ ಮುಳುಗಿಸಿದ ಮೇಲೂ ಬಣ್ಣ ಮತ್ತು ಪ್ರಕಾಶವು ಪುಸ್ತಳಿ ಚಿನ್ನದಂತೆಯೇ ಇರುವುದು. ನಿಜವಾದ ಚಿನ್ನದಿಂದ ತಯಾರಿಸಲ್ಪಡುವಂತಹ ಎಲ್ಲಾ ಮಾದರಿಯ ಆಧುನಿಕ ನಮೂನೆಯ ಆಭರಣಗಳನ್ನು ಈ ಲೋಹದಿಂದಲೂ, ಚಿನ್ನದಂತಹ ಪ್ರಕಾಶ ಮತ್ತು ನಾಜೂಕಿನಿಂದಲೇ ಮಾಡಬಹುದು

ಚಿನ್ನದ ವಿಪರೀತವಾದ ಬೆಲೆಯನ್ನು ತಗ್ಗಿಸುವುದಕ್ಕಾಗಿ ಅದರೊಡನೆ ಬೆರಕೆ ಮಾಡಲು ಸ್ವಸ್ತಿಕಾ ಚಿನ್ನಕ್ಕೆ ಸರಿಯಾದುದು ಯಾವುದೂ ಇಲ್ಲ. ಯಾವ ದ್ರಾವಕದಿಂದಲೂ ಅದು ಕರಗುವುದಿಲ್ಲ. ಮತ್ತು ಚಿನ್ನವು ಒಂದಿಷ್ಟು ಕಂದುವ ಹಾಗಿಲ್ಲ.

ತರಿಸಿಕೊಂಡು ಒಮ್ಮೆ ಪರೀಕ್ಷಿಸಿದರೆ ಖಾತ್ರಿಯಾಗುವುದು. ಉದಾರ ಕಮಿಶನಿನ ಮೇಲೆ ಏಜಂಟರು ಮತ್ತು ಸ್ಟೋಕಿಸ್ಟರು ಬೇಕಾಗಿದ್ದಾರೆ. ಸಚಿತ್ರ ಕೆಟಲಾಗಿಗೆ ಬರೆಯಿರಿ.

Swastik Gold Co.,
122 Charni Road, BOMBAY No. 4.

ಈ ಕೆಳಗಿನ ಔಷಧಗಳಲ್ಲಿ
ಗುಣವಿಲ್ಲವೆಂದು
ಸಿದ್ಧಮಾಡಿಕೊಟ್ಟಲ್ಲಿ
೧೦೦ ರೂ. ಇನಾಮು

ಕಾಮಾಮೃತ

ಸ್ತ್ರೀ ಪುರುಷರಿಗೆ ಧಾತುಪುಷ್ಟಿ
ಕೊಡುವ ಲೋಕಪ್ರಸಿದ್ಧ
ಶಕ್ತಿವರ್ಧಕ ಸಿದ್ಧೌಷಧ.

ಇವು ಸ್ತ್ರೀ ಪುರುಷರಿಗೆ ಆನಂದವನ್ನುಂಟುಮಾಡುವ ಮಾತ್ರೆಗಳು, ಇದರಲ್ಲಿ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳನ್ನುಪಯೋಗಿಸಿದೆ. ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿದ್ದು. ಮುಂಡಕಶನವನ್ನು ಲೋಕದಲ್ಲಿಲ್ಲದಂತೆ ಮಾಡುವುದು.

ಗುಣವಿಲ್ಲದಿದ್ದಲ್ಲಿ ಹಣ ವಾಪ್ಸು -- ಕೆಟಲಾಗು ಉಚಿತ

ಒಂದು ತಿಂಗಳ ಔಷಧ ಕಿಮ್ಮತ್ತು ರೂ. 4-8-0, 15 ದಿನಗಳಿಗೆ ರೂ. 2-8-9

ಡಾ|| ಎ. ಕನಕರಾಜು ಚಿಕಾಕೋಲ್, (ವಿಜಾಗ್ ಡಿಸ್ಟ್ರಿಕ್ಟ್)

ESTD 1921 ಸ್ಥಾಪನೆ

FOUNDER
Sri A. B. Shetty, M L A
Parliamentary Secretary Govt of Madras
ಸಂಸ್ಥಾಪಕರು
ಶ್ರೀ ಎ. ಬಿ ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ ಕೆ ಶೆಟ್ಟಿ

ನವಯುಗ
NAVAYUGA

ಚಂದಾ ವಿವರ
1 ವರ್ಷಕ್ಕೆ - ರೂ 3— 4—0
6 ತಿಂಗಳಿಗೆ ರೂ 1—12—0
ಚಂದಾ ಹಣವನ್ನು ಮುಂಗಡ ಕಳಿಸಬೇಕು

ಸಹಸಂಪಾದಕ
ಕೆ. ಎಚ್ ಶೆಟ್ಟಿ.

ಸಂಪುಟ ೧೯
ಸಂಚಿಕೆ ೧

ಉಡುಪಿ, ಗುರುವಾರ ೭—೯—೧೯೩೯
Udipi, Thursday 7—9—1939

Vol. 19
No 1

ಶ್ರೀಕೃಷ್ಣ ಜಯಂತಿ ಸಂಚಿಕೆ

Sri Krishna Jayanthi Special

ಡಾ. ಕೆ. ವಿಟ್ಠಲ ಶೆಟ್ಟಿ,
ಜಿಲ್ಲಾ ಬೋರ್ಡ್ ಪ್ರೆಸಿಡಂಟ್,
ಇವರ ಸಂದೇಶ.

ಪ್ರಿಯ ಸಂಪಾದಕರೇ,

ನವಯುಗದ 19ನೇ ವರ್ಷಾರಂಭವೂ ಶ್ರೀಕೃಷ್ಣ ಜಯಂತಿಯೂ ಜತೆಗೊಂಡು ಬಂದಿರುವ ಸುಮುಹೂರ್ತದಲ್ಲಿ ನೀವು ವಿಶೇಷ ಸಂಚಿಕೆಯನ್ನು ಪ್ರಕಟಿಸಿರುವುದು ಅತ್ಯಂತ ಸಂದರ್ಭೋಚಿತವಾದುದು. ಕರ್ನಾಟಕ ಪತ್ರಿಕೆಗಳ ಜೀವನದಲ್ಲಿ 19ವರ್ಷ ದಾಟುವುದೆಂದರೆ ಮಹತ್ತಾದೊಂದು ಸಾಧನೆಯೆಂದು ನಾನೆಣಿಸುತ್ತೇನೆ ನವಯುಗವು ಇಂದು ಅಂತಹ ಸಾಧನೆಯ ಪರಿಣಾಮವಾಗಿ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಗಣನೀಯ ಸ್ಥಾನವೊಂದನ್ನು ಗಳಿಸಿಕೊಂಡಿದೆ ಹಲವು ಕಂಟಕಗಳಿಂದ ಪಾರಾಗಿ ಪ್ರೌಢಿಮೆ ಪಡೆದು ಮುನ್ನಡೆಯುತ್ತಿದೆ. ಉಡುಪಿ ಕ್ಷೇತ್ರಕ್ಕೆ ಹೋದಮೇಲದು ಹೆಚ್ಚೆಚ್ಚು ಜನಾದರಣೀಯವಾಗಿ ಬೆಳೆಯುತ್ತಿದೆಂಬುದು ಮತ್ತಷ್ಟು ಸಂತೋಷದ ಸಂಗತಿ. ಉಡುಪಿಯನ್ನು ಕ್ಷೇತ್ರವನ್ನಾಗಿ ಮಾಡಿಕೊಂಡಿರುವ ನವಯುಗವು ಉಡುಪಿಯ ಶ್ರೀ ಕೃಷ್ಣನ ದಯೆಯಿಂದ ಹೆಚ್ಚೆಚ್ಚು ಜನಸೇವೆಮಾಡಿ ಅಧಿಕಾಧಿಕವಾಗಿ ಕನ್ನಡಿಗರ ಪ್ರೀತಿಗೆ ಪಾತ್ರವಾಗಿ ಯಶಸ್ಸು ಪಡೆಯಲೆಂದು ನನ್ನ ಮನಃಪೂರ್ವಕವಾದ ಕೋರಿಕೆ

ಪರ್ಯಾಯ ಪೀಠಾರೂಢರಾದ ಶ್ರೀ ರಘುಮಾನ್ಯ ತೀರ್ಥ ಶ್ರೀಗಳವರ ಸಂದೇಶ.

ಮಹನೀಯರೇ,

ನೀವು ಕಳೆದ ವರ್ಷದಂತೆ ಈ ವರ್ಷವೂ ಶ್ರೀಕೃಷ್ಣ ಜಯಂತಿ ಸಂಚಿಕೆಯನ್ನು ಪ್ರಕಟಿಸುವುದು ಪ್ರಶಂಸನೀಯವು ಈ ವರ್ಷ ಶ್ರೀಕೃಷ್ಣ ಜಯಂತಿಯೊಂದಿಗೆ ನವಯುಗದ ನವ ವರ್ಷಾರಂಭವೂ ಒಂದಾಗೂಡಿದುದು ಶುಭ ಚಿಹ್ನೆಯೆಂದು ನಾವೆಣಿಸುತ್ತೇವೆ ನವ್ಯ ಉಡುಪಿ ಕ್ಷೇತ್ರಕ್ಕೆ ಬಂದಂದಿನಿಂದ ನವಯುಗವು ಪ್ರವರ್ಧಮಾನವಾಗಿ ಬೆಳೆಯುತ್ತಿದೆಯೆಂಬುದು ನನಗೆ ಆನಂದದ ವಿಷಯ. ನಿಮ್ಮ ಪತ್ರಿಕೆಯು ಇನ್ನಷ್ಟು ಬೆಳೆದು ಚಿರಕಾಲ ಬಾಳಿ ಉಡುಪಿಯ ಕೀರ್ತಿಯನ್ನು ಬೆಳಗಿಸಲೆಂದು ನಾವು ಸದಾ ಹಾರೈಸುತ್ತೇವೆ.

ಉಡುಪಿ ಶ್ರೀಕೃಷ್ಣ ಮಠ — ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳು

ಶ್ರೀ. ಶಿವರಾಮ ಕಾರಂತರ ಸಂದೇಶ

"ಉಡುಪಿ, ಮೊದಲಿಗೇನೇ ಕನ್ನಡ ಪತ್ರಿಕೆಗಳ ಬಳಗಕ್ಕೆ ಶ್ರೀಕೃಷ್ಣ ಸೂಕ್ತಿಯನ್ನೂ, ಬೋಧಿನಿಯನ್ನೂ ಕೊಟ್ಟು ತನ್ನ ಕರ್ತವ್ಯ ಸಲಿಸಿತು ನಮ್ಮ ದುರ್ದೈವದಿಂದ ಅವುಗಳು ಕಣ್ಮರೆಯಾದವು ನವಯುಗವು ಕೆಲವು ವರ್ಷಗಳಿಂದ ಹಲವು ಎಡರುಗಳನ್ನು ಕಿತ್ತು ಬಿಸುಟು, ತನ್ನ ಕರ್ತವ್ಯ ನೆರವೇರಿಸುತ್ತಿದೆ. ನಾಡು ಮುಂದುವರಿದಂತೆ ನಮಗಿರುವ ಪತ್ರಿಕಗಳು ಕಡಿಮೆಯೇ ಸರಿ. ಇದ್ದರೆ ಪತ್ರಿಕೆಗಳನ್ನು ಉಳಿಸಲು ಯತ್ನಿಸುವವರೆಷ್ಟು ಮಂದಿ! ಮರುಭೂಮಿಯಲ್ಲಿ ಸಂಭವಿಸಿದಂತೆ ಇಂದಿನ ಕನ್ನಡ ಪತ್ರಿಕೆಗಳ ಜೀವನವಾಗಿದೆ. ಅಂಬಿನ ಧೈರ್ಯ ಅದಕ್ಕೆ ಬೇಕು ಅಷ್ಟೆಲ್ಲ ತಾಳ್ಮೆಯಿಂದ ನವಯುಗದ ಸಂಪಾದಕರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿರುವುದು ಪ್ರಶಂಸನೀಯ. ಅವರ ಸಾಹಸಕ್ಕೆ ತಕ್ಕುದಾದ ಯಶಸ್ಸು ದೊರೆಯುವುದೆಂದು ನನ್ನ ನಂಬಿಕೆ"



Continued patronage from our clientele has emboldened us to come out with a Special Number on the occasion of Shri Krishna Jayanthi which has auspiciously coincided with the beginning of our 19th year We have tried as far as possible to make some innovations, and introduce new features in our Special Our heart is filled with joyful gratitude when we state that our 'Special Numbers' have achieved great success and increased the popularity of the paper beyond our expectations We offer our heartfelt thanks to our rapidly increasing advertising clients etc, the various contributors, our enthusiastic agents, press people who have spared no pains and last but not least to the well wishers of the Navayuga who have sent their blessings and good wishes

May Lord Sri Krishna shower on them all the choicest blessings on earth is our prayer. —*Editors*

ನಮ್ಮ ಗಿರಾಕಿಗಳ ಯದ ಪ್ರಕಾರವಾದ ಪ್ರೋತ್ಸಾಹದಿಂದ ಶ್ರೀಕೃಷ್ಣ ಜಯಂತಿಯೂ, ನಮ್ಮ 19ನೇ ವರ್ಷಾರಂಭವೂ ಒಟ್ಟಿಗೆ ಬಂದ ಈ ಸುಯೋಗದಲ್ಲಿ ವಿಶೇಷ ಸಂಚಿಕೆಯೊಂದನ್ನು ಹೊರಡಿಸುವ ಧೈರ್ಯವು ನಮ್ಮಲ್ಲುಂಟಾಯಿತು. ಈ ವಿಶೇಷ ಸಂಚಿಕೆಯಲ್ಲಿ ಕೆಲವು ಹೊಸ ಮಾರ್ಪಾಟು ಮತ್ತು ನೂತನತೆಯನ್ನು ಮಾಡಲು ನಾವು ಸಾಧ್ಯವಿದ್ದಷ್ಟು ಪ್ರಯತ್ನಿಸಿರುತ್ತೇವೆ. ನಮ್ಮ ವಿಶೇಷಸಂಚಿಕೆಗಳು ಬಹಳ ಜಯಶಾಲಿಯಾಗಿ ಪತ್ರಿಕೆಯ ಜನಾದರತೆಯನ್ನು ಹೆಚ್ಚಿಸಿವೆಯೆನ್ನುವಾಗ ನಮ್ಮ ಹೃದಯವು ಆನಂದಪೂರಿತ ಕೃತಜ್ಞತೆಯಿಂದ ತುಂಬಿರುವುದು. ದಿನೇ ದಿನೇ ಹೆಚ್ಚುತ್ತಿರುವ ನಮ್ಮ ಜಾಹೀರಾತುದಾರರಿಗೂ, ಲೇಖಕವೃಂದಕ್ಕೂ ಉತ್ಸಾಹೀ ಏಜಂಟರಿಗೂ, ಯಾವ ಶ್ರಮವೂ ಲೆಕ್ಕಿಸದೆ ಕೆಲಸ ಮಾಡಿರುವ ಛಾಪಖಾನೆಯವರಿಗೂ ನಮ್ಮ ಮೇಲಿನ ಅಭಿಮಾನದಿಂದ ಪತ್ರಿಕೆಗೆ ಆಶೀರ್ವಾದ ಮತ್ತು ಸಂದೇಶಗಳನ್ನು ಕಳುಹಿಸಿರುವ ಹಿತಚಿಂತಕರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು ಭಗವಾನ್ ಶ್ರೀಕೃಷ್ಣನು ಅವರ ಮೇಲೆ ಲೋಕದ ಅತ್ಯುತ್ತಮ ಸುಖಗಳನ್ನು ಸುರಿಯಲೆಂದೇ ನಮ್ಮ ಪ್ರಾರ್ಥನೆ —**ಸಂಪಾದಕರು.**

ಕ್ರಾಂತಿಕಾರಕ ಶ್ರೀಕೃಷ್ಣ

ಮಾನವನನ್ನು ದೇವರಾಗಿ ಮಾಡುವ ಮೂಢ ಮನೋವೃತ್ತಿ.



ಬಾಲ ಶ್ರೀ ಕೃಷ್ಣ

ಇಂದೀಗ ಶ್ರೀಕೃಷ್ಣನು ಹಿಂದುಗಳ ದೇವರಾಗಿ ಬಿಟ್ಟಿದ್ದಾನೆ ಆತನ ಬಾಲ ಲೀಲೆ, ತಾರುಣ್ಯದ ಸಾಹಸ, ಯೌವನದ ಅಸಾಧಾರಣ ಚಾತುರ್ಯ ಮತ್ತು ಮಹತ್ಕಾರ್ಯಗಳ ಕುರಿತೆಲ್ಲಾ ಪೌರಾಣಿಕರು, ಅದ್ಭುತ ಕತೆಗಳನ್ನು ಕಲ್ಪಿಸಿ ಆತನನ್ನು ಮಾನವತ್ವದ ಮಟ್ಟದಿಂದೆತ್ತಿ ದೇವತ್ವದ ಅಟ್ಟಕ್ಕೇರಿಸಿದ್ದಾರೆ ವಿಜ್ಞಾನವು ಬಹಳವಾಗಿ ಮುಂದುವರಿದಿರುವ ಈ ಇಪ್ಪತ್ತನೆಯ ಶತಮಾನದಲ್ಲಿ ಜೀವನದ ಪ್ರತಿಯೊಂದು ಸಂಗತಿಯೂ ಕ್ಷಣಕ್ಷಣನೆಂಬಂತೆ ಪ್ರಕಟಿಸಲ್ಪಡುವ ಈ ಕಾಲದಲ್ಲಿ ಕೂಡಾ ಗಾಂಧಿಯವರಂತಹ ಮಹಾ ಪುರುಷರನ್ನು ದೇವರನ್ನಾಗಿ ಕಲ್ಪಿಸಿಕೊಂಡು, ಅವರ ಅದ್ಭುತ ಕೃತ್ಯಗಳೆನ್ನುವ ದಂತಕತೆಗಳು ಹುಟ್ಟಿ ಪ್ರಚಾರವಾಗಿರುವಾಗ, ಇತಿಹಾಸವೆಂಬುದು ಹುಟ್ಟುವ ಬಹಳ ಕಾಲದ ಮೊದಲು ಕೆಲವು ಸಾವಿರ ವರ್ಷಗಳ ಹಿಂದೆ ಜನಿಸಿದ ಮಹಾಪುರುಷನಾದ ಶ್ರೀಕೃಷ್ಣನು ದೇವತ್ವದ ವೇದಿಕೆಗೇರಿಸಲ್ಪಟ್ಟು ಅವನು ಮಾಡಿರುವ ಅಸಾಧಾರಣ ಸಾಹಸ ಹಾಗೂ ಚಾತುರ್ಯದ ಕೆಲಸಗಳು ಅದ್ಭುತ ಪೌರಾಣಿಕ ಕಥೆಗಳಾಗಿ ಹಿಂದುಗಳಲ್ಲಿ ಹಬ್ಬಿದುದರಲ್ಲಿ ಆಶ್ಚರ್ಯವಾದರೂ ಏನು?

ಜಡಾರಾಧನೆಯ ಅಂಧರೂಢಿ

ಒಬ್ಬನೇನಾದರೂ ಅಸಾಧಾರಣ ಕೆಲಸ ಮಾಡಿದನೆಂದರೆ ಕೂಡಲೆ ಅವಕ್ಕೆ ಅದ್ಭುತದ ಬಣ್ಣ ಕೊಟ್ಟು, ಆ ವ್ಯಕ್ತಿಯನ್ನು ಸಾಮಾನ್ಯ ಜೀವನದಿಂದ ಅಮಾನುಷತೆಯ ಆಕಾಶಕ್ಕೇರಿಸಿ ನಾನಾ ಕಟ್ಟುಕತೆಗಳನ್ನು ಕಟ್ಟಿ, ವೀರಾನುಕರಣೆಯ ಬದಲಿಗೆ ಜಡಾರಾಧನೆಯ ಪರಂಪರೆಯನ್ನೇ ತಮ್ಮ ವಂಶೀಯರಿಗೆ ಬಿಡುವುದಂತೂ ಹಿಂದೂ ಸಮಾಜಕ್ಕೆ ಅನಾದಿಕಾಲದಿಂದಲೂ ತಗಲಿರುವ ಭಯಂಕರ ಅಂಟುರೋಗ, ಇದರ ಪರಿಣಾಮವಾಗಿ ಹಿಂದೂದೇಶದಲ್ಲಿ ಮಾನವರಿಗಿಂತಲೂ ವೃಥಾದೇವರುಗಳ ಸಂಖ್ಯೆಯು ಹಲವು ಪಾಲು ಹೆಚ್ಚಿರುವುದು ಮಾನವನ ಮನೆಮಾರಿಗಿಂತ ವೃಥಾದೇವರುಗಳ ಗುಡಿಗೋಪುರಗಳು ಮಹತ್ವವಾಗಿರುವವು. ಇಹಜೀವನದ ಸುಖಸಂಪತ್ತಿಗಿಂತ ಪರಲೋಕದ ಸುಖಸಂಪತ್ತು ಪ್ರಧಾನವಾಗಿರುವುದು ಕ್ಷಯರೋಗದಂತೆ ಹಿಂದೂ ಸಮಾಜದ ಶರೀರವನ್ನು ಕ್ಷಯಿಸಿ ಹಿಂದುಗಳನ್ನು ನಿರ್ವೀರ್ಯ, ಪೌರುಷಹೀನ ಮತ್ತು ಜೀವನ್ಮೃತರನ್ನಾಗಿ ಮಾಡಿರುವ ಮಹತ್ತಾದ ದುರಾಚಾರವೆಂದರೆ ಈ ಜಡಾರಾಧನೆ ಇದರ ಮೂಲೋತ್ಪಾಟನೆಯ ಬದಲಿಗೆ ಇನ್ನೂ ಇನ್ನೂ ಬಲಪಡಿಸುವ ಪ್ರಯತ್ನವು ನಡೆಯುತ್ತಿರುವುದು ಬಹಳ ಶೋಚನೀಯ

ನವನಿರ್ಮಾಣವೇ ಶ್ರೀಕೃಷ್ಣನ ಜೀವನಮಂತ್ರ

ನಾನು ಶ್ರೀಕೃಷ್ಣನನ್ನು ದೇವತ್ವದ ವೇದಿಕೆಯಿಂದ ಕಳಗಿಳಿಸಿ, ಪೌರಾಣಿಕರು ಆತನ ಸುತ್ತಲೆಲ್ಲಾ ರಚಿಸಿರುವ ಅದ್ಭುತರಮ್ಯ ಗುಡಿ, ಗೋಪುರ, ಪ್ರಾಕಾರಾದಿಗಳ ಬಂಧನದಿಂದ ಆತನನ್ನು ಹೊರಗೆ ಮಾನವ ಕ್ಷೇತ್ರದ ತಳಕ್ಕೆ ತಂದು, ಆತನ ಜೀವನದಿಂದ ಹಿಂದುಗಳು ಇಂದೇನಾದರೂ ಪಾಠ ಕಲಿಯಬಲ್ಲಿರೆಯೋ, ಇಂದಿನ ಹಿಂದೂ ತರುಣರೇನಾದರೂ ಹೊಸ ಹುರುಪು ತಾಳಲಿದೆಯೋ ಎಂದು ವಿಚಾರಿಸಲೆಳಸುವೆನು ಹಿಂದುಗಳ ಅವತಾರಗಳಲ್ಲಿ ಶ್ರೀಕೃಷ್ಣನಷ್ಟು ಮಾನವತೆಯುಳ್ಳ ಅವತಾರವು ಇನ್ನೊಂದಿಲ್ಲ. ದೊಡ್ಡ ಕ್ರಾಂತಿಕಾರಿ ಆತ. ಸಮಾಜನಿರ್ಮಾಣಕಾರಕ, ದೀನ ದುಃಖಿತ ಜನ ರಕ್ಷಕ. ಪತಿತೋದ್ಧಾರಕ, ಅನಾಥಬಂಧು ಹೊಸ ರೀತಿ-ನೀತಿಗಳ ನಿರ್ಮಾಣಕ ನವ ಜನಾಂಗವನ್ನು ಕಟ್ಟಿದವನು. ನವಸಮಾಜವನ್ನು ರಚಿಸಿದವನು. ಎಲ್ಲಾ ವಿಷಯದಲ್ಲಿಯೂ ನವೀನವಾದ ರಚನೆಯೇ ಶ್ರೀಕೃಷ್ಣನ ಜೀವನದುಸಿರು ಪ್ರಗತಿಗೆ ತೊಡಕಾಗಿ ನಿಂತ ಹಿಂದಿನ ಆಚಾರ ವಿಚಾರಗಳನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ಕಿತ್ತೊಗೆದು ಹೊಸ ದಾರಿ ಹೊಸ ಮಾದರಿಯನ್ನು ಹಾಕಿಕೊಟ್ಟವನವನು ಗೋವಳನಾಗಿ ಹುಟ್ಟಿ ಯಾದವ ಜನಾಂಗವನ್ನು ಕಟ್ಟಿ ದ್ವಾರಕೆಯನ್ನು ನಿರ್ಮಿಸಿ ಯದುವಂಶ ಶಿಖಾಮಣಿಯಾಗಿ ಮೆರೆದವನವನು.

ದೊಡ್ಡ ಬಂಡಾಯಗಾರ

ಶ್ರೀಕೃಷ್ಣನು ಇಂದಿನ ಹಲವು ಕ್ರಾಂತಿಕಾರಕ ಮಹಾಪುರುಷರಂತೆಯೇ ಮಹತ್ತಾದ ಕ್ರಾಂತಿಕಾರಕ ಯುಗ ಪುರುಷನೆಂದರೆ ಇಂದು ಆತನನ್ನು ಆರಾಧಿಸುತ್ತಿರುವ ಸನಾತನಿಗಳು ಹೌಹಾರಿ ಬೀಳಬಹುದು ಆದರೆ ವಿಚಾರದ ಭೂತಕನ್ನಡಿಯಿಂದ ಶ್ರೀಕೃಷ್ಣನ ಜೀವನವನ್ನು ಪರೀಕ್ಷಿಸಿದಲ್ಲಿ ಯಾರಿಗಾದರೂ ಇದು ವೇದ್ಯವಾಗುವ ವಿಷಯ ಬಾಲಕೃಷ್ಣನು ದೊಡ್ಡ ಪುಂಡ ಮತ್ತು ಪೋಕ್ರಿ ಆತನ ಬಾಲಲೀಲೆಗಳಿಂದ ಇದು ಸುವ್ಯಕ್ತವಾಗುವುದು ಅವನನ್ನು ಆಳಲು ಅಸಾಧ್ಯವಾಗಿತ್ತು ಯಶೋದಗೆ ಬಾಲಕನಾಗಿರುವಾಗಲೇ ದೊಡ್ಡ ಬಂಡಾಯಗಾರನವ ಬಾಲಕರ ಸ್ವಭಾವಸಿದ್ಧ ಪ್ರವೃತ್ತಿಗಳನ್ನು ಹತ್ತಿಕ್ಕದೆ ಸ್ವಚ್ಛಂದವಾಗಿ ಹರಿಯಬಿಡಬೇಕೆಂಬ ಆತ್ಯಾಧುನಿಕ ಸಾರವನ್ನು ಶ್ರೀಕೃಷ್ಣನ ಬಾಲ್ಯದಿಂದಲೇ ನಾವು ಕಲಿಯಬಹುದು ಅವರಿಂದ ಹಾವಳಿಯಾದರೂ ಹೆತ್ತವರದನ್ನು ಸಂತೋಷದಿಂದ ತಾಳಿಕೊಳ್ಳಬೇಕು, ಅದನ್ನು ರೂಢಿಯ ಕಟ್ಟು-ನಿಟ್ಟು, ಕ್ರಮ ಶಿಸ್ತುಗಳ ಬಂಧನದೊಳಗೆ ಹಾಕಿಡಲು ಪ್ರಯತ್ನಿಸಿದರೆ ಪರಿಣಾಮ ವಿಪರೀತವಾಗುವುದು ಶ್ರೀಕೃಷ್ಣನ ಅಸಾಧಾರಣ ಹಾಗೂ ದುರ್ದಮನೀಯ ಶಕ್ತಿಯ ಆವಿರ್ಭಾವವೇ ಆತನ ಬಾಲಲೀಲೆಗಳು ಗೋಕುಲದಲ್ಲಿ ದೊಡ್ಡ ಗೊಂದಲವನ್ನೇ ಎಬ್ಬಿಸಿಬಿಟ್ಟಿತದು. ಪುಂಡಕೃಷ್ಣನು ಬಾಲಕ ತಂಡವೊಂದನ್ನು ಕಟ್ಟಿಕೊಂಡು ಗೋಕುಲದಲ್ಲೊಂದು ಬಂಡಾಯವನ್ನೇ ಎಬ್ಬಿಸಿಬಿಟ್ಟ ಗೋಪಿಕೆಯರಿಗೆ ಅವನು ಕೊಟ್ಟ ಪೀಡೆ ಎಷ್ಟು? ಯಶೋದೆಯ ಬಳಿಗೆ ಪ್ರತಿನಿತ್ಯವೂ ಬರುವ ದೂರುಗಳೆಷ್ಟು? ಆದರೂ ಕೃಷ್ಣನು ಎಂತಹ ಮುದ್ದು ಕುವರ ಅವರಿಗೆಲ್ಲ! ಬೆಣ್ಣೆ ಮೊಸರನ್ನು ಕದ್ದಾದರೂ ತಿಂದು ಬೆಳೆದವನವನು ಬಾಲಕರಿಗೆ ಹೆಚ್ಚಾಗಿ ಹಾಲು ಬೆಣ್ಣೆ ಮತ್ತು ಮೊಸರನ್ನು ಕೊಡಲೇ ಬೇಕಲ್ಲವೇ? ತಮ್ಮ ತಿನಿಸನ್ನವು ನೋಡಿದಲ್ಲಿ ಕೈಹಾಕುವವು. ಅವುಗಳೇನು ಗೊತ್ತು ಆ ತಿನಿಸನ್ನು ಕೆಲವರು ತಮ್ಮ ಸ್ವಾರ್ಥದ ಸೊತ್ತಾಗಿ ಮಾಡಿಕೊಂಡಿರುವರೆಂದು ಶ್ರೀಕೃಷ್ಣನ ಬಾಲಲೀಲೆಗಳು ಇಂದೂ ಹಿಂದುಗಳ ಮನೆಮಾತಾಗಿರುವುದು

ತಾರುಣ್ಯದ ವಿಚಿತ್ರ ಸಾಹಸ

ಶ್ರೀ ಕೃಷ್ಣನು ತಾರುಣ್ಯದ ಹೊಸ್ತಿಲಲ್ಲಿ ಕಾಲಿಡುವಾಗಲೇ ಆರಂಭಿಸಿದ್ದಾನೆ ಅತ್ಯಂತ ಸಾಹಸದಿಂದ ಗೋಕುಲದ ಗೋವುಗಳ ಮತ್ತು ಗೋಪಾಲ ಜನರ ಪೀಡೆ ಉಪದ್ರವಗಳನ್ನು ನಿವಾರಿಸಲಿಕ್ಕೆ ತಾನು ಚಿಕ್ಕಂದಿನಿಂದ ಒಡನಾಡಿ ಬೆಳೆದ ಗೋಕುಲದ ಗೋವುಗಳು ಮತ್ತು ಗೋಪಾಲರೆಂದರೆ ಆತನ ಪ್ರಾಣದ ಪ್ರಾಣ. ಗೋಪಾಲರೆಲ್ಲರೂ ಆತನ ಆಪ್ತ ಗೆಳೆಯರು. ಗೋಪಿಕಾ ಸ್ತ್ರೀಯರೆಲ್ಲಾ ಪ್ರೀತಿಯ ಗೆಳತಿಯರು. ಗೋಕುಲವನ್ನೇ ಪ್ರತ್ಯಕ್ಷ ನಂದನವನವನ್ನಾಗಿ ಪರಿವರ್ತಿಸಿ ಬಿಟ್ಟಿದ್ದನವನು. ಜನರಿಗೆ ನಾನಾ ರೀತಿಯ ಪೀಡೆ ಕೊಡುವ ದುಷ್ಟ ಜನರನ್ನೆಲ್ಲಾ ನಾಶಮಾಡಿದನು. ತನ್ನ ತರುಣ ಗುಂಪಿನೊಂದಿಗೆ ಅತ್ಯಂತ ಸಾಹಸಪರ ಕೆಲಸಗಳನ್ನು ಮಾಡಿ ಜನತೆಯನ್ನು ವಿಸ್ಮಯಗೊಳಿಸಿದನು ತನ್ನ ವಿಹಾರ ವಿನೋದ ಕ್ರೀಡೆಗಳಿಂದ ಗೋಪ ಗೋಪೀ ಜನರ ಮನ ರಮಿಸುವನು. ಬಾಲ ಕೇಳಿಯಲ್ಲಿ ಕೃಷ್ಣನು ಎಷ್ಟೊಂದು ದುರ್ದಮನೀಯ ಪುಂಡನೋ ತಾರುಣ್ಯದಲ್ಲಿ ಅಷ್ಟೇ ಸಾಹಸಿ ಬಂಡಾಯಗಾರನು. ಡಂಭಾಚಾರ, ನಟನೆ, ವಂಚನೆಗಳ ಮೂಲಕ್ಕೇನೇ ಕೊಡಲಿ ಇಡುವವನವನು. ನಿಸರ್ಗಸಿದ್ಧ ಸರಳ ಪ್ರೇಮಮಯ ಜೀವಿತ ಆತನದು ಗೋಪಿಕಾಸ್ತ್ರೀಯರನ್ನು ಎಷ್ಟೊಂದು ರೀತಿಯಲ್ಲಿ ಕಾಡಿ ಪೀಡಿಸಲಿಲ್ಲ ಆತ! ಸ್ನಾನ ಮಾಡುವಾಗ ಅವರ ಸೀರೆಯನ್ನು ಕೂಡಾ ಕದ್ದೊಯ್ದಿಡುವ ಹುಡುಗಾಟಿಕೆ ಮಾಡಿ ನಟನೆಯ ಲಜ್ಜೆಯನ್ನವರು ಬಿಟ್ಟು ಬಿಡುವಂತೆ ಮಾಡಿದನು ಗುಡ್ಡ ಕಾಡುಗಳಲ್ಲಿ ಗೋವುಗಳನ್ನು ಮೇಯಿಸುವಾಗ ಗೋವಳ ಹೃದಯವನ್ನು ಆನಂದಿಸುವ ಸರಳ ಹಾಗೂ ಅತ್ಯಂತ ಮಧುರ ಗಾನೋಪಕರಣವೆಂದರೆ ಕೊಳಲು ಶ್ರೀಕೃಷ್ಣನು ವೇಣುಗೋಪಾಲನಾಗಿ ತನ್ನ ಮೃದು ಮಧುರ ಪ್ರೇಮ ಗಾನದಿಂದ ಗೋಪ ಗೋಪಿಯರ ಮಾತ್ರವಲ್ಲದೆ ಪಶುಗಳಾದ ಗೋವುಗಳ ಹೃದಯವನ್ನೂ ಸೂರೆಮಾಡಿಬಿಟ್ಟನು. ಆತನ ಕೊಳಲ

ಇಂಜೆಕ್ಷನಿಗೆ ಹಣ ವ್ಯಯಿಸಬೇಡಿ.

ಸೀಮೂತ್ರಕ್ಕೆ ದಿವ್ಯೌಷಧಿ

COPALTRA

ನವೀನ ಹಾಗೂ ನಿರಪಾಯವಾದ ಉಷ್ಣವಲಯದ ಈ ಗಿಡ ಮೂಲಿಕಾ ಔಷಧಿ ಇರುವಾಗ ವಿಪರೀತ ವೆಚ್ಚದ ಇಂಜೆಕ್ಷನುಗಳಿಗೇಕೆ ಹಣ ವ್ಯಯಿಸುವಿರಿ?

ಇನ್ನೆಂದೂ ಉಂಟಾಗದಂತೆ ಒಮ್ಮೆಯೇ ಗುಣಮಾಡಿಬಿಡುತ್ತದೆ. ಸ್ವಾಭಾವಿಕ ಮತ್ತು ನಿರಪಾಯವಾಗಿರುತ್ತದೆ. ಸೀಮೂತ್ರವು ಅಜ್ಞಾತವಿರುವ ಪ್ರದೇಶದಲ್ಲಿ ಕಂಡ ಹಿಡಿಯಲ್ಪಟ್ಟಿರುವ ವಿಚಿತ್ರ ಉಷ್ಣವಲಯ ರಸಾಯನದ ಆಧಾರದಿಂದ 'ಕೊಪಾಲ್ಟ್ರ' ತಯಾರಿಸಲ್ಪಟ್ಟಿದೆ ಪ್ರತಿಯೊಂದು ರೀತಿಯ ಸೀಮೂತ್ರಕ್ಕೂ ಕೊಪಾಲ್ಟ್ರವು ರಾಮಬಾಣದಂತಾಗಿದೆ ಒಂದು ಕಪ್ ಚಾ ಕುಡಿಯುವಂತೆ ಅದನ್ನು ಸುಲಭವಾಗಿ ತೆಗೆದುಕೊಳ್ಳಬಹುದು, ಶರೀರದ ಸಕ್ಕರೆಯನ್ನೆಲ್ಲಾ ಕೊಪಾಲ್ಟ್ರವು ಎಂದೂ ಹೊರಗಟ್ಟದಿರಬಾರದು ಫ್ರಾನ್ಸ್ ದೇಶದ ಮುಖ್ಯ ಪಟ್ಟಣವಾದ ಪರಿಸಿನ ಔಷಧಿ ನಿಯಂತ್ರಕ ನೆಶನಲ್ ಲೆಬೊರೆಟರಿಯಲ್ಲಿ ಕೊಪಾಲ್ಟ್ರವು ರಿಜಿಸ್ಟ್ರಿಯಾಗಿದ ರಿಜಿಸ್ಟ್ರಿ ನಂಬ್ರ 1084-1, ಕೊಪಾಲ್ಟ್ರನನ್ನು ಸೇವಿಸಿ ಸೀಮೂತ್ರ ವಿಮುಕ್ತರಾಗಿರಿ ಒಂದು ತಿಂಗಳ ಚಿಕಿತ್ಸೆಗೆ ಸಾಕಾಗುವಷ್ಟರ ಒಂದು ಪೆಟ್ಟಿಗೆಯ ಬೆಲೆ ರೂ 10. ವಿ ಪಿ ಚಾರ್ಜು ಪ್ರತ್ಯೇಕ

ಇಂಡಿಯಾ, ಬರ್ಮಾ ಮತ್ತು ಸಿಲೋನಿನ ಸೋಲ್ ಏಜಂಟರು.

ಕೊಪಾಲ್ಟ್ರ ಎಂಡ್ ಕೋ, ಲಿಮಿಟೆಡ್, ಮಂಗೇಶ್ ಬಿಲ್ಡಿಂಗ್, 36 ನ್ಯೂ ಭಾಜಿವಾಡಿ ಸ್ಟ್ರೀಟ್, ಒಪೇರ ಹೌಸಿನ ಬಳಿ, ಬೊಂಬಾಯಿ, ನಂಬ್ರ 4 ಶ್ರೀ. ಬಿ ಬ ಳಿಗ, ಶೋಲಾಪುರ ಸೈಯದ್ ಅಬ್ದುಲ್ ರಜಾಕ್ ಎಂಡ್ ಕೋ, ಹೈದರಾಬಾದ್, ಡಕ್ಕನ್ ಆಪ್ಟೆ ಎಂಡ್ ಕೋ, ಮದ್ರಾಸು ಬೊಂಬಾಯಿಯ ಎಲ್ಲಾ ಪ್ರಮುಖ ಕೆಮಿಸ್ಟರಲ್ಲಿ ಸಿಗುತ್ತದೆ. ಪ್ರತಿನಿಧಿಗಳಿಲ್ಲದ ಪಟ್ಟಣಗಳಲ್ಲಿ ಏಜಂಟರು ಮತ್ತು ಸ್ಟಾಕಿಸ್ಟರು ಬೇಕಾಗಿದ್ದಾರೆ

ನಾದದಿಂದ ಇಡೀ ಗೋಕುಲವೇ ಮೈ ಮರೆಯುತ್ತಿತ್ತು. ತಾರುಣ್ಯದ ಪ್ರೇಮ ಮಯ ಜೀವನದಿಂದ ಗೋಪ ಗೋಪಿಯ ರನ್ನು ಕೃಷ್ಣನು ಮರುಳುಗೊಳಿಸಿಬಿಟ್ಟನು. ಆತನ ಸಾಹಸ ಹಾಗೂ ಪ್ರೇಮ ಪೂರ್ಣ ಜೀವನವು ನಮ್ಮ ತರುಣರಿಗೆ ಉಜ್ವಲ ಮಾದರಿಯಾಗಿರುವುದು

ಕಂಸ ವಧೆ

ಕೃಷ್ಣನ ಸೋದರ ಮಾವನಾದ ಕಂಸ ನು ರಾಕ್ಷಸನೆಂದು ಚಿತ್ರಿಸಿರುವುದರಲ್ಲಿ ಅರ್ಥವೇ ಇಲ್ಲ. ಅವನು ಆಗಣ ಸಮಾ ಜದ ಪ್ರತಿಷ್ಠಿತ ಹಾಗೂ ಪ್ರಭಾವಶಾಲಿ ವ್ಯಕ್ತಿಯು ಅಧಿಕಾರ ದರ್ಪದಿಂದ ಬಡ ಪ್ರಜೆಗಳನ್ನು ಇಚ್ಛಾನುಸಾರ ಹಿಂಸಿಸುತ್ತಿದ್ದ ನಿರಂಕುಶ ಪ್ರಭುವು. ಇಂದವನಿಗೆ ನವನಿರ್ಮಾಣಕ ಕೃಷ್ಣನು ಬದ್ಧ ವೈರಿಯಾಗಿ ತೋರಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ತನ್ನ ಸೋದರ ಮಾವನಾದರೂ ಲಕ್ಷ್ಯ ಮಾಡದ ಇಂತಹ ನಿರಂಕುಶಿಯನ್ನು ಶ್ರೀ ಕೃಷ್ಣನು ಕೊಂದು ಹಾಕಿದುದೂ ಸಹಜವೇ ಸರಿ. ಇದೇ ರೀತಿ ಸಮಾಜ ಪೀಡಕರೂ ನಿರಂಕುಶಿಗಳೂ ಆದ ಹಲವರನ್ನು ಶ್ರೀ ಕೃಷ್ಣನು ನಾನಾ ಉಪಾಯಗಳಿಂದ ನಾಶ ಮಾಡಿರುವನು. ತನ್ನ ದಾರಿಯಲ್ಲಿ ಅಡ್ಡ ಬಂದವರನ್ನು ಯಾವ ರೀತಿಯಿಂದಲಾದರೂ ನಾಶಮಾ ಡಲು ಆತನು ಹಿಂಜರಿಯುತ್ತಿದ್ದಿಲ್ಲ. ಮಾ ವನೇ ಆದರೂ ಸಮಾಜ ಕಂಟಕನಾದರೆ ಆತನನ್ನು ವಿರೋಧಿಸಿ ನಾಶಮಾಡಲೇ ಬೇಕೆಂಬ ಪಾಠವನ್ನು ತರುಣರು ಕಂಸವ ಧೆಯಿಂದ ಕಲಿತುಕೊಳ್ಳಬಹುದು. ಪ್ರಾ ಣದ ಹಂಗು ತೊರೆದಾದರೂ ದುಷ್ಟ ಜನ ರ ಪೀಡೆಯಿಂದ ಸಮಾಜವನ್ನು ವಿಮು ಕ್ತಗೊಳಿಸಲು ಸೊಂಟಕಟ್ಟಬೇಕವರು. ಜರಾಸಂಧಾದಿಗಳಿಂದ ಶ್ರೀ ಕೃಷ್ಣನು ಎಂತಹ ಪೀಡೆಯನ್ನು ಪಡೆದಿಲ್ಲ. ಎಷ್ಟು ಸಲ ಅವನು ಮಧುರೆಯನ್ನು ಬಿಟ್ಟೋಡ ಬೇಕಾಗಿಲ್ಲ! ಜರಾಸಂಧನ ನಿರಂತರವಾದ ಪೀಡೆಯೇ ಕೃಷ್ಣನು ದ್ವಾರಕಿಕಟ್ಟಲು ಕಾರಣ. ಆದರೂ ತನ್ನ ಪ್ರಯತ್ನವನ್ನು ಬಿಟ್ಟು ಬಿಡದೆ ಜರಾಸಂಧನನ್ನು ಕೊಲ್ಲಿಸಿ ಯೇಬಿಟ್ಟನು. ಶ್ರೀ ಕೃಷ್ಣನು ತನ್ನ ಆತ್ಮೀಯರೇ ಆಗಲಿ ಅಂಹಕಾರ ಮತ್ತು ದರ್ಪವುಳ್ಳವರಾದರೆ ಕೂಡಲೆ ಅದನ್ನಿಳಿಸಿ ಬಿಡುತ್ತಿದ್ದನು. ಕುಚೇಲ ಚರಿತ್ರೆಯೂ ವಿಧುರನ ಮೇಲಿನ ಆತನ ಪ್ರೇಮವೂ ಇದನ್ನು ವ್ಯಕ್ತಗೊಳಿಸುವವು

ಪಾಂಡವರ ಪಂಚಪ್ರಾಣ

ಅಸಹಾಯರೂ ಅನಾಥರೂ ಆದ ಪಾಂಡವರ ಪಕ್ಷಹಿಡಿದು, ಅವರು ಕೌರವರ ನ್ನು ಗೆದ್ದು ತಮ್ಮ ರಾಜ್ಯವನ್ನು ಕಟ್ಟುವಂತೆ ಶ್ರೀಕೃಷ್ಣನು ಪಟ್ಟ ಶ್ರಮವಾದರೂ ಎಷ್ಟು? ಮಹಾಭಾರತ ಯುದ್ಧದ ಕಪಟ ನಾಟಕ ಸೂತ್ರಧಾರಿಯೇ ಅವನು. ಕೌರವ ರನ್ನು ಸದೆಬಡಿಯಲು ಆತನು ಹೂಡಿದ ಮಂತ್ರತಂತ್ರಗಳಾದರೂ ಏನು? ಒಳ್ಳೇ ಉದ್ದೇಶಕ್ಕಾಗಿ, ದುಷ್ಟ ಹಾಗೂ ಪ್ರಬಲ ವೈರಿಗಳನ್ನು ಗೆಲ್ಲುವುದಕ್ಕಾಗಿ ಯಾವ ಕೆಲಸವನ್ನಾದರೂ ಮಾಡಬಹುದೆಂದು ಕೃಷ್ಣನ ಕುರುಕ್ಷೇತ್ರದ ಚಾಣಕ್ಯ ತಂತ್ರವು ಸ್ಪಷ್ಟಪಡಿಸುವುದು. ತನ್ನ ಶಕ್ತಿ, ಸಾಮರ್ಥ್ಯ ಮತ್ತು ಪ್ರಭಾವವನ್ನು ಕೊನೆಯ ವರೆಗೂ ಒಪ್ಪದೆ ಧಿಕ್ಕರಿಸಿದ ಕೌರವಾದಿಗಳನ್ನು ನಿರ್ಘೃಣವಾಗಿ ಮಣ್ಣುಗೂಡಿಸಿದ ಕೃಷ್ಣನು ಹೃದಯರಹಿತನೆಂದು ತೋರಬಹುದು. ಆದರೆ ಆತನು ವ್ಯಕ್ತಿಗಳನ್ನು ಮನ್ನಿಸುವವನಲ್ಲ. ಕೊಳತು ಹೋಗಿ ಸಮಾಜಘಾತುಕವಾಗಿರುವ ಹಳೆಯದನ್ನು ನಿರ್ಮೂಲಿಸಿ ನವರಚನೆಗಾಗಿ ಕಟಿಬದ್ಧನಾಗಿರುವ ಕೃಷ್ಣನಿಗೆ ತೊಡಕಾಗಿ ಬರುವ ವರನ್ನೆಲ್ಲಾ ನಿದಾಕ್ಷಿಣ್ಯವಾಗಿ ನಾಶಮಾ ಡಿದನವನು.

ಭಗವದ್ಗೀತೆ

ಕುರುಕ್ಷೇತ್ರದ ರಣರಂಗದಲ್ಲಿ, ಎರಡೂ ಕಡೆಯ ಸೈನ್ಯಗಳು ಯುದ್ಧಸಿದ್ಧವಾಗಿ ಎದುರೆದುರು ನಿಂತಿರುವಾಗ ಶ್ರೀಕೃಷ್ಣನು ಅರ್ಜುನನಿಗೆ 700 ಶ್ಲೋಕಗಳ ಭಗವದ್ಗೀತೆಯನ್ನು ಬೋಧಿಸಿದನೆಂಬುದನ್ನು ನಂಬಲು ಎಷ್ಟು ಸಾಧ್ಯವೋ ತಿಳಿಯದು! ಶ್ರೀಕೃಷ್ಣನು ಅಷ್ಟೊಂದು ದೊಡ್ಡ ವೇದಾಂತಿಯೇ ಎಂಬ ಪ್ರಶ್ನೆಯೂ ಬರುವುದು. ಅವನು ಅತ್ಯಂತ ಸಾಹಸಿಯು, ಅಸಾಧಾರಣ ರಾಜನೀತಿಜ್ಞನು, ಅಪ್ರತಿಮ ಪ್ರತಿಭಾಶಾಲಿಯು, ಮಾಡಿತೋರಿಸುವ ವನೇ ಹೊರತು ವಿಶೇಷವಾಗಿ ಬೋಧಿಸುವ ಚಟ ಆತನಲ್ಲಿರಲಿಲ್ಲ. ಶ್ರೀಕೃಷ್ಣನ ಅಣ್ಣ ಬಲರಾಮನು ಧರ್ಮಪರಾಯಣನು, ವೇದಾಂತಿಯು. ಆದರೆ ಶ್ರೀಕೃಷ್ಣನು ನವ ನಿರ್ಮಾಣಕ ಉಜ್ವಲ ವ್ಯಕ್ತಿಯಲ್ಲದೆ ತಾತ್ವಿಕ ವೇದಾಂತಿಯಲ್ಲ. ಅರ್ಜುನನ ಹೃದಯ ದೌರ್ಬಲ್ಯವನ್ನು ನಿವಾರಿಸಲು ಅವನು ಸ್ಫೂರ್ತಿಯ ಬೋಧೆಯನ್ನಿತ್ತಿರಬಹುದು. ಆದರೆ ಇಡೀ ಭಗವದ್ಗೀತೆಯನ್ನು ರಣರಂಗದಲ್ಲಿ ಬೋಧಿಸಿರುವನೆಂದು ಹೇಳಲು ಸಾಧ್ಯವಿಲ್ಲ. ಪ್ರಾಯಶಃ ಶ್ರೀಕೃಷ್ಣನನ್ನು ದೇವರು ಮಾಡಿದವರು ಆತನ ಬಾಯಿಯಿಂದ ಅದನ್ನು ಹೇಳಿಸಿರಬಹುದು

ಲೆನಿನ್ ಮತ್ತು ಶ್ರೀಕೃಷ್ಣ

ಶ್ರೀ ಕೃಷ್ಣನ ನವ ನಿರ್ಮಾಣಕ್ಕೂ ರಷ್ಯದ ಈಗಣ ನವ ರಚನೆಗೂ ಹೆಚ್ಚಿನ ಅಭ್ಯಂತರವಿರುವಂತೆ ತೋರುವುದಿಲ್ಲ. ಲೆನಿನನು ರಷ್ಯದ ಬಡಕೆಲಸಗಾರರನ್ನೂ ಕೃಷಿಕರನ್ನೂ ಒಟ್ಟುಗೂಡಿಸಿ ನವ ಹುರುಪನ್ನುಂಟುಮಾಡಿ ನಿರಂಕುಶ ಝಾರ್ ಶಾಹಿಯನ್ನೂ, ಸಮಾಜಘಾತುಕ ಧನಸತ್ತೆಯನ್ನೂ ನಾಶಮಾಡಿ ಸೋವಿಯಟ್ ರಾಜ್ಯವನ್ನು ಕಟ್ಟಿದಂತೆ ಶ್ರೀ ಕೃಷ್ಣನು ಬಡ ಗೋವಳರನ್ನೂ ಕೃಷಿಕರನ್ನೂ ಒಟ್ಟುಗೂಡಿಸಿ ಯಾದವ ಜನಾಂಗವನ್ನು ಸ್ಥಾಪಿಸಿ ಅನಾಥರಾದ ಪಾಂಡವ ಪಕ್ಷಪಾತಿಯಾಗಿ ಅಂದಿನ ನಿರಂಕುಶ ರಾಜರನ್ನೂ ಸಮಾಜ ಘಾತಕಿಜನರನ್ನೂ ನಾಶಮಾಡಿ ನವ ರೀತಿನೀತಿಧರ್ಮ ಮತ್ತು ಸಮಾಜ ಸ್ಥಾಪಕನಾದನು. ಅವನು ಧನಿಕ ಪ್ರತಿಷ್ಠಿತ ಜನದ್ವೇಷಿಯಾಗಿ ಸದಾ ದೀನದರಿದ್ರರ ಪಕ್ಷಪಾತಿಯಾಗಿದ್ದನು. ಅತಿದೊಡ್ಡ ಸಮತಾವಾದಿಯವನು. ತಾನು ತನ್ನದು ಎಂಬ ಮಮಕಾರವಿರಬಾರದು. ಲೋಕಕಲ್ಯಾಣದ ದೃಷ್ಟಿಯಿಂದ ದುಡಿಯಬೇಕು. ಸುಖ ದುಃಖವನ್ನು ಸಮದೃಷ್ಟಿಯಿಂದ ಕಾಣಬೇಕು. ನಿಷ್ಕಾಮಕರ್ಮಿಗಳಾಗಬೇಕು. ಯಾವುದರಲ್ಲಿಯೂ ಆಸಕ್ತಿಯುಳ್ಳವರಾಗ ಬಾರದು" ಎಂಬ ಗೀತೆಯ ತತ್ವಸಾರವು ಇಂದು ಕಾರ್ಯರೂಪದಲ್ಲಿ ಆಚರಿಸಲ್ಪಡುವುದೆಂದರೆ ರಷ್ಯದಲ್ಲಿಹುದೆ. ಶ್ರೀಕೃಷ್ಣನನ್ನು ಆರಾಧಿಸುವ ಹಿಂದೂದೇಶದಲ್ಲಲ್ಲ.

ಯಾದವೀ ಕಲಹ

ಶ್ರೀ ಕೃಷ್ಣನು ಬಹಳ ವೈರಾಗ್ಯಗೊಂಡು ಎಲ್ಲಿಯೋ ಒಂದೆಡೆ ನ್ಯಾತನಾದಂತೆ ತೋರುತ್ತದೆ. ತಾನು ಕಟ್ಟಿದ ರಾಜ್ಯ ಮತ್ತು ಜನಾಂಗವೇ ಅಧಿಕಾರ ಮತ್ತತೆಯಿಂದ ಒಡೆದುಹೋಗುವುದನ್ನವನು ಮನಗಂಡು ಬೇಸರಗೊಂಡಂತೆ ತೋರುತ್ತದೆ. ಆತನ ಮರಣದ ನಂತರ ಯಾದವ ಜನಾಂಗವು ಅಂತಃಕಲಹದಿಂದ ನಿರ್ನಾಮವಾಯಿತು. ಯಾದವೀಕಲಹವೆಂಬುದು ಗಾದೆಯ ಮಾತಾಯಿತು. ಒಬ್ಬ ಮಹಾವ್ಯಕ್ತಿಯ ಕಟ್ಟನೊಳಗಿದ್ದ ಜನರು, ಆತನ ಅಂತರ್ಧಾನದ ನಂತರ ಕಟ್ಟೊಡೆದು ಇಚ್ಛಾನುಸಾರ ನಡೆದು ನಿರ್ನಾಮವಾಗುವುದೆಂಬುದು ಇತಿಹಾಸದಲ್ಲಿ ಎಲ್ಲೆಲ್ಲಿಯೂ ತೋರಿಬರುವ ವಿಷಯ. ಶ್ರೀ ಕೃಷ್ಣನ ಮರಣದ ನಂತರ ಅಂತೆಯೇ ಯದುವಂಶವು ನಾಶವಾಗಿರಬೇಕು. ಇದರಲ್ಲಿಯೂ ಈಗಣ ಜನತೆಗೆ ಅಮೂಲ್ಯವಾದೊಂದು ಪಾಠವಿದೆ

ಶ್ರೀಕೃಷ್ಣನ ಬಾಲ್ಯ, ತಾರುಣ್ಯ, ಯೌವನ ಮತ್ತು ಮರಣದಿಂದ ಆತನ ಇಂದಿನ ಮಹಾವ್ಯಕ್ತಿಯೊಬ್ಬನೋ ಎಂಬಂತೆ ಹಿಂದೀಯರು ಪಾಠ ಕಲಿಯಲಿವೆ. ವಿಶೇಷವಾಗಿ ಹಿಂದೀತರುಣರು ಆತನ ಜೀವನದಿಂದ ನವ ಚೈತನ್ಯವನ್ನು ಪಡೆದು ಸಾಹಸಿಗರಾಗಿ ಇಂದಿನ ನವರಚನೆಗೆ ನೆರವಾಗಬಹುದಾಗಿದೆ. ಆದರೆ ನಾವೆಲ್ಲಿ ಆ ಪಾಠಕಲಿಯುವೆವು? ಆತನ ಕಲ್ಲಿನ ಮೋಹಕ ಮೂರ್ತಿಯನ್ನು ನಾನಾ ರೀತಿ ಶೃಂಗರಿಸಿ ಆರಾಧಿಸುವೆವು. ಆತನ ಹೆಸರಲ್ಲಿ ನಾನಾ ಭಕ್ಷ್ಯಗಳನ್ನು ತಿಂದುತೇಗುವೆವು. ಆ ಕ್ರಾಂತಿಕಾರನನ್ನು ಆರಾಧಿಸುವ ಜನರು ಇಂದು ಕ್ರಾಂತಿಯೆಂದರೆ ಬೆಚ್ಚಿಬೀಳುವರು! ಆ ನವ ನಿರ್ಮಾಣಕನನ್ನು ಮಂದಿರದೊಳಗೆ ಪೂಜಿಸುವವರು ಇಂದು ನವರಚನೆಯೆಂದರೆ ಹಿಗಿಲುಗೊಳ್ಳುವರು. ಆದುದರಿಂದಲೇ ಇಂದು ಹಿಂದೂಸಮಾಜವು ನಿರ್ಜೀವವಾಗಿ ಜೀವನ್ಮೃತವಾಗಿ ಬಿದ್ದುಕೊಂಡಿರುವುದು.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್ —**ಹೂಮಾರ್ಕೇಟಿನ ಬಳಿ, ಮಂಗಳೂರು.**

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I **ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನರಿಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗ ಸಂಕುಚಿತವಾಗಿ ಮಾಡುವದು

II **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ** —ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು. ದ. ಕ.

ಮೈಸೂರು ಸ್ಟೇಟಿನ ಏಜಂಟರು – **ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.**

ವಿಜಯ ಬೇಂಕ್, ಲಿಮಿಟೆಡ್, ಮಂಗಳೂರು

ಶಾಖೆಗಳು:—ಉಡುಪಿ, ಕುಂದಾಪುರ, ಕಾಪು ಮತ್ತು ಕಾರ್ಕಳ

ಎಲ್ಲಾ ತರದ ಬೇಂಕ್ ವಹಿವಾಟುಗಳು ಇಲ್ಲಿ ನಡಿಸಲ್ಪಡುತ್ತವೆ. ಈ ಬೇಂಕಿನ ಎಲ್ಲಾ ಆಫೀಸುಗಳಲ್ಲಿಯೂ ಕಾಯಂ ಠೇವಣಾತಿಯು ಈ ಕೆಳಗೆ ಕಾಣಿಸಿದ ಬಡ್ಡಿಯಲ್ಲಿ ಈಗ ಅಂಗೀಕರಿಸಲಾಗುವುದು

3 ತಿಂಗಳಿಗೆ		3½%
6 ,,	..	4%
1 ವರ್ಷಕ್ಕೆ	..	4½%
2 ,,	..	5%

ಬಡ್ಡಿಯು ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುವುದು. ಚಿನ್ನಾಭರಣದ ಈಡಿನ ಮೇಲೆ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಎಂದರೆ ರೂ. 5/-ರ ವರೆಗಿನ ಸಾಲ ಕೊಡಲ್ಪಡುತ್ತದೆ

ಸರ್ವ ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಮುನ್ನಡೆಯ ನಡೆಸುತ್ತಿರುವ ಮತ್ತು ಭದ್ರತೆ ಪೂರ್ಣವಾದ ಈ ಬೇಂಕ್ ಸಾರ್ವಜನಿಕರ ಆದರವನ್ನೂ ಪ್ರೋತ್ಸಾಹವನ್ನೂ ಕೋರುತ್ತದೆ

"ನಾವೂ ಅಲ್ಲಿಗೇ ಹೋಗುತ್ತೇವೆ"

ಕಮಲಮ್ಮ—ನೀವು ಉಡುಪಿ ಯಾತ್ರೆಗೆ ಹೋದವರು ಯಾವಾಗ ಬಂದಿರಮ್ಮಾ?

ಕಾವೇರಮ್ಮ—ನಾವು ನಿನ್ನೆ ಸಂಜೆಯ ಬಸ್ಸಿಗೆ ಬಂದವು. ಶ್ರೀಕೃಷ್ಣನ ಕೃಪೆಯಿಂದ ಯಾತ್ರೆಯು ಸುಗಮವಾಗಿ ಸಾಗಿತು

ಕಮಲಮ್ಮ—ನೀವು ಹೋಗುವಾಗ ನಾವೂ ಹೋಗೋಣವೆಂದು ಅವರೊಡನೆ ಆಗ್ರಹಪಟ್ಟೆ ಅವರು ಬರುವ ವರ್ಷ ಹೋಗೋಣವೆಂದರು ನೀವು ಪುಣ್ಯಾತ್ಮರಮ್ಮ ಹೋದೆ ನಿಮ್ಮಿಂದಾದರೂ ಉಡುಪಿ ಕ್ಷೇತ್ರದ ವಿಷಯ ಕೇಳೋಣವಮ್ಮ

ಕಾವೇರಮ್ಮ—ಉಡುಪಿ ಕ್ಷೇತ್ರದ ವಿಚಾರವಾಗಿ ನಾನೇನೆಂದು ವರ್ಣಿಸಲಿ? ಹುಟ್ಟಿದುದಕ್ಕಾದರೂ ಅದನ್ನು ನೋಡಲೇಬೇಕಮ್ಮ ಆ ಕೃಷ್ಣ ದೇವಸ್ಥಾನ, ಮಧ್ವಸರೋವರ ಅನಂತೇಶ್ವರ, ಚಂದ್ರೇಶ್ವರ ದೇವಸ್ಥಾನಗಳು, ಇವುಗಳ ಸುತ್ತಲೂ ರಥಬೀದಿ, ಅಷ್ಟ ಮಠಗಳು ಇವನ್ನೆಲ್ಲಾ ನೋಡಿಯೇ ತೀರಬೇಕಮ್ಮ ಯಾತ್ರಿಕರಿಗೆ ಈಗಿನ ಪರ್ಯಾಯ ಸ್ವಾಮಿಗಳು ಮಾಡಿದ ಅನುಕೂಲತೆಗಳನ್ನಂತೂ ಹೇಳಿ ತೀರದು

ಕಾವೇರಮ್ಮ—ನೀವು ಉಡುಪಿಯಿಂದ ಏನನ್ನಾ ತಂದಿದ್ದೀರಮ್ಮ?

ಕಮಲಮ್ಮ—ಏನಿಲ್ಲ ನನ್ನ ಒತ್ತಾಯದಿಂದ ಸ್ವಲ್ಪ ಪಾತ್ರ ಸಾಮಾನು ತಂದಿದ್ದೇವೆ ನೋಡಿ ಒಳಗೆ ಬನ್ನಿ. ಇದು ದೇವತಾರ್ಚನೆ ಸೆಟ್, ಇದೊಂದು ಬೆಳ್ಳಿಯ ವಿಗ್ರಹ, ಈ ಲೋಟಿ, ತಂಬಿಗೆ, ತಪ್ಪಲೆಗಳನ್ನು ನೋಡಿರಿ

ಕಾವೇರಮ್ಮ—ಎಷ್ಟು ನಾಜೂಕಾಗಿವೆ ಇವೆಲ್ಲ! ಇವನ್ನೆಲ್ಲ ಎಲ್ಲಿಂದ ಕೊಂಡುಕೊಂಡಿರಮ್ಮ!

ಕಮಲಮ್ಮ—ನಾನು ಅನಂತೇಶ್ವರ ದೇವಸ್ಥಾನವೆಂದು ಮೊದಲೆ ಹೇಳಿದೆನಲ್ಲ-ಅದರ ಬಲಗಡೆಯಲ್ಲೊಂದು ಪಾತ್ರೆ ಅಂಗಡಿಯಿದೆ ಅತಿ ದೊಡ್ಡ ಅಂಗಡಿಯದು ನನಗೆ ಅದನ್ನು ನೋಡಿದವಳಿಗೆ ಯಾವುದನ್ನು ಕೊಳ್ಳುವುದು ಯಾವುದನ್ನು ಬಿಡುವುದೆಂದು ತೋರಲಿಲ್ಲ

ಕಾವೇರಮ್ಮ—ಮೊನ್ನೆ ನೆರೆಮನೆಯ ತುಂಗಮ್ಮನವರು ಕೆಲವು ಪಾತ್ರ ತಂದಿದ್ದರು ಅವೂ ಬಹು ಚಲೋದಾಗಿವೆ. ಕಲ್ಮಂಜೆ ವ್ಯಾಸಾಚಾರ್ಯರೆಂಬವರಲ್ಲಿಂದ ಪಡೆಕೊಂಡುದಂತೆ.

ಕಮಲಮ್ಮ—ಸರಿ. ಇವನ್ನೂ ಅವರಲ್ಲಿಂದಲೇ ಕೊಂಡುದು ಸಾಮಾನ್ಯವಾಗಿ ಇಂತಹ ಆತ್ಯಾಧುನಿಕ ಮಾದರಿಯ ಯಾವತ್ತೂ ಪಾತ್ರೆ ಪದಾರ್ಥಗಳಿಗೆ ಖಾತ್ರಿಯಾದ ಪಾತ್ರೆಯಂಗಡಿಯೆಂದರೆ ಅವರದೊಂದೇ ಸಾಮಾನು ನಾಜೂಕು, ಕ್ರಯವೂ ಅಗ್ಗವಮ್ಮ

ಕಾವೇರಮ್ಮ—ಹಾಗಾದರೆ ನಾವು ಉಡುಪಿಗೆ ಹೋದವರು ನಮಗೆ ಬೇಕಾದ ಪಾತ್ರೆಗಳನ್ನು ಅವರಲ್ಲಿಂದಲೇ ಪಡಕೊಳ್ಳುವೆವಮ್ಮ

ಕಮಲಮ್ಮ—ಚಲೋದು ಅವರ ವಿಳಾಸ ಹೀಗಿದೆ ನೋಡಿ—

Kalmanje Vyasachar

Brass ware merchant,

Car Street, UDIPI

(Advt)

ಮೈಸೂರಿನ ಹರಿಜನರಲ್ಲಿ ನವಚೈತನ್ಯ

"ನಾವು ಸ್ಟೋರ್ಸ್ ಪರ್ಚೇಸ್ ಸಮಿತಿಗೆ ಒಳ್ಳೆಯ ತರಹೆಯ ಮಾದರಿಗಳನ್ನೊದಗಿಸಲು ಅನುಮತಿಯನ್ನು ಪಡೆದಿರುತ್ತೇವೆ" ಮಳವಳ್ಳಿಯ ಮೋಚಿಗಳ ಪರಸ್ಪರ ಸಹಾಯ ಸಂಘದವರು ತಮ್ಮ ಸದಸ್ಯರುಗಳಿಗೆ ತಕ್ಕಷ್ಟು ಕೆಲಸವನ್ನು, ಮಾಡಿದ ಕೆಲಸಕ್ಕೆ ಕೂಲಿಯನ್ನು ಕೊಡುತ್ತಾ ಇದ್ದಾರೆ ಇದರ ಪರಿಣಾಮವಾಗಿ ಆ ಜನರ ಸ್ಥಿತಿಗತಿಗಳು ಬಹುಮಟ್ಟಿಗೆ ಉತ್ತಮವಾಗಿದೆ

ಮಂಡ್ಯ ಮತ್ತು ಮಳವಳ್ಳಿಯಲ್ಲಿ ಹರಿಜನ ನೇಯಿಗಾರರಿಗಾಗಿಯೇ ಪರಸ್ಪರ ಸಂಸ್ಥಾನ ಸಹಾಯ ಸಂಘಗಳೇರ್ಪಟ್ಟಿವೆ. ಹರಿಜನರಿಗೆ ಈ ವಿಧವಾದ ಪರಸ್ಪರ ಸಹಾಯ ಸಂಘಗಳ ಮೂಲಕ ಬಹಳ ಅನುಕೂಲ ಮಾಡಿಕೊಡಲಾಗುತ್ತಿದೆ ಹರಿಜನರಿಗಾಗಿ ಪರಸ್ಪರ ಸಹಾಯ ಸಂಘಗಳನ್ನೇರ್ಪಡಿಸುವುದು, ಆ ಸಂಘಗಳಿಗೆ ದ್ರವ್ಯ ಸಹಾಯವನ್ನು ಮಾಡುವುದು, ಪ್ರಾರಂಭದಲ್ಲಿ ಅಂಥ ಸಂಘಗಳ ಕಾರ್ಯದರ್ಶಿಗಳಿಗೆ ಬೋನಸ್ಸನ್ನು ಕೊಡುವುದು, ಬೇಕಾದ ಲೆಕ್ಕದ ಪುಸ್ತಕಗಳನ್ನು ಮುಫತ್ತಾಗಿ ಕೊಡುವುದು, ಸಂಘದ ಸದಸ್ಯರಿಗೆ ವ್ಯವಸಾಯದ ಮುಟ್ಟುಗಳನ್ನು ಅರ್ಧ ಕ್ರಯಕ್ಕೆ ಕೊಡುವುದು, ಇವೇ ಮೊದಲಾದ ವಿಧದಲ್ಲಿ ಇಲಾಖೆಯವರು ಹರಿಜನರಿಗೆ ಸಹಾಯ ಮಾಡುತ್ತಿದ್ದಾರೆ ಬೆಂಗಳೂರು ಜಿಲ್ಲೆಯೊಂದರಲ್ಲಿಯೇ ಹರಿಜನರಿಗೇರ್ಪಡಿಸಿದ 47 ಸಹಕಾರಸಂಘಗಳಿವೆ. ಈ ಸಂಘಗಳಲ್ಲಿ 1117 ಮಂದಿ ಸದಸ್ಯರಿದ್ದಾರೆ ವಸೂಲಾದ ಷೇರು ಬಂಡವಾಳ 10,359 ರೂಪಾಯಿಗಳು, ರಿಜರ್ವ್ ಫಂಡು 3,056 ರೂಪಾಯಿಗಳು.

ಹರಿಜನರ ಏಳಿಗೆಗಾಗಿ ಸರ್ಕಾರದವರು ಎಷ್ಟು ಆಸಕ್ತಿಯಿಂದ ದುಡಿಯುತ್ತಿದ್ದಾರೆಂಬುದಕ್ಕೆ ಆ ಪಂಗಡದ ಜನರಿಗೆ ಕಳೆದ 10 ವರ್ಷಗಳಲ್ಲಿಯೇ 70,006 ಎಕರೆಗಳಷ್ಟು ಜಮೀನನ್ನು ಸಾಗುವಳಿಗಾಗಿ ಕೊಟ್ಟಿರುವುದು ಅತ್ಯುತ್ತಮವಾದ ನಿದರ್ಶನವಾಗಿದೆ ಹರಿಜನರಿಗಾಗಿ ಜಮೀನನ್ನು ಕೊಡುವುದಕ್ಕಾಗಿ ಏರ್ಪಟ್ಟ ನಿಬಂಧನೆಗಳ ಮೇರೆಗೆ ಇಷ್ಟೊಂದು ಜಮೀನನ್ನು ಅವರಿಗೆ ಕೊಡಲಾಗಿದೆ ಬೆಂಗಳೂರು ಜಿಲ್ಲೆಯೊಂದರಲ್ಲಿಯೇ ಹರಿಜನರಿಗೆ 7000 ಎಕರೆ ಜಮೀನನ್ನು ಕೊಡಲಾಗಿದೆ ಅಲ್ಲದೆ ಡೆಪ್ಯುಟಿ ಕಮೀಷನರುಗಳಿಗೆ 15 ಎಕರೆಗಳಿಗೆ ಮೀರದಷ್ಟು ಜಮೀನನ್ನು ಅಪ್ಸೆಟ್ ಬೆಲೆಗೆ ಹರಿಜನರಿಗೆ ಕೊಡುವ ಅಧಿಕಾರವನ್ನೂ ಕೊಡಲಾಗಿದೆ ಮತ್ತು ಅವರು ಹೀಗೆ ಪಡೆದ ಜಮೀನುಗಳನ್ನು ಇತರರು ಬೆಲೆಗೆ ಕೊಂಡು ಇವರಿಗೆ ತೊಂದರೆಯುಂಟು ಮಾಡಕೂಡದೆಂಬ ಉದ್ದೇಶದಿಂದ, ಹರಿಜನರು ತಮ್ಮ ಜಮೀನುಗಳನ್ನು ಪರಬಾರೆ ಮಾಡಕೂಡದೆಂದು ವಿಧಾಯಕ ಮಾಡಿದೆ

ಹರಿಜನರಿಗೆ ದೇವಾಲಯ ಪ್ರವೇಶದಿಂದ ಉಂಟಾಗುವ ಅನುಕೂಲಕ್ಕಿಂತ, ಸಮಾಜದಲ್ಲಿ ಅವರ ಸ್ಥಾನವು ಸುಧಾರಿಸುವುದರಿಂದ ಆಗುವ ಅನುಕೂಲವೇ ಹೆಚ್ಚು ಸಂಸ್ಥಾನದಲ್ಲಿ ಕೆಲವು ಒಳ್ಳೆಯ ಪ್ರದೇಶಗಳನ್ನು ಚುನಾಯಿಸಿ ಅಲ್ಲಿ ಅವರಿಗೆ ಪ್ರತ್ಯೇಕವಾದ ಕಾಲೋನಿಗಳನ್ನೇರ್ಪಡಿಸಲಾಗುತ್ತಿದೆ ಬೆಂಗಳೂರು ಮತ್ತು ಚನ್ನಗಿರಿಯಲ್ಲಿ ಇಂತಹ ಎರಡು ಕಾಲೊನಿಗಳನ್ನೇರ್ಪಡಿಸಿದೆ ಇವುಗಳಿಂದ ಹರಿಜನರಿಗೆ ಬಹಳ ಪ್ರಯೋಜನವಾಗಿದೆ.

ಹರಿಜನರಿಗೆ ಪ್ರತ್ಯೇಕವಾದ ವಸತಿ, ಮತ್ತು ಕುಡಿಯುವ ನೀರಿನ ಬಾವಿಗಳು ಇವುಗಳನ್ನು ನಿರ್ಮಿಸುವುದು ಗ್ರಾಮಪಂಚಾಯತಿಯವರ ಜವಾಬ್ದಾರಿಯಾಗಿದೆ. 1680 ಗ್ರಾಮಗಳಲ್ಲಿ ಹರಿಜನರಿಗಾಗಿಯೇ ಪ್ರತ್ಯೇಕವಾದ ಕುಡಿಯುವ ನೀರಿನ ಬಾವಿಗಳನ್ನೇರ್ಪಡಿಸಲಾಗಿದೆ ಈ ಸಂಬಂಧದಲ್ಲಿ ಗ್ರಾಮಪಂಚಾಯತಿಗಳವರಿಗೆ ಉತ್ತೇಜನವನ್ನು ಕೊಡುವುದಕ್ಕಾಗಿ ಹರಿಜನರಿಗಾಗಿ ಬಾವಿಗಳನ್ನು ತೋಡಿಸಿದರೆ, ಪಂಚಾಯತಿಯವರು ಸರ್ಕಾರಕ್ಕೆ ಕೊಡಬೇಕಾದ ಕಂಟ್ರಿಬ್ಯೂಷನನ್ನು ವಿನಾಯಿಸಲಾಗುತ್ತದೆ ಹಲವು ಗ್ರಾಮಗಳಲ್ಲಿ ಹರಿಜನರಿಗಾಗಿ ವಾಸದ ಮನೆಗಳನ್ನು ಕಟ್ಟಿಸಿ ಅವನ್ನು ಬಹಳ ಕಡಿಮೆ ದರದ ಮೇಲೆ ಅವರಿಗೆ ಬಾಡಿಗೆಗೆ ಕೊಡಲಾಗಿದೆ ಹರಿಜನರೂ ಸಹ ಈ ವಸತಿಗಳನ್ನು ಚೊಕ್ಕಟವಾಗಿಟ್ಟುಕೊಂಡಿರುತ್ತಾರೆ ಮನೆಗಳೂ ಸಹ ನೋಡಲು ಮುದ್ದಾಗಿವೆ

ಮಾದರಿ ಮನೆಗಳ ಸೌಕರ್ಯವೂ ಇಲ್ಲದೆ, ಮನೆಯನ್ನು ಕಟ್ಟಲಿಚ್ಛಿಸುವವರು ಕುಟುಂಬ ಒಂದಕ್ಕೆ 15 ರೂಪಾಯಿಗಳ ಬೆಲೆಯಾದಷ್ಟು ಮರ ಮುಂತಾದ ಸಾಮಾನುಗಳನ್ನು ಮುನ್ನಾ ಜಂಗಲುಗಳಿಂದ ತೆಗೆದುಕೊಳ್ಳಬಹುದೆಂದು ಸರ್ಕಾರದವರು ವಿಧಾಯಕ ಮಾಡಿದ್ದಾರೆ. ಬೆಂಕಿಯ ಅನಾಹುತಕ್ಕೆ ನಷ್ಟಕ್ಕೆ ಗುರಿಯಾದವರಿಗೂ ಸಹ ಈ ರಿಯಾಯಿತಿಯನ್ನು ತೋರಿಸಲಾಗುತ್ತಿದೆ

ಚಾರಿ ಮತ್ತು ಪ್ರಕಾಶ್—ಶ್ರೀ ವನಮಾಲ ವತ್ತು ದೀಪ ಪ್ರಕಾಶ್‌ರವರೇ ಇದರ ಮಾಲಿಕರು ಇವರುಗಳು ಕಳೆದ 3 ವರ್ಷದ ಕೆಳಗೆ ಶಿವ್ವ ನೆಯಲ್ಲಿ ಒಂದು ಅಂಗಡಿ ತೆರೆದರು ವ್ಯಾಪಾರವು ದಿನದಿನಕ್ಕೂ ಹೆಚ್ಚಲು, ಸ್ವಯ್ಯಾಜಿರಾವ್ ರಸ್ತೆಯಲ್ಲಿರುವ ವಿಸ್ತಾರವಾದ ಮತ್ತೊಂದು ಮಳಿಗೆಗೆ ಹೋಗಿದ್ದಾರೆ ಸರ್ವರಿಗೂ ಒಪ್ಪುವ ಎಲ್ಲಾ ತರಹ ಪದಾರ್ಥಗಳನ್ನೂ ಸುಲಭ ದರದಲ್ಲಿ ಮಾರುವ ಇವರ ಕಂಪೆನಿಯು ಶ್ರೇಯೋಭಿವೃದ್ಧಿ ಹೊಂದಲೆಂದು ಹಾರೈಸಲಾಗಿದೆ

ಶ್ರೀ ರಾಜಲಕ್ಷ್ಮೀ ಮೋಟಾರ್ ಸರ್ವಿಸ್

ಕ್ಯಾಪ್ಟನ್ ಆರ್ ರಾಜಗೋಪಾಲ್ ಮೊದಲಿಯಾರವರು L M & S ರವರು 1923ರಲ್ಲಿ ಮೋಟಾರು ಸರ್ವಿಸ್ ಸ್ಥಾಪಿಸಿದರು ಈ ಸರ್ವಿಸಿನವರು ನೀಲಗಿರಿಗೂ ಮೇಲು ಕೋಟೆ ಕಡೆಗೂ ಬಹಳ ಸುಲಭ ದರದಲ್ಲಿ ಪ್ರಯಾಣಿಕರನ್ನು ಬಿಡುತ್ತಾರೆ ರಾಯಲ್ ಮೇಲ್ ಮತ್ತು ಮೈಸೂರು ರೈಲ್ವೆ ಔಟ್ ಏಜನ್ಸಿ ಇವರಿಗೆ ಸೇರಿದ್ದು ಇವರ ಆಧುನಿಕ ಬಸ್ಸುಗಳಲ್ಲಿ ಕುಳಿತು ನೀಲಗಿರಿಗೆ ಹೋಗುತ್ತಿದ್ದರೆ ಬಹಳ ಆನಂದವಾಗುತ್ತೆ ಶ್ರೀ ರಾಜಗೋಪಾಲ್‌ರವರು ಗೂಡಲ್ಲೂರಿನ ವನರು ತಮ್ಮ ಕನಸಿನಲ್ಲೂ ಕಾಣದ ಕೆಲವು ಸಾಧನೆ ಮತ್ತು ನೀರು, ವಿದ್ಯುತ್ ದೀಪದ ಸೌಕರ್ಯ ಒದಗಿಸಿ ಕೊಟ್ಟಿದ್ದಾರೆ ಪ್ರಯಾಣಿಕರ ಸೌಕರ್ಯಕ್ಕಾಗಿ ಅಲ್ಲಲ್ಲೇ ವಸತಿ (Best house) ವಿಶ್ರಾಂತಿ ಗೃಹ ಕಟ್ಟಿಸಿದ್ದಾರೆ ಶ್ರೀ ರಾಜಗೋಪಾಲ್‌ರವರು ಸಾರ್ವಜನಿಕ ಸೇವೆಯಲ್ಲಿ ತೊಡಗಿ ಎಲ್ಲರ ಮನ್ನಣೆಗೂ ಪಾತ್ರರಾಗಿದ್ದಾರೆ ನೀಲಗಿರಿ ಗೂಡ್ಲೂರ್ ಮತ್ತು ಹಾಸನ ಮೈಸೂರು ಡಿಪೋ ಮ್ಯಾನೇಜರುಗಳು ಈ ಸರ್ವಿಸಿನ ಅಭಿವೃದ್ಧಿಗೆ ಹಗಲಿರುಳು ಸೇವೆ ಮಾಡುತ್ತಿರುವುದು ಪ್ರಶಂಸನೀಯವಾದುದು, ಈ ಸರ್ವಿಸ್ ಇನ್ನಷ್ಟು ಉನ್ನತ ಸ್ಥಾನವಡೆಯಲೆಂದು ಹಾರೈಸಲಾಗಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)



ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರ ರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುವು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 60 ಮಾತ್ರೆಗಳ ಒಡ್ಡಿಯೊಂದಕ್ಕೆ ರೂ 3 ವಿ ಪಿ ಖರ್ಚು 0 8 0 ಪ್ರತ್ಯೇಕ, ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಿನಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಕನ್ನಡಿಗರಿಗೆ ಜಯವು ಕೃಷ್ಣನಾಶ್ರಯವು

— ಬೆನಗಲ್ಲ ರಾಮರಾಯರು

ಭಾರತದ ಪುರಾಣಪುರುಷರಲ್ಲಿ ಶ್ರೀಕೃಷ್ಣನು ಅದ್ವಿತೀಯನಾಗಿದ್ದಾನೆ; ಅತ್ಯಂತ ಶ್ರೇಷ್ಠ ಪುರುಷನಾಗಿದ್ದಾನೆ. ಪುರುಷೋತ್ತಮನಾಗಿದ್ದಾನೆ ಸಾಕ್ಷಾತ್ ಪರಮಾತ್ಮನ ಪೂರ್ಣಾವತಾರ ಸ್ವರೂಪನಾಗಿದ್ದಾನೆಂದು ಆತನನ್ನು ನಮ್ಮ ಸನಾತನ ಪುರಾಣಗಳೆಲ್ಲ ವರ್ಣಿಸುತ್ತವೆ. ಆತನ ಉಪಾಸನೆಯನ್ನು ಅನನ್ಯಭಾವದಿಂದ ಮಾಡುತ್ತ ಆತನ ಗುಣಗಣಗಳೊಳಗಿನ ಅತ್ಯಲ್ಪ ಭಾಗವನ್ನಾದರೂ ಅನುಕರಿಸುವ ಬುದ್ಧಿಯಿಂದ ಕನ್ನಡ ಜನಾಂಗವು ಆತನ ಜನ್ಮೋತ್ಸವದ ದಿನವಾದ ಇಂದಿನ ಶುಭಯೋಗದಲ್ಲಿ ನಿಶ್ಚಯಿಸಿ ತನ್ನ ನಡತೆಯನ್ನು ತಿದ್ದಿಕೊಳ್ಳುವ ದಾರಿಹಿಡಿದರೆ ಕನ್ನಡನಾಡಿನಲ್ಲಿ ನವಯುಗಕ್ಕಾರಂಭವಾಗುವುದು.

ಅದ್ವಿತೀಯ ಮಹಾಮಹಿಮ—
<u>ಶ್ರೀಕೃಷ್ಣ</u>

ಭಗವಂತನ ದಶಾವತಾರಗಳಲ್ಲಿ ಅಥವಾ ದಶಸಹಸ್ರ ಅವತಾರಗಳೆಂದರೂ ಸರಿಯೇ-ಅವೆಲ್ಲವುಗಳಲ್ಲಿ, ಶ್ರೀಕೃಷ್ಣಾವತಾರದಲ್ಲಿ ಅಭಿವ್ಯಕ್ತನಾದ ಆತನ ಪರಮೋತ್ಕೃಷ್ಟವಾದ ಆದರ್ಶ ಜೀವನವು ಬೇರೆ ಯಾವ ಅವತಾರಗಳಲ್ಲಿಯೂ ಕಂಡುಬರುವುದಿಲ್ಲ. ಸತ್ತಾಧಾರಿಯಾದ ಅರಸನ ಅವಕೃಪೆಗೆ ಗುರಿಯಾಗಿ ಸೆರೆಮನೆಯ ವಾಸಕ್ಕೆ ಈಡಾದ ದಂಪತಿಗಳ ಮಗನಾಗಿ ಹುಟ್ಟಿ, ಹಟ್ಟಿಕಾರರ ಹಿರಿಯನೊಬ್ಬನ ಹಿಗ್ಗಿನ ಮಗನಾಗಿ ಬೆಳೆದು, ಹುಟ್ಟಿದಾಗಿನಿಂದ ಹದಿನೆಂಟು ಬಗೆಯ ಪ್ರಾಣಾಪತ್ತುಗಳ ತುತ್ತುಗಳಿಗೆ ಗುರಿಯಾದರೂ ಅವೆಲ್ಲವುಗಳಿಂದ ತಾನು ತನ್ನ ಕರ್ತೃತ್ವದಿಂದಲೇ ಪಾರಾಗಿ, ತನ್ನ ಗುಂಪಿನವರಿಗೆ ಒದಗಿದ ಅನೇಕ ಆಪತ್ತುಗಳನ್ನೂ ತನ್ನ ಬುದ್ಧಿ-ಬಲ-ಧೈರ್ಯ ಸಾಹಸಗಳಿಂದ ಪಡೆಬಡಿದು ಅವರೆಲ್ಲರನ್ನೂ ಸಲಹಿ ಸಂರಕ್ಷಿಸಿದ ಕುಮಾರ ಕೃಷ್ಣನು ತನ್ನ ಸಂಗಡಿಗರೆಲ್ಲರಿಗೆ ಪಂಚಪ್ರಾಣಗಳಂತೆ ಪ್ರಿಯನಾಗಿದ್ದನು. ದನಗಾಹಿಗಳ ಹಿಂಡಿನ ಹಿರಿಯ ಮಣಿಯಾಗಿ ಹೆಣ್ಣು-ಗಂಡು-ಪಶುಗಳನ್ನೂ ಕೂಡ ತನ್ನ ಪ್ರೇಮಪೂರಿತ ಅಂತಃಕರಣದ ಬಲೆಯಲ್ಲಿ ಸೆರೆಹಿಡಿದು ತನ್ನ ಕೊಳಲನಾದದ ಧ್ವನಿಗುಂಟ ಇದ್ದಲ್ಲಿಂದ ಓಡಿ ಬಂದು ಆತನ ಸುತ್ತುಮುತ್ತು ಮೊಗವೆತ್ತಿ ನಿಂದ ಪರವಶವಾದ ಅಂತಃಕರಣಗಳಿಂದ ಹೊರಹೊಮ್ಮಿದ ಪ್ರೇಮರಸವು ಕಣ್ಣೀರಧಾರೆಯಾಗಿ ಸುರಿವಂತೆ ಮಾಡಿದ ಮಹಾಮಾಂತ್ರಿಕನೀ ಕುಮಾರ ಶ್ರೀಕೃಷ್ಣನು. ಕೃಷ್ಣನಿಗೆ ಕುತ್ತುಗಳನ್ನೊಡ್ಡಿದ ಕಂಸನ ಕೃತ್ರಿಮವನ್ನು ಕಂಡುಕೊಂಡರೂ ಅಕ್ರೂರನೊಡನೆ ಮಥುರೆಗೈದಿ, ಕುವಲಯಾಪೀಡ ಎಂಬ ಮದ್ದಾನೆಯನ್ನು ಗೆದ್ದು, ಚಾಣೂರಮುಷ್ಟಿಕರೆಂಬ ಮಲ್ಲಮಣಿಗಳನ್ನು ಸದೆದು, ದುಷ್ಟಕಂಸನನ್ನು ಮುಷ್ಟಿಪ್ರಹಾರದಿಂದ ಪರಲೋಕಕಟ್ಟಿ, ಆತನಿಂದ ಅನ್ಯಾಯವಾಗಿ ಆಕ್ರಮಿತವಾದ ಸಿಂಹಾಸನವನ್ನು ಅವನ ಮುದಿ ತಂದೆಯಾದ ಉಗ್ರಸೇನನಿಗೆ ತಿರುಗಿ ಒಪ್ಪಿಸಿದ ವೀರಧೀರ ಬಲಶಾಲಿಯಾದ ಉದಾರಪುರುಷನು ಶ್ರೀಕೃಷ್ಣಪರಮಾತ್ಮನು. ಶ್ರೀಕೃಷ್ಣನ ಚಾರುಚಾರಿತ್ರ್ಯದ ಪ್ರಾರಂಭವೇ ಈ ಬಗೆಯಾಗಿ ಸ್ವಾರ್ಥನಿರಪೇಕ್ಷವಾದ ಲೋಕಸೇವಾತತ್ಪರತೆಯಿಂದ ಆರಂಭವಾಗಿದೆ. ಆತನ ಭುಜಬಲಪರಾಕ್ರಮದಿಂದ ಬುದ್ಧಿಬಲ ಸಾಮರ್ಥ್ಯದಿಂದ ರಾಜತಂತ್ರ ನಿಪುಣತೆಯ ಪ್ರಭಾವದಿಂದ ಅನೇಕಾನೇಕ ದುಷ್ಟರೂ ಪ್ರಜಾಪೀಡಕರೂ ಆದ ರಾಜರ ನಿರ್ಮೂಲನವಾಗಿದ್ದರೂ, ಆಗಿನ ಕಾಲದ ಜ್ಞಾತ ಜಗತ್ತಿಗೆಲ್ಲ ಸಾರ್ವಭೌಮನಾಗಿ ಮೆರೆಯಲು ಬರಬಹುದಾದ ಸಂಧಿಯು ಅನೇಕ ಪ್ರಸಂಗಗಳಲ್ಲಿ ಆತನೆದುರಿಗೆ ಕೈಜೋಡಿಸಿಕೊಂಡು ನಿಂತುಕೊಂಡಿದ್ದರೂ ಮನುಷ್ಯತ್ವವನ್ನು ಪಶುತ್ವಕ್ಕೆ ಈಡುಮಾಡುವ "ಸ್ವಾರ್ಥ" ವಿಚಾರವನ್ನು ತಮ್ಮ ವಿವೇಕಶಕ್ತಿಯ ಖಡ್ಗದಿಂದ ತುಂಡರಿಸಿ ಚೆಲ್ಲಿ ಕೊನೆಯ ವರೆಗೂ ಸಾಮಾನ್ಯ ಮನುಷ್ಯನಾಗಿ ಬಾಳಿ ಆರ್ತಪರಿತ್ರಾಣದ ಮೂಲಕವಾಗಿ ಜಗತ್ತಿನ ಉದ್ಧಾರವನ್ನೆಸಗಿದ

ಲೇಖಕರು:—ಶ್ರೀ ಮುದವೀಡು ಕೃಷ್ಣರಾಯರು.

ಅದ್ವಿತೀಯ ಮಹಾಮಹಿಮನು ಶ್ರೀಕೃಷ್ಣನಾಗಿದ್ದಾನೆ. ಪಾಂಡವರ ರಾಜಸೂಯಯಜ್ಞವೆಂಬುದು ಆ ಕಾಲದ ವಿವಿಧ ಗುಣವಿಶಿಷ್ಟ ಪುರುಷಶ್ರೇಷ್ಠರೆಲ್ಲರ ಪ್ರಚಂಡವಾದದ್ದೊಂದು ಜಗತ್ ಪರಿಷತ್ತೇ ಆಗಿತ್ತು. ಇಂಥ ಪರಿಷತ್ತಿನಲ್ಲಿ ಅಗ್ರಪೂಜೆಯ ಸನ್ಮಾನವು ಶ್ರೀಕೃಷ್ಣನಿಗೇ ಸಲ್ಲತಕ್ಕದ್ದೆಂದು ಕುರುಕುಲ ಪಿತಾಮಹನೂ, ಸಕಲಶಾಸ್ತ್ರ ವಿಶಾರದನೂ, ಧನ-ವಿದ್ಯಾಧುರೀಣನೂ, ಜಿತೇಂದ್ರಿಯರ ಪರಮಗುರುವೂ, ಸ್ವಾರ್ಥತ್ಯಾಗದ ಸಾಕಾರಮೂರ್ತಿಯೂ, ಸತ್ಯಪ್ರತಿಜ್ಞರ ಶಿರೋಮಣಿಯೂ ಆಗಿದ್ದ ಭೀಷ್ಮಾಚಾರ್ಯರೇ ತಮ್ಮ ಮಾತನ್ನು ಸಜ್ಜನರೆಲ್ಲರೊಪ್ಪುವರೆಂಬ ಆತ್ಮಪ್ರತ್ಯಯಬುದ್ಧಿಯಿಂದ ಕೈಯೆತ್ತಿ ಸಾರಿ ಅದನ್ನು ಕೊನೆಗಾಣಿಸಿದ್ದೇ ಬಿಟ್ಟರೆಂಬ ಒಂದೇ ಸಂಗತಿಯಿಂದ ಶ್ರೀಕೃಷ್ಣನ ಉದಾತ್ತ ಜೀವನದ ಶ್ರೇಷ್ಠ ರಹಸ್ಯವೆಲ್ಲವೂ ಮನದಟ್ಟಾಗುವಂತಿದೆ. ಮಹಾಭಾರತ ಯುದ್ಧದಲ್ಲಿ ತನ್ನ ಮೈದುನನಾದ, ಶಿಷ್ಯನಾದ ಭಕ್ತನಾದ ಅರ್ಜುನನ ಸಾರಥ್ಯವನ್ನು ಕೈಕೊಂಡು ಲೋಕವೆಲ್ಲ ಕೀಳೆಂದು ಬಗೆಯುವ ಎಂಥ ಕರ್ಮವನ್ನಾದರೂ ಲೋಕಕಲ್ಯಾಣಕ್ಕಾಗಿಯೇ ಮಾಡುವುದರಲ್ಲಿ ಯಾವ ಹೀನತನವೂ ಇಲ್ಲವೆಂಬುದನ್ನು ತನ್ನ ಆಚರಣೆಯಿಂದಲೇ ತೋರಿಸಿಕೊಟ್ಟ ನರಪುಂಗವನು ಶ್ರೀಕೃಷ್ಣಪರಮಾತ್ಮನಾಗಿರುವನು.

<u>ಶ್ರೀಕೃಷ್ಣಾವತಾರ ಕಾಲದಲ್ಲಿ</u>

ಶ್ರೀಕೃಷ್ಣನ ಅವತಾರ ಕಾಲದಲ್ಲಿ ಭಾರತ ವರ್ಷದ ಜನಜೀವನದಲ್ಲಿ ಅಸಹ್ಯನಾದ ಕೋಲಾಹಲವೆದ್ದಿತು. ರಾಜರು ಮಹಾರಾಜರುಗಳೆಲ್ಲೆಲ್ಲ ಡಂಭ, ದರ್ಪ, ದುರಭಿಮಾನ, ದುರಹಂಕಾರಾದಿ ಅಸುರ ಗುಣಗಳು ಪ್ರಬಲವಾಗಿದ್ದ ಮೂಲಕ ಅವರು ಮದೋನ್ಮತ್ತರಾಗಿ ಸಜ್ಜನರಿಗೂ ಸಾಮಾನ್ಯರಿಗೂ ಅತ್ಯಂತ ತಾಪದಾಯಕರಾಗಿದ್ದರು. ಇಂಥವರ ಪ್ರಬಲವಾದ ಪ್ರಚಂಡವಾದ ಎದುರಿಲ್ಲದ ತಾಮಸ ಬಲದ ಮುಂದೆ ಧರ್ಮನಿರತರೂ ಸಚ್ಛೀಲರೂ ಆಗಿದ್ದ ಎಷ್ಟೋ ಜನ ರಾಜರು ಮಹಾರಾಜರು ಕೂಡ ತಲೆ ತಗ್ಗಿಸಬೇಕಾಗಿ ಬಂದುದರಿಂದ ಇಂಥ ನಾವಿರಾರು ಜನರು ಜರಾಸಂಧ, ನರಕಾಸುರ ಮೊದಲಾದವರ ಸೆರೆಯಾಳುಗಳಾಗಿದ್ದರು. ಸ್ತ್ರೀದಾಕ್ಷಿಣ್ಯದ ಸರ್ವಮಾನ್ಯ ತತ್ವವನ್ನೂ ಲೆಕ್ಕಿಸದವರಾಗಿದ್ದ ಆ ಮದಾಂಧರ ಬಂದಿವಾಸದಲ್ಲಿ ಅಸಂಖ್ಯ ಜನ ಹೆಂಗಳೆಯರು ಕೂಡ ಕಣ್ಣೀರಿನಿಂದ ಕೈತೊಳೆಯುತ್ತ ಬಾಳಿ ಬಿದ್ದಿದ್ದರು. ಹೀಗೆ ಭರತಖಂಡದಲ್ಲೆಲ್ಲಿ ನೋಡಿದರೂ ಉನ್ಮತ್ತತೆಯು ತಲೆಯೆತ್ತಿ ಮೆರೆಯುತ್ತಿದ್ದಿತು. ಈ ಬಗೆಯಾಗಿ ಒಂದು ರೀತಿಯ ಪ್ರಳಯ ಕಾಲವನ್ನೇ ಎದುರು ನೋಡುತ್ತಿದ್ದ ಆರ್ತ ಜನಾಂಗವನ್ನು ಉದ್ಧಾರ ಮಾಡುವದಕ್ಕಾಗಿಯೇ ಶ್ರೀಕೃಷ್ಣನ ಜನ್ಮವಾಯಿತು. ಅಖಂಡ ಭಾರತದಲ್ಲಿ ಸುಪ್ತಪ್ರಾಯವಾಗಿದ್ದ ದೈವೀಶಕ್ತಿಯನ್ನು ಕೇಂದ್ರೀಕರಿಸಿ, ಜಗದ್ವಿಧ್ವಂಸಕವಾಗಿ ಮೆರೆಯುತ್ತಿದ್ದ ಅಸುರ ಬಲವನ್ನು ನಿರ್ಮೂಲಮಾಡಿ ಎಲ್ಲೆಲ್ಲಿಯೂ ಶಾಂತಿ ಸಾಮ್ರಾಜ್ಯವನ್ನು ಪ್ರಸ್ಥಾಪಿಸಿ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಶ್ರೇಷ್ಠವಾದ ಸನಾತನ ಧರ್ಮತತ್ವವನ್ನು ಎಲ್ಲೆಡೆಯಲ್ಲಿಯೂ ಕಾರ್ಯರೂಪಕ್ಕಿಳಿಸಿದ ಪರಮಶ್ರೇಷ್ಠ ಕರ್ತೃತ್ವಶಾಲಿಯಾದ ತತ್ವಜ್ಞಾನಿಯು ಶ್ರೀಕೃಷ್ಣನಲ್ಲದೆ ಇತಿಹಾಸದಲ್ಲಿ ಬೇರೆ ಯಾರೂ ದೊರೆಯುವದಿಲ್ಲ. ಜನಾಂಗದೊಳಗಿನ ಅಧರ್ಮ ಪ್ರವೃತ್ತಿಯನ್ನು ನಿಷ್ಠುರತನದಿಂದ ನಿರ್ಮೂಲನಗೈದು, ಧರ್ಮದ ತೆರೆಮರೆಯಲ್ಲಿ ಜನಾಂಗವನ್ನು ವಿನಾಶದ ಪಂಥಕ್ಕೆಳೆಯುತ್ತಿದ್ದ ಕರ್ತೃತ್ವಶೂನ್ಯ ನಿವೃತ್ತಿಯನ್ನು ನಿರಾಕರಿಸಿ ಲೋಕಕ್ಕೆ ನಿಜವಾದ ಶಾಂತಿ ಸುಖವನ್ನು ನೀಡಿದ ಶ್ರೀಕೃಷ್ಣಪರಮಾತ್ಮನ ಆದರ್ಶಜೀವನವು ಇಡೀ ಜಗತ್ತಿಗೇ ಇಂದು ಮಾರ್ಗದರ್ಶಕವಾಗಿರಲು ಪ್ರತ್ಯಕ್ಷ ಆತನ ಜನ್ಮಭೂಮಿಯೂ ಕರ್ಮಭೂಮಿಯೂ ಆಗಿದ್ದ ನಮ್ಮ ಭರತಭೂಮಿಗೆ ಆತನ ಅಗಾಧ ಉ

YOUR LUCK

Simply send us a post card with the name of any flower together with your name and address and we will send you by V P P. for Rs 1 8-0/- only detailed account of your forth coming 12 months showing among other things profit and loss in business, promotion, transfer and reduction in service, birth marriage, happiness and bodily ailments and directions will be sent to safeguard yourself from the coming evil influence of the star. A trial will convince you of the accuracy of our prophects Sold under money return Guraantee.

BHARAT JOTISHASHRAM (N.U.)
JULLUNDUR CITY, (Punjab)

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಷ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ರಿತ್ರ್ಯವು ಎಷ್ಟೊಂದು ಬಗೆಯಿಂದ ಉಪಯುಕ್ತವಾಗಿರುವದೆಂಬುವದನ್ನು ಬೇರೆ ಒಡೆದು ಹೇಳಬೇಕೆ?

ಶ್ರೀ ಕೃಷ್ಣನು ಕನ್ನಡ ಜನಾಂಗಕ್ಕೆ ಹೊಂದಿಕೊಂಡವನು

ಹೀಗೆ ಜಗದ್ವಂದ್ಯ ಪುರುಷೋತ್ತಮನಾಗಿ ಜಗತ್ಕರ್ತನಾದ ಪರಮಪುರುಷನ ಅವತಾರವೇ ಎಂದು ಗಣಿಸಲಾಗಿರುವ ಶ್ರೀಕೃಷ್ಣನು ನಮ್ಮ ಕನ್ನಡ ಜನಾಂಗಕ್ಕೆ ಹೊಂದಿಕೊಂಡವನೆಂದು ಇತ್ತಿತ್ತಲಾಗಿನ ಸಂಶೋಧನಕಾರರು ಪ್ರಕಟಗೊಳಿಸಹತ್ತಿದ್ದಾರೆ * ಸಿಂಧೂ ನದಿಯ ನೆರೆ ಪ್ರದೇಶದಲ್ಲಿ ದೊರೆತಿರುವ "ಮೋಹಂಜೋದಾರೋ" ಮೊದಲಾದ ನಗರದ ಅವಶೇಷಗಳು ಪುರಾತನ ದ್ರಾವಿಡ ಅಂದರೆ ಕನ್ನಡ ಸಂಸ್ಕೃತಿಯ ಕುರುಹುಗಳಾಗಿವೆಯೆಂದು ಆ ಶಾಸ್ತ್ರ ಪ್ರವೀಣರು ತಮ್ಮ ನಿಃಸಂದಿಗ್ಧ ಅಭಿಪ್ರಾಯಗಳನ್ನು ಸಾರಹತ್ತಿದ್ದಾರೆ ಈಗಿನ ಕಾಲಕ್ಕೆ ಇನ್ನೂ ಅನುಮಾನಾವಸ್ಥೆಯಲ್ಲಿರುವ ಈ ಶೋಧವು ಐತಿಹಾಸಿಕ ಸತ್ಯವೆಂದು ನಿರ್ಣೀತವಾದರೆಂತೂ ಶ್ರೀಕೃಷ್ಣ ಪರಮಾತ್ಮನು ನಮ್ಮ ಕನ್ನಡ ಜನಾಂಗಕ್ಕೆ ಕುಲಪುರುಷನಾಗಿ ಪ್ರತಿಯೊಬ್ಬ ಕನ್ನಡಿಗನ ಅಂತರಂಗದ ಅಧಿದೇವತೆಯಾಗುತ್ತಾನೆ. ನಮ್ಮ ಕನ್ನಡ ನಾಡು ಅಖಂಡ ಭಾರತದ ಒಂದು ಅಂಗವೇ ಆಗಿರುವುದನ್ನು ಆ ಭಾರತೀಯ ಸಂಸ್ಕೃತಿಯ ಸನಾತನ ಸ್ವರೂಪವನ್ನು ಪರಮೋಜ್ವಲಗೊಳಿಸಿ ಇಡೀ ಜಗತ್ತಿನ ದೃಷ್ಟಿಯನ್ನೇ ಇದರ ಕಡೆಗೆ ಸೆಳೆದ ಮಹತ್ಕಾರ್ಯವನ್ನು ನಮ್ಮ ಕನ್ನಡ ಜನಾಂಗವೇ ಐತಿಹಾಸಿಕ ಕಾಲದಲ್ಲಿ ಮಾಡುತ್ತಾ ಬಂದಿರುವುದನ್ನು ನಿರೀಕ್ಷಿಸಿದರೆ ಕನ್ನಡ ಜನಾಂಗದ ಪ್ರಾಚೀನ ಪರಂಪರೆಯು ಯಾದವರ ಶ್ರೀಕೃಷ್ಣನನ್ನು ತನ್ನೊಳಗೆ ಸೇರಿಸಿಕೊಳ್ಳುವದು ಉಚಿತವಾದ ಮಾತೇ ಆಗಲಿದೆ. ನಮ್ಮ ಮಹಾಪುರುಷರು ಭಾರತೀಯ ವಿಭೂತಿಗಳಾಗಿ ಜಗದುದ್ಧಾರಕರಾಗಿ ವಿಶ್ವವಂದ್ಯ ಮಹಾನುಭಾವರಾಗಿ ಮೆರೆಯುತ್ತಿರುವರೆಂಬುದನ್ನು ಯಾರೂ ಅಲ್ಲಗಳೆಯಲಾರರು

ಕನ್ನಡಿಗರ ಇಂದಿನ ವಿಪರೀತ ಪರಿಸ್ಥಿತಿ

ಇಂದು ಮಾತ್ರ ನಮ್ಮ ಕನ್ನಡ ಜನಾಂಗದ ಪರಿಸ್ಥಿತಿಯೇ ವಿಪರೀತವಾಗಿದೆ ಇಂದಿನ ಜಗದ್ವಿಖ್ಯಾತ ಕನ್ನಡಿಗರು ತಮ್ಮ ಕನ್ನಡತನವನ್ನೇ ಮರೆತಿದ್ದಾರೆ, ಹಾಗೆಯೇ ಜಗತ್ತಿನ-ಬಿಡು, ಭಾರತದ ಬೇರೆ ಜನಾಂಗಗಳೂ ಕನ್ನಡವನ್ನೂ ಕನ್ನಡಿಗರನ್ನೂ ಕಡೆಗಣಿಸುತ್ತಲಿದ್ದಾರೆ ಪ್ರಾಚೀನ ಕನ್ನಡ ನಾಡು ಕತ್ತರಿಸಲ್ಪಟ್ಟು ನೆರೆಹೊರೆಯ ಜನಾಂಗಗಳ ಒಡಲೊಳಗೆ ಸೇರಿಹೋಗಿ, ಹಿಂದೂಸ್ಥಾನದ ಅರ್ವಾಚೀನ ಇತಿಹಾಸದಲ್ಲಿ ನಿರ್ನಾಮವಾಗಿರುವುದರಿಂದಲೇ ಇಂದು ಈ ದುರವಸ್ಥೆ ಕನ್ನಡಜನಾಂಗಕ್ಕೊದಗಿದೆ ಬೇರೆ ಬೇರೆ ನಾಡುಗಳೊಡಲೊಳಗೆ ಸೇರ್ಪಡೆಯಾಗಿರುವ ನಮ್ಮಿಂದ ಅವರಿಗೂ ಹಿತವಿಲ್ಲ ಅವರಿಂದ ನಮಗೂ ಸುಖಸಮಾಧಾನ ಶಾಂತಿಗಳಿಲ್ಲ ಮನುಷ್ಯನ ಶರೀರದೊಳಗೆ ಹೊಕ್ಕ ಪರಪದಾರ್ಥವು (Foreign matter) ಆ ಶರೀರಕ್ಕೆ ನೋವನ್ನುಂಟುಮಾಡಿ ತಾನು ಹೊರಬೀಳುವ ಹಂಚಿಕೆಯನ್ನೇ ಹಾಕುತ್ತಿರುವುದು ನಿಸರ್ಗಸಿದ್ಧವಾದ ನಿಯಮವಾಗಿದೆ ಹೀಗೆ ಉಭಯರ ಹಾನಿಗೂ ಕಾರಣವಾದ, ಕನ್ನಡ ಜನಾಂಗದ ಬದುಕಿಗೂ ಬಾಳಿಗೂ ಅಪಾಯಕರಕಾದ, ಕನ್ನಡ ನಾಡಿನ ವಿಭಜನೆಯನ್ನು ಪ್ರತಿಭಟಿಸಿ, ಅದನ್ನು ಮತ್ತೆ ಒಂದುಗೂಡಿಸಿಕೊಂಡಾಗಲೇ ಕನ್ನಡಿಗರು ಮೊದಲಿನಂತೆ ತಲೆಯೆತ್ತಿ ಮೆರೆಯಬಹುದಾಗಿದೆ ಈ ಮಹತ್ಕಾರ್ಯದಲ್ಲಿ ನಮ್ಮವನೇ ಆದ ಶ್ರೀಕೃಷ್ಣನ ದಿವ್ಯ ಚರಿತ್ರೆಯನ್ನು ಕನ್ನಡ ಜನಾಂಗವೆಲ್ಲ ಕಣ್ಣು ಮುಂದಿಟ್ಟುಕೊಂಡು ಅದರಿಂದ ಹೊರಹೊರಡುವ ದಿವ್ಯ ಸಿದ್ಧಾಂತಗಳನ್ನು ನಡೆನುಡಿಗಳಲ್ಲಿಳಿಸಿಕೊಂಡು ಮುಂದುವರಿಯಬೇಕಾಗಿದೆ.

* ವಸ್ಯ ಪ್ರೊ. ಪಲಕರ ಬಾಳಕೃಷ್ಣ ... ಯವರ ಸಂಶೋಧನಾತ್ಮಕ ಗ್ರಂಥಗಳನ್ನು ನೋಡಬೇಕು.

ಧರ್ಮಸ್ಥಾಪನೆ

ಶ್ರೀಕೃಷ್ಣನ ಕಾರ್ಯಕೌಶಲದ ಪರಮಾವಧಿಯು ಮಹಾಭಾರತ ಯುದ್ಧದ ಪರ್ಯವಸಾನದಲ್ಲಿ ನಿದರ್ಶನಕ್ಕೆ ಬರುವದು. ಧರ್ಮನಿಷ್ಠರಾದ ಐದು ಮಂದಿ ಪಾಂಡವರೊಂದು ಕಡೆಗೆ, ದುರಹಂಕಾರದ ಪ್ರತಿ ಅವತಾರನಾದ ದುರ್ಯೋಧನನೂ ಆತನ ನೂರು ಮಂದಿ ಸಹೋದರರೂ ಇನ್ನೊಂದು ಕಡೆಗೆ ತಮಗೆ ನ್ಯಾಯಸಿದ್ಧವಾಗಿದ್ದ ಬಾಧ್ಯತೆಯನ್ನು ದೊರಕಿಸಲು ಅತ್ಯಂತ ಸಾತ್ವಿಕ ವೃತ್ತಿಯಿಂದ ಶಾಂತಿ ಸಮಾಧಾನಗಳ ಸಂಧಿಯಿಂದ ಪ್ರಯತ್ನಿಸಿದವರು ಅಲ್ಪ ಸಂಖ್ಯರಾದ ಪಾಂಡವರು, ಅವರ ಜನ್ಮಸಿದ್ಧ ಹಕ್ಕುಗಳನ್ನೆಲ್ಲ ಅಲ್ಲಗಳೆದು ಅವರ ಶಾಂತ ಸ್ವಭಾವವನ್ನು ಹೇಡಿತನವೆಂದು ಬಗೆದು ಅವರ ಸರ್ವಸ್ವವನ್ನು ಅಪಹರಿಸಬೇಕೆಂಬ ದುರುದ್ದೇಶದಿಂದ ಅವರನ್ನು ಜಗತ್ತಿನೊಳಗೇ ಇರಗೊಡದಂತೆ ಹಂಚಿಕೆ ಹಾಕಿ ಕೈಸಾಧಿಸಿಕೊಂಡವರು ಬಹುಸಂಖ್ಯಾಕರಾದ ಕೌರವರು. "ಸತ್ಯಮೇವ ಜಯತೇ" ಎಂಬ ಸನಾತನ ತತ್ವಾನುಸಾರ ಒಮ್ಮೆ ಸಾಮೋಪಾಯದಿಂದ ತಮ್ಮ ಸ್ವತ್ವವನ್ನು ಸಂಪಾದಿಸಿಕೊಂಡು ತಮ್ಮಸ್ವಕ್ಕೆ ತಾವು ಬಾಳಿಬೆಳೆದು ನೆರೆಯವರ ಬೆಳವಣಿಗೆಯಿಂದಲೂ ಸಂತಸಗೊಂಡು ಒಡಂಕಲನುಮಾಡವರು ಪಾಂಡವರು, ಆದರೆ ಅವರ ಉತ್ಕರ್ಷದಿಂದ ಅಸೂಯೆಗೊಂಡು ದುರ್ದಮನೀಯ ದುಷ್ಟನೀತಿಯ ಖಳಖನಿಯಾದ ಶಕುನಿಯ ತಂತ್ರದಿಂದ ಅವರನ್ನು ಅಡವಿಗೀಡುಮಾಡಿ ಅವರ ವೈಭವವನ್ನೆಲ್ಲ ಸೂರೆಗೊಂಡು ಪಾಂಡವರ ಹೆಸರನ್ನೇ ಅಳಿಸಿಬಿಡುವದಕ್ಕೆ ಹಾತೊರೆದು ಹೆಣಗಿದವರು ಕೌರವರು ಹೀಗೆ ಒಂದಕ್ಕೊಂದು ವಿರುದ್ಧವಾದ ಎರಡು ಗುಣಗಳ ಹೋರಾಟ ನಡೆದ ಕಾಲಕ್ಕೆ ಅಲ್ಪ ಸಂಖ್ಯಾಕರಾದರೂ ಸದ್ಗುಣಿಗಳೂ ಸದ್ಧರ್ಮಶೀಲರೂ, ಸಚ್ಚಾರಿತ್ರ್ಯವಂತರೂ ಆದ ಪಾಂಡವರ ಪಕ್ಷವನ್ನು ಹಿಡಿದು ಅವರ ಮೂಲಕವಾಗಿಯೇ ಇಡೀ ಭರತವರ್ಷದಲ್ಲಿ ಶಾಂತಿ ಸಾಮ್ರಾಜ್ಯವನ್ನು ನೆಲೆಗೊಳಿಸಿ ತನ್ನ ಮಹತ್ಕಾರ್ಯದ ಶ್ರೇಯಸ್ಸೆಲ್ಲವನ್ನೂ ಧರ್ಮಭೀಮಾರ್ಜುನರಡಿಯೊಳಗೆ ಹಾಕಲಿಕ್ಕೆ ಶ್ರೀಕೃಷ್ಣನು ಹಿಂದೆಮುಂದೆ ನೋಡಲಿಲ್ಲ ಮಮ ಪ್ರಾಣಾ ಹಿ ಪಾಂಡವಾಃ" ಎಂಬ ಕರುಳಿನ ಉದ್ಗಾರಗಳು ಆ ಮಹಾಮಹಿಮನ ಬಾಯಿಯಿಂದ ಹೊರಬಿದ್ದು ಸಣ್ಣ ಪುಟ್ಟಮಾತಲ್ಲ, "ಪಾಂಡವಪ್ರತಿಷ್ಠಾಪನಾಚಾರ್ಯ" ನೆಂಬ ಬಿರುದಿನಲ್ಲಿಯೇ ತನ್ನ ಸರ್ವಶ್ರೇಯಸ್ಸಡಕವಾಗಿರುವದೆಂಬ ಆತನ ಅಂತಃಸಮಾಧಾನದಿಂದಅಭಿವ್ಯಕ್ತವಾಗುವ ನಿಸ್ವಾರ್ಥಲೋಕಸೇವಾಧುರೀಣತ್ವವು ಯಾವ ಉಚ್ಚತರಗತಿಯದೆಂಬುದನ್ನು ಈಗಿನ ಕಾಲದ ಲೋಕಸೇವಾಧುರಂಧರರೆನಿಸಿಕೊಳ್ಳುವವರು ಅಗತ್ಯವಾಗಿ ತಿಳಿದು ನೋಡತಕ್ಕದ್ದಾಗಿದೆ.

ಕರ್ತುಮಕರ್ತುಂ ಅನ್ಯಥಾ ಕರ್ತುಂ

ಇಂಥ ಮಹಾಪುರುಷನು ನಮ್ಮ ಕನ್ನಡ ನಾಡಿನ ಪಶ್ಚಿಮ ಸಮುದ್ರದ ಕರಾವಳಿಯಲ್ಲಿ ಇಂದಿಗೂ ಬಾಲಕೃಷ್ಣ ಸ್ವರೂಪದಲ್ಲಿ ನೆಲೆಗೊಂಡು ಕನ್ನಡ ಜನಾಂಗಕ್ಕೆಲ್ಲ ತನ್ನ "ಕರ್ತುಮಕರ್ತುಂ ಅನ್ಯಥಾ ಕರ್ತುಂ" ಸಾಮರ್ಥ್ಯದ ನೆನಪು ಕೊಡುತ್ತಿದ್ದಾನೆ. "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂಬುದು ಆತನ ತ್ರಿಕಾಲಾಬಾಧಿತವಾದ ಬಿರುದಾಗಿದೆ. ಈ ಬಿರುದಿನಲ್ಲಿ ನಂಬುಗೆಯನ್ನಿಟ್ಟು ಆತನ ಉಪಾಸನೆಯನ್ನು ಅನನ್ಯಭಾವದಿಂದ ಮಾಡುತ್ತ ಆತನ ಗುಣಗಣಗಳೊಳಗಿನ ಅತ್ಯಲ್ಪವನ್ನಾದರೂ ಅನುಕರಿಸುವ ಬುದ್ಧಿಯಿಂದ ಕನ್ನಡ ಜನಾಂಗವು ಆತನ ಜನ್ಮೋತ್ಸವ ದಿನವಾದ ಇಂದಿನ ಶುಭಯೋಗದಲ್ಲಿ ನಿಶ್ಚಯಮಾಡಿ ತನ್ನ ನಡತೆಯನ್ನು ತಿದ್ದಿಕೊಳ್ಳುವ ದಾರಿಯನ್ನು ಹಿಡಿದರೆ ಕನ್ನಡನಾಡಿನಲ್ಲಿ "ನವಯುಗ" ಕ್ಕಾರಂಭವಾಗಿ ಭಾರತದ ಭವಿತವ್ಯವನ್ನು ಬದಲಿಸಲು ಅದು ಸಮರ್ಥವಾಗುವದೆಂಬ ಭವಿಷ್ಯವನ್ನು ಇಂದು ಅಸಂದಿಗ್ಧವಾಗಿ ನುಡಿಯಬಹುದಾಗಿದೆ ೨೧-೮-'೩೪

ಸ್ಥಾಪನೆ **ಕ್ರೌನ್ ರಬ್ಬರ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಮೇದಿಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡಲಾಗುವುದು.



CROWN RUBBER STAMP CO.,
Balmat Road, MANGALORE
Includ by the Mysore Govt Stores Purchase Committee in the list of approved firms

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ:—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ ಆರ್ ಕೆ ಕೇಟ್ ಬಿಲ್ಡಿಂಗ್,
ವಿಕ್ಟೋರಿಯಾ ಸ್ಕೂಲ್ ರೋಡು

ಅಥವಾ

ಎಚ್ ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

WANTED District and Taluk Organisers in Districts and Taluks of Karnataka on a monthly salary of Rs 50/ and Rs. 20/ Special facilities for initial business. Only influential and educated Organisers who can guarantee Rs 50,000/- and Rs 25 000/ per year need apply. Padubidri Bros, Bombay 8.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಪುಷ್ಟಿಕರ ಗುಣವುಂಟಾಗುವಂತೆಮಾಡುತ್ತದೆ ದುಷ್ಟರಕ್ತವನ್ನು ಶುದ್ಧಿ ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ ಕ್ರಯ ಡಬ್ಬಿಗೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಂದ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವದು, ಅರ್ಧಕೊಳೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ ಪುಸ್ತಕವು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡುಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಮೈಸೂರಿನಲ್ಲಿ ಶ್ರೀಕೃಷ್ಣಜಯಂತಿ ಉತ್ಸವವನ್ನು ಹೇಗೆ ಆಚರಿಸಲಾಗುತ್ತದೆ?

ರಾಜಧಾನಿಯು ಗೋಕುಲವೇ ಆಗಿಬಿಡುವುದು.

(ಲೇಖಕರು —ಶ್ರೀ. ಎನ್. ಗುಂಡೂರಾವ್)

ನವಯುಗದ - ಮೈಸೂರು ಬಾತ್ಮೀದಾರರು

ಮೈಸೂರು ಸಂಸ್ಥಾನದಲ್ಲಿ ಆಚರಿಸಲ್ಪಡುವ ಮುಖ್ಯ ಹಬ್ಬಗಳಲ್ಲಿ ಶ್ರೀಕೃಷ್ಣಜಯಂತಿ (ಗೋಕುಲಾಷ್ಟಮಿ) ಉತ್ಸವವು ಒಂದಾಗಿದೆ. ಅದರಲ್ಲೂ ಅರಮನೆಯಲ್ಲಿ ಈ ಹಬ್ಬವನ್ನು ಬಹಳ ಅತ್ಯುತ್ಸಾಹದಿಂದ ಆಚರಿಸಲಾಗುತ್ತದೆ ಮೈಸೂರಿನ ಒಡೆಯರು ಯದುವಂಶಸ್ಥರೆಂದಿರುವುದರಿಂದ ಶ್ರೀಕೃಷ್ಣಜಯಂತಿ ಉತ್ಸವಕ್ಕೆ ಅಷ್ಟು ಪ್ರಾಮುಖ್ಯತೆ ಕೊಡಲಾಗುತ್ತದೆ

ದೇವಸ್ಥಾನ

ಮೈಸೂರು ಅರಮನೆಯ ಕೋಟೆಯ ಒಳಗಡೆ ಅನೇಕ ದೇವಸ್ಥಾನಗಳಿವೆ ಅರಮನೆಯ ದಕ್ಷಿಣ ಭಾಗದಲ್ಲಿರುವ ಸುಪ್ರಸಿದ್ಧ ದೇವಸ್ಥಾನವು ಶ್ರೀ ಕೃಷ್ಣದೇವರ ಗುಡಿ. ಗತಿಸಿದ ಮೂರನೇ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಇದನ್ನು ಕಂಡು ಹಿಡಿದರೆಂದು ಚರಿತ್ರೆಗಳಿಂದ ತಿಳಿಯಬರುತ್ತದೆ ಈ ದೇವಸ್ಥಾನದಲ್ಲಿ ಪುರಾತನ ಕಾಲದ ಅನೇಕ ವಿಗ್ರಹಗಳಲ್ಲದೆ, ಬಹಳ ಮುದ್ದಾದ ಶ್ರೀಕೃಷ್ಣ ಪ್ರತಿಮೆಯೂ ಇದೆ ದೇವಸ್ಥಾನವಂತೂ ಪುರಾತನ ಕಲೆಯ ಬೆಡಗಿನಿಂದ ತುಂಬಿದೆ.

(ಮೈಸೂರಿನ ಆದರ್ಶ ಮಹಾರಾಜರು)

ಉತ್ಸವ

ಶ್ರೀ ಕೃಷ್ಣ ಜಯಂತಿ ಉತ್ಸವದ ದಿನ ರಾಜಧಾನಿಯಲ್ಲಿರುವ ಪ್ರತಿಯೊಂದು ಹಿಂದೂ ಮನೆಯನ್ನು ತಳಿರು ತೋರಣಗಳಿಂದ ಅಲಂಕರಿಸುವರಲ್ಲದೆ ಶ್ರೀ ಕೃಷ್ಣ ದೇವರ ಗುಡಿಯಲ್ಲೂ ಅದೇ ರೀತಿ ಮಾಡುತ್ತಾರೆ ಈ ಉತ್ಸವದ ಮೊದಲನೆ ದಿನ ಮೊದಲುಗೊಂಡು ಸುಮಾರು ಎಂಟುದಿನಗಳ ವರೆಗೆ ಪ್ರತಿದಿನವೂ ದಿನಕ್ಕೆ ಒಂದೊಂದವತಾರದಂತೆ ಶ್ರೀಕೃಷ್ಣ ಮೂರ್ತಿಯನ್ನು ಅಲಂಕರಿಸಿ ಪೂಜೆಮಾಡುತ್ತಾರೆ ಮತ್ತು ಆ ಅಲಂಕಾರ ರೂಪದಲ್ಲಿ ಕೋಟೆಯ ಒಳಗಡೆಯಿರುವ ರಸ್ತೆಯಲ್ಲಿ ಮೆರವಣಿಗೆ ನಡೆಸುತ್ತಾರೆ.

ಶ್ರೀ ಕೃಷ್ಣ ಜಯಂತಿ ಉತ್ಸವದ ಮೊದಲನೆದಿನ ಬೆಳಗ್ಗೆ ವಾದ್ಯವಾಗುತ್ತಿರುವಾಗ ಶ್ರೀ ಕೃಷ್ಣ ದೇವರಿಗೆ ಮಂಗಳ ಸ್ನಾನಾದಿ ಮಾಡಿ ಪೂಜೆಪುನಸ್ಕಾರ ಮತ್ತು ಅಭಿಷೇಕ ಮಾಡಲಾಗುವುದು ಸಂಜೆ ದೇವರಿಗೆ ಒಂದು ಅಲಂಕಾರ ಹಾಕುತ್ತಾರೆ. ಇದೇ ರೀತಿ ಉಳಿದ ದಿನಗಳಲ್ಲೂ ಶಕಟಾಸುರ ವಧೆ ಪೂತನಿಸಂಹಾರ, ಬೆಣ್ಣೆ ಚೋರತನವೇ ಇತ್ಯಾದಿ ಅಲಂಕಾರ ಮಾಡಿ, ಎಂಟನೆಯ ಮತ್ತು ಕೊನೆಯ ದಿನ ರಾಸಕ್ರೀಡೆ (ಜಲಕ್ರೀಡೆ) ಅಲಂಕಾರಮಾಡಿ ಮೆರವಣಿಗೆ ನಡೆಯುತ್ತದೆ ಆ ದಿನ ನಡೆಯುವ ಉತ್ಸವವು ಬಹಳ ಚರಿತ್ರಾರ್ಹವಾದುದು. ಈ ಉತ್ಸವದಲ್ಲಿ ಕಾಮಧೇನು ಬರುವುದು

ಮೆರವಣಿಗೆ

ಮೇಲೆ ಹೇಳಿದ ರೀತಿಯಲ್ಲಿ ಹಬ್ಬದ ಕಾಲದಲ್ಲಿ ಶ್ರೀಕೃಷ್ಣದೇವರಿಗೆ ಪ್ರತಿದಿನವೂ ಅಲಂಕರಿಸಿದ ಮೇಲೆ ಮೆರವಣಿಗೆ ನಡೆಯುತ್ತದೆ ಇದನ್ನು ದಸರಾ ಕಾಲದ ಮೆರವಣಿಗೆಗೆ ಸ್ವಲ್ಪ ಹೋಲಿಸಬಹುದು ಮೆರವಣಿಗೆಯಲ್ಲಿ ಶ್ರೀಮನ್ಮಹಾಪ್ರಭುಗಳ ಬಳಿಯಿರುವ ಸೈನಿಕರುಗಳೂ, ಕಾಲಾಳುಗಳೂ, ಆನೆಗಳೂ, ವಾದ್ಯ ಬಾರಿಸುವವರೂ ಮತ್ತು ಅರಮನೆಗೆ ಸೇರಿದ ಕೆಲವು ನೌಕರುಗಳೂ ಭಾಗ ವಹಿಸುತ್ತಾರೆ

ಪ್ರತಿನಿತ್ಯವೂ ಮೆರವಣಿಗೆಯು, ಸಂಧ್ಯಾಕಾಲ ಶ್ರೀಕೃಷ್ಣದೇವರ ಗುಡಿಯಿಂದ ಹೊರಟು ಅರಮನೆಯ ಮುಂಭಾಗಕ್ಕೆ ಬಂದು ಅಲ್ಲಿಂದ ಮುಂದಕ್ಕೆ ಪ್ರಯಾಣ ಮಾಡುತ್ತದೆ ಅರಮನೆಯ ಬಳಿಗೆ ಬಂದಾಗ ಮಹಾಪ್ರಭುಗಳೂ, ರಾಜ ಮನೆತನದವರೂ ಶ್ರೀ ಪ್ರಸನ್ನ ಕೃಷ್ಣಸ್ವಾಮಿಯ ದರ್ಶನ ಲಾಭ ಪಡೆದು ಸಂತೃಪ್ತರಾಗುತ್ತಾರೆ ಅರ

(ಶ್ರೀಗತಿವರ ಮೈಸೂರಿನ ದಿವಾನರು)

ಮನೆಯನ್ನು ದಾಟಿದ ಮೇಲೆ ಮೆರವಣಿಗೆಯು ಕೋಟೆಯ ಒಳಭಾಗದಲ್ಲಿರುವ ಮುಖ್ಯರಸ್ತೆಗಳಲ್ಲಿ ಹಾದುಹೋಗಿ ಕೊನೆಗೆ ದೇವಸ್ಥಾನಕ್ಕೇ ಹಿಂತಿರುಗುವುದು.

ಮೆರವಣಿಗೆಯ ಕಾಲದಲ್ಲಿ ಆನೆಗಳೂ, ಒಂಟೆಗಳೂ, ಕುದುರೆಗಳೂ, ಸೈನ್ಯದವರೂ (ಇವರ ಮಧ್ಯೆ ತಮಾಷೆಗಾಗಿ ಪರದೇಶದಿಂದ ತಂದಿರುವ ಗಡ್ಡದ ಮೇಕೆ ಮತ್ತು ಟಗರುಗಳೂ) ಅಲಂಕರಿಸಿರುವ ದೊಡ್ಡ ದೊಡ್ಡ ಗೋಪುರಗಳೂ, ದೇವದಾಸಿಯರೂ, ವಾದ್ಯ ಬಾರಿಸುವವರೂ, ಇವರ ಹಿಂದೆ ದಿವ್ಯವಾಗಿ ಒಪ್ಪುವ ಬೆಲೆ ಬಾಳುವ ಒಡವೆಗಳಿಂದ ಅಲಂಕಾರಾನಂತರ ಮಾಡಿರುವ ಶ್ರೀ ಕೃಷ್ಣ ಪರಮಾತ್ಮನ ವಿಗ್ರಹವನ್ನೂ ಹೊತ್ತುಕೊಂಡು, ಬಹಳ ಗಂಭೀರ ಧ್ವನಿಯಲ್ಲಿ ದೇವರ ನಾಮಸ್ಮರಣೆ ಮಾಡುವ ವೈದಿಕರುಗಳೂ, ಸುವಾಸನೆಯಿಂದ ಕೂಡಿದ ಧೂಪದೀಪಾದಿಗಳನ್ನು ಹಿಡಿದಿರುವವರೂ, ಭಕ್ತಿಯುಳ್ಳವರೂ, ಚಾಮರದವರೂ, ಸ್ವಲ್ಪ ಸೈನ್ಯದವರೂ ಮತ್ತು ಅರಮನೆಯ ನೌಕರರುಗಳೂ ಕ್ರಮವಾಗಿ ಒಬ್ಬರ ಹಿಂದೊಬ್ಬರು ಮಂದಗಮನದಲ್ಲಿ ನಡೆಯುತ್ತಾರೆ ಇಷ್ಟಲ್ಲದೆ ವಿದ್ಯುತ್ ದೀಪದ ಬೆಳಕನ್ನೂ ಕರಿಸಿ ನೋಟವನ್ನು ಬೆಡಗುಮಾಡುತ್ತಾರೆ

TRY ONCE

NEW VIDYARTHI NILAYAM

BRAMHINS' RESTAURANT

SANTAPET SQUARE, NEAR JAGANMOHAN PALACE,
MYSORE.

ನ್ಯೂ ವಿದ್ಯಾರ್ಥಿ ನಿಲಯಂ

ಬ್ರಾಹ್ಮಣರ ಫಲಾಹಾರ ಮಂದಿರಂ.

ಜಗನ್ಮೋಹನ ಬಂಗ್ಲೆ, ಸಂತೆಪೇಟೆ ಚೌಕದ ಬಳಿ, ಮೈಸೂರು.

ಪ್ರಶ್ನೆ—ಕೆ ಚಿರುಚಿಯಾದ ತಿಂಡಿತೀರ್ಥಗಳಿಗೆ ಮೈಸೂರಿಗೆ ಬಂದಾಗ ಎಲ್ಲಿಗೆ ಹೋಗುತ್ತೀರಿ?

ಉತ್ತರ—ಮೈಸೂರು ಸಂತೇಪೇಟೆ ಚೌಕದ ಬಳಿಯಿರುವ "ನ್ಯೂ ವಿದ್ಯಾರ್ಥಿ-ನಿಲಯಂ"

Proprietors M G Rao and M N Rao

VISIT

The QUEEN of HILL Station (OOTACAMUND)
Via The GARDEN City of India (MYSORE)

THE SHORTEST AND CHEAPEST ROUTE FOR
Passengers, parcels and goods traffic from and to Ootacamund to all places on the Mysore and connected Railways in India

BUS TO OOTACAMUND

MYSORE

DEP 7-30 A M and 12-30 Noon — ARR 2-30 P M and 6-45 P M

OOTACAMUND

DEP 7-45 A M and 12-45 Noon — ARR 2-30 P M and 6 45 P M

Also bus Service between:—

Ootacamund—Meppadi—Nilambur and Devarasola
Mysore—Melkote and Bellur

Special Buses, Cars

and lorries can also be supplied on previous intimation

Please apply for full particulars:—

THE MANAGER,

Rajalakshmi Motor Service,

Royal Mail and Mysore State
RAILWAY OUT-AGENCY CONTRACTORS

MYSORE — GUDALUR — OOTACAMUND

Phone No 417 — Phone No 3235

ಕೊನೆಯ ದಿನ

ಮೇಲೆ ಬರೆದಿರುವಂತೆ ಎಂಟನೆಯ ಮತ್ತು ಕೊನೆಯ ದಿನ ನಡೆಯುವ ದೃಶ್ಯವು ಬಹಳ ಸೊಬಗಿನಿಂದ ಕೂಡಿರುತ್ತದೆ ಆ ದಿನದ ದೃಶ್ಯದಲ್ಲಿ ರಾಸಕ್ರೀಡೆ ಅಲಂಕಾರ ಮತ್ತು ಪಟ್ಟದ ಗೋವಿಗೆ 'ಕಾಮಧೇನು' ಅಲಂಕಾರ ಮಾಡಿ, ವಜ್ರ ವೈಡೂರ್ಯಾದಿಗಳಿಂದ ಅಲಂಕರಿಸುತ್ತಾರೆ ಈ ದೃಶ್ಯವು ಪ್ರತಿಯೊಬ್ಬನೂ ನೋಡುವಂಥಾದ್ದು.

ಈ ಹಬ್ಬವನ್ನು ಆಚರಿಸುವ ಕಾಲದಲ್ಲಿ ಅರಮನೆಯ ಮುಂಭಾಗದಲ್ಲಿ ಮತ್ತೊಂದು ದೃಶ್ಯವನ್ನು ಏರ್ಪಡಿಸಿರುತ್ತಾರೆ ಅದೇನಂದರೆ, ಸ್ವಲ್ಪ ಸ್ವಲ್ಪ ದೂರದಲ್ಲಿ ದೊಡ್ಡ ದೊಡ್ಡ ಜಗಲಿಯನ್ನು ಕಟ್ಟಿ, ಸಂಗೀತಗಾರರನ್ನು ಅದರ ಮೇಲೆ ಕುಳ್ಳಿರಿಸಿ ಸಂಗೀತವನ್ನೂ, ಭಜನೆಯನ್ನೂ ಮತ್ತು ಹರಿಕಥೆಗಳನ್ನೂ ಮಾಡಿಸುತ್ತಾರೆ ಈ ಸೊಗಸಾದ ದೃಶ್ಯವನ್ನು ನೋಡಿದಲ್ಲಿ ಗೋಕುಲದಲ್ಲಿಯೂ, ನಂದನ ವನದಲ್ಲಿಯೂ ಶ್ರೀ ಕೃಷ್ಣ ಪರಮಾತ್ಮನೇ ಬಂದು ಹೇಗೆ ಕುಣಿಯುತ್ತಾ ಎಲ್ಲರನ್ನೂ ಆನಂದ ಸಾಗರದಲ್ಲಿ ಮುಳುಗಿಸಿರುತ್ತಾನೆಂಬುದನ್ನೂ ಜ್ಞಾಪಕಕ್ಕೆ ತರುತ್ತದೆ.

ಅರಮನೆಯವರು ನಡೆಸುವ ಈ ಜಯಂತ್ಯುತ್ಸವವನ್ನು ನೋಡಲು ಸುತ್ತ ಮುತ್ತಲಿರುವ ಪ್ರದೇಶಗಳಿಂದಲೂ ಅಲ್ಲದೆ ಸ್ಥಳೀಯ ಪ್ರತಿ ಗಂಡಸೂ, ಹೆಂಗಸೂ, ಹುಡುಗರೂ ಸಾವಿರಾರು ಜನರು ತಂಡೋಪತಂಡವಾಗಿ ಆಗಮಿಸಿ, ಕಣ್ಣು ತುಂಬ ನೋಡಿ ಆನಂದಗೊಳ್ಳುತ್ತಾರೆ.

ಇಷ್ಟಲ್ಲದೆ ಮೈಸೂರಿನಲ್ಲಿ ಶ್ರೀ ಪರಕಾಲಿ

(ವೇಣು ಗೋಪಾಲ)

ಮಠವೆಂದು ಒಂದು ಶ್ರೀವೈಷ್ಣವರ ಮಠವಿದೆ ಇಲ್ಲಿ ಶ್ರೀಕೃಷ್ಣ ಜಯಂತಿ ಉತ್ಸವವನ್ನು ಅಟ್ಟಹಾಸದಿಂದ ನೆರವೇರಿಸುವರು

ಶ್ರೀ ಕೃಷ್ಣಮಹಿಮೆ

(ರಾಗ ಸುರಟಿ—ತಾಳ ರೂಪಕ)

ಧನ್ಯ ಕೃಷ್ಣನೂ | ಮಹಾ |
ಪುಣ್ಯ ಚರಿತನೂ || ಪಲ್ಲ ||

ಕಾಕುಜನರ ದರ್ಪ ಮುರಿದು |
ಶೋಕತಾಪ ಕಳೆದು ಜನರ ||
ತ್ಯಾಗಭೋಗಿಯಾಗಿ ಬಾಳಿ |
ಯೋಗಿಚಂದ್ರನಾಗಿ ಮೆರೆದ || || ೧ ||

ಗೋಪಕುಲದಿ ಜನಿಸಿದರೂ |
ಬ್ರಹ್ಮ ಕ್ಷತ್ರಿ ವೈಶ್ಯರೆಲ್ಲರ ||
ಪ್ರೇಮಪಾತ್ರನಾದನವನು |
ತಾಪಹರಿದು ಸರ್ವಜನರ || || ೨ ||

ರಾಜಸೂಯ ಯಜ್ಞದಲ್ಲಿ |
ರಾಜ ಮಹಾ ಋಷಿಗಳಿರಲು ||
ತೇಜವಂತನೀತನಗ್ರ |
ಪೂಜೆಗರ್ಹನಾಗಿ ಮೆರೆದ || || ೩ ||

ಪ್ರಬಲ ಶತ್ರುಕುಲದಿ ನೊಂದ |
ಅಬಲ ನೃಪರ ಪಕ್ಷ ವಹಿಸಿ ||
ಅಮಿತ ಕಷ್ಟ ಸಹಿಸಿ ಅವರಿಗೆ |
ಕ್ರಮದ ಸ್ವರಾಜ್ಯ ಸವಿಯ ಕೊಟ್ಟ || ೪ ||

ಹೀನ ಅಬಲ ಪುರುಷ ಸ್ತ್ರೀಯರ |
ಮಾನ ಉಳಿಸಿ ಬಂಧ ಬಿಡಿಸಿ ||
ಜಾಣನವ ಸ್ವತಂತ್ರವಿತ್ತು
ದೀನಮಿತ್ರನೆನಿಸಿಕೊಂಡ || || ೫ ||

ಮತ್ತರಾದ ನೃಪರ ರಾಜ್ಯ |
ಶಕ್ತಿಯುಕ್ತಿಯಿಂದ ಗೆದ್ದರೂ ||
ಸೊತ್ತು ಪರರದೆಂದು ಗ್ರಹಿಸಿ |
ಇತ್ತನದನು ಅವರದವರಿಗೇ || || ೬ ||

ಗೀತಬೋಧೆ ಮಾಡಿ ಜನಕೆ |
ಹಾದಿಬಿಡಿಸಿ ಕರಮು ಶರಕೆ ||
ಆದಿ ಮಹಾತ್ಮನಾಗಿ ಮೆರೆದು |
ಸಾಧಿಸಿದನು ಅಮರ ಕೀರ್ತಿ || || ೭ ||

ಮೋಹನಪ್ಪ ತಿಂಗಳಾಯ,
ಮಂಗಳೂರು.

ಈ ಜಯಂತಿ ಉತ್ಸವವು ಮುಗಿದ ಮೇಲೆ, ಆ ಶ್ರೀಕೃಷ್ಣ ಪರಮಾತ್ಮನು, ಗೋಪಿಕಾ ಸ್ತ್ರೀಯರ ಬಳಿಗೆ ಓಡುವನಂತೆ,

"ಯದುಮಣಿಗೆ ಜಯವಾಗಲಿ
ಮೈಸೂರು ನಾಲ್ಮಡಿ ಕೃಷ್ಣನಿಗೆ
ಮಂಗಳವಾಗಲಿ"

ಮಾನವನಿಗೆ ಮುಖ್ಯ ಬೇಕಾದುದೇನು?

ಸಹಜ ಹಾಗಾದರೆ ಇಲ್ಲಿಗೆ ಬನ್ನಿರಿ ಜಗತ್ಪ್ರೇರಕನಾದ ಸರ್ವೇಶ್ವರನ ಮೇಲೆ ದೃಢಭಕ್ತಿಯನ್ನಿಟ್ಟು ಅವನ ಕಡೆಗೆ ಕಣ್ಣುಬಿಟ್ಟು ನೋಡ ಮಾದಿರಿ ಗೆ ಸ್ವಾಮಿಯು ತನ್ನ ಸರ್ವ ಮಾಯವನ್ನು ಬೀರಿ, ಅವನ ಬೇಡುವಿಕೆಯನ್ನು ಪೂರೈಸುವನು ಎನ್ನಲೇನು ಸಂಶಯ?

ಕಾಟನ್ ಮತ್ತು ಶೇಯರ್ ಬಜಾರಿನಲ್ಲಿ ದುಡ್ಡನ್ನು ಸಂಪಾದಿಸುವುದಕ್ಕೆ ಜರೂರು ನನ್ನಲ್ಲಿ ಒಂದಾವರ್ತಿ ಬಂದು ಭೇಟಿಮಾಡಿರಿ ಬಜಾರಿನ ವಿಷಯ ಯೋಗ್ಯ ಸೂಚನೆಕೊಡಲ್ಪಡುವುದು ಪತ್ರಮಾತ್ರ ಇಂಗ್ಲಿಷ್ ಯಾ ಹಿಂದಿ, ಗುಜರಾತ್.

ಚಾರ್ಜು ತುಂಬ ಬಹಳ ಕಮ್ಮಿ. ಒಂದು ವಾರದ್ದಕ್ಕೆ Rs. 5 0 0 ಒಂದು ತಿಂಗಳಿಗೆ Rs 15 0 0 ಸಮಯ ಬೆಳಗ್ಗೆ 8 10, ಸಾಯಂಕಾಲ 4ರಿಂದ 6ರ ತನಕ.

J M Joshi
Astrologer & Palmist
25 Chandramahal BOMBAY 4

WHY SOME PEOPLE FAIL IN LIFE?

Why some people fail in life though they have better earnings?
The answer is simple

"THE SEED OF SUCCESS IS NOT IN THEM"

"If you want to know whether you are destined to be a success or not, you can easily find out. The test is simple and infallible ARE YOU ABLE TO SAVE MONEY? IF NOT, DROP OUT YOU WILL LOSE You may think not, but you will lose as sure as fate for the SEED OF SUCCESS IS NOT IN YOU." J J Hill

DO REALIZE

the necessity of saving systematically Small sums saved yearly accumlate to make large provision for old age Yes, it is Life Assurance In case of early demise, it gives your family **What you hoped to save**

THE CANARA MUTUAL

ASSURANCE CO., LTD, UDIPI.

Take a policy and join its ever increasing Membership.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಗತಿಪರನಾದ ಈ ದೇಶೀಯ ಕಂಪೆನಿಯಲ್ಲೊಂದು ಪೋಲಿಸಿ ಪಡೆಯಿರಿ.

ಶ್ರೀಕೃಷ್ಣ ಜಯಂತಿ

ಗೋಪಾಲ ಗೋಪೀ ವಿನೋದದ ರಹಸ್ಯವೇನು?

ಲೇಖಕರು—ಶ್ರೀ ಬಿ ಶ್ರೀನಿವಾಸ ಭಟ್ಟರು, ಸಾಹಿತ್ಯ ಶಿರೋಮಣಿ ಸಂಸ್ಕೃತ ಕಾಲೇಜ್, ಉಡುಪಿ

ಶ್ರೀಮನ್ನಾರಾಯಣನು ಭೂಭಾರವನ್ನಿಳುಹಿ ಲೋಕಹಿತವನ್ನುಂಟುಮಾಡುವುದಕ್ಕಾಗಿ ದೇವಕೀ ವಸುದೇವರ ಸುಪುತ್ರನಾಗಿ ಶ್ರೀಕೃಷ್ಣನೆಂಬ ನಾಮದಿಂದವತರಿಸಿ, ದಿವ್ಯ ಲೀಲೆಗಳಿಂದ ಭಕ್ತರನ್ನಾನಂದಪಡಿಸಿ,ಕಂಸ ಮೊದಲಾದ ಲೋಕಕಂಟಕರನ್ನು ಸದೆ ಬಡಿದು ಪಾಂಡವರಾದಿಯಾಗಿ ಸಜ್ಜನರನ್ನುದ್ಧರಿಸಿದನೆಂಬುದೇ ಶ್ರೀಕೃಷ್ಣಾವತಾರದ ಪುರಾಣಕಥೆಯ ಸಾರಾಂಶವು

ಶ್ರೀಕೃಷ್ಣನ ಅನೇಕಾದ್ಭುತ ಕಥೆಗಳಲ್ಲಿ ಆತನು ಚಿಕ್ಕಂದಿನಲ್ಲಿ ಗೋವಳನಾಗಿ ಗೊಲ್ಲತಿಯರ ನಲ್ಲನಾಗಿದ್ದನೆಂಬುದೊಂದು ಸೋಜಿಗದ ಕಥೆಯು. ಈ ಕಥೆಯನ್ನು ಪುರಂದರದಾಸರೇ ಮೊದಲಾದ ಮಹನೀಯರು ಬಗೆಬಗೆಯ ಕೀರ್ತನೆಗಳಿಂದ ಆ ಲೀಲೆಯು ಪ್ರತ್ಯಕ್ಷ ಮನಸ್ಸಿಗೆ ಹೊಳೆಯುವಂತೆ ವರ್ಣಿಸಿ ಚಿಕ್ಕ ಮಕ್ಕಳನ್ನೂ ತರುಣರನ್ನೂ ತರುಣಿಯರನ್ನೂ ವೃದ್ಧರನ್ನೂ ಬೆರಗುಗೊಳಿಸಿರುವರು.

ಇಂತಹ ಶ್ರೀಕೃಷ್ಣವಿಲಾಸ ವಿನೋದದಲ್ಲಿ ಮತಾಂತರದವರು ದೋಷಗಳನ್ನಾರೋಪಿಸಿರುತ್ತಾರೆ ಈಗಲೂ ಅನೇಕರು ಅದು ತಪ್ಪೆಂದು ತಿಳಿಯುವವರಿರುವರು. ಭಾರತೀಯರಲ್ಲಿಯೇ ಅನೇಕ ತತ್ತ್ವವಿಮರ್ಶಕರು ಗೋಪಾಲಗೋಪೀ ವಿನೋದದ ರಹಸ್ಯವೇ ಬೇರೆ. ಮೂಲಚರಿತ್ರವನ್ನು ವರ್ಣನಕೌಶಲದಿಂದ ರೂಪಾಂತರಕ್ಕೆ ತಂದಿರುತ್ತಾರೆ ಪರಮಾತ್ಮನು ಶ್ರುತಿಗಳಿಂದ (ವೇದಗಳಿಂದ) ಮೆರೆದನು ಎಂಬುದನ್ನು ಅತಿಶಯೋಕ್ತಿಯಿಂದ ಗೋಪಿಕಾಸ್ತ್ರೀಯರಿಂದ ಶ್ರೀಕೃಷ್ಣನು ಸರಸವಾಡಿದನೆಂದು ಬಣ್ಣಿಸಿರುತ್ತಾರೆ

ಮತ್ತೆ ಕೆಲ ಮಹನೀಯರು ಶ್ರೀಕೃಷ್ಣನೆಂದರೆ ಒಬ್ಬ ಸಮಾಜನೇತೃ ಮಹಾತ್ಮನು. ಈತನ ಹಲವು ಲೋಕೋಪಕಾರದ ಕಥೆಗಳನ್ನು ಉಪ್ಪುಕಾರ ಹಚ್ಚಿ ಜನರಿಗೆ ಆಶ್ಚರ್ಯವಾಗುವಂತೆ ಬಣ್ಣಿಸಿದ್ದಾರೆನ್ನುವರು. ಈ ವಿಷಯದಲ್ಲಿ ನನ್ನದೊಂದು ಅಭಿಪ್ರಾಯವು—ಯಾವ ಚರಿತ್ರೆಯನ್ನು ಯಾವುದರ ಆಧಾರದಿಂದ ತಿಳಿಯುವೆವೋ, ಅದರ ರಹಸ್ಯವನ್ನು ಆ ಮೂಲಾಧಾರದಿಂದಲೇ ವಿಮರ್ಶಿಸುವುದುಚಿತವು ಹಾಗೆ ಮಾಡದೆ ಕೆಲವನ್ನು ಮಾತ್ರ ಮೂಲದಿಂದೊಪ್ಪಿ, ಹಲವನ್ನು ಸುಳ್ಳೆಂದು ಕಲ್ಪಿಸುವುದುಚಿತವಾಗದು

ಶ್ರೀಕೃಷ್ಣನೊಬ್ಬನಿದ್ದನೆಂಬುದನ್ನು ಭಾಗವತಾದಿ ಪುರಾಣಾಧಾರದಿಂದ ತಿಳಿಯುವುದಾದರೆ, ಅದರಲ್ಲಿಯೇ ಗೋಪಿಕಾಸ್ತ್ರೀಯರು ಪೂರ್ವದಲ್ಲಿ ಮಹರ್ಷಿಗಳಾಗಿದ್ದವರು ಶ್ರೀಕೃಷ್ಣನ ಅಂಗಸುಖಾನುಭವವನ್ನು ಹೊಂದಬೇಕೆಂದು ತಪಸ್ಸುಮಾಡಿದುದರ ಫಲವಾಗಿ ಗೊಲ್ಲತಿಯರಾಗಿ ಅವನ್ನು ಪಡೆದರೆಂದಿದ್ದುದನ್ನೇಕೆ ಒಪ್ಪುವುದಿಲ್ಲ?

ಈ ಗೊಲ್ಲತಿಯರೊಡನೆ ಸರಸವು ಎಂಟು ವರ್ಷದೊಳಗಿನ ಬಾಲ್ಯದಲ್ಲಿ. ರುಕ್ಮಿಣೀ ಮೊದಲಾದ ೧೬೧೦೮ ವಿವಾಹಿತ ಸ್ತ್ರೀಯರ ಸಂಭೋಗವು ತಾರುಣ್ಯದಲ್ಲಿ ಈ ವಿವಾಹಿತ ಸ್ತ್ರೀಭೋಗವು ಧರ್ಮವಿಹಿತವು ಎಂಟುವರ್ಷದೊಳಗಿನ ಬಾಲಕನು ಅನೇಕ ಪ್ರೌಢಸ್ತ್ರೀಯರೊಡನೆ ಸರಸವಾಡಿದನೆಂಬುದು ಮನುಷ್ಯರೀತಿಯಲ್ಲಿ ಅಸಂಭವವು ಮಾತ್ರ. ಜಗದೀಶ್ವರನ ವಿಲಾಸವೆಂದರೆ ಮನುಷ್ಯರ ಕ್ಷುದ್ರಾಕ್ಷೇಪಗಳಿಗೆ ಸಿಲುಕದ ದಿವ್ಯಾದ್ಭುತ ಲೀಲೆಯಿದು

ಲೋಕದಲ್ಲಿ ಒಬ್ಬಾಕೆ ಸುಂದರಿಯಲ್ಲಿ ಗಂಧರ್ವ ಅದವಾ ಯಕ್ಷನ ಆಕ್ರಮಣಾವೇಶವಾಯಿತೆಂದರೆ ಆಕೆಯ ಪತಿಯು ಆವಳನ್ನು ವ್ಯಭಿಚಾರಿಣಿಯೆಂದು ತಿಳಿಯುವುದಿಲ್ಲವೆಂದ ಮೇಲೆ ಆ ಗಂಧರ್ವಾದಿಗಳಿಂದ ಎಷ್ಟೋ ಹೆಚ್ಚಿನ ಸಾಮರ್ಥ್ಯವುಳ್ಳ ಜಗದೀಶ್ವರನು ಸ್ವಾರ್ಥವಿಲ್ಲದೆ ಪರಾರ್ಥಹಿತದೃಷ್ಟಿಯಿಂದ ಏನೋ ಒಂದು ಗುಪ್ತ ಕಾರಣದಿಂದ ಆ ಸ್ತ್ರೀಯರನ್ನು ಮೆಚ್ಚಿಸಿದ್ದರೆ ಅದನ್ನು ತಪ್ಪೆಂದು ಆ ಗೊಲ್ಲರು ಒಪ್ಪದಿರುವಾಗ ಬೇರೊಬ್ಬರು ದೋಷವನ್ನಾರೋಪಿಸುವುದಾದರೂ ಹೇಗೆ?

ಶ್ರೀಕೃಷ್ಣನು ಕಂಸನ ಬಿಗಿಯಾದ ಕಾವಲಿನಲ್ಲಿ ಸೆರೆಮನೆಯಲ್ಲಿ ಹುಟ್ಟಿದವನು ನಡುರಾತ್ರಿಯಲ್ಲಿ ಗೋಕುಲಕ್ಕೆ ಮಳೆಗಾಲದಲ್ಲಿ ಯಮುನೆಯನ್ನು ದಾಟಿಹೋದುದು, ಪೂತನಿ ಮೊದಲಾದ ದುಷ್ಟರನ್ನು ಕೊಂದುದು, ಕಾಳಿಂದಿಯ ಮಡುವಿನಲ್ಲಿ ಧುಮುಕಿ ಕಾಳಿಂಗನನ್ನು ತುಳಿದುದು ಗೋವರ್ಧನ ಗಿರಿಯನ್ನೆತ್ತಿದುದು, ಗೊಲ್ಲತಿಯರ ರಾಸಕ್ರೀಡೆಯಲ್ಲಿ ಅನೇಕ ಕೃಷ್ಣ ರೂಪವನ್ನು ತೋರಿಸಿದುದು, ಯಮಳಾರ್ಜುನ ಮರಗಳನ್ನು ಕಿತ್ತುದು, ಕುವಲಯಾಪೀಡವೆಂಬ ಮದ್ದಾನೆಯನ್ನು ಒಸ್ಸದು, ೧೬೧೦೮ ಪತ್ನಿಯರಲ್ಲಿ ಒಬ್ಬಳಲ್ಲಿ ಹತ್ತರಂತೆ ಮಕ್ಕಳನ್ನು ಪಡೆದುದು ಮೊದಲಾದ ಕಾರ್ಯಗಳು ಮನುಷ್ಯಮಾತ್ರದವರಿಗೆ ಸಾಧ್ಯವೆ? ಇದೆಲ್ಲ ಅಲಂಕಾರದ ಮಾತೆಂದು ಹೇಳುವುದಕ್ಕಿಂತ ಇಂತಹ ದಿವ್ಯಾದ್ಭುತಕರ್ಮಕಾರಿಯಾದ ಶ್ರೀಕೃಷ್ಣನೇ ಇರಲಿಲ್ಲವೆಂದರೇ ಸರಿಯು. ಏಕೆಂದರೆ ಮಾಲತೀಮಾಧವ ಪ್ರಕರಣವೆಂಬ ರೂಪಕದಲ್ಲಿ ನಾಯಕನೇ ಕಲ್ಪಿತನಿರುವುದರಿಂದ ಆ ಚರಿತ್ರೆಯೇ ಕಲ್ಪಿತವೆನಿಸಿದಂತೆ, ಶ್ರೀಕೃಷ್ಣನೇ ಸುಳ್ಳೆಂದರೆ ಆತನ ಚರಿತ್ರೆಗ್ರಂಥವೇ ಸುಳ್ಳೆನ್ನುವುದು ಸುಖವಲ್ಲವೆ? ಅದಲ್ಲದೆ ಭಾರತೀಯ ವಿವಾಹ ಮಂತ್ರದಲ್ಲಿ ಸೋಮ, ಗಂಧರ್ವ ಮುಂತಾದ ದೇವತೆಗಳು ಸ್ತ್ರೀಯನ್ನು ಭೋಗಿಸಿ ಮನುಷ್ಯನಿಗೆ ಕೊಡುವರೆಂದು ತೋರುವುದು. ಉಪನಿಷತ್ತುಗಳಲ್ಲಿ ಜೀವರಲ್ಲಿ ಜಗದೀಶ್ವರನು ತಾನಿದ್ದು ಸಂಭೋಗಾದಿ ಸುಖಸಾರವನ್ನು ತಾನೇ ಭೋಗಿಸಿ ಉಳಿದ ಸುಖವನ್ನು ಜೀವರಿಗೆ ಕೊಡುವನೆಂದು ತಿಳಿಯುವುದು ಆದುದರಿಂದ ಭಗವಂತನು ಗೊಲ್ಲತಿಯರ ಅನುಗ್ರಹಕ್ಕಾಗಿ ಹಿಂದಿನ ಜನ್ಮದಲ್ಲಿತ್ತ ವರವನ್ನು ಸಲ್ಲಿಸಲಿಕ್ಕಾಗಿ, ಅವರಲ್ಲಿ ತನ್ನ ಪತ್ನಿಯಾದ ಮಹಾ ಲಕ್ಷ್ಮೀದೇವಿಯ ಸನ್ನಿಧಾನವು ಇರುವಂತೆ ಮಾಡಿ ಅನೇಕ ರೂಪದಿಂದ ಆ ಲಕ್ಷ್ಮೀದೇವಿಯೊಡನೆ ತಾನು ಕ್ರೀಡಿಸಿ, ಆ ಗೊಲ್ಲತಿಯರಿಗೆ ತೃಪ್ತಿಯನ್ನುಂಟುಮಾಡಿದುದರಿಂದ ಶ್ರೀಕೃಷ್ಣನಿಗಾಗಲಿ ಆ ಗೊಲ್ಲತಿಯರಿಗಾಗಲಿ ವ್ಯಭಿಚಾರದೋಷವಿಲ್ಲವೆಂದು ಮೂಲಾಧಾರ ವಿಮರ್ಶದಿಂದ ಆಸ್ತಿಕರು ಶ್ರೀಕೃಷ್ಣನ ಈ ವಿಲಾಸಚರಿತ್ರವು ಪಾಪ ಪರಿಹಾರಕವೆಂದು ನಂಬಿ, ಬಗೆಬಗೆಯಾಗಿ ಕೊಂಡಾಡುತ್ತ ಪವಿತ್ರರಾದೆವೆಂದು ಭಾವಿಸುತ್ತಾರೆ ಆದುಕಾರಣ ಪುರಾತನ ಮಹರ್ಷಿಗಳೇ ಮೊದಲಾದವರು ಈ ವಿಷಯದಲ್ಲಿ ಸರ್ವೇಷ್ಟಸಾಧಕವೆಂದು ಅನೇಕ ಗ್ರಂಥಗಳನ್ನು ರಚಿಸಿರುತ್ತಾರೆ. ನಮ್ಮ ಆ ಪೂರ್ವಿಕರ ಯೋಗ್ಯತೆಯಲ್ಲಿ ಲೇಶವಷ್ಟೂ ಇಲ್ಲದ ನಾವು ಅವರ ದಾರಿಯಲ್ಲ ತಪ್ಪು. ಈಗ ನಮಗೆ ಪರಕೀಯರು ತೋರಿಸುವ ಈ ಹೊಸ ವಿಮರ್ಶೆಯೇ ಯೋಗ್ಯವೆಂದು ಮರುಳಾಗಿ ಅವರ ತಾಳಕ್ಕೆ ತಕ್ಕ ಕುಣಿಯುವುದು ಉಚಿತವಲ್ಲವೆಂಬುದು ನನ್ನ ಅಭಿಪ್ರಾಯ

ಸಾರಾಂಶ—ಹಿಂದಿನವರು ಸತ್ಯವೆಂದೂ ಪವಿತ್ರವೆಂದೂ ಪಾಪ ಪರಿಹಾರಕವೆಂದೂ ಇಷ್ಟ ಸಾಧಕವೆಂದೂ ನಂಬಿಕೊಂಡು ಬಂದ ಮಾರ್ಗವನ್ನನುಸರಿಸಿ, ಶ್ರೀಕೃಷ್ಣ ಪರಮಾತ್ಮನ ಲೀಲೆಯಲ್ಲಿ ಯಾವ ದೋಷಕಳಂಕವನ್ನೂ ಆರೋಪಿಸದೆ, ಮಹತ್ತ್ವ ಬುದ್ಧಿಯಿಂದ ನಂಬಿ ನಡೆದುದರಲ್ಲಿ ನಮಗೆ ಯಾವ ದೋಷವೂ ಇಲ್ಲದ ಕಾರಣ, ನಮ್ಮ ಮೂಢಬುದ್ಧಿಗೆ ಹೊಳೆಯದಿರುವ ಮಾತ್ರಕ್ಕೆ ಪರಕೀಯರ ದೋಷಾರೋಪಣೆಯ ಮಾರ್ಗದಲ್ಲಿ ನಾವು ನಡೆಯಬಾರದೆಂದು ನನ್ನ ಸೂಚನೆಯಲ್ಲದೆ ಯಾವ ಮಹನೀಯರ ವಚನವನ್ನು ಖಂಡಿಸಬೇಕೆಂಬ ದುರಭಿಪ್ರಾಯವು ನನಗಿಲ್ಲ.

ಇಂತಹ ಶ್ರೀಕೃಷ್ಣಪರಮಾತ್ಮನು ಅವತರಿಸಿದ ದಿನವೆಂದರೆ ಸಿಂಹ (ಶ್ರಾವಣ) ಮಾಸದ ಕೃಷ್ಣಾಷ್ಟಮೀ ತಿಥಿಯ ದಿನ



ಉಡುಪಿ ಶ್ರೀಕೃಷ್ಣ

THE
MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.
ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ನ ಸರಕಿನ ಈಡಿನಮೇಲೆ ನೇಕಡ 7 ನ 8ರ ದರದಲ್ಲಿ ಸಾಲಕೊಡಲಾಗುವುದು
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು
M. R Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

ರೋಹಿಣೀ ನಕ್ಷತ್ರವಿದ್ದರೆ ಶ್ರೀಕೃಷ್ಣಜಯಂತೀ, ಇಲ್ಲದಿದ್ದರೆ ಶ್ರೀಕೃಷ್ಣ ಜನ್ಮಾಷ್ಟಮಿಯೆನಿಸುವುದು. ಪ್ರತಿವರ್ಷವೂ ಈ ದಿನದಲ್ಲಿ ಆಸ್ತಿಕರಾದ ಹಿಂದುಗಳು ಅರ್ಧರಾತ್ರಿ ತನಕ ಉಪವಾಸವಿದ್ದು ಅನೇಕ ಸೇವೆಗಳಿಂದ ಆ ಭಗವಂತನನ್ನೊಲಿಸಿ, ಚಂದ್ರೋದಯಕ್ಕೆ ಮುಂದು ಶ್ರೀಕೃಷ್ಣನವತರಿಸಿದನೆಂಬ ಭಾವನೆಯಿಂದ ಪೂಜಿಸಿ ಅರ್ಘ್ಯವನ್ನಿತ್ತು ಆದಿನ ಉಪವಾಸ, ರಾತ್ರಿ ಜಾಗರಣೆ, ಮರುದಿನ ದೇವಪೂಜೆ, ಪಾರಣೆ, ಬ್ರಾಹ್ಮಣರಿಗೆ ದಾನಮುಂತಾದ ಸೇವೆಗಳನ್ನಾಚರಿಸಿ ಶ್ರೀಕೃಷ್ಣನ ಕೃಪೆಗೆ ಪಾತ್ರರಾದೆವೆಂದು ಸಂತೋಷಪಡುತ್ತಾರೆ.

ಉಡುಪಿ ಶ್ರೀಕೃಷ್ಣ ಮಠದಲ್ಲಿ ಸಾಕ್ಷಾತ್ ಶ್ರೀಕೃಷ್ಣನನ್ನು ಶ್ರೀ ಮಧ್ವಾಚಾರ್ಯರು ಪ್ರತಿಷ್ಠಿಸಿ, ಅನುಗ್ರಹಿಸಿದುದರಿಂದಂತೂ ಅಲ್ಲಿ ರಾಜವೈಭವಗಳಿಂದ ನಡೆಯುವ ಈ ಮಹೋತ್ಸವದ ಸಂಭ್ರಮವು ವರ್ಣನಾತೀತವಾಗಿದೆ.

ತಳಿರುತೋರಣಗಳಿಂದ ಸಿಂಗರಿಸಿದ ಶ್ರೀಕೃಷ್ಣ ದೇವಸ್ಥಾನದಲ್ಲಿ ಅಷ್ಟಮಿ ದಿನ ಮುಂಜಾನೆಯಿಂದ ಬ್ರಾಹ್ಮಣರ ಪಾರಾಯಣದ ಕೋಲಾಹಲವೊಂದೆಡೆ, ಶ್ರೀಕೃಷ್ಣನ ದರ್ಶನ ಫಲಸಮರ್ಪಣೆಗೆ ಬಂದು ಹೋಗುವ ಜನರ ಗದ್ದಲವೊಂದೆಡೆ, ಅರ್ಧರಾತ್ರಿ ಶ್ರೀ ಸ್ವಾಮಿಗಳಾದಿಯಾಗಿ ಸರ್ವರೂ ಶ್ರೀಕೃಷ್ಣನಿಗೂ ಚಂದ್ರನಿಗೂ ಅರ್ಘ್ಯವನ್ನೀಯುವ ಸಮ್ಮರ್ದ, ಆವೇಳೆ ಶ್ರೀ ಸ್ವಾಮಿಗಳವರು ತೀರ್ಥಮಂತ್ರಾಕ್ಷತೆಗಳನ್ನಿತ್ತು ಜನರನ್ನನುಗ್ರಹಿಸುವ ಸಂಭ್ರಮ, ಮರುದಿನ ಶ್ರೀಕೃಷ್ಣ ಪೂಜೆಯಾಗಿ ಬ್ರಾಹ್ಮಣಸಂತರ್ಪಣೆಯಾದೊಡನೆ ಮಠದ ಕೆಲಸಗಾರರ ತರತರದ ವೇಷಗಳ ವಿನೋದ, ಮಧ್ಯಾಹ್ನ ರಥೋತ್ಸವ, ಬಗೆಬಗೆಯ ಆಟಗಳ ನೋಟ, ತೆಂಗೆಗಳೀದ ಕಾದಾಟ, ಒಕುಳಿಯ ಚೆಲ್ಲಾಟ, ಅವಭೃತದ ನೀರಾಟಗಳಿಂದ ಉಡುಪಿಯ ಶ್ರೀಕೃಷ್ಣಾಷ್ಟಮಿಯನ್ನು ನೋಡತಕ್ಕವರಿಗೆ ತಾವು ನಂದಗೋಕುಲದಲ್ಲಿ ಶ್ರೀಕೃಷ್ಣನ ಸನ್ನಿಧಿಯಲ್ಲಿ ಆತನ ಆಟಗಳನ್ನೇ ಪ್ರತ್ಯಕ್ಷ ನೋಡುತ್ತಿರುವೆನೆಂಬ ಭಾವನಾಮಯ ಆನಂದವೇ ಹುಟ್ಟುವುದೆಂಬು ಪ್ರತ್ಯಕ್ಷಸಿದ್ಧವು. ಪ್ರಕೃತ-

ಈ ವರ್ಷದ ಕೃಷ್ಣ ಜಯಂತೀ ಮಹೋತ್ಸವವು ಇದೇ ಬರುವ ತಾ. 6, 7-9 39 ಬುಧ, ಗುರುವಾರ ಈ ಎರಡು ದಿನಗಳಲ್ಲಿ ಶ್ರೀ ಪರ್ಯಾಯ ಪಟ್ಟಾಧಿರೂಢರಾದ ಶ್ರೀ ಫಲಿಮಾರು ಶ್ರೀಪಾದಂಗಳವರ ಪರಮೋತ್ಸಾಹದಿಂದ ಅಸದೃಶವಾಗಿ ನೆರೆದು ಸರ್ವಜನಾನಂದಕರವಾಗುವುದೆಂದು ನಿರೀಕ್ಷಿಸುತ್ತಾ, ಇಂತಹ ಶ್ರೀ ಕೃಷ್ಣಜಯಂತೀ ಮಹೋತ್ಸವ ಸಮಾರಂಭದಲ್ಲಿ ತನ್ನ ಉತ್ತಮ ಸೇವೆಯನ್ನು ಸಲ್ಲಿಸಲು ಬದ್ಧಕಂಕಣವಾದ "ನವಯುಗ"ದ ಶ್ರೀ ಕೃಷ್ಣಾಷ್ಟಮಿ ಸಂಚಿಕೆಗೆ ನನ್ನ ಈ ಚಿಕ್ಕ ಶ್ರೀಕೃಷ್ಣ ಜಯಂತೀ ಕುಸುಮವು ಶ್ರೀಕೃಷ್ಣನಿಗಾಗಿ ಕೈಗಾಣಿಕೆಯ ರೂಪದಿಂದ ಒಪ್ಪಿಸಲ್ಪಟ್ಟಿದೆ.

ಉಡುಪಿಯ ಪ್ರಾಚೀನ ಮತ್ತು ಅರ್ವಾಚೀನ ಚರಿತ್ರೆಯನ್ನು ತಿಳಿಯಬೇಕೇ? ಹಾಗಿದ್ದರೆ ಶ್ರೀ ಕೊರಡ್ಕಲ್ಲರು ಬರೆದ 'ನಮ್ಮ ಉಡುಪಿ' ಎಂಬ ೫ ಆಣೆ ಕ್ರಯದ ಸಚಿತ್ರ ಪುಸ್ತಕವನ್ನೋದಿರಿ. ಪ್ರತಿಗಳಿಗೆ- ನವಭಾರತ ಪುಸ್ತಕಭಂಡಾರ ಉಡುಪಿ.

"ಹುಂ, ಗಂಡಸು, ಗಂಡಸಿನ ಹೆಸರೇನು?"

(ಡಾಕ್ಟರ್ ರಮಾನಾಥನು ಸಂಜೆ ಮದ್ರಾಸ್ ಸಮುದ್ರ ತೀರದ ಏಕಾಂತ ಪ್ರದೇಶವೊಂದರಲ್ಲಿ ತುಸು ಹೊತ್ತು ಶಿಳ್ಳು ಹಾಕುತ್ತಾ ಕುಳಿತು ಆ ಮೇಲೆ ಕಿಸೆಯಿಂದ ಲೀಲಾವತಿಯ ಪತ್ರವೊಂದನ್ನು ತೆಗೆದು ನೋಡಿ ಆನಂದ ಪರವಶನಾಗಿ ಹಾಡುವನು)

ರಮಾನಾಥನ್—

ಜೀವನ ನೀರಸವೆನಿಸುವುದೀಗ,
ತಾಳೆನು ಆಹಾ ವಿರಹ ತಾಪ!!
ಹೃದಯ ದುಗುಡವನೆಲೆಯಾಗಿರುತ
ಮಾನವೆ ಶಾಂತಿವಿಹೀನವಿದಕಟ!!
ಮನ ನೋಹಿಸಿ ಬಾರದೆ ಹಾ!!
ಪ್ರೇಮವಿನೋದಾನಂದವೊಳಿರುತ
ಬಂದುನಲಿಯುವ ಮನದಾತುರವ,
ತಣಿಸುವ ಬಗೆ ಕಾಣೆನಿಂದೀಗ!
ಜಗವೇ ಮೋದ ವಿಹೀನ!!

(ಅಷ್ಟರಲ್ಲಿ ಲೀಲೆಯು ಪ್ರವೇಶಿಸಿ ತುಸು ಹೊತ್ತು ಡಾಕ್ಟರ್ ರಮಾನಾಥನನ ಹಿಂದೆಯೇ ನಿಂತು ಆ ಮೇಲೆ ಫಕ್ಕನೆ ಹೋಗಿ ಅವನ ಎರಡೂ ಕಣ್ಣುಗಳನ್ನು ಬಲವಾಗಿ ಹಿಡಿಯುವಳು.)

ರಮಾನಾಥನ್—ಯಾರದು? ಸ್ತ್ರೀಯರಿಷ್ಟು ಗಟ್ಟಿಯಾಗಿ ಹಿಡಿಯಲಾರರು, ಯಾರೋ ಗಂಡಸರು!

ಲೀಲೆ—(ಗಹಗಹಿಸಿ ನಕ್ಕು) ಹುಂ, ಗಂಡಸು, ಗಂಡಸಿನ ಹೆಸರೇನು?

ರಮಾನಾಥನ್—ಓಹೋ ನೀನೇ! ಬಿಡು ಬಿಡು, (ಕೈ ಬಿಡಿಸಿಕೊಂಡು) ನಿನ್ನೊಡನೆ ನಾನು ಮಾತನಾಡಲಾರೆ, ನೀನು ನನ್ನ ಬಳಿಗಿನ್ನು ಬರಬಾರದು.

ಲೀಲೆ—ಅದೇಕಷ್ಟು ಕೋಪ ಮಿಸ್ಟರ್ ರಮಾನಾಥನ್! ಆ ಪ್ರಾಣಿ ನನ್ನನ್ನು ಬರಲೇ ಬಿಡಲಿಲ್ಲ ನಮ್ಮ ರಹಸ್ಯವನ್ನು ಅವರ ಕಿವಿಗಾರೋ ಹಾಕಿರುವಂತೆ ತೋರುತ್ತಿದೆ.

ರಮಾನಾಥನ್—ಲೀಲಾ ಎಷ್ಟು ದಿನಗಳಿಂದ ನಾನಿಲ್ಲಿ ಕುಳಿತು ನೀನು ಬರುವೆಯೆಂದು ಹಾರೈಸಿಕೊಂಡಿರುವುದು! ನೀನಿಲ್ಲದೆ ನನ್ನ ಜೀವನವೇ ನಿಸ್ಸಾರ ಲೀಲಾ! ಅದೆಷ್ಟು ಮನೋಜ್ಞವಾಗಿರುವುದೀ ಸಂಧ್ಯಾರಾಗ!

ಲೀಲೆ—ಹೌದು ಮಿಸ್ಟರ್ ರಮಾನಾಥನ್, ಅದೆಷ್ಟು ಉಲ್ಲಾಸಕರವಿರುವುದೀ ಸಂಜೆಯ ಸೊಬಗು!

ರಮಾನಾಥನ್—ನಮ್ಮಿಬ್ಬರ ಸಮ್ಮಿಲನವಾಗುವುದೇ ಅಪರೂಪ! ಅಪರೂಪವಾಗಿ ದೊರೆಯುವ ಈ ಅಲ್ಪ ಸಮಯವನ್ನಾದರೂ ನಾವು ಸುಖವಾಗಿ ಕಳೆಯಬೇಡವೇ? ಬಾ, ಲೀಲಾ ಬಾ! ಅದೋ ಆ ಸ್ಥಳವು ಏಕಾಂತವಾಗಿದೆ. ಅಲ್ಲಿಗೆ ಹೋಗುವ. (ಕೈ ಹಿಡಿದೆಳದೊಯ್ಯುವನು)

ಲೀಲೆ ಯಾರು? ರಮಾನಾಥನಾರು? ಹಿಂಗತೆಯೇನು? ಮುಂಗತೆಯೇನು? ಎಂಬುದನ್ನು ತಿಳಿಯಬೇಕಾದರೆ 'ವ್ಯಭಿಚಾರಿಣಿ ಯಾರು' ಎಂಬ ಅತಿ ಮನೋಹರವಾದ ಸಾಮಾಜಿಕ ನಾಟಕ ಪುಸ್ತಕವನ್ನೋದಿರಿ. ಬೆಲೆ ಎಂಟಾಣೆ. ಹಲವು ಚಿತ್ರಗಳಿವೆ ಸಂಗೀತವಿದೆ. 0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು. ವಿಳಾಸ—"ಕಿರಿಯರ ಪ್ರಪಂಚ" ಪ್ರಕಾಶಕರು, ಉಡುಪಿ. (*Advt.*)

ಯಂ. ಗಣಪಯ್ಯ ಎಂಡ್ ಸನ್ಸ್:

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ನಂಬ್ರ 11 ಮಂಗಳೂರು.

ಧಾತು ಪುಷ್ಟಿ ಲೇಹ

ಸುವರ್ಣ, ಸಾಲಾಮಿಶ್ರಿ, ಶಿಲ್ಪಜಮಿಶ್ರ

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನು ಉಂಟುಮಾಡುವುದು.

ಡಬ್ಬಿ 1ಕೆ ರೂ. 2-8-0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿ ವರ್ಧಕ, ಪ್ರಸವಾಯಾಸವನ್ನು ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸಿ ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವಲ್ಲದೆ ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು.

ಬಾಟ್ಲಿ 1ಕೆ ರೂ 1-8-0.

ಬಾಲಗ್ರಹ ಗುಟಿಕೆ

ಮಕ್ಕಳಿಗೆ ಕೆಮ್ಮು, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕೆ ಆಣೆ 10.

ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಹಸಿವನ್ನು ತೀವ್ರಗೊಳಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು, ಕೆಮ್ಮು, ಶೀತಬಾಧೆ, ಉಬ್ಬಸ, ಊಸಶ್ವಾಸ, ಎದೆನೋವು ಇವುಗಳಿಗೆ ದಿವ್ಯ ಔಷಧಿ

ಪೌಂಡ್ 1ಕೆ ರೂ 2-8-0, ½ ಪೌಂಡಿಗೆ ರೂ. 1-5-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಖಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ಚುನಾಯಿಸಿ ರವಾನಿಸಬಹುದು.

ನಮ್ಮ ಔಷಧಿ ಸಿಕ್ಕುವ ಸ್ಥಳ—

1. ನವಭಾರತ ಬುಕ್ಕ್‌ಡಿಪ್ಪೋ ಉಡುಪಿ
2 ಕೃಷ್ಣಾ ಫಾರ್ಮಸಿ, ಕುಂದಾಪುರ.
3 ಡಾಕ್ಟರ್ ಕೆ ಎನ್. ಶ್ರೀನಿವಾಸ ಭಾಗ್ಯ, ಆಲಂಗಾರ್
4. ಕಂತಾವರ ವಾಸುದೇವ ಕಾಮತ್, ಬೆಳ್ತಂಗಡಿ
5. ಬಿ. ಎಸ್ ಮಾಧವ ರಾವ್, ಮರ್ಚಂಟ್, ಚಿಕ್ಕಮಗಳೂರು.
6. ಯಂ. ಸಿ ನಂಜುಂಡಯ್ಯ, ಸಕಲೇಶಪುರ.
7. ಜನರಲ್ ಸ್ಟೋರ್ಸ್ ಡಿ. ಐ. ಪಿ. ಪಾಟಿಂಗಾ
8. ಡಾಕ್ಟರ್ ಶ್ರೀನಿವಾಸ ಪೈ
9. ಕೆ. ನರಸಿಂಹ ಭಟ್ಟ, ಕಾಪು.
10 ಗಣೇಶ ಸುಂದರ ಪ್ರಭು, ಸುಳ್ಯ
11 ಮಂಗಳೂರು ಸ್ಟೋರ್ಸ್, ಮಡಿಕೇರಿ.
12. ಎ. ಎಸ್. ಮಾಚಯ್ಯ, ಕುಂಟ ಕೊಪ್ಪ.
13 ಬಿ. ಕೃಷ್ಣಯ್ಯ ಎಂಡ್ ಸನ್ಸ್, ಸೋಮವಾರಪೇಟೆ.

☞ ಕೆಟಲಾಗಿಗೆ ಬರೆಯಿರಿ.

M. Ganapaya & Sons, Car Street, Mangalore, S. K.

ನನ್ನ ಪ್ರಿಯ ಲೀಲು

ನಾನು ಬೇಡವೆಂದರೂ ನೀನು ಬಿಡದೆ ನನ್ನನ್ನು ಆ ಮರದಡಿಗೆ ಎಳೆದೊಯ್ದು ಅಷ್ಟೊಂದು ಕಾಲ ಮಾತನಾಡುತಿದ್ದುದರ ಪರಿಣಾಮವು ಏನಾಯಿತೆಂಬುದು ನಿನ್ನ ಅರಿವಿಗೆ ಬಂದಿದೆಯಲ್ಲವೇ? ಲೋಕದ ಅರಿವು ನಿನಗಿಲ್ಲ. ನಾವು ಮಾತನಾಡುತ್ತಾ ಅಲ್ಲಿ ಒಂದೆರಡು ಗಂಟೆ ನಿಂತಿದ್ದುದನ್ನು ನಿಮ್ಮ ಗುರುಗಳೇ ಕಂಡಿರುವರಂತೆ. (ಆದರೆ ಆ ಪುಣ್ಯಾತ್ಮ ನಮ್ಮ ಮಾತುಗಳನ್ನಾದರೂ ಏಕೆ ಕೇಳದೆ ಹೋದನೋ ತಿಳಿಯೆ) ಇದರಿಂದಾಗಿ ನಿನ್ನ ಮೇಲೆ ಅಪವಾದವು ತುಂಬಿ ಹೋಗಿರುವುದಲ್ಲದೆ ನನ್ನನ್ನೂ ಎಲ್ಲರೂ ಹಳಿಯುತ್ತಿರುವರಂತೆ. ಅದಲ್ಲದೆ ನಿನ್ನಣ್ಣನು ನನಗೆ ಬರೆದಿರುವ ಪತ್ರವನ್ನು ನೀನೇ ಓದಿಕೊಳ್ಳೆಂದು ಇದರೊಟ್ಟಿಗೆ ಇಟ್ಟಿರುವೆ.

ತಂಗಿ! ಯಾರೇ ಇರಲಿ, ತಮ್ಮೊಡನಿದ್ದ ಮಾನದಿಂದಲೇ ಇಳತೆಯ ಕಾರ್ಯವನ್ನು ನಡಿಸುವುದು ಸಹಜ. ಹಾಗೆನೇ ನಮ್ಮನ್ನು ಅನ್ಯರು ಅವರವರ ನಡತೆಗನುಸರಿಸಿ ಅಳೆದಿರುವರು. ಅವರನ್ನುವುದು ತಪ್ಪೇನು? ನೀನು ಪ್ರಾಯಕ್ಕೆ ಬಂದ ಸುಂದರ ತರುಣಿ ನಾನೇನೂ ಕುರೂಪಿಯಲ್ಲ, ನಾವು ಹಾಗೆಲ್ಲ ಗುಟ್ಟಾಗಿ ನಿಂತು ಮಾತನಾಡುವುದರ ಕಾರಣವಾದರೂ ಏನೆಂದು ಅವರು ಹೇಗೆ ತಿಳಿದುಕೊಳ್ಳಬಲ್ಲರು? ಆದುದರಿಂದಲೇ ಇಂದು ನೀನು ಇಂತಹ ಸಂಕಷ್ಟಕ್ಕೆ ಗುರಿಯಾಗಬೇಕಾಗಿ ಬಂದಿದೆ. ನನಗಾದರೋ ಇನ್ನು ಸದ್ಯ ಊರಿಗೆ ಬರುವುದೇ ಸಾಧ್ಯವಲ್ಲ ಏಕೆಂದರೆ ಅಲ್ಲಿಯ ಜನತೆಯು ನನ್ನ ವಿಚಾರ ಒಂದು ವಿಧದ ತುಚ್ಛಕಲ್ಪನೆಯನ್ನೇ ಮಾಡಿಕೊಂಡಿರುವುದು. ಅದನ್ನು ಹೋಗಲಾಡಿಸದ ವಿನಹ ನನಗಲ್ಲಿ ವಿಶ್ರಾಂತಿ ಸಿಗದು. ಹೋಗಲಾಡಿಸುವುದು ಒಂದೆರಡು ತಿಂಗಳುಗಳಲ್ಲಾಗುವ ವಿಷಯವಲ್ಲ ಹೆಚ್ಚು, ಸಮಯ ನನಗಲ್ಲಿರಲು ಸಾಧ್ಯವಿರದು, ಅಂದ ಬಳಿಕ ಬಾರದಿರುವುದೇ ಲೇಸಲ್ಲವೇ?

ಲೀಲು! ಆದರೆ ನಿನ್ನ ಪರಿಶುದ್ಧ ಭಗಿನೀ ವಾತ್ಸಲ್ಯವು ನನ್ನನ್ನತ್ತ ಎಳೆಯುತ್ತದೆ. ನನ್ನಿಂದಾಗಿ ನಿನಗುಂಟಾಗಿರುವ ಅಪವಾದಕ್ಕಾಗಿ ನಾನು ಕೊರಗುತ್ತಿರುವೆ ನಿನ್ನನ್ನು ತಿಳಿದುಕೊಳ್ಳಲು ಶಕ್ಯರಾದ ವ್ಯಕ್ತಿಗಳೇ ನಮ್ಮೂರಲ್ಲಿ ಕಡಿಮೆ. ಆದರಲ್ಲಿಯೂ ನೀನು ಹುಡುಗಿ, ಯಾರೊಡನೆಯೂ ಹೆಚ್ಚು ಮಾತನಾಡದಂತೆ ಬಂಧನ, ಎಂದ ಬಳಿಕ ನಿನ್ನ ನಿರ್ಮಲ ಹೃದಯದರಿವು ಅವರಿಗೆ ಹೇಗಾಗಬೇಕು? ನಿನ್ನಣ್ಣನು ನನ್ನ ಮೇಲೆ ಮಾನನಷ್ಟಕ್ಕೆ ದಾವೆಮಾಡಿರುವುದಾಗಿ ಬರೆದಿರುವನು ಈಗ ನೀನು ಬಿಕ್ಕಟ್ಟಿನಲ್ಲಿ ಬಿದ್ದಿರುವೆ. ನನ್ನ ಪಕ್ಷವನ್ನು ಹಿಡಿದರೆ ನಿನಗೆ ಮನೆಯನ್ನೇ ಬಿಡಬೇಕಾಗುವುದು. ಅಣ್ಣನ ಪಕ್ಷ ಹಿಡಿದರೆ ನಾನು ದಂಡತೆರಬೇಕಾಗುವುದು. ಆದರೆ ಲೀಲು, ನಿನಗೆ ನನ್ನ ಮೇಲೆ ವಾತ್ಸಲ್ಯವಿದ್ದರೆ ನಾನು ಹೇಳುವ ಒಂದು ಮಾತನ್ನು ಕೇಳಲೇಬೇಕು. ಒಪ್ಪದಿದ್ದರೆ ಜೀವನದಲ್ಲಿ ನಾನು ನಿನ್ನನ್ನು ಕಣ್ಣಿನಲ್ಲಿಯೂ ಕಾಣಲಾರೆ ಅದೇನೆಂದರ ನೀನು ನಿನ್ನಣ್ಣನ ಪಕ್ಷವನ್ನೇ ಹಿಡಿಯಬೇಕು, ಇಷ್ಟೇ.

ನಿನ್ನ ಬಂಧು,

ಮಾಧು

ಪತ್ರವು ಇನ್ನು ಕೆಲವು ಪತ್ರಗಳೊಡನೆ ಒಂದು ಪುಸ್ತಕದೊಳಗಿಡಲ್ಪಟ್ಟಿತ್ತು ನಾನು ಸಂಜೆ ತಿರುಗಾಡಲು ಬರುವೆಯಾ ಎಂದು ಕೇಳಲು ಮಾಧವನೆಡೆಗೆ ಹೋಗಿದ್ದೆ ಆತಿ ಅಗತ್ಯದ ಕೆಲಸವಿದ್ದುದರಿಂದ ಹೊರಗೆಲ್ಲಿಯೋ ಹೋಗಿರುವುದಾಗಿ ಆಳು ಹೇಳಿದ. ಈ ಪತ್ರವನ್ನೋದಿ ನನಗೊಂದು ವಿಚಿತ್ರದ ಸೋಜಿಗವೇ ಆಯಿತು ಬೇಗಬೇಗನೆ ಇದರೊಡನಿದ್ದ ಬೇರೊಂದು ಪತ್ರವನ್ನೂ ಓದತೊಡಗಿದೆ.

ಡಾಕ್ಟರ್ ಮಾಧವರಾಯರಿಗೆ

ಇಷ್ಟೊಂದು ವಿದ್ಯಾವಂತರಾದ ನೀವು ಈ ತೆರನಾದ ವರ್ತನೆಯವರೆಂದು ಯಾರು ತಿಳಿಯಬೇಕು? ನಿಮ್ಮ ಮೃದು ನುಡಿಗಳೇನು, ನಗೆಯೇನು, ವಿಶ್ವಾಸ ತೋರಿಸುವ ಬಗೆಯೇನು? ಆದರೆ ಹೃದಯದೊಳಗೆ ಇಂತಹ ಕಪಟದ ಮೂರ್ತಿಯೊಂದನ್ನು ಬಚ್ಚಿಟ್ಟುಕೊಂಡಿರುವಿರಲ್ಲವೇ? ನನ್ನ ತಂಗಿ ಲೀಲಾವತಿ ವೇಶ್ಯೆಯೆಂದು ತಿಳಿದುಕೊಂಡಿರುವಿರೇನು? ನನಗೆಲ್ಲಾ ತಿಳಿದುಬಂದಿದೆ, ನೀವು ಈಕೆಯನ್ನು ಬಲಾತ್ಕಾರದಿಂದೆಳೆದೊಯ್ದು ಆ ಮರದಡಿ ನಿಂತಿದ್ದುದನ್ನು ನಮ್ಮ ಗುರುಗಳೇ ಕಂಡಿರುವರು. ನಿಮ್ಮ ಮೇಲೆ ಹತ್ತುಸಾವಿರ ರೂಪಾಯಿಗಳಿಗೆ ಮಾನನಷ್ಟ ದಾವಾ ನಡಿಸಿರುವೆ. ಗುರುಗಳೇ ಸಾಕ್ಷಿಗಿದ್ದಾರೆ. ಗೋಮುಖ ವ್ಯಾಘ್ರರಾದ ನೀವು ಇನ್ನು ಸಮ್ಮೂರಿಗೆ ಕಾಲಿಡದಂತೆ ತಕ್ಕ ಏರ್ಪಾಡು ಮಾಡಿರುವೆ.

ಹಲವೇಳೆ ನೀವು ಲೀಲಾವತಿಯನ್ನು ತಂಗಿ, ತಂಗಿ ಎನ್ನುತ್ತಿದ್ದಿರಿ. ಆಕೆಯೂ ಅಣ್ಣ ಅಣ್ಣ ಎನ್ನುತ್ತಿದ್ದಳು. ಆದರೆ, ಯಾವ ತಂಗಿಯೊಡನೆ ಮಾತನಾಡಲು ಅಣ್ಣ ಆಕೆ ಶಾಲೆಯಿಂದ ಬರುವಾಗ ನಡುದಾರಿಯಲ್ಲಿ ಕಾದಿರುವ? ಈ ಕಪಟ ವರ್ತನೆಯು ನನಗೇನು ತಿಳಿದಿಲ್ಲವೆಂದೂಹಿಸಿರುವಿರಾ? ನಿಮ್ಮ ನಡತೆಯು ಸರಿತೋರದುದರಿಂದಲೇ ಕೆಲದಿನಗಳ ಹಿಂದೆ ನೀವು ನಮ್ಮ ಮನೆಗೆ ಬಂದಾಗ ನಿಮ್ಮೊಡನೆ ಮಾತನಾಡದಿದ್ದುದು. ಅಂದು ನಿಮಗೆ ಕುಳಿತುಕೊಳ್ಳಲೊಂದು ಕುರ್ಚಿ ಕೊಡದಿದ್ದರೂ ನಿಮಗೆ ಬುದ್ಧಿ ಬಂದಿಲ್ಲ ಅಲ್ಲವೇ? ಸದ್ಯವೇ ಚೆನ್ನಾಗಿ ಬುದ್ಧಿ ಬಾರದಿರದು,

ಸುಂದರ

ಭಗಿನಿ ಗಾನ

"ಹಾಯ್ ಅಣ್ಣಾ! ನಮ್ಮ ಬಂಧು ಪ್ರೇಮದರಿವು ಯಾರಿಗೂ ಆಗದೆ ಹೋಯಿತಲ್ಲವೇ? ಲೋಕದಲ್ಲಿ ಎಷ್ಟು ಅನಾಚಾರಿಗಳಿಲ್ಲ! ಆದರೆ ಅವರಿಗೆ ನಮ್ಮಂತೆ ಕಷ್ಟಗಳು ಬರುವವೇ? ಪರಿಶುದ್ಧವಾದ ನಮ್ಮ ಬಂಧುಪ್ರೇಮದ ಮೇಲೇಹೊಡೆತ"

....

—ಲೀಲೂ.

(ಶ್ರೀ. ಉಪ್ಪೂರು ಕೃಷ್ಣ ಶೆಟ್ಟಿ
ಪ್ರೇಮಾಯತನ, ತುಂಗಭದ್ರ)

ಪ್ರೇಮದ ಬಂಧುವೆ!

ನನ್ನದೆಸೆಯಿಂದ ನಿನ್ನ ಮೇಲೆ ಒಂದು ದೊಡ್ಡ ಗಂಡಾಂತರವೇ ಬಂದೊದಗಿರುವುದು. ಅವೆಲ್ಲವೂ ಇಷ್ಟರೊಳಗೆ ನಿನಗೆ ತಿಳಿಯದಿರಲಿಕ್ಕಿಲ್ಲ. ಊರಲ್ಲಿಯೂ ಎಲ್ಲರೂ ನಮ್ಮನ್ನು 'ಛೆ! ಛಿ!' ಎನ್ನುತಾರೆ. ನಾನು ಶಾಲೆಗೆ ಹೋಗಿಬರುವುದೇ ಕಷ್ಟವಾಗಿದೆ.

ಹಾಯ್! ಅಣ್ಣಾ! ನಮ್ಮ ಬಂಧು ಪ್ರೇಮದರಿವು ಯಾರಿಗೂ ಆಗದೆ ಹೋಯಿತಲ್ಲವೇ? ಲೋಕದಲ್ಲಿ ಎಷ್ಟು ಅನಾಚಾರಿಗಳಿಲ್ಲ! ಆದರೆ ಅವರಿಗೆ ನಮ್ಮಂತೆ ಕಷ್ಟಗಳು ಬರುವವೆ? ಪರಿಶುದ್ಧವಾದ ನಮ್ಮ ಬಂಧು ಪ್ರೇಮದ ಮೇಲೇ ಹೊಡೆತ! ಅಣ್ಣಾ! ಮಾಧವಾ! ನಾನಿದನ್ನು ಸಹಿಸಲಾರೆ. ನಿನ್ನ ಮೇಲೆ ಬರಬಹುದಾದ ಅಪಮಾನವನ್ನು ಯೋಚಿಸುವಾಗಲೇ ನನ್ನ ಪ್ರಾಣವು ಹಾರಿಹೋಗುವಂತಾಗುತ್ತದೆ, ಬಂಧುವೇ! ಮನೆಯಲ್ಲಿ ನನ್ನ ಪ್ರೇಮದಣ್ಣನು ನನ್ನ ಜೀವನದ ಬೆಳಕಾದ, ನಿನ್ನೊಡನೆ ಮಾತನಾಡುವುದು ಸಾಧ್ಯವಾಗದಾಗ ನಾನು ನಿನ್ನನ್ನು ದಾರಿಯಲ್ಲಿ ಅಡ್ಡಕಟ್ಟಿ ನಿಲ್ಲಿಸಿ ಮಾತನಾಡಿದುದರಲ್ಲಿ ತಪ್ಪೇನು? ಹೌದು, ನೀನು ದಾರಿಯಲ್ಲಿಯೇ ನಿಂತರೂ ದೊಡ್ಡದಲ್ಲ, ಮರದಡಿ ಹೋಗುವುದು ಬೇಡೆಂದ. ಆದರೆ ಕಟುಕರ ಕಣ್ಣಿಗೆ ಹೆದರಿ ನಾನು ನಿನ್ನಲ್ಲಿಗೆ ಒತ್ತಾಯದಿಂದ ಕರೆದೊಯ್ದೆ. ಹೀಗಾಗುವುದೆಂದು ಯಾರಿಗೆ ಗೊತ್ತು?

ಸಹೋದರಾ! ನೀನೀಗ ನನ್ನನ್ನು ಪಳಿಯುತ್ತಿರಬಹುದಲ್ಲವೇ? ನಿನ್ನ ಹೃದಯದಿಂದ ನಾನು ಇಷ್ಟರೊಳಗೆನೇ ದೂರಾಗಿರಬಹುದಲ್ಲವೇ? ಅಹಾ! ನನ್ನ ನೋವನ್ನು ಹೇಗಿನ್ನು ನಿನಗೆ ತೋರಿಸಲಿ? ನನಗೆ ಸಾವಾದರೂ ಏಕೆ ಬರಲಾರದು! ಅಣ್ಣಾ! ಕರಮೊಡ್ಡಿ ಬೇಡುವೆ, ನನ್ನನ್ನು ಕ್ಷಮಿಸು—ಹೌದು; ನೀನು ಕ್ಷಮಿಸದಿರೆ ಏಕೆಂದರ ದೇವರು ಜನದ ಅಪರಾಧಗಳನ್ನು ನೋಡಿದಾಗ ಕ್ಷಮಿಸದಿರ ನೀನು ನನ್ನ ಒಲಿದ ದೇವರು. ನಾನು ಕಣ್ಣಿಗೆ ಕಾಣದ ದೇವನಿಗಿಂತಲೂ ಕಣ್ಣಿಗೆ ಕಾಣಿಸಿಕೊಳ್ಳುವ ದೇವನನ್ನು ಆರಾಧಿಸುವವಳು. ಆದುದರಿಂದ ನನ್ನ ದೇವರಾದ ನೀನು ನನ್ನನ್ನು ಕ್ಷಮಿಸದೆ ಇರುವುದಾದರೂ ಎಂತು? ಕ್ಷಮಿಸಿರುವೆನೆಂದು ಒಂದೇ ಒಂದು ಅಕ್ಷರವನ್ನಾದರೂ ಬರೆ. ಕಾದಿರುವೆ.

ಇತಿ ನಿನ್ನ ನಿರ್ಭಾಗ್ಯ ತಂಗಿ
ಲೀಲು

ಮೇಲಿನೆರಡು ಪತ್ರಗಳು ಒಂದು ಕವರಿನೊಳಗಿದ್ದುವು. ಅವುಗಳನ್ನು ನಾಳೆ ಪೋಸ್ಟಿಗೇನೆ ಕಳುಹಲೆಂದು ಮಾಧವನಿಟ್ಟಿರಬೇಕು. ಆದರೆ ಈ ಪತ್ರವು ಇಂದು ಬಂದುದು, ಇದರ ಮೇಲೆ 20ನೇ ತಾರೀಕಿನ ಮೋಹರವಿದೆ. ಇದನ್ನೋದಿ ನನ್ನ ಕುತೂಹಲ ಇನ್ನೂ ಹೆಚ್ಚಾಯಿತು. ನಾನು ಆಚೆ ಈಚೆ ನೋಡಿ ಆ ಪುಸ್ತಕದಲ್ಲಿದ್ದ ಬೇರೆ

YOUR DAUGHTER'S MARRIAGE MADE EASY.

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through policies in

The Bombay Life Assurance Co., Ltd.

For details, please consult:—

KOCHIKAR BROTHERS LIMITED.,
MADRAS BRANCH SECRETARIES,
BOMBAY LIFE BUILDING,
SIR LALUBHAI SAMALDAS ROAD,
GANDHI NAGAR,
UDIPI.

Or any of their following Offices:—

Post Box No. 337, Mount Road, Madras.	Visweshwarapuram Circle, Bangalore City.	Charni Road, Girgaum, Bombay 4.
Car Street, Mangalore.	Puthiyara, Calicut.	Central Station Road, Trivandrum.

ಕೆಲವು ಪತ್ರಗಳನ್ನೂ ತೆಗೆದೋದಿದೆ ಕುತೂಹಲವು ಹೆಚ್ಚುತ್ತಿದ್ದುದರಿಂದ ನಾನು ಅಪರಾಧಮಾಡುತ್ತಿರುವೆನೆಂಬುದೂ ನನಗೆ ತಿಳಿಯಾಯಿತು.

ಮಾಧವಣ್ಣ!

ನಾನು ಯಾರೆಂಬುದು ನಿಮಗೆ ತಿಳಿದಿರಲಿಕ್ಕಿಲ್ಲ ಆದರೆ ನನಗೆ ನಿಮ್ಮ ಪರಿಚಯ ಚೆನ್ನಾಗಿದೆ. ಪರಿಚಯ ಮಾತ್ರವಲ್ಲ, ನೀವು ನನ್ನ ಜೀವನಕ್ಕೆ ಬೆಳಕನ್ನು ತೋರಿಸಿರುವ ನನ್ನ ಪಾಲಿನ ದೇವತೆಯೇ ಆಗಿರುವಿರಿ ನಿಮಗೀ ಪತ್ರ ಕಂಡು ಆಶ್ಚರ್ಯವಾಗಿರಬಹುದು. ಪರಿಚಯವಿಲ್ಲದೊಂದು ವ್ಯಕ್ತಿಯು ಹೀಗೆಲ್ಲಾ ಬರೆಯುವುದೆಂದರೆ ಆಶ್ಚರ್ಯವಲ್ಲದೆ ಮತ್ತೇನು? ಆದರೆ ನಿಮ್ಮ ಪ್ರೇಮಳ ಹೃದಯ, ಉತ್ತಮ ಮಾದರಿಯ ಜೀವನ ಇವುಗಳನ್ನೆಲ್ಲಾ ವಿವರಿಸಿ ಹೇಳಿ, ನೀವು ಮಾರ್ಗಬಿಟ್ಟ ಪುರುಷರ ಕಾಮತೃಷೆಯ ಒಡವೆಯಾಗಿದ್ದ ರಮೆಯನ್ನು ಹೇಗೆ ದಾರಿಗೆ ತಂದಿರುವಿರೆಂಬುದನ್ನು ಆಕೆಯಿಂದಲೇ ಕೇಳಿದಂದಿನಿಂದ ನಾನು ನಿಮ್ಮನ್ನೇ ನನ್ನ ಭಾಗ್ಯ ದೇವತೆ ಎಂದು ತಿಳಿದಿರುವೆ. ನಾನು ಯಾವ ಉದ್ದೇಶದಿಂದಲೂ ಈ ಪತ್ರ ಬರೆಯುವುದಿಲ್ಲ ಆದರೆ ನಿಮ್ಮ ಮಾದರಿಯ ಜೀವನವು ನನ್ನನ್ನುದ್ಧರಿಸಿದೆ ಎಂದು ತಿಳಿಸುವುದೇ ನನ್ನೀ ಪತ್ರದ ಗುರಿ.

ನಿಮ್ಮ ಭಗಿನಿ ಶಾಂತಿ.

ಇದನ್ನೋದಿ ನನಗೆ ಮತ್ತಷ್ಟು ಆಶ್ಚರ್ಯವಾಯಿತು. ಅಷ್ಟಕ್ಕೆ ಮಾಧು ಬಂದೇಬಿಟ್ಟ, ನಾನು ಪುಸ್ತಕವನ್ನು ಇದ್ದಲ್ಲಿಯೇ ಇಟ್ಟು ಕೈಕಟ್ಟಿ ನಿಂತಿದ್ದೆ. ಆತ ಬಂದವನೇ ನಗುತ್ತಾ ನನ್ನನ್ನು ಎಡೆಯ ಕುರ್ಚಿಯಲ್ಲಿ ಕೂಡ್ರಿಸಿ, "ಏನು ಭಾಸೂ! ಚಿಂತಾಕ್ರಾಂತನಾಗಿ ಕುಳಿತಿರುವೆ; ಮಾತನಾಡಬಾರದೇಕೆ?" ಎಂದು ಕೇಳಿದ

ಅಷ್ಟಕ್ಕೆ ಹೊರಗಿನಿಂದ ಪೇದೆಯೊಬ್ಬನು ಬಂದು ನೋಟೀಸೊಂದನ್ನು ಕೊಟ್ಟು ಹೋದ. ಮಾಧು ಅದನ್ನು ಕಂಡು ತುಸು ನಕ್ಕು ಮೇಜಿನೊಳಗದನ್ನು ತೂರಿಬಿಟ್ಟ ಹೌದು ನನಗದೇನೆಂದು ತಿಳಿಯಿತು. ಸುಂದರರಾಯರು ಮಾನನಷ್ಟಕ್ಕಾಗಿ ಮಾಡಿದ ದಾವಾದ ಸಂಬಂಧವಾದುದೇ ಅದಾಗಿತ್ತು. ಅದನ್ನು ಕಂಡರೂ ಮಾಧುವಿನ ಮುಖವು ಮೊದಲಿನಂತೆಯೇ ಹರ್ಷವನ್ನು ಹೊರಸೂಸುತ್ತಿತ್ತು. ಇಂದು ಇಷ್ಟು ದಿನಗಳ ತನಕ ನನಗೆ ಮಾಧುವಿನ ಮೇಲಿದ್ದ ಸಮಾನತೆಯ ಭಾವವು ಅಳಿಸಿಹೋಯಿತು. ಮೊದಲಿನಷ್ಟು ಸಲಿಗೆಯಲ್ಲಿ ಮಾತನಾಡಲು ನಾಲಿಗೆಯೇ ಬಾರದಾಯಿತು. ನನ್ನ ಹೃದಯದಲ್ಲಿ ಅವನ ಸಲುವಾಗಿ ಒಂದು ಪೂಜ್ಯಭಾವನೆಯುತ್ಪನ್ನವಾಯಿತು. ಇಷ್ಟರ ತನಕ ನಾನಾತನನ್ನು ಚಿತ್ರಿಸಿಕೊಂಡಿದ್ದ ರೀತಿಯೇ ಬೇರೆ. ಆತನೊಬ್ಬ ವೇಶ್ಯಾಪ್ರಿಯನೆಂದೂ. ಹೆಣ್ಣಿಗಾಗಿ ಏನನ್ನೂ ಮಾಡಲು ಸಿದ್ಧನೆಂದೂ.........ಇನ್ನೇನೆಲ್ಲಾ ಇದಕ್ಕೆ ಸಂಬಂಧಪಟ್ಟ ಯೋಚನೆಗಳನ್ನು ಮಾಡಿದ್ದ. ಆದರೆ, ಇಂದು! ಅಪ್ಪಾ! ಆತನೆಷ್ಟು ಪವಿತ್ರನು! ನಾನಿಷ್ಟರ ತನಕ ಆತ ಹುಡುಗಿಯರ ಹುಚ್ಚನೆಂದು ಆತನ ಗೆಳೆತನ ಮಾಡಿದ್ದೆ. ಆದರೆ ಇಂದು ನನ್ನಲ್ಲಿದ್ದ ಹುಡುಗಿಯರ ಹುಚ್ಚು ಮಾಯವಾಗಿದೆ

ಮಾಧು ಹೇಳತೊಡಗಿದ, "ಭಾಸೂ! ಇಂದು ಕೋನ್ಸ್ಟಂಟ್ ರೋಡಿಗೆ ಹೋಗಿರುವೆಯೇನು? ಈಗ ಹೋಗುವ, ಬರುವೆಯಾ? ಇಷ್ಟು ದಿನಗಳಂತಾಗಿದ್ದರೆ ನಾನು ಈ ಮಾತುಗಳನ್ನು ಮುಂದುವರಿಸುತ್ತಿದ್ದೆನು. ಆದರೆ ಇಂದು ನನಗೇಕೋ ಮಾತೇ ಹೊರಡದಾಯಿತು! ಮಾಧು ಮತ್ತೂ ಹುಡುಗ ಹುಡುಗಿಯರ ವಿಚಾರ ಹೇಳತೊಡಗಿದ ನಾನು ಕಿವಿಗೊಟ್ಟು ಕೇಳುತ್ತಿದ್ದಂತೆ ನನಗವುಗಳಲ್ಲಿ ಮೊದಲು ತೋರುತ್ತಿದ್ದಂತೆ ಕಾಮಾಂಧತೆಯೇನೂ ತೋರದೆ ಪ್ರತಿಮಾತಿನಲ್ಲಿಯೂ ತತ್ವ ಭಾಗಗಳೇ ಹೊಳೆಯತೊಡಗಿದವು.

ಒಂದು ಹಳ್ಳಿಯ ಹುಡುಗಿಯ ಕೇವಲ ಬಂಧುವಾತ್ಸಲ್ಯಕ್ಕಾಗಿ ಹತ್ತು ಸಾವಿರ ರೂಪಾಯಿ ಮಾನನಷ್ಟ ತೆರಲಿಕ್ಕೆ ಸಿದ್ಧನಿರುವ ಈ ಮನುಷ್ಯನಾದರೂ ಸಾಮಾನ್ಯನೇ? ಯಾವ ಆಶೆಗಾಗಿ ಈತ ಹೀಗೆ ಮಾಡುವ? ಕೀರ್ತಿಗಾಗಿಯೇ? ಅಲ್ಲ, ಇದರಿಂದಾಗಿ ಇವನಿಗೆ ಅಪಕೀರ್ತಿಯಲ್ಲದ ಎಲ್ಲಿಯ ಕೀರ್ತಿ? ಲಾಭಕ್ಕಾಗಿಯೇ? ಹತ್ತು ಸಾವಿರ ರೂಪಾಯಿಗಳು ನಷ್ಟವಾಗಲಿಕ್ಕಿವೆ ಎಂದ ಮೇಲೆ ಲಾಭವೆಲ್ಲಿಯದು? ಮತ್ತೆ ಏತಕ್ಕಾಗಿ ಈತ ಹೀಗೆ ಮಾಡುವ? ನಾನು ತುಂಬಾ ತರ್ಕಿಸಿದೆ ಹೌದು, ಹಲವು ಜೀವನಗಳ ಶುದ್ಧಿಗಾಗಿಯೇ ಈತ ಹೀಗೆ ಮಾಡುತ್ತಿರಬೇಕು. ನನಗೆ ಮೊದಮೊದಲು ಇದನ್ನು ಯೋಚಿಸುವುದೂ ಕಷ್ಟವಾಗಿತೋರಿತು.

ನಾನು ಮನದಲ್ಲಿಯೇ ಮಾಧುವನ್ನು ನಮಸ್ಕರಿಸಿ ಬೇರೆ ಮಾತನಾಡದೆ ಹೊರಬಿದ್ದೆ. ಹೊರಬರುವಾಗ ಮಾಧು ಕಾಣದಂತೆ ನಾನು ಓದಿರುವ ಪತ್ರಗಳನ್ನು ನನ್ನೊಡನೆ ತರಲು ಮರೆಯಲಿಲ್ಲ ಅಂದೇ ರಾತ್ರಿ ಲೀಲೂನವರ ಮನೆಗೆ ಪ್ರಯಾಣ ಬೆಳಸಿ ಆಕೆಯ ಅಣ್ಣನ ಪರಿಚಯ ಮಾಡಿಕೊಂಡು ಈ ಪತ್ರಗಳನ್ನೆಲ್ಲಾ ಅವನಿಗೆ ತೋರಿಸಿ ನಿಜಸ್ಥಿತಿಯನ್ನು ಅವನಿಗೆ ಮನದಟ್ಟು ಮಾಡಿದೆ. ಆತನೂ ನನ್ನಂತೆ ಆಶ್ಚರ್ಯಚಕಿತನಾಗಿ "ಇಂತಹ ಮಹಾತ್ಮರೂ ಲೋಕದಲ್ಲಿದ್ದಾರಲ್ಲವೇ?" ಎನ್ನುತ್ತಾ ಒಂದು ಬಿಸಿಯುಸಿರುಬಿಟ್ಟ. ಒಡನೆಯೇ ದಾವಾವನ್ನು ಹಿಂತೆಗೆಯಲು ತನ್ನ ವಕೀಲನಿಗೆ ಪತ್ರ ಬರೆದ. ಅಲ್ಲದೆ ಮರುದಿನವೇ ಲೀಲೂವನ್ನು ಕರಕೊಂಡು ನನ್ನೊಡನೆ ಮಾಧವನೆಡೆಗೆ ಪ್ರಯಾಣ ಬೆಳೆಸಿ ಬಿಟ್ಟ.

ನಾವು ಮೂವರು ಬರುವಾಗ ಮಾಧವ ಒಬ್ಬ ರೋಗಿಯನ್ನು ಪರೀಕ್ಷಿಸುತ್ತಾ ಕುಳಿತಿದ್ದ. ನಮ್ಮನ್ನು ಕಂಡು ಎಂದಿನಂತೆ ಕಪಟವಿಲ್ಲದ ನಗು ಒಂದನ್ನು ನಕ್ಕು ಕುಳಿತುಕೊಳ್ಳಲು ಸನ್ನೆ ಮಾಡಿದ, ರೋಗಿಯನ್ನು ಔಷಧಕೊಟ್ಟು ಕಳುಹಿಯಾದ ಮೇಲೆ ನಮ್ಮೆಡೆ ಬಂದು ಸುಂದರರಾಯರನ್ನು ಸತ್ಕರಿಸಹತ್ತಿದ ಅಷ್ಟಕ್ಕೆ ನಾವು ಮೂವರೂ ಆತನ ಕಾಲಿಗೆರಗಿಬಿಟ್ಟೆವು ಆತ ಆಶ್ಚರ್ಯಚಕಿತನಾಗಿ ನಿಂತಿದ್ದ. ಆಗ ಲೀಲೂ ಆತನನ್ನಪ್ಪಿಕೊಂಡು ಹರ್ಷಾಶ್ರುಗಳನ್ನು ಸುರಿಸುತ್ತಾ ಎಲ್ಲವನ್ನೂ ಹೇಳಿದಳು. ಮಾಧು ಹರ್ಷದಿಂದ ಮೂವರನ್ನೂ ತಬ್ಬಿಕೊಂಡ. ಸುಂದರರಾಯರು ಉಕ್ಕಿ ಬರುವ ಆನಂದವನ್ನು ಮಾತಿನತ್ತ ತಿರುಗಿಸಿ ಕೇಳಿದರು. "ಮಾಧವರಾಯರೇ ನೀವು ಏತಕ್ಕಾಗಿ ಇಂತಹ ಅಪವಾದವನ್ನು ಹೊರಲು ಸಿದ್ಧರಾದಿರಿ?" ಮಾಧು ಅದೇ ಕಪಟರಹಿತ ಸ್ವರದಲ್ಲಿ ಹೇಳಿದ, "ಭಗಿನಿಗಾಗಿ"

ಇದನ್ನು ಓದಬೇಡೀಂದ್ರೆ!

ರಜನಿ—ದೀನೇಂದ್ರರೇ ನಿಮ್ಮ ಯೌವನ ಸಂಪತ್ತನ್ನು ನೀವು ಸೆರೆಮನೆಯಲ್ಲಿ ಕೊಳೆಯಿಸಿ ಹಾಳು ಮಾಡುವುದರಿಂದ ಫಲವೇನು? ಜೀವಿಯು ಪೇಕ್ಷಿಸುವುದು ಸುಖಕ್ಕಲ್ಲವೇ? ಈ ಯೌವನದುಬ್ಬಿನಲ್ಲಿ ನಿಮ್ಮ ಹೃದಯವಾದರೂ ಸುಖ ಪಡೆಯಲು ಆತುರ ಪಡುವುದಿಲ್ಲವೇ? ನಿಮಗೆ ಸೌಂದರ್ಯವಿದೆ, ಸಂಪತ್ತಿದೆ, ವಿದ್ಯೆಬುದ್ಧಿಯಿದೆ. ಆದರೆ, ನೀವು ಅದನ್ನಾವುದನ್ನೂ ನಿಮ್ಮ ಸುಖಕ್ಕಾಗಿ ಉಪಯೋಗಿಸದೆ ಹಾಳುಗೆಡಹಿರುವಿರಿ ಹೃದಯದ ಸಹಜಪ್ರೇರಣೆಯನ್ನು ಮೂಲೆಗೊತ್ತಿ, ಜನಸೇವೆ, ಜನಹಿತಸಾಧನೆಯೆಂಬ ಭ್ರಾಂತಿಯಿಂದ ಕೃತಕ ಜೀವನ ನಡೆಸುತ್ತಿರುವಿರಿ

ದೀನೇಂದ್ರ—ಜೀವಿಯ ಉದ್ದೇಶವು ಸುಖವೆಂಬುದು ನಿಜ. ಆದರೆ, ಅದೆಂತಹ ಸುಖ? ಕೇವಲ ವೈಯಕ್ತಿಕ ವಿಷಯೋಪಭೋಗವಲ್ಲ. ವೈಯಕ್ತಿಕ ಸುಖ ವಿಲಾಸಾಭಿಲಾಷೆಯು ಕೇವಲ ಪಾಶವಿಕ ಪ್ರೇರಣೆಯು. ವಿಚಾರಶೀಲ, ಸುಸಂಸ್ಕೃತ ಮಾನವನು ಸಾಮಾಜಿಕ ಜೀವಿಯು. ಸಮಾಜದ ಹಿತವೇ ಅವನ ಹಿತ, ಸಮಾಜದ ಸುಖವೇ ಅವನ ಸುಖ.

ರಜನಿ—(ಚಪಲವಾಗಿ ಶಂಕಿಸುತ್ತಾ) ಹಾಗಾದರೆ ನಿಮ್ಮ ಜೀವನ ಕ್ರಮದಲ್ಲಿ ಪ್ರೇಮಮಯ ದಾಂಪತ್ಯ ಜೀವನಕ್ಕೆಲ್ಲಿದೆ ಸ್ಥಾನ? ಪ್ರೇಮವಸಂತವಾದ ಯೌವನವನ್ನು ನೀವು ಹೀಗೆ ಜನಸೇವೆ ಜನಸೇವೆಯೆಂದು ನೀರಸವಾಗಿ ಕಳೆದರೆ ಹೇಗೆ? ಪ್ರಕೃತಿಯು ಋತುಗುಣಕ್ಕನುಗುಣವಾದ ಜೀವನ ನಿಯಮವುಳ್ಳವಳಾಗಿಲ್ಲವೇ? ವಸಂತವು ಅದೆಷ್ಟು ಸುಖಮಯ! ಆನಂದಮಯ!, ತರುಲತೆಗಳು ನವಪಲ್ಲವಗಳ ಕುಂದಣಮಧ್ಯದಲ್ಲೊಪ್ಪುವ ಫಲಪುಷ್ಪಗಳಿಂದ ಮನೋಜ್ಞವಾಗಿರುವಾಗ ಪಕ್ಷಿನಿಕರವು ನಲಿನಲಿದು ಮೃದುಮಧುರ ಪ್ರೇಮದಿಂಚರದಿಂದ, ಹೃದಯೋಲ್ಲಾಸಗೊಳಿಸುವಾಗ, ಪ್ರಕೃತಿಯೇ ಪ್ರೇಮೋಲ್ಲಾಸದಿಂದ ಕಾಲಪುರುಷನೊಂದಿಗೆ ರಾಸಕ್ರೀಡೆಯಾಡುತ್ತಿರುವಾಗ ಶಿಶಿರ ಋತುವಿನ ವಿರಸ ಜೀವನ ನಡೆಸುವುದಾದರೂ ಅದೆಷ್ಟು ವಿಹಿತವಾದುದು? ಅದು ಕೃತಕ ಜೀವನವಲ್ಲದೆ ಸಹಜ ಪ್ರೇರಣೆಗನುಗುಣವಾದುದೇ?

ದೀನೇಂದ್ರ—ಆಹ! ಸಾವಿತ್ರಿಯೇ ರಜನಿಯ ರೂಪದಲ್ಲಿ ಕವಯಿತ್ರಿಯಾಗಿ ಬಂದು ಕಾವ್ಯ ಮಾಧುರ್ಯವನ್ನು ನನಗೆ ಸವಿಸುವ ಕೃಪೆ ಮಾಡಿರುವಂತಿದೆ.

ರಜನಿ—(ಲಜ್ಜೆಯಿಂದ ಕಾಲ ಎಡಹೆಬ್ಬೆಟ್ಟಿನಿಂದ ನೆಲವನ್ನು ಕೀಸುತ್ತ) ಸಾಕು ತಮಾಷೆ ನಿಮ್ಮದೆಲ್ಲ! ಬ್ರಹ್ಮನೇ ದೀನೇಂದ್ರನಾಗಿ ಬಂದು ವೇದಾಂತಾಮೃತವನ್ನು ನನಗುಣಿಸುವ ದಯತೋರಿದಂತಿದೆಯೆಂದು ನಾನು ಹೇಳಿದರೆ?

● .... ಮುಂದೆ ಈ ಮಾತುಗಳು ಹೇಗೆ ಹರಿಯುತ್ತವೆ? ರಜನೀದಿನೇಂದ್ರರು ಯಾರು? ಎಂಬ ವಿಚಾರವನ್ನು ತಿಳಿಯಬೇಕಾದರೆ ಶ್ರೀ. ಕೆ. ಕೆ ಶೆಟ್ಟರು ಬರೆದ ನವೀನ ಸಾಮಾಜಿಕ ನಾಟಕವಾದ **"ದೇಶಭಕ್ತ"** ಎಂಬುದನ್ನು ಓದಬೇಕು. **ಬೆಲೆ 0-10-0 ಮಾತ್ರ ನವಭಾರತ ಪುಸ್ತಕ ಭಂಡಾರ, ಉಡುಪಿ.** ಈ ವಿಳಾಸಕ್ಕೆ 0-11-0 ಸ್ಟಾಂಪು ಕಳುಹಿಸಿದರೆ ಒಂದು ಪ್ರತಿ ನಿಮ್ಮ ಮನೆಬಾಗಿಲಿಗೆ ಬಂದುಬಿಡುತ್ತೆ.

(*Advt.*)

Unexpected Bargain
Factory permits us special concession of 50%
which is offered to public. *Don't miss unique opportunity.*



Lever jewelled Mov
No 550 Chromium case Rs 7/8
No. 551 Rolled gold 10 yrs Rs 10/

Round or Square
No 101 Chromium Case Rs 3/
No 102 Golden Case Round Rs 4/-
Any Model with Radium dial Rs 1/—Extra



Lever 15 Jewells
No.559 Chromium Rs 12-8
No 560 Rolled gold 10 yrs Rs 17 8.



No 511 Chromium Rs 5/8
No 512 Golden case Rs 7/-
Lady's Miniatures

No 517 Chromium Rs 6—8
No 518 Golden case Rs 8—0
No 518 R Rolled gold 10 yrs Rs 12—8



Lever 15 Jewells
No 590 Rolled gold 10 yrs Rs 18/-
No 590 G Sct gold Rs. 25/-



Geneva Mov.
No 536 Chromium Rs 9—0
No. 537 Golden Case Rs 10—8
No 538 Rolled Gold 10 yrs Rs. 13—8

As 9-0 Extra for Postage & Packing
ILLUSTRATED CATALOGUE FREE.

BAPALAL & Co.,
101 Abdul Rehman St., **BOMBAY, 3.**

ಲೇಖಕರು:—
ಶ್ರೀ ಎಂ ವಿ. ಹೆಗ್ಡೆ,
ಸಹಸಂಪಾದಕರು,
'ಅಂತರಂಗ' ಉಡುಪಿ.

> **ಶ್ರೀಕೃಷ್ಣನ ಪುನರವತಾರವಾಗಬೇಕಾದರೆ ಮೊದಲನೆಯದಾಗಿ ಕೃಷ್ಣನನ್ನು ಹೆರುವ ದೇವಕಿ ಬೇಕು. ಅವನ ಜನನವಾದ ಮೇಲೆ ಗೋವುಗಳನ್ನು ಕಾಪಾಡುವ ಕೆಲಸ ಬೇಕು. ಕಾಳಿಂಗ ಮರ್ದನವಾಗಬೇಕು. ಆ ಮೇಲೆ ರಾಸಕ್ರೀಡೆ ವಸ್ತ್ರಾಪಹರಣವಾಗಬೇಕು. ಸಾರಥಿತ್ವಕ್ಕೂ ಒಂದು ಅನುಕೂಲತೆಬೇಕು. ಇವೆಲ್ಲಾ ನಮ್ಮಲ್ಲಿವೆಯೇ? ಇಲ್ಲ. ಅಂತೂ ಅವನು ಈಗ ಬಂದರೆ ಬರುವುದು ಯುರೋಪಿಯನ್ನನಾಗಿ ಅವತಾರಕ್ಕೆ ಬೇಕಾದ ಅನುಕೂಲತೆಗಳೆಲ್ಲ ಅಲ್ಲಿವೆ ನೋಡಿ!**

ಬಗವಾನ್ ಕೃಷ್ಣ ಈಗ ಬಂದರೆ?

ಅಂದಿನಂತೆ ಇಂದೂ ಭಾರತೀಯರಿಗೆ ಮಾರ್ಗದರ್ಶಕನಾಗಿಯೇ ನಿಂತಾನು, ತಪ್ಪಿದರೆ ಸ್ವತಃ ಗೊಂದಲದಲ್ಲಿ ಬಿದ್ದಾನು ಹಿಂದೀಯರಿಗಿದು ಬಿಡಿಸಲಾಗದ ಬಿಕ್ಕಟ್ಟಿನ ಕಾಲ; ಸರಿಯಾದ ಮಾರ್ಗದರ್ಶಿತ್ವವಿಲ್ಲದೆ ಸಿಕ್ಕಾಬಟ್ಟೆ ಚಲಿಸುತ್ತಿರುವ ಕಾಲ. ಇಂತಹ ಸಂದಿಗ್ಧ ಸಮಯದಲ್ಲಿ, 'ಬಗವಂತಾ ನೀನೇ ಗತಿ' ಎಂದು ಮೊರೆಯಿಡುತ್ತಿರುವ ವೇಳೆಯಲ್ಲಿ ಸ್ವತಃ ಭಗವಂತನು ಅವತರಿಸಿದರೆ, ಯಾವ ಪರಿಹಾರ ಕೈಗೊಂಡಾನು ಎಂಬುದನ್ನು ಯೋಚಿಸೋಣ. ನಾವು, ಅಂದರೆ ಭಾರತೀಯರು ನಮ್ಮ ಪೂರ್ವಸಂಸ್ಕೃತಿಯೆಲ್ಲವನ್ನೂ ಕೈಯ್ಯಾರೆ ಮಣ್ಣುಪಾಲುಮಾಡಿಕೊಂಡವರು; ನಮ್ಮ ಕೃಷ್ಣನಿಗೆ ಪುನಃ ಅವತಾರಕೊಡುವ ಯೋಗ್ಯತೆಯೊಂದನ್ನಾದರೂ ಉಳಿಸಿಕೊಂಡಿರುವೆವೆ? ಇಲ್ಲವೆನ್ನಬೇಕಾಗುವುದು. ಅನೂ ನಮ್ಮ ಮಿಕ್ಕ ಯೋಗ್ಯತೆಗಳಂತೆ ಬಿಳಿಜನರ ಪಾಲಿಗೇನೇ ಸೇರಿಹೋಗಿವೆಯೆನ್ನಬೇಕಾಗುವುದು. ಆದ್ದರಿಂದ ಈ ಮಾತಿಗಾಗಿ ಕ್ಷಮೆ ಕೇಳುತ್ತೇನೆ—ನಮ್ಮ ಭಗವಾನ್ ಕೃಷ್ಣ ಇನ್ನೊಮ್ಮೆ ಹುಟ್ಟುವದಾದರೆ ಬಿಳಿಜನರ ನಡುವೆ. ನೀಲಮೇಘಶ್ಯಾಮನಾಗಿ ಅಲ್ಲ, ವಸಂತದ ಮೇಘಶ್ಯಾಮನಾಗಿ! ನನ್ನ ಈ ಮಾತು ಬಹಳ ಹೆಚ್ಚಿನದು ಎಂಬುದನ್ನು ನಾನು ಬಲ್ಲೆ. ಇದಕ್ಕೆ ಸಾಕಷ್ಟು ಕಾರಣಗಳನ್ನು ಕೊಡದಿದ್ದಲ್ಲಿ ನನ್ನಂಥ ದೇವದ್ರೋಹಿಗಾಗಿ ಪ್ರತ್ಯೇಕ ನರಕನಿರ್ಮಾಣಮಾಡೆಂದು ಭಗವಂತನಲ್ಲಿ ದೂರಿಡಲು ಹಲವರು ಹೊರಡಬಹುದು. ಆದ್ದರಿಂದ ಶ್ರೀಕೃಷ್ಣನಿಗೆ ಬಿಳಿಯನಾಗಿ ಹುಟ್ಟುವ ಅಗತ್ಯ ಹೇಗೆ ಬೀಳುತ್ತದೆ ಎಂಬುದನ್ನು ಅಗತ್ಯ ಹೇಳುತ್ತೇನೆ.

೦ ೦ ೦

"ಕೃಷ್ಣ ನಮ್ಮವ, ನಮ್ಮಲ್ಲಿಯೇ ಇನ್ನೊಮ್ಮೆ ಹುಟ್ಟಬೇಕು" ಎಂದು ವಾರೀಸು ಹಕ್ಕನ್ನು ಹಿಡಿದುಕೊಂಡು ವಾದಿಸಿದರೆ ಸಾಲದು ಕೃಷ್ಣ ಹುಟ್ಟುವದಕ್ಕೊಂದು ಅವಕಾಶವೂ ಬೇಕಲ್ಲ. ಹಾಗೆಯೇ ಅವನ ಮಿಕ್ಕ ಕಾರ್ಯಗಳಿಗೂ ಅನುಕೂಲತೆ ಬೇಕು. ಅಂದರೆ ಮೊದಲನೆಯದಾಗಿ ಅವನನ್ನು ಹೆರುವ ದೇವಕಿ ಬೇಕು. ಎರಡನೆಯದಾಗಿ ಗೋಪಾಲನೆ, ಹಾಗೂ ಅದೇ ಸಮಯದಲ್ಲಿ ಕಾಳಿಂಗಮರ್ದನವಾಗಬೇಕು. ಮೂರನೆಯದಾಗಿ ಜಲಕೇಳಿ ವಸ್ತ್ರಾಪಹರಣ, ಇಷ್ಟೂ ಆಗಬೇಕು. ನಾಲ್ಕನೆಯದಾಗಿ ಮಹಾಯುದ್ಧದಲ್ಲಿ ಸಾರಥಿಯಾಗಲು ಪಾರ್ಥನೊಬ್ಬ ಬೇಕು. ಇಷ್ಟನ್ನೆಲ್ಲಾ ಒದಗಿಸಿಕೊಟ್ಟು 'ಅವತಾರ ತಾಳು, ಬಾ' ಎಂದು ಕರೆಯಲು ಸದ್ಯಕ್ಕೆ ಬಡ ಭಾರತೀಯರಾದ ನಮ್ಮಲ್ಲೇನುಂಟು? ಈ ಎಲ್ಲಾ ಅನುಕೂಲತೆಯಿರುವದು ಈಗ ಬಿಳಿಜನರಲ್ಲಿ ಮಾತ್ರ. ಆದ್ದರಿಂದಲೇ ಹೇಳಿದೆ ಕೃಷ್ಣ ಈಗ ಬರುವದಾದರೆ, ಬಂದು ನಮ್ಮ ಉದ್ಧಾರದ ಹಾದಿ ಸೂಚಿಸುವದಾದರೆ ಬಿಳಿಜನವಾಗಿ ಹುಟ್ಟುವ ಮೂಲಕವೇ; ಬಿಳಿಯರಾಗಿ ಹುಟ್ಟಿದಲ್ಲಿ ಮಾತ್ರ ನಮ್ಮ ಉದ್ಧಾರವೆಂಬುದನ್ನು ನಾವು ಅಷ್ಟರಿಂದಲೇ ತಿಳಿದುಕೊಂಡರಾಯಿತು.

೦ ೦ ೦

ಕೃಷ್ಣನ ಪುನರವತಾರಕ್ಕೆ ಬೇಕಾಗುವ ಸಲಕರಣೆಗಳ ಔಟ್‌ಲೈನನ್ನು ಅಂದರೆ ರೂಪರೇಷೆಯನ್ನು ಮಾತ್ರ ಹಾಕಿದ್ದೇನೆ. ಇನ್ನು ಒಂದೊಂದನ್ನೇ ವಿವರವಾಗಿ ಹೇಳಿದಲ್ಲಿ ಎಲ್ಲವೂ ವಿಶದವಾದೀತು. ಮೊದಲನೆಯದಾಗಿ ಕೃಷ್ಣನನ್ನು ಹೆರುವ ದೇವಕಿ ಬೇಕು ವಸುದೇವ ಕಾರಾಗೃಹದಲ್ಲಿ ಕೈಕಾಲುಗಳಿಗೆ ಸಂಕೋಲೆ ಸಿಕ್ಕಿಸಿಕೊಂಡು ಬಿದ್ದಿದ್ದಾಗ, ಕೃಷ್ಣನನ್ನು ಹೆರಬಲ್ಲ ಸಮರ್ಥ ಹೆಂಗಸು ದೇವಕಿ ಬೇಕು ಅಂತಹ ಬಹು ಪತಿವ್ರತೆ ನಮ್ಮಲ್ಲಿ ಯಾರಿದ್ದಾಳೆ? ಗಂಡ ಜೈಲಲ್ಲಿಯೋ ಪರಊರಲ್ಲಿಯೋ ಇರುವಾಗ ಅಪರೂಪವಲ್ಲಾದರೂ ಹೆತ್ತವರನ್ನು ತೋರಿಸಿ ಕೊಡಲು ಯಾರಾದರೂ ಮುಂದೆ ಬರಬಹುದು. ಆದರೆ ಅಂತಹ ದೇವಕ್ಕ ದೇವಿಯರ ವಸುದೇವ ದೂರದಲ್ಲಿದ್ದರೆ ವಾಸುದೇವನೊಬ್ಬ ಹತ್ತಿರದಲ್ಲಿಲ್ಲದೆ ನಿರ್ವಾಹವಿಲ್ಲವಷ್ಟೆ. ಅಂದಿನ ದೇವಕಿಯ ಸ್ಥಾನಕ್ಕೆ ಈ ಧಾವಕಿಯನ್ನು ನೇಮಿಸಿದರೆ ನಾನೆಂದಿಗೂ ಒಪ್ಪಲಾರೆ ಹಾಗೆ ಯಾರೂ ಇಲ್ಲದೇನೇ ಶ್ರೀಕೃಷ್ಣನನ್ನು ಹೆರಬಲ್ಲ ಮಿಕ್ಕ ದೇವಕಿಯನ್ನು ಹುಡುಕಿ ತೆಗೆಯಲು ಸಿದ್ಧರಾಗಲಾರರು. ಅಂದರೆ ವಸುದೇವನ ಸಹಾಯ ವಿನಹಾ ಕೃಷ್ಣನನ್ನು ಹೆರಬಲ್ಲ ದೇವಕಿ ಸದ್ಯ ನಮ್ಮ ಭಾರತದಲ್ಲಿಲ್ಲ. ಆದರೆ ಯುರೋಪಿನಲ್ಲಿದ್ದಾಳೆ. ಮಾತ್ರವಲ್ಲ—ಇದ್ದಾರೆ. ಪುರುಷನ ಕೈಕಾಲುಗಳಿಗೆ ಸಂಕೋಲೆ ಬಿಗಿದಿದೆಯೋ ಯಾ, ಬಳ್ಳಿಬಿಗಿದಿದೆಯೋ ಎಂಬುವನ್ನು ತಿಳಿಯುವ ಅವಕಾಶಕೂಡ ಇಲ್ಲದೆ ಬೇಬಿಗಳಿಗೆ ಜನ್ಮವೀಯಬಲ್ಲ ಲೇಡಿಗಳೆಷ್ಟು ಬೇಕು ಯುರೋಪಿನಲ್ಲಿ! ಅದಿನ ಮಗು ಕೃಷ್ಣನನ್ನೆತ್ತಿಕೊಂಡು ವಸುದೇವ ಹೊರಟಾಗ ಅವನ ಹಿಂದಿನಿಂದ ಹೆಡೆಯ ಛತ್ರಿಯನ್ನು ಬಿಡಿಸಿಕೊಂಡು ಸಹಾಯಕ್ಕಾಗಿ ಆದಿ ಶೇಷ ಹೊರಟಿದ್ದಾನಂತೆ, ಇಂದು ಹಾಗೆಯೇ ಕೃಷ್ಣ ಜನನಕ್ಕಾಗಿಯೇ ಸಹಾಯಮಾಡುವ 'ಟ್ಯೂಬ್' ಇದೆ. ಪುರುಷ ಸಂಪರ್ಕವಿಲ್ಲದೆ ನಳಿಗೆಯ ಸಹಾಯದಿಂದ ಯುರೋಪಿನಲ್ಲಿ ಸಂತತಿ ನಿರ್ಮಾಣ ಮಾಡಲಾರಂಭಿಸಿರುವದು ಗೊತ್ತೇ ಉಂಟಷ್ಟೆ. ನಮ್ಮ ಶ್ರೀಕೃಷ್ಣನ ಪುನರವತಾರಕ್ಕೆ ಅನುಕೂಲವೆಂದರೆ ಅಲ್ಲಿಯೇ ಸರಿ, ಶ್ರೀ ಕೃಷ್ಣ 'ಟ್ಯೂಬ್ ಬೇಬಿ'ಯಾಗಿ ಹುಟ್ಟಿದ; ದ್ವಾಪರಯುಗದ ಜನನದ ರೀತಿಗೆ ಒಂದಿಷ್ಟು ಲೋಪವಿಲ್ಲದಂತೆಯೇ ಹುಟ್ಟಿದ ಹಾಗೆ ಹುಟ್ಟಿದ ಮಗುವನ್ನು ಸಾಕುವ ನಂದಗೋಕುಲಗಳಿರುವದೂ ಅಲ್ಲಿಯೇ. ಹೀಗಾಗಿ ಹುಟ್ಟಿದ ಮಗುವನ್ನಾದರೂ ತಂದು ನಮ್ಮ ಬಾಲಕೃಷ್ಣನನ್ನಾಗಿ ಮಾಡಿಬಿಡೋಣವೆಂದರೆ ಅದೂ ನಮಗೆ ಅಸಾಧ್ಯ!

೦ ೦ ೦

ಸರಿ, ಶ್ರೀ ಕೃಷ್ಣ ಜನನವಾಯಿತು ಆ ಮೇಲೆ ಅವನ ಸ್ವಭಾವಕ್ಕನುಸರಿಸಿ ಗೋವುಗಳನ್ನು ಕಾಪಾಡುವ ಕೆಲಸಕೊಡಬೇಕು, ಕಾಳಿಂಗ ಮರ್ದನವಾಗಬೇಕು ಇದಕ್ಕೆ ನಮ್ಮ ವೈಸರಾಯರಾದ ಲೋರ್ಡ್ ಲಿನ್‌ಲಿತ್‌ಗೋವರ ಸ್ನೇಹಾಚಾರ ಸಂಪಾದಿಸದೆ ಶ್ರೀಕೃಷ್ಣನಿಗೆ ಗತಿಯಿಲ್ಲ ಇವರು ಲಿನ್‌ಲಿತ್‌'ಗೋ' ಎಂಬುದಕ್ಕಾಗಿ ಅಲ್ಲ; ಬೀಜದ ಹೋರಿಗಳನ್ನು ಹೆಚ್ಚಿಸಿ ಗೋಪಾಲನೆಯ ಧರ್ಮವನ್ನು ಅಂಗೀಕರಿಸಿರುವ ಮಾನ್ಯ ವೈಸರಾಯರ ಅಥವಾ ಇಂದಿನ ನಂದಗೋಪನ ಯೋಜನೆ ಸಫಲವಾದರೇನೇ ಕೃಷ್ಣನು ಸಾಕಬಲ್ಲ ಗೋಸಂತತಿಯುಂಟಾದೀತು; ಹೊರತು ಈಗ ಯಾವ ಗೋಮಂದೆಯನ್ನು ತೋರಿಸಿ ಕೃಷ್ಣನನ್ನು ಕರೆಯಬಹುದು? ನಮ್ಮ ದನಗಳಿಗೆ ಹಿಂದಿನಿಂದ ಹುಲಿಯಾರ್ಭಟಿಸಿದರೆ ಹೆದರಿ ಓಡುವಷ್ಟು ತ್ರಾಣ ವೈಯಲ್ಲಿಲ್ಲ, ಧೇನುಕಾಸುರನ ಮಾತು ಬಿಡಿ, ನಾಯಿ ಹುಲಿಯ ಹೊಟ್ಟೆಗೆ ಸಾಕಾಗುವಷ್ಟು ಮಾಂಸ ನಮ್ಮ ದನಗಳ ಎಳ್ಳೆಗಳಲ್ಲಿಲ್ಲ. ಇಂತಹ ಗೋಹಿಂಡು ಕೃಷ್ಣನ ಕೊಳಲು ಕೇಳಿದೊಡನೆ ಓಡಲು ಕಲಿತಾವೆಂದರೆ ಹೆಡ್ಡತನವಾದೀತು. ಆದ್ದರಿಂದ ಶ್ರೀಕೃಷ್ಣನ ಗೋಪಾಲನಾ ಧರ್ಮಕ್ಕೂ ಬಿಳಿಜನರೇ ಬೇಕು. ಇನ್ನು ಕಾಳಿಂಗಮರ್ದನದ ಕೆಲಸ ವೊಂದುಂಟು ಇದನ್ನು ಅಕ್ಷರಶಃ ಅನುಸರಿಸಿದರೆ ಶ್ರೀಕೃಷ್ಣನು ಇಂದಿನ ಯುಗಧರ್ಮದಂತೆ ಹಾವಾಡಿಗನೆನ್ನಿಸಿಯಾನು ಹೊರತು ಅವತಾರ ಪುರುಷನಾಗಲಾರನು. ಕಾಳಿಂಗನೆಂದರೆ ಶ್ರೀಕೃಷ್ಣನು ತುಳಿದಷ್ಟೂ ಬುಸುಗುಟ್ಟುತ್ತಾ ಸೋತು ಹೋದ ಕಪ್ಪು ಸರ್ಪ. ಕಪ್ಪು ಜನರನ್ನು ತುಳಿಯುತ್ತಿರುವವರೂ ಅವರು ಆಗಾಗ ಬುಸುಗುಟ್ಟುತ್ತಾ ಬಲಗುಂದುತ್ತಿರುವದೂ ಈ

ಆಗಬಾರದಿತ್ತು; ಆದರೆ ಆಗಿಹೋಯಿತು

ಒಂದು ನಾಮಾಂಕಿತ ಕುಟುಂಬದ ಆಧಾರ ಸ್ತಂಭದಂತಿದ್ದ ಒಬ್ಬನೇ ಒಬ್ಬ ತರುಣನು ಆಕಸ್ಮಾತ್ತಾಗಿ ಮರಣಕ್ಕೆ ತುತ್ತಾದನು ತನ್ನ ಹೆಸರಲ್ಲಿ ಹಣದ ಯಾವ ವ್ಯವಸ್ಥೆಯನ್ನೂ ಮಾಡದಿದ್ದ ಕಾರಣ ಅವನ ಹೆಂಡತಿ ಮಕ್ಕಳು ಬಹಳ ಕಷ್ಟಕ್ಕೆ ಗುರಿಯಾದರು. ಹಾಗೂ ಕುಟುಂಬದ ತುಟ್ಟೀಕಾರಕ್ಕೆ ಒಳಗಾದರು.

ಅಂತಹ ಅನಿಷ್ಟ ಪ್ರಸಂಗವು ಕುಟುಂಬದವರ ಮೇಲೆ ಬರಬಾರದು. ಇದಕ್ಕೆ ಒಂದೇ ಉಪಾಯವೆಂದರೆ—ಜೀವವಿಮೆ ಮಾಡುವುದು—ಮತ್ತು ಅದು ಸಹ—

ಈಸ್ಟ್ ಎಂಡ್ ವೆಸ್ಟ್
ಕಂಪೆನಿಯಲ್ಲಿ ಮಾತ್ರ.

ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಅಪೊಲೊ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮರ್ಯಾದಸ್ಥ ಗೃಹಸ್ಥರು ಈ ಕಂಪೆನಿಯಲ್ಲಿ ವಿಮೆಮಾಡಿ, ತಮ್ಮ ಭವಿಷ್ಯ ಕಾಲವನ್ನು ಪ್ರಕಾಶಮಯವಾಗಿ ಮಾಡಬಹುದು.
ವಿಶೇಷ ಮಾಹಿತಿಗೋಸ್ಕರ ಈ ಹೊತ್ತೇ ಬರೆಯಿರಿ:—
(ಮಹಾರಾಷ್ಟ್ರ ವ ಕರ್ನಾಟಕದ ಚೀಫ್ ಏಜಂಟರಿಗೆ)
ಮೆಸರ್ಸ್ ಪಡುಬಿದ್ರಿ ಬ್ರದರ್ಸ್,
ನಾರಾಯಣಲಾಲ್ ಬನ್ಸಿಲಾಲ್ ಬಿಲ್ಡಿಂಗ್ 73, ಲೆಮಿಂಗ್ಟನ್ ರೋಡ್
ಮುಂಬಯಿ

EAST AND WEST
INSURANCE CO. LTD., BOMBAY.

ವರೆಗೂ ನಡೆದೇ ಉಂಟು ತನ್ನ ಕಾಳಿಂಗ ಮರ್ದನದ ಕಾರ್ಯವಾಗಬೇಕೆಂದಿದ್ದರೆ ಶ್ರೀಕೃಷ್ಣನೂ ತುಳಿಯುವವರ ಸಾಲಿಗೆ ಸೇರಿದಂತಾಯಿತು. ಅಂತೂ ಅವನನ್ನು ಕೃಷ್ಣನಿಗೆ ಬಿಳಿಯರ ಪಂಕ್ತಿಯೇ ಗತಿ

o o o

ಆವೇಳೆ ನಡೆಯಬೇಕು ರಾಸಕ್ರೀಡೆ ವಸ್ತ್ರಾಪಹರಣ ಕೃಷ್ಣ ಕೃಷ್ಣನೆಂದು ಈ ಸೌಕರ್ಯಗಳನ್ನಾದರೂ ಒದಗಿಸಿಕೊಡಲು ನಾವು ಭಾರತೀಯರು ಸಿದ್ಧರಿರುವೆವ? ಅದೂ ಇಲ್ಲ. ಜಲಕ್ರೀಡೆ, ಸಮುದ್ರಸ್ನಾನ ಈಜುವ ಹುಚ್ಚು-ಇವೆಲ್ಲಾ ಇರುವದು ಯುರೋಪಿನ ಮಹಿಳೆಯರಲ್ಲಿ, ಅದರಲ್ಲೂ ಶ್ರೀಕೃಷ್ಣನಂತಹ ಪುಂಡನೊಟ್ಟಿಗೆ ಮುಳುಗೇಳಬಲ್ಲ ಮಹಿಳೆಯರಿರುವದು ಯುರೋಪಿನಲ್ಲಿ ಮಾತ್ರ. ಅಲ್ಲಿ ಭಗವಾನ್ ಕೃಷ್ಣನು ರಾಸಕ್ರೀಡೆಯನ್ನು ಇನ್ನಷ್ಟು ಸದಾಚಾರಿತ ರೀತಿಯಲ್ಲಿ ಆಡಬಹುದು, ತನ್ನ ಪುನರವತಾರದ ಸಾರ್ಥಕತೆಯನ್ನೇ ಮಾಡಿಕೊಳ್ಳಬಹುದು. ವಸ್ತ್ರಾಪಹರಣ ಮಾಡುವ ಆದೊಂದು ಹುಚ್ಚು ಶ್ರೀಕೃಷ್ಣನಲ್ಲಿದೆ ಈ ಹುಚ್ಚನ್ನು ಕಟ್ಟಿಕೊಂಡು ಕೃಷ್ಣನಾವುದಾದರೊಂದು ನಗ್ನಾಲಯದ ಬಾಗಿಲಿಗೆ ಹೋಗಿ ಕಲಬೇಕಿದರಾಯಿತು, ಡ್ರೆಸ್ಸುಗಳನ್ನು ಕಳೆಚಿಟ್ಟ ಕೋಣೆಯ ಪಹರೆ ಕೆಲಸವೇ ಆವನಿಗೆ ದೊರೆತೀತ, ಮರಹತ್ತಿ ಅಡಗಬೇಕೆಂಬ ಪ್ರಯಾಸ ಕೂಡ ಇಲ್ಲ ಜತೆಯಲ್ಲಿ ಗೋಪಿಕಾ ಸ್ತ್ರೀಯರ ಲಜ್ಜೆಯನ್ನಪಹರಿಸಿದ ತನ್ನ ಚಾತುರ್ಯವನ್ನೂ ಕಟ್ಟಿಟ್ಟು ಸ್ವಸ್ಥ ನಿಂತುಬಿಟ್ಟರಾಯಿತು, ಸಲಾಸರಿ ಇದಿರಿಗೆ ಬಂದು ಡ್ರೆಸ್ಸು ಬೇಡುವ ಗೋಪಿಕೆಯರಿಗೆ ಮರ್ಯಾದೆಯಿಂದ ಅವನ್ನು ಹೆಕ್ಕಿಕೊಟ್ಟು ಕಣ್ಣುಜ್ಜಿಕೊಂಡು ಬಂದು ಬಿಟ್ಟರೆ ಸರಿ. ಹೀಗೆ ಜಲಕ್ರೀಡೆ ಮತ್ತು ವಸ್ತ್ರಾಪಹರಣ ಮಾಡುವುದಕ್ಕಾಗಿಯೂ ಶ್ರೀ ಕೃಷ್ಣ ಹುಟ್ಟಬೇಕು ಆಂಗ್ಲೇಯರಲ್ಲಿಯೇ

o o o

ಇನ್ನು ಕೊನೆಯದಾಗಿ ಶ್ರೀಕೃಷ್ಣನ ಸಾರಥಿತ್ವಕ್ಕೂ ಒಂದು ಅನುಕೂಲತೆಮಾಡಿಕೊಡಬೇಕಲ್ಲ "ಹೊಡಿ ನಿನ್ನ ವಿರೋಧಿಗಳಿಗೆ ಶರ, ಸಂಬಂಧಿಕರೆಂದು ಶಂಕಿಸಬೇಡ, ಹೂಡು ಬಾಣ!" ಎಂದು ಯಾವ ಅರ್ಜುನನ ಕಿವಿಯಲ್ಲಿ ಈಗ ಬಂದ ಕೃಷ್ಣ ಹೇಳಿದರಾದೀತು? ಈ ಒಂದು ಕೆಲಸವನ್ನಾದರೂ ನಮ್ಮ ಭಾರತದಲ್ಲೇ ಕೊಟ್ಟರಾಗದೆ? ಊಹೂಂ, ಅದೂ ಸಾಧ್ಯವಿಲ್ಲ ಸಂಬಂಧಿಕರೆಂದು ನೋಡದೆ ವಿರೋಧಿಗಳೆಂದು ತೋರಿದವರ ಮೇಲೆ ಬಾಣಬಿಡುವದನ್ನು ಕಲಿಸುವದಕ್ಕಾಗಿ ಇನ್ನೊಬ್ಬ ಕೃಷ್ಣಬರುವಷ್ಟು 'ಗರ್ಜು' ನಮ್ಮಲ್ಲೇನಿದೆ? ಕಣ್ಣುಮುಚ್ಚಿ ನೋಡದೆ ಒಬ್ಬರಮೇಲೊಬ್ಬರು ಬಾಣಬಿಡುವವರಲ್ಲೇ ಭಾರತೀಯ ರಥಿಕರು. ಇನ್ನು ಕೃಷ್ಣನ ಗೀತೋಪದೇಶದ ಅಗತ್ಯವೇನಿದೆ? ಅಥವಾ ಸುಭಾಸಬೋಸರಿಗೋ, ಸರ್ದಾರ ಪಟೇಲರಿಗೋ ಸಾರಥಿತ್ವ ಕೈಗೊಂಡು ಶ್ರೀಕೃಷ್ಣ ಇನ್ನಾವ ಬ್ರಹ್ಮಾಸ್ತ್ರ ಪ್ರಯೋಗಕ್ಕೆ ತ್ತೇಜನ ಕೊಡಲಿದೆ? ಶ್ರೀಕೃಷ್ಣನಿಲ್ಲದೇನೇ ಕುರುಕ್ಷೇತ್ರವಾಗಿರುವಲ್ಲಿಗ ಅವನೇಕ ಬರಬೇಕು? ಯುರೋಪಿನಲ್ಲಾದರೆ ಎರಡೆರಡು ಸಲ ದನುಸ್ಸು ಕಳೆಗಿಟ್ಟು ತಲೆಯಮೇಲೆ ಕೈಯ್ಯೇರಿಸಿ ಕುಳಿತ ಚೇಂಬರ್ಲೇನರಿದ್ದಾರೆ, ಅವರಿಗೇ ಸಾರಥಿತ್ವವನ್ನು ಕೈಗೊಳ್ಳಲಿ. ಹೋಗಿ ಚಮ್ಮಟಗೆ ಹಿಡಿದು "ನಿನ್ನ ಕೆಲಸ ನೀನು ಮಾಡು, ಶಂಕಿಸಬೇಡ, ಹೂಡು ಬಾಣ" ಎಂದು ಉಪದೇಶಿಸುವ ಅಗತ್ಯವಿರುವದು ಅಲ್ಲಿ ಕೃಷ್ಣನ ಸಾರಥಿತ್ವ ಸಫಲವಾಗಿ ರಕ್ತದೋಕುಳಿಯಾಗಬೇಕಾದರೆ ಎಬ್ಬಿಸಬೇಕು ಚೇಂಬರ್ಲೇನರನ್ನು. ಆದ್ದರಿಂದ ಈಗ ಭಗವಾನ್ ಕೃಷ್ಣ ಬಂದರೆ ಚೇಂಬರ್ಲೇನರ ಸಾರಥಿಯಾದಾನು ಹೊರತು ಯಾವನಾದರೊಬ್ಬ ಹಿಂದೀಯನ ರಥವೇರಿಯಾನೆಂಬ ಮಾತು ಸುಳ್ಳು, ಹಾಗೆ ಭಾರತೀಯನ ಸಾರಥಿಯಾಗಿ ಜಟಕಾವಾಲನೆನಿಸಿಯಾನೆಂದು ಸ್ವಪ್ನೇಪಿ ನೆನೆಸಬೇಡಿ ನಮ್ಮ ಅವತಾರ ಪುರುಷನನ್ನು.

o o o

ಅಂತು ಶ್ರೀ ಕೃಷ್ಣನು ಈಗ ಬಂದರೆ ಬರುವದು ಯುರೋಪಿಯನ್ನನಾಗಿ. ಇದ್ದರಿಂದ ನಮ್ಮ ದೇವಾಲಯಗಳ ವ್ಯಾಜ್ಯಪ್ರಕರಣಗಳ ಕುರಿತೋ, ಹರಿಜನ ಪ್ರವೇಶದ ಕುರಿತೋ, ನಾವು ಬಿಳಿಮೊಗದವರೊಡನೆ ದೂರಿಡುವದರಲ್ಲಿ ತಪ್ಪಿಲ್ಲ 'ಶ್ರೀಕೃಷ್ಣನು ಅವತಾರ ಪುರುಷ ನಿಜವೆನ್ನಿಸಬೇಕಾದರ ಈಗ ಒಂದಾಗ ಅವನಿಗೆ ಬಿಳಿಯರ ಸಂಬಂಧವೊಂದೇ ಗತಿ, ಹಾಗೆಯೇ ನಮ್ಮ ಕೃಷ್ಣ ನಮಗ ಮಾರ್ಗದರ್ಶಕನೂ ಹೌದು. ಸದ್ಯ ಸ್ಥಿತಿಯಲ್ಲಿ ಬಿಳಿಯರಾಗದ ಹೊರತು ನಮ್ಮ ಉದ್ಧಾರಕ್ಕೆ ಬೇರೆಮಾರ್ಗವಿಲ್ಲವೆಂಬುದನ್ನೂ ಅವ ತನ್ನ ಪುನರವತಾರದ ಮೂಲಕ ತೋರಿಸಿಕೊಡಬಲ್ಲನು. ಅದಕ್ಕಾಗಿಯಾದರೂ ಶ್ರೀಕೃಷ್ಣ ಈಗ ಒದಗಲೊಲ್ಲನೇಕೆ? 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂದು ಅವ ಕೊಟ್ಟಿದ್ದ ವಾಗ್ದಾನವೊಂದೆಡೆಯಲ್ಲಿದೆ, ಪೋಲೆಂಡಿನ ಸಹಾಯಕ್ಕೊದಗುವೆವೆಂದು ಚೇಂಬರ್ಲೇನ್ ಯಾನೆ ಅರ್ಜುನ ಕೊಟ್ಟ ವಾಗ್ದಾನವಿನ್ನೊಂದೆಡೆಯಲ್ಲಿದೆ, ಹೊತ್ತಿಗೆ ಸರಿಯಾಗಿ ಅಷ್ಟುಮಿ ಒಂದಿದೆ.—ಲೋರ್ಡ್ ಕೃಷ್ಣ ಬರಲೇಬೇಕಲ್ಲ! ಆಗಲಿ, ಬಂದರೆ ಬಂದವ ಇತ್ತಬಂದರೆ ನಮ್ಮ ಗುರುತ ಅವನಿಗೆ, ಅವನ ಗುರುತ ನನಗೆ ಆದೀತೆ?

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯುದೆಯಲ್ಲಿ 1-4 '39ರಂದ ಬಹಳ ವ್ಯತ್ಯಾಸಗಳಾಗಿವೆ. ಹೊಸದಾದ ವಿಕ್ರಯ ಟೇಕ್ಸಿನ ಅಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ ಕೇವಲ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೆಲವೇ ವಿಷಯಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸ್ ಕಮ್ಮಿಯಾಗುವದು ಸಂದರ್ಭವಶ್ಯಾತ ಟೇಕ್ಸ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. 'ರಿಟರ್ನ್' ತಪ್ಪಿಯಾಗಿ ಹೋಗಿದ್ದರೂ ತಪ್ಪಾಗಲಿಲ್ಲ ಟಿಪ್ಪಿ ಹಾಜರ ಮಾಡುವ 15ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ

ಎಸ್. ಎಸ್. ಪುರಾಣಿಕ,

ಮಂಜೂರಾತಿ ಹೊಂದಿದ ಇನ್ಕಮ್‌ಟೇಕ್ಸ್(ಪ್ರಾಕ್ಟೀಶನರ್) ಜ್ಯೋತಿಷಾಲಯದ ಕಟ್ಟಡ, ಕುಂದಾಪುರ ಪೋಸ್ಟ್

ಉಟ್ಲ್‌ಬಡಿಯೊ, ವಿಟ್ಲ್‌ಪಿಂಡಿಯೊ?

ಲೇಖಕರು
ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು



ಉಡುಪಿಯ ಶ್ರೀ ಕೃಷ್ಣದೇವಸ್ಥಾನ

ಶ್ರೀಕೃಷ್ಣಾಷ್ಟಮಿಯು ವಿಶೇಷತಃ ಉಡುಪಿಯಲ್ಲಿ ದೊಡ್ಡ ಹಬ್ಬ. ಕಾರಣ ಇಲ್ಲಿಯ ಅಧಿದೇವತೆ ಶ್ರೀಕೃಷ್ಣ. ಅಂದಿನ ದಿವಸ ಪೂಜೆ ಉಪವಾಸಗಳಿಂದ ಸಾಗಿದರೂ ಮರುದಿನ ಶ್ರೀಕೃಷ್ಣಮಠದಲ್ಲಿ ಜನಮನೋರಂಜನೆಯೇ ಪ್ರಧಾನವಾದ ಉತ್ಸವವಿದೆ. ಇದಕ್ಕೆ ವಿಟ್ಲಪಿಂಡಿ ಹಬ್ಬ ಎನ್ನುವರು. ಆದರೆ ವಿಟ್ಲಪಿಂಡಿ ಎಂದರೇನೆಂದು ಯಾರಿಗೂ ಗೊತ್ತಿಲ್ಲ. ಈ ಉತ್ಸವದ ಕಾರ್ಯಕಲಾಪಗಳಲ್ಲಿ ಯಾವುದನ್ನೇ ವಿಚಾರಿಸಿ ವಿಮರ್ಶಿಸಿದರೂ ಆ ಹೆಸರಿಗೆ ಕಾರಣವಾದುದೇನೂ ತೋರಿಬರುವುದಿಲ್ಲ. ಇದರ ಇಂದಿನ ವೈಶಿಷ್ಟ್ಯವೆಂದರೆ ಹುಲಿವೇಷಗಳ ಪಡೆ. ಇವು ಕೊಟ್ಟಿಗೆಯ ದನವನ್ನು ಮುಟ್ಟುವುದಿಲ್ಲವಾದರೂ ಪೆಟ್ಟಿಗೆಯ ಧನವನ್ನೊಯ್ಯುತ್ತಿವೆ. ಮಾತ್ರವಲ್ಲ ಇವಕ್ಕೆ ಈ ಉತ್ಸವದಲ್ಲಿ ಸ್ಥಾನವಿಲ್ಲ. ಏಕೆಂದರೆ ಉತ್ಸವದ ಮೂಲೋದ್ದೇಶವು ವಿಶೇಷತಃ ಶ್ರೀಕೃಷ್ಣ ಮತ್ತು ಗೋವಳರ ಹಾಗೂ ನಾಡಾಡಿಗಳ ಆಟಗಳ ನಟನೆಗಳಿಂದ ಜನಮನೋರಂಜನೆಗೊಳಿಸುವುದಾಗಿದ್ದಿರಬೇಕೆಂದು ಇಂದಿಗೂ ಉಳಿಯದುಳಿದಿರುವ ಅದರ ಕೆಲವು ಲಕ್ಷಣಗಳಿಂದ ದೃಢವಾಗಿ ಹೇಳಬಹುದು. ಶ್ರೀಕೃಷ್ಣನಾಗಲಿ ಗೋವಳರಾಗಲಿ ನಾಡ ಹುಲಿಗಳಾಗಿ ಕುಣಿದ ಅಥವಾ ಅವರ ದನಗಳಿಗೆ ಕಾಡ ಹುಲಿಗಳು ಕಾಟಕೊಟ್ಟ ವಿಷಯವನ್ನು ಯಾವ ಪುರಾಣಕತೆಯೂ ಹೇಳಿಲ್ಲ. ಅಂದಮೇಲೆ ಈ 'ತಟ್ಟೆರಡಣ್ಣಾಣ' ಹುಲಿಗಳು ನಮ್ಮ ಧನಕ್ಕೆ ಕಂಟಕಪ್ರಾಯವಾಗಿ ಇತ್ತೀಚೆಗೆ ಹೆಚ್ಚುಹೆಚ್ಚಾಗಿ ಈ ಉತ್ಸವದಲ್ಲಿ ನುಸುಳಿಕೊಂಡಿರಬೇಕಲ್ಲದೆ ಇವುಗಳಿಗೆ ನ್ಯಾಯವಾದ ಸ್ಥಾನವಿಲ್ಲ. ಇನ್ನು ಈ ಉತ್ಸವದಲ್ಲಿ ಕಣ್ಣಿಗೆ ಬೀಳುವ ವಿವಿಧ ವಿನೋದ ದೃಶ್ಯಾವಳಿಗಳಲ್ಲಿ ಬಗೆಬಗೆಯ ಸಗಲು ವೇಷಗಳು ಮುಖ್ಯವಾಗಿವೆ. ಅವುಗಳಲ್ಲಿ ಸಾಮಾನ್ಯ ಮಕ್ಕಳ ಮಂದಿಗೆ ಮನೋರಂಜನೆ ಮಾಡಬಹುದಾದುದಕ್ಕಿಂತ ಹೆಚ್ಚಿನ ಚಾತುರ್ಯ ಕಲಾಭಿನಯ ಕೌಶಲ್ಯಗಳೇನೂ ಇಲ್ಲ. ಬಣ್ಣ ಬಳಿದುಕೊಳ್ಳುವುದರಲ್ಲಾಗಲಿ ವೇಷಕಟ್ಟಿಕೊಳ್ಳುವುದರಲ್ಲಾಗಲಿ ಸ್ವಾಭಾವಿಕತೆಯ ಕಡೆಗೆ ಲಕ್ಷ್ಯವಿಲ್ಲ. ನಡೆನುಡಿನಟನೆಗಳಲ್ಲಂತೂ ಸಹಜತೆಯಾಗಲೀ ರಸ್ಯತೆಯಾಗಲೀ ಕಾಣಸಿಗದು. ಹೆಚ್ಚಿನವರು ನಡೆವುದು ಬಂಡು, ಅಡಿ ನಟಿಸಿ ತೋರುವುದೂ ಅದನ್ನೇ. ಮಾತುನಟನೆಗಳಲ್ಲಿ ನಿರಿನ ಮಟ್ಟದ ಜಾಣ್ಮೆಯನ್ನು ಪ್ರದರ್ಶಿಸುವಷ್ಟು ಜಂದಿಗೆಯಿಲ್ಲದವರೇ ಅಂತಹ ವೇಷಧಾರಿಗಳು. ಇವರನ್ನು ವೇಷಗಟ್ಟಿಸುವ ಪ್ರೇರೇಪಕ ಶಕ್ತಿಯು ಕಲಾಭಿಮಾನವಲ್ಲ, ಸುರಾಭಿಮಾನ. ಮಠದಿಂದ ಈ ವೇಷಗಳಿಗೆ ವಿಶೇಷ ಪ್ರೋತ್ಸಾಹವೇನೂ ದೊರಕುವುದಿಲ್ಲ. ಆದರೆ ಮನಸ್ಸಿಲ್ಲದೆ ದಾಕ್ಷಿಣ್ಯಕ್ಕೊಳಗಾಗಿ ಮಂದಿಯ ಜೇಬಿನ ಕಾಸು ಹೊರಬೀಳುತ್ತೆ. ಅಂತೂ ಕ್ಷೀರಪಾನಪ್ರೋತ್ಸಾಹಿಯಾದ ಶ್ರೀಕೃಷ್ಣನ ಹೆಸರಲ್ಲಿ ಸುರಾಪಾನಪ್ರೋತ್ಸಾಹವಾಗುತ್ತೆ. ನ್ಯೂನ ಕೀಳ್ತರದ ದುಷ್ಪರಿಣಾಮಕಾರಿಯಾದ ಮನೋರಂಜನೆಯನ್ನು ತಡೆಗಟ್ಟುವುದಕ್ಕೆ ಕಾಸು ಬಿಚ್ಚದಿರುವ ನಿರ್ಧಾರವೇ ಉತ್ಕೃಷ್ಟ ಉಪಾಯವು. ಎಲ್ಲ ವೇಷಗಳೂ ಇಂತಹವೇ ಎನ್ನಲು ಒರುವುದಿಲ್ಲ. ಬಳ್ಳ ಜಳ್ಳನ್ನು ತೂರಿದರೆ ಕಾಳೊಂದು ಸಿಗಲಾರದ? ಹಾಗೇ ಒಂದೊಂದು ಇರುತ್ತೆ. ಕಳೆದ ವರ್ಷ ಪರ್ಣಶಪಾತ್ರಿಯ ವೇಷವೊಂದಿತ್ತು. ಅದಕ್ಕೆ ಬೇಕಾದ ಹಿಮ್ಮೇಳ, ಪಾತ್ರಿಯ ವೇಷ, ಆವೇಶ, ನುಡಿಗಟ್ಟು, ಇವುಗಳಿಂದ ಹಡ್ಡನಿಗೂ ಪಾತ್ರಿಗಳೆಲ್ಲ ಬೇಗಡೆಗಳೆಂಬುದು ಮನದಟ್ಟಾಗುವಂತಿತ್ತು. ವೇಷಗಳಲ್ಲಿ ಮನೋರಂಜನೆಯೊಂದಿಗೆ ಶೈಕ್ಷಣಿಕ ಧ್ಯೇಯವಿರಬೇಕು. ಕಲಾಭಿನಯಗಳ ವೈಶಿಷ್ಟ್ಯಬೇಕು. ಅಂತಹವುಗಳು ಮಾತ್ರ ಪ್ರೋತ್ಸಾಹನೀಯ. ಉಳಿದವೆಲ್ಲ ನಿಂದನೀಯ ಹಾಗೂ ಖಂಡನೀಯ.

ಲೇಖಕರು

ಉತ್ಸವದ ವಿವಿಧ ವಿನೋದ ದೃಶ್ಯಾವಳಿಗಳ ಗುಣದೋಷಗಳ ಪರಿಶೀಲನೆಯಿಂದಲೂ ಇದಕ್ಕೆ ವಿಟ್ಲಪಿಂಡಿ ಎಂಬ ಹೆಸರೇಕೆ ಬಂತೆಂಬುದು ಹೊಳೆಯುವುದಿಲ್ಲ. ಬಹುಶಃ ಇದು ಯಾವುದೊಂದೂ ಅರ್ಥವಿಲ್ಲದ ಶಬ್ದವಾಗಿರಬೇಕೆಂದೇ ಭಾಸವಾಗುತ್ತೆ. ಉತ್ಸವದ ಮೂಲೋದ್ದೇಶವು ಮಸುಕು ಮಸುಕಾಗುತ್ತ ಬಂದ ಹಾಗೆಲ್ಲ ಕಾಲಕ್ರಮದಲ್ಲಿ ಅರ್ಥವಿಲ್ಲದ ಅಸಂಗತ ವೇಷಗಳು ಹೇಗೆ ನುಸುಳಿಕೊಂಡುಬಂದು ಅವೇ ಪ್ರಧಾನವಾಗಿ ಮೆರೆಯುತ್ತಲಿರುವವೋ ಹಾಗೆಯೇ ಈ ಉತ್ಸವದ ನಿಜವಾದ ಹೆಸರೂ ಸ್ಪಷ್ಟವಾಗದಷ್ಟು ಮಾಸಿಹೋಗಿ ವಿಟ್ಲಪಿಂಡಿ ಎಂಬುವು ಅದರ ಸ್ಥಾನಾಕ್ರಮಣ ಮಾಡಿರಬೇಕೆಂಬ ಸಂದೇಹವೇ ಪ್ರಬಲವಾಗುತ್ತೆ. ಮುಟ್ಟುಗೆಟ್ಟರೆ ಬತ್ತವಾಗಲಾರದೆಂಬಂತೆ ಉತ್ಸವವೆಷ್ಟುಗೆಟ್ಟರೂ ಅದು ಆದಿಯಲ್ಲಿ ಹೇಗಿತ್ತೆಂಬುವರ ಚಿಹ್ನೆಯು ಇಂದಿಗೂ ಮಾಸದೆ ಉಳಿದಿವೆ. ಇದರಿಂದ ಅಂದು ಈ ಉತ್ಸವದ ಹೆಸರು ಏನಿತ್ತೆಂಬುದು ವ್ಯಕ್ತವಾಗುತ್ತೆ. ಉತ್ಸವದ ಮುಖ್ಯಲಕ್ಷಣವು ತೋರಿಬರುವುದು ಉತ್ಸವಮೂರ್ತಿಯು ಹೊರಬಂದ ಮೇಲೆಯೇ. ಅಗ ಪ್ರಾಕಿನ ಕಟ್ಟುಕಟ್ಟಳೆಗಳೆಂದಿದ್ದುವೋ ಅವು ನಡೆಯುತ್ತವೆ. ಆದುದರಿಂದ ಅದಕ್ಕಿಂತ ಮುಂಚಿನ ಜನಮನೋರಂಜನೆಯ ಕಾರ್ಯಕಲಾಪಗಳನ್ನೆಲ್ಲ ಕಾಲವು ತಂದು ತುರುಕಿದುದೆಂದು ನಾವು ತಳ್ಳಿಬಿಟ್ಟು ನಮ್ಮ ಪರಿಶೀಲನೆಯನ್ನು ಉತ್ಸವ ಮೂರ್ತಿಯ ಎದುರು ನಡೆಯುವ ಆಟಗಳ ಕಡೆಗೆ ತಿರುಗಿಸಬೇಕಾಗಿದೆ. ಅಗ ಪ್ರೇಕ್ಷಕರೆಲ್ಲರ ಲಕ್ಷ್ಯವನ್ನು ಸೆಳೆಯುವ ಆಟವೆಂದರೆ ಅಟ್ಟಳಿಗೆಗಳಿಂದ ಜೋತುಬಿಡುವ ತಿಂಡಿತಿನಸುಗಳನ್ನು ಬಡಿದು ಹಿಡಿಯುವ ಹುಡುಗಾಟ. ಇವುಗಳಲ್ಲಿ ಮೊಸರಿನ ಕುಡಿಕೆಯೂ ಬರುತ್ತೆ. ಇದರಿಂದಾಗಿ ಇದಕ್ಕೆ ಮೊಸರುಹಬ್ಬ, ಮೊಸರುಕುಡಿಕೆ ಹಬ್ಬ (ತುಳುವಿನಲ್ಲಿ—ಕರರ್ಪಿ ಪರ್ಬ) ಎಂಬ ಹೆಸರು ಇಂದಿಗೂ ಹಳ್ಳಿಗಳಲ್ಲಿ ವಾಡಿಕೆಯಲ್ಲಿದೆ. ಆದರೆ ಈ ಯಾವ ಹೆಸರೂ ಕಾಲದ ಬಾಯಿಯಲ್ಲಿ ಹೇಗೆ ವಿಕಲ್ಪಗೊಂಡರೂ ವಿಟ್ಲಪಿಂಡಿಯೆಂದಾಗಲಾರದು.

ಹಿಂದಿನ ಕಾಲದಲ್ಲಿ ನಮ್ಮ ನಾಡಿನಾಟಗಳು ಎಷ್ಟೋ ಇದ್ದುವು. ಹಬ್ಬದ ವಾದ್ಯ ಊರು ಊರೇ ಅಂತಹ ಆಟಗಳಲ್ಲಿ ಕೂಡಿ ಆಡಿ ನೋಡಿ ಸಂತಸಗೊಳ್ಳುತ್ತಿತ್ತು. ಈಗ ಅವುಗಳಲ್ಲೆಷ್ಟೋ ಆಟಗಳ ಹೆಸರೂ ಉಳಿದಿಲ್ಲ. ಅಂತಹ ಆಟಗಳಲ್ಲಿ 'ಉಟ್ಲಬಡಿ' ಎಂಬುದೊಂದು. ಇದು ಆ ಕಾಲದಲ್ಲಿ ಹಬ್ಬದ ವಾದ್ಯ ದೇವಸ್ಥಾನಗಳ ಹಾಗೂ ಶ್ರೀಮಂತರ ಮನೆಗಳ ಎದುರು ನಡೆಯುತ್ತಿದ್ದ ಆಟ. ಇದರ ಲಕ್ಷಣ ಹೀಗಿದೆ. ಅಟ್ಟಳಿಗೆಯ ಮೇಲಿಂದಾಗಲೀ ಉಪ್ಪರಿಗೆಯ ಕಡಗಟ್ಟಿನಿಂದಾಗಲೀ ಹಣ್ಣು ಹಂಪಲುಗಳ ಗೊಂಚಲುಗಳನ್ನೋ ತಿಂಡಿತಿನಸುಗಳ ಮಡಿಕೆಗಳನ್ನೋ ಹಗ್ಗದಿಂದ ಜೋತುಬಿಟ್ಟು ಕುಣಿಸುತ್ತ ಸುತ್ತಾಡಿಸುವುದು; ಕೆಳಗಿಂದ ಜನರು ಅದನ್ನು ಬಡಿದು ಹಿಡಿದು

ಸ್ಥಾಪನೆ ಕೆನರಾ ಛಾಪಖಾನೆ [1920
(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)
ಹಂಪನಕಟ್ಟೆ, ಮಂಗಳೂರು.
ಇಲ್ಲಿ
ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ಶೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ
Manager,
Kanara Printing Works,
Hampankatte, **MANGALORE**

ಬಾಲಾರ್ಕ ಮಧು
ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ
ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ ಖ ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ.
ಉಡುಪಿ ಸ್ಟಾಕಿಸ್ಟರು.- ನವಭಾರತ ಬುಕ್‌ಡಿಪೋ, ಉಡುಪಿ.

ತಿನ್ನಲು ಹುರಿದು ಹಿಟ್ಟು ಮಾಡುವುದು. ಇಂದು ಉತ್ಸವ ಪೂರ್ತಿಯು ತೇರು ಬೀದಿಯ ಸುತ್ತು ಬರುವಾಗ ಅಲ್ಲಲ್ಲಿ ಅದ ರಿಂದ ನಡೆಯುವ ಆಟವು ಈ 'ಉಟ್ಲ ಬಡಿ' ಈ ಆಟವೇ ಉತ್ಸವದ ಪ್ರಧಾನ ಲಕ್ಷಣ, ಇದನ್ನು ನೋಡದೆ ಉತ್ಸವದಿಂದ ಹಿಂತಿರುಗಿದರೆ ಪುಣ್ಯವಿಲ್ಲ ಎಂಬ ಭಾವನೆಯು ಇಂದಿಗೂ ಶ್ರದ್ಧಾವಂತರಲ್ಲಿದೆ ಎಂದ ಮೇಲೆ ನೂರಾರು ವರುಷಗಳ ಹಿಂದೆ 'ಉಟ್ಲಬಡಿಯೇ ಪ್ರಧಾನ ಆಟವಾಗಿದ್ದ ಈ ನಾಡಹಬ್ಬಕ್ಕೆ 'ಉಟ್ಲಬಡಿ' ಹಬ್ಬ ಎಂಬ ಹೆಸರಿದ್ದಿರಬೇಕು 'ಉಟ್ಲ' ಎಂಬುದು ಬಹುಶಃ ತಿಂಡಿ ತಿನಿಸುಗಳನ್ನಡಗಿಸಿಟ್ಟುಕೊಳ್ಳುವ ಜಾಗವೆಂಬರ್ಥ ಪ್ರಳ್ಳ 'ಉಡಿಲು' (=ಉಡ್ಲು) ಎಂಬದರಿಂದಲೋ ಅಥವಾ ತಿನ್ನಲಿಕ್ಕಾಗಿ ಬಡಿ ಎಂಬರ್ಥದಲ್ಲಿ "ಉಣ್ಣಲು ಬಡಿ' ಉಣ್ಣ ಬಡಿ' ಊಟಲು ಬಡಿ' ಉಟ್ಲ ಬಡಿ' ಎಂದೇನೋ ಕಾಲದ ಬಾಯಲ್ಲಿ ಸಂವರ್ತನ ಹೊಂದುತ್ತ ಬಂದಿರಬೇಕು, ಈ ಆಟದಲ್ಲಿ ಬಡಿಯುವುದರೊಂದಿಗೆ ಹಿಡಿಯುವುದೂ ಮುಖ್ಯ ಲಕ್ಷಣವಾಗಿರುವುದರಿಂದ 'ಉಟ್ಲಬಡಿ'ಯು 'ಉಟ್ಲ ಪಿಡಿ' ಯಾಗಿ ಮುಂದಿಯ ಉಚ್ಚಾರದಿಂದ "ಯಿಟ್ಲ ಪಿಡಿ" "ವಿಟ್ಲ ಪಿಡಿ" ಎಂದಾದಾಗ ಬಹುಶಃ ಪಂಡಿತವರ್ಗವು ಅದೇನೋ ಸಂಸ್ಕೃತ ಶಬ್ದದ ಅಪಭ್ರಂಶವೆಂದು ಭ್ರಮಿಸಿ ಸಾಧ್ಯವಿದ್ದಷ್ಟು ಅದನ್ನು ಶುದ್ಧೀಕರಿಸುವ ಹವಣಿಕೆಯಿಂದ ಅದನ್ನು "ವಿಟ್ಲ ಪಿಂಡಿ" ಎಂದನ್ನ ತೊಡಗಿರಬೇಕು. ಅವಿಲ ಭಾರತದಲ್ಲಿ ಆಚರಣೆಯಲ್ಲಿರುವ "ಗಣೇಶ ಚತುರ್ಥಿ" "ಕೃಷ್ಣಾಷ್ಟಮಿ" ಮುಂತಾದ ಹಬ್ಬಗಳಿಗೆಲ್ಲ ಸಹಜವಾಗಿ ಸಂಸ್ಕೃತಭಾಷೆಯಲ್ಲೇ ಹೆಸರಿರುತ್ತ ಅವನ್ನೇ ಉಪಯೋಗಿಸುತ್ತಿದ್ದ ಸಂಸ್ಕೃತ ಪ್ರಿಯ ವೈದಿಕಲೋಕಕ್ಕೆ ಈ ನಾಡಹಬ್ಬದ "ಉಟ್ಲಬಡಿ' ಎಂಬತಿರುಳ್ಗನ್ನಡದ ಹೆಸರು ಮೆಚ್ಚಿಗೆಯಾಗಲಿಲ್ಲವೆಂದು ತೋರುತ್ತೆ. ಶ್ರೀಕೃಷ್ಣನಿಗೇನೋ ಸಂಬಂಧವಿರುವ ಶಬ್ದದಿಂದುತ್ಪನ್ನವಾಗಿ ಕುಲಕೆಟ್ಟ ಶಬ್ದವಾಗಿರಬೇಕೆಂದು ಅವರಿದನ್ನು ಭ್ರಮಿಸಿ ಅರ್ಥವಿಲ್ಲದಿದ್ದರೂ ಏನೋ ಅವ್ಯಕ್ತ ಭಾವನೆಯುಂಟಾಗುವಂತಹ ಸಂಸ್ಕೃತ ಶಬ್ದಧ್ವನಿ ಭಾರವನ್ನಾದರೂ ಅದು ತಳೆವಂತೆ "ಉಟ್ಲ ಪಿಡಿ"ಯನ್ನು ವಿರಲಪಿಂಡಿ (ವಿಟ್ಲಪಿಂಡಿ) ಎಂದು ಕರೆಯಲು ತೊಡಗಿರಬೇಕು. ಕಾಲಾಂತರದಲ್ಲಿ ಪಂಡಿತರಾಡುವ ಈ ನುಡಿಯೇ ಸರಿಯಾಗಿರಬೇಕೆಂದೂ ತಮ್ಮದೇನೋ ! ನಾಲಗೆ ಹೊರಳದ ಅಶಿಕ್ಷಣದಿಂದಾಗ ವಿಕಲ್ಪವಾಗಿರಬೇಕೆಂದೂ ಮಂದಿಯು ಭ್ರಮಿಸಿಕೊಂಡು ಪಂಡಿತರ "ವಿಟ್ಲಪಿಂಡಿ"ಯನ್ನೇ ತಾವೂ ಹೇಳುತ್ತ ಸುಸಂಸ್ಕೃತರೆಂದೆನ್ನಿಸಿಕೊಳ್ಳಲು ಹವಣಿಸಿದ ಪರಿಣಾಮವಾಗಿ ಅರ್ಥವಿದ್ದ "ಉಟ್ಲಬಡಿ"ಯು ಜಾರಿತು. ಅರ್ಥವಿಲ್ಲದ "ವಿಟ್ಲಪಿಂಡಿ" ನೆಲೆಯಾಯಿತು ಎಂದರೆ ತಕ್ಕಷ್ಟು ಆಧಾರ ಸಂಭಾವ್ಯಗಳಿಲ್ಲವೆನ್ನಲಾಗುವುದಿಲ್ಲ.

ಹರುಷದಿ ಹರಿದಿಹ ಹನಿಯ್ಯೆದು

ಗಗನದಿ ರಾಜಿಪ ದಿನಪತಿಯು |
ತಾರಾತಾರಕ ಉಷಾಪತಿಯು ||
ಭಾರತಗುರುವರ ಮೋಹನವೆ |
ತರುಣರ ಮನಮಣಿ ಸುಭಾಷವೇ ||

ಸಾಗರ ಮಧ್ಯದ ಇಂದಿರೆಯು |
ಸುಮವನದೊಳಗಿನ ಮಂದಿರೆಯು ||
ಅರಳುವ ಅರಳಿಯ ಅಂಕುರವೆ |
ಗರತಿಯ ನೊಸಲಿನ ಕುಂಕುಮವೆ ||

ಕನ್ನಡ ಕುವರರ ವರನಗೆಪೆ |
ಸೊಂಪಿನ ಇಂಪಿನ ಹಿರಿಮಗುವೆ ||
ಪತ್ರಿಕೆ ಕುಲಮಣಿ ವರಯುಗವೆ |
ನಮ್ಮಯ ಒಲ್ಮೆಯ ನವಯುಗವೆ ||

ಮೆರೆಯುತ ಕಳೆದೆಯ ಹದಿನೆಂಟು !
ನಲಿಯುತ ಬಾಳೈ ಇನ್ನೆಂಟು ||
ಸಾಸಿರ ವರುಷದ ಹಿರಿಗಂಟು |
ಪಡೆಯುತ ನಾಡಿನ ಹಿರಿನೆಂಟು ||

ನಿನ್ನಯ ಸವಿದಿನ ನವಕುಸುಮ |
ಕೈನ್ನಯ ಸಂಜಾಕೃತಿಯ ಸುಮ |
ನಲ್ಮೆಯ ಒಲ್ಮೆಯ ಭಾವ ಸಮ |
ಗೂಡಿದ ಪ್ರೇಮದ ನಮೋನಮ ||

ಬ್ರಹ್ಮಾನಂದ, ಪದ್ಮಸಾಲಿ

ವಿದ್ಯಾರ್ಥಿಗಳಿಗೆ

ಆನಂದದ ಬಾತಮಿ.

ಅತಿ ಅಭ್ಯಾಸ ಯಾ ಪಾಠರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ಸೇಕಡ 50 ವಿದ್ಯಾರ್ಥಿಗಳ ತಿಳಿದು ಯಾ ತಿಳಿಯದೆ ಪರೀಕ್ಷೆಯ ಕಾಲದಲ್ಲಿ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳ ವಿದ್ಯಾರ್ಥಿಗಳೂ ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ ಈ ಸರ್ವ ವಿಚಾರಗಳಿಗೆ ನಾವು ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲವನ್ನು** ಉಪಯೋಗಿಸುವದರಿಂದ ಲಕ್ಷೀಚಾನ್ಸ್ ಸಿಕ್ಕುತ್ತದೆ 6 ಯಾ 11ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡು ಕೊಂಡು ಸ್ವಲ್ಪ ತಲೆಗೆ ಹಾಕಿ ಪೇಪರಿಗೆ ಶುರುಮಾಡಿರಿ ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ ತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಿಸಿಟ್ಟುಕೊಳ್ಳಿರಿ 4 ಔನ್ಸಿನ ಸೀಸೆ 1ರ ಕ್ರಯ 0-11-0, 2 ಔನ್ಸಿನ ಸೀಸೆ 1ರ 0-6-0

ತಯಾರಿಸುವವರು – ಸ್ವದೇಶೀ ಔಷಧಿ ಭಂಡಾರ, (ರಜಿಸ್ಟರ್ಡ್) ಕುಂಜಬಲ್ಲ, ಪೋಸ್ಟ್ ಬ್ರಹ್ಮಪುರ, ದ ಭಾರತ,

ನಮ್ಮ ಸ್ಟಾಕಿಸ್ಟರು –ವಿ ಆರ್ ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆಂಟ್, ಬಟಾಟೆವಾಲಾ ಮೆನ್ಶನ್, ಲಾಲ್ ಬಾಗ್, ಮುಂಬೈ. ಜನರಲ್ ಸಪ್ಲೈಯರ್ಸ್ ಲಿಮಿಟೆಡ್, ಉಡುಪಿ, ನವಭಾರತಬುಕ್ ಡಿಪೋ, ಉಡುಪಿ, ಕೆಟಲಾಗಿಗೆ ಬರೆಯಿರಿ

(*Advt.*)

ಶ್ರೀರಂಗಂ

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

An Indispensable Aid

to build up your business is

Modern Printing

Neat, Beautiful & Fashionable,
we do it for you
at minimum cost with our latest equipments.

PRABHAKARA PRESS LTD.
UDIPI, S KANARA

ನಿಮ್ಮ ವ್ಯಾಪಾರವನ್ನು ಬೆಳೆಸಲು ಅನಿವಾರ್ಯವಾಗಿ
ನಿಮಗೆ ಬೇಕಾದ ಸಹಾಯವೆಂದರೆ

ಅತ್ಯಾಧುನಿಕ ಪ್ರಿಂಟಿಂಗ್

ಚೊಕ್ಕವಾಗಿ, ಸುಂದರವಾಗಿ ಮತ್ತು ನಾಜೂಕಾಗಿ
ನಮ್ಮ ಅತ್ಯಾಧುನಿಕ ಉಪಕರಣ ಸಿದ್ಧತೆಯಿಂದ
ಅತಿಕಡಿಮೆ ಬೆಲೆಗೆ
ನಿಮಗೆ ನಾವು ಮಾಡಿಕೊಡುವೆವು.

ಪ್ರಭಾಕರ ಪ್ರೆಸ್ ಲಿಮಿಟೆಡ್,
ಉಡುಪಿ, ದಕ್ಷಿಣ ಕನ್ನಡ

The Canara Industrial & Banking Syndicate, Ltd.

ESTD) *Head Office.* UDIPI, (1925

MEMBER:

RESERVE BANK OF INDIA
BANKERS' CLEARING HOUSE, BOMBAY

Five year cash Certificates are issued at the price of Rs 8/–, Rs 80/—, Rs 400/ and Rs 800/ – repayable on maturity at Rs 10/—, Rs 100/—, Rs. 500/— and Rs 1000/— respectively.

An investment which is liquid and yet very remunerative.

FURTHER PARTICULARS CAN BE HAD ON APPLICATION.

General Banking Business Transacted.

SAVING MONEY AND TIME

Thousands of prudent and thriving business men prefer this Bank because attention is prompt and personal To most of these busy people their time is very valuable and they cannot afford to lose a few minutes every now and then in idle waiting They have chosen the CANARA BANK because here they never need wait We make a point of giving every customer immediate and personal attention

RESOURCES OF A CRORE

ESTD 1906

CANARA BANK
LIMITED

'ಹಿಟ್ಲರನು ಲೋಕದ ಮಹತ್ತಾದ ವೈರಿ!

"ಉನ್ಮತ್ತ ಪೋಲಂಡನ್ನು ಸದೆಬಡಿದೇ ಸಿದ್ಧವೆಂದು ಹಿಟ್ಲರನ ರಣಗರ್ಜನೆ!"

ಜರ್ಮನ್ ಸೇನೆಯ ಧಾಳಿ

ಇದೇ ತಾ 1ರಲ್ಲಿ ಜರ್ಮನ್ ಸೇನೆಯು ಪೂರ್ವಕಡೆಗಳಿಂದ ಪೋಲಂಡನ ಮೇಲೆ ಧಾಳಿನಡಿಸಿದೆ. ವಾರ್ಸಾ ಮೊದಲಾದ ನಾಲ್ಕು ಪಟ್ಟಣಗಳ ಮೇಲೆ ಜರ್ಮನ್ ವಿಮಾನಪಡೆಯು ಧಾಳಿನಡಿಸಿ ಹೆಚ್ಚಿನ ಹಾವಳಿಯಾಗಿದೆ ಕೆಲವು ಜರ್ಮನ್ ವಿಮಾನಗಳು ಕೆಳಗುರುಳಿಸಲ್ಪಟ್ಟಿವೆ. ಡಾನ್ಸಿಗನ್ನು ಜರ್ಮನಿಗೆ ಸೇರಿಸಲ್ಪಟ್ಟನೆ ಇಲ್ಲಿ ಪ್ರಬಲ ಹೋರಾಟ ನಡೆದಿದೆ. ಆದರೆ ಇಷ್ಟರ ವರೆಗೆ ಜರ್ಮನರು ಹೆಚ್ಚಿನ ಜಯವೇನೂ ಪಡೆದಿಲ್ಲ. ಹಿಟ್ಲರರು, ಜನರಲ್ ಗೋರಿಂಗರನ್ನು ತನ್ನ ನಂತರದ ಸರ್ವಾಧಿಕಾರಿಯಾಗಿ ನೇಮಿಸಿದ್ದಾರೆ.

ಇಂಗ್ಲೆಂಡಿನ ಎಚ್ಚರಿಕೆ

ಪೋಲೆಂಡಿನಿಂದ ಸೇನೆಯನ್ನು ಹಿಂದೆ ಕರೆಯುವ ಆಶ್ವಾಸನೆ ಕೊಟ್ಟು ಸಂಧಾನಕ್ಕೆ ಸಿದ್ಧವಾಗದಿದ್ದರೆ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಪೋಲೆಂಡಿಗೆ ಕೊಟ್ಟಿರುವ ಮಾತಿನ ಮೇರೆಗ ನಡೆಯಬೇಕಾಗುವುದೆಂದು ಎಚ್ಚರಕೊಟ್ಟಿದ್ದಾರೆ ಜರ್ಮನಿಗೆ ಬ್ರಿಟಿಷ್ ಪ್ರಧಾನ ಮಂತ್ರಿಗಳು. ಇದಕ್ಕೆ ಹಿಟ್ಲರರು ತೃಪ್ತಿಕರ ಉತ್ತರವೀಯದಿದ್ದರೆ ಜರ್ಮನಿಯಿಂದ ತಮ್ಮ ರಾಯಭಾರಿಯನ್ನು ಕರೆದು ಯುದ್ಧಹೂಡಲಿದ್ದಾರೆ. ಬ್ರಿಟಿಷ್ ಮತ್ತು ಫ್ರೆಂಚ್, ನೆಲ, ಜಲ ಮತ್ತು ವೈಮಾನಿಕ ಸೇನೆಯು ಪಶ್ಚಿಮದಿಂದ ಜರ್ಮನಿಯ ಮೇಲೇರಿ ಹೋಗಲು ತಯಾರಾಗಿದೆ.

ಪೋಲಂಡು

ಜರ್ಮನಿಗೆ ಎಷ್ಟಕ್ಕೂ ಬಗ್ಗದೆ ಸ್ವಾಭಿಮಾನದಿಂದ ಜರ್ಮನ್ ಸೇನೆಯ ಬರ್ಬರ ಧಾಳಿಯನ್ನು ತಡಗಟ್ಟುವ ಘೋರ ನಿರ್ಧಾರದಿಂದ ಕಟಿಬದ್ಧವಾಗಿ ನಿಂತಿದೆ. ಒಮ್ಮೆಗೆ ಜರ್ಮನಿಗೆದು ಬಿಟ್ಟುಕೊಡುವ ಹಾಗಿಲ್ಲ ಪ್ರೆಸಿಡೆಂಟ್ ಮೊಸಿಸ್ಕಿಯವರು ಮಾರ್ಶಲ್ ಸ್ಮಿಗಿಯವರನ್ನು ತನ್ನ ನಂತರದ ಅಧಿಕಾರಿಯಾಗಿ ನೇಮಕಮಾಡಿದ್ದಾರೆ ಪೋಲಂಡು ಇಂಗ್ಲೆಂಡು ಮತ್ತು ಫ್ರಾನ್ಸಿನ ಸಹಾಯವನ್ನು ಬೇಡಿದ.

ಇಟೆಲಿಯ ತಾಟಸ್ಥ

ಇಟೆಲಿಯ ಸದ್ದಿಯಿಲ್ಲ ಸಂಪೂರ್ಣ ಮೌನಧಾರಣೆ ಮಾಡಿದೆ ಅದು ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸದೆ ತಾಟಸ್ಥ್ಯದಿಂದಿರುವ ಉಪಾಯವನ್ನು ಹೂಡಿದೆ ಯುದ್ಧವನ್ನು ಇಡೀ ಯುರೋಪಿನಲ್ಲಿ ವ್ಯಾಪಿಸಿದ ಜವಾಬ್ದಾರಿಯನ್ನು ಇಂಗ್ಲೆಂಡು ಮತ್ತು ಫ್ರಾನ್ಸುಗಳ ಮೇಲೆ ಹಾಕುವ ಕುಟಿಲ ನೀತಿ ಇರಬಹುದಿದು. ಜಪಾನೂ ತಾಟಸ್ಥ್ಯ ವಹಿಸಲಿದೆ ಬೆಲ್‌ಜಿಯಮ್, ಡೆನ್ಮಾರ್ಕ್, ಹೊಲ್ಲೆಂಡ್ ಸ್ವೀಡನ್ ಮೊದಲಾದ ಚಿಕ್ಕ ರಾಜ್ಯಗಳೂ ತಟಸ್ಥ ನಿಲ್ಲಲಿವೆ ರಶ್ಯವು ತಟಸ್ಥವಾಗಿದ್ದರೂ ಅದರ ರಾಜ್ಯದ ಮೇಲೆ ಯಾರಾದರೂ ಆಕ್ರಮಣ ಮಾಡಿದರೆ ಸುಮ್ಮನಿರಲಾರದೆಂದು ಎಚ್ಚರಿಸಿದೆ.

ಇಂಗ್ಲೆಂಡು ಯುದ್ಧ ಆರಂಭಿಸಿತು

ಬ್ರಿಟಿಷ್ ಪ್ರಧಾನ ಮಂತ್ರಿಗಳು ಜರ್ಮನಿಗೆ ಕೊಟ್ಟ ಎಚ್ಚರಿಕೆಯನ್ನದು ಮನ್ನಿಸದುದರಿಂದ ಇದೇ ತಾ 3ರಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಜರ್ಮನಿಯೊಡನೆ ಯುದ್ಧ ಹೂಡಿರುತ್ತವೆ.

ಮಹಾತ್ಮಾ ಗಾಂಧಿ

ಇವರನ್ನೂ ಇನ್ನೂ ಕೆಲವುಂದಿ ಹಿಂದೀ ಮುಖಂಡರನ್ನೂ ವೈಸರಾಯರು ಮಾತಾಡಲು ಕರೆದಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಬೇಗನೆ ಸೇರಲಿದೆ ಪಂಡಿತ ಜವಾಹರಲಾಲರು ಜರೂರಾಗಿ ಚೈನದಿಂದ ಹೊರಟಿದ್ದಾರೆ.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯ ನ್ಯಾಯದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ನ್ಯಾಸ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವದು.

ಅಮೃತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಝೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ ರೋಡ್, ಉಡುಪಿ

ಜೀವನದಲ್ಲಿ ವೃಥಾ ಚಿಂತೆಯಿಂದ ನರಳುವಿರೇಕೆ?
ರಕ್ತಶುದ್ಧಿಗೆ—ಧಾತುವೃದ್ಧಿಗೆ—ನರಗಳ ನಿಶ್ಶಕ್ತಿಗೆ-ದೇಹ ಪುಷ್ಟಿಗೆ ಜ್ಞಾಪಕ ಶಕ್ತಿಗೆ
ಇವುಗಳಿಗೆಲ್ಲಾ ಹಲವು ವರುಷಗಳಿಂದಲೂ ಹೆಸರು ಹೊಂದಿದ ಮತ್ತು ಅತ್ಯುತ್ಕೃಷ್ಟವಾದ ಶಕ್ತಿವರ್ಧಕ ಔಷಧಿಯೆಂದರೆ
ಶಕ್ತಿಜೀವನ ಆಯುರ್ವೇದಿಕ್ ಫಾರ್ಮಸಿಯವರ
ಸುವರ್ಣ ಮಿಶ್ರಿತ

ಅಶ್ವಗಂಧಸುಧಾ (ರಜಿಸ್ಟರ್ಡ್)

ಇದನ್ನು ಉಪಯೋಗಿಸಿ ಆರೋಗ್ಯ, ಶಕ್ತಿ ಮತ್ತು ನವಚೈತನ್ಯವನ್ನು ಹೊಂದಿ ಸುಖಿ ಪಡೆಯಿರಿ

ಬಾಟ್ಲು 1ಕ್ಕೆ ರೂ 3-8-0, ½ ಬಾಟ್ಲು ರೂ. 1-11-0, ¼ ಬಾಟ್ಲು ರೂ 1-0-0.
ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು ಮಾಹಿತಿ ಬಗ್ಗೆ ಬರೆಯಿರಿ—

Sole Agents for —

BOMBAY PRESIDENCY - Messrs SHENAI BROS, Bassein Road, B.B & C I Rly. BOMBAY.

MADRAS PRESIDENCY - T. V. A KINI & Co, Pr. Amruta Kala Press Hospital Road UDIPI

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ನೋವು, ಉರಿಯುವುದು, ಶಬ್ದವೇಳುವುದು, ಗುಂಯಗುಡುವುದು, ಕುರು ಅಥವಾ ಪೊಳವೇಳುವುದು, ಕರ್ಣದ ಹರದ ರೋಗ, ಶೀತ ಅಥವಾ ಜ್ವರದ ನಿಮಿತ್ತ ಕಿವಿಯು ಕೆಡುಕೊಂಡ ಕಾರಣವಾಗಿ ಉಂಟಾದ ಬಧಿರತೆ ಯಾ ಸಂಪೂರ್ಣ ಕಿವುಡುತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಹಳೆಯ ಕಿವುಡತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವದರಿಂದ ಖಾತ್ರಿಗ ಗುಣಹೊಂದುವದು ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ ಗುಣಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ.—

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

Look sharp! Just arrived! Golden opportunity
Bright articles! Small profits & large sale

STOCKISTS of Hand-loom sarees of last colours & upto date designers Benares, Conjeevaram, Bangalore, Madhura, Pullampet, Hubli Sarees, Coatings, Suitings, Dothies, Bath towels, Hats & all sorts of travelling requsits etc. etc

Quality & Price: To suit young & old rich & poor.

WHY NOT THEN VISIT OUR SHOW ROOM
WHEN OPPORTUNITY ARRISES OF PASSING
TROUGH HAMPANKATTA.

THE
CITY CLOTH STORES

Thankyou! KANARA PRESS BUILDINGS,
HAMPANKATTA, MANGALORE.

ಮುಂದಿನ ಹಿಂದಿ:

ಮಹಾತ್ಮಾ ಗಾಂಧಿ, ಪಂಡಿತ ಜವ
ಜಯಪ್ರಕಾಶ ನಾರಾಯಣ, ಎ
ಹಿಂದೀ ನಾಯಕನಾರಾಗಬ
ಸೂಕ್ಷ್ಮವಾಗಿ

ಮಹಾತ್ಮಾ ಗಾಂಧಿಯವರು ಹಿಂದೆ ಸರಿಯುವರೇ?

'ಒಂದೇ ವರ್ಷದೊಳಗೆ ಸ್ವರಾಜ್ಯ'ವೆಂಬ ಉದ್ಘೋಷದಿಂದ 1921ರಲ್ಲಿ ಅಸಹಕಾರ ಚಳವಳವನ್ನಾರಂಭಿಸಿ ಗಾಂಧಿಜಿಯವರು ಪ್ರಚಂಡ ಜನಜಾಗ್ರತಿಯನ್ನುಂಟುಮಾಡಿದ್ದರು. ಗತಪ್ರಜ್ಞರಾಗಿದ್ದ ಹಿಂದೂದೇಶವನ್ನು ತೊಡೆತಟ್ಟಿಸಿ ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿದರವರು. ಅಂದಿನಿಂದ ಕಾಂಗ್ರೆಸು ಅವರ ನಾಯಕತ್ವದಲ್ಲಿ ಅಹಿಂಸಾತ್ಮಕ ಶಾಂತಿ ಸಮರವನ್ನು ಹಲವು ಸಲ ಹೂಡಿ ಪ್ರಭಾವಪಡೆದು ಲೋಕದಲ್ಲೆಲ್ಲ ತನ್ನ ವರ್ಚಸ್ಸನ್ನು ಬೀರಿರುತ್ತದೆ. ಈಗ ಸುಮಾರು 20 ವರ್ಷಗಳುದ್ದವು ಗಾಂಧಿಜಿಯವರ ಕೈಕೆಳಗೆ ಕಾಂಗ್ರೆಸು ಮುನ್ನಡೆದಿತ್ತು. ಗಾಂಧಿಜಿಯವರಿಗೂ 70 ವರ್ಷ ಸಮೀಪಿಸುತ್ತಾ ಬಂತು. ಮುದುಕರಾದರವರು. ಆದರೆ ಹಿಂದುದೇಶವು ಇನ್ನೂ ಸಂಪೂರ್ಣ ಸ್ವರಾಜ್ಯದ ತಿರುಳನ್ನಾದರೂ ಪಡೆದಿಲ್ಲ. ಇಂದೀಗ 9 ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜ್ಯಭಾರ ಮಾಡುತ್ತಿದ್ದಾರೆ. ಗಾಂಧಿಜಿಯವರ ಪ್ರೇರಣೆ ಮೇರೆಗೆ ಮದ್ಯಪಾನ ನಿಷೇಧ, ಹರಿಜನೋದ್ಧಾರವೇ ಮೊದಲಾದ ಕಾರ್ಯಕ್ರಮಗಳನ್ನವರು ಮುಂದೊತ್ತುತ್ತಿದ್ದಾರೆ. ಹಲವು ವರ್ಷಗಳ ಕಾರ್ಯಕ್ರಮವನ್ನು ಹಾಕಿಕೊಂಡು ಸುಗಮವಾಗಿ ಆಡಳಿತ ರಥವನ್ನು ನಡೆಸುತ್ತಿದ್ದಾರೆ. ಆದರೆ, "ಸ್ವರಾಜ್ಯವೆಲ್ಲಿ ಸ್ವರಾಜ್ಯವೆಲ್ಲಿ?" ಎಂಬ ಕೂಗು ದೇಶದ ಅಸಹಿಷ್ಣು ತರುಣ ಹೃದಯದಲ್ಲಿ ಧ್ವನಿಸಿ ಬಂಡಾಯಕ್ಕವರನ್ನು ಎಂದೂಡುತ್ತಿದೆ. ಅಹಿಂಸೆ, ಖಾದಿ, ಹರಿಜನೋದ್ಧಾರ, ಮದ್ಯಪಾನ ನಿಷೇಧ, ಹಿಂದೂ ಮುಸಲ್ಮಾನ ಐಕ್ಯವೆಂಬ ಗಾಂಧಿಜಿಯವರ ಪಲ್ಲವಿಯು ಅವರ ಹೃದಯವನ್ನು ತೃಪ್ತಿಪಡಿಸುವ ಹಾಗಿಲ್ಲ. ಅದು ಶುಷ್ಕವಾಗಿ ತೋರುತ್ತಿದೆ ಅವರಿಗೀಗ. ಅಹಿಂಸೆ ಅಹಿಂಸೆಯೆಂದು ಕೇವಲ ಗಾಂಧಿಯವರ ಆದರ್ಶವಾದಕ್ಕೆ ಕಟ್ಟುಬಿದ್ದು ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಖಾದಿ, ಹರಿಜನೋದ್ಧಾರ, ಮದ್ಯಪಾನ ನಿಷೇಧಗಳಿಂದ ರಾಜ್ಯ ಸಮರಕ್ಕೆ ಜನರು ಸಿದ್ಧರಾಗುವ ಹಾಗಿಲ್ಲ. ಏನಾದರೂ ಹೊಸ ಕಾರ್ಯಕ್ರಮ ಕೈಕೊಳ್ಳಬೇಕು. ಹೊಸ ನಾಯಕತ್ವ ಬೇಕು. ಪ್ರಚಂಡ ಸಾಮುದಾಯಿಕ ಚಳವಳ ಹೂಡಿ ಬೇಗನೆ ಸ್ವರಾಜ್ಯವನ್ನು ಸಾಧಿಸಬೇಕೆಂಬ ಕೂಗು ನಾಲ್ದೆಸೆಗಳಿಂದಲೂ ಕೇಳಬರುತ್ತದೆ. ಕಾಂಗ್ರೆಸು ಇಂದು ಹಿಂದಿನ ತನ್ನ ಕ್ರಾಂತಿಯ ಹೆದ್ದಾರಿ ಬಿಟ್ಟು ಸುಧಾರಣೆಯ ಕಿರುದಾರಿ ಹಿಡಿದಿದೆ. ಇನ್ನೊಂದು ಹೋರಾಟವಿಲ್ಲದೆ ಅಹಿಂಸಾತ್ಮಕವಾಗಿ ಶಾಂತಿಪರವಾಗಿ ಅಧಿಕಾರವನ್ನು ಪಡೆಯುವ ಆಸೆಯುಳ್ಳದಾಗಿದೆಯೆಂಬ ದೂರು ಕೇಳಬರುತ್ತಿದೆ. ಇದಕ್ಕೆ ಗಾಂಧಿಜಿಯವರು ಉತ್ತರ ಕೊಡದಂತಾಗಿದ್ದಾರೆ. ಕಾಂಗ್ರೆಸಿನೊಳಗೆ ಬೆಳೆದು ಬರುತ್ತಿರುವ ಅತೃಪ್ತಿಯನ್ನವರಿಗೆ ತಡೆಗಟ್ಟಲು ಅಸಾಧ್ಯವಾಗಿದೆ. ಈಗ ಕಾಂಗ್ರೆಸಿನಲ್ಲಿ ಹಲವರಿಗೆ ಅಹಿಂಸೆ, ಖಾದಿ ಮೊದಲಾದ ಕಾರ್ಯಕ್ರಮದಲ್ಲಿ ವಿಶ್ವಾಸವಿಲ್ಲೆಂಬುದನ್ನು ಬಲ್ಲರವರು. ಅವರಿಗೆ ಸ್ವರಾಜ್ಯಕ್ಕಿಂತ ಅಹಿಂಸಾವಾದವೇ ಪ್ರಾಮುಖ್ಯ. ಒಮ್ಮೆ ಹಿಂಸೆಯಿಂದ ಸ್ವರಾಜ್ಯವನ್ನು ಸಾಧಿಸಲು ಸಾಧ್ಯವಾದರೂ ಬೇಡವಾಗಿದೆ



ಮಹಾತ್ಮಾ ಗಾಂಧಿಯವರು

ಅದವರಿಗೆ. ರಕ್ತಪಾತವೆಂದರೆ ಅಸಹನೀಯವಿದೆ ಅವರಿಗೆ. ಅಹಿಂಸಾವತಾರಿಯವರು. ಅವರ ಈ ಆದರ್ಶದ ಮಟ್ಟದಿಂದ ಕಾಂಗ್ರೆಸು ಈಗ ಬಹಳವಾಗಿ ಕೆಳಗೆ ಬಿದ್ದಿರುವುದರಿಂದಲೇ ಅವರೀಗ ಅದರ ನಾಲ್ಕಾಣೆ ಮೆಂಬರರೂ ಕೂಡಾ ಆಗಿರುವುದಿಲ್ಲ. ತನ್ನ ನಾಯಕತ್ವವನ್ನು ನಿರಾಕರಿಸಿಬಿಡಿ, ತನ್ನ ಕಾರ್ಯಕ್ರಮದಂತೆ ನಡೆಯಬೇಡಿ, ಹೊಸ ನಾಯಕತ್ವ ಹೊಸ ಕಾರ್ಯಕ್ರಮವನ್ನು ರಚಿಸಿಕೊಳ್ಳಿರೆಂದು ಗಾಂಧಿಯವರೇ ಸಾರಿ ಹೇಳುತ್ತಿದ್ದಾರೆ. ಅವರ ಈ ಆದರ್ಶವಾದವು ರಾಜಕೀಯದಲ್ಲಿ ವ್ಯವಹಾರ್ಯವಾಗುವುದೆಂದು ಹೇಳಬರುವುದಿಲ್ಲ. ಅವರು ಮಹಾತ್ಮರೇ ಹೊರತು ರಾಜಕೀಯ ನಾಯಕರಾಗಲು ಅರ್ಹರೇ ಎಂಬ ಸಂದೇಹವು ಬಲವಾಗಹತ್ತಿದೆ. ರಾಜಕೋಟೆಯ ಪ್ರಕರಣವು ಅವರ ಪ್ರತಿಷ್ಠೆಯನ್ನು ಬಹಳವಾಗಿ ತಗ್ಗಿಸಿಬಿಟ್ಟಿದೆ. ಅದರ ನಂತರ ಅವರೀಗ ಎಲ್ಲಾ ದೇಶೀಯ ಸಂಸ್ಥಾನಗಳ ಸ್ವಾತಂತ್ರ್ಯ ಚಳವಳವನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಕಾಂಗ್ರೆಸು ಕೂಡಾ ಈಗ ಯಾವ ಆಂದೋಲನವನ್ನೂ ಕೈಕೊಳ್ಳುವಷ್ಟರ ಶಕ್ತಿಯನ್ನು ಪಡೆದಿಲ್ಲೆಂದು ಹೇಳಹತ್ತಿದ್ದಾರೆ. ಅವರ ಪಟ್ಟಶಿಷ್ಯರಿಗೇನೇ ಅವರ ತತ್ವಗಳಿಗನುಗುಣವಾಗಿ ನಡೆಯಲು ಅಸಾಧ್ಯವಾಗಿದೆ. ಕಾಂಗ್ರೆಸ್ ಮಂತ್ರಿಗಳ 144 ಸೆಕ್ಷನ್ನು ಜ್ಯಾರಿ, ಮಜೂರ ಮತ್ತು ಕೃಷಿಕ ಚಳವಳಿಗಾರರ ದಸ್ತಗಿರಿ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟಿನ ಉಪಯೋಗವೇ ಮೊದಲಾದವುಗಳು ಕಾಂಗ್ರೆಸಿನೊಳಗಣ ತೀವ್ರಗಾಮಿಗಳಲ್ಲಿ ತೀವ್ರ ಸಂತಾಪವನ್ನುಂಟುಮಾಡಿವೆ. "ಇಲ್ಲವಾದರೆ ರಾಜ್ಯಭಾರ ನಡೆಸುವುದು ಅಸಾಧ್ಯವಾಗುವುದು" ಎಂದು ಗಾಂಧಿಜಿಯವರೇ ಪ್ರತಿಪಾದಿಸಹತ್ತಿದ್ದಾರೆ ಕಾಂಗ್ರೆಸ್ ಮಂತ್ರಿಗಳ ದಬ್ಬಾಳಿಕೆಯನ್ನು. "ಯಾವ ರಾಜ್ಯಭಾರ ನಡೆಸುವುದು? ಆಡಳಿತ ನಡೆಸಲಿಕ್ಕೆ ಕಾಂಗ್ರೆಸು ಅಧಿಕಾರ ಸ್ವೀಕರಿಸಿರುವುದೇ? ಅಥವಾ ಮುರಿದು ಹಾಕಲಿಕ್ಕಾಗಿಯೇ?" ಎಂದು ಉದ್ವೇಗಗೊಂಡು ಪ್ರಶ್ನಿಸಹತ್ತಿದ್ದಾರೆ ತೀವ್ರಗಾಮಿಗಳು.

ದೇವರಿಗಿಂತಲೂ ಪೂಜಾರಿಗಳು ಜೋರಾಗಿದ್ದಾರೆ. ಇಲ್ಲವಾದರೆ ಗಾಂಧಿಜಿಯವರು ಇಷ್ಟರಲ್ಲೇ ರಾಜಕೀಯದಿಂದ ಸರಿದು ನಿಂತು ಅವರ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವುದರಲ್ಲಿ ನಿರತರಾಗುತ್ತಿದ್ದರು. ಆದರೆ ಗಾಂಧಿವಾದಿಗಳು ಮಹಾತ್ಮರನ್ನು ದೇವರನ್ನಾಗಿ ಮಾಡಿಕೊಂಡು ತಾವು ಪೂಜಾರಿಗಳಾಗಿ, ಗಾಂಧಿತ್ವದಿಂದಲೇ ದೇಶದ ರಕ್ಷಣೆ, ಸ್ವರಾಜ್ಯಸಾಧನೆಯೆಂದು ಛಲಹಿಡಿದು ಕಾಂಗ್ರೆಸ್ ಕಮಿಟಿಗಳನ್ನು ವಶಪಡಿಸಿಕೊಂಡು ಆ ಮೂಲಕ ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲೆಳಸುತ್ತಿದ್ದಾರೆ. ತಮ್ಮ ವಿರೋಧಿಗಳನ್ನು ಕಾಂಗ್ರೆಸಿನಿಂದ ಹೊರಗಟ್ಟುವ ತಂತ್ರಹೂಡುತ್ತಿದ್ದಾರೆ. ಈ ರೈಟಿಸ್ಟರು ಕಾಂಗ್ರೆಸಿನೊಳಗಣ ಮಂದಗಾಮಿಗಳಾಗಿದ್ದಾರೆ ಈಗ. ಅವರು ಇದೇ ರೀತಿ ನಡೆದಲ್ಲಿ ಒಂದಲ್ಲೊಂದು ದಿನ ತೀವ್ರಗಾಮಿಗಳು ಅವರನ್ನು ಕಾಂಗ್ರೆಸಿನಿಂದ ಹೊರಹಾಕುವುದು ನಿಶ್ಚಯ. ಆಗ ಗಾಂಧಿತ್ವವೂ ಕಾಂಗ್ರೆಸಿನಿಂದ ಹೊರಹಾಕಲ್ಪಟ್ಟು ಅದೊಂದು ಧರ್ಮವಾಗಿ ಸ್ಥಾಪಿಸಲ್ಪಡುವ ಸಂಭವ ತೋರುತ್ತದೆ. ರಾಜಕೀಯದಲ್ಲಿ ಅದರ ಪ್ರಭಾವವಿನ್ನು ಇಳಿಮುಖವಾಗಿದೆಯೆನ್ನಬಹುದು. ರಾಜಕೀಯವು ಯುಕ್ತಿಪ್ರಯುಕ್ತಿಗಳ ಚದುರಂಗದಾಟ. ಅದನ್ನು ಧಾರ್ಮಿಕವಾಗಿಯೂ ನೀತಿಯುಕ್ತವಾಗಿಯೂ ಮಾಡಲೆಳಸಿದರೆ ಜಯಶೀಲವಾಗುವುದಾದರೂ ಹೇಗೆ? ಇನ್ನು ಗಾಂಧಿ ಅವತಾರ ಮುಗಿಯಿತೆನ್ನಬಹುದು. ಇನ್ನೊಂದು ಅವತಾರ ಈಗ ಬೇಕಾಗಿದೆ ಹಿಂದೂದೇಶಕ್ಕೆ ಎಂದು ಕೆಲವರ ಅಭಿಮತ.

ಪಂಡಿತ ಜವಾಹರಲಾಲರ ತ್ರಿಶಂಕು ಅವಸ್ಥೆ

ಗಾಂಧಿಯವರ ನಂತರ ಮುಂದಿನ ನಾಯಕರು ಪಂಡಿತ ಜವಾಹರಲಾಲರೆಂದು ಇತ್ತಲಾಗಿನ ವರೆಗೆ ನಿಶ್ಚಯವಾಗಿದ್ದಿತು. ಅವರೇ ದೇಶದ ತರುಣ ಹೃದಯವೇದಿಕೆಯ ಪ್ರತಿಷ್ಠಿತ ಮೂರ್ತಿಯಾಗಿದ್ದರು. ಇತ್ತ ಗಾಂಧಿವಾದಿಗಳನ್ನೂ ಅತ್ತ ಸಮತಾವಾದಿಗಳನ್ನು ಒಂದುಗೂಡಿಸಿ ಕಾಂಗ್ರೆಸಿನೊಳಗೆ ಇಷ್ಟರವರೆಗೆ ಇಕ್ಕಟ್ಟುಂಟಾಗದಂತೆ ಮಾಡಿರುವರವರು. ಅವರ ನಾಯಕತ್ವದಲ್ಲಿ ಇತ್ತೀಚಿನ ವರೆಗೆ ಗಾಂಧಿವಾದಿಗಳು ಕೆಲವರಿಗೇನೇ ಅವಿಶ್ವಾಸವಿದ್ದಿತು. ಸಮತಾವಾದಿಗಳಿಗೆ ಪೂರ್ಣ ವಿಶ್ವಾಸವಿತ್ತು. ಈಗ ಪರಿಸ್ಥಿತಿಯು ಸಂಪೂರ್ಣ ಮಾರ್ಪಟ್ಟಿದೆ. ಅವರು, ಅಲಹಾಬಾದಿನ ಹುಲಿ ವಾರ್ಧದ ಇಲಿ ಎಂದು ಟೀಕಿಸಹತ್ತಿದ್ದಾರೆ ಕೆಲ ಮಂದಿ ಸಮತಾವಾದಿಗಳು. ದಂಡಿಯಲ್ಲಿ ಕುಳಿತು ಗಾಂಧಿಯವರ ನಂತರ ಹಿಂದೀ ಮುಖಂಡತ್ವದ ಆಕಾಂಕ್ಷೆಯುಳ್ಳವರಾಗಿದ್ದಾರೆನ್ನುತ್ತಾರೆ ಇನ್ನು ಕೆಲವರು. ಈಗ ಪಂಡಿತರು ಗಾಂಧಿವಾದಿಗಳ ಬಲಗೈಯಾಗಿ ಹೋಗಿರುತ್ತಾರೆ. ಅವರಲ್ಲದೆ ವರ್ಕಿಂಗ್ ಕಮಿಟಿ ಸಭೆಯು ನಡೆಯುವ ಹಾಗಿಲ್ಲ. ಚೈನಕ್ಕೆ ಹೋಗಿರುವ ಅವರಿಗೆ ಜರೂರಿನ ಕರೆ ಹೋಗಿದೆ ಬರುವ ವರ್ಕಿಂಗ್ ಕಮಿಟಿ ಸಭೆಗೆ ಬರಬೇಕೆಂದು. ಶ್ರೀ ಸುಭಾಷಚಂದ್ರರ ಮೇಲಿನ ಶಿಸ್ತು ಜ್ಯಾರಿಯ ಮೇಲಂತೂ "ಜವಾಹರಲಾಲರ ಧೋರಣೆಯೇನು? ಅವರು ಸಂಪೂರ್ಣವಾಗಿ ಗಾಂಧಿವಾದಿಗಳ ಕಡೆಗೆ ಸೇರಿಬಿಟ್ಟರೇ?" ಎಂಬ ಸಂದೇಹವು ಹಲವರಲ್ಲುಂಟಾಗಿದೆ.

ಆದರೆ ಪಂಡಿತರ ಹೃದಯವು ಬಹಳ ಕಳವಳಗೊಂಡಿದೆ. ಕಳೆದ 20 ವರ್ಷಗಳಿಂದ ಸಾವಿರಾರು ಮಂದಿ ಹಿಂದೀಯರ ಶ್ರಮ ಮತ್ತು ತ್ಯಾಗದ ಮುಡಿಪಿನಿಂದ ಕಟ್ಟಲ್ಪಟ್ಟ ಕಾಂಗ್ರೆಸು ಒಡೆದುಹೋಗುವ ಕಾಲ ಬಂದಿರುವುದೇ ಎಂದು ಬಹಳ ಸಂತಪ್ತರಾಗಿದ್ದಾರೆ ಅವರು. ತಾನೇನು ಮಾಡುವುದೆಂಬುದು ತಿಳಿಯದೆ ಮೌನರಾಗಿದ್ದಾರೆ. ಅವರ ರಾಜಿಯ ಪ್ರಯತ್ನ ನಿಷ್ಫಲವಾಗಿದೆ. ನಿರಾಶೆಯಿಂದ ತುಂಬಿದೆ ಅವರ ಹೃದಯ. ಹಿಂದೂದೇಶದ ವಾತಾವರಣವು ನಿರುತ್ಸಾಹಜನಕವಾಗಿದೆ ಅವರಿಗೆ. ಆದುದರಿಂದಲೇ

ಸುಭಾಷಚಂದ್ರ ಬೋಸ್

ಅವರು ಅದನ್ನು ಬಿಟ್ಟು ಹೊರಗೋಡುವ ಆತುರವುಳ್ಳವರಾಗಿದ್ದಾರೆ.

ಪಂಡಿತ ಜವಾಹರಲಾಲರಿಗೆ ಸ್ವತಂತ್ರವಾದ ವ್ಯಕ್ತಿತ್ವವಿದೆ. ಮಹಾತ್ಮಾ ಗಾಂಧಿಯವರ ನಂತರ ದೇಶದಲ್ಲಿ ಅವರಷ್ಟು ಜನಮಾನ್ಯರಾಗಿರುವ ಮುಖಂಡರು ಇನ್ನೊಬ್ಬರಿಲ್ಲ. ಪ್ರಕೃತ ಗಾಂಧಿಜಿಯವರ ನಾಯಕತ್ವ ಮತ್ತು ಕಾರ್ಯಕ್ರಮವು ದೇಶಕ್ಕೆ ಅವಶ್ಯವೆಂಬ ವಿಶ್ವಾಸವುಳ್ಳವರವರು. ಹೊರತು ನಿಷ್ಠಾವಂತ ಗಾಂಧಿವಾದಿಯಲ್ಲ. ಉಜ್ವಲ ಸಮತಾವಾದಿ. ಅತ್ಯಾಧುನಿಕ ಅಂತರರಾಷ್ಟ್ರೀಯ ಮನೋವೃತ್ತಿ ಅವರದು. ಖಾದಿ, ಹರಿಜನೋದ್ಧಾರ, ಮದ್ಯಪಾನ ನಿಷೇಧಗಳೇ ಸರ್ವಸ್ವವೆನ್ನುವವರು ಅವರಲ್ಲ. ಇನ್ನೊಂದು ಪ್ರಚಂಡ ಸಾಮುದಾಯಿಕ ಹೋರಾಟಹೂಡದೆ ಸ್ವರಾಜ್ಯವನ್ನು ಗಳಿಸಲು ಸಾಧ್ಯವಿಲ್ಲವೆನ್ನುವವರು ಅವರು. ಅವರ ಮೇಲೆ ಅವಲಂಬಿಸಿಕೊಂಡಿದೆ ದೇಶದ ಮುಂದಿನ ಆಶೆ. ಈಗ ಸುಮ್ಮನಿದ್ದರೂ ಸಮಯಬಂದಾಗ ಮೌನವ ಮುದ್ರೆಯೊಡೆದು ಕಾಂಗ್ರೆಸಿನೊಳಗಣ ಎಡಬಲ ಪಕ್ಷಗಳೊಳಗೆ ಒಕ್ಕಟ್ಟನ್ನುಂಟುಮಾಡುವ ಶಕ್ತಿಯುಳ್ಳವರೆಂದರೆ ಪಂಡಿತ ಜವಾಹರಲಾಲರು. ದೇಶದಲ್ಲಿಯೂ ಪರದೇಶಗಳಲ್ಲಿಯೂ ಅಗ್ರಗಣ್ಯಸ್ಥಾನವೊಂದನ್ನವರು ಸಂಪಾದಿಸಿಕೊಂಡಿದ್ದಾರೆ. ಈಗ

ಕಾಂಗ್ರೆಸಿನೊಳಗಣ
ಅವರು ಹೇಗೆ ನಿ
ಸಿರುವರೋ ಹಾಗೆ
ನ್ನು ಕಠಿಣವಾಗಿ
ವಾಗಲೂ ಬಹ
ವ್ಯಕ್ತಿತ್ವ ಅವರದು
ವುಳ್ಳವರು
ಹಾಗೂ ನಿರ್ಬಂಧ
ತ್ಯಂತ ತೀಕ್ಷ್ಣ
ಮದರಿಂದ
ಕಮಿಟಿಯು ಪಂಡಿತ
ಬೇಕಾಗಬಹುದೆಂದು

ಶ್ರೀ ಸು

ಷಾ

ಉಜ್ವಲ ದೇ
ತ್ತಾ ಸೇವೆಯ ದೃಷ್ಟಿ
ಚಂದ್ರರಿಗೆ ದೇಶ
ಹೊಂದಿದೆ ಅವರು
ರ ಬಲಗೈಯಾಗು
ಯಿದ್ದಿತು ಒಮ್ಮೆ
ಆಗಿರುವ ಅವರಲ್ಲಿ
ಸಂಪೂರ್ಣವಾದ
ಯವುದಿಲ್ಲ ನಡುವೆ
ಕ್ಷ ಬಂಡಾಯಗಾ
ತೋರಿಬರುತ್ತದೆ
ಪರಿಣಾಮವಾಗಿಯೆ
ಷ್ಟು ಹೆಜ್ಜೆಗಳನ್ನಿ

ಎಂ. ಎ

ಬಂಗಾಳದ ಪ್ರಾಂತ
ಲವಟ್ಟಿಗೆ ಬಲಿಬಿದ್ದ
ಸ್ವಲ್ಪ ಮಟ್ಟಿಗೆ
ಇರುವಂತಿದೆ.

ಆದರೆ ಇಂದೀಗ
ತೆಗಳ ನಿರಂಕುಶತೆಯ
ಟಂದ ದೊಡ್ಡ ಬ
ಭೋಸರು ದೇಶದ

ನಾಯಕನಾರು?

ಗಾಲ, ಸುಭಾಸಚಂದ್ರ ಭೋಸ್, ನ್. ರೋಯ್, ಇವರಲ್ಲಿ ಮುಂದಿನ ಬ ನಮ್ಮ ಈ ಲೇಖನದಲ್ಲಿ ವೇಚಿಸಲಾಗಿದೆ.

ಪ್ರಗಾಮಿಗಳನ್ನು ಣ್ಯವಾಗಿ ಖಂಡಿ ಗಾಂದಿವಾದಿಗಳ ಅವರಿಂದ ದೂರ ಆವೇಶಪ್ರಧಾನ ುದ್ಧಾಂತಃಕರಣ ನಸ್ಸು ನಿರ್ಮಲ ುದು, ಬುದ್ಧಿಯು ್ಯಾಪಕವಾದುದು ನಾಯಕತ್ವದ ರಲಾಲರ ಮೇಲಿ ರ ನಿರೀಕ್ಷೆಯಿದ ಚಂದ್ರರ ್ಲಿ? ಾಸ, ತ್ಯಾಗ ಮು ಲ್ಲಿ ಶ್ರೀ ಸುಭಾಸ ಅಗ್ರಗಣ್ಯಸ್ಥಾನ ಡಿತ ಜವಾಹರಲಾಲ ಎಂಬ ನಿರೀಕ್ಷೆ ಇನ್ನೂ ತರುಣರೇ ರಿಪಕ್ವಬುದ್ಧಿಯು ಯಿರುವುದೆನ್ನಬ ನ ದುಡುಕು ಮ ನವು ಆಧಿಕವಾಗಿ ಾಸರಲ್ಲಿ ಇದರ ನಲು ಇಂದು ತ ುಂಬಿದ್ದಿದ್ದಾರೆ.

ಯ

ಗೂ ಅವರು ಕೆ ಂತೆಕೋರುತ್ತದೆ ರ ಲಾಲರೆಯ ೂ ಗ್ರೆಸ್ ಆಧಿವೇವ ಂರಾಗಿ ಧೈರ್ಯ ನೆಬ್ಬಿಸಿ ಶ್ರೀ ಹೃದಯವನ್ನು

ಆಕರ್ಷಿಸಿಬಿಟ್ಟಿದ್ದಾರೆ ಈ ಸಂದರ್ಭದಲ್ಲೇ ಕಾಂಗ್ರೆಸು ಹೋರಾಟಹೂಡಿ ಬ್ರಿಟಿಷ್ ಸರಕಾರವನ್ನು ಬಗ್ಗುಬಡಿಯಬೇಕು. ಕೌನ್ಸಿಲ್ ಕಾರ್ಯವನ್ನು ಬಿಟ್ಟು ಹೊರಬರಬೇಕು ಅವನ್ನೇ ಮುಂದೊತ್ತಿದರೆ ದೇಶದಲ್ಲಿ ಮಂದಗಾಮಿಮನೋವೃತ್ತಿಯು ಬೆಳೆದು ಕೊನೆಗೆ ಫೆಡರೇಶನನ್ನು ಸ್ವೀಕರಿಸುವಷ್ಟು

ಜಯಪ್ರಕಾಶ ನಾರಾಯಣ

ಅದು ಮುಂದುವರಿಯಬಹುದು ಆದ ದರಿಂದ ಕೂಡಲೆ ಸರಕಾರಕ್ಕೆ ಸಡ್ಡು ಹೊಡೆದು ಯುದ್ಧ ಹೂಡಬೇಕೆಂಬುದೇ ಶ್ರೀ ಸುಭಾಸಚಂದ್ರರ ಉದ್ದೇಶ ಇದಕ್ಕಾಗಿ ಅವರು ಫೋರ್ವರ್ಡ್ ಬ್ಲೋಕೊಂದನ್ನು ಸ್ಥಾಪಿಸಿದ್ದಾರೆ ಕಾಂಗ್ರೆಸಿನೊಳಗಣ ಎಡಪಕ್ಷಗಳನ್ನೆಲ್ಲಾ ಒಂದುಗೂಡಿಸಲೆತ್ನಿಸುತ್ತಿದ್ದಾರೆ ಶ್ರೀಭೋಸರಿಗೆ ದೇಶದ ತರುಣರು ಮತ್ತು ಕಾಂಗ್ರೆಸಿನೊಳಗಣ ತೀವ್ರಗಾಮಿಗಳು ಬೆಂಬಲವೀಯುತ್ತಿದ್ದಾರೆ. ಅವರ ಮೇಲಿನ ಪಿಸ್ತು ಜ್ಯುರಿಯು ಅವರಿಗೆ ಮತ್ತಷ್ಟು ಪ್ರಾಮುಖ್ಯತೆಯನ್ನಿತ್ತಿದೆ ಅಗ್ರಗಣ್ಯ ತೀವ್ರಗಾಮಿ ಮುಖಂಡರಾಗಿ ಶ್ರೀ ಭೋಸರು ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲೊಂದು ಸ್ಥಾನವನ್ನು ಪಡೆದೇ ಪಡೆಯುವರು ಎನಸೊಬ್ಬ ಬಂಡಾಯಗಾರನಲ್ಲ ಕಾಂಗ್ರೆಸಿನೊಳಗೆ ಹೋರಾಡುವ ಸಿಪಾಯಿ ತಾನು. ತನಗೆ ನಾಯಕತ್ವವೇನೂ ಬೇಕಾಗಿಲ್ಲ ಕಾಂಗ್ರೆಸು ಕೌನ್ಸಿಲ್ ಕಾರ್ಯಕ್ರಮ ಬಿಟ್ಟು ಈಗಲೇ ಹೋರಾಟ ಆರಂಭಿಸಿದರೆ ಗಾಂಧಿಜಿಯವರ ನಾಯಕತ್ವದಲ್ಲಿ ಕಾಂಗ್ರೆಸಿನ ದೀನ ಸೇವಕನಾಗಿ ಕೆಲಸಮಾಡಲು ಸಿದ್ಧನಿದ್ದೇನೆಂದು ಶ್ರೀ ಭೋಸರು ಸ್ಪಷ್ಟಪಡಿಸಿದ್ದಾರೆ ಧೋರಣೆ ಮತ್ತು ಕಾರ್ಯಕ್ರಮದಲ್ಲಿ ಶ್ರೀ ಭೋಸರಿಗೂ ಪಂಡಿತ ಜವಾಹರಲಾಲರಿಗೂ ಹೆಚ್ಚಿನ ಭೇದವೇನೂ ಇರುವಂತಿಲ್ಲ ಆದುದರಿಂದ ಶ್ರೀ ಭೋಸರು ಒಂದಲ್ಲೊಂದು ದಿನ ಪಂಡಿತರೊಡಗೂಡಿ ನಡೆಯುವ ಸಂಭವವೇ ತೋರುತ್ತದೆ.

ಶ್ರೀ ಜಯಪ್ರಕಾಶ ನಾರಾಯಣರು

ಕಾಂಗ್ರೆಸಿನೊಳಗೆ ಪ್ರಥಮವಾಗಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವನ್ನು ಸ್ಥಾಪಿಸಿ ಗಾಂಧಿತ್ವದ ಎದುರಾಗಿ ಬಂಡಾಯದ ಧ್ವಜವನ್ನೆತ್ತುವ ಸಾಹಸ ಮಾಡಿದವರು ಸಮತಾವಾದಿ ಧ್ಯೇಯ ಮತ್ತು ಕಾರ್ಯಕ್ರಮವನ್ನು ದೇಶದ ಮುಂದಿಟ್ಟು ಪ್ರಚಾರ ಮಾಡಿರುವ ಉಜ್ವಲ ಸಮತಾವಾದಿ; ಇವರಿಗೆ ಸಂಪೂರ್ಣವಾಗಿ ಪಂಡಿತ ಜವಾಹರಲಾಲರ ಸಹಾನುಭೂತಿ ಮತ್ತು ಸಹಾಯವಿದ್ದಿತು. ಪಂಡಿತರ ಆಶ್ರಯದಿಂದಲೇ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವು ಬೆಳೆಯಿತೆನ್ನಬಹುದು ಪಂಡಿತರು ಅಧ್ಯಕ್ಷರಾಗಿದ್ದಾಗ ಈ ಪಕ್ಷದ 3 ಮಂದಿ ಪ್ರತಿನಿಧಿಗಳು ಒಮ್ಮೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರಾಗಿದ್ದರು. ಮಜೂರ ಮತ್ತು ಕೃಷಿಕರನ್ನು ಘಟಿಸಿ ಸಾಮುದಾಯಿಕ ಚಳವಳಿಕ್ಕೆ ಕಾಂಗ್ರೆಸನ್ನು ಸಿದ್ಧಗೊಳಿಸುವುದೇ ಈ ಪಕ್ಷದ ಉದ್ದೇಶ ಶ್ರೀ ಜಯಪ್ರಕಾಶರು ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿಗಳು ಬಹಳ ಸರಳ ಹಾಗೂ ವಿಶುದ್ಧ ಹೃದಯವುಳ್ಳವರು ಗಾಂಧಿಯವರ ಮೇಲೂ ಕೆಲಮಟ್ಟಿನ ವಿಶ್ವಾಸವುಳ್ಳವರು." ರಷ್ಯದ ಸಹಾಯ ಪಡೆಯುವ ಕಮ್ಯೂನಿಸ್ಟರನ್ನೂ ಇತ್ತಲಾಗಿ ತನ್ನ ಪಕ್ಷಕ್ಕೆ ಸೇರಿಸಿಕೊಂಡಿರುವರು ಒಂದು ಕಾಲದಲ್ಲಿ ಶ್ರೀ ಜಯಪ್ರಕಾಶರು ಬೆಳಗುವ ನವತಾರೆಯಾಗಿದ್ದರು ಹಿಂದೂದೇಶದ ರಾಜಕೀಯ ಆಕಾಶದಲ್ಲಿ. ಆದರೆ ಎರಡು ದೋಣಿಗೆ ಕಾಲಿಟ್ಟ ಈ ಪಕ್ಷವು ಒಡೆದು ಹೋಗಿದೆ ತ್ರಿಪುರಿಯಲ್ಲಿ ಅದು ಸಂಪೂರ್ಣವಾಗಿ ತನ್ನ ವ್ಯಕ್ತಿತ್ವವನ್ನು ಕಳಕೊಂಡು ಪತನ ಹೊಂದಿದೆ ಈಗ ಶ್ರೀ ಜಯಪ್ರಕಾಶರು ಶ್ರೀ ಸುಭಾಸಭೋಸರೊಡನೆ ಸಂಪೂರ್ಣ ಸಹಾನುಭೂತಿಯುಳ್ಳವರಾಗಿ ಸಹಕರಿಸುತ್ತಿದ್ದಾರೆ ಇವರೂ ಮುಂದೆ ಪಂಡಿತ ಜವಾಹರಲಾಲರೊಂದಿಗೆ ಸೇರಿ ಕೆಲಸ ಮಾಡುವುದು ಅಸಂಭವನೀಯವೇನೂ ಅಲ್ಲ.

ಶ್ರೀ ಎಮ್ ಎನ್. ರೋಯಿಗಳ ನವೀನ ನಾಯಕತ್ವ

ಹಿಂದೂದೇಶದಲ್ಲಿ ಗಾಂಧಿತ್ವದ ವಿರೋಧವಾಗಿ ಸಮತಾವಾದಿ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಸ್ಥಾಪಿತವಾಗಲು ಮೂಲಪ್ರೇರೇಪಕರು ಶ್ರೀ ಎಮ್ ಎನ್ ರೋಯಿಗಳೆನ್ನಬಹುದು. ಆದರೆ ಅವರು ಜೈಲಿನಿಂದ ಹೊರಬಂದಮೇಲ ಈ ಪಕ್ಷಗಳೆಲ್ಲಾ ಅವರ ನಾಯಕತ್ವವಂತೆ ನಡೆಯಲೊಪ್ಪದೆ ಅವರನ್ನು ದೂರಮಾಡಿವೆ. ಗಾಂಧಿತ್ವಕ್ಕೆ ಸಂಪೂರ್ಣ ವಿರೋಧವೂ ಭಿನ್ನವೂ ಆದ ಕಾರ್ಯಕ್ರಮವನ್ನು ದೇಶದ ಮುಂದಿಟ್ಟಿರುವವರೆಂದರೆ ಶ್ರೀ ಎಮ್ ಎನ್ ರೋಯಿಗಳು ಒಂದಿಷ್ಟಾದರೂ ಗಾಂಧಿಯವರ ಪ್ರಭಾವಕ್ಕವರು ಒಳಗಾಗಿಲ್ಲ. ಸ್ವತಂತ್ರವೂ ವಿಶಿಷ್ಟವೂ ಆದ ವ್ಯೆಯಕ್ತಿಕತೆ ಅವರದು. ಅಂತರ್ರಾಷ್ಟ್ರೀಯ ರಾಜಕೀಯ ಆಂದೋಲನಗಳಲ್ಲಿ ಚೆನ್ನಾಗಿ ಪಳಗಿದ ಕೈ ಅವರದು. ಪಾಶ್ಚಾತ್ಯ ನಾಗರಿಕತೆ ಮತ್ತು ಸಂಸ್ಕೃತಿಯಿಂದಲೇ ಹಿಂದೂದೇಶದ ಉದ್ಧಾರವೆಂದು ಘಂಟಾಘೋಷವಾಗಿ ಸಾರುವ ನಿಶ್ಚಿತ ಮನೋನಿರ್ಧಾರವುಳ್ಳವರವರು, ಧರ್ಮವನ್ನೂ ರಾಜಕೀಯವನ್ನೂ ಬೆರೆಸಿ ಗೊಂದಲವನ್ನುಂಟುಮಾಡುವುದರಲ್ಲಿ ಅರ್ಥವಿಲ್ಲ ಕೇವಲ ಅಹಿಂಸೆಗೇನೇ ಅಂಟಿಕೊಂಡಿರುವ ಆದರ್ಶವಾದದಲ್ಲಿ ಹುರುಳಿಲ್ಲ ಕಾಂಗ್ರೆಸು ರಾಜಕೀಯ ಸಂಸ್ಥೆಯಾಗಿರುವುದರಿಂದ ಈಗ ಲೋಕದಲ್ಲೆಲ್ಲಾ ಪ್ರಧಾನವಾಗಿರುವ ಸಾಂಪತ್ತಿಕ ಪ್ರಶ್ನೆಯನ್ನೆತ್ತಿ ಹಿಡಿದು ಸ್ವಾತಂತ್ರ್ಯ ಹೋರಾಟವನ್ನದು ನಡೆಸಬೇಕು. ಗಾಂಧಿತ್ವವು ಅಪ್ರಾಗತಿಕವಾದುದು ನವಸಮಾಜ ರಚನೆಗೆ ದೊಡ್ಡ ತೊಡಕಾಗಿರುವುದದು. ಕ್ರಾಂತಿಯನ್ನು ತಡೆಗಟ್ಟಿ ಇದ್ದ ಸ್ಥಿತಿಯನ್ನೆತ್ತಿ ಹಿಡಿಯುತ್ತಿದ್ದರೆ ಗಾಂಧಿವಾದಿಗಳೆಂದು ಕಂಠೋಕ್ತವಾಗಿ ಹೇಳಿ ಬಂಡಾಯವೆಬ್ಬಿಸಿ ತನ್ನದೇ ಆದ ಕಾರ್ಯಕ್ರಮವನ್ನು ದೇಶದ ಮುಂದಿಡುವ ಸಾಹಸ ಮಾಡಿದವರೆಂದರೆ ಶ್ರೀ ಎಮ್ ಎನ್ ರೋಯಿಗಳು ಕಾಂಗ್ರೆಸಿನೊಳಗೆ ತನ್ನ ಕಾರ್ಯಕ್ರಮವನ್ನು ಮುಂದೊತ್ತಲು 'ಲೀಗ್ ಆಫ್ ರಡಿಕಲ್ ಕಾಂಗ್ರೆಸ್ ಮೆನ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಗಾಂಧಿವಾದದ ಬುಡಕ್ಕೇನೇ ಕೊಡಲಿ ಇಡಲೆತ್ನಿಸುತ್ತಿರುವರು ರಾಯಿವಾದವೆಂದು ಅವರದೊಂದು ಹೊಸ ವಾದವೇ ಹುಟ್ಟಿದೆ ಆ ಕುರಿತು ಹಲವು ಪುಸ್ತಕಗಳು ಒರೆಯು ಪ್ಪಿಟ್ಟಿವೆ ಅವರ ಇಂಡಿಪೆಂಡೆಂಟ್ ಇಂಡಿಯಾ ಪತ್ರಿಕೆಯು ನವವಿಚಾರ ಮತ್ತು ಕಾರ್ಯಕ್ರಮವನ್ನು ದೇಶದ ಮುಂದಿಡುತ್ತಿದೆ ಇವರೂ ಈಗಿನ ಕಾಂಗ್ರೆಸ್ ಹೈಕಮಾಂಡಿನ ಧೋರಣೆಗೆ ಬಹು ವಿರೋಧವಿದ್ದಾರೆ ಆದರೆ ಶ್ರೀ ಸುಭಾಸಭೋಸರಂತೆ ಪ್ರತ್ಯಕ್ಷ ವಿರೋಧಮಾಡಿ ಬಿಕ್ಕಟ್ಟುಂಟು ಮಾಡುವುದು ಅವಿವೇಕವೆಂಬ ಅಭಿಪ್ರಾಯವುಳ್ಳವರಿದ್ದಾರೆ. ಆದುದರಿಂದಲೇ ಶ್ರೀ ಭೋಸರ ಲೆಫ್ಟ್ ಕನ್‌ಸೋಲಿಡೇಶನ್ ಕಮಿಟಿಯಿಂದ ಶ್ರೀ ರೋಯಿಗಳ ಪಕ್ಷೀಯರು ಹೊರಬಂದಿದ್ದಾರೆ ಇವರಿಗೂ ಶ್ರೀ ಭೋಸರಿಗಿಂತ ಪಂಡಿತ ಜವಾಹರಲಾಲರ ಮೇಲೆ ಹೆಚ್ಚಿನ ಆದರವಿದೆ ಆದರೆ ಅವರೊಂದಿಗೇನೇ ಸೇರಿ ನಡೆಯಲು ಇವರು ಎಷ್ಟರಮಟ್ಟಿಗೆ ಸಿದ್ಧರಿರಲಾರರು. ಗಾಂಧಿತ್ವದೊಡನೆ ಯಾವ ತರದ ರಾಜಿಗೂ ಶ್ರೀ ರೋಯಿಗಳು ಸಿದ್ಧರಿಲ್ಲ ಮೂಲಭೂತವಾದ ಅಭಿಪ್ರಾಯಭೇದವಿದೆ. ಗಾಂಧಿ ಮತ್ತು ರಾಯಿವಾದಗಳೊಳಗೆ.

ಪಂಡಿತ್ ಜವಾಹರ್‌ಲಾಲರು

> ## ನವಯುಗಕೆ
>
> ದೇಶದ ಸೇವೆಯು
> ಭಾಷೆಯ ಸೇವೆಯು
> ಈಶನ ಸೇವೆಯು
> ಎಂದೆನುತ
> ಭಾಷೆಯ ಮೂಲಕ
> ದೇಶದ ಜನದಲಿ
> ಕೋಪದಿ ಜಾಗೃತಿ
> ಬೆಳೆಸುವುದು.
> ದರೆಯಲಿ ಸಾವಿರ
> ವರುಷಗಳನಕವು
> ನೆರೆಯಲಿ ಕೀರುತಿ
> ಪಡೆಯುಂಬಲಿ
> ನರವುಡಿ ಸೀಂಕನ
> ಚರಣಗಳಡಿಯಲಿ
> ಮೆರೆಯೀ ಪತ್ರಿಕೆ
> 'ನವಯುಗ' ವು.
>
> ಕೆ ರಾಮರಾಯ ಶೆಟ್ಟಿ, ಉಡುಪಿ

ವಂದನೆಗಳು

ನಮ್ಮ ವಿಶೇಷ ಸಂಚಿಕೆಗೆ ಸಾಧ್ಯವಾದಷ್ಟು ಜಾಹೀರಾತುಗಳನ್ನು ಸಂಗ್ರಹಿಸಿಕೊಟ್ಟ ಶ್ರೀಗಳಾದ ಕೆ. ಆರ್. ಶೆಟ್ಟಿ, ಯು ಕೆ. ರಂಗ, ಎನ್. ಗುಂಡ ರಾವ್, ನಾರಾಯಣ ಮೊದಲಾದವರಿಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ (ಸಂ ನ.)

ಉಡುಪಿ.

ವಾಡಿಕದಂತೆ ಇಲ್ಲಿಯ ಶ್ರೀ ಲಕ್ಷ್ಮೀವೆಂಕಟೇಶ ದೇವಾಲಯದಲ್ಲಿ ನಡೆಯ ವ ಭಜನೆ ಸಪ್ತಾಹ ಮಹೋತ್ಸವವು ಈ ವರ್ಷ ಕಾರಣಾಂತರಗಳಿಂದ ನಿಂತು ಹೋಗುವದೋ ಎಂಬ ಸಂದೇಹ ಭಕ್ತರಲ್ಲಿದ್ದುದು ದಾದರೂ ಕೊನೆಗೆ ಭಕ್ತವೃಂದದವರ ಪ್ರಯತ್ನಗಳ ನಿರ್ಧಾರದಿಂದ ಅದು ಎಂದಿಗಿಂತಲೂ ವಿಜೃಂಭಣೆಯಿಂದ ಸಾಂಗವಾಗಿ ಜರಗಿತು ಏಳು ರಾತ್ರಿ ಹೂವಿನ ಪೂಜೆಯು ಬಹಳ ವಿಜೃಂಭಣೆಯಿಂದ ನಡೆದುದೂ ಅಲ್ಲದೆ ಶ್ರೀ ವಾಸುದೇವ ಜೋಗಪ್ಪನವರ ಭಾಗದ ರಂಗಪೂಜಾ ಸೇವೆಯು ರಾತ್ರಿ ಸುಮಾರು 3000ಕ್ಕೆ ಮಿಕ್ಕಿದ ಜನಸಂದಣಿಯು ಕಿಕ್ಕಿರಿದಿದ್ದರೂ ಎಂದಿನಂತೆ ಸುವ್ಯವಸ್ಥೆಯಿಂದ ಪೂಜಾ ಕಾರ್ಯಕ್ರಮಗಳು ಜರಗಿದವೂ ಈ ವರ್ಷದ ವೈಶಿಷ್ಟ್ಯವೆನ್ನಬೇಕು ಏಳೂ ದಿನ ಅಹೋರಾತ್ರಿ ಭಜನೆ ಕಾರ್ಯಕ್ರಮದಲ್ಲಿ ಹೆಚ್ಚಿನ ಭಾಗವಹಿಸಿದ ಶ್ರೀ ಮೂಲ್ಕಿ ಸಂತ ಕೊಗ್ಗ ಕಾಮತರೇ ಮೊದಲಾದ ಸಂತವೃಂದದವರ ಮತ್ತು ಹಗಲಿರುಳು ಅವಿಶ್ರಾಂತ ಶ್ರಮದಿಂದ ಕಾರ್ಯನಿರ್ವಹಿಸಿದ ಭಜನೆ ಸಪ್ತಾಹ ವ್ಯವಸ್ಥಾಪಕರಾದ ಶ್ರೀ ಉ ವೆಂಕಟೇಶ ಭಟ್ ಮೊದಲಾದವರ ಹಾಗೂ ಮಹೋತ್ಸವದ ಏಳೂ ದಿನಗಳಲ್ಲಿ ಬಹು ಉತ್ಸಾಹದಿಂದ ಸ್ವಯಂಸೇವಕ ಕಾರ್ಯವನ್ನು ಅತ್ಯಂತ ಶಿಸ್ತಿನಿಂದಲೂ ಧೈರ್ಯದಿಂದಲೂ ನಡೆಸಿದ ಶ್ರೀ ಲಕ್ಷ್ಮೀವೆಂಕಟೇಶ ಸೇವಾದಳದವರ ಪ್ರಯತ್ನಗಳೂ ಸ್ತುತ್ಯವೇ ಸರಿ

ಸಭೆ— ತಾ 28-8 '39ರಲ್ಲಿ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಶ್ರೀ ಕೆ ವೆಂಕಟಯ್ಯ ಹೆಗ್ಡೆ ಅಧ್ಯಕ್ಷತೆಯಲ್ಲಿ ಆಳಿಯ ಸಂತಾನದ ಸಭೆಯೊಂದು ಜರಗಿ ಜಿಲ್ಲಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಲಾಯಿತು.

ವರ್ಧಂತಿ—ತಾ 31ರಲ್ಲಿ ಸಂಸ್ಕೃತ ಕಾಲೇಜಿನ ವರ್ಧಂತಿಯು ಪರ್ಯಾಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಮ ಸಾಂಗವಾಗಿ ಜರಗಿತು.

ತಿದ್ದುಪಡಿ

ತಾರೀಕು 17-6-1939ನೇ ನವಯುಗ ಸಂಚಿಕೆಯ ಪುಟ 20ರಲ್ಲಿ ಪ್ರಕಟವಾದ ಶ್ರೀ ಕಾಡಿಪಟ್ಲ ಚಂದಾವಿ ಮಾಸ್ಟರರ ಸಂಬಂಧವಾದ ಲೇಖನದಲ್ಲಿ (1ನೇ ಕಲಮಿನ 18 ಪಂಕ್ತಿಯಲ್ಲಿ) ಶಾಸ್ತ್ರರಿಂದ ಮತ್ತು ಹಿತಚಿಂತಕರಿಂದ ಎಂಬ ಬದಲಿಗೆ ಅವರ ಪುತ್ರರಿಂದ ಮತ್ತು ಹಿತಚಿಂತಕರಿಂದ ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ. ಸಂ ನ



'ಶೆಂಕ್ಸ್' ಕೋಲ್ಡ್ ಸ್ಟಾರ್ಟ್ ಕ್ರೂಡಾಯಿಲ್ ಎಂಜಿನುಗಳು
(ಇಂಗ್ಲೀಷ್ ವೆ ಿತ್) ನ

'SHANKS'

Diesel Engines
British & Best

ದಕ್ಷಿಣಕನ್ನಡದೊಳಗಿನ ಹೆಚ್ಚಿನ ಮಿಲ್ಲುಗಳಲ್ಲಿ 'ಶೆಂಕ್ಸ್' ಎಂಜಿನುಗಳಿರಲು ಕಾರಣಗಳಿವೆ.
ಸುಲಭ ರಚನೆ, ಮಿತವ್ಯಯ, ಬಾಳಿಕೆ ಇವೇ ಮೊದಲಾದ ಗುಣಗಳಿಂದಲೇ ಅವು ಜನಪ್ರೀತವಾಗಿವೆ
ಉಪಯೋಗಿಸುವವರ ಅಭಿಪ್ರಾಯವನ್ನು ಕೇಳಿರಿ! ಕ್ಯಾಟಲಾಗು ವ ಇತರ ವಾಹಿತಿಯು ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಪೆರಾಮೌಂಟ್ ಎಂಜನೀಯರಿಂಗ್ ಕೊರ್ಪೊರೇಶನ್
ಎಪೋಲೋ ಸ್ಟ್ರೀಟ್ ಫ್ರೋರ್ಟ್, ಬೊಂಬಾಯಿ.

Paramount Engineering Corp.
82 Apollo Street, Fort, Bombay.

ನವ್ಮಲ್ಲಿ ಅಕ್ಕಿ ತಯಾರಿಸ ವ ಹಲ್ಲರ್(ಹಾಗೂ ಪ್ಲೇಟುಗಳೂ)ನೀರಿನ ಪಂಪು, ಎಣ್ಣೆಯ ಗಾಣ, ಹಿಟ್ಟಿನ ಯಂತ್ರ, ಮರಕೊಯ್ಯುವ ಮೆಶಿನ್, ಗರಗಸ ಮುಂತಾದ ಯಂತ್ರಗಳೂ ಇತರ ಸಾಮಗ್ರಿಗಳೂ ಸಿಗುತ್ತವೆ

ಆಯುರ್ವೇದ ಕೀರ್ತಿವಂತರ ರತ್ನ
55 ವರ್ಷಗಳಿಂದ ಪ್ರಸಿದ್ಧವಾದ

ಶಕ್ತಿಸುಧಾಕರ ಗೂಳಿಯು

(ರಜಿಸ್ಟರ್ಡ)

ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧ ಮತ್ತು ಧಾತುವೃದ್ಧಿ ಹೊಂದುತ್ತದೆ. ಸ್ವಪ್ನದಲ್ಲಿ ಮಿತಿವಾರಿ ಸ್ತ್ರೀಸಂಗ, ಕಟ್ಟ ಉಪಯೋಗ, ಅಥವಾ ಮೂತ್ರದಲ್ಲಿ ಹೋಗುವ ಧಾತ (ರಕ್ತ) ಕೆಲವು ದಿವಸದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ, ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟಿ ಕರಿಸುತ್ತದೆ, ಕ್ಷಯರೋಗವನ್ನು ಮತ್ತು ನಪುಂಸಕತ್ವವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟು ಮಾಡುತ್ತದೆ. ಎವೆನೋವು ಎಂತಹ ಇತರ ಉಪಯೋಗದಿಂದ ವಾಯ ವಾಗುತ್ತದೆನ್ನಲು ಸಂಶಯವಿಲ್ಲ. ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿಯಬರುವದು 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1ಮಾತ್ರ.

ಭೆಟ್ಟಿಯ ಸಮಯ—ಬೆಳಗ್ಗೆ 8ರಿಂದ 12 ಗಂಟೆ ಮಧ್ಯಾಹ್ನ 2ರಿಂದ 8.

Vaidya Shasthry Kalyanji
Takar
365, Kalabadevi Road
Hanuman Lane Corner BOMBAY 2

ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಾಕರ್
565, ಕಾಲಬಾದೇವಿ ರೋಡ್,
ಹನುಮಾನಗಲ್ಲಿಯ ಬಾಂಬಾಯಿ ನಂ 2

ಗ್ರೇಂಡ್ ಆಕ್ಷನ್ ಮತ್ತು ರಿಡಕ್ಷನ್

ಸೇಲ್ ಕೂಡಾ

ಅನೇಕ ತರದ ಜವುಳಿಗಳನ್ನು ಬಹುಕಡಿಮೆ ಬೆಲೆಯಲ್ಲಿ
ರಖಂ ಮತ್ತು ಚಿಲ್ಲರೆ ವಿಕ್ರಯ
ಮತ್ತು

ಏಲಂ ಕೂಡಾ ಮಾಡಲ್ಪಡುವುದು

ಏಲಂ ಸಂಜೆ ಘಂಟೆ 5ಕ್ಕೆ ಪ್ರಾರಂಭ

ಸೇಲಂಕಾರ್—
ಎ. ವರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ
ಮಾರ್ಕೆಟು ರಸ್ತೆ, ಮಂಗಳೂರು.

ಮದ್ರಾಸು ಸರಕಾರವು 1939ನೇ ಮೇ ತಿಂಗಳಲ್ಲಿ ಪ್ರಕಟಿಸಿರುವ ಪ್ರಾಥಮಿಕ ಶಾಲಾ ಪಾಠಪಟ್ಟಿ(ಸಿಲಬಸ್)ಗೆ ಅನುಗುಣವಾಗಿ ಈಗಲೇ ನಮ್ಮಿಂದ ಪ್ರಕಟಿಸಾದ ಮತ್ತು ಪ್ರಕಟವಾಗಲಿರುವ ಪುಸ್ತಕಗಳು.

ಚರಿತ್ರೆ	3ನೇ ದರ್ಜೆ	(ಪ್ರಕಟವಾಗಿದೆ)	ಭೂಗೋಳ	6ನೇ ದರ್ಜೆ	(ಅಚ್ಚಿನಲ್ಲಿದೆ)
,,	4ನೇ ದರ್ಜೆ	(,,)	,,	7ನೇ ದರ್ಜೆ	(,,)
,,	5ನೇ ದರ್ಜೆ	(,,)	,,	8ನೇ ದರ್ಜೆ	(,,)
ಭೂಗೋಳ	4ನೇ ದರ್ಜೆ	(ಅಚ್ಚಿನಲ್ಲಿದೆ)	ಸಿವಿಕ್ಸ್	4ನೇ ದರ್ಜೆ	(,,)
,,	5ನೇ ದರ್ಜೆ	(,,)	,,	5ನೇ ದರ್ಜೆ	(,,)

ನಮ್ಮಿಂದ ಪ್ರಕಟಿತವಾದ ಇತರ ಪುಸ್ತಕಗಳು

ಭೂವಿವರಣೆ IV ಫಾರ್ಮು	0 12 0	ಆಲೀಬಾಬನ ಕಥೆ	0 2 3
ಗ್ರೇಟ್ ಬ್ರಿಟನಿನ ಚರಿತ್ರೆ IVಫಾರ್ಮು	0 10 0	ಅಲ್ಲಾವುದ್ದೀನನ ಕಥೆ	0 2 0
ಆರ್ಯಮಹೋಪಾಖ್ಯಾನ	0 6 0	ಜೋಮನದುಡಿ (ಹಾಯರ್ ಗ್ರೇಡ್ ಟ್ರೈನಿಂಗ್ ಉಪಪಠ್ಯ)	0 12 0
ಕರ್ಣನ ಕಥೆ	0 6 0		

ನಮ್ಮಲ್ಲಿ ಅತೀಕಡಿಮೆ ಬೆಲೆಗೆ ದೊರಕುವ ಚಿತ್ರಪಟ(Maps)ಗಳು:—

1	ಮದ್ರಾಸ್ ಆಧಿಪತ್ಯದ ಚಿತ್ರ ಪಟ (ಕನ್ನಡ)	38″ × 28″	3 8 0
2	ದಕ್ಷಿಣ ಕನ್ನಡ ಜಿಲ್ಲೆಯ ಚಿತ್ರ ಪಟ	36″ × 23″	3 8 0

ಇತರ ಚಿತ್ರ ಪಟಗಳೂ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಸಿಕ್ಕುತ್ತವೆ. ಇವುಗಳಲ್ಲದೆ

1 ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಪುಸ್ತಕ, ಹಾಜರಿ ರಿಜಿಸ್ಟ್ರಿ ಮೊದಲಾದ ಶಾಲಾ ಉಪಕರಣಗಳೂ ಆಫೀಸು ಉಪಯೋಗದ ಸಾಮಾನುಗಳೂ ಸದಾ ದೊರೆಯುತ್ತವೆ.

2 ಸಹಸ್ರಯೋಗ (ಕನ್ನಡ ಟೀಕು ಸಹಿತ) ವೈದ್ಯಗ್ರಂಥ ರೂ. 2 ಮಾತ್ರ.

3 ಭಾರದ್ವಾಜ ಕೃತ ಇಂಗ್ಲೀಷ್—ಕನ್ನಡ ಅರ್ಥವಿರುವ ಡಿಕ್ಷನೆರಿ ರೂ 2

ಸ್ಕೂಲ್ ಬುಕ್ ಕಂಪೆನಿ

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು, ರಥಬೀದಿ, ಮಂಗಳೂರು ದ. ಕ.

ಭಾರತದ ಕೈಗಾರಿಕೋದ್ಯಮ

ಲೇಖಕರು:
ಡಾಕ್ಟರ್ ಯಂ.
ಯನ್‌, ಸಾಹಾ,
ಎಫ್. ಆರ್ ಎಸ್.

"ಇಂದು ಜಗತ್ತು ಬಹಳ ಭಯಂಕರ ಸ್ಥಿತಿಯಲ್ಲಿ ಸಿಕ್ಕಿದೆ. ಆದುದರಿಂದ ಪ್ರತಿ ದೇಶವು ತನ್ನಲ್ಲಿರುವ ನೈಸರ್ಗಿಕ ಸಂಪತ್ತನ್ನು—ಭೌತಿಕ ಮತ್ತು ಆತ್ಮೀಯ—ಸದುಪಯೋಗಪಡಿಸಿಕೊಳ್ಳಲು ಯತ್ನಿಸಬೇಕು ಭಾರತದ ಭೂಮಿಯು ಸ್ವರ್ಣಭೂಮಿ ಬೇಕಾದಷ್ಟು ನೈಸರ್ಗಿಕ ಸಂಪತ್ತು ಇದರಲ್ಲಿ ತುಂಬಿದೆ. ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ, ಅವುಗಳನ್ನು ಅಭಿವೃದ್ಧಿಗೆ ತರಲು ವಿಶಾಲವಾದ ಕ್ಷೇತ್ರವಿದೆ. ಕೈಗಾರಿಕೆಯ ಉನ್ನತಿಯಿಂದ ಸಾವಿರಾರು ಜನರಿಗೆ ಉದ್ಯೋಗ ದೊರೆಯುವುದೊಂದೇ ಅಲ್ಲದೆ, ದೇಶವು ಆಪತ್ತಿನ ದಿವಸಗಳನ್ನು ಧೈರ್ಯದಿಂದ ಎದುರಿಸಲು ಶಕ್ತವಾಗುವುದು. ನನಗೆ ನಗರಗಳಿಗಿಂತ ಹಳ್ಳಿಗಳ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಹೆಚ್ಚು ಮನಸ್ಸಿರುವುದೇನೋ ನಿಜ ಆದರೆ ಜಗತ್ತಿನಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳ ಅಸ್ತಿತ್ವವೂ ಅನಿವಾರಣೀಯವೆಂಬುದನ್ನೂ ನಾನು ಬಲ್ಲೆನು. ಜನಾಂಗದ ಮುಂದೆ ಇದೊಂದು ದೊಡ್ಡ ಸಮಸ್ಯೆಯಾಗಿದೆ ನಮ್ಮವರು ಕೈಗಾರಿಕೆಯ ಅಭಿವೃದ್ಧಿಯ ವಿಚಾರದಲ್ಲಿ ತೀವ್ರವಾದ ಗಮನವನ್ನೀಯುವರೆಂದು ನನಗೆ ಸಂಪೂರ್ಣ ನಂಬಿಕೆ ಇದೆ"

—ರವೀಂದ್ರನಾಥ ಠಾಗೋರ್

ಯಂತ್ರಗಳ ದುಷ್ಪರಿಣಾಮಗಳನ್ನು ಮಹಾತ್ಮಾ ಗಾಂಧಿಯವರು ಚಾರ್ಲಿ ಚಾಪ್ಲಿನ್ನನಿಗೆ ಹೇಳಿದರು

1932ರಲ್ಲಿ ಮಹಾತ್ಮಾ ಗಾಂಧಿಯವರು ಲಂಡನ್ನಿನ ಚಕ್ರಗೋಷ್ಠಿಗೆ ಹೋಗಿದ್ದರು. ಆಗ ಅವರು ಸುಪ್ರಸಿದ್ಧ ಹಾಸ್ಯಗಾರನಾದ ಚಾರ್ಲಿಚಾಪ್ಲಿನ್‌ನನ್ನೂ ಭೇಟಿಯಾಗಿದ್ದರು ಮಾತು ಮಾತಾಡುತ್ತಿದ್ದಾಗ ಕಾರ್ಖಾನೆಗಳ, ಯಂತ್ರಗಳ ಮತ್ತು ಚರಕದ ಸುದ್ದಿಯೂ ಬಂದಿತು. ಗಾಂಧಿಜಿಯು ಯಂತ್ರಗಳ ದುಷ್ಪರಿಣಾಮಗಳನ್ನು ವರ್ಣಿಸುತ್ತ ಅವುಗಳಿಂದ ನಿರುದ್ಯೋಗವು ಹೇಗೆ ಹೆಚ್ಚುವುದೆಂಬುದನ್ನೂ, ಮಾನವ ಸಭ್ಯತೆಗೆ ಧಕ್ಕೆ ತಗಲುವುದೆಂಬುದನ್ನೂ ಹೇಳುತ್ತಿರುವಾಗ ಚಾರ್ಲಿ ಚಾಪ್ಲಿನ್ನನು ಹೀಗೆ ಉತ್ತರಕೊಟ್ಟನು? "ತಮ್ಮ ಮಾತುಗಳಿಂದ ತಾವು ಯಂತ್ರಗಳ ವಿರೋಧಿಗಳಲ್ಲವೆಂಬುದೂ, ಯಂತ್ರಗಳಿಂದಾಗತಕ್ಕ ಕೆಟ್ಟ ಪರಿಣಾಮಗಳ ವಿರೋಧಿಗಳು ಮಾತ್ರವೆಂಬುದೂ ತಿಳಿಯುವುದು. ಆದರೆ ನಿರುದ್ಯೋಗವಿಲ್ಲದಂತೆ ಸಮಾಜ ಮತ್ತು ಯಂತ್ರಗಳ ವ್ಯವಸ್ಥೆಯಾಗುವುದಾದರೆ, ಜನತೆಗೆ ಧಕ್ಕೆ ಬರದಂತೆ ನೋಡಿಕೊಳ್ಳುವುದಾದರೆ, ತಾವು ಇದನ್ನು ಒಪ್ಪಬಹುದಲ್ಲವೆ?" ಗಾಂಧಿಯವರು ಇದಕ್ಕೇನೂ ಉತ್ತರ ಕೊಡಲಿಲ್ಲವಂತೆ

ಈಗ ಎಲ್ಲೆಲ್ಲಿಯೂ ಪ್ರತಿಯೊಂದು ದೇಶವು ಸ್ವಯಂ ಪೂರ್ಣವಾಗುವಂತೆ ಯತ್ನ ನಡೆದಿರುವುದು ಯಾವುದಕ್ಕೇ ಆಗಲಿ ಅನ್ಯ ದೇಶದವರನ್ನು ಅವಲಂಬಿಸಬಾರದೆಂದೇ ಇಂದಿನ ಪ್ರಯತ್ನ ಮತ್ತೆ ಕೆಲವರು ಜೀವನದ ರೀತಿನೀತಿಗಳನ್ನೇ ಬದಲಾಯಿಸಿ, ಒಂದು ಸುವ್ಯವಸ್ಥಿತವಾದ ನವೀನ ಜೀವನ ಪದ್ಧತಿಯನ್ನೇ ಜಾರಿಗೆ ತರಬೇಕೆನ್ನುವರು

ಇವರಿಂದ ಯುದ್ಧದ ಭಯವುಂಟೇ ಇಲ್ಲವೇ ಎಂಬುದನ್ನು ಇಲ್ಲಿ ಚರ್ಚಿಸುವುದಿಲ್ಲ. ಪ್ರತಿ ಮನುಷ್ಯನಿಗೂ, ಪ್ರತಿ ಜನಾಂಗಕ್ಕೂ ಮೊದಲು ಬೇಕಾಗಿರುವುದು ವ್ಯಕ್ತಿ ರಕ್ಷಣೆ ಮತ್ತು ಸುಖಜೀವನ ಈಗಂತೂ ಕೈಗಾರಿಕೆಯ ಕ್ಷೇತ್ರದಲ್ಲಿ ಸರಿಯಾದ ವ್ಯವಸ್ಥೆಯಿಲ್ಲದ ಯಾವ ದೇಶವೂ ಜೀವಿಸಿರಲಾಗದೆಂಬುದು ನಿರ್ವಿವಾದವಾದ ವಿಚಾರ.

ಈ ಕಾರಣದಿಂದಲೇ, ಸಜೀವವಾಗಿರುವ ದೇಶಗಳು ತಮ್ಮ ಸಮಾಜದ ಪುನರ್ರಚನೆ ಮತ್ತು ವ್ಯವಸ್ಥೆಯಲ್ಲಿ ಮಗ್ನವಾಗಿರುವವು ರಷ್ಯವನ್ನೇ ತೆಗೆದುಕೊಳ್ಳಿ. ಇದು ಜೀವಸಹಿತ ಇರಬಯಸುತ್ತದೆ. ಆದ್ದರಿಂದಲೇ ಅದು ಕಳೆದ 20 ವರ್ಷಗಳಲ್ಲಿ ಕೈಗಾರಿಕೆಯ ಬಲೆಯನ್ನೇ ಬೀಸಿದೆ. 20 ವರ್ಷಗಳ ಮೊದಲು ರಷ್ಯ ಸಹ ಭಾರತದಂತೆಯೇ ವ್ಯವಸಾಯ ಪ್ರಧಾನವಾದ ದೇಶವಾಗಿತ್ತು ಆದರೆ ಈ ಕೈಗಾರಿಕೆಯ ಜಾಗೃತಿಯಿಂದ ಇಂದು ಅದು ಜಗತ್ತಿನ ಅತ್ಯಂತ ಸಮೃದ್ಧ ರಾಷ್ಟ್ರಗಳಲ್ಲಿ ಗಣನೆಯಾಗುತ್ತಿದೆ

ಇನ್ನು ಚೀನವನ್ನು ನೋಡಿ. ಈಗಂತೂ ಅಲ್ಲಿ ಎಲ್ಲೆಲ್ಲೂ ವಿನಾಶದ ದೃಶ್ಯಗಳೇ ಕಂಡು ಬರುತ್ತಿವೆ ಕಾರಣವೇನೆಂದರೆ 28 ವರ್ಷಗಳ ಕಾಲ ಅಲ್ಲಿ ಪ್ರಜಾ ಪ್ರಭುತ್ವವಿದ್ದು ಅದು ವ್ಯವಸಾಯ ಪ್ರಧಾನವಾಗಿಯೇ ಉಳಿಯಿತು

ಡಾ ಸನ್‌ಯಾಟ್‌ಸೇನನು ತನ್ನ ಮರಣಕ್ಕೆ ಸ್ವಲ್ಪ ಮೊದಲು 1923ರಲ್ಲಿಯೇ ಕೇವಲ ರಾಜಕೀಯ ಸ್ವಾತಂತ್ರ್ಯದಿಂದಲೇ ದೇಶವು ಸುಖವಾಗಿರಲಾರದೆಂಬುದನ್ನು ಮನಗಂಡಿದ್ದನು. ಜನಾಂಗದ ಪುನರ್ರಚನೆಯೇ ಮುಖ್ಯವಾದ ಸಾಧನವೆಂದರಿತಿದ್ದನು ತನ್ನ ಮರಣಕ್ಕೆ ಮುಂಚೆ ಅವನು ಕೊಟ್ಟ 3 ಭಾಷಣಗಳಲ್ಲಿ ತನ್ನ ಕೈಗಾರಿಕೆಯ ನೀತಿಯನ್ನು ವರ್ಣಿಸಿದ್ದನು ಕಳೆದ 15 ವರ್ಷಗಳ ಚೀನದ ರಾಜಕೀಯವನ್ನು ವಿಮರ್ಶಿಸಿದರೆ ಗೊತ್ತಾಗುವುದೇನೆಂದರೆ, ಅಲ್ಲಿನ ನಿವಾಸಿಗಳು, ಮುಖಂಡರು ವೈಯಕ್ತಿಕ ಉದ್ದೇಶಗಳನ್ನು ಬದಿಗಿಟ್ಟು ಈ ಕೆಲಸದಲ್ಲಿ ತೊಡಗಿರುತ್ತಿದ್ದಲ್ಲಿ ಇಂದು ಚೀಣವು ಜಪಾನಿನವರಿಂದಾಗುತ್ತಿರುವ ತೊಂದರೆಗೆ ಸಿಗುತ್ತಿರಲಿಲ್ಲ.

ಭಾರತದಲ್ಲಿ 2 ವರ್ಷಗಳಿಂದ "ಪ್ರಜಾಪ್ರಭುತ್ವ"ವಿದೆ ಈ ಎರಡು ವರ್ಷಗಳ ಅವಧಿಯಲ್ಲಿ ಆಗಿರುವುದನ್ನು ನೋಡಿದರೆ, ನಾವೂ ಸಹ ಚೀಣಿಯರು ಹೋದ ಮಾರ್ಗದಲ್ಲಿಯೇ ಹೋಗುತ್ತಿದ್ದೇವೆಂದು ಹೇಳಬಹುದು. ಯಾವ ಪ್ರಭುತ್ವವೇ ಆಗಲಿ, ಕಾಂಗ್ರೆಸ್ಸಿನದಾಗಲಿ, ಬೇರೆ ಆಗಲಿ, ಇದುವರೆಗೆ ಈ ಉದ್ದೇಶಸಾಧನೆಯ ಕಡೆಗೆ ಗಮನ ಕೊಟ್ಟಿರುವುದಿಲ್ಲ

ಸುಧಾರಣೆಗಳಿಗೂ, ನೂತನ ಜನಾಂಗ ರಚನೆಗೂ ಬಹಳ ವ್ಯತ್ಯಾಸವಿದೆ ಭಾರತದ ನೇ. 89ರಷ್ಟು ಜನರು ವ್ಯವಸಾಯವನ್ನು ಅವಲಂಬಿಸಿಕೊಂಡಿರುವರು ನಗರದಲ್ಲಿರುವವರು ಕೇವಲ ನೇಕಡ 11 ಯಾವ ಜನಾಂಗವೇ ಆಗಲಿ. ನೇ.50ಕ್ಕಿಂತ ಹೆಚ್ಚಾಗಿ ವ್ಯವಸಾಯವನ್ನವಲಂಬಿಸಿಕೊಂಡಿದ್ದರೆ ಅದರ ಅಸ್ತಿತ್ವವು ಗಣನೀಯವಲ್ಲವೆಂಬುದು ತಜ್ಞರ ಮತ.

ಅಲ್ಲದೆ ಇಲ್ಲಿನ ನೈಸರ್ಗಿಕ ಸಂಪತ್ತಿನಲ್ಲಿ ಕೇವಲ ನೇ. 2 ಭಾಗವು ಉಪಯೋಗಿಸಲ್ಪಡುತ್ತಿದೆಯೆಂದು ಹೇಳಲಾಗಿದೆ. ಅಲ್ಲದೆ ಮನುಷ್ಯನ ಬಲವನ್ನು ಕೇವಲ ಕೂಲಿಯ ರೂಪದಲ್ಲಿ ಮಾತ್ರ ವಿನಿಯೋಗಿಸಲಾಗುತ್ತಿದೆ. ಮುಂದರಿದ ದೇಶಗಳಲ್ಲಿ ಭಾರತಕ್ಕಿಂತ 20ರಷ್ಟು ಹೆಚ್ಚಾದ ಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿರುವರು. ಹಿಂದುಳಿದ ದೇಶವೆಂದು ಕರೆಯುವ ಮೆಕ್ಸಿಕೋದೇಶ ಸಹ ಇದಕ್ಕಿಂತ ಉತ್ತಮವಾಗಿದೆ ಇಲ್ಲಿನ ಬಡತನ ಮತ್ತು ನಿರುದ್ಯೋಗಕ್ಕೆ ಇವೇ ಕಾರಣ, ಇದರ ಕಡೆಗೆ ಗಮನ ಕೊಡದೆ ಆರ್ಥಿಕ ಪುನರ್ರಚನೆಯು ಅಸಾಧ್ಯ.

ಈಗ ಗಾಳಿಯು ಯುದ್ಧದ ಸುದ್ದಿಗಳಿಂದ ತುಂಬಿಹೋಗಿದೆ, ಯಾವಾಗ ಯುದ್ಧವಾಗುವುದೋ ಎಂಬ ಭೀತಿ ಇದ್ದೇ ಇದೆ ಒಂದು-ವೇಳೆ ಯುದ್ಧವುಂಟಾದರೆ ನಮ್ಮ ದೇಶದ ಅವಸ್ಥೆ ಏನಾಗುವುದೆಂದು ಯಾರಾದರೂ ಮುಖಂಡರು ಇದುವರೆಗೆಯೋಚಿಸಿರುವರೆ?

ಅಲಹಾಬಾದ್ ವಿಶ್ವವಿದ್ಯಾನಿಲಯದ ಪ್ರೊಫೆಸರರೊಬ್ಬರು "ಒಂದು ವೇಳೆ ಯುದ್ಧವಾದರೆ?" ಎಂಬ ಪುಸ್ತಕವನ್ನು ಬರೆದಿರುವರು. ಅದರಲ್ಲಿ ಅವರು ಈ ರೀತಿ ಬರೆದಿರುವರು "ಒಂದು ವೇಳೆ ಯುದ್ಧವಾದರೆ, ಭಾರತಕ್ಕೆ ಹೊರಗಿನಿಂದ ಕೈಗಾರಿಕೆಯ ವಸ್ತುಗಳು ಬರುವ ಅನೇಕ ಮಾರ್ಗಗಳು ಬಂದಾಗುವುವು. ನಂತರ ನೋಡುವುದೇನು? ಸಂಚಾರದ ಮಾರ್ಗಗಳು ಸಹ ಕಠಿಣವಾಗುವವು. ಏಕೆಂದರೆ ಕೈಗಾರಿಕೆಯ ವಸ್ತುಗಳೆಲ್ಲ ಯುರೋಪಿನಿಂದಲೇ ಬರುತ್ತಿರುವುವು ಶಾಂತಿಯಿಲ್ಲದ ಸಂದಿಗ್ಧ ಒದಗುವುದು ಸಹ ದುಸ್ತರವಾಗುವುದು ಏಕೆಂದರೆ ಅವಶ್ಯ ಬೇಕಾಗುವ ಸಾಮಾನು ಒಂದೂ ಭಾರತದಲ್ಲಿ ಆಗುವಂತಿಲ್ಲ ಯಾವ ವಸ್ತುವಿಗೂ ನಾವು ಹೊರಗಿನವರನ್ನೇ ಆಶ್ರಯಿಸಬೇಕಾಗಿದೆ"

ಅಷ್ಟೇ ಅಲ್ಲ ಭಾರತದಲ್ಲಿರುವ ಅನೇಕ ಕಾರ್ಖಾನೆಗಳು ಸಹ ಹೊರಗಿನಿಂದ ವಸ್ತುಗಳು ಬರದಿದ್ದಲ್ಲಿ ನಿಂತುಹೋಗಬೇಕಾ



ಕೇವಲ 16 ದಿವಸಗಳಲ್ಲಿ ಉದ್ದವಾಗುವಿರಿ

ಶರೀರದ ಬೆಳವಣಿಗೆಯು ಬೇಗದ ಕೈಯಂತಿರುವ ಗ್ರಂಥಿಯು ನಿರ್ಜೀವವಾಗಿದ್ದರೆ ಅದನ್ನು ಉತ್ತೇಜಿಸಿ ಸಶಕ್ತಗೊಳಿಸಿ ಬೆಳವಣಿಗೆಯನ್ನು ಹೆಚ್ಚಿಸಲು ಮಾತ್ರ ಉಪಾಯವೆಂದರೆ ಜೀವಕತ್ವಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಹಿಟೋಜನ್ ಮಾತ್ರೆಗಳನ್ನು ಸೇವಿಸುವುದು ದಿನಕ್ಕೆರಡರಂತೆ ಕೇವಲ 16 ದಿವಸ ತೆಗೆದುಕೊಂಡಲ್ಲಿ ಶರೀರದ ಗಾತ್ರವು ವಿಚಿತ್ರವಾಗಿ ಹೆಚ್ಚುವುದು. 'ನಿಮ್ಮ ಕೇವಲ ಒಂದು ಪಕ್ಷದ ಚಿಕಿತ್ಸಾ ಕ್ರಮದಿಂದ ನಾನು 2¼ ಇಂಚು ಎತ್ತರವಾಗಿರುವೆ'ನೆಂದು ಮಿ ಪ್ರಿಜ್. ಪೋಲೋ ಇವರು ಬರೆಯುತ್ತಾರೆ

Hitogen
GROWTH HORMONES

ಪೆಟ್ಟಿಗೆಯೊಂದರ ಬೆಲೆ ರೂ 5-4-0, ಟಪ್ಪಾಲು ಮತ್ತು ಪೇಕಿಂಗ್ ವೆಚ್ಚ 0—10—0 ಹಿಂದೂಸ್ಥಾನದ ಹೊರಗಿನವರಿಗೆ 10ಶಿಲಿಂಗ್,

Sole Agents—**British Products Co, Fort, Bombay.**
Sole Distributors —
Mahasukhlal Chimanlal & Co, Princess St. Mangaldas Road, BOMBAY.

ಗುವುದು ಯುದ್ಧವು ಹೆಚ್ಚು ಕಾಲದ ವರೆಗೆ ನಡೆಯುತ್ತಿದ್ದರೆ ಎಲ್ಲೆಲ್ಲಿಯೂ ಅವ್ಯವಸ್ಥೆಯೇ ರಾಜ್ಯವಾಗುವುದು ಕೈಗಾರಿಕೆಯು ಜೀವನವೇ ವ್ಯಾಹತವಾಗುವುದು.

ಇದಲ್ಲದೆ ಭಾರತವು ಹೊರಗಿನವರ ಆಕ್ರಮಣವನ್ನು ಎದುರಿಸುವುದಕ್ಕೂ ಸಹ ಸಿದ್ಧವಾಗಿಲ್ಲ. ಇಲ್ಲಿ ವಿಮಾನವೂ ಆಗುವಂತಿಲ್ಲ, ಅಥವಾ ಯುದ್ಧ ಸಾಮಾಗ್ರಿಗಳೂ ಸಿದ್ಧವಾಗುವಂತಿಲ್ಲ. ಇದಕ್ಕೂ ಸಹ ನಾವು ಪರರನ್ನೇ ಆಶ್ರಯಿಸಬೇಕಾಗಿದೆ.

ನಾವು ಇಂದು ಜನರ ಆರ್ಥಿಕ ಸ್ಥಿತಿಯ ವಿಚಾರದಲ್ಲಿ ಬಹಳ ಕೇಳುತ್ತಿದ್ದೇವೆ. ಕಾಂಗ್ರೆಸ್ ಸಹ ನ್ಯಾಷನಲ್ ಪ್ಲಾನಿಂಗ್ ಕಮಿಟಿಯನ್ನು ನಿಯಮಿಸಿದೆ. ಇದು ಏನು ಮಾಡುತ್ತದೋ ಏನೋ? ಆಗಾಗ್ಗೆ ಸಭೆ ಸೇರುತ್ತಿದೆ ಅಷ್ಟೆ

ಬಂಗಾಳ ಸರಕಾರವು ಕೈಗಾರಿಕೆಯ ಸಮಿತಿಯೊಂದನ್ನು ನಿರ್ಮಿಸಿತು ಆದರೆ ಅದರ ಯಾವ ಸಲಹೆಯೂ ಪ್ರಯೋಜನಕಾರಿಯಾದಂತೆ ಕಾಣುವುದಿಲ್ಲ. ಈಗ ಆರ್ಥಿಕ ಸಮಸ್ಯೆಯೇ, ಮದ್ಯ ನಿಷೇಧ ಮತ್ತು ಗ್ರಾಮೋದ್ಧಾರದ ಸಮಸ್ಯೆಗಳಿಗಿಂತ ಹೆಚ್ಚು ಮಹತ್ವವುಳ್ಳದ್ದಾಗಿರುವುದು ಆದರೆ ಪ್ರಾಂತೀಯ ಸರಕಾರಗಳಿಗೆ ಇದರ ಕಡೆಗೆ ಗಮನ ಕೊಡಲು ಸಮಯವೇ ಇಲ್ಲದಂತಾಗಿದೆ. ಯುದ್ಧವು ನಿಜವಾಗಿ ಆರಂಭವಾದ ನಂತರ "ಈಗ ನಾವೇನು ಮಾಡಲೂ ಸಾಧ್ಯವಿಲ್ಲ" ಎಂದು ಹೇಳುವರೋ ಏನೋ?

ಈಗ ಅವರು ಅತ್ಯಂತ ವಿಶಾಲವೂ, ಮುಖ್ಯವೂ, ಜಗತ್ಯವೂ ಆದ ವಿಚಾರವನ್ನೇ ಮರೆತಿರುವರು. ಈಗ ಜನಾಂಗದ ಆರ್ಥಿಕ ಪುನರ್ರಚನೆಯ ಕಡೆಗೆ ತಮ್ಮ ಗಮನವನ್ನೀಯುವುದು ಅವರ ಪ್ರಥಮ ಕರ್ತವ್ಯ.

ಭಾರತದಲ್ಲಿ ಕಚ್ಚಾ ಸಾಮಾನಿಗೇನೂ ಕೊರತೆಯಿಲ್ಲ, ಜನರಿಗೆ ಅಭಾವವಿಲ್ಲ. ಕೊರತೆ ಇರುವುದು, ಅಭಾವವಿರುವುದು ಉದ್ದೇಶದ್ದು ಮಾಡಬೇಕೆಂಬ ಮನಸ್ಸಿನ ಅಭಾವವೇ ಈಗ ಇರುವುದು.

ಅಮೃತ ವಾಣಿ

ಪ್ರತಿಫಲಾಪೇಕ್ಷೆಯಿಂದ ಮಾಡುವ ಉಪಕಾರವು ಉಪಕಾರವೇ ಅಲ್ಲ.

-ಶೇಕ್ಸ್‌ಪಿಯರ್

ನಿಮಗೆ ತಿಳಿದಿದೆಯೋ?

ಬ್ರಿಟನ್ ದೇಶದಲ್ಲಿರುವ ಇಂಟರ್ ಪ್ಲಾನೆಟರೀ ಸೊಸೈಟಿಯವರು 15 ವರ್ಷಗಳ ಕಾಲ ತೀವ್ರವಾದ ಕೃಷಿಮಾಡಿ 2½ ಲಕ್ಷ ಪೌಂಡುಗಳನ್ನು ಖರ್ಚುಮಾಡಿ ನಂತರ ಒಂದು ಯಂತ್ರವನ್ನು ತಯಾರುಮಾಡಿದ್ದಾರೆ. ಅದರ ಮೂಲಕದಿಂದ ಮೂವರು ಚಂದ್ರಲೋಕದಲ್ಲಿ ಯಾತ್ರೆಮಾಡಿ 3 ವಾರಗಳಲ್ಲಿ ಭೂಮಿಗೆ ಬರಬಹುದು. ಯಂತ್ರವು ಚಂದ್ರಲೋಕದಲ್ಲಿ ಹದಿನೈದು ದಿನಗಳು ಇರುವುದಂತೆ!

೦೦೦ ೦೦೦ ೦೦೦

500 ಮಿಲ್ಯಜನಾದವರೊಂದಿಗೆ ಇಷ್ಟು ದೊಡ್ಡ ಯುದ್ಧಮಾಡುತ್ತಿರುವ ಜಪಾನಿನ ಪರ ಸಂಖ್ಯೆ 70 ಮಿಲ್ಯ ಮಂದಿಯೇ!

೦೦೦ ೦೦೦ ೦೦೦

ನಮಗೆ ಮೇಲ್ಗಡೆ 8½ ಮೈಲುಗಳ ಎತ್ತರದವರೆವಿಗೂ ಸ್ವಚ್ಛವಾದ ಗಾಳಿ ಇರುತ್ತದೆ

೦೦೦ ೦೦೦ ೦೦೦

ನಾವು ತಿಂದ ಆಹಾರವು ಜೀರ್ಣವಾಗಲು 5-6 ಗಂಟೆಗಳ ಕಾಲ ಹಿಡಿಯುವುದು.

೦೦೦ ೦೦೦ ೦೦೦

ಯಾವ ದೆವ್ವದ ಉಪದ್ರ ತಪ್ಪಿದರೂ ಪೇದೆಗಳ ಕಾಟ ಇಷ್ಟೇ ಇದೆ



ಪೇದೆ—ಏನು ಸ್ವಾಮಿ, ಏನೂ ಕೊಡದೆ ಹೋಗುತ್ತೀರಾ?
ಆಕ್ಷಿಗಾರ—ನಿಮ್ಮನ್ನು ತೃಪ್ತಿಪಡಿಸಲು ಬಲಿರಾಯನೇ ಬರಬೇಕು ಮತ್ತೆ.

ಲಂಡನ್ ನಗರದಲ್ಲಿಯ ಜಂತು ಪ್ರದರ್ಶಕ ಶಾಲೆಯಲ್ಲಿ ಬಹು ದೊಡ್ಡ ಆಮೆಯೊಂದು ಇರುವುದು ಅದರ ವಯಸ್ಸು 150 ವರುಷಗಳು. ಅದರ ಎತ್ತರ 4 ಅಡಿಗಳು. ಅದು 3-4 ದಿನಗಳ ತನಕ ನಿದ್ದೆಮಾಡುತ್ತಿರುವುದಂತೆ!

೦೦೦ ೦೦೦ ೦೦೦

ರೇಡಿಯೋ ಸೇರಿಸಲ್ಪಟ್ಟಿರುವ ಬ್ರಿಟಿಷ್ ಕಾರುಗಳ ಸಂಖ್ಯೆ 45,506.

ಅಮೇರಿಕಾ ಸಂಯುಕ್ತ ರಾಜ್ಯಗಳಲ್ಲಿ (U. S. A.) ಪ್ರಪಂಚದಲ್ಲಿರುವ ಚಿನ್ನದಲ್ಲಿ 75% ರಷ್ಟು ಇರುವುದು.

೦೦೦ ೦೦೦ ೦೦೦

ಅಂಡಮಾನ್ ದ್ವೀಪದಲ್ಲಿರುವ ಸೆಲ್ಯುಲಾರ್ (Cellular) ಜೈಲಿನಲ್ಲಿ 880 ಕೊಠಡಿಗಳಿರುವುವು

೦೦೦ ೦೦೦ ೦೦೦

ಇಂಡಿಯಾ ದೇಶದಲ್ಲಿ ಮೊದಲನೆಯ ವಾರಪತ್ರಿಕೆಯು ಇಂಗ್ಲೀಷಿನಲ್ಲಿ 1780 ನೇ ಇಸವಿ ಜನವರಿ 29 ರಲ್ಲಿ ಹಿಕೆ ಎಂಬುವರ ಸಂಪಾದಕತ್ವದಲ್ಲಿ ಕಲಕತ್ತಾ ನಗರದಿಂದ ಹೊರಟಿತು.

೦೦೦ ೦೦೦ ೦೦೦

ರಷ್ಯಾ ದೇಶದಲ್ಲಿ ಒಬ್ಬ ಶಾಸ್ತ್ರಜ್ಞನು ಹಸುಗಳಿಗೆ ದಂತಗಳ ಗೊರಸನ್ನು ಕಂಡು ಹಿಡಿದಿರುವನು.

೦೦೦ ೦೦೦ ೦೦೦

ಜಪಾನ್ ದೇಶದಲ್ಲಿ ಬೆಳೆಯುತ್ತಿರುವ ಯೋಕೋಹಾಮಾ ಕೋಳಿಗೆ (Yokohama Fowl) 30 ಅಡಿಗಳ ಉದ್ದವುಳ್ಳ ಬಾಲವಿರುವುದು.

೦೦೦ ೦೦೦ ೦೦೦

ರಿವಾಲ್ವರನ್ನು 1835 ನೆ ಇಸ್ವಿಯಲ್ಲಿ ಕೋಲ್ಟ್ ಎಂಬ ಅಮೇರಿಕಾ ದೇಶದವನು ಕಂಡುಹಿಡಿದನು.

೦೦೦ ೦೦೦ ೦೦೦

ಇಂದಿನ ಪ್ರಪಂಚದ ಏಳು ವಿಚಿತ್ರಗಳಾವುವೆಂದರೆ.—

1. ವಾಯು ವಿಮಾನ. 2 ಲಂಡನ್ ನಗರದ ಭೂಮಿಯ ಒಳಗಿನ ರೈಲು. 3. ನ್ಯೂಯಾರ್ಕಿನ ಎಂಪೈರ್‌ಸ್ಟೇಟ್ ಬಿಲ್ಡಿಂಗ್. 4. ಸಾನ್ ಫ್ರಾನ್ಸಿಸ್‌ಕೋದಲ್ಲಿಯ ಗೋಲ್ಡನ್ ಗೇಟ್ ಬ್ರಿಜ್ಜು 5 ರೇಡಿಯೋ, 6. ಟೆಲಿಫೋನ್, 7 ವೈರ್ಲೆಸ್.

೦೦೦ ೦೦೦ ೦೦೦

ಭಾರತ ಕೇಂದ್ರ ಸರ್ಕಾರದ ದಆಯ
1223772000
ಖರ್ಚು 2318470000

೦೦೦ ೦೦೦ ೦೦೦

ಹಿಂದೂ ದೇಶದಲ್ಲಿರುವ ಜಿಲ್ಲೆಗಳಲ್ಲಿ ಹೆಚ್ಚು ವಿಸ್ತೀರ್ಣವೂ ಹೆಚ್ಚು ಜನಸಂಖ್ಯೆಯೂ ಉಳ್ಳದ್ದು ವಿಶಾಖಪಟ್ಟಣ ಜಿಲ್ಲೆಯು. ಇದರ ಜನಸಂಖ್ಯೆ 3,607,948 ವಿಸ್ತೀರ್ಣ 17,168 ಚ ಮೈಲು.

೦೦೦ ೦೦೦ ೦೦೦

ಸಂಗ್ರಾಹಕ
ಕೊಪ್ಪದ ಶ್ರೀ ರಾಮಸ್ವಾಮಿ ಅಯ್ಯಂಗಾರ್

ಅಮೃತ ವಾಣಿ

ಇಬ್ಬರು ಮೂವರೊಂದಿಗಾದರೂ ನ್ಯಾಯವನ್ನೆತ್ತಿ ಹಿಡಿಯಲಿಕ್ಕೆ ಇಲ್ಲದವರು ಗುಲಾಮರವರು.

--ಜೆ. ಆರ್. ಲೋವೆಲ್.

The Pangal Nayak Bank Ltd.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.
(INCORPORATED 1920)
Reserves Rs. 2,02 800/-. Paid up Capital: Rs 1,82,100/-
PRINCIPAL OFFICE COURT ROAD, UDIPI.
OTHER OFFICES
UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% p. a. for the earlier half and at 1% p a. for the latter half of every calendar year.

Fixed Deposits are accepted at all the above offices for one and two years and interest allowed at 3½% p. a. and 4% p. a. respectively, interest being payable every half year of the calendar year. Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms.

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.
ಅಮೃತಾಂಜನ ಡಿಪೋವಿನ ತ್ರಿವರ್ಣದ "ರೈಸಿಂಗ್ ಸನ್"
ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸ ಕೊಡುತ್ತೇವೆ.
ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಎರಡು ವರ್ಷಗಳ ಕಾಂಗ್ರೆಸ್ ಆಳ್ವಿಕೆ

ಲೇಖಕರ — ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಎ., ಪಾರ್ಲಿಮೆಂಟರಿ ಸೆಕ್ರೆಟರಿ, ಮದರಾಸ್.

ಹಿಂದೂದೇಶದ 11 ಪ್ರಾಂತಗಳ ಪೈಕಿ 6 ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರಕ್ಕೆ ಬಂದೀಗ ಎರಡು ವರ್ಷಗಳಾದುವು ಈಗ 8 ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಆಡಳಿತ ನಡೆಸುತ್ತಿದ್ದಾರೆ. ಸಿಂಧ್ ಪ್ರಾಂತದಲ್ಲಿ ಬೇಗನೆ ಕಾಂಗ್ರೆಸ್ ಮಂತ್ರಿಮಂಡಲವು ಸ್ಥಾಪಿತವಾಗುವ ಸಂಭವವಿದೆ. ಅಲ್ಲಿಯ ಆಡಳಿತವು ಬಹುಶೇಕ ಕಾಂಗ್ರೆಸಿನ ಪ್ರಭಾವಕ್ಕೊಳಗಾಗಿದೆ ಕಾಂಗ್ರೆಸ ಮಂತ್ರಿ ಮಂಡಲವಿಲ್ಲದ ಪಂಜಾಬು ಮತ್ತು ಬಂಗಾಳದಲ್ಲಿ ಕೂಡಾ ಕಾಂಗ್ರೆಸಿನ ಧ್ಯೇಯಾನುಕರಣವು ತೋರಿ ಬರುತ್ತದೆ. ಅತಿ ಹೆಚ್ಚಿನ ಬಹುಪಕ್ಷ ಪಡೆದಿರುವ ಮದ್ರಾಸ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷವು ಮತ್ತಷ್ಟು ಹೆಚ್ಚಿದೆ ಪ್ರತಿಯೊಂದು ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಒಂದೋ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬರುತ್ತಿದ್ದಾರೆ, ಇಲ್ಲವೆ ಅತಿ ಹೆಚ್ಚಿನ ಓಟು ಪಡೆದು ಆರಿಸಲ್ಪಡುತ್ತಾರೆ ದೇಶದಲ್ಲೆಲ್ಲಾ ಕಾಂಗ್ರೆಸು ಯಥಾ ಪ್ರಕಾರ ಜನಾದರಣೀಯವಾಗಿರುವುದೆಂಬ ಸೂಚನೆಗಳಿವು.

ಹಳ್ಳಿ ಜನತೆಯ ಹಿತ ಸಾಧನೆ

ಹಳ್ಳಿಯ ಜನರ ಹಿತ ಸಾಧನೆಯ ಕುರಿತು ಕಾಂಗ್ರೆಸ್ ಮಂತ್ರಿಗಳು ಪ್ರಥಮವಾಗಿ ಲಕ್ಷ್ಯ ಕೊಡುತ್ತಿದ್ದಾರೆ. ಈ ಉದ್ದೇಶದಿಂದಲೇ ಕೃಷಿಕರ ಸಾಲ ನಿವಾರಣಾ ಮಸೂದೆಯನ್ನು ಜ್ಯಾರಿಗೆ ತಂದುದಾಗಿದೆ. ಇತರ ಪ್ರಾಂತಗಳಲ್ಲಿಯೂ ಇಂತಹ ಕಾನೂನುಗಳು ಮಾಡಲ್ಪಟ್ಟವೆ ಪ್ರತಿ ಕಾಂಗ್ರೆಸ್ ಪ್ರಾಂತವು ಮದ್ಯ ಪಾನ ನಿಷೇಧವನ್ನು ಜ್ಯಾರಿಗೆ ತಂದು ಅದರ ವ್ಯಾಪನೆಯನ್ನು ಹೆಚ್ಚಿಸುತ್ತಿದೆ ಬರುವ ಅಕ್ಟೋಬರ ತಿಂಗಳಿಗೆ ಉತ್ತರ ಆರ್ಕಾಡು ಜಿಲ್ಲೆಯಲ್ಲಿ ಮದ್ಯ ನಿಷೇಧಿಸಲ್ಪಟ್ಟಿತೆಂದರೆ ಮದ್ರಾಸ್ ಪ್ರಾಂತದಲ್ಲಿ ಐದನೇ ಒಂದಂಶದಿಂದ ಮದ್ಯಪಾನದ ಉಚ್ಚಾಟನೆಯಾಗುವುದು ಪ್ರತಿ ವರ್ಷ ರೂ. 71 ಲಕ್ಷಕ್ಕಿಂತಲೂ ಮಿಕ್ಕಿದ ಭೂಕಂದಾಯ ರಿಯಾಯಿತಿಯು ಮದ್ರಾಸ್ ಪ್ರಾಂತದಲ್ಲಿ ಕೊಡಲ್ಪಡುತ್ತಿರುವುದು. ಗೋಚರಾವ್ ಫೀಸು ಸೇಕಡ 50 ರಷ್ಟು ಇಳಿಸಲ್ಪಟ್ಟಿದೆ ಅಧಿಕಾರಿಗಳ ಸಂಬಳವು 1937ರಿಂದ ಬದಲಾವಣೆ ಮಾಡಲ್ಪಟ್ಟಿದೆ. ಇನ್ನೂ ಹಲವು ವಿಷಯಗಳಲ್ಲಿ ಆಡಳಿತ ವೆಚ್ಚವು ಕಡಿಮೆ ಮಾಡಲ್ಪಟ್ಟಿರುವುದು. ಹಲವು ರೀತಿಯಲ್ಲಿ ಮಿತವ್ಯಯವನ್ನು ಕೈಕೊಳ್ಳಲಾಗಿದೆ

ಆದಾಯದ ಆವಶ್ಯಕತೆ

ಬಡ ಕುಡುಕ ಜನರ ಹಿತ ಸಾಧನೆಯ ದೃಷ್ಟಿಯಿಂದ ಮದ್ಯಪಾನ ನಿಷೇಧವನ್ನು ಇತರ ಜಿಲ್ಲೆಗಳಲ್ಲಿಯೂ ಜ್ಯಾರಿಗೆ ತರಬೇಕಾಗಿದೆ ಇದರಿಂದ ಸರಕಾರಕ್ಕೆ ಇನ್ನಷ್ಟು ಆದಾಯ ನಷ್ಟವಾಗುವುದು. ಭೂಕಂದಾಯವನ್ನೂ ಕಡಿಮೆ ಮಾಡಬೇಕಾಗಿದೆ ಭೂಕಂದಾಯ ಪದ್ಧತಿಯನ್ನೇ ಬದಲಾವಣೆ ಮಾಡುವ ಆಲೋಚನೆ ನಡೆದಿದೆ ಪ್ರಾಥಮಿಕ ಶಿಕ್ಷಣದ ಸುಧಾರಣೆ ಮತ್ತು ವ್ಯಾಪನೆಯು, ಈ ಮೊದಲೇ ಮಾಡಲ್ಪಡಬೇಕಾಗಿದ್ದ ಪ್ರಾಮುಖ್ಯ ಪ್ರಶ್ನೆಯಿರುತ್ತದ

ತೆರಿಗೆಯ ಸಮತೋಲನ

ಭೂಕಂದಾಯ ಮತ್ತು ಅಬ್ಕಾರಿ ಕರವು ಪ್ರಾಂತದ ಆದಾಯದ ಎರಡು ಪ್ರಾಮುಖ್ಯ ಆಶಯಗಳು ಬಡ ಬೇಸಾಯಗಾರರು ಮತ್ತು ಮಜೂರ ಜನರು ಈ ತೆರಿಗೆಗಳನ್ನು ಕೊಡುತ್ತಾ ಬಂದಿರುವರು. ಈಗ ಈ ಎರಡು ವರ್ಗದ ಜನರಿಗೆ ಸಹಾಯ ಮಾಡಬೇಕಾಗಿದೆ, ಆದದರಿಂದ ಮದ್ರಾಸ್ ಸರಕಾರವು ಈ ವರ್ಷ ಹೊಸತಾಗಿ ತೆರಿಗೆ ಹೊರಿಸುವ ಕಾನೂನುಗಳನ್ನು ಮಾಡಿದೆ ಇವುಗಳಲ್ಲಿ ಅತಿ ಪ್ರಾಮುಖ್ಯವಾದುದು ಸೇಲ್ಸ್ ಟೇಕ್ಸ್ ಪ್ರತಿವರ್ಷ ರೂ. 10 000ಕ್ಕಿಂತ ಹೆಚ್ಚು ವ್ಯಾಪಾರಮಾಡುವ ಪ್ರತಿಯೊಬ್ಬ ವ್ಯಾಪಾರಿಯು ಸ್ವಲ್ಪ ಕರವನ್ನು ಸರಕಾರಕ್ಕೆ ತರಬೇಕಾಗಿದೆ, ವ್ಯಾಪಾರವು ವರ್ಷಕ್ಕೆ ರೂ 20,000ಕ್ಕಿಂತ ಮಿಕ್ಕಿದರೆ ಪ್ರತಿಯೊಂದು ರೂಪಾಯಿಗೆ ಒಂದು ಪೈ ಕರ ತೆರತಕ್ಕದ್ದು ಈ ಹೊಸ ಕರಗಳಿಂದ ತೆರಿಗೆಯ ಭಾರವು ಸರಿ ಸಮಾನವಾಗಿ ಹಂಚಲ್ಪಡುವಂತಾಗುವುದು ತೆರಿಗೆಯ ಭಾರವು ಹಳ್ಳಿಯಿಂದ ಪಟ್ಟಣಕ್ಕೂ ಬಡವರಿಂದ ಧನಿಕರಿಗೂ ಬೀಳುವಂತಾಗುವುದು ಚಿಕ್ಕ ವ್ಯಾಪಾರಿಗಳ ಮತ್ತು ಬಡ ಗಿರಾಕಿಗಳ ಮೇಲೆ ಹೆಚ್ಚಿನ ಭಾರವೇನೂ ಬೀಳಲಾರದು ದೊಡ್ಡ ವ್ಯಾಪಾರಿಗಳು ಮತ್ತು ಶ್ರೀಮಂತ ಗಿರಾಕಿಗಳು ಸಾಮಾನುಗಳನ್ನು ವಿಕ್ರಯಿಸಿದಂತೆ ಮತ್ತು ಪಡಕೊಂಡಂತೆ ತೆರಿಗೆ ತೆರಬೇಕಾಗಿದೆ

ಕಾಂಗ್ರೆಸ್ ಮಂತ್ರಿಗಳಿಗೆ ಯಾಕೆ ಬೆಂಬಲ ಕೊಡಬೇಕು-

ಇದೇ ಉದ್ದೇಶದಿಂದಲೇ ಇತರ ಪ್ರಾಂತಗಳ ಕಾಂಗ್ರೆಸ್ ಮಂತ್ರಿಗಳೂ ಹೊಸ ತೆರಿಗೆಯನ್ನು ಹೊರಿಸಿರುತ್ತಾರೆ ಈಗ ಸರಕಾರದ ಆದಾಯವು ಸಂಪೂರ್ಣವಾಗಿ ಅವಲಂಬಿಸಿಕೊಂಡಿರುವ ಭೂಕಂದಾಯ ಮತ್ತು ಅಬ್ಕಾರಿ ಕರಕ್ಕಿಂತ ಈ ಹೊಸ ತೆರಿಗೆಗಳು ನ್ಯಾಯವೂ ಯುಕ್ತವೂ ಆಗಿವೆ. ಹಿಂದೂದೇಶದಲ್ಲಿ ಈ ವರೆಗೆ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳ ಭಾರವು ಬಿದ್ದಿರಲಿಲ್ಲ ಇನ್ನಾದರೂ ಅವರು ಸರಕಾರದ ಖಜಾನೆಗೆ ನ್ಯಾಯವಾದ ತಮ್ಮ ಪಾಲನ್ನಿತ್ತು ಕಾಂಗ್ರೆಸ್ ಮಂತ್ರಿಗಳು ಬಡಜನರಿಗೆ ಸಹಾಯ ಮಾಡಲು ನೆರವಾಗಬೇಕಾಗಿದೆ.

ಕಾಂಗ್ರೆಸ್ ಮಹಾ ಕಮಾಂಡಿನವರು ನಿಶ್ಚೈಸಿರುವ ಘೋಷಣೆ ಮತ್ತು ಕಾರ್ಯಕ್ರಮವನ್ನು ಕಾಂಗ್ರೆಸ್ ಮಂತ್ರಿಗಳು ವಿಧೇಯವಾಗಿ ನೆರವೇರಿಸಲೆತ್ನಿಸುತ್ತಿರುವರು. ಮೂಲ ಭೂತವಾದ ಎಲ್ಲಾ ವಿಷಯಗಳಲ್ಲಿ ಅದು ಅಖಿಲ ಭಾರತ ಧೋರಣೆಯಾಗಿರುತ್ತದೆ ಎಲ್ಲಾ ಕಾಂಗ್ರೆಸ್ ವಾದಿಗಳೂ ನ್ಯಾಯವಾದಿಗಳಾದ ನಾಗರಿಕರೂ ಸಾಧ್ಯವಾದರೀತಿಯಲ್ಲೆಲ್ಲಾ ಕಾಂಗ್ರೆಸ್ ಮಂತ್ರಿಗಳ ಈ ಕೆಲಸಕ್ಕೆ ನಿರ್ಣಯ ಸಹಕಾರ ಮತ್ತು ಬೆಂಬಲವೀಯುವುದು ಅವರ ಕರ್ತವ್ಯವಿದೆ ಮಂತ್ರಿಗಳು, ಇಂಡಿಯಾ ಆಕ್ಟಿನ ಕಟ್ಟುನಿಟ್ಟಿಗೊಳಗಾಗಿ ಕೆಲಸ ಮಾಡಬೇಕಾಗಿದೆ ಅವರಿಗೆ ದೊರೆತಿರುವ ಅನುಕೂಲತೆಗಳು ಏನೇನೂ ಸಾಲದಾಗಿವೆ ಅವರು ಹೊರಗಣ ವಿರೋಧವನ್ನೂ, ಒಳಗಣ ಉಪದ್ರವವನ್ನೂ ಇದಿರಿಸಬೇಕಾಗಿದೆ. ಆದುದರಿಂದ ಇಡೀ ದೇಶಕ್ಕಾಗಿ ಮತ್ತು ವಿಶೇಷವಾಗಿ ಅಜ್ಞಾನ, ದಾರಿದ್ರ್ಯ ಮತ್ತು ರೋಗ ರುಜೆ ಪೀಡಿತರಾಗಿ ಬಹಳ ದುರವಸ್ಥೆಗೀಡಾಗಿರುವ ಜನತೆಯ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಕಾಂಗ್ರೆಸ್ ಮಂತ್ರಿಗಳು ಮಾಡುವ ಕೆಲಸದಲ್ಲಿ ಅವರಿಗೆ ಹೆಚ್ಚಿನ ಸಹಾನುಭೂತಿ ಮತ್ತು ಪ್ರೋತ್ಸಾಹದ ಅವಶ್ಯವಿದೆ.

Transport & Car Owners



ARE SPECIALLY INVITED TO VISIT
OUR SHOW ROOM
for economical transport maintenance
CANARA AUTOMOBILES - - - - - MANGALORE

ಗರ್ಭ ನಿರೋಧ

ರಹಸ್ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿ ತಡೆಗಟ್ಟುತ್ತದೆ, ಇದನ್ನು 3 ದಿವಸ ಉಪಯೋಗಿಸಿದಲ್ಲಿ, ಗರ್ಭಧಾರಣೆಯ ಪೀಡೆಯು ಜೀವಾವಧಿಯ ವರೆಗೆ ನಿವಾರಿತವಾಗುತ್ತದೆ ಶರೀರಕ್ಕೆ ಯಾವ ತರದ ಹಾನಿಯೂ ಆಗುವುದಿಲ್ಲ ಯಾವ ರೀತಿಯ ಮುಟ್ಟ ದೋಷವೂ ಉಂಟಾಗುವುದಿಲ್ಲ ಪ್ರತಿಯೊಂದು ಆರ್ಡರಿನೊಂದಿಗೆ ಗ್ಯಾರಂಟೀ ಪತ್ರವಿದೆ ಬೆಲೆ ರೂ. 5 8 0

ರಜವತಿ ನಿಂತ ಮುಟ್ಟು ನಿಲ್ಲಿಸಲ್ಪಟ್ಟುದನ್ನು ಕ್ರಮವಾಗಿ ಆಗುವಂತೆ ಮಾಡುತ್ತದೆ ಬೆಲೆ ರೂ 5 8 0 ಪೋಸ್ಟೇಜು 10 ಪೆನ್ಸ್

ಫೋ ನಂ. 21343
ಡಾ. ಎಸ್. ಎಚ್. ಖಾನ್,
42, (N G) ಬೆನ್ ಗೇಟ್ ಸ್ಟ್ರೀಟ್,
ಫೋರ್ಟ್. ಬೊಂಬಾಯಿ

ಅಂತರಂಗ

ನವರಾತ್ರಿ
(ದಸರಾ)
ವಿಶೇಷ ಸಂಚಿಕೆ

ಎಂದಿನದಕ್ಕಿಂತಲೂ ಹೆಚ್ಚಿನ ಪುಟಗಳು! ಉತ್ತಮ ಲೇಖನಗಳು!! ಸುಂದರ ಚಿತ್ರಗಳು!!!

ಇದೇ ಅಕ್ಟೋಬರ ತಾ.15ನೆಯ ಸಂಚಿಕೆಯಲ್ಲಿವೆ

ಇಷ್ಟೆಲ್ಲ ಹೆಚ್ಚಳವಿದ್ದರೂ ಜಾಹೀರಾತಿನ ದರವು ಹಿಂದಿನಷ್ಟೇ! [ಬಿಡಿ ಪ್ರತಿ ೧ ಆಣೆ ಮಾತ್ರ

ಒಳಗಿನ ಪುಟಗಳಲ್ಲಿ —1 ಪುಟಕ್ಕೆ 16—0—0, ½ ಪುಟಕ್ಕೆ 8—8—0, ¼ ಪುಟಕ್ಕೆ 1—6—0 ½ ಪುಟಕ್ಕೆ 2—8—0

ಈ ಸಂಚಿಕೆಗೆ ಜಾಹೀರಾತನ್ನು ಅಂಗೀಕರಿಸುವ ಕೊನೆಯ ತಾರೀಕು 30—9—39

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

Advertisement Manager 'ANTARANGA' Udipi.

ರೂಪಾಯಿಗೆ ಅರ್ಧಾಣೆ ಡಬ್ಬು!

ಹಳ್ಳಿಯೊಂದರ ಸಹಜ ಚಿತ್ರ.
ಆದರೆ ಕೇವಲ ಕಲ್ಪಿತ.

ಕವಾಟಿನ ಬೀಗ ತೆಗೆದು ಚೀಲವನ್ನೆತ್ತಿ ಶೆಟ್ರಿಗೆ ಕೊಟ್ಟು 'ಇದೇ ನಿಮ್ಮ ಚೀಲವಲ್ಲವೇ? ನಿಮಗೆ ಸರಿಯಾಗಿ ಗೊತ್ತಿದೆಯಲ್ಲ' ಎಂದರು ಸಾಂಬ್ರಾಣಿ ಗುತ್ತಿನ ಸಂಕಪ್ಪ ಪೂಂಜರು "ಹೌದು ಇದೆ. ನೀವೇನು ಮೋಸಮಾಡುವಿರೇ ನನಗೆ, ಬಡವಗೆ ನನ್ನ ಇಡೀ ಜೀವಮಾನದ ಗಂಟಿದು ಆಯ್ತು ಹೋಗಿ ಬರುತ್ತೇನೆ." ಎಂದು ಚೀಲವನ್ನು ತನ್ನ ಎಲವಸ್ತ್ರದಲ್ಲಿ ಸುತ್ತಿ ಭದ್ರವಾಗಿ ಗಂಟುಹಾಕಿ ಕಂಕುಳಲ್ಲಿಟ್ಟು ತನ್ನ ಮನೆಗೆನಡೆದರು ಬೈಲುಮನೆ ಶೀನಪ್ಪ ಶೆಟ್ರು. ಮನೆಯಲ್ಲಿ....?

೧

"ಹಾಗಾದರೆ ನಾನು ಹೋಗುತ್ತೇನೆ. ಅಪ್ಪಣೆಯಾಗಲಿ. ಧರ್ಮಕ್ಕೆ ಕೊಟ್ಟಂತಾಯಿತು ಪೂಂಜರೆ ನೀವು ಆ ಹಣವನ್ನು ಈ ಸಂದರ್ಭದಲ್ಲಿ ಬಹಳ ಉಪಕಾರವಾಯಿತು" ಎಂದು ರೂಪಾಯಿ ಚೀಲ ಹಿಡಿದು ಹೊರಡಲುದ್ಯುಕ್ತರಾದ ಬೈಲು ಮನೆ ಸೀನಪ್ಪ ಶೆಟ್ರನ್ನು ಸಾಂಬ್ರಾಣಿ ಗುತ್ತು ಸಂಕಪ್ಪ ಪೂಂಜರು ಕೈಹಿಡಿದು ಕೂಡ್ರಿಸಿ, "ಛೆ! ಛೆ!! ಊಟಮಾಡದೆ ಹೋಗುವುದೇ? ನಿಮಗಾಗಿಯೇ ಕೋಳಿಪಲ್ಯ ಮತ್ತು ಹೆಸರುಪಾಯಸ ಮಾಡಿಸಿದ್ದು ಕಣ್ಣಾ! ಓ ಕಣ್ಣಾ!! ಎಲ್ಲಿ ಸತ್ತು ಹೋದಿ ಸೂಳೆ ಮಗನೆ! ಒಂದು ತಂಬಿಗೆ ನೀರು ತಾ. ಬೇಗ ತಾ" ಎಂದು ಕೂಗಿ ಪುನಃ ಶೆಟ್ರನ್ನುದ್ದೇಶಿಸಿ, "ಸ್ನಾನ ಮಾಡಬೇಕಾದರೆ ತಯಾರಿದೆ ಬಿಸಿನೀರು. ದಾಕ್ಷಿಣ್ಯ ಮಾಡಕೂಡದು' ಎಂದರು ಹೆಸರು ಪಾಯಸವೆಂದರೆ ಬಾಯಲ್ಲಿ ನೀರೂರಿ ಬಂದ ಶೆಟ್ರು ಅದನ್ನಲ್ಲಿಯೇ ನುಂಗಿ ಬಹಳ ದೈನ್ಯದಿಂದ, "ಯಾಕಪ್ಪ ನಮಗೆ ಬಡವರಿಗೆ ಇಷ್ಟೆಲ್ಲಾ ಉಪಚಾರ! ನಾವು ನಿಮ್ಮ ಚಾಕರಿಯವರಿಗಿಂತ ಕಡೆ. ಬೇಡ ಪೂಂಜರೆ ಬೇಡ. ಈಗ ನಾನು ಗಂಜಿ ಊಟಮಾಡಿ ಬಂದುದು. ಇನ್ನು ಮಧ್ಯಾಹ್ನ ಊಟಕ್ಕೆ ಹೋಗುತ್ತೇನೆ ಮನೆಗೆ." ಎಂದರು.

"ಇದೇನು ಮನೆಯಲ್ಲವೇ? ಏನು ಮಾತಿದು ಶೆಟ್ರೆ! ಇಲ್ಲಿ ಕೊಡಿ ನಿಮ್ಮ ಹಣದ ಚೀಲ. ಕವಾಟಿನೊಳಗಿಡುತ್ತೇನೆ. ಏಳಿ ನೋಡುವ, ಕೈ ಕಾಲು ತೊಳೆಯಿರಿ" ಎಂದು ಪೂಂಜರು ಶೆಟ್ರ ಕೈಯಿಂದ ಬಲಾತ್ಕಾರದಿಂದವೆಂಬಂತೆ ರೂಪಾಯಿ ಚೀಲವನ್ನು ತೆಗದುಕೊಂಡು ಕವಾಟಿನೊಳಗಿಟ್ಟು ಅವರದುರಲ್ಲಿಯೇ ಡಬ್ಬನೆ ಬಾಗಿಲು ಮುಚ್ಚಿ ಬೀಗ ಹಾಕಿ, ಬೀಗಬಿದ್ದದೋ ಇಲ್ಲವೋ ಎಂದು ಎರಡೆರಡು ಸಲ ಎಳೆದು ನೋಡಿ ಬಿದ್ದದೆಯೆಂಬ ಭರವಸೆಯುಳ್ಳವರಾಗಿ ಅಷ್ಟರಲ್ಲಿ ಕಾಲುಕೈ ತೊಳೆದು ತಯಾರಾದ ಶೆಟ್ರನ್ನು ದೂಡಿ ಬಹಳ ಒತ್ತಾಯದಿಂದ ಮುಂದೆ ಮಾಡಿಕೊಂಡು ತಾನು ಅವರ ಕೈಯ ತಂಬಿಗೆಯನ್ನು ಕಸಕೊಂಡು ಹಿಡಿದು ಅವರ ಹಿಂದಿನಿಂದ ಪರಿಚಾರಕನಂತೆ ನಡೆದುಹೋದರು "ಶ್ರೀಮಂತಿಕೆ ಬರಬೇಕು ಇಂದವರಿಗೆ ಅದರ ಒಂದಿಷ್ಟು ದರ್ಪವಾದರೂ ಇವರಲ್ಲಿರುವುದೇ? ತುಂಬಿದ ಕೊಡ ತುಳುಕುವುದಿಲ್ಲೆಂಬುದು ಖಂಡಿತ" ಎಂದು ಶೆಟ್ರು ಮನಸ್ಸಿನೊಳಗೆ ಪೂಂಜರ ಗುಣಗಾನ ಮಾಡುತ್ತಾ ಊಟಕ್ಕೆ ಹೋಗಿ ಕುಳಿತರು. ಪೂಂಜರು ತನ್ನ ಹೆಂಡತಿಯೊಡನೆ "ಹೆಸರಿನ ಪಾಯಸವೆಂದರೆ ಪ್ರಾಣ ಶೆಟ್ರಿಗೆ ಹೆಸರು ಹೋದವರವರು ಹೆಸರಿನ ಪಾಯಸ ತಿನ್ನಲಿಕ್ಕೆ. ಇನ್ನೂ ಎರಡು ಸವುಟು ಬಳಸು. ಮತ್ತೂ ಬಳಸು ಕೋಳಿ ಪಲ್ಯವಿದ್ದರೆ ತಂದು ಹಾಕು ಪ್ರಾಯಹೋದವರಾದರೂ ಕಲ್ಲನ್ನು ಜೀರ್ಣಿಸುವ ಶಕ್ತಿಯುಂಟವರಿಗೆ. ಎಪ್ಪತ್ತಕ್ಕೆ ಸಮೀಪಿಸಿದರೂ ಒಂದು ಹಲ್ಲು ಕೂಡಾ ಹೋಗಿಲ್ಲ ಹ್ಯಾಗೆ ಕಟುಕುಟು ಕಡಿಯುತ್ತಾರೆ ನೋಡು ಕೋಳಿ ಎಲುಬುಗಳನ್ನು! ಹ್ಯಾಗೆ ಸುರಿಯುತ್ತಾರೆ ನೋಡು ಪಾಯಸ!" ಎಂದು ಬೇಡಬೇಡವೆಂದರೂ ಮೂರು ಮೂರು ಸಲ ಬಲಾತ್ಕಾರದಿಂದ ಬಡಿಸಿ ಮಾಡಿದ ಉಪಚಾರದಿಂದ ಶೆಟ್ರ ಮನಸ್ಸು ಸೂರೆಯಾಗಿ ಹೋಯಿತು ತನ್ನಂತಹ ಕಸದ ಕಡ್ಡಿಗೆ ಈ ಸನ್ಮಾನವೇಕೆಂದು ಅವರು ಸೋಜಿಗಗೊಂಡರು

ತೇಗಿನ ಹಿಂದೆ ತೇಗುತ್ತಾ ಮೈಯಿಂದ ಧಾರೆಗಟ್ಟಿ ಸುರಿದು ಬರುವ ಬೆವರನ್ನು ತನ್ನ ಮದ್ರಾಸ್ ಎಲವಸ್ತ್ರದಿಂದ ಒರಸಿಕೊಳ್ಳುತ್ತಾ ಶೆಟ್ರು, "ದಾಕ್ಷಿಣ್ಯ ಕಡಿಯಲಿಕ್ಕಾಗಲಿಲ್ಲ. ಸ್ವಲ್ಪ ಹೆಚ್ಚಾಗಿಹೋಯಿತು" ಎಂದು ಸರಿ ನಿಲ್ಲಲಿಕ್ಕೆ ಕೂಡ ಆಗದೆ ಬಗ್ಗಿ ಬಗ್ಗಿ ನಡೆದು ದೊಡ್ಡ ಮರದ ಕೊರಡೇ ಆಗಿರುವ ಚಾವಡಿಯ ಕಂಬಕ್ಕೊರಗಿ ಕೂತುಬಿಟ್ಟರು. "ಚಿಂತೆಯಿಲ್ಲ ಶೆಟ್ರೇ ಚಿಂತೆಯಿಲ್ಲ. ಯಾನಾಗಲೊಮ್ಮೆ ಸಿಕ್ಕುವಾಗ ಸರಿ ಹೊಡೆದುಬಿಡಬೇಕು ನನಗೂ ನಿಮ್ಮಂಥವರು ತಿಂದಷ್ಟು ಸಂತೋಷ. ನಮ್ಮವಳಿಗಂತೂ ಬಡಿಸಿದಷ್ಟು ಸಾಲದು. ನೋಡಿದಿರಲ್ಲ ನೀವೇ ಸ್ವತಃ. ಚಂದಮಾಡಿ ಒಂದು ವೀಳ್ಯ ಹಾಕಿ. ಇಗೊಳ್ಳಿ" ಎಂದು ಚಿಕ್ಕ ಪೆಟ್ಟಿಗೆಯಂತಿರುವ ಕಂಚಿಯನ್ನು ಶೆಟ್ರ ಕಡೆಗೆ ದೂಡಿದರು ಶೆಟ್ರು ಎಲವಸ್ತ್ರದಿಂದ ಗಾಳಿಹಾಕಿಕೊಳ್ಳುತ್ತಾ ತುಸು ಹೊತ್ತು ಕಂಬಕ್ಕೊರಗಿ ಕೂತು ಪುನಃ ದೀರ್ಘ ಶ್ವಾಸಬಿಟ್ಟು ಆಮೇಲೆ ವೀಳ್ಯಹಾಕಿ ಮುಚುಮುಚ ಜಗಿಯುತ್ತಾ ಪುನಃ ಮೈಯೆಲ್ಲಾ ಮಿಂದಂತೆ ಒದ್ದೆಯಾದ ಬೆವರನ್ನೊರಸಿಕೊಂಡು ಎದ್ದುನಿಂತು, "ಇನ್ನು ನಾನು ಹೋಗಿಬರುತ್ತೇನೆ ಪೂಂಜರೆ. ಮನೆಯ ಹತ್ತಿರ ಸ್ವಲ್ಪ ಕೆಲಸವುಂಟು. ಬಹಳ ಉಪಕಾರವಾಯಿತು ನನ್ನ ಚೀಲ ಇತ್ತ ಕೊಡಿ" ಎಂದರು "ಈಗಲೇ ಹೋಗಬೇಕೆ? ಸಂಜೆ ಕಾಫಿ ಕುಡಿದು ಹೋದರಾಗದೆ? ಮಾತಾಡಿ ಮಾತಾಡಿ ಕೂತುಕೊಳ್ಳುವ" ಎಂದು ಪೂಂಜರು ಹೇಳಲು, "ಬೇಡ ಬೇಡ, ಪೂಂಜರೆ ನಮಗೆ ಬಡವರಿಗೆ ಕಾಫಿಯೋ ಮಣ್ಣೋ. ಇವತ್ತೊಂದು ಕುಡಿದರಾಯಿತೋ? ಅದಕ್ಕೂ ಹೊಟ್ಟೆಯಲ್ಲಿ ಎಡೆ ಇರಬೇಕಲ್ಲ? ಇನ್ನೊಮ್ಮೆ ಬರುತ್ತೇನೆ, ಈಗ ಹೋಗುತ್ತೇನೆ" ಎಂದು ಶೆಟ್ರು ಹೊರಡೋಣವಾದರು. ಪೂಂಜರು, 'ಆಯ್ತು ಹಾಗಾದರೆ ಇನ್ನೊಮ್ಮೆ ಕೋಳಿ ರೊಟ್ಟಿಮಾಡಿ ಕರೆಯ ಕಳುಹಿಸುತ್ತೇನೆ. ಬರಬೇಕು" ಎಂದು ಕವಾಟಿನ ಬೀಗ ತೆಗೆದು ಚೀಲವನ್ನು ತೆಗೆದು ಶೆಟ್ರಿಗೆ ಕೊಟ್ಟು, "ಇದೇ ನಿಮ್ಮ ಚೀಲವಲ್ಲ. ನಿಮಗೆ ಸರಿಯಾಗಿ ಗೊತ್ತಿದೆಯಲ್ಲ'ಎಂದರು "ಹೌದು ಇದೇ. ನೀವೇನು ಮೋಸಮಾಡುವಿರೆ ನನಗೆ ಬಡವನಿಗೆ ನನ್ನ ಇಡೀ ಜೀವಮಾನದ ಗಂಟಿದು. ಆಯ್ತು ಹೋಗಿಬರುತ್ತೇನೆ, ಅಪ್ಪಣೆಯಾಗಲಿ. ಬಹಳ ಉಪಕಾರವಾಯಿತು" ಎಂದು ಶೆಟ್ರು ಚೀಲವನ್ನು ತನ್ನ ಎಲವಸ್ತ್ರದಲ್ಲಿ ಸುತ್ತಿ ಭದ್ರವಾಗಿ ಗಂಟುಹಾಕಿ ಕಂಕುಳಲ್ಲಿಟ್ಟುಕೊಂಡು ತನ್ನ ಮನೆಗೆ ತೆರಳಿದರು. ಪೂಂಜರು, ಶೆಟ್ರು ತಲೆ ಮರೆಯಾಗುವವರೆಗೂ ಕಣ್ಣಿಟ್ಟು ಅವರನ್ನೇ ನೋಡುತ್ತಾ ನಿಂತುಕೊಂಡರು. ಫಕ್ಕನೆ ಹುಸಿನಗೆಯೊಂದು ಅವರ ತುಟಿಗಳ ನಡುವೆ ಚಮಕಿಸಿ ಮಾಯವಾಯಿತು ಅವರು ಬಾಗಿಲುಹಾಕದೆ ಬಿಟ್ಟಿದ್ದ ಕವಾಟಿನ ಬಳಿಗೆ ಹೋಗಿ ಅದರೊಳಗಿದ್ದ ಚೀಲವನ್ನು ಒಳಗಿಂದಲೇ ಬಿಚ್ಚಿ ನೋಡಿ ಒಳಗಿರುವುದು ರೂಪಾಯಿಗಳೆಂದು ದೃಢಮಾಡಿಕೊಂಡು ಡಬ್ಬನೆ ಬಾಗಿಲು ಮುಚ್ಚಿ ಬೀಗಹಾಕಿದರು.

೨

"ತಂದಿದ್ದೀರಿ ರೂಪಾಯಿ ಪೂಂಜರ ಕೈಯಿಂದ ಸುಳ್ಳು ಹೇಳಬೇಡಿ ಸತ್ಯ ಹೇಳಿ. ನನಗೆ ಬೇಕಾದುದು ಬರೇ ನಾಲ್ಕು ರೂಪಾಯಿ. ನಿಮಗೆ ಬಡ್ಡಿ ಕೂಡಿಸಿ ಕೊಡುತ್ತೇನೆ. ಸಾಲವಾದರೂ ಕೊಡಿ. ನನಗೆ ನಾಲಿಗೆ ಮಾರಿನೂರಿ ಸಾಕಾಯಿತು. ಇವತ್ತು ಖಂಡಿತ ಕೊಡುತ್ತೇನೆಂದು ಹೇಳಿದ್ದೇನೆ. ಕೊಡದಿದ್ದರೆ ಮರ್ಯಾದೆ ಉಳಿಯುವಹಾಗಿಲ್ಲ" ಎಂದಳು ಶೆಟ್ರ ಹೆಂಡತಿ ಸೀತಮ್ಮ. "ನಿನಗೇನು ಧಿಮಾಕು, ನನ್ನ ಹತ್ತಿರ ಚಿಕ್ಕಾಸಿಲ್ಲ ಪೂಂಜರು ಇವತ್ತು ನಾಳೆಯೆಂದು ವಾಯಿದೆ ಇಡುತ್ತಾ ಹೋಗುತ್ತಾರೆ ನಿನ್ನೆ ನಾನು ಅವರಲ್ಲಿ ಸರಿ ಕೋಳಿ ಪಲ್ಯ ಮತ್ತು ಪಾಯಸ ಹೊಡೆದುಬಂದುದು ಮಾತ್ರ. ಆ ಹಣ ಬೇಗ ಸಿಗುವ ಹಾಗೆ ತೋರುವುದಿಲ್ಲ" ಎಂದರು ಶೆಟ್ರು ಹುಸಿ ನಕ್ಕು. "ಅದೆಲ್ಲ ಸುಳ್ಳು ಕೊಡುವಿರೋ ಇಲ್ಲವೋ ಹೇಳಿ. ನನ್ನ ಉಂಗುರವನ್ನಾದರೂ ಅಡವಿಟ್ಟು ನನಗೀಗ ೪ರೂಪಾಯಿ ಯಾರಿಂದಾದರೂ ಪಡೆಯದೆ ನಿರ್ವಾಹವಿಲ್ಲ ಸಿಕ್ಕಸಿಕ್ಕವರ ಹತ್ತಿರ ಹೇಳಿ ಬೈಯುತ್ತೊಡಗಿದ್ದಾಳೆ ನಿಮ್ಮ ತಮ್ಮನ ಹೆಂಡತಿ ನನ್ನ ಕೈಯಲ್ಲಿ ಹೇರಾಳ ಹಣವಿದ್ದು ಬೇಕೆಂತ ಬೇರೆಯವರಿಂದ ಹಣ ತೆಗೆದುಕೊಂಡು ಬಡ್ಡಿಗೆ ಕೊಟ್ಟು ಹಣಮಾಡುವುದಂತೆ ಇವತ್ತು ಕೊಡದಿದ್ದರೆ ಇನ್ನು

THE ASIAN ASSURANCE COMPANY, LTD.

ASIAN BUILDINGS - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,15,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,391	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
,, M Shivarama Rao, Organizer, Puttur.

Or

Sri J. A. PUTRAN,
Branch Manager, MANGALORE.

ಏನು ಹೇಳುವಳೋ?" ಎಂದಳು ಸೀತಮ್ಮ "ನಿಮಗೆ ಹೆಂಗಸರಿಗೆ ಗಂಡಸರ ಕಷ್ಟವೇ ನು ಗೊತ್ತು? ಇವತ್ತಿಗೆ ಪುಡಿಗೆ ಮುಕ್ಕಾಲಿಲ್ಲದೆ ಮೇಲೆ ಕೆಳಗೆ ನೋಡುತ್ತಿದ್ದೇನೆ ನಾನು. ಎಲ್ಲಿಂದ ಕೊಡುವುದು ನಿನಗೆ 4 ರೂಪಾಯಿ." ಎಂದರು ಶೆಟ್ರು "ನಿಮ್ಮ ಹತ್ತಿರ ಇದ್ದರೆ? ನೀವು ಎಷ್ಟು ಗುಟ್ಟು ಮಾಡಿದರೂ ನನಗೆ ತಿಳಿಯದಿರುವುದೇ? ಏನು ಗಂಡಂದಿರ ಭ್ರಾಂತು! ಹೆಂಡತಿಯನ್ನು ಕೂಡಾ ವಂಚಿಸಿ ಯಾವ ವಿಷಯವನ್ನಾದರೂ ಗುಟ್ಟಾಗಿರಿಸಲು ಸಾಧ್ಯವಿದೆಯೆಂದು ಭಾವಿಸಿದಿರೇ? ಕಂಕುಳಲ್ಲಿ ಮರೆಸಿ ವಸ್ತ್ರ ಹೊದೆದುಕೊಂಡು ಬಂದು ಮೆಲ್ಲಗೆ ಪೆಟ್ಟಿಗೆ ಬೀಗತೆಗೆದು ರೂಪಾಯಿ ಚೀಲವನ್ನು ಗುಟ್ಟಿನಲ್ಲಿ ಇಡುವುದನ್ನು ನಾನು ನೋಡಿದ್ದೇನೆ. ನನಗೀಗ 4 ರೂಪಾಯಿ ಕೊಡದಿದ್ದರೆ ನಾಳೆಕ್ಕೆ ಎಂಟು ರೂಪಾಯಿ ತೆಗೆಯಲು ನನಗೆ ಸಾಧ್ಯವುಂಟೋ ಇಲ್ಲವೋ ನೋಡುತ್ತೇನೆ" ಎಂದಳು ಶೀತಮ್ಮ ಮುಗುಳ್ನಗೆ ನಗುತ್ತಾ. "ನಿನ್ನೊಡನೆ ಚರ್ಚಿಸಿ ಫಲವಿಲ್ಲಪ್ಪ! ಹೆಂಗಸರು ಯಾವಾಗಲೂ ಗಂಡಸರಿಗಿಂತ ಬಿಗಿ! ಪೂಂಜರು ಕಡೆಗೆ ಹೇಗಾದರೂ 500 ರೂಪಾಯಿ ಕೊಟ್ಟರು ನಿನಗಲ್ಲದಿದ್ದರೆ ಇನ್ನಾರಿಗೆ ಆ ರೂಪಾಯಿ ಮಕ್ಕಳು ಮರಿಗಳಿರುವರೇ? ಇಗೋ ಬೀಗದ ಕೈ ನಾಲ್ಕು ರೂಪಾಯಿ ಮಾತ್ರ ತೆಗಿ ಚೀಲದಿಂದ. ಹೆಚ್ಚು ತೆಗೆದರೆ ಜಾಗ್ರತೆ!" ಎಂದು ಶೆಟ್ರು ಸೊಂಟದಿಂದ ಬೀಗದ ಗೊಂಚಲನ್ನು ಗೈಲೆಂದು ನೆಲಕ್ಕೆಸೆದರು. "ಮೊದಲೇ ಕೊಡುತ್ತಿದ್ದರೆ ಇಷ್ಟೆಲ್ಲಾ ಚರ್ಚೆಯಿತ್ತೇ?" ಎಂದು ಶೀತಮ್ಮನು ಬಹಳ ಸಂತೋಷದಿಂದ ಬೀಗದ ಕೈ ಹೆಕ್ಕಿ ಒಳಗೆ ಹೋಗಿ ಪೆಟ್ಟಿಗೆಯ ಬೀಗತೆಗೆದು ಚೀಲದ ಬಾಯಿ ಬಿಚ್ಚಿ ಒಳಗೆ ಕೈಹಾಕಿ ಒಂದು ಹಿಡಿ ನಾಣ್ಯಗಳನ್ನು ಹೊರಗೆ ತೆಗೆದು ನೋಡುತ್ತಾಳೆ—ನೋಡುವುದೇನನ್ನು? ಎಲ್ಲಾ ಅರ್ಧಾಣೆ ಡಬ್ಬು! ಪುನಃ ಕೈಹಾಕಿ ಇನ್ನೊಂದು ಮುಷ್ಟಿ ತೆಗೆದು ನೋಡುತ್ತಾಳೆ, ಅವೂ ಅರ್ಧಾಣೆ ಡಬ್ಬು! ಎಷ್ಟು ಸಲ ತೆಗೆದರೂ ಮತ್ತೂ ಅರ್ಧಾಣೆ ಡಬ್ಬೇ ಹೊರತು ಒಂದು ರೂಪಾಯಿ ಕೂಡಾ ಶೀತಮ್ಮನಿಗೆ ಸಿಗಲಿಲ್ಲ ಅವಳು ದಿಗಿಲುಗೊಂಡಳು. ಏನು ಮಾಡುವುದೆಂದು ತೋಚಲಿಲ್ಲ ಅವಳಿಗೆ ತುಸು ಹೊತ್ತು ಅವಾಕ್ಕಾಗಿ ನಿಂತು ಬಿಟ್ಟಳು ಆ ಮೇಲೆ, "ಓಯಿ, ಹೋಯಿ, ಇಲ್ಲಿ ಬನ್ನಿ, ಬೇಗಬನ್ನಿ, ಓಡಿ ಬನ್ನಿ" ಎಂದು ಕೂಗಿದಳು. ಶೀತಮ್ಮನಿಗೆ ಅಕ್ಕಳೆಯೆಂದರೆ ಭಯ. ಅದನ್ನು ಕಂಡ ಕೂಡಲೆ ಅವಳು ಭಯ ಚಕಿತಳಾಗಿ ಒಮ್ಮೆಯೇ ಚೀರಿಬಿಡುವಳು ಹಾಗೆಯೇ ಪೆಟ್ಟಿಗೆಯೊಳಗೇನೋ ಅಕ್ಕಳೆ ಸೇರಿರಬೇಕೆಂದು ಶೆಟ್ರು, "ನಿನ್ನನ್ನು ಕೊಂಡುಹೋಗುವುದೆ ಅಕ್ಕಳೆ! ಇಷ್ಟು ಪ್ರಾಯವಾದರೂ ನಿನ್ನಾ ಅಕ್ಕಳೆಯೆಂದರೆ ಭಯ ರಂಡೆಗೆ! ಅದೇನು ಹುಲಿಯೋ ಹಾಗೆ ಕೂಗಲಿಕ್ಕೆ ನೀನು" ಎಂದು ಗದರಿಸುತ್ತಾ ಒಳಗೆ ಸರಿದು ಶೀತಮ್ಮನನ್ನು ದೂಡಿ, "ಸರಿಯತ್ತ. ಚೀಲದಿಂದ 4 ರೂಪಾಯಿ ತೆಗೆಯಲಿಕ್ಕೆ ಇಷ್ಟೆಲ್ಲಾ ಗಲಾಟೆ! ಯಾರಾದರೂ ಈ ಗಲಾಟೆ ಕೇಳಿ ಓಡಿಬಂದರೆ" ಎಂದು ಕಣ್ಣು ಅರಳಿಸಿ ನೋಡಿ ಚೀಲದೊಳಗಿಂದಲೇ ಕೈಮಾಡಿ ನಾಲ್ಕು ರೂಪಾಯಿಗಳನ್ನು ಹೊರತೆಗೆದು ನೋಡುವಾಗ ಅರ್ಧಾಣೆ ಡಬ್ಬುಗಳನ್ನು ಕಂಡು ಚಕಿತನಾದನು. ತನ್ನ ಕಣ್ಣನ್ನು ತಾನೇ ನಂಬದ ಅವನ್ನು ಕುಗಿಸಿ ತಿರುಗಿಸಿ ನೋಡಿದನು. ಪುನಃ ಚೀಲದೊಳಗೆ ಕೈಹಾಕಿ ಒಂದು ಮುಷ್ಟಿ ನಾಣ್ಯತೆಗೆದು ಪರೀಕ್ಷಿಸಿದಾಗ ಅವೂ ಅರ್ಧಾಣೆ ಡಬ್ಬು! ಇದೇ ರೀತಿ ಹಲವು ಸಾರಿ ಪರೀಕ್ಷಿಸಿದರೂ ಒಂದೇ ಒಂದು ರೂಪಾಯಿ ಸಿಗಲಿಲ್ಲ! ಕಡೆಗೆ ಇಡೀ ಚೀಲವನ್ನೇ ತೆಗೆದು ನೆಲಕ್ಕೆ ಸುರುವಿದನು. ಅರ್ಧಾಣೆ ಡಬ್ಬುಗಳು ಹೊರಗುರುಳಿದವು "ಏನು ಮಾಡಿದೆ ರಂಡೆ, ಹೇಳು! ಬೇಗ ಹೇಳು!!" ಎಂದು ಧೃತಿಗೆಟ್ಟು ಹೆಂಡತಿಯ ಜುಟ್ಟು ಹಿಡಿದು ಎರಡು ಗುದ್ದಿದನು ಉನ್ಮತ್ತನಂತೆ ಕೋಣೆಯಲ್ಲಿ ಅತ್ತಿತ್ತ ಹಾರಾಡಿದನು. "ಧರ್ಮಸ್ಥಳ ಮಂಜುನಾಥ ದೇವರಾಣೆ ನಾನೇನೂ ಮಾಡಿಲ್ಲ ನಾನು ಬೀಗ ತೆಗೆದು ಚೀಲದ ಬಾಯಿ ಬಿಚ್ಚಿ ನೋಡುವಾಗಲೇ ಅದರೊಳಗಿದ್ದುದು ಅರ್ಧಾಣೆ ಡಬ್ಬು. ನೀವು ತಂದುದೇ ಅರ್ಧಾಣೆ ಡಬ್ಬು! ಏನು ಮಾಡಿದಿರಿ! ಅಯ್ಯೋ ಯಾರು ಕೊಟ್ಟರು ನಿಮಗೀ ಅರ್ಧಾಣೆ ಡಬ್ಬುಗಳನ್ನು! ಹೊಟ್ಟೆಬಾಯಿಕಟ್ಟಿ ಮಾಡಿಟ್ಟದ್ದೆಲ್ಲಾ ವ್ಯರ್ಥವಾಯಿತಲ್ಲಾ! ಅಯ್ಯೋ! ಎಂದು" ಎದೆ ಬಡಕೊಳ್ಳಲಾರಂಭಿಸಿದಳು ಸೀತಮ್ಮ.

"ರಂಡೆ, ಬಾಯಿ ಮುಚ್ಚು! ಮಾತಾಡಬೇಡ! ನಾನು ತಂದುದು ಮೊಹರದ 500 ರೂಪಾಯಿ ಪೂಂಜರು ನನ್ನೆದುರಲ್ಲೇ "ಟ್ಟ್ಯಂಯಿ ಬ್ಯಾಂಯಿ" ಎಂದು ಹೊಡೆದು 500 ರೂಪಾಯಿಗಳನ್ನು ಲೆಕ್ಕಮಾಡಿಕೊಟ್ಟುದು. ನಾನೇ ಅವರು ಕೊಟ್ಟ ಚೀಲದೊಳಗೆ ಅವನ್ನೆಲ್ಲಾ ಹಾಕಿ ಬಾಯಿಕಟ್ಟಿದುದು. ನಾನೇ ಹಿಡಕೊಂಡು ಬಂದು ಪೆಟ್ಟಿಗೆಯೊಳಗಿಟ್ಟುದು. ರಂಡೆ ಏನು ಮಾಡಿದೆ ಹೇಳು! ನೀನೇ ಏನಾದರೂ ಮೋಸಮಾಡಿರಬೇಕು! ಸತ್ಯ ಹೇಳು! ಯಾರಿಗೆ ಕೊಟ್ಟಿರುವೆ ಹೇಳು! ಇಲ್ಲವಾದರೆ ಗುದ್ದಿ ಗುದ್ದಿ ಕೊಲ್ಲುತ್ತೇನೆ ನೋಡು! ಎಂದು ಹೆಂಡತಿಯ ಮೈಮೇಲೆ ಬೀಳಹೋದರು ಶೆಟ್ರು ಪುನಃ ಹುಚ್ಚನಂತಾಗಿ. "ಅಯ್ಯೋ ದೇವರೇ ನನ್ನನ್ನೇಕೆ ಕೊಲ್ಲುವುದು ನೀವು? ನಾನೇನು ಮಾಡಿದ್ದೇನೆ! ನಿಮ್ಮ ಪಾದಸಾಕ್ಷಿ ಯಾವದೂ ನಾನೇನೂ ಮಾಡಿಲ್ಲ ನನಗೇನೂ ಗೊತ್ತಿಲ್ಲ. ನಾನೀ ಚೀಲವನ್ನು ಮುಟ್ಟುವುದು ಇವೇ ಮೊದಲು" ಎಂದು ಸೀತಮ್ಮನು ಗೋಳಿಡುತ್ತಾ ಶೀನ ಶೆಟ್ರು ಕಾಲಿಗ ಬಿದ್ದಳು. ಶೆಟ್ರಿಗೆ ಸ್ವಲ್ಪ ವಿಚಾರ ಬಂತು. ಅವರು ಸೀತಮ್ಮನನ್ನು ಒದೆದು ದೂಡಿ ಅತ್ತಿತ್ತ ತಿರುಗಿದರು ಆ ಮೇಲೆ ಕೂತು ಅರ್ಧಾಣೆ ಡಬ್ಬುಗಳನ್ನೆಲ್ಲಾ ಹೆಕ್ಕಿ ಲೆಕ್ಕಮಾಡಹತ್ತಿದರು. 500 ರೂಪಾಯಿಗಳ ಬದಲಿಗೆ ಸರಿಯಾಗಿ 500 ಅರ್ಧಾಣೆ ಡಬ್ಬುಗಳು! 'ಇದು ಹೇಗಾಯಿತು! ಈ ವಂಚನೆ ನಡಿಸಿದವರಾರು? ಅವರಿಗೆ ನನ್ನ ಕುತ್ತಿಗೆಗೇನೇ ಕತ್ತಿ ಇಡಬಹುದಿತ್ತಲ್ಲ' ಎಂದು ಶೆಟ್ರು ಮೌನವಾಗಿ ಆಲೋಚಿಸತೊಡಗಿದರು. "ಸರಿ ಕೋಳಿ ಕಿಂದು ಪಾಯಸ ಹೊಡೆದು



ಭಾವೀ ಮಾವನು ನಿನ್ನನ್ನು ಬೀದಿಯಲ್ಲಿ ನಿಲ್ಲಿಸುವುದು.

ಎಲ್ಲಿ ಮತಿಗೆಟ್ಟಿದ್ದೀರೋ ಏನೋ? ಇಲ್ಲಿ ಬಂದು ರಂಡೆ ಏನು ಮಾಡಿದೆ? ಎಂದು ನನಗೆ ಹೊಡೆಯುತ್ತೀರಿ ಆ ಪೂಂಜರೇನೂ ಸಾಮಾನ್ಯರಲ್ಲ ಅವರು ಆಸ್ತಿಮಾಡಿದುದೇ ಬಡಬಗ್ಗರ ಕುತ್ತಿಗೆ ಕೊಯ್ದು, ಹಣಕ್ಕಾಗಿ ಕೊಲೆಮಾಡಲೂ ಹೇಸುವವರು ಅವರಲ್ಲವೆಂದು ನಾನು ಕೇಳಿದ್ದೇನೆ ಒಂದೆರಡು ಕೊಲೆ ಕೂಡಾ ಮಾಡಿದ್ದಾರಂತೆ? ಎಂದು ಸಿಡಿಕಿದಳು ಸೀತಮ್ಮ ಶೆಟ್ರು ಹೊಡೆದ ನೋವನ್ನು ಸಹಿಸಲಾರದೆ.

ಅಯ್ಯೋ! ಗೊತ್ತಾಯಿತು, ಆ ಕೋಳಿ ಪಲ್ಯ ಮತ್ತು ಪಾಯಸ ನನ್ನನ್ನು ಕೊಂದಿತು. ನನಗ್ಯಾಕೆ ಬೇಕಿತ್ತಪ್ಪ ಆ ಊಟ! ಅಯ್ಯೋ ಶಿವ! ಇನ್ನು ನನ್ನ ಗತಿಯೇನು? ಈ ಮುದಿಪ್ರಾಯದಲ್ಲಿ ನಾವಿಬ್ಬರೂ ಬೇಡಿ ತಿನ್ನಬೇಕಾಗುವ ಗತಿ ಬಂತಲ್ಲ! ಅಯ್ಯೋ ದೇವರೆ! ನಾನಿನ್ನೇನು ಮಾಡಲಿ! ಯಾರಿಗೆ ಮೊರೆ ಇಡಲಿ" ಎಂದು ಶೆಟ್ರು ಗೋಳಿಟ್ಟು ತಲೆಯನ್ನು ನೆಲಕ್ಕೆ ಜಪ್ಪಿಕೊಂಡು ಬೋರ್ಲೆ ಬಿದ್ದರು.

"ದೊಡ್ಡ ಜಮೀನ್ದಾರರೂ, ಮನೆತನವಂತರೂ ಸುಪ್ರಸಿದ್ಧರೂ ಆದ ಸಾಂಬ್ರಾಣಿಗುತ್ತಿನ ಸಂಕಪ್ಪ ಪೂಂಜರು, ಬಡ ಮುದುಕ ಶೀನಶೆಟ್ರಿಗೆ ಮೋಸಮಾಡಿದರಂತೆ ರೂಪಾಯಿ ಬದಲಿಗೆ ಅರ್ಧಾಣೆ ಡಬ್ಬು ಕೊಟ್ಟು ವಿಶ್ವಾಸಘಾತುಕಮಾಡಿದರಂತೆ" ಎಂದು ಪಟ್ಟಸುದ್ದಿಯು ಊರೆಲ್ಲೆಲ್ಲಾ ತುಂಬಿ ಗುಜುಗುಜಿಸಿತು. ಎಲ್ಲರೂ ಪೂಂಜರನ್ನು ಛಿ! ಛಿ! ಎನ್ನಹತ್ತಿದರು. ಪೂಂಜರು ಶೀನಶೆಟ್ರಿಗೆ ರೂ 500ನ್ನು ಲೆಕ್ಕ ಮಾಡಿಕೊಟ್ಟು ತನ್ನದೇ ಆದೊಂದು ಚೀಲವನ್ನು ಸಹ ಅವರಿಗೆ ಕೊಟ್ಟು ಅವರು ಆ ರೂಪಾಯಿಗಳನ್ನು ಅದರೊಳಗೆ ಹಾಕಿ ಬಾಯಿಕಟ್ಟಿದುದೇನೋ ನಿಜ. ಆದರೆ ಶೆಟ್ರನ್ನು ಊಟಕ್ಕೆ ಕರೆದೊಯ್ಯುವಾಗ ಆ ರೂಪಾಯಿ ಚೀಲವನ್ನು ಕವಾಟಿನೊಳಗಿಟ್ಟು ಬೀಗಹಾಕಿದರು. ಕಡೆಗೆ ಚೀಲ ತೆಗೆದು ಕೊಡುವಾಗ, 500 ಅರ್ಧಾಣೆ ಡಬ್ಬು ತುಂಬಿಸಿರುವ ಅಂಥಹದೇ ಆದ ಮತ್ತೊಂದು ಚೀಲವನ್ನು ಶೆಟ್ರಿಗೆ ಕೊಟ್ಟರು ಈ ಪ್ಲೇನನ್ನೆಲ್ಲಾ ಅವರು ಮೊದಲೇ ಮಾಡಿದ್ದರು. ತನ್ನ ಕುರಿತು ಊರಲ್ಲಿ ಎಂತಹ ಸುದ್ದಿ ಹಬ್ಬಿದ್ದರೂ, ತನ್ನ ನೆಂಟರಿಷ್ಟರು ಏನೆಲ್ಲಾ ಹೇಳಿ ತಮಾಷೆ ಮಾಡಿದರೂ ಪೂಂಜರು ಕಿವಿಗೆ ಹಾಕಿಕೊಳ್ಳದೆ, 'ಮುದುಕನಿಗೆ ಮುದಿಭ್ರಾಂತು ಹಿಡಿದಿದೆ. ಅದನ್ನಿಳಿಸದೆ ಆಗುವುದಿಲ್ಲ ನಾನು ಹಲವು ಜನರ ಸಮಕ್ಷಮದಲ್ಲಿ ಅವನಿಗೆ ರೂ. 500 ಲೆಕ್ಕಮಾಡಿಕೊಟ್ಟಿರುವಾಗ ಅರ್ಧಾಣೆ ಡಬ್ಬು ಕೊಟ್ಟಿದ್ದೆಂದು ಹೇಳುವುದೆಂದರೆ ಅರ್ಥವೇನು? ಅವನ ದುಡ್ಡು ಯಾರಿಗೆ ಬೇಕಾಗಿದೆ! ಅವನಿಗೇನೋ ಹುಚ್ಚು ಹಿಡಿದಿರಬೇಕು" ಎಂದು ಶೀನಶೆಟ್ರನ್ನು ಬೈದು ಭಂಗಿಸಿ ಅವರನ್ನು ನಾನಾ ರೀತಿ ಬೆದರಿಸುತಿದ್ದರು.

೩

ಪೂಂಜರು ಒಂದುದಿನ ಮುಂಜಾನೆ ಎದ್ದು ಹೆಬ್ಬಾಗಿಲಿಂದ ಹೊರಗೆ ಹೋಗುವುದರಲ್ಲಿರುವಾಗ ಬಯಲಲ್ಲಿ ದೂರದಲ್ಲಿ ಶೀನಶೆಟ್ರು ತಲೆಬಿಟ್ಟುಹಾಕಿಕೊಂಡು ಬರುವುದನ್ನು ಕಂಡರು. ಪೂಂಜರ ಕಾಲಬಳಿಯಲ್ಲಾದರೂ ಬಿದ್ದು ನ್ಯಾಯಬೇಕೆಂಬುದೇ ಅವರ ನಿರ್ಧಾರವಾಗಿತ್ತು. ಅವರನ್ನು ಕಂಡವರೇ ಪೂಂಜರು ಥಟ್ಟನೆ ಒಳಗೆ ಸರಿದು ಹೆಬ್ಬಾಗಿಲು ಬಂದುಮಾಡಿ ನಾಯಿಗಳನ್ನು ಬಿಡಿಸಿದರು. ಶೀನಶೆಟ್ರು ಹೆಬ್ಬಾಗಿಲನ್ನು ಸಮೀಪಿಸುವಾಗ ನಾಲ್ಕು ನಾಯಿಗಳು ಗೌ ಗೌ ಎಂದು ಅವರ ಕಡೆಗೋಡಿದುವು. ಕೈಯಲ್ಲಿ ದಂಟೆ ಇದ್ದುದರಿಂದ ಬದುಕಿದರವರು. ಇಲ್ಲವಾದರೆ ಭಯಂಕರ ನಾಯಿಗಳು ಅವರನ್ನು ಹರಿದು ಕೊಂದೇ ಹಾಕುತ್ತಿದ್ದುವು. ದಂಟೆಯಿಂದ ಎಷ್ಟು ಹೊಡೆದು ಬೆದರಿಸಿದರೂ ನಾಯಿಗಳು ಶೀನಶೆಟ್ರನ್ನು ಒಂದು ಹೆಜ್ಜೆ ಮುಂದಿಡಬಿಡಲಿಲ್ಲ. ಅವರು ನಾಯಿಗಳೊಡನೆ ಬಹಳವಾಗಿ ಹೋರಾಡಿ ಸೋತು

ಹಿಂದಿನ ಪುಟನೋಡಿರಿ.



ಮಹರ್ಷಿ ಅರವಿಂದಘೋಷರು

ಫ್ರೆಂಚ್ ಮಹನೀಯರೊಬ್ಬರ ಅಭಿಪ್ರಾಯ.

(ಶ್ರೀ. ಎಸ್ ಎಸ್ ಶೆಟ್ಟಿ, ಮಂಗಳೂರು ಇವರಿಂದ)

ಅರವಿಂದರು ಭರತಖಂಡದ ಮಹಾ ಋಷಿಗಳಲ್ಲಿ ಕೊನೆಯವರು. ಅವರ ಸೂತ್ರಗಳು ಚೇತನ ಶಕ್ತಿಯನ್ನು ಆವಿರ್ಭವಿಸುವಂತಹವುಗಳು. ಮಾನವನ ನಿಗೂಢ ಚೇತನ ಶಕ್ತಿಯ ಅಂತರಾಳಕ್ಕೆ ಮುಟ್ಟುವ ಅವರ ಬೋಧನೆಗಳು ಅದ್ವಿತೀಯವಾದವುಗಳು ಮತ್ತು ವ್ಯವಹಾರ್ಯವಾದುವುಗಳು. ಅವರ ಭಾವನೆಗಳು ನಿಜತ್ವದಿಂದ ಕೂಡಿದ ಆಧಾರಯುಕ್ತ ಸಾಧನಗಳು ಸರ್ವತ್ರ ದೈವತ್ವವನ್ನು ವ್ಯಾಪಕಗೊಳಿಸುವುದು ಅವರ ಗುರಿ. ಭರತಖಂಡದ ದಿವ್ಯಋಷಿಗಳಾದ ಅರವಿಂದರು ವಿಶ್ವದ ಭಾವೀ ಉತ್ಪಾದನೆಯ ಸ್ಫುರಣಾತ್ಮಕ ಧನುಸ್ಸನ್ನು ತಮ್ಮ ಹಸ್ತದಲ್ಲಿ ಧರಿಸಿದ ಧರ್ಮ, ಜ್ಞಾನ ಮತ್ತು ಧೀರತೆಯ ಪ್ರತಿಮೂರ್ತಿ.

●

ಇತ್ತೀಚೆಯ ವರೆಗೆ ಯೋಗಿ ಅರವಿಂದರ ಬೋಧೆಗಳು ಹಿಂದೂದೇಶದ ಜನತೆಗೆ ಅಥವಾ ಇಂಗ್ಲಿಷು ಬಲ್ಲ ವಾಚಕ ವೃಂದಕ್ಕೆ ಮಾತ್ರ ಸೇರಿದ್ದುವು. ಈಗೀಗ ಅವರ ಗ್ರಂಥಗಳು ಜಗತ್ತಿನ ಹಲವು ಭಾಗಗಳಲ್ಲಿ ಪರಿವರ್ತನೆ ಹೊಂದಿರುವು. ದಿವ್ಯೋದಯವು ಅವರ ಗ್ರಂಥಗಳಲ್ಲಿ ಫ್ರೆಂಚು ಭಾಷೆಗೆ ತರ್ಜುಮೆ ಹೊಂದಿದ 'ತರ್ಯ' ಎಂಬ ಗ್ರಂಥವು ಕೆಲವೇ ಸಮಯದೊಳಗೆ ಬಿಕರಿಯಾಗಿದೆ. ಏಕೆಂದರೆ, ಈಗ ದೊರೆಯುವುದು ದುರ್ಲಭವಿದೆ. ಅರವಿಂದರ ಗ್ರಂಥದ ವಿಚಾರಗಳನ್ನು ತತ್ವಬೋಧೆಗಳನ್ನು ಅರಿತುಕೊಳ್ಳಲು ಜಗತ್ತೀಗ ಕತ್ತು ನೀಡತೊಡಗಿದೆ. ದಿನದಿನಕ್ಕೆ ಅವರ ಗ್ರಂಥಗಳ ಬೆಳವಣಿಗೆಯು ದೇಶದೇಶಗಳಲ್ಲಿ ಬೇರೆಬೇರೆ ಭಾಷೆಗಳಲ್ಲಿ ವಿಸ್ತಾರ ಹೊಂದುತ್ತಿವೆ. ಫ್ರೆಂಚು ಭಾಷೆಯಲ್ಲಿ ಅವರ ಉದ್ಬೋಧೆಗಳ ಕುರಿತಾಗಿ ಒಂದು ಗ್ರಂಥಮಾಲೆಯು ಪ್ರಕಟವಾಗುತ್ತಿದೆ. ಗ್ರಂಥಮಾಲೆಯು ಮುನ್ನುಡಿಯಲ್ಲಿ,ಪೌರ್ವಾತ್ಯ ತತ್ವದಲ್ಲಿ ಅತೀವ ಆಸಕ್ತಿಯುಳ್ಳ ತಮ್ಮ 'Les Vedantistes Moderns' ಎಂಬ ಗ್ರಂಥಮಾಲೆಯಲ್ಲಿ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮ ಗಾಂಧಿ ಮೊದಲಾದ ಮಹಾಪುರುಷರ ವಿಚಾರ, ತತ್ವಬೋಧೆ, ಮತ್ತುಜೀವನ ರಹಸ್ಯಗಳನ್ನು ಸಂಗ್ರಹಿಸಿರುವ, ಜೀನ್ ಹರ್ಬರ್ಟರು ಹೀಗೆನ್ನುವರು.

"ಶ್ರೀ ಅರವಿಂದರ (Thoughts & Glimpses ಎಂಬ) ಗ್ರಂಥದ ಕೆಲವೇ ಹಾಳೆಗಳನ್ನು ತಿರುವಿಸಿದರೆ, ನಮಗೆ ಅರವಿಂದ ಘೋಷರ ತತ್ವದ ಆಳವು ಮನನವಾಗಬಹುದಾಗಿದೆ. ಪ್ರತಿಯೊಂದು ಪರಿಚ್ಛೇದವು ಅತ್ಯಂತ ಮಹತ್ವದ ವಿಚಾರಗಳಿಂದ ಕೂಡಿದ್ದು ಹಲವು ಅಧ್ಯಾಯಗಳನ್ನೀಗ ವಿಸ್ತರಿಸಲರ್ಹವಾದ ಭಾವ ವಿಶೇಷಗಳನ್ನೊಳಗೊಂಡಿರುವ ವೈಶಿಷ್ಟ್ಯದಿಂದ ತುಂಬಿಕೊಂಡಿರುವುದು"

"ಈ ಪುಸ್ತಕದಲ್ಲಿ ತೋರುವ ಹಲವು ಭಾವನೆ, ಮತ್ತು ಬೋಧೆಗಳು ಆರಂಭದಲ್ಲಿ ಫ್ರೆಂಚ ಓದುಗನಲ್ಲಿ ಆಶ್ಚರ್ಯಕ್ಕೆಡೆಕೊಡಬಹುದು. ವಾಚಕನು ಈ ಪುಸ್ತಕದ ವಿಚಾರಗಳನ್ನು ಸುಲಭವಾಗಿ ಗ್ರಹಿಸಬಲ್ಲನೆಂಬುದರಲ್ಲಿ ಇವರ ಮಹತ್ವಿಕೆ ನಿಂತಿಲ್ಲ ಅದಕ್ಕಿಂತ ಮಿಗಿಲಾದ ವಿಶಿಷ್ಟತೆಯು ಇದರಲ್ಲಿದೆ ಶ್ರದ್ಧೆ ವಹಿಸಿ ಓದುವವನು ಅವುಗಳನ್ನು ತನ್ನ ಭಾವನೆಯಲ್ಲಿ ಅನುಭವಿಸುವನು, ಮತ್ತು ಆನಂದ ತಲ್ಲೀನತೆಯನ್ನು ಗಳಿಸುವನು. ನವ ಓದುಗನನ್ನು ತಲ್ಲಣಗೊಳಿಸುವ ನವಭಾವಗಳು, ಸ್ವತಂತ್ರವಾಗಿ ಯೋಚಿಸಲು ಪ್ರೇರೇಪಿಸುವ ಉನ್ನತ ವಿಚಾರಗಳು, ತನ್ಮಯನಾಗಿ ಮಾಡಿಬಿಡಬಲ್ಲ ಆನಂದ ಪ್ರಬೋಧಕ, ಸಾಹಸೋದ್ರೇಕ ವಿಷಯ ವಿವರಣೆಗಳು ಈ ಗ್ರಂಥದಲ್ಲಿವೆ. ಇದರಿಂದಾಗಿ ಇವುಗಳನ್ನು ಮನನ ಮಾಡುವವನು ಆನಂದಾತಿಶಯದ ಸಂಪತ್ತನ್ನು ಗಳಿಸಬಲ್ಲನು."

ಅರವಿಂದರ ಸೂತ್ರಗಳನ್ನು ಓದಿ, ವಿಮರ್ಶಾತ್ಮಕ ದೃಷ್ಟಿಯಿಂದ, ಪರಿಶೀಲಿಸುವುದರಿಂದ, ಓದುಗನಲ್ಲಿ ಅತೀವ ಚೇತನಾತ್ಮಕ ಶಕ್ತಿಯು ಮೇಲೆದ್ದು ಬರುವುದು. ಮನಸ್ಸು ಪರಿಪುಷ್ಟಸತ್ವಶಕ್ತಿಯಿಂದ ಪುಷ್ಟಿ ಹೊಂದುವುದು; ಆಂತರ್ಯ ವ್ಯಾಯಾಮವು ಮನಸ್ಸನ್ನು ಸಶಕ್ತಗೊಳಿಸುವುದು, ಉತ್ಕೃಷ್ಟತೆಯು ಕೈಗೂಡುವುದು. ಈ ಅಮೋಘತತ್ವದ ಅಮೂಲ್ಯ ಫಲವು ಅಖಂಡವಾಗಿ ಕೈಗೂಡಬೇಕಾದರೆ, ಬರೇ ಬುದ್ಧಿಗಮ್ಯವಾದ ವಿಚಾರದಲ್ಲೇ ತಿರುಗಿಸಿ ನೋಡಿದರೆ ಸಾಲದು, ತಾನೇ ಈ ತತ್ವದಲ್ಲಿ ತನ್ಮಯನಾಗಬೇಕು.

ಅರವಿಂದರು ಬುದ್ಧಿಶಕ್ತಿಗೇನೇ ಸಂಪೂರ್ಣ ಪ್ರಾಧಾನ್ಯತೆ ಕೊಡುವುದಿಲ್ಲ, ಬರೇ ತಿಳುವಿನ ಜನತೆಗೆ ಮಾತ್ರ ತಾನು ಬೋಧಿಸಲು ಹೊರಟಿಲ್ಲ. ಮಾನವನ ನಿಗೂಢ ಚೇತನಾಶಕ್ತಿಯ ಅಂತರಾಳಕ್ಕೆ ಮುಟ್ಟುವಂತೆ ಬೋಧಿಸುವುದೇ ಅವರ ತತ್ವದ ಆದರ್ಶತೆಯು. ಬರೇ ಬುದ್ಧಿಗಮ್ಯ ವಿಚಾರವು ಪರಿಪೂರ್ಣವಲ್ಲ, ಪೂರ್ಣಸಿದ್ಧಿಯಲ್ಲ ಅದು ಶುಷ್ಕವು ಎಂದು ಅವರು ಹಿಂದಣ ಋಷಿಮುನಿಗಳ ಅಭಿಪ್ರಾಯವನ್ನೇ ಸಮರ್ಥಿಸುವರು ಯಾರು ಪೂರ್ಣನಿರ್ಧಾರದಿಂದ, ಅಖಂಡಸಾಧನೆಗಳಿಂದ, ವಿಶಾಲವಾದ ವಿಶ್ವವ್ಯಾಪಕ ಪರಿಪೂರ್ಣ ಆತ್ಮನಿರ್ಣಯಕ್ಕಾಗಿ ಜೀವನವನ್ನು ಸೂತ್ರಬದ್ಧವಾಗಿ ತಿರುಗಿಸುವರೋ ಅಂಥಾ ಸಾಧಕರೇ ನಿಜವಾದ ತತ್ವವೇತ್ತರೆಂದು ಅರವಿಂದರ ಅಭಿಮತ ಅವರ ದೈವಿಕ ಸಿದ್ಧಿಯ ಬೋಧೆಗಳು, ಸೂತ್ರರೀತಿಗಳು, ವ್ಯವಹಾರ್ಯವಾದುವುಗಳೆಂಬುದರಿಂದ ಅವುಗಳ ಮಹತ್ವಿಕೆಗೆ ಕಾರಣ. ಅವರ ಉದ್ಬೋಧೆಗಳು ಸತ್ಯಶಕ್ತಿಯ ಮೇಲೆ ನಿಂತ ಆಧಾರಬದ್ಧ ಸಾಧನ ಸೂತ್ರಗಳು.

ಜೀವನವೂ ತತ್ವವೂ ಭಿನ್ನವಾಗಿಲ್ಲ.

ತತ್ವ ಮತ್ತು ಜೀವನವು ಒಂದನ್ನೊಂದು ಬೇರ್ಪಡಿಸಿಲ್ಲ. ಅವರ ದೃಷ್ಟಿಗೆ ಸೂಕ್ರೆಟೀಸರಂಥವರು ನಿಜವಾದ ತತ್ವಜ್ಞಾನಿಗಳು, ಬರೇ ಪುಸ್ತಕ ಪಾಂಡಿತ್ಯಗಳಿಸಿದ ಶುಷ್ಕ ಪಂಡಿತರಲ್ಲ. ಹಿಂದೂ ಧರ್ಮಬೋಧೆಯು, ಸ್ವಾಮಿ ವಿವೇಕಾನಂದರು ವಿಶ್ವರಂಗಕ್ಕೆ ಕಾಲಿಡುವ ವರೆಗಾದರೂ ವ್ಯವಹಾರ ಜೀವನದಿಂದ ಬೇರೆಯಾಗಿಯೇ ಇದ್ದಂತೆ ತೋರುವುದು. ಅರವಿಂದರು ಇದೀಗ ಪಾಶ್ಚಿಮಾತ್ಯ ನೈತಿಕ ಮತ್ತು ಧಾರ್ಮಿಕ ತತ್ವವಿಚಾರವನ್ನು ಸಮೀಪಿಸುವ ಮಾನವನ ಅನುದಿನದ ಪ್ರಾಪಂಚಿಕ ಜೀವನವೂ ಧಾರ್ಮಿಕ ಸಿದ್ಧಿಯೂ ಅನ್ಯೋನ್ಯವಾಗಿರಬೇಕೆಂಬ ಸೂತ್ರ ನಿರ್ಣಯಕ್ಕೆ ಬಂದಿರುವರು.

"ಅವರೇ ವಿಶಾಲವಾದ ಅಖಂಡವಾದ ಕಲ್ಪನೆಗಳ ಸಂಯೋಜನೆಗಳನ್ನು ಪರಿಣಾಮಕಾರಿಯಾಗಿ ನೆಲಸುವಂತೆ ಬಯಸುವರು, ಮಾತ್ರವಲ್ಲದೆ, ಅವರ ದೃಷ್ಟಿಯು ಇನ್ನಷ್ಟು ಮುಂದೋಡುತ್ತಿದೆ. ಅವರು ಅದಕ್ಕಿಂತಲೂ ಎಷ್ಟೋ ಮುಂದೆ ನಡೆದಿರುವರು. ದಿವ್ಯ ಶಕ್ತಿಯನ್ನು ಚೈತನ್ಯಕ್ಕೆ ತಂದು, ಅಲ್ಲಿಂದ ಭೌತಿಕ ಶರೀರಕ್ಕೆ ಹಾಗೆಯೇ ಶಾರೀರಿಕ ಜೀವನ ಮತ್ತು ಮನಸ್ಸು ಹೃದಯ ಮತ್ತು ಆತ್ಮಕ್ಕೆ ಇಳಿಸಬೇಕೆಂಬುದು ಅವರ ಗುರಿ. ಶರೀರವೆಂಬುದು ನಾವು ಬದ್ಧರಾಗಿರುವ ಪಂಜರವಾಗಿರದೆ, ಅದೂ ಒಂದು ಸೃಷ್ಟಿಯ ದೃಷ್ಟಿವಿಶೆಯೆಂದೂ ಆದುದರಿಂದ ಬೇರೆಯವುಗಳಂತೆ ಪೂಜ್ಯವೆಂದೂ, ಗಮನಾರ್ಹವಾದುದೆಂದೂ ಅವರ ಅಭಿಮತ. ಒಂದು ವೇಳೆ ಪರಿಶುದ್ಧತೆಗೆ ತೊಡರೆಂದರೂ, ಅಹಂಕೃತಿಗೆ ಮೂಲವೆಂದರೂ ಅದು ಪ್ರತಿಯೊಂದು ವಿಷಯದಲ್ಲಿ ದೈವತ್ವವನ್ನು ಕೈಗೂಡಿಸಲರ್ಹತೆಯುಳ್ಳದಿದೆಯೆಂಬುದು ಅವರ ಸಿದ್ಧಾಂತ."

ಅರವಿಂದರು ಅದ್ಭುತ ಸಾಹಸಿಗಳು

ಮಹರ್ಷಿ ಅರವಿಂದರು ತಮ್ಮ ಅಮೋಘ ದೈವಸಿದ್ಧಿಯ ಸಾಧನೆಯ ಅದ್ಭುತ ಸಾಹಸಕಾರ್ಯವನ್ನು ಬಹು ಶಾಂತಚಿತ್ತರಾಗಿ ಸಾಧಿಸುವ ಮಹಾನುಭಾವರು. ಯಾವ ಸಾಧನೆಯೂ ಯಾರೊಬ್ಬನ ಸ್ವಾರ್ಥಕ್ಕಾಗಿ ಅದ್ವಿತೀಯವಾಗಿ ನಿರಂತರ ಉಳಿಯುವಂತಿದ್ದರೆ ಅದು ನಿಷ್ಪ್ರಯೋಜನವೆಂಬ, ಸ್ವಾಮಿ ವಿವೇಕಾನಂದರ ಅಭಿಮತವನ್ನು ಇವರೂ ಸಮರ್ಥಿಸುವರು. ಗುರುವು ಅನ್ನ ಸಿದ್ಧಿಯನ್ನು ಎಷ್ಟರಿಗೂ ಸಿದ್ಧಿಸುವಂತೆ ಮಾಡಲರ್ಹತೆಯನ್ನು ಗಳಿಸಿರದಿದ್ದರೆ ಆ ಸಿದ್ಧಿಯು ನಿರರ್ಥಕವೆಂಬುದು ಅರವಿಂದರ ಅಭಿಪ್ರಾಯ. ಅವರು ತಮ್ಮ ಹಲವು ಶಿಷ್ಯರನ್ನು ದಿವ್ಯ ಮಾರ್ಗದಲ್ಲಿ ಮುನ್ನಡೆಯಿಸುತ್ತಿರುವರು. ಅತೀವ ಸಾಧನ ಸಾಹಸಗಳಿಂದ, ನಿಬಿಡವಾಗಿ ಉದ್ಯೋಗಿಸಬಲ್ಲ ಪೂರ್ಣ ದೃಢತೆ, ಮತ್ತು ಆತ್ಮಸಮರ್ಪಣೆಯುಳ್ಳಸಾಧಕರು ಮಾತ್ರ ಅರವಿಂದರು ತೋರಿಸುವ ಪ್ರಗತಿಮಾರ್ಗದಲ್ಲಿ ಗುರಿಮುಟ್ಟಲು ಸಾಧಿಸಬಹುದಾಗಿದೆ. ಇಂತಹ ಸಾಹಸ, ಸಾಮರ್ಥ್ಯವುಳ್ಳ ಗುರುವಿನಲ್ಲಿ ನಿಶ್ಚಲ ನಂಬಿಕೆಯುಳ್ಳ ಅರವಿಂದರ ಅದ್ಭುತ ಶೋಧದಲ್ಲಿ ಸ್ಥಿರ ನಿರ್ಧಾರವುಳ್ಳ ತಮ್ಮ ಗುರಿಯನ್ನು ಗುರುವಿನ ಅನುಗ್ರಹದಿಂದ ಕೈಗೂಡಿಸಿಕೊಳ್ಳಬಲ್ಲೆವೆನ್ನುವ ಹಲವು ಶಿಷ್ಯರು ಅರವಿಂದ ಯೋಗಿಗಳ ಬಳಿಯಲ್ಲಿರುವರು. ಇವರು ತಮ್ಮ ಅಖಂಡ ಜೀವಿತವನ್ನು ಸತ್ಯಾನ್ವೇಷಣಕ್ಕಾಗಿ ಅರ್ಪಿಸಿದ ಮಹಾತ್ಯಾಗಿಗಳು; ಅತೀವ ಚಿಂತತೆಯಿಂದ ಪೂರ್ಣ ತಾಳ್ಮೆಯಿಂದ, ಶ್ರದ್ಧೆ ಸಾಹಸ, ಶಕ್ತಿಯಿಂದ ದೈವತ್ವಕ್ಕೇರಿ, ದಿವ್ಯ ಶಕ್ತಿಯನ್ನು ಜೀವಿತಕ್ಕಿಳಿಸಿ, ಈ ಶಕ್ತಿಯನ್ನು ಜೀವನದ ವ್ಯಾಪಕ ಶಕ್ತಿಯನ್ನಾಗಿ ಬಳಕೆಗೆ ತರುವಂಥಾ ಕ್ರಿಯೆಯಲ್ಲಿ ಇವರು ಸದಾ ಸರ್ವದಾ ಮಗ್ನರಾಗಿರುವರು.

ಜಗತ್ತಿನ ಪ್ರಸಿದ್ಧ ತತ್ವವಿದರಾದ ಮಹಾತ್ಮ ರೋಮನ್ ರೊಲ್ಯಾಂಡರು ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಕುರಿತಾದ ಅಮೋಘವಾದ ಗ್ರಂಥಗಳನ್ನು ಬರೆದು ಜಗತ್ತಿಗೆ ಅವರ ತತ್ವ ವಿಚಾರ, ಜೀವನ ಮಹತ್ವಿಕೆಯನ್ನು ತಿಳಿಯುವ ಸಂದರ್ಭವನ್ನೊದಗಿಸಿ ಕೊಟ್ಟು ಲೋಕ ಕಲ್ಯಾಣವನ್ನು ಬಯಸುವ ಪುಣ್ಯ ಪುರುಷರು ಅವರು ಅರವಿಂದರು ಮಾನವ ಕೋಟಿಯ ಉದ್ಧಾರಕ್ಕಾಗಿ ಇಂದು ತೊಡಗಿರುವ ಅದ್ಭುತ ಸಾಹಸವನ್ನು ಮನಸ್ವೀ ಹೊಗಳಿರುವರು-ಒಂದೆಡೆ ತಮ್ಮೊಂದು ಗ್ರಂಥದಲ್ಲಿ ಅವರು ಹೀಗೆನ್ನುವರು. "ಪರಿಪೂರ್ಣ ಜ್ಞಾನ ಮತ್ತು ಅತಿ ತೀಕ್ಷ್ಣವಾದ ಕ್ರಿಯಾಶಕ್ತಿಗಳು ಒಂದಾಗಿ ಮಿಲನಗೊಂಡು ಭರತಖಂಡದಲ್ಲಿ ಜನ್ಮವೆತ್ತಿದ ಧರ್ಮ, ವಿದ್ಯೆ, ಮತ್ತು ಧೀರತೆಯ ಪ್ರತಿಮೂರ್ತಿಯೆನಿಸಿದ ಅರವಿಂದರಲ್ಲಿ ಪುನರ್ಜನ್ಮ ತಾಳಿರುವುವು. ಹಿಂದೂದೇಶದ ಮಹರ್ಷಿಗಳಲ್ಲಿ ಕೊನೆಯವರಾದ ಯೋಗಿ ಅರವಿಂದರ ಹಸ್ತವು ಭಾವೀ ಉತ್ಪಾದನೆಯ, ಸ್ಫುರಣಾತ್ಮಕ ಧನುಸ್ಸಿನಿಂದ ಕೂಡಿಕೊಂಡಿರುವುದು."

(ಇಂಗ್ಲಿಷ್ ಲೇಖನದ ಆಧಾರದಿಂದ)

(೨೭ನೇ ಪುಟದಿಂದ)

ಸುಣ್ಣವಾಗಿ, ಇನ್ನು ಅವುಗಳ ಬಾಯಿಗೆ ಸಿಕ್ಕಿ ಸಾಯುವುದು ಬೇಡವೆಂದು ಬಹು ಪ್ರಯಾಸದಿಂದ ತಪ್ಪಿಸಿಕೊಂಡು ಬಂದಂತೆ ಹಿಂದೆ ಹೋದರು.

ಒಂದುದಿನ ಬೆಳಗ್ಗೆ ಪ್ರೂಂಜರ ದನ ಮೇಯಿಸುವ ಹುಡುಗನು ತಳಮಳಗೊಂಡು ಓಡಿಬಂದು "ಅಲ್ಲೊಂದು ಹೆಣ! ಹೆಣ! ಮರದಲ್ಲಿ ತೂಗಾಡುತ್ತಿದೆ!" ಎಂದು ಬೊಬ್ಬೆ ಹಾಕಿದನು. ಮನೆಯವರೆಲ್ಲಾ, "ಎಲ್ಲಿ!" "ಎಲ್ಲಿ" ಎಂದು ಅವನೊಡನೆ ಕೇಳಿ ಅವನ ಸುತ್ತುಗಟ್ಟಿದರು. "ಬೊಬ್ಬೆ ಹಾಕಬೇಡ ಸೂಳೆಮಗನೇ! ಎಲ್ಲಿ ತೋರಿಸು!" ಎಂದರು ಪ್ರೂಂಜರು ಅಬ್ಬರಿಸಿ. "ಬನ್ನಿ ತೋರಿಸುತ್ತೇನೆ" ಎಂದು ಅವನು ಎಲ್ಲರನ್ನೂ ಮನೆಯ ಹಿಂಬದಿಯ ಕಾಡಿಗೆ ಕರೆದೊಯ್ದನು. ಅಲ್ಲಿ ಒಂದು ದೊಡ್ಡ ಮರದ ಗೆಲ್ಲಿನಲ್ಲಿ ಶೀನಶೆಟ್ಟರ ಶವವು ತೂಗಾಡುತ್ತಿತ್ತು!

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್ ಫೋನ್ 406 ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ ಮೈಸೂರು ಕೆಫೆ ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್:-ಕೆ. ಗುರುರಾಜಾಚಾರ್ಯ.

ಶ್ರೀಕೃಷ್ಣ ಜಯಂತಿಯನ್ನು ಹೇಗೆ ಆಚರಿಸಬೇಕು?

ಲೇಖಕರ
ಶ್ರೀ. ಪಾದೂರು ವಾಸುದೇವ ಉಪಾಧ್ಯಾಯರು,
ಬಿ.ಎ., ಎಲ್.ಎಲ್.ಬಿ., ವಕೀಲ, ಕಾರ್ಕಳ

ಮಹಾಪುರುಷರ ಜನ್ಮದಿನವನ್ನು ಆಚರಿಸುವುದರಲ್ಲಿ ಒಂದು ಉದ್ದೇಶವಿದೆ ಅವರ ಜೀವನದಲ್ಲಿ ಅವರು ನಡೆಯಿಸಿದ ಮಹತ್ಕಾರ್ಯಗಳನ್ನು ನಾವು ನೆನಪಿಸಿ ಸಾಧ್ಯವಾದಷ್ಟು ಅವರಂತೆಯೇ ನಾವೂ ನಡೆದುಕೊಳ್ಳಲೆತ್ನಿಸಬೇಕು ಜನ್ಮದಿನದಲ್ಲಿ ನಾವು ನೆನಪುಮಾಡಬೇಕಾದ ವಿಷಯಗಳು ಯಾವುವೆಂದರೆ ಅವರು ಬಾಲ್ಯದಲ್ಲಿರುವಾಗ ಇತರ ಬಾಲಕರಂತೆಯೇ ಅಥವಾ ಅವಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ನಡೆಯಿಸುತ್ತಿದ್ದ ಮಕ್ಕಳಾಟಿಕೆಯಲ್ಲ, ಹುಡುಗರಾಗಿದ್ದಾಗ ಎಲ್ಲಾ ಹುಡುಗರಂತೆಯೇ ಅಥವಾ ಅದಕ್ಕಿಂತಲೂ ಹೆಚ್ಚಾಗಿ ನಡೆಯಿಸಿದ ಹುಡುಗಾಟಿಕೆಯಲ್ಲ. ಪ್ರಾಪ್ತವಯಸ್ಕರಾದಾಗ ಅವರು ಇತರರಿಗಿಂತಲೂ ಹೆಚ್ಚಾಗಿ ಪ್ರದರ್ಶಿಸಿದ ಶೌರ್ಯ, ಪರಾಕ್ರಮ, ಧೈರ್ಯ, ದಯಾ ಇತ್ಯಾದಿ ಗುಣಗಳು ಅವರಲ್ಲಿದ್ದುವೆಂದು ತೋರಿಸುವ ಮಹತ್ಕಾರ್ಯಗಳು. ಶ್ರೀಕೃಷ್ಣನನ್ನು ಮಹಾಪುರುಷನೆಂದೂ ದೇವರ ಅವತಾರನೆಂದೂ ಜನರು ಯಾವುದರಿಂದ ತಿಳಿದರು? ಅವನು ಕೇವಲ ನ್ಯಾಯಪಕ್ಷಪಾತಿಯಾಗಿ ನಿಸ್ಸಹಾಯಕರಾದ ಪಾಂಡವರ ಕಡೆಯಿಂದ ಬಹಳ ಜಾಣ್ಮೆಯಿಂದಲೂ ಪರಾಕ್ರಮದಿಂದಲೂ ಯುದ್ಧಮಾಡಿ ಶತ್ರುಗಳನ್ನು ನಿಗ್ರಹಮಾಡಿದುದು. ಯುದ್ಧಕಾಲದಲ್ಲಿ ಅರ್ಜುನನು ತನ್ನ ಕ್ಷಾತ್ರಿಯ ಧರ್ಮವನ್ನು ಮರೆತು ತನ್ನ ಬಂಧುಬಳಗದವರನ್ನು ಹೇಗೆ ಕೊಲ್ಲಲೆಂದು ಕಳವಳಗೊಳ್ಳುತ್ತಿರುವಾಗ ಯಾವುದು ನ್ಯಾಯವೋ ಅದನ್ನು ನಿರ್ದಾಕ್ಷಿಣ್ಯದಿಂದಲೂ ನಿರ್ಭೀತಿಯಿಂದಲೂ ಮಾಡುವುದೇ ಮನುಷ್ಯನ ಧರ್ಮವೆಂದು ಬೋಧಿಸಿ ಅರ್ಜುನನಲ್ಲಿ ವಿಶೇಷವಾದ ಉತ್ಸಾಹವನ್ನು ತುಂಬಿ ಅವನಿಂದ ಯುದ್ಧಮಾಡಿಸಿದುದು ಇವೇ ಮೊದಲಾದ ಅವನ ಕಾರ್ಯಗಳಿಂದಾಗಿ ಶ್ರೀಕೃಷ್ಣನು ಮಹಾಪುರುಷನೆಂದೆಣಿಸಲ್ಪಟ್ಟಿರುತ್ತಾನೆ. ಆದುದರಿಂದ ಶ್ರೀಕೃಷ್ಣನ ಜಯಂತಿಯನ್ನು ಆಚರಿಸಬೇಕೆನ್ನುವ ಭಕ್ತರು ಕೃಷ್ಣಾಷ್ಟಮಿ ದಿನ ಏನುಮಾಡಬೇಕೆನ್ನುವುದರೆ ಶ್ರೀಕೃಷ್ಣನು ಯಾವ ಮಹತ್ಕಾರ್ಯಗಳನ್ನು ಮಾಡಿ ಮಹಾ ಪುರುಷನಾದ ಎಂಬುದರ ವಿಷಯವಾಗಿ ವಿದ್ವಾಂಸರಿಂದ ಭಾಷಣಗಳನ್ನು ಕೊಡಿಸಿ ಜನರಿಗೆ ಶ್ರೀಕೃಷ್ಣನ ಜೀವನ ಚರಿತ್ರೆಯನ್ನು ವಿವರಿಸುವುದು, ಮತ್ತು ನಮ್ಮ ದೇಶದ ಮಹಾಗ್ರಂಥವಾಗಿರುವ ಮತ್ತು ಭೂಲೋಕದಲ್ಲೆಲ್ಲಾ ಮನ್ನಣೆ ಪಡೆದಿರುವ ಭಗವದ್ಗೀತೆಯನ್ನು ಪ್ರಚಾರಮಾಡಿ ಅದರಲ್ಲಿ ಹೇಳಿರುವ ಮಹಾತತ್ವಗಳು ಎಲ್ಲರಿಗೂ ಮನದಟ್ಟಾಗಿ ಎಲ್ಲರೂ ಅವುಗಳನ್ನು ತಮ್ಮ ಜೀವನದಲ್ಲಿ ಉಪಯೋಗಿಸುವಂತೆ ಮಾಡುವುದು. ಇವೇ ಮುಖ್ಯ ಕಾರ್ಯಗಳು

ಆದರೆ ನಮ್ಮವರು ಶ್ರೀ ಕೃಷ್ಣಾಷ್ಟಮಿಯನ್ನು ಆಚರಿಸುವ ಕ್ರಮವು ಬಹಳ ಆಶ್ಚರ್ಯಕರವಾಗಿದೆ ಈಗ ನಡೆಯುವ ಶ್ರೀ

ಕಡೆಗೋಲಿಯ ಶ್ರೀಕೃಷ್ಣ.

ಕೃಷ್ಣ ಜಯಂತಿಯ ಕ್ರಮವನ್ನು ನೋಡುವಾಗ ಶ್ರೀಕೃಷ್ಣನು ಬಾಲ್ಯದಲ್ಲಿ ಎಲ್ಲಾ ಮಕ್ಕಳಿಗಿಂತಲೂ ಹೆಚ್ಚಿನ ಉಪಟಳಕೊಡುವ ದುಷ್ಟ ಸ್ವಭಾವದ ಬಾಲಕನಾಗಿದ್ದನೆಂದೂ ತನ್ನ ಮನೆಯಲ್ಲ ಮತ್ತು ನೆರೆ ಹೊರೆಯವರಲ್ಲಿ ಹೋಗಿ ಬೆಣ್ಣೆ ಇತ್ಯಾದಿ ಪದಾರ್ಥಗಳನ್ನು ಕದ್ದುಕೊಂಡು ಸಹಿಸಲಾರದಷ್ಟು ತಂಟೆ ನಡೆಯಿಸುತ್ತಿದ್ದನೆಂದೂ ತಾರುಣ್ಯದಲ್ಲಿಯೂ ಒಬ್ಬ ಆದರ್ಶ ಪುರುಷನಾಗಿರದೆ ಮನುಷ್ಯನಿಗೆ ಸಹಜವಾದ ಎಲ್ಲಾ ದೋಷಗಳುಳ್ಳವನಾಗಿದ್ದನೆಂದೂ ಮಾತ್ರ ನಾವು ತಿಳಿದುಕೊಳ್ಳಬೇಕಾಗಿದೆ,

ಶ್ರೀಕೃಷ್ಣನನ್ನು ನಾವು ಗೌರವಿಸುವುದು ಈ ಮಕ್ಕಳಾಟಿಕೆಯ ಅಥವಾ ಹುಡುಗಾಟಿಕೆಯ ಕಾರ್ಯಗಳಿಗಾಗಿಯಲ್ಲ ಎಂಬುದು ನಮ್ಮ ಜನರಿಗೆ ತಿಳಿಯದೇ? ಹಾಗಿದ್ದರೆ ನಮ್ಮ ಜನರು ಈ ಕಾರ್ಯಗಳಿಗೆ ಏಕೆ ಮಹತ್ವವನ್ನು ಕೊಡುತ್ತಿದ್ದರೆಂದು ತಿಳಿಯುವುದಿಲ್ಲ.

ಇನ್ನಾದರೂ ಶ್ರೀ ಕೃಷ್ಣ ಜಯಂತಿ ದಿನವನ್ನು ಆಚರಿಸುವವರು ಅವನ ಜೀವನ ಚರಿತ್ರೆ ಮತ್ತು ಅವನು ಅರ್ಜುನನಿಗೆ ಬೋಧಿಸಿದ ಗೀತೆಯ ಪ್ರಚಾರಕ್ಕಾಗಿ ಆ ದಿನವನ್ನು ಉಪಯೋಗಿಸಿ ಕೃತಾರ್ಥರಾಗಬೇಕೆಂದು ಅಪೇಕ್ಷಿಸುತ್ತೇನೆ ಅದು ಸಾಧ್ಯವಿಲ್ಲದಿದ್ದರೆ ಈಗಿನ ಅರ್ಥವಿಲ್ಲದ ಹುಡುಗಾಟಿಕೆಯ ರೀತಿಯಲ್ಲಿ ಆಚರಿಸಿ ಆ ಮಹಾತ್ಮನನ್ನು ಅಗೌರವಿಸುವುದನ್ನಾದರೂ ನಿಲ್ಲಿಸುವುದು ಉತ್ತಮವಿದೆ *

* ಈ ಸಂದರ್ಭದಲ್ಲಿ ನವಯುಗವು ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಿ ಮಹಾಜನರ ದೃಷ್ಟಿಯನ್ನು ಶ್ರೀಕೃಷ್ಣನ ಮಹತ್ಕಾರ್ಯಗಳ ಮತ್ತು ಮಹಾ ಬೋಧನೆಯ ಕಡೆಗೆ ತಿರುಗಿಸಿದ್ದು ಸ್ತುತ್ಯವಿದೆ.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕ ಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತ್ತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

ಅವ್ಯಕ್ತ

(ಶ್ರೀ. ಸಿ. ಜಿ. ರಾಜರತ್ನಂ, ಎಂ ಎ, ಅವರಿಂದ)

ಬೆಳಗ್ಗೆ ಇನ್ನೂ ಎಳುವುದಕ್ಕಿಲ್ಲ, ಹಾಸಿಗೆಯಲ್ಲಿ ಮಲಗಿದ್ದ ಹಾಗೆಯೇ ಶೇಷಗಿರಿಯು ಕೂದಲಿನ ಮೇಲೆ ಹಲ್ಲಿ ಬಿತ್ತು. ಎದ್ದು ಹೊಸಲು ದಾಟುವಾಗ ಬಾಗಿಲಕಟ್ಟೆಗೆ ತಲೆ ಬಡಿದುಕೊಂಡ. ಅವನ ಮನೆಮುಂದೆ ನಾಯಿ ಮುಗಿಲ ಕಡೆ ಮೋರೆ ಮಾಡಿ ಅಪಸ್ವರ ಎತ್ತಿತ್ತು.. ಎಲ್ಲಕ್ಕೂ ತಂದಿಯಾಗಿ ಅವನ ಹೆಂಡತಿ ಸರೋಜಳು ತುಲಸಿ ಪೂಜೆ ಮಾಡುತ್ತ ಎಡವಿ ಅರಸಿನ ಕುಂಕುಮದ ತಟ್ಟೆ ಕೆಡವಿದಳು.... ...

ಇದೆಲ್ಲ ಕಂಡು ಸರೋಜಳಿಗೆ ತುಂಬ ಹೆದರಿಕೆಯಾಯಿತು. ಆ ದಿನವೇ ಶೇಷಗಿರಿ ಸರ್ಕೀಟು ಹೊರಡಬೇಕಿತ್ತು. ಆ ದಿನವೆ ಹೀಗೆಲ್ಲ ಆಗಬೇಕಾದರೆ! ದೇವರಿಗೆ ತುಪ್ಪದ ದೀಪಹಚ್ಚಿ, ಹರಕೆ ಕಟ್ಟಿ ಶೇಷಗಿರಿಯನ್ನು ಹೊರಡಬೇಡನೆಂದು ಎಷ್ಟೋ ವಿಧಗಳಲ್ಲಿ ಬೇಡಿಕೊಂಡಳು ಅವನಿಗೆ ಶಕುನಗಳಲ್ಲಿ ನಂಬಿಕೆಯಿರಲಿಲ್ಲ ಅಲ್ಲದೆ ಅವನು ಸರ್ಕಾರಿ ನೌಕರ! ತನ್ನ ಗುಲಾಮಗಿರಿಯ ಕಷ್ಟಗಳನ್ನೆಲ್ಲ ಅವಳಿಗ ಹೇಳಿಕೊಂಡ.

ಆಗ ಯಾವುದೋ ಒಂದು ದನಿ ಅವನಿಗೆ ಕೇಳಿಸಿತು "ನಿನ್ನ ಕೆಲಸ ಹೆಚ್ಚೋ? ನಿನ್ನ ಜೀವ ಹೆಚ್ಚೋ? ಈ ದಿನ ನೀನು ಹೊರಟರೆ ಸಾವು ಸಿದ್ಧ ನಿನಗೆ!"

ಶೇಷಗಿರಿ ಕೊಂಚ ಅಳುಕಿದ ಒಡನೆಯೆ "ಏನು! ಈ ಅರ್ಥವಿಲ್ಲದ ಗೊಡ್ಡು ಶಕುನಗಳನ್ನು ನಂಬಲು ನಾನೇನು ಅಜ್ಞನೆ!" ಎಂದುಕೊಂಡ. ಅಂತೂ ಅದೇ ಮಧ್ಯಾಹ್ನ ರೈಲಿನಲ್ಲಿ ಊರು ಬಿಟ್ಟು ಹೊರಟ.

(೦) (೦) (೦) (೦)

ರೈಲು ಸಾಗಿತು. ನಾಲ್ಕು ಮೈಲು ದೂರ ಹೋಗುವುದರೊಳಗಾಗಿ ಇದಿರಿಗೆ ಬರುತ್ತಿದ್ದ ಇನ್ನೊಂದು ರೈಲಿಗೆ ಢಿಕ್ಕಿ ಹೊಡೆದು ಕೆಳಗುರುಳಿತು. ಗಾಯ ಪಟ್ಟವರಲ್ಲಿ ಶೇಷಗಿರಿಯೂ ಒಬ್ಬ ಮಗ್ಗುಲಾಗಿ ಮಲಗಿದ ಗಾಡಿಯೊಂದರಡಿಯಲ್ಲಿ ಶೇಷಗಿರಿ ಸಿಕ್ಕಿಬಿದ್ದಿದ್ದ. ಅವನ ತಲೆ ಮಾತ್ರ ಆಚೆ ಇತ್ತು. ಮುಖದ ಮೇಲೆ ಮೃತ್ಯು ತಾಂಡವವಾಡುತ್ತಿತ್ತು.

ಆಗ ಶೇಷಗಿರಿಗೆ ಹಿಂದೆ ಕೇಳಿಸಿದ ಧ್ವನಿ ಮತ್ತೆ ಕೇಳಿಸಿತು.

"ಈಗ ಏನೆನ್ನುವೆ?"

ನೀನು ಹೇಳಿದುದು ವಾಸ್ತವ ನನಗ ಈ ರೀತಿ ಎಚ್ಚರಿಸಿ, ಈಗ ಮರೆಯಲ್ಲಿ ನಿಂತು ಹಂಗಿಸುತ್ತಿರುವ ನೀನು ಯಾರು?

ರೈಲುರುಳಿ ಆದ ಆ ಗೊಂದಲದಲ್ಲಿಯೂ ಶೇಷಗಿರಿಗೆ ಸ್ಪಷ್ಟವಾಗಿ ಕೇಳಿಸಿತು.

"ನಾನು ಅವ್ಯಕ್ತ! ನನ್ನನ್ನು ಇದುವರೆಗೆ ಯಾರೂ ಕಂಡುದಿಲ್ಲ ಹಲವರು ನನ್ನನ್ನು ಹಲವು ಬಗೆಯಾಗಿ ಕರೆಯುವರು-ದೇವರೆಂದು, ಅದೃಷ್ಟವೆಂದು, ಹಣೆಯ ಬರಹವೆಂದು. ನಾನು ಪ್ರತಿಜೀವಿಯಲ್ಲಿಯೂ ಅಡಗಿರುವವನು, ಅವರ ಕೆಲಸ ನಡೆಸುವವನು ನಿನ್ನಲ್ಲಿ ಇದ್ದು ನಿನಗೆ ಈ ಅಪಾಯವುಂಟೆಂದು ಎಚ್ಚರಿಸಿದವನೂ ನಾನೇ. ನಾನು ಜಗತ್ತಿನ ಆದಿಯಲ್ಲಿದ್ದವನು, ಅಂತ್ಯದಲ್ಲಿರುವವನು! ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನು ನಾನು! ತ್ರಿಕಾಲಜ್ಞನಿಯೂ ನಾನು' ಅವ್ಯಕ್ತ ನಾನು! ಜಗದಾದಿ ಶಕ್ತಿಯಾನು! ಜಗದಾದಿ ದೈವನಾನು! ಜಗ... .

ಶೇಷಗಿರಿ ಸಾವಿನ ನೋವಿನಲ್ಲಿ ಆ ಅವ್ಯಕ್ತದ ಮಾತನ್ನು ಅಡ್ಡಕಟ್ಟಿ "ಸಾಕೋ ನಿನ್ನ ಹರಟೆ! ನೀನು ದೈವವಲ್ಲವೋ-ಜನರನ್ನು ಗೋಳುಹುಯಿದು, ಅವರ ಸಂಕಟ ಕಂಡು ಹಿಗ್ಗುವ ದವ್ವ ನೀನು! ನೀನು ನನಗೆ ಎಚ್ಚರ ಕೊಟ್ಟುದು ನನ್ನ ಒಳ್ಳೆಯ ದಕ್ಕಿರಬಹುದು ದಿಟವಾದರೆ-ನಿನ್ನ ಎಚ್ಚರಿಕೆಯನ್ನು ಮೂಲೆಗೊತ್ತಿ ನಾನು ಹೀಗೆ ಸಾಯಬೇಕೆಂಬುದನ್ನು ತಿಳಿದೂ ನೀನು ನನಗೆ ಎಚ್ಚರ ಕೊಟ್ಟುದೇಕೆ? ಏಕೆ ಕೊಟ್ಟೆ?" ಎಂದು ಅರಚಿದ.

ಸಾವಿನ ಮನೆಯ ಹೊಸಲ ದಾಟುತ್ತಿದ್ದ ಶೇಷಗಿರಿಯ ಪ್ರಶ್ನೆಗೆ ಅವ್ಯಕ್ತದ ವಿಕಟ ಹಾಸ್ಯವೊಂದೇ ಉತ್ತರವಾಯಿತು!

(ಹನಗಳಿಂದ)

ಕಿಶೋರ-ಶ್ರೀಕೃಷ್ಣ

(ಶಾವರ್ಧಿನಿ)

೧

ಕಲಕಲ ನಾದದಿ ಹರಿಯುವ ಯಮುನೆಯ
ಸುಲಲಿತ ವೇದಿಕೆಯಗ್ರದಿ, ಮುದದಲಿ
ನಲಿಯುವ ಮಂಜುಳ-ಮೋಹನ-ಲೀಲಾ
ವಿಗ್ರಹರಂಜಿತನು,
ಕೊಳಲನ್ನೂದುತ ಸರಸದಿ ತೀರದೊ-
ಳಲೆಯುವ, ಮುಗ್ಧ-ಮನೋಹರ ಕಾಯದ
ಅಲಕ ವಿಚಿತ್ರಿತ ವದನ ಸರೋರುಹ
ಸುಂದರನೀ ಕೃಷ್ಣ !

೨

ಪುಲಿನದಿ ಲೀಲಾ ಕಮಲವ ಬರೆಯುತ,
ಲಲಿತ ಕ್ರೀಡೆಯನಾಡುತಲೋಡುತ,
ಸಲಿಲ ವಿಹಾರ ವಿನೋದಿತ ಮಾನಸ-
ನಾಗಲು, ನಲವಿನಲಿ
ವಲಿತ-ವಿಲೋಲ-ತರಂಗಿತ ಯಮುನಾ
ಜಲದಲಿ 'ಜಲಕ'ವನಾಡುವ, ನೂತನ
ಜಲಧರ ಶ್ಯಾಮಲ-ಕೋಮಲ ಕಾಯ-ಕಿ
ಶೋರನು ಶ್ರೀಕೃಷ್ಣ !

—ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್,
ತಾ. ೨೮-೮-೧೯೩೯. ('ಕನ್ನಡ ಸೇವಾಸಂಘ')

ಸತ್ಯಾಗ್ರಹಿ

(ಶ್ರೀ ಕೆ. ವಿ ಪುಟ್ಟಪ್ಪ, ಎಂ. ಎ., ಅವರಿಂದ)

ಸ್ವಾತಂತ್ರ್ಯ ಸಂಗ್ರಾಮದಲಿ ತನ್ನ ಜೀವವನು
ಲೆಕ್ಕಿಸದೆ ಹೋರುವನು ವೀರಸತ್ಯಾಗ್ರಹಿಯು;
ನೊಂದರೂ, ಬೆಂದರೂ, ಸತ್ಯವನು ಕೈಬಿಡದೆ
ಜನನದಾಡೆಯ ನುಗ್ಗುವವನು ಸತ್ಯಾಗ್ರಹಿಯು!
ಆತ್ಮಶಕ್ತಿಯ ಬಲದಿ ಮಿಂಚುಗಳ ಸಂಕ್ಷೈಸಿ
ಸಿಡಿಲುಗಳು ಬೋಳೈಸುವವನು ಸತ್ಯಾಗ್ರಹಿಯು;
ಹೊಡೆಯದೆಯೆ ತಡೆಯುವನು ವೀರಸತ್ಯಾಗ್ರಹಿಯು!
ಗೆಲ್ಲದೆಯೆ ಗೆಲ್ಲುವನು ವೀರಸತ್ಯಾಗ್ರಹಿಯು!
ಸಿಡಿಗುಂಡಿನೆದುರಲ್ಲಿ, ಕೂರಸಿಗಳೆದುರಿನಲಿ,
ಶಬ್ಬಣದ ಸಂಕೋಲೆಗಳ ಕರಿಯ ತೆಕ್ಕೆಯಲಿ,
ಜೈಲಿನಲಿ ಅಧಿಕಾರ ಕ್ರೂರ ದರ್ಪದಲಿ,
ಹರಿವೆದೆಯ ನೆತ್ತರಿನ ಹೊಳೆಯಲ್ಲಿ, ಮುಂದಿಟ್ಟ
ಕಾಲ ಹಿಂದೆಗೆಯದಳಿವವನು ಸತ್ಯಾಗ್ರಹಿಯು!
ದೇಶಮಾತೆಯ ಸುಖಕೆ ತನ್ನ ಸುಖವನು ಬೇಳ್ವ,
ದೇಶದ ಬದುಕಿಗಾಗಿ ತನ್ನ ಬದುಕನು ಸೀಳ್ವ,
ಹಿಂಸೆಯನೆ ಹಿಂಸೆಯಿಂ ಹಿಂಸಿಸಿಯೆ ಕೊಲ್ವ,
ಸಮರಶೀಲನೆ ನಮ್ಮ ವೀರ ಸತ್ಯಾಗ್ರಹಿಯು!
ಪ್ರೇಮಾಗ್ನಿಯಿಂ ದ್ವೇಷದಗ್ನಿಯನು ಸುಟ್ಟು,
ದೇಹಶಕ್ತಿಯನಾತ್ಮಶಕ್ತಿಯಿಂಗೆದ್ದು,
ಬಗೆಯಲ್ಲಿ, ಬಾಯಲ್ಲಿ, ಕೈಯಲ್ಲಿ ಹಿಂಸೆಯನು
ಬಿಟ್ಟು ಹೋರುವ ಭಟನು ವೀರಸತ್ಯಾಗ್ರಹಿಯು!
ಹೇಳದೆಯೆ ಕೇಳದೆಯೆ ದಳಪತಿಯು ನುಡಿದಂತೆ
ಮಾಡುವವನಾವನೋ ಅವನೆ ಸತ್ಯಾಗ್ರಹಿಯು,
ಕೋಪಿಸದೆ ಶತ್ರುವಿನ ರಭಸವಹಕೋಪವನು
ಸಹನೆಯಿಂ ಗೆಲ್ಲುವ ಪರಾಕ್ರಮಿಯು, ಬಲವಿರಲು
ಬಲುಮೆಯನು ತೋರದನು ದಿವ್ಯಸತ್ಯಾಗ್ರಹಿಯು!
ತನ್ನ ತಾಯಿಯ ಉಪ್ಪು ತನ್ನ ವಶದಲ್ಲಿರಲು
ಇತರರನು ನೋಯಿಸದೆ ತನ್ನ ಜೀವವ ತೆತ್ತು
ಕಾಯುವನನಾವನೋ ಅವನೆ ಸತ್ಯಾಗ್ರಹಿಯು!
ಎಂದಿಗೂ ಆಣೆಯಿಡದವನೆ ಸತ್ಯಾಗ್ರಹಿಯು!
ಎಂದಿಗೂ ಶಾಪವನು ಕೊಡದವನು ಸತ್ಯಾಗ್ರಹಿಯು!
ರಾಕ್ಷಸೀಬಲದಿಂದ ನಮ್ಮನಾಳುವ ಒಡರ
ಹಾಳಿವಿಗೆಗೆ ಬಾಗದವನವನೆ ಸತ್ಯಾಗ್ರಹಿಯು!
ತನ್ನ ಗೌರವ ಕೆಡದ ರೀತಿಯಲಿ ನಡೆಯುವನು;
ತನ್ನ ಜಾಗಕೆ ತಾನೇ ಬಲು ಹೆಮ್ಮೆ ಪಡದವನು,
ಮೆರೆಯದೆಯೆ ಹಡೆದ ಮಾತೆಯ ಸೇವೆಯನು ಮಾಡಿ
ಮೌನದಿಂ ಮಡಿವವನು ಧನ್ಯಸತ್ಯಾಗ್ರಹಿಯು!
ಕಲಿಯುಗದ ಪ್ರಚ್ಛನ್ನ ಕಲ್ಕಿ ಸತ್ಯಾಗ್ರಹಿಯು!

(ಪಾಂಚಜನ್ಯದಿಂದ)

THULUNAD BANK

OF SUPPLY AGENCY LIMITED, UDIPI.

IT PAYS YOU

to invest your SAVINGS on

INDUSTRIAL CASH CERTIFICATES

ISSUED IN DENOMINATIONS OF

Rs 5/-, Rs. 10/-, Rs 50/- and Rs 100/- for

Rs 3—12—0, Rs 7—8—0, Rs 37—8—0, and Rs 75—0—0

MATURING AFTER FIVE YEARS.

YOU MAY CASH THEM EARLIER IF YOU DESIRE

CURRENT ACCOUNT DEPOSIT ACCEPTED AT 3 PER CENT.

For Particulars of the above and other Schemes of Deposits,

WRITE TO THE MANAGING DIRECTOR

ನಮ್ಮ ಮಠಗಳೂ ಮಠಾಧೀಶರೂ

(ಶ್ರೀ. ಎಸ್. ಎಲ್. ಸುಬ್ರಹ್ಮಣ್ಯಂ—ಅನುವಾದಕ)

ಅಂದು- ಇಂದು

ಭಾರತದಲ್ಲಿ ಅಸಂಖ್ಯ ಮಠಗಳಿವೆ. ಈ ಎಲ್ಲ ಮಠಗಳ ಸಂಪತ್ತನ್ನೂ ಒಟ್ಟುಗೂಡಿಸಿದಲ್ಲಿ ದೇಶದಲ್ಲಿ ಅನೇಕ ವಿಶ್ವವಿದ್ಯಾಲಯಗಳನ್ನೂ ಗುರುಕುಲಗಳನ್ನೂ ಸ್ಥಾಪಿಸಬಹುದು. ಆದರೆ ನಮ್ಮ ದುರ್ದೈವ-ನಮ್ಮಲ್ಲಿಯ ಶಿಕ್ಷಿತವರ್ಗವಾಗಲಿ, ಮುಖಂಡರಾಗಲಿ ಈ ಕಡೆಗೆ ಗಮನ ಕೊಟ್ಟಿರುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಠಗಳಲ್ಲಿ ವಿದ್ಯಾರ್ಥಿಗಳು ನಿರಾತಂಕವಾಗಿ ವ್ಯಾಸಂಗ ಮಾಡುತ್ತಿದ್ದರು. ಅಮರ ಕೋಶದ ದ್ವಿತೀಯ ಕಾಂಡದ ಪುರವರ್ಗದಲ್ಲಿ "ಮಠಶ್ಛಾತ್ರಾದಿ ನಿಲಯಃ" ಎಂದಿದೆ. ಅಂದರೆ ವಿದ್ಯಾರ್ಥಿಗಳು ಗುರುಗಳ ಬಳಿಯಲ್ಲಿದ್ದು ವಿದ್ಯಾವ್ಯಾಸಂಗ ಮಾಡುವ ಆಶ್ರಮಕ್ಕೆ ಮಠವೆಂದು ಅರ್ಥ. ಇಂತಹ ಮಠಗಳಲ್ಲಿ ಸಾಧುಸನ್ಯಾಸಿಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುತ್ತಾ ತ್ಯಾಗ ಮತ್ತು ತಪಸ್ಸಿನ ಜೀವನವನ್ನೂ ನಡೆಸುತ್ತಿದ್ದರು. ಬೌದ್ಧಕಾಲಕ್ಕೆ ಪೂರ್ವದಲ್ಲಿ ಅಥವಾ ಮಹಾಭಾರತ ಕಾಲದ ವರೆಗೂ ಭಾರತದಲ್ಲಿ ಗುರುಕುಲಾಶ್ರಮಗಳು ಅಧಿಕ ಪ್ರಚಾರದಲ್ಲಿದ್ದುವು. ಅವುಗಳಲ್ಲಿ ತ್ಯಾಗಿಗಳು, ತಪಸ್ವಿಗಳು, ಸ್ವಾಧ್ಯಾಯ ತತ್ಪರರು, ಸನ್ಯಾಸಿಗಳು, ಮಹಾತ್ಮರು, ಋಷಿಗಳು ಇರುತ್ತಿದ್ದರು. ದೂರದೂರದಿಂದ ವಿದ್ಯಾರ್ಥಿಗಳು ಬಂದು ಅವರ ಬಳಿ ವೇದಾಧ್ಯಯನ ಮಾಡುತ್ತಿದ್ದರು. ಇವುಗಳ ಪರಿವರ್ತನೆ ಹೊಂದಿದ ರೂಪವೇ ಇಂದು ದೇಶದಲ್ಲಿರುವ ಅಸಂಖ್ಯಾತ ಮಠಗಳು. ಈ ಮಠಗಳು ಬೌದ್ಧ ಕಾಲದಿಂದ ಪ್ರಚಲಿತವಾಗಿರುವುವೆಂದು ಇತಿಹಾಸದಿಂದ ತಿಳಿಯುವುದು. ಸ್ವಾಮಿ ಶಂಕರಾಚಾರ್ಯರು ತಮ್ಮ ಮತದ ಪ್ರಚಾರಕ್ಕಾಗಿ, ಇವುಗಳ ತತ್ಕಾಲೀನ ಪ್ರಚಾರವನ್ನೂ ಮಾಡಿರಬಹುದು, ಇರಲಿ.

ಸಂಪತ್ತು ಸದುಪಯೋಗವಾಗಬೇಕು

ಮಠಗಳಿರುವುದು ದೇಶಕ್ಕೇನೂ ಹಾನಿಕಾರಕವಲ್ಲ. ಆದರೆ ಅವುಗಳ ಸಂಪತ್ತು ಯುಕ್ತ ಮಾತ್ರ ಸದುಪಯೋಗವಾಗುತ್ತಿರಬೇಕು. ಈಗಲೂ ಬುದ್ಧಮತಪ್ರಚಾರವಿರುವ, ಸಿಂಹಳ, ಬರ್ಮ, ಜಪಾನ್ ದೇಶಗಳಲ್ಲಿನ ಮಠಗಳಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವರು. ಆದರೆ ಭಾರತದ ಮಠಾಧಿಪತಿಗಳು ಎಷ್ಟು ಆಲಸ್ಯಮಗ್ನರಾಗಿರುವರು! ಎಷ್ಟೋ ಮಠಗಳಲ್ಲಿ ಅಪಾರ ಧನಸಂಪತ್ತು ಇದೆ. ಅವುಗಳ ವಿನಿಯೋಗದ ವಿಚಾರವನ್ನು ಯಾರೂ ಕೇಳುವವರೇ ಇಲ್ಲ! ಎಷ್ಟೋ ಹಣವು ಬರೆಯಲಾಗದ ದುರ್ವ್ಯಸನಗಳಲ್ಲಿ ಹಾಳಾಗುತ್ತಿದೆ!

ಮಠಗಳಲ್ಲಿ ಮೂರು ವಿಧ

ನಮ್ಮಲ್ಲಿ ಮೂರು ವಿಧದ ಮಠಗಳಿವೆ. ಒಂದನೆಯದು-ಅವುಗಳ ಸಂಪತ್ತಿಯ ಇತಿಹಾಸವೇ ತಿಳಿಯದಂತಿದೆ. ಅದು ಎಲ್ಲಿಂದ ಯಾವಾಗ ಬಂದಿತೆಂಬುದು ಗೊತ್ತಾಗುವಂತಿಲ್ಲ. ಯಾರೋ ಶಿಷ್ಯರು ಕೊಟ್ಟಿರಬಹುದು. ಅಥವಾ ನಾಲ್ಕಾರು ಊರಿನವರು ಸೇರಿ ದೇವಾಲಯವನ್ನು ಕಟ್ಟಿಸಿ, ಅದಕ್ಕಾಗಿ ಮಠವನ್ನೇರ್ಪಡಿಸಿರಬಹುದು. ಅಥವಾ ಯಾರಾದರೂ ಪರೋಪಕಾರ ಪರಾಯಣ ವ್ಯಕ್ತಿಯು ಜನಸೇವೆಗೆಂದು ಚಂದಾ ಎತ್ತಿ ಕೊಟ್ಟಿರಬಹುದು. ಇವುಗಳ ಇತಿಹಾಸವೇನೇ ಇರಲಿ, ಧರ್ಮ ಪ್ರಚಾರಕ್ಕೆಂದು ಕೊಟ್ಟಿರಲಿ, ವಿದ್ಯಾಪ್ರಚಾರಕ್ಕೆಂದಾಗಲಿ, ಅನಾಥರ, ರೋಗಿಗಳ ಸೇವೆಗೆಂದಿರಲಿ, ಯಾವುದಾದರೂ ಸದುದ್ದೇಶದಿಂದಲೇ ಕೊಟ್ಟಿರಬೇಕು. ಈ ಮಠಗಳ ವಿಶಾಲ ಸಂಪತ್ತಿಯು ಕೇವಲ ಒಂದೆರಡು ವ್ಯಕ್ತಿಗಳ ಭೋಗವಿಲಾಸಕ್ಕೆಂದು ಮಾತ್ರ ಎಂದಿಗೂ ಆಗಿರಲಾರದು. ಇಂದು ಮಠಾಧೀಶರು ವಿರಾಗಿಗಳೆಂದು ಹೇಳಿಕೊಳ್ಳುತ್ತಾ ಪ್ರಪಂಚಗಳಲ್ಲಿ ಲಿಪ್ತರಾಗಿರುವರು. ಎಲ್ಲಕ್ಕಿಂತ ಮೊದಲು ಈ ಮಠಗಳನ್ನು ಸುಧಾರಿಸುವುದೇ ಅಗತ್ಯವಾಗಿದೆ. ಇವುಗಳ ಅಧಿಕಾರಿಗಳು ಪರಂಪರಾಗತವಾಗಿ ಚುನಾಯಿಸಲ್ಪಡುವರು.

ಎರಡನೆ ವಿಧದ ಮಠಗಳು

ಎರಡನೆಯ ವಿಧದ ಮಠಗಳು-ಯಾರಾದರೂ ಧರ್ಮಜ್ಞರು ಗೃಹಸ್ಥರು ತಮ್ಮ ಧಾರ್ಮಿಕ ಶ್ರದ್ಧೆಯ ತೃಪ್ತಿಗಾಗಿ ಕಟ್ಟಿಸಿ ಕೊಟ್ಟಿರಬಹುದು. ಈಗಲೂ ಅನೇಕರು ಈ ರೀತಿ ಮಾಡುತ್ತಿರುವರು. ಇವುಗಳ ಸಮಸ್ಯೆಯು ಅಷ್ಟೇನೂ ಜಟಿಲವಲ್ಲ. ಇವುಗಳಲ್ಲಿ ಹೆಚ್ಚು ಸಂಪತ್ತು ಇರುವುದಿಲ್ಲ.

ಮೂರನೇ ವಿಧದ ಮಠಗಳು

ಮೂರನೆ ಜಾತಿಯವು-ಪ್ರಸಿದ್ಧ ತೀರ್ಥ ಕ್ಷೇತ್ರಗಳಲ್ಲಿರುವುವು. ಇವುಗಳಲ್ಲಿ ದಿನದಿನವೂ ಸಂಪತ್ತಿಯು ವೃದ್ಧಿಯಾಗುತ್ತಿರುವುದು. ಈ ತೀರ್ಥ ಸ್ಥಾನಗಳಲ್ಲಿ ಮಠಗಳಲ್ಲಿ ನಡೆಯುವ- ಧರ್ಮದ ಮರೆಯಲ್ಲಿ ಆಗುವ ಅತ್ಯಾಚಾರಗಳು ಹೆಚ್ಚಾಗುತ್ತಲೇ ಇವೆ. ಅನೇಕ ಸ್ಥಾನಗಳಲ್ಲಿ ದೇವರ ಸೇವೆಗೆಂದು ಅನೇಕ ದಾಸಿಯರಿರುವರು. ಎಲ್ಲರೂ ಅವಿವಾಹಿತರೇ. ಈಗಿನ ಕಾಲದ ಸಾಧು ಸನ್ಯಾಸಿಗಳ ರೂಪರೇಖೆಗಳು ಹೇಗಿರುತ್ತವೆಂಬುದನ್ನು ಬರೆಯುವ ಅವಶ್ಯಕತೆ ಇಲ್ಲ. ಈ ದಾಸಿಯರು ಮಂದಿರದಲ್ಲಿ ಸ್ಥಾಪಿಸಲ್ಪಟ್ಟಿರುವ ದೇವತೆಗಳ ಸೇವಕರಾಗಿರದೆ, ಪ್ರತ್ಯಕ್ಷ ದೇವತೆಗಳ ಸೇವೆಯಲ್ಲಿಯೇ ಇರುವರು!

ಆಪನ್ನಯ

ಪ್ರಾಯಶಃ ಮಠಾಧಿಪತಿಗಳಿಗೆ ಅಪಾರ ಭೂಸಂಪತ್ತಿ ಇರುವುದು. ಮಠಗಳ ಅಕ್ಕಪಕ್ಕಗಳಲ್ಲಿ ಸೇವಕ ಸೇವಕಿಯರು ಇದ್ದೇ ಇರುವರು. ಅಲ್ಲಿನ ಮಹಾಂತರನ್ನೂ ಗ್ರಾಮವಾಸಿಗಳು ಚನ್ನಾಗಿ ಬಲ್ಲರು. ಸಮಯ ಸಮಯಗಳಲ್ಲಿ ಧರ್ಮದ ಹೆಸರಿನಲ್ಲಿ ನೃತ್ಯಗಾನಗಳಿಗಾಗಿ ಅಪಾರ ಅಪವ್ಯಯವಾಗುತ್ತದೆ ಈ ಮಠಗಳ ಅಧಿಕಾರಿಗಳು ಸಹ ಯಮುನಾಜನ ದೂತರೇ ಆಗಿರುತ್ತಾರೆ.

ಸುಧಾರಣೆಯಾಗಬೇಕು.

ಈ ಮಠಗಳ ಸಂಪತ್ತಿಯ ವ್ಯವಸ್ಥೆಯು ಸಮಿತಿಯ ಮೂಲಕ ಆಗಬೇಕು. ಪೂಜಾದಿಗಳಿಗೆ ಸ್ವಲ್ಪಭಾಗವನ್ನು ಇಟ್ಟು ಉಳಿದುದನ್ನು ಸಾರ್ವಜನಿಕ ಕಾರ್ಯಗಳಲ್ಲಿ ಉಚಿತ ರೀತಿಯಿಂದ ವ್ಯಯಮಾಡಬೇಕು. ನಾಮಧಾರೀ ಸನ್ಯಾಸಿ, ಬೈರಾಗಿಗಳನ್ನು ಅಲ್ಲಿಂದ ಹೊರದೂಡಬೇಕು. ಮಹಾಂತರ ಅಧಿಕಾರವಳಿಯಬೇಕು. ಸಮಿತಿಯ ಸದಸ್ಯರು ಆಗಾಗ್ಗೆ ಚುನಾಯಿತರಿರಬೇಕು.

ಅನೇಕ ಮಹಾಂತರ ವೈಯಕ್ತಿಕ ಚರಿತ್ರೆಗಳು ಕಳಂಕಪೂರಿತವಾಗಿರುವವು. ಅವರಿಗೆ ವಿವಾಹವಾಗುವ ಇಚ್ಛೆ ಇದ್ದಲ್ಲಿ ಆ ರೀತಿ ಮಾಡಿ ಅವರ ಜೀವನ ನಿರ್ವಾಹದ ಏರ್ಪಾಡು ಮಾಡಿ ಅವರನ್ನೂ ಹೊರಗೋಡಿಸಬೇಕು. ಏಕೆಂದರೆ ಈ ಮಹಾಶಯರು ವಿವಾಹಿತರಾಗಿ ಗೃಹಸ್ಥರಾಗಿರುವುದೇ ಒಳ್ಳೆಯದು. ಕಾಲಚಕ್ರವು ವೇಗವಾಗಿ ಉರುಳುತ್ತಿದೆ. ಸಮಾಜ ಕ್ರಾಂತಿಕಾರೀ ಸುಧಾರಕರು ಒಟ್ಟಾಗಿ, ಪ್ರಚಂಡ ಆಂದೋಲನವನ್ನು ಎಬ್ಬಿಸಿ, ಈ ಕಳಂಕವನ್ನು ತೊಳೆಯಬೇಕು.

ಜನವಾಣಿಯನ್ನು ಮನ್ನಿಸಿ, ಅವರ ಕುಂದನ್ನು ದೂರಮಾಡಲು ಇತರರಿಗಿಂತ ಕಾಂಗ್ರೆಸಿನವರು ಉತ್ತಮರು. ಅವರ ಆಡಳಿತದಲ್ಲಾದರೂ ಈ ಸಮಾಜದ ಕುಂದು ದೂರವಾದೀತೇ?

(ಹಿಂದಿಯಿಂದ)

When God Adopts Manhood?

ದೇವರು ಮಾನವತ್ವವನ್ನೆಂದು ವಹಿಸುವನು?

ಸತ್ಯವು ಸರ್ವಶಕ್ತಿಯುದುದು, ಎಲ್ಲಾ ಆತ್ಮಗಳಿಗೂ ಅದು ಸ್ವರ್ಗೀಯ ಆನಂದದಾಯಕವಾದುದು. ಮಾನವನು ನಿಸ್ಸಹಾಯಕನೆಂದು ಹೇಳುವವರಾರು? ಮಾನವನು ತನ್ನ ಇಷ್ಟಗಳನ್ನು ನೆರವೇರಿಸಿಕೊಳ್ಳಲಾರನೆಂದು ಹೇಳುವವರಾರು? ಈ ಲೋಕದಲ್ಲಿ ಯಾವುದಾದರೂ ಅಸಾಧ್ಯವೆಂದು ನಂಬುವವರಾರು? ಯಾರಿಗೆ ಜೀವನದಲ್ಲಿ ಬೇಸರವುಂಟಾಗಿರುವುದೋ, ಯಾರನ್ನು ದುರದೃಷ್ಟವು ಬೆನ್ನಟ್ಟಿದಿರುವುದೋ, ಯಾರು ನಿರುತ್ಸಾಹಗೊಂಡಿರುವರೋ ಅವರಿಗೆಲ್ಲಾ ಸುಸ್ವಾಗತ. ನೀವು ನೆರವೇರಿಸಿಕೊಳ್ಳದ ಅಪೇಕ್ಷೆಗಳಾದರೂ ಯಾವುವು? ನೀವು ಗುಣಪಡಿಸಿಕೊಳ್ಳಲಾರದ ರೋಗವಾದರೂ ಯಾವುದಿದೆ? ಯಾವುದದು ನಿಮಗೆ ಮಾಡಲು ಅಸಾಧ್ಯವಾದವು? ನೋಡಿರಿ; ಕಣ್ಣು ತೆರೆಯಿರಿ! ಮಾನವನಲ್ಲಿ ದೇವಾಂಶ ಶಕ್ತಿಯಿರುವುದೆಂಬುದನ್ನು ಕಂಡುಕೊಳ್ಳಿರಿ. ಸಚ್ಚರಿತ ಆತ್ಮವಿದ್ಯಾ ಕೋವಿದನೊಬ್ಬನು ನಿಮಗೆ ವಿನೋದದ ಜ್ಯೋತಿರ್ಮಂಡಲದ ವೈಚಿತ್ರ್ಯವನ್ನು ತೋರಿಸುವನು, ಎಲ್ಲಾ ತರದ ರೋಗಗಳಿಂದ ನಿಮ್ಮನ್ನು ವಿಮುಕ್ತರನ್ನಾಗಿ ಮಾಡುವನು. ನಿಮ್ಮ ಜೀವನದ ಆಶೆಗಳನ್ನು ನೆರವೇರಿಸುವ ಮಾರ್ಗದಲ್ಲಿರುವ ತೊಡಕುಗಳನ್ನೆಲ್ಲಾ ನಿವಾರಿಸುವನು, ಸರ್ವಶಕ್ತ ಸತ್ಯದ ಪ್ರಭಾವದಿಂದ ಅವನು ನಿಮಗೆ ದಿವ್ಯ ಶಾಂತಿ ಮತ್ತು ಅಭಿವೃದ್ಧಿಯನ್ನುಂಟುಮಾಡುವನು. ಮಹಾತ್ಮ ಗಾಂಧಿ, ಹಿಟ್ಲರ್, ನೆಪೋಲಿಯನರೇ ಮೊದಲಾದ ಮಹಾಪುರುಷರ ಜಯಶೀಲತೆಯ ರಹಸ್ಯವು ವಿವರಿಸಲ್ಪಡುವುದು. ಮತ್ತು 24ಘಂಟೆಗಳೊಳಗೆ ಜನತೆಗೆ ಮುಕ್ತಿಯ ಮಾರ್ಗವು ತೋರಿಸಲ್ಪಡುವುದು. ಸತ್ಯವು ಸರ್ವ ಶಕ್ತವಾದುದು ಮತ್ತು ದಿವ್ಯ ಆನಂದದಾಯಕವು, ಆತ್ಮ ಮತ್ತು ಹಾರ್ದಿಕವಾಗಿ ಒಬ್ಬನು ಸತ್ಯಶೀಲನಾಗಿದ್ದರೆ ವಿಚಿತ್ರ ಕೆಲಸ ಮಾಡಬಹುದು. ನಿಮಗಿದನ್ನು ಸೂಚಿಸಬೇಕೆಂದಿದ್ದರೆ, ಬನ್ನಿರಿ, ಹಿಂದು, ಮುಸಲ್ಮಾನ್ಯ ಪಾರ್ಸಿ ಮೊದಲಾದವರೆಲ್ಲರಿಗೂ, ಆತ್ಮವಿದ್ಯೆಯಿಂದ ಜೀವನದ ಎಲ್ಲಾ ಸಂಕಷ್ಟಗಳನ್ನು ಹೇಗೆ ನಿವಾರಿಸಿಕೊಳ್ಳಬಹುದೆಂಬ ಕುರಿತು ಉಪದೇಶವೀಯಲಾಗುವುದು, ಈ ವಿಚಿತ್ರ ಮನುಷ್ಯನಂದೊಮ್ಮೆ ಸಲಹೆಪಡೆದ ಪಕ್ಷದಲ್ಲಿ, ಪ್ರಕೃತಿಯ ನಿಜವಾದ ಶಕ್ತಿಗಳ ಮತ್ತು ಪ್ರಕೃತಿಯ ವಿಷಯವಾಗಿಯೇ ನಿಮಗೆ ಸಾಧಾರಣ ಅಭಿಪ್ರಾಯವಾಗುವುದು.

ವಿ. ಸೂ.—(3 ಪ್ರಶ್ನೆಗಳಿಗೆ ರೂ. 2 ಮಾತ್ರ.)

ಹಣವನ್ನು ಟಪ್ಪಾಲುದ್ವಾರಾ ಅಥವಾ ಸ್ವತಃ ಕೊಡಬಹುದು.

ವಿಳಾಸ:— ಸ್ಪಿರಿಚುವಲ್ ಸ್ಪಾರ್ಕ್,

I ಫ್ಲೋರ್, ಮಹಾಕಾಳಿ ಮಂದಿರ, ಚಾಲ್, ಪಿಧೋನಿ, ಬೊಂಬಾಯಿ.

Address:—**Spiritual Spark,**

First Floor, Mahakali Mandir, Chawl, Pydhony, BOMBAY.

Degrees: Books: Medicines.

Free H. L. M. S, H. M. B. H. M. D. etc Free Homeo-Ayur-Unani-Naturo degres, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Madary Pills

(REGISTERED)

ಮದಾರಿ ಗುಳಿಗೆಗಳು

(ರಿಜಿಸ್ಟರ್ಡ್)

ಜಯಪ್ರದ ಹಾಗೂ ಅನುಭವದಾಯಿಕ ರಾಮಬಾಣ- ಸನ್ನಿ, ಅಪಸ್ಮಾರ ಇತ್ಯಾದಿಗಳಿಗೆ,

ದೋಷರಹಿತವಾದ ಅತ್ಯಮೂಲ್ಯ ಗಿಡಮೂಲಿಕೆಗಳ ಸತ್ವದಿಂದ ತಯಾರಿಸಲ್ಪಟ್ಟಿದ್ದು, ಅಫೀಮು ಇತ್ಯಾದಿಗಳ ಸಂಪರ್ಕವೇ ಇಲ್ಲ.

ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನಪುಂಸಕತ್ವ, ಸೂತಿಕಾವಾಯು, ಗರ್ಭಾಶಯ ದಾಹ, ನಿದ್ರೆಬಾರದಿರುವಿಕೆ, ಹುಚ್ಚು, ಉನ್ಮಾದ, ಸ್ವಪ್ನೇಂದ್ರಿಯ, ಬಾಲಗ್ರಹ, ಮತ್ತಿತರ ಮಾನಸಿಕ ಮತ್ತು ಮೆದುಳಿನ ಆಕ್ರಮಗಳನ್ನು ಹೋಗಲಾಡಿಸುತ್ತದೆ.

ಇಂಡಿಯಾ, ಬರ್ಮಾ, ಆಫ್ರಿಕಾ, ಸಿಂಹಳದ್ವೀಪ, ಮೊದಲಾದ ಪ್ರಮುಖ ರಾಷ್ಟ್ರಗಳ ಪ್ರಸಿದ್ಧ ಡಾಕ್ಟರುಗಳು ಮದಾರಿ ಮಾತ್ರೆಗಳಿಗೆ ಪದೇ ಪದೇ ಆರ್ಡರುಗಳನ್ನು ಕೊಡುವುದೇ ಸತ್ವ ಗುಳಿಗೆಗಳ ಶಕ್ತಿಯನ್ನು ಬಲಪಡಿಸುವಂತಹುದಕ್ಕೆ ನಿದರ್ಶನ.

50 ಗುಳಿಗೆಗಳುಳ್ಳ ಸೀಸೆಯೊಂದಕ್ಕೆ ಕ್ರಯ ರೂ. 3-8-0. ಬಯಕೆಯುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆಯಿರಿ:—

The Imperial Chemist Coy,
106, Vithalbhai Patil Road Bombay 4.

ತಾ 7-9-1939 ರಿಂದ

ವಾರದ ಭವಿಷ್ಯ

ತಾ 14-9-39ರ ವರೆಗೆ

ಮುಂದಾಗುವುದನ್ನು ಇಂದೇ ತಿಳಿಯಿರಿ

[ಜ್ಯೋತಿಷವು ಅಪ್ರಸ್ತುವಾವಲ್ಲ ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಯರೊಬ್ಬರಿಂದ ಬರೆಸಿ ಪ್ರಕಟಿಸಿರುತ್ತೇವೆ ಸಂ ನ.]

ಮೇಷರಾಶಿ—

ಸದಾ ನಿಮ್ಮ ಬಂಧುಗಳಿಂದಲೂ ಮಿತ್ರರಿಂದಲೂ ಮುಕ್ತರಾಗಿದ್ದರೂ ಏಕತ್ವ ಇದ್ದವರು ನಿಮಗೆ ಸಿರಿವಾಗಲಿರುವರು ಇವರ ಸಹಾಯದಿಂದ ನೀವು ಕೃತಕೃತ್ಯ ಉಪಕಾರಕ್ಕೆ ತಕ್ಕ ಪ್ರತೀಕಾರವನ್ನು ಮಾಡಿ ಕೃತಕೃತ್ಯರಾಗುವಿರಿ. ರಾಜಕೀಯ ಸಂಬಂಧವಾದ ಭಯವು ನಿಮ್ಮ ಅಂತರ್ಯದಲ್ಲಿರುವುದರಿಂದ ಮನಸ್ಸು ಸದಾ ವಿಚಾರತರಂಗಗಳಲ್ಲಿ ಲೀನವಾಗಿರುವುದು ಆರೋಗ್ಯವಿಚಾರವಾಗಿ ಸ್ವಲ್ಪ ಕಷ್ಟವನ್ನನು ಭವಿಸಬೇಕಾಗುವುದು ಸಾಂಸಾರಿಕ ಸಂಬಂಧವಾದ ದುಃಖಗಳು ದಿನೇ ದಿನೇ ವೃದ್ಧಿಗೊಳ್ಳುವವು ಮನಸ್ಸಿನಲ್ಲಿ ಅಲ್ಲಸಲ್ಲದ ಚಿಂತೆಗಳು ಹುಟ್ಟುವುದರಿಂದಲೂ ಪ್ರವಾಸದಲ್ಲಿ ಕಷ್ಟನಷ್ಟಗಳೊದಗುವುದರಿಂದಲೂ ಅತೀವ ವ್ಯಸನಾಕ್ರಾಂತರಾದ ನಿಮಗೆ ಸುಖದಿಂದ ನಿದ್ದೆ ಸಹಾ ಹತ್ತಲಾರದು ತಾ 3 8 ಈ ದಿನಗಳನ್ನು ಬಿಟ್ಟು ಇತರ ದಿನಗಳಲ್ಲಿ ಅನಾರೋಗ್ಯ ಅತಿವ್ಯಯ, ಕಾರ್ಯವಿಘ್ನ ಇತ್ಯಾದ್ಯನಿಷ್ಟಗಳು ವೃದ್ಧಿಗೊಳ್ಳುವವು

ವೃಷಭರಾಶಿ—

ಈ ವಾರದಲ್ಲಿ ನಿಮ್ಮ ಅದೃಷ್ಟವು ಇಷ್ಟಾನಿಷ್ಟಗಳಿಂದ ವಿಶ್ರೀಮೋತವಾಗಿರುವುದು ಆರೋಗ್ಯವು ಉತ್ತಮರೀತಿಗೆ ಬಂದಿದ್ದರೂ ತಕ್ಕವಟ್ಟಿನ ಸಧಾರಿತ ಸ್ಥಿತಿಯಲ್ಲಿರುವುದು ನಿಮ್ಮ ಶಕ್ತಿಯನ್ನತಿಕ್ರಮಿಸಿ ಕಷ್ಟಪಟ್ಟು ಸಂಪಾದಿಸಬಹುದಿರಿ ಆದರೆ ನಿಮಗೆ ಸಂಪಾದಿಸಲು ಮಾತ್ರ ಗೊತ್ತೇ ಹೊರತು ಅದನ್ನು ಉಳಿಸಿಕೊಳ್ಳಲು ತಿಳಿಯದು, ಕೈಗೆ ಬಂದೊಡನೆ ನಾನಾ ರೀತಿಯಲ್ಲಿ ಖರ್ಚಾಗುವುದು ಆದಕಾರಣದಿಂದಲೇ ಸದಾ ರಿಕ್ತಹಸ್ತರಾಗಿರುವಿರಿ ಇಷ್ಟವಾದ ವಸ್ತುವು ಬೇಕನ್ನುವ ಕಾಲಕ್ಕೆ ದೊರೆಯದು ಭೂಸಂಬಂಧ ಹುಟ್ಟಿನ ಧನವ್ಯಯವಿರಿ ಕುಟುಂಬಿಕರು ಮಿತ್ರರು ಇವರ ಸಮಾಗಮದಿಂದಾಗಿ ದಿನಗಳ ಬಹುಬೇಗನೆ ಕಳೆಯುವವು. ಅನಿತ್ಯರ್ಯ ಸಲುವಾಗಿ ಧನವನ್ನು ಉದ್ದೇಶಪೂರ್ವಕ ವ್ಯಯಿಸುವಿರಿ, ಶರೀರದಲ್ಲಿ ನಿಶ್ಶಕ್ತಿಯು ಅಧಿಕವಾಗುವುದಲ್ಲದೆ ಮಾನಸಿಕ ಸುಖವೂ ಕೂಡ ದುರ್ಲಭವಾಗುವುದು ತಾ 7 ಮತ್ತು 10, 11 ಈ ದಿನಗಳಲ್ಲಿ ಈಪ್ಸಿತ ಕಾರ್ಯಗಳೇ ಬೇಗನೆ ಸಿದ್ಧಿಸುವ ಯೋಗವಿದೆ

ಮಿಥುನರಾಶಿ—

"ಪ್ರಾಣಂ ವಾಪಿ ಪರಿತ್ಯಜ್ಯ ಮಾನಮೇವಾಭಿರಕ್ಷತು" ಪ್ರಾಣವನ್ನಾದರೂ ಬಿಟ್ಟು ಮಾನವನ್ನು ಕಾಪಾಡು ಎಂಬುದೇ ಈ ಪದ್ಯಾರ್ಥ ಮಾನಧನಾಭಿಮಾನಿಗಳಾದ ಸತ್ಪುರುಷರ ಆಚಂದ್ರಾರ್ಕಸ್ಥಾಯಿಯಾದ ಮಾನವನ್ನು ಕಾಪಾಡಬೇಕೆಂದು ಕ್ಷಣಿಕವಾದ ಜೀವಿತವನ್ನು ಗಣನೆಗೆ ತರಲಾರರು ಪ್ರಕೃತ ನಿಮ್ಮ ಜೀವಿತದಲ್ಲಿ ಪ್ರತಿಸ್ಪರ್ಧಿಗಳಿಂದ ಮಾನಚ್ಯುತಿಯ ಯೋಗವು ಕಂಡುಬರುತ್ತದೆ ಅಂಥಾ ಪ್ರಸಂಗಕ್ಕೆ ಎಡೆಕೊಡದಿರುವುದು ಮಾನಾಭಿಮಾನಿಗಳ ಮುಖ್ಯ ಕರ್ತವ್ಯ ಸಂಚಾರದಲ್ಲಿ ಅಪಘಾತಗಳು ಸಂಭವಿಸಿ ಗಾಯಾದಿಗಳುಂಟಾದಾವು, ಇತರ ದಿನಗಳಲ್ಲಿ ನೀವು ನಿಶ್ಚಿಂತರಿರುವಿರಿ. ಅವರವರ ಅಭಿರುಚಿಗನುಸಾರವಾಗಿ ನಾನಾ ರೀತಿಯ ಉದ್ಯೋಗದಿಂದ ಧನ ಪ್ರಾಪ್ತಿಯಾಗುವುದು ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾಗುವಿರಿ ಮಂಗೋಲದಿಂದಾಗಿ ಕೆಲವರಿಗೆ ಸರ್ಕಾರಿ ತಿರಸ್ಕಾರ ತೋರಬಹುದು, ಆದರೂ ನಿಮಗವರ ಬೆದರಿಕೆಯಿಲ್ಲವು ತಾ. 7, 10, 11, 14ರ ಮಟ್ಟಿಗೆ ಪ್ರತಿಕೂಲವಿದೆ

ಕರ್ಕಾಟಕರಾಶಿ—

ವಿದ್ಯೋಪಜೀವಿಗಳಿಗೂ ವ್ಯಾಪಾರಿಗಳಿಗೂ ಇತರ ಸಜ್ಜನ ವರ್ಗಕ್ಕೂ ಈ ವಾರವು ಸಾಮಾನ್ಯ ಉತ್ತಮವೆನ್ನಬಹುದು ನಿಮ್ಮ ಚಾಲಾಕ್ಷತೆಯನ್ನನುಸರಿಸಿ ನಿಮ್ಮ ಭವಿಷ್ಯವಿರುವುದು ಶತ್ರುಜನರಿಂದ ಪೀಡೆಗಳು ಬಂದರೂ ಆರ್ಥಿಕಭಾಗಕ್ಕೆ ಧಕ್ಕೆಯಿಲ್ಲವು ಸತ್ಕಾರ್ಯ ಸತ್ಸಂಸರ್ಗಗಳಲ್ಲಿ ವೈಮನಸ್ಯ ಹುಟ್ಟುವುದರಿಂದ ಜನಾಪವಾದಕ್ಕೆ ಪಾತ್ರರಾಗುವಿರಿ ಮನಶ್ಚಾಂಚಲ್ಯವಧಿಕವಾಗುವುದು ಶರೀರಪೀಡೆಯಿಂದ ಸ್ವಲ್ಪ ಮಟ್ಟಿಗೆ ದುಃಖಿತ್ಯೋಬೇಗುವಿರಿ ನೇತ್ರೋದರ ಪೀಡೆಗಳು ಆಗಾಗ ಬಾಧಿಸುವವು ಅರ್ಧಾಂಗಿಯ ಬನ್ನಾವ್ಯ ಚಂಡಿಯ ಅಪರಾಧಕಾರಳಾಗಿ ತೋರಬಹುದು ಇದರ ಸಾಂಸಾರಿಕ ಭಾಗಗಳಲ್ಲಿ ನಿಶ್ಚಿಂತರಿರುವಿರಿ. ಅಂತೂ ಮಾನಸಿಕ ಸುಖದಿಂದ ವಂಚಿತರಾದ ನಿಮಗೆ ಈ ವಾರದ ತಾ. 8-9-12 13 ದಿನಗಳಲ್ಲಿ ಉಪಜೀವಿತಯಿಂದಾಗಿ ಗಟ್ಟಿಗರಾಗಿ ಕೆಲಸದಲ್ಲಿ ಅನಾಸಕ್ತಿ ದೇಹಾಯಾಸ, ಅನಾರೋಗ್ಯಗಳು ಅಧಿಕವಾದಾವು.

ಸಿಂಹರಾಶಿ—

ಹೇಮಾರು ಗ್ರಹರು ವಿಪರೀತಸ್ಥಾನದಲ್ಲಿರುವುದರಿಂದ ನೀವೀವಾರದಲ್ಲಿ ಬಹಳ ಕಷ್ಟಕ್ಕೆ ತತ್ತಾಗುವಿರಿ ರೋಗಪ್ರಾಬಲ್ಯದಿಂದಾಗಿ ದೇಹಾಯಾಸವಧಿಕವಾಗುವುದು ದೌರ್ಜನ್ಯ ದುರಾಗ್ರಣಿಯಿಂದಾಗಿ ಕೆಲಹ ತಿರಸ್ಕಾರ ಧನನಾಶ ಇವುಗಳಿಗೊಳಗಾಗುವಿರಿ, ವಂಚನೆ, ನಾಸ್ತಿಕತೆ, ಅಸೂಯೆ ಇತ್ಯಾದಿಗಳ ಜಗಳ ಪ್ರಾದುರ್ಭಾವದಿಂದ ಜನರ ಬಾಯಿಗೆ ಸಿಲುಕುವಿರಿ, ಗುರುಪ್ರಕೋಪಕ್ಕೆ ಕುತ್ತಾದ ನೀವು ದುರ್ಮಾರ್ಗಯಾಸದಿಂದಾಗಿ ಹೆಚ್ಚಿನ ಕೇಡಿಗೆ ಗುರಿಯಾಗುವಿರಿ ಆದರೂ ನಿಮಗೆ ತೃಪ್ತಿಯೇನೆಂದರೆ ಸುಖಭಾಗ್ಯಪತಿಯಾದ ಕುಜನು ಉಚ್ಚನಾಗಿ ಸುಸ್ಥಾನವನ್ನು ಹೊಂದಿರುವುದರಿಂದ ಶತ್ರುಪೀಡೆಯಿಲ್ಲದೆ ಕಾರ್ಯನಿರ್ವಹಿಸುವಿರಿ. ಆರ್ಥಿಕ ಭಾಗವು ಉತ್ತಮವಿಲ್ಲದಿದ್ದರೂ ಕೆಟ್ಟಿಲ್ಲವು. ಸ್ತ್ರೀವಿಷಯಕವಾದ ಸುಖವನ್ನು ಹೊಂದುವಿರಿ, ತಾ. 10-11-14 ಈ ದಿನಗಳು ನಿಮಗೆ ಪ್ರತಿಕೂಲಗಳಾಗಿರುವುದರಿಂದ ಕೋರ್ಟು ಕಾರ್ಯ, ಪ್ರವಾಸ ಇತ್ಯಾದಿಗಳನ್ನು ಮುಂದರಿಸುವದೊಳ್ಳಿತು

ಕನ್ಯಾರಾಶಿ—

ಸತ್ಕರ್ಮ ಸದಾಚಾರಗಳಲ್ಲಿ ವಿಶೇಷ ಆತುರರಾದ ವರಿಗೆ ಈ ವಾರದಲ್ಲಿ ಹೆಚ್ಚಿನ ಕೆಡುಕೂ ಒಳ್ಳೆಯದೂ ಆಗಲಾರದು ನಿಮ್ಮ ಪಾಂಡಿತ್ಯ ಮತ್ತು ಆದಕ್ಷನುಕೂಲವಾದ ವಾಕ್ಪಟುತ್ವ ಇವುಗಳಿಂದಾಗಿ ಜನರ ಪ್ರೇಮಾದರಗಳಿಗೆ ಪಾತ್ರರಾಗುವಿರಿ ನಿತ್ಯ ಊಟದ ಸಲುವಾಗಿ ಧನಧಾನ್ಯಗಳಲ್ಲಾಗಲಿ ಆರ್ಥಿಕಭಾಗದಲ್ಲಾಗಲಿ ಕೊರತೆಯಿಲ್ಲವು. ಕೋರ್ಟು ವಗೈರೆ ಕಾರ್ಯಗಳಲ್ಲಿ ಸತ್ಯಾಸತ್ಯಗಳಿಗೆ ವಿಜಯವಿದೆ, ಆದರೆ ಶತ್ರುಕೃತ ವಿಘ್ನಗಳಿಂದಾಗಿ ನಿಮ್ಮ ನೌಕರಿ ಭಾಗದಲ್ಲೂ ಇತರ ಕಾರ್ಯದಲ್ಲೂ ತೊಂದರೆಗಳುಂಟಾಗುವವು. ಅಪತ್ಯವರ್ಗದಿಂದ ಸುಖವಿರದು, ಅರ್ಥನಾಶ ಮಾನಸಿಕ ಚಿಂತೆಯಿಂದಾಗಿ ದೇಹಾರೋಗ್ಯವೂ ಕೂಡ ಕೆಡುವ ಸಂಭವವಿದೆ, ತಾ 7-12 13 ಈ ದಿನಗಳು ಇತರ ದಿನಗಳಿಗಿಂತ ಸ್ವಲ್ಪ ಹೀನ ತರಗತಿಯವಿರುವುದರಿಂದ ದೇಹಾಲಸ್ಯ ಧನವ್ಯಯಗಳು ಅಧಿಕವಾಗುವವು

ತುಲಾರಾಶಿ—

"ಸ್ಥಾನಭ್ರಷ್ಟಾ ನ ಶೋಭಂತೇ ದಂತಾಃ ಕೇಶಾ ನಖಾ ನರಾಃ" ಪಂಡಿತರು (ವಿದ್ವಾಂಸರು) ಸ್ತ್ರೀಯರು ಬಳ್ಳಿಗಳು ಇವು ಸ್ವಸ್ಥಾನವನ್ನು ಅತಿಕ್ರಮಿಸಿದರೆ ಅವುಗಳಿಗೆ ಶೋಭೆಯಿಲ್ಲವು ಆದಕಾರಣ ಸ್ಥಾನಬಲವೇ ಇವುಗಳ ಆಧಿಕ್ಯಕ್ಕೆ ಮುಖ್ಯಕಾರಣವು. ಇದೇ ರೀತಿ ರವಿ ಬುಧ ಶುಕ್ರರು ಕೂಡ ಸ್ವಸ್ಥಾನಬಲವನ್ನು ಹೊಂದಿರುವುದರಿಂದ ಅವರ ಮೂಲಕ ನಿಮಗೆ ಅತೀವ ಶೋಭೆ ಬಂದಿದೆ ಯಾವುದರಲ್ಲಿ? ಕಾರ್ಯದಕ್ಷ. ಜಗದಲ್ಲಿ, ಆರೋಗ್ಯಭಾಗ್ಯದಲ್ಲಿ. ಮಿತ್ರರ ಸಹಕಾರ ಸಮಾಗಮಗಳಿಂದ ಯುಕ್ತರಾದ ನಿಮಗೆ ದಿನಗಳು ಸಂತೋಷದಿಂದ ಕಳೆಯುವವು ಶತ್ರುಪೀಡಾ ಸಂಸರ್ಗದೋಷ ಇತ್ಯಾದಿಗಳಿಂದ ಮನೋವ್ಯಥೆಯು ನಿಶ್ಶೇಷವಾಗಿ ಪರಿಹಾರವಾಗಬೊಲ್ಲದು ಪ್ರವಾಸ ವಿಷಯಕವಾಗಿ ಕಷ್ಟನಷ್ಟಗಳೊದಗುವವು ತಾ 10ರಿಂದ 13ರ ವರೆಗಿನ ದಿನಗಳಲ್ಲಿ ನಿಮ್ಮ ಕಾರ್ಯಗಳು ನಿರಾಯಾಸದಿಂದಲೂ ನಿರ್ವಿಘ್ನದಿಂದಲೂ ಮುಂದರಿವವು.

ವೃಶ್ಚಿಕರಾಶಿ—

ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನ್ನು ಕುರಿತು "ನಿಮಿತ್ತಮಾತ್ರಂ ಭವ ಸವ್ಯಸಾಚಿನ್" ಎಂದಿರುವಂತೆ ಈಗ ನಿಮ್ಮ ಗ್ರಹಗಳೂ ಅದೇ ಮಾತನ್ನು ನಿಮಗೆ ಪರೋಕ್ಷವಾಗಿ ತಿಳಿಸುತ್ತಿವೆ ಅದರರ್ಥವನ್ನರಿತು ನೀವು ಶಕ್ತಿಗೆ ತಕ್ಕದಾಗಿ ಕಾರ್ಯದಲ್ಲಿ ಪ್ರವರ್ತಿಸಿರಿ ಗ್ರಹಗಳು ಎಂದಿಗೂ ನಿಮ್ಮ ಕೈಬಿಡುವಂತಿಲ್ಲವು ಕೋರ್ಟುಕಾರ್ಯಗಳಲ್ಲಿ ನಿಮಗೇನೇ ವಿಜಯ ಶ್ರೀಯು ದೊರೆಯಲಿದೆ, ಈ ಹಿಂದೆ ಕೈಬಿಟ್ಟುಹೋಗಿ ನಷ್ಟವಾದುದೆಂದು ತಿಳಿದ ದ್ರವ್ಯ ಒಡವೆಗಳೂ ನಿಮ್ಮ ಕೈಸೇರಲಿವೆ. ಪುತ್ರ-ಮಿತ್ರ ಪರಿಜನ ಬಂಧುವರ್ಗ ಇವುಗಳಿಂದ ಕೂಡಿರತಕ್ಕ ನಿಮಗೆ ಸಾಂಸಾರಿಕ ಚಿಂತೆಯು ದೂರವಾಗುವುದು. ವಿದ್ಯಾಭ್ಯಾಸಿಗಳು ಅಭೀಷ್ಟವನ್ನು ಅಚಿರದಲ್ಲೇ ಹೊಂದುವರು ಆದರೊಂದು ಮಾತು "ಮೌನಂ ಪಂಡಿತ ಲಕ್ಷಣಂ" ಈ ವಾಕ್ಯವನ್ನು ಸದಾ ನೆನಪಿನಲ್ಲಿಡಿರಿ. ತಾ 7-12 13-14 ಈ ದಿನಗಳು ಸರ್ವಾಭೀಷ್ಟಪ್ರದಗಳೆಂದರೂ ತಪ್ಪಾಗಲಾರದು.

ಧನೂರಾಶಿ—

"ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವದೇನೋ ದೇವಾ" ಎಂಬ ದಾಸರುಕ್ತಿಯಂತೆ ಕರ್ಮಫಲವು ಬಲವತ್ತರವಾಗಿದ್ದರೆ ದೈವದೇವತೆಗಳಾದರೂ ಏನು ಮಾಡ್ಯಾರು. ನಮ್ಮ ನಿಮ್ಮ ಪಿತಾರದಲ್ಲಿ ಬಹಳ ಅಪಘಾತಗಳು ಪ್ರಾಪ್ತವಾಗಲಿವೆ. ವರ್ಷಾಕಾಲೀನ ಅಮಾವಾಸ್ಯೆಯ ದಿನದ

ಪುಟ ೩೬ ನೋಡಿರಿ

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಖಾಸ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನ.

ಮಹಾತ್ಮರ ಉಪದೇಶ! ೪೦ ವರ್ಷದ ಚಾಲ್ತಿ!! ಖಾತರಿ ಗುಣ!

ಸಂತಾನ ಸಿಂಧೂರ

ಮಹಿಳೆಯರಿಗೆ ಬಹುತ್ವ ಸಂಬಂಧದ ಹೊಟ್ಟೆನೋವು ಗುಣವಾದ ಹೊರತು **ಖಂಡಿತ** ಸಂತಾನವಾಗುವುದಿಲ್ಲ. ಈ ಅದ್ಭುತ ಭಸ್ಮವು ೩ ದಿವಸದಲ್ಲಿ ಆ ಹೊಟ್ಟೆನೋವಿನ ಹುಟ್ಟನ್ನೇ ಮಟ್ಟತಟ್ಟಿ, ಮೂಲಸ್ಥಾನವನ್ನು ಶುದ್ಧಿಮಾಡಿ, ಹದಪಡಿಸಿ, ಗರ್ಭಧಾರಣಗೆ ಸಿದ್ಧಪಡಿಸುತ್ತೆ. ಸತಿಯು ಇದನ್ನು ಸೇವಿಸುವಾಗ್ಯೆ, ಪತಿಯು ಧಾತುವನ್ನು ಶುದ್ಧಿಮಾಡಿ ವೃದ್ಧಿಪಡಿಸ ತಕ್ಕ (ಇನ್ನು ಹೆಚ್ಚಾಗಿ ವರ್ಣಿಸಬಾರದು) **'ಮದನ ವಿಲಾಸ'** ಎಂಬ ಅಮೋಘವಾದ ಗುಳಿಗೆಯನ್ನು ಸೇವಿಸಿದರ ಜಾಗ್ರತೆ ಸಂತಾನ ಫಲ ಈ ವೈದ್ಯ ಹೊಸದಲ್ಲ, ಫಾರಂಗಿ ಅಲ್ಲ, ಅನುಭವಸಿದ್ಧ. **ಶೋಭನವಾದ 12-15 ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ.** ಲೇಡಿ ಡಾಕ್ಟರಿಂದ ಆಪ್ರೇಶನ್, ಇತರ ಚಿಕಿತ್ಸೆಗಳು, ಯಂತ್ರ, ಮಂತ್ರ ಇತ್ಯಾದಿಗಳೆಲ್ಲಾ ಆಗಿದ್ದು ಫಲವಾಗದಿದ್ದಾಗ್ಯೂ ನಿರಾಶರಾಗಬೇಡಿ! **ಅನೇಕ ಇಂಗ್ಲಿಷ್ ಡಾಕ್ಟರುಗಳು ತರಿಸಿಕೊಳ್ಳುತ್ತಿರತಕ್ಕ ಈ ನಮ್ಮ ಸಿದ್ಧೌಷಧಗಳನ್ನೂ ಒಂದಾವರ್ತಿ ಉಪಯೋಗಿಸಿ ನೋಡಿ!**

೨ ಔಷಧಿಗಳ (೧ ಸೆಟ್) ಕ್ರಯ ರೂ ೨ ವಿ ಪಿ ಇಲ್ಲ ರೂ. ೨-೮-೦ ಮನಿಯಾರ್ಡರ್ ಮಾಡಿರಿ. ಮುಟ್ಟಿದ ಕ್ಷಣ ರಿಜಿಸ್ಟರ್ ಪಾರ್ಸೆಲ್ ರವಾನೆ. ಪತ್ರವ್ಯವಹಾರ ಗುಪ್ತ ಅನುಪಾನ ಪತ್ರ ಔಷಧಿಯ ಸಂಗಡ. ಹೆಚ್ಚು ಮಾಹಿತಿ ಬಗ್ಗೆ ೧ ಆಣೆ ಸ್ಟಾಂಪಿಟ್ಟು ಬರೆಯಿರಿ

ನಮ್ಮ ವಿಳಾಸ:—

A. Ramaswami Aiyar, *Amblav, Yelandur P O.* (Mysore Dt)

ಎ. ರಾಮಸ್ವಾಮಿ ಅಯ್ಯರ್, ಅಂಬಳೆ, ಯಳಂದೂರು ಪೋಸ್ಟು, (ಮೈಸೂರು ಡಿಸ್ಟ್ರಿಕ್ಟ್)

ಲೈಬ್ರರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ

ಕೆಟಲಾಗಿಗೆ ಬರೆಯಿರಿ

ಪಿ. ಎ. ಉಪಾಧ್ಯಾಯ,
ಬುಕ್ ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ.

GET RICH AND PROSPEROUS

through Simple Means upheld and persued by Millions.........!

WRITE NOW WITH STAMP.—

K. S. Row,
Worli, BOMBAY.

ವಿನೋದದಲ್ಲಿ

ಸುಬ್ಬಯ್ಯನ ಶಿಕಾರಿ

ಕಾಲ್ಪನಿಕ ಕತೆ

x x x x x x x

. . . .

'ಸುಬ್ಬಯ್ಯ! ನೀನೆಂತಹ ಅಂಜುಬುರುಕನಯ್ಯ? ಭವಾನಿಯ ಆಶೀರ್ವಾದದಿಂದ ಇದು ವರೆಗೆ ನನ್ನ ಪ್ರಶ್ನಫಲವಾಗಲೀ, ಜಾತಕ ಫಲವಾಗಲೀ ಸುಳ್ಳಾದುದನ್ನು ನೀನು ಕೇಳಿರುವೆಯಾ? ನಿನ್ನ ಪ್ರಶ್ನೆಯ ಗಣನೆಯಲ್ಲಿ ಏನೂ ತಪ್ಪಿಲ್ಲ. ಇದರಲ್ಲಿ ನಿನಗೆ ಜಯವಾಗದಿದ್ದರೆ ತಿರಿಗಿ ನಾನು ಕವಡೆ ಮುಟ್ಟಲಿಕ್ಕಿಲ್ಲ; ಭವಾನಿಯ ಆಣೆ!' ಎಂದರು ತಿಮ್ಮಪ್ಪ ಜೋಯಿಸರು . . . .

ಸುಬ್ಬಯ್ಯ ಸಡಗರದಿಂದ ಎದ್ದು ಜೇಬಿನಿಂದ ರೂ. **3000**ದ ವಿಮೆಯ ಬಗೆಗೆ ಜೋಯಿಸರ ಹೆಸರಲ್ಲಿ ಮೊದಲೇ ಬರೆದು ತಂದಿದ್ದ ವಿಮೆಯ ಪ್ರಸ್ತಾವದ ಫಾರ್ಮವನ್ನು ಮುಂದಿಟ್ಟು "ಇದಕ್ಕೆ ಸಹಿ ಮಾಡಿರಿ ಜೋಯಿಸರೇ" ಎಂದು ಫೌಂಟೆನ್ ಪೆನ್ನಿನ ಟೋಪಿಯನ್ನು ತೆಗೆದು ಜೋಯಿಸರ ಕೈಯಲ್ಲಿ ಕೊಟ್ಟ! ?

ಬರೆದವರು—ಶ್ರೀ. ಬಿ. ರಾಮಕೃಷ್ಣಾಚಾರ್, ಬಿ. ಎ., ವಿದ್ವಾನ್, ಉಡುಪಿ

"ನಮಸ್ಕಾರ, ಜೋಯಿಸರೆ!"

"ಯಾರದು? ಓಹೋ ಸುಬ್ಬಯ್ಯ! ಬಾ"

"ಹೌದು ಸ್ವಾಮಿ! ನಾನೇ."

"ಇಷ್ಟು ಬೆಳಗ್ಗೆ ಬರುವ ಉದ್ದೇಶ"

"ತಮ್ಮ ಆಶೀರ್ವಾದ ಪಡಕೊಳ್ಳಲಿಕ್ಕೆ"

"ಏನಯ್ಯ ಅಂತಹ ವಿಶೇಷ ಸಂಗತಿ?"

"ಸ್ವಾಮೀ! ಒಳಗೆ ದಯಮಾಡಿ. ಮಹತ್ವಾದ ವಿಷಯ. ನಿಮಿತ್ತ ಗಣಿಸಿ ಹೇಳಬೇಕು. ಬಡವನ ಮೇಲೆ ದಯೆ, ಇರಲಿ!"

ತಿಮ್ಮಪ್ಪ ಜೋಯಿಸರು ಇದೇನೋ ಪಿಕಲಾಟ ಬಂದಿತೆಂದು ಯೋಚಿಸಿ, "ಆಯಿತಪ್ಪ ಚಾವಡಿಯಲ್ಲಿ ಕೂತಿರು. ಈಗಲೇ ಬಂದೆ" ಎಂದರು.

ಸುಬ್ಬಯ್ಯ "ಎಮ್ಡನ್ ಇನ್ಶೂರೆನ್ಸ್ ಕಂಪೆನಿ"ಯ ಮುಖ್ಯ ಏಜಂಟ್, ವಿಮಾ ಕ್ಷೇತ್ರದಲ್ಲಿ ಬಹುಕಾಲದಿಂದ ಪಳಗಿ ದುಡಿದು ಹಲವು ಅಸಾಧ್ಯ ಹರನಾರಿ ಶಿಕಾರಿಗಳನ್ನು ತನ್ನ ವಾಗ್ಜಾಲದಲ್ಲಿ ಕೆಡವಿ, ತಾನೂ ನಾಲ್ಕು ಕಾಸು ಸಂಪಾದಿಸಿದ ರುಸ್ತುಂ! ಭಾವೀ ವಿಮಾದಾರರ ಮನೋವಿಜ್ಞಾನ ಆತನಿಗೆ ಚೆನ್ನಾಗಿ ಗೊತ್ತು. ಆಗಾಗ ಬೇಟೆಯ ಗೊತ್ತು ಹಚ್ಚಿ, ಅವನ ಮನಸ್ಸಿನ ಒಲವನ್ನು ನೆಲೆಹಿಡಿದು, ಅತ್ಯಂತ ಆಪ್ತನಂತೆ ನಟಿಸಿ, ಅವನಿಗೆ ಬೇಕಾದ ಅನುಕೂಲತೆ ಒದಗಿಸಿ, ಹಲವು ದಿನಗಳ ಉಪದೇಶದಿಂದ ಕಾಡಿ ಪೀಡಿಸಿ ಸಮರ್ಥನಾಯಿಸಿ, ಕಂಪೆನಿಯ ಪೋಲಿಸಿಯನ್ನು ಅವನ ತಲೆಯ ಮೇಲೆ ಹೊರಿಸಿಯೇ ಬಿಡುತ್ತಿದ್ದನು. ಆತನ ಜೀವನವೆಲ್ಲಾ ವಿಮಾದಾರರ ಉದ್ಧಾರಕ್ಕಾಗಿಯೇ ಉತ್ಸರ್ಗವಾಗಿದೆ. 'ತನಗೇನೂ ಸ್ವಾರ್ಥವಿಲ್ಲ ಎಲ್ಲರಂತೆ ಕುಟುಂಬದ ನೆಮ್ಮದಿಯ ಭರಣಪೋಷಣಕ್ಕೆ ಸಾಕಷ್ಟು ಸಿಕ್ಕಿದರೆ ತೃಪ್ತನಾಗುವೆನು. ಆದರೆ ಊರ ಬಾಂಧವರ ಚಿಂತೆಯೇ ತನಗೆ ಹೆಚ್ಚು! ಅವರ ಸತಿಸುತರ ಮುಂದಿನ ಜೀವನದ ಸಮಸ್ಯೆಯನ್ನು ಬಿಡಿಸಿ, ಅವರಿಗಾಗಿ ಉಚಿತ ಆಯೋಜನೆ ಮಾಡುವುದೇ ಅವನ ಗುರಿ! ಅವರು ದಿಕ್ಕುಗೆಟ್ಟು ಪರರನ್ನು ಹಾರೈಸದಂತೆ ವಿಮಾಮಾಡಿಕೊಳ್ಳುವುದು ಪವಿತ್ರ ಕರ್ತವ್ಯವೆಂತೂ, ಹಾಗೆ ಕುಟುಂಬದ ಮುಂದಿನ ವ್ಯವಸ್ಥೆ ಮಾಡದವನು ಪಾಪಕ್ಕೆ ಗುರಿಯಾಗುವನೆಂದೂ ಅವನ ಚಿರಸಿದ್ಧಾಂತ.

ಅಂತೂ ತನ್ನ ಉದ್ಯಮ, ಇಷ್ಟಮಿತ್ರರ ಸಹಕಾರ ಸಿಫಾರಶಿನಿಂದ ಊರಿನಲ್ಲಿ ಯಾರನ್ನೂ ಬಿಡದೆ ತನ್ನ ಕಂಪೆನಿಯ ಪೊಲಿಸಿದಾರರನ್ನಾಗಿಮಾಡಿ ಕೀರ್ತಿಗಳಿಸಿದವನು. ಅವನ ಬಲೆಗೆ ಬೀಳದೆ ತಪ್ಪಿದವರೆಂದರೆ ತಿಮ್ಮಪ್ಪ ಜೋಯಿಸರು ಅದೇಕೋ, ಅವನ ಮಂಕುಬೂದಿ, ಮಂತ್ರವಾದಿಗಳಾದ ಅವರ ಮೇಲೆ ಈ ವರೆಗೆ ನಡೆಯಲಿಲ್ಲ. ಅದೂ ಅವನ 'ನಸೀಬು'! ಆದರೂ ಒಂದಲ್ಲ, ಇನ್ನೊಂದು ದಿನವಾದರೂ ಜೋಯಿಸರು ತನ್ನ ಗಾಳಕ್ಕೆ ಅವಶ್ಯ ಸಿಲುಕುವರೆಂದು ಅವನಿಗೆ ನಿಶ್ಚಯವಾದ ನಂಬಿಗೆಯಿದ್ದಿತು.

ಅಲ್ಲದೆ, ಅವನಿಗೆ ಈ ವರ್ಷದ ಒಂದು ಲಕ್ಷ ವಿಮೆಯ "ಗೆರಂಟಿ" ಪೂರ್ಣವಾಗಲಿಕ್ಕೆ ಇನ್ನು ಮೂರೇ ಸಾವಿರಗಳ ಒಂದು ಪೊಲಿಸಿ ದೊರೆತರೆ ಸಾಕು. ಪೂರಾ ಕಮಿಶನ್, ಬಂಗಾರದ ಪದಕ, ಸರ್ಟಿಫಿಕೇಟು ಮುಂತಾದ ಉಪಹಾರಗಳೂ "ಗೆರಂಟಿ" ಯಾಗುವುವು. ಡಿಸೆಂಬರ ತಿಂಗಳ ತಾರೀಕು 30 ಕಳೆಯಿತು, ಇನ್ನೆರಡು ದಿನಗಳಲ್ಲಿ ಯಾವುದಾದರೊಂದು ಶಿಕಾರಿ ದೊರೆಯಲಾರದೆ? ಸುಬ್ಬಯ್ಯ ಆಶಾವಾದಿ! ತನ್ನ ಸಫಲತೆಯ ಸಾಮರ್ಥ್ಯವೂ ಆತನಿಗೆ ಚೆನ್ನಾಗಿ ಗೊತ್ತು. ಬಹು ಕಾಲ ಯೋಚಿಸಿದ ಮೇಲೆ ಅವನಿಗೆ ಒಮ್ಮೆಲೇ ತಿಮ್ಮಪ್ಪ ಜೋಯಿಸರ ನೆನವಂಕೆಯಾಯಿತು! ಅವರೊಬ್ಬರೇ ಉಳಿದವರು. 'ಒಂದು ಸಲ ಗಾಳಿ ಗೇಸಿಬಿಡೋಣ. ಫಲಾಫಲಗಳು ಅದೃಷ್ಟ ವಶವಾಗಿವೆ!' ಎಂದು ಬೆಳಗ್ಗೆ ಎದ್ದು ಶಿಕಾರಿಗೆ ಹೊರಟನು!

ತಿಮ್ಮಪ್ಪ ಜೋಯಿಸರು ಊರ ಪ್ರಮುಖ ಜ್ಯೋತಿಷಿ. ಮಂತ್ರವಾದಿ, ಧರ್ಮಶಾಸ್ತ್ರ ಪಂಡಿತರೆಂದು ಹೆಸರುವಾಸಿಯಾದವರು. ಜಾತಕ ಸೃಷ್ಟಿ, ನಷ್ಟ ಜಾತಕ ರಚನೆ, ಮಾಟ ಕೃತ್ರಿಮಗಳ ಉಚ್ಚಾಟನ ಮಂತ್ರಾದಿಪ್ರಗಳಲ್ಲಿ ಪ್ರವೀಣರು. ಧರ್ಮಶಾಸ್ತ್ರ ಪ್ರಮಾಣಗಳು ಅವರಿಗೆ ಅಂಗೈಯೊಳಗಿನ ನೆಲ್ಲಿಕಾಯಿಯಂತೆ! ಯಾವ ಭಾಗದಲ್ಲಿಯಾದರೂ ಊರವರಿಗೆ ಸಂಶಯವುಂಟಾದರೆ ತಿಮ್ಮಪ್ಪ ಜೋಯಿಸರ 'ಜಜ್ಮೆಂಟೇ' ಸರ್ವ ಮಾನ್ಯವಾದುದು!

ಜೋಯಿಸರು ಬಹು ನಿಷ್ಠಾವಂತರು. ದೊಡ್ಡ ಸಂಸಾರದಲ್ಲಿ ದುಃಖದುಃಖಗಳ ಅನುಭವದಿಂದ ಹಣ್ಣಾದವರು. ವಯಸ್ಸು ಐವತ್ತು ನಡೆಯುತ್ತಿದೆ. ದೇಹವು ಬಲಿಷ್ಠ. ಸಂಯಮಿಯಾದುದರಿಂದ ಸ್ನಾಯು ಮಿಸುಳುಗಳ ಬಲ ಬೇಕಾದಷ್ಟಿದೆ. ಮುಖದಲ್ಲಿ ಬ್ರಹ್ಮ ತೇಜಸ್ಸು ಕಂಗೊಳಿಸುತ್ತಿದೆ. ತುಂಬ ರಸಿಕರು. ಯಾವ ಕೂಟದಲ್ಲಿಯೂ ಸೇರಿ ಗೆದ್ದು ಬರುವವರು. ಪಂಡಿತರ ತಂಡದಲ್ಲಿ ಮನ್ನಣೆಗೆ ಪಾತ್ರರಾದವರು; ತರುಣರ ಕೂಟದಲ್ಲಿ ಇನ್ನೂ ಗಬರ ಯುವಕರಂತೆ ಮೆರೆಯುವವರು; ಚಿಕ್ಕ ಮಕ್ಕಳೊಡನೆ ಕಣ್ಣುಮುಚ್ಚಾಲೆ, ಉಪ್ಪಿನ ಗೋಣಿ, ಕುದುರೆ ಸವಾರಿ ಮುಂತಾದ ಆಟಗಳಿಂದ ಅವರ ಮನಸ್ಸನ್ನು ಒಲಿಸುವವರು.

ಗ್ರಾಮಸ್ಥರಿಗಂತೂ ಜೋಯಿಸರು ಹುಟ್ಟಿದಿಂದ ಹಿಡಿದು, ಸಾವಿನ ವರೆಗೂ ಎಲ್ಲಾ ಕೆಲಸಕ್ಕೆ ಬೇಕಾದವರು ಪ್ರತಿದಿನವೂ ಒಂದಲ್ಲ, ಇನ್ನೊಂದು ಚರ್ಚೆ ಜೋಯಿಸರ 'ಕೋರ್ಟಿ'ಗೇ ಬಂದೇ ಬರುವುದು. ಕುಟುಂಬದ ವಾದ ವಿವಾದಗಳ ಫೈಸಲೆ ಜ್ಞಾನವಯೋವೃದ್ಧರಾದ ಜೋಯಿಸರದೇ ಮಹತ್ತಾದುದು. ನಿಮ್ನ ತರಗತಿಯವರಿಗಂತೂ ದೇವರನ್ನು ಬಿಟ್ಟರೆ ಜೋಯಿಸರೇ ಶರಣು 'ಇಂದು ನಮ್ಮಲ್ಲಿ ಮಗು ಹುಟ್ಟಿದೆ—ಒಂದು ಜಾತಕವಾಗಬೇಕಲ್ಲ!' ಇಂದು ನನ್ನ ಹಿರೀ ಮಗಳಿಗೆ ಮೈಯಲ್ಲಿ ಚಳಿ—ಕಂಪ—ಜ್ವರ—ಪ್ರೇತಬಾಧೆ ಇರಲಿಕ್ಕಿಲ್ಲವಷ್ಟೆ! ಸ್ವಲ್ಪ ಕವಡೆ ಲೆಕ್ಕ ಹಾಕಿ ನೋಡಿದರೆ ಆಗುತ್ತಿತ್ತು! ಇಂದು ನಮ್ಮ ಎಮ್ಮೆ ಹಾಲೇ ಕೊಡಲಿಲ್ಲ, ನೋಡಿ. ಒಂದೇಸಮನೆ ಒದೆಯುತ್ತಿದೆ. ಒಂದು ಹಗ್ಗ ಮಂತ್ರಿಸಿ ಕೊಟ್ಟೀರಾ? ಎಂದು ಮುಂತಾಗಿ ಅವರವರ ತಾಪತ್ರಯದ ಗೋಳನ್ನು ಕೇಳಿಸಲು ಸಾಲು ಸಾಲಾಗಿ ಬರುವ ಬಡಗ್ರಾಮಸ್ಥರ ದುರ್ದೆಶೆಯನ್ನು ಶಾಂತರಾಗಿ ಕೇಳಿ, ಅವರವರಿಗೆ ಪ್ರತಿಕ್ರಿಯೆಗಳನ್ನು ಹೇಳಿ ಕಳುಹುವರು. ತುಸುವಾದರೂ ಸಿಟ್ಟಾಗುತ್ತಿರಲಿಲ್ಲ. ಪ್ರಾಣಿಮಾತ್ರದ ಮೇಲೆ ಅಪಾರ ಕರುಣೆಯಿದ್ದಿತು ಅವರಿಗೆ! ಅಂತೆಯೇ ಜನರ ಒಲುಮೆಗೆ ಪಾತ್ರರಾಗಿದ್ದರು. ವಕೀಲರು, ಡಾಕ್ಟರರು, ಜೋಯಿಸರುಗಳಿಗೆ ಪುರುಸತ್ತು ಕಡಿಮೆ, ಇವರೆಲ್ಲ ಸಮಾಜದ ಹಿತಕ್ಕಾಗಿಯೇ ಬ್ರಹ್ಮನಿಂದ ಸೃಷ್ಟಿಯಾದವರು!

ತಿಮ್ಮ ಜೋಯಿಸರು ಇಹದಲ್ಲಿ ದೇವರ ಹೊರತು ಇತರರಿಗೆ ಅಂಜುತ್ತಿರಲಿಲ್ಲ. ಪ್ರಾಣಿಗಳ ಭೂತಭವಿಷ್ಯದ್ವರ್ತಮಾನವನ್ನು ಗುಣಿಸಿ ಹೇಳಬಲ್ಲ ಅವರಿಗೆ ಭೂತಪ್ರೇತಗಳ ಬಾಧೆಗೆ ತರಹತರಗಳ ಮೂಲಕ ತಡೆಗಟ್ಟಿ, ಅವುಗಳಿಗೆ ಬಲಿಯಾಗುವ ನರಪ್ರಾಣಿಗಳನ್ನು ಬದುಕಿಸುವ ಅವರಿಗೆ ಎತರ ಭಯ?

ಆದರೆ ಅವರು ಹೆದರುತ್ತಿದ್ದರೆಂದರೆ ಕೇವಲ ಇನ್ಶೂರೆನ್ಸ್ ಏಜಂಟರಿಗೆ! ಸಾವಿರಾರು ಜನರ ಆಯುರ್ದಾಯವನ್ನು ಎಣಿಸಿ ಕ್ಷಣದಲ್ಲಿ ಹೇಳಬಲ್ಲ ಅವರಿಗೆ—ಗ್ರಹಗಳ ಫಲಾಫಲಗಳಲ್ಲಿ ಅಚಲವಿಶ್ವಾಸವಿರುವ ಅವರಿಗೆ—ಅದೇಕೋ ಸುಬ್ಬಯ್ಯ ಇದಿರು ಬಂದವೆಂದರೆ, ಸನ್ನಿಹಿತವಾದ ಮರಣದ ಪ್ರತ್ಯಕ್ಷ ನೆನಹುಂಟಾಗುವುದು. ಸಾಯುವುದಕ್ಕೆ ಅಂಜುವವರು ಜೋಯಿಸರಲ್ಲ. ಆದರೆ ಆ "ಮರಣ ಫಂಡಿ"ನ ಹೆಸರೆತ್ತಿದ ಕೂಡಲೇ ಅವರ ಮನಸ್ಸಿನಲ್ಲಿ ಒಂದು ತರದ ಹೇಗುದಿಯುಂಟಾಗಿ ಕಳವಳಗೊಳ್ಳುವರು.

ವಿಮೆ ಮಾಡಿಸಿಕೊಳ್ಳುವುದರಲ್ಲಿ ಅವರಿಗೆ ಏನೂ ವಿಶ್ವಾಸವಿರಲಿಲ್ಲ. ಸಾಕಷ್ಟು ಆಸ್ತಿ, ಹಣ, ಒಡವೆ ವಸ್ತುಗಳಿರುವಾಗ ಈಗ ಹಣ ಸುರಿದು ಸತ್ತಮೇಲೆ ಯಾರಿಗೋ ಸಿಗಬಹುದಾದ ಆ ಹಣದ ಹಂಬಲೇಕೆ? ಹೆಂಡತಿ ಮಕ್ಕಳು ಅನಾಥರಾಗಬಹುದೆನ್ನುವಿರಾ? ಭಗವಂತನ ಇಚ್ಛೆ ಹಾಗಿದ್ದರೆ ತಪ್ಪಿಸಲಾದೀತೆ? ಅವರೂ ಅವರು ಕೂಲಿ ದುಡಿದಾದರೂ ಜೀವನ ನಿರ್ವಾಹನಾಡಿ

ಹೊಸ ಪುಸ್ತಕ!

ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲೀಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ಎರಡು ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೦೦ ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅಲ್ಪ ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ. ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ: ರೂ. 1—8—0

Western Swiss watch Co.
Book Sellers, Post Box No 68
G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ಯೇ ಮಾಡುವರು ಅದಕ್ಕಾಗಿ ಚಿಂತಿಸ ಲೇಕೆ? ಎನ್ನುವರು.

ಹಲವು ಏಜಂಟರು ಅವರ ಮನದ ನೆಲೆಯನ್ನು ಕಂಡುಹಿಡಿಯಲಾರದೆ ನಿರಾಶರಾಗಿದ್ದರು ಸುಬ್ಬಯ್ಯನೂ ಗಾಳ ಹಾಕದೆ ಬಿಡಲಿಲ್ಲ ಆದರೆ ಈ ಮಂಗೂ ಈ 'ವಿಗಾನ' ಗಾಳಕ್ಕೆ ಸಿಕ್ಕಿರಲಿಲ್ಲ ಇತರರಂತೆ ನಿರಾಶೆಪಡದ, ಅವಸರವ ಹೊಂಚು ಹಾಕುತ್ತಲೇ ಇದ್ದನು

ಬೆಳಗ್ಗೆ ಎದ್ದು ಶೌಚಾದಿಗಳಿಂದ ನಿವೃತ್ತರಾಗಿ, ಜೋಯಿಸರು ತುಲಸೀಗಿಡಕ್ಕೆ ನೀರೆರದು, ಮೃತ್ತಿಕೆಯನ್ನು ಹಚ್ಚಿಕೊಂಡು, ನಮಸ್ಕಾರಮಾಡಿ ಏಳುವಾಗ, ಶಿಕಾರಿಗಾಗಿ ಹೊರಟಿದ್ದ ಸುಬ್ಬಯ್ಯ ಬಂದು ಪ್ರಣಾಮ ಮಾಡಿದನು.

ಜೋಯಿಸರ ಮನಸ್ಸಿನಲ್ಲಿ ಗ್ರಹಣದ ಕತ್ತಲು ಕವಿದಂತೆ ಒಂದು ಕಳವಳವೆದ್ದಿತು! 'ಈ ಯಮದೂತನೆಲ್ಲಿಂದ ಬಂದನಯ್ಯ! ಎಂತಹ ಪಜೀತಿ ಮಾಡುತ್ತಾನೋ ತಿಳಿಯದು.' ಎಂದು ಯೋಚಿಸುತ್ತ ಹೇಗೂ ಸ್ಥಿರಿಸಿಕೊಂಡು, ಸುಬ್ಬಯ್ಯನೊಡನೆ ಚಾವಡಿಯಲ್ಲಿ ಕುಳ್ಳಿರುವಂತೆ ಹೇಳಿ, ಮನೆಯೊಳಗೆ ದೇವರ ನಮಸ್ಕಾರಕ್ಕೆ ಹೋದರು

ಅನಂತರ ಮಣೆ, ಕವಡೆಯ ಚೀಲ, ಪಂಚಾಂಗಗಳನ್ನು ಆಯ್ದುಕೊಂಡು ತನ್ನ ನಿತ್ಯದ ಪ್ರಶ್ನೆಗೆ ಬಂದು ಮಂಡಿಸಿದರು ಮಣೆಯನ್ನಿಟ್ಟು ರಾಶಿಗಳ ಕವಡೆಗಳನ್ನು ಬಿಡಿಸಿ ಇಟ್ಟರು ಸುಬ್ಬಯ್ಯ ಜೇಬಿನಿಂದ ಒಂದು ಇಡೀ ರೂಪಾಯಿ ತೆಗೆದು ಬಹು ಭಕ್ತಿಯಿಂದ ಸಿಂಹರಾಶಿಯ ಮೇಲೆ ಇಟ್ಟು ಕೈಮುಗಿದನು

ರೂಪಾಯಿ ಕಾಣಿಕೆ ಕೊಡುವವರು ಬಹು ವಿರಳ ಸಿರಿವಂತರು ಜೋಯಿಸರ ಬಳಿಗೆ ಧನಬಲವಿರುವ ವರೆಗೂ ಹೋಗುವುದಿಲ್ಲ! ಮಧ್ಯ ತರಗತಿಯವರು ಅಷ್ಟೊಂದು ತ್ಯಾಗಮಾಡಲು ಶಕ್ತರಲ್ಲ ಬಡವರಂತೂ ಒಂದಾಣೆಯ ಕಿಲುಬು ಹಿಡಿದ ನಾಣ್ಯಗಳನ್ನು ಇಡಬೇಕೆಂದರೆ ಅಂದಿನ ರಾತ್ರಿಯ ಊಟಕ್ಕೆ ಸಂಚಕಾರ! ಹೀಗಾಗಿ ಜೋಯಿಸರಿಗೆ ಬೆಳ್ಳಿಯ ರೂಪಾಯಿ ಕಾಣಿಕೆಯೆಂದರೆ ಅಮಾವಾಸ್ಯೆಯ ಚಂದ್ರನನ್ನು ಕಂಡಂತೆ! ಜೋಯಿಸರಿಗೆ ಆಶ್ಚರ್ಯವಾಗದೆ ಇರಲಿಲ್ಲ

ಆದರೆ ಪಾಪ! ನಿರ್ವಂಚನೆಯ ಆ ಬಡಪ್ರಾಣಿಗೆ ಆ ರೂಪಾಯಿಯ ಪೂರ್ವಕತೆ ಹೇಗೆ ಗೊತ್ತು! ಹಲವು ಅಂಗಡಿ, ಬೇಂಕ್ ಟಪಾಲಾಫೀಸುಗಳಲ್ಲಿ ತಿರುಗಿ ಖಜಾನೆಯವರೆಗೂ ಹೋಗಿ, ಅದನ್ನು ಚಲಾಯಿಸಲು ಅವರೆಲ್ಲರಿಗೂ ಯೋಗ್ಯತೆ ಸಾಲದೆಂಬ ಸರ್ಟಿಫಿಕೇಟು ಪಡೆದು ಸುಬ್ಬಯ್ಯನಿಗೇ ಬಂದೆ ಪ್ರಾಪ್ತಿಯಾದುದೆಂದು ಅವರಿಗೆ ಹೇಗೆ ತಾನೇ ತಿಳಿದೀತ? ಯಾವನೋ ಕಂಪೆನಿಯ ವಿಮಾಕಂಟಿನೊಡನೆ ಸುಬ್ಬಯ್ಯನ ತಲೆಯಮೇಲೆ ಹಾಕಿಬಿಟ್ಟಿದ್ದ ಆತನೂ ಅದನ್ನು ಎಲ್ಲಿಯೂ ನಡೆಸಲಾರದೆ ಇನ್ನು ಯಾರ ತಲೆಗೆ ಹಾಕುವುದೆಂದು ಚಿಂತಿಸುವಷ್ಟರಲ್ಲಿ ಒಂದು ಬೆಳಗ್ಗೆ ಆತನ ಉದ್ಯೋಗಿ ಮಂಡಳಿನಿಂದ ಹೊರಟ ಅಪೂರ್ವ ಯುಕ್ತಿಯ ಸಾಧನೆಯಲ್ಲಿ ಕೆಲಸಕ್ಕೆ ಬರುವಂತಾಯಿತು! ಮುಖ್ಯವಾಗಿ ಆ ರೂಪಾಯಿ ಬನಾವಟಿಯೆಂದೇ ಎನ್ನಿ! ಆದರೆ ಜೋಯಿಸರು ಕಾಣಿಕೆಯಾಗಿಟ್ಟ ಹಣವನ್ನು ಎಲ್ಲಿಯಾದರೂ ಎತ್ತಿ ಪರೀಕ್ಷಿಸುವುದುಂಟೆ? ಎದರ ಗುಟ್ಟು ಆಗ ಅವರ ಮನಸ್ಸಿಗೆ ಹತ್ತಲೇ ಇಲ್ಲ ವಿಶ್ವಾಸದಿಂದ ಅವರು ಕವಡೆ ಎಣಿಸಿ, ಗುಣಾಕಾರ ಭಾಗಾಕಾರ ಮಾಡಿ ಫಲಹೇಳತೊಡಗಿದರು

"ಸುಬ್ಬಯ್ಯ! ಒಳ್ಳೆಯ ಗಳಿಗೆಯಲ್ಲಿ ನೀನು ಇಂದು ಹೊರಟಿದ್ದೀ ಕಾಣಿಕೆ ಬಿದ್ದುದೇ ಸಿಂಹರಾಶಿಯಲ್ಲಿ ಭಾಗ್ಯಾಧಿಪ ಬಲವಾಗಿದ್ದಾನೆ ಧನಾಗಮ, ಕೀರ್ತಿ, ಮಾನ ಸಂತೋಷ ಇತ್ಯಾದಿ ಫಲ ಹೇಳುತ್ತದೆ ಆದರೆ ಸ್ವಲ್ಪ ಅಂಗಾರಕನ ದೃಷ್ಟಿಮಾತ್ರ ಕಾಡುವಂತಿದೆ ಆದರೂ ಗುರು ಶುಕ್ರರು ಭಾಗ್ಯಸ್ಥಾನದಲ್ಲಿದ್ದು, ಜಯದ ಚಿಹ್ನೆಯನ್ನೇ ತೋರಿಸುತ್ತಾರೆ ಅಂಗಾರಕನಿಗೆ ಹೆದರಬೇಕಾಗಿಲ್ಲ ನೀನು ಕೈಕೊಂಡ ಕೆಲಸ ಜಯಿಸಲೇಬೇಕು. ನಮ್ಮ ಉಪಾಸ್ಯ ದೇವತೆಯ ವರವೇ ಹಾಗಿದೆ ಮುಗಿಯಿತಲ್ಲವೆ? ಜಯ ಶ್ರೀ ಭವಾನಿ! ಎಂದು ಕವಡೆಯನ್ನು ಒಟ್ಟುಗೂಡಿಸಿ ನೆತ್ತಿಗೆತ್ತಗಲಿಸಿ, ಸುಬ್ಬಯ್ಯನ ಮುಖ ನೋಡತೊಡಗಿದರು ಪ್ರಶ್ನಫಲದ ಪರಿಣಾಮವು ಹೇಗಾಯಿತೆಂದು ನೋಡುವುದಕ್ಕೆ!

ಸುಬ್ಬಯ್ಯ ಇದನ್ನೇ ನಿರೀಕ್ಷಿಸಿಕೊಂಡಿದ್ದನು "ನಿಜವೆ? ಜೋಯಿಸರೆ! ತಮ್ಮ ಮಾತು ಸುಳ್ಳಾಗದು ನನ್ನ ಮನಸ್ಸೇನೋ ಹೇಳುತ್ತಿದೆ ಆದರೆ ಇಂದು ನಾನು ಹೊರಟ ಉದ್ದೇಶವು ಅಂತಹ ಮಹತ್ವದ್ದು ಜಯವಾಗುವುದು ಹೇಗೋ ಎಂದು ಸಂಶಯವಾಗುತ್ತದೆ ಏನು ಮಾಡಲಿ?

'ಛೀ! ಇಂದು ನಿಮಿತ್ತ ಫಲದಿಂದ ನಿನ್ನ ಕಾರ್ಯಸಿದ್ಧಿಯ ಸೂಚನೆಗಳೇ ಹೆಚ್ಚಿವೆ ನೀನು ಬರುವಾಗ ನಾನು ತುಲಸೀಗಿಡಕ್ಕೆ ನೀರೆರೆಯುವುದನ್ನು ನೀನೇ ನೋಡಿಲ್ಲವೇ? ದೇವತಾನುಗ್ರಹದ ಚಿಹ್ನೆಯೆಂದರೆ ಅದೇ." ಎಂದರು ಜೋಯಿಸರು

"ಸ್ವಾಮಿ! ನೀರೆರೆದ ಮೇಲೆ ತಾವು ಮೃತ್ತಿಗೆ ಹಚ್ಚಿಕೊಂಡುದರಿಂದ ಶಂಕೆಗೆ ಸ್ವಲ್ಪ ಕಾರಣವಾಯಿತು ಆ ನಾಮ ನನಗೆ ಬೇಕಲ್ಲಾರದಷ್ಟು!" ಎಂದು ಕೇಳಿದ ಸುಬ್ಬಯ್ಯ!

"ಎಂತಹ ಪ್ರಾಣಿಯಯ್ಯ! ನೀನೇನೂ ಭಯಪಡಬೇಡ, ಗ್ರಹಫಲಗಳು ತಪ್ಪುವಂತಿಲ್ಲ, ದೇವಿಯ ದ್ವಾರಾ ಪ್ರಯತ್ನ ಮಾಡು ಇರಲಿ ನೀನು ಇಂದು ಯಾರೋ ದೊಡ್ಡ ಆಸಾಮಿಯ ಮೇಲೆ ಗುರಿಯಿಟ್ಟಿರಬೇಕು! ಯಾರಯ್ಯಾ ಹೇಳು!" ಎಂದರು ಜೋಯಿಸರು.

"ಸ್ವಾಮಿ! ಆ ಮಹಾರಾಯ ಬಹಳ ಚಾಲಾಕು, ಎಲ್ಲರ ಹಾಗಲ್ಲ ಎಂತೆಂತಹ ಹುಲಿಗಳನ್ನೂ ನನ್ನ ಬಲೆಯೊಳಗೆ ಹಾಕಿಕೊಂಡಿದ್ದೇನೆ ಆದರೆ ಇದು ಮೃಗರಾಜ! ಎಲ್ಲಿಯಾದರೂ ತಮ್ಮ ಪ್ರಶ್ನಫಲ ನಿಜವಾಗದಿದ್ದರೆ ನಾನು ಕೆಟ್ಟೆ! ಗಾಳವೇನೋ ಹಾಕಿಬಿಟ್ಟಿದ್ದೇನೆ ಆದರೆ ಅದಕ್ಕೆ ಆ ಮೀನು ಸಿಕ್ಕಬೇಕಷ್ಟೆ! ನನಗೆ ಧೈರ್ಯವಾಗುವುದಿಲ್ಲ ನಿಜವಾಗಿಯೂ ನಾನಿಟ್ಟ ರಾಶಿಯ ಫಲವೇ ಹಾಗಿದೆಯಲ್ಲವೆ? ಇನ್ನೊಮ್ಮೆ ಲೆಕ್ಕಮಾಡಿ ನೋಡಿ, ಜೋಯಿಸರೆ! ತಪ್ಪಿಹೋಗಿದ್ದರೂ ಇರಬಹುದು ಆಗದಿದ್ದರೆ ಸ್ಪಷ್ಟ ಹೇಳಿಬಿಡಿ, ನನಗೇನೂ ಬೇಸರವಿಲ್ಲ, ಈಗ 'ನಸೀಬು' ಇಲ್ಲ ಎಂದು ತಿಳಿಯುತ್ತೇನೆ.' ಎಂದು ಸಣ್ಣ ಮುಖ ಮಾಡಿಕೊಂಡು ಸುಬ್ಬಯ್ಯ ಹೇಳಿದನು.

"ಸುಬ್ಬಯ್ಯಾ! ನೀನೆಂತಹ ಅಂಜುಬುರುಕ! ಭವಾನಿಯ ಆಶೀರ್ವಾದದಿಂದ ಇದುವರೆಗೆ ನನ್ನ ಪ್ರಶ್ನಫಲವಾಗಲೀ ಜಾತಕಫಲವಾಗಲೀ ಸುಳ್ಳಾದುದನ್ನು ನೀನು ಕೇಳಿರುವೆಯಾ? ನಿನ್ನ ಪ್ರಶ್ನೆಯ ಗಣನೆಯಲ್ಲಿ ಏನೂ ತಪ್ಪಿಲ್ಲ ಇದರಲ್ಲಿ ನಿನಗೆ ಜಯವಾಗದಿದ್ದರೆ ತಿರುಗಿ ನಾನು ಕವಡೆ ಮುಟ್ಟಲಿಕ್ಕಿಲ್ಲ ಭವಾನಿಯ ಆಣೆ!" ಎಂದರು ಜೋಯಿಸರು ರೂಪಾಯಿ ಕಾಣಿಕೆಯ ಮಾಹಾತ್ಮ್ಯೆ!

"ಹಾಗಾದರೆ, ತಮ್ಮ ಭರವಸೆಯ ಮೇಲೆ ದುಸ್ತರವಾದ ಈ ಕೆಲಸಕ್ಕೆ ಇಳಿದಿದ್ದೇನೆ ನಿರಾಶೆಯ ಸಂಕಟದಿಂದ ತಾವೇ ನನ್ನನ್ನು ಪಾರುಮಾಡಬೇಕು." ಎಂದು ಅಡ್ಡಬಿದ್ದ ಸುಬ್ಬಯ್ಯ

"ಏಳಯ್ಯ! ಇಷ್ಟೊಂದು ಚಿಂತೆಯೇಕೆ? ನಿನಗೆ ಇನ್ನೂ ಭರವಸೆಯಿಲ್ಲವೆ?" ಎಂದು ಜೋಯಿಸರು ಅವನನ್ನೆಬ್ಬಿಸಿ, ಅತನ ತಲೆಯ ಮೇಲೆ ಕೈಯಿಟ್ಟು "ಜಗದಂಬಾ! ಸರ್ವಕಾರ್ಯಾಣಿ ಸಾಧಯ!' ಎಂದು ಹರಸಿದರು.

ಸುಬ್ಬಯ್ಯ ಸಡಗರದಿಂದ ಎದ್ದು, ಜೇಬಿನಿಂದ ರೂ. ೩,000/-ರದ ವಿಮೆಯ ಬಗೆಗೆ ಜೋಯಿಸರ ಹೆಸರಿನಲ್ಲಿ ಮೊದಲೇ ಬರೆದು ತಂದಿದ್ದ ವಿಮೆಯ ಪ್ರಸ್ತಾಪದ ಫಾರ್ಮನ್ನು ಮುಂದಿಟ್ಟು "ಇದಕ್ಕೆ ತಮ್ಮ ಆಶೀರ್ವಾದದ ರೂಪದ ದಸ್ಕತುಮಾಡಿ, ಬಡವನನ್ನು ಪಾರುಗಾಣಿಸಿರಿ. ತಮ್ಮ ಅನುಗ್ರಹದಿಂದ ನನ್ನ ಗೇರಂಟಿಯ ಒಂದು ಲಕ್ಷ ವಿಮೆ ಇಂದು ಪೂರ್ಣವಾಯಿತು ಇಷ್ಟೇ ಈ ದೀನನ ಅರಿಕೆ!" ಎಂದು ಫೌಂಟನ್ ಪೆನ್ನಿನ ಟೊಪ್ಪಿಯನ್ನು ತೆಗೆದು, ಹಿಂಬದಿ ಸಿಕ್ಕಿಸಿ ಜೋಯಿಸರ ಕೈಯಲ್ಲಿ ಕೊಟ್ಟನು!

"ದುಡಿದುದ ಹೊಡೆಯುವ ದೇವರೆ ಬೇಡ"

ಮಾತೆಯು ದಿನದಿನ ಮರುಗುವಳಲ್ಲ! ।
ಜಾತಿಯು ಜಗಳದಿ ಸೊರಗುವಳಲ್ಲ! ॥
ವೇಷದ ಶಕ್ತರು ಮೆರೆಯುವರಲ್ಲ! ।
ದೇಶದ ಭಕ್ತರು ಕೊರಗುವರಲ್ಲ! ॥
ಮಾತೆಯ ಸೇವೆಯ ಮಾಡಲು ಹೊರಟೆ ।
ನೀತಿಯ ಜನರಿಗೆ ದುರುಳರ ಕಾಟ ॥
ಸೋತರು ರೈತರು! ದುಡಿಯುವರೆಲ್ಲ ।
ಯಾತನೆ ಪಡುತಲಿ ಸಾಯುವರಲ್ಲ! ॥
ಲೋಕದ ನಾಯಕ ನಿನಗಿದೆ ಧನವು ।
ಶೋಕಿತ ಶ್ಲೋಕಿನ ಮಿರುಗಿನ ಮನೆಯು ॥
ಬಡವರು ಕಷ್ಟದಿ ವಾಸಿಪರಲ್ಲಿ ।
ಗುಡಿಸಲು ಹರಕಿವೆ ಸೋರುವದಲ್ಲಿ ॥
ಬಡವರ ಕಷ್ಟವ ನೋಡುತ ನೀನು ।
ಗುಡಿಯಲಿ ಸುಮ್ಮಗೆ ಮಾಡುವದೇನು? ॥
ಅರತಿಕೊಳ್ಳುತ ಕುಳ್ಳಿರಬೇಡ ।
ಭಾರತಮಾತೆಯ ಮರುಕವ ನೋಡ! ॥
ಒಡಲಿನ ಮಡಿಯಲಿ ಕೂಡುವ ನೀನು ।
ಬೆಡಗಿನ ಗುಡಿಯಲಿ ಮಾಡುವದೇನು? ॥
ದುಡ್ಡಿನ ರಾಶಿಯು ನಿನಗದು ಯಾಕೆ? ।
ಮಡದಿಯು ಮಕ್ಕಳ ಪೊರೆಯಲು ಬೇಕೆ? ॥
ಮಕ್ಕಳು ಮಡದಿಯ ರಿಲ್ಲದ ನೀನು ।
ರೊಕ್ಕವ ಕೂಡಿಸಿ ಮಾಡುವದೇನು? ॥
ಗದರಿಸಿ ಹೆದರಿಸಿ ಹರಕೆಯ ತರಿಸಿ ।
ಮದವನು ತಾಳುವ ಕಪಟವ ಧರಿಸಿ! ॥
ಕಪ್ಪಿನ ಬಡವರು ಹತ್ತಿರ ಸೇರೆ ।
ದೊಪ್ಪನೆ ನೂಕಿಸಿಯೋಡುವೆ ಬೇರೆ ॥
ದುಡಿಯುವ ಜನಗಳ ದಿನದಿನ ದಣಿಸಿ ।
ಒಡವರ ನೆತ್ತರ ಧನಿಕರಿಗುಣಿಸಿ ॥
ಬೊಜ್ಜನು ಬೆಳಸಿಹ ದೈತ್ಯರನಿರಿಸಿ ।
ಲಜ್ಜೆಯನುಳಿದಿಹ ನೀಚರ ಕರೆಸಿ ॥
ಕಜ್ಜವಮಾಡದ ಧನಿಕರ ಹರಸಿ ।
ಕಜ್ಜಯತನಿಸುವೆ ಕಾಣಿಕೆ ಸುರಿಸಿ ॥
ಗಜ್ಜೆಯ ದರಿಸಿಹ ಪೆಣ್ಗಳ ಕುಣಿಸಿ ।
ಸಜ್ಜಿಗೆಪಾಯಸ ದುರುಳರಿಗುಣಿಸಿ ॥
ದುಷ್ಟರ ಸಲಹಲು ಶಿಷ್ಟರ ಸುಲಿವೆ ।
ಕಷ್ಟವ ಮಾಡದ ಧನಿಕರಿಗೊಲಿವ ॥
ಕಪ್ಪಿನ ಬಡವರ ಮಾಡುವೆ ದೂರ ।
ತಪ್ಪನು ಗೈಯುವ ನೀನತಿಕ್ರೂರ ॥
ದುಡಿಯುವ ಕರಿಜನ ದೇವಗೆ ಬೇಡ? ।
ದುಡಿದುದ ಹೊಡೆಯುವ ದೇವರೆ ಬೇಡ ॥
ದೇವರ ಧರ್ಮದ ಹೆಸರನು ಹಾಡಿ ।
ದೇವನ ಹೆಸರಲಿ ದೇಗುಲ ಮಾಡಿ ॥
ಧನಿಕರು ಬಲ್ಲಿದ ಜನಗಳು ಕೂಡಿ ।
ದಿನದಿನ ಬಡವರ ಸುಲಿಯುವ ನೋಡಿ॥

ಮುದ್ರಾಡಿ ಕೃಷ್ಣಯ್ಯ ಸೆಟ್ಟಿ.

Renowned Sisu Toilets perfumers require Agents Attractive commission Apply SISU 1st Floor Rahi[illegible]oom House, Homji Street, Sir Pherozshah Mehtha Road, Fort, Bombay

You may spend a lot to make the Ashtami festivities a huge success! But the celebration is incomplete, Unless you see and hear a page of Sri Krishna's Life, realistically portrayed On the silver screen

AT SRI RAMAKRISHNA THEATRE, UDIPI.

from 7-9-1939



Sri Krishna's life is an inspiration to one and all! His each word Utterd, His each act done—has got its own significance,

SO THAT, WE PEOPLE, DROPING IN DARKNESS, AND IMMERSED IN SINFUL ENVIRONMENT, MAY BE ENLIGHTENED, MAY BECOME RIGHTEOUS, MAY ATTAIN THE ETERNAL BLISS!

MARK A POINT IN RIGHT EARNEST TO SEE THE PICTURE TO DAY itself, and

establish your earnestness as a devotee of Lord Krishna

KALIA MARDAN

FEATURING:

Master Vasanth, Leela, Indu Bala, Rama Bhadra & others

ಅಷ್ಟಮಿಯ ಉತ್ಸವವನ್ನು ಯಶಸ್ವಿಯಾಗಿ ನೆರವೇರಿಸಲು ಬೇಕಾದಷ್ಟು ಖರ್ಚುಮಾಡಿರಿ ! — — — ಆದರೆ ನಿಮಗೆ ತಿಳಿದಿದೆಯೇ ?

ಶ್ರೀ ಕೃಷ್ಣಪರಮಾತ್ಮನ ಜೀವನ ಚರಿತ್ರೆಯ ಒಂದು ಅಧ್ಯಾಯವನ್ನಾದರೂ ನೋಡಿ, ಕೇಳಿ, ಆನಂದಪಡೆಯದಿರುವಲ್ಲಿ ಉತ್ಸವವು ಪರಿಪೂರ್ಣವಾಗದೆಂದು?

ಅಷ್ಟೊಂದು ಸ್ವಾಭಾವಿಕವಾಗಿ ನೋಡುವಿರಿ ನೀಲಕೃಷ್ಣನ ಬಾಲಲೀಲೆಯನ್ನು !

ತಾರೀಖು 7-9-1939 ರಿಂದ

ಉಡುಪಿ

ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ

ಮಾಸ್ಟರ್ ವಸಂತ, ಲೀಲಾ, ಇಂದುಬಾಲ, ರಾಮಭದ್ರ ಮೊದಲಾದವರು ನಟಿಸಿರುವ

ಕಾಳಿಂಗ ಮರ್ದನ

ಶ್ರೀ ಕೃಷ್ಣಪರಮಾತ್ಮನ ಚರಿತ್ರೆಯು ಪ್ರತಿಯೊಬ್ಬ ಮಾನವನಿಗೂ ಸ್ಫೂರ್ತಿಯನ್ನುಂಟುಮಾಡುವುದು!

ಅವನು ಆಡಿದ ಒಂದೊಂದು ಮಾತು, ಮಾಡಿದ ಒಂದೊಂದು ಕೆಲಸ, ಬಹು ನಿಗೂಢವಾದುದು, ಆದರ್ಶಪ್ರಾಯವಾದುದು

ಅಜ್ಞಾನವೆಂಬ ಅಂಧಕಾರದಲ್ಲಿ ಅಲೆದಾಡುತ್ತಿರುವ ಪಾಪಕೂಪದಲ್ಲಿ ಕೊಳೆಯುತ್ತಿರುವ ಮಾನವ ಜೀವಿಗಳಿಗೆ ಧರ್ಮಮಾರ್ಗವನ್ನು ತೋರಿಸಿ ಜನ್ಮಸಾರ್ಥಕ ಮಾಡಿಕೊಳ್ಳಲು ಇರುವ ಊರುಗೋಲು!

ಈ ಚಿತ್ರವನ್ನು ಇಂದೇ ನೋಡಿರಿ! ಕೃಷ್ಣನ ನಿಜಭಕ್ತರೆಂಬುದನ್ನು ಸಿದ್ಧಪಡಿಸಿರಿ!!

— ಕಥಾಸಾರಾಂಶ —

ದನಾಸುರ ಮತ್ತು ಕಾಲಾಸುರರೆಂಬ ರಕ್ಕಸರು ಧನರಾಜನೆಂಬ ಗೋವಳನಿಗೆ ಹಣದಾಸೆ ತೋರಿಸಿ ನಂದಗೋಕುಲವನ್ನು ಸುಟ್ಟುಬಿಡುವ ಸಂಚಿಕೆ ಮಾಡುವರು. ರಾಧಾಕೃಷ್ಣರು ಯಮುನಾ ನದೀತೀರದಲ್ಲಿ ವಿಹಾರಾರ್ಥವಾಗಿ ತಿರುಗಾಡುತ್ತಿರುವಾಗ ಆದೊಬ್ಬ ಗೋವಳನ ದನಕರುಗಳನ್ನು ಯಾರೋ ಕದ್ದೊಯ್ದರೆಂದು ಕೃಷ್ಣನಿದ್ದಲ್ಲಿಗೆ ದೂರು ಬರುವದು. ಗೋವಳರೆಲ್ಲಾ ಧನರಾಜನನ್ನು ಹೊಡೆದು ಕೊಲ್ಲಲು ಯತ್ನಿಸುವರು. ಕೃಷ್ಣನು ಅವರನ್ನು ಸಮಾಧಾನಪಡಿಸಿ ಧನರಾಜನನ್ನು ಜರೆದು ಅವನನ್ನು ಬಿಟ್ಟು ಬಿಡಲು ಹೇಳುವನು.

ಧನರಾಜನು ಮಾತ್ರ ಕೃಷ್ಣನಂತೆಯೇ ತಾನೂ ಗೋವಳನೆಂದೂ, ಅವನಿಗೆ ಹೆದರುವವನಲ್ಲವೆಂದೂ, ಗೋಕುಲವನ್ನು ನಾಶಪಡಿಸಿಯಾದರೂ ಕೃಷ್ಣನ ಮರಣವನ್ನು ಕಣ್ಣಾರ ನೋಡಬೇಕೆಂದೂ ನಿಶ್ಚಯಿಸುವನು

ಇತ್ತ ರಾಧೆಯು ಕೃಷ್ಣನನ್ನು ಹುಡುಕಿಕೊಂಡು ಬರುವದೆ ಹೊರಡುವಾಗ ಗೋಪಿಕಾಸ್ತ್ರೀಯರು ಕೃಷ್ಣನ ಲೂಟಿಯ ವಿಚಾರವಾಗಿ ಯಶೋದೆಯಲ್ಲಿ ದೂರು ಹೇಳುವರು. ಯಶೋದೆಯು ಕೃಷ್ಣನನ್ನು ವಿಚಾರಮಾಡುವುದಾಗಿ ಸಮಾಧಾನಪಡಿಸಿ ಗೋಪಿಕಾಸ್ತ್ರೀಯರನ್ನು ಹಿಂದೆ ಕಳುಹಿಸುವಳು ಮತ್ತೆ ಕೃಷ್ಣನಿಗೆ ಪೆಟ್ಟು ಬೀಳುವುದನ್ನು ಕಣ್ಣಾರೆ ನೋಡಬೇಕೆಂದೆಣಿಸಿ ಗೋಪಿಕಾ ಸ್ತ್ರೀಯರೆಲ್ಲರೂ ಸಂತೋಷದಿಂದ ಹೋಗುವರು.

ಮರುದಿನ ಬೆಳಿಗ್ಗೆ ಗೋಕುಲದ ದೇವಸ್ಥಾನದಲ್ಲಿ ಒಬ್ಬ ಕಪಟ ಸನ್ಯಾಸಿಯು ಕಾಣಿಸಿಕೊಳ್ಳುವನು. ಸರಳ ಮನಸ್ಸಿನವರಾದ ಗೋಕುಲದ ಜನರು ಸಾಧುವನ್ನು ಬಹಳ ಶ್ರದ್ಧೆಯಿಂದ ನೋಡುವರು.

ಅನೇಕ ಜನರು ಸಾಧುದರ್ಶನಕ್ಕೆ ಬರುವುದನ್ನು ನೋಡಿ ಯಶೋದೆಯೂ ಬರುವಳು. ಸಾಧುವು ಕೃಷ್ಣನನ್ನು ಮನೆಯ ಹೊರಗೆ ಕಳಿಸಬಾರದಾಗಿಯೂ ಕಳಿಸಿದರೆ ಅನಿಷ್ಟವಾಗುವುದೆಂದೂ ಹೇಳುವನು. ಅನಿಷ್ಟನಿವಾರಣೆಗಾಗಿ ದೇವತಾ ಪ್ರಾರ್ಥನೆ ಮಾಡಲು ಹೇಳುವನು. ಯಶೋದೆಯು ಸಾಧುವನ್ನು ತನ್ನ ಮನೆಯ ಹತ್ತಿರವಿರುವ ದೇವಸ್ಥಾನದಲ್ಲಿ ವಾಸಿಸುವಂತೆ ಕೇಳಿಕೊಳ್ಳುವಳು. ಸಾಧುವು ಒಪ್ಪುವನು.

ಸಾಧುವಿನ ಹೇಳಿಕೆ ಮೇರೆಗೆ ಕೃಷ್ಣನು ಮನೆಯಿಂದ ಹೊರಗೆ ಹೋಗದಂತೆ ಪ್ರತಿಬಂಧಕವಾಗುವುದು. ಆದರೆ ದಾಮನನ್ನು ತನ್ನ ಸ್ಥಾನದಲ್ಲಿ ಕುಳ್ಳಿರಿಸಿ ಕೃಷ್ಣನು ಪರಾರಿಯಾಗುವನು. ಯಶೋದೆಯು ಅಳುತ್ತ ಕೃಷ್ಣನನ್ನು ಹುಡುಕಿಕೊಂಡು ಹೋಗುವಳು. ಇತ್ತ ಕೃಷ್ಣನು ಬಂದು ದಾಮನನ್ನು ಕಟ್ಟಿಹಾಕಿದ್ದ ಸ್ಥಳದಲ್ಲಿ ಬಂದು ತಾನೇ ಬಂಧಿಸಲ್ಪಟ್ಟು ನಿಂತುಕೊಳ್ಳುವನು. ಯಶೋದೆಯು ಕೃಷ್ಣನಿದ್ದೆಡೆಗೆ ಬಂದು ಅವನನ್ನು ಗದರಿಸಿ ಆತನನ್ನು ಬಂಧಿಸಿದ ಹಗ್ಗವನ್ನು ಬಿಡಿಸಹೋಗುವಳು. ಅಷ್ಟು ಹೊತ್ತಿಗೆ ಹಗ್ಗವು ತಾನಾಗಿಯೇ ಮಾಯವಾಗುವುದು. ಎಲ್ಲರೂ ವಿಸ್ಮಯಗೊಳ್ಳುವರು. ಯಶೋದೆಯು ಮಗನನ್ನು ತೊಡೆಯ ಮೇಲೇರಿಸಿ ಮುತ್ತಿಡುವಳು. ಇತ್ತ ಕಪಟ ಸನ್ಯಾಸಿಯು ಮಾಂಸ ಮತ್ತು ಮದ್ಯವಿಲ್ಲದೆ ದೇವಾಲಯದಲ್ಲಿ ಸಾಯಲಿಕ್ಕೆ ಬೀಳುವನು. ಮರುದಿವಸವೇ ಕೃಷ್ಣನ ಮಾಂಸವನ್ನು ತಿನ್ನುವೆನೆಂದು ದೃಢ ಮಾಡುವನು. ಕೃಷ್ಣನು ರಾಧೆಯೊಡನೆ ಕಪಟ ಸನ್ಯಾಸಿಯಿದ್ದೆಡೆಗೆ ಹೋಗುವನು. ಅಷ್ಟರಲ್ಲಿ ಒಬ್ಬ ಗೋವಳನು ಸಾಧುವಿದ್ದೆಡೆಗೆ ಬಂದು ತನ್ನ ಮಗನು ಏಕಾಏಕಿ ಬಿದ್ದು ಸತ್ತುಹೋಗಿರುವನು, ಅವನಿಗೆ ಜೀವದಾನ ಮಾಡಬೇಕೆಂದು ಮೊರೆಯಿಡುವನು. ಇದರಿಂದ ಪಾರಾಗುವುದು ಕಠಿಣವೆಂದೆಣಿಸಿ ಸಾಧುವು ಈ ಊರಿನಲ್ಲಿ ಭಯಂಕರ ಪಾಪದ ಪರಿಣಾಮವಾಗಿ ದೇವರಿಗೆ ಕೋಪ ಬಂದಿದೆ. ಇವರನ್ನು ರಕ್ಷಿಸುವದು ಅಸಾಧ್ಯವೆನ್ನುವನು. ಆಗ ಕೃಷ್ಣನು ಕಪಟ ಸನ್ಯಾಸಿಯ ಗುಟ್ಟನ್ನು ಬಯಲಿಗೆಳೆಯುವನು. ಗೋವಳರೆಲ್ಲಾ ಸಾಧುವಿಗೆ ಹೊಡೆಯಲುದ್ಯುಕ್ತರಾಗುವರು. ಕೃಷ್ಣನು ಅವರನ್ನು ತಡೆದು ಇವನನ್ನು ಪ್ರಕೃತ ಬಿಟ್ಟುಬಿಡಿರೆಂದು ಸನ್ಯಾಸಿಯನ್ನು ಬಿಡಿಸುವನು. ಅಷ್ಟರಲ್ಲಿ ಯಮುನಾನದಿಯ ನೀರು ಕುಡಿದು, ದಾಮನನೂ ಗೋವುಗಳೂ ಮೃತವಾಗಿ ಬಿದ್ದಿರುವವೆಂದು ಚಾರಕರು ಬಂದು ತಿಳಿಸುವರು. ಎಲ್ಲರೂ ಆಶ್ಚರ್ಯಚಕಿತರಾಗುವರು. **"ಬೂದಿಯಿಂದ ಆವರಿಸಲ್ಪಟ್ಟ ಸಾಧುಗಳ ರೂಪದಲ್ಲಿ ಭಯಂಕರ ಅಗ್ನಿರೂಪದ ದುಷ್ಕರ್ಮಗಳೂ ಅಡಗಿರುತ್ತವೆ"**ಎಂಬುವನ್ನು ಮರೆಯಬೇಡಿರೆಂದುಪದೇಶಿಸುವನು ಕೃಷ್ಣದೇವನು

ಕೃಷ್ಣದೇವನು ಎಲ್ಲಾ ಜನರೊಡನೆ ಯಮುನಾ ತೀರಕ್ಕೆ ಹೋಗುವನು ಅಲ್ಲಿ ಅತಿ ಭಯಂಕರವಾದ ನಾಗಸರ್ಪವೊಂದು ನದಿಯಲ್ಲಿ ಬುಸುಗುಟ್ಟುತ್ತಿದೆಯೆಂದು ತಿಳಿದು ಕೃಷ್ಣನು ಜನರನ್ನು ದಡದ ಬಳಿ ನಿಲ್ಲಿಸಿ, ಕಾಳೀಯನಿದ್ದೆಡೆಗೆ ಹೋಗಿ "ಇದೀಗಲೇ ಇಲ್ಲಿಂದ ನೀನು ಹೋಗಲೇಬೇಕು. ನಡೆಯದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು, ತಿಳಿಸುವನು. ಮರುದಿನ ಪ್ರಾತಃಕಾಲದ ವರೆಗೆ ಕಾಳೀಯನಿಗೆ ಸಮಯವಿತ್ತು ರಾಧೆ ಮತ್ತು ಸೇವಕರೊಡನೆ ಮನೆಗೆ ಹಿಂದಿರುಗುವನು ಇತ್ತ ಧನರಾಜನು ಧನಾಸುರ, ಕಾಲಾಸುರರಿಂದ ಪ್ರೇರಿತನಾಗಿ ಇಡೀ ಗೋಕುಲಕ್ಕೆ ಬೆಂಕಿ ಕೊಡುವನು. ಒಂದೆಡೆಯಲ್ಲಿ ಬೆಂಕಿ ಇನ್ನೊಂದೆಡೆ ಇದ್ದಕ್ಕಿದ್ದಂತೆಯೇ ಬಿದ್ದು ಮರಣ. ಗೋಕುಲದಲ್ಲೆಲ್ಲಾ ಹಾಹಾಕಾರ!

ಅದೇ ರಾತ್ರಿ ಮಲಗಿದ್ದ ಕೃಷ್ಣನನ್ನು ಕೈಕಾಲು ಕಟ್ಟಿ, ಕಾಲಾಸುರ ಧನಾಸುರರು ಕೊಂಡೊಯ್ದರು. ಮರುದಿನ ಬೆಳಿಗ್ಗೆ ಕೃಷ್ಣ ಕಾಣೆ ಯಶೋದೆಯ ಬೊಬ್ಬೆ!

ಇತ್ತ ಧನರಾಜನು ನಿಶ್ಶಂಕೆಯಿಂದ ನಿದ್ರಿಸುತ್ತಿರುವಾಗ ಅವನ ಗುಡಿಸಲಿಗೂ ಬೆಂಕಿ ತಾಗಿ ಅವನು ಸುಡಲ್ಪಡುವನು. ಸಾಯುವ ಸಮಯದಲ್ಲಿ ಕೃಷ್ಣಪರಮಾತ್ಮನ ಮೂರ್ತಿಯು ಆತನೆದುರಿಗೆ ನಿಂತಿತ್ತು. ಪಶ್ಚಾತ್ತಾಪದಿಂದ ಕ್ಷಮೆ ಬೇಡುವನು.

ಮರುದಿನ ಎಲ್ಲೆಲ್ಲೂ ಕೋಲಾಹಲ! ಕೃಷ್ಣನು ಯಮುನಾ ತೀರಕ್ಕೆ ಕೃಷ್ಣಸರ್ಪನಿದ್ದೆಡೆಗೆ ತೆರಳುವನೆಂಬ ವಾರ್ತೆಯೇ ವಾರ್ತೆ. ಇಡೀ ಗೋಕುಲವೇ ಯಮುನಾ ನದೀತೀರಕ್ಕೆ ಬಂದು ದಿಗ್ಭ್ರಮೆಯಿಂದ ನೋಡುತ್ತಿತ್ತು. ಕೃಷ್ಣನು ಕಾಳಿಂಗನಿದ್ದೆಡೆಗೆ ಧುಮುಕಿದನು. ಎಲ್ಲರೂ ದೇವಸ್ಮರಣೆಯಲ್ಲಿ ನಿರತರಾದರು. ಮುಂದೇನು ?

ಟಿಕೇಟಿನ ದರ —(ಟ್ಯಾಕ್ಸ್ ಸಮೇತ) ರಿಜರ್ವಡ್ 1-8-0, ಸ್ಪೆಶಲ್ 0-11-9, ಗೆಲರಿ 0-7-0, ಬೆಂಚು 0-4-6, 0-2-3

Next—Wadia Movietones 'HUNTERWALI' featuring fearless Nadia, to heat your monsoon lethargy!

ಬರುವ ಚಿತ್ರ---ಫೀಯರಲೆಸ್ ನಾಡಿಯ ನಟಿಸಿರುವ ವಾಡಿಯ ಮುವಿಟೋನಿನವರ "ಹಂಟರವಾಲಿ"

Coming -Sagar's 'Watan' featuring Maya & Kumar, Gungntwali, Bombay Talkies' Achut Kanya featuring Devikarni & Ashok Kumar, Pragatys Nanda Kumar etc.

ಮುಂದಿನಚಿತ್ರ: ಮಾಯಾ ಮತ್ತು ಕುಮಾರ್ ನಟಿಸಿರುವ ಸಾಗರ್'ವತನ್'; ಗುಂಗುಟ್ ವಾಲಿ'; ದೇವಿಕಾ ರಾಣಿ ಮತ್ತು ಅಶೋಕ ಕುಮಾರ ನಟಿಸಿರುವ ಬಾಂಬೇ ಟಾಕಿಸಿನ 'ಅಚ್ಚುತಕನ್ಯಾ'; ಪ್ರಗತಿ ನಂದಕುಮಾರ್ ಇತ್ಯಾದಿ.

ವಾರದ ಭವಿಷ್ಯ

ಪುಟ ೩೨ರಿಂದ

ವೇಷಾಚ್ಛಾದಿತ ಚಾರಿತ್ರಹೀನರಲ್ಲಿ ಸಿಲುಕಿ ತೊಳಲಿ ಬಳಲುತ್ತಿರುವಿರಿ. ಎತ್ತ ನೋಡಿದರೆ ದೃಷ್ಟಿಯ ಮುಂದೆ ಪಸರಿಸಿದು. ಯಾವುದನ್ನು ಮಾಡಲಿ, ಯಾವುದನ್ನು ಬಿಡಲಿ ಎಂಬೀ ವಿಚಾರವೂ ಸನ್ನಿಸ್ತ್ರ್ಯತಿಪಥಕ್ಕೆ ಬರಲಾರದು ಯಾವ ಕಾರ್ಯಕ್ಕೂ ನೀವು ಅದ್ವಿತೀಯರಾಗಿ ಮುಂದರಿಯ ಬೇಕಾಗಿದೆ. ಬಂಧುಮಿತ್ರರಿಲ್ಲ, ಪುತ್ರಭೃತ್ಯರೂ ಇಲ್ಲ, ಆರ್ಥಿಕಬಿಕ್ಕಟ್ಟಿನ ಸಲುವಾಗಿ ವಿಸುಮಾಡಬೇಕೆಂದೂ ತೋರಲಾರದು. ಕಷ್ಟಕಾಲದಲ್ಲಿ ದೇವರ ನೆನವರಿಕೆಯು ಹರ್ಷವು ಮಾನ್ಯ ಎಲ್ಲರಿಗೂ ಉಂಟಾಗುವುದು. ಅಂತೇ ನೀವೂ ಕೂಡ ಧರ್ಮ ನೇವರುಗಳಲ್ಲಿ ವಿಶ್ವಾಸವನ್ನಿಡುವಿರಿ. ತಾ 7 8 9 ಈ ದಿನಗಳಲ್ಲಿ ಸ್ವಲ್ಪ ಪೆಟ್ಟಾದರೂ ಇಷ್ಟಪ್ರಾಪ್ತಿಯಾದೀತು.

ಮಕರರಾಶಿ—

ಕಳೆದ ನಾಲ್ಕೆಂತ ನೀವು ಈ ವಾರದಲ್ಲಿ ಸ್ವಲ್ಪ ಉತ್ತಮಸ್ಥಿತಿಗೆ ಬಂದಿರುವಿರಿ ಶ್ರೀಮಂತ ಸ್ತ್ರೀಯರ ಮೂಲಕ ಲಾಭದೊರೆಯಲಿದೆ ನೌಕರಿ ಬಾಗದಲ್ಲಿಯೂ ವ್ಯಾಪಾರೀ ವೃತ್ತಿಯಲ್ಲೂ ಇಷ್ಟಸಿದ್ಧಿ, ಧನ ಲಾಭಗಳು ಚೆನ್ನಾಗಿರುತ್ತವೆ ಆದರೆ ನಿಮ್ಮ ಮನಸ್ಸು ಹತೋಟಿಗೆ ಬಂದಂತಿಲ್ಲವು ವಿಷಯ ಚಾಪಲ್ಯಕ್ಕೊಳಗಾಗಿ ಮನಬಂದಂತೆ ವರ್ತಿಸಿ ಆಶ್ಚರ್ಯಗಳನ್ನು ಮಾಡಿ ಕಷ್ಟನಷ್ಟಗಳಿಗೆ ಪಾತ್ರರಾಗಲಿರುವಿರಿ. ಸುತ್ತಲಿಂದಲೂ ಶತ್ರುಜನರು ವೃದ್ಧಿಗೊಳ್ಳುತ್ತಲಿರುವುದರಿಂದ ಹಿಡಿದ ಕಾರ್ಯಕ್ಕೆ ಇವರ ಪೀಡೆಯು ಬಹಳ ಅಧಿಕವಾಗುವುದು ದೇಹವು ಅಪಘಾತಕ್ಕೊಳಗಾಗುವುದಲ್ಲದೆ ಅನಾರೋಗ್ಯಕ್ಕೂ ಈಡಾಗುವುದು. ಬಂಧುಮಿತ್ರರ ವಿಯೋಗವಾಗ ವುದು ಸ್ತ್ರೀಯೊಡನೆ ಕಲಹವಾಗದ ದಿನವಿರದು. ಅಂತೂ ತಾ 8ರಿಂದ 11ರವರೆಗಿನ ದಿನಗಳನ್ನು ಬಿಟ್ಟರೆ ಇತರ ದಿನಗಳಲ್ಲಿ ಆಪ್ತರಲ್ಲಿ ಕಲಹ, ಪ್ರಯಾಣ, ಕಾರ್ಯನಾಶದಿಂದ ಶೋಕ, ಅನಾರೋಗ್ಯಗಳು ಅಧಿಕವಾಗುವ ಚಿಹ್ನೆಗಳೇ ಹೆಚ್ಚಿವೆ.

ಕುಂಭರಾಶಿ—

"ಸುಖಸ್ಯಾನಂತರಂ ದುಃಖಂ" ಅಂದರೆ ಸುಖಾವಸಾನದಲ್ಲಿ ದುಃಖವಿದ್ದೇ ಇರುವುದು ಹೇಗೆ ಹಗಲು ಮುಗಿದೊಡನೆ ಕತ್ತಲು ಬರುವುದೋ ಅಂತೆಯೇ ಈಗಲೀಗ ನಿಮಗೆ ಗುರು ಶನಿಗಳನ್ನು ಬಿಟ್ಟು ಮತ್ತಾರೂ ಸಹಾಯಕರಿಲ್ಲವು ಆದಕಾರಣ ಆರ್ಥಿಕ ವಿಚಾರದಲ್ಲೂ ಕುಟುಂಬವಿಚಾರದಲ್ಲೂ ಈ ಎರಡರ ಮಟ್ಟಿಗೆ ವಿಶೇಷ ಯೋಚಿಸಬೇಕಾಗಿಲ್ಲವು. ಆರೋಗ್ಯವು ಸ್ವಲ್ಪಮಟ್ಟಿಗೆ ಕೆಡಲಿದೆ, ಪಿತ್ತಾಧಿಕ್ಯ ನೇತ್ರೋದರ ರೋಗ ಇವುಗಳು ವೃದ್ಧಿಹೊಂದುವವು. ಪ್ರಯಾಣದ ಸಲುವಾಗಿ ಧನವ್ಯಯಿಸುವಿರಿ. ಸ್ತ್ರೀವರ್ಗದಿಂದಾಗಿ ಅನಿಷ್ಟಗಳೂ ಶೋಕಗಳೂ ಪ್ರಾಪ್ತವಾಗಲಿವೆ. ವಿಜಾತೀಯರೊಡನೆ ವ್ಯವಹಾರದಲ್ಲಿ ಕಲಹಪ್ರಾಪ್ತವಾಗುವುದು ಆದಕಾರಣ ಆದಷ್ಟು ಹಿತವಾದದಿಂದ ವರ್ತಿಸುವುದೊಳ್ಳಿತು ತಾ, 10, 11, 12, 13ಈ ದಿನಗಳನ್ನು ಬಿಟ್ಟು ಇತರ ದಿನಗಳೆಲ್ಲವೂ ನಿವಗೆ ಪ್ರತಿಕೂಲಕಾರಿಗಳಾಗಿವೆ.

ಮೀನರಾಶಿ—

ಶತ್ರುಗಳನ್ನು ಹಿಮ್ಮೆಟ್ಟಿ ಮುನ್ನಡೆವ ಕಾಲವು ನಿಮಗೀಗ ಒದಗಿರುವುದು. ದೇಹಾರೋಗ್ಯದಿಂದ ಯುಕ್ತರಾದ ನೀವು ಮನೋರೋಗದಿಂದ ಮುಕ್ತರಾದಿರಿ. ಋಣದ ಸಲುವಾಗಿ ಈ ವರೆಗೆ ಬಹಳ ತತ್ತರಿಸುತ್ತಲಿದ್ದಿರಷ್ಟೆ, ಈಗ ಆ ಚಿಂತೆಯು ನಿವಾರಣೆಯಾಯಿತು ನಾನಾ ರೀತಿಯಿಂದ ಹಣವು ನಿಮ್ಮ ಕೈಸೇರುವುದು ಸಾಹಸಸಾಧ್ಯಗಳಾದ ಕರ್ಮಗಳಲ್ಲಿ ಜಯವೂ, ಸಾಮಾಜಿಕ ಕಾರ್ಯಗಳಲ್ಲಿ ಗೆಲುವೂ ನಿಮಗಿರುವುದು ಜನರಿಂದ ಬಹುಮಾನಿತರಾಗಿರುವಿರಿ, ಆದರೆ ಕುಟುಂಬ ವಿಚಾರವಾಗಿ ನಿಮಗೆ ಮನಃಸ್ವಾಸ್ಥ್ಯವಿಲ್ಲವು. ತಲೆಯಲ್ಲಿ ಯಾವಾಗಲೂ ವಿಚಾರತರಂಗಗಳೇ ಮೂಡುತ್ತಿರುವವು. ಆದರವು ಫಲ್ಕನೆ ಕೊನೆ ಹೊಂದುವಂತಿಲ್ಲವಾದ್ದರಿಂದ ಕಾರ್ಯಚಟುವಟಿಕೆ ಸಾಹಸಗಳು ಸ್ವಲ್ಪ ಕಡಿಮೆಯಾಗಿ ಸದಾ ಔದಾಸೀನ್ಯರಾಗಿರುವಂತೆ ಕಾಣುತ್ತಿರುವಿರಿ ಎನ್ನೆಂದು ಹಣ ಸಿಕ್ಕಿದರೂ ಕತ್ತಲಾಗುವಾಗ ಕಾಸೊಂದೂ ಉಳಿಯದು ಇದೇ ನಿಮ್ಮ ದುರವಸ್ಥೆ ತಾ. 7, 12, 13, 14 ಈ ದಿನಗಳು ಉತ್ತಮಗಳಾಗಿವೆ.

ಮಾದಿರ

ಕವಿ
ಶ್ರೀ ಎಸ್. ವೆಂಕಟರಾಜರು,
ಉಡುಪಿ.

೧

ಎಳೆರೇಳರಿ ಬಾಳಹಿಗ್ಗಿನ
ಸೊಗದ ಸುಗ್ಗಿಯ ತಾಣಕೆ!
ಮೇಳಗೂಡಿದೆ ಮಾರನೈಸಿರಿ
ಪೂರ್ಣಕಾಮದ ಪಯಣಕೆ!
ಜೀವಕೊಂದೇ ಸಿಂಗರ–ಅದೆ
ಸತ್ಯಸಂಗಮದಾಸರ!

೨

ನಸುಕು ಬಾನಿನ ಹಾಸುಹೊಕ್ಕಿನ
ನೆರೆದ ಗಿಳಿಗಳ ತೋರಣ!
ಕುಸುಮ ಬಂಧುರ ಚೂತಸಿಂಧುರ
ವಿಡಿದ ಚಾಮರದೋರಣ!
ಭವ್ಯಭೋಗದ ಸಂಕುಲ–ಭವ
ಭೃಂಗಶೌರ್ಯದ ಕಲಕಲ!

೩

ಆಳುಕಲೀತಕೆ–ಬಳುಕಲೀತಕೆ
ಕಾಮಕರ್ಮದ ಮೊನೆಯಲಿ?
ಜೀವಸಾರಥಿಗಾವನಾಣತಿ
ಗಳಿಗೆಗೊತ್ತಿನ ಮನೆಯಲಿ?
ಮಮತೆಯೊಂದೇ ಸಾಲದೆ–ನವ
ರಕ್ತಿಮುಕ್ತಿಯನಾಳದೆ?

೪

ಮುಗುದಗಡಲಿನ ನಲುಮೆಯರಳಿನ
ಕುಸುರು ಸೇಸೆಯು ನೆರೆದಿದೆ!
ಮಿಲನಕೆಂದೆ ಮುಹೂರ್ತವೆಂದೇ
ಮುತ್ತಿನಾರತಿ ಮೆರೆದಿದೆ!
ತೋಳತಳ್ಕೆಯು ತೆರೆಯಲಿ–ರತಿ
ರಂಗಧಾಮದ ಕಾಕಲಿ!

೫

ಹಾಡಿ ಕುಣಿಯುವ ಕುಣಿದುಕೂಡುವ
ನರ್ಮನಾಟ್ಯದ ವೈಭವ!
ಜೋಡುಬದುಕಿನ ಗಾಡಿಯುರಿಸುವ
ಮೌನ ನೃತ್ಯ ಪರಾಭವ!
ಅಮಿತರಾಗರಸಾಗಮ–ಯುವ
ಜೀವಜೀವ ಸಮಾಗಮ!

೬

ಪ್ರೇಮಯಾತ್ರೆಯ ನೇಮಕೊದಗಿದೆ
ಮದುರಮಂಗಳ ಮಾದಿರ!
ಮತ್ತಮಧುಪನ ಹೃತ್ತರಂಗದ
ಹರ್ಷಮಹತಿಯು 'ಮಾದಿರ'!
ಅದುವೆ ಜೀವನ ಕೊಲಿಯಲಿ–ತುಳು
ನಾಡನೂಪುರವಲಗಲಿ!

ಬಿಸಿ ಬಿಸಿ ಸುದ್ದಿ! ಸೊಗಸಾದ ಚಿತ್ರ!

TAINADU

ಮೈಸೂರು ಮಹಾರಾಜರ ಐರೋಪ್ಯ ಪ್ರವಾಸದ ವರದಿಮಾಡಲು
ಸ್ಪೆಷಲ್ ಪ್ರತಿನಿಧಿಗಳನ್ನು ಯುರೋಪಿಗೆ ಕಳುಹಿಸ್ದ ಏಕೈಕ

ತಾಯಿನಾಡು ಕನ್ನಡ ದಿನಪತ್ರಿಕೆ ತಾಯಿನಾಡು

ಓದಿರಿ 'ತಾಯಿನಾಡು' ನಿಮಗೆ ಗೊತ್ತೆ? 'ತಾಯಿನಾಡು' ಓದಿರಿ.

ಪ್ರಪಂಚದಲ್ಲಿ ಪ್ರತಿದಿನವೂ ನಡೆಯುವ ಸುದ್ದಿಗಳನ್ನು ಆಯಾ ದಿನವೇ ತಂತೀ ಮೂಲಕ ತರಿಸಿ ಪ್ರಕಟಿಸುವ ಸುಪ್ರಸಿದ್ಧ ದಿನ ಪತ್ರಿಕೆ "ತಾಯಿನಾಡು" ರೂಟರ್ ಸ್ಪೆಶಲ್, ಎ. ಪಿ ಐ, ಸ್ವಂತ ಬಾತ್ಮೀದಾರರ ತಂತಿ ಮತ್ತು ಫೋನ್ ಸುದ್ದಿಗಳಿಗೂ, ಕರ್ನಾಟಕದಲ್ಲೆಲ್ಲಾ ಬಹಳ ಪ್ರಚಾರದಲ್ಲಿರುವ ಮತ್ತು ಮನೆಮಾತಾಗಿರುವ, ಸೊಗಸಾದ ಸುದ್ದಿ(News) ಚಿತ್ರಗಳಿಗೆ 'ತಾಯಿನಾಡು'ನೋಡಿ ದಿನವೂ 10ರಿಂದ 14ಪುಟಗಳು.

ಒಂದು ಕಾಣೆ ಸ್ಟಾಂಪು ಕಳುಹಿದಲ್ಲಿ ಮಾದರಿ ಪತ್ರಿಕೆ ಉಚಿತ ನಿಮ್ಮ ಜಾಹೀರಾತನ್ನು 'ತಾಯಿ ನಾಡು'ವಿಗೆ ಕೊಟ್ಟು ವ್ಯಾಪಾರ ಅಭಿವೃದ್ಧಿ ಮಾಡಿಕೊಳ್ಳಿ. ವಿವರಗಳಿಗೆ—

ಎಂ ಸಿದ್ಧರಾಮಯ್ಯ, ಏಜಂಟ್,
ತಾಯಿನಾಡು 512 ದಿವಾನ್ಸ್ ರೋಡು, ಮೈಸೂರು.

ON THE APPROVED LIST OF THE GOVERNMENT OF MYSORE

Chari & Prakash

SAYYAJI RAO ROAD, MYSORE.

(Opposite K. R HOSPITAL)

WHOLLSALE & RETAIL DEALERS IN

Chemicals, Drugs, Patent Medicines, Toilets & Sundries.

Orders to Hospitals, Colleges & Public Institutions Executed Promptly & Reliably.

TRIAL SOLICITED.

"ಲಲಿತೆಗೆ ಈ ಗತಿಯಾಯಿತೆ?"

ಆಹ! ಎಷ್ಟು ಒಳ್ಳೆಯ ಹುಡುಗಿ! ಎಂತಹ ಗುಣನಡತೆಯವಳು! ಆದೆಷ್ಟು ಚುರುಕು ಬುದ್ಧಿಯವಳು! ನೋಡಲಾಗಿ ಏನೆನ್ನೊಂದು ರೂಪವತಿ! ಅಯ್ಯೋ ದೇವರೇ, ಎಂತಹ ರಾಕ್ಷಸರಪ್ಪ ಪುರುಷ ಜಾತಿ! ಅದರೂ ಶಿವಾನಂದರು ಸರ್ವ ಬಿಟ್ಟ ಸನ್ಯಾಸಿ! ಸನ್ಯಾಸಿ ಯೋಗಿ!! ಸಮಾಜದ ಧರ್ಮಾಧಿಕಾರಿ! ಅವರೇ ಇಂತಹ ನರ ಪಿಶಾಚಿ! ಅಹಹ! ಏನನ್ನ ಬೇಕು ಈ ವಿಷಯಾಸಕ್ತಿ!. ಛೀ ಛೀ ಇಂತಹ ತುಚ್ಛನೀಚ ಧರ್ಮಾದಿಕಾರಿಗೂ, ವಿವೇಕಹೀನ ಕರ್ತವ್ಯಭ್ರಷ್ಟ ಒಡ ಸಮಾಜಕ್ಕೂ ಶತಶಃ ಧಿಕ್ಕಾರವಿರಲಿ! ಆಯ್ಯೋ ಲಲಿತೆ, ನಿನ್ನ ಗತಿ ಹೀಗಾಯಿತೇ? ನಿನ್ನ ತಾಯಿಯೇ ನಿನ್ನನ್ನು ಜೀವನ್ಮೃತಳನ್ನಾಗಿಮಾಡಲು ನೆರವಾದಳಲ್ಲವೇ? ಅವಳೇನು ಮಾಡಿಯಾಳು ಮತ್ತೆ? ಅವಳ ಮಗು ಅವಳಂತೆಯೇ ಆಗದೆ ಬೇರೆ ರೀತಿಯಾಗಲು ಕ್ರೂರ ಸಮಾಜವು ಬಿಡುವುದೇ? ವೇಶ್ಯೆಯ ಮಗಳು ಎಷ್ಟೊಂದು ಸುಶೀಲೆಯಾದರೂ ವೇಶ್ಯೆಯೇ ಅಲ್ಲವೇ? ಸಮಾಜದ ರೀತಿಯೇ ಹಾಗಲ್ಲವೇ! ರೂಢಿಯ ಗೂಡೊಳಗಿನ ಗೊಂಬೆಯಾದ ಅದಕ್ಕೆ ಲಲಿತೆಯ ಹೃದಯದ ಪರಿಸ್ಥಿತಿಯೇನು ಗೊತ್ತು! ಅಹ! ಎಳೆ ಬಾಲಕಿಯ ಮೇಲೆ ಎಂತಹ ಪೈಶಾಚಿಕ ಅತ್ಯಾಚಾರ! ಹಾಳು ಸಮಾಜ! ಹಾಳು ರೀತಿ ನೀತಿ! ಹಾಳು ಧರ್ಮದೇವರು! ಎಲ್ಲವೂ ಹಾಳು! ಇವೆಲ್ಲಾ ಹಾಳಾಗಿಹೋಗದೆ ಸ್ತ್ರೀಯರಿಗೆಲ್ಲ ಒಳ್ಳೆಯ ಬಾಳು" ಎಂದೆಲ್ಲಾ ಸುಮಿತ್ರಾಬಾಯಿಯವರಲ್ಲಿ ತರಂಗವಾಗಿ ಭಾವನೆಗಳೆದ್ದು ಹೃದಯದಲ್ಲಿ ಪ್ರಚಂಡ ಕೋಲಾಹಲವನ್ನೆಬ್ಬಿಸಿದವು

ಈ ಲಲಿತೆ ಯಾರು? ಅವಳ ಮೇಲೆ ಆತ್ಯಾಚಾರಮಾಡಿದವರಾರು? ಅವಳ ಗತಿಯೇನಾಯಿತು? ಹಿಂದಿನ–ಮುಂದಿನ ಕಥಾಭಾಗವೇನ? ಎಂಬುದನ್ನೆಲ್ಲಾ ನಿಮಗೆ ತಿಳಿಯಬೇಕೆಂದೆನಿಸುವುದಿಲ್ಲವೇ? ಹಾಗಿದ್ದರೆ ಕೂಡಲೇ 0–8–0ಯ ಸ್ಟಾಂಪನ್ನು ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಕಳಿಸಿರಿ. ಅವರು 'ಸನ್ಯಾಸಿಯ ಸೋಗಿನಲ್ಲಿ' ಎಂಬ 0–8–0 ಕ್ರಯದ ಸಾಮಾಜಿಕ ಕಾದಂಬರಿಯನ್ನು ಅಂಚೆ ವೆಚ್ಚವಿಲ್ಲದೆ ಕೂಡಲೇ ನಿಮಗೆ ಕಳಿಸುವರು. ಶ್ರೀ ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟ ಅತ್ಯುತ್ತಮ ಕಾದಂಬರಿಯದು ಸನ್ಯಾಸಿಯ ಸೋಗಿನಲ್ಲಿ. **Advt.**

ಪ್ರಕಟಣೆ.

ಇನ್ನು ಮುಂದೆ ಎಲ್ಲಾ ಕೋಪಿಸ್ಟ್ಸ್ ಅರ್ಜಿಗಳಿಗೆ ಮತ್ತು ಡುಪ್ಲಿಕೇಟ್ ಲೈಸನ್ಸ್, ರಿನವಲ್, ಟ್ರಾನ್ಸ್‌ಫರ್, ಎಕ್ಸ್‌ಟೆನ್ಷನ್, ರಿಜಿಸ್ಟ್ರೇಶನ್, ಕೇನ್ಸಲೇಶನ್ ಮತ್ತು ಕೆ. ಎ ಒದಲಾವಣೆ ಬಾಬತು ಅರ್ಜಿಗಳಿಗೆ ಮತ್ತು ಮದಾಂ ಕ್ ಮತ್ತು ಕೊಂಡುಕೊಳ್ಳುವ ಕೋರ್ಟ ಫವಕೊಳ್ಳುವ ವ್ಯಾಪಾರ ಸಂಬಂಧಿಸಲು ಮತ್ತು ಅಂತಹ ಇತರ ವಿಚಾರದಲ್ಲಿ ಇಂಡಿಯನ್ ಅಂಕ್ಟುಗಳಿಗನುಸಾರವಾಗಿ ಮಾಡುವ ಎಲ್ಲಾ ಅರ್ಜಿಗಳಿಗೆ ಎರಡಾಣೆ ಮೌಲ್ಯದ ಕೋರ್ಟ ಫೀ ಸ್ಟಾಂಪನ್ನು ಅಂಟಿಸತಕ್ಕದ್ದು

ಸಿ ಪಿ. ಕರುಣಾಕರ ಮೆನನ್,
ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್

ದಕ್ಷಿಣಕನ್ನಡ ಜಿಲ್ಲಾ ಮೆಜಿಸ್ಟ್ರೇಟರ ಆಫೀಸು
ಮಂಗಳೂರು, ತಾ. 2೦ 8–39.

ಮಠಗಳ ಸುಧಾರಣೆ

ಶ್ರೀ. ಕೆ. ಹೊನ್ನಯ್ಯ ಶೆಟ್ಟಿ

ಸದ್ಯವೇ ಪುಸ್ತಕ ರೂಪದಲ್ಲಿ ಪ್ರಕಟವಾಗಲಿರುವ 'ನೂರಾರು' ಎಂಬ ಕಥಾಚಿತ್ರಗಳಲ್ಲಿ ಒಂದು ಸ್ಯಾಂಪಲ್.

ಅಂದೊಂದು ದಿನ ನಮ್ಮೂರ ರಥಬೀದಿಯಲ್ಲೊಂದು ಭಾಷಣ, ವಿಷಯ "ಮಠಗಳ ಸುಧಾರಣೆ."

ನಿಶ್ಚಿತ ವೇಳೆಗೆ ಸರಿಯಾಗಿ ಹಲವು ಜನರು ಬಂದು ರಥಬೀದಿಯಲ್ಲಿ ಸೇರಿದರು. ಶ್ರೀ. ರಾಮರಾಯರ ಅಧ್ಯಕ್ಷತೆಯಲ್ಲಿ ಸಭಾರಂಭವಾಯಿತು

ಮೊದಲು ಗೋಪಾಲರಾಯರ ಭಾಷಣವಾಯಿತು. ಎರಡನೆದಾಗಿ ಶಿವರಾಯರು ಮಾತನಾಡಿದರು. ಮೂರನೆದಾಗಿ 'ಸುಧಾರಕ' ಪತ್ರಿಕೆಯ ಸಂಪಾದಕರ ಭಾಷಣವಿತ್ತು. ಅವರು ಮಾತನಾಡುತ್ತ, "ಇಂದು ಮಠದೇವಸ್ಥಾನಗಳು ಸೂರೆ ಸುಲಿಗೆಗಳ ತವರುಮನೆಗಳಾಗಿವೆ. ವ್ಯಾಪಾರೀ ಸಂಸ್ಥೆಗಳಾಗಿ ಮಾರ್ಪಟ್ಟಿವೆ. ಇಂಥ ಮಠದೇವಸ್ಥಾನಗಳು ಅಳಿಯಬೇಕು. ಅವುಗಳಿಂದ ಊರಿಗೆ ಕ್ಷೇಮವಿಲ್ಲ. ಅವುಗಳಲ್ಲಿಯ ಹೇರಳ ದ್ರವ್ಯವು ಅನಾವ್ರಯವಾಗುತ್ತಿರುವುದನ್ನು ನೋಡುವಾಗ ತುಸು ವಿಚಾರವಂತನಿಗೆ ಪಶ್ಚಾತ್ತಾಪವಾಗದಿರಲಾರದು. ಹಣವು ಹೇಗೆ ಹೇಗೆ ಅಪಾವ್ರಯವಾಗುತ್ತದೆಂಬುದನ್ನಿಲ್ಲಿ ವಿವರಿಸುವ ಅಗತ್ಯವಿಲ್ಲ. ಪಾತ್ರಾಪಾತ್ರ ವಿವೇಚನೆಯಿಲ್ಲದೆ ಸಾವಿರಾರು ಜನರಿಗೆ ಅನ್ನದಾನ ನಡೆಯುತ್ತದೆ. ಮನೆಯಲ್ಲಿ ಚೆನ್ನಾಗಿ ಉಂಡಿಕ್ಕಿರುವವರಿಗೇ ಅಲ್ಲಿ ಊಟ ಸಿಗುತ್ತದೆ. ಬಡವರು, ಭಿಕ್ಷುಕರು ಬಂದರೆ ಅವರನ್ನು ದಾನವರಂತೆ ಹೊಡೆದೋಡಿಸುತ್ತಾರೆ, ಮಠದಾಳುಗಳಿಗೆ ದಯೆದಾಕ್ಷಿಣ್ಯವೆಂಬುದಿಲ್ಲ.... ಇನ್ನು ಯಜ್ಞ ಹೋಮವೆಂದು ಹಾಳಾಗುವ ದ್ರವ್ಯವೆಷ್ಟು! ಇವಕ್ಕೆ ಎರೆಯುವ ತುಪ್ಪವನ್ನು ಬಡವರಿಗೆ ಕೊಡಬಾರದೇ? ಇವರು ತಿಂದು ಬಿಸಾಡುವುದಕ್ಕೆ ಮಿತಿಯಿದೆಯೇ? ಇದನ್ನೆಲ್ಲಾ ಸುಧಾರಕರಾದ ನಾವು ಹೇಗೆ ನೋಡಬೇಕು? ಧನಿಕರಿಗೇ ಕರೆಕರೆದು ಊಟೋಪಚಾರ ಮಾಡುತ್ತಾರೆ! ಬಡವರೆಂದರೆ ಮುಖ ತಿರುಗಿಸುತ್ತಾರೆ... ಇನ್ನು ಉತ್ಸವದ ವೇಳೆ ಹಾಳಾಗುವ ದುಡ್ಡು ಎಷ್ಟು! ಈ ಉತ್ಸವಗಳೇಕೆ? ಅದಕ್ಕೆ ಆಡಂಬರಗಳೇಕೆ? ಬಿರುಸುಬಾಣಗಳೇಕೆ? ವಾದ್ಯಘೋಷವೇಕೆ? ಹೀಗೆ ಹಾಳು ಮಾಡುವ ಹಣವನ್ನು ಸದ್ವಿನಿಯೋಗಿಸುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಇದಕ್ಕಾಗಿ ನಾವೆಲ್ಲರೂ ಹೋರಾಡಬೇಕು" ಎಂದು ಮುಂತಾಗಿ ಒಳ್ಳೇ ಆವೇಶದಿಂದ ಹೇಳಿದರು. ಸಭಿಕರೂ 'ಭ್ಯಾಸ್ ಭ್ಯಾಸ್' ಎಂದರು. ಕೈಚಪ್ಪಾಳೆಯೋ ಚಪ್ಪಾಳೆ! "ಭಾಷಣವೆಂದರೆ ಹೀಗಿರಬೇಕು" ಎಂದರು ಕೆಲವರು. ಅಂತೂ ಸಭಾಕಾರ್ಯವು ಧನ್ಯವಾದಗಳೊಡನೆ ಸಮಾಪ್ತಿಯಾಯಿತು. ಎಲ್ಲರೂ ಹೊರಟು ಹೋದರು.

೦೦ ೦೦ ೦೦

ಇಂದು ಅದೇ ಊರ ಜಾತ್ರೆ. ಸಂಪಾದಕರು ತನ್ನ ನೆಂಟರಿಷ್ಟರು, ಬಂಧುಬಳಗದವರನ್ನೆಲ್ಲಾ ಎರಡೆರಡು ಕಾಗದ ಬರೆದು ಜಾತ್ರೆಗೆ ಆಮಂತ್ರಿಸಿದ್ದಾರೆ ಖರ್ಚಿಗೆ ತೊಂದರೆಯಾಗಬಾರದೆಂದು ಮೊದಲೇ ಇಂಡಿಯನ್ ಬ್ಯಾಂಕಿನಿಂದ ರೂ 200/- ಸಾಲಪಡೆದಿಟ್ಟುಕೊಂಡಿದ್ದಾರೆ. ಹತ್ತಿಪ್ಪತ್ತು ಜನ ನೆಂಟರಿಷ್ಟರು ಬಂದಿದ್ದಾರೆ ಸಂಪಾದಕರೂ ಮನೆಯಲ್ಲೇ ಇದ್ದಾರೆ ಒಂದು ತಿಂಗಳ ರಜೆಯನ್ನು ಪಡೆದು ಬಂದಿದ್ದಾರೆ.

ಸತ್ಕಾರಸಮಾರಂಭವನ್ನು ವಿವರಿಸುವುದೇ ಬೇಡ. ಊಟ ಉಪಚಾರದ ಸಂಭ್ರಮವೇನು? ಭಕ್ಷ್ಯ ಭೋಜ್ಯಗಳ ವೈಭವವೇನು! ಬೆಳಗ್ಗೆ ಎದ್ದೊಡನೆ ಕಾಫಿಟಿಫಿನ್. ಟಿಫಿನಿಗೆ ನಾಲ್ಕಾರು ಬಗೆಯ ತಿಂಡಿ ತಿನಸುಗಳು! ಮಧ್ಯಾಹ್ನ ಪಂಚಭಕ್ಷ್ಯಪರಮಾನ್ನ! ಪುನಃ ಸಂಜೆ 4ಘಂಟೆಗೆ ಕಾಫಿಟಿಫಿನ್ ರೆಡಿ! ಅನಂತರ ಮೋಟಾರು ಕಾರುಮಾಡಿ ದಿನಕ್ಕೊಂದು ಕಡೆಗೆಂಬಂತೆ ವಿಹಾರ! ರಾತ್ರಿ ಪುನಃ ಗಮ್ಮತಿನ ಊಟ. ಇದನ್ನೆಲ್ಲಾ ವಿವರಿಸಿದರೆ ಅದೇ ಒಂದು ಪುರಾಣವಾದೀತು. ಮತ್ತೆ ರಾತ್ರಿ ಸಿನೆಮಾದರೆ ಸಿನೆಮ, ನಾಟಕವಾದರೆ ನಾಟಕ, ಸರ್ಕಸಾದರೆ ಸರ್ಕಸ್!

ಒಂದು ದಿನ ಮಧ್ಯಾಹ್ನದ ಊಟ ಆಗಿ ಸಂಪಾದಕರು ನೆಂಟರೊಂದಿಗೆ ಮಾತನಾಡುತ್ತಿದ್ದಾರೆ ಆಗ "ಅಮ್ಮಾ ಧರ್ಮ" ಎಂದು ಭಿಕ್ಷುಕನೊಬ್ಬ ಬಂದುಬಿಟ್ಟ. ಯಾರೂ ಮಾತನಾಡಲಿಲ್ಲ. ಅವನು ಪುನಃ "ಅಮ್ಮಾ ಧರ್ಮ ಕೊಡೀ" ಎಂದ. ಯಾರೂ ಉತ್ತರಕೊಡಲಿಲ್ಲ. "ಅಮ್ಮಾ ಧರ್ಮಾ!" ಎಂದು ಆತ ಪುನಃ ಗಟ್ಟಿಯಾಗಿ ಅರಚಿದ.

ಸಂಪಾದಕರು ಸಿಟ್ಟಾಗಿ ತಟ್ಟನೆದ್ದು "ಇಲ್ಲಿ ಧರ್ಮಗಿರ್ಮ ಇಲ್ಲ, ಹೋಗಾಚೆ" ಎಂದರು.

"ಸ್ವಾಮಿ, ಬೆಳಗ್ಗಿನಿಂದ ಊಟಇಲ್ಲಾ, ಒಂದಿಷ್ಟು ಅನ್ನಕೊಡೀ, ಪುಣ್ಯ ಬರುತ್ತೆ

ಸ್ವಾಮಿ" ಎಂದು ಅಂಗಲಾಚಿದ ಭಿಕ್ಷುಕ.

"ನಿನ್ನ ಪುಣ್ಯಗಿಣ್ಯ ನಮಗೆ ಬೇಡ. ಕೊಡುವುದಿಲ್ಲವೆಂದ ಮೇಲೆ ನಾವು ಕೊಡುವುದೇ ಇಲ್ಲ. ಒಳ್ಳೇ ಮಾತಿನಿಂದ ಇಲ್ಲಿಂದ ತೊಲಗು" ಎಂದರು ಸಂಪಾದಕರು.

"ಅಯ್ಯಾ ಹಸಿವಾಗುತ್ತೆ ಸ್ವಾಮಿ! ಏನಾದರೂ ಒಂದಿಷ್ಟು ಧರ್ಮ ಕೊಡಿ ಸ್ವಾಮಿ" ಎಂದ ಪುನಃ ಭಿಕ್ಷುಕ.

"ನಿನಗೆ ಇಷ್ಟು ಹಟ. ಹೋಗೆಂದರೆ ಹೋಗಬೇಕು ನಡಿ ಬದ್ಮಾಷ್! ನಿನಗೆ ಕೆಲಸಮಾಡಲಿಕ್ಕೆ ಧಾಡಿಯೇನು?" ಎಂದು ಸಂಪಾದಕರು ಒಂದು ಬೆತ್ತತೆಗೆದರು; ಒಂದು ಹೆಜ್ಜೆ ಮುಂದಾದರು.

ಭಿಕ್ಷುಕ ಏನೋ ಗೊಣಗುಟ್ಟುತ್ತ ಅಲ್ಲಿಂದ ಹೊರಟ.

ಹೀಗಿರಬೇಕು ಮಠಗಳ ಸುಧಾರಣೆ!

ADVERTISING IS A PART OF COMMERCIAL SUCCESS
To Insure Larger Volume of Business,
TAKE TO ADVERTISEMENT
in
NAVAYUGA
in the
NEW YEAR
For rates apply to the
MANAGER
'NAVAYUGA'
[illegible]

ಹೆಂಡತಿ: ಪ್ರಿಯಾ! ನೀವು ಧರಿಸಿಕೊಂಡ ಈ ಸೂಟು ಬಹು ಅಚ್ಚುಕಟ್ಟಾಗಿದೆ. ಇದನ್ನು ಎಲ್ಲಿ ಹೊಲಿಸಿಕೊಂಡಿರಿ?
ಗಂಡ: ಪ್ರಿಯೆ! ನೀನರಿಯೆಯಾ? ನಮ್ಮ ಮಂಗಳೂರಲ್ಲಿ ಹೊಲಿಗೆ ಕೆಲಸದಲ್ಲಿ ಪ್ರಸಿದ್ಧಿ ಹೊಂದಿದ ಡಿ. ಪೂವಪ್ಪ ಆಳ್ವರನ್ನು?
ಹೆಂಡತಿ: ಓಹೋ ಅವರೇ? ಸರಿ ನನ್ನ ನೆರಮನೆ ಸುಂದರಮ್ಮನ ಗಂಡನ ಆಫೀಸಿನಲ್ಲಿ ಅವರ ಗಂಡ ಹಾಕಿಕೊಂಡ ಡ್ರೆಸ್ಸನ್ನು ನೋಡಿ ಎಲ್ಲರೂ "ನೀವು ನಿಮ್ಮ ದೇಹಕ್ಕೆ ಸರಿಯಾದ ಉಡುಪನ್ನು ಎಲ್ಲಿ ಹೊಲಿಸಿಕೊಳ್ಳುತ್ತಿರುವಿರಿ? ಈಗ ಆಧುನಿಕ ರೀತಿಯಲ್ಲಿ ನಾಜೂಕಾಗಿ, ಶರೀರಕ್ಕೆ ಅಚ್ಚುಕಟ್ಟಾಗಿ ಹೊಲಿದುಕೊಡುವ ಡಿ. ಪೂವಪ್ಪ ಆಳ್ವರಲ್ಲಿಗೆ ಹೋಗಬಾರದೇ" ಎಂದರಂತೆ ಹಾಗೆಯೇ ಅವರು ಒಂದು ಸೂಟನ್ನೂ ತನ್ನ ಪತ್ನಿಗೆ ಒಂದು ಜಂಪರನ್ನೂ ಹೊಲಿಸಿಕೊಂಡು ನಿನ್ನೆ ಬಂದಿದ್ದರು. ಬಹು ಅಂದವಾಗಿತ್ತು. ನನಗೂ ಒಂದು ಬ್ಲೌಸನ್ನು ಡಿ ಪೂವಪ್ಪ ಆಳ್ವರ ಹೊಲಿಗೆ ಸಂಸ್ಥೆಯಿಂದ ಹೊಲಿಸಿ ತರಲಾರಿರಾ?
ಗಂಡ: ಸರಿ ಪ್ರಿಯೇ! ನನ್ನ ಮಿತ್ರಮಂಡಳಿಗೂ ಅವರ ಪರಿಚಯಮಾಡಿಕೊಡಬೇಕು. ಅದುದರಿಂದ ನನ್ನ ಸ್ನೇಹಿತರಿಗೂ ಅವರ ವಿಳಾಸವನ್ನು ಕಳುಹಿಸಿ ಕೊಡುತ್ತೇನೆ

D. Poovappa Alva's Tailoring House
Behind Felix Pai Building, **Hampankatta, MANGALORE.**

SIRDAR BHAVAN
BRAHMINS' BOARDING & LODGING
FELIX PAI BAZAR, **MANGALORE.**
ಸರದಾರ ಭವನ
ಫೆಲಿಕ್ಸ್ ಪೈ ಬಜಾರು, ಮಂಗಳೂರು.
ಉಡುಪಿ ಬ್ರಾಹ್ಮಣರ ಉಪಹಾರ ಮತ್ತು ವಸತಿಗೃಹ.
ಮಂಗಳೂರಲ್ಲಿರುವಾಗ ಎಲ್ಲಾ ಅನುಕೂಲತೆಗಳೂ ಸೌಕರ್ಯವೂ, ಮಿತವಾದ ದರದಲ್ಲಿ ಸಿಗಬೇಕಾದರೆ ಎಲ್ಲಿ ಉಳಕೊಳ್ಳುವಿರಿ?
ಸರದಾರ ಭವನದಲ್ಲಿ!
ಶಾಸ್ತ್ರೋಕ್ತ ರೀತಿಯಲ್ಲಿ ಅನುಭವಸ್ಥ ಬ್ರಾಹ್ಮಣರಿಂದ ತಯಾರಿಸಲ್ಪಟ್ಟ ತರತರದ ತಿಂಡಿತಿನಸುಗಳೂ, ಆರೋಗ್ಯಕರವಾದ ಮತ್ತು ರುಚಿಕರವಾದ ಊಟವೂ, ನಾನಾ ಬಗೆಯ ತಂಪಾದ ಪಾನೀಯವೂ, ಎಲ್ಲರ ಮನಸ್ಸಂತೋಷಪಡಿಸುವ ವ್ಯವಸ್ಥೆಯೂ, ಉಳಕೊಳ್ಳುವರೆ ಮಿತವಾದ ದರದಲ್ಲ ನಾಜೂಕಾದ ಕೊಠಡಿಗಳೂ ಉಳ್ಳ **'ಸರದಾರ ಭವನ'**ವನ್ನು ಸಂದರ್ಶಿಸಲು ಮರೆಯಬೇಡಿರಿ.
ವಿದ್ಯಾರ್ಥಿಗಳಿಗೆ ಎಲ್ಲಾ ತರದಲ್ಲಿಯೂ ಹೆಚ್ಚಿನ ರಿಯಾಯಿತಿಗಳಿವೆ
H. R. RAO.
Prop. **Bangalore silk Emporium, MADRAS.**

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — — . ಸುಖಶಾಂತಿಗಳ ಮೂಲಕಾರಣವಾದ . — — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವ ದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವ ರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು, ಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಣಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳು

ಕ್ರಯ ಸೀಸೆ **1**ಕ್ಕೆ ರೂ. **2—4—0**

ವಿ. ಪಿ. ಬೇರೆ.

ಒಂದೇ ಸಲ **12** ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ರೂ **24/-** ವಿ. ಪಿ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ **1**ಕ್ಕೆ ರೂ **1—2—0.**

ವಿ. ಪಿ. ಬೇರೆ.

ಒಂದೇ ಸಲ **12** ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ ಸಹಿತ ರೂ. **12/-** ಮಾತ್ರ

"ಹವನನ್" ಹೆಮೊರ್ರೋಯಿಡ್-ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ, ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರೋಯಿಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಹೋಗಿ ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ **1**ಕ್ಕೆ ರೂ **1—4—0** ವಿ. ಪಿ. ಬೇರೆ

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿ ಉಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಾಲು ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ಎಷ್ಟನ್ನು ಸದಾ ಸ ... ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಾದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ **1**ಕ್ಕೆ ರೂ **1—0—0** ವಿ. ಪಿ. ಬೇರೆ.

ಹಿಂದುಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road B B & C. I. Ry. BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗೆ ಏಜಂಟರುಗಳು ಬೇಕಾಗಿದ್ದಾರೆ . . . . . . ದಯವಿಟ್ಟು ಇಂಗ್ಲಿಷಿನಲ್ಲಿಯೇ ಬರೆಯಿರಿ

YOURS FAITHFULLY

"Yours faithfully" has been a common subscription in all business letters.
But it has not been a formal subscription with us.

THE

Canara Banking Corporation

LIMITED

(Incorporated in British India.)

Head Office: UDIPI, S. Kanara.

SERVES

its various constituents through the following network of Branches.

UDIPI, COONDAPOOR, MANGALORE (Car Street), MADRAS, SHIMOGA, MANGALORE (Bunder), MERCARA, VIRAJPET, SAKLASPUR, TELLICHERRY, MYSORE, SAGAR, SHIRVA, BYNDOOR, VELLORE, SALEM, METTUPALAYAM, MALPE, ERODE & THIRTHAHALLI.

OFFERS

excellent money saving schemes as

3 YEARS' CASH CERTIFICATES, CUMULATIVE DEPOSITS

ETC., ETC.

EXTENDS

all facilities for remittances to various places with maximum safety and minimum cost

SEEKS

the continued patronage and co-operation of the public

AND

EVER REMAINS FAITHFUL

OUR EXPERIENCE OF 33 YEARS WILL NEVER FAIL TO HELP YOU TO SOLVE YOUR DIFFICULTIES.

ISSUED & SUBSCRIBED CAPITAL	Rs.	3,50,000
PAID UP CAPITAL	„	3,10,705
RESERVES	„	3,95,808

ಪ್ರಗತಿ
ಮತ್ತು
ಭದ್ರತೆ

ಒಂದು ಸಂಸ್ಥೆಯು ಜನರ [illegible] ವಿಶ್ವಾಸಕ್ಕೂ ಪಾತ್ರವಾಗಬೇಕಾದರೆ ಅದರ ಪ್ರಗತಿ ಮತ್ತು ಭದ್ರತೆಗಳೇ ಕಾರಣ.
ಅಂತಹ ಪ್ರಗತಿಪರ ಹಾಗೂ ಭದ್ರತರ ಸಂಸ್ಥೆಗಳಲ್ಲಿ ಹೆಸರಾದುದೆಂದರೆ

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಲಿಮಿಟೆಡ್,

ಜಿಲ್ಲೆಯ ಹಿರಿಯ ಬ್ಯಾಂಕಿಂಗ್ ಸಂಸ್ಥೆಯಿದು.

ನಮ್ಮಲ್ಲಿ

ಕ್ಯಾಶ್ ಸರ್ಟಿಫಿಕೇಟು, ಕ್ಯುಮುಲೇಟಿವ್ ಡಿಪಾಸಿಟ್ ಮೊದಲಾದ ಹಣವುಳಿಸುವ ಯೋಜನೆಗಳಿವೆ.
ಬೇರೆ ಬೇರೆ ಊರುಗಳಿಗೆ ಹಣವನ್ನು [illegible] ಅತ್ಯಧಿಕ ಭದ್ರತೆಯಿಂದ ಹಣ ರವಾನಿಸುವ ಸರ್ವಾನುಕೂಲತೆಗಳಿವೆ.
ನಮ್ಮ 33 ವರ್ಷಗಳ ಅನುಭವ [illegible]

Printed By S. S. Karanth at the Thulunad Press, Udipi, and Published by K. H. Shetty at 'Navayuga' Office, Udipi, South India.



ಮೆಡಿಕಲ್

[illegible]

THE ASIAN ASSURANCE COMPANY, LTD.

ASIAN BUILDINGS — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9 24,965	24,50,234
1935	2,52,08,418	18 39,296	42,98,820
1938	3,61,56 764	22,34,301	67,66,528

ದಿ ಏಶಿಯನ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ M Shivarama Rao, Organizer, Puttur

Or

Sri J. A PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2,02 800/-. Paid up Capital: Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p. a for the earlier half and at 1% p a for the latter half of every calendar year.

Fixed Deposits are accepted at all the above offices for one and two years and interest allowed at 3½% p a and 4% p.a. respectively, interest being payable every half year of the calendar year. Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮಾರ್ಕ ಮುಲಾಮು —

ಇಷ್ಟರ ವರೆಗಿನ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ಮಾರ್ಕ

ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು

ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತೆ.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಕ್ಷಯ, ಉಬ್ಬಸ, ಶ್ವಾಸ ಕಾಸ ಎದೆನೋವು ಇತ್ಯಾದಿಗಳಿಗೆ ದಿವ್ಯ ಔಷಧಿ,

ಪೌಂಡ 1ಕ್ಕೆ ರೂ 2-8-0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಆರೋಗ್ಯಕಾರಕ ರಕ್ತವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ, ಧಾತುವು ಅಭಿವೃದ್ಧಿಯಾಗಿ ಬಾಣಂತಿಯ ದುಷ್ಟಿ ಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು, ಬಾಟ್ಲಿ 1ಕ್ಕೆ ರೂ 1-8-0.

ಕೆಟಲಾಗಿಗೆ ಬರೆಯಿರಿ — **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ಸಮಯದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ

ಔಷಧಿ ಸಿಕ್ಕುವ ಸ್ಥಳ: ದಿ ಕೆನರಾ ಟ್ರೈಡ್ಸ್ ಏಜನ್ಸಿಸ್, ಪುತ್ತೂರು, ಶ್ರೀ ರಾಮ ಸ್ಟೇಶನರಿ ಹೌಸ್, ಕಾಸರಗೋಡು. ವಿಟ್ಲದ ನಾರಾಯಣ ಶೆಣೈ, ವಿಜಗಾಂವ, ಬೊಂಬಾಯಿ, ಬಿ ಪಟ್ಟಿಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ, ಮಂಗಳೂರು ಸ್ಟೋರ್ಸ್, ಮಡಿಕೇರಿ ಕೃಷ್ಣ ಫಾರ್ಮಸಿ, ಕುಂದಾಪುರ ನವಭಾರತ ಬುಕ್ ಡಿಪೋ ಮತ್ತು ಊರಗಣ್ಣು ನ್ಯೂಸ್‌ಏಜಂಟ್ಸ್ ಉಡುಪಿ

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ

SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಒದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲೀಷು ಓದುವುದನ್ನೂ, ಮಾತನಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು, ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ ೭೭೪ ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಇರುವುದು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯ ದಿಂದ ಕನ್ನಡ ಓದಬಲ್ಲ ಎವ್ವಾದೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತ ಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ, ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದುವಿಕೆ ಎಲ್ಲಾ ಸುಲಭವಾಗಿ ಬರುತ್ತೆ.

ಪುಸ್ತಕದ ಕ್ರಯ ರೂ. 1—8—0

Western Swiss watch Co. Book-Sellers Post Box No 68 G P O MADRAS	ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ—

ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆವಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ನಡೆಯುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಕಾಶೀಮಠದ ಕಟ್ಟೋಣ, ಉಡುಪಿ

ಬ್ರಾಂಚ್—ಹೂವಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಸೀರೆಗಳು ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣ ಜರಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER
Sri. B. B. Shetty, M.L.A.
Parliamentary Secretary Govt. of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

NAVAYUGA

ಚಂದಾ ವಿವರ
1 ವರ್ಷಕ್ಕೆ - ರೂ. 3— 4—0
6 ತಿಂಗಳಿಗೆ - ರೂ. 1—12—0
ಚಂದಾ ಹಣವನ್ನು ಮುಂಗಡ ಕಳಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೨

ಉಡುಪಿ, ಗುರುವಾರ ೧೪—೯—೧೯೩೯
Udipi, Thursday 14—9—1939

Vol. 19
No. 2

ವಾರದ ವಿಮರ್ಶೆ

ಡಾನ್ಸಿಗಿಗಾಗಿ ಯುದ್ಧವೇ?

ಇಂದೀಗ ಇಡೀ ಲೋಕವನ್ನೇ ಆವರಿಸಿರುವ ಭಯಂಕರ ಯುದ್ಧವು ಕೇವಲ 751 ಚದರ ಮೈಲು ವಿಸ್ತೀರ್ಣದ ಡಾನ್ಸಿಜಿಗಾಗಿಯೇ? ಅಲ್ಪವಾದೊಂದು ಡಾನ್ಸಿಗ್ ಪ್ರಶ್ನೆಗಾಗಿ ತಾನು ಕಟ್ಟಿರುವ ಬೃಹತ್ ಜರ್ಮನಿಯನ್ನು ವಿನಾಶಗೊಳಿಸಲು ಹಿಟ್ಲರನೇನು ಚಿರಭ್ರಾಂತನೇ? ಅತಿ ದೂರದ ಪೋಲಂಡಿನ ಸ್ವಾತಂತ್ರ್ಯಕ್ಕಾಗಿ ತನ್ನೊಂದಿಗೆ ಬಹುತೇಕ ಇಡೀ ಲೋಕವನ್ನೇ ಯುದ್ಧಕ್ಕೆಳೆಯುವಷ್ಟು ಮೂರ್ಖರೇ ಬ್ರಿಟಿಷ್ ಮತ್ತು ಫ್ರೆಂಚ್ ಮುತ್ಸದ್ದಿಗಳು? ಎಂದಿಗೂ ಅಲ್ಲ. ಇಂದೀಗ ಯುರೋಪಿನ ಅಧಿಕಾರಕ್ಕಾಗಿ ನಾಝಿ ಜರ್ಮನಿ ಮತ್ತು ಆಂಗ್ಲೋ ಫ್ರೆಂಚ್ ಸರಕಾರಗಳು ಮಹತ್ತಾದ ಹೋರಾಟಕ್ಕಾರಂಭಿಸಿರುವವು. ಹಿಟ್ಲರನ ಪ್ರಭಾವವು ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಗೆ ಅಸಹನೀಯವಾಗಿದೆ. ಆಂಗ್ಲೋ ಫ್ರೆಂಚರ ಕೊಡಕಿನಿಂದಾಗಿ ಹಿಟ್ಲರನಿಗೆ ಮುಂದಡಿಯಿಡಲು ಅಸಾಧ್ಯವಾಗಿದೆ. ಅಂದ ಮೇಲೆ ಪರಸ್ಪರ ಘರ್ಷಣೆ ನಡೆಯಲೇಬೇಕಲ್ಲವೇ?

ಯುದ್ಧದ ಪೂರ್ವಸಿದ್ಧತೆ!

ರಾಜನೈತಿಕ ಚಾಣಕ್ಯ ತಂತ್ರ ಮತ್ತು ಯುದ್ಧ ಚಾತುರ್ಯದಲ್ಲಿ ಹಿಟ್ಲರನು ಚೇಂಬರ್ಲೇನ್ ದಲಾಡಿಯರರನ್ನು ಹಿಂದೆ ಹಾಕಿಬಿಟ್ಟಿರುವನು. ಯುದ್ಧವಾದರೆ ಥಕ್ಕನೆ ಪೋಲಂಡಿಗೆ ಸಹಾಯ ಕೊಡಲು ಸಾಧ್ಯ ರಶ್ಯಕ್ಕೆ ಮಾತ್ರ. ಇಂಗ್ಲೆಂಡು ಮತ್ತು ಫ್ರಾನ್ಸಗಳಿಗೆ ಒಬ್ಬನೇ ಒಬ್ಬ ಸೈನಿಕನನ್ನು ಪೋಲರ ಸಹಾಯಕ್ಕೆ ಕಳುಹಿಸಲು ಸಾಧ್ಯವಿಲ್ಲ. ರಶ್ಯವನ್ನು ತಮ್ಮ ಪಕ್ಷಕ್ಕೆಳೆಯಲು ಆಂಗ್ಲೋ ಫ್ರೆಂಚರು ೫ ತಿಂಗಳುಗಳಿಂದ ನಡಿಸಿದ ಪ್ರಯತ್ನವನ್ನು ಹಿಟ್ಲರನು ಮೂರೇ ದಿವಸಗಳಲ್ಲಿ ನಿಷ್ಫಲಗೊಳಿಸಿ ವಿದ್ಯುದ್ವೇಗದಿಂದ ಅದರೊಡನೆ ಒಪ್ಪಂದ ಮಾಡಿ ಇಡೀ ಲೋಕವನ್ನೇ ದಂಗುಗೊಳಿಸಿದನು. ಅದರ ಬೆನ್ನಲ್ಲಿಯೆ ಪೋಲಂಡಿನ ಮೇಲೆ ಯುದ್ಧ ಹೂಡಿದನು.

ಸಿನೆಮ ದೃಶ್ಯಗಳಂತಹ ವಿದ್ಯಮಾನಗಳು.

ಆಗೋಸ್ತುತಾ. ೨೧ರಲ್ಲಿ ಸೋವಿಯೆಟ್ ಜರ್ಮನ್ ಒಪ್ಪಂದ. ತಾ. 29ರಲ್ಲು ಡಾನ್ಸಿಗಿನಕುರಿತು ಸಂಧಿ ಮಾಡಿಕೊಳ್ಳಬೇಕೆಂದು ಪೋಲಂಡಿಗೆ ಅಲ್ಟಿಮೇಟಮ್. ಅದು ಪೋಲಂಡಿಗೆ ತಿಳಿಯುವುದರೊಳಗೆ ತಾ. 1ರಲ್ಲಿ ಡಾನ್ಸಿಗಿನ ವಶೀಕರಣ. ಪೋಲಂಡಿನ ಮೇಲೆ ಪ್ರಚಂಡ ಧಾಳಿ. ಈ ವಿದ್ಯಮಾನಗಳು ಸಿನೆಮ ದೃಶ್ಯಗಳಂತೆ ಲೋಕದ ದೃಷ್ಟಿಯ ಮುಂದೆ ಚಲಿಸಿದವು. ಯುದ್ಧ! ಯುದ್ಧ! ಯುದ್ಧವೆಂಬ ಹಾಹಾಕಾರ ಹಬ್ಬಿತು ಜಗತ್ತಿನಲ್ಲಿ. ವಿದ್ಯುದ್ವೇಗದಿಂದ ಧಾಳಿ ನಡಿಸಿ ಒಂದು ಹನಿ ರಕ್ತ ಸುರಿಸದೆ ಆಸ್ಟ್ರಿಯ ಜೆಕೊಸ್ಲೋವೇಕಿಯಗಳನ್ನು ನುಂಗಿಬಿಟ್ಟಿದ್ದ ಹಿಟ್ಲರ. ಅದೇ ರೀತಿ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ತಯಾರಾಗುವ ಮೊದಲೇ ಈ ಸಲವೂ ತನ್ನ ಉದ್ದೇಶ ಸಾಧಿಸಿಬಿಡಬೇಕೆಂದು ಬಗೆದು ಮುಂದೊತ್ತಿದ. ಆದರೆ ರಕ್ತದ ಕಾಲುವೆಯೇ ಹರಿವಂತಾಗಿದೆ ಈಗ. ಜರ್ಮನಿಯು ಅಸ್ತಿತ್ವಕ್ಕೇನೇ ಬಂದಿದೆ ಗಂಡಾಂತರ.

ಯುದ್ಧದ ಪರಿಸ್ಥಿತಿ.

ಇಷ್ಟರ ವರೆಗೆ ಹಿಟ್ಲರನ ಉದ್ದೇಶವು ನೆರವೇರಿದೆ. ಪೂರ್ವಪ್ರಶ್ಯ, ಜರ್ಮನಿ ಮತ್ತು ಸ್ಲೋವೇಕಿಯದಿಂದ ಜರ್ಮನ್ ಸೇನೆಯು ಪೋಲಂಡಿನ ಮೇಲೆ ಒಂದೇ ಸವನೆ ಏರಿ ಹೋಗಿ ಕ್ರೆಕೋವ್ ಎಂಬ ಮುಖ್ಯ ನಗರವನ್ನು ವಶಪಡಿಸಿ ಪ್ರಧಾನ ಪಟ್ಟಣವಾದ ವಾರ್ಸೋವನ್ನು ಮೂರು ಕಡೆಗಳಿಂದ ಆವರಿಸಿದೆ. ಡಾನ್ಸಿಗ್ ಮತ್ತು ಕೊರಿಡೋರ್ ಪ್ರದೇಶವು ಯುದ್ಧಾರಂಭದ ಮೂರು ನಾಲ್ಕು ದಿನಗಳಲ್ಲೇ ಸುಲಭವಾಗಿ ಜರ್ಮನರ ಅಧೀನವಾಗಿವೆ. ಪೋಲರು ಎಷ್ಟೊಂದು ವೀರಾವೇಶದಿಂದ ಕಾದಿದರೂ ಹೆಚ್ಚಿನ ಸಂಖ್ಯೆ ಮತ್ತು ಉತ್ತಮ ಯುದ್ಧೋಪಕರಣವುಳ್ಳ ಜರ್ಮನ್ ಸೇನೆಯ ಧಾಳಿಯನ್ನು ತಡೆಗಟ್ಟಲು ಅವರಿಂದ ಸಾಧ್ಯವಾಗದೆ ಹಿಂದೆ ಸರಿಯಬೇಕಾಗಿದೆ. ಇಷ್ಟರ ವರೆಗೆ ಪ್ರಬಲ ಸಮರಂಗ ಯುದ್ಧವೇನೂ ನಡೆದಿಲ್ಲ. ಪ್ರಬಲ ಜರ್ಮನ್ ಸೇನೆಯನ್ನು ದಕ್ಷಿಣ ಮತ್ತು ಪಶ್ಚಿಮದ ಸಮದ ಭೂಮಿಯಲ್ಲಿ ಎದುರಿಸಲಾಗದ ಪೋಲಿಶ್ ಸೇನೆಯು ಪೂರ್ವ ಮತ್ತು ಉತ್ತರದ ಗುಡ್ಡ ಪ್ರದೇಶಕ್ಕೆ ಸರಿದಿದೆ. ಪೂರ್ವದ ಲುಬ್ಲಿನ್ ಪಟ್ಟಣವು ಪ್ರಧಾನ ನಗರವಾಗಿ ಮಾಡಲ್ಪಟ್ಟಿದೆ. ಪೋಲಂಡಿನ ಉತ್ಕೃಷ್ಟ ಅಶ್ವಾರೋಹಿ ಸೇನೆ ಮತ್ತು ಪ್ರಬಲ ವಿಮಾನಪಡೆಯು ಪ್ರತಾಪವೇನೂ ಈ ವರೆಗೆ ತೋರಿಬಂದಿಲ್ಲ. ಪ್ರಾಯಶಃ ಪೋಲಿಶರು ಜರ್ಮನರೊಡನೆ ಸಮರಂಗ ಯುದ್ಧವನ್ನೇ ತಪ್ಪಿಸಿ ಯುಕ್ತಿಯಿಂದ ಹಿಂದೆ ಸರಿದಿರುವಂತಿವೆ.

ಜರ್ಮನಿಯ ಉಗ್ರತೆ!

ಜರ್ಮನಿಯು ಅತ್ಯುಗ್ರತೆಯಿಂದ ಯುದ್ಧವನ್ನಾರಂಭಿಸಿದೆ. ಎಂತಹ ಬರ್ಬರತನಕ್ಕೂ ಅದು ಹೇಸುವಂತೆ ತೋರುವುದಿಲ್ಲ. ಪೋಲಂಡಿನಪಟ್ಟಣಮತ್ತುಹಳ್ಳಿಗಳ ಮೇಲೆ ಎಡೆಬಿಡದೆ ಪೈಶಾಚಿಕ ವಿಮಾನ ಧಾಳಿ ನಡಿಸಿ ಭಯಂಕರ ಪ್ರಾಣ ಮತ್ತು ಸೊತ್ತು ಹಾನಿಮಾಡಿದೆ. ಪೋಲಂಡಿನ ದಕ್ಷಿಣದ ಕೈಗಾರಿಕೆ ಕೇಂದ್ರಗಳ ಮೇಲೆಲ್ಲಾ ಭರದಿಂದ ವಿಮಾನ ಹಲ್ಲೆ ನಡಿಸಿದೆ. ಇದು ಹೊರತು ಯುದ್ಧ ಆರಂಭವಾಗುವ ಮೊದಲೇ ಅಟ್ಲಾಂಟಿಕ ಮೊದಲಾದ ಸಾಗರಗಳಿಗೆ ಜಲಾಂತರ್ಗಾಮಿ ನಾವೆಗಳನ್ನು ಕಳುಹಿಸಿ ಅವು ಹಾವಳಿ ಮಾಡಹತ್ತಿವೆ. ಅಥೇನಿಯ ಮೊದಲಾದ ಐದಾರು ಬ್ರಿಟಿಷ್ ಸ್ಟೀಮರುಗಳು ಮುಳುಗಿಸಲ್ಪಟ್ಟಿವೆ. 4 ವಾರಗಳೊಳಗೆ ಪೋಲಂಡನ್ನು ಸದೆಬಡಿದು ಜರ್ಮನಿಗೆ ಸೇರಿಸಿಕೊಂಡು ಆಮೇಲೆ ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳನ್ನು ಪ್ರಬಲವಾಗಿ ತಡೆಗಟ್ಟಿ ಅವು ಜರ್ಮನಿಗೆ ಪ್ರವೇಶಿಸದಂತೆ ಮಾಡುವುದೇ ಜರ್ಮನಿಯ ಉದ್ದೇಶವಿದೆಯೆಂದು ಮಾ. ಗೋರಿಂಗರು ವ್ಯಕ್ತಪಡಿಸಿದ್ದಾರೆ.

ಮಿತ್ರರಾಷ್ಟ್ರಗಳೇನು ಮಾಡುತ್ತಿವೆ?

ಇಂಗ್ಲೆಂಡ್ ಮತ್ತು ಫ್ರಾನ್ಸುಗಳಿಗೆ ಇಷ್ಟರ ವರೆಗೆ ಪೋಲಂಡಿಗೆ ಯಾವ ರೀತಿಯ ಸಹಾಯವನ್ನೂ ಮಾಡಲು ಸಾಧ್ಯವಾಗಿರುವುದಿಲ್ಲ. ಫ್ರೆಂಚ್ ಸೇನೆಯು ಪಶ್ಚಿಮದಲ್ಲಿ ಜರ್ಮನಿಯ ಮೇಲೆ ಧಾಳಿ ನಡಿಸಿದೆ. ಆದರೆ ಈ ವರೆಗೆ ಸಿಜ್‌ಫ್ರಿಡ್ ಕೋಟೆಯನ್ನು ಭೇದಿಸಿ ಮುಂದೊತ್ತಿರುವುದಿಲ್ಲ. ಪಶ್ಚಿಮದಲ್ಲಿ ಈ ವರೆಗೆ ಪ್ರಬಲ ಹೋರಾಟವೇನೂ ನಡೆದಿಲ್ಲ. ಚಿಕ್ಕಪುಟ್ಟ ವಿಮಾನ ಯುದ್ಧಗಳು ನಡೆದಿವೆ. ಜರ್ಮನಿಯ ಪಶ್ಚಿಮದ ಕೋಟೆಯನ್ನು ಭೇದಿಸಿ ಭರದಿಂದ ಮುಂದೊತ್ತುವ ಪ್ರಯತ್ನವು ಒಂದೇ ಸವನೆ ನಡೆಯುತ್ತಿದೆ. ಇಂಗ್ಲೆಂಡು ಮೊದಲಾಗಿ ತನ್ನ ರಕ್ಷಣೆಯ ಏರ್ಪಾಡು ಮಾಡುವುದರಲ್ಲೇ ನಿರತವಾಗಿದೆ. ಇಂಗ್ಲೆಂಡಿನ ಮೇಲೆ ವಿಮಾನ ಧಾಳಿಯಾದರೆ ಹೆಚ್ಚಿನ ಹಾನಿಯಾಗದಂತೆ ಬ್ರಿಟಿಷ್ ವ್ಯಾಪಾರಿ ಹಡಗುಗಳಿಗೆ ಅಪಾಯವಾಗದಂತೆ ತಕ್ಕ ಏರ್ಪಾಡು ನಡಿಸುತ್ತಿದೆ. ಜರ್ಮನ್ ಹಡಗ ಮತ್ತು ಜಲಾಂತರ್ಗಾಮಿ ನಾವೆಗಳನ್ನೆಲ್ಲಾ ಸಮುದ್ರಗಳಿಂದ ಓಡಿಸಿದೆ. ಲಂಡನಿಗೆ ವಿಮಾನಧಾಳಿಯೇ ಅಸಾಧ್ಯವೆಂಬಂತೆ ರಕ್ಷಣೆಯ ವ್ಯವಸ್ಥೆ ನಡಿಸಿದೆ. 3 ವರ್ಷಗಳ ವರೆಗಣ ಯುದ್ಧಕ್ಕೆ ತಕ್ಕ ಸಿದ್ಧತೆ ಮಾಡುತ್ತಿದೆ. ಜರ್ಮನ್ ಜನತೆಯಲ್ಲಿ ನಾಝಿ ಪಾಲಿಸಿಕೆಯ ಕುರಿತು ಅತೃಪ್ತಿಯನ್ನೆಬ್ಬಿಸಲು ಬ್ರಿಟಿಷ್ ವಿಮಾನಗಳು ಮಿಲ್ಯಗಟ್ಟಲೆ ಕರಪತ್ರಗಳನ್ನು ಜರ್ಮನಿಯಲ್ಲೆಲ್ಲಾ ಚೆಲ್ಲುತ್ತಿವೆ. ಕೆಲವು ಭಾಗಗಳ ಜರ್ಮನ್ ಜನತೆಯಲ್ಲಿ ಅತೃಪ್ತಿಯೆದ್ದಂತೆ ತೋರುತ್ತದೆ.

PIGMY DEPOSIT SCHEME

Special thrift deposit and unique feature of our Bank. it will enable you to build a fortune for the rainy day. It is a fountain of happiness.

Further particulars can be had from

The Canara Industrial & Banking Syndicate Ltd.

UDIPI, (S. India).

ಸಾಹಿತ್ಯದಲ್ಲಿ ಕ್ರಾಂತಿಯಾಗಬೇಕಾದರೆ — — ಆತ್ಮನೀಚತಾ ಭಾವನೆ ಹೋಗಬೇಕು.



ಶ್ರೀ: ಕೆ ಹೈದರ್,
ಸಂಪಾದಕ—ಅಂತರಂಗ—ಉಡುಪಿ
(ಲೇಖಕರು)

ಕನ್ನಡಿಗರಲ್ಲಿ ಆತ್ಮನೀಚತಾಭಾವನೆಯು ತುಂಬಿ ಹೋಗಿದೆ ಯಾವ ಪತ್ರಿಕೆಯ ಪುಟ ಮಗುಚಿದರೂ ಅಲ್ಲಿ ಕನ್ನಡಿಗರ ದೌರ್ಭಾಗ್ಯದ ಶೋಕಗೀತೆಯು ಇದ್ದೇ ಇರುತ್ತದೆ ನಮ್ಮ ಕವಿಗಳು, ಸಾಹಿತಿಗಳು, ರಾಜಕೀಯ ಮುತ್ಸದ್ದಿಗಳು ಅಥವಾ ಸಮಾಜದ ಇನ್ನಿತರ ಧುರೀಣರು ಹಿಂದಿನ ವೈಭವದ ಕುರಿತು ಹಾಡಿ ಹೊಗಳುವುದರ ಬದಲು ಇಂದಿನವರಲ್ಲಿ ಸ್ಫೂರ್ತಿಯನ್ನುಂಟು ಮಾಡುವ ಗೋಜಿಗೆ ಹೋಗುವುದೇ ಇಲ್ಲ ನಮ್ಮ ನಾಡಿನಲ್ಲಿ ಉತ್ಸಾಹದಿಂದ ತುಂಬಿ ತುಳುಕುತ್ತಿರುವ ಯುವಕರಿಲ್ಲವೆಂದಿಲ್ಲ. ಇದ್ದಾರೆ ಆದರೆ ಅವರನ್ನು ಒಂದುಗೂಡಿಸಿ, ಉತ್ಸಾಹವನ್ನು ತುಂಬಿ ಉಪಯೋಗಿಸುವ ಸಾಮರ್ಥ್ಯವುಳ್ಳ ಧುರೀಣರು ಮಾತ್ರ ನಮ್ಮಲ್ಲಿ ಇದು ವರೆಗೂ ಕಾಣಿಸಿಕೊಳ್ಳಲಿಲ್ಲ

ಇದಕ್ಕೆ ಕಾರಣವಾದರೂ ಏನಿರಬಹುದು? ನಾವು ಈ ಕುರಿತು ಒಂದಿನಿತು ಯೋಚಿಸಿದರೆ ನಮ್ಮಲ್ಲಿ ಆತ್ಮನೀಚತಾ ಭಾವನೆ (Inferiority Complex)ಯು ದಿನೇ ದಿನೇ ಹೆಚ್ಚುತ್ತಿದೆಯೆಂದು ಹೊಳೆಯುತ್ತಿದೆ "ನಮಗೊಬ್ಬ ಪಟ್ಟಾಭಿ ಬೇಕು"ಎಂದು ಗಂಟಲಿನಿಂದಾಗಿ ನಾವು ಹೇಳತೊಡಗಿ ಬಹು ಸಮಯವಾಗಲಿಲ್ಲ ನಮ್ಮಲ್ಲಿ ಕನ್ನಡ ಪಟ್ಟಾಭಿಗಳಿಲ್ಲವೆಂದಿಲ್ಲ ಆದರೆ ಅವರನ್ನು ನಾವು ಗುರುತಿಸುವ ತೊಂದರೆಗೆ ಒಳಗಾಗಲಿಲ್ಲ. ನಾವು ಗುರುತಿಸದಿರಲು ಕಾರಣವಿದೆ ನಮ್ಮಲ್ಲಿ ಇನ್ನೂ ಪರಸ್ಪರ ಗೌರವಾದರದಿಂದ ಕಂಡುಕೊಳ್ಳುವ ಬುದ್ಧಿಯು ತಲೆದೋರಲಿಲ್ಲ ಕೇರಳದಲ್ಲಿ ಕವಿ ವಳ್ಳತ್ತೋಳರವರು ಈಗಿನಷ್ಟು ಪ್ರಸಿದ್ಧಿಗೆ ಬರಲು ಕಾರಣವೇನು? ಕೇರಳೀಯರು ಅವರ ಕವನಗಳನ್ನೂ, ಚಟುವಟಿಕೆಗಳನ್ನೂ ಗೌರವಾದರಗಳಿಂದ ಕಂಡು ಏಕಕಂಠದಿಂದ ಪ್ರಶಂಸಿಸುತ್ತಿದ್ದಾರೆ ಈ ಪ್ರಶಂಸೆಯು ಗೌರವದ ಪರಿಣಾಮವಾಗಿ ವಳ್ಳತ್ತೋಳರವರು ತಮ್ಮ ನಾಡಿನಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಲ್ಲದೆ, ಅವರ ಸಾಹಿತ್ಯವು ಭಾಷೆಗಳಿಗೆ ಭಾಷಾಂತರಿಸಲ್ಪಟ್ಟು ಅಷ್ಟು ಪ್ರಸಿದ್ಧಿಯನ್ನು ಹೊಂದಿತು ಕನ್ನಡನಾಡಿನಲ್ಲಿ ವಳ್ಳತ್ತೋಳರಂಥ ಪ್ರತಿಭಾವಂತ ಸಾಹಿತಿಗಳಿಲ್ಲವೆ? ಇದ್ದಾರೆ ಆದರೆ ಎಲ್ಲೋ ಕೆಲವು ಕನ್ನಡನಾಡಿನ ಗಣ್ಯ ಭಾಗಗಳ ಜನರು ಅವರನ್ನು

ತಮ್ಮ ನಾಡಿನ ಸಾಹಿತಿಗಳು, ತಮ್ಮವರು, ತಮ್ಮ ಗೌರವಾದರಗಳಿಗೆ ಪಾತ್ರರಾದವರೆಂದು ಭಾವಿಸುವುದಿಲ್ಲ ಈ ಪರಿಸ್ಥಿತಿಯನ್ನು ಕಂಡು ನಿರಾಶರಾದ ಸಾಹಿತಿಗಳು ಕೂಡಾ ಕಾರಣಾಂತರಗಳಿಂದ ಅಖಿಲ ಕರ್ನಾಟಕದ ಜನತೆಗೆ ತಮ್ಮ ಪರಿಚಯವನ್ನು ಮಾಡಿಕೊಳ್ಳುವುದಿಲ್ಲ ಇಂತಹ ಪರಿಸ್ಥಿತಿಯ ಮೂರ್ತಿವಂತ ಸ್ವರೂಪವೋ ಎಂಬಂತೆ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಜೀವಿಸಲಿಕ್ಕಾಗಿ ಯತ್ನಿಸುತ್ತಿದೆ ಕನ್ನಡ ಜನತೆಯ ಸರ್ವತೋಮುಖ ಪ್ರಗತಿಯು ಅವರ ಸಾಹಿತ್ಯದ ಮತ್ತು ಸಾಹಿತಿಗಳ ಮೇಲೆ ಹೊಂದಿಕೊಂಡಿದೆಯೆಂಬುದನ್ನು ನಮ್ಮ ಪರಿಷತ್ತು ಮರೆತುಬಿಟ್ಟಂತಿದೆ. ಯಾವ ರಾಷ್ಟ್ರದ ಚರಿತ್ರೆಯನ್ನು ನೋಡಿದರೂ ಅಲ್ಲಿಯ ಸಾಹಿತಿಗಳು ಯಾಗೂ ಚಿಂತಕರು ಅದರ ರಚನೆಯಲ್ಲಿ ಪ್ರಾಮುಖ್ಯ ಭಾಗವಹಿಸಿದ್ದಾರೆಂದು ತಿಳಿಯುತ್ತದೆ ಇದು ನಮ್ಮ ನಾಡಿಗೂ ಅನ್ವಯಿಸುವುದಿಲ್ಲವೆ? ಅನ್ವಯಿಸುತ್ತದೆ. ಆದರೆ ನಮ್ಮ ನಾಡಿನ ಸಾಹಿತಿಗಳು ಮಾತ್ರ ಈ ವಿಚಾರವನ್ನು ಮರೆತಿದ್ದಾರೆ ಸಾಹಿತ್ಯ ಪರಿಷತ್ತು ಸಾಮಾನ್ಯ ಜನತೆಯ ಬಳಿ ಸೇರದೆ ಕೇವಲ ರಾಜಾಶ್ರಯದ ಬಲದಿಂದಲೇ ಜೀವಿಸಲು ಪ್ರಯತ್ನಿಸುತ್ತಿದೆ "ನಮಗೆ ಇನ್ನೆಷ್ಟು ಸಹಾಯವನ್ನು ಘನವಂತರಾದ.. . ಅವರು ಕೊಡಬೇಕಾಗಿ ನಾವು ಶಿರಮಣಿದು ಬೇಡಿಕೊಳ್ಳುತ್ತೇವೆ" ಯೆಂದು ನಮ್ಮ ಸಾಹಿತಿಗಳು ಬೇಡಲಾರಂಭಿಸಿದ್ದಾರೆ. ಜನತೆಯು ಬೆಂಬಲ ಪಡೆಯಲು ಪ್ರಯತ್ನಿಸಿದರೆ ರಾಜಸ್ಥಾನದಿಂದ ಬಿಸಾಡಬಹುದಾದ ರೊಟ್ಟಿ ಚೂರುಗಳಿಂದ ಸಾವಿರಪಾಲು ಹೆಚ್ಚಿನ ಬೆಂಬಲವನ್ನು ಕೊಡಲು ದರಿದ್ರಾವಸ್ಥೆಯಲ್ಲಿದ್ದರೂ ಜನತೆಯು ಸಿದ್ಧವಾಗಿದೆ ಆದರೆ ನಮ್ಮ ಸಾಹಿತಿಗಳು ಜನತೆಗೇನು ಮಾಡಿದ್ದಾರೆ? ಅ

ನಾಡಿನ ದುರ್ಬಲತೆಗೆ ನಿರ್ಜೀವ ಸಾಹಿತ್ಯವೇ ಕಾರಣ.

(ಜಯಂತಿ ಸಂಚಿಕೆಗಾಗಿ ಬಂದುದು)

ವರಲ್ಲಿ ಬೇರೂರಿಕೊಂಡಿರುವ ನಿರಕ್ಷರತೆಯನ್ನು ಕಡಿಮೆ ಮಾಡುವ್ಯಸೂರುಗೊಳಿಸಲು ನಮ್ಮ ಘನ ಸಾಹಿತಿಗಳು ಪ್ರಯತ್ನಿಸಿದ್ದುಂಟೇ? ತಮ್ಮ ಕೃತಿಗಳನ್ನು ಆಸ್ಥಾನ ಇಲ್ಲವೆ ಆಸ್ಥಾನದ ಪರಿಚಾರಕರ ಮುಂದಿಟ್ಟು ಪ್ರಶಂಸೆಯನ್ನು ಪಡೆದುದಲ್ಲದೆ, ಜನತೆಯ ಮುಂದಿಟ್ಟು ಅವರ ಏಕಕಂಠದ ಪ್ರಶಂಸೆಗೆ ಪಾತ್ರವಾದುದುಂಟೆ? ಈ ಪ್ರಶ್ನೆಗೆ ಧೈರ್ಯದಿಂದ ಉತ್ತರ ಕೊಡುವ ಒಬ್ಬನೇ ಒಬ್ಬ ಸಾಹಿತಿಯು ಸಮಗ್ರ ಕರ್ನಾಟಕದಲ್ಲಿಲ್ಲ ಪರಂತು, ಸಾಹಿತಿಗಳು ತಮ್ಮದೇ ಒಂದು ಜಾತಿಯನ್ನು ಮಾಡಿಕೊಂಡಿದ್ದಾರೆ ಜನಜೀವನದ ದರ್ಪಣವಂತಿರಬೇಕಾದ ಸಾಹಿತಿಗಳು ಪೂಜ್ಯಪ್ರೇತಗಳಂತೆ ಸಾಮಾನ್ಯ ಜನತೆಗೆ ಕಾಣಿಸಿಗದವರಾಗಿದ್ದಾರೆ ಅನ್ಯೋನ್ಯ ಸಹಾಯದಿಂದ ಒಟ್ಟುಗೂಡಿ ಕೆಲಸಮಾಡತಕ್ಕ ಒಂದು ಸಭೆಯನ್ನು ಸರಕಾರದ ಸಂಬಂಧವಿಲ್ಲದೆ ನಿರ್ಮಿಸಬೇಕು" (ಕ. ಪತ್ರಿಕೆ ೧೯೧೬, ಎಪ್ರಿಲ್) ಎಂಬ "ಘನವಾದ ಉದ್ದೇಶ"ವನ್ನಿಟ್ಟುಕೊಂಡರೂ ಪರಿಷತ್ತಿನವರು ಈ ಇಪ್ಪತ್ತನೇ ಶತಮಾನದಲ್ಲಿ ಪೆನ್ಶನಂತರದ ರಾಜ ಮಹಾರಾಜರನ್ನು ಪ್ರಶಂಸಿಸುವ ಭಟ್ಟಂಗಿಗಳಾಗಿರುವುದರಲ್ಲಿ ಸಮಾಧಾನ ಹೊಂದಿದ್ದಾರೆ ಇಲ್ಲದಿದ್ದರೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಈಗಿನಂತೆ ಮೂರೇ ದಿನದ ಗೊಂಬೆಯಾಗಿ ವರ್ಷದ ಮಿಕ್ಕುಳಿದ ಅವಧಿಯಲ್ಲಿ ಕನ್ನಡದ ಪ್ರಗತಿಗೆ ದುಡಿಯದೆ ಸುಮ್ಮನಿರುವ ಪ್ರಸಂಗವುಂಟಾಗುತ್ತಿತ್ತೆ? "ಉಪಾಧ್ಯಕ್ಷರು ಬೆಂಗಳೂರಿನವರೇ ಆಗಬೇಕು

ಎಂಬ ಕೊಳಕು ನಿಯಮಕ್ಕೆ ಘನವಾದ ಉದ್ದೇಶವುಳ್ಳ ಸಾಹಿತ್ಯ ಪರಿಷತ್ತಿನ ಘಟನೆ ಮತ್ತು ನಿಯಮಾವಳಿಯಲ್ಲಿ ಎಡೆ ದೊರಕುತ್ತಿತ್ತೆ? ಕನ್ನಡ ಸಾಹಿತ್ಯ ಪರಿಷತ್ತು ಕೆಲವರ ಕೈ ಗೊಂಬೆಯಾಗಿ ಉಳಿಯುತ್ತಿತ್ತೇ? ಈಗ ಸಾಹಿತ್ಯ ಪರಿಷತ್ತಿಗೆ ಅಖಿಲ ಕರ್ನಾಟಕ ಸ್ವರೂಪವಿರುವುದು ಹೆಸರಿಗೆ ಮಾತ್ರ ಈ ವಿಚಿತ್ರ ಮನೋವೃತ್ತಿಯಿಂದಾಗಿ ನಮ್ಮ ಸಾಹಿತಿಗಳು ಅಖಿಲ ಕರ್ನಾಟಕದ ನಿಜವಾದ ಮನ್ನಣೆಗೆ ಪಾತ್ರರಾಗುವುದಿಲ್ಲ ಹೀಗಿರುವುದರಿಂದಲೇ ಕನ್ನಡ ನಾಡು ಹಿಂದುಳಿದಿದೆ ಕನ್ನಡ ನಾಡಿಗೆ ದುರೀಣರಿಲ್ಲ, ನಮಗೆ ಪಟ್ಟಾಭಿ ಬೇಕು, ರವೀಂದ್ರರು ಬೇಕು ಎಂಬಿವೇ ಮೊದಲಾದ ಕೂಗು ನಮಗೆ ಕೇಳುವುದರ ರಹಸ್ಯವಾಗಿದೆ ಈ ವಿಚಾರವು ಕನ್ನಡ ನಾಡಿನ ರಾಜಕೀಯ ರಂಗಕ್ಕೂ ಸಮನ್ವಯಿಸುತ್ತದೆ.

ಕರ್ನಾಟಕ ಏಕೀಕರಣ ಪ್ರಶ್ನೆಯು ಮುಂದೆ ಬಂದಿರುವ ಈ ಕಾಲದಲ್ಲಿ ಸಾಹಿತಿಗಳು ನಾಡಿನ ಜನಜೀವನದ ನಿರ್ಭಯ ಪ್ರತಿನಿಧಿಗಳು ಮುಂದೆ ಒಂದು ದುಡಿಯಬೇಕಿತ್ತು ಆದೆಷ್ಟು ಮಂದಿ ಸಾಹಿತಿಗಳು ಕರ್ನಾಟಕದಲ್ಲಿ ಏಕೀಕರಣಕ್ಕಾಗಿ ಧೈರ್ಯದಿಂದ ಮುಂದೆ ಬಂದಿದ್ದಾರೆ ಅಲ್ಲೊಬ್ಬ ಕೂಡುವ ತುಂಡು ಧುರೀಣ, ಇಲ್ಲೊಬ್ಬ ನಿವೃತ್ತಿ ಹೊಂದಿದ ಸರಕಾರೀ ನೌಕರ ಇಂಥವರಲ್ಲದ ಇತರರು ತಮ್ಮ ನೌಕರಿಗೆ ಧಕ್ಕೆ ಬರಬಹುದೆಂಬ ಭಯದಿಂದ "ಮಾನಾಗ್ರಹ"ದಲ್ಲಿ ನಿರತರಾಗಿದ್ದಾರೆ. ಇದಕ್ಕೆ ನಮ್ಮಲ್ಲಿ ಬೇರೂರಿ ರಕ್ತಗತವಾಗಿರುವ ಆತ್ಮನೀಚತಾಭಾವನೆಯೇ ಕಾರಣ, ಹಿಂದಿನ ಕನ್ನಡಿಗರು ಮಾತ್ರ ಧೀರರಲ್ಲ, ಅವರಾನಂತರ ತಲೆದೋರಿದ ನಾವು ಕೂಡಾ ಧೀರತ್ವದಲ್ಲಿ ಹಿಂದುಳಿದವರಲ್ಲವೆಂಬುದನ್ನು ಆಂಧ್ರರು ಪ್ರಾಂತೀಯಕರಣಕ್ಕಾಗಿ ಆಂಧ್ರರು ನಡೆಸುವಂತೆ ನಾವು ಕೂಡಾ ಚಳವಳವನ್ನು ನಡೆಸಬಲ್ಲೆವೆಂಬುದನ್ನು ನಮ್ಮ ಧುರೀಣರು ಮರೆಯದಿರಲಿ ಸಾಹಿತಿಗಳು ತಮ್ಮ "ಸಾಹಿತ್ಯ ಜಾತಿ"ಯ ಮೇಲ್ಮೆಯನ್ನು ಮರೆತು ಘನ ಹೊಂದಿದವರ ಅಸಂತೋಷಕ್ಕೆ ಒಳಗಾಗುವೆನೆಂಬ ಭಯವನ್ನು ತೂರಿದು ಜೀವಂತ ಸಾಹಿತ್ಯಕ್ಕೆ ಅವಶ್ಯಕವಾದ ಬೆಂಬಲವನ್ನು ಕೊಡಲು ಶಕ್ತರಾದ ಜನತೆಯ ಮಧ್ಯಕ್ಕೆ ಧುಮುಕಲಿ. ಅವರ ಮಧ್ಯದಲ್ಲಿದ್ದುಕೊಂಡು ದುಡಿದು, ಅವರಲ್ಲಿ ಕನ್ನಡದ ಮಮತೆಯನ್ನುಂಟುಮಾಡಲಿ. ಕನ್ನಡ ಕವಿಗಳ ಹಾಡುಗಳು ಅವರ ದುಡಿಮೆಯ ಹಾಡುಗಳಾಗಲಿ. ಸಾಹಿತಿಗಳ ಪುಸ್ತಕಗಳನ್ನೋದುವ ಶಕ್ತಿಯು ಜನತೆಯಲ್ಲುಂಟಾಗಲಿ. ಇಷ್ಟಾದರೆ "ಕರ್ನಾಟಕ ಏಕೀಕರಣ" ಪ್ರಶ್ನೆಯು ದೊಡ್ಡ ವಿಚಾರವೇ ಅಲ್ಲ

೧೯೧೩ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳವಾದ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ ಆರ್ ಕೆ ಸೇಟ್ ಬಿಲ್ಡಿಂಗ್,
ಮಿಶ್ಯನ್‌ಸ್ಕೂಲ್ ರೋಡು

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ವಿಶ್ವೇಶ್ವರ
ಪುರ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

1914ರ ಮತ್ತು ಇಂದಿನ ಜರ್ಮನಿ.

ಹರ್ ಹಿಟ್ಲರರಿಗೆ ವಿಜಯವು ಸಾಧ್ಯವೇ?

ದೀರ್ಘ ಯುದ್ಧದಿಂದ ಜರ್ಮನಿಯ ಪತನ.

ಶೀಘ್ರ ಫಲಿತಾಂಶದಿಂದ ವಿಜಯ ಆದರೆ ಇದು ಎಷ್ಟುಮಟ್ಟಿಗೆ ಸಾಧ್ಯ

ವಿಜಯ ಅಥವಾ ಆತ್ಮಹತ್ಯೆಯೇ ಹಿಟ್ಲರನ ದೀಕ್ಷೆ.

(ಪ್ರಸಿದ್ಧ ಅಂತರಾಷ್ಟ್ರೀಯ ಸಮರಜ್ಞ ಕೆಪ್ಟನ್ ಲ್ಯೊಡೆನ್ ಬ್ರೌನರಿಂದ)

ಯಾರಾದರೊಬ್ಬ ಹುಚ್ಚ, ಧರ್ಮಾಂಧ ಅಥವಾ ಅಧ್ಯಾತ್ಮವಾದಿಯು ಯುದ್ಧವನ್ನು ಆರಂಭಿಸಬಹುದು ಆದರೆ ಅದರಲ್ಲಿ ವಿಜಯಹೊಂದಲು ಅಸಾಧಾರಣ ಪ್ರತಿಭೆ ಮತ್ತು ಜಾಣ್ಮೆ ಬೇಕು. ಯುದ್ಧವೇ ಜೀವಾಳವಾದ ಲೋಕ ಪ್ರಖ್ಯಾತ ಸೇನಾನಿಯೆನಿಸಿದ ನೆಪೋಲಿಯಾನನ ಗತಿ ಯಾದರೂ ಕಡೆಗೇನಾಯಿತು? ತಮ್ಮ ಜನಾಂಗವನ್ನು ಯಾಂತ್ರಿಕ ಶಿಸ್ತು ನಿಯಮ ಮತ್ತು ತರಬೇತಿಯಿಂದ ಸಜ್ಜುಗೊಳಿಸಿ ದಾಕ್ಷಿಣ ಫೆಸಿಸ್ಟರಿಗೆ ಪ್ರತ್ಯಕ್ಷ ಸಮರಾಂಗಣದಲ್ಲಿ ವಿಜಯ ಸಾಧಿಸಲು ಸಾಧ್ಯವಿಲ್ಲ. ಪ್ರಚಂಡ ಪೋಲೀಸ್ ಫೌಜಿನ ದಬ್ಬಾಳಿಕೆಯಿಂದ ಜನತೆಯನ್ನು ದಬಾಯಿಸಿ, "ನಾವು ಅಜೇಯರು ನಮ್ಮ ವೈರಿಗಳು ಸತ್ತು ನಿರ್ನಾಮವಾಗಿರುವರು" ಎಂದು ಕೂಗಿದಾಕ್ಷಣ ಯುದ್ಧದಲ್ಲಿ ಗೆದ್ದಂತಾಗಲಿಲ್ಲ ಒಮ್ಮೆ ಯುದ್ಧ ಆರಂಭವಾಯಿತೆಂದರೆ ನಿಜಪರಿಸ್ಥಿತಿಯು ಎದ್ದು ಕಾಣುವುದು ಇದೀಗ ಹಿಟ್ಲರ್ ಮತ್ತು ನಾಝಿ ಜರ್ಮನಿಯ ಗರ್ಜನೆ ತರ್ಜನೆಗಳ ನಿಜವಾದ ಪರೀಕ್ಷಾ ಕಾಲ

ಕಳೆದ 4 ವರ್ಷಗಳಿಂದ ಹಿಟ್ಲರನು ಕೇವಲ ಸೇನಾಸಿದ್ಧತೆಯ ಬೆದರಿಕೆ ಹಾಕಿ ಪ್ರಬಲ ರಾಷ್ಟ್ರಗಳ ಕಣ್ಣಿಗೆ ಮಣ್ಣು ಹಾಕಿ ದುರ್ಬಲ ವೈರಿಗಳ ಮೇಲೆ ಅಕಸ್ಮಾತ್ತಾಗಿ ಏರಿಹೋಗಿ ಅನಾಯಾಸವಾಗಿ ತನ್ನ ಉದ್ದೇಶ ಸಾಧಿಸಿರುವನು. ಅದೇ ರೀತಿ ಡಾನ್ಜಿಗನ್ನು ನುಂಗುವ ಸ್ಕೀಮು ಕೂಡಾ ನಡೆದಿತ್ತು. ೩ ದಿವಸಗಳೊಳಗೆ ತನ್ನ ಬದ್ಧ ವೈರಿ ಸೋವಿಯಟ್ ರಷ್ಯದೊಡನೆ ಒಪ್ಪಂದಮಾಡಿ ಇಂಗ್ಲೆಂಡು ಮತ್ತು ಫ್ರಾನ್ಸುಗಳನ್ನು ದಂಗುಗೊಳಿಸಿದುದಾದರೂ ಇದೇ ಉದ್ದೇಶದಿಂದ. ಕಟ್ಟಕಡೆಗೆ ಪೋಲಂಡಿಗಾಗಿ ಫ್ರಾನ್ಸು ಮತ್ತು ಇಂಗ್ಲೆಂಡುಗಳು ಯುದ್ಧಕ್ಕಿಳಿಯಲಾರವೆಂದು ಜರ್ಮನಿಯ ವಿದೇಶ ಮಂತ್ರಿ ಹರ್ ವಾನ್ ರಿಬಂಟ್ರಪನ ಭರವಸೆಯಿದ್ದಿತು. ರಷ್ಯವು ತಮ್ಮ ಕೈಬಿಟ್ಟನಂತರ ಅದು ಖಂಡಿತವೆಂದೇ ರಿಬಂಟ್ರಫರಿಗೆ ದೃಢವಿದ್ದಿತು ಕೂಡಲೆ ಪೋಲಂಡಿನ ಮೇಲೆ ಯುದ್ಧ ಹೂಡಲು ಮುಖ್ಯ ಕಾರಣವೆಂದರೆ, ಫ್ರಾನ್ಸು ಮತ್ತು ಇಂಗ್ಲಂಡುಗಳನ್ನು ದಿಗಿಲಿನಿಂದ ಗಲಿಬಿಲಿಗೊಳಿಸಿ ಕಾರ್ಯ ಸಾಧಿಸಲಿಕ್ಕಾಗಿ. ಆದರೆ ಮದ್ಯ ವ್ಯಾಪಾರಿ ರಿಬಂಟ್ರಫನು ತಪ್ಪಿಬಿದ್ದನು. ಅನುಭವಶಾಲಿಗಳಾದ ಹಳೆಯ ಜರ್ಮನ್ ಸೇನಾನಿಗಳ ಅಂಜಿಕೆಯು ಸರಿಯಾಯಿತು.

ಈಗ ಮಹತ್ತಾದ ಸಂಗ್ರಾಮವು ಜರ್ಮನಿಯನ್ನು ಮುಕ್ಕಲು ಬಾಯ್ದೆರೆದು ಬಂದಿರುವುದು ಮುಂದಿನ ಗತಿಯಾದರೂ ಏನು? ವಾಸ್ತವವಾದರೆ ನಾಝಿ ಜರ್ಮನಿಯು ಯುದ್ಧಕ್ಕೆ ಸಿದ್ಧವಾಗಿರುವುದಿಲ್ಲ ಅದರ ಸಾಂಪತ್ತಿಕ ಸ್ಥಿತಿಯು ಏನೇನೂ ನೆಟ್ಟಗಿಲ್ಲ ಹಿಟ್ಲರನ ಇಷ್ಟರ ವರೆಗಿನ ವಿಜಯಗಳೆಂದರೆ ಕೇವಲ ರಾಜಕೀಯ ಧಾಳಿ ಮಾತ್ರ ಹೋರಾಟವೆಂಬುದು ಎಲ್ಲಿಯೂ ನಡೆದಿಲ್ಲ ಈಗ ನೋಡಬೇಕು ಅವನ ಪೌರುಷ, ನಾಝಿಗಳ ಪರಾಕ್ರಮ

ಜರ್ಮನರು ಈಗ ೬ ವರ್ಷಗಳಲ್ಲಿ ಮಾತ್ರ ಸರಿಯಾಗಿ ಯುದ್ಧ ತರಬೇತಿ ಪಡೆದರು. ತಾತ್ಕಾಲಿಕ ಯುದ್ಧಕ್ಕಾದರೆ ಅನುಸಾಕು ದೀರ್ಘಕಾಲದ ಯುದ್ಧಕ್ಕೆಲ್ಲಿ ಸಾಕೆದು? ಪ್ರಥಮ ಧಾಳಿಯು ಪಟ್ಟಿಗೇನೇ ಮುಗ್ಗರಿಸಬಹುದಗು. 914ರಲ್ಲಿ ಜರ್ಮನರು ಒಮ್ಮೆಯೇ ಬೆಲಿಜಿಯಮಿನ ಮೇಲೇರಿ ಹೋದಂತೆ ಈಗಲೂ ಪೋಲೆಂಡಿನ ಮೇಲೆ ಧಾವಿಸಿ ತಾತ್ಕಾಲಿಕ ವಿಜಯ ಪಡೆಯಬಹುದು. ಆದರೆ ಪ್ರಚಂಡ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯು ಪಶ್ಚಿಮದಲ್ಲಿ ಜರ್ಮನಿಯ ಮೇಲೆ ಆಕ್ರಮಿಸುವಾಗ ದೀರ್ಘಕಾಲ ತಡೆಯುವ ಶಕ್ತಿ ಇದೆಯೇ ಜರ್ಮನ್ ಸೇನೆಗೆ? ಆಗ ಪೋಲಂಡೂ ಇಲ್ಲ, ಜರ್ಮನಿಯೂ ಇಲ್ಲವೆಂಬಂತಾಗದಿರುವುದೇ?

ಇಂದು ಯುದ್ಧ ನಡಿಸಲು 1914ರ ಗಿಂತ ಎಷ್ಟೋ ಹೆಚ್ಚಿನ ಸಾಮಗ್ರಿ ಸಿದ್ಧತೆ ಬೇಕು. ಹೊಸ ಯುದ್ಧ ಯಂತ್ರಗಳಿಗೂ ತೀವ್ರ ಸಿಡಿಯುವ ತೋಪುಗಳಿಗೂ ಹೆಚ್ಚಿನ ಎಣ್ಣೆ, ಮದ್ದು ಗುಂಡು, ರಬ್ಬರ್ ಮೊದಲಾದ ಪದಾರ್ಥಬೇಕು ಒಂದು ವಿಮಾನದಲ್ಲಿ ಹಲವು ಮಿಶನ್ ತೋಪುಗಳಿವೆ ಈ ತೋಪುಗಳು ಮಿನಿಟಿಗೆ ಹಲವು ಸಲ ಗುಂಡು ಹಾರಿಸುತ್ತವೆ ಎರಡು ಮೂರು ಮಿನಿಟುಗಳೊಳಗೆ ಒಮ್ಮೆ ವಿಮಾನದಲ್ಲಿದ್ದ ಮದ್ದು ಗುಂಡು ಖರ್ಚಾಗುತ್ತದೆ ಪುನಃ ತುಂಬಿಸಲು ಅದು ಕೆಳಗಿಳಿಯ ಬೇಕಾಗುತ್ತದೆ ಆದುದರಿಂದ ಯಾವಾಗಲೂ ಬೇಕಷ್ಟು ಮದ್ದು ಗುಂಡು ಸಂಗ್ರಹ ಬೇಕೇಬೇಕು ಪೆಟ್ರೋಲ್ ಸಂಗ್ರಹವು ಎಷ್ಟಿದ್ದರೂ ಸಾಲದು. ಜರ್ಮನಿಯಲ್ಲಿ ಸಾಕಷ್ಟು ಪೆಟ್ರೋಲ್ ಸರಬರಾಯಿ ಇಲ್ಲ

ಯಾಂತ್ರಿಕ ಉದ್ಯಮಗಳಲ್ಲಿ ಹೆಚ್ಚಿನ ಸಾಮಾನುಗಳೇನೂ ಸಂಗ್ರಹಿಸಲ್ಪಟ್ಟಿರುವುದಿಲ್ಲ ಇದ್ದವುಕ್ಕೆಲ್ಲ ಇಷ್ಟರಲ್ಲೇ ಖರ್ಚಾಗಿ ಹೋಗಿದ ಉದ್ಯಾಪನಗಳ ಸುತ್ತಲಿನ ಕಬ್ಬಿಣದ ಆವರಣಗಳು ತೆಗೆಯಲ್ಪಟ್ಟಿವೆ. ಜರ್ಮನಿಯ ಸ್ವಾವಲಂಬಿ ಚತುರ್ವಾರ್ಷಿಕ ಯೋಜನೆಯು ಮಧ್ಯದಲ್ಲೇ ನಿಂತು ಹೋಗಿದೆ ಆಸ್ಟ್ರಿಯದ ಕಬ್ಬಿಣದ ಪದರು, ಜೆಕೋಸ್ಲೊವೇಕಿಯದ ಯುದ್ಧ ಕಾರ್ಖಾನೆ, ಪ್ರಾಯಶಃ ರುಮೇನಿಯದ ಪೆಟ್ರೋಲ್ ಮೊದಲಾದವುಗಳಿಂದ ಇನ್ನೆರಡು ವರ್ಷಗಳ ನಂತರವಾದರೆ ಜರ್ಮನಿಯು ಸ್ವಾವಲಂಬಿಯಾಗಬಹುದು. ಅದು ಹಂಗೇರಿ ಮತ್ತು ಯುಗೋಸ್ಲಾವಿಯಾಗಳಿಂದಲೂ ರಷ್ಯದಿಂದಲೂ ಬೇಕಾದ ಆಹಾರ ಮತ್ತು ಇತರ ಸಾಮಾನುಗಳನ್ನು ಪಡೆಯಬಹುದು ಆದರೆ ಹಣವೆಲ್ಲಿಂದ ಬರಬೇಕು?

ಆರ್ಥಿಕ ದೃಷ್ಟಿಯಿಂದ ಇಂದಿನ ಜರ್ಮನಿಯು 1914ರ ಜರ್ಮನಿಯ ಛಾಯೆ ಮಾತ್ರ. 10 ವರ್ಷಗಳ ಸಂಪದಭಿವೃದ್ಧಿ ಮತ್ತು ವ್ಯಾಪಾರೋದ್ಯಮ ವ್ಯಾಸನಯ ಧನ ಸಂಗ್ರಹವಿದ್ದಾಗ ಅಪಾರ ಚಿನ್ನವನ್ನು ಸಂಗ್ರಹಿಸಿಕೊಂಡಿತ್ತು. ಸುಮಾರು 15,00000,0000000 ಮಾರ್ಕ್ಸಗಳಷ್ಟರ ಬೆಳ್ಳಿ ಮತ್ತು ಚಿನ್ನ ಸಂಗ್ರಹವಿದ್ದಾಗ ಜರ್ಮನ್ ಸರಕಾರದ ಬ್ಯಾಂಕಿನಲ್ಲಿ. ಈಗ ಇರುವುದು 2,500,000 ಮಾರ್ಕ್ಸ ಗಳಷ್ಟು ಚಿನ್ನ ಮಾತ್ರ ಅದು ಕೂಡ ಆಸ್ಟ್ರಿಯದ ಬ್ಯಾಂಕಿನಲ್ಲಿ ಸಂಗ್ರಹವಿದ್ದದ್ದು. ಇದು ಹೊರತು 1914ರಂತೆ ಚಿನ್ನದ ನಾಣ್ಯಗಳ ಚಲಾವಣೆ ಈಗಿರುವುದಿಲ್ಲ ಈಗ ನೋಟುಗಳೇ ತುಂಬಿ ಹೋಗಿವೆ. ಯುದ್ಧ ಆರಂಭವಾದೊಡನೆಯೆ ಜರ್ಮನ್ ಸರಕಾರವು 5 ಮಾರ್ಕ್ಸಗಳ ನೋಟುಗಳನ್ನು ಬಹಳವಾಗಿ ಛಾಪಿಸಿ ಚಲಾವಣೆಗೆ ತಂದಿದೆ

1914-18ರ ಯುದ್ಧವು ದೀರ್ಘವಾಗಿ ನಡೆಯಲು, ಜರ್ಮನ್ ಜನತೆಯು ತಮ್ಮಲ್ಲಿದ್ದ ಚಿನ್ನದ ನಾಣ್ಯ ಮತ್ತು ಆಭರಣಾದಿಗಳನ್ನು ಕೊಟ್ಟದು ಮುಖ್ಯವಾದೊಂದು ಕಾರಣ ವಿದೇಶೀ ಬದ್ರತೆಗಳ ಮೇಲೆ ಕೂಡಾ ಈಗ ಜರ್ಮನ್ ಸಂಪತ್ತೇನೂ ಇರುವುದಿಲ್ಲ 1932ರಿಂದ ನಾಝಿಗಳ ವ್ಯಯವು ಅದನ್ನೆಲ್ಲಾ ನುಂಗಿಬಿಟ್ಟಿವೆ ಆದುದರಿಂದ ಜರ್ಮನಿಗೆ ಯುದ್ಧಮಾಡಲು ಹಣವಾದರೂ ಎಲ್ಲಿಂದ? ಚಿನ್ನ ಸಂಗ್ರಹವಿಲ್ಲದೆ ನೋಟುಗಳನ್ನು ಛಾಪಿಸಿ ಚಲಾವಣೆ ಮಾಡಿದರೆ ಬೆಲೆ ಏನುಳಿಯಿತು? ಯುದ್ಧೋಪಕರಣ ಸಿದ್ಧತೆಯ ಕಾರ್ಯಕ್ರಮವು ಒಕಾಸುರನಂತೆ ಜರ್ಮನಿಯ ಸಂಪತ್ತನ್ನೆಲ್ಲಾ ಇಷ್ಟರಲ್ಲೇ ನುಂಗಿ ನೀರುಕುಡಿದಿರುವುದು

ಇಟೆಲಿಯಿಂದ ಜರ್ಮನಿಗೆ ಯಾವ ರೀತಿಯ ಸಹಾಯವೂ ದೊರೆಯಲಾರದು. ಅದಕ್ಕೇನೇ ಆರ್ಥಿಕ ಮತ್ತು ಸಾಂಪತ್ತಿಕ ಸಹಾಯ ಬೇಕಾಗಿದೆ ಅಂದಮೇಲೆ ಜರ್ಮನಿಯು ಗೆಲ್ಲುವುದಾದರೂ ಹೇಗೆ? ಹಗೆಕೊಡದ ಬಾಗಿಲ ಬಳಿ ಬೇಕಷ್ಟು ಆಹಾರ ಸಾಮಾಗ್ರಿ ಮತ್ತು ಪೆಟ್ರೋಲ್, ಖುಕ್ಕ ನೊದಲಾದವುಗಳು ದೊರೆಯುವುದಾದರೆ ಜರ್ಮನಿಯು ಜಯಹೊಂದಬಹುದು. ಇಲ್ಲವಾದರೆ ವಿದ್ಯುದ್ವೇಗದಿಂದ ಅದು ತನ್ನ ವೈರಿಗಳನ್ನು ಒಮ್ಮೆಯೇ ಗದ್ದುಬಿಡಬೇಕು. ಇಂಗ್ಲೆಂಡು ಮತ್ತು ಫ್ರಾನ್ಸಗಳು ಜರ್ಮನಿಯ ಪಶ್ಚಿಮ ರಣರಂಗದಲ್ಲಿ ಯುದ್ಧವನ್ನು ಇಷ್ಟರಲ್ಲೇ ಆರಂಭಿಸಿರುವುದರಿಂದ ಶೀಘ್ರ ವಿಜಯವು ಸಾಧ್ಯವಿಲ್ಲ ಆದೀಗ ಪಶ್ಚಿಮದ ಭರದಿಂದ ಸೇನೆ ಕಳುಹಿಸಿ ಆತ್ಮರಕ್ಷಣೆಗೆ ತೊಡಗಬೇಕಾಗಿದೆ ಆಗ ಪೋಲಂಡಿನ ಮೇಲಿನ ಅವರ ಒತ್ತಾಟ ಕಡಿಮೆಯಾಗುವುದು ಪೋಲರೂ ಸರಿಯಾದ ಸೇನಾಸಿದ್ಧತೆ ಮಾಡಿ ಜರ್ಮನರನ್ನು ಹಿಂದಕ್ಕಟ್ಟಬಹುದು

1914ರ ಯುದ್ಧದಲ್ಲಿ ಅಜ್ಞಾತ ಸೈನಿಕನಾಗಿ ಹೋರಾಡಿ ಅದೃಷ್ಟವಶಾಗಿ ಪ್ರಾಣರಕ್ಷಣೆ ಪಡೆದು ಗಾರೆಯಾಕಿಕೊಂಡಿದ್ದ ಸಾಮಾನ್ಯ ಕೆಲಸಗಾರ ಹರ್ ಹಿಟ್ಲರನು ಇಂದು ಜರ್ಮನಿಯ ಏಕಾಂತ ಮಾಂತ್ರಿಕನಾಗಿ ಇನ್ನೊಂದು ಲೋಕ ಯುದ್ಧದ ದಾವಾಗ್ನಿಯನ್ನು ಇಡೀ ಜಗತ್ತಿಗೆ ಹಚ್ಚಿಸಿರುವನು ಮಂಗ್ನರ ಗಾಯನ ಮರುಳನೂ ಶಾಕಾಹಾರಿಯೂ ಅವಿವಾಹಿತನೂ ಆಗಿದ್ದವನ್ನೆ ಕುಟುಂಬ, ಹೆಂಡತಿ ಮಕ್ಕಳ ಗೊಡವೆಯಿಲ್ಲದ ಹಿಟ್ಲರನು ಧನ ಗೌರವಾದಿಗಳಿಂತ ತನ್ನ ಪಂಥಕ್ಕಾಗಿ ತನ್ನ ಜನಾಂಗವನ್ನು ಮಾತ್ರವಲ್ಲದೆ ಇಡೀ ಲೋಕವನ್ನೇ ಬಲಿಕೂಡಲು ಸಿದ್ಧನಿರುವನು ಅವನು ಕಟ್ಟಿದ ಜರ್ಮನ್ ಜನಾಂಗದೊಂದಿಗೆ ಸ್ಥಾಪಿಸಿದ ನಾಝಿ ಆಳ್ವಿಕೆಯೊಂದಿಗೆ ತಾವನೂ ನಾಶಹೊಂದುವನು.

ನಾಝಿಗಳು ಜರ್ಮನಿಯನ್ನು ಮಹಾ ಸಮರ ಸಾಗರಕ್ಕಿಳಿಸಿರುವರು. ಅವರು ಮುಳುಗಿದರೆ ಜರ್ಮನಿಯೂ ಮುಳುಗುವುದು. ಅವರೇ ಆಧುನಿಕ ಜರ್ಮನಿ ಹಿಟ್ಲರನೇ ಅವರ ದೇವರು ಇದೀಗ ಜರ್ಮನಿಯ ಗಂಡಾಂತರ 'ರೆನ್ನಿಮ್ಮ ಡೀಲು' ಎಂಬ ಪ್ರಚಂಡ ಸಾಂಪತ್ತಿಕ ಪ್ರಯೋಗದ ಜುಗಾರಾಡಿ ಸಮಾಜವಾದೊಂದಿಗೆ ಅಮೇರಿಕದ ಪ್ರೆಸಿಡೆಂಟ್ ರೋಸ್‌ವೆಲ್ಟರು ಬಾಗಿಲ್ಲ

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE

ESTD 1906
CANARA BANK
LIMITED

ಯುದ್ಧದಲ್ಲಿ ತೊಡಗಿರುವ ರಾಷ್ಟ್ರಗಳ ಸೇನಾಬಲ.

ಬ್ರಿಟಿಷ್ ನೌಕಾಪಡೆಯ ಅಪ್ರತಿಮತೆ.

ಫ್ರೆಂಚ್ ಸೇನೆಯ ಉತ್ಕೃಷ್ಟತೆ

ಜರ್ಮನರ ಪ್ರಚಂಡ ವಿಮಾನ ಪಡೆ.

ಇಂದೀಗ ಎರಡನೇ ಲೋಕಯುದ್ಧದ ಕಾಡ್ಗಿಚ್ಚಿದ್ದಿರುವುದು. ಈನು ಕಳೆದ 6 ವರ್ಷಗಳಿಂದ ಸಿದ್ಧಗೊಳಿಸಿದ ಸೇನೆಯ ಮತ್ತು ಸಿಜ್‌ಫ್ರಿಡ್ ಕೋಟೆಗಳ ಸಾಲಿನ ದುರ್ಭೇದ್ಯತೆಯ ಮೇಲೆ ಸಂಪೂರ್ಣ ಭರವಸೆಯಿತ್ತು ಹರ್ ಹಿಟ್ಲರರು 'ಪಶ್ಚಿಮ ರಣರಂಗದ ಗೊಡವೆ ಬಿಟ್ಟು ಪೂರ್ವಕ್ಕೆ ಸ್ವತಃ ತಾನೇ ಹೋಗಿರುವರು. ಕೆಲವೇ ವಾರಗಳಲ್ಲಿ ಪೋಲಂಡನ್ನು ಸದೆಬಡಿದು ಅನಂತರ ಪಶ್ಚಿಮಕ್ಕೆ ಸರಿದು ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯನ್ನು ಮುರಿಯಬಹುದೆಂದು ಹಿಟ್ಲರರ ಕಲ್ಪನೆ. ಈ ಯುದ್ಧದ ಪರಿಣಾಮವೇನಾಗುವುದೆಂದು ಈಗ ಹೇಳಲು ಕಷ್ಟ. ಅದು ಹಲವು ಸಂಗತಿಗಳ ಮೇಲೆ ಹೊಂದಿಕೊಂಡಿದೆ. ಆದರೆ ಪ್ರಮುಖ್ಯ ಸಂಗತಿಯೆಂದರೆ ಹೋರಾಡುವ ರಾಷ್ಟ್ರಗಳ ಸೇನಾಬಲ.

ಹಿಟ್ಲರನ ಮುಖ್ಯ ಆಶ್ಚರ್ಯವೆಂದರೆ ಜರ್ಮನಿಯ ವಿಮಾನಪಡೆ. ಇಂಗ್ಲೆಂಡು ಮತ್ತು ಫ್ರಾನ್ಸಗಳು ಇತ್ತಲಾಗಿ ಎಷ್ಟೊಂದು ತೀವ್ರಗತಿಯಿಂದ ಯುದ್ಧ ವಿಮಾನಗಳನ್ನು ತಯಾರಿಸಿದ್ದರೂ ಜರ್ಮನ್ ವಿಮಾನಪಡೆಯು ಮತ್ತೂ ಶ್ರೇಷ್ಠವಾಗಿಯೇ ಇದೆ. ಇತ್ತಲಾಗಿನ ಅಂದಾಜಿನ ಮೇರೆಗೆ ಜರ್ಮನಿಯಲ್ಲಿ ಪ್ರಥಮಶ್ರೇಣಿಯ 4000 ವಿಮಾನಗಳು ಮತ್ತು ರಿಸರ್ವಿನಲ್ಲಿ ಇನ್ನು 4000 ಯುದ್ಧವಿಮಾನಗಳಿರುವವು. ಇದು ಹೊರತು ತಿಂಗಳಿಗೆ 1000 ವಿಮಾನಗಳನ್ನು ಜರ್ಮನಿಯು ತಯಾರಿಸಬಲ್ಲುದು. ವಿಮಾನಪಡೆಯ ನಾಯಕರಾದ ಮಾರ್ಶಲ್ ಗೋರಿಂಗರು, ಜರ್ಮನಿಯ ವಿಮಾನಪಡೆಯು, ಜಗತ್ತಿನಲ್ಲೆಲ್ಲಾ ಅತಿ ಶ್ರೇಷ್ಠವಾದುದು ಮತ್ತು ಅಜೇಯವಾದುದೆಂದು ಉದ್ಘೋಷಿಸಿರುವರು.

ಬ್ರಿಟನಿನಲ್ಲಿ ಪ್ರಥಮಶ್ರೇಣಿಯ 2600 ಮತ್ತು ರಿಸರ್ವ್ 1300 ಯುದ್ಧವಿಮಾನಗಳಿವೆ. ತಿಂಗಳೊಂದರ 600 ವಿಮಾನಗಳನ್ನದು ತಯಾರಿಸಬಲ್ಲುದು. ಫ್ರಾನ್ಸಿನಲ್ಲಿ ಒಟ್ಟು 2000 ಯುದ್ಧವಿಮಾನಗಳಿವೆ. ರಿಸರ್ವ್ ಏನೂ ಇಲ್ಲ. ತಿಂಗಳಿಗೆ 200 ವಿಮಾನಗಳನ್ನು ತಯಾರಿಸಬಲ್ಲುದು. ಪೋಲಂಡಿನಲ್ಲಿ ಪ್ರಥಮ ಶ್ರೇಣಿಯ 900 ಮತ್ತು ರಿಸರ್ವ್ 400 ವಿಮಾನಗಳಿವೆ. ತಿಂಗಳೊಂದರ 50ರಂತೆ ಅದು ಹೊಸತಾಗಿ ಸಿದ್ಧಗೊಳಿಸಬಲ್ಲುದು. ಇಟೆಲಿಯು ಜರ್ಮನಿಯ ಪಕ್ಷಕ್ಕೆ ಸೇರಿದರೆ ಆಗ ಡಿಕ್ಟೇಟರಶಾಹಿ ರಾಷ್ಟ್ರಗಳ ವಿಮಾನಪಡೆಯು ನಿಸ್ಸಂದೇಹವಾಗಿಯೂ ಪ್ರಬಲವಾದುದಾಗುವುದು. ಇಟೆಲಿಯಲ್ಲಿ 3400 ಪ್ರಥಮಶ್ರೇಣೀಯ ವಿಮಾನಗಳಿರುವವು. ರಿಸರ್ವಾಗಿ 600 ಇವೆ. ತಿಂಗಳಿಗೆ 300 ವಿಮಾನಗಳನ್ನದು ತಯಾರಿಸಬಲ್ಲುದು. ಇತರ ಚಿಕ್ಕ ರಾಷ್ಟ್ರಗಳನ್ನು ಪರಿಗಣಿಸಬೇಕಾಗಿಲ್ಲ. ಹಂಗೇರಿ, ಸ್ಪೈನು ಮತ್ತು ಯುಗೋಸ್ಲಾವಿಯಗಳು ಜರ್ಮನಿಯ ಕಡೆಗೆ ಸೇರಿದರೆ ರುಮೇನಿಯ ಗ್ರೀಸ್ ಮತ್ತು ಟರ್ಕಿಗಳು ಮಿತ್ರರಾಷ್ಟ್ರಗಳ ಕಡೆಗಿವೆ.

ಜರ್ಮನಿಯಲ್ಲಿ ಕಾಲಾಳ ಸೇನೆಯು 49 ದಳವಿದೆ. ಅಶ್ವಾರೋಹಿ ದಳ 3 ಮತ್ತು 4 ಯಾಂತ್ರಿಕ ಸೇನಾದಳಗಳಿವೆ. ರಿಸರ್ವಾಗಿ 38 ದಳಗಳಿವೆ. ಇಟೆಲಿಯಲ್ಲಿ 46 ಕಾಲಾಳು 3 ಅಶ್ವಾರೋಹಿ ಮತ್ತು 35 ರಿಸರ್ವ್ ದಳಗಳಿವೆ. ಇಂಗ್ಲೆಂಡಿನಲ್ಲಿ 4 ಕಾಲಾಳು, 1 ಅಶ್ವಾರೋಹಿ 2 ಯಾಂತ್ರಿಕ ಮತ್ತು 12 ರಿಸರ್ವ್ ದಳಗಳಿವೆ, ಫ್ರಾನ್ಸಿನಲ್ಲಿ 32 ಕಾಲಾಳು, 4 ಅಶ್ವಾರೋಹಿ 2 ಯಾಂತ್ರಿಕ ಮತ್ತು 40 ರಿಸರ್ವ್ ದಳಗಳಿವೆ ಪೋಲಂಡಿನಲ್ಲಿ 30 ಕಾಲಾಳು, 5 ಅಶ್ವಾರೋಹಿ 1 ಯಾಂತ್ರಿಕ ಮತ್ತು 30 ರಿಸರ್ವ್ ದಳಗಳಿವೆ. ಯಾಂತ್ರಿಕ ದಳಗಳೆಂದರೆ ಸಶಸ್ತ್ರ ಕಾರು, ಟಾಂಕಿ, ಮತ್ತು ಮಿಶಿನ್ ತೋಪುಗಳ ದಳ. ಒಂದೊಂದು ದಳದಲ್ಲಿ 12,000ದಿಂದ 18,000ದ ವರೆಗೆ ಸೈನಿಕರಿರುತ್ತಾರೆ. ಫ್ರೆಂಚ್ ಸೇನೆಯು ಲೋಕದಲ್ಲೇ ಶ್ರೇಷ್ಠವಾದುದು ಮತ್ತು ಸುಸಜ್ಜಿತವಾದುದು.

ಹಡಗುಪಡೆಯಲ್ಲಿ ಬ್ರಿಟನಿನ ಶ್ರೇಷ್ಠತೆಯು ನಿಸ್ಸಂದೇಹವಾದುದು. ಇಂಗ್ಲೆಂಡಿನಲ್ಲಿ ದೊಡ್ಡ ಯುದ್ಧಹಡಗಗಳು 15 ಇರುವಾಗ ಫ್ರಾನ್ಸಿನಲ್ಲಿ 7, ಜರ್ಮನಿಯಲ್ಲಿ 5, ಮತ್ತು ಇಟೆಲಿಯಲ್ಲಿ 4 ಮಾತ್ರ ಇರುತ್ತವೆ. ಕ್ರೂಯಿಸರುಗಳೆಂಬ ಪ್ರಬಲ ಹೋರಾಟದ ಹಡಗಗಳು ಇಂಗ್ಲೆಂಡಿನಲ್ಲಿ 15, ಫ್ರಾನ್ಸಿನಲ್ಲಿ 7 ಮತ್ತು ಇಟೆಲಿಯಲ್ಲಿ 7 ಇವೆ. ಜರ್ಮನಿಯಲ್ಲಿ ಏನೂ ಇಲ್ಲ. ಹಗುರವಾದ ಕ್ರೂಯಿಸರುಗಳು ಇಂಗ್ಲೆಂಡಿನಲ್ಲಿ 24, ಫ್ರಾನ್ಸಿನಲ್ಲಿ 43, ಜರ್ಮನಿಯಲ್ಲಿ 6 ಮತ್ತು ಇಟೆಲಿಯಲ್ಲಿ 12 ಇವೆ. ಡಿಸ್ಟ್ರಾಯರುಗಳು ಇಂಗ್ಲೆಂಡಿನಲ್ಲಿ 97, ಫ್ರಾನ್ಸಿನಲ್ಲಿ 38, ಜರ್ಮನಿಯಲ್ಲಿ 23 ಮತ್ತು ಇಟೆಲಿಯಲ್ಲಿ 87 ಇವೆ. ಚಿಕ್ಕ ಹಡಗಗಳು ಇಂಗ್ಲೆಂಡಿನಲ್ಲಿ 116, ಫ್ರಾನ್ಸಿನಲ್ಲಿ 45, ಜರ್ಮನಿಯಲ್ಲಿ 78 ಮತ್ತು ಇಟೆಲಿಯಲ್ಲಿ 109 ಇವೆ. ಜಲಾಂತರ್ಗಾಮಿ ನಾವೆಗಳು ಇಂಗ್ಲೆಂಡಿನಲ್ಲಿ 44, ಫ್ರಾನ್ಸಿನಲ್ಲಿ 76, ಜರ್ಮನಿಯಲ್ಲಿ 43 ಮತ್ತು ಇಟೆಲಿಯಲ್ಲಿ 97 ಇವೆ. ಹಡಗುಪಡೆಯಲ್ಲಿಯೂ ಇಟೆಲಿ ಮತ್ತು ಜರ್ಮನಿಗಳೊಂದಾದರೆ ಮಿತ್ರರಾಷ್ಟ್ರಗಳಿಗಿಂತ ಅವು ಬಹಳ ಹಿಂದೆ ಬೀಳುವ ಹಾಗಿಲ್ಲ.

ಹಿಟ್ಲರರು ಅವಲಂಬಿಸಿಕೊಂಡಿರುವುದು ಮಿಂಚಿನಂತಹ ಚಮತ್ಕಾರ ಪರಿಣಾಮಕಾರಿ ಯುದ್ಧದ ಮೇಲೆ. ಇತ್ತಂಡದವರೂ ಸಮಬಲರಿರುವಾಗ ಇದು ಹೇಗೆ ಸಾಧ್ಯವೋ? ಇದು ಹೊರತು ಪಶ್ಚಿಮರಣರಂಗದಲ್ಲಿ ಜರ್ಮನಿಯ ಮೇಲೆ ಪ್ರಥಮವಾಗಿ ಎರಗಬರುವ ಫ್ರೆಂಚ್ ಸೇನೆಯು ಲೋಕದಲ್ಲೇ ಉತ್ತಮವಾದುದೆಂದು ಹೆಸರುಪಡೆದುದು. ಜರ್ಮನ್ ಸೈನಿಕರು ಒಳ್ಳೇ ಹೋರಾಟಗಾರರೂ ಚತುರ ಯುಕ್ತಿಗಾರರೂ ಅಹುದು. ಆದರೆ ವರ್ಸಾಲಿ ಒಪ್ಪಂದದ ಮೇರೆಗೆ 1919ರಿಂದ 34ರ ವರೆಗೆ ಯಾವ ಯುದ್ಧತರಬೇತಿ ಹೊಂದದಂತೆ ಅವರ ಮೇಲೆ ನಿಷೇಧವಿತ್ತು. ಹಿಟ್ಲರರು ವರ್ಸಾಲಿ ಒಪ್ಪಂದವನ್ನು ಮುರಿದು ಹಾಕಿ ಈಗ 6 ವರ್ಷಗಳಿಂದ ಪ್ರಚಂಡ ಯುದ್ಧತಯಾರಿಮಾಡಿದುದು. ಇದರಿಂದಾಗಿ ಜರ್ಮನಿಯ ಸೇನೆಯಲ್ಲಿ ಚೆನ್ನಾಗಿ ತರಬೇತಿ ಹೊಂದಿದ ಅಧಿಕಾರಿಗಳಾಗಲೀ, ರಿಸರ್ವ್ ಸೇನೆಯಾಗಲೀ ಇರುವುದಿಲ್ಲ.

ಸಾಂಪತ್ತಿಕ ಸ್ಥಿತಿಗತಿಯ ದೃಷ್ಟಿಯಿಂದ ಇಂಗ್ಲೆಂಡಿನ ಸ್ಥಾನವು ಅಜೇಯವಾಗಿದೆ. ಲೋಕದ ಮೂರನೇ ಒಂದಂಶವಾಗಿರುವ ಸಾಮ್ರಾಜ್ಯದ ಅಪಾರ ಸಂಪತ್ತಿನ ಆಶ್ರಯ ಅದಕ್ಕಿದೆ. ಇದು ಹೊರತು ಇಂಗ್ಲೆಂಡಿನ ಬೇಂಕುಗಳ ಚಿನ್ನದ ಸಂಗ್ರಹವೇ 1,000,000,000 ಪವನುಗಳಾಗಿವೆ. ಇದು ಹೊರತು ಯುನೈಟೆಡ್ ಸ್ಟೇಟ್ಸ್, ಕೆನಡಾ, ದಕ್ಷಿಣಆಫ್ರಿಕ, ಆಸ್ಟ್ರೇಲಿಯ ಮತ್ತು ಲೋಕದ ಇತರ ಭಾಗಗಳಲ್ಲಿ ಇಂಗ್ಲೆಂಡಿನ ಚಿನ್ನಸಂಗ್ರಹವಿದೆ. ಬೇರೆ ಬೇರೆ ರೀತಿಯ ಉಳಿತಾಯದ ಠೇವಣಾತಿಗಳಲ್ಲಿ ಬ್ರಿಟಿಷರ ಹಣವು 3,500,000,000 ಪವನುಗಳಿವೆ. ಹೊರಗೆ ಬೇರೆ ಬೇರೆ ದೇಶಗಳಲ್ಲಿ 2,000,000,000 ಪವನುಗಳು ವಿನಿಯೋಗಿಸಲ್ಪಟ್ಟಿವೆ. ವಿನಿಮಯ ಪಾಲು ಮೊದಲಾದುವುಗಳಲ್ಲಿ ಬ್ರಿಟಿಷ್ ಠೇವಣಾತಿಯು 20,000,000,000 ಪವನುಗಳಿರುತ್ತವೆ. ಆಸ್ತಿಗಳಲ್ಲಿ ಇನ್ನು 20,000,000,000 ಪವನು ವಿನಿಯೋಗಿಸಲ್ಪಟ್ಟಿದೆ. ಫ್ರಾನ್ಸಿನ ಸ್ಥಿತಿಯು ಇಷ್ಟು ಉತ್ತಮವಾಗಿರದಿದ್ದರೂ ಜರ್ಮನಿ ಮತ್ತು ಇಟೆಲಿಗಳಿಗಿಂತ ಎಷ್ಟೋ ಮೇಲಾಗಿದೆ. ಅಪಾರ ಚಿನ್ನವನ್ನದು ಸಂಗ್ರಹಿಸಿಟ್ಟಿದೆ. ಅಮೇರಿಕ ಯುನೈಟೆಡ್ ಸ್ಟೇಟ್ಸಿನ ಸಂಪೂರ್ಣ ಸಹಾನುಭೂತಿಯು ಮಿತ್ರರಾಷ್ಟ್ರಗಳ ಕಡೆಗಿರುವುದರಿಂದ ಅದು ಕೂಡಾ ಫ್ರಾನ್ಸ್ ಮತ್ತು ಇಂಗ್ಲೆಂಡುಗಳಿಗೆ ಹೆಚ್ಚಿನ ಸಹಾಯಮಾಡದಿರಲಾರದು. ಹೀಗೆ ಫೆಸಿಸ್ಟ್ ರಾಷ್ಟ್ರಗಳ ಸಾಂಪತ್ತಿಕ ಸ್ಥಿತಿಯು ಬಹಳ ಕೆಟ್ಟುಹೋಗಿ ಅವುಗಳಿಗೆ ಹೆಚ್ಚಿನ ಸಹಾಯವೂ ದೊರೆಯುವ ಸಂಭವವಿಲ್ಲದಿರುವಾಗ ಮಿತ್ರರಾಷ್ಟ್ರಗಳ ಪರಿಸ್ಥಿತಿಯು ಅಜೇಯವಾಗಿದೆ.

(5ನೇ ಪುಟದಿಂದ)

ದು. ಆದರೆ ಹಿಟ್ಲರನು ಹಾಗೆ ಮಣಿಯಲಾರ. ಅವನು ಮುರಿಯುವುದು ಮಾತ್ರ. ತಾನು ಜನರಿಗೆ ಅಪ್ರಯೋಜಕನಾಗಿ ನಿವಾಳಿಸಲ್ಪಡುವುದಕ್ಕಿಂತ ಸಾಯುವುದು ಲೇಸೆನ್ನುವವನು ಹಿಟ್ಲರ. ವಿಜಯ ಇಲ್ಲವೇ ಮರಣವೆಂಬುದೇ ಆತನ ದೀಕ್ಷೆ. ಪರಾಜಿತನಾದರೆ ಆತ್ಮಹತ್ಯೆಮಾಡಿಕೊಳ್ಳಲು ಹತ್ಯಾರು ಸದಾ ಸಿದ್ಧವಾಗಿಯೇ ಇರುವುದಂತೆ ಆತನಲ್ಲಿ. ತನ್ನೊಂದಿಗೆ ಇಡೀ ಜರ್ಮನಿಯನ್ನೂ ಹಾಗೂ ಲೋಕವನ್ನೂ ಮಹಾನಾಶಕ್ಕೊಯ್ಯಲು ಹೊರಟಿದ್ದಾನೆ.

YOUR DAUGHTER'S MARRIAGE MADE EASY.

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through policies in

The Bombay Life Assurance Co., Ltd.

For details, please consult:-

KOCHIKAR BROTHERS LIMITED.,
MADRAS BRANCH SECRETARIES,
BOMBAY LIFE BUILDING,
SIR LALUBHAI SAMALDAS ROAD,
GANDHI NAGAR,
UDIPI.

Or any of their following Offices:—

Post Box No. 337, Mount Road, Madras.	Visweshwarapuram Circle, Bangalore City.	Charni Road, Girgaum, Bombay 4.
Car Street, Mangalore.	Puthiyara, Calicut.	Central Station Road, Trivandrum.

Alyasanthana Law And Its Reforms

By Sri K. J. Ballal,
B. A., LL. B.,
VAKIL, UDIPI.

Alyasanthana Law is the customary law governing a certain ection of the people of this District. The basis of this system law is matriarchy or maternal succession as opposed to atriarchy or paternal succession.

It is popularly known that one Bhuthala Pandya introduced is system of law for his subjects in A. D. 78. But there are arious indications to show that the so called "Kattu Kattale" f Bhuthala Pandya is a sort of memorandum got up and anteated by the Thulu rulers of this part and submitted to their verlords during the supremacy of the Vijayanagar Kings to cquaint them of the usages and customs then prevailing among eir subjects and to protect the same from their interference nd that the story of Bhuthala Pandya was spread about as a rt of Dravidian propaganda as against the Aryan propaganda.

But whether the system of law began with Bhuthala andya or whether it existed before is not very material for our resent purpose. All that we are now concerned with is hether this system of law is so bad as is imagined by some eople and if so, how the same should be reformed

An ideal Alyasanthana Family is a corporate body of embers descending from a common ancestress, owning proerty in common, living and working together under common anagement and jointly participating in its income. Here men omen and children have equal rights and equal voice in all its fairs. It provides a means of livelihood for all its members, matter whether old, blind, deaf, dumb, lame or infirm. It ives as an Orphanage to the parentless children widows, ome for husbandless women, a Nursing Home for the sick d a sort of national insurance for all. Under it, while being a ember, he or she can have his own or her own resources with without its aid. It creates and fosters the spirit of brotherod. It holds out to all its members the lofty ideal of co-operion i. e "each for all and all for each." By this spirit of otherhood as well as this lofty ideal of co-operation, there is more scope for economic development both collectively and individually of all its members by pooling all their resources whenever any occasion arises.

Obseessd, however, by our close contact with the western ideals and western civilisation and surrounded as we are by people governed by different systems of law, these beautiful features of our system are forgotten and a cry is raised for its radical change.

One of the main items of reform sought to be introduced is with regard to marriage. The advocates of reform say that it is a great blot upon the Alyasanthana people that their marriages are not recognised by law.

Marriage among Alyasnthana people is a sacred union according to the customary law. It is true that our High Court was ance pleased to hold such marriages to be not legal. But the High Court was probably pleased to so hold on account of the peculiar customs regarding marriage then prevailing in Malabar. There it was styled "sammandam" and till recently the wife used to reside in her family and the husband only used to visit her. But marriage of Alyasanthana people materially differs from the "sammandam" of Malabar. Among the Alyasanthana people it is the sacred duty of the wife to go and live with her husband in his family and their marital relationship resembles in all particulars that prevailing between husband and wife of any other community. It is so well recognised

ಅಳಿಯ ಸಂತಾನ ಕಾನೂನು ಮತ್ತು ಅದರ ಸುಧಾರಣೆ.

ಶ್ರೀ. ಕೆ. ಜೆ ಬಲ್ಲಾಳ,
ಬಿ ಎ., ಎಲ್‌ಎಲ್. ಬಿ.,
ವಕೀಲ್, ಉಡುಪಿ, ಇವರಿಂದ

ಅಳಿಯ ಸಂತಾನ ಕಾನೂನು ಎಂಬುದು ಈ ಜಿಲ್ಲೆಯ ಜನರಲ್ಲಿ ಒಂದೊಂದು ವರ್ಗಕ್ಕೆ ಅನ್ವಯಿಸುವ, ಸಾಂಪ್ರದಾಯಿಕವಾಗಿ ನಡೆದು ಬಂದ ಒಂದು ಕಾನೂನು ಮಕ್ಕಳು ತಂದೆಯ ಉತ್ತರಾಧಿಕಾರಿಗಳಾಗುವ ಬದಲಾಗಿ ತಾಯಿ ಕಡೆಯಿಂದಲೇ ಉತ್ತರಾಧಿಕಾರವನ್ನು ಪಡೆಯುವುದೇ ಈ ಕಾನೂನಿನ ಮೂಲತತ್ವ.

ಭೂತಾಳಪಾಂಡ್ಯನೆಂಬವನು ಕ್ರಿ. ಶ. ೭೮ರಲ್ಲಿ ತನ್ನ ರಾಜ್ಯದ ಪ್ರಜೆಗಳಲ್ಲಿ ಈ ಕಾನೂನನ್ನು ಪ್ರಥಮತಃ ಜಾರಿಗೆ ತಂದನೆಂದು ನಮ್ಮ ನಾಡಿನಲ್ಲಿ ಪ್ರತೀತಿ. ಆದರೆ "ಭೂತಾಳಪಾಂಡ್ಯನ 'ಈ ಕಟ್ಟು ಕಟ್ಟಳೆ' ಎಂಬುದು ವಿಜಯನಗರ ವೈಭವದ ಕಾಲದಲ್ಲಿ ನಮ್ಮ ನಾಡಿನ ತುಳುವರಸರು ತಮ್ಮ ಮೇಲಧಿಕಾರಿಗಳಿಗೆ ಪೂರ್ವದಿಂದಲೂ ನಡೆದು ಬಂದ ಕಟ್ಟಳೆ ಎಂದು ಒಪ್ಪಿಸಿದ ಒಂದು ಮನವಿ ಮತ್ತು ನಾಡಿನ ಪ್ರಾಚೀನ ಪದ್ಧತಿ, ಸಂಪ್ರದಾಯಗಳನ್ನು ಆ ಮೇಲಧಿಕಾರಿಗಳಿಗೆ ತಿಳಿಸಿ ಅವುಗಳಿಗೆ ಅವರಿಂದ ಆತಂಕಬಾರದಂತೆ ರಕ್ಷಿಸುವುದೇ ಅವರ ಧ್ಯೇಯವಾಗಿದ್ದು, ಆರ್ಯಜನರ ಅಭಿಪ್ರಾಯಗಳಿಗೆ ವಿರುದ್ಧವಾಗಿ ದ್ರಾವಿಡರ ಅಭಿಮತಗಳನ್ನು ಜನತೆಯಲ್ಲಿ ಬಿತ್ತುವುದೇ ಭೂತಾಳಪಾಂಡ್ಯನ ಕತೆಯ ಪ್ರಸಾರದ ಗುರಿಯಾಗಿದ್ದಿತು," ಎಂಬುದಕ್ಕೆ ಹಲವು ಸಾಕ್ಷ್ಯಗಳು ದೊರೆತಿವೆ.

ಭೂತಾಳಪಾಂಡ್ಯನೇ ಈ ಕಾನೂನನ್ನು ನಿರ್ಮಿಸಿರಲಿ, ಯಾ ಅವನ ಪೂರ್ವದಿಂದಲೂ ಅದು ನಡೆದುಕೊಂಡು ಬಂದಿರಲಿ, ಪ್ರಸ್ತುತ ಸಮಸ್ಯೆಗೆ ಅದು ಸಂಬಂಧವಿಲ್ಲದ ವಿಷಯ. ಈ ಕಾನೂನಿನಲ್ಲಿ ಕೆಲವರ ಕಲ್ಪನೆಯಷ್ಟು ಕಡುಕುಂದುಗಳುಂಟೋ, ಕೆಡುಕುಗಳಿದ್ದಲ್ಲಿ ಅವನ್ನು ಯಾವ ಬಗೆಯಿಂದ ಸುಧಾರಿಸಬಹುದೆಂಬುದೇ ಪ್ರಕೃತ ನಾವು ಗಮನಿಸಬೇಕಾಗಿದೆ.

ಆದರ್ಶ ಅಳಿಯ ಸಂತಾನ ಕುಟುಂಬವೆಂಬುದು ಮೂಲ ಸ್ತ್ರೀಯೊಬ್ಬಳಿಂದ ಇಳಿದುಬಂದು, ಆಸ್ತಿ-ಪಾಸ್ತಿಗಳನ್ನು ಒಟ್ಟಾಗಿ ಅನುಭವಿಸಿ, ಒಂದೇ ಆಡಳಿತದ ಕೆಳಗೆ ಒಕ್ಕಟ್ಟಿನಿಂದ ದುಡಿದು ಉಂಡು, ಆಸ್ತಿಯ ಆಯದಲ್ಲಿ ಸರ್ವರೂ ಪಾಲುಗಾರರಾಗಿ ಸಾಮುದಾಯಿಕ ಹಕ್ಕು-ಬಾಧ್ಯತೆಗಳನ್ನು ಅನುಭವಿಸುವ ಹಲವು ವ್ಯಕ್ತಿಗಳ ಒಂದು ಸಮುದಾಯವಾಗಿದೆ. ಬಾಲ, ವೃದ್ಧ, ಸ್ತ್ರೀ, ಪುರುಷರೆಂಬ ತಾರತಮ್ಯವಿಲ್ಲದೆ ಸರ್ವರಿಗೂ ಅದರ ಸಮಗ್ರ ವ್ಯವಹಾರಗಳಲ್ಲಿ ಸಮಾನಾಧಿಕಾರವಿದೆ. ಅದು ಮುದುಕ, ಮೂಕ, ಕುರುಡ, ಕಿವುಡ, ಕುಂಟನೆಂಬ ಭೇದವೆಣಿಸದೆ ಎಲ್ಲಾ ಸದಸ್ಯರಿಗೂ ಜೀವನ ಸೌಕರ್ಯವನ್ನೊದಗಿಸುವ ಕುಟುಂಬ. ತಂದೆತಾಯಿಗಳಿಲ್ಲದ ಬಾಲರಿಗೊಂದು ಅನಾಥಾಶ್ರಮ. ಪತಿವಿಹೀನೆಯರಾದ ಸತಿಯರಿಗೊಂದು ವಿಧವಾಶ್ರಮ. ಗತಿವಿಹೀನರಾದ ರೋಗಿಗಳಿಗೊಂದು ಚಿಕಿತ್ಸಾಶ್ರಮ. ಸರ್ವರಿಗೂ ಅದೊಂದು ವಿಶಿಷ್ಟ ರಾಷ್ಟ್ರೀಯ ವಿಮಾ ಪದ್ಧತಿ ಎನಬೇಕು. ಈ ಪದ್ಧತಿಯು ಯಾರಿಗೆ ಸ್ತ್ರೀ ಪುರುಷ ಸದಸ್ಯರಲ್ಲಿ ಯಾರೇ ಆಗಲಿ ಕುಟುಂಬದ ಸದಸ್ಯರಾಗಿರುವಾಗಲೇ ಅವರು ತಮ್ಮಷ್ಟಕ್ಕೆ ಯಾ ಕುಟುಂಬದ ಸಹಾಯದಿಂದ ತಮ್ಮ ಸ್ವಂತ ಆಸ್ತಿಪಾಸ್ತಿಗಳ ಹಕ್ಕುದಾರರಾಗಲು ಸಾಧ್ಯವಿದೆ. ಅಳಿಯಸಂತಾನ ಪದ್ಧತಿಯು ಕುಟುಂಬದಲ್ಲಿ ಭ್ರಾತೃತ್ವಭಾವವನ್ನು ಬಿತ್ತಿ, ಬೆಳೆಯಿಸುವುದು. "ತನಗೆಲ್ಲರೆಲ್ಲರಿಗೆ ತಾನೊಬ್ಬನೆಂಬ ಅನುವಾಗಿ ಬೆರೆಸಿಹುದೆಂಬ" ಸಂಘಶಕ್ತಿಯ ಉತ್ತಮೋತ್ತಮ ತತ್ವವನ್ನು ಸದಸ್ಯರಿಗೆ ಎತ್ತಿ ತೋರಿಸುವುದು. ಈ ಸಹೋದರ ಭಾವ, ಸಹಕಾರ ಧ್ಯೇಯಗಳ ಸತ್ಫಲವಾಗಿ ಕುಟುಂಬದ ಸದಸ್ಯರೆಲ್ಲ ವೈಯಕ್ತಿಕ ವ ಸಾಮುದಾಯಿಕವಾಗಿ ಸಮಯಬಂದಾಗ ತಮ್ಮ ಸಂಪತ್ತನ್ನೆಲ್ಲ ಏಕೀಕರಿಸಿ ಕುಟುಂಬದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ತುಂಬಾ ಅವಕಾಶವಿದೆ.

ಇಂದಿನ ಪರಿಸ್ಥಿತಿಯಲ್ಲಾದರೋ ನಾವು ಪಾಶ್ಚಾತ್ಯ ಧ್ಯೇಯಗಳಿಗೆ ಸಂಪೂರ್ಣ ಮರುಳಾಗಿರುವೆವು, ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದಿಂದ ನಮ್ಮನ್ನೇ ನಾವು ಮರೆತಿರುವೆವು. ನಾನಾತರದ ಕಾನೂನು ಕಟ್ಟಳೆಗಳಿಂದ ಸುತ್ತುವರಿದಿರುವ ಪ್ರಚಲಿತ ವಾತಾವರಣ. ಆದುದರಿಂದ ನಮ್ಮ ಈ ಪ್ರಾಚೀನ ಪದ್ಧತಿಯ ಸಲ್ಲಕ್ಷಣಗಳಿಗೆಲ್ಲ ನಾವು ಕುರುಡರಾಗಿರುವೆವು. ಹೀಗಾಗಿ ಈ ಪದ್ಧತಿಯ 'ಸಮೂಲ ಸುಧಾರಣೆ' ಯಾಗಬೇಕೆಂಬ ಕೂಗು ಇತ್ತೀಚೆಗೆ ಕೆಲವೆಡೆಗಳಿಂದ ಕೇಳಬರುತ್ತಿದೆ.

ಸುಧಾರಣೆಯಾಗಬೇಕೆನ್ನುವ ಮುಖ್ಯ ವಿಷಯಗಳಲ್ಲಿ ವಿವಾಹಪದ್ಧತಿಯ ಕುರಿತಾದುದೊಂದು. ಅಳಿಯಸಂತಾನ ಕ್ರಮಾನುಸಾರ ನಡೆಯುವ ವಿವಾಹವು ಕಾನೂನು ಸಮ್ಮತವಲ್ಲವೆಂಬುದು ಅಳಿಯಸಂತಾನದವರಿಗೆಲ್ಲ ಒಂದು ಕುಂದೆಂದು ಸುಧಾರಕರ ಅಂಬೋಣ.

ಅಳಿಯಸಂತಾನದವರಲ್ಲಿ ರೂಢಿಯಲ್ಲಿರುವ ವಿವಾಹವು ಸಾಂಪ್ರದಾಯಾನುಸಾರ ನಡೆವ ಐಕ್ಯದ ಒಂದು ಪವಿತ್ರ ವಿಧಿಯಾಗಿದೆ. ಮದ್ರಾಸ್ ಹೈಕೋರ್ಟಿನವರು ನಮ್ಮ ಈ ತರದ ವಿವಾಹವು ಕಾನೂನು ಪ್ರಕಾರ ವಿವಾಹವಲ್ಲ ಎಂಬದಾಗಿ ಅಭಿಪ್ರಾಯಪಟ್ಟದ್ದೇನೋ ನಿಜ. ಆದರೆ ಆ ಅಭಿಪ್ರಾಯವು ಆಗಿನ ಮಲಬಾರ್ ಸಂಪ್ರದಾಯಕ್ಕೆ ಸರಿಯಾಗಿ ಅಭಿಪ್ರಾಯಪಟ್ಟದ್ದಾಗಿರಬೇಕು. ಮಲಬಾರಲ್ಲಿ ವಿವಾಹ ಯೆಂದರೆ ಬರೇ ಒಂದು ಸಂಬಂಧ ಎಂಬುದಾಗಿ ರೂಢಿಯಲ್ಲಿತ್ತು. ಇತ್ತೀಚಿನವರೆಗೆ ಮಲಬಾರಲ್ಲಿ ಹೆಂಡತಿಯು ಗಂಡನ ಒಟ್ಟಿಗೆ ಇರುವ ಪದ್ಧತಿಯಿಲ್ಲದೆ ತನ್ನ ಮನೆಯಲ್ಲಿಯೇ ಇದ್ದು ಗಂಡನು ಅವಳಿದ್ದಲ್ಲಿಗೆ ಬಂದು ಹೋಗುವವನಾಗಿರುತ್ತಿದ್ದ. ಅಳಿಯ ಸಂತಾನದ ವಿವಾಹಕ್ಕೂ ಮಲಬಾರ್ ಸಂಬಂಧಕ್ಕೂ ಹೆಚ್ಚಿನ ವ್ಯತ್ಯಾಸಗಳುಂಟು. ಅಳಿಯ ಸಂತಾನದವರಲ್ಲಿ ಹೆಂಡತಿಯು ಗಂಡನ ಒಟ್ಟಿಗೆ ಇರುವಂಥಾದ್ದು ಅವಳ ಪವಿತ್ರ ಕರ್ತವ್ಯವಾಗಿರುತ್ತದೆ. ಮ ಅ ಪ್ರಕಾರ ಅವರು ಅನ್ಯಜಾತಿಯ

that the very High court was pleased to hold that marriage among Alyasanthana people is as sacred and binding as that of any other community and that in awarding maintenance to such members Courts should take into consideration the expenses required for their wives and children.

Marriage among Alyasanthana people is based upon natural love and affection and this natural love and affection is promoted even after marriage by virtue of their respective positions. The husband cannot ignore the wife as she has independent means in her mother's family. The wife also can not afford to offend the husband for fear of losing his separate property if any.

But what is more, the Alyasanthana men and women have equal rights to divorce in case their married life becomes unhappy. This is also another check against misbehaviour on the part of the husband or the wife.

Besides, in Alyasanthana marriages, there is no restriction as to age or widow remarriages.

Thus happy married life is a rule and unhappy married life is an exception among the Alyasanthana people. This desirable state of affairs is wanting in marriages of other people either in the East or in the West and the result is that in very many cases men and women suffer in silence and all sorts of subterfuges are attempted by legislation or otherwise. Under the circumstances any cut and dry legislation attempting to codify these social laws, customs and usages regarding marriage will not only nullify these features of our marriage but will also prove to be positively harmful.

The next reform is in the matter of partition. The advocates of reform think that the joint family system is subject to the following grave objections.

1. It is unnatural. 2. It has out-grown. 3. It gives rise to frequent domestic quarrels leading to civil and criminal litigation ruinous to the family withthe result that thereis no scope for development either collectively or individually. Let us examine each of these objections and see whether it is really so.

Unnatural system—People call it unnatural because they say that it is more natural for a man to love his wife and children than his brothers, sisters nephews and nieces. But this natural attraction for wife and children which is fostered and developed by the institution of marriage by our Aryan race which has spread far and wide in the East and West, is more appealing to the animal side of human nature while to live and work for brothers, sisters, nephews and nieces as well as wife and children is more appealing to, and animated by the divine side of it. This fundamental conception of our joint family system is not realised by the people and that is why it looks to be unnatural in their eyes.

System out-grown—This implies that it was good at one time and that it has ceased to be so on account of the change of time. But which feature of the system is unworkable under the present order of things is not clear. It is true that this system differs from other systems in the matter of (1) marriage (2) intestate succession and (3) partition. Simply because it differs from other systems can it be called out-grown system? The only question is whether this system of law is workable now or hereafter. Further is the present order of things permanent? We find that in various matters we are reverting to old order of things. The law governing marriage among other people is undergoing rapid changes. Not only are the rules relaxed but there is also a tendency towards social marriages. In the matter of all human activities too, individualism is being slowly replaced by socialism and individual activity by group activity. To achieve this end various attempts are being made through legislation or otherwise by the people

(See Page 13)

ಗಂಡ ಹೆಂಡತಿಯರ ಹಾಗೆ ಒಟ್ಟಿನಿಂದ ಜೀವಿಸಿ ಬರುತ್ತಾರೆ. ಆದುದರಿಂದಲೇ ಮದ್ರಾಸ್ ಹೈಕೋರ್ಟಿನವರೇ ಅಳಿಯಸಂತಾನದವರಲ್ಲಿ ನಡೆದು ಬರುವ ವಿವಾಹವು ಇತರ ಯಾವುದೇ ಜಾತಿಯ ವಿವಾಹದಷ್ಟೇ ಪವಿತ್ರವಾದದ್ದೆಂಬುದಾಗಿ ಅಭಿಪ್ರಾಯ ಪಟ್ಟದ್ದಲ್ಲದೆ ಅಳಿಯ ಸಂತಾನದ ಗಂಡಸರಿಗೆ ಜೀವನಾಂಶ ವಿಧಿಸುವಾಗ್ಯೆ ಅವರ ಹೆಂಡಿರುಮಕ್ಕಳ ಖರ್ಚುಕೂಡ ಆಲೋಚಿಸಿ ತೀರ್ಮಾನಿಸಬೇಕಾಗಿ ವಿಧಿಸಿರುತ್ತಾರೆ.

ಈ ವಿಧಿಯು ಕೇವಲ ಸ್ವಾಭಾವಿಕವಾದ ಪ್ರೀತಿ ಮಮತೆಗಳ ಮೇಲೆ ಆಧರಿಸಿ ಕೊಂಡಿದೆ. ಈ ಪ್ರೀತಿ ಮಮತೆಗಳು ವಿವಾಹದ ತರುವಾಯವೂ ದಂಪತಿಗಳಲ್ಲಿ ಅವರ ದಾಂಪತ್ಯ ಸ್ಥಾನೋಚಿತವಾಗಿ ಬೆಳೆಯುತ್ತಲೇ ಇರುತ್ತದೆ. ಸತಿಗೆ ತನ್ನ ಮಾತೃ ಕುಟುಂಬದಲ್ಲಿ ಸ್ವತಂತ್ರ ದ್ರವ್ಯಾನುಕೂಲತೆಯಿರುವುದರಿಂದ ಪತಿಯು ಆಕೆಯನ್ನು ಅಲಕ್ಷಿಸಲಾರನು. ಸತಿಯೂ ತನ್ನ ಪತಿಗೆ ಪ್ರತ್ಯೇಕ ಆಸ್ತಿಯಿದ್ದಲ್ಲಿ ತಾನು ಆ ಆಸ್ತಿಯನ್ನು ಕಳೆದುಕೊಳ್ಳುವ ಹೆದರಿಕೆಯಿಂದ ಪತಿಯ ಮನಸ್ಸನ್ನು ನೋಯಿಸಲಾರಳು.

ಇವೆಲ್ಲಕ್ಕಿಂತಲೂ ಮಿಗಿಲಾಗಿ, ದಾಂಪತ್ಯ ಜೀವನವು ಸುಗಮವಾಗಿ ಸಾಗದ ಸಂದರ್ಭದಲ್ಲಿ ವಿವಾಹವಿಚ್ಛೇದಕ್ಕೆ ಸತಿಪತಿಯರಿಗೆ ಸಮಾನ ಅಧಿಕಾರವಿರುವುದಾಗಿದೆ. ಇದರ ಪರಿಣಾಮವಾಗಿ ಸತಿಪತಿಯರಲ್ಲಿ ತೋರಬರಬಹುದಾದ ದುರ್ನಡತೆಗಳಿಗೆ ಇನ್ನೊಂದು ಪ್ರತಿಬಂಧಕವನ್ನಿಟ್ಟಂತಾಗುತ್ತದೆ. ಇಷ್ಟೇ ಮಾತ್ರವಲ್ಲದೆ ಅಳಿಯ ಸಂತಾನದಲ್ಲಿ ವಿವಾಹ ವಯಸ್ಸು ಯಾ ವಿಧವಾ ವಿವಾಹಗಳಿಗೆ ಯಾವ ರೀತಿಯ ತಡೆಯಾಗಲೀ ಇರುವುದಿಲ್ಲ.

ಮೇಲಿನ ಕಾರಣಗಳಿಂದ ಅಳಿಯ ಸಂತಾನದವರಲ್ಲಿಯ ದಾಂಪತ್ಯವು ಸಾಮಾನ್ಯವಾಗಿ ಸರ್ವತ್ರ ಸುಗಮವಾಗಿಯೇ ಸಾಗುತ್ತದೆ. ದಾಂಪತ್ಯ ಜೀವನದಲ್ಲಿ ಎಲ್ಲಾದರೂ ವಿಘ್ನ ಬರುವುದೆಂದರೆ ಅದು ಈ ಮಾತಿಗೆ ಕೇವಲ ಅಪವಾದವೆನ್ನ ಬಹುದು. ಈ ತೆರನಾದ ಅಪೇಕ್ಷಣೀಯ ಸಂಗತಿಯು ಪೌರ್ವಾತ್ಯ ಪಾಶ್ಚಾತ್ಯ ಜನಾಂಗಗಳಲ್ಲಿ ಬೇರೆಲ್ಲಿಯೂ ತೋರಿಬರುವುದಿಲ್ಲ. ಆದುದರಿಂದ, ಅವರಲ್ಲಿ ಹಲವೆಡೆ ಗಳಲ್ಲಿ ಸ್ತ್ರೀಪುರುಷರು ಮೌನದಿಂದ ಸಂಕಷ್ಟವನ್ನು ಅನುಭವಿಸುವ ಅಥವಾ ಕಾನೂನು ಯಾ ಇನ್ನಿತರ ಕಾರಣಗಳಿಂದ ವಾದ-ಪ್ರತಿವಾದಗಳ ಗೊಂದಲವೆಬ್ಬಿಸುವ ಸನ್ನಿವೇಶ ಗಳನ್ನು ನಾವು ಎಂದೂ ನೋಡುತ್ತಿರುವೆವು. ಈ ಸಂಗತಿಗಳನ್ನೆಲ್ಲ ಗಮನಿಸಿದ ಪಕ್ಷದಲ್ಲಿ, ವಿವಾಹದ ಕುರಿತಾಗಿರುವ ಸಾಮಾಜಿಕ ಕಾನೂನು-ಕಟ್ಟುಕಟ್ಟಳೆಗಳನ್ನು ನಿಘಂಟೀಕರಿಸಿ ನಿರ್ದಿಷ್ಟ ಕಾನೂನು ಜಾರಿಗೆ ತರಲು ಪ್ರಯತ್ನಿಸುವುದರಿಂದ ನಮ್ಮ ಪ್ರಾಚೀನ ವಿವಾಹ ಪದ್ಧತಿಯ ಸಲ್ಲಕ್ಷಣಗಳನ್ನೆಲ್ಲ ಸಮೂಲ ಮುರಿದು ಅಪಾರ ಹಾನಿ ತಂದಂತಾಗುವುದರಲ್ಲಿ ಲೇಶಮಾತ್ರ ಸಂಶಯವಿಲ್ಲ.

ಎರಡನೆಯದಾಗಿ, ಆಸ್ತಿ ವಿಭಜನೆಯ ನಿಯಮಗಳಲ್ಲಿ ಸುಧಾರಣೆಯಾಗ ಬೇಕೆನ್ನುತ್ತಾರೆ. ಅವಿಭಕ್ತ ಕುಟುಂಬದ ಪದ್ಧತಿಯು ಕೇವಲ ಅಪ್ರಾಕೃತಿಕ, ಅದು ಮೀರಿ ಬೆಳೆದಿದೆ, ಅದರಿಂದಲೇ ವಿನಾಶಕಾರಣವಾದ ಕೌಟುಂಬಿಕ ಕಲಹಗಳು, ಸಿವಿಲ್, ಕ್ರಿಮಿನಲ್ ಮೊಕದ್ದಮೆಗಳು ತಲೆದೋರಿ ಸಾಮೂಹಿಕ ವ ವೈಯಕ್ತಿಕ ಅಭಿವೃದ್ಧಿಗೆ ಏನೊಂದೂ ಆಸ್ಪದವಿಲ್ಲದಂತಾಗುವುದೆಂಬ ಮೂರು ತರದ ಆಕ್ಷೇಪ ಗಳನ್ನು ಮುಂದೊತ್ತುತ್ತಾರೆ. ನಾವು ಈ ಆಕ್ಷೇಪಣೆಗಳಲ್ಲಿ ಪ್ರತಿಯೊಂದನ್ನು ಕೂಲಂಕಷವಾಗಿ ಪರೀಕ್ಷಿಸಿ ಅವುಗಳಲ್ಲೇನಾದರೂ ಹುರುಳಿದೆಯೋ ನೋಡೋಣ.

ಅಪ್ರಾಕೃತಿಕ ಪದ್ಧತಿ—ಮಾನವನಿಗೆ ತನ್ನ ಸೋದರಿ-ಸೋದರ, ಸೊಸೆ-ಅಳಿಯಂದಿರ ಮೇಲಿನ ಪ್ರೀತಿಗಿಂತಲೂ ಮಡದಿ ಮಕ್ಕಳ ಮೇಲಿನ ಮಮತೆಯು ಸ್ವಾಭಾವಿಕವೆನ್ನುವವರೇ ಈ ಪದ್ಧತಿಯನ್ನು ಅಸ್ವಾಭಾವಿಕ, ಅಪ್ರಾ ಕೃತಿಕವೆನ್ನುತ್ತಾರೆ. ಪೂರ್ವ ಪಶ್ಚಿಮಾರ್ಧಗೋಲಗಳ ಮೇಲೆ ಪಸರಿಸಿರುವ ಆರ್ಯ ಜನಾಂಗದವರ ವೈವಾಹಿಕ ವಿಧಿಯ ಮೂಲಕ ಬೆಳೆದು ಅಭಿವೃದ್ಧಿ ಹೊಂದಿದ ಸತಿ ಸುತಲಾಲಸೆಯು ಮಾನವನ ಪಶುಪ್ರಾಣಿ ಸಹಜ ಸ್ವಭಾವಕ್ಕೆ ಮಾತ್ರ ಒಪ್ಪುವಂತಹು ದಾಗಿದೆ. ಆದರೆ ಸೋದರ-ಸೋದರಿಯರಿಗಾಗಿ, ಸೊಸೆ ಅಳಿಯಂದಿರಿಗಾಗಿ ಜೀವ ರಿಳಿಸಿ ದುಡಿದು, ಅವರಿಗಾಗಿ ಬಾಳಿ ಬದುಕುವುದು ಮಾನವ್ಯದ ಸರ್ವೋತ್ಕೃಷ್ಟ ಸ್ವಭಾವಕ್ಕೆ ಸಹಜವಾಗಿದ್ದು ಕೇವಲ ದೈವಿಕವೆಂದೇ ಹೇಳಬೇಕು. ಅವಿಭಕ್ತ ಕುಟುಂಬ ಜೀವನದ ಈ ಮೂಲತತ್ವದ ಏನೊಂದೂ ಅರಿವಿಲ್ಲದವರ ಕಣ್ಣಿಗೆ ಮಾತ್ರ ಅದು ಅಸ್ವಾಭಾವಿಕವೆಂದು ಕಂಡುಬರುವುದು ಸಹಜ.

ಮೀರಿ ಬೆಳೆದ ಪದ್ಧತಿ—ಇದರ ಅರ್ಥವೇನೆಂದರೆ ಈ ಪದ್ಧತಿಯು ಒಂದು ಕಾಲದಲ್ಲಿ ಒಳ್ಳೆಯದೆಂದೆನಿಸಿಕೊಂಡಿದ್ದಿರಬಹುದು. ಆದರೆ ಕಾಲಪರಿವರ್ತನದಿಂದ ಅದು ಈಗ ಹಾಗಿಲ್ಲವೆಂದು. ಆದರ ಈ ಪದ್ಧತಿಯ ಯಾವ ಲಕ್ಷಣವು ಪ್ರಚಲಿತ ಜನಾಂಗಕ್ಕೆ ಸರಿಹೋಗುವುದಿಲ್ಲವೆಂಬುದು ಮಾತ್ರ ತಿಳಿಯದಾಗಿದೆ. ಈ ಪದ್ಧತಿಗೂ ಉಳಿದ ಪದ್ಧತಿಗೂ ಮುಖ್ಯ ಭೇದವಿರುವುದು ವೈವಾಹಿಕ ವಿಧಿಯಲ್ಲಿ, ವೀಲಿಲ್ಲದೆ ಉತ್ತರಾಧಿಕಾರವನ್ನು ಪಡೆಯುವುದರಲ್ಲಿ ಮತ್ತು ವಿಭಜನೆಯಲ್ಲಿ ಎಂಬುದು ನಿಜ. ಆದರೆ ಇತರ ಪದ್ಧತಿಗಳಿಂದ ಅದು ಬೇರಾಗಿದೆ ಎಂಬ ಅದೊಂದೇ ಕಾರಣದಿಂದ ಅದು ಮೀರಿಬೆಳೆದ ಪದ್ಧತಿಯೆಂದು ಹೇಳಬಹುದೇ? ಈ ಪದ್ಧತಿಯು ಇಂದಾಗಲೀ ಇನ್ನು ಮುಂದಾಗಲೀ ಅನುಸರಣೀಯವಲ್ಲವೇ? ಇಂದಿನ ಆಗುಹೋಗುಗಳು ಹೀಗೆಯೇ ಎಂದೆಂದಿಗೂ ನೆಲೆನಿಂತಾವೇ? ಎಂಬುದು ನಮ್ಮ ಪ್ರಶ್ನೆ. ನಾವು ಎಷ್ಟೋ ವಿಷಯ ಗಳಲ್ಲಿ ಹಿಂದಿನವರ ಪದ್ಧತಿಗಳಿಗೆ ಮರಳಿ ಶರಣಾಗುತ್ತಿದ್ದೇವೆ. ಪರಜಾತಿಯವರ ವೈವಾಹಿಕ ನಿಯಮಗಳಲ್ಲಿ ಶಿಥಿಲಗೊಳಿಸುವುದೇ ಮಾತ್ರವಲ್ಲದೆ ಸಾಮಾಜಿಕ ವಿವಾಹ ಪದ್ಧತಿಗಳನ್ನು ಅವರು ಅನುಕರಿಸುವ ಕುರುಹುಗಳೂ ತೋರುತ್ತಿವೆ. ಮಾನವನ ಸಕಲ ಚಟುವಟಿಕೆಗಳಲ್ಲಿ ವ್ಯಕ್ತಿತ್ವದ ಸ್ಥಾನದಲ್ಲಿ ಸಾಮಾಜಿಕತೆಯೂ ವೈಯಕ್ತಿಕ

(13ನೇ ಪುಟ ನೋಡಿರಿ)

ಉಡುಪಿ

ಸಾಹುಕಾರರ ಸಭೆ—ತಾ. 10 9-39ರಲ್ಲಿ ಸ್ಥಳೀಕ ಟ್ರೈನ್ ಶಾಲೆಯಲ್ಲಿ ಸಬ್ ಕಲೆಕ್ಟರರು ಸಾಹುಕಾರರ ಒಂದು ಸಭೆ ಕರೆದಿದ್ದರು. ಯುದ್ಧದ ಕಾರಣದಿಂದ ಅತ್ಯಾವಶ್ಯಕವಾದ ಸಾಮಾನುಗಳಿಗೆ ಹೆಚ್ಚು ಕ್ರಯವೇರಿಸದೆ ಅದನ್ನು ಒಂದು ಮಿತಿಯಲ್ಲಿರಿಸಬೇಕೆಂಬುದೇ ಸಭೆಯ ಉದ್ದೇಶವಾಗಿತ್ತು. ಸಾಹುಕಾರರಲ್ಲಿ ಕೆಲವರು ಬೆಲೆ ಏರಿದುದರ ಮತ್ತು ಏರಿಸುವುದರ ಅವಶ್ಯಕತೆಯನ್ನು ವಿವರಿಸಿದರು. ಕೆಲವರು ದರ ಏರಿಸಬಾರದೆಂದೂ ಏರಿಸಿದರೆ ಬಡವರಿಗೆ ಕಷ್ಟವಾಗುವುದೆಂದೂ ಹೇಳಿದರು. ಕೆಲವರು ಸರಕಾರಿ ಡಿಪೋ ಮಾಡುವುದು ಹಿತಕರವೆಂದು ಸೂಚಿಸಿದರು. ಕಲೆಕ್ಟರರು ಆ ಕುರಿತು ಯೋಚಿಸುವುದಾಗಿ ತಿಳಿಸಿ ಸಭೆ ಮುಗಿಸಿದರು.

ದರವಿಳಿಸಬೇಡಿರಿ—ಮರು ದಿನ ಬೆಳಿಗ್ಗೆ 300-400ಜನರು ಮೆರವಣಿಗೆ ಹೊರಟು ಅಕ್ಕಿ ಅಂಗಡಿಗಳಿಗೆಲ್ಲ ಹೋಗಿ 'ದರ ಏರಿಸಬೇಡಿರಿ, ಅಕ್ಕಿ ಮುಡಿಗೆ 3 15-0, ಸೇರಿಗೆ 0 1-6 ಇಡಿರಿ' ಎಂದು ಸಾರುತ್ತ ಹೋದರು ಎಷ್ಟೋ ಕಡೆಗಳಲ್ಲಿ ಅದೇ ದರದಲ್ಲಿ ಅಕ್ಕಿ ಕೊಟ್ಟರು. ಮಧ್ಯಾಹ್ನ ಸುಮಾರು 2-30ಕ್ಕೆ ಚರ್ಚರೋಡಿನಲ್ಲಿ ಶ್ರೀ. ರಮಾನಾಥಪೈಗಳೆಂಬವರ ಚಿಲ್ಲರೆ ಅಂಗಡಿಯಲ್ಲಿ ಸ್ವಲ್ಪ ಗಲಾಟೆಯಾಯಿತು. ಜನರಿಗೂ ಶ್ರೀ. ಪೈಗಳಿಗೂ ಕ್ರಯದ ಕುರಿತು ಚರ್ಚೆಯಾಯಿತು. ಸೋಡಾ ಪೆಟ್ಟಿಗೆ ಬಿಸಾಡಲ್ಪಟ್ಟಿತು. ಎರಡು ಮುಡಿ ಅಕ್ಕಿ ಒಯ್ಯಲ್ಪಟ್ಟಿತು. ಬಾಳೆಹಣ್ಣು ಕೀಳಲ್ಪಟ್ಟಿತು. ಅಷ್ಟರಲ್ಲಿ ಪೋಲೀಸಿನವರು ಬಂದು ಮೂವರನ್ನು ಹಿಡಕೊಂಡು ಹೋದರು. ಸುಮಾರು 1ಘಂಟೆಯ ಮೇಲೆ ಅವರನ್ನು ಬಿಟ್ಟುಬಿಟ್ಟರೆಂದು ತಿಳಿದು ಬರುತ್ತದೆ. ವ್ಯಾಪಾರಿಗಳು ದಿಗಿಲುಗೊಂಡು ಒಟ್ಟು ಸೇರಿ ಆಲೋಚಿಸಿ ಅಂಗಡಿ ಬಾಗಿಲು ಹಾಕುವ ನಿರ್ಧಾರ ಮಾಡಿದರು. ಅಧಿಕಾರಿಗಳಿಗೆ ತಂತಿ ಬಿಟ್ಟರು. ಸಂಜೆ ಸುಮಾರು 8ಘಂಟೆಗೆ ಮಂಗಳೂರಿನಿಂದ D. S. P. ಯವರೂ 1ಲೋರಿ ರಿಸರ್ವ್ ಪೋಲೀಸಿನವರೂ ಧಾವಿಸಿಬಂದರು. ಆ ಮೊದಲೇ ಕೆಲವು ಅಕ್ಕಿ ಜೀನಸು ಚಿಲ್ಲರೆ ಅಂಗಡಿಗಳು ಮುಚ್ಚಲ್ಪಟ್ಟವು. ದೊಡ್ಡ ಜೀನಸು ಅಂಗಡಿಗಳಲ್ಲಿ ಕರ್ನಾಟಕ ಸ್ಟೋರ್ಸ್ ಮಾತ್ರ ತೆರೆದಿತ್ತು. ಮರುದಿನ ಪೋಲೀಸರು ಏನೂ ಗಲಾಟೆಯಿಲ್ಲೆಂದು ಬಂದಂತೆ ಹಿಂದೆ ಹೋದರು. ಅಂಗಡಿಗಳು ಮಂಗಳವಾರವೂ ಬಂದಾಗಿದ್ದವು. ಮಂಗಳವಾರ ಅಪರಾಹ್ನ ಜಿಲ್ಲಾ ಕಲೆಕ್ಟರರು ಬಂದು ವ್ಯಾಪಾರಿಗಳ ಮತ್ತು ಜನರ ಸಭೆ ಕರೆದು ವಿಚಾರಣೆ ನಡೆಸಿದರು.

ಕಲೆಕ್ಟರರ ಮಧ್ಯಸ್ತಿಕೆಯಿಂದ ಸಾಮಾನುಗಳಿಗೆ ದರವನ್ನು ನಿಶ್ಚಯಿಸಲಾಯಿತು. ಮುಚ್ಚಿದ ಅಂಗಡಿಗಳೆಲ್ಲ ತೆರೆಯಲ್ಪಟ್ಟವು. ದರವನ್ನು ಟಮ್ಕಿ ನಿಸಿ ಪ್ರಚಾರಪಡಿಸಲಾಗಿದೆ.

ಜಿಲ್ಲಾ ಕಲೆಕ್ಟರರು ವ್ಯಾಪಾರಿಗಳ ಮತ್ತು ಜನತೆಯ ಅಭಿಪ್ರಾಯ ಪಡೆದು ಅಕ್ಕಿಯನ್ನು ಸೇರಿಗೆ 0-1-9, ಉಪ್ಪಿಗೆ 0 1-1, ಚಿಮಿಣೆ ಎಣ್ಣೆ ಬಾಟ್ಲಿಗೆ 0 2-3, ಇಂತೆ ದರ ನಿಶ್ಚಯ ಮಾಡಿರುವರು. ಉಡುಪಿಯ ಹತ್ತಿರದ ಕೆಲವು ಹಳ್ಳಿಗಳಲ್ಲೂ ಚಿಕ್ಕಪುಟ್ಟ ಗಲಾಟೆಗಳು ನಡೆದಿರುವವೆಂದು ಸುದ್ದಿ ಬಂದಿದೆ.

ಯಕ್ಷಗಾನ ನಾಟಕ:—ಬ್ರಹ್ಮಾವರ ಪಶುಪತಿ ಸರ್ವೇಶ್ವರ ಯಕ್ಷಗಾನ ಕೂಟದವರು ಉಡುಪಿ ಹರಿಜನ ಅನಾಥಾಲಯದ ಸಹಾಯಾರ್ಥವಾಗಿ ಮೊಡನ್ ಶಾಲೆಯಲ್ಲಿ ಕಳೆದ ವಾರ ಶ್ರೀ. ಎಸ್. ಯು ಪಣಿಯಾಡಿಯವರ ಅಧ್ಯಕ್ಷತೆಯಲ್ಲಿ 'ಸುಧನ್ವ ಕಾಳಗ' ಎಂಬ ಯಕ್ಷಗಾನ ನಾಟಕವನ್ನು ಪ್ರದರ್ಶಿಸಿದರು.

ವಿಟ್ಲ ಪಿಂಡಿ—ತಾ. 7-9 39ರಲ್ಲಿ ವಿಟ್ಲಪಿಂಡಿ ಉತ್ಸವ ವಿಜೃಂಭಣೆಯಿಂದ ಜರಗಿತು. ವೇಷಗಳಿಗೆ ಬಹುಮಾನಕೊಡಲು ರಥಬೀದಿಯಲ್ಲಿ ಈ ವರ್ಷ ಒಂದು ವೇದಿಕೆಯನ್ನು ನಿರ್ಮಿಸಲಾಗಿತ್ತು.

ರೈತರ ಗೋಳು— ಸುಮಾರು ಒಂದು ತಿಂಗಳಿಂದ ಮಳೆಯಿಲ್ಲದೆ ಬೇಸಿಗೆಯಂತೆ ಬಿಸಿಲಾಗುತ್ತಿದೆ. ಇದರಿಂದ ಬೆಳೆಗೆ ತುಂಬಾ ಹಾನಿಯುಂಟಾಗಿದೆ. ಬೆಟ್ಟುಗದ್ದೆಗಳ ಪೈರಂತೂ ತೆನೆಬಿಡುವುದೇ ಕಷ್ಟವಾಗಿದೆ. ಪ್ರಾರಂಭದಲ್ಲಿ ಸರಿಯಾಗಿ ಮಳೆಯಿಲ್ಲದೆ ವ್ಯವಸಾಯಕ್ಕೆ ತೊಂದರೆಯಾಗಿತ್ತು. ಈ ವರ್ಷ ಅರ್ಧಕ್ಕರ್ಧ ಬೆಳೆಯಾಗುವುದೂ ಕಷ್ಟವೆಂದು ಒಕ್ಕಲಿಗರು ಗೋಳಿಡುತ್ತಾರೆ.

ಮದ್ರಾಸ್ ಸರಕಾರದ ಪ್ರಕಟಣೆಗಳು
ದವಸ ಧಾನ್ಯಗಳ ಬೆಲೆ ಏರಿಸಿದುದು ಅನ್ಯಾಯ

ಪ್ರಾಂತದ ಕೆಲವು ಕಡೆಗಳಲ್ಲಿ ಕಳೆದ ಕೆಲವು ದಿವಸಗಳಲ್ಲಿ ಸಾಮಾನುಗಳ ಮತ್ತು ಜನತೆಗೆ ಅತ್ಯಾವಶ್ಯಕವಾದ ದವಸಧಾನ್ಯಗಳ ಬೆಲೆಯು ಏರಿಸಲ್ಪಟ್ಟು ಅದರಿಂದಾಗಿ ಜನತೆಯಲ್ಲಿ ಅನಾವಶ್ಯಕವಾದ ದಿಗಿಲುಂಟಾಗಿರುವುದೆಂಬುದು ಸರಕಾರದ ತಿಳುವಳಿಕೆಗೆ ಬಂದಿದೆ. ವಸ್ತುಗಳ ವಿಶೇಷವಾಗಿ ಆಹಾರ ಸಾಮಗ್ರಿಗಳ ಬೆಲೆ ಏರಿಸುವುದಕ್ಕೆ ಯಾವನ್ಯಾಯವೂ ಇಲ್ಲ. ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಹೀಗೆ ದುರುಪಯೋಗಗೊಳಿಸುವ ವ್ಯಾಪಾರಿಗಳ ವರ್ತನೆಗೆ ಸರಕಾರವು ವಿರೋಧವಿರುತ್ತವೆ ಇಂತಹ ಅನುಚಿತ ಹಾಗೂ ಅನ್ಯಾಯವಾದ ಕೆಲಸಮಾಡುವ ಆಕರ್ಷಣವನ್ನು ವ್ಯಾಪಾರಿಗಳು ತಡೆಗಟ್ಟುವರೆಂದು ಸರಕಾರದ ನಂಬಿಕೆ. ಇಲ್ಲವಾದರೆ ಯುದ್ಧದ ಪರಿಣಾಮವು ಈ ದೇಶದ ಮೇಲೆ ಈ ವರೆಗೇನೂ ಆಗದಿರುವಾಗಲೆ ಸರಕಾರವು ವ್ಯಾಪಾರ ವಹಿವಾಟನ್ನು ನಿಯಂತ್ರಿಸಲು, ಹಿಂದೂದೇಶದ ರಕ್ಷಣೆಗಾಗಿ ಜ್ಯಾರಿಮಾಡಲ್ಪಟ್ಟಿರುವ ಓರ್ಡಿನೆನ್ಸ್ ಮತ್ತು ರೂಲ್ಸುಗಳಮೇರೆಗೆ ಕಠಿಣಕಾರ್ಯ ಕೈಕೊಳ್ಳಬೇಕಾಗುತ್ತದೆ ವ್ಯಾಪಾರಿಗಳು ವಿಪರೀತ ಲಾಭಮಾಡುವುದನ್ನು ನಿಲ್ಲಿಸದಿದ್ದರೆ ಸರಕಾರವು ಓರ್ಡಿನೆನ್ಸನ್ನು ಜ್ಯಾರಿಗೆ ತಂದು ವಿಪರೀತ ಲಾಭ ಮಾಡುವ ದುಶ್ಚಾಳಿಯನ್ನು ತಕ್ಷೀರಾಗಿ ಮಾಡಿ ಅದಕ್ಕೆ 3 ವರ್ಷ ಕಠಿಣಸಜೆ ಮತ್ತು ಅನಿಶ್ಚಿತ ಪ್ರಮಾಣದ ಜುಲ್ಮಾನೆ ವಿಧಿಸಲಾಗುವುದೆಂದು ಮದ್ರಾಸ್ ಸರಕಾರವು ಪ್ರಕಟಿಸಿರುತ್ತದೆ. ಸರಕಾರದ ಈ ಪ್ರಕಟಣೆಯ ನಂತರ ಒಮ್ಮೆ ಏರಿಸಲ್ಪಟ್ಟಿದ್ದ ಬೇರೆ ಬೇರೆ ವಸ್ತುಗಳ ಬೆಲೆಯು ಈಗ ಕಡಿಮೆಯಾಗಿರುತ್ತದೆ.

ಪ್ರಕಟಣೆ

ಪುತ್ತೂರು ತಾಲೂಕು ಪಳನೊಗ್ಗು ಗ್ರಾಮದ ಮೊಡಪ್ಪಾಡಿ ದೇವಪ್ಪ ರೈಗಳ ಅಳಿಯ ಬೀರುಬಂಟನಾದ ನಾನು ಈ ಮೂಲಕ ತಿಳಿಯಪಡಿಸುವುದೇನಂದರೆ—ನಮ್ಮ ಕುಟುಂಬದ ಬಾಬ್ತು ನಮಗೆ ಕ್ರಮಾಗತದ ಆಸ್ತಿ ಇರುತ್ತದೆ. ಸದ್ರಿ ಆಸ್ತಿಯ ಈಗಿನ ಪಟ್ಟಾದಾರನ ಆಡಳ್ತೆದಾರ ನಾನು ಆಗಿರುತ್ತೇನೆ. ಆದರೆ ಇಡೀ ಕುಟುಂಬದವರಾದ ನಾವು ಒಂದೇ ಗೃಹಕೃತ್ಯದಲ್ಲಿ ಪ್ರತ್ಯಪ್ರತ್ಯೇಕ ಆಸ್ತಿ ಅನುಭವಿಸಿಕೊಂಡು ಬರುತ್ತೇವೆ. ಹೀಗಿರುವಲ್ಲಿ ಕಳೆದ 1346ನೇ ಫಸ್ಲಿಯ ಬಾಬ್ತು ಕೊಡತಕ್ಕ ತೀರ್ವೆ ಕೊಡುವರೆ ನನಗೆ ಅನಾನುಕೂಲವಾದ ಸಂಬಂಧ ತೀರ್ವೆ ಬಾಕಿ ಬಗ್ಗೆ ನನ್ನ ಸ್ವಾಧೀನವಿದ್ದ ಆಸ್ತಿ ಪೈಕಿ ಸ್ವಲ್ಪ ಅಂಶ ಏಲಂ ಆದ್ದಲ್ಲಿ ಏಲಮ್ಮಿನಲ್ಲಿ ಕೇರಿ ಅರ್ಕಬಂಟರು ವಹಿಸಿಕೊಂಡು ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟು ಮುಖಾಂತ್ರ ಡಿಲೀವರ್ ಕೂಡಾ ಮಾಡ್ಸಿ ಈಗ ಸ್ವಾಧೀನತೆಯಿಂದ ತೀರ್ವೆ ಕೊಟ್ಟು ಅನುಭವಿಸಿಬರುತ್ತಾರೆ. ಹೀಗಿರುವಲ್ಲಿ ಸದ್ರಿ ಏಲಂ ರದ್ದುಪಡಿಸುವ ಬಗ್ಗೆ ಸಿವಿಲ್ ವ್ಯವಹಾರ ಮಾಡಿದ್ರೆ ಅದು ರದ್ದಾಗತಕ್ಕಂತ ಯುಕ್ತಿಯಿದೆ. ಸಂಕಪ್ಪ ರೈಗಳು ನಮ್ಮನ್ನು ನಂಬಿಸಿದ್ದರಿಂದ ನಾವು ಆ ಆಸೆಗೆ ಒಳಪಟ್ಟು ಖರ್ಚಿಗೆ ಏನೂ ನಮ್ಮ ಕೂಡೆ ಅಸ್ಸದವಿಲ್ಲವೆಂತ್ಲೂ, ವ್ಯಾಜ್ಯದ ಸಂಗತಿ ನಮ್ಮಿಂದ ಸಾಧ್ಯವಿಲ್ಲವೆಂತ್ಲೂ ಹೇಳಿದಕ್ಕೆ ವ್ಯಾಜ್ಯ ನಾನು ಸುಧಾರಿಸಿ ಕೊಡುತ್ತೇನೆಂತ್ಲೂ, ಅದಕ್ಕೆ ನೋಟು ಬರಕೊಡಬೇಕಂತ್ಲೂ ಹೇಳಿದಕ್ಕೆ ನಾವು ಕೆಲವು ಜನರು ಮಾತ್ರ ಒಪ್ಪಿದ್ದರಿಂದ ಸದ್ರಿ ಸಂಕಪ್ಪ ರೈಗಳು ಅವರ ಭಾವನಂಟ ತಿಮ್ಮಣ್ಣ ಭಂಡಾರಿಗಳ ಹೆಸರಲ್ಲಿ ಏನೂ ಪ್ರತಿಫಲ ಕೊಡದೆ ಈಗ ಒಂದು ತಿಂಗಳ ಹಿಂದೆ ರೂ. 250ಕ್ಕಂತ ಒಂದು ನೋಟು ಬರ್ಸಿಟ್ಟಿರುತ್ತಾರೆ. ಅನಂತ್ರ ವಕೀಲರ ಕೂಡೆ ಆಲೋಚಿಸಿದಲ್ಲಿ ಜರು ತೀರ್ವೆ ಬಗ್ಗೆ ನ್ಯಾಯವಾಗಿ ಏಲಂ ಆದ್ದರಿಂದ ವ್ಯವಹರಿಸಿ ಮಾಡಿ ಪ್ರಯೋಜನವಿಲ್ಲವೆಂತಾಯಿತು. ನೋಟು ನಾನು ಕೊಡಬಹುದೆಂತ ಆ ಸಂಕಪ್ಪ ರೈಗಳು ಹೇಳಿರುವದುದ್ದರಿಂದ ಸದ್ರಿಯವರ ಕುಟುಂಬಕ್ಕೆ ನಮ್ಮ ಆಸ್ತಿ ಈಡಿನಿಂದ ಸಲಲಿಕ್ಕಿರುತ್ತಿದ್ದ ಸಾಲವು ಈಗಿನ ಸಾಲ ನಿವಾರಣಾ ಆಕ್ಟ್ ಪ್ರಕಾರ ಸದ್ರಿ ಸಾಲವು ಪೂರಾ ವಜಾವಾಗುವದರಿಂದ ಪ್ರತಿಫಲವಿಲ್ಲದೆ ನಾವು ಬರಕೊಟ್ಟ ನೋಟಿಗೆ ವ್ಯಾಜ್ಯ ಮಾಡಿ ಹಣ ಪಡೆಯುವ ಆಲೋಚನೆಯಲ್ಲಿರುತ್ತಾರೆಂದು ಈಗ ತಿಳಿದುಬರುವದ್ದರಿಂದ ನಾನು ಸರ್ವಜನರಿಗೂ ಈ ಮೂಲಕ ತಿಳಿಸುವುದೇನೆಂದ್ರೆ—ನಾನು ವಗೈರೆಯರು ಬರಕೊಟ್ಟದ್ದೆಂಬ ನೋಟು ಪ್ರತಿಫಲವಿಲ್ಲದ್ದಾದ್ದರಿಂದ ಸದ್ರಿ ತಿಮ್ಮಣ್ಣ ಭಂಡಾರಿಗಳೇ ವ್ಯವಹಾರ ಮಾಡಿದ್ದಾದ್ರೂ, ಯಾ ಯಾರಿಗಾದ್ರೂ ನಂಬಿಸಿ ವರಾಭಾರೆ ವಗೈರೆ ಮಾಡಿದ್ದಾದ್ದಲ್ಲಿ ಅದು ಸಂಧುವಾಗಲಾರದು ಎಂತ ಕೂಡಾ ಈ ಮೂಲಕ ತಿಳಿಸಿರುತ್ತೇನೆ. ಈ ಸಂಗ್ತಿಯನ್ನು ರಿ. ನೋಟೀಸು ಮೂಲಕ ಸಂಕಪ್ಪ ರೈಗಳಿಗೆ ವ ತಿಮ್ಮಣ್ಣ ಭಂಡಾರಿಗಳಿಗೆ ಪ್ರತ್ಯೇಕ ಕೂಡಾ ತಿಳ್ಸಿಯದೆ.

ಪಳನೊಗ್ಗು, ತಾ. 23-8 39 } ●!!! ಈ ಮೊಹರುಗೆರೆ ವ ಎಡಗೈ ಹೆಬ್ಬೆಟ್ಟು ಮುದ್ರೆ ಬೀರು ಬಂಟನ ರುಜು.

TO
The Editor,
'Navayuga'
UDIPI

I am very gald to note that your esteemed weekly Navayuga has reached another mile stone in its walk of life. It is needless to say anything about the great trouble you have taken during the past years, to build your weekly in to a most up to date Journal of our Karnataka. The love that you are showing to carve Kanada Journalism is note worhy It is really hard to run a news paper specially in our Country and particularly in Karnataka as it is a limited one.

Your criticism through the leader dur-ing the past years on international as wel as Indian and local affairs was moderate and I believe that you would keep up the same with pride and prestige in future also.

So on the occasion of the 19th Brithday of your exteemed weekly I pray God to give you long life and prosperity

I conclude this blessing wishing your Journal every success. NAVAYUGA' go a head.

Yours faithfully
Mysore. **N. Gundu Rao.**

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪು ವ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4 '39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಜಪತ್ರ ಕೆಲವೇ ದಿವಸಗಳಲ್ಲಿ ತಮ್ಮ ಆಫೀಸರರಿಗೆ ಒಪ್ಪಿಸಬೇಕಾಗುವುದು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ಸಲ್ಲಬೇಕಾಗುವ ಟೇಕ್ಸು ಕಡಿಮೆಯಾಗುವುದು ಸಂಭವನೀಯ. ಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. ''ರಿಟರ್ನ್'' ಕಳ್ಸಿಯಾಗಿ ಹೋಗಿದ್ದರೂ ತೊಡಕಾಗಲಿಲ್ಲ. ಲೆಕ್ಕ ಹಾಜರುಮಾಡುವ 15ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,

ನುಂಜೂರಾತಿ ಹೊಂದಿದ ಇನ್ಕಮ್ ಟೇಕ್ಸ್(ಪ್ರಾಕ್ಟೀಶನರ್) ಜ್ಯೋತಿಷಾಲಯದ ಕಟ್ಟಡ, ಕುಂದಾಪುರ ಪೋಸ್ಟ್

(೧೧ನೇ ಪುಟದಿಂದ ಮುಂದರಿಸಿದ್ದು.)

ಫೆಡರೇಶನ್ ಮುಂದುವರಿಸಲ್ಪಟ್ಟಿತು

ಇದೇ ತಾ 11ರಲ್ಲು ವೈಸರಾಯರು, ಸಿಮ್ಲಾದಲ್ಲಿ ಎಸೆಂಬ್ಲಿ ಮತ್ತು ಕೌನ್ಸಿಲ್ ಆಫ್ ಸ್ಟೇಟಿನ ಸಂಯುಕ್ತ ಸಭೆ ನಡೆಸಿ, ಯುದ್ಧದಲ್ಲಿ ಸಹಾಯದ ಆಶ್ವಾಸನೆಯಿತ್ತುದಕ್ಕಾಗಿ ಚಕ್ರವರ್ತಿಗಳು ಕಳುಹಿಸಿದ ಸಂದೇಶವನ್ನೋದಿದರು ಮತ್ತು ಪ್ರಕೃತದ ಪರಿಸ್ಥಿತಿಯಲ್ಲಿ ಫೆಡರೇಶನನ್ನು ಯುದ್ಧ ಮುಗಿಯುವ ವರೆಗೆ ಮುಂದೆಹಾಕಲಾಗುವುದೆಂದೂ, ಆದರೆ ಸರಕಾರವು ಆ ಉದ್ದೇಶವನ್ನು ಮಾತ್ರ ಬಿಟ್ಟಿಲ್ಲವೆಂದೂ ಹೇಳಿದರು. ಜರ್ಮನಿಯ ಯುದ್ಧದ ಅನೀತಿಯನ್ನು ನಿಷೇಧಿಸಿ ಹಿಂದೀಯರೆಲ್ಲರೂ ಇಂಗ್ಲೇಡಿಗೆ ಸಹಾಯಮಾಡುವ ನಿರೀಕ್ಷೆಯಿದೆಯೆಂದರು. ಹಿಂದೀ ಸೇನೆಯನ್ನು ತರಬೇತಿ ಮಾಡುವ ಮತ್ತು ಅದರ ಕಲಮಟ್ಟಿನ ವೆಚ್ಚವನ್ನು ಇಂಗ್ಲೆಂಡು ವಹಿಸುವ ಸೂಚನೆಗಳನ್ನಿತ್ತಿರುವ ಚೇಟ್ ಫೀಲ್ಡ್ ವರದಿಯು ಹಿಂದೂಸ್ಥಾನದಲ್ಲಿ ನವಮನ್ವಂತರವೊಂದನ್ನಾರಂಭಿಸುವುದೆಂದು ಅತಿಸಿದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಇದೇ ತಾ. 8ರಿಂದ ವಾರ್ಧದಲ್ಲಿ ಆರಂಭವಾಗಿ ಯುದ್ಧದ ಕುರಿತು ಈ ವರೆಗೆ ಯಾವ ನಿರ್ಣಯವನ್ನೂ ಮಾಡಿಲ್ಲ. ಎಡಪಕ್ಷೀಯ ಮುಖಂಡರಾದ ಶ್ರೀಗಳಾದ ಭೋಸ್, ಜಯಪ್ರಕಾಶ ನಾರಾಯಣ್ ಆಚಾರ್ಯ ನರೇಂದ್ರ ದೇವರೂ, ಶ್ರೀ ಅಣೆಯವರೇ ಮೊದಲಾದವರೂ ಆಮಂತ್ರಿಸಲ್ಪಟ್ಟಿದ್ದಾರೆ. ಪಂಡಿತ ಜವಾಹರಲಾಲರು ಇದೇ ತಾ. 10ನೇ ಸಂಜೆ ಬಂದು ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಪ್ರಾಮುಖ್ಯ ಭಾಗವಹಿಸಿದರು. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ತೃಪ್ತಿಪಡಿಸುವ ಠರಾವೊಂದನ್ನು ವರ್ಕಿಂಗ್ ಕಮಿಟಿಯು ಸ್ವೀಕರಿಸುವುದೆಂದು ನಂಬಲಾಗಿದೆ. ಇದರಲ್ಲಿ ಮಹಾತ್ಮ ಗಾಂಧಿಯವರು ಮುಖ್ಯ ಭಾಗವಹಿಸಿ ವೈಸರಾಯರಿಗೂ ತನಗೂ ನಡೆದ ಮಾತುಕತೆಯನ್ನು ವರ್ಕಿಂಗ್ ಕಮಿಟಿ ಮೆಂಬರರಿಗೆ ತಿಳಿಸಿರುತ್ತಾರೆ.

ಒಂದು ಲಕ್ಷ ನಾಝಿ ಫಂಡಿನ ಜಪ್ತಿ

ಹಿಂದೂದೇಶದಲ್ಲಿ ಪ್ರಚಾರಕ್ಕಾಗಿ ಸಂಗ್ರಹಿಸಲ್ಪಟ್ಟಿದ್ದ ರೂ 105000ದಷ್ಟರ ನಾಝಿಪಾರ್ಟಿ ಫಂಡನ್ನು ಸರಕಾರವು ಜಪ್ತಿಮಾಡಿ ವಶಪಡಿಸಿಕೊಂಡಿದೆ.

— ಮಾರಾಟಕ್ಕೆ ಸಿದ್ಧವಾಗಿದೆ —
ಅನಂತನ ವಸ್ತ್ರಗಳು
ಮತ್ತು
ದಾರಗಳು
ವಸ್ತ್ರಗಳು—
ಜೊತೆ 1ಕ್ಕೆ 1 ಆಣೆಯಿಂದ 2ಆಣೆವರೆಗೆ
ದಾರಗಳು—
ಜೊತೆ 1ಕ್ಕೆ 1ಆಣೆಯಿಂದ 2ಆಣೆವರೆಗೆ
ವಸ್ತ್ರಗಳು—
100ಕ್ಕೆ ರೂ 3ರಿಂದ ರೂ 4ರ ವರೆಗೆ
ದಾರಗಳು—
100ಕ್ಕೆ ರೂ. 3ರಿಂದ ರೂ. 6ರ ವರೆಗೆ
— ಉಡುಪಿ ಸ್ಟೋರ್ಸ್ —
ನಂಬ್ರ 45, ಆರ್ಕಾಡು ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಉಂಟು.

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: 1906

ಉಡುಪಿ, ಗುರುವಾರ, ತಾ. ೧೪-೯-೩೯

ಇನ್ನೊಂದು ಮಹಾ ಪ್ರಳಯವೇ?

ಪ್ರಥಮ ಲೋಕ ಯುದ್ಧವಾಗಿ ಈಗ ೨೫ ವರ್ಷಗಳಾದುದು ಮಾತ್ರ. ಆ ಭಯಂಕರ ನಾಶವನ್ನು ಸ್ಮರಿಸಿದರೆ ಮೈ ಜುಮ್ಮೆನ್ನುವುದೊಮ್ಮೆ. ಆ ಯುದ್ಧವು ಕೊನೆಗೊಂಡು ಸಂಧಾನವಾದ 1918ನೇ ನವಂಬರ ತಾ. 11ನ್ನು ಲೋಕವು ಪ್ರತಿ ವರ್ಷವೂ ತಪ್ಪದೆ ಪವಿತ್ರ ಶಾಂತಿಯ ದಿನವಾಗಿ ಆಚರಿಸಿಕೊಂಡು ಬಂದಿರುವುದು. ಅದನ್ನು ಅತ್ಯಂತ ನಿಷ್ಠೆ ಮತ್ತು ಸಂಭ್ರಮದಿಂದ ಆಚರಿಸುತ್ತಿದ್ದವರೆಂದರೆ ಯುರೋಪಿನ ರಾಷ್ಟ್ರಗಳು. ಅಲ್ಲಿಯೇ ಇಂದು ಇನ್ನೊಂದು ಮಹಾಪ್ರಳಯದ ಕಿಚ್ಚೆದ್ದಿರುವುದು. ಮಾನವನು ನಾಗರಿಕತೆಯ ತುತ್ತ ತುದಿಗೇರಿದರೂ ಕಾದಾಡುವ ಕಾಡು ಸ್ವಭಾವವು ಅವನಿಂದ ಬಿಟ್ಟು ಹೋಗುವುದಿಲ್ಲವೇ? ಸಮಾಜ ಕಂಟಕ ವೈಯಕ್ತಿಕ ಪುಂಡತನವನ್ನು ಅಣಗಿಸುವಂತೆ ಲೋಕಕಂಟಕ ರಾಷ್ಟ್ರೀಯ ಪುಂಡತನವನ್ನಣಗಿಸಲು ಸಾಧ್ಯವಿಲ್ಲವೇ? ಲೋಕ ಶಾಂತಿ, ಸೌಹಾರ್ದ ಮತ್ತು ಸುಭಿಕ್ಷೆಯೆಂಬುದು ಬಯಲು ಕಲ್ಪನೆಯಾಗಿಯೇ ಉಳಿಯುವುದೇ? ಲೋಕದಲ್ಲಿ ಚಿರಶಾಂತಿ ಸ್ಥಾಪನೆಯಾಗುವಂತೆ ಜಾಗತಿಕ ವ್ಯವಸ್ಥೆಯನ್ನೇನಾದರೂ ಮಾನವನಿಗೆ ಮಾಡಲು ಸಾಧ್ಯವೇ ಇಲ್ಲವೇ? ಎಂಬ ಪ್ರಶ್ನೆಗಳು ಈ ಸಂದರ್ಭದಲ್ಲಿ ಚಿತ್ತವೇಧಕವಾಗಿ ವಿಚಾರಿ ಮಾನವನ ಮುಂದೆ ಬಂದು ತಾಂಡವವಾಡುವವು.

ಎಂದೆಂದಿಗೂ ಯುದ್ಧವನ್ನು ಬಹಿಷ್ಕರಿಸಿ ದೂರಮಾಡಲು ಮಾನವನಿಗೆ ಸಾಧ್ಯವಿದೆಯೆಂಬ ಪ್ರಸಿಡೆಂಟ್ ವಿಲ್ಸನರ ಕಲ್ಪನೆಯೇ 1918ರಲ್ಲಿ ಲೀಗ್ ಆಫ್ ನೇಶನ್ಸಿನ ಸ್ಥಾಪನೆಗೆ ಮೂಲ ಪ್ರೇರಣೆಯಾಯಿತು. ರಾಷ್ಟ್ರಗಳೆಲ್ಲಾ ತಮ್ಮ ಕಲಹಗಳನ್ನು ಲೀಗ್ ಆಫ್ ನೇಶನ್ಸಿನ ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಬೇಕೇ ಹೊರತು ತಾವಾಗಿ ಹೋರಾಟ ನಡಿಸಬಾರದು. ಎಲ್ಲಾ ರಾಷ್ಟ್ರಗಳೂ ಶಸ್ತ್ರತ್ಯಾಗಮಾಡಬೇಕು. ಲೋಕದಲ್ಲಿ ಶಾಂತಿಯು ಸ್ಥಿರವಾಗಿ ನೆಲೆಗೊಳ್ಳುವಂತಾಗಬೇಕೆಂಬ ಉದ್ದೇಶದಿಂದಲೇ ಲೀಗ್ ಆಫ್ ನೇಶನ್ಸು ಸ್ಥಾಪಿತವಾದುದು. ಆದರೆ ಇಂದದರ ಗತಿಯಾದರೂ ಏನು? ಅದನ್ನು ಗಣ್ಯಮಾಡುವವರಾದರೂ ಯಾರು? ಇದಕ್ಕೆ ಕಾರಣವೇನು? ಫೆಸಿಸ್ಟರನ್ನು ಬೆಳೆಯಬಿಟ್ಟವರಾರು? ಮುಸಲೋನಿ ಮತ್ತು ಹಿಟ್ಲರರ ಬೆನ್ನು ತಟ್ಟುವ ಧೋರಣೆ ವಹಿಸಿದವರಾರು? ಆಕ್ರಮಣಶೀಲ ಪುಂಡುಸ್ವಭಾವವನ್ನು ಮೊಳಕೆಯಲ್ಲೇ ಮುರಿದೊಗೆಯದೆ ಹುಲುಸಾಗಿ ಬೆಳೆಯಬಿಟ್ಟವರಾರು? ಲೋಕದಲ್ಲಿ ಪ್ರಬಲವಾಗುತ್ತಿರುವ ಸಮತಾವಾದಿ ಆಂದೋಲನದ ಪ್ರಭಾವವನ್ನು ತಡೆಗಟ್ಟಲು ಲೀಗ್ ಆಫ್ ನೇಶನ್ಸನ್ನು ತಮ್ಮ ಕೈಗೊಂಬೆಯಾಗಿ ಉಪಯೋಗಿಸಿದವರಾರು? ಕಡೆಗೂ ಸಮತಾವಾದಿ ಸೋವಿಯೆಟ್ ರಶ್ಯವನ್ನು ಮನ್ನಿಸದೆ ತಿರಸ್ಕರಿಸಿ ಹಿಟ್ಲರನ ಕಡೆಗದನ್ನು ದೂಡಿ ಇಂದಿನ ಮಹಾಯುದ್ಧವನ್ನು ಬರಮಾಡಿಸಿದವರಾರು? ಹಿಟ್ಲರನು ಲೋಕಕಂಟಕ; ನಾಝಿ ವಾದವು ಅಳಿಯದೆ ಲೋಕವು ಉಳಿಯುವ ಹಾಗಿಲ್ಲೆಂಬ ಕೂಗೀಗ ಎಲ್ಲೆಲ್ಲಿಂದಲೂ ಕೇಳಿಬರುತ್ತಿರುವುದು. ಆದರೆ ನಾಝಿ ಮತ್ತು ಫೆಸಿಸ್ಟ ವಾದ ಮಾತ್ರ ಅಳಿದರೆ ಸಾಕೆ? ಸಾಮ್ರಾಜ್ಯವಾದವೂ ಅಳಿಯಬೇಡವೇ? ಈಗ ಸಾಮ್ರಾಜ್ಯ ಕಟ್ಟುವುದು ತಪ್ಪಾದರೆ ಹಿಂದೆ ಕಟ್ಟಿದುದೂ ತಪ್ಪಲ್ಲವೇ? ಅವುಗಳೂ ಕೊನೆಗೊಳ್ಳಬೇಡವೇ? ಮುಸಲೋನಿ ಹಿಟ್ಲರರ ಕಣ್ಣು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಮೇಲಲ್ಲವೇ? ಅಂದ ಮೇಲೆ 'ಫೆಸಿಸ್ಮ್' ಬೆಳೆಯಲು ಇಂಪೀರಿಯಲಿಸ್ಮ್' ಕಾರಣವಲ್ಲವೇ? ಫೆಸಿಸ್ಮ್ ಅಳಿಯಬೇಕಾದರೆ ಇಂಪೀರಿಯಲಿಸ್ಮ ಕೂಡಾ ಅಳಿಯಬೇಡವೇ?

ಲೀಗ್ ಆಫ್ ನೇಶನ್ಸ್ ನಿರ್ನಾಮವಾಗಲು ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯ ಸ್ವಾರ್ಥವೇ ಮೂಲ ಕಾರಣ. ಆದುದರಿಂದ ಈಗ ನಾಝಿ ಆಳ್ವಿಕೆಯು ಲೋಕಕಂಟಕವೆಂದೂ, ಪ್ರಜಾಸತ್ತೆಗೆ ದೊಡ್ಡ ಗಂಡಾಂತರವೆಂದೂ, ಬಲವೇ ನ್ಯಾಯವೆಂಬ ಅನ್ಯಾಯದ ಪ್ರಾದುರ್ಭಾವವೆಂದೂ ಅದನ್ನು ನಾಶಮಾಡಲು, ಇಡೀ ಲೋಕವನ್ನೇ ಯುದ್ಧಕ್ಕೆಳೆದಿರುವ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ತಮ್ಮ ಮುಂದಾದರೂ ಸಾಮ್ರಾಜ್ಯ ಸ್ವಾರ್ಥವನ್ನು ಬಿಡದಿದ್ದಲ್ಲಿ ಲೋಕ ಶಾಂತಿಯಾಗಲಿ, ಕಲ್ಯಾಣವಾಗಲಿ ಆಗಲಾರದು. ಮಾನವ ಬಾಂಧವ್ಯವು ಬರೇ ಕಲ್ಪನೆಯಾಗಿಯೇ ಉಳಿಯುವುದು. ಈ ಯುದ್ಧದ ಪರಿಣಾಮವೇನಾಗುವುದೆಂಬ ಕುರಿತು ನಮಗೇನೂ ಸಂಶಯವಿಲ್ಲ. ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಕಟ್ಟಕಡೆಗೆ ಜರ್ಮನಿಯ ನಾಝಿ ಆಳ್ವಿಕೆಯನ್ನು ನಾಶ ಮಾಡುವುದಂತೂ ನಿಶ್ಚಯ. ಆದರೆ ಅದಕ್ಕಾಗಿ ಲಕ್ಷಾಂತರ ಮಾನವರು ಪ್ರಾಣ ಬಲಿಕೊಡಬೇಕಾಗುವುದು. ಸಹಸ್ರಗಟ್ಲೆ ವೀರ ಸೈನಿಕರ ರಕ್ತವು ಕಾಲುವೆಯಾಗಿ ಹರಿಯಬೇಕಾಗುವುದು. ಕೋಟಿಗಟ್ಲೆ ಧನ ಮತ್ತು ಸೊತ್ತು ನಾಶವಾಗುವುದು. ಯುರೋಪಿನ ನಾಗರಿಕತೆಯೇ ನಿರ್ನಾಮವಾಗುವ ಸಂಭವ ಬರಬಹುದು. ಇಡೀ ಲೋಕವೇ ಅಪಾರ ಕಷ್ಟನಷ್ಟಗಳಿಗೊಳಗಾಗಬೇಕಾಗುವುದು. ಮುಂದೆಯಾದರೂ ಇಂತಹ ಪರಿಸ್ಥಿತಿಯುಂಟಾಗದಂತಾಗಬೇಕಾದರೆ ನಾಝಿಸ್ಮಿನೊಂದಿಗೆ ಇಂಪೀರಿಯಲಿಸ್ಮ ಕೂಡಾ ಅಳಿಯಬೇಕು. ಲೋಕದ ಎಲ್ಲಾ ಮಾನವರೂ ಸರಿಸಮಾನರಾಗಿ ಎಲ್ಲಾ ರಾಷ್ಟ್ರಗಳೂ ಸಮಾನವಾಗಬೇಕು. ಈಗಿರುವ ರಾಷ್ಟ್ರೀಯ ಸಾಮ್ರಾಜ್ಯಗಳೆಲ್ಲಾ ಅಳಿದು ಲೋಕಸಾಮ್ರಾಜ್ಯವು ಸ್ಥಾಪಿಸಲ್ಪಡಬೇಕು. ಪ್ರತಿಯೊಂದು ರಾಷ್ಟ್ರವೂ ಶಸ್ತ್ರತ್ಯಾಗ ಮಾಡಿ ಸೇನಾಸಂಗ್ರಹವೇ ನಿಷೇಧಿಸಲ್ಪಡಬೇಕು. ಲೋಕಸಾಮ್ರಾಜ್ಯದ ಅಧೀನದಲ್ಲಿ ಅಲ್ಲಲ್ಲಿ ಶಾಂತಿ ಮತ್ತು ವ್ಯವಸ್ಥೆಗಾಗಿ ಸೈನ್ಯವು ಇರಿಸಲ್ಪಡಬೇಕು. ಆಗ ಮಾತ್ರ ಲೋಕಶಾಂತಿ ಸೌಹಾರ್ದ ಮತ್ತು ಸುಭಿಕ್ಷೆಯು ನೆಲೆಗೊಳ್ಳಬಹುದು. ಅಂತಾದರೆ ಈಗ ಮಾನವನ ಕೋಟಿಯ ಇಂದಿನ ಮಹತ್ತಾದ ತ್ಯಾಗವು ಸಾರ್ಥಕವಾಗುವುದು, ಮುಂದೆ ಲೋಕಕ್ಕೆ ಇಂಥ ಗಂಡಾಂತರವುಂಟಾಗದಂತಾಗುವುದು.

ಹಿಂದೂದೇಶ ಮತ್ತು ಯುದ್ಧ

ಈ ಸಂದರ್ಭದಲ್ಲಿ ಹಿಂದೂದೇಶವು ಏನುಮಾಡಬೇಕೆಂಬ ಪ್ರಶ್ನೆಯು ದೊಡ್ಡ ಸಮಸ್ಯೆಯಾಗಿರುವುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ಕುರಿತು ಆಳವಾಗಿ ವಿಚಾರಿಸಿ ನಿರ್ಧರಿಸಲಿರುವರು. ಕಳೆದ ಮಹಾಯುದ್ಧದ ಪಾಠವನ್ನು ಹಿಂದೀಯರು ಎಂದೂ ಮರೆಯಲಾರರು. ಸ್ವಾತಂತ್ರ್ಯ ವೇದಿಕೆಯಲ್ಲಿ ಸರ್ವಸ್ವವನ್ನೂ ಬಲಿಗೊಡಲು ಸೊಂಟಕಟ್ಟಿರುವ ಪೋಲಂಡಿನ ಕಡೆಗೆ ಹಿಂದೀಯರ ಹೃದಯವು ಸ್ವಾಭಾವಿಕವಾಗಿ ಹರಿಯದಿರಲಾರದು. ಯಾಕೆಂದರೆ ಪೋಲಂಡು ಇದ್ದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಕಾದಾಡುತ್ತಿರುವುದು. ಹಿಂದೀಯರು ಇಲ್ಲದ ಸ್ವಾತಂತ್ರ್ಯವನ್ನು ಪಡಕೊಳ್ಳಲು ಹೋರಾಡುವರು. ಪೋಲರ ಸ್ವಾತಂತ್ರ್ಯಕ್ಕಾಗಿ ಇಂಗ್ಲೆಂಡು ಭಯಂಕರ ಯುದ್ಧ ಹೂಡಿರುವಾಗ ಹಿಂದೀಯರಿಗೆ ಅದೇ ಸ್ವಾತಂತ್ರ್ಯವನ್ನು ನಿರಾಕರಿಸಿದರೆ ಹೇಗೆ? 'ಇಂಗ್ಲೆಂಡಿನ ಅಪಾಯ ಹಿಂದೀಯರ ಉಪಾಯ'ವೆಂಬ ಧೋರಣೆಯನ್ನು ಕಾಂಗ್ರೆಸು ಈಗ ವಹಿಸುವುದು ಯುಕ್ತವಾಗದಿದ್ದರೂ, ಸರ್ ತೇಜ ಬಹದ್ದೂರ ಸಪ್ರು ಮೊದಲಾದ ಮಂದಗಾಮಿಗಳನ್ನುವಂತೆ ಹಿಂದೀ ಸ್ವಾತಂತ್ರ್ಯದ ಕುರಿತು ಬ್ರಿಟಿಷ್ ಸರಕಾರದಿಂದ ಯಾವ ತರದ ಆಶ್ವಾಸನೆಯೂ ಇಲ್ಲದೆ ಕಾಂಗ್ರೆಸಿನವರು ಸಹಕಾರವೀಯುವುದು ವಿವೇಕವಾಗಲಾರದು. ದೇಶಘಾತುಕವಾದ ಫೆಡರೇಶನು ಕೂಡಲೇ ತೆಗೆದುಹಾಕಲ್ಪಟ್ಟು, ಕೆನಡಾ, ಆಸ್ಟ್ರೇಲಿಯಾ ಮೊದಲಾದ ಇತರ ಸಾಮಂತ ರಾಜ್ಯಗಳಂತಹ ಸ್ವಾತಂತ್ರ್ಯವನ್ನಾದರೂ ಹಿಂದೂದೇಶಕ್ಕೀಯುವ ಆಶ್ವಾಸನೆಯನ್ನು ಬ್ರಿಟಿಷ್ ಸರಕಾರವು ಈ ಸಂದರ್ಭದಲ್ಲಿ ಕೊಡುವ ಉದಾರತೆ ತೋರಿಸಿದರೆ ಕಾಂಗ್ರೆಸಿನವರೂ ಉದಾರ ಧೋರಣೆವಹಿಸದಿರಲಾರರು.

ದೀರ್ಘ ಕಾಲದ ಭೀಕರ ಯುದ್ಧ

ಬ್ರಿಟಿಷ್ ಯುದ್ಧ ಮಂತ್ರಿಮಂಡಲವು ೩ ವರ್ಷಗಳವರೆಗಣ ಪ್ರಬಲ ಯುದ್ಧ ಸಿದ್ಧತೆ ಮಾಡಿದೆ. "ಇನ್ನು ಕೆಲವೇ ದಿವಸಗಳಲ್ಲಿ ಪೋಲಿಶ್ ಸೇನೆಯು ಜರ್ಮನರ ಕೈಯೊಳಗೆ ಸಿಕ್ಕುವುದು. ಅದನ್ನು ಸಂಪೂರ್ಣ ಬಗ್ಗುಬಡಿಯಲು ೪ ವಾರಗಳಿಗಿಂತ ಹೆಚ್ಚು ಸಮಯ ಬೇಕಾಗದು. ಜರ್ಮನಿಯು ಫ್ರೆಂಚ್ ಎಲ್ಲೆಯನ್ನು ರಕ್ಷಿಸಿಕೊಳ್ಳುವುದೇ ಹೊರತು ತಾನಾಗಿ ಮೇಲೆ ಬಿದ್ದು ಯುದ್ಧ ಮಾಡಲಾರದು. ಅದೀಗ ಶಾಂತಿಗೆ ಸಿದ್ಧವಾಗಿದೆ. ಮಿ. ಚೇಂಬರ್ಲೇನರೇ! ಈಗ ಜೀವನ ಅಥವಾ ಮರಣವೆಂಬುದನ್ನು ನಿಶ್ಚೈಸುವ ಜವಾಬ್ದಾರಿ ನಿಮ್ಮದು. ಆದರೆ ಇನ್ನೊಮ್ಮೆ ವರ್ಸಲೆ ಒಪ್ಪಂದವು ಎಂದೆಂದಿಗೂ ಆಗಲಾರದು" ಎಂದು ಮಾರ್ಶಲ್ ಗೋರಿಂಗರು ಉದ್ಘೋಷಿಸಿರುವರು. ಅಂದರೆ ಒಂದೋ ವಿಜಯಿ ಜರ್ಮನಿಯು ತನ್ನಿಚ್ಛೆಯ ಸಂಧಿಮಾಡಿಕೊಳ್ಳುವುದು. ಇಲ್ಲವೆ ಸಂಪೂರ್ಣ ನಾಶವಾಗುವುದು. ಪರಂತು ಎಂದಿಗೂ ಶರಣಾಗತವಾಗಲಾರರೆಂದರ್ಥ. ಜರ್ಮನ್ ಪ್ಲೇನಿನಂತೆಯೇ ಪೂರ್ವದಲ್ಲಿ ಯುದ್ಧ ನಡೆದು ಪೋಲಂಡು ನಿರ್ನಾಮವಾದ ಪಕ್ಷದಲ್ಲಿಯೂ ಪಶ್ಚಿಮದಲ್ಲಿ ಯುದ್ಧವು ಕೊನೆಗೊಳ್ಳಲಾರದು. ನಾಝಿ ಆಳ್ವಿಕೆಯು ಸಂಪೂರ್ಣ ನಾಶವಾಗದೆ ಜರ್ಮನಿಯು ಶಾಂತಿಯನ್ನಪೇಕ್ಷಿಸಿದರೂ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಹೋರಾಟವನ್ನು ನಿಲ್ಲಿಸಲಾರವು. ಆದುದರಿಂದ ಅವುಗಳು ದೀರ್ಘ ಕಾಲದ ಭೀಕರ ಯುದ್ಧ ಸಿದ್ಧತೆ ಮಾಡಿರುವವು.

ಪೋಲಂಡನ್ನು ಬೇಗನೆ ಗೆಲ್ಲಲು ಸಾಧ್ಯವಿಲ್ಲ

ಆದರೆ ಪೂರ್ವದಲ್ಲಿ ಮಾರ್ಶಲ್ ಗೋರಿಂಗರು ಬಡಾಯಿಕೊಚ್ಚಿದಂತೆ ಜರ್ಮನರು ವಿಜಯಹೊಂದುತ್ತಿರುವುದಿಲ್ಲ. ವಾರ್ಸೋ ಪಟ್ಟಣದಲ್ಲಿ ಭೀಕರ ಕದನ ನಡೆದಿದೆ. ಅದಿನ್ನೂ ಜರ್ಮನರ ವಶವಾಗಲಿಲ್ಲ. ಜರ್ಮನರು ಮಾತ್ರ ಇನ್ನು ಪೋಲಂಡು ತಮ್ಮ ವಶವಾದಂತೆಂದು ಅದನ್ನು ಜರ್ಮನಿಗೆ ಸೇರಿಸಿಕೊಳ್ಳುವ ಸಿದ್ಧತೆ ಮಾಡುತ್ತಿರುವರು. ಆದರೆ ಪೋಲರು, ಗಂಡಾಂತರದಲ್ಲಿ ಮತ್ತಷ್ಟು ಧೈರ್ಯದಿಂದ ಅದರ ಎ

ಚಂದಾದಾರರಲ್ಲಿ ವಿನಂತಿ.

ಕಳೆದ ತಿಂಗಳಾಂತ್ಯಕ್ಕೆ ನವಯುಗದ 18ನೇ ವರ್ಷವು ಕೊನೆಗೊಂಡು ಇದೇ ಸಪ್ಟಂಬರದಿಂದ 19ನೇ ವರ್ಷವು ಆರಂಭಿಸಿರುವದಷ್ಟೆ. ಈ ಕಾಲಕ್ಕೆ ಚಂದಾ ಅವಧಿ ಮುಗಿದ ಚಂದಾದಾರರಲ್ಲಿ ಕೆಲವರು ಇನ್ನೂ ತಮ್ಮ ಚಂದಾಹಣ ಕಳಿಸಿರುವದಿಲ್ಲ. ಅವರು ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಚಾಲ್ತಿ ಚಂದಾ ಬಾಕಿ ಆದವರು ವರ್ಷಾಂತ್ಯದವರೆಗೆ ಕಾಯದೆ ಅದನ್ನು ವರ್ಷದ ಪ್ರಾರಂಭದಲ್ಲೇ ಕಳಿಸಬೇಕಾಗಿ ವಿನಂತಿ. —ಮ್ಯಾನೇಜರ್.

× ದೀರ್ಘ ಕಾಲದ ಭೀಷಣ ಸಂಗ್ರಾಮ ×

ಫ್ರೆಂಚ್ ಸೇನೆಯು ಜರ್ಮನ್ ಎಲ್ಲೆಗೆ ನುಗ್ಗಿತು.

ವಾರ್ಸೋದಲ್ಲಿ ಭೀಷಣ ಹೋರಾಟ ನಡೆಯುತ್ತಿದೆ !

ದಿಟ್ಟ ಹೋರಾಡುವ ವೀರರು. 1930ರಲ್ಲಿ ರಸ್ಯಾನರು ವಾರ್ಸೋ ಪಟ್ಟಣದ ಹೊರವಳಯದವರೆಗೆ ಮುಂಬೊತ್ತಿದ್ದರೂ ಧೃತಿಗೆಡದೆ ಅಸಾಧಾರಣ ಸ್ಥೈರ್ಯದಿಂದ ಕಾದಾಡಿ ಪೋಲರು ಅವರನ್ನು ಹಿಂದಕ್ಕಟ್ಟಿದ್ದರು. ಈಗಲೂ ಅದೇ ರೀತಿ ಅವರು ವಾರ್ಸೋ ಪಟ್ಟಣವನ್ನು ವೀರಾವೇಶದಿಂದ ರಕ್ಷಿಸುತ್ತಿದ್ದಾರೆ. ಒಮ್ಮೆ ಮುಂದೊತ್ತಿ ಬಂದ ಜರ್ಮನ್ ಸೇನೆಯನ್ನು ಹಿಮ್ಮೆಟ್ಟಿಸಿರುತ್ತಾರೆ. ಜರ್ಮನ್ ಸೇನೆಯಲ್ಲಿ ಇಷ್ಟರಲ್ಲಿಯೇ ಯುದ್ಧದ ಆಯಾಸವು ತೋರಿಬಂದಿದೆ. ಹಿಟ್ಲರರು ಸ್ವತಃ ಪೂರ್ವ ರಣರಂಗಕ್ಕೆ ಹೋಗಿ ಸಿಲಿಸಿಯದಲ್ಲಿ ತನ್ನ ಕೇಂದ್ರವನ್ನು ಸ್ಥಾಪಿಸಿ ಜರ್ಮನರನ್ನು ಹುರಿದುಂಬಿಸುತ್ತಿದ್ದಾರೆ. ಗಿಡ್ನಿಯಾ ಮತ್ತು ಡಾನ್ಸಿಗಿನಿಂದ ಇಷ್ಟರವರೆಗೆ ಪೋಲಿಶ್ ಸೇನೆಯನ್ನು ಸಂಪೂರ್ಣವಾಗಿ ಹೊರಹಾಕಲು ಜರ್ಮನರಿಗೆ ಸಾಧ್ಯವಾಗಿರುವುದಿಲ್ಲ. ಪೋಲಿಶ್ ಅಶ್ವಾರೋಹಿ ಸೇನೆಯು ಜರ್ಮನ್ ಪ್ರದೇಶದ ಮೇಲೆ ಧಾಳಿ ನಡೆಸುತ್ತಿದೆ. ಅವರ ವಿಮಾನಪಡೆಯೂ ಬರ್ಲಿನಿನ ಮೇಲೆ ಧಾಳಿ ನಡಿಸಿದೆ. ಆದರೆ ಅವರ ಮುಖ್ಯ ಕೈಗಾರಿಕ ಪ್ರದೇಶವಾದ ಸಿಲೀಸಿಯವು ಜರ್ಮನರ ಅಧೀನವಾಗಿದೆ. ಸಮುದ್ರ ಪ್ರದೇಶವು ಬಂದುಮಾಡಲ್ಪಟ್ಟಿದೆ. ಇದು ಪೋಲಂಡಿಗೆ ದೊಡ್ಡ ಪೆಟ್ಟಾಗಿದೆ. ಆದರೂ ಪೋಲಂಡನ್ನು ಜರ್ಮನರಿಗೆ ಬೇಗನೆ ಗೆಲ್ಲಲು ಸಾಧ್ಯವಾಗಲಾರದು.

ಫ್ರೆಂಚರು ಜರ್ಮನಿಗೆ ಪ್ರವೇಶಿಸಿದ್ದಾರೆ

ಫ್ರೆಂಚರು ಇಷ್ಟರಲ್ಲೇ ಅಭೇದ್ಯವೆನಿಸುವ ಜರ್ಮನರ ಸಿಗ್ ಫ್ರಿಡ್ ಕೋಟೆಗಳನ್ನು ದಾಟಿ ಮುಂದುವರಿದು ಜರ್ಮನ್ ಪ್ರದೇಶಕ್ಕೆ ಪ್ರವೇಶಮಾಡಿದ್ದಾರೆ. ಸಾರ್ ಪ್ರದೇಶದ ಜರ್ಮನ್ ವಿಮಾನನಿಲಯವೊಂದು ವೈರಿಗಳ ಕೈವಶವಾಗಬಾರದೆಂದು ಜರ್ಮನರೇ ನಾಶಮಾಡಿದ್ದಾರೆ. ಇಂದಮೇಲೆ ಸಿಗ್ ಫ್ರಿಡ್ ಕೋಟೆಯು ಅಭೇದ್ಯವೆಂಬುದು ಸುಳ್ಳಾಯಿತು. ಇದರಿಂದ ಜರ್ಮನರ ವಿಶ್ವಾಸಕ್ಕೆ ದೊಡ್ಡ ಘಾತವುಂಟಾಗದಿರಲಾರದು. ಪಶ್ಚಿಮವು ಅಜೇಯವಿದೆ. ತನಗೇನೂ ಭೀತಿಯಿಲ್ಲೆಂಬ ಹಿಟ್ಲರರ ಭ್ರಾಂತಿಯ ಪರದೆಯು ಇಷ್ಟರಲ್ಲೇ ಹರಿಯಲ್ಪಟ್ಟಿದ. ರೂರ್ ಪ್ರದೇಶದ ಕೆಲಸಗಾರರಲ್ಲಿ ಮೊದಲೇ ಅತೃಪ್ತಿಯಿದೆ. ಜರ್ಮನ್ ಜನತೆಯಲ್ಲಿ ಅತೃಪ್ತಿಯೆದ್ದು ನಾಝಿಗಳ ಆಟವು ನಡೆಯದಂತಾಗುವುದೇನೂ ಅಸಂಭವವಲ್ಲ. 1914ರಲ್ಲಿ ಜರ್ಮನಿಯ ಶಕ್ತಿಯನ್ನು ಕುಂದಿಸಿದುದು ಮಿತ್ರರಾಷ್ಟ್ರಗಳ ಸಾಂಪತ್ತಿಕ ಮುತ್ತಿಗೆ. ಅದೇ ರೀತಿ ಈಗಲೂ ಇಷ್ಟರಲ್ಲೇ ಸಾಂಪತ್ತಿಕ ಮುತ್ತಿಗೆ ಹಾಕಲ್ಪಟ್ಟಿದೆ. ಜರ್ಮನ್ ಜನತೆಯಲ್ಲಿ ಅತೃಪ್ತಿಯನ್ನೆಬ್ಬಿಸಲು ಪ್ರಚಂಡ ಪ್ರಯತ್ನ ನಡೆದಿದೆ. ಕಟ್ಟಕಡೆಗೆ ಜರ್ಮನಿಯ ಅಪಜಯ ನಿಶ್ಚಯ.

ಆದರೂ ಬೇಗನೆ ಸೋಲು ಗೆಲು ನಿಶ್ಚಯವಾಗುವ ಹಾಗಿಲ್ಲ. ಮೂರು ನಾಲ್ಕು

ಫೆಡರೇಶನ್ ಮುಂದೆ ಹಾಕಲ್ಪಟ್ಟಿತು.

ವರ್ಷ ಯುದ್ಧ ನಡೆದರೂ ನಡೆಯಬಹುದು. ಆರಂಭದಲ್ಲಿ ಜರ್ಮನಿಯು ಕೆಲವು ವಿಜಯಗಳನ್ನು ಪಡೆದೇ ಪಡೆಯುವುದು. ಆದರೆ ಕಟ್ಟಕಡೆಗೆ ಮಿತ್ರರಾಷ್ಟ್ರಗಳ ಹೆಚ್ಚಿನ ಸಹನಾಶಕ್ತಿಯಿಂದ ಜರ್ಮನಿಯ ಅಪಜಯ ನಿಶ್ಚಯ. ಜರ್ಮನಿಯು ಒಂದು ವೇಳೆ ಬೇಗನೆ ಪೋಲೆಂಡನ್ನು ಗೆಲ್ಲುವಂತಾದರೆ ಪಶ್ಚಿಮ ರಣರಂಗದ ರಕ್ಷಣೆಗಾಗಿ 60ರಿಂದ 70 ದಳ ಜರ್ಮನ್ ಸೇನೆಯು ಹೆಚ್ಚಾಗಿ ದೊರೆಯುವುದು. ಆಗ ಫ್ರೆಂಚ್ ಸೇನೆಯು ಜರ್ಮನಿಯ ಮೇಲೆ ಜಯಶೀಲವಾಗಿ ಧಾಳಿ ನಡಿಸಲು ಸಾಧ್ಯವಿಲ್ಲೆಂದು ಜರ್ಮನರ ನಿರೀಕ್ಷೆ. ಪಶ್ಚಿಮದಲ್ಲಿ ಜರ್ಮನಿಯು ತಾನಾಗಿ ಮೇಲೆ ಬೀಳಹೋಗದೆ ಬ್ರಿಟಿಷ್ ಮತ್ತು ಫ್ರೆಂಚ್ ಸೇನೆಯ ಧಾಳಿಯನ್ನು ತಡೆಗಟ್ಟಿ ತಟಸ್ಥವಾಗಿ ನಿಲ್ಲುವುದು. ಒಂದು ಸೇನೆಯು ಇನ್ನೊಂದಕ್ಕಿಂತ ಮೂರು ಪಾಲಷ್ಟು ದೊಡ್ಡದಾಗಿಲ್ಲದಿದ್ದರೆ ಒಂದರ ಮೇಲೊಂದು ಬಿದ್ದು ಜೈಸಲು ಸಾಧ್ಯವಿಲ್ಲೆಂದು ಕಳೆದ ಯುದ್ಧದ ಅನುಭವದಿಂದ ಸಿದ್ಧವಾಗಿದೆ. ಅದು ಅಸಾಧ್ಯವಿರುವುದರಿಂದ ಪಶ್ಚಿಮ ರಣರಂಗದಲ್ಲಿ ದೀರ್ಘ ಕಾಲದ ವರೆಗೆ ಭೀಕರ ಹೋರಾಟ ನಡೆಯುವುದೇ ಹೊರತು ಶೀಘ್ರ ಜಯಾಪಜಯವು ಸಾಧ್ಯವಿಲ್ಲ.

ಸಾಂಪತ್ತಿಕ ಮುತ್ತಿಗೆಯಿಂದಲೇ ಜಯದೊರೆಯಬೇಕು

ಮುಖ್ಯವಾಗಿ ಸಾಂಪತ್ತಿಕ ಮುತ್ತಿಗೆಯಿಂದಲೇ ಅಪಜಯ ಬರಬೇಕು. ಜರ್ಮನ್ ಜನತೆಯು ತೀವ್ರ ಸಾಂಪತ್ತಿಕ ಮುಗ್ಗಟ್ಟಿಗೊಳಗಾಗಿ ನಾಝಿಗಳಿಗೆ ಎದುರು ನಿಲ್ಲಬೇಕು. ಈ ಕೆಲಸವು ಪ್ರಾಮುಖ್ಯವಾಗಿ ಬ್ರಿಟನರಿಂದ ನಡೆಯಬೇಕಾಗಿದೆ. ಇಂಗ್ಲಂಡಿನ ಪ್ರಚಂಡ ನೌಕಾಬಲದಿಂದ ಇದು ಸಾಧ್ಯವಿದೆ. ಇಂಗ್ಲಂಡಿಗೆ ಮೂರರಲ್ಲಿ ಎರಡಂಶ ಆಹಾರಸಾಮಗ್ರಿಗಳು ಹೊರಗಿಂದ ಬರಬೇಕು. ಆದುದರಿಂದ ಮೊದಲಾಗಿ ಬ್ರಿಟಿಷ್ ನಾವೆಗಳು ಬ್ರಿಟನಿಗೆ ಆಹಾರಸಾಮಗ್ರಿಗಳನ್ನು ತಂದುಕೊಡಬೇಕು. ಅವು ವೈರಿಗಳಿಗೆ ಸಿಗದಂತೆ ತಡೆಗಟ್ಟಬೇಕು. ಈ ಕೆಲಸಕ್ಕಾಗಿ ಬ್ರಿಟಿಷ್ ಹಡಗಗಳು ಉತ್ತಮ ಸಿದ್ಧತೆ ಪಡೆದಿವೆ. ಬಾಲ್ಟಿಕ್ ಸಮುದ್ರದ ಹೊರತು ಇತರ ಎಲ್ಲಾ ಸಮುದ್ರ ಮಾರ್ಗಗಳೂ ಇಂಗ್ಲೆಂಡಿನ ಅಧೀನವಿರುತ್ತವೆ. ಜನರಲ್ ಫ್ರೇಂಕೋರವರು ತಟಸ್ಥರಾಗಿ ನಿಂತುದರಿಂದ ಬಹಳ ಪ್ರಯೋಜನ. ಜರ್ಮನ್ ಜಲಾಂತರ್ಗಾಮಿ ನಾವೆಗಳ ಹಾವಳಿಯು ದೊಡ್ಡ ತೊಡಕಾಗಿದೆ. ಸಮುದ್ರಗಳಲ್ಲೀಗ ಜರ್ಮನ್ ಹಡಗಗಳೇನೂ ಸಂಚರಿಸುವುದಿಲ್ಲ. ಹೆಚ್ಚಾಗಿ ಸಂಚರಿಸುವುದೆಂದರೆ ಬ್ರಿಟಿಷ್ ಹಡಗಗಳು. ಆದುದರಿಂದ ಜರ್ಮನ್ ಜಲಾಂತರ್ಗಾಮಿ ನಾವೆಗಳು ಅವುಗಳನ್ನು ಭೇದಿಸಿ ಬ್ರಿಟಿಷ್ ಹಡಗ ಸಂಚಾರಕ್ಕೆ ತೊಡಕನ್ನುಂಟುಮಾಡುವುದರಲ್ಲಿ ನಿರತವಾಗಿವೆ. ಆದರೆ ಈಗ 1917ರಂತೆ ಹಡಗಗಳನ್ನು ನಾಶಮಾಡಲು ಜರ್ಮನರಿಗೆ ಸಾಧ್ಯವಿಲ್ಲ. 1917ನೇ ಎಪ್ರಿಲ್ ತಾ. 19ರಲ್ಲಿ ಒಂದೇ ದಿನದಲ್ಲಿ 11 ಬ್ರಿಟಿಷ್ ವ್ಯಾಪಾರಿ ಮತ್ತು 8 ಮೀನು ಹಿಡಿಯುವ ಹಡಗಗಳು ಮುಳುಗಿಸಲ್ಪಟ್ಟಿದ್ದವು. ಎಪ್ರಿಲ್ ಇಡೀ ತಿಂಗಳುಗಳಲ್ಲಿ ಒಟ್ಟು 377 ಬ್ರಿಟಿಷ್ ಮತ್ತು ಮಿತ್ರ ರಾಷ್ಟ್ರಗಳ ಹಡಗುಗಳು 118 ತಟಸ್ಥ ರಾಷ್ಟ್ರಗಳ ಹಡಗುಗಳು ಮುಳುಗಿಸಲ್ಪಟ್ಟಿದ್ದವು. ಯುದ್ಧ ಆರಂಭವಾದಂದಿನಿಂದ ಇಷ್ಟರವರೆಗೆ ಜರ್ಮನ್ ಜಲಾಂತರ್ಗಾಮಿ ನಾವೆಗಳು 5 ಬ್ರಿಟಿಷ್ ಮತ್ತು 3 ಇತರ ಹಡಗಗಳನ್ನು ಮಾತ್ರ ಮುಳುಗಿಸಿರುತ್ತವೆ. ಜಲಾಂತರ್ಗಾಮಿ ನಾವೆಗಳು ಸಮೀಪಿಸುವುದನ್ನು ಕೂಡಲೇ ಕಂಡುಕೊಂಡು ಅವನ್ನು ನಾಶಮಾಡುವ ಸಾಧನವೊಂದನ್ನು ಬ್ರಿಟಿಷರೀಗ ಕಂಡುಹಿಡಿದಿರುತ್ತಾರೆ. ಮತ್ತು ವ್ಯಾಪಾರಿ ಹಡಗುಗಳಿಗ ಯುದ್ಧನಾವೆಗಳ ರಕ್ಷಣೆಯನ್ನೀಯಲಾಗುತ್ತದೆ. ಆದುದರಿಂದ ಈ ಸಲ ಜರ್ಮನ್ ಜಲಾಂತರ್ಗಾಮಿ ನಾವೆಗಳಿಂದ ಹೆಚ್ಚಿನ ಹಾವಳಿಯ ಅಪಾಯವಿರಲಾರದು.

ಮುತ್ತಿಗೆಯೂ ಶೀಘ್ರ ಪರಿಣಾಮಕಾರಿಯಾಗಲಾರದು

ಈ ಸಲ ತಟಸ್ಥ ಪ್ರದೇಶಗಳ ಪ್ರದೇಶವು ವ್ಯಾಪಕವಾಗಿರುವುದರಿಂದ ಜರ್ಮನರು ಯುದ್ಧಕ್ಕಾಗಿ ಬೇಕಾದ ಪೂರ್ವಸಿದ್ಧತೆಗಳನ್ನು ಮೊದಲೇ ಮಾಡಿರುವುದರಿಂದ ಅತ್ಯಂತ ಕಠಿಣವಾದ ಸಾಂಪತ್ತಿಕ ಮುತ್ತಿಗೆಯಿಂದ ಕೂಡಾ ಶೀಘ್ರ ಪರಿಣಾಮವಾಗಲಾರದು.

ಜರ್ಮನ್ ಸೇನೆ ಹಿಂದೆ ಸರಿದಿದೆ

ಜರ್ಮನ್ ಸೇನೆಯು ಇಷ್ಟರ ವರೆಗೆ ಪೋಲೆಂಡಿನ ಪ್ರಧಾನ ಪಟ್ಟಣವಾದ ವಾರ್ಸೋವನ್ನು ವಶಪಡಿಸಿಕೊಂಡಿಲ್ಲ. ಇದೇ ತಾ. 10ರಲ್ಲಿ ವಾರ್ಸೋದ ಸಮೀಪದಿಂದ ಜರ್ಮನ್ ಸೇನೆಯು ಹಿಂದೆ ಸರಿದಿರುವುದೆಂದು ಪೋಲೆಂಡಿನ ಸರಕಾರದ ರೇಡಿಯೋ ಪ್ರಕಟಣೆ. ಜರ್ಮನ್ ವಾರ್ತಾಸಂಸ್ಥೆಗೆ ವಾರ್ಸೋ ಪಟ್ಟಣದ ವಾಯುವ್ಯದಲ್ಲಿ ಬಗ್ ನದಿ ಪ್ರದೇಶವನ್ನು ಜರ್ಮನರು ಗದ್ದುರುವರೆಂದು ತಿಳಿದುಬರುತ್ತದೆ. ಪೋಲಿಶ್ ಸೇನೆಯ ಧೈರ್ಯ ಮತ್ತು ಸ್ಥೈರ್ಯವು ಅತ್ಯುತ್ತಮವಾಗಿದೆ. ವೀರಾವೇಶದಿಂದ ಪೋಲರು ಜರ್ಮನರನ್ನು ತಡೆಗಟ್ಟುತ್ತಿದ್ದಾರೆ. ತಡೆಗಟ್ಟಲು ಅಸಾಧ್ಯವಾದಲ್ಲಿ ದಿಗಿಲುಗೊಂದಲವಿಲ್ಲದೆ ಕ್ರಮವಾಗಿ ಹಿಂದೆ ಸರಿಯುತ್ತಿದ್ದಾರೆ. ಜರ್ಮನ್ ಸೇನೆಯು ಇಷ್ಟರಲ್ಲೇ ದಣಿವುಗೊಂಡಿರುವಂತಿದೆ.

ಸಿಲೀಸಿಯದ ಮೇಲ್ಭಾಗದಲ್ಲಿ ಭೀಷಣ ಕದನ ನಡೆದಿದೆ. ಪೋಲಿಷ್ ಕಾರಿಡೋರ್ ಸಂಪೂರ್ಣ ಜರ್ಮನರವಶವಾಗಿದೆ. ಹಿಟ್ಲರರು ಪೋಲಿಷ್ ಸಿಲೀಸಿಯದಲ್ಲಿ ತಮ್ಮ ಕೇಂದ್ರ ಸ್ಥಾಪಿಸಿದ್ದಾರೆ. ಜರ್ಮನರ ತೀವ್ರವಾದ ಧಾಳಿಯಿಂದ ಪೋಲರು ತಲ್ಲಣಗೊಂಡಿದ್ದಾರೆ. ಆದರೂ ಧೈರ್ಯಗೆಟ್ಟಿರುವುದಿಲ್ಲ. ವಾರ್ಸೋದ 6 ಮೈಲು ದೂರದಲ್ಲಿ ಭೀಕರ ಕದನ ನಡೆದು ಜರ್ಮನರು ಹಿಂದಕ್ಕಟ್ಟಲ್ಪಟ್ಟರೆಂದು ಪೋಲಂಡಿನ ವಾರ್ತೆ.

ಪುನಃ ಎರಡು ಬ್ರಿಟಿಷ್ ಸ್ಟೀಮರು ಮುಳುಗಿಸಲ್ಪಟ್ಟವು !!

ಪಶ್ಚಿಮ ರಣರಂಗದಲ್ಲಿ ಫ್ರೆಂಚ ಸೇನೆಯು ಸಾರ್ ಮತ್ತು ಬಸ್ಜಿನ್ ಪಟ್ಟಣಗಳ ನಡುವೆ ಒಳನುಗ್ಗಿರುತ್ತದೆ. ಫ್ರೆಂಚ್ ಸೇನೆಯು ಜರ್ಮನಿಯ ಗಡಿದಾಟಿದೆಯೆಂಬುದು ಜರ್ಮನರೊಪ್ಪುತ್ತಾರೆ. ತಾ. 10ರಲ್ಲಿ ಹಲವು ಸ್ಥಳಗಳಲ್ಲಿ ಜರ್ಮನರು ಫ್ರೆಂಚ್ ಸೇನೆಯ ಮೇಲೆ ಬಿದ್ದು ಕಾದಾಡಿದರು. ಆದರೆ ಅವನ್ನು ಹಿಂದಕ್ಕಟ್ಟಲು ಸಾಧ್ಯವಾಗಲಿಲ್ಲ. ಫ್ರೆಂಚ್ ಸಶಸ್ತ್ರ ಕಾರುಗಳು ಸಿಗ್ ಫ್ರಿಡ್ ಕೋಟೆ ದಾಟಿ ಜರ್ಮನರೊಡನೆ ಹೋರಾಡಲಾರಂಭಿಸಿದೆ.

ಫ್ರಾನ್ಸಿನಲ್ಲಿ 20,000 ಜರ್ಮನರನ್ನು ಹಿಡಿದು ಬಂದೋಬಸ್ತಿನಲ್ಲಿಡಲಾಗಿದೆ. ಫ್ರಾನ್ಸಿನಲ್ಲಿರುವ ಪೋಲ್ ಮತ್ತು ಜೆಕ್ಕರು ತಮ್ಮದೇ ಆದೊಂದು ಸೇನೆ ತಯಾರಿಸಿದ್ದಾರೆ.

ಇದೇ ತಾ. 10ರಲ್ಲಿ ಇನ್ನೆರಡು ಬ್ರಿಟಿಷ್ ಹಡಗುಗಳು ಮುಳುಗಿಸಲ್ಪಟ್ಟಿವೆ. ಹೆಚ್ಚಿನ ಪ್ರಾಣಹಾನಿಯೇನೂ ಆಗಿಲ್ಲ. ಕೆನಡವು ಯುದ್ಧ ಸಾರಿ ಇಂಗ್ಲಂಡಿನ ಸಹಾಯಕ್ಕೆ ನಿಂತಿದೆ. ಆಸ್ಟ್ರೇಲಿಯವೂ ದೀರ್ಘ ಯುದ್ಧಕ್ಕೆ ತಯಾರಾಗಿದೆ. ಇಂಗ್ಲಂಡಿನಲ್ಲಿ ಸ್ತ್ರೀಯರು ವಿಮಾನ ಮತ್ತು ನಾವಿಕ ಕೆಲಸಕ್ಕೆ ತರಬೇತಿ ಹೊಂದುತ್ತಿದ್ದಾರೆ. 1140 ಮಂದಿ ಇಷ್ಟರಲ್ಲೇ ತರಬೇತಿ ಹೊಂದುತ್ತಿದ್ದಾರೆ. ಇನ್ನು ಸಾವಿರಾರು ಮಂದಿ ತರಬೇತಿಗಾಗಿ ಸೇರಲಿದ್ದಾರೆ. ಡ್ಯೂಕ್ ಆಫ್ ವಿಂಡ್ಸರರು ಲಂಡನಿಗೆ ಹೋಗಲಿದ್ದಾರೆ.

ಇಷ್ಟರ ವರೆಗೆ 10,000 ಜರ್ಮನರು ಮೃತರಾದರೆಂದು ಪೋಲೆಂಡ್ ಕಡೆಯ ಸುದ್ದಿ. 16,000 ಪೋಲರು ಸೆರೆ ಹಿಡಿಯಲ್ಪಟ್ಟಿದ್ದಾರೆಂದು ಜರ್ಮನ್ ಕಡೆಯ ಸುದ್ದಿ.

ಈ ವರೆಗೆ ಎಲ್ಲಿಯೂ ದೊಡ್ಡ ವಿಮಾನಯುದ್ಧಗಳು ನಡೆದಿಲ್ಲ. ಚಿಕ್ಕಪುಟ್ಟ ಹೋರಾಟ ಮಾತ್ರ ನಡೆದಿದೆ. ಜರ್ಮನಿಯು 1914ರಷ್ಟು ಬಲಶಾಲಿಯಾಗಿಲ್ಲೆಂದು ಜಪಾನ್ ನೌಕಾಧಿಕಾರಿ ಎಡ್ಮಿರಲ್ ನಾಕಮೂರಾರವರು ಅಭಿಪ್ರಾಯಪಡುತ್ತಿರುತ್ತಾರೆ. ಹಿಟ್ಲರರು ತಪ್ಪಾದ ಕ ನಡೆ ಯುದ್ಧ ಮಾಡಿದರೆಂದು ಜಪಾನ ಪ್ರಧಾನ ಮಂತ್ರಿಗಳೆಂದಿರುತ್ತಾರೆ. ರಶ್ಯ, ಅಮೇರಿಕ, ಇಂಗ್ಲಂಡ್ ಮತ್ತು ಫ್ರಾನ್ಸ್ ಕಡೆಗಿನ ತನ್ನ ಧೋರಣೆಗಳನ್ನು ಜಪಾನು ಬದಲಾಯಿಸಲಿರುವುದು.

ಜರ್ಮನ್ ಜನತೆಯಲ್ಲಿ ಇಷ್ಟರಲ್ಲೇ ಅತೃಪ್ತಿಯುಂಟಾಗಿರುವುದೆಂದು ಫ್ರೆಂಚ್ ಕಡೆಯ ಸುದ್ದಿ. ಸೋವಿಯೆಟ್ ಸರಕಾರವು ಪೋಲೆಂಡಿನ ಎಲ್ಲೆಯನ್ನು ಬಲಪಡಿಸಿ ಸೇನೆಯನ್ನು ಸಂಗ್ರಹಿಸುತ್ತಿದೆ. ಈ ಮಿ ಲೇನಿಂದ್ ತಟಸ್ಥವಾಗಿ ನಿಂತಿದೆ

(ನೇ ಪುಟಕ್ಕೆ ಮುಂದರಿದೆ)

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ 11-9-39

ಹರಿಜನ ಲೇಬರ್ ಲೀಗ್—ಕಳೆದ ತಾ. 3ರಲ್ಲಿ ಹರಿಜನ ಲೇಬರ್ ಲೀಗಿನವರು ಮಾನ್ಯ ಮಂತ್ರಿಗಳಾದ ಶ್ರೀ ಗೋಪಾಲ ರೆಡ್ಡಿಯವರಿಗೆ ನೂಟರ್‌ಪೇಟೆ ಲೇಬರ್ ಶಾಲೆಯಲ್ಲಿ ಒಂದು ಮಾನಪತ್ರವನ್ನರ್ಪಿಸಿದರು. ಕೆ. ಈಶ್ವರನವರು ಮಾನಪತ್ರವನ್ನು ಓದಿದರು.

ಅಕ್ಕಿ ಮೊದಲಾದುವಕ್ಕೆ ಅಧಿಕಬೆಲೆ. ಯುದ್ಧದ ನೆವದಿಂದ ಒಂದೇ ಸಾರಿ ಜೀವನಕ್ಕೆ ಅಗತ್ಯವಾದ ಸಾಮಗ್ರಿಗಳ ಬೆಲೆ ಏರಿದುದರಿಂದ ಜನರ ಸಂಕಷ್ಟವನ್ನು ಸರಕಾರಕ್ಕೆ ತಿಳಿಸುವ ಪ್ರಯುಕ್ತ ನಿನ್ನೆಯದಿನ (ತಾ. 10) ಸಾಯಂ, 5 ಘಂಟೆಗೆ ಮೈದಾನದಲ್ಲಿ ಶ್ರೀ. ಗೋವಿಂದರಾಮ್ ಓಂ ಪ್ರಕಾಶರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭಾಷಣಗಳಾದವು. ವ್ಯಾಪಾರಿಗಳ ಜೀವನಕ್ಕೆ ಅಗತ್ಯವಾದ ವಸ್ತುಗಳನ್ನು ಅಧಿಕ ಕ್ರಯಕ್ಕೆ ಮಾರುವುದು ನ್ಯಾಯವಲ್ಲವೆಂದೂ ಸರಕಾರದವರು ಬೆಲೆಯನ್ನು ತಕ್ಕ ಮಟ್ಟದಲ್ಲಿರುವಂತೆ ಕಾನೂನು ಮಾಡಬೇಕೆಂದೂ ಸೂಚಿಸಲಾಯಿತು.

ಅಳಿಯಸಂತಾನ ಸುಧಾರಣಾಪರಿಷತ್ತು

ತಾ. 17—9—39ನೇ ಆದಿತ್ಯವಾರ ಅಳಿಯ ಸಂತಾನ ಸಮಾಜದ ಸುಧಾರಣಾಪರಿಷತ್ತು ಮಂಗಳೂರಲ್ಲಿ ಜರಗುವುದಾಗಿ ನಿಶ್ಚಯವಾಗಿತ್ತು. ಆದರೆ ಹಲವು ಕಾರಣಗಳಿಂದಾಗಿ ಆ ಪರಿಷತ್ತನ್ನು ಮುಂದರಿಸಬೇಕಾಗಿದೆ. ಆದರಿಂದ ತಾ. 17ನೇ ಆದಿತ್ಯವಾರ ಕಮಿಟಿಮೀಟಿಂಗನ್ನು ಕರೆದು ಮುಂದಿನ ತಾರೀಕನ್ನು ನಿಶ್ಚೈಸಿ ಪ್ರಕಟಿಸುತ್ತೇವೆ. ತಾ. 17ರ ವರೆಗೆ ಈಗ ಆರಿಸಿ ಬಂದಿರುವ ಪ್ರತಿನಿಧಿಗಳು ಅವರವರ ಪ್ರತಿನಿಧಿಪಾಸನ್ನು ಶ್ರೀ. ಪಿ. ಯಂ. ಹೆಗಡೆ, ಎಡಿಟರ್, ಮಂಗಳೂರು ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

(*Sd*) **K. B. Jinaraja Hegdi,**
President.
8—9—39.

WANTED one Inspector, two Organisers and Agents in South Kanara. Apply stating previous experience to:-

The Bombay Co-operative Insurance Society Ltd.,
Office for Mysore, Coorg & South Kanara,
Asiatic Building, Kempe Gowda Road',
Bangalore City.

ಮದಾರಿ ಗುಳಿಗೆಗಳು

(ರಿಜಿಸ್ಟರ್)

ಸನ್ನಿ ಅಪಸ್ಮಾರ ಮೊದಲಾದುವಕ್ಕೆ ರಾಮಬಾಣ.

MADARY PILLS

ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ ನಪುಂಸಕತ್ವ, ಸೂತಿಕವಾಯು, ಗರ್ಭಾಶಯ ದಾಹ, ನಿದ್ರೆಬಾರದಿರುವಿಕೆ, ಹುಚ್ಚು, ಉನ್ಮಾದ, ಸ್ವಪ್ನೇಂದ್ರಿಯ, ಬಾಲಗ್ರಹ, ಮತ್ತಿತರ ಮಾನಸಿಕ ಮತ್ತು ಮೆದುಳಿನ ಅಶಕ್ತತೆಗಳನ್ನು ಹೋಗಲಾಡಿಸುತ್ತದೆ.

50 ಗುಳಿಗೆಗಳಿರುವ ಸೀಸೆಯೊಂದಕ್ಕೆ ಕ್ರಯ ರೂ. 3-8-0. ಬಯಕೆಯುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಬರೆಯಿರಿ:—

The Imperial Chemist Coy.
106, Vithalbhai Patil Road Bombay 4.

ಮೈಸೂರು ಪತ್ರ

(ನವಯುಗದ ಬಾತ್ಮೀದಾರರಿಂದ)

ಮೈಸೂರು, ತಾ. 11-9-39.

ಪ್ರೆಸ್ ಸೆನ್‌ಸಾರ್ ಅಧಿಕಾರಿಗಳು—ಶ್ರೀ. ಸುಬ್ರಹ್ಮಣ್ಯಯ್ಯರ್‌ರವರು ಮೈಸೂರು ಸಂಸ್ಥಾನದ ಮುಖ್ಯ ಪ್ರೆಸ್‌ಸೆನ್‌ಸಾರ್ ಅಧಿಕಾರಿಗಳಲ್ಲದೆ ಪ್ರತಿಜಿಲ್ಲೆಯ ಜಿಲ್ಲಾಧಿಕಾರಿಗಳೂ ಆಯಾ ಜಿಲ್ಲೆಯ ಪ್ರೆಸ್‌ಸೆನ್‌ಸಾರ್ ಅಧಿಕಾರಿಗಳಾಗಿ ನೇಮಿತರಾಗಿದ್ದಾರೆ.

ಮೈಸೂರಿನವರೊಬ್ಬರು ಮಾಯವೆ? ಮೈಸೂರು ಅಂಗವಿಹೀನರ ಶಾಲೆಯ ಮುಖ್ಯಾಧಿಕಾರಿ ಶ್ರೀ. ನಟೇಶ ಮೊದಲಿಯಾರ್‌ರವರು ಹೆಚ್ಚು ಶಿಕ್ಷಣ ಪಡೆಯಲು ಸರಕಾರದ ವೇತನ ಪಡೆದು ಇಂಗ್ಲಾಂಡಿಗೆ ಹೋಗಿದ್ದರು. ಅಲ್ಲಿಂದವರು ಅಮೇರಿಕಾಕ್ಕೆ ಪ್ರಯಾಣಬೆಳೆಸಿದರೆಂದೂ ಮತ್ತು ಇಂಗ್ಲಾಂಡಿನಿಂದ ಹೊರಟ 'ಅಥೀನಿಯ' ಹಡಗಿನಲ್ಲೇ ಹೊರಟರೆಂದೂ ಆದರೆ ಇದನ್ನು ಜರ್ಮನರು ಟಾರ್ಪೆಡೋ ಮಾಡಲು, ಕೆಲವರು ನೀರಿನಲ್ಲಿ ಮುಳುಗಿ ಸತ್ತರೆಂದೂ, ಅದರಲ್ಲಿ ಶ್ರೀ. ನಟೇಶಮೊದಲಿಯಾರ್‌ರವರೊಬ್ಬರೆಂದೂ, ಇಲ್ಲಿ ಹೇಳಲಾಗುತ್ತದೆ.

ವ್ಯಾಪಾರಗಾರರ ಹತೋಟಿ—ಯುದ್ಧದ ಪ್ರಯುಕ್ತ ಸಂಸ್ಥಾನದ ವ್ಯಾಪಾರಗಾರರು ಮನುಷ್ಯನಿಗೆ ಬೇಕಾಗುವ ದಿನಚರಿಯ ಮತ್ತು ಇತರ ಆಹಾರ ಪದಾರ್ಥಗಳ ಬೆಲೆಯನ್ನು ಏರಿಸಿದ ಹಾಗೆ ತಡೆಗಟ್ಟಲು ಮೈಸೂರು ಸರ್ಕಾರದವರು ಒಂದು ವಿಶೇಷಾಜ್ಞೆ ಹೊರಡಿಸಿದ್ದಾರೆ.

ಸುಖವಾಗಿರುತ್ತಾರೆ—ಮೈಸೂರು ಶ್ರೀ ಮದ್ಯುವರಾಜಸಾಹೇಬ್ರಯವರು ಜಾಪೆಂಡಿನ ಟೋಕಿಯೋನಲ್ಲಿ ಸುಖವಾಗಿರುವರಲ್ಲದೆ ಹಿಂತಿರುಗಲು ತಕ್ಕ ಪ್ರಯತ್ನಮಾಡಲಾಗುವುದೆಂದು ಇಲ್ಲಿಗೆ ಕೇಬಲ್ ಬಂದಿದೆ.

ಡಾ| ವಿಠಲ ಶೆಟ್ಟಿ—ಮೈಸೂರು ದಿವಾನರು ಮುಂದಿನ ತಿಂಗಳು ದ. ಕ. ಕ್ಕೆ ಬರುವುದರಿಂದ ಅವರ ಕಾರ್ಯಕಲಾಪಗಳ ಏರ್ಪಾಡು ಮಾಡುವ ಸಲುವಾಗಿ ದಕ್ಷಿಣಕನ್ನಡ ಜಿಲ್ಲಾಬೋರ್ಡಿನ ಅಧ್ಯಕ್ಷರಾದ ಡಾ| ವಿಠಲಶೆಟ್ಟಿಯವರು ಬೆಂಗಳೂರಿಗೆ ಬಂದು ಸರಕಾರದ ಅತಿಥಿಗಳಾಗಿ ಲೇಕ್‌ವ್ಯೂ ಭವನದಲ್ಲಿ ಬಿಡಾರ ಮಾಡಿದ್ದಾರು.

ಪ್ರಕಟಣೆ

ಇನಾಂ ರೂಪಾಯಿ ಹತ್ತು 10-0-0

ನನ್ನ ಅಳಿಯ ಬಾಬು ಅಥವಾ ರುಕ್ಕಪ್ಪ ಎಂಬ 15 ವರ್ಷ ಪ್ರಾಯದ ಕಪ್ಪು ವರ್ಣದ ನಾಲ್ಕುಫೀಟು ಎತ್ತರದ ಉದ್ದ ಕೈಯ ರಂಗೀನ್ ಷರ್ಟು, ರಂಗೀನ್ ಕೋಟು, ಅರ್ಧ ಕಪ್ಪು ಇಜಾರು ಹಾಕಿದ್ದ ಹುಡುಗ ಕಾಣೆಯಾಗಿದ್ದಾನೆ. ಇವರು ತನ್ನ ಊರಾದ ತೋಕೂರಿನಿಂದ ಹಾಲಿ ಬೊಂಬೈಗೆ ಬಂದು ಬರೇ ಮೂರು ತಿಂಗಳಾಯಿತು. ಟೈಲರಿಂಗ್ ಕೆಲಸ ಕಲಿಯುತ್ತಾ ಇರುತ್ತಿದ್ದ. ಕಳೆದ ತಾ. 30-8-39ರಲ್ಲಿ ಬೊಂಬೈ ಪಟ್ಟಣದ ಕೋಟೆಯಿಂದ ಪರಾರಿಯಾಗಿದ್ದಾನೆ. ಪೋಲೀಸರಿಗೆ ತಿಳಿಸಿದ್ದೇನೆ. ಇಷ್ಟರವರೆಗೆ ಪತ್ತೆಯಿಲ್ಲ. ಬಹುಶಃ ಹಿಂದು ಹೋಟೇಲಿನಲ್ಲಿ ಸೇರಿಕೊಂಡಿದ್ದಾನೆಂದು ಸಂಶಯವಿದೆ. ಆದ್ದರಿಂದ ಯಾರಿಗಾದರೂ ಈತನ ಪತ್ತೆ ಸಿಕ್ಕಿದರೆ ನನಗೆ ತಿಳಿಸಬೇಕಾಗಿ ವಿನಂತಿ, ಅಥವಾ ಪೋಲೀಸನವರ ಸ್ವಾಧೀನಮಾಡಿದರೂ ಆದೀತು.

ವಿಳಾಸ: **Siddu G. Kotian,**
The Clearing House, Share Bazare, Dalal Street, Fort Bombay.

'SERWELL' RUBBER STAMPS

OFTEN APPEAL.

Since they surely serve well. YOU CAN HAVE ONE

On placing your order with our Representatives in your area.

IF UNREPRESENTED WRITE FOR AGENCY TERMS.

Manufacturers:—
on the approved list of the Govt. of Mysore.

YADIKE BROS.
MANUFACTURERS' REPRESENTATIVES, IMPORTERS & ENGINEERS,
BANGALORE CITY.

ಆತಂಕನಿಗ್ರಹ ಮಾತ್ರೆ.

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ ನರಗಳ ನಿಶ್ಶಕ್ತಿ ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣವುಂಟಾಗುವಂತೆ ಮಾಡುತ್ತದೆ. ದುಷ್ಟರಕ್ತವನ್ನು ಶುದ್ಧಿಮಾಡಿ ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸುವುದು. ದೇಹಕ್ಕೂ ಮನಸ್ಸಿಗೂ ಉಲ್ಲಾಸವನ್ನು ಕೊಡುತ್ತದೆ. ಕ್ರಯ ಡಬ್ಬಿ ೧ಕ್ಕೆ ೧—೦—೦

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯಥಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು. ಅರ್ಧತೊಲೆ ಸೀಸೆ 1ಕ್ಕೆ ರೂ. 5—0—0

'ಕಾಮಶಾಸ್ತ್ರ' ಧರ್ಮಾರ್ಥ. ಪುಸ್ತಕ ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡು ಹಾಕಿರಿ.

ಆತಂಕನಿಗ್ರಹ ಫಾರ್ಮಸಿ, ೭೪ ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

— ಗರ್ಭ ನಿರೋಧ —

ರಹತ್-ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವುದು ಇದನ್ನು 3 ದಿವಸ ಉಪಯೋಗಿಸಿದಲ್ಲಿ ಗರ್ಭಧಾರಣೆಯ ಪೀಡೆಯು ಜೀವಾವಧಿಯವರೆಗೆ ನಿವಾರಿತವಾಗುವುದು. ಶರೀರಕ್ಕೆ ಯಾವ ತರದ ಹಾನಿಯೂ ಇರುವುದಿಲ್ಲ. ಯಾವರೀತಿಯ ಮುಟ್ಟುದೋಷವೂ ಉಂಟಾಗುವದಿಲ್ಲ. ಪ್ರತಿಯೊಂದು ಓರ್ಡರಿನೊಂದಿಗೆ ಗ್ಯಾರಂಟೀ ಪತ್ರವಿದೆ. ಬೆಲೆ ರೂ. 5-8-0.

ರಜವತಿ-ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು ಬೆಲೆ ರೂ. 5-8-0 ವಿದೇಶ 10ಶಿಲ್ಲಿಂಗು.

ಪೋ. ನಂ. 21343.

ಡಾ. ಎಸ್. ಎಚ್. ಖಾನ್,
42, (*N.G.*) ಚರ್ಚಗೇಟ್ ಸ್ಟ್ರೀಟ್, ಫೋರ್ಟ, ಬೊಂಬಾಯಿ.

ಕೋಪ್ರಾನದ ಬಿಳೀ ಟೂಥಪೇಸ್ಟ ಅಗಳಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ

ಅಗಲಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ).

ಪ್ರಕಟಣೆ

ಕುಂದಾಪುರ ಶ್ರೀ ಕೆ. ಸಂಜೀವ ಹೆಗಡೆ, ಏಜಂಟ್, ವಿಜಯ ಬ್ಯಾಂಕ್ ಇವರಿಂದ ಬಂದ ತಾರೀಕು 22-8-39ನೇ ಕಾರ್ಡು ಪ್ರಕಾರ ಅಳಿಯ ಸಂತಾನದ ಮಸೂದೆಯನ್ನು ಪರ್ಯಾಲೋಚಿಸುವರೇ ಸೇರಲಿರುವ ಜಿಲ್ಲಾ ಪರಿಷತ್ತಿಗೆ ಬೈಂದೂರು ಸರ್ಕಲಿನ ಪರಿಯಿಂದ ನನ್ನನ್ನು ಪ್ರತಿನಿಧಿಯಾಗಿ ಆರಿಸಲ್ಪಟ್ಟದ್ದಾಗಿ ತಿಳಿದು ಬರುತ್ತದೆ.

ಅಳಿಯ ಸಂತಾನ ಸುಧಾರಣಾ ಕಮಿಟಿಯವರು ಮಾಡಿ ಹಳ್ಳಿಗಳಲ್ಲಿ ಮಸೂದೆಯ ಕುರಿತಾದ ಪ್ರಚಾರ ನಡಿಸದೆ ತಾಲೂಕಿನ ಮುಖ್ಯ ಸ್ಥಾನದಲ್ಲಿ ಮಾತ್ರ ಸಭೆಗಳನ್ನು ಸೇರಿಸಿ ಪಟ್ಟಣ ವಾಸಿಗಳಾಗಿ ಅಳಿಯಕಟ್ಟನ್ನಾಚರಿಸುವ ಹಳ್ಳಿಗರ ಕುಟುಂಬದ ಗೃಹಕೃತ್ಯದ ಸರಿಯಾದ ಅನುಭವವಿಲ್ಲದ ಕೆಲವು ಜನರ ಅಭಿಪ್ರಾಯವೇ ಬಹುಮತವೆಂದು ಭಾವಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿ ಮಸೂದೆಗೆ ವಿರೋಧವಿಲ್ಲವೆಂದು ಊಹಿಸುವುದು ಯುಕ್ತವಲ್ಲ.

ನಮ್ಮ ಜಿಲ್ಲೆಯ ಸುಮಾರು ಮುಕ್ಕಾಲಂಶ ಜನಸಂಖ್ಯೆ ಅಳಿಯಸಂತಾನ ಕಟ್ಟನ್ನಾಚರಿಸುವವರಾಗಿ ಹೆಚ್ಚಿನವರು ರೈತರಾಗಿಯೂ ಹಳ್ಳಿ ವಾಸಿಗಳೇ ಆಗಿ ವ್ಯವಸಾಯಗಾರರಾಗಿಯೂ ಇರುತ್ತಾರೆ.

ಹಳ್ಳಿಗಳಲ್ಲಿ ಪತ್ರಿಕೆ ಪ್ರಚಾರವು ಬಹಳ ವಿರಳವಾದ್ದರಿಂದ ಜಾರಿಗೆ ತರಲಿಕ್ಕಿರುವ ಈ ಮಸೂದೆಯ ಗಾಳಿ ಗಂಧವೇ ಹಳ್ಳಿಗರಲ್ಲಿ ಇಲ್ಲವೆಂಬುದಾಗಿ ನಾನು ತಿಳಿಯುತ್ತೇನೆ. ಮಸೂದೆ ಸುಧಾರಣಾ ಸಮಿತಿಯವರಿಗೆ ಯಥಾರ್ಥವಾಗಿ ಬಹುಮತಕ್ಕೆ ಒಳಪಟ್ಟು ಈ ಮಸೂದೆಯನ್ನು ಜಾರಿಗೆ ತರಬೇಕೆಂಬ ಇಚ್ಛೆಯಿರುವುದಾದರೆ ಪ್ರತಿ ಹಳ್ಳಿಗಳಲ್ಲಿ ಪ್ರಚಾರಮಾಡಿ ಮತ ತೆಗೆದು ಈಗ ತಯಾರಿಸಿದ ಮಸೂದೆಯು ಅಗತ್ಯವೋ ಎಂಬ ಮುಂದಾಗಿ ತಿಳಿದುಕೊಳ್ಳಬೇಕಾದ್ದು ಅಗತ್ಯ.

ಈ ಮಸೂದೆಯ ಚಾಲಕರು ಪ್ರತಿನಿಧಿಗಳನ್ನು ಅಲ್ಲಲ್ಲಿ ಆರಿಸಿ ಜಿಲ್ಲಾ ಪರಿಷತ್ತೆಂತ ಮಾಡಿ ದುಡುಕಿನಿಂದ ಮುಂದರಿಸಿ• ಈ ಮಸೂದೆ ಅಗತ್ಯವೆಂದು ಮುಂದರಿಸುವುದು ನ್ಯಾಯಸಮ್ಮತವಾದದ್ದಲ್ಲ. ಹಾಗೆ ಉದ್ವೇಗದಿಂದ ಮುಂದರಿಸಿದರೆ ಅಳಿಯಕಟ್ಟನ್ನಾಚರಿಸುವ ಸಮಾಜಕ್ಕೇನೇ ಮಸೂದೆ ಚಾಲಕರು ಅನ್ಯಾಯಮಾಡಿದಂತಾಗುತ್ತದೆ.

ಮಸೂದೆ ಚಾಲಕರು ಕುಂದಾಪುರದಲ್ಲಿ ತಾರೀಕು 19-8-39ರಲ್ಲಿ ಒಂದು ಸಭೆಯೆಂತ ಮಾಡಿ ಬೈಂದೂರು ಸರ್ಕಲಿನ ಕಡೆಯಿಂದ ನನ್ನನ್ನು ಆರಿಸಿದ್ದೆಂಬುದು ಮಸೂದೆ ಚಾಲಕರೇ ವಿನಹಾ ಬೈಂದೂರು ಸರ್ಕಲಿನ ಕಡೆಯವರೆಂತ ನಾನು ಗ್ರಹಿಸುವುದಿಲ್ಲ. ಹಲವು ಕಡೆಗಳಲ್ಲಿ ಇದೇ ರೀತಿಯಲ್ಲಿಯೇ ಪ್ರತಿನಿಧಿಗಳನ್ನು ಆರಿಸಿದ್ದಿರಬಹುದಾಗಿ ಊಹಿಸಬೇಕಾಗುತ್ತದೆ. ಹ್ಯಾಗೂ ಇರಲಿ, ಸುಧಾರಕರು ಪ್ರತಿಹಳ್ಳಿಗಳಲ್ಲಿಯೂ ಕ್ರಮವಾದ ಪ್ರಚಾರಮಾಡಿ ಮತಪಡೆದು ಮುಂದರಿಸಬೇಕಾಗಿ ಕೋರುತ್ತೇನೆ.

ಬೈಂದೂರು
5-9-39 } **Y. Sooryanna Shetty**
Byndoor.

ಮಾನವನಿಗೆ ಮುಖ್ಯ ಬೇಕಾದುದೇನು?

ಹಣ. ಹಾಗಾದರೆ ಇಲ್ಲಿಗೆ ಬನ್ನಿರಿ. ಜಗತ್ಪ್ರೇರಕನಾದ ಸರ್ವಶಕ್ತನ ಮೇಲೆ ದೃಢಭಕ್ತಿಯನ್ನಿಟ್ಟು ಅವನ ಕಡೆಗೆ ಕಣ್ಣುಬಿಟ್ಟು ನೋಡುವವನಿಗೆ ಸ್ವಾಮಿಯು ತನ್ನ ಸರ್ವ ಮಾಯವನ್ನು ಬೀರಿ, ಅವನ ಬೇಡುವಿಕೆಯನ್ನು ಪೂರೈಸುವನು ಎನ್ನಲೇನು ಸಂಶಯ?

ಕಾಟನ್ ಮತ್ತು ಶೇಯರ್ ಬಜಾರಿನಲ್ಲಿ ದುಡ್ಡನ್ನು ಸಂಪಾದಿಸುವುದಕ್ಕೆ ಜರೂರು ನನ್ನಲ್ಲಿ ಒಂದಾವರ್ತಿ ಬಂದು ಭೇಟಿಮಾಡಿರಿ, ಬಜಾರಿನ ವಿಷಯ ಯೋಗ್ಯ ಸೂಚನೆಕೊಡಲ್ಪಡುವುದು. ಪತ್ರಮಾತ್ರ ಇಂಗ್ಲಿಷ್ ಯಾ ಹಿಂದಿ, ಗುಜರಾತ್.

ಚಾರ್ಜಂತೂ ಬಹಳ ಕಮ್ಮಿ. ಒಂದು ವಾರದ್ದಕ್ಕೆ Rs. 5-0-0. ಒಂದು ತಿಂಗಳಿಗೆ Rs. 15-0-0. ಸಮಯ ಬೆಳಿಗ್ಗೆ 8-10, ಸಾಯಂಕಾಲ 4ರಿಂದ 6ರ ತನಕ.

J. M. Joshi
Astrologer & Palmist
25 Chandramahal BOMBAY. 4.

WHEN HITLER IS BOMPARDING POLAND

here the screen roars with the exploits of

HUNTERWALI

A mysterious personality, Protector of the poor, and Punisher of the Evil-doers! It is the picturisation of the daring deeds of an Indian girl, who sacrificed Royal luxuries to the cause of her people and country!

Every hour, every minute, every second will engage you with pleasant surprises, Unforeseen suspense, invissible intrigues & blood medling fights with 105% Thrills!

Hats of to:

Fearless NADIA the Indian Pearl white.

Coming to Udipi for the first time, to touch the very core of your heart with her action galore!

After monsoon lethargy be thrilled with

HUNTERWALI

Wadia movietone's

Diamond Thriller Series 2, featuring Nadia, Sharifa, Gulshan, Boman Shroff, Johan cavas & others.

AT SRI RAMAKRISHNA THEATRE, UDIPI.

from 13-9-1939

ಹಿಟ್ಲರನು ಪೋಲೇಂಡಿನ ಮೇಲೆ ಬೋಂಬುಗಳನ್ನು ಎಸೆಯುತ್ತಿರುವಾಗ—

'ಹಂಟರ್‌ವಾಲಿ'ಯ ಸಾಹಸ ಕಾರ್ಯಗಳಿಂದ ರಜತ ಪರದೆಯು ಗುಡುಗುತ್ತಿದೆ; 'ಹಂಟರ್‌ವಾಲಿ' ಹೆಸರಿಗೆ ತಕ್ಕಂತೆ ದೊಡ್ಡ ತುಂಟಿಯವಳು; ಆದರೆ, ಈ ತುಂಟತನವು ಸ್ವಾರ್ಥಕ್ಕಾಗಿ ಅಲ್ಲ; ಬಡವರನ್ನು ಕಾಪಾಡಲು, ಕಡು ಕ್ರೂರಿಗಳನ್ನು ಸದೆಬಡಿಯಲು; ಇದಕ್ಕಾಗಿಯೇ ರಾಜ ಮನೆತನದ ಭೋಜನವನ್ನು ತುದಿಗಾಲಿಂದ ಒದೆದು,

ನಿಮಿಷನಿಮಿಷಕ್ಕೂ ಅವಾಂತರಗಳಿಂದ ಆವರಿಸಲ್ಪಟ್ಟ ದಾರಿಯಲ್ಲಿ ವಿಚಕ್ಷಣ ರೀತಿಯಲ್ಲಿ ಅಟ್ಟಹಾಸದ ಮಟ್ಟವನ್ನೇರಿದ ವೀರ ನಾರಿ!

ಕ್ಷಣ ಕ್ಷಣಕ್ಕೂ ಕಾದಾಟ; ಎಡೆಬಿಡದೆ ಬಡಿದಾಟ; ಶೇಕಡ 105ರಷ್ಟು ರಕ್ತವನ್ನು ಬಿಸಿಗೇರಿಸುವ ಕಾರ್ಯಕಲಾಪಗಳು; ಅಮಾನುಷ ಕೃತ್ಯಗಳು!

ಸುಂಟರ ಗಾಳಿಯಂತೆ ಹಾರಾಡುವಳು **ಹಂಟರ್ ವಾಲಿ**

ವಾಡಿಯಾ ಮೂವಿಟೋನಿನವರ ಉತ್ಕೃಷ್ಟ ಕೃತಿಗಳಲ್ಲೊಂದು.

ಉಡುಪಿಗೆ ಪ್ರಥಮಾಗಮನ ಗಂಡುಭೀರಿ ನಾಡಿಯಾ

ಶರಿಫಾ, ಗುಲ್ಶನ್, ಬೋಮನ್ ಶ್ರೋಫ್, ಜೋನ್ ಕವಾಸ್ ಮೊದಲಾದವರೇ ಮುಖ್ಯನಟರು!

ನೋಡಿರಿ! ತಾರೀಖು 13-9-1939 ರಿಂದ

ಉಡುಪಿ ಶ್ರೀರಾಮಕೃಷ್ಣಾ ಥಿಯೇಟರಿನಲ್ಲಿ

HUNTERWALI

SYNOPSIS

Krishnavati, a victim to the charms of Ranmal the wicked Prime-minister, is thrown out of the city Gates to face thunderstorm with her little babe Jaswant, who coming to age, is ran over by the Royal car. He creates admiration in the heart of Princess Madhuri.

Now Ranmal decoys the king in to his secret den, and usurps the throne for himself commencing a reign of terror. Madhuri lamenting over the misfortune, she is informed of the poor plight of the king Suddenly out of the unknown there arises a mysterpersonality called 'Hunterwali'

Jaswant, now very poor, wants to dispose of his horse, which by a comic ruse, is stolen by Hunterwali's followers. Jaswant becomes angry and swears to capture Hunterwali and earn the reward of Rs. 1,000/-set against Hunterwali's head. Comming home, he is surprished to see his horse with a Ten Rupee Note, and a chit requesting him to meet her in the woods. Jaswant went upon capturing Hunterwali, goes there at the appointed time, and in a fight catches her and rides away with her like a fury. Jaswant claims the reward in the Royal court, and at the critical moment Hunterwali Kicks off the boy of gold from the hands of Ranmal and escapes. Dejected, Jaswant comes home, and is surprised to see the money bag with a letter from Hunterwali. Now he realises the noble motive of Hunterwali and joins hands with her for releasing the king. What happens next?

* ಕಥಾಸಾರಾಂಶ *

ಪ್ರಧಾನಿ ರಣಮಲ್ಲನಿಂದ ಕೆಡಿಸಲ್ಪಟ್ಟ ಕೃಷ್ಣಾವತಿಯು ತನ್ನ ಚಿಕ್ಕ ಮಗುವಿನೊಂದಿಗೆ ಬಾಹಿರಳಾಗಿ, ಬಿಸಿಲು ಚಿಂತಿ ಎನ್ನದೆ ಕಷ್ಟದಿಂದ ದಿನದೂಡುತ್ತಿದ್ದಳು. ಚಿಕ್ಕ ಮಗುವಾದ ಜಸವಂತನಿಗೆ ಪ್ರಾಯಬರುತ್ತಲೇ, ರಾಜನ ಕಾರಿನಿಂದ ಅವನಿಗೆ ಅಪಘಡವಾಗುವುದು. ಇದರಿಂದ ರಾಜನು ಅವನನ್ನು ಆಸ್ಥಾನದಲ್ಲಿ ಪುರಸ್ಕರಿಸುತ್ತಿರಲು ರಣಮಲ್ಲನು ಜಸವಂತನನ್ನು ಹೀಯಾಳಿಸುವನು. ಇದರಿಂದ ಕುಪಿತನಾಗಿ ಜಸವಂತನು ಬಹುಮಾನವನ್ನು ಚೆಲ್ಲಿಬಿಟ್ಟುಹೋಗುವನು. ರಾಜಕುಮರಿ ಮಾಧುರಿಯು ಇವನ ಉತ್ಸಾಹಕ್ಕಾಗಿ ಸಂತೋಷಪಡುವಳು.

ಇತ್ತ ರಣಮಲ್ಲನು ರಾಜನನ್ನು ಮೋಸದಿಂದ ಸೆರೆಯಲ್ಲಿಟ್ಟು ರಾಜ್ಯವನ್ನಾಳುತ್ತಿರಲು ಮಾಧುರಿಯು ತನ್ನ ತಂದೆಯ ಕಷ್ಟಕ್ಕಾಗಿ ಪರಿತಪಿಸುತ್ತಿರುವಳು. ಆಗಲೇ 'ಹಂಟರ್‌ವಾಲಿ' ಎಂಬ ವ್ಯಕ್ತಿಯು ಅವತರಿಸುವುದು.

ಜಸವಂತನು ಇದೀಗ ಅತಿ ಗರೀಬನಾಗಿ, ತನ್ನ ಕುದುರೆಯನ್ನು ಮಾರಬೇಕೆಂದು ಬರುತ್ತಿರುವಲ್ಲಿ, ಹಂಟರ್‌ವಾಲಿಯ ಸಂಗಾತಿಗಳು ಅದನ್ನು ಅಪಹರಿಸುವರು. ಇದರಿಂದ ಕೋಪಗೊಂಡು, ಹೇಗಾದರೂ ಹಂಟರ್‌ವಾಲಿಯನ್ನು ಹಿಡಿದು ಅದರಿಂದ ಸಾವಿರಾರು ರೂಪಾಯಿಯ ಬಹುಮಾನವನ್ನು ಪಡೆಯಬೇಕೆಂದು ನಿಶ್ಚಯಿಸುವನು. ಮನೆಗೆ ಬಂದು ನೋಡುವಾಗ ತನ್ನ ಕುದುರೆಯೊಂದಿಗೆ ಒಂದು ಹತ್ತು ರೂಪಾಯ ನೋಟನ್ನು ಇಟ್ಟು ಹಂಟರ್‌ವಾಲಿಯು ಹೋಗಿದ್ದಳು. ಆದರೂ ಹಂಟರ್‌ವಾಲಿಯನ್ನು ಹಿಡಿಯಬೇಕೆಂದು ನಿಶ್ಚಯಿಸಿ, ಜಸವಂತನು ಕಾಡಿನಲ್ಲಿ ತಿರುಗುತ್ತಿದ್ದು ಹಂಟರ್‌ವಾಲಿಯೊಡನೆ ಕಾದಾಡಿ ಅವಳನ್ನು ಆಸ್ಥಾನಕ್ಕೆ ಹಿಡಿದುಕೊಂಡು ಬರುವನು. ತನ್ನ ಬಹುಮಾನವನ್ನು ಕೊಡಬೇಕೆಂದು ಕೇಳುವನು. ಹಂಟರ್‌ವಾಲಿಯು ರಣಮಲ್ಲನ ಕೈಯಲ್ಲಿದ್ದ ಹಣದ ಚೀಲವನ್ನು ಅಪಹರಿಸಿಕೊಂಡು ಪರಾರಿಯಾಗುವಳು. ಜಸವಂತನು ಆಶಾಭಗ್ನನಾಗಿ ಮನೆಗೆ ಹಿಂದಿರುಗುವಾಗ ಹಣದ ಚೀಲವು ಮನೆಯಲ್ಲಿದ್ದುದನ್ನು ನೋಡಿ ಆಶ್ಚರ್ಯಪಡುವನು. ಹಂಟರ್‌ವಾಲಿಯು ಬಡವರ ಸಲುವಾಗಿ ಹೊಡೆದಾಡುವವಳೆಂಬುದು ಜಸವಂತನಿಗೆ ಇದೀಗ ತಿಳಿಯುವುದು, ರಾಜನ ಬಂಧವಿಮೋಚನಾ ಕಾರ್ಯಕ್ಕೆ ಹಂಟರ್‌ವಾಲಿಯೊಡನೆ ಕೈ ಜೋಡಿಸುವನು. ಮುಂದೇನು?

ಟಿಕೇಟಿನ ದರ:—(ಟಿಕ್ಸ್ ಸಮೇತ) ರಿಜರ್ವಡ್ 1-8-0, ಸ್ಪೆಶಲ್ 0-11-9, ಗೆಲರಿ 0-7-0, ಬೆಂಚು 0-4-6, 0-2-3

Next:-Sagar Movietone's crowning success 'Watan' featuring Maya and Kumar-

ಬರುವ ಚಿತ್ರ—ಮಾಯಾ ಮತ್ತು ಕುಮಾರ್ ನಟಿಸಿರುವ ಸಾಗರ್ ಮೂವಿಟೋನಿನವರ ಉತ್ಕೃಷ್ಟ ಚಿತ್ರ "ವತನ್"

Coming:-Gungutwali; Achut Kanya Nanda, Kumar; Jagatkesari, Lord of the Jungle etc.

ಮುಂದಿನಚಿತ್ರ: ಗುಂಗುಟ್‌ವಾಲಿ, 'ಅಚ್ಯುತಕನ್ಯಾ', ನಂದಕುಮಾರ್, ಜಗತ್ ಕೇಸರಿ, ಲೋರ್ಡ್ ಆಫ್ ದಿ ಜಂಗಲ್ ಇತ್ಯಾದಿ.

and the state in the East and West. This being so, why should our joint family system which is a sort of co-operative living called out-grown and why should it be disintegrated and its members thrown out of this co-operative living?

Domestic quarrels, civil & criminal litigation, want of scope for development—The usual complaint put forward by our reformers is that the managers for the time being misappropriate the entire family income for themselves and their wives and children and starve the junior members with the result that there are frequent quarrels in the family, leading to civil and criminal litigation ruinous to the family. They further say that as a result of all these there is no scope for collective or individual development.

It is true that in certain families there appear to be some of these complaints. But to say that they prevail in all families is nothing but exaggeration. If we take statistics of all Alyasanthana Families in the District it will be clear that not less than 75 per cent of the families own properties paying an assessment of Rs. 50/- and less, about 10 percent of the families pay an assessment of about Rs. 50/- to Rs. 100/- about 10 per cent of the families pay an assessment of about Rs 100 to Rs 500 and the remaining 5 per cent only pay an assessment of over Rs.500 Now familes of the first two classes are invariably actual cultivators either jointly or under some arrangement oral or written between them and they live in peace and contentment practically without any hitch. It is only in some of the families of the last two classes we hear of these complaints.

But such complaints are not peculiar to Alyasanthana families alone. We see them in other families as well, whether Hindu, Mohammadan or Christian. This will be clear if litigation statistics are taken.

After all, these are only evils of management and not of the system itself. Evils of management are not the criterion by which an institution is to be judged. We have to see whether an institution is intrinsically good and beneficial. Very often we find that such beneficial institutions as Co-operative Societies' Local Boards Charitable Trusts are badly managed. For bad management we should not end the institutions themselves.

Instead, therefore, of reforming management our reformers advocate cumpulsory tavazi partition. This is a thin end of the wedge to end the joint family system, altogether. The remedy is worse than the evil.

What will be the consequences of this compulsory partition? 1. Naturally all joint families will desire to break up and ruinous & prolonged litigation will follow. 2. With the breaking up of joint families all the beautiful features of an ideal Alyasanthana Family will disappear and instead of "Each for all and all for each" we will have "Each for himself and God for all" with all its concomitant results. 3. Joint family properties will soon be reduced to uneconomic holdings not sufficient to keep even a small family going. It is particularly so in the case of not less than 85 percent of the families whose holdings are even at present very small. 4. The holdings thus becoming uneconomic will soon pass into the hands of money lenders and other communities and the several of our families now owning these holdings will then have to join the army of the unemployed. 5. Our people not being so andvanced as people of other communities and the only occupation we know of being

ಕಾರ್ಯಕಲಾಪಗಳ ಎಡೆಯಲ್ಲಿ ಸಾಮೂಹಿಕ ಕಾರ್ಯ ಕಲಾಪಗಳೂ ತಲೆದೋರುತ್ತಲಿವೆ. ಪೌರ್ವಾತ್ಯ-ಪಾಶ್ಚಿಮಾತ್ಯ ಪ್ರಜಾವರ್ಗದವರೂ ಸರಕಾರಗಳೂ ಕಾಯಿದೆ ಕಾನೂನು ಯಾ ಇನ್ನಿತರ ಸಾಧನಗಳಿಂದ ಈ ಧ್ಯೇಯವನ್ನು ಸಾಧಿಸಲು ಹವಣಿಸುತ್ತಿರುವರು. ವಸ್ತುಸ್ಥಿತಿಯು ಹೀಗಿರುವಾಗ ಅದೊಂದು ಬಗೆಯ ಸಂಘಶಕ್ತಿಯ ಜೀವನ ಪದ್ಧತಿಯಾದ ನಮ್ಮ ಅವಿಭಕ್ತ ಕುಟುಂಬಗಳ ಪದ್ಧತಿಯನ್ನು ವಿಪಾರಿ ಬೆಳೆದುದೆಂದು ಹೇಳುವುದಾದರೂ ಹೇಗೆ? ಈ ವಿಶಿಷ್ಟ ಪದ್ಧತಿಯನ್ನು ಛಿನ್ನಗೊಳಿಸಿ ಅದರ ಸದಸ್ಯರನ್ನು ಸಹಕಾರ ಜೀವನದಿಂದ ಹೊರಹಾಕುವುದರಿಂದ ಸಾಧಿಸುವ ಪುರುಷಾರ್ಥವಾದರೂ ಏನಿರಬಹುದು?

ಕೌಟುಂಬಿಕ ಕಲಹಗಳು, ಸಿವಿಲ್ ಕ್ರಿಮಿನಲ್ ಮೊಕದ್ದಮೆಗಳು, ಅಭಿವೃದ್ಧಿಗೆ ನಿರವಕಾಶ—ಈ ಪದ್ಧತಿಗೆ ವಿರೋಧವಾಗಿ ಸುಧಾರಕರ ಬಾಯಿಂದ ಎಂದೂ ಕೇಳಬರುವ ಇನ್ನೊಂದು ಕೂಗೆಂದರೆ "ಕುಟುಂಬದ ಯಜಮಾನರು ಕುಟುಂಬದ ಸಮಸ್ತ ಆದಾಯವನ್ನು ತಮ್ಮ ಮತ್ತು ತಮ್ಮ ಮಡದಿ ಮಕ್ಕಳ ಖರ್ಚಿಗಾಗಿ ದುರುಪಯೋಗಗೊಳಿಸಿ ಕುಟುಂಬದ ಕಿರಿಯ ಸದಸ್ಯರನ್ನು ಉಪವಾಸ ಬೀಳಿಸುವರು. ಇದರಿಂದಲೇ ಕಲಹಗಳುಂಟಾಗಿ ಕುಟುಂಬವನ್ನೇ ಮಣ್ಣುಗೂಡಿಸುವಂತಹ ಸಿವಿಲ್, ಕ್ರಿಮಿನಲ್ ಮೊಕದ್ದಮೆಗಳು ತಲೆಯೆತ್ತುವುವು. ಇದರ ದುಷ್ಪರಿಣಾಮವಾಗಿ ಸಾಮೂಹಿಕ ವ ವೈಯಕ್ತಿಕ ಅಭಿವೃದ್ಧಿಗೆ ಅವಕಾಶವೇ ಸಿಗದಂತಾಗುತ್ತದೆ" ಎಂದು.

ಕೆಲವು ಕುಟುಂಬಗಳಲ್ಲೇನೂ ಈ ತೆರನಾದ ದುರವಸ್ಥೆ ಸಂಘಟಿಸಿರುವುದು ನಿಜವೆಂದು ಒಪ್ಪಬೇಕಾಗಿದೆ. ಆದರೆ ಎಲ್ಲಾ ಕುಟುಂಬಗಳಲ್ಲಿ ಇದೇ ಪಾಡೆಂಬುದು ಅತಿಶಯೋಕ್ತಿಯೇ ಸರಿ. ನಮ್ಮ ಜಿಲ್ಲೆಯ ಅಳಿಯ ಸಂತಾನದ ಕುಟುಂಬಗಳ ಅಂಕೆ-ಸಂಖ್ಯೆಗಳನ್ನು ಪರಿಶೀಲಿಸಿದರೆ ಸೇಕಡಾ 75ಕ್ಕೆ ಕಡಿಮೆಯಾಗದ ಕುಟುಂಬಗಳು ತಮ್ಮ ಸ್ವಂತ ಆಸ್ತಿಯ ಮೇಲೆ ರೂ. 50 ಯಾ ಅದಕ್ಕಿಂತ ಕಡಿಮೆ ತೀರ್ವೆ ಕೊಡುವಂತಹವುಗಳೆಂದೂ ಸುಮಾರು ಸೇಕಡಾ 10ರಷ್ಟು ಕುಟುಂಬಗಳು ರೂ. 50 ರಿಂದ ರೂ. 100ರ ವರೆಗೂ ಮತ್ತು ಸೇಕಡಾ 10ರಷ್ಟು ಕುಟುಂಬಗಳು ರೂ. 100 ರಿಂದ ರೂ. 500ರ ವರೆಗೂ ಉಳಿದ ಬರೀ ಸೇಕಡಾ 5 ಕುಟುಂಬಗಳು ರೂ. 500 ಕ್ಕಿಂತಲೂ ಹೆಚ್ಚು ತೀರ್ವೆ ಕೊಡುತ್ತವೆ ಎಂಬುದೂ ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಮೊದಲಿನ ಎರಡು ವರ್ಗದವುಗಳೆಲ್ಲ ಬೇಸಾಯಗಾರರ ಕುಟುಂಬಗಳಾಗಿದ್ದು ಸಾಮೂಹಿಕವಾಗಿ ಅಥವಾ ಬಾಯಿದರೆ ಯಾ ಬರಹ ಮೂಲಕ ಒಪ್ಪಂದ ನಡೆಸಿ ಬೇಸಾಯ ವೃತ್ತಿಯನ್ನೇ ಅವಲಂಬಿಸಿ ಶಾಂತಿ-ಸಂತೃಪ್ತಿಗಳಿಂದ ಒಡಕಿಗೆ ಎಡೆ ಕೊಡದೆ ತಮ್ಮ ಜೀವನವನ್ನು ಸಾಗಿಸುತ್ತವೆ. ಕೊನೆಯ ಎರಡು ವರ್ಗಗಳಿಗೆ ಸೇರಿದ ಕೆಲವೇ ಕುಟುಂಬಗಳಿಗೆ ಮಾತ್ರ ಮೇಲೆ ಬಣ್ಣಿಸಿರುವಂತಹ ದುರವಸ್ಥೆಯೊದಗಿರಬಹುದು.

ಆದರೆ ಈ ಪರಿಯ ದುಃಸ್ಥಿತಿಯು ಅಳಿಯ ಸಂತಾನ ಕುಟುಂಬಗಳಲ್ಲೇ ಮಾತ್ರವಲ್ಲ, ಹಿಂದೂ, ಮಹಮ್ಮದೀಯ, ಕ್ರೈಸ್ತ-ಎಂಬ ಭೇದವಿಲ್ಲದೆ ಎಲ್ಲಾ ಸಮಾಜಗಳ ಕುಟುಂಬಗಳಲ್ಲಿಯೂ ತೋರಿಬರುತ್ತವೆಂಬುದು ವ್ಯಾಜ್ಯ ಮೊಕದ್ದಮೆಗಳ ಅಂಕೆ ಸಂಖ್ಯೆಗಳಿಂದ ವಿಶದವಾಗದಿರದು.

ಏನೆಂದರೂ ಈ ದುಃಸ್ಥಿತಿಗಳೆಲ್ಲ ಆಡಳಿತದ ಪರಿಣಾಮವಲ್ಲದೆ ಪದ್ಧತಿಯ ಸರಿಣಾಮವೆನ್ನಬರುವಂತಿಲ್ಲ. ಒಂದು ಸಂಸ್ಥೆಯ ಮೌಲ್ಯವನ್ನು ಅದರ ಆಡಳಿತದಲ್ಲಿಯ ಕುಂದುಕೊರತೆಗಳ ಮಾನದಿಂದ ಅಳೆದು ತೀರ್ಮಾನಿಸುವುದು ಸಮಂಜಸವಲ್ಲ. ಒಂದು ಸಂಸ್ಥೆಯು ಸ್ವಾಭಾವಿಕವಾಗಿ ಉತ್ತಮ ವ ಉಪಯೋಗಕಾರಿಯಾಗಿದೆಯೇ ಎಂಬುದು ಮಾತ್ರ ಗಮನಾರ್ಹವಾದ ವಿಷಯ. ಅನೇಕ ಬಾರಿ ಎಷ್ಟೋ ಪ್ರಯೋಜನಕಾರಿಗಳಾದ ಸಹಕಾರ ಸಂಘಗಳು, ಸ್ಥಳೀಯ ಆಡಳಿತ ಸಂಸ್ಥೆಗಳು, ಧರ್ಮನಿಧಿಗಳ ಆಡಳಿತದಲ್ಲಿ ಎಷ್ಟೋ ನ್ಯೂನತೆಗಳು ಕಂಡುಬರುತ್ತವೆ. ಆದರೆ ಆಡಳಿತದಲ್ಲಿರುವ ನ್ಯೂನತೆಗಳಿಗಾಗಿ ಸಂಸ್ಥೆಯನ್ನೇ ಮುರುವದಾಗಲೀ ಅದನ್ನು ನಿರ್ಮೂಲಗೊಳಿಸಲು ಯತ್ನಿಸುವುದಾಗಲೀ ಯುಕ್ತವಲ್ಲ.

ಹೀಗಿದ್ದೂ ಆಡಳಿತದಲ್ಲಿ ಸುಧಾರಣೆಗಳನ್ನು ತರುವುದರ ಬದಲಾಗಿ ಸುಧಾರಕರು ಕಡ್ಡಾಯವಾಗಿ ತವಡು ಪ್ರಕಾರ ವಿಭಜನೆಯಾಗಬೇಕೆಂಬ ಕಟ್ಟಳೆಯನ್ನು ಬಳಕೆಗೆ ತರಬೇಕೆಂದು ಸಾಧಿಸುತಿದ್ದಾರೆ. ಇದು ಅವಿಭಕ್ತ ಕುಟುಂಬದ ಪದ್ಧತಿಯನ್ನೇ ನುಂಗಿ ನಿರ್ನಾಮಗೊಳಿಸಬೇಕೆಂದು ಬಂದಿರುವ ವಾಮನ ಪಾದವೆಂದೇ ಹೇಳಬೇಕು. ಮಾತ್ರವಲ್ಲದೆ ರೋಗಕ್ಕಿಂತ ಮದ್ದೇ ಕೇಳಾಗುವುದರಲ್ಲಿ ಸಂದೇಹವಿಲ್ಲ.

ಈ ತೆರನಾದ ಕಡ್ಡಾಯದ ವಿಭಜನೆಯ ಪರಿಣಾಮಗಳಾದರೂ ಏನೆಂದು ವಿಚಾರಿಸೋಣ. 1. ಅವಿಭಕ್ತ ಕುಟುಂಬಗಳೆಲ್ಲ ವಿಭಜಿಸಲ್ಪಡಲೆಳಸಿ ಅದರ ಹಿಂದೆಯೇ ನಾಶಕಾರಕ ಹಾಗೂ ದೀರ್ಘಕಾಲದವರೆಗೆ ಮುಂದೊತ್ತಲ್ಪಡುವ ವ್ಯಾಜ್ಯ ವ್ಯವಹರಣೆಗಳು ತಲೆದೋರುವುವು. 2. ಅವಿಭಕ್ತ ಕುಟುಂಬಗಳ ವಿಭಜನೆಯಿಂದ ಮೇಲೆ ನಮೂದಿಸಲ್ಪಟ್ಟ ಆದರ್ಶ ಅಳಿಯ ಸಂತಾನ ಕುಟುಂಬದ ಸಲ್ಲಕ್ಷಣಗಳೆಲ್ಲಾ ಮಾಯವಾಗುವುವು. "ತನಗೆಲ್ಲರೆಲ್ಲರಿಗೆ ತಾನು" ಎಂಬುದರ ಬದಲಾಗಿ "ತನ್ನ ತಲೆಗೆ ತನ್ನ ಕೈ, ಎಲ್ಲರ ತಲೆಗೆ ದೇವರ ಕೈ" ಎಂಬ ಅವಸ್ಥೆಯುಂಟಾಗಿ, ದುರವಸ್ಥೆಯ ದುಷ್ಫಲಗಳೆಲ್ಲ ಮೂಡದಿರಲಾರವು. 3. ಅವಿಭಕ್ತ ಕುಟುಂಬದ ಆಸ್ತಿಪಾಸ್ತಿಗಳೆಲ್ಲ, ಆರ್ಥಿಕ ದೃಷ್ಟಿಯಿಂದ ನಷ್ಟವಾಗಿ, ಅತಿ ಸಣ್ಣ ಕುಟುಂಬವನ್ನಾದರೂ ಹೊರಲಾರದಷ್ಟು ಕುಗ್ಗಿಹೋಗುವವು. ವಿಶೇಷತಃ ಈಗಾಗಲೇ ಅಲ್ಪಾಸ್ತಿಯ ಸೇಕಡಾ 85 ಕುಟುಂಬಗಳಿಗೆ ಈ ಮಾತು ಅಕ್ಷರಶಃ ನಿಜವಾಗದಿರದು. 4. ಆಸ್ತಿಗಳು ಈ ರೀತಿಯಲ್ಲಿ ಆರ್ಥಿಕ ಸಂಕಷ್ಟಕ್ಕೊಳಗಾಗಿ, ಸಾಲಿಗರ ಇಲ್ಲವೇ ಅನ್ಯ ಜಾತಿಯವರ ಕೈಸೇರುವವು ಮತ್ತು ಈಗ ಅಂತಹ ಆಸ್ತಿಯ ಮಾಲಿಕ ಕುಟುಂಬಗಳು ನಿರುದ್ಯೋಗಿಗಳ ಪಡೆಯನ್ನು ಸೇರಬೇಕಾಗುವುದು. 5. ಅನ್ಯ ಜಾತಿ

agriculture it will be a pitiable condition when our men, women and children become unemployed and are compelled to work as coolies to eke out their livelihood.

These are only some of the disastrous results. They will clearly show that instead of the millenium hoped for by our reformers there will be a complete eradication of the race as a whole.

If this then is the result in a majority of cases whom is the proposed reform legislation for? Is it only for the sake of 5 or 10 per cent of the richer families? If that be so it is against the fundamental principle of jurisprudence which says that when any legislation is contemplated it should aim at the greatest happiness of the greatest number. Here instead of the greatest happiness of the greatest number there will be greatest disaster for the greatest number. This is what we find in Marumakathayam families after the passing of the Marumakathayam Act and the people concerned are not very happy over this reform legislation.

But then, is no reform necessary at all? As has been already pointed out there are certain evils connected with the administration of joint family properties by their respective Ejmans and it is necessary that these evils must be removed. How best this can be done is not easy to solve.

Under the law as now administered the Ejmans are all powerful. They are neither agents nor trustees. They are not bound to keep accounts nor are they accountable to junior members. They have absolute control over moveables and outstandings and within the scope of management their powers are practically uncontrolled and this is why it is very difficult to remove misbehaving ejmans.

Now if the relationship between ejmans and their respective families is declared to be that of trustees and beneficiaries and their rights and liabilities defined, with the consequences for breach thereof, the Ejmans will be bound to manage their family properties subject to those rights and liabilities. There will then be no room for mal-feasance, misfeasance or non-feasance and their removal will also become very easy and less costly. If necessary, the ejmans may be allowed a certain percentage of the net income of their respective families for all their troubles. If this is acceptable a suitable scheme on theser lines will be prepared and published.

ಗಳಷ್ಟು ಮುಂದರಿಯದೆ ಇನ್ನು ಹಿಂದುಳಿದ ನಮ್ಮ ಜಾತಿಗೆ ಗೊತ್ತಿರುವ ವೃತ್ತಿಯೆಂದರೆ 'ವ್ಯವಸಾಯ' ಮಾತ್ರವೇ ಆಗಿರುವುದರಿಂದ, ನಮ್ಮ ಸ್ತ್ರೀ-ಪುರುಷ-ಬಾಲರೆಲ್ಲ ನಿರುದ್ಯೋಗಿಗಳಾಗಿ, ಕೂಳಿಗೋಸುಗ ಕೂಲಿಗಳಾಗಿ ದುಡಿಯುವ ದುರ್ಗತಿಗೀಡಾಯುವುದು.

ಮೇಲಿನವು ಈ ಸುಧಾರಣೆಯಿಂದುಂಟಾಗುವ ಭಯಾನಕ ಪರಿಣಾಮಗಳಲ್ಲಿ ಕೆಲವೇ ಮಾತ್ರವೆನ್ನಬಹುದು. ಆದಕಾರಣ, ನಮ್ಮ ಸುಧಾರಕರು ಈ ಬದಲಾವಣೆಗಳ ಮೂಲಕ ತಾವು ನಿರೀಕ್ಷಿಸಿದಂತೆ ಅದೊಂದು ಶಾಶ್ವತ ಸುಖಸಮಯವನ್ನು ತರುವ ಬದಲಾಗಿ ಜನಾಂಗವನ್ನೇ ಸಮೂಲ ನಾಶಗೊಳಿಸುವರೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಬಹುಪಕ್ಷದ ಕುಟುಂಬಗಳ ಪರಿಸ್ಥಿತಿಯು ಹೀಗಾಗುವುದಾದರೆ ಸುಧಾರಣೆಯಿಂದ ಪ್ರಯೋಜನವಾಗುವುದಾದರೂ ಯಾರಿಗೆ? ಅದು ಕೇವಲ ಸೇಕಡಾ 5ರಿಂದ 10ರೊಳಗಿನ ಶ್ರೀಮಂತ ಕುಟುಂಬಗಳಿಗಾಗಬಹುದೇ? ಹಾಗಿದ್ದ ಪಕ್ಷದಲ್ಲಿ ಅದು ನ್ಯಾಯ ಶಾಸ್ತ್ರದ ಮೂಲತತ್ವಕ್ಕೇನೇ ತೀರಾ ವಿರುದ್ಧವಾಗಿದೆಯೆನ್ನಬಹುದು. ಯಾವುದೇ ಕಾಯಿದೆಯನ್ನು ಮಂಜೂರುಮಾಡುವ ಮೊದಲು ಅದು ಅಧಿಕ ಸಂಖ್ಯಾಕರಿಗೆ ಅಧಿಕ ಸುಖಕೊಡಬಲ್ಲುದೇ ಎಂದು ಪರ್ಯಾಲೋಚಿಸುವುದು ಕಾಯಿದೆಕಾರರ ಕರ್ತವ್ಯವೆಂದು ನ್ಯಾಯ ಶಾಸ್ತ್ರವು ಸಾರಿಹೇಳುತ್ತಿದೆ. ಪ್ರಸ್ತುತ ಸುಧಾರಣೆಯಲ್ಲಿ ಅಧಿಕ ಸಂಖ್ಯಾಕರಿಗೆ ಅಧಿಕ ಸುಖ ಲಭಿಸುವ ಮಾತಂತಿರಲಿ, ಅಧಿಕ ಸಂಖ್ಯಾಕರಿಗೆ ಅಧಿಕ ವಿಪತ್ತುಂಟಾಗುವುದೆಂಬುದು ಖಂಡಿತ. ಮರುಮಕತ್ತಾಯ ಕಾನೂನು ಜಾರಿಗೆ ಬಂದ ಮೇಲೆ ಮರುಮಕತ್ತಾಯ ಕುಟುಂಬಗಳಿಗಾದ ಗತಿಯೇ ಹೀಗಾದುದರಿಂದ, ಅವರಿಗೆ ಮೇಲೆ ನಮೂದಿಸಲ್ಪಟ್ಟ ಸುಧಾರಣೆಯಿಂದ ದೊರೆತ ಸುಖವು ಎಷ್ಟೆಂದರೂ ಅಷ್ಟೇಯೆನ್ನಬಹುದು.

ಹಾಗಾದರೆ ಸುಧಾರಣೆಯೇ ಅಗತ್ಯವಿಲ್ಲವೆನ್ನಬರುವುದೇ? ಮೇಲೆ ಸೂಚಿಸಿದಂತೆ ಅವಿಭಕ್ತ ಕುಟುಂಬದ ಯಜಮಾನರ ಆಸ್ತಿಪಾಸ್ತಿಗಳ ಆಡಳಿತದಲ್ಲಿ ಕಂಡುಬರುವ ಆ ನ್ಯೂನತೆಗಳನ್ನು ಹೋಗಲಾಡಿಸಲೇಬೇಕು. ಇದನ್ನು ಸಾಧಿಸಲು ತಕ್ಕ ಉಪಾಯವಾವುದೆಂಬುದು ಮಾತ್ರ ಸುಲಭವಾಗಿಲ್ಲ.

ಪ್ರಕೃತ ಜಾರಿಯಲ್ಲಿರುವ ಕಾನೂನು ಮೇರೆಗೆ ಯಜಮಾನರೇ ಸರ್ವಾಧಿಕಾರಿಗಳಾಗಿದ್ದಾರೆ. ಅವರು ಕುಟುಂಬದ ಏಜಂಟರೂ ಅಲ್ಲ, ಟ್ರಸ್ಟಿಗಳೂ ಅಲ್ಲ. ಅವರು ಲೆಕ್ಕ-ಪತ್ರಗಳನ್ನಿಡಬೇಕೆಂದಿಲ್ಲ. ಕಿರಿಯ ಸದಸ್ಯರಿಗೆ ಅವರನ್ನು ಪ್ರಶ್ನಿಸುವ (ಲೆಕ್ಕ ಕೇಳುವ) ಅಧಿಕಾರವೂ ಇಲ್ಲ. ಚರಾಸ್ತಿ-ಹೊರ ಬಾಕಿಗಳ ಮೇಲೆ ಅವರಿಗೆ ನಿರಂಕುಶ ಅಧಿಕಾರವಿದೆ. ಆಡಳಿತ ಕ್ಷೇತ್ರದಲ್ಲಿ ಅವರ ಹಕ್ಕುಗಳು ಯಾರ ಹಿಡಿತಕ್ಕೂ ಸಿಗುವಂತಿಲ್ಲ. ಹೀಗಾದುದರಿಂದಲೇ ದುರಾಚಾರಿ ಯಜಮಾನರನ್ನು ಪದಚ್ಯುತರನ್ನಾಗಿ ಮಾಡುವುದು ದುಸ್ತರವಾಗಿದೆ.

ಯಜಮಾನರು ಮತ್ತು ಅವರ ಕುಟುಂಬಗಳೊಳಗಿನ ಸಂಬಂಧವು ಟ್ರಸ್ಟಿ ಮತ್ತು ಹಿತೈಷಿಗಳೊಳಗಿನ ಸಂಬಂಧದಂತೆಯೇ ಇರಬೇಕೆಂದು ನಿರ್ಣಯಿಸಿ ಅವರ ಹಕ್ಕುಬಾಧ್ಯತೆಗಳನ್ನು ನಿರ್ದಿಷ್ಟ ರೀತಿಯಲ್ಲಿ ಸೂಚಿಸಿ, ಆ ಹಕ್ಕುಬಾಧ್ಯತೆಗಳನ್ನು ಉಲ್ಲಂಘಿಸುವುದರಿಂದುಂಟಾಗುವ ಪರಿಣಾಮಗಳನ್ನು ಸ್ಪಷ್ಟೀಕರಿಸಿದಲ್ಲಿ, ಯಜಮಾನರು ತಮ್ಮ ಕುಟುಂಬದ ಆಸ್ತಿಪಾಸ್ತಿಗಳ ಆಡಳಿತವನ್ನು ಈ ಹಕ್ಕುಬಾಧ್ಯತೆಗಳೊಳಗಾಗಿ ನಡಿಸುವಂತಾಗುವುದು. ಆಗ ಆಡಳಿತದಲ್ಲಿ ದುಷ್ಪ್ರವೃತ್ತಿ, ಅಧಿಕಾರದ ದುರುಪಯೋಗ ಹಾಗೂ ಕರ್ತವ್ಯ ಹೀನತೆಗಳಿಗೆ ಆಶ್ರಯ ಸಿಗದಂತಾಗುವುದು. ಅಷ್ಟೇ ಅಲ್ಲದೆ ಯಜಮಾನಿಕೆಯನ್ನು ಸುಲಭವಾಗಿಯೂ ಅಲ್ಪವ್ಯಯದಿಂದಲೂ ರದ್ದುಪಡಿಸಬಹುದು. ಅಗತ್ಯವಿದ್ದರೆ ಯಜಮಾನರು ತಮ್ಮ ಕುಟುಂಬಗಳ ಆಡಳಿತದಲ್ಲಿ ಪಡುವ ಶ್ರಮದ ಪ್ರತಿಫಲವಾಗಿ ಅವರಿಗೆ ನೆಟ್ ಹುಟ್ಟುವಳಿಯ ನಿರ್ದಿಷ್ಟ ಅಂಶ ಕೊಡಲೂಬಹುದು. ಇದು ಸಮ್ಮತವಾದರೆ ಇದಕ್ಕೆ ಅನುಸರಿಸಿ ಒಂದು ಸ್ಕೀಮು ತಯಾರಿಸಿ ಪ್ರಕಟಿಸಬಹುದು.

Most Reliable New Model 1939

High Grade Lever Movement. Offered at 50% Reduction

No. 517 STRONG & DURABLE.

ROUND OR SQUARE



No. 401. Chromium Rs. 3 0 0

„ **402. Golden Case** „ 4 0 0

LEVER MOVT. 15 JEWELS.

No. 561. Chromium Rs. 13 8 0

Guaranteed 5 Years.

No. 562 Rolled Gold Rs. 17 0 0 **No. 517 Chromium** Rs. 6 8 0

For other Particulars. **No. 518. Golden Case** Rs. 8 0 0. Ask for our Catolague. As. 9/- Extra for postage & packing.

(CORRESPONDENCE IN ENGLISH ONLY.)

BAPALAL & CO., *101 Abdul Rehman Street,* **Bombay 3**

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ಸ್ ಹೋಟೆಲ್ ಫೋನ್ 406 ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ ಮೈಸೂರು ಕೇಪ್ ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜ್ಜಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ರಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು,

ಅಮೃತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜ್ಜಾನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ಜಿಲ್ಲಾ ಸಮಾಚಾರ

ಕನ್ನೂರು—ಆಸುಪಾಸಿನ ಗ್ರಾಮಗಳ ಅಳಿಯ ಸಂತಾನಿಕರ ಸಭೆಯೊಂದು ತಾ. 2-9-39ರಲ್ಲಿ ಕನ್ನೂರು ಶಾಲೆಯಲ್ಲಿ ಶ್ರೀ. ಕನ್ನೂರು ಗುತ್ತು ರಾಮಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಬಿಲ್ಲನ್ನು ಚರ್ಚಿಸಲಾಗಿ ಕೆಲವು ಅಗತ್ಯವುಳ್ಳ ತಿದ್ದುಪಡಿಗಳನ್ನು ಮಾಡಬೇಕೆಂದು ನಿರ್ಣಯಿಸಲಾಯಿತು.

ಮೂಲ್ಕಿ—ಪಂಚಾಯತ ಬೋರ್ಡಿನ ಕಡೆಯಿಂದ ತಾ. 9ರಿಂದ 15ರ ವರೆಗೆ ಗ್ರಾಮಾಭಿವೃದ್ಧಿ ಉತ್ಸವ ಆಚರಿಸಲ್ಪಡುತ್ತಿದೆ. ಪ್ರಥಮ ದಿನ ಜಿಲ್ಲಾ ಸೆಶ್ಯನ್ ಜಡ್ಜ್ ಶ್ರೀ ರಾಜಗೋಪಾಲಾಚಾರಿಯವರು ಗ್ರಾಮೋದ್ಧಾರ ಉದ್ಘಾಟನ ಸಮಾರಂಭ ನಡಿಸಿದರು. ಶ್ರೀ ಹಿರಿಯಡ್ಕ ನಾರಾಯಣ ರಾಯರು ಪಾದಿಯ ವಿಷಯ ಉಪನ್ಯಾಸವಿತ್ತರು.

ಎಲ್ಲೂರು—ತಾ. 3-9-'39ರಲ್ಲಿ ಪಂಚಾಯತ ಬೋರ್ಡಿನವರಿಂದ ನೂತನವಾಗಿ ಸಂತೆಯು ಆರಂಭವಾಗಿದೆ. ಪ್ರತಿ ಆದಿತ್ಯವಾರ ನಡೆವ ಈ ಸಂತೆಗೆ ತುಂಬಾ ಪ್ರೋತ್ಸಾಹ ಸಿಗುವುದೆಂದು ನಿರೀಕ್ಷಿಸಲಾಗಿದೆ

ಬೈಂದೂರು—ಸ್ಥಳೀಯ ಮಿಡ್ಲ್‌ಸ್ಕೂಲ್ ಬಡವಿದ್ಯಾರ್ಥಿ ನಿಧಿಗೆ ಶ್ರೀ. ಬೇಲಂಜೆ ಕೃಷ್ಣಯ್ಯ ಹೆಗ್ಡೆ ರೂ. 2. ಪುತ್ತೂರು ಬೋರ್ಡುಹೈಸ್ಕೂಲ್, ರೂ. 8 (ಶ್ರೀ. ಪೊಳಲಿ ರಾಮಕೃಷ್ಣರಾವ್ ರೂ. 2ರ ಸಹಿತ) ಶ್ರೀ. ಕೆ. ಟಿ ಸಟ್ಟಿಗಾರ ರೂ. 1. ಸಹಾಯಮಾಡಿದ್ದಾರೆ.

ಈ ಕಡೆಯ ಅಳಿಯಸಂತಾನಗರ 1 ಸಭೆಯು 'ಅಳಿಯಸಂತಾನ ಬಿಲ್ಲಿ'ನ ಕುರಿತು ಪರ್ಯಾಲೋಚಿಸುವರೆ ತಾ. 27 8-39ರಲ್ಲಿ ಶ್ರೀ. ಭದ್ರ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಬಿಲ್ಲನ್ನು ನಿಷೇಧಿಸಲಾಗಿದೆ.

ಶ್ರೀ. ಎಸ್. ಕಾಳಪ್ಪ ಶೆಟ್ರ ನಿಧನ

ಅಬ್ಕಾರಿ ಸಬ್‌ಇನ್‌ಸ್ಪೆಕ್ಟರರಾಗಿದ್ದು ಕೆಲವು ವರ್ಷಗಳ ಮೊದಲು ನಿವೃತ್ತರಾಗಿ ಪಾಂಗಾಳದಲ್ಲಿ ವಾಸಮಾಡಿಕೊಂಡಿದ್ದ ಶ್ರೀ ಕಾಳಪ್ಪ ಶೆಟ್ರು (ನವಯುಗದ ಉಪಸಂಪಾದಕ ಲೇಖಕ ಶ್ರೀ. ಬಿ. ಶ್ಯಾಮರಾಯ ಶೆಟ್ಟಿ, ಬಿ.ಎ., ಎಲ್.ಟಿ.ಯವರ ತಂದೆ) ಕಳೆದ ಶುಕ್ರವಾರ ತನ್ನ 64ನೇ ವಯಸ್ಸಿನಲ್ಲಿ ಮೃತರಾಗಿರುವರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಕೆಲ ಸಮಯದಿಂದ ಪಕ್ಷವಾತರೋಗ ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ದಿವಂಗತರು ಗುಣವಂತರೂ ಸರಳಸ್ವಭಾವಿಯೂ ವಿನಯಶೀಲರೂ ಆಗಿದ್ದರು. ದ್ವಿತೀಯ ಪತ್ನಿ ಮತ್ತು ಮಕ್ಕಳೊಡನೆ ನಾವು ಸಹಾನುಭೂತಿಯುಳ್ಳವರಿರುತ್ತೇವೆ

ಕುಂಟಾಡಿ—ಜನರಿಗೆ ಉಪದ್ರವ ಕೊಡುತ್ತಿದ್ದ ಒಂದು ಜತೆ ಹುಲಿಗಳಲ್ಲಿ ಹೆಣ್ಣು ಹುಲಿಯು ಶ್ರೀ. ವೆಂಕಟಾಚಲ ಭಟ್ಟರೊಡ್ಡಿದ ಪಂಜರದಲ್ಲಿ ಸೆರೆಯಾಗಿದೆ. ನಿತ್ಯ ಬಂದು ರಾಣಿಯನ್ನು ಬಿಡಿಸಲು ಬೊಬ್ಬಿಡುವ ಗಂಡು ಹುಲಿಯನ್ನು ಕೊಲ್ಲಲು ಪ್ರಯತ್ನಗಳಾಗುತ್ತಿವೆ. ಸೆರೆಯಾದ ಹುಲಿಯನ್ನು ಆಸುಪಾಸಿನವರೆಲ್ಲ ತಂಡತಂಡವಾಗಿ ಬಂದು ನೋಡಿ ಹೋಗುತ್ತಿರುವರು ಶ್ರೀ. ಭಟ್ಟರ ಸಾಹಸವು ಸ್ತುತ್ಯ.



ಶ್ರೀ. ಕುಂಜೂರು ವ್ಯಾಸರಾಯರ ನಿಧನ ದ್ರಾವಿಡಬ್ರಾಹ್ಮಣ ಸಮಾಜದ ಸುಪ್ರತಿಷ್ಠಿತ ಗೃಹಸ್ಥರೂ ಸಾರ್ವಜನಿಕ ಹಿತಕಾರಿಯೂ ಆದ ಶ್ರೀ. ಕುಂಜೂರು ವ್ಯಾಸರಾಯರು ಇದೇ ತಾರೀಖು 1 9-39ರಲ್ಲಿ ತನ್ನ 75ರ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಕೀರ್ತಿಶೇಷ ಅದಮಾರು ಮಠದ ವಿಬುಧಪ್ರಿಯ ಶ್ರೀಪಾದಂಗಳವರ ಬಲಗೈಯಂತಿದ್ದು ಹಲವು ಕಾರ್ಯಗಳಲ್ಲಿ ಅವರಿಗೆ ನೆರವಾದರು. ಇವರ ಕಾರ್ಯದಕ್ಷತೆ, ಉದಾರತೆ ಮತ್ತು ಯಶಸ್ಸಿಗೆ ಮೆಚ್ಚಿದ ಎಲ್ಲೂರು ಸೀಮೆಯ ಜನರು ಇವರಿಗೆ ಎಲ್ಲೂರು ವಿಶ್ವನಾಥ ಮತ್ತು ದುರ್ಗಾಪರಮೇಶ್ವರಿ ದೇವಸ್ಥಾನಗಳ ಮೊಕ್ತೇಸರಿಕೆ ಕೊಟ್ಟರು. ಈ ಕಾಲದಲ್ಲಿ ಶ್ರೀ. ವ್ಯಾಸರಾಯರು ಎಲ್ಲೂರು ದೇವಸ್ಥಾನದಲ್ಲಿ ಒಂದು ಸಂಸ್ಕೃತ ಶಾಲೆ ಸ್ಥಾಪಿಸಿದ್ದರು. ಉಚ್ಚಿಲದಿಂದ ಎಲ್ಲೂರು ದೇವಸ್ಥಾನದ ವರೆಗೆ ರಸ್ತೆ ಮಾಡಿಸಿ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿಸಿದರು. ಅದಮಾರು ವ ರವ ವಿಬುಧಪ್ರಿಯ ಸ್ವಾಮಿಗಳು ಇವರನ್ನು ಭಂಡಾರಕೇರಿ ಮತ್ತು ಫಲಿಮಾರು ಮಠದ ಜನರಲ್ ಏಜಂಟರನ್ನಾಗಿ ಮಾಡಿದ್ದರು. ದಿವಂಗತರು ಹಲವು ಸಂಸ್ಥೆಗಳಲ್ಲಿ ಕೆಲಸಮಾಡಿರುವರಲ್ಲದೆ ಬೆಳಪು ಗ್ರಾಮದಲ್ಲಿ ಎಲಿಮೆಂಟರಿ ಶಾಲೆಯೊಂದನ್ನು ಸ್ಥಾಪಿಸಿದ್ದರು. ಇವರ ಬಂಧು ಬಳಗದ ಶೋಕದಲ್ಲಿ ನಾವು ಸಹಾನುಭೂತಿಯುಳ್ಳವರಿರುತ್ತೇವೆ.

ನೋಟೀಸು.

The Pangal Nayak Bank Ltd., Udipi.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ತೋರಿಸುವವರು ಈ ಬೇಂಕಿನ ಉಡುಪಿ ಆಫೀಸಿನಿಂದ ಚಿನ್ನಾಭರಣಗಳ ವ ಬೆಳ್ಳಿ ದಾಗೀನುಗಳ ಆಧಾರದ ಮೇಲೆ ಪಡೆದ ಸಾಲಗಳ ಅಸಲು ಮತ್ತು ಅವುಗಳ ಮೇಲಣ ಬಡ್ಡಿ ಹಣ ಬೇಂಕಿಗೆ ಮ್ಯಾದೆಗೆ ವಸೂಲು ಬಾರದೆ ಇದ್ದ ಕಾರಣ ಅವರಿಗೆ ಕಳುಹಿಸಿದ ಟಪ್ಪಾಲು ರಿಜಿಸ್ಟ್ರ ನೋಟೀಸುಗಳು ವ ಇತರ ನೋಟೀಸುಗಳು "ಸದ್ರಿಯವರು ಮೃತಪಟ್ಟಿರುತ್ತಾರೆ ಯಾ ವಿಳಾಸ ಗೊತ್ತಿಲ್ಲ ಯಾ ಇನ್ನಾರು ಮಾಡುತ್ತಾರೆ" ಎಂಬ ಸಬಬುಗಳಿಂದ ಹಿಂತಿರುಗಿ ಬಂದಿರುವುದರಿಂದಲೂ ಸದ್ರಿ ವ್ಯಕ್ತರ ವಾರಿಸುದಾರರು ಹಕ್ಕುಸ್ಥಾಪಿಸಿ ಕೋರ್ಟಿನಿಂದ ಸಕ್ಸೆಶ್ಯನ್ ಸರ್ಟಿಫಿಕೇಟು ಪಡೆದು ಸದ್ರಿ ಸಾಲಗಳ ಅಸಲು ಹಣ ವ ಈ ವರೇಗಿನ ಬಡ್ಡಿ ಬೇಂಕಿಗೆ ಸಲ್ಲಿಸಿ ನಗಗಳನ್ನು ಈ ವರೆಗೂ ಬಿಡಿಸಿಕೊಂಡು ಹೋಗದೆ ಇರುವುದರಿಂದಲೂ ಈ ಮೂಲಕ ಪ್ರಕಟಿಸಲಾಗುವದೇನೆಂದರೆ.—ಸದ್ರಿ ಸಾಲಗಳ ಬಾಬ್ತು ಜಮಾ ಸಮಸ್ತ ಅಸಲು ಬಡ್ಡಿ ಖರ್ಚುಗಳು ನೋಟೀಸುಗಳ ಖರ್ಚು ಸಹಿತ ತಾ. 23-9-1939ನೇ ಶನಿವಾರ ಅಪರಾಹ್ನ ಘಂಟೆ 1ರ ಒಳಗೆ ಬೇಂಕಿಗೆ ಜಮಾ ವಸೂಲು ಬಾರದೆ ಇದ್ದರೆ ಸದ್ರಿ ಸಾಲಗಳ ಭದ್ರತೆ ಬಗ್ಗೆ ಸದ್ರಿಯವರು ಬೇಂಕಿನಲ್ಲಿ ಒತ್ತೆಯಿಟ್ಟ ನಗಗಳನ್ನು ತಾರೀಖು 25-9-1939ನೇ ಸೋಮವಾರ ಮಧ್ಯಾಹ್ನ 12 ಘಂಟೆಗೆ ಬೇಂಕಿನ ಉಡುಪಿ ಆಫೀಸಿನಲ್ಲಿ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡಲಾದೀತು. ಏಲಂ ಅದೇ ದಿವಸ ಸಂಪೂರ್ಣವಾಗದೆ ಇದ್ದರೆ ನಂತರದ ದಿವಸಗಳಲ್ಲಿ ಪುನಃ ನೋಟೀಸು ಕೊಡದೆನೇ ಮುಂದುವರಿಸಲಾದೀತು.

1. ಸಾಲದ ನಂಬ್ರ 712/36 ಶೇಕ ಯಾಕೂಬ ಸಾಹೇಬ, ಶೇಕ ಅಲ್ಲಿ ಸಾಹೇಬರ ಮಗ, ಮುಂಡುಚಿಟ್ಟು, ಉಗ್ರಾಣಿ, ಕಟಪಾಡಿ ಪೋಸ್ಟು, ಸಾಲದ ಅಸಲು ಬಾಕಿ ರೂ. 75/ ಬಡ್ಡಿ ಬಾಕಿಯಾದ ತಾ. 1-9-'38

2. ಸಾಲದ ನಂಬ್ರ 27/37, ಶೇಕ ಮಿರಾಸಾಹೇಬ, ಹುಸ್ಸೇನ್ ಸಾಹೇಬರ ಮಗ. ಪೋಲೀಸು ಕೊನ್ಸ್ಟೆಬಲ್ ನಂಬ್ರ 414, ಪೋಲೀಸು ಸ್ಟೇಶನು, ಉಡುಪಿ, ಸಾಲದ ಅಸಲು ಬಾಕಿ ರೂಪಾಯಿ 90/-. ಬಡ್ಡಿ ಬಾಕಿಯಾದ ತಾರೀಖು 16-3-1938.

3. ಸಾಲದ ನಂಬ್ರ 263/38 ಬಿ. ಶೀನ ಭಂಡಾರಿ, ಬಾಬ ಭಂಡಾರಿ ಅಳಿಯ, ನಂಬ್ರ 76ನೇ ಬಡಗಬೆಟ್ಟು ಗ್ರಾಮ ನಿವಾಸಿ, ಉಡುಪಿ ಪೋಸ್ಟು, ಸಾಲದ ಅಸಲು ಬಾಕಿ ರೂಪಾಯಿ 40/-, ಬಡ್ಡಿ ಬಾಕಿಯಾದ ತಾರೀಖು 27-7-1938.

4. ಸಾಲದ ನಂಬ್ರ 315 38 ಕೆ. ವಾಸುದೇವ ಪೈ, ಕೆ. ರಘುನಾಥ ಪೈಗಳ ಮಗ, ಸರಾಫ್, ಉಡುಪಿ. ಸಾಲದ ಅಸಲು ಬಾಕಿ ರೂಪಾಯಿ 100/- ಬಡ್ಡಿ ಬಾಕಿಯಾದ ತಾ. 7-9-1938

5. ಸಾಲದ ನಂಬ್ರ 57/39 ಕೊಟ್ಟೇಶ್ವರ ವಾಸುದೇವ ಪೈ, ಕೊಟ್ಟೇಶ್ವರ ರಘುನಾಥ ಪೈಗಳವರ ಮಗ, ಸರಾಫ್, ಬಡಗುಪೇಟೆ, ಉಡುಪಿ. ಸಾಲದ ಅಸಲು ಬಾಕಿ ರೂಪಾ 1050/- ಬಡ್ಡಿ ಬಾಕಿಯಾದ ತಾರೀಖು 12-5-1939.

ಬೇಂಕಿನ ಆಫೀಸು, ಉಡುಪಿ.
ತಾ. 9-9-1939

P. Venkatesl. Nayak,
ಏಜಂಟ್.

ಸುರತ್ಕಲ್ (ಮೈರಪ್ಪಾಡಿ)— ಇಲ್ಲಿಯ ಶ್ರೀ ಭಾರತೀ ವಾಚನಾಲಯದವರು ಊರವರ ಪ್ರೋತ್ಸಾಹ-ಸಹಾಯಗಳಿಂದ ತಾ. 1-7-39ರಲ್ಲಿ ಆರಂಭಿಸಿದ ಭಾರತ ವಾಚನದ ಮಂಗಲ ಸಮಾರಂಭವನ್ನು ತಾ. 9-9-39ರಂದು ಜರಗಿಸಿದರು.

ಇನ್ನಂಜೆ—ಹಿಂದೂ ಎಲಿಮೆಂಟರಿ ಶಾಲೆಯಲ್ಲಿ 6ನೇ ಕ್ಲಾಸು ತೆರೆಯುವ ಸಮಾರಂಭವು ತಾ. 1-9-39ರಲ್ಲಿ ಶ್ರೀ. ಕೆ. ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಬಡವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಗಳನ್ನು ಕೊಡಲಾಯಿತು. ತಿಂಡಿ ಹಂಚಲಾಯಿತು. ಶಾಲೆಯ ಏಳಿಗೆಯನ್ನು ವಿವರಿಸಿ ಅಧ್ಯಕ್ಷರು ಭಾಷಣಕೊಟ್ಟರು.

ಕಾರ್ಕಳ—ಇಲ್ಲಿಯ ರಾಮಕೃಷ್ಣ ವಿದ್ಯಾರ್ಥಿ ಭವನವು ಶ್ರೀ. ಎಂ. ಬಸವಶೆಟ್ಟರ ಪರಿಶ್ರಮದಿಂದ ತಾ 15 7-39ರಿಂದ ಪ್ರಾರಂಭವಾಗಿ ಕ್ರಮವಾಗಿ ನಡೆಯುತ್ತಿದೆ. ಡಾ. ಎನ್. ಎಂ. ಅದ್ಯಂತಾಯ (ಅಧ್ಯಕ್ಷ) ಶ್ರೀ. ಶಾಂಬಶೆಟ್ಟಿ, ವಕೀಲ್, (ಕಾರ್ಯದರ್ಶಿ) ಶ್ರೀ. ಎಂ. ಬಸವಶೆಟ್ಟಿ, (ವಾರ್ಡನ್) ಆಗಿರುವ ಒಂದು ಕಮಿಟಿ ರಚನೆಯಾಗಿದೆ. ಈಗ ಶ್ರೀ ಬಸವಶೆಟ್ಟರಿಗೆ ಬೈಂದೂರಿಗೆ ವರ್ಗವಾಗಿರುವದಾದರೂ ಭವನವು ಸರಿಯಾಗಿ ನಡೆಯುವುದೆಂದು ಭಾವಿಸಲಾಗಿದೆ.

ಕಾಪು ಮಾದ್ಲೂರು:-ಇಲ್ಲಿಯ ಬೋರ್ಡ ಶಾಲೆಯ ಮುಖ್ಯ ಅಧ್ಯಾಪಕರಾದ ಶ್ರೀ. ಎ. ಓರಿಯಣ್ಣ ಶೆಟ್ಟಿಗೆ ಇಲ್ಲಿಂದ ವರ್ಗವಾದುದರಿಂದ ತಾ 21-8-39 ರಲ್ಲಿ ಊರವರೂ ವಿದ್ಯಾರ್ಥಿಗಳೂ ಅವರನ್ನು ಬೀಳ್ಕೊಂಡರು. ಶೀನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಓರಿಯಣ್ಣ ಶೆಟ್ಟರು ಬಂದಂದಿನಿಂದ ಶಾಲೆಯು ಹೇಗೆ ಅಭಿವೃದ್ಧಿ ಹೊಂದಿತೆಂಬುದಾಗಿ ಭಾಷಣಗಳಾದುವು.

ದಕ್ಷಿಣಕನ್ನಡ ಜಿಲ್ಲಾ ಮೂಲಗೇಣಿದಾರರ ಸಂಘ ಸ್ಥಾಪನೆ—ದಕ್ಷಿಣಕನ್ನಡ ಜಿಲ್ಲೆಯ ಕರಾವಳಿಯ ಮೂಲಗೇಣಿದಾರರ ಹಲವು ತೊಡಕು-ತೊಂದರೆಗಳನ್ನೂ ಸಂಕಷ್ಟಗಳನ್ನೂ ನ್ಯಾಯಸಮ್ಮತವಾದ ಸಂಘಟನಾತ್ಮಕ ರೀತಿಯಲ್ಲಿ ಚಳುವಳಿ ನಡೆಯಿಸಿ ಪರಿಹರಿಸಿಕೊಳ್ಳಲಿಕ್ಕೂ ಪರಸ್ಪರ ಸಹಾಯ ಸಹಾನುಭೂತಿ ಸ್ವಾವಲಂಬನ ಶಕ್ತಿಗಳನ್ನು ವೃದ್ಧಿಗೊಳಿಸಿ ಮೇಲ್ಮೆಯನ್ನು ಸಾಧಿಸಲಿಕ್ಕೂ ಅವಕಾಶವಾಗ ಬಂತೆ ಮೂಲಗೇಣಿದಾರರು ತಾರೀಖು 27-8-39ರಲ್ಲಿ ಕಲ್ಯಾಣಪುರದಲ್ಲಿ ಸಭೆಗೂಡಿ ಸಂಘ ಸ್ಥಾಪನೆ ಮಾಡಿದರು. ಅದರ ಕ್ರಮನಿಯಮಗಳನ್ನು ನಿರ್ಣಯಿಸಿ ಅದರ ವ್ಯವಸ್ಥೆ ಮತ್ತು ಪ್ರಚಾರಕ್ಕಾಗಿ ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸಲಾಯಿತು.

ಕುಂದಾಪುರ—ದಿ ವೆಸ್ಟರ್ನ್ ಎಶ್ಯೂರೆನ್ಸ್ ಕಂಪೆನಿಯ ಓರ್ಗನೈಜರ್ ಶ್ರೀ. ಬಿ. ನಾರಾಯಣ ಶೆಟ್ಟರ ಕಾರ್ಯಕ್ಷೇತ್ರವೂ ವ್ಯವಹಾರವೂ ಹೆಚ್ಚಿದುದರಿಂದ ತಾ. 10 9-39ರಲ್ಲಿ ಒಂದು ಆಫೀಸನ್ನು ತೆರೆಯಲಾಯಿತು. ವಕೀಲ್ ಶ್ರೀ ಕೆ. ವಿ. ಎನ್. ಹೆಬ್ಬಾರರು ಆಫೀಸನ್ನು ತೆರೆವ ಸಮಾರಂಭ ಜರಗಿಸಿದರು. ಟೀಪಾರ್ಟಿ ಸತ್ಕಾರ, ವ್ಯಾಖ್ಯಾನಗಳೊಂದಿಗೆ ಸಭಾವಿಸರ್ಜನೆಯಾಯಿತು.



ವಿನಾಶ ಮತ್ತು ಬರ್ಬರತೆಗೆ ವಿಜಯ.

ಹಿಟ್ಲರರೊಡನೆ ಡಲಾಡಿಯರರ ಆಗ್ರಹದ ವಿನಂತಿ ಹರ್ ಹಿಟ್ಲರರ ಉತ್ತರ.

ಯುದ್ಧ ಆರಂಭವಾಗುವ ಮೊದಲು ಫ್ರೆಂಚ್ ಪ್ರಧಾನ ಮಂತ್ರಿಗಳಾದ ಡಲಾಡಿಯರ್ ಮತ್ತು ಹಿಟ್ಲರರೊಳಗೆ ನಡೆದ ಪತ್ರ ವ್ಯವಹಾರವು ವಿವರವಾಗಿ ಈಗ ಪ್ರಕಟವಾಗಿದೆ. "ಜರ್ಮನಿಯ ಪ್ರಿಯ ಚಾನ್ಸೆಲರೇ" ಎಂದು ಡಲಾಡಿಯರರು ಹಿಟ್ಲರರನ್ನು ಸಂಬೋಧಿಸಿ ಅವರೊಡನೆ ಅತ್ಯಂತ ಆಗ್ರಹಪೂರ್ವಕವಾಗಿ ಈ ಕೆಳಗಣಂತೆ ವಿನಂತಿ ಮಾಡಿಕೊಂಡಿದ್ದರು. "ನನ್ನಂತೆಯೇ ನೀವೂ ಕಳೆದ ಮಹಾಯುದ್ಧದಲ್ಲಿ ರಣಾಂಗಣದ ಕಂದಕಗಳಲ್ಲಿ ಹೋರಾಡಿದ ಸೈನಿಕರಿರುವಿರಿ. ಆ ಯುದ್ಧವು, ರಾಷ್ಟ್ರಗಳ ಮನಸ್ಸುಗಳಲ್ಲಿ ಎಂತಹ ಭೀಕರತೆ ಮತ್ತು ಜಿಗುಪ್ಸೆಯನ್ನುಂಟುಮಾಡಿರುವುದೆಂಬುದನ್ನು ನನ್ನಂತೆ ನೀವೂ ಅರಿತಿರುವಿರಿ. ಯುದ್ಧವು ಹೇಗೆ ಬೇಕಾದರೂ ಕೊನೆಗೊಳ್ಳಲಿ. ಮಾನವ ನಾಗರಿಕತೆಯ ಹಿತದೃಷ್ಟಿಯಿಂದ ಜರ್ಮನ್ ಜನಾಂಗವು ಮಾಡಬೇಕಾದ ಕರ್ತವ್ಯವನ್ನು ನೆರವೇರಿಸುವಂತೆ ಅವರನ್ನು ನಡಿಸುವ ಅದ್ವಿತೀಯ ಶಕ್ತಿಯು ಅವರ ಅಖಂಡ ಮುಖಂಡರಾದ ನಿಮಗಿರುವುದರಿಂದ ಸನ್ನಿಸಂಧಾನದ ಸೂಚನೆಗಳಿಗೆ ನಿಮ್ಮಿಂದ ನಾನು ಉತ್ತರವನ್ನು ಕೇಳಿಕೊಳ್ಳುತ್ತೇನೆ. 25 ವರ್ಷಗಳ ಹಿಂದಿನಂತೆ ಈಗಲೂ ಫ್ರೆಂಚ್ ಮತ್ತು ಜರ್ಮನ್ ರಕ್ತವು, ಅದಕ್ಕಿಂತಲೂ ದೀರ್ಘವೂ ಭೀಕರವೂ ಆದ ಯುದ್ಧದಲ್ಲಿ ಹರಿಯಲೇ ಬೇಕೆಂದಾದರೆ ಎರಡು ರಾಷ್ಟ್ರಗಳೂ ತಮ್ಮ ವಿಜಯದವಿಶ್ವಾಸದಿಂದ ಹೋರಾಡುವವು. ಆದರೆ ಈ ಭೀಷಣ ಕದನದಲ್ಲಿ ನಿಶ್ಚಯವಾಗಿಯೂ ವಿಜಯವೆಂದರೆ ವಿನಾಶ ಮತ್ತು ಬರ್ಬರತನಕ್ಕೆ." ಫ್ರೆಂಚ್ ಪ್ರಧಾನ ಮಂತ್ರಿಗಳ ಅಂತಃಕರಣವನ್ನು ತೆರೆದು ತೋರಿಸುವ ವಾಕ್ಯಗಳಿವು.

ಹರ್ ಹಿಟ್ಲರರ ಉತ್ತರ

ಎಮ್. ಡಲಾಡಿಯರರ ಮೇಲಿನ ಅಂತಃಕರಣಪೂರ್ವಕವಾದ ವಿನಂತಿಗೆ ಹಿಟ್ಲರರು ಈ ಕೆಳಗಣಂತೆ ಉತ್ತರವಿತ್ತಿರುವರು. "ಎಮ್. ಡಲಾಡಿಯರರೇ, ನಿಮ್ಮ ಪತ್ರದಲ್ಲಿ ನೀವು ಬರೆದಿರುವುದೆಲ್ಲಾ ನಿಮ್ಮಂತೆಯೇ ನನಗೆ ಕೂಡಾ ತೋರುತ್ತದೆ. ನಾವಿಬ್ಬರೂ ಯುದ್ಧ ಕಂದಕಗಳ ಹಳೆಯ ಸೈನಿಕರಿರುವುದರಿಂದ ಪ್ರಾಯಶಃ ಹಲವು ರೀತಿಯಲ್ಲಿ ಸಹೃದಯವುಳ್ಳವರಿರುತ್ತೇವೆ. ಆದರೆ ತನ್ನ ಎಲ್ಲೆಯಲ್ಲಿಯೇ ಅಪಮಾನಕರ ಪೀಡೆಗೊಳಗಾಗಿರುವ 2 ಮಿಲ್ಯ ಸಹೋದರರನ್ನು ಕೈಬಿಡುವುದು ಗೌರವಪೂರ್ವಕವಾದ ರಾಷ್ಟ್ರಕ್ಕೆ ಅಸಾಧ್ಯವೆಂಬುದನ್ನು ನೀವೇ ಯೋಚಿಸಬೇಕೆಂದು ನನ್ನ ವಿನಂತಿ. ನಮ್ಮೊಳಗಿನ ಹೋರಾಟದ ಪರಿಣಾಮವು ಭೀಷಣವಾಗಲಿರುವುದೆಂಬುದನ್ನು ನಾನು ಸ್ಪಷ್ಟವಾಗಿ ಬಲ್ಲೆ. ಆದರೆ ಅದರ ಅತ್ಯಂತ ಭೀಷಣ ಫಲಿತಾಂಶವನ್ನು ಪೋಲೆಂಡು ಹೊರಬೇಕಾಗುವುದೆಂದು ನನ್ನ ನಂಬಿಕೆ.

ಪೋಲೆಂಡಿನ ನಾಶ ನಿಶ್ಚಯ

ಯುದ್ಧದ ಫಲಿತಾಂಶ ಏನೇ ಆಗಲಿ. ಎಂತಾದಾದರೂ ಈಗಿರುವಂತಹ ಪೋಲೆಂಡು ನಷ್ಟಹೊಂದುವುದು ನಿಶ್ಚಯ. ಇದಕ್ಕಾಗಿ ನಮ್ಮೆರಡು ರಾಷ್ಟ್ರಗಳು ಭೀಕರ ವಿನಾಶದ ಇನ್ನೊಂದು ಯುದ್ಧದಲ್ಲಿ ತೊಡಗುವುದೆಂದರೆ ನಿಮಗೆ ಮಾತ್ರವಲ್ಲ, ಎಂ. ಡಲಾಡಿಯರರೇ, ನನಗೂ ಅತ್ಯಂತ ವಿಷಾದಕರ ವಿಷಯ. ಜರ್ಮನ್ ಜನಾಂಗ ಮತ್ತು ಸರಕಾರಕ್ಕೆ ಅಸಹನೀಯವಾಗಿರುವ ಪರಿಸ್ಥಿತಿಯನ್ನು ಸರಿಪಡಿಸಲು ಪೋಲೆಂಡು ನ್ಯಾಯಮಾರ್ಗಕ್ಕೆ ಬರುವ ಸಂಭವವೇನೂ ನನಗೆ ತೋರುವುದಿಲ್ಲ."

– ಬೊಂಬಾಯಿ –

ಯುದ್ಧಕ್ಕಾಗಿ ಸಲಕರಣೆಗಳು— ಬ್ರಿಟಿಷರು ಯುದ್ಧದಲ್ಲಿ ಭಾಗವಹಿಸಿದರೆಂಬ ವಾರ್ತೆಯು ಬಂದೊಡನೆ, ಮುಂಬಯಿ ಸರಕಾರವು ಜನರಕ್ಷಣೆಗೆ ಬೇಕಾದ ಸಲಕರಣೆಗಳನ್ನು ಮಾಡತೊಡಗಿದೆ. ಒಂದೆರಡು ತಿಂಗಳ ಮೊದಲಾಗಿಯೇ ಬಾಂಬುಗಳ ಅಪಾಯದಿಂದ ರಕ್ಷಿಸಿಕೊಳ್ಳುವ ಉಪಾಯಗಳನ್ನು ಜನರಿಗೆ ಕಲಿಸಿಕೊಡಲ್ಪಡುತ್ತಿತ್ತು. ಈಗ ಸೈನ್ಯವು 24 ಗಂಟೆಯೂ ಸಿದ್ಧವಾಗಿದೆ. ಯಾರೂ ಯುದ್ಧಕ್ಕೆ ವಿರೋಧ ಲೇಖನಗಳನ್ನು ಬರೆಯಕೂಡದೆಂಬ ಕಾನೂನು ಜಾರಿಗೆ ಬಂದಿದೆ. ರಾತ್ರಿಯಲ್ಲಿ ಆಗತ್ಯವಿದ್ದಲ್ಲಿ ಮಾತ್ರ ದೀಪಗಳನ್ನು ಹೊತ್ತಿಸುತ್ತಿರುವರು. ಟ್ರಾಮು, ಬಸ್ಸುಗಳಲ್ಲಿ ಬಸಿರು ಬಣ್ಣದ ಬತ್ತಿಗಳು ಉರಿಯತೊಡಗಿವೆ. ಹೀಗೆ ಮುಂಬಯಿ ಸರಕಾರವು ಯುದ್ಧದ ಕುರಿತಾಗಿ ಮುಂಜಾಗ್ರತೆ ತಕ್ಕೊಂಡಿದೆ.

ಸಾಮಾನುಗಳ ಬೆಲೆ ಹೆಚ್ಚಿತು— ಯುದ್ಧದ ಪರಿಣಾಮವಾಗಿ ಎಲ್ಲಾ ಸಾಮಾನುಗಳ ಬೆಲೆಯೂ ಶೇಕಡಾ 25% 35%ರಷ್ಟು ಹೆಚ್ಚಿದೆ. ಪರದೇಶಗಳಿಂದ ಬರುವ ಸಾಮಾನು ಮಾತ್ರವಲ್ಲದೆ ಇಲ್ಲಿಯೇ ಉತ್ಪನ್ನವಾಗುವ ಸಾಮಾನುಗಳ ಬೆಲೆಯೂ ಹೀಗೆ ಏರುತ್ತಿರುವುದನ್ನು ನೋಡಿ ಜನರು ಗಾಬರಿಗೊಂಡಿರುವರು. ಇದಕ್ಕೆ ತಕ್ಕ ಉಪಾಯ ಮಾಡಬೇಕೆಂದು ಸರಕಾರಕ್ಕೆ ತಿಳಿಸಿರುವರು. ಭಾರತದಲ್ಲೇ ಆಗುವ ಸಾಮಾನುಗಳ ಬೆಲೆಯನ್ನು ಮನಬಂದಂತೆ ಏರಿಸಬಾರದೆಂದು ಸರಕಾರವು ಕಾನೂನು ತಂದಿರುವುದು. ದೇಶೀಯ ಸಾಮಗ್ರಿಗಳಿಗೆಲ್ಲಾ ಬೆಲೆ ನಿಶ್ಚಯಮಾಡುವ ಯೋಜನೆ ನಡೆದಿರುವುದು.

ಜರ್ಮನರೆಲ್ಲ ಕೈಸೆರೆ ಹಿಡಿಯಲ್ಪಟ್ಟರು— ಮುಂಬಯಿಯಲ್ಲಿರುವ ಜರ್ಮನರೆಲ್ಲ ಕೈಸೆರೆ ಹಿಡಿಯಲ್ಪಟ್ಟಿರುವರು. ಜರ್ಮನ್ ಕಂಪೆನಿಗಳೊಡನೆ ಯಾರೂ ವ್ಯಾಪಾರವಾಡಬಾರದೆಂದೂ, ಹಾಗೆ ಮಾಡಿದಲ್ಲಿ ಶಿಕ್ಷೆಗೆ ಗುರಿಯಾಗಬೇಕಾಗುವುದೆಂದೂ ಸರಕಾರವು ತಿಳಿಸಿದೆ.

ಎರಡು ವರ್ಷ ಶಿಕ್ಷೆ— ಜುಲೈ 9ನೆಯ ತಾರೀಕಿನ ದಿವಸ ರಾಷ್ಟ್ರಪತಿಯವರ ಆಜ್ಞೆಗೆ ವಿರುದ್ಧವಾಗಿ ನಡೆದು ಶಿಸ್ತುಭಂಗ ಮಾಡಿದ್ದಕ್ಕಾಗಿ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು 8 ಮಂದಿಯ ಮೇಲೆ ಶಿಸ್ತುಭಂಗ ಕಾನೂನನ್ನು ಹೊರಿಸಿರುವರು. ಇವರು ಎರಡು ವರ್ಷಗಳ ತನಕ ಯಾವ ಚುನಾಯಿತ ಹುದ್ದೆಯನ್ನಾಗಲೀ ಸ್ವೀಕರಿಸಬಾರದೆಂದು ಇದರರ್ಥ. ಈ ಎಂಟು ಮಂದಿಯಲ್ಲಿ ನಾಲ್ವರು ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಸದಸ್ಯರು. ಇನ್ನಿತರರು ವಾರ್ಡ್ ಕಮಿಟಿಗಳ ಸದಸ್ಯರು. ಇವರಾರೆಂದರೆ, (1) ಕೆ. ಎಫ್. ನರಿಮನ್, (2) ರಾಜಾರಾಮ ಪಾಂಡೆ, (3) ಜಿ. ಅಧಿಕಾರಿ, (4) ನಾರಾಯಣ ಸ್ವಾಮಿ, (5) ಕೇಳ್ಕರ್, (6) ಶ್ರೀಮತಿ ಮಣಿಬೆನ್ ಮುಲ್ಜೀ, (7) ಬಿ. ಟಿ. ರಣದಿವ್, (8) ಭಗವಾನ್‌ದಾಸ್ ಕಪಾಡಿಯ.

ಹೀಗೆ ಒಂದು ಕಡೆ ಬಿ. ಪಿ. ಸಿ. ಸಿ. ಯ ಶಿಸ್ತುಪ್ರಹರವು ಈ ಎಂಟು ಮಂದಿಯ ಮೇಲೆ ಬೀಳಲು ಮತ್ತೊಂದೆಡೆ ಮುನ್ಷಿ ಸಾಹೇಬರ 'ಕಾಳಕಾನೂನು' ಕಾಮಗಾರರ ಮುಂದಾಳುಗಳನ್ನು ಸೆರೆ ಹಿಡಿಯುತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೈಗೊಳ್ಳದಂಥ ಕಾರ್ಯವನ್ನು ನಮ್ಮ ಮುನ್ಷಿ ಸಾಹೇಬರು ಕಾಯಿದೆಯ ರೂಪದಲ್ಲಿ ತರುತ್ತಿರುವರು. ಶ್ರೀಗಳಾದ ಡಾಂಗೆ, ಪಾಟಕರ, ಮಿರಾಜಕರ ಮೊದಲಾದ ಕಾಮಗಾರ ಮುಖ್ಯಸ್ಥರು ಸೆರೆಹಿಡಿಯಲ್ಪಟ್ಟಿರುವರು. ಇವರನ್ನು ಜಾಮೀನಿನ ಮೇಲೆ ಬಿಡಲೂ ಕೇಳುವುದಿಲ್ಲ.

ಮೊಗವೀರ ಯುವಕ ಸಂಘ— ಇದರ ವಾರ್ಷಿಕೋತ್ಸವವು ತಾ. 29-8-39ರಲ್ಲು ಫ್ರಾಮ್ಜಿ ಕಾವಸ್ಜಿ ಇನ್ಸ್ಟಿಟ್ಯುಟ್ (ವೆಲಿಂಗ್ಟನ್ ಸಿನೆಮಾ) ಮಂದಿರದಲ್ಲಿ ಶ್ರೀಮಾನ್ ಯುಸುಫ್ ಮೆಹರಲಿಯವರ ಸನ್ಮಾನ್ಯಾಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಲ್ಲಿ ಜರಗಿತು.

ಬಿಲ್ಲವರ ಎಸೋಸಿಯೇಶನ್— ಇದರ ವಾರ್ಷಿಕ ಸಮಾರಂಭವು ತಾ. 17ನೇ ಮಧ್ಯಾಹ್ನ 2-30ಕ್ಕೆ ಫ್ರೇಮ್ಜಿ ಕಾವಾಸ್ಜಿ ಮಂದಿರದಲ್ಲಿ ಶ್ರೀ ಆರ್. ಬಿ. ಜಹಗೀರ್‌ದಾರ್, ಬಿ ಎ. ಎಲ್‌ಎಲ್. ಬಿ ಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಐವರು ಪುನರಪಿ ಮೊಗವೀರರಾದರು— ಸುಮಾರು ಹತ್ತು ವರ್ಷಗಳ ಹಿಂದೆ ಹೊಸಬೆಟ್ಟು ಮೊಗವೀರ ಕೂಡುಕಟ್ಟಿಗೆ ಸೇರಿದ್ದ ಕಾರಣಾಂತರದಿಂದ ಉಡುಪಿಯಲ್ಲಿ ಪ್ರೊಟೆಸ್ಟಂಟ್ ಕ್ರೈಸ್ತಮತವನ್ನು ಸ್ವೀಕರಿಸಿದ್ದ ಶ್ರೀಮಾನ್ ದೇವದಾಸ ಅಂಚನರನ್ನು ಅವರ ಪತ್ನಿ ಮತ್ತು 3 ಮಂದಿ ಮಕ್ಕಳನ್ನು, 2 ಹೆಣ್ಣು, 1 ಗಂಡು. ಮುಂಬಯಿಯಲ್ಲಿರುವ ಹೊಸಬೆಟ್ಟು ಮೊಗವೀರ ಸಭೆಯವರು ವೈದಿಕ ರೀತ್ಯಾನುಸಾರ ಸ್ಥಳೀಯ ಪ್ರೊಫೆಸರ್ ಆರ್ಯ ಮಾಡಿದವರಿಂದ ಶುದ್ಧಿಮಾಡಿಸಿ ತಮ್ಮ ಜಾತಿಗೆ ಸೇರಿಸಿಕೊಂಡಿರುತ್ತಾರೆ.

ತಿದ್ದುಪಡಿ— ತಾ. 17-8-39ರ ಸಂಚಿಕೆಯಲ್ಲಿ ಶ್ರೀ. ಕಾಪಟ್ಟ ಚಂದು ಎ. ಮಾಸ್ತರರ ವಿಷಯಕವಾದ ಪ್ರಕಟಣೆಯಲ್ಲಿ ಅವರು ಮೊಗವೀರ ವ್ಯವಸ್ಥಾಪಕ ಮಂಡಳಿಯ ಸ್ಥಾಪಕರಲ್ಲೊಬ್ಬರೆಂದು ಪ್ರಕಟವಾಗಿತ್ತು. ಅದು ನಿಜವಲ್ಲವೆಂದು ಮಂಡಳಿಯವರು ತಿಳಿಸುತ್ತಾರೆ.

ಸಂ. ನ

ಕೇವಲ ರೂ. 2-4-0ಕ್ಕೆ

ಲಿವರ್ ರಿಸ್ಟ್‌ವಾಚುಗಳು

ಈ ಗಡಿಯಾರಗಳು ಸರಿಯಾದ ಸಮಯ ತೋರಿಸುವವುಗಳು, ಮತ್ತು 5 ವರ್ಷಗಳ ಗ್ಯಾರಂಟಿಯವುಗಳು. ದುಂಡು ಅಥವಾ ಚೌಕಾಕಾರದಕ್ಕೆ ರೂ.2-8-0 ಉತ್ತಮವಾದುದಕ್ಕೆ ರೂ. 3 ಆ.12 ಗುಂಡಾದ ಮುಟ್ಟೆಗೆ ರೂ.4-4-0, Rec. ರೂ. 6-8-0 ರೆಕ್ಟ್ಯಾಂಗ್ಯುಲರ್ ರೂ. 7-4-0 ಅತ್ಯುತ್ತಮವಾದ್ದಕ್ಕೆ ರೂ. 11 ಹತ್ತು ವರ್ಷಗಳ ಗ್ಯಾರಂಟಿ. ಟಪ್ಪಾಲು ವೆಚ್ಚ ಆಣೆ 8 ಪ್ರತ್ಯೇಕ. ಒಮ್ಮೆಯೇ 3 ಗಡಿಯಾರಗಳನ್ನು ತೆಕ್ಕೊಂಡರೆ ಟಪ್ಪಾಲು ಫ್ರೀ.

ಟಪ್ಪಾಲಿನ ಆರ್ಡರುಗಳು ಸಂಪೂರ್ಣ ಮುಂಗಡದೊಂದಿಗೆ, ಒರಿಯಂಟಲ್ ಫ್ಯಾನ್ಸಿ ಸ್ಟೋರ್ಸ್, ಪೋಸ್ಟ್ ಬಾಕ್ಸ್ ನಂ 12204, ಕಲ್ಕತ್ತೆ. (S. C. E 164)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹವ್ಯಾಧಿಗೆ ಸಿದ್ಧೌಷಧ.

ಇಂದಿನ ಅದ್ಭುತ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇಂಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೋನೋರೋಕ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ಬೆಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ.

Sole Manufacturer Dr. D. N. JASANI, Vitalbhai Patel Road, BOMBAY 4

GET RICH
AND
PROSPEROUS
through Simple Means upheld and persued by Millions.........!

WRITE NOW WITH STAMP.—

K. S. Row,
Worli, BOMBAY.

ತಾ. 14-9-1939ರಿಂದ

ವಾರದ ಭವಿಷ್ಯ

ತಾ. 21-9-39ರ ವರೆಗೆ

ಮುಂದಾಗುವುದನ್ನು ಇಂದೇ ತಿಳಿಯಿರಿ

[ಜ್ಯೋತಿಷವು ಅದೃಷ್ಟವಾದವಲ್ಲ. ಪ್ರವೃತ್ತಿಗಳನ್ನು ಸೂಚಿಸುವ ಶಾಸ್ತ್ರ. ಜೀವಿತದ ತೊಡಕು ತೊಂದರೆಗಳನ್ನು ನಿವಾರಿಸಿ ಅತ್ಯುತ್ತಮ ಸುಖ ಪಡೆಯಲು ಈ ಕೆಳಗಣ ಭವಿಷ್ಯದಿಂದ ಸಹಾಯವಾದರೆ ಅದು ಸಾರ್ಥಕವಾದಂತಾಯಿತು. ನಮ್ಮ ಕೆಲವು ಮಂದಿ ಏಜೆಂಟರು ಮತ್ತು ಹಲವು ಮಂದಿ ವಾಚಕರ ಒತ್ತಾಯದ ಮೇರೆಗೆ ನಾವೀ ಭವಿಷ್ಯವನ್ನು ಪ್ರಸಿದ್ಧ ಜ್ಯೋತಿಷ್ಕರೊಬ್ಬರಿಂದ ಬರೆಸಿ ಪ್ರಕಟಿಸುತ್ತೇವೆ. ಸಂ. ನ.]

ಮೇಷರಾಶಿ—

'ಸಂಘೇ ಶಕ್ತಿಃ ಕಲೌ ಯುಗೇ' ಕಲಿಯುಗದಲ್ಲಿ ಸಂಘಸಂಸ್ಥೆಗಳಲ್ಲಿ ಬಲವಿರುವುದೇ ಹೊರತು ಏಕಾಕಿಯು ಮಾಡತಕ್ಕ ಕಾರ್ಯಗಳಿಗೆ ಎಷ್ಟೆಂದರೂ ಬಲ ಕಡಿಮೆಯೇ. ಪ್ರಕೃತ ನಿಮ್ಮ ಗ್ರಹಮಾನ ರೀತ್ಯಾ ಸಕಲ ಗ್ರಹರೂ ಅನಿಷ್ಟ ಸ್ಥಾನವನ್ನಾಶ್ರೈಸಿರುವರು. ಆದರೂ ಎರಡು ಮೂರು ದಿನಗಳೊಳಗೆ ಗ್ರಹರಾಜನಾದ ರವಿಯು ಸುಸ್ಥಾನವನ್ನು ಪ್ರವೇಶಿಸಲಿರುವನು. ಈ ಅನಿಷ್ಟಸ್ಥಾನಸ್ಥ ಗ್ರಹಸಮೂಹದಿಂದಾಗಿ ನಿಮ್ಮ ಜೀವನಪಥದಲ್ಲಿ ಅನೇಕ ತೊಡಕು ತೊಂದರೆಗಳು ಮುಂಬರುವವು. ಶರೀರಾಲಸ್ಯ, ಮತ್ತು ಶತ್ರುಜನರ ಆಧಿಕ್ಯದಿಂದ ಮನಸ್ಸಿನಲ್ಲಿ ಶಾಂತಿಯು ನೆಲಸದು. ಆಪ್ತೇಷ್ಟರೆನ್ನತಕ್ಕವರೇ ಮೋಸಮಾಡುವರು. ಸಂಸಾರದಲ್ಲಿ ನಿತ್ಯ ಕಲಹ ಸಹೋದರರಲ್ಲಿ ಮನಸ್ತಾಪ ಇತ್ಯಾದಿಗಳು ಅಧಿಕವಾಗುವವು ಹಿಡಿದ ಕಾರ್ಯದಲ್ಲಿ ಸರ್ವತ್ರ ಸೋಲೇ ಸ್ಪಷ್ಟವಾಗುವ ಸಂಭವವಿದೆ. ಆದರೂ ವಿರೋಧಿಗಳ ಪ್ರತೀಕಾರಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡಲು ಬೇಕಾದ ಶಕ್ತಿಯು ನಿಮಗಿದೆಯೆನ್ನಬಹುದು. ವಾರಾಂತ್ಯದ ನಾಲ್ಕು ದಿನಗಳು ಅಷ್ಟೊಂದು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ವೃಷಭರಾಶಿ—

ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮವಾಗಿದೆಯೆಂದೇ ಹೇಳಬಹುದು. ಆದರೊಂದು ವಿಚಾರ "ದುರ್ಜನಾನ್ ಪ್ರಥಮಂ ವಂದೇ ಸಜ್ಜನಾನ್ ತದನಂತರಂ" ಎಂಬ ಲೋಕನ್ಯಾಯದಂತೆ ಸದಸಜ್ಜನರಿಂದ ಯುಕ್ತವಾಗಿರತಕ್ಕ ಒಂದು ಸಮಿತಿಯಲ್ಲಿ ಆದಿಯಲ್ಲಿ ದುರ್ಜನರಿಗೇನೇ ಮನ್ನಣೆ ಕೊಡಬೇಕಾಗುವುದು. ಇಲ್ಲವಲ್ಲಿ ತಕ್ಕಫಲವನ್ನು ಕೂಡಲೇ ಅನುಭವಿಸಬೇಕಾಗುವುದು ಅಂತೆಯೇ ಈಗ ನಿಮ್ಮ ಗ್ರಹಮಂಡಲದಲ್ಲಿರತಕ್ಕ ಪಾಪಿ ಗ್ರಹರನ್ನು ನೀವು ಮೊತ್ತಮೊದಲು ಸ್ತುತಿಸಬೇಕಾಗಿದೆ. ಅವರ ಅನುಗ್ರಹವನ್ನು ಪಡೆದರೇನೇ ನಿಮ್ಮ ವಿಘ್ನಗಳು ನಿವಾರಿಸಲ್ಪಡುವವು. ಕಾರ್ಯಗಳು ಸುಸೂತ್ರದಿಂದ ಕೊನೆಗೊಳ್ಳುವವು. ಪ್ರಕೃತ ನಿಮಗೆ ಬಂಧುವರ್ಗ ಮತ್ತು ಮಿತ್ರವರ್ಗದವರ ಸಂಪೂರ್ಣ ಬೆಂಬಲವಿದೆ. ವ್ಯಾಪಾರ ಉದ್ಯೋಗಗಳಲ್ಲಿ ಒಳ್ಳೇ ಕೀರ್ತಿಯೂ ಲಾಭವೂ ಇರುವುದು. ಆದರೇನು, ನಿತ್ಯ ರೋಗಿಯಾಗಿರತಕ್ಕ ನಿಮಗೆ ಇಷ್ಟೊಂದರಿಂದಲೂ ಮನಸ್ಸಿಗೆ ಶಾಂತಿಯಿರದು. ಕೈಕಾಲುಗಳಿಗೆ ಸುಖವಿದ್ದರೆ ಹೇಗೂ ಜೀವಿಸಬಹುದೆಂಬ ಭಾವನೆಯು ನಿಮ್ಮಲ್ಲುತ್ಪನ್ನವಾಗುವುದು ಆದರೂ ತಾ. 16ರಿಂದ 19ರ ವರೆಗಿನ ದಿನಗಳನ್ನು ಸಾಮಾನ್ಯ ಸುಖದಿಂದಲೇ ಕಳೆಯಲಿರುವಿರಿ.

ಮಿಥುನರಾಶಿ—

ಈಗಿನ ಗ್ರಹದ ವಿಧ್ಯಮಾನದಲ್ಲಿ ನಿಮಗನುಕೂಲರಾಗಿರತಕ್ಕವರು ಶುಕ್ರ ಶನಿಗಳಿಬ್ಬರೇ. ಅವರಲ್ಲಿ ಅವರೀರ್ವರೂ ನೀಚಸ್ಥಾನವನ್ನು ಹೊಂದಿರುವವು. ಅಂದ ಬಳಿಕ ಇವರ ಅನುಗ್ರಹದಿಂದ ನಿಮಗೇನೂ ಲಾಭವಿಲ್ಲವು, ನಷ್ಟ ಸಂಭವಿಸದು. ಉಳಿದ ಗ್ರಹರೆಲ್ಲರೂ ಅನಿಷ್ಟಕಾರಿಗಳೇ. ಅಂತೂ ನಿಮಗೆ ಪರಿಣಾಮವು ನೆಟ್ಟಗಿಲ್ಲವೆಂಬುದು ನಿಶ್ಚಯ. ಮನೋರಥಗಳು ಕಾರ್ಯರೂಪಕ್ಕೆ ಬರಲಾರವು. ಪ್ರತಿಸ್ಪರ್ಧಿಗಳಿಂದ ಮಾನಚ್ಯುತಿಯ ಪ್ರಸಂಗವೊದಗುವದು ಮತ್ತು ವಿಶೇಷ ಧನವ್ಯಯವೂ ಆಗುವುದು. ಸರಕಾರಿ ವ ಕ್ರಿಮಿನಲ್ ತಕ್ರಾರುಗಳಿಗೆ ಗುರಿಯಾಗಿ ರಾಜಪ್ರಕೋಪಕ್ಕೆ ಬಲಿಯಾಗುವ ಸಂಭವವಿದೆ, ಆದಕಾರಣ ಇಂಥಾ ಪ್ರಕರಣಗಳಲ್ಲಿ ಬಲು ಜಾಗರೂಕರಾಗಿರುವುದೊಳ್ಳಿತು. ಹಣದ ತಾಪತ್ರಯವು ಹೆಜ್ಜೆ ಹೆಜ್ಜೆಗೂ ತಪ್ಪದು. ತಾ. 14ರಿಂದ 17ರ ವರೆಗಿನ ದಿನಗಳಲ್ಲಿ ಅನಾರೋಗ್ಯ ಪ್ರವಾಸ ಶೋಕ ಇತ್ಯಾದಿಗಳು ಸಂಭವಿಸಲಿವೆ ಮಾತ್ರವಲ್ಲದೆ ಮಿತ್ರರನ್ನೆ ಭಿನ್ನಾಭಿಪ್ರಾಯದಿಂದ ಕಳಚಬೇಕಾದ್ದು ಬಂದೀತು.

ಕರ್ಕಾಟಕರಾಶಿ—

ಇದ್ದುದರಲ್ಲಿ ನಿಮ್ಮ ಭವಿಷ್ಯವು ಸಾಮಾನ್ಯ ಉತ್ತಮಸ್ಥಿತಿಗೆ ಬಂದಿದೆಯೆಂದು ಹೇಳಬೇಕಾಗಿದೆ. ನಿಮ್ಮ ಕಲಹಾದಿಗಳಿಂದ ಸಮಯವನ್ನು ವ್ಯರ್ಥಮಾಡ ತಕ್ಕ ಮೈಗಳ್ಳರೂ ಅಲಸರೂ ಕೆಲದ ಮುಂದಿನ ಭವಿಷ್ಯವನ್ನು ಉತ್ತಮತೆಗೆ ತರಲು ಯತ್ನಿಸುವರು. ಶಿಲ್ಪಕಲೆಯಲ್ಲೂ, ಗಣಿತವೃತ್ತಿಯಲ್ಲೂ ವ್ಯಾಪಾರ ಜೀವನದಲ್ಲೂ ಫಲವು ಉತ್ತಮವಾಗಿ ದೊರೆಯುವುದು. ಗುರ್ವನುಗ್ರಹವು ನಿಮಗಿರುವುದರಿಂದ ಹಿಡಿದ ಕಾರ್ಯವನ್ನು ಕೊನೆಗಾಣದೆ ಕೈಬಿಡಲಾರಿರಿ. ನಿಮ್ಮ ಆರ್ಥಿಕ ಭಾಗವು ಸಾಕಷ್ಟು ಉತ್ತಮ ರೀತಿಗೆ ಬರುವುದು. ಹಗೆಯವರಿಂದ ಏನೊಂದೂ ಪ್ರತಿಕ್ರಿಯೆ ಸಾಗದು. ಆದರೆ ನಿಮ್ಮ ನೈಸರ್ಗಿಕ ಗುಣವಾದ ದೋಷಗ್ರಾಹಕತ್ವದಿಂದ ಕೆಲವರ ಅನಾದರಕ್ಕೆ ಪಾತ್ರರಾಗುವಿರಿ ಸಾಂಸಾರಿಕರಿಗೆ ಪತ್ನಿಯಿಂದಾಗಿ ಮನಶ್ಶಾಂತಿಯಿಲ್ಲವು. ನೇತ್ರರೋಗ ಉದರವ್ಯಾಧಿಗಳು ಆಗಾಗ ಪೀಡಿಸಲಿರುವವು. ತಾ. 14-15 ಮತ್ತು 20-21 ಈ ದಿನಗಳಲ್ಲಿ ಕಾರ್ಯಜಯ ಆರೋಗ್ಯ ಧನಾಪ್ತಿಗಳು ಉತ್ತಮವಿವೆ.

ಸಿಂಹರಾಶಿ—

ಧರ್ಮದೇವರುಗಳಲ್ಲಿ ವಿಶ್ವಾಸವು ಕಡಿಮೆಯಾಗುವದು, ಪೂರ್ವಾಚಾರಗಳು ತಿರಸ್ಕರಿಸಲ್ಪಡುವವು. ನಾಸ್ತಿಕ್ಯಬುದ್ಧಿಯು ಪ್ರಬಲಿಸುತ್ತಾ ಹೋಗುವುದು. ಆದಕಾರಣದಿಂದಲೇ ನಿಮಗೆ ಸರ್ವತ್ರ ಪರಾಭವವುಂಟಾಗುತ್ತಿರುವುದು. "ಯತೋ ಧರ್ಮಸ್ತತೋ ಜಯಃ" ಎಂಬ ಆರ್ಯೋಕ್ತಿಯು ಎಂದಿಗೂ ಸುಳ್ಳಾಗದು. ಹೇಗೆಂದರೆ, ಹಿಂದೆ ಅಧರ್ಮಪ್ರವರ್ತಕರಾದ ನೂರೊಂದು ಜನ ಕೌರವರು ಧರ್ಮಿಷ್ಠರಾದ ಪಂಚಪಾಂಡವರಿಂದ ನಾಶಹೊಂದಿರುವರಲ್ಲವೇ? ತದ್ವತ್ ನೀವೂ ಕೂಡ ಧರ್ಮಬಾಹಿರರಾಗಿರುವುದರಿಂದ ನೌಕರಿ, ವೈದ್ಯಕೀಯ ವ್ಯಾಪಾರ, ಕೋರ್ಟು ಕಾರ್ಯ ಇತ್ಯಾದಿ ಸಕಲ ವಿಭಾಗದಲ್ಲೂ ಪರಾಜಿತರಾಗುವಿರಿ. ಮನಸ್ಸು ಗಾಳಿಗೆದುರಾಗಿಟ್ಟ ದೀಪದೋಪಾದಿಯಲ್ಲಿ ಸದಾ ಚಂಚಲವಾಗಿರುವುದು. ದೈವಾತ್ ನಿಮಗೆ ಶತ್ರುಪೀಡೆಯಿಲ್ಲದಿದ್ದರೂ ಯಾವೊಂದು ಕಾರ್ಯವನ್ನು ಮಾಡಲಿಕ್ಕೂ ಬೇಕಾದ ಧೈರ್ಯವು ಎಳ್ಳಷ್ಟೂ ಇರದುದರಿಂದ ನಿತ್ಯಖರ್ಚಿಗಾಗಿ ಬಹಳ ಪರದಾಟ ಪಡುವಿರಿ. ಸಮಾಜದಲ್ಲಿ ಹೆಚ್ಚಿನವರಿಂದ ತಿರಸ್ಕೃತರಾಗುವಿರಿ. ತಾ. 16-17 ಈ ಎರಡು ದಿನಗಳನ್ನು ಬಿಟ್ಟು ಇತರ ದಿನಗಳೆಲ್ಲವೂ ಒಂದರಿ ವರ್ಷವನ್ನು ಕಳೆದಂತಾಗುವುದು.

ಕನ್ಯಾರಾಶಿ—

ಮಾತಿಗೆ ತಕ್ಕಂತೆ ಕೃತಿಯಿದ್ದರೇನೇ ಆ ಮಾತಿಗೆ ಸರ್ವರೂ ಮಾನ್ಯತೆಕೊಡುವರು. ಪ್ರಕೃತ ನಿಮ್ಮ ಮಾತು ರಾಮಬಾಣದಂತೆ ಹುಸಿಯಿಲ್ಲದ್ದಾಗಿರುವುದು. "ಆಡಿ ತಪ್ಪಬೇಡ ಓಡಿ ಬೀಳಬೇಡ" ಎಂಬ ಗಾದೆಯನ್ನು ಅಕ್ಷರಶಃ ಪಾಲಿಸುವಿರಿ. ಆದ್ದರಿಂದಲೇ ನೀವು ಜನಸಾಮಾನ್ಯರಂತಾಗಿರದೆ ಸ್ವಲ್ಪ ವಿಶೇಷವುಳ್ಳವರಾಗಿರುವಿರಿ. ನಿಮಗೀ ವಾರದಲ್ಲಿ ಆತ್ಮೋಪಭೋಗಕ್ಕೆ ಯಾವ ಭಾಗದಲ್ಲೂ ಚ್ಯುತಿಬಾರದು. ಆದರೂ ಇತರ ಭಾಗದಲ್ಲಿ ನಿಮಗೆ ದೈವಬಲವಿಲ್ಲವು. ವಿಪಕ್ಷೀಯರ ಬಲವು ದಿನೇ ದಿನೇ ವೃದ್ಧಿಗೊಳ್ಳುತ್ತಿರುವುದರಿಂದ ನಿಮ್ಮ ಕಾರ್ಯೋತ್ಸಾಹವೆಲ್ಲವೂ ಆರಂಭದಲ್ಲೇ ಶೂನ್ಯವಾಗುವುದು. ಸಂಸಾರದಲ್ಲಿ ಸ್ತ್ರೀಪುತ್ರರ ನಿಮಿತ್ತ ಸ್ವಲ್ಪ ಚಿಂತೆಯುಂಟಾಗುವುದು. ಆರೋಗ್ಯ ಪ್ರಯುಕ್ತ ಧನವ್ಯಯ ಮಾಡಿರಿ ಹೊಸತಾಗಿ ಸಂಪಾದಿಸಲು ಅಸಾಧ್ಯವಿದೆ ಇದ್ದ ಹಣವನ್ನೇ ವ್ಯಯಿಸಬೇಕಾಗುವುದು. ನಿಮ್ಮ ಆತ್ಮೀಯರಾಗಿರತಕ್ಕವರಿಂದಲೇ ನಿಮಗೆ ಕೇಡು ಸಂಭವಿಸಲಿರುವುದು ತಾ. 16-17-20-21 ಈ ದಿನಗಳಲ್ಲಿ ಧನವ್ಯಯದಿಂದ ನಷ್ಟ ಮನಶ್ಚಾಂಚಲ್ಯ ಅಧಿಕವಾಗುವುದು.

ತುಲಾರಾಶಿ—

ಈ ವಾರದಲ್ಲಿ ನಿಮಗೆ ಪ್ರವಾಸಸಂಬಂಧವಾಗಿ ಕಷ್ಟನಷ್ಟಗಳು ವಿಶೇಷವಾಗಿ ಸಂಭವಿಸಲಿವೆ ನಿಮ್ಮ ಮಿತ್ರವರ್ಗವೋ ಬಹಳ ದೊಡ್ಡದಿದೆ. ಅವರಲ್ಲಿ ನಿಮ್ಮ ಕೈಯ್ಯ ಹಣವನ್ನೇ ಖರ್ಚುಮಾಡಿಸಿ ನಿಮಗೆ ನೀಡತಕ್ಕವರೇ ಬಹಳ. ಪ್ರಕೃತ ನಿಮಗೀ ವಿಚಾರವು ಮನವರಿಕೆಯಾಗದು. ನಂತರ ತಾನಾಗಿಯೇ ತಿಳಿಯುವುದು. ಉದ್ಯೋಗದಲ್ಲಿ ಇಷ್ಟದಂತೆ ಫಲದೊರೆಯದು. ರಾಜಕೀಯ ರಂಗದಲ್ಲಿ ಅಪಜಯ ಧನಹಾನಿಗಳು ಕಟ್ಟಿಟ್ಟ ಬುತ್ತಿಯಂತಿವೆ. ಶತ್ರುಜನರ ಉಪಟಳವು ಸರ್ವತ್ರ ನಿಮ್ಮನ್ನು ಪ್ರತಿಬಂಧಿಸುವುದು. ಕಾರ್ಯವನ್ನು ಮುಂದರಿಸಲು ಧನಬಲವಾಗಲೀ ಜನಬಲವಾಗಲೀ ನಿಮಗಿಲ್ಲವು ತತ್ಪ್ರಯುಕ್ತ ವ್ಯರ್ಥಾಯಾಸವೇ ನಿಮಗೆ ಪ್ರತಿಫಲರೂಪದಲ್ಲಿ ದೊರೆವುದು. ಇವೇ ಮೊದಲಾದ ಚಿಂತೆಯಿಂದ ವಿಶೇಷ ಶಾರೀರಿಕ ನಿಮ್ಮ ಆರೋಗ್ಯವೂ ಚೆನ್ನಾಗಿರದು. ನಿತ್ಯಖರ್ಚಿಗಾಗಿ ನೀವು ಸಾಲಮಾಡಬೇಕಿಲ್ಲವು. ತಕ್ಕಷ್ಟು ಧನಪ್ರಾಪ್ತಿಯಿದೆ. ತಾ. 16-17-20-21 ಈ ದಿನ ಇತರ ದಿನಗಳಿಗಿಂತ ವಾಸಿ.

ವೃಶ್ಚಿಕರಾಶಿ—

"ನೈವಂ ಫಲತಿ ಸರ್ವತ್ರ, ನ ವಿದ್ಯಾ ನ ಚ ಪೌರುಷಂ" ಮನುಷ್ಯನ ವಿದ್ಯೆಯಾಗಲೀ ಯಾ ಪೌರುಷವಾಗಲೀ ಸಕಾಲದಲ್ಲಿ ಫಲಕೊಡಲು ಶಕ್ತವಾಗುವುದಿಲ್ಲವು. ದೈವವೊಂದೇ ಈ ವಿಭಾಗದಲ್ಲಿ ಸಮರ್ಥವಾದುದು. ನಿಮಗೆ ಪ್ರಕೃತ ರಾಹುವೊಬ್ಬನುಳಿದು ಸಕಲ ಗ್ರಹಮಂಡಲವೂ ಅನುಕೂಲವಾಗಿರುವಾಗ ನಿಮ್ಮ ಅದೃಷ್ಟಕ್ಕೆ ಎಣೆಯೇ ಇಲ್ಲವೆಂದರೂ ತಪ್ಪಾಗಲಾರದು. ಯಾವ ಭಾಗದಲ್ಲೂ ನಿಮಗೆ ಚಿಂತೆಯಾಗಲೀ ಕೊರತೆಯಾಗಲೀ ಕಂಡುಬರುವುದಿಲ್ಲ. ನಿಮ್ಮ ಮನಸ್ಸನ್ನು ಸಂತೋಷಗೊಳಿಸುವ ಶಕ್ತಿಯುಳ್ಳ ಈ ಅದೃಷ್ಟದ ಫಲವನ್ನು ಪೂರ್ಣಹೊಂದಬೇಕಾದರೆ ಈಪ್ಸಿತ ಕಾರ್ಯದಲ್ಲಿ ಪ್ರವರ್ತಿಸಿ ಫಲಪ್ರಾಪ್ತಿಯಾದೊಡನೆ ನಿವೃತ್ತರಾಗಬಾರದು. ಇನ್ನೂ ಮಹತ್ತರವಾದ ಫಲವನ್ನು ಬಯಸಿರಿ. ನಿಮ್ಮ ಬಯಕೆಯನ್ನು ಪೂರೈಸದೆ ಆ ವಿಧಿಗೆ ನಿರ್ವಾಹವಿಲ್ಲವಾದುದರಿಂದ ನಿಮ್ಮ ಅಪೇಕ್ಷೆಯನ್ನು ಕೊನೆ ಹೊಂದಿಸಿಯೇ ಅದು ನಿವೃತ್ತವಾಗಲಿರುವುದು. ತಾ. 14 15. 18. 19 ಈ ದಿನಗಳಲ್ಲಿ ನೀವು ಮಾಡಿದ್ದೇ ಕಾರ್ಯ, ಆಡಿದ್ದೇ ಮಾತು ಎಂದಾಗುವದು.

ಧನೂರಾಶಿ—

ಇನ್ನು ಕೆಲವೇ ದಿನಗಳ ವಳಗೆ ನಿಮ್ಮ ಪರಿಸ್ಥಿತಿಯು ಸುಧಾರಣೆ ಹೊಂದಲಿದೆ. ಹೇಗೂ ಇಷ್ಟು ದಿನಗಳನ್ನು ಕಷ್ಟದಿಂದ ಕಳೆದ ನಿಮಗೆ ಈ ವಾರವನ್ನು ಕಳೆಯುವುದು ಮಹತ್ತಾದ ವಿಷಯವಲ್ಲ. ದೈಹಿಕ ಮತ್ತು ಮಾನಸಿಕ ಶಕ್ತಿಯಿಂದ ಚ್ಯುತರಾದ ನೀವು ಯಾವ ಕಾರ್ಯದಲ್ಲೂ ಫಲಹೊಂದದೆ ನಿರಾಶರಾಗಿರುವಿರಾದರೂ ಮುಂದಿನ ಕಾರ್ಯಕ್ಕೆ ಇಂದೇ ತಳಹದಿಯನ್ನು ಹಾಕಲು ಆಲೋಚಿಸಿರಿ. ಎರಡನೆಯವರ ಹಂಗನ್ನು ಬಯಸದೆ ಇರತಕ್ಕ ಕಾರ್ಯದಲ್ಲಿ ವ್ಯಕ್ತರಾಗಿರಿ. ಏಕನಿಷ್ಠೆಯನ್ನು ಬಲಗೈಯು ನಂಬದಿರುವ ಈ ಕಾಲದಲ್ಲಿ ಇತರರನ್ನಾದರೂ ನಂಬುವುದೆಂತು. ಹಣವಿಲ್ಲದವನಿಗೆ ಬಂಧುಗಳಿಲ್ಲ ಬಾಂಧವರಿಲ್ಲ, ಹೆಂಡತಿಯಿಲ್ಲ, ಮಕ್ಕಳಿಲ್ಲ, ಎಲ್ಲವೂ ಶೂನ್ಯವೆಂದೇ ತೋರುವದು. ಮಾತನಾಡಿದೊಡನೆ ಮಿತ್ರರಲ್ಲೂ ಬಂಧುಗಳಲ್ಲೂ ಕೂಡ ಕಲಹವೇ ಆರಂಭವಾಗುವುದು. ಪ್ರಕೃತ ಪರರ ಪ್ರತಿಕ್ರಿಯೆಯಿಂದ ನೊಂದ ನಿಮ್ಮ ಮನಸ್ಸಿಗೆ ಶಾಂತಿಯೆಂಬುದು ಅಸಾಧ್ಯ ದುರ್ಲಭವಾಗಿರುವುದು. ಅದರಲ್ಲೂ ತಾ. 18-17 ಈ ದಿನಗಳಲ್ಲಿ ನಿಮ್ಮ ಅರಿವೇ ನಿಮಗಿಲ್ಲದಂತಾಗುವುದು.

ಮಕರರಾಶಿ—

ವಿಧಿ ಬರೆಹವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲವೆ. ಅಂದ ಬಳಿಕ ನೀವಾದರೂ ಮಾಡುವುದೇನು. "ಬಾರದ್ದೆಲ್ಲಾ ಬರಲಿ ಗೋ

(18 ಪುಟಕ್ಕೆ ಮುಂದರಿಸಿದೆ)

ಆಗಬಾರದಿತ್ತು; ಆದರೆ ಆಗಿಹೋಯಿತು

ಒಂದು ನಾಮಾಂಕಿತ ಕುಟುಂಬದ ಆಧಾರ ಸ್ತಂಭದಂತಿದ್ದ ಒಬ್ಬನೇ ಒಬ್ಬ ತರುಣನು ಆಕಸ್ಮಾತ್ತಾಗಿ ಮರಣಕ್ಕೆ ತುತ್ತಾದನು. ತನ್ನ ಹೆಸರಲ್ಲಿ ಹಣದ ಯಾವ ವ್ಯವಸ್ಥೆಯನ್ನೂ ಮಾಡದಿದ್ದ ಕಾರಣ ಅವನ ಹೆಂಡತಿ ಮಕ್ಕಳು ಬಹಳ ಕಷ್ಟಕ್ಕೆ ಗುರಿಯಾದರು. ಹಾಗೂ ಕುಟುಂಬದ ತುಚ್ಛೀಕಾರಕ್ಕೆ ಒಳಗಾದರು.

ಅಂತಹ ಅನಿಷ್ಟ ಪ್ರಸಂಗವು ಕುಟುಂಬದವರ ಮೇಲೆ ಬರಬಾರದು. ಇದಕ್ಕೆ ಒಂದೇ ಉಪಾಯವೆಂದರೆ–ಜೀವವಿಮೆ ಮಾಡುವುದು–ಮತ್ತು ಅದು ಸಹ–

ಈಸ್ಟ್ ಏಂಡ್ ವೆಸ್ಟ್

ಕಂಪೆನಿಯಲ್ಲಿ ಮಾತ್ರ.

ಈಸ್ಟ್ ಏಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಅಪೊಲೊ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮರ್ಯಾದಸ್ಥ ಗೃಹಸ್ಥರು ಈ ಕಂಪೆನಿಯಲ್ಲಿ ವಿಮೆಮಾಡಿ, ತಮ್ಮ ಭವಿಷ್ಯ ಕಾಲವನ್ನು ಪ್ರಕಾಶಮಯವಾಗಿ ಮಾಡಬಹುದು.

ವಿಶೇಷ ಮಾಹಿತಿಗೋಸ್ಕರ ಈ ಮೊತ್ತೇ ಬರೆಯಿರಿ:—

(ಮಹಾರಾಷ್ಟ್ರ ವ ಕರ್ನಾಟಕದ ಚೀಫ್ ಏಜಂಟರಿಗೆ)

ಮೆಸರ್ಸ್ ಪಡುಬಿದ್ರಿ ಬ್ರದರ್ಸ್,

ನಾರಾಯಣಲಾಲ್ ಬನ್ಸೀಲಾಲ್ ಮೆನ್ಷನ್ 73, ಲೆಮಿಂಗ್ಟನ್ ರೋಡ್

ಮುಂಬಯಿ

EAST AND WEST

INSURANCE CO. LTD., BOMBAY.

"ವಿಂದಸ ದಯುವೊಂದಿರಲಿ" ಎಂದೇ ಹೇಳಬೇಕಾಗಿದೆ. ಈಗಲೀಗ ನಿಮಗೆ ದಿನ ಹೋದಂತೆ ಕರಕರೆಗಳು ಬರುತ್ತಾ ಹೋಗುತ್ತಿವೆ. ಒಂದನ್ನು ನಿವೃತ್ತಿ ಪಡಿಸಲೆಳಸಿದರೆ ಮತ್ತೆರಡು ಗಂಟು ಬೀಳುವವು. ಅಲ್ಲದೆ ನೀವು ಮಾತಿನಲ್ಲೊಂದು ವಿಧ, ಮನದಲ್ಲೊಂದು ರೀತಿ, ಕೃತಿಯಲ್ಲಿನ್ನೊಂದು ಬೇರೆ ಈ ರೀತಿ ವರ್ತಿಸುವುದರಿಂದ ಜನರ ವಿಶ್ವಾಸವು ನಿಮ್ಮಲ್ಲಿ ಇಲ್ಲವಾಗಿದೆ. ಆದ್ದರಿಂದಲೇ ಸಾಲಿಗರು ಒಳಿಯುವದು. ಹಗೆಯವರು ನಿದ್ದೆ ಮಾಡ ಬಿಡರು. ಕೋರ್ಟು ಕಾರ್ಯಗಳಲ್ಲಿ ಪರಾಜಯದ ಚಿಹ್ನೆಯೇ ಕಂಡು ಬರುವುದು. ಒಂದು ರೂಪಾಯಿ ಸಂಪಾದನೆಗೆ ಎರಡು ರೂಪಾಯಿ ಖರ್ಚು ಮಾಡುವಿರಿ. ಆದರೂ ಸುಖವುಂಟೇ?, ದೈಹಿಕ ಸುಖವೂ ಇಲ್ಲ, ಮಾನಸಿಕ ಸುಖವೂ ಇಲ್ಲ, ಅಂತೂ ದಿನಗಳೆಲ್ಲವೆಂದರೆ ಬಹಳ ಕಷ್ಟವಾಗುವುದು. ತಾ. 14. 15. 20. 21. ಈ ದಿನಗಳನ್ನು ರಾಜಭೀತಿ ಜಾಗರಣೆ ಮುಂತಾದವುಗಳಿಂದ ಕಳೆವಿರಿ.

ಕುಂಭರಾಶಿ—

ನಿಮ್ಮ ಭಾಗಕ್ಕೆ ಈ ವಾರವು ಮಿಶ್ರ ಫಲಪ್ರದವಾಗಿರುವುದು. ಸ್ತ್ರೀ ಧನ ಲಾಭವೂ ತತ್ಸಂಬಂಧವೂ ಸಿಗಲಿದೆ. ನಿಮ್ಮ ಆರ್ಥಿಕ ಭಾಗವು ಬಹಳ ಉತ್ತಮ ಪರಿಸ್ಥಿತಿಯಲ್ಲಿರುವುದು. ಗೃಹಪರಿವಾರವೂ ಕೂಡ ಪೂರ್ಣವಾಗಿರುವುದು, ಆದರೂ ಗಂಡ ಹೆಂಡಿರ ಕಲಹ ತಪ್ಪುವಂತಿಲ್ಲವು. ಆರೋಗ್ಯವು ಹೆಚ್ಚಿನಂಶ ಉತ್ತಮವಾಗಿರುವುದಾದರೂ ಪಿತ್ಥ ವಿಕಾರದ ಉಪದ್ರವವು ಆಗಾಗ ಕಂಡುಬಂದೀತು. ಯಾವ ವಿಚಾರದಲ್ಲಾದ್ದೂ ನೀವು ಪರರ ಮಾತನ್ನು ಕೇಳಲಾರಿರಿ, ಇದೊಂದು ನಿಮ್ಮಲ್ಲಿರತಕ್ಕ ದೊಡ್ಡ ದೋಷವೆನ್ನಬೇಕಾಗಿದೆ, ಯಾಕೆಂದರೆ "ಯುಕ್ತಿಯುಕ್ತಂ ವಚೋ ಗ್ರಾಹ್ಯಂ ಬಾಲಾದಪಿ ಶುಕಾದಪಿ" ಒಳ್ಳೇ ಯುಕ್ತಿಯಿಂದ ಕೂಡಿದ ಮಾತನ್ನು ಚಿಕ್ಕ ಹುಡುಗನು ಹೇಳಿದರೂ ಯಾ ಒಂದು ಗಿಳಿಯು ಹೇಳಿದರೂ ಅದನ್ನು ಕೇಳಲೇ ಬೇಕು, ಎಂದು ಹಿರಿಯರ ಅಂಬೋಣ. ತನ್ನ ಯುಕ್ತಿಗೂ ಹಿರಿಯರ ಮತ್ತು ಹಲವರ ಯುಕ್ತವಾದ ಮಾತನ್ನು ಅತಿಕ್ರಮಿಸುವುದು ಕಲ್ಯಾಣಾಪೇಕ್ಷಿಗಳಿಗೆ ಯುಕ್ತವಲ್ಲವು. ತಾ 14 ರಿಂದ 19 ರ ವರೆಗಿನ ದಿನಗಳಲ್ಲಿ ರಾತ್ರಿಯ ಕಾರ್ಯ ವಾಹನಾದಿಗಳ ಯಾನ ನದೀತರಣ ಮುಂತಾದವುಗಳಲ್ಲಿ ಜಾಗರೂಕರಾಗಿರತಕ್ಕದ್ದು.

ಮೀನರಾಶಿ—

ಈಗೀಗಲೇ ನಿಮ್ಮ ಅದೃಷ್ಟವು ಕೆಟ್ಟು ಹೋಗಲಾರಂಭಿಸಿದೆ. ಆದಕಾರಣ ಪ್ರತಿಯೊಂದು ಕಾರ್ಯದಲ್ಲೂ ಬಹಳ ಜಾಗರೂಕರಾಗಿರಿ. ಸ್ತ್ರೀ ಜನತೆಯಿಂದಲೇ ನಿಮಗೆ ಅನಿಷ್ಟವೊದಗುವ ಸಂಭವವಿದೆ. ದಶ ದಿಕ್ಕುಗಳಿಂದಲೂ ಒಂದೇ ಸವನೆ ತೊಂದರೆಗಳು ನಿಮಗೆ ಬರಲಾರಂಭಿಸುವವು. ದೈವಿಕ ಶಕ್ತಿಯಿಂದ ನೀವು ಧಾರಾಳ ದುಡಿಯುವಿರಾದರೂ ನಾನಾ ರೀತಿಯಿಂದ ಖರ್ಚುಗಳು ನಿಮ್ಮನ್ನು ಸುತ್ತಿರುವುದರಿಂದ ಏನು ಮಾಡಲೂ ನಿಮಗೆ ತೋಚದಂತಾಗಿರುವದು. ಇದರಲ್ಲಿ ನಿಮ್ಮ ಬುದ್ಧಿಹ್ರಾಸವೂ ಒಂದು ಕಾರಣವಾಗಬಹುದು. ಜನರಲ್ಲಿ ಕಲಹವು ಅನಿರೀಕ್ಷಿತವಾಗಿ ಸಂಭವಿಸುವುದು. ಅಕಸ್ಮಾತ್ ಪ್ರವಾಸವು ಗಂಟು ಬೀಳುವುದು ಇದರಿಂದ ದೇಹಾಯಾಸವೂ ಖರ್ಚು ಅಧಿಕವಾಗುವುದು. ಆಪದ್ಧನವಾಗಿದ್ದ ಹಣವೂ ವ್ಯಯವಾಗಿ ಹೋಗುವುದು. ಕೃಷಿ ವಿಭಾಗದಲ್ಲಿ ಸ್ವಲ್ಪ ಮಟ್ಟಿಗೆ ಲಾಭವಾಗಬಹುದು, ಸಾಹಸ ಪ್ರಿಯರಿಂದ ತರುಣರಿಗೆ ಕೆಲ ವಿಚಾರಗಳಲ್ಲಿ ಇಷ್ಟಪ್ರಾಪ್ತಿಯಾಗುವುದು. ತಾ 16 ರಿಂದ 19 ರವರೆಗಿನ ದಿನಗಳು ಕಷ್ಟದಾಯಕಗಳಾಗಿವೆ.

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degrees, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamps:—

Principal, Indian Homeopathic Institute and Society (Govt Regd.) *P. O. MAHUVA, (Kathiawar Dt, India.*

ಕೇವಲ 16 ದಿವಸಗಳಲ್ಲಿ ಉದ್ದವಾಗುವಿರಿ

ಶರೀರದ ಬೆಳವಣಿಗೆಯ ಬೀಗದ ಕೈಯಂತಿರುವ ಗ್ರಂಥಿಯು ನಿರ್ಜೀವವಾಗಿದ್ದರೆ ಅದನ್ನು ಉತ್ತೇಜಿಸಿ ಸಶಕ್ತಗೊಳಿಸಿ ಬೆಳವಣಿಗೆಯನ್ನು ಹೆಚ್ಚಿಸಲು ಮಾತ್ರ ಉಪಾಯವೆಂದರೆ ಜೀವಸತ್ವಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಹಿಟೋಜೆನ್ ಮಾತ್ರೆಗಳನ್ನು ಸೇವಿಸುವುದು ದಿನಕ್ಕೆರಡರಂತೆ ಕೇವಲ 16 ದಿವಸ ತೆಗೆದು ಕೊಂಡಲ್ಲಿ ಶರೀರದ ಗಾತ್ರವು ವಿಚಿತ್ರವಾಗಿ ಹೆಚ್ಚುವುದು 'ನಿಮ್ಮ ಕೇವಲ ಒಂದು ಪಕ್ಷದ ಚಿಕಿತ್ಸಾ ಕ್ರಮದಿಂದ ನಾನು 2½ ಇಂಚು ಎತ್ತರವಾಗಿರುವೆ'ನೆಂದು ಮಿ. ಪಿ. ಜೆ. ಫೋಲೋ ಇವರು ಬರೆಯುತ್ತಾರೆ.

Hitogen
GROWTH HORMONES

ಪೆಟ್ಟಿಗೆಯೊಂದರ ಬೆಲೆ ರೂ. 5-4-0, ಟಪ್ಪಾಲು ಮತ್ತು ಪೇಕಿಂಗ್ ವೆಚ್ಚ 0—10—0.
ಹಿಂದೂಸ್ಥಾನದ ಹೊರಗಿನವರಿಗೆ 10 ಶಿಲಿಂಗ್.

Sole Agents:-British Products Co., Fort. Bombay.
Sole Distributors:—
Mahasukhlal Chimanlal & Co., Princess St. Mangaldas Road, BOMBAY.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

Transport & Car Owners

ARE SPECIALLY INVITED TO VISIT
OUR SHOW ROOM
for economical transport maintenance.
CANARA AUTOMOBILES - - - - - MANGALORE.

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಪೇಂಟಿಂಗ್, ನೊಟೊಗ್ರಾಫ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವ ಸುಲಭ ದರಗಳಲ್ಲಿ ಮಾಡಿ ಕೊಡಲಾಗುವುದು.

CROWN RUBBER STAMP CO.,
Balmat Road, MANGALORE.

Includ by the Mysore Govt. Stores. Purchase Committee in the list of approved firms.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 125/1938 R.E.P. 795/1938

ಟಿಪಕಳ ಶಿವರಾವ್—ಅರ್ಜದಾರ
ಮತ್ತು
ಎಚ್. ಭವಾನಿಬಾಯಿ ಕೂಡಾ—ಎದ್ರಿರು
ಇವರೊಳಗೆ

1ನೇ ಎದ್ರಿಳು—
ಎಚ್. ಭವಾನಿ ಬ್ಬಾ, ಹಟ್ಟಿಕುದ್ರು, ಗಣೇಶರಾಯರ ವಿಧವೆ C/o Ramadasa Koppikar Retired Doctor, Hubli ಇವರಿಗೆ—
2ನೇ ಗಾರ್ನಿಶಿ—

ಓಬಯ್ಯ ಹೆಗ್ಡೆ ಶಿವಪ್ಪಹೆಗ್ಡೆರ ಅಳಿಯ ಕಾರ್ಕಳ ಡಿ. ಮು. ಕೋರ್ಟು O. S. 187/34, 106/37ನೇ ಡಿಕ್ರಿಗಳ ಪ್ರತಿವಾದಿ ಕಾರ್ಕಳ ಕಸಬೆಯಲ್ಲಿ ರುಹವ ಇವರಿಗೆ—

ಮೃತ ಗಣೇಶರಾಯರ estateಗೆ ಸಂಬಂಧಪಟ್ಟ ಹಣವಸೂಲಿಗೆ ಪಡೆದ ಕಾರ್ಕಳ ಡಿ. ಮು. ಕೋರ್ಟು ಕ್ರಮ ನಂಬ್ರ 187-188-189/1934, 106/37ನೇ ಡಿಕ್ರಿಗಳ ಜಪ್ತಿ ಬಗ್ಗೆ ಹುಕುಂ ಆಗಿ ಸದ್ರಿ ಅಮಲಜ್ಯಾರಿಯು ತಾರೀಕು 28-9-39ಕ್ಕೆ ತನ್ನಗೆ ಇಟ್ಟಿರುವದರಿಂದ ಸದರಿ ಜಪ್ತಿ ಕುರಿತು ನಿಮಗೇನಾದರೂ ಆಕ್ಷೇಪ ಇದ್ದಲ್ಲಿ ಸದರಿ ದಿನ ಬೆಳಗ್ಗೆ 10 ಘಂಟೆಗೆ ಸದರಿ ಕೋರ್ಟಿನಮುಂದೆ ನೀವು ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಬಿಟ್ಟುಬಿಟ್ಟು ನಿಮ್ಮ ಗೈರಹಾಜರಿಯಲ್ಲಿ ಸದರಿ ಅಮಲಜ್ಯಾರಿಯು ಮುಂದರಿಸಲ್ಪಡುವದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ.

P. Ramachandara Rao,
Pleader for petitioner.
ಕಾರ್ಕಳ, ತಾ. 4-9-39.

ವಿದ್ಯಾರ್ಥಿಗಳಿಗೆ ಆನಂದದ ವಾರ್ತೆ.

ಅತಿ ಅಭ್ಯಾಸ ಯಾ ಘಾಬರಿಯಿಂದ ಪರೀಕ್ಷೆಯ ಸಮಯ ನರ್ವಸ್ ವೀಕ್ನೆಸಿನಿಂದ ಸಾಮಾನ್ಯ ನೇಕಡ 50 ವಿದ್ಯಾರ್ಥಿಗಳು ತಿಳಿದು ಯಾ ತಿಳಿಯದೆ ಪರೀಕ್ಷೆಯ ಕಾಲದಲ್ಲಿ ಫಸ್ಟ್ ಕ್ಲಾಸಿನ ಯೋಗ್ಯತೆಯುಳ್ಳ ವಿದ್ಯಾರ್ಥಿಗಳೂ ಕೂಡ ಥರ್ಡ್ ಕ್ಲಾಸಿನಲ್ಲಿ ಸಹ ಪಾಸಾಗದೆ ನಾಪಾಸಾಗುವ ಪರಿಸ್ಥಿತಿಯು ಬರುತ್ತದೆ. ಈ ಸರ್ವ ವಿಚಾರಗಳಿಗೆ ನಾವು ದೀರ್ಘ ಅನುಭವದಿಂದ ತಯಾರಿಸಲ್ಪಟ್ಟ ಬಹುಗುಣಯುಕ್ತ ಪುಷ್ಪಗಂಧಾಮೋದಿತ **ಆಮಲಕೀ ತೈಲವನ್ನು** ಉಪಯೋಗಿಸುವದರಿಂದ ಲಕ್ಕೀಚಾನ್ಸ್ ಸಿಕ್ಕುತ್ತದೆ. 6 ಯಾ 11ಆಣೆ ಬೆಲೆಯ 1 ಸೀಸೆ ತೈಲವನ್ನು ಕೊಂಡು ಕೊಂಡು ಸ್ವಲ್ಪ ತಲೆಗೆ ಹಾಕಿ ಪೇಪರಿಗೆ ಶುರುಮಾಡಿರಿ. ಇದರಿಂದ ಮೆದುಳಿನ ಜ್ಞಾನಶಕ್ತಿ ಯಾ ಸ್ಮರಣಶಕ್ತಿ ವೃದ್ಧಿಯಾಗಿ ಆತ್ಮವಿಶ್ವಾಸವು ಹೆಚ್ಚುವದಲ್ಲದೆ ಕಠಿಣ ತರದ ಪ್ರಶ್ನೆಗಳಲ್ಲಿ ಸುಲಭವಾಗಿ ಯಶಃಪ್ರಾಪ್ತಿಯಾಗುವುದು. ಪರೀಕ್ಷೆಯ ಮೊದಲೇ ಒಂದೆರಡು ಸೀಸೆ ನಮ್ಮ ಆಮಲಕೀ ತೈಲವನ್ನು ತರಸಿಕೊಳ್ಳಿರಿ. 4 ಔನ್ಸಿನ ಸೀಸೆ 1 ರ ಕ್ರಯ ರೂ. 0-11-0, 2 ಔನ್ಸಿನ ಸೀಸೆ 1ರ 0-6-0

ತಯಾರಿಸುವವರು:— ಸ್ವದೇಶೀ ಔಷಧಿ ಭಂಡಾರ, (ರಿಜಿಸ್ಟರ್ಡ್) ಕುಂಜಾಲು, ಪೋಸ್ಟ್ ಬ್ರಹ್ಮಾವರ, ದ. ಭಾರತ,

ನಮ್ಮ ಸ್ಟಾಕಿಸ್ಟರು:—ಪಿ. ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ ಏಜೆಂಟ್, ಬಟಾಟವಾಲಾ ಮೆನ್ಶನ್, ಲಾಲ್ ಬಾಗ್, ಮುಂಬೈ, ಜನರಲ್ ಸಪ್ಲೈಯರ್ಸ್ ಲಿಮಿಟೆಡ್, ಉಡುಪಿ, ನವಭಾರತಬುಕ್ ಡಿಪ್ಪೋ, ಉಡುಪಿ, ಕೆಟಲಾಗಿಗೆ ಬರೆಯಿರಿ.

Advt.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ

ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Manager,

Kanara Printing Works,
Hampankatte, **MANGALORE**.

ಬಾಲಾರ್ಕ ಮಧು

ಚಿಕ್ಕಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡುಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಸೆಬಿಟ್ಟಿರುವ ನಿಮ್ಮ ಮಕ್ಕಳು ತಿರಿಗಿ ನಿಮ್ಮ ಕೈಗೆ ಸೇರುವರು. ಬೆಲೆ ಸೀಸೆ 1ಕ್ಕೆ 12 ಆಣೆ, ಟ. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ.**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಈ ಕೆಳಗಿನ ಔಷಧಗಳಲ್ಲಿ
ಗುಣವಿಲ್ಲವೆಂದು
ಸಿದ್ಧ ಮಾಡಿಕೊಟ್ಟಲ್ಲಿ
೧೦೦ ರೂ. ಇನಾಮು

ಕಾಮಾಮೃತ

ಸ್ತ್ರೀಪುರುಷರಿಗೆ ಧಾತುಪುಷ್ಟಿ
ಕೊಡುವ ಲೋಕಪ್ರಸಿದ್ಧ
ಶಕ್ತಿವರ್ಧಕ ಸಿದ್ಧೌಷಧ.

ಇವು ಸ್ತ್ರೀ ಪುರುಷರಿಗೆ ಆನಂದವನ್ನುಂಟುಮಾಡುವ ಮಾತ್ರೆಗಳು. ಇದರಲ್ಲಿ ಮಾದಕಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳನ್ನು ಪಯೋಗಿಸಿದೆ. ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿದ್ದು. ಮುದುಕತನವನ್ನು ಲೋಕದಲ್ಲಿಲ್ಲದಂತೆ ಮಾಡುವುದು.

ಗುಣವಿಲ್ಲದಿದ್ದಲ್ಲಿ ಹಣ ವಾಪ್ಸು -- ಕೆಟಲಾಗು ಉಚಿತ

ಒಂದು ತಿಂಗಳ ಔಷಧ ಕಿಮ್ಮತ್ತು ರೂ. 4-8-0, 15 ದಿನಗಳಿಗೆ ರೂ. 2-8-0

ಡಾ॥ ಎ. ಕನಕರಾಜು, ಚಿಕಾಕೋಲ್, (ವಿಜಾಗ್ ಡಿಸ್ಟ್ರಿಕ್ಟ್)

THE
MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.

ಭಂಗಾರ ವ ಸರಕಿನ ಈಡಿನಮೇಲೆ ಸೇಕಡ 7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5¼ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್,
ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಮೂಲವ್ಯಾಧಿ!

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

☞ **ಅರ್ಶ-ಮಾರಾ** (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು: ನೋವು ತುರಿಸಾಟ, ಉರಿಯುವಿಕೆ, ಕೀವು, ರಕ್ತ ಸ್ರಾವವಾಗುವದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಮಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಪಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಭೈರವ ಮಾತ್ರೆಗಳು- ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ. ೧೦೦ ಮಾತ್ರೆಗಳಿಗೆ ರೂ. ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

WANTED one Inspector, two Organisers and Agents in South Kanara. Apply stating previous experience to:—
The Bombay Co-operative Insurance Society Ltd.,
Office for Mysore, Coorg & South Kanara
Asiatic Building, Kempe Gowda Road,
Bangalore City.

'SERWELL'
RUBBER STAMPS
OFTEN APPEAL,
Since they surely serve well.
YOU CAN HAVE ONE.
On placing your order with our Representatives in your area.
IF UNREPRESENTED WRITE FOR AGENCY TERMS.
Manufacturers:—
on the approved list of the Govt. of Mysore.
YADIKE BROS.
MANUFACTURERS' REPRESENTATIVES, IMPORTERS & ENGINEERS,
BANGALORE CITY.



ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

FOUNDER:
SRI. A. B. SHETTY, M. L. A.,
Parliamentary Secretary, Govt. of Madras.

ಸಂಪಾದಕ: ಕೆ. ಕೆ. ಶೆಟ್ಟಿ. ESTD. 1921 ಸಹಸಂಪಾದಕ: ಕೆ. ಎಚ್. ಶೆಟ್ಟಿ.

ಸಂಪುಟ ೧೯	ಉಡುಪಿ	VOL. 19
ಸಂಚಿಕೆ ೩	ಗುರುವಾರ, ತಾ 21-9-1959.	No. 3

GET RICH
AND
PROSPEROUS
through Simple Means upheld and pursued by Millions.........!
WRITE NOW WITH STAMP.—
K. S. Row,
Worli, BOMBAY.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂ ಡೆಲ್ಲಿ.
ಪ್ರಗತಿಶೀಲವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.	ಅಥವಾ ಕೆ. ರಾಮಸ್ವಾಮಿ ಅಯ್ಯರ್, ಎಂ. ಎ., ಬ್ರಾಂಚ್ ಸೆಕ್ರೆಟರಿ, ನಂ 180 ಮೌಂಟ್ ರೋಡ್, ಮದ್ರಾಸು.

— ಗರ್ಭ ನಿರೋಧ —
ರಬೆಕ್ ಇದು ಗರ್ಭಧಾರಣೆಯನ್ನು ತಪ್ಪಿಸುವ ಸಾಧನ. ಇದನ್ನು 3 ವರ್ಷ ಉಪಯೋಗಿಸಿದಲ್ಲಿ ಗರ್ಭಧಾರಣೆಯ ಭೀತಿಯು ಅನಿರ್ದಿಷ್ಟ ಅವಧಿಯವರೆಗೆ ನಿವಾರಿಸಲಾಗುವುದು. ಶರೀರಕ್ಕೆ ಯಾವ ರೀತಿಯ ಹಾನಿಯೂ ಇರುವುದಿಲ್ಲ. ಯಾವ ರೀತಿಯ ದುಷ್ಪರಿಣಾಮವೂ ಉಂಟಾಗುವುದಿಲ್ಲ. ಪ್ರತಿಯೊಂದು ಆರ್ಡರಿನೊಂದಿಗೆ ಗ್ಯಾರಂಟಿ ಪತ್ರವಿದೆ. ಬೆಲೆ ರೂ. 5-8-0.
ರಬೆಕ್ ತಿನ್ನುವುದನ್ನು ನಿಲ್ಲಿಸಿದ್ದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು. ಬೆಲೆ ರೂ. 5-8-0 ಇದರ 10 ಕಿಲ್ಲಿಂಗು.
ಫೋ. ನಂ. 21345.
Dr. S. H. Khan,
42 (N. G.) Churchgate street
Fort Bombay.

ಕೇವಲ ರೂ. 2-4-0ಕ್ಕೆ,
ಲಿವರ್ ರಿಸ್ಟ್ ವಾಚುಗಳು

ಈ ಗಡಿಯಾರಗಳು ಸರಿಯಾದ ಸಮಯ ತೋರಿಸುವವುಗಳು ಮತ್ತು 5 ವರ್ಷಗಳ ಗ್ಯಾರಂಟಿ ಯವುಗಳು. ದುಂಡು ಆಥವಾ ಚೌಕಾಕಾರದ್ದಕ್ಕೆ ರೂ. 2-8-0 ಉತ್ತಮವಾದದ್ದಕ್ಕೆ ರೂ. 3 ಆ. 12 ಥಂಗಾಂದ ಬಿಚ್ಚುವದ್ದಕ್ಕೆ ರೂ. 4-4-0. Rec. ರೂ. 6-8-0 ದಕ್ಕೆ ರಂಗ್ಯುಲರ್ ರೂ. 7-4-0 ಅಕ್ಯುರೆಟ್ ಮಾದರಿಕ್ಕೆ ರೂ. 11 ಮತ್ತು ವರ್ಷಗಳ ಗ್ಯಾರಂಟಿ. ಡಜನ್ನು ತೆಗೆದುಕೊಂಡವರಿಗೆ 8 ಪ್ರತ್ಯೇಕ. ಒಟ್ಟಿಗೇ 3 ಗಡಿಯಾರಗಳನ್ನು ತೆಗೆದುಕೊಂಡರೆ ಟಪಾಲು ಫ್ರೀ.
ಸಿದ್ಧವಾದ ಆರ್ಡರುಗಳು ಸಂಪೂರ್ಣ ಮುಂಗಡದೊಂದಿಗೆ ಒರಿಯಂಟಲ್ ಸ್ಟೋರ್ಸ್, ಪೋಸ್ಟ್ ಬಾಕ್ಸ್ ನಂ 12204, ಕಲ್ಕತ್ತಾ (S. C. L. 184)

ಅದ್ವಿತೀಯ ಗುಣಕಾರಿ
ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿ
ಆಯುರ್ವೇದ ರೂಪಿಯಾದಿರುವ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.
ಕಸ್ತೂರಿಯೇ ಮೊದಲಾದ ಬೆಲೆಬಾಳುವ ದ್ರವ್ಯ ಯಾ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಕೆಮ್ಮು, ಚಳಿಜ್ವರ ಯಾ ಎಳೆಯುವ ಸರ್ವವಿಧದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳಿಂದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.
ಕ್ರಯ—12 ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.
ಬೆಲೆಗೆ ಸ್ಯಾಂಪಲು ಕೇಳುವವರಿಗೆ 12 ಮಾತ್ರೆ (ಗ.ಪ) ಗಳನ್ನು ಕಳುಹಿಸುತ್ತದೆ.
ಸ್ವದೇಶೀ ಔಷಧಿ ಭಂಡಾರ,
(ರಜಿಸ್ಟರ್ಡ್) ಕುಂಜಿಬೆಟ್ಟು.
ಪ್ರೊಪ್ರೈಟರ್—ಬ್ರಿಯಾಪ್ರವರ, ದ, ಕ.
ನಮ್ಮ ಸ್ಟಾಕಿಸ್ಟರು—1. ಬಿ. ಆರ್. ಪ್ರಭು, ಬಿ ಕೆ ಸ ಕೆಮಿಸ್ಟ್ ಎಂಡ್ ಡ್ರಗ್ಸ್ ಏಜನ್ಸಿ, ಬಹಾದ್ದೂರ್ ಮೆನ್ಶನ್, ಮುಂಬೈ. 2 ಜನರಲ್ ಸಪ್ಲೈ ಲಿಮಿಟೆಡ್, ಉಡುಪಿ. 3. ನವಭಾರತ ಬುಕ್ ಡಿಪೋ, ಉಡುಪಿ.

— ನವರಾತ್ರಿಗೆ ಸಿದ್ಧವಾಗಿದೆ —
ಅನಂತನ ವಸ್ತ್ರಗಳು
ಮತ್ತು
ದಾರಗಳು
ವಸ್ತ್ರಗಳು—
ಜೊತೆ 1ಕ್ಕೆ 1 ಆಣೆಯಿಂದ 2 ಆಣೆವರೆಗೆ
ದಾರಗಳು—
ಜೊತೆ 1ಕ್ಕೆ 1 ಆಣೆಯಿಂದ 2 ಆಣೆವರೆಗೆ
ವಸ್ತ್ರಗಳು—
100ಕ್ಕೆ ರೂ. 3ರಿಂದ ರೂ. 4ರ ವರೆಗೆ
ದಾರಗಳು—
100ಕ್ಕೆ ರೂ. 3ರಿಂದ ರೂ. 6ರ ವರೆಗೆ
— ಉಡುಪಿ ಸ್ಟೋರ್ಸ್ —
ನಂಬ್ರ 45, ಆಕಾರಬು ಶ್ರೀನಿವಾಸಾಚಾರ್ಯ ರಸ್ತೆ ಬೆಂಗಳೂರು ಸಿಟಿ.
ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಉಂಟು.



ಹಿಂದೂದೇಶದ ಜನಪ್ರೀತ
ದಂತಾಂಜನ
ಜಾಗರೂಕರಾಗಿ ಕಳ್ಳ ಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ ಶೀಘ್ರವಾಗಿ ಪಲ್ಲನ್ನು ನಿರ್ಮಲವಾಗಿಡುವುದು.



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯರ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಿದರೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಮದಾರಿ
ಗುಳಿಗೆಗಳು
(ರಜಿಸ್ಟರ್ಡ್)
ನನ್ನ ಆರೋಗ್ಯ
ಮೊದಲಾದವಕ್ಕೆ
ರಾಮಬಾಣ.



ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ ನರ್ವಸನೆಸ್, ಮೂರ್ಛೆರೋಗ, ಗರ್ಭಾಶಯದ ದೋಷ, ಸಿಡುಬಿನ ಉರಿ, ಹುಚ್ಚು, ಉನ್ಮಾದ, ಸ್ವಪ್ನದೋಷ, ಬಾಲಗ್ರಹ, ಮತ್ತು ಪಿತ್ತ ವಿಕಾರಗಳ ಮತ್ತು ನರಗಳ ಅಶಕ್ತತೆಗಳನ್ನು ಹೋಗಲಾಡಿಸುತ್ತದೆ.
50 ಗುಳಿಗೆಗಳಿರುವ ಬಾಟ್ಲಿಯೊಂದಕ್ಕೆ ಕ್ರಯ ರೂ. 3-8-0. ಬಯಸುವವರು ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—
The Imperial Chemist Coy.
106, Vithalbhai Patil Road Bombay 4.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
,, **M. Shivarama Rao,** Organizer, Puttur.

Or

Sri. J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Current accounts are opened free of charge & interest allowed on daily balances at 2% p. a. for the earlier half and at 1% p. a. for the latter half of every calendar year.

Fixed Deposits are accepted at all the above offices for one and two years and interest allowed at 3½% p. a. and 4% p. a. respectively; interest being payable every half year of the calendar year. Savings Bank & Cumulative Deposits are also received on remunerative terms.

Negotiable Instruments payable on demand and also genuine short dated trade bills are discounted on fairly easy terms.

For business proper please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಖಾಸಶ್ವಾಸ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಸುವಿಗೆ ಧಾರಾಳವಾಗಿ ಹಾಲುಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಉಡುಪಿ ಸ್ಟೋಕಿಸ್ಟರು—ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್‌ಏಜಂಟ್ಸ್ ಉಡುಪಿ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನು, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಬಹಳ ಪೇಜಗಳು ಇರುವ ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಆರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ, ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ.1॥

Western Swiss watch Co.
Book-Sellers. Post Box No. 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಕೇವಲ 16 ದಿನಗಳಲ್ಲಿ ಉದ್ದವಾಗುವಿರಿ

ಶರೀರದ ಬೆಳವಣಿಗೆಯ ವೇಗದ ಕ್ರಿಯಾಂತಿರುವ ಗ್ರಂಥಿಯು ನಿರ್ಬಲವಾಗಿದ್ದರೆ ಅದನ್ನು ಉತ್ತೇಜಿಸಿ ಸಶಕ್ತಗೊಳಿಸಿ ಬೆಳವಣಿಗೆಯನ್ನು ಹೆಚ್ಚಿಸಲು ಖಾತ್ರಿ ಉಪಾಯವೆಂದರೆ ಜೀವಸತ್ವಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಹಿಟೋಜೆನ್ ಮಾತ್ರೆಗಳನ್ನು ಸೇವಿಸುವುದು ದಿನಕ್ಕೆರಡರಂತೆ ಕೇವಲ 16 ದಿವಸ ತೆಗೆದುಕೊಂಡಲ್ಲಿ ಶರೀರದ ಗಾತ್ರವು ವಿಚಿತ್ರವಾಗಿ ಹೆಚ್ಚುವುದು. "ನಿಮ್ಮ ಕೇವಲ ಒಂದು ಪಕ್ಷದ ಚಿಕಿತ್ಸಾ ಕ್ರಮದಿಂದ ನಾನು 2½ ಇಂಚು ಎತ್ತರವಾಗಿರುವೆ"ನೆಂದು ಮಿ.ಷಿ.ಜಿ. ಫೋಟೋ ಇವರು ಬರೆಯುತ್ತಾರೆ.

Hitogen
GROWTH HORMONES

ಪೆಟ್ಟಿಗೆಯೊಂದರ ಬೆಲೆ ರೂ. 5-4-0, ಟಪ್ಪಾಲು ಮತ್ತು ಪೇಕಿಂಗ್ ವೆಚ್ಚ 0—10—0.
ಹಿಂದೂಸ್ಥಾನದ ಹೊರಗಿನವರಿಗೆ 10 ಶಿಲಿಂಗ್.

Sole Agents:-**British Products Co., Fort. Bombay.**

Sole Distributors:—

Mahasukhlal Chimanlal & Co., Princess St. Mangaldas Road, BOMBAY.

: ಜಾಹೀರಾತು :

ದರಗಳು.

೧ ಪುಟಕ್ಕೆ ೧ ಸಲಕ್ಕೆ ... ರೂ. ೨೫
ಅರ್ಧ ಪುಟಕ್ಕೆ ೧ ಸಲಕ್ಕೆ ... ,, ೧೫
ಕಾಲು ಪುಟಕ್ಕೆ ೧ ಸಲಕ್ಕೆ ... ,, ೮
ಅರೆಕಾಲು ಪುಟಕ್ಕೆ ೧ ಸಲಕ್ಕೆ ,, ೫
ಇಂಚು ಕಲಮಿಗೆ ೧ ಸಲಕ್ಕೆ ... ,, ೧

ಕಾಯಂ ಜಾಹೀರಾತು
: ದರಗಳಿಗೆ ಬರೆಯಿರಿ :

ವಾರ ಪತ್ರಿಕೆ

NAVAYUGA

ನವಯುಗ

Kanarese Weekly

: ಚಂದಾ ವಿವರ :

೧ ವರ್ಷಕ್ಕೆ ... ರೂ. ೩—೪—೦
೬ ತಿಂಗಳಿಗೆ ... ,, ೧—೧೨—೦
೩ ತಿಂಗಳಿಗೆ ... ,, ೧—೦—೦
ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ.

ಮಾದರಿ ಸಂಚಿಕೆಗೆ
: ಮೆನೇಜರರಿಗೆ ಬರೆಯಿರಿ :

ವಾರದ ವಿಮರ್ಶೆ

ಜೆಕ್ಕರಿಗೆ ಪುನಃ ಸ್ವಾತಂತ್ರ್ಯ

ಕಳೆದ ಮಹಾಯುದ್ಧದಲ್ಲಿ ಮಸಾರಿಕ್ ಮತ್ತು ಡಾಕ್ಟರ್ ಬೆನೆಸರು ಜೆಕ್ಕರ ಸೇನೆಯೊಂದನ್ನು ಸಂಘಟಿಸಿ ಮಿತ್ರ ರಾಷ್ಟ್ರಗಳ ಪಕ್ಷದಿಂದ ಹೋರಾಡಿದ ಸಂಗತಿಯು ಒಂದು ವಿಚಿತ್ರ ಕಥೆಯೇ ಆಗಿದೆ. ಅವರ ಸಾಹಸದ ಪರಿಣಾಮವಾಗಿ ಜೆಕೋಸ್ಲೋವೇಕಿಯ ರಾಜ್ಯವು ಸ್ಥಾಪಿಸಲ್ಪಟ್ಟಿತು. ಇಂದೀಗ ಜರ್ಮನಿಯ ಆಕ್ರಮಣದಿಂದಾಗಿ ಜೆಕೋಸ್ಲೋವೇಕಿಯವು ಘಾತಿಸಲ್ಪಟ್ಟು ಕ್ಷ ಸುರಿಸುತ್ತಾ ಬಿದ್ದಿರುವಾಗ ಅದು ಪುನರುಜ್ಜೀವಿತವಾಗುವುದೆಂಬ ಸಮಾಚಾರವು ಉತ್ಸಾಹಜನಕವಿದೆ. ಇಂಗ್ಲೆಂಡ್ ಯಾವ ತತ್ವವನ್ನೆತ್ತಿ ಹಿಡಿದು ಯುದ್ಧಕ್ಕೆ ಇದಿರುವುದೋ ಅದು ಜಯಶೀಲವಾದಲ್ಲಿ ಜೆಕ್ಕರಿಗೆ ಪುನಃ ಸ್ವಾತಂತ್ರ್ಯ ಬೀಯಲಾಗುವುದೆಂದು ಚೇಂಬರ್ಲೇನರು ಡಾಕ್ಟರ್ ಬೆನೆಸರಿಗೆ ಆಶ್ವಾಸನೆಯಿತ್ತಿರುತ್ತಾರೆ. ಮತ್ತು ಇಷ್ಟರಲ್ಲೇ ಡಾಕ್ಟರ್ ಬೆನೆಸರು ಪ್ರಧಾನ ಮಂತ್ರಿಗಳಾಗಿ ತಾತ್ಕಾಲಿಕ ಸರಕಾರವೊಂದು ಸ್ಥಾಪಿತವಾಗಿ ಅದಕ್ಕೆ ಕೂಡಲೆ ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳಿಂದ ಅಂಗೀಕಾರ ಪಡೆಯುವ ಪ್ರಯತ್ನ ನಡಿಯುತ್ತಿದೆ. ಪ್ರತ್ಯೇಕ ಜೆಕ್ ಸೈನಿಕದಳವೊಂದು ಸಂಘಟಿತವಾಗಿ ಮಿತ್ರ ರಾಷ್ಟ್ರಗಳ ಸೇನೆಯೊಂದಿಗೆ ಜರ್ಮನ್ ಸೇನೆಯ ಎದುರಾಗಿ ಹೋರಾಡಲನುವಾಗಿದೆ. ತಮ್ಮ ಬಂಧ ವಿಮೋಚನೆಯ ದಿನವು ಸಮೀಪಿಸುತ್ತಿದೆಂಬ ಹೊಸ ಉದಯವುಂಟಾಗಿದೆ ಜೆಕ್ಕರಲ್ಲಿ.

ಜಪಾನು ಎತ್ತ ಸರಿಯುತ್ತಿದೆ?

ರಸ್ಸೋ ಜರ್ಮನ್ ಒಪ್ಪಂದದಿಂದ ಆಘಾತ ಪರಿಣಾಮವಾದುದೆಂದರೆ ಜಪಾನ ಮೇಲೆ. ಜಪಾನು ಅದರಿಂದ ಸ್ತಂಭಿತವಾಯಿತು. ಕೂಡಲೆ ಅವರ ಮಂತ್ರಿಮಂಡಲವು ರಾಜಿನಾಮೆ ಕೊಟ್ಟಿತು. ಜಪಾನು ಇಟೆಲಿ ಮತ್ತು ಜರ್ಮನಿಯೊಂದಿಗೆ ಸೇರಿದುದು ರಸ್ಯದ ವಿರೋಧವಾಗಿ. ರಸ್ಯಕ್ಕೆ ಜರ್ಮನಿಗೂ ರಾಜಿಯಾದ ಮೇಲೆ ಜಪಾನು ಏಕಾಕಿಯಾಗಿ ಸೋವಿಯೆಟ್ ಸರಕಾರವನ್ನು ವಿರೋಧಿಸಬೇಕಾಯಿತು. ಜರ್ಮನಿಯು ವಿಶ್ವಾಸಘಾತ ಮಾಡಿತೆಂದು ಜಪಾನು ಬಹಳ ಸಿಟ್ಟು ತಾಳಿದೆ. ಬೆರನ್ ಅಬೆಯವರು ಹೊಸ ಪ್ರಧಾನ ಮಂತ್ರಿಗಳಾಗಿ ಜಪಾನಿನ ವಿದೇಶ ಸಂಬಂಧವಾದ ಧೋರಣೆಯನ್ನೇ ಮಾರ್ಪಡಿಸಿರುತ್ತಾರೆ. ಬ್ರಿಟನ್, ಫ್ರಾನ್ಸ್, ಯುನೈಟೆಡ್ ಸ್ಟೇಟ್ಸ್ ಮತ್ತು ಸೋವಿಯೆಟ್ ರಸ್ಯಗಳ ಸಂಬಂಧವಾದ ಹಿಂದಿನ ಧೋರಣೆಯು ಈಗ ಬದಲಾಗಿ ಜಪಾನು ದ್ವೇಷದ ಬದಲಿಗೆ ಮೈತ್ರಿ ಬೆಳೆಸಲೆತ್ನಿಸುವಂತಿದೆ. ಹೋಂಗ್ಕಾಂಗನ್ನು ಮುತ್ತಲು ಕಳುಹಿಸಲ್ಪಟ್ಟ ಸೇನೆಯು ಹಿಂಪೆ ಕರೆಯಲ್ಪಟ್ಟಿದೆ. ಮಂಚೂಕು ರಾಜ್ಯದ ಎಲ್ಲೆಯ ಕುರಿತು ಜಪಾನರಿಗೂ ಸೋವಿಯೆಟ್ ಸರಕಾರಕ್ಕೂ ಬಹಳ ಸಮಯದಿಂದ ನಡೆಯುತ್ತಿದ್ದ ಕಲಹವು ರಾಜಿಯಾಗಿದೆ. ಚೀನದಲ್ಲಿಯೂ ಈಗ ಜಪಾನು ಹೆಚ್ಚಿನ ಹೋರಾಟವನ್ನೇನೂ ನಡಿಸುತ್ತಿರುವಂತೆ ತೋರುವುದಿಲ್ಲ. ಸಾಕು ಸಾಕಾಗಿದೆ. ಅದಕ್ಕೆ ಚೀನದ ಯುದ್ಧ.

ಸಮಾಜಘಾತುಕ ಮನೋವೃತ್ತಿ

ಗಂಡಾಂತರದ ಪರಿಸ್ಥಿತಿಗಳ ದುರುಪಯೋಗ ಪಡೆದು ಆದಷ್ಟು ಹೆಚ್ಚಿನ ಲಾಭ ಮಾಡಿ ಒಮ್ಮೆಯೇ ತಮ್ಮ ದುಡ್ಡಿನ ಚೀಲ ತುಂಬಿಸಿಬಿಡಬೇಕೆಂಬ ಸಮಾಜಘಾತುಕ ಮನೋವೃತ್ತಿಯು ಈಗಣ ವ್ಯಾಪಾರಿಗಳಲ್ಲಿ ವಿಪರೀತಾವಸ್ಥೆಗೆ ಮುಟ್ಟಿರುವುದು ಅತ್ಯಂತ ಶೋಚನೀಯವಿದೆ. ಸರಕಾರವು ಎಷ್ಟೊಂದು ಕಠಿಣವಾದ ಎಚ್ಚರವಿತ್ತರೂ, ಅದರಿಂದ ರಖಮ್ ವ್ಯಾಪಾರಿಗಳ ಮೇಲೆ ಕೆಲಮಟ್ಟಿನ ಪರಿಣಾಮವಾಗಿರುವುದೇ ಹೊರತು ಚಿಲ್ಲರೆ ವ್ಯಾಪಾರಿಗಳು ಸಾಮಗ್ರಿಗಳನ್ನು ಹೆಚ್ಚಿನ ಲಾಭಮಾಡಿ ಯೇ ಮಾರುತ್ತಿರುವರು. ರೆವಿನ್ಯೂ ಅಧಿಕಾರಿಗಳು ಪರಿಸ್ಥಿತಿಯನ್ನು ವಿಚಾರಿಸಿ ಸರಕಾರಕ್ಕೆ ವರದಿಯನ್ನೊಪ್ಪಿಸುತ್ತಿರುವರು. ಕೆಲವು ಕಡೆಗಳ ವ್ಯಾಪಾರಿಗಳೇ ಪ್ರಶಂಸನೀಯ ವಿವೇಕತನದಿಂದ ತಮ್ಮೊಳಗೆ ತಾವೇ ಮಾತಾಡಿಕೊಂಡು ಮಾಲುಗಳ ಬೆಲೆಯನ್ನು ನಿಶ್ಚೈಸಿ ಮಿತಗೊಳಿಸಿರುವರು. ಕೆಲವೆಡೆ ಜನತೆಯು ಚಳವಳಿಸಿ ವ್ಯಾಪಾರಿಗಳನ್ನು ದಾರಿಗೆ ತಂದಿರುವರು. ಇನ್ನು ಕೆಲವು ಸ್ಥಳಗಳಲ್ಲಿ ಅಧಿಕಾರಿಗಳು ಮಧ್ಯಸ್ತಿಕೆಮಾಡಿ ವಿಪರೀತ ಬೆಲೆಯನ್ನು ಮಿತಕ್ಕೆ ತಂದಿರುವರು. ಕೆಲವು ಸ್ಥಳಗಳಲ್ಲಿ ಗಲಾಟೆ ಕೂಡಾ ನಡೆದಿರುವುದು. ಸರಕಾರವು ಎಚ್ಚರಿಕೊಟ್ಟ ಮೇಲೆ ಒಮ್ಮೆಯೇ ವಿಪರೀತ ಏರಿದ್ದ ಸಾಮಗ್ರಿಗಳ ಬೆಲೆಯು ಸ್ವಲ್ಪ ಕಡಿಮೆಯಾಗಿರುವುದೆಂಬುದೇನೋ ನಿಜ. ಆದರೆ ಮುಂದೇನಾಗುವುದೆಂದು ಹೇಳಬರುವುದಿಲ್ಲ. ಯುದ್ಧವು ಇದೇ ರೀತಿ ಮುಂದುವರಿದರೆ ಸಾಮಾನುಗಳ ಬೆಲೆಯು ಮುಂದೆ ಏರುವುದಂತೂ ನಿಶ್ಚಯ. ಆದುದರಿಂದ ಸರಕಾರದವರು ಪ್ರಾಂತದ ಬೇರೆ ಬೇರೆ ಸಾಮಗ್ರಿಗಳಿಗೆ ನ್ಯಾಯವಾದ ಬೆಲೆಯನ್ನು ನಿಶ್ಚೈಸಿ, ಆ ಬೆಲೆಗಿಂತ ಹೆಚ್ಚಿಸಬಾರದೆಂದು ಕಾನೂನು ಜ್ಯಾರಿಗೆ ತರುವುದು ಅತ್ಯಾವಶ್ಯಕವಾಗಿದೆ. ಇದಕ್ಕಾಗಿ ಸರಕಾರದ, ವ್ಯಾಪಾರಿಗಳ ಮತ್ತು ಗಿರಾಕಿಗಳ ಪ್ರತಿನಿಧಿಗಳನ್ನೊಳಗೊಂಡ ಕಮಿಟಿಯೊಂದನ್ನು ಸ್ಥಾಪಿಸಿ ಸಾಮಾನುಗಳ ಬೆಲೆಯನ್ನು ಅಗತ್ಯ ಬಿದ್ದಂತೆ ಸಂದರ್ಭಾನುಸಾರ ಬದಲಾವಣೆ ಮಾಡಬಹುದು.

ದೇವಸ್ಥಾನ ಪ್ರವೇಶ ಚಳವಳಿ

ತಮಿಳು ನಾಡಿನ ಹರಿಜನ ದೇವಸ್ಥಾನ ಚಳವಳವು ಅಲ್ಲಿಯ ಸನಾತನಿಗಳನ್ನೆಲ್ಲಾ ಬಹಳವಾಗಿ ರೇಗಿಸಿದೆ. ಸನಾತನಿಗಳೆಲ್ಲಾ ಸಂಘಟಿತರಾಗಿ ಕಾಂಗ್ರೆಸ್ ಪಕ್ಷೀಯರನ್ನು ವಿರೋಧಿಸಲು ಸೊಂಟಕಟ್ಟಿದ್ದಾರೆ. ಕಾಂಗ್ರೆಸ್ ರಾಜ್ಯಭಾರಕ್ಕಿಂತ ಬ್ರಿಟಿಷ್ ಆಳ್ವಿಕೆಯು ಮೇಲೆಂದು ಅವರೀಗ ಭಾವಿಸಿರುವಂತಿದೆ. ಮಧುರೆ ಶ್ರೀರಂಗಂ, ಚಿದಂಬರಮ್ ಮೊದಲಾದ ದಕ್ಷಿಣದ ಪ್ರಖ್ಯಾತ ಕ್ಷೇತ್ರಗಳ ಸನಾತನಿಗಳೆಲ್ಲಾ ಈಗ ದೇವಸ್ಥಾನ ಪ್ರವೇಶದ ವಿರೋಧವಾಗಿ ಪ್ರಬಲ ಆಂದೋಲನವೆಬ್ಬಿಸಿರುತ್ತಾರೆ. ನೂರಾರು ಮಂದಿ ಸನಾತನ ಸ್ತ್ರೀಯರೂ ಇದರಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಕಳೆದ ವಾರ ಮದ್ರಾಸ್ ಮಂತ್ರಿಗಳಾದ ಡಾಕ್ಟರ್ ರಾಜನರು ಶ್ರೀರಂಗಮ್ ದೇವಸ್ಥಾನಕ್ಕೆ ಹೋದಾಗ ನೂರಾರು ಮಂದಿ ಸ್ತ್ರೀಯರು ಸಾಲಾಗಿ ನಿಂತು ಅಳುತ್ತಾ ಬೊಬ್ಬೆ ಹಾಕುತ್ತಾ ಅವರನ್ನಡ್ಡಗಟ್ಟಿದರು. ಸಾವಿರಾರು ಮಂದಿ ಸನಾತನಿಗಳು ಈ ದೃಶ್ಯವನ್ನು ದೂರದಲ್ಲಿ ನಿಂತು ನೋಡುತ್ತಿದ್ದರು. ಆದರೂ ಡಾಕ್ಟರ್ ರಾಜನರು ಅಂಜದೆ ದೇವಸ್ಥಾನಕ್ಕೆ ಹೋಗಿಯೇ ಸಿದ್ಧವೆಂದು ಛಲತೊಟ್ಟು ಪೋಲೀಸರ ಸಹಾಯದಿಂದ ಒಳಗೆ ಹೋದರು. ಪೋಲೀಸರು ಈ ಹೆಂಗಸರನ್ನು ದೂಡುವಾಗ ಸನಾತನಿಗಳು ಕಲ್ಲೆಸೆದರು. ಕಲ್ಲು ಡಾಕ್ಟರ್ ರಾಜನರ ಮೇಲೂ ಬಿತ್ತು. ಪೋಲೀಸರು ಲಾಠಿ ಪ್ರಹರ ಮಾಡಿ ಜನರನ್ನು ಚೆದರಿಸಿದರೆಂದೂ ಕೆಲ ಮಂದಿ ಸ್ತ್ರೀಯರಿಗೆ ಕೂಡಾ ಬಹಳ ಪೆಟ್ಟಾಗಿರುವುದೆಂದೂ ಸನಾತನಿಗಳ ಆರೋಪ.

ರಸ್ಯವೂ ಯುದ್ಧಕ್ಕೆಳೆಯಲ್ಪಡುವುದೇ?

ಎಂಬ ಸಂದೇಹಕ್ಕೆ ಆಸ್ಪದವಾಗಿದೆ ಪೋಲೆಂಡಿನಲ್ಲಿರುವ ಸುಮಾರು 10 ಮಿಲ್ಯ ರಸ್ಯಾನ ಅಲ್ಪಸಂಖ್ಯಾಕರಿಗೆ ಪೋಲಿಶ್ ಸರಕಾರವು ಪೀಡೆಕೊಡುತ್ತಿದೆಯೆಂದು ಸೋವಿಯೆಟ್ ಸರಕಾರದ ಬಾಯಿಯಂತಿರುವ ಪ್ರವಾದ ಪತ್ರಿಕೆಯು ಪ್ರಕಟಿಸಿದೆ. ಪೋಲೆಂಡಿನ ಎಲ್ಲೆಯಲ್ಲಿ ರಸ್ಯವು 3 ಮಿಲ್ಯ ಸೇನಾಸಂಗ್ರಹಮಾಡಿ ಈಗ ಎಲ್ಲೆಯ ಪ್ರದೇಶಗಳ ಮೇಲೆ ಧಾಳಿಯಿಟ್ಟು ಮುಂದೊತ್ತಿರುವುದು. ಈಗ ನಡೆಯುವ ವಿದ್ಯಮಾನಗಳನ್ನು ನೋಡಿದರೆ, ಜರ್ಮನಿ ಮತ್ತು ರಸ್ಯಗಳು ಪೋಲೆಂಡನ್ನು ತಮ್ಮೊಳಗೆ ಹಂಚಿಕೊಂಡು ನುಂಗಿಬಿಡುವುದು ನಿಶ್ಚಯವೆಂದು ತೋರುತ್ತದೆ. ಹೀಗೆ ಪೋಲೆಂಡು ನಿರ್ನಾಮವಾದ ಪಕ್ಷದಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸುಗಳು ದೊಡ್ಡ ಸಮಸ್ಯೆಯಲ್ಲಿ ಸಿಕ್ಕಿಬೀಳುವವು. ರಸ್ಯವು ಪೋಲೆಂಡಿನ ಮೇಲೆ ಯುದ್ಧ ಹೂಡಿದರೆ ಪೋಲೆಂಡಿನ ಯುದ್ಧವು ಬೇಗನೆ ಕೊನೆಗೊಂಡು ಪೂರ್ವ ರಣರಂಗದಿಂದ ಜರ್ಮನಿಯು ತನ್ನ ಹೆಚ್ಚಿನ ಸೇನೆಯನ್ನು ಪಶ್ಚಿಮಕ್ಕೊಯ್ಯುವುದು. ಆಗ ಮಿತ್ರರಾಷ್ಟ್ರಗಳ ಕೆಲಸವು ಮತ್ತಷ್ಟು ಕಷ್ಟವಾಗುವುದು.

ಇಟೆಲಿಯು ಏನು ಮಾಡುವುದು?

ಹಿಟ್ಲರರೊಡನೆ ಸೇರಿ ನಡೆಯಹತ್ತಿದಂದಿನಿಂದ ಇಟೆಲಿಯಲ್ಲಿ ಮುಸಲೋನಿಗಳ ಪ್ರತಿಷ್ಠೆಯು ಕಡಿಮೆಯಾಗಹತ್ತಿರುವುದೆಂದು ತಿಳಿದುಬರುತ್ತದೆ. ಹೆಚ್ಚಿನ ಇಟೆಲಿಯಾನರು ಒಳಗಿಂದೊಳಗೆ ನಾಝಿಗಳನ್ನು ದ್ವೇಷಿಸುವವರಿದ್ದಾರೆ. ಇಟೆಲಿಯ ಅರಸನಾದ ವಿಕ್ಟರ್ ಇಮಾನುವೇಲರವರು ಬ್ರಿಟಿಷ್ ಪಕ್ಷಪಾತಿಯಿದ್ದು, ಇಟೆಲಿಯು ಜರ್ಮನಿಯ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಿಲ್ಲೆಂದು ಸ್ಪಷ್ಟವಾಗಿ ಹಿಟ್ಲರರಿಗೆ ತಿಳಿಸಿದರೆಂದು ಪ್ರಕಟವಾಗಿದೆ. ಇಷ್ಟರ ವರೆಗೆ ಇಟೆಲಿಯ ಧೋರಣೆಯೇನೆಂತ ತಿಳಿದಿಲ್ಲ. ಇಟೆಲಿಯ ಲೋಕಪ್ರಖ್ಯಾತ ವೈಮಾನಿಕರಾದ ಮಾರ್ಶಲ್ ಬಾಲ್ಬೋರವರು ಬೇಗನೆ ಜರ್ಮನಿಗೆ ಹೋಗಲಿರುವರೆಂಬ ಸುದ್ದಿಯು ಮುಸಲೋನಿಯವರ ಉದ್ದೇಶವೇನಿರುವದೆಂಬ ಕುರಿತು ಸಂದೇಹವನ್ನುಂಟುಮಾಡುತ್ತದೆ. ಅವರು ಸ್ವಯಂಸೇವಕರನ್ನೂ ವೈಮಾನಿಕರನ್ನೂ ಕಳುಹಿಸಿ ಜರ್ಮನಿಗೆ ಅಪ್ರತ್ಯಕ್ಷ ಸಹಾಯವನ್ನೀಯಬಹುದು, ಆಗ ಮಿತ್ರ ರಾಷ್ಟ್ರಗಳು ಯುದ್ಧ ಹೂಡಲಿಕ್ಕೂ ಅಲ್ಲ, ಬಿಡಲಿಕ್ಕೂ ಅಲ್ಲೆಂಬ ಉಭಯಸಂಕಟದಲ್ಲಿ ಬೀಳುವವು. ಮುಸಲೋನಿಗಳು ಇಷ್ಟರ ವರೆಗೆ ಒಂದೇ ಒಂದು ಶಬ್ದವಿಲ್ಲದೆ ಮೌನಧಾರಣೆ ಮಾಡಿರುವುದು ಆಶ್ಚರ್ಯಕರವಿದೆ.

ಪ್ರಕಟಣೆ

ಉಡುಪಿ ಮುನಿಸಿಪಾಲಿಟಿಯೊಳಗಿರುವ ವಧಾಗೃಹದಲ್ಲಿ (slaughter house) ತಾ. 1-10-39ರಿಂದ ತಾ. 31-3-40 ರ ವರೇಗಿನ 6 ತಿಂಗಳಲ್ಲಿ ಮಾಂಸಮಾರಲು ಮಾಡುವ ಸ್ವತಂತ್ರವನ್ನು ತಾ. 25-9-39 ನೇ ಸೋಮವಾರ ಅಪರಾಹ್ನ ಘಂಟೆ 2-30ಕ್ಕೆ ಉಡುಪಿಯಲ್ಲಿ ಉಡುಪಿ ಮುನಿಸಿಪಲ್ ಆಫೀಸಿನಲ್ಲಿ ಉಡುಪಿ ಮುನಿಸಿಪಲ್ ಕಮಿಶನರವರಿಂದ ಯಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಖಾಯಿಷ್‌ವುಳ್ಳವರು ಏಲಂಗೆ ನಿಲ್ಲಬಹುದು.

ಏಲಂ ಶರ್ತುಗಳನ್ನು ಮ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಮುನಿಸಿಪಲ್ ಆಫೀಸಿನಲ್ಲಿ ಬಂದು ತಿಳಕೊಳ್ಳಬಹುದು.

B. Suryanarayana Rao, M. A.
ಕಮಿಶನರ್, ಉಡುಪಿ ಮುನಿಸಿಪಾಲಿಟಿ.

ಮುನ್ಸಿಪಲ್ ಆಫೀಸು
ಉಡುಪಿ, ತಾ. 25-8-39

1914ನೇ ಯುದ್ಧದ ಭೀಕರ ಸ್ಮರಣೆ.

ಮುಂದೆ ಯುದ್ಧವಾಗದಂತೆ ಮಾಡಲು ಅಂದಿನ ಮಹಾಯುದ್ಧ!

ಇಂದೀಗ ಅಂದಿಗಿಂತಲೂ ಎಷ್ಟೋ ಭಯಂಕರ ಯುದ್ಧ!!

ಲೋಕದ ಮುಂದಿನ ಗತಿಯಾದರೂ ಏನು?

ಎರಡುಮೂರು ವರ್ಷಗಳಿಂದ ಹೊಗೆದು ಹೊಗೆಸುತ್ತಿದ್ದ ಯುರೋಪಿನ ಜ್ವಾಲಾಮುಖಿಯು ಇಂದೀಗ ಭೀಕರ ಸ್ಫೋಟಗೊಂಡು ಇಡೀ ಲೋಕದಲ್ಲೇ ಹಾಹಾಕಾರವೆಬ್ಬಿಸಿರುವುದು. ಅದೊಂದು ಮಹಾಪ್ರಳಯವಾಗಿ ಇಡೀ ಲೋಕವನ್ನು ಮುಕ್ಕುವುದೋ ಎಂಬ ತಲ್ಲಣವನ್ನುಂಟುಮಾಡಿರುವುದು. ಈ ಸಂದರ್ಭದಲ್ಲಿ ಇಂದಿಗೆ 25ವರ್ಷಗಳ ಹಿಂದೆ ಇಡೀ ಪ್ರಪಂಚವನ್ನೇ ಒಂದೊಮ್ಮೆ ಕಂಪನಗೊಳಿಸಿದ ಮಹಾಯುದ್ಧದ ನೆನವರಿಕೆಯು ಅಪ್ರಸ್ತುತವಾಗಲಾರದು.

ಕೈಸರರ ಸ್ವೇಚ್ಛಾಪರವರ್ತನೆ

ಆ ಮಹಾಯುದ್ಧವು 1914ನೇ ಇಸ್ವಿ ಜುಲೈ ತಾ 28ರಲ್ಲಿ ಆರಂಭವಾಯಿತು. ಇಂದು ಜರ್ಮನಿಯ ಸರ್ವಾಧಿಕಾರಿ ಹಿಟ್ಲರನು ಇಡೀ ಲೋಕದ ಅದೃಷ್ಟವನ್ನು ತನ್ನ ಕರತಲಾಮಲಕವಾಗಿಟ್ಟುಕೊಂಡು ಹೇಗೆ ಕಾಳಭೈರವ ಸ್ವರೂಪಿಯಾಗಿ ಭಯಂಕರ ಯುದ್ಧದ ತಾಂಡವವಾಡುತ್ತಿರುವನೋ ಅದೇ ರೀತಿ ಅಂದು ಜರ್ಮನಿಯ ಕೈಸರರು ವರ್ತಿಸಿದರು. ಯಾರು ಹೇಳಿದರೂ ಕೇಳದೆ, ಯಾರ ಮಧ್ಯಸ್ಥಿಕೆಗೂ ಒಪ್ಪದೆ ಉಭ್ರಮೆಯಿಂದ, ಇಂಗ್ಲೆಂಡು ಫ್ರಾನ್ಸಿನ ಸಹಾಯಕ್ಕೆ ಬರಲಾರದೆಂಬ ಭ್ರಾಂತಿಯಿಂದ ಫ್ರಾನ್ಸನ್ನು ಸದೆಬಡಿಯಲು ಮುಂದಾದರು. ಆದರ ಪರಿಣಾಮವು ಪ್ರತಿವಿರುದ್ಧವಾಯಿತು. ಅವರು ಜರ್ಮನಿಯಿಂದೋಡಿ ಹಾಲೆಂಡಿನಲ್ಲಿ ಆಶ್ರಯ ಪಡೆಯದಿರುತ್ತಿದ್ದರೆ ತಲೆಉಳಿಯುತ್ತಿದ್ದಿಲ್ಲ ಅವರದು. ಈಗಲೂ ಜರ್ಮನಿಯ ಪ್ರಭಾವ ವೈಭವಗಳನ್ನು ಕನವರಿಸುತ್ತಾ ಡೂರ್ನಿನಲ್ಲಿ ಮುದಿಸಿಂಹದಂತೆ ಕಾಲಕಳೆಯುತ್ತಿದ್ದಾರೆ ಅವರು. ಮುಂದೆ ಹಿಟ್ಲರನ ಗತಿಯೇನಾಗುವುದೋ?

ಕಳೆದ ಯುದ್ಧಕ್ಕೆ ಕಾರಣವೇನು?

1914ರಲ್ಲಿ ಜರ್ಮನಿ, ಆಸ್ಟ್ರಿಯ, ಟರ್ಕಿ, ಬಲ್ಗೇರಿಯಗಳು ಕೂಡಿದ ಸೆಂಟ್ರಲ್ ಪವರ್ಸಿಗೂ, ಫ್ರಾನ್ಸ್, ಇಂಗ್ಲೆಂಡ್, ರಷ್ಯಾ ಮೊದಲಾದ ಮಿತ್ರ ರಾಷ್ಟ್ರಗಳಿಗೂ ತೀವ್ರವಾದ ವೈಮನಸ್ಸುಂಟಾಗಿ ಒಳಗೊಳಗೆ ಕುದಿಯುತ್ತಿತ್ತು. ಸರಜಾವೋ ಕೊಲೆಯಿಂದ ಅದು ಭಯಂಕರ ದಾವಾಗ್ನಿಯಾಗಿ ಎದ್ದುಕಬ್ಬಿತು. ಸರಜಾವೋ ಎಂಬುದು ಆಗಿನ ಬೋಸ್ನಿಯದ ರಾಜಧಾನಿ. ಮೊದಲದು ಆಸ್ಟ್ರಿಯಕ್ಕೆ ಸೇರಿದ್ದು ಈಗ ಯುಗೋಸ್ಲಾವಿಯಕ್ಕೆ ಸೇರಿಹೋಗಿದೆ. ಆಸ್ಟ್ರಿಯದ ರಾಜಕುಮಾರನಾದ ಫ್ರೇನ್ಸಿಸ್ ಫರ್ಡಿಂಡೀನನು ಸೆಂಜಾವೋದಲ್ಲಿ ಕೊಲೆಮಾಡಲ್ಪಟ್ಟನು. ಕೊಲೆಯು ಸರಿಯಾಗಿ ಪತ್ತೆಯಾಗದಿದ್ದರೂ ಅದರಲ್ಲಿ ಸರ್ವಿಯಾ ದೇಶದ ಕೈಯಿತ್ತೆಂದು ರುಜುವಾಯಿತು (ಸರ್ವಿಯವು ಕೂಡಾ ಈಗ ಯುಗೋಸ್ಲಾವಿಯಕ್ಕೆ ಸೇರಿದೆ.) ಆಸ್ಟ್ರಿಯವು ಸರ್ವಿಯಕ್ಕೆ 'ಅಲ್ಟಿಮೇಟಮ್' (ಎಚ್ಚರ) ಕೊಟ್ಟಿತು. ಇದಕ್ಕೆ ಸರ್ವಿಯವು ಸಮಾಧಾನಕರ ಉತ್ತರವೀಯಲಿಲ್ಲ. ಆಗ ಆಸ್ಟ್ರಿಯವು 1914ನೇ ಜುಲೈ ತಾ. 28ರಲ್ಲು ಸರ್ವಿಯದ ಮೇಲೆ ಯುದ್ಧಹೂಡಿತು. ಜುಲೈ ತಾ. 30ರಲ್ಲಿ ರಷ್ಯದ ಝಾರರು ಸರ್ವಿಯದ ಸಹಾಯಾರ್ಥವಾಗಿ ಸೈನ್ಯಸಂಗ್ರಹ ಮಾಡಿದರು. ಇದು ತಮ್ಮ ಮೇಲಿನ ಆಕ್ರಮಣ ಸಿದ್ಧತೆಯೆಂದು ಜರ್ಮನಿಯು ಉದ್ವೇಗಗೊಂಡು ಆಗೋಸ್ತು ತಾ. 1ರಲ್ಲು ಸೇನಾ ಸಂಗ್ರಹ ಮಾಡಿತು. ಇದೇ ದಿನ ಫ್ರಾನ್ಸು ಕೂಡಾ ಸೈನ್ಯ ಜಮಾಯಿಸಿತು. ಆಗೋಸ್ತು ತಾ. 3ರಲ್ಲು ಫ್ರಾನ್ಸಿನ ಮೇಲೆ ಆಕ್ರಮಣ ನಡಿಸುವುದಕ್ಕಾಗಿ ಜರ್ಮನ್ ಸೇನೆಯು ಬೆಲ್ಜಿಯಮಿನ ಮೇಲೆ ನುಗ್ಗಿ, ಬೆಲ್ಜಿಯಮಿನ ಭದ್ರತೆಯನ್ನು ಮನ್ನಿಸುವ 1839ರ ಲಂಡನ್ ಒಪ್ಪಂದವನ್ನು ಮುರಿಯಿತು. ಇದರಿಂದಾಗಿ ಇಂಗ್ಲೆಂಡು ಆಗೋಸ್ತು ತಾ 4ರಲ್ಲಿ ಯುದ್ಧಕ್ಕಿಳಿದು ಅಂದೇ ಬ್ರಿಟಿಷ್ ಸೈನಿಕರು ಇಂಗ್ಲಿಷ್ ಕಾಲುವೆ ದಾಟಿ ಬೆಲ್ಜಿಯಮಿನ ಸಹಾಯಕ್ಕಾಗಿ ಹೋದರು.

ಇತ್ತಂಡದಲ್ಲಿ ಹೋರಾಡಿದ ರಾಷ್ಟ್ರಗಳು

ಆಗೋಸ್ತು ತಾ. ೨೩ರಲ್ಲಿ ಜಪಾನು ಇಂಗ್ಲೆಂಡಿನ ಸಹಾಯಕ್ಕೆ ನಿಂತು ಯುದ್ಧ ಆರಂಭಿಸಿತು. ಇಟಲಿ, ರುಮೇನಿಯ, ಗ್ರೀಸ್ ಮತ್ತು ಅಮೆರಿಕಗಳು ಮಿತ್ರ ರಾಷ್ಟ್ರಗಳ ಅಂದರೆ ಇಂಗ್ಲೆಂಡ್ ಫ್ರಾನ್ಸ್ ಮತ್ತು ರಷ್ಯಗಳ ಸಹಾಯಕ್ಕೆ ಹೋದುವು. ಸ್ಪೈನ್, ಸ್ವಿಸರ್ಲೆಂಡ್, ಹೋಲ್ಲೆಂಡ್, ನೋರ್ವೆ, ಸ್ವೀಡನ್ ಮತ್ತು ಡೆನ್ಮಾರ್ಕ್ ದೇಶಗಳು ತಟಸ್ಥವಾಗಿದ್ದುವು. ಸೆಂಟ್ರಲ್ ಪವರ್ಸಿಗೆ ಟರ್ಕಿಯಿಂದಲೂ, ಬುಲ್ಗೇರಿಯದಿಂದಲೂ ಸಹಾಯ ದೊರೆಯಿತು. 4 ವರ್ಷ 3 ತಿಂಗಳು 11 ದಿವಸ ಈ ಭಯಂಕರ ಯುದ್ಧ ನಡೆದು ಕಡೆಗೆ ವರ್ಸೇಲ್ ಒಪ್ಪಂದವಾಗಿ 1918ನೇ ನವಂಬರ ತಾ. 11ರಲ್ಲು ಯುರೋಪಿನಲ್ಲೂ ಇಡೀ ಲೋಕದಲ್ಲೂ ಶಾಂತಿ ಸ್ಥಾಪನೆಯಾಯಿತು. ಅಮೆರಿಕದ ಆಗಿನ ಪ್ರೆಸಿಡೆಂಟರಾದ ವಿಲ್ಸನರು, ಈ ಶಾಂತಿಸ್ಥಾಪನೆಯಲ್ಲಿ ಅಗ್ರಭಾಗ ವಹಿಸಿದರು. ಮಾತ್ರವಲ್ಲದೆ ಮುಂದೆ ಯುದ್ಧವಾಗದಂತೆ ಮಾಡಲು ರಾಷ್ಟ್ರ ರಾಷ್ಟ್ರಗಳೊಳಗಿನ ಕಲಹವನ್ನು ಮಧ್ಯಸ್ಥಿಕೆಯಿಂದ ಇತ್ಯರ್ಥಮಾಡುವುದಕ್ಕಾಗಿ ಲೀಗ್ ಆಫ್ ನೇಶನ್ಸನ್ನು (ರಾಷ್ಟ್ರಕೂಟ) ಸ್ಥಾಪಿಸಿದರು.

ಯುದ್ಧದ ಭೀಷಣ ಪರಿಣಾಮ

ಈ ಯುದ್ಧದಲ್ಲಿ ಒಟ್ಟು 75,50300 ಮಂದಿ ಮೃತರಾದರು. ಲಕ್ಷಾಂತರ ಜನರು ಗಾಯಗೊಂಡರು. ಕೋಟ್ಯಂತರ ರೂಪಾಯಿ ವ್ಯಯವಾಯಿತು. 1917ನೆ ಇಸ್ವಿ ಏಪ್ರಿಲ್ 6ರಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟ್ಸಿನವರು ಮಿತ್ರರಾಷ್ಟ್ರಗಳ ಸಹಾಯಕ್ಕೆ ಬಂದಮೇಲೆ ಯುದ್ಧದ ಸ್ವರೂಪ ಬದಲಾಯಿಸಿತು. ಮಿತ್ರರಾಷ್ಟ್ರಗಳ ಮುತ್ತಿಗೆಯಿಂದಾಗಿ ಜರ್ಮನರು ಆಹಾರವಿಲ್ಲದೆ ಕಂಗೆಟ್ಟರು. ನೂರಾರು ಮಂದಿ ಸ್ತ್ರೀಯರೂ ಮಕ್ಕಳು ಹೊಟ್ಟೆಗಿಲ್ಲದೆ ಸಾಯತೊಡಗಿದರು. ಜರ್ಮನಿಯು ಧೃತಿಗೆಟ್ಟಿತು. ಸಂಧಿಮಾಡದೆ ನಿರ್ವಾಹವಿಲ್ಲವಾಯಿತು ಅದಕ್ಕೆ. ಈ ಸಂಗ್ರಾಮದಿಂದ ಯುರೋಪಿನ ಭೂಪಟವೇ ಬದಲಾಯಿತು. ಯುದ್ಧಕ್ಕಿಂತ ಮೊದಲು, ಬ್ರಿಟನ್ ಫ್ರಾನ್ಸ್, ರಷ್ಯಾ, ಜರ್ಮನಿ, ಇಟೆಲಿ ಮತ್ತು ಆಸ್ಟ್ರಿಯಾ ಹಂಗೇರಿಗಳು ಹೆಚ್ಚುಕಡಿಮೆ ಸರಿಸಮಾನ ರಾಷ್ಟ್ರಗಳಾಗಿದ್ದುವು. ಯುದ್ಧವಾದ ಮೇಲೆ ಆಸ್ಟ್ರಿಯ ಹಂಗೇರಿಯು ಮಣ್ಣುಗೂಡಿತು. ರಷ್ಯಾದೇಶದ ಝಾರ ಚಕ್ರವರ್ತಿತ್ವವು ನಾಶವಾಗಿ ಅಲ್ಲಿ ಮಹತ್ತಾದ ಕ್ರಾಂತಿಯೆದ್ದು ಸಮತಾವಾದಿ ಸೋವಿಯೆಟ್ ರಾಜ್ಯಭಾರ ಸ್ಥಾಪಿಸಲ್ಪಟ್ಟಿತು. ಬ್ರಿಟನ್, ಫ್ರಾನ್ಸ್ ಮತ್ತು ಇಟೆಲಿಗಳು ಮೊದಲಿಗಿಂತಲೂ ಹೆಚ್ಚಿನ ಪ್ರಭಾವ ಪಡೆದುವು. ಯುರೋಪಿನಲ್ಲಿ ಹಲವು ತುಂಡರಾಜ್ಯಗಳು ತಲೆಯೆತ್ತಿದುವು. ಪೋಲಂಡ್, ರುಮೇನಿಯ, ಜೆಕೊಸ್ಲೊವೇಕಿಯ, ಯುಗೋಸ್ಲಾವಿಯ, ಇವೆಲ್ಲವೂ ಯುದ್ಧಾನಂತರ ಜನ್ಮಕ್ಕೆ ಬಂದ ರಾಷ್ಟ್ರಗಳು, ಜರ್ಮನಿಯೊಂದಿಗೆ ಸೇರಿಕೊಂಡು ಹೋರಾಡಿದ ಟರ್ಕಿಯ ಸಾಮ್ರಾಜ್ಯವು ನಾಶವಾಗಿ ಅರಬ್ಬಿದೇಶದ ಜನರು ಸ್ವತಂತ್ರರಾದರು. ಟರ್ಕಿಯಲ್ಲಿ ಕೆಮಾಲ್‌ಪಾಶರು ಕ್ರಾಂತಿಯನ್ನೆಬ್ಬಿಸಿ ಸುಲ್ತಾನರನ್ನು ತೆಗೆದುಹಾಕಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು.

ನವಮನ್ವಂತರ

ಕಳೆದ ಮಹಾಯುದ್ಧದ ನಂತರ ಯುರೋಪಿನಲ್ಲಿಯೂ ಇಡೀ ಲೋಕದಲ್ಲಿಯೂ ನವಮನ್ವಂತರ ಒಂದು ಆರಂಭವಾಯಿತೆನ್ನಬಹುದು. ಸೋವಿಯೆಟ್ ರಷ್ಯದ ಮಹಾಕ್ರಾಂತಿಯನ್ನೂ ಜರ್ಮನಿ, ಮತ್ತು ಇಟೆಲಿಗಳಲ್ಲಿ ಪ್ರಭಾವಪಡೆದಿರುವ ನವಸಿದ್ಧಾಂತಗಳನ್ನು ನೋಡಿದರೆ ಎದೆ ಝುಮ್ಮೆನ್ನುತ್ತದೆ. ಲೆನಿನ್, ಮುಸಲೋನಿ, ಹಿಟ್ಲರ್, ಸ್ಟಾಲಿನ್, ಮಸಾರಿಕ್, ಕೆಮಾಲ್ ಅಟಟರ್ಕ್ ಪಿಲ್ಸುಡಸ್ಕಿ, ರಿಜಾಖಾನರೇ ಮೊದಲಾದ ವಿಭೂತಿ ಪುರುಷರು ನವನಿರ್ಮಾಣವನ್ನಾರಂಭಿಸಿದರು. ಪ್ರಪಂಚದ ಇತಿಹಾಸದಲ್ಲಿ ಚಿರಸ್ಥಾಯಿ ಸ್ಥಾನ ಪಡೆಯತಕ್ಕ ಮಹಾಪುರುಷರಿವರ. ಇವರ ಪ್ರಭಾವದಿಂದಾಗಿ ಜನತೆಯಲ್ಲಿ ಪ್ರಜಾಸತ್ತೆಯ ಕುರಿತಾಗಿದ್ದ ವಿಶ್ವಾಸವು ಕಡಿಮೆಯಾಗಹತ್ತಿತು. ಎಲ್ಲೆಲ್ಲಿಯೂ ಸರ್ವಾಧಿಕಾರಿಗಳ ಕೈ ಮೇಲಾಯಿತು. ಲೀಗ್ ಆಫ್ ನೇಶನ್ಸಿನ ಸಮಾಧಿಯಾಗಿದೆ. ನ್ಯಾಯವೇ ಬಲವೆಂಬ ನಾಗರಿಕ ನೀತಿಯು ಮೂಲೆಗುಂಪಾಗಿ ಬಲವೇ ನ್ಯಾಯವೆಂಬ ಬರ್ಬರ ಸ್ವೇಚ್ಛಾಪರತೆಯ ಪ್ರಭಾವವು ಹೆಚ್ಚಿತು. ಇಂದಿನ ಭಯಂಕರ ಯುದ್ಧಾನಂತರವಾದರೂ ಲೋಕದಲ್ಲಿ ಇನ್ನೊಂದು ಮನ್ವಂತರ ಆರಂಭವಾಗಿ ಚಿರಶಾಂತಿಯು ನೆಲೆಗೊಳ್ಳುವಂತಾಗುವುದೇ? ಮಾನವ ಮಾನವ ಮತ್ತು ರಾಷ್ಟ್ರ ರಾಷ್ಟ್ರಗಳೊಳಗಣ ಅಸಮಾನತೆಯು ತೊಲಗಿ ನಿಜವಾದ ವಿಶ್ವಬಾಂಧವ್ಯವು ನೆಲೆಗೊಳ್ಳುವುದೇ?

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through policies in

The Bombay Life Assurance Co., Ltd.

For details, please consult:—

KOCHIKAR BROTHERS LIMITED.,
MADRAS BRANCH SECRETARIES,
BOMBAY LIFE BUILDING,
SIR LALUBHAI SAMALDAS ROAD,
GANDHI NAGAR,
UDIPI.

Or any of their following Offices:—

Post Box No. 337, Mount Road Madras.	Visweshwarapuram Circle, Bangalore City.	Charni Road, Girgaum, Bombay 4.
Car Street, Mangalore.	Puthiyara, Calicut	Central Station Road, Trivandrum.

15 ದಿವಸಗಳ ಸಂಗ್ರಾಮ

ಎರಡು ರಣರಂಗಗಳಲ್ಲಿಯೂ ಜರ್ಮನರಿಗೆ ಸೋಲು.

ಜರ್ಮನರ ಪೈಶಾಚಿಕ ಅತ್ಯಾಚಾರ.

ಜರ್ಮನ್ ಸಬ್‌ಮೆರಿನ್‌ಗಳ ನಾಶ.

ಯುದ್ಧದ ನಿಜವಾದ ಸ್ಥಿತಿಗತಿಯು ಸರಿಯಾದ ವಾರ್ತೆಯು ಬರುವುದಿಲ್ಲ. ಆದರೂ ಪ್ರಥಮ ಹಪ್ತೆಯಲ್ಲಿ ಒಂದೇಸವನೆ ವಿಜಯಿಯಾದ ಜರ್ಮನಿಯು ಅನಂತರ ಪರಾಜಯ ಹೊಂದಹತ್ತಿದೆ. ವಾರ್ಸೋ ಪಟ್ಟಣವು ಇನ್ನೂ ಜರ್ಮನರ ಅಧೀನವಾಗಿಲ್ಲ. ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯದಿಂದ ಪೋಲರು ಅದನ್ನು ರಕ್ಷಿಸುತ್ತಿದ್ದಾರೆ. ಪೋಲರ ಸಾಹಸದ ಕುರಿತು ಇಟಲಿಯಾನರು ಕೂಡಾ ಮೆಚ್ಚಿಗೆ ಸೂಚಿಸಿರುತ್ತಾರೆ. ಜರ್ಮನರು ವಶಮಾಡಿಕೊಂಡಿದ್ದ ದಕ್ಷಿಣದ ಪ್ರಾಮುಖ್ಯಪಟ್ಟಣವಾದ ಲೋಜ್ ಎಂಬುದನ್ನು ಪೋಲರು ಪುನಃ ವಶಪಡಿಸಿಕೊಂಡಿರುತ್ತಾರೆ. ಜರ್ಮನ್ ಸೇನೆಯ ಆರಂಭದ ಉತ್ಸಾಹ ಕುಂದಿ ಅದು ಆಯಾಸಗೊಂಡಿದೆ. ಹವಾಗುಣವು ಕೆಟ್ಟುಹೋಗಿ ಪೋಲರಿಗೆ ಬಹಳ ಅನುಕೂಲವಾಗಿದೆ. ಜರ್ಮನರಿಗೆ ರಸ್ತೆಗಳಲ್ಲಿ ದೊಡ್ಡ ದೊಡ್ಡ ಯಂತ್ರಗಳನ್ನು ಒಯ್ಯಲು ಬಹಳ ತೊಂದರೆಯುಂಟಾಗಿದೆ. ಆರಂಭದ ಉತ್ಸಾಹದಿಂದ ಗೆದ್ದ ವಿಸ್ತಾರ ಪ್ರದೇಶವನ್ನು ಬಲಪಡಿಸಿ ರಕ್ಷಿಸಿಕೊಳ್ಳುವ ಸರಿಯಾದ ವ್ಯವಸ್ಥೆಯನ್ನು ಜರ್ಮನರು ಮಾಡಿಲ್ಲ. ಆದುದರಿಂದ ಪೋಲರು ಜಯಶೀಲವಾಗಿ ಜರ್ಮನ್ ಸೇನೆಯನ್ನು ತಡೆಗಟ್ಟುತ್ತಿರುವುದು ಮಾತ್ರವಲ್ಲದೆ ಅವರಿಂದ ಕೆಲವು ಸ್ಥಳಗಳನ್ನು ಪುನಃ ವಶಪಡಿಸಿಕೊಂಡಿರುವರು. ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಸೇನೆಯು ಜರ್ಮನಿಯ ಒಳನುಗ್ಗಿ ಸಾರ್ ಪ್ರದೇಶದ ಮುಖ್ಯ ಪಟ್ಟಣವಾದ ಸಾರ್ ಬ್ರುಕೆನನ್ನು ವಶಪಡಿಸಿಕೊಳ್ಳುವ ವರೆಗೆ ಜಯಶೀಲವಾಗಿ ಮುಂದುವರಿದಿರುವುದು. ತೀವ್ರ ಅಸಹಿಷ್ಣುತೆಯಿಂದ ಹಿಟ್ಲರರು, ಸರ್ವಸಾಮಾನ್ಯ ಜನರು, ಹೆಂಗಸರು ಮಕ್ಕಳೇ ಮೊದಲಾದವರ ಮೇಲೂ ವಿಮಾನಧಾಳಿ ನಡಿಸಿ ಭಯಂಕರ ನಾಶವನ್ನುಂಟುಮಾಡಿ ಪೋಲರನ್ನು ಧೃತಿಗೆಡಿಸಬೇಕೆಂದು ತನ್ನ ವಿಮಾನಪಡೆಗೆ ಇದೇ ತಾ. 13ರಲ್ಲಿ ಅನುಜ್ಞೆಯಿತ್ತಿರುವರು. ಅದೇ ರೀತಿ ಜರ್ಮನ ವಿಮಾನಗಳು ಇಚ್ಛಾನುಸಾರ ಎಲ್ಲೆಲ್ಲಿಯೂ ಪೈಶಾಚಿಕ ಧಾಳಿನಡಿಸಿ ನೂರಾರು ಜನರು ಕೊಲ್ಲಲ್ಪಟ್ಟಿರುವರು. ಹಲವು ಹಳ್ಳಿ ಮತ್ತು ಪಟ್ಟಣಗಳು ನಾಶವಾಗಿರುವವು. ಇದರಿಂದ ಅಮೇರಿಕ ಮೊದಲಾದ ತಟಸ್ಥ ರಾಷ್ಟ್ರಗಳ ಜನರಲ್ಲಿಯೂ ಉದ್ವೇಗವುಂಟಾಗಿರುವುದು. 5000 ಜರ್ಮನ್ ವಿಮಾನಗಳು ಪೋಲೆಂಡಿನ ಮೇಲೆ ಎಡೆಬಿಡದೆ ವಿಮಾನಧಾಳಿ ನಡಿಸಿ ಭಯಂಕರ ಹಾವಳಿಮಾಡಿರುತ್ತವೆ. ಎಲ್ಲಾ ಸ್ಥಳಗಳನ್ನೂ ಪೋಲರು ಯುದ್ಧಕ್ಷೇತ್ರವಾಗ ಮಾರ್ಪಡಿಸಿದ್ದಾರೆ. ಸರ್ವಸಾಮಾನ್ಯ ಜನರೂ ಅವರಿಗೆ ಸಹಾಯಮಾಡುತ್ತಿರುವರೆಂಬುದೇ ಹಿಟ್ಲರರ ಈ ಹೊಸ ಅನುಜ್ಞೆಗೆ ನೆವನ. ಪೋಲರನ್ನು ಶೀಘ್ರವಾಗಿ ಸದೆಬಡಿದು ಪೋಲೆಂಡನ್ನು ವಶಪಡಿಸಿಕೊಳ್ಳಬೇಕೆಂಬ ಮದೋನ್ಮತ್ತೆಯಿಂದ ಹೋರಾಡುವ ಜರ್ಮನ್ ಸೇನೆಯು ಯುದ್ಧದ ನ್ಯಾಯನೀತಿಗಳಿಗೆ ಗಮನಕೊಡುವುದೆಂದೆಣಿಸಲು ಸಾಧ್ಯವಿಲ್ಲ. "ರೌರವ ನರಕವೇ ವೈರಿಗೆ ನಿರ್ಮಿಸಲ್ಪಡುವುದು" ಎಂದು ಮಾರ್ಶಲ್ ಗೋರಿಂಗರು ಮೊದಲೇ ಸಾರಿ ಹೇಳಿದ್ದರು. ಅದೇ ರೀತಿ ಈಗ ಜರ್ಮನ್ ಸೇನೆಯು ಮಾಡುತ್ತಿರುವುದು. ನಾಝಿಗಳ ಬರ್ಬರತೆಯಿಂದ ಇಡೀ ಲೋಕವೇ ಜುಗುಪ್ಸೆಗೊಂಡಿರುವುದು. ಅಬಿಸೀನಿಯ ಸ್ಪೈನ್ ಮತ್ತು ಚೀನದಂತೆಯೇ ಪೋಲೆಂಡಿನಲ್ಲಿಯೂ ನಡೆದಿರುವುದು. ಆಧುನಿಕ ಯುದ್ಧವು ಮಾನವತೆಯ ಪ್ರತಿವಿರುದ್ಧವಾದುದು. ವಿಜ್ಞಾನವು ಭಯಂಕರ ವಿನಾಶಕ ಉಪಕರಣವನ್ನು ಸೈನಿಕನ ಕೈವಶಮಾಡಿರುತ್ತದೆ. ಯುದ್ಧೋನ್ಮತ್ತನಾದ ಅವನು ಅವುಗಳನ್ನು ನೀತಿನಿಯಮ ಪ್ರಕಾರ ಉಪಯೋಗಿಸುವನೆಂಬುದು ಬಯಲು ಭ್ರಾಂತಿ. ಹೇಗಾದರೂ ಗೆಲ್ಲಬೇಕೆಂಬ ಒಂದೇ ದೃಷ್ಟಿಯಿಂದಿರುವ ಅತನು ತನ್ನ ಉದ್ದೇಶಸಾಧನೆಗಾಗಿ ಎಂತಹ ಪೈಶಾಚಿಕ ವಿಧಾನವನ್ನಾದರೂ ಉಪಯೋಗಿಸಲು ಹೇಸಲಾರನು. ಈ ದೃಷ್ಟಿಯಲ್ಲಿ ಆಧುನಿಕ ಯುದ್ಧವು ಅನಾಗರಿಕ ಬರ್ಬರರ ಯುದ್ಧಕ್ಕಿಂತಲೂ ಭಯಂಕರ ಬರ್ಬರತೆಗೆ ಮುಟ್ಟಿರುವುದು. ಹಿಂದಿನ ಕಾಲದಲ್ಲಿ ಯುದ್ಧವಾದರೆ ಹೋರಾಡಿ ನಾಶವಾಗುವವರು ಸೈನಿಕರು ಮಾತ್ರ. ಈಗ ಎಲ್ಲರೂ ಭಯಂಕರ ವಿನಾಶದ ದಾವಾಗ್ನಿಗೆ ಬಲಿಯಾಗಬೇಕಾಗಿದೆ.

ಜರ್ಮನರು ಮೂರು ಕಡೆಗಳಿಂದ ಪೋಲೆಂಡಿನ ಮೇಲೆ ಒಮ್ಮೆಯೇ ಏರಿಹೋದುದರಿಂದ ಪೋಲರು ಅವರನ್ನಿದಿರಿಸಲು ಅಸಾಧ್ಯವಾಗಿ ಹಿಂದೆ ಸರಿದು ಚಿಕ್ಕ ಯುದ್ಧರಂಗಗಳಲ್ಲಿ ಅವರನ್ನು ತಡೆಗಟ್ಟಿರುವರು. ಜರ್ಮನ್ ಸೇನೆಯು ದುರ್ಬಲವಾಗಿರುವಲ್ಲಿ ಅದರ ಮೇಲೆ ಬಿದ್ದು ಪೀಡೆಕೊಡುತ್ತಿರುವರು. ಮೃತ್ಯುವಿನ ಬಾಯಿಗೇನೇ ಹಾರಲು ಸಿದ್ಧವಾಗಿರುವ ಸೈನಿಕ ದಳಗಳು ಸಿದ್ಧವಾಗಿವೆ ಈ ಕೆಲಸಕ್ಕಾಗಿ. ಜರ್ಮನರು ಪೋಲೆಂಡಿನ ಪಶ್ಚಿಮದ ಹೆಚ್ಚಿನ ಪ್ರದೇಶವನ್ನೂ ಡಾನ್ಸಿಗ್ ಮತ್ತು ಕೊರಿಡೋರ್ ಪ್ರದೇಶವನ್ನು ಸಿಲೀಸಿಯವನ್ನೂ ವಶಪಡಿಸಿಕೊಂಡಿರುವರು. ಗಿಡ್ನಿಯಾ ಬಂದರವು ಸಂಪೂರ್ಣವಾಗಿ ಜರ್ಮನರ ವಶವಾದುದು ಇತ್ತಲಾಗಿ. ರುಮೇನಿಯದಿಂದ ಪೋಲೆಂಡಿಗೆ ಯಾವ ಸಹಾಯವೂ ದೊರೆಯದಂತೆ ದಕ್ಷಿಣ ಪೋಲೆಂಡಿನ ಮುಖ್ಯ ರಸ್ತೆಯನ್ನೇ ವಶಪಡಿಸಿಕೊಳ್ಳಲು ಜರ್ಮನರು ಬಹಳವಾಗಿ ಪ್ರಯತ್ನಿಸುತ್ತಿದ್ದಾರೆ. ವಾರ್ಸೋ ಪಟ್ಟಣದ ಸಮಾಪದಿಂದ ಪೂರ್ವದಲ್ಲಿರುವ ಮಧ್ಯ ದಕ್ಷಿಣ ಮತ್ತು ಮೂಡಣ ಪೋಲೇಡನ್ನು ತಮ್ಮ ವಶವಿಟ್ಟುಕೊಳ್ಳಲು ಪೋಲರು ಪ್ರಯತ್ನಿಸುತ್ತಿರುವರು. ಗುಡ್ಡ, ಸರೋವರ ಮತ್ತು ನದಿಗಳಿಂದೊಡಗೂಡಿದ ಈ ಪ್ರದೇಶಗಳಲ್ಲಿ ಪೋಲರಿಗೆ ಹೋರಾಡಲು ಅನುಕೂಲವಾಗಿದೆ. ಇಲ್ಲಿ ವೈರಿಯನ್ನು ದೀರ್ಘಕಾಲದವರೆಗೆ ತಡೆಗಟ್ಟುವ ವಿಶ್ವಾಸವು ಪೋಲರಿಗಿರುವುದು. ಜರ್ಮನರಿಗೆ ವಿಶಾಲವಾದ ಕ್ಷೇತ್ರವನ್ನು ಕಾಯ್ದುಕೊಳ್ಳಲಿದೆ, ಮತ್ತು ಅವರು ಒಂದೇ ಸವನೆ ಜರ್ಮನಿ ಬಿಟ್ಟು ಬಹುದೂರ ಮುಂದುವರಿದಿರುವುದರಿಂದ ಆಹಾರ ಸಾಮಗ್ರಿಗಳನ್ನೊದಗಿಸುವ ವ್ಯವಸ್ಥೆಯೂ ಸರಿಯಾಗಿ ನಡೆದಿಲ್ಲ. ಪಶ್ಚಿಮ ಪೋಲೆಂಡಿನಲ್ಲಿ ಆತ್ಮಘಾತದಳವು ಜರ್ಮನರಿಗೆ ಎಡೆಬಿಡದೆ ಪೀಡೆಕೊಡುತ್ತಿದೆ. ಪಶ್ಚಿಮದ ಪೋಸೆನ್ ಪ್ರದೇಶದಲ್ಲಿ ಗೂಡಿನೊಳಗೆ ಸಿಕ್ಕಿಬಿದ್ದಂತಿದ್ದ ಪೋಲಿಶ್ ಸೇನೆಯು ತಪ್ಪಿಸಿಕೊಂಡು ವಾರ್ಸೋ ಪಟ್ಟಣದ ಮುಖ್ಯ ಸೇನೆಯೊಂದಿಗೆ ಸೇರಿದುದು ಆಶ್ಚರ್ಯಕರವಿದೆ. ವಾರ್ಸೋ ಪಟ್ಟಣವು ತಮ್ಮ ವಶವಾಯಿತೆಂದು ಜರ್ಮನರು ಪ್ರಕಟಿಸಿ 8 ದಿವಸವಾದರೂ ಅದಿನ್ನೂ ಅವರ ಅಧೀನವಾಗಿಲ್ಲ. ಎರಡನೇ ವಾರದಲ್ಲಿ ಪೋಲರು ಪ್ರಶಂಸನೀಯವಾಗಿ ಕಾದಾಡಿ ನಿಜವಾದ ವಿಜಯಗಳನ್ನು ಪಡೆದಿರುವರು. ಲೋಜ್ ಪಟ್ಟಣವನ್ನು ಪೋಲರು ಜರ್ಮನರಿಂದ ಗೆದ್ದುದರಿಂದ ಪೋಲಿಶ್ ಸೇನೆಯಲ್ಲಿ ನವ ಉತ್ಸಾಹವುಂಟಾಗಿದೆ. ಅವರು ಅತ್ಯುತ್ಸಾಹದಿಂದ ವಾರ್ಸೋ ಪಟ್ಟಣವನ್ನು ರಕ್ಷಿಸುತ್ತಿದ್ದಾರೆ. ಪೋಲೆಂಡ್ ರುಮೇನಿಯ ಮಾರ್ಗದ ಸಂದುಕಟ್ಟಿನ ಸ್ಥಳವಾದ ಲೋವೋವನ್ನು ವಶಪಡಿಸಿಕೊಳ್ಳಲು ಜರ್ಮನರು ನಡಿಸಿರುವ ಪ್ರಯತ್ನ ಕೂಡ ಇಷ್ಟರವರೆಗೆ ಫಲಕಾರಿಯಾಗಿಲ್ಲ. ಪೋಲಿಶ್ ವಿಮಾನ ಪಡೆಯು ಇದೀಗ ಪ್ರಥಮವಾಗಿ ಜರ್ಮನಿಯ ಮೇಲೆ ಹೋಗಿ ವಿಮಾನನಿಲಯವೊಂದನ್ನು ನಾಶಮಾಡಿರುತ್ತದೆ.

ಬ್ರಿಟಿಷ್ ಮತ್ತು ಫ್ರೆಂಚರ ಚಲನವಲನ

ಜರ್ಮನ್ ಸಬ್ ಮೇರೀನ್‌ಗಳು ಇಷ್ಟರವರೆಗೆ ೯ ಬ್ರಿಟಿಷ್ ಹಡಗಗಳನ್ನು ಮುಳುಗಿಸಿವೆ. ಆದರೆ ಈಗ ಬ್ರಿಟಿಷ್ ಯುದ್ಧ ವಿಮಾನಗಳು ಸಮುದ್ರಗಳಲ್ಲೆಲ್ಲಾ ಶೋಧಿಸಿ ಹಲವು ಜರ್ಮನ್ ಸಬ್ ಮೇರೀನ್‌ಗಳನ್ನು ನಾಶಮಾಡಿರುತ್ತವೆ. ಇದರಿಂದ ಜರ್ಮನಿಯು ತಳಮಳಗೊಂಡಿದೆ. ಅದು ಹೊಸ ಸಬ್ ಮೇರೀನ್‌ಗಳನ್ನು ತಯಾರಿಸಲು ಭರದಿಂದ ಪ್ರಯತ್ನಮಾಡುತ್ತಿದೆ. ಜರ್ಮನಿಯ ಹಡಗಗಳೇನೂ ಈಗ ಸಮುದ್ರಗಳಲ್ಲಿ ಸಂಚರಿಸಲು ಸಾಧ್ಯವಿಲ್ಲ. ಮಾತ್ರವಲ್ಲದೆ ತಟಸ್ಥ ರಾಷ್ಟ್ರಗಳ ಹಡಗಗಳು ಕೂಡಾ ಜರ್ಮನಿಗೆ ಸಾಮಾನುಗಳನ್ನೊಯ್ಯದಂತೆ ಬ್ರಿಟಿಷ್ ಸರಕಾರವು ತಡೆಮಾಡಿದೆ. ಇದರಿಂದ ಜರ್ಮನಿಯು ತಬ್ಬಿಬ್ಬಾಗಿದೆ. ನೂರಾರು ಜರ್ಮನ್ ವಿಮಾನಗಳು ಒಂದೇ ಸವನೆ ಬ್ರಿಟಿಷ್ ಬಂದರುಗಳ ಮೇಲೇರಿ ಹೋಗಿ ಪ್ರತೀಕಾರಮಾಡಲಾಗುವುದೆಂದು ಜರ್ಮನರು ಬೆದರಿಕೆಹಾಕಿರುತ್ತಾರೆ. ಫ್ರೆಂಚ್ ಸೇನೆಯು ಸಮತಟ್ಟಾದ ಸಾರ್ ಪ್ರದೇಶದ ಮಾರ್ಗವಾಗಿ ಮುಂದೊತ್ತಿ ಪ್ರಾಮುಖ್ಯವಾದ ಸಾರ್ ಬ್ರುಕೆನ್ ಪಟ್ಟಣವನ್ನು ವಶಪಡಿಸಿಕೊಳ್ಳುವುದರಲ್ಲಿದೆ. ಜರ್ಮನ್ ಸೇನೆಯು ದೊಡ್ಡ ದೊಡ್ಡ ಫಿರಂಗಿಗಳಿಂದ ಗುಂಡೆಸೆದು ಎಷ್ಟು ಪ್ರಯತ್ನಮಾಡಿದರೂ ಫ್ರೆಂಚ್ ಸೇನೆಯನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಮೆಜ್ ಎಂಬ ಸ್ಥಳದಲ್ಲಿದ್ದ ಸೇತುವೆ ಮತ್ತು ರೈಲ್ವೇ ಲೈನನ್ನು ಜರ್ಮನರು ತಾವಾಗಿ ಸ್ಫೋಟಿಗೊಳಿಸಿ ಟ್ರಿಯರ್ ಮೊದಲಾದ ಪಟ್ಟಣಗಳಿಂದ ಜನರನ್ನು ಬೇರೆ ಕಡೆಗಳಿಗೆ ಕಳುಹಿಸಿರುವುದು ಗಣನೀಯ ಸಂಗತಿಯಾಗಿದೆ. ಫ್ರೆಂಚ್ ಸೇನೆಯು ಜರ್ಮನಿಯ ಸಿಗ್‌ಫ್ರಿಡ್ ಕೋಟೆಗಳ ಸಾಲನ್ನು ಸಮೀಪಿಸಿದೆ. ಫ್ರೆಂಚ್ ವಿಮಾನಗಳು ಜಯಶೀಲವಾಗಿ ಈ ಕೋಟೆಗಳ ಫೋಟೋ ತೆಗೆದಿರುತ್ತವೆ. ಜರ್ಮನರಿಗೆ ಫ್ರೆಂಚ್ ಸೇನೆಯನ್ನಿನ್ನು ಹಿಂದಕ್ಕಟ್ಟಲು ಸಾಧ್ಯವಾಗಲಾರದು. ಯಾಕೆಂದರೆ ಇಷ್ಟರಲ್ಲೇ ಬ್ರಿಟಿಷ್ ಸೇನೆಯು ಅದರ ಬೆಂಬಲಕ್ಕೆ ಬಂದಿದೆ. ಅತ್ಯಂತ ರಹಸ್ಯವಾಗಿ ಇಂಗ್ಲಿಷ್ ಸೇನೆಯು ಫ್ರಾನ್ಸಿಗೆ ಕಳುಹಿಸಲ್ಪಟ್ಟು ಫ್ರೆಂಚರಿಂದ ಸಂಭ್ರಮದ ಸ್ವಾಗತ ಪಡೆದಿದೆ. ಇದೇ 13ರಲ್ಲು ಫ್ರಾನ್ಸಿನಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ಪ್ರಧಾನಮಂತ್ರಿಗಳೂ ಪ್ರಾಮುಖ್ಯ ಸೇನಾನಾಯಕರೂ ಸೇರಿ ಯುದ್ಧದ ಪ್ಲೇನಿನ ಕುರಿತು ಅಭಿಪ್ರಾಯ ವಿನಿಮಯಮಾಡಿ ವಿಷಯವನ್ನೆಲ್ಲಾ ನಿರ್ಣೈಸಿರುವುದು ಪ್ರಾಮುಖ್ಯವಾಗಿದೆ. ಯಾಕೆಂದರೆ ಕಳೆದ ಮಹಾಯುದ್ಧದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸಂಯುಕ್ತ ಯುದ್ಧ ಕೌನ್ಸಿಲು ಸ್ಥಾಪಿತವಾದುದು 1917ರಷ್ಟು ವಿಳಂಬವಾಗಿ.

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE

ESTD. 1906
CANARA BANK LIMITED

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪ್ರಕಟಣೆ

ಪ್ರಜಾಶಾಹಿ ರಾಷ್ಟ್ರಗಳೊಡನೆ ಸಹಾನುಭೂತಿ

ಹಿಂದೂದೇಶದ ಕುರಿತು ಬ್ರಿಟಿಷ್ ಸರಕಾರದ ಧೋರಣೆ ಸ್ಪಷ್ಟೀಕೃತವಾಗಬೇಕು.

ಆ ಮೊದಲು ಯುದ್ಧದ ಕುರಿತು ಯಾವ ನಿರ್ಧಾರವೂ ಸಾಧ್ಯವಿಲ್ಲ

ಪಂಡಿತ ನೆಹರುಗಳ ಅಧ್ಯಕ್ಷತೆಯಲ್ಲಿ ಉಪಕಮಿಟಿಯ ನೇಮಕ

●

ಈ ಸಲದಷ್ಟು ದೊಡ್ಡ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಹಿಂದೆಂದೂ ನಡೆದಿರಲಾರದು. ತಾ. ೮ರಿಂದ ೧೬ರ ವರೆಗೆ ೯ ದಿವಸಗಳ ವರೆಗೆ ಈ ಸಲದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಭೆಸೇರಿದ್ದು, ಯುದ್ಧ ಸಂಬಂಧವಾದ ಹಿಂದೂದೇಶದ ಧೋರಣೆಯೊಂದರ ಕುರಿತೇ ೬ ದಿವಸಗಳ ವರೆಗೆ ಚರ್ಚೆ ನಡೆಯಿತು. ದೇಶದ ಎಲ್ಲಾ ಅಭಿಪ್ರಾಯಗಳನ್ನು ಸಮಾಧಾನಪಡಿಸಿ ಒಕ್ಕಟ್ಟುಂಟುಮಾಡುವ ರೀತಿಯ ನಿರ್ಣಯವನ್ನು ಮಂಜೂರುಮಾಡಬೇಕೆಂಬೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಪ್ರಯತ್ನವಾಗಿತ್ತು. ಆದುದರಿಂದಲೇ ಅವರು ಕಾಂಗ್ರೆಸಿನೊಳಗಣ ತೀವ್ರಗಾಮಿ ಮುಖಂಡರುಗಳಾದ ಶ್ರೀಗಳಾದ ಭೋಸ್, ನರೇಂದ್ರ ದೇವ್, ಜಯಪ್ರಕಾಶ್ ನಾರಾಯಣರೇ ಮೊದಲಾದವರನ್ನೂ ಶ್ರೀ ಅಣೆಯವರನ್ನೂ ಆಮಂತ್ರಿಸಿ ಅಭಿಪ್ರಾಯ ಕೇಳಿದ್ದರು. ಮುಸ್ಲಿಮ್ ಲೀಗಿನ ಪ್ರೆಸಿಡೆಂಟರಾದ ಮಿ. ಜಿನ್ನರನ್ನು ಕಾಂಗ್ರೆಸ್ ಪ್ರೆಸಿಡೆಂಟರು ಆಮಂತ್ರಿಸಿದ್ದರೂ ಅವರಿಗೆ ವಾರ್ಧಕ್ಕೆ ಹೋಗಲಿಕ್ಕಾಗದುದು ಅತ್ಯಂತ ಶೋಚನೀಯವಿದೆ. ಪ್ರಕೃತದ ವಿಶಿಷ್ಟ ಪರಿಸ್ಥಿತಿಯಲ್ಲಿಯೂ ಮಿ. ಜಿನ್ನರು ತನ್ನ ಪ್ರತಿಷ್ಠೆಗೇನೇ ಪ್ರಥಮ ಸ್ಥಾನ ಕೊಟ್ಟಂತೆ ತೋರುವುದು ವಿಷಾದಕರವಿದೆ.

ಪಂಡಿತ ನೆಹರುಗಳ ವರ್ಚಸ್ಸು

ಈಗಿನ್ನೂ ಹಿಂದೂದೇಶದ ಸ್ವಾತಂತ್ರ್ಯದ ಕುರಿತು ಆಲೋಚಿಸುತ್ತಿರುವುದಿಲ್ಲ. ಯುದ್ಧದ ಪರಿಣಾಮವಾಗಿ ಲಂಡನಿನ ಮೇಲೆ ವಿಮಾನಧಾಳಿ ನಡೆದರೆ ಆಗುವ ಹಾವಳಿಯ ಕಲ್ಪನೆಯು ತನ್ನಲ್ಲಿ ಸಂತಾಪವನ್ನುಂಟುಮಾಡಿರುವುದು. ಹಿಂದೂದೇಶದ ಸ್ವಾತಂತ್ರ್ಯವಂತೂ ಬಂದೇ ಬರುತ್ತದೆ. ಪ್ರಕೃತದ ಪರಿಸ್ಥಿತಿಯಲ್ಲಿ ಆ ಕುರಿತು ಕಾಂಗ್ರೆಸಿನವರು ಇಂಗ್ಲಂಡಿನೊಡನೆ ಚರ್ಚಿಸುವುದು ಯುಕ್ತವಲ್ಲೆಂಬ ಗಾಂಧಿಜಿಯವರ ಹೇಳಿಕೆಯು ಹಲವರಲ್ಲಿ ಸಖೇದಾಶ್ಚರ್ಯವನ್ನುಂಟುಮಾಡಿದ್ದಿತು. ಗಾಂಧಿಜಿಯವರ ಅಭಿಪ್ರಾಯದಿಂದ ಬ್ರಿಟಿಷ್ ಸರಕಾರವು ಸಂತೋಷಗೊಂಡು ಇನ್ನು ಕಾಂಗ್ರೆಸಿನ ಸಹಾಯವು ತಮಗೆ ದೊರೆತಂತೆಯೇ ಸರಿಯೆಂದು ಭಾವಿಸಿದ್ದಿತು. ಆದರೆ ಪಂಡಿತ ಜವಾಹರಲಾಲರು ಚೀನದಿಂದ ಹಿಂದಿರುಗಿ ಇದೇ ತಾ. 10ರಲ್ಲಿ ವಾರ್ಧಕ್ಕೆ ಹೋಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಚರ್ಚೆಯಲ್ಲಿ ಭಾಗವಹಿಸಿದ ಮೇಲೆ ಗಾಂಧಿಜಿಯವರ ಅಭಿಮತವು ಮೂಲೆಗುಂಪಾಗಿ ಪಂಡಿತರ ಅಭಿಪ್ರಾಯಕ್ಕೇನೇ ಮನ್ನಣೆ ದೊರೆತಿರುವುದು. ಗಾಂಧಿಜಿಯವರೇ ಅದನ್ನೊಪ್ಪಿ, ಪ್ರಕೃತದ ಪರಿಸ್ಥಿತಿಯಲ್ಲಿ ಪಂಡಿತರಂಥವರೇ ಕಾಂಗ್ರೆಸಿನ ಅದೃಷ್ಟ ಚಾಲಕರಾಗಲು ಯೋಗ್ಯರೆಂಬ ನಿರ್ಧಾರವುಳ್ಳವರಾಗಿ, ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಸೇರುವಂತೆ ಮಾಡಿರುವುದು ಮಾತ್ರವಲ್ಲದೆ ಪ್ರಕೃತದ ಪರಿಸ್ಥಿತಿಯ ಕುರಿತು ಕಾಂಗ್ರೆಸಿನ ಪರವಾಗಿ ಎಲ್ಲಾ ವ್ಯವಹಾರ ನಡಿಸಲು ಸಂಪೂರ್ಣ ಅಧಿಕಾರಹೊಂದಿದ ಉಪಕಮಿಟಿಗೆ ಪಂಡಿತರನ್ನೇ ಅಧ್ಯಕ್ಷರನ್ನಾಗಿ ಮಾಡಿರುವುದು ಸಂತೋಷಕರವಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಯುದ್ಧಸಂಬಂಧವಾದ ಕಾಂಗ್ರೆಸಿನ ಧೋರಣೆಯನ್ನು ನಿಶ್ಚೈಸದೆ ಮುಂದೆಹಾಕಿದೆ. ಈಗಣ ಪರಿಸ್ಥಿತಿಯ ಕುರಿತು ಕಾಂಗ್ರೆಸಿನ ಸ್ಪಷ್ಟವಾದ ಅಭಿಪ್ರಾಯವನ್ನೊಳಗೊಂಡ ವಿವರವಾದ ಪ್ರಕಟಣೆಯೊಂದನ್ನು ಹೊರಡಿಸಿದೆ. ಇದನ್ನು ತಯಾರಿಸಿದವರು ಪಂಡಿತ ನೆಹರುಗಳು. ಮಹಾತ್ಮರೂ ಅದನ್ನು ಅಲ್ಲಲ್ಲಿ ಸ್ವಲ್ಪ ಬದಲಾಯಿಸಿರುವರು. ಅದು ಬರೇ ಹಿಂದೂದೇಶಕ್ಕೆ ಮಾತ್ರವಲ್ಲ, ಇಡೀ ಲೋಕಕ್ಕೇನೇ ಸಂಬಧಿಸುತ್ತದೆ. ಅದಕ್ಕೆ ಮಹಾತ್ಮರು ಮೆಚ್ಚಿ ಹೋಗಿರುತ್ತಾರೆ.

ವರ್ಕಿಂಗ್ ಕಮಿಟಿಯ ಪ್ರಕಟಣೆ ಬ್ರಿಟಿಷ್ ಸರಕಾರದ ನಿರಂಕುಶತೆ

ಯುದ್ಧವಾರಂಭದಲ್ಲಿ ಹಿಂದೂದೇಶದ ಧೋರಣೆ ಎಂತಹದಿರಬೇಕೆಂಬುದನ್ನು ಕಾಂಗ್ರೆಸು ಮೊದಲೇ ಸ್ಪಷ್ಟಪಡಿಸಿರುತ್ತದೆ. ಬ್ರಿಟಿಷ ಸರಕಾರವು ಹಿಂದೀ ಜನಮತಕ್ಕೆ ವಿರೋಧವಾಗಿ ಹಿಂದೀ ಸೇನೆಯನ್ನು ಹೊರಕಳುಹಿಸಿದ ಕುರಿತು ಕಾಂಗ್ರೆಸು ಒಂದು ತಿಂಗಳ ಮೊದಲು ತನ್ನ ನಿಷೇಧ ಸೂಚಿಸಿ ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಮೆಂಬರರು ಅದರ ಸಭೆಗಳನ್ನು ಬಹಿಷ್ಕರಿಸಿರುವರು. ಅನಂತರ ಬ್ರಿಟಿಷ್ ಸರಕಾರವು, ಹಿಂದೂದೇಶವೂ ಜರ್ಮನಿಯ ಮೇಲೆ ಯುದ್ಧಹೂಡುವಂತೆ ಮಾಡಿದೆ. ಹಲವು ಓರ್ಡಿನೆನ್ಸ್‌ಗಳನ್ನು ಜ್ಯಾರಿಗೆ ತಂದಿದೆ. ಇಂಡಿಯಾ ಆಕ್ಟಿನ ತಿದ್ದುಪಡಿ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿದೆ. ಹಿಂದೀಯರಿಗೆ ಪ್ರಾಮುಖ್ಯವಾಗಿ ಸಂಬಂಧಿಸುವ ಮತ್ತು ಪ್ರಾಂತಿಕ ಸರಕಾರಗಳ ಅಧಿಕಾರವನ್ನು ನಿರ್ಬಂಧಿಸುವ ಇನ್ನೂ ಹಲವು ಮಹತ್ವದ ಕೆಲಸಗಳನ್ನು ಮಾಡಿದೆ. ಅವುಗಳಿಗೆ ಹಿಂದೀ ಜನತೆಯ ಒಪ್ಪಿಗೆಯನ್ನೇನೂ ಪಡೆದಿರುವುದಿಲ್ಲ. ಮಾತ್ರವಲ್ಲದೆ ಸ್ಪಷ್ಟವಾಗಿ ನಿರೂಪಿತವಾದ ಹಿಂದೀಯರ ಇಚ್ಛೆಯನ್ನು ಬ್ರಿಟಿಷ್ ಸರಕಾರವು ಉದ್ದೇಶಪೂರ್ವಕವಾಗಿ ಕಡೆಗಣಿಸಿದೆ. ಈ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬಹಳ ಸಂತಪ್ತರಾಗಿರುತ್ತಾರೆ.

ನಾಝಿ ಆಕ್ರಮಣದ ನಿಷೇಧ

ಫೆಸಿಸ್ಟ್ ಮತ್ತು ನಾಝಿವಾದದ ತತ್ವ ಮತ್ತು ಆಚರಣೆ, ಯುದ್ಧ ಮತ್ತು ಹಿಂಸೆಯ ಮಹತ್ತಿಕೆಯು ಅದರ ಧೋರಣೆ, ಮಾನವ್ಯತೆಯ ವಿಮುಖತೆಯ ಕುರಿತು ಕಾಂಗ್ರೆಸು ತನ್ನ ಸಂಪೂರ್ಣ ಅಸಮ್ಮತಿಯನ್ನು ಹಲವು ವೇಳೆ ವ್ಯಕ್ತಗೊಳಿಸಿರುತ್ತದೆ. ನಾಗರಿಕ ರೀತಿನೀತಿಗಳನ್ನು ಮೂಲೆಗೊತ್ತಿ ಅವರು ನಡಿಸಿರುವ ಆಕ್ರಮಣಗಳನ್ನೂ ಕಾಂಗ್ರೆಸು ಆಗಾಗ ನಿಷೇಧಿಸಿದೆ. ನಾಝಿ ಮತ್ತು ಫೆಸಿಸ್ಟ್ ವಾದಗಳಲ್ಲಿ ಹಿಂದೀಯರು ಹಲವು ವರ್ಷಗಳಿಂದ ಎದುರಾಡುವ ಸಾಮ್ರಾಜ್ಯವಾದದ ತೀವ್ರ ಸ್ವರೂಪವು ತೋರಿಬರುತ್ತದೆ. ಆದುದರಿಂದ ಜರ್ಮನಿಯು ಪೋಲಂಡಿನ ಮೇಲೆ ನಡಿಸಿರುವ ಧಾಳಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿಷೇಧಿಸಿ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಪೋಲರೊಡನೆ ಸಂಪೂರ್ಣ ಸಹಾನುಭೂತಿ ಸೂಚಿಸುತ್ತದೆ

ಯುದ್ಧ ಯಾ ಶಾಂತಿಯನ್ನು ಹಿಂದೀಯರೇ ನಿರ್ಧರಿಸಬೇಕು.

ಹಿಂದೂದೇಶದಲ್ಲಿನ ಯುದ್ಧ ಅಥವಾ ಶಾಂತಿಯ ಪ್ರಶ್ನೆಯನ್ನು ಹಿಂದೀಯರೇ ನಿರ್ಧರಿಸಬೇಕಲ್ಲದೆ ಹೊರಗಣವರು ಆ ನಿರ್ಧಾರವನ್ನು ಅದರ ಮೇಲೆ ಹೊರಿಸಬಾರದು. ಮಾತ್ರವಲ್ಲದೆ ಸಾಮ್ರಾಜ್ಯಶಾಹಿಯ ಸ್ವಾರ್ಥಕ್ಕಾಗಿ ಹಿಂದೂದೇಶದ ಶಕ್ತಿ ಸಂಪತ್ತುಗಳ ದುರುಪಯೋಗವು ಹಿಂದೀಯರಿಗೆ ಸಹನವಾಗಲಾರದು. ಹಿಂದೂದೇಶದ ಮೇಲೆ ಹೊರಿಸಲ್ಪಡುವ ನಿರ್ಧಾರವನ್ನೂ ಹಿಂದೀಯರ ಸಮ್ಮತಿಯಿಲ್ಲದೆ ಸಾಮ್ರಾಜ್ಯಶಾಹಿಗಾಗಿ ಹಿಂದೀ ಶಕ್ತಿ ಸಂಪತ್ತುಗಳ

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್, ಕೆ. ಆರ್. ಕೆ. ಶೆಟ್ ಬಿಲ್ಡಿಂಗ್, ಮಿಶ್ಯನ್ ಹೈಸ್ಕೂಲ್ ರೋಡು.

ಅಥವಾ

ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಉಪಯೋಗವನ್ನೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅಗತ್ಯವಾಗಿ ವಿರೋಧಿಸಲೇ ಬೇಕು. ಸರಿಸಮಾನರಾದ ಇತ್ತಂಡದವರಿಗೂ ಯೋಗ್ಯವೆನಿಸುವ ಕಾರ್ಯಕ್ಕಾಗಿ ಪರಸ್ಪರ ಒಪ್ಪಿಗೆಯಿಂದ ಸಹಕಾರವೀಯುವುದು ನ್ಯಾಯವಾದುದು. ಹಿಂದೂದೇಶದಲ್ಲಿ ಈಗಿರುವ ಸ್ವಾತಂತ್ರ್ಯವೂ ಅಪಹರಿಸಲ್ಪಟ್ಟಿರುವಾಗ, ಪ್ರಜಾಸತ್ತೆಗಾಗಿಯೆಂದು ನಡಿಸಲ್ಪಡುವ ಯುದ್ಧದಲ್ಲಿ ಹಿಂದೀಯರಿಗೆ ಸಹಕರಿಸಲು ಸಾಧ್ಯವಿಲ್ಲ

ಗುಪ್ತ ಒಪ್ಪಂದಗಳು

ಪ್ರಜಾ ಸತ್ತೆ, ಸ್ವಾತಂತ್ರ್ಯವನ್ನು ಪ್ರತಿಪಾದಿಸಿ ಆಕ್ರಮಣ ಶೀಲತೆಯನ್ನು ನಿರ್ನಾಮಗೊಳಿಸಲು ತಾವು ಯುದ್ಧ ಹೂಡಿರುವುದೆಂದು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಉದ್ಘೋಷಿಸಿರುತ್ತವೆ. ಆದರೆ ಆದರ್ಶಗಳಾಗಿ ಉದ್ಘೋಷಿಸುವುದಕ್ಕೂ ಕಾರ್ಯಕ್ಷೇತ್ರದಲ್ಲಿ ಆಚರಣೆಗೆ ತರುವುದಕ್ಕೂ ಬಹಳ ಅಭ್ಯಂತರವಿದೆಯೆಂಬುದು 1914-18ರ ಯುದ್ಧದ ಇತಿಹಾಸವು ಸಿದ್ಧಗೊಳಿಸಿರುತ್ತದೆ. ಪ್ರಜಾಸತ್ತೆಯ ರಕ್ಷಣೆ ಚಿಕ್ಕ ರಾಷ್ಟ್ರಗಳ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವೇ ಕಳೆದ ಯುದ್ಧದ ಉದ್ದೇಶಗಳಾಗಿದ್ದವು. ಆದರೆ ಅವುಗಳನ್ನು ಘೋಷಿಸಿದ ರಾಷ್ಟ್ರಗಳೇ ಟರ್ಕಿಯ ಒಟ್ಟೋಮನ್ ಸಾಮ್ರಾಜ್ಯವನ್ನು ನಿರ್ನಾಮಗೊಳಿಸಿ ಅದರ ರಾಜ್ಯವನ್ನು ತಮ್ಮೊಳಗೆ ಹಂಚಿಕೊಂಡು ತಮ್ಮ ಸಾಮ್ರಾಜ್ಯ ಸ್ವಾರ್ಥಸಾಧಿಸಲು ಒಳಗಿಂದೊಳಗೆ ಒಪ್ಪಂದ ಮಾಡಿಕೊಂಡಿದ್ದವು.

ಲೀಗ್ ಆಫ್ ನೇಶನ್ಸಿನ ನಾಮಾವಶೇಷ

ತಮಗೇನೂ ರಾಜ್ಯ ಬೇಕಾಗಿಲ್ಲೆಂದು ಈ ರಾಷ್ಟ್ರಗಳು ತಮ್ಮ ಸಾಮ್ರಾಜ್ಯಗಳಿಗೆ ವಸಾಹತುಗಳನ್ನು ಸೇರಿಸಿಕೊಂಡವು. ವರ್ಸೇಲ್ ಒಪ್ಪಂದದ ಪರಿಣಾಮವಾಗಿಯೇ ಇಂದೀಗ ಯುದ್ಧ ಆರಂಭವಾಗಿರುವುದು. ಅದರ ಕರ್ತರು ತಾವು ಕೊಟ್ಟ ಮಾತಿಗೆ ತಪ್ಪಿ ಸಾಮ್ರಾಜ್ಯಶಾಹಿ ಒಪ್ಪಂದವನ್ನು ಪರಾಜಿತ ರಾಷ್ಟ್ರಗಳ ಮೇಲೆ ಹೊರಿಸಿದರು. ಈ ಒಪ್ಪಂದದ ಒಂದೇ ಒಂದು ಸತ್ಪರಿಣಾಮವಾದ ಲೀಗ್ ಆಫ್ ನೇಶನ್ಸ್ ಇಂದು ಕತ್ತು ಹಿಸುಕಲ್ಪಟ್ಟು ನಾಮಾವಶೇಷವಾಗಿರುವುದು. ಮಂಚೂರಿಯ, ಅಬಿಸೀನಿಯ, ಜೆಕೋಸ್ಲೋವೇಕಿಯ ಮತ್ತು ಸ್ಪೈನುಗಳನ್ನು ಈಗ ಪ್ರಜಾಸತ್ತೆಗಾಗಿ ಹೋರಾಡುವ ರಾಷ್ಟ್ರಗಳೇ ಕೈಬಿಟ್ಟು ಅವುಗಳ ಆಕ್ರಮಣದಲ್ಲಿ ಅಪ್ರತ್ಯಕ್ಷವಾಗಿ ನೆರವಾದುವು.

ಹಿಂದೂದೇಶ ಮತ್ತು ಪ್ರಜಾಸತ್ತೆ

ಸಾಮ್ರಾಜ್ಯಶಾಹಿಗಳ ಈಗಣ ಹಕ್ಕು ಬಾಧ್ಯತೆ, ಅಧಿಕಾರ, ವಸಾಹತು, ಮತ್ತು ಆಶ್ರಿತ ರಾಜ್ಯಗಳನ್ನು ಇದ್ದಕ್ಕಿದ್ದಂತೆ ರಕ್ಷಿಸಿಕೊಳ್ಳುವುದು ಈ ಯುದ್ಧದ ಉದ್ದೇಶವಾದಲ್ಲಿ ಹಿಂದೂದೇಶಕ್ಕೂ ಅದಕ್ಕೂ ಯಾವ ಸಂಬಂಧವೂ ಇರಲಾರದು. ಪ್ರಜಾಸತ್ತೆ ಮತ್ತು ಲೋಕದ ನವೀನ ವ್ಯವಸ್ಥೆಯೇ ಇಂದಿನ ಯುದ್ಧದ ಉದ್ದೇಶವಾದರೆ ಹಿಂದೂದೇಶಕ್ಕೆ ಅದರಲ್ಲಿ ತೀವ್ರ ಆಸಕ್ತಿಯಿದೆ. ಹಿಂದೂದೇಶದ ಮತ್ತು ನಿಜವಾದ ಬ್ರಿಟಿಷ್ ಹಾಗೂ ಲೋಕದ ಪ್ರಜಾಸತ್ತೆಗಳು ಪರಸ್ಪರ ವಿರೋಧವಾದುವಲ್ಲ, ಆದರೆ ಹಿಂದೂದೇಶದ ಮತ್ತು ಇತರ ಕಡೆಯ ಪ್ರಜಾಸತ್ತೆಗೂ ಸಾಮ್ರಾಜ್ಯವಾದ ಮತ್ತು ಫೆಸಿಸ್ಟವಾದಕ್ಕೂ ಮೂಲಭೂತ ಹಾಗೂ ಅನಿವಾರ್ಯವಾದ ವಿರೋಧವಿದೆ. ಪ್ರಜಾಸತ್ತೆಯ ಪ್ರತಿಪಾದನೆ ಮತ್ತು ವ್ಯಾಪನೆಗಾಗಿ ಇಂಗ್ಲೆಂಡು ಹೋರಾಡುವುದಾದ ಪಕ್ಷದಲ್ಲಿ ಅದು ಅಗತ್ಯವಾಗಿ ತನ್ನ ಅಧೀನ ರಾಜ್ಯಗಳಲ್ಲಿ ಸಾಮ್ರಾಜ್ಯ ಶಾಹಿಯನ್ನು ಕೊನೆಗೊಳಿಸಿ ಹಿಂದೂದೇಶದಲ್ಲಿ ಪ್ರಜಾಸತ್ತೆಯನ್ನು ಸ್ಥಾಪಿಸಬೇಕು. ಹಿಂದೀಯರು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಮೂಲಕ ತಮ್ಮ ರಾಜಕೀಯ ಘಟನೆಯನ್ನು ತಯಾರಿಸಿ ಹೊರಗಣ ತಡೆತೊಡರುಗಳಿಲ್ಲದೆ ತಮ್ಮ ದೇಶವನ್ನು ಆಳುವಂತಾಗಬೇಕು. ಸ್ವತಂತ್ರವೂ ಪ್ರಜಾಸತ್ತಾತ್ಮಕವೂ ಆದ ಹಿಂದೂದೇಶವು, ಆಕ್ರಮಣದ ವಿರೋಧವಾಗಿ ಪರಸ್ಪರ ರಕ್ಷಣೆ ಮತ್ತು ಸಾಂಪತ್ತಿಕ ಸಹಕಾರದಲ್ಲಿ ಇತರ ಸ್ವತಂತ್ರ ರಾಷ್ಟ್ರಗಳೊಂದಿಗೆ ಸಂತೋಷದಿಂದ ಸಹಕರಿಸುವುದು. ಆಗ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಆಧಾರದಿಂದ ಲೋಕದಲ್ಲಿ ನಿಜವಾಗಿಯೂ ನವೀನ ವ್ಯವಸ್ಥೆಯನ್ನುಂಟುಮಾಡುವುದರಲ್ಲಿ ನಾವು ಪ್ರಯತ್ನಿಸಿ ಲೋಕದ ಜ್ಞಾನ ಮತ್ತು ಅನುಕೂಲತೆಗಳನ್ನು ಮಾನವ ಕೋಟಿಯ ಪ್ರಗತಿ ಮತ್ತು ಅಭಿವೃದ್ಧಿ ಸಾಧನೆಗಾಗಿ ಉಪಯೋಗಿಸಬಹುದು.

ಇಂದಿನ ಬಿಕ್ಕಟ್ಟಿನ ಸ್ವರೂಪ

ಇಂದೀಗ ಯುರೋಪಿನಲ್ಲುಂಟಾಗಿರುವ ಬಿಕ್ಕಟ್ಟು ಇಡೀ ಲೋಕಕ್ಕೆ ಸಂಬಂಧಿಸುವಂಥಾದ್ದು. ಅದು ಈಗಣ ಲೋಕರಚನೆಯನ್ನೇ ಬದಲಾಯಿಸದಿರಲಾರದು. ಕಳೆದ ಮಹಾ ಯುದ್ಧಾನಂತರದ ಲೋಕದ ಸಾಂಪತ್ತಿಕ, ಸಾಮಾಜಿಕ ಮತ್ತು ರಾಜಕೀಯ ವೈಷಮ್ಯಗಳ ಪರಿಣಾಮವಾಗಿ ಈ ಯುದ್ಧವುಂಟಾಗಿರುವುದು. ಆ ವೈಷಮ್ಯಗಳನ್ನು ನಿವಾರಿಸಿ ನವ ರಚನೆಯನ್ನುಂಟುಮಾಡದೆ ಲೋಕದಲ್ಲಿ ಶಾಂತಿ ಸುಭಿಕ್ಷೆಗಳು ನೆಲೆಗೊಳ್ಳಲಾರವು. ಇದಕ್ಕಾಗಿ ದೇಶದೇಶಗಳೊಳಗಣ ಅಸಮಾನತೆ ಮತ್ತು ಸೂರೆಯು ಅಂತ್ಯವಾಗಬೇಕು. ಅವುಗಳ ಈಗಣ ಪರಸ್ಪರ ಸಾಂಪತ್ತಿಕ ಸಂಬಂಧವು ಸಂಪೂರ್ಣ ಬದಲಾಗಿ ಇಡೀ ಮಾನವಕೋಟಿಯ ಹಿತಕ್ಕಾಗಿ ನ್ಯಾಯವಾದ ತಳಹದಿ ಹಾಕುವಂತಾಗಬೇಕು. ಆಧುನಿಕ ಸಾಮ್ರಾಜ್ಯವಾದದ ಮಹತ್ತ್ವದ ಉದಾಹರಣೆಯಾಗಿರುವ ಹಿಂದೂದೇಶದ ಪ್ರಾಮುಖ ಪ್ರಶ್ನೆಯನ್ನು ಬಿಟ್ಟು ಲೋಕದ ನವನಿರ್ಮಾಣವು ಸಾಧ್ಯವಿಲ್ಲ. ಅದರ ವಿಶಾಲತೆ, ಸಂಪನ್ನತೆ ಮತ್ತು ಪರಿಸ್ಥಿತಿಗಳಿಂದ ಅದು ಲೋಕದ ನವನಿರ್ಮಾಣದಲ್ಲಿ ಪ್ರಮುಖ ಸ್ಥಾನಪಡೆಯಲೇಬೇಕು. ಹಾಗಾಗಬೇಕಾದರೆ ಅದು ಮೊದಲು ಸ್ವತಂತ್ರವಾಗಬೇಕು.

ಪ್ರಜಾಸತ್ತೆ ಮತ್ತು ಹಿಂದೀ ರಾಜ ಮಹಾರಾಜರುಗಳು

ಯುರೋಪಿನಲ್ಲಿ ಪ್ರಜಾಸತ್ತೆಯ ರಕ್ಷಣೆಗಾಗಿ ಕಾದಾಡುವ ಇಂಗ್ಲೆಂಡಿಗಾಗಿ ಹಿಂದೂದೇಶದ ಹಲವು ರಾಜ ಮಹಾರಾಜರುಗಳು ತಮ್ಮ ಸೇವೆ ಮತ್ತು ಸಹಾಯವನ್ನರ್ಪಿಸಿರುವರು, ಆದರೆ ಅವರು ಹಾಗೆ ಮಾ

11ನೇ ಪುಟಕ್ಕೆ ಮುಂದರಿದದು

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ— ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲುಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ **ಆರ್ಥಿಕ ಸ್ವಾತಂತ್ರ್ಯದ ತಳಹದಿ** ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD 1906

—ಪೂರ್ವ ಪೋಲಂಡಿನ ಮೇಲೆ ರಸ್ಯದ ಆಕ್ರಮಣ—

ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಬ್ರಿಟಿಷ್ ಸೇನೆ ಮುಂದೊತ್ತುತ್ತಿದೆ.

ವಾರ್ಸೋವನ್ನು ಧ್ವಂಸಗೊಳಿಸುವೆವೆಂದು ಜರ್ಮನಿಯ ಎಚ್ಚರಿಕೆ !

ನಂಬಬ ಗಿತ್ತು. ಆದರೆ ಈಗ ಪೂರ್ವದಲ್ಲಿ ಮಂಗೋಲಿಯ, ಮಂಚೂರಿಯ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸಿ ಜಪಾನಿನೊಡನೆ ರಾಜಿಮಾಡಿಕೊಂಡಿರುವುದು ಮುಂದೆ ಯುರೋಪಿನಲ್ಲಿಯು ಏನು ಮಾಡಲಿರುವದೋ ತಿಳಿಯದು. ಇಟೆಲಿಯು ಜರ್ಮನಿಗೆ ಸಹಾಯಮಾಡಲು ನಿರಾಕರಿಸಿದುದರಿಂದ ಜರ್ಮನಿಯು ರಸ್ಯದೊಡನೆ ಸೇರಿ ನಡೆಯುವುದೆಂದು ಸುದ್ದಿಯುಂಟಾಗಿದೆ.

ಜರ್ಮನಿಯ ಎಚ್ಚರ

12ಘಂಟೆಗಳೊಳಗೆ ಶರಣಾಗತವಾಗಬೇಕು. ಇಲ್ಲವಾದರೆ ಮತ್ತೆ 12 ಘಂಟೆಗಳೊಳಗೆ ನಿಶ್ಚಿತವಾದ ಎರಡು ದಾರಿಗಳಿಂದ ವಾರ್ಸೋ ಪಟ್ಟಣದ ಸರ್ವಸಾಮಾನ್ಯ ನಾಗರಿಕರನ್ನೆಲ್ಲಾ ಹೊರಗೆ ಕಳುಹಿಸಬೇಕು. ಅನಂತರ ಇಡೀ ವಾರ್ಸೋ ಪಟ್ಟಣವು ಯುದ್ಧರಂಗವಾಗಿ ಪರಿಗಣಿಸಲ್ಪಟ್ಟು ಅದನ್ನು ಧ್ವಂಸಮಾಡಲಾಗುವುದೆಂದು ಎಚ್ಚರಿಸಿ ಜರ್ಮನರು ಇದೇ ತಾ 16ರಲ್ಲು ಪೋಲಂಡಿಗೆ ಕರಪತ್ರಗಳನ್ನು ವಿಮಾನದ ಮೂಲಕ ಕಳಿಸಿದರು. ಈ ಎಚ್ಚರವನ್ನು ಅಧಿಕಾರಿಯೊಬ್ಬನ ಮೂಲಕ ಕಳುಹಿಸಲೆತ್ನಿಸಿದಾಗ ಪೋಲಿಶ್ ಸೇನಾನಾಯಕರು ಅವರನ್ನು ಪಟ್ಟಣದೊಳಕ್ಕೆ ಪ್ರವೇಶಿಸಬಿಡಲಿಲ್ಲ. ವಾರ್ಸೋ ಪಟ್ಟಣದ ಪೋಲಿಶ್ ಸೇನಾನಾಯಕರು ಜರ್ಮನಿಯ ಎಚ್ಚರವನ್ನು ನಿರಾಕರಿಸಿರುವರು. ವಾರ್ಸೋ ಪಟ್ಟಣದ ಮೇಲೆ ಜರ್ಮನರು ಎಡೆಬಿಡದೆ ವಿಮಾನಧಾಳಿ ನಡಿಸುತ್ತಿದ್ದಾರೆ. ತಾ. 15ರಲ್ಲು 18 ಜರ್ಮನ್ ಬೋಂಬರ್ ವಿಮಾನಗಳು ವಿಲ್ನಾದ ಮೇಲೆ 200 ಬೋಂಬಸೆದು

ಸ್ತ್ರೀಯರು ಮಕ್ಕಳೇ ಮೊದಲಾದ ನೂರಾರು ಜನರು ಕೊಲ್ಲಲ್ಪಟ್ಟಿರುವರು. ಹೆಚ್ಚಿನ ಸೊತ್ತು ನಾಶವಾಗಿರುತ್ತದೆ.

ಪೋಲಿಶ್ ಸರಕಾರವು ಇದೇ ತಾ. 16ರಲ್ಲು ಲೊವೊವ್ ಪ್ರದೇಶದಲ್ಲಿದ್ದು ಎಲ್ಲಾ ಕಡೆಯ ಸೇನೆಗಳೊಂದಿಗೆ ಸರಿಯಾದ ಸಂಬಂಧವನ್ನಿಟ್ಟುಕೊಂಡು ಸೈನಿಕ ಚಲನವಲನದ ಸೂತ್ರಚಾಲನೆ ಮಾಡುತ್ತಿದೆ. ಜರ್ಮನರು ಪೋಲಿಶ್ ವಿಮಾನ ಪಡೆಯನ್ನು ನಿರ್ನಾಮಗೊಳಿಸಿರುವರೆಂದು ಹೇಳಬಹುದು. ಆದರೆ ಪ್ರಬಲ ಪೋಲಿಶ್ ಸೇನೆಯು ಶಿಸ್ತು ಮತ್ತು ಉತ್ಸಾಹದಿಂದ ಹೋರಾಟ ನಡಿಸುತ್ತಿದೆ. ಪಶ್ಚಿಮ ಪೂರ್ವ ಮತ್ತು ಕೇಂದ್ರ ಪೋಲಂಡುಗಳಲ್ಲಿ ಜರ್ಮನರನ್ನದು ಪ್ರಬಲವಾಗಿ ವಿರೋಧಿಸುತ್ತಿವೆ. ಪೋಲಿಶ್ ಸೈನಿಕರು ಹೆಚ್ಚಿನ ಸಂಖ್ಯೆ

ಯ ವೈರಿ... ಲಸಾಧ್ಯ... ದು ವೈರಿ... ಅದನ್ನು ... ನಾಶವಾಗುತ್ತಿದ್ದಾರ... ಪೂರ್ವ... ಣವಾದ ... ಲೋವೊವ... ನಡೆಯುತ್ತಿ... ವಾರ್ತೆ. ... ಲೀಶ್ ... ಸೋ ಪ... ಸೇನೆಯನ್ನು ... ನೆಯು ... ಗಿ 8000 ... ತ್ತಾರೆ ... ಟ್ಟವೆ ...

... ಯುದ್ಧ ... ಕಡೆಯ ... ಳಿ ಪೋ... ದೆ ವಾ... ಜರ್ಮನ್ ... ಲಿಶ್ ಸೇ... ರ್ಘಕವಾ... ಲ್ಪಟ್ಟಿರು... ಡಿಯಲ್ಪ... ವಾರ್ಸೋ

ಪಟ್ಟಣವನ್ನು ಸಮೀಪಿಸಿದೆ. ಪೂರ್ವದ ಲೊವೊವ್ ಪ್ರದೇಶದ ಮತ್ತು ಪಶ್ಚಿಮದ ಪೂರ್ವಪ್ರಸ್ಯದ ಸೇನೆಗಳು ಕೇಂದ್ರಕ್ಕೆ ಒಂದು ಸಾರಿ ಒಟ್ಟಾಗಿ ವಾರ್ಸೋ ಪಟ್ಟಣವನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದೆಂದು ಜರ್ಮನರು ಕಾಯುತ್ತಿರುವಂತಿದೆ.

ಗಳಿಂದ ಜನರನ್ನು ಹೊರಗೆ ಕಳುಹಿಸಬೇಕಾಗಿದೆ. ಇದೇ ತಾ. 16ರಲ್ಲು ಸಾರ್‌ಬ್ರುಕಿನ ದಕ್ಷಿಣದಲ್ಲಿ ಜರ್ಮನರು ಫ್ರೆಂಚ್‌ಸೇನೆಯ ಮೇಲೆ ಫಿರಂಗಿ ಗುಂಡುಗಳ ಮಳೆಗರೆದರು. ಫ್ರೆಂಚರು ಅವರನ್ನು ಹಿಂದಕ್ಕಟ್ಟಿರುವರು. ಇಕ್ಕಡೆಯುವರೊಳಗೂ ತೀವ್ರ ಫಿರಂಗಿ ಯುದ್ಧ ನಡೆದಿರುವುದು. ಜರ್ಮನರು ಹೆಚ್ಚೆಚ್ಚಿನ ಸೇನೆಯನ್ನು ಕಳುಹಿಸುತ್ತಿರುವರು ಮತ್ತು ಹಿಂದೆ ಸರಿಯಬೇಕಾಗಿ ಬಂದಾಗ ದಾರಿಯ ಹಳ್ಳಿಗಳನ್ನೆಲ್ಲಾ ನಾಶವಗಾಡುತ್ತಿರುವರು. ಫ್ರೆಂಚ್‌ಸೇನೆ ಈಗ ಜರ್ಮನ್ ಪ್ರದೇಶದಲ್ಲಿ ಸ್ಥಿರವಾಗಿ ಕಾಲೂರಿದೆ. ಅವರ ವಿಮಾನಗಳು ವೈರಿಗಳದಕ್ಕಿಂತ ಶ್ರೇಷ್ಠವಾದುದಾಗಿದೆ. ಸಕ್ರೆನದಿಯ ದಕ್ಷಿಣ ತಟದಲ್ಲಿ ಜರ್ಮನ್ ಸಿಗ್‌ಫ್ರಿಡ್ ಕೋಟೆಯೊಳಗಣ ಸೈನಿಕರಿಗೂ ಫ್ರೆಂಚರಿಗೂ ತೀವ್ರ ಹೋರಾಟ ನಡೆದಿದೆ. ಸಕ್ರೆನದಿ ಪ್ರವೇಶದಲ್ಲಿ ಪ್ರಬಲ ಹೋರಾಟಗಳು ನಡೆಯುತ್ತಿವೆ, ಆದರೆ ಜರ್ಮನರಿಗೆ ಇಷ್ಟರವರೆಗೆ ಜಯ ದೊರೆತಿರುವುದಿಲ್ಲ.



ರಸ್ಯದೊಡನೆ ಒಪ್ಪಂದ ಮಾಡಲು ವಿಳಂಬಿಸಿದ ಚೇಂಬರ್ಲೇನರು ಯುರೋಪಿನ ಯುದ್ಧದ ಈಗಣ ವಿದ್ಯಮಾನದಿಂದ ಶ್ರುತವಾಗಿದೆ. ಬೆಲ್‌ಜಿಯಮ್, ಹೊಲಂಡ ಮತ್ತು ಫ್ರಾನ್ಸ್‌ಗಳಿಗೆ ಪೋಲಂಡಿಗೆ ಯಾವ ಸಹಾಯವನ್ನೂ ಕೊಡಲು ಸಾಧ್ಯವಿಲ್ಲ. ಮಿತ್ರರಾಷ್ಟ್ರಗಳ ಅವಿವೇಕ, ಮತ್ತು ಪೋಲಂಡಿನ ಉದ್ಧಟತನದಿಂದ ರಸ್ಯವು ಜರ್ಮನಿಯ ನಿರ್ನಾಮಗೊಳಿಸ ವಂತಾಗಿದೆ. ಅನಂತರ ಭಯಂಕರ ಯುದ್ಧವು ಪಶ್ಚಿಮದ ಆತಟಿ... ಕೋಟೆಗಳ ಸಾಲುಗಳವೆ. ಫ್ರೆಂಚ್ ಸೇನೆಯು ಸಿಗ್‌ಫ್ರಿಡ್ ಕೋಟೆಗಳ ಸಾಲನ್ನು ಸ... ಮುಂದೆ ನಿರ್ವಾಹವಿಲ್ಲದೆ ರುಮೇನಿಯ, ಬಲ್ಗೇರಿಯ ಯುಗೊಸ್ಲಾವಿಯಗಳು ಜರ್ಮ... ಜರ್ಮನಿಯ ಬಲ ಹೆಚ್ಚುವದು. ಸಂದರ್ಭ ನೋಡಿ ಇಟೆಲಿಯೂ ಜರ್ಮನಿಯ ಪಕ್ಷ... ಶೂ ರಾಷ್ಟ್ರಗಳ ಪೈಕಿ ಒಂದರ ಸಹಾಯವನ್ನಾದರೂ ಪಡೆಯದ ಅತಿ ದೂರದ ಮತ್ತು ಅವುಗಳ ಸಹಾಯದ ಮೇಲೆಯೇ ಹೊಂದಿಕೊಂಡಿದ್ದುದು ಪೋಲಂಡಿನ ದೊಡ್ಡ ತಪ್ಪು. ... ರುತ್ತಿಲ್ಲೆಂಬ ಮಿ ಲ್ಲೊಯ್ಡ್ ಜೋರ್ಜರ ಕಠಿಣ ಟೀಕೆಯು ಈ ಸಕಾರಣದಿಂದ ಮತ್ತು ... ಗಿ ಬಾಲ್ಟಿಕ್ ಸಮುದ್ರವು ಜರ್ಮನಿಯ ಕೈಯದಂತಾಗಿರುವದರಿಂದ ಇಂಗ್ಲೆಂಡ್ ... ಪೋಲಂಡಿಗೆ ಸಹಾಯಮಾಡಬೇಕಲ್ಲ ಒಂದೇ ಒಂದು ರಾಷ್ಟ್ರವೆಂದರೆ ಸೋವಿಯೆಟ್ ರಸ್ಯ ... ಈಗ ರಸ್ಯ ಮತ್ತು ಜರ್ಮನಿಗಳು ಪೋಲಂಡನ್ನು ತಮ್ಮೊಳಗೆ ಹಂಚಿಕೊಂಡು ... ಫ್ರಾನ್ಸ್ ಮತ್ತು ಜರ್ಮನಿಯ ಎಲ್ಲೆಗಳಲ್ಲಿ ಮೆಗಿನೊ ಮತ್ತು ಸಿಗ್‌ಫ್ರಿಡ್ ... ರುವದರಿಂದ ಭೂಮಧ್ಯ ಸಾಗರದಿಂದ ಒಳಗೆ ಪ್ರವೇಶಿಸಲು ಸಾಧ್ಯವೇ ಇಲ್ಲ ... ಪ್ರತ್ಯಕ್ಷವಾಗಿ ಅದಕ್ಕೆ ಸಹಾಯಮಾಡಬಹುದು. ರಸ್ಯವು ಯುದ್ಧಕ್ಕಿಳಿಯಲ್ಪಟ್ಟಲ್ಲಿ ... ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ರಕ್ಷಿಸ ಬೇಕಾದ ಅಸಾಧ್ಯವಾಗುವುದು. ನೆರೆಯ ... ಅಸಾಧ್ಯವಾದ ಇಂಗ್ಲೆಂಡ ಮತ್ತು ಫ್ರಾನ್ಸುಗಳೊಡನೆ ಒಪ್ಪಂದ ಮಾಡಿಕೊಂಡು

ರಸ್ಯದ ಪ್ರತೀಕಾರ

ಇದೇ ತಾ 17ರಲ್ಲು ಸೋವಿಯೆಟ್ ರಸ್ಯದ ಸೇನೆಯು ಪೋಲಂಡಿನ ಪೂರ್ವ ಎಲ್ಲೆಯನ್ನು ದಾಟಿ ಆಕ್ರಮಣ ಮಾಡಿರುತ್ತದು. ರುಮೇನಿಯದಿಂದ ಲಿಟ್ವಾನಿಯದವರೆಗೆ ಸುಮಾರು 500 ಮೈಲುಗಳ ವಿಸ್ತಾರ ಎಲ್ಲೆಯ ಮೇಲೆ ತಿವಿದ್ಯ ಸೋವಿಯೆಟ್ ಸೈನಿಕರು ... ಯಿಟ್ಟಿರುವರು. ಕೆಲವಡೆ ಪೋಲಿಶ್ ಸೇನೆಯು ಇವರನ್ನು ತಡೆದು ಚಿಕ್ಕ ಹೋರಾಟಗಳು ನಡೆದಿರುವವು. ಪೋಲಂಡಿನಲ್ಲಿರುವ ಸುಮಾರು 10 ಮಿಲ್ಯ ಬಿಳಿ ರಸ್ಯನ ಮತ್ತು ಉಕ್ರೇನಿಯನ್ ಅಲ್ಪ ಸಂಖ್ಯಾಕರ ರಕ್ಷಣೆಗಾಗಿ ಸೋವಿಯೆಟ್ ಸರಕಾರವು ಹೀಗ ಮಾಡಿರುವುದಲ್ಲದೆ ಯುದ್ಧವೆಂದು ಘೋಷಿಸದ ತಟಸ್ಥವಿರವುದು. ಪೋಲಿಶ್ ಸರಕಾರವು ಈಗ ಅತಿ ದುರ್ಬಲವಾದ ಅದರ ನೆಲೆ ಎಲ್ಲೆಂಬುದೇ ತಿಳಿದಿಲ್ಲ. ಪೂರ್ವ ಪೋಲಂಡಿನಲ್ಲಿ ಅನಾಯಕತ್ವವುಂಟಾಗಿದೆ. ಆದುದರಿಂದ ತಾವು ಅದನ್ನು ಆಕ್ರಮಿಸಿಕೊಂಡು ತಮ್ಮ ಜನರಿಗೆ ರಕ್ಷಣೆಕೊಡಬೇಕಾಗಿದೆಯೆಂದು ಸೋವಿಯೆಟ್ ಸರಕಾರದ ವಿದೇಶ ಮಂತ್ರಿ ಮೊಲೊಟೊವ್‌ರವರ ಹೇಳಿಕೆ. ಈ ವಿಷಯವನ್ನು ಮಾಸ್ಕೋದಲ್ಲಿರುವ ಪೋಲಂಡಿನ ರಾಯಭಾರಿಗೂ ತಿಳಿಸಲಾಗಿತ್ತು. ಆದರೆ ಅವರದನ್ನು ಸ್ವೀಕರಿಸದೆ ಅದರ ಸಂಗತಿಯನ್ನು ಮಾತ್ರ ತನ್ನ ಸರಕಾರಕ್ಕೆ ತಿಳಿಸಿದರು. ರಸ್ಯವು ಇಂದು ಪೂರ್ವ ಪೋಲಂಡನ್ನು ಆಕ್ರಮಿಸಿ ಪೋಲಂಡಿನ ಮೇಲೆ ಸೇಡುತೀರಿಸಿಕೊಂಡಿರುವುದೆನ್ನಬಹುದು. ಹಿಂದೆ ಪೋಲಂಡಿನ ಪೂರ್ವಭಾಗವು ರಸ್ಯಕ್ಕೆ ಸೇರಿದ್ದಿತು. 1918ರಲ್ಲಿ ಪೋಲಿಶ್ ಸೇನೆಯು ಬೊಲ್ಶೆವಿಕ್ ಸೇನೆಯನ್ನು ಜೈಸಿ ಪೂರ್ವ ಪೋಲಂಡನ್ನು ಗದ್ದು ವಶಪಡಿಸಿಕೊಂಡಿತು. ಇದು ಹೊರತು ಪೋಲಂಡಿಗೂ ರಸ್ಯಕ್ಕೂ ಆಗಾಗ ತಿಕ್ಕಾಟ ನಡೆಯುತ್ತಲೇ ಇದ್ದಿತು. ಆದುದರಿಂದಲೇ ಸೋವಿಯೆಟ್ ಸೇನೆಗೆ ಪೋಲಂಡಿನ ಮೇಲಿಂದ ದಾರಿಕೊಡಲು ಪೋಲಿಶ್ ಸರಕಾರವು ಮೊದಲು ಒಪ್ಪಲಿಲ್ಲ. ಇಂಗ್ಲೆಂಡ್ ಫ್ರಾನ್ಸ್ ಮತ್ತು ರಸ್ಯಗಳ ಒಪ್ಪಂದಕ್ಕೆ ಇದೊಂದು ತೊಡಕಾಗಿದ್ದಿತು. ರಸ್ಯವು ಈಗ ಸಂದರ್ಭ ನೋಡಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿರುತ್ತದೆ.

ರಸ್ಯದ ರಾಜನೀತಿಯು ಮಿತ್ರರಾಷ್ಟ್ರಗಳಿಗೆ ಬೇತಾಳ ಸಮಸ್ಯೆಯಾಗಿದೆ. ಅದು ಪೂರ್ವದಲ್ಲಿ ಜಾಪಾನನ್ನು ಪ್ರಬಲವಾಗಿ ವಿರೋಧಿಸಲು ಇಚ್ಛಿಸುವಲ್ಲಿ ಜರ್ಮನಿಯೊಡನೆ ಒಪ್ಪಂದಮಾಡಿಕೊಂಡಿರುವುದೆಂದು

ಫ್ರೆಂಚ್ ಸೇನೆಯು ಮುಂದುವರಿಯುತ್ತಿದೆ

ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಸೇನೆಯು ಜರ್ಮನಿಯ ಒಳಭಾಗಕ್ಕೆ ಮುಂದೊತ್ತುತ್ತಿದೆ. ಬ್ರಿಟಿಷ್ ಸೇನೆಯೂ ಈಗ ಬಂದು ಫ್ರೆಂಚ್ ಸೇನೆಯೊಂದಿಗೆ ಸೇರಿದೆ. ಈ ಸಂಗತಿಯನ್ನು ಜರ್ಮನರು ಎಷ್ಟೊಂದು ಮರೆಮಾಚಲೆತ್ನಿಸಿದರೂ ಫಲವಾಗಿರುವುದಿಲ್ಲ. ರೈನ್‌ಲೇಂಡಿನ ಕಲ್‌ರೂಹೆ, ಸಾರ್ ಬ್ರುಕೆನ್ ಮೊದಲಾದ ಪಟ್ಟಣಗ

ಜೆಕೋಸ್ಲೊವೇಕಿಯದಲ್ಲಿ ಅತೃಪ್ತಿ

ಡಾಕ್ಟರ್ ಬೆನೆಶರ ಪಕ್ಷಪಾತಿಗಳಾದ ಹಲವು ಮಂದಿ ಜೆಕ್ಕರು ಮಿತ್ರರಾಷ್ಟ್ರಗಳ ಸಹಾಯಾರ್ಥವಾಗಿ ಸಂಘವೊಂದನ್ನು ಸ್ಥಾಪಿಸಿದ್ದಾರೆ. ಇದನ್ನು ಜರ್ಮನ್ ಗುಪ್ತ ಪೋಲೀಸರು ಕಂಡುಹಿಡಿದು ಹಲವು ಮಂದಿ ದಸ್ತಗಿರಿ ಮಾಡಲ್ಪಟ್ಟಿರುವರೆಂದು ಜರ್ಮನರೇ ಒಪ್ಪಿರುತ್ತಾರೆ. ಬೊಹೇಮಿಯ ಮೊರಾವಿಯ ಮತ್ತು ಸ್ಲೋವಾಕಿಯದ ಜನರಲ್ಲಿಯೂ ಅತೃಪ್ತಿಯುಂಟಾಗಿದೆ. ಅನೇಕ ಮಂದಿ ದಸ್ತಗಿರಿಯಾಗಿದ್ದಾರೆ. ಸ್ಲೊವಾಕ್ ಸೈನಿಕ ದಳವೊಂದು ಪೋಲಂಡಿನ ವಿರೋಧವಾಗಿ ಕಾದಲೊಪ್ಪದೆ ನಿರ್ಬಂಧದಲ್ಲಿರಿಸಲ್ಪಟ್ಟಿದೆ.

ಪೋಲೆಂಡ್ ನಿರ್ನಾಮವಾಯಿತು!

ಅದನ್ನು ಜರ್ಮನಿ ಮತ್ತು ರಸ್ಯಗಳು ಹಂಚಿಕೊಳ್ಳುತ್ತಿವೆ

ರಸ್ಯದ ಮುಂದಿನ ಧೋರಣೆಯೇನು?

ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಉಭಯಸಂಕಟ.

ಪೋಲಿಶ್ ಸರಕಾರವು ಅಸ್ತಿತ್ವದಲ್ಲಿಲ್ಲ.

ಹತ್ತೇ ದಿವಸದ ಯುದ್ಧದಲ್ಲಿ ಪೋಲಂಡು ತನ್ನ ಪ್ರಾಮುಖ್ಯ ಕೈಗಾರಿಕೆ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಕಳಕೊಂಡಿದೆ. ಮತ್ತು ಅದರ ಮುಖ್ಯ ಪಟ್ಟಣದ ಮೇಲೆಯೇ ಜರ್ಮನರು ಧಾಳಿ ನಡಿಸಿರುತ್ತಾರೆ. ಇದರಿಂದ ಪೋಲಂಡು ಅದೆಷ್ಟು ದುರ್ಬಲವಾಗಿರುವುದೆಂಬುದು ವ್ಯಕ್ತವಾಗುತ್ತದೆ. ಇಂದೀಗ ಪೋಲಿಶ್ ಸರಕಾರಕ್ಕೊಂದು ನಿಶ್ಚಿತ ನೆಲೆಯೊಂದಿಲ್ಲ. ಅದರ ಆಡಳಿತ ಯಂತ್ರವು ಮುರಿದು ಹೋಗಿದೆ. ಸರಕಾರವೆಂಬುದೇ ಈಗ ಅಸ್ತಿತ್ವದಲ್ಲಿಲ್ಲ. ಆದುದರಿಂದ ಸೋವಿಯೆಟ್ ರಸ್ಯಕ್ಕೂ ಪೋಲಂಡಿಗೂ ನಡೆದಿರುವ ಒಪ್ಪಂದಗಳು ಅಸಿಂಧುವಾಗುವವು. ಸೋವಿಯೆಟ್ ಸರಕಾರವು ಪೋಲಂಡನ್ನು ಯುದ್ಧದ ಭಯಂಕರ ಹಾವಳಿಯಿಂದ ವಿಮುಕ್ತಗೊಳಿಸಿ ಶಾಂತಿಯನ್ನೀಯುವ ಉದ್ದೇಶವುಳ್ಳದಾಗಿದೆ. ಈಗಣ ಯುದ್ಧದಲ್ಲಿನ ಸೋವಿಯೆಟ್ ರಸ್ಯದ ತಾಟಸ್ಥ್ಯಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ರಸ್ಯವು ಪೂರ್ವ ಪೋಲಂಡಿನಲ್ಲಿ ಶಾಂತಿ ಮತ್ತು ಸುರಕ್ಷಿತತೆಯನ್ನು ಸ್ಥಾಪಿಸಲೆತ್ನಿಸುತ್ತಿದೆ. ಪೋಲಿಶ್ ಸರಕಾರವು ವಾರ್ಸೋದಿಂದ ಓಡಿಹೋಗಿ ಮರೆದು ಹೋಗಿರುವುದರಿಂದ ಪೋಲಂಡಿನಲ್ಲೀಗ ಅನಾಯಕತ್ವವುಂಟಾಗಿದೆ ಎಂಬುದೇ ಸೋವಿಯೆಟ್ ಸರಕಾರದ ವಿದೇಶ ಮಂತ್ರಿ ಮೊಲೊಟೊವ್‌ರವರು ಪೋಲಂಡಿಗೆ ಕಳುಹಿಸಿದ ಹೇಳಿಕೆ. ಪೋಲಿಶ್ ಸೇನೆಯು ಸೋವಿಯೆಟ್ ಸೈನಿಕರನ್ನು ಕೆಲವಡೆ ವಿರೋಧಿಸಿ ಯುದ್ಧವಾಗಿರುವುದು. ಆದರೂ ಸೋವಿಯೆಟ್ ಸೈನಿಕರು 34 ಮೈಲು ಮುನ್ನಡೆದಿರುವರು. ಇದೇ ತಾ 18ರಲ್ಲಿ ಅವರು ಬ್ರೆಸ್ಟ್ ಲಿಟೊವಸ್ಕ್ ಎಂಬಲ್ಲಿಯೂ ಲೋವೊವಿನಲ್ಲಿಯೂ ಜರ್ಮನ್ ಸೇನೆಗಳನ್ನು ಮುಟ್ಟಲಿರುವರು. ಸೋವಿಯೆಟ್ ಸೇನೆಯು 7 ಪೋಲಿಶ್ ವಿಮಾನಗಳನ್ನು ಕೆಳಗುರುಳಿಸಿರುತ್ತದೆ. 3 ಬೋಂಬರ್ ವಿಮಾನಗಳು ಕೆಳಗೆ ಬರುವಂತೆ ಮಾಡಿರುತ್ತದೆ. ಈ ಆಕ್ರಮಣಕ್ಕೆ ಇಡೀ ರಸ್ಯದ ಬೆಂಬಲ ಅವರಿಗಿದೆ ಮತ್ತು ಅವರು ಹೋದಲ್ಲೆಲ್ಲಾ ಜನತೆಯು ಅವರನ್ನು ಸಂತೋಷದಿಂದ ಸ್ವಾಗತೀಕರಿಸುತ್ತಿದೆಂದು ತಿಳಿದು ಬರುತ್ತದೆ. ಉತ್ತರ ವಿಲ್ನಾ ಪಟ್ಟಣವು ಸೋವಿಯೆಟ್ ಸೈನಿಕರ ವಶವಾಗಿದೆ. ಡಾನ್ಸಿಗ್ ಕೊರಿಡೊರ್ ಮತ್ತು ಸಿಲೇಸಿಯವನ್ನು ಜರ್ಮನಿಗೆ ಬಿಟ್ಟು ಪಶ್ಚಿಮ ಉಕ್ರೈನನ್ನು ತಾನಿಟ್ಟುಕೊಂಡು ಸೋವಿಯೆಟ್ ರಸ್ಯಾ ಮತ್ತು ಜರ್ಮನಿಗಳ ನಡುವೆ ಸ್ವತಂತ್ರ ಪೋಲಿಶ್ ರಾಜ್ಯವೊಂದನ್ನು ಸ್ಥಾಪಿಸುವುದೇ ಸೋವಿಯೆಟ್ ಸರಕಾರದ ಧ್ಯೇಯವಿರುತ್ತದೆ.

ಪೋಲಂಡನ್ನು ಹಂಚಿಕೊಳ್ಳುವ ಧ್ಯೇಯ

ಇದೇ ತಾ. 18ರಲ್ಲು ಬ್ರೆಸ್ಟ್‌ಲಿಟೊವಸ್ಕ್ ಎಂಬಲ್ಲಿ ಜರ್ಮನ್ ಮತ್ತು ಸೋವಿಯೆಟ್ ಸೈನಿಕ ಮತ್ತು ರಾಜಕೀಯ ಮುಖಂಡರ ದೊಡ್ಡ ಸಭೆಯೊಂದು ನಡೆಯಲಿರುವುದು. ಪೋಲಂಡನ್ನು ಹೇಗೆ ಹಂಚಿಕೊಳ್ಳುವುದು ಮತ್ತು ರಸ್ಸೊ ಜರ್ಮನ್ ಎಲ್ಲೆಯನ್ನೆಲ್ಲಿ ಸ್ಥಾಪಿಸುವುದೆಂಬುದನ್ನು ನಿಶ್ಚೈಸುವುದೇ ಈ ಸಭೆಯ ಉದ್ದೇಶವಾಗಿದೆ. ಇತರರು ಭಾವಿಸುವಂತೆ ಜರ್ಮನಿಗೆ ಶಾಂತಿಯ ಆತುರವೇನೂ ಇಲ್ಲೆಂದು ತಿಳಿದು ಬಂದಿದೆ. ಪೋಲೆಂಡಿನ ಧಾಳಿಯು ಕೊನೆಗೊಳ್ಳುತ್ತಾ ಬರುತ್ತಿದೆ. ಲುಬ್ಲಿನು ಜರ್ಮನರ ವಶವಾಗಿದೆ. ಲೊವೊವ್ ಆವರಿಸಲ್ಪಟ್ಟಿದೆಯೆಂದು ಜರ್ಮನ್ ಕಡೆಯ ವಾರ್ತೆ.

ಪೋಲಂಡಿನ ದುರವಸ್ಥೆ

ರುಮೇನಿಯದ ಎಲ್ಲೆಯ ಸಮೀಪದ ಕುಟ್ಟಿ ಎಂಬಲ್ಲಿ ಪೋಲಿಶ್ ಸರಕಾರವು ತಾತ್ಕಾಲಿಕವಾಗಿ ಸ್ಥಾಪಿಸಲ್ಪಟ್ಟಿದೆ. ಪ್ರೆಸಿಡೆಂಟ್ ಮೆಸ್ಸಿಕಿ ಮತ್ತು ಪೋಲಿಶ್ ಸರಕಾರದ ಮಂತ್ರಿಗಳು ಅಲ್ಲಿಗೆ ಹೋಗಿರುತ್ತಾರೆ. ತಾ 16ರಲ್ಲು ಜರ್ಮನ್ ಅಧಿಕಾರಿಯನ್ನು ವಾರ್ಸೋ ಪಟ್ಟಣದೊಳಕ್ಕೆ ಪ್ರವೇಶಿಸಬಿಡದಿದ್ದರೂ ತಾ 17ರಲ್ಲು ಅಲ್ಲಿಯ ಸೇನಾನಾಯಕರು ಜರ್ಮನ್ ಸೇನಾನಿಗಳ ಒಳಗೆ ಮಧ್ಯಸ್ಥಿಕೆಗಾಗಿ ಜನಕಳುಹಿಸಬಹುದೋ ಎಂದು ಕೇಳಿದರೆಂದೂ ಅದಕ್ಕೆ ಜರ್ಮನರೊಪ್ಪಿದರೂ ಆಮೇಲೆ ಉತ್ತರವೇ ಇಲ್ಲೆಂದೂ ಜರ್ಮನ್ ಕಡೆಯ ವಾರ್ತೆ.

ಇದೇ ತಾ 16ರಲ್ಲು ಪೋಲಿಶ್ ರುಮೇನಿಯನ್ ಎಲ್ಲೆಯ ಬಳಿ ಪೋಲಿಶ್ ಸೇನೆಯು ಜರ್ಮನ್ ಸೇನೆಯ ಮೇಲೆ ಬಿದ್ದು 12,000 ಮಂದಿ ಜರ್ಮನರನ್ನೂ ಸೆರೆಹಿಡಿದು 100 ಟಾಂಕಿಗಳನ್ನೂ ವಶಪಡಿಸಿಕೊಂಡಿರುವರೆಂದು ತಿಳಿದು ಬರುತ್ತದೆ. ಎಲ್ಲಾ ರಣರಂಗಗಳಲ್ಲಿಯೂ ಘೋರ ಸಂಗ್ರಾಮ ನಡೆದಿದೆ. ಜರ್ಮನ್ ವಿಮಾನಗಳು ಉದ್ದೇಶಪೂರ್ವಕವಾಗಿ ಒಯಲು ಪಟ್ಟಣಗಳ ಮೇಲೆ ವಿಮಾನ ಧಾಳಿ ನಡಿಸಿ ಅಪಾರ ಹಾವಳಿ ಮಾಡಿವೆ. ಸಾವಿರಾರು ಮಂದಿ ಪೋಲರು ರುಮೇನಿಯಕ್ಕೆ ಪ್ರವೇಶಿಸಿ ಆಶ್ರಯ ಪಡೆಯುತ್ತಿದ್ದಾರೆ.

ರಸ್ಯದ ಧೋರಣೆಯಿಂದ ಇಂಗ್ಲೆಂಡ್, ಫ್ರಾನ್ಸ್, ಅಮೇರಿಕ ಮೊದಲಾದ ರಾಷ್ಟ್ರಗಳು ಚಕಿತನಾಗಿವೆ. ಬ್ರಿಟಿಷ್ ಮತ್ತು ಫ್ರೆಂಚರ ಮೇಲೆ ಈಗ ಮತ್ತೂ ದೊಡ್ಡ ಜವಾಬ್ದಾರಿ ಬಿದ್ದಿದೆ. ಪೋಲಂಡಿನ ಹಿಂದಿನ ಸರಕಾರವೇ ನಿರ್ನಾಮವಾಗಿ ಜರ್ಮನಿ ಮತ್ತು ರಸ್ಯಗಳ ಒಪ್ಪಿಗೆಯ ಹೊಸ ಸರಕಾರವು ಮಧ್ಯ ಪೋಲಂಡಿನಲ್ಲಿ ಹೊಸತಾಗಿ ಸ್ಥಾಪಿತವಾದರೆ ಆಂಗ್ಲೋ ಫ್ರೆಂಚರು ಮಾಡುವುದಾದರೂ ಏನು? ಅವರೀಗ ಉಭಯಸಂಕಟದಲ್ಲಿ ಬಿದ್ದು ಪರಿಸ್ಥಿತಿಯನ್ನು ಪುನರಾಲೋಚಿಸಹತ್ತಿರುತ್ತಾರೆ. ಪತ್ರಿಕೆಗಳು ಪೋಲಿಶ್ ರಾಯಭಾರಿಗಳೂ ರಸ್ಯದ ಅನ್ಯಾಯವಾದ ಮತ್ತು ಒಪ್ಪಂದ ವಿರೋಧವಾದ ಆಕ್ರಮಣಶೀಲಧೋರಣೆಯನ್ನು ಖಂಡಿಸುತ್ತಾರೆ.

—— ಪಾಠಕರಲ್ಲಿ ——

ನಾವ 19ನೆ ಹೊಸ ವರ್ಷದ ಆರಂಭದಿಂದ ಸಮಯೋಚಿತ 24 ಪುಟಗಳಿಂದ ಕೊಡಬೇಕೆಂದು ಯೋಚಿಸಿದ್ದೆವು. ಆದರೆ ... ದಿಗಿಲುಗೊಳಿಸಿರವ ... ಹೆಚ್ಚು ... 20 ಪುಟಗಳನ್ನು ಕೊಡಲೇಬೇಕಾಗಿ, ಈ ಬಾರಿ ... ಪುಟ ಕಡಿಮೆ ... (ಸ ಮಾನ್ಯ ... ಪುಟಗಳನು ಇಳಿಸಿಕೊಂಡಿರುತ್ತ 3) ಎಂಬ ಇದಕ್ಕೂ ಕಡಿಮೆ ಪುಟಕೊಡುವ ... —ಮನೇಜರ್

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯ 1 ... 39ರಿಂದ ಬಹಳ ವ್ಯತ್ಯಾಸಗಳಾಗಿ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಿಂದ ... ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ... (rest illegible) ...

ಎಸ್ ಎಸ್. ಪುರಾಣಿಕ,

... ಇನ್ಕಮ್ ಟೇಕ್ಸ್ (ಪ್ರಾಕ್ಟೀಸನರ) ... ಕಟ್ಟಡ, ... ಪೋಸ್ಟು

—ಚಂದಾದಾರರಲ್ಲಿ—

ಚಂದಾ ಅವಧಿ ಮುಗಿದವರಿಗೆಲ್ಲ ನೋಟೀಸು ಕಳಿಸಲಾಗಿದೆ. ಅವರು ತಮ್ಮ ... ಮತ್ತು ... ಬೇಗನೆ ಕಳಿಸಿ ಕೊಡಬೇಕಾಗಿ ... ಪತ್ರಿಕೆ ... ಕಳಿಸಿ ... — ಮನೇಜರ್

THE WELL KNOWN HOUSE FOR DEFORMITY APPLIANCES ARTIFICIAL LIMBS SPLINTS TRUSSES BELTS & SELECTED HOSPITAL REQUISITES ASK FOR FREE MANUAL

K. CHAPMAN & CO.

SANDHURST ROAD BOMBAY 4

ಲೇಖಕರು ಮತ್ತು ಬಾಕೀದಾರರಿಗೆ

ನವಯುಗದಲ್ಲಿ ಪುಟಗಳನ್ನು ಇಳಿಸಿರುವುದರಿಂದ ಇನ್ನುಮುಂದೆ ಲೇಖನ ಜಾಹೀರನ್ನು ಪ್ರಕಟಿಸಲು ಸಾಧ್ಯವಾಗಲಾರದು. ಯುದ್ಧದ ಮತ್ತು ಪ್ರಾಮುಖ್ಯ ಸಮಾಚಾರಗಳನ್ನಷ್ಟೇ ಸಂಕ್ಷೇಪವಾಗಿ ಕೊಡಲಾಗುವದು. —ಮನೇಜರ್

ಜಿಲ್ಲಾ ಸಮಾಚಾರ

ಮಂಗಳೂರು

ವೈ. ಎಮ್. ಎಚ್. ಎ. ಮಂಗಳೂರು

ಇದರ ಮಹಾಸಭೆಯು ತಾ. 9–9–'39ರಲ್ಲು ಸುಖಾವಾಸದ ಸಭಾಭವನದಲ್ಲಿ ಶ್ರೀ. ಬಿ. ಆರ್. ಪ್ರಭುಗಳವರ ಅಧ್ಯಕ್ಷತೆಯಲ್ಲಿ ಜರಗಿ, ಸಭಾ ಕಾರ್ಯಕ್ರಮವು ಮುಗಿದ ಮೇಲೆ ಕೆಳಗಿನ ಕಾರ್ಯಕಾರಿ ಮಂಡಳಿಯು ಆರಿಸಲ್ಪಟ್ಟಿತು, ಶ್ರೀಗಳಾದ ಎಮ್. ವಿ. ಕಾಮತ್ (ಅಧ್ಯಕ್ಷ) ಎನ್. ಎಸ್ ಶೆಟ್ಟಿ, (ಕಾರ್ಯದರ್ಶಿ) ಎಚ್. ವಿ. ನಾಯ್ಕ, (ಕೋಶಾಧಿಕಾರಿ) ಪಿ ಎನ್. ಶೆಣೈ, ಯು ಎನ್ ಶೆಣೈ, ಸಿ ಆರ್. ಕಾಮತ್, ಬಿ. ಆರ್. ಪ್ರಭು, ಕೆ. ಎನ ಪೈ, ಎಸ್. ಆರ್. ನಾಯಕ್, (ತರ್ಕ ಮತ್ತು ಸಾಹಿತ್ಯ ವಿಭಾಗದ ಕಾರ್ಯದರ್ಶಿ) ಬಿ. ಆರ್. ಪ್ರಭು, (ವಾಚನಾಲಯ ಮತ್ತು ಪುಸ್ತಕಭಂಡಾರದ ವ್ಯವಸ್ಥಾಪಕರು)

ಮರದಿನ ಶ್ರೀ. ಟಿ. ಶ್ರೀನಿವಾಸ ಪೈ, ಬಿ ಎ. ವಿದ್ವಾನ್, (ಹಿಂದಿ) ಇವರ ಅಧ್ಯಕ್ಷತೆಯಲ್ಲಿ ತರ್ಕ ಮತ್ತು ಸಾಹಿತ್ಯ ವಿಭಾಗದ ಪ್ರಥಮ ಅಧಿವೇಶನವು ಜರಗಿತು.

ಉಡುಪಿ

ಗಣೇಶಚತುರ್ಥಿ—ಶ್ರೀ ಪರ್ಯಾಯ ಮಠದ ವತಿಯಿಂದ ವ್ಯವಸ್ಥಿತವಾದ ಬಡಗುಮಾಳಿಗೆ ವಿನಾಯಕ ಪ್ರದರ್ಶನವು ಅತಿ ಪ್ರೇಕ್ಷಣೀಯವಾಗಿತ್ತು. ಉದ್ಯಾನರಚನೆಯು ಶ್ರೀಕೃಷ್ಣಾ ಇಲೆಕ್ಟ್ರಿಕ್ ಸ್ಟೋರ್ಸಿನ ಶ್ರೀ. ಕೆ. ಸರ್ವೋತ್ತಮ ಶೆಟ್ಟರ ಇಲೆಕ್ಟ್ರಿಕ್ ಫಿಟ್ಟಿಂಗ್ಸ್‌ಗಳೆಲ್ಲಾ ಅತಿ ಮನೋಹರವಾಗಿದ್ದುವು.

ಸಭೆ:— ತಾ. 17–9–39ರಲ್ಲಿ ಎಡ್ವಕೇಟ್ ಶ್ರೀಯುತ ಬಿ. ಹಿರಿಯಣ್ಣ ಹೆಗ್ಗಡೆಯವರ ಮನೆಯಲ್ಲಿ ಶ್ರೀ ಬಸ್ರೂರು ಹಿರಿಯಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಅಳಿಯಕಟ್ಟನ್ನಾಚರಿಸುವವರ ಸಭೆ ಕೂಡಿ ಶ್ರೀ. ಬಸ್ರೂರು ಹಿರಿಯಣ್ಣ ಶೆಟ್ರೀ ಮೊದಲಾದ 48 ಜನರ ದಸ್ಕತು ಸಹಿ ಪ್ರಕಟವಾಗಿರುವ ಐಟಮುಗಳು ಯಥಾರ್ಥವಾದವುಗಳೆಂದೂ, ಪ್ರಕೃತ ಅಳಿಯಕಟ್ಟು ಸಮಾಜದಲ್ಲಿ ಯಾವ ಸುಧಾರಣೆಯೂ ಅವಶ್ಯವಿಲ್ಲವೆಂದೂ ಮತ್ತು ಈಗ ಪ್ರಕಟಿಸಿರುವ ಬಿಲ್ಲು ಬಹಳ ಹಾನಿಕರವಾದ್ದರಿಂದಲೂ ಸುಧಾರಣೆಯಾಗಬೇಕೆಂದಿದ್ದ ಸಂದರ್ಭದಲ್ಲಿ ಬಹುಜನರ ಅಭಿಪ್ರಾಯವನ್ನು ತಿಳಿದು ಅಂಥಾ ಬಹುಜನರ ಅಭಿಪ್ರಾಯದ ಮೇರೆಗೆ ಮತ್ತು ಬಹುಜನರ ಪ್ರಯೋಜನಾರ್ಥವಾದ ಬಿಲ್ಲು ತಯಾರಿಸುವದು ನ್ಯಾಯವೂ ಯೋಗ್ಯವೂ ಅಲ್ಲದೆ ಈಗ ಮಾಡಿದಂತೆ ಬಿಲ್ಲು ಮೊದಲೇ ತಯಾರಿಸಿ ಅದಕ್ಕೆ ಬೆಂಬಲ ಕರುವ ಬಗ್ಗೆ ಪ್ರಚಾರ ಮಾಡುವುದು ನ್ಯಾಯವಲ್ಲವೆಂದೂ ನಿರ್ಣಯವಾಯಿತು

ಪುತ್ತೂರು

ಜಿಲ್ಲಾ ಪಂಚಾಯತಗಳ ಪರಿಷತ್ತು

ಅಕ್ಟೋಬರ 20ಕ್ಕೆ ಪುತ್ತೂರಲ್ಲಿ ಜರಗಿಸುವ ವ್ಯವಸ್ಥೆ ಮಾಡಲಾಗಿದೆ. ಪರಿಷತ್ತು ಸರ್. ಟಿ. ವಿಜಯ ರಾಘವಾಚಾರ್ಯರಿಂದ ತೆರೆಯಲ್ಪಟ್ಟು, ಡಾ ವಿಟ್ಠಲಶೆಟ್ಟರ ಅಧ್ಯಕ್ಷತೆಯಲ್ಲಿ ಜರಗುವುದು, ಎಲ್ಲಾ ಪಂಚಾಯತ ಬೋರ್ಡಿನವರು ಈ ಪರಿಷತ್ತಿನ ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ. ಮಹಾಸಭೆಯಲ್ಲಿರಿಸತಕ್ಕ ವಿಷಯಗಳನ್ನು ಚರ್ಚಿಸುವರೆ ಸಬ್ಜೆಕ್ಟ ಕಮಿಟಿ ಮೀಟಿಂಗು ಅದೇ ದಿನ ಬೆಳಗ್ಗೆ ಶ್ರೀ. ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗುವುದು, ಚರ್ಚಿಸತಕ್ಕ ಸೂಚನಾ ಪತ್ರವನ್ನು ಕಳುಹಿಸುವವರು ತಾ. 10 10-39 ರೊಳಗೆ ಶ್ರೀ ಮೊಳಹಳ್ಳಿಯವರಿಗೆ ಕಳಿಸತಕ್ಕದ್ದು. ಇನ್ನೇನಾದರೂ ಮಾಹಿತಿ ಬೇಕಾದರೆ ಶ್ರೀ. ಸಂಜೀವ ತೆಳಮಾರ್, ಬಿ. ಎ, ಬಿ. ಯಲ್, ಪಂಚಾಯತ ಆಫೀಸರ್, ಮಂಗಳೂರು ಇವರಿಗೆ ಬರೆಯ ಬಹುದು

ಬೈಂದೂರು—ತಾ. 10–9–39ರಲ್ಲಿ ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ದತ್ತಾರಾಮ ರಾಯರ ಅಧ್ಯಕ್ಷತೆಯಲ್ಲಿ ಅಳಿಯಸಂತಾನಿಗರ ಮಹಾಸಭೆಯೊಂದು ಜರಗಿ ಶ್ರೀ. ಬಸ್ರೂರು ಹಿರಿಯಣ್ಣ ಶೆಟ್ರೀ ಮೊದಲಾದ 48 ಜನರ ಸಹಿಯಿಂದ ಪ್ರಕಟವಾದ ಅಳಿಯಸಂತಾನ ಕಟ್ಟಿನ ಸುಧಾರಣೆ ಮಾಡುವವರಾರು? ಎಂಬ ಲೇಖನವನ್ನು ಸಮರ್ಥಿಸದೆ ಅಳಿಯಸಂತಾನಕಟ್ಟೇ ಶ್ರೇಯಸ್ಕರವೆನ್ನುವ ಮಂಗಳೂರಲ್ಲಿ ಜರಗಲಿರುವ ಅಳಿಯಸಂತಾನ ಸುಧಾರಣೆ ಮಸೂದೆ ಬಗ್ಗೆ ಸೇರುವ ಪರಿಷತ್ತಿನಲ್ಲಿ ಪಾಸಾಗುವ ರೆಝೊಲ್ಯೂಶನ್‌ಗಳು ಅಳಿಯಕಟ್ಟಿನ ಯಾವ ಕುಟುಂಬಕ್ಕೂ ಅನ್ವಯಿಸತಕ್ಕದ್ದಲ್ಲವೆನ್ನುವ, ಪ್ರತಿನಿಧಿಗಳು ನ್ಯಾಯವಾಗಿ ಆರಿಸಲ್ಪಟ್ಟವರಲ್ಲವೆನ್ನುವ ಠರಾವುಗಳು ಪಾಸಾದುವು.

ಆಹಾರ ಸಾಮಗ್ರಿಗಳಿಗೆ ವ್ಯಾಪಾರಸ್ಥರು ಕ್ರಯ ಏರಿಸಬಾರದೆಂದು ನಿಶ್ಚಯಿಸಲು ಶ್ರೀ. ಸುಬ್ಬಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ತಾ. 15 9 39ರಲ್ಲಿ ಸೇರಿತು.

ಜಿಲ್ಲಾ ಫೋರೆಸ್ಟ್ ಆಫೀಸರು ಕೃಷಿಕರಿಗೆ ಆದಷ್ಟು ಸಹಾಯಮಾಡುವುದಾಗಿ ಕಾಡುಗಳಿಗೆ ಉಂಟಾಗುವ ಕಷ್ಟಗಳನ್ನು ಹೋಗಲಾಡಿಸುವುದಾಗಿ ಶ್ರೀ ಬಿ ಸುಬ್ಬಣ್ಣ ಶೆಟ್ಟರಿಗೆ ಆಶ್ವಾಸನೆಯಿತ್ತಿರುವರು.

ಕನ್ನಡ ತಾಂಡವ ಮಂಡಲದ ಮುಂದಡಿ—ಇದರ ಜೀವಾಳದಂತಿರುವ ಶ್ರೀ. ಕುಲಕರ್ಣಿ ಶ್ರೀನಿವಾಸ, ಬಿ ಎ ಇವರು ಜತೆಗಾತಿ ಶ್ರೀ ರೋಹಿಣಿದೇವಿಯರೊಂದಿಗೆ ಮಂಗಳೂರು, ಮಲಬಾರಿಗೆ ಹೋಗಿ ಯಕ್ಷಗಾನ, ಕಥಕ್ಕಳಿಯ ಅಭ್ಯಾಸಮಾಡಿ, ಈಗ ಕೊಯಮುತ್ತೂರಲ್ಲಿ 'ಪುರುಷೋತ್ತಮ' ಎಂಬ ತಮಿಳು ಚಿತ್ರದಲ್ಲಿ ತಮ್ಮ ನರ್ತನವನ್ನು ಕೊಡುತ್ತಲಿದ್ದಾರೆ.

ಕಾಂಗ್ರೆಸ್ ಸದಸ್ಯರನ್ನು ಮಾಡುವುದು—ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿನ್ನೆ (13–9–39) ವಾರ್ಧಾದಲ್ಲಿ ಸೇರಿದ ಸಭೆಯಲ್ಲಿ ಪ್ರಾಥಮಿಕ ಸದಸ್ಯತ್ವದ ಕೊನೆಯ ತಾರೀಕನ್ನು 15–9–39ರಿಂದ 30–9–39ರ ವರೆಗೆ ಮುಂದುವರಿಸಿರುವರು.

ಬೊಂಬಾಯಿ

ಕರ್ನಾಟಕ ಧರ್ಮಾರ್ಥ ಹೈಸ್ಕೂಲ್ ಮುಂಬಾಯಿ—ಕರ್ನಾಟಕ ಧರ್ಮಾರ್ಥ ರಾತ್ರಿಶಾಲೆಯಲ್ಲಿ ಇತ್ತೀಚೆಗೆ ವಿದ್ಯಾರ್ಥಿಗಳ ಸಂಖ್ಯೆಯು ಹಿರಿದುದರಿಂದ ಇದನ್ನು ಹೈಸ್ಕೂಲನ್ನಾಗಿ ಮಾಡಲಾಗಿದೆ. ಇದಕ್ಕೆ ಶ್ರೀ. S. S ಶೆಟ್ಟರು ಅಧ್ಯಕ್ಷರಾಗಿರುವ ಒಂದು ಕಮಿಟಿಯನ್ನು ರಚಿಸಲಾಗಿದೆ.

ಮೈಸೂರು

ಸುಖವಾಗಿರುತ್ತಾರೆ— ಶ್ರೀ. ನಟೇಶ ಮೊದಲಿಯಾರರವರು ಅಮೇರಿಕಾಕ್ಕೆ ಪ್ರಯಾಣ ಮಾಡುವಾಗ 'ಅಥೀನಿಯಾ' ಜಹಜಿನಲ್ಲಿ ಮುಳುಗಿದರೆಂದು ಹಿಂದೆ ತಿಳಿಸಲಾಗಿತ್ತಷ್ಟೆ. ಆದರೆ ಶ್ರೀಯುತರು ಅಮೇರಿಕವನ್ನು ಸುಖವಾಗಿ ಸೇರಿದರೆಂದು ಇಲ್ಲಿಗೊಂದು ಕೇಬಲ್ ಕಳುಹಿಸಿದ್ದಾರೆ. ಶ್ರೀಮದ್ಯುವರಾಜ ಸಾಹೇಬರು ಸಹ ಒಂದು ಕೇಬಲ್ ಕಳುಹಿ ಹಾಲೆಂಡಿನ ಹೇಗ್‌ನಲ್ಲಿ ಸುಖವಾಗಿರುತ್ತಾರೆಂದು ತಿಳಿಸಿದ್ದಾರೆ.

ಶ್ರೀಮನ್ ಮಹಾರಾಜ್ಞಿಯವರು—ಮೈಸೂರು ಶ್ರೀಮನ್ಮಹಾರಾಣಿಯವರು ಕಳೆದ ವಾರಾಂತ್ಯದಲ್ಲಿ ಬೆಂಗಳೂರು ಮಹಿಳಾಸಮಾಜಕ್ಕೆ ಭೇಟಿಯಿತ್ತು ಅಲ್ಲಿ ನಡೆದ ಒಂದು ಸಂತೋಷಕೂಟದಲ್ಲಿ ಗೆದ್ದವರಿಗೆ ಬಹುಮಾನ ಹಂಚಿ ಸಮಯೋಚಿತ ಭಾಷಣಮಾಡಿದರು. ಶ್ರೀಮತಿಯವರು ಈ ತರದ ಸಾರ್ವಜನಿಕ ಸಭೆಗೆ ಬಂದದ್ದು ಇದೇ ಮೊತ್ತಮೊದಲೆಂದು ಹೇಳಲಾಗಿದೆ.

ಸ್ವೀಕಾರ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ 1925ನೇ ಅಕ್ಟೋಬರಿಂದ 1939ನೇ ಜನವರಿ 14ರ ವರೆಗಿನ 'ಹಿಸ್ಟರಿ ಎಂಡ್ ವರ್ಕಿಂಗ್' ಎಂಬ ಸರ್ವಾಂಗ ಸುಂದರ ಜ್ಞಾಪಕಾರ್ಥ ಪತ್ರಿಕೆಯನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿದ್ದೇವೆ, ವಿಮರ್ಶೆ ಹಿಂದಿನಿಂದ.

ಪ್ರಭಾ ಸುಗಂಧ ಕಾರ್ಯಾಲಯ ಸಕಲೇಶಪುರ—ಇವರ ಪ್ರೀತಿಪೂರ್ವಕವಾಗಿ ಕಳಿಸಿದ 'ಪ್ರಭಾಅಂಟಿಸೆಪ್ಟಿಕ್ ಟೂತ್ ಪೌಡರ್', (ಕ್ರಿಮಿನಾಶಕ ದಂತಚೂರ್ಣ) ಪ್ರಭಾ ಹರ್ಬಲ್ ಆಯಿಂಟ್‌ಮೆಂಟ್, ಪ್ರಭಾಕ್ಯಾಸ್ಟರ್ ಆಯಿಲ ಇವನ್ನು ಸಂತೋಷಪೂರ್ವಕ ಸ್ವೀಕರಿಸಿದ್ದೇವೆ ಪ್ರಭಾ ಸುಗಂಧ ಕಾರ್ಯಾಲಯದವರ ತಯಾರಿಕೆಗಳೆಲ್ಲವೂ ಶಾಸ್ತ್ರೀಯವಾಗಿವೆಯೆಂದು ತಿಳಿದುಬರುತ್ತದೆ. ದಂತಚೂರ್ಣವು ಬೇವು ಮತ್ತು ಇತರ ಕ್ರಿಮಿನಾಶಕ ದ್ರವ್ಯಗಳಿಂದ ತಯಾರಿಸಲ್ಪಟ್ಟಿದ್ದು ಹಲ್ಲುಗಳು ಆರೋಗ್ಯವಾಗಿಯೂ ಗಟ್ಟಿಯಾಗಿಯೂ ಇರಲು ಸಹಾಯಕವಾಗಿದೆ. ಇದರ ಮಾಲಕರಾದ ಶ್ರೀ. ಎಸ್. ಎಸ್. ವಿ. ನಾಯ್ಕರವರು ಲಾಭದ ಕಡೆಗೆ ಹೆಚ್ಚಿನ ದೃಷ್ಟಿಯಿಡದೆ ಕೇವಲ ಪ್ರಚಾರ ಮತ್ತು ಜನಹಿತದೃಷ್ಟಿಯಿಂದ ಈ ಕಾರ್ಯಾಲಯವನ್ನು ನಡೆಸುತ್ತಿರುವುದು ಕನ್ನಡಿಗರಿಗೆ ಭೂಷಣವಾಗಿದೆ, ಇವರಿಗೆ ತುಂಬಾ ಪ್ರೋತ್ಸಾಹ ದೊರೆಯಲೆಂದು ಹಾರೈಸುವೆವು.

ಮೊಗವೀರ ಯುವಕ ಸಂಘ ಮುಂಬಾಯಿ—ಇದರ ನಾಲ್ಕನೆ ವರ್ಷದ (1938) ವರದಿಯು ನಮ್ಮ ಹಸ್ತಗತವಾಗಿದೆ. ಉತ್ತಮ ಉದ್ದೇಶಗಳನ್ನಿಟ್ಟುಕೊಂಡು 1932ರಲ್ಲಿ ಈ ಸಂಘವು ಸ್ಥಾಪನೆಯಾಗಿ ವಿದ್ಯಾಪ್ರಸಾರ, ಸಾಹಿತ್ಯಸೇವೆ ಮೊದಲಾದ ಜನಹಿತ ಕಾರ್ಯಗಳನ್ನು ಮಾಡುತ್ತಿದೆ. ದಾನಿಗಳ ಉದಾರ ಸಹಾಯದಿಂದಲ್ಲ ಸಂಘವು ಹಿಂದಿಲ್ಲ. ಸಂಘದ ಸರ್ವಾಂಗೀನ ಅಭಿವೃದ್ಧಿಗೆ ಕಾರ್ಯನಿರ್ವಾಹಕ ಮಂಡಳಿಯ ಉತ್ಸಾಹವೇ ಕಾರಣವಾಗಿದೆ, ಈ ಯುವಕ ಸಂಘವು ಇನ್ನಷ್ಟು ಪ್ರವರ್ಧಮಾನವಾಗಲಿ, ಮೊಗವೀರ ಸಮಾಜಕ್ಕೆ ಮಾರ್ಗದರ್ಶಕವಾಗಲಿ ಹಾಗೂ ನಾಡಸೇವೆಯನ್ನು ಮಾಡಲಿ ಎಂದೇ ನಮ್ಮ ಹಾರೈಕೆ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. No $\frac{137}{1938}$

R. E. P. No. $\frac{727}{1938}$

ಮಧ್ವರಾಯ ಕೂಡ-ವಾದಿರು

ಅರ್ಜಿದಾರರು. ಮತ್ತು

ವಾಸುದೇವ ರಾವ್ ಕೂಡ-ಪ್ರತಿವಾದಿರು ಎದ್ರಿರು.

2ನೇ ಎದ್ರಿ, Venkat Rao, Son of Kunjur Srinivasa Rao, residing in No.5 Kuppu Muthu street, Triplicane Madras 14ನೇ ಎದ್ರಿ K. Ramakrishna Rao, Son of Kunjoor Padmanabhaya, Vakil residing in Udipi Town. 15ನೇ ಎದ್ರಿ, Sheshappaya, Son of Ramappaya, residing in Udipi Hotel, Mount Road, Madras.

ಸದ್ರಿ 2, 14, 15ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಕ್ರಮ ನಂಬ್ರ $\frac{137}{1938}$ನೇ ದಾವೆಯಲ್ಲಿ ಕೊಡೋಣಾದ ಡಿಕ್ರಿಯಲ್ಲಿ ಡಿಕ್ರಿಯ ಹಣಕ್ಕೆ ಮಾರಾಟಕ್ಕೆ ವಿಧಿಯಿರುವ ಸ್ಥಿರಾಸ್ತಿಯನ್ನು ಏಲಂ ಬಗ್ಗೆ ಅಮ್ಲುಜ್ಯಾರಿ ದಾಖ್ಲು ಮಾಡಿ ಸದ್ರಿ ಅಮ್ಲುಜ್ಯಾರಿಯಲ್ಲಿ ಇಸ್ತಿಹಾರು ದಾಖ್ಲು ಮಾಡಿರುತ್ತಾರೆ. ಸದ್ರಿ ಆಸ್ತಿ ಏಲಂ ಸಮಯ ತಮಗೆ ಕೂಡಾ ದರ್ಖಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಬೇಕಾಗಿ R. E. A. No. $\frac{706}{1938}$ಕ್ಕೆ ಅರ್ಜಿದಾಖ್ಲು ಮಾಡಿರುತ್ತಾರೆ, ಸದ್ರಿ ಅಮ್ಲುಜ್ಯಾರಿಯಲ್ಲಿ ಏಲಮಿನ ನಿರ್ಣಯಗಳನ್ನು ನಿರ್ಣಯಿಸುವರೆ ಮತ್ತು ಬಿಡ್ ಅರ್ಜಿ ಕೂಡಾ ತನ್ಖ ಬಗ್ಗೆ ತಾ 6-10 39ಕ್ಕೆ ಇಟ್ಟಿರುತ್ತದೆ, ಈ ಕುರಿತು ತಮ್ಮ ಕಡೆಯಿಂದ ಉಜುರಿಸುವದಿದ್ರೆ ನೀತ್ರ ಸದ್ರಿ ತಾ. 6 10-39ನೇ ದಿವಸ ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತರ ಹಾಜರು ಆಗಿ ಜ್ಯಾಹೀರು ಮಾಡತಕ್ಕದ್ದು, ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿಯನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಿರುತ್ತದೆ.

KARKALA 17—9—1939, } **K. V. Kamath,** *Advocate for Petitioner*

ನವಸೃಷ್ಟಿ

ಕಂಬನಿ—ದಿವಂಗತ ಮಿಸೆಸ್ ಬಿ. ಟಿ. ಜಿ. ಕೃಷ್ಣ ಅವರೀವ ಪ್ರಕಾಶಕರು ಮನೋಹರ ಗ್ರಂಥ ಭಂಡಾರ, ಧಾರವಾಡ, ಬೆಲೆ ರೂ. ೧. ಕ್ಯಾಲಿಕೋ ೧—೮—೦.

ಈ ಕಥಾಸಂಗ್ರಹದಲ್ಲಿ ಶ್ರೀಮತಿಯವರು ೧೯೩೨ ಮತ್ತು ೩೯ರ ತಮ್ಮ ೭ ವರ್ಷಗಳ ಸಾಹಿತ್ಯಜೀವನದಲ್ಲಿ ಬರೆದ ಹಲವು ಕತೆಗಳಲ್ಲಿ ೧೨ ಮಾತ್ರ ಪ್ರಕಟಿಸಲ್ಪಟ್ಟಿವೆ. ಎಲ್ಲ ಕಥೆಗಳಲ್ಲೂ ಹೊರಹೊಮ್ಮುವ ಪ್ರಾಮುಖ್ಯ ಭಾವವೆಂದರೆ ಮುನ್ನುಡಿಗಾರರಾದ ಶ್ರೀ. ದ. ರಾ. ಬೇಂದ್ರೆಯವರನ್ನುವಂತೆ 'ಒಂದಲ್ಲೊಂದು ವಿಧದಿಂದ ಹೆಣ್ಣು ಗಂಡಿನ ಜೀವನವು, ಅದರ ಭಾಗ್ಯ ದುರ್ಭಾಗ್ಯದ ಆದರ ಪ್ರಣಯದ ಆಖ್ಯಾನಗಳು, ಗಂಡಸಿನ ದೌರ್ಜನ್ಯ, ದಾರಿದ್ರ್ಯ—ಕುಲೀನಪತಿಗಳ ದೌರ್ಭಾಗ್ಯ, ಹೆಂಗಸಿನ ಯುಗಯುಗದ ದುರ್ವಿಧಿವಿಲಾಸ, ಸಮಾಜದ ವಿಪರೀತ ದುರ್ಬುದ್ಧಿ, ಶಿಷ್ಟಾಚಾರಗಳ ಅಂಧವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖವಾಗಿ ಗೌರವ್ಯನಿಪುಣ ಕರುಳಿನ ತಂತಿಯಿಂದ ಮಿಡಿದುಬಂದ ಮೂಕಶೋಕವು ಹೃದಯ ಭೇದಕವಾಗಿಯೂ ಹೃದಯಬೋಧಕವಾಗಿಯೂ ಆಗಿರುವದು.' ಕರ್ನಾಟಕದ ಸ್ತ್ರೀಲೇಖಕರಲ್ಲಿ ಶ್ರೀಮತಿಯವರ ಸ್ಥಾನ ಹಿರಿದಾದುದು, ಇವರ ಇತ್ತೀಚಿನ ಕೌಸಲ್ಯಾನಂದನ ಮಗುವಿನ ರಾಣಿ ಮೊದಲಾದ ಕತೆಗಳು ಉತ್ತಮ ಪುರುಷ ಲೇಖಕರ ಕತೆಗಳಿಗೆ ಸರಿ ಮಿಗಿಲೆನಿಸುವಂಥಗಳೇ ಆಗಿವೆ ಇವರಿಂದ ಹಲವು ಕೃತಿಗಳು ಹೊರಬರಬಹುದಾಗಿತ್ತು. ಆದರೆ ತನ್ನ ೨೭ ವಯಸ್ಸಿನಲ್ಲೇ ಅವರು ನಮಗೊಂದು 'ಕಂಬನಿ' ಕೊಟ್ಟು ಮರೆಯಾದರು ಇವರ ಇನ್ನೊಂದು ಕಥಾಸಂಗ್ರಹವನ್ನೂ ಒಂದು ಕಾದಂಬರಿಯನ್ನೂ ಇದೇ ಪ್ರಕಾಶಕರು ಹೊರಡಿಸಲಿರುವರೆಂಬುದು ಸಂತೋಷಕರ.

ಶ್ರೀ. ಬೇಂದ್ರೆಯವರ ಮುನ್ನುಡಿ—ಶ್ರೀ. ಅಂಬಿಕಾತನಯ ದತ್ತರ 'ತಂಗಿ ಗೌರವ್ವ' ಎಂಬ ಚರಮಗೀತ, ಶ್ರೀ. ದತ್ತಾತ್ರೇಯ ಕುಲಕರ್ಣಿಯವರ 'ನಾನು ಕಂಡ ಗೌರವ್ವ' ಎಂಬ ಪರಿಚಯ ಲೇಖನ ಇವೆಲ್ಲಾ ಈ ಪುಸ್ತಕದ ಕಳೆಯನ್ನು ಹೆಚ್ಚಿಸಿವೆ, 3 18-136 ಪುಟಗಳು. ಅತ್ಯಲ್ಪ ಬೆಲೆಗೆ ಉತ್ತಮ ಪುಸ್ತಕಗಳನ್ನು ಒದಗಿಸುತ್ತಿರುವ ಮನೋಹರ ಗ್ರಂಥ ಭಾಂಡಾರದವರ ಕಾರ್ಯವನ್ನು ಅಭಿನಂದಿಸುವೆವು.

ಪ್ರಕಟಣೆ

ಉಡುಪಿ ಕಸಬಾ ಚರ್ಚರೋಡಿನಲ್ಲಿರುವ ಕಾಫಿ ಹೋಟೆಲ್ ಎಚ್. ಸುಬ್ರಾಯ ಪೈಯು ಈ ಮೂಲಕ ತಿಳಿಯಪಡಿಸುವದೇನೆಂದ್ರೆ —ತಾ. 11 9-39ರಲ್ಲು ಆದ ಅಕ್ಕಿ ಸಂಬಂಧದ ಗಲಾಟೆಯಲ್ಲಿ ಅನೇಕರು ಬಂದು ಹೋಟೆಲನ್ನು ಕೂಡ್ಲೆ ಬಂದುಮಾಡು, ಎಲ್ಲಾ ಹೋಟೆಲುಗಳು ಬಂದುಮಾಡಿದ್ದಾರೆ. ನೀನು ಕೂಡ ನಾಳೆ ಬಂದುಮಾಡಬೇಕು ಎಂತ ಹೇಳಿದ್ದಕ್ಕೆ ನಾನು ಕೂಡಾ ತಾ. 12-9-39ರಲ್ಲು ನನ್ನ ಕಾಫಿ ಹೋಟೆಲನ್ನು ಬಂದುಮಾಡಿರುತ್ತೇನೆ. ಈಗ ನೋಡುವಾಗ್ಗೆ ಅಕ್ಕಿಸಂಬಂಧದ ಗಲಾಟೆಗೂ ಕಾಫಿ ಹೋಟೆಲಿಗೂ ಏನೂ ಸಂಬಂಧವಿಲ್ಲಾ ಎಂತ ತಿಳಿಯಿತು. ಅದೂ ಅಲ್ಲದೆ ನನ್ನಲ್ಲಿ ಕಾಫಿಕುಡಿಯುವ ಕುಳವಾರುಗಳಿಗೆ ನಾನು ಬಂದುಮಾಡುತ್ತೇನೆ ಎಂಬುದನ್ನು ತಿಳಿಸದೆ ಇದ್ದ ತಪ್ಪನ್ನು ನಾನೇ ಒಪ್ಪಿಕೊಳ್ಳುತ್ತೇನೆ, ಆ ಬಗ್ಗೆ ಪಶ್ಚಾತ್ತಾಪಪಟ್ಟು ಸಾರ್ವಜನಿಕರಿಗೆ ಗೊತ್ತಾಗುವಂತೆ ಈ ಪ್ರಕಟಣೆಯನ್ನು ಪ್ರಕಟಿಸುತ್ತೇನೆ. ಸಾರ್ವಜನಿಕರು ಬಡವನಾದ ನನ್ನ ಮೇಲೆ ಕನಿಕರವಿಟ್ಟು ಎಂದಿನಂತೆಯೇ ನನ್ನ ಹೋಟೆಲಿಗೆ ಬಂದು ನನ್ನನ್ನು ಪ್ರೋತ್ಸಾಹಿಸುವರಾಗಿ ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ

19 9 39 ಉಡುಪಿ } ಎಚ್. ಸುಬ್ರಾಯ ಪೈ.

ಮಾನವನಿಗೆ ಮುಖ್ಯ ಬೇಕಾದುದೇನು?

ಹಣ, ಹಾಗಾದರೆ ಇಲ್ಲಿಗೆ ಬನ್ನಿರಿ. ಜಗತ್ತೀರಕನಾದ ಸರ್ವಕರ್ತನ ಮೇಲೆ ದೃಢಭಕ್ತಿಯನ್ನಿಟ್ಟು ಅವನ ಕಡೆಗೆ ಕಣ್ಣುಬಿಟ್ಟು ನೋಡುವವರಿಗೆ ಸ್ವಾಮಿಯು ತನ್ನ ಸರ್ವ ಮಾಯವನ್ನು ಬೀರಿ, ಅವನ ಬೇಡಿಕೆಯನ್ನು ಪೂರೈಸುವನು ಎನ್ನಲೇನು ಸಂಶಯ?

ಕಾಟನ್ ಮತ್ತು ಶೇಯರ್ ಬಜಾರಿನಲ್ಲಿ ದುಡ್ಡನ್ನು ಸಂಪಾದಿಸುವುದಕ್ಕೆ ಜರೂರು ನನ್ನಲ್ಲಿ ಒಂದಾವರ್ತಿ ಬಂದು ಭೇಟಿಮಾಡಿರಿ. ಬಜಾರಿನ ವಿಷಯ ಯೋಗ್ಯ ಸೂಚನೆಕೊಡಲ್ಪಡುವುದು. ಪತ್ರಮಾತ್ರ ಇಂಗ್ಲಿಷ್ ಯಾ ಹಿಂದಿ, ಗುಜರಾತ್.

ಚಾರ್ಜು ಅಂತೂ ಬಹಳ ಕಮ್ಮಿ, ಒಂದು ವಾರದ **ಕ್ಕೆ Rs 5 0-0. ಒಂದು ತಿಂಗಳಿಗೆ Rs. 15-0 0. ಸಮಯ ಬೆಳಿಗ್ಗೆ 8–10,** ಸಾಯಂಕಾಲ 4ರಿಂದ 6ರ ತನಕ,

J M. Joshi
Astrologer & Palmist
25 Chandramahal BOMBAY, 4.

(೭ನೇ ಪುಟದಿಂದ)

ಡುವ ಮೊದಲು, ನಿರಂಕುಶತೆಯೇ ರಾಜ್ಯ ಮಾಡಿಕೊಂಡಿರುವ ತಮ್ಮ ಸಂಸ್ಥಾನಗಳಲ್ಲಿ ಪ್ರಜಾಸತ್ತೆಯನ್ನು ಸ್ಥಾಪಿಸಬೇಕು. ಇದಕ್ಕೆ ಸಂಸ್ಥಾನಾಧಿಪತಿಗಳಿಗಿಂತಲೂ ಬ್ರಿಟಿಷ್ ಸರಕಾರವೇ ಹೆಚ್ಚು ಜವಾಬ್ದಾರಿಯಿರುವುದೆಂದು ಇತ್ತಲಾಗಿನ ವಿದ್ಯಮಾನಗಳಿಂದ ವ್ಯಕ್ತವಾಗಿದೆ. ಈ ಧೋರಣೆಯು, ಬ್ರಿಟಿಷ್ ಸರಕಾರವು ಯುರೋಪಿನಲ್ಲಿ ಹೋರಾಡುವ ಪ್ರಜಾಸತ್ತೆ ಮತ್ತು ಲೋಕದ ನವನಿರ್ಮಾಣದ ಪ್ರತಿವಿರುದ್ಧವಿದೆ. ಯುರೋಪ್, ಆಫ್ರಿಕ ಮತ್ತು ಏಸ್ಯಖಂಡಗಳಲ್ಲಿ ಮತ್ತು ಹಿಂದುದೇಶದಲ್ಲಿ ನಡೆದಿರುವ ವಿದ್ಯಮಾನಗಳಿಂದ, ಬ್ರಿಟಿಷ್ ಸರಕಾರವು ಈಗ ಹೇಳಿದಂತೆಯೇ ಮುಂದೆ ನಡೆಯುವುದೆಂದು ನಂಬಲು ಸಾಧ್ಯವಿಲ್ಲ. ಲೋಕದಲ್ಲಿ ನಿಜವಾದ ಪ್ರಜಾಸತ್ತೆಯು ಸ್ಥಾಪಿತವಾಗಬೇಕಾದರೆ ಸಾಮ್ರಾಜ್ಯವಾದವೂ ಫೆಸಿಸ್ಟ್‌ವಾದವೂ ಕೊನೆಗೊಳ್ಳಬೇಕು. ಆಗ ಮಾತ್ರ ಲೋಕದ ನವನಿರ್ಮಾಣವನ್ನು ರಚಿಸಲು ಸಾಧ್ಯವಿದೆ. ಈ ನವನಿರ್ಮಾಣದಲ್ಲಿ ಸಹಕರಿಸಲು ಕಮಿಟಿಯು ಆತುರಪಡುತ್ತದೆ. ಆದರೆ ಸಾಮ್ರಾಜ್ಯವಾದರೀತ್ಯಾ ನಡೆಸಲ್ಪಟ್ಟು ಹಿಂದುದೇಶದಲ್ಲಿಯೂ ಹೊರಗೂ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬಲಗೊಳಿಸುವ ಯುದ್ಧದಲ್ಲಿ ಕಾಂಗ್ರೆಸಿಗೆ ಸಹಕಾರವೀಯಲು ಸಾಧ್ಯವಿಲ್ಲ.

ಯುದ್ಧದ ಉದ್ದೇಶವು ಸ್ಪಷ್ಟೀಕರಿಸಲ್ಪಡಬೇಕು

ಈ ಯುದ್ಧದ ನಿಜವಾದ ಉದ್ದೇಶ, ಹಿಂದೂದೇಶದ ಪ್ರಕೃತದ ಮತ್ತು ಮುಂದಿನ ಸ್ಥಾನದ ಕುರಿತು ಬ್ರಿಟಿಷ್ ಸರಕಾರದ ಧೋರಣೆಯು ಸ್ಪಷ್ಟೀಕರಿಸಲ್ಪಡುವವರೆಗೆ ಕಾಂಗ್ರೆಸಿಗೆ ಆ ಕುರಿತು ತನ್ನ ಧೋರಣೆಯನ್ನು ನಿಶ್ಚೈಸಲು ಸಾಧ್ಯವಿಲ್ಲ. ಪ್ರಜಾಸತ್ತೆ, ಸಾಮ್ರಾಜ್ಯಶಾಹಿ ಮತ್ತು ಲೋಕದ ನವರಚನೆಯ ಕುರಿತು ತನ್ನ ಧೋರಣೆ ಏನೆಂಬುದನ್ನು ಬ್ರಿಟಿಷ್ ಸರಕಾರವು ನಿಸ್ಸಂದೇಹವಾಗಿ ಸ್ಪಷ್ಟಪಡಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಿನಂತಿಮಾಡಿಕೊಳ್ಳುತ್ತದೆ. ವಿಶೇಷವಾಗಿ ಈ ಧೋರಣೆಯು ಹಿಂದೂದೇಶಕ್ಕೆ ಹೇಗೆ ಅನ್ವಯಿಸುವುದು? ಅದನ್ನು ಪ್ರಕೃತ ಹೇಗೆ ಜ್ಯಾರಿಗೆ ತರಲಾಗುವುದು? ಸಾಮ್ರಾಜ್ಯಶಾಹಿಯನ್ನು ಅಂತ್ಯಗೊಳಿಸಿ ಹಿಂದೂದೇಶವು ಹಿಂದೀಯರ ಇಚ್ಛೆಯ ಮೇರೆಗೇನೇ ಆಳಲ್ಪಡುವ ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಲ್ಪಡುವುದೇ ಎಂಬುವು ಸ್ಪಷ್ಟವಾಗಬೇಕಾಗಿದೆ. ಹೀಗೆ ಮುಂದೆ ಸಾಮ್ರಾಜ್ಯಶಾಹಿ ಮತ್ತು ಫೆಸಿಸ್ಟ್ ಪದ್ಧತಿಯನ್ನು ಕೊನೆಗೊಳಿಸುವ ವಚನವಿತ್ತು ಕೊಡಲ್ಪಡುವ ಸ್ಪಷ್ಟವಾದ ನಿರೂಪವನ್ನು ಎಲ್ಲಾ ದೇಶಗಳವರೂ ಸ್ವಾಗತೀಕರಿಸದಿರಲಾರರು. ಇದನ್ನು ಸಾಧ್ಯವಾದಷ್ಟು ಹೆಚ್ಚಾಗಿ ಕೂಡಲೇ ಜಾರಿಗೆ ತರುವುದರಿಂದ ಜನತೆಗೆ ವಿಶ್ವಾಸವುಂಟಾಗುವುದು. ಯಾವುದಾದರೊಂದು ನಿರೂಪಣೆಯ ಪರೀಕ್ಷೆಯು ಅದರ ಪ್ರಕೃತದ ಆಚರಣೆಯ ಮೇಲೆ ಅವಲಂಬಿಸಿಕೊಂಡಿದೆ

ಯುದ್ಧ ಮತ್ತು ಅದರ ಮೂಲ ಕಾರಣ

ಇಂದೀಗ ಯುರೋಪಿನ ಯುದ್ಧದ ಪರಿಣಾಮದ ಕಲ್ಪನೆಯು ಭಯಂಕರವಾಗಿದೆ. ಆದರೆ ಕಳೆದ ವರ್ಷಗಳಲ್ಲಿ ಅಬಿಸೀನಿಯ, ಸ್ಪೈನ್ ಮತ್ತು ಚೀನದಲ್ಲಿ ಯುದ್ಧದ ಭಯಂಕರ ಹಾವಳಿಯಾಗಿರುವುದು. ಅಸಂಖ್ಯಾತ ನಿರ್ದೋಷಿ-ಗಂಡಸರು, ಹೆಂಗಸರು ಮತ್ತು ಮಕ್ಕಳು ಪೈಶಾಚಿಕ ಬೊಂಬುಗಳ ಸ್ಫೋಟಕ್ಕೊಳಗಾಗಿ ನಾಶಹೊಂದಿರುತ್ತಾರೆ. ಅಮಾನುಷ ಕೊಲೆ ಮತ್ತು ಹಿಂಸೆಗಳು ನಿರಾತಂಕವಾಗಿ ನಡೆದಿರುವವು. ಇಂದೀಗ ಬರ್ಬರ ಹಿಂಸೆಯು ಭೀಕರತೆಯಿಂದ ಇಡೀ ಲೋಕವನ್ನೇ ಕವಿದಿರುವುದು. ಅದನ್ನು ವಿರೋಧಿಸಿ ಕೊನೆಗೊಳಿಸದಿದ್ದರೆ ಇಡೀ ನಾಗರಿಕತೆಯೇ ನಾಶವಾಗುವ ಸಂಭವವುಂಟಾಗಿದೆ. ಆದರೆ ಅದರ ಮೂಲ ಕಾರಣ ಫೆಸಿಸ್ಟ್‌ವಾದ ಮತ್ತು ಸಾಮ್ರಾಜ್ಯವಾದ. ಅದನ್ನು ನಿವಾರಿಸುವುದರಲ್ಲಿ ವರ್ಕಿಂಗ್ ಕಮಿಟಿಯವರು ಸಹಕರಿಸಲು ಸಿದ್ಧವಿರುವರು. ಆದರೆ ಈ ಭೀಕರ ಯುದ್ಧವೂ ಸಾಮ್ರಾಜ್ಯಶಾಹಿಯನ್ನು ಬಲಪಡಿಸುವುದಕ್ಕಾಗಿಯೇ ನಡಿಸಲ್ಪಟ್ಟರೆ ಅದೊಂದು ಮಹತ್ತಾದ ಅನಾಹುತವೇ ಸರಿ

ಹಿಂದೀಯರಿಗೆ ಜಪಾನ್ ಅಥವಾ ಜರ್ಮನ್ ಜನತೆಯೊಂದಿಗೆ ಯಾವ ಕಲಹವೂ ಇರುವುದಿಲ್ಲ. ಸ್ವಾತಂತ್ರ್ಯವನ್ನು ನಿರಾಕರಿಸಿ ಹಿಂಸೆ ಮತ್ತು ಆಕ್ರಮಣದ ಮೇಲೆ ಆಧರಿಸಿಕೊಂಡಿರುವ ಪದ್ಧತಿಗಳನ್ನವರು ತೀವ್ರವಾಗಿ ದ್ವೇಷಿಸುವವರಿದ್ದಾರೆ. ಒಂದು ಜನಾಂಗದ ಮೇಲೆ ಇನ್ನೊಂದು ಜನಾಂಗದ ವಿಜಯ, ಅಥವಾ ಹೊರಿಸಲ್ಪಡುವ ಶಾಂತಿಯನ್ನು ಕಾಂಗ್ರೆಸು ಹಾರೈಸುತ್ತಿರುವುದಿಲ್ಲ. ಎಲ್ಲಾ ದೇಶಗಳ ಎಲ್ಲಾ ಜನತೆಗೂ ಸ್ವಾತಂತ್ರ್ಯವು ದೊರೆಯುವಂತೆ ನಿಜವಾದ ಪ್ರಜಾಸತ್ತೆಯ ವಿಜಯ ಮತ್ತು ಹಿಂಸೆ ಮತ್ತು ಸಾಮ್ರಾಜ್ಯಶಾಹಿಯ ದಬ್ಬಾಳಿಕೆಯ ಭೀಕರತೆಯಿಂದ ಮುಕ್ತವಾದ ಲೋಕವನ್ನು ಕಾಂಗ್ರೆಸು ನಿರೀಕ್ಷಿಸುತ್ತಿರುವುದು.

ಹಿಂದೀಯರೊಡನೆ ವಿನಂತಿ.

ಹಿಂದೀಯರು ತಮ್ಮೊಳಗಣ ಕಲಹ ಮತ್ತು ಕಚ್ಚಾಟಗಳನ್ನು ಕೊನೆಗೊಳಿಸಬೇಕು. ಅಪಾಯದ ಈ ವಿಷಮ ಪರಿಸ್ಥಿತಿಯಲ್ಲಿ ಒಕ್ಕಟ್ಟಿನಿಂದ ಒಂದೇ ರಾಷ್ಟ್ರವಾಗಿ, ಲೋಕದ ವ್ಯಾಪಕ ಸ್ವಾತಂತ್ರ್ಯದೊಳಗೆ ಹಿಂದೂದೇಶದ ಸ್ವಾತಂತ್ರ್ಯವನ್ನು ಸಾಧಿಸುವ ದೃಢನಿರ್ಧಾರ ಮಾಡಿಸಿಕೊಳ್ಳಲು ಉದ್ದೇಶದಿಂದ ಶಾಂತವಾಗಿ ಸಿದ್ಧವಾಗಿರಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಿನಂತಿಮಾಡಿಕೊಳ್ಳುತ್ತದೆ

ನೋಟೀಸು

ಪುತ್ತೂರು ಡಿ. ಮು ಕೋರ್ಟು

O. S 288/1939.

ಸುಬ್ರಹ್ಮಣ್ಯ ಅಡಿಗ—ವಾದಿ

ರಾಮಕೃಷ್ಣ ಹೆಬ್ಬಾರ ಕೊಡಾ—ಪ್ರತಿವಾದಿಯು.

3ನೆ ಪ್ರತಿವಾದಿ ಸೀತಾರಾಮ ಅಡಿಗ, ಮಂಜುನಾಥ ಅಡಿಗರ ಮಗ, ಹಾಲಿರಾವುಕೆಂಜಗ್ರಾಮ —

ವಾದಿಯು ಪ್ರತಿವಾದಿರಿಂದ ಬಹ ಅಸಲಿನ ಬಡ್ಡಿ ಬಾಕಿ ರೂ. 62-8 0ಕ್ಕೆ ದಾವಾಮಾಡಿ ಅದು ತಾ 28-9-1939ಕ್ಕೆ ನೋಟೀಸಿನ ಮ್ಯಾದ ಆಗಿರುತ್ತದೆ ಆ ವ್ಯಾದೆಗೆ ಪ್ರತಿವಾದಿರು ಅಂದ್ರೆ 3ನೆ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಇದ್ದರೆ ಆ ವ್ಯಾದೆಗೆ ಕೋರ್ಟಿಗೆ 11 ಘಂಟೆಗೆ ತಪ್ಪದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ಹಿವಾಯಿ ಎಂತ ಮಾಡಿ ದಾವೆಯನ್ನು ತನ್ನಿಯಿಂದ ತೀರ್ಮಾನಿಸಲಾಗುವುದು. ವಾದಿ ಕಡೆಯಿಂದ ಕೊಟ್ಟ R. I. A.1106/1939ನೆ ಅರ್ಜಿಯ ಹುಕುಂ ಪ್ರಕಾರ ಈ ನೋಟೀಸು ಮಾಡ್ಸಿದ ದೆ.

14 9 '39 } B. Ramachandra Rau
ಪುತ್ತೂರು } *Vakil for Plaintiff*

ಮಂಗಳೂರ ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು.

(ತಾ 4-9-39ರಲ್ಲಿದ್ದಂತೆ ಪಜೂರು ಟ್ರೇಜರಿಯಿಂದ)

	ರಿಂದ			ವರೆಗೆ		
1 (a) ಅಕ್ಕಿ ಅವ್ವಲ್ ಗಡ್ಡ	4	14	0	5	0	0
(b) " ದುಯಂ " "	4	10	0	4	12	0
2 (a) " ಅವ್ವಲ್ ಸಗ್ಗಿ	4	10	0	4	11	0
(b) " ದುಯಂ " "	4	7	0	4	9	0
3 (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	27	8	0	35	0	0
(b) " ಸಿಪ್ಪೆಯಿದ್ದದ್ದು "	30	0	0	40	0	0
4 ಕೊಬ್ಬರಿ ಆಫೀಸು ಖಂಡಿಗೆ	50	0	0			
5 ತೆಂಗಿನ ಎಣ್ಣೆ ಮಣಕ್ಕೆ	3	7	0		.	
6 ಅಡಿಕೆ ಸಿಪ್ಪೆಯಿದ್ದದ್ದು 1000ಕ್ಕೆ	2	8	0	3	8	0
7 ಗೇರುಬೀಜ ಮುಡಿಗೆ	3	8	0			
8 ಕಬ್ಬಿನ ಬೆಲ್ಲ ಖಂಡಿಗೆ	55	0	0	60	0	0
9 ಒಳ್ಳೇ ಮೆಣಸು ಹಂಡ್ರೆಡ್ ವೇಟಿಗೆ	14	8	0	15	8	0

ಕಂಬನಿ

ಮಿಸೆಸ್ ಬಿ ಟಿ ಜಿ ಕೃಷ್ಣ

ಅವರ ಸಣ್ಣ ಕತೆಗಳ ಸಂಕಲನ.

ಶ್ರೀ. ಬೇಂದ್ರೆಯವರ ಮುನ್ನುಡಿ, ಶ್ರೀ. ದತ್ತಾತ್ರೇಯ ಅವರ

'ನಾನು ಕಂಡ ಗೌರಮ್ಮ' ಇವುಗಳೊಡನೆ

ಬೆಲೆ ಒಂದು ರೂಪಾಯಿ.

ಶ್ರೀ ಬೇಂದ್ರೆಯವರು ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ

'ಈ ಹನ್ನೆರಡು ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣುಗಂಡಿನ ಜೀವನದ, ಅವರ ಭಾಗ್ಯ-ದುರ್ಭಾಗ್ಯದ, ಅವರ ಪ್ರಣಯದ ಆಖ್ಯಾನಗಳಾಗಿವೆ. ಗಂಡಸಿನ ದೌರ್ಜನ್ಯ, ದಾರಿದ್ರ್ಯ, ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯೌವನಯುಗದ ದುರ್ವಿಧಿ ವಿಲಾಸ, ಸಮಾಜದ ವಿಪರೀತ ದುರ್ಬುದ್ಧಿ, ಶಿಷ್ಟಾಚಾರಗಳ ಅಂಧ ವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗೌರಮ್ಮನವರ ಕರುಣೆ ತುಂಬಿ ಬಂದ ಕವನ ಹೃದಯ ಭೇದಕವಾಗಿಯೂ, ಹೃದಯಬೋಧಕವಾಗಿಯೂ ಆಗಿರುವದು'

ಕತೆಗಾರ್ತಿಯ ಭಾವಚಿತ್ರವಿದೆ 'ಅಂಬಿಕಾತನಯದತ್ತ'ರ 'ತಂಗಿ ಗೌರಮ್ಮ' ಎಂಬ ಕವಿತೆ ಇದೆ

ಮನೋಹರ ಗ್ರಂಥ ಭಾಂಡಾರ, ಧಾರವಾಡ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —**ನವಭಾರತ ಪುಸ್ತಕ ಭಂಡಾರ.**

ಶ್ರೀರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್:—**ಹೂವಮಾರ್ಕೆಟಿನ ಬಳಿ, ಮಂಗಳೂರು.**

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ವರ್ಗದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿ ಸೋರುವುದು, ನೋವು, ಉರಿಯುವುದು, ಶಬ್ದವೇಳುವುದು, ತುರಿಸುವುದು, ಕೀರು ಅಥವಾ ಮೊಳವೇಳುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡುತನವೇ ಮೊದಲಾದ ಎಂಥೆಂಥ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣಹೊಂದುವದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವದು. ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ. 5, ಟಪಾಲು ಖರ್ಚು ಪ್ರತ್ಯೇಕ

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟುಗಳೂ, ಪೇಪರ್ ವೆಯಿಟ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು.

CROWN RUBBER STAMP CO,

Balmat Road, MANGALORE

Includ by the Mysore Govt Stores, Purchase Committee in the list of approved firms

THE TARTARS FOUGHT LIKE MAD WOLVES AND THE COSSACKS PAID A HEAVY PRICE

Nevertheless they fought like men!

BLOOD-SHED, CORPSES, CHAOS, SOBBING SOULS, WEEPING WIVES AND WAILING MOTHERS

were the order of the day

SUCH WAS THE CONSPIRACY THAT JABIR HAD FORMED TO CRUSH THE COSSACKS! EVEN THE HALF WITTED RUSSIAN KING GAVE ALL POWERS TO JABIR, NOT IN THE LEAST KNOWING THAT JABIR HAD TARTARS' BLOOD IN HIS VEINS! BUT MURAD, THE COSSACK GENERL, DESPITE REVERSES, AND AT THE RISK OF HIS LIFE, ENDED ALL PLANS OF JABIR IN SMOKE.

Best and spectacular presentation of Sagar Movitone

WATAN

featuring: Kumar, Bibbo, Yakub, Maya, Sitara Budo and others.

Critics have hailed the picture! spectators have thrown their hats off in excitement and ecstacy of joy!

SPLENDID PERFORMANCE! MELODIOUS & HAUNTING SONGS! GRIPPING PRESENTATION!

See ToDay at **SRI RAMAKRISHNA THEATRE, UDIPI.**

Runing programme Upto 22-9-39 HURICANE HANSA *from 22-9-1939*

ಟಾರ್ಟರರು ಹಸಿದ ಹೆಬ್ಬುಲಿಯಂತೆ ಕಾದಿದರು! ಕೊಸಕ್ಕರು ಶಕ್ತಿ ಮೀರಿ ಹೆಣಗಿದರು ವೀರರಂತೆ!!

ರಕ್ತಪಾತ, ಮೃತದೇಹಗಳು, ಅನಾಹುತ, ಗೋಳಾಟ---ಎಲ್ಲೆಲ್ಲೂ ಉತ್ಪಾತ!!!

ಕೊಸಕ್ಕರನ್ನು ನಿರ್ನಾಮಮಾಡಬೇಕೆಂದು ಹೂಡಿದ ಜಬೀರನ ಒಳಸಂಚು ಅಂತಹುದು! ಜಬೀರನ ಧಮನಿಯಲ್ಲಿ ಟಾರ್ಟರರ ರಕ್ತವು ಚಲಿಸುತ್ತಿರುವುದೆಂಬುದನ್ನು ರಾಜನು ಕೂಡಾ ತಿಳಿಯದೆ, ಅವನಿಗೆ ಸಂಪೂರ್ಣ ಅಧಿಕಾರವನ್ನು ಕೊಡುವನು! ಆದರೆ, ಕೋಸಕ್ಕರ ಜನರಲ ಮುರಾದನು ಮಾತ್ರ ತನ್ನ ಜೀವದ ಹಂಗನ್ನು ತೊರೆದು ಕಷ್ಟವನ್ನು ಗಣಿಸದೆ, ಇಷ್ಟವನ್ನು ಪಡೆದನು. **ಸಾಗರ ಮುವಿಟೋನಿನವರ ಅತ್ಯುತ್ತಮ ಕೃತಿ.**

ವತನ್!

ವಿಮರ್ಶಕರು ಕೊಂಡಾಡಿರುವರು! ಪ್ರೇಕ್ಷಕರು ಸಂತೋಷಲಹರಿಯಲ್ಲಿ ಕುಣಿದಾಡಿರುವರು! ಬಿಬ್ಬೊನ ಕೋಗಿಲೆಯ ಕಂಠವನ್ನು ಕೇಳಬಯಸದವರಾರು? ಕುಮಾರನ ಸ್ಫೂರ್ತಿಪರ ಭಾಷಣವನ್ನು ತಿಳಿಯಲು ಆಸಿಸದವರಾರು? ಯಾಕೂಬನ ನಟನಾಕೌಶಲ್ಯವನ್ನು ನೋಡಲು ಇಚ್ಛಿಸದವರಾರು? ಮಾಯಾ ಮತ್ತು ಸಿತರನ ಚಮತ್ಕೃತಿಗೆ ಬೆರಗಾಗದವರಾರು? ಬುದೋ ಅದ್ವಾನಿಯ ಹಾಸ್ಯಲಹರಿಗೆ ನಗದವರಾರು? ಇಂದೇ ನೋಡಿರಿ!

ಉಡುಪಿ ಶ್ರೀರಾಮಕೃಷ್ಣಾ ಥಿಯೇಟರಿನಲ್ಲಿ

ತಾ 18—9—39ರಿಂದ 22—9—39ರ ವರೆಗೆ 'ಹರಿಕೇನ್ ಹಂಸ' ತಾ 22—9—39ರಿಂದ ವತನ್

— ಕಥಾ ಸಾರಾಂಶ —

ಜಬೀರನು ಟಾರ್ಟರ ಪಂಗಡಕ್ಕೆ ಸೇರಿದವನು ಅವನ ಪಂಗಡದ ಆಜನ್ಮ ವಿರೋಧಿಗಳಾದ ಕೊಸಕ್ಕರ ವಂಶ ನಿರ್ನಾಮ ಮಾಡಬೇಕೆಂದು ರಷಿಯಾ ರಾಜನನ್ನು ಒಲಿಸಿಕೊಂಡು, ಸೇನಾಧಿಪತಿಯನ್ನು ಒಳಸಂಚಿಗೆ ತೆಗೆದುಕೊಳ್ಳುವನು ಈ ವಿಷಯ ಮುರಾದನು ತಿಳಿದು ದೇಶಾಭಿಮಾನಿಗಳ ದಳವೊಂದನ್ನು ತಯಾರಿಸುತ್ತಿದ್ದನು. ಜಬೀರನು ಮುರಾದನ ಕಾರುಭಾರವನ್ನು ತಿಳಿದು ರಾಜದ್ರೋಹ ಆರೋಪಣೆಯ ಮೇಲೆ ಅವನ ದಸ್ತಗಿರಿಗೆ ಹುಕುಂ ಮಾಡಿಸುವನು. ಮುರಾದನು ಮುಂದಾಗಿ ತಪ್ಪಿಸಿಕೊಂಡು ಕಾಡುಪಾಲಾಗುವನು. ಅಲ್ಲಿ ಗುಲ್ನಾರ್ ಎಂಬ ಕನ್ಯೆಯ ಪರಿಚಯವಾಗಿ ಅವಳನ್ನು ರಾಜಕುಮಾರಿ ನಿಗಾರಳ ಪರಿಚಾರಿಕೆಯಾಗಿ ನಿಲ್ಲುವಂತೆ ಹೇಳಿಕಳುಹಿಸಿಕೊಡುವನು. ಇದರಿಂದ ರಾಜ್ಯದಲ್ಲಿ ನಡೆಯುವ ಹೂಡು ಇವನಿಗೆ ತಿಳಿಯುತ್ತಿತ್ತು.

ಇತ್ತ ಜಬೀರನು ಟಾರ್ಟರರ ಜನರಲ್‌ನಿಗೆ ಕೂಡಲೆ ಧಾಳಿ ನಡಿಸುವಂತೆ ಆಮಂತ್ರಿಸಲು ಒಂದು ಜನವನ್ನು ಕಳುಹಿಸುವನು. ಆ ಜನವನ್ನು ಮುರಾದನು ಅಟಕಾಯಿಸಿ ರಾಜಕುಮಾರಿಯ ಸಹಾಯವನ್ನು ಕೇಳಲು ನಗರಿಗೆ ಗುಲ್ನಾರಳ ಸಹಾಯದಿಂದ ಹೋಗುವನು ಆದರ ಅಲ್ಲಿ ಜಬೀರನ ಮಗನು ಮುರಾದನನ್ನು ಹಿಡಿದು ಆಸ್ಥಾನದಲ್ಲಿ ಹಾಜರು ಪಡಿಸಲು, ಅವನಿಗೆ ಮರಣ ಶಿಕ್ಷೆಗೆ ಹುಕುಂ ಆಗುವುದು ಇದನ್ನು ರಾಜಕುಮಾರಿ ನಿಗಾರಳು ಕೇಳಿ ಅಲ್ಲಿಗೆ ಧಾವಿಸುವಳು, ಮುಂದೇನು ?

SYNOPSIS

Jabir, a Tartar minister, wins over the Russian King and by bribing the commander, wants to crush Cossacks and wreak vengeance on the born enemies of his race Murad, the general, smells this conspiracy, and collects a band of patriots. Jabir, suspecting Murad, charges him of treason and gets a warrant of arrest issued against him. Before the law could reach him, Murad flies to a jungle where he comes into contact with a wild flower, Gulnar by name He sends Gulnar to serve as maid servant to the princess Nigar so as to get himself in touch with the state affairs He obstructs the messenger sent by Jabir to the Tartar General inviting for an attack, and approaches the princess through Gulnar for help to resist the attack. There he is attacked by Jabir's son and arrested. Death sentence is passed on him and princess Nigar rushes to the spot What happens next ?

ಟಿಕೇಟಿನ ದರ —(ಟೇಕ್ಸ್ ಸಮೇತ) ರಿಜರ್ವ್ಡ್ **1-8-0,** ಸ್ಪೆಶಲ್ **0-11-9,** ಗೆಲರಿ **0-7-0,** ಬೆಂಚು **0-4-6, 0-2-3**

Next — Gungutwali,

Comming.—Achut Kanya, Pragati's Nanda Kumar, Lord of the Jungle, Jagatkesari, Gopala Krishna etc,

ಬರುವ ಚಿತ್ರ:---ಗುಂಗುಟ್‌ವಾಲಿ,

ಮುಂದಿನ ಚಿತ್ರ:—ಅಚ್ಯುತಕನ್ಯಾ. ಪ್ರಗತಿ ನಂದ ಕುಮಾರ್, ಲೋರ್ಡ್ ಆಫ್ ದಿ ಜಂಗಲ್, ಜಗತ್ ಕೇಸರಿ, ಗೋಪಾಲಕೃಷ್ಣ ಇತ್ಯಾದಿ.

ಅಖಿಲ ಫ್ರೆಂಚ್ ಸೇನೆಯ ಮುಖ್ಯ ದಳಪತಿ

ಲೋಕದ ಅತ್ಯಂತ ಮೇಧಾವಿ ಯುದ್ಧ ತಂತ್ರಜ್ಞ ಕಳೆದ ಮಹಾಯುದ್ಧದಲ್ಲಿ ಪೆರಿಸನ್ನು ರಕ್ಷಿಸಿದ ಚಾಣಾಕ್ಷ ಸೇನಾನಾಯಕ

ಜನರಲ್ ಮೋರಿಸ್ ಗಸ್ಟವ್ ಗೆಮೆಲಿನ್

ಚಿಕ್ಕಾಳು. ಕೇವಲ 5 ಅಡಿ 4 ಇಂಚು ಗಾತ್ರ. ಆಡಂಬರ ರಹಿತ ಸರಳ ಸ್ವಭಾವ. ತಲೆ ಸಂಪೂರ್ಣ ನೆರೆತ 60 ವರ್ಷದ ಮುದುಕ. ಇವರೇ ಸರ್ವ ಫ್ರೆಂಚ್ ಸೇನೆಯ ಮುಖ್ಯ ನಾಯಕ ಜನರಲ್ ಗೆಮೆಲಿನರು. ನೆಪೋಲಿಯನರ ನಂತರ ಇಷ್ಟೊಂದು ಉಚ್ಚಸ್ಥಾನವನ್ನು ಪಡೆದ ಇನ್ನೊಬ್ಬ ಫ್ರೆಂಚ್ ಸೈನಿಕನಿಲ್ಲ. ಲೋಕದ ಅತಿಚತುರ ಸಮರತಂತ್ರಜ್ಞ ಜನರಲ್ ಗೆಮೆಲಿನರನ್ನೇ ಫ್ರೆಂಚ್ ಮತ್ತು ಬ್ರಿಟಿಷ್ ಸಂಯುಕ್ತ ಸೇನೆಗಳ ದಳಪತಿಯನ್ನಾಗಿ ಮಾಡುವರೆಂದು ನಂಬಲಾಗಿದೆ. ಲೋಕದ ಅತ್ಯಂತ ಪ್ರತಿಭಾಸಂಪನ್ನ ಸಮರಶಾಸ್ತ್ರಜ್ಞರಲ್ಲೊಬ್ಬನಾದ ನೆಪೋಲಿಯನನ ಸೇನಾಚಲನವಲನವನ್ನೆಲ್ಲಾ ಆದ್ಯಂತವಾಗಿ ಅಭ್ಯಾಸಿಸಿದವರು ಅವನು ಕೊಟ್ಟ ಪ್ರತಿಯೊಂದು ಆಜ್ಞೆಯನ್ನೂ ಮತ್ತು ಅನು ಯಾರಿಗೆ ಕೊಟ್ಟನೆಂಬುದನ್ನು ಬಲ್ಲರವರು.

ಕಳೆದ ಮಹಾಯುದ್ಧದಲ್ಲಿ ಜನರಲ್ ಗೆಮೆಲಿನರು, ಫ್ರೆಂಚ್ ಸೇನಾನಾಯಕ ಜನರಲ್ ಜೋಫ್ರೆಯವರ ಮಿಲಿಟರಿ ಸೆಕ್ರೆಟರಿಯಾಗಿದ್ದರು ತನ್ನೊಂದು ರಕ್ಷನಾಡಿಯೆಂದು ಕರೆಯುತ್ತಿದ್ದರವರು ಗೆಮೆಲಿನರನ್ನು. ಕಳೆದ ಮಹಾಯುದ್ಧದ ಆರಂಭದಲ್ಲಿ ಜನರಲ್ ಗೆಮೆಲಿನರ ಯುದ್ಧ ಚಾತುರ್ಯದಿಂದ ಪೆರಿಸ್ ಪಟ್ಟಣವು ಜರ್ಮನ್ ಸೇನೆಯ ಆಕ್ರಮಣದಿಂದ ರಕ್ಷಿಸಲ್ಪಟ್ಟಿತೆನ್ನಬಹುದು. 1914ನೇ ಆಗೋಸ್ತು ತಾ. 26ರಲ್ಲಿ ಒಟ್ಟು 1700,000 ಸೈನಿಕರ 7 ಜರ್ಮನ್ ಸೇನೆಗಳು, ಸ್ವಿಸರ್ಲೆಂಡಿನ ಗಡಿಯಿಂದ ಪೆರಿಸಿನ ಹೊರವಳೆಯದನಕ 300 ಮೈಲು ವಿಸ್ತೀರ್ಣದಲ್ಲಿ ವ್ಯಾಪಿಸಿದುವು. 20 ದಿವಸಗಳಲ್ಲಿ ಅವರೊಂದು ಯಂತ್ರವೆಂಬಂತೆ ಅತ್ಯಂತ ತೀವ್ರಗತಿಯಿಂದ ಮುಂದೊತ್ತಿ ಬೆಲ್ಜಿಯಮನ್ನು ಛಿನ್ನಭಿನ್ನಗೊಳಿಸಿ ಫ್ರಾನ್ಸ್ ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗ್‌ನ 140,000 ಚದರಮೈಲುಗಳನ್ನು ವಶಪಡಿಸಿಕೊಂಡವು. ಮಧ್ಯದಲ್ಲಿ ಜರ್ಮನ್ ಸೇನೆಯನ್ನು ಭೇದಿಸುವ ಫ್ರೆಂಚ್ ಪ್ಲೇನ್ ಅಸಾಧ್ಯವೆಂದು ಬಿಟ್ಟುಬಿಡಲ್ಪಟ್ಟಿತು. ಪೆರಿಸಿನ ಸೈನ್ಯಾಧಿಕಾರಿಗಳು ಧೃತಿಗೆಟ್ಟು ಫ್ರೆಂಚ್ ಸೇನೆಯು ಹಿಂದೆ ಸರಿಯುವ ವಿನಹ ಬೇರೆ ಉಪಾಯವಿಲ್ಲೆಂದು ಅಭಿಪ್ರಾಯಪಟ್ಟರು.

ಗೆಮೆಲಿನರ ಜಾಣ್ಮೆ

ಜರ್ಮನರ ಮುಖ್ಯ ಪ್ಲೇನಿನ ಪ್ರಕಾರ ಕ್ಲಕ್ಸರೆಂಬ ಸೇನಾನಾಯಕರ ಕೈಕೆಳಗಿನ ಪ್ರಥಮ ಜರ್ಮನ್ ಸೇನೆಯು ಬೆಲ್ಜಿಯಮಿನ ಮೇಲೆಧಾಳಿಯಿಟ್ಟು ಬೆಲ್ಜಿಯಮ್ ಸೇನೆಯನ್ನು ಸದೆಬಡಿದು ಅನಂತರ ಪೆರಿಸಿನ ನೈರುತ್ಯ ದಿಕ್ಕಿಗೆ ಚಲಿಸಿ ಬಲಬದಿಯ ಜರ್ಮನ್ ಸೇನೆಗೆ ಆಶ್ರಯವಾಗಬೇಕಿತ್ತು. ಇದರೆ ಸೇನಾ ಚಲನವಲನ ಮತ್ತು ಸ್ಥಾನದ ಅನಿಶ್ಚಿತತೆಯಲ್ಲಿ ಕ್ಲಕ್ಸನಿಗೆ ದಿಕ್ಕುತಪ್ಪಿ ಹೋಯಿತು. ವಿಜಯದ ಅಮಲೂ ಆತನ ತಲೆಗೇರಿದ್ದಿತು. ಅವನು ಪೇರಿಸನ್ನು ನೈರುತ್ಯದಿಂದ ಆವರಿಸುವ ಬದಲಿಗೆ ಆಗ್ನೇಯ ಪಕ್ಕನಿಂದಲೇ ಮುಂದುವರಿದು ನೆಟ್ಟಗೆ ಪೆರಿಸಿನ ಮೇಲೆ ಸೇನೆಯನ್ನು ನಡಿಸಿದನು. ಪೆರಿಸಿನ ಮಿಲಿಟರಿ ಗವರ್ನರರಾದ ಗೆಮೆಲಿನರು ಕ್ಲಕ್ಸನು ಪೆರಿಸಿನ ಆಗ್ನೇಯ ದಿಕ್ಕಿಗೆ ಸರಿದು ಬಲ ಭಾಗದ ಜರ್ಮನ್ ಸೇನೆಯನ್ನು ದುರ್ಬಲಗೊಳಿಸುತ್ತಿರುವುದನ್ನು ಮನಗಂಡರು. ಇದೇ ಸುಸಂದರ್ಭವೆಂದು ಗೆಮೆಲಿನರು ತನ್ನ ಸೇನೆಯನ್ನು ಒಡನೆಯೇ ಹೋರಾಡಲನುಗೊಳಿಸಿ, ಮುಂದೊತ್ತಲನುಜ್ಞೆ ಕೊಡಬೇಕೆಂದು ಜನರಲ್ ಜೋಫ್ರೇಯವರಿಗೆ ಟೆಲಿಫೋನ್ ಮಾಡಿದರು. ತನಗೆ ಕೂಡಲೆ ಅನುಜ್ಞೆ ದೊರೆಯದಿರಲು ತಾನೆ ಬೆಳಗ್ಗೆ ಘಂಟೆ 6ಕ್ಕೆ ಜನರಲ್ ಜೋಫ್ರೆಯವರ ಆಫೀಸಿಗೆ ಹೋದರು. ಅಲ್ಲಿ ಸೈನ್ಯಾಧಿಕಾರಿಗಳು ದೊಡ್ಡ ಭೂಪಟಗಳನ್ನು ಗೋಡೆಗೆ ತೂಗಹಾಕಿ ಚರ್ಚಿಸುತ್ತಿದ್ದರು. "ಇದೇ ಸಂದರ್ಭ. ಕೂಡಲೆ ನಮ್ಮ ಸೇನೆಯನ್ನು ಮುಂದೊತ್ತಬೇಕು" ಎಂದು ಒತ್ತಾಯಪಡಿಸಿದರು ಗೆಮೆಲಿನರು. ಜನರಲ್ ಜೋಫ್ರೆಯವರಿಗೆ ಸರಿಯೆನಿಸಿತು. ಆದರೆ ಇತರ ಹಲವು ಮಂದಿ ಸೈನ್ಯಾಧಿಕಾರಿಗಳು ಸಂದೇಹಗೊಂಡರು. ಗೆಮೆಲಿನರು ಮತ್ತೂ ಒತ್ತಾಯಮಾಡಿದರು. ಬಹಳವಾಗಿ ಆಲೋಚನೆಮಾಡಿ ಅಂದು ರಾತ್ರಿ 10ಘಂಟೆಗೆ ಹುಕುಮುಸಿಕ್ಕಿತು. ಮರುದಿನ ಬೆಳಗ್ಗೆ ಫ್ರೆಂಚ್ ಮೊರೊಕ್ಕೊ ಸೈನಿಕರು ಬಲಬದಿಯ ಜರ್ಮನ್ ಸೇನೆಯ ಮೇಲೇರಿಹೋದರು. ಕ್ಲಕ್ಸನು, ಈ ಬಲ ಬದಿಯ ಸೇನೆಯ ಸಹಾಯಾರ್ಥವಾಗಿ ಪಡೆಯ ಹಿಂದೆ ಪಡೆ ಕಳುಹಿಸಿದರೂ ಫಲವಾಗಲಿಲ್ಲ. ಮೂರು ದಿನಗಳ ಭೀಕರ ಕದನದ ನಂತರ ದೊಡ್ಡ ಪರಾಜಯ ಪಡೆದು ಇಡೀ ಜರ್ಮನ್ ಸೇನೆಯು 6 ದಿನಗಳಲ್ಲಿ 60 ಮೈಲು ಹಿಂದೆ ಸರಿದು ಪೆರಿಸಿನ ಮೇಲಿನ ಧಾಳಿಯ ಯತ್ನವನ್ನೇ ಬಿಟ್ಟುಬಿಡಬೇಕಾಯಿತು. ವಿದ್ಯುದ್ವೇಗದಿಂದ ವಿಜಯ ಸಂಪಾದಿಸುವ ಆಶೆಯೂ ನಿರಾಶೆಯಾಯಿತು.

ಸೈನಿಕ ವಂಶ ಪಾರಂಪರ್ಯ ಮತ್ತು ತರಬೇತಿ

ಜನರಲ್ ಗೆಮೆಲಿನರು 1872ರಲ್ಲಿ ಫ್ರೆಂಕೋ ಪ್ರಶ್ಯನ್ ಯುದ್ಧದ ಮರು ವರ್ಷ ಹುಟ್ಟಿದರು. ಅವರ ಬಾಲ್ಯದ ಆಟಗಳೇ ಯುದ್ಧದಾಟಗಳು. ಗೆಮೆಲಿನರ ತಂದೆ, ಅಜ್ಜ, ಪಿಜ್ಜ, ಮುತ್ತಜ್ಜರೆಲ್ಲಾ ಸೇನಾನಾಯಕರಾಗಿದ್ದರು. ತಂದೆ ಫ್ರೆಂಚ್ ಸೇನೆಯ ಕಂಟ್ರೋಲರ್ ಜನರಲರಾಗಿದ್ದರು. ಪ್ರಖ್ಯಾತ ಫ್ರೆಂಚ್ ಸೇನಾ ನಾಯಕರಾದ ಮಾರ್ಶಲ್ ಫ್ಲೋಕರ ಕೈಕೆಳಗೆ ಗೆಮೆಲಿನರು ತರಬೇತಿಹೊಂದಿದವರು. ಆಮೇಲೆ ಬೇರೆ ಬೇರೆ ಸೈನಿಕ ಹುದ್ದೆಗಳಲ್ಲಿ ಚತುರತೆಯಿಂದ ಕೆಲಸಮಾಡಿ 1906ರಲ್ಲಿ ಜನರಲ್ ಜೋಫ್ರೆಯವರ ಕೈಕೆಳಗೆ ಅಧಿಕಾರ ಪಡೆದರು. 1912ರಲ್ಲಿ ಜನರಲ್ ಜೋಫ್ರೆಯವರು ಯುದ್ಧ ಕೌನ್ಸಿಲಿನ ಮುಖ್ಯಸ್ಥರನ್ನಾಗಿ ನೇಮಿಸಲ್ಪಟ್ಟಾಗ ಗೆಮೆಲಿನರು ಅವರ ಮುಖ್ಯ ಮಂತ್ರಾಲೋಚಕರಾದರು.

ಜನರಲ್ ಗೆಮೆಲಿನರು 66ವರ್ಷ ಪ್ರಾಯದವರಾದರೂ ಬಹಳ ಚಟುವಟಿಕೆಯುಳ್ಳವರು, ಸಕಕಾಲದಲ್ಲಿ ಮಾತ್ರ ಅವರು ವಾರಗಟ್ಲೆ ಫ್ರೆಂಚ್ ಸೈನಿಕ ಸಂಸ್ಥೆಗಳ ಪರಿಶೀಲನೆಗಾಗಿ ಹೋಗುವರು. ಉಳಿದ ಸಮಯಗಳಲ್ಲಿ ಗೆಮೆಲಿನರು ಬೆಳಗ್ಗೆ ಘಂಟೆ 9ರಿಂದ ಸಂಜೆ 7ರವರೆಗೆ ಆಫೀಸು ಕೆಲಸ ಮಾಡುವರು. ಬಹಳ ತರಬೇತಿ ಹೊಂದಿದ ಅವರ ಸ್ಮರಣೆಯು ವಿಚಿತ್ರವಿರುತ್ತದೆ. ಫ್ರೆಂಚ್ ಗಡಿಪ್ರದೇಶದ ಬಳಿಯ ಪ್ರತಿಯೊಂದು ರಸ್ತೆಯ ಹೆಸರೂ ಅವರಿಗೆ ಗೊತ್ತಿರುವುದು ಮಾತ್ರವಲ್ಲದೆ, ಕರ್ನಲನವರೆಗಣ ಪ್ರತಿಯೊಬ್ಬ ಫ್ರೆಂಚ್ ಅಧಿಕಾರಿಯ ಹೆಸರು ಅವರಿಗೆ ಗೊತ್ತಿರುವುದಂತೆ. ಅವರ ವಿನೋದ ಗಾಯನ ಮತ್ತು ಸಿನೆಮ. ಮನೆಯಲ್ಲಿರುವಾಗ ಸದಾ ಓದುವರು. ಜನರಲ್ ಗೆಮೆಲಿನರಿಗೆ ಸ್ನೇಹಿತರೇ ಕಡಿಮೆ. ಆದರೆ ಅವರ ಪರಮಮಿತ್ರರೆಂದರೆ ಇಟೆಲಿಯ ಪ್ರಖ್ಯಾತ ಸೇನಾನಿ ಮಾರ್ಶಲ್ ಪೀಟ್ರೋ ಬೊಡೊಗ್ಲಿಯೋರವರು. ಇಂದಿನ ಸಮರದಲ್ಲಿ ಈ ಗೆಳೆಯರು ಎದುರೆದುರಾಗಿ ಹೋರಾಡುವ ಸಂಭವ ಬರುವುದೋ ಏನೋ?

NOTICE.

In the Court of the District Munsiff of Udipi

Original Petition No 45 of 1939

In the matter of the estate of—

Jogappa Shetty of Ninjoor village Karkal Taluk (*deceased*)

Anthaya Shetty nephew of Annappa Shetty residing at Ninjoor village, Karkal Taluk } Petitioner

Take notice that on the 4th day of September 1939 the petitioner presented the above application praying that a succession certificate might be granted to him as Ejman of his branch family empowering him to collect the debt mentioned therein negotiate or transfer the same and that the forth day of October 1939 has been fixed for the hearing of the application.

If any body desires to oppose the said application they must appear on the said 4th day of October 1939 in this Court and state their objections if any, to the grant of the certificate to the petitioner.

Udipi 12 9 39 | **K J Ballal** *Vakil for petitioner*

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದ ಹೇರ್ ಆಯಿಲ್ ಎಂದು.
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ತಾ 21-9-1939ರಿಂದ

ವಾರದ ಭವಿಷ್ಯ

ತಾ 28-9-39ರ ವರೆಗೆ

ಮೇಷರಾಶಿ—

ಅನುಕೂಲಸ್ಥಾನಗತರಾದ ಷಷ್ಠಸ್ಥ ರವಿ ಬುಧರಿಂದಾಗಿ ನಿಮಗೆ ವಿರೋಧಿ ಜನರಿಂದ ಪ್ರಾಪ್ತವಾದ ಕಲಹ ಮನಸ್ತಾಪ ಇತ್ಯಾದಿಗಳು ನಿವಾರಣೆ ಹೊಂದುವವು. ಆರೋಗ್ಯದಿಂದ ಕೂಡಿದ ನಿಮಗೆ ಉದ್ಯೋಗದಲ್ಲಿ ತೃಪ್ತಿಯೂ ಕಾರ್ಯದಲ್ಲಿ ಜಯವೂ ಮೊದಲ ಸಂಪತ್ಪ್ರಾಪ್ತಿಯೂ ಕಿಂಚಿನ್ಮಾತ್ರವಾಗುವುದು. ಆದರೂ ಇತರ ದುರ್ಗ್ರಹರಿಂದಾಗಿ ಆತ್ಮೀಯರಿಂದ ಪ್ರಾಪ್ತವಾದ ಮನೋವ್ಯಾಧಿಯು ಬೆಳೆಯುತ್ತಲೇ ಇರುವುದು. ಪ್ರಯಾಣದ ನಿಮಿತ್ತ ಹೆಚ್ಚಿನ ಕಷ್ಟನಷ್ಟಗಳಿಗೆ ನೀವು ಕಾರಣ. ಆಕಸ್ಮಾತ್ತಾಗಿ ಸ್ತ್ರೀಯರಿಂದಲೂ ವ್ಯಾಪಾರದಲ್ಲಿಯೂ ಕಷ್ಟನಷ್ಟಗಳು ಸಂಭವಿಸುವ ಯೋಗವಿದೆ. ತಾ. 21, 22, 23 ಈ ದಿನಗಳಲ್ಲಿ ರಾಜಭೀತಿಯ ಸಲುವಾಗಿ ಧನವ್ಯಯವಾದೀತು. ವಿಷಜಂತುಗಳಿಂದ ಪೀಡೆ ಸಂಭವಿಸಲೂ ಬಹುದು.

ವೃಷಭರಾಶಿ—

ಮುಯ್ಯಿಗೆ ಮುಯ್ಯಿ ತೀರಿಸಬೇಕೆಂಬ ನಿಮ್ಮ ಘನೋದ್ದೇಶವು ಬಹ್ವಂಶ ಫಲಕಾರಿಯಾಗುವದು. ಬಂಧುಮಿತ್ರರ ಸಹಾಯವು ನಿಮಗೆ ತುಂಬಾ ಇರುವುದು. ಖರ್ಚು ಹೆಚ್ಚಾಗಿ ಸಂಭವಿಸುವುದಾದರೂ ಹಣದ ಅಡಚಣೆಯು ಉಂಟಾಗದು. ಆದರೂ ಅನಾರೋಗ್ಯದ ನಿಮಿತ್ತ ನೀವು ಬಹಳ ತ್ರಾಸಹೊಂದುವಿರಿ. ಸಹಜಾತರಲ್ಲಿಯೂ ಕುಟುಂಬದವರಲ್ಲಿಯೂ ಮನಸ್ತಾಪವು ಹೆಚ್ಚುವ ನಿಮಿತ್ತ ಕಲಹವುಂಟಾಗುವುದು. ಅಲ್ಲಸಲ್ಲದ ಖರ್ಚುಗಳು ಮೇಲಿಂದ ಮೇಲೆ ಪ್ರಾಪ್ತವಾಗುವವು. ಮೊದಲೇ ಅನಾರೋಗ್ಯದಿಂದ ಪೀಡಿತವಾದ ನಿಮ್ಮ ಶರೀರವನ್ನು ಶೋಕಾಗ್ನಿಯು ಒಳಗಿಂದೊಳಗೇ ದಹಿಸುತ್ತಿರುವುದು. ಮಾರಿದಿಯ ನಾಲ್ಕು ದಿನಗಳಲ್ಲಿ ನಿಮ್ಮ ಇಷ್ಟಕ್ಕೆ ವಿರುದ್ಧವಾಗಿ ಕ್ರಿಯೆಗಳೂ ಫಲಗಳೂ ಜರಗುವವು.

ಮಿಥುನರಾಶಿ—

ರಾಜಕೀಯ ರಂಗದಲ್ಲೂ ಇತರ ವ್ಯವಹಾರ ಕ್ಷೇತ್ರಗಳಲ್ಲೂ ಪ್ರತಿಸ್ಪರ್ಧಿ ಜನರಿಂದ ಮಾನಹಾನಿ ಮತ್ತು ಕಷ್ಟನಷ್ಟಗಳು ಸಂಭವಿಸುವ ಚಿಹ್ನೆಗಳಿರುವುದರಿಂದ ಈ ಬಾಗದಲ್ಲಿ ಹೆಚ್ಚಿನ ಜಾಗರೂಕರಾಗಿರಿ. ಆಕಸ್ಮಾತ್ ಅಪಘಾತದಿಂದಾಗಲೀ ಅನ್ಯಇತರ ಕಾರಣಗಳಿಂದಾಗಲೀ ಶರೀರಕ್ಕೆ ಪೆಟ್ಟು ತಗಲುವ ಸಂಭವವಿದೆ. ಆರೋಗ್ಯವೂ ಚೆನ್ನಾಗಿರದು. ಆದರೂ ಕೌಟುಂಬಿಕರಿಂದಲೂ ಮಿತ್ರರಿಂದಲೂ ಕೂಡಿದ ನಿಮಗೆ ಅತೀವ ದುಷ್ಕರವಾದ ಕಾರ್ಯವೂ ಸುಲಭಸಾಧ್ಯವಾಗುವಂತಿದೆ. ಆರ್ಥಿಕ ಪರಿಸ್ಥಿತಿಯು ಸಿಧಿಸುವುದು. ಸ್ತ್ರೀಮೂಲಕವಾಗಿ ಧನಾಗಮದ ಯೋಗವಿರುವುದು. ತಾ. 21, 22, 28 ಈ ದಿನಗಳಲ್ಲಿ ಇಷ್ಟಸಿದ್ಧಿ ಮನಶ್ಶಾಂತಿಯು ಕೂಡಾ ದೊರೆಯುವುದು.

ಕರ್ಕಾಟಕರಾಶಿ—

ಮನಸ್ಸಿನಗೆ ವ್ಯಾಧಿಗಿಂತಲೂ ಆಧಿಯು ಭಯಂಕರವಾದ ರೋಗವು. ಮಹಾವ್ಯಾಧಿಯು ಕೂಡಾ ಔಷಧೋಪಚಾರಗಳಿಂದ ನಿವೃತ್ತಿ ಹೊಂದುವುದು. ಆದರೆ ಆಧಿಗೆ ತಕ್ಕ ದಾಬ ಮದ್ದು ಸಿಗುವುದು ದುರ್ಲಭವು. ಆದರೂ ನೀವೀವಾರದಲ್ಲಿ ಈ ಪ್ರಬಲವಾಗಿರತಕ್ಕ ಆಧಿಯಿಂದ ಮುಕ್ತರಾಗಿ ಪ್ರಸನ್ನ ಮನಸ್ಕರಾಗುವಿರಿ. ಇದಕ್ಕೆ ನಿಮಗನುಕೂಲವಾಗಿರತಕ್ಕ ಗ್ರಹರಾಜನೂ ಮಂತ್ರದ್ವಯರೂ ಕಾರಣರಾಗಿರುವರು. ಆರ್ಥಿಕ ಸುಧಾರಣೆಯಿಂದಲೂ ಸಾಂಸಾರಿಕ ಸಂಪತ್ತಿನಿಂದಲೂ ಕೂಡಿ ಸುಖದಿಂದ ಕಾಲಯಾಪನೆಮಾಡುವಿರಿ. ಪ್ರಕೃತ ನಿಮ್ಮಲ್ಲಿ ಮನೋನಿಗ್ರಹವು ಸಾಕಷ್ಟು ಇಲ್ಲದಿರುವ ಕಾರಣ ನೌಕರವರ್ಗದವರು ಅಧಿಕಾರಿಗಳ ಕೋಪಕ್ಕೂ ಇತರರು ಜನಾಪವಾದಕ್ಕೂ ಸಿಲುಕುವ ಕಾರ್ಯವನ್ನು ಮಾಡಲಿರುವಿರಿ. ನೇತ್ರೋದರ ರೋಗಗಳೂ ಕಳತ್ರ ಕಲಹವೂ ಆಗಾಗ ಸಂಭವಿಸೀತು. ತಾ 21ರಿಂದ 24ರ ವರೆಗೆ ನಿಮಗೆಲ್ಲಾ ಅನುಕೂಲ ಪರಿಸ್ಥಿತಿಗಳೇ ಒದಗುವವು.

ಸಿಂಹರಾಶಿ—

ಸಿಮಗೀವಾರದಲ್ಲಿ ಶುಭಾಶುಭಗ್ರಹರ ಬಲ ಸಾಮ್ಯವಿರೋಧದಿಂದ ಇಷ್ಟಾನಿಷ್ಟಗಳು ಸರಿಸಮಾನವಾಗಿ ಫಲಿಸುವವು. ನಿಮ್ಮ ಉದ್ಯೋಗದಲ್ಲೂ ವ್ಯಾಪಾರದಲ್ಲೂ ಧನಲಾಭವು ಬಹಳ ಚೆನ್ನಾಗಿದ್ದರೂ ಖರ್ಚುಮಾತ್ರ ಮೇಲಿಂದ ಮೇಲಕ್ಕೆ ಸಂಭವಿಸಿ ಕೈಯಲ್ಲಿ ಏನೊಂದೂ ಉಳಿಯಲಾರದು. ಆರೋಗ್ಯವು ಬಹಳ ಹೀನಸ್ಥಿತಿಗೆ ಬರುವುದು. ಮನಸ್ಸ್ಥೈರ್ಯವು ಲೋಪವಾಗುವುದು. ಪ್ರಯಾಣನಿಮಿತ್ತ ಕಷ್ಟನಷ್ಟಗಳಧಿಕವಾಗುವುವು. ವಿಪಕ್ಷೀಯರ ಬೆದರಿಕೆಯು ನಿಮಗಿಲ್ಲದಿರೋಣವದರಿಂದ ಹಿಡಿದ ಕಾರ್ಯಗಳು ಹೆಚ್ಚಿನಂಶ ನಿರಾಯಾಸವಾಗಿ ಕೊನೆಗೊಂಡಲಿರುವವು. ಪಶುಭೃತ್ಯಾದಿಗಳಿಂದೊಡಗೂಡಿದ ಗೃಹಸಂಪತ್ತು ಪರಿಪೂರ್ಣವಾಗಿರುವುದು. ತಾ 23ರಿಂದ 27ರ ವರೆಗಿನ ದಿನಗಳು ಉತ್ತಮವಿರುವುದರಿಂದ ಧನಲಾಭ ವಾಹನಾದಿಗಳಲ್ಲಿನ ಯಾನ ಪಾನಾದಿಗಳು ದೊರೆಯುವವು.

ಕನ್ಯಾರಾಶಿ—

'ಬಲ್ಲವರ ಮಾತು ಬೆಲ್ಲಕ್ಕಿಂತ ಸವಿ' ಎಂಬ ಲೋಕೋಕ್ತಿಯಂತೆ ನೀವು ಒಳ್ಳೇ ವಾಕ್ಚತುರರಿರುವಿರಿ. ನಿಮ್ಮ ನಿತ್ಯ ಉಪಭೋಗಗಳಿಗ ಆದಾಯರೀತಿಯಿಂದಲೂ ಕಡಿಮೆಯಾಗಲಾರದು. ಸಕಲಪರಿವಾರೋಪೇತರಾದ ಸ್ತ್ರೀಸುಖವು ಇಚ್ಛಾಧಿಕವಾಗಿ ದೊರೆಯಲಾಪ ಆತಂಕವೂ ಇರಲಾರದು. ಇವೆಲ್ಲಾ ಇದ್ದರೇನು ಶರೀರಕ್ಕೆ ಸುಖವಿಲ್ಲದವರಿಗೆ ಕಂಡ... ಕಂಡಂತೆ ಹೇಳುವ ಗುಣದಿಂದಾಗಿ ನೀವು ಹಲವರ ಆಗ್ರಹ ಅಸೂಯೆಗಳಿಗೆ ಗುರಿಯಾಗಲಿರುವಿರಿ. ಆದಾಯಕ್ಕಿಂತ ವ್ಯಯವು ಅಧಿಕವಾಗುವುದರಿಂದಲೂ ಸಂಸಾರದಲ್ಲಿ ಒಡಕುಂಟಾಗುವುದರಿಂದಲೂ ಹೆಚ್ಚಿನ ಶೋಕಕ್ಕೆ ಪಾತ್ರರಾಗುವಿರಿ. ವಾರದಿಯ ನಾಲ್ಕು ದಿನಗಳಲ್ಲಿ ಉದರವ್ಯಾಧಿ ಮಾರ್ಗಾಯಾಸ ಕಾರ್ಯವಿಘ್ನಗಳು ಕಂಡುಬರುವವು.

ತುಲಾರಾಶಿ—

"ಕಾಲಸ್ಯ ಕುಟಿಲಾ ಗತಿ" ಎಂಬ ನ್ಯಾಯದಂತೆ ನಿಮ್ಮ ಅವಸ್ಥೆಯು ಕಾಲಗತಿಯಿಂದಾಗಿ ಬಹಳ ಹೀನದೆಸೆಗೆ ಬಂದಿರುತ್ತದೆ. ಅಪಜಯ್ಯಲದಲ್ಲಿ ಧೈರ್ಯವು ಮನುಷ್ಯಗೆ ಅತ್ಯಂತ ಮುಖ್ಯವಾದದರಿಂದ ಭಯಗ್ರಸ್ತರಾಗದೆ ಧೈರ್ಯಸಸ್ಕರಾಗಿರಿ. ಅನ್ಯಾಯಕ್ಕೆ ಮನಸೋಲದೆ ಸನ್ಮಾರ್ಗದಲ್ಲಿ ಪ್ರವರ್ತಿಸಿದರೆ ಇಷ್ಟಕ್ಕೆ ತಕ್ಕುದಲ್ಲವಾದರೂ ಕಷ್ಟಕ್ಕೆ ಸರಿಯಾದ ಫಲಲಭಿಸೀತು. ಕಂಡಕಂಡವರೊಡನೆ ವೈತ್ರಿಯನ್ನು ಬೆಳೆಸುವುದರಿಂದ ಕೆಲವೊಮ್ಮೆ ಆಪತ್ತಿಗೆ ಸಿಲುಕಲಿರುವಿರಿ. ಶತ್ರುಜನರ ಪೀಡೆಯಿಂದಾಗಿ ಧನವ್ಯಯವೂ ಮನೋರೋಗವೂ ಪ್ರಬಲವಾಗುವುದು. ಅಂತರಿಕ ಭಯದಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗುವುದು. ವಾರದ ಅಂತ್ಯಂತ ದಿನಗಳಲ್ಲಿ ಹೆಚ್ಚಿನ ಕಷ್ಟವಿರದು.

ವೃಶ್ಚಿಕರಾಶಿ—

ಇಂದೀಗ ನೀವು ನಿಮ್ಮ ಅದೃಷ್ಟದ ತುತ್ತತುದಿಗೇರಿರುವಿರಿ. ಸಕಲಾಭೀಷ್ಟಗಳೂ ನಿಮ್ಮ ಇಚ್ಛಾನುಕೂಲವಾಗಿ ಕೊನೆಗೊಳ್ಳುವವು. ಇಂತಹ ಸುಸಂಧಿಯೊಳು ನೀವು ಅಲಸರಂತೆ ಸಮಯ ಕಳೆಯಬೇಡಿರಿ. ಉದ್ಯೋಗದಲ್ಲಿ ಪ್ರವರ್ತಿಸಿರಿ. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' ಎಂಬಂತೆ ನಿಶ್ಚಯವಾಗಿಯೂ ನಿಮ್ಮ ಉದ್ಯೋಗಫಲವು ನಿಮ್ಮ ಹಸ್ತಗತವಾಗಿರುವುದೆಂದೇ ತಿಳಿಯಿರಿ. ಸಕಲ ವರ್ಗದವರಿಗೂ ಸ್ತ್ರೀಪುರುಷರನ್ನು ಮೊದಲ್ಗೊಂಡು ಆಬಾಲವೃದ್ಧರವರೆಗೂ ಅವರವರಿಗೆ ಯುಕ್ತವಾದ ವೃತ್ತಿಯಲ್ಲಿ ವಿಪುಲತರ ಫಲಪ್ರಾಪ್ತಿಯಿರುವುದು. ತಾ 23, 24 ಈ ಎರಡು ದಿನಗಳು ಅತ್ಯುತ್ತಮವಿರುವುದರಿಂದ ಈ ದಿನಗಳಲ್ಲಿ ಕಾರ್ಯಜಯ ವಸ್ತ್ರಲಾಭ ಧನಪ್ರಾಪ್ತಿ ಸ್ತ್ರೀಸುಖಗಳು ವಿಶೇಷ ದೊರಕುವವು.

ಧನೂರಾಶಿ—

ಮನದಲ್ಲಿ ನೆನೆದ ಕೆಲಸವನ್ನು ಕಾರ್ಯರೂಪಕ್ಕೆ ತರುವಿರಿ ಮಾತ್ರವಲ್ಲದೆ ಅದರಲ್ಲಿ ಜಯಶೀಲರಾಗುವ ಸಂಭವವೂ ಇರುವುದು. ಮನಸ್ಸು ಉತ್ಸಾಹಪೂರ್ಣವಾಗಿದ್ದು ಕಾರ್ಯದಲ್ಲಿ ಮುಂದೊತ್ತುತ್ತಿರುವುದು. ಪಿತ್ತಾತಿರೇಕದಿಂದ ದುಃಸ್ವಪ್ನಗಳೂ ಆಗಾಗ ನಿದ್ರಾಭಂಗವೂ ಆಗಲಿರುವುದು. ಹಣ ಸಂಬಂಧವಾಗಿ ಹಲವರಲ್ಲಿ ಕಲಹ ಬಂಧುಗಳೊಡನೆ ಮನಸ್ತಾಪ ಇತ್ಯಾದಿಗಳುದ್ಭವಿಸುವವು. ಸಾಂಸಾರಿಕ ತಾಪತ್ರಯಗಳು ಅತೀವ ಹೆಚ್ಚಿ ಮನೋನೆಮ್ಮದಿಗೆ ಭಂಗ ತರಲಿರುವವು. ವ್ಯಾಪಾರೀ ವರ್ಗದವರಿಗೆ ವಿಶೇಷ ಹಾನಿದಾಯಕವಾದರೂ ವಿದ್ಯಾಭ್ಯಾಸಿಗಳಿಗೂ ನೌಕರಜನರಿಗೂ ಸುಖಕಾರಿಯಾಗಿ ಪರಿಣಮಿಸುವುದು. ತಾ 23, 24, 28 ಈ ದಿನಗಳಲ್ಲಿ ದೇಹಾಲಸ್ಯ ಧನವ್ಯಯಗಳು ಬಂದೆದಧಿಕವಾಗಲಿವೆ.

ಮಕರರಾಶಿ—

ವಿಶೇಷವಾಗಿ ಮನಸ್ಸಿಗೆ ಕೆಲಸ ಕೊಡುವುದರಿಂದಲೂ ಪ್ರಯಾಣವು ಅಧಿಕವಾಗುವುದರಿಂದಲೂ ಸಾಕಷ್ಟು ನಿದ್ರೆಯು ಸಿಗದಿರುವುದರಿಂದಲೂ ಪ್ರಕೃತಿಯು ಕೆಟ್ಟು ಪ್ರತಿಯೊಂದು ಅವಯವಗಳಲ್ಲೂ ನೋವು ಕಾಂತಿಕ್ಷಯಾದಿಗಳುಂಟಾಗುವವು. ಧನವಿಷಯಕವಾಗಿ ಕಲಹವುಂಟಾಗುವುದು. ವಿರೋಧಿಗಳ ಪ್ರತಿಕ್ರಿಯೆಯಿಂದುಂಟಾದ ಮಾನಹಾನಿಯು ಸಹಿಸಲಸದಳವಾಗುವುದು. ಬಂಧುಗಳು ಮಿತ್ರರು ಇವರೇ ಮೊದಲಾದವರಿಂದ ಉಂಟಾದ ವಿರಹವೇದನೆಯು ವರ್ಣನಾತೀತವಾಗುವುದು. ಸ್ವೀಕೃತ ಕಾರ್ಯಗಳಲ್ಲೂ ಸಾಮಾಜಿಕ ಕ್ರಿಯೆಗಳಲ್ಲೂ ಪ್ರತಿಕೂಲವಾದಾವಸ್ಥೆಯೇ ಕಂಡು ಬರುವುದು. ಆಂತೂ ತಾ 23, 24, 28 ಈ ದಿನಗಳು ಕಿಂಚಿದುತ್ತಮವಿರುವುದರಿಂದ ಸ್ತ್ರೀಸುಖ ಧರ್ಮಕಾರ್ಯಗಳಲ್ಲಿ ಆಸಕ್ತಿ ಬಲವಾಗುವುದು.

ಕುಂಭರಾಶಿ—

ಹತ್ತರ ಕೂಡ ಹನ್ನೊಂದು ಹರ್ಕೆ ಕೂಡ ಗೋವಿಂದ ಎಂಬ ಲೋಕೋಕ್ತಿಯಂತೆ ನಿಮ್ಮ ಅದೃಷ್ಟವು ಬಲವಾಗಿರುವುದರಿಂದ ನಿಮ್ಮ ಪ್ರಯತ್ನವು ಹೇರಿಗೆ ತಕ್ಕಂತೆ ಎಂಬ ರೀತಿಯಲ್ಲಿರವು. ಆದರೂ ನಿಮ್ಮ ವ್ಯವಹಾರ ಕ್ಷೇತ್ರಕ್ಕೆ ರಾಜಭೀತಿಯು ಹೆಚ್ಚಾಗಿರುವುದು. ತತ್ಸಲುವಾಗಿ ಹೆಚ್ಚಿನ ಜಾಗರೂಕರಾಗಿರಿ. ನೀವು ಸ್ವಾರ್ಥಸಾಧಕರಾಗಿದ್ದರೂ ಪರರಲ್ಲಿ ಸಹಾನುಭೂತಿಯುಳ್ಳವರಾದ ಕಾರಣ ಜನಪ್ರಿಯರಾಗಿರುವಿರಿ. ವ್ಯಾಪಾರಿ, ನೌಕರಿ, ವಿದ್ಯಾರ್ಥಿ, ಕಷ್ಟಜೀವಿ ವರ್ಗದವರಿಗೆ ಕಾಲವು ಅನುಕೂಲವಾಗಿರುವುದು. ಆರ್ಥಿಕ ಭಾಗವು ಉತ್ತಮವಿರುವುದು. ಕಿಂಚಿದನಾರೋಗ್ಯ ಮತ್ತು ಗೃಹಕಲಹವು ನಿಮ್ಮನ್ನು ಸದಾ ಪೀಡಿಸಬಹುದು. ತಾ. 21, 22, 25, 26, 27 ಈ ದಿನಗಳು ಉತ್ತಮವಿದೆ.

ಮೀನರಾಶಿ—

ಸಕಲ ಗ್ರಹಮಂಡಲವೇ ವಿಪರೀತವಾಗಿ ಕೆಟ್ಟಿದ್ದರೂ ಭೂಲಾಭದಾಯಕನಾದ ಭೂಪುತ್ರನು ಉಚ್ಚನಾಗಿ ಉತ್ತಮ ಸ್ಥಾನವನ್ನೈದಿಹನು. ಇದೊಂದು ನಿಮ್ಮ ಭಾಗ್ಯವೆನಬೇಕು. ಇದಕ್ಕನೇ ಆಪತ್ತಿನಲ್ಲಿ ಸಂಪತ್ತೆಂದರೂ ತಪ್ಪಾಗದು. ನೀವೇನೋ ಅತ್ಯುತ್ಸಾಹದಿಂದ ಕಾರ್ಯವನ್ನು ಮುಂದರಿಸುವಿರಿ. ಆದರೆ ಅದರಲ್ಲಿನ ಸಾಧಕಬಾಧಕಗಳನ್ನು ವಿಚಾರಮಾಡದೆ ಆಮೇಲೆ ತೊಂದರೆಗೀಡಾಗಲಿರುವಿರಿ. ಸಾಮಾಜಿಕ ಕಾರ್ಯಗಳಲ್ಲಿ ನಿಮ್ಮ ಪ್ರಯತ್ನವು ಸ್ತುತ್ಯವಿರುವುದು. ಪ್ರವಾಸದಲ್ಲಿ ಕಷ್ಟ, ವಿರೋಧಿಗಳಿಂದ ಪೀಡೆ, ಶರೀರದಲ್ಲಿ ಅನಾರೋಗ್ಯ ಇವು ನಿಮ್ಮನ್ನು ಬಿಟ್ಟಿಲ್ಲವು. ಖರ್ಚು ಅತ್ಯಧಿಕವಾಗಿದ್ದರೂ ಅಡಚಣೆಯುಂಟಾಗದು. ತಾ 25, 26, 27 ಈ ದಿನಗಳಲ್ಲಿ ಬಹಳ ಜಾಗರೂಕತೆಯಿಂದಿರಬೇಕಾಗುವುದು.

ತುಳುನಾಡ್ ವೈದ್ಯಶಾಲೆ

ಉಡಿಯಾವರ, ದ.ಕ

ಕೋಲೆರಾ ಪಿಲ್ಸ್ ಕಾಲರಾ ರೋಗಕ್ಕೆ

ರಾಮಬಾಣ ಔಷಧ

೧೦೦ ಮಾತ್ರೆಗಳಿಗೆ ರೂ ೩—೮—೦.

ಭೈರವ ಮಾತ್ರೆಗಳು— ಬಾಣಂತಿ

ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ

೧೦೦ ಮಾತ್ರೆಗಳಿಗೆ ರೂ ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಓ ಮೇಸ್ತ್ರ, ಗೋಲ್ಡ್ ಮೆಡಲ್ ಫಿಸಿಶಿಯನ್

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾವು, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩ ವಿ ಪಿ ಖರ್ಚು ೦ ೬ ೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲಭಾಯಿ ಪಟೇಲ್ ರೋಡ್, ಮುಂಬಯಿ ೪

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

DAIMONDS! **DAIMONDS!**

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.
ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು
ಸೀಸೆ1ಕ್ಕೆ12ಆಣೆ, ಟಪಾಲ್ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು - **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:—**ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ** ಸುಖಸೇವನದಿಂದ ಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.
ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಈ ಕೆಳಗಿನ ಔಷಧಗಳಲ್ಲಿ
ಗುಣವಿಲ್ಲವೆಂದು
ಸಿದ್ಧಮಾಡಿಕೊಟ್ಟಲ್ಲಿ
೧೦೦ ರೂ. ಇನಾಮು

ಕಾಮಾಮೃತ

ಸ್ತ್ರೀ ಪುರುಷರಿಗೆ ಧಾತುಪುಷ್ಟಿ ಕೊಡುವ ಲೋಕಪ್ರಸಿದ್ಧ ಶಕ್ತಿವರ್ಧಕ ಸಿದ್ಧೌಷಧ.

ಇವು ಸ್ತ್ರೀ ಪುರುಷರಿಗೆ ಆನಂದವನ್ನುಂಟು ಮಾಡುವ ಮಾತ್ರೆಗಳು ಇದರಲ್ಲಿ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳನ್ನು ಉಪಯೋಗಿಸಿ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿದ್ದ ಮುದುಕತನವನ್ನು ಲೋಕದಲ್ಲಿಲ್ಲದಂತೆ ಮಾಡುವುದು

ಗುಣವಿಲ್ಲದಿದ್ದಲ್ಲಿ ಹಣ ವಾಪ್ಸು - - ಕೇಟಲಾಗು ಉಚಿತ
ಒಂದು ತಿಂಗಳ ಔಷಧ ಕಿಮ್ಮತ್ತು ರೂ. 4-8-0, 15 ದಿನಗಳಿಗೆ ರೂ 2-8-0
ಡಾ॥ ಎ. ಕನಕರಾಜು, ಚಿಕಾಕೋಲ್, (ವಿಜಾಗ್ ಡಿಸ್ಟ್ರಿಕ್ಟ್)

Most Reliable New Model 1939
High Grade Lever Movement. Offered at 50% Reduction
No 517

STRONG & DURABLE
ROUND OR SQUARE
No 401 Chromium Rs 3 0 0
„ **402 Golden Case** „ 4 0 0
LEVER MOVT 15 JEWELS
Guaranteed 5 Years
No 517 Chromium Rs 6 8 0
No 518 Golden Case Rs 8 0 0 **No 561 Chromium** Rs. 13 8 0
No 562 Rolled Gold Rs 17 0 0. **Catalogue Free.** As. 9/- Extra for postage & packing
(CORRESPONDENCE IN ENGLISH ONLY)
BAPALAL & CO., *101 Abdul Rehman Street,* **Bombay 3**

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್ ಫೋನ್ 406 ನಾಲೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ ಮೈಸೂರು

ಮುದ್ರಾಸಿಗೆ ಬಂದಲ್ಲಿ **ಮೈಸೂರು ಕೇಪ್** ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್.-ಕೆ. ಗುರುರಾಜಾಚಾರ್ಯ.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ರಾನ್ ಬೋರ್ಡ್ ಸ್ಟಾಂಪಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು.

ಅನ್ಯಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೋಸ್ಪಿಟಲ್ ರೋಡ್, ಉಡುಪಿ.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance*
CANARA AUTOMOBILES - - - - - MANGALORE

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್‌ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, **ಮಂಗಳೂರು.**

ಕಡಿಮೆ ಖರ್ಚು!
ಬೆಂಗಳೂರಿಗೆ ಬಸ್ಸು ಮತ್ತು
ರೈಲು ಚಾರ್ಜು ಕೂಡಾ
ರೂಪಾಯಿ 5-9-0 ಮಾತ್ರ

ಮಂಗಳೂರಿನಿಂದ-ಬೆಂಗಳೂರು-ತಿರುಪತಿ-ಮದರಾಸು

ಅತಿ ಶೀಘ್ರ ಪ್ರಯಾಣ
ಬೆಂಗಳೂರಿಗೆ
ಬರೇ 14 ತಾಸುಗಳೊಳಗೆ
ತಲ್ಪುವ ಏರ್ಪಾಡು.

ಇತ್ಯಾದಿ ಸ್ಥಳಗಳಿಗೆ ಹೋಗಲು ಅತ್ಯನುಕೂಲವಾದ ಸರ್ವಿಸುಗಳ ವ್ಯವಸ್ಥೆ ಮಾಡಲಾಗಿರುವದೆ.

(1) ಮಂಗಳೂರಿನಿಂದ ಬೆಂಗಳೂರಿಗೆ ಹೋಗುವವರು, ಮಂಗಳೂರಿನಿಂದ ಬೆಳಿಗ್ಗೆ 5-15 A.M. ಗೆ ಹೊರಡುವ ನಮ್ಮ ಮೋಡರ್ನ್ ಮೋಟಾರ್ ಸರ್ವಿಸಿನಲ್ಲಿ ಹೊರಟು 11 A.M. ನ ಒಳಗೆ ಮಡಿಕೇರಿಗೆ ತಲುಪಿ, ಅಲ್ಲಿಂದ ಕೂಡಲೆ ಹೊರಟು ಮೈಸೂರು ರೈಲ್ವೆ ಸ್ಟೇಶನಿಗೆ 3-15 P.M. ನ ಒಳಗೆ ತಲುಪಿ, ಮೈಸೂರಿನಿಂದ 4 P.M. ಗೆ ಹೊರಡುವ ಬೆಂಗಳೂರು ಮೈಲು ಟ್ರೈನಿನಲ್ಲಿ ಹೊರಟು, ಸಂಜೆ 7-20 P.M. ನ ಒಳಗೆ ಬೆಂಗಳೂರಿಗೆ ತಲುಪಬಹುದು. ಮಂಗಳೂರಿನಿಂದ ಮೈಸೂರಿಗೆ ಬಸ್ಸು ಚಾರ್ಜು 4-0-0 ಮತ್ತು ಮೈಸೂರಿನಿಂದ ಬೆಂಗಳೂರಿಗೆ ಮೈಲು ಟ್ರೈನು ಚಾರ್ಜು ರೂಪಾಯಿ 1-9-0 ಕೂಡಾ ಚಾರ್ಜು ರೂಪಾಯಿ 5-9-0 ಮಾತ್ರ.

(2) ಮಂಗಳೂರಿನಿಂದ ತಿರುಪತಿಗೆ ಹೋಗುವವರು ಮೈಸೂರಿನಿಂದ ರೈಲು ಚಾರ್ಜು ರೂಪಾಯಿ 5-11-0 ನ್ನು ಕೊಟ್ಟು ತಿರುಪತಿಗೆ ಪ್ರಯಾಣಮಾಡಲಿಕ್ಕೆ ಸುಕರ.

(3) ಮಂಗಳೂರಿನಿಂದ ಮದ್ರಾಸಿಗೆ ಹೋಗುವವರು ಮಡಿಕೇರಿ, ಮೈಸೂರು, ಬೆಂಗಳೂರು ಇತ್ಯಾದಿ ಮನೋರಂಜಿತ ಸ್ಥಳಗಳನ್ನು ನೋಡಿ ಪರಮಾನಂದಭರಿತರಾಗಿ ಬೆಂಗಳೂರಿನಿಂದ 9 P.M. ಗೆ ಬಿಡುವ ಟ್ರೈನಿನಲ್ಲಿ ಹೊರಟು ಮರುದಿನ ಬೆಳಿಗ್ಗೆ ಮದ್ರಾಸಿಗೆ ತಲುಪಬಹುದು. ಬೆಂಗಳೂರಿನಿಂದ ಮದ್ರಾಸಿಗೆ ಚಾರ್ಜು ರೂಪಾಯಿ 5-2-0 ಮಾತ್ರ.

ಬಸ್ಸು ಪ್ರಯಾಣವು

ಅತಿ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಹಾರದ ಅನುಕೂಲತೆ!!

ಇವೆಲ್ಲವೂ ಬಸ್ಸು ಪ್ರಯಾಣದಲ್ಲಿವೆ.

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS

The Combined Booking Agency, MANGALORE. The Joint Booking Office, KODIALBAIL.

Thulunad Bank

OF SUPPLY AGENCY LIMITED,

ESTD] UDIPI [1933

Authorised & Issued Capital Rs. 1,00,000
Subscribed & Paid up .... Rs. 31,300

RATE OF INTEREST FOR FIXED DEPOSITS.

3 to 6 Months 4% p. a.
7 to 11 ,, 5% ,,
12 to 18 ,, 6% ,,

SPECIAL RATE FOR LONG TERM DEPOSITS ON APPLICATION.

Current Accounts are accepted at 3% p. a.

JOIN ANY OF THE SCHEMES:

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Buddha	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಸತ್ಯನಾರಾಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
,, ಭಾಗ ೨	0	4	0
,, ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors:* GENERAL SUPPLIES, LTD., UDIPI)

PRINTED BY S. S. KARANTH AT THE THULUNAD PRESS, UDIPI, AND PUBLISHED BY K. H. SHETTY AT NAVAYUGA OFFICE, UDIPI, S. INDIA.

Registered No. M. 5618

WANTED one Inspector, two Organisers and Agents in South Kanara. Apply stating previous experience to:-
The Bombay Co-operative Insurance Society Ltd.,
Office for Mysore, Coorg & South Kanara
Asiatic Building, Kempe Gowda Road,
Bangalore City.

ನವಯುಗ
NAVAYUGA

ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

FOUNDER:
SRI. A. B. SHETTY, M. L. A.,
Parliamentary Secretary, Govt. of Madras.

ಸಂಪಾದಕ: ಕೆ. ಕೆ. ಶೆಟ್ಟಿ. ESTD. 1921 ಸಹಸಂಪಾದಕ: ಕೆ. ಎಚ್. ಶೆಟ್ಟಿ.

ಸಂಪುಟ ೧೯ ಸಂಚಿಕೆ ೪	ಉಡುಪಿ ಗುರುವಾರ, ತಾ 28-9-1939	VOL. 19 No. 4

GET RICH
AND
PROSPEROUS
through Simple Means upheld and pursued by Millions.........!
WRITE NOW WITH STAMP.—
K. S. Row,
Worli, BOMBAY.

'SERWELL'
RUBBER STAMPS
OFTEN APPEAL,
Since they surely serve well.
YOU CAN HAVE ONE
On placing your order with our Representatives in your area.
IF UNREPRESENTED WRITE FOR AGENCY TERMS.
Manufacturers:—
on the approved list of the Govt. of Mysore.
YADIKE BROS.
MANUFACTURERS' REPRESENTATIVES, IMPORTERS & ENGINEERS,
BANGALORE CITY.

HELP HIM to achievement!

The child is Father to the Man. Yet "promise" is never fulfilled without care for the child's future health and happiness. For parents whom sheer value is imperative a policy of the TROPICAL is the most effective future-care.
TROPICAL is helping thousands of families: it will help yours' too. Write to-day!

TROPICAL
INSURANCE COMPANY LIMITED.
NEW DELHI.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂ ಡೆಲ್ಲಿ.
ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಿಗೆ ಬಯಸುವವರು ಬರೆಯಿರಿ.
ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು. ಅಥವಾ ಕೆ. ರಾಮಸ್ವಾಮಿ ಅಯ್ಯರ್, ಎಂ. ಎ., ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು.

— ಗರ್ಭ ನಿರೋಧ —
ರಹತ್‌ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವುದು. ಇದನ್ನು 3 ದಿವಸ ಉಪಯೋಗಿಸಿದರೆ ಗರ್ಭಧಾರಣೆಯು ಪೀಡೆಯು ಜೀವಮಾನವಿಡೀ ನಿವಾರಿಸಲ್ಪಡುವುದು. ಶರೀರಕ್ಕೆ ಯಾವ ತರದ ಹಾನಿಯೂ ಇರುವುದಿಲ್ಲ. ಯಾವರೀತಿಯ ಮುಟ್ಟು ದೋಷವೂ ಉಂಟಾಗುವದಿಲ್ಲ. ಪ್ರತಿಯೊಂದು ಔಷಧಿಯೊಂದಿಗೆ ಗ್ಯಾರಂಟಿ ಪತ್ರವಿದೆ. ಬೆಲೆ ರೂ. 5-8-0.
ರಜವತಿ-ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು. ಬೆಲೆ ರೂ. 5-8-0 ಪಡೆದ 10ಕಿಲ್ಲಿಂಗು.
ಫೋ. ನಂ. 21343.
Dr. S. H. Khan,
42 (N. G.) Churchgate street
Fort Bombay

ಕೇವಲ ರೂ. 2-4-0ಕ್ಕೆ
ಲಿವರ್ ರಿಸ್ಟ್‌ವಾಚುಗಳು

ಈ ಗಡಿಯಾರಗಳು ಸರಿಯಾದ ಸಮಯ ತೋರಿಸುವವು ಮತ್ತು 5ವರ್ಷಗಳ ಗ್ಯಾರಂಟಿ ಉಳ್ಳವುಗಳು. ದುಂಡು ಆಕಾರ ಬೋಕಾಕಾರಕ್ಕೆ ರೂ.2-... ಉತ್ತಮ ಮಾದರಿಯಕ್ಕೆ ರೂ. ... ರೂ.12 ಥರಗಳು ... ರೂ.4-4-0. Rec. ... 6-8-0 ... 7-4-0 ... ರೂ. 11 ... ಗ್ಯಾರಂಟಿ. ... 8 ಪ್ರತ್ಯೇಕ ... 3ಗಡಿಯಾರಗಳನ್ನು ತೆಕ್ಕೊಂಡರೆ ... ಉಚಿತ.
ಸಿಲೋನಿನ ಆರ್ಡರುಗಳು ಸಂಪೂರ್ಣ ಹಣದೊಂದಿಗೆ ಬರಿಯಬೇಕು: ಫೇಸ್ಸ ಸ್ಟೋರ್ಸ್, ಪೋಸ್ಟ್‌ಬಾಕ್ಸ್ ನಂ 12204, ಕಲ್ಕತ್ತ (S. C. E. 184)

ಅದ್ವಿತೀಯ ಗುಣಕಾರಿ
ವಾಯುವಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿ
ಆಯುರ್ವೇದ ರೂಪಿತಮಂದಿರದ ಆಧಾರದಲ್ಲಿ ... ಭಗವಾನ್ ಧಾನ್ವಂತರಿಯು ಲೋಕದ್ಧಾರಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ... ನಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.
ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ... ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಂಸ್ಕಾರಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ... ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುರುಕು ಯಾ ಎಲ್ಲ ... ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳಿಂದ ದಿನನಿತ್ಯದ ಉಪದ್ರವಗಳ ನೋವಿನಿಂದ ... ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.
ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.
ಏಜೆಂಟ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ನ.ಬಿ) ಗಳನ್ನು ಕಳುಹಿಸುತ್ತೇವೆ.
ಸ್ವದೇಶೀ ಔಷಧಿ ಭಂಡಾರ,
(ರಜಿಸ್ಟರ್ಡ್) ಕುಂಜಾಲು.
ಪೋಸ್ಟ್-ಬ್ರಹ್ಮಾವರ, ದ. ಕ.
ನಮ್ಮ ಸ್ಟಾಕಿಸ್ಟರು—1. ಎ. ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ಸ್ ಏಜನ್ಸಿ, ಬಟಾಟಾ ... ಮೆನ್ಸನ್, ಮುಂಬೈ. 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ. 3. ನವಭಾರತ ಬುಕ್ ಡಿಪೋ, ಉಡುಪಿ.

ಕೋಪ್ರಾನದ ಬಿಳೀ ಟೂಥ್‌ಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತು ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು:—ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ).

ಮದಾರಿ ಗುಳಿಗೆಗಳು
For Keeping the BRAIN LEVEL

(ರಜಿಸ್ಟರ್ಡ್)
ಸನ್ನಿ, ಅಪಸ್ಮಾರ ಮೊದಲಾದುವಕ್ಕೆ ರಾಮಬಾಣ.
MADARY PILLS
ಅಂಗ ದೌರ್ಬಲ್ಯದಿಂದುಂಟಾಗುವ ನಿದ್ರಾಭಂಗ, ನಪುಂಸಕತ್ವ, ಸೂತಿಕಾವಾಯು, ಗರ್ಭಾಶಯ ದಾತೃ, ನಿದ್ರೆಬಾರದಿರುವಿಕೆ, ಹುಚ್ಚು, ಉನ್ಮಾದ, ಸ್ವಪ್ನೇಂದ್ರಿಯ, ಬಾಲಗ್ರಹ, ಮತ್ತಿತರ ಮಾನಸಿಕ ಮತ್ತು ಮೆದುಳಿನ ಅಶಕ್ತತೆಗಳನ್ನು ಹೋಗಲಾಡಿಸುತ್ತದೆ.
50 ಗುಳಿಗೆಗಳಿರುವ ಸೀಸೆಯೊಂದಕ್ಕೆ ಕ್ರಯ ರೂ. 3-8-0. ಬಯಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆಯಿರಿ:-
The Imperial Chemist Coy.
106, Vithalbhai Patil Road Bombay 4.

— ಮಾರಾಟಕ್ಕೆ ಸಿದ್ಧವಾಗಿದೆ —
ಅನಂತನ ವಸ್ತ್ರಗಳು
ಮತ್ತು
ದಾರಗಳು
ವಸ್ತ್ರಗಳು—
ಜೊತೆ 1ಕ್ಕೆ 1ಆಣೆಯಿಂದ 2ಆಣೆವರೆಗೆ
ದಾರಗಳು—
ಜೊತೆ 1ಕ್ಕೆ 1ಆಣೆಯಿಂದ 2ಆಣೆವರೆಗೆ
ವಸ್ತ್ರಗಳು—
100ಕ್ಕೆ ರೂ. 3ರಿಂದ ರೂ. 4ರ ವರೆಗೆ
ದಾರಗಳು—
100ಕ್ಕೆ ರೂ. 3ರಿಂದ ರೂ. 6ರ ವರೆಗೆ
— ಉಡುಪಿ ಸ್ಟೋರ್ಸ್ —
ನಂಬ್ರ45, ಅಕ್ಕಾರ ಟು ಶ್ರೀನಿವಾಸಾಚಾರ್ಯ ರಸ್ತೆ, ಬೆಂಗಳೂರು ಸಿಟಿ.
ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಉಂಟು.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

THE ASIAN ASSURANCE COMPANY, LTD.

ASIAN BUILDINGS - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9,24,965	24 50,234
1935	2,52 08,418	18,39 296	42 98,820
1938	3,61,56 764	22 34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
,, **M Shivarama Rao**, Organizer, Puttur

Or

Sri J. A PUTRAN,
Branch Manager, MANGALORE.

She Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2,02 800/-   Paid up Capital Rs 1 82 100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Current accounts are opened free of charge & interest allowed on daily balances at 2% p a for the earlier half and at 1% p a. for the latter half of every calendar year

Fixed Deposits are accepted at all the above offices for one and two years and interest allowed at 3½% p. a and 4% p a respectively, interest being payable every half year of the calendar year Savings Bank & Cumulative Deposits are also received on remunerative terms

Negotiable Instruments payable on demand and also genuine short dated trade bills are discounted on fairly easy terms

For business proper please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೆ ನಮ್ಮ
ವಿಲಿಯಮ್ ಎಂಡ್ ಕೋ ರವರ
ರೂಪ ಮತ್ತು ರಾಜಿಯ ಟ್ರೇಡ್‌ಮಾರ್ಕುಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆವಂತ ಶ್ರೀಮಂತರ ವರೆಗೂ ಅವರವರ ಅನುಕೂಲಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಎದೆನೋವು ಇತ್ಯಾದಿಗಳಿಗೆ ದಿವ್ಯ ಔಷಧಿ.

ಪೌಂಡ್ ರೂ 2-8 0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವೃದ್ಧಿ ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುತ್ತದೆ ಬಾಟ್ಲಿ 1ರ ರೂ 1-8-0,

ಕೆಟಲಾಗಿಗೆ ಬರೆಯಿರಿ — **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ನವ ಜಾತಿಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ

ಉಪ ಸ್ಟೋಕಿಸ್ಟರು —ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್‌ಏಜಂಟ್ಸ್ ಉಡುಪಿ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8 0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ ಮಾತನಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ ೭೬೪ ಪೇಜುಗಳು ಇರುವ ಈ ದೊಡ್ಡ ಪುಸ್ತಕ ಸಲ್ಪ ಪ್ರತಿಗಳು ಮಾತ್ರ ಇರುವುದು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಆದಕ್ಕಾಗಿ ಎಲ್ಲಿಗೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿರಿ ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತ ಪುಸ್ತಕದ ಬೆಲೆ ರೂ ೧

Western Swiss watch Co
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದ್ರಾಸ್

ಸೀರೆಗಳು

ಸ್ವದೇಶೀ ಶೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ

ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಜಾಡಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಕೇವಲ 16 ದಿವಸಗಳಲ್ಲಿ ಉದ್ದವಾಗುವಿರಿ

ಶರೀರದ ಬೆಳವಣಿಗೆಯ ವೇಗದ ಕ್ರಿಯಂತಿರುವ ಗ್ರಂಥಿಯು ನಿರ್ಬಲವಾಗಿದ್ದರೆ ಅದನ್ನು ಉತ್ತೇಜಿಸಿ ಸಶಕ್ತಗೊಳಿಸಿ ಬೆಳವಣಿಗೆಯನ್ನು ಹೆಚ್ಚಿಸಲು ಖಾತ್ರಿ ಉಪಾಯವೆಂದರೆ ಜೀವಸತ್ವಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಹಿಟೋಜೆನ್ ಮಾತ್ರೆಗಳನ್ನು ಸೇವಿಸುವುದು ದಿನಕ್ಕೆರಡರಂತೆ ಕೇವಲ 16 ದಿವಸ ತೆಗೆದುಕೊಂಡಲ್ಲಿ ಶರೀರದ ಎತ್ತರವು ವಿಚಿತ್ರವಾಗಿ ಹೆಚ್ಚುವುದು 'ನಿಮ್ಮ ಕೇವಲ ಒಂದು ಪಕ್ಷದ ಚಿಕಿತ್ಸಾ ಕ್ರಮದಿಂದ ನಾನು 2½ ಇಂಚು ಎತ್ತರವಾಗಿರುವೆ'ನೆಂದು ಮಿ ಪಿ ಜಿ ಫೋಬ್ಸ್ ಇವರು ಬರೆಯುತ್ತಾರೆ

Hitogen
GROWTH HORMONES,

ಒಟ್ಟಿಗೆಯೊಂದರ ಬೆಲೆ ರೂ. 5 4 0, ಟಪ್ಪಾಲು ಮತ್ತು ಪೇಕಿಂಗ್ ವೆಚ್ಚ 0—10 —0.
ಹಿಂದೂಸ್ಥಾನದ ಹೊರಗಿನವರಿಗೆ 10 ಶಿಲಿಂಗ್.

Sole Agents **British Products Co., Fort Bombay**

Sole Distributors —
Mahasukhlal Chimanlal & Co, Princess St Mangaldas Road, BOMBAY

—: ಜಾಹೀರಾತು :—

ದರಗಳು.

೧ ಪುಟಕ್ಕೆ ೧ ಸಲಕ್ಕೆ . . ರೂ. ೨೫
ಅರ್ಧ ಪುಟಕ್ಕೆ ೧ ಸಲಕ್ಕೆ ,, ೧೫
ಕಾಲು ಪುಟಕ್ಕೆ ೧ ಸಲಕ್ಕೆ ,, ೮
ಅರೆಕಾಲು ಪುಟಕ್ಕೆ ೧ ಸಲಕ್ಕೆ ,, ೫
ಇಂಚು ಕಲಮಿಗೆ ೧ ಸಲಕ್ಕೆ ,, ೧

ಕಾಯಂ ಜಾಹೀರಾತು
—: ದರಗಳಿಗೆ ಬರೆಯಿರಿ :—

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

—: ಚಂದಾ ವಿವರ :—

೧ ವರ್ಷಕ್ಕೆ . ರೂ. ೩—೪—೦
೬ ತಿಂಗಳಿಗೆ . ,, ೧-೧೨—೦
೩ ತಿಂಗಳಿಗೆ ... ,, ೧—೦—೦
ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ.

ಮಾದರಿ ಸಂಚಿಕೆಗೆ
—:ಮೆನೇಜರರಿಗೆ ಬರೆಯಿರಿ:—

ವಾರದ ವಿಮರ್ಶೆ

ರಾ ಅವಿವೇಕಪರ ಘೋರಣೆ

ಇದೇ ತಾ. 17ರಲ್ಲು ಡಿಲ್ಲಿಯಲ್ಲಿ ಸೇರಿ
ಮುಸ್ಲಿಮ್ ಲೀಗ್ ಕೌನ್ಸಿಲಿನ ನಿರ್ಣ
ಯವು ಅತ್ಯಂತ ಅವಿವೇಕದ್ದಾಗಿದೆ. ಪ್ರಕೃ
ತ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಮುಸ್ಲಿ
ಮ್ ಲೀಗಿನವರು ತಮ್ಮ ಕ್ಷುದ್ರ ಸಂಕುಚಿ
ತ ಮನೋವೃತ್ತಿಯನ್ನೇ ಮುಂದೊತ್ತಿ
ಕಾಂಗ್ರೆಸಿನ ಮೇಲೆ ಸೇಡು ತೀರಿಸುವ
ಧೋರಣೆ ವಹಿಸಿದುದು ದೇಶದ ದೊಡ್ಡ
ದೌರ್ಭಾಗ್ಯವ. ಹಿಂದುಸಿರಲ್ಲವರು ಹಿಂದೂ
ದೇಶದ ಸ್ವಾತಂತ್ರ್ಯವನ್ನು ಪ್ರತಿ
ಪಾದಿಸಿ ಇನ್ನೊಂದುಸಿರಲ್ಲಿ ಅದರ ಬುಡ
ಕ್ಕೇನೇ ಕೊಡಲಿ ಇಡುವ ಅರ್ಥರಹಿತ
ಮತ್ತು ಅಸಂಗತ ನಿರ್ಣಯಗಳನ್ನು ಮಾ
ಡುತ್ತಾರೆ. ಕಾಂಗ್ರೆಸಿನ ಆಮಂತ್ರಣವ
ನ್ನು ಸ್ವೀಕರಿಸುವುದು ಕೂಡಾ ತನ್ನ ಗೌರ
ವಕ್ಕೆ ಕುಂದೆಂಬ ಅಹಂಭಾವ ತೋರಿಸಿರು
ವ ಮಿ. ಜಿನ್ನರ ಮನೋವೃತ್ತಿಯನ್ನೇ ಅ
ದು ಕೂಡಾ ಸೂಚಿಸುತ್ತವೆ. ಯುದ್ಧದಲ್ಲಿ
ಬ್ರಿಟಿಷ್ ಸರಕಾರಕ್ಕೆ ಸಹಾಯವೀಯಲು
ಸಿದ್ಧರಾಗಿರುವ ಲೀಗಿನವರು ಅದಕ್ಕಾಗಿ
ಸಮಂಜಸಲ್ಲದ ಶರ್ತಗಳನ್ನು ಹಾಕಿರುತ್ತಾರೆ.
ಬಹುಪಕ್ಷೀಯರಾದ ಹಿಂದುಗಳ ಹಾಗೂ
ಕಾಂಗ್ರೆಸಿನ ಅಧಿಕಾರದ ಕುರಿತು ಉರಿಕಾ
ರುತ್ತಾರೆ. ಫೆಡರೇಶನಿಗೆ ಮಾತ್ರವಲ್ಲ ಹಿಂ
ದೂದೇಶದ ಸಂಯುಕ್ತ ರಾಜ್ಯಾಂಗ ರಚ
ನೆಯ ಉದ್ದೇಶಕ್ಕೇನೇ ಲೀಗು ಬದ್ಧ ವಿ
ರೋಧವಿದೆ. ಯಾಕಂದರೆ ಅದರಿಂದಾಗಿ
ಪ್ರಜಾಸತ್ತೆಯ ಮತ್ತು ಪಾರ್ಲಿಮೆಂಟರಿ ಸ
ರಕಾರದ ಹೆಸರಲ್ಲಿ ಬಹು ಸಂಖ್ಯಾಕ ಜಾತಿ
ಯ, ಅಂದರೆ ಹಿಂದುಗಳ ಅಧಿಕಾರಕ್ಕೆಡೆ
ಯಾಗುತ್ತದೆಂದು ಲೀಗ್ ಕೌನ್ಸಿಲಿನ
ಅಭಿಮತ. ಬಹುಪಕ್ಷೀಯರಾದ ಹಿಂದು
ಗಳ ಬದಲಿಗೆ ಅಲ್ಪ ಸಂಖ್ಯಾಕರಾದ
ಮುಸಲ್ಮಾನರು ಹಿಂದೂದೇಶವನ್ನು ಆಳು
ವಂತಾದರೆ ಲೀಗಿನವರಿಗೆ ಸಂತೋಷವಾಗು
ವುದೋ ಏನೋ. ಒಂದೇ ಜನಾಂಗವಾಗದೆ
ಬೇರೆ ಬೇರೆ ಜನಾಂಗಗಳಿಂದ ಕೂಡಿದ ಹಿಂ
ದೂದೇಶಕ್ಕೆ ಪ್ರಜಾಸತ್ತಾತ್ಮಕ ರಾಜಕೀ
ಯ ಘಟನೆಯೇ ಅಯೋಗ್ಯವಾದುದೆಂದು
ಲೀಗಿನವರ ಸಿದ್ಧಾಂತ. ಈಗಣ ಪ್ರಾಂತಿಕ
ಸ್ವಾಯತ್ತತೆಯಲ್ಲಿ ಹಿಂದು ಬಹುಪಕ್ಷೀ
ಯರೇ ಅಧಿಕಾರಕ್ಕೆ ಬರುವಂತಾಗಿ ಮುಸ
ಲ್ಮಾನ ಅಲ್ಪ ಸಂಖ್ಯಾಕರ ಜೀವನ, ಸ್ವಾ
ತಂತ್ರ್ಯ, ಸೊತ್ತು ಮತ್ತು ಗೌರವಕ್ಕೇನೇ
ಹಾನಿಯುಂಟಾಗಿದೆಯಂತೆ. ಗವರ್ನರರು
ತಮ್ಮ ವಿಶೇಷಾಧಿಕಾರವನ್ನು ಪಯೋಗಿಸಿ
ಮುಸಲ್ಮಾನರಿಗೆ ರಕ್ಷಣೆ ಕೊಡಲಿಲ್ಲವಂತೆ.
ಇನ್ನು ಮುಂದೆ ಮುಸ್ಲಿಮ್ ಲೀಗಿನ ಸಮ್ಮ
ತಿಯಿನಃ ಹಿಂದೂದೇಶಕ್ಕೆ ಯಾವ ರಾಜಕೀ
ಯ ಸ್ವಾತಂತ್ರ್ಯವನ್ನೂ ಕೊಡಬಾರದೆಂ
ದು ಲೀಗ್ ಕೌನ್ಸಿಲಿನ ಎಚ್ಚರಿಕೆ ಬ್ರಿಟಿಷ್
ಸರಕಾರಕ್ಕೆ. ಇದಕ್ಕಿಂತ ದೇಶಘಾತುಕ
ಘೋಷಣೆಯಾದರೂ ಇನ್ನಾವುದು? ಮಿ. ಜಿ
ನ್ನರಿಗೂ ಹಿಟ್ಲರರ ಗಾಳಿ ತಾಗಿರುವಂತೆ
ತೋರುತ್ತದೆ ಇತ್ತಿತ್ತಲಾಗಿ.

ಹೆರ್ ಹಿಟ್ಲರರ ಜಂಭ

ಇಷ್ಟರ ವರೆಗೆ ಜಂಭ ಹೊಡೆದು, ಬೆದ
ರಿಕೆ ಹಾಕಿ ತನ್ನ ಕಾರ್ಯ ಸಾಧಿಸಿ ಕೊಂ
ಡಂತೆಯೇ ಈಗಲೂ ಮಾಡುತ್ತಿದ್ದಾರೆ
ಹೆರ್ ಹಿಟ್ಲರರು. ಇದೇ ತಾ. 19ರಲ್ಲು
ಅವರು ಡಾನ್ಜಿಗಿಗೆ ಪ್ರಥಮವಾಗಿ ಹೋಗಿ
ಮಾಡಿರುವ ಭಾಷಣವು ಯುದ್ಧದ ವಿಷ
ಯದಲ್ಲಿ ಲೋಕದ ಕಣ್ಣಿಗೆ ಮಣ್ಣು ಹಾಕು
ವಂತಹದಿದೆ ಸುಳ್ಳು ತರ್ಕದಿಂದ ಬಿಳುಪ
ನ್ನು ಕಪ್ಪಾಗಿ ಮಾಡಲು ಸಾಧ್ಯವಿಲ್ಲ ತನ
ಗೇನೂ ಇಂಗ್ಲೆಂಡ್ ಮತ್ತು ಫ್ರಾನ್ಸುಗಳ
ಮೇಲೆ ಯುದ್ಧ ಮಾಡುವ ಹಂಚಿಕೆ ಇರ
ಲಿಲ್ಲ. ಜರ್ಮನಿಯ ಹಾಗೂ ಇಡೀ ಲೋ
ಕದ ಮೇಲೆ ಭಯಂಕರ ಯುದ್ಧ ಹೊರಿಸಿ
ದವರು ಪ್ರಜಾಶಾಹಿ ರಾಷ್ಟ್ರಗಳು. ವಾರ್ಸೆ
ಲಿನ ಒಪ್ಪಂದವೇ ಅವರ ಯುದ್ಧ ಮನೋ
ವೃತ್ತಿಯ ದ್ಯೋತಕ. ಈ ಒಪ್ಪಂದದಿಂದ
ಜರ್ಮನಿಯ 82ಮಿಲ್ಯ ಜನರು ಕೆಳಕ್ಕೆ
ತುಳಿಯಲ್ಪಟ್ಟರು. ಆದರೆ ಯುದ್ಧ ತೃಷೆ
ಯುಳ್ಳ ಪ್ರಜಾಶಾಹಿ ರಾಷ್ಟ್ರಗಳು ಏನು
ಮಾಡಿದರೂ ಈ 82ಮಿಲ್ಯ ಜನರು ಸ್ವಾ
ಭಿಮಾನದಿಂದ ತಲೆಯೆತ್ತಿ ನಿಂತೇ ನಿಲ್ಲು
ವರು. ಪೋಲೆಂಡಿಗೆ ತಾನು, ಜರ್ಮನ್
ಜನತೆಗೆ ಒಪ್ಪಿಗೆಯಿಲ್ಲದ ಅತಿ ರಿಯಾಯಿತಿ
ಯ ಶರ್ತಗಳನ್ನಿತ್ತೆ. ಪ್ರಜಾಶಾಹಿ ರಾಷ್ಟ್ರ
ಗಳ ಪ್ರೇರಣೆ ಮತ್ತು ಪ್ರೋತ್ಸಾಹದಿಂದ
ಅವುಗಳನ್ನದು ಸ್ವೀಕರಿಸಲಿಲ್ಲ. ಜರ್ಮನಿ
ಯೊಡನೆ ರಾಜಿಗೆ ತಯಾರಾಗಲಿಲ್ಲ. ಮುಸ
ಲೋನಿಯವರು ರಾಜಿ ಮಾಡಲೆತ್ನಿಸಿದರು.
ಫ್ರಾನ್ಸು ಅದಕ್ಕೊಪ್ಪಿತು ಆದರೆ ಇಂಗ್ಲೆಂ
ಡು ಒಪ್ಪಲಿಲ್ಲ ಇಂದೀಗ 18 ದಿವಸ
ಗಳಲ್ಲಿ ಪೋಲಂಡನ್ನು ತಾವು ಗೆದ್ದಿರು
ವೆವು. ಪೋಲೀಶ್ ಸೇನೆಯು ನಿರ್ನಾಮ
ವಾಗಿದೆ. ಜರ್ಮನ್ ಸೇನೆಯು ಪ್ರಜಾ
ಶಾಹಿ ರಾಷ್ಟ್ರಗಳಿಗೊಂದು ಪಾಠ ಕಲಿಸಿದೆ.
ಇಷ್ಟರವರೆಗೆ ತಮ್ಮ ವಿಮಾನ ಪಡೆಯು
ಸಾಮಾನ್ಯ ಪಟ್ಟಣಗಳು ಮತ್ತು ಜನತೆ
ಯ ಮೇಲೆ ಬೋಂಬೆಸೆಯಲಿಲ್ಲ. ಆದರೆ
ಇನ್ನು ಮುಂದೆ ಮುಯ್ಯಿಗೆ ಮುಯ್ಯಿ ತೀರಿ
ಸಿ ವೈರಿಗಳ ಒಂದು ಬೋಂಬಿಗೆ 6 ಬೋಂ
ಬುಗಳೆಸೆಯಲ್ಪಡುವವು. ಈಗಣಂತಹ
ಪೋಲಂಡು ಇನ್ನೆಂದಿಗೂ ಜನ್ಮಕ್ಕೆ ಬರ
ಲಾರದು. ಪೋಲಂಡಿನ ಪ್ರಶ್ನೆಯನ್ನು ಇ
ತ್ಯರ್ಥ ಮಾಡಬೇಕಾದುದು ಜರ್ಮನಿ
ಮತ್ತು ರಷ್ಯವಲ್ಲದೆ ಇಂಗ್ಲೆಂಡು ಫ್ರಾನ್ಸುಗ
ಳಲ್ಲ ಇನ್ನಾದರೂ ಜರ್ಮನಿಯು ಶಾಂತಿ
ಸ್ಥಾಪನೆಗೆ ಸಿದ್ಧವಿದೆ ಆದರೆ ಪ್ರಜಾಶಾಹಿ
ರಾಷ್ಟ್ರಗಳು 3 ವರ್ಷದ ವರೆಗಲ್ಲ, ಐದು
ಆರು ಏಳು ವರ್ಷಗಳ ಯುದ್ಧ ಮಾಡಿದ
ರೂ ಜರ್ಮನಿಯು ಬಿಟ್ಟುಕೊಡಲಾರದು
ಇಷ್ಟರ ವರೆಗೆ ಯಾರಿಗೂ ತಿಳಿಯದ, ವೈ
ರಿಗಳಿಗೆ ಜರ್ಮನಿಯ ಎದುರಾಗಿ ಉಪ
ಯೋಗಿಸಲು ಅಸಾಧ್ಯವಾದ ರಹಸ್ಯವೊಂ
ದು ಜರ್ಮನಿಗೆ ಗೊತ್ತಿದೆ. ಅದನ್ನು ಉಪ
ಯೋಗಿಸುವ ಸಂದರ್ಭ ಬರಲಾರದೆಂದು
ನಿರೀಕ್ಷಿಸುತ್ತೇನೆ ಬಂದರೆ ಆ ಮೇಲೆ ಯಾ
ರಾದರೂ ಮಾನವತೆಯ ಹೆಸರಲ್ಲಿ ದೂರ
ಬಾರದೆಂಬುದೇ ಹಿಟ್ಲರರ ಭಾಷಣದ
ಸಾರಾಂಶ. ಈ ಭಾಷಣದಿಂದ ಲೋಕವು
ವಂಚಿತವಾಗಲಾರದು ಹಿಟ್ಲರ್ ಶಾಹಿಯ
ನ್ನು ನಿರ್ನಾಮಗೊಳಿಸಿಯೇ ಸಿದ್ಧವೆಂಬ
ಪ್ರಜಾಶಾಹಿ ರಾಷ್ಟ್ರಗಳ ನಿರ್ಧಾರವು ಇದ
ರಿಂದ ಮತ್ತಷ್ಟು ಸ್ಥಿರವಾಗದಿರಲಾರದು.

ಮಿತ್ರರಾಷ್ಟ್ರಗಳ ದೃಢನಿರ್ಧಾರ

ಜರ್ಮನಿ ಮತ್ತು ರಷ್ಯಗಳು ಒಪ್ಪಂದ
ಮಾಡಿಕೊಂಡೊಡನೆಯೇ, ಅದು ಕೇವಲ
ಪರಸ್ಪರ ಅನಾಕ್ರಮಣದ ಒಡಂಬಡಿಕೆ
ಯಲ್ಲ; ಒಳಗಿಂದೊಳಗೆ ಇನ್ನು ಏನಾದರೂ
ಇರಬೇಕೆಂದು ಜರ್ಮನಿಯ ಬ್ರಿಟಿಷ್
ರಾಯಭಾರಿಯು ಮೊದಲೇ ಸೂಚಿಸಿದ್ದ
ರು ಅದೀಗ ವ್ಯಕ್ತವಾಗಿರುವುದು. ಪೋ
ಲಂಡನ್ನು ತಮ್ಮೊಳಗೆ ಹಂಚಿಕೊಳ್ಳುವ
ಏರ್ಪಾಡು ಮೊದಲೇ ಜರ್ಮನಿ ರಷ್ಯಗಳೊ
ಳಗೆ ನಡೆದಿರಬೇಕು. ರಷ್ಯದ ಧೈರ್ಯದಿಂದ
ಹಿಟ್ಲರರು ಒಡನೆಯೇ ಪೋಲಂಡಿನ ಮೇ
ಲೇರಿಹೋದುದು:- 4 ವಾರಗಳೊಳಗೆ
ಪೋಲಂಡನ್ನು ಸದೆಬಡಿಯಲಾಗುವು
ದೆಂದು ಗೋರಿಂಗರು ಉದ್ಘೋಷಿಸಿದುದು.
ರಷ್ಯವು ಪೋಲಂಡಿಗೆ ಹಿಂದಿನಿಂದ ತಿವಿಯ
ದಿದ್ದಲ್ಲಿ ಜರ್ಮನಿಗೆ ಪೋಲರನ್ನು ಅಷ್ಟು
ಸುಲಭವಾಗಿ ಜೈಸಲು ಸಾಧ್ಯವಿಲ್ಲೆಂಬು
ದನ್ನು ಇಷ್ಟರವರೆಗೂ ನಡೆಯುತ್ತಿರುವ
ವಾರ್ಸೋ ಯುದ್ಧವೇ ಸಿದ್ಧಗೊಳಿಸುತ್ತದೆ
ಆದರೆ ಇದರಿಂದ ಯುದ್ಧದ ಕುರಿತಾದ
ಮಿತ್ರರಾಷ್ಟ್ರಗಳ ಧೋರಣೆಯೇನೂ ಬದ
ಲಾಗುವುದಿಲ್ಲ ಪೋಲಂಡಿಗೆ ನೆಟ್ಟಗೆ
ಸಹಾಯಮಾಡಲು ಸಾಧ್ಯವಿಲ್ಲೆಂಬುದ
ನ್ನವರು ಮೊದಲೇ ತಿಳಿದಿದ್ದರು. ಕೊನೆಯ
ತನಕ ಹೋರಾಟವನ್ನು ನಡಿಸಿ ಹಿಟ್ಲರ್
ಶಾಹಿಯನ್ನು ಅಂತ್ಯಗೊಳಿಸಿ ಪೋಲಂಡನ್ನು
ಪುನಃ ಸ್ವತಂತ್ರವನ್ನಾಗಿ ಮಾಡಿಯೇ ಸಿದ್ಧ
ವೆಂದು ಬ್ರಿಟಿಷ್ ಮತ್ತು ಫ್ರೆಂಚ್ ಸರಕಾ
ರಗಳು ದೃಢನಿರ್ಧಾರಮಾಡಿರುವವೆಂಬು
ದು ಇದೇ ತಾ. 20ರಲ್ಲು ಬ್ರಿಟಿಷ್ ಪ್ರಧಾ
ನಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಮಾಡಿ
ದ ಭಾಷಣ ಮತ್ತು ಫ್ರೆಂಚ್ ಸರಕಾರವು
ಹೊರಡಿಸಿರುವ ಪ್ರಕಟನೆಯಿಂದ ವಿಶೇಷ
ದವಾಗುತ್ತದೆ. ಹಿಟ್ಲರ ಬೆದರಿಕೆಗೆ ಅವ
ರೇನೂ ಸೊಪ್ಪುಹಾಕಿರುವುದಿಲ್ಲ. ಯಾರಿ
ಗೂ ತಿಳಿಯದಂತಹ ಅಂತಹ ಭಯಂಕರ
ಯುದ್ಧರಹಸ್ಯವೇನೂ ಇರುವಂತಿಲ್ಲೆಂದೇ
ಮಿತ್ರರಾಷ್ಟ್ರಗಳ ಅಭಿಮತ. ಅಂತಹ ವೈಜ್ಞಾ
ನಿಕ ಉಪಕರಣವನ್ನೇನಾದರೂ ಜರ್ಮನಿ
ಯು ಉಪಯೋಗಿಸಿದರೂ ಅದನ್ನು ದಿರಿಸಲ

PIGMY DEPOSIT SCHEME

Special thrift deposit and unique feature of our Bank. it will enable you to build a fortune for the rainy day. It is a fountain of happiness.

Further particulars can be had from

The Canara Industrial & Banking Syndicate Ltd.

UDIPI, (S. India).

ವರು ಸಿದ್ಧರೇ ಇದ್ದಾರೆ ಮಿ. ಚೇಂಬರ್ಲೇನರು ರಷ್ಯದ ಧೋರಣೆಯು ಕುರಿತೇನೂ ಟೀಕಿಸಿರುವುದಿಲ್ಲ, ರಷ್ಯವು ಜರ್ಮನಿಯ ಹಿತಕ್ಕಾಗಿ ಅದನ್ನು ಬಗ್ಗುಬಡಿಯುವ ಧೋರಣೆ ವಹಿಸಿದೆ ಎಂದು ನಂಬಲಾಗಿದೆ ಯುದ್ಧನೇನೂ ಮಾಡದೆ ಅದಕ್ಕೆ ಪೋಲೆಂಡಿನ ದೊಡ್ಡ ಭಾಗವು ಪ್ರಾಪ್ತವಾಗಿ ಸಿಕ್ಕಿದುದು ಜರ್ಮನರಲ್ಲಿ ಮನಸ್ತಾಪವನ್ನುಂಟುಮಾಡದಿರಲಾರದು. ಮತ್ತು ಜರ್ಮನಿ ರಷ್ಯಗಳೊಳಗೆ ಅನ್ಯೋನ್ಯವುಂಟಾಗುವ ಸಂಭವನವಿಲ್ಲ ಅದುದರಿಂದಲೇ ರಷ್ಯವು ಸಂದರ್ಭ ನೋಡಿ ಮುಂಜಾಗ್ರತೆ ತೆಗೆದುಕೊಂಡು ತನ್ನ ಸ್ಥಾನ ಬಲಪಡಿಸಿಕೊಂಡಿರುವುದೆಂದು ನಂಬಲಾಗಿದೆ. ಪಕ್ಕನೆ ಜಯಪಡೆಯಬೇಕೆಂದು ತಾವೇನಾದರೂ ದುಡುಕಿ ಹೆಚ್ಚಿನ ಕಷ್ಟನಷ್ಟಕ್ಕೊಳಗಾಗಲಿಕ್ಕಿಲ್ಲ ಶಾಂತವಾಗಿ ಯುದ್ಧವನ್ನು ಮುಂದೊತ್ತುವೆವು ಕಟ್ಟಕಡೆಗೆ ತಮಗೆ ಜಯದೊರೆಯದಿರಲಾರದೆಂಬ ವಿಶ್ವಾಸವನ್ನು ಬ್ರಿಟಿಷ್ ಪ್ರಧಾನ ಮಂತ್ರಿಗಳು ತೋರಿಸಿರುವರು.

ಯುದ್ಧದ ಮೊದಲಿನ ವಿದ್ಯಮಾನಗಳು

ಯುದ್ಧ ಆರಂಭವಾಗುವ ಮೊದಲಿನ ವಿದ್ಯಮಾನಗಳನ್ನೆಲ್ಲಾ ಬ್ರಿಟಿಷ್ ಸರಕಾರವು ಇದ್ದಕ್ಕಿದ್ದ ಹಾಗೆ ಈಗ ಪ್ರಕಟಿಸಿದೆ. ಹಿಟ್ಲರರಿಗೂ ಮಿ. ಚೇಂಬರ್ಲೇನರಿಗೂ ನಡೆದ ಪತ್ರವ್ಯವಹಾರ, ಬ್ರಿಟಿಷ್ ರಾಯಭಾರಿ ಹೆಂಡರ್ಸನರಿಗೂ, ಹಿಟ್ಲರ್ ಗೋರಿಂಗ್ ಮತ್ತು ರಿಬಂಟ್ರಾಫ್ ಮೊದಲಾದವರಿಗೂ ನಡೆದ ಮಾತುಕತೆ ಕೊನೆಯವರೆಗೂ ಯುದ್ಧವಾಗದಂತೆ ಬ್ರಿಟಿಷ್ ರಾಯಭಾರಿಯು ನಡಿಸಿದ ಪ್ರಯತ್ನವನ್ನೆಲ್ಲಾ ಈ ವಿದ್ಯಮಾನಗಳು ವಿದಿತಗೊಳಿಸುತ್ತವೆ. ಇದರಿಂದ ಜರ್ಮನಿಯ ಅದೃಷ್ಟವು ಅದೆಂತಹ ಅವಿವೇಕಿ ಹಾಗೂ ದುಡುಕುಜನರ ಹಸ್ತಗತವಾಗಿ ವಿನಾಶದ ಹಾದಿ ಹಿಡಿದಿರುವುದೆಂಬುದು ಸ್ಪಷ್ಟವಾಗುತ್ತದೆ ಹಿಟ್ಲರರು ಇಂಗ್ಲೆಂಡಿನ ಮೈತ್ರಿಗಾಗಿ ಹಾತೊರೆಯುತ್ತಾರೆ ಅದಕ್ಕಾಗಿ ಏನುಮಾಡಲಿಕ್ಕೂ ಸಿದ್ಧರಿದ್ದಾರೆ ಆದರೆ ಅವರು ನಂಬಿರುವ ರೀತಿಯ ಜರ್ಮನಿಯ ಹಿತಸಾಧನೆಯು ಅದಕ್ಕೆ ಅಡ್ಡ ಬರುತ್ತದೆ ಕಳೆದ ಯುದ್ಧದ ಮೊದಲಿನ ಜರ್ಮನಿಯ ವಸಾಹತುಗಳನ್ನದಕ್ಕೆ ಬಿಟ್ಟುಕೊಟ್ಟರೆ, ಪೋಲಂಡಿನಲ್ಲಿ ಅದನ್ನು ಇಚ್ಛಾನುಸಾರ ನಡೆಯಬಿಟ್ಟರೆ, ಒಂದೇ ಮಾತಿನಲ್ಲಿ ಹೇಳುವುದಾದರೆ, ಯುರೋಪಿನಲ್ಲ ಪ್ರಭಾವಶಾಲಿಯಾಗಿ ನಿರಾತಂಕವಾದ ಅಧಿಕಾರ ನಡಿಸಲು ಜರ್ಮನಿಯನ್ನು ಬಿಟ್ಟರೆ ಬ್ರಿಟನಿಗೆ ತಾನೇನೂ ತೊಂದರೆ ಮಾಡದೆ ಎರಡು ರಾಷ್ಟ್ರಗಳೂ ಬಹಳ ಮೈತ್ರಿಯಿಂದಿರಬಹುದೆಂದೇ ಹಿಟ್ಲರರ ಅಭಿಮತ. ರಷ್ಯದೊಡನೆ ಒಪ್ಪಂದಮಾಡಿಕೊಳ್ಳಲು ಅವರಿಗೆ ಮನಸ್ಸಿರಲಿಲ್ಲ. ಬ್ರಿಟನರ ಧೋರಣೆಯಿಂದಾಗಿ ಅವರು ಹಾಗೆ ಮಾಡಿದುದಾಗಿದೆ ಹಿಟ್ಲರರಿತ್ತ ರಾಜಿಯ ಶರ್ತಗಳು ಪೋಲಂಡಿಗೆ ಮುಟ್ಟಲೇ ಇಲ್ಲ. ಆ ಮೊದಲೇ ಜರ್ಮನಿಯು ಯುದ್ಧವನ್ನಾರಂಭಿಸಿಬಿಟ್ಟಿತು. ಯುದ್ಧ ಹೂಡಬಾರದು, ತಾಳ್ಮೆಯಿಂದಿರಬೇಕು. ಯುದ್ಧದ ಮನೋವೃತ್ತಿಯನ್ನು ಬಿಟ್ಟಲ್ಲಿ ಸಮಾಧಾನದಿಂದ ಎಲ್ಲವನ್ನೂ ಇತ್ಯರ್ಥಮಾಡಿಕೊಳ್ಳಬಹುದೆಂದು ಬ್ರಿಟಿಷ್ ರಾಯಭಾರಿಯು ಬಗೆಬಗೆಯಿಂದ ಕೇಳಿಕೊಂಡರೂ ಹಿಟ್ಲರರು ಗಮನಿಸಲಿಲ್ಲ ಗೋರಿಂಗರು ಕಿವಿಗೊಡಲಿಲ್ಲ. ರಿಬಂಟ್ರಾಪರು ಧಿಕ್ಕರಿಸಿಬಿಟ್ಟರು ಆಗೋಸ್ತು ತಾ 27ರಿಂದ 31ರ ವರೆಗೆ ನಾಟಕದ ದೃಶ್ಯಗಳಂತೆ ನಡೆದ ಈ ವಿದ್ಯಮಾನಗಳು ಈ ಭೀಷಣ ಲೋಕಯುದ್ಧದ ಪಾಪವನ್ನು ಯಾರು ಹೊಂಬೇಕೆಂಬುದನ್ನು ನಿಸ್ಸಂದೇಹವಾಗಿ ರುಜುಗೊಳಿಸುತ್ತವೆ ಹಿಟ್ಲರರ ಅದೊಂದು ಬಗೆಯ ಉದ್ವೇಗಪರ ಉನ್ಮತ್ತ ಮನೋವೃತ್ತಿಯು ಇಡೀ ಈ ಲೋಕವನ್ನು ಈ ಅನಾಹುತದ ದವಡೆಯೊಳಗೆ ಸಿಲುಕಿಸಿದೆ.

ಇನ್ಕಮ್ ಟೇಕ್ಸ್ ಮತ್ತು ಹೊಸತೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4 '39ರಂದ ಬಹಳ ವ್ಯತ್ಯಾಸಗಳಾಗಿವೆ, ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾಲಿಯಾನದ ನಿವ್ವಳ [illegible] ವಿಷಯಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಕೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಹಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು ಪರಿಣಾಮವಾಗಿ ನನ್ನಿಂದ ವಸೂಲಾಗುವ ಟೇಕ್ಸು [illegible] ಕಡಿಮೆ ಮಾಡಿಸಲು ಟೇಕ್ಸು ಕೊಡಬೇಕೆಂದೂ [illegible] ಗಬಹುದ [illegible] ಗಳಿಲ್ಲ [illegible] ಮಾಡುವ 15ದಿವಸಗಳ ಮುಂಚಿತವಾಗಿ [illegible] ದನೆ ವ್ಯವಸ್ಥೆ ನಡೆಸಿರಿ

ಎಸ್. ಎನ್. ಶ್ರೀಂ ಶೆಟ್ಟಿ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಷನರ್,
ಕುಂದಾಪುರ ಪೋಸ್ಟ್.

ಸ್ವೀಕಾರ-ವಿಮರ್ಶೆ

ಅಜ್ಞಾನ ತಿಮಿರ ಮಾರ್ತಾಂಡ— ಲೇಖಕರು ಶ್ರೀ. ಬಿ. ಅಂತಯ್ಯ ಶೆಟ್ಟರು, ಪ್ರಕಾಶಕರು ಹರಿಜನ ಶಿಕ್ಷಣ ಸಹಾಯಕ ಸಂಘ, ಬ್ರಹ್ಮಾವರ. ಬೆಲೆ 0-4 0

ಹರಿಜನ ಉದ್ಧಾರಕ್ಕಾಗಿ ಕೆಲಸಮಯದಿಂದ ಅವಿಶ್ರಾಂತವಾಗಿ ದುಡಿಯುತ್ತಿರುವ ಶ್ರೀ ಅಂತಯ್ಯ ಶೆಟ್ಟರ ಪರಿಚಯವು ವಾಚಕರಿಗಿರಬಹುದು ಅವರ ಉತ್ಸಾಹದ ಕೃತಿಯಿದು. ಅಸ್ಪೃಶ್ಯತೆಯುಂಟಾಗುವಂತೆ ವೇದಶಾಸ್ತ್ರಗಳ ವಚನಾಮೃತಗಳನ್ನೂ ಜ್ಞಾನಿಗಳ ಬೋಧಾಮೃತಗಳನ್ನೂ ಈ ಚಿಕ್ಕ ಕೃತಿಯಲ್ಲಿ ಸಂಗ್ರಹಿಸಲಾಗಿದೆ, ಅಸ್ಪೃಶ್ಯರನ್ನು ಮುಟ್ಟಬಾರದೆಂಬುದ ತಪ್ಪೆ? ಎಂದು ಪ್ರಶ್ನಿಸುವವರ ಅಜ್ಞಾನ ತಿಮಿರಕ್ಕೆ ಇದು ಮಾರ್ತಾಂಡಪ್ರಾಯವಾಗಿದೆ ಎಂದ ಲೇಖಕರ ಅಭಿಪ್ರಾಯವಾಗಿದೆ

ಇಷ್ಟೋಪದೇಶ— ವ್ಯಾಖ್ಯಾನಕಾರರು ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ಪ್ರಕಾಶಕರು ಶ್ರೀ. ದೇಜಪ್ಪನವರು, ಪಚಿಬಿಲ ಆರಮನೆ, ನೆಲ್ಲಿಕಾರ್ ಮೂಲ್ಯ ಶಾಸ್ತ್ರ ವಿನಯ ಪರನ ಮತ್ತು ಆತ್ಮ ಕಲ್ಯಾಣ.

ಇದ ಶ್ರೀ ಅನಂತಕೀರ್ತಿ ಗ್ರಂಥಮಾಲೆಯ ೧೦ನೆಯ ಪುಷ್ಪ ಜೈನಸಮಾಜಕ್ಕೆ ಪೂಜ್ಯರಾದ ಶ್ರೀ ಮತ್ಪೂಜ್ಯಪಾದಾಚಾರ್ಯ ವಿರಚಿತ ಇಷ್ಟೋಪದೇಶವನ್ನು ಶ್ರೀ ಶಾಸ್ತ್ರಿಗಳು ವ್ಯಾಖ್ಯಾನ ಮಾಡಿ ತುಂಬ ಉಪಕಾರ ಮಾಡಿದ್ದಾರೆ. ಶ್ರೀಮತಿ ದೇಜಮ್ಮನವರಂತಹ ಈಗಾಗಲೇ 9ಕೃತಿಗಳನ್ನು ಪ್ರಕಟಿಸಿ ಧರ್ಮಾರ್ಥ ಹಂಚುತ್ತಿದ್ದು ತಮ್ಮ ಔದಾರ್ಯವನ್ನು ಪ್ರದರ್ಶಿಸುತ್ತಲಿ ೦ ೨-ಅಣೆಯ ಸ್ಟಾಂಪು ಕಳಿಸಿದವರಿಗೆ ಈ ಪುಸ್ತಕಗಳು ಧರ್ಮಾರ್ಥ ಸಿಗುವವು

ಹಿಮಾಲಯ ಯೋಗಿ ಪುಷ್ಪ ಮಾಲಿಕೆ ಮೂಲ ಲೇಖಕರು—ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರು, ಅನುವಾದಕರು ಶ್ರೀ ಶೇಷಗಿರಿ ಪ್ರಭು, ಸಾತ್ನೂರು ಭಾರಂ, ಮಂಡ್ಯ, ಮೈಸೂರು

ಇದು ದಿವ್ಯ ಜೀವನ ಧಾರ್ಮಿಕ ಸಂಘದ ಮೂಡಬಿದ್ರೆ ಉಪಸಭೆಯ ಅಧ್ಯಕ್ಷ ಶ್ರೀ ಬಿ. ಸುಬ್ಬರಾಯರಿಂದ ಉಚಿತ ಹಂಚಿಕೆಗಾಗಿ ಪ್ರಕಟಿಸಲ್ಪಟ್ಟಿದೆ ಆಧ್ಯಾತ್ಮಿಕದಲ್ಲಿ ಶ್ರದ್ಧೆಯುಳ್ಳವರಿಗೆ ಉಪಯುಕ್ತ ಪುಸ್ತಕ

ಜಪ ಯೋಗಾಭ್ಯಾಸ:-ಮೂಲ ಲೇಖಕರು—ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರು, ಅನುವಾದಕರು—ಶ್ರೀ ತಲಚೇರಿ ರಾಘವೇಂದ್ರ ಪ್ರಭುಗಳು, ಉಡುಪಿ. ಪ್ರಕಾಶಕರು ಶ್ರೀ ಬಳ್ಳ [illegible] ಸುಬ್ಬರಾಯರು.

ಇದು ಜಪ ಯೋಗಾಭ್ಯಾಸ ಮಾಡಲಿಚ್ಛಿಸುವವರಿಗೆ ಧರ್ಮಾರ್ಥ ಹಂಚಲು ಪ್ರಕಟಿಸಲ್ಪಟ್ಟಿದೆ, ಪ್ರಕಾಶಕರ ಕೆಲಸ ಸ್ತುತ್ಯ

ಹೊಸ ಪಾಠ ಪಟ್ಟಿ— ಪ್ರಾಥಮಿಕ ಶಾಲೆಗಳಿಗೆಂದು ಸರಕಾರದವರು ತಿದ್ದಿ ತಯಾರಿಸಿ 1939ರಲ್ಲಿ ಪ್ರಕಟಿಸಿದ ಪಾಠ ಪಟ್ಟಿಯ ಕನ್ನಡ ಭಾಷಾಂತರವಿದು ಪ್ರಕಟಿಸಿದವರು ದ. ಕ ಜಿಲ್ಲಾ ಟೀಚರ್ಸ್ ಗಿಲ್ಡಿನವರು. ಜತೆಗೆ ಗಿಲ್ಡಿನ ಕಮಿಟಿಯವರ ಉಪಯುಕ್ತ ಸೂಚನೆಗಳೂ ಕೊಡಲ್ಪಟ್ಟಿವೆ ಈ ಸೂಚನೆಗಳು ಉಪಾಧ್ಯಾಯ ವರ್ಗಕ್ಕೆ ತುಂಬ ಸಹಾಯಕವಾಗಬಹುದು ಚಂದವಾಗಿ ಮುದ್ರಿತಗೊಂಡ 103 ಪುಟಗಳ ಈ ಪಾಠ ಪಟ್ಟಿಯ ಬೆಲೆ 0-3-0 ಮಾತ್ರ.

In the Court of the District Munsiff of Udipi

O S. NO $\frac{?}{1?38}$ E. I A NO. $\frac{?}{1?39}$
R. E P NO. $\frac{?}{?}$

BETWEEN

Laxminarayana Bhat — Petitioner

AND

1 Putti
2 Shridhara Paranika } Respondents

NOTICE

To the 2nd respondant Shridhara Puranika son of Ramachandra Puranik residing in Yenagudde Village Udipi Taluk

Where as in the above named suit the petitioner, the decree holder has applied for the sale of the immoveable properties you are here by inform d that the 9th day of October 1939 has been fixed for settling the terms of the proclomation of sale

UDIPI, S K } **K. L Aithala,**
Dated 21 9 39 } *Vakil for Petitioner*

YOUR DAUGHTER'S MARRIAGE MADE EASY

GIRLS are more or less Lumpsum Liabilities unlike the BOYS who are Instalment Liabilities. You can not only convert Lumpsum Liabilities into Instalment Liabilities, but also guarantee the PURPOSE through policies in

The Bombay Life Assurance Co., Ltd.

For details, please consult –

KOCHIKAR BROTHERS LIMITED.,
MADRAS BRANCH SECRETARIES,
BOMBAY LIFE BUILDING,
SIR LALUBHAI SAMALDAS ROAD,
GANDHI NAGAR,
UDIPI

Or any of their following Offices—

Post Box No. 337, Mount Road Madras	Visweshwarapuram Circle, Bangalore City.	Charni Road, Girgaum, Bombay 4
Car Sreet, Mangalore.	Puthiyara, Calicut.	Central Station Road, Trivandrum.

Degrees Books Medicines.

Free H L M S, H M B, H. M D etc Free Homeo Ayur-Unani Naturo degrees by post also—Practioners also get soons Homeo Ma eria medica, Rs 5 Homeo Practice book Rs 4 Insanity Cure Pills Rs 10 Enclose 2 annas stamps —

Principal, Indian Homeopathic Institute and Society (Govt Regd)
P O MAHUVA, (Kathia ar Dt, India

ತುಳುನಾಡ್ ವೈದ್ಯಶಾಲೆ
ಉದಿಯಾವರ, ದ ಕ.

ಕೊಲೆರಾ ಫಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೧—೮—೦.

ಭೈರವ ಮಾತ್ರೆಗಳು— ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳುದೊರೆಯುತ್ತವೆ.

ಯು. ಪಿ ಮೇಸ್ತ, ಗೋಲ್ಡ್ ಮೆಡಲ್ಡ್ ಫಿಸಿಷಿಯನ್

ಸರಸ್ವತಿ
(ಉತ್ತಮ ವರ್ಗದ ಸಚಿತ್ರ ಮಾಸಪತ್ರಿಕೆ)

ಹದಿನೆಂಟನೇ ವರ್ಷದ ವಿಶೇಷ ಸಂಚಿಕೆ ನವರಾತ್ರಿಯ ದಬ್ಬದ ದಿನ ಪ್ರಕಟವಾಗುವುದು.

ಪ್ರಸಿದ್ಧರನೇಕರ ಉತ್ತಮ ಲೇಖನಗಳಿವೆ, ಬೆಲೆ 0 4 0, ಅಕ್ಟೋಬರದಿಂದ ಚಂದಾದಾರರಾಗುವವರಿಗೆ ಉಚಿತ, ಏಜಂಟರಿಗೆ ಧಾರಾಳ ಕಮಿಷನ್

ಸರಸ್ವತೀ ಕಾರ್ಯಾಲಯ,
ಬೆಂಗಳೂರು ಸಿಟಿ.

ಜರ್ಮನ್ ಸಬ್ ಮೆರೀನುಗಳ ಹಾವಳಿ

ಬ್ರಿಟಿಷ್ ವೈಮಾನಿಕನ ಸಾಹಸ

ಬ್ರಿಟಿಷ್ ಯುದ್ಧ ಹಡಗ ಮುಳುಗಿ 518 ಮಂದಿಯ ಜಲಸಮಾಧಿ ಸಬ್ ಮೆರಿನ್‌ಗಳನ್ನು ನಾಶಪಡಿಸಲು ಬ್ರಿಟಿಷ್ ಮತ್ತು ಫ್ರೆಂಚರ ಪ್ರಬಲ ಯತ್ನ.

ಬ್ರಿಟಿಷ್ ರೋಯಲ್ ಏರ್‌ಫೋರ್ಸಿನ …ರುಣ ವೈಮಾನಿಕನೊಬ್ಬನು, ಇದೇ …. 17ರಲ್ಲಿ ಜರ್ಮನ್ ಸಬ್ ಮೆರೀ…ಗಳನ್ನು ಎಚ್ಚರಿಕೆಯಿಂದ ನೋಡುವು…ಕ್ಕಾಗಿ ಇಂಗ್ಲೆಂಡಿನ ಉತ್ತರದ ಸಮುದ್ರ… ಕಳುಹಿಸಲ್ಪಟ್ಟಿದ್ದ. ಆಗ ಅವನು …ರಡು ಮೈಲುಗಳ ದೂರದಲ್ಲೊಂದು …ಬ್ ಮೆರೀನನ್ನು ನೋಡಿದ. ಅದು ಪೂ…ರ್ವಾಭಿಮುಖವಾಗಿ ಹೋಗುತ್ತಿತ್ತು. ಕೂ…ಲೆ ವೈಮಾನಿಕನು ಮೋಡಗಳ ಮರೆಗೆ …ಹೋಗಿ ಸಬ್ ಮೆರೀನಿನ ಹಿಂಭಾಗದಿಂ… ಅದನ್ನು ಸಮೀಪಿಸಿದ. 15,000 …ಡಿ ಎತ್ತರಕ್ಕೆ ಬಂದ. ಮತ್ತೂ ಸ್ವಲ್ಪ …ತ್ತಿರ ಹೋಗಿ ಸಬ್ ಮೆರೀನನ್ನು ಚೆ…ನ್ನಾಗಿ ಪರೀಕ್ಷಿಸಿದ. ಅದು ಜರ್ಮನ್ …ಬ್ ಮೆರೀನೆಂದು ಖಚಿತವಾಯಿತು. …ಡಲೆ ಕೆಳಗೆ ಸರಿದು ಸಬ್ ಮೆರೀನಿನ …ಹಿಂಭಾಗದ ಪರೀಕ್ಷಣಾಶಿಖರದಲ್ಲಿ ಬಿಳ…ಿ ಟೊಪ್ಪಿಯನ್ನಿಟ್ಟುಕೊಂಡು ನಿಂತಿದ್ದವ…ನೊಬ್ಬನ ಮೇಲೆ ಬೋಂಬೆಸೆದ. ವೈಮಾ…ನಿಕನು 500 ಅಡಿಗಳಷ್ಟು ಸಮೀಪಕ್ಕೆ …ರುವಷ್ಟರಲ್ಲಿ ಸಬ್ ಮೆರೀನು ಮುಳುಗ…ಲು ಮಾಡಿತು. ಅಷ್ಟರಲ್ಲಿ ವೈಮಾನಿಕನು …ಘಮಸರ್ಪಿಯ ಬೋಂಬುಗಳನ್ನು …ಬ್ ಮೆರೀನಿನಿಂದ ನೆಟ್ಟಗೆ 20 ಅಡಿ …ಹಿಂಭಾಗಕ್ಕೆಸೆದಿದ್ದ. ಸಬ್ ಮೆರೀನು …ರಿವಾಸಿ ನೀರೊಳಗಿದ್ದಿತು. ಬೋಂಬು…ಗಳ ಸ್ಫೋಟವು ಅದನ್ನು ಪುನಃ ಮೇಲಕ್ಕೆ …ಎರಿಸಿತು. ಇದರಿಂದ ವೈಮಾನಿಕನಿಗೆ …ದರ ಮೇಲೆ ಸರಿಯಾಗಿ ಬೋಂಬು ಹಾ…ಕಲನುಕೂಲವಾಯಿತು ಅವನು ತಿರುಗಿ …ಬಂತು ನೆಟ್ಟಗೆ ಸಬ್ ಮೆರೀನಿನ ಮೇಲೆ …ಬೋಂಬು ಹಾರಿಸಿದ. ಈ ಬೋಂಬುಗಳು …ಬ್‌ಮೆರೀನಿನ ಬದಿಗೆ ಆರಡಿ ದೂರಬಿದ್ದು …ಭಯಂಕರ ಸ್ಫೋಟವುಂಟಾಯಿತು. ಸಬ್ …ಮೆರೀನಿನ ಎದುರುಭಾಗವು ಒಡೆದು ಮು…ಳುಗಿ ಹಿಂದಿನ ಭಾಗವು ಮೇಲಕ್ಕೆತ್ತಲ್ಪಟ್ಟಿ…ತು. ಅನಂತರ ಅದು ಕೂಡಲೆ ಮುಳು…ಗಿತು. ವೈಮಾನಿಕನು 20 ನಿಮಿಷಗಳ …ವರೆಗೆ ಅಲ್ಲಿಯೇ ಕಾದು ಮುಳುಗಿದ ಸಬ್ …ಮೆರೀನಿನಿಂದ ಹೊರಟುಬಂದ ಗಾಳಿಯಿಂ…ದ್ದ ಗುಳ್ಳೆ ಮತ್ತು ಸುಳಿಗಳನ್ನು ನೋ…ಡುತ್ತ ನಿಂತ. ಇಷ್ಟರಲ್ಲಿ ಸಬ್‌ಮೆರೀನು …ಸಂಪೂರ್ಣವಾಗಿ ಸಮುದ್ರತಳಕ್ಕೆ ಮುಟ್ಟಿ …ಸಮಾಧಿ ಹೊಂದಿರಬೇಕೆಂದು ನಿಶ್ಚಯ …ಮಾಡಿಕೊಂಡು ವೈಮಾನಿಕನು ತನ್ನಸ್ಥಳಕ್ಕೆ …ಹಿಂದಿರುಗಿದ.

18 ಮಂದಿ ನಾವಿಕರ ನಾಶ

ಇದೇ ತಾ. 17ರಲ್ಲು ಎಚ್. ಎಮ್. …ಸ್. ಕರೇಜಿಯಸ್ ಎಂಬ ವಿಮಾನಗಳ …ನ್ನೊಯ್ಯುವ 22,600 ಟನ್ ಬ್ರಿಟಿಷ್ …ಯುದ್ಧ ಹಡಗವನ್ನು ಜರ್ಮನ್ ಸಬ್ …ಮೆರೀನೊಂದು ಮುಳುಗಿಸಿರುವುದು. ಕರೇ…ಜಿಯಸು 1917ರಲ್ಲಿ ಕಟ್ಟಲ್ಪಟ್ಟಿದ್ದು. ಅದ…ರಲ್ಲಿ 16ತೋಪುಗಳಿದ್ದವು. 48ವಿಮಾನಗ…ಳನ್ನೊಯ್ಯುವಷ್ಟುದೊಡ್ಡದಿದ್ದಿತದು. ಕರೇ…ಜಿಯಸನ್ನು ಸಬ್ ಮೆರೀನ್ ಛೇದಿಸಿದ …ಕೆಲವೇ ನಿಮಿಷಗಸಲ್ಲಿ ಅದರ ಕೆಪ್ಟನರು …ನಾವಿಕರೆಲ್ಲಾ ಅದನ್ನು ಬಿಟ್ಟುಹೋಗಬೇ…ಕೆಂದು ಅನುಜ್ಞೆಯಿತ್ತರು. ಅರ್ಧಘಂಟೆ…ಯಲ್ಲಿ ಇಡೀ ಹಡಗವು ಮುಳುಗಿ ಹೋಯಿತು ಹಡಗದೊಳಗಿದ್ದ ರಕ್ಷಣಾ ದೋಣಿಗಳನ್ನು ಕೆಳಗಿಳಿಸಲಾಗಲಿಲ್ಲ. ಕೆಲ ಮಂದಿ ನಾವಿಕರು ಹಡಗದ ಕೆಳಭಾಗದಲ್ಲಿದ್ದರು. ಮೇಲಿದ್ದವರೆಲ್ಲರು ಕೂಡಲೇ ನೀರಿಗೆ ಹಾರಿದರು. ಈಜಲು ಗೊತ್ತಿಲ್ಲದವರು ಹಲಗೆ ತುಂಡುಗಳನ್ನು ಹಿಡಿದುಕೊಂಡು ಈಜಾಡಿದರು. ನಾವಿಕರೇನೂ ಗಲಿಬಿಲಿಗೊಳ್ಳದೆ ಉತ್ಸಾಹದಿಂದ ಹಾಡುತ್ತಾ ಈಜುತ್ತಿದ್ದರು. ಶಕ್ತಿಗುಂದಿ ಮುಳುಗುತ್ತಿದ್ದವರನ್ನು ಕೆಲವರು ರಕ್ಷಿಸುವ ಸಾಹಸ ಮಾಡುತ್ತಿದ್ದರು ಒಬ್ಬ ನಾವಿಕನು ಇದಕ್ಕಾಗಿ 10ಸಲ ಮುಳುಗಿದ್ದನು. ಮೃತ್ಯುವಿನ ದವಡೆಯೊಳಗೆ ಸಿಲುಕಿದಂತಿದ್ದ ನಾವಿಕರ ಧೈರ್ಯ ಸ್ಥೈರ್ಯ ಮತ್ತು ಉಲ್ಲಾಸವು ವಿಚಿತ್ರವಾಗಿತ್ತು. ಕರೇಜಿಯಸ್ ಯುದ್ಧ ಹಡಗವು ಮುಳುಗುವ ಮೊದಲು ಬಿಟ್ಟ ಜಲದೊಳಗಣ ಬೋಂಬುಗಳಿಗೆ ಸಿಕ್ಕಿ ಜರ್ಮನ್ ಸಬ್ ಮೆರೀನು ಆಗಲೇ ಮುಳುಗಿ ಹೋಗಿರುವುದು. ಹಡಗದ ಕಹಳೆ ಊದುವವನು, ಈ ಸಬ್ ಮೆರೀನ್ ಮೇಲಕ್ಕೆಸೆಯಲ್ಪಟ್ಟು ಎರಡು ತುಂಡಾಗಿ ಮುಳುಗಿ ಹೋಗುವುದನ್ನು ಕಂಡು ಸಂತೋಷದಿಂದ ಕರತಾಡನ ಮಾಡಿದನು ಕರೇಜಿಯಸಿನಲ್ಲಿ ಒಟ್ಟು 1260 ಮಂದಿ ನಾವಿಕರಿದ್ದರು. ಇವರಲ್ಲಿ 73ಅಧಿಕಾರಿಗಳು ಮತ್ತು 670 ನಾವಿಕರು ಬೇರೆ ಬೇರೆ ಹಡಗಗಳಿಂದ ರಕ್ಷಿಸಲ್ಪಟ್ಟಿರುವರು. ಉಳಿದ 518ಮಂದಿ ಮುಳುಗಿ ಹೋಗಿರುವರೆಂದು ನಂಬಲಾಗಿದೆ. ಕರೇಜಿಯಸಿನ ಕೆಪ್ಟನರು ಅದರೊಂದಿಗೇನೇ ಮುಳುಗಿ ಜಲಸಮಾಧಿ ಹೊಂದಿರುವರು. ಅವರು ಹಡಗವನ್ನು ಬಿಟ್ಟು ಬರಲಿಕ್ಕೊಪ್ಪಲಿಲ್ಲ ಇದೇ ತಾ. 19ರಲ್ಲು ಲೋರ್ಡ್ ಮಿಂಟೋ ಮತ್ತು ಅಲ್ಲಿಬಾ ಎಂಬೆರಡು ಹಡಗಗಳನ್ನು ಜರ್ಮನ್ ಸಬ್ ಮೆರೀನುಗಳು ಮುಳುಗಿಸಿರುತ್ತವೆ ಇದೇ ತಾ 11ರಲ್ಲು 'ಇನ್ವರ್ಲಿಫೆ' ಎಂಬ ಬಿರಿಷ್ ಫ್ರೀಸ್ಟೇಟಿನ ಹಡಗವೊಂದನ್ನು ಜರ್ಮನ್ ಸಬ್‌ಮೆರೀನೊಂದು ಗುಂಡು ಹಾರಿಸಿ ಎಚ್ಚರಿಸಿ ಬಲಾತ್ಕಾರದಿಂದ ನಿಲ್ಲಿಸಿತು. 'ಇನ್‌ವರ್ಲಿಫೆಯ' ಕೆಪ್ಟನನು ಜರ್ಮನ್ ಸಬ್ ಮೆರೀನಿಗೆ ಹೋಗಿ, ತಮ್ಮದು ಐರಿಷ್ ಫ್ರೀಸ್ಟೇಟಿನ ಹಡಗವೆಂದು ಫ್ರೀಸ್ಟೇಟಿನ ಧ್ವಜವನ್ನೂ ರಿಜಿಸ್ತ್ರಿ ನಂಬ್ರವನ್ನೂ ಸಬ್‌ಮೆರೀನ್ ನಾಯಕನಿಗೆ ತೋರಿಸಿದ ಆದರೆ ಅವನದಕ್ಕೆ ಕಿವಿಗೊಡದೆ, ಹಡಗವು ಕೂಡಲೇ ಮುಳುಗಿಸಲ್ಪಡುತ್ತದೆ ಬೇಗನೆ ಪ್ರಾಣವನ್ನುಳಿಸಿ ಕೊಳ್ಳಿರಿ ಎಂದು ಆಜ್ಞಾಪಿಸಿದ ನಿರ್ವಾಹವಿಲ್ಲದೆ ಇನ್‌ವರ್ಲಿಫೆಯ 40ಮಂದಿ ನಾವಿಕರು ರಕ್ಷಣಾ ದೋಣಿಗಳಿಗೇರಿ ಪ್ರಾಣವುಳಿಸಿಕೊಂಡರು. ಸಬ್‌ಮೆರೀನು ಹಡಗದ ಮಧ್ಯಭಾಗದ ಮೇಲೆ ಟೋರ್ಪಿಡೊವೊಂದನ್ನೆಸೆಯಲು ಬೆಂಕಿ ಹಿಡಿದು ಇಡೀ ಹಡಗ ಸುಟ್ಟುಹೋಯಿತು ಅಮೇರಿಕನ್ ಹಡಗವೊಂದು ಇನ್‌ವರ್ಲಿಫೆಯ ನಾವಿಕರನ್ನು ರಕ್ಷಿಸಿತು. ಇದೇ ತಾ. 23ರಲ್ಲು 2 ಫಿನ್ನಿಶ್ ಸ್ಟೀಮರುಗಳನ್ನು ಜರ್ಮನ್ ಸಬ್‌ಮೆರೀನುಗಳು ಮುಳುಗಿಸಿರುವವು

ಸಬ್‌ಮೆರೀನುಗಳ ನಾಶ

ಕಳೆದ ಯುದ್ಧದಲ್ಲಿ ಒಟ್ಟು 199 ಜರ್ಮನ್ ಸಬ್‌ಮೆರೀನುಗಳನ್ನು ಬ್ರಿಟಿಷರು ನಾಶಮಾಡಿದ್ದರು. ಇವುಗಳಲ್ಲಿ 133ನ್ನು ಬ್ರಿಟಿಷ್ ಯುದ್ಧ ನಾವೆಗಳು ಮುಳುಗಿಸಿದ್ದವು, 45ನ್ನು ಮೈನ್‌ಗಳೆಂಬ ಸಿಡಿಮದ್ದಿನ ಸ್ಫೋಟದಿಂದ ನಾಶವಾಗಿದ್ದವು. 1914ರಿಂದ 16ರ ವರೆಗಣ 2 ವರ್ಷಗಳಲ್ಲಿ ಕೇವಲ 3 ಮತ್ತು 1918ನೇ ಇಸವಿ ಮೇ ಒಂದೇ ತಿಂಗಳಲ್ಲಿ 14 ಸಬ್ ಮೆರೀನುಗಳು ನಾಶಮಾಡಲ್ಪಟ್ಟಿದ್ದವು. ಈ ಸಲದ ಒಂದು ಹಪ್ತೆಯೊಳಗೆ 7 ಸಬ್‌ಮೆರೀನುಗಳನ್ನು ಬ್ರಿಟಿಷರೂ, ನಾಲ್ಕೈದನ್ನು ಫ್ರೆಂಚರೂ ನಾಶಗೊಳಿಸಿರುವರು. ಜರ್ಮನರಲ್ಲಿ ಒಟ್ಟು 50ಕ್ಕಿಂತ ಸಬ್ ಮೆರೀನುಗಳಿರುವುದಿಲ್ಲ

ಸಬ್‌ಮೆರೀನುಗಳ ನಾಶ

ಬ್ರಿಟಿಷ್ ಯುದ್ಧಹಡಗಗಳು ಹಲವು ಜರ್ಮನ್ ಸಬ್‌ಮೆರೀನುಗಳನ್ನು ಮುಳುಗಿಸಿರುತ್ತವೆ. ಬ್ರಿಟಿಷ್ ಮತ್ತು ಫ್ರೆಂಚ್ ಯುದ್ಧವಿಮಾನಗಳು ಪರಸ್ಪರ ಸಹಕರಿಸಿಕೊಂಡು ಸಮುದ್ರದಲ್ಲೆಲ್ಲಾ ಹುಡುಕಾಡಿ, ಜಲಾಂತರ್ಗಾಮಿ ಬೋಂಬುಗಳನ್ನೆಸೆದು ಸಬ್‌ಮೆರೀನುಗಳನ್ನು ನಾಶಮಾಡುತ್ತಿವೆ. ಫ್ರೆಂಚ್ ಯುದ್ಧವಿಮಾನಗಳು ನಾಲ್ಕೈದನ್ನು ನಾಶಮಾಡಿರುವವೆಂದು ತಿಳಿದುಬರುತ್ತದೆ, ಯುದ್ಧ ಆರಂಭವಾದಂದಿನಿಂದ ಇಂಗ್ಲೆಂಡಿನ ಹಡಗುಗಳ ಮೇಲೆ ಜರ್ಮನ್ ಯುದ್ಧಹಡಗಗಳು ಅಥವಾ ಸಬ್ ಮೆರೀನುಗಳು ಧಾಳಿನಡಿಸದಂತೆ ಕರಾವಳಿಯಲ್ಲೆಲ್ಲಾ ಬ್ರಿಟಿಷ್ ವಿಮಾನಪಡೆಗಳು ಎಚ್ಚರಿಕೆಯಿಂದ ಕಾಯುತ್ತಿದ್ದು ಹಡಗುಪಡೆಯೊಂದಿಗೆ ಸಹಕರಿಸುತ್ತಿವೆ. ಕಳೆದ ಮಹಾಯುದ್ಧದ ಕೊನೆಯಲ್ಲಿ ಜರ್ಮನ್ ಯುದ್ಧ ಹಡಗ ಮತ್ತು ಸಬ್‌ಮೆರೀನುಗಳ ಹಾವಳಿಯನ್ನು ಜಯಶೀಲವಾಗಿ ತಡೆಗಟ್ಟಿದುದೆಂದರೆ ಜಲ ಮತ್ತು ನೆಲ ವಿಮಾನಗಳು 21ವರ್ಷದ ನಂತರ ಈಗ ಈ ವಿಮಾನಗಳು ಬಹಳ ದೊಡ್ಡದಾಗಿವೆ ಮತ್ತು ಅವುಗಳ ವೇಗವು ಹೆಚ್ಚಾಗಿದೆ. ಅವುಗಳು ಬಹಳ ಸಮಯ ಹಾರಾಡಿ ಅತಿ ದೂರದ ಹಡಗಗಳನ್ನು ಪರೀಕ್ಷಿಸಿ ಅವುಗಳ ಮೇಲೆ ತೀವ್ರಗತಿಯಿಂದ ಹಾರಿ ಬೋಂಬೆಸೆಯಬಲ್ಲವು. ಇದರಿಂದಾಗಿ ಜರ್ಮನ್ ಸಬ್ ಮೆರೀನುಗಳೀಗ ಬ್ರಿಟಿಷ್ ವಿಮಾನಗಳೆಂದರೆ ಹೆದರಿಹೋಗಿವೆ. ಬ್ರಿಟಿಷ್ ವಿಮಾನಗಳ ಧಾಳಿಯಿಂದಾಗಿ ಹಲವು ಜರ್ಮನ್ ಸಬ್‌ಮೆರೀನುಗಳು ಸಮುದ್ರತಟಕ್ಕೆ ಸೇರಿದ್ದು ಅಲ್ಲಿಂದ ಮೇಲೇರಿ ಬರುವ ಹಾಗೆಯೇ ಇಲ್ಲ ಇನ್ನು ಕೆಲವು ಜಖಮ್ ಹೊಂದಿರುತ್ತವೆ. ಜರ್ಮನ್ ನೌಕಾ ನಾಯಕರು ಎಂದೂ ಹಿಂತಿರುಗದ ಈ ಸಬ್‌ಮೆರೀನುಗಳಿಂದ ಸಮಾಚಾರವನ್ನು ನಿರರ್ಥಕವಾಗಿ ನಿರೀಕ್ಷಿಸಿಕೊಂಡಿರಬೇಕಾಗುವುದು. ಬ್ರಿಟಿಷ್ ನೆಲ ಮತ್ತು ಜಲಯಾನಗಳು, ಉತ್ತರ ಮತ್ತು ಅಟ್ಲಾಂಟಿಕ ಸಮುದ್ರಗಳನ್ನು ಎಡೆಬಿಡದೆ ಅತ್ಯಂತ ಎಚ್ಚರದಿಂದ ಪರೀಕ್ಷಿಸುತ್ತಿದ್ದು ಎಲ್ಲಿಯಾದರೂ ನೀರೊಳಗಿಂದ ಸಬ್‌ಮೆರೀನು ಮೇಲಕ್ಕೆ ತಲೆಯೆತ್ತಿದೊಡನೆಯೇ ಅಲ್ಲಿಗೆ ಕೂಡಲೆ ಧಾವಿಸಿ ಬೋಂಬೆಸೆಯುವುದರಿಂದ ಸಬ್‌ಮೆರೀನ್‌ನಾಯಕರ ಕೆಲಸವು ಬಹಳ ಕಷ್ಟವಾಗಿದೆ ಬೋಂಬು ತಾಗಿದರೆ ಅಥವಾ ಹತ್ತಿರ ಎಲ್ಲಿಯಾದರೂ ಬಿದ್ದರೆ ಸಬ್ ಮೆರೀನು ನಾಶವಾಗುವುದು ಇಲ್ಲವೆ ಜಖಂ ಹೊಂದಿ ಮುಳುಗುವುದು ನಿಶ್ಚಯ. ಕಳದ 20 ದಿವಸಗಳಿಂದ ಅವಿಶ್ರಾಂತವಾಗಿ ಬ್ರಿಟಿಷ್ ವಿಮಾನಗಳು ಈ ಕೆಲಸಮಾಡುತ್ತಿರುವವಾದರೂ ಜರ್ಮನ್ ವಿಮಾನಗಳೇನೂ ಅವನ್ನು ತಡೆಗಟ್ಟಲೆತ್ನಿಸಿರುವುದಿಲ್ಲ:

WHAT MAKES A MAN RICH?

Luck? -	Very rarely.
Inheritance? -	Not often.
Speculation?	Once in a blue moon
Gambling? -	Never.
Hard Work? -	Very Often.
Hard work and Thrift -	Always.

RESOURCES OF A CRORE

ESTD 1906
CANARA BANK
LIMITED

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ 'ಸಂಜೀವನ' ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜನರನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷದವು ಬೇರೊಂದಿಲ್ಲ ಮೂತ್ರಕೋಶ ಬಹುಮೂತ್ರ, ಸೀಮೂತ್ರ ಪಿತ್ತಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ವಾರ್ಧ್ಯಕಾಯ ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾದಿ, ಅಜೀರ್ಣಕ್ಕೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಸೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯೂ ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಜುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷದಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಒಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹಂಗುಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ "ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷದಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0

ವಿ ಪಿ ಬೇರೆ

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರ್ರೈಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವದಾದರೆ, "ಹವನನ್" ಎಂಬ ಹೆಮೊರ್ರೈಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸಂಚರಿಸಿ ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು ಸೀಸೆ 1ಕ್ಕೆ ರೂ **1-4-0** ವಿ ಪಿ ಬೇರೆ

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳ ಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ, ಸೀಸೆ 1ಕ್ಕೆ ರೂ 1 0-0 ವಿ ಪಿ ಬೇರೆ

ಹಿಂದ ಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road, B. B & C I Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ಆಗಾಗ ಏಜಂಟರ ಗಳು ಬೇಕಾಗಿದ್ದಾರೆ. ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ

ಜರ್ಮನಿಯ ಅಪಾರ ನಷ್ಟ

ರುಮೇನಿಯದ ಮುಖ್ಯ ಮಂತ್ರಿಗಳ ಕೊಲೆ.

ಪಶ್ಚಿಮ ರಣರಂಗದಲ್ಲಿ ಜರ್ಮನಿ ಏನು ಮಾಡುವುದು ?

ಪೋಲೆಂಡಿನ ಮೇಲೆ ನಡಿಸಿದ ಯುದ್ಧದ ಪರಿಣಾಮವಾಗಿ 150,000ಕ್ಕಿಂತಲೂ ಮಿಕ್ಕಿದ ಜರ್ಮನ್ ಸೈನಿಕರು ಕೊಲ್ಲಲ್ಪಟ್ಟಿರುವರು ಇಲ್ಲವೆ ಗಾಯಗೊಂಡಿರುವರೆಂದು ತಿಳಿದು ಬಂದಿದೆ ಇವರೆಲ್ಲಾ ಹೆಚ್ಚಾಗಿ ಹಿಟ್ಲರ್ ಯುವಕದಳಕ್ಕೆ ಸೇರಿದವರು ಜರ್ಮನಿಯು ಸುಮಾರು 1000 ವಿಮಾನಗಳನ್ನು ಕಳಕೊಂಡಿರುವುದು ..00 ವೈಮಾನಿಕರು ಕೊಲ್ಲಲ್ಪಟ್ಟಿರುವರು. ಜರ್ಮನಿಯ ಹೊರ ವ್ಯಾಪಾರವು ಇಷ್ಟರಲ್ಲೇ ಸೇಕಡ 50ರಷ್ಟು ಇಳಿದು ಹೋಗಿದೆ. ಒಳ ವ್ಯಾಪಾರ ಸೇಕಡ 40ರಷ್ಟು ಕಡಿಮೆಯಾಗಿದೆ. ಫ್ರೆಂಚ್ ಸೇನೆಯು ಆಕ್ರಮಿಸುತ್ತಿರುವ ಸಾರ್ ಪ್ರದೇಶದಿಂದ ಇಡೀ ಪೋಲಂಡಿನಲ್ಲಿ, ಸಿಗುವುದಕ್ಕಿಂತ ಎರಡರಷ್ಟು ಖನಿಜ ಸಂಪತ್ತು ಸಿಗುತ್ತದೆ. ಅಂದಮೇಲೆ ಜರ್ಮನಿಯು ಸಾರನ್ನು ಕಳಕೊಂಡಲ್ಲಿ ಮಹತ್ವಾದ ಹಾನಿಯಾಗುವುದು.

ಕಳೆದ ಮಾರ್ಚ ತಿಂಗಳಿಂದ ರುಮೇನಿಯದ ಪ್ರಧಾನ ಮಂತ್ರಿಗಳಾಗಿದ್ದು, ಅಯರ್ನಗಾರ್ಡ್‌ರೆಂಬ ನಾಝಿ ದಳವನ್ನು ಅಡಗಿಸಿದ ಎಮ್. ಕಲಿನೆಸ್ಕುರವರನ್ನು ಇದೇ ತಾ. 21ರಲ್ಲು ಕೆಲವಂದಿ ಅಯರ್ನ ಗಾರ್ಡರು ಗುಂಡು ಹೊಡೆದು ಕೊಂದಿರುವರು, ಅವರ ಮೋಟರ್ ಕಾರನ್ನು ಎತ್ತಿನ ಗಾಡಿಯನ್ನು ಅಡ್ಡ ಹಾಕಿ ತಡೆದು, ಆ ಮೇಲೆ ತರುಣರು ಕೆಲವರು ಎರಡು ಮೋಟರ್ ಕಾರುಗಳಲ್ಲಿ ಧಾವಿಸಿ ಕಲಿನೆಸ್ಕುರವರ ಮೇಲೆ ಗುಂಡೆಸೆದು ಕೊಂದು ಹಾಕಿದರು. ಅವರೊಂದಿಗಿದ್ದ ಪೋಲೀಸ್ ಅಧಿಕಾರಿಯೊಬ್ಬನೂ ಕೊಲ್ಲಲ್ಪಟ್ಟಿರುವನು. ಕೊಲೆಗಾರರು ಬುಚರೆಸ್ಟಿನ ರೇಡಿಯೋ ಸ್ಟೇಶನಿಗೆ ಹೋಗಿ ಅಲ್ಲಿಯ ಕೆಲಸಗಾರರಿಗೆ ಗುಂಡೆಸೆದು ಗಾಯಗೊಳಿಸಿ ರೇಡಿಯೋ ಮೂಲಕ ಕೊಲೆಯ ಸುದ್ದಿ ಪ್ರಚಾರ ಮಾಡಿದರು. ಅನಂತರ ಇವರನ್ನು ಪೋಲೀಸರು ಹಿಡಿದು ದಸ್ತಗಿರಿ ಮಾಡಿದರು. ಕೂಡಲೆ ಈ ಕೊಲೆಗಾರರನ್ನು ಕಲಿನೆಸ್ಕುರವರನ್ನು ಕೊಂದ ಸ್ಥಳದಲ್ಲಿ ಗುಂಡೆಸೆದು ಕೊಲ್ಲಿಸಿ ಶ ವ ಗ ಳ ನ್ನು ರಸ್ತೆಗಳಲ್ಲಿಯೇ ಹಾಕಲಾಯಿತು. ಎಲ್ಲೆಲ್ಲಿಗೋಡುತ್ತಿದ್ದ ಅಯರ್ನ ಗಾರ್ಡ್ಸರನ್ನೂ ಅವರ ಸಹಾಯಕರನ್ನೂ ಹಿಡಿದು ಕೊಲೆ ಮಾಡಲಾಗಿದೆ. ಒಂದೇ ದಿನ 300 ಮಂದಿ ಕೊಲ್ಲಲ್ಪಟ್ಟಿದ್ದಾರೆ. ಜರ್ಮನಿಯ ನಾಝಿಗಳ ಪಿತೂರಿಯೇ ಈ ಕೊಲೆಗೆ ಕಾರಣವೆಂದು ನಂಬಲಾಗಿದೆ ರುಮೇನಿಯದಲ್ಲಿ ದೊಡ್ಡ ಬಂಡಾಯವೆಬ್ಬಿಸಲವರು ಒಳಸಂಚು ನಡಿಸುತ್ತಿದ್ದರು. ರುಮೇನಿಯದ ಅರಸ ಕೆರೊಲರು 3 ಮಂದಿ ಸೇನಾನಾಯಕರನ್ನು ಸೇರಿಸಿ ಹೊಸ ಮಂತ್ರಿಮಂಡಲವನ್ನು ನೇಮಿಸಿ ಶಾಂತವಾಗಿ ರಾಜ್ಯಭಾರ ನಡೆಸುತ್ತಿದ್ದಾರೆ.

20,000 ನಾಗರಿಕರ ಕೊಲೆ

ಇದೇ ತಾ 16ರಲ್ಲು ಲೆಂಬರ್ಗಿನಲ್ಲಿ ಜರ್ಮನ್ ಬೋಂಬೆಸೆದ ಪರಿಣಾಮವಾಗಿ 20,000 ಮಂದಿ ನಾಗರಿಕರು ಕೊಲ್ಲಲ್ಪಟ್ಟಿರುವರು ಲುಬ್ಲಿನ್ ಬಿಟ್ಟು ಬೇರೆ ಕಡೆಗೆ ಹೋಗುತ್ತಿದ್ದ ಜನರ ಮೇಲೆಯೂ ಜರ್ಮನ್ ವಿಮಾನಗಳು ಮಿಶನ್ ತೋಪುಗಳ ಮೂಲಕ ಗುಂಡಿನ ಮಳೆಗರೆದವು ವಾರ್ಸೋದಿಂದ ಸರಕಾರಿ ಅಧಿಕಾರಿಗಳನ್ನು ರುಮೇನಿಯದ ಎಲ್ಲೆಗೊಯ್ಯುತ್ತಿದ್ದ ರೈಲು ಬಂಡಿಯ ಮೇಲೆ ಜರ್ಮನರು ಅನೇಕ ವೇಳೆ ಬೊಂಬೆಸೆದ ಪರಿಣಾಮವಾಗಿ ಅದು ಹಲವು ಕಡೆಗಳಲ್ಲಿ ನಿಂತು ಕ್ರೆಜ್ಮನಿಕ್ ಎಂಬಲ್ಲಿಗೆ ಮುಟ್ಟಲು 1 ದಿನ ಮತ್ತೊಂದು ರಾತ್ರಿ ಹಿಡಿಯಿತು ಈ ರೈಲು ಬಂಡಿಯ 14 ಗಾಡಿಗಳಲ್ಲಿ ಜಡ್ಜರು ಇತರ ಸರಕಾರಿ ಮೆಂಬರರು ಮತ್ತು ಅವರ ಕುಟುಂಬಗಳೇ ಮೊದಲಾದ 1600 ಮಂದಿ ಇದ್ದರು. ಇವರಿಗೆ 4 ದಿವಸಗಳ ವರೆಗೆ ಬಹುತೇಕ ಅನ್ನ ನೀರು ನಿದ್ದೆ ಗಳಿರಲಿಲ್ಲ. ಕೆಲವರಿಗೆ ವಿಮಾನಧಾಳಿಯ ಭೀಕರತೆಯು ಅಸಹನೀಯವಾಗಿ ಅವರು ಟ್ರೈನು ಬಿಟ್ಟು ಸಿಕ್ಕಲ್ಲಿ ಹೋದರು.

200ಕ್ಕಿಂತಲೂ ಮಿಕ್ಕಿದ ಪೋಲಿಶ್ ವಿಮಾನಗಳು ರುಮೇನಿಯದ ಸೆರ್ನಟೋಜಿನಲ್ಲಿಳಿದು ಸರಕಾರದ ಬಂದೋಬಸ್ತಿನಲ್ಲಿರಿಸಲ್ಪಟ್ಟಿರುವವು ಲಿಟೇನಿಯದಲ್ಲಿ 60 ವಿಮಾನಗಳು ಆಶ್ರಯಪಡೆದಿವೆ. ರುಮೇನಿಯ, ಹಂಗೇರಿ, ಲಿಥುವೇನಿಯ ಮತ್ತು ಲಿಟೇನಿಯಗಳಿಗೆ ಸಾವಿರಾರು ಮಂದಿ ಪೋಲರು ಮತ್ತು ಸೈನಿಕರು ಹೋಗಿ ಆಶ್ರಯ ಪಡೆಯುತ್ತಿದ್ದಾರೆ ರುಮೇನಿಯ ಒಂದರಲ್ಲೇ ಈ ವರೆಗೆ 60,000 ಮಂದಿ ಆಶ್ರಯ ಪಡೆದಿರುವರು.

ಇದೇ ತಾ. 17ನೇ ಆದಿತ್ಯವಾರ ವಾರ್ಸೋ ಪಟ್ಟಣದ ಸುಂದರವಾದ ಸ್ಟೆಂಟ್ ಜೋನ್ ಇಗರ್ಜಿಯಲ್ಲಿ ಬೆಳಗ್ಗೆ ಪ್ರಾರ್ಥನೆ ನಡಿಸುತ್ತಿರುವಾಗಲೇ ಜರ್ಮನ್ ವಿಮಾನಗಳೆಸೆದ ಬೋಂಬೊಂದು ಬಿದ್ದು ಮಾಡಿಗೆ ಬೆಂಕಿಹಿಡಿದು ಉರಿಯುವ ಜಂತಿಗಳೆಲ್ಲಾ ಕೆಳಗೆ ಬಿದ್ದುವು. ಇಗರ್ಜಿಯಲ್ಲಿ ಜನರು ಕಿಕ್ಕಿರಿದಿದ್ದರು ಇಗರ್ಜಿಗೆ ಬೆಂಕಿಹಿಡಿದರೂ ಪಾದ್ರಿಯು ಧೈರ್ಯಗೆಡದೆ ಪ್ರವಚನವನ್ನು ಮುಗಿಸಿದರು

(ಗ್ರಾಸೇ ಪ್ರತಿಕ್ಕೆ ಮುಂದರಿಸಿದೆ)

HURRY UP !! HURRY UP !!

Competitors please note the Extension of the last posting Date

Row's precious gifts for winners

Our Guaranteed PRIZES

Rs. 25,000

To be distributed in CASH PRIZES to the Winners only.

ROWS PUZZLE NO 9

Minimum Award of Rs 2000/- is guaranteed for every All Correct Solution similar to the one deposited in the Indian Bank Ltd Madras

Rs 14000/- 1st Prize for All Correct Solution
5000/- 2nd Prize for 1st 3 Rows tallying with the sealed solution
3000/- 3rd Prize for 1st 2 Rows tallying with the sealed solution
1000/- 4th Prize for 1st Row tallying with the sealed solution
1000/- for all Correct Solutions received before 30—9—1939
500/- for all Correct Lady Competitors
500/- of which Rs 300/- and Rs 200/ for the highest number of Entries containing an all Correct solution

Extra Cash Prizes Rs 10/- each for those whose 1st 3 figures of the 1st Row tally with those of the sealed solution

ROW'S PUZZLE No 9 How to solve Arrange the Numbers from 5 to 20 in the given squares, such that each of the Row Columns and Diagonals totals 50 using each number once only

Last Posting Date extended to 4—10—39

Key Solution 15 10-39 My Magazine

Entrance Fee Re 1 for single entry or Rs 5 for 8 entries

RULES Any number of entries on plain paper with the requisite fees by M O or Postal Orders are accepted Enclose M O Receipt and 4 Half Anna Stamps for Result Sheet Burma Competitors should add As 2 to the Entrance Fee The Prize Scheme will be proportionate but Rs 2000 is definitely assured for every All Correct Solution Write full address in Block Capitals Manager's Decision will be final and legally binding Prizes and Result will be sent before 30—10—1939.

Extra Prizes—One His Master's Voice Portable Gramaphone for every All Correct Solver One Set of 2 Kremenz Shirt Buttons for 8 paid Entries One Row's Toilet Set for 16 paid Entries, One Row's Pen and Pencil Combination Set for 32 Paid Entries, One Parker Junior Pen for 80 Paid Entries and One Set of Pure Silver Cup, Saucer and Spoon of 35 Tolas weight for 160 Paid Entries

Sealed Key Solution of Row's Puzzle No 8

1st Row	13	9	115	10
2nd Row	18	6	17	5
3rd Row	11	15	8	12
4th Row	4	16	7	19

Address all Entries & Fees mentioning this paper to—

THE MANAGER,

The Lakshmi Chemical Laboratories Regd 2034

Mfrs of Row's Lime & Glycerine & Rows Toilets, Competition Dept

RAJAHMUNDRY, M & S M

WANTED Reliable Agents for Row's Toilets Samples and Terms for 9 one anna stamps

ಸ್ಥಾಪನ **ಕ್ರೌನ ರಬ್ಬರ ಸ್ಟಾಂಪ ಕಂಪಾನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ ಬೋರ್ಡು, ಪೇದೆಗಳ ಬಿಲ್ಲು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು.

Crown Rubber Stamp Co, Balmat Road MANGALORE

Included by the Mysore Govt Stores Purchase Committee in the list of approved firms

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

GONO KILLER ORIGINAL

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅತ್ಯುತ್ತಮ ಔಷಧ ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದು ವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ಹಳೆ ರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ 40 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3 ವಿ. ಪಿ ಖರ್ಚು 0 8 0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪದಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ರಿಸ್ ಸೆಸ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD: 1906

∴ ವಾರ್ಸೋದ ಮೇಲ್ಭೀಕರ ವಿಮಾನ ಧಾಳಿ ∴

ವಾರ್ಸೋವು ಇನ್ನೂ ಜರ್ಮನರ ವಶವಾಗಿಲ್ಲ

ಪೋಲಂಡಿನ ಯುದ್ಧ ಮುಗಿಯಿತೆಂದು ಜರ್ಮನರು ಒಂದು ಹಪ್ತೆಯ ಮೊದಲೇ ಉದ್ಘೋಷಿಸಿದ್ದರೂ ವಾರ್ಸೋ ಪಟ್ಟಣವು ಇದೇ ತಾ. 24ರ ವರೆಗೂ ಜರ್ಮನರ ವಶವಾಗಿರುವುದಿಲ್ಲ. ಪ್ರತಿ ಮೈಲನ್ನವರು ಭೀಷಣವಾಗಿ ಕಾದಾಡಿ ಗೆಲ್ಲಬೇಕಾಗಿದೆ. ಪೋಲರು ವಿಚಿತ್ರ ಧೈರ್ಯ ಮತ್ತು ಸ್ಥೈರ್ಯದಿಂದ ಜರ್ಮನರನ್ನು ಜಯಶೀಲವಾಗಿ ಹೆಜ್ಜೆಹೆಜ್ಜೆಗೆ ತಡೆಗಟ್ಟಿರುವರು. ವಾರ್ಸೋ, ಮಾಡ್ಲಿನ್ ಮತ್ತು ಹೆಲ್‌ಪೆನಿನ್ಸುಲಗಳೆಂಬ ಮೂರು ಸ್ಥಳಗಳಲ್ಲದೆ, ಲುಬ್ಲಿನ್ ಮತ್ತು ಲೊವೊವ್ ಪಟ್ಟಣಗಳ ನಡುವಿನ ಟೊಮಾಜೊವ್ ಮತ್ತು ಜೊಮಸ್ಕ್ ರುದ್ಕಿ ಎಂಬಲ್ಲಿಯೂ ಪೋಲರು ಹೋರಾಡುತ್ತಿದ್ದಾರೆ. ಕಳೆದ ಶನಿವಾರ ಮತ್ತು ಆದಿತ್ಯವಾರ ಜರ್ಮನ್ ವಿಮಾನಗಳು ವಾರ್ಸೋ ಪಟ್ಟಣದ ಮೇಲೆ ಎಡೆಬಿಡದೆ ಭೀಕರ ವಿಮಾನ ಧಾಳಿನಡಿಸಿರುವವು. ಇಗರ್ಜಿ, ಆಸ್ಪತ್ರೆಗಳು ಕೂಡ ನಾಶಮಾಡಲ್ಪಡುತ್ತಿವೆ. 24 ಘಂಟೆಗಳಲ್ಲಿ 1000ಕ್ಕಿಂತಲೂ ಮಿಕ್ಕಿದ ನಾಗರಿಕರು ಕೊಲ್ಲಲ್ಪಟ್ಟಿರುತ್ತಾರೆ. ಇದೇ ತಾ. 23ರಿಂದ ಜರ್ಮನ್ ತೋಪುಗಳು ಅವಿಶ್ರಾಂತವಾಗಿ ವಾರ್ಸೋದ ಮೇಲೆ ಗುಂಡು ಹಾರಿಸುತ್ತಿವೆ. ಗಾಯಗೊಂಡವರಿಂದ ತುಂಬಿದ 3 ಆಸ್ಪತ್ರೆ ಮತ್ತು ಇಗರ್ಜಿಗಳು ನಾಶಗೊಳಿಸಲ್ಪಟ್ಟಿವೆ. ವಿಸ್ಟುಲ ನದಿಯ ಬಲತಟದಿಂದ ಜರ್ಮನರು ವಾರ್ಸೋದ ಮೇಲೆ ಮಾಡಿದ ಧಾಳಿಯನ್ನು ಪೋಲರು ತಡೆಗಟ್ಟಿ ಹಿಂದಕ್ಕಟ್ಟಿರುತ್ತಾರೆ. ಕಳೆದ ಆದಿತ್ಯವಾರ ವಾರ್ಸೋ ಪಟ್ಟಣದ ಮಧ್ಯ ಭಾಗದ ಮೇಲೆ ಭೀಕರ ವಿಮಾನ ಧಾಳಿ ನಡೆಯಿತು. ಒಂದು ಇಗರ್ಜಿಯಲ್ಲಿ ಪ್ರಾರ್ಥನೆ ನಡೆಯುವಾಗಲೆ ಬೋಂಬು ಬಿದ್ದು ಹಲವರು ಕೊಲ್ಲಲ್ಪಟ್ಟಿರುವರು. ರೆಡ್‌ಕ್ರೋಸ್ ಆಸ್ಪತ್ರೆಗಳ ಹಲವು ಭಾಗಗಳು ನಾಶವಾಗಿವೆ. ಅನೇಕ ಮಂದಿ ಗಾಯಗೊಂಡ ಸೈನಿಕರು, ಸ್ತ್ರೀಯರು ಮತ್ತು ಮಕ್ಕಳು ಕೊಲ್ಲಲ್ಪಟ್ಟಿದ್ದಾರೆ. ಆದಿತ್ಯವಾರ ಅಪರಾಹ್ನ ಜರ್ಮನ್ ವೈಮಾನಿಕರು ವಾರ್ಸೋದ ಬೇರೆ ಬೇರೆ ಕಡೆಗಳಿಗೆ ಬೆಂಕಿಬ್ಬಿಸುವ ಬೋಂಬುಗಳನ್ನೆಸೆದು ಭಯಂಕರ ಹಾವಳಿ ಮಾಡಿರುವರು. ಪ್ರಾಗದ ಸುತ್ತಲೂ ಭೀಷಣ ಕದನ ನಡೆಯುತ್ತಿದೆ. ವಾರ್ಸೋಪಟ್ಟಣದಲ್ಲಿ ಒಂದೇ ಒಂದು ಕಟ್ಟೋಣವಾದರೂ ಸರಿ ಇರುವುದಿಲ್ಲ. ಪೋಲಿಶ್ ಸೈನಿಕರಿಗೆ ಆಹಾರದ ಅಭಾವವುಂಟಾಗಿರುವುದೆಂದೂ ಇನ್ನು ಹೆಚ್ಚು ಸಮಯ ಕಾದಾಡಲು ಸಾಧ್ಯವಿಲ್ಲೆಂದೂ ತಿಳಿದುಬರುತ್ತದೆ.

ಜರ್ಮನ್ ಸೇನಾ ನಾಯಕರ ಮರಣ

ಪೋಲರ ವೀರತ್ವವನ್ನು ನೋಡಿ ಜರ್ಮನರೇ ಮೆಚ್ಚಿ ಹೋಗಿರುತ್ತಾರೆ. ಕೈ ಕೈ ಹೋರಾಟದಲ್ಲಿ ಜರ್ಮನ್ ಸೈನಿಕರಿಗಿಂತ ಪೋಲರೇ ಶ್ರೇಷ್ಠರಾಗಿರುತ್ತಾರೆ. ಜರ್ಮನರು ತಮ್ಮ ಪ್ರಚಂಡ ಯುದ್ಧ ಯಂತ್ರಗಳನ್ನು ಒಮ್ಮೆಯೇ ಪೋಲರ ಮೇಲೆ ನಡೆಸಿ ಅವರನ್ನು ಗೆದ್ದಿರುತ್ತಾರೆ. ಇದು ಹೊರತು ಸ್ಲೋವೇಕಿಯದ ಎಲ್ಲೆಯಿಂದ ಸಿಲೀಸಿಯದ ಮೇಲೆ ಜರ್ಮನ್ ಸೇನೆಯು ಏರಿ ಹೋಗಿ ಮುಂದೊತ್ತುವಾಗ ಪೋಲರು ಅದನ್ನು ಪ್ರಬಲವಾಗಿ ವಿರೋಧಿಸಿ ತಡೆಗಟ್ಟಿದುದು ದೊಡ್ಡ ತಪ್ಪಾಯಿತು. ಅವರು ವಿಶಾಲ ಹಾಗೂ ಸಮತಟ್ಟಾದ ರಣರಂಗಗಳಲ್ಲಿ ಜರ್ಮನರನ್ನು ಇದಿರಿಸಲು ಸಾಧ್ಯವಾಗದೆ ಹಿಂದೆ ಸರಿದು ಗುಡ್ಡ ತಟ್ಟುಗಳ ಮತ್ತು ನದಿ ಸರೋವರಗಳ ಸಂಕುಚಿತ ಕ್ಷೇತ್ರಗಳಲ್ಲಿ ಯುದ್ಧ ಹೂಡುವ ಪ್ಲೇನ್ ಮಾಡಿದ್ದರು. ಆದರೆ ರಷ್ಯದ ಧಾಳಿಯಿಂದ ಅವರ ಪ್ಲೇನು ಸಂಪೂರ್ಣ ಮುರಿದು ಹೋಯಿತು. ಇಲ್ಲವಾದರೆ ಅವರು ಜರ್ಮನರನ್ನು ದೀರ್ಘಕಾಲ ತಡೆಗಟ್ಟಲು ಶಕ್ತರಾಗುತ್ತಿದ್ದಾರೆಂಬುದು ವಾರ್ಸೋದ ಯುದ್ಧವು ಸಿದ್ಧಗೊಳಿಸುವುದು. ಮೊದಲು ಜರ್ಮನ್ ಸೇನಾನಾಯಕರಾಗಿದ್ದು ಇತ್ತೀಚಾಗಿ ಹಿಟ್ಲರರ ಆಕ್ರಮಣದ ಅವಿವೇಕವನ್ನು ವಿರೋಧಿಸಿದುದಕ್ಕಾಗಿ ಕೆಳಗೆ ಹಾಕಿ ಅವಮಾನಿಸಲ್ಪಟ್ಟಿದ್ದ ಜನರಲ್ ವಾನ್ ಫ್ರಿಚರು ವಾರ್ಸೋದ ರಣರಂಗದಲ್ಲಿ ಕೊಲ್ಲಲ್ಪಟ್ಟಿರುವರು. ಇವರು ವಾರ್ಸೋದ ಜರ್ಮನ್ ಸೇನೆಯ ನಾಯಕರಾಗಿದ್ದರೆಂದು ತಿಳಿದು ಬರುತ್ತದೆ. ಇವರು ಹೇಗೆ ಮೃತರಾದರೆಂಬುದರ ಕುರಿತು ಜರ್ಮನಿಯ ಪತ್ರಿಕೆಗಳು ಹೆಚ್ಚಿನ ವಿಷಯಗಳನ್ನೇನೂ ಪ್ರಕಟಿಸಿಲ್ಲ. ಅವಮಾನಿಸಲ್ಪಟ್ಟಿದ್ದ ಇವರು ಸಾಮಾನ್ಯ ಸೈನಿಕರೊಂದಿಗೆ ಕಾದಾಡಿ ಮಡಿದರೆಂದು ಕೆಲವರ ಊಹನೆ.

ತಾ. 17ರಿಂದ 23ರ ವರೆಗೆ ಈ ಸೊವಿಯೆಟ್ ಸೈನ್ಯವು ಪೋಲಂಡಿನಲ್ಲಿ 160 ಮೈಲು ಮುಂದುವರಿದಿರುವುದು. ಸ್ಟೇಲಿನರ ಅರ್ಧ ಮಿಲ್ಯ ಭಾವ ಚಿತ್ರಗಳು ಜನರಲ್ಲಿ ಹಂಚಲ್ಪಡುತ್ತಿವೆ. ಇನ್ನೂ ಅರ್ಧ ಮಿಲ್ಯ ಬರಲಿದೆ. ತಾವು ಗೆದ್ದ ಪ್ರದೇಶಗಳ

ಪೂರ್ವಯುರೋಪಿನಲ್ಲಿ ರಷ್ಯದ ಪ್ರಾಬಲ್ಯ

ಶಾಂತಿಯು ಸಾಧ್ಯವಿಲ್ಲ: ಮಿತ್ರರಾಷ್ಟ್ರಗಳ ನಿರ್ಧಾರ

ಮಿತ್ರರಾಷ್ಟ್ರಗಳಿಗೆ ಇಟಲಿಯ ಎಚ್ಚರಿಕೆ

ಪುನಃ ಗಾಂಧಿ ವೈಸ್‌ರಾಯ ಮಾತುಕತೆ.

ಜನತೆಯಲ್ಲಿ ಬೋಲ್ಷೆವಿಕ್ ತತ್ವ ಪ್ರಚಾರವನ್ನು ಶೀಘ್ರವಾಗಿ ಕೈಕೊಂಡಿರುವರು ಸೊವಿಯೆಟ್ ಸೈನಿಕರು. ಉಕ್ರೈನಿನಲ್ಲಿ ಪೋಲಿಶ್ ಒಳದೇಶ ಮಂತ್ರಿಗಳ ಸಮೇತ 5 ಮಂದಿ ಅಧಿಕಾರಿಗಳನ್ನು ಸೊವಿಯೆಟ್ ಸೈನಿಕರು ದಸ್ತಗಿರಿ ಮಾಡಿದ್ದಾರೆ.

450,000 ಕೈದಿಗಳು

ಇಷ್ಟರವರೆಗಣ ಯುದ್ಧದಲ್ಲಿ 450,005 ಮಂದಿ ಪೋಲರು ಜರ್ಮನರಿಗೆ ಸೆರೆ ಸಿಕ್ಕಿರುವರೆಂದೂ ಇವರಿಂದ ಜರ್ಮನ್ ಕೈಗಾರಿಕೆಗಳಲ್ಲಿ ಕೆಲಸಮಾಡಿಸಲಾಗುವದೆಂದೂ ತಿಳಿದುಬರುತ್ತದೆ. ಪೋಲರ 800 ವಿಮಾನಗಳು ನಾಶಮಾಡಲ್ಪಟ್ಟಿವೆ ಅಥವಾ ಹಿಡಿಯಲ್ಪಟ್ಟಿವೆ. ಉಳಿದ ವಿಮಾನಗಳು ದೇಶ ಬಿಟ್ಟೋಡಿವೆ. ಜರ್ಮನ್ ಮತ್ತು ರಷ್ಯನರೊಳಗೆ ನಿಶ್ಚಯವಾದ ಗಡಿಯನ್ನು ದಾಟಿ ಮುಂದೊತ್ತಿದ್ದ ಜರ್ಮನ್ ಸೈನಿಕರು ಹಿಂದೆ ಸರಿದಿರುತ್ತಾರೆ.

ರಷ್ಯಕ್ಕೆ ಅತಿ ದೊಡ್ಡ ಪಾಲು

ರಷ್ಯ ಮತ್ತು ಜರ್ಮನಿಗಳು ಪೋಲಂಡನ್ನೀಗ ತಮ್ಮೊಳಗೆ ಹಂಚಿಕೊಂಡಿರುವರಷ್ಟೆ. ಇದರಲ್ಲಿ ರಷ್ಯಕ್ಕೆ ಅತಿ ದೊಡ್ಡ ಪಾಲು ದೊರೆತು ಪೂರ್ವ ಯುರೋಪಿನಲ್ಲಿ ಅದರ ಕೈಮೇಲಾಗುವಂತಾಗಿದೆ. ಹಿಟ್ಲರರು ಉಕ್ರೈನಿನ ಆಶೆಯನ್ನೇ ಬಿಟ್ಟುಬಿಟ್ಟಂತಿದೆ. ಮುಂದೊತ್ತಿ ವಶಮಾಡಿಕೊಂಡಿದ್ದ ಪ್ರದೇಶಗಳನ್ನೂ ಜರ್ಮನ್ ಸೇನೆಯು ಬಿಟ್ಟು ಹಿಂದೆ ಸರಿಯಬೇಕಾಗಿದೆ. ಹಂಗೇರಿ ಮತ್ತು ರುಮೇನಿಯದ ಮೇಲೂ, ಲಿಜೇವಿಯ ಮೊದಲಾದ ಬಾಲ್ಟಿಕ್ ರಾಜ್ಯಗಳ ಮೇಲೂ ರಷ್ಯದ ಪ್ರಭಾವವೇ ಹೆಚ್ಚುವಂತಾಗಿದೆ. ರಷ್ಯದೊಡನೆ ವೈರತ್ವದಿಂದಿದ್ದ ಹಂಗೇರಿಯು ಇಷ್ಟರಲ್ಲೇ ಅದರೊಡನೆ ಒಪ್ಪಂದ ಮಾಡಿಕೊಂಡು ವ್ಯಾಪಾರ ಸಂಬಂಧವಾದ ಒಡಂಬಡಿಕೆಮಾಡಿಕೊಳ್ಳಲುವದಾಗಿದೆ. ರುಮೇನಿಯವು ಮೊದಲೇ ರಷ್ಯದೊಡನೆ ಒಡಂಬಡಿಕೆ ಮಾಡಿಕೊಂಡಿದೆ. ರುಮೇನಿಯದಲ್ಲಿ ಆಶ್ರಯಪಡೆದುಕೊಂಡಿದ್ದ 'ಪೋಲಂಡಿನ ಪ್ರೆಸಿಡೆಂಟ್ ಮೊಸಿಸ್ಕಿಯವರೇ ಮೊದಲಾದ ಅಧಿಕಾರಿಗಳನ್ನು ನಿರ್ಬಂಧದಲ್ಲಿರಿಸಲಾಗಿದೆ. ಲಿಜೇವಿಯದ ವಿದೇಶ ಮಂತ್ರಿಗಳು ರಷ್ಯದೊಡನೆ ಮಾತುಕತೆ ನಡಿಸಲು ಮೋಸ್ಕೋ ಪಟ್ಟಣಕ್ಕೆ ಹೋಗಿರುತ್ತಾರೆ. ಕಪ್ಪು ಸಮುದ್ರದಲ್ಲಿ ಯುದ್ಧವಾಗದಂತೆ ಅದಕ್ಕೆ ಜರ್ಮನಿಗೆ ಪ್ರವೇಶವನ್ನೇ ಕೊಡಬಾರದೆಂಬ ಕುರಿತು ರಷ್ಯದೊಡನೆ ಒಡಂಬಡಿಕೆಮಾಡಿಕೊಳ್ಳಲು ಟರ್ಕಿಯ ವಿದೇಶ ಮಂತ್ರಿಗಳು ಮೋಸ್ಕೋವಿಗೆ ಹೋಗಿರುತ್ತಾರೆ. ಹೀಗೆ ಪೂರ್ವ ಯುರೋಪಿನಲ್ಲಿ ರಷ್ಯವೇ ಪ್ರಧಾನ ಸ್ಥಾನ ಪ

[illegible]

ಪಿನಲ್ಲಿಯೂ ಬಿರುಗಾಳಿಯೇಳುವುದೆಂದು ಮುಸಲೋನಿಯವರ ಬಾಯಿಯಂತಿರುವ ಸೀನರ್ ಗೈಡಾರವರು ಎಚ್ಚರಿಸಿರುವರು. ಇದರಿಂದ ಇಟೆಲಿಯು ಹೆಚ್ಚು ಸಮಯ ಸುಮ್ಮನಿರಲಾರದೆಂಬುದು ಸ್ಪಷ್ಟವಾಗುವುದು. ಗಾಳಿಯು ಎತ್ತ ಬೀಸುವುದೆಂಬುದನ್ನು ಚೆನ್ನಾಗಿ ಪರೀಕ್ಷಿಸಿಕೊಂಡು ಮುಸಲೋನಿಯವರು ತನ್ನ ಮುಂದಿನ ಧೋರಣೆಯನ್ನು ನಿರ್ಧರಿಸಬಹುದು. ಫೆಸಿಸ್ಟ್ ಮತ್ತು ಕಮ್ಯೂನಿಸ್ಟ್ ರಾಷ್ಟ್ರಗಳೊಂದುಗೂಡಿ ಸಾಮ್ರಾಜ್ಯಶಾಹಿರಾಷ್ಟ್ರಗಳ ಬಲವನ್ನು ಮುರಿಯುವ ಅಭಿಪ್ರಾಯವು ಈಗ ಇಟೆಲಿಯಲ್ಲಿ ಕೆಲವರಲ್ಲುಂಟಾಗಿದೆ. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯವೋ? ಇಂಗ್ಲಂಡ್ ಭೂಮಧ್ಯ ಸಾಗರವನ್ನು ಆವರಿಸಿರುತ್ತದೆ. ಇದರಿಂದ ಇಟೆಲಿಯ ವ್ಯಾಪಾರ ವಹಿವಾಟುಗಳಿಗೆ ತೊಂದರೆಯಾಗಿ ಅದಕ್ಕೆ ಸಾಂಪತ್ತಿಕ ಹಾನಿಯುಂಟಾಗಬಹುದು. ಇದು ಹೊರತು ಅದು ಜರ್ಮನಿಗೆ ಆಹಾರ ಸಾಮಾಗ್ರಿ ಮೊದಲಾದುವುಗಳನ್ನು ಕೊಟ್ಟು ಸಹಾಯ ಮಾಡಬಹುದು. ಇದರಿಂದ ಮಿತ್ರರಾಷ್ಟ್ರಗಳಿಗೂ ಇಟೆಲಿಗೂ ತಿಕ್ಕಾಟವುಂಟಾಗಬಹುದು. ಇಲ್ಲವಾದಲ್ಲಿ ಮುಸೋಲಿನಿಯವರು ಸಂದರ್ಭ ನೋಡಿ ಫ್ರಾನ್ಸಿನ ಸಂಬಂಧವಾದ ತನ್ನ ಕೇಳಿಕೆಗಳನ್ನು ಮುಂದೊತ್ತಿದರೆ ಮಿತ್ರರಾಷ್ಟ್ರಗಳು ಒಂದೊ ಅವರನ್ನು ಸಮಜಾಯಿಸಬೇಕು ಇಲ್ಲವೆ ವಿರೋಧಿಸಬೇಕಾಗುವುದು. ಯುದ್ಧವು ದೀರ್ಘಕಾಲ ಮುಂದುವರಿದರೆ ಇಟೆಲಿಯು ಅದಕ್ಕೆಳೆಯಲ್ಪಡುವುದಂತೂ ನಿಶ್ಚಯವೆನ್ನಬಹುದು.

ಶಾಂತಿಯು ಸಾಧ್ಯವಿಲ್ಲ

ಪೋಲಂಡಿನೊಡನೆ ಮಾಡಿಕೊಂಡಿರುವ ಒಪ್ಪಂದದ ಮೇರೆಗೆ ಇಂಗ್ಲಂಡ್ ಮತ್ತು ಫ್ರಾನ್ಸುಗಳು ತಮ್ಮ ಧೋರಣೆಯನ್ನು ನಿರ್ಧರಿಸಿರುವವು. ಈಗ ಪೋಲಂಡು ನಿರ್ನಾಮವಾದಾಕ್ಷಣ ಅದು ಮಾರ್ಪಡುವ ಹಾಗಿಲ್ಲ. ಜರ್ಮನಿಯ ಆಕ್ರಮಣವನ್ನು ಮಿತ್ರರಾಷ್ಟ್ರಗಳು ಎಂದೂ ಅಂಗೀಕರಿಸಲಾರವು. ಆದುದರಿಂದ ಮುಸಲೋನಿಯವರು ವಿನಂತಿ ಮಾಡಿಕೊಂಡಿರುವಂತೆ ಶಾಂತಿಯು ಸಾಧ್ಯವಿಲ್ಲೆಂದೇ ಇಂಗ್ಲಂಡ್ ಮತ್ತು ಫ್ರಾನ್ಸುಗಳ ದೃಢನಿರ್ಧಾರವಾಗಿದೆ.

ಪಶ್ಚಿಮ ರಣರಂಗದ ವಿದ್ಯಮಾನಗಳು.

ಪೋಲಂಡಿನ ಯುದ್ಧವು ಇನ್ನು ಹೆಚ್ಚು ದಿನಗಳ ವರೆಗೆ ನಡೆಯಲಾರದು. ಇನ್ನು ಮುಂದೆ ಲೋಕದ ದೃಷ್ಟಿಯು ಸಂಪೂರ್ಣವಾಗಿ ಪಶ್ಚಿಮ ರಣರಂಗದ ಮೇಲೆ ಬೀಳುವುದು. ಇಷ್ಟರವರೆಗೆ ಈ ರಣರಂಗದಲ್ಲಿ ದೊಡ್ಡ ಯುದ್ಧವೇನೂ ನಡೆದಿರುವುದಿಲ್ಲ. ಮಿತ್ರರಾಷ್ಟ್ರಗಳ ಮತ್ತು ಜರ್ಮನಿಯ ಶಕ್ತಿ ಪರೀಕ್ಷೆಯಾಗಲಿದೆ ಈ ರಣರಂಗದಲ್ಲಿ ಇನ್ನುಮುಂದೆ. ಜರ್ಮನಿಯು ಇಲ್ಲಿ ಯಾವ ರೀತಿಯಲ್ಲಿ ಹೋರಾಡುವುದೆಂಬುದು ಈ ವರೆಗೆ ತಿಳಿದಿಲ್ಲ. ಹಿಟ್ಲರರು ಬೇಗನೆ ಪಶ್ಚಿಮ ರಣರಂಗಕ್ಕೆ ಬರಲಿದ್ದಾರೆ. ಮುಖ್ಯ ಜರ್ಮನ್ ಸೇನಾ ನಾಯಕರಾದ ಜನರಲ್ ವಾನ್ ಬ್ರೋಚಿಚರು ಪಶ್ಚಿಮ ರಣರಂಗಕ್ಕೆ ಬಂದಂದಿನಿಂದ ಜರ್ಮನರು ಫ್ರೆಂಚ್ ಸೇನೆಯೊಡನೆ ಪ್ರಬಲವಾದ ಹೋರಾಟ ಆರಂಭಿಸಿದ್ದಾರೆ. ಅವರು ಸಾರ್ ಬ್ರುಕೆನಿನ ಬಳಿಯ ಗುಡ್ಡ ತುದಿಗಳನ್ನು ವಶಪಡಿಸಿಕೊಳ್ಳುವುದಕ್ಕೂ, ಲೋಟರ್ ಎಂಬ ನದಿಯ ಮಾರ್ಗವಾಗಿ ಫ್ರೆಂಚ್ ಪ್ರದೇಶವನ್ನು ಪ್ರವೇಶಿಸಲಿಕ್ಕೂ, ಜ್ವೈಬ್ರೆಕೆನ್ ಎಂಬ ಪ್ರಾಮುಖ್ಯ ಸ್ಥಳದ ಮೇಲೆ ಫ್ರೆಂಚರ ಒತ್ತಾಟವನ್ನು ಕಡಿಮೆ ಮಾಡಲಿಕ್ಕೂ ಪ್ರಯತ್ನಿಸುತ್ತಿರುವರು. ಇಷ್ಟರ ವರೆಗೆ ಈ ಪ್ರಯತ್ನಗಳನ್ನು ಫ್ರೆಂಚ್ ತೋಪುಗಳು ನಿರರ್ಥಕಗೊಳಿಸಿರುವವು.

ಕೋಟೆಗಳ ಯುದ್ಧ

ಪಶ್ಚಿಮ ರಣರಂಗದಲ್ಲಿ ಕೋಟೆಗಳ ಯುದ್ಧವೇ ಹೊರತು ದೊಡ್ಡ ಸಮರಂಗ ಹೋರಾಟವೇನೂ ನಡೆಯಲಾರದು. ಫ್ರೆಂಚರ ಮೆಗಿನಟ್ ಲೈನಿನಂತೆಯೇ ಜರ್ಮನರ ಸಿಗ್‌ಫ್ರಿಡ್ ಕೋಟೆಯೂ ಅಭೇದ್ಯವಾಗಿದೆ. ಜರ್ಮನ್ ಕೋಟೆಗಳು ಕಟ್ಟಲ್ಪಟ್ಟು ಆದುದು ಎರಡು ವರ್ಷ ಮಾತ್ರ. ಫ್ರೆಂಚ್ ಕೋಟೆಗಳನ್ನು ಕಟ್ಟಿ ಆರೇಳು ವರ್ಷಗಳಾದುವು. ಅವುಗಳು ಬಹಳ ಭದ್ರವಾಗಿ ಸೈನಿಕರಿಗೆ ಎಲ್ಲಾ ತರದ ಅನುಕೂಲತೆಗಳನ್ನೂ ಕೊಡುತ್ತಿವೆ. ಆದರೆ ಜರ್ಮನ್ ಕೋಟೆಗಳು ಅತ್ಯವಸರದಿಂದ ಕಟ್ಟಲ್ಪಟ್ಟುವಾದುದರಿಂದ ಅವುಗಳೊಳಗೆ ಸೈನಿಕರ ಜೀವನವು ಬಹಳ ಕಷ್ಟವಾಗಿದೆ. ಸಿಗ್‌ಫ್ರಿಡ್ ಕೋಟೆಯೊಳಗೆ ಜೀವನವು ಬಹಳ ಅನಾರೋಗ್ಯಕರವಾಗಿರುವುದೆಂದೂ ಬೇಕಷ್ಟು ಒಳ್ಳೇ ವಾಯು ಮತ್ತು ಆಹಾರ ಸಿಗುವುದಿಲ್ಲೆಂದೂ, ಇಷ್ಟರಲ್ಲೇ ಅವುಗಳೊಳಗಣ ನೂರಕಡ 26ರಷ್ಟು ಸೈನಿಕರು ಕಾಯಿಲೆಗೊಳಗಾಗಿರುವರೆಂದೂ ತಿಳಿದುಬರುತ್ತದೆ. ಅಂತೂ ಈ ಕೋಟೆಗಳನ್ನು ಸುಲಭವಾಗಿ ಮುರಿಯಲು ಇತ್ತಂಡದವರಿಗೂ ಸಾಧ್ಯವಾಗಲಾರದು. ದೀರ್ಘ ಕಾಲದ ವರೆಗೆ ಹೋರಾಟ ನಡೆಯಬೇಕಾಗುವುದು.

ದೀರ್ಘ ಕಾಲದ ಯುದ್ಧವನ್ನು ಸಹಿಸಿಕೊಳ್ಳುವಷ್ಟರ ಶಕ್ತಿಯು ಜರ್ಮನಿಗಿರುವುದೇ ಎಂಬುದೀಗ ಪ್ರಶ್ನೆ. ಅದರ ಈ ವರ್ಷದ ಬೆಳೆಯು ಬಹಳ ಒಳ್ಳೇದಾಗಿದ್ದು ಇನ್ನೊಂದು ವರ್ಷದ ವರೆಗೂ ಸಾಕೆಂದು ತಿಳಿದುಬರುತ್ತದೆ. ಆದರೆ ಆಧುನಿಕ ಯುದ್ಧಕ್ಕೆ ಮುಖ್ಯವಾಗಿ ಬೇಕಾದುದೆಂದರೆ ಎಣ್ಣೆ ಮತ್ತು ಕಬ್ಬಿಣ ಮೊದಲಾದ ಲೋಹಗಳು. ಒಂದು ವರ್ಷಕ್ಕೆ ಜರ್ಮನಿಗೆ ಬೇಕಾಗುವ ಸುಮಾರು 50 ಮಿಲ್ಯ ಟನ್ನು ಪೆಟ್ರೋಲ್ ಮೊದಲಾದ ಎಣ್ಣೆಗಳಲ್ಲಿ ಕಾಲುಪಾಲು ಕೂಡಾ ಜರ್ಮನಿಯಲ್ಲಿ ದೊರೆಯುವುದಿಲ್ಲ. ರುಮೇನಿಯ, ಹಂಗೇರಿ, ಸ್ವೀಡನ್ ಮೊದಲಾದ ನೆರೆಕರೆಯ ಮತ್ತು ಹೊರಗಣ ದೇಶಗಳಿಂದ ಅದು ಎಣ್ಣೆ ಮತ್ತು ಲೋಹಗಳನ್ನು ತರಿಸುತ್ತದೆ. ಬ್ರಿಟಿಷರ ನೌಕಾ ಮುತ್ತಿಗೆಯಿಂದ ಇಷ್ಟರಲ್ಲೇ ಜರ್ಮನಿಯ ಮೇಲೆ ಪರಿಣಾಮವಾಗಿರುವಂತಿದೆ. ಆ ಕುರಿತು ಹಿಟ್ಲರರು ಅಸಹಿಷ್ಣುತೆ ತೋರಿಸ ಹತ್ತಿರುತ್ತಾರೆ. ತಟಸ್ಥ ರಾಷ್ಟ್ರಗಳ ಸ್ಟೀಮರುಗಳ ಮೂಲಕವಾಗಿ ಕೂಡಾ ಜರ್ಮನಿಗೆ ಯುದ್ಧ ಸಹಾಯಕ ಸಾಮಾಗ್ರಿಗಳು ಒಯ್ಯಲ್ಪಡದಂತೆ ಇಂಗ್ಲಂಡು ನಿರ್ಬಂಧ ಹಾಕಿದೆ. ಇಷ್ಟರವರೆಗೆ ಸುಮಾರು 100 ತಟಸ್ಥ ಹಡಗಗಳನ್ನು ಹಿಡಿದು ಪರೀಕ್ಷಿಸಿ ಜರ್ಮನಿಗೆ ಹೋಗುವ 6 ಲಕ್ಷ ಟನ್ನುಗಳಷ್ಟರ ಲೋಹವೇ ಮೊದಲಾದುವುಗಳನ್ನು ಜಪ್ತಿಮಾಡಿರುತ್ತದೆ. ಇದರಿಂದ ಇಂಗ್ಲಂಡು ತನ್ನ ತಾಟಸ್ಥ್ಯದ ಧೋರಣೆಯನ್ನು ಮುರಿದಂತಾಗುತ್ತದೆಂದು ಜರ್ಮನಿಯು ಆಕ್ಷೇಪಿಸಿದೆ. ಪರಿಸ್ಥಿತಿಯು ಇದೇ ರೀತಿ ನಡೆದರೆ ಬೆಲ್‌ಜಿಯಮ್ ಮತ್ತು ಹೋಲೆಂಡುಗಳ ಮೇಲೆ ಜರ್ಮನಿಯು ಆಕ್ರಮಿಸಿ 1914ರಂತೆಯೇ ಫ್ರಾನ್ಸಿನ ಮೇಲೇರಿ ಹೋಗುವುದೆಂದೂ, ಆ ದೃಷ್ಟಿಯಿಂದಲೇ ಅದೀಗ ಸಿದ್ಧತೆಮಾಡುತ್ತಿರುವುದೆಂದೂ ಸುದ್ದಿಯುಂಟಾಗಿದೆ. ಬೆಲ್‌ಜಿಯಮ್ ಮತ್ತು ಹೋಲೆಂಡುಗಳು ತಮ್ಮ ಎಲ್ಲೆಗಳನ್ನು ಭದ್ರಪಡಿಸಿ ಸೇನಾ ಸಂಗ್ರಹ ಮಾಡುತ್ತಿವೆ. ಹೋಲ್ಲೆಂಡು ದೇಶವು ಜರ್ಮನಿಯ ತನ್ನ ಎಲ್ಲೆಯನ್ನು ನೀರಿನಿಂದ ಮುಳುಗಿಸಿಬಿಡುವ ಏರ್ಪಾಡು ಮಾಡುತ್ತಿದೆ. ಬೆಲ್‌ಜಿಯಮಿನ ಸೇನೆ ಮತ್ತು ಭದ್ರತೆಯು 1914ಕ್ಕಿಂತಲೂ ಉತ್ತಮವಾಗಿದೆ. ಈ ರಾಷ್ಟ್ರಗಳ ತಾಟಸ್ಥ್ಯವನ್ನು ಜರ್ಮನಿಯು ಮನ್ನಿಸುವುದೆಂದು ಗೊಬ್ಬೆಲ್ಸರು ಈಗ ಪ್ರಕಟಗೊಳಿಸಿದರೂ ಜರ್ಮನಿಯು ಸಂದರ್ಭಾನುಸಾರ ಏನುಮಾಡುವುದೆನ್ನಲಾಗುವುದಿಲ್ಲ.

ಬ್ರಿಟಿಷ್ ಹಡಗುಗಳು ಮುಳುಗಿದವು

ಇದೇ ತಾ. 23ರಲ್ಲು ಫಿನ್ಲೆಂಡಿನ ಎರಡು ಹಡಗಗಳನ್ನು ಜರ್ಮನ್ ಸಬ್‌ಮೆರೀನುಗಳು ಮುಳುಗಿಸಿರುವವು. ಈ ಕುರಿತು ಫಿನ್ಲೆಂಡ್ ಸರಕಾರವು ಜರ್ಮನಿಗೆ ನಿಷೇಧ ವ್ಯಕ್ತಗೊಳಿಸಿರುತ್ತದೆ. ಒಂದು ಫಿನ್ಲೆಂಡ್ ಹಡಗವು ಇಂಗ್ಲಂಡಿಗೆ ಸೆಲ್ಯುಲೋಸನ್ನು ಒಯ್ಯುವದಾಗಿತ್ತು. ದಕ್ಷಿಣ ಅಮೆರಿಕದ ಮೆಕ್ಸಿಕೋ ತೀರದಲ್ಲಿ 2 ಸಬ್‌ಮೆರೀನುಗಳು ತೋರಿಬಂದಿವೆ. ಇದೇ ತಾ 24ರಲ್ಲು ಎರಡು ಬ್ರಿಟಿಷ್ ಹಡಗ ಮತ್ತು ಒಂದು ಸ್ವೀಡನ್ ಹಡಗವು ಮುಳುಗಿಸಲ್ಪಟ್ಟಿವೆ. ಸ್ವೀಡನು ಜರ್ಮನಿಗೆ ವರ್ಷ ವರ್ಷ ಒದಗಿಸುವ 6 ಮಿಲ್ಯ ಟನ್ನು ಕಬ್ಬಿಣದ ಪದರನ್ನು ನಿಲ್ಲಿಸಿ ಬಿಡಬಹುದೆಂದು ಸಂಬಲಾಗಿದೆ.

ಗಾಂಧಿ ವೈಸರಾಯರ ಭೇಟಿ

ವೈಸರಾಯರು ಪುನಃ ಮಾತಾಡಲು ಗಾಂಧಿಜಿಯವರನ್ನೂ ಮಿ. ಜಿನ್ನಾರವರನ್ನೂ ಆಮಂತ್ರಿಸಿರುವರು. ಇತ್ತಲಾಗಿ ಕೆಲವು ದಿನಗಳಿಂದ ವಾರ್ಧದಲ್ಲಿ ಗಾಂಧಿಜಿಯವರು ಶ್ರೀಗಳಾದ ರಾಜಗೋಪಾಲಾಚಾರಿ, ಸರ್ದಾರ್ ವಲ್ಲಭಾಯಿ ಪಟೇಲ್, ಬಾಬು ರಾಜೇಂದ್ರ ಪ್ರಸಾದರೊಡನೆಲ್ಲಾ ದೀರ್ಘವಾದ ಮಾತುಕತೆ ನಡಿಸಿರುವರು. ಇದೇ ತಾ. 24ರಲ್ಲು ಬಾಬುರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್ ಮತ್ತು ರಾಜಗೋಪಾಲಾಚಾರ್ಯರು ಪುನಃ ಗಾಂಧಿಯವರೊಡನೆ ಬಹಳ ಹೊತ್ತು ಮಾತಾಡಿದರು. ಮಹಾತ್ಮರು ಶ್ರೀ ಮಹದೇವ ದೇಸಾಯಿ, ಮತ್ತು ರಾಜಕುಮಾರಿ ಅಮೃತಕೌರರೊಂದಿಗೆ ವಾರ್ಧದಿಂದ ಡಿಲ್ಲಿಗೆ ಹೊರಟು ಹೋಗಿರುವರು. ಅವರು ತಾ. 26ರಲ್ಲು ವೈಸರಾಯರೊಡನೆ ಮಾತಾಡುವರು. ಪೋಲಿಶ್ ವೀರರ ಯುದ್ಧವನ್ನು ಅಹಿಂಸಾತ್ಮಕ ಹೋರಾಟವೆಂದೇ ಕರೆಯಬಹುದೆಂದು ಗಾಂಧಿಯವರು ಅಭಿಪ್ರಾಯವಿತ್ತು ಆ ಕುರಿತು ಪೋಲರ ಅವಸ್ಥೆಯ ಕುರಿತು ಹಾರ್ದಿಕ ಸಹಾನುಭೂತಿ ತೋರಿಸಿರುವರು. ಗಾಂಧಿಜಿ ವೈಸರಾಯ ಭೇಟಿಯ ಪರಿಣಾಮವಾಗಿ ಕಾಂಗ್ರೆಸ್ ಬ್ರಿಟಿಷ್ ಸರಕಾರಕ್ಕೆ ಸಹಾಯವೀಯುವಂತಾಗುವುದೇ ಎಂಬ ಪ್ರಶ್ನೆಯುಂಟಾಗಿದೆ ಈಗ ದೇಶದಲ್ಲಿ. ಆದರೆ ಪಂಡಿತ ಜವಾಹರಲಾಲ್, ಭೋಸರೇ ಮೊದಲಾದವರು ಕಠಿಣ ಧೋರಣೆಯುಳ್ಳವರಾಗಿ ಸರಕಾರದೊಡನೆ ಹೋರಾಟನಡಿಸುವುದಕ್ಕಾದರೂ ಸಿದ್ಧರೇ ಇರುವಂತಿದೆ. ಈ ಸಂದರ್ಭದಲ್ಲಿ ದೇಶವು ಒಕ್ಕಟ್ಟಿನಿಂದ ನಡೆಯಬೇಕೆಂದು ಪಂಡಿತರು ಆಗ್ರಹದಿಂದ ವಿನಂತಿ ಮಾಡಿರುತ್ತಾರೆ.

ಮೈಸೂರು

ಸ್ವಂ. ಬಾ. ತಾ. 25-9-39.

ಮೈಸೂರು ದಿವಾನರಾದ ಸರ್. ಮಿರ್ಜಾರವರು ಬರುವ ತಿಂಗಳು ತಾ. 8ಕ್ಕೆ ದ. ಕ. ಶಿವಪುರಕ್ಕೆ ಆಗಮಿಸಿ, ಅಲ್ಲಿ ಕಟ್ಟಿರುವ ಸೇತುವೆಯ ಪ್ರಾರಂಭೋತ್ಸವ ನಡೆಸಿ ಅಲ್ಲಿಂದ ಮಂಗಳೂರಿಗೆ ಬಂದು, ಅಲ್ಲಿ ಫಲಪುಷ್ಪ ಪ್ರದರ್ಶನ ಆರಂಭೋತ್ಸವ ನೆರವೇರಿಸಿ ಮಡಿಕೇರಿ ಮೇಲೆ ಮೈಸೂರಿಗೆ ಬರುತ್ತಾರಂತೆ.

ಮೈಸೂರು ಯುವರಾಜ ಪಾರ್ಟಿಯವರು ಹಾಲೆಂಡಿನ ಹೇಗ್‌ನಿಂದ ಲಂಡನ್ನಿಗೆ ಹೋಗಿ ಅಲ್ಲಿಂದ ಇಂಡಿಯಾಕ್ಕೆ ಹಿಂತಿರುಗಲು ಶಕ್ಯ ಪ್ರಯತ್ನ ನಡೆಸುತ್ತಿದೆಂದು ಇಲ್ಲಿಗೆ ಕೇಬಲ್ ಬಂದಿದೆ.

ಶ್ರೀ. ಕೇಯಿಫ್. ಸಾಲಿಮೊನ್ ಮತ್ತು ಶ್ರೀ. ಜೆ. ವಿ. ಕಾಮತ್‌ರವರು ಮುಂದಿನ ವಾರ ಮೈಸೂರಿಗೆ ಬರಲಿದ್ದಾರೆ.

ಚಿತ್ರದುರ್ಗದ ಅರಣ್ಯ (ತುರವನೂರ್) ಠಾಣೆಯ ಮುರಿದರೆಂದು ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರನ್ನು ದಸ್ತಗಿರಿಮಾಡಿ ವಿಚಾರಿಸಿ, ಶಿಕ್ಷೆ ವಿಧಿಸಿದರು.

ಮೈಸೂರು ಕಾಂಗ್ರೆಸ್‌ನವರ ಚಳವಳಿಯು ಮುಂದುವರಿದು ಸಂಸ್ಥಾನದಾದ್ಯಂತವೂ ಹಾಕಿರುವ ಕೆಲವು ಭಾಗಗಳಲ್ಲಿ) ಆಜ್ಞೋಲ್ಲಂಘನೆ ನಡೆದು ಕಾಂಗ್ರೆಸು ಮುಂದಾಳುಗಳ ಮತ್ತು ಸ್ವಯಂಸೇವಕರ ದಸ್ತಗಿರಿಯಾಗಿ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ. ಎ. ಐ. ಸಿ. ಸಿ. ಸದಸ್ಯರಾದ ಶಂಕರಕುರ್ತಕೋಟಿ ಮತ್ತು ಪ್ರಹ್ಲಾದ ಶೆಟ್ಟರು ಇಂಡಿಯಾ ಡಿಫೆನ್ಸ್ ಆಕ್ಟಿನ ಪ್ರಕಾರ ಶಿವಮೊಗ್ಗದಲ್ಲಿ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಇಲ್ಲದೆ ಅನೇಕರ ಮೇಲೆ ರಾಜದ್ರೋಹ ಆಪಾದನೆ ಮೊಕದ್ದಮೆ ಹೂಡಿರುತ್ತಾರೆ. ಬೆಂಗಳೂರು, ಮೈಸೂರಿನಲ್ಲಿ ಸತ್ಯಾಗ್ರಹವು ಮುಂದುವರಿಯುತ್ತಿದೆ. ಹಾಸನದಲ್ಲಿ ಕಟ್ಟಲಾಗಿರುವ ಶ್ರೀಮತಿ ಕೆಂಪು ಚನ್ನಾಜಮ್ಮಣ್ಣಿ ಮಹಿಳಾ ಸಮಾಜದ ಪ್ರಾರಂಭೋತ್ಸವವನ್ನು ಅಲ್ಲಿಯ ಜಿಲ್ಲಾಧಿಕಾರಿಗಳ ಧರ್ಮಪತ್ನಿಯವರು ನಿನ್ನೆ ನಡೆಸಿದರು.

ಮೈಸೂರು ಬ್ರಿಟಿಷ್ ರೆಸಿಡೆಂಟರು ಮುಂದಿನ ತಿಂಗಳು ತಾ. 2ಕ್ಕೆ ಕೊಡಗಿಗೆ ಬರುವರು.

ಮೈಸೂರು ಸರ್ಕಾರಿ ನೌಕರರು, ಮಹಾತ್ಮರು ಹೊರಡಿಸುವ 'ಹರಿಜನ' ಪತ್ರಿಕೆಯನ್ನು ತರಿಸಬಹುದೆಂದು ದಿವಾನರು ಅಪ್ಪಣೆಯಿತ್ತಿದ್ದಾರೆ.

ಮೈಸೂರು ಮಹಾರಾಜರು, ಹವಾಬದಲಾವಣೆಗಾಗಿ, ಕಳೆದ ವಾರ ಪೂನಾಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ 8-10 ದಿನವಿದ್ದು, ನವರಾತ್ರಿ ಹೊತ್ತಿಗೆ ಮೈಸೂರಿಗೆ ಬರುತ್ತಾರೆ.

ಕೊಡಗು ಸೀಮೆಯನ್ನು ಮೈಸೂರು ದೇಶಕ್ಕೆ ಸೇರಿಸಲು ಶಕ್ಯ ಪ್ರಯತ್ನ ಮಾಡಲಾಗುತ್ತಿದೆಯಂತೆ.

ಶ್ರೀಮತಿ ಭಾಗೀರಥಿ ಬಾಯಿಯವರನ್ನು ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮನವರ ಜಾಗದಲ್ಲಿ ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರನ್ನಾಗಿ ನೇಮಿಸಿದ್ದಾರೆ.

ಮೈಸೂರು ದಸರಾ ಮಹೋತ್ಸವಕ್ಕೆ ಆಹ್ವಾನಿಸಲ್ಪಡುವವರ, ಅತಿಥಿಗಳ ಪಟ್ಟಿಯೊಂದು ತಯಾರಾಗುತ್ತಿವೆ. ಇವರಲ್ಲಿ, ಸರ್ ರಾಧಾಕೃಷ್ಣನ್‌ರವರೊಬ್ಬರೆಂದು ಹೇಳಲಾಗಿದೆ.

ಬೊಂಬಾಯಿ

ಇಲ್ಲಿಯ ಪ್ರಸಿದ್ಧ ವಕೀಲರುಗಳಾದ ಶ್ರೀಯುತ ಮತ್ತು ಶ್ರೀಮತಿ ಜೋಕಿಮ್ ಆಳ್ವರ ಪ್ರಥಮ ಮಗುವಿನ ನಾಮಕರಣೋತ್ಸವವು ಬೊಂಬಾಯಿಯ ಆರ್ಚಬಿಶಪರಿಂದ ತಾ. 17-9-39ರಲ್ಲಿ ಸೈಂಟ್ ಇಗ್ನೇಸ್ ಚರ್ಚಿನಲ್ಲಿ ನಡೆಸಲ್ಪಟ್ಟಿತು. ಮಗುವಿಗೆ ನಿರಂಜನ ಥೋಮಸ್ ಎಂಬ ನಾಮಕರಣಮಾಡಲಾಯಿತು. ಈ ಸಮಾರಂಭಕ್ಕೆ ಶ್ರೀ. ಭುಲಾಭಾಯಿ, ಜೆ. ದೇಸಾಯಿ, ಹೊನರೇಬಲ್ ಮೊರಾರ್ಜಿ ಆರ್. ದೇಸಾಯಿ, ಹೊನರೇಬಲ್ ಎಲ್. ಎಂ. ಪಾಟೀಲ್, ಶ್ರೀ. ಡಿ. ಎಸ್. ಜೋಶಿ, ಮೊದಲಾದ ಪ್ರಸಿದ್ಧರನೇಕರು ಚಿತ್ತೈಸಿದ್ದರು.

ಕೆನರಾ ಸ್ಟೂಡೆಂಟ್ಸ್ ಯೂನಿಯನ್

ಇದರ ವಾರ್ಷಿಕ ಮಹಾಸಭೆಯು ತಾರೀಕು 10-9-39ರಲ್ಲು ಶ್ರೀ. ಜಾನ್. ಯೆಚ್. ಸುವರ್ಣರವರ ಅಧ್ಯಕ್ಷತೆಯಲ್ಲಿ ಸೇರಿ ವರದಿಯನ್ನೂ ಆಯವ್ಯಯದ ಪಟ್ಟಿಯನ್ನೂ ಮಂಜೂರುಮಾಡಲಾಯಿತು. ತರ್ಕಸಭೆಗಳಲ್ಲಿ ಗೆದ್ದವರಿಗೆ ಬಹುಮಾನಕೊಡಲಾಯಿತು. ಸಭಿಕರ ಭಾಷಣ, ಅಧ್ಯಕ್ಷರ ಉಪನ್ಯಾಸ, ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ [illegible] R. I. A. [illegible]

ಪಕ್ಕುಬಾಣೆ ಭಟ್ಟ ವಾದಿ— ಅರ್ಜಿದಾರ.

ಮತ್ತು

ರಂಗ ಭಟ್ಟ ಕೂಡಾ ಪ್ರತಿವಾದಿಗಳು— ಎದುರು.

ಸದರಿ ವ್ಯವಹರಣೆಯಲ್ಲಿ ಪ್ರತಿವಾದಿ 9ನೇ ವರೆಗಿನ ಪ್ರತಿವಾದಿಗಳು ಎದುರಾದ

5ನೇ ಕೃಷ್ಣ ಭಟ್ಟ 6ನೇ ಅಪ್ಪಣ್ಣ [illegible] ಲಕ್ಷ್ಮೀನಾರಾಯಣ ಭಟ್ಟ, 7ನೇ ಬಾಬು [illegible] ಸುಬ್ರಾಯ ಭಟ್ಟ— ವಾಮಂಜೆ ಕೇಶವ ಭಟ್ಟರ ಮಕ್ಕಳು ಮಂಗಳೂರು ತಾಲೋಕು [illegible] ಗ್ರಾಮದಲ್ಲಿ ಇರುವವರು—

8ನೇ ಅರಿದಾಸ ಭಟ್ಟ, 9ನೇ ಗೋಪಾಲ ಭಟ್ಟ— ರಾಮಚಂದ್ರ ಭಟ್ಟರ ಮಕ್ಕಳು, ಮಂಗಳೂರು ತಾಲೂಕು ವಾಮಂಜೆ ಗ್ರಾಮದಲ್ಲಿ ಇರುವವರು—

ಇವರಿಗೆ ತಿಳಿಯಪಡಿಸುವದೇನೆಂದರೆ—

ಸದರಿ ವ್ಯವಹರಣೆಯಲ್ಲಿ ತಾ. 17-12-37ರಲ್ಲಿ ವಾದಿ ಮತ್ತು 10ನೇ ಪ್ರತಿವಾದಿಯ ಗುಣಕ್ಕೆ ಕೊಡೋಣಾದ ಪ್ರಿಲಿಮಿನರಿ ಡಿಕ್ರಿಯಲ್ಲಿ ಫೈನಲ್ ಡಿಕ್ರಿ ಕೊಡಬೇಕೆಂದು ಸದರಿ ವಾದಿಯು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯು ತಾರೀಕು 30-10-39ಕ್ಕೆ ಆಪ್ಪೈರು ತಕ್ಕಾಗ ಇಟ್ಟಿರುವದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದರಿ ತಾರೀಕು ಹಗಲು 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ನಿವೇದಿಸಿಕೊಳ್ಳದೆ ಇದ್ದರೆ ಸದರಿ ಅರ್ಜಿಯು ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂತ ಈ ಮೂಲಕ ತಿಳಿಸಲಾಗುತ್ತದೆ.

A. N. S. Achar,
Pleader for Plaintiff.
Karkal, Date 26-9-39.

ಚಂದಾದಾರರಲ್ಲಿ ವಿನಂತಿ

ಚಂದಾಅವಧಿ ಮುಗಿದವರಿಗೆಲ್ಲ ನೋಟೀಸು ಕೊಟ್ಟು ತಿಳಿಸಲಾಗಿದೆ. ಅವರು ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ದಯಮಾಡಿ ಕೂಡಲೇ ಕಳಿಸಿ ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಪತ್ರಿಕೆ ಬೇಡವಾದವರು ಬಾಕಿ ಚಂದಾಹಣ ಕಳಿಸಿ ನಮಗೆ ತಿಳಿಸುವ ಉಪಕಾರ ಮಾಡಬೇಕು. ಮುಂದಕ್ಕೆ ಚಂದಾಹಣ ಮುಂಗಡವಾಗಿ ಕಳುಹಿಸದೆ ಪತ್ರಿಕೆ ಕಳಿಸಲು ಸಾಧ್ಯವಾಗಲಾರದೆಂದು ಈ ಮೂಲಕ ವಿನಂತಿಸಲಾಗುತ್ತದೆ. ಎಲ್ಲಾ ಚಂದಾದಾರರು ಈ ಕಡೆಗೆ ತಮ್ಮ ಗಮನವಿತ್ತು ತಮ್ಮ ಚಂದಾ ಹಣವನ್ನು ಕೂಡಲೇ ಕಳಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ,

—ಮ್ಯಾನೇಜರ್.

ಕಾಗದಕ್ಕೆ ಕ್ರಯವೇರಿದುದರ ಪರಿಣಾಮವಾಗಿ ಈ ವರ್ಷ ನಮ್ಮ ತಿಂಗಳ ಕಾಣಿಕೆಯನ್ನು ನಿಲ್ಲಿಸಲಾಗಿದೆ.

Advt. Tariff
1 Page [illegible]
½ „
¼ „
⅛ „
Per S[illegible] [illegible]tion
Contra[illegible] [illegible]tion
Manag[illegible]

ಮಂಗಳೂರು

ಸ್ವಂ. ಪ್ರಾ. ತಾ. 24-9-39

ರಾ ಜಾ ರಾ ಮ ಮೋ ಹ ನ ರಾಯಿಗಳ ಪುಣ್ಯತಿಥಿಯು— ತಾ. 27ನೇ ಬುಧವಾರ ಬ್ರಹ್ಮ ಮಂದಿರದಲ್ಲಿ ಆಚರಿಸಲ್ಪಡುವದು. ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಕೆ. ಎಸ್. ಯು. ನಾಯರ್ ಇವರು ಅಧ್ಯಕ್ಷತೆಯನ್ನು ವಹಿಸುವರು.

ಹೊಸ ಶಾಲಾಕಟ್ಟಡದ ಪ್ರವೇಶ— ಸ್ಥಳೀಯ ಮಾರ್ಕೆಟ್ ವಾರ್ಡ ಹುಡುಗರ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಕೌನ್ಸಿಲರ್ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮ್ಯುನಿಸಿಪಲ್ ಕೌನ್ಸಿಲರ್ ಶ್ರೀ. ಗುರುವನವರು ನೆರವೇರಿಸಿದರು.

ಫಲ ಬೆಳೆಸುವವರ ಸಂಘ—ಹಿಂದಿನ ಭಾನುವಾರ ಡಿ. ರಿಜಿಸ್ಟ್ರಾರರ ಕಚೇರಿಯಲ್ಲಿ, ಶ್ರೀ. ಯಂ. ಪಿ. ಶೆಣೈಯವರ ಅಧ್ಯಕ್ಷತೆಯಲ್ಲಿ ಫಲವಸ್ತುಗಳನ್ನು ಬೆಳೆಸುವವರ ಸಭೆಯು ಜರಗಿತು. ಹಣ್ಣು ಬೆಳೆಸುವವರ ಸಹಕಾರಿ ಸಂಘವೆಂಬ ಹೆಸರಿಂದ ಸಹಕಾರಿ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಅಧಿಕಾರಿಗಳ ಚುನಾವಣೆಯೂ ನಡೆಯಿತು.

ಅಪಾದಿತನ ಬಿಡುಗಡೆ—ಕಾರ್ಕಳ ತಾಲೂಕು ಮಿಯಾರು ಗ್ರಾಮದ ಲೋರೆಸ್ ನೋರನು ಕಳೆದ ಮಾರ್ಚ ತಿಂಗಳ ತಾ. 22ರಲ್ಲಿ ಅದೇ ಗ್ರಾಮದ ಪಾವ್ಲು ಎಂಬವನನ್ನು ಚೂರಿಯಿಂದ ತಿವಿದುದಾಗಿಯೂ, ಅದರ ಗಾಯದಿಂದ ಪಾವ್ಲು ಆಸ್ಪತ್ರೆಯಲ್ಲಿ ಮೃತಪಟ್ಟನೆಂದೂ ಲೋರೆಸನ ಮೇಲೆ ದಾವೆ ಹೂಡಲಾಗಿತ್ತು. ಸೆಶ್ಯನ್ಸ್ ಜಡ್ಜರು ಮೊಕದ್ದಮೆಯನ್ನು ವಿಚಾರಿಸಿ ತೀರ್ಪುಕೊಟ್ಟರು. ಲೋರೆಸನು ತನ್ನ ಆತ್ಮರಕ್ಷಣೆಗಾಗಿ ತಾನು ತಿವಿದುದೆಂದು ಸಾಧಿಸಿದನು. ಅಸೆಸರರು ಅಪಾದಿತನು ತಪ್ಪಿತಸ್ಥನಲ್ಲವೆಂದು ಅಭಿಪ್ರಾಯಪಟ್ಟರು. ಜಡ್ಜರು ಆಪಾದಿತನನ್ನು ಬಿಡುಗಡೆಮಾಡಲು ಹುಕುಮುಕೊಟ್ಟರು.

ಜಿಲ್ಲಾ ಬೋರ್ಡುಸಭೆ— ತಾರೀಕು 7-10-39ನೇ ಬೆಳಗ್ಗೆ 9-30ಕ್ಕೆ ಹಂಪ್ಪ ಬೋರ್ಡು ಶಾಲಾ ಕಟ್ಟಡದಲ್ಲಿ ಜರಗುವುದು.

ಹರಿಜನವಾರ—ತಾ. 24-9-39ರಿಂದ 2-10-39ರತನಕ ವಿವಿಧ ಕಾರ್ಯಕ್ರಮಗಳಿಂದ ಜಿಲ್ಲಾ ಹರಿಜನ ಸೇವಕ ಸಂಘದ ಕಡೆಯಿಂದ ಜರಗಿಸಲ್ಪಡುವದು. ಸಾರ್ವಜನಿಕ ಸಭೆ, ಆಟವಿನೋದ, ವಾಚನ, ಮೆರವಣಿಗೆ, ಹರಿಜನ ಸಂಘಕ್ಕೆ ಸದಸ್ಯರನ್ನು ಸೇರಿಸುವದು. ಹಣಸಂಗ್ರಹ ಮಾಡುವದು ಮೊದಲಾದ ವಿವಿಧ ಕಾರ್ಯಕ್ರಮಗಳಿವೆ.

ಅಳಿಯಸಂತಾನ ಸುಧಾರಣಾ ಕಮಿಟಿ ಸಭೆ—ಯು ತಾ. 17-9-39ರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿ, ತಾ. 24-9-39ರೊಳಗೆ ಪ್ರತಿನಿಧಿಗಳು ತಮ್ಮ ಪ್ರವೇಶಧನ ಕಳಿಸಬೇಕೆಂದೂ ತಾ. 27ರೊಳಗೆ ಶ್ರೀ. ಪಿ. ಯಂ. ಹೆಗ್ಡೆಯವರು ಹಣಕೊಟ್ಟವರ ಪಟ್ಟಿಯನ್ನು ತಯಾರಿಸಬೇಕೆಂದೂ ಹಣಕೊಡದೆ ಖಾಲಿಬಿದ್ದವರ ಸ್ಥಾನಕ್ಕೆ ಹೊಸ ಪ್ರತಿನಿಧಿಗಳನ್ನು ಆರಿಸಬೇಕೆಂದೂ, ಹೊಸ ಮೆಂಬರರು ತಾ. 16-10-39ರೊಳಗೆ ತಮ್ಮ ಪ್ರತಿನಿಧಿ ಧನವನ್ನು ಕೋಶಾಧಿಕಾರಿಗಳಿಗೆ ಕಳಿಸತಕ್ಕದ್ದೆಂದೂ ನಿರ್ಣಯಿಸಲಾಯಿತು. ಹೊಸ ಪ್ರತಿನಿಧಿಗಳನ್ನು ಆರಿಸಲು ಶ್ರೀಗಳಾದ ಬಿ. ಶಿವರಾಮ ಶೆಟ್ಟಿ, (ಕುಂದಾಪುರ) ಶೀನಪ್ಪ ಹೆಗ್ಡೆ (ಉಡ್ಪಿ) ಕೆ. ಮಹಾಬಲ ಹೆಗ್ಡೆ (ಕಾರ್ಕಳ) ಟಿ. ಎಸ್. ಭಂಡಾರಿ ಮತ್ತು N. S. ಶೆಟ್ಟಿ, (ಮಂಗಳೂರು) U. ಲಕ್ಷ್ಮೀನಾರಾಯಣ ರೈ (ಪುತ್ತೂರು) ಕೆ. ಸುಂದರರಾಮ ಶೆಟ್ಟಿ (ಕಾಸರಗೋಡು) ಇವರನ್ನು ಕೇಳಿಕೊಳ್ಳಬೇಕೆಂದಾಯಿತು. ಅಳಿಯಸಂತಾನ ಮಸೂದೆಯನ್ನು ತಯಾರಿಸಿದ ಕಮಿಟಿ ಮೆಂಬರರು ಪ್ರತಿನಿಧಿಗಳಾಗದ ವಿನಃ ಅವರಿಗೆ ಪರಿಷತ್ತಿನಲ್ಲಿ ಮತಾಧಿಕಾರವಿಲ್ಲವೆಂದೂ ಜಿಲ್ಲಾ ಪರಿಷತ್ತನ್ನು ತಾ. 5-11-39ನೇ ಆದಿತ್ಯವಾರ ಪೂರ್ವಾಹ್ನ 11ಗಂಟೆಗೆ ರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಜರಗಿಸಬೇಕೆಂದೂ ನಿರ್ಣಯಿಸಲಾಯಿತು.

ಉಡುಪಿ

ಆತ್ಮಹತ್ಯೆ—ಕಳೆದ ವಾರದಲ್ಲಿ ಎರ್ಮಾಳಿನಿಂದ ಮೊಗವೀರ ಹೆಂಗಸೊಬ್ಬಳ ಶವವನ್ನು ಆಸ್ಪತ್ರೆಗೆ ತರಲಾಗಿತ್ತು. ಅವಳು ಸಹಿಸಲಸಾಧ್ಯವಾದ ಹೊಟ್ಟೆನೋವಿನಿಂದ ಕುತ್ತಿಗೆಗೆ ಹಗ್ಗ ತೆಕ್ಕೊಂಡು ಆತ್ಮಹತ್ಯೆಮಾಡಿಕೊಂಡಳೆಂದು ತಿಳಿದು ಬರುತ್ತದೆ.

ಮೊಕಾಮ್— ಜಿಲ್ಲಾ ಪೋಲಿಸ್ ಸುಪರಿಂಟೆಂಡರೂ ಜಿಲ್ಲಾ ಕಲೆಕ್ಟರರೂ ತಾ. 20-9-39 ರಿಂದ ಇಲ್ಲಿ 3 ದಿನ ಮೊಕಾಮ್ ಮಾಡಿದ್ದರು. ತಾ. 20ರಲ್ಲಿ ಕಲೆಕ್ಟರರು ಪತ್ರಿಕಾವ್ಯವಸಾಯಿಗಳನ್ನು ಕರೆಸಿ ಹಲವು ಸೂಚನೆಗಳನ್ನಿತ್ತರು.

ಹರಿಜನವಾರ—24—8—1939ರಿಂದ ತಾಲೂಕು ಹರಿಜನ ಸೇವಾಸಂಘದ ಕಡೆಯಿಂದ ಆಚರಿಸಲ್ಪಡುತ್ತದೆ. ಪ್ರಾರಂಭದ ದಿನ ಮೆರವಣಿಗೆ, ಹರಿಜನ ಕೇರಿಗಳ ಸಂದರ್ಶನೆ ಮಾಡಲಾಯಿತು. ತಾ. 25ರಿಂದ ಬ್ರಹ್ಮಾವರ ಬಾರ್ಕೂರು ಕಡೆಗಳಲ್ಲಿ ಮೆರವಣಿಗೆ ಸಭೆಗಳಾಗುವವು. ತಾ. 2-10-39ಕ್ಕೆ ಪುನಃ ಉಡ್ಪಿಯಲ್ಲಿ ಸಭೆ ಭಾಷಣಗಳಿರುವವು. ಎಲ್ಲರೂ ಬಂದು ಸಹಕರಿಸಬೇಕೆಂದು ಶ್ರೀ. ಬಿ. ಅಂತಯ್ಯ ಶೆಟ್ಟಿ, ಕಾರ್ಯದರ್ಶಿ, ಹರಿಜನ ಸೇವಾ ಸಂಘ ಇವರು ಅಪೇಕ್ಷಿಸುತ್ತಾರೆ.

ಟ್ರೋಪಿಕಲ್ ಇನ್ಶೂರೆನ್ಸ್ ಕಂಪೆನಿ— ಇದರ ಸ್ಥಳೀಯ ಒರ್ಗನೈಜರ್ ಶ್ರೀ. ಜಗನ್ನಾಥ ಶೆಟ್ಟರು ಜೂನಿಯರ್ ಇನ್ಸ್‌ಪೆಕ್ಟರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಸ್ಥಳೀಯ ಒರ್ಗನೈಜರಾಗಿ ಶ್ರೀ. ಎಚ್. ಮಂಧರಾಧರ ಬಲ್ಲಾಳರು ನೇಮಕಹೊಂದಿರುವರು. ಶ್ರೀ. ಇವರ್ನಾಡಿ ಸದಿಯಣ್ಣ ಶೆಟ್ಟರು ಕಂಪೆನಿಯ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಉಡುಪಿ ಕೋಓಪರೇಟಿವ್ ಟೌನ್ ಬ್ಯಾಂಕ್—ಇದರ ವರ್ಷಾವಧಿ ಮಹಾಸಭೆಯು ತಾ. 1-10-39ನೇ ಆದಿತ್ಯವಾರ 8-30ಕ್ಕೆ ಜರಗಲಿರುವದು.

ಕಾರ್ಕಳ—ಶ್ರೀ. ಬಿ. ಬಾಲಕೃಷ್ಣ ಶೆಟ್ಟಿ, ಬಿ. ಎ. ಎಲ್. ಎಲ್. ಬಿ. ಯವರು ಇಲ್ಲಿ ಇತ್ತೀಚೆಗೆ ವಕೀಲಿಕೆಗೆ ಆರಂಭಿಸಿರುತ್ತಾರೆ. ಇವರು ಉತ್ಸಾಹಿ ಮತ್ತು ಸರಳಸ್ವಭಾವದ ತರುಣರಿದ್ದು ಉತ್ತಮ ಭವಿಷ್ಯವುಳ್ಳವರಿದ್ದಾರೆಂತ ಬಾತ್ಮಿ.

ಪಳ್ಳಿ— ಇಲ್ಲಿಯ ಬೋರ್ಡುಶಾಲೆಯಲ್ಲಿ ತಾ. 20-9-39ರಲ್ಲು ಗ್ರಾಮಸ್ಥರ ಒಂದು ಸಭೆಯು ಪಳ್ಳಿ ಪಟೇಲ ಶ್ರೀ. ಮಂಜಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಊರವರು ಲ್ಯಾನೇಕರು ಶಾಲೆಗೆ ಸಹಾಯವಾಗಿದ್ದನಿತ್ತರು.

ಮೂಲ್ಕಿ—ತಾ. 9-9-39ರಿಂದ 15-9-39ರ ವರೆಗೆ ಪಂಚಾಯಿತಬೋರ್ಡಿನ ಕಡೆಯಿಂದ ಗ್ರಾಮಾಭಿವೃದ್ಧಿ ವಾರವು ಅತಿ ಜಯಶೀಲವಾಗಿ ಆಚರಿಸಲ್ಪಟ್ಟಿತು. ಈ ವಾರವು ಜಿಲ್ಲಾ ಜಡ್ಜರಿಂದ ತೆರೆಯಲ್ಪಟ್ಟಿತು. ಭಾಷಣ, ಪ್ರದರ್ಶನಾದಿಗಳೂ ಇದ್ದವು. ಈ ವಾರದ ಆಚರಣೆಗೆ ಕಾರಣರಾದ ಶ್ರೀ. ಎಂ. ಆರ್. ಪೂಂಜ ಮತ್ತು ಶ್ರೀ. ಬೋಳ ವಾಸುದೇವರಾಯರು ಅಭಿನಂದನೀಯರು.

ನೋಟೀಸು.

ಕುಂದಾಪುರ
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
1928 ಸಂವತ್ಸರದ ವ್ಯಾಜ್ಯದ ನಂಬರು
O. S. 342. R. E. P. 251/1939
ನರಸಪ್ಪ ಹೊಳ್ಳ ..... ವಾದಿ
ವಿಶ್ವೇಶ್ವರ ಹೊಳ್ಳ, ಕೂಡಾ **ಪ್ರತಿವಾದಿರು**

4ನೇ ಜಡ್ಜಮೆಂಟ ಡೇಟರಾದ ಮುಡಹಡು ಸುಬ್ಬಣ್ಣ ಹೊಳ್ಳರ ಮಗ ನರಸಿಂಹ ಹೊಳ್ಳರಿಗೆ—

ವಾದಿಯು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1939ನೇ ಇಸವಿ ಅಕಟೋಬ್ರ ತಿಂಗಳ 6ನೇ ತಾರೀಕು ನಿಶ್ಚಯಿಸಲ್ಪಟ್ಟಿಯದೆಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

(*Sd.*) **A. V. N. Hebbar,**
Pleader for Dft.
Kundapur, 15-9-1939.

ಬೊಂಬಾಯಿ
ಬಂಟರ ಯಾನೆ ನಾಡವರ ಸಂಘ

ಈ ಸಂಘದ ಸಾರ್ವಜನಿಕ ಸಭೆಯು ತಾರೀಕು 8-10-39ನೇ ಆದಿತ್ಯವಾರ ಕೋಟೆಯೊಳಗಣ ಬೋರಾಬಜಾರ್ ಸ್ಟ್ರೀಟನಲ್ಲಿರುವ ಮಂಗ್ಳೂರ್ ಮೆನ್ಶನ್‌ನಲ್ಲಿ ಅಪರಾಹ್ನ ಘಂಟೆ 3ಕ್ಕೆ (S. T.) ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ದಯವಿಟ್ಟು ಸಭೆಗೆ ಬಿತ್ತೈಸಿ ಅದರ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾಗಿ ಸಂಘದ ಸೆಕ್ರೆಟರಿಗಳವರು ವಿನಂತಿಸುತ್ತಾರೆ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ. ಆರ್. ಕೆ. ಶೇಟ್ ಬಿಲ್ಡಿಂಗ್,
ಮಿಶ್ಯನ್‌ಹೈಸ್ಕೂಲ್ ರೋಡು.

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

3600 ರೂಪಾಯಿಗಳು.

ಸಂಪೂರ್ಣ ಸರಿಯಾದ 18 ಇನಾಮುಗಳೊಳಗೆ ಹಂಚಲ್ಪಡುವದು.

ನಮ್ಮ ಸಾಂಕೇತಿಕ ಉತ್ತರದ ಯಾವುದಾದೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ರನ್ನರ್ಸ್ ಅಪ್ಸ್' ಇವರಿಗೆ ರೂ. 20ರ 50 ಇನಾಮುಗಳನ್ನು ಸಮಾಧಾನಾರ್ಥವಾಗಿ ಕೊಡಲಾಗುವದು. ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರದ ಮೊದಲಿನ ಎರಡು ಸಮಾನಾಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ. 50ರ ಗ್ಯಾರಂಟಿ ಇರುವುದು. ಅತಿ ಹೆಚ್ಚಿನ ಉತ್ತರ ಕಳುಹಿಸುವವನಿಗೆ ರೂ. 200 ರಿಸರ್ವ ಮಾಡಲಾಗಿದೆ.

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 6ರಿಂದ 21ರ ವರೆಗಣ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ಮೊತ್ತ 54 ಆಗತಕ್ಕದ್ದು. ಪ್ರತಿಯೊಂದು ಅಂಕೆಯೂ ಒಮ್ಮೆಯೇ ಉಪಯೋಗಿಸಲ್ಪಡಬೇಕು. ಉತ್ತರ ಕಳುಹಿಸುವ ಕೊನೆಯ ತಾ. 10-10-39, ಫಲಿತಾಂಶ ಪ್ರಕಟಣಾ ತಾರೀಕು 18-10-39.

ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ. 1 ಅಥವಾ 3ಕ್ಕೆ ರೂ. 2 ಅಥವಾ 8ರ ಪ್ರತಿಯೊಂದು ಸೆಟ್ಟಿಗೆ ರೂ. 5.

ಕ್ರಮಗಳು:— ಖಾಲಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಆಗತ್ಯವುಳ್ಳ ಪ್ರವೇಶ ಹಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು. ಪ್ರವೇಶಹಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು. ಪ್ರವೇಶಹಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು. ಆದರೆ ಬೊಂಬಾಯಿಯ ಪ್ರಸಿದ್ಧವಾದ ಬೇಂಕೊಂದರಲ್ಲಿ ಡಿಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ. 2000ದಷ್ಟರ ಇನಾಮಿನ ಗ್ಯಾರಂಟಿ ಇದೆ. ಫಲಿತಾಂಶವನ್ನು ಪಡೆಯುವುದಕ್ಕಾಗಿ ವಿಳಾಸ ಸಮೇತವಾದ ಕವರೊಂದನ್ನು ಸ್ಟೇಂಪು ಸಹಿತ ಲಗ್ತೀಕರಿಸತಕ್ಕದ್ದು. ಮೆನೇಜರರ ನಿರ್ಣಯವೇ ಕೊನೆಯದೂ ಸಿಂಧುವಾದುದೂ ಆಗಿರುವದು.

ಮೊತ್ತ 50ರ ಹಿಂದಿನ ಸಮಸ್ಯೆಯ ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ.

1ನೇ ಸಾಲು	5,	16,	10,	19
2ನೇ ಸಾಲು	11,	18,	8,	13
3ನೇ ಸಾಲು	20,	9,	15,	6
4ನೇ ಸಾಲು	14,	7,	17,	12

ನಿಮ್ಮ ಉತ್ತರ ಮತ್ತು ಪ್ರವೇಶ ಹಾಸಲನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ,
ದಿ ಮೆನೇಜರ್,
ಪ್ರೆಸಿಡೆನ್ಸಿ, ಕಮರ್ಶಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ 2.

The Manager,
Presidency, Commercial Syndicate,
Mumbadevi, BOMBAY 2.

ಶ್ರೀ ರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್:—**ಹೂಮಾರ್ಕೆಟಿನ ಬಳಿ, ಮಂಗಳೂರು.**

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

(೭ನೇ ಪುಟದಿಂದ)

ಜೆಕೋಸ್ಲೋವೇಕಿಯದಲ್ಲಿ ತೀವ್ರ ಅತೃಪ್ತಿ

ಹಿಂದಿನ ಜೆಕೋಸ್ಲೋವೇಕಿಯ ಕ್ಕೆ ಸೇರಿ ಬೊಹೀಮಿಯ, ಮೊರಾವಿಯ ಮತ್ತು ಸ್ಲೋವಾಕಿಯದ ಜನರಲ್ಲಿ ತೀವ್ರ ಅತೃಪ್ತಿ ಯುಂಟಾಗಿ ಜನರು ಜರ್ಮನಿಯ ಎದುರು ಪ್ರತಿಭಟಿಸುತ್ತಿದ್ದುದರಿಂದ ಅಲ್ಲಿ ಭೀಕರ ದಬ್ಬಾಳಿಕೆ ನಡೆದಿದೆ. ಜನರು ಸಾಮುದಾಯಿಕವಾಗಿ ದಸ್ತಗಿರಿ ಮಾಡಲ್ಪಡುತ್ತಿದ್ದಾರೆ. ಪ್ರಖ್ಯಾತ ಸ್ಕೋಡಾ ಕಾರ್ಖಾನೆಯ ಕೆಲಸಗಾರರು ದಂಗೆ ಎಬ್ಬಿಸಿದುದರಿಂದ ಜರ್ಮನಿಯ ಗೆಸ್ಟಾಪೋ ಪೋಲೀಸರು ಸಾವಿರಾರು ಮಂದಿಯನ್ನು ದಸ್ತಗಿರಿ ಮಾಡಿರುವರೆಂದು ತಿಳಿದುಬರುತ್ತದೆ. ಪ್ರೇಗ್ ಬೇಂಕಿನ ನೆಲ ಮಾಳಿಗೆಗಳಲ್ಲಿ ಗುಪ್ತವಾಗಿ ನೂರಾರು ಜನ ತಲೆಗಡಿಯಲ್ಪಡುತ್ತಿದ್ದಾರೆ. ಜರ್ಮನಿಯ ಪ್ರಚಾರಕ ಮಂತ್ರಿಗಳಾಗಿದ್ದು ಹಿಟ್ಲರ ಕಹಳೆಯೆಂದು ಪ್ರಖ್ಯಾತರಾದ ಡಾಕ್ಟರ ಗೊಬ್ಬೆಲ್ಸರ ಸುದ್ದಿಯೇ ಇಲ್ಲ ಇತ್ತಲಾ ಅವರಿಗೂ ಮಾರ್ಶಲ್ ಗೋರಿಂಗರಿಗೂ ತೀವ್ರ ಮತ್ಸರವಿದ್ದಿತು ಗೋರಿಂಗ ಜನರು ಅವರನ್ನೀಗ ದಸ್ತಗಿರಿ ಮಾಡಿ ಬಂಧದಲ್ಲಿರಿಸಿರುವರೆಂದು ಸುದ್ದಿ. ಪ್ರಸಿದ್ಧ ಯಹೂದ್ಯ ದ್ವೇಷಿಯಾದ ಜೂಲಿಯಸ್ ಸ್ಟ್ರೈಚರ್ ಎಂಬವರು ಸೇನಾನಾಯಕರೊಬ್ಬರೊಡನೆ ಕಲಹಮಾಡಿದ ನಿಮಿತ್ತ ದಸ್ತಗಿರಿ ಮಾಡಲ್ಪಟ್ಟಿರುವರು ಹಿಟ್ಲರರ ಮಧ್ಯಸ್ಥಿಕೆಯಿಂದ ಇವರ ತಲೆ ಉಳಿಯಿತಂತೆ. ಯುದ್ಧ ವಿರೋಧಕವಾದ ಕೆಲಸಗಳಿಗಾಗಿ ೨೦೦ಕ್ಕಿಂತಲೂ ಮಿಕ್ಕಿದ ನಾಝಿ ಪಕ್ಷೀಯರು ಮತ್ತು ೬೦ಮಂದಿ ಉಪ ನಾಯಕರ ತಲೆ ತೆತ್ತಿರುವರೆಂದು ಸುದ್ದಿ. ಆಸ್ಟ್ರಿಯದ ನಾಗರಿಕರಲ್ಲಿಯೂ ಅತೃಪ್ತಿಯೆದ್ದಿದೆ ಜರ್ಮನಿಯ ಕೈಕೆಲಸಗಾರರು ದಿನಕ್ಕೆ ೧೬ಗಂಟೆ ದುಡಿಯಬೇಕಾಗಿದೆ ಆಹಾರದ ವಿಷಯದಲ್ಲಿ ಕಠಿಣ ನಿರ್ಬಂಧ ಹಾಕಲಾಗಿದೆ. ಈ ನಿರ್ಬಂಧಕ್ಕೆ ವಿರೋಧವಾಗಿ ನಡೆದವರು ದಸ್ತಗಿರಿ ಮಾಡಲ್ಪಡುತ್ತಿದ್ದಾರೆ. ಹಲವು ಕಡೆಗಳಲ್ಲಿ ಗಲಾಟೆಯಾಗಿದೆ. ಜನರು ತಮಗೆ ಸಿಕ್ಕಿದ ಉಪಕರಣಗಳನ್ನು ಹಿಡಿದು ಜರ್ಮನರೆದುರಾಗಿ ಹೋರಾಡುತ್ತಿದ್ದಾರೆ

ಪೋಲೆಂಡಿನ ಯುದ್ಧ ಮುಗಿಯಿತು

ಪೋಲೆಂಡಿನ ಯುದ್ಧ ಮುಗಿದಂತಾಯಿತೆಂದು ಇದೇ ತಾ. ೨೦ರಲ್ಲು ಜರ್ಮನ ಸೇನಾನಾಯಕರು ಪ್ರಕಟಿಗೊಳಿಸಿರುವರೆ. ಆದರೆ ವಾರ್ಸೋ ಪಟ್ಟಣದ ಸಮೀಪದಲ್ಲಿ ಅತಿ ದೊಡ್ಡ ಸಮರ ನಡೆಯುತ್ತಿದೆ ವಾರ್ಸೋ ಪಟ್ಟಣವು ಇನ್ನೂ ಜರ್ಮನರ ವಶವಾಗಿರುವುದಿಲ್ಲ ಹಿಂದಿನಿಂದ ಸೋವಿಯೆಟ್ ಸೇನೆಯು ಮುಂದೊತ್ತಿಬಂದುದರಿಂದ ಪೋಲಿಶ್ ಸೈನಿಕರು ಧೈರ್ಯಗೆಟ್ಟು ಹಲವು ಕಡೆ ಹೋರಾಟ ನಿಷ್ಫಲವಾಗಿ ಬಂದು ಅವರಲ್ಲೆಲ್ಲಾ ತೀವ್ರ ಸಂತಾಪವುಂಟಾಗಿದೆ ಪೋಲಿಶ್ ಯೋಧರ ವೀರತ್ವದ ಕುರಿತು ಎಲ್ಲರೂ ಮೆಚ್ಚಿಗೆ ಸೂಚಿಸುತ್ತಾರೆ. ಪೋಲೆಂಡನ್ನು ಜರ್ಮನಿ ಮತ್ತು ರಷ್ಯಗಳು ಯಾವ ರೀತಿಯಲ್ಲಿ ವಿಭಾಗಿಸಿಕೊಳ್ಳುವುದೆಂಬುದೀಗ ಹೆಚ್ಚಿನ ಮಟ್ಟಿಗೆ ನಿಶ್ಚಯವಾಗಿದೆ ವಾರ್ಸೋದಿಂದ ಪೂರ್ವಕ್ಕೆ ಆರೆವಾಸಿ ಪೋಲೆಂಡಿನ ಭಾಗವನ್ನು ರಷ್ಯವು ಆಕ್ರಮಿಸಿಕೊಂಡಿದೆ. ಪಶ್ಚಿಮಾರ್ಧವು ಜರ್ಮನಿಗೆ ಸೇರಿಸಲ್ಪಡುತ್ತದೆ.

110 ದಳ ಸೋವಿಯೆಟ್ ಸೇನೆಯು ಪೋಲೆಂಡಿನ ಮೇಲೇರಿ ಹೋಗಿದ್ದಿತು. ಸೋವಿಯೆಟ್ ಸೇನಾಧ್ಯಕ್ಷ ಮಾರ್ಶಲ್ ವರೊಶಿಲವರೇ ಅದರ ನಾಯಕರಾಗಿದ್ದರು ಸೇನೆಯು ಉಕ್ರೇನಿಯರಲ್ಲಿ ಒಕ್ಕಲಿಗರಿಂದ ಕೂಡಿದ ಸೋವಿಯೆಟ್ ಯೂನಿಯನುಗಳನ್ನು ಸ್ಥಾಪಿಸಿದೆ. ಸ್ಟೇಲಿನರ ಲಕ್ಷಾಂತರ ಭಾವಚಿತ್ರಗಳು ಹಂಚಲ್ಪಡುತ್ತಿವೆ ಅಲ್ಲಲ್ಲಿ ಜಿಲ್ಲಾ ಸೋವಿಯೆಟ್ ಸಂಘಗಳು ಸ್ಥಾಪಿಸಲ್ಪಟ್ಟಿವೆ 17ರಿಂದ 20 ರ ವರೆಗೆ ಸೋವಿಯೆಟ್ ಸೇನೆಯು 3 ದಳ ಪೋಲಿಶ್ ಕಾಲಾಳು ಎರಡು ಅಶ್ವಾರೋಹಿ ದಳ ಮತ್ತು ಇತರ ಚಿಕ್ಕ ಚಿಕ್ಕ ದಳಗಳನ್ನು ನಿರಾಯುಧವನ್ನಾಗಿ ಮಾಡಿರುವುದು. 30,000 ಮಂದಿ ಸೆರೆಯಾಗಿರುವರು 280 ತೋಪು ಮತ್ತು 120 ವಿಮಾನಗಳು ಹಿಡಿಯಲ್ಪಟ್ಟಿರುವವು ಜರ್ಮನ್ ಸೇನಾನಾಯಕರಾದ ವಾನ್ ಬ್ರೊಕಿಚರು ಇದೇ ತಾ 20ರಲ್ಲು ಪಶ್ಚಿಮ ರಣರಂಗವನ್ನು ಸಂದರ್ಶಿಸಿರುವರು.

ವಾರ್ಸೋದ ಪಶ್ಚಿಮಭಾಗದಲ್ಲಿ ಪೋಲಿಶ್ ಅಶ್ವಾರೋಹಿ ಸೇನೆಯು ವೀರಾವೇಶದಿಂದ ಕಾದಾಡಿ ಜರ್ಮನರನ್ನು ಹಿಂದಕ್ಕಟ್ಟಿರುವುದು. ವಾರ್ಸೋ ಪಟ್ಟಣದ ಮೇಲೆ ಜರ್ಮನರು ನಡಿಸಿದ ಭಯಂಕರ ವಿಮಾನಧಾಳಿಯಿಂದ ಅಸಂಖ್ಯಾಕ ಮಂದಿ ಕೊಲ್ಲಲ್ಪಟ್ಟಿರುತ್ತಾರೆ ಮಾರ್ಶಲ್ ಸ್ಮಿಗ್ಲಿಯವರು ಇನ್ನೂ ಪೋಲೆಂಡಿನಲ್ಲೇ ಇದ್ದಾರೆ ಲೊವ್ರೀವಿನ ಗವರ್ನರರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. 20,000 ಯೆಹೂದ್ಯರು ಪೋಲೆಂಡಿನಿಂದ ರುಮೇನಿಯಕ್ಕೆ ಹೋಗಿರುತ್ತಾರೆ

ಪಶ್ಚಿಮ ರಣರಂಗದಲ್ಲಿ ಜರ್ಮನರೇನು ಮಾಡುವರು?

ಜರ್ಮನರು ಆದಷ್ಟು ಬೇಗನೆ ಪೋಲೆಂಡಿನ ಯುದ್ಧವ ಮುಗಿಸಿ, ಪೋಲೆಂಡಿನ ಹೆಚ್ಚಿನ ಭಾಗವನ್ನು ರಷ್ಯಕ್ಕೆ ಬಿಟ್ಟುಕೊಡಲು ಕಾರಣವೆಂದರೆ, ಪಶ್ಚಿಮದಲ್ಲಿನ ಶತ್ರು ರಾಷ್ಟ್ರಗಳ ಸೇನೆಯ ಧಾಳಿ. ಅದನ್ನು ಭರದಿಂದ ಅವರು ತಡೆಗಟ್ಟದಿದ್ದಲ್ಲಿ ಸರ್ವನಾಶವಾಗುವುದು ಆದುದರಿಂದ ಅವರೀಗ ಪೋಲೆಂಡಿನ ಹೆಚ್ಚಿನ ಸೇನೆ ಮತ್ತು ಯುದ್ಧ ವಿಮಾನಗಳನ್ನು ಪಶ್ಚಿಮರಣರಂಗಕ್ಕೆ ತರುತ್ತಿದ್ದಾರೆ. ಸಾರ್ ಪ್ರದೇಶದ ಗುಡ್ಡದ ತುದಿಯಿಂದ ಫ್ರೆಂಚ್ ಸೇನೆಯನ್ನು ಹಿಂದಕ್ಕಟ್ಟಲು ಜರ್ಮನ್ ಸೇನೆಯು ಪ್ರಬಲ ಯತ್ನನಡಿಸುತ್ತಿದೆ, ಯಾಕಂದರೆ ಇಲ್ಲಿರಿಸಲ್ಪಟ್ಟಿರುವ ಫ್ರೆಂಚ್ ತುಪಾಕಿಗಳು ಸಿಗ್‌ಫ್ರಿಡ್ ಕೋಟೆ ಮತ್ತು ಪ್ರಾಮುಖ್ಯ ಕೈಗಾರಿಕ ಪ್ರದೇಶಗಳ ಮೇಲೆ ಗುಂಡು ಹಾಂಸಿ ಹಾವಳಿಮಾಡಬಲ್ಲವು ಡಚ್ ಎಲ್ಲೆಯಲ್ಲಿ ಕಾಡುಗಳ ಮರೆಯಲ್ಲಿ ಸಾವಿರಾರು ಮಂದಿ ಜರ್ಮನ್ ಸೈನಿಕರು ಸಂಗ್ರಹವಾಗುತ್ತಿದ್ದಾರೆಂದು ಸುದ್ದಿಗಳು ಹಬ್ಬಿವೆ ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಸೇನೆಯನ್ನು ವಿರೋಧಿಸಿ ದೀರ್ಘಕಾಲ ಯುದ್ಧ ಮಾಡಲಾಗದೆ ಜರ್ಮನರು ಹೊಲ್ಲಂಡಿನ ಮೇಲೇರಿ ಹೋಗಿ ಆ ಮೂಲಕ ಫ್ರಾನ್ಸಿನ ಮೇಲೆ ಧಾಳಿ ಇಡುವರೋ ಎಂಬ ಸಂದೇಹವುಂಟಾಗಿದೆ ಹೊಲ್ಲೆಂಡು ತನ್ನ ಎಲ್ಲೆಯನ್ನು ಭರದಿಂದ ಭದ್ರಗೊಳಿಸುತ್ತಿದೆ.

ರಾಜಿ ಪ್ರಸ್ತಾಪದ ಆಲೋಚನೆಯೇ ಈಗ ಸಾಧ್ಯವಿಲ್ಲ ನಿಜಯವಾಗುವ ವರೆಗೆ ಯುದ್ಧ ಮಾಡಿಯೇ ಸಿದ್ಧವೆಂದು ಫ್ರೆಂಚ್ ಸರಕಾರವು ನಿರ್ಧರಿಸಿದೆ ಹಿಟ್ಲರರು ಡಾನ್ಸಿಂಗಿನಲ್ಲಿ ಮಾಡಿದ ಭಾಷಣದಿಂದ ಇಟಲಿಯಲ್ಲಿ ಅತೃಪ್ತಿಯುಂಟಾಗಿದೆ, ಯುದ್ಧವು ಬೇಗನೆ ಕೊನೆಗೊಳ್ಳುವ ಹಾಗಿಲ್ಲೆಂದು ಇಟೆಲಿಯಾನರು ನಿರಾಶೆಗೊಂಡಿರುತ್ತಾರೆ.

ಇದೇ ತಾ, 21ರಲ್ಲು 1 ಕಡೆಗಳಲ್ಲಿ ಪೋಲರು ಕಾದಾಡುತ್ತಿದ್ದಾರೆಂದು ಜರ್ಮನರೇ ಒಪ್ಪುತ್ತಾರೆ ವಿಸ್ಟೂಲ ನದಿಯ ಪ್ರದೇಶದಲ್ಲಿ ನಡೆದ ಭೀಕರ ಕದನದಲ್ಲಿ 170,000 ಮಂದಿ ಪೋಲರು ಸೆರೆಯಾಗಿರುವರೆಂದೂ 320 ತೋಪು ಮತ್ತು 40 ಸಶಸ್ತ್ರಕಾರುಗಳು ತಮ್ಮ ವಶವಾಗಿವೆಯೆಂದೂ ಜರ್ಮನರ ವಾರ್ತೆ

ನಾಝಿ ಮುಂದಾಳುಗಳ ಮುಂಜಾಗ್ರತೆ.

ನಾಝಿ ಮುಂದಾಳುಗಳು ತಟಸ್ಥರಾಷ್ಟ್ರಗಳಲ್ಲಿ ಹೇರಳ ಹಣವನ್ನು ವಿನಿಯೋಗಿಸಿ ಮುಂಜಾಗ್ರತೆ ತೆಗೆದುಕೊಂಡಿರುವಂತಿದೆ. ಹರ್ ವಾನ್ ರಿಬೆಂಟ್ರಾಪ್, ಡಾಕ್ಟರ್ ಗೊಬ್ಬೆಲ್ಸ್, ಮಾರ್ಶಲ್ ಗೋರಿಂಗ್, ಹರ್ ಹಿಮ್ಲರ್, ಡಾಕ್ಟರ್ ಲೇ, ಹರ್ ಹೆಸ್, ಮತ್ತು ಹರ್ ಸ್ಟ್ರೈಚರರು ಒಟ್ಟು 7 ಮಿಲ್ಯ ಪವನುಗಳನ್ನು ಬೇರೆ ಬೇರೆ ತಟಸ್ಥ ರಾಷ್ಟ್ರಗಳಲ್ಲಿ ನಗ್ದಿಯಾಗಿಯೂ, ಭದ್ರತೆ ಮತ್ತು ವಿಮೆಗಳಲ್ಲಿಯೂ ವಿನಿಯೋಗಿಸಿರುವರೆಂದು ಅಮೇರಿಕದಲ್ಲಿ ಪ್ರಕಟವಾಗಿದೆ. ಹರ್ ಹಿಟ್ಲರರು ಮಾತ್ರ ಈ ರೀತಿ ವಿನಿಯೋಗಿಸಿರುವುದಿಲ್ಲ ಈ ವರ್ತಮಾನದಿಂದ ರೇಗಿದ ನಾಝಿಗಳು ಡಾಕ್ಟರ್ ಬೆನೆಸರು ಜೆಕೋಸ್ಲೋವೇಕಿಯದಿಂದ ಮಿಲ್ಯಗಟ್ಲೆ ಹಣವನ್ನು ತಂದಿದ್ದರೆಂದು ಆರೋಪವಮಾಡಿದ್ದಾರೆ.

ನಿಮ್ಮ ಜಾಹೀರಾತುಗಳನ್ನು
"ನವಯುಗ"ದಲ್ಲೇ
ಕೊಟ್ಟು ಪ್ರೋತ್ಸಾಹಿಸಿರಿ!

ಆಯುರ್ವೇದ ಕೀರ್ತಿವಂತರ ರತ್ನ
55 ವರ್ಷಗಳಿಂದ ಪ್ರಸಿದ್ಧವಾದ
ಶಕ್ತಿಸುಧಾಕರ
ಗೋಳಿಯ
(ರಿಜಿಸ್ಟರ್ಡ್)
ಪುರುಷರು ಕಳೆದುಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತ ಶುದ್ಧ ಮತ್ತು ಧಾತು ವೃದ್ಧಿ ಹೊಂದುತ್ತದೆ. ಸ್ವಪ್ನದಲ್ಲಿ, ವಿಕಾರಿ ಸ್ತ್ರೀಸಂಗ, ಕೆಟ್ಟ ಉಪಯೋಗ ಅಥವಾ ಮೂತ್ರದಲ್ಲಿ ಹೋಗುವ ಧಾತು (ಶಕ್ತಿ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ, ಅಲ್ಪವೆಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ. ಕ್ಷಯರೋಗವನ್ನು ಮತ್ತು ನಪುಂಸಕತನ ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ. ಎದೆನೋವು ಎಂತಹ ಇದರ ಉಪಯೋಗದಿಂದ ಮಾಯವಾಗುತ್ತದೆನ್ನಲು ಸಂಶಯವಿಲ್ಲ ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣಾಂಶವು ತಿಳಿದುಬರುವುದು. 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ. 1ಮಾತ್ರ
ಆಫೀಸು ಸಮಯ-ಬೆಳಗ್ಗೆ 8ರಿಂದ 12ಗಂಟೆ ಮಧ್ಯಾಹ್ನ 2ರಿಂದ 8
Vaidya Shasthry Kalyanji Takar
365, Kalabadevi Road
Hanuman Lane Corner BOMBAY 2
ವೈದ್ಯಶಾಸ್ತ್ರಿ ಕಲ್ಯಾಣ್ಜಿ ಹರಿಕೃಷ್ಣ ಟಾಕರ್
565, ಕಾಲಬಾದೇವಿ ರೋಡ್,
ಹನುಮಾನ್‌ಗಲ್ಲಿಯ ನಾಕೆ, ಬೊಂಬಾಯಿ ನಂ 2

ಆಗಬಾರದಿತ್ತು; ಆದರೆ ಆಗಿಹೋಯಿತು

ಒಂದು ನಾಮಾಂಕಿತ ಕುಟುಂಬದ ಆಧಾರ ಸ್ತಂಭದಂತಿದ್ದ ಒಬ್ಬನೇ ಒಬ್ಬ ತರುಣನು ಅಕಸ್ಮಾತ್ತಾಗಿ ಮರಣಕ್ಕೆ ತುತ್ತಾದನು ತನ್ನ ಹೆಸರಲ್ಲಿ ಹಣದ ಯಾವ ವ್ಯವಸ್ಥೆಯನ್ನೂ ಮಾಡದಿದ್ದ ಕಾರಣ ಅವನ ಹೆಂಡತಿ ಮಕ್ಕಳು ಬಹಳ ಕಷ್ಟಕ್ಕೆ ಗುರಿಯಾದರು. ಹಾಗೂ ಕುಟುಂಬದ ತುಚ್ಛೀಕಾರಕ್ಕೆ ಒಳಗಾದರು.

ಅಂತಹ ಅನಿಷ್ಟ ಪ್ರಸಂಗವು ಕುಟುಂಬದವರ ಮೇಲೆ ಬರಬಾರದು. ಇದಕ್ಕೆ ಒಂದೇ ಉಪಾಯವೆಂದರೆ-ಜೀವವಿಮೆ ಮಾಡುವುದು-ಮತ್ತು ಅದು ಸಹ-

ಈಸ್ಟ್ ಏಂಡ್ ವೆಸ್ಟ್
ಕಂಪೆನಿಯಲ್ಲಿ ಮಾತ್ರ.

ಈಸ್ಟ್ ಏಂಡ್ ವೆಸ್ಟ್ ಇನ್ಶೂರೆನ್ಸ್ ಕಂಪೆನಿ,
ಲಿಮಿಟೆಡ್.
ಅಪೊಲೊ ಸ್ಟ್ರೀಟ್, ಫೋರ್ಟ್ ಬೊಂಬಾಯಿ.

ಮರ್ಯಾದಸ್ಥ ಗೃಹಸ್ಥರು ಈ ಕಂಪೆನಿಯಲ್ಲಿ ವಿಮೆಮಾಡಿ, ತಮ್ಮ ಭವಿಷ್ಯ ಕಾಲವನ್ನು ಪ್ರಕಾಶಮಯವಾಗಿ ಮಾಡಬಹುದು.
ವಿಶೇಷ ಮಾಹಿತಿಗೋಸ್ಕರ ಈ ಹೊತ್ತೇ ಬರೆಯಿರಿ:—
(ಮಹಾರಾಷ್ಟ್ರ ವ ಕರ್ನಾಟಕದ ಚೀಫ್ ಏಜಂಟರಿಗೆ)
ಮೆಸರ್ಸ್ ಮಡುಬಿದ್ರಿ ಬ್ರದರ್ಸ್,
ನಾರಾಯಣದಾಸ್ ಬನ್ಸಿಲಾಲ್ ಮೇನ್ಶನ್ 73, ಲೆಮಿಂಗ್ಟನ್ ರೋಡ್
ಮುಂಬಯಿ.

EAST AND WEST
INSURANCE CO. LTD., BOMBAY.

Emblem of Modesty is Gunghat, its wearer is

GUNGATWALI

Time has witnessed that preachers of Gunghat or gospels of purity, truthfulness, peity and philanthrophy are wolves in the skin of sheep, upholding the dogmas of samaj in their sermons, but exposing themselves to be the real miscreants when they look askance with their wicked eyes.

GUNGHATWALI wielded her whip against these degenerated pillars of Society and waged a war aginst the long armed atrocities

You will hold your breath! You will laugh!! You will sob!!!

You will weep and giggle at the dare devil enterprises!!

See Vishwakala Movietone's stunt thriller GUNGHATWALI

featuring Prem Adib & Aloka Rani

At Sri Ramakrishna Theatre Udipi from 27-9-1939.

ಗಡಗಡವೆನ್ನಬೇಕು ಅವಳ ನಡೆನುಡಿಗೆ! — ಅವಳ ಅಬ್ಬರ ಆರ್ಭಟಕ್ಕೆ!!

ಸಮಾಜದಲ್ಲಿ ಪ್ರತಿಷ್ಠಿತ ಪುರುಷರೆನಿಸಿಕೊಂಡು, ಅಕೃತ್ಯಗಳ ಬೀಡೆನಿಸಿಕೊಂಡ ಗೋಮುಖ ವ್ಯಾಘ್ರಗಳನ್ನು ಸದೆಬಡಿಯುವುದೇ ಅವಳ ಹೆಗ್ಗುರಿ!

ಜೀವದ ಹಂಗನ್ನು ತೊರೆದು ಕಾದಾಡಿದ ತರುಣಿಯೋರ್ವಳ ಸಾಹಸ ಚರಿತ್ರೆ.

ವಿಶ್ವಕಲಾ ಮೂವಿಟೋನಿನವರ ಗುಂಗುಟ್ ವಾಲಿ

ಪ್ರೇಮ ಅಡಿಬ್, ಅಲೋಕರಾಣಿ, ರಾಜಕುಮಾರಿ, ಚಾರ್ಲಿ, ಬಟ್ ಮೊದಲಾದವರು ನಟಿಸಿರುವ ಆಧುನಿಕ ರೀತ್ಯಾ ಕಾದಾಟದ ಚಿತ್ರ!

ನೋಡಿರಿ ಶ್ರೀರಾಮಕೃಷ್ಣಥಿಯೇಟರಿನಲ್ಲಿ ತಾರೀಕು 27-9-39 ರಿಂದ

—* ಕಥಾ ಸಾರಾಂಶ *—

ಗುಂಗುಟ್‌ವಾಲಿಯು ಸಮಾಜದ ಕುರುಡು ಬೆಳಕುಗಳ ವಿರೋಧಿ. ಇವಳ ಚಾಟಿಯ ಪ್ರಥಮ ಸವಿಯನ್ನು ತಿಂದವನೆಂದರೆ ಬ್ರಿಜಮೋಹನನೆಂಬ ಜಮಾನ್‌ದಾರನ ಕುಟುಂಬ. ಮೋಹನನು ದುರಾಚಾರಿ, ವ್ಯಭಿಚಾರಿ. ಆದರೂ ತನ್ನ ಗುಣಗಳನ್ನೆಲ್ಲಾ ಮುಚ್ಚಿಡುವಷ್ಟು ಹಣವಿದ್ದಿತ್ತು ಅವನಲ್ಲಿ. ಇವನಿಂದ ಕೆಡಿಸಲ್ಪಟ್ಟ ಅದೆಷ್ಟೋ ಜನ ನಾರಿಯರ ಗೋಳು ಅವನನ್ನು ಮುಟ್ಟದಾಯಿತು. ಮೋಹನನ ಮಗಳಾದ ಶೀಲ ಎಂಬವಳನ್ನು ಮೋಹನನ ತಾಬೆಯಲ್ಲಿದ್ದ ವಿಜಯ ನೆಂಬವನಿಗೆ ವಿವಾಹವಾಗಬೇಕೆಂದಿತ್ತು. ಆದರೆ ತನಗೆ ಆಪತ್ಕಾಲದಲ್ಲಿ ಸಹಾಯಕ್ಕೆ ಒದಗಿದ ರಘುವೀರನೆಂಬ ದುಷ್ಟನ ಒತ್ತಾಯದಿಂದ ಮಗಳು ರಘುವೀರನನ್ನು ಮದುವೆಯಾಗಬೇಕೆನ್ನುವನು. ರಘುವೀರನೆಂದರೆ ಇನ್ನೊಬ್ಬ ಸಮಾಜದ್ರೋಹಿ. ಸುಲೋಚನೆ ಎಂಬ ಯುವತಿಯನ್ನು ಕೆಡಿಸಿ ಹುಟ್ಟಿದ ಮಗುವಿನೊಂದಿಗೆ ಅವಳನ್ನು ದಿಕ್ಕಿಲ್ಲಾಗಿ ಮಾಡಿದವನವನು. ಇತ್ತ ಶೀಲನು ತನ್ನನ್ನು ವಿವಾಹವಾಗಲಾರಳು ಎಂಬ ವಿಚಾರವನ್ನು ತಿಳಿದ ವಿಜಯನು ಶೋಕಾಕುಲನಾಗುವನು. ರಘುವೀರನ ಮೇಲೆ ಸೇಡನ್ನು ತೀರಿಸಿಕೊಳ್ಳಬೇಕೆಂದು ಕೈಲಾಸನೆಂಬ ಬೀದಿಯ ಹುಡುಗನೂ ಹೊಂಚುಹಾಕುತ್ತಿದ್ದನು. ಇದಕ್ಕೆ ಸರಿಯಾಗಿ ಗುಂಗಟ್‌ವಾಲಿಯೂ ಶಮ್ಶೇರ್ ಎಂಬ ಡಕಾಯಿತನ ಸಂಗಡವನ್ನು ಸೇರಿಕೊಂಡು ಧಾಳಿ ಇಡಹತ್ತುವಳು. ಎಲ್ಲೆಲ್ಲೂ ಕೋಲಾಹಲ-ಎಲ್ಲೆಲ್ಲೂ ಆರ್ತನಾದ! ಅಕಸ್ಮಾತ್ ಕೈಲಾಸ, ರಘುವೀರ, ಸುಲೋಚನೆ, ಮತ್ತು ವಿಜಯನಿ ಇವರು ಒಟ್ಟಾಗುವರು. ಗುಂಗುಟ್‌ವಾಲಿಯೂ ಶಮ್ಶೇರನೂ ಸಮಾಜದ ಕಂಟಕರೆಂದು ನಿರ್ಧರಿಸಿ, ಅವರ ಮೇಲೆ ಶಸ್ತ್ರವನ್ನೆತ್ತುವರು. ಮುಂದೇನು?

ಟಿಕೇಟಿನ ದರ:—(ಟೇಕ್ಸ್ ಸಮೇತ) ರಿಜರ್ವಡ್ 1-8-0, ಸ್ಪೆಶಲ್ 0-11-9, ಗೆಲರಿ 0-7-0, ಬೆಂಚು 0-4-6, 0-2-3

Next: Would you like DEVIKA RANI to be an untouchable? How you wish she is within your reach! But in Bombay Talkies ACHUT KANYA, she is an untouchable, headlong in love with Ashok Kumar, a Brahmin Boy.

Fate intervenes: And She is married to a Pariah! He is married to a Brahmin Girl.

But does this magnetic love attract each other?

See at RAMAKRISHNA THEATRE from 3-10-39

ಬರುವ ಚಿತ್ರ: ದೇವಿಕಾರಾಣಿಯು ಅಸ್ಪೃಶ್ಯಳಾಗುವುದು ನಿಮಗೆ ಇಷ್ಟವೆ? ಛೆ! ಅವಳು ನಿಮ್ಮ ಹತ್ತಿರವೇ ಇರುತ್ತಿರಬೇಕೆಂದು ನಿಮ್ಮ ಹೃದಯವು ಹೇಳುತ್ತಿದೆ!

ಆದರೆ ಬಾಂಬೆ ಟಾಕೀಸ್‌ನ "ಅಚ್ಚುತ ಕನ್ಯಾ"ದಲ್ಲಿ ಅವಳು ಅಸ್ಪೃಶ್ಯಳು! ಬ್ರಾಹ್ಮಣ ಕುವರ ಅಶೋಕ ಕುಮಾರ ನಲ್ಲಿ ಮೋಹಪರವಶಳಾಗಿದ್ದಳು.

ಆದರೆ—ಸಮಾಜ!—ಅವಳು ಹೊಲೆಯನನ್ನು ಮದುವೆಯಾದಳು! ಇವನು ಬ್ರಾಹ್ಮಣ ಹುಡುಗಿಯನ್ನು ಮದುವೆಯಾದನು!

ಮುಂದೇನು?—ಪ್ರೇಮ---ಇದು ಅವರನ್ನು ಸೆಳೆಯಲಿಲ್ಲವೆ?

Comming:—Pragati's crowning success and stupendous mythological hit 'Nanda Kumar', Lord of the Jungle, Jagatkesari, Prabhat's Gopala Krishna etc,

ಮುಂದಿನ ಚಿತ್ರ:—ಪ್ರಗತಿಯವರ ಉತ್ಕೃಷ್ಟ ಪೌರಾಣಿಕ ಕತೆ 'ನಂದಕುಮಾರ್', ಲೋರ್ಡ್ ಆಫ್ ದಿ ಜಂಗಲ್, ಜಗತ್ ಕೇಸರಿ, ಪ್ರಭಾತ ಗೋಪಾಲಕೃಷ್ಣ ಇತ್ಯಾದಿ.

ಪೂರ್ವ ಪೋಲಂಡಿನ ಅಸ್ಥಿರ ಪರಿಸ್ಥಿತಿ

ಪೋಲಂಡು ತನ್ನ ಎಲ್ಲೆಯನ್ನು ಪೂರ್ವಕ್ಕೆ ವಿಸ್ತರಿಸಿದುದು ಅವಿವೇಕ

ರಸ್ಯಕ್ಕುಂಟಾಗಿರುವ ಪ್ರಯೋಜನ

ಕಳೆದ ಮಹಾಯುದ್ಧದ ಸಂದರ್ಭದಲ್ಲಿ 1916ನೇ ಇಸ್ವಿಯ ಆರಂಭದಲ್ಲೇ ಜರ್ಮನಿಯು, ಸ್ವತಂತ್ರ ಪೋಲಿಶ್ ರಾಜ್ಯವನ್ನು ಸ್ಥಾಪಿಸುವ ಆಶೆ ತೋರಿಸಿ, ಜರ್ಮನಿಯ ಸಹಾಯಾರ್ಥವಾಗಿ ಪೋಲಿಶ್ ಸೇನೆಯೊಂದನ್ನು ಸಂಘಟಿಸುವ ಉದ್ದೇಶದಿಂದ ತಾತ್ಕಾಲಿಕ ಪೋಲಿಶ್ ಕೌನ್ಸಿಲ್ ಆಫ್ ಸ್ಟೇಟನ್ನು ಕೂಡಾ ಸ್ಥಾಪಿಸಿತು. ಆದರೆ ಅದಕ್ಕೆ ಜನ ಬೆಂಬಲ ದೊರೆಯಲಿಲ್ಲ ಅನಂತರ ಹೊಸ ಕೌನ್ಸಿಲ್ ಆಫ್ ಸ್ಟೇಟು ಸ್ಥಾಪಿಸಲ್ಪಟ್ಟು 1918ರಲ್ಲಿ ಅದು ಪೋಲಂಡಿನ ಸ್ವಾತಂತ್ರ್ಯವನ್ನು ಸಾರಿತು ಈ ನಡುವೆ ಜರ್ಮನಿಯು ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದ ಮಾಡಿ ಪೋಲಂಡಿನ ಒಂದು ಭಾಗವಾದ ಉಕ್ರೇನಿನಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಲೆತ್ನಿಸಿತು. ಪೂರ್ವ ಗೆಲೀಸಿಯದಲ್ಲಿ ಆಸ್ಟ್ರಿಯವು ತನ್ನಾಧೀನದಲ್ಲಿ ಇನ್ನೊಂದು ರಾಜ್ಯವನ್ನು ಕಟ್ಟುವ ಪ್ರಯತ್ನ ಮಾಡಿತು. 1918ನೇ ನವೆಂಬರದಲ್ಲಿ ಪೂರ್ವ ಗೆಲೀಸಿಯದ ಲೇಂಬರ್ಗಿನಲ್ಲಿ ಸ್ವಾವಲಂಬಿ ರುತೇನಿಯನ್ ರಾಜ್ಯವೊಂದು ಸ್ಥಾಪಿಸಲ್ಪಟ್ಟಿತು ಈ ಸರಕಾರವನ್ನು ಪೋಲರು ಒಂದು ತಿಂಗಳೊಳಗೆ ಹೊರಗಟ್ಟಿದರು ಜನರಲ್ ಪೆಟ್ಲೂರರು ಕೀವ್ ಪಟ್ಟಣದಲ್ಲಿ ಪೂರ್ವ ಗೆಲೀಸಿಯವನ್ನು ಸೇರಿಸಿ ಉಕ್ರೇನಿಯನ್ ರಾಜ್ಯವನ್ನು ಸ್ಥಾಪಿಸಿದರು. 1919ರಲ್ಲಿ ಉಕ್ರೇನಿಯದಲ್ಲಿ ಬೋಲ್ಶೆವಿಕರು ಬಂಡಾಯವೆದ್ದ ಪರಿಣಾಮವಾಗಿ ಜನರಲ್ ಪೆಟ್ಲೂರರು ಪೂರ್ವ ಗೆಲೀಸಿಯಕ್ಕೆ ಹೋಗಿ, ಮೊದಲು ತನ್ನ ವಿರೋಧಿಗಳಾಗಿದ್ದ ಪೋಲರೊಡನೆ ಮೈತ್ರಿ ಬೆಳೆಸಿದರು. ಇದೇ ಕಾಲದಲ್ಲಿ ವಿಲ್ನಾ ಸೀಮೆಯ ಪ್ರಶ್ನೆಯ ಕುರಿತು ರಸ್ಯಾನರಿಗೂ ಪೋಲರಿಗೂ ಕಾದಾಟ ನಡೆದಿದ್ದಿತು. ಹೀಗೆ 1919ನೇ ವಸಂತ ಮತ್ತು ಸೆಕೆಕಾಲದಲ್ಲೆಲ್ಲಾ ಈಗಣ ಪೂರ್ವ ಪೋಲಂಡಿನಲ್ಲಿ ದೊಡ್ಡ ಗೊಂದಲವೆದ್ದಿತು

ತನ್ನ ಹಿತದೃಷ್ಟಿಯಿಂದಲೇ ಪೋಲಂಡು ತನ್ನ ಎಲ್ಲೆಯನ್ನು ಪೂರ್ವಕ್ಕೆ ಬಹಳವಾಗಿ ಮುಂದೊತ್ತಬಾರದೆಂದು 1919ರಲ್ಲೇ ಬ್ರಿಟಿಷ್ ಮುತ್ಸದ್ದಿಗಳು ಅಭಿಪ್ರಾಯಪಟ್ಟಿದ್ದರು, 1919ನೇ ಮೇ ತಿಂಗಳಲ್ಲಿ ಮಿತ್ರ ರಾಷ್ಟ್ರಗಳು ಪಶ್ಚಿಮ ಗೆಲೀಸಿಯವನ್ನು ಪೋಲಂಡಿಗಿತ್ತರು. ಅನಂತರ ಪೋಲರು ಜೂನ್ ತಿಂಗಳಲ್ಲಿ ಪೂರ್ವ ಗೆಲೀಸಿಯದಲ್ಲಿಯೂ ರಾಜ್ಯಭಾರವನ್ನು ಸ್ಥಾಪಿಸಿಬಿಟ್ಟರು. ನವಂಬರದಲ್ಲಿ ಪೆರಿಸಿನಲ್ಲಿ ನಡೆದ ಶಾಂತಿಸ್ಥಾಪನಾ ಪರಿಷತ್ತಿನಲ್ಲಿ; ಪೂರ್ವ ಗೆಲೀಸಿಯವು ಪೋಲರ ಆಶ್ರಯದಲ್ಲಿ 25 ವರ್ಷಗಳ ವರೆಗೆ ಸ್ವತಂತ್ರವಾಗಿರಬೇಕೆಂದೂ ಅನಂತರ ಅದರ ಭವಿಷ್ಯವನ್ನು ಲೀಗ್ ಆಫ್ ನೇಶನ್ಸಿನವರು ನಿಶ್ಚೈಸಬೇಕೆಂದೂ ನಿರ್ಣಯವಾಯಿತು ಇದೇ ವರ್ಷದ ದಶಂಬರದಲ್ಲಿ ಕರ್ಜನ್ ಲೈನೆಂಬ ಪೋಲಂಡಿನ ಪೂರ್ವ ಗಡಿಯು ನಿಶ್ಚೈಸಲ್ಪಟ್ಟಿತು. ಇದರಲ್ಲಿ ಪೂರ್ವ ಗೆಲೀಸಿಯ, ವಲ್ಹೀನಿಯ ಮತ್ತು ವಿಲ್ನಾ ಸೇರಲಿಲ್ಲ. ಈ ನಡುವೆ ಪೋಲಿಶ್ ಸೇನೆಯು ಮುಂದೊತ್ತಿ 1920ನೇ ಮೇ ತಿಂಗಳಲ್ಲಿ ಉಕ್ರೈನಿನ ಪ್ರಾಮುಖ್ಯ ಪಟ್ಟಣವಾದ ಕೀವಿಗೆ ಮುಟ್ಟಿತು ಅನಂತರ ಯುದ್ಧದ ಪರಿಸ್ಥಿತಿಯು ಬದಲಾಯಿತು ರಸ್ಯಾನರು ಪೋಲರನ್ನು ಹಿಂದಕ್ಕೆ ನೂಕಿದರು ಮಿತ್ರ ರಾಷ್ಟ್ರಗಳ ಮಧ್ಯಸ್ಥಿಕೆಗಾಗಿ ಪೋಲಂಡು ವಿನಂತಿಮಾಡಿತು, ಪೋಲಿಶ್ ಸೇನೆಯು ಕರ್ಜನ್ ಲೈನೆಂಬ ಗಡಿಯೊಳಗೆ ಬರಬೇಕೆಂದು; ಮಿತ್ರ ರಾಷ್ಟ್ರಗಳಾಗ ನಿರ್ದೇಶಿಸಿದವು ಮತ್ತು ಪೂರ್ವ ಯುರೋಪಿನಲ್ಲಿ ಶಾಂತಿ ಸ್ಥಾಪಿಸಲು ಪರಿಷತ್ತೊಂದನ್ನು ಸೇರಿಸಬೇಕೆಂದೂ ಸೂಚಿಸಲ್ಪಟ್ಟಿತು ರಸ್ಯವು ಪೋಲಂಡಿನೊಂದಿಗೆ ನೆಟ್ಟಗೆ ಹೊರತು ಇತರರ ಮಧ್ಯಸ್ಥಿಕೆಯಿಂದ ರಾಜಿ ಪ್ರಸ್ತಾಪಿಸಲೊಪ್ಪಲಿಲ್ಲ ಮತ್ತು ಆ ಮರು ರಾಜಿ ಪ್ರಸ್ತಾಪವನ್ನು ವಿಳಂಬಿಸಿತು ಆಗ ಮಾರ್ಶಲ್ ಪಿಲ್ಸುಡ್ಸ್ಕಿಯವರು ರಸ್ಯಾನರ ಮೇಲೇ ತಿರುಗಿಬಿದ್ದು ಸಂಪೂರ್ಣ ಜಯ ಹೊಂದಿದರು 1921ನೇ ಮಾರ್ಚ್ ತಿಂಗಳಲ್ಲಿ ರಸ್ಯಾ ಮತ್ತು ಪೋಲಂಡುಗಳು ರೀಗಾ ಪಟ್ಟಣದಲ್ಲಿ ಒಪ್ಪಂದಮಾಡಿಕೊಂಡವು ಈಗ ರಸ್ಯಾನರು ಆಕ್ರಮಿಸಿರುವ ಪೋಲಂಡಿನ ಗಡಿಯೂ ನಿಶ್ಚೈಸಲ್ಪಟ್ಟಿತು ಹಳೆಯ ಪೂರ್ವ ಗೆಲೀಸಿಯಾ ಸರಕಾರವು ಗಡಿಪಾರಾಗಿ ವಿಯನ್ನಾದಲ್ಲಿ ಅಸ್ತಿತ್ವದಲ್ಲಿದ್ದಿತು ಆದರೆ ಅವನ್ನಾರೂ ಗಣ್ಯಮಾಡುವವರಿರಲಿಲ್ಲ ಜನರಲ್ ಪೆಟ್ಲೂರರು ಮೂಲೆಗುಂಪಾದರು. ರೀಗಾ ಒಪ್ಪಂದದ ಮೇರೆಗೆ ರಸ್ಯಾ ಮತ್ತು ಪೋಲಂಡುಗಳೆರಡೂ ಉಕ್ರೇನಿಯದ ಸ್ವತಂತ್ರವನ್ನೊಪ್ಪಿದವು ಆದರೆ 1923ರಿಂದ ಉಕ್ರೇನು ಸೋವಿಯಟ್ ರಿಪಬ್ಲಿಕಿನ ಪ್ರಾಮುಖ್ಯಾಂಗವಾಗಿ ಅದರೊಡನೆ ಸೇರಿ ಹೋಗಿ ನಾಮಮಾತ್ರವಾದ ಸ್ವಾಯತ್ತತೆಯುಳ್ಳದಾಗಿರುವುದು.

ತನ್ನ ಗಡಿಯನ್ನು ಕರ್ಜನ್ ಲೈನಿಗಿಂತ ಪೂರ್ವಕ್ಕೆ ವಿಸ್ತರಿಸಿದುದೇ ಪೋಲಂಡು ಮಾಡಿದ ದೊಡ್ಡ ಅವಿವೇಕ. ಅದರಿಂದಾಗಿಯೇ ಅದಕ್ಕಾ ರಸ್ಯಕ್ಕೂ ತಿಕ್ಕಾಟ ತಪ್ಪಲಿಲ್ಲ ಈಗ ಸಂದರ್ಭ ನೋಡಿ ರಸ್ಯವು ಪ್ರಯೋಜನ ಮಾಡಿಕೊಂಡಿರುವುದು ಪೂರ್ವ ಪೋಲಂಡಿನಲ್ಲಿರುವ ವೈಟ್ ಅದವಾ ಬಿಳ್ಳಾ ರಸ್ಯಾನರ ಮತ್ತು ಉಕ್ರೇನಿಯನರ ರಕ್ಷಣಾರ್ಥವಾಗಿ ತಾವದರ ಮೇಲೇರಿ ಹೋಗಿ ವಶಪಡಿಸಿಕೊಳ್ಳಬೇಕಾಯಿತೆಂಬುದು ರಸ್ಯಾನರ ಕೇವಲ ನೆವನ, ಅವರೀಗ ವಶಪಡಿಸಿಕೊಂಡಿರುವ ಪ್ರದೇಶಗಳಲ್ಲಿರುವ ಬಹುಪಕ್ಷ ಜನ ಸಂಖ್ಯೆ ಪೋಲರು ಮತ್ತು ಯೆಹೂದ್ಯರು ಪೋಲರು ತಮ್ಮ ಆಧೀನವಿದ್ದ ಉಕ್ರೇನಿಯನರಿಗೆ ಸ್ವತಂತ್ರ ನೀಯುವೆವೆಂದು ಮಾತು ಕೊಟ್ಟಿದ್ದರೂ ಅದರಂತೆ ನಡೆಯಲಿಲ್ಲ. ಪೂರ್ವ ಗೆಲೀಸಿಯದ ಅಭಿವೃದ್ಧಿ ಸಾಧನೆಗಾಗಿ ಪ್ರಯತ್ನಿಸಲಿಲ್ಲ ಆದುದರಿಂದ ಈ ಜನತೆಯಲ್ಲಿ ಅತೃಪ್ತಿಯಿದ್ದು ಅವರು ರಸ್ಯಾನರನ್ನು ಸ್ವಾಗತೀಕರಿಸಿರಬಹುದು

ಪ್ರಖ್ಯಾತ ಗ್ರಂಥಕರ್ತರಾದ ವಿ. ಬೆರ್ನಾರ್ಡ್ ಶೋರವರು ಹೇಳಿದಂತೆ ಸ್ಟೇಲಿನರು ಹಿಟ್ಲರರನ್ನು ತನ್ನ ಕೈಗೊಂಬೆಯಾಗಿ ಉಪಯೋಗಿಸಿ, ಯಾವ ಹೋರಾಟವೂ ಇಲ್ಲದೆ ಪೂರ್ವ ಪೋಲಂಡನ್ನು ಗೆದ್ದು ಬಿಟ್ಟಿರುವರು. ಇದರಿಂದ ಜರ್ಮನಿಯ ಪೂರ್ವ ಯುರೋಪಿನ ಆಕಾಂಕ್ಷೆಗೆ ದೊಡ್ಡ ತಡೆಯಾದಂತಾಯಿತು ಪೂರ್ವ ಯುರೋಪಿನಲ್ಲಿ ರಸ್ಯದ ಕೈಮೇಲಾಯಿತು. ರುಮಾನಿಯ, ಹಂಗೇರಿ, ಲಿಥುವಾನಿಯ, ಲೆಟೇವಿಯ, ಫಿನ್ಲೆಂಡ್ ಮೊದಲಾದ, ರಾಜ್ಯಗಳು ರಸ್ಯವು ಹೇಳಿದಂತೆ ಕೇಳಬೇಕಾಗುವುದು ಹಿಟ್ಲರರು ಮೊದಲಿಂದಲೂ ಕಣ್ಣಿಟ್ಟಿದ್ದ ಉಕ್ರೈನನ್ನು ಒಂದೇ ದಿವಸದಲ್ಲಿ ಸ್ಟೇಲಿನರು ವಶಪಡಿಸಿಕೊಂಡಿರುವರು. ಉಕ್ರೈನೆಂಬುದು ದವಸಧಾನ್ಯಗಳ ಕಣಜದಂತಿರುವ ರಾಜ್ಯ. ಈಗ ರಸ್ಯಕ್ಕೆ ಮತ್ತು ಪೋಲಂಡಿಗೆ ವಿಭಾಗವಾಗಿದ್ದ ಉಕ್ರೈನು ಒಂದಾದಂತಾಯಿತು ಇದು ಹೊರತಾಗಿಯೂ ಪೋವ್ (ಲೆಂಬರ್ಗ್) ಎಂಬ ಪ್ರಾಮುಖ್ಯ ಪಟ್ಟಣದ ಸಮೇತವಾಗಿ ಪೂರ್ವ ಗೆಲೀಸಿಯ ಮತ್ತು ವಿಲ್ನಾಪಟ್ಟಣ ಸಹಿತ ಪೋಲ್ಹೀನವು ಅನಾಯಾಸವಾಗಿ ಸೋವಿಯಟ್ ರಸ್ಯದ ವಶವಾಯಿತು. ಹೀಗೆ ರಸ್ಯವು ಪೂರ್ವದಲ್ಲಿ ಜಪಾನಿನೊಡನೆ ಮತ್ತು ಪಶ್ಚಿಮದಲ್ಲಿ ಜರ್ಮನಿಯೊಂದಿಗೆ ಒಪ್ಪಂದ ಮಾಡಿಕೊಂಡು ತನ್ನ ರಾಜ್ಯವನ್ನು ಬಹಳವಾಗಿ ವಿಸ್ತರಿಸಿ ಬಲಪಡಿಸಿಕೊಂಡಿರುವುದು.

ಮಂಗಳೂರ ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು.

(ತಾ 18-9-39ರಲ್ಲಿದ್ದಂತೆ ವಜೂರು ಟ್ರೆಜರಿಯಿಂದ)

	ರಿಂದ			ವರೆಗೆ		
1 (a) ಅಕ್ಕಿ ಅವ್ವಲ್ ತರದ ಗುದ್ದು	5	0	0	—		
(b) ,, ದುಯಂ ,,	4	12	0	—		
2 (a) ,, ಅವ್ವಲ್ ಸುಗ್ಗಿ	5	0	0	—		
(b) ,, ದುಯಂ ,,	4	12	0	—		
3 (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	35	0	0	42	8	0
(b) ,, ಸಿಪ್ಪೆಯಿದ್ದದ್ದು ,,	37	8	0	47	8	0
4 ಕೊಬ್ಬರಿ ಆಫೀಸು ಖಂಡಿಗೆ	55	0	0	—		
5 ತೆಂಗಿನ ಎಣ್ಣೆ ಮುಡಿಕ್ಕೆ	3	12	0	—		
6 ಅಡಿಕೆ ಸಿಪ್ಪೆಯಿದ್ದದ್ದು 1000ಕ್ಕೆ	2	8	0	3	8	0
7 ಗೇರುಬೀಜ ಮುಡಿಗೆ	3	6	0	—		
8 ಕಪ್ಪಿನ ಪೀಸು ಖಂಡಿಗ	47	8	0	52	8	0
9 ಒಳ್ಳೇ ವೆಣಸು ಹಂಡ್ರಡ್ ವೇಟಿಗೆ	16	0	0	17	0	0



ಸ್ವಸ್ತಿಕ "ಕಾಂತಿ"
ಟೊಯ್ಲೆಟ್ ಸೋಪ್
ಪ್ರತಿಯೊಬ್ಬರ ಅಚ್ಚುಮೆಚ್ಚಿನದಾಗಿದೆ.
ಹೀಗಿರುವಾಗ ನೀವೂ
ಇದನ್ನೇ ಏಕೆ
ಉಪಯೋಗಿಸಬಾರದು?
●
ಅತಿ ಕಡಿಮೆ ಕ್ರಯಕ್ಕೆ
ಅತ್ಯುತ್ತಮ ಟೊಯ್ಲೆಟ್
ಸೋಪೆಂದರೆ
ಇದೊಂದೇ.
ಎಲ್ಲೆಲ್ಲೂ ಮಾರಲ್ಪಡುತ್ತದೆ.

ರಸ್ಯದ ಪ್ರಚಂಡ ಸೇನಾಬಲ

ಅತ್ಯಾಧುನಿಕ ತರಬೇತಿಯ 20ಮಿಲ್ಯ ಸೇನೆ.

ಅದ್ವಿತೀಯ ವಿಮಾನ ಪಡೆ—ಪ್ರಬಲ ನೌಕಾಪಡೆ

ಅಪಾರ ಧನಾನುಕೂಲತೆ

ಅಖಂಡ ಸೇನಾ ನಾಯಕ ಮಾರ್ಶಲ್ ವರೊಶಿಲೊವ್

ಇಂಗ್ಲೆಂಡ್ ಮತ್ತು ಫ್ರಾನ್ಸುಗಳಿಗೆ ರಸ್ಯಾದೊಡನೆ ಒಪ್ಪಂದಮಾಡಿಕೊಳ್ಳಲಾಗದುದೇ ಪ್ರಕೃತದ ಯುದ್ಧಕ್ಕೆ ಕಾರಣ. ಹಿಟ್ಲರರು ಜಾಪಾನು ಇಟಲಿ ಮತ್ತು ಸ್ಪೈನುಗಳಿಂದ ಸಹಾಯ ದೊರೆಯಲಾರದೆಂದು ತಿಳಿದೊಡನೆಯೇ ತನ್ನ ಧೋರಣೆಯನ್ನು ಮಿಂಚಿನ ವೇಗದಿಂದ ಬದಲಾಯಿಸಿ ರಸ್ಯಾದೊಡನೆ ಒಡಂಬಡಿಕೆಮಾಡಿದರು. ಒಡನೆಯೇ ಪೋಲಂಡಿನ ಮೇಲೆ ಬಿದ್ದರು. 15 ದಿನಗಳಲ್ಲಿ ಪೋಲಂಡು ನಿರ್ನಾಮವಾಗಿದೆ. ರಸ್ಯವು ಪೂರ್ವದಿಂದ ಪೋಲಂಡನ್ನು ಆಕ್ರಮಿಸಿ ನಡೆಯುತ್ತಿದೆ. ಮುಂದೇನು? ರಸ್ಯವು ಜರ್ಮನಿಗೆ ಸಹಾಯ ಮಾಡುವುದೆ? ಅಥವಾ ಹಿಟ್ಲರ ನೀತಿಯಿಂದಲೇ ಹಿಟ್ಲರನಿಗೆ ಬುದ್ಧಿ ಕಲಿಸಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡುದೇ? ಅದೊಂದು ಸಮಸ್ಯೆಯಾಗಿದೆ. ಮಿತ್ರರಾಷ್ಟ್ರಗಳಿಗೆ ರಸ್ಯದ ನೆರವಿಲ್ಲದೆ ಜರ್ಮನಿಯನ್ನು ಗೆದ್ದರೂ ಮಿತ್ರರಾಷ್ಟ್ರಗಳ ಪೋಲಂಡನ್ನು ಸ್ವತಂತ್ರಗೊಳಿಸಲು ರಸ್ಯಾದೊಡನೆಯೂ ಕಾದಬೇಕಾಗುವುದೇ? ಎಂಬೀ ಪ್ರಶ್ನೆಗಳೆಲ್ಲಾ ಲೋಕವನ್ನೇ ತಳಮಳಿಸುವಾಗ ರಸ್ಯದ ಸೇನಾಬಲವನ್ನು ತಿಳಿಯುವುದು ಅಪ್ರಸ್ತುತವಾಗಲಾರದು.

ಸೇನಾಬಲದಲ್ಲಿ ಇಂದೀಗ ರಸ್ಯವು ಅಪ್ರತಿಮವಾಗಿದೆ. ಕಳೆದ ಮಹಾಯುದ್ಧ ಕಾಲದಲ್ಲಿ 10ಮಿಲ್ಯವಿದ್ದ ಸೇನೆಯು ಈಗ 20 ಮಿಲ್ಯಕ್ಕೇರಿದೆ. 19 ವರ್ಷ ಪ್ರಾಯದ ಪ್ರತಿಯೊಬ್ಬನೂ ರಸ್ಯದಲ್ಲಿ ಸೇನಾಶಿಕ್ಷಣವನ್ನು ಕಡ್ಡಾಯವಾಗಿ ಪಡೆಯಬೇಕು. ಪ್ರತಿವರ್ಷ ಸುಮಾರು 1ಮಿಲ್ಯ ಸೈನಿಕರು ಹೆಚ್ಚಿಗೆಯಾಗಿ ಸೇನೆಗೆ ಸೇರಿಸಲ್ಪಡುತ್ತಾರೆ. ರಸ್ಯದ 13 ಮಿಲಿಟರಿ ಎಕಡೆಮಿಗಳಲ್ಲಿ 16,000ಮಂದಿ ವಿದ್ಯಾರ್ಥಿಗಳು ಸೈನ್ಯಾಧಿಕಾರಿಗಳಾಗಲು ತರಬೇತಿ ಹೊಂದುತ್ತಾರೆ. ಇತರ ವಿಶ್ವವಿದ್ಯಾಲಯಗಳಿಗೆ ಸೇರಿ ಇನ್ನಾರು ಮಿಲಿಟರಿ ಎಕೆಡೆಮಿಗಳಿವೆ. 1937ರಲ್ಲಿ ರಸ್ಯದಲ್ಲಿ ೯500ಯುದ್ಧ ವಿಮಾನಗಳಿದ್ದುವು. ಈಗ ಇದು ಬಹಳವಾಗಿ ಹೆಚ್ಚಿಸಲ್ಪಟ್ಟಿರುವುದು. ರಸ್ಯದ ವೈಮಾನಿಕರು ಬಲು ದಕ್ಷರೆಂದು ಪ್ರಖ್ಯಾತರಾಗಿದ್ದಾರೆ. ಒಟ್ಟು 60,000 ವೈಮಾನಿಕರಲ್ಲಿ 10,000 ಮಂದಿ ವೈಮಾನಿಕ ಪಡೆಗಳ ನಾಯಕರಾಗಲು ತಜ್ಞತರಬೇತಿ ಪಡೆದವರಿರುತ್ತಾರೆ. ರಸ್ಯವು ನವೀನವಾಗಿ ಪ್ರಬಲ ಹಡಗಪಡೆಯನ್ನು ರಚಿಸಿಕೊಂಡಿದೆ. ಬಾಲ್ಟಿಕ್ ಸಮುದ್ರ, ಕಪ್ಪು ಸಮುದ್ರ, ಉತ್ತರ ಧ್ರುವ ಮತ್ತು ಉತ್ತರ ಸೋವಿಯೆಟ್ ಸಮುದ್ರಗಳಲ್ಲಿ ರಸ್ಯವು 4 ಹಡಗಪಡೆಗಳನ್ನಿರಿಸಿದೆ. ಕಡಿಮೆಯೆಂದರೆ 4 ಯುದ್ಧ ಹಡಗ, 7 ಕ್ರೂಯಿಸರ್ ಹಡಗ, 32 ಡಿಸ್ಟ್ರೋಯರ್ ಹಡಗ ಮತ್ತು 175ಕ್ಕೆ ಕಡಿಮೆಯಿಲ್ಲದ ಸಬ್‌ಮೆರೀನುಗಳಿವೆ.

ಹಣದ ವಿಷಯದಲ್ಲಿ ಸೋವಿಯೆಟ್ ಸರಕಾರಕ್ಕೆ ಕೊರತೆಯೇ ಇರುವಂತಿಲ್ಲ. ಕಳೆದ 5 ವರ್ಷಗಳಿಂದ ಹಣದ ವ್ಯವಸ್ಥೆಯನ್ನದು ಮಾಡಿಕೊಂಡು ಬಂದಿದೆ. 1937ನೇ ವರ್ಷದ ದೇಶರಕ್ಷಣಾ ಬಜೆಟಿನ ಮೇರೆಗೆ 800 ಮಿಲ್ಯ ಪವನು ಸಾಲ ಪಡೆಯಲಾಗಿತ್ತು. 1938ರಲ್ಲಿ ಪುನಃ 1000 ಮಿಲ್ಯ ಪವನು ಸಾಲಪಡೆಯಲಾಯಿತು. ಸಾಲಕ್ಕೆ ಸೇಕಡ 4ರಂತೆ ಬಡ್ಡಿ ಕೊಡಲಾಗುತ್ತದೆ. ಸಾಲಕೊಡುವವರೇನೂ ಶ್ರೀಮಂತರಲ್ಲ. 45 ಮಿಲ್ಯದ ವರೆಗಣ ಕೆಲಸಗಾರರು, ನೌಕರರೇ ಮೊದಲಾದವರು. ಪ್ರತಿಯೊಬ್ಬ ಕೆಲಸಗಾರನು ವರ್ಷಕ್ಕೆ ಒಂದು ತಿಂಗಳ ಸಂಬಳವನ್ನು ದೇಶ ರಕ್ಷಣಾ ಫಂಡಿಗೆ ಕೊಡಬೇಕು. ಸ್ವಲ್ಪ ಧನಿಕರಾದವರು ತಮ್ಮ ಆದಾಯದ ಸೇಕಡ ಒಂದಂಶವನ್ನು ಕೊಡಬೇಕಾಗುವುದು. ಎಷ್ಟೊಂದು ದೀರ್ಘಯುದ್ಧ ಹೂಡುವುದಕ್ಕಾದರೂ ರಸ್ಯದಲ್ಲೀಗ ಬೇಕಾದ ಅನುಕೂಲತೆಯಿದೆ. ರಸ್ಯದ ಅಶ್ವಾರೋಹಿ ಸೇನೆಯು ಝಾರರ ಕಾಲದ್ದಕ್ಕಿಂತಲೂ ಉತ್ತಮವಾಗಿದ್ದು ಕಡಿಮೆಯೆಂದರೆ ಒಂದು ಲಕ್ಷವಿರುತ್ತದೆ. ಸೇನೆಯ ಯಂತ್ರೀಕರಣವು ಇತ್ತಲಾಗಿ ಭರದಿಂದ ನಡೆದಿದೆ. 2000 ಹಗುರವಾದ ಟಂಕೆ, 700 ಸಶಸ್ತ್ರ ಕಾರು ಮತ್ತು ನೂರಾರು ಭಾರವಾದ ಟಾಂಕಿಗಳನ್ನು ರಸ್ಯವು ಸಿದ್ಧಗೊಳಿಸಿದೆ.

ಇಂದೀಗ 20 ಮಿಲ್ಯ ಸೇನೆಯನ್ನು ಪೋಲಂಡಿನ ಮೇಲೆ ನಡಿಸಿ ಅದರ ಪೂರ್ವಭಾಗವನ್ನಾಕ್ರಮಿಸಿರುವ ಮಾರ್ಶಲ್ ವರೋಶಿಲೊವರು ರಸ್ಯದ ಎಲ್ಲಾ ಸೇನೆಗಳ ಅಖಂಡ ನಾಯಕರು. ನೆಲ, ಜಲ, ಮತ್ತು ಆಕಾಶ ಪಡೆಗಳೆಲ್ಲವೂ ಯುದ್ಧ ಮಂತ್ರಿಗಳಾದ ಅವರ ಕೈಕೆಳಗಿರುತ್ತವೆ. ಈ ವರೆಗೆ ಲೋಕದಲ್ಲಿ ಇಷ್ಟೊಂದು ಪ್ರಚಂಡ ಸೇನೆಯ ನಾಯಕರಾಗಿದ್ದವರಾರೂ ಇಲ್ಲ. ವರೊಶಿಲೊವರು ಇಷ್ಟರ ವರೆಗ ರಸ್ಯವನ್ನು ಬಿಟ್ಟು ಹೋದವರಲ್ಲ. ಆದರೂ ಲೋಕದ ಸೇನಾ ರೀತಿ, ನೀತಿ, ಯುಕ್ತಿ, ತಂತ್ರಗಳನ್ನೆಲ್ಲಾ ಬಲ್ಲವರು. ಸದಾ ಪ್ರಸನ್ನಚಿತ್ತರು, ಸ್ನೇಹಶೀಲರು, ಲೆನಿನರ ಬುದ್ಧಿಪ್ರೌಢಿಮೆಯಾಗಲಿ, ಸ್ಟಾಲಿನರ ಉಗ್ರತೆಯಾಗಲಿ ಅವರಲ್ಲಿಲ್ಲ. ಜೀವನದ ಸುಖ ವಿಷಯಗಳನ್ನು ಸಂತೋಷದಿಂದ ಅನುಭವಿಸುವವರವರು. ರಸ್ಯನ್ ಹೊರತು ಬೇರೊಂದು ಭಾಷೆ ಗೊತ್ತಿಲ್ಲ ಅವರಿಗೆ.

ವರೊಶಿಲೊವರು ಸರ್ವಸಾಮಾನ್ಯ ಸ್ಥಿತಿಗತಿಯಿಂದ ಮೇಲಕ್ಕೇರಿದವರು. ಅವರ ತಂದೆಯೊಬ್ಬ ಸೈನಿಕನಾಗಿದ್ದನು. ಆದರೆ ಇವರು ತನ್ನ 7ನೇ ವಯಸ್ಸಿನಲ್ಲೇ ಗಣಿಯೊಂದರಲ್ಲಿ ಕೆಲಸ ಮಾಡುತ್ತಾ ಹೊಟ್ಟೆ ಹೊರಕೊಳ್ಳಲಾರಂಭಿಸಿದರು. ಈಗಣ ಹೆಚ್ಚಿನ ಸೋವಿಯೆಟ್ ಮುಖಂಡರಂತೆ ಉಪವಾಸ ಬೀಳುವುದೇನೆಂಬುದನ್ನು ಚೆನ್ನಾಗಿ ಬಲ್ಲರವರು. ಅನಂತರ ಉಕ್ಕಿನ ಗಿರಣಿಯಲ್ಲಿ ಕೆಲಸ ಮಾಡಿದರು. ಇವರ ವಿದ್ಯೆಯು 1೮ರಲ್ಲಿ ಆರಂಭವಾಯಿತು. ಯಾವ ಶಾಲೆಗೂ ಹೋಗದ ಸ್ವತಃ ಕಲಿತವರು. ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಜೂರರ ಪರಿಸ್ಥಿತಿಯನ್ನು ಕಂಡು ವರೊಶಿಲೊವರು ತನ್ನ 16ನೆ ವಯಸ್ಸಿನಲ್ಲಿ ಕ್ರಾಂತಿಕಾರಿಯಾದವರು. ಅನಂತರ 7 ವರ್ಷಗಳಲ್ಲಿ ಕಾರಾಗೃಹಗಳಿಗೆ ಹೋಗುತ್ತಾ ಬರುತ್ತಾ ಇದ್ದರು. ಈ ಸಂದರ್ಭದಲ್ಲವರು ಸ್ವಂತ ಪರಿಶ್ರಮದಿಂದ ವಿದ್ಯಾಲಾಭ ಪಡೆದರು. ಯುದ್ಧಶಾಸ್ತ್ರವನ್ನು ಅಭ್ಯಾಸಿಸಿದರು. ರಸ್ಯದ ವಿಪ್ಲವದ ಕಾಲದಲ್ಲಿ ದೇಶದಲ್ಲೆಲ್ಲಾ ತಿರುಗಾಡಿ ಕ್ರಾಂತಿಕಾರಕ ದಳಗಳನ್ನು ಸಂಘಟಿಸಿ ಹೋರಾಟ ಸಹ ನಡಿಸಿದರು. ಉಕ್ರೈನಿನ ಸೇನೆಯೊಂದನ್ನು ಸಂಘಟಿಸಿ ಜರ್ಮನರೆದುರಾಗಿ ಅದನ್ನು ನಡಿಸಿದರು. ಅನಂತರ ರಸ್ಯದ ಕ್ರಾಂತಿಯ ವಿರೋಧಿಗಳಾದ ವ್ಹೈಟ್ ರಸ್ಯಾನರೊಡನೆ ಕಾದಿದರು. ಸ್ಟೆಲಿನ್ ಮತ್ತು ರಸ್ಯದ ಪ್ರಖ್ಯಾತ ಅಶ್ವಾರೋಹಿ ಸೇನಾನಾಯಕರಾದ ಬುಡೆನ್ನಿಯವರೊಂದಿಗೆ ಹಲವು ಹೋರಾಟಗಳಲ್ಲಿ ಭಾಗವಹಿಸಿದ್ದರು. ರಸ್ಯದಲ್ಲಿ ಶಾಂತಿಸ್ಥಾಪಿತವಾದ ಮೇಲೆ ವರೊಶಿಲೊವರು ಉತ್ತರ ಕೋಕಸಸ್ ಸೇನೆಯ ನಾಯಕರಾಗಿಯೂ ಆಮೇಲೆ ಮೋಸ್ಕೋ ಪಟ್ಟಣದ ಸೇನಾನಾಯಕರಾಗಿಯೂ ನೇಮಿಸಲ್ಪಟ್ಟರು.

ವರೋಶಿಲೋವರು 1925ರಲ್ಲು ಸೇನಾ ಕೌನ್ಸಿಲಿನ ಅಧ್ಯಕ್ಷ ಮತ್ತು ಸೈನಿಕ, ನೌಕಾ ಮತ್ತು ವೈಮಾನಿಕ ಖಾತೆಗಳ ಮಂತ್ರಿಗಳಾದರು. ಈಗ 15ವರ್ಷಗಳಿಂದ ಅವರೇ ಸ್ಥಾನದಲ್ಲಿರುವರು. ದಿನೇದಿನೇ ಅವರ ಜನಾದರಣೆಯು ಹೆಚ್ಚುತ್ತಿರುವುದು. ಸ್ಥಾನವು ಬಲಗೊಂಡಿರುವುದು. ರಸ್ಯದ ಅತ್ಯಂತ ಚತುರ ಕುದುರೆ ಸವಾರ ಮತ್ತು ಕೋವಿ ಗುರಿ ವಿಚಕ್ಷಣರವರು. ರಸ್ಯದ ಸೇನೆಯನ್ನು ಯಂತ್ರೀಕರಿಸುವುದರಲ್ಲಿ ಅತ್ಯುತ್ಸಾಹದಿಂದ ಅಗ್ರಭಾಗವಹಿಸಿದವರು. ಚಕೋ ಎಂಬ ರಸ್ಯದ ಭಯಂಕರ ಗುಪ್ತಚರ ದಳವನ್ನು ಸ್ಥಾಪಿಸಿದವರೇ ವರೊಶಿಲೊವರು. ಸ್ಟಾಲಿನರ ಆಳ್ವಿಕೆಗೆ ವಿರೋಧಿಗಳಾದ 8ಮಂದಿ ಸಹ ವ್ಯವಸಾಯಿಗಳನ್ನು ಕೊಲ್ಲಿಸಿದವರು ಅಂದ ಮೇಲೆ ಅವರು ಕೋಮಲರಾಗಿರುವರಂತೆ ಅತಿ ಕಠಿಣರೂ ಆಗಬಲ್ಲರು.

ಸ್ಟೇಲಿನರ ಪರಮಾಪ್ತರಾಗಿ ಅವರ ಅತ್ಯಂತ ವಿಶ್ವಾಸ ಪಾತ್ರರಿರುವ ವರೊಶಿಲೊವರೇ ರಸ್ಯದ ಮುಂದಿನ ನಾಯಕರೆಂದು ನಂಬಲಾಗಿದೆ. ಸ್ಟಾಲಿನರಿಗಿಂತ ಎರಡೇ ವರ್ಷ ಚಿಕ್ಕವರಾದರೂ ಅವರ ಆರೋಗ್ಯವು ಅತ್ಯುತ್ತಮವಿದೆ. ರಸ್ಯದ ಸೇನಾ ಬಲದ ಶಕ್ತಿಯು ವರೊಶಿಲೊವರಿಗೆ ಮಾತ್ರ ಗೊತ್ತು. ತಮ್ಮ ಮೇಲೆ ನಡಿಸಲ್ಪಡುವ ದಾಳಿಯನ್ನು ವಿರೋಧಿಸುವುದು ಮಾತ್ರವಲ್ಲದೆ, ವೈರಿಗಳ ಮೇಲೇರಿ ಹೋಗುವ ಶಕ್ತಿಯೂ ತಮ್ಮ ಸೇನೆಗಿರುವುದೆಂದು ವರೊಶಿಲೊವರು ಇತ್ತಲಾಗಿ ಉದ್ಘೋಷಿಸಿದ್ದರು.

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು. ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು



ಕಂಬನಿ

ಮಿಸೆಸ್ ಬಿ ಟಿ ಜಿ ಕೃಷ್ಣ

ಅವರ ಸಣ್ಣ ಕತೆಗಳ ಸಂಕಲನ

ಶ್ರೀ. ಬೇಂದ್ರೆಯವರ ಮುನ್ನುಡಿ, ಶ್ರೀ. ದತ್ತಾತ್ರೇಯ ಅವರ 'ನಾನು ಕಂಡ ಗೌರಮ್ಮ' ಇವುಗಳೊಡನೆ

ಬೆಲೆ ಒಂದು ರೂಪಾಯಿ

ಶ್ರೀ ಬೇಂದ್ರೆಯವರು ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ

'ಈ ಹನ್ನೆರಡು ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣುಗಂಡಿನ ಜೀವನದ, ಅದರ ಭಾಗ್ಯ-ದುರ್ಭಾಗ್ಯದ, ಅದರ ಪ್ರಣಯದ ಆಖ್ಯಾನಗಳಾಗಿವೆ. ಗಂಡಸಿನ ದೌರ್ಜನ್ಯ, ದಾರಿದ್ರ್ಯ, ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯುಗಯುಗದ ದುರ್ವಿಧಿ ವಿಲಾಸ, ಸಮಾಜದ ವಿಪರೀತ ದೃಷ್ಟಿ, ಶಿಷ್ಟಾಚಾರಗಳ ಅಂಧ ವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗೌರಮ್ಮನವರ ಕರುಳಿನ ತಂತಿಯಿಂದ ಮಿಡಿದು ಬಂದ ಮೂಕ ಶೋಕವು ಹೃದಯಭೇದಕವಾಗಿಯೂ, ಹೃದಯಬೋಧಕವಾಗಿಯೂ ಆಗಿರುವದು

ಕತೆಗಾರ್ತಿಯ ಭಾವಚಿತ್ರವಿದೆ. 'ಅಂಬಿಕಾತನಯದತ್ತ'ರ 'ತಂಗಿ ಗೌರಮ್ಮ' ಎಂಬ ಕವಿತೆ ಇದೆ.

ಮನೋಹರ ಗ್ರಂಥ ಭಾಂಡಾರ, ಧಾರವಾಡ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ — **ನವಭಾರತ ಪುಸ್ತಕ ಭಂಡಾರ.**

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ಶೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ.

Kanara Printing Works,

Hampankatte, **MANGALORE.**

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality. selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ನೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು. ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪುಂಜ,

President & Manager, ಪ್ರಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುವ ಸೀಸೆ1ಕ್ಕೆ12ಆಣೆ, ಟ.ಖ.೯ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪ್ಪೋ. ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರಮನೋಹರವಾದ ಈ ರಸಾಯನವು ಬಾಣಂತಿಯ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲ ಬೇಕಾಗುವುದು ಕ್ರಯ ಬಾಟ್ಲ 1ಕ್ಕೆ ರೂ2-8-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ

ಅರ್ಶ-ಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವುದೇ ಆದ ಮೂಲವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು ನೋವು ತುರಿಸುವ, ಉರಿಯುವಿಕೆ, ಶೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುವು. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಸಂಗವೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇದರಿಂದ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು ಬೆಲೆ ರೂ. 2-0-0

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

Most Reliable New Model 1939

High Grade Lever Movement. Offered at 50% Reduction

No. 517

STRONG & DURABLE

ROUND OR SQUARE

No 401. Chromium Rs. 3 0 0

" **402. Golden Case** " 4 0 0

LEVER MOVT 15 JEWELS.

Guaranteed 5 Years

No 517 Chromium Rs. 6 8 0

No 518 Golden Case Rs. 8 0 0 **No 561 Chromium** Rs. 13 8 0

No 562 Rolled Gold Rs 17 0 0. **Catalogue Free.** As. 9/- Extra for postage & packing.

(CORRESPONDENCE IN ENGLISH ONLY)

BAPALAL & CO., *101 Abdul Rehman Street,* **Bombay 3**

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ಸ್ ಹೋಟೆಲ್

ಫೋನ್ 405 — ಹಳೆ ಪೋಸ್ಟಾಫೀಸು ಬಳಿಯು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮುದ್ದಾಸಿಗೆ ಬಂದಲ್ಲಿ **ಮೈಸೂರು ಕೇಫ್** ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸೈನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance*

CANARA AUTOMOBILES – – – – – MANGALORE

ANNOUNCEMENT.

Having satisfied the provisions of the new Insurance act (Act IV of 1938) this Company has been registered and has obtained the **Certificate of Registration** from the Superintendent of Insurance within the statutory time limit.

THE CANARA MUTUAL ASSURANCE COMPANY, LIMITED.

Head Office: UDIPI, S. INDIA.

Thulunad Bank

F SUPPLY AGENCY LIMITED,

D] UDIPI [1933

Authorised & Issued Capital	**Rs. 1,00,000**
Subscribed & Paid up	**Rs. 31,300**

RATE OF INTEREST FOR FIXED DEPOSITS.

3 to 6 Months 4% p. a.
7 to 11 „ 5% „
12 to 13 „ 6% „

SPECIAL RATE FOR LONG TERM DEPOSITS ON APPLICATION.

Current Accounts are accepted at

3% p. a.

JOIN ANY OF THE SCHEMES.

INDUSTRIAL CASH CERTIFICATE
SAVE AS YOU PLEASE DEPOSIT
DEENABANDHUNIDHI
INDUSTRIAL DEPOSIT
ANTARANGA DEPOSIT

Write for particulars to—
THE MANAGING DIRECTOR.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಶಾಂತಿ ಪುರಾಣ	3	0	0
ಚಂದ್ರಗುಪ್ತ ಚಕ್ರವರ್ತಿ	1	0	0
Goutama Buddha	0	8	0
भगवद्गीता	0	2	0
ಮಧುವನ	1	8	0
ಒಂದೇ ತಿಂಗಳಲ್ಲಿ ಇಂಗ್ಲಿಷ್	0	8	0
ಎರಡೇ ವಾರಗಳಲ್ಲಿ ಓದುಬರಹ	0	1	0
ಗೀತೆಯ ಕೈಗನ್ನಡಿ	0	4	0
ಭಗವದ್ಗೀತೆ	0	2	0
ತುಳು ವ್ಯಾಕರಣ	0	8	0
ಸಾಮುದ್ರಿಕ ಶಾಸ್ತ್ರ	0	8	0
ಮಿತ್ಯನಾರಯಣ ಕತೆ	0	8	0
ಪುರಂದರದಾಸರ ಪದಗಳು ಭಾಗ ೧	0	4	0
„ ಭಾಗ ೨	0	4	0
„ ಭಾಗ ೩	0	4	0
ತುಳುನಾಡ್ ತಿಲಕ ಪಂಚಾಂಗ	0	1	0
ವೈಜಯಂತೀ ಪಂಚಾಂಗ	0	2	6
ಕುಕ್ಕುಟ ಪಂಚಾಂಗ	0	1	0

ಇತ್ಯಾದಿ. ಇತ್ಯಾದಿ.

ತುಳುನಾಡ್ ಪ್ರೆಸ್, ಉಡುಪಿ.

(*Proprietors*: **GENERAL SUPPLIES, LTD, UDIPI**)

PRINTED BY S S KARANTH AT THE THULUNAD PRESS, UDIPI. AND PUBLISHED BY K H SHETTY AT "NAVAYUGA OFFICE. UDIPI, S INDIA.